KARNATAKA STATE ARCHIVES

KARNATAKA
STATE
ARCHIVES

KARNATAKA STATE ARCHIVES

KARNATAKA
STATE
ARCHIVES

Roll No:138.

Roll No: 138.

ARS 34 APP 82

NAVAYUGA KANNADA
WEEKLY

FROM 4:4:1940 Contd from Roll
No. 137

ARS 34 APP 82

NAVAYUGA KANNADA
WEEKLY

From 4:4:1940 Contd from Roll
No. 137

ARS 34 APP 82

NAVAYUGA KANNADA
WEEKLY

From 4:4:1940 Contd from Roll
NO. 137

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of

The Canara Banking Corporation Limited.
(Incorporated in British India)
[illegible]

ನವಯುಗ

ಉಡುಪಿ, ಗುರುವಾರ ತಾ. ೪-೪-'೪೦

ಮಿ. ಜಿನ್ನರ ಬಯಲು ಭ್ರಾಂತಿ

ಹಿಂದೂದೇಶವನ್ನು ಮುಸಲ್ಮಾನ ಮತ್ತು ಹಿಂದುಸ್ಥಾನಗಳಾಗಿ ವಿಭಾಗಿಸಬೇಕೆಂದು ಮಿ. ಜಿನ್ನರು ಲಾಹೋರಿನ ಮುಸ್ಲಿಮ್ ಲೀಗಿನ ಮಹಾಸಭೆಯಲ್ಲಿ ಮಾಡಿದ ಭಾಷಣವು ದೇಶದ ಹಲವು ಕಡೆಗಳಲ್ಲಿ ಉದ್ವೇಗವನ್ನುಂಟುಮಾಡಿದೆ. ವಿಚಾರಶಾಲಿಗಳಾದ ಹಿಂದು, ಮುಸಲ್ಮಾನ, ಸಿಖ್ಖ ಮುಖಂಡರುಗಳು ಅದನ್ನು ಸಂಪೂರ್ಣವಾಗಿ ನಿಷೇಧಿಸಿರುತ್ತಾರೆ. ಮುಸ್ಲಿಮ್ ಲೀಗಿನೊಳಗೇನೇ ಆ ಕುರಿತು ಒಮ್ಮತವಿರುವಂತೆ ತೋರುವುದಿಲ್ಲ. ಮಿ. ಜಿನ್ನರಿಗೆ ಈ ಮುದಿಪ್ರಾಯದಲ್ಲಿ ಮುಸಲ್ಮಾನ ರಾಜ್ಯವೊಂದನ್ನು ಪ್ರತ್ಯೇಕವಾಗಿ ಕಟ್ಟುವ ಭ್ರಾಂತಿ ಹಿಡಿದಿದೆ. ಅದಕ್ಕಾಗಿ ಅವರು ದೇಶದ ಸ್ವಾತಂತ್ರ್ಯಕ್ಕಾದರೂ ಎರವಾಗಲು ಸಿದ್ಧರಿದ್ದಂತಿದೆ. ಲಂಡನ್ ಟೈಮ್ಸ್ ಪತ್ರಿಕೆಯಲ್ಲಿ ಮಿ. ಜಿನ್ನರು ತನ್ನ 14 ಪಾಯಿಂಟುಗಳನ್ನು ಮುಂದೊತ್ತಿ ಹಿಂದೂ ಮುಸಲ್ಮಾನ ಐಕ್ಯಕ್ಕೆ ವಿಘಾತವನ್ನುಂಟುಮಾಡಿ ಹಿಂದೀಯರು ಒಮ್ಮತದ ಕೇಳಿಕೆಯನ್ನು ಬ್ರಿಟಿಷ್ ಸರಕಾರದ ಮುಂದಿಡದಂತೆ ತೊಡಕನ್ನುಂಟುಮಾಡಿದರು. ಇಂದೀಗ ದೇಶದ ಸ್ವಾತಂತ್ರ್ಯವನ್ನು ಒಕ್ಕಟ್ಟಿನಿಂದ ಸಾಧಿಸಬೇಕಾದ ಸಂದಿಗ್ಧ ಸಮಯದಲ್ಲಿ, ಮುಸಲ್ಮಾನರದೇ ಆದ ಪ್ರತ್ಯೇಕವಾದೊಂದು ರಾಜ್ಯವನ್ನು ಕಟ್ಟುವ ಅಭಿಪ್ರಾಯವನ್ನು ಮುಂದೊಡ್ಡಿ ಮುಸಲ್ಮಾನ ಜಾತೀಯ ಭಾವವನ್ನು ಉದ್ದೀಪನಗೊಳಿಸಿ ದೇಶದ ಸ್ವಾತಂತ್ರ್ಯಸಾಧನೆಯ ಗೊಡವೆಯೇ ಇಲ್ಲದ 'ಬೆಕ್ಕಿನ ಬಿಡಾರವೇ ಬೇರೆ' ಎಂಬಂತಹ ಘೋಷಣೆ ಎಬ್ಬಿಸಿರುವರು.

ಹಿಂದೂದೇಶದಲ್ಲಿ ಮುಸಲ್ಮಾನ ರಾಜ್ಯ ಕಟ್ಟಿ, ಅಫಘಾನಿಸ್ಥಾನ, ಪರ್ಶಿಯಾ, ಅರೇಬಿಯಾ ಮೊದಲಾದ ಮುಸಲ್ಮಾನ ರಾಜ್ಯಗಳೊಂದಿಗೆ ಸೇರುವ ಪಾಕಿಸ್ಥಾನ ಚಳವಳವನ್ನೇ ಮಿ. ಜಿನ್ನರು ಎತ್ತಿ ಹಿಡಿದು ಪ್ರತಿಪಾದಿಸಿರುವರೆಂದು ಹೇಳಬಹುದು. ಇದರಿಂದ ಸಾವರಕರರ ಹಿಂದೂಮಹಾಸಭೆಯವರಿಗೆ ಹಿಂದುಗಳನ್ನು ಕೆರಳಿಸಲು ಹೊಸ ಅವಕಾಶ ಸಿಕ್ಕಿದಂತಾಗುವುದು. ಮಿ. ಜಿನ್ನರ ಮುಸಲ್ಮಾನ ರಾಜ್ಯದ ಭಾವನೆಗೆ ಮುಸಲ್ಮಾನರು ಬೆಂಬಲವಿತ್ತ ಪಕ್ಷದಲ್ಲಿ, ಹಿಂದುಸ್ಥಾನವು ಹಿಂದುಗಳ ಸ್ಥಾನವೆಂಬ ಶ್ರೀ ಸಾವರಕರರ ಅಭಿಪ್ರಾಯವು ಹೆಚ್ಚೆಚ್ಚಾಗಿ ಹಿಂದುಗಳನ್ನು ಆಕರ್ಷಿಸದಿರಲಾರದು. ಪಂಜಾಬು ತಮ್ಮ ಮೋಕ್ಷಭೂಮಿ ಮತ್ತು ಪುಣ್ಯಭೂಮಿಯೆಂದು ಸಿಖ್ಖರು ಇಷ್ಟರಲ್ಲೇ ಘೋಷಿಸಹತ್ತಿದ್ದಾರೆ. ಹೀಗೆ ಸಂಕುಚಿತ ಜಾತೀಯತೆಯು ಈಗು ಬಲಗೊಂಡು ಜನಬೆಂಬಲ ಪಡೆಯಿತೆಂದರೆ ಇಡೀ ಹಿಂದುಸ್ಥಾನವು ಅಂತಃಕಲಹದ ಕಳವಾಗಿ ಪರಿಣಮಿಸದಿರಲಾರದು. ಆದರೆ ಸುದೈವದಿಂದ ಮಿ. ಜಿನ್ನರ ಮುಸಲ್ಮಾನ ರಾಜ್ಯ ಸ್ಥಾಪನೆಯ ಭಾವನೆಯು ಬಯಲುಭ್ರಾಂತಿಯಾಗಿದೆ. ಹೆಚ್ಚಿನ ಮುಸಲ್ಮಾನರೇ ಅದಕ್ಕೆ ಬಗ್ಗವಿರೋಧವಿದ್ದಾರೆ. ಮುಸಲ್ಮಾನ ಹಿತಕ್ಕೇನೇ ಅದು ವಿಘಾತುಕವಾಗಿದೆಯೆಂದು ಹಲವು ಮುಸಲ್ಮಾನ ಮುಖಂಡರೇ ಅದನ್ನು ಉಗ್ರವಾಗಿ ನಿಷೇಧಿಸಿರುತ್ತಾರೆ. ಮತ್ತು ಅದು ಅತ್ಯಂತ ಅವ್ಯವಹಾರ್ಯವಾದ ದಾಗಿದೆ. ಬ್ರಿಟಿಷ್ ಸರಕಾರವೂ ಅದಕ್ಕೆ ವಿರೋಧವಿದೆಯೆಂದು ಲಂಡನಿನ ಟೈಮ್ಸ್ ಪತ್ರಿಕೆಯು ಮಾಡಿರುವ ಟೀಕೆಯಿಂದ ಸಿದ್ಧವಾಗುತ್ತದೆ. ಕೇವಲ ಅಪ್ರಾಗತಿಕರಿಂದ ತುಂಬಿರುವ ಮುಸ್ಲಿಮ್ ಲೀಗಿನ ಅಭಿಪ್ರಾಯಕ್ಕೆ ಸಂಪೂರ್ಣವಾಗಿ ಮುಸಲ್ಮಾನ ಪ್ರಾಂತವಾಗಿರುವ ವಾಯುವ್ಯ ಗಡಿನಾಡು ಬದ್ಧ ವಿರೋಧವಿರುವುದು. ಅದೆಂದಿಗೂ ಲೀಗಿನೊಂದಿಗೆ ಸೇರಲಾರದು. ನೂರಕ್ಕೆ 75ಕ್ಕಿಂತಲೂ ಮಿಕ್ಕಿ ಮುಸಲ್ಮಾನ ಜನಸಂಖ್ಯೆಯಿರುವ ಕಾಶ್ಮೀರದಲ್ಲಿ ಮುಸಲ್ಮಾನ ಮುಖಂಡರಾದ ಮಿ. ಅಬ್ದುಲ್ಲಾರವರೇ ರಾಷ್ಟ್ರೀಯಪಕ್ಷ ಸ್ಥಾಪಿಸಿ ಚಳವಳಿಸುತ್ತಿರುವರು. ಬಲೂಚಿಸ್ಥಾನದಲ್ಲಿಯೂ ಕಾಶ್ಮೀರದಂತಹ ಚಳವಳವೇ ಪ್ರಬಲವಾಗಿ ಹಬ್ಬಿರುವುದು. ಸಿಂಧುದೇಶದಲ್ಲಿ ಮುಸ್ಲಿಮ್ ಲೀಗಿನವರೇ ತಮ್ಮ ಪಕ್ಷವನ್ನು ಕೊನೆಗೊಳಿಸಿ ಹಿಂದುಗಳೊಂದಿಗೆ ಸೇರಿ ಸಂಯುಕ್ತ ರಾಷ್ಟ್ರೀಯ ಪಕ್ಷಸ್ಥಾಪಿಸಿ ಹೊಸತಾಗಿ ಮಂತ್ರಿಮಂಡಲವನ್ನು ರಚಿಸಿರುತ್ತಾರೆ. ಪಂಜಾಬಿನ ಮಂತ್ರಿಮಂಡಲವು ಮುಸ್ಲಿಮ್ ಲೀಗಿನಲ್ಲಿ ಸರ್ ಸಿಕಂದರರು ಕೇವಲ ಮುಸ್ಲಿಮ್ ಲೀಗ್ ಪಕ್ಷ ಸ್ಥಾಪಿಸಲು ಬದ್ಧ ವಿರೋಧವಿದ್ದಾರೆ. ಹಿಂದು ಮತ್ತು ಮುಸಲ್ಮಾನ ಜನಸಂಖ್ಯೆಯು ಹೆಚ್ಚುಕಡಿಮೆ ಸಮಸಮವಾಗಿದೆ. ಸಂಯುಕ್ತ ಪ್ರಾಂತ ಬಂಗಾಳ ಮತ್ತು ಬಿಹಾರಗಳಲ್ಲಿ ಇದು ಹೊರತು ಹಿಂದೂ ಸಂಸ್ಕೃತಿಯ ಉಗಮಸ್ಥಾನವಾದ ಅವರ ಪುಣ್ಯಸ್ಥಳಗಳ ನಾಡಾದ ಪವಿತ್ರ ಗಂಗಾ ಯಮುನಾ ನದಿಗಳು ಹರಿಯುವ ಸಮಭೂಮಿಯನ್ನು ಹಿಂದುಗಳು ಎಷ್ಟಕ್ಕೂ ಬಿಟ್ಟುಕೊಡಲೊಪ್ಪಲಾರರು. ಪಂಜಾಬಿನಲ್ಲಿ ಮುಸಲ್ಮಾನ ರಾಜ್ಯಭಾರ ಸ್ಥಾಪಿಸಲು ಸಿಖ್ಖರು ಮತ್ತು ಜಾಟರು ಎಂದಿಗೂ ಬಿಡಲಾರರು. ಜಾತೀಯತೆಯು ಕಾಡ್ಗಿಚ್ಚಿನಂತೆ ಹಬ್ಬಿತೆಂದರೆ ಮಧ್ಯ ಮತ್ತು ದಕ್ಷಿಣ ಹಿಂದುಸ್ಥಾನದಲ್ಲಿ ಮುಸಲ್ಮಾನರಿಗೆ ಇರಲಿಕ್ಕೆ ಸಹ ಸಿಕ್ಕಲಿಕ್ಕಿಲ್ಲ. ಹೈದರಾಬಾದಿನಂತಹ ಮುಸಲ್ಮಾನ ರಾಜ್ಯಗಳು ದಕ್ಷಿಣದಲ್ಲಿ ಇರುವುದೇ ಅಸಾಧ್ಯವಾಗುವುದು. ಒಂದೇ ನಾಡಿನಲ್ಲಿ ಹುಟ್ಟಿ ಬೆಳೆದು ಒಟ್ಟಿಗೆ ವಾಸಿಸುವವರೆಲ್ಲ ಬಂಧುಗಳಾಗಿ ಒಂದುಗೂಡಿ ನಡೆಯಬೇಕೆಂಬ ರಾಷ್ಟ್ರೀಯ ಭಾವನೆಯಲ್ಲಿಯೇ ಎಂದೆಂದಿಗೂ ಉದ್ಧಾರ ಮತ್ತು ಅಭ್ಯುದಯ ಇದೆ. ಮಿ. ಜಿನ್ನರ ಮುದಿ ಭ್ರಾಂತಿಯು ನಿಜವಾದ ರಾಷ್ಟ್ರಹಿತಘಾತುಕವಿದ್ದು, ಹಿಂದೂದೇಶಕ್ಕೆ ಸ್ವಾತಂತ್ರ್ಯವನ್ನು ನಿರಾಕರಿಸಲು ಆಳರಸರಿಗೆ ಬಹಳ ಅನುಕೂಲ ಕಾರಣವಾಗಿದೆ. ಅದುದರಿಂದಲೇ ಅವರು ಮಿ. ಜಿನ್ನರ ಬೆನ್ನುಚಪ್ಪರಿಸುವ ನಟನೆ ನಡೆಸುತ್ತಿರುವಂತಿದೆ. ಪ್ರಕೃತದ ಪರಿಸ್ಥಿತಿಯಲ್ಲಿ ಕಾಂಗ್ರೆಸು ಮಂತ್ರಿಗಳು ಅಧಿಕಾರದಲ್ಲಿದ್ದು ಸರಕಾರದೊಂದಿಗೆ ಸಹಕರಿಸುತ್ತಿದ್ದರೆ ಮಿ. ಜಿನ್ನರನ್ನು ಆಳರಸರೇ ವಕ್ರದೃಷ್ಟಿಯಿಂದ ಕಾಣುತ್ತಿದ್ದರೆಂಬುದಕ್ಕೆ ಸಂದೇಹವೇ ಇಲ್ಲ. ಇದನ್ನು ಮಿ. ಜಿನ್ನರು ಆಲೋಚಿಸಿಕೊಳ್ಳದೆ ಮುಖದ ಮೇಲೆ ಪ್ರತೀಕಾರವಾದಲು ಮೂಗುಮುರಿದುಕೊಂಡಂತೆ ಕಾಂಗ್ರೆಸಿನ ಮೇಲಿನ ದ್ವೇಷಸಾಧಿಸಲು ಹಿಂದೂದೇಶದ ಸ್ವಾತಂತ್ರ್ಯಸಾಧನೆಗೇ ದೊಡ್ಡ ವಿಘ್ನವನ್ನೊಡ್ಡುತ್ತಾರೆ.

ಖಾಸಗಿ ಶಾಲೆಯವರ ಗೋಳು

ಈ ವರುಷ ಜಿಲ್ಲೆಯ ಹಲವು ಖಾಸಗಿ ಶಾಲೆಗಳವರ ಗ್ರಾಂಟಿನಲ್ಲಿ ಅತಿಹೆಚ್ಚಿನ ಕಡಿತವಾಗಿದೆಯೆಂದು ಕೆಲವು ಶಾಲೆಗಳ ಗ್ರಾಂಟನ್ನು ನೂರಕ್ಕೆ 83½ರಷ್ಟು ಇಳಿಸಲಾಗಿದೆಯೆಂದೂ ಜಿಲ್ಲೆಯ ಹಲವು ಕಡೆಗಳಲ್ಲಿ ದೊಡ್ಡ ಗೋಳಿದ್ದಿದೆ. ಈ ಗ್ರಾಂಟಿನ ಮೇರೆಗೆ ಕೆಲವು ಶಾಲೆಗಳನ್ನು ನಡೆಸುವುದೇ ಅಸಾಧ್ಯವಾಗಿದೆ. ಶಾಲಾಗ್ರಾಂಟು ಯಾವುದಾದರೊಂದು ನಿಶ್ಚಿತ ನೀತಿ ನಿಯಮದ ಮೇರೆಗೆ ಕೊಡಲ್ಪಡುವುದೆಂದು ತೋರುವುದಿಲ್ಲ. ಕೆಲವರಿಗೆ ಸಾಕಷ್ಟು ಅನ್ನಹಾಕಿ ಇನ್ನು ಕೆಲವರನ್ನು ಉಪವಾಸ ಕೊಲ್ಲಿಸುವ ಘೋರವೆಸಗಿದಂತಿದೆ. ಈಸಲ ಇದರ ರೀತಿ ಗ್ರಾಂಟುಕೊಡುವ ಶಿಕ್ಷಣಾಧಿಕಾರಿಗಳಿಗೆ ಆರೋಗ್ಯವೆಂದು ತೋರುವ ಖಾಸಗಿಶಾಲೆಗಳಿಗೆ ಸಂಪೂರ್ಣವಾಗಿ ಗ್ರಾಂಟನ್ನು ನಿರಾಕರಿಸಿ ಅವುಗಳ ಮುಚ್ಚುವಿಕೆಯನ್ನು ಬಯಸಿ ಮಾಡಿ ಅವು ಮುಚ್ಚಲ್ಪಡುವಂತೆ ಮಾಡುವುದರಲ್ಲಿ ಅರ್ಥವಿದೆ. ಆದರೆ ಯಾವ ಶಾಲೆಯಾದರೂ ಜೀವನ್ಮೃತಾವಸ್ಥೆಯಲ್ಲಿರುವ ಪ್ರಮಾಣದಲ್ಲಿ ಗ್ರಾಂಟು ಕೊಡುವುದರಲ್ಲಿ ಏನೂ ಅರ್ಥವಿಲ್ಲ.

ಸರಕಾರಕ್ಕೆ ಹಣದ ಅಡಚಣೆ ಇರುವುದಾದರೆ ಇನ್ನು ಮುಂದೆ ಕೆಲವು ವರುಷ ಖಾಸಗಿ ಶಾಲೆಗಳಿಗೆ ಮಂಜೂರಾತಿ ಕೊಡುವುದನ್ನೇ ನಿಲ್ಲಿಸಿ ಬಿಡಬಹುದು. ಆದರೆ ನಡೆಯುತ್ತಿರುವ ಶಾಲೆಗಳು ಸರಿಯಾಗಿ ಬದುಕಿಉಳಿಯಲು ಸಾಕಾಗುವಷ್ಟರ ಗ್ರಾಂಟು ಕೊಡುವುದು ಸರಕಾರದ ಕರ್ತವ್ಯವಿದೆ. ಅವುಗಳನ್ನು ಜೀವನ್ಮೃತಾವಸ್ಥೆಯಲ್ಲಿ ನರಳಿಸುವುದು ದೊಡ್ಡ ಅನ್ಯಾಯ. ಸೇ.

FOR LIFE INSURANCE

CONSULT

TROPICAL

Chairman. SJT SUBASHCHANDRA BOSE.
PANDIT MOTILAL NEHRU,
Founder Directors Dr. M. A. ANSARI,
HAKIM AJMAL KHAN,
Sri SRINIVASA IYENGER

POLICIES ISSUED EXCEED

THREE CRORES

For Agency Apply to —

M. R. PRABHU, [illegible]
The Tropical Ins, Co, Ltd,
KASARGODE,
SOUTH KANARA,

Or

M. SUNDERAM SHETTY, [illegible]
The Tropical Ins Co. Ltd.
HAMPANKATTA,
MANGALORE, S. K.

…ದೇಶದ ವಿಭಜನೆಯು ಅರ್ಥಶೂನ್ಯವಾದುದು !

ದಕ್ಷಿಣಕನ್ನಡ ಜಿಲ್ಲಾ ಹರಿಜನ ಪರಿಷತ್ತು

ದೇಶದಲ್ಲೆಲ್ಲಾ ಸತ್ಯಾಗ್ರಹ ಸಿದ್ಧತೆ.

ನರೇ ಹ ಗ ವಾದಲೇ ಇಷ್ಟು ಸುದು ಅತ್ಯಂತ ವಿಷಾದಕರವಿದೆ.

ತಾ. 27ನೇ ಬೆಳಿಗ್ಗೆ ಶ್ರೀ ಸುಬ್ಬ ಐತ [illegible] ರ್ಯಗಳು ರಾಷ್ಟ್ರೀಯ ಧ್ವಜಾರೋಹಣ ಮಾಡಿದರು. ಶ್ರೀ ಮುನಿಸ್ವಾಮಿ ಪಿಳ್ಳೆಯವರು ಶ್ರೀ. ಪಿ. ಬಿ. ಶಿಪ್ರು ಡಾಕ್ಟರ್ ಕೆ. ವಿಠಲ ಶೆಟ್ಟಿ, ಶ್ರೀ ಈಶ್ವರಪ್ಪ ಮೊದಲಾದವರೊಂದಿಗೆ ಮೂಲ್ಕಿಗೆ ಬಂದೊಡನೆ ಯೇ ಮೂಲ್ಕಿ ಯೂನಿಯನ್ ಕ್ಲಬ್ಬಿನವರು ಅವರಿಗೆ ಟೀಪಾರ್ಟಿ ಕೊಟ್ಟು ಸತ್ಕರಿಸಿದರು. ಅನಂತರ ಅಧ್ಯಕ್ಷರನ್ನು ಮೆರವಣಿಗೆಯಲ್ಲಿ ಪರಿಷತ್ತಿನ ಸ್ಥಳಕ್ಕೆ ಕರೆದೊಯ್ಯಲಾಯಿತು. ಪರಿಷತ್ತಿನ ಸ್ವಾಗತ ಕಮಿಟಿಯ ಅಧ್ಯಕ್ಷರಾದ ಶ್ರೀ ಎಸ್. ಆರ್. ಪೂಂಜರು ಅಧ್ಯಕ್ಷರನ್ನು ಸ್ವಾಗತೀಕರಿಸಿ, ಮೂಲ್ಕಿಯಲ್ಲಿ ನಡೆಸಲ್ಪಟ್ಟಿರುವ ಹರಿಜನೋದ್ಧಾರ ಕೆಲಸಗಳನ್ನು ತಿಳಿಸಿ ಮೂಲ್ಕಿಯ ಆಸುಪಾಸಿನ 16 ಹಳ್ಳಿಗಳ ಬೇರೆ ಬೇರೆ ಜಾತಿಗಳ ಹರಿಜನರು ಈ ಪರಿಷತ್ತಿನ ವ್ಯವಸ್ಥೆಯಲ್ಲಿ ಪ್ರಮುಖ ಭಾಗವಹಿಸಿರುವರೆಂದು ಸೂಚಿಸಿದರು. ಮತ್ತು ಹರಿಜನರ ಉದ್ಧಾರಕ್ಕಾಗಿ ಕೈಕೊಳ್ಳಬೇಕಾದ ಕಾರ್ಯಕ್ರಮದ ರೂಪುರೇಷೆಯನ್ನು ಚಿತ್ರಿಸಿ, ಹರಿಜನ ವಿದ್ಯಾರ್ಥಿಗಳಿಗೆ ಪ್ರಾಥಮಿಕ ಶಿಕ್ಷಣವನ್ನಾದರೂ ಕಡ್ಡಾಯವಾಗಿ ಕೊಡುವ ಏರ್ಪಾಡು ಸರಕಾರ ಮಾಡಬೇಕೆಂದು ಹೇಳಿದರು. ಪಂಚಾಯತ ಬೋರ್ಡು ಮತ್ತು ಮೂಲ್ಕಿಯ ಜನತೆಯ ಪರವಾಗಿ ಪಂಚಾಯತ ಬೋರ್ಡು ಪ್ರಸಿಡೆಂಟರಾದ ಶ್ರೀ ಬೋಳ ವಾಸುದೇವ ರಾಯರು ಶ್ರೀ ಪಿಳ್ಳೆಯವರಿಗೆ ವಂದನೆಯನ್ನರ್ಪಿಸಿದರು.

ಆ ಮೇಲೆ ಶ್ರೀ ಪಿಳ್ಳೆಯವರು ಅಧ್ಯಕ್ಷ ಭಾಷಣವಿತ್ತು, ಬೇರೆ ಬೇರೆ ಪಂಗಡಗಳವರಾದ ಹರಿಜನರೆಲ್ಲರೂ ಒಕ್ಕಟ್ಟಾಗಿ, ಹರಿಜನ ಸೇವಕ ಸಂಘ, ಡಿಪ್ರೆಸ್ಡ್ ಕ್ಲಾಸಸ್ ಮಿಶನ್ ಮೊದಲಾದ ಸಂಸ್ಥೆಗಳೊಂದಿಗೆ ಉತ್ಸಾಹದಿಂದ ಸಹಕರಿಸಬೇಕೆಂದು ವಿನಂತಿ ಮಾಡಿಕೊಂಡರು. ಕಾಂಗ್ರೆಸ್ ಮಂತ್ರಿಗಳು ಹರಿಜನೋದ್ಧಾರಕ್ಕಾಗಿ ಮಾಡಿರುವ ಕೆಲಸವನ್ನು ವಿವರಿಸಿ, ಈಗಣ ಸರಕಾರವು ಕಾಂಗ್ರೆಸ್ ಮಂತ್ರಿಗಳಿತ್ತಿದ್ದ ಅನುಕೂಲತೆಗಳನ್ನಿಲ್ಲದುದಕ್ಕಾಗಿ ಮತ್ತು ಮದ್ಯಪಾನ ನಿಷೇಧವನ್ನು ವ್ಯಾಪಿಸದುದಕ್ಕಾಗಿ ಖಂಡಿಸಿದರು.

ಪರಿಷತ್ತಿಗೆ ಬಂದಿದ್ದ 10 ಮಂದಿ ಕೊರಗರು ತವಿಸ್ಸು [illegible] ಮದ್ಯಪಾನ ಮತ್ತು ಸತ್ತ ದನದ ಮಾಂಸ ತಿನ್ನುವುದನ್ನು ತ್ಯಜಿಸುವ ಪ್ರತಿಜ್ಞೆ ಮಾಡಿದರು. ಸಂಜೆ ಲೇಬರ್ ಮತ್ತು ಇತರ ಶಾಲೆಗಳ ವಿದ್ಯಾರ್ಥಿಗಳ ವಿನೋದ ಪ್ರದರ್ಶನ ಮತ್ತು ಕೊರಗರ ಯಕ್ಷಗಾನ ಆಟವಿದ್ದಿತು. ಶ್ರೀ ಯು ಎಸ್. ಕೃಷ್ಣರಾಯರ ಕಲ್ಪನಿಕ ಉರಿಯ ಭಾಷೆಯ ಹರಿಜನ ದೇವಸ್ಥಾನ ಪ್ರವೇಶ ಸಂಬಂಧವಾದ ಭಾಷಣವು ಅತ್ಯಂತ ಮನೋರಂಜಕವಾಗಿತ್ತು. ಪರಿಷತ್ತಿನ ಸಂದರ್ಭದಲ್ಲಿ ಮಕ್ಕಳ ಕೈಗಾರಿಕ ವಸ್ತು ಪ್ರದರ್ಶನ ಮತ್ತು ಜಿಲ್ಲಾ ಬೋರ್ಡ ಆರೋಗ್ಯ ಇಲಾಖೆಯ ಆರೋಗ್ಯ ಸಂಬಂಧವಾದ ಚಿತ್ರ ಮತ್ತು ಸಿನಿಮ ದೇಖಾವೆ ಇದ್ದಿತು.

ಮಂಜೂರಾದ ಠರಾವುಗಳು

ತಾ. 28ನೇ ಬೆಳಿಗ್ಗೆ ಹರಿಜನ ಪರಿಷತ್ತು ಶ್ರೀ ಎಮ್ ಎಸ್ ಮಾಧವರಾಯರ ಅಧ್ಯಕ್ಷತೆಯಲ್ಲಿ ನಡೆದು ಈ ಕೆಳಗಣ ಠರಾವುಗಳು ಮಂಜೂರಾದವು. ಗಾಂಧಿಯವರು ಹರಿಜನರಿಗಾಗಿ ಮಾಡಿರುವ ಕೆಲಸಕ್ಕಾಗಿ ಕೃತಜ್ಞತೆಯನ್ನೂ ಪ್ರಕಟಿಸಿ ಅವರಲ್ಲಿ ಸಂಪೂರ್ಣ ವಿಶ್ವಾಸ ಸೂಚಿತವಾಯಿತು. ಹರಿಜನ ವಿದ್ಯಾರ್ಥಿ ವೇತನಗಳನ್ನು ಹೆಚ್ಚಿಸಬೇಕೆಂದೂ ಹರಿಜನರಿಗಾಗಿ ಕೈಗಾರಿಕೆ ಶಾಲೆಯೊಂದನ್ನು ತೆರೆಯಬೇಕೆಂದೂ ಮಂಗಳೂರಿನ ಡಿಪ್ರೆಸ್ಡ್ ಕ್ಲಾಸಸ್ ಮಿಶನಿಗೆ ಸರಕಾರವು ಸಹಾಯಮಾಡಬೇಕೆಂದೂ, ಗ್ರಾಮ ಕೋರ್ಟು, ಗ್ರಾಮ ಪಂಚಾಯತ ಮತ್ತು ಇತರ ಸ್ಥಾನಿಕ ಸಂಸ್ಥೆಗಳಲ್ಲಿ ಕಡಿಮೆ ಪಕ್ಷ ಸೇಕಡ 10ರಷ್ಟು ನೌಕರಿಗಳನ್ನು ಹರಿಜನರಿಗೀಯಬೇಕೆಂದು ಸರಕಾರದೊಡನೆ ಕೇಳಿಕೊಳ್ಳುವ ನಿರ್ಣಯಗಳಾದುವು. ಶಾಲೆಗೆ ಹೋಗುವ ಪ್ರಾಯದ ಎಲ್ಲಾ ಹರಿಜನ ಮಕ್ಕಳಿಗೆ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವೀಯುವ ಏರ್ಪಾಡು ಮಾಡಬೇಕೆಂದು ಸರಕಾರದೊಡನೆ ಆಗ್ರಹಪೂರ್ವಕವಾಗಿ ಕೇಳಿಕೊಳ್ಳಲಾಯಿತು. ಹರಿಜನರು ಎಂಜಲು ತಿನ್ನುವುದನ್ನು ಬಿಟ್ಟುಬಿಡಬೇಕೆಂದು ವಿಚಾರವಾಯಿತು. ದೇವಸ್ಥಾನಾಧಿಕಾರಿಗಳು ಮತ್ತು ಇತರ ಸವರ್ಣ ಹಿಂದುಗಳು ಹರಿಜನರಿಗೆ ಎಂಜಲು ಕೊಡದೆ ಶುದ್ಧವಾದ ಆಹಾರವನ್ನೇ ಕೊಡಬೇಕೆಂದು ಕೇಳಿಕೊಳ್ಳುವ ನಿರ್ಣಯವಾಯಿತು. 6 ವರ್ಷ ಪ್ರಾಯವಾಗುವ ವರೆಗೆ ಹರಿಜನ ಮಕ್ಕಳಿಗೆ ಅನ್ನ ಕೊಡುವರೆ ದೇವಸ್ಥಾನಗಳ ಹಣವನ್ನುಪಯೋಗಿಸಬೇಕೆಂದು ವಿನಂತಿಮಾಡಿಕೊಳ್ಳಲಾಯಿತು.

ಬೇರೆ ಬೇರೆ ಸ್ಥಾನಿಕ ಸಂಸ್ಥೆಗಳಲ್ಲಿ ಹರಿಜನರಿಗೆ ಸ್ಥಾನ ಒಪ್ಪಂದದ ಮೇರೆಗೆ ಪ್ರಾತಿನಿಧ್ಯವೀಯಬೇಕೆಂದು ಸರಕಾರದೊಡನೆ ಕೇಳಿಕೊಳ್ಳಬೇಕೆಂದು ನಿರ್ಣಯವಾಯಿತು. ಘಟ್ಟಕ್ಕೆ ತೋಟಗಳಿಗೆ ಆಳುಗಳನ್ನು ಲೇಬರ್ ಡಿಪಾರ್ಟ್‌ಮೆಂಟಿನ ಮೂಲಕ ಕಳುಹಿಸುವ ಏರ್ಪಾಡು ಮಾಡಿ ಸರಿಯಾಗಿ ಮೇಸ್ತ್ರಿಗಳ ಮೂಲಕ ಕಳುಹಿಸುವುದನ್ನು ನಿಷೇಧಿಸುವ ಕಾನೂನು ಮಾಡಬೇಕೆಂದು ಸರಕಾರವನ್ನು ಒತ್ತಾಯಪಡಿಸುವ ನಿರ್ಣಯವಾದಲಾಯಿತು. ಜಿಲ್ಲೆಯ ಕಾಡುಗಳ ಅಪಾರ ಸಂಪತ್ತಿನ ಉಪಯೋಗ ಪಡೆದು ಕೈಗಾರಿಕೆಗಳನ್ನು ಸ್ಥಾಪಿಸಿ ಹರಿಜನರಿಗೆ ಉದ್ಯೋಗಗಳನ್ನೊದಗಿ ಕೊಡುವಂತೆ ಸರಕಾರವನ್ನು ಕೇಳಿಕೊಳ್ಳಬೇಕೆಂದಾಯಿತು.

ಮಂಗಳೂರಿನ ಕೃಷಿ ಇಲಾಖಾ ಇನ್ಸ್‌ಪೆಕ್ಟರಾದ ಶ್ರೀ ಬಂಡಾರಿಗಳು ಬೇಸಾಯ ಮತ್ತು ಕೋಳಿಗಳ ವ್ಯವಸಾಯದ ಕುರಿತು ಪ್ರದರ್ಶನ ಮೂಲಕ ಭಾಷಣ ಮಾಡಿದರು. ಶ್ರೀ ಮುನಿಸ್ವಾಮಿ ಪಿಳ್ಳೆಯವರು ತಾ. 28ನೇ ಸಂಜೆ ಮೂಲ್ಕಿ ಬೋರ್ಡ್ ಸ್ಕೂಲನ್ನು ಸಂದರ್ಶಿಸಿ ಮೂಲ್ಕಿ ಕಾಂಗ್ರೆಸ್ ಕಮಿಟಿಯಿಂದ ಟೀಪಾರ್ಟಿ ಸತ್ಕಾರ ನಡೆದು ಮಂಗಳೂರಿಗೆ ತೆರಳಿದರು.

ಸತ್ಯಾಗ್ರಹ ಸಿದ್ಧತೆ

ಮಹಾತ್ಮ ಗಾಂಧಿಯವರ ಅಭಿಪ್ರಾಯ ಮತ್ತು ಕಾಂಗ್ರೆಸ್ ಜನರಲ್ ಸೆಕ್ರೆಟರಿಗಳ ಸಕ್ಯುಲರಿನ ಮೇರೆಗೆ ದೇಶದಲ್ಲೆಲ್ಲಾ ಸತ್ಯಾಗ್ರಹ ಸಿದ್ಧತೆಯು ಭರದಿಂದ ನಡೆಯುತ್ತಿರುವುದು. ಸಂಯುಕ್ತ ಪ್ರಾಂತದ ನೈನಿತಾಲಿನಲ್ಲಿ ಕಾಂಗ್ರೆಸ್ ಮುಖಂಡರನ್ನು ತರಬೇತಿ ಮಾಡುವ ಶಿಬಿರವೊಂದನ್ನು ಪಂಡಿತ ಜವಾಹರಲಾಲರು ತೆರೆದಿರುತ್ತಾರೆ. ಇಲ್ಲಿ ತರಬೇತಾದವರು ಪ್ರಾಂತಿಕ ಬೇರೆ ಬೇರೆ ಕಡೆಗಳಿಗೆ ಹೋಗಿ ಇತರರನ್ನು ತರಬೇತಿ ಮಾಡುತ್ತಾರೆ. ಕಾಂಗ್ರೆಸ್ ಪ್ರಸಿಡೆಂಟರು ಮಾರ್ಚ ತಾ. 31ರಲ್ಲಿ ಈ ಶಿಬಿರವನ್ನು ಸಂದರ್ಶಿಸಿದರು. ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಎಗ್ಸಿಕ್ಯೂಟಿವ್ ಕಮಿಟಿಯವರು ಸಭೆ ಸೇರಿ ಸತ್ಯಾಗ್ರಹ ಕಮಿಟಿಯನ್ನು ಸ್ಥಾಪಿಸಿರುವರು. ಮತ್ತು ಪ್ರಾಂತದ ಬೇರೆ ಬೇರೆ ಕಡೆಗಳಲ್ಲಿ ಈ ಕಮಿಟಿಗಳನ್ನು ಸ್ಥಾಪಿಸಿ ಸತ್ಯಾಗ್ರಹಿಗಳನ್ನು ಸೇರಿಸಿ ಶ್ರೀ ಶಂಕರರಾವ್ ದೇವರನ್ನು ನೇಮಿಸಿರುವರು. ಕರಾಚಿ ಜಿಲ್ಲಾ ಕಾಂಗ್ರೆಸ್ ಕಮಿಟಿಯವರ, ಸಿಂಧಿ ಪ್ರಮುಖ ಕಾಂಗ್ರೆಸ್ ಮುಖಂಡರುಗಳನ್ನೊಳಗೊಂಡ 16 ಮಂದಿಯ ಕಮಿಟಿಯೊಂದನ್ನು ಆರಿಸಿ ಈ ಕಮಿಟಿಯವರು ಸ್ವಯಂಸೇವಕರನ್ನು ಸೇರಿಸಿ ಗಾಂಧಿಜಿಯವರು ಸೂಚಿಸಿರುವ ಕಾರ್ಯಕ್ರಮವನ್ನು ಜಾರಿಗೆ ತರಬೇಕೆಂದು ನಿರ್ಧರಿಸಿರುವರು. ಸಂಯುಕ್ತ ಪ್ರಾಂತದ ಕಾಂಗ್ರೆಸ್ ಕಮಿಟಿಯ ಕಾರ್ಯನಿರ್ವಾಹಕ ಮಂಡಲಿಯವರು ಸಭೆ ಸೇರಿ ಸತ್ಯಾಗ್ರಹ ಕಮಿಟಿಗಳನ್ನು ಶೀಘ್ರವಾಗಿ ಸ್ಥಾಪಿಸುವ ನಿರ್ಧಾರ ಮಾಡಿರುವರು.

ಫಿನ್ನಿಶ್ ಯುದ್ಧದಿಂದಾದ ಸೈನಿಕರ ನಾಶ

ಫಿನ್‌ಲೆಂಡ್ ಮತ್ತು ರಶ್ಯಗಳೊಳಗೆ ಸುಮಾರು 3 ತಿಂಗಳುಗಳ ವರೆಗೆ ಭೀಕರವಾಗಿ ನಡೆದ ಕದನದಲ್ಲಿ 15,795 ಸೋವಿಯೆಟ್ ಸೈನಿಕರು ಕೊಲ್ಲಲ್ಪಟ್ಟು 158,863 ಮಂದಿ ಗಾಯಗೊಂಡಿರುವರು. ಈ ಯುದ್ಧದಲ್ಲಿ ಹತರಾದ ಫಿನ್ನಿಶ್ ಸೈನಿಕರ ಸಂಖ್ಯೆಯು 60,000ಕ್ಕಿಂತ ಮಿಕ್ಕಿರುವುದೂ 250,000ದ ಜನ ಗಾಯಗೊಂಡಿರುವರೆಂದೂ ಅಂದಾಜುಮಾಡಲಾಗಿದೆ. ಕೇವಲ 15,000 ಜನರು ಮಾತ್ರ ಕೊಲ್ಲಲ್ಪಟ್ಟರೆಂಬ ಫಿನ್ನರ ಹೇಳಿಕೆಯನ್ನು ನಂಬಲು ಸಾಧ್ಯವಿಲ್ಲ.

ಚೈನದಲ್ಲಿ ಗೊಂಬೆ ರಾಜ್ಯಭಾರ

ಮಾರ್ಚ ತಾ. 30ರಲ್ಲಿ ನಾನ್ಕಿಂಗಿನಲ್ಲಿ ಜಪಾನು ಚೈನದಲ್ಲಿ ಸ್ಥಾಪಿಸಿರುವ ವಾಂಗ್ ಚಿಂಗ್ ವೈಯವರ ರಾಜ್ಯಭಾರವು ಈಗ ಆರಂಭವಾಗಿರುವುದು. ಇದನ್ನು ಲೋಕದ ಇತರ ರಾಷ್ಟ್ರಗಳು ಅಂಗೀಕರಿಸುವಂತೆ ಜಪಾನು ಒತ್ತಾಯ ಪಡಿಸುತ್ತಿರುವುದು. ಜಪಾನ ಕೈಗೊಂಬೆಯಾಗಿ ಚೀನಿ ರಾಷ್ಟ್ರ ವಿನಾಶಕವಾದ ಈ ರಾಜ್ಯಭಾರವನ್ನು ಅಂಗೀಕರಿಸಬಾರದೆಂದು ಚೀನಿ ರಾಷ್ಟ್ರೀಯ ಸರಕಾರವು ಇತರ ರಾಷ್ಟ್ರಗಳೊಡನೆ ವಿನಂತಿ ಮಾಡಿಕೊಂಡಿರುವುದು. ಅಮೇರಿಕ ಮತ್ತು ಇಂಗ್ಲೆಂಡುಗಳು ವಾಂಗ್ ಚಿಂಗರ ಸರಕಾರವನ್ನು ಅಂಗೀಕರಿಸಲು ಸಾಧ್ಯವಿಲ್ಲೆಂದು ತಿಳಿಸಿರುವವು.

ನೋಟೀಸು.

ಕಾಸರಗೋಡು ಡಿ ಮು. ಕೋರ್ಟಿನಲ್ಲಿ

ಕ್ರಮನಂಬ್ರ 1 ¹ ₋

ವಸ್ತೀವಭಟ್ಟ ಕೂಡಾ — ವಾದಿರು

ಮತ್ತು

ಅಚ್ಯುತಭಟ್ಟ ಕೂಡಾ — ಪ್ರತಿವಾದಿರು

ಇವರೊಳಗೆ —

ಸದ್ರಿ ವ್ಯಾಜ್ಯದ ಡಿಕ್ರಿಯಲ್ಲಿ [illegible] ದನಿಪ್ಪು [illegible] 4ನೇ ಪ್ರತಿವಾದಿ [illegible] ಭಟ್ಟ 1 [illegible] 7ನೇ ಪ್ರತಿವಾದಿ [illegible] ಭಟ್ಟ, 1 8ನೇ ಪ್ರತಿವಾದಿ [illegible] ಭಟ್ಟ 1 9ನೇ ಪ್ರತಿವಾದಿ [illegible] ಭಟ್ಟ 1 ಹೊರತು 4 ಜನರಿಗೆ ಈ ಮೂಲಕ ತಿಳಿಯಪಡಿಸುವದೇನಂದರೆ —

[illegible] ಗೇ ತಾ 1940 8 4 ನೇ [illegible] 12 4 40ಕ್ಕೆ ಆಪ್ಪರು ತನ್ನ ಬಗ್ಗೆ ಇಟ್ಟಿರುವದರಿಂದ ಸದ್ರಿ ವ್ಯಾಜ್ಯದಲ್ಲಿ ನಿಮಗೆ ಸ್ವಂತವಾಗಿ ವಗೈರ ಕೊಟ್ಟು ಉದಾಹರಿಸಲಿಕ್ಕಿದ್ದರೆ ಸದ್ರಿ ತಾರೀಕಿಗೆ ಕೋರ್ಟು ಮುಂದೆ ಉಪಸ್ಥಿತರಾಗಿ [illegible] ಇಲ್ಲವಾದರೆ ಸದ್ರಿ ನಿಮ್ಮ ಗೈರುಹಾಜರಿಯಲ್ಲಿ ಎಕ್ಸ್‌ಪಾರ್ಟಿಯಾಗಿ ತೀರ್ಮಾನಿಸಲಾಗುವುದು.

S Lakshman Rao

ವಾದಿರ ಕಡೆ ವಕೀಲ

ಕಾಸರಗೋಡು, ತಾ 2 4 1940.

NOTICE.

In the Court of District Munsiff, Puttur.

O P. 3/1940

Bipathumma — *Petitioner.*

[illegible] wife of He[illegible] Ibrahi Beary and daughter of Bulladka Hammade Beary Bundar Village Puttur Taluk — *Respondent*

Please take notice that the above petition for grant of a Succession certificate under section 3 2 of Act 39 25 filed by petitioner to collect the amounts due to her deceased husband Bulladka Hammade Beary stands posted for hearing to [illegible]—40 at 10 A. M. If persons interested in objecting to the grant fail to appear and contest on the said date orders will be passed exparte.

(Sd) H Pundarik Bhat,

Pleader for Petitioner

30—3—40

ದಕ್ಷಿಣ ಕನ್ನಡ

ಮಂಗಳೂರು

(ನಮ್ಮ ಸ್ವಂತ ವರದಿಗಾರರಿಂದ)

ಮಂಗಳೂರು, ತಾ 1 4 1940

ಮಣ್ಣಗುಡ್ಡೆ ಮ್ಯುನಿಸಿಪಲ್ ಶಾಲೆಗೆ ಹೊಸ ಕಟ್ಟಡ— ಮಂಗಳೂರು ಪೇಟೆಗೆ ಸೇರಿದ ಮಣ್ಣಗುಡ್ಡೆ ಮ್ಯುನಿಸಿಪಲ್ ಶಾಲೆಗೆ ಶ್ರೀ ಫ್ರಾಂಕ್ ಮ್ಯಾಕ್ಸಿಂ ಪಿಂಟೋರವರು ತಮ್ಮ ಖರ್ಚಿನಿಂದ ಕಟ್ಟಿಸಿಕೊಟ್ಟ ಹೊಸ ಕಟ್ಟಡದ ಪ್ರವೇಶೋತ್ಸವವು ಕಳೆದ ತಾ 25ನೇ ಸಾಯಂಕಾಲ ನಗರಸಭೆಯ ಆರೋಗ್ಯ ಸಮಿತಿಯ ಅಧ್ಯಕ್ಷರಾಗಿದ್ದ ಡಾ. ಸುಬ್ರಾಯ ಬಾಳಿಗರವರಿಂದ ನೆರವೇರಿಸಲ್ಪಟ್ಟಿತು. ನಗರಸಭಾಧ್ಯಕ್ಷರಾದ ಶ್ರೀ ಬಿ ವಿ ಬಾಳಿಗ ಯಂ. ಎಲ್. ಎ. ಯವರು ಅಧ್ಯಕ್ಷತೆ ವಹಿಸಿದ್ದರು. ಸಭಾಧ್ಯಕ್ಷರು ಶ್ರೀ ಪಿಂಟೋರವರ ಧರ್ಮಬುದ್ಧಿಯನ್ನು ಬಹಳವಾಗಿ ಪ್ರಶಂಸಿಸಿ ಮಾತಾಡಿದರು. ಮತ್ತು ಅವರ ಉಚ್ಚ ಮನೋವೃತ್ತಿಯನ್ನು ಇತರರೂ ಅನುಸರಿಸಬೇಕೆಂದರು. ಸಭಿಕರ ಪೈಕಿ ಹಲವರು ಇದೇ ಅಭಿಪ್ರಾಯಗಳನ್ನು ಸೂಚಿಸಿ ಭಾಷಣಮಾಡಿದರು. ಅನಂತರ ಡಾ. ಸುಬ್ರಾಯ ಬಾಳಿಗರು ಶ್ರೀಮಾನ್ ಪಿಂಟೋರವರು ತಮ್ಮ ಧನವನ್ನು ಲೋಕೋಪಕಾರದ ಕೆಲಸಗಳಿಗೆ ಉಪಯೋಗಿಸುತ್ತಿರುವರೆಂದೂ, ಈ ಶಾಲೆಯ ಒರದ ಪುಸ್ತ ಮ್ಯಾಕ್ಸಿಂ ಪಿಂಟೋ ಹಾಲ್ ಎಂಬ ಕಟ್ಟಡವೇ ಇದಕ್ಕೆ ಸಾಕ್ಷಿಯೆಂದೂ, ಶ್ರೀ ಪಿಂಟೋರವರ ಕೀರ್ತಿಯು ಆಚಂದ್ರಾರ್ಕವಾಗಿ ವರ್ಧಿಸಲೆಂದೂ ಹೇಳಿ, ಸಭಿಕರ ಜಯಕಾರದೊಡನೆ ಕಟ್ಟಡದ ಪ್ರವೇಶೋತ್ಸವವನ್ನು ನೆರವೇರಿಸಿದರು. ಅನಂತರ ಬಂದಿದ್ದ ಅಧಿಕಾರಿಗಳಿಗೂ ಅನಧಿಕಾರಿಗಳಿಗೂ ಮತ್ತು ವಿದ್ಯಾರ್ಥಿಗಳಿಗೂ ಟೀಪಾರ್ಟಿ ಸತ್ಕಾರದ ಬಳಿಕ ಧನ್ಯವಾದ ಸಮರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ರಾಮಗಡ ಕಾಂಗ್ರೆಸಿನ ವಿಷಯ ಉಪನ್ಯಾಸ— ನಮ್ಮ ಜಿಲ್ಲೆಯ ಪ್ರತಿನಿಧಿಗಳಾಗಿ ರಾಮಗಢ ರಾಷ್ಟ್ರಾಧಿವೇಶನಕ್ಕೆ ಚಿತ್ತೈಸಿದ್ದ ಶ್ರೀ। ಯು. ಧರ್ಮರಾಜ ಅಧಿಕಾರಿಗಳು ಕಳೆದ ತಾ 26ರಲ್ಲಿ ಕಾಂಗ್ರೆಸಿನಲ್ಲಿ ನಡೆದ ಅನುಭವಗಳನ್ನು ಮಂಗಳೂರ ಪುರಜನರಿಗೆ ತಿಳಿಸಿದರು. ಶ್ರೀ ಕೊಪ್ಪ [illegible] ಶೆಟ್ಟಿಯವರು ಅಧ್ಯಕ್ಷತೆ ವಹಿಸಿದ್ದರು. ಸಭೆಯು ಆರಂಭವಾಗುವ ಮುಂಚೆ ದಿವಂಗತ ಯಾಕೂಬ್ ಹಸನರ ವಿಷಯದಲ್ಲಿ ದುಃಖಸೂಚಕ ಠರಾವನ್ನು ಅಧ್ಯಕ್ಷರು ಸೂಚಿಸಿದರು. ಶ್ರೀ ಎಸ್. ಎನ್. ಹೊಳ್ಳರು ಮಿ। ಯಾಕೂಬ್ ಹಸನರ ಜೀವನ ಚರಿತ್ರೆಯನ್ನು ಸಂಕ್ಷೇಪವಾಗಿ ನುಡಿದು ಅನುಮೋದಿಸಿದರು. ಠರಾವು ಸರ್ವಾನುಮತದಿಂದ ಮಂಜೂರಾಯಿತು. ಆ ಮೇಲೆ ಶ್ರೀ ಧರ್ಮರಾಜ ಅಧಿಕಾರಿಗಳು ಬಂದ ಮರೆ ತಾಸುಗಳ ವರೆಗೆ ಭಾಷಣ ಮಾಡುತ್ತಾ ರಾಮಗಢದಲ್ಲಿ ತಾವು ಹೊಂದಿದ ಅನುಭವಗಳನ್ನು ಸೂಚಿಸಿ, ಸದ್ಯದಲ್ಲಿಯೇ ಮಹಾತ್ಮರು ಸ್ವಾತಂತ್ರ್ಯ ಸಮರವನ್ನು ಹೂಡಲು ನಿರ್ಧರಿಸುವರೆಂದು ತಮಗೆ ತೋರಿದೆಯೆಂದೂ, ಪ್ರತಿಯೊಂದು ಕಡೆಯಲ್ಲಿಯೂ ಕಾಂಗ್ರೆಸ್ ಪಕ್ಷದವರು ತಮ್ಮ ಒಳಜಗಳವನ್ನು ಬಿಟ್ಟು ದೇಶದ ಸ್ವಾತಂತ್ರ್ಯ ಸಮರದಲ್ಲಿ ಸಕಲರೂ ಒಂದಾಗಿ ಸೇರುವುದು ಆವಶ್ಯಕವೆಂದೂ ಹೇಳಿದರು. ಶ್ರೀ ಎಸ್ ಎನ್ ಹೊಳ್ಳರು ರಾಮಗಢ ಕಾಂಗ್ರೆಸಿನಲ್ಲಾದ ಠರಾವನ್ನು ಜನರಿಗೆ ವಿವರಿಸಿ ಹೇಳಿದರು. ಬಳಿಕ ಕೆಲವರು ಮಾತಾಡಿದ ಮೇಲೆ ಅಧ್ಯಕ್ಷರ ಸಮಯೋಚಿತ ಭಾಷಣದೊಂದಿಗೆ ಸಭೆ ಮುಕ್ತಾಯವಾಯಿತು.

ಆಗಮನ— ಕಳೆದ ವಾರ ಮಂಗಳೂರ ಸಾಯಂಕಾಲ ಸ್ಕೂಲ್ಸ್ ಬರಿಸನ ಪರಿಷತ್ತಿನ ನಿಯೋಜಿತ ಅಧ್ಯಕ್ಷರಾದ ಶ್ರೀ ವಿ ಬ ಮಾಧವನ್ ಪಿಳ್ಳೆಯವರು ಮಂಗಳೂರಿಗೆ ಚಿತ್ತೈಸಿದರು. ಶ್ರೀಯುತರನ್ನು ಎ ಬಿ. ಶೆಟ್ಟಿ, ಯಂ ಎಲ್ ಎ, ಡಾ ಕೆ ವಿಟಲ ಶೆಟ್ಟಿ, ಕೆ ಈಶ್ವರ ಯಂ ಎಲ್ ಎ, ಡಾ ಎಚ್ ವಿ ಅಡಪ ಇವರೇ ಮೊದಲಾದ ಮಹನೀಯರು ಅವರನ್ನು ಸ್ವಾಗತೀಕರಿಸಿದರು. ಶ್ರೀ. ಈಶ್ವರನವರು ಶ್ರೀ ಪಿಳ್ಳೆಯವರಿಗೆ ಹೂವಿನ ಹಾರವನ್ನು ಹಾಕಿ ಸತ್ಕರಿಸಿದರು.

ಬಿಶೋಪರ ಉಪದೇಶ— ಕಳೆದ ತಾ 29ರಲ್ಲಿ ಲೇಡಿ ಹಿಲ್ ಸೇಂಟರಿ ಶಾಲೆಯ ವಾರ್ಷಿಕೋತ್ಸವವು ಮಂಗಳೂರಿನ ಪೂಜ್ಯ ಬಿಶೋಪರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ವರದಿ ವಾಚನಗಳಾದ ಮೇಲೆ ಬಹುಮಾನ ವಿತರಣೆಯಾಯಿತು. ಅನಂತರ ಅಧ್ಯಕ್ಷರು ಭಾಷಣಮಾಡುತ್ತಾ, ಕೆಥೋಲಿಕರ ಮಕ್ಕಳಿಗೆ ಕೆಥೊಲಿಕ್ ವಿದ್ಯಾಭ್ಯಾಸವನ್ನು ಕೆಥೊಲಿಕರೇ ಕೊಡತಕ್ಕದ್ದು, ಕೆಥೊಲಿಕ ಶಾಲೆಯಲ್ಲಿ ಕೆಥೊಲಿಕರಿಂದಲೇ ವಿದ್ಯೆಯನ್ನು ಕಲಿಯಬೇಕೆಂದೂ, ಇತರ ಶಾಲೆಗಳಲ್ಲಿ ಕೆಥೊಲಿಕರಿಗೆ ಬೇಕಾದ ವಿದ್ಯೆ ದೊರೆಯಲಾರದೆಂದೂ, ಆದುದರಿಂದ ಇತರ ಶಾಲೆಗಳಿಗೆ ಮಕ್ಕಳನ್ನು ಕಳುಹದೆ, ಕೆಥೊಲಿಕರ ಹುಡುಗಿಯರನ್ನು ಲೇಡಿ ಹಿಲ್ ಶಾಲೆಗೆ, ಇಲ್ಲವೆ ಸೈಂಟ್ ಆಗ್ನೆಸ್ ಕಾಲೇಜಿಗೆ ಸೇರಿಸಬೇಕೆಂದೂ ಹೇಳಿದರು. ಅನಂತರ ಮಕ್ಕಳ ವಿವಿಧ ಚಟುವಟಿಕೆಗಳಾಗಿ ಧನ್ಯವಾದ ಸಮರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಶ್ರೀ ಸುಬ್ರಹ್ಮಣ್ಯ ಮಠದ ಗುರುಗಳು— ಶ್ರೀ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾತೀರ್ಥ ಶ್ರೀಪಾದಂಗಳವರು ಮಂಗಳೂರಲ್ಲಿಯೇ ಇರುವರು. ಇವರನ್ನು ಶಿಷ್ಯವೃಂದದವರು ಅತ್ಯಂತ ಆದರದಿಂದ ಬರಮಾಡಿ [illegible]ದು ಪಾದಪೂಜೆಮಾಡಿ, ಭಿಕ್ಷಾದಿಗಳನ್ನು ಕೊಟ್ಟು ಗುರುಕಟಾಕ್ಷಕ್ಕೆ ಪಾತ್ರರಾಗುತ್ತಿರುವರು.

ಮಂಗಳೂರು ನಗರಸಭೆ— ಮಂಗಳೂರು ನಗರಸಭೆಯ ಸಾಮಾನ್ಯ ಸಭೆಯೊಂದು ಕಳೆದ ಶನಿವಾರ (ತಾ 30) ಸಾಯಂಕಾಲ ನಡೆಯಿತು. ಚೇರ್ಮೇನರಾದ ಶ್ರೀ ಬಿ ವಿ ಬಾಳಿಗ ಯಂ. ಎಲ್. ಎ. ಇವರು ಅಗ್ರಾಸನ ವಹಿಸಿದ್ದರು. ಸಾಮಾನ್ಯ ವಿಷಯಗಳನ್ನು ತೀರ್ಮಾನಿಸಿದ ಅನಂತರ ಸರಕಾರಿ ಟ್ರೇಡ್ ಸ್ಕೂಲಿನಲ್ಲಿ ಕಲಿಯುವ ಆರು ಮಂದಿ ವಿದ್ಯಾರ್ಥಿಗಳಿಗೆ ವೇತನಕೊಡಲು ರೂ 66 ನ್ನು ಮಂಜೂರು ಮಾಡಿದರು. ಆ ಬಳಿಕ ಒಂದು ಮನೆಯ ಗೋಡೆಯನ್ನು ತೆಗೆದು ಒಂದು ಕಿಟಕಿಯನ್ನೋ ಅಥವಾ ಗೋ[illegible]ಸಿದರೆ ಅದು ಹೊಸ ಕಟ್ಟಡವಾಗಿ ಪರಿಗಣಿಸಬಹುದೇ? ಎಂಬ ವಿಷಯದಲ್ಲಿ ಚರ್ಚೆ ನಡೆಯಿತು. ಶ್ರೀ ಯು. ಮಾಧವರಾಯರು ಮಾತಾಡುತ್ತಾ, ನಗರಸಭೆಯು ಇಂತಹ ಪ್ರಶ್ನೆಯನ್ನು ಮೊದಲೇ ನಿರ್ಧಾರ ಮಾಡಿದೆಯೆಂದೂ, ಒಂದು ಕಿಟಕಿ ಅಥವಾ ಬಾಗಿಲನ್ನು ಇಡಿಸಿದರೆ, ಅಥವಾ ಬದಿಯ ಜಂತಿಗಳನ್ನು ತೆಗೆದು ಮರದವುಗಳನ್ನು ಹಾಕಿಸಿದರೆ ಅದು ಮರಾಮತ್ತಿಯಾಗಿ ಪರಿಗಣಿಸಬೇಕೆಂದರು. ಮಿ. ಸಿ ಎಲ್ ಲೋಬೋರವರು ಈ ಪ್ರಶ್ನೆಯನ್ನು ಇನ್ನೂ ಚೆನ್ನಾಗಿ ವಿಚಾರಿಸಿ ತಿಳಿಯುವ ಬಗ್ಗೆ ಸಮಯ ಬೇಕೆಂದರು. ಚೇರ್ಮೇನರು ಉತ್ತರ ಕೊಡುತ್ತಾ, ಈ ಪ್ರಶ್ನೆಯಲ್ಲಿ ವಿಶೇಷವಾಗಿ ತಿಳಿಯತಕ್ಕ ವಿಚಾರವೇನೂ ಇಲ್ಲವೆಂದೂ, ಕಿಟಕಿ, ಬಾಗಿಲುಗಳನ್ನಿಡುವುದು ಸಾಮಾನ್ಯ ರಿಪೇರಿ ಎಂದು ನಗರಸಭೆಯು ಈ ಮೊದಲೇ ನಿರ್ಧರಿಸಿದೆಯೆಂದೂ, ಅದರಲ್ಲಿಯೂ ಕೂಡ ರಸ್ತೆಯ ಬದಿಯಲ್ಲಿಲ್ಲದ ಕಟ್ಟಡಗಳಲ್ಲಿ ಯಾವ ಬಗೆಯ ಮಾರ್ಪಾಟನ್ನು ಮಾಡುವುದಕ್ಕೂ ಅಭ್ಯಂತರವಿಲ್ಲವೆಂದೂ, ರಸ್ತೆಯ ಬದಿಯಲ್ಲಿರುವ ಕಟ್ಟಡಗಳಲ್ಲಿಯೂ ಕೂಡ ಮೇಲೆ ಹೇಳಿದ ರೀತಿಯ ಚಿಲ್ಲರೆ ರಿಪೇರಿಯನ್ನು ಪ್ರತ್ಯೇಕ ಕಟ್ಟಡವೆಂದು ಎಣಿಸುವುದು ಸರಿಯಲ್ಲವೆಂದೂ ಹೇಳಿದರು. ಅಲ್ಲಿಗೆ ಚರ್ಚೆಯು ಮುಗಿಯಿತು. ಸಭಾರಂಭದಲ್ಲಿ ಚೇರ್ಮೇನರು ದಿವಂಗತ ಯಾಕೂಬ್ ಹಸನರ ವಿಷಯದಲ್ಲಿ ಸಂತಾಪ ಸೂಚಿಸಿ ತಂದ ಠರಾವು ಪಾಸಾಯಿತು. ಸಭಾಂತ್ಯದಲ್ಲಿ ಅಧ್ಯಕ್ಷರು, ನಗರಸಭೆಯವರು ವಿದ್ಯುತ್ತಿಗೆ ಕಾಳಿಯು ಕೇಳಿದ ಅನುಕೂಲತೆಯನ್ನು ಸರಕಾರದವರು ದಯಪಾಲಿಸಿರುತ್ತಾರೆಂದು ತಿಳಿಸಿದರು.

ವ್ಯಾಪಾರಿಗಳಿಗೆ ಜುಲುಮಾನೆ— ಸೆಂಟ್ರಲ್ ಮಾರ್ಕೇಟಿನಲ್ಲಿ ಕಟ್ಟಿದ್ದರಿಂದ ಹೊರಗೆ ವಸ್ತುಗಳನ್ನು ಮಾರಿದಂತ ಕಾರಣದಿಂದ ಕೆಲವು ವ್ಯಾಪಾರಿಗಳ ಮೇಲೆ ನಗರಸಭೆಯವರು ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಮಾಡಿದ್ದ ದಾವೆಯ ತೀರ್ಪು ತಾ. 30ರಲ್ಲಿ ಕೊಡಲ್ಪಟ್ಟಿತು. ವ್ಯಾಪಾರಿಗಳಿಗೆ ತಲಾ ಒಂದು ರೂಪಾಯಿಯಂತೆ ಜುಲುಮಾನೆ ವಿಧಿಸಿದ್ದಾರೆ.

ಉಡುಪಿ

ತಿದ್ದುಪಡಿ— ಕಳೆದ ವಾರದ ನವಯುಗದಲ್ಲಿ ಶ್ರೀ ವಾದಿರಾಜ ಸ್ವಾಮಿಗಳ ಜನ್ಮೋತ್ಸವವು ತಾರೀಕು 26 3 40ರಲ್ಲಿ ಜರಗಿತೆಂದು ಪ್ರಕಟವಾಗಿದೆ. ಇದು ಶ್ರೀ ವಾದಿರಾಜರ ಪುಣ್ಯತಿಥಿಯೆಂದಾಗಬೇಕು.

ಶ್ರೀ. ದಾಬೋಳ್ಕರರಿಗೆ ಸತ್ಕಾರ ಕೂಟ— ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಡೈರೆಕ್ಟರ ಮಂಡಳಿಯು ತಾ 27 3 '40 ರಲ್ಲಿ ಬೇಂಕಿನ ಮಹಡಿಯಲ್ಲಿ ಬೊಂಬಾಯಿಯ ಶ್ರೀ ಲಕ್ಷ್ಮೀಕಾಂತ ಶಾಂತಾರಾಮ ದಾಬೋಳ್ಕರರಿಗೆ ಸುಸ್ವಾಗತವನ್ನು ಬಯಸಿ ಟೀಪಾರ್ಟಿ ಸತ್ಕಾರವನ್ನಿತ್ತು ಗೌರವಿಸಿತು. ಊರ ಪ್ರಮುಖರನೇಕರು ಈ ಸಮಾರಂಭಕ್ಕೆ ಆಮಂತ್ರಿತರಾಗಿದ್ದರು. ಬೇಂಕಿನ ಮೆನೇಜಿಂಗ್ ಡೈರೆಕ್ಟರಾದ ಡಾ। ಮಾಧವ ಪೈಗಳು ಜಿಲ್ಲೆಯ ಬೇಂಕುಗಳ ಮತ್ತು ಈ ಸಿಂಡಿಕೇಟು ಬೇಂಕಿನ ಕಾರ್ಯಕಲಾಪಗಳ ಕುರಿತು ವಿವರವಾದ ವರದಿಯನ್ನೋದಿದ ಬಳಿಕ ಸನ್ಮಾನ್ಯ ಅತಿಥಿಗಳು ಹಾಜರಿದ್ದವರ ಪರಿಚಯ ಮಾಡಿಕೊಂಡು, ಭಾಷಣಕೊಡುತ್ತ ಸಿಂಡಿಕೇಟ್ ಬೇಂಕಿನ ಪ್ರಶಂಸನೀಯ ಕೆಲಸಗಳ ಕುರಿತು ಬೊಂಬಾಯಿಯ ತಮ್ಮ ಮಿತ್ರಮಂಡಳಿಗೆ ತಿಳಿಸುವೆನಾಗಿ ಸೂಚನೆಯಿತ್ತರು. ಅವರ ಉತ್ತರ ಭಾಷಣದ ಪರವಾಗಿ ಶ್ರೀ ಎ ಲಕ್ಷ್ಮೀನಾರಾಯಣ ರಾಯರು ಚಿಕ್ಕ ಭಾಷಣವಿತ್ತ ಬಳಿಕ ದಾ[illegible] ಪೈಗಳವರ ಧನ್ಯವಾದ ಪೂರ್ವಕವಾಗಿ ಸತ್ಕಾರಕೂಟವು ಕೊನೆಗೊಂಡಿತು.

ಹಿಂದುಸ್ಥಾನ ಸ್ಕೌಟ್ ಎಸೋಸಿಯೇಶನ್— ಇದರ ಶಾಖೆಯೊಂದನ್ನು ಉಡುಪಿಯಲ್ಲಿ ಸ್ಥಾಪಿಸುವ ಬಗ್ಗೆ ತಾ. 30 3 1940-ರಲ್ಲಿ ಬೋರ್ಡ ಹೈಸ್ಕೂಲಿನಲ್ಲಿ ಒಂದು ಸಭೆ ಸೇರಿತು. ವಕೀಲ ಶ್ರೀ. ವಿಠಲ ಕಾಮತರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕಾರೀ ಮಂಡಳಿಗೆ ಶ್ರೀಗಳಾದ ವಿಠಲ ಕಾಮತ್ (ಪ್ರೆಸಿಡೆಂಟ್) ಡಾ। ಸುಂದರರಾಮ ಶೆಟ್ಟಿ ಮತ್ತು ನಗರ ರಾಮರಾವ್ (ವೈಸ್ ಪ್ರೆಸಿಡೆಂಟರು) ಲಕ್ಷ್ಮ[illegible] (ಕಾರ್ಯದರ್ಶಿ) ಮೊದಲಾದವರನ್ನು ಆರಿಸಲಾಯಿತು. ಹಾಜರಿದ್ದ [illegible] ಸ್ವಾಗತವಾಗಿ 'ರೋವರ್ ಕಂಪೆನಿ' ಸ್ಥಾಪಿಸಲಾಯಿತು. ಶ್ರೀ ಟಿ ಎಮ್ ಪೈಗಳನ್ನು ಅಸಿಸ್ಟೆಂಟ್ ಸ್ಕೌಟ್ ಕಮಿಷನರರ ಸ್ಥಳಕ್ಕೆ ಸೂಚಿಸಲಾಯಿತು. ಮಂಗಳೂರಿನ ಶ್ರೀ. ಎಸ್. ಎಸ್. ಮಾಧವರಾಯರೂ ಸಹ ಹಾಜರಿದ್ದರು.

ಉಡುಪಿ ಮುನಿಸಿಪಲ್ ಕೌನ್ಸಿಲು ಸಭೆ— ತಾ 30 3 40ರಲ್ಲಿ ಚೆಯರ್ಮೆನ ಶ್ರೀ ಎ ಎಲ್ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಮೊಲನಾ ಯಾಕೂಬ ಹಸನರ ಮರಣದ ಕುರಿತು ದುಃಖಸೂಚಕ ಠರಾವು ಮಾಡಲಾಯಿತು. ಮದ್ಯಪಾನ ನಿಷೇಧ ಪ್ರಸ್ತಾಪವನ್ನು ಪ್ರಕೃತ ಮುಂದರಿಸಲಾಯಿತು. ಸಂತೆಕಟ್ಟೆ ಆಸ್ಪತ್ರೆಯನ್ನು ಕಡಿಯುವ ವಿಷಯದಲ್ಲಿ ಹೆಚ್ಚು ಮಂದಿ ಪ್ರತಿಕೂಲ ಅಭಿಪ್ರಾಯವಿತ್ತುದರಿಂದ ಚೆಯರ್ಮೆನರು ಸಹ ಹಾಗೆಯೇ ಆಗಲೆಂದರು.

ಪ್ರಖ್ಯಾತ ದಂತವೈದ್ಯ, ಶ್ರೀ ಕೆಂಚಂಗಾಲ್, ಚೀನ ಅಮಿನಾನರು

ಇವರು ಕೆಲವು ಸಮಯದ ಮೊದಲು ಮುಂಬಯಿಗೆ ಬಂದಿದ್ದು ಪುನಃ ಊರಿಗೆ ತೆರಳುವವರು. ಇವರು ದಂತವಿಜ್ಞಾನದಲ್ಲಿ ನಿಪುಣರು ಮತ್ತು ಪ್ರಖ್ಯಾತ ವೈದ್ಯರಾಗಿ ಮುಂಬಯಿಯ ಕನ್ನಡಿಗರ ಸೇವೆಯನ್ನು ಇಂದಿಗೆ ಮೂವತ್ತು ವರುಷಗಳಿಂದ ಮಾಡುತ್ತಿದ್ದರು. ಹಲ್ಲಿನ ಯಾವತ್ತು ರೋಗವನ್ನು ನಿವಾರಿಸುವುದು ತಿದ್ದು ಕೃತಕ ದಂತಗಳನ್ನು ನಿರ್ಮಿಸುವುದು ಸಿಂಗಾಣಿ ಹಲ್ಲು ಮಾಡಿಕೊಡುವುದು, ಹಲ್ಲುಗಳನ್ನು ಕಿತ್ತು ಮಾಡುವುದು ಮೊದಲಾದ ಯಾವತ್ತೂ ದಂತಚಿಕಿತ್ಸೆಯಲ್ಲಿ ಹೆಸರು ಪಡೆದವರು. ಇವರಿಗೆ ಸ್ವಲ್ಪಾಂಶ ಸಹ ಕನ್ನಡ ಬಂಧುಗಳು ಹೆಚ್ಚಿನ ಪ್ರೋತ್ಸಾಹವೀಯುವರೆಂದು ನಂಬಲಾಗಿದೆ.

ಎಲ್ಲೂರು— ಇದೇ ತಾ. 5-4-40ರಿಂದ ತಾ 18 4-40ರ ವರೆಗೆ ಸ್ಥಳೀಯ ಶ್ರೀ ವಿಶ್ವನಾಥ ದೇವಸ್ಥಾನದಲ್ಲಿ ವರ್ಷಂಪ್ರತಿ ಜರಗತಕ್ಕ ಸಂಜೆ ಬಲಿಯಿಂದಾರಂಭಿಸಿ, ಕ್ರಮವಾಗಿ ನಿಯಮಿತ ದಿವಸಗಳಲ್ಲಿ ಧ್ವಜಾರೋಹಣ, ರಥೋತ್ಸವ, ಅವಭೃತಾದಿ ಮಹೋತ್ಸವಗಳು ಸಾಂಗವಾಗಿ ನೆರವೇರಲಿರುವುದಾಗಿಯೂ, ಭಜಕವೃಂದವು ಎಂದಿನಂತೆ ಬಂದು ಶ್ರೀ ದೇವರ ಕೃಪಾಪಾತ್ರರಾಗಲೆಂದೂ ಮೊಕ್ತೇಸರರು ಕೋರುತ್ತಾರೆ.

ಕುಂದಾಪುರಿನ ಬಳಿ ನಿವಾಸಿಕರ ಗೋಳು— ಕುಂದಾಪುರ ಕಸಬಿನ ಬಾಗಿಲಿನಿಂದ 3 ಫರ್ಲಾಂಗ್ ವರೆಗೆ ಇರುವ ರಾಜರಸ್ತೆಯು ಬಹಳ ಸಪೂರವಾಗಿಯೂ ಇಕ್ಕಟ್ಟಾಗಿಯೂ ಇರುತ್ತದೆ. ಸದ್ರಿ ರಸ್ತೆಯಲ್ಲಿ ಮೈಸೂರು ಜಿಲ್ಲೆಯಿಂದ ಆರು ಚಕ್ರಗಳುಳ್ಳ 13 ಮೋಟಾರ್ ಲಾರಿಗಳನ್ನು ಯಾವಾಗಲೂ ಹಗಲೂ ರಾತ್ರಿ ಅತಿ ಸ್ಪೀಡಿನಿಂದ ಬಿಡುತ್ತಾರೆ. ಅನೇಕ ತರದ ಕಷ್ಟನಷ್ಟ ಅಪಾಯಗಳೂ ಆಗುತ್ತಲಿರುತ್ತವೆ. ಸದ್ರಿ ರಸ್ತೆಯಲ್ಲಿ ಯಾವಾಗಲೂ ಎತ್ತಿನ ಗಾಡಿಯವರು ಸಹ ಗಾಡಿ ನಿಲ್ಲಿಸಿಕೊಂಡು ಸಾಮಾನು ತೆಗೆಯುವುದು ಇಳಿಸುವುದು ಇತ್ಯಾದಿ ಕೆಲಸಗಳನ್ನು ಮಾಡುತ್ತಾರೆ. ಆ ಸಂಬಂಧ ಮನುಷ್ಯರಿಗೆ ರಸ್ತೆಯಲ್ಲಿ ತಿರುಗಾಡಲಿಕ್ಕೂ ಮತ್ತು ಸೈಕಲು ಸವಾರರು ವಾಹನ ಬಿಡಲಿಕ್ಕೂ ಅತಿ ಕಷ್ಟವಾಗಿಯದೆ. ಇದರ ವಿಷಯ ಈ ವರೆಗೆ ಯಾರೂ ಗಮನ ತೆಗೆದುಕೊಂಡವರಿಲ್ಲ. ಈ ಎಲ್ಲಾ ಸಂಕಷ್ಟಗಳಿಂದ ಪಾರುಮಾಡುವವರಾರೋ ಉಳಿದ ಮಾಗಿದೆ. ಅಧಿಕಾರಿ ವರ್ಗದವರಿಗೆ ಇನ್ನಾದರೂ ಒದಗಲಿ ನಮ್ಮ ಮೇಲೆ ದಯೆ ಬಾರದೇ ಎಂದೊಂದು ಪತ್ರ.

ಕಾರ್ಕಳ— ಸ್ಥಳೀಯ ಶ್ರೀ. ವೆಂಕಟರಮಣ ಹಾಯರ್ ಎಲಿಮೆಂಟರಿ ಮತ್ತು ಹಿಂದೂ ಬಾಲಿಕಾ ಪಾಠಶಾಲೆಗಳ ವಾರ್ಷಿಕೋತ್ಸವವು ಈ ರೇಂಜ ಡಿಪ್ಟಿ ಇನ್ಸ್ಪೆಕ್ಟರ ಶ್ರೀ ಬಿ ವಿ ರಮಣ ಬಿ ಎ, ಯಲ್ ಟಿ ಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಯಲ್ ಯನ್ ಉಪಾಧ್ಯಾಯರು ವರದಿ ವಾಚನಮಾಡಿದರು. ಸಂದರ್ಭೋಚಿತ ಭಾಷಣ, ಸ್ಪರ್ಧಾ ಬಹುಮಾನ ವಿತರಣ, ಕನ್ನಡ, ಹಿಂದಿ, ತುಳು, ಸಂಸ್ಕೃತ ನಾಟಕಪ್ರಹಸನಾದಿಗಳ ಅಭಿನಯ ಇತ್ಯಾದಿ ಬೋಧಪ್ರದ ಮತ್ತು ಮನೋರಂಜಕ ಕಾರ್ಯಕ್ರಮವಿದ್ದಿತು.

ಬೊಂಬಾಯಿಯ ಶ್ರೀಮಂತ ಶ್ರೀ. ಲಕ್ಷ್ಮೀಕಾಂತ ಶಾಂತಾರಾಮ ದಾಬೋಳಕರರವರು ತಾರೀಕು 28 3 40ರ ದಿನ ಇಲ್ಲಿ ಶ್ರೀ. ಕೆ ಸಿ ಶೇಷಗಿರಿ ಪೈಗಳವರ ಸನ್ನಿಧ್ಯ ಅತಿಥಿಗಳಾಗಿ ಸಾರ್ವಜನಿಕ ಸಂಘ ಸಂಸ್ಥೆಗಳಿಗೆ ಸಂದರ್ಶನವನ್ನಿತ್ತು, ಅವುಗಳ ಕಾರ್ಯಕಲಾಪಗಳ ಕುರಿತು ತಮ್ಮ ಸಂತೋಷವನ್ನು ತೃಪ್ತಿಯನ್ನೂ ವ್ಯಕ್ತಮಾಡಿ, ಸಾಯಂಕಾಲ ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಅವರ ಸಮ್ಮಾನಾರ್ಥ ಕೂಡಿದ ಉಪಾಹಾರ ಕೂಟದಲ್ಲಿ ಗೌಡಸಾರಸ್ವತ ಬ್ರಾಹ್ಮಣ ಸಮಾಜದ ಪರವಾಗಿ ಶ್ರೀ. ವಕೀಲ ಕೆ ವೆಂಕಟೇಶ ಪೈಯವರು ಅರ್ಪಿಸಿದ ಅಭಿನಂದನ ಪತ್ರಕ್ಕೆ ಸಂದರ್ಭೋಚಿತ ಸದುತ್ತರವನ್ನಿತ್ತು, ಕಾರ್ಕಳ ಶ್ರೀ ವೆಂಕಟ್ರಮಣ ದೇವಾಲಯದ ಕನ್ನ ಹಿಂಗತೆ ಆದಾಯವನ್ನು ವಿಶ್ವಾಸ ಪ್ರಾಮಾಣಿಕ ಮಹಾಕಾರ್ಯಗಳಿಗೆ ವಿನಿಯೋಗಿಸಿ ಮಾರ್ಗದರ್ಶಕವಾಗಿರುವುದು ಆನಂದಕರವಾಗಿದೆ ಎಂದರು. ದೇವದರ್ಶನ ಇತ್ಯಾದಿ ಪಡೆದು ಮರುದಿನ ಶ್ರೀ ದಾಬೋಳಕರರು ಧರ್ಮಸ್ಥಳಕ್ಕೆ ತೆರಳಿದರು.

ಕಳೆದ ಫೆಬ್ರವರಿ ತಿಂಗಳಲ್ಲಿ ಈ ಕೇಂದ್ರದಲ್ಲಾದ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಾರಂಭಿಕ ಪರೀಕ್ಷೆಗಳನ್ನು ಕೊಟ್ಟ 31 ಮಂದಿಯಲ್ಲಿ ಪ್ರಾಥಮಿಕದಲ್ಲಿ 6ರಲ್ಲಿ 5, ಮಧ್ಯಮದಲ್ಲಿ 14ರಲ್ಲಿ 8 ಮತ್ತು ರಾಷ್ಟ್ರಭಾಷೆಯಲ್ಲಿ 11ರಲ್ಲಿ 10 ಒಟ್ಟು 23 ಮಂದಿ ಉತ್ತೀರ್ಣರಾಗಿದ್ದಾರೆ. ಅವರ ಪೈಕಿ ಶ್ರೀಮತಿ ಸೀತಾದೇವಿಯವರು ಪ್ರಾಥಮಿಕದಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರುವರೆಂದು ಶ್ರೀ ಕಟಪಾಡಿ ಶ್ರೀನಿವಾಸ ಶೆಣೈಯವರು ತಿಳಿಸುತ್ತಾರೆ.

ಎಡ್ವರ್ಡ ಕೊರೊನೇಶನ ಕ್ಲಬ್ಬಿನಲ್ಲಿ ಕಳೆದ ವಾರ ಕೂಡಿದ ಸಾರ್ವಜನಿಕ ಸಭೆಯಲ್ಲಿ ಶ್ರೀ. ಎ. ಬಿ. ಶೆಟ್ಟಿ ಯಂ ಯಲ್ ಎ ರವರು 'ಪ್ರಪಂಚ ಸ್ಥಿತಿ ಮತ್ತು ಅದನ್ನು ಸುಧಾರಿಸುವ ಉಪಾಯಗಳು' ಎಂಬ ಕುರಿತು ಇಂಗ್ಲಿಷಿನಲ್ಲಿ ಒಂದು ಅಮೋಘವಾದ ಭಾಷಣವನ್ನು ಕೊಟ್ಟರು.

ವಿವಿಧ ಸಮಾಚಾರ

ರಶ್ಯವು ಪೆಟ್ರೋಲ್ ಸಂಗ್ರಹಿಸುತ್ತಿದೆ.

ರಶ್ಯದ ಸೋವಿಯೆಟ್ ಸರಕಾರವು ಪೂರ್ವದ ವ್ಲಾಡಿವೊಸ್ಟಕ್ ಬಂದರದ ಮೂಲಕ ಹೆಚ್ಚಿನ ಪೆಟ್ರೋಲನ್ನು ಭರದಿಂದ ತರಿಸಿ ಸಂಗ್ರಹಿಸುತ್ತಿದೆಯೆಂದು ಜಪಾನು ಪ್ರಕಟಿಸಿರುವುದು. ತನ್ನ ಪೂರ್ವ ಪ್ರದೇಶದ ಪೆಟ್ರೋಲ್ ಉತ್ಪತ್ತಿಯನ್ನು ಕೂಡಾ ಹೆಚ್ಚಿಸಲು ರಶ್ಯವು ಪ್ರಯತ್ನಿಸುತ್ತಿರುವುದು.

ದೊಡ್ಡ ಚೀನೀ ವಿಜಯ

ಚೀನೀಯರು ಇಂಡೋ ಚೈನಾ ವ್ಯಾಪಾರ ಮಾರ್ಗದಲ್ಲಿರುವ ಲಿಂಗ್‌ಶಾನ್ ಎಂಬ ಸಂದುಕಟ್ಟಿನ ಸ್ಥಳವನ್ನು ಜಪಾನರಿಂದ ಗೆದ್ದು ಆ ಯುದ್ಧದಲ್ಲಿ ಸುಮಾರು 5000 ಮಂದಿ ಜಪಾನ ಸೈನಿಕರು ಕೊಲ್ಲಲ್ಪಟ್ಟಿರುವರಷ್ಟೆ. ಈಗ ಯೆಲ್ಲೋನದಿಯ ಉತ್ತರದಲ್ಲಿರುವ ವಾಯುವನ್ ಎಂಬ ಪಟ್ಟಣವನ್ನು ಜಪಾನರಿಂದ ವಶಪಡಿಸಿಕೊಂಡಿರುವರು. ಇದು ಹೊರತು ವಾಯುವನಿಗಿಂತ 40ಮೈಲು ಉತ್ತರದಲ್ಲಿ ಸಂದುಕಟ್ಟಿನಲ್ಲಿರುವ ಪರ್ವತ ಕಣಿವೆಯನ್ನು ಗೆದ್ದು ತಮ್ಮ ಸ್ಥಾನವನ್ನು ಬಲಪಡಿಸಿರುವರು.

ಮಿತ್ರ ರಾಷ್ಟ್ರಗಳಿಗೆ ಅಮೆರಿಕಾದ ವಿಮಾನಗಳು

ಅಮೆರಿಕದ ಯುನೈಟೆಡ್ ಸ್ಟೇಟ್ಸ್ ಸರಕಾರವು ಮಿತ್ರ ರಾಷ್ಟ್ರಗಳಿಗೆ ಅತ್ಯಾಧುನಿಕ ರೀತಿಯ ಯುದ್ಧ ವಿಮಾನಗಳನ್ನೊದಗಿಸಲು ಒಪ್ಪಿಗೆಕೊಟ್ಟಿರುವುದು. ಇಷ್ಟರಲ್ಲೇ ಇಂಗ್ಲೆಂಡ್ ಮತ್ತು ಫ್ರಾನ್ಸುಗಳು 150 ಮಿಲ್ಯ ಪವನುಗಳಿಗಿಂತಲೂ ಮಿಕ್ಕಿದ ಕ್ರಯದ ವಿಮಾನಗಳಿಗೆ ಓರ್ಡರ್ ಕೊಟ್ಟಿರುತ್ತವೆ. ಜರ್ಮನಿಯು ಈಗ ತಿಂಗಳಿಗೆ 3000 ಯುದ್ಧ ಹಡಗಗಳನ್ನು ತಯಾರಿಸುತ್ತಿರುವುದೆಂದೂ, ಇನ್ನು ಮುಂದೆ ತಿಂಗಳಿಗೆ 6000 ತಯಾರಿಸಲಾಗುವುದೆಂದೂ ಅಮೆರಿಕದಲ್ಲಿ ಸುದ್ದಿಯುಂಟಾಗಿದೆ.

೩೦,೦೦೦ ವಿಮಾನ ತಯಾರಿ

ಲೋಕದ ಇತರ ರಾಷ್ಟ್ರಗಳ ವಿಮಾನಗಳಿಗಿಂತ ಶ್ರೇಷ್ಠ ತರಗತಿಯ (ಬರದ ಯುದ್ಧ ವಿಮಾನಗಳನ್ನು ಅಮೆರಿಕಾ ಯುನೈಟೆಡ್ ಸ್ಟೇಟ್ಸ್ ಸರಕಾರವು ತಯಾರಿಸಿಕೊಂಡಿರುವುದು. 1940ರೊಳಗೆ ಯುನೈಟೆಡ್ ಸ್ಟೇಟ್ಸ್ ಪ್ರತಿ ವರ್ಷ 30,000ದಿಂದ 10ಸಾವಿರದ ವರೆಗೆ ಯುದ್ಧ ವಿಮಾನಗಳನ್ನು ತಯಾರಿಸುವುದು.

೧೨೮ ಜರ್ಮನ್ ವಿಮಾನಗಳ ನಾಶ

6ತಿಂಗಳ ವಿಮಾನ ಹೋರಾಟದ ಪರಿಣಾಮವಾಗಿ ಬ್ರಿಟಿಷ್ ವಿಮಾನ ಪಡೆಯವರು ಮತ್ತು ವಿಮಾನ ಭೇದಕ ತೋಪುಗಳು 128 ಜರ್ಮನ್ ವಿಮಾನಗಳನ್ನು ನಾಶಗೊಳಿಸಿರುವವು. ಇದು ಹೊರತು 44 ವಿಮಾನಗಳು ಹೆಚ್ಚಿನ ಜಖಮ್ ಪಡೆದು ಜರ್ಮನಿಗೆ ಪ್ರಾಯಶಃ ಹಿಂತಿರುಗಿರುವುದಿಲ್ಲ. ಮಾರ್ಚ ತಾ. 26ರಲ್ಲು ಜರ್ಮನ್ ವಿಮಾನಗಳು ಮೂರು, ಏಳು ಹದಿಮೂರರ ಸಾಲಿನಲ್ಲಿ ಮೆಗಿನೆಟ್ ಕೋಟೆ ದಾಟಿ ಫ್ರಾನ್ಸಿನ ಮೇಲೇರಿ ಹೋದಾಗ ಬ್ರಿಟಿಷ್ ವಿಮಾನಗಳು ಅವುಗಳನ್ನು ತಡೆದು 3ಕಡೆಗಳಲ್ಲಿ ಹೋರಾಟ ನಡೆದು 5ಜರ್ಮನ್ ವಿಮಾನಗಳು ನಾಶ ಮಾಡಲ್ಪಟ್ಟಿರುವವು.

ಇಂಡಿಯಾ ಸೆಕ್ರೆಟರಿಗಳ ಹೊಸ ಸಲಹೆಗಾರರು

ಮೊದಲೊಮ್ಮೆ ಇಂಡಿಯಾ ಸೆಕ್ರೆಟರಿಗಳ ಸಲಹೆಗಾರರಾಗಿ ನೇಮಿಸಲ್ಪಟ್ಟಿದ್ದ ಸರ್ ಶನ್ಮುಖಂಸೆಟ್ಟಿಯವರು ವಿಮಾನ ಮೂಲಕ ಲಂಡನಿಗೆ ಹೋಗುತ್ತಿದ್ದಾಗ ವಿಮಾನವು ಸಮುದ್ರಕ್ಕೆ ಬಿದ್ದು ಮುಳುಗಿ ಕೊಲ್ಲಲ್ಪಟ್ಟಿರುವರಷ್ಟೆ. ಈಗ ಮದ್ರಾಸ್ ವಿಶ್ವವಿದ್ಯಾಲಯದ ವೈಸ್ ಚಾನ್ಸೆಲರಾಗಿರುವ ಮಿ ಎಸ್ ಇ. ರಂಗನಾಥನರು ಈ ಸ್ಥಾನಕ್ಕೆ ಆರಿಸಲ್ಪಟ್ಟಿರುವರು. ಇವರು ಎಪ್ರಿಲ್ ಎರಡನೇ ವಾರದಲ್ಲಿ ಪತ್ನಿ ಮತ್ತು ಪುತ್ರಿಯೊಂದಿಗೆ ಇಂಗ್ಲೆಂಡಿಗೆ ತೆರಳಲಿರುವರು.

ಜೆಕೋಸ್ಲೋವೇಕಿಯದಲ್ಲಿ ಹಿಟ್ಲರನ ಭಾವಚಿತ್ರ

ಈಗ ಜರ್ಮನಿಯ ಅಧೀನವಾಗಿರುವ ಮೊದಲಿನ ಜೆಕೋಸ್ಲೋವೇಕಿಯದಲ್ಲಿ ಸರಕಾರದ ಎಲ್ಲಾ ಆಫೀಸುಗಳಲ್ಲಿಯೂ ಹರ್ ಹಿಟ್ಲರರ ಭಾವಚಿತ್ರವನ್ನಿಡಬೇಕೆಂದು ಈಗಣ ಸರಕಾರವು ಆಜ್ಞೆ ಹೊರಡಿಸಿರುವುದು ಹಿಟ್ಲರರ ಚಿತ್ರದ ಎಡಭಾಗದಲ್ಲಿ ಸರಕಾರದ ಈಗಣ ಪ್ರಸಿಡೆಂಟರ ಚಿತ್ರವನ್ನಿರಿಸಬೇಕಾಗಿದೆ.

ಜರ್ಮನ್ ಯುದ್ಧಹಡಗಗಳ ಚಲನ

ಜರ್ಮನಿಯ ಯುದ್ಧ ಹಡಗುಗಳು ವಿಲ್ ಹೆಲ್ಮ್ ಹೇವನಿನ ನೌಕಾ ನಿಲಯದಿಂದ ಹೊರಟು ಜರ್ಮನ್ ವ್ಯಾಪಾರಿ ಹಡಗುಗಳನ್ನು ತಡೆಗಟ್ಟುವ ಬ್ರಿಟಿಷ್ ನೌಕಾ ಪಡೆಯನ್ನೆದುರಿಸಲು ಸಿದ್ಧವಾಗಿ ನಿಂತಿವೆಯೆಂದು ರೋಮ್ ರೇಡಿಯೊ ಸುದ್ದಿ. ಸ್ಕಾಂಡಿನೇವಿಯದ ಕರಾವಳಿಯಲ್ಲಿ ಸಂಚರಿಸುವ ಜರ್ಮನ್ ವ್ಯಾಪಾರಿ ಹಡಗುಗಳೆಲ್ಲಾ ಹತ್ತಿರದ ಬಂದರುಗಳಲ್ಲಿ ಆಶ್ರಯ ಪಡೆಯಬೇಕೆಂದು ಆಜ್ಞಾಪಿಸಲಾಗಿದೆ

ಸ್ವೀಕಾರ-ವಿಮರ್ಶೆ

ಮುಂದರಿದ ಮೈಸೂರು— ಕೈಗಾರಿಕೆ ಮತ್ತು ಗ್ರಾಮಾಭಿವೃದ್ಧಿ ಕೆಲಸ ಬಗ್ಗೆ ಮೈಸೂರು ಸರಕಾರ ಪ್ರಕಟಣಾ ಶಾಖಾಧಿಕಾರಿಗಳು ಕಳುಹಿಸಿಕೊಟ್ಟಿರುವ 1. Mysore and Modern Industrise (ಮೈಸೂರು ಮತ್ತು ಆಧುನಿಕ ಕೈಗಾರಿಕೆ) 2 (Village uplift in Mysore) (ಮೈಸೂರಲ್ಲಿ ಗ್ರಾಮಾಭಿವೃದ್ಧಿ) ಮತ್ತು 3. ಶ್ರವಣ ಬೆಳಗೊಳದೆಂಬ ಮೂರು ಅಮೋಘ ಪುಸ್ತಕಗಳನ್ನು ಆದರಪೂರ್ವಕ ಸ್ವೀಕರಿಸಲಾಗಿದೆ. ಈ ಪುಸ್ತಕಗಳನ್ನು ನಯವಾದ ಕಾಗದದ ಮೇಲೆ ಮುದ್ದಾಗಿ ಅಚ್ಚು ಹಾಕಲಾಗಿದೆ. ಬೆಲೆಯಿಲ್ಲದಷ್ಟು ಸುಂದರ ಚಿತ್ರಗಳಿವೆ. ಮೈಸೂರು ಕೈಗಾರಿಕೆಗಳು ಎಷ್ಟು ಮುಂದೆ ಹೋಗಿ ನಿರುದ್ಯೋಗವನ್ನು ಕಡಿಮೆಮಾಡಿ ಲಕ್ಷ್ಮಿಸತ್ರಿವೇಣಿಯನ್ನು ತಿಳಿಯಬೇಕಾದರೆ ಮೈಸೂರು ಮತ್ತು ಆಧುನಿಕ ಕೈಗಾರಿಕೆ ಎಂಬ ಪುಸ್ತಕ ಸರ್ವರೂ ಓದಬೇಕು ಸಚಿತ್ರ ಲೇಖನದೊಡನೆ ಕೂಡಿರುವ ಈ ಪುಸ್ತಕದ ಮೊದಲನೇ ಪುಟ ತೆಗೆದಲ್ಲಿ ಮೈಸೂರು ಮಾನ್ಯ ಸಚಿವರಾದ ಸರ್ ಮಿರ್ಜಾ ಎಂ ಇಸ್ಮಾಯಿಲರವರು ಕೆಲವು ತಿಂಗಳ ಕೆಳಗೆ ಮದ್ರಾಸ್ ಆಕಾಶವಾಣಿ ರೇಡಿಯೋದಲ್ಲಿ ಮೈಸೂರು ಬಗ್ಗೆ ಪ್ರಕೃತಿಸೌಂದರ್ಯದಿಂದ ಎರಿದು ಸರ್ವಪೂ ಮೈಸೂರು ನೆಲ್ಲುಗಳಿಂದ ಕೇಳುವುದು ಒಂದು ಹೆಮ್ಮೆ ಎಂದು ಹೇಳಿದುದನ್ನು ಉಲ್ಲೇಖಿಸಿರುತ್ತಾರೆ. ಇದನ್ನು ನಮ್ಮ ಯುವಕ ಯುವತಿಯರು ಮನನಮಾಡಿ ಕಲಿತು ದೊಡ್ಡ ಸಭೆಗಳಲ್ಲಿ ಸಾರಿದರೆ ಮೈಸೂರಿಗೆ ಇನ್ನೂ ಕೀರ್ತಿ ಬರುವಂತಾಗುವುದು. ಮೈಸೂರು ಕೈಗಾರಿಕೆಯ ಪ್ರತಿ ಇಲಾಖೆಗೂ ಸೇರಿದ ರಸಭರಿತ ಲೇಖನ ಮತ್ತು ಚಿತ್ರಗಳಿಂದ ಈ ಪುಸ್ತಕವು ತುಂಬಿದೆ. ಮೈಸೂರಲ್ಲಿ ಗ್ರಾಮಾಭಿವೃದ್ಧಿ ಚಳವಳಿಗೆ ಹೇಗೆ ನಡೆಯುತ್ತಿದೆಂಬುದು ಎರಡನೇ ಪುಸ್ತಕದಿಂದ ಗೊತ್ತಾಗುತ್ತದೆ. ಪುಸ್ತಕವು ಅಂದವಾಗಿದೆ ಮೂರನೆಯದರಲ್ಲಿ ಶ್ರವಣಬೆಳಗೊಳದ ಚರಿತ್ರೆ ಶಿಲಾ ಶಾಸನಗಳು ಚಿತ್ರಗಳು ... ಸರಕಾರದ ... ಪ್ರಕಟಣಾ ಶಾಖಾಧಿಕಾರಿಗಳು ... ಪ್ರಕಟಿಸಿ ಸರ್ವರಿಗೂ ಉಪಯೋಗವಾಗುವಂತೆ ಮಾಡಿದರು. ವಿಚಾರ ಪರಿಪೂರ್ಣ ಸಮಾಚಾರ ಮತ್ತು ಚಿತ್ತಾಕರ್ಷಕವಾದ ಚಿತ್ರಗಳಿರುವ ಈ ಪುಸ್ತಕವು ಮನೋಹರವಾಗಿದೆ.

ಮೈಸೂರು ಸರಕಾರದ ಉತ್ಸಾಹೀ ಪ್ರಕಟಣಾ ಶಾಖಾಧಿಕಾರಿಗಳು ಅವರ ಸಹೋದ್ಯೋಗಿಗಳೂ ಶ್ರಮವಹಿಸಿ ವಿಚಾರಗಳನ್ನು ... ವ್ಯಾಸಂಗ ... ಮಾಡಿರುವರು.

ಆರು ಕತೆಗಳು - ಕಥಾ ... ಬೆಲೆ ೦-೪-೦

ಭಾರತೀಯ ಆರೋಗ್ಯ ಸೂತ್ರಗಳು ಲೇಖಕರು ಆಯುರ್ವೇದ ... ಪಿ. ಕೆ. ಶರ್ಮಾ, ಎ ... ಎ. ಸಿ. ... ಪ್ರಕಾಶಕರು ... ಬಂಗಳೂರು, ಬೆಲೆ ೦ ೩-೦

ಹಿಂದುಸ್ಥಾನದ ಹೊಸ ಘಟನೆ— ಲೇಖಕರು ಶ್ರೀ ಮ ... ನಾಯಕ, ಎಂ ಎ. ಎಲ್. ಎಲ್. ಬಿ ... ಕರ್ನಾಟಕ ವೈಭವ, ... ಬೆಲೆ ರೂ. 1 8 0

ಎದ್ದೆದ ಕಾಟಿ? (ತುಳು ನಾಟಕ) ಬರೆದವರು ಶ್ರೀ. ಕೆ ... ಪ್ರಕಾಶಕರು ... ಬೆಲೆ ... 0 5-0.

ಶ್ರೀ ಬಸವೇಶ್ವರ— ಲೇಖಕರು - ಶ್ರೀ ಎಸ್. ಎಸ್. ... ಪ್ರಕಾಶಕರು ... ಸಂಘ.

ಹೊನ್ನಮ್ಮ— ಲೇಖಕ ... ಗೌಡ ... ಗ್ರಂಥ ... ಧಾರವಾಡ, ಬೆಲೆ 0 1 6

ಇಷ್ಟೇ ಅಲ್ಲದೆ ... 8ನೇ ವರ್ಷದ ವರದಿ, ... ಪ್ರಕಾಶಕದ ಮಿತ್ರ ... 383 ರ ವರದಿ ... ಸ್ವೀಕರಿಸಿದೆ. ಎಲ್ಲವನ್ನು ... ಕೊಡಲಾಗಿದೆ.

ಬ್ರಿಟಿಷ್ ರಾಯಭಾರಿಗಳು ಲಂಡನಿಗೆ

ಬ್ರಿಟಿಷ್ ಸರಕಾರದ ಪರರಾಷ್ಟ್ರ ಮಂತ್ರಿಗಳಾದ ಲೋರ್ಡ್ ಹೆಲಿಫೆಕ್ಸರು, ಟರ್ಕಿ, ಗ್ರೀಸ್ ರುಮೇನಿಯ, ಯುಗೊಸ್ಲಾವಿಯ, ಬಲ್ಗೇರಿಯ, ಹಂಗೇರಿ ಮತ್ತು ಇಟೆಲಿಯ ರಾಯಭಾರಿಗಳನ್ನು ಲಂಡನಿಗೆ ಕರೆದಿರುವರೆಂದು ತಿಳಿಯಬರುತ್ತದೆ. ಇಂದಿನ ಬಾಲ್ಕನ್ ರಾಷ್ಟ್ರಗಳ ಪರಿಸ್ಥಿತಿಯ ವಿಷಯ ಯೋಚಿಸುವುದರ ಪ್ರಯುಕ್ತ ಆ ಕುರಿತು ತಮ್ಮ ರಾಯಭಾರಿಗಳ ಅಭಿಪ್ರಾಯವನ್ನು ಪಡೆಯುವುದಕ್ಕಾಗಿ ಬ್ರಿಟಿಷ್ ಸರಕಾರವು ಅವರನ್ನು ಕರೆಸಿದೆ.

HURRY UP ? ? ?. UNIQUE OPPORTUNITY.
CLEARANCE SALE OF A LARGE CONSIGNMENT OF 10,000 WATCHES, JUST ARRIVED FROM SWITZERLAND, AT OLD PRICES.



No 416 Chromium Case Rs 5—10
No 417 Golden Case Rs 6— 6
No 417 R Rolledgold 10yrs. Jewelled Mov. Rs 12—8



No 428 Chromium Case. Rs. 9—0
No. 430 Rolledgold 10yrs. Rs 15—0



ROUND OR CUSHION
No 401 Chromium Case Rs 3—12
No 402 Golden Case Rs. 4— 8

As. 9/- Extra for Postage.
For further particulars send for our new catalogue No. 16.
(Correspondance in English)

BAPALAL & CO.,
101 Abdul Rehman Street,
BOMBAY, 3.

LATEST ARRIVAL 1940
STRONG & DURABLE
ACCURATE TIME-KEEPERS
Guaranteed Lever Movement



No 424 Chromium Case Rs 7—8
No 425 Golden Case Rs 8—4
No 425 R Rolledgold 10yrs 13—8

LADIES MINIATURES



Geneva Movement.
No 460 Chromium Case Rs 10 8
No 461 Golden Case Rs 12 0
No 462 Rolledgold 10yrs. Rs 15—0

ಈ ವಾರದ ಭವಿಷ್ಯ

ತಾರೀಕು 4 4-1940ರಿಂದ 11 4-1940ರ ವರೆಗೆ

ಮೇಷ—ರಾಹು ಶುಕ್ರರನ್ನುಳಿದು ಸಕಲ ಗ್ರಹರೂ ಅತೀವ ದುಷ್ಟರಾಗಿರುವುದರಿಂದ ಕಷ್ಟನಷ್ಟಗಳು ನಿಮಗೆ ಅತಿಯಾಗಿ ಪರಿಣಮಿಸಲಿವೆ. ಆದರೂ ವಿಪದಿ "ಧೈರ್ಯಮಥಾಭ್ಯುದಯೇ ಕ್ಷಮಾ" ಎಂಬ ವಾಕ್ಯದನ್ವಯಂತೆ ಕಷ್ಟಕಾಲದಲ್ಲಿ ಎದೆಗುಂದದೆ ಧೈರ್ಯವಾಗಿಯೂ ಸುಸಮಯದಲ್ಲಿ ಮಿತ್ರರಾಗದೆ ಶಾಂತರಾಗಿಯೂ ಇರುವುದು ಸತ್ಪುರುಷರ ಸ್ವಭಾವವು. ಸದ್ಯ ನಿಮಗೆ ಆರ್ಥಿಕ ದುರವಸ್ಥೆಯು ಬಹುವಾಗಿ ಪೀಡಿಸಲಿದೆ. ಮಾತ್ರವಲ್ಲ ತಲೆತಿರುಕು ನಿದ್ರಾನಾಶ ಇತ್ಯಾದಿಗಳಿಂದ ದೇಹಕ್ಕೆ ಸ್ವಲ್ಪವೂ ಸುಖ ದೊರೆಯದು. ನೌಕರಿ ಭಾಗದಲ್ಲಿ ಅತೃಪ್ತಿ ಮಾನಭಂಗ ಇತ್ಯಾದಿಗಳಿಂದ ತಾ. 6-7 11 ಈ ದಿನಗಳಲ್ಲಿ ಬಹಳೇ ದುಃಖವಾದೀತು.

ವೃಷಭ—ಸಂಪಾದನೆಯು ಉತ್ತಮವಿರುವುದಾದರೂ ಖರ್ಚಿನ ಭಾಗದಲ್ಲಿ ಬಹಳ ಜಾಗರೂಕರಾಗಿರಿ. ಅವಿಚಾರದಿಂದಾಗಿ ಕೆಲವೊಮ್ಮೆ ಅನರ್ಥಗಳಿಗೆ ಸಿಲುಕಿ ವ್ಯರ್ಥ ಅರ್ಥವ್ಯಯಕ್ಕೂ ಲೋಕ ನಿಂದೆಗೂ ಗುರಿಯಾಗಬೇಕಾದೀತು. ಸಂಚಾರ ಕ್ರಮದಲ್ಲಿ ಜಾಗ್ರತರಾಗಿದ್ದಷ್ಟೂ ಒಳ್ಳಿತು. ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ನೌಕರಿಗಳಿಗೂ ವ್ಯಾಪಾರಿಗಳಿಗೂ ಇಚ್ಛಾನುಸಾರವಾಗಿ ಫಲಪ್ರಾಪ್ತಿಯೂ ಲಭಿಸಲಿದೆ. ಸಾಮಾಜಿಕ ಮತ್ತು ರಾಜಕೀಯ ಕಾರ್ಯಗಳಲ್ಲಿ ವಿಜಯಿಗಳಾಗಿ ಜನರ ಆದರಕ್ಕೂ ನಿಮ್ಮ ಬಂಧು ಮಿತ್ರರ ಪ್ರೇಮಕ್ಕೂ ಒಳಗಾಗುವಿರಿ. ಗೃಹಕ ವಿಷಯ ತೃಪ್ತಿಕರವಾಗಿರದು. ತಾ. 8, 9, 10 ಈ ದಿನಗಳಲ್ಲಿ ಅನಾರೋಗ್ಯದ ಭಯವಿದೆ.

ಮಿಥುನ— ಸವನವೋದ್ಯಮಗಳಲ್ಲಿ ಕೈಯಿಕ್ಕುವ ನೂತನ ಸಾಹಸವನ್ನು ಮಾಡುವಿರಿ. ಮಾತ್ರವಲ್ಲ ಅವರಲ್ಲಿ ವಿಜಯಿಗಳಾಗಿ ಮತ್ತು ಪ್ರಗತಿಯ ಪಥದಲ್ಲಿ ಮುಂದರಿಯುವಿರಿ. ಸಟ್ಟಿನ ಆವೇಶದಿಂದ ಕೆಲವೊಮ್ಮೆ ನಿಷ್ಠುರೋಕ್ತಿಗಳನ್ನಾಡಿದರೂ ತತ್ಕ್ಷಣವೇ ಅದನ್ನು ಮರೆತು ಸೌಹಾರ್ದಭಾವದಿಂದ ವರ್ತಿಸುವಿರಿ. ಸನ್ಮಿತ್ರರ ಮತ್ತು ಬಂಧು ಬಳಗದವರ ಬೆಂಬಲವು ಚೆನ್ನಾಗಿರುವುದರಿಂದ ಯಾವ ಭಾಗದಲ್ಲೂ ನಿಮಗೆ ಕೊರತೆಯುಂಟಾಗದು. ಧಾರಾಳವಾಗಿ ಖರ್ಚುಮಾಡುವಿರಿ. ತಾ. 4, 5, ಮತ್ತು 11 ಈ ದಿನಗಳಲ್ಲಿ ಸ್ತ್ರೀಕಲಹ, ನೇತ್ರರೋಗ ನೆಗಳು ತಲೆದೋರುವಂತಿವೆ.

ಕರ್ಕಾಟಕ—ಇದು ಸರಿ, ಇದು ತಪ್ಪು ಎಂಬೀ ವಿಚಾರ ನಿಮಗೆ ತಿಳಿದಿದ್ದರೂ ಕೂಡ ನೀತಿ ಅತ್ಯಕ್ಷಗಳನ್ನು ಮೀರಿ ಅಪರಾಧಿಗಳಾಗಲಿರುವಿರಿ. ನಿಮ್ಮ ಸಾಂಸಾರಿಕ ಭಾಗವು ಉತ್ತಮವಾಗಿದ್ದರೂ ಅದನ್ನು ರೂಢಿಸಿಕೊಂಡು ಹೋಗುವ ರೀತಿ ನೀತಿ ತಿಳಿಯದೆ ಅಪವ್ಯಯಮಾಡುವಿರಿ. ರಾಜಕೀಯ ವಿಚಾರದಲ್ಲಿ ನೀವು ಬಹಳ ನೊಂದವರಿರುವಿರಿ. ಸದ್ಯದಲ್ಲೇ ನಿಮ್ಮ ಮನಸ್ಸಿಚ್ಛೆಯು ಫಲಿಸಲಿದೆ. ಪರರ ಉತ್ಕರ್ಷವನ್ನು ಸಹಿಸಲಾರದ ಜನರು ನಿಮ್ಮ ಮೇಲೆ ಸದಾ ವಕ್ರದೃಷ್ಟಿಯನ್ನಿಟ್ಟರೂ ನೀವೇನೂ ಬೆದರುವ ಕಾರಣವಿಲ್ಲ. ವಾರಾದಿಯ ನಾಲ್ಕು ದಿನಗಳಲ್ಲಿ ಕಾರ್ಯೋತ್ಸಾಹವು ಕುಂಠಿತವಾಗಿದ್ದೀತು.

ಸಿಂಹ—"ಉದ್ಯಮೇನ ಹಿ ಸಿಧ್ಯಂತಿ ಕಾರ್ಯಾಣಿ ನ ಮನೋರಥೈಃ" ಕೇವಲ ಇಚ್ಛಾಮಾತ್ರದಿಂದಲೇ ಕಾರ್ಯವು ಸಿದ್ಧಿಸುವದಾಗಿದ್ದರೆ ಯಾವ ನಿರುದ್ಯೋಗಿಯೂ ಕಾರ್ಯದಲ್ಲಿ ಪ್ರವರ್ತಿಸುತ್ತಿದ್ದಿಲ್ಲ. ನಿರುದ್ಯೋಗಿಗಳ ಸಂಖ್ಯೆಯೇ ಲೋಕದಲ್ಲಿ ಹೆಚ್ಚುತ್ತಿತ್ತು. ಈ ವಿಚಾರವನ್ನು ನೀವು ತಿಳಿದಿದ್ದು ಸ್ವಪ್ರಯತ್ನದಿಂದ ನಿಮ್ಮ ಉನ್ನತಿಗೆ ದೇವರ ಕೃಪೆಯೂ ಮತ್ತು ಸ್ವಭಾವವೇ ಕಾರಣವಾಗಿತ್ತು. ಸದ್ಯದಲ್ಲೇ ನೀವೇ ಗಣ್ಯರಾದವರಿಂದ ಮನ್ನಣೆ ಗಳಿಸುವಿರಿ. ಗೃಹ ಕಲಹದಿಂದ ಗಿ ನಿಮ್ಮ ಜಗಳ ತಪ್ಪದು. ಆಕಸ್ಮಿಕ ಪ್ರಯಾಣದಿಂದ ದೇಹಾಲಸ್ಯವೂ ಚಿತ್ತಶಾಂತಿಗೆ ಭಂಗವೂ ಉಂಟಾಗಲಿದೆ. ವ್ಯಾಪಾರಿಗಳಿಗೆ ಸರ್ವತ್ರ ನಷ್ಟವೇ ಹೆಚ್ಚಲಿರುವುದರಿಂದ ತಾ. 4, 5, 11 ಈ ದಿನಗಳು ಹೆಚ್ಚಿನ ಕಷ್ಟದಾಯಕಗಳಾಗಲಿರುವವು.

ಕನ್ಯಾ—"ಅಕ್ಷರೋಽಸಿ ಗುರುರ್ಹರಃ" ಎಂದು ದೈವಜ್ಞರನ್ನುವಂತೆ ಇಷ್ಟರ ಕಸಕ ನಿಮಗಿರುವ ಹಾನಿಯ ಸರ್ವ ದುರ್ದೃಷ್ಟಿಯಿದ್ದುದರಿಂದ ಎಂತಹ ಮಹದಾಪತ್ತುಗಳಿಗೆ ಸಿಲುಕಿದ್ದರೂ ಅದರಿಂದ ಪಾರಾಗುತ್ತಿದ್ದಿರಿ. ಆದರೆ ಸದ್ಯದಲ್ಲೇ ಅತನು ಅನಿಷ್ಟಸ್ಥಾನವಾದ ಅಷ್ಟಮಕ್ಕೆ ಪ್ರವೇಶಿಸಲಿರುವುದರಿಂದ ದೈವಬಲದಿಂದ ಮುಕ್ತರಾಗಿ ಮೇಲಿಂದ ಮೇಲೆ ಕಷ್ಟಗಳನ್ನು ಭವಿಸುವ ದಿನಗಳೇ ಹೆಚ್ಚಲಿವೆ. ಸಾಲದುದಕ್ಕೆ ನೀಚಕನಿಯು ಕೂಡ ಅಲ್ಲೇ ಇರುವನು. ದೇಹಾಲಸ್ಯವೂ ಚಿತ್ತಚಿಂತೆಯೂ ಆರ್ಥಿಕ ಅಡಚಣೆಯೂ ದಿನೇ ದಿನೇ ಹೆಚ್ಚಲಿದೆಯಾದ ಕಾರಣ ತಾ. 8, 9, 10, 11 ಈ ದಿನಗಳಲ್ಲಿ ಬಹಳೇ ಜಾಗರೂಕರಾಗಿ ವರ್ತಿಸಿರಿ.

ತುಲಾ—ಹಲಕೆಲವು ದಿನಗಳಿಂದ ಬಹಳ ಕಷ್ಟವನ್ನನುಭವಿಸುತ್ತಿದ್ದ ನಿಮಗೆ ಇನ್ನು ದಿನಗಳು ಸ್ವಲ್ಪ ಸುಖದಾಯಕಗಳಾಗಿ ... ಕಾರ್ಯಕ್ಕೆ ... ಆಗಲಿರುವುದು ... ನಿಮ್ಮ ಕಾರ್ಯಗಳಿಗೆ ... ಕಾರ್ಯವನ್ನು ಕೊನೆಗೊಳಿಸದೆ ... ದಿನಗಳಲ್ಲಿ ... ಉತ್ತಮವಾಗಿ ಲಭಿಸಲಿದೆ. ... ಉತ್ಸಾಹ ... ದ ಆರೋಗ್ಯ ... ತಾ. 6ರಿಂದ 10ರ ವರೆಗಿನ ದಿನಗಳು ಇಷ್ಟಸಿದ್ಧಿಕಗಳಾಗಿವೆ.

ವೃಶ್ಚಿಕ—... ಗ್ರಹಮಾನವು ... ಮಾತ್ರ ... ಸ್ನೇಹ ... ದಿನೇ ದಿನೇ ವೃದ್ಧಿ ... ಗೃಹಕ ... ಶೀಘ್ರದಲ್ಲೇ ... ನಿರ್ಭಯ ... ಸಕಲ ... ವೈರಿಗಳು ... ಅನಾರೋಗ್ಯದ ... ದಿಂದ ... ನೆಟ್ಟಗಾಗುವುದರಿಂದ ... ವಾರದ 4 ದಿನಗಳು ಅನುಕೂಲಗಳಾಗಿವೆ.

ಧನು—ಅಷ್ಟಮ ... ದಿನಗಳಲ್ಲಿ ... ಬಹಳ ... ಪ್ರತಿ ... ಧನ ... ಕೂಡ ... ಇತ್ಯರ್ಥ ... ಶ್ರಮ ... ಫಲ ದೊರೆತರೂ ... ಭಿನ್ನಾಭಿಪ್ರಾಯಗಳು ಉಂಟಾಗಿದ್ದರೂ ಸದ್ಯದಲ್ಲೇ ಶಾಂತತೆ ನೆಲೆಗೊಳ್ಳುವುದು. ತಾ. 4 5 11, ಈ ದಿನಗಳಲ್ಲಿ ಸಾಮಾಜಿಕ ಕಾರ್ಯಗಳಲ್ಲಿ ವಿಜಯ, ಧನ ವಸನಗಳ ಲಾಭವೂ ಸ್ತ್ರೀ ಸುಖವೂ ದೊರೆಯಲಿದೆ.

ಮಕರ—ಸಾಂಸಾರಿಕ ಚಿಂತೆಯು ದಿನೇ ದಿನೇ ಪ್ರಬಲವಾಗುತ್ತಾ ಹೋಗುವುದು. ಪತ್ನೀ ಪುತ್ರರ ವಿರಹ, ದೇಹಾಲಸ್ಯ ಇವುಗಳ ಸಂಬಂಧವಾಗಿ ತಮಗೆ ಕೊರಗುವಿರಿ. ಶತ್ರು ಜನರ ಉಪದ್ರವವು ಮುಂಚಿಗಿಂತಲೂ ಅಧಿಕವಾಗುವುದು. ಇದಕ್ಕೆ ನಿಮ್ಮ ಬಂಧುಗಳು ಸೇರಿರುವುದರಿಂದಲೇ ನಿಮ್ಮ ಮನಸ್ಸಿಗೆ ವಜ್ರಾಘಾತವಾದಂತಿರುವುದು. ದಿನ ಹೋದಂತೆ ಆರ್ಥಿಕ ಬಲವು ಕುಗ್ಗುತ್ತಾ ಬರುವುದರಿಂದ ಜನ ಬೆಂಬಲವೂ ಕಡಿಮೆಯಾಗುವುದು. ಸ್ವೋದ್ಯೋಗದಲ್ಲಿ ತಪ್ಪಾಗಿ ವರ್ತಿಸಿ ಅಧಿಕಾರಿ ಜನರ ಅವಕೃಪೆಗೆ ಗುರಿಯಾಗುವಿರಿ. ತಾ. 6, 7 ಬಿಟ್ಟು ಇತರ ದಿನಗಳು ಬಹಳ ಅನಿಷ್ಟಕಾರಿಗಳಾಗಿವೆ.

ಕುಂಭ—ಅಲ್ಪರ ಸಂಗ ಅಭಿಮಾನ ಭಂಗ ಎಂಬ ನಾಣ್ನುಡಿಯಂತೆ ಯುಕ್ತಾಯುಕ್ತ ವಿಚಾರ ಹೀನರಾದ ಮಿತ್ರಗೋಡಿಗಳಾಗಿರಿತಕ್ಕ ದುರ್ಜನರ ಬಲೆಯಲ್ಲಿ ಅನಾಯಾಸದಿಂದ ಬಿದ್ದು ಹಣ ಕಾಸುಗಳಿಗೂ ಮಾನ ಮರ್ಯಾದೆಗಳಿಗೂ ತುಂಬಾ ಹಾನಿ ಮಾಡಿಕೊಳ್ಳುವಿರಿ. ದೇಹದಲ್ಲಿ ಕಿಂಚಿದಾಯಾಸವೂ ತಲೆದೋರುವುದು. ವಿದ್ಯಾರ್ಥಿಗಳು ಒಳ್ಳೆಯ ಯೋಗ್ಯವಂತರಾಗಿರುವರು. ಗೃಹೋಪಕರಣಗಳಿಗೇನೂ ಕೊರತೆಯಾಗದು. ನೌಕರಿ ವ್ಯಾಪಾರಗಳಲ್ಲಿ ಫಲವು ಉತ್ತಮವಾಗಿರುವುದು. ಶತ್ರು ಜನರು ತಲೆಮರಿಸಿಕೊಂಡೇ ದಿನಗಳೆಯುವರು. ತಾ. 4, 5 ಮತ್ತು 8, 9, 10 ಈ ದಿನಗಳು ಬಹಳ ಉತ್ತಮವಿವೆ.

ಮೀನ—ನಿಮ್ಮ ಹರುಷ ಮೆಚ್ಚಿ ಅನುಕೂಲವಾಗಿ ದೈವಬಲವೂ ದೊರೆಯಲಿದೆ. ಕಷ್ಟದ ದಿನಗಳಿಂದ ಒಮ್ಮೆಗೆ ಪಾರಾದಿರೆಂದರೆ ಅತಿಶಯೋಕ್ತಿಯಾಗದು. ದೈಹಿಕ ಬಲವೂ ಮಾನಸಿಕ ಶಕ್ತಿಯೂ ಉತ್ತಮವಿರುವುದರಿಂದ ಕೈಗೊಂಡ ಕಾರ್ಯಗಳು ವಿಫಲವಾಗುವಂತಿಲ್ಲ. ಆದರೆ ನಿಮ್ಮ ಧನ ಸ್ಥಾನದಲ್ಲಿ ಕೀಳತರಕ್ಕೆ ಗ್ರಹ ಮಹಾರಾಜನಿಂದಾಗಿ ನೀವೆಷ್ಟೇ ಹಣ ಗಳಿಸಿದರೂ ಕೈಯಲ್ಲಿ ಕಾಸೊಂದೂ ಉಳಿಯುವಂತಿಲ್ಲ. ಆದಷ್ಟು ನಾಲಗೆಯನ್ನು ಬಿಗಿಹಿಡಿದಿರುವುದೊಳ್ಳಿತು. ತಾ. 4, 5, 8, 9, 10 ಈ ದಿನಗಳಲ್ಲಿ ಧನ ವಾಹನಗಳಿಗೆ ಹಾನಿಯಿದೆ.

ನಮ್ಮ ಪೊಲಿಸಿದಾರರ ಸೇವಾದೀಕ್ಷೆ ಮತ್ತು ನಮ್ಮ ಕುರಿತಾದ ಕ್ಲೈಮುಗಳ ಕುರಿತು ಸಂಪೂರ್ಣ ಸಮಾಧಾನವೇ ಇಂದಿಗೆ 25 ವರ್ಷಗಳಿಂದ ನಮ್ಮ ಧೋರಣೆಯಾಗಿದೆ.

ಎಲ್ಲಾ ತರದ ಅನಾಯಿಗಳ ಕುರಿತು ಭದ್ರತೆ ಪಡೆಯುವ ಅಭೂತಪೂರ್ವ ಅನುಕೂಲತೆಗಳನ್ನು ನಾವು ಕೊಡುತ್ತೇವೆ.

ಜ್ಯಾರಿಯಲ್ಲಿರುವ ವಹಿವಾಟು ರೂ. 1,75,000,00

ಒಟ್ಟು ಮೂಲಧನ ರೂ. 24,000,00

ದಿ ಈಸ್ಟ್ ಎಂಡ್ ವೆಸ್ಟ್

ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

(1913ರಲ್ಲಿ ಸ್ಥಾಪಿತವಾದುದು)

55 ಅಪೊಲ್ಲೋ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಏಜಂಟ್ಸ್ ಮತ್ತು ಓರ್ಗನೈಜರ್ ಬೇಕಾಗಿದ್ದಾರೆ

ರೂಪಾಯಿ200 ಧರ್ಮಾರ್ಥ!

ಮಹಾತ್ಮಾ ಸಿದ್ಧ ಕವಚ

ಅತ್ಯದ್ಭುತ ಶಕ್ತಿಯುಕ್ತವಾದ ಮಹಾತ್ಮಾ ಸಿದ್ಧ ಕವಚವೊಂದು ನಿಮ್ಮೊಡನಿದ್ದರೆ ಎಂತಹ ಕಷ್ಟಸಾಧ್ಯವಾದ ಯೋಜನೆಯೂ ಕ್ಷಿಪ್ರ ಫಲಕಾರಿಯಾಗುವುದು ಈ ಯಂತ್ರಧಾರಣೆಗೆ ಮಂತ್ರ ತಂತ್ರಗಳ ಸಹಾಯ ಬೇಕಾಗಿಲ್ಲ. ಇದನ್ನು ಧರಿಸಿದ ಮಾತ್ರದಿಂದ ನಿಮಗೆ ಬೇಕಾಗುವ ಹೆಂಗಸಾಗಲೀ ಗಂಡಸಾಗಲೀ ನಿಮ್ಮ ಹತೋಟಿಯಲ್ಲಿ ಸಿಕ್ಕುವರು. ತಾಮ್ರದ ಕವಚಕ್ಕೆ ರೂ 2; ಮೂರಕ್ಕೆ ರೂ. 5-1-0, ಬೆಳ್ಳಿ ಕವಚಕ್ಕೆ ರೂ 2 11-0; ಬಂಗಾರದಕ್ಕೆ ರೂ. 6-4-0.

ಮಹಾಲಕ್ಷ್ಮೀ ಯಂತ್ರ

ದುಷ್ಟಗ್ರಹರ ವಕ್ರದೃಷ್ಟಿ, ವೈರಿಗಳು ಬಾಧಕರಾಗುವುದು, ಪರೀಕ್ಷೆ, ವ್ಯಾಪಾರ, ಕೋರ್ಟು ವ್ಯಾಜ್ಯಗಳು, ನೌಕರಿ, ಪುತ್ರ ಸಂತಾನಪ್ರಾಪ್ತಿ, ಅಪಾರದ್ರವ್ಯ ದೊರೆಯುವಿಕೆ, ಸಾಲದಿಂದ ಮುಕ್ತಿ, ಸ್ವಾತಂತ್ರ್ಯಲಾಭ, ಭಯಾನಕ ಕಾಯಿಲೆಗಳಿಂದ ಪಾರಾಗುವುದು ಇತ್ಯಾದಿ ಸರ್ವಸಿದ್ಧಿಯಾಗಬೇಕೆಂದಿದ್ದರೆ ಒಡನೆಯೇ ಮಹಾಲಕ್ಷ್ಮೀ ಯಂತ್ರವನ್ನು ಧರಿಸಿರಿ. ತಾಮ್ರದ ಕವಚಕ್ಕೆ ರೂ. 2, (ಮೂರಕ್ಕೆ ರೂ 5-4-0) ಬೆಳ್ಳಿಯದಕ್ಕೆ ರೂ. 2-14-0; ಚಿನ್ನದ ಕವಚವುಳ್ಳದುದಕ್ಕೆ ರೂ. 6-1-0, ನಾಲ್ಕು ಉದ್ದೇಶಗಳನ್ನು ಸಾಧಿಸುವರೆ ನಂಬ್ರ 1ನೇ ವಿಶೇಷ ಕವಚವನ್ನು ರೂ. 3-8-0 ಕೊಟ್ಟು ಇಂದೇ ಪಡೆಯಿರಿ. ಐದಕ್ಕೂ ಮಿಕ್ಕಿದ ಯೋಜನೆಗಳನ್ನು ಒಮ್ಮೆಯೇ ಪೂರೈಸಬೇಕೆಂದಿದ್ದರೆ ಅತ್ಯಾಧಿಕ್ಯ ಶೀಘ್ರೋ ಮಹತ್ವದ ನಂಬ್ರ 3ನೇ ಕವಚವನ್ನು 7-10-0 ಕೊಟ್ಟು ಪಡೆಯಿರಿ. ಟಪ್ಪಾಲು ಚಾರ್ಜು ಪ್ರತ್ಯೇಕ.

ಸೂಚನೆ ... ಕವಚಗಳು ನಿಷ್ಪ್ರಯೋಜಕವೆಂದು ರುಜುಪಡಿಸುವವರಿಗೆ ರೂಪಾಯಿ 200 ಇನಾಮು ಕೊಡಲಾಗುವುದು. ಕವಚವು ವ್ಯರ್ಥ ಸಹ ಹಾಗೂ ಸಿಕ್ಕುವುದು.

SHRI MAHATMA ASHRAM, Post Box No. 12 (N Y.A.) AMRITSAR.



ಭಾರತದಲ್ಲಿ ಡೈರಿ ವ್ಯವಸಾಯ

ಕೃಷಿ ಪ್ರಧಾನವಾದ ದೇಶದಲ್ಲಿ ಅದು ಎಷ್ಟು ಹಿಂದೆ ಬಿದ್ದಿದೆ ?

ಇತ್ತೀಚಿಗೆ ಭಾರತದ ಅವಶ್ಯಕತೆಗಳಲ್ಲಿ ಡೈರಿ ವ್ಯವಸಾಯವು ಮುಖ್ಯವಾಗುತ್ತ ಬಂದಿದೆ. ಈ ದೇಶದಲ್ಲಿ ಹಾಲು ಮತ್ತು ಅದರಿಂದಾಗುವ ಪದಾರ್ಥಗಳ ಅಭಾವವು ಬಹಳವಾಗಿದೆ ಎನ್ನುವುದನ್ನು ಎಲ್ಲರೂ ಬಲ್ಲರು ನಮ್ಮ ದೇಶದ ಆಹಾರದಲ್ಲಿ ತರಕಾರಿಯು ವಿಶೇಷವಾದುದು, ಇಂತಹ ಆಹಾರ ಸೇವಿಸುವವರಿಗೆ ಸಾಕಷ್ಟು ಪ್ರಮಾಣದಲ್ಲಿ ಹಾಲು ದೊರೆಯದಿರುವುದು ಈ ದೇಶದ ದೌರ್ಭಾಗ್ಯವಲ್ಲದೆ ಬೇರೆ ಇಲ್ಲ. ಸಿಮ್ಲಾದಲ್ಲಿ ನಡೆದ ಪಶುವೈದ್ಯ ಸಮ್ಮೇಳನದಲ್ಲಿ ಮಾತನಾಡುತ್ತ ಷೀಟಿಂಗ್‌ರವರು ಅತ್ಯಂತ ವ್ಯಸನದಿಂದ ಈ ರೀತಿ ಹೇಳಿದರು. ದೇಶದಲ್ಲಿ ಮಕ್ಕಳು ಕುಡಿಯಲು ಹಾಲೇ ದೊರೆಯುತ್ತಿಲ್ಲ. ಕೆಳಗಿನ ಅಂಕೆಗಳಿಂದ ಇತರ ದೇಶಗಳಲ್ಲಿ ಹಾಲು ದೊರೆಯುವುದನ್ನು ನಮ್ಮ ದೇಶದೊಡನೆ ಹೋಲಿಸಿ ನೋಡಬಹುದು.

ದೇಶದ ಹೆಸರು	ಪ್ರತಿ ಒಬ್ಬನೂ 1 ವರ್ಷದಲ್ಲಿ ಕುಡಿಯುವ ಹಾಲಿನ ಪ್ರಮಾಣ.
ಫಿನ್‌ಲೆಂಡ್	10 ಮಣ 19 ಸೇರು
ಸ್ವಿಜರ್‌ಲೆಂಡ್	8 ,, 32 ,,
ಸ್ವೀಡನ್	8 ,, 28 ,,
ನಾರ್ವೆ	7 ,,
ಅಮೇರಿಕ	7 ,, 36 ,,
ಕೆನಡ	6 ,, 16 ,,
ಆಸ್ಟ್ರೇಲಿಯ	4 ,, 25 ,,
ಇಂಗ್ಲೆಂಡ್	3 ,, 33 ,,
ಜರ್ಮನಿ	3 ,, 16 ,,
ಫ್ರಾನ್ಸ್	3 ,, 5 ,,
ಡೆನ್ಮಾರ್ಕ್	2 ,, 30 ,,
ಭಾರತ	1 ಮಣ 4 ಸೇರು

ಭಾರತದ ಜನ ಸಂಖ್ಯೆಯ ದೃಷ್ಟಿಯಿಂದ ಒಬ್ಬ ಮನುಷ್ಯನಿಗೆ ದಿನ 1[illegible]5 ಚಟಾಕು ಹಾಲಿಗಿಂತ ಹೆಚ್ಚಾಗಲಿಲ್ಲ ಇದರಲ್ಲಿ ತುಪ್ಪ, ಬೆಣ್ಣೆ ಮತ್ತು ಹಾಲಿನಿಂದಾಗುವ ಇತರವಸ್ತುಗಳೂ ಸೇರಿವೆ. ಮೇಜರ್ ಜನರಲ್ ಸರ್ ಜಾನ್ ಮೆಗಾರವರು ಬೆಂಗಳೂರನ್ನು ಬಹಳ ಸೂಕ್ಷ್ಮವಾಗಿ ಪರೀಕ್ಷಿಸಿ ಮೇಲ್ಕಂಡ ನಿರ್ಣಯಕ್ಕೆ ಬಂದಿರುವರು. ಇದು ಎಷ್ಟು ಕಡಿಮೆ ಪ್ರಮಾಣದ್ದೆಂಬುದು ಬಹಳ ಮುಖ್ಯವಾದುದು!

ಹಾಲನ್ನು ಹೊರಗಿನಿಂದ ತರಿಸುವುದಕ್ಕಿಂತ ಅವಮಾನಬೇಕೆ?

ಹಾಲಿನ ಉಪಯೋಗವು ಮಕ್ಕಳಿಗೆ, ವೃದ್ಧರಿಗೆ ಮಾತ್ರವಲ್ಲದೆ ಯುವಕರಿಗೂ ಪುರುಷ ಸ್ತ್ರೀಯರೆಲ್ಲರಿಗೂ ಅಗತ್ಯವಾದುದು. ಯಾವ ಸುಸಂಸ್ಕೃತ ಜನಾಂಗವೇ ಆಗಲಿ ಹಾಲಿಲ್ಲದೆ ಜೀವಿಸಬಾರದು. ಉತ್ತಮವಾದ ಶುದ್ಧವಾದ ಹಾಲಿಗಿಂತ ಆರೋಗ್ಯಕ್ಕೆ ಬೇಕಾದ ಪದಾರ್ಥವು ಬೇರೆ ಯಾವುದೂ ಇಲ್ಲ. ದಿನ ದಿನಕ್ಕೆ ಬೆಳೆಯುವ ಮಕ್ಕಳಿಗಂತೂ ಹಾಲು ಅನಿವಾರ್ಯವಾದುದು.

ಇಂತಹ ಉತ್ತಮವಾದ ವಸ್ತುವಿನ ಉಪಯೋಗವು ನಮ್ಮಲ್ಲಿ ಸಾಕಷ್ಟು ಪ್ರಮಾಣದಲ್ಲಿಲ್ಲವೆಂಬುದನ್ನು ಮೇಲೆ ವಿವರಿಸಿದ್ದಾಯಿತು. ನಮಗೆ ಎಷ್ಟು ಹಾಲು ಬೇಕೆಂಬುದನ್ನು ನೋಡೋಣ. ಸಾಧಾರಣವಾಗಿ ಪ್ರತಿಯೊಬ್ಬನಿಗೂ 1 ದಿನಕ್ಕೆ 7 ಚಟಾಕು ಹಾಲಿನ ಅಗತ್ಯವಿದೆ. ಆದರೆ ನಮ್ಮ ದೇಶದಲ್ಲಿ ಈಗ ಇದರ ಅರ್ಧಭಾಗ ಮಾತ್ರ ದೊರೆಯುತ್ತಿದೆ. ಒಟ್ಟು ಬೇಕಾಗುವ ಹಾಲಿನ ಸೇ 60 ಭಾಗ ಮಾತ್ರ ದೊರೆಯುತ್ತಿದೆ. ಮಕ್ಕಳಿಗೆ ಪ್ರತಿದಿನವೂ 7ರಿಂದ 14 ಚಟಕು ಹಾಲು ಅಗತ್ಯ. ಗರ್ಭಿಣಿ ಸ್ತ್ರೀಯರಿಗೂ ಮತ್ತು ಸ್ತನ್ಯಪಾನ ಮಾಡಿಸುವ ಹೆಂಗಸರಿಗೂ ಸಾಧಾರಣವಾಗಿ 11 ಚಟಾಕು, ಯುವಕರಿಗೆ ದಿನವೂ 7 ಚಟಕೂ ಹಾಲು ಬೇಕು.

ಭಾರತದಲ್ಲಿ ಬ್ರಿಟನ್ನಿನ 11ರಷ್ಟು ಡೆನ್ಮಾರ್ಕಿನ 6ರಷ್ಟು ಆಸ್ಟ್ರೇಲಿಯದ [illegible] ಜರ್ಮನಿಯ 7ರಷ್ಟು ದನಗಳಿದ್ದರೂ, ಇಲ್ಲಿ ಹಾಲು, ಮತ್ತು ಅದರಿಂದಾಗುವ ಪದಾರ್ಥಗಳ ಅಭಾವವು ಬಹಳವಾಗಿದೆ ಅಲ್ಲದೆ ತನ್ನ ಆವಶ್ಯಕತೆಗಳನ್ನು ಪೂರೈಸಲು ಭಾರತವು ಹೊರಗಿನಿಂದ ಹಾಲು ತರಿಸಿಕೊಳ್ಳುತ್ತಿದೆ ಎಂದರೆ ಇದಕ್ಕಿಂತ ನಾಚಿಕೆಗೇಡಿನ ವಿಚಾರವಿನ್ನೇನು ಬೇಕು? 1935-36ರಲ್ಲಿ 70 ಲಕ್ಷ ರೂ.ಗಳಿಗಿಂತ ಹೆಚ್ಚಿನ ಬೆಲೆಯ ಹಾಲು ಹೊರಗಿನಿಂದ ಇಲ್ಲಿಗೆ ಬಂದಿತ್ತು. 11 ಲಕ್ಷಕ್ಕಿಂತ ಹೆಚ್ಚು ಬೆಲೆಯ ಬೆಣ್ಣೆಯು ಹೊರದೇಶಗಳಿಂದ ಬಂದಿತ್ತು.

ಇನ್ನೊಂದು ಗಮನಾರ್ಹವಾದ ವಿಚಾರವೇನೆಂದರೆ ಭಾರತದ ನಗರಗಳಲ್ಲಿ ಹಾಲು ಬಹಳ ಕಡಿಮೆಯಾಗಿದೆ, ಜೊತೆಗೆ ಶುದ್ಧವಾದ ಹಾಲು ದೊರೆಯದಿರುವ ತೊಂದರೆ ಬೇರೆ ಅಲ್ಲದೆ ನಮ್ಮ ನಗರಗಳಲ್ಲಿ ಹಾಲು ಮಾರುವ ಬೆಲೆಯು ಇತರ ದೇಶಗಳಿಗಿಂತ ಹೆಚ್ಚಾಗಿದೆ. ನಗರಗಳ ಸುತ್ತ ಹಾಲು ಉತ್ಪತ್ತಿಯಾಗುವ ವಾತಾವರಣವು ತೀರ ಕೆಟ್ಟಿದ್ದು, ಹಾಲು ಕುಡಿಯಲು ಯೋಗ್ಯವಾಗಿರುವುದಿಲ್ಲ. ಕೆಲವು ಪುರಾಣಬದ್ಧರು ಆಕಳು, ಎಮ್ಮೆಗಳಿಗೆ ಸುದರೆ ಲದ್ದಿಯನ್ನು ತಿನ್ನಿಸುತ್ತಾರಂತೆ!. ಇಂತಹ ಆಹಾರವನ್ನು ತಿಂದು ಅವು ಎಂತಹ ಹಾಲನ್ನು ತಾನೇ ಕೊಡಬಲ್ಲವು? ಇದನ್ನು ಕುಡಿಯುವುದಕ್ಕಿಂತ ಹಾಗೇ ಇರುವುದೇ ಉತ್ತಮವಲ್ಲವೆ?

ತುಪ್ಪದ ವಿಚಾರವೂ ಇದೇ ರೀತಿಯಾಗಿದೆ. ಈಗ ಶುದ್ಧವಾದ ತುಪ್ಪವು ದೊರೆಯುವುದೇ ದುರ್ಲಭವಾಗಿದೆ. ಅದರಲ್ಲಿ ಉಗ್ಗೆ ಮತ್ತು ಅನೇಕ ವಿಧವಾದ ಕೊಬ್ಬನ್ನು ಸೇರಿಸಿರುವರು. ಇದರ ಉಪಯೋಗದಿಂದ ಆರೋಗ್ಯವು ಸಹಜವಾಗಿ ಕೆಡುವುದು. ಆದುದರಿಂದ ಅಸ್ವಚ್ಛವಾದ ಹಾಲು ಮತ್ತು ತುಪ್ಪವನ್ನು ತಯಾರಿಸುವುದು ನಮ್ಮ ಪ್ರಾಂತಗಳ ಮುಖ್ಯ ಕೆಲಸವಾಗಬೇಕು. ಸರಕಾರವೂ ಸಹ ಇದರ ವಿಷಯದಲ್ಲಿ ಹೆಚ್ಚು ಗಮನ ಕೊಡಬೇಕು. ನಂತರ ರಾಜಕೀಯ ಸಂಸ್ಥೆಗಳು ಇದರ ಕಡೆಗೆ ಸಹ ಗಮನಕೊಡಬೇಕು.

ಡೈರಿ ಉದ್ಯೋಗವು ಹೆಚ್ಚುವುದರ ಮೂಲಕ ನಮ್ಮ ದೇಶಕ್ಕೆ ಅನೇಕ ಲಾಭವುಂಟು. ಭಾರತದ ರೈತರಿಗೆ ಯಾವಾಗಲೂ ಸಹಾಯಕರೇ ಇರುವುದಿಲ್ಲ. ವರ್ಷದಲ್ಲಿ ಬಹಳ ಕಾಲ ಅವನು ಕೆಲಸವಿಲ್ಲದೆ ಇರುವನು. ಆಗ ಅವನ ಆದಾಯಕ್ಕೆ ಯಾವ ಮಾರ್ಗವೂ ಇರುವುದಿಲ್ಲ. ಕೇಂಟಬರ್ ಎಂಬುವರ ಲೆಕ್ಕದ ಪ್ರಕಾರ ಪ್ರಾಂತ್ಯಗಳಲ್ಲಿ ವರ್ಷದಲ್ಲಿ 150-190 ದಿನ ಮಾತ್ರ ಕೆಲಸವಿದೆಯಂತೆ. ಪಂಜಾಬಿನ ವ್ಯವಸಾಯಗಾರರ ಲೆಕ್ಕದಂತೆ ರೈತನು ಸರಾಸರಿ ವರ್ಷದಲ್ಲಿ 150 ದಿನಕ್ಕಿಂತ ಹೆಚ್ಚು ಕೆಲಸ ಮಾಡುವುದಿಲ್ಲವಂತೆ. ಈ ಬಿಡುವಿನ ಕಾಲವನ್ನು ಡೈರಿ ವ್ಯವಸಾಯದಲ್ಲಿ ಉಪಯೋಗಿಸಿದರೆ ಬಹಳ ಲಾಭವಾಗುವುದು. ಇದಕ್ಕಿಂತ ರೈತರಿಗೆ ಬೇರೆ [illegible] ಸಹಾಯಬೇಕು? ನಮ್ಮ ದೇಶದ ಶಕ್ತಿಯನ್ನು ಪುನಃ ಸಂಪಾದಿಸಬೇಕಾದರೆ, ಹಾಲು, ತುಪ್ಪ, ಮೊಸರಿನಂತಹ ವಸ್ತುಗಳನ್ನು ಹೆಚ್ಚಿಸಬೇಕು. ನಮ್ಮ ದೇಶದಲ್ಲಿ ಉತ್ತಮವಾದ ತಳಿಗಳಿಗೇನೂ ಕೊರತೆ ಇಲ್ಲ.

ಡೈರಿಯ ಉನ್ನತಿಗೆ [illegible] ಕೊಡುವುದೂ ಒಂದು ಮುಖ್ಯವಾದ ವಿಚಾರ. ಸರಕಾರವು ಇದರ ಕಡೆಗೆ ಗಮನಕೊಡಬೇಕು. ಹಾಲಿನ ವ್ಯಾಪಾರದಲ್ಲಿ ಅತ್ಯಂತ ಕಠಿಣವಾದ ನಿಬಂಧನೆಗಳಿರಬೇಕು.

ಕೃಷಿ ಪ್ರಧಾನವಾದ ಭಾರತದಲ್ಲಿ, ಎಲ್ಲರಿಗೂ ಅತ್ಯಂತ ಅಗತ್ಯವಾಗಿ ಬೇಕಾದ ಹಾಲಿನಂತಹ ಮುಖ್ಯವಾದ ವಸ್ತುವನ್ನು ಸಾಕಷ್ಟು ಪ್ರಮಾಣದಲ್ಲಿ, ಎಲ್ಲರಿಗೂ ದೊರೆಯುವಂತೆ ಮಾಡುವುದು ಸರಕಾರದ ಮತ್ತು ಸಾರ್ವಜನಿಕರ ಬಹಳ ಮುಖ್ಯವಾದ ರಾಷ್ಟ್ರೀಯ ಕೆಲಸ. ನ

NAVAYUGA
Advertisement Tariff

1 Page Rs. 25 - per insertion
½ ,, Rs. 15 - ,, ,,
¼ ,, Rs. 8 ,, ,,
⅛ ,, Rs. 5 ,, ,,
Per Single inch col. Re. 1 ,,
Contract rates on application
Manager Navayuga UDIPI.

ANTARANGA
YUGADI SPECIAL

ADVERTISEMENT RATES

Full Page	Rs. 25—0—0
Half Page	Rs. 13—0—0
Quarter Page	Rs. 7—0—0
⅛ Page	Rs. 4—0—0
Cover Back Page	Already Reserved.
Cover 2nd & 3rd Page	Rs. 35—0—0

FOR FURTHER PARTICULARS APPLY TO:
Advertisement Manager:—
ANTARANGA, UDIPI.

ಕೆನರಾ ಬೇಂಕ್ ಲಿಮಿಟೆಡ್
ಲಿಮಿಟೆಡ್ ಜವಾಬ್ದಾರಿಯಿಂದ ಬ್ರಿಟಿಷ್ ಇಂಡಿಯದಲ್ಲಿ ಸ್ಥಾಪಿತವಾದುದ.
೧೯೩೯ನೇ ಇಸವಿ ದಶಂಬರ ೩೧ಕ್ಕೆ ಅಂತ್ಯವಾಗುವ ವರ್ಷದ
ಆಯವ್ಯಯದ ಸಾರಾಂಶ ಪಟ್ಟಿ.

	ರೂ ಆ ಪೈ		ರೂ ಆ ಪೈ
ಮೂಲಧನ		ಕಟ್ಟಡ ಮತ್ತು ಸಾಮಾನು	
ತೆತ್ತಲ್ಪಟ್ಟ	6,00,000 0-0	ಮೊದಲಾದವುಗಳಿಗೆ ಸ್ಥಿರ	
ಶೈರ್ ಅರ್ಫ್	3,91,342-0 0	ಮೌಲ್ಯ ನ್ಯಾಯ	95,489-4 3
ರಿಸರ್ವ್ ಫಂಡು	4,50,000 0-0	ವ್ಯಾಪಾರಿಗಳಿಗೆ ಎಡ್ವಾನ್ಸ್ ಕೊಟ್ಟದ್ದು	
ಡಿಪೋಸಿಟ್		ಬೆಲೆ ಬಾಳುವ	
ಫಿಕ್ಸೆಡ್, ಕರೆಂಟ್		ಸೆಕ್ಯುರಿಟಿ	40,97,741 5 6
ಇತ್ಯಾದಿ	81,21,622-8 1	ಹುಂಡೀ ಪತ್ರ	
ಬೇಂಕುಗಳಿಗೆ ಸಲ್ಲತಕ್ಕದ್ದು	ಇಲ್ಲ	ಮೊದಲಾದವುಗಳು	10,30,649 2 10
ವಿವಿಧ	10,51,799-1 7	ಠೇವಣಾತಿ	20,64,535-2 0
ಈ ವರ್ಷದ ಲಾಭ	55,003 0-6	ವಿವಿಧ	9,82,093 10 4
		ನಗದು	17,99,207-1 3
ಒಟ್ಟು	1,00,69,766 10 2	ಒಟ್ಟು	1,00,69,766 10 2

ಹಠಯೋಗ ಸಾಧನೆಯ ವಿಚಿತ್ರ ಪ್ರದರ್ಶನ

ಮನುಯೋಗಿಯ ಸಜೀವ ಸಮಾಧಿ!

ಕಥಿಯಾವಾಡದ ಮೋರ್ವಿಯಲ್ಲಿ ಇತ್ತಲಾಗಿ ನಡೆದ ಸಮಾಧಿಯ ವಿವರ.

ಕಥಿಯಾವಾಡದ ಮೋರವಿ ಎಂಬ ಪಟ್ಟಣದಲ್ಲಿ ರಿಷಿಕೇಶದ ಶಂಕರ ಯಾನೆ ಮನುಯೋಗಿ ಎಂಬವರು ಇತ್ತಲಾಗಿ ವಿಚಿತ್ರ ಯೋಗಿಕ ಸಾಧನೆಗಳನ್ನು ಪ್ರದರ್ಶಿಸಿ ಜನತೆಯನ್ನು ವಿಸ್ಮಯಗೊಳಿಸಿರುವರು. 24 ಘಂಟೆಗಳ ವರೆಗೆ ಸಜೀವವಾಗಿ ಹೂಳಲ್ಪಟ್ಟು ಯಾವ ತರದ ದುಷ್ಪರಿಣಾಮವೂ ಇಲ್ಲದೆ ಹೊರತೆಗೆಯಲ್ಪಟ್ಟಿರುವರು.

ಹಠಯೋಗದಿಂದ ಇಂದ್ರಿಯಗಳ ಚಲನ-ವಲನಗಳ ಮೇಲೆ ಸಂಪೂರ್ಣ ಅಧಿಕಾರ ಸ್ಥಾಪಿಸಿ ಅವನ್ನು ನಿಯಂತ್ರಗೊಳಿಸಿ ಶ್ವಾಸೋಚ್ಛ್ವಾಸವನ್ನೂ ಹತೋಟಿಗೆ ತಂದು ಮನಸ್ಸನ್ನು ನಿಶ್ಚಲ ಪ್ರಶಾಂತಸ್ಥಿತಿಗೆ ಮುಟ್ಟಿಸಿ ಆರೋಗ್ಯ(ದ್ದೇಶಪಕ್ಷ)ಐಕ್ಯಗೊಳಿಸಬಹುದು. ಯೋಗಿಗಳ ಅಭಿಮತದ ಮೇರೆಗೆ ಮನುಷ್ಯ ದೇಹದಲ್ಲಿ ಪಂಚಪ್ರಾಣಗಳಿರುವವು. ಅದರಲ್ಲಿ ಮುಖ್ಯವಾದುದೆಂದರೆ ಶ್ವಾಸೋಚ್ಛ್ವಾಸದ ವಾಯು. ಹಠಯೋಗಿಯು ಅವುಗಳನ್ನು ನಿಯಂತ್ರಿಸಿ ಸ್ತಂಭಿತಗೊಳಿಸಬಲ್ಲನು. ಇಂತಹ ಅಬೋಧಾವಸ್ಥೆಯು ಸಮಾಧಿಯೆಂದು ಕರೆಯಲ್ಪಡುವುದು. ಯೋಗಿಯು ಸಮಾಧಿಸ್ಥನಾದಾಗ ಶ್ವಾಸೋಚ್ಛ್ವಾಸ ಮತ್ತು ಹೃದಯ ಬಡಿತವು ನಿಂತುಹೋದರೂ ಮರಣವುಂಟಾಗಲಾರದು. ಯೋಗಿಯು ಎಷ್ಟು ದೀರ್ಘಕಾಲ ಹೀಗೆ ಸಮಾಧಿಸ್ಥನಾದರೂ ಆತನ ಶರೀರದಲ್ಲಿ ಯಾವ ತರದ ಶಿಥಿಲತೆಯೂ ಉಂಟಾಗಲಾರದು. 3 ತಿಂಗಳುಗಳಿಗಿಂತಲೂ ಹೆಚ್ಚಾಗಿ ಹೀಗೆ ಸಮಾಧಿಸ್ಥರಾಗಿದ್ದ ಸಂಗತಿಗಳಿವೆ. ಸಮಾಧಿಯನ್ನು ಸಾಧಿಸಿ ಅದರಿಂದೇನಾದರೂ ಹಾನಿಯುಂಟಾಗದಂತಾಗಲು ಕೆಲವು ಮುಂಜಾಗ್ರತೆಗಳನ್ನು ತೆಗದುಕೊಳ್ಳತಕ್ಕದ್ದು. ಹಠಯೋಗದ ಪೂರ್ವಸಿದ್ಧತೆಯು ಅವಶ್ಯವಾಗಿದ್ದು ಸಮಾಧಿಯ ಮೊದಲು 2 ದಿನಗಳ ವರೆಗೆ ಅವನ್ನು ನಡಿಸತಕ್ಕದ್ದು.

ಈ ಪೂರ್ವ ಸಿದ್ಧತೆಯ ಸಮಯದಲ್ಲಿ ಯೋಗಿಯು ನಿರಶನನಾಗಿದ್ದು ಧೌತಿ, ಬಸ್ತಿ, ನೇತಿ, ತ್ರಾಟಕ ಕಪಾಲಿ ಮತ್ತು ಭಾತಿ ಎಂಬ 6 ಬಗೆಯ ಶುದ್ಧೀಕರಣಗಳನ್ನು ನಿಷ್ಠೆಯಿಂದ ನಡಿಸಬೇಕು. ಈ ಶುದ್ಧೀಕರಣ ಸಾಧನಗಳು ಕೂಡಾ ಸಮಾಧಿಯಷ್ಟೇ ಚಿತ್ತಾಕರ್ಷಕವಿರುತ್ತವೆ. ಅಂಟು ಹಾಕಿದ ಹತ್ತಿ ನೂಲಿನಿಂದ ಗಂಟಲು ಮತ್ತು ಮೂಗನ್ನು ಶುದ್ಧಮಾಡಲಾಗುವುದು. ಅನ್ನಕೋಶವನ್ನು ಶುದ್ಧಮಾಡಲು ನಯವಾದ ರೇಶ್ಮೆಯ ಉದ್ದವಾದ ಅಂಚೊಂದನ್ನು ನುಂಗಿ ಹೊರತೆಗೆಯಲಾಗುವುದು. ನೌಲಿಯ ಮೂಲಕ ಕರುಳನ್ನು ಶುದ್ಧಪಡಿಸಲಾಗುತ್ತದೆ.

ಮೋರ್ವಿಯಲ್ಲಿ ನಡೆದ ಪ್ರದರ್ಶನದಲ್ಲಿ ಮೊದಲಾಗಿ ಸ್ಥಳೀಯ ಶಂಕರ ಆಶ್ರಮದ ತೋಟದಲ್ಲಿ 4 ಅಡಿ ವ್ಯಾಸ ಮತ್ತು 6 ಅಡಿ ಆಳದ ಹೊಂಡವೊಂದನ್ನು ಅಗೆಯಲಾಯಿತು. ಈ ಗೋಡೆಯ ಸುತ್ತಲಿನ ಗೋಡೆಗೆ ಸರಿಯಾಗಿ ಸಗಣಿ ಬಳಿದು, ಅಡಿಯ ಭಾಗಕ್ಕೆ ಹೊಯಿಗೆ ಹಾಕಲಾಯಿತು. ಪುರೋಹಿತರುಗಳು ಕೆಲವು ಸಂಸ್ಕಾರಗಳನ್ನು ಮಾಡಿದ ಮೇಲೆ ಕೇವಲ ಕೌಪೀನ ಧಾರಿಯಾದ ಮನುಯೋಗಿಯು ಮೂರು ಸಲ ಈ ಹೊಂಡದ ಸುತ್ತು ಬಂದು ಅದರೊಳಗಿಳಿದನು. ಆ ಮೇಲೆ ಪಾದಗಳನ್ನು ಮೇಲಕ್ಕೆತ್ತಿ ಯೋಗಾಸೀನನಾದನು. ಅನಂತರ ಶರೀರವನ್ನೆಲ್ಲಾ ವಸ್ತ್ರದಿಂದ ಮುಚ್ಚಿ 15 ನಿಮಿಷಗಳಲ್ಲಿ ಸಮಾಧಿಸ್ಥನಾದನು.

ಯೋಗಿಯ ಶ್ವಾಸೋಚ್ಛ್ವಾಸವು ನಿಂತಾಗ ಅಥವಾ ಕಡಿಮೆಯಾದಾಗ ಆತನಿದ್ದ ಹೊಂಡವನ್ನು ಕಬ್ಬಿಣದ ತಗಡಿನಿಂದ ಮುಚ್ಚಲಾಯಿತು. ಅನಂತರ ಅದರ ಬದಿಗಳನ್ನೆಲ್ಲಾ ಇಟ್ಟಿಗೆ ಮತ್ತು ಗಚ್ಚಿನಿಂದ ಸರಿಯಾಗಿ ಬಂದುಮಾಡಲಾಯಿತು. ಆ ಮೇಲೆ ಅದರ ಮೇಲೆ ದಪ್ಪವಾಗಿ ಮಣ್ಣು ಹಾಕಿ ವಾಯು ಒಂದಿಷ್ಟಾದರೂ ಹೊಂಡದೊಳಗೆ ಪ್ರವೇಶಿಸದಂತೆ ಮಾಡಲಾಯಿತು. ಅಂದಿನ ರಾತ್ರಿ ಮತ್ತು ಹಗಲಲ್ಲಿ ಇಬ್ಬರು ಪೋಲೀಸರು ಮತ್ತು ಇನ್ನು ಕೆಲವು ಜನರು ಈ ಹೊಂಡದ ಬಳಿ ಕಾವಲಿದ್ದರು. 24 ಘಂಟೆಗಳ ನಂತರ ಮರುದಿನ ಸಂಜೆ ಘಂಟೆ 6 30ಕ್ಕೆ ಹೊಂಡದ ಮೇಲಿನ ಮಣ್ಣು ಇಟ್ಟಿಗೆ ಮತ್ತು ಕಬ್ಬಿಣ ತಗಡುಗಳನ್ನು ತೆಗೆಯಲಾಯಿತು.

ಮನುಯೋಗಿಯು, ಹೊಂಡವು ಮುಚ್ಚಲ್ಪಡುವಾಗ ಇದ್ದಂತೆಯೇ ಇದ್ದನು. ಆತನ ಶ್ವಾಸೋಚ್ಛ್ವಾಸವು ನಿಂತುಹೋದಂತೆ ತೋರುತ್ತಿತ್ತು. ಅದರ ಅನಂತರ ಕೆಲವು ನಿಮಿಷಗಳಲ್ಲೇ ಪುನಃ ಉಸಿರಾಟ ಆರಂಭವಾಯಿತು. 10 ನಿಮಿಷಗಳಾದ ಮೇಲೆ ಯೋಗಿಯು ಸರಿಯಾಗಿ ಉಸಿರಾಡಲಾರಂಭಿಸಿದರು. ಪುರೋಹಿತರುಗಳು ಪುನಃ ಕೆಲವು ಸಂಸ್ಕಾರಗಳನ್ನು ಮಾಡಿದರು. ಮನುಯೋಗಿಯು ಹೊಂಡದೊಳಗಿದ್ದ ರೀತಿಯಲ್ಲಿಯೇ ಅದರಿಂದ ಹೊರಬಂದನು. 3 ತಿಂಗಳ ವರೆಗೆ ಸಮಾಧಿಸ್ಥನಾಗಿರಲು ತನಗೆ ಅನುಮತಿ ಕೊಡಬೇಕೆಂದು ಮನುಯೋಗಿಯು ಪ್ರಥಮತಃ ಸರಕಾರದೊಡನೆ ಕೇಳಿಕೊಂಡಿದ್ದನು. ಆದರೆ ಇದು ಅತ್ಯಂತ ದೀರ್ಘವಾಗಿ ಅಪಾಯಕರವಾದುದೆಂದು ಸರಕಾರವು ಸಮ್ಮತಿಸಲಿಲ್ಲ. ಈ ಯೋಗ ಸಿದ್ಧ ಪ್ರದರ್ಶನದ ಕುರಿತು ಆರಂಭದಿಂದಲೂ ಮೋರ್ವಿಯ ಜನರು ಬಹಳ ಉತ್ಸುಕತೆ ತಾಳಿದ್ದರು. ಹಠಯೋಗದಲ್ಲಿ ಜನರಿಗೆ ಕಡಿಮೆಯಾಗುತ್ತಿರುವ ವಿಶ್ವಾಸವನ್ನು ದೃಢಪಡಿಸಲು ಮನುಯೋಗಿಯು ಈ ಪ್ರದರ್ಶನವನ್ನು ಬಹಿರಂಗವಾಗಿ ನಡಿಸಿದನು. ಸರ್ವಸಾಮಾನ್ಯವಾಗಿ ಯೋಗಿಗಳು ಏಕಾಂತವಾಗಿ ಸಮಾಧಿಸ್ಥರಾಗುವರು.

ದಕ್ಷಿಣಕನ್ನಡ ಜಿಲ್ಲಾ ದೇವಾಡಿಗರ ಶುಭೋದಯ ಸಂಘ, ಮಂಗಳೂರು-

ತಾ. 24-3-1940ರಲ್ಲಿ ಮಂಗಳೂರು ಶ್ರೀ ಮಹಮ್ಮಾಯಿ ದೇವಸ್ಥಾನದ ಬಳಿಯಲ್ಲಿರುವ ಶಾಲಾ ಕಟ್ಟಡದಲ್ಲಿ ದಕ್ಷಿಣಕನ್ನಡ ಜಿಲ್ಲಾ ದೇವಾಡಿಗರ ನೂತನ ಸಭೆಯೊಂದು ಶ್ರೀ ಭೋಜರಾವ್ ಮಾಸ್ತರರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಾಗಿ ಜರಗಿತು. ಜಿಲ್ಲೆಯ ಎಲ್ಲಾ ಭಾಗಗಳಿಂದ ಸುಮಾರು 300 ಜನ ಸ್ವಜಾತಿ ಬಾಂಧವರು ಬಂದಿದ್ದರು.

ದೇವತಾಪ್ರಾರ್ಥನೆಯಾದ ನಂತರ ಜೋಯಾಳಿಗರಿಕಾದ ಪರವಾಗಿ ಶ್ರೀ. ಅಡಿಯಾನ ಗೋಪಾಲ ದೇವಾಡಿಗರು ಇಂದು ಕೂಡಿ ಬಂದ ಸಭೆಯ ಉದ್ದೇಶವನ್ನು ವಿವರಿಸಿ ಹೇಳಿದರು. ಅಲ್ಲಿ ಶ್ರೀ ಅಬ್ಬಂಣ ದೇವಾಡಿಗರು ಸಂಘದ ಅವಶ್ಯಕತೆ ಮತ್ತು ಕ್ರಮ ನಿಬಂಧನೆಗಳು ವಾಲಾ ವಿಷಯಗಳಲ್ಲಿ ಸಭೆಯ ಮುಂದಿಟ್ಟಿರುವ ಕ್ರಮ ನಿಬಂಧನೆಗಳು ಸರ್ವಾನುಮತದಿಂದ ಮಂಜೂರಾಗಿ ಮುಂದೆ ನಡಿಸುವ ಬಗ್ಗೆ 12 ಜನ ಆಡಳಿತ ಮಂಡಳಿಯನ್ನೂ 12 ಜನ ಕಮಿಟಿ ಮೆಂಬರನ್ನೂ ಸರ್ವಾನುಮತದಿಂದ ಚುನಾಯಿಸಲಾಯಿತು. ಆ ವೇಳೆ ಸಂಘದ ಪ್ರವರ್ತಕರು ಶ್ರೀ ಶೀನಪ್ಪ ಮಾಸ್ತರರು ಮತ್ತು ಶ್ರೀ. ಕೆ. ಅಂತಪ್ಪ ಮೇಸ್ತ್ರಿಯವರು ಸಂಘದ ಏಳಿಗೆಯ ವಿಷಯದಲ್ಲಿ ಎಲ್ಲಾ ಸ್ವಜಾತಿ ಬಾಂಧವರು ಸಹಕರಿಸುವಂತೆ ವಿನಂತಿ ಮಾಡಿಕೊಂಡರು. ಸಭಾಧ್ಯಕ್ಷರು ಈ ರೀತಿಯ ಸಮಾಜ ಸಂಘಗಳು ಅತೀ ಅಗತ್ಯವೆಂದೂ ಎಲ್ಲವರೂ ಅನ್ಯೋನ್ಯದಿಂದ ನಡಕೊಂಡು ಸಮಾಜದಲ್ಲಿ ಬಡವರಿಗೆ ಯೋಗ್ಯ ವಿದ್ಯೆಯು ದೊರಕುವಂತೆ ಇಂಥಾ ಸಂಘಗಳಿಂದ ತಕ್ಕ ಸಹಾಯ ಕೊಡಬೇಕೆಂದೂ ಭಾಷಣವಿತ್ತರು. ಶ್ರೀ ಗೋಪಾಲ ಮಾಸ್ತರರು ಧನ್ಯವಾದಗಳನ್ನು ಅರ್ಪಿಸಿದ ನಂತರ ಮುಖ್ಯ ಶ್ರೀ ಅಬ್ಬಂಣ ದೇವಾಡಿಗರು ತಾನು ರಚಿಸಿದ ಸಂಘದ ಪ್ರಾರ್ಥನೆಯ ಹಾಡನ್ನು ಓದಿದ ಮೇಲೆ ಸಭೆಯು ಕೊನೆಗೊಂಡಿತು.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

S. C. ನಂ. R. E. P. ನಂ.

ಮಲ್ಲಿಗೆ ಮಾಡುವ ಲ್ಲಕಾರ್ಜುನ-ವಾದಿ-ಅರ್ಜಿದಾರ

ಮತ್ತು

ಮಂಜುದೇ-ಚೆಂಮಂಣ ಗುಂಡಿಲ ಅಬ್ದುಲ್ಲ ಹಾಜಿಗೆ ಪೋಟುಕರಿ ಇಲ್ಲತ್ತ ಅಸ್ಯಮ್ಮ ಹೆಂಗ್ಸಿನಲ್ಲಿ ಹುಟ್ಟಿದ ಮಗ, ಕಾಸರಗೋಡು ತಾಲು ಚಿತ್ತಾರಿ ಗ್ರಾಮದಲ್ಲಿರುವವ— } ಪ್ರತಿವಾದಿ ರೆಸ್ಪಾಂಡೆಂಟ್

ಇವರೊಳಗೆ

ಪ್ರತಿ ರೆಸ್ಪಾಂಡೆಂಟಿಗೆ ತಿಳಿಸುವದೇನೆಂದ್ರೆ

ಮೇಲ್ಕಂಡ ಅಮಲ್ಜಾರಿಯಲ್ಲಿ ಜಪ್ತಾದ ಸ್ಥಿರಾಸ್ತಿಗಳು ಏಲಂ ಮಾಡುವ ಬಗ್ಗೆ ಏಲಂ ಸಮಯ ವಾರು ಕೊಡಿಸುವರೆ ಪರ್ಮಿಶನ ಕೊಡಿಸುವ ಬಗ್ಗೆ ಕೂಡಾ ಅರ್ಜಿದಾರನು ಅರ್ಜಿ ದಾಖಲು ಮಾಡಿರುವದ್ರಿಂದ ಆ ಕುರಿತು ರೆಸ್ಪಾಂಡೆಂಟಿಗೆ ಆಕ್ಷೇಪ ಹೇಳಲಿಕ್ಕೆ ಇದ್ದ ಪಕ್ಷಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ 11 ಘಂಟೆ ಸಮಯಕ್ಕೆ ತಾರೀಕು 12-4-1940ನೇ ದಿವ್ಸ ಹಾಜರಾಗಿ ಆಕ್ಷೇಪ ಹೇಳಬಹುದು. ತಪ್ಪಿದ್ದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

Kasaragod | *Sd.* **C. V Kamath**
30—3—40 | *Advocate for Petr.*

ತಾಳದ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ

"ಗೊನೊಕಿಲರ್" (ರಜಿಸ್ಟರ್ಡ)

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲರ್" ಹೆಸರನ್ನೂ ಗಮನಿಸಿರಿ.

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ನಿಷ್ಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನವ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗನಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳೆಯ ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋರೋಗದಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 60 ಮಾತ್ರೆಗಳ ಬುದ್ದಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ ಇಲೆಕ್ಟ್ರೊ ಹೋಮ್ಯೊಪತ್ ಡಿಸ್‌ಪೆನ್ಸರಿ.

Sole Manufacturer DR. D. N. JASANI, Vitalbhai Patel Road, BOMBAY 4

THE

PANGAL NAYAK BANK LTD.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು)

Season Deposits for a period of 3, 4, 5 or 6 months are accepted at all the offices of the Bank and interest is allowed at 4% per annum till maturity or the 30th June 1940, as the case may be, whichever is earlier.

For further information please communicate with or call at any of our offices.

THE VIJAYA BANK LTD.,

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ-- ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಆಮಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರ ವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಬಾಲಕರು ಆರೋಗ್ಯಶಾಲಿಯರಾಗಲು **ಪ್ರಭೂಸ್-ಬಾಲಾಮೃತ**

ಒಂದೆರಡು ವಾರಗಳಲ್ಲಿ ಅದ್ಭುತ ಗುಣ.

— ಕಮನೀಯವಾದ ಕೇಶಕಲಾಪ ತಂಪಾದ ಮೆದುಳು ಶುಭ್ರ ನೇತ್ರಗಳು ಇವುಗಳನ್ನು ಹೊಂದಲು —

ಪುಷ್ಪಗಂಧಾಮೋದಿತ **ಆಮಲಕೀ ತೈಲ** ಬಹು ಗುಣಯುಕ್ತ

ವಾಯುಮಾತ್ರೆಗಳೆಂಬ --- **ಧಾನ್ವಂತರಿ ಗುಟಿಕಾ** --- ಇವುಗಳನ್ನು ಸೇವಿಸಿ ವಾಯುವೆಂಬ ರೋಗವನ್ನು ಗುಣಪಡಿಸಿಕೊಳ್ಳಿರಿ.

ಮಾತ್ರೆ-12ಕ್ಕೆ 0-4-0, 25ಕ್ಕೆ 0-7-0, 50ಕ್ಕೆ 0-13 0, 100ಕ್ಕೆ 1-5-0.

5 ಆಣೆಯ ಸ್ಟಾಂಪು ಕಳುಹಿಸಿದರೆ 12 ಮಾತ್ರೆಗಳನ್ನು ಕಳುಹಿಸುತ್ತವೆ.

ಸ್ವದೇಶೀ ಔಷಧಿ ಭಂಡಾರ (ರಜಿಸ್ಟರ್ಡ್) **ಕೋಟೇಶ್ವರ**, ಬ್ರಹ್ಮಾವರ, ದ. ಭಾ

ನಮ್ಮ ಸ್ಟಾಕಿಸ್ಟರು:-

ನವಭಾರತ ಬುಕ್ ಡಿಪೋ, ಉಡುಪಿ, ದ. ಕನ್ನಡ. ಜನರಲ್ ಸಪ್ಲೈಸ್ ಲಿಮಿಟೆಡ್, ಉಡುಪಿ ಫೋರ್ಟ್ ದ. ಭಾರತ, ಕೆನರಾ ಸಪ್ಲೈ ಏಜನ್ಸಿ, ವಿ. ಆರ್ ಪ್ರಭು, ಟಟಾಟುವಾಲಾ ಬಿಲ್ಡಿಂಗ್, ಲಾಲ್‌ಭಾಗ್ ಮುಂಬೈ ನಂಬ್ರ 12, ಗಣಪಯ್ಯ ಲಕ್ಷ್ಮಣ ಶಾನುಭೋಗ್ ಎಂಡ್ ಬ್ರದರ್ಸ್, ಕೋಟ, ದ. ಕನ್ನಡ.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ. ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

Transport & Car Owners



ARE SPECIALLY INVITED TO VISIT

OUR SHOW ROOM *for economical transport maintenance.*

CANARA AUTOMOBILES - - - - - MANGALORE

"ನಾಮರ್ದಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣಿತ, ಸ್ವಪ್ನದೋಷ, ಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ

"ಕೆಮಿಕಾ ಟಾನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನ ಉಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ.

ಕಿಮ್ಮತು ರೂ. 3-0-0 ಡಬ್ಬಿ 0-8-0

ಸೊರಠ್ ಫಾರ್ಮಸಿ,

ನಲ್ ಬಜಾರ್, ಡಂಕನ್ ರೋಡ್,

ಮುಂಬಯಿ 4

Sorath Pharmacy,

Null Bazzar, Dencan Road,

BOMBAY 4.

ಭಾರತೀ ಗ್ರಂಥಮಾಲೆಯ ಪುಸ್ತಕಗಳು.

ಬೆಳಕು (ಚಿಕ್ಕ ಕತೆಗಳ ಸಂಗ್ರಹ.)

ಕಿನಿಸು (ಕತೆ, ಕವನ, ಪ್ರಬಂಧಗಳ ಸಂಗ್ರಹ)

ಪ್ರತೀಕಾರ (ನವಪೌರಾಣಿಕ ನಾಟಕ)

ತೋಪಾಮುದ್ರೆ (ಪೌರಾಣಿಕ ಕತೆ)

ಚಿಗುರು (10 ಚಿಕ್ಕ ಕತೆಗಳ ಸಂಗ್ರಹ)

ಪಂಚಾರತಿ (5 ಏಕಾಂಕ ನಾಟಕಗಳ ಸಂಗ್ರಹ)

ಪ್ರತಿಯೊಂದರ ಬೆಲೆ ನಾಲ್ಕಾಣೆ ಮಾತ್ರ

(ಅಂಚೆವೆಚ್ಚ 0 0-6 ಪ್ರತ್ಯೇಕ)

ರೂ 1-8-0 ಕಳಿಸಿದ್ದಲ್ಲಿ ಆರೂ ಪುಸ್ತಕಗಳನ್ನು ಕಳಿಸಲಾಗುವುದು. (ಅಂಚೆವೆಚ್ಚ ಪುಕ್ಕಟೆ)

ವ್ಯಾಪಾರಿಗಳಿಗೆ ಧಾರಾಳ ಕಮಿಶನ್.

ಪ್ರತಿಗಳಿಗೆ ಬರೆಯಿರಿ:-

ಮೆನೇಜರ್,

ನವಭಾರತ ಪುಸ್ತಕ ಭಂಡಾರ

ಉಡುಪಿ

Degrees: Books: Medicines.

Free H. L. M. S, H. M. B, H. M. D etc Free Homœo Ay r-Unani-Naturo degrees. by post also—Practitioners also get some Homeo Materiamedica, Rs. 5. Homœo-Practice book Rs. 4. Insanity Cure Pills Rs. 10 Enclose 2 annas stamp.—

Principal, Indian Homœopathic Institute and Society (Govt Regd)

P. O. MAHUVA, (Kathiawar Dt. India

ಕನ್ನಡ ನುಡಿವೆಣ್ಣಿಗೊಂದು ಕನ್ನಡಿಗಿತ್ತಿಯ ಕೊಡುಗಾಣಿಕೆ

ನಾಡ ನೋದರಿಯರ ಸ್ವಜ ಜೀವನದ ದುರಂತ ಚಿತ್ರವನ್ನೂ, ಸ್ತ್ರೀ-ಪುರುಷ ಹೃದಯಗಳ ಆಳವನ್ನೂ ಹೃದಯಂಗಮವಾಗಿ ಚಿತ್ರಿಸುವ ರಮ್ಯ ಕಥಾನಕ

ವತ್ಸಲಾ

ಸಾಮಾಜಿಕ ಕಾದಂಬರಿ

ಬೆಲೆ: 0-8-0.

0-8-0 ಸ್ಟಾಂಪು ಕಳುಹಿಸಿದರೆ 1 ಪ್ರತಿಯನ್ನು ಕಳಿಸಲಾಗುವುದು.

ಬರೆದವರು:-

ಶ್ರೀಮತಿ ಮಟ್ಟಾಡಿ ಕಮಲಾಕ್ಷಿ

ಈ ಪುಸ್ತಕದ ಕುರಿತು ಪ್ರಾಕ್ತನ ವಿಮರ್ಶ ವಿಚಕ್ಷಣ ಕರ್ನಾಟಕ ವಿದ್ಯಾವರ್ಧನ, ರಾವ್ ಬಹದ್ದೂರ್ ಆರ್. ನರಸಿಂಹಾಚಾರ್ಯ M A. M.R.A.S. ಇವರು ಬೆಂಗಳೂರಿನಿಂದ ಹೀಗೆ ಅಭಿಪ್ರಾಯ ಕಳುಹಿಸಿದ್ದಾರೆ 'ಗ್ರಂಥದ ಶೈಲಿ ಗಂಭೀರವಾಗಿಯೂ ಹೃದಯರಂಜಕವಾಗಿಯೂ ಇದೆ. ಪ್ರತಿಪಾದಿತವಾದ ವಿಷಯವು ನೀತಿಬೋಧಕವಾಗಿಯೂ ದುರಂತ ನಿವಾರಕವಾಗಿಯೂ ಇದೆ. ಸ್ತ್ರೀಯರಿಗೆ ಬೋಧಪ್ರದವಾದ ಗ್ರಂಥ ......'

ಪ್ರತಿಗಳು ಸಿಗುವ ಸ್ಥಳ.

ನವಭಾರತ ಪುಸ್ತಕ ಭಂಡಾರ,

ಉಡುಪಿ.

ಕೋಲ್ಗೇಟ್ ರಿಬನ್ ಡೆಂಟಲ್ ಕ್ರೀಂ ಅಲುಗಾಡುವ ಹಲ್ಲುಗಳನ್ನು ಗಟ್ಟಿಮಾಡುತ್ತದೆ.

ಅಲುಗಾಡುವ ಹಲ್ಲುಗಳನ್ನು ಮತ್ತೆ ಗಟ್ಟಿಮಾಡಿ ರಕ್ತ ಬೀಳುವದನ್ನು ಬಂದು ಮಾಡಿ ವಸಡಿಯನ್ನು ಗಟ್ಟಿ ಮಾಡುವದು. ತಯಾರಿಸುವವರು— ಕೋಟ್ಯಾಕ್ ಕೆಮಿಕಲ್ ಕಂ. (ಮಾಲಕರು:—ಮಗನಭಾಯ್ ಅಮೀನ್ ಅಂಡ್ ಕಂಪೆನಿ ಮುಂಬಯಿ.

ನಮ್ಮ ಹೊಸ ಪ್ರತಿನಿಧಿಗಳು

ಶ್ರೀ. ಕೆ. ಎಂ. ದೇಜಪ್ಪ ಶೆಟ್ಟರು 'ನವಯುಗ'ದ ಪ್ರತಿನಿಧಿಯಾಗಿ ಕೆಲಸ ಮಾಡಲು ಉತ್ಸಾಹದಿಂದ ಮುಂದೆ ಬಂದಿದ್ದಾರೆ. ಇವರು ಮಿತಭಾಷಿಗಳು, ವಿನಯಸಂಪನ್ನರು ಹಾಗೂ ಸಂಕ ಮನೋವೃತ್ತಿಯ ಕಾಂಗ್ರೆಸ್ ಭಕ್ತರು 'ನವಯುಗ'ವನ್ನು ಎಲ್ಲೆಲ್ಲೂ ಪ್ರಚಾರಕ್ಕೆ ತರಬೇಕೆಂಬ ಉತ್ಸಾಹೇಚ್ಛೆಯಿಂದ ಇವರು ಪ್ರತಿ ಹಳ್ಳಿ, ಪೇಟೆ, ಪಟ್ಟಣಗಳಲ್ಲೂ ಕ್ರಮಶಃ ಸಂಚರಿಸಲಿರುವರು. ಇವರಿಗೆ ಸಕಲರೂ ಉದಾರಾಶ್ರಯವಿತ್ತು 'ನವಯುಗ'ಕ್ಕೆ ಸರ್ವ ಪ್ರೋತ್ಸಾಹ ಕೊಡಬೇಕಾಗಿ ಈ ಮೂಲಕ ಪ್ರಾರ್ಥಿಸಲಾಗುತ್ತದೆ. ಮೆನೇಜರ್.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Kanara Printing Works,
Hampankatte, **MANGALORE**

ಮೂಲವ್ಯಾಧಿ

ಸಾರ್ವಭೌಮನ ಸಿದ್ಧಿಯಾಗಿರುವ ವಿಚಿತ್ರ ಹಾಗೂ ಅಪೂರ್ವ ಔಷಧಿ.

ಅರ್ಶಮಾರಾ (ರಿಜಿಸ್ಟರ್ಡ್)

ರಕ್ತ ಸುರಿಯುವ ಅಥವಾ ಬಿಂದುಗಿರುವ ಒಳಗಿನ ಅಥವಾ ಹೊರಗಿನ ಯಾವಸ್ಥಿತಿಯಲ್ಲೇ ಆದ ಮೂಲವ್ಯಾಧಿಯು 'ಅರ್ಶಮಾರಾ'ವನ್ನು ಒಂದೊಮ್ಮೆ ಹಚ್ಚಿದ ಕೂಡಲೆ ಅದ್ಭುತವಾಗಿ ಗುಣಹೊಂದುವದು. ನೋವು ತುರಿಕೆ, ಉರಿಯುವಿಕೆ, ಕೀವು, ರಕ್ತಸ್ರಾವ ಆಗುವುದನ್ನೆಲ್ಲಾ ಕೂಡಲೆ ನಿಲ್ಲಿಸಿಬಿಡುವುದು. ಕೇವಲ 3 ದಿನ ಹಚ್ಚಿದರೆ ಯಾವ ತರದ ಒಪರೇಶನ ಇಲ್ಲದೆ ಮೂಲವ್ಯಾಧಿ ಅಥವಾ ಮೊಳೆಗಳನ್ನು ಗುಣಪಡಿಸುವುದು. ಈ ಔಷಧಿಯಿಂದ ಸಾವಿರಾರು ರೋಗಿಗಳು ಗುಣಹೊಂದಿ ಇತರರಿಗೆ ಅದನ್ನು ಶಿಫಾರಸು ಮಾಡುತ್ತಾರೆ. ಗುಣವಾಗದಿದ್ದಲ್ಲಿ ಹಣ ವಾಪಸು. ಬೆಲೆ ರೂ. 2 0 0.

ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

THE **MOOLKY BANK, LTD.,**
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟ ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ. ಭಂಗಾರ ವ ಸರಕಿನ ಈಡಿನ ಮೇಲೆ ಸೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು. ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ವರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja,	ಯಂ. ಆರ್. ಪೂಂಜ,
President & Manager,	ಪ್ರೆಸಿಡೆಂಟ್ ಮತ್ತು ಮೆನೇಜರ್.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ. ಆರೆಬಿಟ್ಟಿರುವ ನಿಪ್ಪ ಮಕ್ಕಳು ಕಿರುಗನಿವ ಕೈಗೆಸೇರುವುದ. ಸೀಸೆ 1ಕ್ಕೆ 12 ಆಣೆ, ಟಪಾಲು ಖರ್ಚು ಅಣೆ.

ಎಸ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪೋ, ಉಡುಪಿ**

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು. **ಸುಖಸೇವನ:** ಸುಖಸೇವನದಿಂದ ಮಧುರವೂ ಸೋಹರವಾದ ಈ ರಸಾಯನವು ಬಾಣಂತಿಯ ರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶವೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವದು ಕ್ರಯ ಬಾಟ್ಲಿ 1ಕ್ಕೆ ರೂ.2-0-0.

ಎಸ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.

ಮೈಸೂರು ಸ್ಟೇಟಿನ ಏಜಂಟರು:- ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

DAIMONDS! **DAIMONDS!**

K R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕಾಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ **ಕ್ರಾಸ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್ಸಿಲ್‌ಗಳು, ಜವಾನರ ಬೇಜು, ಮೊನೊಗ್ರಾಮ್ ಸೀಲು ಇತ್ಯಾದಿಗಳು ತ್ವರಿತವಾಗಿ ಮಾಡಿಕೊಡಲ್ಪಡುವವು.

Crown Rubber Stamp Co, 18 Balmat Road, MANGALORE.
Approved firm by the Govt. of Mysore — Certified by the Agent of the Govt. of India in Ceylon

---

ಹೊಸ ಪುಸ್ತಕ! **ಸೆಲ್ಫ್ ಇಂಗ್ಲಿಷ್ ಸ್ಟಡಿ** ಈಗಲೇ ಪ್ರಿಂಟಾಗಿದೆ!!

SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ. 1-8-0

ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವುದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ 3 ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕ ಇದುವರೆಗೆ ಯಾರೂ ತಯಾರಿಸಲಿಲ್ಲ, ದೊಡ್ಡ ಪುಸ್ತಕ, ಸ್ವಲ್ಪ ಪ್ರತಿಗಳು ಮಾತ್ರ ಇರುವವು, ಬೇಗನೇ ಬರೆಯಿರಿ. ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರೆಲ್ಲರೇ ಅಗಲಿ ಅನೇಕ ದಿವಸಗಳಲ್ಲಿ ಇಂಗ್ಲಿಷ್ ಕಲಿತುಕೊಳ್ಳಬಹುದು, ಶಾಲೆ ಅಥವಾ ಎಲ್ಲೂ ಹೋಗಬೇಕಾಗಿಲ್ಲ. ಮನೆಯಲ್ಲೇ ಈ ಪುಸ್ತಕ ಓದಿ, ಇಂಗ್ಲೀಷ್ ಓದುಬರಹ ಎಲ್ಲಾ ಸುಲಭವಾಗಿ ಬರುತ್ತೆ. ಪುಸ್ತಕದ ಕ್ರಯ ರೂ. 1—8—0.

Western Swiss Watch Co.	**ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,**
Book-Sellers, Post Box No 68	ಪೋಸ್ಟ್, ಬಾಕ್ಸ್ ನಂ. 68, ಮದರಾಸ್.
G. P. O. MADRAS	

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸವಾದಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಬದಲಾವಣೆಯಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಲಿಲ್ಲವೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಂಜೆ ನ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

PRINTED BY S. S. KARANTH AT THE THULUNAD PRESS, UDIPI. AND PUBLISHED BY K. H. SHETTY AT "NAVAYUGA OFFICE, UDIPI, S. INDIA.

ered No. M. 3618 11-4-1940

ನವಯುಗ

NAVAYUGA

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಛೇರಿ:— **ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.**

ಭದ್ರತೆಯಿಂದಲೂ, ಖಾತ್ರಿಯುಳ್ಳ ನಫೆ ಹಂಚಿಕೆಯಿಂದಲೂ, ಜಾಗ್ರತೆಯಾಗಿ ಹಕ್ಕುಗಳನ್ನು ಕೊಡುವುದರಿಂದಲೂ ಮತ್ತು ಉದಾರವಾದ ಜೀವವಿಮೆಯ ನಿಯಮಗಳಿಂದಲೂ ಈ ಸಂಸ್ಥೆಯು ಪ್ರಖ್ಯಾತಿಪಡೆದಿರುತ್ತದೆ.

ಪ್ರೊಫೆಸರ್ ಕೆ. ಬಿ. ಮಾಧವ, ಎಂ.ಎ, ಎಫ್.ಆರ್.ಎ.ಎಸ್., ಎ ಐ.ಎ (ಲಂಡನ್) ಪ್ರೊಫೆಸರ್, ಮಹಾರಾಜ ಕಾಲೇಜು, ಮೈಸೂರು ಅಕ್ಚ್ಯುಯರಿಯವರ ಅಭಿಪ್ರಾಯ ಸಾರಾಂಶ.

"ಕಳೆದ ೧೦ ವರ್ಷಗಳಿಂದ ನಿಮ್ಮ ಸಂಘವು ಬಹಳವಾಗಿ ಮುಂದುವರಿಯುತ್ತಿರುವುದಲ್ಲದೆ ಕಳೆದ ಮೂರು ವರ್ಷಗಳಿಂದ ಅಡಳಿತದ ವೆಚ್ಚ, ಬಡ್ಡಿಯ ಫಲ, ಲಾಪ್ಸಾದ ಪಾಲಿಸಿಗಳ ಸಂಖ್ಯೆ ಇವೇ ಮೊದಲಾದ ಜೀವವಿಮೆಯ ನಿಯಮಗಳನ್ನು ಉತ್ತಮಗೊಳಿಸಲು ಸಹಕಾರಿಯಾಗುವ ವಿಷಯಗಳಲ್ಲಿ ಹೊಂದಿರುವ ಅಭಿವೃದ್ಧಿಯು ತೃಪ್ತಿಕರವಾಗಿದೆ.........ಶೌರ್ಯ ಸಹಿತವಾದ ಅಭಿವೃದ್ಧಿಗೆ ಉದಾಹರಣೆಯಾಗಿರುವ ಏಷ್ಯಾಟಿಕ್ಕಿನ ಅಪ್ರತಿಹತವಾದ ಕಾರ್ಯಕಲಾಪಗಳಿಗಾಗಿ .ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸೂಚಿಸಲು ಉಂಟಾಗುವ ಸಂತೋಷವನ್ನು ಕಳೆದುಕೊಳ್ಳಲಾರೆನು"

ಕೊಟ್ಟಿರುವ ವಿಮಾ ಹಕ್ಕಿನ ಹಣಗಳು: ೫,೦೦,೦೦೦—೦—೦.

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

H. Venkataramiah, *Divisional Superintendent* or **R. Purniah** *Ag. General Manager*

The Asiatic Govt. Security Life Assu. Co. Ltd.,
Asiatic Building, BANGALORE CITY

ಝಂಡು ಮಲೇರಿಯಾ ಮಿಕ್ಶ್ಚರ್

ಕಳ್ಳಿ ಬೂದಿ — ಜಂಡು

ಮಲೇರಿಯಾ, ವಿಷವ್ರಣಗಳಿಂದುಂಟಾಗುವ ಎಲ್ಲಾ ತರದ

ಕಠಿಣ ಜ್ವರಗಳಿಗೆ

ಖಾತ್ರಿಯಾದ ಸಿದ್ಧೌಷಧ

ಕ್ರಯ: ಆಣೆ 0—14—0 ಮಾತ್ರ.

ಸ್ಥಳೀಯ ಏಜಂಟರು— ಪಿ. ಎ. ಪೈ ಬ್ರದರ್ಸ್.

ಕಾರ್ಕಳದ ಏಜಂಟರು:— ವಿ. ವಿ. ಶೆಣೈ, ಕೆಮಿಸ್ಟ್ಸ್.

ಮಂಗಳೂರಿಗೂ ದಕ್ಷಿಣ ಕನ್ನಡ ಜಿಲ್ಲೆಯ ಇತರ ಮುಖ್ಯ ಸ್ಥಳಗಳಿಗೂ ಏಜಂಟರು ಬೇಕಾಗಿದ್ದಾರೆ.

ಶರ್ತಗಳಿಗೂ ಏಜನ್ಸಿಗಳಿಗೂ ಮುಖ್ಯ ಏಜಂಟರಿಗೆ ಬರೆಯಿರಿ:—

ದಾಮೋದರ್ ಎಂಡ್ ಕೊ,

ಮುಖ್ಯ ಏಜಂಟರು,

ZANDU

೭೮ ಚೈನಾ ಬಜಾರ್ ರೋಡ್, **ಜಿ. ಟಿ. ಮದರಾಸು.**

DAMODER & CO.,
78 China Bazaar Road, **G. T. MADRAS**



ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು.

ಮೈಸೂರು ಸೇಂಡಲ್ ಸೋಪು

ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಶೀಘ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು.

ಕ್ರಯ:— 40 ಮಾತ್ರೆಗಳ ಡಬ್ಬಿ 1ಕ್ಕೆ ರೂ. 1—0—0.

ಮದನಮಂಜರಿ ಫಾರ್ಮಸಿ, 184 ಚೈನಾಬಜಾರ್ ಮದ್ರಾಸ್.

ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

ಸರ್ವಾಂಗ ಭದ್ರತೆಯ ಹಾಗೂ ಅಭಿವೃದ್ಧಿಯ ಮೇಲ್ಮೆಯುಳ್ಳದ್ದಿರುವ ಜೀವ ವಿಮಾ ಸಂಘಯಾವುದೆಂದು ಸರ್ವದಾ ಚಿಂತಿಸುತ್ತಿರುವ ಜೀವವಿಮಾದಾರರಿಗೂ ಖ್ಯಾತಿನಿಷ್ಠ ಪಡೆಯಲಪೇಕ್ಷಿಸುವ ಗೃಹಸ್ಥ ಗೃಹಿಣಿಯರಿಗೂ ಕ್ಷಿಪ್ರದಲ್ಲೇ ಇಷ್ಟಾರ್ಥ ಸಿದ್ಧಿಯಾಗಬೇಕೆಂದಿದ್ದರೆ ಕೂಡಲೇ ನಮ್ಮೊಡನೆ ವಿಚಾರಿಸಿರಿ:—

ಬ್ರಾಂಚ್ ಸೆಕ್ರೆಟರಿ,
ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್, ಮದ್ರಾಸು.
ಮಂಗಳೂರು ಬ್ರಾಂಚ್.

THE

PANGAL NAYAK BANK LTD.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

('೧೯೨೦ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು)

Season Deposits for a period of 3, 4, 5 or 6 months are accepted at all the offices of the Bank and interest is allowed at 4% per annum till maturity or the 30th June 1940, as the case may be, whichever is earlier.

For further information please communicate with or call at any of our offices.

THE VIJAYA BANK LTD.,

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ— ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯಾಪಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಆರಂಭಿಸಿ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯಾಪಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ. ಕುಂದಾಪುರ, ಕಾರ್ಕಳ, ಮತ್ತು ಕಾಪು.

ಬಾಲಕರು ಆರೋಗ್ಯಶಾಲಿಗಳಾಗಲು **ಪ್ರಭೂಸ್-ಬಾಲಾಮೃತ**

ಒಂದೆರಡು ವಾರಗಳಲ್ಲಿ ಅದ್ಭುತ ಗುಣ.

— ಕಮನೀಯವಾದ ಕೇಶಕಲಾಪ ತಂಪಾದ ಮೆದುಳು ಶುಭ್ರ ನೇತ್ರಗಳು ಇವುಗಳನ್ನು ಹೊಂದಲು —

ಪುಷ್ಪಗಂಧಾಮೋದಿತ **ಆಮಲಕೀ ತೈಲ** ಬಹು ಗುಣಯುಕ್ತ ವಾಯುಮಾತ್ರೆಗಳೆಂಬ — **ಧಾನ್ವಂತರಿ ಗುಟಿಕಾ** — ಇವುಗಳನ್ನು ಸೇವಿಸಿ ವಾಯುವೆಂಬ ರೋಗವನ್ನು ಗುಣಪಡಿಸಿಕೊಳ್ಳಿರಿ

ಮಾತ್ರೆ-12ಕ್ಕೆ 0-4-0, 25ಕ್ಕೆ 0-7-0, 50ಕ್ಕೆ 0-13 0, 100ಕ್ಕೆ 1-5-0

5 ಆಣೆಯ ಸ್ಟಾಂಪು ಕಳುಹಿಸಿದರೆ 12 ಮಾತ್ರೆಗಳನ್ನು ಕಳುಹಿಸುತ್ತೇವೆ

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಕೊಂಚಾಡಿ. ಬ್ರಹ್ಮಾವರ, ದ. ಕ.

ನಮ್ಮ ಸ್ಟಾಕಿಸ್ಟರು:-

ನವಭಾರತ ಬುಕ್ ಡಿಪೋ, ಉಡುಪಿ, ದ. ಕನ್ನಡ. ಜನರಲ್ ಸಪ್ಲ್ಯೈಸ್ ಲಿಮಿಟೆಡ್, ಉಡುಪಿ ಪೋಸ್ಟ್, ದ. ಭಾರತ, ಕೆನರಾ ನ್ಯೂಸ್ ಏಜನ್ಸಿ, ವಿ. ಆರ್ ಪ್ರಭು, ಬಟಾಟಾವಾಲಾ ಬಿಲ್ಡಿಂಗ್, ಲಾಲ್‌ಬಾಗ್, ಮುಂಬೈ ನಂಬ್ರ 12, ಗಣಪಯ್ಯ ಲಕ್ಷ್ಮಣ ನಾಯಕ್ ಎಂಡ್ ಬ್ರದರ್ಸ್, ಕೋಟ, ದ. ಕನ್ನಡ.

ಸೀರೆಗಳು ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

Transport & Car Owners



ARE SPECIALLY INVITED TO VISIT

OUR SHOW ROOM *for economical transport maintenance.*

CANARA AUTOMOBILES - - - - - MANGALORE

"ನಾಮರ್ದಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ಸ್ವಪ್ನದೋಷ, ಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ.

"ಸೆಮಿನಾ ಟೊನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನವುಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ.

ಕಿಮ್ಮತು ರೂ. 3-0-0 ಡಬ್ಬಿ 0-8-0

ಸೊರತ್ ಫಾರ್ಮಸಿ,

ನಳ್ ಬಜಾರ್, ಡಂಕನ್ ರೋಡ್,

ಮುಂಬಾಯಿ 4

Sorath Pharmacy,

Null Bazzar, Duncan Road,

BOMBAY 4.

ಭಾರತೀ ಗ್ರಂಥಮಾಲೆಯ ಪುಸ್ತಕಗಳು.

ಬೆಳಕು (ಚಿಕ್ಕ ಕತೆಗಳ ಸಂಗ್ರಹ.)

ತಿನಿಸು (ಕತೆ, ಕವನ, ಪ್ರಬಂಧಗಳ ಸಂಗ್ರಹ)

ಪ್ರತೀಕಾರ (ನವಪೌರಾಣಿಕ ನಾಟಕ)

ಲೋಪಾಮುದ್ರೆ (ಪೌರಾಣಿಕ ಕತೆ)

ಚಿಗುರು (10 ಚಿಕ್ಕ ಕತೆಗಳ ಸಂಗ್ರಹ)

ಸಂಚಾರಿಕೆ (5 ಏಕಾಂಕ ನಾಟಕಗಳ ಸಂಗ್ರಹ)

ಪ್ರತಿಯೊಂದರ ಬೆಲೆ ನಾಲ್ಕಾಣೆ ಮಾತ್ರ (ಅಂಚೆವೆಚ್ಚ 0-0-6 ಪ್ರತ್ಯೇಕ)

ರೂ 1-8-0 ಕಳಿಸಿದ್ದರೆ ಆರೂ ಪುಸ್ತಕಗಳನ್ನು ಕಳಿಸಲಾಗುವುದು. (ಅಂಚೆವೆಚ್ಚ ಪುಕ್ಕಟೆ)

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪ್ರತಿಗಳಿಗೆ ಬರೆಯಿರಿ:-

ಮೆನೇಜರ್,

ನವಭಾರತ ಪುಸ್ತಕ ಭಂಡಾರ

ಉಡುಪಿ

De… Books: Medicines.

Free H. L M S, H M B H M D etc Free Homeo Ay…-Unani Naturo degrees by post also—Practioners also get soons Homeo Matertamedica, Rs 5 Homeo-Practice book Rs. 4. Insanity Cure Pills Rs. 10 Enclose 2 annas stamp:—

Principal, Indian Homeopathic Institute and Society (Govt Regd)

P. O. MAHUVA, (Kalkta… Dt. India

ನಮ್ಮ ಹೊಸ ಪ್ರತಿನಿಧಿಗಳು

ಶ್ರೀ. ಕೆ ಎಂ. ದೇಜಪ್ಪ ಶೆಟ್ಟರು 'ನವಯುಗ'ದ ಪ್ರತಿನಿಧಿಯಾಗಿ ಕೆಲಸ ಮಾಡಲು ಉತ್ಸಾಹದಿಂದ ಮುಂದೆ ಬಂದಿದ್ದಾರೆ. ಇವರು ಮಿತಭಾಷಿಗಳು, ವಿನಯಸಂಪನ್ನರು ಹಾಗೂ ಸರಳ ಮನೋವೃತ್ತಿಯ ಕಾಂಗ್ರೆಸ್ ಭಕ್ತರು 'ನವಯುಗ'ವನ್ನು ಎಲ್ಲೆಲ್ಲೂ ಪ್ರಚಾರಕ್ಕೆ ತರಬೇಕೆಂಬ ಉತ್ಸಾಹದಿಂದ ಇವರು ಪ್ರತಿ ಹಳ್ಳಿ, ಪೇಟೆ, ಪಟ್ಟಣಗಳಲ್ಲೂ ಕ್ರಮಶಃ ಸಂಚರಿಸಲಿರುವರು. ಇವರಿಗೆ ಸಕಲರೂ ಉದಾರಾಶ್ರಯವಿತ್ತು 'ನವಯುಗ'ಕ್ಕೆ ಸರ್ವ ಪ್ರೋತ್ಸಾಹ ಕೊಡಬೇಕಾಗಿ ಈ ಮೂಲಕ ಪ್ರಾರ್ಥಿಸಲಾಗುತ್ತದೆ. —ಮೆನೇಜರ್

ಕನ್ನಡ ನುಡಿವೆಣ್ಣಿಗೊಂದು ಕನ್ನಡಗಿತ್ತಿಯ ಕಿರುಗಾಣಿಕೆ ನಾಡ ಸೋದರಿಯರ ನೈಜ ಜೀವನದ ದುರಂತ ಚಿತ್ರವನ್ನೂ, ಸ್ತ್ರೀ-ಪುರುಷ ಹೃದಯಗಳ ಆಳವನ್ನೂ ಹೃದಯಂಗಮವಾಗಿ ಚಿತ್ರಿಸುವ ರಮ್ಯ ಕಥಾನಕ

ವತ್ಸಲಾ

ಸಾಮಾಜಿಕ ಕಾದಂಬರಿ

ಬೆಲೆ: ೦-೭-೩.

0—8—0 ಸ್ಟಾಂಪು ಕಳುಹಿಸಿದರೆ 1 ಪ್ರತಿಯನ್ನು ಕಳಿಸಬಹುದು.

ಬರಹಗಾರ್ತಿ ಮರು:-

ಶ್ರೀಮತಿ ಮಟ್ಪಾಡಿ ಕಮಲಾಕ್ಷಿ

ಈ ಪುಸ್ತಕದ ಕುರಿತು ಪ್ರಾಕ್ತನ ವಿಮರ್ಶ ವಿಚಕ್ಷಣ ಕರ್ನಾಟಕ ವಿದ್ಯಾವೈಭವ, ರಾವ್ ಬಹದೂರ್ ಆರ್. ನರಸಿಂಹಾಚಾರ್ಯ M A ,M.R A.S. ಇವರು ಬೆಂಗಳೂರಿನಿಂದ ಹೀಗೆ ಅಭಿಪ್ರಾಯ ಪಡುತ್ತಾರೆ 'ಗ್ರಂಥದ ಶೈಲಿ ಗಂಭೀರವಾಗಿಯೂ ಹೃದಯರಂಜಕವಾಗಿಯೂ ಇದೆ, ಪ್ರತಿಪಾದಿತವಾದ ವಿಷಯವು ನೀತಿಬೋಧಕವಾಗಿಯೂ ಧರ್ಮಾಭಿಮಾನಕರವಾಗಿಯೂ ಇದೆ, ಸ್ತ್ರೀಯರಿಗೆ ಬೋಧಪ್ರದವಾದ ಗ್ರಂಥ …….'

ಪ್ರತಿಗಳು ಸಿಗುವ ಸ್ಥಳ:

ನವಭಾರತ ಪುಸ್ತಕ ಭಂಡಾರ,

ಉಡುಪಿ.

ಕೋಸ್ಪ್ರನದ ಬಿಳೀ ಟೂಥಪೇಸ್ಟ ಅಲುಗಾಡುವ ಹಲ್ಲುಗಳನ್ನು ಗಟ್ಟಿಮಾಡ್ತದೆ.



ಅಲುಗಾಡುವ ಹಲ್ಲುಗಳನ್ನು ಮತ್ತೆ ಗಟ್ಟಿಮಾಡಿ ರಕ್ತ ಬೀಳುವದನ್ನು ಬಂದು ಮಾಡಿ ಒಸಡಿಯನ್ನು ಗಟ್ಟಿ ಮಾಡುವದು. ತಯಾರಿಸುವವರು— ಕೋಲ್ಸ್ಟನ್ ಕೆಮಿಕಲ್ ಕಂ. (ಮಾಲಕರು:—ಮಗನಭಾಯಿ ಅಮೀನ್ ಅಂಡ್ ಕಂಪೆನಿ ಮುಂಬಯಿ).

ESTD. 1921 ಸ್ಥಾಪನೆ

FOUNDER:
SRI. A. B. SHETTY, M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿಯವರು, ಎಂ ಎಲ್ ಎ

ಸಂಪಾದಕ:
ಕೆ. ಕೆ. ಶೆಟ್ಟಿ.

NAVAYUGA
ನವಯುಗ

ಚಂದಾ ವಿವರ:
1 ವರ್ಷಕ್ಕೆ – ರೂ. 3–4–0
6 ತಿಂಗಳಿಗೆ – ರೂ. 1–12–0

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹ ಸಂಪಾದಕ:
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೩೧

ಉಡುಪಿ, ಗುರುವಾರ, ೧೧—೪—೧೯೪೦.
UDIPI, THURSDAY, 11-4-1940.

VOL. 19
No. 31

ಬ್ರಿಟಿಷ್ ಮಂತ್ರಿಮಂಡಲದೊಳಗೆ ಬದಲಾವಣೆ

ಬ್ರಿಟಿಷ್ ಮಂತ್ರಿಮಂಡಲದೊಳಗೆ ಬದಲಾವಣೆಯನ್ನು ಮಾಡಲಾಗಿದೆ. ಲೋರ್ಡ್ ಚೇಟ್‌ಫೀಲ್ಡರು ರಾಜಿನಾಮೆಯಿತ್ತಿದ್ದಾರೆ. ಯುದ್ಧಕಾರ್ಯವನ್ನು ಸುಗಮಗೊಳಿಸುವರೆ ಸರ್ವಿಸು ಮಂತ್ರಿಗಳ ಕಮಿಟಿಯೊಂದು ಸ್ಥಾಪಿಸಲ್ಪಟ್ಟಿದೆ. ಮಿ. ಚರ್ಚಿಲ್ಲರು ಅದರ ಅಧ್ಯಕ್ಷರು. ಈ ಕಮಿಟಿಯು ಯುದ್ಧಮಂಡಲದ ಪರವಾಗಿ ಆವಸರದ ಸಂದರ್ಭಗಳಲ್ಲೆಲ್ಲಾ ಕಾರ್ಯ ಕೈಗೊಳ್ಳುವದಲ್ಲದೆ ಯುದ್ಧರೀತಿಯ ಕುರಿತು ಶಿಫಾರಸುಗಳನ್ನೂ ಮಾಡುವ ಕಾರ್ಯಕ್ಕಾಗಿ ರಚಿಸಲ್ಪಟ್ಟಿದೆ. ವೈಮಾನಿಕ ಖಾತೆಯ ಮಂತ್ರಿ ಸರ್. ಸಾಮುವೆಲ್ ಹೋರರಿಗೆ ಸಹಾಯಕರಾಗಿ ಲೋರ್ಡ್ ರಿವರ್ಡೇಲ್ ಇವರ ನೇಮಕವಾಗಿದೆ. ಸರ್. ಜೋನ್ ಸೈಮನರೇ ಆರ್ಥಿಕಸಂಬಂಧ ಸಮಿತಿಯ ಅಧ್ಯಕ್ಷರು. ಸರ್. ಕಿಂಗ್ಸ್ಲೀ ವುಡ್ಡರು ಗೃಹಸಂಬಂಧ ಕಮಿಟಿಯ ಅಧ್ಯಕ್ಷರು. ಯುದ್ಧಕಾರ್ಯಗಳಲ್ಲಿ ಸುವ್ಯವಸ್ಥೆಯನ್ನು ಉಂಟುಮಾಡುವದಕ್ಕಾಗಿಯೇ ಈ ಬದಲಾವಣೆಗಳೆಂದು ಮಿ. ಚೇಂಬರ್ಲಿನರೆಂದಿರುವರು. ಲಂಡನಿನಲ್ಲಿ ಈ ಕುರಿತು ಹೆಚ್ಚಿನ ಆತುರವೇನೂ ಕಂಡುಬರುವದಿಲ್ಲ. ಫ್ರಾನ್ಸ್ ತೃಪ್ತಿಗೊಂಡಿದೆ.

ವಿಮಾನಧಾಳಿ ಹೆಚ್ಚುತ್ತಿದೆ!

ಹೋರಾಟದ ಬಿಗುವೇರುವ ಚಿಹ್ನೆ ಕಂಡುಬರುತ್ತಿದೆ. ಕಳೆದ ವಾರ ಡಚ್ ಗಡಿಯ ಬಳಿಯಲ್ಲಿ ಮಿತ್ರರಾಷ್ಟ್ರಗಳು ಮತ್ತು ಜರ್ಮನಿ ವಿಮಾನಗಳು ತೀವ್ರ ಹೋರಾಟ ನಡೆಯಿಸಿದುವು. ಸ್ವಚ್ಛ ಆಕಾಶದಲ್ಲಿ ನಡೆಯುತ್ತಿದ್ದ ವಿಮಾನಯುದ್ಧವನ್ನು ಸಾವಿರಾರು ಜನರು ಸ್ಪಷ್ಟವಾಗಿ ಕಂಡರು. ಪಶ್ಚಿಮ ರಣರಂಗದಲ್ಲೂ ಆಗಾಗ ವಿಮಾನಗಳ ಹೋರಾಟ ನಡೆಯುತ್ತಲೇ ಇದೆ. ಒಂದು ವಾರದೊಳಗೆ 10 ವೈರಿವಿಮಾನಗಳನ್ನು ಕೆಳಗುರುಳಿಸಿದ್ದೇವೆಂದೂ, ತಮಗೆ ನಷ್ಟವಾದುದು ಒಂದು ವಿಮಾನಮಾತ್ರವೆಂದೂ ಬ್ರಿಟಿಷರ ಪ್ರಕಟಣೆ. ಜರ್ಮನಿ ಇದನ್ನು ಅಲ್ಲಗಳೆಯುತ್ತಿದೆ. ಸ್ಕೇಪಾಪ್ಲೋ ಎಂಬ ಬ್ರಿಟಿಷ್ ನೌಕಾ ನಿಲ್ದಾಣದ ಮೇಲೆಯೂ ವಿಮಾನಧಾಳಿಯು ನಡೆಯಿತು. ಬೋಂಬುಗಳು ಸಮುದ್ರಕ್ಕೆ ಬಿದ್ದುವೆಂದೂ, ಒಂದು ಬೋಂಬು ದಡಕ್ಕೆ ಬಿತ್ತೆಂದೂ, ಹಡಗುಗಳಿಗೆ ಪೆಟ್ಟು ಬಿದ್ದುದೇ ಇಲ್ಲವೆಂದೂ ಬ್ರಿಟಿಷರ ಅಂಬೋಣ. ಧಾಳಿಯಿಟ್ಟ ವಿಮಾನಗಳಲ್ಲಿ ಒಂದನ್ನು ಕೆಳಗುರುಳಿಸಿ ಮಿಕ್ಕವುಗಳನ್ನು ಓಡಿಸಲಾಯಿತಂತೆ. ತಮ್ಮ ವಿಮಾನಗಳೆಲ್ಲಾ ಹಿಂದಿರುಗಿರುವವು, ಬ್ರಿಟಿಷ್ ಹಡಗುಗಳು ಹಲವನ್ನು ಜಖಂಗೊಳಿಸಿರುವವು ಎಂದು ಜರ್ಮನರ ಪ್ರಕಟಣೆ ಹೇಳುತ್ತದೆ.

ಸಮಾಚಾರ ಸಂಗ್ರಹ

ಎರಡೂ ಕಡೆಯವರ ಹೆಗ್ಗಳಿಕೆ

ಉತ್ತರಸಮುದ್ರದ ಬಳಿ ನಡೆದ ಆಕಾಶಯುದ್ಧದಲ್ಲಿ, ಧಾಳಿಯಿಡಲು ಬಂದ ಆರು ವಿಮಾನಗಳೊಡನೆ ಬ್ರಿಟಿಷರ ಒಂದೇ ಒಂದು ಆಕಾಶಬೋಟು ಹೋರಾಡಿ ಎರಡನ್ನು ಕೆಳಗುರುಳಿಸಿರುವದೆಂದು ಲಂಡನಿನ ಸುದ್ದಿ. ತಮ್ಮ ಎರಡು ವಿಮಾನಗಳು ಕೆಳಗಿಳಿಸಲ್ಪಟ್ಟಿವೆ. ಮತ್ತೊಂದು ಕಾಣೆಯಾಗಿದೆ ಎಂಬುದನ್ನು ಜರ್ಮನರು ಒಪ್ಪುತ್ತಾರಾದರೂ ಆ ಯುದ್ಧದಲ್ಲಿ ತಾವೇ ಜಯಿಸಿದೆವೆನ್ನುತ್ತಾರೆ. ಒಟ್ಟಿಗೆ ಏಳು ಸಾವಿರ ಟನ್ನುಗಳಷ್ಟು ತೂಕದ ಬ್ರಿಟಿಷರ ಒಂದು ಡಿಸ್ಟ್ರೋಯರ್ ಒಂದು ಪೆಟ್ರೋಲ್ ಬೋಟು, ಎರಡು ವ್ಯಾಪಾರೀ ಹಡಗುಗಳು ವಿಪರೀತ ಹಾಳಾಗಿರುವವೆಂದೂ, ಐದು ಸಾವಿರ ಟನ್ನಿನ ಒಂದು ವ್ಯಾಪಾರೀ ಹಡಗು ಮತ್ತು ಮೂರು ಪೆಟ್ರೋಲ್ ಬೋಟುಗಳು ಪುಡಿಯಾಗಿರುವವೆಂದೂ, 17 ಸಾವಿರ ಟನ್ನಿನ ಮೂರು ವ್ಯಾಪಾರೀ ಹಡಗುಗಳು ಮತ್ತು ಒಂದು ಪೆಟ್ರೋಲ್ ಬೋಟೂ ಜಖಮಾಗಿರುವದೆಂದೂ ಜರ್ಮನರ ಹೇಳಿಕೆ. ಇದಕ್ಕೆ ಪ್ರತಿಯಾಗಿ ಜರ್ಮನಿಯ ನೌಕಾನಿಲ್ದಾಣವಾದ ವಿಲ್‌ಹೆಲ್ಮ್ ಹೇವನ್‌ನ ಮೇಲೆ ವಿಮಾನಧಾಳಿ ನಡೆಯಿತು. ವಿರೋಧಿ ವಿಮಾನಸ್ತ್ರಂಪರ ಮೇಲೆ ಬೋಂಬು ಸುರಿಸಲಾಗಿದೆ. ನಾಲ್ಕು ಡಿಸ್ಟ್ರೋಯರುಗಳನ್ನು ಜಖಂಗೊಳಿಸಲಾಗಿದೆ. ತಮ್ಮ ವಿಮಾನಗಳೆಲ್ಲ ಸುರಕ್ಷಿತವಾಗಿ ಹಿಂದಿರುಗಿದವು ಎಂದು ಬ್ರಿಟಿಷರ ಹೇಳಿಕೆ. ತಟಸ್ಥ ನಿರಾಯುಧ ವ್ಯಾಪಾರೀ ಹಡಗವೊಂದಕ್ಕೆ ಎಚ್ಚರಿಕೆ ಕೊಡದೆ ಬ್ರಿಟಿಷ್ ವಿಮಾನಗಳು ಧಾಳಿ ನಡಿಸಿದವೆಂದು ಜರ್ಮನರನ್ನುತ್ತಾರೆ. ಬ್ರಿಟನು ಇದನ್ನು ಅಲ್ಲಗಳೆದಿದೆ.

ಯು. ಬೋಟುಗಳಿಗೇನಾಯ್ತು?

ಜರ್ಮನಿಯ ಯು. ಬೋಟುಗಳ ಹಾವಳಿ ಈಗ ಪೂರ್ತಿನಿಂತಂತೆ ಕಂಡುಬರುತ್ತಿದೆ ಅವುಗಳ ಚಟುವಟಿಕೆಯೇನೂ ತೋರುವದಿಲ್ಲ. ಹತ್ತುದಿನಗಳ ಅವಧಿಯಲ್ಲಿ ಒಂದಾದರೂ ಬ್ರಿಟಿಷ್ ಹಡಗ ಮುಳುಗಿರುವದಿಲ್ಲ. ಪ್ರಾಯಶಃ ಜರ್ಮನಿಗೆ ಸಮರ್ಥರಾದ ಜನರ ಅಭಾವವಿರಬೇಕು, ಇಲ್ಲವೇ ಸಬ್ ಮೆರಿನುಗಳ ಕೊರತೆಯುಂಟಾಗಿರಬೇಕು, ಎಂದು ಲಂಡನಿನ ಊಹೆ. ಬ್ರಿಟನಿಗೆ ಸೆರೆಸಿಕ್ಕಿದ ಯು. ಬೋಟುಗಳ ಚಾಲಕರೆಲ್ಲಾ ಸುಮಾರು 20 ವರುಷ ಪ್ರಾಯದವರಂತೆ, ಇದರಿಂದ ಜರ್ಮನಿಗೆ ಸಮರ್ಥ ಜನರ ಅಭಾವವಿದೆ ಎಂದು ತಿಳಿಯಲಾಗಿದೆ

ಪಶ್ಚಿಮದಲ್ಲೇ ಪಂಥ

ಫೀಲ್ಡ್ ಮಾರ್ಶಲ್ ಗೋರಿಂಗರು ಒಂದೆಡೆಯಲ್ಲಿ ಭಾಷಣಮಾಡುತ್ತಾ "ಇತರ ಕಡೆಗಳಲ್ಲಿ ಭದ್ರತೆಯ ವ್ಯವಸ್ಥೆ ಮಾಡಿಯಾಯಿತು. ಇನ್ನು ಪಶ್ಚಿಮರಣರಂಗದಲ್ಲಿ ನಮಗೆದುರಾಗಿ ನಿಂತಿರುವ ಬ್ರಿಟಿಷ್ ಫ್ರಾನ್ಸುಗಳ ಸೇನೆಯನ್ನಿದಿರಿಸುವೆವು. ನಾವು ಇಲ್ಲಿಯೇ ಧಾಳಿಹೂಡುವದಂತೂ ಖಂಡಿತ. ಒಂದುವರುಷದೊಳಗೆ ಜಯಿಸಿಯೇ ಸಿದ್ಧ"ವೆಂದರು. ಬರುವ ಸಪ್ಟಂಬರದಲ್ಲಿ ನಡೆಯಲಿರುವ ನಾಜೀ ರ್‍ಯಾಲಿಯಲ್ಲಿ ವಿಜಯೋತ್ಸವಾಚರಿಸುವ ಸಿದ್ಧತೆಗೂ ಹುಕುಮು ಕೊಡಲಾಗಿದೆಯಂತೆ. ಇದಕ್ಕನುಗುಣವಾಗಿ ಹಿಟ್ಲರನು ಪಶ್ಚಿಮದಲ್ಲಿ ಪ್ರಬಲಹೋರಾಟ ಹೂಡಲು ಸಿದ್ಧತೆ ನಡೆಯಿಸುತ್ತಿರುವನೆಂದೂ, ಜನರಲ್ ವೊನ್ ಬ್ರಾಚಿಟ್ಸ್ ಮತ್ತು ಜನರಲ್ ವೋನ್ ಕಿಟೆಲರೊಳಗೆ ಮಾತುಕತೆ ನಡೆದುದು ಅದಕ್ಕಾಗಿಯೇ ಎಂದೂ ಪ್ಯಾರಿಸ್ ಪತ್ರಿಕೆಯೊಂದು ಪ್ರಕಟಿಸಿದೆ. ಯುದ್ಧತಜ್ಞರು ಈ ಹಂಚಿಕೆಯನ್ನು ವಿರೋಧಿಸುತ್ತಿರುವರಾದರೂ ರಿಬ್ಬನ್‌ಟ್ರಾಪನು ಹಿಟ್ಲರನನ್ನು ಒತ್ತಾಯಪಡಿಸುತ್ತಿರುವನಂತೆ.

ಜರ್ಮನಿಗೆ ಯಥಾರ್ಥ ಮಿತ್ರರೊಬ್ಬರೂ ಇಲ್ಲ

ಲಂಡನಿನ ಸಭೆಯೊಂದರಲ್ಲಿ ಭಾಷಣಮೀಯುತ್ತಾ ಮಿ. ಚೇಂಬರ್ಲೇನರು ಹೀಗೆಂದರು. "ಏಳು ತಿಂಗಳ ಯುದ್ಧಾನಂತರ ನನ್ನಲ್ಲಿ ವಿಜಯ ಭರವಸೆ ಆದಿಯಲ್ಲಿದ್ದುದಕ್ಕಿಂತ ಹತ್ತುಪಾಲು ಅಧಿಕವಾಗಿದೆ. ಯುದ್ಧವೇಳುವ ಹೊತ್ತಿನಲ್ಲಿ ಜರ್ಮನಿಯು ಯುದ್ಧಸಿದ್ಧತೆಯಲ್ಲಿ ನಮ್ಮನ್ನು ಬಹಳ ಮೀರಿಹೋಗಿತ್ತು. ಆ ಸುಸಂದರ್ಭವನ್ನು ನಮ್ಮ ಮತ್ತು ಫ್ರಾನ್ಸಿನ ಮೇಲೆ ಬೀಳುವ [illegible] ಜರ್ಮನಿ ಸಾಧಿಸಿಕೊಳ್ಳುವದೆಂದು ನಾನು ನಿರೀಕ್ಷಿಸಿದ್ದೆ. ಹಾಗಾಗದಿದ್ದುದೊಂದು ವಿಶೇಷವಲ್ಲವೆ? ಈ ಏಳು ತಿಂಗಳಲ್ಲಿ ನಾವು ನಮ್ಮೊಳಗಿನ ಎಲ್ಲಾ ಕೊರತೆಗಳನ್ನೂ ನಿವಾರಿಸಿಕೊಂಡು ಈಗ ಎಂತಹ ಸಂದರ್ಭವೊದಗಿದರೂ ಯುದ್ಧ ನಡೆಯಿಸುವ ಸ್ಥಿತಿಗೆ ಬಂದಿದ್ದೇವೆ. ನಮ್ಮ ದೇಶವು ಯುದ್ಧ ಜಯಕ್ಕಾಗಿ ಇಂದಿನಷ್ಟು ಒಗ್ಗಟ್ಟಾದ ನಿದರ್ಶನ ಚರಿತ್ರೆಯಲ್ಲಿಯೇ ಬೇರೆ ಇಲ್ಲ. ಜರ್ಮನಿಗೆ ಯುರೋಪಿನಲ್ಲಿ ಯಥಾರ್ಥ ಮಿತ್ರರಾರೂ ಇಲ್ಲ" ಎಂದರು.

ನೋರ್ವೇ ಸ್ವೀಡನುಗಳಿಗೆ ಮಿತ್ರರಾಷ್ಟ್ರಗಳ ಸೂಚನೆ

ಲಂಡನಿನಲ್ಲಿ ವಿದೇಶ ಮಂತ್ರಿ ಹೆಲಿಫೆಕ್ಸರೂ, ಪ್ಯಾರಿಸಿನಲ್ಲಿ ಮುಖ್ಯ ಮಂತ್ರಿ ರೈನಾಡರೂ ನೋರ್ವೆ ಮತ್ತು ಸ್ವೀಡನ್ ಮಂತ್ರಿಗಳನ್ನು ಕರೆಯಿಸಿಕೊಂಡು ತಮ್ಮ ತಮ್ಮ ಸರಕಾರದ ಸೂಚನಾಪ್ರತಿಯನ್ನೊಪ್ಪಿಸಿರುವರು. ಸ್ಕ್ಯಾಂಡಿನೇವಿಯಾ ರಾಷ್ಟ್ರಗಳ ತಟಸ್ಥ ಘೋಷಣೆಗೆ ಸಂಬಂಧಪಟ್ಟ ಸ್ವಾಭಿಪ್ರಾಯಗಳು ಈ ಸೂಚನೆಗಳಲ್ಲಿವೆಯೆಂದು ನಂಬಲಾಗಿದೆ. ಫಿನ್ಲೆಂಡಿನ ಮೇಲೆ ರಶ್ಯವು ಮುಂದಕ್ಕೆ ಮಾಡಬಹುದಾದ ಯುದ್ಧದೇ ಧಾಳಿಯನ್ನು ಮಿತ್ರ

ಮರೆತರೆ
ಮರುಗಬೇಕಾದೀತು - - - - -

14–4–1940 ರ
ಅಂತರಂಗ
ಯುಗಾದಿ ಸಂಚಿಕೆ
ಯಾಗಿ ಹೊರಡುವುದು.

ಬೆಲೆ: . . . ಕೇವಲ . . . ಎರಡಾಣೆ

ರಾಷ್ಟ್ರಗಳು ತಮ್ಮ ಹಾದಿಯ ಆತಂಕವೆಂದು ಗಣಿಸುವವೆಂದು ಆ ಸೂಚನೆಗಳಲ್ಲಿತ್ತೆಂದೂ ವಾರ್ತೆಯಿದೆ. ನೋರ್ವೆ ಸ್ವೀಡನುಗಳು ಇದರಿಂದ ಗಲಿಬಿಲಿಗೊಂಡಿವೆ. ಉತ್ತರದ ಅಪೇಕ್ಷೆ ಆ ಸೂಚನೆಗಳಲ್ಲಿಲ್ಲವಾದರೂ, ಉತ್ತರಿಸುವ ಮೊದಲು ಸ್ವೀಡನ್ ನೋರ್ವೆಗಳು ಪರಸ್ಪರ ವಿಚಾರ ವಿನಿಮಯಮಾಡಿಕೊಳ್ಳುವವು. ಇಲ್ಲವೇ ಸ್ವೀಡನಿನ ಉತ್ತರ ನೋಡಿಯೇ ನೋರ್ವೆ ಉತ್ತರಕೊಡುವದು. ರಶ್ಯದ ಆಕ್ರಮಣ ಭಯದಿಂದ ನೋರ್ವೆ ಸ್ವೀಡನುಗಳು ಜರ್ಮನಿಯ ಸಹಾಯ ಕೋರುವ ಸಂಭವವಿರುವದರಿಂದ, ಅಂತಹ ವರ್ತನೆಯನ್ನು ಮಿತ್ರ ರಾಷ್ಟ್ರಗಳು ಒಪ್ಪುವಂತಿಲ್ಲ. ಮಿತ್ರರಾಷ್ಟ್ರಗಳ ಸೂಚನೆಯಲ್ಲಿ ತಮ್ಮ ಸ್ಪಷ್ಟಾಭಿಪ್ರಾಯವಲ್ಲದೆ ಇತರ ಒತ್ತಾಯವೇನೂ ಇಲ್ಲವೆಂದು ತಿಳಿದುಬರುತ್ತದೆ.

ನೋರ್ವೆ ಮಂತ್ರಿಯ ಸ್ಫೂರ್ತಿಯ ಮಾತು

ನೋರ್ವೆಯ ವಿದೇಶ ಮಂತ್ರಿಯು ಪಾರ್ಲಿಮೆಂಟಿಗಿತ್ತ ಹೇಳಿಕೆಯಲ್ಲಿ ಹೀಗಂದಿರುವರು: 'ನಾವು ಸ್ವರಕ್ಷಣೆಯ ಸಂದರ್ಭ ಬಂದ ಹೊರತು ಯುದ್ಧಕ್ಕಿಳಿಯುವಂತಿಲ್ಲ. ನಮ್ಮ ಸಮುದ್ರಗಳಲ್ಲಿ ಅನ್ಯಾಯವಾಗಿ ಕಾಲಿಡುವವರನ್ನು ನಾವು ಇದಿರಿಸುವೆವು. ಚೇಂಬರ್ಲೀನರ ಮತ್ತು ಚರ್ಚಿಲ್ಲರ ಭಾಷಣದ ಮೇಲಿಂದ, ಬ್ರಿಟನು ಅಂತರಾಷ್ಟ್ರೀಯ ನೀತಿ ಮತ್ತು ನಮ್ಮ ತಾಟಸ್ಥ್ಯಕ್ಕೆ ಭಂಗತರಲಾರದೆಂದು ನಂಬುತ್ತೇವೆ." ವಿದೇಶೀ ವಿಮಾನಗಳಿಂದ ನೋರ್ವೆಯ ತಟಸ್ಥ ಧೋರಣೆಗೆ ಭಂಗ ಬಂದ ವಿಷಯವನ್ನು ಹೇಳಿ ಈ ವರೆಗೆ 21 ಖಂಡನೆಗಳನ್ನು ತಾವು ಬ್ರಿಟನ್, ರಶ್ಯಾ ಜರ್ಮನಿಗಳಿಗೆ ಕಳುಹಿದ್ದೇವೆಂದರು. "ಆ ಅಕೃತ್ಯಗಳೆಲ್ಲಾ ಅನುದ್ದೇಶವಾಗಿ ನಡೆದವುಗಳಲ್ಲ ಇನ್ನು ಮುಂದೆ ಕೇವಲ ಖಂಡನೆ ಮಾಡಿಯೇ ಸುಮ್ಮನಿರುವಂತಿಲ್ಲ. ನಾವು ಅಂತಹ ವಿಮಾನಗಳನ್ನು ಹೊಡೆದು ಕೆಳಗುರುಳಿಸುವೆವು" ಎಂದರು. ಈತನಕ ನೋರ್ವೆಯ 130 000 ಟನ್ನಿನ 61 ಹಡಗುಗಳು, 392 ಜನರು ಇಂತಹ ದಾವಳಿಗೆ ಬಲಿಯಾಗಿರುವರೆಂದರು. ತಮ್ಮ 'ಮಿರಿ' ಎಂಬ ಹಡಗಕ್ಕೆ ಜರ್ಮನರು ಬೆಂಕಿಬಿಟ್ಟುದನ್ನು ಖಂಡಿಸಿ, ಆ ಸ್ಟೀಮರು ಬ್ರಿಟಿಷ್ ರಕ್ಷಣೆಯಲ್ಲಿ ಹೋಗುತ್ತಿದ್ದ ಪಕ್ಷಕ್ಕೂ ಈ ರೀತಿ ವರ್ತಿಸಲು ಜರ್ಮನಿಗಧಿಕಾರವಿಲ್ಲವೆಂದರು. ಫಿನ್‌ಲೇಂಡಿಗೆ ಮಿತ್ರ ರಾಷ್ಟ್ರಗಳ ಸೈನ್ಯಗಳನ್ನು ಹೋಗ ಬಿಡುತ್ತಿದ್ದಲ್ಲಿ, ಅಥವಾ ತಾವು ಸೈನ್ಯ ಸಹಾಯವೀಯುತ್ತಿದ್ದಲ್ಲಿ ಜರ್ಮನಿಯದನ್ನು ವಿರೋಧಿಸುತ್ತಿತ್ತೆಂದೂ ಫಿನ್‌ಲೇಂಡು ತಮ್ಮಿಂದ ಸೈನ್ಯ ಸಹಾಯ ಕೇಳಿದ್ದೇ ಇಲ್ಲವೆಂದೂ ನೋರ್ವೆ ಮಂತ್ರಿಯ ಹೇಳಿಕೆ. ತಮ್ಮ ಸಮೀಪದ ರಾಷ್ಟ್ರಗಳೊಳಗೆ ಸೈನಿಕ ಒಪ್ಪಂದ ಮಾಡಿಕೊಳ್ಳುವ ಕುರಿತು, ರಶ್ಯಾ–ಫಿನ್ಲೆಂಡು ಸಂಬಂಧವು ಸ್ಪಷ್ಟವಾಗುವ ವರೆಗೆ ಆ ಯೋಚನೆಯನ್ನು ಬಿಡಲಾಗಿದೆಯಂತೆ.

— ಏಜಂಟರು ಬೇಕು —

'ನವಯುಗ'ದ ಬಿಡಿ ಪ್ರತಿಗಳನ್ನು ವಿಕ್ರಯಿಸಲು ಚಟುವಟಿಕೆಯುಳ್ಳ ಏಜಂಟರು ಎಲ್ಲಾ ಕಡೆಗಳಲ್ಲೂ ಬೇಕಾಗಿದ್ದಾರೆ.

—ಮೆನೇಜರ್, ನವಯುಗ.

ಲೋರ್ಡ್ ಜೆಟ್ಲೆಂಡರ ಮೈತಪ್ಪಿಸಿಕೊಳ್ಳುವ ಮಾತು.

ರಾಜಾಜಿಯವರ ಸಮರ್ಪಕ ಉತ್ತರ.

ತನ್ನದೊಂದು ಬ್ರಾಡ್‌ಕಾಸ್ಟ್ ಭಾಷಣದಲ್ಲಿ ಭಾರತ ಮಂತ್ರಿಗಳಾದ ಲೋರ್ಡ್ ಜೆಟ್ಲೆಂಡರು ಬ್ರಿಟಿಷ್ ಸರಕಾರದ ನಿತ್ಯದ ಹಾಡನ್ನೇ ಹಾಡಿರುವರು. ಅವರನ್ನುತ್ತಾರೆ: "ಭಾರತ ಮಸೂದೆಯಂತೆ ಜನ ಜವಾಬ್ದಾರಿಯುಳ್ಳ ಹಿಂದೀ ಮಂತ್ರಿಗಳಿಗೆ ಪ್ರಾಂತಿಕ ಅಧಿಕಾರವನ್ನೊಪ್ಪಿಸಲಾಗಿದೆ. ಮಾತ್ರವಲ್ಲ, ಬ್ರಿಟಿಷ ಪ್ರಾಂತ್ಯಗಳನ್ನೂ ಆಶ್ರಿತ ರಾಜರನ್ನೂ ಒಂದೇ ಫೆಡರೇಶನಿನೊಳಗೆ ಸೇರಿಸಿಕೊಳ್ಳುವ ಭಾಗವೂ ಆ ಮಸೂದೆಯಲ್ಲಿದೆ ಆದರೆ ಈ ಸಂಬಂಧದಲ್ಲಿ ತೊಂದರೆಗಳೆದ್ದಿವೆ. ಕಾಂಗ್ರೆಸ್ ಆಶ್ರಿತ ರಾಜರು ಮತ್ತು ಮುಸ್ಲಿಂ ಲೀಗೆಂಬ ಪ್ರಾಮುಖ್ಯ ಮೂರು ರಾಜಕೀಯ ಸಂಸ್ಥೆಗಳ ಪೈಕಿ ಕಾಂಗ್ರೆಸ್ ಈಗ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನಲ್ಲ, ಜನಪ್ರತಿನಿಧಿ ಮಹಾಸಭೆ ರೂಪಿಸುವ ಪೂರ್ಣ ಸ್ವಾತಂತ್ರ್ಯವನ್ನು ಕೇಳುತ್ತಿದೆ. ಇನ್ನೊಂದು ಪಕ್ಷದವರಾದ ಮುಸ್ಲಿಮರು ಇದಕ್ಕೊಪ್ಪದೆ ಪ್ರತ್ಯೇಕ ಮುಸ್ಲಿಮ್ ರಾಜ್ಯವನ್ನೇ ಕೇಳುತ್ತಾರೆ. ಹಿಂದೂ ಮುಸ್ಲಿಮರೊಳಗೆ ಪರಸ್ಪರ ಒಡಂಬಡಿಕೆಯಿಲ್ಲದೆ ಭಾರತದ ಕುರಿತು ಸ್ಥಿರವಾದ ಒಂದು ನಿರ್ಧಾರಕ್ಕೆ ಬರುವದು ಅಸಾಧ್ಯವೆಂದು ನನಗೆ ಮನವರಿಕೆಯಾಗಿದೆ. ಹಾದಿಯಲ್ಲಿ ಎಂತಹ ಸಂಕಷ್ಟಗಳೇ ಒದಗಲಿ, ಈ ಒಡಂಬಡಿಕೆಗಾಗಿ ನಾವು ಮನಃಪೂರ್ವಕ ಮುಂದಕ್ಕೂ ದುಡಿಯುತ್ತೇವೆಂದು ಹೇಳಬಯಸುತ್ತೇನೆ."

ಲೋರ್ಡ್ ಜೆಟ್ಲೆಂಡರು ಭಾರತದ ರಾಜಕೀಯ ಸಮಸ್ಯೆಗಳನ್ನು ಜರ್ಮನಿಯ ಅಪಪ್ರಚಾರಕರು ಕುರೂಪವಾಗಿ ಚಿತ್ರಿಸಿ ಬೊಬ್ಬಿಡುತ್ತಿರುವರೆಂದರು. ಅಂಥವರಿಗುತ್ತರವಾಗಿ ಕಾಂಗ್ರೆಸಿನ ಪತ್ರಿಕೆಯಲ್ಲಿದ್ದ 'ಭಾರತವು ಲೋಕದ ಸಹಾನುಭೂತಿಯ ಕಡೆಗೆ ಅನಭಿರುಚಿಯನ್ನು ತೋರಿಸುವದಿಲ್ಲ ಆದರೆ ಅದು ನಾಜಿಗಳಿಂದ ಬರುವದು ಬೇಡ' ಎಂಬ ವಾಕ್ಯವನುದ್ಧರಿಸಿ ಹೇಳಿದರು

ಜನಪ್ರತಿನಿಧಿ ಸಭೆಯಲ್ಲೇ ತೀರ್ಮಾನ

ಭಾರತದ ರಾಜಕೀಯ ಭಿನ್ನಾಭಿಪ್ರಾಯಗಳನ್ನು ದ್ವೇಷಾಸೂಯೆ ಗಳೆಂದು ಬ್ರಿಟಿಷರು ಹೇಳುತ್ತಿದ್ದಾರೆ. ಹಿಂದೂ ಮುಸ್ಲಿಮರ ಒಡಂಬಡಿಕೆಯ ಮಾತನ್ನು ಮೇಲಿಂದ ಮೇಲೆ ಆವರಿಸುತ್ತಿರುವದು ಪರಿಸ್ಥಿತಿಯ ದುರುಪಯೋಗವೇ ಸರಿ. ಬ್ರಿಟಿಷರ ವಾಗ್ದಾನಗಳನ್ನು ಕಾರ್ಯರೂಪಕ್ಕೆ ತರುವದೆ ವಿಳಂಬವಾಗಲು ಭಾರತದ ಭಯಂಕರವಾದ ಆಂತರಿಕ ಪರಿಸ್ಥಿತಿಯೇ ಕಾರಣವೆಂದು ತೋರಿಸಲಾಗಿದೆ. ಮುಸ್ಲಿಮ್ ಲೀಗ್ ಮತ್ತು ಇತರರ ಕಾರ್ಯವ್ಯತ್ಯಾಸಗಳು ಒಂದುಗೂಡಬೇಕಾದರೆ ಜನಪ್ರಾತಿನಿಧ್ಯವುಳ್ಳ ಅಧಿಕಾರಯುಕ್ತವಾದ ಸಂಸ್ಥೆಯಲ್ಲೇ ತೀರ್ಮಾನವಾಗಬೇಕು. ಅದು ದ್ವೇಷ, ದುರಾಕಾಂಕ್ಷೆಗಳ ಪ್ರಶ್ನೆಯಾಗಿರುತ್ತಿದ್ದರೆ ಸಂಬಂಧಪಟ್ಟವರನ್ನು ಮತ್ತು ಮುಂದಾಳುಗಳನ್ನು ಒಂದು ಗೂಡಿಸಿ ಸಮಜಾಯಿಸಬಹುದಿತ್ತು. ಆದರೆ ಇದು ಹಾಗಲ್ಲ. ಕೇವಲ ರಾಜಕೀಯ ಅಭಿಪ್ರಾಯ ಮತ್ತು ರೀತಿಗಳಲ್ಲಿನ ವ್ಯತ್ಯಾಸ ಇದ್ದರಿಂದ ನಾನು ಕಂಠೋಕ್ತವಾಗಿ ಹೇಳುವದೇನೆಂದರೆ ಅಧಿಕಾರವುಳ್ಳ ಜನ ಪ್ರತಿನಿಧಿ ಸಭೆಯೊಂದರಲ್ಲೇ ಇದು ತೀರ್ಮಾನವಾಗಬೇಕಾಗಿದೆ. ಅಲ್ಲಿ ಒಪ್ಪಂದಕ್ಕೆ ಬರುವೆವು; ಅಸಾಧ್ಯವಾದಲ್ಲಿ ಪಂಚಾಯತಿದಾರರ ತೀರ್ಮಾನಕ್ಕೆ ಬಿಡುವೆವು. ಹಾಗೆ ಜನ ಪ್ರತಿನಿಧಿ ಸಭೆ (ಕಾನ್ಸ್ಟಿಟ್ಯೂಯೆಂಟ್ ಎಸೆಂಬ್ಲಿ)ಯ ಸ್ಥಾಪನೆಗಾಗಿ ಹಾರೈಸುತ್ತಿರುವದೂ ಅದಕ್ಕೇನೆ.

ಬ್ರಿಟನಿಗೆ ನಮ್ಮೊಳಗೆ ಒಡಂಬಡಿಕೆಯಾಗಬಾರದೆಂಬ ಮನಸ್ಸಿದ್ದರೆ ಅದು ಆ ಎಸೆಂಬ್ಲಿಯನ್ನು ರಚಿಸಲಾರದು; ಬದಲಿಗೆ ಬ್ರಿಟಿಷರಿಗೆ ತಮ್ಮ ಉದ್ದೇಶದ ಪರಿವೆ ಇದ್ದರೆ ಜನಪ್ರತಿನಿಧಿ ಸಭೆಯನ್ನು ಸ್ಥಾಪಿಸುವಂತೆ ಅವರು ತಮ್ಮ ಸರಕಾರವನ್ನು ಕೇಳಿಕೊಳ್ಳಬೇಕು. ಭಾರತದ ಕುರಿತು ಸ್ಥಿರ ನಿರ್ಧಾರಕ್ಕೆ ಬರಬೇಕಾದರೆ ಇದೊಂದೇ ಹಾದಿ. ಇಂಗ್ಲಾಂಡ್ ಹೀಗೆ ಮಾಡ ಲೊಪ್ಪದ ವರೆಗೆ "ತೀರ್ಮಾನಕ್ಕಾಗಿ ಮನಃಪೂರ್ವಕ ದುಡಿಯುತ್ತಿದ್ದೇವೆ" ಎಂದು ಹೇಳಲು ಅದಕ್ಕಧಿಕಾರವಿಲ್ಲ." ಎಂದು ಶ್ರೀ ರಾಜಗೋಪಾಲಾಚಾರ್ಯರು ಜೆಟ್ಲೆಂಡರಿಗೆ ಉತ್ತರವಿತ್ತಿದ್ದಾರೆ.

THE

BOMBAY LIFE ASSURANCE Company Limited.

[ESTD 1908]

COMPARE

Your Life Assurance with any other property you possess what is its guarranteed value

If you live-today-a few years more-when you are old?

If you die-to your family and dependants?

REMEMBER THAT If you live, Life Insurance takes the place of your professional income during your old age. If you die, it provides your family with enough income for their maintenance and the education of your children.

"BOMBAY LIFE" offers all that is best in Life Assurance.

1938 Record.

Completed Business	... ...	Rs. 1,44,91,000
Life Assurance Fund	... ...	Rs. 1,17,69,748
Total Assets	... ...	Rs. 1,31,28,998

To Insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,

BOMBAY LIFE BUILDING,

Sir Lalubhai Samaldas Road,

GANDHI NAGAR, UDIPI.

Post Box No, 337, Mount Road, MADRAS.	Visweswarapuram Circle BANGALORE CITY.	Charni Road, Girgaum, BOMBAY No. 4.
Car Street, MANGALORE.	Puthiyara, CALICUT.	Central Station Road, TRIVANDRUM.

ಪ್ರಕಟನೆ

ಕಾರ್ಕಳ ಡಿ ಮುನ್ಸೀಫ ಕೋರ್ಟಿನಲ್ಲಿ

O.S No. 324/1935 R I.A.No. 2234/1935

ಮುತ್ತೇಶ ಅರಸ —ವಾದಿ.

ಶಿರೇಖಾ ನೋಣ ಬ್ಯಾಂಕರ—ಪ್ರತಿವಾದಿ ಇವರೊಳಗೆ

ಸಪ್ಲಿಮೆಂಟಲ್ ಪ್ರತಿವಾದಿಗಳಾಗತಕ್ಕವರು—

(3) ಮಾನೆಲ್ ನೋಣ, (4) ಅಂತ್ರು ನೋಣ, (5) ಎಲಿಯಾಸ್ ನೋಣ–ಶಿವಯ್ಯಾ ನೋಣರ ಮಕ್ಕಳು. ಮೈಸೂರು ಸಂಸ್ಥಾನದ ಬಳ್ಳಾರಿಗಳದಲ್ಲಿ ತೋಟಯಲ್ಲಿರುವವರು ಇವರಿಗೆ—

ಸದ್ರಿ ವ್ಯಾಜ್ಯದಲ್ಲಿ ನಿಮ್ಮನ್ನು ಸಪ್ಲಿಮೆಂಟಲ್ ಪ್ರತಿವಾದಿಗಳಾಗಿ ಸೇರಿಸುವುದರ ಬಗ್ಗೆ ವಾದಿಯು ಅರ್ಜಿ ಕೊಟ್ಟಿರುವದರಿಂದ ಮತ್ತು ಸದ್ರಿ ಅರ್ಜಿಯು ತಾ. 10-6-40 ಕ್ಕೆ ಇಟ್ಟಿರುವದರಿಂದ ಆ ಕುರಿತು ನಿಮ್ಮ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಿದ್ದು ಉತ್ತರಿಸಿಕೊಳ್ಳತಕ್ಕದ್ದೆಂತಲೂ ತಪ್ಪಿದ್ದರೆ ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲಾಗುವದೆಂತಲೂ ತಿಳಿಯಪಡಿಸಲಾಗುತ್ತದೆ.

(ಕೋರ್ಟು ಹುಕುಂ ಪ್ರಕಾರ)

M. S. Adhikari, B.A.,LL.B.

Pleader for Plaintiff.

ಕಾರ್ಕಳ, 4-4-1940.

ನವಯುಗದಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ನಿಮ್ಮ ವ್ಯವಹಾರ ವೃದ್ಧಿಗೊಳಿಸಿರಿ!

ಮೈಸೂರು ಪತ್ರ

(ನವಯುಗದ ಬಾತ್ಮೀದಾರರಿಂದ)

ಮೈಸೂರು, ಎಪ್ರಿಲ್, 8.

ಖಾದಿ ಮತ್ತು ಗ್ರಾಮೈಕ್ಯಗಾರಿಕೆ ವಸ್ತುಪ್ರದರ್ಶನ

ಡಾ. ನಾ. ಸು. ಹರ್ಡೀಕರ್‌ರವರಿಂದ ಪ್ರಾರಂಭೋತ್ಸವ---ಶಿವಮೊಗ್ಗೆಯಲ್ಲಿ ನಡೆಯಲಿರುವ ಮೈಸೂರು ಕಾಂಗ್ರೆಸ್ ನೈಕೀಯ ಅಧಿವೇಶನದಂಗವಾಗಿ ಖಾದಿ ಮತ್ತು ಗ್ರಾಮೈಕ್ಯಗಾರಿಕೆ ದೇಶಿ ವಸ್ತುಪ್ರದರ್ಶನವನ್ನೇರ್ಪಡಿಸಲಾಗಿದೆ. ಇದರ ಪ್ರಾರಂಭೋತ್ಸವವನ್ನು ಅ. ಭಾ. ಮತ್ತು ಕರ್ನಾಟಕ ಕಾಂಗ್ರೆಸ್ ಮುಂದಾಳುಗಳಾದ ಡಾ. ನಾ. ಸು. ಹರ್ಡೀಕರ್‌ರವರು ನೆರವೇರಿಸಿ ಸುಪ್ರಸಿದ್ಧ ಭಾಷಣಮಾಡಿದರು. ಈ ವಸ್ತುಪ್ರದರ್ಶನದಲ್ಲಿ ಅನೇಕ ಹಲವು ಮತ್ತು ಅಪೂರ್ವ ಗ್ರಾಮೈಕ್ಯಗಾರಿಕೆ ವಸ್ತುಗಳನ್ನು ಪ್ರದರ್ಶಿಸಲಾಗಿದೆ.

ಇತರ ಸುದ್ದಿಗಳು— ಮೈಸೂರು ಕಾಂಗ್ರೆಸ್ಸಿನ ಮೂರನೇ ಅಧಿವೇಶನವು ಇದೇ ಮಾಹೆ ತಾ. ೨೦ರಿಂದ ಶಿವಮೊಗ್ಗೆಯಲ್ಲಿ 3ದಿನ ನಡೆಯಲಿದೆ. ಅದಕ್ಕೆ ಬೇಕಾದ ಎಲ್ಲ ಏರ್ಪಾಡುಗಳು ನಡೆದಿವೆ. ಸಂಸ್ಥಾನದಾದ್ಯಂತದಿಂದಲೂ ಪ್ರೇಕ್ಷಕರು ಬರಲಿರುವರು. ಕಾಂಗ್ರೆಸ್ ಅಧ್ಯಕ್ಷರನ್ನು ಎತ್ತಿನ ಗಾಡಿಯಲ್ಲಿ ಕುಳ್ಳಿರಿಸಿ ಊರಿನ ಮುಖ್ಯ ಬೀದಿಯಲ್ಲಿ ಮೆರವಣಿಗೆ ಹೋಗಿ ಕಾಂಗ್ರೆಸ್ ನಡೆಯುವ ಸ್ಥಳಕ್ಕೆ "ಆಜಾದ್ ನಗರ"ಕ್ಕೆ ಕರೆತರಲಾಗುತ್ತದೆ. (ಮೈ. ಕಾಂ. ಈ ಅಧಿವೇಶನದ ಸುದ್ದಿ ಮುಂದಿನ ಸಂಚಿಕೆಯಲ್ಲಿ ವಿಸ್ತಾರವಾಗಿ ತಿಳಿಸಲಾಗುತ್ತೆ. ಸಂ. ನ.) ಮೈಸೂರು ನಗರದ ಸಮೀಪದ ಕೆರೆಬಳಿಯಿರುವ ಶಾನಭೋಗರೊಬ್ಬರ ಮನೆಗೆ ಬೆಂಕಿಬಿದ್ದು ಅರು ಎತ್ತುಗಳು ಬೆಂದು ಹೋದುವು. ಈ ದೃಶ್ಯವು ಮನಕರಗುವಂತಿತ್ತು. ಮೈಸೂರು ಬಳಿ ರಮ್ಮನಹಳ್ಳಿ ಎಂಬ ಹಳ್ಳಿಯಲ್ಲಿ ಕೈರ ಗುಂಪಿತ್ತೆಂದು ತಿಳಿದು ಪೋಲೀಸರು ತಕ್ಷಣವೇ ಆ ಸ್ಥಳಕ್ಕೆ ಹೋಗಿ ಅಲ್ಲಿ ಕೆಲವರನ್ನು ಚಮತ್ಕಾರದಿಂದ ದಸ್ತಗಿರಿಮಾಡಲು, ಕಳವಾಗಿರುವ ಅನೇಕ ವಸ್ತುಗಳು ಸಿಕ್ಕಿವೆ. ದಿವಂಗತ ಮೋಹನದಾಸ ಕೃಷ್ಣಮೂರ್ತಿ ಕೊಲೆ ಸಂಬಂಧ ದಸ್ತಗಿರಿಯಾಗಿರುವವರ ಮೇಲೆ ಹೂಡಿರುವ ಮೊಕದ್ದಮೆ ಇದೇ ಮಾಹೆ ತಾ. ೨೦ರಿಂದ ನಡೆಯುವುದೆಂದೂ, ಶ್ರೀ. ಆರ್. ಸಿ. ಮಲ್ಲಪ್ಪನವರು ಇದನ್ನು ನಡೆಸುವರೆಂದೂ ಹೇಳಲಾಗಿದೆ. ಇದೇ ಸಮಯದಲ್ಲಿ ದಸ್ತಗಿರಿಯಾಗಿರುವ ವಕೀಲ್ ಶ್ರೀ. ಬಿ. ಎಸ್. ವೆಂಕಟರಂಗೈಂಗಾರರನ್ನು ಜಾಮೀನಿನ ಮೇಲೆ ಬಿಡಬೇಕೆಂದು ಹೈಕೋರ್ಟಿಗೆ ಬಂದಿದ್ದ ಅರ್ಜಿಯನ್ನು ಚೀಫ್ ಜಸ್ಟಿಸರು ತಿರಸ್ಕರಿಸಿದರು. ಮೈ. ಬಿಲ್ಲಿಯವರು ಅಖಿಲ ಭಾರತ ಕಾಂಗ್ರೆಸ್ಸು ಸಂಧಿಲು ಮಹಾತ್ಮರು ಹರಿಜನದಲ್ಲಿ ಆ ಭಾಷಣದ ಬಗ್ಗೆ ಟೀಕಿಸಿದ್ದರಷ್ಟೆ. ಇದರ ವಿಚಾರವಾಗಿ ಸರ್. ಮಿರ್ಜಾರವರು ಏನು ಹೇಳುವರೆಂದು ಪತ್ರಿಕಾ ಪ್ರತಿನಿಧಿಗಳು ಅವರನ್ನು ಭೇಟಿ ಮಾಡಲು ಪ್ರಯತ್ನಿಸಲು ಏನನ್ನೂ ಹೇಳದೆ ಮೌನಮುದ್ರೆಯಿಂದಿದ್ದರು. ಮೈಸೂರು ಸಂಸ್ಥಾನ ಸೈನ್ಯ ಮತ್ತು ಆರೋಗ್ಯ ಇಲಾಖೆ 1938 '39 ಸಾಲಿನ ವರದಿ ಹೊರಬಿದ್ದಿದೆ. ಅನೇಕ ವಿಷಯಗಳಿವೆ. ಶ್ರೀಯುತರುಗಳಾದ ಸಿ. ಬ್ರಹ್ಮಯ್ಯ ರಾಜ್ ಅರಸ, ಶ್ರೀಕಂಠ ಲಕ್ಷ್ಮೀಕಾಂತ ರಾಜ ಅರಸರುಗಳನ್ನು ಶ್ರೀಮನ್ಮಹಾರಾಜರ ಅಂಗರಕ್ಷಕರುಗಳನ್ನಾಗಿ ನೇಮಿಸಲಾಗಿದೆ. ಕುರುಬರ ಜಿಲ್ಲೆ ಸಂಘದವರು ದಿವಾನರಿಗೆ ಒಂದು ಮಾನಪತ್ರ ಅರ್ಪಿಸಿದರು. ದಿವಾನರು ಇದನ್ನು ಸ್ವೀಕರಿಸಿ ಸ್ವಾರಸ್ಯ ಭಾಷಣ ಮಾಡಿದರು. ಬೆಂಗಳೂರಿನಲ್ಲಿರುವ ಮೆಡಿಕಲ್ ಸ್ಕೂಲನ್ನು ರದ್ದುಮಾಡಲಾಗುವುದಿಲ್ಲವೆಂದು ತಿಳಿಸಲಾಗಿದೆ. ಶೀಘ್ರ ಬಿಸಿ ಪರೀಕ್ಷೆಗೆ ಕುಳಿತಿದ್ದ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಹೇಳುವ ಡಿಕ್ಟೇಷನ್ ಬಹಳ ಕಠಿಣವಾಗಿತ್ತೆಂದು ಮುಷ್ಕರ ಹಿಡಿದು ಪರೀಕ್ಷಾ ಭವನದಿಂದ ಎದ್ದು ಹೊರಟು ಹೋದರೆಂದು ಹೇಳಲಾಗಿದೆ. ಶ್ರೀಮದ್ಯುವರಾಜ ಜಯಚಾಮರಾಜ ಒಡೆಯರ ಬಳಿ ವಿ.ll ಮೇಸ್ತ್ರಿಗಳು ಸೆಕ್ರೆಟರಿಗಳಾಗಿಯೂ ಶ್ರೀ. ಬಿ. ತಮ್ಮಯ್ಯನವರು ಪ್ರೈವೇಟ್ ಸೆಕ್ರೆಟರಿಗಳಾಗಿಯೂ ಇರುತ್ತಾರೆ. ಮೈ. ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳಿಗೆ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಮಿಲಿಟರಿ ಶಿಕ್ಷಣ ಕೊಡಲಾಗುತ್ತದೆ. ಇದರ ಬಗ್ಗೆ ಬೆಂಗಳೂರು ವಿದ್ಯಾರ್ಥಿಗಳು ಹೆಬ್ಬಾಳ ಫಾರಂಬಳಿಯೂ ಮೈಸೂರು ವಿದ್ಯಾರ್ಥಿಗಳು ಚಾಮುಂಡಿ ಬೆಟ್ಟ ಬಳಿಯೂ ಸುಮಾರು 10 ದಿನ ಕ್ಯಾಂಪ್ ಮಾಡಿ ಶಿಕ್ಷಣ ಕೊಂಡಿದರು. ಸರ್. ವಿ ಜಾರ್ಜ್‌ರವರು ಹೆಬ್ಬಾಳಿಗೆ ಬಂದ ಮಿಲಿಟರಿ ಜೋಡಿನ ತರಗತಿ ನೋಡಿ ಯುವಕರುಗಳಿಗೆ ಹುರಿದುಂಬಿಸಿದ್ದರು. ಜ. ದ್ವಿ ಸಹಾಯ ನಿಧಿಗೆ ನಿಧಿ ಸೇರಿಸುವ ಬಗ್ಗೆ ಮೈಸೂರಿನಲ್ಲಿ ಒಂದು ಸಾಂತ್ವನ ನೀಡಲು ನೌಕರ ಮತ್ತು ಪೌರ ಸಭೆಯು ಕಟ್ಟೋಣದಲ್ಲಿ ಸಭೆ ನಡೆಯಿತು. ಅ. ಕ. ವೈಶ್ಯರ ಕೂಟದ ಮೂರನೆ ಅಧಿವೇಶನವು ಬೆಂಗಳೂರಿನಲ್ಲಿ ಶ್ರೀಮನ್ ತಿ ಕಲ್ಯಾಣಮ್ಮನವರ ನೇತೃತ್ವದಲ್ಲಿ ಬಾಲಕ ಶಿವಮೂರ್ತಿ ಅಧ್ಯಕ್ಷತೆಯಲ್ಲಿ ನಡೆಯಿತು. ಅನೇಕ ಚಿಕ್ಕ ಮಕ್ಕಳು ಬಂದಿದ್ದವು. ದಿವಾನರು ಇದರ ಆರಂಭೋತ್ಸವ ನಡೆಸಿ ಮನ ಕರಗುವ ಭಾಷಣಮಾಡಿದರು. ಇಂಡಿಯನ ಇನ್ಸ್‌ಟ್ಯೂಟ್ ಆಫ್ ಸೈನ್ಸ್ ಮತ್ತು ಮೈ. ಬ್ರಿಟಿಷ ರೆಸಿಡೆಂಟರಾದ ಡಿಲಾಹೆ ಗಾರ್ಡನ್‌ರವರಿಗೆ ಮಹಾರಾಷ್ಟ್ರದ ಶ್ರೀ ಬಿಧೆ ಎಂಬವರು ಜುಲುಂ ಮಾಡಿದರೆಂದು ಕರೆಯಿಸಲಾಗಿದೆ. ಶ್ರೀ ಬಿಧೆಯವರು ಇಂಡಿಯನ್ ಇನ್ಸ್‌ಟ್ಯೂಟಿನಲ್ಲಿ ನೌಕರಿಯಲ್ಲಿದ್ದರೆಂದೂ ಅಲ್ಲಿಂದ ಹಿಂದಕ್ಕೆ ಕಳುಹಿಸಲು ಶ್ರೀಯುತರು ಇದರ ಬಗ್ಗೆ ರೆಸಿಡೆಂಟರೊಡನೆ ಭೇಟಿಮಾಡಿ ಅವರ ಮೇಲೆ ಜುಲುಂ ನಡೆಸಲು ತಕ್ಷಣ ಶ್ರೀ. ಬಿಧೆಯವರನ್ನು ಹಿಡಿದು ಪೋಲಿಸಿಗೆ ಕೊಟ್ಟು, ನ್ಯಾಯಾಧೀಶರಿಗೆ ಇದರ ವಿಚಾರ ತಿಳಿಸಲು ಶ್ರೀ. ಬಿಧೆಯವರು ಹುಚ್ಚುತನದಿಂದ ಈ ರೀತಿ ಮಾಡಿದರೆಂದೂ, ಅವರನ್ನು 10 ದಿನ ಹುಚ್ಚರಾಸ್ಪತ್ರೆಗೆ ಕಳುಹಿಸಿ ಮುಂದಿನ ವಿಚಾರಣೆಯಾಗುತ್ತದೆಂದೂ ಹೇಳಲಾಗಿದೆ. ರಾಷ್ಟ್ರೀಯ ವಾರವನ್ನು ಸಂಸ್ಥಾನದಾದ್ಯಂತವೂ ಆಚರಿಸಲಾಯಿತು. ಇದರ ಬಗ್ಗೆ ಸಭೆ ನಡೆಸಿ ಕಾಂಗ್ರೆಸು ಮುಂದಾಳುಗಳು ಭಾಷಣಮಾಡಿದರು.

ಪತ್ರವ್ಯವಹಾರ

ಮುಂಬಯಿಯಲ್ಲಿ ಬಿಲ್ಲವರ ಸಂಘ ಸಂಸ್ಥೆಗಳು

(ಕಳೆದ ಸಂಚಿಕೆಯಿಂದ ಮುಂದರಿದದ್ದು)

ಈಗಲೀಗ ನಮ್ಮ ಸಂಸ್ಥೆಗಳಿಗೆ ಬರವಿಲ್ಲದಿಲ್ಲ. ತಿಳಿದ ಮಟ್ಟಿಗೆ ಹೇಳಬೇಕಾದರೆ ದಿ ಬಾಂಬೆ ಬಿಲ್ಲವರ ಚಾರಿಟಿ ಸಂಘ, ವಿದ್ಯಾದಾಯಿನಿ ಸಭಾ, ದಿ ಬಿಲ್ಲವರ ಎಸೋಸಿಯೇಶನ್, ಈ ಮೂರು ಸಂಘಗಳು ಆದಿಯಿಂದಲೂ ಸಾಧ್ಯವಾದ ಮಟ್ಟಿನ ಸೇವೆಯನ್ನು ಸಲ್ಲಿಸುತ್ತಿವೆ. ಆದರೆ ಈ ಸಂಘಗಳು ಸಾಧಿಸ ಸೇವೆಗಿಂತ ಇನ್ನೂ ಹೆಚ್ಚು ಸೇವೆ ಸಲ್ಲಿಸಬೇಕೆಂಬ ಛಲದಿಂದಲೋ ಅಧಿಕಾರಿಗಳ ಆಕಾಂಕ್ಷೆಯಿಂದಲೋ ಎಂಬಂತೆ "ದಿ ಕೆನರಾ ಬಿಲ್ಲವರ ಅನಾಥ ಸಂಘ"ವೆಂಬುದೊಂದು ಸ್ಥಾಪಿಸಲ್ಪಟ್ಟಿತು. ಇದು ರಿಜಿಸ್ಟರ್ಡ್ ಆಗದೆ ಈಗ ಸಂಘಗಳು ಐದಾರು ಸಂಖ್ಯೆಗೆ ಏರಿವೆ. ಇನ್ನೊಂದು 'ಬಿಲ್ಲವ ಯುವಕ ಸಂಘ' ಮತ್ತು 'ಬಿಲ್ಲವ ಫ್ರೆಂಡ್ಸ್ ಯೂನಿಯನ್' ಇವುಗಳ ಪೈಕಿ ಬಿಲ್ಲವ ಫ್ರೆಂಡ್ಸ್ ಯೂನಿಯನ್ ಬಹಳ ಅಂದರೆ ಕಡಿಮೆ ಸಂಬಳದವರನ್ನು ಸೇರಿಸಿಕೊಂಡಿಲ್ಲ. ಮೊದಲು ಮೇಲಿನ ಮೂರು ಸಂಘಗಳಿಗೆ ಸರಿಯಾಗಿ ಚಂದಾ ಕೊಡುವ ಪ್ರಮಾಣ ತಿಂಗಳ 0-12-0 ಆಗುತ್ತಿತ್ತು. ಈಗ ಸರಾಸರಿ ಈ ಆರು ಸಂಘಗಳ ಚಂದಾ ಪ್ರತಿ ತಿಂಗಳು (ಯುವಕ ಸಂಘಕ್ಕೆ ವರ್ಷಕ್ಕೆ 0-8-0ಯಂತೆ ಬಿಟ್ಟು) ತಿಂಗಳಿಗೆ 8ಷ್ಟು ಬಂದು ಒಂದು ರೂಪಾಯಿ 4ಆಣೆ 8ಷ್ಟು ಪ್ರಕಾರ ವರ್ಷಕ್ಕೆ ರೂಪಾಯಿ 15-8-0. ಬಿಲ್ಲವರು ಹಿಂದುಳಿಯಲು ಕಾರಣ ಯಾ ದೇವಸ್ಥಾನ ಪ್ರವೇಶ ಸಿಕ್ಕದಿರುವುದೇ ಎಂದು ಕೇಳಿದರೆ ನಮ್ಮ ಕೆಲವರಿಗೆ ಉತ್ತರ ದೊರೆಯಾಗಲಿಲ್ಲವೆಂದು ಸ್ವಲ್ಪವೂ ಯೋಚಿಸದ ಉತ್ತರ ಕೊಟ್ಟು ಬಿಡುತ್ತಾರೆ. ಅದರೊ ನಿಜವಾದ ಅರ್ಥವನ್ನು ತಿಳಿಯುವುದೂ ಇಲ್ಲ. ಇನ್ನೊಬ್ಬರಿಂದ ವಿಚಾರಿಸಿ ಕೊಳ್ಳುವುದೂ ಇಲ್ಲ. ಬಿಲ್ಲವರಲ್ಲಿ ಮೊದಲು ಇದ್ದ ಹಿರಿಯ ಚರಿತ್ರೆಯನ್ನು ಯಾರಾದರೂ ವಿದ್ಯಾವಂತರು ವಿವರಿಸಿದರೆ ದಾನ್ ಬರುತ್ತಾರು ಏನು ಹಿಡಿದಿದ್ದರೋ ಹೇಗೆ ಬೀಳುತ್ತಾರೆ. ವಿದ್ಯಾವಂತರೂ ಅವಿದ್ಯಾವಂತರೂ ಹೀಗೆ ನಮ್ಮ ಸಮಾಜದ ಮೇಲೆ ಈ ಗುಪ್ತ ಕತ್ತಲೆ ಸಮಾಜದ ಗತಿ ಏನು? ಅದರಿಂದ ಉದ್ಧಾರವೇನು? ಅದರೂ ಚಿಂತಿಲ್ಲ. ಇನ್ನಾದರೂ ನಾವು ಬಡಸಮಾಜದ ಮೇಲೆ ಜುಗುಪ್ಸೆಯಾದರೆ ಅದಕ್ಕೆ ಸದಾ ಬೆಂಬಲವನ್ನಿತ್ತು, ಮುಂದೆಕಿತ್ತುವುದು ನಮ್ಮ ಕರ್ತವ್ಯವಲ್ಲವೇ? ನಮ್ಮ ಸಮಾಜವನ್ನು ಬಲಪಡಿಸಲಿಕ್ಕೆ ಸಾಧ್ಯವಾಗದೆ ಹೋದರೆ ರಾಜಕೀಯ ಕಾರ್ಯದಲ್ಲಿ ಭಾಗವಹಿಸುವುದು ಹೇಗೆ! ಎಲೈ ಆಗಲಿ ಪ್ರಿಯ ಬಿಲ್ಲವ ಬಂಧು ಭಗಿನಿಯರೇ, ನಾವು ನಮ್ಮ ಕರ್ತವ್ಯವನ್ನು ಕೇಳಿಕೊಳ್ಳುವುದು ದೂಷಣೆಯಲ್ಲ, ರೋಗದ ಔಷಧವನ್ನು ಅದರ ಒಳ್ಳೇದಕ್ಕಾಗಿಯೇ ತಿಳಿಯಬೇಕೆಂದು ತಿಳಿಯಲಾಗಿದೆ. ಬಿಲ್ಲ ನಾವು ಸಂಘಟಿಸಿಕೊಂಡು ಸಮ್ಮೇಳದಲ್ಲಿ ಒಳಗೊಂಡರೆ ನಮ್ಮೊಳಗೆ ಪ್ರೇಮವುಳ್ಳವರಾದರೆ ಸಮಾಜದಲ್ಲಿ ಅಸಹ್ಯಪಡದೆ ಎಲ್ಲರೂ ನಮ್ಮ ಬಂಧುಗಳೆಂದು ತಿಳಿದು ವರ್ತಿಸಿದರೆ ಅದೆಷ್ಟು ಚೆಂದ! ಹೀಗೆ ನಾವು ಒಬ್ಬರಿಗೊಬ್ಬರು ಅನ್ಯೋನ್ಯದಿಂದಿದ್ದರೆ ನಮ್ಮನ್ನು ಧಿಕ್ಕರಿಸಿ ದೂರಮಾಡ ಮವರೇ ಇಲ್ಲ. ಪ್ರತಿ ಒಬ್ಬರೂ ನಮ್ಮನ್ನು ಗೌರವದಿಂದಲೇ ಕಾಣುವರು. ಆಗ ನಾವು ಸಮಾಜವನ್ನು ಮೇಲಕ್ಕೆತ್ತಿ ದೇಶಸೇವೆಗೆ ಕೈಯಿಕ್ಕಿದರೆ ಬಾಹುಬಲವೆನಿಸ ಭಾರತಾಂಬೆಯು ಧನ್ಯಳಾಗಿ ಕೃಪೆಮಾಡುವಳು. ಗದ್ಯಾನುಯಾಯಿ ಸಂತುಷ್ಟನಾಗುವನು. ಒಕ್ಕಲಿಗನ ದೃಷ್ಟಾಂತ ಕೊಡುವುದಾದರೆ ತಾ. 11-2-40 ವಿದ್ಯಾದಾಯಿನಿ ಸಭೆಯ ಚಾರಿತ್ರ ವಾಗಿದೆ! ವರ್ಷಕ್ಕೆ 2-3 ಮಹಾಸಭೆಯು ಜರು ಗಿದಾಗ ಸರಿಯಾಗಿ ನೆರೆಬರದು. ಬಂದಿದ್ದರೆ ಕಾರ್ಯಕಾರಿ ಮಂಡಳಿಯು ಅದೆಷ್ಟು ಚತುರತನದಿಂದ ಮುಂದುವರಿಯುತ್ತಿದೆ! ಇದರಲ್ಲಿ ಅವರ ಉತ್ಸಾಹದ ಬದಲಿಗೆ ನಿರುತ್ಸಾಹವನ್ನು ಹುಟ್ಟಿಸದಂತಿಲ್ಲವೇ ಪ್ರತಿ ಒಂದರಲ್ಲಿ ನಮ್ಮ ವಿಷಯವನ್ನೆತ್ತಿ ನ್ನು ನೋಡ ಮಾಗ್ಯ, ನಮ್ಮ ಹೃದಯ ದ್ರವಿಸಿದಾಗುವದು. ದ್ರವಕಾರಾದವನೇ ಕಟುಕರ ಪಾಲಿನವನೆಂದು ಖಂಡಿತ ಹೇಳಬಲ್ಲೆ. ಇನ್ನು ಮುಂದಾದರೂ ಸಮಾಜದ ನೀತಿ ಕರ್ಮಜೀವನದತ್ತ ಅದರ ಉತ್ತರೋತ್ತರ ಅಭಿವೃದ್ಧಿಯ ಕಡೆಗೆ ಗಮನಕೊಟ್ಟು ತಂತಮ್ಮ ಮತ್ಸರವನ್ನು ಸಮಾಜಕ್ಕೆ ಹೊರಿಸದೆ ಇದ್ದರೆ ಸಮಾಜವು ನಡೆಯಬಹುದು. ಮತಸ್ಥನವನ್ನು ಕಟ್ಟಿಕೊಂಡು ಸಮಾಜದಲ್ಲಿ ಪ್ರೇರಿಸಿದರೆ ಅದೇನು ಮಾಡಲಾದೀತು. "ಯುವಕರ ಸೇವೆಯು ಅದಿಗದಿಗೆ ಬೇಕಾದೆಂದು ಗೊತ್ತಾಗುತ್ತಿದೆ. ಕಾರ್ಯಕರ್ತರುಗಳಾಗಿ ಕೆಲಸಮಾಡುವ ಒಬ್ಬರು ನಿರುತ್ಸಾಹರಾಗಿದ್ದಾರೆ ಸಮಾಜಕ್ಕಾಗಿ ಸಾಧ್ಯವಾದಷ್ಟು ತನ ಮನವನ್ನರ್ಪಿಸಿದವರಲ್ಲಿ ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ ಶ್ರೀ. ತೌಡಪ್ಪ, ಕೆ. ಅಮೀನ್, ಬಿ. ಪಿ. ಕೋಟ್ಯಾರ್, ಪಿ. ಕೆ. ಸುವರ್ಣ ಸಂದರ ಅಮೀನ್, ಪಿ. ಅಣ್ಣಯ್ಯ, ಎಸ್. ಮೈಂದ, ಜಿ ಟಿ ಅಂಚನ್, ಬಿ. ಎಸ್. ಕಿರೋಡಿಯನ್, ಎಂ. ಜನ್ನಪ್ಪ, ಕೃಷ್ಣಪ್ಪ ಬಂಗೇರ, ಎಂ. ಪಿ. ಸಾಲ್ಯ, ಡಾಕ್ಟರ್ ಎನ್. ಅರ. ಸುವರ್ಣ, M. S) ಸೇ ಸುಬ್ಬ, ಕೃಷ್ಣಪ್ಪ ಡಿ. ಮೂಲ್ಕಿ, ಕೆ. ಅಣ್ಣಯ್ಯ, ಕೆ. ಬಾಬು, ಎ. ಎಸ್. ಉಳಿಯೂರಗೋಳಿ, ಟಿ. ಕರಿಯ, ಎಸ್. ಎಂ. ಉದ್ಯಾವರ್, ಬಾಂಗಾಳ ತುಕ್ರನವರು ಪಟ್ಟು ರಾಮು ಕೆ. ಅಮೀನ್, ಸ್ವರ್ಗವಾಸಿ ಪಿ. ಅಪ್ಪು ಪೂಜಾರಿಯವರು, ಇನ್ನೂ ಅನೇಕರಿರಬಹುದು. ಇವರ ಸೇವೆಯು ಸರ್ವಸಾಧಾರಣ ಅಗದಿರಾದದ್ದೆಂದು ಹೇಳಬೇಕು. ಶ್ರೀ. ತೌಡಪ್ಪ, ಕೆ. ಅಮೀನ್, ಬಿ. ಪಿ. ಕೋಟ್ಯಾರ್ ಪಿ. ಕೆ. ಸುವರ್ಣ ಇವರು ಹತ್ತಿನ ಆಯುಷ್ಯವನ್ನು ಸಮಾಜದ ಉನ್ನತಿಗಾಗಿ ಸವೆದಿದ್ದಾರೆಂದು ನಾನು ಚೆನ್ನಾಗಿ ಬಲ್ಲೆನು. ಇನ್ನು ಅನೇಕರು ಕೆಲಸಮಾಡಿರಬಹುದು, ಅವನ್ನು ತೋರ್ಪಡಿಸಿಕೊಂಡಿಲ್ಲವೆಂದು ಬೇಸರಪಡಬಾರದಾಗಿ ನೇಮಕನ ವಿನಂತಿ. ಅಂತಹ ನಾನು ನನ್ನಂತಹ ಯುವಕರನ್ನು ದೂರುವುದೂ ಅಲ್ಲ, ಅವರನ್ನು ಹೊಗಳುವುದೂ ಅಲ್ಲ, ನಿಜಸಂಗತಿ ಬರೆದದ್ದು ಮಾತ್ರ. ನಾನು ಯುವಕನಾದ ಕಾರಣ ಅವರ ಕೆಲಸಕ್ಕೆ ತಲೆಬಾಗಲೇಬೇಕು. ಅವರಿಂದಲೂ ಹೆಚ್ಚಾದ ಕೆಲಸ ನಾವು ಮಾ

(ಗಿನೇ ಪುಟಕ್ಕೆ ಮುಂದರಿಯುವದು)

ನೋಟೀಸು.

The Vijaya Bank Ltd., Coondapoor.

ದಿ ವಿಜಯ ಬೇಂಕ್ ಲಿಮಿಟೆಡ್, ಕುಂದಾಪುರ.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸ ಮಾಡುವದೇನೆಂದರೆ— ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನ, ಬೆಳ್ಳಿ, ಆಭರಣಗಳ ಆಧಾರದ ಮೇಲೆ ಪಡೆದ ಸಾಲಗಳನ್ನಾಗಲೀ, ಅದರ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇದ್ದುದರಿಂದಲೂ, ಸದ್ರಿಯವರಿಗೆ ಬಿಟ್ಟ ರಿಜಿಸ್ಟರ್ ನೋಟೀಸುಗಳಲ್ಲಿ ಕೆಲವು ವಾಪಸಾಗದೆ ಇದ್ದುದರಿಂದಲೂ, ಸದ್ರಿ ಲೋನನ್ನು ಇನ್ನು ಹೆಚ್ಚಿಗೆ ಸಮಯ ಬಾಕಿ ಇಟ್ಟಲ್ಲಿ ಬೇಂಕಿಗೆ ನಷ್ಟವಾಗಬಹುದಾಗಿ ಕಂಡುಬರುವುದರಿಂದಲೂ, ಸದ್ರಿ ತಿಂಗಳ ಅಖೇರಿಯ ಸಾಲ ಬಡ್ಡಿ ಎಲ್ಲಾ ಅಸಲು ಬಡ್ಡಿ ಹಣಗಳನ್ನು ಕೊಟ್ಟು ತಾ. 15-4-40ನೇ ಸೋಮವಾರ ಮಧ್ಯಾಹ್ನ 3 ಘಂಟೆಯ ಒಳಗೆ ಬಿಡಿಸಿಕೊಂಡು ಹೋಗದೆ ಇದ್ದಲ್ಲಿ ತಾ. 16-4-40ನೇ ಮಂಗಳವಾರ ಮಧ್ಯಾಹ್ನ ಘಂಟೆ 3ಕ್ಕೆ ಸದರಿ ನಗಗಳನ್ನು ಬಹಿರಂಗವಾಗಿ ಏಲಂ ಮಾಡಿ ಹುಟ್ಟಿ ಬಂದ ಹಣಗಳಲ್ಲಿ ನಮಗೆ ಬರ ಬೇಕಾದ ಬಡ್ಡಿ ಮತ್ತು ಎಲ್ಲಾ ಖರ್ಚು ವಗೈರೆ ಕಳೆದು ಉಳಿದ ಹಣ ಉಳಿದರೆ ಸದರಿಯವರ ಅಕೌಂಟಿಗೆ ಜಮಾ ಮಾಡಲ್ಪಡುವುದು. ಏಲಮಿನಿಂದ ಹುಟ್ಟಿಬಂದ ಹಣ ಬೇಂಕಿಗೆ ಬರತಕ್ಕ ಹಣಕ್ಕೆ ಕಮ್ಮಿ ಬಿದ್ದರೆ ಸದರಿ ಅಸಾಮಿಯ ಮೇಲೆ ಹೆಚ್ಚಿಗೆ ಬರತಕ್ಕ ಹಣಗಳಿಗೆ ದಾವಾ ದಾಖಲುಮಾಡಲಾದೀತೆ. ಏಲಂ ಅದೇ ದಿವಸ ಆಗದೆ ಇದ್ದಲ್ಲಿ ಬೇಂಕಿಗೆ ಯುಕ್ತ ಕಂಡ ದಿವಸಕ್ಕೆ ಮುಂದುವರಿಸಲ್ಪಡುವುದು ತಿಳಿದಿರ ಬೇಕು.

ಲೋನು ನಂಬ್ರ	ಇಟ್ಟ ತಾರೀಖು.	ಹೆಸರು ಮತ್ತು ವಿಳಾಸ	ಅಸಲು ರೂಪಾಯಿ
191/36	23 8 37	ರಾಮಣ್ಣ ಶೆಟ್ಟಿ, ಸಂದ್ಯಪ್ಪ ಶೆಟ್ಟಿ ಅಳಿಯ ಗುಜ್ಜಾಡಿ ಹೊಸ್ಮನೆ, ಪೋಸ್ಟ್ ಕುಂದಾಪುರ.	275—0—0
253 37	14 3 38	ಕೃಷ್ಣಯ್ಯ ಶೆಟ್ಟಿ, ನಾಗಯ್ಯ ಶೆಟ್ಟಿ ಅಳಿಯ, ಹುಲಾಡಿ ಗ್ರಾಮ, ಉಡ್ಪಿ ತಾಲೂಕು, ಪೋಸ್ಟ್ ಶಂಕರನಾರಾಯಣ.	35—0—0
473/37	12-7-38	ನಾಗಮ್ಮ ಶೆಟ್ಟಿ, ತುಂಗಮ್ಮ ಶೆಟ್ಟಿ ಮಗ, ಹೊಸಕಟ್ಟೆ ಮನೆ, ಹಕ್ಲಾಡಿ ಗ್ರಾಮ, ಹಕ್ಲಾಡಿ ಪೋಸ್ಟ್	35—0—0
562/37	15-8 38	ನರಸಿಂಹ ಶೆಟ್ಟಿ, ಚಿಕ್ಕಯ್ಯ ಶೆಟ್ಟಿ ಅಳಿಯ, ಸೀನಮನೆ, ಹಕ್ಲಾಡಿ ಗ್ರಾಮ, ಪೋಸ್ಟ್ ಹಕ್ಲಾಡಿ.	5—0—0
356/37	6 5-38	ಸುಬ್ಬಯ್ಯ ಶೆಟ್ಟಿ, B/o ಚಿಕ್ಕಯ್ಯ ಶೆಟ್ಟಿ, ಅತ್ರಾಡಿ, ವಂಡ್ಸೆಗ್ರಾಮ, ಪೋಸ್ಟ್ ವಂಡ್ಸೆ.	30—0—0
404/37	1 6-38	ವೆಂಕಟ್ರಮಣ ಮಂಜ, ಸುಬ್ರಾಯ ಮಂಜರ ಮಗ, ಮಾರಣಕಟ್ಟೆ, ಚಿತ್ತೂರು ಗ್ರಾಮ, ಪೋಸ್ಟ್ ವಂಡ್ಸೆ.	80—0—0
418/37	13 6-38	ನರಸಿಂಹ ಕಾರಂತ, ನಡೇರ ಹೋಬಳಿ, ಕುಂದಾಪುರ.	3—0—0

OFFICE OF THE BANK,
COONDAPOOR,
6—4—1940

K. Sanjiva Hegde,
Agent

ಹಿಟ್ಲರ್ ಕ್ಷಮಿಸುತ್ತಿರುವ ನಾಜೀ ಒಡಕು

ಹೆರ್ ಹಿಟ್ಲರ್

• ರಶ್ಯಾ-ಜರ್ಮನಿ ಜತೆಮಾಡಿ ನೊಗವಿಟ್ಟವ ರಿಬ್ಬೆಂಟ್ರಾಪ್!

• ಹಳೆ ಸ್ನೇಹಿತನನ್ನೇ ಹಂಬಲಿಸುವವ ಗೋರಿಂಗ್!!

• ಎತ್ತು ಏರಿಗೆಳೆದಾಗ ಕೋಣ ನೀರಿಗೆಳೆಯಿತು!

ಮಾರ್ಶಲ್ ಗೋರಿಂಗ್

ಹಿಟ್ಲರನ ಸರ್ವಾಧಿಕಾರಿತ್ವದಿಂದ ಜರ್ಮನ್ ಜನತೆಯು ಪೂರ್ಣ ಸುಖ ಸಂತೃಪ್ತಿಯಲ್ಲಿದೆ ಎಂದು ಭಾವಿಸುವದು ಎಂತಹ ಅಪರಾಧವಾಗುವುದೋ, ಈ ಯುರೋಪು ಯುದ್ಧದಲ್ಲಿ ವಿಜಯಕ್ಕಾಗಿ ಅಲ್ಲಿಯ ಜನರು ಹಾತೊರೆಯುತ್ತಿಲ್ಲವೆಂದು ಭಾವಿಸಿದರೆ ಅಷ್ಟೇ ತಪ್ಪಾಗಬಹುದು. ಜರ್ಮನರಿಗೆಲ್ಲಾ ಗೊತ್ತಿದೆ— ಇಂದಿನ ಯುದ್ಧದಲ್ಲಿ ತಮ್ಮ ದೇಶವು ಸೋಲನ್ನು ಹೊಂದಿದರೆ ವರ್ಸೇಲ್ಸ್ ಒಪ್ಪಂದಕ್ಕೂ ಕಠಿಣತರವಾದ ದಿಗ್ಬಂಧನಕ್ಕದು ಒಳಗಾಗುವದು ಖಂಡಿತವೆಂದು. ಆದ್ದರಿಂದಲೇ ಸ್ವಭಾವತಃ ಅಲ್ಲಿಯ ಜನತೆ ಜಯವನ್ನು ಹಾರೈಸುತ್ತಿದೆ, ಸೋಲುವದಕ್ಕೆ ಡಾ ಗೋಬೆಲ್ಸನ ಅಮರಗಾನವಂತೂ ಕ್ಷಣಕ್ಷಣಕ್ಕೂ ಇದ್ದೇ ಇದೆ

ಇದು ಜನಸಾಮಾನ್ಯರ ಮಾತಾಯಿತು, ಯುದ್ಧದ ಬಹುದೊಡ್ಡ ಜವಾಬ್ದಾರಿಯ ಪಾಲು ವಹಿಸಿಕೊಂಡಿರುವ ನಾಜೀ ಪ್ರಮುಖರ ಆವೇಗ ಮಹಾಜಾಗ್ರತೆಗಳು ಇಷ್ಟೇ ಎಂದು ಹೇಳುವದು ಕಷ್ಟ. ಜರ್ಮನಿಯು ಯನ್ನು ಪಂಜರದ ಗಿಣಿಯಂತೆ ಮಾಡಿಟ್ಟ ಹಳೇ ವಿರೋಧಿಗಳೇ ಇಂದೂ ಇವಿಂಳಿಗಳು, ಲಾಭದ ಮಾತು ಒತ್ತಟ್ಟಿಗಿರಲಿ— ಮುಯ್ಯಿಗೆ ಮುಯ್ಯಿ ಮಾಡಿದ ಕೀರ್ತಿ ಬರಬೇಕಾದರೆ ಈ ಬಾರಿ ಮಿತ್ರರಾಷ್ಟ್ರಗಳನ್ನು ಹಣ್ಣುಮಾಡಬೇಕು, ಎಂಬುದೇ ಅವರ ಆಂತರಿಕ ಇಚ್ಛೆ. ಈ ಧೋರಣೆಯಿಲ್ಲದ ನಾಜೀ ಪ್ರಮುಖನಿಲ್ಲ ಆದರೆ ಅದನ್ನು ಸಾಧಿಸುವದರ ಕುಂತು ಅವರೊಳಗೆ ರಾತ್ರಿ-ಹಗಲಿನಂತಹ ಮತಭೇದವಿದೆ ಗುಟ್ಟೇನ? 'ಎತ್ತು ಏರಿಗೆಳೆದರೆ ಕೋಣ ನೀರಿಗೆಳೆಯುತ್ತಿದೆ' ಎಂಬಂತೆ ನಾಜೀ ಪ್ರಮುಖರೊಳಗೆ ಜಗ್ಗಾಟನಡೆಯುತ್ತಲೂ ಇದೆ. ಇದಕ್ಕೆ ದೃಷ್ಟಾಂತವಾಗಿ ಜರ್ಮನ್ ಸರಕಾರದ ಕೈಬಾಯಿಗಳಂತಿರುವ ಧುರೀಣರೊಳಗಿನ ವ್ಯವಹಾರಗಳು, ಅವರು ರೂಪಿಸುತ್ತಿರುವ ಯುದ್ಧನೀತಿಗಳು—ಇವನ್ನು ತೆಗೆದು ಕೊಂಡರೆ ಸಾಕು.

ಫೀಲ್ಡ್ ಮಾರ್ಶಲ್ ಗೋರಿಂಗ್

ಹಿಟ್ಲರನ ನಂತರ ಬರುವ ಹೆಸರೇ ಗೋರಿಂಗನದು. ಅವ ಜರ್ಮನ್ ಸರ್ವಾಧಿಕಾರಿಯ ಬಲ ಭುಜ. ಮಾತ್ರವಲ್ಲ ಹಿಟ್ಲರನ ವರ್ಚಸ್ಸು ಗಡಿ ಸೇರಿ ನಿಂತಿದೆಯಾದರೆ ಗೋರಿಂಗನದು ಆ ಮೇರೆ ಸೇರುವಷ್ಟು ವ್ಯಾಪಿಸುತ್ತಿದೆ, ಬಹಳ ತೀವ್ರಗತಿಯಿಂದ ಧಾವಿಸುತ್ತಿದ ಹಿಟ್ಲರನು ಧುರೀಣನೂಳಗಿನ ಕಲಹ ಕ್ಷೇತ್ರದ ಹೊರಗಿನವ, ಗೋರಿಂಗನು ಬಹುಸಂಖ್ಯಾಕ ಪಕ್ಷವೊಂದರ ಧುರೀಣ. ಅಧಿಕಾರಿ ವರ್ಗದಲ್ಲಿ ಗೋರಿಂಗನಿಗಿರುವಷ್ಟು ಬೆಂಬಲವು ಅವನ ಇದಿರಾಳಿಗಳಿಗಿಲ್ಲ. ರೂಡೊಲ್ಫ್ ಹೆಸ್ ನಂತಹ ಜನಸಾಮಾನ್ಯ ಪ್ರಮುಖರೂ ಗೋರಿಂಗನನ್ನೇ ಸಮರ್ಥಿಸುತ್ತಾರೆ ಆವನ ವಿರೋಧ ಪಕ್ಷೀಯರೆಂದರೆ ವಿದೇಶ ಮಂತ್ರಿ ರಿಬ್ಬೆಂಟ್ರಾಪ್, ಪ್ರಚಾರ ಮಂತ್ರಿ ಗೋಬೆಲ್ಸ್. ಗುಪ್ತ ಪೋಲೀಸರ ಸಂಸ್ಥೆಯಾದ ಗೆಸ್ಟೆಪೋವಿನ ನಾಯಕ ಹಿಮ್ಲರ್, ಮುಂತಾದವರು ಆದರ ಗೋರಿಂಗನ ವರ್ಚಸ್ಸು ಅಜೇಯವಾದುದು ದಳಪತಿಗಳಲ್ಲಿ ಅತಿ ಹೆಚ್ಚಿನವರು ಅವನ ಹಿಂಬಾಲಕರು. ಜನಸಾಮಾನ್ಯರೂ ಹಿಟ್ಲರನೊಬ್ಬನನ್ನು ಬಿಟ್ಟರೆ ಫೀಲ್ಡ್ ಮಾರ್ಶಲ್ ಗೋರಿಂಗನಿಗೆ ಕೊಡುವಂತಹ ಗೌರವವನ್ನು ಇನ್ನೊಬ್ಬರಿಗೆ ಕೊಡುತ್ತಿಲ್ಲ

ಜರ್ಮನ್ ಜನತೆಯಲ್ಲಿ ಒಗ್ಗಟ್ಟನ್ನುಂಟುಮಾಡಬಲ್ಲವನೊಬ್ಬನಿದ್ದನಾದರೆ ಅವ ಗೋರಿಂಗ—ಎಂಬ ಭಾವನೆ ಅಖಿಲಜರ್ಮನಿಯಲ್ಲಿದೆ, ಅದಕ್ಕನುಗುಣವಾಗಿ— ಮಂತ್ರಿ ಸ್ಥಾನದಲ್ಲೇ ಯಾವ ನಿರ್ಧಾರವನ್ನಾದರೂ ಮಾಡಬಲ್ಲ, ಎಂತಹ ಜವಾಬ್ದಾರಿಯನ್ನಾದರೂ ಹೊರಲು ಗೋರಿಂಗನು ಸಿದ್ಧನಿರುವ ಮನುಷ್ಯ ತಮ್ಮ ಪಕ್ಷದ ತ್ರಿಯ ದೃಢ ಕುಂದುಕೊರತೆಗಳನ್ನು ನಿವಾರಿಸುವ ಉತ್ಸಾಹಚ್ಛೆಯು ಗೋರಿಂಗನಲ್ಲಿದೆ. ಇಂತಹ ಕೆಲವು ಗುಣವಿಶೇಷಗಳಿಂದಾಗಿ ಗೋರಿಂಗನ ಸ್ಥಾನವು ಅತ್ಯಂತ ಭದ್ರವಾದದು ಅವನ ಇದಿರಾಳಿಗಳು ಹಾಗಿಲ್ಲ ಸಮರ್ಥರೇನೋ ಹೌದು ಹೋರಿ ಗೋರಾಟಕ್ಕೆ ಕೋಡುವನಿಯುತ್ತಿದ್ದ ಜರ್ಮನಿ—ರಶ್ಯಗಳ ಹೆಗಲಿಗೆ ನೊಗವಿಟ್ಟು ಜತೆಗೂಡಿಸಿ ಲೋಕವನ್ನೇ ವಿಸ್ಮಯಗೊಳಿಸಿದ ಮಹಾಚತುರ ರಿಬ್ಬೆಂಟ್ರಾಪ್, ಪ್ರಚಾರಬಲದಿಂದ ಹಗಲನ್ನು ರಾತ್ರಿಮಾಡುತ್ತಿರುವ ಕುತರ್ಕ ವಾಚಸ್ಪತಿ ಗೋಬೆಲ್ಸ್, 'ಸೂ' ಎಂದೊಡನೆ ಸೂಟುಹಿಡಿಯಬಲ್ಲ ಹಿಮ್ಲರ್—ಇವರೇನು ಸಾಮಾನ್ಯರಲ್ಲ! ಆದರೆ ದೇಶಕಾಲಗಳ ವ್ಯಾಖ್ಯಾನವಿಲ್ಲದೆ, ಕುತಂತ್ರಕ್ಕೆ ಸಿಗದ ಬೆಲೆ ಯಥಾರ್ಥತೆಗೆ ಸಿಗುತ್ತಿದೆಯಷ್ಟೆ. ಆದ್ದರಿಂದಲೇ ಇಂದು, ಜರ್ಮನಿಯ ವಿದೇಶ ಮತ್ತು ಒಳಧೋರಣೆಯಲ್ಲಿ ಗೋರಿಂಗನ ಮಾತೇ ನಡೆಯುವಂತೆ ಆತನಿಗೆ ಪೂರ್ಣ ಅಧಿಕಾರ ಕ್ಷೇತ್ರಾಧಿಕಾರ ದೊರಕಿಸಿಕೊಡುವ ಪ್ರಯತ್ನಗಳಾಗುತ್ತಿವೆ. ಯಥಾರ್ಥವಾದರೆ, ಈಗೀಗ ಬರ್ಲಿನಿನಲ್ಲಿ 'ಹಿಟ್ಲರ್ ಏನುಮಾಡಲಿದ್ದಾನೆ' ಎಂಬುದಕ್ಕಿಂತಲೂ 'ಗೋರಿಂಗನೇನನ್ನುತ್ತಾನೆ' ಎಂಬ ಕಡೆಗೇನೇ ಜನರ ಲಕ್ಷ್ಯ ಹೆಚ್ಚಾಗಿ ಹೋಗುತ್ತಿದೆ.

ರಿಬ್ಬೆಂಟ್ರಾಪನ ಕಿವಿಮಾತು

ಈಗ, ಗೋರಿಂಗನ ಅಪೇಕ್ಷೆಯೇನು, ಎಂಬುದನ್ನು ನೋಡೋಣ. ಅವ ಜರ್ಮನಿ—ರಶ್ಯಾ ಸ್ನೇಹಾಚಾರಕ್ಕೆ ಬದ್ಧ ವಿರೋಧಿಯಿದ್ದ ಇಟಲಿಯ ಬಾಂಧವ್ಯವನ್ನು ಇನ್ನಷ್ಟು ಊರ್ಜಿತಗೊಳಿಸಬೇಕಿತ್ತು, ಈ ಯುದ್ಧದಲ್ಲೂ ಸಹಾಯಕ್ಕಾಗಿ ಹಿಂಬದಿ ನೋಡುವಾಗ ಹಳೇ ಸ್ನೇಹಿತನೇ ಕಂಡು ಬರಬೇಕಿತ್ತು—ಎಂದು ಗೋರಿಂಗನ ಬಯಕೆ ಆದರೆ ರಿಬ್ಬೆಂಟ್ರಾಪನ ತಂಟೆಮಾತಿಗೇ ಮನ್ನಣೆ ದೊರೆಯಿತು. ರಶ್ಯನ್ ಸೈನ್ಯದ ಅತುಲ ಸಾಮರ್ಥ್ಯ, ಮತ್ತು ತಮಗಲ್ಲಿಂದ ದೊರಕಬಹುದಾದ ಅಮಿತ ಸಹಾಯದ ವಿರಾಟ್ರೂಪದ ಕುರಿತು ರಿಬ್ಬೆಂಟ್ರಾಪ್ ಹಿಟ್ಲರನೊಡನೆ ಹೇಳಿದ್ದದನ್ನೆಲ್ಲಾ ಕೇವಲ ತಿಂಗಳುಗಳ ವಿದ್ಯಮಾನಗಳು ವಿಫಲಗೊಳಿಸಿವೆ ಫಿನ್ಲೆಂಡನ್ನು ರಶ್ಯ ಬೇಕಾದಂತೆ ಕಬಳಿಸಬಹುದು ಎಂಬ ಒಪ್ಪಂದ ರಿಬ್ಬೆಂಟ್ರಾಪ್ ಮೋಸ್ಕೋವಿಗೆ ಹೋದಾಗಲೇ ಆಗಿತ್ತು ಆದರೆ ಈ ಸಂಗತಿ ಯಾರಿಗೂ ಗೊತ್ತಿರಲಿಲ್ಲ; ಅದು ಎಷ್ಟು ಗುಪ್ತವಾಗಿತ್ತೆಂದರೆ, ಯುದ್ಧ ನಡೆಯುವ ಒಟ್ಟಿನ ಜವಾಬ್ದಾರಿ ಯಾರ ಹೆಗಲ ಮೇಲಿದೆಯೋ ಆ ಗೋರಿಂಗನ ಕಿವಿಗೂ ಅದ ಕೊನೆಯ ತನಕ ಬೀಳಲಿಲ್ಲ! ಗೊತ್ತಿದ್ದುದೆಂದರೆ ಹಿಟ್ಲರ್ ಮತ್ತು ರಿಬ್ಬೆಂಟ್ರಾಪ್ ಇವರಿಬ್ಬರಿಗೇನೇ! ಗೋರಿಂಗನಿದನ್ನು ಸಹಿಸುವುದುಂಟೆ?

ಅಂದಿನಿಂದ ಗೋರಿಂಗನು ರಿಬ್ಬೆಂಟ್ರಾಪನ ಬದ್ಧ ವೈರಿಯಾದ ಈ ವೈರವನ್ನು ಬಲಗೊಳಿಸುವ ಒಂದೊಂದು ಗಟ್ಟಿ ಹೊರಬೀಳಲಿಕ್ಕೂ ಹತ್ತಿತ ... ತ್ತಾಗುವಂತೆ ಫಿನ್ನಿಶ್ ಗಡಿನಾಡಿನ ಒ... ಯ ನೋರ್ವೆಯ ಸಮುದ್ರ ಕರಾವಳಿಯನ್ನೂ, ಸ್ಪಿಟ್ಸ್‌ಬರ್ಗನನ್ನೂ ರಶ್ಯ ಆಕ್ರಮಿಸಿ ಆ ಮೂಲಕ ಅಟ್ಲಾಂಟಿಕ್ ಸಮುದ್ರದಲ್ಲಿ ತನಗೆ ನೌಕಾ ನಿಲ್ದಾಣವೊಂದನ್ನು ಪಡೆಯುವದಕ್ಕೂ ರಿಬ್ಬೆಂಟ್ರಾಪ್ ಒಪ್ಪಿಕೊಟ್ಟೇ ಬಿಡಿದ್ದಾನಂತೆ! ಈ ಯುದ್ಧದಲ್ಲಿ ರಶ್ಯದ ಸಹಾಯ ಪಡೆಯುವುದಕ್ಕಾಗಿ ಇವೆಲ್ಲಾ ಕಾಣಿಕೆಗಳು. ಈ ಸಂಗತಿಯು ಬಹಳ ಗುಟ್ಟಾಗಿಯೇ ಇತ್ತು. ಗೋರಿಂಗನ ಆಜ್ಞೆಯಂತೆ ಬರ್ಲಿನ್ ಪತ್ರಿಯೊಂದು ಅದನ್ನು ಪ್ರಕಟಿಸಿದಾಗ ರಿಬ್ಬೆಂಟ್ರಾಪ್ ಉರಿದ ಬಿದ್ದ, ಗೋಬೆಲ್ಸ್ ಸಿಡಿಕಿಸಿದ. ಆದರೆ ಗೋರಿಂಗ್ ಹರಟಿದು ಅದನ್ನು ಬೆಳಕಿಗೆ ಹಾಕಿಯೇ ಬಿಟ್ಟ

ಪರಕೀಯರಿದಿರು ಪಂಥ!

ಇಷ್ಟರಿಂದ ಗೋರಿಂಗನು ಬ್ರಿಟಿಷ ಸ್ನೇಹಿತನೆಂದು ಊಹಿಸಿದರೆ ತಪ್ಪಾದೀತು ಯಾವಾಗ ಹಿಟ್ಲರನಿಗೆ ಬ್ರಿಟಿಷರಲ್ಲಿ ಪ್ರಥಮ ಇದ್ದ ಪ್ರೇಮದ ಸ್ಥಾನದಲ್ಲಿ ದ್ವೇಷ ಬಂದನಿಂತಿತೋ ಅಂದೇ ನಾಜಿ-ಕೆಲ್ಲರೂ ... ಷ್ ದ್ವೇಷಿಗಳಾದರು. ಅಧಿಕಾರಿ ... ದಲ್ಲಿ ಬ್ರಿಟಿಷರೊಡನೆ ಸಂಧಿಮಾಡಿಕೆ...

ತುಳುನಾಡ್ ಬೇಂಕ್

ಆಫ್ ಸಪ್ಲೈ ಏಜನ್ಸಿ ಲಿಮಿಟೆಡ್ ಉಡುಪಿ

Authorised & Issued Capital	Rs	1,00,000
Subscribed & Paid up Capital	Rs	31,340
Reserves & other Funds ...	Rs	22 052

ನಿರಖು ಠೇವಣಾತಿಗಳು ರಿಯಾಯತಿ ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.

ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳೂ ಮಾಡಲ್ಪಡುತ್ತವೆ. ಹೆಚ್ಚಿನ ವಿವರಗಳಿಗೆ ಬರೆಯಿರಿ.

THULUNAD BANK
OF SUPPLY AGENCY LIMITED.

ಬೇಕೆನ್ನುವ ಒಬ್ಬನಾದರೂ ಈಗ ದೊರೆಯುವಂತಿಲ್ಲ. ಜನಸಾಮಾನ್ಯರಲ್ಲಂತೂ ಬ್ರಿಟಿಷ್ ವಿರುದ್ಧ ಮನೋವೃತ್ತಿ ಬೆಳೆಯಲು ಎಷ್ಟೆಲ್ಲಾ ಆಗಬೇಕೋ ಅಷ್ಟೂ ಪ್ರಚಾರಕಾರ್ಯ ಎಡೆಬಿಡದೆ ನಡೆಯುತ್ತಿದೆ. ಕಳೆದ ಮಹಾಯುದ್ಧದಲ್ಲಿ ಪ್ರಾಣಬಿಟ್ಟ ಕವಿ ಹರ್ಮಾನ್ ಲೋಯೆನ್ಸ್ ಬರೆದ "ನಾವು ಇಂಗ್ಲೆಂಡಿನ ವಿರುದ್ಧ ಹುಟ್ಟು ಹಾಕುತ್ತಿದ್ದೇವೆ" ಎಂಬ ಕವಿತೆ ಇಂದು ಜರ್ಮನಿಯಲ್ಲೆಲ್ಲಾ ಹಾಡಲ್ಪಡುತ್ತಿದೆ. ಡಾ| ಗೋಬೆಲ್ಸ್ ಅದನ್ನು ಸಾವಿರಗಟ್ಟಲೆ ಗ್ರಾಮಾಫೋನ್ ರಿಕಾರ್ಡುಮಾಡಿಸಿ ಜರ್ಮನಿಯೊಳಗೂ ಯುದ್ಧಕ್ಷೇತ್ರದಲ್ಲಿಯೂ ಹಂಚಿಸಿದ್ದಾನೆ. ಗೋರಿಂಗನ ಇಚ್ಛೆ ಇಷ್ಟೆ-ಇಂಗ್ಲೆಂಡಿನೊಡನೆ ಹೋರಾಡಲು ಇಟಲಿಯ ಪೂರ್ಣ ಬೆಂಬಲ ಪಡೆಯಬೇಕು ಒಂದೋ ದಕ್ಷ, ಇಲ್ಲವೇ ಇಟಲಿಯೊಂದಾಗಬೇಕು; ಒಂದನ್ನು ಕೂಡುವಾಗ ಮತ್ತೊಂದನ್ನು ದೂಡಲೇಬೇಕು.

ಅವನ ಅಭಿಪ್ರಾಯದಲ್ಲಿ, ಜರ್ಮನಿಯ ಆರ್ಥಿಕ ಸುಧಾರಣೆಗಾಗಿ ಹಂಗೇರಿ ಮತ್ತು ಬಾಲ್ಕನ್ ರಾಷ್ಟ್ರಗಳನ್ನು ಜಯಶೀಲವಾಗಿ ಉಪಯೋಗಿಸಿಕೊಳ್ಳಬೇಕಾದರೆ ಇಟಲಿಯ ಪೂರ್ಣ ಬೆಂಬಲವಿದ್ದಲ್ಲಿ ಮಾತ್ರ ಸಾಧ್ಯ. ಈ ಉದ್ದೇಶದಿಂದಲೇ ಗೋರಿಂಗನ ಸೂಚನೆಪಡೆದು ಹರ್ ವೋನ್ ಕ್ಲೋಡಿಯುಸ್, ಇವನು ಒಪ್ಪಂದಕ್ಕೆ ರೋಮಿಗೂ ಹೋಗಿದ್ದ. ಇಟಲಿಯ ರಾಜನಳಿಯನಾದ, ರಾಜಕುವರ ಫಿಲಿಪ್ ಕೂಡ ಗೋರಿಂಗನ ರಾಯಭಾರ ವಹಿಸಿ ಇಟಲಿಯಲ್ಲಿ ತರ್ಕಿಸಿದ್ದರೂ ಆ ಕುರಿತು ಏನೂ ತಿಳಿದುಬಂದಿಲ್ಲ.

ಹಿಮ್ಲರ್ ಗೋಬೆಲ್ಸರ ಉಚ್ಚಾಟನೆಯೇ?

ಗೋಬೆಲ್ಸ್ ಹಿಮ್ಲರ್ ಮತ್ತು ಹೈಡ್ರಿಚ್‌ರನ್ನು ಸ್ಥಾನಚ್ಯುತರನ್ನಾಗಿ ಮಾಡಬೇಕೆಂಬ ಸಾಧನೆಯಲ್ಲಿದ್ದಾನೆ ಗೋರಿಂಗ್. ಗೋಬೆಲ್ಸ್-ಗೋರಿಂಗರೆಂದರೆ ಆದಿಯಿಂದಲೂ ಕರ್ಣಾರ್ಜುನರಿದ್ದಂತೆ. ಹಿಮ್ಲರ್ ಮತ್ತು ಹೈಡ್ರಿಚರನ್ನು ಅವನು ಇಷ್ಟೊಂದು ದ್ವೇಷಿಸುವದಕ್ಕೆ ಕಾರಣವೆಂದರೆ ಅವರ 'ಗೆಸ್ಟೆಪೋ' ಎಂಬ ಗುಪ್ತದಳ. ಸೈನ್ಯವೊಂದನ್ನು ಬಿಟ್ಟರೆ, ಹಿಟ್ಲರನ ನಂತರ ಮಿಕ್ಕ ಎಲ್ಲಾ ವಿಭಾಗಗಳಲ್ಲಿಯೂ ಹಿಮ್ಲರನ ಅಧಿಕಾರ ವಿಶೇಷ. ಇವನ ಪ್ರಾಬಲ್ಯದಿಂದ ತನ್ನ ಕಾರ್ಯಗಳಿಗೆ ವಿಘ್ನ ಬಂದೀತು, ಯಶಸ್ಸಿಗೆ ತೊಂದರೆಯೊದಗೀತು ಎಂಬ ಹೆದರಿಕೆ ಗೋರಿಂಗನಿಗೆ ತಾಗಿದೆ.

ಇಂತಹ ಸಂಸ್ಥೆಗಳನ್ನು ನೆಲಕ್ಕಪ್ಪಳಿಸುವದರಲ್ಲಿಯೂ ಗೋರಿಂಗನು ಪ್ರವೀಣನೇ ಇದ್ದಾನೆ 1934ನೇ ಜೂನ್ 30ರಲ್ಲಿ 'ಎಸ್. ಎ.' ಎಂಬ ಸಂಸ್ಥೆಯನ್ನು ಕಠಿನವಾಗಿ ಸೈನ್ಯಬಲದಿಂದ ಅಡಗಿಸಿ, ಅದರ ನಾಯಕನಾದ ರೋಹೆಮನನ್ನು ಹಲ್ಲಿಲ್ಲದ ಸರ್ಪದಂತೆ ಮಾಡಿ ಹಾಕಿದವನು, ಇವನೇ ಗೋರಿಂಗ್! ಇಂದು ಕೂಡ ಹಿಮ್ಲರ್, ಹೈಡ್ರಿಚರನ್ನು ಹೊರತಳ್ಳಿ, ಹಾದಿಯ ಕಂಟಕವನ್ನು ದೂರಮಾಡಿಕೊಳ್ಳಬೇಕೆಂಬ ಹಂಚಿಕೆಯಲ್ಲೇ ಇದ್ದಾನೆ. ಜರ್ಮನಿಯ ಜನರೆಲ್ಲರ ಅತೀವ ಧಿಕ್ಕಾರಕ್ಕೊಳಗಾಗಿರುವ ಹಿಮ್ಲರನನ್ನು ಮರ್ದಿಸಿದಲ್ಲಿ ಗೋರಿಂಗನ ಲೋಕಪ್ರಿಯತೆ ಇನ್ನಷ್ಟು ಬೆಳೆಯುವದಲ್ಲದೆ, ಅಧಿಕಾರೀವರ್ಗದಿಂದಲೂ ಧನ್ಯವಾದಗಳು ದೊರೆತಾವು. ಗೆಸ್ಟೆಪೋ ಸಂಸ್ಥೆಯು, ಪೋಲರು ಮತ್ತು ಯೆಹೂದಿಯರ ಮೇಲೆ ನಡೆಯಿಸಿದ ಪಾಶವಿಕ ಅತ್ಯಾಚಾರದಿಂದ ಜುಗುಪ್ಸೆಗೊಂಡ ಅಧಿಕಾರೀವರ್ಗದವರು ಹಿಮ್ಲರ್ ಮತ್ತು ಹೈಡ್ರಿಚರನ್ನು ಸಂಪೂರ್ಣವಾಗಿ ಬಹಿಷ್ಕರಿಸಿದ್ದರು. ಅವರೊಳಗೆ ಆಫೀಸು ಕಾರ್ಯಗಳ ಹೊರತು ಇತರ ಯಾವ ಸಂಬಂಧವೂ ಇರುವದಿಲ್ಲ. ಅಧಿಕಾರಿಗಳ ನಡುವೆ ಹಿಮ್ಲರನು ಯಾವಾಗಲೂ "ಬೆಕ್ಕಿನ ಬಿಡಾರ ಬೇರೆ" ಎಂಬಂತೆಯೇ ಇರಬೇಕಾಗಿದೆ. ಪೋಲೆಂಡನ್ನು ಗೆದ್ದ ಹಿಟ್ಲರನು ಮೊದಲ ಬಾರಿ ವಾರ್ಸಾ ನಗರವನ್ನು ಪ್ರವೇಶಿಸುವ ವಿಜಯೋತ್ಸವದ ಸಂದರ್ಭದಲ್ಲಿ ಇದಕ್ಕೊಂದು ಸ್ವಚ್ಛ ನಿದರ್ಶನ ದೊರಕಿತು ಆ ವಿಜೃಂಭಣೆಯ ಸಮಯದಲ್ಲಿ, ಮದುವೆ ಚಪ್ಪರದ ಜಾತಿ ಹೀನನಂತೆ ಹಿಮ್ಲರ್ ದೂರ ನಿಂತಿದ್ದ. ದೊಡ್ಡದೊಡ್ಡ ನಾಜೀ ಅಧಿಕಾರಿಗಳು ಒಬ್ಬರ ಹಿಂದೊಬ್ಬರಂತೆ ಹಿಮ್ಲರನ ನೆರಳನ್ನು ತುಳಿದುಕೊಂಡು ಹೋದರಾದರೂ ಅವನ ಮುಖ ನೋಡಿದವರಿಲ್ಲ. ಗೆಸ್ಟೆಪೊ ಅನಾಚಾರದ ನಿಷೇಧಕ್ಕಾಗಿ ಈ ವರ್ತನೆ

ಅಂತೂ ಗೋರಿಂಗನ ಉದ್ದೇಶವೆಂದರೆ ಇಷ್ಟೇ: ಸೈನ್ಯದ ಸಹಾಯದಿಂದ ತಾನು 'ರೀಚ್‌ಚಾನ್ಸಲರ್' ಆಗಬೇಕು; ತನಗೆ ಆರ್ಥಿಕ ವ್ಯವಹಾರದಷ್ಟೇ ಅಲ್ಲ, ಪರದೇಶಗಳ ಮತ್ತು ಸ್ವದೇಶೀ ಸಂಬಂಧದ ಸರ್ವಾಧಿಕಾರದ ಹಕ್ಕುಗಳೂ ದೊರಕಬೇಕು. ಹೀಗಾದಲ್ಲಿ ಹಿಟ್ಲರನು ನಾಜೀ ಸರಕಾರದ ಶಿರಸ್ಸಾಗುವ ಬದಲಿಗೆ ಕೇವಲ ಮುಖಂಡಾಸು ಆಗಿ ಉಳಿಯಬಹುದು!

ಆದರೆ ಹಿಟ್ಲರನ ಕಡೆಗೆ ಗೋರಿಂಗನು ಅತ್ಯಂತ ಭಯಭಕ್ತಿಯನ್ನು ತೋರಿಸುತ್ತಿದ್ದಾನೆ ಹಿಟ್ಲರನಿಗನುಮಾನ ಬಾರದ ಹಾಗೆ-ವಿರೋಧಿಗಳಿಗೆ ಗುಟ್ಟು ಸಿಗದಹಾಗೆ ವರ್ತಿಸುತ್ತಿದ್ದಾನೆ

ಹಿಟ್ಲರನೂ ಹಾಗೆಯೇ; ಗೋರಿಂಗನ ಕುರಿತು ವಿಶ್ವಾಸ-ಅವಿಶ್ವಾಸಗಳ ಮಧ್ಯದಲ್ಲಿದೆ ಅವನ ಮನಸ್ಸು. ತನ್ನ ಸಮೀಪವರ್ತಿ ಅನುಯಾಯಿಗಳನ್ನಾದರೂ ಸದಾಕಾಲ ಸಂದೇಹ ದೃಷ್ಟಿಯಿಂದ ವಿಮರ್ಶಾತ್ಮಕವಾಗಿ ಕಾಣುವದು ಅವನ ಸ್ವಭಾವ. ಆದ್ದರಿಂದ ಅಧಿಕಾರ ಸಂಬಂಧದಲ್ಲಿ ಅವನು ವಿಶೇಷ ಬದಲಾವಣೆಗಳನ್ನೇನೂ ಮಾಡುವಂತಿಲ್ಲ. ತನ್ನ ಪಕ್ಷದ ಧುರೀಣರೊಳಗಿನ ಈ ಜಾತಿಯ ತಾಕಲಾಟಗಳನ್ನೆಲ್ಲ ಅವನು ಬಯಸುತ್ತಾನೆ. ಯಾಕಂದರೆ ಈ ಹೋರಾಟದ ಭಟರು ತಾವೇ ಸೋಲುವರಲ್ಲದೆ, ಆ ಸಮಯದಲ್ಲಿ ತನ್ನ ನಾಯಕತ್ವವೊಂದು ಅಸ್ಪರ್ಶವಾಗಿ ಉಳಿದುಬಿಡುತ್ತದೆ. ದೂರದಲ್ಲಿ ಭದ್ರವಾದ ಸ್ಥಳದಲ್ಲಿ ಕುಳಿತು ಅನ್ಯರ ಜಗಳ ನೋಡುವದೂ ಒಂದು ಸೊಗಸು ತಾನೆ!

ಪ್ರಕಟಣೆ.

ಕಾರ್ಕಳ ೩ ಮು. ಕೋರ್ಟಿನಲ್ಲಿ.

O P No. 33/10

1. ಪ್ರಭಾಕರ, 2. ಭಾಸ್ಕರ, 3. ಶಂಕರ, ಪ್ರಾಯನರರು, ಇವರ ಕ್ಷೇಮಚಿಂತಕರು ತಾಯಿ ಸಂಜೀವಿ ಯಾನೆ ಪ್ರೇಮಾ ಬಾ —ಅರ್ಜಿದಾರರು,

ಮತ್ತು

1 ರಾಯಪ್ಪ ಶ್ಯಾನಭಾಗ, 2. ಮಾಧವ ಶ್ಯಾನಭಾಗ, 3. ಅಣ್ಣಪ್ಪ ಶ್ಯಾನಭಾಗ, ಬರ್ಮಪ್ಪ ಶ್ಯಾನಭಾಗರ ಮಕ್ಕಳು, ಮಂಗಳೂರು ತಾಲೂಕು ಹೆಡವಾಡಿ ಕಸಬು ಗ್ರಾಮ —ಎದುರು, ಸದ್ರಿ ಎದುರಿಗೆ—

ಅರ್ಜಿದಾರರ ತಂದೆ ಮೃತ ಶಿರಿಯಪ್ಪ ಶ್ಯಾನಭಾಗರ ಬಾಬ್ತು ಬೊಂಬೈ ಲ್ಯಾಫ್ ಇನ್ಶೂರೆನ್ಸ್ ಕಂಪೆನಿಯ ೧ದ ನಂಬ್ರ 9599ನೇ ಪೋಲಿಸಿ ಪ್ರಕಾರ ಸಿಕ್ಕತಕ್ಕ ರೂಪಾಯಿ 480/- ವಸೂಲಿ ಬಗ್ಗೆ ಅರ್ಜಿದಾರರ ಕ್ಷೇಮಚಿಂತಕರಿಗೆ ವಾರಿಸು ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು(ಕ್ಷೇಮಚಿಂತಕರು) ದಾಖಲ್ಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 12-6-1940ಕ್ಕೆ ಇಟ್ಟಿರುವದರಿಂದ ಆ ಕುರಿತು ನಿಮ್ಮ ಆಕ್ಷೇಪಗಳು ಇದ್ದರೆ ಸದ್ರಿ ತ್ಯಾದಿಗೆ ಈ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದೆಂತಲೂ ತಪ್ಪಿದ್ದಲ್ಲಿ ನಿಮ್ಮ ಗೈರಹಾಜರಿಯಲ್ಲಿ ತೀರ್ಮಾನಿಸಲಾಗುವುದೆಂತಲೂ ತಿಳಿಯಪಡಿಸಲಾಗುತ್ತದೆ.

ಕೋರ್ಟಿನ ಹುಕುಂ ಪ್ರಕಾರ,

M. S. Adhikari, B.A.,LL.B.
Pleader for Petitioners.
ಕಾರ್ಕಳ, 5-4-40.

ನೋಟೀಸು.

ಕುಂದಾಪುರ ತಾಲೂಕು ಬೇಳೂರು ಗ್ರಾಮದ ದನ್ನಾಡಿ ಮನೆಯಲ್ಲಿರುವ ಹಾಂಬೈಟ್ಟ ರಂಗಮ್ಮ ಹೆಗ್ಗಡ್ತಿಯವರು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನೆಂದರೆ—

ಉಡುಪಿ ತಾಲೂಕು ಬೆಳ್ವಣ್ಣ ಗ್ರಾಮದಲ್ಲಿರುವ ಬಾಳ್ಯದ್ರು ಪಟೇಲ್ ಶೀನಪ್ಪ ಶೆಟ್ರು ಹಾಗೂ ಅವರ ಉಗ್ರಾಣಿ ಅನಂತ ನಾಯರಿ ಕೂಡಾ ನನಗೆ ಮೋಸಗೊಳಿಸಿ ತಾ. 26-3-1940ರಲ್ಲಿ ಕೆಲವು ಖಾಲಿ ಕಾಗದಕ್ಕೆ ನನ್ನ ಎಡಗೈ ಹೆಬ್ಬೆಟ್ಟು ಮೊಹರು ಪಡಕೊಂಡಿರುತ್ತಾರೆಂತ ನನ್ನ ತಿಳುವಳಿಕೆಗೆ ಬಂದಿದ್ದರಿಂದ ಆ ಕುರಿತು ತನ್ನ ಪರವಾಗಿ ಕುಂದಾಪುರ ಮಿಷನರ್ ತಾಲ್ಲೂಕ್ ಮ್ಯಾಜಿಸ್ಟ್ರೇಟರವರಿಗೆ ಈ ಬಗ್ಗೆ ಅಲ್ಲಿನ ಅರ್ಜಿ ಮಾಡಿಕೊಂಡಿರುತ್ತೇನೆ. ಸದ್ರಿ ಶೀನಪ್ಪ ಶೆಟ್ರು ಮತ್ತು ಅವರ ಉಗ್ರಾಣಿ ಅನಂತ ನಾಯರಿ ಕೂಡಾ ನನಗೆ ಮೋಸಗೊಳಿಸಿ ಪಡಕೊಂಡದ್ದಾಗಿ ನನ್ನ ತಿಳುವಳಿಕೆಗೆ ಬಂದ ಖಾಲಿ ಕಾಗದದ ಮೇಲಿರುವ ಹೆಬ್ಬೆಟ್ಟಿನ ಮೊಹರಿನ ಆಧಾರದಿಂದ ಅವರು ಯಾವ ತರದ ದಸ್ತಾವೇಜುಗಳನ್ನು ಯಾರ ಹೆಸರಿಗೆ ಬರೆದುಕೊಂಡಿದ್ದರೂ ತಯಾರಿಸಿದ್ದಲ್ಲಿ ಅಂತಹ ದಸ್ತಾವೇಜುಗಳು ನನ್ನ ಮೇಲೆ ಬದ್ಧವಾದವುಗಳಲ್ಲ ಮತ್ತು ಸಿಂಧುವಾಗತಕ್ಕದ್ದಲ್ಲ. ನಾನು ನನ್ನ ಬಾಬ್ತು ಕೆಲವು ಆಸ್ತಿ ಮೂಲಗೇಣಿ ಮಾಡಿ ನನಗಿರುವ ಸ್ವಲ್ಪ ಸಾಲ ಸಂದಾಯಮಾಡಿರುತ್ತೇನೆ. ನನ್ನ ಸ್ವಂತಕ್ಕೂ ನನ್ನ ಕುಟುಂಬಕ್ಕೆ ಜೀವನ ಉತ್ಪತ್ತಿ ಇರುವ ಸ್ಥಿರ ಆಸ್ತಿ ಇರುತ್ತದೆ. ನನ್ನಿಂದ ಯಾರಿಗೂ ಎಷ್ಟನ್ನಾದರೂ ಸಾಲ ಕೊಡತಕ್ಕದ್ದು ಬಾಕಿ ಇರುವುದಿಲ್ಲ. ಸದ್ರಿ ಶೀನಪ್ಪ ಶೆಟ್ರು ಮೋಸಗೊಳಿಸಿ ಪಡಕೊಂಡದ್ದೆಂಬ ಹೆಬ್ಬೆಟ್ಟು ಮೊಹರಿನ ಕಾಗದದ ಮೇಲೆ ಮಾಡುವ ಮತ್ತು ಮಾಡಬಹುದಾದ ಯಾವ ದಸ್ತಾವೇಜುಗಳು ನನ್ನ ಮೇಲೆ ಬದ್ಧವಾಗತಕ್ಕದ್ದಲ್ಲವೆಂತ ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುತ್ತೇನೆ.

●|| ಈ ಗೆರೆ ಎಡ ಹೆಬ್ಬೆಟ್ಟಿನ ಗುರ್ತು ರಂಗಮ್ಮ ಹೆಗ್ಗಡ್ತಿ ರುಜು.

ಮೊಕ್ಕಾಂ: ಬೇಳೂರು, ತಾ. 1-4-1940.

NAVAYUGA
Advertisement Tariff
1 Page Rs. 25/- per insertion
½ „ Rs. 15/- „ „
¼ „ Rs. 8/- „ „
⅛ „ Rs. 5/- „ „
Per Single inch col. Re. 1 „
Contract rates on application
Manager-**Navayuga UDIPI.**

HURRY UP ? ? ?. UNIQUE OPPORTUNITY.
CLEARANCE SALE OF A LARGE CONSIGNMENT OF 10,000 WATCHES, JUST ARRIVED FROM SWITZERLAND, AT OLD PRICES.

LATEST ARRIVAL 1940
STRONG & DURABLE
ACCURATE TIME-KEEPERS.
Guaranteed Lever Movement.

No. 416 Chromium Case Rs. 5—10
No. 417 Golden Case Rs 6—8
No. 417 R *Rolledgold 10yrs.*
Jewelled Mov. Rs. 13—8



ROUND OR CUSHION
No. 401 Chromium Case Rs. 3—12
No. 402 Golden Case Rs. 4—8

No 424 Chromium Case Rs. 7—8
No 425 Golden Case Rs. 8—4
No. 425 R Rolledgold 10yrs. 13—8



No. 428 Chromium Case. Rs. 9—0
No. 430 Rolledgold 10yrs. Rs. 15—0

As. 9/- Extra for Postage.
For further particulars send for our new catalogue No. 16.
(Correspondance in English)

BAPALAL & CO.,
101 Abdul Rehman Street,
BOMBAY, 3.

LADIES MINIATURES.

Geneva Movement.
No 460 Chromium Case Rs. 10—8
No. 461 Golden Case Rs. 11—0
No. 462 Rolledgold 10yrs. Rs. 13—0

ಮೈಸೂರು ಪತ್ರ

(ನವಯುಗದ ಬಾತ್ಮೀದಾರರಿಂದ)

ಮೈಸೂರು, ಎಪ್ರಿಲ್ 8.

ಖಾದಿ ಮತ್ತು ಗ್ರಾಮಕೈಗಾರಿಕೆ ವಸ್ತುಪ್ರದರ್ಶನ

ಡಾ. ನಾ. ಸು. ಹರ್ಡಿಕರ್‌ರವರಿಂದ ಪ್ರಾರಂಭೋತ್ಸವ—ಶಿವಮೊಗ್ಗೆಯಲ್ಲಿ ನಡೆಯಲಿರುವ ಮೈಸೂರು ಕಾಂಗ್ರೆಸಿನ ತೃತೀಯ ಅಧಿವೇಶನದಂಗವಾಗಿ ಖಾದಿ ಮತ್ತು ಗ್ರಾಮಕೈಗಾರಿಕೆ ಸ್ವದೇಶಿ ವಸ್ತುಪ್ರದರ್ಶನವನ್ನೇರ್ಪಡಿಸಲಾಗಿದೆ. ಇದರ ಪ್ರಾರಂಭೋತ್ಸವವನ್ನು ಅ. ಭಾ. ಸ. ತ್ತು ಕರ್ನಾಟಕ ಕಾಂಗ್ರೆಸ್ ಮುಂದಾಳುಗಳಾದ ಡಾ. ನಾ. ಸು. ಹರ್ಡಿಕರ್‌ರವರು ನೆರವೇರಿಸಿ ಸುಪ್ರಸಿದ್ಧ ಭಾಷಣಮಾಡಿದರು. ಈ ವಸ್ತುಪ್ರದರ್ಶನದಲ್ಲಿ ಅನೇಕ ಕುಶಲ ಮತ್ತು ಅಪೂರ್ವ ಗ್ರಾಮಕೈಗಾರಿಕೆ ವಸ್ತುಗಳನ್ನು ಪ್ರದರ್ಶಿಸಲಾಗಿದೆ.

ಇತರ ಸುದ್ದಿಗಳು—ಮೈಸೂರು ಕಾಂಗ್ರೆಸ್ ಮೂರನೇ ಅಧಿವೇಶನವು ಇದೇ ವಾರ ತಾ. 10ರಿಂದ ಶಿವಮೊಗ್ಗೆಯಲ್ಲಿ 3ದಿನ ನಡೆಯುತ್ತದೆ. ಇದಕ್ಕೆ ಬೇಕಾದ ಸಕಲ ಏರ್ಪಾಡುಗಳು ನಡೆದಿವೆ. ಸಂಸ್ಥಾನದುದ್ದಕ್ಕದಿಂದಲೂ ಪ್ರೇಕ್ಷಕರು ಬರಲಿರುವರು. ಕಾಂಗ್ರೆಸ್ ಅಧ್ಯಕ್ಷರನ್ನು ಎತ್ತಿನ ಗಾಡಿಯಲ್ಲಿ ಕೂಡ್ರಿಸಿ ಊರಿನ ಮುಖ್ಯ ಬೀದಿಯಲ್ಲಿ ಮೆರವಣಿಗೆ ಹೊರಟು ಕಾಂಗ್ರೆಸ್ ನಡೆಯುವ ಸ್ಥಳಕ್ಕೆ "ಆಜಾದ್ ನಗರ"ಕ್ಕೆ ಕರೆತರಲಾಗುತ್ತದೆ. (ಮೈ. ಕಾಂ. ಈ ಅಧಿವೇಶನ ಸುದ್ದಿ ಮುಂದಿನ ಸಂಚಿಕೆಯಲ್ಲಿ ವಿಸ್ತಾರವಾಗಿ ತಿಳಿಸಲಾಗುತ್ತೆ. ಸಂ. ನ.) ಮೈಸೂರು ನಗರ ಸುಬ್ಬರಾಯನ ಕೆರೆಬಳಿಯಿರುವ ಖಾದಿಗೇಹದ ಬಳಿ ಬೆಂಕಿಬಿದ್ದು ಅರು ಅಂಗಡಿಗಳು ಬೆಂದು ಹೋದುವು. ಈ ದುರ್ಘಟನೆ ಮನಕರಗುವಂತಿತ್ತು. ಮೈಸೂರು ಬಳಿ ರಮ್ಮನಹಳ್ಳಿ ಎಂಬ ಹಳ್ಳಿಯಲ್ಲಿ ಅಕ್ಕರ ಗುಂಪೊಂದು ತಿಂದು ಪೋಲೀಸರು ತಕ್ಕ ಸಂಬಂಧಿಯೊಡನೆ ಆ ಸ್ಥಳಕ್ಕೆ ಹೋಗಿ ಅಲ್ಲಿ ಕೆಲವರನ್ನು ಚಮತ್ಕಾರದಿಂದ ದಸ್ತಗಿರಿಮಾಡಲು, ಕಳವಾಗಿರುವ ಅನೇಕ ವಸ್ತುಗಳು ಸಿಕ್ಕಿವೆ. ದಿವಂಗತ ಶ್ರೀ ಮೋ. ಗುಂಡಾ ಕೃಷ್ಣಮೂರ್ತಿ ಕೊಲೆ ಸಂಬಂಧ ದಸ್ತಗಿರಿಯಾಗಿರುವವರ ಮೇಲೆ ಹೂಡಿರುವ ಮೊಕದ್ದಮೆ ಇದೇ ವಾರ ತಾ. 9ರಂದ ನಡೆಯುತ್ತಿದೆ. ಶ್ರೀ. ಆರ್. ಸಿ. ಮಲ್ಲಪ್ಪನವರು ಇದನ್ನು ವಿಚಾರಿಸುವರೆಂದೂ ಹೇಳಲಾಗಿದೆ. ಇದೇ ಸಮಯದಲ್ಲಿ ದಸ್ತಗಿರಿಯಾಗಿರುವ ವಕೀಲ್ ಶ್ರೀ. ಡಿ. ಸ. ಕೆ. ವೆಂಕಟರಂಗೈಂಗಾರರನ್ನು ಜಾಮೀನಿನ ಮೇಲೆ ಬಿಡಬೇಕೆಂದು ಹೈಕೋರ್ಟಿಗೆ ಬಂದಿದ್ದ ಅರ್ಜಿಯನ್ನು ಚೀಫ್ ಜಸ್ಟಿಸರು ತಿರಸ್ಕರಿಸಿದರು. ಶ್ರೀ. ಬ್ರಿಟ್ಟಿಯವರು ಅಖಿಲ ಭಾರತ ಕಾಂಗ್ರೆಸ್ಸನ್ನು ನಿಂದಿಸಲು ಮಹಾತ್ಮರು ಹರಿಜನದಲ್ಲಿ ಆ ಭಾಷಣದ ಬಗ್ಗೆ ಟೀಕಿಸಿದ್ದರನ್ನು ಇತರ ವಿಚಾರವಾಗಿ ಸರ್. ಮಿರ್ಜಾರವರು ಏನು ಹೇಳುವರೆಂದು ಪತ್ರಿಕಾ ಪ್ರತಿನಿಧಿಗಳು ಅವರನ್ನು ಭೇಟಿ ಮಾಡಲು ಶ್ರೀಯುತರು ಏನನ್ನೂ ಹೇಳದೆ ಮೌನಮುದ್ರೆಯಿಂದಿದ್ದರು. ಮೈಸೂರು ಸಂಸ್ಥಾನ ಸ್ವಾಸ್ಥ್ಯ ಮತ್ತು ಆರೋಗ್ಯ ಇಲಾಖೆ 1938-39 ಸಾಲಿನ ವರದಿ ಹೊರಬಿದ್ದಿದೆ. ಅನೇಕ ವಿಷಯಗಳಿವೆ. ಶ್ರೀಯುತರುಗಳಾದ ಸುಬ್ರಹ್ಮಣ್ಯರಾಜೆ ಅರಸ, ಶ್ರೀಕಂಠ ಲಕ್ಷ್ಮೀಕಾಂತ ರಾಜೆ ಅರಸರುಗಳನ್ನು ಶ್ರೀಮನ್ಮಹಾರಾಜರ ಅಂಗರಕ್ಷಕರುಗಳನ್ನಾಗಿ ನೇಮಿಸಲಾಗಿದೆ. ಕುರುಹಿನ ಶೆಟ್ಟಿ ಸಂಘದವರು ದಿವಾನರಿಗೆ ಒಂದು ಮಾನಪತ್ರ ಅರ್ಪಿಸಿದರು. ದಿವಾನರು ಇದನ್ನು ಸ್ವೀಕರಿಸಿ ಸ್ವಾರಸ್ಯ ಭಾಷಣ ಮಾಡಿದರು. ಬೆಂಗಳೂರಿನಲ್ಲಿ ಮೆಡಿಕಲ್ ಸ್ಕೂಲನ್ನು ರದ್ದುಮಾಡಲಾಗುವುದಿಲ್ಲವೆಂದು ತಿಳಿಸಲಾಗಿದೆ. ಚೀಫ್ ಜಸ್ಟಿಸರು ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಈ ಬಾರಿ ಕುಳಿತಿದ್ದ ವಿದ್ಯಾರ್ಥಿಗಳ ಪರೀಕ್ಷೆಯಲ್ಲಿ ಹೇಳುವ ಡಿಕ್ಟೇಶನ್ ಬಹಳ ಕಠಿಣವಾಗಿತ್ತೆಂದು ಮುಖ್ಯರ ಪೈಕಿರು ಕರಿಪ್ರಾ ಭವನದಿಂದ ಎಸ್ಸು ಹೊರಟು ಹೋದರೆಂದು ಹೇಳಲಾಗಿದೆ. ಶ್ರೀಮನ್ಮಹಾರಾಜ ಅಯ ಚಾಮರಾಜ ಒಡೆಯರ ಬಳಿ ಶಿಶು ಮೇಕ್ರಿಗಳು ಸೆಕ್ರೆಟರಿಗಳಾಗಿ ಯೂ ಶ್ರೀ. ಬಿ. ತಮ್ಮಯ್ಯನವರು ಪ್ರೈವೇಟ್ ಸೆಕ್ರೆಟರಿಗಳಾಗಿಯೂ ಇರುತ್ತಾರೆ. ಮೈ. ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳಿಗೆ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಮಿಲಿಟರಿ ಶಿಕ್ಷಣ ಕೊಡಲಾಗುತ್ತಿದೆ ಇದರ ಬಗ್ಗೆ ಬೆಂಗಳೂರು ವಿದ್ಯಾರ್ಥಿಗಳು ಹೆಬ್ಬಾಳ ಫಾರಂಬಳಿಯೂ ಮೈಸೂರು ವಿದ್ಯಾರ್ಥಿಗಳು ಚಾಮುಂಡಿ ಬೆಟ್ಟ ಬಳಿಯೂ ಸವಾರು 10 ದಿನ ಕ್ಯಾಂಪ್ ಮಾಡಿ ಶಿಕ್ಷಣ ಕೊಂಡರು. ಸರ್. ಮಿರ್ಜಾರವರು ಹೆಬ್ಬಾಳಿಗೆ ಬಂದು ಮಿಲಿಟರಿ ಶಿಕ್ಷಣದ ತರಗತಿ ನೋಡಿ ಯುವಕರುಗಳಿಗೆ ಹಿತೋಪದೇಶ ಮಾಡಿದರು. ಯುದ್ಧ ಸಹಾಯ ನಿಧಿಗೆ ನಿಧಿ ಸೇರಿಸುವ ಬಗ್ಗೆ ಮೈಸೂರಲ್ಲಿ ಒಂದು ಸಮಿತಿ ರಚಿಸಲು ಮೈಸೂರು ಪೌರ ಸಭೆಯ ಕಟ್ಟೋಣದಲ್ಲಿ ಸಭೆ ನಡೆಯಿತು. ಅ. ಕ. ಮಕ್ಕಳ ಕೂಟದ ಮೂರನೆ ಅಧಿವೇಶನವು ಬೆಂಗಳೂರಲ್ಲಿ ಶ್ರೀಮತಿ ಕಲ್ಯಾಣಮ್ಮನವರ ನೇತೃತ್ವದಲ್ಲಿ ಬಾಲಕ ಶಿವಮೂರ್ತಿ ಅಧ್ಯಕ್ಷತೆಯಲ್ಲಿ ನಡೆಯಿತು. ಅನೇಕ ಚಿಕ್ಕ ಬಾಲಕರು ಬಂದಿದ್ದವು. ದಿವಾನರು ಇದರ ಆರಂಭೋತ್ಸವ ನಡೆಸಿ ಮನಸೆಳೆವ ಭಾಷಣಮಾಡಿದರು. ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸಯನ್ಸ್ ಮತ್ತು ಮೈ. ಬ್ರಿಟಿಷ ರೆಸಿಡೆಂಟರಾದ ಲೆಫ್ಟಿನೆಂಟ್ ಗಾರ್ಡನ್‌ರವರಿಗೆ ಮಹಾರಾಷ್ಟ್ರದ ಶ್ರೀ ಬಿಧೆ ಎಂಬವರು ಹಲ್ಲೆ ಮಾಡಿದರೆಂದು ಕೋರ್ಟು ಹಿಡಿದಿದೆ. ಶ್ರೀ. ಬಿಧೆಯವರು ಇಂಡಿಯನ್ ಇನ್ಸ್ಟಿಟ್ಯೂಟಿನಲ್ಲಿ ನೌಕರಿಯಲ್ಲಿದ್ದರೆಂದೂ ಅಲ್ಲಿಂದ ಹೊರಹಾಕಲ್ಪಟ್ಟರು ಕಳುಹಿಸಲು ಶ್ರೀಯುತರು ಇದರ ಬಗ್ಗೆ ರೆಸಿಡೆಂಟರೊಡನೆ ಭೇಟಿಮಾಡಿ ಅವರ ಮೇಲೆ ಹಲ್ಲೆ ನಡೆಸಲು ತಕ್ಷಣ ಶ್ರೀ. ಬಿಧೆಯವರನ್ನು ಹಿಡಿದು ಪೋಲೀಸಿಗೊಪ್ಪಿಸಿ ನ್ಯಾಯಾಧೀಶರಿಗೆ ಇದರ ವಿಚಾರ ತಿಳಿಸಲು ಶ್ರೀ. ಬಿಧೆಯವರು ಹುಚ್ಚನಿಂದ ಈ ರೀತಿ ಮಾಡಿದರೆಂದೂ, ಅವರನ್ನು 10 ದಿನ ಹುಚ್ಚ ಆಸ್ಪತ್ರೆಗೆ ಕಳುಹಿಸಿ ವಿಚಾರಣೆಯನ್ನು ಮುಂದಿನ ವಿಚಾರಣೆಯನ್ನು ತ್ತಿರೆಂದೂ ಹೇಳಲಾಗಿದೆ. ರಾಷ್ಟ್ರೀಯ ವಾರವನ್ನು ಸಂಸ್ಥಾನವದ್ಯಂತವೂ ಆಚರಿಸಲಾಯಿತು. ಇದರ ಬಗ್ಗೆ ಸಭೆ ನಡೆಸಿ ಕಾಂಗ್ರೆಸು ಮುಂದಾಳುಗಳು ಭಾಷಣಮಾಡಿದರು.

ಪತ್ರವ್ಯವಹಾರ

ಮುಂಬಯಿಯಲ್ಲಿ ಬಿಲ್ಲವರ ಸಂಘ ಸಂಸ್ಥೆಗಳು

(ಕಳೆದ ಸಂಚಿಕೆಯಿಂದ ಮುಂದರಿದುದು)

ಈಗಲೀಗ ನಮ್ಮ ಸಂಸ್ಥೆಗಳಿಗೆ ದರಿದ್ರತೆ ಇಲ್ಲ. ತಿಳಿದ ಮಟ್ಟಿಗೆ ಹೇಳಬೇಕಾದರೆ ದಿ ಬಾಂಬೆ ಕರ್ನಾಟಕ ಬಿಲ್ಲವ ಚ್ಯಾರಿಟಿ ಸಂಘ, ವಿದ್ಯಾದಾಯಿನಿ ಸಭಾ, ದಿ ಬಿಲ್ಲವರ ಎಸೋಸಿಯೇಶನ್, ಈ ಮೂರು ಸಂಘಗಳು ಆದಿಯಿಂದಲೂ ಸಾಧ್ಯವಾದ ಮಟ್ಟಿನ ಸೇವೆಯನ್ನು ಸಲ್ಲಿಸುತ್ತಿವೆ. ಆದರೆ ಈ ಸಂಘಗಳು ಮಾಡಿದ ಸೇವೆಗಿಂತ ಇನ್ನೂ ಅಧಿಕ ಸೇವೆ ಸಲ್ಲಿಸಬೇಕೆಂಬ ಉದ್ದೇಶದಿಂದ ಬೇರೆ ಅಧಿಕಾರಿಗಳ ಆಡಳಿತದ ಎಂಬಂತೆ "ದಿ ಕೆನರಾ ಬಿಲ್ಲವರ ಆಸೋಸಿಯೇಶನ್ ಸಂಘ"ವೆಂಬುದೊಂದು ಸ್ಥಾಪಿಸಲ್ಪಟ್ಟಿತು. ಇದು ರಿಜಿಸ್ಟರ್ಡ್ ಆಗದೆ ಈಗ ಸಂಘಗಳು ರಣಮಂಡಲಕ್ಕೆ ಇಳಿದಿವೆ. ಇನ್ನೊಂದು 'ಬಿಲ್ಲವ ಯುವಕ ಸಂಘ' ಮತ್ತು 'ಬಿಲ್ಲವ ಫ್ರೆಂಡ್ಸ್ ಯೂನಿಯನ್' ಇವುಗಳ ಪೈಕಿ ಬಿಲ್ಲವ ಫ್ರೆಂಡ್ಸ್ ಯೂನಿಯನ್ ಬಡವರ ಅಂದರೆ ಕಡಿಮೆ ಸಂಬಳದವರನ್ನು ಹಿಡಿಸಲಿಲ್ಲ. ಮೊದಲು ಮೇಲಿನ ಮೂರು ಸಂಘಗಳಿಗೆ ಸರಿಯಾಗಿ ಚಂದಾಹಣ ಕೊಡುವವರು ತಿಂಗಳ 0-12-0 ಬೇಕಿತ್ತು. ಈಗ ಸರಾಸರಿ ಈ ಆರು ಸಂಘಗಳ ಚಂದಾ ಪ್ರತಿ ತಿಂಗಳು, (ಯುವಕ ಸಂಘಕ್ಕೆ ವರ್ಷಕ್ಕೆ 0-8-0ಯಂತೆ ಬಾಕಿ ತಿಂಗಳಿಗೆ 8ಸ್ಕೆ ಬಂತು ಒಂದು ರೂಪಾಯಿ 4ಆಣೆ 8ಪೈ ಪ್ರಕಾರ ವರ್ಷಕ್ಕೆ ರೂಪಾಯಿ 15-8-0. ಬಿಲ್ಲವರು ಹಿಂದುಳಿದವರು ಕಾರಣ ಯಾವ ದೇವಸ್ಥಾನ ಪ್ರವೇಶ ಸಿಕ್ಕದಿರುವುದೇ ನೆಂದು ಕೇಳುವರೆ ನಮ್ಮ ಕೀಟಕರಿಗೆ ಉತ್ತರಿಸಿ ಬೇಕಾಗಿಲ್ಲವೆಂದು ಸ್ವಲ್ಪ ಯೋಚಿಸಿದ ಉತ್ತರ ಕೊಟ್ಟುಬಿಡುತ್ತಾರೆ. ಆದರೂ ನಿಜವಾದ ಅರ್ಥವನ್ನು ತಿಳಿ... ಇಲ್ಲ ... ಕೊಳ್ಳುವರು ಇಲ್ಲ. ಬಿಲ್ಲವರಲ್ಲಿ ಮೊದಲು ... ಪೀಠ ಚರಿತ್ರೆಯನ್ನು ಯಾರೊಬ್ಬರೂ ವಿದ್ಯಾವಂತನು ಓದಿನೋಡಲಿ ದಾರ್ ಬಹದ್ದೂರು ಪದವಿ ಪಡೆದವರೇ ರೀತಿ ಬೇಕತ್ತಾರೆ. ವಿದ್ಯಾವಂತರೂ ಅವಿದ್ಯಾವಂತರೂ ಹೀಗೆ ಸಮಾಜದ ಮೇಲೆ ಜಗಳಪ್ಪಕಟ್ಟಿದರೆ ಸಮಾಜದ ಗತಿ ಏನು? ಆದರಿಸುವವರಾರು? ಆದರೂ ಚಿಂತಿಲ್ಲ. ಇನ್ನಾದರೂ ನಾವು ಬಡಸಮಾಜದ ಮೇಲೆ ಜುಗುಪ್ಸೆಯಾದರೆ ಅದಕ್ಕೆ ಸದಾ ಬೆಂಬಲವನ್ನಿತ್ತು ಮುಂದೊತ್ತುವುದು ನಮ್ಮ ಕರ್ತವ್ಯವಲ್ಲವೇ? ನಮ್ಮ ಸಮಾಜವನ್ನು ಬಲಪಡಿಸಲಿಕ್ಕೆ ಸಾಧ್ಯವಾಗದ ಹೊರತು ರಾಜಕೀಯ ಕಾರ್ಯದಲ್ಲಿ ಭಾಗವಹಿಸುವುದು ಹೇಗೆ! ಏನೇ ಆಗಲಿ ಪ್ರಿಯ ಬಿಲ್ಲವ ಬಂಧುಭಗಿನಿಯರೇ, ನಾವು ನಮ್ಮ ಕಂಮುಕೊಂಡ ತೆಯನ್ನು ತೋರಿಸುವುದು ಲಾಜೆಯಲ್ಲ, ದೋಗಿಯ ರೋಗವನ್ನು ಅವನ ಒಳ್ಳೇಪಕ್ಕಾಗಿಯೇ ತಿಳಿಯಬೇಕೆಂದು ಮಾಡುತ್ತೇವೆ. ತಿಳಿಯಲಾಗದಿಲ್ಲ. ನಾವು ಸದುರಿಸಿಕೊಂಡು ನಮ್ಮಲ್ಲಿ ಒಕ್ಕಟ್ಟಿದ್ದರೆ ನಮ್ಮೊಳಗೆ ಪ್ರೇಮವೃದ್ಧಿಯಾದರೆ ಸಮಾಜದಲ್ಲಿ ಅಸಮ್ಮತಪಡದೆ ಎಲ್ಲರೂ ನಮ್ಮ ಬಂಧುಗಳೆಂದು ತಿಳಿದು ವರ್ತಿಸಿದರೆ ಅದೆಷ್ಟು ಚಂದ! ಹೀಗೆ ನಾವು ಒಟ್ಟುಗೂಡಿದ್ದರು ಅನ್ಯೋನ್ಯದಿಂದಿದ್ದರೆ ನಮ್ಮನ್ನು ಧಿಕ್ಕರಿಸಿ ದೂರವಾಗುವವರೇ ಇಲ್ಲ. ಪ್ರತಿ ಒಬ್ಬರೂ ನಮ್ಮನ್ನು ಗೌರವದಿಂದಲೇ ಕಾಣುವರು. ಆಗ ನಾವು ಸಮಾಜವನ್ನು ಮೇಲಕ್ಕೆತ್ತಿ ದೇಶಸೇವೆಗೆ ಕೈಯಿಕ್ಕಿದರೆ ಬಾಪೂಜಿ ಭಾರತಾಂಬೆಯು ಧನ್ಯಳಾಗಿ ಹರಸುವಳು. ಗರುಸ್ಥಾನ ಸಂತುಷ್ಟನಾಗುವನು. ಒಕ್ಕಟ್ಟಿನ ದೃಷ್ಟಾಂತ ಕೊಡುವುದಾದರೆ ತಾ. 11-2-40 ವಿದ್ಯಾದಾಯಿನಿ ಸಭೆಯೇ ಉದಾಹರಣೆಯಾಗಿದೆ! ವರ್ಷಕ್ಕೆ 2-3 ಮಹಾಸಭೆಯು ಜರಗುವಾಗ ಸರಿಯಾಗಿ ನೆರೆಯುವರು. ಹಾಜರಿದ್ದರೆ ಕಾರ್ಯಕಾರಿ ಮಂಡಳಿಯು ಅದೆಷ್ಟು ಚತುರತೆಯಿಂದ ಮುಂದುವರಿಯುತ್ತದೆ! ಇದರಲ್ಲಿ ಅವರ ಉತ್ಸಾಹದ ಬಗೆಗೆ ನಿಮ್ಮನ್ನು ಹುಟ್ಟಿಸಿದಂತೆ ಬಿಲ್ಲವ ಪ್ರತಿ ಒಂದರಲ್ಲಿ ನಮ್ಮ ಏನಾದರನ್ನು ನೋಡ ಬಾಗ, ನಮ್ಮ ಹೃದಯ ದ್ರಾವಕರು ಗುವದು, ಧ್ರುವಕವಾಗದೆನೇ ಆಟದೆ ಬಾಲಕನ ನಂದು ಮೂಡಿ ಹೇಳಬಲ್ಲೆ. ಇನ್ನು ಮುಂದೆಯಾದರೂ ಬಡಸಮಾಜದ ಮೇಲೆ ಕರುಣೆಯನ್ನಿಟ್ಟು ಅದರ ಉತ್ತರೋತ್ತರ ಅಭಿವೃದ್ಧಿಯ ಕಡೆಗೆ ಗಮನಕೊಟ್ಟು ತಂತಮ್ಮ ಸ್ವಸ್ವತ್ವವನ್ನು ಸಮಾಜಕ್ಕೆ ತೋರಿಸಿದರೆ ಇದ್ದರೆ ಸಮಾಜವು ನಲಿವುದು. ಗುಣವನ್ನು ಬಿಟ್ಟು ಕಟ್ಟಿಕೊಂಡು ಸಮಾಜದಲ್ಲಿ ಹೋರಾಡದಿರಲಿ ಅದೇನು ಮಾಡಲಾದೀತು. "ಯುವಕರ ಸೇವೆಯು ಆದಿಯಿಂದ ಬೇಕಾದೆಂದು ಗೊತ್ತಾಗುತ್ತದೆ. ಕಾರ್ಯಕರ್ತರುಗಳಾಗಿ ಕೆಲಸಮಾಡುವ ಒಬ್ಬ ನಿರುತ್ಸಾಹಗೊಂಡಿದ್ದಾರೆ. ಸಮಾಜಕ್ಕಾಗಿ ಸಿದ್ಧನಿದ್ದು ಕಿನ ಮನವನ್ನರ್ಪಿಸಿದವರಲ್ಲಿ ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ ಶ್ರೀ. ತೌಡಪ್ಪ, ಕೆ. ಅಮೀನ್, ಪಿ. ಕೆ. ... ಸ ... ಸಿ. ... ಸ. ನ. ಸ ಜಾಸಂದರ ಅಮೀನ್, ಪಿ. ಅಣ್ಣಯ್ಯ, ಯಸ್. ಮೈಂದನ್, ಜಿ ಟಿ ಅಂಚನ್, ಪಿ. ಯ. ಸ. ಕರ್ಕೇರ ಯನ್, ಬಿ. ಜನ್ನಪ್ಪ, ಕೃಷ್ಣಪ್ಪ ಬಂಗೇರ, ಯಂ. ಪಿ. ಸಾಲಿಯನ್, ಮುಕ್ಕಾರ್ ಯನ್, ಆರ್. ಸುವರ್ಣ, M. S) ಸಿ. ಸುಬ್ಬ, ಕೃಷ್ಣಪ್ಪ ಪಿ. ಮೂಲ್ಕಿ, ಕೆ. ಅಣ್ಣಯ್ಯ, ಕೆ. ಕಾಂತ, ಪಿ. ಯ. ಸ. ಉಳ್ಳಾಲದವರಿಂದ ಟಿ. ಶಂಭು, ಯನ್. ಡಿ. ಉಪ್ಪೂರ್, ಬಂಗೇರ ಶಿನ್ನನವರು ಮತ್ತು ಧಾಮ ಕೆ. ಅಮೀನ್, ಸ್ವಗ್ರಾಮವಾಸಿ ಪಿ. ಅಪ್ಪು ಪೂಜಾರಿಯವರು. ಇನ್ನೂ ಅನೇಕರಿಂದಿರಬಹುದು. ಇವರ ಸೇವೆಯು ನಿಜವಾಗಿಯೂ ... ಅನ... ನ ... ಹೇಳಬೇಕು. ಶ್ರೀ. ತೌಡಪ್ಪ, ಕೆ. ಅಮೀನ್, ಬಿ. ಪಿ. ಕರ್ಕೇರ, ಸಿ. ಕೆ. ... ಇವರು ಹುಟ್ಟಿನ ಅಮೃತವನ್ನು ಸವಿ ... ಉನ್ನತಿಗಾಗಿ ಸವೆದಿದ್ದಾರೆಂದು ನಾನು ಚೆನ್ನಾಗಿ ಬಲ್ಲೆನು. ಇನ್ನೂ ಅನೇಕರು ಕೆಲಸಮಾಡುತ್ತಿರಬಹುದು. ಅವರನ್ನು ತೋರಿಸಿಕೊಡಲ್ಲಿಕ್ಕಿಲ್ಲವೆಂದು ಬೇಸರಗೊಳ್ಳಬಾರದಾಗಿ ಸೇವಕರ ವಿನಂತಿ. ಅಂತೂ ನಾನು ಸದ್ಯಂತರ ಯುವಕರನ್ನು ದೂರುವುದೂ ಅಲ್ಲ, ಅವರನ್ನು ಹೊಗಳುವುದೂ ಅಲ್ಲ, ನಿಜವನ್ನುಳಿ ಬರೆದದ್ದು ಮಾತ್ರ. ನಾನು ಯಾವ ಪಕ್ಷವಾದ ಕಾರಣ ಅವರ ಕೆಲಸಕ್ಕೆ ಕಲಿಸಬೇಕಲ್ಲ. ಬೀಕು. ಆದರಿಂದಲೂ ಹೆಚ್ಚಾದ ಕೆಲಸ ನಾವು ಮಾ...

(ಇನ್ನೂ ಮುಂದಕ್ಕೆ ಮುಂದರಿಯುವುದು)

ನೋಟೀಸು.

The Vijaya Bank Ltd., Coondapoor.

ದಿ ವಿಜಯ ಬೇಂಕ್ ಲಿಮಿಟೆಡ್, ಕುಂದಾಪುರ.

ಈ ಮೂಲಕ ಸರ್ವ ಜನರಿಗೆ ತಿಳಿಯ ಪಡಿಸುವದೇನೆಂದರೆ:—ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನ, ಬೆಳ್ಳಿ, ಆಭರಣಗಳ ಆಧಾರದ ಮೇಲೆ ಪಡೆದ ಸಾಲಗಳನ್ನಾಗಲೀ, ಅದರ ಬಡ್ಡಿಯನ್ನಾಗಲೀ ವ್ಯಾದಿಗೆ ಕೊಡದೆ ಇದ್ದುದರಿಂದಲೂ, ಸದ್ರಿಯವರಿಗೆ ಬರೆದ ರಿಜಿಸ್ಟ್ರ ನೋಟೀಸುಗಳಲ್ಲಿ ಕೆಲವು ವಾಪಸಾಗದೆ ಇದ್ದುದರಿಂದಲೂ, ಸದ್ರಿ ಜೋಡನೆಗಳನ್ನು ಇನ್ನೂ ಹೆಚ್ಚಿಗೆ ಸಮಯ ಬಾಕಿ ಇಟ್ಟಲ್ಲಿ ಬೇಂಕಿಗೆ ನಷ್ಟವಾಗಬಹುದಾಗಿ ಕಂಡುಬರ ಬರುವದರಿಂದಲೂ, ಸದ್ರಿ ಜೋಡನೆ ಅಡವಾಯಿಯವರು ನಮಗೆ ಬರಬೇಕಾದ ಎಲ್ಲಾ ಅಸಲು ಬಡ್ಡಿ ಹಣಗಳನ್ನು ಕೊಟ್ಟು ತಾ. 15-4-40ನೇ ಸೋಮವಾರ ಮಧ್ಯಾಹ್ನ 3 ಘಂಟೆಯ ಒಳಗೆ ಬಿಡಿಸಿಕೊಂಡು ಹೋಗದೆ ಇದ್ದಲ್ಲಿ ತಾ. 16-4-40ನೇ ಮಂಗಳವಾರ ಮಧ್ಯಾಹ್ನ ಘಂಟೆ 3ಕ್ಕೆ ಸದರಿ ನಗಗಳನ್ನು ಬಹಿರಂಗವಾಗಿ ನಿಲಾಂ ಮಾಡಿ ಹುಟ್ಟಿ ಬಂದ ಹಣದಲ್ಲಿ ನಮಗೆ ಬರು ಅಸಲು ಬಡ್ಡಿ ಮತ್ತು ಎಲ್ಲಾ ಖರ್ಚು ವಗೈರೆ ಕಳೆದು ಹೆಚ್ಚಿನ ಹಣ ಉಳಿದರೆ ಸದರಿಯವರ ಅಡವಾಸ ಲೆಖ್ಖಕ್ಕೆ ಸಿಬಿಲ್ಲಿಯಿಂದ ಜಮಾ ಮಾಡಲ್ಪಡುವುದು. ನಿಲಾಮಿನಿಂದ ಹುಟ್ಟಿಬಂದ ಹಣ ಬೇಂಕಿಗೆ ಬರತಕ್ಕ ಹಣಕ್ಕೆ ಕಡಿಮೆ ಬಿದ್ದರೆ ಸದರಿ ಅಸಾಮಿಯ ಮೇಲೆ ಹೆಚ್ಚಿಗೆ ಬರತಕ್ಕ ಹಣಗಳಿಗೆ ದಾವಾ ದಾಖಲುಮಾಡಲಾದೀತು. ನಿಲಾಂ ಅದೇ ದಿವಸ ಆಗದೆ ಇದ್ದಲ್ಲಿ ಬೇಂಕಿಗೆ ಯುಕ್ತ ಕಂಡ ದಿವಸಕ್ಕೆ ಮುಂದುವರಿಸಲ್ಪಡುವುದು ತಿಳಿದಿರುವುದು.

ಜೋಡನೆ ನಂಬ್ರ	ಇಟ್ಟ ತಾರೀಕು.	ಹೆಸರು ಮತ್ತು ವಿಳಾಸ	ಅಸಲು ರೂಪಾಯಿ
191/36	23 8 37	ರಾಮಣ್ಣ ಶೆಟ್ಟಿ, ಸಂಕಪ್ಪ ಶೆಟ್ರ ಅಳಿಯ ಗುಳ್ವಾಡಿ ದೊಡ್ಡಮನೆ, ಪೋಸ್ಟ್ ಕುಂದಾಪುರ	275—0—0
253 37	14 3 38	ಕೃಷ್ಣಯ್ಯ ಶೆಟ್ಟಿ, ನಾಗಯ್ಯ ಶೆಟ್ಟಿ ಅಳಿಯ, ಹಾಲಾಡಿ ಗ್ರಾಮ, ಉಡುಪಿ ತಾಲೂಕು, ಪೋಸ್ಟ್ ಗಂಗೊಳ್ಳಿ ಮಾರ್ಗ.	35—0—0
473/37	12-7-38	ನಾಗಯ್ಯ ಶೆಟ್ಟಿ, ತುಂಗಮ್ಮ ಶೆಡ್ತಿ ಮಗ, ಹೊಸಕಟ್ಟೆ ಮನೆ, ಹಕ್ಲಾಡಿ ಗ್ರಾಮ, ಹಕ್ಲಾಡಿ ಪೋಸ್ಟ್	35—0—0
562/37	15-8 38	ನರಸಿಂಹ ಶೆಟ್ಟಿ, ಚಿಕ್ಕಯ್ಯ ಶೆಟ್ರ ಅಳಿಯ, ಸೇನಾಪುರ, ಹಕ್ಲಾಡಿ ಗ್ರಾಮ, ಪೋಸ್ಟ್ ಹಕ್ಲಾಡಿ.	5—0—0
356/37	6 5-38	ಕುಟ್ಟಯ್ಯ ಶೆಟ್ಟಿ, B/o ಚಿಕ್ಕಯ್ಯ ಶೆಟ್ಟಿ, ಅಸ್ಪಾಡಿ, ವಂಡ್ಸೆಗ್ರಾಮ, ಪೋಸ್ಟ್ ವಂಡ್ಸೆ.	30—0—0
404/37	1 6-38	ವೆಂಕಟ್ರಮಣ ಮಂಜ, ಸುಬ್ರಾಯ ಮಂಜನ ಮಗ, ಮಾರಣಕಟ್ಟೆ, ಚಿತ್ತೂರು ಗ್ರಾಮ, ಪೋಸ್ಟ್ ವಂಡ್ಸೆ.	80—0—0
418/37	13 6-38	ನರಸಿಂಹ ಕಾಮತ, ನಡೇರ ಹೋಬಳಿ, ಕುಂದಾಪುರ.	3—0—0

OFFICE OF THE BANK, COONDAPOOR. 6—4—1940

K. Sanjiva Hegde, *Agent*

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ನವಯುಗ

ಉಡುಪಿ, ಗುರುವಾರ ತಾ. ೧೧-೪-'೪೦

ಸೇನಾನಿಯ ಕಟ್ಟಾಜ್ಞೆಗಳು.

ಸತ್ಯಾಗ್ರಹಸಮರವು ಅನಿವಾರ್ಯವಾಗುತ್ತ ಬರುತ್ತಿದೆ. ಮಹಾತ್ಮಾಗಾಂಧಿಯವರು ಸಂಧಾನಕ್ಕಾಗಿ ಹಾರೈಸಿದರು; ಸಂಧಿಯ ಸುಗಮ ಹಾದಿಯನ್ನೂ ತೋರಿಸಿಕೊಟ್ಟರು. ಒಂದೆಡೆಯಲ್ಲಿ ಭುಜಚಪ್ಪರಿಸುವವರನ್ನು ತಡೆದು ನಿಲ್ಲಿಸಿ, ಸಾಕಷ್ಟು ಬಾರಿ ವೈಸರಾಯರನ್ನು ಸ್ವತಃ ಕಂಡು ಬಂದರು. ಈ ಎಲ್ಲಾ ಪ್ರಯತ್ನಗಳ ನಂತರವೂ ಅಪಜಯವನ್ನೇ ಪಡೆದರು! ಸರಕಾರದ ನೀತಿಯು ನ್ಯಾಯದ ದರ್ಶನಮಾತ್ರದಿಂದ ಬದಲಾಗದು; ನ್ಯಾಯದ ಬಲವನ್ನದು ಮತ್ತೊಮ್ಮೆ ಪರೀಕ್ಷಿಸಲು ಸಿದ್ಧವಿದೆ ಎಂಬುದೇ ಇವೆಲ್ಲವುಗಳ ಸಾರಾಂಶ. ಇದಕ್ಕೆ ನಿದರ್ಶನವಾಗಿ ದೇಶದಲ್ಲಿ ಉಗ್ರವಾದಿ ಮುಖಂಡರು ಹಲವರ ದಸ್ತಗಿರಿ ನಡೆದಿದೆ. ನಡೆಯುತ್ತಿದೆ. ಈ ವಿದ್ಯಮಾನಗಳ ಪರಿಣಾಮವು ಗಾಂಧಿಯವರ ಮೇಲೆ ಆಗದೆ ಹೋಗಿಲ್ಲ. ಭಾರತರಾಜಕೀಯದ ಶೀತೋಷ್ಣಮಾಪಕ ಯಂತ್ರವೆಂದರೆ ಮಹಾತ್ಮಾ ಗಾಂಧಿ! ಅವರಿಂದು ಸತ್ಯಾಗ್ರಹ ಸಮರ ಸಿದ್ಧತೆಯ ರೀತಿ ನೀತಿಗಳನ್ನು ದೇಶದ ಮುಂದಿಟ್ಟಿದ್ದಾರೆ.

ಇನ್ನು ಮುಂದೇನು? ಎಂಬ ಪ್ರಶ್ನೆ. ಹಾದಿಯು ಸುಸ್ಪಷ್ಟವಿದೆ. ಮಹಾತ್ಮಾ ಗಾಂಧಿಯವರೇ ಸೇನಾನಿ. ಅವರ ಹಾದಿಯು 'ಅದೋ-ಇದೋ!'ಎಂಬ ಅನುಮಾನಕ್ಕೆಡೆಯಿಲ್ಲ. ಯುರೋಪಿನ ಯುದ್ಧೋನ್ಮತ್ತ ರಾಷ್ಟ್ರಗಳ ಕಣ್ಣುಮುಚ್ಚಾಲೆಯಾಟದಂತಹ ಆಟದ ಭಯ ಇಲ್ಲಿಲ್ಲ. ಮಹಾತ್ಮರು ವಿಧಾಯಕ ಕಾರ್ಯಕ್ರಮಗಳ ರೀತಿಯನ್ನು ಸಾರಿದ್ದಾರೆ ಅದೇ ಸತ್ಯಾಗ್ರಹ ಸಿಪಾಯಿಯ ಕವಾಯತು, ಆ ಕವಾಯತಿನಲ್ಲಿ ತರಬೇತಾದ ಸೈನ್ಯಬಲ ಸಾಕಷ್ಟಿದೆ ಎಂದು ಮನವರಿಕೆಯಾಗಬೇಕು, ಯುದ್ಧ ಹೂಡಬೇಕು, ಅಲ್ಲವಾದರೆ ಇದೂ ಇಲ್ಲ ಎಂದು ಗಾಂಧಿಯವರ ದೃಢ ನಿರ್ಧಾರ. ಗಾಂಧಿಯವರಿಗೆ ಈ ಯುದ್ಧ ಕೊನೆಯ ಹೋರಾಟವಾಗಬೇಕೆಂಬ ಇಚ್ಛೆಯಿದೆ; ಜಯಿಸಬೇಕೆಂಬ ಆತುರವಿದೆ, ಉತ್ಸಾಹ, ಹೋರಾಟದ ಮನೋನ್ನತ್ತಿ ಇವನ್ನಷ್ಟೇ ಪ್ರದರ್ಶಿಸುವದರಲ್ಲಿ ಸಾರ್ಥಕತೆಯನ್ನು ಅವರು ಕಾಣುವದಿಲ್ಲ ಅದ್ದರಿಂದಲೇ ಹುರುಪಿನವರ ದೃಷ್ಟಿಗೆ ಹುಳುಕಿಲ್ಲದವರಾಗಿ ಅವರು ಕಾಣುತ್ತಿದ್ದಾರೆ "ಸೇನಾನಿಬೇಕು, ಸೇನಾನಿಯ ಆಜ್ಞೆ ಬೇಡವೆಂಬುದರಲ್ಲಿ ಅರ್ಥವಿಲ್ಲ. ನನ್ನ ಕಾರ್ಯಕ್ರಮಗಳಲ್ಲಿ ಪೂರ್ತಿ ವಿಶ್ವಾಸವಿಲ್ಲವಾದರೆ ಕಾಂಗ್ರೆಸ್ ನನ್ನನ್ನು ಬಿಡುವದೊಳ್ಳಿತು. ಕಾಂಗ್ರೆಸ್ ಸಂಬಂಧ ತಪ್ಪಿದಲ್ಲಿ ನನ್ನ ಸೇವಾಶಕ್ತಿ ಮತ್ತಷ್ಟು ಉಜ್ವಲವಾದೀತು. ಶಿಸ್ತು, ಸಂಘಟನೆಯಿಲ್ಲದ ಸೇನೆಯನ್ನು ಅಪಜಯದ ಕಡೆಗೆಂಬಂತೆ ನಾಂದೂ ನಡೆಯಿಸಲಾರೆ. ನಾನು ನಾಯಕನಾಗಿ ಸತ್ಯಾಗ್ರಹ ಸಮರ ಹೂಡುವ ಮೊದಲು, ಮುಂದಿಟ್ಟ ಶರ್ತಗಳು ಪೂರ್ತಿಗೊಳ್ಳಬೇಕು" ಎಂದು ಗಾಂಧಿಯವರನ್ನುತ್ತಾರೆ. ಸತ್ಯಾಗ್ರಹ ಸೇನಾನಿಯ ಯೋಗ್ಯತೆಯು ಪೂರ್ಣವಾಗಿ ಈ ಮಾತುಗಳಲ್ಲಿ ಬಿಂಬಿಸಿದೆ.

ಗಾಂಧಿಯವರ ಕರೆಗೆ ದೇಶವು ಕಾದುಗುಟ್ಟಿದೆ. ಎಲ್ಲೆಲ್ಲಿಯೂ ಸತ್ಯಾಗ್ರಹ ಸೇನೆಯ ಸಿದ್ಧತೆಯು ಭರದಿಂದ ನಡೆಯುತ್ತಿದೆ. ಕಳೆದೆರಡು ಬಾರಿ ಸಮರ ಹೂಡಿ ಅನುಭವವುಳ್ಳ ಮಹಾತ್ಮರು ಈ ಬಾರಿ ಶಿಸ್ತು, ... ಹೆಚ್ಚಿನ ಪ್ರಾಮುಖ್ಯತೆಯಿತ್ತಿರುವರೆಂಬುದನ್ನು ಯಾರೂ ಮರೆಯಲಾಗದು; ದೇಶದಲ್ಲಿ ಸ್ವಾತಂತ್ರ್ಯ ತೃಷ್ಣೆಯೆಂದೋ ಎದ್ದಿದೆ; ಧೈರ್ಯೋತ್ಸಾಹಗಳಿಗೆ ಕೊರತೆಯಿಲ್ಲ; ಆದರೂ ಈ ತನಕ ಗುರಿಸೇರಲಾಗಲಿಲ್ಲ. ಯಾವುದರಿಂದಾಗಿ? ಕೇವಲ ಸಂಘಟನಾ ಶಕ್ತಿಯ ಅಭಾವದಿಂದಾಗಿ. ಯಾವುದೇ ಹೋರಾಟದಲ್ಲಿ ಹೊಡೆತಕ್ಕೆ ಹೊಡೆತ, ಕ್ರಿಯೆಗೆ ಪ್ರತಿಕ್ರಿಯೆ ಇದ್ದೇ ಇದೆ; ಇದಿರಾಳಿಯ ಪೆಟ್ಟಿಗೆ ಪುಡಿಯಾಗದ ವಜ್ರಕವಚವಿದ್ದವನೇ ಕೊನೆಗೆ ಜಯಿಸುತ್ತಾನೆ ಎಂತಲೇ ಗಾಂಧಿಯವರಿಂದು ಸ್ವಬಲ ವರ್ಧಕ ಮಂತ್ರ ಪಠಿಸುತ್ತಿದ್ದಾರೆಂಬುದನ್ನು ಯಾರೂ ಮರೆಯಬಾರದು. ಗಾಂಧಿಯವರ ಸೂಚನೆಗಳು ಯೋಗ್ಯನಿಗೆ ಹೇಳಿಸಿದವುಗಳೇ ಎಂದು ಅನುಮಾನ ಪಡುವವರಿರಬಹುದು. ಇಂಥವರು ಕಲಿನೆ ಮಾಡಬೇಕಾದುದು: ಪ್ರಥಮತಃ ಹೋರಾಟವು ಅಗತ್ಯವೋ ಅನಗತ್ಯವೆಂಬುದನ್ನು; ಅಗತ್ಯವೆಂದಾದರೆ ಎಂಥನೆಯದಾಗಿ, ಹೋರಾಟ ಹೂಡುವ ಭಿನ್ನ ಪಂಥಗಳಿದ್ದರೆ-ಅವುಗಳ ತೂಕಕ್ಕೆ ನಿಲ್ಲುವಂತಿದ್ದರೆ-ಅವುಗಳನ್ನು. ಕೊನೆಯದಾಗಿ, ಎಷ್ಟೇ ಮಹತ್ವದ ಕಾರಣಕ್ಕಾದರೂ ಸೈನಿಕನು ಸೈನ್ಯ ಶಿಸ್ತನ್ನು ಉಲ್ಲಂಘಿಸಲಾಗುತ್ತದೋ ಎಂಬುದನ್ನು. ಪ್ರತಿಯೊಬ್ಬ ಹಿಂದೀಯನೂ ಈ ಮೂರು ವಿಧದ ವಿಮರ್ಶೆಯನ್ನು ಮಾಡಿ ದೇಶದ ಕರೆಗೆ ಉತ್ತರ ಕೊಡುವ ಕಾಲಬಂದಿದೆ. ಕಾಂಗ್ರೆಸ್ ಅಧ್ಯಕ್ಷ ಮೌಲಾನ ಅಜಾದರು ಹೇಳಿರುವಂತೆ, ಪ್ರತಿಯೊಬ್ಬನೂ ಪ್ರಥಮತಃ ತನ್ನ ಹೃದಯ ಶೋಧನೆ ಮಾಡಿಕೊಳ್ಳಲಿ. ಗಾಂಧಿಯವರ ವಿಧಾಯಕ ಕಾರ್ಯಕ್ರಮಗಳಿಗೆ ಹೃದಯದಲ್ಲಿ ಸ್ಥಾನವಿದೆಯೇ ನೋಡಿಕೊಂಡು, ತಾನದನ್ನು ಎಷ್ಟರ ಮಟ್ಟಿಗೆ ಕಾರ್ಯತಃ ಅನುಸರಿಸುತ್ತಿರುವೆನೆಂಬುದನ್ನು ತಿಳಿದುಕೊಳ್ಳಲಿ. ಈ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಭಾರತ ಸ್ವಾತಂತ್ರ್ಯ ಸಾಧನೆಯಲ್ಲಿ ತನ್ನ ಪಾಲು ತೆಗೆದುಕೊಳ್ಳುವದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವೆಂದು ಬೇರೆ ಹೇಳಬೇಕೆ?

ದೀನಬಂಧುವಿಯೋಗ

ದೀನಬಂಧು ಸಿ. ಎಫ್. ಎಂಡ್ರ್ಯೂಸರು ನಿಧನಹೊಂದಿದರು. ಭಾರತವಿಡೀ ಮರುಗುತ್ತಿದೆ ಹಿಂದೂದೇಶದ ಈ ಕಷ್ಟಕಾಲದಲ್ಲಿ ಆಪತ್ತಿಗೊದಗಬಲ್ಲ ಯುರೋಪಿಯನ್ ಬಂಧುವೊಬ್ಬರು ಅಗಲಿದುದು ಅದರ ದುರದೃಷ್ಟ! ಇಂಗ್ಲಾಂಡಿನವರಿಗೆ ಭಾರತದೊಡನೆ ಎಂತಹ ಸಂಬಂಧವಿರಬೇಕೆಂಬುದಕ್ಕೆ ದೀನ ಬಂಧುಗಳೊಬ್ಬರೇ ಮಾದರಿಯಾಗಿದ್ದರು. ಆ ಸ್ಥಾನವಿಂದು ಬರಿದಾಯಿತು. ಸ್ವದೇಶ ಮತ್ತು ವಿದೇಶಗಳಲ್ಲಿ ಭಾರತೀಯರು ಪ್ರಕೃತಿಜನ್ಯವಾದ ಇಲ್ಲವೆ ಮನುಷ್ಯನಿರ್ಮಿತವಾದ ಆಪತ್ತಿಗೊಳಗಾದಾಗಲೆಲ್ಲಾ ಆಂಡ್ರ್ಯೂಸರು ಅಂಥವರ ಬದಿಯಲ್ಲಿ ಇದ್ದೇ ಇದ್ದರು. ಇಂಗ್ಲಾಂಡು ಭಾರತಕ್ಕೆ ಹಲವು ವಿಧದಲ್ಲಿ ಋಣಿಯಾಗಿದೆ; ಪ್ರತಿಯಾಗಿ ಆಂಡ್ರ್ಯೂಸರಂತಹ ಪುತ್ರನನ್ನು ಹೆತ್ತುದಕ್ಕೆ ಮಾತ್ರ ಭಾರತವು ಇಂಗ್ಲಾಂಡಿಗೆ ಋಣಿಯಾಗಿರಬೇಕು. ಅವರು ಹಿಂದೀಯರ ನಡುವೆ ದೇಶಭಕ್ತ ಭಾರತೀಯರಂತೆಯೇ ಇದ್ದರು, ದೀನಬಂಧುಗಳ ನಿಧನದಿಂದ ಇಂಗ್ಲಾಂಡು ಭಾರತದ ಸಂಬಂಧ ಕೆಡುತ್ತಾ ಬರುತ್ತಿರುವ ಈ ಕಾಲದಲ್ಲಿ ಒಂದು ಆದರ್ಶವೂ ಕಳಚಿಬಿದ್ದಂತಾಯಿತು!

ಸ್ಕೇಂಡಿನೇವಿಯಾ ತಾಟಸ್ಥ್ಯಭಂಗ

ಜರ್ಮನಿಯು ನೋರ್ವೆಯ ಸಮುದ್ರದಲ್ಲಿ ವೈನ್‌ಗಳನ್ನಿಟ್ಟು ಸಬ್‌ಮೆರಿನುಗಳನ್ನುಪಯೋಗಿಸಿ ತಮ್ಮ ಮತ್ತು ತಟಸ್ಥ ರಾಷ್ಟ್ರಗಳ ವ್ಯಾಪಾರೀ ಹಡಗುಗಳನ್ನು ಮುಳುಗಿಸಿರುವ ಕಾರಣಕೊಟ್ಟು ಇಂಗ್ಲಾಂಡು ಫ್ರಾನ್ಸುಗಳು, ಆ ಕರಾವಳಿಯ ಮೂರು ಕಡೆಗಳಲ್ಲಿ ತಮ್ಮ ವೈನುಗಳನ್ನಿಟ್ಟಿರುವವು. ಈ ವರ್ತನೆಯಿಂದ ನೋರ್ವೆ ಗಲಿಬಿಲಿಗೊಂಡಿದೆ. ಯುದ್ಧಗತಿಯು ಮಾರ್ಪಾಟಾಗುವ ಚಿಹ್ನೆಯೂ ಕಂಡು ಬರುತ್ತಿದೆ. ಜರ್ಮನಿ ಈ ವರ್ತನೆಯನ್ನು ಎಷ್ಟುಕಾಲ ಸಹಿಸುವಂತಿಲ್ಲ. ಪುಟ್ಟ ರಾಷ್ಟ್ರಗಳನ್ನು ಕೃತಕ ನೆಪಹೂಡಿ ಬಗಲೊಳಗೆ ಸೇರಿಸಿಕೊಂಡು ಉಬ್ಬಿತಾಗಿದ ಜರ್ಮನಿಯು ತಾನಾಗಿ ಬಂದೊದಗಿದ ಈ ಸಂದರ್ಭವನ್ನು ಬಿಟ್ಟುಬಿಡಲಾರದು. 'ವೈರಿಗಾಶ್ರಯ ಕೊಟ್ಟವ ಕಡುವೈರಿ' ಎಂದು ಕ್ರೋಧೋನ್ಮತ್ತವಾಗಿದೆ. ಅದರ ಉದ್ರೇಕಾವಲೋಕನದ ಆಧಾರದಿಂದ ಜರ್ಮನಿ ಒಡನೆಯೇ ನೋರ್ವೆಯನ್ನಾಕ್ರಮಿಸುವದು ಸಂಭವನೀಯವೆನ್ನಬಹುದು. ಹೀಗಾದಲ್ಲಿ ಯುದ್ಧಗತಿಯು ಬೇರೆಯಾಗಬಹುದು. ಸ್ಕಾಂಡಿನೇವಿಯಾ ರಾಷ್ಟ್ರಗಳ ಸ್ವಾತಂತ್ರ್ಯವು ಮಣ್ಣುಪಾಲಾಗಬಹುದು. ಇದಿರಾಳಿಯ ಅರ್ಥಬಲವನ್ನು ನಿಂತಲ್ಲೇ ಅಪಹರಿಸುವ ಪಾಲಿಯ ಶಕ್ತಿ ಹಿಟ್ಲರನಿಗೆ ಬರಬಹುದು. 'ಸ್ಕಾಂಡಿನೇವಿಯದ ಆಕ್ರಮಣವಾದಲ್ಲ ಹಿಟ್ಲರ್ ಬಲಸಮೃದ್ಧಿಯಾದೀತು. ಎಂದು ಬ್ರಿಟನಿನ ಮಾಜೀ ಯುದ್ಧಮಂತ್ರಿ ಹೋರ್ ಬೆಲೀಷಾರವರೇ ಬರೆದಿದ್ದಾರೆ. ನೋರ್ವೆಯ ಸಮುದ್ರದಲ್ಲಿ ಕಾಲಿಟ್ಟದು ಬ್ರಿಟನ್-ಫ್ರಾನ್ಸುಗಳು ಯುದ್ಧದಲ್ಲಿ ಚುರುಕುಗೊಳ್ಳುವವೆಂಬುದರ ಚಿಹ್ನೆ. ಹಿಟ್ಲರನ ಆಕ್ರಮಣವನ್ನು ಅವು ಯಾವ ರೀತಿ ತಡೆಯುವವೋ ನೋಡಲಿದೆ.

ನೋರ್ವೆಯ...

ನೋರ್ವೆಯ ಸಮುದ್ರದ ಮೂರೆಡೆಗಳಲ್ಲಿ ತಾವು ವೈನ್‌ಗಳನ್ನೂ ಹಡಗಗಳನ್ನೂ ನಿಲ್ಲಿಸಿರುವೆವೆಂದು ಇದೇ ತಾ 8ರಲ್ಲಿ ಇಂಗ್ಲಾಂಡು, ಫ್ರಾನ್ಸುಗಳು ಅಕಸ್ಮಿಕವಾಗಿ ತಿಳಿಸಿವೆ.

ಈ ವರ್ತನೆಗೇನು ಕಾರಣ?

"ಕಳೆದ ಕೆಲವು ವಾರಗಳಿಂದ ಜರ್ಮನಿಯು ಎಲ್ಲಾ ರಾಷ್ಟ್ರಗಳ ವ್ಯಾಪಾರಿ ಹಡಗುಗಳನ್ನು ಮುಳುಗಿಸುವ ಆಟ ನಡೆಯಿಸುತ್ತಲೇ ಇದೆ. 150ಕ್ಕೆ ಮಿಕ್ಕಿದ ಹಡಗುಗಳು ತಟಸ್ಥ ರಾಷ್ಟ್ರಗಳವನ್ನು ನಾಶವಾದಲಾಗಿದೆ. ಸಾವಿರದ ವರೆಗೆ ಜನರು ಮೃತಪಟ್ಟಿದ್ದಾರೆ ಇಷ್ಟರಿಂದ ಜರ್ಮನಿಯು ಆ ಸಮುದ್ರದಲ್ಲಿ ನಿರಾತಂಕವಾಗಿ ಹಂಚಿಕೆ ನಡೆಯಿಸಿ ವೈನುಗಳನ್ನು ಇಟ್ಟು ಸಬ್

ಮೆರಿನುಗಳ ...
...ತ್ತಿದೆ ಎಂಬ ...
ಮಿತ್ರರಾಷ್ಟ್ರ...
ಸುಮಾರು ...
ಲ್ಲಟ್ಟು, ತ...
ಯ ಚಲಾವ...
ಭೀಕರವಾಗಿ ...
ಇವುಗಳ ...
ದ್ದೇಶದಿಂದ ...
ಎಂಬದು ಸ...
ರ ಒಂದೇ ...
ದು ಪ್ರಾಣ...

ಬವಲಿಗೆ ...
ಯಾಗುತ್ತಿದ...
ದಲ್ಲಿ ಅವು ...
ಯಿಂದ ಸ...
ಪರಿಸ್ಥಿತಿಗ...
ಸುವದು ...
ವಲ್ಲ. ಸಾಧ...
ಗೆ ವಿರುದ್ಧ...
ನೀತಿ ವಿರು...
ಕಾಗುವ ವಿ...
ದೇಶೀರವ...
ಪರಿಸ್ಥಿತಿಗೆ
ದ್ದೇವೆ.
ಲೋಕಾ...
ಜರ್ಮ...

FOR LIFE INSURANC...

CONSU...

TROPI...

Chairman: SJT. SUBASHCHAN...

Founder Directors:
PANDIT MOT...
Dr. M. A. AN...
HAKIM AJM...
Sri. SRINIVA...

POLICIES ISSUED

THREE CR...

For Agency Apply to:—

M. R. PRABHU, B.A., B.COM., C.A.I.I.B.,
Inspector of Agencies,
The Tropical Ins., Co., Ltd.,
KASARGODE,
SOUTH KANARA,

O
R

M...
The...
M...

...ಯುದ್ಧದಲ್ಲಿ ಬ್ರಿಟನ್-ಫ್ರಾನ್ಸುಗಳು ಭದ್ರತೆಗಿಳಿದವು !

...ರತದಲ್ಲೆಲ್ಲಾ ಸತ್ಯಾಗ್ರಹ ಸಮರ ಸಿದ್ಧತೆ!

...ನಡೆಯಕು ...ಸ್ಪೃಶ್ಯಕ್ಕೆ ...ಒಲಿಬಿದ್ದಿವೆ ...ನಡೆಯಿಸ ...ಂತರ್ರಾಷ್ಟ್ರೀ ...ಭೇದವಿಡದೆ ...ಕಲಾಗಿದೆ. ...ಾರದ ಉ ... ನಡೆದಿವೆ ...ಗಳು ತಟಸ್ಥ ...ಗಲೀ, ಒಂ ...ಾಡಿದುದಿಲ್ಲ

L

...ಟು,

...R.

...ED

HETTY,

Co Ltd.

...ТА,

S. K.

...ಕಾರಕ್ಕೆ ಬಲಿ ...ಸ್ನೆ ಸಮುದ್ರ ...ಥಿಯ ಆಡೆ ...ಸುತ್ತಿರುವಾಗ ...ನ್ನು ವಿರೋಧಿ ...ಕೆಗೆ ವಿರುದ್ಧ ...ಲ್ಲಿ ಕಾಯಿದೆ ...ಕಡೆಯುವರ ...ಇದಿರಿಸಬೇ ...ಗಳಲ್ಲಿ ಕಾಯಿ, ...ತ್ತಿಂದ ನಾವು ...ಸಲು ಜಿದ್ದರಿ

...ರಣವಿಲ್ಲ ...ತ್ತು ಒಟ್ಟು

ಜರ್ಮನಿಯು ನೋರ್ವೆಯ ಬೇಟೆಯಾಡುವದೆ?

ಯಕ್ಕೊಳಗಾಗಿ ನೋರ್ವೆಯು ಯಾವ ಧೋರಣೆಯನ್ನೇ ಅನುಸರಿಸಲಿ; ಮಿತ್ರ ರಾಷ್ಟ್ರಗಳು, ಸದ್ಯ ನೋರ್ವೆಯಿಂದ ಜರ್ಮನಿಗಾಗುತ್ತಿರುವ, ಅನುಕೂಲತೆ, ಹಾಗೂ ತಮಗೆ ಪ್ರತಿಕೂಲವಾದ ವಿಷ್ಯಮಾನಗಳನ್ನು ಮುಂದಕ್ಕೆ ನಡೆಯಗೊಡುವಂತಿಲ್ಲ. ಜರ್ಮನಿಗೆ ಅನುಕೂಲವಾಗುವ ಹಾಗೂ ತಮಗೆ ಪ್ರತಿಕೂಲವಾಗುವ ಯಾವ ವ್ಯವಹಾರವನ್ನೂ ಈ ಯುದ್ಧ ಸಂಬಂಧದಲ್ಲಿ ತಾವು ಕ್ಷಮಿಸುವಂತಿಲ್ಲವೆಂದು ನೋರ್ವೆಗೆ ಈ ಮೊದಲೇ ಎಚ್ಚರಿಕೆ ಕೊಟ್ಟಿದ್ದೇವೆ. ಯುದ್ಧವನ್ನು ಜಯಶೀಲವಾಗಿ ನಡೆಯಿಸಲು ಈ ಕೃತ್ಯದ ಅಗತ್ಯ ಬಿದ್ದುದರಿಂದ ಲೋಕ ಮತವು ನಮಗೆ ವಿರುದ್ಧವಾಗಿರಲಾರದು. ಯುರೋಪಿನ ಪುಟ್ಟ ರಾಷ್ಟ್ರಗಳ ಸ್ವಾತಂತ್ರ್ಯ ರಕ್ಷಣೆಯೇ ನಮ್ಮ ಯುದ್ಧದ ಧ್ಯೇಯ. ಮಿತ್ರ ರಾಷ್ಟ್ರಗಳು ಜರ್ಮನಿಯ ಪಾಶವಿಕ ಹಿಂಸಾತ್ಮಕ ರೀತಿಯನ್ನು ಎಂದೂ ಅನುಕರಿಸುವಂತಿಲ್ಲ. ತಮ್ಮ ಧ್ಯೇಯವನ್ನು ಮಾನವತೆಯ ಉದಾಹರಣೆಯನ್ನಿಟ್ಟುಕೊಂಡೇ ಅವು ಸಾಧಿಸುವವು." ಎಂದು ಬ್ರಿಟನ್-ಫ್ರಾನ್ಸುಗಳು ಪ್ರಕಟಿಸಿವೆ. ನೂರು ಸ್ಥಳಗಳಲ್ಲಿ ಭದ್ರತೆ ನಡೆಯಿಸುತ್ತೇವೆ. ನೋರ್ವೆಯ ಹಡಗು ಮತ್ತು ಜನರ ನಿತ್ಯ ಕಾರ್ಯಗಳನ್ನು ಆತಂಕಿಸುವಂತಿಲ್ಲ ನಾವು ನಿಂತಿರುವ ಕ್ಷೇತ್ರಗಳನ್ನು ತಿಳಿಯಲಾಗುವಂತೆ ಬ್ರಿಟಿಷ ಹಡಗುಗಳ ಕಾವಲು ನಡೆಯುತ್ತದೆ. ನಮ್ಮ ಕ್ಷೇತ್ರದೊಳಗೆ ಪ್ರವೇಶಿಸುವ ಹಡಗುಗಳಿಗೆ ಸಾಕಷ್ಟು ಸಮಯದೊಡನೆ ಮುಂದಾಗಿ ಎಚ್ಚರಿಕೆ ಕೊಡುತ್ತೇವೆ—ಎಂದು ಆ ಪ್ರಕಟಣೆಯಲ್ಲಿದೆ.

ಜರ್ಮನಿ ಉರಿಕಾರುತ್ತಿದೆ!

ಮಿತ್ರರಾಷ್ಟ್ರಗಳ ಈ ಕೃತ್ಯಕ್ಕಾಗಿ ಜರ್ಮನಿಯು ತಟಸ್ಥ ರಾಷ್ಟ್ರಗಳ ಮೇಲೆ ಉರಿಕಾರುತ್ತಿದೆ ಅಲ್ಲಿಯ ಪತ್ರಿಕೆಗಳೆಲ್ಲಾ ಕಠೋರವಾಗಿ ಟೀಕಿಸಹತ್ತಿವೆ. 'ದಿಗ್ಬಂಧನಕ್ಕೆ ಸಹಾಯಮಾಡುವದೆಂದರೆ ವಿರೋಧಿಯ ಪಕ್ಷ ಹಿಡಿದಂತೆಯೇ ಸರಿ' 'ಬ್ರಿಟನಿಗೆ ಹೀನಾಯವಾದ ಹಂಚಿಕೆ ಇದು' 'ಮತ್ತೊಂದು ಭಯೋತ್ಪಾದಕ ವಿಷಯ.' ಎಂದೆಲ್ಲಾ ಅಲ್ಲಿಯ ಪತ್ರಿಕೆಗಳು ಗರ್ಜಿಸುತ್ತಿವೆ. ನೋರ್ವೆಯು ಈ ಸಂದರ್ಭದಲ್ಲಿ ತನ್ನ ತಾಟಸ್ಥ್ಯವನ್ನು ಉಳಿಸಿಕೊಳ್ಳಲು ಪ್ರಯತ್ನಿಸಲಿಲ್ಲವೆಂದೂ ಆ ಕಡೆಯ ರಾಷ್ಟ್ರಗಳಿಗೆಲ್ಲಾ ಇಂತಹ ವರ್ತನೆಯನ್ನು ಜರ್ಮನಿ ಸಹಿಸುವಂತಿಲ್ಲವೆಂಬುದನ್ನು ಕಲಿಸಿಯೇ ತೀರಬೇಕೆಂದೂ ಜರ್ಮನಿಯ ನಾಯಕರ ಅಭಿಪ್ರಾಯವಿರುವಂತಿದೆ. ನೋರ್ವೆ ಸ್ವೀಡನುಗಳನ್ನು ತಟಸ್ಥರೆಂದು ಮುಂದಕ್ಕೆ ಭಾವಿಸುವಂತಿಲ್ಲ. ಮಿತ್ರರಾಷ್ಟ್ರಗಳು ಸ್ಕಾಂಡಿನೇವಿಯ ರಾಜ್ಯಗಳನ್ನು ಒತ್ತಾಯಪಡಿಸುವವರೆಗೆ ಜರ್ಮನಿಯು ಕಾಯುವಂತಿಲ್ಲವೆಂಬ ಆತುರವೆದ್ದಿದೆ. ಜರ್ಮನಿ ಕೂಡಲೇ ನೋರ್ವೆಯಮೇಲೆ ಕೌತುಕಕರವಾದ ಧಾಳಿಯಿಡುವದೆಂದು ಖಂಡಿತವಾಗಿ ಹೇಳಬಹುದು.

ಚಿಕ್ಕ ರಾಷ್ಟ್ರಗಳ ಅಂತರ್ಧಾನವೆ?

ಜರ್ಮನಿಯ ಧಾಳಿಯನ್ನು ನೋರ್ವೆ ಯಿದಿರಿಸಲಾರದು. ಅದು ತಟಸ್ಥ ಧೋರಣೆಯನ್ನನುಸರಿಸಿದುದು ಜರ್ಮನಿಯ ಭಯದಿಂದ, ಫಿನ್ಲೆಂಡಿಗೆ ಮಿತ್ರರಾಷ್ಟ್ರಗಳ ಸೇನೆ ಹೋಗಗೊಡಲೊಪ್ಪದುದೂ ಆ ಭೀತಿಯಿಂದಲೇ. ಆದರೂ ಅದರ ಹಡಗುಗಳು ನಾಶವಾದಷ್ಟು ಬೇರಾವ ತಟಸ್ಥ ರಾಷ್ಟ್ರದವೂ ನಾಶವಾಗಿಲ್ಲ. ಸಮುದ್ರ ಒಲವೇ ಪ್ರಾಮುಖ್ಯವಾಗಿರುವ ನೋರ್ವೆಯಂತಹ ಕರಾವಳಿ ರಾಜ್ಯಕ್ಕೆ ಆ ನಷ್ಟವೇನು ಸಾಮಾನ್ಯವಲ್ಲ. ಜರ್ಮನಿ ಸೈನ್ಯವನ್ನಿದಿರಿಸಿದಲ್ಲಿ ನೋರ್ವೆ ಧ್ವಂಸವಾಗುವದಂತೂ ಖಂಡಿತ. ಮಿತ್ರರಾಷ್ಟ್ರಗಳ ಸಹಾಯ ಯಾಚಿಸಿದಲ್ಲಿಯೂ ನೋರ್ವೆಯು ರಣಕ್ಷೇತ್ರವಾಗಿ ಇತ್ತಂಡದವರ ಕಾಲ್ತುಳಿತಕ್ಕೆ ಸಿಕ್ಕಿ ನುಚ್ಚುನೂರಾಗ ಬೇಕಾಗುವುದು; ಈ ಯುದ್ಧಾಂತ್ಯದವರೆಗೂ ನರಕಯಾತನೆಯನ್ನನುಭವಿಸಬೇಕಾಗುವುದು. ಅದ್ದರಿಂದ ನೋರ್ವೆಯು ಜರ್ಮನಿಯನ್ನಿದಿರಿಸುವದು ಸಂಭವನೀಯವಾಗಿ ಕಾಣಿಸದಿಲ್ಲ. ಹಿಟ್ಲರನ ಬೇಟೆಯಾಟವನ್ನು ಕಾಣಬೇಕಾಗಿ ಅಂದು ಒಮ್ಮೆ ಜರ್ಮನಿಯು ಬಗಲೊಳಗಾಗುವದಂತೂ ಖಂಡಿತವೆನ್ನಬಹುದು. ಸ್ವೀಡನ್ ಮುಂತಾದ ಸ್ಕಾಂಡಿನೇವಿಯಾ ರಾಷ್ಟ್ರಗಳಿಗೂ ಇಂದಲ್ಲವಾದರೆ ನಾಳೆ ಅದೇ ಗತಿ ಬರುವ ಸಂಭವ ತೋರುತ್ತದೆ. ನೋರ್ವೆ ಜರ್ಮನಿಗೆ ದೊರೆತ ಮರುಕ್ಷಣವೇ ಅಪ್ರತ್ಯಕ್ಷವಾಗಿಯಾಗಲೀ ಪ್ರತ್ಯಕ್ಷವಾಗಿಯಾಗಲೀ ಸ್ಕಾಂಡಿನೇವಿಯವೆಲ್ಲ ಜರ್ಮನಿಯ ಆಶ್ರಯದಲ್ಲಿರಬೇಕಾಗುವದು.

ದೇಶದಲ್ಲೆಲ್ಲಾ ಸತ್ಯಾಗ್ರಹ ಸಮರ ಸಿದ್ಧತೆ

ಮಹಾತ್ಮರ ಸೂಚನೆಯನ್ನನುಸರಿಸಿ ಎಲ್ಲಾ ಕಡೆಗಳಲ್ಲಿಯೂ ಸತ್ಯಾಗ್ರಹ ಸಮಿತಿಗಳನ್ನು ಸ್ಥಾಪಿಸುವ ಕಾರ್ಯ ನಡೆಯಹತ್ತಿದೆ. ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಜಿಲ್ಲಾ ಸಮಿತಿಗಳಿಗೆಲ್ಲಾ ಸತ್ಯಾಗ್ರಹ ಸಮಿತಿ ಸ್ಥಾಪಿಸುವ ಸೂಚನೆಕೊಟ್ಟಿರುವರು. ಕರಾಚಿಯಲ್ಲಿ ನೂರು ಜನಕ್ಕೂ ಮಿಕ್ಕಿ ಸತ್ಯಾಗ್ರಹಿಗಳನ್ನು ತರಬೇತುಮಾಡುವ ಶಿಬಿರ ಸ್ಥಾಪಿಸಲ್ಪಟ್ಟಿದೆ. ಸಂಯುಕ್ತ ಸಂಸ್ಥಾನದ ನೈನಿಯಲ್ಲಿ ಸ್ಥಾಪಿಸಲ್ಪಟ್ಟ ಧುರೀಣರ ತಯಾರೀ ಶಿಬಿರವು ಭರದಿಂದ ಕಾರ್ಯಪ್ರವೃತ್ತವಾಗಿದೆ. ಸರದಾರ ಪಟೇಲರು ಗುಜರಾತಿನಲ್ಲೆಲ್ಲಾ ಸಂಚರಿಸಲು ಹತ್ತು ದಿನಗಳ ಕಾರ್ಯಕ್ರಮವಿಟ್ಟಿದ್ದಾರೆ.

ಎ. ಐ. ಸಿ. ಸಿ.ಯ ಸಂಘಟನೆ.

ಅಖಿಲಭಾರತ ಕಾಂಗ್ರೆಸ್ ಮಿತಿಯಲ್ಲಿ ಕಾಯಂ ಇನ್ಸ್‌ಪೆಕ್ಟರರ ದಲವೊಂದನ್ನು ರಚಿಸಲು ಮೌಲಾನಾ ಆಜಾದರು ನಿರ್ಧರಿಸಿದ್ದಾರೆ. ಹಾಗೆಯೇ ಮಹಿಳಾ ವಿಭಾಗವೊಂದನ್ನೂ ಎ. ಐ. ಸಿ. ಸಿ.ಯಲ್ಲಿ ತೆರೆಯಲಾಗುವದು. ಪಂಡಿತ ಜವಾಹಿರಲಾಲರಿಗೆ ಕಾಂಗ್ರೆಸಿನ ವಿದೇಶೀ ವ್ಯವಹಾರ ಸಂಬಂಧದ ಕಾರ್ಯದರ್ಶಿ ಸ್ಥಾನವನ್ನು ಕೊಡಲಾಗಿದೆ.

ಬೊಂಬಾಯಿ ಸಮಿತಿ

ಬೊಂಬಾಯಿಯ ಪ್ರಾಂತಿಕ ಕಮಿಟಿಯ ಕಾರ್ಯಕಾರೀ ಮಂಡಲಿಯು ಸತ್ಯಾಗ್ರಹ ಸಮಿತಿಯಾಗಿ ಮಾರ್ಪಾಟುಗೊಂಡಿತು. ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತರು ನವ ಡಿಲ್ಲಿಯಲ್ಲಿ ಮಹಿಳಾ ಸಭೆಯೊಂದರಲ್ಲಿ ಕಾಂಗ್ರೆಸಿನ ವಿಧಾಯಕ ಕಾರ್ಯಕ್ರಮವನ್ನು ವಿವರಿಸಿ ಭಾಷಣವಿತ್ತರು.

ರಾಷ್ಟ್ರೀಯ ವಾರ

ಡಿಲ್ಲಿ, ಅಲಹಾಬಾದ್, ಮದ್ರಾಸ, ಲಾಹೋರು, ಬೊಂಬಾಯಿ ಕಲ್ಕತ್ತಾ ಮೊದಲಾದ ದೊಡ್ಡ ಪಟ್ಟಣಗಳಲ್ಲೂ ಇತರ ಕಡೆಗಳಲ್ಲೂ ರಾಷ್ಟ್ರೀಯ ವಾರವು ಆಚರಿಸಲ್ಪಟ್ಟಿತು ಮೌಲಾನ ಅಬುಲ್ ಕಲಾಮ್ ಆಜಾದರ ಅಧ್ಯಕ್ಷದ ಸಭೆಯು ಕಾಂಗ್ರೆಸಿನ ವಿಧಾಯಕ ಕಾರ್ಯಕ್ರಮವನ್ನು ಮುಂದೊತ್ತುವರೆ ಕೇಳಿಕೊಂಡವರು. ಹಲವು ಕಡೆಗಳಲ್ಲಿ ನೂಲುವ ಪ್ರದರ್ಶನವಿದ್ದವು.

ಉಡುಪಿ

ಅಧ್ಯಾಪಕರ ಸಭೆ—ಉಡುಪಿ ಉಪಾಧ್ಯಾಯ ಸಂಘದ ವಾರ್ಷಿಕ ಸಭೆಯು ಮೈನಾರ್ಸ್ಕೂಲಿನಲ್ಲಿ ಇದೇ ತಾ. 6-4-40ನೇ ಶನಿವಾರ ಶ್ರೀ. ಶಂಕರನಾರಾಯಣರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿಯವರ ವರದಿವಾಚನವಾದ ಮೇಲೆ ಸ್ಥಳೀಕ ಬೋರ್ಡ್ ಹೈಸ್ಕೂಲಿನ ಡ್ರಿಲ್ ಮಾಸ್ತರ್ ಶ್ರೀ. ಬಿ. ಎಸ್. ಬಂಗರು ಭಾಷಣವಿತ್ತರು. ಸಿಕ್ಷಕರ ಗಳ ವಾಚನವಾದ ಮೇಲೆ ಉಪಾಧ್ಯಾಯರೊಬ್ಬರು ಉಪನ್ಯಾಸ ಕೊಡುವಾಗ ಅವರ ಕೆಲವು ಮಾತುಗಳಿಂದ ಅಧ್ಯಾಪಕರೆಬ್ಬಿಟ್ಟರು ಅಧ್ಯಕ್ಷರಿಗೊ-ಮು ಸಭೆಯಲ್ಲಿ ಬಿಸು ಗಲಭೆ ನಡೆದು ಭಾಷಣಕರ್ತರು ಭಾಷಣವನ್ನು ಅರ್ಧದಲ್ಲಿಯೇ ನಿಲ್ಲಿಸಬೇಕಾಗಿ ಬಂದುದು ವಿಷಾದಕರವೆಂದು ಒಂದು ಬಾತ್ಮಿ.

ಹರಿಕಥೆ—ಪರ್ಕಳದ ಶ್ರೀ ವಿಮಲಾನಂದ ದಾಸರವರು, ಶ್ರೀ ವೆಂಕಟೇಶ ದೇವಸ್ಥಾನ, ಶ್ರೀಅನಂತೇಶ್ವರ ದೇವಸ್ಥಾನ ಮತ್ತು ಮೋದನ್ ಶಾಲೆಗಳಲ್ಲಿ ಹರಿಕಥೆಗಳನ್ನು ಜರಗಿಸಿದರು.

ಫಸ್ಟ್ ಕ್ಲಾಸ್ ಪಾಸು—ಸಹಕಾರಿ ಸಂಘಗಳ ಕಾರ್ಯದರ್ಶಿ ಹಾಗೂ ಮೆನೇಜರರ ಟ್ರೈನಿಂಗ್ ಪರೀಕ್ಷೆಯಲ್ಲಿ ಬಡಗಬೆಟ್ಟು ಸಹಕಾರ ಸಂಘದ ಮೆನೇಜರ್ ಶ್ರೀ. ಕೆ. ಲಕ್ಷ್ಮಣ ಬಲ್ಲಾಳರು ಫಸ್ಟ್‌ಕ್ಲಾಸ್ ಪಾಸಾಗಿರುತ್ತಾರೆ.

ಸ್ಪೆಶಲ್ ಮಹಾಸಭೆ—ಉಡುಪಿ ತಾಲೂಕು ಎಲಿಮೆಂಟರಿ ಶಾಲಾ ಮೆನೇಜರರ ಸಂಘದ ಸ್ಪೆಶಲ್ ಮಹಾಸಭೆಯು ತಾ. 14-4-40ನೇ ಆದಿತ್ಯವಾರ ಅಪರಾಹ್ನ ಎರಡು ಗಂಟೆಗೆ ಉಡುಪಿ ಮುನಿಸಿಪಲ್ ಪ್ಲ್ಯಾನ್ ಶಾಲೆಯಲ್ಲಿ ಜರಗಲಿರುವುದು. ಸರಕಾರೀ ಗ್ರಾಂಟಿನಲ್ಲಿ ಉಂಟಾದ ಅಪಾರ ಕಡಿತದ ಕುರಿತು ಈ ಸಭೆಯಲ್ಲಿ ಆಲೋಚಿಸಲಾಗುವುದು. ಜಿಲ್ಲೆಯ ಪರಿಸ್ಥಿತಿ ವಿದ್ಯಾಸು ಸಂಬಂಧಕ್ಕೆ ಡೆಪ್ಯುಟೀಸ್ ಕಲೆಕ್ಟರ್ ಹಾಜರಿರುವದರಿಂದ ಜಿಲ್ಲೆಯ ಎಲ್ಲಾ ಶಾಲಾ ಮೆನೇಜರರು ಬೆತ್ತಪ್ಪನೆ ತಂತವನ್ನು ಸಲಹೆಗಳನ್ನೀಯಬೇಕಾಗಿ ಉಡುಪಿ ಮೆನೇಜರರ ಸಂಘದ ಕಾರ್ಯದರ್ಶಿಯವರ ವಿನಂತಿಯದೆ.

ಹಂಗಾರಕಟ್ಟೆ—ಇಲ್ಲಿಯ ಹರಿಜನ ಯುವಕ ಸಂಘದ ಸಭೆಯು ತಾ. 7-4-1940ನೇ ಆದಿತ್ಯವಾರ ಶ್ರೀ. ಬಿ. ಅಂತಯ್ಯ ಸೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಚಂದ್ರಶೇಖರ ಹೆಗಡೆ, ಬಾಬು ಮೇಸ್ತ್ರಿಯವರು ಭಾಷಣವಿತ್ತರು. ಅಧ್ಯಕ್ಷರು ಮೂಲ್ಕಿ ಪರಿಷತ್ತಿನ ವಿಷಯ ಮಾತಾಡಿದರು.

ಮೂಲ್ಕಿ ಹರಿಜನ ಪರಿಷತ್ತಿನಲ್ಲಿ ಯುವ ಹರಿಜನರೊಳಗೆ ಭೇದ

—'ಮೂಲ್ಕಿ ಹರಿಜನ ಪರಿಷತ್ತಿನಲ್ಲಿ ಭಾಗವಹಿಸಲು ಹರಿಜನರಲ್ಲಿ ಅತಿ ಕೆಳಜಾತಿಯ ಕೊರಗರದೊಂದು ದಶಾವತಾರ ಮೇಳವನ್ನು ನಾನು ಕೊಂಡು ಹೋಗಿದ್ದೆ. ಜಿಲ್ಲೆಯಲ್ಲಿ ಹರಿಜನ ಸಂಘಗಳಿದ್ದರೂ ಅವುಗಳ ಹರಿಜನೋದ್ಧಾರ ಕಾರ್ಯವು ಕೊರಗರನ್ನು ಬಿಟ್ಟೇ ಆಗಿತ್ತು. ಬ್ರಹ್ಮಾವರದಲ್ಲಿರುವ ಉಡುಪಿ ಹರಿಜನ ಸಂಘವೊಂದು ಮಾತ್ರ ಮಿಕ್ಕ ಹರಿಜನರಂತೆ ಕೊರಗರ ಉದ್ಧಾರವನ್ನು ತನ್ನ ಕಾರ್ಯಕ್ರಮದಲ್ಲಿ ಸೇರಿಕೊಂಡು ಬಂದಿದೆ. ಈ ಉದ್ದೇಶದಿಂದಲೇ ಬ್ರಹ್ಮಾವರದ ಸಂಘ ಕೊರಗರನ್ನೇ ಪ್ರತಿನಿಧಿಗಳಾಗಿ ಕರಕೊಂಡುಹೋಗಿದ್ದೆ ಆದರೆ ಮೂಲ್ಕಿ ಪರಿಷತ್ತಿನಲ್ಲಿ ಬೇರೆಲ್ಲಿಂದಲೂ ಕೊರಗರು ಬಂದಿರಲಿಲ್ಲ. ನಾನು ಕರಕೊಂಡು ಹೋದ ಕೊರಗರು ಆ ಹರಿಜನ ಪರಿಷತ್ತಿನಲ್ಲಿ ಕೂಡ ಅಸ್ಪೃಶ್ಯರಾಗಿಯೇ ಉಳಿದರು. ಅವರಿಗೆ ಕಾಲು ತೊಳೆಯಲು ಇತರರಂತೆ ನೀರು ಕೂಡ ಸಿಗಲಿಲ್ಲ. ಊಟಕ್ಕೆ ಪ್ರತ್ಯೇಕ ಚಪ್ಪರ ಏರ್ಪಡಿಸಿತ್ತು. ಕೊನೆಗೆ ನಾನೇ ಅವರ ಪಂಕ್ತಿಯಲ್ಲಿ ಊಟಕ್ಕೆ ಕುಳಿತು, 'ಅಂತ್ಯಾದಶನ' ಎಂಬ ಬಯಲಾಟವನ್ನು ಆಡಿ ತೋರಿಸಿದವರು ಕೊರಗರಾದರೂ ಪರಿಷತ್ತಿನವರ ವರದಿಯಲ್ಲಿ ಕೆಳಜಾತಿಯವರ ವಿವರವೂ ಇಲ್ಲದೆ 'ಬಯಲಾಟವಿತ್ತು' ಎಂದು ಮಾತ್ರ ಬರೆಯಲಾಗಿತ್ತು. ಜಿಲ್ಲಾ ಹರಿಜನ ಪರಿಷತ್ತಿನ ಕಾರ್ಯಕ್ರಮವನ್ನು ಮುಂದಾಗಿ ಪ್ರಕಟಿಸುವಾಗ, ಮಿಕ್ಕವುಗಳ ವಿವರವಿದ್ದಂತೆ ಕೊರಗರ ಬಯಲಾಟದ ಕುರಿತು, ಯಾರಿಂದ, ಎಲ್ಲಿಂದ ಎಂಬ ಸೂಚನೆಯೇ ಇರಲಿಲ್ಲ. ಕೊರಗರನ್ನು ಮುಟ್ಟಲೊಪ್ಪದ ಹರಿಜನರನ್ನು ಮಿಕ್ಕವರೆಲ್ಲರೂ ಸಹಾನುಭೂತಿಯಿಂದ ಕಂಡರಾದರೆ ಕೊರಗರು ಮಾತ್ರ ಮೇಲ್ಜಾತಿಯವರಿಗೂ ಇತರರಿಗೂ ಅಸ್ಪೃಶ್ಯರಾಗಿಯೇ ಉಳಿದರು. ಹರಿಜನ ಪರಿಷತ್ತಿನಲ್ಲಿಯೇ ಹೀಗಾಗುವದು ನೀತಿಯೆ?' ಎಂಬ ಸಾರದ ಪತ್ರಿಕೆಯೊಂದನ್ನು, ಉಡುಪಿ ತಾಲೂಕು ಹರಿಜನ ಸಂಘ ... ಕಾರ್ಯದರ್ಶಿಗಳಾದ ಶ್ರೀ. ಬಿ. ಅಂತಯ್ಯ ಸೆಟ್ಟಿ ಕಳುಹಿಸಿದ್ದಾರೆ.

ನಂದಳಿಕೆ—ಇಲ್ಲಿಯ ಉಪಾಧ್ಯಾಯರ ಸಭೆಯ ವಾರ್ಷಿಕೋತ್ಸವವು ತಾ 30-3-40 ಶನಿವಾರ ದಿನ ಸಾಯಂಕಾಲ ಘಂ. 7ಕ್ಕೆ ಶ್ರೀ. ಹಳಿಂಗೇಶ್ವರ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಬಾಲಕೃಷ್ಣ ಶೆಟ್ಟಿ, ಬಿ. ಎ. ಎಲ್. ಎಲ್. ಬಿ. ಪ್ಲೀಡರ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಕೆಲವು ಹಳ್ಳಿಗಳ ಶಾಲೆಗಳಿಂದ ಮಕ್ಕಳು ಈ ಉತ್ಸವದ ಆಟಗಳಲ್ಲಿ ಭಾಗವಹಿಸಿದ್ದರು. ಶಾಲಾ ಮಕ್ಕಳ ನರ್ತನ ಹರಿಕಥೆ ಮುಂತಾದ ಆಟಪಾಟಗಳು ಪ್ರೇಕ್ಷಕ ವೃಂದವನ್ನು ಮುಗ್ಧಗೊಳಿಸಿದವು. ಸಮಾರಂಭವನ್ನೂ, ಕೇಂದ್ರ ಸಭೆಯನ್ನೂ ಡೆಪ್ಯೂಟಿ ಇನ್ಸ್‌ಪೆಕ್ಟರ್ ಮತ್ತು ಅಟ್ಟೆಂಡೆನ್ಸ ಆಫೀಸರರವರು ಬಹಿಷ್ಕರಿಸಿದ ಬಗ್ಗೆ ವಿಷಾದವಿದೆ. ಈ ಸಮಾರಂಭವನ್ನು ಯಶಸ್ವಿಗೊಳಿಸಲು ಶ್ರೀ. ದಳಿಕೆ ನಾರಾಯಣ ಸೆಟ್ಟಿಯು ಮಾಡಿದ ಸಹಾಯ ಸ್ತುತ್ಯವಾದದ್ದು.

ಕರಂಗಿಪೇಟೆ—ಇಲ್ಲಿಯ ಶ್ರೀ ರಾಮಾಯಣ್ ಎಲಿಮೆಂಟರಿ ಶಾಲೆಯ ಇಪ್ಪತ್ತೈದನೇ ಶಾಲಾ ವಾರ್ಷಿಕೋತ್ಸವವು ತಾ. 16-4-40 ಮಂಗಳ ಶ್ರೀಯುತ ಯು. ಕೃಷ್ಣಪ್ಪ, ಎಮ್. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು

ಮಂಗಳೂರು

(ನಮ್ಮ ಸ್ವಂತ ವಾರ್ತಾದಾರರಿಂದ)

ಮಂಗಳೂರು, ತಾ. 8-4-1940.

[illegible] 12-4-40 [illegible] ಶ್ರೀ ಆರ್. ಎಸ್. ಸುಬ್ರಹ್ಮಣ್ಯ ಅಯ್ಯರ್‌ರವರು [illegible]

[illegible]

ರಾಷ್ಟ್ರೀಯ ಸಪ್ತಾಹ—ಮಂಗಳೂರಲ್ಲಿ ರಾಷ್ಟ್ರೀಯ ಸಪ್ತಾಹವು ಆಚರಿಸಲ್ಪಡುತ್ತಿದೆ. [illegible]

ಮೈದಾನದಲ್ಲಿ ಸಭೆ—[illegible]

[illegible] 6-30 [illegible]

[illegible]

ಮಜೂರರ ದಿನಾಚರಣೆ—ತಾ. 7ನೇ [illegible]

[illegible]

ದ. ಕನ್ನಡದಲ್ಲಿ ದೈಹಿಕ ಶಿಕ್ಷಣ-ಅದು ಹೇಗಿದೆ ಮತ್ತು ಹೇಗಿರಬೇಕು—

[illegible] 2. [illegible] 3. [illegible]

ದ. ಕ. ಉಪಾಧ್ಯಾಯರ ಸಂಘ—

[illegible]

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ

[illegible] 13ರ [illegible] 1919ನೇ [illegible]

ಉಡುಪಿ

I express my hearty thanks through the valuable columns of this paper to all the Institutions and persons that have so kindly afforded me a very pleasant stay in their midst for the last 10 days giving me very many opportunities for studying the economic, the social and the religious aspects of this District and its people, their customs, manners etc. from close quarters thus occasioning me to learn much about South Kanara and the South Kanarites. I regret at the same time my inability to thank them individually.

From what I have heard, from what I have seen, and from what I have been able to gather, I would observe that South Kanara is a pleasant part of the Country and to its people I pay the compliment of being industrious and enterprising on the whole. To give an instance, the financial concerns like the Canara Bank Ltd., The Canara Banking Corporation Ltd., The Canara Industrial & Banking Syndicate, Ltd., The Canara Mutual Assurance Co. Ltd., and similar other Institutions have been largely responsible in making South Kanara what it is to day. The work that these Institutions have turned out in the economic sphere is really praiseworthy. I wish them every success.

Even in the social sphere I am pleased to note, and very much impressed with the laudable service done by the Iswaranand Mahilashram, Bhagini Samaj and such other Institutions. These Institutions are of utmost importance for the welfare of the Society and the welfare of the Country and it is the duty of every thinking member of the society to do what little he can, towards the successful functioning of these Institutions and see that they serve the ends for which they are disigned. Therefore I take this oportunity to urge on the people of South Kanara to encourage and to build such Institutions more and more in as much as in such constructive work every man can and ought to play his part.

I am also much pleased with the useful work that is being turned out by the educational Institutions of South Kanara, such as the The Canara High School, Ganapathy High School, the Buntwal High School, and the St. Aloysius College of Mangalore, and heartily wish them every success in the days to come.

I also take this opportunity to thank all the trustees of the temples who were very kind in showing me round the various religious Institutions and explaining me their working.

Travel in South Kanara has been made very convenient and comfortable by the C. P. C. Co., Ltd., and other bus companies.

In conclusion I would have a word to all *these Institutions.* "Having gone through all these years so creditably, keep up to your progress". To the people too I earnestly apeal to unite as members of the same family, forgetting and rising above all petty differences of caste, creed or community and work with the spirit of "all for one, and one for all" and be an example to the Sister Districts. This is all I have to say.

I had a very pleasant and enjoyable stay in South Kanara I bid it farwell and in doing so I carry with me very happy memories, and wish that South Kanarites may have a soft corner for me in their hearts.

MANIPAL, 11th April 1940 } Sd L. S. Dabholkar.

(೨ನೇ ಪುಟದಿಂದ ಮುಂದರಿಸಿದ್ದು)

[illegible]

[illegible]

—ಯು. ಕೆ. ರಂಗ.

ದೀನಬಂಧು ಸಿ. ಎಫ್. ಎಂಡ್ರೂಸರವರು ದಿವಂಗತರಾದರು!

ಭಾರತದ ಸೇವೆಗಾಗಿ ಮೀಸಲಿದ್ದ ಜೀವನ.

ಭಾರತದ ಸೇವೆಯಲ್ಲೇ ಅಹರ್ನಿಶಿಯನ್ನು ಕಳೆದು, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಗೋರರ ಪರಮಾಪ್ತರಾಗಿ 'ದೀನಬಂಧು' ಎಂದು ಭಾರತೀಯರ ಗೌರವಾದರಗಳಿಗೆ ಪಾತ್ರರಾಗಿದ್ದ ಮಿ. ಸಿ. ಎಫ್. ಎಂಡ್ರೂಸರು ಇದೇ ತಾ. 5-4-1940ರಲ್ಲಿ ಅಪರಾಹ್ನ ಘಂಟೆ 1-40ಕ್ಕೆ ಕಲ್ಕತ್ತದ ಡಾ| ರಿಯೋರ್ಡನರ ಚಿಕಿತ್ಸಾಲಯದಲ್ಲಿ ದಿವಂಗತರಾದರು. ಕೆಲಸಮಯದಿಂದ ಅವರಿಗೆ ದೇಹ ಸ್ವಾಸ್ಥ್ಯವಿದ್ದಿಲ್ಲ. ಕವಿ ಠಾಗೋರರ ಶಾಂತಿನಿಕೇತನದಲ್ಲಿದ್ದವರು 'ಒಪರೇಶನ್' ಮಾಡಿಸಿಕೊಳ್ಳಲು ಜನವರಿ 27ರಲ್ಲಿ ಕಲ್ಕತ್ತಕ್ಕೆ ಬಂದಿದ್ದರು. ದ್ವಿತೀಯ ಶಸ್ತ್ರ ಕ್ರಿಯೆ ನಡೆದ ವೇಳೆಯೂ ಸ್ವಲ್ಪ ಗುಣ ಕಂಡು ಬಂತು. ಆದರೆ ಸ್ವಲ್ಪ ಸಮಯದಲ್ಲೇ ಪ್ರಕೃತಿ ಕೆಡಲಾರಂಭಿಸಿ ಎಂಡ್ರೂಸರು ಮರಣ ಹೊಂದಿದರು.

ಧುರೀಣರ ಹೃದಯ ಸಂಬಂಧಿಕ

ದೀನ ಬಂಧುಗಳು ಗಾಂಧೀ ಠಾಗೋರರ ಪ್ರೀತಿಯ ಗೆಳೆಯರು. ಮಹಾತ್ಮಾಗಾಂಧಿಯವರು ಫೆಬ್ರವರಿ 17ರಲ್ಲಿ ಅಲ್ಲಿಯವರೆಗೂ ಹೋಗಿ ಅವರನ್ನು ನೋಡಿ ಬಂದಿದ್ದರು. ಅವರ ಕೊನೆಯ ದಿವಗಳಲ್ಲಿ ಗಾಂಧಿಯವರು ಶ್ರೀ. ಮಹದೇವ ದೇಸಾಯಿಯವರನ್ನು ಕಾಹಿಲೆ ನೋಡಿಕೊಂಡು ಬರಲು ಕಳುಹಿಸುತ್ತಿದ್ದರು. ಕವಿ ಠಾಗೋರರು ತನ್ನ ಹೃದಯ ಸಂಬಂಧಿಯನ್ನು ಪ್ರತ್ಯಕ್ಷ ಕಾಣುವ ಆತುರದಲ್ಲಿದ್ದರೂ ಡಾಕ್ಟರರು ಪ್ರಯಾಣಕ್ಕಡ್ಡಿ ಹೇಳಿದುದರಿಂದ ತನ್ನ ಮಗ ರಥೀಂದ್ರನಾಥ ಠಾಗೋರರನ್ನು ಪತ್ನೀ ಸಮೇತ ಅಲ್ಲಿಗೆ ಕಳುಹಿಸಿ ಕೊಟ್ಟಿದ್ದರು. "ನನ್ನ ಹೃದಯವು ನಿಮ್ಮ ಜತೆಯಲ್ಲಿದೆ ನನ್ನ ಪ್ರಾರ್ಥನೆಗಳಲ್ಲಿ ನೀವೂ ಇದ್ದೀರಿ." ಎಂಬ ಸಂದೇಶವನ್ನು ಕವಿಗಳು ಎಂಡ್ರೂಸರಿಗೆ ಕಳುಹಿಸಿದ್ದರು. ಅವರನ್ನು ನೋಡಲು ಬರುವ ಜನವಾಹಿನಿಯ ಉಪದ್ರವನ್ನು ತಡೆಯಲಾಗದುದಕ್ಕಾಗಿ ಶಸ್ತ್ರಕ್ರಿಯೆಯವೇಳೆ ಆಸ್ಪತ್ರೆಯಲ್ಲಿದ್ದವರನ್ನು ನರ್ಸಿಂಗ್ ಹೋಮಿಗೆ ತರಲಾಗಿತ್ತು. ಅವರ ನಿಧನವಾರ್ತೆ ಕೇಳಿದೊಡನೆ ಭಾರತೀಯ ಧುರೀಣರಲ್ಲಿ ಅವರಿವರೆನ್ನದೆ ಎಲ್ಲರೂ ದುಃಖ ಸಂದೇಶ ಕಳುಹಿಸಿದ್ದಾರೆ. 'ಭಾರತವರ್ಷವೇ ಅಲ್ಲ, ಮಾನವ ವರ್ಗವು ಒಬ್ಬ ನಿಜ ಪುತ್ರ ಮತ್ತು ಯಥಾರ್ಥ ಸೇವಕನನ್ನು ಕಳಕೊಂಡಿತು. ಅವರು ಇಂಗ್ಲೆಂಡಿನ ಸುಪುತ್ರರಾಗಿದ್ದು ಭಾರತದ ದತ್ತಪುತ್ರರಾದವರು. ನಾನು ಸಿ. ಎಫ್. ಎಂಡ್ರೂಸರಿಗಿಂತ ಒಳ್ಳೆಯ ಮನುಷ್ಯ ಹಾಗೂ ಉತ್ತಮ ಕ್ರಿಶ್ಚಿಯನನ್ನು ಬೇರೆ ತಿಳಿದಿಲ್ಲ." ಎಂದು ಗಾಂಧಿಯವರಂದಿದ್ದಾರೆ. ಅವರ ದಹನ ಕಾರ್ಯದ ವೇಳೆ ಸುಭಾಸ್ ಬೋಸರೇ ಆದಿಯಾಗಿ ಸ್ಥಳೀಕ ಕಾಂಗ್ರೆಸ್ ಮುಖಂಡರೂ ಕೆಲಸಗಾರರೂ ಹಾಜರಿದ್ದರು.

ಬಡವರ ಸೇವೆಯೇ ಜೀವನದ ಗುರಿ

ಮಿ. ಸಿ. ಎಫ್. ಎಂಡ್ರೂಸರು ಇಂಗ್ಲಾಂಡಿನವರು. 35 ವರುಷಗಳ ಹಿಂದೆ ಭಾರತಕ್ಕೆ ಬಂದು ಅಂದಿನಿಂದ ಕೊನೆಯವರೆಗೂ ಉಚ್ಚ ದೇಶಭಕ್ತ ಭಾರತೀಯನೊಬ್ಬನು ಪ್ರೀತಿಸುವಷ್ಟೇ ಗಾಢವಾಗಿ ಭಾರತಾಂಬೆಯನ್ನು ಪ್ರೀತಿಸುತ್ತಿದ್ದರು. ಹಿಂದೂ ದೇಶದ ಸಂಬಂಧವಾದಾರಭ್ಯ ಅವರ ಜೀವನದ ಪ್ರತಿಯೊಂದು ಕ್ಷಣವೂ ಈ ದೇಶದ ಹಿತಚಿಂತನೆಯಲ್ಲೇ ಕಳೆಯಿತೆನ್ನಬಹುದು. ಶ್ರೀ ಮಹದೇವ ದೇಸಾಯಿಯವರು ಬರೆದಿರುವಂತೆ ತನ್ನ ದೇಶೀಯರ ಪಾಪದ ಫಲವಾಗಿ ತಾನು ಭಾರತದಲ್ಲಿರುವೆನೆಂದೂ ಭಾರತದ ಋಣ ಪರಿಹಾರಮಾಡುವ ಕೆಲಸವನ್ನಷ್ಟೇ ಶಕ್ತ್ಯನುಸಾರ ಮಾಡುತ್ತಿದ್ದೇನೆಂದೂ, ಭಾರತೀಯರಿಗಾಗಿ ದುಡಿಯುವಾಗ ಎಂಡ್ರೂಸರ ಭಾವನೆ. 'ಭಾರತೀಯರಿಗೆ ಆಪತ್ತೊದಗಿತು' ಎಂದಾಗಲೆಲ್ಲಾ ಎಂಡ್ರೂಸರಲ್ಲಿ ಹಾಜರಿ. ಒರಿಸ್ಸಾದಲ್ಲಿ ಬರಗಾಲ ಸಂಭವಿಸಿದಾಗ ಬಿಹಾರು, ಕ್ವೆಟ್ಟಾಗಳಲ್ಲಿ ಭೂಕಂಪವಾದಾಗ ದೀನಬಂಧುಗಳು ಮಾಡಿದ ಸೇವೆ ಅಷ್ಟಿಷ್ಟಲ್ಲ. ಫಿಜಿ, ದಕ್ಷಿಣಾಫ್ರಿಕ, ಕೆನ್ಯಾ ಮತ್ತು ಟಾಂಗನ್ಯಿಕಾಗಳಲ್ಲಿ ದಬ್ಬಾಳಿಕೆ ಸಹಿಸಲಾರದೆ ಹಿಂದೀಯರು ಚಳವಳ ಹೂಡಬೇಕಾಗಿ ಬಂದಿತ್ತು. ಅವೆಲ್ಲಾ ಕಡೆಗಳಲ್ಲಿ ಎಂಡ್ರೂಸರು ಭಾರತೀಯರ ಪಕ್ಷದಲ್ಲಿದ್ದರು. ಭಾರತೀಯರಂತೆಯೇ ಕಷ್ಟನಷ್ಟಗಳನ್ನು ಸಹಿಸಿದ್ದರು. 'ದೀನಬಂಧು' ಬಿರುದು ಅವರಿಗೆ ಗಾಂಧಿಯವರಿಂದ ದೊರೆತುದು. ಹಿಂದೀಯರ ಹಿತಾಕಾಂಕ್ಷಿಗಳಾದ ಬ್ರಿಟಿಷರು ಹಲವರಿರಬಹುದು. ಆದರೆ ದೇಶೀಯರಲ್ಲಿ ಪ್ರಥಮ ಸಾಲಿನವರ ಸರಿಸಮಿಗಿಲೆನಿಸಿ ಭಾರತದ ಸೇವೆಮಾಡಿದ ಒಬ್ಬ ಯುರೋಪಿಯನ್ ಮನುಷ್ಯನೆಂದರೆ ಎಂಡ್ರೂಸರೇ ಸರಿ. ಅವರ ನಿಧನದಿಂದ, ಭಾರತವು ಈ ಸಂದಿಗ್ಧ ಕಾಲದಲ್ಲಿ ಸೇವಾನಿಷ್ಠರೊಬ್ಬರನ್ನು ಕಳೆಕೊಂಡಂತಾಯಿತು.

ಪ್ರಕಟಣೆ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O.S.No. $\frac{18}{1935}$ R I.A No $\frac{18}{1940}$

ಚಂಪ್ಪಾಚಾರಿ ಹೆಗ್ಡೆ–ವಾದಿಯು, ಅರ್ಜಿದಾರರು

ಮತ್ತು

ಸೂರಪ್ಪಶೆಟ್ಟಿ ಪಗ್ಗೆರೆ–ಪ್ರತಿವಾದಿಯು, ಎದ್ರಿಯು

ಇವರೊಳಗೆ

1ನೇ ಪ್ರತಿವಾದಿ–ಸೂರಪ್ಪ ಶೆಟ್ಟಿ, ಉಪ್ಪೂರು, ಶೆಟ್ಟಿ ಮಗ, ಕಾರ್ಕಳ ತಾಲೂಕು ಜ್ಯೋಡು ಗ್ರಾಮದ ಕೋಂಕೆಬೈಲು ಎಂಬಲ್ಲಿರುವವ—

1ನೇ ಎದ್ರಿ.

ಇವರಿಗೆ—

ಮೇಲ್ಕಂಡ ವ್ಯವಹಾರದಲ್ಲಿ ಪಕ್ಕಸಲ್ ಮತ್ತು ಕೊಡತಕ್ಕದ್ದಾಗಿ ಇರುವ ಬರೆಕೊಂಡ ಹೊರಡಿಸಿದ ಅರ್ಜಿಯು ತಾ. 10-6-40ಕ್ಕೆ ಅಲ್ಲಿ ಮುಕ್ತರರಿಂದ ಆ ಕೋರಿಕೆ ನಿಮ್ಮ ಆಕ್ಷೇಪಣೆ ಇದ್ದರೆ ಆದ್ದರಿಂದ ಆ ಕೋರ್ಟಿನ ಮುಂದೆ ಹಾಜರಾಗಿ ಉತ್ತರಿಸಿಕೊಳ್ಳತಕ್ಕದ್ದೆಂತಲೂ ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲಾಗುವುದೆಂತಲೂ ತಿಳಿಯಪಡಿಸಲಾಗಿದೆ. ಕೋರ್ಟಿನ ಮುದ್ರೆ ಪ್ರಕಾರ

M. S. Adhikari B. A. LL. B.,

Pleader for Petitioner.

ಕಾರ್ಕಳ, 4-4-1940

ವ್ಯವಹಾರ ವೈಚಿತ್ರ್ಯ!

ಹಿಟ್ಲರನ ಹೆಸರೆತ್ತದ ಪತ್ರಿಕೆ

ಇಂಗ್ಲೆಂಡಿನಲ್ಲಿ 'ಲಂಡನ್ ಗಝೆಟ್' ಎಂಬ ಪತ್ರಿಕೆ 1666ರಲ್ಲಿ ಹುಟ್ಟಿದುದು. ಅದರಲ್ಲಿ ವೈಶಿಷ್ಟ್ಯವೊಂದಿದೆ. ಇತರ ಪತ್ರಿಕೆಗಳು ಬಿಸಿಬಿಸಿ ವಾರ್ತೆಗಳನ್ನು ಕೊಡುವದರಲ್ಲಿ ಮೇಲಾಟ ಹೂಡಿರುವಾಗ ಈ ಪತ್ರಿಕೆಯು ಸುದ್ದಿಗಳು ಹಳೆಯವಾಗುವವರೆಗೆ ಕಾದು ಮತ್ತೆ ಪ್ರಕಟಿಸುತ್ತದೆ. ಐದನೇ ಜೋರ್ಜರು ಸತ್ತು ನಾಲ್ಕು ದಿನಗಳಾದಾಗ ಆ ಪತ್ರಿಕೆಯಲ್ಲಿ ವಾರ್ತೆ ಬಂತು. ಚಕ್ರವರ್ತಿಗಳ ಪಟ್ಟಾಭಿಷೇಕ ಮಹೋತ್ಸವದ ಪೂರ್ಣ ವಿವರವನ್ನು ಈ ಪತ್ರಿಕೆ ಪ್ರಕಟಿಸಿದುದು ಆರು ತಿಂಗಳ ನಂತರ! ಅಷ್ಟೇ ಅಲ್ಲ, ಬ್ರಿಟಿಷರು ಯುದ್ಧ ಸಾರಿದ ದಿನ ಆ ಪತ್ರಿಕೆಯಲ್ಲಿ ಎಂದಿನದೋ ಒಂದು ಹಳೇ ವಾರ್ತೆ ಬಂದಿತ್ತು; ಈ ವಾರ್ತೆ ಮತ್ತೊಂದು ದಿನ ಬಂತು. ಇನ್ನೂ ವಿಚಿತ್ರವೆಂದರೆ 'ಲಂಡನ್ ಗಝೆಟ್' ಈ ವರೆಗೂ ಹಿಟ್ಲರನ ಪ್ರಸ್ತಾಪವೆತ್ತಿದುದಿಲ್ಲ; ಮುದ್ರಣಾಲಯದ ಮೊಳೆ ಜೋಡಿಸುವವರು 'Hitler' ಎಂಬ ಅರಕ್ಷರಂಗಳನ್ನು ಒಮ್ಮೆಯೂ ಒಟ್ಟಿಗೆ ಇಟ್ಟಿದ್ದಿಲ್ಲ! ಹಿಟ್ಲರನ ಸುದ್ದಿ ಸೂಚಿಸಬೇಕಾದರೆ ಅವನ ಅವತಾರ ಪೂರ್ತಿ ಮುಗಿದು ಆರು ತಿಂಗಳಾದರೂ ಕಳೆಯಬೇಕೇನೋ!

ಅರ್ಧ ಪೈ ಅರೆಜೀವಮಾಡಿತು!

ಅರ್ಧ ಪೈ ಅಧಿಕಾರಿಗಳನ್ನು ಕೂಡ ದಣಿಸಬಲ್ಲುದು! ವಿಸಾರತ್ ಸಿಟಿಮೆಜಿಸ್ಟ್ರೇಟರಿಗೆ ಇಂತಹ ಸಂದರ್ಭವೊಂದು ಒದಗಿತು. ವಾರೀಸುದಾರರಿಲ್ಲದವನೊಬ್ಬನ ಹಣ ಸಿಕ್ಕಿತು. ಹಣದ ಪೈಯಲ್ಲಿ ಇತರ ಚಿಲ್ಲರೆ ಹಣದೊಂದಿಗೆ ಅರ್ಧ ಪೈ ನಾಣ್ಯವೊಂದಿತ್ತು. ಹಕ್ಕುದಾರರಿಲ್ಲದ ಹಣವು ರಾಜ್ಯದ ಹಣವಷ್ಟೆ. ಅದನ್ನು ಡಿಪೋಸಿಟು ಇಡಲು ಖಜಾನೆಗೊಪ್ಪಿಸಲು ಹೋದಾಗ ಅಲ್ಲಿಯ ಅಧಿಕಾರಿಗಳು ಅರ್ಧವನ್ನು ತೆಗೆದುಕೊಳ್ಳಲೊಪ್ಪಲಿಲ್ಲ. ಲೆಕ್ಕಕ್ಕೆ ಒಡಿಯುವ ಬಗೆ ಹೇಗೆ? ಈ ಸಂಗತಿಯನ್ನು ಮೆಜಿಸ್ಟ್ರೇಟರ ತೀರ್ಮಾನಕ್ಕೊಪ್ಪಿಸಲಾಯಿತು. ಅವರು ಬಹಳವಾಗಿ ಯೋಚಿಸಿದರು. ಅನಾಥ ಹಣದ ಹಣವದು. ಅದಕ್ಕೆ ಅರ್ಧ ಪೈಯನ್ನು ಏನೆಂದು ಕೂಡಿಸುವದು. ತೆಗೆದು ಬಿಡೋಣವೆಂದರೆ ಸರಕಾರದ ಹಣವಲ್ಲವೆ ಮುಟ್ಟಲು ಸಾಧ್ಯವುಂಟೆ? ಕೊನೆಗೆ ಆ ಹಣವು ನಾಝರ ವಶದಲ್ಲಿರಬೇಕೆಂದು ಮೆಜಿಸ್ಟ್ರೇಟರು ತೀರ್ಪು ಕೊಟ್ಟರು. ಸರಿ ಈಗ ನಾಝರನ ತಲೆ ಕೆಡಹಾಗುವ ಸರ್ತಿ. ಅರ್ಧ ಪೈಯನ್ನು ಕಂಡ ನಾಝರನು ಮೆಜಿಸ್ಟ್ರೇಟರಲ್ಲಿಗೆ ಓಡಿ ಬಂದ ತನ್ನ ಜೇಬಿನಿಂದ ಅರ್ಧ ಪೈಯನ್ನು ಕೂಡಿಸಿಯಾದರೂ ಇಡುವೆನೆಂದ. ಆದರೆ ಅದು ಸಾಧ್ಯವಿಲ್ಲ. ಕೊನೆಗೆ ಮೆಜಿಸ್ಟ್ರೇಟರೊಂದು ತೀರ್ಮಾನ ಕೊಟ್ಟರು. ಅರ್ಧ ಪೈಯನ್ನು ನಾಝರ್ ತನ್ನಲ್ಲೇ ಅಮಾನತಾಗಿ ಇಟ್ಟುಕೊಳ್ಳಬೇಕು; ಇನ್ನೊಂದು ಅರ್ಧ ಪೈ ಬಂದರೆ ಒಂದು ಪೈ ಮಾಡಿ ಖಜಾನೆಗೊಪ್ಪಿಸಬೇಕು. ಹಾಗೂ ಸಮಸ್ಯೆ ಬಗೆ ಹರಿಯಿತು. ಇನ್ನು ಮುಂದೆ ಏನೂ ಅಧಿಕಾರವಿಲ್ಲದವರನ್ನು ಅರೆಕಾಸಿನವ! ಎಂದು ಬೈಯಬೇಡಿ!

ಮನುಷ್ಯ ಪಾರ್ಸೆಲ್!

ಮಾವನ ಮನೆಗೆ ಹೋಗುವದಕ್ಕಾಗಿ ಮುಂದೆ ಮಹಾ ಅದ್ಭುತಗಳನ್ನು ಸಾಧಿಸುವವರಿದ್ದಾರೆ. ಈ ಸಂಬಂಧದ ಕಾದು ವರೆಗಿನ ದಾಖಲೆಗಳನ್ನೆಲ್ಲಾ ಹಿಂದೆ ಹಾಕುವ ಕಥೆಯೊಂದು ಇತ್ತೀಚೆಗೆ ನಡೆಯಿತು. ಗ್ರೆನ್ನ್‌ಸೆ ಎಂಬ ಊರಲ್ಲಿ ಮೇಜರ್ ಎಲ್. ವಾಮರ್ ಎಂಬವನಿದ್ದಾನೆ. ಆತನ ಹೆಂಡತಿ ತನ್ನ ಊರಾದ ಅಲ್ಡರ್ನೇ ಎಂಬಲ್ಲಿಗೆ ಹೋಗಿದ್ದಳು. ಹೆಂಡತಿ ಅಲ್ಲಿದ್ದರೆ ಮಾವನ ಮನೆಯ ಯೋಗಕ್ಷೇಮ ತಿಳಿಯುವ ಆತುರ ಹೆಚ್ಚುವದೆಂತಲ್ಲ. ಅಂತೆಯೇ ವಾಮರ್‌ನಿಗೆ ಹೆಂಡತಿಯೂರಿಗೆ ಹೋಗುವ ಮನಸಾಯಿತು. ಅವನ ದುರ್ಭವಿಷ್ಯದಲ್ಲಿ 'ಪ್ರಯಾಣಾನುಕೂಲತೆಯಿಲ್ಲ' ಎಂದಿತ್ತೋ ಏನೋ! ಹೊರಟಷ್ಟು ಸಲವೂ ಬೋಟು ಸಿಕ್ಕದೆ ಹೋಗುತ್ತಿತ್ತು. ಆ ಊರಿನ ಬೋಟುಗಳು ವಾರದಲ್ಲಿ ಮೂರೇ ದಿನ; ಒಮ್ಮೆ ನಾಲ್ಕು ಮಂದಿ ಪ್ರಯಾಣಿಕರನ್ನು ಮಾತ್ರ ಕೊಂಡು ಹೋಗುತ್ತಿತ್ತು. ಹಲವು ಬಾರಿ ನಿರಾಶೆಹೊಂದಿದ ಮೇಲೆ ಕೊನೆಗೆ ಆತ ಒಂದು ಉಪಾಯ ಮಾಡಿದ. ತನ್ನನ್ನು ಪಾರ್ಸೆಲ್ ಆಗಿ ಕಳುಹಿಸಬೇಕೆಂದು ಪೋಸ್ಟಲ್ ಅಧಿಕಾರಿಗಳಿಗೆ ಬರೆದ. ಅಧಿಕಾರಿಗಳು ಮೊದಲು ಶಂಕಿಸಿದರು; ಕೊನೆಗೆ ಒಪ್ಪಿದರು. ಈ ಪತ್ನೀಪ್ರೇಮಿಯ ಅಂಗೀ ಗುಂಡಿಯ ತೂತಿಗೆ ಪೋಸ್ಟು ಲೇಬಲ್ ತಗಿಸಿ ಒಪ್ಪಟೆಪ್ಪಾಲು ಪೇದೆಯ ಸ್ವಾಧೀನದಲ್ಲಿ ಅವನನ್ನು ಅಲ್ಡರ್ನೇಗೆ ರವಾನಿಸಲಾಯಿತು. ಆ ಬಾರಿಯ ಬೋಟಿನಲ್ಲಿ ಐದು ಮಂದಿ ಪ್ರಯಾಣಿಕರಾದರು. ಆದರೆ ವಾಮರ್ ಮನುಷ್ಯನಲ್ಲ–ಪಾರ್ಸೆಲ್! 'ನೀವೇ ಸುಟಪ್ಪಾಲಿನಲ್ಲಿ ಬಂದಿರಾ?' ಎಂದು ವಿಚಾರಿಸುವ ಕಾಲವೂ ಮುಂದೆ ಒದರಬಹುದು!

ನೋಟೀಸು

ಉಡುಪಿ ಡಿ| ಮು| ಕೋರ್ಟಿನಲ್ಲಿ

O. S. $\frac{44}{39}$ R E P. $\frac{...}{...}$

R. E. P. $\frac{1033}{39}$

ರಾಮಚಂದ್ರ ಸೋಮಯಾಜಿ —ಅರ್ಜಿದಾರ,

ಮತ್ತು

1 ವೆಂಕಟ್ರಮಣ ಸೋಮಯಾಜಿ, 2. ರಾಮಚಂದ್ರ ಸೋಮಯಾಜಿ, ಸೂರ್ಯನಾರಾಯಣ ಸೋಮಯಾಜಿರ ಮಕ್ಕಳು, ಮೂಡಬೆಳ್ಳೆ ಗ್ರಾಮದ ಬಿತ್ತ— —ಎದ್ರಿರು.

ಇವರೊಳಗೆ

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ—

ಅರ್ಜಿದಾರನೆ 1, 2ನೇ ಎದ್ರಿಯರು ರಿ. ಸಿ. ಬರಕೊಟ್ಟ ಭೋಗ್ಯಾದಿ ಇವರಿಗೆ ಕಾರಣವಾದ ಆಸ್ತಿಗಳ ಪೈಕಿ ಕೆಲವು ಆಸ್ತಿಗಳು ಡಿಕ್ರಿ ವಿಧಿಪ್ರಕಾರ ಏಲಂ ಆಗಿ ಡಿಕ್ರಿ ಸವೇಜು ಹೋಗುತ್ತಾ ಹಳ್ಳಿಯ ಐವೇಜು ರೂಪಾ 63-11-0ನ್ನು ತನ್ನ ಭೋಗ್ಯಾದಿ ದಸ್ತಾವೇಜು ಪ್ರಕಾರ ಬರತಕ್ಕ ಹಣದ ಪೈಕಿಗೆ ಕೂಡಿಸಬೇಕಾಗಿ ಅರ್ಜಿದಾರನು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 19-4-40ಕ್ಕೆ ತನಿಗೆ ಇಟ್ಟಿದೆ. ಆ ಕುರಿತು ಆಕ್ಷೇಪಣೆ ಇದ್ದರೆ ಸದ್ರಿ ದಿವಸ ಹಾಜರಾಗಿ ಸಾಬೀತುಮಾಡಿಕೊಳ್ಳತಕ್ಕದ್ದು. ತಪ್ಪಿದ್ದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

ಉಡುಪಿ, ದ. ಕ] **K. L. Aithala.**
ತಾ. 4-4-40] ಅರ್ಜಿದಾರರ ಕಡೆ ವಕೀಲ

ಗ್ರಾಮೋದ್ಯೋಗಗಳೂ ಯಂತ್ರವಾದವೂ!

ಯಂತ್ರವಾದದ ಮೇಲೆ ಗಾಂಧೀವಾದದ ದೃಷ್ಟಿಕೋನ.

(ಲೇಖಕರು:- ಶ್ರೀ ಜಿ. ಸಿ ಕುಮಾರಪ್ಪ.)

ಮಹಾತ್ಮರ ಪ್ರೇರಣೆಯಿಂದ ಇಂದು ಭಾರತದಲ್ಲಿ ಔದ್ಯೋಗೀಕರಣದ ಕೂಗೆದ್ದಿದೆ ಮನುಷ್ಯನ ಶಕ್ತಿಯನ್ನೂ ಕಿತ್ತುಕೊಂಡ ಅವನನ್ನು ನಿರುದ್ಯೋಗಿಯನ್ನಾಗಿ ಮಾಡಿರುವ ವಿಚಾರವಾದ ಈ ಲೇಖನವು ವಾಚಕರಿಗೆ ರುಚಿಕರವಾಗಿರುವುದು. ಮನುಷ್ಯನ ಅಯೋಗ್ಯತೆ, ನಿರುದ್ಯೋಗಗಳನ್ನು ದೂರಮಾಡುವ ಏಕಮಾತ್ರ ಉಪಾಯವೆಂದರೆ ಗ್ರಾಮೋದ್ಯೋಗಗಳ ಪ್ರಚಾರವೇ. ಅದು ಮನುಷ್ಯರನ್ನು ಸಬಲನೂ, ಸಕ್ರಿಯನೂ, ಸುಬುದ್ಧಿವಂತನೂ ಮತ್ತು ಕುಶಲನೂ ಆಗುವಂತೆ ಮಾಡುವುದು

ಆಯುಧ ಸಾಮಗ್ರಿಗಳನ್ನು ಉಪಯೋಗಮಾಡುವ ಪಶುವೆಂದರೆ ಮನುಷ್ಯ. ಪ್ರಾಕೃತಿಕ ರೂಪದಿಂದ ನೋಡಿದಲ್ಲಿ ಮನುಷ್ಯನ ಆಯುಧಗಳಿಗೊಂದು ಮಿತಿ ಇದೆ. ಅವನಲ್ಲಿ ಉದ್ದವಾದ ಉಗುರುಗಳಾಗಲೀ, ರೆಕ್ಕೆಗಳಾಗಲೀ, ಶಾಖವಾದ ಚರ್ಮದ ಹೊದಿಕೆಯಾಗಲೀ ಇಲ್ಲ. ಆದರೆ ಇವೆಲ್ಲ ಅಭಾವಗಳನ್ನು ಪೂರ್ತಿಮಾಡಲು ಅವನಲ್ಲಿ ಉತ್ತಮ ದರ್ಜೆಯ ಬುದ್ಧಿಯೊಂದಿದೆ. ಈ ಯಂತ್ರಯುಗದಲ್ಲಿ, ಮನುಷ್ಯನು ಭೂಮಿಯನ್ನು ರೈಲು ಮೋಟಾರುಗಳಿಂದಲೂ, ಗಾಳಿಯನ್ನು ವಿಮಾನಗಳಿಂದಲೂ, ಸಮುದ್ರವನ್ನು ಹಡಗಿನಿಂದಲೂ ತನ್ನ ವಶಪಡಿಸಿಕೊಂಡಿರುವನು. ಇವುಗಳೆಲ್ಲಕ್ಕಿಂತ ಮನುಷ್ಯನು ಉತ್ತಮವಾದ ಆಯುಧಗಳಿಂದ ಸುಸಜ್ಜಿತನಾಗಿದ್ದಾನೆ. ಸಾಧನಗಳೆಲ್ಲವೂ ಒಟ್ಟುಗೂಡಿದುವೆಂದರೆ ಮನುಷ್ಯನು ಕುದುರೆಗಿಂತ ಹೆಚ್ಚು ತೀವ್ರಗಾಮಿಯೂ, ಆನೆಗಿಂತ ಅಧಿಕ ಬಲಿಷ್ಠನೂ, ಸಿಂಹಕ್ಕಿಂತ ಹೆಚ್ಚು ಭಯಂಕರನೂ ಆಗುವನು. ಅನೇಕ ವಿಧವಾದ ಆಯುಧಗಳ ಸಂಯೋಗದಿಂದ ಮನುಷ್ಯನು ವೈಜ್ಞಾನಿಕರಿಗಿಂತ ಹೆಚ್ಚು ಸೂಕ್ಷ್ಮವಾಗಿ ಆಯುಧಗಳನ್ನುತ್ಪತ್ತಿಮಾಡಿದಾಗ, ನಮಗೆ ಪ್ರಕೃತಿಯ ಅತ್ಯಧಿಕ ಜನ್ಮಜಾತ, ದುರ್ಬಲ ಅಂಗವು ಯಾವ ರೀತಿ ಪ್ರಕೃತಿಯ ಸಾಮ್ರಾಟನಾಗುವುದೆಂಬುದು ಗೊತ್ತಾಗುವುದು.

ಆಯುಧಗಳೊಡೆಯ!

ಎಲ್ಲಿಯ ವರೆಗೆ ಮನುಷ್ಯನು ಈ ಆಯುಧಗಳಿಗೆ ರಾಜನಾಗಿರುವನೋ, ಅಲ್ಲಿಯ ವರೆಗೂ ಅವನ ಉನ್ನತಿಯಾಗುತ್ತಿರುವುದು. ಆದುದರಿಂದ ಆಯುಧಗಳನ್ನು ಉಪಯೋಗಿಸುತ್ತಿರುವವನೇ ವಿಶ್ವದ ಅಧಿಪತಿಯಾಗಿರುವುದು. ಅವರೂ ಅನೇಕರು ಇವುಗಳ ಮೂಲಕವೇ ಇತರರ ಶೋಷಣೆಗೂ ಯತ್ನಮಾಡುತ್ತಿರುವರು. ಇದು ವರೆಗೆ ಇವುಗಳನ್ನು ರಚನಾತ್ಮಕ ಕಾರ್ಯಗಳಲ್ಲಿ ಉಪಯೋಗಿಸುತ್ತಿದ್ದರು. ಏಕೆಂದರೆ ಎಲ್ಲಿಯ ವರೆಗೆ ಆಯುಧಗಳು ನಮ್ಮ ಪ್ರದರ್ಶನದ ಸಾಧನೆಯಾಗಿದ್ದುವೋ ಅದು ವರೆಗೆ ಅವು ನಮ್ಮ ಮೇಲೆ ತಮ್ಮ ಪ್ರತಿಕ್ರಿಯೆಯನ್ನಿಟ್ಟಿರುತ್ತಿದ್ದವು ಇದೆಲ್ಲವೂ ಮನುಷ್ಯನು ಆಯುಧಗಳ ರಾಜನಾಗಿರುವ ವರೆಗೆ!

ಮನುಷ್ಯನು ಉತ್ಪತ್ತಿಯ ಕೇಂದ್ರೀಕರಣವನ್ನು ತನ್ನದನ್ನಾಗಿಮಾಡಿಕೊಂಡ ಮೇಲೆ ತನ್ನವರೇ ಆದ ಸಹೋದರರ ಶೋಷಣೆಮಾಡುವ ಆವಿಷ್ಕಾರಮಾಡಿ, ಮತ್ತೊಂದು ಆಯುಧವನ್ನು ಕಂಡುಹಿಡಿದು ವ್ಯಕ್ತಿಯ ಯೋಗ್ಯತೆಯನ್ನು ನಾಶಪಡಿಸಿಬಿಟ್ಟರು. ಮೊದಲು ಆಯುಧಗಳ ಮೂಲಕ ತನ್ನ ಕೆಲಸದಲ್ಲಿ ತೋರಿಸುತ್ತಿದ್ದ ಕಲೆಯು ನಷ್ಟವಾಗಿ ಅದರ ಜಾಗವನ್ನು ಯಂತ್ರವು ಆಕ್ರಮಿಸಿಬಿಟ್ಟಿತು. ಹಿಂದೆ ಕಾಲಕ್ಕೆ ಸರಿಯಾಗಿ ಯಂತ್ರಗಳಿಗೆ ಆಹಾರವನ್ನೊದಗಿಸುತ್ತಿದ್ದವನು ಇಂದು ಅವುಗಳ ಗುಲಾಮನಾಗಿಹೋಗಿದ್ದಾನೆ ಕಾರ್ಖಾನೆಯ ಕೂಲಿಗಾರರನ್ನು ಕೆಲವು ವೇಳೆ ಕುಶಲರಾದ ಕೆಲಸಗಾರರೆಂದು ಕರೆಯುವರು. ಆದರೆ ಇದು ಕೇವಲ ಭ್ರಮೆಮಾತ್ರವೇ, ಯಂತ್ರಗಳ ಆವಶ್ಯಕತೆಗಳನ್ನು ಪೂರ್ಣಮಾಡುವ ಮನುಷ್ಯನನ್ನು ಕುಶಲನಾದ ಕೆಲಸಗಾರನೆಂದು ಕರೆಯುವುದು ದೊಡ್ಡ ತಪ್ಪು.

ಯಂತ್ರಗಳ ವರಪ್ರಸಾದ

ಯಂತ್ರವಾದವು ಉದ್ಯೋಗಗಳಲ್ಲಿ ಮನುಷ್ಯತ್ವದ ಭಾಗವನ್ನೇ ತೆಗೆದು ಬಿಸಾಡಿದೆ. ಇದರಿಂದ ಸುಖವು ಒಂದು ನಿಶ್ಚಿತ ರೂಪವನ್ನೇ ಧರಿಸಿದೆ, ಯಂತ್ರಗಳಿಂದ ಮನುಷ್ಯನ ಸ್ನಾಯುಗಳು ಅಚೇತನವಾಗುವವು. ಅದನ್ನು ಶಾಂತಗೊಳಿಸಲು ಮನುಷ್ಯನು ಬೀಡಿ, ಸಿಗರೇಟು ಮುಂತಾದುವನ್ನು ಉಪಯೋಗಿಸುವನು. ಇವೆಲ್ಲವೂ ಯಂತ್ರವೆಂಬ ಮಹಾಮಾಯಿಯವರ ಪ್ರಸಾದ. ಮನುಷ್ಯನನ್ನು ಮನುಷ್ಯತೆಯಿಂದ ಪತಿತನನ್ನಾಗಿಮಾಡುವವರ ಪ್ರಭುವು ಮನುಷ್ಯನನ್ನು ಸೃಷ್ಟಿಯ ಸ್ವಾಮಿಯನ್ನಾಗಿ ಪ್ರಕಟಮಾಡಿದನು. ಆದರೆ ಯಂತ್ರಗಳು ಪ್ರಕೃತಿದತ್ತವಾದ ನಿಯಮಗಳನ್ನು ಬದಲಾಯಿಸಿವೆ ಮನುಷ್ಯನು ಹೃದಯಹೀನನೂ, ಪಾಷಾಣ ಹೃದಯಿಯೂ, ವಿಚಾರಹೀನನೂ, ಯಂತ್ರಗಳ ದಾಸನೂ ಆಗಿರುವನು. ಯಂತ್ರಗಳು ಮನುಷ್ಯನನ್ನು ಅವನ ಮನುಷ್ಯತ್ವದಿಂದ ದೂರಮಾಡಿವೆ. ಮಾನವತ್ವದ ಪತನವೇ ಯಂತ್ರಗಳು ಕೊಟ್ಟಿರುವ ವರಪ್ರಸಾದ.

ಪತನದಿಂದ ಪತನಕ್ಕೆ!

ಕಂಡಿರಾ ಯಂತ್ರಗಳ ಹಾನಿಯನ್ನು? ನಾವು ವಯಸ್ಕರ ಶಿಕ್ಷಣದ ಕಡೆಗೆ ಗಮನಕೊಟ್ಟು, ಮನುಷ್ಯನ ವ್ಯಕ್ತಿಗತ ಯೋಗ್ಯತೆಯನ್ನು ಪ್ರಕಾಶಿಸದೆ ಹೋದಲ್ಲಿ, ಈ ಯಂತ್ರವಾದ ನಮ್ಮನ್ನು ಪತನದಿಂದ ಪತನದ ಕಡೆಗೆ ಒಯ್ಯುತ್ತಾ ಹೋಗುವುದು. ಮನುಷ್ಯ ಜೀವನದಲ್ಲಿ ಯಂತ್ರಗಳಿಗೆ ಸ್ಥಾನವಿದ್ದೇ ಇದೆ. ಆದರೆ ಎಂತಹ ಯಂತ್ರಗಳು ಬೇಕು? ಮನುಷ್ಯರ ದಾಸರಾಗಿರುವ ಯಂತ್ರಗಳು ಬೇಕೇ ಹೊರತು, ಮನುಷ್ಯರನ್ನು ತಮ್ಮ ದಾಸರನ್ನಾಗಿ ಮಾಡಿಕೊಳ್ಳುವಂತಹವುಗಳಲ್ಲ.

ಇಂದು ಉತ್ಪತ್ತಿಯ ರೀತಿಗಳ ಕೇಂದ್ರೀಕರಣವಾಗಿರುವಾಗ ಮನುಷ್ಯನು ತನ್ನ ಅಧಿಕಾರವನ್ನೆಲ್ಲ ಸಮರ್ಪಿಸಿಬಿಟ್ಟಿರುವನು. ನಾವು ಈ ಕಬ್ಬಿಣದ ದಾನವರ ಮೇಲೆ ವಿಜಯಹೊಂದಿ ಮಾನವತ್ವದ ಪ್ರಧಾನತೆಯನ್ನು ಸ್ಥಾಪಿಸುವ ಕಾಲವು ಈಗ ಉಂಟಾಗಿದೆ. ಈ ಉದ್ದೇಶದಿಂದಲೇ ಗ್ರಾಮೋದ್ಯೋಗ ಸಂಘವು ಹಳ್ಳಿಗಳವರಿಗೆ ಸಹಾಯಮಾಡುವ-ಅವನ ಮೇಲೆ ಅಧಿಕಾರ ನಡೆಸದಿರುವ-ಆಯುಧಗಳನ್ನೇ ತಯಾರು ಮಾಡುತ್ತಿದೆ.

ಉದ್ಧಾರದ ಮಾರ್ಗ

ಅಧಿಕ ಪ್ರಮಾಣದಲ್ಲಿ ಉತ್ಪತ್ತಿ ಮಾಡುವ ಯಂತ್ರಗಳ ಕೆಲಸಗಳೇ ಬೇರೆ ಇರುವಂತೆ ಗ್ರಾಮೋದ್ಯೋಗಕ್ಕೂ ಸಹ ಇದೆ. ಕೆಲವನ್ನು ಹೆಚ್ಚಾಗಿಯೂ ಮಾಡಬೇಕಾಗುತ್ತದೆ. ಆದರೆ ಇವುಗಳ ದುರ್ಗುಣಗಳನ್ನು ಸಾಮಾಜಿಕ ಉಪಯೋಗತೆಯ ಬಣ್ಣದಲ್ಲಿ ತಂದು, ಕಡಿಮೆಮಾಡಬಹುದು. ಅಫೀಮು ಮತ್ತು ವಿಷ ಪದಾರ್ಥಗಳು ಯಾವ ರೀತಿ ನಿತ್ಯ ಜೀವನದಲ್ಲಿ ಕನಿಷ್ಠ ಪ್ರಮಾಣದಲ್ಲಿ ಅಗತ್ಯವೋ ಆ ರೀತಿ ಯಂತ್ರಯುಕ್ತವಾದ ಕೆಲವು ಉದ್ಯೋಗಗಳೂ ಸಹ ಇವೆ-ಅವುಗಳ ಮೇಲೆ "ವಿಷ"ದ ಕೆಂಪು ಚೀಟಿಯು ಅಗತ್ಯವಾಗಿರಲೇ ಬೇಕು.

ಸಣ್ಣ ಸಣ್ಣ ಆಯುಧಗಳು ಮನುಷ್ಯನ ಯೋಗ್ಯತೆ ಮತ್ತು ಕುಶಲತೆಯನ್ನು ಹೆಚ್ಚಿಸುತ್ತವೆ ಆದರೆ ದೊಡ್ಡ ಯಂತ್ರಗಳು ಮನುಷ್ಯನನ್ನು ಮರತೇ ಬಿಡುತ್ತವೆ. ನಮಗೆ ಎರಡೂ ಬೇಕು-ಆದರೆ ಒಂದು ಪರಿಮಿತಿಯಲ್ಲಿ ಮಾತ್ರ. ಈ ಮಾರ್ಗದಿಂದಲೇ ನಾವು ಜನತೆಯ ಅಭಿವೃದ್ಧಿಯಲ್ಲಿ ಸಹಾಯಕರಾಗಬಲ್ಲೆವು.

S.

ರೂಪಾಯಿ 200 ಧರ್ಮಾರ್ಥ!

ಮಹಾತ್ಮಾ ಸಿದ್ಧಕವಚ



ಅತ್ಯದ್ಭುತ ಶಕ್ತಿಯುಕ್ತವಾದ ಮಹಾತ್ಮಾ ಸಿದ್ಧಕವಚವೊಂದು ನಿಮ್ಮೊಡನಿದ್ದರೆ ಎಂತಹ ಕಷ್ಟಸಾಧ್ಯವಾದ ಯೋಜನೆಯೂ ಶೀಘ್ರ ಫಲಕಾರಿಯಾಗುವುದು. ಈ ಯಂತ್ರಧಾರಣೆಗೆ ಮಂತ್ರ ತಂತ್ರಗಳ ಸಹಾಯ ಬೇಕಾಗಿಲ್ಲ ಇದನ್ನು ಧರಿಸಿದ ಮಾತ್ರದಿಂದ ನಿಮಗೆ ಬೇಕಾಗುವ ಹೆಂಗಸಾಗಲೀ ಗಂಡಸಾಗಲೀ ನಿಮ್ಮ ಹತೋಟಿಯಲ್ಲಿ ಸಿಕ್ಕುವರು. ತಾಮ್ರದ ಕವಚಕ್ಕೆ ರೂ. ೩; ಮೂರಕ್ಕೆ ರೂ. 5-4-0; ಬೆಳ್ಳಿ ಕವಚಕ್ಕೆ ರೂ.೨-14-0; ಬಂಗಾರದಕ್ಕೆ ರೂ. 6-4-0

ಮಹಾಲಕ್ಷ್ಮೀ ಯಂತ್ರ

ದುಷ್ಟಗ್ರಹರ ವಕ್ರದೃಷ್ಟಿ, ವೈರಿಗಳು ತಾವದರಿಂದರಾಗುವುದು, ಪರೀಕ್ಷೆ, ವ್ಯಾಪಾರ, ಕೋರ್ಟು ವ್ಯಾಜ್ಯಗಳು, ನೌಕರಿ, ಪುತ್ರ ಸಂತಾನಪ್ರಾಪ್ತಿ, ಅಪಾರದ್ರವ್ಯ ದೊರೆಯುವಿಕೆ, ಸಾಲದಿಂದ ಮುಕ್ತಿ, ಸ್ವಾತಂತ್ರ್ಯಲಾಭ, ಭಯಾನಕ ಕಾಯಿಲೆಗಳಿಂದ ಪಾರಾಗುವುದು ಇತ್ಯಾದಿ ಸರ್ವಸಿದ್ಧಿಯಾಗಬೇಕೆಂದಿದ್ದರೆ ಒಡನೆಯೇ ಮಹಾಲಕ್ಷ್ಮೀಯಂತ್ರವನ್ನು ಧರಿಸಿರಿ. ತಾಮ್ರದ ಕವಚಕ್ಕೆ ರೂ. 2,(ಮೂರಕ್ಕೆ ರೂ. 5-4-0)ಬೆಳ್ಳಿಯದಕ್ಕೆ ರೂ. 2-14-0;ಚಿನ್ನದ ಕವಚವುಳ್ಳದುದಕ್ಕೆ ರೂ. 6-4-0, ನಾಲ್ಕು ಉದ್ದೇಶಗಳನ್ನು ಸಾಧಿಸುವರೆ ನಂಬ್ರ 4ನೇ ವಿಶೇಷ ಕವಚವನ್ನು ರೂ. 5-8-0ಕೊಟ್ಟು ಇಂದೇ ಪಡೆಯಿರಿ. ಐದಕ್ಕೂ ಮಿಕ್ಕಿದ ಯೋಜನೆಗಳನ್ನು ಒಮ್ಮೆಯೇ ಪೂರೈಸಬೇಕೆಂದಿದ್ದರೆ ಅತ್ಯಾಧಿಕ್ಯ ತೇಜೋಮಯವಾದ ನಂಬ್ರ 5ನೇ ಕವಚವನ್ನು 7-10-0 ಕೊಟ್ಟು ಪಡೆಯಿರಿ. ಟಪ್ಪಾಲು ಚಾರ್ಜು ಪ್ರತ್ಯೇಕ.

ಸೂಚನೆ.—ಮೇಲೆ ನಮೂದಿಸಿದ ಕವಚಗಳು ನಿಷ್ಪ್ರಯೋಜಕವೆಂದು ರುಜುಪಡಿಸುವವರಿಗೆ ರೂಪಾಯಿ 200 ಇನಾಮು ಕೊಡಲಾಗುವುದು. ಕವಚದ ಮೌಲ್ಯ [illegible] ವಾಪಾಸು [illegible].

SHRI MAHATMA ASHRAM, Post Box No. 12 (N.Y.A.) **AMRITSAR.**

ನವಯುಗ

ನೋಟೀಸು.

ಇನ್ನೂ ನವಯುಗದ ಚಂದಾಹಣ ಬಾಕಿ ಮಾಡಿಕೊಂಡವರು ಅವನ್ನು ದಯಮಾಡಿ ಕೂಡಲೇ ಕಳಿಸಿಕೊಡುವಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆ. ಚಂದಾದಾರರು ಪತ್ರವ್ಯವಹಾರ ಮಾಡುವಾಗ ದಯಮಾಡಿ ತಮ್ಮ ಚಂದಾ ನಂಬ್ರ ಬರೆಯಬೇಕು.

—ಮ್ಯಾನೇಜರ್.

ಹುಟ್ಟುವಳಿ ಕಡಿಮೆಯಿದ್ದರೂ ಕೆಟ್ಟ ಚಾಳಿ ಜಾಸ್ತಿ!

ಭಾರತದ ತುಂಡರಸರ ಪ್ರೋತಾಟಿಕೆ.

'ತುಂಬದ ಕೊಡ ತುಳುಕುವದು ಜಾಸ್ತಿ' ಎಂಬ ಗಾದೆಯಿದೆ. ಇದಕ್ಕೆ ಜನಜೀವನದಲ್ಲಿ ಸಾಕಷ್ಟು ನಿದರ್ಶನಗಳೂ ದೊರಕುತ್ತಿವೆ. ಎಲ್ಲರಿಗೂ ಅರ್ಥವಾಗುವ ದೊಡ್ಡ ದೃಷ್ಟಾಂತಗಳೆಂದರೆ ನಮ್ಮ ಆಶ್ರಿತ ಸಂಸ್ಥಾನಗಳು. ಪರಕೀಯರ ಆಳ್ವಿಕೆಯಿಂದ ಭಾರತಕ್ಕೊದಗಿದ ಕಷ್ಟನಷ್ಟಗಳನ್ನು ನಾವು ಚಿತ್ರಿಸಬಲ್ಲೆವು. ಆದರೆ ಭಾರತದ ಆಶ್ರಿತ ರಾಜರ ಆಳ್ವಿಕೆಯಲ್ಲಿರುವ ಸಂಸ್ಥಾನಗಳಲ್ಲಿ ಬ್ರಿಟಿಷ್ ಭಾರತದಲ್ಲಿರುವಷ್ಟು ಸುಧಾರಣೆ, ಸೌಕರ್ಯಗಳು ಕೂಡ ಇಲ್ಲ. ಇನ್ನೂ ಸ್ವಲ್ಪ ಕೆಳಗಿಳಿದರೆ, ದೊಡ್ಡ ದೊಡ್ಡ ಆಶ್ರಿತ ರಾಜರ ಆಳ್ವಿಕೆಗಿಂತಲೂ ತುಂಡುರಾಜರ ರಾಜ್ಯಭಾರವು ಕಳಕಿಯದಾಗಿರುವದನ್ನು ಕಾಣಬಹುದು; ಅಷ್ಟೇ ಏಕೆ, ಇಪ್ಪತ್ತನೇ ಶತಮಾನದಲ್ಲಿ ಬೇರೆಲ್ಲಿಯೂ ಕಂಡು ಕೇಳಲಾಗದ ವಿಚಿತ್ರಗಳೇ ದೊರೆತಾವು. ಮಾದರಿಗಾಗಿ ಒಂದೆರಡನ್ನು ಇಲ್ಲಿ ಕೊಡಲಾಗಿದೆ

ಸಂತಾನ ಪಾರಂಪರ್ಯದ ಪರಿಗೂ ಬಹಿಷ್ಕಾರ!

ಒಂದು ತುಂಡು ರಾಜ್ಯದ ದಿವಾನ, ನಡೆಯಲು ತಿಳಿಯದ—ಅಲ್ಲ, ಹುಟ್ಟದೇನೇ ಇರುವ ಮಕ್ಕಳ ಮೇಲೂ ತನ್ನ ಸಂಸ್ಥಾನದೊಳಗೆ ಕಾಲಿಡಕೂಡದೆಂಬ ಹುಕುಂ ಜ್ಯಾರಿಮಾಡಿದ್ದಾನೆಂದರೆ ನಿಮಗೆಲ್ಲ ಆಶ್ಚರ್ಯವಾಗಬಹುದು. 'ಆಶ್ರಿತ ರಾಜರ ಕಾಲಕಳೆಯುತ್ತಾ ಬಂತು' ಎನ್ನುವವರು ಕಿವಿಮುಚ್ಚಿಕೊಂಡು ಸಹಸ್ರನಾಮ ಪಠನೆಗಾರಂಭಿಸಬಹುದು! ಆದರೆ ಇದು, ಮಧ್ಯ ಭಾರತದಲ್ಲಿರುವ ಜೋಬಟ್ ಎಂಬ ಚಿಕ್ಕ ಸಂಸ್ಥಾನದ ದಿವಾನರ ಅಪ್ರತಿಮ ಕಾರ್ಬಾರು! ವಿದ್ಯಮಾನ ನಡೆದದ್ದೇ. ಆ ಕುರಿತು ಪಂಡಿತ ಜವಾಹಿರಲಾಲರು ಕೊಟ್ಟ ಹೇಳಿಕೆಯೊಂದನ್ನೇ ಇಲ್ಲಿ ಉದಾಹರಿಸುತ್ತೇವೆ. ಪಂಡಿತರನ್ನುತ್ತಾರೆ: "ಭಾರತದ ಸಂಸ್ಥಾನಗಳೊಡನೆ ವ್ಯವಹಾರ ನಡೆಯಿಸಿ ಗೊತ್ತಿದ್ದವರಲ್ಲಿ, ಆಶ್ಚರ್ಯಪಡುವ ಅದೊಂದು ಗುಣವೇ ಮಾಯವಾಗಿದೆ ಅಲ್ಲಿ ಸಂಭವಿಸುವದರಲ್ಲಿ ಯಾವುದೂ, ಕಳತೆ, ಹಾಸ್ಯಾಸ್ಪದ ಹಾಗೂ ವಿಪರೀತವೆಂದೆನಿಸುವುದಿಲ್ಲ. ಆದರೆ ಮಧ್ಯಭಾರತದ ಜೋಬಟ್ ಸಂಸ್ಥಾನದಲ್ಲಿ ಜ್ಯಾರಿಯಾದ ಒಂದು ಆಜ್ಞೆಯನ್ನು ತಿಳಿದ ನಾನು ಆಶ್ಚರ್ಯಪಡಲೇ ಬೇಕು. ಆ ಸಂಸ್ಥಾನದ ದಿವಾನರು ಶ್ರೀ ಶ್ಯಾಮ್ಸ್ ಉದ್ದೀನ್ ಎಂಬವರಿಗೆ ಆ ಸಂಸ್ಥಾನವನ್ನು ಕೂಡಲೇ ಬಿಟ್ಟುಹೋಗುವ ಹುಕುಮೊಂದನ್ನು ಹೊರಡಿಸಿದರು. ಅಷ್ಟೇ ಅಲ್ಲ, ಆ ಹುಕುಮಿನಲ್ಲಿ ಅವರ ಮಕ್ಕಳೂ (ಹೆಸರು ಆ ಹುಕುಮಿನಲ್ಲಿರಲಿಲ್ಲ) ಸೇರಿಸಲ್ಪಟ್ಟಿದ್ದರು. ಇಷ್ಟು ಮಾತ್ರವಲ್ಲ, ಶ್ರೀ. ಶ್ಯಾಮ್ಸುದ್ದೀನರ ಮತ್ತು ಅವರ ಮಕ್ಕಳ ಸಂತತಿ ಪಾರಂಪರ್ಯದವರು, ಹುಟ್ಟಿದವರು ಮತ್ತು ಹುಟ್ಟುವವರು ದರ್ಬಾರಿನ ಅಪ್ಪಣೆಯನ್ನು ಮುಂದಾಗಿ ಪಡೆಯದೆ ಪುನಃ ಸಂಸ್ಥಾನದೊಳಗೆ ಕಾಲಿಡಕೂಡದೆಂದು ಆ ನೋಟೀಸಿನಲ್ಲಿತ್ತು. ಎಂದೆಂದಿನ ಪರಿಗೂ, ಮುಂದಿನ ಜನಾಂಗದ ಮೇಲೂ ಜ್ಯಾರಿಯಾಗಿರುವ ಈ ಗಣನೀಯ ಆಜ್ಞೆಯು ವಕೀಲರ ಹಾಗೂ ಘಟನಾತಜ್ಞರ ಹೃದಯದಲ್ಲಿ ವಿನೋದದ ಅಲೆಗಳನ್ನೆಬ್ಬಿಸಬಹುದು. ಭವಿಷ್ಯತ್ಕಾಲದಲ್ಲಿ ಇಂದಿನ ಜನಾಂಗದ ಅನುಭವ ಹಾಗೂ ವಿನೋದಕ್ಕಾಗಿ ತೆರೆದಿಡುವ ಪ್ರದರ್ಶನಾಲಯದಲ್ಲಿ ಇಂದಿನ ಹಿಂದೀ ರಾಜರ ರಾಜ್ಯಭಾರದ ಒಂದು ಮಾದರಿಯಾಗಿ, ಬಹುಮಾನ ಹೊಂದಿದ ಸ್ಮಾರಕಗಳಲ್ಲೊಂದಾಗಿ ಈ ಹುಕುಮಿನ ಪ್ರತಿಯು ಳಿಂಬಿಸುವದೆಂಬುದರಲ್ಲಿ ಸಂದೇಹವಿಲ್ಲ" ಪಂಡಿತ ಜವಾಹಿರಲಾಲರು ಈ ವಿದ್ಯಮಾನದಿಂದ ಇಷ್ಟು ವಿನೋದಗೊಂಡಿದ್ದಾರೆ. ಆ ಹುಕುಮಿಗೆ ಮಾತ್ರವೇ ಬಹುಮಾನವೆಂದರೇನು? ಆ ಕಾಲದಲ್ಲಿ ದೇಶಕ್ಕಾಗಿ ಶಿಕ್ಷೆಯನುಭವಿಸಿದವರಿಗೆ ಉಡುಗೊರೆಯಾಗುವ ಸಮಾರಂಭ ನಡೆಯಲೂ ಬಹುದು. ಚಿಕ್ಕ ಪ್ರಾಯದಲ್ಲಿ ಶಿಕ್ಷೆ ಹೊಂದಿದವರಿಗಿಡುವ ಪ್ರತ್ಯೇಕ ಬಹುಮಾನವನ್ನು, ಹುಟ್ಟುವ ಮೊದಲೇ ನೋಟೀಸು ಪಡೆದಿದ್ದ ಶ್ಯಾಮ್ಸುದ್ದೀನ್ ಸಂತತಿಯ ಮಗುವೊಂದು ಪಡೆಯುವುದರಲ್ಲಿ ಅನುಮಾನವಿದೆಯೆ?

ಬಹಿರಂಗ ಸ್ತ್ರೀ ಏಲಂ

ಅಂತೂ ಮಧ್ಯಭಾರತದ ತುಂಡು ದೇಶೀಯ ರಾಜ್ಯಗಳಲ್ಲಿ ಇಂತಹ ಚಿತ್ರಾರ್ಹ ಕೃತ್ಯಗಳ ಕುರಿತು ಸ್ಪರ್ಧೆಯಿದ್ದಂತೆ ಕಾಣುತ್ತದೆ. ಅಲ್ಲಿಯ ಮತ್ತೊಂದು ತುಂಡು ರಾಜ್ಯವಾದ ಚರ್ಕಾರೀ ಸಂಸ್ಥಾನಕ್ಕೆ ಅಖಿಲಭಾರತ ಹಿಂದೂ ಮಹಾಸಭೆಯ ಪ್ರಮುಖ ಕಾರ್ಯದರ್ಶಿಯರಾದ ಶ್ರೀ. ಜಗನ್ನಾಥ ಪ್ರಸಾದ ವರ್ಮರು ಚಳವಳ ನಡೆಯಿಸಲು ಹೋಗಿದ್ದರು. ಅವರು ತಮ್ಮ ಕಾರ್ಯದ ವರದಿಯನ್ನು ಒಪ್ಪಿಸಿದ್ದಾರೆ. ಅದರಲ್ಲಿರುವ ಒಂದು ವಿಷಯವು ಇನ್ನಷ್ಟು ಸ್ವಾರಸ್ಯವಾಗಿದೆ. "ಒಬ್ಬ ಹಿಂದೂ ಸ್ತ್ರೀ-ಚಾಂದ್ವಾ ತಾಲೂಕಿನವಳು—ತಹಸೀಲ್ದಾರರಿಂದ ಬಹಿರಂಗವಾಗಿ ಹರಾಜು ಮಾಡಲ್ಪಟ್ಟಳು. ಅವಳನ್ನು ವಹಿಸಿಕೊಂಡವನ ವಶಕ್ಕೊಪ್ಪಿಸಲಾಯಿತು. ಈ ಏಲಮಿಗೆ ಕಾರಣವೇಂದರೆ ಅವಳು ತೀರ್ವೆಯ ಹಣ ಕಟ್ಟದಿದ್ದುದೇ. ಅವಳ ಸ್ಥಿರಚರ ಸೊತ್ತುಗಳೆಲ್ಲ ಆ ಮೊದಲೇ ಜಪ್ತಿಮಾಡಲ್ಪಟ್ಟಿದ್ದವು. ಅವಳ ಮನೆಯೂ ಸ್ವಾಧೀನ ತಪ್ಪಿದೆ."—ಇದಕ್ಕೇನೆನ್ನಬೇಕು! ಈ ಕಾಲದಲ್ಲಿ, ಅದೂ ಒಂದು ಸರಕಾರದವರಿಂದಲೇ ಇಂತಹ ಪೈಶಾಚಿಕ ಕೃತ್ಯ ನಡೆಯಿತೆಂಬ ವಾರ್ತೆ ಕೇಳಿದವರು ತಮ್ಮ ಕಿವಿಗಳನ್ನು ತಾವು ನಂಬುವ ಹಾಗುಂಟೆ? ಶ್ರೀ. ವರ್ಮರ ವರದಿಯಲ್ಲಿರುವ ಮತ್ತೊಂದು ವಿಶೇಷ ವಾರ್ತೆಯೆಂದರೆ, ಆ ಸಂಸ್ಥಾನದ ರಾಜರ ಮಾವನನ್ನು ದಿವಾನರ ನಿವಾಸ ಗೃಹದ ಬಳಿಯಲ್ಲೇ ಗುಂಡಿಟ್ಟು ಕೊಲೆಮಾಡಲಾಯಿತಂತೆ. ಆದರೂ ಯಾರೊಬ್ಬನನ್ನೂ ದಸ್ತಗಿರಿ ಮಾಡಲಿಲ್ಲವಂತೆ! ದೇವರೇ ಗತಿ!

ಎಳೆಪ್ರಾಯದಲ್ಲೇ ಮಿತವ್ಯಯದ ಅಭ್ಯಾಸವನ್ನು ಪ್ರೋತ್ಸಾಹಿಸಿ ನಿಮ್ಮ ಹುಡುಗನ ಜೀವನಕ್ಕೆ ತಕ್ಕ ಏರ್ಪಾಡುಮಾಡಿರಿ

ಮಕ್ಕಳಿಗಾಗಿ ಮುಂದುವರಿಸಲ್ಪಡುವ ವಿಮೆಯ ಪಾಲಿಸಿಯೊಂದನ್ನು
ಸುಭದ್ರವೂ ಅತ್ಯಂತ ಜನಪ್ರಿಯವೂ ಆದ ಭಾರತೀಯ ಜೀವ ವಿಮಾಸಂಸ್ಥೆ

ಓರಿಯಂಟಲ್‌ನಲ್ಲಿ ಪಡೆಯಿರಿ.

--- ಮಕ್ಕಳ ಮುಂದುವರಿಸಲ್ಪಡುವ ವಿಮೆಯು ---
ನವೀನವಾದ ವಿಮಾಯೋಜನೆಯು. ಈ ಪ್ರಕಾರ ಬಹಳ ಕಡಿಮೆ ಪ್ರೀಮಿಯಮ್ ಪಾವತಿಯಿಂದ ಹೆತ್ತವರು ತಮ್ಮ ಮಕ್ಕಳ ಪೋಷಣೆಗೆ ಇಡೀ ಜೀವಮಾನದ ಯಾ ಉಂಬಳಿ ವಿಮೆಯ ಪಾಲಿಸಿಯನ್ನು ಸಂಗ್ರಹಿಸಲು ಅನುಕೂಲವಾಗುವಂತೆ ತಯಾರಿಸಿದೆ. ಇದರಲ್ಲಿ 22ನೇ ವರ್ಷಕ್ಕಿಂತ ಮುಂಚಿತವಾಗಿ ಒಂದು ನಿಶ್ಚಿತ ಪ್ರಾಯದಲ್ಲಿ "ರಿಸ್ಕ" ಆರಂಭವಾಗುವುದು.

ಹೆಚ್ಚಿನ ಮಾಹಿತಿಗೆ ಇವರಿಗೆ ಬರೆಯಿರಿ:—

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್

ಸ್ಥಾಪಿತ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನ ಕಾರ್ಯಾಲಯ—ಮುಂಬಯಿ.

ಅಥವಾ ದಿ ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸು, ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್‌ಪೆರೇಡ್ ಬೆಂಗಳೂರು.

—ORIENTAL—
GOVERNMENT SECURITY LIFE ASSURANCE CO., LTD.

ಸಾವರ್ಕರರ ಸಿಂಹನಾದ



ಲೇಖಕರು: ಪಂಡಿತ ತಾರಾನಾಥರು

ಸುಪ್ರಸಿದ್ಧ ಬೆರಿಸ್ಟರ್ ಸಾವರ್ಕರರು ಕಳೆದ ವಾರವೇ ಮದ್ರಾಸನ್ನು ಬಿಟ್ಟು ಉತ್ತರಕ್ಕೆ ಹೋದರು. ಅವರು ಅಲ್ಲಿ ಸೇಲಮ್ ಮುಂತಾದ ಪಟ್ಟಣಗಳಲ್ಲಿ ಮಾಡಿದ ಉಪನ್ಯಾಸಗಳ ವಿಷಯವು ಪತ್ರಿಕೆಗಳನ್ನು ಓದುವವರಿಗೆ ಆಗಲೇ ತಿಳಿದುಬಂದಿರಬೇಕು. ಅವುಗಳನ್ನು ಕುರಿತು ಎರಡು ಮಾತುಗಳನ್ನು ಬರೆಯುವುದೇ ಈ ಲೇಖನದ ಉದ್ದೇಶ.

ಸಾಮಾನ್ಯವಾಗಿ ಜನರಲ್ಲಿ ಒಂದು ತಂಡಕ್ಕೋ ಪಂಗಡಕ್ಕೋ, ಜಾತಿಗೋ ಪಾರ್ಟಿಗೋ ಯಾವುದೋ ಒಂದು ಸಂಘಕ್ಕೆ ಸೇರಿಕೊಂಡಿರುವುದು ರೂಢಿ. ವ್ಯಕ್ತಿಯ ದುರ್ಬಲತೆ, ಪರಾಧೀನತೆ ಹೆಚ್ಚಿದಂತೆ ಆ ವ್ಯಕ್ತಿಯು ಸಂಘದ ಆಶ್ರಯವನ್ನು ಹೆಚ್ಚಾಗಿ ಕೋರುತ್ತದೆ. ಅಂಥ ವ್ಯಕ್ತಿಗೆ ತನ್ನ ಸಂಘವು ಹೇಳಿದ್ದೇ ಸತ್ಯ, ಮಾಡಿದ್ದೇ ನ್ಯಾಯ. ಅದಕ್ಕೆ ಸರಿಹೋಗದ ಯಾವ ಮಾತೂ ಅದರ ಸದಸ್ಯನಿಗೆ ಸರಿಹೋಗುವುದಿಲ್ಲ, ಅಷ್ಟೇ ಅಲ್ಲ, ಅವನು ಆ ಮಾತನ್ನೂ ಅದನ್ನು ಅನುಸರಿಸುವವರನ್ನೂ ದ್ವೇಷಿಸಿಯೂ ಬಿಡುತ್ತಾನೆ. ತಮ್ಮ ಜೀವ-ಜೀವಿತಗಳನ್ನು ಬಿಟ್ಟು ಇನ್ನಾವ ಕಡೆಯೂ ಅಂಥವರಿಗೆ ನ್ಯಾಯನೀತಿ ಕಾಣುವುದೇ ಇಲ್ಲ. ಅಂಥವರಿಂದ ವಿವೇಚನೆಯನ್ನೂ ಕೋರಲಿಕ್ಕಾಗದು.

ಈಗ ನಮ್ಮಲ್ಲಿ ನೂರಾರು ಪಾರ್ಟಿಗಳಿದ್ದರೂ ಮೂರು ಮುಖ್ಯವಾಗಿವೆ. ಕಾಂಗ್ರೆಸ್, ಮುಸ್ಲಿಮ್ ಲೀಗ್, ಹಿಂದೂ ಮಹಾಸಭಾ. ಸಾಧಾರಣವಾಗಿ ಒಂದಕ್ಕೆ ಸೇರಿದವರು ಇನ್ನೊಂದರ ವಿಚಾರ ಗಸ್ತ್ಯಗಳ ಕಡೆಗೆ ಗಮನವನ್ನೇ ಕೊಡುವುದಿಲ್ಲ. 'ವಿಚಾರ ಚರ್ಚೆಗಳ ಕೊಡು ಕೊಳ್ಳುಗಳೇ ನಮಗೆ ಮುಖ್ಯ' ಎಂದು ಕೂಗುತ್ತಿರುವವರು ಅವು ಮಾತ್ರವೇ ನಡೆಯುತ್ತಿರುವವರೆಗೆ ಒಬ್ಬರಿನ್ನೊಬ್ಬರನ್ನು ಲೆಕ್ಕಿಸುವುದೇ ಇಲ್ಲ. ಆದರೆ, ಹಿತಕ್ಕಾಗಲಿ ಅಹಿತಕ್ಕಾಗಲಿ ಒಬ್ಬರ ಸಂಘದ ಕಾರ್ಯಬಲ ಬೆಳೆಯಿತೋ, ಆಗಲೇ ಇನ್ನೊಬ್ಬರು ಅವರನ್ನು ಮನ್ನಿಸತೊಡಗುತ್ತಾರೆ. ಸಾಧಾರಣವಾಗಿ ಬುದ್ಧಿವಿಚಾರಗಳಿಲ್ಲದ ಸನ್ಮಾನ ಆಗ ಅವರ ಈ ಬಲಗಳಿಗೆ ದೊರೆಯುತ್ತದೆ. ಮಾತುಗಳೆಷ್ಟು ದೊಡ್ಡವೇ ಇರಲಿ, ನಿಜಸ್ಥಿತಿಯೇನೋ ಹೀಗಿದೆಯಲ್ಲವೆ?

ರಾಜ್ಯನೀತಿ, ಲೌಕಿಕ ವ್ಯವಹಾರಗಳು ತರ್ಕ ಸಮ್ಮತ, ಬಹುಜನ ಸಮ್ಮತವಾಗಿರಬೇಕು. ಪಾರ್ಟಿ ದುರಭಿಮಾನವನ್ನು ಬಿಟ್ಟು ಶುದ್ಧ ವಿಚಾರ ಮಾತ್ರದಿಂದಲೇ ಪ್ರಶ್ನೆಗಳನ್ನು ಬಿಡಿಸಬೇಕು. ಕಾಂಗ್ರೆಸ್ ಸರಕಾರದ ಆಡಳಿತ ಕಾಲದಲ್ಲಿಯೇ ಬರೆಯಲ್ಪಟ್ಟ ಪಠ್ಯಪುಸ್ತಕಗಳಲ್ಲಿ ಸೀತೆಯನ್ನು ಸೀತಾದೇವಿ ಎನ್ನದೆ ಬೇಗಮ್ ಸೀತಾ ಎಂದು ಬರೆದಿದ್ದಾರಂತೆ. ಇಂತಹ ದೌರ್ಬಲ್ಯಗಳನ್ನು ತೋರದೆ, ಎಲ್ಲವರ ವಿಚಾರಗಳನ್ನು ತಕ್ಕಡಿಗೇರಿಸಿ ನೋಡಬಾರದೇಕೆ? ಎಂದು ಪಂಡಿತರು ಪ್ರಶ್ನಿಸುತ್ತಾರೆ.

ದೃಷ್ಟಾಂತಕ್ಕೆ ಮುಸ್ಲಿಮ್ ಲೀಗನ್ನು ನೊನ್ನೆ ಮೊನ್ನೆ ವರೆಗೆ ಕಾಂಗ್ರೆಸ್ ಕಣ್ಣೆತ್ತಿ ಸಹ ನೋಡುತ್ತಿರಲಿಲ್ಲ. (ಹಿಂದೂ ಮಹಾಸಭೆಯನ್ನು ಇಂದಿಗೂ ಲೆಕ್ಕಕ್ಕೇ ತಂದುಕೊಳ್ಳುವುದಿಲ್ಲ) ಆದರೆ ಇತ್ತೀಚೆಗೆ ಎಂದಿನಿಂದ ಮಿಸ್ಟರ್ ಜಿನ್ನಾ ತಮ್ಮ ಹಟವಾದವನ್ನು ಹೂಡಿ, ಮಿತಿಮೀರಿದ ಶರತ್ತುಗಳನ್ನು ಹಾಕತೊಡಗಿದರೋ ಅಂದಿನಿಂದ ಅವರೂ ಅವರ ಲೀಗೂ ಕಾಂಗ್ರೆಸ್ಸಿನ ಗಮನಕ್ಕೆ ಬಂದಿವೆ. ಮುಸ್ಲಿಮ್ ಲೀಗ್ ಮುಸಲ್ಮಾನರ ಪ್ರತಿನಿಧಿ ಆಹುದು, ಅದರ ಕಾರ್ಯ ಧ್ಯೇಯಗಳು ಗಮನಾರ್ಹವೇ, ಅದರ ಮೆಪ್ಪು ಒಪ್ಪಿಗೆಗಳನ್ನು ಯಥಾಶಕ್ತಿ ಸಂಪಾದಿಸುವುದೂ ಆವಶ್ಯಕವೇ-ಎನ್ನುವ ಮಾತುಗಳು ಈಗ ಕಾಂಗ್ರೆಸಿನ ಮುಂದಾಳುಗಳ ಬಾಯಿಬರೆಹಗಳಿಂದ ವಿಪುಲವಾಗಿ ನೋಡಬಹುದು. ಈಗಿನ ಸ್ಥಿತಿಯಲ್ಲಿ ಮುಸಲ್ಮಾನರ ಮರ್ಜಿಗೆ ಎಷ್ಟರ ಮಟ್ಟಿಗೆ ಮಾನವಿದೆಯೆಂದು ತೋರಿಸಲಿಕ್ಕೆ, ಸಾವರ್ಕರರು (ಕಾಂಗ್ರೆಸಿನ ಆಡಳಿತದ ಕಾಲದಲ್ಲಿಯೇ ಬರೆಯಲ್ಪಟ್ಟ ಹಿಂದೀ ಪಠ್ಯಪುಸ್ತಕಗಳಿಂದ) ಕೆಲವು ದೃಷ್ಟಾಂತಗಳನ್ನೆತ್ತಿ ಮುಂದಿಟ್ಟಿದ್ದಾರೆ. ಅದರಲ್ಲಿ ಇಂಡಿಯದ ವೀರಪುರುಷರಲ್ಲಿ ಅಕ್ಬರ್ ಔರಂಗಜೇಬರಿಗೆ ಸ್ಥಾನವಿದ್ದರೂ, ರಾಣಾ ಪ್ರತಾಪಸಿಂಗ ಶಿವಾಜಿಯಂಥ ಮಹಾಪುರುಷರಿಗೆ ಜಾಗೆಯೇ ಇಲ್ಲವಂತೆ! ಸೀತೆಯನ್ನು ಸೀತಾದೇವಿಯೆಂದು ಕರೆಯದೆ ಬೇಗಮ್ ಸೀತಾ ಎಂದು ಬರೆದಿದ್ದಾರಂತೆ! ಶುದ್ಧ ವಿಚಾರಕ್ಕೆ ಒಗ್ಗದೆ ಬರೀ ಬಲಕ್ಕೆ ಬಗ್ಗುವುದರ ಅವಸ್ಥೆ ಎಲ್ಲಿಗೆ ಮುಟ್ಟುತ್ತದೆಂಬುದಕ್ಕೆ ಹೇಗಿದೆ ಈ ಉದಾಹರಣೆ?

ಸಾವರ್ಕರರ ವಿಚಾರಗಳನ್ನೂ ಮಹಾಸಭೆಯ ಧ್ಯೇಯ ಕಾರ್ಯಕ್ರಮಗಳನ್ನೂ ಅನುಸರಿಸಬೇಕೋ ಬೇಡವೋ ಎನ್ನುವುದನ್ನು ಚರ್ಚಿಸುವುದು ಈ ಲೇಖದ ಉದ್ದಿಷ್ಟವಲ್ಲ. ಸ್ವಹಿತ, ಸಂಘಹಿತ, ದೇಶಹಿತ ಲೋಕಹಿತ ಆಗಬೇಕಾದರೆ ಎಲ್ಲವರ ವಿಚಾರಗಳನ್ನೂ ಮೋಹಮಾಯೆಗಳಿಲ್ಲದೆ ತಕ್ಕಡಿಗೇರಿಸಿ ನೋಡಬೇಕಷ್ಟೇ? ಸಾವರ್ಕರರ ಉಪನ್ಯಾಸಗಳನ್ನೂ ಹಾಗೇ ನೋಡೋಣ. ಅವುಗಳ ಸಾರಾಂಶವಿಷ್ಟೇ:-

ಬಹುಸಂಖ್ಯೆಯೇ ಇರಲಿ, ಅಲ್ಪ ಸಂಖ್ಯೆಯೇ ಇರಲಿ, ಮುಸಲ್ಮಾನರ ಹಕ್ಕು ಅಧಿಕಾರಗಳ ಪ್ರಾಬಲ್ಯ ಒಂದೇ ಸಮನೆ ಹೆಚ್ಚುತ್ತಿದೆ. ಹೈದರಾಬಾದಿನಂಥ ಕಡೆಯಲ್ಲಿ ಅವರ ಸಂಖ್ಯೆ ಕಡಿಮೆಯಿದ್ದರೂ ಅವರು ಅಧಿಪತಿಗಳು ತಾವು ಎಂದು ದರ್ಪ ನಡೆಸುತ್ತಿದ್ದಾರೆ. ಕಾಶ್ಮೀರದಲ್ಲಿಯೋ ಬಹುಸಂಖ್ಯಾಕರು ತಾವು ಎಂದು ಜೋರು ನಡೆಸುತ್ತಿದ್ದಾರೆ. ಸಿಂಧ ಪಂಜಾಬುಗಳಲ್ಲಿಯೂ ಇದೇ ಅವಸ್ಥೆ. ತಮ್ಮ ಸಂಖ್ಯೆ ಕಡಿಮೆ ಇದ್ದಲ್ಲಿ 'ವೈಟೇಜ್'ನ ಆಗ್ರಹ, ದೊಡ್ಡ ದೊಡ್ಡ ಹುದ್ದೆಗಳು ಮೊದಲು. ಅನೇಕ ಸಂಸ್ಥಾನಗಳಲ್ಲಿಯೂ ಅವರ ತತ್ವ, ವರ್ತನ ಆಗ್ರಹಗಳು ಈ ರೀತಿಯೇ ನಡೆದಿವೆ. ಆದರೆ ಇದೇ ನೀತಿಯಿಂದ ಹಿಂದುಗಳೂ ವರ್ತಿಸಿದರೆ ಅದಕ್ಕೆ ನ್ಯಾಯವೆನ್ನುವರೋ? ಯುರೋಪು ಅಮೇರಿಕದ ಅಲ್ಪಸಂಖ್ಯಾಕರಲ್ಲಿ ಇಲ್ಲಿಯ ಮುಸಲ್ಮಾನರ ರಾಜ್ಯ ನೀತಿಯು ಎಲ್ಲಿಯಾದರೂ ಕಂಡುಬರುತ್ತದೋ? ಇಲ್ಲವಾದರೆ ಇಲ್ಲಿ ಕೋರುವ ಅಪವಾದಕ್ಕೆ ಯಾವುದಾದರೂ ಹೊಸನೀತಿಯು ಆಧಾರವಾಗಿದೆಯೋ, ಅಥವಾ ಕಾಂಗ್ರೆಸಿನ ಸಂಕೋಚ ದೌರ್ಬಲ್ಯಗಳೇ ಮುಖ್ಯ ಕಾರಣಗಳಾಗಿವೆಯೋ?

ಹಿಂದೂ ಮಹಾಸಭೆಯ ರಾಜ್ಯನೀತಿ ಇಷ್ಟೇ-ವ್ಯಕ್ತಿಗೊಂದು ವೋಟು, ಯೋಗ್ಯತೆಗೆ ಸರಿಯಾದ ಹುದ್ದೆ, ನೌಕರಿ, ಚಾಕರಿಗಳು ಅಥವಾ ಆಯಾ ಪ್ರಾಂತ್ಯದ ಆಯಾ ಮತದವರ ಸಂಖ್ಯಾ ಪ್ರಮಾಣದಂತೆ. ಅಲ್ಲದೆ ಮತನೋಡಿ ಮರ್ಯಾದೆ ಕೊಡುವುದು ಯಾವ ಸರಕಾರಕ್ಕೂ ಕೂಡದು. ಮಹಾಸಭೆಯ ಈ ಸೂತ್ರದಲ್ಲಿ ಯಾವುದಾದರೂ ಅನೀತಿ ಇದೆಯೋ?

ಹಿಂದೂ ಮಹಾಸಭೆಯ ಮೇಲೆ ಮಾತ್ರ ಕಾಂಗ್ರೆಸ್ಸಿನ ವಕ್ರದೃಷ್ಟಿ ಏಕೆ? ತಮ್ಮ ತಮ್ಮ ಸಂಸ್ಕೃತಿಯನ್ನು ಕಾಪಾಡಿ ಬೆಳೆಸುವ ಹಕ್ಕು ಎಲ್ಲರಿಗೂ ಇದೆಯಷ್ಟೆ? ಅದರ ಯಾವ ಮಾರ್ಗವೇ ಇರಲಿ, ಅದಕ್ಕೆ ಸೇರಿದವರ ರಾಜ್ಯನೀತಿ, ಲೌಕಿಕ ವ್ಯವಹಾರಗಳು ಮಾತ್ರ ತರ್ಕಸಮ್ಮತ, ಬಹುಜನ ಸಮ್ಮತವಾಗಿರಬೇಕಷ್ಟೆ? ಈ ವಿಷಯ ಮಹಾಸಭೆಯ ನೀತಿಯಲ್ಲಿ ಲೋಪದೋಷಗಳೇನಾದರೂ ಇವೆಯೋ? ಅದರ ನೀತಿಯು ಯುಕ್ತವಾಗಿಯೇ ಇದ್ದರೆ, ಕಾಂಗ್ರೆಸ್ ಮುಸಲ್ಮಾನರ ಬೇಡಿಕೆಗಳಿಗೆ ಒಂದು ಕಡೆ ಬಗ್ಗುತ್ತಿಹೋದಂತೆ, ಮಹಾಸಭೆಯು ಸ್ವಜನ ರಕ್ಷಣಾರ್ಥವಾಗಿ ತಾನೇ ತನ್ನನ್ನು ಏತಕ್ಕೆ ಬಲಪಡಿಸಿಕೊಳ್ಳಬಾರದು? ಪಾರ್ಟಿ ದುರಭಿಮಾನವನ್ನು ಬಿಟ್ಟು ಶುದ್ಧ ವಿಚಾರ ಮಾತ್ರದಿಂದಲೇ ಈ ಪ್ರಶ್ನೆಗಳನ್ನು ಬಿಡಿಸಬೇಕಲ್ಲವೇ? ಹಿಂದೂ ಮಹಾಸಭೆ ಇತರರಿಂದ ಬೇಡುವುದು ಸ್ವಧರ್ಮ ಸಂರಕ್ಷಣೆಯುಳ್ಳ, ಲೋಕಸಮ್ಮತ ರಾಜ್ಯನೀತಿಯೊಂದೇ. ಇದರಲ್ಲಿ ಯಾರಿಗೇನು ಆಕ್ಷೇಪಣೆ?

The Canara Mutual Assurance Co., Ltd.

NOTICE having been given of the loss of the Policy No 2335 on the life of Mr Mooroor Janu alias Babanna Nayak of Nire, Bailur Post, South Kanara, a duplicate copy will be issued unless objection is lodged with us within one month from this date.

UDIPI, 4th April, 1940

T. R. A. PAI,
Manager.

ಕೆನರಾ ಬೇಂಕ್ ಲಿಮಿಟೆಡ್

ಲಿಮಿಟೆಡ್ ಜವಾಬ್ದಾರಿಯಿಂದ ಬ್ರಿಟಿಷ್ ಇಂಡಿಯದಲ್ಲಿ ಸ್ಥಾಪಿತವಾದುದು.

೧೯೩೯ನೇ ಇಸವಿ ದಶಂಬರ ೩೧ಕ್ಕೆ ಅಂತ್ಯವಾಗುವ ವರ್ಷದ ಆಯವ್ಯಯದ ಸಾರಾಂಶ ಪಟ್ಟಿ.

	ರೂ. ಆ. ಪೈ		ರೂ. ಆ. ಪೈ.
ಮೂಲಧನ		ಕಟ್ಟಡ ಮತ್ತು ಸಾಮಾನು ಮೊದಲಾದುವುಗಳಿಗೆ ಸಲ್ಲಿತ ಮೂಲ ವ್ಯಯ	95,489-4-3
ತೆತ್ತಲ್ಪಟ್ಟ	6,00,000 0 0	**ವ್ಯಾಪಾರಿಗಳಿಗೆ ಎಡ್ವಾನ್ಸ್ ಕೊಟ್ಟದ್ದು**	
ಸ್ಪೆಡ್ ಆಫ್	3,91,342-0-0	ಬೆಲೆಬಾಳುವ ಸೆಕ್ಯೂರಿಟಿ	40,97,741-5-6
ರಿಸರ್ವ್ ಫಂಡು	4,50,000-0-0	ಹುಂಡೀ ಪತ್ರ ಮೊದಲಾದವುಗಳು	10,30,649 2-10
ಡಿಪೋಸಿಟ್		ಲೇವಣಾತಿ	20,64,586-2-0
ಫಿಕ್ಸೆಡ್, ಕರೆಂಟ್ ಇತ್ಯಾದಿ	81,21,622-8-1	ವಿವಿಧ	9,82,093-10-4
ಬೇಂಕುಗಳಿಗೆ ಸಲ್ಲತಕ್ಕದ್ದು	ಇಲ್ಲ	ನಗದು	17,99,207-1-3
ವಿವಿಧ	10,51,799-1-7		
ಈ ವರ್ಷದ ಲಾಭ	55,003 0-6		
ಒಟ್ಟು	1,00,69,766-10-2	ಒಟ್ಟು	1,00,69,766-10-2

ಸದ್ವೈದ್ಯಶಾಲಾ ನಂಜನಗೂಡು ಇವರ

"ಸುಬಲಾ" ಪಿತ್ತಕಂಟಕ, ಮಲಬದ್ಧತೆ ಇವುಗಳನ್ನು ಹೋಗಲಾಡಿಸಿ, ರಕ್ತ ವೃದ್ಧಿ ಪಡಿಸಿ, ಶರೀರಕ್ಕೆ ಬಲವನ್ನು ಕೊಡುತ್ತದೆ ಬಹಳ ಗುಣಯೋಗಿರತ್ತದೆ.

ಬ್ರಾಂಚ್:-ರಥಬೀದಿ ಮಂಗಳೂರು.

ಈ ವಾರದ ಭವಿಷ್ಯ

ತಾರೀಕು 11-4-1940ರಿಂದ 18-4-1940ರ ವರೆಗೆ

ಮೇಷ—ಈ ಹೊಸ ವರ್ಷಾರಂಭದಲ್ಲಿ ವ್ಯಯಸ್ಥಾನದಲ್ಲಿದ್ದ ಗುರು ಮತ್ತು ರವಿಗಳು ನಿಮ್ಮ ಮನೆಗೆ ಬಂದರು, ಈ ಕಾರಣದಿಂದಾಗಿ ನಿಮ್ಮ ಮನೋರೋಗವು ಕೆಲಮಟ್ಟಿಗೆ ಶಾಂತವಾಗುವುದಾದರೂ ದೇಹಾಲಸ್ಯವು ಮಾತ್ರ ನಿವೃತ್ತಿಗೊಂಡುದೆಂತಿಲ್ಲ. ಅವಿಚಾರದಿಂದ ಮಾಡತಕ್ಕ ಕಾರ್ಯಗಳು ಆರ್ಥಿಕ ಭಾಗಕ್ಕೆ ಬಹಳ ಹಾನಿಯನ್ನುಂಟುಮಾಡುವವು. ರಾಜಕೀಯ ವಿಚಾರದಲ್ಲಿ ದೈವದ ವಿರುದ್ಧವಾಗಿರುವುದರಿಂದ ಕಷ್ಟನಷ್ಟಗಳಿಗೆ ಗುರಿಯಾಗುವಿರಿ. ಶತ್ರು ಜನರ ಬಾಧೆಯಿಂದ ಸ್ವೀಕೃತ ಕಾರ್ಯಗಳಲ್ಲಿ ಪರಾಜಯವಾಗಲಿದೆ. ನೌಕರಿಯಿಂದ ಜೀವಿಸತಕ್ಕವರಿಗೆ ದಿನಗಳೆಯುವುದು ಕಷ್ಟಕಾದೀತಾದರೂ, ತಾ. 13, 14, 15, ಈ ದಿನಗಳಲ್ಲಿ ವ್ಯವಹಾರ ಮೂಲಕ ಕೆಂಚಿದ್ಧನಾಪ್ತಿ, ಮಿತ್ರರ ಸಹಾಯದಿಂದ ಚಿಕ್ಕ ಕಾರ್ಯಗಳಲ್ಲಿ ವಿಜಯಿಗಳಾಗುವಿರಿ.

ವೃಷಭ—ವ್ಯಾಪಾರೋದ್ಯೋಗ, ಕೃಷಿ ಕ್ರಿಯೆ, ಯಾನಾದಿಗಳಲ್ಲಿ ದೇಹಕ್ಕೆ ಆಘಾತವುಂಟಾಗುವ ಲಕ್ಷಣಗಳಿವೆ. ಆಯಕ್ಕಿಂತ ದ್ವಿಗುಣವಾಗಿ ಖರ್ಚು ಸಂಭವಿಸುವುದರಿಂದ ಆರ್ಥಿಕ ಅಡಚಣೆಯು ಹೆಚ್ಚುವುದು. ಆಹಾರದೋಷದಿಂದ ಉದರರೋಗವು ಪ್ರಾಪ್ತವಾಗಲಿದೆ. ಮಾನಸಿಕ ಚಿಂತೆಯು ದಿನೇ ದಿನೇ ವೃದ್ಧಿಯನ್ನೈದುವುದು. ಆದರೂ ಸಾಂಸಾರಿಕ ತಾಪತ್ರಯಗಳಿಂದ ಸ್ವಲ್ಪ ಮುಕ್ತರಾಗಿರುವಿರಿ. ಉದ್ಯೋಗದಲ್ಲಿ ಪ್ರಯತ್ನಕ್ಕೆ ಫಲ ದೊರೆಯುವುದು. ಹಣದ ಅಡಚಣೆಯಿದ್ದರೂ ಬೇಕಾದ ವಸ್ತುಗಳಿಗೆ ಕೊರತೆಯಾಗದು. ಪ್ರವಾಸವು ಹುಟ್ಟಿನ ಕಷ್ಟನಷ್ಟಗಳಿಗೆ ಗುರಿಮಾಡಲಿರುವುದು. ತಾ. 11, 12, 16, 17ರಲ್ಲಿ ಮಿತ್ರಭೋಜನ, ಗೃಹಸುಖಗಳು ದೊರೆಯಲಿವೆ.

ಮಿಥುನ—"ಧನಸ್ಯೋಪೂರ್ಣಕೃತೋಕಸ್ಯ" ಎಂಬ ಉದ್ಗಾರವನ್ನು ತೆಗೆಯುವಿರಿ ನೀವೀವಾರದಲ್ಲಿ. ಶ್ರಮಿಯೊಂದು ಭಾಗದಲ್ಲೂ ನಿಮ್ಮ ಮನೋರಥವು ಅಪ್ರತಿಹತವಾಗುವುದು. ಲಾಭಸ್ಥಾನದಲ್ಲಿ ರವಿಗುರು ಶನಿಗಳು ಏಕಮಾಪ್ತಾಪ್ತವಾಗಿರುವುದರಿಂದ ಕೇಳಬೇಕೇ ನಿಮ್ಮ ಆರ್ಥಿಕ ಸುಧಾರಣೆಯನ್ನು. ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಯಶಸ್ವಿಗಳಾಗುವರು. ಸದುದ್ಯೋಗದಿಂದ ಸಮುದಾಯದ ನಿಮ್ಮ ಕಳೆವಿರಿ. ವ್ಯಾವಹಾರಿಕ ತಜ್ಞರು ಜನತೆಯ ಆದರಕ್ಕೆ ಪಾತ್ರರಾಗುವರು. ಮುಂಗೋಪದ ನಿಮಿತ್ತ ಹೆಂಗಸರೊಡನೆ ಕಲಹವಾದೀತು. ದೇಹದಲ್ಲಿ ಪಿತ್ಥವಿಕಾರದಿಂದ ಸ್ವಲ್ಪ ಆಲಸ್ಯವೂ ತಲದೋರೀತು. ತಾ. 13, 14, 15, 18 ಅತ್ಯುತ್ತಮಗಳಾಗಿವೆ.

ಕರ್ಕಾಟಕ—ಈಗೀಗ ನಿಮ್ಮ ಗೃಹದಲ್ಲಿ ಬಹಳ ಮಾರ್ಪಾಟುಂಟಾಗಿರುವುದು. ಅಂತಯೇ ಕರ್ಮದಲ್ಲೂ ಕೂಡ ಸ್ಥಿತ್ಯಂತರ ಯಾಗಿ ಹರಿದಾಡತಕ್ಕ ಮನಸ್ಸನ್ನು ಬಿಗಿಹಿಡಿದು ಹೇಳಿದಂತೆ ಕೇಳಲು ಕಲ್ಪಿಸಿರಿ. ಅನಾಕವಾದ ಭೀತಿಯು ಕಡಿಮೆಯಾದೀತು. ನಿಮ್ಮ ಸಾಹಸವು ಅಪ್ರತಿಹತವಾಗಿರುವುದರಿಂದ ಸರ್ವತ್ರ ವಿಜಯಿಗಳಾಗಲಿರುವಿರಿ. ಧನಲಾಭವೂ ಬಹು ದಾರಿಯಿಂದ ದೊರೆಯುವುದಾದರೂ ಸಂಪತ್ತಿನ ಭಾಗವು ವಾಡಿಕೆಯನ್ನು ಉತ್ತಮಪಡದು. ಕೋರ್ಟು ಕಾರ್ಯಗಳಲ್ಲಿ ವಿಜಯಿಗಳಾಗುವಿರಿ. ನೌಕರಿಯವರಲ್ಲಿ ಕೊಂಚ ಅತೃಪ್ತಿ ತೋರಬರುತ್ತಿದೆ. ತಾ. 13, 14, 15 ಮತ್ತು 18ರಲ್ಲಿ ಆರ್ಥಿಕ ದಿನಸ್ಯ ಸುಖವಾಗಲಿದೆ.

ಸಿಂಹ—ಬಹು ದಿವಸದಿಂದ ಕಷ್ಟಪರಂಪರೆಗಳನ್ನು ಅನುಭವಿಸಿ ಸೋತು ಸುಣ್ಣವಾದ ನಿಮಗೆ ಈ ವಾರದಲ್ಲಿ ಕೊಂಚ ಸುಧಾರಣೆಯಾಗುವುದು. ಗುರುವಿನ ಅನುಗ್ರಹವು ನಿಮ್ಮ ಮೇಲುಂಟಾಗಿರುವುದರಿಂದ ಋಣದಿಂದ ಮುಕ್ತರಾಗುವ ಕಾಲ ಬಂದಿದೆ. ಆದರೂ ಮಾತೃಪಿತೃಗಳ ಆರೋಗ್ಯ ಕೆಡಬಹುದು. ವ್ಯಾಪಾರೀ ಜನರಿಗೆ ಹೊಸ ಲಾಭವಾಗುವುದು. ದ್ಯೂತ ಜೂಜು ಪಣ್ಯೆಗಳಲ್ಲಿ ಧನಲಾಭವಾಗುವ ಯೋಗವಿದೆ. ನಾಸ್ತಿಕಬುದ್ಧಿಯು ಹೆಚ್ಚಾಗಿರುವುದರಿಂದ ಜಲದೇವತೆಗಳನ್ನು ಮತ್ತು ಜನರನ್ನು ಅಲಕ್ಷಿಸಿ ನಡೆಯುತ್ತಲಿರುವಿರಿ. ತಾ. 16, 17 ಮಾತ್ರ ಪ್ರತಿಕೂಲ.

ಕನ್ಯಾ—ನಿಮ್ಮ ದುರದೃಷ್ಟವು ನಿಮ್ಮನ್ನು ಬಹಳವಾಗಿ ಪೀಡಿಸಲಿರುವುದು. ದಿಕ್ಕುನಷ್ಟವಾಗಿ ಇದರ ಎಲ್ಲಾ ಗೃಹಗಳೂ ಕೆಟ್ಟಿರುವುದರಿಂದ ಯಾವಾಗ ಏನು ಗಂಡಾಂತರವೊದಗುವುದೆಂದು ಹೇಳಲು ಶಕ್ಯವಿಲ್ಲ. ಮನಸ್ಸಿಗೆ ಹೆಚ್ಚಿನ ಕೆಲಸದ ಹೊರೆ ಮುಸುಕಿದ್ದರಿಂದ ಸರಿಯಾದ ವಿರಾಮ ದೊರೆಯದ ಶಿರೋವೇದನಾದಿಗಳು ಪ್ರಾಪ್ತವಾದಾವು. ಮಾತ್ರವಲ್ಲ ದೇಹದಲ್ಲಿ ಸ್ತ್ರೀ ಅನಾರೋಗ್ಯವೂ ಸಲ್ಲಲಿದೆ. ಗೃಹಕಲಹದಿಂದಾಗಿ ಗಾಢವಾದ ಸಂತಾಪ ಪ್ರಾಪ್ತವಾದೀತು. ಬಹುದಿವಸದಿಂದ ಮಿತ್ರರಿಗಳ ಕಂಡಬರುತ್ತಿರುವುದರಿಂದ ದುಸ್ಥಿನ ಅವಚನ ನಿವೃತ್ತಿಯಾಗುವಂತಿಲ್ಲ. ತಾ. 13ರಿಂದ 17ರ ವರೆಗಿನ ದಿನಗಳಲ್ಲಿ ಸ್ವಲ್ಪ ಅದೃಷ್ಟವಿರುವುದರಿಂದ ಮಿತ್ರಮಿಲನದಿಂದ ಸಂತೋಷ, ಸ್ತ್ರೀಯಿಂದ ಧನಲಾಭವಾಗಲಿದೆ.

ತುಲಾ—ನಕ್ಷತ್ರ ನವಾಂಶ ಸದ್ದುವಾಗಿ ಗಳಿಗೆ ಧ್ವಜಬಲವು ಹುಟ್ಟಿನಿಂದ ಉತ್ತಮವಾಗಿರುವುದು. ಸೌಖ್ಯದಿಂದ ಎಲ್ಲದಕ್ಕೂ ಪೂರ್ಣ ಚಂಚಲತೆ ನಿಮಗೆ ಇರುವುದರಿಂದ ಸಮಿತಿಗಳಲ್ಲಿ ವಹಿತ್ತದ ಸರ್ವಗಳಲ್ಲಿ ಪ್ರತಿ ... ಉನ್ನತಸ್ಥಾನವನ್ನು ಹೊಂದುವಿರಿ. ಜನರನ್ನು ನಂಬಿ ವಿಲವವರ್ತನ್ನಾರಿಗೆ ನಿಮಗೆ ಜನತೆ ಸ್ನೇಹಿತರೂ ದೊರೆಯಲಿದ್ದಾರೆ. ಅರ್ಥಕೋಶದಿಂದ ಮುಕ್ತರಾಗುವಿರಿ ಪ್ರಭುಗ್ರ ವಿರೋಧಿಗಳ ಕಾಟ, ಅಜ್ಞಾನದಿಂದಾಗಿ ಚರ್ಮರೋಗದಿಂದ ನಿಮ್ಮಗೆ ಸ್ವಲ್ಪ ದುಃಖವುಂಟಾಗಲಿದೆ. ಮಾರಾದಿಯ 5 ದಿನಗಳಲ್ಲಿ ವಿಶೇಷ ಜಾಗರೂಕರಾಗಿರಿ.

ವೃಶ್ಚಿಕ—ಗ್ರಹರು ನಿಯತ ಗತಿಯಿಂದ ಸಂಚರಿಸುತ್ತಿದ್ದಂತೆಯೇ ನಿಮ್ಮ ಭಾಗ್ಯ ಚಕ್ರವೂ ಕೂಡ ಚಲಿಸುತ್ತಿರುವುದು. ಅದೀಗ ಸದ್ಯೋದ ಕಾಲ ಪಂಕ್ತಿಕ್ರಮಿಸಿ ಉದ್ಧೇಗವದೆಡೆಗೆ ಧಾವಿಸುತ್ತಿದೆ. ಆದರೆ ಆಹಾರ ವ್ಯವಹಾರಗಳಲ್ಲಿ ಜಾಗ್ರತೆಯು ದೃಶ್ಯ ಒಲ್ಲದು. ಗೃಹಕಲಹದಿಂದ ಕಲಹೋದ್ಭವ ಸಂಭವವುಂಟಾಗುವುದು. ಸ್ತ್ರೀಯರಿಂದ ಹುಟ್ಟಿನ ಅನಿಷ್ಟಗಳು ಪ್ರಾಪ್ತವಾಗ ಬಹುದು. ಕೈ ಹಿಡಿದಾಕೆಯಂತೂ ಬಹುದಿನ ಅವರಿಂದಂತ ವರ್ತಿಸುವಳೆಂಬುದಿ ತಪ್ಪಗದು ರತ್ನಗಳ ಕಳವಿನಿಂದ ವ್ಯಕ್ತಿಯಿರುವುದರಿಂದ ಕೈಗೆ ಬಂದ ಕಾರ್ಯವು ಅಪೂರ್ಣವೆಂದು ಅವಿವೇಕದಿಂದ ಕೆಡಿಸಲಿದ್ದೀರಿ. ಮಿತ್ರರು ಸುಮಿಪು ಉತ್ತಮವಾಗಿ ಲಭಿಸಲಿವೆ. ತಾ. 13ರಿಂದ 17ರ ವರೆಗೆ ಅನಿಷ್ಟವಿದೆ.

ಧನು—ನವೀನ ಕಾರ್ಯಗಳಲ್ಲಿನ ನಿಮ್ಮ ಸಾಹಸವು ಸಫಲವಾಗುವುದು. ದೈವದೊಲವೆಯು ಸುಕೃತದಿಂದ ಉದ್ಯೋಗದಲ್ಲಿ ತೃಪ್ತಿ, ಬಂಧು ಬಳಗದವರ ಸಹಸ್ರಭೂತಿ, ಮಾನಸಿಕ ದೋಷ ನಿವೃತ್ತಿಗಳೇ ಕೂಡ ಉಂಟಾಗಲಿವೆ. ಕೌಟುಂಬಿಕ ಜನರಿಂದ ನಿಮಗೆ ಆಗಾಗ ತೊಂದರೆಗಳು ಸಂಭವಿಸಿರುವವಾದರೂ ನಿಮ್ಮ ಭಾಗದಲ್ಲಿ ಚಿಂತಿಸಬೇಕಿಲ್ಲ. ರಾಜಕೀಯ ಕಾರ್ಯಗಳನ್ನು ಇನ್ನೂ ಸ್ವಲ್ಪ ದಿವಸ ಮುಂದಕ್ಕೆ ಹಾಕುವುದೊಳ್ಳಿತು. ವ್ಯಾಪಾರಿಗಳು ಆರ್ಥಿಕವಾಗಿ ನಷ್ಟಕ್ಕೆ ಗುರಿಯಾಗಲಿರುವರು. ತಾ. 11ರಿಂದ 15ರ ವರೆಗೆ ಇಷ್ಟಕಾರ್ಯಸಿದ್ಧಿ, ಧನಲಾಭ, ಗೃಹಸುಖಗಳು ದೊರೆಯಲಿವೆ.

ಮಕರ—ಎಲ್ಲೆಲ್ಲೂ ನಿಮಗೆ ಅತೃಪ್ತಿಯ ಚಿಹ್ನೆಗಳೇ ಕಾಣಬರುವವು. ಅಧಿಕಾರಿಗಳಿಗೂ ನೌಕರರಿಗೂ ಪರಸ್ಪರ ಮನಸ್ತಾಪವುಂಟಾಗಲಿದೆ. ಮಾತ್ರವಲ್ಲ ಒಂದ ಮೇಲೊಂದ ಎಡರುಗಳೆಂದುವುದರಿಂದ ಮನಸ್ಸಿಗೆ ಗಾಸಿಲು ಬಹ ವ್ಯಥೆಯುಂಟಾಗುವುದು. ಗೃಹ ಜನರೂ ವಿಶ್ವಾಸ ಕೂಡ ಸ್ವೇಚ್ಛಾವಿಹಾರಿಗಳಾಗಿ ಇರುವುದರಿಂದ ಅವರಲ್ಲಿ ಪ್ರತೀಕಾರ ಬುದ್ಧಿಯುಂಟಾಗುವುದು. ಮನಸ್ಸು ದುಷ್ಟಮಾರ್ಗದಲ್ಲಿ ... ಒಂದು ಚಿಂತೆಯಿಂದಲೂ ಧನಗಳಿಸಲ್ಲದಿರುವುದರಿಂದಲೂ ಅರ್ಥಿಕ ಬಿಕ್ಕಟ್ಟು ಅತ್ಯಂತ ಮಿತ. ತಾ. 13ರಿಂದ 17ರ ವರೆಗಿನ ದಿನಗಳಲ್ಲಿ ಹುಟ್ಟಿನ ಸಂಕಟಕ್ಕೆ ಗುರಿಯಾಗಲಾರಿರಿ.

ಕುಂಭ—ನಿಮ್ಮ ಧನಸ್ಥಾನದಲ್ಲಿ ... ಧನಂತಿದ್ದ ಗ್ರಹಗಳ ಮಾರಾಟ ... ದಕ್ಕೆ ಕಾಲಿಟ್ಟಿವೆ. ಅಂಗಾರಕನೂ ಕೂಡ ಸ್ವಸ್ಥಾನವನ್ನು ... ಕಾರಣ ದೇಹಸ್ಥಿತಿ ಕೆಟ್ಟದ್ದ. ಮನಸ್ಸಿಗೆ ಚಿಂತೆ ... ದಿಂದ ಅನಿಷ್ಟ ತಪ್ಪದು. ಆದರೂ ... ಕಾರ್ಯವನ್ನು ಮಾಡಲೂ ... ಹಿಂಜರಿದು ... ಕಾರ್ಯಗಳು ಕೈಗೂಡಲಿವೆ ... ಸಾಕಷ್ಟು ... ತೃಪ್ತಿ ಕಡಿಮೆಯಾಗಿಲ್ಲ. ತಾ. 11ರಿಂದ 15ರ ವರೆಗೆ ಅಷ್ಟದಲ್ಲಿನ ನಿಮ್ಮ ಪ್ರಯತ್ನಗಳ ಸಂಭವ ...

ಮೀನ—ನಿಮ್ಮ ಕರ್ಮಕ್ಷೇತ್ರ ದಕ್ಷ ... ಧನಲಾಭದಲ್ಲಿ ... ಮನೆಯವರ ... ದುರ್ಬಲರಾಗಿರುವುದರಿಂದ ಕಾರ್ಯ ಸಾಧನೆಯಾಗಲಿದೆ ... ಮಿತ್ರರಿಂದ ದುಃಖ ... ವಿರಿ. ಗೃಹಕೃತ್ಯ ... ಸಿಟ್ಟಿನ ಆವೇಗದಿಂದ ಅವಾಚ್ಯ ... ಕೀರ್ತಿಗೆ ಕಳಂಕ ... ಗೃಹಸುಖ ಪೂರ್ಣ ತೃಪ್ತಿಕರವಾಗುವುದೆಂದು ಹೇಳಬಹುದು. ತಾ. 11-12-18 ಈ ದಿನಗಳಲ್ಲಿ ಮಿತ್ರರ ಸಹಾಯದಿಂದ ಸುಖಿಗಳಾಗಲಿರುವಿರಿ.

ನೋಟೀಸು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. ...

ವಾದಿ—ನಾಗಪ್ಪ ಶೆಟ್ಟಿ

ಪ್ರತಿವಾದಿ—ವಿ. ಕೆ. ಸುಂದರೇಶ ಶಾಸ್ತ್ರಿ, ರಿಟೈರ್ಡ್ ಸಬ್ ಡೆ ಮಜಿಸ್ಟ್ರೇಟ್, ಹಳೆ ... ಕಸವಾಗುತ್ತಿರುವವ.

ಪ್ರತಿವಾದಿಯು ಕುಂದಾಪುರ ತಸಬದಲ್ಲಿ ... ವಕೀಲ ಶಿವರಾಮ ಶೆಟ್ಟಿಗೆ ತಾ. 5 8 19..ರಲ್ಲಿ ರೂಪಾಯಿ 250ಕ್ಕೆ ಬರೆದುಕೊಟ್ಟ ಪ್ರೋನೋಟು ಸಾಲವನ್ನು ವಾದಿಯು ನ್ಯಾಯವಾದ ಪ್ರತಿಫಲಕ್ಕೆ ಟ್ರಾನ್ಸ್ಫರ್ ಪಡೆದು ಸದ್ರಿ ನೋಟಿನ ಮೇಲೆ ... ಹಣ ಒಟ್ಟು ರೂ. 115-15-7ಕ್ಕೆ ಮೊಕದ್ದಮೆ ದಾವಾ ಮಾಡಿರುತ್ತಾನೆ. ಸದ್ರಿ ದಾವೆಯ ... 19-4-40ಕ್ಕೆ ನಿಮಗೆ ಇಷ್ತೀಹಾರಿಗಿದ್ದ ... ರಿಂದ ನಿಮ್ಮ ಆಕ್ಷೇಪಣೆ ಇದ್ದರೆ ಸದ್ರಿ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ... ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ನೋಟೀಸು ಮೂಲಕ ತಿಳಿಸಲಾಗಿದೆ.

S. S. Kolkebail,
Advocate for Plaintiff

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಕೆಲವಾದ ಜವಾಬು ಪಟ್ಟಿಯನ್ನು ಬರೆದಿಟ್ಟರೂ ಸಾಲದು. ಅದರಿಂದ ತಯಾರಿಸಿದ ಸಾರಾಂಶ ನಿಜತ್ವವು ಕೇಳುವ ಸಮಯಗಳಲ್ಲಿ ತನ್ನಯ ಆಫೀಸರಿಗೆ ... ಗಬೇಕು ... ಎಲ್ಲಾ ತರದ ವಿನಾಯತಿಗಳನ್ನು ... ಳು ಮೇಲಿನ ಟೇಕ್ಸುಗಳನ್ನು ಕೊಡುವ ... ಮು ಕೆಳಗೆ ಕಾಣಿಸಿದವರಿಂದ ಅನುಭವ ... ಸರಿಗೆ ನಿಜಸ್ಥಿತಿಯನ್ನು ಸಮಾಧಾನಕರ ... ದೆಯಂತೆ ಸಿಗಬೇಕಾದ ಎಲ್ಲಾ ತರದ ... ಪ್ರಯೋಜನ ಹೊಂದಬಹುದು. ... ನಿಮ್ಮಿಂದ ವಸೂಲಾಗುವ ಟೇಕ್ಸು ... ದು ಸಂದರ್ಭಾನುಸಾರ ಟೇಕ್ಸು ಕೊಡಬೇಕಾಗಿ ... ದೂ ತೀರ್ಮಾನವಾಗಬಹುದು. ... ಯಾಗಿ ಹೋಗಿದ್ದರೂ ತಿದ್ದುವಾಗಲಿಲ್ಲವಷ್ಟೆ. ದಾವಾ ಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸಕ್ಕೆ ತಿಳಿಸಿದವರೊಡನೆ ಪತ್ರವ್ಯವಹಾರ ನಡೆಸಿರಿ.

ಎಸ್. ಎಸ್. ಪ್ರಭು ...,
ಇನ್ಕಮ್ ಟೇಕ್ಸ್ ... ,
ಕುಂದಾಪುರ ...

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ

GONO KILLER

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡೆಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೋಕಿಲರ್" ಹೆಸರನ್ನೂ ಗಮನಿಸಿರಿ.

"ಗೊನೋಕಿಲರ್" (ರಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಸ್ವಸ್ಥ ಔಷಧ, ಅಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿ ಮಾತ್ರ ಈ ನವ **ಗೊನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೋ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೊನೋರಿಯಾ, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವುದೇ ಸ್ಥಿತಿಯಲ್ಲಿರಲಿ), ಸೋಕು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೩೦ ಮಾತ್ರೆಗಳ ಬುದ್ದಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೋ ಹೋಮಿಯೋಪತ್ ಡಿಸ್‌ಪೆನ್ಸರಿ.

Sole Manufacturer DR. D. N. JASANI, Vitalbhai Patel Road, BOMBAY 4

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Kanara Printing Works,
Hampankatte, **MANGALORE**.

ಕಿವುಡರೂ ಸಂಪೂರ್ಣವಾಗಿ ಕೇಳಬಹುದು.

ಬಧಿರತಾ ಹರಣ

ವಿಜ್ಞಾನದ ನವೀನ ಮತ್ತು ವಿಚಿತ್ರ ಶೋಧ

ಕಿವಿಸೋರುವುದು, ಸೋಪು, ಉಸಿರಾಡುವುದು, ಶಬ್ದ ಕೇಳುವುದು, ತುರಿಸುವುದು, ಕಿವಿ ಅಥವಾ ... [illegible] ... ಪರಿಣಾಮವಾಗಿ ಉಂಟಾದ ಅರ್ಧ ಯಾ ಸಂಪೂರ್ಣ ಕಿವುಡತನವೇ ಮೊದಲಾದ ಎಂತಹ ಕರ್ಣರೋಗ ವಾಗಲಿ, ಅತ್ಯಂತ ಕಠಿಣ ಕಿವುಡುತನವಾಗಲಿ ನಮ್ಮ ವಿಚಿತ್ರ 'ಬಧಿರತಾಹರಣ' ಎಣ್ಣೆಯನ್ನು ಉಪಯೋಗಿಸುವುದರಿಂದ ಖಾತ್ರಿಗುಣಹೊಂದುವುದು. ಈ ಸಿದ್ಧೌಷಧಿಯಿಂದ ನೂರಾರು ವರ್ಷ ಕಿವುಡರು ಚೆನ್ನಾಗಿ ಶ್ರವಣ ಶಕ್ತಿಯನ್ನು ಪಡೆದಿರುತ್ತಾರೆ. ಫಲಕಾರಿಯಾಗದಿದ್ದರೆ ಬೆಲೆಯನ್ನು ವಾಪಸು ಕೊಡಲಾಗುವುದು. ಬಾಟ್ಲಿ 1ರ ಬೆಲೆ ರೂ. 2, 3 ಬಾಟ್ಲಿಗಳಿಗೆ ರೂ. 5, ಟಪ್ಪಾಲು ಖರ್ಚು ಪ್ರತ್ಯೇಕ.

ವಿಳಾಸ:—ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4.

THE **MOOLKY BANK, LTD.,**
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ಸಹಾಯದ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ. ಭಂಗಾರದ ಸರಕಿನ ಈಡಿನ ಮೇಲೆ ಸೀಕಡ 7 ದರ ವರೆಗೆ ಸಾಲಕೊಡಲಾಗುವುದು. ಸಿರಪು ಠೇವಣಾತಿ ಸೀಕಡ 5ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೀಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುವು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
President & Manager, ಪ್ರಸಿಡೆಂಟು ಮತ್ತು ಮೆನೇಜರ್.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ. ಆಲೆಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿ ನಿಮ್ಮ ಕೈಗೆ ಸೇರುವುದು. ಸೀಸೆ 1ಕ್ಕೆ 12 ಆಣೆ, ಟಪ್ಪಾಲ 4 ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟ್‌ರು:- ನವಭಾರತ ಬುಕ್‌ಡಿಪೋ, ಉಡುಪಿ

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಒಸ್ತಿಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು. **ಸುಖಸೇವನ:**ಸುಖಸೇವನದಿಂದ ಮಧುರವಾದ ಈ ರಸಾಯನವು ಪ್ರಾಣಾಂತಿಕವಾದ ಅರುಚಿ, ಅಗ್ನಿಮಾಂದ್ಯ ನಿದ್ರಾನಾಶವೇ ಮೊದಲಾದ ಬಾಧೆಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಪ್ಪ ... [illegible] ... ಸಿಗುವುದು. ಕ್ರಯ ಬಾಟ್ಲಿ 1ಕ್ಕೆ ರೂ.2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ... ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು ಶ್ರೀ. ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

DAIMONDS! **DAIMONDS!**

K. R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾಠ (first quality, selected) ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ **ಕ್ರೌನ್ ರಬ್ಬರ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು, ಪಿತ್ತಳೆ ಬಿಲ್ಲೆ, ಮೊನೊಗ್ರಾಮ್ ಸೀಲು ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವುವು.

Crown Rubber Stamp Co, 18 Balmat Road, MANGALORE.
Approved firm by the Govt. of Mysore. Certified by the Agent of the Govt. of India in Ceylon

ಹೊಸ ಪುಸ್ತಕ! ಸೆಲ್ಫ್ ಇಂಗ್ಲಿಷ್ ಸ್ಟಡಿ ಈಗಲೇ ಪ್ರಿಂಟಾಗಿದೆ!!

SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ **1-8-0**

ಕನ್ನಡ ಓದಲಿಕ್ಕೆ ತಿಳಿದವರು ಬೇರೆ ಸಹಾಯವಿಲ್ಲದೆ ಇಂಗ್ಲಿಷ್ ಓದುವುದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ನಡೆಸುವುದನ್ನೂ 3 ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕ ಇದುವರೆಗೆ ಯಾರೂ ತಯಾರಿಸಲಿಲ್ಲ. ದೊಡ್ಡ ಪುಸ್ತಕ, ಸ್ವಲ್ಪ ಕ್ರಯ. ... ಬರೆಯಿರಿ. ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರಾರೇ ಆಗಲಿ ಅವರು ಕೆಲವೇ ದಿವಸಗಳಲ್ಲಿ ಇಂಗ್ಲಿಷ್ ಕಲಿತುಕೊಳ್ಳಬಹುದು. ... ಓದಿರಿ, ಇಂಗ್ಲೀಷ್ ಓದುವುದು ಎಷ್ಟು ಸುಲಭವಾಗಿ ಬರುತ್ತೆ. ಪುಸ್ತಕದ ಕ್ರಯ ರೂ. 1—8—0.

Western Swiss Watch Co. | ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,
Post Box No. 68 | ಪೋಸ್ಟ್ ಬಾಕ್ಸ್ ನಂ. 68, ಮದ್ರಾಸ್.
G. P. O MADRAS

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗೂ ನಮ್ಮ ವಿಲಿಯಮ್ ಎಂಡ್ ಕೋ ರವರ ರಿಂಗ್ ... ರಿಂಗ್‌ವರ್ಮ್ ಮುಲಾಮು ಈ ಕೆಳಗಿನಂತೆ ... ಹೆಸರಿಸಲಾಗಿದೆ.

ಅಮೃತಾಂಜನ ಡಿಪೋವಿನ ರಿಂಗ್‌ವರ್ಮ್‌ದ "ರೈಸಿಂಗ್ ಸನ್"

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ದುರ್ಬಳಕೆಯಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅತಿ ಸೋವಿಯೂ ಕ್ರಯವೂ ... ಸಾಮಾನುಗಳು.

PRINTED BY ... AT THE ... PRESS UDIPI AND PUBLISHED BY K. H. SHETTY AT "NAVAYUGA OFFICE, UDIPI, S. INDIA.

Entered No. M. 3618

18-4-1

ನವಯುಗ

NAVAYUGA

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಛೇರಿ:— ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

ಭದ್ರತೆಯಿಂದಲೂ, ಖಾತ್ರಿಯುಳ್ಳ ನಫೆ ಹಂಚಿಕೆಯಿಂದಲೂ, ಜಾಗ್ರತೆಯಾಗಿ ಹಕ್ಕುಗಳನ್ನು ಕೊಡುವುದರಿಂದಲೂ ಮತ್ತು ಉದಾರವಾದ ಜೀವವಿಮೆಯ ನಿಯಮಗಳಿಂದಲೂ ಈ ಸಂಸ್ಥೆಯು ಪ್ರಖ್ಯಾತಿಪಡೆದಿರುತ್ತದೆ.

ಪ್ರೊಫೆಸರ್ ಕೆ. ಬಿ. ಮಾಧವ, ಎಂ.ಎ., ಎಫ್.ಆರ್.ಎ.ಎಸ್., ಎ.ಐ.ಎ. (ಲಂಡನ್)

ಪ್ರೊಫೆಸರ್, ಮಹಾರಾಜ ಕಾಲೇಜು, ಮೈಸೂರು ಆಕ್ಚ್ಯುಯರಿಯವರ ಅಭಿಪ್ರಾಯ ಸಾರಾಂಶ.

"ಕಳೆದ ೧೦ ವರ್ಷಗಳಿಂದ ನಿಮ್ಮ ಸಂಘವು ಬಹಳವಾಗಿ ಮುಂದುವರಿಯುತ್ತಿರುವುದಲ್ಲದೆ ಕಳೆದ ಮೂರು ವರ್ಷಗಳಿಂದ ಆದಾಕದ ವೆಚ್ಚ, ಬಡ್ಡಿಯ ಫಲ, ರದ್ದಾದ ಪಾಲಿಸಿಗಳ ಸಂಖ್ಯೆ ಇವೇ ಮೊದಲಾದ ಜೀವವಿಮೆಯ ನಿಯಮಗಳನ್ನು ಉತ್ತಮಗೊಳಿಸಲು ಸಹಕಾರಿಯಾಗುವ ವಿಷಯಗಳಲ್ಲಿ ಹೊಂದಿರುವ ಅಭಿವೃದ್ಧಿಯು ತೃಪ್ತಿಕರವಾಗಿದೆ ......ಸೌಕರ್ಯ ಸಹಿತವಾದ ಅಭಿವೃದ್ಧಿಗೆ ಉದಾಹರಣೆಯಾಗಿರುವ ಏಷ್ಯಾಟಿಕ್ಕಿನ ಅಪ್ರತಿಹತವಾದ ಕಾರ್ಯಕಲಾಪಗಳಿಗಾಗಿ .... ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸೂಚಿಸಲು ಉಂಟಾಗುವ ಸಂತೋಷವನ್ನು ಕಳೆದುಕೊಳ್ಳಲಾರೆನು."

ಕೊಟ್ಟಿರುವ ವಿಮಾ ಹಕ್ಕಿನ ಹಣಗಳು: ೫,೦೦,೦೦೦—೦—೦.

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

H. Venkataramiah, *Divisional Superintendent* } or { **R Purniah** *Ig. General Manager*

The Asiatic Govt. Security Life Assu. Co. Ltd.,
Asiatic Building, BANGALORE CITY.

ಝಂಡು ಮಲೇರಿಯಾ ಮಿಕ್ಶ್ಚರ್

ಮಲೇರಿಯಾ ವಿಷಪ್ರಾಣಿಗಳಿಂದುಂಟಾಗುವ ಎಲ್ಲಾ ತರದ

ಕಠಿಣ ಜ್ವರಗಳಿಗೆ

ಖಾತ್ರಿಯಾದ ಸಿದ್ಧೌಷಧ

ಕ್ರಯ: ಆಣೆ 0—14—0 ಮಾತ್ರ.

ಸ್ಥಳೀಯ ಏಜಂಟರು:— ಪಿ. ಎ. ಪೈ ಬ್ರದರ್ಸ್.

ಕಾರ್ಕಳದ ಏಜಂಟರು:— ವಿ. ವಿ. ಶೆಣೈ, ಕೆಮಿಸ್ಟ್ಸ್.

ಮಂಗಳೂರಿಗೂ ದಕ್ಷಿಣ ಕನ್ನಡ ಜಿಲ್ಲೆಯ ಇತರ ಮುಖ್ಯ ಸ್ಥಳಗಳಿಗೂ ಏಜಂಟರು ಬೇಕಾಗಿದ್ದಾರೆ.

ಶರ್ತಗಳಿಗೂ ಏಜನ್ಸಿಗಳಿಗೂ ಮುಖ್ಯ ಏಜಂಟರಿಗೆ ಬರೆಯಿರಿ:—

ದಾಮೋದರ್ ಎಂಡ್ ಕೊ,

ಮುಖ್ಯ ಏಜಂಟರು,

೭೬ ಚೈನಾ ಬಜಾರ್ ರೋಡ್, ಜಿ. ಟಿ. ಮದರಾಸು.

ಚಿಟ್ಟಾರು ಆಟಿ

ZANDU

DAMODER & CO.,
76 China Bazaar Road, **G. T. MADRAS**



ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು.

ಮೈಸೂರು ಸ್ಯಾಂಡಲ್ ಸೋಪು

ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸ್ಯಾಂಡಲ್ ಸೋಪು

ಗವರ್ನಮೆಂಟು ಸೋಪ್ ಫ್ಯಾಕ್ಟರಿ, ಬೆಂಗಳೂರು.

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಕ್ಷಿಪ್ರದಲ್ಲಿಯೇ ದೂರಮಾಡಿ, ರಕ್ತ ವೀರ್ಯಗಳನ್ನು ವಿಶೇಷವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು.

ಕ್ರಯ:- 40 ಮಾತ್ರೆಗಳ ಡಬ್ಬಿ 1ಕ್ಕೆ ರೂ 1—0—0.

ಮದನಮಂಜರಿ ಫಾರ್ಮಸಿ, 184 ಚೈನಾಬಜಾರ್ ಮದ್ರಾಸ್.

ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

Your anxiety in finding a sound and progressive Life Office both to insure or to represent will end on consultation with.

Branch Secretary,
The New Guardian of India Life Ins. Co. Ltd., Madras.
MANGALORE Branch

THE

PANGAL NAYAK BANK LTD.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(೧೯೨೦ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.)

Season Deposits for a period of 3, 4, 5 or 6 months are accepted at all the offices of the Bank and interest is allowed at 4% per annum till maturity or the 30th June 1940, as the case may be, whichever is earlier.

For further information please communicate with or call at any of our offices.

THE VIJAYA BANK LTD.,

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ--- ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು

ಬಡಬಗ್ಗರಿಂದ ಆರಂಭಿಸಿ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಬಾಲಕರು ಆರೋಗ್ಯಶಾಲಿಗಳಾಗಲು **ಪ್ರಭೂಸ್-ಬಾಲಾಮೃತ**

ಒಂದೆರಡು ವಾರಗಳಲ್ಲಿ ಅದ್ಭುತ ಗುಣ.

— ಕಮನೀಯವಾದ ಕೇಶಕಲಾಪ ತಂಪಾದ ಮೆದುಳು ಶುಭ್ರ ನೇತ್ರಗಳು ಇವುಗಳನ್ನು ಹೊಂದಲು —

ಪುಷ್ಪಗಂಧಾನ್ವೋದಿತ **ಆಮಲಕೀ ತೈಲ** ಬಹು ಗುಣಯುಕ್ತ ವಾಯುಮಾತ್ರೆಗಳೆಂಬ --- **ಧಾನ್ವಂತರಿ ಗುಟಿಕಾ** --- ಇವುಗಳನ್ನು ಸೇವಿಸಿ ವಾಯುವೆಂಬ ರೋಗವನ್ನು ಗುಣಪಡಿಸಿಕೊಳ್ಳಿರಿ

ಮಾತ್ರೆ-12ಕ್ಕೆ 0-1 0, 25ಕ್ಕೆ 0-7-0, 50ಕ್ಕೆ 0-13 0, 100ಕ್ಕೆ 1-5-0

5 ಆಣೆಯ ಸ್ಟಾಂಪು ಕಳುಹಿಸಿದರೆ 12 ಮಾತ್ರೆಗಳನ್ನು ಕಳುಹಿಸುತ್ತದೆ.

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಕುಂಜಾಲು, ಬ್ರಹ್ಮಾವರ, ದ. ಕ.

ನಮ್ಮ ಸ್ಟಾಕಿಸ್ಟರು:—

ನವಭಾರತ ಬುಕ್ ಡಿಪೋ, ಉಡುಪಿ, ದ. ಕನ್ನಡ. ಜನರಲ್ ಸಪ್ಲೈರ್ಸ್ ಲಿಮಿಟೆಡ್, ಉಡುಪಿ ಪೋಸ್ಟ್ ದ ಭಾರತ, ಕೆನರಾ ನ್ಯೂಸ್ ಏಜನ್ಸಿ, ವಿ. ಆರ್ ಪ್ರಭು, ಬಟಾಟವಾಲಾ ಬಿಲ್ಡಿಂಗ್, ಲಾಲ್‌ಬಾಗ್, ಮುಂಬೈ ನಂಬ್ರ 12, ಗಣಪಯ್ಯ ಲಕ್ಷ್ಮಣ ನಾಯಕ್ ಎಂಡ್ ಬ್ರದರ್ಸ್, ಕೋಟ, ದ. ಕನ್ನಡ.

ಸೀರೆಗಳು ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ. ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

Transport & Car Owners



ARE SPECIALLY INVITED TO VISIT

OUR SHOW ROOM *for economical transport maintenance.*

CANARA AUTOMOBILES - - - - - MANGALORE

"ನಾಮರ್ದಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ಸಶೋಣಿ ಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ.

"ಸೆಮಿನಾ ಟೊನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನ ವುಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ.

ಕಿಮ್ಮತು ರೂ. 3-0-0 ಡಬ್ಬಿ 0-8-0

ಸೊರತ್ ಫಾರ್ಮಸಿ,

ನಳ್ ಬಜಾರ್, ಡಂಕನ್ ರೋಡ್,

ಮುಂಬಾಯಿ 4

Sorath Pharmacy,

Null Bazzar, Duncan Road,

BOMBAY 1.

ಭಾರತೀ ಗ್ರಂಥಮಾಲೆಯ ಪುಸ್ತಕಗಳು.

ಬೆಳಕು (ಚಿಕ್ಕ ಕತೆಗಳ ಸಂಗ್ರಹ.)

ತಿನಿಸು (ಕತೆ, ಕವನ, ಪ್ರಬಂಧಗಳ ಸಂಗ್ರಹ)

ಪ್ರತೀಕಾರ (ನವಪೌರಾಣಿಕ ನಾಟಕ)

[illegible]ಮುದ್ರೆ (ಪೌರಾಣಿಕ ಕತೆ)

ಚಿಗುರು (10 ಚಿಕ್ಕ ಕತೆಗಳ ಸಂಗ್ರಹ)

ಪಂಚಾರತಿ (5 ಏಕಾಂಕ ನಾಟಕಗಳ ಸಂಗ್ರಹ)

ಪ್ರತಿಯೊಂದರ ಬೆಲೆ ನಾಲ್ಕಾಣೆ ಮಾತ್ರ (ಅಂಚೆವೆಚ್ಚ 0-0-6 ಪ್ರತ್ಯೇಕ)

ರೂ 1-8 0 ಕಳಿಸಿದ್ದಲ್ಲಿ ಆರೂ ಪುಸ್ತಕಗಳನ್ನು ಕಳಿಸಲಾಗುವುದು. (ಅಂಚೆವೆಚ್ಚ ಪುಕ್ಕಟೆ)

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪ್ರತಿಗಳಿಗೆ ಬರೆಯಿರಿ:-

ಮೆನೇಜರ್,

ನವಭಾರತ ಪುಸ್ತಕ ಭಂಡಾರ ಉಡುಪಿ

Degrees: Books: Medicines.

Free H L. M. S., H M B H M D etc Free Homeo Ayur-Unani Naturo degrees by post also—Practioners also get soons Homeo Materiamedica, Rs 5. Homeo Practice book Rs 4. Insanity Cure Pills Rs. 10 Enclose 2 annas stamp —

Principal, Indian Homeopathic Institute and Society (Govt Regd)

P. O MAHUVA, (Kathiawar Dt, India

ನಮ್ಮ ಹೊಸ ಪ್ರತಿನಿಧಿಗಳು

ಶ್ರೀ. ಕೆ. ಎಂ. ದೇಜಪ್ಪ ಶೆಟ್ಟರು 'ನವಯುಗ'ದ ಪ್ರತಿನಿಧಿಯಾಗಿ ಕೆಲಸ ಮಾಡಲು ಉತ್ಸಾಹದಿಂದ ಮುಂದೆ ಬಂದಿದ್ದಾರೆ. ಇವರು ಮಿತಭಾಷಿಗಳು, ವಿನಯಸಂಪನ್ನರು ಹಾಗೂ ಸರಳ ಮನೋವೃತ್ತಿಯ ಕಾಂಗ್ರೆಸ್ ಭಕ್ತರು 'ನವಯುಗ'ವನ್ನು ಎಲ್ಲೆಲ್ಲೂ ಪ್ರಚಾರಕ್ಕೆ ತರಬೇಕೆಂಬ ಉತ್ಕಟೇಚ್ಛೆಯಿಂದ ಇವರು ಪ್ರತಿ ಹಳ್ಳಿ, ಪೇಟೆ, ಪಟ್ಟಣಗಳಲ್ಲೂ ಕ್ರಮಶಃ ಸಂಚರಿಸಲಿರುವರು. ಇವರಿಗೆ ಸಕಲರೂ ಉದಾರಪ್ರಿಯರಾಗಿದ್ದು 'ನವಯುಗ'ಕ್ಕೆ ಸರ್ವ ಪ್ರೋತ್ಸಾಹ ಕೊಡಬೇಕಾಗಿ ಈ ಮೂಲಕ ಪ್ರಾರ್ಥಿಸಲಾಗುತ್ತದೆ. -ಮೆನೇಜರ್.

ಕನ್ನಡ ನುಡಿವೆಣ್ಣಗೊಂದು ಕನ್ನಡಗಿತ್ತಿಯ ಕಿರುಗಾಣಿಕೆ

ನಾಡ ಸೋದರಿಯರ ನೈಜ ಜೀವನದ ದುರಂತ ಚಿತ್ರವನ್ನೂ, ಸ್ತ್ರೀ-ಪುರುಷ ಹೃದಯಗಳ ಆಳವನ್ನೂ ಹೃದಯಂಗಮವಾಗಿ ಚಿತ್ರಿಸುವ ರಮ್ಯ ಕಥಾನಕ

ವತ್ಸಲಾ

ಸಾಮಾಜಿಕ ಕಾದಂಬರಿ

ಬೆಲೆ: 0-೭-೩.

0—8—0 ಸ್ಟಾಂಪು ಕಳುಹಿಸಿದರೆ 1 ಪ್ರತಿಯನ್ನು ಕಳಿಸಬಹುದು.

ಬರಹಗಾರ್ತಿಯರು:-

ಶ್ರೀಮತಿ ಮಟ್ಪಾಡಿ ಕಮಲಾಕ್ಷಿ

ಈ ಪುಸ್ತಕದ ಕುರಿತು ಪ್ರಸಿದ್ಧ ವಿಮರ್ಶಕ, ವಿಚಕ್ಷಣ ಕರ್ನಾಟಕ ವಿದ್ಯಾವರ್ಧಕ, ರಾವ್ ಬಹದೂರ್ ಆರ್. ನರಸಿಂಹಾಚಾರ್ಯ M A , M.R A.S. ಇವರು ಬೆಂಗಳೂರಿನಿಂದ ಹೀಗೆ ಅಭಿಪ್ರಾಯ ಪಡುತ್ತಾರೆ 'ಗ್ರಂಥದ ಶೈಲಿ ಗಂಭೀರವಾಗಿಯೂ ಹೃದಯರಂಜಕವಾಗಿಯೂ ಇದೆ, ಪ್ರತಿಪಾದಿತವಾದ ವಿಷಯವು ನೀತಿಬೋಧಕವಾಗಿಯೂ ಮರ್ಮಶಿಕ್ಷಾಕರವಾಗಿಯೂ ಇದೆ, ಸ್ತ್ರೀಯರಿಗೆ ಬೋಧಪ್ರದವಾದ ಗ್ರಂಥ........'

ಪ್ರತಿಗಳು ಸಿಗುವ ಸ್ಥಳ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕೋಪ್ರಾನದ ಬಿಳೀ ಟೂಥಪೇಸ್ಟ ಅಲುಗಾಡುವ ಹಲ್ಲುಗಳನ್ನು ಗಟ್ಟಿಮಾಡ್ತದೆ.

ಅಲುಗಾಡುವ ಹಲ್ಲುಗಳನ್ನು ಮತ್ತು ಗಟ್ಟಿಮಾಡಿ ರಕ್ತ ಬೀಳುವದನ್ನು ಬಂದು ಮಾಡಿ ಮಸಡಿಯನ್ನು ಗಟ್ಟಿ ಮಾಡುವದು. ತಯಾರಿಸುವವರು— ಕೋಪ್ರಾನ್ ಕೆಮಿಕಲ್ ಕಂ. (ಮಾಲಕರು:—ಮಗನಭಾಯಿ ಅಮೀನ್ ಅಂಡ್ ಕಂಪನಿ ಮುಂಬಯಿ.

STD. 1921 ಸ್ಥಾಪಿತ

FOUNDER
SRI. A. B. SHETTY, M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

NAVAYUGA
ನವಯುಗ

ಚಂದಾ ವಿವರ:
1 ವರ್ಷಕ್ಕೆ – ರೂ. ೩–೪–೦
6 ತಿಂಗಳಿಗೆ – ರೂ. 1-12 0
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹ ಸಂಪಾದಕ:
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೩೨

ಉಡುಪಿ, ಗುರುವಾರ, ೧೮–೪–೧೯೪೦.
UDIPI, THURSDAY, 18-4-1940.

VOL. 19
No. 32

ಹಿಟ್ಲರನು ತಪ್ಪಿಬಿದ್ದನೆ?

ಯುದ್ಧವು ಯಾವ ದಿಕ್ಕಿನಲ್ಲಿ ಸ್ಫೋಟವಾಗುವದೆಂದು ನಿರೀಕ್ಷೆಯಲ್ಲಿರುವಾಗ ಥಟ್ಟನೆ ನೋರ್ವೆಯ ಮೇಲೆ ಜರ್ಮನಿ ಧಾಳಿಯಿಟ್ಟಿತು. ಇಲ್ಲಿ ಬ್ರಿಟನ್ ಫ್ರಾನ್ಸ್ ಮತ್ತು ಜರ್ಮನಿಯೊಳಗೆ ಪ್ರಬಲ ಹೋರಾಟ ನಡೆಯುತ್ತಿದೆ. ಇಲ್ಲಿಯೆ ಇತ್ತಂಡದವರ ಬಲಾಬಲ, ಅಥವಾ ಜೀವನ-ಮರಣಗಳ ಪರೀಕ್ಷೆಯುವಾಗಲಿದೆ ಎಂಬುದು ನಿಸ್ಸಂದೇಹ. ನೋರ್ವೆಯಲ್ಲಿ ಜರ್ಮನಿಯನ್ನು ಹೊಡೆದಟ್ಟಲು ಮಿತ್ರ ರಾಷ್ಟ್ರಗಳು ಸಮರ್ಥನಾದಲ್ಲಿ ಬಾಲ್ಟಿಕ್ ಮತ್ತು ಉತ್ತರಸಮುದ್ರವು ಪೂರ್ಣವಾಗಿ ಮಿತ್ರರಾಷ್ಟ್ರಗಳ ಹತೋಟಿಯೊಳಗಾಗುವುದು; ಜರ್ಮನಿಯ ಮೇಲೆ ಹಾಕಿದ ವ್ಯವಹಾರ ದಿಗ್ಬಂಧನವು ಆಗ ಪೂರ್ಣ ಫಲಕಾರಿಯಾಗುವದು. ಮಾತ್ರವಲ್ಲ, ಅಲ್ಲಿಯ ಅಪಜಯವು ಪ್ರಥಮವಾಗಿ, ಬೆನ್ನಲ್ಲಿಯೇ ಇಂಥ ಅಪಜಯಗಳನ್ನು ಒಂದೊಂದಾಗಿ ಜರ್ಮನಿಯನು ಸಹಿಸುವ ಕಾಲ ಮತ್ತೆ ದೂರವಿರದು.

ಜರ್ಮನಿ ಗೆದ್ದರೆ?

ಇಡೀ ಯೂರೋಪು ಅದರ ಕೈಗೊಂಬೆಯಾದಂತೆಯೇ ಸರಿ. ಆ ವೇಳೆ ಮಿತ್ರರಾಷ್ಟ್ರಗಳು ಹಾಕಿರುವ 'ಬ್ಲೋಕೇಡ್' ಎರಿಯ ಬಾಯಿಮಾತಾಗಿ ಪರಿಣಮಿಸಬಹುದು. ಜರ್ಮನಿಯು ಅನ್ಯ ರಾಷ್ಟ್ರಗಳೊಡನೆ ವ್ಯಾಪಾರ ನಡೆಯಿಸಲು ಪೂರ್ಣ ಅನುಕೂಲತೆ ದೊರೆಯುವದು. ಮತ್ತು ಇಂಗ್ಲೆಂಡಿನ ಹೃದಯಕ್ಕೆ ಗುರಿಯಿಡಲಾಗುವ ಸ್ಥಾನವೊಂದನ್ನು ಜರ್ಮನಿ ಸಂಪಾದಿಸಿಕೊಂಡಂತಾಗುವದರಲ್ಲಿ ಎರಡನೆಯ ಮಾತಿಲ್ಲ. ದೀರ್ಘ ಸಮಯ ಕಾದು ನೋಡಿ ಬೇಸತ್ತ ಹಿಟ್ಲರನು ಮುಂದಾಗಿಯೇ ಈ ಕಾರ್ಯಕ್ರಮವನ್ನು ಹಾಕಿಟ್ಟಿದ್ದನೆಂದು ತಿಳಿದುಬರುತ್ತದೆ. ಬ್ರೆನ್ನರ್ ಕಣಿವೆಯಲ್ಲಿ ಮುಸಲಿನಿಯೊಡನೆ ಹಿಟ್ಲರ್, ಫೋನಪೊಚನೆ ರಿಬ್ಬೆಂಟ್ರಾಪ್, ಮತ್ತು ಸಮ್ನರ್ ವೆಲ್ಸರೊಡನೆ ಅವರಿಬ್ಬರೂ ತಮ್ಮ ಈ ಕಾರ್ಯಕ್ರಮವನ್ನು ತಿಳಿಸಿದ್ದರಂತೆ.

ಅಲ್ಲಿ ಕಾಲಿಟ್ಟಂತೆ ನಟಿಸಿ ಇಲ್ಲಿ ಹಾರಿದರೆ?

"ಪಶ್ಚಿಮ ರಣರಂಗದ ಕಡೆಗೆ ಪೂರ್ಣ ಲಕ್ಷ್ಯವಿರಲಿ. ಉತ್ತರ ಯುರೋಪಿನ ಗೊಂದಲದಲ್ಲಿ ಮುಳುಗಿ, ಮೊಸಲ್ಲೆ ಮತ್ತು ರೈನ್ ಕ್ಷೇತ್ರದ ಮಧ್ಯಪ್ರದೇಶವನ್ನು ಮರೆಯಕೂಡದು" ಎಂದು ಫ್ರಾನ್ಸಿನ ಯುದ್ಧಖಾತೆಯು ಎಚ್ಚರಿಸಿದೆ. ಆ ಕಡೆಯಲ್ಲಿ ಧಾಳಿ ನಡೆಯುವ ಹೇವು ಲಕ್ಷಣಗಳು ಕಂಡುಬಂದಿವೆಯಂತೆ. ಒಂದೆಡೆಯಲ್ಲಿ ಜರ್ಮನರು ಗುಂಡು ಹಾರಿಸಿದರೆಂದೂ, ಅದಕ್ಕೆ ಗುಂಡಿನಿಂದಲೇ ಉತ್ತರ

ಸಮಾಚಾರ ಸಂಗ್ರಹ

ಕೊಡಲಾಯಿತೆಂದೂ ಫ್ರೆಂಚರು ಪ್ರಕಟಿಸಿದ್ದಾರೆ. ನೋರ್ವೆಯಲ್ಲಿ ಕಾಲಿಟ್ಟ ಮೇಲೆ ಹಿಟ್ಲರನು ಯಾವ ಕಾರ್ಯಸಾಧನೆಗೈದರೂ ಸೋಲು ಪಡೆಯದೆ ಅಲ್ಲಿಂದ ಕಾಲ್ತೆಗೆಯುವದು ಅಸಂಭವ. ಆದರೆ ಪಶ್ಚಿಮ ರಣರಂಗದಲ್ಲಿ ವಿರೋಧಿಗಳು ಸಡಿಲಾಗಿರುವರು ಎಂದು ತೋರಿದರೆ, ಅಲ್ಲಿ ಸಂದರ್ಭ ಸಾಧಿಸಿ ಪ್ರಬಲ ಹೋರಾಟವನ್ನು ಹೂಡಬಹುದು. ನೋರ್ವೆಯಲ್ಲಿ ಪರಾಭವವನ್ನು ಹೊಂದಿದರೂ ಹಿಟ್ಲರನು ಹೋಲೆಂಡು ಬೆಲ್ಜಿಯಮುಗಳ ಮೇಲೆ ದುಡುಕುವುದೇ ಸಂಭವನೀಯ ಹೊರತು ಪಶ್ಚಿಮ ರಣರಂಗದಲ್ಲಿ ಒಮ್ಮೆಗೇ ಯುದ್ಧ ಹೂಡುವಂತೆ ತೋರದು ವುದಿಲ್ಲ. ಹೋಲೆಂಡಿನ ಗಡಿಯಲ್ಲಿ ಜರ್ಮನ್ ವಿಮಾನಗಳು ಪಹರೆ ನಡೆಸುತ್ತಿರುವ ವಾರ್ತೆ ಬಂದಿದೆ. ಆದರೆ ಈ ಮಿತ್ರರಾಷ್ಟ್ರಗಳ ಬೆದರಿಕೆಯಿಂದ ಹೊರತು ಬೆದರಿಸುವದಕ್ಕಲ್ಲ. ಅಂತೂ ನೋರ್ವೆಯ ಯುದ್ಧವು ಇತ್ತಂಡದವರ ಬಲಾಬಲ ಪರೀಕ್ಷೆಯ ಪ್ರಥಮಾಂಕವೂ ಹೌದು; ಈ ಯುದ್ಧದ ಕೊನೆಯ ನಿರ್ಣಯವನ್ನು ತಿಳಿಸುವ ಒಂದು ಮಂಥನವೂ ಹೌದು.

ಹಿಡಿದ ಕೈ ಸಡಲುತ್ತಿದೆ.

ಅಂತೂ ನೋರ್ವೆಯಲ್ಲಿ ಜರ್ಮನಿ ಅನಿರೀಕ್ಷಿತ ಆಪತ್ತಿಗೊಳಗಾಗಿರುವದೆಂಬುದು ನಿಜ. ಒಳಗಿನಿಂದ ನೋರ್ವೆ ಸರಕಾರದ ಕೆರಿಯುದ್ಧ, ಸಮುದ್ರದಿಂದ ಮಿತ್ರರಾಷ್ಟ್ರಗಳ ಜಲಾಕಾಶ ಧಾಳಿ, ಇವು ನಡೆಯುತ್ತಿವೆ. ಮಿತ್ರರಾಷ್ಟ್ರಗಳ ಹೊಡತವಂತೂ ತೀವ್ರಗತಿಯಲ್ಲಿದೆ. ಜರ್ಮನಿ ವಶಪಡಿಸಿಕೊಂಡ ಬಂದರುಗಳ ಮೇಲೆ ಭೀಕರ ವಿಮಾನ ಧಾಳಿ ನಡೆಯುತ್ತಿದೆ. ಸಮುದ್ರದಲ್ಲಿ ಮೈನುಗಳನ್ನು ಇಟ್ಟು ಯುದ್ಧ ಹಡಗುಗಳ ಕಠಿನ ಕಾವಲನ್ನಿರಿಸಿ ಹೊರಗಿನಿಂದ ಜರ್ಮನ್ ಸೈನ್ಯಕ್ಕೆ ಸಹಾಯಬಾರದಂತೆ ತಡೆಗಟ್ಟಲಾಗಿದೆ. ನೋರ್ವೆಯೊಳಹೊಕ್ಕ ಸೈನ್ಯವು ಒತ್ತಿ ಹಿಡಿಯಲ್ಪಟ್ಟಂತಾಗಿದೆ ಎನ್ನಬಹುದು. ಧಾಳಿಯಿಟ್ಟಷ್ಟು ಸುಲಭದಲ್ಲಿ ಈ ತಡೆಗಳನ್ನು ಭೇದಿಸಲು ಜರ್ಮನಿಯ ಸೈನ್ಯಕ್ಕೆ ಸಾಧ್ಯವಾಗಲಾರದು. ಅತಿಮಹತ್ವದ ಪರಿಣಾಮವನ್ನೀಯಬಲ್ಲ ನೋರ್ವೆ ಯುದ್ಧದ ಫಲಿತಾಂಶವೇನಾಗುವದೆಂಬುದನ್ನು ನೋಡಲಿದೆ.

ರಷ್ಯದ ಅಭಿಮತ ಹೇಗಿದೆ?

ಸ್ವೀಡನಿನ ಮೇಲೆ ಜರ್ಮನಿ ಧಾಳಿಯಿಡುವದರಲ್ಲಿ ಪ್ರಾಯಶಃ ರಷ್ಯಕ್ಕೆ ಒಪ್ಪಿಗೆ ಇಲ್ಲ. ಜರ್ಮನರು ತಮ್ಮ ಧಾಳಿಗಳನು ಹೂಡಿವಾಗುವಂತೆ 'ಮಿವಾರ್ನ್ಸ್ಕಕ್ಷೇತ್ರ ಮತ್ತು ಮರ್ಮಾನ್ಸ್ ಲೆನಿನ್‌ಗಾರ್ಡ್ ರೈಲ್ವೇಲೈನನ್ನು ಉಪಯೋಗಿಸಲು ಬಿಡಬೇಕೆಂದು ರಶ್ಯದೊಡನೆ ಕೇಳಿದರೆಂದೂ ರಶ್ಯವದಕ್ಕೆ ಒಪ್ಪಿಗೆ ಕೊಡಲಿಲ್ಲವೆಂದೂ ಸುದ್ದಿಯಿದೆ. ಮಿ ವೆನೋರ್ನ ಬಾಟ್ಲೆಟ್ ಎಂಬವರು ಇಂಗ್ಲೆಂಡ್ ಇನ್ನೊಮ್ಮೆ ರಷ್ಯದೊಡನೆ ಒಡಂಬಡಿಕೆಗೆ ಬರಬೇಕೆಂದು ಸೂಚಿಸಿರುವರು. ವ್ಯಾಪಾರೀ ಸಂಬಂಧವನ್ನು ರಷ್ಯದೊಡನೆ ಮಾಡಿಕೊಂಡಲ್ಲಿ ತಮ್ಮಲ್ಲಿಂದ ಕೊಂಡ ಸಾಮಾನುಗಳನ್ನು ಅದು ಜರ್ಮನಿಗೊದಗಿಸದಂತೆ ಶರ್ತಗಳನ್ನು ಹಾಕಿದಲ್ಲಿ ಮಿತ್ರರಾಷ್ಟ್ರಗಳು ಒಡಂಬಡಿಕೆಗೆ ಹಿಂಜರಿಯ ಬೇಕಾಗಿಲ್ಲವೆಂದು ವೆನೋರ್ನರ ಅಭಿಪ್ರಾಯ.

ಅಮೇರಿಕವು ಆಕ್ರಮಣ ವಿರೋಧಿ

ಪ್ರೆಸಿಡೆಂಟ್ ರೂಸ್‌ವೆಲ್ಟರು ಮತ್ತೊಮ್ಮೆ ಆಕ್ರಮಣಶೀಲ ಮನೋವೃತ್ತಿಯನ್ನು ಖಂಡಿಸಿರುವರು. ಅವರು ಜರ್ಮನಿಗೆ ಇತ್ತೀಚೆಗೆ ಬಲಿಯಾದ ರಾಷ್ಟ್ರಗಳಿಗೆ ತಮ್ಮ ಸಹಾನುಭೂತಿಯನ್ನು ಸೂಚಿಸುತ್ತಾ 'ಸಣ್ಣದೇಶಗಳೂ ಬದುಕುವ ಅಧಿಕಾರವನ್ನು ಪಡೆದಿವೆ' ಎಂದಿರುವರು.

ಸ್ಥಳೀಕ ಸಂಸ್ಥೆಗಳ ಮೆಂಬರರಿಗೆ ಕರೆ ಬಂತು!

ಕಾಂಗ್ರೆಸ್ ಅಧ್ಯಕ್ಷರಾದ ಮೌಲಾನಾ ಆಜಾದರು, ಸ್ಥಳೀಕ ಸಂಸ್ಥೆಗಳಲ್ಲಿರುವ (ಡಿಸ್ಟ್ರಿಕ್ಟ್ ಬೋರ್ಡ್, ಮುನ್ಸಿಪಾಲಿಟಿ ಇತ್ಯಾದಿ) ಕಾಂಗ್ರೆಸ್ ಮೆಂಬರರೆಲ್ಲಾ ಸಮ್ಯದಲ್ಲಿಯೇ ರಾಜೀನಾಮೆ ಕೊಡಬೇಕಾಗುವುದೆಂದು ತಿಳಿಸಿರುವರು. ಇದೇ ತಾ 15ರಲ್ಲಿ ವಾರ್ಧಾದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಸಭೆ ಸೇರಿದೆ. ಅಲ್ಲಿ, ಯಾವ ಕಡೆಯಲ್ಲಿ ಕಾಂಗ್ರೆಸ್ ಮೆಂಬರರು ಅಲ್ಪ ಸಂಖ್ಯಾಕರಾಗಿರುವರೋ ಅಲ್ಲಿಯ ಕಾಂಗ್ರೆಸ್ ಎಸೆಂಬ್ಲಿ ಮೆಂಬರರೆಲ್ಲಾ ರಾಜೀನಾಮೆ ಕೊಡುವ ಕುರಿತು ತೀರ್ಮಾನವಾಗಲಿದೆ.

ರಾಷ್ಟ್ರೀಯ ವಾರದ ಕಡೆಯ ದಿನ

ತಾ. 13ರಲ್ಲಿ ದೇಶದ ಪ್ರತಿಯೊಂದೆಡೆಯಲ್ಲಿಯೂ ರಾಷ್ಟ್ರೀಯ ವಾರವು ಆಚರಿಸಲ್ಪಟ್ಟಿದೆ. ಕಾಂಗ್ರೆಸ್ಸಿನ ವಿಧಾಯಕ ಕಾರ್ಯಕ್ರಮವನ್ನು ಕೈಗೊಳ್ಳುವ ಮತ್ತು ಗಾಂಧಿಯವರ ಧುರೀಣತ್ವವನ್ನು ತ್ರಿಕರಣಪೂರ್ವಕ ಅನುಸರಿಸುವ ಕುರಿತು ಮುಖಂಡರ ಭಾಷಣಗಳಾದುವು. ಅಲಹಾಬಾದಿನಲ್ಲಿ ಜರಗಿದ ಪ್ರಾಂತ ಸಭೆಯಲ್ಲಿ ಪಂಡಿತ ಜವಾಹಿರಲಾಲರು ಸ್ಫೂರ್ತಿಯಿಂದ ಭಾಷಣವಿತ್ತು ಯುದ್ಧವು ಅನಿವಾರ್ಯವೆಂದೆಚ್ಚರಿಸಿರುವರು. ಜಿನ್ನರ ವಿಭಾಗಿಸುವ ಯೋಜನೆಯ ಕುರಿತು ಮಾತಾಡುತ್ತಾ, ಆ ಕುರಿತು ರಾಜಿಯಿಂದ ಒಟ್ಟಾಗುವುದು ಅಸಾಧ್ಯ; ಅಂತಹ ಪ್ರಯತ್ನಗಳನ್ನು ಪೂರ್ಣ ನಿರಾಕರಿಸಬೇಕು. ನೀವೀ ಹುಚ್ಚು ಯೋಜನೆಯ ಗೊಡವೆಯನ್ನೇ ಬಿಡಬೇಕು ಎಂಬ ಅಭಿಪ್ರಾಯ ಸೂಚಿಸಿರುವರು.

ಗವರ್ನರರ ಆಡಳಿತಕ್ಕೆ ಆಯುಷ್ಯ ಜೋಡಣೆ

1935ನೇ ಗವರ್ನಮೆಂಟ್ ಓಫ್ ಇಂಡಿಯಾ ಆಕ್ಟಿನ ಸೆಕ್ಷನ್ 93ಕ್ಕನುಸಾರವಾಗಿ ಮಂತ್ರಿಗಳು ರಾಜಿನಾಮೆ ಯಿತ್ತ

ಮುಚ್ಚಿದರೆ ಮುಗುಳು ! ಬಿಚ್ಚಿದರೆ ಅರಳು !!

ಶ್ರೀ. ಕೆ. ಪೊನ್ನಯ್ಯ ಶೆಟ್ಟರಿಂದ ಪೋಣಿಸಲ್ಪಟ್ಟ
ಚಿಕ್ಕ ಮಕ್ಕಳ ಆಕ್ಕರೆಯ ಕವಿತಾ ಮಾಲಿಕೆಯು

ಮುಗುಳು

ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಅತ್ಯುಪಯುಕ್ತವಾದ ಸಚಿತ್ರ ಪದ್ಯ ಪುಸ್ತಕ.
(ಮದ್ರಾಸ್, ಬೊಂಬಾಯಿ, ಮೈಸೂರು ಟೆಕ್ಸ್ಟ್ ಬುಕ್ ಕಮಿಟಿಗಳಿಂದ ಮಂಜೂರಾಗಿದೆ.
ಅಭಿನಯಕ್ಕೆ, ನರ್ತನಕ್ಕೆ, ಕೋಲಾಟಕ್ಕೆ, ಎಲ್ಲಕ್ಕೂ ಅತ್ಯನುಕೂಲವಾದ,
ಮಕ್ಕಳ ವಯೋಗುಣಕ್ಕನುಗುಣವಾದ ಪದ್ಯಗಳಿಂದೊಡಗೂಡಿದೆ.
ಅಧ್ಯಾಪಕರೆಲ್ಲಾ ಇವನ್ನು ಮಕ್ಕಳ ಕೈಗೆ ಕೊಟ್ಟು, ಉಲಿದಾಡಿಸಿ,
ಹುರಿದುಂಬಿಸಬೇಕಾಗಿ ಪ್ರಾರ್ಥನೆ.

ಎಂಟನೆಯ ಆವೃತ್ತಿ] [ಬೆಲೆ: ೦—೩—೬

ಪ್ರತಿಗಳು ನಮ್ಮಲ್ಲಿ ಪುಸ್ತಕ ವ್ಯಾಪಾರಿಗಳಲ್ಲಿ ಸಿಗುವವು; ಕೆಳಗಿನವರಿಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರಾಂತ್ಯಗಳಲ್ಲಿ ಗವರ್ನರರುಗಳೇ ಸರ್ವಾಧಿಕಾರ ವಹಿಸಿ ಸರಕಾರ ನಡೆಯಿಸುತ್ತಿದ್ದರಷ್ಟೆ. ಬ್ರಿಟಿಷ್ ಸರಕಾರವು ಗವರ್ನರರ ಅಧಿಕಾರದ ಅವಧಿಯನ್ನು ಪುನಃ ಮುಂದು ವರಿಸಿ, ಆ ಕುರಿತು ಒಂದು ಶ್ವೇತಪತ್ರ ಹೊರಡಿಸಿರುವದು. ಆಕ್ಟಿನನ್ವಯ ಇಂತಹ ಅಧಿಕಾರಕ್ಕೆ ಒಮ್ಮೆಗೆ ಆರುತಿಂಗಳಷ್ಟೇ ಅವಧಿಯಾದುದರಿಂದ ಈ ರೀತಿ ಜೀವದಾನ ಮಾಡಿದುದಾಗಿದೆ. ಇದು ಎಪ್ರಿಲ್ ತಾ. 18ರ ಪಾರ್ಲಿಮೆಂಟಿನಲ್ಲಿ ಚರ್ಚಿಸಲ್ಪಡಲಿದೆ.

ಜಿನ್ನಾ ಯೋಜನೆಗೆ ಮಹಾತ್ಮಾ ಗಾಂಧಿಯವರ ಖಂಡನೆ

'ಸರ್ವಾಂಗ ಅಬದ್ಧನಾದ ಯೋಜನೆ!'

ತಾ. 13-1-'40ರ ಹರಿಜನಪತ್ರಿಕೆಯಲ್ಲಿ ಭಾರತವನ್ನು ಹಿಂದೂ ರಾಜ್ಯ ಮತ್ತು ಮುಸ್ಲಿಮ್ ರಾಜ್ಯವೆಂದು ವಿಂಗಡಿಸಿ ಹಾಕಬೇಕೆಂಬ ಜಿನ್ನಾರ ಯೋಜನೆಯನ್ನು ಖಂಡಿಸಿ ಗಾಂಧೀಜಿಯವರು ಹೀಗೆ ಬರೆಯುತ್ತಾರೆ:

ಹಲವು ಶತಮಾನಗಳಿಂದ ಅಸಂಖ್ಯಾತ ಹಿಂದುಗಳೂ ಮುಸಲ್ಮಾನರೂ ಏನನ್ನು ಸಂಪಾದಿಸಿದ್ದರೋ ಅದನ್ನು ಈ ವಿಭಾಗಿಸುವ ರೀತಿಯು ಅಲ್ಲಗಳೆಯುತ್ತದೆ. ಹಿಂದೂತ್ವ ಮತ್ತು ಇಸ್ಲಾಮುಗಳು ಪರಸ್ಪರ ವಿರುದ್ಧವಾದ ಸಂಸ್ಕೃತಿ ಹಾಗೂ ಸಂದೇಶಗಳ ಪ್ರತಿರೂಪಗಳೆಂಬ ಭಾವನೆಗೆ ವಿರುದ್ಧವಾಗಿ ನನ್ನ ಆತ್ಮವಿದ್ರೋಹ ಮಾಡುತ್ತದೆ. ಅಂತಹ ಭಿನ್ನತೆಯನ್ನು ಕಾಣುವದೆಂದರೆ ನನ್ನ ಅಭಿಪ್ರಾಯದಲ್ಲಿ ದೇವರನ್ನೇ ಅಲ್ಲಗಳೆದಂತೆ. ನನ್ನ ನಂಬಿಕೆಯೆಂದರೆ ಕುರಾನಿನ ದೇವರೇ ಭಗವದ್ಗೀತೆಯ ದೇವರು; ನಾವು ಯಾವ ಹೆಸರನ್ನೇ ಇಟ್ಟಿರಲಿ, ಎಲ್ಲರೂ ಒಂದೇ ದೇವನ ಮಕ್ಕಳು, ಒಂದು ದಿನ ಹಿಂದುಗಳಾಗಿದ್ದವರು ಮುಸ್ಲೀಮ್ ಮತವನ್ನವಲಂಬಿಸಿದೊಡನೆ ಅವರ ರಾಷ್ಟ್ರೀಯತ್ವವನ್ನು ಬದಲಾಯಿಸಬಹುದೆಂಬ ಭಾವನೆಗೆ ನಾನು ಪ್ರಬಲ ವಿರೋಧಿ. ಇದು ಕೇವಲ ನನ್ನ ನಂಬಿಕೆ. ತಾವು ಪ್ರತ್ಯೇಕ ರಾಷ್ಟ್ರದವರೆಂಬ ಭಾವನೆ ಕಟ್ಟಿಕೊಂಡ ಮುಸ್ಲೀಮರ ಗಂಟಲೊಳಗೆ ಈ ಅಭಿಪ್ರಾಯವನ್ನು ಒತ್ತಾಯದಿಂದ ತುರುಕಿಸಲಾರೆ.

ಎಲ್ಲಾ ಮುಸಲ್ಮಾನರ ಅಭಿಪ್ರಾಯವಲ್ಲ

ಎಂಟುಕೋಟಿ ಮುಸಲ್ಮಾನರು, ತಾವು ಹಿಂದೂಗಳೊಡನೆ ಅಥವಾ ಬೇರೆ ಜಾತಿಯವರೊಡನೆ ಸಂಬಂಧಿಸಿಕೊಂಡಿಲ್ಲವೆಂದು ಹೇಳುವರೆಂಬುದನ್ನು ನಾನೊಪ್ಪಲಾರೆ. ಈ ಪ್ರಶ್ನೆಯ ಕುರಿತು ಅವರಿಂದಲೇ ತಯಾರಿಸಲ್ಪಡುವ ಹೇಳಿಕೆಯಿಂದಲೇ ಮುಸಲ್ಮಾನರ ಮನಸ್ಸನ್ನು ಸ್ಪಷ್ಟವಾಗಿ ತಿಳಿಯಬೇಕಾಗಿದೆ. ಈಗ ಅಪೇಕ್ಷಿಸಲ್ಪಟ್ಟಿರುವ ಕೊನ್‌ಸ್ಟಿಟ್ಯೂಯೆಂಟ್ ಎಸೆಂಬ್ಲಿಯು ಈ ಪ್ರಶ್ನೆಯನ್ನು ಬಿಡಿಸಬಲ್ಲುದು. ಇಂತಹ ಒಂದು ಸಮಸ್ಯೆಯ ಕುರಿತು ಪಂಚಾಯ್ತನ್ನು ತೀರ್ಮಾನಕ್ಕಾಗಿ ನೇಮಿಸುವುದು ಸ್ವಭಾವತಃ ಅಸಾಧ್ಯ. ಇದು ಸಂಪೂರ್ಣವಾಗಿ ಸ್ವನಿರ್ಧಾರವನ್ನು ಹೊಂದಿಕೊಂಡಿರತಕ್ಕ ವಿಷಯ.

ಪ್ರೊ. ರಂಗರು ನಿಯಮೋಲ್ಲಂಘನೆ ಮಾಡಿದುದು ಸರಿಯಲ್ಲ.

ಗಾಂಧಿಯವರ ಅಭಿಪ್ರಾಯ.

ಕೃಷಿಕ ಕೆಲಸಗಾರರಾದ ಪ್ರೊ. ರಂಗರು ಮದ್ರಾಸನ್ನು ಬಿಟ್ಟು ತನ್ನ ಸ್ವಗ್ರಾಮಕ್ಕೆ ತೆರಳತಕ್ಕದ್ದೆಂಬ ಸರಕಾರದ ಹುಕುಮನ್ನುಲ್ಲಂಘಿಸಿ ಒಂದೂವರೆ ವರ್ಷದ ಕಠಿಣ ಸಜೆಗೊಳಗಾಗಿರುವರಷ್ಟೆ. ಆ ಕುರಿತು, ತನ್ನ ಅಭಿಪ್ರಾಯ ಸೂಚಿಸುತ್ತ ಪ್ರೊ ರಂಗರು ಕೆಟ್ಟ ಮಾದರಿಯೊಂದನ್ನು ಹಾಕಿ ಕೊಟ್ಟರೆಂದು ಗಾಂಧಿಯವರನ್ನುತ್ತಾರೆ. ಅವರು ಹರಿಜನದಲ್ಲಿ ಬರೆದ ಲೇಖನದ ಸಾರಾಂಶವಿದು.

ತಪ್ಪುಮಾಡಿದರು

ಪ್ರೊಫೆಸರ್ ರಂಗರು ನನ್ನ ಸಹವ್ಯವಸಾಯಿಗಳು ಅವರನ್ನು ಬಹಳ ಕಾಲದಿಂದ ನಾನುಬಲ್ಲೆ. ಅವರು ಧೈರ್ಯಶಾಲಿ ಮತ್ತು ಸುಸ್ವಭಾವಿ ಇದ್ದಾರೆ. ಆದರೆ ಅವರಲ್ಲಿರುವ ಒಂದು ಗುಣವೆಂದರೆ ಹೇಳಬಾರದ್ದನ್ನಾದರೂ ಹೇಳುವದು ಮತ್ತು ಅಕಾಲವಲ್ಲ ಮಾಡಬಾರದ್ದನ್ನು ಮಾಡುವದು. ನನ್ನ ಮೇಲೆ ಸ್ಥಳಾಂತರದ ಹುಕುಮು ಜಾರಿಯಾದಾಗ ಅವರದನ್ನು ಉಲ್ಲಂಘಿಸಲು ನಿರ್ಧರಿಸಿ ನನಗೊಂದು ಟೆಲಿಗ್ರಾಮು ಕಳುಹಿದ್ದರು. ತಾನು ಶಿಸ್ತಿಗನುಸಾರವಾಗಿ ನಡೆಯಲು ಬದ್ಧನಿದ್ದೇನೆಂಬುದು ಅವರಿಗೆ ಗೊತ್ತಿತ್ತು. ನನಗವರು ಸಮಯ ಕೊಡುತ್ತಿದ್ದರೆ, ಹುಕುಮನ್ನು ಮನ್ನಿಸಿ ನಿಷ್ಕಳಂಕದ ನಿಡಂಬ್ರೋಲಿಗೆ ಹೋಗಿರೆಂದು ನಾನವರಿಗೆ ಹಿತೋಪದೇಶವೀಯುತ್ತಿದ್ದೆ. ಹಾಗಾಗುತ್ತಿದ್ದರೆ ಅವರು ಶಿಕ್ಷೆಯನ್ನು ಪಾಲಿಸುವ ಸ್ಫೂರ್ತಿ ಪ್ರದರ್ಶಿಸಿದಂತಾಗುತ್ತಿತ್ತು, ಅದೇ ಸಮಯಗಲ್ಲಿ ತನ್ನ ಹಳ್ಳಿಯಲ್ಲಿ ವಿಧಾಯಕ ಕಾರ್ಯಮಾಡಿ ಶ್ಯಾದೇ ಭಂಗ ಚಳವಳದ ಸೈನ್ಯಕ್ಕೆ ಸೇರುವ ಪೂರ್ವ ತಯಾರಿಯನ್ನು ಮುಗಿಸಬಹುದಿತ್ತು.

ನನ್ನ ಅಭಿಪ್ರಾಯದಲ್ಲಿ ಪ್ರೊ ರಂಗರ ವರ್ತನೆಯು ತತ್ವಕ್ಕೆ ಭಂಗ ತಂದಿದೆ. ಅದರಿಂದ ಅವರಿಗಾಗಲೀ ಬೇರೆಯವರಿಗಾಗಲೀ ಏನೂ ಪ್ರಯೋಜನವಿಲ್ಲ. ತನ್ನ ಕಡೆಗೆ ಮಾರ್ಗದರ್ಶಕತೆಗಾಗಿ ನಿರೀಕ್ಷಿಸುವವರಿಗೊಂದು ಕೆಟ್ಟ ಮಾದರಿಯನ್ನು ಹಾಕಿ ಕೊಡುವ ಮೂಲಕ ಅವರು ತತ್ವ ಭಂಗ ಮಾಡಿದ್ದಾರೆ. ನನ್ನ ಮಾತಿಗೆ ಅವರು ಗಮನವೀಯುವದಾದರೆ, ಅವರನ್ನು ಈ ರೀತಿ ಮಾಡುವಂತೆ ನಾನು ಪ್ರೇರೇಪಿಸುತ್ತೇನೆ: ತಾನು ಶಿಸ್ತನ್ನು ಉಲ್ಲಂಘಿಸಿದುದಕ್ಕಾಗಿ ವ್ಯಸನಪಡುತ್ತೇನೆಂದೂ, ತನ್ನನ್ನು ಬಿಟ್ಟಲ್ಲಿ ನಿಡುಬ್ರೋಲಿಗೆ ಹೋಗಿ ಸರಕಾರೀ ಬಹಿಷ್ಕಾರವು ಹಿಂದೆಗೆಯಲ್ಪಡುವ ವರೆಗೆ ಅಲ್ಲೇ ನಿಲ್ಲುತ್ತೇನೆಂದೂ ತಿಳಿಸಬೇಕು. ಪ್ರೊ. ರಂಗರು ನನ್ನ ಈ ಬೋಧನೆಯನ್ನು ಅಂಗೀಕರಿಸಿದಲ್ಲಿ ನನಗೂ, ಅವರ ರಾಷ್ಟ್ರದ ಕಾರ್ಯಕ್ಕೂ ಅವರು ಸಹಾಯಮಾಡಿದಂತಾಗುತ್ತದೆಂದು ನಾನು ಧೈರ್ಯವಾಗಿ ಹೇಳಬಲ್ಲೆ.

ಮದ್ಯ ನಿಷೇಧ ಕಾನೂನಿಗೆ ಆಕ್ಷೇಪ.

ಬೊಂಬಾಯಿ ಹೈಕೋರ್ಟಿನ ತೀರ್ಮಾನ.

"ನಮ್ಮ ಅಭಿಪ್ರಾಯದಂತೆ ಜುಲಾಯಿ 11, 1938ರ ಅಹಮದಾಬಾದಿನ ಮತ್ತು ಜುಲಾಯಿ 17, 1939ರ ಅಹಮದಾಬಾದ್ ಮತ್ತು ಮುಂಬಯಿಯ ಪಾನ ನಿಷೇಧ ಪ್ರಾರಂಭದ ಕುರಿತಾದ ಸರಕಾರದ ಅಪ್ಪಣೆಗಳು (Notification) ಸಿಂಧುವಾಗತಕ್ಕವಲ್ಲ (Ultra Vires)" ಎಂದು ಬೊಂಬಾಯಿಯ ಚೀಫ್ ಜಸ್ಟೀಸರಾದ ಸರ್ ಜೋನ್ ಬಿಯುಮಂಟ್‌ರವರು ತಮ್ಮದೊಂದು ಜಜ್‌ಮೆಂಟಿನಲ್ಲಿ ಬರೆದಿರುವರು. ಪಾನ ನಿಷೇಧದ ವಿವಾದಗಳ ಮೇಲೆ ಕೆಳಕೋರ್ಟಿನಲ್ಲಾದ ತೀರ್ಮಾನದ ಮೇಲೆ ನಡೆದ ಅಪೀಲುಗಳ ಕುರಿತು ಈ ತೀರ್ಮಾನವನ್ನಿತ್ತುದಾಗಿದೆ. ಇದಕ್ಕಾಗಿ ೬ ಮಂದಿ ಜಡ್ಜರ ಸ್ಪೆಶಲ್ ಬೆಂಚಿನವಿಚಾರಣಾಗಿತ್ತು. ಬೊಂಬಾಯಿ ಸರಕಾರದ ಪಾನ ನಿಷೇಧ ಧೋರಣೆಯು ಸಿಂಧುವಾದುದೇ, ಅಲ್ಲವೇ ಎಂಬ ಪ್ರಶ್ನೆ ಈ ಪ್ರಕರಣದಿಂದ ಹುಟ್ಟುತ್ತದೆ. ಸರಕಾರದ ಧೋರಣೆಯು ಎಸೆಂಬ್ಲಿಯಲ್ಲಿ ಮಸೂದೆಯ ರೂಪದಿಂದ ಮಂಜೂರಾದ ಮೇಲೆ ಜಾರಿಗೆ ಬಂದುದಲ್ಲ. ಅಬ್ಕಾರಿ ಮಸೂದೆಯ ಸೆಕ್ಶನ್ 14 (B) ಇದರ ಆಧಾರದ ಮೇಲೆ ಸರಕಾರದ ಪ್ರಕಟಣೆಯ ಮೂಲಕ ಈ ಧೋರಣೆಯನ್ನು ಕಾರ್ಯರೂಪಕ್ಕೆ ತರಲಾಗಿತ್ತು. ಈ ಅಬ್ಕಾರಿ ಮಸೂದೆಯ ಕೆಲವು ಸೆಕ್ಶನುಗಳು ಪಾನಪದ್ಧತಿಯನ್ನು ಹತೋಟಿಯಲ್ಲಿಡುವ ಅಧಿಕಾರವನ್ನೊಳಗೊಂಡಿದ್ದರೂ ಮಸೂದೆಯು ಮುಖ್ಯವಾಗಿ ಅಬ್ಕಾರೀಖಾತೆಯ ಹಣಕಾಸುಗಳಿಗೆ ಸಂಬಂಧಿಸಲ್ಪಟ್ಟುದಾಗಿರುತ್ತದೆ. ನ್ಯಾಯವಿಧಾಯಕ ಸಭೆಗಳ ಮೂಲಕ ಮಂಜೂರಾಗುವ ಮೊದಲೇ ಜಾರಿಗೆ ಬರುವ ಪಾನನಿಷೇಧದಂತಹ ರೀತಿಗಳು ಅಬ್ಕಾರಿ ಮಸೂದೆಯ ಉದ್ದೇಶಕ್ಕೆ ವಿರುದ್ಧವಾಗಿವೆ ಎಂದು ಆ ಜಜ್‌ಮೆಂಟಿನಲ್ಲಿ ಹೇಳಲಾಗಿದೆ.

THE

BOMBAY LIFE ASSURANCE Company Limited.

[ESTD. 1908]

COMPARE

Your Life Assurance with any other property you possess what is its guaranteed value

If you live–today–a few years more–when you are old?
If you die–to your family and dependants?

REMEMBER THAT If you live, Life Insurance takes the place of your professional income during your old age. If you die, it provides your family with enough income for their maintenance and the education of your children.

"BOMBAY LIFE" offers all that is best in Life Assurance.

1938 Record.

Completed Business	Rs.	1,44,91,000
Life Assurance Fund	Rs.	1,17,69,748
Total Assets	Rs.	1,31,28,998

To Insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI.

Post Box No. 337, Mount Road, MADRAS	Visweswarapuram Circle, BANGALORE CITY.	Charni Road, Girgaum, BOMBAY No. 4.
Car Street, MANGALORE.	Puthiyara, CALICUT.	Central Station Road, TRIVANDRUM.

ಸ್ವೀಡನ್ ಗುಮ್ಮನನ್ನು ಕಂಡ ಮಗುವಿನಂತಾಗಿದೆ!

ಸಮರ ಹೂಡುವ ಮೊದಲೇ ಸಮಜಾಯಿಸುವ ಕೆಲಸ ನಡೆದಿತ್ತು!

ಜರ್ಮನಿಯು ಸಣ್ಣ ರಾಷ್ಟ್ರಗಳನ್ನು ನುಂಗುವ ವಿಧಾನವು ಇಡೀ ಪ್ರಪಂಚವನ್ನೇ ಬೆರಗುಗೊಳಿಸಿದೆ. ಆಸ್ಟ್ರಿಯಾ, ಜೆಕೋಸ್ಲೋವೇಕಿಯಗಳನ್ನು ಹಿಟ್ಲರ್ ಸ್ವಾಧೀನಪಡಿಸಿಕೊಂಡ ರೀತಿಯನ್ನು ನೋಡಿ 'ಹಾಂ ಇಷ್ಟು ಸುಲಭದಲ್ಲಿ ರಾಜ್ಯಪಡೆಯುವಾಗುತ್ತದೆಯೆ!" ಎಂದು ಯಾರಾದರೂ ಆಶ್ಚರ್ಯಪಡಲೇಬೇಕು. ಡೆನ್ಮಾರ್ಕನ್ನು ಅರೆಘಂಟೆಯೊಳಗೆ ತನ್ನದನ್ನಾಗಿ ಮಾಡಿಕೊಂಡ ವಾರ್ತೆ ಈಗ ಎಲ್ಲರ ನಾಲಿಗೆಯಲ್ಲಿ ನಲಿಯುತ್ತಿದೆ. ಹಿಟ್ಲರನ ರಾಜ್ಯಾಕ್ರಮ ಇದ ರೀತಿ ಚರಿತ್ರೆಯಲ್ಲೇ ಹೊಸತು. ಕೊನೆಯ ವರೆಗೂ "ನಮ್ಮ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡಿಯೇ ಬಿಡುವೆವು" ಎಂದು ಬುಸುಗುಟ್ಟುವ ದೇಶಗಳೆಲ್ಲಾ ಹಿಟ್ಲರನು ಕಾಲಿಟ್ಟೊಡನೆ ಹಾವಾಡಿಗ ಹಿಡಿದ ಸರ್ಪದಂತೆ ಮೆತ್ತಗಾಗುವ ರೀತಿಯು ಇಂದ್ರಜಾಲದಂತೆ ಕಾಣುತ್ತಿದೆ. ಪುಟ್ಟ ರಾಷ್ಟ್ರಗಳನ್ನು ನುಂಗುವ ಮನಸ್ಸು ಮಾಡದವರಾರು? ಮುಸಲನಿ ಅಬಿಸೀನಿಯವನ್ನು ಪುಡಿಗುಟ್ಟಿದ; ಸ್ಟಾಲಿನ್ ಫಿನ್‌ಲೇಂಡನ್ನು ಪಡೆಬಡಿದ. ಆದರೆ ಇವರು ಬಿಸಿಕೆಂಡವನ್ನು ನುಂಗಿದಂತೆ ಬಹು ಪ್ರಯಾಸದಿಂದ ಆ ರಾಷ್ಟ್ರಗಳನ್ನು ಹೇಗೂ ನುಂಗಿದರು. ಹಿಟ್ಲರನ ರೀತಿಯೇ ಬೇರೆ. ಮುಸಲನಿ ಸ್ಟಾಲಿನರಿಗೆ ರಾಜ್ಯಾಕ್ರಮಣಮಾಡಲು ತಾಗಿದ ತಿಂಗಳುಗಳಷ್ಟೇ ಘಂಟೆಗಳಲ್ಲಿ ಹಿಟ್ಲರನು ಇದುವರೆಗೂ ಆ ಕಾರ್ಯ ಸಾಧಿಸುತ್ತಾ ಬಂದಿದ್ದಾನೆ. ಅವನ ಧಾಳಿಯೆಲ್ಲಾ ಮಿಂಚುಹೊಡೆದಂತೆ ಜಗ್ಗನೆ ಬೆಳಗಿ ಜಯಶೀಲವಾಗಿವೆ. ಇದಕ್ಕೆ ಕಾರಣವೇನು?

ಮಂಕುಗೊಳಿಸುವ ಇಂದ್ರಜಾಲ

ನಾಜಿಗಳಿಗೆ ಕಣ್ಣಿಡುವ ರಾಷ್ಟ್ರಗಳಲ್ಲೆಲ್ಲಾ ಪ್ರಥಮತಃ ಅಸಾಧ್ಯ ಪ್ರಚಾರಕಾರ್ಯ ಪ್ರಾರಂಭವಾಗುತ್ತದೆ. ಒಂದು ಕ್ಷೇತ್ರದಲ್ಲಿ ಬೀಜಬಿತ್ತುವ ಮೊದಲು ಅದನ್ನು ಹದಗೊಳಿಸಬೇಕೆಂಬ ರೀತಿಯನ್ನು ನಾಜಿಗಳು ಸರಿಯಾಗಿ ಬಲ್ಲರು. ಅದಕ್ಕಾಗಿ ಅಲ್ಲಿ ಪತ್ರಿಕೆ, ರೇಡಿಯೋ ಮತ್ತು ಸೂತ್ರಜಾಲನೆಯ ಮೂಲಕ ಪ್ರಬಲ ಪ್ರಚಾರಕಾರ್ಯವಾರಂಭವಾಗುತ್ತದೆ ಸ್ಟಟ್‌ಗಾರ್ಟ್ ಎಂಬಲ್ಲಿ ನಡೆದ ಒಂದು ಸಭೆಯಲ್ಲಿ ಭಾಷಣವೀಯುವಾಗ ಜರ್ಮನಿಯ ಗೋರಿಂಗನು ಮುಚ್ಚುಮರೆಯಿಲ್ಲದೆ ಹೀಗಂದಿದ್ದಾನೆ: "ಹೊರ ದೇಶಗಳಲ್ಲಿ ವಾಸಿಸುತ್ತಿರುವ ಜರ್ಮನರು 'ರೀಚ್ಸ್' ಕಾರ್ಯ ಸಾಧಿಸಲು ಸದಾ ಸಿದ್ಧರಿರುವ ಸೈನಿಕರಂತಿದ್ದಾರೆ." ಈ ಮಾತಿಗೆ ಈಗೀಗ 'ಒಣಜಂಬ' ಎಂಬ ಬಿರುದು ದೊರೆಯುವಂತಿಲ್ಲ. ಗೋರಿಂಗನು ಹಾಗೆನ್ನುವ ಮೊದಲೇ ಆಸ್ಟ್ರಿಯಾ, ಜೆಕೋಸ್ಲೋವೇಕಿಯಗಳಲ್ಲಿ ಕಾರ್ಯತಃ ನಿದರ್ಶನ ದೊರಕಿದೆ. ಆ ಚರಿತ್ರೆಗೆ ಮೊನ್ನೆ ತಾನೇ ಡೆನ್ಮಾರ್ಕಿನ ಹೆಸರು ಬದಲಾದ ಹೊಸತೊಂದು ಪುಟ ಸೇರಿದೆ.

ಸ್ವೀಡನನ್ನು ಚಳಿಕ್ಕೆ ಕಂಡ ರೀತಿ

ಮೊನ್ನೆ ತಾನೆ ನಡೆದ ಸ್ಕಾಂಡಿನೇವಿಯಾ ಆಕ್ರಮಣದಿಂದಾಗಿ ಡೆನ್ಮಾರ್ಕ್ ಹಿಟ್ಲರನಿಗೆ ಶರಣು ಹೊಡೆದಿದೆ. ನೋರ್ವೆಯ ಹೆಚ್ಚಿನ ಭಾಗವು ಆಕ್ರಮಿಸಲ್ಪಟ್ಟಿದೆ. ಆದರೂ ನೆರೆಯ ರಾಷ್ಟ್ರವಾದ ಸ್ವೀಡನ್ ತಾನಿನ್ನೂ ಪೂರ್ಣ ತಾಟಸ್ಥ್ಯ ಧೋರಣೆ ವಹಿಸುವದಾಗಿ ಸಾರಿದೆ. ತನ್ನ ನೆರೆಯ ರಾಷ್ಟ್ರಗಳಿಗೊದಗಿದ ವಿಧಿಯನ್ನು ಕಂಡ ಮೇಲಾದರೂ ಸ್ವೀಡನಿನ ತಪ ಭಂಗವಾಗಲಿಲ್ಲ. 'ನಾವು ನಮ್ಮಷ್ಟಕ್ಕಿದ್ದೇವೆ' ಎಂಬ ಬೋರ್ಡನ್ನೆತ್ತಿ ಹಿಡಿದು ನಿಂತ ಮಿಕ್ಕವರಿಗೊದಗಿದ ಗತಿಯನ್ನು ಕಂಡ ಮೇಲೂ ಆ ಹಲಗೆ ಹೊಡೆತ ತಪ್ಪಿಸುವ ಗುರಾಣಿಯಾಗುವದೆಂಬ ವಿಶ್ವಾಸವಿಡುವವರು ಯಾರೂ ಇರಲಾರರು. ಆದರೆ ಸ್ವೀಡನು ನಿರುಪಾಯವಾಗಿ ಇದ್ದ ಸ್ಥಾನದಿಂದ ಕದಲದ ಪರಿಸ್ಥಿತಿಯಲ್ಲಿದೆ. ಅರ್ಥಾತ್ ತನ್ನ ನೆರೆಹೊರೆಯವರ ಮೇಲಾಗುವ ಅಬ್ಬರದಿಂದ ಸ್ತಬ್ಧವಾಗಿದೆ; ಮರಗಟ್ಟಿಹೋಗಿದೆ!

ಅಷ್ಟೇ ಅಲ್ಲ, ಕಿವಿಚುಚ್ಚುವ ಹೊರಗಿನ ಗೊಂದಲಪ್ರಾಂಪರಿಂದಲೇ ಸ್ವೀಡನು ದಂಗು ಬಡಿದುಹೋಯಿತೆಂದಲ್ಲ; ಕರಳು ತತ್ತರಿಸುವ ಒಳರೋಗವೂ ಈ ಮೊದಲೇ ಬಿತ್ತಲ್ಪಟ್ಟಿದೆ. ಅಲ್ಲಿ ನಾಜಿಗಳ ಪ್ರಚಾರ ಕಾರ್ಯವು ಬಹುಕಾಲದಿಂದ ನಡೆಯುತ್ತಿತ್ತು. ಇಂದಿನ ಯುದ್ಧವಾರಂಭವಾದ ಮೇಲಂತೂ ಅದಕ್ಕೆ ಕಳೆಗೂಡಿತ್ತು. ಸ್ವೀಡನಿನ ಸ್ಟೋಕ್‌ಹೋಮಿನಲ್ಲಿರುವ ಜರ್ಮನ್ ಲೆಗೇಶನಿನಲ್ಲಿ ಕಡಿಮೆಯೆಂದರೆ ನೂರು ಮಂದಿ ಕೆಲಸಗಾರರಿದ್ದಾರೆಂದು ಇತ್ತೀಚಿನ ಅಂಕೆ ಸಂಖ್ಯೆಗಳಿಂದ ತಿಳಿದು ಬರುತ್ತದೆ. ಅಲ್ಲಿಯೇ ಇರುವ ಬ್ರಿಟಿಷ್ ಲೆಗೇಶನಿಗಿಂತ ಇದು ಐದು ಪಾಲು ಜಾಸ್ತಿ! ಇದು ಜರ್ಮನಿನ ಅಧಿಕಾರಯುತ ಸಂಸ್ಥೆಯ ಮಾತಾಯಿತು. ಸ್ವೀಡನಿನಲ್ಲಿ ನಡೆಯುವ ಪ್ರಚಾರವೆಲ್ಲಾ ಈ ಸಂಸ್ಥೆಯ ಪತ್ರಿಕಾ ವಿಭಾಗದವರಿಂದ ಮಾತ್ರವೇ ಎಂದು ಭಾವಿಸಬಾರದು. ಅಲ್ಲಿ ಮಿಕ್ಕ ವಿದೇಶಿಯರಿಗಾರಿಗೂ ಇರದಷ್ಟು ದೊಡ್ಡದಾದ ಜರ್ಮನ್ ವಸಾಹತಿದೆ ಅಲ್ಲಿ ಕಡಿಮೆಯೆಂದರೂ 6,000 ಮಂದಿ ಇದ್ದಾರೆ. ಇವರ ಪೈಕಿ 2,500ರ ವರೆಗೆ ಕೇಂದ್ರಸ್ಥಳವಾದ ಸ್ಟೋಕ್‌ಹೋಮಿನಲ್ಲಿ ವಾಸಿಸುತ್ತಿದ್ದಾರೆ. ಇವರೆಲ್ಲಾ ಉಸಿರಾಡುವುದೆಷ್ಟು ಸತ್ಯವೋ, ನಾಜೀ ಪ್ರಚಾರವಾಡುವುದೂ ಅಷ್ಟೇ ಸತ್ಯ! ವಿದೇಶಗಳಲ್ಲಿರುವ, ಅದರಲ್ಲೂ ಜರ್ಮನಿಗಭಿರುಚಿಯಿರುವ ಪುಟ್ಟ ರಾಷ್ಟ್ರಗಳಲ್ಲಿರುವ ಜರ್ಮನರ ರೀತಿಯೇ ಹಾಗೆ.

ಸುಳ್ಳು ಸುದ್ದಿಗಳ ಸುರಿಮಳೆ

ಜರ್ಮನಿಯ ಕೊಲನಿಯಲ್ಲಿ ಹದಿನಾಲ್ಕು ವಿಧದ ಪ್ರಚಾರ ಶಾಖೆಗಳಿವೆ. ಇವೆಲ್ಲಾ ಪರಸ್ಪರ ಶೃಂಖಲಾಬದ್ಧವಾಗಿದ್ದು ಜರ್ಮನ್ ರಾಷ್ಟ್ರೀಯ ಸಮತಾವಾದದ ತತ್ವರಸವನ್ನು ಹಂಚುವ ಹದಿನಾಲ್ಕು ನಾಳಗಳಂತಿವೆ ಬರ್ಲಿನಿನಿಂದ ಸಂಗ್ರಹಿಸಿ, ಅದನ್ನು ಸ್ಕಾಂಡಿನೇವಿಯಾ ರಾಷ್ಟ್ರಗಳಲ್ಲಿ ಪಸರಿಸುವದೊಂದೇ ಈ ಶಾಖೆಗಳ ಕೆಲಸ ಸ್ಟೋಕ್‌ಹೋಮಿನ ಅಧಿಕಾರೀ ಸಂಸ್ಥೆಯು ಬರ್ಲಿನ್ ಪ್ರಚಾರ ಖಾತೆಯ ಆಶ್ರಯದಲ್ಲಿಯೂ, ಮಿಕ್ಕ ಶಾಖೆಗಳು ಈ ಅಧಿಕಾರೀ ಸಂಸ್ಥೆಯ ಆಶ್ರಯದಲ್ಲಿಯೂ ವ್ಯವಸ್ಥೆಯಿಂದ ಕೆಲಸ ಮಾಡುತ್ತವೆ. ಅವು ಸ್ವೀಡನಿನಲ್ಲುಂಟುಮಾಡುವ ಕಿರುಕುಳಗಳು ಅಷ್ಟಿಷ್ಟಲ್ಲ. ಪತ್ರಿಕಾ ಪ್ರಚಾರ, ಭಾಷಾಂತರಿಸಿದ ರಾಜಕೀಯ ಭಾಷಣಗಳ ವಿತರಣೆ ಇತ್ಯಾದಿ ಬಹಿರಂಗ ಪ್ರಚಾರವೂ ಇದೆ; ಇಲ್ಲದ ಸುಳ್ಳು ಸುದ್ದಿಗಳನ್ನು ಹಬ್ಬಿಸಿ ಜನರಲ್ಲಿ ಗುಜುಗುಜು ಹುಟ್ಟಿಸುವ ಅಂತರಂಗ ಪ್ರಚಾರವೂ ಇದೆ. ಸ್ವಲ್ಪ ಸಮಯಕ್ಕೆ ಹಿಂದೆ ಅಲ್ಲಿಯ ಪತ್ರಿಕೆಗಳಲ್ಲಿ, ಯಹೂದಿಯರ ಮತ್ತು ಬ್ರಿಟಿಷರ ಧನಬಲವು, ಪೋಲೆಂಡಿನಲ್ಲಿ ಆ ಸಂಖ್ಯಾತ ಜರ್ಮನರ ಮೃತ್ಯುವಿಗೆ ಹೇಗೆ ಕಾರಣವಾಯಿತೆಂಬುದನ್ನು ತಿಳಿಸುವ ಮುಖಚಿತ್ರಗಳೇ ಕಂಡುಬರುತ್ತಿದ್ದವು. ಇನ್ನು ಇಂಗ್ಲಿಷ್ ಬಲ್ಲವರಿಗಾಗಿ ಎಚ್. ಆರ್. ಹೋಫ್‌ಮೇನ್ ಎಂಬವರಿಂದ ಹೊರಡುವ 'ಜರ್ಮನಿಯಿಂದ ವಾರ್ತೆಗಳು' ಎಂಬ ಪ್ರಕಟಣೆಗಳು ಸ್ವೀಡನಿನಲ್ಲೆಲ್ಲಾ ಧಾರಾಳ ಹಂಚಲ್ಪಡುತ್ತಿವೆ. ಸ್ಟೋಕ್‌ಹೋಮ್ ಒಂದೆಡೆಯಿಂದಲೇ 8ಸಾವಿರದಿಂದ 10ಸಾವಿರದ ವರೆಗೆ ಕರಪತ್ರಗಳು ಟಪ್ಪಾಲು ಮೂಲಕ ಕಳುಹಿಸಲ್ಪಟ್ಟಿರಲ್ಲದೆ, ಮನೆ ಬಾಗಿಲಲ್ಲಿ, ಟಪ್ಪಾಲು ಪೆಟ್ಟಿಗೆಗಳಲ್ಲೆಲ್ಲಾ ನಾಜೀ ತತ್ವ ಪ್ರಚಾರ ಕರಪತ್ರಗಳು ತಾಗಿಸಲ್ಪಡುತ್ತವೆ. ಅಲ್ಲಿಯ ಜರ್ಮನ್ ಸಾಹುಕಾರರು, ತಮ್ಮಲ್ಲಿಗೆ ಬರುವ ಗಿರಾಕಿಗಳಿಗೆ ಹಿಟ್ಲರನ ಭಾಷಣದ ಪ್ರತಿಗಳನ್ನು ಕೊಡುವದರಲ್ಲಿ, ವರ್ಷಾರಂಭದಲ್ಲಿ ಕೆಲೆಂಡರ್ ಕೊಡುವದಕ್ಕಿಂತಲೂ ಹೆಚ್ಚಿನ ಉತ್ಸಾಹವನ್ನು ತೋರಿಸುತ್ತಿದ್ದಾರೆ ಸ್ವೀಡನಿನಲ್ಲಿ ಮಿತ್ರ ರಾಷ್ಟ್ರಗಳ ಕಡೆಗೆ ತಿರಸ್ಕಾರ ಹುಟ್ಟಿಸುವಂತೆ ಮಾಡುವದೇ ಅಲ್ಲಿಯ ಪ್ರಚಾರದ ಜೀವಾಳವೆನ್ನಬೇಕು. ಈ ಅಸಪ್ರಚಾರವು ಎಷ್ಟರ ವರೆಗೆ ಮುಂದುವರಿದಿದೆ ಎಂದರೆ ಇಂಗ್ಲೆಂಡು ಸ್ವೀಡನನ್ನು ಹೊಂಚುಹಾಕುತ್ತಿದೆ, ಎಂಬ ಹೆದರಿಕೆಯನ್ನು ಹುಟ್ಟಿಸುವ ಪ್ರಯತ್ನ ಅಲ್ಲಿ ನಿರ್ಗಳವಾಗಿ ನಡೆಯುತ್ತಿದೆ. ಅದೇ ರೀತಿ, ಮೊದಲು ಅಲ್ಲಿ ಫಿನ್‌ಲೇಂಡಿನ ವಿರುದ್ಧ ಪ್ರಚಾರವೂ ನಡೆಯುತ್ತಿತ್ತು; ಆದರೆ ಅದೇ ಕಾಲದಲ್ಲಿ ಫಿನ್‌ಲೇಂಡಿನಲ್ಲಿ ಸ್ವೀಡನ್ ವಿರುದ್ಧ ಪ್ರಚಾರವೂ ನಾಜಿಗಳಿಂದ ನಡೆಯುತ್ತಿದ್ದುದರಿಂದ ಅದಕ್ಕೆ ತರಳೆಸುಬ್ಬನ ಮಾತಿಗೆ ದೊರೆಯುವಷ್ಟೇ ಬೆಲೆ ದೊರಕಿತು!

ಸ್ವೀಡಿಶ್ ಜನರ ಕಿವಿಯೊಳ ಹೋಗುವ ಎಲ್ಲಾ ವಾರ್ತೆಗಳಲ್ಲಿಯೂ, ಮಲೇರಿಯಾ ಜ್ವರಕ್ಕೆ ಕೊಡುವ ಯಾವುದೇ ರಸಗುಳಿಗೆಯಲ್ಲಿ ಕ್ವಿನೈನಿನ ಅಂಶವಿರುವಂತೆ ತಮ್ಮ ನಾಜೀ ತತ್ವವಿರಲೇಬೇಕೆಂಬ ಹಠ ಜರ್ಮನರದು. ಅಂತೆಯೇ ಅವರು ಪ್ರಥಮತಃ ಸ್ವೀಡನಿನ ಬ್ರೋಡ್‌ಕಾಸ್ಟಿಂಗ್ ಕಂಪೆನಿಯವರೊಡನೆ, ತಮ್ಮ ಪ್ರಚಾರ ರಿಕಾರ್ಡುಗಳನ್ನು ರೇಡಿಯೋ ಮೂಲಕ ಪ್ರಚುರಿಸಬೇಕೆಂದು ಕೇಳಿಕೊಂಡರು; ಒಹಳವಾಗಿ ಪ್ರಯತ್ನಿಸಿದರು. ಆದರೆ ಅಲ್ಲಿಯ ರೇಡಿಯೋ ಅಧಿಕಾರಿಗಳದಕ್ಕೊಪ್ಪಲಿಲ್ಲ. ಕೂಡಲೇ ಕೊನಿಗ್ಸ್‌ಬರ್ಗ್ ಎಂಬಲ್ಲಿಯ ಜರ್ಮನ್ ರೇಡಿಯೋ ಸ್ಟೇಶನಿನ ಮೂಲಕ ಸ್ವೀಡನಿನಲ್ಲಿ ಪ್ರಚಾರಕ್ಕಾರಂಭವಾಯಿತು; ಆ ಮಾದರಿಯನ್ನು ಬಿ. ಬಿ. ಸಿ. ಸಂಸ್ಥೆಯೂ ಅನುಕರಿಸಿತು. ಹಾಗೆಯೇ "ಸ್ವೆನ್ಸ್ಕ್ ಫಿಲ್ಮ್‌ಇಂಡಸ್ಟ್ರಿ" ಎಂಬ ಸ್ವೀಡಿಶ್ ಸಿನೆಮಾ ಸಂಸ್ಥೆಯೊಡನೆ ತಮ್ಮ ನಾಜೀ ಸಿನೆಮಾಗಳನ್ನು ಪ್ರದರ್ಶಿಸುವಂತೆ ಕೇಳಿಕೊಳ್ಳಲಾಯಿತು; ಅವರು ನಿರಾಕರಿಸಿದೊಡನೆ ಜರ್ಮನಿಯ ಸಂಚಾರಿಕ ಸಿನೆಮಾ ಸಂಸ್ಥೆಯು ಸ್ವತಃ ಆ ಕಾರ್ಯವನ್ನು ಮಾಡುವ ನಿರ್ಧಾರಕ್ಕೆ ಬಂತು. ಈಗ ವಿಧಿಯಿಲ್ಲದೆ ಸ್ವೀಡಿಶ್ ಅಧಿಕಾರಿಗಳೂ ತಮ್ಮ ನಿರ್ಣಯವನ್ನು ಬದಲಾಯಿಸಿದರು.

ಕಾನೂನು ವಿರುದ್ಧ, ಅಸ್ವಾಭಾವಿಕ ವರ್ತನೆ

ಸ್ವೀಡನಿನಲ್ಲಿ ಉದ್ಯೋಗಾವಲಂಬಿಗಳಾಗಿರುವ ವಿದೇಶೀಯರಿಲ್ಲದೂ, ತಾವು

ತುಳುನಾಡ್ ಬೇಂಕ್

ಆಫ್ ಸಪ್ಲೈಏಜನ್ಸಿ ಲಿಮಿಟೆಡ್ ಉಡುಪಿ

Authorised & Issued Capital	...	Rs	1,00,000
Subscribed & Paid up Capital	..	Rs	31,340
Reserves & other Funds	...	Rs	22,052

ನಿರಖು ಠೇವಣಾತಿಗಳು ರಿಯಾಯತಿ ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.

ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳೂ ಮಾಡಲ್ಪಡುತ್ತವೆ.

ಹೆಚ್ಚಿನ ವಿವರಗಳಿಗೆ ಬರೆಯಿರಿ.

THULUNAD BANK

OF SUPPLY AGENCY LIMITED.

ಯಾವ ಪ್ರಚಾರಕ್ಕೂ ಕೈಹಾಕುವದಿಲ್ಲವೆಂದು ಬರೆದುಕೊಡುವ ಕಾನೂನಿದೆ. ಆದರೆ ಕೈಬರೆಹದಿಂದ ಹಣೆಬರೆಹ ಬೇರಾಗುವ ಹಾಗುಂಟೆ? ಯುದ್ಧಾರಂಭವಾದೊಡನೆ ಜರ್ಮನಿಯ ಸಂಚಾರಕ ಬ್ಯೂರೋವಿನ ಹೊರಭಾಗದಲ್ಲೆಲ್ಲಾ ಮಿತ್ರರಾಷ್ಟ್ರಗಳ ವಿರುದ್ಧ ಮುಖಪತ್ರಗಳು ಹಾಗೂ ಚಿತ್ರಗಳು ಕಣ್ಸೆಳೆವ ರೀತಿಯಲ್ಲಿ ಪ್ರದರ್ಶಿಸಲ್ಪಟ್ಟವು. ಕಟ್ಟಕಡೆಗೆ ಸ್ವೀಡಿಶ್ ಸರಕಾರವದನ್ನು ಆತಂಕಿಸಿದಾಗ, ನಾಜಿಗಳು ಅದಕ್ಕೆ ಹೇಗೂ ಅರ್ಧಮನಃ ಒಪ್ಪಿಗೆಯಿತ್ತರು.

ಇವೆಲ್ಲಾ ವಯಸ್ಕರನ್ನು ತಿದ್ದುವ, ತತ್ಕಾಲಕ್ಕುಪಯೋಗವಾಗುವ ಸಾಧನಗಳು; ಬೆಳೆವ ಮರಕ್ಕೆ ಕಸಿಕಟ್ಟುವಂತಹ ವಿದ್ಯಮಾನಗಳು. ಮುಂದಿನ ಜನಾಂಗವಾಗುವವರನ್ನು ತರಬೇತುಗೊಳಿಸುವುದರಲ್ಲಿ ಅರ್ಥಾತ್ ಮೊಳಕೆಯನ್ನು ಚಿವುಟಿ ತಮ್ಮ ದಿಕ್ಕಿಗೆ ಬಾಗಿಸುವುದರಲ್ಲೂ ನಾಜಿಗಳು ಜಯಶೀಲ ಕಾರ್ಯ ಮಾಡಿದ್ದಾರೆ. ಒಂದು ವಿಚಿತ್ರವೆಂದರೆ ಸ್ಟೋಕ್‌ಹೋಮಿನಲ್ಲಿರುವ ಜರ್ಮನ್ ಲೆಗೇಶನಿನ ಕಾರ್ಯದರ್ಶಿ ಡಾ॥ ಕಾಪ್ನರನೇ ಸ್ವೀಡಿಶ್ ಮಂತ್ರಿಯ ಮಂತ್ರಾಲೋಚಕ. ಅಲ್ಲಿಯ ಶಾಲೆಗಳಲ್ಲಿ ಜರ್ಮನ್ ಭಾಷೆಯ ಮೇಲೆ ತನ್ನ ಸ್ವಂತ ರಾಷ್ಟ್ರದಲ್ಲಿರುವ ನಾಜೀ ತತ್ವಪ್ರಚೋದಿತ ಪಾಠಕ್ರಮವನ್ನಿಡಿಸುವದರಲ್ಲಿ ಕಾಪ್ನರ್ ಜಯಶೀಲನಾಗಿದ್ದಾನೆ. ಆದರೆ ಅದರ ಫಲಿತಾಂಶ ಮಾತ್ರ ಕಾಪ್ನರನ ನಿರೀಕ್ಷೆಗೆ ಪ್ರತಿಕೂಲವಾಗಿ ಪರಿಣಮಿಸಿತು. ಜರ್ಮನ್ ಪಾಠವಿದ್ದ ಮೇಲ್ತರಗತಿಗಳಲ್ಲೆಲ್ಲಾ ದಾಸ್ಯಾಶಯಕ್ಕೆ ಮಿಕ್ಕ ವಿದ್ಯಾರ್ಥಿಗಳು ನಾಪಾಸಾದರು! ಜರ್ಮನಿ ಪಾಠಪುಸ್ತಕಗಳ ಮೇಲೆ ಸ್ವೀಡಿಶ್ ವಿದ್ಯಾರ್ಥಿಗಳಿಗಿದ್ದ ಅನಾದರಣೆಯೇ ಈ ಅಪಜಯಕ್ಕೆ ಕಾರಣ.

ಹೀಗೆ ಯುದ್ಧಾರಂಭವಾದೊಡನೆ ಸ್ವೀಡನಿನಲ್ಲಿ ನಾಜೀ ಪ್ರಚಾರ ಹಾಗೂ ಮಿತ್ರರಾಷ್ಟ್ರಗಳ ಕುರಿತು ಅಪಪ್ರಚಾರ ಭರದಿಂದ ನಡೆಯುತ್ತಾ ಬಂದಿದೆ. ಇದಕ್ಕೆ ಪ್ರತಿಯಾದ ಕಾರ್ಯವಾವುದನ್ನೂ ಮಿತ್ರರಾಷ್ಟ್ರಗಳು ಅಲ್ಲಿ ಕೈಗೊಂಡಿಲ್ಲ. ಪ್ರಾಜ್ಞರಾದ ಸ್ವೀಡನ್ ಜನರು ಅದರಲ್ಲಿರುವ ಅಪಾಯವನ್ನು ಮೊದಲೇ ಊಹಿಸಿ ತಿಳಿದು, ಮಿತ್ರರಾಷ್ಟ್ರಗಳ ಕಾರ್ಯಶೂನ್ಯತೆಯ ಕುರಿತು ಆಶ್ಚರ್ಯ ಸೂಚಿಸಿದ್ದರು. ಇದರ ಪರಿಣಾಮವಾಗಿಯೇ, ಯುದ್ಧಾರಂಭದ ಕಾಲದಲ್ಲೊಮ್ಮೆ ತೋಳನನ್ನು ಕಾಣುವ ಜಿಂಕೆಯಂತೆ ಬ್ರಿಟನನ್ನು ಸ್ವೀಡನ್ ಬೆದರು ಕಂಗಳಿಂದ ನೋಡುವಂತಾಗಿತ್ತು. ಬ್ರಿಟನರು ಸ್ವೀಡನಿನ ವಿಮಾನ ನಿಲ್ದಾಣವನ್ನು ಉಪಯೋಗಿಸುವ ಹಕ್ಕನ್ನು ಕೇಳಿದ್ದಾರೆಂದೂ, ದಕ್ಷಿಣ ಸ್ವೀಡನಿನಲ್ಲಿ ಬ್ರಿಟಿಷ್ ಸೇನೆಗಳನ್ನು ನಿಲ್ಲಿಸುವ ಯೋಚನೆಯಲ್ಲಿದ್ದಾರೆಂದೂ ಜರ್ಮನ್ ಪ್ರಚಾರಶಾಖೆಯೊಂದು ಸುಳ್ಳು ಸುಳ್ಳೇ ಪ್ರಕಟಿಸಿತ್ತು.

ಅಂತೂ ಜರ್ಮನಿ ಪ್ರಥಮತಃ ತನ್ನ ಇದಿರುವಾದಿಯ ಕಾಲಡಿಯನ್ನು ನಾನಾ ವಿಧದಿಂದ ಕಡಿದುಬಿಡುತ್ತದೆ. ಕೊನೆಗೆ ಜರ್ಮನಿ ಪ್ರತ್ಯಕ್ಷ ಇದಿರುಬಂದಾಗ ಇಂತಹ ಪುಟ್ಟ ರಾಷ್ಟ್ರಗಳು ಕೈಚೆಲ್ಲುವ ಮೊದಲೇ ಕವಚಿಬೀಳುತ್ತವೆ! ಹಿಟ್ಲರನಿಗೆ ರಾಜ್ಯ ಕಬಳಿಸಲು ಘಂಟೆಮಿನಿಟುಗಳೇ ಸಾಕಾಗುತ್ತವೆಂದರೆ ಹೀಗೆ!

ಸ್ವಸ್ತಿಕಾ ಕೊಟ್ಟ; ಜರ್ಮನ್ ನೀತಿಗೆ 'ಅಸ್ತು' ಕೊಡಲಿಲ್ಲ!

ಸ್ವೀಡನಿನ ಕೀರ್ತಿವಂತ ಕೌಂಟ್ ಎರಿಕ್ ವೊನ್ ರೋಸೆನ್ ಅಂದರೆ ಜರ್ಮನಿಯ ಫೀಲ್ಡ್ ಮಾರ್ಶಲ್ ಗೋರಿಂಗನ ನಾದಿನಿಯ ಗಂಡ. ಜರ್ಮನಿಗೆ ಸ್ವಸ್ತಿಕದ ಪರಿಚಯ ಮಾಡಿದವನೇ ಈ ಕೌಂಟ್ ರೋಸೆನ್. ೨೩ ವರ್ಷಗಳಿಗೆ ಹಿಂದೆ ಫಿನ್ಲೆಂಡಿನ "ಬಿಳಿ" ಸೈನ್ಯವು ಆ ಕಾಲದ ಸಮತಾವಾದಿಗಳೊಡನೆ ಮತ್ತು "ಕೆಂಪುದಳ"ದವರೊಡನೆ ಯುದ್ಧ ಹೂಡಿತ್ತು. ರೋಸೆನನು ಫಿನ್ನಿಶ್ ಸೈನ್ಯಕ್ಕೆ ಒಂದು ವಿಮಾನವನ್ನು ಖಾಸಗಿ ದಾನವಾಗಿ ಕೊಟ್ಟಿದ್ದ; ಆ ವಿಮಾನದಲ್ಲಿ ಸ್ವಸ್ತಿಕ ಚಿಹ್ನೆಯನ್ನು ಅವನು ಬಿಡಿಸಿದ್ದ. ಇಂದು ಜರ್ಮನಿಯ ಎಲ್ಲಾ ಕಡೆಗಳಲ್ಲಿಯೂ ಕಂಡು ಬರುವ ಈ ಸ್ವಸ್ತಿಕಾ ನಕಾಶೆಗೆ ಪ್ರಥಮತಃ ಸ್ಥಾನ ದೊರಕಿದುದು ಹೀಗೆ. ಆದಾಗಿ ಕೆಲವು ತಿಂಗಳ ನಂತರ, 1918ನೇ ಇಸವಿಯ ಕ್ರಾಂತಿಯ ದೆಸೆಯಿಂದ ಹೊರಗಟ್ಟಲ್ಪಟ್ಟಿದ್ದ ತರುಣ ಕೆಪ್ಟನ್ ಗೋರಿಂಗ್ ಸ್ವೀಡನಿಗೆ ಬಂದ. ಅಲ್ಲಿ ಕೌಂಟ್ ರೋಸೆನನ ಪರಿಚಯವಾಯಿತು; ಅದಕ್ಕೂ ಮಿಗಿಲಾಗಿ ರೋಸೆನ್‌ನ ಹೆಂಡತಿಯ ಸಹೋದರಿ ಸೊಗಸುಗಾತಿ ಕೌಂಟೆಸ್ ಫೋಕ್ ಇವಳ ಪರಿಚಯವಾಯಿತು. ಸರಿ, ವಿಳಂಬವಿಲ್ಲದೆ ಅವರೊಳಗೆ ವಿವಾಹವೂ ಆಯಿತು.

ಸ್ವಸ್ತಿಕದ ಆಗಮನ

ಗೋರಿಂಗ್ ಸಪತ್ನೀಕನಾಗಿ ತನ್ನ ದೇಶಕ್ಕೆ ಹಿಂದಿರುಗುವಾಗ ಆ ಸ್ವಸ್ತಿಕವನ್ನೂ ಜತೆಯಲ್ಲಿಯೇ ತಂದ. ಸಮತಾವಾದಿಗಳಿಗೆ ಇದಿರಾಗಿ ಗೆದ್ದ ಚಿಹ್ನೆಯಿದು, ಸಮಾಜವಾದವನ್ನು ವಿರೋಧಿಸಲು ಫಣ ತೊಟ್ಟಿರುವ ಹಿಟ್ಲರನಿಗೇ ಚಿಹ್ನೆಯಾದೀತೆಂಬ ಭಾವನೆಯಿಂದ ಅವನದನ್ನು ತಂದಿದ್ದ. ಅಂತೆಯೇ ಆಯಿತು. ಅಂದಿನಿಂದ ಸ್ವಸ್ತಿಕವೇ ನಾಜಿಗಳ ಧ್ವಜಚಿಹ್ನೆಯಾಯಿತು. ಗೋರಿಂಗನ ಮೊದಲನೇ ಹೆಂಡತಿ ತೀರಿಹೋದಳು; ಅವಳೊಟ್ಟಿಗೆ ಬಂದಿದ್ದ ಸ್ವಸ್ತಿಕ ಮಾತ್ರ ಎಷ್ಟೋ ಅಪಮೃತ್ಯುಗಳನ್ನು ಅಲಕ್ಷ್ಯಿಸಿ ಬಾಳಿಬಂದಿದೆ. ಗೋರಿಂಗನು ತನ್ನ ಪ್ರಥಮ ಪತ್ನಿಯ ಸ್ಮರಣೆಯನ್ನು ಎಂದೂ ಮರೆಯುವಂತಿಲ್ಲ.

ಫಿನ್ನರಿಗೆ ಸಹಾಯಮಾಡಬೇಕಿತ್ತಂತೆ

ಇತ್ತೀಚೆಗೆ ಫಿನ್ಲೆಂಡ್ ಯುದ್ಧಾರಂಭವಾಯಿತಷ್ಟೆ. ಕೆಲವು ವಾರಗಳು ಕಳೆಯುವದರೊಳಗೆ ರೋಸೆನ್ ಜರ್ಮನಿಗೆ ಬಂದ. ತನ್ನ ಸಂಬಂಧಿಕ ಗೋರಿಂಗನೊಡನೆ "ನಿನ್ನ ಹೆಂಡತಿಯ ಸ್ಮರಣೆಯೊಂದಿಷ್ಟಾದರೂ ನಿನ್ನಲ್ಲಿದ್ದರೆ ಈ ಸಂದರ್ಭದಲ್ಲಿ ಫಿನ್ನರಿಗೆ ಸಹಾಯಮಾಡಬೇಕು" ಎಂದು ಒತ್ತಾಯಿಸಿದ. "ಈ ಸ್ವಸ್ತಿಕ ಧ್ವಜವು ಜರ್ಮನರು ಕೈಗೊಳ್ಳುವ ಮೊದಲು ಫಿನ್ನಿಶ್ ಜನರ ರಕ್ತದಿಂದ ಅಭಿಷೇಕಿಸಲ್ಪಟ್ಟಿತ್ತು. ಆ ಕುರಿತು ಗೌರವವೇನಾದರೂ ನಿಮ್ಮಲ್ಲಿರುವದಾದರೆ ಈ ದಿನ ಫಿನ್ನರನ್ನುಳಿಸಿರಿ" ಎಂದ. ರೋಸೆನನ ಈ ಮನಮುಟ್ಟುವ ಮಾತುಗಳಿಗೆ "ಸಾಧ್ಯವಿಲ್ಲ" ಎಂಬ ಒಂದೇ ಉತ್ತರ ಗೋರಿಂಗನಿಂದ ಬಂತು. ಅಲ್ಲಿಗೆ ಸಂಭಾಷಣೆ ನಿಂತಿತು.

ನಾಜೀ ಬಹುಮಾನಗಳಿಗೆ ಬೆಂಕಿ ಕೊಟ್ಟ!

ರೋಸನ್ ನಿಸ್ತೇಜ ವದನನಾಗಿ ಸ್ವೀಡನಿಗೆ ಮರಳಿದ. ಸ್ಟೋಕ್‌ಹೋಮಿಗೆ ಐವತ್ತು ಮೈಲು ದೂರದಲ್ಲಿರುವ ತನ್ನ ಹಳ್ಳೀ ನಿವಾಸಕ್ಕೆ ತನ್ನ ಎಲ್ಲಾ ಒಕ್ಕಲುಗಳನ್ನೂ ಆಮಂತ್ರಿಸಿದ. ಅವರ ಕಣ್ಣೆದಿರಲ್ಲಿ ತನಗೆ ನಾಜೀ ಅಧಿಕಾರಿಗಳಿಂದ ಉಡುಗರೆಯಾಗಿ ದೊರೆತಿದ್ದ ಎಲ್ಲಾ ಫೋಟೋಗಳನ್ನೂ ಬೆಂಕಿ ಹಚ್ಚಿ ಸುಟ್ಟುಬಿಟ್ಟ! ಅವುಗಳಲ್ಲಿ ಹಿಟ್ಲರನು ಸಹಿಹಾಕಿ ಕಳುಹಿದ್ದ ಭಾವಚಿತ್ರ ಮತ್ತು ಇತರ ನಾಜೀ ಮುಖಂಡರುಗಳ ಫೋಟೋಗಳೂ ಇದ್ದವು. ಹೀಗೆ ಸ್ವಸ್ತಿಕಾ ದಾನಿಯ ಮನಸ್ಸು ಕೂಡ ನಾಜೀ ಧುರೀಣರ ಧೋರಣೆಯಿಂದ ಪಲ್ಲಟನಾಗಿದೆ!

ನವಯುಗದಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ನಿಮ್ಮ ವ್ಯವಹಾರ ವೃದ್ಧಿಗೊಳಿಸಿರಿ!

ಮೈಸೂರು ಪತ್ರ

ಮೈಸೂರು ಕಾಂಗ್ರೆಸ್ ಅಧಿವೇಶನ ಕಾಂ. ಅಧ್ಯಕ್ಷರ ಭಾಷಣ

ಡಾ. ನಾ. ಸು. ಹರ್ಡೀಕರರು ರಾಷ್ಟ್ರೀಯ ತ್ರಿವರ್ಣ ಧ್ವಜ ಹಾರಿಸಿ ಮಹಾತ್ಮರಲ್ಲಿ ವಿಶ್ವಾಸವಿಡಬೇಕೆಂದರು.

(ನಮ್ಮ ಸ್ವಂತ ಬಾತ್ಮೀದಾರರಿಂದ)

ಪತ್ರಿಕಾ ಮುಸೂದೆ ಖಂಡನೆ ಮಹತ್ವಪೂರಿತ ನಿರ್ಣಯಗಳು ಪಾಸಾದುವು.

ಮೈಸೂರು ರಾಜಕೀಯ ಇತಿಹಾಸದಲ್ಲಿ ಕಳೆದ ವಾರ ಬಹಳ ಮಹತ್ವದ್ದು. ಯೂರೋಪಿನಲ್ಲಿ ಯುದ್ಧ, ಭರತಖಂಡದಲ್ಲಿ ರಾಜಕೀಯ ಬಿಸಿ ಏರುತ್ತಿರುವುದು. ಇವುಗಳ ನಡುವೆ ಮೈಸೂರು ಸಂಸ್ಥಾನ ಕಾಂಗ್ರೆಸ್ಸಿನವರು ತಮ್ಮ ಮೂರನೆ ವಾರ್ಷಿಕಾಧಿವೇಶನವನ್ನು ಶಿವಮೊಗ್ಗೆಯಲ್ಲಿ ಇದೇ ಮಾಹೆ ತಾ. 10ರಿಂದ ಮೂರು ದಿನಗಳು ನಡೆಸಿ ಅಭೂತಪೂರ್ವ ಯಶಸ್ಸನ್ನು ಹೊಂದಿದರೆಂದರೆ ತಪ್ಪಾಗಲಾರದು. ಈ ಅಧಿವೇಶನವನ್ನು ನಡೆಸಿದ ಪ್ರದೇಶಕ್ಕೆ 'ಆಜಾದ್ ನಗರ'ವೆಂದು ಹೆಸರಿಡಲಾಗಿತ್ತಲ್ಲದೆ, ದಟ್ಟ ಕಾಡು, ಗಂಭೀರವಾಗಿ ಹರಿಯುತ್ತಿದ್ದ ತುಂಗಾನದಿಯ ದಡದಲ್ಲಿ ನಡೆದ ಇದನ್ನು ಆ ಭಾಗ ಕಾಂಗ್ರೆಸ್ಸಿನ ಈ ಬಾರಿ ಅಧಿವೇಶನವು ದಾವೋದರ ನದಿ ಮತ್ತು ಮನೋಹರ ಕಾಡುಗಳ ಪ್ರಕೃತಿ ಇತ್ತಿತ್ತು ಬಹುದು. ಆಜಾದ್ ನಗರವು ವಿದ್ಯುತ್ ದೀಪಗಳಿಂದ ಬೆಳಗುತ್ತಿತ್ತಲ್ಲದೆ ಸಂಸ್ಥಾನದ ಅದ್ಯಂತದಿಂದಲೂ ಕಾಂಗ್ರೆಸ್ ಭಕ್ತರುಗಳು ಬಂದು ತಂಡೋಪತಂಡವಾಗಿ ಸೇರಿದ್ದುದರಿಂದ ಒಂದು ಚಿಕ್ಕ ಪಟ್ಟಣವೇ ನಿರ್ಮಾಣವಾಗಿತ್ತೆಂದರೆ ಹೆಚ್ಚಲ್ಲ.

ನಿರ್ದಿಷ್ಟ ಕಾಲದ ಒಳಗೆ ಕಾಂಗ್ರೆಸ್ ಅಧ್ಯಕ್ಷ ಶ್ರೀ. ಕೆ. ಟಿ. ಭಾಷ್ಯಂರವರೂ, ಅತಿಥಿಗಳೂ ಶಿವಮೊಗ್ಗೆಗೆ ಆಗಮಿಸಲು ಶಿವಮೊಗ್ಗ ಕಾಂಗ್ರೆಸ್ ಸಮಿತಿಯವರೂ, ಅಧಿವೇಶನದ ಸ್ವಾಗತ ಸಮಿತಿ ಸದಸ್ಯರುಗಳೂ ಮತ್ತು ಶಿವಮೊಗ್ಗೆ ಪ್ರಜೆಗಳೂ ಕಾಂ| ಅಧ್ಯಕ್ಷರಿಗೆ ಅಭೂತಪೂರ್ವ ಸ್ವಾಗತ ನೀಡಿ ಪುಷ್ಪಹಾರ ಅರ್ಪಿಸಿ ನೂರು ನೂರು ಜೋಡಿ ಎತ್ತಿನ ಗಾಡಿಯನ್ನು ದಿವ್ಯವಾಗಿ ಅಲಂಕರಿಸಿ ಅದರಲ್ಲಿ ಕಾಂ| ಅಧ್ಯಕ್ಷರನ್ನು ಕೂಡಿಸಿ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ಹೋಗಿ ಆಜಾದ್ ನಗರ ತಲುಪಲು ದಾರಿಯಲ್ಲಿ ಈ ದೃಶ್ಯವನ್ನು ನೋಡಿ ಅನೇಕರು ಸಂತೋಷಪಟ್ಟರು.

ಬಹಿರಂಗ ಅಧಿವೇಶನ— ಸುಂದರವಾಗಿ ಅಲಂಕರಿಸಲಾಗಿದ್ದ ದೊಡ್ಡ ಚಪ್ಪರದಲ್ಲಿ ಸುಮಾರು ಮೂವತ್ತು ಸಹಸ್ರ ಪ್ರೇಕ್ಷಕರೊಡನೆ ಕಾಂ| ಅಧಿವೇಶನ ಜರಗಿತು. ವೇದಿಕೆಯ ಮೇಲೆ ಕಾಂ| ವ| ಸಮಿತಿ ಸದಸ್ಯರುಗಳು ಕೂತರು. ಕಾಂಗ್ರೆಸ್ ಅಧ್ಯಕ್ಷರು ಆಗಮಿಸಿದ ಕೂಡಲೆ ಜಯ ಜೈಕಾರ ಧ್ವನಿ ಸಭೆಯ ತುಂಬಲು ಮೊಳಗುತ್ತಿತ್ತು. ರಾಷ್ಟ್ರೀಯ ಗೀತೆ ನಡೆದು, ಸ್ವಾಗತಸಮಿತಿ ಅಧ್ಯಕ್ಷರ ಭಾಷಣ ನಡೆಯಿತು. ಹಿಂದೂಸ್ಥಾನದ ಪ್ರಮುಖ ಮುಖಂಡರುಗಳ ಮರಣದ ಬಗ್ಗೆ ಸಂತಾಪ ನಿರ್ಣಯವಾದಲಾಯಿತು. ಮೈ| ಕಾಂ| ಅಧ್ಯಕ್ಷ ಶ್ರೀ ಹೆಚ್. ಸಿ. ದಾಸಪ್ಪನವರು ಖಾಯಿಲೆ ಇರುವುದರಿಂದ ಅಧಿವೇಶನಕ್ಕೆ ಬರಲು ಸಾಧ್ಯವಿಲ್ಲೆಂದು ತಿಳಿಸಿ ಬರೆದಿದ್ದ ಸಂದೇಶ ಓದಲಾಯಿತು. ಇಷ್ಟಲ್ಲದೆ ಅಧಿವೇಶನವು ಯಶಸ್ವಿಯಾಗಿ ನಡೆಯಬೇಕು ಹಾರೈಸಿ ಅ| ಭಾ| ಕಾಂ| ನಾಯಕರುಗಳಾದ ಶ್ರೀ| ರಾಜೇಂದ್ರಪ್ರಸಾದ್ ಮತ್ತು ಶ್ರೀಮತಿ ಸರೋಜಿನಿ ನಾಯ್ಡು, ಡಾ| ರಾಜನ್, ಶ್ರೀ. ಪಿ. ಹೆಚ್. ಮೆನ್, ಶ್ರೀ. ಸತ್ಯಮೂರ್ತಿ, ಡಾ| ಗಂಗಾಧರ ದೇಶಪಾಂಡೆ, ಶ್ರೀ. ಯಸ್. ಸಿ. ಬೋಸ್ ಮತ್ತು ಇತರರಿಂದ ಬಂದಿದ್ದ ಶುಭ ಸಂದೇಶ ಓದಲಾಯಿತು. ನಂತರ ಕಾಂಗ್ರೆಸ್ ಅಧ್ಯಕ್ಷ ಶ್ರೀ. ಕೆ. ಟಿ. ಭಾಷ್ಯಂರವರು ಜೈಕಾರ ಘೋಷದ ಮುಂದೆ ಶುಭ್ರ ಬಿಳಿ ಖಾದಿ ಉಡುಪು ಧರಿಸಿ ನಿಂತು ಅಧ್ಯಕ್ಷ ಭಾಷಣವನ್ನು ಗಂಭೀರ ಧ್ವನಿಯಲ್ಲಿ ಹೇಳುತ್ತಿದ್ದಾಗ್ಯೆ ಸಭೆಯು ನಿಃಶಬ್ದದಿಂದ ಕೂಡಿ ಪದೆ ಪದೆ ಚಪ್ಪಾಳೆ ತಟ್ಟುತ್ತಿತ್ತು. ಅಧ್ಯಕ್ಷ ಭಾಷಣದಲ್ಲಿ ಅ| ಭಾ| ರಾಜಕೀಯ, ಅಂತರರಾಷ್ಟ್ರೀಯ, ಮೈ| ಕಾಂ| ಮುಂದಿನ ಹೋರಾಟ ಮತ್ತು ಇತರ ಸ್ವಾರಸ್ಯ ವಿಷಯಗಳು ಅಡಗಿರುವುದನ್ನು ಇಲ್ಲಿ ಬರೆಯಲು ಸ್ಥಳ ಸಂಕೋಚ. ಕೊನೆಗೆ ಬಹಿರಂಗ ಸಭೆಯಲ್ಲಿ ಅನೇಕ ವಿಷಯಗಳ ಮೇಲೆ ಚರ್ಚೆ ನಡೆದು ಅವುಗಳಿಗೆ ಬಹುಮತ ಸಿಕ್ಕಿತು.

ಮಾರನೆ ಬೆಳಗ್ಗೆ ರಾಷ್ಟ್ರೀಯ ತ್ರಿವರ್ಣ ಮತ್ತು ಮೈಸೂರು ಧ್ವಜಹಾರಿಸಲಾಯಿತ. ಡಾ. ನಾ. ಸು ಹರ್ಡೀಕರರು ರಾಷ್ಟ್ರೀಯ ಧ್ವಜಹಾರಿಸಿ ಮಹಾತ್ಮರಲ್ಲಿ ವಿಶ್ವಾಸವಿಡಬೇಕೆಂದರು. ಎ. ಎಂ. ಸಿ. ಸಿ. ಮತ್ತು ಕಾಂಗ್ರೆಸ್ ವರ್ಕಿಂಗ್ ಸಮಿತಿ ಸದಸ್ಯರುಗಳ ಬಹಿರಂಗ ಸಭೆನಡೆಯಿತ. ಈ ಸಭೆಗಳಲ್ಲಿ ಅನೇಕ ಪ್ರಾಮುಖ್ಯ ನಿರ್ಣಯಗಳಾದುವಲ್ಲದೆ, ಪತ್ರಿಕಾ ಮಸೂದೆ, ಪಬ್ಲಿಕ್ ಸೆಕ್ಯುರಿಟಿ ಆಕ್ಟ್, ಇಂ. ನ್ಯಾ. ಕಾಂಗ್ರೆಸ್ ಬಗ್ಗೆ ಮೈ. ಹೈಕೋರ್ಟ್ ಚೀಫ್ ಜಸ್ಟಿಸರ ಅವಹೇಳನವನ್ನು ಖಂಡಿಸುವ ಠರಾವುಗಳಾದವು. ಸರ್ಕಾರ ಬ್ಯಾಟ್ಲರ್, ಸರ್ಕಾರದವರು ಕಾಂಗ್ರೆಸ್ ಸ್ವಯಂಸೇವಕರಿಗೆ ಕೊಡುತ್ತಿರುವ ತೊಂದರೆ ಬಗ್ಗೆ ನಿರ್ಣಯ ಠರಾವುಗಳನ್ನು ಅನುಮೋದಿಸಿ ಪಾಸುಮಾಡಲಾಯಿತ. ಮೈ. ಕಾಂ. ನವರು ಶ್ರೀಮಾನ್ ವಿ ಹಾಲಪ್ಪನವರ ಕೈಕಾಪ್ರುದಲ್ಲಿ ಪೂರ್ಣ ಜವಾಬ್ದಾರಿ ಸರಕಾರ ಸ್ಥಾಪನೆಗೆ ಸಂಸ್ಥಾನ ಪ್ರಜೆಗಳು ಹೋರಾಡಬೇಕೆಂದೂ ಇದಕ್ಕೆ ಸರ್ವರೂ ಸಹಾಯಸಿದ್ಧರಾಗಬೇಕೆಂದೂ ನಿರ್ಣಯ ಮಾಡಲಾಯಿತು.

ಕಾಂ. ವ. ಸಮಿತಿಗೆ ನೂತನ ಸದಸ್ಯರುಗಳ ನೇಮಕ ಮತ್ತು ಜೈಲಿನಲ್ಲಿರುವ ಕಾಂಗ್ರೆಸ್ಸಿನವರಿಗೆ ಅಭಿನಂದಿಸುವ ಠರಾವು ಪಾಸಾಗಲು ಅಧಿವೇಶನ ಮುಕ್ತಾಯಗೊಂಡಿತು. ಮುಂದಿನ ಅಧಿವೇಶನವು ಚಿತ್ರದುರ್ಗದಲ್ಲಿ ನಡೆಯುತ್ತದೆ. ಈ ಅಧಿವೇಶನಕ್ಕೆ ಬಂದಿದ್ದ ಕಾಂಗ್ರೆಸ್ ಮುಂದಾಳುಗಳೂ, ಪ್ರೇಕ್ಷಕರುಗಳೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು. ಈ ಅಧಿವೇಶನದಲ್ಲಿ ಯಾವ ಗಲಭೆಯೂ ನಡೆಯದೆ ಎಲ್ಲವೂ ಶಾಂತವಾಗಿ ನಡೆದು ಯಶಸ್ವಿಯಾಗಿ ಮುಕ್ತಾಯಗೊಂಡಿತು.

ವಿಶೇಷ ಸುದ್ದಿಗಳು— ನಗರಾಧ್ಯಗಳ ಸುಪ್ರಸಿದ್ಧ ವರ್ತಕರೂ, ಬೆಂಗಳೂರು ಇಂಡಿಯನ್ ಜ್ಯುಯಲರಿ ಮಾರ್ಟಿನ ಮ್ಯಾನೇಜರೂ ಆದ ಹಿಂದು ಶೆಟ್ಟಿಗಳು ಜಾಮೀನು ಪಟ್ಟಗಳಲ್ಲಿ ಬೆಳ್ಳಿಯನ್ನಿಟ್ಟು ಸಾಲವನ್ನು, ಇಂಡಿಯನ್ ಬೇಂಕ್ ಸ್ಥಳೀಯ ಬ್ರಾಂಚಿನಲ್ಲಿಟ್ಟು ಅವರಿಂದ ಸಾಲಪಡೆಯುತ್ತಿದ್ದರೆಂದೂ, ಇವುಗಳಲ್ಲಿ ಕೆಲವನ್ನು ಹಿಂದಕ್ಕೆ ಪಡೆದು ಬೇಂಕ್ ಸಾಲ ತೀರಿಸಿ ಮತ್ತೆ ಕೆಲವನ್ನು ಬೇಂಕಿನಲ್ಲೇ ಬಿಟ್ಟಿದ್ದರೆಂದೂ, ಬೇಂಕಿನವರು ಆ ಪ್ಯಾಲಿ ಕರುಗಳಿಗೆ ತಿಳಿಸಿ ಋಣ ವಾಪಾಸ್ ಕೊಟ್ಟು ಪೆಟ್ಟಿಗೆ ಹಿಂದಕ್ಕೆ ಪಡೆಯಬೇಕೆಂದು ತಿಳಿಸಿದರೂ, ಠಕ್ಕ ಕಾರ್ಯಕ್ರಮ ಕೈಕೊಳ್ಳದಿರಲು ಬೇಂಕಿನಧಿಕಾರಿಗಳು ಕೆಲವು ಪೆಟ್ಟಿಗೆ ಒಡೆಯಲು ಬೆಳ್ಳಿ ಬದಲು ಕಾಗದ ಚೂರಿಟ್ಟು ಬೇಂಕಿಗೆ ಮೋಸಮಾಡಿರುವರೆಂದೂ, ಈ ರೀತಿ ಸುಮಾರು 9000 ರೂ. ಬೇಂಕಿಗೆ ಆ ಮಾಲೀಕರುಗಳಿಂದ ಬರಬೇಕೆಂದೂ ತಿಳಿಸಿ ಇಂಡಿಯನ ಬೇಂಕ್ ಸ್ಥಳೀಯ ಬ್ರಾಂಚಿನವರು, ಆ ವರ್ತಕರುಗಳ ಮೇಲೆ ಸಿ. ಎಮ್. ಕೋರ್ಟಿನಲ್ಲಿ ಮೊಕದ್ದಮೆ ಹೂಡಿರುತ್ತಾರೆ. ಇದರಂತೆ ಮತ್ತೊಂದು ಸ್ಥಳೀಯ ಖಾಸಗಿ ಬೇಂಕಿನವರು ತಮಗೆ ಮೋಸ ಮಾಡಿರುತ್ತಾರೆಂದು ಪೋಲಿಸಿಗೆ ತಿಳಿಸಲು, ಪೋಲಿಸಿನವರು ಇಂಡಿಯನ್ ಜ್ಯುಯಲರಿ ಮಾರ್ಟಿನ ಮಾಲಿಕರಾದ ಶ್ರೀ. ಶೆಟ್ಟರುಗಳನ್ನು ದಸ್ತಗಿರಿ ಮಾಡಿ ಜಾಮೀನು ಮೇಲೆ ಬಿಟ್ಟು ಮುಂದಿನ ತನಿಖೆ ಕ್ರಮ ನಡಿಸುತ್ತಿದ್ದಾರೆ, ಇದು ಬಹಳ ಕೋಲಾಹಲದಿಂದ ಕೂಡಿದೆ. ಅ. ಮೈ. ಮುಸ್ಲಿಮ್ ಲೀಗ್ ಸಮ್ಮೇಳನವು ಮುಂದಿನ ಮಾಹೆ ತಾ. 3ರಲ್ಲಿ ಬೆಂಗಳೂರಲ್ಲ ನಡೆಯುತ್ತೆಂದೂ, ಇದರ ಆರಂಭೋತ್ಸವವನ್ನು ಬಂಗಾಳ ಮುಖ್ಯ ಮಂತ್ರಿ ಫಜ್ಲುಲ್ ಹಕ್ಕರು ನಡೆಸುತ್ತಾರೆಂದೂ ಹೇಳಲಾಗಿದೆ. ವಿ. ಇಂ. ಆಕ್ಟ್ ಮೀರಿ ದಸ್ತಗಿರಿಯಾಗಿದ್ದ ಶ್ರೀ. ತಗಡೂರ್ ರಾಮಚಂದ್ರ ರಾಯರಿಗೆ 2 ವರ್ಷ ಕಠಿಣ ಶಿಕ್ಷೆ, 500 ರೂ. ಜುಲ್ಮಾನೆ ತಪ್ಪಿದಲ್ಲಿ ಮತ್ತೆ 6 ತಿಂಗಳು ಸಜ ವಿಧಿಸಲಾಯಿತು. ಹೈದ್ರಾಬಾದ್, ಬೆಂಗಳೂರು, ಮದ್ರಾಸ ವ್ಯವಸಾಯ ಸರ್ವಿಸ್ ಹಳದ ಮಾರ್ಗದಿಂದ ಪ್ರಾರಂಭವಾಯಿತು.

ಶಿವಮೊಗ್ಗ— ಮಂಜುನಾಥ ಮೋಟರ್ ಸರ್ವೀಸಿನ ಮೆನೇಜರರಾದ ಶ್ರೀಮಾನ್ ಉದ್ದಯ್ಯಗೌಡರು ಶಿವಮೊಗ್ಗದಲ್ಲಿ ನಿಧನಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ಬಹು ವಿನಯಶೀಲರು ಮತ್ತು ತನ್ನ ಕೆಳ ನೌಕರರನ್ನು ಪ್ರೇಮದಿಂದ ಕಾಣುತ್ತಿದ್ದರು. ಮೃತರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನೀಯಲಿ.

ಬೊಂಬಾಯಿ

ಶ್ರೀ ಗುರುಬ್ರಹ್ಮನಾರಾಯಣ ಸ್ವಾಮಿಯ ಸ್ಮರಣೆ— ಲೋಕಕಲ್ಯಾಣಕ್ಕಾಗಿ ಜನಿಸಿ ಮೇಲು ಕೀಳೆಂಬ ಜಾತಿತಮ್ಯವನ್ನು ನಿವಾರಿಸಿ ತನ್ನ ಜನ್ಮಸಾರ್ಥಕತೆಯನ್ನು ಮಾಡಿಕೊಂಡ ಶ್ರೀ ಸ್ವಾಮಿಜಿಯ ಸ್ಮರಣೆಯು ಅಗತ್ಯವೆಂದು ಮುಂಬಯಿಯಲ್ಲಿ ನೆಲಸಿದ್ದ ಕನ್ನಡಿಗರು ಕೆಲವು ಸಮಯದಿಂದೀಚೆ ಪುಣ್ಯಪವಿತ್ರ ಸ್ವಾಮಿಯನ್ನು ಮನಃಪೂರ್ವಕವಾಗಿ ಸ್ಮರಿಸಲು ಪ್ರತಿ ಆದಿತ್ಯವಾರ 5-30 P. M. (S. T.) ಸರಿಯಾಗಿ ಕೋಟೆಯೊಳಗಿನ ಮದೋರಸ್ಥಿ ದಿಪ್ತ ನ ಫೆರೀರ ಒಂದನೇ ಮಾಳಿಗೆಯಲ್ಲಿ ನಡೆಸುತ್ತಿದ್ದಾರೆಂದು ತಿಳಿಸಬಯಸುವ ಅಂದ ಬಳಿಕ ಜಾತಿಭೇದವಿಲ್ಲದೆ ಎಲ್ಲ ಕನ್ನಡಿಗರು ತಪ್ಪದೆ 30 ನಿಮಿಷದ ಸಮಯವನ್ನು ಸ್ವಾಮಿಗಾಗಿ ಸಲ್ಲಿಸಬೇಕೆಂದು ವಿನಂತಿ.

ಯು. ಕೆ. ರಂಗ.

Await the Gala Opening Night

OF

THE HIMALAYAN PANTOMIME SHOW

AT

THE MUNICIPAL MAIN SCHOOL, UDIPI.

ON FRIDAY 19TH INST.

FIRST SHOW 7-8 30 P. M. SECOND SHOW 9-30-11 P. M.

DON'T MISS THIS GOLDEN OPPORTUNITY

FOR FURTHER PARTICULARS SEE OUR HANDBILL

CAMP: UDIPI. U. SHRIPATHI RAU, *PROPRIETOR.*

ದಕ್ಷಿಣ ಕನ್ನಡ

ಕಾರ್ಕಳ— ಇಲ್ಲಿಯ ದಿಕಾನ್ಸ ಪೊಲಿಟನ ಕ್ಲಬ್ ವಾಚನಾಲಯದ ವರ್ಧಂತಿಯು ತಾ 14-4-1940ರಲ್ಲಿ ಶ್ರೀ ಎ. ಲಕ್ಷ್ಮೀನಾರಾಯಣ ರಾವ್, ಬಿ. ಎ., ಬಿ. ಯಲ್‌ರವರ ಅಧ್ಯಕ್ಷತೆಯಲ್ಲಿ ಉಪಹಾರ ವರದಿ ವಾಚನ, ಭಾಷಣ ಸಂಗೀತ ವಿನೋದ ಮನೋರಂಜನೆ ಮತ್ತು ಬೋಧಪ್ರದ ಕಾರ್ಯಕ್ರಮದಿಂದೊಡಗೂಡಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಅದೇ ದಿನ ಬೆಳಗ್ಗೆ ಕೂಡಾ ಕ್ಲಬ್ಬಿನ ಸದಸ್ಯರ ಬೃಹತ್ಸಭೆಯಲ್ಲಿ ಜನಾಬ್ ಯಚ್. ಯಸ್. ಹುಸ್ಸೇನ, ಬಿ. ಎ. ಬಿ. ಯಲ್. ಯಂ. ಯಲ್. ಎ.ರವರು ಬರುವ ವರ್ಷಕ್ಕೆ ಅಧ್ಯಕ್ಷರಾಗಿಯೂ ಶ್ರೀ. ಬಿ. ಮಹಾಬಲ ಶೆಟ್ಟಿಯವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುತ್ತಾರೆ.

ಸ್ಥಳೀಯ ದಿ ಯೂನಿವರ್ಸಲ್ ಸ್ಕೂಲ್ ಆಫ್ ಕಾಮರ್ಸ್ ಎಂಬ ವಾಣಿಜ್ಯ ಶಿಕ್ಷಣ ಸಂಸ್ಥೆಯ ಒಂದು ಸಂತೋಷ ಕೂಟವು ತಾ 12-4-1940ರ ದಿನ ಶ್ರೀ ಬಿ. ಪಿ. ರಮಣ ಬಿ. ಎ. ಎಲ್. ಟಿ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಉಪಾಹಾರ ಸತ್ಕಾರವು ಮುಗಿದ ಬಳಿಕ ಶ್ರೀ. ಪಕೀರ ಬಿ ಬಾಲಕೃಷ್ಣ ಶೆಟ್ಟಿಯವರು ವಾಣಿಜ್ಯ ಶಿಕ್ಷಣದ ಮಹತ್ವ ಮತ್ತು ಅಗತ್ಯದ ಕುರಿತು ಭಾಷಣವನ್ನಿತ್ತರು.

ಹಿರಿಯಡ್ಕ ಶ್ರೀ ವೀರಭದ್ರಸ್ವಾಮಿ ರಥೋತ್ಸವ— ಇದೇ ಎಪ್ರಿಲ್ ತಿಂಗಳ ತಾ. 22-4-40 ಧ್ವಜಾರೋಹಣ, ಬ್ರಹ್ಮರಥಪೋತ್ಸವ, ತಾ. 23-4-40 ದೀಪೋತ್ಸವ, ತಾ. 24-4-40 ಶ್ರೀಮನ್ಮಹಾ ರಂಗಪೂಜೋತ್ಸವ ಭೂತಬಲಿ, ತಾ. 25-4-40 ಶ್ರೀಮನ್ಮಹಾ ರಥೋತ್ಸವ ತಾ. 26-4-40 ಅವಭೃತ ಸ್ನಾನ, ವಗ್ಯರೆ ಉತ್ಸವಾದಿಗಳು ನಡೆಯಲಿರುವವು, ಭಕ್ತವೃಂದದವರೆಲ್ಲರೂ ಸ್ವಾಮಿಸೇವೆಯಲ್ಲಿ ಭಾಗವಹಿಸಬೇಕಾಗಿ ಆಡಳ್ತೆ ಮೊಕ್ತೇಸರ್ ಮಾಂಬೆಟ್ಟು ತಿಮ್ಮಪ್ಪ ಹೆಗ್ಡೆಯವರು ವಿನಂತಿಸಿಕೊಳ್ಳುತ್ತಾರೆ.

ಮೂಲ್ಕಿ— ಸ್ಥಳೀಯ ಸಂಕೀರ್ತನ ಉಪಾಧ್ಯಾಯರ ಸಂಘದ ವಾರ್ಷಿಕೋತ್ಸವವು ತಾ. 6-4-40ರಲ್ಲಿ ಮಂಗಳೂರು ರೇಂಜ್ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರ್ ಪ್ರೊ. ಯು. ಬಿ. ಪುಟ್ಟಯ್ಯ, ಯಂ. ಎ. ಯಲ್. ಟಿ. ರವರ ಸಭಾಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು.

ಮೂಲ್ಕಿ ಫೂಟ್ ಬಾಲ್ ಕ್ಲಬ್ (ಮುಂಬೈ) ಇದರ ಅಧ್ಯಕ್ಷರಾದ ಶ್ರೀ. ಪಾವ.ನರಾಯರು ಇಲ್ಲಿಗೆ ಬಂದಿದ್ದು ಅವರನ್ನು ಸ್ಥಳೀಯ ಕಮಿಟಿಯವರು ತಾ. 9-4-40ನೇ ಮಂಗಳವಾರ ಸಾಯಂಕಾಲ ಘಂಟೆ 5ಕ್ಕೆ ಉಪಹಾರಾದಿಗಳಿಂದ ಸತ್ಕರಿಸಿ ಹೂವಿನ ಹಾರ ಸಮರ್ಪಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಶ್ರೀಗಳಾದ ಕೆ. ಶ್ರೀನಿವಾಸ ಶೆಣೈಯವರೂ ಬಿ. ಭೋಜರಾಯರು ಇವರೇ ಮೊದಲಾದವರು ಸನ್ಮಾನ್ಯ ಅತಿಥಿಗಳ ಗುಣಕಥನವನ್ನು ಮಾಡಿದರು.

ಹರಿಜನ ಪರಿಷತ್ತು— ಇದಕ್ಕೆ ಬಾಬು ಬಂದ ರೂ. 247-15-5, ಖರ್ಚು ಡಿಪ್ರೆಶಿಯನ್ 15-9-6, ಬಾಡಿಗೆ 17-1-20. ಸಾಲಬಡ್ಡಿಯಂ 16-11-5, ಶೃಂಗಾರ 16-7-2, ವಿನೋದಾವಳಿ 8-10-0, ದೀಪ 9-15-0, ಕೂಲಿ ಮ ಗಾಡಿ 12-8 0 ಪ್ರಕಟಣೆ 5-1-7, ಹೂ ಕಾಗದ ವಗೈರೆ 3-0 6, ಪ್ರಯಾಣ ಖರ್ಚು ರೂ. 48-8-0, ಊಟ 85-3-10, ಪಾನಕ 9-3 2, ಒಟ್ಟು ರೂ. 248-10-2.

ಅಜೆಕಾರು— ಇಲ್ಲಿಯ ಬಿ ಬೋರ್ಡ್ ಎಲಿಮೆಂಟರಿ ಶಾಲಾ ವಾರ್ಷಿಕೋತ್ಸವವು ತಾರೀಖು 13-4-1940ರಲ್ಲಿ ಜನಾಬ್ ಮಹಮ್ಮದ್ ಹುಸೇನ್ ಸಾಹೇಬ್ B. A., B. L., M. L. A., ರವರ ಅಧ್ಯಕ್ಷತೆಯಲ್ಲಿ ಜರಗಿತು. ಕರೆಲ್ ಶ್ರೀ. ಪಿ. ಫೊನ್ಸೆಕಾ ಮಹಿಳೆಯರ ಸ್ಥಿತಿವಾಚನ ಮಾಡಿದರು. ಮಕ್ಕಳಿಂದ ವಿವಿಧ ವಿನೋದಾವಳಿಗಳು ಪ್ರದರ್ಶಿಸಲ್ಪಟ್ಟವು. ಈ ಕೇಂದ್ರಕ್ಕೆ ಮಾನ್ಯ ಡಿಸ್ಟ್ರಿಕ್ಟ್ ಬೋರ್ಡಿನವರು ಒಂದು ಸೂಲಗಿತ್ತಿ (Midwife) ಯನ್ನು ಜಾಕ್ಷಿ ವರ್ಷದಿಂದ ಸೆಂಕ್ಷನ್ ಮಾಡಿರುವರೆಂದು ತಿಳಿದು ಬರುತ್ತದೆ. ಅಂತೆಯೇ ಇಲ್ಲಿ ಅತ್ಯಾವಶ್ಯಕವಾದ ಒಂದು ಡೋಕ್ಟರ್ ಡಿಸ್ಪೆನ್ಸರಿಯನ್ನು ತೆರೆಯುವ ಶೀಘ್ರ ಏರ್ಪಾಡು ಮಾಡಿದರೆ ಬಡಹಳ್ಳಿಗರು ಧನ್ಯರಾಗುತ್ತಿದ್ದರು.

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS,
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ನವಯುಗ

ಉಡುಪಿ, ಗುರುವಾರ ತಾ. ೧೮-೪-'೪೦

ತುದಿಬುಡವಿಲ್ಲದ ಗೊಂದಲ!

ಮಿ. ಜಿನ್ನರ ನೇತೃತ್ವದಲ್ಲಿ ಮುಸ್ಲಿಮ್ ಲೀಗು ಕೈಕೊಂಡಿರುವ ಧೋರಣೆಯು ಭಾರತದ ರಾಜಕೀಯ ಸಮುದ್ರದಲ್ಲೆದ್ದ ಹಾಲಾಹಲವೇ ಸರಿ. ಅವರ ಪಾಕಿಸ್ಥಾನದ ಯೋಜನೆಯಂತೂ ಭಾರತ ಮಾತೆಯ ಹೃದಯ ಶೂಲಿಯಾಗಿ ಪರಿಣಮಿಸಿದೆ. ಅದಕ್ಕೆ 'ಹುಚ್ಚಾಟ' 'ಹಾಸ್ಯಾಸ್ಪದ' 'ಅರ್ಥಶೂನ್ಯ' ಇತ್ಯಾದಿ ಬಿರುದುಗಳು ಸಾಕಷ್ಟು ದೊರಕಿವೆ; ನೀತಿವಿದರಾದ ಮುಸಲ್ಮಾನ ಧುರೀಣರು ಅದನ್ನು ತೀವ್ರವಾಗಿ ಖಂಡಿಸಿದರು. ಎಲ್ಲರ ನಗೆಗೀಡಾಗುವ ಇಂತಹ ಅಭಿಮತವೊಂದನ್ನು ಸಾರಲು ಮಿ. ಜಿನ್ನರಿಗೆ ಎಲ್ಲಿಂದ ಸ್ಫೂರ್ತಿ ಸಂಪಾದಿಸಿ ಕೊಂಡರೆಂಬುದೇ ಪ್ರಕೃತ ಯೋಚಿಸಬೇಕಾದ ವಿಷಯ. ದೇಶದಲ್ಲಿ ಅದಕ್ಕೆ ದೊರಕಿರುವ ಪ್ರಾಮುಖ್ಯತೆಯ ಮೇಲಿಂದ ಜಿನ್ನಾವಾದದ ಸಾಫಲ್ಯವನ್ನು ಕಾಣಬಹುದು. ಒಂದು ವಿಷಯವು ಖಂಡನೆ ಅಥವಾ ಮಂಡನೆಗೆ ಸಿಗಬೇಕಾದರೆ ಅದಕ್ಕೊಂದು ಸ್ಥಾನವಿದ್ದೇ ತೀರಬೇಕು, ತರ್ಕಕ್ಕೆ ಸಿಗುವ ಯೋಗ್ಯತೆಯನ್ನು ಅದು ಹೊಂದಿರಬೇಕು. ಹುಚ್ಚರ ಮಾತಿಗೆ ಅರ್ಥಕಟ್ಟಲು ಯಾರೂ ಹೋಗುವದಿಲ್ಲ; ಅದನ್ನು ಖಂಡಿಸುವ ಬದಲಾಗಿ ಗಾಳಿಪಾಲಾಗಲು ಬಿಡುವದೇ ನ್ಯಾಯವಾದ ಹಾದಿಯು. ಬದಲಿಗೆ ಹುಚ್ಚು ಮಾತನ್ನು ತಿದ್ದಲು ಯತ್ನಿಸುವವರು ಆ ವಾದದ ಅಭ್ಯಾಸಕರಾಗುವವರು ಅದಕ್ಕೊಂದು ಅಸ್ತಿತ್ವವನ್ನು ದೊರಕಿಸಿಕೊಡುತ್ತಾರೆ. ಮಿ. ಜಿನ್ನರ ವಾದಕ್ಕೆ ಇಂತಹದೊಂದು ಪ್ರಾಮುಖ್ಯತೆ ದೊರಕಿದೆ. ದೂರದರ್ಶಿಗಳಾದ ಜಿನ್ನಾರವರೂ ಈ ಸ್ಥಾನವನ್ನಲ್ಲದೆ ಬೇರಾವುದನ್ನೂ ನಿರೀಕ್ಷಿಸಿರಲಾರರು. ಜಿನ್ನಾವಾದವು ಸಾಫಲ್ಯತೆ ಪಡೆಯಿತೆಂದು ನಾವನ್ನುವದು ಇದಕ್ಕಾಗಿಯೆ.

ಇಂತಹ ಪ್ರಾಮುಖ್ಯತೆಯನ್ನು ಕಾಂಗ್ರೆಸು ಬಹುಕಾಲದಿಂದ ಮುಸ್ಲಿಮ್ ಲೀಗಿನ ವಾದಕ್ಕೆ ಕೊಡುತ್ತಾ ಬಂದಿದೆ. ಲೀಗಿನಿದಿರಲ್ಲಿ ನ್ಯಾಯನಿಷ್ಠುರತೆಯನ್ನು ತೋರುವ ಬದಲಿಗೆ ಸಮಜಾಯಿಸುವ ಧೋರಣೆಯೊಂದನ್ನೇ ಹಿಡಿದಿದೆ. ಅದರ ಪರಿಣಾಮವಾಗಿ ಬ್ಯಾರಿಸ್ಟರ್ ಜಿನ್ನಾರವರು ವಿಪರೀತ ಕಲ್ಪನೆಯಿಂದ ಕೆದಿಪಟ್ಟ ಮಗುವಿನಂತಾದರು. ಭಾರತದ ವಿಭಜನೆಗಾಗಿ ಹಟ ಹಿಡಿಯುವಷ್ಟು ಬೆಳೆದರು. ನಾವಿಲ್ಲಿ ಕಾಂಗ್ರೆಸ್ ಧೋರಣೆಯಲ್ಲಿ ಕಲ್ಮಷವನ್ನು ಕಾಣುವದಿಲ್ಲ. ಜಾತೀಯ ಐಕ್ಯತೆಗಾಗಿ ಕಾಂಗ್ರೆಸ್ ನೆಲದ ವರೆಗೂ ಬಗ್ಗಬಲ್ಲದೆಂಬುದನ್ನು ಅದು ತೋರಿಸಿದೆ. ಪರಿಣಾಮವು ಮಾತ್ರ ತದ್ವಿರುದ್ಧವಾಯಿತೆಂಬುದು ಸ್ಪಷ್ಟ. ಬೆರಳು ತೋರಿಸಿ ಕೊಡುವವರು ಪ್ರತ್ಯೇಕವಿದ್ದಾರೆಂಬುದರಿಂದ ಹೊಸ ಹೊಸ ಮ್ಹಾಲನ್ನು ತಯಾರಿಸಿಡುವದೊಂದೇ ಜಿನ್ನರ ಕೆಲಸವಾಗಿದೆ! ಅಲ್ಲವೆನ್ನಲು ಕಾಂಗ್ರೆಸಿನ ಲಕ್ಷ್ಯವೆಳೆದುದೊಂದನ್ನು ಬಿಟ್ಟರೆ ಮುಸ್ಲಿಂ ಲೀಗಿನ ವಾದ ಬೇರಾವ ವಿಧದಲ್ಲಿ ಸಫಲವಾಗಿದೆ? ಮುಸ್ಲಿಂ ಸಾರ್ವಜನಿಕರ ಬೆಂಬಲವಾದರೂ ಅದಕ್ಕೆ ಸಾಕಷ್ಟಿರುವದೇನು? ಜಮಾಯತ್ ಸಂಸ್ಥೆಯ ಸದಸ್ಯರೊಬ್ಬರು ಕಲ್ಕತ್ತದ ಸಭೆಯೊಂದರಲ್ಲಿ ಭಾಷಣವೀಯುವಾಗ ಲೀಗು ಧುರೀಣರ ವಿಭಜನಾ ಯೋಜನೆಯು ಮುಸಲ್ಮಾನರಿಗೆ ಆತ್ಮಹತ್ಯಾ ಸಮಾನವಾಗಿದೆ ಎಂಬುದನ್ನು ಸ್ಪಷ್ಟಪಡಿಸಿರುವರು. ಬಹುಸಂಖ್ಯೆಯನ್ನನುಸರಿಸಿ ಬಂಗಾಳ ಪಂಜಾಬುಗಳು ಮುಸ್ಲಿಂ ಪ್ರಾಂತ್ಯಗಳೆಂದರೂ ಅಲ್ಲಿ ಅರೆವಾಸಿ ಮಿಕ್ಕಿ ಮೀರ್ ನೆರೆವವರು ಹಿಂದುಗಳು; ಆಡಳಿತೆಯ ಅಸ್ತಿವಾರವೇ ಅವರ. ಅವರ ಸಹಾಯವಿನಹಾ ಸರಕಾರ ಸಾಗುವದು ಅಸಾಧ್ಯ; ಆದರೆ ಹಿಂದುಗಳ ಪ್ರಾಂತ್ಯಗಳಲ್ಲಿ ಮುಸಲ್ಮಾನರಿರುವದು ಬೆಳೆಯ ನಡುವೆ ಕಳೆಯಿದ್ದಂತೆ ಬಹುಕಡಿಮೆ; ಕಿತ್ತೆಗೆಯುವದು ಸುಲಭ ಎಂದು ಆ ಸದಸ್ಯರು ಜಿನ್ನರ ಕನಸಿನ ರಾಜ್ಯದ ಚಿತ್ರಬಿಡಿಸಿ ತೋರಿಸಿರುವರು. ಇಂತಹ ಯುಕ್ತಿಯುಕ್ತವಾದಗಳ ನಡುವೆಯೂ ಮುಸ್ಲಿಂಲೀಗಿನ ಬಾಲು ಭ್ರಾಂತಿಗೆ ಒಂದು ಕ್ರಾಂತಿಯರೂಪ ಬಂದಿರುವದೆಂದರೆ, ಕಾಂಗ್ರೆಸು ಅದಕ್ಕೆ ಕೊಟ್ಟಗಮನದಿಂದಾಗಿ; ಕೇವಲ ಇದೊಂದರಿಂದಲೇ!

ಇದರ ಪರಿಣಾಮವು ವಿಪರೀತವಾಗಬಹುದೆಂಬ ಶಂಕೆಗವಕಾಶವಿದೆ. ಕಡೆಗಣಿಸಲ್ಪಡಬೇಕಾದ ಅಥವಾ ನಿರ್ದಾಕ್ಷಿಣ್ಯವಾಗಿ ಅಣಗಿಸಲ್ಪಡಬೇಕಾದ ಲೀಗಿನ ಜಾತೀಯ ಮನೋವೃತ್ತಿಗೆ ತನ್ನ ತತ್ವದ ಕಸಿ ಕಟ್ಟಿ ಸುಧಾರಿಸಬಹುದೆಂದು ಕಾಂಗ್ರೆಸ್ ಭಾವಿಸಿದುದರಿಂದಾಗಿ, ಹಿಂದೂ ಮಹಾಸಭೆಗೂ ಮುಂದೆ ಒಳಬಿಡದೊರಕಿದೆ. ಕೋಳಿಕುನಿಸ್ತ್ರಯೋಜಕವೆಂಬಾದ ಅಂಗಕ್ಕೆ ಚಿಕಿತ್ಸೆ ಮಾಡುವದಕ್ಕಿಂತಲೂ ಓಪರೇಶನ್ ಮಾಡುವದುತ್ತಮವೆಂಬು ನ್ಯಾಯವಷ್ಟೆ. ಕಾಂಗ್ರೆಸ್ ಚಿಕಿತ್ಸಾ ವಿಧಾನವನ್ನನು ಸರಿಸಿರುವಾಗ, ಹಿಂದೂ ಮಹಾಸಭೆ ಶಸ್ತ್ರರಸಿಯೇ ಹಾಕಬೇಕೆಂದು ಹೊರಟಿದೆ. ತನ್ನ ವಾದದ ನ್ಯಾಯವನ್ನು ಸಾವರ್ಕರರು ಚಾತುರ್ಯದಿಂದ ಮನದಟ್ಟು ಮಾಡಿಕೊಡ ಹತ್ತಿದ್ದಾರೆ ಅಂತೂ ಕಾಂಗ್ರೆಸ್ ಕೊಂಡಾಟ ನಡೆಯಿಸಿದುದು ಅಧಿಕವಾಗಿ ಮುಸ್ಲಿಂಲೀಗು ಹಾದಿತಪ್ಪಿದುದನ್ನು ಬಿಟ್ಟಿತ್ತಿ ತೋರಿಸುವ ಮೂಲಕ ಹಿಂದೂ ಮಹಾಸಭೆ ವ್ಯಕ್ತಿಗಳು ಕೂಲವಾಯಿತು. ರಾಷ್ಟ್ರದ ಹಿತಕಾಂಕ್ಷಿಗಳಾರೂ ಈ ಪರಿಸ್ಥಿತಿಗಾಗಿ ಹಿಗ್ಗಲಾರರು.

ಹೀಗೆ ಎರಡೂ ಕಡೆಯಲ್ಲಿ ಜಾತೀಯ ಭಾವನೆಯು ಕಾಂಗ್ರೆಸಿನ ಹಿಡಿತ ತಪ್ಪಿಸಿಕೊಂಡು ತಾಂಡವ ನೃತ್ಯಕ್ಕಾರಂಭಿಸಿದೆ. ಸ್ವಾತಂತ್ರ್ಯ ಸಂಪಾದನೆಗಾಗಿ ಮತ್ತೊಮ್ಮೆ ಅಗ್ನಿಪರೀಕ್ಷೆಗೊಳಗಾಗಿರುವ ಇಂದಿನ ಕಠಿನ ಸನ್ನಿವೇಶದಲ್ಲಿ ಇಂತಹ ವಿಷಮ ಪರಿಸ್ಥಿತಿಯೊದಗಿದುದಕ್ಕಾಗಿ ಮರುಗಬೇಕಾಗಿದೆ. ಜಾತೀಯ ಮನೋವೃತ್ತಿಯನ್ನು ಖಂಡಿಸುವ ತನ್ನ ತತ್ವವನ್ನು ರಾಷ್ಟ್ರೀಯ ಮಹಾಸಭೆಯು ನ್ಯಾಯನಿಷ್ಠುರತೆಯಿಂದ ಅನುಸರಿಸದೆ ಗತ್ಯಂತರವಿಲ್ಲ. ಕಾಂಗ್ರೆಸ್ಸಿನ ಕಣ್ಣ ಮುಂದೆ ಕೃತಕ ಜಾತೀಯ ಭಾವನೆಗಳನ್ನು ಮಬ್ಬುಗೊಳಿಸುವ ಉಜ್ವಲ ಕಾರ್ಯಕ್ರಮವಿದೆ. ಅದು ಜಾತೀಯವಾದಿಗಳನ್ನು ಸಂಪೂರ್ಣ ಕಡೆಗಣಿಸಿ ತನ್ನ ಪಥದ ಕಡೆಗೆ ಲಕ್ಷ್ಯವನ್ನೆಲ್ಲಾ ಕೇಂದ್ರೀಕರಿಸಿದಲ್ಲಿ ಇಕ್ಕಡೆಯ ಜಾತೀಯ ಜಾತೀಯ ವಾದದ ಮೇಲೆ ಅನ್ನಂತೆ ಕತ್ತಲು ಕವಿಯುತ್ತದೆ. ಇಂದಿನ ಪರಿಸ್ಥಿತಿಯಲ್ಲಿ ಹೀಗಲ್ಲದೆ ಅನ್ಯಥಾ ಉಪಾಯವಿಲ್ಲವೆಂಬುದು ಸುಸ್ಪಷ್ಟವಲ್ಲವೆ?

ಚಿಕ್ಕ ರಾಷ್ಟ್ರಗಳಿಗೆ ಉಳಿಗಾಲವಿಲ್ಲವೆ?

'ಬಲವಿದ್ದವನೇ ಬಾಳಬೇಕು' ಎಂಬ ನೀತಿಗೆ ಇಂದಿನ ಯುರೋಪು ಯುದ್ಧದಲ್ಲಿ ಪುರಸ್ಕಾರ ದೊರಕಿದೆ. ಡೆನ್ಮಾರ್ಕ್, ನೋರ್ವೆಗಳ ಅವಸ್ಥೆಯನ್ನು ಕಂಡರೆ ದುರ್ಬಲ ಮನುಷ್ಯನಂತೆಯೇ ಸಣ್ಣ ರಾಷ್ಟ್ರಗಳೂ ಬಲವಂತರ ಆಶ್ರಯ ವಿನಾ ಬದುಕಲಾರವೆಂಬುದು ಸುಸ್ಪಷ್ಟ. ಈ ಯುದ್ಧದಿಂದಾಗಿ ತಮಗಾವ ಲಾಭ-ನಷ್ಟವೂ ಇಲ್ಲ. ಆದ್ದರಿಂದ ತಮ್ಮ ಬಳಿಕೆಯೂ ಬೇಡವೆಂದಿದ್ದ ಸ್ಕೇಂಡಿನೇವಿಯಾ ದೇಶಗಳಿಗಿಂದು ವಿಪತ್ತಿನ ಪರಿಸ್ಥಿತಿಗೆ ಕಟ್ಟುಬಿದ್ದು ಯುದ್ಧಕ್ಷೇತ್ರಗಳಾಗಿ ಪರಿಣಮಿಸಿವೆ. ಡೆನ್ಮಾರ್ಕ್ ಜರ್ಮನಿಗೆ ಶರಣಾಗಿತ್ತು, ನೋರ್ವೆಯು ಜರ್ಮನಿಯಿಂದ ಬಲವಾದ ಹೊಡೆತ ತಿನ್ನುತ್ತಿದೆ. ಸ್ವೀಡನ್ ಭೂಕಂಪ ಹೊಂದುವ ನಿರೀಕ್ಷೆಯಲ್ಲಿದೆ. ಈ ಕಷ್ಟವನುಭವಿಸಲು ಆ ಪುಟ್ಟ ರಾಷ್ಟ್ರಗಳು ಮಾಡಿರುವ ಅಪರಾಧವೇನಾದರೂ ಇದೆಯೆ? ಸರ್ವಥಾ ಇಲ್ಲ. ಪ್ರೆಸಿಡೆಂಟ್ ರೂಸ್‌ವೆಲ್ಟರು ಹೇಳಿರುವಂತೆ ಬಾಳುವ ಹಕ್ಕು ಸಣ್ಣ ರಾಷ್ಟ್ರಗಳಿಗೂ ಇದೆ. ಆದರೆ ಅನ್ಯರದನ್ನು ಪಹರಿಸುವಾಗ, ಅವನ್ನು ಡರಿಸಿ ಬಾಳುವ ಬಲ ಮಾತ್ರ ಇಲ್ಲ! ಸ್ವಕಾರ್ಯ ಸಾಧನ ಧುರಂಧರರಿಗೆ ಅನ್ಯರ ಹಕ್ಕು ಇದ್ದ ಕಡೆಗೂ ಕಾಲು ಚಾಚಬೇಕಾಗಿ ಬಂದರೆ, ಅವರದನ್ನು ಹಿಂಜರಿಯುವುದಿಲ್ಲ. ಹೀಗಾಗಿ ಸಣ್ಣ ರಾಷ್ಟ್ರಗಳ ಭವಿಷ್ಯವು ಸ್ವನಿರ್ಧಾರವನ್ನು ಹೊಂದಿಕೊಂಡಿಲ್ಲವೆಂಬುದು ಸುಸ್ಪಷ್ಟ. ಇಂದು ಕಲ್ಲಪ್ಪ, ಗುಂಡಪ್ಪನವರ ನಡುವೆ ಮೆಣಸಪ್ಪ ಚಟ್ನಿಯಾದಂತೆ, ಜರ್ಮನಿ, ಮಿತ್ರರಾಷ್ಟ್ರಗಳ ಮಧ್ಯೆ ಸಿಲುಕಿ ಸ್ಕಾಂಡಿನೇವಿಯಾ ರಾಷ್ಟ್ರಗಳು ಪುಡಿಯಾಗುತ್ತಿವೆ. ಅವುಗಳ ಶೋಚನೀಯ ಪರಿಸ್ಥಿತಿಗಾಗಿ ಸಹಾನುಭೂತಿ ಪಡೆಯಲೇ ಬೇಕು. ಇಂದಿನ ಮಂಥನವು ಕೊನೆಗಾದರೂ ಎಲ್ಲರ ಜನ್ಮಸಿದ್ಧ ಹಕ್ಕನ್ನು ಭದ್ರಗೊಳಿಸುವ ಸತ್ಫಲವನ್ನು ತಂದರೆ, ಇಂದಿನ ಸಂಕಟವೆಂಬುದು ಸಮುದ್ರಮಥನತುಲ್ಯವಾಗಬಹುದು. ಪ್ರಕೃತ ಹಾಗಾಗುವದೆಂಬ ನಿರೀಕ್ಷೆಯೊಂದರ ಹೊರತು ಬೇರೆ ಸಮಾಧಾನವಿಲ್ಲ

ನಿಜವಾದ ಹೋರಾಟ

ನೋರ್ವೆಯಲ್ಲಿ ಇಂದು ಯುದ್ಧ ಪ್ರವೃತ್ತ ರಾಷ್ಟ್ರಗಳ ಬಲ ಪರೀಕ್ಷೆಯಾಗುತ್ತದೆ ಮಿತ್ರ ರಾಷ್ಟ್ರಗಳು ಜರ್ಮನಿಯ ಮೇಲೆ ಯುದ್ಧಸಾರಿ ಏಳು ತಿಂಗಳುಗಳಿಗೂ ಮಿಕ್ಕಿ ಕಾಲ ಸಂದುಹೋಯಿತು ಈ ವರೆಗೆ ಉಭಯ ಪಕ್ಷೀಯರೂ ಸಡ್ಡುಹೊಡೆದು ನಿಂತ ಜಟ್ಟಿಗಳಂತಿದ್ದರೇ ಹೊರತು ಮೈಬಿಟ್ಟು ಹೋರಾಡಿದ ದಿಲ್ಲ. ನೋರ್ವೆಯಲ್ಲೀಗ ಖಾದಾಖಾಡಿ ಸಂಗ್ರಾಮ ನಡೆಯುತ್ತದೆ, ಇದು ಸ್ವಾಗತಿಸತಕ್ಕ ವಾರ್ತೆ. ಯುರೋಪು ಯುದ್ಧವು ನ್ಯಾಯಬದ್ಧವಾಗಿ ರಾಜಿಯಾದಲ್ಲಿ ಲೋಕವೇ ಆನಂದಗೊಂಡೀತು ಆದರೆ ಅಂತಹ ತೀರ್ಮಾನಕ್ಕನುಕೂಲವಾದ ಕ್ಷೇತ್ರವಿಂದು ಬೇರೆಯಾಗಿ ಉಳಿದಂತೆ ಕಾಣುತ್ತದೆ; ಸಂಧಾನದ ಆಶೆ ದೂರವಾಗಿದೆ ಈ ವರೆಗಿನ ಕಾಲ ಪರಸ್ಪರರು ಇದಿರಾಳಿಯ ಸರಿಯಾದ ಹಿಡಿತ ದೊರೆಯಬೇಕೆಂದು ಹೊಂಚು ಹಾಕುವದರಲ್ಲಿಯೇ ಸಂದಿತು. ಆದರೆ ಲೋಕವನುಭವಿಸಬೇಕಾದ ಯುದ್ಧದ ದುಷ್ಪರಿಣಾಮಗಳಿಗೇನೂ ಕೊರತೆ ಬರಲಿಲ್ಲ. ಹೋರಾಟಕ್ಕಿಳಿದ ರಾಷ್ಟ್ರಗಳ ಕಷ್ಟ ನಷ್ಟಗಳಿಗೂ ತಡೆಯಿರಲಿಲ್ಲ ಇದರಿಂದಾಗಿ ಯುದ್ಧವು ಬೇಗನೆ ತೀರ್ಮಾನ ಹೊಂದುವದು ಅಗತ್ಯವೆಂಬ ಭಾವನೆ ಎಲ್ಲರಲ್ಲಿಯೂ ಸ್ವಾಭಾವಿಕವಾಗಿ ಇದೆ. ನೋರ್ವೆಯಲ್ಲಿ ಇತ್ತಂಡದವರೂ ಪ್ರತ್ಯಕ್ಷ ಹೋರಾಟಕ್ಕಿಳಿದುದು ಈ ದೃಷ್ಟಿಯಿಂದ ಸಂತೋಷದ ಸಂಗತಿ. ಇಂದಿನ ಯುದ್ಧವು ಅನತಿದೂರದಲ್ಲೇ ಲೋಕ ಕ್ಷೇಮಕಾರೀ ತೀರ್ಮಾನವೊಂದನ್ನು ತರುವದೆಂದು ನಾವು ನಿರೀಕ್ಷಿಸುತ್ತೇವೆ.

ಕಾರ್ಯಕಾರೀ ಸಮಿತಿಯ ಸಭೆ

ವಾರ್ಧಾದಲ್ಲಿ ಇದೇ ತಾ. 15ರಲ್ಲಿ ಸೇರಿರುವ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯು ಮಹತ್ವದ್ದಿದೆ. ಕಾಂಗ್ರೆಸಿನ ಮುಂದಿನ ಕಾರ್ಯಕ್ರಮವನ್ನು ಅಲ್ಲಿ ರೂಪಿಸಲಿದೆ ಸ್ವಾತಂತ್ರ್ಯ ಸಂಗ್ರಾಮ ಸಿದ್ಧತೆಯ ಸ್ಪಷ್ಟ ರೂಪರೇಷೆಗಳು ಅಲ್ಲಿ ಬಿಡಿಸಲ್ಪಡಬಹುದು. ಸ್ಥಳೀಕ ಸಂಸ್ಥೆಗಳಲ್ಲಿರುವ ಕಾಂಗ್ರೆಸ್ ಮೆಂಬರರು ಶೀಘ್ರದಲ್ಲಿಯೇ ಹೊರ ಬರಬೇಕಾಗುವದೆಂದು ರಾಷ್ಟ್ರಪತಿ ಆಜಾದರು ನಿರೂಪಿಸಿದ್ದಾರೆಂದು ತಿಳಿದು ಬರುತ್ತದೆ. ಅಂತೆಯೇ ಪ್ರಾಂತಿಕ ನ್ಯಾಯವಿಧಾಯಕ ಸಭೆಗಳ ಪೈಕಿ, ಕಾಂಗ್ರೆಸ್ ಅಲ್ಪಸಂಖ್ಯಾಕ ಮೆಂಬರರಿರುವ ಕಡೆಗಳಲ್ಲಿ ಪ್ರಾತಿನಿಧ್ಯವನ್ನು ಹಿಂದೆಗೆಯುವ

...ನೋರ್ವೆಯ ಹೊಡೆತ ತಿಂದು ಹೊರಡುವದೆ?

...ಂಗ್ರೆಸ್ ಕಾರ್ಯಕಾರೀ ಸಮಿತಿಯ ಮಹತ್ವದ ಸಭೆ

...ಲ್ಲುವಿ ...ಭಾಷಣ ...ಜರ್ಮನಿಯಿಂದರು ...ಬ್ರಿಟಿಷಿನ ...ಉಂಟಾಗಿ ...ನಾವು ಹೆಗ್ಗ ...ರತು ...ಇದೇನೂ ಇ ...ಲ್ಯಾನರೆಂಬ ...ಒಂದು ...ಯಲು ನಾ ...ಮುಟ್ಟಿಗೆ ...ವರೇನೆಂದ ...ಲಕ್ಕೆ ...ಬಿಟ್ಟ ...ತವಾಗ ...ಟ್ಟಬೇಕು" ...ಯ

...ವಾಲಿ ...ದ ತಿಳಿದು ...ಭಯ ...ಮುಂದಾಗಿ ...ಕೊಳ್ಳಬೇ ...ಕರಿಸಿದೆ. ...ಮುಂದಿನ ...ಯುದ್ಧಾರಂ ...ಕಾಟ ...ನುಬಂದಿದೆ. ...ದೇ ಯುದ್ಧ ...ಮಾಡಿಕೊ ...ಪ್ರವೃತ್ತರಾ ...ದ್ದು' ಎಂದು

...ನಾತರ

...ಡುವಾ ...ಪ್ರಕಟಿಸಲ್ಲ

...ನಡೆಯಲಿದೆ. ...ಗಳು ತನ್ನ ...ನ ದೊರೆತಲ್ಲಿ ...ತು ಸೂಚ ...ಮಹಾತ್ಮಾ ...ಗಳಾಗುತ್ತಾ ...ಸು ನಿರ್ಧಾರ ...ಆತುರದಿಂದ ...ಯುರೋಪು ...ತ್ತ ದೇಶದ ...ದಲ್ಲಿ ತಂತಿ ...ಪಾಲನ ಜವಾ ...ರೀ ಸಮಿತಿ ...ನಿರ್ಣಯವು ...ಂದು ಹೆಜ್ಜೆ ...ನಿವಿಲ್ಲ. ಹಿಂ ...ವನ್ನಾ ಕಡೆಗೆ ...ಯುತ್ತೇವೆ.

ಡುತ್ತಿವೆ. ಬ್ರಿಟಿಷ್ ಸೈನ್ಯವು ಹೊಲ್ಲೆಂಡಿನ ಕಡೆಗೆ ಹೊರಟಿವೆ ಎಂಬ ವಾರ್ತೆ ಜರ್ಮನಿಯಿಂದ ಅಮೇರಿಕನ್ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟಿರುವುದು. ಇದಕ್ಕೆ ನಿಜವಾದ ವಿಪತ್ತು ಯಾವ ಕಡೆಯಿಂದ ಒದಗಬಹು ದೆಂದು ಹೊಲ್ಲೆಂಡಿನ ಹೆಚ್ಚಿನವರಿಗೆ ತಿಳಿ ದೇ ಇದೆ ಎಂದೂ ಜರ್ಮನ್ ಕಥೆಗಳು ಹೊರಗಿನವರಾರೂ ನಂಬದಷ್ಟು ಹಾಸ್ಯಾ ಸ್ಪದವಾದುದೆಂದೂ ಲಂಡನಿನಲ್ಲಿ ಪ್ರಕಟ ವಾಗಿದೆ.

ನೋರ್ವೆಯ ಹಲವೆಡೆಗಳಲ್ಲಿ ಬ್ರಿಟಿಷ್ ಸೈನ್ಯ ಕಳವೂರಿತು

ಬ್ರಿಟಿಷರ ಯುದ್ಧಕಚೇರಿಯಿಂದ ಬಂದ ವಾರ್ತೆಯಂತೆ ನೋರ್ವೆಯ ಹಲವು ಕಡೆ ಗಳಲ್ಲಿ ಆಂಗ್ಲೋ ಸೇನೆಯಿಳಿದಿದೆ ಎಂದು ತಿಳಿದುಬರುತ್ತದೆ ನೋರ್ವೆಯ ಆಗ್ನೇಯ ಭಾಗದ 'ಕೋನ್ಸ್‌ಜೋಯಿ' ಎಂಬಲ್ಲಿದ್ದ ಜರ್ಮನ್ ಸೇನೆಯು ನೋರ್ವೇಕ್ ಸೈನ್ಯದ ಧಾಳಿಗೆ ಹೆದರಿ ಹಾಲ್ಡನ್ ಎಂಬಲ್ಲಿಗೆ ಪಲಾಯನವಾಡಿದೆ. ಸ್ಟೆವೆಂಜರ್ ಎಂಬ ಲ್ಲಿದ್ದ ಜರ್ಮನ್ ವಿಮಾನ ನಿಲ್ದಾಣದ ಮೇಲೆ, ಕಗ್ಗತ್ತಲೆ ಮತ್ತು ಜಡಿಮಳೆಯ ನ್ನು ಲೆಕ್ಕಿಸದೆ ಬ್ರಿಟಿಷ್ ವಿಮಾನಗಳು ಬೋಂಬು ಸುರಿಸಿವೆ. ಮತ್ತು ಜರ್ಮ ನಿಯ ರಕ್ಷಣಾಕ್ಷೇತ್ರದ ಮೇಲೆ ಮೆಶಿನ್ ಗನ್ನಿನಿಂದ ಹೊಡೆಯಲಾಯಿತು. ಜರ್ಮ ನಿಯ ಬಲವಾದ ವಿಮಾನಭೇದಕ ಗುಂಡು ಗಳು ಹಾರಿಸಲ್ಪಟ್ಟರೂ ವಿಮಾನಗಳಿಗೆ ಪೆಟ್ಟಾಗಿಲ್ಲ. ಬ್ರಿಟಿಷರ ಬಲವಾದ ನೌಕಾ ಸೈನ್ಯವು ಕರಾವಳಿಯಲ್ಲಿ ಕಡೆಗಟ್ಟಿ ನಿಂತಿ ರುವದೆಂದೂ, ಜರ್ಮನಿಯ ಸಹಾಯಕ ಸೈನ್ಯ ಮತ್ತು ಯುದ್ಧಸಾಮಗ್ರಿಗಳು ಕಡೆ ಯಿಲ್ಲದೆ ದಕ್ಷಿಣ ನೋರ್ವೆಯಲ್ಲಿ ಬಂದಿಳಿ ದಿರುವವೆಂದೂ ಜರ್ಮನರ ಪ್ರಕಟಣೆಯಾ ಗಿದೆ, ಬರ್ಗನಿನಲ್ಲಿ ಎರಡು ಬ್ರಿಟಿಷ್ ವಿಮಾ ನಗಳು ಒಂದು ಜರ್ಮನಿ ಕಾರ್ಗೋಬೋ ಟನ್ನು ಮುಳುಗಿಸಿರುವದು ನಿಜವೆಂದೂ, ಆದರೆ ಅವನ್ನು ತಪ್ಪು ವಿಮಾನಗಳು ಹೊಡೆದುರುಳಿಸಿರುವವೆಂದೂ. ಕಳೆದ ವಾ ರದಲ್ಲಿ ಒಟ್ಟಿಗೆ ಏಳು ಬ್ರಿಟಿಷ್ ಸಬ್‌ಮೆರಿ ನುಗಳನ್ನು ಧ್ವಂಸಮಾಡಿರುವವೆಂದೂ ಜ ರ್ಮನರನ್ನುತ್ತಾರೆ.

ನಾರ್ವಿಕ್‌ನಿಂದ ಪಲಾಯನವೆ?

ಬೋಡೋಯಿ ಎಂಬಲ್ಲಿನ ನೋರ್ವೆ ಯ ವಾರ್ತಾ ಸಂಸ್ಥೆಯ ಪ್ರಕಟಣೆಯಂತೆ ಜರ್ಮನ್ ಸೈನ್ಯವು ನಾರ್ವಿಕನ್ನು ಬಿಟ್ಟು ಕೈದಿಗಳನ್ನು ಕಟ್ಟಿಕೊಂಡು ವಾಯವ್ಯ ದಿಕ್ಕಿಗೆ ಹೊರಟಿದ್ದಾರೆಂದೂ, ಬ್ರಿಟಿಷ್ ಸೈನ್ಯವು ಅಲ್ಲಿ ಕಾಲೂರಿರುವ ವಾರ್ತೆಯಿಲ್ಲ ವೆಂದೂ ತಿಳಿದುಬರುತ್ತದೆ.

ಮೂರರಲ್ಲೊಂದು ಭಾಗ ಹೋಯಿತು!

ನಾರ್ವೆಯ ಸಂಗ್ರಾಮವು ಜರ್ಮನಿಗೆ ಮತ್ತು ಸ್ವತಃ ಹಿಟ್ಲರನಿಗೆ ಬಲವಾದ ಹೊ ಡೆತವೇನೂ ಕಡಿಮೆಯೆಂದರೆ ಜರ್ಮನಿಯ ಮೂರನೇ ಒಂದಂಶದಷ್ಟು ನೌಕಾ ದಳ ನಿರ್ನಾಮವಾಯಿತೆಂದೂ ಪ್ಯಾರಿಸಿನ ವಾರ್ತೆ.

ಜರ್ಮನಿಯ ಹೆಗ್ಗಳಿಕೆ

ತಾ. 13ರ ಘೋರ ಯುದ್ಧದಲ್ಲಿ ಬ್ರಿಟಿಷರ ಎರಡು ಯುದ್ಧ ಹಡಗುಗಳು, ವಿಮಾನ ಹೊತ್ತ ಹಡಗುಗಳು, ಕ್ರೂಯಿಸರುಗಳೂ ಬಹು ಸಂಖ್ಯೆಯ ವಿನಾಶಕ ಹಡಗುಗಳೂ ಭಾಗವಹಿಸಿದ್ದುವೆಂದೂ 'ಕೋಸ್ಸೇಕ್' ಎಂಬುದು ಬೆಂಕಿ ಹಿಡಿದು ಓಡಿತೆಂದೂ 'ಎಸ್ಕಿಮೋ' ಮತ್ತು ಯಕ್ಷವುಗಳು ಬಲ ವಾದ ಹೊಡೆತ ತಿಂದು ಹಾಳಾಗಿವೆಯೆಂ ದೂ ಜರ್ಮನರ ಹೇಳಿಕೆ-ಬ್ರಿಟಿಷ್ 'ಕ್ರೂ ಯಿಸರ್' ಒಂದನ್ನು ಮುಳುಗಿಸಿ ಮೂರು ಸಬ್‌ಮೆರಿನಗಳನ್ನು ಧ್ವಂಸ ಮಾಡಲಾ ಯಿತೆಂದ. ಆ ಹೇಳಿಕೆಯಲ್ಲಿದೆ. ಬ್ರಿಟಿಷರು ಅಲ್ಲಗಳೆದಿದ್ದಾರೆ.

ಪಶ್ಚಿಮದಲ್ಲಿ ಧಾಳಿ

ತಾ. 13ರಲ್ಲಿ ಪಶ್ಚಿಮ ರಣರಂಗದಲ್ಲಿ ಜರ್ಮನರು ಆಕಸ್ಮಿಕ ಧಾಳಿಯನ್ನೂ ಎರ ಡು ಬಾರಿ ನಡೆಯಿಸಿ ಮಿತ್ರ ರಾಷ್ಟ್ರಗಳ ಸೈನ್ಯಗಳಿಂದ ಹೊಡೆತ ತಿಂದು ಮರಳಿದ ರೆಂದು ತಿಳಿದು ಬರುತ್ತದೆ

ಜಪಾನಿನ ಪ್ರಬಲ ನೌಕಾಸಿದ್ಧತೆ

ಜಪಾನು ಗುಪ್ತವಾಗಿ ಪ್ರಬಲ ನೌಕಾ ದಳವನ್ನು ರಚಿಸುತ್ತಿರುವದೆಂಬ ವಾರ್ತೆ ಹೊರಬಿದ್ದಿದೆ. 40 ಸಾವಿರದಿಂದ 50 ಸಾವಿರ ಟನ್ನುಗಳಷ್ಟಾಗುವ ಮೂರು ಅಥ ವಾ ನಾಲ್ಕು ಯುದ್ಧ ಹಡಗುಗಳು ಸ್ವಲ್ಪ ಸಮಯದಲ್ಲೇ ಪೂರ್ಣ ಸಿದ್ಧವಾಗುವವೆಂ ದು ತಿಳಿದುಬರುತ್ತದೆ ಸಾಧ್ಯವಿದ್ದರೆ ಹ ನ್ನೆರಡು ಇಲ್ಲವೇ ಎಂಟು ದೊಡ್ಡ ಯುದ್ಧ ಹಡಗುಗಳನ್ನು ಕಟ್ಟಿ ಮುಗಿಸಲು ಜಪಾ ನು ಅವಸರಪಡುತ್ತಿದೆಯೆಂದು ಗೊತ್ತಾ ಗಿದೆ. ಈ ಸಂಗತಿಯನ್ನು ಜಪಾನರು ಬಹಳ ಗುಟ್ಟಿನಲ್ಲಿಟ್ಟರೂ ಅದು ಹೇಗೋ ಹೊರಬಿತ್ತು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ

ಇದೇ ತಾ. 15ಕ್ಕೆ ವಾರ್ಧಾದಲ್ಲಿ ಸೇರಿ ರುವುದು. ಕಮಿಟಿಯ ಸಭೆಯು ಮೂರು ದಿನಗಳ ವರೆಗೆ ನಡೆಯಬಹುದೆಂದು ತಿಳಿ ದುಬರುತ್ತದೆ ಶ್ರೀ. ಪಟ್ಟಾಭಿ ಸೀತಾ ರಾಮಯ್ಯ, ಶ್ರೀ. ಶ್ರೀ. ಪ್ರಕಾಶ್. ಶ್ರೀ. ಟಿ. ಪ್ರಕಾಶಮ್, ಶ್ರೀಮತಿ ವಿಜಯ ಲಕ್ಷ್ಮೀ ಪಂಡಿತರಿಗೂ ಆಮಂತ್ರಣವಿದೆ. ಶ್ರೀ. ನರೇಂದ್ರ ದೇವ್ ಮತ್ತು ಸೇಟ್ ಜಮನಾಲಾಲ ಬಜಾಜರಲ್ಲದೆ ಉಳಿದ ವ ರ್ಕಿಂಗ್ ಕಮಿಟಿ ಮೆಂಬರರೆಲ್ಲಾ ವಾರ್ಧಾ ಕ್ಕೆ ಬಂದಿರುತ್ತಾರೆ. ಬ್ರಿಟಿಷ್ ಸರಕಾರ ದೊಡನೆ ಸಂಧಿಯಾಗುವ ಆಶೆಯಿಲ್ಲವೆಂ ದೂ, ಹಿಂದೂ ಮುಸ್ಲಿಂ ಪ್ರಶ್ನೆಯನ್ನು ಮಹತ್ವದ್ದಾಗಿ ಮಾಡಿ ಬ್ರಿಟಿಷರು ಬೇಕೆಂ ದೇ ತೊಂದರೆ ಕೊಡುತ್ತಿರುವರೆಂದೂ, ಇದು ವರೆಗೆ ಭಾರತದ ಕಡೆಗೆ ಸಹಾನು ಭೂತಿಯುಳ್ಳವರೆಂದು ಭಾವಿಸಿದ್ದವರು ಕೂಡ ನಿಜವಾದ ಹಿತಚಿಂತಕರಲ್ಲವೆಂಬು ಸ್ಪಷ್ಟವಾಯಿತೆಂದೂ ಧುರೀಣರ ಅಭಿಪ್ರಾ ಯ. ಕಾನ್‌ಸ್ಟಿಟ್ಯೂಯೆಂಟ್ ಎಸೆಂಬ್ಲಿ ಯೊಂದೇ ಹಾದಿಯೆಂಬ ಭಾವನೆ ಬಲ ವಾಗಿದೆ.

ಗಾಂಧಿಯವರ ಮಾರ್ಗದರ್ಶಕತ್ವ

ಅಧ್ಯಕ್ಷ ಆಜಾದರು ವಾರ್ಧಾಕ್ಕೆ ಬಂದು ಮಹಾತ್ಮರೊಡನೆ ಮುಂದಾಗಿ ಪರಿಸ್ಥಿತಿ ಯನ್ನು ಚರ್ಚಿಸಿದರು. ಸತ್ಯಾಗ್ರಹ ಸಮಿ ತಿಗಳಾಗಿ ಮಾರ್ಪಡಿಸಿದ ಕಾಂಗ್ರೆಸ್ ಕಮಿ ಟಿಗಳಿಗೆ ಮುಂದಕ್ಕೆ ಯಾವ ಕಾರ್ಯಕ್ರ ಮ ಹಾಕಿಕೊಡಬಹುದೆಂಬ ವಿಷಯ ಮ ಹಾತ್ಮರು ಸೂಚನೆಗಳನ್ನು ಮುಂದಿಡುವ ರೆಂದು ತಿಳಿದುಬರುತ್ತದೆ. ತಮ್ಮಲ್ಲಾದ ಕಾರ್ಯಗಳ ಕುರಿತು ಪ್ರಾಂತಿಕ ಸಮಿತಿಗ ಳು ಮಾಡಿದ ವರದಿಯನ್ನು ವಿಮರ್ಶಿಸ ಲಾಗುವದು. ಅಲ್ಪ ಸಂಖ್ಯೆಯಿದ್ದಲ್ಲಿ ಕಾಂ ಗ್ರೆಸ್ ಮೆಂಬರರು ಎಸೆಂಬ್ಲಿ ಮೆಂಬರಿಕೆ ತ್ಯಜಿಸಬೇಕೆಂಬ ಮೌಲಾನಾ ಆಜಾದರ ಸೂಚನೆಯನ್ನೂ ಚರ್ಚಿಸಲಾಗುವದು. ಈ ಸಲ ಮುಖ್ಯವಾಗಿ ಇವೆರಡೇ ವಿಷಯ ಗಳು ನಿರ್ಧರಿಸಲ್ಪಡುವವೆಂದು ತಿಳಿದುಬರು ತ್ತದೆ

ಸ್ಥಳೀಕ ಸಂಸ್ಥೆಗಳ ಮೆಂಬರರ ರಾಜೀನಾಮೆಯಿಲ್ಲ

ಅಸಹಕಾರದ ಒಂದು ಹೆಜ್ಜೆಯಾಗಿ ಸ್ಥಳೀಕ ಸಂಸ್ಥೆಗಳಲ್ಲಿರುವ ಕಾಂಗ್ರೆಸ್ ಮೆಂಬರರೆಲ್ಲಾ ರಾಜೀನಾಮೆಕೊಡಬೇ ಕೆಂಬ ಕಾಂಗ್ರೆಸ್ ಅಧ್ಯಕ್ಷರ ಸೂಚನೆಗೆ ಹೆಚ್ಚಿನ ವರ್ಕಿಂಗ್ ಕಮಿಟಿ ಮೆಂಬರರು ಸಮ್ಮತಿಸುವುದಿಲ್ಲವೆಂದು ಧುರೀಣರೊ ಳಗೆ ನಡೆದ ಪೂರ್ವ ಸಂಭಾಷಣೆಯಿಂದ ತಿಳಿದುಬರುತ್ತದೆ. ಆದ್ದರಿಂದ ವರ್ಕಿಂಗ್ ಕಮಿಟಿ ರಾಜೀನಾಮೆಯನ್ನಪೇಕ್ಷಿಸಿ ನಿರ್ಣ ಯಮಾಡುವಂತಿಲ್ಲವೆನ್ನಬಹುದು.

ಕವಿ ಠಾಗೋರರ ಜನ್ಮ ದಿನೋತ್ಸವ

ಶಾಂತಿನಿಕೇತನದಲ್ಲಿ ತಾ 14ರಲ್ಲಿ ಯುಗಾ ದಿಯೆಂದು ನಡೆಯಿತು. ತನ್ನ ಹೊಸ ವರು ಷದ ಸಂದೇಶವಾಗಿ ಕವಿಗಳು ಹೀಗೆಂದರು "ಪ್ರಕೃತ ಅನ್ಯಾಯದ ಶಕ್ತಿಗಳಿಗೆ ಜಯ ದೊರೆತಂತೆ ಕಂಡು ಬಂದರೂ ನ್ಯಾಯವು ಸ್ಥಾನವನ್ನು ಆಕ್ರಮಿಸುವ ಕಾಲವು ದೂರದಲ್ಲಿಲ್ಲ" ಎಂದರು. ಕವಿ ಠಾಗೋರರ ಜನ್ಮದಿನವು ಮೇ 8ಕ್ಕಾದರೂ ಆಗ ಸೆ ಕೆಗಾಲದ ರಜೆಯಲ್ಲಿ ಕವಿಗಳು, ಪದ್ಧತಿ ಯಂತೆ ಪರ್ವತವಾಸಕ್ಕೆ ಹೋಗುವುದ ರಿಂದ ಬಂಗಾಲೀ ಯುಗಾದಿಯ ದಿನವಾದ ತಾ. 14ರಲ್ಲಿ ಅದನ್ನಾಚರಿಸಲಾಯಿತು. ಚೀನದ ರಾಷ್ಟ್ರಪತಿ ಚಿಯಾಂಗ್ ಕೈಷೇ ಕರು ಕವಿಗಳನ್ನಭಿವಂದಿಸಿ ಸಂದೇಶ ಕಳು ಹಿಸ್ದರು.

ವಿಷಾದಕರ ಮರಣ

ಸ್ಥಳೀಯ ಮೋರ್ಡ್ ಕೈಸ್ತಲಿನ ಜನಪ್ರಿಯ ಉಪಾಧ್ಯಾಯರಾದ ಶ್ರೀ. ಎಂ. ಪಿ. ದೇವರಾಯರ ಜ್ಯೇಷ್ಠಪುತ್ರ ಸುಮಾರು 14 ವರ್ಷ ಪ್ರಾಯದ ಎಂ. ಪಿ. ರಮಾನಾಥನು 'Purpura' ಎಂಬ ರಕ್ತ ಸಂಬಂಧದ ಒಂದು ಕಠಿಣ ರೋಗದಿಂದ ತಾ. 13-4-40ನೇ ರಾತ್ರಿ 8ಗಂಟೆಗೆ ಅಕಾಲ ನಿಧನ ಹೊಂದಿರುವನೆಂಬುದು ವಿಷಾದಕರವಿದೆ. ಮೃತನು V ಫಾರ್ಮಿನಲ್ಲಿ ಓದುತ್ತಿದ್ದ, ಚತುರ ವಿದ್ಯಾರ್ಥಿ ಯಾಗಿದ್ದನು. ಮೃತನ ಮಾತಾಪಿತೃಗಳ ದುಃಖದಲ್ಲಿ ನಾವೂ ಸಹಭಾಗಿಗಳಾಗಿದ್ದೇವೆ.

For Everything in Insurance Consult

TROPICAL

INSURANCE CO. LTD.,

Head office: NEW DELHI.

Chairman: SJT. SUBASH CHANDRA BOSE.

Founder Directors:
PANDIT MOTILAL NEHRU,
Dr. M. A. ANSARI,
HAKIM AJMAL KHAN,
Sri S. SRINIVASA IYENGER.

1. This cent per cent national has issued Policies for THREE CRORES.
2. Has given Bonus since the Inception.
3. Has attractive Schemes for Agents & Organisers.
4. Liberal Terms for Field Staff;

For Particulars Apply to:—

M. SUNDERRAM SHETTY, *Branch Manager,* HAMPANKATTA, MANGALORE, S. K.

OR

K. S. RAMAMURTHY, M. A., *Branch Secretary,* 160/- MOUNT ROAD, MADRAS.

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು, ತಾ 15-4-1940

ಜಲಿಯನ್ ವಾಲಾಬಾಗ್ ದಿನಾಚರಣೆ—ಮಂಗಳೂರು ಟೌನ್ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ತಾ 13ರಲ್ಲಿ ಜಲಿಯನ್ ವಾಲಾ ಬಾಗ್ ದಿನಾಚರಣೆಯು ಆಚರಿಸಲಾಯಿತು. ಮೈದಾನದಲ್ಲಿ ಜರಗಿದ ಮಹಾಜನರ ಸಭೆಯ ಅಧ್ಯಕ್ಷಸ್ಥಾನವನ್ನು ಶ್ರೀ ಬಿ. ವೈಕುಂಠ ಬಾಳಿಗರು ವಹಿಸಿದ್ದು ಅಂದಿನ ದಿನದ ಮತ್ತು ರಾಷ್ಟ್ರೀಯ ಸಪ್ತಾಹದ ಮಹತ್ವದ ಕುರಿತು ಆರಂಭ ಭಾಷಣದಲ್ಲಿ ಹೇಳಿದರು. ಆ ವೇಳೆ ಶ್ರೀ ಕೆ. ಕೃಷ್ಣರಾಯರು ಭಾಷಣ ಮಾಡಿ ಕಳೆದ ಘೋರ ಯುದ್ಧವಾದ ಕೂಡಲೆ ಬ್ರಿಟಿಷರು ನಿಷ್ಕಾರಣವಾಗಿ ರೌಲಟ್ ಮಸೂದೆಯನ್ನು ಜಾರಿಗೆ ತಂದು ಸ್ವಾತಂತ್ರ್ಯ ಚಳವಳಿಯನ್ನು ಮುರಿಯಲು ಹೇಗೆ ಯತ್ನಿಸಿದರೆಂಬುದನ್ನು ವಿವರಿಸಿದರು. ಅನಂತರ ಎಡ್ವೊಕೇಟ್ ಜನಾರ್ದನ ಮಲ್ಯರು ಹಿಂದೂ ಮುಸಲ್ಮಾನ ಐಕ್ಯದ ವಿಷಯವಾಗಿಯೂ, ಎಡ್ವೊಕೇಟ್ ಬಿ. ನ್ಯಾಸರಾಯಾಚಾರ್ಯರು ಭಾರತದಲ್ಲಿ ಐಕ್ಯವಿರುವುದು ಅಗತ್ಯವೆಂಬ ವಿಷಯದಲ್ಲಿಯೂ ಶ್ರೀ ಹೊಳ್ಳರು ಕಾನ್‌ಸ್ಟಿಟ್ಯುಯೆಂಟ್ ಎಸೆಂಬ್ಲಿಯ ವಿಷಯವಾಗಿಯೂ, ಶ್ರೀ ಬಿ. ಕೆ. ಗೋಪಾಲದಾಸರು ಸ್ವಾತಂತ್ರ್ಯ ಚಳವಳಿಯು ಯಾವ ಪ್ರಕಾರ ನಡೆಯಬೇಕೆಂಬ ಕುರಿತಾಗಿಯೂ ಮಾತಾಡಿದ ಮೇಲೆ ಅಧ್ಯಕ್ಷರ ಸಮಯೋಚಿತ ಭಾಷಣದೊಂದಿಗೆ ಸಭಾಂತ್ಯವಾಯಿತು.

ಪೋಲಿಸ್ ಅಧಿಕಾರಿಗಳ ನಿರ್ಗಮನ: ಕೊಯಮುತ್ತೂರು ರೇಂಜಿನ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ಇವರು ಈ ಜಿಲ್ಲೆಯ ಪೋಲೀಸ್ ಸ್ಟೇಶನ್‌ಗಳ ತನಿಖೆ ನಡೆಸಿ ತಾ. 13ರಲ್ಲಿ ಕೊಯಮುತ್ತೂರು ಕಡೆಗೆ ಪ್ರಯಾಣ ಬೆಳೆಸಿದರು.

ವಸಂತೋತ್ಸವ—ಸ್ಥಳೀಯ ಬೆಸೆಂಟ್ ಶಾಲೆಯಲ್ಲಿ ಕಳೆದ ತಾ. 13ನೇ ಸಾಯಂಕಾಲ, ಮೈಸೂರು ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ಶ್ರೀ ಕೆ. ಶಂಕರನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ವಸಂತೋತ್ಸವವು ಜರಗಿತು. ಬೆಸೆಂಟ್ ಶಾಲೆಯು ಮಾಡಿದ ಕಾರ್ಯಕಲಾಪಗಳ ವರದಿಯನ್ನು ಶ್ರೀ ಬಿ. ಅನಂತರಾಮರು ಓದಿ..... ಅಧ್ಯಕ್ಷರು, ತಮ್ಮ ಭಾಷಣದಲ್ಲಿ ಡಾ| ಬೆಸೆಂಟರು ಹಿಂದೂಸ್ಥಾನಕ್ಕೆ ಮಾಡಿದ ಮಹದುಪಕಾರವನ್ನು ಅದರಲ್ಲಿಯೂ ಸ್ತ್ರೀ ವಿದ್ಯಾಭ್ಯಾಸಕ್ಕೆ ಕೊಟ್ಟ ಪ್ರೋತ್ಸಾಹವನ್ನು ಪ್ರಶಂಸಿಸಿದರು. ಆಟಗಳ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಅಧ್ಯಕ್ಷರು ಇನಾಮುಗಳನ್ನು ಹಂಚಿದರು ಮತ್ತು ವಸ್ತು ಪ್ರದರ್ಶನದ ಉದ್ಘಾಟನೆಯನ್ನು ನೆರವೇರಿಸಿದರು. ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಅಪಘಾತ—ತಾ. 13ನೇ ಮಧ್ಯಾಹ್ನ ಮಂಗಳೂರು ಟೌನ್ ಸರ್ವಿಸಿನ (ನಂ ೩) ಬಸ್ಸು ಇದಿರು ಕಡೆಯಿಂದ ಬೈಸಿಕಲ್ಲಿನಲ್ಲಿ ಕುಳಿತು ಬರುತ್ತಿದ್ದ ಸುಮಾರು 18 ವರ್ಷ ಪ್ರಾಯದ ರಾಮಕೃಷ್ಣ (ಟೈಲರ್) ಎಂಬ ಯುವಕನಿಗೆ ಡಿಕ್ಕಿ ಹೊಡೆಯಿತು. ರಾಮಕೃಷ್ಣನಿಗೆ ಬಹಳ ಜಖಂ ಆಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟಿದ್ದಾನೆ. ಪ್ರಾಣಾಪಾಯವೇನೂ ಆಗಲಾರದೆಂದು ಹೇಳಲಾಗಿದೆ. ರಾಮಕೃಷ್ಣನನ್ನು ತಪ್ಪಿಸಲು ಫಕ್ಕನೆ ಬಸ್ಸನ್ನು ತಿರುಗಿಸಿದಾಗ ಒಬ್ಬ ಹುಡುಗನಿಗೆ ತಾಗಿ ಅವನೂ ಜಖಂ ಹೊಂದಿ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆ ಹೊಂದುತ್ತಿದ್ದಾನೆ. ಪೋಲೀಸರು ತನಿಖೆ ನಡೆಸಿದ್ದಾರೆ.

ಜಿಲ್ಲಾ ಥಿಯಸಾಫಿಕಲ್ ಪರಿಷತ್ತು—ನಿನ್ನೆಯ ದಿವಸ ಪೂರ್ವಾಹ್ನ 9-30ಕ್ಕೆ ಸರಿಯಾಗಿ ಜಿಲ್ಲಾ ಥಿಯಸಾಫಿಕಲ್ ಪರಿಷತ್ತು ಥಿಯಸಾಫಿಕಲ್ ಲಾಜಿನಲ್ಲಿ ಮೈಸೂರ್ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ಶ್ರೀ ಕೆ. ಶಂಕರನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಉಡುಪಿ

ಉಡುಪಿ ತಾಲೂಕು ಎಲಿಮೆಂಟರಿ ಶಾಲಾ ಮೆನೇಜರರ ಸಂಘ—ದ. ಕ. ಜಿಲ್ಲೆಯ ಎಯಿಡೆಡ್ ಶಾಲೆಗಳ ಗ್ರಾಂಟಿನ ಮೇಲೆ ಬಂದ ಅಪಾರ ಕಡಿತದ ಕುರಿತು ಜಿಲ್ಲೆಯ ಪರವಾಗಿ ಸರಕಾರಕ್ಕೆ ಒಂದು ಮೆಮೋರಿಯಲ್ ಕಳುಹಿಸುವ ಸಂಬಂಧ ಉಡುಪಿ ಮುನಿಸಿಪಲ್ ಮೈನ್ ಶಾಲೆಯಲ್ಲಿ ಇದೇ ತಾ 21 ಮತ್ತು 28 ಮತ್ತು ಮೇ ತಿಂಗಳ ತಾ 5 ಈ ದಿನಗಳಲ್ಲಿ 3 ಸಭೆಗಳು ಜರಗಲಿರುವವು. ಈ ಸಭೆಗಳಲ್ಲಿ ಸರಕಾರಕ್ಕೆ ಡೆಪ್ಯುಟೇಶನ್ ಕಳುಹಿಸುವ ಕುರಿತು ಸಹ ಆಲೋಚನೆ ಆಗುವುದು. ಆದಕಾರಣ ಎಯಿಡೆಡ್ ಶಾಲಾ ಮೆನೇಜರರು ಈ ಸಭೆಗಳಿಗೆ ಹಾಜರಾಗಿ ತಮ್ಮ ಸಹಾನುಭೂತಿ ತೋರಿಸಬೇಕಾಗಿ ಉಡುಪಿ ತಾಲೂಕು ಎಲಿಮೆಂಟರಿ ಶಾಲಾ ಮೆನೇಜರರ ಸಂಘದ ಕಾರ್ಯದರ್ಶಿಯವರು ಈ ಮೂಲಕ ವಿನಂತಿಸುತ್ತಾರೆ.

ಜಿಲ್ಲಾ ಸಹಕಾರಿ ಪರಿಷತ್ತು ಮತ್ತು ಪ್ರದರ್ಶನ—ದ. ಕ. ಜಿಲ್ಲಾ ಸಹಕಾರಿ ಪರಿಷತ್ತು ಮತ್ತು ಪ್ರದರ್ಶನವನ್ನು ಉಡುಪಿಯಲ್ಲಿ ಮೇ ತಿಂಗಳ ತಾ 25, 26ರಲ್ಲಿ ಜರಗಿಸಬೇಕೆಂದಾಗಿ ಕಳೆದ ತಾ. 9ರಲ್ಲಿ ಸೇರಿದ ಸ್ಥಳೀಯ ಸಹಕಾರಿಗಳ ಸಭೆಯಲ್ಲಿ ನಿರ್ಣಯವಾಗಿರುವುದು. ಅಂದಿನ ಸಭೆಯ ಅಧ್ಯಕ್ಷತೆಯನ್ನು ವಕೀಲ್ ಶ್ರೀ. ಕೆ ಬಿ ಬಲ್ಲಾಳರು ವಹಿಸಿದ್ದರು. ಸ್ವಾಗತಮಂಡಳಿಯ ಸದಸ್ಯರ ಚುನಾವಣೆಯಾಗಿ ಪರಿಷತ್ತಿನ ಅಧ್ಯಕ್ಷತೆಯನ್ನು ವಹಿಸುವರೆ ಬೊಂಬಾಯಿಯ ಶ್ರೀ. ?. ಎಲ್. ಮೆಹತಾರವರನ್ನು ಕೇಳಿಕೊಳ್ಳಬೇಕೆಂದು ಗೊತ್ತುವಳಿಯಾಯಿತು.

ಸ್ಪೆಶಲ್ ಸಭೆ—ಉಡುಪಿ ತಾಲೂಕು ಎಲಿಮೆಂಟರಿ ಶಾಲಾ ಮೆನೇಜರ ಸಂಘದ ಸ್ಪೆಶಲ್ ಸಭೆ ನಿನ್ನೆ ಕಳೆದ ಆದಿತ್ಯವಾರ ಮುನಿಸಿಪಲ್ ಮೈನ್ ಶಾಲೆಯಲ್ಲಿ ಡಾ. ಮಾಧವ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಗ್ರಾಂಟಿನ ಕಡಿತದ ಕುರಿತು ಪ್ರಚಾರ ಚಳವಳಿಯನ್ನು ಹೂಡಬೇಕಾಗಿಯೂ

ಆರ್ಯ ಭಜನಾ ಮಂಡಲಿಯ ಹದಿನೈದನೆಯ ವಾರ್ಷಿಕೋತ್ಸವ—ನೀರೇಶ್ವಾಲ್ಯ ಆರ್ಯ ಭಜನಾ ಮಂಡಲಿಯ ಹದಿನೈದನೆಯ ವಾರ್ಷಿಕೋತ್ಸವವು ನಿನ್ನೆಯ ದಿನ ಸಾಯಂಕಾಲ ವಿವಿಧ ಕಾರ್ಯಕ್ರಮಗಳೊಡನೆ ನೆರವೇರಿತು. ಶ್ರೀ ಕೆ. ಆರ್. ಕಾರಂತ್ ಯಂ. ಎಲ್. ಎ. ಇವರು ಅಗ್ರಾಸನ ವಹಿಸಿದ್ದರು. ಪ್ರಾರ್ಥನೆ, ಸ್ವಾಗತ, ಸಂಗೀತಗಳಾಗಿ ಕಾರ್ಯದರ್ಶಿಗಳ ವರದಿ ವಾಚನವಾಯಿತು. ಬಳಿಕ ಪತ್ರವು ಸಭೆಯ ಮುಂದಿರಿಸಲ್ಪಟ್ಟಿತು. "ನಾಡ ಮೇಲೆ ಭಜನಾ ಮಂಡಲಿಯ ಪ್ರಯೋಜನ, ಅದರ ಉದ್ದೇಶ ಮೊದಲಾದ ವಿಷಯದಲ್ಲಿ ಶ್ರೀ ಕೆ. ವೈ. ಪೂಜಾರಿ ಬಿ ಎ, ಬಿ ಎಲ್. ಶ್ರೀಗಳಾದ ನಾರಾಯಣ ಸಿಲ್ಲಿ; ಕೆ ಕೃಷ್ಣರಾವ್, ಎಸ್. ಎನ್. ಹೊಳ್ಳ, ಮೈಸ್ಟರ್, ತಿಮ್ಮಪ್ಪಯ್ಯ, ಶಾಂಕರೀ ಮೊದಲಾದವರು ಮಾತಾಡಿದರು.

ದ ಕನ್ನಡ ಜಿಲ್ಲಾ ಜಟ್ಟಿಗಳ ಪಂದ್ಯಾಟ—ನಿನ್ನೆಯ ದಿವಸ ಸಾಯಂಕಾಲ ಮಂಗಳೂರಿನ ಕೆಲ ಆಪ್ತ ಮಹಾಶಯರು ಶ್ರೀ ನೆಲ್ಲಿಕಾಯಿ ವೆಂಕಟರಾಯರ "ಮನೋಹರ ವಿಲಾಸ'ದಲ್ಲಿ ಸಭೆ ಸೇರಿ ಮಂಗಳೂರಲ್ಲಿ ಬರುವ ಮೇ ತಿಂಗಳಲ್ಲಿ ದಕ್ಷಿಣಕನ್ನಡ ಜಿಲ್ಲಾ ಜಟ್ಟಿಗಳ ಪಂದ್ಯಾಟವನ್ನು ಜರಗಿಸಬೇಕೆಂದು ನಿರ್ಧರಿಸಿ, ಆ ಬಗ್ಗೆ ಶ್ರೀ. ನೆಲ್ಲಿಕಾಯಿ ವೆಂಕಟರಾಯರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸಹ ಏರ್ಪಡಿಸಿದರು. ಇದೇ ವಿಷಯದಲ್ಲಿ ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ಕೈಕೊಳ್ಳುವರೆ ತಾ. 21ನೇ ಭಾನುವಾರ ಪುನಃ ಶ್ರೀ ನೆಲ್ಲಿಕಾಯಿ ವೆಂಕಟರಾಯರ ಮನೆಯಲ್ಲಿ ಸಭೆ ಸೇರಲಿದೆ. ಇದರಲ್ಲಿ ಭಾಗ ವಹಿಸಲಿಚ್ಛಿಸುವವರು ಆ ಸಭೆಗೆ ಬಿಜಯಂಗೈದು ತಮ್ಮ ಸಲಹೆಗಳನ್ನು ಕೊಡಬೇಕಾಗಿ ವಿನಂತಿಸಲಾಗಿದೆ.

ಮೆಮೋರಿಯಲ್ ಡೆಪ್ಯುಟೇಶನುಗಳ ವ್ಯವಸ್ಥೆ ಮಾಡಬೇಕಾಗಿಯೂ ಠರಾವಾಯಿತು.

ಹೊಸ ಕೌನ್ಸಿಲರು—ಮುನಿಸಿಪಲ್ ಕೌನ್ಸಿಲಿನ ಕ್ರಿಶ್ಚಿಯನ ಸೀಟಿನ ಸದಸ್ಯರಾದ ಮಿ. ಎಸ್ ಜಿ ಕಾಂಡಿನ್ಹರು ರಾಜಿನಾಮೆಯಿತ್ತುದರಿಂದ ಸದ್ರಿ ಖಾಲಿ ಜಾಗೆಯಲ್ಲಿ ವಿ. ಆರ್. ಎ ಸ್ವಾಮಿನ್‌ರವರೊಬ್ಬರೇ ನಾಮಪತ್ರ ಹಾಕಿದುದರಿಂದ ಸದ್ರಿಯವರೇ ಚುನಾಯಿಸಲ್ಪಟ್ಟರು. ಮಿ. ಸ್ವಾಮಿನ್‌ರು ಎಷ್ಟೋ ವರುಷಗಳಿಂದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಸದಸ್ಯರಾಗಬೇಕೆಂದು ಪ್ರಯತ್ನಿಸುತ್ತಿದ್ದವರು. ಈ ಬಾರಿ ಅವರ ಮನೋರಥವು ಸಫಲವಾದುದಕ್ಕೆ ಅಭಿನಂದನಗಳು.

ಹರಿಜನ ವಿದ್ಯಾರ್ಥಿಭವನದಲ್ಲಿ ಯುಗಾದಿ ಹಬ್ಬ—ತಾ 13 4-40ರಲ್ಲಿ ಉಡುಪಿ ಹರಿಜನ ಸಂಘದ ವತಿಯಿಂದ, ಹರಿಜನ ಭವನದಲ್ಲಿ ಚಿಕ್ಕ ಪ್ರಮಾಣದ ಮಿಶ್ರಭೋಜನವೊಂದು ಮಧ್ಯಾಹ್ನ ನಡೆಯಿತು. ಸಾಯಂ ಘಂಟೆ ನಾಲ್ಕಕ್ಕೆ ರಾಷ್ಟ್ರಧ್ವಜದೊಂದಿಗೆ ಹರಿಜನ ವಿದ್ಯಾರ್ಥಿಗಳು ಮತ್ತು ಇತರರಿದ್ದ ನಗರಸಂಕೀರ್ತನೆ ಹೊರಟು ಪೇಟೆಯಲ್ಲಿ ಸಂಚರಿಸಿ ಸಾಯಂ 5ಕ್ಕೆ ಗಾಂಧಿ ಮೈದಾನದಲ್ಲಿ ವಕೀಲ್ ಶ್ರೀ ಕೆ. ಟಿ. ಒಲ್ಲಾಳರವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿತು. ಪ್ರಥಮತಃ ಕೊರಗರ ಯಕ್ಷಗಾನ ಪ್ರದರ್ಶನ ನಡೆಯಿತು. ಹರಿಜನೋದ್ಧಾರದ ಕುರಿತು ಶ್ರೀಗಳ ಎ ಕೆ. ಹೈದರ್, ಮ. ವಾಸುದೇವ ಶೆಣೈ, ಎಂ ವಿ. ಹೆಗ್ಡೆ, ಮು. ನಾಗಪ್ಪ ಶಾನುಭಾಗ ಬಿ... ಗಳಾದ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಉಡುಪಿ ಹರಿಜನ ಭವನದ ಕಾರ್ಯಕಲಾಪಗಳನ್ನು ವಿವರಿಸಿ ಹೇಳಿ ಮೇಲ್ಜಾತಿಯವರು ಇಷ್ಟಾದರೂ ಪ್ರಯತ್ನಿಸುತ್ತಿರುವಾಗ ಹರಿಜನರಲ್ಲಿಯೇ ತಂಡಗಳಿರುವುದು ಶೋಚನೀಯವೆಂದೂ ಸ್ಥಳೀಕ ಹರಿಜನ ಪ್ರವೀಣರಿಬ್ಬರು ಮುಖಂಡತ್ವಕ್ಕಾಗಿ ಪ್ರಯತ್ನಿಸುತ್ತಿದ್ದುದು ಬಹಳ ವ್ಯಸನ ಪ್ರದವೆಂದೂ ಹೇಳಿದರು. ಭವನಕ್ಕೆ ಸಹಾಯವಿತ್ತವರನ್ನು ಶ್ರೀ ಬಿ. ಅಂಚೆಯ್ಯ ಸೆಟ್ಟರು ಅಭಿನಂದಿಸಿದರು. ವಕೀಲ್ ಶ್ರೀ ಬಿ. ವಾಸುದೇವರಾಯರು ಯುಗಾದಿಯಂದು 2 ಮುಡಿ ಅಕ್ಕಿ ಸಹಾಯವಿತ್ತಿದ್ದರು.

ಹೆಮ್ಮಕ್ಕಳ ಟ್ರೈನಿಂಗ್ ಶಾಲಾ ವರ್ಧಂತಿ—ಯು ತಾ 16-4 40ರಲ್ಲಿ ಶಾಲಾ ಮಹಾರವದಲ್ಲಿ ಎ. ಜಿ. ಪ್ರೆಸಿಡೆಂಟ ಡಾ. ಕೆ. ಪಟ್ಟ ಪಟ್ಟಂ ಅಧ್ಯಕ್ಷತೆಯಲ್ಲಿ ಯಥಾಸಾಂಗವಾಗಿ ಜರಗಿತು. ಶಾಲಾ ಮುಖ್ಯೋಪಾಧ್ಯಾಪಕಿ ಶ್ರೀ. ಮನೋರಮಾ ಬಾಯಿ, ಬಿ. ಎ. ಎಲ್. ಟಿ. ಯವರು ಶ್ರೀ ಪಟ್ಟಂ ಸಾರ್ವಜನಿಕ ಜೀವನದ ಪರಿಚಯ ಮಾಡುತ್ತ, ಚಿತ್ರ ದಶೆಯನ್ನು ತೋರಿಸುತ್ತ ಅಧ್ಯಕ್ಷಪೀಠವನ್ನು ಅಲಂಕರಿಸಲು ಕೇಳಿಕೊಂಡರು. ಅನಂತರ ಪ್ರಾರ್ಥನೆ, ಶಾಲೆಯ ಪ್ರಗತಿಪರ ವರದಿವಾಚನ, 'ರುಕ್ಮಾಂಗದ' ಕನ್ನಡನಾಟಕ, 'ಸಾವಿತ್ರಿ' ಇಂಗ್ಲಿಷ್ ನಾಟಕ ಮೊದಲಾದವು ಜರಗಿದುವು. ಬಳಿಕ ಅಧ್ಯಕ್ಷರ ಈ ಶಾಲೆಯ ಸರ್ವಾಂಗ ಅಭಿವೃದ್ಧಿಗೆ ಮುಖ್ಯಾಧ್ಯಾಪಕಿ ಮತ್ತು ಅವರ ಸಹಾಯಕರೇ ಕಾರಣರೆಂದು ಅವರನ್ನು ಶ್ಲಾಘಿಸಿ, ಇಂದಿನ ವಿದ್ಯಾಭ್ಯಾಸದ ಕೆಲವೊಂದು ದೋಷಗಳನ್ನು ಚಿತ್ರಿಸಿ, ಉಪಾಧ್ಯಾಯ, ಉಪಾಧ್ಯಾಯಿನಿಯರಿಗೆ ಕೆಲವೊಂದು ಸೂಚನೆಗಳನ್ನಿತ್ತು ಅಧ್ಯಕ್ಷಭಾಷಣ ಮಾಡಿದರು. ಶಾಲೆಯಲ್ಲಿ ದೊರೆಯುವ ಶಿಕ್ಷಣವು ಅವಶ್ಯ ಉತ್ತಮವಾಗಿರುವುದೆಂಬುದಕ್ಕೆ ಇಂದಿನ ಮಕ್ಕಳ ವಿವಿಧ ಚಟುವಟಿಕೆಗಳೇ ಮುಖ್ಯವಾಗಿ ಸಾಕ್ಷಿಯು ಅಭಿನಯವೇ ಒಂದು ನಿದರ್ಶನವೆಂದರು. ಬಳಿಕ ಶ್ರೀ. ಮನೋರಮಾ ಬಾಯಿಯವರು ಪಟ್ಟಣಿಗರ ಸಹಕಾರವೇ ಶಾಲಾಭಿವೃದ್ಧಿಯ ಮೂಲವೆಂದು ಧನ್ಯವಾದಗಳನ್ನಿತ್ತರು. ಕೊನೆಗೆ ಶಿವಾಜಿ ಮರಾಠದ್ರಿಲ್, ಫಯರ್ ಡ್ರಿಲ್ ಜರಗಿ ಸಮಾರಂಭವು ಕೊನೆಗೊಂಡಿತು. ಶ್ರೀಮತಿ ಮನೋರಮಾ ಬಾಯಿಯವರು ಈ ಶಾಲೆಯ ಆರಂಭದಿಂದಲೂ ಇದ್ದುಕೊಂಡು ಶಾಲೆಯನ್ನು ಆದರ್ಶವಾಗಿ ನಡೆಸಿಕೊಂಡು ಬರುತ್ತಿರುವುದು ಅಭಿನಂದನೀಯ ವಿಷಯ.

ಸದ್ವೈದ್ಯಶಾಲಾ ನಂಜನಗೂಡು ಇವರ

"ಸುಬಲಾ"

ಪಿತ್ತಸಂಕಟ, ಮಲಬದ್ಧತೆ ಇವುಗಳನ್ನು ಹೋಗಲಾಡಿಸಿ, ರಕ್ತ ಶುದ್ಧಿಪಡಿಸಿ, ಶರೀರಕ್ಕೆ ಬಲವನ್ನು ಕೊಡುತ್ತದೆ ಬಹಳ ರುಚಿಯಾಗಿರುತ್ತದೆ.

ಬ್ರಾಂಚ್:-ರಥಬೀದಿ ಮಂಗಳೂರು

ರಥೋತ್ಸವ-ಕಡಿಯಾಳಿ ಮಹಿಷಮರ್ದಿನಿ ಅಮ್ಮನವರ ದೇವಸ್ಥಾನದಲ್ಲಿಯ ವಾರ್ಷಿಕ ರಥೋತ್ಸವವು ಕಳೆದ ಆದಿತ್ಯವಾರ ಸಾಂಗವಾಗಿ ನಡೆಯಿತು.

ಕಟಪಾಡಿ—ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಕರೆಯ ಮೇರೆಗೆ ತಾ 12ನೇ ಶುಕ್ರವಾರವನ್ನು ರಾಷ್ಟ್ರೀಯ ಸಪ್ತಾಹ ದಿನವನ್ನಾಗಿ ಇಲ್ಲಿಯ ಯುವಕ ಸಂಘದವರು ಆಚರಿಸಿದರು. ಬೆಳಗ್ಗೆ ಪ್ರಭಾತ ಫೇರಿ, ಧ್ವಜ ವಂದನೆಗಳಾದುವು ಸಾಯಂಕಾಲ ಸಾರ್ವಜನಿಕ ಸಭೆಯು ಶ್ರೀ ಪಿ, ವೆಂಕಟರಾಯ ಶಾನುಭಾಗರ ಅಧ್ಯಕ್ಷತೆಯಲ್ಲಿ ನಡೆದು ಸಿ. ಎಫ್. ಎಂಡ್ರ್ಯೂಸರ ನಿಧನಕ್ಕಾಗಿ ದುಃಖ ಸೂಚಿಸಲಾಯಿತು. ಗಾಂಧೀಜಿಯವರ ಮುಂದಾಳುತನದಲ್ಲಿ ವಿಶ್ವಾಸ ಶ್ರದ್ಧೆಗಳನ್ನು ವ್ಯಕ್ತಪಡಿಸಲಾಯಿತು. ಆ ಮೇಲೆ, ಈಗಿನ ಈ ಬಿಕ್ಕಟ್ಟಿನ ರಾಜಕೀಯ ಪ್ರಸಂಗದಲ್ಲಿ ನಾವು ಹೇಗೆ ವರ್ತಿಸಬೇಕೆಂಬುದರ ವಿಷಯ ಶ್ರೀ ಎಚ್. ಎಲ್ ಶೆಣೈ, ಕೆ. ವಿ ಶೆಣೈ, ಟಿ. ಜಿ. ಶೆಣೈಯರೇ ಮೊದಲಾದವರು ಮಾತನಾಡಿದರು. ರಾತ್ರೆ 9-30ಕ್ಕೆ ಪ್ರಸಿದ್ಧ ಅರ್ಥಧಾರಿಗಳಾದ ಶ್ರೀ ಪೊಳಲಿ ದೇಜು ಸೆಟ್ಟರು, ಸುಬ್ರಾಯರು ಮೊದಲಾದವರು ಕೂಡಿದ ಒಂದು ಯಕ್ಷಗಾನ ಕೂಟವಿತ್ತು.

ಕೊಂಚಾಡಿ—ಇಲ್ಲಿಯ ಎಕ್ಸ್‌ಪೆರಿಮೆಂಟಲ್ ಪೋಸ್ಟಾಫೀಸಿನ ಬ್ರಾಂಚ್ ಪೋಸ್ಟು ಮಾಸ್ತರರಾಗಿ ಯೋಗ್ಯ ರೀತಿಯಿಂದ ಕೆಲಸವನ್ನು ನಿರ್ವಹಿಸುತ್ತಾ ಬರುತ್ತಿದ್ದ, ಶ್ರೀ ಅರಸರು ಸುಬ್ಬರಾಯರು, ತಮ್ಮ ಅನಾರೋಗ್ಯ ಹಾಗೂ ಸ್ವಂತ ತಾಪತ್ರಯದೆಸೆಯಿಂದ, ಸದ್ರಿ ಕೆಲಸಕ್ಕೆ ರಾಜೀನಾಮೆಯನ್ನಿತ್ತುದರಿಂದ, ಆಸ್ಥಾನಕ್ಕೆ ಬೇರೆ ಉಮೇದ್ವಾರರು ಇದ್ದರೂ ಶ್ರೀ. ಕೆ ರಘುನಾಥ ಶ್ರೀಧರ ಪ್ರಭು, ಪ್ರೊಪ್ರೈಟರ್, ಸ್ವದೇಶಿ ವಿವಿಧ ಭಂಡಾರ, ಕೊಂಚಾಡಿ, ಇವರು ಇದೇ ಎಪ್ರಿಲ್ ತಾ 10ರಲ್ಲಿ ನೇಮಕ ಹೊಂದಿರುವುದು ಸ್ತುತ್ಯ. ಈ ಹೊಸ ಬ್ರಾಂಚ್ ಪೋಸ್ಟು ಮಾಸ್ತರರು ಕೂಡಾ ಯೋಗ್ಯ ರೀತಿಯಲ್ಲಿ ಕಾರ್ಯಭಾಗವನ್ನು ನಿರ್ವಹಿಸುವರೆಂದೂ ಇಲ್ಲಿ ಪೋಸ್ಟಾಫೀಸು ಸ್ಥಾಯಿಯಾಗಿ ನೆಲೆಗೊಳ್ಳುವಂತೆ ಸಕಲರೂ ಮನಃಪೂರ್ವಕವಾಗಿ ಸಹಾಯವನ್ನೀಯಬೇಕೆಂದೂ ಕೇಳಲಾಗಿದೆ.

ಸ್ವಾಸ್ಥ್ಯ ಸಂಘದ ಪಿಳಿನೆಯ ವ್ಯಾಯಾಮ ಶಿಕ್ಷಣ—ಈ ಮೊದಲು ಪ್ರಕಟಿಸಿದಂತೆ ಸಂಸ್ಥೆಯ ವ್ಯಾಯಾಮ ಶಿಕ್ಷಣ ಶಿಬಿರಗಳು ಇದೇ ತಿಂಗಳ 15 ಮತ್ತು 22ಕ್ಕೆ ಪ್ರಾರಂಭವಾಗುವುದು ಇತ್ತಾದರೂ ಹಲವು ಅಧ್ಯಾಪಕರುಗಳ ವಿನಂತಿ ಹಾಗೂ ಹಲವು ಶಾಲೆಗಳಿಗೆ ರಜೆಯು ಮೊದಲೆ ಪ್ರಕಟಿಸಿದ ತಾರೀಕಿಗೆ ಸಿಕ್ಕದಿರುವುದರಿಂದ ಮೇಲಿನ ಎರಡೂ ವ್ಯಾಯಾಮ ಶಿಬಿರಗಳನ್ನು ಇದೇ ಬರುವ ಮೇ ಒಂದನೇ ತಾರೀಕಿನಿಂದ ಪ್ರಾರಂಭಿಸುವರೆ ನಿಶ್ಚಯಿಸಿರುತ್ತಾರೆ. ಈ ಮೊದಲು ಪ್ರಕಟಿಸಿದಂತೆ ಸ್ತ್ರೀ ಅಧ್ಯಾಪಕಿಯರ ಶಿಬಿರವು ಮಹಿಳಾ ಸೇವಾಶ್ರಮದಲ್ಲಿಯೂ, ಅಧ್ಯಾಪಕರುಗಳ ಶಿಬಿರವು ಗಣಪತಿ ಹೈಸ್ಕೂಲಿನಲ್ಲಿಯೂ ನಡೆಸಲ್ಪಡುವುದು. ಪ್ರವೇಶ ಅರ್ಜಿಗಳನ್ನು ಇದೇ ತಿಂಗಳ 25ನೇ ತಾರೀಕಿನ ಒಳಗೆ ಒರ್ಗನೈಸರ್ "ಸ್ವಾಸ್ಥ್ಯ ಸಂಘ" ಮಂಗಳೂರು, ಇವರಿಗೆ ಕಳುಹಿಸತಕ್ಕದ್ದು.

ನಿಡ್ಡೋಡಿ—ಈ ಸೆಂಟರಿನ ಅಧ್ಯಾಪಕರ ಮಾಸಿಕ ಸಭೆಯು ವರ್ಧಂತಿಯು ತಾ. 7-4-40ರಂದು ನಿಡ್ಡೋಡಿ ಶ್ರೀ. ಸತ್ಯನಾರಾಯಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಮೂಲ್ಕಿ ರಾಮಕೃಷ್ಣ ಪೂಂಜರ ಅಧ್ಯಕ್ಷತೆಯಲ್ಲಿ ಜರಗಿತು. ಸೆಂಟರಿಗೆ ಸೇರಿದ ಶಾಲೆಗಳ ಮಕ್ಕಳ ಆಟದ ಸ್ಪರ್ಧೆ, ಭಾಷಣ ಸ್ಪರ್ಧೆ, ಕೋಲಾಟ, ಕುಣಿತ ಆಟಪ್ರಹಸನ ಮೊದಲಾದವುಗಳ ಪ್ರದರ್ಶನವು ವಿದ್ಯುಕ್ತರೀತಿಯಲ್ಲಿತ್ತು.

ಅದೇ ದಿನ ರಾತ್ರಿ ನಿಡ್ಡೋಡಿ ಶ್ರೀ ಸತ್ಯನಾರಾಯಣ ಹಾಯರ್ ಎಲಿಮೆಂಟರಿ ಶಾಲಾ ವರ್ಷವರ್ಧಂತಿಯು ಯಬ. ಕಣ್ಣಪ್ಪ ಯಂ. ಎ. ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು. ಕೋಲಾಟ, ಬಿಜಾಮ್ ನರ್ತನ 'ನಾರೀಶ್ವರದ.' ಎಂಬ ಪ್ರಹಸನಗಳಾದ ಮೇಲೆ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ. ಟಿ. ಶೀನಪ್ಪ ಶೆಟ್ರು ವರದಿಯನ್ನು ಓದಲು ಶಾಲಾ ಮಕ್ಕಳಿಗೆ ಅಧ್ಯಕ್ಷರು ಇನಾಮು ಹಂಚಿದರು. 'ಶ್ರೀಕೃಷ್ಣ ಪಾರಿಜಾತ' ಎಂಬ ಕನ್ನಡನಾಟಕವನ್ನೂ 'ಬುದ್ಬುದ' ಎಂಬ ತುಳುನಾಟಕವನ್ನೂ ಮಕ್ಕಳು ಸರಸವಾಗಿ ಅಭಿನಯಿಸಿದರು.

ಇತ್ತಂಡದವರಿಗೂ ಶಿಕ್ಷೆ

ಸಿರಾಜ್‌ಗಂಜಿನಲ್ಲಿ ಓವೆದ್ ಅಲಿ ಎಂಬವ ಮುದ್ದಾಯಿಯಾಗಿ ಮಹಿಮುದ್ದೀನ್ ಎಂಬವನನ್ನು ಮುದ್ದಾಯಿಯಾಗಿ ಮಾಡಿ ಯೂನಿಯನ್ ಬೆಂಚಿನಲ್ಲೊಂದು ಫಿರ್ಯಾದಿ ಮಾಡಿದ್ದ. ಆರೋಪವು ಜಮೀನು ಸಂಬಂಧವಾಗಿ ಇತ್ತೆಂದು. ಬೆಂಚಿನವರು ತನಿಖೆ ನಡೆಸಿದಾಗ ಎರಡು ಕಡೆಯವರದೂ ತಪ್ಪು ಕಂಡು ಬಂತಂತೆ. ಇಬ್ಬರಿಗೂ ಎರಡೆರಡು ರೂಪಾಯಿಗಳ ಜುಲ್ಮಾನೆ ವಿಧಿಸಿದರು. ಮುದ್ದಾಯಿ ಕಡೆಯಿಂದ ಅಪೀಲಾಯಿತು. ಸಬ್‌ಡಿವಿಜನಲ್ ಮೆಜಿಸ್ಟ್ರೇಟರು ಮುದ್ದಾಯಿಯ ಮೇಲೆ ಆರೋಪ ಬಾರದಿರುವಾಗ ಆತನಿಗೆ ಶಿಕ್ಷೆ ವಿಧಿಸಿದುದು ತಪ್ಪೆಂದು ಹೇಳಿ ಕೆಳಕೋರ್ಟಿನ ತೀರ್ಮಾನವನ್ನು ಡಿಸ್‌ಮಿಸ್ ಮಾಡಿದರು.

ಇನ್ನು ವಾದಿಯ ಮೇಲೆಯೇ ಡಿಕ್ರಿ ಕೊಡುವ ಕಾಲ ಬರಬಹುದೇ?

ಭಂಗಾರದಂತಹ ಗಂಡ!

ಕಾಥಿಯಾವಾಡದ ಹಳ್ಳಿಯೊಂದರಲ್ಲಿ ನಡೆದ ಕಥೆಯಿದು. ತಂದೆತಾಯಿಗಳ ಗ್ರಹಚಾರ ಪರಿಹಾರಕ್ಕಾಗಿ 15 ವರುಷಗಳಿಗೆ ಹಿಂದೆ—ಅಂದರೆ ಮಗುವಾಗಿರುವಾಗ—ವಿವಾಹವಾಗಿದ್ದ ವಧು ಪ್ರೌಢಳು. ಗಂಡನ ಮನೆಗೆ ಬಂದಳು. ಗಂಡ ಹೆಂಡಿರಿಗೆ ಒಬ್ಬರ ಗುರುತು ಇನ್ನೊಬ್ಬರಿಗಿರಲಿಲ್ಲ. ಮಕ್ಕಳಾಗಿರುವಾಗ ಆದ ಮದುವೆ; ಆಗ ಬಾಸಿಂಗದ ಬೀಗಡೆಯನ್ನು ಆತುರದಿಂದ ನೋಡಿರಬಹುದೇ ಹೊರತು ಒಬ್ಬರ ಮುಖ ಒಬ್ಬರು ನೋಡಿ ಮುಗುಳು ನಗುವ ಅಗತ್ಯವಷ್ಟೆ! ಪ್ರಾಯಪ್ರಬುದ್ಧೆಯಾದ ಹುಡುಗಿ ಮೊದಲ ಬಾರಿ ಮಾವನ ಮನೆಗೆ ಬಂದು ಗಂಡನ ಪರಿಚಯ ಮಾಡಿಕೊಳ್ಳುವ ಆತುರದಲ್ಲಿದ್ದಳು. ಗಂಡ ಬಂದವನೇ ಹಸಗೊಂಡ [illegible] ಗಿದ ಗಂಡಾಂತರವೊಂದರ ಕತೆ ಹೇಳಿ ಅವಳ ಆಭರಣಗಳನ್ನೆಲ್ಲಾ ಕೇಳುವಂತೆ ಕೇಳಿದ. ಈ ದಮಯಂತಿ ತನ್ನ ತಂದೆ ಹಾಕಿದ ಒಡವೆಗಳನ್ನೆಲ್ಲಾ ಕೊಟ್ಟಳು. ಅವ ಹೋದ ಮೇಲೆ ನಡೆದ ಸಂಗತಿಯನ್ನು ಅತ್ತೆಯೊಡನೆ ಹೇಳಿದಳು. ಅತ್ತೆಗೆ ಆಕಾಶ ಕಳಚಿ ಬಿದ್ದಂತಾಯಿತು. ಹುಡುಗಿಯ ಗಂಡ ಆ ದಿನ ಕೆಲಸದ ನಿಮಿತ್ತ ಎಲ್ಲಿಗೋ ಹೋಗಿದ್ದ. ಇದನ್ನೂ ಗಂಡ ಹೆಂಡಿರಿಗೆ ಗುರುತವೇ ಇಲ್ಲವೆಂಬುದನ್ನೂ ತಿಳಿದಿದ್ದ ಕಿಲಾಡಿಯೊಬ್ಬನು ಗಂಡನಂತೆ ನಟಿಸಿ ಆಭರಣ ಬಗಲಿಗೆ ಹಾಕಿದ್ದ!

ಪ್ರಥಮತಃ ಪರಿಚಯವಾಗದೆ ಭಂಗಾರದಂತಹ ಹುಡುಗಿಗೆ ಕೈಕೊಡಬಾರದೆನ್ನುವದು ಇದಕ್ಕಾಗಿಯೆ!

ಅಡಿಗೆ ಬಿದ್ದರೂ ಮೂಗು ಮೇಲೆ

ಲಂಡನಿನಲ್ಲಿ ಉದ್ದಕ್ಕಿಂತ ಹೆಚ್ಚಿಗೆ ಅಗಲಕ್ಕೆ ಬೆಳೆಯುವ ಮಹಿಳೆಯರ ಸಂಖ್ಯೆ ಈಗೀಗ ಹೆಚ್ಚುತ್ತಿದೆಯಂತೆ. ಅಂತಹ

NAVAYUGA
Advertisement Tariff
1 Page Rs. 25/- per insertion
½ „ Rs. 15/- „ „
¼ „ Rs. 8/- „ „
⅛ „ Rs. 5/- „ „
Per Single inch col. Re. 1 „
Contract rates on application
Manager Navayuga UDIPI.

ವ್ಯವಹಾರ ವೈಚಿತ್ರ್ಯ

ಮುದ್ದಾನೆಯೊಬ್ಬಳು ಒಮ್ಮೆ ಟ್ರಾಮು ಹತ್ತುವಾಗ ಪ್ರಮಾದವಶಾತ್ ಕಂಡಕ್ಟರನ ಹಚ್ಚೆಬಟ್ಟೆಯ ಮೇಲೆ ಕಾಲಿಟ್ಟಳು. ಅವನ ಕಾಲಲ್ಲಿ ಮೊದಲೇ ಒಂದು ಗಾಯವಿತ್ತು; ಅದರ ಮೇಲೆ ಈ ಬಂಡಿ ತೂಕದ ಭಾರಬಿದ್ದೊಡನೆ ಅವ ಚೀರಿಕೊಂಡು ಪಕ್ಕನೆ ಹಾರಿದ. ಇವ ಹಾರಿದ ಅವಸರಕ್ಕೆ ಲೇಡಿಯ ಕಾಲು ಜಾರಿ ಧೊಪ್ಪನೆ ಬಿದ್ದಳು. ಬೊಜ್ಜವರು ಬಿದ್ದರೂ, ಸತ್ತರೂ ಅದಕ್ಕೆ ಬೆಲೆಯಿದೆಯಷ್ಟೆ. ಅವಳು 'ಲೋಸ್ ಎಂಜೆಲೆಸ್' ಕೋರ್ಟಿನಲ್ಲಿ ನಷ್ಟಪರಿಹಾರದ್ರವ್ಯಕ್ಕಾಗಿ ದಾವೆಹೂಡಿದಳು, 500 ಡಾಲರುಗಳ ಸಂಪಾದ್ಯ ದ್ರವ್ಯವನ್ನು ಕೋರ್ಟಿನ ಮೂಲಕ ಪಡೆದಳು!

ತೋರ ಜೀವದವರಿಗೆ ದೂರದಲ್ಲೇ "ನಮಸ್ಕಾರ" ಎನ್ನುವದು ವಾಸಿ!

ಸೇನಾನಿಯ ತಿರುಪತಿಯಾತ್ರೆ!

ರೈಲ್ವೇ ಪ್ರಯಾಣ ಸೌಕರ್ಯವಿಲ್ಲದ ಕಾಲದಲ್ಲಿ ಹಿಂದಿನ ಭಾರತೀಯರು ಮಾಡಿದ್ದ ತಿರುಪತಿ ಯಾತ್ರೆಯಂತಹ ವಿಜಯಯಾತ್ರೆಯನ್ನು ಸೈನ್ಯಾಧಿಪತಿಯೊಬ್ಬನು ನಡೆಸಿದವಾರ್ತೆ ಚೀನದಿಂದ ಕೇಳಿಬರುತ್ತಿದೆ. ನೂರದ ಪ್ರಾಂತ್ಯವೊಂದರಲ್ಲಿ ನಡೆಯುತ್ತಿದ್ದ ಗಲಭೆಗಳನ್ನು ಅಡಗಿಸಲು "ಪೀಕಿಂ" ನಗರದಿಂದ ಸೇನಾಧಿಪತಿಯೊಬ್ಬನನ್ನು ಕಳುಹಲಾಯಿತು. ಅವ [illegible] ಅಪ್ರತಿಮ [illegible]! ಸೈನ್ಯಾಧಿಪತಿಯ ಪ್ರಯಾಣವೆಂದರೆ [illegible] ಆಗಬೇಕಷ್ಟೆ! ಅದಕ್ಕಾಗಿ ಪ್ರಥಮತಃ [illegible] ವನ್ನು ಸಂಪಾದಿಸಿ [illegible] ಗಿಡಗಳನ್ನು ನೆಡುವ ಕೆಲಸಮಾಡಿಸಿದ, [illegible] ಮಾರ್ಗದ [illegible] ಹೊಂದಿ [illegible] ಆಗುವಂತೆ [illegible] ಸಿದನಂತೆ [illegible] ಸ್ಥಳವನ್ನು ಸೇರಲು [illegible]!

"ಕ್ವಾನ್ ಟಿವಾಲ್ಸ್" ಎಂಬ ಪತ್ರಿಕೆ ಇದೇ ರೀತಿಯನ್ನನುಸರಿಸಿದಲ್ಲಿ ಮಿತ್ರರಾಷ್ಟ್ರಗಳಿಗೆ ಯುದ್ಧ ನಡೆಸಲು ಕಾಲವೆಷ್ಟು ಹಿಡಿಯಬಹುದೆಂದು ಪ್ರಶ್ನಿಸುತ್ತಿದೆ. ಇಂದಿನ ಯುದ್ಧದಲ್ಲಿ ಮಿತ್ರರಾಷ್ಟ್ರಗಳ ಮಾವರಿಯೂ ಇದೇ. ಪಟ್ಣ ಸೂರೆಯಾಗುವಾಗ ಪಟ್ಟೆ ಸಿಂಗಾರವಾಗುವದೆಂದರೆ ಹೀಗೆ!

ಸಂಬಳ ಕಡಿಮೆ ಮಾಡಲು ಮುಷ್ಕರ!

ಈ ಯುಗದ ಆಶ್ಚರ್ಯಗಳಲ್ಲೊಂದು. ಕೆಲಸಗಾರರು ಸಂಬಳ ಹೆಚ್ಚಿಸಿರೆಂದು ಮುಷ್ಕರ ಹೂಡುವ ವಾರ್ತೆ ಎಲ್ಲೆಲ್ಲಿಂದಲೂ ಕೇಳಿಬರುತ್ತಿದೆ. ಆದರೆ ಪೋಲೆಂಡಿನಲ್ಲಿ ಜರ್ಮನಿಯ ಆಕ್ರಮಣ ನಡೆಯುವ ಸ್ವಲ್ಪ ಕಾಲದ ಮೊದಲು ಕೆಲಸಗಾರರು ಸಂಬಳ ಕಡಿಮೆ ಮಾಡಿರೆಂದು ಪ್ರಬಲ ಮುಷ್ಕರ ಹೂಡಿದ್ದರು. ಜೋರ್ಜನೋವ್ ಎಂಬುದು ಪೋಲಂಡಿನ ಮುಖ್ಯ ಪಟ್ಟಣಗಳಲ್ಲೊಂದು. ಅಲ್ಲಿಯ ದೊಡ್ಡ ಇಟ್ಟಿಗೆ ಕಾರ್ಖಾನೆಯೊಂದರ ಕೆಲಸಗಾರರು, ಇಟ್ಟಿಗೆ ಕ್ರಯವಿಳಿಯದೆ ಮನೆ ಕಟ್ಟಿಸುವವರಿಲ್ಲದೆ ತಮಗಿಂತಲೂ ದರಿದ್ರರಾಗಿರುವ ನಿರುದ್ಯೋಗಿಗಳಿಗೆ ಕೆಲಸ ದೊರೆಯುವಂತಿಲ್ಲ ಎಂದು ಯೋಚಿಸಿ, ಇಟ್ಟಿಗೆ ದರವಿಳಿಸಲನುಕೂಲವಾಗುವಂತೆ ತಮ್ಮ ಸಂಬಳ ಕಡಿಮೆ ಮಾಡಿರೆಂದು ಅಧಿಕಾರಿಗಳನ್ನು ಕೇಳಿಕೊಂಡರು. ಆದರೆ ಅವರಪೇಕ್ಷೆ ಸಲ್ಲಿಲ್ಲ; ಕೂಡಲೇ ಪ್ರಬಲ ಮುಷ್ಕರ ಹೂಡಿದರು; ಅದೊಂದು ತೀರ್ಮಾನಕ್ಕೆ ಬರುವ ಮೊದಲೇ ಪೋಲೆಂಡಿನ ಎಲ್ಲಾ ಒಳ ಜಗಳಗಳಿಗೂ ಒಂದೇ ತೀರ್ಮಾನಿರುವ ಜರ್ಮನ್ ಆಕ್ರಮಣವಾಯಿತು!

ಈ ಕೆಲಸಗಾರರೆಂದರೆ ತಮ್ಮನ್ನು ತಾವು ಕೆಡಿಸಿಕೊಳ್ಳುವರ ಸಾಲಿಗೆ ಸೇರಿದವರೇ?

ಚರ್ಚಿಲ್ಲರ ಮೇಲೆ ಫೋರ್ಜರಿ ದಾವೆ!

ಇಂಗ್ಲೇಂಡಿನ ಮಿ. ಚರ್ಚಿಲ್ಲರ ಮೇಲೆ ಅಮೇರಿಕದ 'ಎಂಕ್ವಯರರ್' ಪತ್ರಿಕೆಯ ಪ್ರಾತಿನಿಧಿಕರಾದ ಮಿ. ವಿಲ್ಲಿಯಮ್ ಗ್ರಿಫಿನ್ ಎಂಬವರು 100000 ಪೌಂಡಿಗೆ ಫೋರ್ಜರಿ ದಾವೆಯೊಂದನ್ನು ಹೂಡಿದ್ದಾರೆ. ಈ ವಾದಿಯು 1936ರಲ್ಲಿ ಚರ್ಚಿಲ್ಲರ ಭೇಟಿ ಮಾಡಿದ್ದರಂತೆ. ಆಗ ಸಂಭಾಷಣೆಯ ನಡುವೆ ಚರ್ಚಿಲ್ಲರೆಂದರಂತೆ "ನೀವು (ಅಮೇರಿಕದವರು) ಲೋಕ ಯುದ್ಧದಲ್ಲಿ ಭಾಗ ವಹಿಸುವುದು ತಪ್ಪಾಗುವುದು" ಆ ವೇಳೆ ಚರ್ಚಿಲ್ಲರು ಇನ್ನಾ ರೀತಿ ಹೇಳಿದ್ದೇ ಇಲ್ಲವೆಂದು ಅಲ್ಲಗಳೆದಿದ್ದಾರೆ. ಅದಕ್ಕಾಗಿ ಫೋರ್ಜರಿ ದಾವೆ ಬಂತು. ಮಿ. ಚರ್ಚಿಲ್ಲರಿಗೆ ಉತ್ತರ ಕೊಡಲು ಸಮಯ ಕೊಟ್ಟು ಅವರ ಮೇಲೊಂದು ಕೋರ್ಟಿನ ನೋಟೀಸು ಜಾರಿಯಾಗಿದೆ

ಚರ್ಚಿಲ್ಲರ ಸುಳ್ಳಿನ ಶೋಧನೆ ಮಾಡಲು ಜರ್ಮನಿಯ ಗೋಬೆಲ್ಸನೊಬ್ಬನು ಸಾಲದೆಂದು, ಅಮೇರಿಕದ ಪತ್ರಿಕಾ ವ್ಯವಸಾಯಿಯೂ ಹೊರಟನೆ?

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಹೊಸ ರೀತಿಯಲ್ಲಿ 1-4-39ರಿಂದ ಬದಲ ವ್ಯತ್ಯಾಸಗಳಾದವೆ. ಹೊಸತ ವಿಕ್ರಯ ಟೇಕ್ಸಿನ ಅರ್ಥಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಕೇವಲ ಜಮಾ ಖರ್ಚಿನ ಲೆಕ್ಕ ಇದ್ದರೂ ಸಾಲದು, ಅದರಿಂದ ತಯಾರಿಸಿದ ಸಾರಾಂಶದ ನಿಖರತೆಯು ಕೆಲವೇ ನಿಮಿಷಗಳಲ್ಲಿ ಟೇಕ್ಸು ಅಧಿಕಾರಿಗೆ ಒಪ್ಪಿಗೆಯಾಗಬೇಕು. ಅಂಥಾ ಲೆಕ್ಕಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸುವವರಿಂದ ಆಸ ಪಡೆದು ಅಧಿಕಾರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯ್ದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗುವುದು. ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನ್" ಕಳ್ಸಿಯಾಗಿ ಹೋಗಿದ್ದರೂ ತಪ್ಪಾಗಲಿಲ್ಲ. ಲೆಕ್ಕ ಹಾಜರು ಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸ ಕಾಣಿಸುವವರೊಡನೆ ಪತ್ರ ವ್ಯವಹಾರ ನಡಿಸಿರಿ.

ಎಸ್. ಎಸ್. ಪುರಾಣಿಕ,
ಇನ್ಕಮ್ ಟೇಕ್ಸ್ ಪ್ರಾಕ್ಟೀಶನರ್,
ಕುಂದಾಪುರ ಪೋಸ್ಟ್.

HURRY UP ? ? ?. UNIQUE OPPORTUNITY.
CLEARANCE SALE OF A LARGE CONSIGNMENT OF 10,000 WATCHES, JUST ARRIVED FROM SWITZERLAND, AT OLD PRICES.



No 416 Chromium Case Rs. 5—10
No 417 Golden Case Rs 6— 6
No 417 R Rolledgold 10yrs. Jewelled Mov. Rs. 12—8



ROUND OR CUSHION
No 401 Chromium Case Rs. 3—12
No. 402 Golden Case Rs. 4— 8

LATEST ARRIVAL 1940
STRONG & DURABLE
ACCURATE TIME-KEEPERS.
Guaranteed Lever Movement.

No 424 Chromium Case Rs 7—8
No 425 Golden Case Rs 8—4
No. 425 R Rolledgold 10yrs. 13—8



No. 428 Chromium Case Rs 9—0
No. 430 Rolledgold 10yrs. Rs. 15—0

As 9/- Extra for Postage.
For further particulars send for our new catalogue No. 16.
(Correspondence in English)
BAPALAL & CO.,
101 Abdul Rehman Street,
BOMBAY, 3.

LADIES MINIATURES.



Geneva Movement.
No 460 Chromium Case Rs. 10—8
No 461 Golden Case Rs 12—0
No. 462 Rolledgold 10yrs. Rs 13—0

ಭಾರತದ ವಿಭಾಗ
ಜಿನ್ನರ ಹುಚ್ಚಾಟದ ಯೋಜನೆ

ಲೇಖಕರು – ಶ್ರೀ. ಪಿ ವಿ. ಉಪಾಧ್ಯಾಯ, B. A., LL. B.

ನಮ್ಮ ಭಾರತದಲ್ಲಿ ಕಳೆದ ಎಳೆಂಟು ಶತಮಾನಗಳಿಂದ ಹಿಂದುಗಳು ಮತ್ತು ಮುಸ್ಲಿಮರು ಒಟ್ಟಾಗಿ ಜೀವಿಸಿಕೊಂಡಿದ್ದರು. ಅವರ ಮತವಿಚಾರಗಳಲ್ಲಿ ಭೇದ ಇದ್ದರೂ ಜೀವನಕ್ರಮದಲ್ಲಿ ಅವರಲ್ಲಿ ಹೆಚ್ಚಿನ ಭೇದವಿರಲಿಲ್ಲ. ಒಬ್ಬರನ್ನೊಬ್ಬರು ಸಹಕರಿಸಿಕೊಂಡು ಜೀವಿಸಿಕೊಂಡಿದ್ದರು. ಜಿನ್ನರಿಗೆ ಇದು ಪ್ರಕೃತ ಸರಿತೋರುವುದಿಲ್ಲ. ಒಂದೊಂದು ಮತದವರು ಒಂದೊಂದು ಕಡೆ ಪ್ರತ್ಯೇಕವಾಗಿ ಇರುವುದು ಒಳ್ಳೆಯದೆಂದು ಜಿನ್ನರ ಮತ. ಭಾರತವನ್ನು A ಮತ್ತು B ಹೀಗೆ ಎರಡು ಪಾಲುಗಳಾಗಿ ವಿಭಾಗಿಸಬೇಕು. A ಅಂಶದಲ್ಲಿ ಹಿಂದುಗಳೂ B ಅಂಶದಲ್ಲಿ ಮುಸ್ಲಿಮರೂ ಇರಬೇಕು A ಅಂಶದಲ್ಲಿ ಈ ವರೆಗೆ ಅನೇಕ ಶತಮಾನಗಳಿಂದ ಸಂಸಾರ ಸಮೇತ ಜೀವಿಸಿಕೊಂಡಿದ್ದ ಮುಸ್ಲಿಮರು ತಮ್ಮ ಮನೆಮಾರನ್ನು ಬಿಟ್ಟು B ಅಂಶಕ್ಕೆ ಹೋಗಿ ಸೇರಬೇಕು. B ಅಂಶದಲ್ಲಿ ಅನೇಕ ಶತಮಾನಗಳಿಂದಿದ್ದ ಹಿಂದುಗಳು A ಅಂಶಕ್ಕೆ ಸಾಗಬೇಕು ಹೀಗೆ ಮಾಡಿಬಿಟ್ಟರೆ ನಮ್ಮ ಭಾರತವು ನೆಮ್ಮದಿಯಲ್ಲಿರುವುದೆಂದು ಜಿನ್ನರ ಹೇಳಿಕೆ ಇದು ಸಾಧ್ಯವಾದರೆ ಭೂಲೋಕದ ಮುಸ್ಲಿಮರೆಲ್ಲರೂ ಭೂಲೋಕದ ಒಂದೇ ಕಡೆಯಲ್ಲಿರಬೇಕೆಂದು ಒಂದು ಹೊಸ ಯೋಜನೆಯು ಜಿನ್ನರಿಗೆ ಬರಲಿಕ್ಕೆ ಸಾಕು ಪ್ರಕೃತ ನಮ್ಮ ಭಾರತದ ವಿಭಾಗದ ಯೋಜನೆಯನ್ನೇ ಯೋಚಿಸುವ.

ಒಂದು ಮತದವರಿರುವಲ್ಲಿ ಇನ್ನೊಂದು ಮತದವರಿರಲಿಕ್ಕೆ ಸಾಧ್ಯವಿಲ್ಲವೆಂತಾದರೆ ನಮ್ಮಲ್ಲಿರುವ ಕ್ರಿಶ್ಚಿಯಾನರು ಪಾರ್ಸಿಗಳು ಸಿಖ್ಖರು ಯೆಹೂದ್ಯರು ಇವರು ಎಲ್ಲಿರಬೇಕೆಂದು ಜಿನ್ನರು ಇನ್ನೂ ಹೇಳಲಿಲ್ಲ. ಇನ್ನೊಂದು ಮತದವರೊಡನೆ ಇರಲಾರದ ಮುಸ್ಲಿಮರೊಡನೆ ಇವರು ಇರಲಿಕ್ಕೆ ಸಾಧ್ಯವೇ? ಹಾಗಾದರೆ ಅವರನ್ನೂ A ಅಂಶಕ್ಕೇನೇ ಕಳುಹಿಸಬೇಕಾಯಿತು. B ಅಂಶದಲ್ಲಿ ಮುಸ್ಲಿಮರಲ್ಲದೆ ಬೇರೆ ಯಾವ ಮತದವರೂ ಇಲ್ಲದಿರುವುದು ಶ್ರೇಯಸ್ಕರವಲ್ಲವೇ? ಇನ್ನು ಮುಸ್ಲಿಮರಲ್ಲಿ ಶಿಯಾ ಮತ್ತು ಸುನ್ನಿ ಖೋಜಾ ಎಂಬ ಎರಡು ಮೂರು ಮುಖ್ಯ ಪಂಗಡಗಳಿವೆಯಂತೆ. ಇವರಾದರೂ ಒಟ್ಟಿಗೆ ಇರುವರೇ? ಈಗಲೇ B ಅಂಶದಲ್ಲಿ ಮೂರು ಉಪ ಅಂಶಗಳನ್ನು ಮಾಡಿ B_1 ಅಂಶದಲ್ಲಿ ಶಿಯಾ ಪಂಗಡದವರೂ B_2 ಅಂಶದಲ್ಲಿ ಸುನ್ನಿ ಪಂಗಡದವರೂ B_3 ಅಂಶದಲ್ಲಿ ಖೋಜಾ ಪಂಗಡದವರೂ ಇರಬೇಕೆಂದು ನಿರ್ಧರಿಸುವುದು ಒಳ್ಳೆಯದಲ್ಲವೇ? ಇನ್ನು A ಅಂಶದಲ್ಲಿ ಹಿಂದುಗಳು ಸಿಖ್ಖರು ಕ್ರಿಶ್ಚಿಯಾನರು ಪಾರ್ಸಿಗಳು ಇನ್ನು ಮತದವರೂ ಒಟ್ಟಾಗಿರುವುದು ಸಾಧ್ಯವೇ? ಜಿನ್ನರ ಅಭಿಪ್ರಾಯದಲ್ಲಿ ಉಳಿದ ಮತದವರು ಎಲ್ಲಿ ಹೋಗಬೇಕಾದರೂ ಸಾಯಲಿ, ತನ್ನ ಮತದವರು ಒಂದು ಕಡೆಯಲ್ಲಿ ಬೆಚ್ಚಗೆ ಇದ್ದರೆ ಸಾಕೆಂದು ಇರಬಹುದೇ? ಹಾಗಿದ್ದರೆ ಈವರೆಗೆ ಅವರು ಎಲ್ಲಾ ಅಲ್ಪ ಸಂಖ್ಯಾಕರ ಮುಖಂಡನೆಂದು ಹೇಳಿಕೊಂಡಿದ್ದುದರ ಅರ್ಥವೇನು? A ಅಂಶವನ್ನು A_1 A_2 A_3 ಹೀಗೆ ಪ್ರತ್ಯೇಕ ಅಂಶಗಳನ್ನಾಗಿ ಈಗಲೇ ಮಾಡಿಇಡುವುದು ಒಳ್ಳೆಯದಲ್ಲವೇ?

ಹಾಗೆ ಮಾಡುವುದಿದ್ದರೆ ಹಿಂದುಗಳೆಲ್ಲರೂ A, ಹಿಸೆಯಲ್ಲಿ ಒಟ್ಟಿಗಿರುವರೆಂದು ಹೇಳಕೂಡದು. ಶ್ರೀ ರಾಮಸ್ವಾಮಿ ನಾಯ್ಕರು ಈ ಮೊದಲೇ ಆರ್ಯ ಹಿಂದುಗಳಿಗೆ ಬೇರೆ ಪಾಲು, ದ್ರಾವಿಡ ಹಿಂದುಗಳಿಗೆ ಬೇರೆ ಪಾಲು ಈಗಲೇ ಕೊಟ್ಟುಬಿಡಬೇಕೆಂದು ಹೇಳಿರುವರು ಕ್ರಿಶ್ಚಿಯಾನರಲ್ಲಿ ಕೆಥೋಲಿಕರೂ ಪ್ರೊಟೆಸ್ಟೆಂಟರೂ ಒಂದೇ ಪಾಲಿನಲ್ಲಿರಲಾರರಷ್ಟೆ. ಹೀಗೆ ಇನ್ನು ಎಷ್ಟು ಉಪಭಾಗಗಳಾಗಬೇಕೋ ಆ ಭಗವಂತನಿಗೇನೇ ಗೊತ್ತು.

ಪಾಲುಗಳನ್ನು ಮಾಡುವುದಕ್ಕೆ ಹೇಗೂ ಒಂದು ಕಮಿಶನ್ ಏರ್ಪಡಿಸಬೇಕೆನ್ನಿ ಸರಸ ನಿರಸ ನೋಡಿಕೊಂಡು ಆಯಾಯ ಮತದವರ ಜನಸಂಖ್ಯೆಯ ಪ್ರಕಾರ ಪಾಲುಗಳಾಗಬೇಕು ಈ ಯೋಜನೆ ಈಗಲೇ ಮುಂದೆ ಬಂದುದು ಒಳ್ಳೆಯದು ಏಕೆಂದರೆ ಬರುವ ಖಾನೇಸುಮಾರಿಯಲ್ಲಿ ಯಾವ್ಯಾವ ಮತ ಮತ್ತು ಉಪಮತದವರು ಎಷ್ಟೆಷ್ಟು ಜನರಿದ್ದಾರೆಂದು ಸುಲಭದಲ್ಲಿ ಹುಡುಕಬಹುದು. ಒಮ್ಮೆ ಆಯಾ ಮತದವರಿಗೆ ಅವರವರ ಜನಸಂಖ್ಯೆಯನ್ನನುಸರಿಸಿ ಪಾಲುಕೊಟ್ಟ ನಂತರ ಅವರವರು ತಮ್ಮ ಜನಸಂಖ್ಯೆಯ ಪರಿಮಾಣವನ್ನು ಬದಲಾಯಿಸದೆ ಈಗಿನಂತೆಯೇ ಇಟ್ಟುಕೊಳ್ಳುವರೆಂದು ಎಣಿಸಲಾಗಿದೆ

ಇನ್ನು A ಪಾಲಿನಿಂದ B ಪಾಲಿಗೆ ಹೊರಟುಹೋಗುವ ಮುಸ್ಲಿಮರಿಗೆ ಈ ವರೆಗೆ A ಪಾಲಿನಲ್ಲಿದ್ದಷ್ಟೇ ಆಸ್ತಿ B ಪಾಲಿನಲ್ಲಿ ಸಿಗುವುದಿಲ್ಲ. ಇನ್ನು ಮುಂದೆ B ಪಾಲಿನಲ್ಲಿ ಮುಸ್ಲಿಮರೆಲ್ಲರೂ ಒಂದೇ ತಾಯಿಯ ಮಕ್ಕಳಂತೆ ಸುಖವಾಗಿರಬೇಕಾದುದರಿಂದಲೂ ಇಡೀ ಭಾರತದಲ್ಲಿರುವ ಮುಸ್ಲಿಮರ ಜನಸಂಖ್ಯೆಯ ಆಧಾರದಿಂದ B ಪಾಲಿನ ವಿಸ್ತೀರ್ಣ ನಿಶ್ಚಯಿಸಲ್ಪಡುವುದರಿಂದಲೂ B ಪಾಲಿನಲ್ಲಿರುವ ಆಸ್ತಿಯನ್ನು ಜನಸಂಖ್ಯೆಯ ಮೇರೆಗೆ ಸರಿಯಾಗಿ ಹಂಚುತ್ತಾರೆ. ಇನ್ನು ಮೇಲೆ ಮುಸ್ಲಿಮರಲ್ಲಿ ಧನಿಕರು, ಬಡವರು ಎಂಬ ಭೇದವಿರುವುದಿಲ್ಲ ಇದು ಜಿನ್ನರ ಈ ಯೋಜನೆಯ ಮಹತ್ವವಾಗಿರುತ್ತದೆ A ಪಾಲಿನಲ್ಲಿ ಇರುವ ಇತರ ಮತದವರೂ ಹಾಗೆಯೇ ವರ್ತಿಸುವರೆಂದು ಭಾವಿಸಲಾಗಿದೆ. A ಪಾಲಿನಿಂದ B ಪಾಲಿಗೆ ಹೊರಟುಹೋಗುವ ಹಿಂದೂ–ಕ್ರಿಶ್ಚಿಯನ್ ಮೊದಲಾದ ಮತದವರೂ ತಮ್ಮ ತಮ್ಮ ಎಲ್ಲಾ ಸ್ಥಿರ ಚರ ಸೊತ್ತುಗಳನ್ನು ಇಲ್ಲಲ್ಲೇ ಬಿಟ್ಟು ಸಂತೋಷದಿಂದ ಹೊರಟುಹೋಗುವರೆಂದು ಎಣಿಸಲಾಗಿದೆ ಅವರ ಪ್ರಯಾಣ ಭತ್ತೆಯನ್ನು ಸರಕಾರದವರು ಕೊಡುವರೆಂದು ಆಶಿಸಲಾಗಿದೆ ಈ ಹುಚ್ಚಾಟದ ಯೋಜನೆಗೆ ಸಮ್ಮತಿಕೊಡುವವರೂ ಇದು ಕೈಗೂಡಬಹುದೆಂದು ಹೆದರುವವರೂ ನಮ್ಮಲ್ಲಿ ಅನೇಕರಿರುವುದು ಆಶ್ಚರ್ಯವಲ್ಲವೇ?

Every Policyholder is a Member
IN
The Canara Mutual
ASSURANCE COMPANY, LTD.
(Head Office:- UDIPI, S India.)
Everyday the Membership increases.
The Company issues all the well-known plans of Assurance.
Female lives accepted.
JOIN ITS EVER INCREASING MEMBERSHIP.

(೧೮ನೇ ಪುಟದಿಂದ)

ನಡೆಯುತ್ತಿದೆ. ಸ್ಟೀಬರ್ಗ್ ಎಂಬಲ್ಲಿ ಜರ್ಮನಿಯ ಸೈನ್ಯ ಕಳವೊಂದ್ದರೂ ನೋರ್ವೆ ಸೈನಿಕರ ಸಾಹಸದಿಂದ ಅದಿನ್ನೂ ನೋರ್ವೆ ಸರಕಾರದ ಕೈಯಲ್ಲಿದೆ. ಓಸ್ಲೋದ ಸಮೀಪ ಸೇತುವೆಯನ್ನು ನೋರ್ವೆಯವರು ಕಡಿದಿದ್ದಾರೆ. ನೋರ್ವೆ ಸೈನಿಕರ ಗೊರಿಲ್ಲಾ ಯುದ್ಧವೂ ನಡೆಯುತ್ತಿದೆ. ಓಸ್ಲೋವಲ್ಲಿರುವ ಜರ್ಮನ್ ಕಮಾಂಡರನು ನೋರ್ವೆಯ ಸೈನಿಕಾಜ್ಞೆಯಂತೆ ಯುದ್ಧ ಸನ್ನದ್ಧನಾಗುವ ಅಥವಾ ಆಯುಧ ಧರಿಸಿಕೊಂಡ ಯಾವನನ್ನಾದರೂ ಗುಂಡಿಡಲಾಗುವದೆಂದೂ, ಏನಾದರೂ ಆತಂಕ ಪೊಡ್ಡಿದವರಿಗೂ ಅದೇಗತಿಯೆಂದೂ ಸಾರಿದ್ದಾನೆ. ಜರ್ಮನರು 'ಕ್ರಿಶ್ಚಿಯನ್ ಸೇಂಡ್' ಎಂಬಲ್ಲಿಂದ ೨೪ ಮೈಲು ಮುಂದೊತ್ತಿದ್ದಾರೆ.

ಎಜೋರ್ಡಿನ ಭೀಕರ ಸಮರ

ನಾರ್ವಿಕ್ ಎಜೋರ್ಡಿನಲ್ಲಿ ತಾ. 13 ರಲ್ಲಿ ನಡೆದ ಭೀಷಣ ಹೋರಾಟದಲ್ಲಿ 7 ಜರ್ಮನ್ ಡಿಸ್ಟ್ರೋಯರುಗಳನ್ನು ಬ್ರಿಟಿಷ್ ಯುದ್ಧಹಡಗಗಳು ಧ್ವಂಸಮಾಡಿವೆ. ಪ್ರತಿಯಾಗಿ ಮೂರು ಬ್ರಿಟಿಷ್ ಡಿಸ್ಟ್ರೋಯರುಗಳು ವಿಶೇಷವಲ್ಲದ ಹೊಡೆತ ತಿನ್ನಬೇಕಾಗಿ ಬಂತು. ಒಟ್ಟಿಗೆ ಒಂದುಸಾವಿರಕ್ಕೆ ಮಿಕ್ಕಿದ ಜನರು ಆ ಏಳು ಹಡಗುಗಳಲ್ಲಿದ್ದಿರಬೇಕೆಂದು ಅಂದಾಜುಮಾಡಲಾಗಿದೆ.

ಸ್ವೀಡನಿನ ಅಪಾಯ ನಿರೀಕ್ಷೆ

ಜರ್ಮನಿಯು ಸ್ವೀಡನಿನ ಮೂಲಕ ಸೈನ್ಯ ಕೊಂಡುಹೋಗುವ ಹಂಚಿಕೆಯಲ್ಲಿದೆ ಎಂಬ ಹೆದರಿಕೆಯಿದ್ದಿದೆ. ಸ್ವೀಡನಿಗೆ ಮೇಲಿಂದ ಮೇಲೆ ಜರ್ಮನಿ ಎಚ್ಚರಿಕೆ ಕೊಡುತ್ತಿದೆ. "ನಾವು ಪೂರ್ಣ ತಟಸ್ಥರು. ಆ ಧೋರಣೆಗನುಸಾರವಾಗಿ ಯಾರ ಸೈನ್ಯವನ್ನೂ ನಮ್ಮ ದೇಶದೊಳಗಿನಿಂದ ಸಾಗಲು ಬಿಡಲಾರೆವು" ಎಂದು ಸ್ವೀಡನ್ ಮುಖ್ಯ ಮಂತ್ರಿಯವರೆಂದಿರುವರು. ಜರ್ಮನಿಯು ಆಕ್ರಮಣ ನಡೆಸಲು ನಾವು ಸಂಪೂರ್ಣ ಸಹಾಯ ಕೊಡುವೆವೆಂದು ಮಿತ್ರರಾಷ್ಟ್ರಗಳು ಸ್ವೀಡನಿಗೆ ಭರವಸೆಯಿತ್ತಿವೆ.

ನೋಟೀಸು.

ಉಡುಪಿ ತಾಲೂಕು ಬಾಳೆಕುದ್ರು ಗ್ರಾಮದ ಪಟೇಲ ತಿಮ್ಮಪ್ಪ ಶೆಟ್ಟಿಯು ಈ ಮೂಲಕ ತಿಳಿಯಪಡಿಸುವದೇನೆಂದರೆ—

ಕುಂದಾಪುರ ತಾಲೂಕು ಬೀಜೂರು ಗ್ರಾಮದ ದಮ್ಯಾತಿ ಮನೆಯಲ್ಲಿರುವ ರಂಗಮ್ಮ ಹೆಗ್ಗಡ್ತಿಯೆಂಬವಳು ನವಯುಗದ ಎಪ್ರಿಲ್ 11ನೇ ಸಂಚಿಕೆಯಲ್ಲಿ ನನ್ನ ವಿಷಯ ಅಲ್ಲದ ಸಲ್ಲದ ಸಂಗತಿಗಳನ್ನು ಕಾಣಿಸಿ ಬಂದು ನೋಟೀಸು ಕೊಟ್ಟದ್ದಲ್ಲದೆ ಎನಗೆ ಬರಾ ರಜಿಸ್ಟ್ರಿ ನೋಟೀಸು ಮೂಲಕ ಸುಳ್ಳು ಮಿಥ್ಯಾಪವಾದಗಳನ್ನು ನನ್ನ ಅಪಮಾನಕ್ಕೆ ತಂದಿರುತ್ತಾಳೆ. ಅವಳು ಹೇಳಿದ ಎಲ್ಲಾ ಸಂಗತಿಗಳು ನನ್ನ ವೈರಿಗಳ ಮತ್ತು ಅವಳ ಮಕ್ಕಳ ಮಹಾಬಲಶೆಟ್ಟಿಯ ದುರ್ಬೋಧನೆಯ ಫಲಗಳಾಗಿದ್ದು ಎನಗೆ ಅಪಮಾನವನ್ನು ಉಂಟುಮಾಡುವ ಉದ್ದೇಶ ಕಾಣಿಸಿದ್ದಾಗಿರುತ್ತದೆ. ಅವುಗಳೆಲ್ಲವನ್ನು ನಾನು ಸಂಪೂರ್ಣ ನಿರಾಕರಿಸುತ್ತೇನೆ. ಹೆಣ್ಣು ಹೆಂಗಸನ್ನು ಮುಂದೊಡ್ಡಿ ಅವಳ ಹೆಸರಿನಲ್ಲಿ ಕೆಲವರು ಪತ್ರಿಕೆ ನೋಟೀಸುಗಳನ್ನು ಪ್ರಕಟಿಸುತ್ತಿರಬೇಕು. ವಿನಹಾ ಅವರಲ್ಲಿ ಬರೆದ ಸಂಗತಿಗಳು ಯಥಾರ್ಥವಾದ್ದಲ್ಲವೆಂಬ ಸಂಗತಿ ತಿಳಿಯಪಡಿಸುತ್ತೇನೆ.

ಬಾಳೆಕುದ್ರು ಪಟೇಲ್ ತಿಮ್ಮಪ್ಪಶೆಟ್ಟಿ ರುಜು,
ತಾ. 16-4-40. ವಿಳಾಸ. ಬಾಳೆಕುದ್ರು.

ಗಾಂಧಿಜಿ ದುಡುಕುವಂತಿಲ್ಲ ಸರದಾರ ಪಟೇಲರ ಹೇಳಿಕೆ.

ಅಹಮದಾಬಾದಿನ ಸಭೆಯೊಂದರಲ್ಲಿ ಭಾಷಣಮೀಯುತ್ತಾ ಸರದಾರ ಪಟೇಲರಂದರು: "ಒಂದು ಹೋರಾಟವು ಸಂಭವನೀಯ. ಇಪ್ಪತ್ತೊಂದು ವರುಷಗಳ ಮೊದಲು ಕೈಕೊಂಡ ಸ್ವಾತಂತ್ರ್ಯ ಪ್ರತಿಜ್ಞೆಯು ಪೂರ್ತಿಗೊಳ್ಳಬೇಕಾಗಿದೆ. ಪ್ರತಿನಿತ್ಯ ಯುದ್ಧೋತ್ತೇಜಕ ವಿದ್ಯಮಾನಗಳು ನಡೆಯುತ್ತಿರುವವಾದರೂ ಗಾಂಧಿಜಿಯವರು ಒಮ್ಮೆಗೇ ದುಡುಕುವಂತಿಲ್ಲ. ಕಾಲಪಕ್ವವಾಗಿದೆ ಎಂದು ತಿಳಿದೊಡನೆ ಅವರು ಯುದ್ಧ ಸಾರುವರು. ಫಿನ್ಲೆಂಡ್ ಪೋಲೆಂಡಿನಂತಹ ಸರ್ವಸನ್ನದ್ಧ ರಾಷ್ಟ್ರಗಳು ಕೂಡ ದೊಡ್ಡ ರಾಷ್ಟ್ರಗಳ ಬೆಂಬಲವಿದ್ದರೂ ಸದೆಬಡೆಯಲ್ಪಟ್ಟವು. ಅಹಿಂಸಾತ್ಮಕ ಹೋರಾಟಕ್ಕೆ ಅತಿ ಹೆಚ್ಚಿನ ಸಿದ್ಧತೆ ಬೇಕು. ಲಕ್ಷಗಟ್ಲೆ ಜನರು ಜೈಲಿಗೆ ಹೋದಮಾತ್ರಕ್ಕೆ ನಮಗೆ ಜಯ ಸಿಗಲಾರದು. ಸರಕಾರದ ಮೇಲೆ ನೈತಿಕ ಪರಿಣಾಮವನ್ನು ಮಾಡಬಲ್ಲವರು ಮಾತ್ರವೇ ಜೈಲಿಗೆಹೋಗಬೇಕು. ಜನರು ಮಹಾತ್ಮಾಗಾಂಧಿಯವರು ಮುಂದಿಟ್ಟ ವಿಧಾಯಕ ಕಾರ್ಯಕ್ರಮಗಳನ್ನು ಪೂರ್ತಿಗೊಳಿಸಬೇಕು"

ಇದೇ ಸುವರ್ಣ ಸಂಧಿ ಬೋಸರ ಗರ್ಜನೆ

ಕಲ್ಕತ್ತದ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣಮೀಯುತ್ತಾ ಶ್ರೀ ಸುಭಾಷಚಂದ್ರಬೋಸರು ಹೀಗಂದರು:"ಸಾಮ್ರಾಜ್ಯವಾದದ ಅಂತ್ಯವೆಂದರೆ ಹಿಂದುಸ್ಥಾನದ ದಾಸ್ಯನಿವಾರಣೆ. ಭಾರತವು ಈ ಸುವರ್ಣ ಸಂದರ್ಭವನ್ನು ಸದುಪಯೋಗಿಸಿ ತನ್ನ ಯೋಗ್ಯತೆಯನ್ನು ಪ್ರದರ್ಶಿಸಬೇಕು" ಕಾಂಗ್ರೆಸ್ ಎಡಪಕ್ಷ ಅಥವಾ ಇನ್ನಾವ ಸಂಸ್ಥೆಯ ಮೂಲಕವಾದರೂ ಹೋರಾಟ ಪ್ರಾರಂಭವಾಗುವದು ಖಂಡಿತವೆಂದು ಹೇಳಿ ಶ್ರೀ. ಬೋಸರು ದೊಡ್ಡ ಝೇಂಕಾರವುಳ್ಳ ರಣವುಗಳನ್ನು ಮಾಡಿದರೆ ಸಾಲದು. ಕಾರ್ಯವಾಗಬೇಕು. ಮೂರು ಸಲ ಪ್ರಾರಂಭವಾದ ಸತ್ಯಾಗ್ರಹ ಹೋರಾಟದ ಸಂದರ್ಭ[illegible] ಜನರು ಸದಾ ಸಿದ್ಧರಿದ್ದಾರೆಂದು ಖಚಿತವಾಗಿದೆ.

ಧುರೀಣರು ಮುಂದುವರಿಯದಿದ್ದರೆ, ಅವರು ಮುಂದುವರಿಯುವುದಿಲ್ಲ. ಆದ್ದರಿಂದ "ಮುಂದೆ ಹೋಗುವವರು ಬೇಕು" ಎನ್ನುತ್ತಾರೆ ಬೋಸರು

ಭಾರತದ ಮಹಿಳೆಯ ಆದರ್ಶ

ಭಾರತದ ಸ್ತ್ರೀಯರು ಸಾರ್ವಜನಿಕ ಸೇವಾಸಕ್ತರಲ್ಲವೆಂಬ ಅಪವಾದವಿದೆ. ಈ ಆರೋಪವು ಪಾಶ್ಚಿಮಾತ್ಯ ಸಂಸ್ಕೃತಿಯ ಗಾಳಿ ಸೋಂಕಿದವರಿಂದ ಬರತಕ್ಕದ್ದೆಂದು ಬೇರೆ ಹೇಳಬೇಕಾಗಿಲ್ಲ. ಇಂದಿನ ಯುದ್ಧದಲ್ಲಿ ಯುದ್ಧಪ್ರವೃತ್ತ ರಾಷ್ಟ್ರಗಳ ಸ್ತ್ರೀಯರು ಸಲ್ಲಿಸುತ್ತಿರುವ ಸೇವೆಯನ್ನು ನೋಡಿದರೆ, ಭಾರತೀಯ ನಾರಿಯರು ಸಂದರ್ಭವೊದಗಿದರೆ ಅಂತಹ ಪ್ರವರ್ತನೆಗೆ ಸಿದ್ಧರೇ ಎಂಬ ಅನುಮಾನವೇಳುವದು. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಸೈನಿಕರ ಕಾರ್ಯಕ್ಕೆ ಸಮತುಲ್ಯವಾದ ಸಾಹಸಗಳನ್ನು ಸ್ತ್ರೀಯರು ಪ್ರದರ್ಶಿಸುತ್ತಾರೆ; ಸೈನಿಕರಾಗಿಯೂ ಸೇರುತ್ತಾರೆ. ಪುರುಷರಿಲ್ಲದೆ ಖಾಲಿಬಿದ್ದ ಸ್ಥಾನಗಳನ್ನೆಲ್ಲಾ ಸ್ತ್ರೀಯರು ತುಂಬುತ್ತಾರೆ. ಭಾರತ ಮಹಿಳೆಯು ಅಷ್ಟು ಮುಂದುವರಿಯಬಲ್ಲಳೆ?

ಭಿನ್ನತೆಯಲ್ಲಿ?

ಹಾಗಾಗುವದು ಅನುಮಾನಕರ. ನಮ್ಮಲ್ಲಿ ಅಷ್ಟು ಮುಂದುವರಿದ ಮಹಿಳೆಯರಿಲ್ಲವೆಂದಾಗಲೀ ಸಂದರ್ಭಾನುಸಾರ ಪೌರುಷಯುಕ್ತ ಕಾರ್ಯಕ್ಕೆ ಕರೆದರೂ ಅವರು ಬರುವಂತಿಲ್ಲವೆಂದಾಗಲೀ ಹೇಳುವದಲ್ಲ. ಆದರೆ ಸಾಹಸಮಯ ಕಾರ್ಯಗಳಲ್ಲಿ ಐರೋಪ್ಯ ಸ್ತ್ರೀಯರು ತೋರಿಸುವಂತಹ ಸ್ವಾಭಾವಿಕತೆಯು ಭಾರತಮಹಿಳೆಯರಲ್ಲಿ ಕಂಡುಬರಲಾರದು. ಅವಳ ಸೇವೆಯು ನಮ್ರತೆಯಿಂದ ಕೂಡಿದ್ದು ಪ್ರೇಮಮಯವಾಗಿದ್ದೀತೇ ಹೊರತು, ಪೌರುಷಯುಕ್ತವಾಗಿರಲಾರದು.

ಸೇವಾಬುದ್ಧಿ ಹುಟ್ಟುಗುಣ

ಸೇವೆಯನ್ನು ಮಾಡುವ ಆಸಕ್ತಿ ಹಿಂದೀ ಮಹಿಳೆಯ ರಕ್ತಗತವಾದುದು. ಆದ್ದರಿಂದ ದಾದಿಕೆಲಸವನ್ನು ಅವಳಷ್ಟು ನಿಷ್ಠೆಯಿಂದ ಮಾಡುವ ಇನ್ನೊಂದು ವರ್ಗದ ಮಹಿಳೆ ಇರಲಾರಳು. ಅವಳನ್ನು ನಾಚಿಸುವ ಸಂಕೋಚ ಪಡಿಸುವ, ಕೃತಕ ತಡೆಗಳಾವುದೂ ಇಲ್ಲದ ಕ್ಷೇತ್ರದಲ್ಲಿ ಭಾರತ ನಾರಿಯಿಂದಾಗುವಂತಹ ಸೇವೆಯನ್ನು ಬೇರೆಯವರು ಸಲ್ಲಿಸಲು ಸಾಧ್ಯವಿಲ್ಲ. ಐರೋಪ್ಯ ಮಹಿಳೆಯರ ಸೇವೆಯಲ್ಲಿ ಪುರುಷಯೋಗ್ಯವಾದ ದರ್ಪ, ಕೀರ್ತಿಲಾಲಸೆ, ಪ್ರಕಾಶಕ್ಕೆ ಬರುವ ಆತುರ, ಇವೆಲ್ಲವನ್ನೂ ಕಾಣಬಹುದು. ಆದರೆ ಹಿಂದೀಮಹಿಳೆಯ ಸೇವೆ ಭಿನ್ನವಾದುದು; ಅದಕ್ಕೊಂದು ಪೋಷಾಕಿಲ್ಲ; ಅದು ಬರಿಯ ತಿರುಳುಮಾತ್ರ. ಸ್ವಭಾವಜನ್ಯವಾದ ಈ ಸೇವೆಯ ಲಾಭಹೊಂದಲಿಚ್ಛಿಸುವವರು ಕಾರ್ಯಕ್ಷೇತ್ರವನ್ನು ಅಷ್ಟೇ ಸ್ವಾಭಾವಿಕವಾಗಿ ಇಡಬೇಕಾಗುತ್ತದೆ. ಕೃತಕ ವಿಜೃಂಭಣೆಗಳಿಗೆ ಭಾರತ ಮಹಿಳೆ ಬೆದರುತ್ತಾಳೆ.

ಸಂಸ್ಕಾರದ ಪರಿಣಾಮ

ಇದಕ್ಕೆ ಸಾಮಾಜಿಕ ರೀತಿನೀತಿಗಳೇ ಕಾರಣ. ಹಿಂದೀ ಮಹಿಳೆ ಪಾಶ್ಚಿಮಾತ್ಯ ಸ್ತ್ರೀಯಷ್ಟು ನಿರಂಕುಶ ಪ್ರವರ್ತಕಿಯಲ್ಲ; ಅವಳ ಸಾಮಾಜಿಕ ರೀತಿ ನೀತಿಗಳು ಸ್ವಭಾವವನ್ನು ತೀರಾ ಮೃದುಗೊಳಿಸಿವೆ. ತದ್ವಿರುದ್ಧವಾಗಿ ಯೂರೋಪಿಯನ್ ಮಹಿಳೆ ಎಲ್ಲಾ ಕ್ಷೇತ್ರಗಳಲ್ಲಿಯೂ ಪುರುಷ ಸಮಾನ ಸ್ವಾತಂತ್ರ್ಯ ಹೊಂದಿ, ಬಿರುಸು ಮನೋವೃತ್ತಿಯನ್ನು ಪಡೆದಿದ್ದಾಳೆ. ಹೋಲಿವುಡ್ಡಿನ ಪ್ರಸಿದ್ಧ ನಟನೊಬ್ಬನು ಕೊಟ್ಟಿರುವ ಹೇಳಿಕೆಯೊಂದು ಇದಕ್ಕೆ ನಿದರ್ಶನ. ಹೋಲಿವುಡ್ಡೆಂದರೆ ಪ್ರಣಯಾಕಾಂಕ್ಷಿಗಳ ಕಲ್ಪೋದ್ಯಾನವೆಂದೂ ಬಾಯಿ ನೀರೂರಿಸುವವರಿಗೆ 'ಹುಗ್ಗಿ' ಎಂದು ಅವ ತಿದ್ದಿದ್ದಾನೆ. ಹೋಲಿವುಡ್ಡಿನ ನಟಿ ಸೌಂದರ್ಯವತಿಯಾಗಿರಬಹುದು, ಅವಳಲ್ಲಿ ಅನುಪಮ ಲಾವಣ್ಯವಿರಬಹುದು; ಆದರೆ ಪುರುಷರ ಮನಸ್ಸನ್ನಾಕರ್ಷಿಸುವ ಅದೊಂದು ಕೋಮಲ ಸ್ವಭಾವ, ನಸುಲಜ್ಜೆಯಿರುವ ಒಬ್ಬಳೇ ಒಬ್ಬ ಮಹಿಳೆಯನ್ನು ನೀವು ಕಾಣಲಾರಿರಿ! ಎಂದು ಅವನನ್ನುತ್ತಾನೆ

ಸ್ತ್ರೀತ್ವದ ಆದರ್ಶ

ಮಹಿಳೆಗೆ ಭೂಷಣಪ್ರಾಯವಾಗುವ ಸದ್ಗುಣಗಳು ಹಿಂದೀ ನಾರಿಯಲ್ಲಿವೆ. ಅವಳು ತನ್ನ ವ್ಯಕ್ತಿತ್ವವನ್ನು ಮರೆತು ಸೇವೆಯಲ್ಲಿ ತಲ್ಲೀನಳಾಗಬಲ್ಲಳು. ತಾನು ಅದರಿಂದ ಪ್ರತಿಫಲ ಪಡೆಯಬೇಕಾಗಿದೆ ಎಂಬುದರ ಗೊಡವೆಯೇ ಇಲ್ಲದೆ ಸೇವಾಜೀವಿಯಾಗಬಲ್ಲಳು. ಅದರಿಂದಾಗಿ ಅವಳ ಸೇವೆಯು ಅಷ್ಟೇ ಮಧುರ ಹಾಗೂ ಗಂಭೀರವಾಗಿರುತ್ತದೆ. ಇಂತಹ ಸಿಹಿ ಅನುಭವವನ್ನು ಅನ್ಯ ಮಹಿಳೆ ಯಾರೂ ಕೊಡಲಾರಳು.

ಇಷ್ಟು ಹೇಳಿದೊಡನೆ ಭಾರತೀಯ ನಾರಿಗೆ ಧೈರ್ಯ, ಸಾಹಸ ಪ್ರದರ್ಶಿಸಲು ಗೊತ್ತಿಲ್ಲವೆಂದು ಯಾರೂ ಭಾವಿಸಬಾರದು. ಭಾರತ ಮಹಿಳೆಯ ಕೀರ್ತಿಯನ್ನು ಆಚಂದ್ರಾರ್ಕವಾಗಿ ಮಾಡುವ ಕಥೆಗಳೆಷ್ಟೋ ಇವೆ. ಪದ್ಮಿನಿ, ಅಹಲ್ಯಾಬಾಯಿ ಹೋಳ್ಕರ್ ಮೊದಲಾದವರು ಅಸದೃಶ ಸಾಹಸಿಗಳಲ್ಲವೆ? ರಜಪೂತ ರಮಣಿಯರ ಧೈರ್ಯಕ್ಕೆ ಮಿತಿಯುಂಟೆ? ಈಗಲಾದರೂ ಹಿಂದೀ ಸ್ವಾತಂತ್ರ್ಯಕ್ಕಾಗಿ ಪುರುಷರ ಸರಿಮಿಗಿಲೆನಿಸಿ, ಕಷ್ಟಕ್ಕೆದೆಗೊಟ್ಟ ಮಹಿಳೆಯರೆಷ್ಟು ಬೇಕು! ಹಿಂದೀ ಸ್ತ್ರೀಯರು ಪುಷ್ಪೋದ್ಯಾನವಿಹಾರಿಗಳು ಹೊರತು ದಟ್ಟಡವಿಯಲ್ಲಿ ದುಡಿಯುವಂಥವರಲ್ಲವೇ ಅಲ್ಲವೆಂದು ಇಲ್ಲಿ ಹೇಳುವದಲ್ಲ. ಅವರ ಸ್ವಭಾವವು ಕೃತಕವನ್ನು ಮೆಚ್ಚುವದಿಲ್ಲ; ಸ್ವಾಭಾವಿಕತೆಯನ್ನು ಪ್ರಯಾಸಪಟ್ಟಾದರೂ ಪಡೆಯಲು ನೋಡುತ್ತದೆ; ಆದ್ದರಿಂದಲೇ ಅದು ಪವಿತ್ರವಾಗಿದೆ ಎಂಬುದೇ ಈ ಲೇಖನದ ಸಾರಾಂಶ.

'ಓರ್ವ ಮಹಿಳೆ'

ನೋಡಿದರೆ ಸಾಕು ಓದದೆ ಬಿಡಲಾರಿರಿ!

ಮುಗಿದಾಗ ಮುಗಿದು ಹೋಯಿತಲ್ಲಾ ಎನಿಸುವ,
ತೊಡಗಿದಾಗ ಹೇಗೆ ಮುಗಿಯುವುದಿದು? —ಎಂದು
ಕೌತುಕಪಡಿಸುವ ಹನ್ನೆರಡು ಚಿಕ್ಕ ಕಥೆಗಳ ಸಂಗ್ರಹ

ಅಂತರಂಗದ ಕಥೆಗಳು

೧೧೮ ಪುಟಗಳು | ಸೊಗಸಿನ ಮುದ್ರಣ | ಅಂದದ ಹೊರ ಹೊದಿಕೆ

[ಬೆಲೆ:— ಎಂಟಾಣೆ]

ಅಂತರಂಗವನ್ನು ಬೆಳಗಿ ಬಹಿರಂಗವನ್ನು ಹೊಳೆಸಿ ಹರಿಯುವ ಮಾತು

ಅಂತರಂಗದ ಎಲ್ಲಾ ಏಜಂಟರುಗಳಲ್ಲಿಯೂ ದೊರೆಯುತ್ತದೆ.

ಬೆಂಗಳೂರು ಸೋಲ್ ಏಜಂಟರು:
ಶ್ರೀ. ಬಿ. ಎ. ಉಪಾಧ್ಯಾಯರು
45, ಎ. ಎಸ್. ಸ್ಟ್ರೀಟ್, ಬೆಂಗಳೂರು.

ಅಂತರಂಗ ಕಾರ್ಯಾಲಯ,
ಉಡುಪಿ.

ನೋರ್ವೆಯಲ್ಲಿ ಆಂಗ್ಲೋ ಫ್ರೆಂಚ್ ಮತ್ತು ಜರ್ಮನರೊಳಗೆ ಭೀಕರ ಹೋರಾಟ!

ಜರ್ಮನಿ ನೋರ್ವೆಯನ್ನಾಕ್ರಮಿಸಿತು! ಬ್ರಿಟನ್ ಫ್ರಾನ್ಸುಗಳು ಇದಿರಿಸಿದವು!!

ನೋರ್ವೆಯಲ್ಲಿ ಇಕ್ಕಡೆಯವರ ಜೀವನ—ಮರಣಗಳ ನಿರ್ಧಾರವಾಗಲಿದೆ!

ಬ್ರಿಟಿಷ್ ಫ್ರಾನ್ಸುಗಳು ನೋರ್ವೆಯ ಸಮುದ್ರದಲ್ಲಿ ಜಲ ಸುರಂಗಗಳನ್ನಿರಿಸಿದೊಡನೆ ಜರ್ಮನಿಯು ಡೆನ್ಮಾರ್ಕ್ ಮತ್ತು ನೋರ್ವೆಯೊಳಗೆ ಸೈನ್ಯಗಳನ್ನು ಹೊಗಿಸಿತು. ಕೂಡಲೆ ಡೆನ್ಮಾರ್ಕು 'ಜರ್ಮನಿಯ ರಕ್ಷಣೆ'ಯನ್ನು ನಿರಾತಂಕವಾಗಿ ಒಪ್ಪಿಕೊಂಡಿತು. ನೋರ್ವೆ ಡೆನ್ಮಾರ್ಕುಗಳು ಮಿತ್ರರಾಷ್ಟ್ರಗಳ ಕೃತ್ಯಕ್ಕೆ ಎಡೆಗೊಟ್ಟುದನ್ನು ಪ್ರತಿಭಟಿಸುವದಕ್ಕಾಗಿಯೂ, ಅವುಗಳ ಮೇಲೆ ನಡೆಯಲ್ಪಡಬಹುದಾದ ಇತರ ರಾಷ್ಟ್ರಗಳ ಧಾಳಿಯನ್ನು ತಡೆಯುವದಕ್ಕಾಗಿಯೂ ತಾವು ಅವುಗಳ ರಕ್ಷಣೆಯನ್ನು ವಹಿಸಿಕೊಂಡಿದ್ದೇವೆ ಎಂದು ಜರ್ಮನ್ ಸರಕಾರವು ಪ್ರಕಟಿಸಿದೆ. ನೋರ್ವೆಯು ಜರ್ಮನಿಯ ಸ್ವಾಧೀನವಾಗಲು ಒಪ್ಪದೆ ಪ್ರತಿಭಟಿಸಲು ಸಿದ್ಧವಾಯಿತು. ಒಡನೆಯೇ ಪ್ರಬಲ ಜರ್ಮನಿ ಸೈನ್ಯವು ಜಲಮಾರ್ಗವಾಗಿ ನೋರ್ವೆಯನ್ನಾಕ್ರಮಿಸಿತು.

ಬಂದರುಗಳು ಬಲಿಬಿದ್ದವು!

ನೋರ್ವೆಯ ಮುಖ್ಯ ಬಂದರುಗಳೆಲ್ಲಾ ಹೆಚ್ಚಿನ ತಡೆಯಿಲ್ಲದೆ ಜರ್ಮನಿಯ ವಶವಾದವು. ಬೆರ್ಗನ್, ಟ್ರೋಂಡೆಮ್, ಓಸ್ಲೋ ಮೊದಲಾದುವುಗಳು ಜರ್ಮನರ ಕೈಯಲ್ಲಿವೆ. ನೋರ್ವೆ ಸರಕಾರವು ಓಸ್ಲೋದಿಂದ ಮಧ್ಯ ನೋರ್ವೆಯ 'ಹೇಮರ್' ಎಂಬ ಪಟ್ಟಣಕ್ಕೆ ತನ್ನ ಕಾರ್ಯಾಲಯವನ್ನೊಯ್ದಿದೆ. ಜರ್ಮನರು ಅತಿ ಜಾಣ್ಮೆಯಿಂದ ಸ್ವೀಡನ್ ಮತ್ತು ನೋರ್ವೆಯ ಸಮುದ್ರದಲ್ಲೆಲ್ಲಾ ಮೈನ್‌ಗಳನ್ನು ಇರಿಸಿದ್ದಾರೆ. ಸ್ಕೇಂಡಿನೇವಿಯಾ, ಮತ್ತು ಇಂಗ್ಲೇಂಡುಗಳ ಏಕಮಾತ್ರ ರೇಡಿಯೋ ಕೇಂದ್ರವಾದ 'ಕೋಪನ್ ಹೇಗನ್'ನ ವಯರ್‌ಲೇಸ್ ಸ್ಟೇಶನನ್ನು ಸ್ವಾಧೀನಪಡಿಸಿ ಟೆಲಿಫೋನ್ ಸಂಬಂಧವನ್ನು ಮೊದಲಾಗಿ ಕಡಿದು ಹಾಕಿರುವರು. ಹೀಗಾಗಿ ಲಂಡನ್ನಿಗೆ ಕೂಡಲೇ ವಾರ್ತೆ ಸಿಗದಂತಾಗಿದೆ.

ಸ್ವೀಡನ್ ತಟಸ್ಥವಾಗಿದೆ

ಸ್ವೀಡನ್ ತಾನು ಪೂರ್ಣ ತಟಸ್ಥವಿರುವದಾಗಿ ಸಾರಿದೆ. ಅಲ್ಲಿ ಸೈನ್ಯ ಸಿದ್ಧತೆ ನಡೆದಿದೆಯೆಂಬ ವಾರ್ತೆಯನ್ನು ಸ್ವೀಡನ್ ಮುಖ್ಯಮಂತ್ರಿಯವರು ಅಲ್ಲಗಳೆದಿದ್ದಾರೆ. ನೋರ್ವೆ ಡೆನ್ಮಾರ್ಕುಗಳ ಆಕ್ರಮಣವಾಗುವಾಗ ಸ್ವೀಡನಿನ ಧೋರಣೆಯೇನೆಂದು ಜರ್ಮನಿ ಪ್ರಶ್ನಿಸಿದಾಗ ತಾನು ಸಂಪೂರ್ಣ ತಾಟಸ್ಥ್ಯವಹಿಸುವೆನೆ ಆಶ್ವಾಸನೆಯಿತ್ತಿದೆ. ಡೆನ್ಮಾರ್ಕಿನ ರಾಜರು ಜರ್ಮನಿಯ ಆಶ್ರಯಕ್ಕೆ ಸೇರಲೊಪ್ಪಿ ತಮ್ಮವರು ಯಾರೂ ಇದಿರಿಸಬಾರದೆಂಬ ವಿನಂತಿಮಾಡಿಕೊಂಡಿದ್ದಾರೆ. ಡೆನ್ಮಾರ್ಕಿನ "ಜಟ್ಲೆಂಡ" ವಿಮಾನ ನಿಲ್ದಾಣದಲ್ಲಿಯೂ ನೋರ್ವೆಯ ದಕ್ಷಿಣ ಭಾಗದಲ್ಲಿಯೂ ಜರ್ಮನಿಯ ವಿಮಾನದಳಗಳು ಬಲ ಬಂದು ನಿಂತಿವೆ. ಬೆರ್ಗನಿನ ಬಳಿಯ ಆಂಗ್ಲೋ- ಫ್ರೆಂಚ್ ನೌಕಾ ಕ್ಷೇತ್ರದ ಮೇಲೆ ಜರ್ಮನ್ ವಿಮಾನಗಳು ಧಾಳಿ ನಡೆಯಿಸಿ ಹಡಗಗಳಿಗೆ ಪೆಟ್ಟಾಗಿದೆಂದು ತಿಳಿದು ಬರುತ್ತದೆ.

ಆಂಗ್ಲೋ ಫ್ರೆಂಚರ ಪೂರ್ಣ ಸಹಾಯ.

ನೋರ್ವೆಯ ಅತ್ಯಂತ ಪ್ರಾಮುಖ್ಯವಾದ ಸ್ಥಳಗಳೆಲ್ಲಾ ಜರ್ಮನರ ವಶವಾಗಿವೆ ಎನ್ನಬಹುದು. ಆದರೂ ನೋರ್ವೆ ಸರಕಾರವು ದೇಶದ ನಡುಪ್ರದೇಶದಿಂದ ಜರ್ಮನಿಯನ್ನು ವಿರೋಧಿಸುವದು. ಬ್ರಿಟನ್ ಫ್ರಾನ್ಸ ಸಮ್ಮಿಲಿತ ಮುಖ್ಯ ಯುದ್ಧ ಮಂಡಲವು ನೋರ್ವೆಗೆ ಜಲ, ಆಕಾಶ ಮತ್ತು ಸೈನ್ಯ ಸಹಾಯವಿತ್ತು ಜರ್ಮನಿಯನ್ನು ಹೊಡೆದಟ್ಟುವ ನಿರ್ಧಾರಮಾಡಿದೆ. ಸೈನಿಕರ ರಜೆಯನ್ನು ರದ್ದುಪಡಿಸಲಾಗಿದೆ. ಕೂಡಲೇ ಆಂಗ್ಲೋ ಫ್ರೆಂಚ್ ಯುದ್ಧನಾವೆಗಳೂ, ವಿಮಾನಗಳೂ ನೋರ್ವೆಯ ಕಡೆಗೆ ಹೊರಟವು. ಅಲ್ಲಿ ತೀವ್ರ ಯುದ್ಧವಾಗುತ್ತಿದೆ. ಹಿಂದಿನಿಂದ ನಾರ್ವೆ ಸರಕಾರದ ಪ್ರತಿಭಟನೆ ಇದಿರಿನ ಸಮುದ್ರ ಭಾಗದಲ್ಲಿ ಮಿತ್ರರಾಷ್ಟ್ರಗಳ ಪ್ರಬಲ ವಿರೋಧ, ಇವುಗಳ ನಡುವೆ ಜರ್ಮನಿ ಅಭಿಮನ್ಯು ಹೋರಾಟವನ್ನು ನಡೆಸಬೇಕಾಗಿ ಬಂದಿದೆ. 'ನೋರ್ವೆಯು ಮಿತ್ರರಾಷ್ಟ್ರಗಳ ಪಕ್ಷ ವಹಿಸಿ ಹೋರಾಡುವದಲ್ಲದೆ ಜರ್ಮನಿಗೆ ಶರಣಾಗದು. ಆಕ್ರಮಣಗಾರರು ನಮ್ಮ ದೇಶದ ಬಹುಭಾಗವನ್ನು ಪುಡಿಗಟ್ಟುವರೆಂಬುದು ನಿಜ. ಆದರೆ ಭವಿಷ್ಯದಲ್ಲಿ ದೇಶಕ್ಕೆ ಭದ್ರವಾದ ಸ್ವಾತಂತ್ರ್ಯ ದೊರೆಯುವದೆಂಬ ಭರವಸೆ ನಮಗಿದೆ' ಎಂದು ಅಲ್ಲಿಯ ರಾಜರಾದ ಹಾಕೂನ್‌ರವರು ಅಂದಿದ್ದಾರೆ.

ಸಾಹಸ ಪೂರ್ಣಯುದ್ಧ

ನೋರ್ವೆ ಸಮುದ್ರದಲ್ಲಿ ಮಿತ್ರ ರಾಷ್ಟ್ರಗಳ ಯುದ್ಧದ ಹಡಗುಗಳು ಸಾಹಸ ಪೂರ್ಣಹೋರಾಟ ನಡೆಸುತ್ತಿವೆ. ಏಳು ಜರ್ಮನಿ ಹಡಗುಗಳು ಮುಳುಗಿಸಲ್ಪಟ್ಟು ಒಂದು ದೊಡ್ಡ "ಡಿಸ್ಟ್ರೋಯರ್" ತೀವ್ರ ಜಖಂಗೊಂಡಿತು. ಮೇಲಿನಿಂದ ವಿಮಾನ ಧಾಳಿಯೂ ನಡೆಯಿತು. 'ಓಸ್ಲೋ, ಎಜೋರ್ಡ್, ಮಾರ್ಸ್‌ಟ್ರೇಂಡ್, ಮೊದಲಾದೆಡೆಗಳಲ್ಲಿ ನೌಕಾಯುದ್ಧ ಮತ್ತು ವಿಮಾನಧಾಳಿ ನಡೆದ ಪರಿಣಾಮವಾಗಿ ಯುದ್ಧ ಹಡಗಗಳ ಬೆಂಬಲವಿದ್ದ ಎರಡು ಜರ್ಮನಿ ಸಂಚಾಲಕ ಹಡಗುಗಳು ಮುಳುಗಿದವು; ಮಿಕ್ಕವುಗಳು ಪೆಟ್ಟುತಿಂದವು. ಒಂದು ದೊಡ್ಡ ಜರ್ಮನ್ ಡಿಸ್ಟ್ರೋಯರ್ ಬೋಂಬು ಬಿದ್ದು ಮುಳುಗಿತು 5100 ಟನ್ನೇಜಿನ ಜರ್ಮನಿಯ 'ಎಮ್ಡನ್' ಹಡಗವನ್ನು ನೋರ್ವೆಯವರು ಮುಳುಗಿಸಿರುವರು. "ಬ್ಲುಶೆರ್" ಮತ್ತು "ಕಾರ್ಲ್ ಪ್ರೂ" ಎಂಬ ಎರಡು ದೊಡ್ಡ ಹಡಗುಗಳು ಮುಳುಗಿದವೆಂಬುದನ್ನು ಜರ್ಮನರೂ ಒಪ್ಪುತ್ತಾರೆ. ಪ್ರತಿಯಾಗಿ ಬ್ರಿಟಿಷ್ ಹಡಗಗಳು ಹಲವು ಹಾಳಾಗಿವೆಯೆಂದೂ ಜರ್ಮನರನ್ನುತ್ತಾರೆ. ಬ್ರಿಟಿಷ್ ವಿಮಾನಗಳು ಬೆರ್ಗನ್‌ನಲ್ಲಿ ನಡೆಸಿದಧಾಳಿಯಿಂದ ಜರ್ಮನಿ ವಿಮಾನವೊಂದು ಮುಳುಗಿ ಮಿಕ್ಕವು ಪೆಟ್ಟುತಿಂದಿವೆ.

ಜರ್ಮನಿ ಸಿಕ್ಕಿ ಬೀಳುವದೆ?

ತಾ 11ರಲ್ಲಿ ಭಾಷಣವೀಯುವಾಗ ಫ್ರೆಂಚ್ ಮುಖ್ಯ ಮಂತ್ರಿಗಳು ಜರ್ಮನರ 18 ಸ್ಟೀಮರುಗಳು ನಾಶವಾದುವೆಂದೂ, ಅದರ ಒಟ್ಟು ನಷ್ಟವು ಜರ್ಮನಿಯ ಇಡಿ ನ[illegible] ಪತ್ತನೇ ಒಂದು ಪಾಲಾಗುವದೆಂದೂ ಬ್ರಿಟಿಷರ ನಾಲ್ಕು ಡಿಸ್ಟ್ರೋಯರುಗಳು ನಾಶವಾದುವೆಂದೂ ಫ್ರಾನ್ಸಿಗೇನೂ ನಷ್ಟವಾಗಿಲ್ಲವೆಂದೂ ತಿಳಿಸಿದರು. ಸಭೆಯ ರೋಮಾಂಚಕರ ಕರತಾಡನದ ನಡುವೆ ಫ್ರೆಂಚ್ ಮಂತ್ರಿಗಳು ಹೀಂಗೆಂದರು. "1938ರಲ್ಲಿ ಆಸ್ಟ್ರಿಯಾಕ್ರಮಣದ ವೇಳೆ ದೊರೆತ ವಿರೋಧಕ್ಕಿಂತ ಹೆಚ್ಚಿನದೇನೂ ನಡೆಯಲಾರದೆಂಬ ನಿರೀಕ್ಷೆಯಿಂದ ಜರ್ಮನಿ ನಾರ್ವೆಯ ಮೇಲೆ ಬಿತ್ತು. ಬದಲಿಗೆ 1914ರಲ್ಲಿ ಬೆಲ್ಜಿಯಮಿನಲ್ಲಿ ಪಡೆದಂತಹ ವಿರೋಧವನ್ನೇ ಆದೀಗ ಪಡೆದಿದೆ!"

ಜರ್ಮನಿ ಗೆದ್ದ ಸ್ಥಳಗಳು

ಜರ್ಮನ್ ಸೈನ್ಯವು ಸ್ಟಾವೆಂಜರ್, ಬೆರ್ಗನ್, ಟ್ರೋಂಡೆಹಮ್, ಮತ್ತು ಕರಾವಳಿಯ ಇತರ ಮುಖ್ಯ ಸ್ಥಳಗಳನ್ನು ಪೂರ್ಣ ಸ್ವಾಧೀನದಲ್ಲಿಟ್ಟುಕೊಂಡಿವೆ. ಓಸ್ಲೋ ಮತ್ತು ಅದರ ನೆರೆಯ ಸ್ಥಳಗಳನ್ನು ಜರ್ಮನರಾಕ್ರಮಿಸಿ ಹಿಡಿದಿದ್ದಾರೆ. ದಕ್ಷಿಣ ಮತ್ತು ಆಗ್ನೇಯ ದಿಕ್ಕಿನ ಲೈನು ನಮ್ಮ ಸೈನ್ಯದ ಅಂಕೆಯಲ್ಲಿದೆ ಎಂದು ನೋರ್ವೆ ಸರಕಾರವು ಪ್ರಕಟಿಸಿದೆ. ಜರ್ಮನಿಯ ಒಟ್ಟು ಹಡಗು ನಷ್ಟವು 70 ಸಾವಿರದಿಂದ 80 ಸಾವಿರದ ಟನ್ನುಗಳಷ್ಟು, ಅಂದರೆ 25ರಿಂದ 30ರಷ್ಟು ಹಡಗುಗಳೆಂದು ಅಂದಾಜು ಮಾಡಲಾಗಿದೆ. ವಿರೋಧಿಗಳಿಂದ ಮುಳುಗಿಸಲ್ಪಟ್ಟವರು ಅಥವಾ ಕಾಣೆಯಾದವರೆಂದು ಒಟ್ಟು 5 ಸಾವಿರದಷ್ಟು ಜರ್ಮನರು ನಷ್ಟವಾಗಿದ್ದಾರೆಂದು ನಂಬಲಾಗಿದೆ. ನೋರ್ವೆ ಜನರು ಯುದ್ಧ ನಿಲ್ಲಿಸಬೇಕೆಂದೂ, ನಾಜಿಗಳೊಡನೆ ಸಹಕರಿಸದ ಯಾವನನ್ನಾದರೂ ಗುಂಡಿಟ್ಟು ಕೊಲ್ಲಲಾಗುವುದೆಂದೂ ಜರ್ಮನರು ಎಚ್ಚರಿಸಿರುವರು.

ಜರ್ಮನ್ ನಾವೆಗೆ ಪ್ರಬಲ ತಡೆ

ಉತ್ತರ ಸಮುದ್ರದಲ್ಲಿ, ಸ್ಕಾಗರಾಕ್, ಕಟ್ಟೆಗಾಟ್, ಮೊದಲಾದೆಡೆಗಳಲ್ಲಿ ಮಿತ್ರರಾಷ್ಟ್ರಗಳ ಜಲ ಸುರಂಗಗಳಿರಿಸಲ್ಪಟ್ಟಿವೆ. ಡೇನಿಶ್-ಜರ್ಮನ್ ಕರಾವಳಿ, ಸ್ವೀಡನ್ ಮತ್ತು ಡಚ್ ಜಲಕ್ಷೇತ್ರಗಳು ಈ ರೀತಿ ಪ್ರತಿಬಂಧಿಸಲ್ಪಟ್ಟಿವೆ. ಉತ್ತರ ಸಮುದ್ರ ಮತ್ತು ಜರ್ಮನಿಯ ನಡುವಿನ ಸಂಬಂಧವು ಇದರಿಂದ ಕಡಿದು ಹೋಯಿತು. ಇದು ವಿಜಯದ ಹೆದ್ದಾರಿ ಎಂದು ಲಂಡನಿನಲ್ಲಿ ಉತ್ಸಾಹವೆದ್ದಿದೆ. ಚರ್ಚಿಲ್ಲರು ತನ್ನ ಭಾಷಣದಲ್ಲಿ ಹಿಟ್ಲರನು ಉತ್ತರ ಸಮುದ್ರಕ್ಕೆ ಕಾಲಿಟ್ಟು ದೊಡ್ಡ ತಪ್ಪನ್ನು ಮಾಡಿಕೊಂಡನೆಂಬುದಕ್ಕೊಂದು ದೃಷ್ಟಾಂತವಿದು. ಜರ್ಮನರು ಈ ಮೈನುಗಳನ್ನು ತೆಗೆಯಲು ಯತ್ನಿಸಿದರೂ ವಿಮಾನಗಳ ಮತ್ತು ಹಡಗುಗಳ ಹೊಡೆತದಿಂದಾಗಿ ಸಫಲರಾಗುವಂತಿಲ್ಲ. ಇದರಿಂದಾಗಿ ಬಾಲ್ಟಿಕ್ ಅಥವಾ ಉತ್ತರ ಸಮುದ್ರದ ಯಾವುದೇ ಡೇನಿಷ್ ಇಲ್ಲವೆ ಜರ್ಮನ್ ಬಂದರಕ್ಕೆ ಒಂದೇ ಒಂದು ಹಡಗು ಬಾರದಂತಾಗಿದೆ ಒಳಗಿದ್ದ ಜರ್ಮನರೂ ಗೂಡಿನಲ್ಲಿ ಸಿಕ್ಕಿದಂತಾಗಿದ್ದಾರೆ ಎಂದು ಮಿತ್ರ ರಾಷ್ಟ್ರಗಳವರ ಅಭಿಪ್ರಾಯ. ಬ್ರಿಟಿಷ್, ಆರ್. ಎ ಎಫ್ ವಿಮಾನ ದಳವು ಓಸ್ಲೋ ಎಬೊರ್ಡಿನಿಂದ ಹಿಡಿದು ಬಾಲ್ಟಿಕ್ ಕರಾವಳಿಯ ವರೆಗಿನ ಪ್ರದೇಶದಲ್ಲಿರುವ ವೈರಿ ಹಡಗುಗಳ ಮೇಲೆಲ್ಲಾ ಬೋಂಬು ಸುರಿಸಿವೆ. ಜರ್ಮನರ ದೊಡ್ಡ ಹಡಗವೊಂದು ಒಡೆಯಿತು.

ನೋರ್ವೆಯ ವಿರೋಧ

ಹಲವು ಕಡೆಗಳಲ್ಲಿ ಜರ್ಮನಿ ಮತ್ತು ನೋರ್ವೆ ಸೈನ್ಯಗಳೊಳಗೆ ತೀವ್ರಹೋರಾಟ

(೧೩ನೇ ಪುಟ ನೋಡಿರಿ.)

ಕೆನರಾ ಬೇಂಕ್ ಲಿಮಿಟೆಡ್

ಲಿಮಿಟೆಡ್ ಜವಾಬ್ದಾರಿಯಿಂದ ಬ್ರಿಟಿಷ್ ಇಂಡಿಯದಲ್ಲಿ ಸ್ಥಾಪಿತವಾದುದು.

೧೯೩೯ನೇ ಇಸವಿ ದಶಂಬರ ೩೧ಕ್ಕೆ ಅಂತ್ಯವಾಗುವ ವರ್ಷದ ಆಯವ್ಯಯದ ಸಾರಾಂಶ ಪಟ್ಟಿ.

	ರೂ. ಆ. ಪೈ.		ರೂ. ಆ. ಪೈ.
ಮೂಲಧನ		ಕಟ್ಟಡ ಮತ್ತು ಸಾಮಾನು ಮೊದಲಾದುವುಗಳಿಗೆ ಸಲ್ಲತಕ್ಕ ಮೂಲ ವ್ಯಯ	95,459-4-3
ತೆತ್ತಲ್ಪಟ್ಟ	6,00,000 0-0	ವ್ಯಾಪಾರಿಗಳಿಗೆ ಎಡ್ವಾನ್ಸ್ ಕೊಟ್ಟದ್ದು	
ರೈಟ್ ಆಫ್	3,91,342-0-0	ಬೆಲೆಬಾಳುವ ಸೆಕ್ಯುರಿಟಿ	40,97,741-5-6
ರಿಸರ್ವ್ ಫಂಡು	4,50,000-0-0	[illegible]	10,30,649-2-10
ಡಿಪೋಸಿಟ್ ಫಿಕ್ಸೆಡ್, ಕರೆಂಟ್ ಇತ್ಯಾದಿ	81,21,622-8-1	[illegible]	20,64,586-2-0
ಬೇಂಕುಗಳಿಗೆ ಸಲ್ಲತಕ್ಕದ್ದು	ಇಲ್ಲ	ವಿವಿಧ	9,82,093 10-4
ವಿವಿಧ	10,51,799-1-7	ನಗದು	17,99,207-1-3
ಈ ವರ್ಷದ ಲಾಭ	55,003-0-6		
ಜುಮ್ಲಾ	1,00,69,766-10 2	ಜುಮ್ಲಾ	1,00,69 766-10-2

ಈ ವಾರದ ಭವಿಷ್ಯ

ತಾರೀಖು 18-4-1940ರಿಂದ 25-4-1940ರ ವರೆಗೆ

ಮೇಷ—ಗ್ರಹಗಳ ಪರಿಸ್ಥಿತಿಯು ಬಹಳ ವಿಪರೀತಾವಸ್ಥೆಗೆ ಬಂದಿರುತ್ತದೆ. ಆದಕಾರಣ ನಿಮ್ಮ ಯಾವೊಂದು ಕಾರ್ಯಗಳೂ ಸುಗಮವಾಗಿ ಸಾಗು ವಂತಿಲ್ಲ. ವಿರೋಧಿಗಳ ಕಾಟವು ದಿನೇ ದಿನೇ ಪ್ರಬಲವಾಗುವುದು. ಅದನ್ನು ವಿರೋಧಿಸಲು ನಿಮ್ಮಲ್ಲಿ ಸಾಕಷ್ಟು ಧನಬಲವೂ ಜನಸಹಾಯವೂ ಇಲ್ಲವಾಗಿದೆ. ದೇಹದಲ್ಲಿ ಆಲಸ್ಯವು ಹೆಚ್ಚಿರುವುದರಿಂದಲೂ ಆಕಸ್ಮಿಕ ಪ್ರವಾಸ, ಆರ್ಥಿಕ ಅಡಚಣೆಯಿಂದಲೂ ಬಹಳವಾಗಿ ಕೊರಗುವಿರಿ. ರಾಜಕೀಯ ಭಾಗದಲ್ಲಿ ಅಪಜಯ ಧನವ್ಯಯಗಳುಂಟಾಗುವವು. ಆದರೂ ನಿಶಾಚಂದ್ರರ ಅನುಗ್ರಹದಿಂದ ತಾ. 20ರಿಂದ 23ರ ವರೆಗೆ ಹೆಚ್ಚಿನ ಪೀಡೆಯುಂಟಾಗದು. ಕಿಂಚಿದ್ಲಾಭಗಳೂ ಕೈಗೂಡಲಿವೆ.

ವೃಷಭ— ಹಾಸಿಗೆಗೆ ತಕ್ಕುದಾಗಿ ಕಾಲು ಚಾಚಲು ಪ್ರಯತ್ನಿಸಿರಿ. ಖರ್ಚು ಆದಾಯಕ್ಕಿಂತ ದ್ವಿಗುಣವಾಗಿರುವುದಾದರೂ ಸ್ನೇಹಿತರುಗಳು ಅದನ್ನು ಸ್ವಮಿತಕ್ಕೆ ತಂದಿಟ್ಟುಕೊಳ್ಳಲು ಶಕ್ತರಾಗುವರು. ಉದ್ಯೋಗದಲ್ಲಿ ನಿಮ್ಮ ಶಕ್ತಿಗೆ ತಕ್ಕ ಪ್ರತಿಫಲ ದೊರೆಯುವುದು. ಆದರೆ ಅರ್ಧಾಂಗಿಯಾಳ ವಸನ ಸ್ವಪ್ತಿಗಾಗಿ ಹೆಚ್ಚಿನ ಧನ ವ್ಯಯಿಸುವಿರಿ. ಪರ್ಯಟನಾದಿಗಳಲ್ಲಿಯೂ ಗಾಡಿಗಳ ಅಪಘಾತ ವಗೈರೆ ಅನರ್ಥಗಳಿಗೆ ಸಿಲುಕಿ ಬಹಳ ಕಷ್ಟನಷ್ಟಗಳೀಗಾಗುವಿರಿ. ಆದಕಾರಣ ಮುಂದಿನ ನಾಲ್ಕು ದಿನಗಳಲ್ಲಿ ಅತ್ಯಂತ ಜಾಗರೂಕರಾಗಿರಿ.

ಮಿಥುನ—ಕಾಲವು ಪರಿಪಕ್ವಾವಸ್ಥೆಗೆ ಬಂದಿದೆ. ದೈವಬಲವು ವಿಶೇಷವಾಗಿರತಕ್ಕ ನಿಮಗೆ ಯಾವ ವಿಭಾಗದಲ್ಲೂ ಕೊರತೆಯಿರದು. ಸ್ವಉದ್ಯೋಗದಲ್ಲಿ ಉತ್ತಮಸ್ಥಾನವನ್ನು ಪಡೆಯುವಿರಿ. ರಾಜಕೀಯ ರಂಗದಲ್ಲಿ ವಿಜಯವೂ ಧನಮಾನಗಳ ಲಾಭವೂ ದೊರೆಯಲಿದೆ. ಅಧಿಕಾರ ಭಂಗವು ವಿಶೇಷತಃ ಸಂಭಾವಿಸದು. ವ್ಯಾಪಾರ ವ್ಯವಹಾರಗಳಲ್ಲಿ ಒಳ್ಳೇ ಕೀರ್ತಿಲಾಭವಾಗುವುದು. ಸಕಲ ಗ್ರಹಸಂಪತ್ತುಗಳಿಂದೊಡಗೂಡಿ ಸುಖದಿಂದ ಕಾಲ ಕಳೆಯತಕ್ಕ ನಿಮಗೆ ವ್ಯಯಸ್ಥ ಕೇತುವಿನಿಂದಾಗಿ ತಾ. 20ರಿಂದ 23ರ ವರೆಗೆ ದೇಹಾಲಸ್ಯ, ಸ್ತ್ರೀ ಕಲಹ, ಪ್ರವಾಸಗಳು ಸಂಭವಿಸುವವು.

ಕರ್ಕಾಟಕ—ಕೈಗೊಂಡ ಉದ್ಯಮವು ಆನಾಯಾಸದಿಂದಲೂ ನಿರ್ವಿಘ್ನದಿಂದಲೂ ಕೊನೆಗಾಣುವುದು. ಆಯವ್ಯಯಗಳು ಪರಿಮಿತದಲ್ಲಿ ನಿಲ್ಲಲಿರುವ ಕಾರಣ ಹಣದ ಅಡಚಣೆಯಾಗದು. ಸಮಾಜಸೇವಾಕಾರ್ಯದಲ್ಲಿ ನಿರತರಾಗಿ ಜನರ ಆದರಾತಿಥ್ಯಗಳಿಗೆ ಪಾತ್ರರಾಗುವಿರಿ. ವಿದ್ಯಾರ್ಥಿಗಳಿಗೆ ಅಧ್ಯಯನ ಭಾಗಕ್ಕೆ ತೊಡಕು ಹೆಚ್ಚಲಿದೆ. ಮನಸ್ಸಿನಲ್ಲೊಂದು ಕಾರ್ಯದಲ್ಲೊಂದು ನಿಧಾನಗಿ ವರ್ತಿಸುವುದರಿಂದ ಗುರುಹಿರಿಯರ ಪ್ರಕೋಪಕ್ಕೆ ಗುರಿಯಾಗಲಿರುವಿರಿ. ಲೋಕಾಪವಾದದ ಭೀತಿಯೂ ಇದೆ. ತಾ. 20, 21 ಹೊರತು ಇತರ ದಿನಗಳು ಹಾನಿಕರವಿವೆ.

ಸಿಂಹ—ಗ್ರಹಚಾರವನ್ನು ಗಳಿಂದಲೂ ದೈಹಿಕ ಪೀಡೆ, ಮಾನಸಿಕಚಿಂತೆಯಿಂದಲೂ ನೊಂದು ಬಳಲುತ್ತಿದ್ದ ನಿಮ್ಮ ಆತ್ಮಕ್ಕೆ ಈ ವಾರದಲ್ಲಿ ಕೊಂಚ ಶಾಂತಿಯು ಲಭಿಸಲಿದೆ. ಗುರುಶನಿಯರ ಅನುಗ್ರಹದಿಂದಾಗಿ ನಾನಾರಂಗದಲ್ಲಿ ಇಷ್ಟಾರ್ಥವು ನೆರವೇರಲಿದೆ. ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ವಿಜಯಿಗಳಾಗುವರು. ವ್ಯಾಪಾರೀಜನರಿಗೆ ವಿತ್ತ ಭಾಗ್ಯವಾಗಿದ್ದರೂ ಕೂಡ ಜನರೊಡನೆ ಕಲಹವೂ ವ್ಯಾಪಾರದಲ್ಲಿ ನಷ್ಟವೂ ಸಂಭವಿಸಲಿದೆ. ಲೇವಾದೇವಿ ಸಂಬಂಧ ನ್ಯಾಯಸ್ಥಾನಕ್ಕೆ ಹೋಗುವ ಪ್ರಸಕ್ತಿಯೂ ಬರಬಹುದು. ತಾ. 20, 21, 24, 25 ಈ ದಿನಗಳಲ್ಲಿ ಆಪ್ತೇಷ್ಟರಲ್ಲಿ ಕಲಹವೂ ಧನಮಾನಗಳಿಗೆ ಹಾನಿಯೂ ಒದಗಲಿದೆ.

ಕನ್ಯಾ—ದುಃಸ್ವಪ್ನ ನಿಮ್ಮ ಹೊರತಾಗಿ ಇತರ ಸಕಲ ಗ್ರಹರೂ ನಿಮಗೆ ವಿಮುಖರಾಗಿರುವುದರಿಂದ "ವಿನಾಯಕಂ ಪ್ರಕುರ್ವಾಣೋ ರಚಯಾಮಾಸ ವಾನರಂ" ಎಂದಂತೆ ಗಣಪತಿಯನ್ನು ಮಾಡ ಬೇಕೆಂದೆಣಿಸಿ ಮಂಗನನ್ನು ಮಾಡಿದಂತೆ ನೀವೊಂದನ್ನು ನೆನೆದು ಅದನ್ನು ಮಾಡಬೇಕೆನ್ನುವರೆ ಅದು ವಿಪರೀತವಾಗಿ ಪರಿಣಮಿಸಲಿದೆ. ದೇಹಾಲಸ್ಯ, ಗೃಹ ಕಲಹ, ಕಾರ್ಯಹಾನಿ ಇತ್ಯಾದಿ ಚಿಂತೆಗಳಿಂದ ಮನಸ್ಸಿಗೆ ಶಾಂತಿಯೇ ಸಿಕ್ಕದು. ಪತ್ನೀಪುತ್ರರ ವಿರಹದಿಂದಲೂ ಶತ್ರುಜನರ ಕಾಟದಿಂದಲೂ ಸದಾ ಪೀಡಿತರಾಗಿರತಕ್ಕ ನಿಮಗೆ ಅಕಸ್ಮಾತ್ ಪ್ರವಾಸಗಳು ಗಂಟುಬಿದ್ದು ಹೆಚ್ಚಿನ ಕಷ್ಟನಷ್ಟಗಳಿಗೆ ಗುರಿಯಾಗಲಿರುವಿರಿ. ತಾ. 18, 19, 22, 23 ಈ ದಿನಗಳಲ್ಲಿ ಅಲ್ಪಸ್ವಲ್ಪದ ಹಿತಕರಗಳು ಸಂಭವಿಸುವವು.

ತುಲಾ—ಈ ವಾರದಲ್ಲಿ ನಿಮ್ಮ ರಾಶಿಗೆ ರ ಭಾಗ್ಯಸ್ಥ ಗ್ರಹರು ಇಷ್ಟಸ್ಥ ರಾಶಿಗಳಲ್ಲಿರುವುದರಿಂದ ಫಲವು ವಿಚಿತ್ರರೂಪವಾಗಿ ಫಲಿಸಲಿದೆ. ಉದ್ಯೋಗದಲ್ಲಿ ಪದವು ಇಷ್ಟಾಧಿಕವಾಗಿ ಲಭಿಸಲಿದೆ. ವಾಕ್ಸ್ಥ ರಾಹುವಿನ ಸಹಾಯವು ನಿಮ್ಮವರನ್ನಾಗಿ ಮಾಡಿಕೊಳ್ಳುವ ಶಕ್ತಿ ನಿಮಗಿರುವುದರಿಂದಲೂ ಕಾರ್ಯವು ನಿಮ್ಮ ಭಾಗಕ್ಕೆ ಅನುಕೂಲವಾಗಿ ಪರಿಣಮಿಸುವುದು. ಸ್ತ್ರೀ ವಶೀಕರಣವಿಯೂ ಧನಲಾಭವು ಯೋಗವಿದೆ. ಕೋರ್ಟು ವಗೈರೆಗಳ ವ್ಯವಹಾರದಲ್ಲಿ ಹೆಚ್ಚು ಧನ ವ್ಯಯವಾಗುವುದಾದರೂ ನಿಮ್ಮಿಷ್ಟದಂತೆ ಸಿದ್ಧಿಸದು. ಕೈಹಿಡಿದ ಕೆಲಸ ಸಲೀಸಾಗಿ ಜಯವಾಗುವವು. ಚರ್ಮರೋಗಗಳು ಗಾಯಗಳು ದೇಹದಲ್ಲಿ ಉಂಟಾಗಲಿವೆ. ತಾ. 20, 21, 24, 25 ಈ ದಿನಗಳಲ್ಲಿ ಧನಮಾನಗಳ ವಿಚಾರ ತುಂಬಾ ಜಾಗರೂಕರಾಗಿರಿ.

ವೃಶ್ಚಿಕ—ಈ ದಿನಗಳಲ್ಲಾದರೂ ಈ ಬಿಂಪಡೆ ಸಂದು ಹೋದವು ನಿಮ್ಮ ನಿಮಗೆ ಸಾಂಸಾರಿಕ ಚಿಂತೆಯು ವಿಶೇಷವಾಗಿ ಪೀಡಿಸಲಿದೆ. ಮಕ್ಕಳುಗಳ ಅನಾರೋಗ್ಯದ ಸಲುವಾಗಿ ದಿನದಿನ ಧನವೆಲ್ಲವೂ ವ್ಯಯವಾಗುವುದು. ಸ್ತ್ರೀಜನರಿಂದ ಅವರಲ್ಲೂ ಹೆಚ್ಚಾಗಿ ಅರ್ಧಾಂಗಿಯಿಂದಲೇ ನಿಮಗೆ ನಿತ್ಯ ಕಲಹ, ಇಲ್ಲದ ಅಪವಾದ, ಆದರೆ ಭಾಗ್ಯನಿಷ್ಠಗಳು ಪ್ರಾಪ್ತವಾಗಲಿವೆ. ವಿರೋಧಿಗಳ ಪೀಡೆಯಿಲ್ಲದಿದ್ದರೂ ಮನೋವ್ಯಥೆಯು ವಿಶೇಷವಾಗಿರುವುದರಿಂದ ರಾತ್ರಿ ನಿದ್ದೆ ಸಹಾ ಬಾರದು. ತಾ. 22, 23 ಈ ದಿನಗಳಲ್ಲಿ ಅತಿ ವ್ಯಯ ಅನಾರೋಗ್ಯಗಳು ಕಾಣಿಸಿಕೊಳ್ಳಲಿವೆ.

ಧನು—ಕಷ್ಟ ಜೀವಿಗಳಿಗೆ ಈ ವಾರವು ಹಿತಕರವಾಗಿಲ್ಲವು. ಆತ್ಮೀಯರಲ್ಲಿ ವೈಮನಸ್ಸು ಹುಟ್ಟಿ ಪರಸ್ಪರ ಕಲಹವಾಗಲಿದೆ. ಮನೆಯವರಿಂದ "ಮನೆಗೆ ಮಾರಿ, ಊರಿಗುಪಕಾರಿ" ಎಂಬ ಮಾತನ್ನು ಕೇಳಬೇಕಾಗಿಯೂ ಬಂದೀತು. ಆದರೂ ಕೂಡ ನಿಮ್ಮ ಆರ್ಥಿಕ ದುರವಸ್ಥೆಯು ಬಹುಬೇಗ ನಿವಾರಿಸಲ್ಪಡುವುದರಿಂದ ಮನಸ್ಸಿಗೊಂದು ತೆರನಾದ ಸಮಾಧಾನ ದೊರೆಯುವುದು. ವಿದ್ಯಾರ್ಥಿಗಳಲ್ಲಿ ನಿಷ್ಠಾವಂತರು ಸ್ವಲ್ಪ ಜನರನ್ನು ಬೆಂಬಲಕ್ಕೆ ಪಡೆದು ಕೆಲಸವನ್ನು ನೆರವೇರಿಸಲು ಶಕ್ತರಾಗುವರು. ವಾಣಿಜ್ಯ ಭಾಗದಲ್ಲಿ ನಷ್ಟ ಹೊಂದಿದರೂ ಇತರ ಭಾಗಗಳಲ್ಲಿ ಆ ನಷ್ಟವನ್ನು ಭರ್ತಿ ಮಾಡಿಕೊಳ್ಳುವಿರಿ. ತಾ. 21ರಿಂದ 23ರ ವರೆಗೆ ಅನುಕೂಲವು ಹೆಚ್ಚಲಿದೆ.

ಮಕರ—ಕಾರ್ಯದಲ್ಲಿ ಎಷ್ಟೊಂದು ಪ್ರಾಮಾಣಿಕತೆಯಿಂದ ನಡೆದುಕೊಂಡರೂ ಅಧಿಕಾರಿಗಳಲ್ಲಿ ಒಡಕು ಉಂಟಾಗುವುದು. ವೈದ್ಯಕೀಯದಲ್ಲಿ ಯಶಸ್ಸು ದೊರೆಯದು. ವಿರೋಧಿಗಳ ಕಾಟದಿಂದ ಒಂದು ಕಾರ್ಯವೂ ಮುಂದುವರಿಯದು. ಕೇವಲ ವಿಚಾರ ಮಾರ್ಗಗಳೇ ಹೆಚ್ಚುತ್ತ ಹೋಗುವುದರಿಂದ ಹಣಕಾಸುಗಳಿಗಾಗಿ ಹೊಂದಾಣಿಕೆ ಮಾಡಿಕೊಳ್ಳಬೇಕಾಗುವುದು. ಬಂಧು ವರ್ಗದವರಿಂದ ಕಷ್ಟನಷ್ಟಗಳು ಸಂಭವಿಸದಿದ್ದರೂ ಬಳಲಿದೆ. ಪ್ರಿಯಜನರ ವಿಯೋಗದಿಂದ ವಿಶೇಷವಾಗಿ ದಿನಗಳೆಯುವ ಪ್ರಸಂಗವು ಬರಲಿದೆ. ಆದರೂ ವಾರಾಂತ್ಯದ 4 ದಿನಗಳಲ್ಲಿ ಮಿತ್ರರ ಸಮಾಗಮಾದಿಗಳಿಂದ ಎಲ್ಲವೂ ಸ್ವಲ್ಪ ಸಮಾಧಾನವೀತು.

ಕುಂಭ—ಸಂತೋಷದಿಂದಾಗಿ ದುರ್ವ್ಯಸನದ ವೃತ್ತಿಯನ್ನು ಬಿಟ್ಟು ಸತ್ಕಾರ್ಯದ ಕಡೆಗೆ ಧ್ಯಾನವನ್ನು ಹರಿಸಿಕೊಳ್ಳುವಿರಿ. ಉದರಶೂಲೆ, ಸಂಧಿ ನೋವುಗಳಲ್ಲಿ ಬೇನೆ ಇತ್ಯಾದಿಗಳಿಂದ ಆಗಾಗ ಪೀಡಿಸಿಕೊಳ್ಳಲ್ಪಡುವಿರಿ. ನಿರಂತರವಾಗಿ ಕಾರ್ಯಪ್ರವೃತ್ತರಾಗಿಯೇ ಹೊರತು ಹೊಸ ಹುದ್ದೆವು ನಿಮ್ಮಲ್ಲಿ ದಯವಾಗುವುದು. ಕೆಲಸಕ್ಕೆ ತಕ್ಕ ಪ್ರತಿಫಲ ದೊರೆಯುವುದರಿಂದ ಸದಾ ಪ್ರಸನ್ನ ಚಿತ್ತರಿರುವಿರಿ. ಗೃಹೋಪಸ್ಕರಗಳು ಪರಿಪೂರ್ಣವಾಗಿರುವವು. ಸ್ವಯಂಪೋಷಕರಿದ್ದರೂ ಇತರ ಜನರ ಬೇಡಿಕೆಗಳಿಗೆ ಸೊಪ್ಪು ಹಾಕಲು ಶಕ್ತರಿರುವಿರಿ. ತಾರೀಖು 18, 19, 24, 25 ಈ ದಿನಗಳು ಉತ್ತಮವಾಗಿವೆ.

ಮೀನ—ಅಂತರಿಕವಾಗಿ ನೀವು ಧೈರ್ಯಹೀನರಾದರೂ ಮಾತಿನಲ್ಲಿ ಅಸದೃಶ ವಿಶ್ವಾಸವನ್ನು ತೋರಿಸಿಕೊಳ್ಳುವಿರಿ. ಬಹುತೇಕ ನಿಮ್ಮ ಕಾರ್ಯಗಳು ನಿಷ್ಫಲವಾಗಲಿರುವವು. ಸಾಮಾಧಾನ ಸಾಧ್ಯವಾದಷ್ಟು ಕಾರ್ಯಗಳು ಇತರೋಪಾಯಗಳಿಂದ ಆಗಲಾರವೆಂಬುದನ್ನು ನೆನಪಿನಲ್ಲಿಡಿರಿ. ನಿಮ್ಮ ಯೋಗ್ಯತೆಗೆ ಮೀರಿ ಸಂಪಾದಿಸುವಿರಾದರೂ ಒಂದು ಬಿಡಿಕಾಸೂ ಕೈಯಲ್ಲಿ ನಿಲ್ಲಲಾರದು. ಆರೋಗ್ಯ ವಿಚಾರದಲ್ಲಿ ಸ್ವಲ್ಪ ಜಾಗರೂಕರಾಗಿರುವುದುತ್ತಮ. ವಿದ್ಯಾಭ್ಯಾಸಕ್ಕೆ ಕೊಂಚ ತೊಂದರೆಗಳು ಹೆಚ್ಚುವುದಾದರೂ ಅದರಲ್ಲೇ ಅತಿ ಸಮಾಧಾನವಾಗಲಿ. ತಾ. 18ರಿಂದ 21ರ ವರೆಗಿನ ದಿನಗಳು ಕೊಂಚ ಉತ್ತಮವಾಗಿವೆ.

ಬೊಂಬಾಯಿ

ನಿರ್ಬಂಧಿಯ ಕೇಸುಗಳನ್ನು ವಿಚಾರಿಸಿ ನ್ಯಾಯ ತೀರ್ಪನ್ನು ಕೊಡುವರೆ, ಮುಖ್ಯ ನ್ಯಾಯಾಧೀಶರಾದ ಸರ್ ಜಾನ್ ಬೋಮೆಂಟ್, ಜಸ್ಟಿಸ್ ವಾಡಿಯಾ, ಸೋಮ್ಜೀನ್, ಮಾಕ್ಲೇವ್, ಮಾತ್ರಸೇನ ಇವರಿಂದ ಕೂಡಿರುವ ವಿಶೇಷ ಸಭೆಯೊಂದನ್ನು ನೇಮಿಸುವರು. ಇದರ ಕಾರ್ಯಕ್ರಮವು 10ನೇ ತಾರೀಕಿನಿಂದ ನಡೆಯಲಿದೆ.

ಈ ಸಭೆಯನ್ನು ನೇಮಿಸುವರೆ ಮುಖ್ಯ ಕಾರಣವೆಂದರೆ ಮುಂಬಯಿ ಮ್ಯಾಜಿಸ್ಟ್ರೇಟರೊಬ್ಬರು, ನಿರ್ಬಂಧಿಯ ಕೇಸಿನಲ್ಲಿ ಸರಕಾರದ ಪ್ರಕಟಣೆಯು "Ultra vires" ಎಂದು, ಅಹಮದಾಬಾದಿನ ಸೆಷನ್ಸ್ ಜಡ್ಜರು "Intra vires" ಎಂದು ಹೇಳಿರುವುದಾಗಿರುತ್ತದೆ.

೦೦೦ ೦೦೦ ೦೦೦

ಅಖಿಲ ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀಮಾನ್ ಶ್ರೀಕಂಠಯ್ಯನವರು ಮುಂಬಯಿಗೆ ಚಿತ್ತೈಸಿದ್ದು, ಕರ್ನಾಟಕ ಸಂಘ ದೊಡನೆ ಅವರಿಂದ ಏರ್ಪಡಿಸಿದ್ದ ಸಭೆಗಳಲ್ಲಿ ಭಾಷಣ ಮಾಡುತ್ತಾ, ಮುಂಬಯಿ ಕನ್ನಡಿಗರೂ ಸಾಹಿತ್ಯ ಪರಿಷತ್ತಿಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸಿಕೊಡಬೇಕೆಂದೂ, ಮುಂಬಯಿ ಕನ್ನಡಿಗರು ಹೆಚ್ಚಿನ ಉತ್ಸಾಹವನ್ನು ತೆಗೆದುಕೊಂಡು ಕರ್ನಾಟಕ ಏಕೀಕರಣಕ್ಕೆ ಪ್ರಯತ್ನಿಸಬೇಕೆಂದೂ, ಹೇಳಿದರು. ಹಲವು ರಾತ್ರಿ ಶಾಲೆಗಳನ್ನು ಸಂದರ್ಶಿಸಿ, ವಿದ್ಯಾರ್ಥಿಗಳಲ್ಲಿರುವ ವಿದ್ಯಾಕಾಂಕ್ಷೆಯನ್ನೂ, ಉಪಾಧ್ಯಾಯರಲ್ಲಿರುವ ಉತ್ಸಾಹವನ್ನೂ ಕಂಡು ಸಂತೋಷಪಟ್ಟರು.

೦೦ ೦೦೦ ೦೦೦

ಮುಂಬಯಿ ಕಾರ್ಪೊರೇಷನ ಸಂಸ್ಥೆ ಕಠಿಣ ಸ್ಥಿತಿಯಲ್ಲಿದೆ. ಬಿ ಸಿ ಸಿ ಸಿ. ಯವರು ಸಹಾಯ ಮಾಡ ಲೊಪ್ಪುವುದಿಲ್ಲ. ಶ್ರೀ ಭೋಲಾ ಭಾಯಿಯವರು ಇದಕ್ಕೆ ವಿರುದ್ಧ ಪ್ರಕಟಣೆಯನ್ನು ಕೊಟ್ಟಿರುವರು. ವಿಲ್ಲಾಪಾರ್ಟಿಗಳೂ ಕಾಂಗ್ರೆಸಿನ ಮಧ್ಯಸ್ಥಿಕೆಯನ್ನು ಸರಿ ಕರಿಸುತ್ತಿದ್ದಾರೆ

೦೦೦ ೦೦೦ ೦೦೦

ರಾಷ್ಟ್ರೀಯ ವಾರ—ದಿನ ಚರ್ಚೆಯು ದಿನ ಫ್ರೀವರ್ಡ್ ಬ್ಲಾಕಿನ ಪರವಾಗಿ ಜರಗಿದ ಸಭೆಯಲ್ಲಿ ಲಾಫಿಂಗ್ ಮಾರ್ಚ್ ನಡೆಸಿ, ಕಾರ್ಯಕರ್ತ ಯುವರಾದ ಶ್ರೀ ಎಚ್. ವಿ. ಕಾಮತರವರನ್ನು, ಅಂದಿನ ಅಧ್ಯಕ್ಷತೆಯನ್ನು ವಹಿಸಿದ್ದ, ಸೇನಾಪತಿ ಬಾಪಟರವರನ್ನಲ್ಲದೆ ಇನ್ನಿತರ 10 ಮಂದಿಯನ್ನು ಕೈದುಮಾಡಿರುವರು. ಶ್ರೀ. ಬಾಪಟರವರನ್ನಲ್ಲದೆ ಇತರರನ್ನು ಜಾಮೀನಿನ ಮೇಲೆ ಬಿಟ್ಟಿರುವರು. ರಾಂಚಿಯಲ್ಲಿ ಜರಗುತ್ತಿದ್ದ ಸಭೆಗೆ ಬಂದು ಗಲ್ಲೆಬ್ಬಿಸಿ, ನಿರಪರಾಧಿ ಜನರ ಮೇಲೆ ಲಾಠಿಚಾರ್ಜ್ ಮಾಡಿದ, ಪೋಲೀಸರ ಈ ವರ್ತನೆಯು ಖಂಡನೀಯವು. ಬಿ ಬಿ ಸಿ ಸಿ. ಯ ಪರವಾಗಿ ಜರಗಿದ್ದ ಸಭೆಯಲ್ಲಿ ಮಾಜಿ ಮುಖ್ಯ ಮಂತ್ರಿಯವರಾದ ಶ್ರೀ. ಬಿ. ಜಿ. ಖೇರರವರು ಕೂಡ ಪೋಲೀಸರ ಈ ವರ್ತನೆಯನ್ನು ಖಂಡಿಸಿರುವರು. ಕಾಂಗ್ರೆಸ್ ಸರಕಾರವು 2½ ವರ್ಷ ರಾಜ್ಯಭಾರ ಮಾಡಿದರೂ, ಪೋಲೀಸರಿಗೆ ಬುದ್ಧಿ ಕಲಿಸ ಬಲ್ಲದ ಸಮಯವು ಇವರಿಗೆ ಸಿಗಲಿಲ್ಲವೆಂದು ಕಂಡು ಬರುತ್ತದೆ!

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲರ್" ಹೆಸರನ್ನೂ ಗಮನಿಸಿರಿ

"ಗೊನೊಕಿಲರ್" (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅತ್ಯುತ್ತಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನವ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋರೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೯೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0 8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೊ ಹೋಮ್ಯೋಪತಿಕ್ ಡಿಸ್‌ಪೆನ್ಸರಿ

Sole Manufacturer DR. D. N. JASANI, Vitalbhai Patel Road, BOMBAY 4

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ.

Kanara Printing Works,
Hampankatte, **MANGALORE**

ಮೂಲವ್ಯಾಧಿ

ಸಾಧುಪುರುಷನ ಸಿದ್ಧಿಯಾಗಿರುವ ವಿಚಿತ್ರ ಹಾಗೂ ಅಪೂರ್ವ ಔಷಧಿ.

ಅರ್ಶಮಾರಾ (ರಜಿಸ್ಟರ್ಡ್)

ರಕ್ತ ಸುರಿಯುವ ಅಥವಾ ಒಣಗಿರುವ ಹಳೆಯ ಅಥವಾ ಹೊಸ ಒಳಗಿನ ಅಥವಾ ಹೊರಗಿನ ಯಾವುದೇ ಮೂಲವ್ಯಾಧಿಯು 'ಅರ್ಶಮಾರಾ'ವನ್ನು ಒಂದೇ ಸಲ ಹಚ್ಚಿದ ಕೂಡಲೆ ಅದ್ಭುತ ರೀತಿ ಗುಣ ಹೊಂದುವದು. ನೋವು ಉರಿತ, ತುರಿಕೆ, ಶೀತ, ರಕ್ತಸ್ರಾವ ಇವು ಕೂಡಲೆ ನಿಲ್ಲುವವು. ಕೇವಲ 3 ದಿನ ಹಚ್ಚಿದರೆ ಯಾವ ತರದ ಮೂಲವ್ಯಾಧಿಯೂ ಇಲ್ಲದಂತಾಗುವದು. ಇದರ ಉಪಯೋಗದಿಂದ ಸಾವಿರಾರು ರೋಗಿಗಳು ಗುಣ ಹೊಂದಿ ಇದರ ಪ್ರಶಂಸೆಯನ್ನು ಮಾಡುತ್ತಾರೆ. ಗುಣವಾಗದಿದ್ದರೆ ಹಣ ವಾಪಸು. ಬೆಲೆ ರೂ 2-0-0

ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

THE **MOOLKY BANK, LTD.,**
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ. ಭಂಗಾರದ ಸರಕಿನ ಈಡಿನ ಮೇಲೆ ಸೇಕಡ 7 ವರೆಗೆ ದರದಲ್ಲಿ ಸಾಲ ಕೊಡಲಾಗುವುದು ಸಿರಿಯು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುವು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R Punja, ಯಂ. ಆರ್. ಪೂಂಜ,
President & Manager, ಪ್ರಸಿಡೆಂಟ್ ಮತ್ತು ಮೆನೇಜರ್

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಗಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವದು ಇದು ಮಧುರವಾಗಿದೆ ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿ ನಿಮ್ಮ ಕೈಗೆ ಸೇರುವುವು ಸೀಸೆ1ಕ್ಕೆ 12 ಆಣೆ, ಟಪಾಲ 4 ಆಣೆ.

ಎನ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟ್ರು:- ನವಭಾರತ ಬುಕ್ ಡಿಪ್ಪೋ, ಉಡುಪಿ

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ. **ಶೋಧನ ಗುಣ:—** ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು. **ರಸಾಯನ ಗುಣ:—** ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು. **ಸುಖಸೇವನ:** ಸುಖಸೇವನದಿಂದ ಮಧುರವೂ ಸೋಹರವಾದ ಈ ರಸಾಯನವು ಬಾಣಂತಿಯ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ.2-0-0.

ಎನ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು ಶ್ರೀ. ಹಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

DAIMONDS! DAIMONDS!

K. R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್ಮ ಸ್ವ ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ **ಕ್ರೌನ ರಬ್ಬರ ಸ್ಟಾಂಪ್ ಕಂಪನಿ** 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್ಸಿಲ್ ಪ್ಲೇಟುಗಳೂ ಜವಾನರ ಬಿಲ್ಲೆ, ಮೊನೋಗ್ರಾಮ್ ಸೀಲು ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವುವು.

Crown Rubber Stamp Co, 18 Balmat Road, MANGALORE.
Approved firm by the Govt. of Mysore. Certified by the Arts of the Govt. of India in Ceylon

ಹೊಸ ಪುಸ್ತಕ ಸೆಲ್ಫ್ ಇಂಗ್ಲಿಷ್ ಸ್ಟಡಿ ಈಗಲೇ ಪ್ರಿಂಟಾಗಿದೆ!!

SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ 1-8-0

ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವದನ್ನೂ, ಮಾತಾಡುವದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ನಡೆಸುವದನ್ನೂ 3 ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕ ಇದುವರೆಗೆ ಪ್ರಕಟವಾಗಿರಲಿಲ್ಲ. ದೊಡ್ಡ ಪುಸ್ತಕ, ಸ್ವಲ್ಪ ಕ್ರಯ. ಶೀಘ್ರವಾಗಿ ಬರೆಯಿರಿ. ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವನು ಇಂಗ್ಲಿಷ್ ಕಲಿಯುವದರಲ್ಲಿ ವಿದ್ವಾಂಸನಾಗುವನು. ಮನೆಯಲ್ಲೇ ಈ ಪುಸ್ತಕ ಓದಿ, ಇಂಗ್ಲೀಷ್ ಓದುವದು ಎಲ್ಲಾ ಸುಲಭವಾಗಿ ಬರುತ್ತದೆ. ಪುಸ್ತಕದ ಕ್ರಯ ರೂ. 1—8—0.

Western Swiss Watch Co.
Book-Sellers, Post Box No 68
G. P. O. MADRAS

ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ. 68, ಮದರಾಸ್.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ವಿಪ್ಪೋವಿನ ರಿಜಿಸ್ಟರ್ಡ ಮುಲಾಮು —

ಇತ್ತೀಚೆಗೆ ಎರಿಗಿನ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಿನಂತೆ ವ್ಯಾಪಿಸಿ ಮಾಡಲಾಗಿದೆ.

ಅಮೃತಾಂಜನ ಡಿಪ್ಪೋವಿನ ತ್ರಿವರ್ಣದ "ರೈಸಿಂಗ್ ಸನ್"

ಈ ಮೇಲಿನ ಪ್ರಾಮುಖ್ಯ ವೃತ್ತಾಂತವ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪ್ಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತೆ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಿದೂ ಕೊಳ್ಳಲು ಬೇಕಷ್ಟು ಸಾಮಾನುಗಳಿವೆ.

tered No. M. 3618 25-4-1940

ನವಯುಗ

NAVAYUGA

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಚೇರಿ:— ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

ಭದ್ರತೆಯಿಂದಲೂ, ಖಾತ್ರಿಯುಳ್ಳ ನಫೆ ಹಂಚಿಕೆಯಿಂದಲೂ, ಜಾಗ್ರತೆಯಾಗಿ ಹಕ್ಕುಗಳನ್ನು ಕೊಡುವುದರಿಂದಲೂ ಮತ್ತು ಉದಾರವಾದ ಜೀವವಿಮೆಯ ನಿಯಮಗಳಿಂದಲೂ ಈ ಸಂಸ್ಥೆಯು ಪ್ರಖ್ಯಾತಿಪಡೆದಿರುತ್ತದೆ.

ಪ್ರೊಫೆಸರ್ ಕೆ. ಬಿ. ಮಾಧವ, ಎಂ.ಎ., ಎಫ್.ಆರ್.ಎ.ಎಸ್., ಎ.ಐ.ಎ (ಲಂಡನ್)
ಪ್ರೊಫೆಸರ್, ಮಹಾರಾಜ ಕಾಲೇಜು, ಮೈಸೂರು ಅಕ್ಚ್ಯುಯರಿಯವರ
ಅಭಿಪ್ರಾಯ ಸಾರಾಂಶ.

"ಕಳೆದ ೧೦ ವರ್ಷಗಳಿಂದ ನಿಮ್ಮ ಸಂಘವು ಬಹಳವಾಗಿ ಮುಂದುವರಿಯುತ್ತಿರುವುದಲ್ಲದೆ ಕಳೆದ ಮೂರು ವರ್ಷಗಳಿಂದ ಆದಾಯದ ಮೊತ್ತ, ಬಡ್ಡಿಯ ಫಲ, ಲದ್ದಾದ ಪಾಲಿಸಿಗಳ ಸಂಖ್ಯೆ ಇವೇ ಮೊದಲಾದ ಜೀವವಿಮೆಯ ನಿಯಮಗಳನ್ನು ಉತ್ತಮಗೊಳಿಸಲು ಸಹಕಾರಿಯಾಗುವ ವಿಷಯಗಳಲ್ಲಿ ಹೊಂದಿರುವ ಅಭಿವೃದ್ಧಿಯು ತೃಪ್ತಿಕರವಾಗಿದೆ . . . ಆಶ್ಚರ್ಯ ಸಹಿತವಾದ ಅಭಿವೃದ್ಧಿಗೆ ಆಧಾರವಾಗಿರುವ ಏಷ್ಯಾಟಿಕ್ಕಿನ ಅತ್ಯುತ್ತಮವಾದ ಕಾರ್ಯಕಲಾಪಗಳಿಗಾಗಿ . . . ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸಲು ಉಂಟಾಗುವ ಸಂತೋಷವನ್ನು ಕಾದುಕೊಳ್ಳುವೆನು."

ಕೊಟ್ಟಿರುವ ವಿಮಾ ಹಕ್ಕಿನ ಹಣಗಳು: ೫,೦೦,೦೦೦—೦—೦

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

H. Venkataramiah, *Divisional Superintendent* } or { **R. Purniah** *Ag. General Manager.*

The Asiatic Govt. Security Life Assu. Co. Ltd.,
Asiatic Building, BANGALORE CITY

ಝಾಂಡು ಮಲೇರಿಯಾ ಮಿಕ್ಸ್ಚರ್

ಮಲೇರಿಯಾ, ವಿಷಮ್ವರಗಳಿಂದುಂಟಾಗುವ ಎಲ್ಲಾ ತರದ
ಕಠಿಣ ಜ್ವರಗಳಿಗೆ
ಖಾತ್ರಿಯಾದ ಸಿದ್ಧೌಷಧ
ಕ್ರಯ: ಆಣೆ 0—14—0 ಮಾತ್ರ.

ಸ್ಥಳೀಯ ಏಜಂಟರು:— ಪಿ. ಎ. ಪೈ ಬ್ರದರ್ಸ್.
ಕಾರ್ಕಳದ ಏಜಂಟರು:— ವಿ. ವಿ. ಶೆಣೈ, ಕೆಮಿಸ್ಟ್ಸ್.

ಮಂಗಳೂರಿಗೂ ದಕ್ಷಿಣ ಕನ್ನಡ ಜಿಲ್ಲೆಯ ಇತರ ಮುಖ್ಯ ಸ್ಥಳಗಳಿಗೂ ಏಜಂಟರು ಬೇಕಾಗಿದ್ದಾರೆ.

ಶರ್ತಗಳಿಗೂ ಏಜನ್ಸಿಗಳಿಗೂ ಮುಖ್ಯ ಏಜಂಟರಿಗೆ ಬರೆಯಿರಿ:—

ದಾಮೋದರ್ ಎಂಡ್ ಕೊ,
ಮುಖ್ಯ ಏಜಂಟರು,
78 ಚೈನಾ ಬಜಾರ್ ರೋಡ್, ಜಿ. ಟಿ. ಮದರಾಸು.

ZANDU

DAMODER & CO.,
78 China Bazaar Road, **G. T. MADRAS**

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು.
ಮೈಸೂರು
ಸೇಂಡಲ್ ಸೋಪು
ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಶೀಘ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು.

ಕ್ರಯ:— 40 ಮಾತ್ರೆಗಳ ಡಬ್ಬಿ 1ರ ರೂ. 1—0—0.

ಮದನಮಂಜರಿ ಫಾರ್ಮಸಿ, 184 ಚೈನಾಬಜಾರ್ ಮದ್ರಾಸ್.

ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

ಸರ್ವಾಂಗ ಭದ್ರತೆಯ ಹಾಗೂ ಅಭಿವೃದ್ಧಿಯ ಮೇಲ್ಮೆಯುಳ್ಳ ಜೀವ ವಿಮಾ ಸಂಘವಾವುದೆಂದು ಸರ್ವದಾ ಚಿಂತಿಸುತ್ತಿರುವ ಜೀವವಿಮಾದಾರರಿಗೂ ಪ್ರಾತಿನಿಧ್ಯ ಪಡೆಯಲಪೇಕ್ಷಿಸುವ ಗೃಹಸ್ಥ ಗೃಹಿಣಿಯರಿಗೂ ಶೀಘ್ರದಲ್ಲೇ ಇಷ್ಟಾರ್ಥ ಸಿದ್ಧಿಯಾಗಬೇಕೆಂದಿದ್ದರೆ ಕೂಡಲೇ ಸವ್ಯೋತನೆ ವಿಚಾರಿಸಿರಿ:—

ಶಾಖಾ ಕಾರ್ಯದರ್ಶಿ,
ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ
ಲೈಫ್ ಇನ್ಸೂರೆನ್ಸ್ ಕೊ. ಲಿಮಿಟೆಡ್, ಮದ್ರಾಸು.
ಮಂಗಳೂರು ಬ್ರಾಂಚ್.

THE
PANGAL NAYAK BANK LTD.
ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.
(೧೯೨೦ನೇ ಇಸವಿ ... ಸ್ಥಾಪಿಸಲ್ಪಟ್ಟದ್ದು)

Season Deposits for a period of 3, 4, 5 or 6 months are accepted at all the offices of the Bank and interest is allowed at 4% per annum till maturity or the 30th June 1940, as the case may be, whichever is earlier.

For further information please communicate with or call at any of our offices.

THE VIJAYA BANK LTD.,
ಭದ್ರತೆ ಮತ್ತು ಅನುಕೂಲತೆ.
ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ— ಸರಿ, ಬನ್ನಿ ನಮ್ಮಲ್ಲಿಗೆ.
ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು
ಬಡಬಗ್ಗರಿಂದ ಅನಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.
ದಿ ವಿಜಯಾ ಬೇಂಕ್, ಲಿಮಿಟೆಡ್.
ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಬಾಲಕರ ಆರೋಗ್ಯಕ್ಕೆ ... ಪ್ರಭೂಸ್—ಬಾಲಾಮೃತ
ಒಂದೆರಡು ವಾರಗಳಲ್ಲಿ ಅದ್ಭುತ ಗುಣ.
— ಕಮನೀಯವಾದ ಕೇಶಕಲಾಪ ಹಾಗೂ ... ಗಳು ಇವುಗಳನ್ನು ಕೊಡಲು —
ಪುಷ್ಪಗಂಧಾಮೋದಿತ **ಆಮಲಕೀ ತೈಲ** ಬಹು ಗುಣಯುಕ್ತ
ವಾಯುಮಾತ್ರೆಗಳೆಂಬ — **ಧಾನ್ವಂತರಿ ಗುಟಿಕಾ** — ಇವುಗಳನ್ನು
ಸೇವಿಸಿ ವಾಯುವೆಂಬ ರೋಗವನ್ನು ಗುಣಪಡಿಸಿಕೊಳ್ಳಿರಿ
ಮಾತ್ರೆ—12ಕ್ಕೆ 0-1 0, 25ಕ್ಕೆ 0 7 0, 50ಕ್ಕೆ 0 13 0, 100ಕ್ಕೆ 1 5-0
5 ಆಣೆಯ ಸ್ಟಾಂಪು ಕಳುಹಿಸಿದರೆ 12 ಮಾತ್ರೆಗಳನ್ನು ಕಳುಹಿಸುತ್ತೇವೆ
ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಕುಂಜಾಲು. ಬ್ರಹ್ಮಾವರ, ದ. ಕ
ನಮ್ಮ ಸ್ಟಾಕಿಸ್ಟರು:—
ನವಭಾರತ ಬುಕ್ ಡಿಪೋ, ಉಡುಪಿ, ದ. ಕನ್ನಡ, ಜನರಲ್ ... , ಉಡುಪಿ ...
ದ. ಭಾರತ, ... ಬೆಂಗಳೂರು ..., ...
ಮುಂಬೈ ನಂ. 12, ... ಕೋಟ, ದ. ಕನ್ನಡ

ಸೀರೆಗಳು
ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ
ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ

Transport & Car Owners

ARE SPECIALLY INVITED TO VISIT
OUR SHOW ROOM *for economical transport maintenance.*
CANARA AUTOMOBILES - - - - - MANGALORE


KOPRAN
Tooth Paste
ಕುಂದಾಪೇರದ ಜನಪ್ರೀತ ದಂತಮಂಜನ
...
KOPRAN CHEMICAL CO., BOMBAY

ಇನ್ಕಮ್ ಟೇಕ್ಸ್ ಮತ್ತು ಜೋಗ್ರೆಸ್ಸಿ ವ ಇತರ ವಿಕ್ರಯ ಟೇಕ್ಸುಗಳು

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1 4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸದಾದ ವಿಕ್ರಯ ಟೇಕ್ಸಿನ ... ವ್ಯಾಪಾರಸ್ಥರು ತಿಳಿದಿರಬೇಕಾದ ... ಅನೇಕ ಇವೆ. ... ಅದರಿಂದ ತಯಾರಿಸಿದ ... ಎಲ್ಲಾ ತರದ ... ಟೇಕ್ಸುಗಳನ್ನು ಕೊಡಬೇಕಾಗುವವರು ... 15 ದಿವಸಗಳ ... ವಿಳಾಸಕ್ಕೆ ... ಪತ್ರವ್ಯವಹಾರ ನಡಿಸಿರಿ.

ಎಸ್. ಎನ್. ಪುರೋಹಿತ,
ಇನ್ಕಮ್ ಟೇಕ್ಸ್ ಪ್ರೇಕ್ಟೀಶನರ್,
ಕುಂದಾಪುರ ಪೋಸ್ಟ್.

ಕನ್ನಡ ನುಡಿವೆಣ್ಣಗೊಂದು ಕನ್ನಡಗಿತ್ತಿಯ ಕಾಣಿಕೆ
... ಜೀವನದ ದುರಂತ ಚಿತ್ರವನ್ನೂ, ಸ್ತ್ರೀ-ಪುರುಷ ಹೃದಯಗಳ ಆಳವನ್ನೂ ಹೃದಯಂಗಮವಾಗಿ ಚಿತ್ರಿಸುವ ರಮ್ಯ ಕಥಾನಕ
ವತ್ಸಲಾ
ಸಾಮಾಜಿಕ ಕಾದಂಬರಿ
ಬೆಲೆ: ೦-೭-೩.
0—8 0 ಸ್ಟಾಂಪು ಕಳುಹಿಸಿದರೆ 1 ಪ್ರತಿಯನ್ನು ಕಳಿಸಬಹುದು.
ಬರಹಗಾರ್ತಿಯರು:—
ಶ್ರೀಮತಿ ಮಟ್ಪಾಡಿ ಕಮಲಾಕ್ಷಿ
ಈ ಪುಸ್ತಕದ ಕುರಿತು ಪ್ರಖ್ಯಾತ ವಿಮರ್ಶಕರೂ ... ರಾವ್ ಬಹದ್ದೂರ್ ಆರ್. ನರಸಿಂಹಾಚಾರ್ಯ M.A., M.R.A.S. ಇವರು ಬೆಂಗಳೂರಿನಿಂದ ಹೀಗೆ ಅಭಿಪ್ರಾಯ ಪಡುತ್ತಾರೆ 'ಗ್ರಂಥದ ಶೈಲಿ ಗಂಭೀರವಾಗಿಯೂ ಹೃದಯಂಗಮವಾಗಿಯೂ ಇದೆ, ಪ್ರತಿಪಾದಿತವಾದ ವಿಷಯವು ನೀತಿಬೋಧಕವಾಗಿಯೂ ಧರ್ಮಾವಿರೋಧವಾಗಿಯೂ ಇದೆ, ಸ್ತ್ರೀಯರಿಗೆ ಬೋಧಪ್ರದವಾದ ಗ್ರಂಥ ....'
ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

"ನಾಮರ್ದಾಯಿ"
ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ನರಗಳ ಬಲಹೀನತೆ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಲೆ ಸೇವನೆಯಿಂದಲೇ ನಿಲ್ಲಿಸುತ್ತದೆ
"ಸೆವಿಂಗ್ ಟೋನಿಕ್ ಪಿಲ್ಸ್"
ಇದರ ಸೇವನೆಯಿಂದ ನವಜೀವನ ಹುಟ್ಟಾಗುತ್ತದೆ.
ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಕ
ಕಿಮ್ಮತು ರೂ. 3 0-0 ಡಬ್ಬಿ 0-8-0
ಸೋರತ್ ಫಾರ್ಮಸಿ,
ನಲ್ ಬಜಾರ್, ಡಂಕನ್ ರೋಡ್,
ಮುಂಬಯಿ 4
Sorath Pharmacy,
Null Bazar, Duncan Road,
BOMBAY 4.

ಭಾರತೀ ಗ್ರಂಥಮಾಲೆಯ ಪುಸ್ತಕಗಳು.
ಬೆಳಕು (ಚಿಕ್ಕ ಕತೆಗಳ ಸಂಗ್ರಹ.)
ತಿನಿಸು (ಕತೆ, ಕವನ, ಪ್ರಬಂಧಗಳ ಸಂಗ್ರಹ)
ಪ್ರತೀಕಾರ (ನವಪೌರಾಣಿಕ ನಾಟಕ)
ಲೋಪಾಮುದ್ರೆ (ಪೌರಾಣಿಕ ಕತೆ)
ಚಿಗುರು (10 ಚಿಕ್ಕ ಕತೆಗಳ ಸಂಗ್ರಹ)
ಪಂಚಾರತಿ (5 ಏಕಾಂಕ ನಾಟಕಗಳ ಸಂಗ್ರಹ)
ಪ್ರತಿಯೊಂದರ ಬೆಲೆ ನಾಲ್ಕಾಣೆ ಮಾತ್ರ
(ಅಂಚೆವೆಚ್ಚ 0 0 6 ಪ್ರತ್ಯೇಕ)
ರೂ 1-4 0 ಕಳಿಸಿದ್ದಲ್ಲಿ ಆರು ಪುಸ್ತಕಗಳನ್ನು ಕಳಿಸಲಾಗುವುದು. (ಅಂಚೆವೆಚ್ಚ ಪುಕ್ಕಟೆ)
ವ್ಯಾಪಾರಿಗಳಿಗೆ ಧಾರಾಳ ಕಮಿಶನ್.
ಪ್ರತಿಗಳಿಗೆ ಬರೆಯಿರಿ:—
ಮೆ.ನೇಜರ್,
ನವಭಾರತ ಪುಸ್ತಕ ಭಂಡಾರ
ಉಡುಪಿ

ESTD. 1921 ಸ್ಥಾಪನೆ

FOUNDER:
SRI. A. B. SHETTY, M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

NAVAYUGA
ನವಯುಗ

1 ವರ್ಷಕ್ಕೆ - ರೂ. 3—4—0
6 ತಿಂಗಳಿಗೆ - ರೂ. 1-12—0

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹ ಸಂಪಾದಕ:
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೩೩

ಉಡುಪಿ, ಗುರುವಾರ, ೨೫—೪—೧೯೪೦.
UDIPI, THURSDAY, 25-4-1940.

VOL. 19
No. 33

ಕಾಂಗ್ರೆಸ್ ಹೌಸ್ ಫಂಡು

ಮದ್ರಾಸಿನ ಕಾಂಗ್ರೆಸ್ ಭವನವು ಈ ವರ್ಷದ ಅಖಿಲ ಭಾರತ ಖಾದಿ ಮತ್ತು ಕೈಗಾರಿಕೆ ಪ್ರದರ್ಶನದ ಸಂದರ್ಭದಲ್ಲಿ ಸುಟ್ಟು ಹೋಗಿರುವುದಷ್ಟೆ. ಅದನ್ನು ಪುನಃ ಕಟ್ಟಲು ಸಾರ್ವಜನಿಕವಾಗಿ ಹಣ ಶೇಖರಿಸಲ್ಪಟ್ಟು ಅದೀಗ ರೂಪಾಯಿ 61,166-14-10ಕ್ಕೆ ಮುಟ್ಟಿರುವುದು.

ನೋರ್ವೆಯಲ್ಲಿ ಬ್ರಿಟಿಷ್ ಮತ್ತು ಫ್ರೆಂಚ್ ಸೇನೆ

ಒಬ್ಬನೇ ಒಬ್ಬ ಸೈನಿಕನಿಗಾದರೂ ಏನೂ ಹಾನಿಯಾಗದೆ ಹೆಚ್ಚಿನ ಬ್ರಿಟಿಷ್ ಮತ್ತು ಫ್ರೆಂಚ್ ಸೇನೆಯು ನೋರ್ವೆಗೆ ಮುಟ್ಟಿರುವುದು. ತೀವ್ರವಾಗಿ ಸಂಘಟಿತವಾಗುತ್ತಿರುವ ನೋರ್ವೇಯನ್ ಸೇನೆಯೊಂದಿಗೆ ಬ್ರಿಟಿಷ್ ಮತ್ತು ಫ್ರೆಂಚ್ ಸೇನೆಯು ಸಂಪರ್ಕವನ್ನು ಸ್ಥಾಪಿಸುವುದರಲ್ಲಿ ನಿರತವಾಗಿರುವುದು. ಉತ್ತರ ನೋರ್ವೆಯಲ್ಲಿ ಬ್ರಿಟಿಷ್ ಸೇನೆಗೂ ಜರ್ಮನರಿಗೂ ಯುದ್ಧವಾಗಿ ಜರ್ಮನ್ ಸೇನೆಯು ಸೋಲಿಸಲ್ಪಟ್ಟಿರುವುದೆಂದು ತಿಳಿದು ಬರುತ್ತದೆ. ದಕ್ಷಿಣದಲ್ಲಿ ಜರ್ಮನರು ತಾವು ವಶಪಡಿಸಿಕೊಂಡ ಸ್ಥಳಗಳನ್ನು ಭದ್ರಗೊಳಿಸಿ ವಿಲ್ವರಮ್ ಎಂಬ ಪ್ರಾಮುಖ್ಯ ಸ್ಥಳವನ್ನು ವಶಪಡಿಸಿಕೊಳ್ಳಲು ದೊಡ್ಡ ಹೋರಾಟಕ್ಕಾಗಿ ಸಿದ್ಧತೆ ಮಾಡುತ್ತಿರುವರು. ಹಲವು ಕಡೆಗಳಲ್ಲಿ ಜರ್ಮನರು ಸಿಕ್ಕಿಬಿದ್ದಿರುವರು. ನೋರ್ವೇಜಿಯನರು ಗೊರಿಲ್ಲ ಮತ್ತು ಇತರ ಯುದ್ಧ ವಿಧಾನಗಳಿಂದ ಜರ್ಮನರಿಗೆ ಪೀಡೆ ಕೊಡುತ್ತಿರುವರು.

ಪಶ್ಚಿಮ ರಣರಂಗದ ಪರಿಸ್ಥಿತಿ

ನೋರ್ವೆಯಲ್ಲಿ ಯುದ್ಧ ಪ್ರಾರಂಭವಾದಂದಿನಿಂದ ಜನತೆಯ ಲಕ್ಷ್ಯವು ಪಶ್ಚಿಮ ರಣರಂಗದಿಂದ ಸ್ಕಾಂಡಿನೇವಿಯಕ್ಕೆ ಹರಿದಿರುವುದು. ಪಶ್ಚಿಮ ರಣರಂಗದಲ್ಲಿಯೂ ಚಿಕ್ಕಪುಟ್ಟ ಹೋರಾಟಗಳು ನಡೆಯುತ್ತಲೇ ಇವೆ. ಫ್ರೆಂಚ್ ಮತ್ತು ಬ್ರಿಟಿಷ್ ವಿಮಾನಗಳಿಗೂ ಜರ್ಮನ್ ವಿಮಾನಗಳಿಗೂ ತೀವ್ರ ಹೋರಾಟ ನಡೆದು ಹಲವು ಜರ್ಮನ್ ಯುದ್ಧ ವಿಮಾನಗಳು ನಾಶಮಾಡಲ್ಪಟ್ಟಿವೆಯೆಂದು ತಿಳಿದುಬರುತ್ತದೆ. ಬೆಲ್ಜಿಯಮ್ ಮತ್ತು ಹೊಲ್ಲೆಂಡುಗಳ ಮೇಲೆ ಹಾರಾಡಿದ ಜರ್ಮನ್ ಯುದ್ಧವಿಮಾನವೊಂದರ ಮೇಲೆ ವಿಮಾನಭೇದಕ ಗುಂಡುಗಳೆಸೆಯಲ್ಪಟ್ಟು ಅದು ಕೆಳಗಿಳಿಯಬೇಕಾಗಿ ಬಂದಿರುವುದು. ಇಂಗ್ಲೆಂಡಿನ ಪೂರ್ವ ಕರಾವಳಿಯ ಮೇಲೇರಿ ಹೋದ ವಿಮಾನಗಳು ಹಿಂದಕ್ಕೋಡಿಸಲ್ಪಟ್ಟವು.

ಜರ್ಮನ್ ಇಟಲಿಯನ್ ಮತ್ತು ಸೋವಿಯಟ್ ಒಪ್ಪಂದ?

ಬಾಲ್ಕನ್ ರಾಷ್ಟ್ರಗಳ ಸಂಬಂಧವಾಗಿ

ಸಮಾಚಾರ ಸಂಗ್ರಹ

ಜರ್ಮನಿ, ಇಟಲಿ ಮತ್ತು ರಶ್ಯಗಳೊಳಗೆ ಗುಪ್ತ ಒಡಂಬಡಿಕೆಯಾಗಿರುವುದೆಂದು ಸುದ್ದಿಯುಂಟಾಗಿದೆ. ಹಿಟ್ಲರರ ಜನ್ಮದಿನೋತ್ಸವದ ಸಂದರ್ಭದಲ್ಲಿ ಮುಸಲೋನಿಯವರು ಅವರಿಗೆ ಕಳುಹಿಸಿದ ಸಂದೇಶವು ಇಟಲಿ ಜರ್ಮನಿಗಳೊಳಗಣ ಮೈತ್ರಿಯು ಸ್ಥಿರವಾಗಿದ್ದು ಮುಸಲೋನಿಯವರು ಜರ್ಮನಿಯ ವಿಜಯ ಮತ್ತು ಅಭ್ಯುದಯವನ್ನು ಆಂತರಿಕವಾಗಿ ಹಾರೈಸುವರೆಂಬುದನ್ನು ಸ್ಪಷ್ಟಗೊಳಿಸುತ್ತದೆ. ಭೂಮಧ್ಯ ಸಾಗರ ಮತ್ತು ಬಾಲ್ಕನ್ ರಾಷ್ಟ್ರಗಳ ಮೇಲೆ ಇಟಲಿಯು ಅಧಿಕಾರ ಸ್ಥಾಪಿಸುವ ಹಂಚಿಕೆ ನಡೆಸುತ್ತಿದೆ. ರಶ್ಯವು ಬೇಗನೆ ಯುದ್ಧಕ್ಕೆ ಕೈಹಾಕುವ ಸಂಭವ ತೋರುವುದಿಲ್ಲ. ಅದು ರುಮೇನಿಯದೊಡನೆ ವ್ಯಾಪಾರ ಸಂಬಂಧವನ್ನು ಬೆಳೆಸಿದೆ. ಇಂಗ್ಲೆಂಡಿನೊಡನೆ ವ್ಯಾಪಾರಸಂಬಂಧದ ಒಡಂಬಡಿಕೆಮಾಡಿಕೊಳ್ಳುವ ಸಂಭವ ತೋರುತ್ತದೆ

ಪಾರ್ಲಿಮೆಂಟಿನಲ್ಲಿ ಹಿಂದೀ ಪ್ರಶ್ನೆ

ಇದೇ ಕಳೆದ ತಾ ೧೮ರಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಹಿಂದೀ ಪ್ರಶ್ನೆಯ ಕುರಿತು ಚರ್ಚೆ ನಡೆದು, ಪ್ರಾಂತಗಳ ಆಡಳಿತ ನಡಿಸುವ ಗವರ್ನರರ ವಿಶೇಷಾಧಿಕಾರವನ್ನು ಒಂದು ವರ್ಷದ ವರೆಗೆ ಬೆಳೆಸಲಾಯಿತು. ಮತ್ತು ಆ ಸಂದರ್ಭದಲ್ಲಿ ಇಂಡಿಯಾ ಸೆಕ್ರೆಟರಿಗಳಾದ ಲೋರ್ಡ್ ಜೆಟ್ಲೆಂಡರು ಮಾಡಿದ ಹೇಳಿಕೆಯು ಸೌಹಾರ್ದಪರವಾಗಿದ್ದರೂ ಹಿಂದೀ ಬಿಕ್ಕಟ್ಟನ್ನು ಪರಿಹರಿಸಲು ಅದರಿಂದೇನೂ ಪ್ರಯೋಜನವಾಗುವಹಾಗಿಲ್ಲ. ಹಿಂದೀ ಪ್ರಶ್ನೆಯ ಕುರಿತು ಇಂಗ್ಲೆಂಡಿನ ಎಲ್ಲಾ ಪಕ್ಷಗಳು ಬಹುತೇಕ ಒಮ್ಮತದಿಂದಿರುವವೆಂಬುದನ್ನು ಈ ಚರ್ಚೆಯು ಸಿದ್ಧಪಡಿಸುವುದು. ಲೇಬರ್ ಮಂತ್ರಿಮಂಡಲವು ಅಧಿಕಾರದಲ್ಲಿದ್ದಾಗ ಕಾಂಗ್ರೆಸಿನವರಿಂದುಂಟಾದ ತೊಡಕನ್ನು ಮಿ. ವೆಜ್‌ವೂಡ್ ಬೆನ್ನರು ವಿವರಿಸಿ ಡೋಮಿನಿಯನ್ ಸ್ಟೇಟಸಿನ ಅಭಿಪ್ರಾಯವನ್ನು ಪ್ರಥಮವಾಗಿ ಜನರಿಗೆ ತಂದವರೇ ಲೇಬರ್ ಪಕ್ಷೀಯರೆಂದರು. ಕಾಂಗ್ರೆಸು ಹಿಂದು ದೇಶದಲ್ಲಿ ನಿಜವಾದ ಪ್ರಜಾಸತ್ತೆಯನ್ನು ಸ್ಥಾಪಿಸಲೆಳಸುವುದಿಲ್ಲ. ಅದರ ಉದ್ದೇಶವೆಂದರೆ ತನ್ನ ಕೈಗೊಂಬೆಯ ಸರಕಾರವನ್ನು ಸ್ಥಾಪಿಸುವುದೆಂದು ಮಾರ್ಕ್ವಿಸ್ ಆಫ್ ಕ್ರೂವೆಯವರಂದರು. ಇಂಡಿಯಾ ಅಂಡರ್ ಸೆಕ್ರೆಟರಿಗಳಾದ ಸರ್. ಹ್ಯೂ ಓನೀಲರು ಕಾಂಗ್ರೆಸು ಕಾಯಿದೆ ಭಂಗವನ್ನಾರಂಭಿಸಿದರೆ ಅದನ್ನು ಕಠಿಣ ಹಸ್ತದಿಂದ ಅಣಗಿಸಲಾಗುವುದೆಂದು ಎಚ್ಚರಿಸಿದರು. ಹಿಂದೀ ಪ್ರಶ್ನೆಯ ಸಂಬಂಧವಾದ ಬ್ರಿಟಿಷ್ ಪಾರ್ಲಿಮೆಂಟಿನ ಚರ್ಚೆಯ ಕುರಿತು ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ಬರೆಯುತ್ತಾ, ಹಿಂದೀ ರಾಜನೀತಿಯ ಘಟನೆಯನ್ನು ತಯಾರಿಸಲು ಹಿಂದು ಮತ್ತು ಮುಸಲ್ಮಾನ ಮುಖಂಡರ ಒಂದು ಚಿಕ್ಕ ಪರಿಷತ್ತನ್ನು ಕರೆಯಬೇಕೆಂದು ಸೂಚಿಸಿರುವುದು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯು

ಇದೇ ತಾ 18ರಲ್ಲಿ ಕೊನೆಗೊಂಡಿರುವುದು ಪ್ರಕೃತದ ರಾಜಕೀಯ ಪರಿಸ್ಥಿತಿಯ ಕುರಿತು 4 ದಿನಗಳಲ್ಲಿ 21 ತಾಸುಗಳ ದೀರ್ಘವಾದ ಸಮಾಲೋಚನೆ ನಡೆಯಿತು ಗಾಂಧೀಜಿಯವರು ಅದರಲ್ಲಿ ಭಾಗವಹಿಸಿದ್ದರು. ಪ್ರಾಂತದ ಬೇರೆ ಬೇರೆ ಕಡೆಗಳಲ್ಲಿ ಸಂಚರಿಸಿ ಸ್ವಯಂ ಸೇವಕ ದಳವನ್ನು ಸಂಘಟಿಸಲು ಶ್ರೀ ಆರ್. ಎಸ್ ಪಂಡಿತರು ನೇಮಿಸಲ್ಪಟ್ಟಿರು. ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಅಂಗವಾಗಿ ಸ್ತ್ರೀ ವಿಭಾಗವು ಸ್ಥಾಪಿಸಲ್ಪಟ್ಟು ಅದಕ್ಕೆ ಶ್ರೀಮತಿ ಕೃಪಲಾನಿಯವರು ಜನರಲ್ ಸೆಕ್ರೆಟರಿಗಳಾಗಿ ನೇಮಿಸಲ್ಪಟ್ಟರು. ಸತ್ಯಾಗ್ರಹದ ಸಿದ್ಧತೆಯ ಕುರಿತು ಬೇರೆ ಬೇರೆ ಪ್ರಾಂತಗಳಲ್ಲಿ ತೋರಿ ಬಂದ ಬೆಂಬಲದ ಕುರಿತು ತೃಪ್ತಿ ಸೂಚಿಸಿ, ಸತ್ಯಾಗ್ರಹ ಪ್ರತಿಜ್ಞೆಯನ್ನು ತೆಗೆದುಕೊಳ್ಳದ ಕಾಂಗ್ರೆಸ್ ಅಧಿಕಾರಿಗಳು ಮತ್ತು ಎಕ್ಸಿಕ್ಯೂಟಿವ್ ಕಮಿಟಿ ಮೆಂಬರರು ತಮ್ಮ ಸ್ಥಾನಗಳನ್ನು ಬಿಟ್ಟುಕೊಡಬೇಕೆಂದು ನಿರ್ಧರಿಸಲಾಯಿತು. ಇನ್ನೊಂದು ತಿಂಗಳೊಳಗೆ ಇನ್ನೊಮ್ಮೆ ವರ್ಕಿಂಗ್ ಕಮಿಟಿ ಮತ್ತು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಸಭೆ ನಡೆಯಲಿರುವುದು. ಪಂಡಿತ ಜವಾಹರಲಾಲ ನೆಹರೂ, ಶ್ರೀ ರಾಜಗೋಪಾಲಾಚಾರ್ಯರೇ ಮೊದಲಾದ ಕಾಂಗ್ರೆಸ್ ಮುಖಂಡರು ಗಾಂಧೀಜಿಯವರೊಡನೆ ಸುದೀರ್ಘ ಮಾತುಕತೆ ನಡಿಸಿರುವರು.

For Everything in Insurance Consult

TROPICAL
INSURANCE CO. LTD.,

Head office: NEW DELHI.

Chairman: SJT. SUBASH CHANDRA BOSE.

Founder Directors:
PANDIT MOTILAL NEHRU,
Dr. M. A. ANSARI,
HAKIM AJMAL KHAN,
Sri. S. SRINIVASA IYENGER.

1. This cent per cent national has issued Policies for THREE CRORES
2. Has given Bonus since the Inception
3. Has attractive Schemes for Agents & Organisers.
4. Liberal Terms for Field Staff;

For Particulars Apply to:—

M. SUNDERRAM SHETTY, *Branch Manager,* HAMPANKATTA, MANGALORE, S. K.

OR

K. S. RAMAMURTHY, M. A., *Branch Secretary,* 160/- MOUNT ROAD, MADRAS.

ಮೌಲಾನ ಅಬ್ದುಲ್ ಕಲಮ್ ಆಜಾದರು

ಇದೇ ತಾ. ೨೦ರಲ್ಲಿ ಸೇವಾ ಗ್ರಾಮಕ್ಕೆ ಹೋಗಿ ಗಾಂಧಿಜಿಯವರೊಡನೆ 3 ಘಂಟೆಗಳ ವರೆಗೆ ಮಾತಾಡಿರುವರು. ಅವರು ಇದೇ ತಾ. ೨೧ರಲ್ಲಿ ವಾರ್ಧೆಯಿಂದ ಹೊರಟು ಹೋಗಲಿದ್ದವರು ಅದನ್ನೀಗ ಮುಂದುವರಿಸಿರುವರು. ಎಲ್ಲಾ ಕಾಂಗ್ರೆಸ್ ಕಮಿಟಿಗಳೂ ಸತ್ಯಾಗ್ರಹ ಕಮಿಟಿಗಳನ್ನು ಸ್ಥಾಪಿಸಿ ಗಾಂಧಿಜಿಯವರ ಸೂಚನೆಗಳಂತೆ ನಡೆಯಲು ಸಿದ್ಧವಾಗಬೇಕೆಂದು ಕಾಂಗ್ರೆಸ್ ಪ್ರೆಸಿಡೆಂಟರು ಆಗ್ರಹ ಪೂರ್ವಕವಾಗಿ ವಿನಂತಿ ಮಾಡಿಕೊಂಡಿರುವರು.

ಖಾನ್ ಅಬ್ದುಲ್ ಗಾಫರ್ ಖಾನರ ನಿರ್ಧಾರ

ವಾಯುವ್ಯ ಗಡಿನಾಡಿನಲ್ಲಿ ಕಾಂಗ್ರೆಸ್ ಕೆಲಸಗಾರರ ಕೇಂದ್ರವೊಂದನ್ನು ತೆರೆಯುವ ಕುರಿತು ಇನ್ನು ಮುಂದೆ ತಾನು ತನ್ನ ಸರ್ವ ಶಕ್ತಿಯನ್ನೂ ಉಪಯೋಗಿಸಲಿರುವೆನೆಂದು ಖಾನ್ ಅಬ್ದುಲ್ ಗಾಫರ್ ಖಾನರು ನಿರ್ಧರಿಸಿರುವರು. "ಇಂದೀಗ ನಾನು ಹೊಸ ಪ್ರಯೋಗವೊಂದನ್ನಾರಂಭಿಸಲಿರುವೆನು. ವಾಯುವ್ಯ ಗಡಿನಾಡಿನ ಕಾಂಗ್ರೆಸ್ ಕಮಿಟಿಯಲ್ಲಿ ಪಕ್ಷ ವೈಷಮ್ಯವುಂಟಾಗಿದೆ. ರಾಜಕೀಯ ಕಲಹಗಳನ್ನು ಸಂಪೂರ್ಣವಾಗಿ ನಿರ್ಮೂಲಿಸುವ ಚಳವಳವೊಂದನ್ನು ನಾನು ಆರಂಭಿಸಲಿಚ್ಛಿಸುತ್ತೇನೆ." ಎಂದು ಗಡಿನಾಡಿನ ಗಾಂಧಿಯವರು ತನ್ನನ್ನು ಕಾಣಬಂದ ಪೇಶಾವರದ ಕಾಂಗ್ರೆಸ್ ಕೆಲಸಗಾರರೊಡನೆ ಇದೇ ತಾ. 30ರಲ್ಲಿ ಹೇಳಿರುವರು.

ಸ್ವಾಮಿ ಸಹಜಾನಂದರ ದಸ್ತಗಿರಿ

ಹಲವು ಕಡೆಗಳಲ್ಲಿ ಮಜೂರ, ಕೃಷಿಕ, ಸೋಶಿಯಲಿಸ್ಟ ಮತ್ತು ಕಮ್ಯೂನಿಸ್ಟ ಮುಖಂಡರುಗಳ ದಸ್ತಗಿರಿಯಾಗುತ್ತಿರುವುದು. ಇದೇ ತಾ. 19ರಲ್ಲಿ ಅಖಿಲಭಾರತ ಕೃಷಿಕ ಸಂಘದ ಜನರಲ್ ಸೆಕ್ರೆಟರಿಗಳಾದ ಸ್ವಾಮಿ ಸಹಜಾನಂದ ಸರಸ್ವತಿಯವರು ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ಮೇರೆಗೆ ಪಾಟ್ನದಲ್ಲಿ ಕೈದುಮಾಡಲ್ಪಟ್ಟಿರುವರು.

ಪಾಕಿಸ್ಥಾನ ದಿನಾಚರಣೆ

ಹಿಂದೂದೇಶವನ್ನು ಮುಸಲ್ಮಾನ ಮತ್ತು ಹಿಂದುಸ್ಥಾನವಾಗಿ ವಿಂಗಡಿಸಬೇಕೆಂಬ ಮುಸ್ಲಿಮ್ ಲೀಗಿನ ನಿರ್ಣಯವನ್ನು ಸಮರ್ಥಿಸಲು ಇದೇ ತಾ. 19ರಲ್ಲಿ ಹಿಂದೂದೇಶದ ಹಲವು ಕಡೆಗಳಲ್ಲಿ ಪಾಕಿಸ್ಥಾನ ದಿನವು ಆಚರಿಸಲ್ಪಟ್ಟಿತು. ಈ ಸಂಬಂಧವಾಗಿ ಬೊಂಬಾಯಿ, ಡಿಲ್ಲಿ, ಲಾಹೋರು, ಕಲ್ಕತ್ತ, ಅಮೃತಸರ, ಲಕ್ನೋ, ಅಲಹಾಬಾದ್, ಪಾಟ್ನ, ಪೇಶಾವರ, ಮದ್ರಾಸ್ ಮೊದಲಾದ ಪಟ್ಟಣಗಳಲ್ಲಿ ಸಭೆ ನಡೆದಿರುವುದು. ನೇಶನಲಿಸ್ಟ ಮುಸಲ್ಮಾನರೇ ಮೊದಲಾದವರು ಕಲ್ಕತ್ತ, ಅಹಮದಾಬಾದ್, ಡೆಲ್ಲಿ, ಲಕ್ನೋ, ಪಾಟ್ನ ಮೊದಲಾದ ಕಡೆಗಳಲ್ಲಿ ಸಭೆ ಸೇರಿಸಿ ಮುಸ್ಲಿಮ್ ಲೀಗಿನ ಯೋಜನೆಯನ್ನು ನಿಷೇಧಿಸಿರುವರು. ಸರ್. ಸಿಕಂದರಲ್ಲರೇ ಮೊದಲಾದ ಲೀಗ್ ಪಕ್ಷೀಯ ಮುಖಂಡರೇ ಕೆಲವರು ಜಿನ್ನರ ಅಭಿಪ್ರಾಯವನ್ನು ಖಂಡಿಸಿರುವರು.

ವಜೀರಿಸ್ತಾನದಲ್ಲಿ ದಸ್ತಗಿರಿ

ಇಪ್ಪಿಯ ಫಕೀರನ ಸಹಾಯಕರಿಗೆ ಆಶ್ರಯವಿತ್ತರೆಂದು ಉತ್ತರ ವಜೀರಿಸ್ತಾನದ 16 ಮಂದಿ ಗ್ರಾಮ ಮುಖ್ಯಸ್ಥರು ಮತ್ತು 5 ಮಂದಿ ಹಿಂದುಗಳು ದಸ್ತಗಿರಿಮಾಡಲ್ಪಟ್ಟಿರುವರು.

ಹೊಲ್ಲೆಂಡಿನ ಸಂರಕ್ಷಣೆಯ ವಿಚಾರ

ಜರ್ಮನಿಯು ಈಗ ಡೆನ್ಮಾರ್ಕ್ ಮತ್ತು ನೋರ್ವೇಗಳ ಮೇಲೆ ಆಕಸ್ಮಾತ್ತಾಗಿ ಧಾಳಿನಡೆಸಿದುದರಿಂದ ಹೊಲ್ಲೆಂಡ್ ಬೆಲ್ಜಿಯಮ್ ಮತ್ತು ಸ್ವಿಜರ್ಲೆಂಡುಗಳು ತಮ್ಮ ರಕ್ಷಣೆಯ ಕುರಿತು ಭರದಿಂದ ಮುಂಜಾಗ್ರತೆ ತೆಗೆದುಕೊಳ್ಳುತ್ತಿವೆ. ವಿಶೇಷವಾಗಿ ಹೊಲ್ಲೆಂಡು ಮುಂಜಾಗ್ರತೆ ತೆಗೆದುಕೊಳ್ಳುತ್ತಿದೆ. ಇಡೀ ದೇಶವೇ ಮುತ್ತಿಗೆಗೊಳಗಾಗಿರುವುದೆಂಬಂತೆ ಹೊಲ್ಲೆಂಡ್ ಸರಕಾರವು ವಿಶೇಷ ರೀತಿಯ ಸಂರಕ್ಷಣಾ ಸಿದ್ಧತೆಯನ್ನು ಮಾಡುತ್ತಿದೆ.

ಜಪಾನರ ಪ್ರಬಲ ವಿಜಯ

ದಕ್ಷಿಣ ಶಾನ್ಸಿ ಪ್ರಾಂತದ ಚುಂಗ್ ಜಿಯೋ ಪರ್ವತಸಾಲುಗಳ ಬಳಿ ಜಪಾನರಿಗೂ ಚೀನೀಯರಿಗೂ ಪ್ರಬಲ ಯುದ್ಧ ನಡೆದು ಚೀನೀಯರು ದೊಡ್ಡ ಅಪಜಯ ಪಡೆದಿರುವರೆಂದು ತಿಳಿದುಬರುತ್ತದೆ. ಈ ಯುದ್ಧದಲ್ಲಿ 4500 ಮಂದಿ ಚೀನೀಯರು ಮಡಿದಿರುವರೆಂದು ಜಪಾನರ ಹೇಳಿಕೆ. ಯೆಲ್ಲೋ ನದಿಯ ಈ ಪ್ರದೇಶವನ್ನು ೨ ವರ್ಷಗಳಿಂದ ಚೀನೀಯರು ಜಯಶೀಲವಾಗಿ ರಕ್ಷಿಸಿಕೊಂಡಿದ್ದರು. ಈಗ ಅದು ಜಪಾನರ ವಶವಾಗಿರುತ್ತದೆ.

ಖಾಕ್ಸಾರ್ ಚಳವಳ

ಖಾಕ್ಸಾರ್ ಚಳವಳದ ಮೇಲಿನ ನಿಷೇಧವನ್ನು ತೆಗೆದುಹಾಕುವ ಕುರಿತು ಮಿ. ಜಿನ್ನರೇ ಮೊದಲಾದ ಮುಸ್ಲಿಮ್ ಲೀಗಿನ ಮುಖಂಡರು ಪ್ರಯತ್ನಿಸುತ್ತಿರುವರು. ಈ ಕುರಿತು ಪಂಜಾಬಿನ ಮುಖ್ಯ ಮಂತ್ರಿಗಳಾದ ಸರ್. ಸಿಕಂದರ್ ಹಯಾತ್‌ಖಾನರಿಗೂ ಮುಸ್ಲಿಂ ಲೀಗಿನವರಿಗೂ ಭಿನ್ನಾಭಿಪ್ರಾಯವುಂಟಾಗಿರುವಂತಿದೆ. ಪಂಜಾಬ್ ಎಸೆಂಬ್ಲಿಯ ಮೇಲೆ ಬೋಂಬೆಸೆಯಲು ಖಾಕ್ಸಾರನೊಬ್ಬ ನಡೆಸಿದ ಒಳಸಂಚು ಕಂಡುಹಿಡಿಯಲ್ಪಟ್ಟಿದೆ. ಖಾಕ್ಸಾರರಿಗೆ ನಾಝಿಗಳ ಬೆಂಬಲವಿದೆಯೆಂಬ ಸಂದೇಹಕ್ಕಾಸ್ಪದವಾಗಿದೆ. ಜರ್ಮನ್ ಹೆಲ್ಮೆಟ್ (ತಲೆಕವಚ)ಗಳು ಕೆಲವು ಅವರಲ್ಲಿ ಸಿಕ್ಕಿವೆ. ಇದೇ ತಾ. 18ರಲ್ಲಿ 6ಮಂದಿ ಖಾಕ್ಸಾರರು ಲಾಹೋರಿನಲ್ಲಿ ಸರಕಾರದ ಹುಕುಮನ್ನುಲ್ಲಂಘಿಸಿ ಕೈದುಮಾಡಲ್ಪಟ್ಟಿರುವರು. ಹೊರಗಣಿಂದ ಲಾಹೋರಿಗೆ ಲೋರಿಯಲ್ಲಿ ಬರುತ್ತಿದ್ದ 4ಮಂದಿ ಖಾಕ್ಸಾರರು ರವಿಸೇತುವೆಯ ಬಳಿ ಕೈದುಮಾಡಲ್ಪಟ್ಟಿರುವರು. ಸಂಯುಕ್ತಪ್ರಾಂತ ಮತ್ತು ವಾಯುವ್ಯ ಗಡಿನಾಡುಗಳಿಂದ ಖಾಕ್ಸಾರರು ಪಂಜಾಬಿಗೆ ಬರುತ್ತಿದ್ದಾರೆ. ಇವರನ್ನು ಅಲ್ಲಲ್ಲಿ ತಡೆದು ದಸ್ತಗಿರಿಮಾಡಬೇಕೆಂದು ಸರಕಾರವು ಪೋಲೀಸರಿಗೆ ಹುಕುಮು ಕೊಟ್ಟಿದೆ. ವಾಯುವ್ಯ ಗಡಿನಾಡಿನಿಂದ ಬರುತ್ತಿದ್ದ 15 ಮಂದಿ ಖಾಕ್ಸಾರರು ರಾವಳಪಿಂಡಿಯಲ್ಲಿ ದಸ್ತಗಿರಿಮಾಡಲ್ಪಟ್ಟು ಶಿಕ್ಷೆಗೊಳಗಾಗಿದ್ದಾರೆ.

ಶಿಯಾ ಸುನ್ನಿ ಕಲಹ

ಸುನ್ನಿಗಳು ಮಧೇ ಸಭಾ ಮೆರವಣಿಗೆ ನಡೆಸಬಾರದೆಂದು ಶಿಯರು ಲಕ್ನೋದಲ್ಲಿ ವಿರೋಧಿಸುತ್ತಿದ್ದು ಇದೇ ತಾ. 21ರಲ್ಲಿ ಈ ಸಂಬಂಧವಾಗಿ ಶಿಯಾ ಸುನ್ನಿಗಳೊಳಗೆ ಜಗಳವಾಗಿ ಪೋಲೀಸರು ಗುಂಡು ಹಾರಿಸಿ 3ಮಂದಿ ಕೊಲ್ಲಲ್ಪಟ್ಟು ಸುಮಾರು 50ಮಂದಿ ಗಾಯಗೊಂಡಿರುವರು. ಶಿಯಾ ಸುನ್ನಿಗಳು ಹೊಡೆದಾಡಿಕೊಳ್ಳಬಾರದೆಂದು ಮೌಲಾನ ಅಬುಲ್ ಕಲಮ್ ಆಜಾದರು ವಿನಂತಿಮಾಡಿಕೊಂಡಿರುವರು.

ಪುನಃ ಖಾಕ್ಸಾರ ಗಲಾಟೆ

ಇದೇ ತಾ. 17ರಲ್ಲಿ 10 ಮಂದಿ ಖಾಕ್ಸಾರರ ದಳವೊಂದು ಬೆಲ್ಚಾಗಳನ್ನು ಹಿಡಿದುಕೊಂಡು ಲಾಹೋರಿನ ಅನಾರ್ಕಲಿ ರಸ್ತೆಯಲ್ಲಿ ಥಕ್ಕನೆ ನಡೆದು ಬಂದರು. ಆಗ ಪೋಲೀಸರು ಅವರನ್ನಾವರಿಸಿ ಟೀರ್‌ಗ್ಯಾಸನ್ನು ಅವರ ಮೇಲೆ ಉಪಯೋಗಿಸಿ 5 ಮಂದಿಯನ್ನು ಹಿಡಿದರು. ಇನ್ನೈದು ಮಂದಿ ತಪ್ಪಿಸಿಕೊಂಡು ಹತ್ತಿರದ ಮನೆಯೊಳಕ್ಕೋಡಿ ಅವಿತುಕೊಂಡರು. ಪೋಲೀಸರು ಈ ಮನೆಯನ್ನಾವರಿಸಿರುವರು. ತಾ. 18ನೇ ಬೆಳಗ್ಗೆ ಪೋಲೀಸರು ಇನ್ನೈದು ಮಂದಿ ಖಾಕ್ಸಾರರನ್ನು ದಸ್ತಗಿರಿ ಮಾಡಿರುವರು.

ಇಟೆಲಿಯಾನ ನೌಕಾಪಡೆಯ ಚಲನ ವಲನ

ಆಡ್ರಿಯಾಟಿಕ್ ಸಮುದ್ರದಲ್ಲಿ ಇಟೆಲಿಯಾನ ನೌಕಾ ಪಡೆಯ ಮತ್ತು ಅಲ್ಬಾನಿಯದಲ್ಲಿ ಇಟೆಲಿಯಾನ ಸೈನಿಕ ಚಲನವಲನದಿಂದ ಯುಗೋಸ್ಲಾವಿಯವು ದಿಗಿಲುಗೊಂಡಿದೆ. ಇಟೆಲಿಯು ಯುಗೋಸ್ಲಾವಿಯದ ಮೇಲೆ ಧಾಳಿ ನಡೆಸಲಿರುವುದೆಂದೂ, ಇದಕ್ಕೆ ಹಿಟ್ಲರರ ಪ್ರೋತ್ಸಾಹವಿದೆಯೆಂದೂ ಸುದ್ದಿಯುಂಟಾಗಿದೆ. ಆಡ್ರಿಯಾಟಿಕ್ ಸಮುದ್ರದಲ್ಲಿರುವ ಬಂದರಿಗೆ ಯಾರೂ ಪ್ರವೇಶ ಮಾಡಬಾರದೆಂದು ಇಟೆಲಿಯಾನ ಸರಕಾರವು ನಿಷೇಧಿಸಿರುವುದು.

ಬೋಸ್ ಮುಸ್ಲಿಮ್ ಲೀಗ್ ಪಕ್ಷಗಳೊಳಗೆ ಸಹಕಾರ

ಕಲ್ಕತ್ತ ಕೋರ್ಪರೇಶನಿನಲ್ಲಿ ಶ್ರೀ. ಸುಭಾಸ್ ಭೋಸ್ ಮತ್ತು ಮುಸ್ಲಿಮ್ ಲೀಗ್ ಪಕ್ಷೀಯರು ಸಹಕರಿಸಿ ನಡೆಯುವ ನಿರ್ಧಾರ ಮಾಡಿರುವಂತಿದೆ. ಇದೇ ತಾ. 17ರಲ್ಲಿ ನಡೆದ ಕೋರ್ಪರೇಶನಿನ ಎಲ್ಡರ್ ಮೆನ್ ಚುನಾವಣೆಯಲ್ಲಿ ಶ್ರೀ. ಭೋಸ್ ಪಕ್ಷದ 3ಮಂದಿ ಮತ್ತು ಮುಸ್ಲಿಮ್ ಲೀಗ್ ಪಕ್ಷದ ಇಬ್ಬರು ಉಮೇದ್ವಾರರು ಜಯಶೀಲವಾಗಿ ಆರಿಸಿ ಬಂದಿರುವರು.

THE
BOMBAY LIFE ASSURANCE Company Limited.
(ESTD. 1908)
COMPARE
Your Life Assurance with any other property you possess what is its guaranteed value
If you live–today–a few years more–when you are old?
If you die–to your family and dependants?
REMEMBER THAT If you live, Life Insurance takes the place of your professional income during your old age.
If you die, it provides your family with enough income for their maintenance and the education of your children.
"BOMBAY LIFE" offers all that is best in Life Assurance.
1938 Record.

Completed Business	... ...	Rs. 1,44,91,000
Life Assurance Fund	... ...	Rs. 1,17,69,748
Total Assets	... ...	Rs. 1,31,28,998

To Insure or to represent it pays you to consult
KOCHIKAR BROTHERS LTD.,
MADRAS BRANCH SECRETARIES,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI.

Post Box No. 337, Mount Road, MADRAS	Visweswarapuram Circle BANGALORE CITY.	Charni Road, Girgaum, BOMBAY No. 4.
Car Street, MANGALORE.	Puthiyara, CALICUT.	Central Station Road, TRIVANDRUM.

The General Assurance Society, Ltd.
AJMER.
NOTICE.
Notice having been received of the loss of policy No. 19895 on the life of Late Mr. Varamballi Manjaya Hegde, Land Lord, Varamballi Village, Brahmavar (South Kanara) issued by the General Assurance Society Limited, Ajmer on 1st December, 1928, it is hereby notified for general information that the payment of the claim thereunder will be made to Mrs. N. Doddakka Shedthi, the wife of the said deceased assured if no objection to such payment is lodged with the said Society within a month from this date.
Brahma Dutta, B.C., LL.B., F.R.S., (London)
General Manager.
AJMER. Dated 20th April, 1940.

ಈ ವಾರದ ಕತೆ

ಹೊಣೆಯಾರು...?

[ಲೇಖಕಿ:— ಮಿಸ್. ತುಳಸೀ ಬಾಯಿ, ಕೊಡಿಯಾಲ್.]

ಕಮಲೆಯು ರಾಮಚಂದ್ರರಾಯರ ಒಬ್ಬಳೇ ಮಗಳು. ಪಾಪ! ತಾಯಿಯನ್ನು ಬಾಲ್ಯದಲ್ಲಿಯೇ ಕಳೆದುಕೊಂಡ ನಮ್ಮ ಕಮಲೆಗೆ ತಂದೆ ರಾಮಚಂದ್ರರಾಯರಿಂದ ರೆ ಬಹಳ ಪ್ರೀತಿ; ರಾಮಚಂದ್ರರಾಯರಿಗಂತೂ ಇದ್ದುದರಲ್ಲಿಯೇ ಸಂತೋಷ ಪ್ರೀತಿಯ ಹೆಂಡತಿ ಸ್ನೇಹಲತಾ ಬಾಯಿಯನ್ನು ಕಳೆದುಕೊಂಡಂದಿನಿಂದ ಅವರಿಗೆ ಬಾಯಿಗೆ ಅನ್ನವು ಸೇರದು; ನಿದ್ರೆಯು ಬಾರದು ಕಣ್ಣಿಗೆ. ತಾಯಿಯ ಪ್ರತಿಮೂರ್ತಿಯಾದ ಕಮಲೆ.......ಎಂದರೆ ಕೇಳಬೇಕೆ? ಕಮಲಾ ಎಂದರೆ ಎಲ್ಲಾ ಮುಗಿಯಿತು. ಅವಳ ರೂಪಲಾವಣ್ಯ! ಅವಳ ಕಣ್ಣು ಕಮಲದೋಪಾದಿಯಲ್ಲಿತ್ತು; ಮುಖವೂ ಕಮಲ....ಎಲ್ಲವೂ ಕಮಲವೇ.

ಕಮಲೆಯು ಸಾಲೆಗೆ ಹೋಗುವ ಹುಡುಗಿ ನಾಲ್ಕನೆಯ ಫಾರ್ಮಿನಲ್ಲಿ ಓದುತ್ತಾಳೆ. ಅವಳು ಹೆಣ್ಣು ಹೆಂಗಸಾದರೂ ಸ್ವಲ್ಪ ಗಂಡುಬೀರಿತನ ಹೆಚ್ಚಿನ್ನಿ! ಅದೂ ಪ್ರಶಂಸನೀಯವಾದುದೇ. ಈಗಿನ ಕೆಲ ಹೆಣ್ಣು ಹುಡುಗಿಯರಿಗೆ ನಾಚಿಗೆ ಹೆಚ್ಚು. ಪಕ್ವವಾದ ಬಾಳೆಯಕಾಯಿ ಗೊನೆ ಬಾಗುವಂತೆ ನೆಲಕ್ಕೆ ಮುತ್ತುಕೊಡುವ ಸ್ವಭಾವ! ಇದು ನಮ್ಮ ಕಮಲೆಗಾಗದು. ಅವಳು ಯಾವುದಕ್ಕೂ ಹೆದರುವ ಹುಡುಗಿಯಲ್ಲ. ತನ್ನ ಪಾಠಗಳನ್ನಂತೂ ಓದಿ ಓದಿ ಪರೀಕ್ಷೆಯಲ್ಲಿ ಒಂದನೇ ಯಾ ಎರಡನೇ ನಂಬ್ರದ ಜಾಗ ರಿಝರ್ವ್‌ಮಾಡಿಯೇ ಇಡುತ್ತಿದ್ದಳು. ಮಧೂ ಸೂರ್ಯಶೇಖರರಾಯರ ಮಗ........ಇವಳ ಅಚ್ಚುಮೆಚ್ಚಿನ ಗೆಳೆಯ....ಸಾಲದುದಕ್ಕೆ ಸಹಪಾಠಿ....ಕೇಳುವುದೇನು? ಅವಳು ಅವನೊಡನೆ ಯಾವಾಗಲೂ ಒಟ್ಟಿಗೆ ಓದುತ್ತಿದ್ದಳು. ಹೇಗೆಯೋ ಅವರ ವೊತ್ತಮೊದಲಿನ ನಿಷ್ಕಲಂಕ ಪ್ರೇಮವು ಚಿಗುರಿ ಗಿಡವಾಗುವುದರಲ್ಲಿತ್ತು.

○○ ○○ ○○

ಆದರೆ.........ರಾಮಚಂದ್ರರಾಯರಿಗೆ ಕಮಲೆಯಲ್ಲಿ ಎಣೆಯಿಲ್ಲದ ಪ್ರೀತಿ ಇರುವುದು ನಿರ್ವಿವಾದ. ಹುಡುಗಿ ಪ್ರಾಯಕ್ಕೆ ಬಂದಳಲ್ಲ...ಬೇಗ ಮದುವೆಯನ್ನು ಮಾಡದಿದ್ದರೆ.... ಸಮಾಜಘಾತವು ಒನ್ನಲೇ ನನ್ನಮೇಲೆ ಹಾರಿಬಿಡುತ್ತದೋ ...ಎಂದು ಹೆದರಿಕೆ ಅವರಿಗೆ. ಆ ಹೆದರಿಕೆಗೆ ನಮ್ಮ ಲಂಬೋದರ ಭಟ್ಟರ ಸೊಪ್ಪು! "ಏನಯ್ಯಾ! ಒಬ್ಬಳೇ ಹುಡುಗಿ ಎಂದು ಮುದ್ದಾಡುವುದರಲ್ಲಿ ಅರ್ಥವಿಲ್ಲ ಆ ಇಂಗ್ಲಿಷ್-ಗಿಂಗ್ಲಿಷ್ ಯಾಕೆ ಅವಳಿಗೆ? ನಮ್ಮ ಸುಬ್ಬಯ್ಯಾ ಶಾಸ್ತ್ರಿಗಳೆಂದರೆ ಘನ ವಿದ್ವಾಂಸರು. ವರುಷ ಹೆಚ್ಚಾಗಿಲ್ಲ....ಇಪ್ಪತ್ತೆಂಟು ಮತ್ತು ಇಪ್ಪತ್ತು! ನಿಮ್ಮ ಕಮಲೆಗೂ ಅವರಿಗೂ ಒಳ್ಳೆಯ ಜೋಡಿ ನೋಡಿ!! ಇದಕ್ಕೆ ನೀವು ಒಪ್ಪಿದಿರಾದರೆ ಮುಂದಿನ ಕೆಲಸ ನನ್ನದಿದೆಯಲ್ಲಾ... ಐಶ್ವರ್ಯಕ್ಕೇನೂ ಕಡಿಮೆ ಇಲ್ಲ...ಮನೆ ತುಂಬಾ ಇಲಿ ಹೆಗ್ಗಣಗಳ ಕಾಟ...ಬ್ರಿಜ ರಿಯಲ್ಲಂತೂ ನಗ ನಾಣ್ಯಗಳಿಗೆ ತಿಲುಬು ಹತ್ತಿಬಿಟ್ಟಿದೆ...ತಿನ್ನುವವರಿಲ್ಲ ಆ ಸಂಪತ್ತನ್ನ! ಏನಯ್ಯಾ ನಿಮ್ಮ ಮಗಳೀಗೇನೂ ಕಡಿಮೆ ಇಲ್ಲ ಅಂತೀರಾ?"

ಆಯಿತು....ಈ ಹಿತ್ತಾಳೆ ಕಿವಿಯ ರಾಮಚಂದ್ರರಾಯರು ಕಮಲೆ...ಎಳೆಯ ಕಮಲ....ಹದಿನಾಲ್ಕು ವರುಷದ ಹುಡುಗಿಯನ್ನು ಆ ಭೀಮಕಾಯ... ಅರಣ್ಯ ಪಂಡಿತ ಸುಬ್ಬಾ ಶಾಸ್ತ್ರಿಗೆ ಕೊಟ್ಟು ಮದುವೆ ಮಾಡುವುದೆಂದು ನಿಶ್ಚಯ ಮಾಡಿದರು ಪಾಪ! ಕಮಲೆಯೂ ಮಧುಸೂದನನೂ ಸ್ನೇಹದ ಪಾಕವನ್ನು ಪ್ರೀತಿಯಿಂದ ಭುಜಿಸುತ್ತಿದ್ದರಷ್ಟೆ ದೇವರೇನು ಎಣಿಸಿರುವನೋ!

○○ ○○ ○○

ಅಪ್ಪಾ!

....ಮಗೂ

ನನ್ನ ಬಾಳು ಹಾಳಾಗಲೆ?

ಛೀ! ನಾನು ಹಾಗೆ ಎಣಿಸಿರುವೆನೇ?

ಹಾಗಾದರೆ ಕೋಗಿಲೆಗೆ ಕೊಡಬೆ ಹದ್ದಿಗೇಕೆ ನನ್ನನ್ನು ಧಾರೆ ಎರೆಯುವುದನ್ನು ಸಂಕಲ್ಪಿಸಿರುವಿರಿ?

ಕಮಲೆ! ಅರಿಯದ ಹುಡುಗಿ ನೀನು!! ನಿನಗಿನ್ನೂ ಪ್ರಪಂಚ ಧರ್ಮವು ತಿಳಿಯದು....

ಅಪ್ಪಾ! ಗೃಹಿಣೀ ಧರ್ಮವೇ ಮಹತ್ವವಿರಲು ಅದೇ ಅಲ್ಲವೇ ಪ್ರಪಂಚ? ಅದರ ನೆಲಗಟ್ಟು?

ಏನೇ ಇರಲಿ! ನನ್ನ ಮಾತನ್ನು ನಾನು ಮುರಿಯಲಾರೆ ನಿನಗೆ ಬರುವ ಗುರುವಾರ ಮದುವೆ ಎಂದು ನಿಶ್ಚಯವಾಗಿದೆ.

○○ ○○ ○○

ಕಮಲಾ! ಇದೇನೇ ನಿನ್ನ ಮುಖ ಬಾಡಿದೆ...

ಸಮಯೋಚಿತ ಸೂರ್ಯನ ಪ್ರಕಾಶವಿಲ್ಲದೆ....

ಹಾಗೆಂದರೇನೆ? ನಿನ್ನ ಒಗಟು ಬಿಚ್ಚು ಕಠಿಣ ನೋಡೆ, ಕಮಲಾ!....

ನನಗೆ ಬರುವ ವಾರ ಮದುವೆಯಂತೆ ಮುದಿ ಹದ್ದಿಗೆ ನನ್ನನ್ನು ಕೊಡುವರಂತೆ....

ಅಯ್ಯೋ! ಕಮಲಾ!! ಇದೀಗ ಸಮಾಜವು ಕಟುಕರ ಅಂಗಡಿಯ ಂತಿದೆ. ನಿನ್ನಂತಹ ಎಷ್ಟೋ ಭಗಿನಿಯರನ್ನು ಎಂಜಲನ್ನು ತಿಪ್ಪೆಯಲ್ಲಿ ಬಿಸುಡುವಂತೆ ಅಲಕ್ಷ್ಯವಾಡಿದ....ಕುರಿಮಂದೆ! ಕುರಿಮಂದೆ ಎಂದೇ ಹೇಳಬೇಕು.... ...ಒಂದು ಕುರಿ ಹಳ್ಳಕ್ಕೆ ಬಿದ್ದರೆ ಎಲ್ಲಾ ಉಳಿದ ಕುರಿಗಳೂ ಕಣ್ಣು ತೆರೆದುಕೊಂಡೇ ಹಳ್ಳಕ್ಕೆ ಬೀಳುವವು....

ಮಧೂ, ಆಹುದು....ಆದರೆ ಅದನ್ನೆಲ್ಲಾ ಯೋಚಿಸಿ ಈಗ ಮಾಡುವುದೇನು?

ನೀನು ಮದುವೆಯ ದಿನ ಮನೆಯಲ್ಲೇ ಇರಬಾರದು. ನಾನೂ ನೀನೂ ಪತಿಪತ್ನಿಯರೆಂದು ನಮ್ಮ ಮನೋಭಾವನೆ ಇನ್ನು ವಿವಾಹಸಂಬಂಧವನ್ನೂ ಮಾಡಿಕೊಳ್ಳುವಾ!

ಮಧೂ!....

ಕಮಲಾ!...

○○ ○○ ○○

ಮಧುವು ಕಮಲೆಯನ್ನೂ, ಕಮಲೆ ಮಧುವನ್ನೂ ಅನಿಮಿಷ ಯುಕ್ತರಾಗಿ ನೋಡುತ್ತಾರೆ. ಅವರು ಮೌನತೆಯನ್ನು ಧರಿಸಿದ್ದಾರೆ. ಇಬ್ಬರೂ ಕೈಗೆ ಕೈ ಇದ್ದು.... ನಲ್ಲ ನಲ್ಲೆಯರಂತೆ ಸರಸಸಲ್ಲಾಪವನ್ನಾಡುತ್ತಾರೆ. ಆಹುದು! ಕಮಲೆಗೂ ಮಧುವಿಗೂ ನಿಕಟ ಸಂಬಂಧವಲ್ಲವೇ?

○○ ○○ ○○

ಮದುವೆಯ ದಿನ. ಮದುವಣಗಿತ್ತಿಯನ್ನು ಹುಡುಕುತ್ತಾರೆ....ಮೌನತೆಯೇ ಉತ್ತರ. ರಾಮಚಂದ್ರರಾಯರಿಗೆ ದಿಗಿಲು ಕಮಲಾ ...ಮಗೂ ಕಮಲಾ ...

ಅಯ್ಯೋ! ಎಲ್ಲಿ ನನ್ನ ಮುದ್ದು ಮಗಳು ಬಾವಿಯಲ್ಲಿ ಬಿದ್ದಳೇ ...ಆ ಕುಟ್ಟಿ ಮಧುಸೂದನ ಪಲಾಯನ ಸೂತ್ರವನ್ನು ಕಲಿಸಿದನೇ... ಈಗೇನು ಮಾಡಲಿ... ಎಂದು ರಾಮಚಂದ್ರರಾಯರು ಕಳವಳಗೊಂಡರು.

ಸಮಾಜದ ಭೀತಿಗಾಗಿ... ನಿಷ್ಕಲಂಕ ಪರಿಶುದ್ಧ ಪ್ರೇಮಕ್ಕಾಗಿ.... ಹೆತ್ತವರ ಪುರೋಭಿವೃದ್ಧಿಗಾಗಿ....ಕಾಸಾರದಲ್ಲಿ ಹುಟ್ಟಿದ ಕಮಲ.......! ಮನೆಯ ಹಿಂದಿನ ಕೆರೆಯಲ್ಲಿ ಶವ...ಒಂದಲ್ಲ! ಒಟ್ಟಿಗೆ ಮಧುಸೂದನ!!! ಇಬ್ಬರೂ ತಬ್ಬಿಕೊಂಡು ಲೋಕದ ವಿಚಾರಗಳಿಗೆ ಗಮನಕೊಡದೆ... ಪ್ರಶಾಂತ ನಿದ್ರೆಯಲ್ಲಿ ಆಸಕ್ತರಾಗಿದ್ದಾರೆ! ರೋಮಿಯೋ ಜೂಲಿಯೆಟ್ ಪಾತ್ರವಹಿಸಿದ ಇವರಿಬ್ಬರು...ಸಮಾಜವು ಎಚ್ಚರವಾಗಲಿ...ಕಣ್ಣು ತೆರೆಯಲೆಂದು ಮಾರ್ಗದರ್ಶಕರಾಗಿ...... ತೆರಳುವವರಾದರು. ರಾಮಚಂದ್ರ ರಾಯರಿಗೆ ಸಂಭವಿಸಿದ ಇಷ್ಟೆಲ್ಲಾ ಅನರ್ಥಕ್ಕೆ ಹೊಣೆಯಾರು? ಎಂಬ ಸಮಸ್ಯೆ ಎದುರಿಗಿದೆ. ಅದನ್ನು ಬಿಡಿಸುವುದು ಅವರಿಗೆ ಕಠಿಣವಾಗಿದೆ........! ವಿಚಿತ್ರ ಸಮಾಜ !!

NAVAYUGA
Advertisement Tariff
1 Page Rs. 25/- per insertion
½ „ Rs. 15/- „ „
¼ „ Rs. 8/- „ „
⅛ „ Rs. 5/- „ „
Per Single inch col. Re. 1 „
Contract rates on application
Manager-Navayuga UDIPI.

ಯುರೋಪಿನ ಯುದ್ಧದ ಹೊಸ ಸ್ವರೂಪ

ಜರ್ಮನಿ, ಇಟೆಲಿ ಮತ್ತು ರಸ್ಯಗಳು ಒಂದುಗೂಡಿ ನಡೆಯುವವೇ?

ಇಂದೀಗ ಯುರೋಪಿನ ಯುದ್ಧವು ಹೊಸ ಸ್ವರೂಪ ತಾಳಿರುವುದು. ಹೋರಾಟವು ಪಶ್ಚಿಮ ರಣರಂಗದಿಂದ ಉತ್ತರ ಸಮುದ್ರದ ಸ್ಕಾಂಡಿನೇವಿಯಕ್ಕೆ ವ್ಯಾಪಿಸಿರುವುದು. ಪಶ್ಚಿಮ ರಣರಂಗದಲ್ಲಿ ದೊಡ್ಡ ಯುದ್ಧವೇ ನಡೆಯುವ ಸಂಭವ ತೋರುವುದಿಲ್ಲ. ಹಿಟ್ಲರ್ ಮತ್ತು ಮುಸಲೋನಿಗಳು ಬ್ರೆನ್ನರ್ ಗಡಿಯಲ್ಲಿ ಒಟ್ಟಾದ ನಂತರ ವಿದ್ಯಮಾನಗಳು ಮುಂಚಿನಂತೆ ನಡೆದು ಹೋಗಿರುವವು. ಇದರ ಪರಿಣಾಮವಾಗಿ ಜರ್ಮನಿ, ಇಟೆಲಿ ಮತ್ತು ರಸ್ಯಗಳು ಸಹ ಕಲಿಸಿ ನಡೆದು ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳನ್ನು ಬಗ್ಗುಬಡಿದು ಇಡೀ ಯುರೋಪಿನಲ್ಲಿ ಹಾಗೂ ಲೋಕದಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸುವ ಹಂಚಿಕೆ ಮಾಡುತ್ತಿರುವಂತಿದೆ.

ಫಿನ್ಲೆಂಡಿನ ಮೇಲಿನ ರಸ್ಯದ ಧಾಳಿಯ ಕುರಿತು ಇಟಲಿಯು ತನ್ನ ಧೋರಣೆಯನ್ನು ಸಂಪೂರ್ಣವಾಗಿ ಬದಲಾಯಿಸಲು, ಮತ್ತು ಫಿನ್ಲೆಂಡು ರಸ್ಯದೊಡನೆ ರಾಜಿಮಾಡಿಕೊಳ್ಳಲು ಜರ್ಮನಿಯ ಸೂತ್ರಚಾಲನೆಯೇ ಕಾರಣವಾಗಿರುತ್ತದೆ. ಪಶ್ಚಿಮ ರಣರಂಗದಲ್ಲಿ ಪ್ರಚಂಡ ಯುದ್ಧವನ್ನೇನೂ ಹೂಡದೆ ಹೋರಾಟದ ನಟನೆ ನಡಿಸಿ ಸ್ಕಾಂಡಿನೇವಿಯ ಮತ್ತು ಬಾಲ್ಕನ್ ರಾಷ್ಟ್ರಗಳ ಮೇಲೆ ಅಧಿಕಾರವನ್ನು ಸ್ಥಾಪಿಸಲು ಜರ್ಮನಿಯು ಇಟೆಲಿ ಮತ್ತು ರಸ್ಯದ ಸಹಕಾರ ಪಡೆದು ಪ್ರಯತ್ನನಡಿಸುತ್ತಿರುವುದು. ಬ್ರೆನ್ನರ್ ಗಡಿಯಲ್ಲಿ ಹಿಟ್ಲರ್ ಮುಸಲೋನಿಗಳೊಟ್ಟು ಸೇರಿ ಮಾತಾಡಿದುದು ಇದೇ ವಿಷಯವನ್ನೆಂದು ಈಗ ನಿಶ್ಚಯವಾಗಿ ಹೇಳಬಹುದು.

ಸ್ಕಾಂಡಿನೇವಿಯದ ರಾಷ್ಟ್ರಗಳ ಅವಸ್ಥೆ

ಹಿಟ್ಲರರು ಮುಂಚಿನಂತೆ ಹಾರಿ ಡೆನ್ಮಾರ್ಕನ್ನು ನುಂಗಿ ಸುಮಾರು ಅರೆವಾಸಿ ನೋರ್ವೆಯನ್ನು ವಶಪಡಿಸಿಕೊಂಡಿರುವರು. ಈ ನಿರ್ಧಾರವನ್ನವರು ಫಕ್ಕನೆ ಮಾಡಿದುದೇನೂ ಅಲ್ಲ. ದೀರ್ಘಕಾಲದಿಂದ ಯೋಚಿಸಿ ಪ್ಲೇನ್ ನಡಿಸಿದ್ದರು. ಆ ಬಗ್ಗೆ ಸ್ಕಾಂಡಿನೇವಿಯ ರಾಷ್ಟ್ರಗಳಲ್ಲಿ ಒಳಗಿಂದೊಳಗೆ ಸೂತ್ರ ಚಾಲನೆ ನಡಿಸುತ್ತಿದ್ದರು. ಡೆನ್ಮಾರ್ಕು ಅಷ್ಟು ಬೇಗ ಜರ್ಮನಿಯ ಅಧೀನವಾಗಲು ಈ ಸೂತ್ರಚಾಲನೆಯೇ ಕಾರಣ. ಹಿಟ್ಲರರ ಬಲ ಮತ್ತು ಪ್ರಭಾವದಿಂದ ಸ್ಕಾಂಡಿನೇವಿಯ ರಾಷ್ಟ್ರಗಳೆಲ್ಲಾ ದಿಗಿಲುಗೊಂಡಿರುವವು. ಇಂಗ್ಲೆಂಡು ಈ ಸಲ ಹಿಂದು ಮುಂದೆ ನೋಡುತ್ತಾ ಕುಳಿತುಕೊಳ್ಳದೆ ಫಕ್ಕನೆ ನೋರ್ವೆಯ ಸಹಾಯಕ್ಕೆ ಹೋದುದರಿಂದ ಅದನ್ನು ಹಿಟ್ಲರಿಗೆ ಸುಲಭವಾಗಿ ನುಂಗಲು ಸಾಧ್ಯವಾಗಿರುವುದಿಲ್ಲ. ಇಲ್ಲವಾದರೆ ಇಷ್ಟರಲ್ಲೀ ನೋರ್ವೆ ಮಾತ್ರವಲ್ಲದೆ ಸ್ವೀಡನನ್ನು ಕೂಡಾ ಜರ್ಮನಿ ಮತ್ತು ರಸ್ಯಗಳು ಹಂಚಿಕೊಳ್ಳುತ್ತಿದ್ದುವು.

ಇಂಗ್ಲೆಂಡು ಕೂಡಾ ನೌಕಾಪಡೆಯನ್ನು ಸ್ವೀಡನಿನ ಸಮುದ್ರ ಕರಾವಳಿಗೆ ಕಳುಹಿಸಿ ನೌಕಾ ಮುತ್ತಿಗೆ ಹಾಕಿ ಜರ್ಮನಿಯ ನೌಕಾಪಡೆಯೊಡನೆ ಪ್ರಬಲ ಹೋರಾಟ ಹೂಡಿ ಅದರ ಮೂರರಲ್ಲೊಂದರಷ್ಟರ ನೌಕಾಬಲವನ್ನು ನಾಶಮಾಡಿರುವುದರಿಂದ ಹೆಚ್ಚಿನ ಪರಿಣಾಮವಾಗಿರುವುದೆಂಬುದೇನೋ ನಿಜ. ಇದರಿಂದ ಯುರೋಪಿನ ಚಿಕ್ಕ ಚಿಕ್ಕ ರಾಷ್ಟ್ರಗಳಿಗೆ ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳ ಮೇಲೆ ವಿಶ್ವಾಸವುಂಟಾಗುವಂತಾಗಿದೆ. ನೋರ್ವೆಯ ಪ್ರಾಮುಖ್ಯ ಬಂದರಾದ ನಾರ್ವಿಕನ್ನು ಬ್ರಿಟಿಷರು ಜರ್ಮನರಿಂದ ಗೆದ್ದಿರುವರು. ಜರ್ಮನಿಯ ಪ್ರಚಂಡ ಧಾಳಿಯ ದಿಗಿಲಿನಿಂದ ದಿಗಿಲುಗೊಂಡು ಕಕ್ಕಾಬಿಕ್ಕಿಯಾಗಿದ್ದ ನೋರ್ವೆಯ ಸೇನೆಯು ಇಂದು ಸಂಘಟಿತವಾಗಿ ಹೆಚ್ಚಿನ ಧೈರ್ಯ ಮತ್ತು ಸ್ಥೈರ್ಯದಿಂದ ಜರ್ಮನರನ್ನು ವಿರೋಧಿಸುತ್ತಿರುವುದು. ಬ್ರಿಟಿಷ್ ಸೇನೆಯ ಸಹಾಯವೂ ಅವರಿಗೆ ದೊರೆಯುತ್ತಿರುವುದು. ನೋರ್ವೆಯ ಸಮುದ್ರಕರಾವಳಿಯಲ್ಲಿ ಬ್ರಿಟಿಷರು ಜಯಶೀಲರಾದರೂ ಒಳಪ್ರದೇಶದ ನೆಲಯುದ್ಧದಲ್ಲಿ ಜರ್ಮನರನ್ನು ತಡೆಗಟ್ಟಲು ನೋರ್ವೇಜಿಯನ್ ಮತ್ತು ಬ್ರಿಟಿಷ್ ಸೇನೆಗೆ ಎಷ್ಟರ ಮಟ್ಟಿಗೆ ಸಾಧ್ಯವಾಗುವುದೆಂದು ಹೇಳಬರುವುದಿಲ್ಲ. ಇಷ್ಟರಲ್ಲೀ ಜರ್ಮನರು ದಕ್ಷಿಣ ನೋರ್ವೆಯನ್ನು ವಶಪಡಿಸಿಕೊಂಡು ಉತ್ತರಕ್ಕೆ ಮುಂದೊತ್ತುತ್ತಿರುವರು. ನೋರ್ವೆಯ ರಾಜ ಹಾಕನರನ್ನೂ ಅವರ ಮಂತ್ರಿ ಮಂಡಲವನ್ನೂ ನಾಶಮಾಡಲು ಜರ್ಮನರು ಎಡೆಬಿಡದೆ ಪ್ರಯತ್ನಿಸುತ್ತಿದ್ದಾರೆ. ಅವರು ಗುಡ್ಡ ಪ್ರದೇಶಕ್ಕೋಡಿ ಅಡಗಿಕೊಳ್ಳಬೇಕಾಗಿ ಬಂದಿದೆ. ಇಂದೀಗ ಹಿಟ್ಲರನ ಮತ್ತು ಮಿತ್ರರಾಷ್ಟ್ರಗಳ ಪ್ರತಿಷ್ಠೆಯು ನೋರ್ವೆಯ ಯುದ್ಧದ ಪರಿಣಾಮದ ಮೇಲೆ ಹೊಂದಿಕೊಂಡಿದೆ. ಅಲ್ಲಿ ಬ್ರಿಟಿಷರು ಜಯಶೀಲರಾದರೆ ಹಿಟ್ಲರರ ಅದೃಷ್ಟವು ಇಳಿಮುಖವಾಗುವುದು. ಹಿಟ್ಲರರು ಗೆದ್ದರೆ ಮಿತ್ರರಾಷ್ಟ್ರಗಳ ಪ್ರತಿಷ್ಠೆಗೆ ದೊಡ್ಡ ಆಘಾತವುಂಟಾಗುವುದು.

ರಸ್ಯದ ಮೌನದ ಅಂತರ್ಯವೇನು?

ಇಟೆಲಿಯು ಭೂಮಧ್ಯಸಾಗರದ ಮೇಲೆ ಅಧಿಕಾರ ಸ್ಥಾಪಿಸಲೆತ್ನಿಸುವುದೇ?

ರಸ್ಯದ ಧೋರಣೆ

ಇಂದೀಗ ಸೋವಿಯೆಟ್ ರಸ್ಯವು ಮೌನಧಾರಣೆ ಮಾಡಿರುವುದು ಅದರ ಧೋರಣೆಯೇನೆಂದು ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲ. ಸಾಮ್ರಾಜ್ಯವಾದಿ ಮತ್ತು ಡಿಕ್ಟೇಟರ್ ಶಾಹಿ ರಾಷ್ಟ್ರಗಳು ಪರಸ್ಪರ ಕಾದಾಡಿ ಸೋತು ಪತನಹೊಂದಬೇಕೆಂದು ರಸ್ಯವು ಆಶಿಸುವುದು ಸ್ವಾಭಾವಿಕವಾಗಿದೆ. ಸ್ಟೈಲಿನರು ಅದೊಂದು ಸಮಸ್ಯೆಯಾಗಿದ್ದಾರೆ. ರಸ್ಯಕ್ಕೂ ದೊಡ್ಡ ಜರ್ಮನಿಗೂ ಒಳಗಿಂದೊಳಗೆ ಒಡಂಬಡಿಕೆಯಾಗಿಂಬೇಕೆಂದೂ, ನೋರ್ವೆಯನ್ನು ಹಿಟ್ಲರರು ಗೆದ್ದ ಮೇಲೆ ಸೋವಿಯೆಟ್ ಮತ್ತು ಜರ್ಮನ್ ಸೇನೆಗಳು ಒಟ್ಟು ಸೇರಿ ಸ್ವೀಡನನ್ನು ಆಕ್ರಮಿಸಿ ವಶಪಡಿಸಿಕೊಂಡು ಹಂಚಿಕೊಳ್ಳುವವೆಂದೂ ಕೆಲವರ ಅಭಿಮತ. ಆ ಮೇಲೆ ಜರ್ಮನಿಯು ಇಟೆಲಿಯ ಸಹಾಯದಿಂದ ಬಾಲ್ಟಿಕ್ ರಾಷ್ಟ್ರಗಳನ್ನು ಅಧೀನ ಪಡಿಸಿಕೊಳ್ಳುವವೆಂದು ಕೂಡಾ ನಂಬಲಾಗಿದೆ. ಕೊನೆಗೆ ಜರ್ಮನಿಯು ಹೊಲ್ಲೆಂಡ್, ಬೆಲ್‌ಜಿಯಮ್ ಮತ್ತು ಸ್ವೀಡನುಗಳನ್ನು ಕೂಡಾ ಆಕ್ರಮಿಸುವುದೆಂದು ಕೆಲವರ ಊಹೆ. ಜರ್ಮನಿಯು ಸ್ವೀಡನಿನ ಮೇಲೆ ಧಾಳಿ ನಡಿಸಿದಾಗ ರಸ್ಯವು ಸುಮ್ಮನಿರಲಾರದು. ಅದು ಸ್ವೀಡನಿನ ಪೂರ್ವಭಾಗವನ್ನು ಆಕ್ರಮಿಸಿ ವಶಮಾಡಿಕೊಳ್ಳದಿರಲಾರದು. ಅಂತೆಯೇ ಇಟೆಲಿಯೂ ಭೂಮಧ್ಯ ಸಾಗರವನ್ನು ತನ್ನ ವಶಪಡಿಸಿ ಕಪ್ಪು ಸಮುದ್ರದ ಮೇಲೂ ತನ್ನ ಅಧಿಕಾರ ವ್ಯಾಪಿಸಲೆತ್ನಿಸಿದರೆ ರಸ್ಯವು ಮುಂಜಾಗ್ರತೆಯಿಂದ ಆ ಪ್ರದೇಶವನ್ನು ವಶಪಡಿಸಿಕೊಳ್ಳದೆ ಸುಮ್ಮನಿರಲಾರದು. ಆದರೆ ಅದು ಈಗಲೇ ಹಿಟ್ಲರ್ ಮುಸಲೋನಿ ಕೂಟಕ್ಕೆ ಸೇರಿರುವುದೋ ಎಂಬುದು ಸಂದೇಹಕರ.

ಇಟೆಲಿ ಏನು ಮಾಡುವುದು?

ಭೂಮಧ್ಯ ಸಾಗರವು ಇಂಗ್ಲೆಂಡಿನ ಅಧಿಕಾರಕ್ಕೊಳಗಾಗಿರುವುದರಿಂದ ಇಟೆಲಿಯು ತೀವ್ರ ಅತೃಪ್ತಿಗೊಂಡಿದೆ. ಇತ್ತಲಾಗಿ ಬ್ರಿಟಿಷ್ ಸರಕಾರವು ಭೂಮಧ್ಯ ಸಾಗರ ಪ್ರದೇಶದಲ್ಲಿ ತನ್ನ ಬಲವನ್ನು ಹೆಚ್ಚಿಸಿ ತನ್ನ ಸ್ಥಾನವನ್ನು ಭದ್ರಗೊಳಿಸಿದೆ. ಇದರಿಂದ ಇಟೆಲಿಯು ಸಂತಪ್ತವಾಗಿದೆ. ಇಟೆಲಿಯಾನ ಪತ್ರಿಕೆಗಳು ಜರ್ಮನಿಯ ಧೋರಣೆಯನ್ನು ಪ್ರತಿಪಾದಿಸಿ ಇಂಗ್ಲೆಂಡನ್ನು ಪ್ರಬಲವಾಗಿ ಖಂಡಿಸಹತ್ತಿವೆ. ಭೂಮಧ್ಯ ಸಾಗರದಲ್ಲಿ ಇಟೆಲಿಯು ಪ್ರಚಂಡ ನೌಕಾ ಕವಾಯತನ್ನು ನಡಿಸಿದೆ. ಬಾಲ್ಕನ್ ರಾಷ್ಟ್ರಗಳ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಬೇಕೆಂದು ಇಟೆಲಿಯು ಆತುರಪಡುತ್ತಿದೆ. ಪ್ರಕೃತದ ಪರಿಸ್ಥಿತಿಯಲ್ಲಿ ಇಟೆಲಿಯಂತಹ ದೊಡ್ಡ ರಾಷ್ಟ್ರವು ತಟಸ್ಥವಾಗಿ ಸುಮ್ಮನಿರಲು ಸಾಧ್ಯವಿಲ್ಲ. ಅಪಾಯಕ್ಕೊಳಗಾಗದ ಜೀವನವು ನಿಸ್ಸಾರವಾದುದು. ರೋಮನ ವಂಶ ಮಹಾಜನಾಂಗವಾಗಬೇಕಾದರೆ ಗಂಡಾಂತರಗಳನ್ನು ಎದೆಗೊಟ್ಟು ಎದುರಿಸಬೇಕು. ಇಂಗ್ಲೆಂಡು ಸಮುದ್ರದ ಮೇಲೆ ತೋರಿಸುತ್ತಿರುವ ಅಧಿಕಾರವು ಅಸಹನೀಯವಾಗಿದೆ. ಆದರಿಂದಾಗಿ ಇಟೆಲಿಗೆ ವ್ಯಾಪಾರ ಮಾಡುವ ಸ್ವಾತಂತ್ರ್ಯವಿರುವುದಿಲ್ಲ. ಪೋರ್ಚುಗಲಿನಷ್ಟರ ಸ್ವಾತಂತ್ರ್ಯವೂ ಅದಕ್ಕಿಲ್ಲ. ಇಂತಹ ಸನ್ನಿವೇಶದಲ್ಲಿ ಮುಸಲೋನಿಯವರು ಕೈಕಟ್ಟಿ ಸುಮ್ಮನಿರಲಾರರೆಂದು ಇಟೆಲಿಯಾನ ಪತ್ರಿಕೆಗಳು ಎಚ್ಚರವೀಯುತ್ತಿವೆ. ಆದುದರಿಂದ ಇಟೆಲಿಯು ಕೂಡಾ ಭೂಮಧ್ಯ ಸಾಗರ ಮತ್ತು ಬಾಲ್ಕನಿನ ಮೇಲೆ ತನ್ನ ಅಧಿಕಾರವನ್ನು ನೆಲೆಗೊಳಿಸಿ ಮತ್ತು ಫ್ರಾನ್ಸುಗಳನ್ನು ಮೂಲೆಗೊತ್ತಲೆತ್ನಿಸದಿರಲಾರದು. ಅಂತಹ ಗಂಡಾಂತರವನ್ನು ಬ್ರಿಟಿಷರು ಮೊದಲೇ ನಿರೀಕ್ಷಿಸಿ ಅದನ್ನು ತಡೆಗಟ್ಟಲು ಬೇಕಾದ ಸಿದ್ಧತೆ ಮಾಡುತ್ತಿದ್ದಾರೆ. ಅವರ ನೌಕಾಪಡೆಯ ದೊಡ್ಡ ಭಾಗವು ಭೂಮಧ್ಯ ಸಾಗರದಲ್ಲೇ ಇದೆ.

ತುಳುನಾಡ್ ಬೇಂಕ್
ಆಫ್ ಸಪ್ಲೈ ಏಜನ್ಸಿ ಲಿಮಿಟೆಡ್ ಉಡುಪಿ

Authorised & Issued Capital	...	Rs	1,00,000
Subscribed & Paid up Capital	....	Rs	31,340
Reserves & other Funds	...	Rs	22,052

ನಿರಖು ಠೇವಣಾತಿಗಳು ರಿಯಾಯತಿ ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.

ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳೂ ಮಾಡಲ್ಪಡುತ್ತವೆ.

ಹೆಚ್ಚಿನ ವಿವರಗಳಿಗೆ ಬರೆಯಿರಿ.

THULUNAD BANK
OF SUPPLY AGENCY LIMITED.

Degrees: Books: Medicines.

Free H. L. M. S., H. M. B. H., M. D. etc Free Homeo Ayur-Unani-Naturo degrees by post also—Practioners also get soon Homeo Materiamedica, Rs. 5. Homeo Practice book Rs. 4. Insanity Cure Pills Rs. 10 Enclose 2 annas stamp:—

Principal, Indian Homeopathic Institute and Society (Govt Regd.)
P. O. MAHUVA, (Kathiawar Dt. India.

ಬೊಂಬಾಯಿ

(ನಮ್ಮ ಸ್ವಂತ ಬಾತ್ಮೀದಾರರಿಂದ)

ಫೋರ್ಟ್ ಆರ್ಯ ಸಮಾಜ, ಮುಂಬಯಿ ರಾಮ ನವಮಿ—ತಾರೀಖು 16-4-40ನೇ ಮಂಗಳವಾರ ಪ್ರಾತಃಕಾಲ ಘಂಟೆ 8ಕ್ಕೆ ಸಮಾಜ ಮಂದಿರದಲ್ಲಿ ರಾಮನವಮಿಯು ಆಚರಿಸಲ್ಪಟ್ಟಿತು. ವಿದ್ವದ್ವರ್ಯ ಪಂಡಿತ ಅಯೋಧ್ಯಾ ಪ್ರಸಾದ್, ವೈದಿಕ ರಿಸರ್ಚ್ ಸ್ಕಾಲರ್, ಇವರು ಓಂ ಧ್ವಜಾರೋಹಣ ಮಾಡಿದಲ್ಲದೆ, ಪ್ರಾಚೀನ ಕಾಲದಲ್ಲಿ ಓಂ ಧ್ವಜವು ದೇಶ ದೇಶಾಂತರ ಮತ್ತು ದ್ವೀಪ ದ್ವೀಪಾಂತರಗಳಲ್ಲಿ ಹಾರಾಡುತ್ತಿತ್ತೆಂದು ಕಾರಣವಾಗಿ ಈಗ ಅದು ಹಿಂದೀಯರ ಸಭ್ಯತೆ ಮತ್ತು ಸಂಸ್ಕೃತಿಯ ಚಿಹ್ನೆಯಾದ್ದರಿಂದ ಅದರ ರಕ್ಷಣೆಗಾಗಿ ಪ್ರಾಣಾರ್ಪಣೆ ಮಾಡುವುದು ಪ್ರತಿಯೊಬ್ಬ ಆರ್ಯ ಸಮಾಜಿಗಳ ಪರಮ ಕರ್ತವ್ಯವೆಂದು ವಿವರಿಸಿ ರಾಮನವಮಿಯ ಮಹತ್ವವನ್ನು ತನ್ನ ಗಂಭೀರ ವಕ್ತೃತ್ವ ಶೈಲಿಯಲ್ಲಿ ಬೋಧಿಸಿದರು.

ನಾಮಕರಣ—ತಾ. 16-4-40ನೇ ಮಂಗಳವಾರ ಬೆಳಗ್ಗೆ ಘಂಟೆ 10ಕ್ಕೆ, ಮುಂಬಾಯಿಯಲ್ಲಿರುವ ಬೋಳ್ಕೆ ಶ್ರೀ. ಕೆ. ಸುಬ್ಬನವರು ತನ್ನ ಮಗುವಿನ ನಾಮಕರಣವನ್ನು ವೇದೋಕ್ತ ವಿಧಿಯಂತೆ ಫೋರ್ಟ್ ಆರ್ಯ ಸಮಾಜದವರಿಂದ ನೆರವೇರಿಸಿಕೊಂಡರು. ಪಂಡಿತ ಸತ್ಯಾರ್ಥ ಸಿದ್ಧಾಂತ ವಿಶಾರದರು ನಾಮಕರಣವನ್ನು ಸುಸಾಂಗವಾಗಿ ನೆರವೇರಿಸಿದರು. ಮಗುವಿಗೆ ಹರಿಶ್ಚಂದ್ರನೆಂಬ ಶುಭ ನಾಮವನ್ನಿತ್ತು ದೀರ್ಘಾಯುವಾಗಿ ಬಾಳಿ ತನ್ನ ಮಾತಾಪಿತೃಗಳಿಗೂ ದೇಶಕ್ಕೂ ಕೀರ್ತಿಯನ್ನು ತಂದು ಮೆರೆಯಲಿ ಎಂದು ಹರಸಿದರು.

ದಿ. ಬಾರ್ಕೂರು ಬಿಲ್ಲವರ ಚಾರಿಟಿ ಸಂಘ, ಮುಂಬಾಯಿ— ಬಾರ್ಕೂರು ಬಿಲ್ಲವ ಬಂಧು ಭಗಿನಿಯರಿಗೆ ನಮ್ಮ ವಿನಂತಿ. ಮಹಾಶಯರೇ ನಮ್ಮಾ ಸಂಘವು 1917ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು, ಅಂದಿನಿಂದ ಇಂದಿನ 22 ವರ್ಷಗಳ ಪರಿಯಂತರ ಬಿಲ್ಲವ ಸಮಾಜದ ಸೇವೆಯನ್ನು ಶಕ್ತಾದಷ್ಟು ಮಟ್ಟಿಗೆ ಮಾಡಿಕೊಂಡು ಬಂದಿರುತ್ತದೆ. ಈ ಸ್ವಲ್ಪ ಸಂಘವು ಅನೇಕ ಕಷ್ಟನಷ್ಟಗಳಿಗೂ, ಎದುರು ತೊಂದರೆಗಳಿಗೂ ತುತ್ತಾದರೂ, ತನ್ನ ಕಾರ್ಯ ಸಾಧನೆಯನ್ನು ಅತ್ಯಂತ ಧುರಂಧರತೆಯಿಂದ ಮುಂದೆ ಸಾಗಿಸುತ್ತಾ ಬಂದಿರುತ್ತದೆ. ಒಂದು ಸಮಾಜದಲ್ಲಿ ಒಗ್ಗಟ್ಟೂ, ಪರಸ್ಪರ ಪ್ರೇಮವೂ ನೆಲೆಗೊಳ್ಳಬೇಕಾದರೆ, ಸಂಘ ಶಕ್ತಿಯು ಅತ್ಯಾವಶ್ಯಕವೆಂದು ತಿಳಿದ ನಮ್ಮ ಪೂರ್ವಿಕರು "ದಿ ಬಾರ್ಕೂರು ಬಿಲ್ಲವರ ಚಾರಿಟಿ ಸಂಘ"ವನ್ನು ಸ್ಥಾಪಿಸಿ ತಮ್ಮ ತನುಮನ ಧನವನ್ನು ಅರ್ಪಿಸಿ ಸಮಾಜದ ಅಭ್ಯುದಯದ ಪ್ರಥಮ ಸೋಪಾನವನ್ನು ಹಾಕಿ ಮುಂದಿನ ಮೇಲು ಮೆಟ್ಟಲನ್ನು ಹತ್ತುವರೇ ನಮಗೆ ತೋರಿಸಿರುವರು.

ಇಂದಿಗೆ ನಮ್ಮಾ ಸಂಘವು ಮುಂಬಾಯಿಯಲ್ಲಿರುವ ಅಖಿಲ ಬಿಲ್ಲವ ಸಂಸ್ಥೆಗಳಲ್ಲಿ ಬಹಳ ಪ್ರಾಚೀನದ್ದಾಗಿರುತ್ತದೆಂತ ನಮಗೆಲ್ಲರಿಗೂ ತಿಳಿದ ವಿಷಯವಷ್ಟೆ. ಬಿಲ್ಲವ ಸಮಾಜದ ಪೂರ್ವ ಇತಿಹಾಸವು ನಮ್ಮವರಿಗೇನೇ ಹೆಚ್ಚಾಗಿ ತಿಳಿಯದೆ ಇರುವದರಿಂದಲೂ, ನಮ್ಮ ಪೂಜ್ಯ ಗುರುಗಳಾದ ಬ್ರಹ್ಮ ಶ್ರೀ ನಾರಾಯಣ ಪರಮ ಹಂಸರ ಆತ್ಮೀಯ ತತ್ವವನ್ನು ಪ್ರಚುರಗೊಳಿಸಬೇಕೆಂದೂ, ಬಾರ್ಕೂರು ಪ್ರಾಂತ್ಯಕ್ಕೆ ಸೇರಿದ ಬಿಲ್ಲವ ಸಮಾಜದಲ್ಲಿ ಪ್ರಥಮವಾಗಿ ನಮ್ಮ ಗುರುಗಳ ಶಿಷ್ಯರಾಗಿದ್ದ ಸ್ವಾಮಿ ವಿಷ್ಣು ತೀರ್ಥರವರ ಚರಿತ್ರೆಯನ್ನು ಅನೇಕರು ತಿಳಿಯದೆ ಇರುವುದರಿಂದಲೂ, ಜಾತಿ ವಿಜಾತಿ ಗ್ರಹಸ್ಥರಿಗೆ ಪ್ರಚಾರ ಮಾಡುವುದು ಅವಶ್ಯವೆಂದು ತಿಳಿದು ನಮ್ಮಾ ಸಂಘವು "ಬಿಲ್ಲವ" ಎಂಬ ಪುಸ್ತಕವನ್ನು ಸ್ಥಾಪಿಸಿ ಪ್ರಚಾರಕ್ಕೆ ಕೊಡಲ್ಪಟ್ಟಿರುತ್ತದೆ. ಸ್ವಜಾತಿ ಬಂಧು ಭಗಿನಿಯರು ಈ ಪುಸ್ತಕವನ್ನು ತೆಗೆದುಕೊಂಡು ನಮ್ಮಾ ಪ್ರಯತ್ನವು ಮುಂದೆ ಸಾಫಲ್ಯವಾಗುವಂತೆ ನೆರವಾಗದಲ್ಲದೆ ಬಾರ್ಕೂರಿನ ಪ್ರತಿಯೊರ್ವ ಬಂಧು ಭಗಿನಿಯರು ಸಂಘದ ಸಭ್ಯರಾಗಿ ಸೇರಿ ಇದರ ಶ್ರೇಯೋಭಿವೃದ್ಧಿಯನ್ನು ಬಯಸುವರೇ ಮನವಿ ಮಾಡಿಕೊಳ್ಳುತ್ತೇವೆ.

ಸಮಾಜದ ಬಂಧು ಭಗಿನಿಯರಲ್ಲೊಂದು ವಿನಂತಿ—"ದಕ್ಷಿಣಕನ್ನಡ ಜಿಲ್ಲೆಯ ಹಳ್ಳಿಗಳಲ್ಲಿ ವರ್ಷ ಸಾಧಾರಣವಾಗಿ ಎಲ್ಲರಿಗೂ ಮಳೆಗಾಲದಲ್ಲಿ ಕೆಲಸವು ಬಹಳ ಕಡಿಮೆ ಇರುತ್ತದೆ. ಇಂಥಾ ಕಾಲದಲ್ಲಿ ಸಮಯವನ್ನು ವ್ಯರ್ಥವಾಗಿ ಹಾಳು ಮಾಡದೆ ಒಳ್ಳೆಯ ಕೆಲಸಕ್ಕೆ ಉಪಯೋಗ ಮಾಡುವುದು ಪ್ರತಿಯೊಬ್ಬ ಮಾನವನ ಕರ್ತವ್ಯ. ಅದುದರಿಂದ ಇಂಥಾ ಬಿಡು ಸಮಯದಲ್ಲಿ ಪ್ರತಿಯೊಬ್ಬರೂ ಚರಕವನ್ನು ಉಪಯೋಗಿಸುವುದು ಬಹಳ ಉತ್ತಮ. ಅದರಲ್ಲಂತೂ ಬಿಲ್ಲವ ಸಮಾಜವು ಚರಕವನ್ನು ಕೈಕೊಳ್ಳುವುದು ಯೋಗ್ಯವೆಂತ ನಮ್ಮ ಅಭಿಪ್ರಾಯ. ಕಾರಣ ಮುಂದಕ್ಕೆ ಅವರ ಸ್ವತಂತ್ರ ವೃತ್ತಿಯಿಂದಕ್ಕೆ ಹಾನಿ ಬರುವ ಸಂಭವವಿರುವುದರಿಂದ ಅವಾಗ್ಗೆ ಬಿಲ್ಲವ ಸಮಾಜಕ್ಕೆ ಹೆಚ್ಚಿನ ತೊಂದರೆಯು ಬಾಧಿಸಬಹುದು. ಆದ ಪ್ರಯುಕ್ತ ಸಮಯವನ್ನು ನಿಷ್ಪ್ರಯೋಜನವಾಗಿ ವೆಚ್ಚ ಮಾಡದೆ ಅಂತಾ ಸಮಯವನ್ನು ನೂಲುವುದಕ್ಕೆ ಉಪಯೋಗಿಸಬೇಕೆಂತ ಈ ಮೂಲಕ ನಾವು ಬಿಲ್ಲವ ಸಮಾಜದ ಪ್ರತಿಯೊಬ್ಬ ಬಂಧು ಭಗಿನಿಯರಿಗೂ ವಿನಂತಿ ಮಾಡಿಕೊಳ್ಳುತ್ತೇವೆ. ಇತಿ ಕಾರ್ಯ ನಿರ್ವಾಹಕ ಸಭೆಯ ಅನುಮತಿ ಮೇರೆಗೆ

ಪಿ. ಕೆ. ಸುವರ್ಣ, ಅಧ್ಯಕ್ಷ.
ವೈ. ಸುಬ್ಬ
ಮಾನಾರ್ಥ ಜನರಲ್ ಕಾರ್ಯದರ್ಶಿ.

ನವಯುಗದಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ನಿಮ್ಮ ವ್ಯವಹಾರ ವೃದ್ಧಿಗೊಳಿಸಿರಿ!

ಪ್ರಕಟಣೆ

ಮಂಗ್ಳಪಾಡಿ ಗ್ರಾಮದಲ್ಲಿರುವ ಸೋಂಕಾಡಿ ದುಗ್ಗಪ್ಪ ಭಂಡಾರಿಗಳ ಅಳಿಯ ರಾಮಯ್ಯ ಭಂಡಾರಿಯು ಈ ಮೂಲಕ ತಿಳಿಯಪಡಿಸುವದೇನಂದ್ರೆ.

ನನ್ನ ಮಾವಾ ಅಲ್ಲಾ ಮಂಜಪ್ಪ ಭಂಡಾರಿಯು ಕೆಲವು ವರುಷಗಳಿಂದ ನನ್ನ ತವರಿನ ಆಸ್ತಿಗಳ ಆಡಳ್ತೆ ನೋಡಿಕೊಂಡು ಬರುವಲ್ಲಿ ತವರಿನ ಆಸ್ತಿಗಳ ಉತ್ಪತ್ತಿಯಿಂದ ಆತನ ಹೆಂಡ್ತಿ ಮಕ್ಕಳ ಹೆಸರಲ್ಲಿ ಹೆಚ್ಚಿನ ಆಸ್ತಿಗಳು ಬಸ್ತಿಕೊಂಡು ಬಂದದ್ದಲ್ಲದೆ ಈಗ ಕೆಲವು ಸಮಯದ ಆರಭ್ಯ ತವರಿನ ಇತರ ಮೆಂಬರಿಗೆ ತೊಂದರೆ ಮಾಡುವ ಕೆಟ್ಟ ಇರಾದೆಯಿಂದ ತವರಿಗೆ ಹಾನಿಕರವಾದ ಹೆಚ್ಚಿನ ಅಕೃತ್ಯಗಳು ನಡ್ಸಿದ್ರಿಂದ ಆತನನ್ನು ಆಡಳ್ತೆಯಿಂದ ತೆಗೆದು ಹಾಕುವರೆಯೂ ವ ಆತ ಮಾಡಿದ ಪರಾಧೀನಗಳು ರದ್ದು ಮಾಡುವರೆ ವ ಇತರ ವಿವೃತ್ತಿಗಳ ಬಗ್ಗೆ ನಾನು ವ ಇತರ ಮೆಂಬರು ಕ್ಯಾಜ್ಯಕ್ಕೆ ಉದ್ಯುಕ್ತರಾಗಿ ಆ ಕುರಿತು ರಿಕಾರ್ಡುಗಳು ಸಂಗ್ರಹಿಸುವ ಸಂಗ್ತಿ ಸದ್ರಿ ಮಂಜಪ್ಪ ಭಂಡಾರಿಯು ತಿಳಕೊಂಡು ನಮ್ಮ ತವರಿಗೆ ಇನ್ನು ಹೆಚ್ಚಿನ ಮೋಸಕೊಡಬೇಕೆಂಬ ಕೆಟ್ಟ ಇರಾದೆಯಿಂದ ನಮ್ಮ ತವರಿಗೆ ಬರತಕ್ಕ ಕೆಲವು ಆಧಾರ ಕಾಗದಗಳು ವಗ್ಯೆರೆ ಏನೊಂದು ಪ್ರತಿಫಲ ಪಡೆಯದೆ ಅನ್ಯರ ಹೆಸರಲ್ಲಿ ಬಿನಾಮಿ ಮೇಲುಚೀಟು ಮಾಡಿಕೊಡುವ ಇರಾದೆಯಲ್ಲಿ ಇರುವದಾಗಿ ತಿಳಿಯ ಬರುವದರಿಂದ ತಿಳ್ಸುವದೇನಂದ್ರೆ. ಈಗಿರುವ ಸ್ಥಿತಿಯಲ್ಲಿ ತವರಿನ ಪರವಾಗಿ ಅಂದ್ರೆ ತವರಿನ ಆಡಳ್ತೆದಾರನ ನೆಲೆಯಲ್ಲಿ ಸದ್ರಿ ಮಂಜಪ್ಪ ಭಂಡಾರಿಯಿಂದ ಯಾತೊಬ್ಬರೂ ಯಾವದೊಂದು ದಸ್ತೈವಜುಗಳು ಬರ್ಸಿಕೊಂಡದ್ದಾದ್ರೆ ಅಂಥಾ ದಸ್ತೈವಜುಗಳು ತವರಿನ ಇತರ ಮೆಂಬರ್ರು ಮೇಲಾಗಲಿ ತವರಿನ ಆಸ್ತಿಗಳ ಮೇಲಾಗಲಿ ಬಾಧಿಸುವಂತಾದ್ದಲ್ಲ. ಇದಕ್ಕೆ ವಿರೋಧವಾಗಿ ನಡಕೊಳ್ಳುವವರು ಅದ್ರ ಸಾಧಕ ಬಾಧಕಗಳನ್ನು ಅವರೇ ಸಹಿಸಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಸರ್ವರೂ ತಿಳಿದಿರತಕ್ಕದ್ದು.

ಮಂಗ್ಳಪಾಡಿ
20-4-40 } ರಾಮಯ್ಯ ಭಂಡಾರಿ ರುಜು

ಓರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್

ಸ್ಥಾಪಿತ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನ ಕಾರ್ಯಾಲಯ—ಮುಂಬಯಿ

ನಿಮ್ಮನ್ನು ಆಶ್ರಯಿಸಿಕೊಂಡಿರುವವರಿಗೆ, ಮುಪ್ಪಿನಲ್ಲಿ ನಿಮಗೆ ಮತ್ತು ನಿಮ್ಮನ್ನು ಹೊಂದಿಕೊಂಡಿರುವವರಿಗೆ ಮುದ್ದಿಗಾಗಿ ಪರಾವಲಂಬಿಗಳಾಗದೆ ತಕ್ಕಷ್ಟು **ಆರ್ಥಿಕ ಸ್ವಾತಂತ್ರ್ಯವು** ನಿಸ್ಸಂದೇಹವಾಗಿ ದೊರಕುವಂತಹ ನಿಧಿಯು ಕ್ಲಪ್ತ ಅವಧಿಗಳ ಚಿಕ್ಕಪಾವತಿಗಳಿಂದ ನಿಶ್ಚಯವಾಗಿ ಬೆಳೆದು ಬರುವಂತೆ ಮಾಡುವ ಏಕಮಾತ್ರ ಸಾಧನವೆಂದರೆ **ಜೀವವಿಮೆ ಮಾಡುವುದೇ.**

ಯೋಗ್ಯಾಯೋಗ್ಯತೆಯನ್ನು ಪರಿಶೀಲಿಸಬಲ್ಲ ಸಾವಿರಾರುಮಂದಿ ಪ್ರತಿ ವರ್ಷವೂ "ಓರಿಯಂಟಲ್" ನಲ್ಲೇ ತಮ್ಮ ಜೀವವಿಮೆಮಾಡಿ ತಮ್ಮನ್ನು ಅವಲಂಬಿಸಿಕೊಂಡಿರುವವರಿಗೂ ವೃದ್ಧಾಪ್ಯದಲ್ಲಿ ತಮಗೂ ತಮ್ಮ ಆಶ್ರಿತರಿಗೂ **ಆರ್ಥಿಕ ಸ್ವಾತಂತ್ರ್ಯದ ತಳಹದಿ** ಹಾಕುತಿದ್ದಾರೆ.

ನೀವೇಕೆ ಕಾಲಹರಣ ಮಾಡುವಿರಿ?

ಇಂದೇ ಓರಿಯಂಟಲಿನ ಒಂದು ವಿಮಾಪತ್ರ ಹೊಂದಿರಿ!

ವಿಷಯ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ದಿ ಇನ್ಸ್‌ಪೆಕ್ಟರ್,
ಓರಿಯಂಟಲ್ ಲೈಫ್ ಆಫೀಸು,
ಮೈನ್ ರೋಡ್, ಮಡಿಕೇರಿ, (ಕೊಡಗು.)

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸು,
ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು.

—ORIENTAL—

GOVERNMENT SECURITY LIFE ASSURANCE CO., LTD.

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ನವಯುಗ

ಉಡುಪಿ, ಗುರುವಾರ ತಾ. ೨೫-೪-'೪೦

ಹಿಂದೂದೇಶದ ಕುರಿತು ಬ್ರಿಟಿಷ್ ಪಾರ್ಲಿಮೆಂಟಿನ ಚರ್ಚೆ

ಕಳೆದ ವಾರ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಹಿಂದೀ ಪ್ರಶ್ನೆಯ ಕುರಿತು ನಡೆದ ಚರ್ಚೆಯ ಘಟನೆಯದಿದ್ದು ಅಂತರರಾಷ್ಟ್ರೀಯ ಜನಮತವನ್ನು ಸಮಾಧಾನಪಡಿಸುವ ದೃಷ್ಟಿಯಿಂದ ನಡೆಸಲ್ಪಟ್ಟದೆಂದರೆ ತಪ್ಪಾಗಲಾರದು. ಹಿಂದೂದೇಶದ ಪರಿಸ್ಥಿತಿಗೂ ಅದಕ್ಕೂ ಸಂಬಂಧವಿರುವುದಿಲ್ಲ. ಹಿಂದೀಯರ ಮೇಲೆ ಅದು ಯಾವ ಪರಿಣಾಮವನ್ನೂ ಮಾಡಿರುವದಿಲ್ಲ. ಬ್ರಿಟನು ಹಿಂದೂದೇಶಕ್ಕೆ ಅನ್ಯಾಯಮಾಡುತ್ತಿದೆ. ಅದರ ಸ್ವಾತಂತ್ರ್ಯದ ಕುರಿತು ಸ್ವಪರ ವಂಚಕ ಕುಟಿಲಧೋರಣೆ ವಹಿಸಿದೆ. ಲೋಕಕ್ಕೆಲ್ಲ ಪ್ರಜಾಸತ್ತೆಯ ವೇದಾಂತವನ್ನು ಸಾರಿ ಸಾರಿ ಹಿಂದೂ ದೇಶವನ್ನು ಗುಲಾಮಗಿರಿಯಲ್ಲಿರಿಸಿ ನರಳಿಸುತ್ತಿದೆಯೆಂದು ಅಮೇರಿಕವೇ ಮೊದಲಾದ ರಾಷ್ಟ್ರಗಳಲ್ಲಿ ಅಭಿಪ್ರಾಯ ಹಬ್ಬಿ ಪ್ರಬಲವಾಗುತ್ತಿದೆ. ಇದರಿಂದ ತಳಮಳಗೊಂಡ ಬ್ರಿಟಿಷ್ ಸರಕಾರವು ಲೋಕಮತದ ಕಣ್ಣಿಗೆ ಮಣ್ಣು ಹಾಕಲು ನಡಿಸಿದ ಪ್ರಯತ್ನವೇ ಕಳೆದ ವಾರ ಪಾರ್ಲಿಮೆಂಟಿನಲ್ಲಿ ನಡೆದ ಚರ್ಚೆ. ಈ ಚರ್ಚೆಯಲ್ಲಿ ಭಾಗವಹಿಸಿದ ಲೋರ್ಡ್ ಜೆಟ್ಲೆಂಡರೇ ಮೊದಲಾದ ಸರಕಾರದ ಪ್ರತಿನಿಧಿಗಳೂ ಬೇರೆ ಬೇರೆ ಪಕ್ಷಗಳವರೂ ಹಿಂದೂದೇಶದ ಪರಿಸ್ಥಿತಿಯ ಕುರಿತು ಅನ್ಯಾಯವಾದ ಚಿತ್ರವನ್ನು ಲೋಕದ ಮುಂದಿಡಲೆತ್ನಿಸಿರುತ್ತಾರೆ. ಕಾಂಗ್ರೆಸಿನ ಕೇಳಿಕೆಯ ಮೇರೆಗೆ ಹಿಂದೂದೇಶಕ್ಕೆ ಸ್ವಾತಂತ್ರ್ಯವಿತ್ತರೆ ಹಿಂದು ಮುಸಲ್ಮಾನರು ಹೊಡೆದಾಡಿಕೊಂಡು ಗಲಾಟೆಯಾಗುವುದು ನಿಶ್ಚಯ. ವೆಸ್ಟ್‌ಮಿನಿಸ್ಟರ್ ರೀತಿಯ ಡೊಮಿನಿಯನ್ ಸ್ಟೇಟಸನ್ನು ಹಿಂದೂದೇಶಕ್ಕೆ ತಾವು ಕೊಡಲೊಪ್ಪಿದಾಗ ಅದನ್ನು ಕಾಂಗ್ರೆಸ್ ನಿರಾಕರಿಸಿರುವುದು. ಕಾಂಗ್ರೆಸು ದೇಶದಲ್ಲಿ ತನ್ನ ಸಂಪೂರ್ಣವಾದ ಅಧಿಕಾರವನ್ನು ಸ್ಥಾಪಿಸಲೆತ್ನಿಸುತ್ತಿದೆ. ಇದರಿಂದ ಮುಸಲ್ಮಾನರು ಉದ್ವೇಗಗೊಂಡು ಜಂಡಾಯವೆಬ್ಬಿಸಿರುತ್ತಾರೆಂಬುದೇ ಬ್ರಿಟಿಷ್ ಮುತ್ಸದ್ದಿಗಳ ಅಭಿಪ್ರಾಯದ ಮಥಿತಾರ್ಥ. ಹಿಂದೀ ಪ್ರಶ್ನೆಯ ಕುರಿತು ಇಂಗ್ಲೆಂಡಿನ ಎಲ್ಲಾ ಪಕ್ಷಗಳವರೊಳಗೂ ಬಹುತೇಕ ಒಮ್ಮತವಿರುತ್ತದೆ. ಅವರಿಗೆ ಹಿಂದೂದೇಶದ ಮೇಲಿನ ಅಧಿಕಾರವನ್ನು ಬಿಟ್ಟುಕೊಡಲು ಮನಸ್ಸಿರುವುದಿಲ್ಲೆಂಬುದು ಸ್ಪಷ್ಟವಾಗುತ್ತದೆ.

ವೆಸ್ಟ್‌ಮಿನಿಸ್ಟರ್ ರೀತಿಯ ಡೊಮಿನಿಯನ್ ಸ್ಟೇಟಸನ್ನು ಬ್ರಿಟಿಷ್ ಸರಕಾರವು ಹಿಂದು ದೇಶಕ್ಕೆ ಕೊಡಲೊಪ್ಪಿರುವುದೆಂದು ಲೋರ್ಡ್ ಜೆಟ್ಲೆಂಡರು ಮಾಡಿದ ಹೇಳಿಕೆಯು ಸತ್ಯವಲ್ಲ. ಹಿಂದೂದೇಶಕ್ಕೆ ಕೂಡಲೆ ಡೊಮಿನಿಯನ್ ಸ್ಟೇಟಸ್ ಕೊಡಲಾಗುವುದೆಂದು ಯಾರೂ ಹೇಳಿದವರಿಲ್ಲ. ಹಿಂದು ದೇಶವು ಬೇಗನೆ ವೆಸ್ಟ್‌ಮಿನಿಸ್ಟರ್ ರೀತಿಯ ಡೊಮಿನಿಯನ್ ಸ್ಟೇಟಸನ್ನು ಪಡೆಯುವಂತೆ ಪ್ರಯತ್ನಿಸುವುದೇ ಬ್ರಿಟಿಷ್ ಸರಕಾರದ ಗುರಿಯೆಂದು ಮಾತ್ರ ಲೋರ್ಡ್ ಲಿನ್ಲಿತ್‌ಗೋವರು ವಿದಿತಪಡಿಸಿರುವರು. ಈ ಗುರಿಮುಟ್ಟುವದು ಯಾವಾಗ ಮತ್ತು ಹೇಗೆ ಎಂಬುದನ್ನವರು ಹೇಳಿರುವುದಿಲ್ಲ. ಯುದ್ಧ ಮುಗಿದಾಕ್ಷಣ ಹಿಂದು ದೇಶಕ್ಕೆ ಡೊಮಿನಿಯನ್ ಸ್ಟೇಟಸ್ ಕೊಡಲಾಗುವುದೆಂದು ಕೂಡಾ ವೈಸರಾಯರು ನಿಶ್ಚಿತವಾಗಿ ಹೇಳಿರುವುದಿಲ್ಲ.

ವೈಸರಾಯರಿಗೂ ಕಾಂಗ್ರೆಸ್ ಮತ್ತು ಇತರ ಮುಖಂಡರಿಗೂ ಹಿಂದೀ ಬಿಕ್ಕಟ್ಟನ್ನು ನಿವಾರಿಸುವ ಸಂಬಂಧವಾಗಿ ನಡೆದ ಮಾತುಕತೆಯು ನಿಷ್ಫಲವಾಗಲು ಕಾರಣ ಹಿಂದೂ ಮುಸಲ್ಮಾನ ವೈಷಮ್ಯವಲ್ಲ. ಹಿಂದು ಮುಸಲ್ಮಾನ ಪ್ರಶ್ನೆಗೂ, ಹಿಂದೀ ಸ್ವಾತಂತ್ರ್ಯಕ್ಕೂ ಯಾವ ಸಂಬಂಧವೂ ಇರುವುದಿಲ್ಲ. ಹಿಂದೂ ದೇಶದ ಸ್ವಾತಂತ್ರ್ಯವನ್ನಪೇಕ್ಷಿಸದ ಹಿಂದೀಯರಾರೂ ಇರುವುದಿಲ್ಲ. ಮುಸ್ಲಿಂ ಲೀಗಿನವರು ಕೂಡಾ ಹಿಂದೂ ದೇಶದ ಸಂಪೂರ್ಣ ಸ್ವಾತಂತ್ರ್ಯ ಸಾಧನೆಯ ಉದ್ದೇಶವುಳ್ಳವರಿದ್ದಾರೆ. ದೇಶದ ರಕ್ಷಣೆ, ವ್ಯಾಪಾರ ಮತ್ತು ಆರ್ಥಿಕ ವಿಷಯ, ಆಶ್ರಿತ ಸಂಸ್ಥಾನಗಳ ಮತ್ತು ಅಲ್ಪ ಸಂಖ್ಯಾತ ಪ್ರಶ್ನೆಯ ಕುರಿತು ಹಲವು ಭಿನ್ನತೆಗಳನ್ನು ಕೇಳುವಷ್ಟರ ಸಂಕುಚಿತತೆಯನ್ನು ವೈಸರಾಯರು ತೋರಿಸಿದುದರಿಂದ ಗಾಂಧಿಜಿಯವರು, ತನಗೆ ಮತ್ತು ವೈಸರಾಯರಿಗೆ ಮೂಲಭೂತವಾದ ಭಿನ್ನಾಭಿಪ್ರಾಯವಿದೆಯೆಂದು ರಾಜಿ ಪ್ರಸ್ತಾಪವನ್ನೇ ಬಿಟ್ಟುಬಿಟ್ಟರು. ದೇಶಕ್ಕೆ ಸ್ವಾತಂತ್ರ್ಯವನ್ನು ನಿರಾಕರಿಸಲು ಬ್ರಿಟಿಷರು ಜಾತೀಯ ಪ್ರಶ್ನೆಯನ್ನೊಂದು ನೆವನವಾಗಿ ಮಾಡಿಕೊಂಡಿರುವರೆಂಬುದು ಸೂರ್ಯಪ್ರಕಾಶದಷ್ಟು ಸ್ಪಷ್ಟವಾಗಿದೆ. ಬ್ರಿಟಿಷ್ ಸರಕಾರವು ಹಿಂದೂದೇಶದ ಕುರಿತಾದ ತನ್ನ ಕರ್ತವ್ಯವನ್ನು ಕಡೆಗಣಿಸುತ್ತಿದೆ. ಅದಕ್ಕೆ ನ್ಯಾಯವನ್ನೀಯಲು ನಿರಾಕರಿಸುತ್ತಿದೆಯೆಂಬ ಅಭಿಪ್ರಾಯವು ಅಮೇರಿಕ ಮೊದಲಾದ ರಾಷ್ಟ್ರಗಳಲ್ಲಿ ಬಲಗೊಳ್ಳುತ್ತಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಕಳೆದ ವಾರ ನಡೆದಂತಹ ಪಾರ್ಲಿಮೆಂಟಿನ ಚರ್ಚೆಗಳಿಂದ ಲೋಕದ ಜನಮತವು ವಂಚಿತವಾಗುವದಾಗಿಲ್ಲ.

ಮಿ. ಜಿನ್ನರಾಗಲಿ, ಮಹಾತ್ಮ ಗಾಂಧಿಯವರಾಗಲಿ, ಹಿಂದೂದೇಶದಲ್ಲಿ ಅಂತಃಕಲಹ ಹೆಚ್ಚಿಸಿ ಅನಾಯಕತ್ವವನ್ನುಂಟುಮಾಡಲು ಹೊರಟಿರುವುದಿಲ್ಲ. ಬ್ರಿಟಿಷರು ತಮ್ಮ ಬೇಳೆ ಬೇಯಿಸುವುದಕ್ಕಾಗಿ ಆ ಸುಳ್ಳು ಕೂಗನ್ನೆಬ್ಬಿಸಿರುತ್ತಾರೆ. ಜಾತೀಯ ಪ್ರಶ್ನೆಯ ಇತ್ಯರ್ಥದ ಮತ್ತು ಹಿಂದೂದೇಶದ ಎಲ್ಲಾ ಪಕ್ಷೀಯರನ್ನೂ ಬಹುತೇಕ ತೃಪ್ತಿಪಡಿಸುವ ರಾಜಕೀಯ ಘಟನೆಯನ್ನು ತಯಾರಿಸುವ ಜವಾಬ್ದಾರಿಯು ಹಿಂದೀಯರದಾಗಿದೆ. ಅದಕ್ಕೆ ಕಾಂಗ್ರೆಸು ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯ ಸೂಚನೆಯನ್ನು ಮುಂದೊಡ್ಡಿದೆ. ಬಹು ಜನ ಮತದ ಬೆಂಬಲ ಪಡೆದು ಯಾವುದಾದರೊಂದು ವಿಷಯವನ್ನು ಇತ್ಯರ್ಥಿಸುವ ನ್ಯಾಯವಾದ ಮಾರ್ಗವಿದು. ಕಾಂಗ್ರೆಸಿನವರು ತಮ್ಮ ತತ್ವವನ್ನು ಮೂಲೆಗೊತ್ತಿ ಪ್ರತ್ಯೇಕ ಪ್ರಾತಿನಿಧ್ಯದ ಮೂಲಕ ಮುಸಲ್ಮಾನ ಪ್ರತಿನಿಧಿಗಳನ್ನಾರಿಸುವುದಕ್ಕೆ ಕೂಡಾ ಒಪ್ಪಿರುತ್ತಾರೆ. ಅಲ್ಪ ಸಂಖ್ಯಾತರ ನ್ಯಾಯವಾದ ಹಕ್ಕು ಬಾಧ್ಯತೆಗಳನ್ನು ಅಂಗೀಕರಿಸಲು ಅವರು ಸದಾ ಸಿದ್ಧರೇ ಇದ್ದಾರೆ. ಅಂಥ ವೇಳೆ ಬ್ರಿಟಿಷ್ ಸರಕಾರಕ್ಕೆ ಹಿಂದೂದೇಶದ ಮೇಲಿನ ರಾಜಕೀಯ ಅಧಿಕಾರವನ್ನು ಬಿಟ್ಟುಕೊಡಲು ಮನಸ್ಸಿದ್ದರೆ ಅದು ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯನ್ನು ಕರೆದು ತಮಗೆ ಬೇಕಾದ ರಾಜಕೀಯ ಘಟನೆಯನ್ನು ತಯಾರಿಸುವ ಸ್ವಾತಂತ್ರ್ಯವನ್ನು ಹಿಂದೀಯರಿಗೀಯಬೇಕು. ಸುಳ್ಳು ನೆವನಗಳನ್ನು ಮುಂದೊಡ್ಡಿ ಹಿಂದೂದೇಶದ ರಾಜಕೀಯ ಸ್ವಾತಂತ್ರ್ಯವನ್ನು ಅದಷ್ಟು ಮುಂದೆ ಹಾಕಲೆತ್ನಿಸುವುದಕ್ಕಿಂತ ತಮಗೆ ಅಧಿಕಾರವನ್ನು ಬಿಟ್ಟುಕೊಡಲು ಮನಸ್ಸಿಲ್ಲವೆಂದು ಹೇಳುವುದರಲ್ಲಿ ಯಥಾರ್ಥತೆಯ ಗೌರವವಿದೆ. ಬ್ರಿಟಿಷ್ ಸರಕಾರವೂ ಇದೇ ರೀತಿಯ ಧೋರಣೆ ವಹಿಸಿದರೆ ಹಿಂದೂದೇಶದ ಸಂಪೂರ್ಣ ದ್ವೇಷವನ್ನದು ಸಂಪಾದಿಸಿದಂತಾಗುವುದು. ಪ್ರಚಂಡ ಆಂದೋಲನದ ಅಗ್ನಿ ಪರೀಕ್ಷೆಗದನ್ನು ದೂಡಿ ಸ್ನೇಹಪರ ಸಹಕಾರ ಮತ್ತು ಸಂಬಂಧದ ಸಂದರ್ಭವನ್ನೆ ಕಳಕೊಳ್ಳುವಂತಾಗುವದು.

ಬೊಂಬಾಯಿ ಕನ್ನಡಿಗರಲ್ಲಿ ವಿನಂತಿ

ಬೊಂಬಾಯಿಯು 'ನವಯುಗ' ಪತ್ರಿಕೆಗೆ ಗಣನೀಯ ಪ್ರೋತ್ಸಾಹವನ್ನು ಈ ವರೆಗೂ ಕೊಡುತ್ತಾ ಬಂದಿದೆ. ಬೊಂಬಾಯಿ ನಗರದ ಪ್ರಾಮುಖ್ಯತೆಗೆ ಹೊಂದಿಲ್ಲದ ಬೆಂಬಲವನ್ನು ಅಲ್ಲಿಯ ಕನ್ನಡಿಗರು ವಿಶೇಷವಾಗಿ ದಕ್ಷಿಣ ಕನ್ನಡಿಗರು ನವಯುಗಕ್ಕಿತ್ತಿರುವರೆನ್ನಲು ಅಭಿಮಾನಪಡುತ್ತೇವೆ. ನಮ್ಮ ಪತ್ರಿಕೆಯ ಕಾರ್ಯಕಲಾಪಗಳ ಮುಖ್ಯ ಕೇಂದ್ರಗಳು ಬೊಂಬಾಯಿಯೊಂದರೂ ಸಲ್ಲುವದು.

ನವಯುಗದ ಸಂಪಾದಕ, ಸಹಸಂಪಾದಕರು ಈ ವಾರದಲ್ಲಿ ಬೊಂಬಾಯಿಗೆ ಹೋಗತಕ್ಕವರಿದ್ದಾರೆ. ಪತ್ರಿಕೆಯ ಸರ್ವತೋಮುಖ ಅಭಿವೃದ್ಧಿಯ ಕಾರ್ಯದಲ್ಲಿ ಮುಂಬಾಯಿ ಕನ್ನಡ ಬಾಂಧವರ ಅಮೂಲ್ಯ ಸಹಾಯ ಪಡೆಯುವುದೇ ಆಗಮನದ ಉದ್ದೇಶ. ಕನ್ನಡಿಗರು ಉದಾರಬುದ್ಧಿಯಿಂದ ಪ್ರೋತ್ಸಾಹಿಸುವರೆಂದು ಪೂರ್ಣ ಭರವಸೆಯಿದೆ.

ಕನ್ನಡ ನಾಡಿನ ಬೇರೆ ಬೇರೆ ಕಡೆಗಳಿಂದ ವಿಶೇಷವಾಗಿ ದಕ್ಷಿಣ ಕನ್ನಡದಿಂದ ಬೊಂಬಾಯಿಗೆ ಹೋಗಿ ನಿಂತವರಿಗೆ ಈ ಸಹಾಯ ಯಾಚನೆಯ ಸೊಲ್ಲು ಎಡೆಬಿಡದೆ ಕೇಳಿಬರುವ ಪಲ್ಲವಿಯಾಗಿದೆ ಎಂಬುದನ್ನು ನಾವು ಬಲ್ಲೆವು. ಸೋಡ್ತಿ ಟಿಕೇಟುಗಳಿಂದ ಹಿಡಿದು ಸಂಘ ಸಂಸ್ಥೆಗಳ ವರೆಗೂ ಅವರು ಸಹಾಯವಿತ್ತು ದಣಿದಿರುವರೆಂದೂ ನಮಗರಿತಿದೆ. ಇಂತಹ ದಾನಗಳಿಗೆ ದಾಕ್ಷಿಣ್ಯವೋ, ಅನಿವಾರ್ಯ ಪರಿಸ್ಥಿತಿಯೋ, ಪ್ರೇರಣೆಕೊಟ್ಟಿರಬಹುದಲ್ಲದೆ ಪಾತ್ರಾಪಾತ್ರತೆಯ ತುಲನೆಗೆ ಅಂತಹ ಸಂದರ್ಭಗಳಲ್ಲಿ ಅವಕಾಶಕಡಿಮೆ. ನವಯುಗದ ಸಹಾಯ ಯಾಚನೆಯು ಆ ತರಗತಿಯದ್ದಲ್ಲ. ಕಳೆದ 19 ವರುಷಗಳ ಅದರ ಸೇವೆಯು ಸಾರ್ವಜನಿಕರ ಕಣ್ಣು ಮುಂದಿದೆ; ಆ ಸೇವೆಗೆ ಶಾಶ್ವತ ರೂಪವನ್ನು ಕೊಡುವ ಏಕಮಾತ್ರ ಧ್ಯೇಯದಿಂದ ನವಯುಗದ ಚಾಲಕರು ಬೊಂಬಾಯಿ ಕನ್ನಡಿಗರನ್ನು ಸಂದರ್ಶಿಸುವದಾಗಿದೆ. ಆದ್ದರಿಂದ ಇದೊಂದು ಸುಸಂದರ್ಭವೆಂದೇ ಅಲ್ಲಿಯ ಕನ್ನಡಿಗರು ಭಾವಿಸಿ ಮನಃಪೂರ್ವಕವಾಗಿ ಪ್ರೋತ್ಸಾಹವೀಯಬೇಕಾಗಿ ದೈನ್ಯಪೂರ್ವಕವಾಗಿ ಕೇಳಿಕೊಳ್ಳುತ್ತೇವೆ.

ನವಯುಗ ಎಂಟರ್ ಪ್ರೈಸ್, ಲಿಮಿಟೆಡ್

ಈ ಸಂಸ್ಥೆಯು ಸ್ಥಾಪನೆಯಾಗಿ ಏಳು ತಿಂಗಳುಗಳಾಗುತ್ತಾ ಬಂದವು. ಈ ಅವಧಿಯಲ್ಲಿ ಇದು ಸಾಕಷ್ಟು ಪ್ರೋತ್ಸಾಹವನ್ನು ಪಡೆದಿದೆ. ದಕ್ಷಿಣ ಕನ್ನಡದಲ್ಲಿ ಮಾತ್ರವಲ್ಲ, ಹೊರ ಭಾಗದ ಕನ್ನಡಿಗರಿಂದಲೂ ವಿಶೇಷವಾದ ಬೆಂಬಲ ದೊರೆತಿದೆ. ಕಂಪೆನಿಯ 'ಶೇರು'ಗಳನ್ನು ಪಡೆಯುವದರಲ್ಲಿ ಎಲ್ಲಾ ಕಡೆಯವರೂ ಅಭಿಮಾನ ತೋರಿಸಿರುವರೆಂದು ಹೇಳಲು ಆನಂದಪಡುತ್ತೇವೆ.

ಇದರ ಚೇರ್ಮೆನರು, ಮೆನೇಜಿಂಗ್ ಡೈರೆಕ್ಟರರು ಮೊದಲಾದವರು ಈ ವಾರದಲ್ಲಿ ಬೊಂಬಾಯಿಯನ್ನು ಸಂದರ್ಶಿಸಲಿರುವರು. ಬೊಂಬಾಯಿ ಕನ್ನಡಿಗರು ಆದರಪೂರ್ವಕ ಈ ಸಂಸ್ಥೆಯನ್ನು ಪ್ರೋತ್ಸಾಹಿಸುವರೆಂದು ನಂಬುತ್ತೇವೆ.

ಲಿಮಿಟೆಡ್ ಕಂಪೆನಿಗಳ ಆವಶ್ಯಕತೆಯನ್ನು ಬೇರೆ ಹೇಳಬೇಕೆಂದಿಲ್ಲ. ಒಬ್ಬೊಬ್ಬರಿಂದ ಅಸಾಧ್ಯವಾದ, ವ್ಯವಸ್ಥೆಯ ಅಭಾವದಿಂದ, ಮಾಡಲಾಗದ ಸಾರ್ವಜನ ಹಿತಕಾರೀ ಉದ್ಯೋಗಗಳನ್ನು ಲಿಮಿಟೆಡ್ ಸಂಸ್ಥೆಗಳು ಮಾಡಬಲ್ಲವು. ಸಾರ್ವಜನಿಕರ ಧನ-ಮನವನ್ನು ಒಂದೆಡೆಯಲ್ಲಿ ಕೇಂದ್ರೀಕರಿಸಿ ಅದರಿಂದ ಉಪಯುಕ್ತ ಸಾರ್ವಜನಿಕ ಕಾರ್ಯ ಮಾಡುವದೇ ಕ್ರಮಬದ್ಧವಾದ ಲಿಮಿಟೆಡ್ ಸಂಸ್ಥೆಯ ಉದ್ಯೋಗ.

...ರ್ವೆಯಲ್ಲಿ ಪ್ರಬಲ ಹೋರಾಟ ಸಿದ್ಧತೆ

...ನ್ಮಾರ್ಕಿನ ಮೇಲೆ ಬ್ರಿಟಿಷ್ ವಿಮಾನಧಾಳಿ

...ರಾಟ
...ಹೋರಾಟ
... ಬ್ರಿಟಿಷ್
...ನೋರ್ವೇಜ
...ರ್ಕ ಪಡೆದು
... ಉತ್ತರ
...ಪಟ್ಟಣವಾದ
...ನರು ಪ್ರಬಲ
...ದ್ದಾರೆ. ಸು
...ಈ ಪಟ್ಟಣ
... ಪ್ರದೇಶಗ
...ರೆ. ನಾರ್ವಿ
...ರ್ಮನ್ ಸೈನಿ
...ಂಟಾಗಿದ್ದಾರೆ.
...ರ್ಮನರು
...ನ ಡಾನಿ
...ಷ್ ಹಡ
... ಜರ್ಮನ್
...ಗೆ ಹೋ
...ನರು ಗಾಳಿ
...ನ್ನಿಳಿಸುತ್ತಿ
...ಮೈಲು ಪೂ
...ವೈಸ್ಕ್ರೆ ಸ್ಟೇ
... ಜರ್ಮನ
...ವರು ಏ
...ದ್ದ ಗಾಳಿ
... ಅತಿ ಪ್ರ
...ರುವುದು.
...ಜೇನ್ ಎಂ
...ವು ಸ್ಟೋ
...ಳಿಸಲ್ಪಟ್ಟಿ
... ನೋರ್ವೆ
...ಕೊಳ್ಳಲಿಕ್ಕೆ
...ರುವ ಜ
...ನಿ ಗುಡ್ಡ
...ಸುತ್ತಿಕೊಳ್ಳ
...ಲ್ಯಾಂಡ್ರುವಿಗೆ

...ಬೆಂಬಲವೆಂ
... ಸ್ವತಂತ್ರದ
...ರುವ ಪುಣ್ಯ
...ರೆಂದಿಲ್ಲ.
...ವ್ಯ ನವ
...ಟಿಷ್, ಇ
...ವೆಯುವದೆಂ
...ಲು 1ಕ್ಕೆ
...ರ ಧನ ರೂ
...ವ್ಯೆಯೇ ಕೆ
...ಕವು ಬದಿ
...ರಿಗೂ ನಾ
...ನುಕೂಲವಿ
... ತಮ್ಮ ಕ
... ಪಡೆದು
...ನು ಕೀಳ್ತಾ
...ಂದಾರೆಂದಿ.

ಹೆಚ್ಚಿನ ವಿಮಾನ ಮತ್ತು ಸೇನೆಯನ್ನು ಭರದಿಂದ ಕಳುಹಿಸುತ್ತಿದ್ದಾರೆ. ಟ್ರೊಂಡೈಮಿನಲ್ಲಿರುವ ಜರ್ಮನ್ ಸೇನಾ ನಾಯಕರಾದ ಕರ್ನೆಲ್ ವೈಸಾಸ್‌ರವರು ಮಿತ್ರರಾಷ್ಟ್ರಗಳ ಸೈನಿಕರೊಡನೆ ಯುದ್ಧ ಮಾಡಲು ಭರದಿಂದ ತಯಾರು ಮಾಡುತ್ತಿರುವರು. ಉತ್ತರ ಮತ್ತು ದಕ್ಷಿಣದಿಂದ ಬ್ರಿಟಿಷ್ ಫ್ರೆಂಚ್ ಮತ್ತು ನೋರ್ವೇಜಿಯನ್ ಸೈನಿಕರು ಟ್ರೊಂಡೈಮಿನ ಕಡೆಗೆ ಸರಿಯುತ್ತಿದ್ದಾರೆ.

ಹೇಗ್ರಾ ಎಂಬ ಕೋಟೆಯು ಇನ್ನೂ ಜರ್ಮನರ ವಶವಾಗಿಲ್ಲೆಂದೂ, ಹಮಾರ್ ಕೋಟೆಯನ್ನು ನೋರ್ವೇಜಿಯನರು ಜರ್ಮನರಿಂದ ಪುನಃ ವಶಪಡಿಸಿರುವರೆಂದೂ ಸುದ್ದಿಯುಂಟಾಗಿದೆ.

ಜರ್ಮನಿ ಸರಕಾರದ ಪ್ರಕಟಣೆಯ ಮೇರೆಗೆ ಬ್ರಿಟಿಷ್ ನೌಕಾ ಪಡೆಯು ನಾರ್ವಿಕ್ ಬಂದರದ ಮೇಲೆ ಧಾಳಿ ನಡಿಸಿದರೂ ಸೇನೆಯನ್ನಿಳಿಸುವ ಪ್ರಯತ್ನ ನಡಿಸಿರುವುದಿಲ್ಲ. ನಾರ್ವಿಕದಲ್ಲಿರುವ ಜರ್ಮನ್ ಸೈನಿಕರು 8000 ಬಂದೂಕು ಮತ್ತು 315 ಮಿಶಿನ್ ತೋಪುಗಳನ್ನು ವೈರಿಗಳಿಂದ ವಶಪಡಿಸಿಕೊಂಡಿರುತ್ತಾರೆ. ನೋರ್ವೆಯ ಮುಖ್ಯಪಟ್ಟಣವಾದ ಓಸ್ಲೋ ಪಟ್ಟಣ ಪ್ರದೇಶ ಇನ್ನೂ ಹೆಚ್ಚಿನ ಜರ್ಮನ್ ಸೈನಿಕರು ಕಳುಹಿಸಲ್ಪಟ್ಟು ಅವರು ಎಲ್ಲಾ ಕಡೆಗಳಿಂದಲೂ ಮುಂದುವರಿಯುತ್ತಿದ್ದಾರೆ. ಜರ್ಮನಿಯಿಂದ ಹೆಚ್ಚೆಚ್ಚಾಗಿ ಜನರು ಮತ್ತು ಸಾಮಗ್ರಿಗಳು ನಿರಾತಂಕವಾಗಿ ನೋರ್ವೆಗೆ ಕಳುಹಿಸಲ್ಪಡುತ್ತಿವೆ. ನಾಮ್ಸೊಸ್ ಮತ್ತು ಆಂಡಲಸ್ನೆಯಲ್ಲಿ ಬ್ರಿಟಿಷ್ ಸೇನೆಯನ್ನಿಳಿಸುವ ಪ್ರಯತ್ನವನ್ನು ಜರ್ಮನ್ ವಿಮಾನಗಳು ಜಯಶೀಲವಾಗಿ ತಡೆಗಟ್ಟಿರುತ್ತವೆ. ಆಂಡಲಸ್ನೆಯಲ್ಲಿ ಬ್ರಿಟಿಷ್ ಯುದ್ಧ ಹಡಗವೊಂದು ಮುಳುಗಿಸಲ್ಪಟ್ಟಿದೆ. ಹಮಾರ್ ಕೋಟೆಯಿಂದ 30 ಮೈಲು ಉತ್ತರ ಬಿಲ್ಲೆ ಹೆಮ್ಮರ್ ಎಂಬ ಸ್ಥಳವನ್ನು ಜರ್ಮನ್ ಸೇನೆಯು ವಶಪಡಿಸಿಕೊಂಡಿದೆ

ನೋರ್ವೇಜಿಯನ್ ಸೈನಿಕರು ಹಮಾರ್, ಎಲ್ವೆರಮ್ ಮೊದಲಾದ ಸಮತಟ್ಟು ಪ್ರದೇಶದಿಂದ ಹಿಂದೆ ಸರಿದು ಗುಡ್ಡ ಪ್ರದೇಶಗಳಲ್ಲಿ ಜರ್ಮನರನ್ನು ತಡೆಗಟ್ಟುತ್ತಿದ್ದಾರೆ. ನೋರ್ವೆಯ ಸಮುದ್ರ ತೀರಾವಳಿಯಲ್ಲಿ ಬ್ರಿಟಿಷ್ ನೌಕಾಪಡೆಯು ಜಯ ಪಡೆದಿರುವುದಾದರೂ ಭೂಪ್ರದೇಶದಲ್ಲಿ ಇಷ್ಟರ ವರೆಗೆ ಪ್ರಬಲ ಹೋರಾಟವೇನೂ ನಡೆದಿರುವುದಿಲ್ಲ. ಫ್ರೆಂಚ್ ಮತ್ತು ಬ್ರಿಟಿಷ್ ಸೇನೆಗಳು ಸ್ಟೀಮರ್ ಮೂಲಕ ಉತ್ತರ ನೋರ್ವೆಗೆ ತೆರಳುತ್ತಿವೆ. ಇದಕ್ಕೆ ಜರ್ಮನರಿಂದ ಹೆಚ್ಚಿನ ಆತಂಕವೇನೂ ಉಂಟಾಗಿರುವಂತೆ ತೋರುವುದಿಲ್ಲ.

ಡೇನಿಶ್ ವಿಮಾನ ನಿಲಯದ ಮೇಲೆ ಧಾಳಿ

ಜರ್ಮನರು ಡೆನ್ಮಾರ್ಕನ್ನು ಪಕ್ಕನೆ ಗೆದ್ದು ವಶಪಡಿಸಿಕೊಂಡಿರುವುದರಿಂದ ಆ ಮೂಲಕ ನೋರ್ವೆಗೆ ಸೇನೆ ಮತ್ತು ಸಾಮಗ್ರಿಗಳನ್ನು ಕಳುಹಿಸಲು ಅವರಿಗೆ ಬಹಳ ಅನುಕೂಲವಾಗಿವೆ. ನೋರ್ವೆಯ ಕರಾವಳಿಯಲ್ಲಿ ಜರ್ಮನ್ ಮತ್ತು ಬ್ರಿಟಿಷ್ ನೌಕಾ ಪಡೆಗಳೊಳಗೆ ನಡೆದ ಯುದ್ಧದಲ್ಲಿ ಜರ್ಮನರಿಗೆ ಅಪಜಯವಾಗಿರುವುದೆಂಬುದರಲ್ಲಿ ಸಂದೇಹವಿಲ್ಲ. ಯಾಕೆಂದರೆ ಆ ಮೇಲೆ ಜರ್ಮನ್ ಯುದ್ಧ ನಾವೆಗಳ ಚಲನವಲನದ ಸುದ್ದಿಯೇ ಇಲ್ಲ. ಯುದ್ಧ ವಿಮಾನಗಳ ಚಟುವಟಿಕೆಯು ಅತಿ ಹೆಚ್ಚಾಗಿದೆ. ಡೆನ್ಮಾರ್ಕಿನ ಬೇರೆ ಬೇರೆ ವಿಮಾನ ನಿಲಯಗಳಿಂದ ಜರ್ಮನ್ ವಿಮಾನಗಳು ನೋರ್ವೆಗೆ ಹಾರಿ ಧಾಳಿ ನಡಿಸುವುದು ಮಾತ್ರವಲ್ಲದೆ ಸೈನಿಕರನ್ನೂ ಒಯ್ಯುತ್ತಿವೆ. ಆದುದರಿಂದ ಬ್ರಿಟಿಷ್ ಯುದ್ಧ ವಿಮಾನಗಳು ಡೆನ್ಮಾರ್ಕಿನ ವಿಮಾನ ನಿಲಯಗಳ ಮೇಲೂ ಧಾಳಿ ನಡಿಸತೊಡಗಿವೆ. ಇದೇ ತಾ. 20ನೇ ರಾತ್ರಿ ಮತ್ತು ತಾ. 21ರಲ್ಲು ಬ್ರಿಟಿಷ್ ಯುದ್ಧ ವಿಮಾನಗಳು ಉತ್ತರ ಡೆನ್ಮಾರ್ಕಿನ ಅಲ್ಬೊರ್ಗ್ ವಿಮಾನ ನಿಲಯದ ಮೇಲೂ, ಕ್ರಿಸ್ತಿಯನ್ ಸೇಂಡ್ ಮತ್ತು ಸ್ಟೆವೆಂಜರಿನ ವಿಮಾನ ನಿಲ್ದಾಣಗಳ ಮೇಲೂ ವಿಮಾನ ಧಾಳಿ ನಡಿಸಿ ಹಾವಳಿ ಮಾಡಿರುತ್ತವೆ. ಅಲ್ಬೊರ್ಗಿನ ಮೇಲಿನ ಬ್ರಿಟಿಷ್ ವಿಮಾನಧಾಳಿಯು ಜರ್ಮನರನ್ನು ಆಶ್ಚರ್ಯಗೊಳಿಸಿ ಜರ್ಮನ್ ವಿಮಾನಗಳ ಚಲನವಲನಕ್ಕೆ ಹೆಚ್ಚಿನ ತೊಡಕನ್ನುಂಟುಮಾಡಿದೆ. ಜರ್ಮನ್ ವಿಮಾನಗಳು ಮತ್ತು ವಿಮಾನಭೇದಕ ತೋಪುಗಳು ಬ್ರಿಟಿಷ್ ವಿಮಾನಗಳನ್ನು ತಡೆಗಟ್ಟಿದರೂ ಫಲವಾಗದೆ ಅವು ಬೋಂಬುಗಳನ್ನು ಸುರುವಿ ಸುರಕ್ಷಿತವಾಗಿ ಹಿಂದೆ ಬಂದಿರುತ್ತವೆಂದು ತಿಳಿಸಲ್ಪಡುತ್ತದೆ. ತಾ. 22ರಲ್ಲಿ ಬ್ರಿಟಿಷ್ ವಿಮಾನಗಳು ಪುನಃ ಸ್ಟೆವೆಂಜರಿನ ಮೇಲೆ ವಿಮಾನಧಾಳಿ ನಡಿಸಿ ಹಲವು ಸ್ಫೋಟಕ ಬೋಂಬುಗಳನ್ನೆಸೆದಿರುತ್ತವೆ. ಇದರ ಪರಿಣಾಮವಾಗಿ ಹಲವು ಜರ್ಮನ್ ವಿಮಾನಗಳು ನಾಶವಾಗಿವೆಯೆಂದು ತಿಳಿಸಲ್ಪಡುತ್ತದೆ.

ರಂಗೂನಿನಲ್ಲಿ ಗಲಾಟೆ

ರಂಗೂನಿನಲ್ಲಿ ಇದೇ ತಾ 20 ಮತ್ತು 21ರಲ್ಲು ಹಿಂದು ಮುಸಲ್ಮಾನ ಗಲಾಟೆಯೆದ್ದು 11ಮಂದಿ ಕೊಲ್ಲಲ್ಪಟ್ಟು 69 ಮಂದಿಗೆ ಪೆಟ್ಟಾಗಿರುತ್ತದೆ. ಉದ್ರೇಕಗೊಂಡ ಹಿಂದು ಮುಸಲ್ಮಾನ ಜನಸ್ತೋಮವನ್ನು ಚೆದರಿಸಲು ಪೋಲೀಸರು ಹಲವು ಸಲ ಗುಂಡುಹಾರಿಸಬೇಕಾಗಿ ಬಂದಿದೆ. ಪರಿಸ್ಥಿತಿಯು ಪ್ರಕ್ಷುಬ್ಧವಾಗಿದೆ. ಪೋಲೀಸರು ಮತ್ತು ಸೈನಿಕರು ರಸ್ತೆಗಳಲ್ಲಿ ಪಹರೆ ನಡಿಸುತ್ತಿದ್ದಾರೆ. ಅನೇಕರು ದಸ್ತಗಿರಿಯಾಗಿದ್ದಾರೆ.

ಉಡುಪಿ

'ಗೀತಾ' ಭಾಷಣಗಳು—ಕಳೆದ ಆದಿತ್ಯವಾರ ಶ್ರೀ ಅಚ್ಯುತ ಬಾಳಿಗರು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಭಗವದ್ಗೀತೆಯ ವಿಷಯವಾಗಿ ಉಪನ್ಯಾಸವಿತ್ತರು. ಇನ್ನು ಕೆಲವು ಆದಿತ್ಯವಾರ ಇವರ ಭಾಷಣಗಳಿರುವವೆಂದು ತಿಳಿದು ಬರುತ್ತದೆ

ವಿಷಾದಕರ ಮರಣ— ಸ್ಥಳೀಯ ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಕ್ಲಾರ್ಕರಾಗಿದ್ದ ಶ್ರೀ ಯು. ಉಪೇಂದ್ರ ಹೆಗ್ಗಡೆಯವರು ಕೆಲವು ದಿವಸಗಳಿಂದ ಟೈಫೈಡ್ ಜ್ವರ ಪೀಡಿತರಾಗಿದ್ದು ತಾ. 23-4-40ನೇ ಮಂಗಳವಾರ ಅಪರಾಹ್ನ 3 ಘಂಟೆಗೆ ಅಕಸ್ಮಾತ್ತಾಗಿ ನಿಧನರಾಗಿರುವರೆನ್ನಲು ವಿಷಾದವಾಗುತ್ತದೆ. ಮೃತರು ಈ ಬ್ಯಾಂಕಿನ ಪ್ರಾರಂಭದಿಂದಲೂ ಅದರಲ್ಲೇ ಇದ್ದು, ಉತ್ಸಾಹದಿಂದ ಕೆಲಸಮಾಡುತ್ತಿದ್ದರು. ಸರಳ ಹಾಗೂ ವಿನೋದ ಸ್ವಭಾವದವರಾಗಿದ್ದುದರಿಂದ ಜನಪ್ರೀತರಾಗಿದ್ದರು. ಇವರ ಅಕಾಲ ಮರಣಕ್ಕಾಗಿ ಅತ್ಯಂತ ದುಃಖಿಸುತ್ತೇವೆ.

ದಕ್ಷಿಣ ಕನ್ನಡ

ಸತ್ಯಾಗ್ರಹ ಸಮಿತಿಗಳನ್ನು ಮಾಡಿರಿ

ತಾ. ೧೪-೪-೪೦ನೇ ದಿವಸ ಸೇರಿದ ಕರ್ನಾಟಕ ಪ್ರಾಂತೀಯ ಸಮಿತಿಯ ಕಾರ್ಯಕಾರೀ ಮಂಡಲದ ಸಭೆಯು ಸೇರಿ ಪ್ರಾಂತೀಯ ಕಾರ್ಯಕಾರೀ ಮಂಡಲವನ್ನು ಸತ್ಯಾಗ್ರಹ ಸಮಿತಿಯಾಗಿ ನೇಮಿಸಲಾಗಿದೆ. ಇದೇ ಮೇರೆಗೆ ಪ್ರಾಂತದೊಳಗಿನ ಎಲ್ಲ ಅಧೀನ ಸಮಿತಿಗಳನ್ನು ಕೂಡಲೇ ಸತ್ಯಾಗ್ರಹ ಸಮಿತಿಗಳನ್ನಾಗಿ ಮಾಡಬೇಕಾಗಿ ಈ ಕೆಳಗಿನ ಗೊತ್ತುವಳಿಯು ಕಾರ್ಯಕಾರೀ ಮಂಡಲದಲ್ಲಿ ಸ್ವೀಕರಿಸಲ್ಪಟ್ಟಿದೆ.

"ಅಧೀನ ಸತ್ಯಾಗ್ರಹ ಸಮಿತಿಗಳು"

ಅಖಿಲಭಾರತ ಕಾಂಗ್ರೆಸ್ ಸಮಿತಿಯ ಪರಿಷತ್ತು ಹಾಗೂ ಮಹಾತ್ಮಾ ಗಾಂಧಿಯವರ ಸೂಚನೆಗಳಿಗನುಸರಿಸಿ ಪ್ರಾಂತದಲ್ಲಿಯ ಎಲ್ಲ ಜಿಲ್ಲಾ, ತಾಲೂಕು, ಗ್ರೂಪ್ ಹಾಗು ಗ್ರಾಮ ಕಾಂಗ್ರೆಸ್ ಸಮಿತಿಗಳನ್ನು ಸತ್ಯಾಗ್ರಹ ಸಮಿತಿಗಳನ್ನಾಗಿ ತಾ. ೩೦-೪-೪೦ರ ಒಳಗಾಗಿ ಏರ್ಪಡಿಸಿ ಕೂಡಲೇ ತಮ್ಮ ವರದಿಯನ್ನು ಪ್ರಾಂತೀಯ ಸಮಿತಿಗೆ ಕಳಿಸಬೇಕಾಗಿ ಈ ಸಭೆಯು ತೀರ್ಮಾನಿಸುತ್ತದೆ.

ಈ ಗೊತ್ತುವಳಿಯ ಮೇರೆಗೆ ಎಲ್ಲ ಕಾಂಗ್ರೆಸ್ ಸಮಿತಿಗಳು ತಮ್ಮ ತಮ್ಮ ಸಭೆಗಳನ್ನು ಕರೆದು ಆ ಸಮಿತಿಯ ಸದಸ್ಯರ ಸಹಿಗಳನ್ನು ಸತ್ಯಾಗ್ರಹ ಪ್ರತಿಜ್ಞಾಪತ್ರಿಕೆಯ ಮೇಲೆ ತೆಗೆದುಕೊಂಡು ಆಯಾ ಸಮಿತಿಗಳು ಸತ್ಯಾಗ್ರಹ ಸಮಿತಿಗಳಾದವೆಂಬ ಗೊತ್ತುವಳಿಯನ್ನು ಮಾಡಿ ಕೂಡಲೇ ಅದರ ವರದಿಯನ್ನು ನಮ್ಮ ಕಡೆಗೆ ಕಳಿಸಿಕೊಡಬೇಕು. ಸಮಿತಿಯ ಅವಸರದ ಸಭೆ ಕರೆಯಬೇಕು, ಒಂದುವೇಳೆ ಸಭೆಗಳು ಸೇರಿ ಅಥವಾ ಬೇರೆ ಕಾರಣಗಳಿಗೆ ಅದಲ್ಲಿ ಸತ್ಯಾಗ್ರಹ ಸಮಿತಿಯಾದ ವಿಷಯವನ್ನು ಕೂಡಲೇ ನಮ್ಮ ಕಚೇರಿಗೆ ತಿಳಿಸಬೇಕು.

ಪ್ರತಿಜ್ಞಾಪತ್ರವನ್ನು ಸಹಿಮಾಡಲು ಯಾವ ಸದಸ್ಯರಿಗೂ ಜುಲುಮೆ ಒತ್ತಾಯಮಾಡತಕ್ಕದ್ದಲ್ಲ. ಆಯಾ ಕಾಂಗ್ರೆಸ್ ಸಮಿತಿಗಳ ಸದಸ್ಯರಲ್ಲಿ ಬಹುಮತದವರು ಸಹಿಮಾಡಿದರೇನೇ ಆ ಸಮಿತಿಗಳನ್ನು ಸತ್ಯಾಗ್ರಹ ಸಮಿತಿಗಳನ್ನಾಗಿ ಏರ್ಪಡಿಸಬೇಕು. ಬಹುಮತದ ವಿರೋಧವಿದ್ದಲ್ಲಿ ಬೇರೊಂದು ಸತ್ಯಾಗ್ರಹ ಸಮಿತಿಯನ್ನು ಸ್ಥಾಪಿಸಬೇಕು. ಮತ್ತು ಆ ಸತ್ಯಾಗ್ರಹ ಸಮಿತಿಗೆ ಕಾಂಗ್ರೆಸ್ ಸಮಿತಿಯು ಸಂಪೂರ್ಣ ಸಹಾಯಮಾಡಬೇಕು.

ಜಿಲ್ಲಾ ಸಮಿತಿಗಳು ತಮ್ಮ ಜಿಲ್ಲೆಯೊಳಗಿನ ಎಲ್ಲ ಅಧೀನ ಸಮಿತಿಗಳನ್ನು ಸತ್ಯಾಗ್ರಹ ಸಮಿತಿಗಳನ್ನಾಗಿ ನಿರ್ಮಿಸಿ ಸ್ಥಾಪಿತವಾದ ಸತ್ಯಾಗ್ರಹ ಸಮಿತಿಗಳ ಪೂರ್ಣ ವಿಳಾಸವನ್ನು ಕೂಡಲೇ ನಮ್ಮ ಕಡೆಗೆ ಕಳುಹಿಸಬೇಕು. ಅಂದರೆ ಶೀಘ್ರವಾಗಿ ಕಳುಹಿಸಬೇಕಾದ ಪರಿಪತ್ರಗಳನ್ನು ನೇರವಾಗಿ ಕಳುಹಿಸಲು ಅನುಕೂಲವಾಗುವುದು.

ಕಾಂಗ್ರೆಸ್ ಸದಸ್ಯತ್ವ

ಪ್ರತಿ ವರುಷದಂತೆ ಈ ಸಲವಾದರೂ ಕಾಂಗ್ರೆಸ್ ಸದಸ್ಯರನ್ನು ಮಾಡುವುದು ಅತ್ಯವಶ್ಯವಿದೆ. ಈ ಸಲ ಕಾಂಗ್ರೆಸ್ ಸಮಿತಿಗಳು ಎರಡು ಬಗೆಯ ಸದಸ್ಯರನ್ನು ನೋಂದಿಸಬೇಕಾಗುವುದು. ಹೋದ ವರುಷ ಕಾಂಗ್ರೆಸ್ ಸದಸ್ಯರ ಯಾದಿಯಲ್ಲಿ ದಾಖಲು ಆದ ಸದಸ್ಯರನ್ನು 'ಮುಂದುವರಿಸುವ' (Renewal) ಪುಸ್ತಕದಲ್ಲಿಯೂ ಹೊಸದಾಗಿ ಸದಸ್ಯರಾಗುವವರಿದ್ದರೆ 'ಸದಸ್ಯ' ಪುಸ್ತಕದಲ್ಲಿಯೂ ಸದಸ್ಯರನ್ನು ಮಾಡಿಕೊಳ್ಳಬೇಕಾಗುವುದು. ಈ ಬಗ್ಗೆ ನಾವು ಕೊಡುವ ಸೂಚನೆಗಳನ್ನು ಲಕ್ಷ್ಯದಲ್ಲಿಟ್ಟು ಈ ಕಾರ್ಯವನ್ನು ಮಾಡಬೇಕು. ಮೇಲ್ಕಾಣಿಸಿದಂತೆ ಎರಡು ನಮೂನೆಯ ಪುಸ್ತಕಗಳನ್ನು ಕಾಂಗ್ರೆಸ್ ಸಮಿತಿಗಳು ಉಪಯೋಗಿಸಬೇಕಾಗುವುದು. ಈ ಪುಸ್ತಕಗಳಲ್ಲಿ ೫೦ ಫಾರ್ಮುಗಳಿರುತ್ತವೆ. ಪ್ರತಿಯೊಂದು ಪುಸ್ತಕದ ಬೆಲೆ ಎರಡಾಣೆ (೦-೨-೦) ಇಡಲಾಗಿದೆ. ಸದಸ್ಯ ಪುಸ್ತಕ ಅಥವಾ ಸದಸ್ಯತ್ವ ಮುಂದುವರಿಸುವ ಪುಸ್ತಕ ಬೇಕಾದರೆ ಜಿಲ್ಲಾ ಕಾಂಗ್ರೆಸ್ ಸಮಿತಿಗಳು ಕೂಡಲೇ ಮುಂಗಡ ಹಣ ಕಳುಹಿಸಿ ಆರ್ಡರ್ ಕೊಟ್ಟಲ್ಲಿ ಅವರಿಗೆ ಪುಸ್ತಕಗಳನ್ನು ಕಳುಹಿಸಲಾಗುವದು.

ಕ. ಪ್ರಾಂ. ಕಾಂ. ಸಮಿತಿ, ಧಾರವಾಡ 17-4-'40.

ಚನ್ನ ಬಸಪ್ಪ ಅಂಬಲಿ,
ಪ್ರಾಂ. ಕಾರ್ಯದರ್ಶಿ.

ಜಿಲ್ಲಾ ಹರಿಜನ ಪರಿಷತ್ತು—ಮುಲ್ಕಿ ಹರಿಜನ ಪರಿಷತ್ತಿನ ಕುರಿತು ಶ್ರೀ. ಬಿ. ಅಂಕಯ್ಯ ಸಟ್ಟರು 11-4-40ರ ನವಯುಗದಲ್ಲಿ ಕೊಟ್ಟ ಬಾತ್ಮಿಗೆ ದ. ಕ. ಜಿಲ್ಲಾ ಹರಿಜನ ಲೀಗಿನ ಅಧ್ಯಕ್ಷ ಶ್ರೀ ಗೋಪಾಲ ಸಾಲಿಯನ್ನರ ಉತ್ತರ ಬಂದಿದೆ. ಶ್ರೀ ಅಂಕಯ್ಯ ಸಟ್ಟ ಕುಂದಾಪುರ ಕಡೆಯಾದ ಪ್ರತಿನಿಧಿಗಳನ್ನು ಕರುಣಿಸೆಂದು ಭರವಸೆ ಕೊಟ್ಟಿದ್ದು ಮಾತ್ರ; ಪರಿಷತ್ತಿಗೆ ಬಾಸೊಬ್ಬನೇ ಬಂದಿದ್ದನು. ಸ್ವಾಗತಕಾರಿಣಿ ದಿ. ಸಿ. ಯಂ ಕೋಲನಯ ಕೆಲಸಗಾರರನ್ನು, 'ಇವು ತಂದುದಾಗಿ ಅರ್ಥವಿಲ್ಲದೆ ಬರೆದಿದ್ದಾರೆ. ಪರಿಷತ್ತಿನ ಸಭಾಕಕ್ಷೆಯಲ್ಲಿ ಮತ್ತು ಸ್ವಾಗತ ಸಮಿತಿಯಲ್ಲಿ ಕೊರಗರಿದ್ದರು. ಶ್ರೀನಿವಾಸ ಈಶ್ವರ, ಸುಬ್ಬ ಪರಪ್ಪ ರೈ, ಕೊಡಿಯಾಲ ಗುತ್ತು ಭಾಸ್ಕರ ರೈ, ಕಂಬಳಿ ದೇವಪ್ಪ ಆಳ್ವ, ಬಾಳ್ಕುದ್ರು ಚಂದ್ರಶೇಖರ ಹೆಗ್ಡೆ, ನಾರಾಯಣ ಶೆಟ್ಟಿ, ಗೋಪಾಲ ಸಾಲಿಯನ್ನ, ಬಾಬು ಮೇಸ್ತ್ರಿ, ಮತ್ತು ಆತ್ಮಾರಾಮ ಗೋಲಿಯರ ಕೂಡಿದವರು ಕೊರಗರ ಪಂಕ್ತಿಯಲ್ಲಿ ಕುಳಿತು ಊಟಮಾಡಿದ್ದರು, ಶ್ರೀ. ಶೆಟ್ಟಿಯಾರು ಎಂಜಲೆಲೆ ಕೂಡಾ ತೆಗೆದಿದ್ದರು. ಕೊರಗರ ಪ್ರತಿನಿಧಿತನವನ್ನು ಸ್ವಾಗತ ಸಮಿತಿಗೆ ಶ್ರೀ. ಅಂಕಯ್ಯ ಸಟ್ಟರು ತಿಳಿಸಿದ್ದೇ ಇಲ್ಲ. ಅದ್ದರಿಂದಲೇ ಕಾರ್ಯಕ್ರಮದಲ್ಲಿ ಪ್ರಕಟಿಸಲಿಲ್ಲ. ಮುಲ್ಕಿ ಪರಿಷತ್ತಿನ ವಿಷಯ ಅವರು ಕೊಟ್ಟ ಬಾತ್ಮಿ ತೀರಾ ಬೇಜವಾಬ್ದಾರಿಯದು ಮತ್ತು ನಿರಾಧಾರವಾದದ್ದು, ಎಂಬುದು ಶ್ರೀ. ಸಾಲಿಯನ್ನರ ಉತ್ತರದ ಸಾರಾಂಶ.

ಕೋಟೇಶ್ವರ—ತಾ. 21-4-40ರಲ್ಲಿ ದ. ಕ. ಜಿಲ್ಲಾ ಬೋರ್ಡ ಶ್ರೀ. ಪಿ. ಬಾಲಗೋಪಾಲಾಚಾರ್ಯರವರು ಕೋಟೇಶ್ವರ ಶಾಂತಿನಿಕೇತನ ಶಾಲೆಯ ಕನ್ಯಾ ವಿಭಾಗಕ್ಕಾಗಿ ಕಟ್ಟಿಸಿದ ಹೊಸ ಕಟ್ಟಡವನ್ನು ದ. ಕ. ಜಿಲ್ಲಾಬೋರ್ಡು ವೈಸ್ ಪ್ರೆಸಿಡೆಂಟ್ ಶ್ರೀ ಎ. ಎಲ್. ರಾಮರಾಯರು ಶಾಂತಿನಿಕೇತನ ದತ್ತಿಯಿತ್ತು ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಶ್ರೀ. ಕೃಷ್ಣಯ್ಯ ಶೆಟ್ಟಿಯವರವರು ಶಾಂತಿ ಸ್ವರ್ಗದ ಬಾಗಿಲನ್ನು ತೆರೆದರು ಶ್ರೀ ಮಾನ್ಯ ಪಪ್ಪರವರಿಂದ ಮಾರ್ಕೆಟ್ ಕೆಲಸ ವರೆ ಬುನಾದಿ ಕಲ್ಲು ಸ್ಥಾಪಿಸಲಾಯಿತು

ಅಂಪಾರು ಮೂಡುಬಾಗೆ—ಸಪ್ರಿ ಶಾಲೆಯಲ್ಲಿ ಮುಖ್ಯ ಉಪಾಧ್ಯಾಯರಾಗಿದ್ದ ಗಾವಳಿ ವೆಂಕಟ್ರಮಣ ಕಿಣಿಯವರಿಗೆ ವರ್ಗವಾದುದರಿಂದ ಸಪ್ರಿಯವರನ್ನು ಬೀಳ್ಕೊಡುವ ಸದ್ಗ್ರಾಮಸ್ಥರಿಂದ ಒಂದು ಸಭೆಯು ಇದೇ ತಾ. 15ರಲ್ಲಿ ಜರಗಿತು. ಉಪಹಾರ ಸತ್ಕಾರವೂ ನಡೆಯಿತು. ಶ್ರೀ. ಕಿಣಿಯವರು ಊರಿನ ಏಕೆಯಲ್ಲಿ ಸುರಿತವರಿಷ್ಟ, ಜನಪ್ರೀತರಾಗಿದ್ದರು.

ಕುಂದಾಪುರ—ತಾ. 18—4—'40ರಲ್ಲಿ ಕುಂದಾಪುರ ತಾಲೂಕಿನ ಪ್ರಮುಖ ಮುಖಂಡರ ಸಭೆಯೊಂದು ಕುಂದಾಪುರ ಬೋರ್ಡ ಹೈಸ್ಕೂಲು ಕಟ್ಟಡದಲ್ಲಿ ಜಿಲ್ಲಾ ಬೋರ್ಡು ಅಧ್ಯಕ್ಷರಾದ ಡಾ. ಕೆ. ವಿಠಲ ಸೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿ ಕುಂದಾಪುರ ತಾಲೂಕು ಹರಿಜನ ಸೇವಾ ಸಂಘವೊಂದು ಸ್ಥಾಪಿಸಲ್ಪಟ್ಟಿತು. ಸಂಘದ ವತಿಯಿಂದ ಹರಿಜನ ವಿದ್ಯಾರ್ಥಿಭವನವೊಂದನ್ನು ತೆರೆಯುವ ನಿರ್ಧಾರ ಕೂಡ ಮಾಡಲಾಯ್ತು. ಶ್ರೀ. ಕನ್ನನ್ ನಂಬಿಯವರು ಸುಮಾರು 250 ಹರಿಜನರಿಗೆ ಊಟೋಪಚಾರ ಮಾಡಿದರು. ಕುಂದಾಪುರ ಬೋರ್ಡ ಶಾಲಾ ಟ್ರೇನಿಂಗ್ ಅಧ್ಯಾಪಕರು ನೆರೆದ ಇತರ ಮಹನೀಯರಿಗೆ ಫಲಾಹಾರಾದಿಗಳನ್ನಿತ್ತು ಸತ್ಕರಿಸಿದರು

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು, ತಾ 22-4-1940.

ಮಂಗಳೂರು ನಗರಸಭೆ— ಮಂಗಳೂರು ನಗರಸಭೆಯ ಸಾಮಾನ್ಯ ಸಭೆಯೊಂದು ಕಳೆದ ತಾ 15ನೇ ಸೋಮವಾರ ದಿವಸ ಶ್ರೀ. ಬಿ. ವಿ. ಬಾಳಿಗರ ಅಧ್ಯಕ್ಷತೆಯಲ್ಲಿ ನೆರವೇರಿತು. ಸಭಾರಂಭವಾಗುವ ಮೊದಲು ಅಧ್ಯಕ್ಷರು ದೀನಬಂಧು ಸಿ. ಎಫ್. ಎಂಡ್ರೂಸರ ಮರಣಕ್ಕಾಗಿ ಸಂತಾಪ ಸೂಚಿಸುವ ಠರಾವು ತಂದರು. ಅದು ಮಾನ್ಯವಾಯಿತು. ಎಲ್ಲರೂ ಎದ್ದು ನಿಂತು ಅದನ್ನು ಮಂಜೂರು ಮಾಡಿದರು. ಅನಂತರದಲ್ಲಿ ಒಂದು ಮನೆಗೆ ಕಟ್ಟುತ್ತಿರುವ ಬಾಗಿಲಿನ ಸ್ಥಾನದಲ್ಲಿ ಒಂದು ಬಾಗಿಲನ್ನೋ ಅಥವಾ ಒಂದು ಕಿಟಕಿಯನ್ನೋ ಇಡಿಸಿದ್ದಾದರೆ ಅದು ಹೊಸ ಕಟ್ಟೋಣ (ರಿಕನ್‌ಸ್ಟ್ರಕ್ಷನ್) ಎಂದು ಗಣಿಸಲ್ಪಡಬೇಕೆ ಅಥವಾ ಸಾಮಾನ್ಯ ದುರಸ್ತಿ ಎಂದು ಗಣಿಸಲ್ಪಡಬೇಕೇ ಎಂಬ ವಿಚಾರ ಬಂದಾಗ ಅದು ಸಾಮಾನ್ಯ ದುರಸ್ತಿಯೆಂದೂ ಅದಕ್ಕೆ ಹೊಸ ಕಟ್ಟಡ ಎಂಬ ಅರ್ಥವಾಗಲಾಗುವುದಿಲ್ಲವೆಂದೂ ಆದ್ದರಿಂದ ಅವಕ್ಕೆ ಲೈಸೆನ್ಸ್ ಬೇಕಾಗಿಲ್ಲವೆಂದೂ ನಿರ್ಧಾರವಾಯಿತು. ಇತರ ಕೆಲ ಸೂಚನೆಗಳ ಮೇಲೆ ನಿರ್ಧಾರಗಳಾದುವು. ಮಂಗಳೂರಿನ ವಹಿಳಾ ಸೇವಾಶ್ರಮಕ್ಕೆ ಪ್ರತಿ ತಿಂಗಳು ರೂ. 25ರಂತೆ ಸಹಾಯನಿಧಿಯನ್ನು ಕೊಡಬೇಕೆಂದಾಯಿತು.

ಮೋಟಾರ್ ಕೆಲಸಗಾರರ ಅನ್ನಸತ್ಯಾಗ್ರಹ—ದ. ಕ. ಮೋಟಾರ್ ಎಂಪ್ಲೋಯಿಸ್ ಎಸೋಸಿಯೇಶನಿನ ಇಬ್ಬರು ಕೆಲಸಗಾರರಾದ ಶ್ರೀ. ಕೆ. ರಮೇಶರಾವ್ ಮತ್ತು ಶ್ರೀ. ಯು. ವಾಸುದೇವರಾವ್ ಇವರಿಬ್ಬರು ತಾ. 20ರಲ್ಲಿ ಶ್ರೀ. ಬಿ. ವಿ. ಬಾಳಿಗ, ಯಂ. ಎಲ್. ಎ. ಇವರ ಮನೆಯ ಮುಂದೆ ಅನ್ನತ್ಯಾಗ ಸತ್ಯಾಗ್ರಹವನ್ನು ಆರಂಭಿಸಿದರು. ಶ್ರೀ. ಬಿ. ವಿ. ಬಾಳಿಗರು ಮತ್ತಿನ್ನಿತರರಿಬ್ಬರು ಪಂಚಾತಿಕೆದಾರರಾಗಿದ್ದು ಅವರ ತೀರ್ಮಾನದ ಮೇರೆಗೆ ಹಿಂದೆ ಯೂನಿಯನನ್ನು ಹೊಸ ಸದಸ್ಯರಿಗೆ ಬಿಟ್ಟುಕೊಟ್ಟುದಾಗಿಯೂ ಆದರೆ ಪಂಚಾತಿಗೆದಾರರು ಅನ್ಯಾಯವಾಗಿ ಕಂಪೆನಿಗಳಿಂದ ಹೊರಹಾಕಲ್ಪಟ್ಟ ಕೆಲಸಗಾರರ ಪರವಾಗಿ ಈ ನಾಲ್ಕೈದು ತಿಂಗಳಲ್ಲಿ ಏನೂ ಮಾಡಿಲ್ಲವೆಂದೂ, ಈ ಮಧ್ಯೆ ಸುಮಾರು ಮೂವತ್ತು ನಲುವತ್ತು ಮಂದಿ ಕೆಲಸಗಾರ ಬಂಧುಗಳನ್ನು (ಇವರಲ್ಲಿ ಕೆಲವರು 20 ವರ್ಷಗಳಿಗಿಂತಲೂ ಹೆಚ್ಚಾಗಿ ಕಂಪೆನಿಗಳ ಸೇವೆಮಾಡಿದವರೂ, ಇನ್ನು ಕೆಲವರು ಅನೇಕ ವರ್ಷಗಳ ವರೆಗೆ ಧರ್ಮಾರ್ಥ ಕೆಲಸಮಾಡಿದವರೂ, ಇನ್ನು ಕೆಲವರು ಕಂಪೆನಿಯ ಸೇವೆಯಲ್ಲಿ ಅಂಗಹೀನರಾದವರೂ ಇದ್ದಾರೆ.) ಹೊರಹಾಕಿದ್ದಾರೆಂದೂ ಇನ್ನು ಕೆಲವರಿಗೆ ಕೊಡಬೇಕಾದ ಭತ್ತೆ ಮೊದಲಾದ ಸೌಕರ್ಯಗಳನ್ನು ಟ್ರಾನ್ಸ್‌ಫರ್ ಮಾಡುವಾಗ ಕೊಡಲಿಲ್ಲವೆಂದೂ, ಪಂಚಾತಿಕೆದಾರರು ಈ ಬಾಬಿನಲ್ಲಿ ಏನೂ ಮಾಡಿಸದ ಕಾರಣ ಈಗ ಅನ್ನತ್ಯಾಗ ವ್ರತವನ್ನು ತಾವು ಕೈಕೊಳ್ಳುವುದಾಗಿಯೂ ಅಭಿಪ್ರಾಯ ಬರುವ ಹಸ್ತಪತ್ರಿಕೆಗಳನ್ನು ಪ್ರಚಾರ ಮಾಡಿ ತಾ. 20ರಲ್ಲಿ ಸತ್ಯಾಗ್ರಹ ಆರಂಭಮಾಡಿದರು. ಅನೇಕ ಕೆಲಸಗಾರ ಬಂಧುಗಳು ಸತ್ಯಾಗ್ರಹಿಗಳ ಸಮೀಪದಲ್ಲಿಯೇ ಇದ್ದರು.

ಸತ್ಯಾಗ್ರಹ ತತ್ಕಾಲ ನಿಲ್ಲಿಸಲ್ಪಟ್ಟಿತು— ನಿನ್ನೆಯ ದಿನ ಶ್ರೀ. ರಮೇಶ ರಾಯರ ದೇಹಸ್ಥಿತಿಯು ಬಹಳ ಕೆಟ್ಟದ್ದಿತಲ್ಲದೆ ಅನೇಕ ಸಾರಿ ಅವರಿಗೆ ಮೂರ್ಛೆಯಾಗಿತ್ತು. ಸತ್ಯಾಗ್ರಹವು ರಾತ್ರಿ 8ಘಂಟೆಯ ವರೆಗೂ ನಡೆಯಿತು. ಅಷ್ಟರಲ್ಲಿ ಶ್ರೀ. ರಮೇಶ ರಾಯರ ದೇಹಸ್ಥಿತಿಯು ಸಂಪೂರ್ಣ ಕೆಟ್ಟದ್ದಿತು. ಶ್ರೀ. ವಾಸುದೇವರಾಯರು ತುಂಬ ನಿಶ್ಶಕ್ತರಾಗಿದ್ದರು. ಡಾ. ಯು. ಪಿ. ಮಲ್ಯರು ಬಂದು ಸತ್ಯಾಗ್ರಹ ನಿಲ್ಲಿಸಬೇಕಾಗಿ ಬಹಳವಾಗಿ ಕೇಳಿಕೊಂಡರೂ ಸತ್ಯಾಗ್ರಹಿಗಳು ಒಪ್ಪಲಿಲ್ಲ. ಶ್ರೀ. ಯು. ಎಸ್. ಮಲ್ಯರೂ, ಶ್ರೀ. ವಿ. ಎಸ್. ಕುಡ್ವರೂ ಊರಲ್ಲಿಲ್ಲದ ಕಾರಣ ತಾತ್ಕಾಲಿಕವಾಗಿಯಾದರೂ ಸತ್ಯಾಗ್ರಹ ನಿಲ್ಲಿಸಬೇಕೆಂದೂ, ಅವರುಗಳು ಬಂದಮೇಲೆ ತಮ್ಮ ಶಕ್ತಿಮೀರಿ ಕೆಲಸಗಾರ ಬಂಧುಗಳಿಗೆ ನ್ಯಾಯ ದೊರಕುವಂತೆ ತಾವು ಯತ್ನಿಸುವುದಾಗಿಯೂ ಡಾ. ಮಲ್ಯರು ಹೇಳಿ ಸತ್ಯಾಗ್ರಹಿಗಳಿಗೆ ಬಿನ್ನವಿಸಿಕೊಂಡರು. ಡಾ. ಮಲ್ಯರ ಪ್ರಾರ್ಥನೆಯನ್ನು ಗೌರವಿಸಿ ಸತ್ಯಾಗ್ರಹಿಗಳು ತಾತ್ಕಾಲಿಕವಾಗಿ ಅನ್ನತ್ಯಾಗ ವ್ರತವನ್ನು ನಿಲ್ಲಿಸಿದ್ದಾರೆ. ಸತ್ಯಾಗ್ರಹಿಗಳಿಬ್ಬರನ್ನು ದಯಾಳುವಾದ ಡಾ. ಯು. ಪಿ. ಮಲ್ಯರು ಶುಶ್ರೂಷೆಯ ಬಗ್ಗೆ ಶ್ರೀರಾಮಕೃಷ್ಣ ನರ್ಸಿಂಗ್ ಹೋಮಿಗೆ ಸಾಗಿಸಿಕೊಂಡು ಅಲ್ಲಿ ಅವರಿಗೆ ಬೇಕಾದ ಔಷಧೋಪಚಾರಮಾಡುತ್ತಿದ್ದಾರೆ. ಸತ್ಯಾಗ್ರಹಿಗಳ ವಿಷಯದಲ್ಲಿ ಬೀಡಿ ಕೆಲಸಗಾರರ ಸಂಘದವರು ಬಹಳ ಸಹಾನುಭೂತಿಯನ್ನು ತೋರಿಸಿದ್ದಾರೆ. ಈ ಸತ್ಯಾಗ್ರಹದಿಂದ ಕೆಲಸಗಾರರಲ್ಲಿ ಒಂದು ಹೊಸ ವಿಧದ ಜಾಗ್ರತಿಯು ಉಂಟಾಗಿದೆ. ಕಾಂಗ್ರೆಸ್ ಧುರೀಣರುಗಳು ಪರಿಸ್ಥಿತಿಯು ಇಷ್ಟರವರೆಗೆ ಮುಟ್ಟುವಂತೆ ಎಡೆಕೊಟ್ಟುದಕ್ಕಾಗಿ ಎಲ್ಲರೂ ಬಹಳ ವ್ಯಸನಪಡುತ್ತಾರೆ.

ಉಡುಪಿ

ಜನಪ್ರೀತರಿಗೆ ವರ್ಗ— ಸ್ಥಳೀಯ ಟಪ್ಪಾಲು ಕಚೇರಿಯ ಜನಪ್ರೀತ ಪೋಸ್ಟುಮಾಸ್ತರ್ ಶ್ರೀ. ಬಿ. ಕೃಷ್ಣಬಾಳಿಗರಿಗೆ ಕುಂದಾಪುರಕ್ಕೆ ವರ್ಗವಾಗಿರುವುದು. ಇವರ ಸ್ಥಾನಕ್ಕೆ ವಿ. ಗೋಮ್ಸರು ಬರಲಿರುವರು. ಶ್ರೀ ಬಾಳಿಗರು ಜನತೆಗೆ ಕೆಲವೊಂದು ಅನುಕೂಲತೆಗಳನ್ನು ಒದಗಿಸಿಕೊಟ್ಟಿರುವದಲ್ಲದೆ ಇನ್ನೂ ಕೆಲವನ್ನು ಕಾರ್ಯರೂಪದಲ್ಲಿ ತರಲಿದ್ದರು.

ಸಹಕಾರ ಪ್ರಚಾರ ಸಭೆ—ಕಳೆದ ತಾ. 21ರಲ್ಲಿ ಮೋಹನ್ಸ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಸಹಕಾರ ಪ್ರಚಾರ ಸಭೆಯೊಂದು ಜರಗಿತು. ಮುನ್ಸಿಪಲ್ ಕಮಿಶನರ್ ಶ್ರೀ. ಬಿ. ಸೂರ್ಯನಾರಾಯಣ ರಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಹಿ. ರಾಮರಾಯ ಮಲ್ಯ, ಉಡ್ಪಿ ಗೋವಿಂದ ರಾವ್, ಬಿ. ಅನಂತರಾವ್, ಕೆ. ರಾಮಚಂದ್ರ ಶೆಣೈ ಮೊದಲಾದವರ ಭಾಷಣಗಳಾದುವು. ಸೆಂಟ್ರಲ್ ಸಹಕಾರ ಬೇಂಕಿನ ಕಾರ್ಯದರ್ಶಿಗಳಾದ ಶ್ರೀ. ಯು. ಶಾಂತಾರಾಮರಾಯರು ಧನ್ಯವಾದಗಳನ್ನರ್ಪಿಸಿದರು.

ಜಿಲ್ಲಾ ಸಹಕಾರಿ ಪರಿಷತ್ತು—ಬರುವ ತಿಂಗಳ 25-26 ಉಡುಪಿಯಲ್ಲಿ ಜರಗಲಿರುವ ಜಿಲ್ಲಾ ಸಹಕಾರಿ ಪರಿಷತ್ತಿನ ಯಶಸ್ಸಿನ ಸಲುವಾಗಿ ಪೂರ್ವಸಿದ್ಧತೆಗಳು ಈಗಾಗಲೇ ಆರಂಭವಾಗಿವೆ. ಸಹಕಾರಿ ಸಂಘಗಳ ಪ್ರೋತ್ಸಾಹವನ್ನು ಸ್ವಾಗತ ಸಮಿತಿಯವರು ನಿರೀಕ್ಷಿಸುತ್ತಿರುವರು.

ಮುನಿಸಿಪಲ್ ವಾಚನಾಲಯದ ಅಭಿವೃದ್ಧಿ ಸೂಚಕ ಸಂಖ್ಯೆಗಳು— ಕಳೆದ ತಾ. 13ಕ್ಕೆ ಅಂತ್ಯವಾದ ವಾರದಲ್ಲಿ ಮುನಿಸಿಪಲ್ ವಾಚನಾಲಯವನ್ನು 580 ಮಂದಿ ಸಂದರ್ಶಿಸಿದರು. 165 ಮಂದಿ ಲೈಬ್ರರಿ ಪುಸ್ತಕಗಳಿಂದ ತಮಗೆ ಬೇಕಾದ ಅನುಭವವನ್ನು ಪಡಕೊಂಡರು. 41 ಮಂದಿ ಲೈಬ್ರರಿ ಪುಸ್ತಕಗಳನ್ನು ಓದಲೋಸುಗ ತಂತಮ್ಮ ಮನೆಗಳಿಗೆ ಕೊಂಡು ಹೋದರು. ಜನತೆಯಲ್ಲಿ ವಾಚನಾಭಿರುಚಿ ಹೆಚ್ಚುತ್ತಿರುವುದೆಂಬುದಕ್ಕೆ ಇದೊಂದು ನಿದರ್ಶನ.

ಕಲ್ಯಾಣಪುರ ಸೋಮಿಲ್ಸ್—ಮುಂಬಾಯಿಯಲ್ಲಿ ವ್ಯಾಪಾರೋದ್ಯೋಗಮಾಡಿ ವಿಶೇಷ ಹಣಗಳಿಸಿರುವ ಉಡುಪಿಯವರೇ ಆದ ಜನಾಬ್ ಹಸನ್ ಬಾಪೂ ಸಾಹೇಬರವರು ಕಲ್ಯಾಣಪುರ ಹೊಳೆ ತೀರದಲ್ಲಿ ಹೊಸತಾಗಿ ನಿರ್ಮಿಸಿದ 'ಕಲ್ಯಾಣಪುರ ಸೋಮಿಲ್ಸ್'ನ ಆರಂಭೋತ್ಸವವು ತಾ. 21-4-40ರಲ್ಲಿ ಜನಾಬ್ ಎಚ್. ಎಸ್. ಹಸನ್ ಸಾಹೇಬ್ ಬಹದ್ದೂರ್, ಎಂ ಎಲ್. ಎ. ರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಉಪಾಹಾರವಾದೊಡನೆ ಡಾಕ್ಟರ್ ಶ್ರೀಪಾದ ರಾವ್, ಕೆ. ಶೀನ ಶೆಟ್ಟಿ, ಯಸ್. ಯು. ಪಣಿಯಾಡಿ, ಕೆ. ಹೈದರ್, ಮೊದಲಾದವರು ಹಸನ್ ಬಾಪೂ ಸಾಹೇಬರ ಧಾರ್ಮಿಕ ಬುದ್ಧಿ, ಹಣವನ್ನು ಗಂಟು ಕಟ್ಟಿ ಇಡದೆ ನೂರಾರು ಬಡವರಿಗೆ ಅನ್ನವೀಯುವ ಕಸಬು ಕೈಗಾರಿಕೆಯಲ್ಲಿ ವಿನಿಯೋಗಿಸುತ್ತಿದ್ದರಲ್ಲಿರುವ ಶ್ರದ್ಧೆ, ಧೈರ್ಯ ಮೊದಲಾದುವನ್ನು ವಿವರಿಸಿ ಸಂದರ್ಭೋಚಿತವಾಗಿ ಮಾತನಾಡಿದರು. ಅಧ್ಯಕ್ಷರು, ಈ ಸೋಮಿಲ್ ಅತಿ ದೊಡ್ಡದಾದುದೆಂದೂ, ಇದನ್ನು ತೆರೆದ ಬಾಪೂರವರು ಅಭಿವಂದನೀಯರೆಂದೂ ಹೇಳಿದರು. ನಮ್ಮಲ್ಲಿ ಧನಿಕರೇ ಕಡಿಮೆ, ಇದ್ದ ಕೆಲವರಾದರೂ ಇಂತಹ ಕೈಗಾರಿಕೆಗಳನ್ನು ತೆರೆಯಲು ಮುಂದೆ ಬರುವುದಿಲ್ಲ. ಹೀಗಿರುವಲ್ಲಿ ಸ್ವಾರ್ಜಿತವಾದ ತನ್ನ ಹಣವನ್ನು ನಮ್ಮ ನ್ಯಾಯ ದಾರಿಯ ತರುಣೋತ್ಸಾಹದಿಂದ, ಧೈರ್ಯದಿಂದ ಈ ಮಹಾಬಾಯರಕ್ಕೆ ಕೈ ಹಾಕಿರುವ ಬಡವರ ಮೇಲಿನ ಮಮತೆಯು ದ್ಯೋತಕವೆಂದರು. ಕಡೆಗೆ ಧನ್ಯವಾದಾರ್ಪಣೆಯೊಂದಿಗೆ ಸಮಾರಂಭವು ಕೊನೆಗೊಂಡಿತು.

ನವಯುಗ ಎಂಟರ್ ಪ್ರೈಸ್ ಲಿಮಿಟೆಡ್—ಇದರ ಪ್ರಥಮ ವಿಶೇಷ ಸಭೆಯು ತಾರೀಕು 20-4-40ರಲ್ಲಿ ರಿಜಿಸ್ಟರ್ಡ್ ಆಫೀಸಿನಲ್ಲಿ ಚೆಯರ್ ಮೇನ್ ಶ್ರೀ. ಕೆ. ಜೆ. ಬರ್ಲ್ಲಿಲ್, ಬಿ. ಎ., ಎಲ್. ಎಲ್. ಬಿ.ಯವರ ಅಧ್ಯಕ್ಷತೆಯಲ್ಲಿ ಜರಗಿ ಆಡಿಟ್ ಮಾಡಲ್ಪಟ್ಟ ಸ್ಟೇಟುಟರಿ ರಿಪೋರ್ಟುಗಳನ್ನು ಮಂಜೂರು ಮಾಡಲಾಯಿತು. ಈ ಸಂದರ್ಭದಲ್ಲಿ ಒಡಿಟರರಾದ ಶ್ರೀ. ಪಿ. ಯಂ. ಹೆಗ್ಡೆ, G.D.A., R. A. ರವರೂ ಹಾಜರಿದ್ದರು.

ಉಡುಪಿ—ತಾ 20-4-40ರಲ್ಲಿ ದ. ಕ. ಜಿಲ್ಲಾ ಹರಿಜನ ಲೀಗಿನ ಸದಸ್ಯರ ಮಹಾಸಭೆಯೊಂದು ಉಡ್ಪಿಯ ಕಂಬಳಬೆಟ್ಟಿನಲ್ಲಿ ಶ್ರೀ ಗೋಪಾಲ ಸಾಲಿಯಾನರ ಅಧ್ಯಕ್ಷತೆಯಲ್ಲಿ ಜರಗಿ, ಲೆಕ್ಕ ಪತ್ರ ಮಂಜೂರು ಮಾಡಿ, ಬಾಕಿ ವರ್ಷಕ್ಕೆ ಅಧಿಕಾರ ವರ್ಗ ರಚಿಸಲಾಯಿತೆಂದು ತಿಳಿದು ಬರುತ್ತದೆ.

ಓರಿಯಂಟಲ್ ಗವರ್ನಮೆಂಟ್ ಸೆಕ್ಯುರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್—ಜನಪ್ರೀತವೂ ಪ್ರಖ್ಯಾತವೂ ಆದ ಈ ವಿಮಾ ಕಂಪೆನಿಯ ವಿಮಾ ವ್ಯವಹಾರವು ಕಳೆದ ವರ್ಷ 39,965 ಪೋಲಿಸಿಗಳಿಂದ ರೂಪಾಯಿ 7, 73, 10,040ರಷ್ಟಾಗಿರುವುದೆಂದು ತಿಳಿದು ಬರುತ್ತದೆ.

ನಿಮಗೆ ದೊಡ್ಡ ಆಕಾಂಕ್ಷೆ ಇದೆಯೇ ?

ಜೀವವಿಮೆಯು ಇಂದೀಗ ಅತಿ ಗೌರವ ವೃತ್ತಿಯೆಂದು ಲೋಕದಲ್ಲೆಲ್ಲಾ ಅಂಗೀಕೃತವಾಗಿದೆ. ಒಳ್ಳೇ ವಿಕ್ರಯಗೆ ಜೀವವಿಮೆಯು ಬಹಳ ಲಾಭದಾಯಕ ವೃತ್ತಿಯಾಗಿದೆ. ಕ್ರಮವಾಗಿ ಜೀವವಿಮೆಯನ್ನು ವಿಕ್ರಯಿಸಿ ನೀವು ನಿಮ್ಮ ಸ್ನೇಹಿತರಿಗೂ ಸಂಬಂಧಿಕರಿಗೂ, ಮಾನವಕೋಟಿಗೆ ಬಹಳ ಒಳ್ಳೇ ಸೇವೆಮಾಡಿ, ಸಂಕಷ್ಟಕ್ಕೊಳಗಾಗಿರುವ ಹಲವು ಕುಟುಂಬಗಳ ಆಶೀರ್ವಾದ ಪಡೆದು ಯೋಗ್ಯವಾದ ಪ್ರತಿಫಲ ಪಡೆಯಬಹುದು.

ಮಹತ್ತಾದ ಸಂದರ್ಭ

ಲಾಭದಾಯಕವಾದ ಜನರಲ್ ಏಜೆನ್ಸಿಯನ್ನು ಸ್ಥಾಪಿಸಲು ನಿಮಗೆ ಹೇಗೆ ಸಹಾಯಮಾಡಬೇಕೆಂಬುದನ್ನು ಚೆನ್ನಾಗಿ ಅರಿತಿರುವ ಈ ಕೆಳಗಣ ಕಂಪೆನಿಯಲ್ಲಿ ಉದ್ಧಾರ ಏಜೆನ್ಸಿ ಕಂಟ್ರಾಕ್ಟು ಪಡೆದು ಕೆಲಸಮಾಡಲು ಇಂದೀಗ ಮಹತ್ತಾದ ಸಂದರ್ಭವೊಂದು ಮುಂದೆ ಬಂದು ನಿಂತಿರುವುದು. ನೀವು ನಿಮ್ಮ ಸ್ವಂತ ಏಜೆನ್ಸಿಯನ್ನು ಸ್ಥಾಪಿಸಿ ಬೆಳೆಸಬಹುದು. ನಿಮ್ಮ ವಿಕ್ರಯ ಶಕ್ತಿಯನ್ನು ವೃದ್ಧಿಗೊಳಿಸಬಹುದು. ನಿಮ್ಮ ಸಂಪಾದನೆಯನ್ನು ಹೆಚ್ಚಿಸಿ ನಿಮ್ಮ ಸಮಾಜದಲ್ಲಿ ಸ್ಥಿರವಾದ ವ್ಯವಹಾರ ಮಹಿಮಾಟದ ಮುಖಂಡನಾಗಬಹುದು. ನಿಮಗೆ ಆಸಕ್ತಿಯಿದ್ದಲ್ಲಿ ನಿಮ್ಮೊಡನೆ ಸಹಕರಿಸಿ ಸಹಾಯಮಾಡಲು ನಾವು ಸಂತೋಷಪಡುವೆವು. ವಿಳಂಬಮಾಡಬೇಡಿರಿ, ನಮಗೆ ಬರೆಯಿರಿ.

ಈಸ್ಟ್ ಎಂಡ್ ವೆಸ್ಟ್ ಇನ್ಶ್ಯೂರೆನ್ಸ್ ಕೋ. ಲಿಮಿಟೆಡ್,

ಈಸ್ಟ್ ಎಂಡ್ ವೆಸ್ಟ್ ಬಿಲ್ಡಿಂಗ್ಸ್,

ಅಪೊಲ್ಲೋ ಸ್ಟ್ರೀಟ್, ಫೋರ್ಟ್ ಬೊಂಬಾಯಿ.

ಮೈಸೂರು ಪತ್ರ

(ನವಯುಗ ಬಾತ್ಮೀದಾರರಿಂದ)

ಮೈಸೂರು, ಎಪ್ರಿಲ್ 22.

ಲಾಯರ್ ಕೊಲೆ ಮುಕದ್ದಮೆ

ಹಿಂದೆ 'ನವಯುಗ'ದಲ್ಲಿ ತಿಳಿಸಿದ್ದಂತೆ ಬೆಂಗಳೂರು ವಕೀಲ್ ಶ್ರೀ. ಹೋಳ್ನೆಗುಂದಂ ಕೃಷ್ಣಮೂರ್ತಿ ಘೋರಕೊಲೆ ಸಂಬಂಧ ಪೋಲೀಸರಿಂದ ದಸ್ತಗಿರಿಯಾಗಿ ಆಪಾದಿತರುಗಳಾಗಿರುವ ಶ್ರೀಗಳಾದ ನಾರಾಯಣ ರೆಡ್ಡಿ, ಪೊನ್ನಾಂಬಲಂ, ರಾಜು, ಮುನಿಗ, ಮುಣ್ಣಾರ ಮತ್ತು ಸುಪ್ರಸಿದ್ಧ ವಕೀಲ್ ಶ್ರೀ. ಎಸ್. ಕೆ. ವೆಂಕಟರಂಗ್ಯಂಗಾರ್‌ರವರುಗಳ ಮೇಲೆ ಹೂರಡಿರುವ ಮುಕದ್ದಮೆಯನ್ನು ಸ್ಪೆ! ಮ್ಯಾ! ಶ್ರೀ. ಆರ್. ಪಿ. ಮಲ್ಲಪ್ಪನವರು ವಿಚಾರಣೆ ನಡೆಸುತ್ತಿದ್ದರು. ಇದು ಬಹಳ ಕೋಲಾಹಲದಾಗಿರುವುದರಿಂದ ಕೋರ್ಟು ಆವರಣದಲ್ಲಿ ಜನಗಳ ಗುಂಪು ಜಾಸ್ತಿ ಮತ್ತು ಕೋರ್ಟಿನ ಒಳಗೆ ಕೆಲಸವಿರುವವರಿಗೂ, ಅಧಿಕಾರಿಗಳಿಗೂ ಮಾತ್ರ ಪ್ರವೇಶವುಂಟು. ಈ ಮುಕದ್ದಮೆಯಲ್ಲಿ ಮೋಟಾರ್ ಡ್ರೈವರ್ ಪೊನ್ನಾಂಬಲಂರವರು ಕೊಲೆ ಸಂಬಂಧ ನಡೆದ ಎಲ್ಲಾ ಸಂಗತಿಗಳನ್ನು ಪೋಲೀಸರಿಗೆ ತಿಳಿಸಿ ಸರ್ಕಾರದವರಿಂದ ಕ್ಷಮೆ ಪಡೆದು ಸರ್ಕಾರದ ಅಪ್ರೂವರ್ ಆಗಿ ಸಾಕ್ಷ್ಯವಿತ್ತರು 5ನೇ ಮತ್ತು ಕೊನೆ ಆಪಾದಿತರವರ ಮದರಾಸ್ ಸುಪ್ರಸಿದ್ಧ ವಕೀಲ್ ಶ್ರೀ. ವಿ. ವಿ. ಶ್ರೀನಿವಾಸಯ್ಯಂಗಾರು ಕೋರ್ಟಿನಲ್ಲಿ ವಾದಿಸುತ್ತಾರೆ. ಮುಕದ್ದಮೆ ಪತ್ರದ ಭವಾದ ಬಳಿ ಪೊನ್ನಾಂಬಲಂರನ್ನು ಗೌ! ಡ್ವೋಕೇಟರು ಪ್ರಶ್ನಿಸಲು "ಶ್ರೀಕೃಷ್ಣಮೂರ್ತಿಗಳ ಕೊಲೆ ಹೇಗೆ ನಡೆಯಿತು, ಮತ್ತು ಪ್ರತಿದೇಶವನ್ನು ಟ್ಯಾಕ್ಸಿಯಲ್ಲಿ ಮಾಡಿ ಗಳಿಗೆ ಸಾಗಿಸಿದ್ದರ ವಿಚಾರಗಳನ್ನು ವಿಶದವಾಗಿ" ಉತ್ತರವಿತ್ತಿರುವುದನ್ನು ಓದಿದರೆ ಮೈ ಜುಂ ಅನ್ನುತ್ತೆ. ನಂತರ ಮೊದಲನೆ ಆಪಾದಿತ ರೆಡ್ಡಿಗಳು ಸಾಕ್ಷ್ಯವಿತ್ತು, ರೆಡ್ಡಿ ಮತ್ತು ಅವರ ತಾಯಿಯವರಿಗೆ ಕೋರ್ಟಿನಲ್ಲಿ ಆಸ್ತಿ ಬಗೆ ವ್ಯಾಜ್ಯ ನಡೆಯುತ್ತಿತ್ತೆಂದೂ, ರೆಡ್ಡಿಗಳಿಗೆ 5ನೇ ಆಪಾದಿತ ಶ್ರೀ. ವೆಂಕಟರಂಗ್ಯಂಗಾರ್ ವಕೀಲರೆಂದೂ, ಅವರ ತಾಯಿಯವರ ಪರ ಶ್ರೀಕೃಷ್ಣಮೂರ್ತಿಗಳು ವಕೀಲರೆಂದೂ ತಿಳಿ ಈ ಇಬ್ಬರು ವಕೀಲರಿಗೂ ಮನಸ್ತಾಪ ಉಂಟಾಗಿ ಕೊನೆಗೆ ಕೃಷ್ಣಮೂರ್ತಿ ಕೊಲೆಯ ಕಾರಣ ನಾರಾಯಣರೆಂದೂ ಸ್ಪಷ್ಟಪಡಿಸಿದರು ನಂತರ ಹವಂಗರರ ಕೊಲೆ ಸಂಬಂಧ ಉ...ದ ಟ್ಯಾಕ್ಸಿ ಮಾಲೀಕ ಶ್ರೀ. ವಿ... ಯವರಿಗೆ ಅವರ ಬಗ್ಗೆ ಗುಮಾನಿ ಬಂದು ಇದನ್ನು ಶ್ರೀಯುತರ ಸ್ನೇಹಿತರೂ, ಮೈ! ಸರ್ಕಾರಿ ಅಧಿಕಾರಿಗಳೂ, ದೊಡ್ಡಬಳ್ಳಾಪುರ ಸ! ಅ... ಸಭೆ ಕಾರ್ಯದರ್ಶಿಗೆ ತಿಳಿಸಿ ಮ! ದಾರಾಪಿದವರು ಇದನ್ನು ಪೋಲೀಸರಿಗೆ ತಿಳಿಸಿ ಮುಂದಿನ ತನಿಖೆ ಕ್ರಮಕ್ಕೆ ಉಪಯೋಗವಾಯಿತೆಂದೂ ಮಿ! ಮಿತ್ರ ಮತ್ತು ಮಿ! ...ರವರ ಸಾಕ್ಷಿಯಿಂದ ಗೊತ್ತಾಗುತ್ತೆ. ... ದೇಹ ಪೋಸ್ಟ್‌ಮಾರ್ಟಂ ನಡೆಸಿದ ಡಾಕ್ಟ... ಸಾಕ್ಷ್ಯವಿತ್ತರು. ಶ್ರೀ ರೆಡ್ಡಿಗಳ ಮುಕದ್ದ... ಯು ಬೆಂಗಳೂರು ಹಿಂದಿನ ಡಿ! ಕೋರ್ಟ... ನಡೆಯುತ್ತಿದ್ದುದರಿಂದ ಡಿ! ಜ! ಶ್ರೀ. ಹೇಮ... ನವರೂ ಸಾಕ್ಷ್ಯವಿತ್ತು ಕೆಲವು ಅಂಶ ತಿಳಿ... ರು. ಪೋಸ್ಟುಮಾರ್ಟಂನಲ್ಲಿ ಪ್ರತಿದೇಹ... ದಾ! ಮಾಂಟಿರೋರವರೂ ಪ್ರತಿದೇಹ ... ತಮ್ಮ ಸಾಕ್ಷ್ಯವಿತ್ತು ಮುಗಿಸಿದ್ದು ಅದೇ... ಸಾಕ್ಷ್ಯವಿತ್ತು "ದಿ ಕೃಷ್ಣಮೂರ್ತಿಗಳಿಗೆ ... ವೆಂಕಟರಂಗ್ಯಂಗಾರ್ ಅವರಿಗೆ ವೈ... ದ್ವೇಷವಿತ್ತೆಂದೂ ಆದರೂ ಶ್ರೀ... ಮೂರ್ತಿಗಳು ಆ ವಕೀಲರಿಗೆ ಹೇಳುತ್ತಿದ್ದ... ರು" ತಿಳಿಸಿದರು. ಇನ್ನೂ ಅನೇಕ ಮು... ರು ಸಾಕ್ಷಿ ಇತ್ತರು. ಈ ಮುಕದ್ದಮೆ... ಸುಮಾರು 125 ಮಂದಿ ವಿಚಾರಣೆ ನಡೆ... ದೆ. ಇದು ಇನ್ನೂ ನಡೆಯಬೇಕಿರುವ ಸಾಕ್ಷಿ... ಹಾಜರಾಗಿಲ್ಲ ನಡೆದಿಲ್ಲ. ಮುಕದ್ದಮೆ ಸುಮಾರು 2 ತಿಂಗಳು ನಡೆಯಬಹುದು.

SCHEDULE NO. 4

SHRI SODE MATH, UDIPI, SOUTH KANARA.

Summary of Receipts and Payments for the period between 8-11-1934 and 3-11-1937.

Part A. Receipts on Revenue Account

	Rs.	As.	Ps.
Rent from Agricultural & Horticultural Lands	1,27,752	14	5
Rent from House Property	342	4	0
Tasdik	3,426	12	9
Sale of Wood & Dry-Land Produce ...	3,136	13	0
Varshasanas	694	12	3
Voluntary Offerings	4,215	9	9
Inter-Math Formalities & Presents ...	580	4	0
Dividend on Shares in C. P. C. Co., Ltd., ...	17	8	0
Interest on Sundry Advances	460	13	5
Final Total: Part A.	**1,40,627**	**11**	**7**

Part A. Payments on Revenue Accounts & Surplus

	RS.	AS	PS
Government Assessment	38,409	6	10
Mulgeni	817	14	4
H. R. E. Board Contribution ...	1,700	0	0
Municipal Tax	150	3	2
Salaries & Wages	13,512	7	2
Stationery, Printing, Postage, Lighting etc	859	15	2
Trevelling Expenses	2,358	7	6
Legal Expenses	5,541	0	6
Repairs, Maintenance and Replacements	3,014	5	9
Interest	39,483	4	2
Charities, Presents & Donations ...	2,551	10	9
Inter-math Formalities & Presents ...	554	15	6
Feeding & Viniyoga Expenses ...	15,648	2	0
Daxine	1,893	13	6
Collection Expenses to C. I. & B. S. Ltd.	1,400	15	1
Preliminary Total...	1,27,916	9	5
Surplus Vide Part B.	12,711	2	2
Final Total: PART A.	**1,40,627**	**11**	**7**

Part B: Receipts on Capital Account. Opening Balances & Surplus.

	Rs.	As.	Ps.
Sale of Old Motor Car	1,250	0	0
Sale of Cart & Bullocks	243	0	0
Paryayam arrears Recovered	2,391	0	9
Sale of Jewels	31,154	4	6
Advances Recovered	7,645	1	9
Liabilities Incurred	1,11,085	13	9
Value of Opening Stores	2,120	6	1
Opening Cash Balance	397	3	4
Preliminary Total	1,56,286	14	2
Surplus Vide Part A	12,711	2	2
Final Total: Part B. ...	1,68,998	0	4
Final Total: Part A.	1,40,627	11	7
Preliminary Total: Part B:	1,56,286	14	2
GRAND TOTAL ...	**2,96,914**	**9**	**9**

Part B Payments on Capital Account and Closing Balances.

	RS.	AS	PS
Life Insurance Premium on Swamiar's Policies ...	10,374	2	0
Purchase of New a Motor Car ...	3,350	0	0
Purchase of Cart Bullocks	50	0	0
Paryayam arrear cleared .. .	2,020	6	0
Land improvements	6,079	0	5
Sundry Advances	3,620	11	8
Liabilities Discharged	1,40,135	3	4
Acquisition of Land	110	12	0
Cash in Transit from Collection Centres	1,926	12	0
Value of Closing Stores	797	6	7
Closing Cash Balance	523	10	4
Final Total: PART B.	**1,68,998**	**0**	**4**
Preliminary Total: Part A. ...	1,27,916	9	5
Final Total: Part B. ...	1,68,998	0	4
Grand Total...	**2,96,914**	**9**	**9**

Checked and found correct subject to the remarks contained in my report of this date

MANGALORE,
25-11-1938

(Sd.) **P. M. HEGDE.**
Registered Accountant.

ಸ್ವೀಕಾರ ವಿಮರ್ಶೆ

ಅಂತರಂಗದ ಕಥೆಗಳು—ಅಂತರಂಗ ವಾರ ಪತ್ರಿಕೆಯಿಂದ ಆಯ್ದ ೧೩ ಚಿಕ್ಕ ಕಥೆಗಳ ಸಂಗ್ರಹ. ಕ್ರೌನ್ ೧/೮ರ ೧೦೩ ಪುಟಗಳು. ಬೆಲೆ:-೦-೮-೦. ಪ್ರಕಾಶಕರು: ಜನರಲ್ ಸಪ್ಲೈಸ್ ಲಿಮಿಟೆಡ್, ಉಡುಪಿ.

'ಅಪರ ಜೀವನ' 'ಕಲ್ಪನೆ' 'ಎರಡು ಮಹಾಕಥೆಗಳು' (ಶ್ರೀ. ಪಿ. ವೆಂಕಟರಮಣಾಚಾರ್ಯರಿಂದ), 'ತಪಸ್ಸಿದ್ಧಿ' 'ಆ ನೆನಪು' (ಶ್ರೀ. ಎಸ್. ವೆಂಕಟರಾವ್ ರಿಂದ), 'ಮಗುವಿನ ತಂದೆ' 'ಅನಸೂ ಪಾಲು ಗಾರ' 'ಫೊಸರ್ಗನ' 'ಮಾತೆ-ದಾಸಿ' 'ಸೋಟದ ವಾಟ' (ಶ್ರೀ. ಎಂ. ವಿಠಲ ಹೆಗ್ಡೆಯವರಿಂದ) 'ಅಪರಾಧವೆ?' (ಶ್ರೀ. ದೇವದಾಸರಿಂದ) 'ಕಪಿ' (ಶ್ರೀ. ಕೆ. ಹೈದರರಿಂದ) 'ಅನುಚಿತವೆ.' (ಶ್ರೀ. ಬಿ. ಎಸ್. ಆಚಾರ್ಯರಿಂದ) ಇಷ್ಟು ಕಥೆಗಳಿವೆ.

'ಅಪರ ಜೀವನ' 'ಕಲ್ಪನೆ'ಗಳ ಶೈಲಿಯು ಕೂಸಕು, ಅರ್ಥವೂ ಗೂಢವಾದುದು. ಇವೆರಡು ಒಟ್ಟಾಗಿ ಓದುಗರ ಭಾವವನ್ನು ತಟ್ಟಿ ಮೀಟಲಾಗಿ ಇವುತ್ತವೆ; ಜಗ್ಗಿಸಿ ಬೇಗ ಆರುವದಿಲ್ಲ. 'ತಪಸ್ಸಿದ್ಧಿ' 'ಆ ನೆನಪು'-ಹೃದಯಸ್ಪರ್ಶಿಸುವ ಕಥೆಗಳು. ಜೀವನದ ನೈಜ ಘಟನೆಯ 'ಫೋಟೋ' ಅಲ್ಲವಾದರೂ ಉತ್ತಮ ಚಿತ್ರಗಾರನು ಕಣ್ಣೆದೆ ಇಟ್ಟುಕೊಂಡು ಬಿಡಿಸಿದ ಚಿತ್ರಗಳು. 'ಮಗುವಿನ ತಂದೆ' 'ಅನಸೂ ಪಾಲುಗಾರ' 'ಫೊಸರ್ಗನ'-ಇವು ಅಂತರಂಗದ ಕಥೆಗಳು! ಪ್ರಣಯದ ನೈಜ ಘಟನೆಗಳು ಇವುಗಳಲ್ಲಿ ಮುಚ್ಚುಮರೆಯಿಲ್ಲದೆ ಬಂದಿವೆ. 'ಸೋಟದ ವಾಟ' ಯುದ್ಧದ ತದ್ರೂ ಸನ್ನಿವೇಶವೊಂದನ್ನು ಚಿತ್ರಿಸುತ್ತದೆ. 'ಮಾತೆ-ದಾಸಿ' ಅಪೂರ್ಣ ಸಂಸಾರದ ವೇದನೆಯೊಂದರ ಸೊಗಸಾದ ಚಿತ್ರ. 'ಅಪರಾಧವೆ?' ಕಥೆಯು ಒಂದು ಪ್ರವಾದವನ್ನು ಇದ್ದಂತೆ ಸಾರುತ್ತದೆ. ಆ ಘಟನೆಯಲ್ಲಿನ ನ್ಯಾಯ ಪಾಲನೆಯ ಅಗತ್ಯವುಳ್ಳವನೊಬ್ಬನು ತೀರ್ಮಾನಕ್ಕಾಗಿ ಪ್ರಶ್ನಿಸಲು ವಿದ್ಯಮಾನವನ್ನು ವಿವರಿಸಲಾಗಿದೆ; ಉತ್ತರ ಕೊಡುವದು ಸುಲಭವಲ್ಲ. ಕನಸಿನ ರಾಜ್ಯದಲ್ಲಿ ವಿಹರಿಸುವವನ ಸಾಹಸವನ್ನು 'ಕಪಿ'ಯಲ್ಲಿ ಕಾಣಬಹುದು. 'ಅನುಚಿತವೆ?' ಕಥೆಯು ಸಾಮಾಜಿಕ ದೋಷವೊಂದರ ಯಥಾರ್ಥ ವರ್ಣನೆ. ಕಥೆಯು ಒಂದು ಪರಿಣಾಮ ಕೊಡುತ್ತದೆ; ಅಷ್ಟೇ ಸುಗಮವಾಗಿ ಭಾವವನ್ನು ಕೆಣಕುವದಿಲ್ಲ.

ಕತೆಗಾರನ ಭಾವನಾಕನ್ನಡಿಯಲ್ಲಿ ಪ್ರಪಂಚದ ಪ್ರತಿಬಿಂಬ ಇದ್ದಂತೆ ಮೂಡುತ್ತದೆ. ಯಾವ ಕಾರಣಕ್ಕಾಗಿಯಾದರೂ ಅದನ್ನು ವಿಸ ವಂಚಿಸ ಬೇಕೆಂದಿಲ್ಲ. ಕುರೂಪವಿರಲಿ, ಸುರೂಪವಿರಲಿ, ಅದು ಪ್ರಾಪಂಚಿಕ ವಿದ್ಯಮಾನಗಳ ಛಾಯೆ. ತಿದ್ದುವ ಕೆಲಸವಿರುವದು ಮಂಗಳರದೋ ಮುನಿಗಳದೋ ಹೊರತು ಕನ್ನಡಿಯದಲ್ಲ! ಈ ಸಂಗ್ರಹದಲ್ಲಿನ ತರುಣ ಕತೆಗಾರರು ಕೆಲವು ಕತೆಗಳಲ್ಲಿ ವಿದ್ಯಮಾನಗಳ ನೈಜ ಚಿತ್ರ ಮೂಡಿಸಲು ಸಂಪ್ರದಾಯದ ಗೌರವದ ಮೇರೆ ಮೀರಿದ್ದಾರೆ-ತಪ್ಪಲ್ಲ.

ಪುಸ್ತಕದ ಮುದ್ರಣವು ಮುದ್ದಾಗಿದೆ, ಕತೆಗಾರರ ಅಲ್ಪ ಪರಿಚಯ ಕೊಡಲಾಗಿದೆ. ಮುಖಪತ್ರ ಆಕರ್ಷಣೀಯ, ಕನ್ನಡಿಗರು ಅವಶ್ಯವಾಗಿ ಪಡೆದೋದಬೇಕಾದ ಪುಸ್ತಕ.

ಆರು ಕಥೆಗಳು—ಬೆಳಗಾವಿಯ ಕಥಾಕುಂಜ ಗ್ರಂಥಮಾಲೆಯ ೧ನೆಯ ಹೂ. ಸಂಪಾದಕರು: ಶ್ರೀ. ಸ್ವಾಟ ರಾಮರಾಯರು. ಕ್ರೌನ್ ೧/೫ರ ೧೬೦ಕ್ಕೆ ಮಿಕ್ಕಿದ ಪುಟಗಳು. ಬೆಲೆ, ೦-೧೨-೦.

ಆರು ಚಿಕ್ಕ ಕತೆಗಳ ಈ ಪುಸ್ತಕಕ್ಕೆ ಶ್ರೀ. ಬಿ. ಎಂ. ಶ್ರೀಕಂಠಯ್ಯನವರು ಮುನ್ನುಡಿ ಬರೆದಿದ್ದಾರೆ. ಕತೆಗಾರರ ಪರಿಚಯವೂ ಇದೆ. ಮಂಗಳೂರಿನ ದಿವಂಗತ ಪೇಜಾವರ ಸದಾಶಿವರಾಯರ 'ಜೀವನ ನಿರ್ಮಾಲ್ಯ'ವು ಸೊಗಸಾದ ಕತೆ. ಬಡತನದ ಬಾಳಿನ ವೇದನೆಯ ಛಾಯೆ ಸ್ಪಷ್ಟವಾಗಿ ಓದುಗರ ಹೃದಯದ ಮೇಲೆ ಬೀಳುತ್ತದೆ. ದಿವಂಗತ ಮಿಸೆಸ್. ಬಿ. ಟಿ. ಜಿ. ಕೃಷ್ಣನವರ 'ನನ್ನ ಮಗು'ವಿನಲ್ಲಿನ ಘಟನೆಯು ಕೊನೆಯಲ್ಲಿ ಸಡಿಲವಾದಂತೆ ತೋರುತ್ತದೆ; ಕತೆಯು ಬರವಣಿಗೆಯಿಂದ 'ಬದುಕಿದ್ದೇನು' ಇದು ಶ್ರೀ. ದ. ಬಾ. ಕೆವೂರರು ಬರೆದದ್ದು. ಹೇಳುವ ರೀತಿ ಮನಮುಟ್ಟುವಂತಹುದಿದ್ದು ಓದುಗರನ್ನು ಸೆಳೆಯುತ್ತದೆ. ಶ್ರೀ ಎನ್. ಎಸ್. ಕೆ. ಲಕ್ಷ್ಮೀನಾರಾಯಣರ 'ಮೋತಿಯ ಸ್ವರ್ಗ'ವು ಹೊಸಮಾದರಿಯ ಕತೆ, ಹೇಳುವ ರೀತಿಯೂ ಚೆನ್ನಾಗಿದೆ. ಕಥಾಘಟನೆಯನ್ನು ಜೋಡಿಸುವ ಗೋಜುಗಳ ಅತಿ ಒತ್ತಾಯವಾದುದೆನ್ನಿಸುತ್ತದೆ. 'ಸರುವೆಯ ವಿದ್ವಾನ್' ಶ್ರೀ. ಕಡೆಂಗೋಡ್ಲು ಶಂಕರ ಭಟ್ಟರು ಬರೆದ ಉತ್ತಮ ತರಗತಿಯ ಕತೆ. ಕಥಾಘಟನೆ, ಮಾತಿನ ಶೈಲಿ ಸೊಗಸಾಗಿವೆ; ಬಗೆ ಮುಟ್ಟುತ್ತವೆ. ನೈಜ ಚಿತ್ರಕ್ಕೆ ಮಾತಿನ ಮೆರುಗು ಕೊಟ್ಟುದರಿಂದ ಹಾಲಿಗೆ ಸಕ್ಕರೆ ಬೆರೆತಂತಾಗಿದೆ. ಬರಿಯ ಹಾಲಿನ ರುಚಿ ನೋಡುವವರಿಗೆ ಬೇಸರವಾಗುವದಿಲ್ಲ. ಪಂಡಿತ ತಾರಾನಾಥರ 'ಸಮಾಧಾನವೋ' ಸರಸವಾದ ಕತೆ. ಉದ್ದೇಶ ಪ್ರದರ್ಶನವಿಲ್ಲದೆ, ಸಾಮಾಜಿಕ ಕೊರತೆಯೊಂದನ್ನು 'ಕತೆಗಾರಿಕೆ'ಯಿಂದಲೇ ಎದ್ದು ತೋರುವಂತೆ ಮಾಡಿ ಕೊಡುತ್ತದೆ. ಶೈಲಿಯು ಸ್ವಲ್ಪ ಕಡಿಮೆಯ ಯಿತೆನ್ನಿಸುತ್ತದೆ.

ಒಟ್ಟಿನ ಮೇಲೆ ಪುಸ್ತಕವು ವಾಚನೀಯವಿದೆ. ಶ್ರೀ ಬಿ. ಎಂ. ಶ್ರೀಕಂಠಯ್ಯನವರು ಮುನ್ನುಡಿಯಲ್ಲಿ ಹೇಳಿರುವಂತೆ 'ಮನಸನ್ನು ಕುಣಿಸ ಬಹುದೇ ಅಲ್ಲ, ಹೃದಯವನ್ನು ತೊಳೆದು ಶುದ್ಧಿ ಮಾಡುವದಕ್ಕೂ, ಇದರಲ್ಲಿನ ಕತೆಗಳು ಅನುಕೂಲವೇ. ಪುಸ್ತಕವು ಕನ್ನಡಿಗರ ಪ್ರೋತ್ಸಾಹಕ್ಕೆ ಅರ್ಹವಿದೆ.

ಹಿಂದುಸ್ತಾನದ ಹೊಸ ಘಟನೆ—ಲೇಖಕರು ಮತ್ತು ಪ್ರಕಾಶಕರು: ಶ್ರೀ ವೆಂಕಟೇಶಭೀಮರಾವ ನಾಯಕ, ಎಂ. ಎ. ಎಲ್‌ಎಲ್. ಬಿ. ವಿಜಾಪುರ, ಇವರು.

೧೫೦ಕ್ಕೆ ಮಿಕ್ಕಿದ ಪುಟಗಳು ದಪ್ಪವಾದ ರಟ್ಟಿನ ಪತ್ರ. ಬೆಲೆ ೧-೮-೦. ಹಿಂದುಸ್ತಾನದ ಸರಕಾರ ಪದ್ಧತಿಯ, ಆಗು ಹೋಗುಗಳನ್ನು ೧೫ ಪ್ರಕರಣಗಳಲ್ಲಿ ಈ ಪುಸ್ತಕದಲ್ಲಿ ವಿವರಿಸಲಾಗಿದೆ.

ಶಿಕ್ಷಣದ ಸುಧಾರಣೆ ಮುಗಿದ ಮೇಲೆ, ರೀತಿನೀತಿಗಳು, ಮನದಟ್ಟಾಗುವಷ್ಟು ವಿವರವಾಗಿ ಸರಳವಾದ ಭಾಷೆಯಲ್ಲಿ ಬರೆಯಲ್ಪಟ್ಟಿವೆ. ಹಿಂದೀ ರಾಜಕೀಯದ ಮೇಲೆ ಇಷ್ಟು ಸವಿಸ್ತಾರವಾಗಿ ವಿಷಯ ನಿರೂಪಣೆ ಮಾಡುವ ಕನ್ನಡ ಪುಸ್ತಕವು ಬೇರೆ ಇಲ್ಲವೆನ್ನಬಹುದು. ರಾಜಕೀಯಾಭಿರುಚಿಯುಳ್ಳ ಕನ್ನಡಿಗರೆಲ್ಲರೂ ಓದಬೇಕಾದ ಪುಸ್ತಕ.

ವೇದಾಂತದ ಒಳದಾರಿ—ಹುಬ್ಬಳ್ಳಿಯ ಅವಧೂತ ಗ್ರಂಥಾಲಯದವರಿಂದ ಪ್ರಕಾಶಿಸಲ್ಪಟ್ಟದ್ದು. ವೇದಾಂತದ ತಿರುಳನ್ನು ಮನದಟ್ಟು ಮಾಡಿಕೊಡುವ ಗ್ರಂಥ. ಹರಿತ ತಪಸ್ಸಿನಂತಿರುವ ತ್ರೈಮಾಸಿಕ ಪರಮಾರ್ಥ ಸಾಧನೆಯ ಶಿಬಿರದಲ್ಲಿ ನಡೆದ ಆರು ಪ್ರವಚನಗಳು ಇದರಲ್ಲಿ ಬಂದಿವೆ. ವೇದಾಂತಿಗಳಿಗೆ ಕೈ ಪಿಡಿಯಾಗಲು ಯೋಗ್ಯವಾದುದು. ಪುಸ್ತಕದ ಬೆಲೆ ೦-೬-೦.

ಭಾರತೀಯ ಆರೋಗ್ಯ ಸೂತ್ರಗಳು. ಲೇಖಕರು: ಶ್ರೀ. ಎ. ಕೆ. ಪಿ. ರಮಾರ್, ಇವರು ಪ್ರಕಾಶಕರು: ಶ್ರೀ. ಟಿ. ರಾಮದಾಸ ಶೆಣೈ, ಮಂಗಳೂರು. ಆರೋಗ್ಯ ನಿಯಮಗಳು ಈ ಪುಸ್ತಕದಲ್ಲಿ ಚೊಕ್ಕವಾಗಿ ವಿವರಿಸಲ್ಪಟ್ಟಿವೆ. ಬೆಲೆ ೧-೩-೦.

ಶ್ರೀ. ಬಸವೇಶ್ವರ—ದಾವಣಗೆರೆ ಶ್ರೀ. ವೀರಶೈವ ತರುಣ ಸಂಘದಿಂದ ಪ್ರಕಟಿತವಾದ ಚಿಕ್ಕ ಪುಸ್ತಕ. ಭಕ್ತಾಗ್ರಣಿ ಬಸವಣ್ಣನವರ ಚರಿತ್ರೆ, ಪದ್ಯರೂಪದಲ್ಲಿ ಬಂದಿದೆ. ಬರೆದವರು: ಶ್ರೀ ಎಸ್. ಎಸ್. ಕೃಷ್ಣಮೂರ್ತಿ.

ಪೊನ್ನಮ್ಮ—ದಿ ಮಿಸೆಸ್. ಬಿ. ಟಿ. ಜಿ. ಕೃಷ್ಣನವರು, ಧಾರವಾಡದ ಮನೋಹರ ಗ್ರಂಥ ಭಂಡಾರದವರು ಪ್ರಕಾಶಿಸಿದರು. ಕೇವಲ ತರಗತಿಯ ಬಾಲಕರಿಗೆ ಹೇಳಿಸಿದ ಈ ಚಿಕ್ಕ ಪುಸ್ತಕದ ಬೆಲೆ ಒಂದೂವರೆ ಆಣೆ.

ರೇಲವೆ ಪ್ರವಾಸಿಕರ ಮಿತ್ರ—ಬೆಳಗಾಂವಿ ರೇಲವೆ ಮಂಡಳದವರು ಪ್ರಸಿದ್ಧಿಸಿದರು. ರೇಲ್ವೆ ಪ್ರಯಾಣದ ರೀತಿ ನೀತಿಗಳು, ಕಾಯಿದೆ ಕಟ್ಟಳೆಗಳು, ಎಲ್ಲಾ ಈ ಪುಸ್ತಕದಲ್ಲಿ ಬಂದಿವೆ. ಪ್ರಯಾಣಿಕರಿಗೆ ಉತ್ತಮವಾದ ಕೈಪಿಡಿ. ಈ ಪುಸ್ತಕವೊಂದಿದ್ದರೆ ರೇಲ್ವೆ ಪ್ರಯಾಣಿಕರು ದಶೆಯಲ್ಲಿ ಅನುಭವಿಸ ಬೇಕಾದ ಕಷ್ಟವನೊಬ್ಬನು ಇದ್ದಂತೆ.

ಡಿಪ್ರೆಸ್ಡ್ ಕ್ಲಾಸಸ್ ಮಿಶ್ಯನ್, ಮಂಗಳೂರು—ಇದರ 1938-39ನೇ ವರ್ಷದ ಪ್ರಗತಿಪರ ವಾರ್ಷಿಕ ವರದಿ ನಮ್ಮ ಕೈಸೇರಿದೆ. ಒಟ್ಟು ವರದಿಯು ವರ್ಷದಲ್ಲಿ ಪ್ರಸಂಶನೀಯ ಕಾರ್ಯ ಮಾಡಿರುವದೆಂಬುದನ್ನು ದಲಿತ ವರ್ಗಕ್ಕಾಗಿರುವ ಸಹಾಯ, ಮತ್ತು ಮಹಾಜನರ ಅಭಿಪ್ರಾಯಗಳಿಂದ ತಿಳಿಯಬಹುದು.

ಬಿಲ್ಲವರ ಎಸೋಸಿಯೇಶನ್ ಮುಂಬಯಿ—ಇದರ 1939ರ ಅಷ್ಟಮ ವಾರ್ಷಿಕ ವರದಿಯು ನಮ್ಮ ಹಸ್ತಗತವಾಗಿದೆ. ಒಟ್ಟು 342 ಸದಸ್ಯರಿದ್ದು ಸಂಘವು ವರುಷದಿಂದ ವರುಷಕ್ಕೆ ಅಭಿವೃದ್ಧಿಯನ್ನೈದುತ್ತಾ ಬಂದ ರೀತಿ, ಬರುವ ಲಕ್ಷಣಗಳೆಲ್ಲಾ ವರದಿಯಲ್ಲಿ ಕಂಡು ಬರುತ್ತವೆ.

ಅಂಗದ ಸಂಧಾನ—ಯಕ್ಷಗಾನ ಪ್ರಸಂಗ ಪುಸ್ತಕ; ಸುಪ್ರಸಿದ್ಧ ಯಕ್ಷಗಾನ ಅರ್ಥಧಾರಿಗಳಾದ ಶ್ರೀ ಮಲ್ಪೆ ಶಂಕರ ನಾರಾಯಣ ಸಾಮಗರಿಂದ ಬರೆಯಲ್ಪಟ್ಟ ಅರ್ಥದೊಡನೆ ಪ್ರಕಟಿತ. ಯಕ್ಷಗಾನ ಕಲಾಭಿಮಾನಿಗಳಿಗೆ ಅತ್ಯನುಕೂಲವಾಗಿದೆ. ಬೆಲೆ: ೦-೬-೬.

ವಿದ್ಯೆದ ಹಾದಿ?—ತುಳು ಭಾಷೆಯ ನಾಟಕ ಲೇಖಕರು: ಶ್ರೀ. ಪಿ ಶಿವಣ್ಣ ಹೆಗ್ಡೆ. ಪ್ರಕಾಶಕರು: ಪ್ರಭಾತ್ ಸ್ಟೇಶನರಿ ಮಾರ್ಟ್, ಉಡುಪಿ. ಬೆಲೆ- ೦-೫-೦.

ನಾಟಕಕಾರರು ಅಳಿಯ ಸಂತಾನದ ಕುಟುಂಬವೊಂದರ ಚಿತ್ರವನ್ನು ಸೊಗಸಾಗಿ ಬಿಡಿಸಿದ್ದಾರೆ. ಆಧುನಿಕ ವಿದ್ಯಾಭ್ಯಾಸದ ಪರಿಣಾಮ, ಹಳೆಯ ರೂಢಿ ನ್ಯಾಯವೆಂದು ಹೋದವರ ವ್ಯವಹಾರ ರೀತಿ- ಇವೆಲ್ಲ ನಾಟಕದಲ್ಲಿ ಮನಮುಟ್ಟುವಂತೆ ಬಂದಿವೆ. ಸ್ಥಳೀಯ ತುಳು ಭಾಷೆಯ ಶುದ್ಧ ತುಳು ಭಾಷೆ ಬಲ್ಲವರೆಲ್ಲಾ ಅಗತ್ಯ ಓದಬೇಕಾದ ಪುಸ್ತಕ. ನಾಟಕದಲ್ಲಿಯ ಪಾತ್ರಗಳ ರಚನೆಯೂ ಅಸ್ವಾಭಾವಿಕವಾಗಿಲ್ಲ; ಆಡಿ ತೋರಿಸುವದಕ್ಕೆ ಅನುಕೂಲವೇ ಇದೆ.

—'ಪಂಢರೀನಾಥ.'

ಕೆನರಾ ಬೇಂಕ್ ಲಿಮಿಟೆಡ್

ಲಿಮಿಟೆಡ್ ಜವಾಬ್ದಾರಿಯಿಂದ ಬ್ರಿಟಿಷ್ ಇಂಡಿಯಾದಲ್ಲಿ ಸ್ಥಾಪಿತವಾದುದು.

೧೯೩೯ನೇ ಇಸವಿ ದಶಂಬರ ೩೧ಕ್ಕೆ ಅಂತ್ಯವಾಗುವ ವರ್ಷದ ಆಯವ್ಯಯದ ಸಾರಾಂಶ ಪಟ್ಟಿ.

	ರೂ. ಆ. ಪೈ.		ರೂ. ಆ. ಪೈ.
ಮೂಲಧನ		ಕಟ್ಟಡ ಮತ್ತು ಸಾಮಾನು	
ತೆತ್ತಲ್ಪಟ್ಟ	6,00,000 0-0	ಶೇರುದಾರರಿಗೆ ನಿಶ್ಚಿತ	
ಷೈರ್ ಆಫ್	3,91,342-0-0	ಮೂಲ ವ್ಯಯ:	95,489-4 3
ರಿಜರ್ವ್ ಫಂಡು	4,50,000-0-0	**ವ್ಯಾಪಾರಿಗಳಿಗೆ ಎಡ್ವಾನ್ಸ್ ಕೊಟ್ಟದ್ದು**	
ಡಿಪೋಸಿಟ್		ಬೆಲೆಬಾಳುವ	
ಫಿಕ್ಸಡ , ಕರೆಂಟ್		ಸೆಕ್ಯೂರಿಟಿ	10,97,741-5-6
ಇತ್ಯಾದಿ	81,21,622-8 1	ಹುಂಡೀ ಪತ್ರ	
ಬೇಂಕುಗಳಿಗೆ ಸಲ್ಲತಕ್ಕದ್ದು	ಇಲ್ಲ	ಶೇರುದಾರರಿಗಳು	10,30,649 2 10
ವಿವಿಧ	10,51,799-1-7	ರೇವಣಿ	20,64,586-2-0
ಈ ವರ್ಷದ ಲಾಭ	55,003 0-6	ವಿವಿಧ	9,82,093 10-4
		ನಗದು	17,99,207-1 3
ಜುಮ್ಲಾ	1,00,69,766-10-2	ಜುಮ್ಲಾ	1,00,69,766-10-2

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ, ಕೇವಲ ೪ ರೂಪಾಯಿಗಳೇ ಒಂದು ಬಾಣಂತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಮ್. ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ.ಕ.**

ಸ್ಥಾಪನೆ: **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಟ ರಸ್ತೆ, ಮಂಗಳೂರು.



ಸರಕಾರಕ್ಕೂ, ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೀಲ್ ಲೆಟರ್ ಪಂಚುಗಳು, ಮೊನೊಗ್ರಾಮ್ ಸೀಲು ಇತ್ಯಾದಿಗಳು ಶೀಘ್ರ ಸರಿಯಾಗಿ ಮಾಡಿಕೊಡಲ್ಪಡುವವು.

Crown Rubber Stamp Co., 18 Balmat Road, MANGALORE.

Approved firm by the Govt. of Mysore. Certified by the Agent of the Govt. of India in Ceylon

ಸಿಡಿಗುಂಡಿನ ಜನ್ಮದಾತ - ವಾಲ್ಟರ್ ಬೋಗೆನ್.

ಹೆರ್. ಹಿಟ್ಲರ್

- ಕಠೋರತೆ, ಕಠಿಣ ಹೃದಯದ ಗಂಡುಗಲಿ !
- ಮಾನವ ಜೀವದ ಬೆಲೆಯಿಳಿಸಿದ ಹಸಿದ ಹುಲಿ !!
- ಪ್ರಲಯದ ಕಿಡಿಯನ್ನು ಕಂಡುಹಿಡಿದ ಮಹಾ ಸಾಹಸಿ !!!

ಮಿ. ಚೇಂಬರ್ಲೆನ್.

ಮಿತ್ರ ರಾಷ್ಟ್ರಗಳ ಪೇಚಾಟಕ್ಕೆ ಕಾರಣ ಇವನ ಕೈಮಾಟ !

ಇಂದಿನ ಯುರೋಪು ಯುದ್ಧದಲ್ಲಿ ವಿಜ್ಞಾನದ ಅದ್ಭುತವು ಕಂಡುಬರುವಷ್ಟು ಉಜ್ವಲವಾಗಿ ಮಾನವನ ಸಾಹಸವು ತೋರಬರುವದಿಲ್ಲ. ಹಿಂದಿನ ಕಾಲದ ಯುದ್ಧಗಳಲ್ಲಿ ಮಾನವ ಜೀವವು, ಇಂದಿನಷ್ಟು ಕಡಿಮೆ ಬೆಲೆಬಾಳಿದ ಉದಾಹರಣೆಯೇ ಇಲ್ಲ. ಸಾವಿರಗಟ್ಟಲೆ ಜನರನ್ನು, ಒಮ್ಮೆಗೇ ನಿರ್ನಾಮ ಮಾಡುವ ಉಪಾಯವು ಹಳೆಯ ಕಾಲದಲ್ಲಿ ಇರಲೇ ಇಲ್ಲ. ಮನುಷ್ಯನ ಬುದ್ಧಿ ಶಕ್ತಿ ಮಾತ್ರದಿಂದ ಇಷ್ಟು ಹೆಚ್ಚಿನ ಬಲಿಗಳನ್ನಾದರೂ ಸವರಲು ಸಾಧ್ಯವಿಲ್ಲ. ಅಂಬಷ್ಟು ಜನರನ್ನು, ವೈಜ್ಞಾನಿಕ ಸಾಧನಗಳ ಬಲದಿಂದ ಇಂದು ಪುಡಿಗುಟ್ಟಲಾಗುತ್ತಿದೆ.

ಪ್ರಲಯಾಗ್ನಿ ಸದೃಶ ಕೋಟೆಗಳು

ಇಂತಹ ಪ್ರಲಯಕಾರೀ ಶಕ್ತಿಗಳ ಪೈಕಿ ‘ಮೈನ್’ಗಳಷ್ಟು ಅಪಾಯಕರವೂ ಅದ್ಭುತವೂ ಆದ ಮತ್ತೊಂದು ಸಾಧನವಿಲ್ಲವೆನ್ನಬಹುದು. ಪುರಾಣಪ್ರಸಿದ್ಧವಾದ ಇಂದ್ರಜಿತು, ಘಟೋತ್ಕಚರ ಮಾಯಾ ಯುದ್ಧವನ್ನು ಈ ‘ಮೈನ್’ ಯುದ್ಧವು ಸಾದಾ ಶರಣಗಳಿಸಿಬಿಟ್ಟಿದೆ! ಸಮುದ್ರದಲ್ಲಿ ಸಂಚರಿಸುವ ಹಡಗುಗಳನ್ನು ಆಕರ್ಷಿಸಿ, ಅಥವಾ ಶತ್ರುಗಳಿಗೆ ಅಗೋಚರವಾಗಿ ಬಡಿದು ಧ್ವಂಸಗೊಳಿಸಿಬಿಡುವ ಈ ಸಿಡಿಗುಂಡುಗಳು ಇಂದಿನ ಯುದ್ಧದ ಬ್ರಹ್ಮಾಸ್ತ್ರಗಳಾಗಿ ಪರಿಣಮಿಸಿವೆ. ಈ ವರೆಗಿನ ಯುದ್ಧದಲ್ಲಿ ನೆಲಸಮವಾಗಿ ಹೋದ ಹಡಗುಗಳ ಪೈಕಿ ಶೇಕಡಾ ತೊಂಭತ್ತನ್ನು ಆಹುತಿ ಕೊಂಡುದು ಈ ಕೋಟೆಗಳೇ. ಮಿತ್ರರಾಷ್ಟ್ರಗಳ ಹಡಗುಗಳು ನಾಶವಾದಷ್ಟು ಈ ವರೆಗೆ ಜರ್ಮನಿಯ ಹಡಗುಗಳು ಹೋಗಿಲ್ಲ. ಇದಕ್ಕೆ ಇಂಗ್ಲಾಂಡಿಗಿರುವಂತಹ ಪ್ರಬಲ್ ನೌಕಾಸೇನೆ ಜರ್ಮನಿಗಿಲ್ಲ, ಎಂದೇ ಹಾನಿ ತಾಳಾಗುವ ಹೆದರಿಕೆಯೇ ಇಲ್ಲ, ಎಂಬ ಉತ್ತರ ಸಿಗಬಹುದು. ನೌಕಾಪಡೆ ಪ್ರಬಲವಿದ್ದಷ್ಟೂ ಅದರ ರಕ್ಷಣಾಕಾರ್ಯವೂ ಪ್ರಬಲವೇ ಇರುವುದು ಸ್ವಾಭಾವಿಕವಷ್ಟೆ. ಆದರೆ ಜರ್ಮನ್ ‘ಮೈನ್’ ಗಳು ಎಲ್ಲಾ ರಕ್ಷಣೋಪಾಯಗಳನ್ನೂ ಹುಸಿ ಮಾಡಿ ವಿರೋಧಿಗಳ ಹಡಗುಗಳಿಗೆ ಜಲ ಸಮಾಧಿಕೊಟ್ಟಿವೆ. ಇತ್ತೀಚೆಗೆ ಬ್ರಿಟಿಷರು ಅವುಗಳ ಹಾವಳಿಯನ್ನು ಜಯಶೀಲವಾಗಿ ತಡೆಗಟ್ಟಿರುವರು. ಜರ್ಮನಿ ‘ಮೈನ್’ಗಳ ಅವತಾರ ಒಮ್ಮೆಗೇ ಸಮಾಪ್ತಿಯಾಯಿತೋ ಎಂಬಂತೆ ಮಿತ್ರರಾಷ್ಟ್ರಗಳ ಯುದ್ಧ ಹಡಗು ಭಂಜನವೆಲ್ಲಿಯೂ ನಡೆದುದು ಕೇಳ ಬರುತ್ತಿಲ್ಲ. ಬದಲಾಗಿ ಈಗ ಬ್ರಿಟಿಷರ ಕಾರ್ಯಾರಂಭವಾಗಿದೆ ಎಂದರೂ ಸಲ್ಲುವುದು. ನೋರ್ವೆಯ ಸಮುದ್ರದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಮಿತ್ರ ರಾಷ್ಟ್ರಗಳು ಜಲ ಸುರಂಗಗಳನ್ನು ಚೆಲ್ಲಿರುವ ಈ ಸುರಂಗ ಯುಗದ ಎರಡನೆ ಅಧ್ಯಾಯ. ಆದರೆ ಯುದ್ಧ ಪ್ರಾರಂಭಿಸಿದ ಕೆಲವು ವಾರಗಳ ವರೆಗೆ ಒಂದೇ ಸವನೆ ಬ್ರಿಟಿಷ್ ಯುದ್ಧ ಹಡಗುಗಳು ನೀರು ಕುಡಿದಿವೆ. ಪ್ರತಿನಿತ್ಯವೂ ಸಮುದ್ರ ಪಾಲಾಗುವ ಬ್ರಿಟಿಷ್ ಹಡಗುಗಳ ಸಂಖ್ಯೆ ಎರಡೂ ಕೈ ಬೆರಳೆಣಿಕೆಗೆ ಸಿಗುತ್ತಿತ್ತು! ಇಕ್ಕಡೆಯವರೂ ಬಹುಶೀಘ್ರ ದೃಷ್ಟಿ ಯುದ್ಧದಲ್ಲೇ ಕಳೆದಿದ್ದ ಕಾಲದಲ್ಲಿ ಕೂಡ ಹಡಗುಗಳ ನಾಶದ ಮಟ್ಟಗೆ ಯುದ್ಧ ಭಯಂಕರವಿತ್ತು. ‘ಮೈನ್’ಗಳ ಥಿಕ್ಕಿ ನಡೆದೇ ಇತ್ತು. ಆದ್ದರಿಂದ ಯುದ್ಧದ ಚರಿತ್ರೆಯಲ್ಲಿ ಈ ವರೆಗಿನ ಕಾಲವು ‘ಜಲ ಸುರಂಗಾಧ್ಯಾಯ’ವೆಂದು ಕರೆಯಲ್ಪಡುವದರಲ್ಲಿ ಸಂದೇಹವಿಲ್ಲ.

ಪ್ರಲಯ ಪುರುಷ—ವಾಲ್ಟರ್ ಬೋಗೆನ್

ಇಂತಹ ಸಿಡಿಗುಂಡುಗಳ ಜನ್ಮದಾತ ನಾಝಿ-ವಾಲ್ಟರ್ ಬೋಗೆನ್. ಅವನೇ ಇಂದಿನ ಜರ್ಮನಿ ಮೈನ್ ದಳದ ‘ಇನ್ಸ್‌ಪೆಕ್ಟರ್-ಇನ್-ಚೀಫ್’! ಹೆರ್. ಹಿಟ್ಲರರ ಅದೃಷ್ಟಗಳಲ್ಲಿ ಅವರಿಗೆ ತಕ್ಕಂತಹ ಅನುಯಾಯಿಗಳು-ನಾಯಕನ ಅಭಿಮತಕ್ಕೆ ಪ್ರತ್ಯಕ್ಷ ರೂಪವೀಯಬಲ್ಲ ಕಾರ್ಯಕುಶಲರಾದ ಹಿಂಬಾಲಕರು-ದೊರೆತಿರುವ ಭಾಗ್ಯವು ಅತಿ ಮುಖ್ಯವಾದುದು. ಇಂದಿನ ಯುದ್ಧ ದೃಷ್ಟಿಯಿಂದ ವಾಲ್ಟರ್ ಬೋಗೆನ್‌ನಿಗಿಂತ ಹೆಚ್ಚಿನ ಅನುಕೂಲನಾದ ಮತ್ತೊಬ್ಬ ಅನುಯಾಯಿ ಹಿಟ್ಲರರಿಗಿಲ್ಲವೆನ್ನಬಹುದು. ಯುದ್ಧಕ್ಕಾಗಿ ವಾಲ್ಟರ್ ಬೋಗೆನನ ಜನ್ಮವಾಯಿತೋ, ವಾಲ್ಟರ್ ಬೋಗೆನ್‌ನಂತಹ ವೈಜ್ಞಾನಿಕರಿಂದಾಗಿ ಯುದ್ಧ ಹುಟ್ಟಿತೋ ಹೇಳುವದು ಕಷ್ಟ; ‘ಸವಿಯು ಸಕ್ಕರೆಯೊಳಗೊ, ಸಕ್ಕರೆಯು ಸವಿಯೊಳಗೊ’ ಎಂಬಷ್ಟೇ ಕಷ್ಟ! ಹೇಗಿದ್ದರೂ ವಾಲ್ಟರನಂತಹ ವೈಜ್ಞಾನಿಕರ ಶೋಧನಾ ಬಲವೇ ಕೋಟೆಗಟ್ಟಲೆ ಕುಟುಂಬಗಳ ರೋದನಕ್ಕೆ ಕಾರಣವೆಂಬುದಕ್ಕೆ ಸಂದೇಹವಿಲ್ಲ.

ಬೋಗೆನ್ ೩೦ರ ವಯಸ್ಸಿನ ಯುವಕ, ಮೂರು ಮಕ್ಕಳ ತಂದೆ. ಇವ ರಸಾಯನ ಶಾಸ್ತ್ರಜ್ಞ, ಪ್ರವೀಣ ಮತ್ತು ಡಾಕ್ಟರ್. ಜೆನಾ ಎಂಬಲ್ಲಿನ ಯುನಿವರ್ಸಿಟಿಯಲ್ಲಿ ಕೆಲಕಾಲ ಪ್ರೊಫೆಸರನಾಗಿಯೂ ಇದ್ದ. ಆ ಹುದ್ದೆಯಿಂದ ಅವನನ್ನು ಕೆಳಗುರುಳಿಸಿದವರು ಯುನಿವರ್ಸಿಟಿಯ ವಿದ್ಯಾರ್ಥಿಗಳೇ. ಮಾನವ ಧ್ವಂಸಕ ಮಾರಣವನ್ನು ಕಂಡುಹಿಡಿದ ಈತ ಸ್ವಭಾವತಃ ಮಾನವದ್ವೇಷಿ; ಅತಿ ಕಠೋರ ಹೃದಯಿ. ದಯೆ, ದಾಕ್ಷಿಣ್ಯ, ನಯ-ಭಯಗಳೆಲ್ಲಾ ಪುಡಿಕ ಹುಡುಕಿದರೂ ಇವನಲ್ಲಿ ಕಾಣವು! ಒಂದು ದಿನ ಯುನಿವರ್ಸಿಟಿಯ ವಿದ್ಯಾರ್ಥಿಗಳೇ ಈ ಜೀವಂತ ಪಾಷಾಣ ಮೂರ್ತಿಯ ವಿರುದ್ಧ ದಂಗೆಯೆದ್ದರು. ಅವನ ಶೋಧನಾಲಯದ ಕಿಟಕಿ ಬಾಗಿಲುಗಳನ್ನೊಡೆದು, ಎಲ್ಲಾ ಉಪಕರಣಗಳನ್ನೂ ರಸ್ತೆಗೆಳೆದು ಹಾಕಿ ಬೆಂಕಿಕೊಟ್ಟರು. ಕಡೆಗೆ ಹಿಟ್ಲರರಿಗೇ ತಪ್ಪಿ ಅರ್ಜಿ ಕಳುಹಿಸಲಾಯಿತು-ಪ್ರೊಫೆಸರನನ್ನು ರಾಜೀನಾಮೆ ಕೊಡಿಸುವಂತೆ ಕೇಳಿಕೊಂಡರು. ಈ ರೀತಿ ವಿದ್ಯಾರ್ಥಿಗಳು ಹಠಹಿಡಿದು ಈ ಭೀತಾಳನನ್ನು ಉಚ್ಚಾಟನೆಮಾಡಿ ಬಿಟ್ಟರು.

ನರಭಕ್ಷಕನೆ?

ವಾಲ್ಟರ್ ಬೋಗೆನನ ಜೀವನಚರಿತ್ರೆ ಬಹಳ ಭೀಕರವಾದುದು. ಅವನ ಕುರಿತು ಹೇಳಲ್ಪಡುವ ಎಷ್ಟೋ ಕಥೆಗಳು ರೋಮಾಂಚಕಾರಿಗಳಾಗಿವೆ. ಅವನ

ನೋಡಿದರೆ ಸಾಕು ಓದದೆ ಬಿಡಲಾರಿರಿ !

ಮುಗಿದಾಗ ಮುಗಿದು ಹೋಯಿತಲ್ಲಾ ಎನಿಸುವ,
ತೊಡಗಿದಾಗ ಹೇಗೆ ಮುಗಿಯುವುದಿದು? —ಎಂದು
ಕೌತುಕಪಡಿಸುವ ಹನ್ನೆರಡು ಚಿಕ್ಕ ಕಥೆಗಳ ಸಂಗ್ರಹ

ಅಂತರಂಗದ ಕಥೆಗಳು

೧೧೬ ಪುಟಗಳು ಸೊಗಸಿನ ಮುದ್ರಣ ಅಂದದ ಹೊರ ಹೊದಿಕೆ

[ಬೆಲೆ:— ಎಂಟಾಣೆ]

ಅಂತರಂಗವನ್ನು ಬೆಳಗಿ ಬಹಿರಂಗವನ್ನು ಹೊಳೆಸಿ ಹರಿಯುವ ಮಾತು

ಅಂತರಂಗದ ಎಲ್ಲಾ ಏಜಂಟರುಗಳಲ್ಲಿಯೂ ದೊರೆಯುತ್ತವೆ.

ಬೆಂಗಳೂರು ಹೋಲ್ ಏಜಂಟರು:
ಶ್ರೀ. ಪಿ. ಎ. ಉಪಾಧ್ಯಾಯರು
45, ಎ. ಎಸ್. ಸ್ಟ್ರೀಟ್, ಬೆಂಗಳೂರು.

ಅಂತರಂಗ ಕಾರ್ಯಾಲಯ,
ಉಡುಪಿ.

ಸ್ವೀಕಾರ ವಿಮರ್ಶೆ

ಅಂತರಂಗದ ಕಥೆಗಳು—ಅಂತರಂಗ ವಾರ ಪತ್ರಿಕೆಯಿಂದ ಆಯ್ದ ೧೩ ಚಿಕ್ಕ ಕಥೆಗಳ ಸಂಗ್ರಹ. ಕ್ರೌನ್ ೧/೧೬ರ ೧೦೩ ಪುಟಗಳು. ಬೆಲೆ:-೦-೪-೦. ಪ್ರಕಾಶಕರು: ಜನರಲ್ ಸಪ್ಲೈಸ್ ಲಿಮಿಟೆಡ್, ಉಡುಪಿ.

'ಅವರ ಜೀವನ' 'ಕಣ್ಣನ್ನೆ' 'ಎರಡು ಪತ್ರಿಕೆಗಳು' (ಶ್ರೀ. ಪಿ. ವೆಂಕಟರಾಮಾಚಾರ್ಯರಿಂದ), 'ತಪಸ್ಸಿದ್ಧಿ' 'ಆ ನೆನಪು' (ಶ್ರೀ ಎಸ್. ವೆಂಕಟರಾಜರಿಂದ), 'ಮಗುವಿನ ತಂದೆ' 'ಅವನೂ ಪಾಲುಗಾರ' 'ಧೂಸರ್‌ನ' 'ಮಾತೆ-ದಾಸಿ' 'ಸೋಟದ ಮಾಟ' (ಶ್ರೀ. ಎಂ. ವಿಠಲ ಹೆಗ್ಡೆಯವರಿಂದ) 'ಅಪರಾಧವೇ?' (ಶ್ರೀ. ದೇವದಾಸರಿಂದ) 'ಕವಿ' (ಶ್ರೀ ಕೆ. ಹೈದರರಿಂದ) 'ಅನುಚಿತವೇ?' (ಶ್ರೀ. ಬಿ. ಎಸ್ ಆಚಾರ್ಯರಿಂದ) ಇಷ್ಟು ಕಥೆಗಳಿವೆ.

'ಅವರ ಜೀವನ' 'ಕಣ್ಣನ್ನೆ'ಗಳ ಶೈಲಿಯೂ ಕೊಸತು; ಅರ್ಥವೂ ಗೂಢವಾದುದು. ಇವೆರಡು ಓಟ್ಟಿಗೆ ಓದುಗರ ಭಾವವನ್ನು ತಮ್ಮ ವಿಷಯಕ್ಕಾಗಿ ಇವು ತೃಪ್ತಿ ಜಗ್ಗನೆ ಬೇಗ ಆರುವದಿಲ್ಲ. 'ತಪಸ್ಸಿದ್ಧಿ' 'ಆ ನೆನಪು'-ಹೃದಯ ಸ್ಪರ್ಶಿಸುವ ಕಥೆಗಳು. ಜೀವನದ ಸ್ವಜ ಘಟನೆಯ 'ಫೋಟೋ' ಅಲ್ಲವಾದರೂ ಉತ್ತಮ ಚಿತ್ರಗಾರನು ಕಣ್ಣಿಂದ ಇಟ್ಟುಕೊಂಡು ಬಿಡಿಸಿದ ಚಿತ್ರಗಳು. 'ಮಗುವಿನ ತಂದೆ' 'ಅವನೂ ಪಾಲುಗಾರ' 'ಧೂಸರ್‌ನ'-ಇವು ಅಂತರಂಗದ ಕಥೆಗಳು ಪ್ರಣಯದ ಸ್ವಜ ಘಟನೆಗಳು ಇವುಗಳಲ್ಲಿ ಮುಚ್ಚುಮರೆಯಿಲ್ಲದೆ ಬಂದಿವೆ.' ಸೋಟದ ಮಾಟ' ಯದ್ವಾತದ್ವಾ ಸನ್ನಿವೇಶವೊಂದನ್ನು ಚಿತ್ರಿಸುತ್ತದೆ. 'ಮಾತೆ-ದಾಸಿ' ಅಪೂರ್ಣ ಸಂಸಾರದ ವೇದನೆಯೊಂದರ ಸೊಗಸಾದ ಚಿತ್ರ. 'ಅಪರಾಧವೇ?' ಕಥೆಯು ಒಂದು ಪ್ರಮಾದವನ್ನು ಇದ್ದಂತೆ ಸಾರುತ್ತದೆ. ಆ ಘಟನೆಯಲ್ಲಿನ ನ್ಯಾಯ ಪಾಲನೆಯು ಅಗತ್ಯವುಳ್ಳವನೊಬ್ಬನು ತೀರ್ಮಾನಕ್ಕಾಗಿ ಪ್ರಶ್ನಿಸಲು ವಿಷಯವನ್ನು ವಿವರಿಸಿದಂತಿದೆ; ಉತ್ತರ ಕೊಡುವದು ಸುಲಭವಲ್ಲ. ಕನಸಿನ ರಾಜ್ಯದಲ್ಲಿ ವಿಹರಿಸುವವನ ಪಾಡನ್ನು 'ಕವಿ'ಯಲ್ಲಿ ಕಾಣಬಹುದು. 'ಅನುಚಿತವೇ?' ಕಥೆಯು ಸಾಮಾಜಿಕ ದೋಷವೊಂದರ ಬದ್ಧಾರ್ಥ ವರ್ಣನೆ. ಕಥೆಯು ಒಂದು ವರ್ತಮಾನ ಕೊಡುತ್ತದೆ; ಅಷ್ಟೇ ಸುಗಮವಾಗಿ ಭಾವವನ್ನು ಕೆಣಕುವದಿಲ್ಲ.

ಕತೆಗಾರನ ಭಾವನಾಶಕ್ತಿಯಲ್ಲಿ ಪ್ರಪಂಚದ ಪ್ರತಿಬಿಂಬ ಇದ್ದಂತೆ ಮೂಡುತ್ತದೆ. ಯಾವ ಕಾರಣಕ್ಕಾಗಿಯಾದರೂ ಅದನ್ನವನು ಮರೆಸಬೇಕೆಂದಿಲ್ಲ. ಕುರೂಪವಿರಲಿ, ಸುರೂಪವಿರಲಿ, ಅದು ಪ್ರಾಪಂಚಿಕ ವಿದ್ಯಮಾನಗಳ ಛಾಯೆ. ತಿದ್ದುವ ಕೆಲಸವಿರುವದು ಮುಂಗಾಳೆಸ್ಕೋ ಮುನಿವನಸ್ಕೋ ನಾಲ್ಕು ಕನ್ನಡಿಯನ್ನಲ್ಲ! ಈ ಸಂಗ್ರಹದಲ್ಲಿನ ತರುಣ ಕತೆಗಾರರು ಕೆಲವು ಕತೆಗಳಲ್ಲಿ ವಿದ್ಯಮಾನಗಳ ಸ್ವಜ ಚಿತ್ರ ಮೂಡಿಸಲು ಸಂಪ್ರದಾಯ ಕಟ್ಟಳೆಯ ವೇಲೆ ಸಾಗಿದ್ದಾರೆ ತಪ್ಪಲ್ಲ.

ಪುಸ್ತಕದ ಮುದ್ರಣವು ಚೆಂದವಾಗಿದೆ. ಕತೆಗಾರರ ಅಲ್ಪ ಪರಿಚಯ ಕೊಡಲಾಗಿದೆ. ಮುಖಪತ್ರ ಆಕರ್ಷಣೀಯವಿದೆ. ಕನ್ನಡಿಗರು ಅವಶ್ಯವಾಗಿ ಪಡೆದೋದಬೇಕಾದ ಪುಸ್ತಕ.

ಆರು ಕಥೆಗಳು—ಬೆಳಗಾವಿಯ ಕಥಾಕುಂಜ ಗ್ರಂಥಮಾಲೆಯ ೧ನೆಯ ಹೂ. ಸಂಪಾದಕರು: ಶ್ರೀ. ಪ್ಯಾಟ ಶ್ಯಾಮರಾಯರು. ಕ್ರೌನ್ ೧/೧೬ರ ೧೬೦ಕ್ಕೆ ಮಿಕ್ಕದ ಪುಟಗಳು. ಬೆಲೆ, ೦-೧೨-೦.

ಆರು ಚಿಕ್ಕ ಕತೆಗಳ ಈ ಪುಸ್ತಕಕ್ಕೆ ಶ್ರೀ. ಬಿ. ಎಂ. ಶ್ರೀಕಂಠಯ್ಯನವರು ಮುನ್ನುಡಿ ಬರೆದಿದ್ದಾರೆ. ಕತೆಗಾರರ ಪರಿಚಯವೂ ಇದೆ. ಮಂಗಳೂರಿನ ದಿವಂಗತ ಪೇಜಾವರ ಸದಾಶಿವರಾಯರ 'ಜೀವನ ನಿರ್ಮಾಲ್ಯ'ವು ಸೊಗಸಾದ ಕತೆ. ಬಡತನದ ಬಾಳಿನ ವೇದನೆಯ ಛಾಯೆ ಸ್ಪಷ್ಟವಾಗಿ ಓದುಗರ ಹೃದಯದ ಮೇಲೆ ಬೀಳುತ್ತದೆ. ದಿವಂಗತ ಮಿಸೆಸ್. ಬಿ. ಟಿ. ಜಿ. ಕೃಷ್ಣನವರ 'ನನ್ನ ಮದುವೆ' ಯಲ್ಲಿನ ಘಟನೆಯು ಸುಗಮವಾಗಿಸಾಗಿ ಕೊನೆಯಲ್ಲಿ ಸಿಡಿಗುಂಡು ಸಿಡಿಯಿಸಿ ನಿಂತಿದೆ; ಕತೆಯು ವಾಚನೀಯವಿದೆ. 'ಬಯಸಿದ್ದೇನು' ಇದು ಶ್ರೀ. ದ. ಬ. ಕುಲಕರ್ಣಿಯವರು ಬರೆದಿದ್ದು, ಹೇಳುವ ರೀತಿ ಮನವಟ್ಟುವಂತಿದ್ದು ಓದೋಣವೆನ್ನಿಸುತ್ತದೆ. ಶ್ರೀ. ಎನ್. ಎಮ್. ಕುಲಕರ್ಣಿಯವರ 'ಜ್ಯೋತಿಯ ಕೃಷ್ಣಪಕ್ಷ'ವು ಹೊಸಮಾದರಿಯ ಕತೆ. ಹೇಳುವ ರೀತಿಯೂ ಚೆನ್ನಾಗಿದೆ. ಕಥಾಘಟನೆಯನ್ನು ಜೋಡಿಸುವ ಗೋಜುಗಳ ಅತಿ ಒತ್ತಾಯದಿಂದ ಸ್ವಲ್ಪ ಸ್ವಾಭಾವಿಕತೆ ಕಡಿಮೆಯಾಗಿದೆ. 'ಸಾಪಿ'ಯು ಎಮ್. ಎಸ್. ಪುಟ್ಟಣ್ಣನವರು ಶ್ರೀ. ಕಡೆಂಗೋಡ್ಲು ಶಂಕರ ಭಟ್ಟರು ಬರೆದ ದ ಉತ್ತಮ ತರಗತಿಯ ಕತೆ. ಕಥಾ ಘಟನೆ, ಮಾತಿನ ಶೈಲಿ ಸೊಗಸಾಗಿವೆ, ಬಗೆ ಮುಟ್ಟುತ್ತವೆ. ಸ್ವಜ ಚಿತ್ರಕ್ಕೆ ಮಾತಿನ ವಿರುಗು ಕೊಟ್ಟುದರಿಂದ ಹಾಲಿಗೆ ಸಕ್ಕರೆ ಬೆರೆತಂತಾಗಿದೆ; ಬರಿಯ ಹಾಲಿನ ರುಚಿ ನೋಡುವವರಿಂದ ಬೇರ್ಪಡಿಸಲಾಗುವದಿಲ್ಲ. ಶ್ರೀ. ದಿ. ತಾ. ಸಾಲಿಯವರ 'ಸಮಾಧಾನವೋ' ಸರಳವಾದ ಕತೆ ಉದ್ರೇಕ ಪ್ರದರ್ಶನವಿಲ್ಲದೆ, ಸಾಮಾಜಿಕ ಕೊರತೆಯೊಂದನ್ನು 'ಕತೆಗಾರಿಕೆ'ಯಿಂದಲೇ ಮನವಟ್ಟು ಮಾಡಿಕೊಡುತ್ತದೆ. ಶೈಲಿಯ ನಯ ಕಥೆಯ ಸೌಂದರ್ಯವನ್ನು ಹೆಚ್ಚಿಸುತ್ತದೆ.

ಒಟ್ಟಿನ ಮೇಲೆ ಪುಸ್ತಕವು ವಾಚನೀಯವಿದೆ. ಶ್ರೀ ಬಿ. ಎಂ. ಶ್ರೀಕಂಠಯ್ಯನವರು ಮುನ್ನುಡಿಯಲ್ಲಿ ಹೇಳಿರುವಂತೆ 'ಮನಸನ್ನು ಕುಣಿಸುವುದಕ್ಕೇ ಅಲ್ಲ, ಹೃದಯವನ್ನು ತೊಳೆದು ಶುದ್ಧಿ ಮಾಡುವದಕ್ಕೂ, ಇದರಲ್ಲಿನ ಕತೆಗಳು ಅನುಕೂಲವೇ. ಪುಸ್ತಕವು ಕನ್ನಡಿಗರ ಪ್ರೋತ್ಸಾಹಕ್ಕೆ ಅರ್ಹವಿದೆ.

ಹಿಂದುಸ್ತಾನದ ಹೊಸ ಘಟನೆ-ಲೇಖಕರು ಮತ್ತು ಪ್ರಕಾಶಕರು: ಶ್ರೀ ವೆಂಕಟೇಶ ಭೀಮರಾವ ನಾಯಕ, ಎಂ. ಎ ಎಲ್‌ಎಲ್. ಬಿ. ವಿಜಾಪುರ. ಇವರು.

೧೯೩೫ಕ್ಕೆ ವಿಕ್ಕದ ಪುಟಗಳು ದಪ್ಪವಾದ ರಟ್ಟಿನ ಪತ್ರ. ಬೆಲೆ ೧ ರೂ. ಹಿಂದುಸ್ಥಾನದ ಸರಕಾರ ಪದ್ಧತಿಯು ಆಗುಹೋಗುಗಳನ್ನು ೧೫ ಪ್ರಕರಣಗಳಲ್ಲಿ ಈ ಪುಸ್ತಕದಲ್ಲಿ ವಿವರಿಸಲಾಗಿದೆ.

ಆಧುನಿಕ ಸುಧಾರಣಾ ಮಸೂದೆಯ ರೀತಿನೀತಿಗಳು, ಮನದಟ್ಟಾಗಿಸುವಷ್ಟು ವಿಸ್ತಾರವಾಗಿ ಸರಳವಾದ ಭಾಷೆಯಲ್ಲಿ ಬರೆಯಲ್ಪಟ್ಟಿವೆ. ಹಿಂದೀ ರಾಜಕೀಯದ ಮೇಲೆ ಇಷ್ಟು ಸವಿಸ್ತಾರವಾಗಿ ವಿಷಯ ನಿರೂಪಣೆ ಮಾಡುವ ಕನ್ನಡ ಪುಸ್ತಕವು ಬೇರೆ ಇಲ್ಲವೆನ್ನಬಹುದು. ರಾಜಕೀಯಾಭಿರುಚಿಯುಳ್ಳ ಕನ್ನಡಿಗರೆಲ್ಲರೂ ಓದಬೇಕಾದ ಪುಸ್ತಕ.

ವೇದಾಂತದ ಒಳದಾರಿ—ಹುಬ್ಬಳ್ಳಿಯ ಅವಧೂತ ಗ್ರಂಥಾಲಯದವರಿಂದ ಪ್ರಕಾಶಿಸಲ್ಪಟ್ಟಿದೆ. ವೇದಾಂತದ ತಿರುಳನ್ನು ಮುಂದಿಟ್ಟು ಮಾಡಿಕೊಡುವ ಗ್ರಂಥ. ಕಠಿನ ತಪಸ್ಸಿನಿಂದಿರುವ ತ್ರೈಮಾಸಿಕ ಪರಮಾರ್ಥ ಸಾಧನೆಯ ಶಿಬಿರದಲ್ಲಿ ನಡೆದ ಆರು ಪ್ರವಚನಗಳು ಇದರಲ್ಲಿ ಬಂದಿವೆ. ವೇದಾಂತಿಗಳಿಗೆ ಕೈಪಿಡಿಯಾಗಲು ಯೋಗ್ಯವಾದುದು. ಪುಸ್ತಕದ ಬೆಲೆ, ೦-೬-೦.

ಭಾರತೀಯ ಆರೋಗ್ಯ ಸೂತ್ರಗಳು. ಲೇಖಕರು: ಶ್ರೀ. ಪಿ. ಕೆ. ಸಿ. ಶರ್ಮಾ, ಇವರು, ಪ್ರಕಾಶಕರು: ಶ್ರೀ. ಟಿ. ರಾಮದಾಸ ಶೆಟ್ಟಿ, ಮಂಗಳೂರು. ಆರೋಗ್ಯ ನಿಯಮಗಳು ಈ ಪುಸ್ತಕದಲ್ಲಿ ಚೊಕ್ಕವಾಗಿ ವಿವರಿಸಲ್ಪಟ್ಟಿವೆ. ಬೆಲೆ ೦-೨-೦.

ಶ್ರೀ. ಬಸವೇಶ್ವರ—ದಾವಣಗೆರೆ ಶ್ರೀ. ವೀರಶೈವ ತರುಣ ಸಂಘದಿಂದ ಪ್ರಕಟವಾದ ಚಿಕ್ಕ ಪುಸ್ತಕ. ಧರ್ಮಗುರು ಬಸವಣ್ಣನವರ ಚರಿತ್ರೆ ಪದ್ಯರೂಪದಲ್ಲಿ ಬಂದಿದೆ. ಬರೆದವರು: ಶ್ರೀ. ಎಸ್. ಎನ್. ಕೃಷ್ಣಮೂರ್ತಿ.

ಪೊನ್ನಮ್ಮ—ದಿ ಮಿಸೆಸ್. ಬಿ. ಟಿ. ಜಿ. ಕೃಷ್ಣನವರದು. ಧಾರವಾಡದ ಮನೋಹರ ಗ್ರಂಥಭಂಡಾರದವರು ಪ್ರಕಾಶಿಸಿದರು. ಕೆಳತರಗತಿಯ ಮಕ್ಕಳಿಗೆ ಹೇಳಿಸಿದ ಈ ಚಿಕ್ಕ ಪುಸ್ತಕದ ಬೆಲೆ ಒಂದಾಣೆ.

ಗೇಲಿನ ಪ್ರವಾಸಿಕರ ಮಿತ್ರ—ಚಳಗಾಂವಿ ಲೇಲನ ಮಂಡಳದವರು ಪ್ರಸಿದ್ಧಿಸಿದರು. ರೇಲ್ವೆ ಪ್ರಯಾಣದ ರೀತಿ ನೀತಿಗಳು, ಬಾಯಿದೆ ಕಟ್ಟಳೆಗಳು, ಎಲ್ಲ ಈ ಪುಸ್ತಕದಲ್ಲಿ ಬಂದಿವೆ. ಪ್ರಯಾಣಿಕರಿಗೆ ಉತ್ತಮವಾದ ಕೈಪಿಡಿ. ಈ ಪುಸ್ತಕವೊಂದಿದ್ದರೆ ರೇಲ್ವೆ ಪ್ರಯಾಣಿಕರು ಜತೆಯಲ್ಲಿ ಅನುಭವಸ್ಥನೊಬ್ಬನು ಇದ್ದಂತೆ.

ಡಿಪ್ರೆಸ್ಡ್ ಕ್ಲಾಸಸ್ ಮಿಶ್ಯನ್, ಮಂಗಳೂರು—ಇದರ 1938–39ನೇ ವರ್ಷದ ಪ್ರಗತಿಪರ ವಾರ್ಷಿಕ ವರದಿ ನಮ್ಮ ಕೈ ಸೇರಿದೆ. ಮಿಶ್ಯನು ವರದಿಯ ವರ್ಷದಲ್ಲಿ ಪ್ರಸಂಶನೀಯ ಕಾರ್ಯ ಮಾಡಿರುವದೆಂಬುದನ್ನು ದಲಿತ ವರ್ಗಕ್ಕಾಗಿರುವ ಸಹಾಯ, ವ ತ್ತು ಮಹನೀಯರ ಅಭಿಪ್ರಾಯಗಳಿಂದ ತಿಳಿಯಬಹುದು.

ಬಿಲ್ಲವರ ಎಸೋಸಿಯೇಶನ್ ಮುಂಬಯಿ—ಇದರ 1939ರ ಅಕ್ಟೋಬರು ವಾರ್ಷಿಕ ವರದಿಯು ನಮ್ಮ ಹಸ್ತಗತವಾಗಿದೆ. ಪ್ರತ್ಯೇಕ 342 ಸದಸ್ಯರಿದ್ದು ಸಂಘವು ವರುಷದಿಂದ ವರುಷಕ್ಕೆ ಅಭಿವೃದ್ಧಿಯನ್ನೈದುತ್ತಾ ಬಂದ ರೀತಿ, ಬರುವ ಲಕ್ಷಣ ಇವೆಲ್ಲಾ ವರದಿಯಲ್ಲಿ ಕಂಡು ಬರುತ್ತವೆ.

ಅಂಗದ ಸಂಧಾನ—ಯಕ್ಷಗಾನ ಪ್ರಸಂಗ ಪುಸ್ತಕ; ಸುಪ್ರಸಿದ್ಧ ಯಕ್ಷಗಾನ ಅರ್ಥಧಾರಿಗಳಾದ ಶ್ರೀ ಮಲ್ಪೆ ಶಂಕರ ನಾರಾಯಣ ಸಾಮಗರಿಂದ ಬರೆಯಲ್ಪಟ್ಟ ಅರ್ಥದೊಡನೆ ಪುಸ್ತಕವು ಯಕ್ಷಗಾನ ಕಲಾಭಿಮಾನಿಗಳಿಗೆ ಅತ್ಯನುಕೂಲವಾಗಿದೆ. ಬೆಲೆ ೦-೬-೬.

ವಿದ್ಯೆದ ತಾದಿ?—ತುಳು ಭಾಷೆಯ ನಾಟಕ ಲೇಖಕರು: ಶ್ರೀ. ಪಿ ಕಿಟ್ಟಣ್ಣ ಹೆಗ್ಡೆ. ಪ್ರಕಾಶಕರು: ಪ್ರಭಾಕರ್ ಸ್ಟೇಶನರಿ ಮಾರ್ಟ್, ಬಿದುಬಿದ್ರೆ. ಬೆಲೆ- ೦-೫-೦.

ನಾಟಕಕಾರರು ಅಳಿಯ ಸಂತಾನದ ಕುಟುಂಬವೊಂದರ ಚಿತ್ರವನ್ನು ಸೊಗಸಾಗಿ ಬಿಡಿಸಿದ್ದಾರೆ. ಆಧುನಿಕ ವಿದ್ಯಾಭ್ಯಾಸದ ಪರಿಣಾಮ, ಹಳೆಯ ಕಟ್ಟುನಿಟ್ಟಿನ ಕೋಡಿನ ವ್ಯವಹಾರ ರೀತಿ- ಇವೆಲ್ಲ ನಾಟಕದಲ್ಲಿ ಎದ್ದು ಕಾಣುವಂತೆ ಬಂದಿವೆ. ಸ್ವಚ್ಛ ತುಳು-ಭಾಷೆಯಲ್ಲಿದ್ದು ತುಳು ಭಾಷೆ ಬಲ್ಲವರೆಲ್ಲಾ ಅಗತ್ಯ ಓದಬೇಕಾದ ಪುಸ್ತಕ. ನಾಟಕದಲ್ಲಿಯ ಪಾತ್ರಗಳ ರಚನೆಯೂ ಅಸ್ವಾಭಾವಿಕವಾಗಿಲ್ಲ; ಆಡಿ ತೋರಿಸುವದಕ್ಕೆ ಅನುಕೂಲವೇ ಇದೆ.

—'ಫಂಡರೀನಾಥ.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ನೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅನೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಎ ಬೆಲೆಯ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿನಗಳಿಗೆ ಬರುವವು. ಅಂದರೆ, ಕೇವಲ ೪ ರೂಪಾಯಿಗಳು ಒಂದು ಬಾಣಂತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಮ್. ಪಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ. ೯ **ಕೊಡಿಯಾಲಬೈಲು ದ.ಕ.**

ಕೆನರಾ ಬೇಂಕ್ ಲಿಮಿಟೆಡ್

ಲಿಮಿಟೆಡ್ ಜವಾಬ್ದಾರಿಯಿಂದ ಬ್ರಿಟಿಷ್ ಇಂಡಿಯದಲ್ಲಿ ಸ್ಥಾಪಿತವಾದುದು.

೧೯೩೯ನೇ ಇಸವಿ ದಶಂಬರ ೩೧ಕ್ಕೆ ಅಂತ್ಯವಾಗುವ ವರ್ಷದ ಆಯುವ್ಯಯದ ಸಾರಾಂಶ ಪಟ್ಟಿ.

ಮೂಲಧನ	ರೂ. ಆ. ಪೈ
ತೆತ್ತಲ್ಪಟ್ಟ	6,00,000 0-0
ಪೈದ್ ಅಫ್	3,91,342-0-0
ರಿಸರ್ವ್ ಫಂಡು	4,50,000-0-0
ಡಿಪೋಸಿಟ್	
ಫಿಕ್ಸಿದ, ಕರೆಂಟ್	
ಇತ್ಯಾದಿ	81,21,622-8-1
ಬೇಂಕುಗಳಿಗೆ ಸಲ್ಲತಕ್ಕದ್ದು	ಇಲ್ಲ
ವಿವಿಧ	10,51,799 1-7
ಈ ವರ್ಷದ ಲಾಭ	55,603 0-6
ಜುಮ್ಲಾ	1,00,69,766-10-2

	ರೂ. ಆ. ಪೈ
ಕಟ್ಟಡ ಮತ್ತು ಸಾಮಾನು	
ಮೊದಲಾದವುಗಳಿಗೆ ನಿಶ್ಚಿತ	
ಮೂಲ ವ್ಯಯ	95,489-4 3
ವ್ಯಾಪಾರಿಗಳಿಗೆ ಎಡ್ವಾನ್ಸ್ ಕೊಟ್ಟದ್ದು	
ವಿಮೆಯುಳ್ಳ	
ಸೆಕ್ಯುರಿಟಿ	40,97,741-5-6
ಹುಂಡೀ ಪತ್ರ	
ಮೊದಲಾದವುಗಳು	10,30,649-2-10
ರೀವರಾತಿ	20,64,586-2-0
ವಿವಿಧ	9,82,093 10 4
ನಗದು	17,99,207-1-3
ಜುಮ್ಲಾ	1,00,69,766-10-2

ಸ್ಥಾಪನೆ: **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ಸರಕಾರಕ್ಕೂ, ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೀಲ್ ಲೆಟರುಗಳು, ಸಿಕಾನರ ಪ್ಲೇಟು, ಮೊನೊಗ್ರಾಮ್ ಸೀಲು ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co., 18 Balmat Road, **MANGALORE.**

Approved firm by the Govt. of Mysore. Certified by the Agent of the Govt. of India in Ceylon

ಸಿಡಿಗುಂಡಿನ ಜನ್ಮದಾತ - ವಾಲ್ಟರ್ ಬೋಗೆನ್.

ಹೆರ್. ಹಿಟ್ಲರ್

- ಕಠೋರತೆ, ಕಠಿಣ ಹೃದಯದ ಗಂಡುಗಲಿ !
- ಮಾನವ ಜೀವದ ಬೆಲೆಯಿಳಿಸಿದ ಹಸಿದ ಹುಲಿ !!
- ಪ್ರಲಯದ ಕಿಡಿಯನ್ನು ಕಂಡುಹಿಡಿದ ಮಹಾ ಸಾಹಸಿ !!!

ಮಿ. ಚೇಂಬರ್ಲೆನ್.

ಮಿತ್ರ ರಾಷ್ಟ್ರಗಳ ಪೇಚಾಟಕ್ಕೆ ಕಾರಣ ಇವನ ಕೈಮಾಟ !

ಇಂದಿನ ಯುರೋಪು ಯುದ್ಧದಲ್ಲಿ ವಿಜ್ಞಾನದ ಅದ್ಭುತವು ಕಂಡುಬರುವಷ್ಟು ಉಜ್ವಲವಾಗಿ ಮಾನವನ ಸಾಹಸವು ತೋರಿಬರುವದಿಲ್ಲ. ಹಿಂದಿನ ಕಾಲದ ಯುದ್ಧಗಳಲ್ಲಿ ಮಾನವ ಜೀವವು, ಇಂದಿನಷ್ಟು ಕಡಿಮೆ ಬೆಲೆಬಾಳದ ಉದಾಹರಣೆಯೇ ಇಲ್ಲ. ಸಾವಿರಗಟ್ಲೆ ಜನರನ್ನು, ಒಮ್ಮೆಗೇ ನಿರ್ನಾಮ ಮಾಡುವ ಉಪಾಯವು ಹಳೆಯ ಕಾಲದಲ್ಲಿ ಇರಲೇ ಇಲ್ಲ. ಮನುಷ್ಯಸಿದ್ಧ ಶಕ್ತಿ ಮಾತ್ರದಿಂದ ಇಷ್ಟು ಹೆಚ್ಚಿನ ನುಸಿಗಳನ್ನಾದರೂ ಸವರಲು ಸಾಧ್ಯವಿಲ್ಲವೆಂಬಷ್ಟು ಜನರನ್ನು, ವೈಜ್ಞಾನಿಕ ಸಾಧನಗಳ ಬಲದಿಂದ ಇಂದು ಪುಡಿಗುಟ್ಟಲಾಗುತ್ತಿದೆ.

ಪ್ರಲಯಾಗ್ನಿ ಸದೃಶ ಕೋಟೆಗಳು

ಇಂತಹ ಪ್ರಲಯಕಾರೀ ಶಕ್ತಿಗಳ ಪೈಕಿ ಮೈನ್'ಗಳಷ್ಟು ಅಪಾಯಕರವೂ ಅದ್ಭುತವೂ ಆದ ಮತ್ತೊಂದು ಸಾಧನವಿಲ್ಲವೆನ್ನಬಹುದು. ಪುರಾಣಪ್ರಸಿದ್ಧವಾದ ಇಂದ್ರಜಿತು, ಘಟೋತ್ಕಚರ ಮಾಯಾ ಯುದ್ಧವನ್ನು ಈ 'ಮೈನ್' ಯುದ್ಧವು ಸಾದಾತರಗೊಳಿಸಿಬಿಟ್ಟಿದೆ! ಸಮುದ್ರದಲ್ಲಿ ಸಂಚರಿಸುವ ಹಡಗುಗಳನ್ನು ಆಕರ್ಷಿಸಿ, ಅಥವಾ ಅವುಗಳಿಗೆ ಅಗೋಚರವಾಗಿ ಬಡಿದು ಧ್ವಂಸಗೊಳಿಸಿಬಿಡುವ ಈ ಸಿಡಿಗುಂಡುಗಳು ಇಂದಿನ ಯುದ್ಧದ ಬ್ರಹ್ಮಾಸ್ತ್ರಗಳಾಗಿ ಪರಿಣಮಿಸಿವೆ. ಈ ವರೆಗಿನ ಯುದ್ಧದಲ್ಲಿ ನೆಲಸಮವಾಗಿ ಹೋದ ಹಡಗುಗಳ ಪೈಕಿ ಶೇಕಡಾ ತೊಂಭತ್ತನ್ನು ಆಹುತಿಗೊಂಡುದು ಈ ಕೋಟೆಗಳೇ. ಮಿತ್ರರಾಷ್ಟ್ರಗಳ ಹಡಗುಗಳು ನಾಶವಾದಷ್ಟು ಈ ವರೆಗೆ ಜರ್ಮನಿಯ ಹಡಗುಗಳು ಹೋಗಿಲ್ಲ. ಇದಕ್ಕೆ ಇಂಗ್ಲಾಂಡಿಗಿರುವಂತಹ ಪ್ರಬಲ ನೌಕಾಸೇನೆ ಜರ್ಮನಿಗಿಲ್ಲ, ಬಹುವಾಗಿ ಹಣ ಹಾಳಾಗುವ ಹೆದರಿಕೆಯೇ ಇಲ್ಲ, ಎಂಬ ಉತ್ತರ ಸಿಗಬಹುದು. ನೌಕಾಪಡೆ ಪ್ರಬಲವಿದ್ದಷ್ಟೂ ಅದರ ರಕ್ಷಣಾ ಕಾರ್ಯವೂ ಪ್ರಬಲವೇ ಇರುವುದು ಸ್ವಾಭಾವಿಕವಷ್ಟೆ. ಆದರೆ ಜರ್ಮನ್ 'ಮೈನ್'ಗಳು ಎಲ್ಲಾ ರಕ್ಷಣೋಪಾಯಗಳನ್ನೂ ಹುಸಿ ಮಾಡಿ ವಿರೋಧಿಗಳ ಹಡಗುಗಳಿಗೆ ಜಲಸಮಾಧಿಗೊಟ್ಟಿವೆ. ಇತ್ತೀಚೆಗೆ ಬ್ರಿಟಿಷರು ಅವುಗಳ ಹಾವಳಿಯನ್ನು ಜಯಶೀಲವಾಗಿ ತಡೆಗಟ್ಟಿರುವರು. ಜರ್ಮನಿ 'ಮೈನ್'ಗಳ ಅವತಾರ ಒಮ್ಮೆಗೇ ಸಮಾಪ್ತಿಯಾಯಿತೋ ಎಂಬಂತೆ ಮಿತ್ರರಾಷ್ಟ್ರಗಳ ಯುದ್ಧ ಹಡಗು ಭಂಜನವೆಲ್ಲಿಯೂ ನಡೆದುದು ಕೇಳಬರುತ್ತಿಲ್ಲ. ಬದಲಾಗಿ ಈಗ ಬ್ರಿಟಿಷರ ಸರದಿಯಾರಂಭವಾಗಿದೆ ಎಂದರೂ ಸಲ್ಲುವುದು. ನೋರ್ವೆಯ ಸಮುದ್ರದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಮಿತ್ರ ರಾಷ್ಟ್ರಗಳು ಜಲ ಸುರಂಗಗಳನ್ನು ಚೆಲ್ಲಿರುವ ಈ ಸುರಂಗ ಯುಗದ ಎರಡನೆ ಅಧ್ಯಾಯ. ಆದರೆ ಯುದ್ಧ ಪ್ರಾರಂಭಿಸಿದ ಕೆಲವು ವಾರಗಳವರೆಗೆ ಒಂದೇ ಸವನೆ ಬ್ರಿಟಿಷ್ ಯುದ್ಧ ಹಡಗುಗಳು ನೀರು ಕುಡಿದಿವೆ. ಪ್ರತಿನಿತ್ಯವೂ ಸಮುದ್ರ ಪಾಲಾಗುವ ಬ್ರಿಟಿಷ್ ಹಡಗುಗಳ ಸಂಖ್ಯೆ ಎರಡೂ ಕೈ ಬೆರಳೆಣಿಕೆಗೆ ಸಿಗುತ್ತಿತ್ತು! ಇಕ್ಕಡೆಯವರೂ ಬಹುತೇಕ ದೃಷ್ಟಿ ಯುದ್ಧದಲ್ಲೇ ಕಳೆದಿದ್ದ ಕಾಲದಲ್ಲಿ ಕೂಡ ಹಡಗುಗಳ ನಾಶದ ಮಟ್ಟಿಗೆ ಯುದ್ಧ ಭಯಂಕರವಿತ್ತು. 'ಮೈನ್'ಗಳ ಥಿರ್ಕಿ ನಡೆದೇ ಇತ್ತು. ಆದ್ದರಿಂದ ಯುದ್ಧದ ಚರಿತ್ರೆಯಲ್ಲಿ ಈ ವರೆಗಿನ ಕಾಲವು 'ಜಲ ಸುರಂಗಾಧ್ಯಾಯ'ವೆಂದು ಕರೆಯಲ್ಪಡುವದರಲ್ಲಿ ಸಂದೇಹವಿಲ್ಲ.

ಪ್ರಲಯ ಪುರುಷ—ವಾಲ್ಟರ್ ಬೋಗೆನ್

ಇಂತಹ ಸಿಡಿಗುಂಡುಗಳ ಜನ್ಮದಾತ ಯಾರು?—ವಾಲ್ಟರ್ ಬೋಗೆನ್. ಅವನೇ ಇಂದಿನ ಜರ್ಮನಿ ಮೈನ್ ದಳದ 'ಕಮ್ಯಾಂಡರ್-ಇನ್-ಚೀಫ್'! ಹೆರ್. ಹಿಟ್ಲರರ ಅದೃಷ್ಟಗಳಲ್ಲಿ ಅವರಿಗೆ ತಕ್ಕಂತಹ ಅನುಯಾಯಿಗಳು—ನಾಯಕನ ಅಭಿಮತಕ್ಕೆ ಪ್ರತ್ಯಕ್ಷ ರೂಪವೀಯಬಲ್ಲ ಕಾರ್ಯಕುಶಲರಾದ ಹಿಂಬಾಲಕರು—ದೊರೆತಿರುವ ಭಾಗ್ಯವು ಅತಿ ಮುಖ್ಯವಾದುದು. ಇಂದಿನ ಯುದ್ಧ ದೃಷ್ಟಿಯಿಂದ ವಾಲ್ಟರ್ ಬೋಗೆನ್‌ನಿಗಿಂತ ಹೆಚ್ಚಿನ ಅನುಕೂಲನಾದ ಮತ್ತೊಬ್ಬ ಅನುಯಾಯಿ ಹಿಟ್ಲರರಿಗಿಲ್ಲವೆನ್ನಬಹುದು. ಯುದ್ಧಕ್ಕಾಗಿ ವಾಲ್ಟರ್ ಬೋಗೆನನ ಜನ್ಮವಾಯಿತೋ, ವಾಲ್ಟರ್ ಬೋಗೆನ್‌ನಂತಹ ವೈಜ್ಞಾನಿಕರಿಂದಾಗಿ ಯುದ್ಧ ಹುಟ್ಟಿತೋ ಹೇಳುವದು ಕಷ್ಟ; 'ಸವಿಯು ಸಕ್ಕರೆಯೊಳಗೊ, ಸಕ್ಕರೆಯು ಸವಿಯೊಳಗೊ' ಎಂಬಷ್ಟೇ ಕಷ್ಟ! ಹೇಗಿದ್ದರೂ ವಾಲ್ಟರನಂತಹ ವೈಜ್ಞಾನಿಕರ ಶೋಧನಾ ಬಲವೇ ಕೋಟಿಗಟ್ಲೆ ಜನಗಳ ರೋದನಕ್ಕೆ ಕಾರಣವೆಂಬುದಕ್ಕಡ್ಡಿಯಿಲ್ಲ.

ಬೋಗೆನ್ ೫೦ರ ವಯಸ್ಸಿನ ಮುದುಕ, ಮೂರು ಮಕ್ಕಳ ತಂದೆ. ಆವ ರಸಾಯನ ಶಾಸ್ತ್ರಜ್ಞ ಪ್ರವೀಣ ಮತ್ತು ಡಾಕ್ಟರ್. ಜೆನಾ ಎಂಬಲ್ಲಿನ ಯುನಿವರ್ಸಿಟಿಯಲ್ಲಿ ಕೆಲಕಾಲ ಪ್ರೊಫೆಸರನಾಗಿಯೂ ಇದ್ದ. ಆ ಹುದ್ದೆಯಿಂದ ಅವನನ್ನು ಕೆಳಗುರುಳಿಸಿದವರು ಯುನಿವರ್ಸಿಟಿಯ ವಿದ್ಯಾರ್ಥಿಗಳೇ. ಮಾನವ ಧ್ವಂಸಕ ಮಾರಣವನ್ನು ಕಂಡುಹಿಡಿದ ಈತ ಸ್ವಭಾವತಃ ಮಾನವದ್ವೇಷಿ; ಅತಿ ಕಠೋರ ಹೃದಯಿ. ದಯೆ, ದಾಕ್ಷಿಣ್ಯ, ನಯ-ಭಯಗಳೆಲ್ಲವುದರ ಕಣಕನ್ನಾದರೂ ಇವನಲ್ಲಿ ಕೇಳಬೇಡಿ! ಒಂದು ದಿನ ಯುನಿವರ್ಸಿಟಿಯ ವಿದ್ಯಾರ್ಥಿಗಳೇ ಈ ಜೀವಂತ ಪಾಷಾಣ ಮೂರ್ತಿಯ ವಿರುದ್ಧ ದಂಗೆಯೆದ್ದರು. ಅವನ ಶೋಧನಾಲಯದ ಕಿಟಕಿ ಬಾಗಿಲುಗಳನ್ನೊಡೆದು, ಎಲ್ಲಾ ಉಪಕರಣಗಳನ್ನೂ ರಸ್ತೆಗೆಳೆದು ಹಾಕಿ ಬೆಂಕಿಕೊಟ್ಟರು. ಕಡೆಗೆ ಹಿಟ್ಲರನಿಗೇನೇ ತಳ್ಳಿ ಅರ್ಜಿ ಕಳುಹಿಸಲಾಯಿತು—ಪ್ರೊಫೆಸರನನ್ನು ರಾಜೀನಾಮೆಕೊಡಿಸುವಂತೆ ಕೇಳಿಕೊಂಡರು. ಈ ರೀತಿ ವಿದ್ಯಾರ್ಥಿಗಳು ಹಠಹಿಡಿದು ಈ ಭೀತಾಳನನ್ನು ಉಚ್ಚಾಟನೆಮಾಡಿಬಿಟ್ಟರು.

ನರಭಕ್ಷಕನೆ?

ವಾಲ್ಟರ್ ಬೋಗೆನನ ಜೀವನಚರಿತ್ರೆ ಬಹಳ ಭೀಕರವಾದುದು. ಅವನ ಕುರಿತು ಹೇಳಲ್ಪಡುವ ಎಷ್ಟೋ ಕತೆಗಳು ರೋಮಾಂಚಕಾರಿಗಳಾಗಿವೆ. ಆ ನ

ನೋಡಿದರೆ ಸಾಕು ಓದದೆ ಬಿಡಲಾರಿರಿ!

ಮುಗಿದಾಗ ಮುಗಿದು ಹೋಯಿತಲ್ಲಾ ಎನಿಸುವ, ತೊಡಗಿದಾಗ ಹೇಗೆ ಮುಗಿಯುವುದಿದು? —ಎಂದು ಕೌತುಕಪಡಿಸುವ ಹನ್ನೆರಡು ಚಿಕ್ಕ ಕಥೆಗಳ ಸಂಗ್ರಹ

ಅಂತರಂಗದ ಕಥೆಗಳು

೧೧೬ ಪುಟಗಳು ಸೊಗಸಿನ ಮುದ್ರಣ ಅಂದದ ಹೊರ ಹೊದಿಕೆ

[ಬೆಲೆ:— ಎಂಟಾಣೆ]

ಅಂತರಂಗವನ್ನು ಬೆಳಗಿ ಬಹಿರಂಗವನ್ನು ಹೊಳೆಸಿ ಹರಿಯುವ ನಾಕು

ಅಂತರಂಗದ ಎಲ್ಲಾ ಏಜಂಟರುಗಳಲ್ಲಿಯೂ ದೊರೆಯುತ್ತದೆ.

ಬೆಂಗಳೂರು ಸೋಲ್ ಏಜಂಟರು:
ಶ್ರೀ. ಪಿ. ಎ. ಉಪಾಧ್ಯಾಯರು
45, ಎ. ಎಸ್. ಸ್ಟ್ರೀಟ್, ಬೆಂಗಳೂರು.

ಅಂತರಂಗ ಕಾರ್ಯಾಲಯ,
ಉಡುಪಿ.

ಶೋಧನಾಲಯವಿದ್ದ ಸಿಲೆಸಿಯಾ ಎಂಬಲ್ಲಿಗೆ ಕೆಲವು ವಿದ್ಯಾರ್ಥಿಗಳು ಆಮಂತ್ರಿಸಲ್ಪಟ್ಟರು. ಖಾಸಗೀ ವಿದ್ಯೆ ಕೊಡುವುದಕ್ಕಾಗಿ ಅವರನ್ನು ಕರೆಯಲಾಗಿತ್ತು. ಅಲ್ಲಿ ಹಲವು ವಾರಗಳ ವರೆಗೆ ಅವರನ್ನು ಅಡಗಿಸಿಡಲಾಗಿತ್ತಲ್ಲದೆ, ಕೆಲವರು ಈ ವರೆಗೂ ಹಿಂದಿರುಗಿದುದಿಲ್ಲ! ಈ ಭಯಾವಹ ಕೃತ್ಯದಿಂದ ಅಲ್ಲಿಯ 'ರಿಕ್ಟರ'ನೇ ಮುನಿದುಬಿದ್ದ. ಮಹಾ ಎಡೆಗಾರನಾದ ಆತ ಬೋಗೆನನನ್ನು ವಿರೋಧಿಸಿದ ಆ ಮೇಲೆ ಬೋಗೆನನನ್ನು ಮತ್ತೊಂದು ಫೇಕ್ಟರಿಗೆ ವರ್ಗಾಯಿಸಲಾಯಿತು.

ಅಲ್ಲಿ ನೌಕಲ್ವಿ ಚಾರ ಜೆಗೊಳಪಟ್ಟು ಬೋಗೆನ್ ನೆಮ್ಮದಿಯಿಂದ, ಅನಾಥ ಹುಡುಗನಷ್ಟು ಸಾಧು ಸ್ವಭಾವ ತೋರುತ್ತಾ ಕೆಲಸಮಯದ ವರೆಗೆ ಕೆಲಸಮಾಡಿದ. ಒಮ್ಮೆ ಕಾರ್ಖಾನೆಯ ಸಮೀಪದ ಶಾಲೆಯಿಂದ ಚಿಕ್ಕ ಹುಡುಗಿಯೊಬ್ಬಳು ಕಾಣೆಯಾದಳು. ಎಲ್ಲರೂ ಬೋಗೆನನನ್ನೇ ಬೆಟ್ಟತ್ತಿ ತೋರಿಸಲಾರಂಭಿಸಿದರು. ಆದರೆ ಬೋಗೆನನ ಮೇಲೆ ಅದರಿಂದೇನೂ ಪರಿಣಾಮವಾಗಲಿಲ್ಲ. ಅವ ಇಂಜನಿಯರಾಗಿ ಕೆಲಸಮಾಡುವಷ್ಟು ಮಾತ್ರ ತಪ್ಪೀಲಾಯಿತು.

ಮನುಷ್ಯಜೀವ ತೃಣಸಮಾನ!

ಹೀಗೆ ಬೋಗೆನನು ಸಿಡಿ ಗುಂಡುಗಳನ್ನು ನಿರ್ಮಿಸಿದ ಮೇಲೆ ಮಾತ್ರವಲ್ಲ, ನಿರ್ಮಿಸುವಾಗಲೂ ಮಾನವ ಜೀವಗಳನ್ನೆಷ್ಟೋ ಬಲಿಕೊಟ್ಟಿದ್ದ. ಆವನು ತನ್ನ ಶೋಧನೆಯಲ್ಲಿ ಹತಯೋಗಿಯೇ ಸಂ. 1937ರ ಸಪ್ಟಂಬರದಲ್ಲಿ ಆವ ಮಹಾ ಅಪಾಯಕಾರೀ ಶೋಧವೊಂದಕ್ಕೆ ತೊಡಗಿದ್ದ. ಅವನ ಮೂವರು ಮಕ್ಕಳು ಸಹಾಯಕರಾಗಿ ಆದೇ ಶೋಧನಾಲಯದಲ್ಲಿದ್ದರು. ಸಪ್ಟಂಬರ 19ನೇ ರಾತ್ರಿ ಒಮ್ಬತ್ತರ ಹೊತ್ತಿಗೆ ಆ ಶೋಧನಾಲಯದಲ್ಲಿ ಜ್ವಾಲಾಮುಖಿಯ ಸ್ಫೋಟವಾದಂತಾಯಿತು. ಮದ್ದುಗುಂಡುಗಳ ಭಯಂಕರ ಸ್ಫೋಟವಾಗಿ ಪಟ್ಟಣದ ಜನರೆಲ್ಲಾ ಹೌಹಾರಿಬಿದ್ದರು. ಆ ರಾತ್ರಿ ಅಲ್ಲಿ ಕೆಲಸಮಾಡುತ್ತಿದ್ದುದು ಬೋಗೆನನ ಮೂವರು ಮಕ್ಕಳು ಮಾತ್ರ. ಅವರೆಲ್ಲಾ ಈ ಸ್ಫೋಟಕ್ಕೆ ಸಿಕ್ಕಿ ನುಚ್ಚುನೂರಿಯಾಗಿದ್ದರು. ಅದೃಷ್ಟದ ಗತಿ ಬಹು ಸೂಕ್ಷ್ಮವಾದುದು. ಇಲ್ಲವಾದರೆ ಬೋಗೆನ್ ಅಂದೇ ಮ್ಯುನಿಚಿಗೆ ಹೋಗಬೇಕೆ? ಇಂತಹ ಸಾವಿರಾರು ಸ್ಫೋಟಗಳನ್ನುಂಟುಮಾಡುವ ಭವಿಷ್ಯವಿದ್ದವನನ್ನು ಸಂದರ್ಭಗಳೇ ಅಪಘಾತದಿಂದ ತಪ್ಪಿಸಿಬಿಟ್ಟವಿನ್ನಿ! ಮ್ಯುನಿಚಿನಲ್ಲಿದ್ದ ಬೋಗೆನ್‌ಗೆ ಟೆಲಿಫೋನ್ ಮಾಡಲಾಯಿತು-ನಿನ್ನ ಮೂವರು ಮಕ್ಕಳು ಶೋಧನಾಲಯದ ಸ್ಫೋಟಕ್ಕೆ ಸಿಕ್ಕಿ ಸತ್ತುಹೋದರೆಂದು "ಹಾಂ.... ನನ್ನ ಉಪಕರಣಗಳು?" ಎಂದು ಬೋಗೆನ್ ಪ್ರತಿಯಾಗಿ ಪ್ರಶ್ನಿಸಿದನಂತೆ! ಅಂದು 47ರ ವಯಸ್ಸಿನ ಮುದುಕ-ಮುಂದೆ ಸಂತಾನವಾಡುವ ಹುರುಪಿಳಿದವ- ತನ್ನ ಮೂರು ಮಕ್ಕಳನ್ನೂ ಒಂದೇ ತುತ್ತು ಮಾಡಿ ಮೃತ್ಯುವೆಂಗಿದಾಗ ಎತ್ತಿದ ಉದ್ಗಾರವಿದು—"ನನ್ನ ಉಪಕರಣಗಳು?". ಬೋಗೆನನ 'ಮೈನ್' ಮಾತ್ರವೆಂದೇನು, ಹೃದಯವೂ ತಾಜಾ ಸಿಡಿಗುಂಡೆಂಬುದಕ್ಕೆ ಇನ್ನೇನು ಬೇಕು ನಿದರ್ಶನ?

ಹಿಟ್ಲರ್ ರಾಜ್ಯದ 'ರಾಷ್ಟ್ರವೀರ'!

ಮೇಲಿನ ಅಪಘಾತವು ಬೋಗೆನನಲ್ಲಿ ಯಾವ ಪರಿಣಾಮವನ್ನೂ ಉಂಟುಮಾಡಲಿಲ್ಲ. ಅವ ಅದೇ ಸಪ್ಟಂಬರ ತಿಂಗಳಲ್ಲಿ ಹೊಸ ವಿನಾಶಕಾರಿಯೊಂದನ್ನು ಕಂಡುಹಿಡಿದ. ತನ್ನ ಶೋಧನೆಯ ಕಾರ್ಯದಲ್ಲಿ ರಾತ್ರಿ ಹಗಲನ್ನು ಸಮನಾಗಿ ಕಂಡು ದುಡಿಯುವ ಅಭ್ಯಾಸ ವಾಲ್ಟರನದು. ಇಂದಿನ ಪ್ರಲಯ ಶೂಲಗಳಾದ 'ಮೈನ್' ಗಳನ್ನು ನಿರ್ಮಿಸಲು ಅವ ತನ್ನ ಸ್ಪೆಶ್ಯಲ್ ಶೋಧನಾಲಯದಲ್ಲಿ ಹಲವು ತಿಂಗಳುಗಳ ವರೆಗೆ ರಾತ್ರಿ ಹಗಲು ಕೆಲಸಮಾಡಿದ್ದ. ಎಲ್ಲಾ ನಾಜೀ ಯುದ್ಧ ಸಾಧನಗಳ ಗುಟ್ಟನ್ನರಿತಿರುವ ಒಬ್ಬನೇ ಒಬ್ಬ ಮನುಷ್ಯನೆಂದರೆ ವಾಲ್ಟರ್ ಬೋಗೆನ್. ದೀರ್ಘಾವಧಿಯ ಶಾಂತಿ ಕಾಲದಲ್ಲಾದರೂ ವಾಲ್ಟರ್ ಬೋಗೆನ್ 'ಮೈನ್'ಗಳ ನಡುವೆ ಮಾನವ ಸಿಡಿಗುಂಡಾಗಿ ಹೊರಳಾಡುತ್ತಿದ್ದ ಮನುಷ್ಯ. ಲೋಕವು ಶಾಂತಿಯನ್ನು ಕನವರಿಸುತಿದ್ದಾಗ ಅವನ ಶೋಧನಾಲಯದಲ್ಲಿ ಪ್ರಲಯ ಶೂಲಗಳ ಅಚ್ಚು ಹೊಯ್ಯಲ್ಪಡುತ್ತಿತ್ತು! ವಾಲ್ಟರ್ ಆಗಾಗ ಹಿಟ್ಲರರನ್ನು ಸಂದರ್ಶಿಸುವ ಕ್ರಮವಿದೆ. ತನ್ನ ನೂತನ ಶೋಧನೆಗಳ ಪರಿಚಯ ಮಾಡಿಕೊಟ್ಟು ಸರ್ವಾಧಿಕಾರಿಯಿಂದ ಆಗತ್ಯವುಳ್ಳ ಸೂಚನೆಗಳನ್ನು ಹೊಂದುವದೇ ಈ ಭೇಟಿಯ ಗುರಿಯೆಂದು ಬೇರೆ ಹೇಳಬೇಕಾಗಿಲ್ಲ

ಮೂರು ವರುಷಗಳ ಹಿಂದೆಯೇ ವಾಲ್ಟರ್ ಬೋಗೆನನಿಗೆ ಅವನ ರಸಾಯನ ಶಾಸ್ತ್ರೀಯ ಶೋಧಕ್ಕಾಗಿ ನೋಬೆಲ್ ಬಹುಮಾನ ದೊರಕುವುದರಲ್ಲಿತ್ತು. ಆದರೆ ಆವನ ಗುಣನಡತೆಯ ವರ್ತಮಾನ ಕೇಳಿದ ಸ್ವೀಡಿಶ್ ಜ್ಯೂರಿಗಳು ಅವನಾ ಬಹುಮಾನಕ್ಕರ್ಹನಲ್ಲವೆಂದು ಹಿಂದೆಗೆದರು. ಇಂತಹ ಜೀವಂತ ಶಿಲಾಮೂರ್ತಿಯು ಇಂದು ನಾಜೀ ಜರ್ಮನಿಯಲ್ಲಿ 'ರಾಷ್ಟ್ರೀಯ ವೀರ'ನೆಂದು ಗೌರವಿಸಲ್ಪಡುತ್ತಿದ್ದಾನೆ.

ನೋಟೀಸು.

ಉಡುಪಿ ಡಿ. ಮು. ಕೋರ್ಟಿನಲ್ಲಿ

R. E. A. No. 54/40

(R. E. P. 608/39)

ಕೃಷ್ಣ ಯಾನೆ ಅಪ್ಪು ಸೂರ್ಯ ಬ್ಯಾ—ಅರ್ಜಿದಾರಳು

ಮತ್ತು

ಲಕ್ಷ್ಮೀ ಯಾನೆ ಸತ್ಯಭಾಮೆ ಕೊಡಾ —ಎದ್ರಿರು

ಇವರೊಳಗೆ

8ನೇ ಎದ್ರಿ ನಾಗಮ್ಮ ಯಾನೆ ಶ್ರೀದೇವಿಯಮ್ಮ ಹೆಜಮಾಡಿ ರಾಮಣ್ಣ ಪ್ರಭುಗಳ ಮಗಳು—ಇವರಿಗೆ,

ಸದ್ರಿ ಕೋರ್ಟ R.E.P. No. 608/39 ರಲ್ಲಿ ಆದ ಸ್ಥಿರ ಆಸ್ತಿ ಏಲಂನಿಂದ ಹುಟ್ಟ ಬಂದ ಐವಜುಗಳಲ್ಲಿ ಹೊಂದೇದು ವ ಡಿಕ್ರಿದಾರಳಾದ 1ನೇ ಎದ್ರಿಳಿಗೆ ಡಿಕ್ರಿ ಪ್ರಕಾರ ಸಲ್ಲತಕ್ಕ ಪೂರ್ಜ ಹಣಗಳು ಕೊಡಾ ಹೋಗುತ್ತಾ ಬಾಕಿ ಕೋರ್ಟ ಡಿಪೋಜಿಟಿನಲ್ಲಿ ಉಳಿದ (Surplus sale proceeds) ರೂ. 1026-0-0ನ್ನು ತನಗೆ ಕೊಡಿಸ ಬಂತೆ ಹುಕುಂ ಆಗಬೇಕಾಗಿ ಅರ್ಜಿದಾರಳು ಈ ಕೋರ್ಟಿಗೆ ಸದ್ರಿ R. E. A. No. 54/40ನೇ ಅರ್ಜಿಯನ್ನು ಮಾಡುತ್ತಾಳೆ. ಸದ್ರಿ ಅರ್ಜಿಯು ತಾ. 17-6 1940ನೇಗೆ ತನ್ಕಿಗೆ ಇಟ್ಟಿರುವದ್ರಿಂದ ಆ ದಿನ ಹಗಲು ಘಂಟೆ 10ಕ್ಕೆ ನೀವು ಈ ಕೋರ್ಟ ಮುಂದೆ ಸ್ವತಹಾ ಆಗಲೀ ವಕೀಲರ ಮುಖಾಂತ್ರವಾಗಿ ಆಗಲೀ ಹಾಜರಾಗಿ ನಿಮ್ಮ ಆಕ್ಷೇಪಣೆಗಳಿದ್ದರೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದ ಸದ್ರಿ ಅರ್ಜಿ ನಿಮ್ಮ ಗೈರು ಹಾಜ್ರಿಯಲ್ಲಿ ತೀರ್ಮಾನಿಸಲ್ಪಡುವದು.

ತಾರೀ 22 4 –1940

S. Gridhara Prabhu,
Advocate for Petitioner.

The Popular Insurance Co., Ltd.

Head Office—MANGALORE.

NOTICE.

It has come to our knowledge that Mr. A. B. Krishna Raja and his assistant Mr. B. Krishnayya, of Udipi, collect premiums either in part or in full with declarations of health from our Policyholders in spite of the fact that both the above have ceased connection with the Company since 22-2-1938.

Policyholders of the Company are hereby informed and cautioned that the Company will not be responsible for any premiums paid to either of the above parties and should they do so, it will be at their own risk.

Mangalore,
17th April, 1940

B. VITTAL RAU.
Managing Director.

ನಿಮ್ಮ ಮನೆಯಲ್ಲಿ ಸದಾ ಆನಂದದ ಜ್ಯೋತಿಯು ಬೆಳಬೆಳಗುತ್ತಿರಬೇಕೇ? ಹಾಗಿದ್ದರೆ--- ---

ನಂದಾದೀಪ

ಎಂಬ ಉತ್ಕೃಷ್ಟ ಚಿಕ್ಕಕತೆಗಳ ಪ್ರತಿಯೊಂದನ್ನಿಟ್ಟುಕೊಳ್ಳಿ.

ಕರ್ನಾಟಕದ ಪ್ರಸಿದ್ಧ ಕತೆಗಾರರಲ್ಲೊಬ್ಬರಾದ ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರು ಬರೆದ ಮನೋಹರವಾದ ಹನ್ನೊಂದು ಕತೆಗಳ ಸಂಗ್ರಹ.

ಪ್ರತಿಯೊಂದು ಕತೆಯೂ ನಿಮ್ಮ ಹೃದಯದಲ್ಲೊಂದು ಬಗೆಯ ಹೊಸ ಬೆಳಕನ್ನು ಬೆಳಗಿಸುವುದು.

ಬೆಲೆ: **0-8-0** ಟಪ್ಪಾಲು ದ್ವಾರ: **0-9-0**

ಕಿರಿಯರ ಪ್ರಪಂಚ, ಉಡುಪಿ.

(0-9-0 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.)

ರೂಪಾಯಿ200 ಧರ್ಮಾರ್ಥ!

ಮಹಾತ್ಮಾ ಸಿದ್ಧಕವಚ

ಅತ್ಯದ್ಭುತ ಶಕ್ತಿಯುಕ್ತವಾದ ಮಹಾತ್ಮ ಸಿದ್ಧ ಕವಚವೊಂದು ನಿಮ್ಮೊಡನಿದ್ದರೆ ಎಂತಹ ಕಷ್ಟಸಾಧ್ಯವಾದ ಯೋಜನೆಯೂ ಕ್ಷಿಪ್ರ ಫಲಕಾರಿಯಾಗುವುದು. ಈ ಯಂತ್ರಧಾರಣೆಗೆ ಮಂತ್ರ, ತಂತ್ರಗಳ ಸಹಾಯ ಬೇಕಾಗಿಲ್ಲ ಇದನ್ನು ಧರಿಸಿದ ಮಾತ್ರದಿಂದ ನಿಮಗೆ ಬೇಕಾಗುವ ಹೆಂಗಸಾಗಲೀ ಗಂಡಸಾಗಲೀ ನಿಮ್ಮ ಹತೋಟಿಯಲ್ಲಿ ಸಿಕ್ಕುವರು. ತಾಮ್ರದ ಕವಚಕ್ಕೆ ರೂ. ೩; ಮೂರಕ್ಕೆ ರೂ. 5-4-0; ಬೆಳ್ಳಿ ಕವಚಕ್ಕೆ ರೂ.೨-14-0; ಬಂಗಾರದಕ್ಕೆ ರೂ. 6-4-0.

ಮಹಾಲಕ್ಷ್ಮೀ ಯಂತ್ರ

ದುಷ್ಟಗ್ರಹರ ವಕ್ರದೃಷ್ಟಿ, ವೈರಿಗಳು ಬಾಧಿಸುತ್ತಿರುವುದು, ಪರೀಕ್ಷೆ, ವ್ಯಾಪಾರ, ಕೋರ್ಟ ವ್ಯಾಜ್ಯಗಳು, ನೌಕ್ರಿ, ಪುತ್ರ ಸಂತಾನಪ್ರಾಪ್ತಿ, ಅಪಾರದ್ರವ್ಯ ದೊರೆಯುವಿಕೆ, ಸಾಲದಿಂದ ಮುಕ್ತಿ, ಸ್ವಾತಂತ್ರ್ಯಲಾಭ, ಭಯಾನಕ ಕಾಯಿಲೆಗಳಿಂದ ಪಾರಾಗುವುದು ಇತ್ಯಾದಿ ಸರ್ವಸಿದ್ಧಿಯಾಗಬೇಕೆಂದಿದ್ದರೆ ಒಡನೆಯೇ ಮಹಾಲಕ್ಷ್ಮೀಯಂತ್ರವನ್ನು ಧರಿಸಿರಿ. ತಾಮ್ರದ ಕವಚಕ್ಕೆ ರೂ. ೩,(ಮೂರಕ್ಕೆ ರೂ. 5-4-0)ಬೆಳ್ಳಿಯದಕ್ಕೆ ರೂ. 3-14-0;ಚಿನ್ನದ ಕವಚವುಳ್ಳದುದಕ್ಕೆ ರೂ. 6-4-0, ನಾಲ್ಕು ಉದ್ದೇಶಗಳನ್ನು ಸಾಧಿಸುವರೆ ನಂಬ್ರ 4ನೇ ವಿಶೇಷ ಕವಚವನ್ನು ರೂ. 5-8-0 ಕೊಟ್ಟು ತರಿಸೇ ಪಡೆಯಿರಿ. ಐವತ್ತೂ ಮಿಕ್ಕಿದ ಯೋಜನೆಗಳನ್ನು ಒಮ್ಮೆಯೇ ಪೂರೈಸಬೇಕೆಂದಿದ್ದರೆ ಅತ್ಯಾಧಿಕ್ಯ ಶೀಘ್ರ ಮಹಿಮಾವಾದ ನಂಬ್ರ ೫ನೇ ಕವಚವನ್ನು 7-10-0 ಕೊಟ್ಟು ಪಡೆಯಿರಿ. ಟಪ್ಪಾಲು ಚಾರ್ಜು ಪ್ರತ್ಯೇಕ.

ಸೂಚನೆ.—ಮೇಲೆ ನಮೂದಿಸಿದ ಕವಚಗಳು ನಿಷ್ಪ್ರಯೋಜಕವೆಂದು ರುಜುವಾತುಪಡಿಸುವವರಿಗೆ ರೂಪಾ, 200 ಇನಾಮು ಕೊಡಲಾಗುವುದು. ಕವಚದ ಮೌಲ್ಯ ಸಹ ವಾಪಾಸು ಸಿಕ್ಕುವುದು.

SHRI MAHATMA ASHRAM, Post Box No. 12 (N.Y.A.) **AMRITSAR.**

ಈ ವಾರದ ಭವಿಷ್ಯ

ತಾರೀಖು 25 4-1940ರಿಂದ 2 5-1940ರ ವರೆಗೆ

ಮೇಷ—ದೈಹಿಕ ಸುಖವು ನಿಮಗೀವಾರ ಇಲ್ಲವೆಂದರೂ ತಪ್ಪಾಗದು. ಅಂಟುಜಾಡ್ಯದಂತೆ ಮನೆಯನ್ನು ಹಿಡಿದ ಕಿರಿಕಿರಿಯು ಹೋಗುವ ಮುನ್ನ ಗ್ರಹಗತಿ ನಡೆಯಲಾರದು. ಆಲಸ್ಯವು ದಿನೇ ದಿನೇ ಹೆಚ್ಚುತ್ತಾ ಹೋಗುವದು "ಆಲಸ್ಯಮಮೃತಂ ವಿಷಂ" ಆಲಸಿಗನಿಗೆ ಅಮೃತವೂ ವಿಷವಾಗಿ ಪರಿಣಮಿಸುವದು. ಆದಕಾರಣ ನಿಮ್ಮ ಕಾರ್ಯಗಳು ನೀವೆಣಿಸಿದಂತಾಗಲಾರವು. ಉದ್ಯೋಗದಲ್ಲಿ ಬಿದಾಗಿ ನ್ನವು ಹೆಚ್ಚುವದು. ದುಡಿತಕ್ಕೆ ತಕ್ಕ ಫಲ ಸಿಗದಿರುವದೇ ಇದರ ಮೂಲಕಾರಣ. ಆಯಕ್ಕಿಂತ ವ್ಯಯವು ಅಧಿಕವಾಗುವದರಿಂದ ಖರ್ಚಿಗಾಗಿ ಸಾಲಮಾಡ್ಯ ಪಿರಿ. ವಿಚಾರ ಶೂನ್ಯತೆಯಿಂದ ಮಾಡಬಾರದ ಕೆಲಸಕ್ಕೆ ಕೈಹಾಕಿ ಗುರು ಹಿರಿಯರ ಅವಕೃಪೆಗೆ ಪಾತ್ರರಾಗುವಿರಿ. ಸ್ಥಾನ ವಿಯೋಗದಿಂದ ಚಿಂತಾಕುಲವಾದ ನಿಮ್ಮ ಚಿತ್ತಕ್ಕೆ ತಾ. 28ರಿಂದ ವಾರಾಂತ್ಯದ ವರೆಗೆ ಆಪ್ತ ಮಿತ್ರರ ಸಹಾಯದಿಂದ ಸ್ವಲ್ಪ ಶಾಂತಿ ದೊರೆಯಲಿದೆ.

ವೃಷಭ—"ಕಿರ್ತಿಃ ಸರ್ವೋ ಭವತಿ ಹಿ ಲಘುಃ ಪೂರ್ಣತಾ ಗೌರವಾಯ" ಎಂದು ಕವಿ ಕಾಳಿದಾಸ ನಂಬಿರುವನಂತೆ ಬರಿದಾದ ಕೊಡವು ಹಗುರವಾಗಿ ಪರಿಪೂರ್ಣವಾದದ್ದು ಭಾರವಾಗಿಯೂ ಇರುವಂತೆ ನರನೂ ಕೂಡ ವಿದ್ಯಾವಿನಯ ಧನ ಇತ್ಯಾದಿಗಳಿಂದ ವಿಹೀನನಿದ್ದರೆ ಅವನು ಲಾಂಛನಾಸ್ಪದನೂ, ಕೂಡಿದ್ದರೆ ಗೌರವಯುತನೂ ಆಗುವನು. ಪ್ರಕೃತ ನಿಮ್ಮ ದಾರ್ಢ್ಯವದ ಬಲದಿಂದ ನಿಮ್ಮಲ್ಲಿರ ತಕ್ಕ ಸೌಜನ್ಯಾದಿ ಗುಣಗಳು ಮರೆಯಾಗುವವಲ್ಲದೆ ಸಂಪದ್ಭಾಗವು ಕ್ಷೀಣವಾಗುವದು. ಅದ್ದರಿಂದಲೇ ಜನರು ನಿಮ್ಮನ್ನು ಗೌರವಿಸುವದನ್ನು ಬಿಟ್ಟು ತಾತ್ಸಾರ ದೃಷ್ಟಿಯಿಂದ ನೋಡುತ್ತಿರುವರು. ಎಷ್ಟೇ ವಿತಮಾರ್ಗದಲ್ಲಿ ನಿಮ್ಮ ಖರ್ಚು ವಾಣಿಜ್ಯ ನೌಕರಿಗಳಲ್ಲಿ ಆಗಾಗ ಉತ್ಪತ್ತಿಗಿಂತ ಇಮ್ಮಡಿಯಾಗಲಿದೆ. ಪ್ರಯಾಣದಲ್ಲಿ ಆವ ಘಾತಗಳಿಗೆ ಸಿಲುಕದಂತೆ ಜಾಗರೂಕರಾಗಿರಿ. ತಾ. 26ರಿಂದ 30ರ ವರೆಗಿನ ದಿನಗಳು ಅನಾರೋಗ್ಯ ರಾಜಭೀತಿಯೇ ಮೊದಲಾದ ಅನಿಷ್ಟಕಾರಿಯಾಗಿದೆ.

ಮಿಥುನ—ನಿಮ್ಮ ಭಾಗ್ಯ ಚಕ್ರವು ಬಹಳ ಉತ್ತಮ ಪರಿಸ್ಥಿತಿಗೆ ಒಂದಿದೆ. ನಿಮ್ಮಿಷ್ಟಾರ್ಥಗಳು ಈ ವಾರದಲ್ಲಿ ಸಿದ್ಧಿಸಲೇ ಬೇಕು. ಅಲ್ಪ ಪ್ರಯೋಜನದಿಂದ ನೀವು ಸಂತುಷ್ಟರಾದಿರಾದರೆ ಅದ್ದಿಗೇ ನಿಮ್ಮ ಇಷ್ಟಿಯು ಪೂರ್ತಿಗೊಂಡಂತಾಗುವದು ಮತ್ತು ಹೆಚ್ಚಿನ ಪ್ರಯೋಜನ ದೊರೆಯಲಾರದು. ಆದಕಾರಣ ಮಾಘ ಕವಿಯು ಹೇಳಿದಂತೆ "ಸಂಪದಾ ಸುಸ್ಥಿರಂ ಮನ್ಯೋ ಭವತಿ ಸ್ವಲ್ಪಯಾಪಿ ಯಃ। ಕೃತಕೃತ್ಯೋ ವಿಧಿರ್ಮನ್ಯೇ ನ ವರ್ಧಯತಿ ತಸ್ಯ ತಾಂ॥" ಬ್ಬನಿಗೆ ಒಮ್ಮೆಗೆ ತೃಪ್ತಿಗೊಳಿಸಬೇಕೆಂದಿದ್ದ ವಿಧಿಯಲ್ಲಿ ಆತನು ಅಲ್ಪದರಲ್ಲೇ ಸಂತುಷ್ಟನಾದರೆ ಆ ವಿಧಿಯು ಅದ್ದಿಗೇ ಮುಗಿಯುವದು. ಆತನು ಮಹತ್ಫಲಾಪೇಕ್ಷಿಯಾಗಿ ಅಲ್ಪದರಲ್ಲೇ ತೃಪ್ತನಾಗದಿದ್ದರೆ ಆತನು ತೃಪ್ತನಾಗುವ ತನಕ ಆ ವಿಧಿಯು ಕೊಡುತ್ತ ಗೊಳ್ಳದು. ಹೀಗಿರಲು ನೀವು ಮಹತ್ಫಲವನ್ನುದ್ದೇಶಿಸಿ ಕಾರ್ಯ ಪ್ರವೃತ್ತರಾದರೆ ನಿಮ್ಮ ಉದ್ದೇಶವು ಸಫಲವಾಗದಿರದು. ಸಕಲರೂ ನಿಮಗೆ ನೆರವಾಗುವರು. ನಿಮ್ಮ ಸಂಪದ್ಭಾಗವು ಬಹುಶೀಘ್ರ ವೃದ್ಧಿಗೊಳ್ಳುವದು. ಸಂಸಾರ ಸುಖವು ಉತ್ತಮವಾಗಿರುವದು. ಗ್ರಹದ ದೆಸೆಯಿಂದಾಗಿ ದೇಹದಲ್ಲಿ ಸ್ವಲ್ಪ ಆಲಸ್ಯವುಂಟಾಗಿ ತನ್ಮೂಲಕ ಧನವ್ಯಯವಾಗಲಿದೆ. ತಾ. 25ರಿಂದ 27ರ ವರೆಗೆ ಅತ್ಯುತ್ತಮವಿದೆ.

ಕರ್ಕಾಟಕ—ಇಚ್ಛಿಸಿದ ಕಾರ್ಯವು ಅನಾಯಾಸದಿಂದ ಪೂರ್ತಿಗೊಳ್ಳುವದು. ವಿಜಯಶ್ರೀಯು ಸದಾ ನಿಮ್ಮವಳೇ ಆಗಿರುವಳೆಂದರೆ ತಪ್ಪಾಗದು. ದೇಹಬಲವೂ ಜನಬಲವೂ ನಿಮಗೆ ಸಾಕಷ್ಟು ಉತ್ತಮವಾಗಿಯೇ ಇರುವದು. ಶತ್ರು ಜನರನ್ನು ನಿಗ್ರಹಿಸುವಿರಿ. ಸದಾ ಸುಖದಿಂದಲೇ ದಿನಗಳೆವಿರಿ. ವಾಣಿಜ್ಯ ವ್ಯವಹಾರ, ನೌಕರಿ, ಕೃಷಿ, ವೈದ್ಯ ಮೊದಲಾದ ವೃತ್ತಿಗಳಲ್ಲಿ ಶ್ರೇಯಸ್ಸೂ ಧನಲಾಭವೂ ಉಂಟಾಗುವದು. ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ತೇರ್ಗಡೆಯೊಂದುವರು. ಸಂಸಾರ ಸುಖವು ಉತ್ತಮವಾಗಿದ್ದರೂ ದೇಹಾರೋಗ್ಯವು ಸ್ವಲ್ಪ ಕೆಡಲಿದೆ. ಸ್ಥಾನಮಾನಗಳಿಗೆ ವಿಪತ್ತಿಯಿಂದ ಹಾನಿಯುಂಟಾದೀತು. ಶಸ್ತ್ರ ಜೀವಿಗಳಿಗೆ ದೇಹ ಶ್ರಮವು ಹೆಚ್ಚುವದಲ್ಲದೆ ಉತ್ಪತ್ತಿಯು ಕಡಿಮೆಯಾದೀತು. ಪರ ಸ್ತ್ರೀಯರಿಂದ ವ್ಯರ್ಥ ಕಲಹವಾಗುವ ಪೂರ್ವ ಚಿಹ್ನೆಯು ಕಂಡುಬಂದೀತು. ತಾ. 27ರಿಂದ ವಾರಾಂತ್ಯದ ವರೆಗಿನ ದಿನಗಳು ಉತ್ತಮಗಳಾಗಿರುವವು.

ಸಿಂಹ—"ಸುಖಂ ಹಿ ದುಃಖಾನ್ಯನುಭೂಯ ಶೋಭತೇ" ಎಂದು ಪ್ರಾಜ್ಞರನ್ನುವಂತೆ ದುಃಖಾನುಭವದ ಅನಂತರದಲ್ಲಿ ಸುಖವುಂಟಾದರೆ ಅದರ ಸಂಪೂರ್ಣ ಆಸ್ವಾದನೆಯು ಸಿಗುವದು. ನೀವು ಈ ಹಿಂದೆ ಬಹಳ ಕಷ್ಟ ನಷ್ಟಗಳ ಪರಂಪರೆಗಳಲ್ಲಿ ಸಿಲುಕಿ ಒಂದೊಂದು ದಿನಗಳನ್ನು ಒಂದೊಂದು ವರ್ಷದಂತೆ ಕಳೆದಿದ್ದಿರಿ. ಈಗ ಆ ದುರ್ದಿನಗಳೆಲ್ಲವೂ ಅರುಣೋದಯವಾದೊಡನೆ ಕಾರ್ಗತ್ತಲೆಯು ದೂರ ಸರಿವಂತೆ ನಿಮ್ಮಿಂದ ದೂರ ಸರಿಯಲಾರಂಭಿಸಿದೆ. ನಿಮಗೆ ಸಿಗತಕ್ಕ ಅಲ್ಪ ಸ್ವಲ್ಪ ಧನವೂ ನಿಮ್ಮ ಪಾಲಿಗೆ ದೊಡ್ಡದಾಗಿ ಕಾಣುವದು. ಬಂಧು ಜನರು ಕಷ್ಟಕಾಲದಲ್ಲಿ ಸಹಾಯವನ್ನು ಮಾಡಲು ಸಿದ್ಧರಿರುವರು. ಅದರೆ ಸಾಲಗಾರರಿಂದ ವಿರೋಧವೂ ತನ್ಮೂಲಕ ನ್ಯಾಯಸ್ಥಾನಗಳ ಭೇಟಿಯೂ ಆಗುವ ಸಂಭವವಿದೆ. ವಿದ್ಯಾರ್ಥಿಗಳು ಕಷ್ಟದಿಂದ ದಿನಗಳೆಯುವರು. ತಾ. 28ರಿಂದ ವಾರಾಂತ್ಯದ ವರೆಗಿನ ದಿನಗಳು ಹೆಚ್ಚಿನ ಸುಖದಾಯಕಗಳಾಗಿವೆ.

ಕನ್ಯಾ—ಗುರುವಿನ ನೇರವೊಂದು ಮಾತ್ರ ಮಾಡಿದಂತೆ ನಿಮಗೆ ಕಷ್ಟಗಳ ಮೇಲೆ ಕಷ್ಟಗಳು ಪ್ರಾಪ್ತವಾಗಲಿವೆ. ಮನಸ್ತಾಪ ಬಾಧೆ ಸಹ್ಯವಾಗಿದ್ದರೂ ಮಾಸಿಗಳ ಯೋಗದ ಜಾಸ್ತಿಯೇ ಆಗದವನ. ಪ್ರಕೃತ ಅಷ್ಟಮ ದಲ್ಲಿದ್ದ ಬುಧನು ಇಷ್ಟದಾಯಕನಾಗುವನೆಂದೆನಿಸಲು ಅವನು ದುಸ್ಥಾನದಲ್ಲಿರುವದರಿಂದ ಆಗುವಂತಿಲ್ಲ. ವಿಶೇಷ ಸಕಲ ಗ್ರಹರೂ ನಿಮ್ಮ ರಾಶಿಗೆ ಅನಿಷ್ಟಕಾರಿಯಾದ ಸ್ಥಾನದಲ್ಲೇ ಇರುವರು. ಬಂದ ಮೇಲೆ ದೈವ ಬಲದಿಂದ ಸಂಪೂರ್ಣ ವಿರಹಿತರಾದ ನಿಮಗೆ ಸುಖವೆಲ್ಲಿಂದ ಬರಬೇಕು. ಕೈಗೊಂಡ ಕಾರ್ಯಗಳು ಹೇಗೆ ಕೊನೆಗೊಳ್ಳುವವೋ, ಯಾವುದೂ ದಕ್ಕುವಲ್ಲ. ದೇಹಾಲಸ್ಯ ಗೃಹ ಕಲಹ, ಸಮಾಜದಲ್ಲಿ ತಿರಸ್ಕಾರ ಗುರು ಹಿರಿಯರಲ್ಲಿ ವಿದ್ವೇಷ ಇತ್ಯಾದಿಗಳಿಂದಾಗಿ ನಿಮಗೆ ಸುಖವೇನೂ ಸಿಗುವದಿಲ್ಲವಾದರೂ ಚಂದ್ರಬಲದಿಂದಾಗಿ ತಾ. 25 ಮತ್ತು 1, 2ರಲ್ಲಿ ಕೆಲವು ಸ್ವಾರ್ಥಗಳು ಸಿದ್ಧಿಸಲಿವೆ

ತುಲಾ—ಮನೋವಾಕ್ಕಾಯಗಳಿಂದ ತ್ರಿಕರಣಗಳಲ್ಲಿ ಮಾಡಿರತಕ್ಕ ಸಮಾಜ ಒಲವಿರುವದಾದರೂ ಸದ್ಯದ ಲೋಕ ವ್ಯವಹಾರ ರೀತ್ಯಾ ಮನಸಿಗೆ ತಲಾಬಚಿಯಿರುವದು. ಈ ಭಾಗದಲ್ಲಿ ನೀವು ಒಳ್ಳೇ ಚತುರರಿರುವಿರಿ. ಮಾನಸಿಕ ಕರ್ಮಗಳು ಹೇಗಿದ್ದರೂ ಮಾತಿನಿಂದ ನೀವು ಸಕಲರನ್ನು ಮೋಹಿಸುವಿರಿ. ಆದ್ದರಿಂದಲೇ ಅಂತರಂಗ ನಿಮಗೆಲ್ಲ ವಿರೋಧವಾಗಿದ್ದರೂ ಬಾಹ್ಯದಲ್ಲಿ ಎಲ್ಲರೂ ಇಷ್ಟಮಿತ್ರರೇ. ಗೃಹ ಸುಖ ಕ್ಕಾವ ಭಾಗದಲ್ಲೂ ನಿಮಗೆ ಕೊರತೆಯಾಗದು. ಆದರೆ ನಿಮಗೆ ಸದಾ ಪ್ರವಾಸದಲ್ಲೇ ಹೆಚ್ಚಿನ ಸಮಯ ವ್ಯಯಿಸಬೇಕಾಗಿ ಬರುವದು. ಉದರ ರೋಗ ಪ್ರಮೇಹ ವಿಕಾರಗಳಿಂದ ಶರೀರಕ ಸುಖವು ದುರ್ಲಭವಾದೀತು. ವಿರೋಧಿಗಳ ಪೀಡೆಯು ದಿನೇ ದಿನೇ ಹೆಚ್ಚುತ್ತಾ ಬರುವದರಿಂದ ನಿಶ್ಚಿಂತರಾಗಿರಲು ಸಾಧ್ಯವಾಗುವಂತಿಲ್ಲ. ತಾ 26, 27 ಈ ಎರಡು ದಿನಗಳ ವಟ್ಟಿಗೆ ಸ್ತ್ರೀ ಸುಖ ಧನ ಲಾಭಗಳು ಉತ್ತಮವಾಗಿರುವವು.

ವೃಶ್ಚಿಕ—ಗುರುಬಲದಿಂದ ಮುಕ್ತರಾಗಿದ್ದರೂ ನೀವು ಗ್ರಹ ಬಲದಿಂದ ಕೂಡಿರುವಿರಿ. ಅತಏವ ನೀವು ಇತರರಿಗೆ ತಲೆ ಬಗ್ಗಿಸಿ ನಡೆಯಬೇಕಾಗಿಲ್ಲ. ಉದ್ಯೋಗ ನೌಕರಿಗಳಲ್ಲಿ ಕ್ರಮವಾಗಿ ಮೇಲೇರುವಿರಿ. ದೇಹಾಲಸ್ಯದಿಂದ ನಿವೃತ್ತರಾಗಿರುವದರಿಂದ ಕಾರ್ಯದಲ್ಲಿ ಉತ್ಸಾಹವು ಮಿಗಿಲಾಗುವದು. ವಿದ್ಯಾರ್ಥಿಗಳು ಯಶೋಭಾಗಿಗಳಾಗುವರು. ಶ್ರಮಕ್ಕೆ ತಕ್ಕ ಪ್ರತಿಫಲ ದೊರೆವದರಿಂದ ದಿನದ ಖರ್ಚಿಗೆ ಯಾವ ತೊಂದರೆಯೂ ಉಂಟಾಗಲಾರದು. ಸಂಸಾರದಲ್ಲಿ ಪುತ್ರ ಮಿತ್ರಾದಿಗಳೂ ಸೇವಕ ಭೃತ್ಯಾದಿಗಳೂ ಸುಖದಿಂದಿದ್ದರೂ ಪರಸ್ಪರ ದಂಪತಿಗಳಲ್ಲಿ ಕಲಹವುಂಟಾಗುವದು. ಕೆಲವರ ಕೃತಿಯಿಂದಾಗಿ ಮನೋವ್ಯಥೆಯು ಹುಟ್ಟಾಗಲಿದೆ ತಾ 25 28, 29, 30 ಈ ದಿನಗಳಲ್ಲಿ ಸುಖ ಭೋಜನ, ಧನ ವಸನಗಳ ಪ್ರಾಪ್ತಿ ಆತ್ಮ ಕಾರ್ಯಗಳಲ್ಲಿ ಜಯವೂ ದೊರೆಯಲಿದೆ.

ಧನು—ನಿನ್ನೆಯ ಪರಿಸ್ಥಿತಿ ಇಂದಿರದು, ಇಂದಿನಂತೆ ನಾಳೆಯಿರದು ಎಂದೀತಿ ದಿನೇ ದಿನೇ ವ್ಯತ್ಯಾಸಗೊಳ್ಳುತ್ತಾ ಹೋಗುತ್ತಿದೆ. ಹೆಂಡಿರು ಮಕ್ಕಳು ಪರಿಚಾರ ಇತರ ಪರಿವಾರದಿ ಸಕಲ ಗೃಹೋಪಕರಣಗಳು ಸಂಪೂರ್ಣವಾಗಿರುವದಾದರೂ "ಒಳಗಿನ ಗುಟ್ಟು ಶಿವನೇ ಬಲ್ಲ" ಎಂಬ ಗಾದೆಯಂತೆ ಪರಸ್ಪರ ತಂದೆ ಮಕ್ಕಳಲ್ಲೂ ಗಂಡ ಹೆಂಡಿರಲ್ಲೂ ಸೇವಕಾದಿ ಕಾರಿಗಳಲ್ಲೂ ಸದಾ ಕಲಹವುಂಟಾಗುವದು. ಹೊರಗಿನ ಜನರಿಗೆ ಈ ವಿಚಿತ್ರ ತಿಳಿಯದು. ನೌಕರಿ ವ್ಯಾಪಾರಾದಿಗಳಲ್ಲಿ ಉತ್ಪತ್ತಿಯು ತೃಪ್ತಿಕರವಾಗಿರದಾದರೂ ಧರ್ಮನಿಮಿತ್ತ ಕೆಲವೆಡೆ ಧನ ಹೋಗುವಿರಿ. ರಾಜಕೀಯ ಸಂಬಂಧವಾದ ಕಾರ್ಯಗಳನ್ನು ಕೋರ್ಟ್ ಕಚೇರಿಗಳಲ್ಲಿನ ಕೆಲಸಗಳನ್ನೂ ಕೆಲದಿನ ಮುಂದರಿಸ ಬಹುದು. ತನ್ಮೂಲದಲ್ಲಿ ಅವುಗಳ ಲಾಭವಾದರೂ ಸದ್ಯವೇ ಸಂಭವಿಸುವ ಚಿಹ್ನೆಗಳಿವೆ. ತಾ 25, 28, 29, 30 ಈ ದಿನಗಳಲ್ಲಿ ಅನಾರೋಗ್ಯ ನಿಮಿತ್ತ ಧನ ವ್ಯಯ ಕಾರ್ಯ ವಿಘ್ನಗಳು ಪ್ರಾಪ್ತವಾಗಲಿವೆ.

ಮಕರ—ಪ್ರಾಣಿಗಳಾಗಲಿ ಮನುಷ್ಯರಾಗಲಿ ಸಕಲರೂ ತಮ್ಮ ತಮ್ಮ ಸುಖ ಸಿಗಬೇಕು, ಕಷ್ಟವು ಬಾರದಿರಲೆಂಬ ಭಾವನಾ ಪ್ರೇರಿತರಾಗಿಯೇ ಇರುವರು. ಆದರೆ ವಿಧಿಯು ಮಾತ್ರ ತನ್ನ ನಿಯಮದಂತೆ ಆಯಾ ಕಾಲಗಳಲ್ಲಿ ಆಗಬೇಕಾದುದನ್ನು ಮಾಡಿಯೇ ಮಾಡುತ್ತದೆ. ಅದಕ್ಕೆ ವಿಪರೀತವಾಗಿ ನಡೆಯತಕ್ಕ ಪೌರುಷವು ಎಂತಹ ಫಲಕಾರಿಯಾಗದು. ಸದ್ಯ ನಿಮ್ಮ ಜನ್ಮಸ್ಥಾನದಲ್ಲಿ ರವಿ ಬುಧ ಗುರು ಶನಿಗಳಿರುವದರಿಂದ ಇದರಲ್ಲಿ ಬುಧನೊಬ್ಬನೇ ನಿಮ್ಮ ಉಪಕಾರ ಮಾಡಿದರೂ ಹೋರಾಟವು ಮತ್ತೆ ಮುಗಿಯದಿದ್ದರೂ ನಿಮ್ಮ ಪಾಲಿಕ್ಕೆ ವಿಘ್ನಕಾರಿಗಳೇ ಆಗಿರುವರು. ಇತರ ಗ್ರಹರೂ ಕೂಡ ಕೆಟ್ಟರೆ ತಪ್ಪು ಈ ಕಾಲದಲ್ಲಿ ನಿಮಗೆ ಆಪ್ತ ಬಂಧುಗಳಲ್ಲಿ ಕಲಹ ಮಿತ್ರ ವಿಯೋಗ, ಗೃಹ ಚಾಂಚಲ್ಯ ಇತ್ಯಾದಿಗಳಿಂದ ಮನಸ್ಸಿಗೊಂದಿಷ್ಟು ಸುಖ ಸಿಗಲಾರದು. ಅಸ್ಥಿರ ಮತಿಗಳಾಗಿ ಯಾವೊಂದು ಕಾರ್ಯ ಮಾಡದೆ ಮನಗಳ ಪಂತೆ ಕಾಲ ಕಳೆಯ ಬೇಕಾದೀತು. ಜನರ ಅಡಚಣೆ ಏರ್ಪಡಲಾಗದು. ಈ ಸಕಲ ಚಿಂತೆಗಳಿಂದ ದೇಹಾರೋಗ್ಯವೂ ಕೆಡಲಿದೆ. ತಾ. 26, 27 ಈ ದಿನಗಳಲ್ಲಿ ವಿರೋಧಿಗಳಿಂದ ಮಾನಕ್ಕೆ ಹಾನಿಯೂ ದೇಹಾಲಸ್ಯವೂ ಹುಟ್ಟುವ ಸಂಭವವಿದೆ.

ಕುಂಭ—"ಕಾಲಸ್ಯ ಕುಟಿಲಾ ಗತಿಃ" ಎಂಬಂತೆ ಕಾಲ ಗತಿಯು ವಕ್ರವಾಗಿರುವದು ಇಂದಿನ ನಿಮ್ಮ ಅವಸ್ಥೆಯ. ತೀರ ಭಿನ್ನವಾಗಲಾರಂಭಿಸಿದೆ. ನಡೆನುಡಿಗಳಲ್ಲೂ ಆಚಾರ ವಿಚಾರಗಳಲ್ಲೂ ವೈಷಮ್ಯವೇ ಕಂಡು ಬರುತ್ತಿದೆ. ನೀವು ಮಾಡತಕ್ಕ ಕೆಲಸಗಳಲ್ಲಿ ನಿಮ್ಮ ಮನಸ್ಸಿಗೇ ತೃಪ್ತಿಯಿಲ್ಲವು. ಆಹಾರ ಸಂಬಂಧದಿಂದಾಗಿ ಅಜೀರ್ಣ ರೋಗವೂ ಉಂಟಾದೀತು. ಕುಜನರ ಸಂಗದಿಂದ ಸ್ಥಾನಮಾನಗಳಿಗೆ ಕುಂದುಂಟಾಗುವದು. ಗುಟ್ಟಿನ ವಿಷಯಗಳೂ ಬಯಲಾಗುವಂತಿವೆ. ಆದರೂ ಉದ್ಯೋಗಕ್ಕೆ ತಕ್ಕ ಪ್ರತಿಫಲವು ದೊರೆವದರಿಂದ ಖರ್ಚಿಗೇನೂ ಕೊರತೆಯಾಗದು. ಹಣದ ಅಡಚಣೆ ಬರದು. ಬಂಧು ಮಿತ್ರರ ಬೆಂಬಲವು ಸದಾ ಇರುವದರಿಂದ ಶತ್ರುಗಳಿಗೆ ಅಂಜಬೇಕಾಗಿಲ್ಲ. ಸಂಸಾರಿಕ ತಾಪತ್ರಯಗಳು ಕಂಡು ಬರವು. ತಾ 28. 29, 30 ಈ ದಿನಗಳಲ್ಲಿ ವಿಶೇಷ ಖರ್ಚು ಸಂಭವಿಸೀತು. ಆರೋಗ್ಯವೂ ಕೆಟ್ಟೀತು.

ಮೀನ—ಮನಸ್ಸಿನಲ್ಲಿ ಒಂದು ತೆರನಾದ ಭಯವಿರುವದರಿಂದ ಕಾರ್ಯತತ್ಪರತೆಯನ್ನು ಪ್ರಕಟಪಡಿಸುವದಿಲ್ಲ. ದೇಹದಲ್ಲಿ ದೌರ್ಬಲ್ಯ, ಕಫ ಸಂಬಂಧವಾದ ರೋಗಗಳು ಕಾಣಿಸಿಕೊಳ್ಳಬಹುದು. ಆದರೂ ನೀವು ಪರಿಶ್ರಮದಿಂದ ವಿಘ್ನವಿದಷ್ಟುಗಳನ್ನೇ ಒರಲಿ, ಅಥವಾ ಅಧಿಕವಾದ ಖರ್ಚು ಪ್ರಾಪ್ತವಾಗಲಿ ಕೈಗೊಂಡ ಕಾರ್ಯವನ್ನು ಪೂರ್ತಿಗೊಳಿಸುವಿರಿ. ನಿಮ್ಮ ಪ್ರಯತ್ನವು ಎಂದೂ ನಿಷ್ಫಲವಾಗಲಾರದು. ಪುತ್ರ ಮಿತ್ರರಿಂದಲೂ ಧನ ಲಾಭವಾಗಲಿದೆ, ಗೃಹ ಸುಖವು ತೃಪ್ತಿಕರವಾಗಿದ್ದೀತು. ಮಿತ್ರರೂ ಬಂಧುಗಳೂ ಇವರ ನೆರವಿನಿಂದ ಕೂಡಿಕೊಂಡು ಸುಖದಿಂದ ದಿನಗಳನ್ನು ಕಳೆವಿರಿ. ತಾ. 25, 1, 2 ಈ ದಿನಗಳಲ್ಲಿ ಅಧಿಕಾರಿಗಳಿಂದ ಭಯ ಅಮಿತ ವ್ಯಯಗಳೂ ಪ್ರಾಪ್ತವಾಗುವಂತಿವೆ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ

"ಗೊನೊಕಿಲರ್" (ರಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನವ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ಸೋಕು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇನ್ನೇ ಮೊದಲಾದ ಯಾವತ್ತು ಗೊನೋರಿಯಾದಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ ಬೆಲೆ ೬೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩. ವಿ. ಪಿ. ಖರ್ಚು ೦-೬-೦ ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ಜಗತ್ಪ್ರಸಿದ್ಧ
ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್ ಹೆಸರನ್ನೂ ಗಮನಿಸಿರಿ

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೊ ಹೋಮ್ಯೊಪತಿಕ್ ಡಿಸ್‌ಪೆನ್ಸರಿ

Sole Manufacturer DR. D. N. JASANI, Vitalbhai Patel Road, BOMBAY 4

ಸ್ಥಾಪನೆ] **ಕೆನರಾ ಛಾಪಖಾನೆ** [1920
(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)
ಹಂಪನಕಟ್ಟೆ, ಮಂಗಳೂರು.
ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ
ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ.
Kanara Printing Works,
Hampankatte, **MANGALORE**

ಕಿವುಡರೂ ಸಂಪೂರ್ಣವಾಗಿ ಕೇಳಬಹುದು.

ಬಧಿರತಾ ಹರಣ
ವಿಜ್ಞಾನದ ನವೀನ ಮತ್ತು
ವಿಚಿತ್ರ ಶೋಧ
ಕಿವಿ ಸೋರುವದು, ನೋವು, ಉರಿಯುವುದು, ಶಬ್ದ ಕೇಳುವುದು, ತುರಿಸುವದು, ಕಿವಿ ಅಥವಾ ಮೂಳೆ ನೋವು, ಕರ್ಣ ರೋಗದ ದೋಷ, ಶೀತ ಅಥವಾ ಜ್ವರದ ನಿಮಿತ್ತ ಕ್ವಿನೀನು ತೆಗೆದುಕೊಂಡು ಪರಿಣಾಮವಾಗಿ ಉಂಟಾದ ಅಥವಾ ಯಾ ಸಂಪೂರ್ಣ ಕಿವುಡತನವೇ ಮೊದಲಾದ ಎಂತಹ ಕರ್ಣರೋಗವಾಗಲಿ, ಅತ್ಯಂತ ಕಠಿಣ ಕಿವುಡುತನವಾಗಲಿ ನಮ್ಮ ವಿಚಿತ್ರ 'ಬಧಿರತಾಹರಣ' ಎಣ್ಣೆಯನ್ನು ಉಪಯೋಗಿಸುವುದರಿಂದ ಮಾತ್ರ ಗುಣಹೊಂದುವುದು. ಈ ಸಿದ್ಧೌಷಧಿಯಿಂದ ನೂರಾರು ಮಂದಿ ಕಿವುಡರು ಚೆನ್ನಾಗಿ ಶ್ರವಣ ಶಕ್ತಿಯನ್ನು ಪಡೆದಿರುತ್ತಾರೆ. ಗುಣಕಾರಿಯಾಗದಿದ್ದರೆ ಬೆಲೆಯನ್ನು ವಾಪಸು ಕೊಡಲಾಗುವುದು. ಒಂದು ಬಾಟ್ಲಿಗೆ ರೂ 2. 3 ಬಾಟ್ಲಿಗಳಿಗೆ ರೂ. 5. ಟಪ್ಪಾಲು ಖರ್ಚು ಪ್ರತ್ಯೇಕ.
ವಿಳಾಸ:—ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.
ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು ಇದು ಮಧುರವಾಗಿದ ಆಶಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿ ನಿಮ್ಮ ಕೈಗೆ ಸೇರುವುದು.
ಸೀಸೆ 1 ಕ್ಕೆ 12 ಆಣೆ, 6 ಕ್ಕೆ 4 ಆಣೆ.
ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟರು:- ನವಭಾರತ ಬುಕ್‌ಡಿಪೋ, ಉಡುಪಿ

THE **MOOLKY BANK, LTD.,**
MOOLKY.
ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.
ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ. ಭಂಗಾರದ ಸರಕಿನ ಈಡಿನ ಮೇಲೆ ಸೇಕಡ 7 ಪರರ ದರದಲ್ಲಿ ಸಾಲಕೊಡಲಾಗುವುದು
ಸಿರಖು. ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.
ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.
M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೇನೇಜರ್.

DAIMONDS! DAIMONDS!
K. R. K. SHET
Opposite Govt. College, Hampankatte, MANGALORE
SHOW-ROOM & WORK SHOP.
SUPERFINE UP TO DATE CUTTING! **ವಜ್ರಗಳು** BEST BRILLIANCY !!
ಉತ್ಕೃಷ್ಟ ತರಗತಿಯ ಜಿನ್ನಸ್ಯಾತ (first quality, selected) ಎಂಟ್‌ವರ್ಪ್ ಪಟ್ಟಣದಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ, ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.
ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

ಹೊಸ ಪುಸ್ತಕ ಸೆಲ್ಫ್ ಇಂಗ್ಲಿಷ್ ಸ್ಟಡಿ ಈಗಲೇ ಪ್ರಿಂಟಾಗಿದೆ!
SELF ENGLISH STUDY
ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ **1-8-0**

ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವದನ್ನೂ, ಮಾತನಾಡುವುದನ್ನೂ, ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡಿಸುವುದನ್ನೂ 3 ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕ ಇದುವರೆಗೆ ಯಾರೂ ತಯಾರಿಸಲಿಲ್ಲ. ದೊಡ್ಡ ಪುಸ್ತಕ, ಸ್ವಲ್ಪ ಪ್ರತಿಗಳು ಮಾತ್ರ ಇರುವವು, ಬೇಗನೇ ಬರೆಯಿರಿ. ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರ್ಯಾರೇ ಆಗಲಿ ಅವರಷ್ಟು ದಿವಸಗಳಲ್ಲಿ ಇಂಗ್ಲಿಷ್ ಕಲಿತುಕೊಳ್ಳಬಹುದು. ಇದಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ. ಮನೆಯಲ್ಲೇ ಈ ಪುಸ್ತಕ ಓದಿ, ಇಂಗ್ಲಿಷ್ ಓದುಬರೆದ ಎಲ್ಲಾ ಸುಲಭವಾಗಿ ಬರುತ್ತೆ. ಪುಸ್ತಕದ ಕ್ರಯ ರೂ.1—8—0.
Western Swiss Watch Co. | ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,
P. O. Box No. 68 | ಪೋಸ್ಟ್ ಬಾಕ್ಸ್ ನಂ. 68, ಮದರಾಸ್.
G. P. O MADRAS

ಮುಚ್ಚಿದರೆ ಮುಗುಳು ! ಬಿಚ್ಚಿದರೆ ಅರಳು !!
ಪ್ರೊ. ಕೆ. ಹೊನ್ನಯ್ಯ ಶೆಟ್ಟರಿಂದ ಪೋಣಿಸಲ್ಪಟ್ಟ
ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಮಾಲೆಯು
ಮುಗುಳು
ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಅತ್ಯುಪಯುಕ್ತವಾದ ಸಚಿತ್ರ ಪದ್ಯ ಪುಸ್ತಕ.
(ಮದ್ರಾಸ್, ಬೊಂಬಾಯಿ, ಮೈಸೂರು ಟೆಕ್ಸ್ಟ್ ಬುಕ್ ಕಮಿಟಿಗಳಿಂದ ಮಂಜೂರಾಗಿದೆ.
ಅಭಿನಯಕ್ಕೆ, ನರ್ತನಕ್ಕೆ, ಕೋಲಾಟಕ್ಕೆ, ಎಲ್ಲಕ್ಕೂ ಅನುಕೂಲವಾದ,
ಮಕ್ಕಳ ವಯೋಗುಣಕ್ಕನುಗುಣವಾದ ಪದ್ಯಗಳಿಂದೊಡಗೂಡಿದೆ.
ಅಧ್ಯಾಪಕರೆಲ್ಲಾ ಇದನ್ನು ಮಕ್ಕಳ ಕೈಗೆ ಕೊಟ್ಟು, ಉಲಿದಾಡಿಸಿ,
ನಲಿದುಂಬಿಸಬೇಕಾಗಿ ಪ್ರಾರ್ಥನೆ.
ಎರಡನೆಯ ಆವೃತ್ತಿ] [ಬೆಲೆ: ೦—೩—೬
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಕೆಳಗಿನವರಿಗೆ ಬರೆಯಿರಿ,
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸದ್ವೈದ್ಯಶಾಲಾ ನಂಜನಗೂಡು ಇವರ
"ಸುಬಲಾ" ಶಕ್ತಿ ಸಂಕಟ, ಮಲಬದ್ಧತೆ ಇವುಗಳನ್ನು ಹೋಗಲಾಡಿಸಿ, ರಕ್ತ ವೃದ್ಧಿ ಪಡಿಸಿ, ಶರೀರಕ್ಕೆ ಬಲವನ್ನು ಕೊಡುತ್ತದೆ. ಬಹಳ ರುಚಿಯಾಗಿರುತ್ತದೆ.
ಬ್ರಾಂಚ್:-ರಥಬೀದಿ ಮಂಗಳೂರು.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ
— ಡಿಪೋವಿನ ರಿಂಗ್‌ವರ್ಮ್ ಮುಲಾಮು —
ಇಷ್ಟರ ವರೆಗಿನ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್ ಮುಲಾಮು ಈ ಕೆಳಗಿನಂತೆ ವ್ಯತ್ಯಾಸಮಾಡಲಾಗಿದೆ.
ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.
ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.


ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

PRINTED BY S. S. KARANTH AT THE THULUNAD PRESS, UDIPI. AND PUBLISHED BY K. H. SHETTY AT "NAVAYUGA OFFICE, UDIPI, S. INDIA.

stered No. M 3618 2-5-1940

ನವಯುಗ

NAVAYUGA

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಛೇರಿ.— ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

ಭದ್ರತೆಯಿಂದಲೂ, ಖಾತ್ರಿಯುಳ್ಳ ನಫೆ ಹಂಚಿಕೆಯಿಂದಲೂ, ಜಾಗ್ರತೆಯಾಗಿ ಹಕ್ಕುಗಳನ್ನು ಕೊಡುವುದರಿಂದಲೂ ಮತ್ತು ಉದಾರವಾದ ಜೀವವಿಮೆಯ ನಿಯಮಗಳಿಂದಲೂ ಈ ಸಂಸ್ಥೆಯು ಪ್ರಖ್ಯಾತಿಪಡೆದಿರುತ್ತದೆ.

ಪ್ರೊಫೆಸರ್ ಕೆ. ಬಿ. ಮಾಧವ, ಎಂ.ಎ, ಎಫ್ ಆರ್.ಎ ಎಸ್., ಎ.ಐ.ಎ (ಲಂಡನ್) ಪ್ರೊಫೆಸರ್, ಮಹಾರಾಜ ಕಾಲೇಜು, ಮೈಸೂರು ಇವರ್ಯರಿಂದವರ ಅಭಿಪ್ರಾಯ ಸಾರಾಂಶ.

"ಕಳೆದ ೧೦ ವರ್ಷಗಳಿಂದ ನಿಮ್ಮ ಸಂಘವು ಬಹಳವಾಗಿ ಮುಂದುವರಿಯುತ್ತಿರುವುದಲ್ಲದೆ ಕಳೆದ ಮೂರು ವರ್ಷಗಳಿಂದ ಆಡಳಿತದ ವೆಚ್ಚ, ಬಡ್ಡಿಯ ದರ, ಗದ್ದಾದ ಪಾಲಿಸಿಗಳ ಸಂಖ್ಯೆ ಇವೇ ಮೊದಲಾದ ಜೀವವಿಮೆಯ ನಿಯಮಗಳನ್ನು ಉತ್ತಮಗೊಳಿಸಲು ಸಹಕಾರಿಯಾಗುವ ವಿಷಯಗಳಲ್ಲಿ ಹೊಂದಿರುವ ಅಭಿವೃದ್ಧಿಯು ತೃಪ್ತಿಕರವಾಗಿದೆ .. .. ಸೌಕರ್ಯ ಸಹಿತವಾದ ಅಭಿವೃದ್ಧಿಗೆ ಉದಾಹರಣೆಯಾಗಿರುವ ಏಷ್ಯಾಟಿಕ್ಕಿನ ಅಪ್ರತಿಹತವಾದ ಕಾರ್ಯಕಲಾಪಗಳಿಗಾಗಿ . ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸೂಚಿಸಲು ಉಂಟಾಗುವ ಸಂತೋಷವನ್ನು ಹೇಳಿ ಕೊಳ್ಳಲಾರೆನು"

ಕೊಟ್ಟಿರುವ ವಿಮಾ ಹಕ್ಕಿನ ಹಣಗಳು: ೫,೦೦,೦೦೦—೦—೦.

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

H. Venkataramiah, *Divisional Superintendent*	or	**R Purniah** *Ag. General Manager*

The Asiatic Govt. Security Life Assu. Co. Ltd.,
Asiatic Building, BANGALORE CITY

ಝಂಡು ಮಲೇರಿಯಾ ಮಿಕ್ಶ್ಚರ್

ಕಹಿಯಾಗಿ ಇರುವುದಿಲ್ಲ

ಮಲೇರಿಯಾ, ವಿಷಮ ಜ್ವರಗಳಿಂದುಂಟಾಗುವ ಎಲ್ಲಾ ತರದ **ಕಠಿಣ ಜ್ವರಗಳಿಗೆ**

ಖಾತ್ರಿಯಾದ ಸಿದ್ಧೌಷಧ

ಕ್ರಯ: ಆಣೆ 0—14—0 ಮಾತ್ರ.

ಸ್ಥಳೀಯ ಏಜಂಟರು:— ಪಿ. ಎ. ಪೈ ಬ್ರದರ್ಸ್.

ಕಾರ್ಕಳದ ಏಜಂಟರು:— ವಿ. ವಿ. ಶೆಣೈ, ಕೆಮಿಸ್ಟ್ಸ್.

ಮಂಗಳೂರಿಗೂ ದಕ್ಷಿಣ ಕನ್ನಡ ಜಿಲ್ಲೆಯ ಇತರ ಮುಖ್ಯ ಸ್ಥಳಗಳಿಗೂ ಏಜಂಟರು ಬೇಕಾಗಿದ್ದಾರೆ.

ಶರ್ತಗಳಿಗೂ ಏಜನ್ಸಿಗಳಿಗೂ ಮುಖ್ಯ ಏಜಂಟರಿಗೆ ಬರೆಯಿರಿ:—

ದಾಮೋದರ್ ಎಂಡ್ ಕೊ,

ಮುಖ್ಯ ಏಜಂಟರು.

ZANDU

[illegible] ಬಜಾರ್ ರೋಡ್, ಜಿ. ಟಿ. ಮದರಾಸು.

DAMODER & CO.,
78 China Bazaar Road, **G T MADRAS**

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು.

ಮೈಸೂರು ಸೇಂಡಲ್ ಸೋಪು

ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ, ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತು ವಿಕಾರ ಮೊದಲಾದವುಗಳನ್ನು ಶೀಘ್ರ ದಲ್ಲಿಯೇ ಪರಿಹರಿಸಿ, ರಕ್ತ ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು.

ಕ್ರಯ:- 40 ಮಾತ್ರೆಗಳ ಡಬ್ಬಿ 1ರ ರೂ. 1—0—0

ಮದನಮಂಜರಿ ಫಾರ್ಮಸಿ, **184** ಚೈನಾಬಜಾರ್ ಮದ್ರಾಸ್.

ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

Your anxiety in finding a sound and progressive Life Office both to insure or to represent will end on consultation with:

Branch Secretary
The New Guardian of India Life Ins Co. Ltd, Madras
MANGALORE Branch

THE
PANGAL NAYAK BANK LTD.
ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.
(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು)

Season Deposits for a period of 3, 4, 5 or 6 months are accepted at all the offices of the Bank and interest is allowed at 4% per annum till maturity or the 30th June 1940, as the case may be, whichever is earlier.

For further information please communicate with or call at any of our offices.

THE VIJAYA BANK LTD.,
ಭದ್ರತೆ ಮತ್ತು ಅನುಕೂಲತೆ.
ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ--- ಸರಿ, ಬನ್ನಿ ನಮ್ಮಲ್ಲಿಗೆ.
ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು
ಬಡಬಗ್ಗರಿಂದ ಆಮಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರ ವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.
ದಿ ವಿಜಯಾ ಬೇಂಕ್, ಲಿಮಿಟೆಡ್,
ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಬಾಲಕರು ಆರೋಗ್ಯವಂತರಾಗಲು **ಪ್ರಭೂಸ್—ಬಾಲಾಮೃತ**
ಒಂದೆರಡು ವಾರಗಳಲ್ಲಿ ಅದ್ಭುತ ಗುಣ.
— ಕಮನೀಯವಾದ ಕೇಶಕಲಾಪ ತಂಪಾದ ಮೆದುಳು ದೃಢ ನೇತ್ರಗಳು ಇವುಗಳನ್ನು ಹೊಂದಲು —
ಪುಷ್ಪಗಂಧಾಮೋದಿತ **ಆಮಲಕೀ ತೈಲ** ಬಹು ಗುಣಯುಕ್ತ
ವಾಯುಮಾತ್ರೆಗಳೆಂಬ --- **ಧಾನ್ವಂತರಿ ಗುಟಿಕಾ** --- ಇವುಗಳನ್ನು
ಸೇವಿಸಿ ವಾಯುವೆಂಬ ರೋಗವನ್ನು ಗುಣಪಡಿಸಿಕೊಳ್ಳಿರಿ
ಮಾತ್ರೆ-12ಕ್ಕೆ 0-4-0, 25ಕ್ಕೆ 0-7-0, 50ಕ್ಕೆ 0-13-0, 100ಕ್ಕೆ 1-5-0
6 ಆಣೆಯ ಸ್ಟಾಂಪು ಕಳುಹಿಸಿದರೆ 12 ಮಾತ್ರೆಗಳನ್ನು ಕಳುಹಿಸುತ್ತೇವೆ
ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಕುಂಜಾಲು. ಬ್ರಹ್ಮಾವರ, ದ. ಕ.
ನಮ್ಮ ಏಜಂಟರು:—
ನವಭಾರತ ಬುಕ್ ಡಿಪ್ಪೋ, ಉಡುಪಿ, ದ. ಕನ್ನಡ. ಜನರಲ್ ಸಪ್ಲೈಯಿಂಗ್ ಲಿಮಿಟೆಡ್, ಉಡುಪಿ ಸ್ಟೋರ್ಸ್, ದ. ಭಾರತ, ಕೆನರ ಸಪ್ಲೈಸ್ ಏಜನ್ಸಿ, ಪಿ. ಆರ್ ಪ್ರಭು, ಒಟಾಟುಮಲ ವಸನ್ಸ್, ಲಾಲ್‌ಬಾಗ್ ಮುಂಬೈ ನಂ. 12, ಗೋಪಯ್ಯ ಲಕ್ಷ್ಮಣ ನಾಯಕ್ ಎಂಡ ಬ್ರದರ್ಸ್, ಕೋಟ, ದ. ಕನ್ನಡ.

ಸೀರೆಗಳು
ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.
ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ

Transport & Car Owners

ARE SPECIALLY INVITED TO VISIT
OUR SHOW ROOM *for economical transport maintenance.*
CANARA AUTOMOBILES - - - - - MANGALORE


KOPRAN
Tooth Paste
ಹಿಂದೂಸ್ಥಾನದ ಜನಪ್ರೀತ
ದಂತಾಂಜನ
KOPRAN CHEMICAL CO., BOMBAY

"ನಾಮರ್ದಾಯಿ"
ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ಸಿಸೋಸಿ ಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿರ್ಮೂಲಿಸುತ್ತದೆ
"ಸೆಮಿನಾ ಟೋನಿಕ್ ಪಿಲ್ಸ್"
ಇದರ ಸೇವನೆಯಿಂದ ನವಜೀವನ ಉಂಟಾಗುತ್ತದೆ.
ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟಂಟ್ ವನಸ್ಪತಿ ಮತ್ತು ರಸಾಯನ ಅನುಭವಿತ
ಕಿಮ್ಮತು ರೂ. 3-0-0 ಡಬ್ಬಿ 0-8-0
ಸೊರಥ್ ಫಾರ್ಮಸಿ,
ನಳ್ ಬಜಾರ್, ಡಂಕನ್ ರೋಡ್,
ಮುಂಬಾಯಿ 4
Sorath Pharmacy,
Null Bazar, Duncan Road,
BOMBAY 4.

ಭಾರತೀ ಗ್ರಂಥಮಾಲೆಯ ಪುಸ್ತಕಗಳು.
ಚಿಳಕು (ಚಿಕ್ಕ ಕತೆಗಳ ಸಂಗ್ರಹ.)
ತಿನಿಸು (ಕತೆ, ಕವನ, ಪ್ರಬಂಧಗಳ ಸಂಗ್ರಹ)
ಪ್ರತೀಕಾರ (ನವಪೌರಾಣಿಕ ನಾಟಕ)
ಅಂಗುಲಿಮುದ್ರೆ (ಪೌರಾಣಿಕ ಕತೆ)
ಚಿಗುರು (10 ಚಿಕ್ಕ ಕತೆಗಳ ಸಂಗ್ರಹ)
ಸಂಸ್ಕಾರ (5 ಏಕಾಂಕ ನಾಟಕಗಳ ಸಂಗ್ರಹ)
ಪ್ರತಿಯೊಂದರ ಬೆಲೆ ನಾಲ್ಕಾಣೆ ಮಾತ್ರ
(ಅಂಚೆವೆಚ್ಚ 0-0-6 ಪ್ರತ್ಯೇಕ)
ರೂ 1-8-0 ಕಳಿಸಿದ್ದಲ್ಲಿ ಆರು ಪುಸ್ತಕಗಳನ್ನು ಕಳಿಸಲಾಗುವುದು. (ಅಂಚೆವೆಚ್ಚ ಪ್ರತ್ಯೇಕ)
ವ್ಯಾಪಾರಿಗಳಿಗೆ ಧಾರಾಳ ಕಮಿಷನ್.
ಪ್ರತಿಗಳಿಗೆ ಬರೆಯಿರಿ:—
ಮೇನೇಜರ್,
ನವಭಾರತ ಪುಸ್ತಕ ಭಂಡಾರ
ಉಡುಪಿ

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸ್

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸದಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ಕೆಲವು ವಿಷಯಗಳು ಇವೆ, ಇವೆ, ಕಾನೂನಿನ ಜವಾಬ್ದಾರಿಕೆಯನ್ನು ತಿಳಿದಿದ್ದರೂ ಸಾಲದು; ಅದರಿಂದ ತಯಾರಿಸಿದ ಸಾರಾಂಶದ ನಿತ್ಯದ ಕೆಲವೇ ನಿಮಿಷಗಳಲ್ಲಿ ತನ್ನಯ ಆಫೀಸರರಿಗೆ ಒಪ್ಪಿಗೆಯು. ಗವೇಕು ಅಂಥಾ ಲೇಖಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸ ಕಾಯುದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ವಿಶೇಷವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗುವುದು. ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನ್" ತಪ್ಪಿಯಾಗಿ ಹೋಗಿದ್ದರೂ ಭಯವಾಗಲಿಲ್ಲವೆಂದು ದಾವರು ಮಾಡುವ 15 ದಿವಸಗಳ ಮುಂಚಿತವಾಗಿ ಕೆಳಗೆ ವಿಳಾಸ ಕಾಣಿಸಿದವರೊಡನೆ ಪತ್ರ ವ್ಯವಹಾರ ನಡೆಸಿರಿ,

ಎಸ್. ಎಸ್. ಪುರಾಣಿಕ,
ಇನ್ಕಮ್ ಟೇಕ್ಸ್ ಪ್ರಾಕ್ಟೀಶನರ್,
ಕೃಷ್ಣ ಪ್ರಿನ್ಸಿಪೇಟ್ ಬಿಲ್ಡಿಂಗ್,
ಹಂಪನಕಟ್ಟೆ, ಮಂಗಳೂರು.

ಕನ್ನಡ ಸುದಿವೆಣ್ಣೊಂದು
ಕನ್ನಡಗಿತ್ತಿಯ ಕಿರುಗಾಣಿಕೆ
ನಾಡ ನಾರಿಯರ ನೈಜ ಜೀವನದ ದುರಂತ ಚಿತ್ರವನ್ನೂ, ಸ್ತ್ರೀ-ಪುರುಷ ಹೃದಯಗಳ ಆಳವನ್ನೂ ಹೃದಯಂಗಮವಾಗಿ ಚಿತ್ರಿಸುವ ರಮ್ಯ ಕಥಾನಕ
ವತ್ಸಲಾ
ಸಾಮಾಜಿಕ ಕಾದಂಬರಿ
ಬೆಲೆ: ೦-೭-೩.
0—8—0 ಸ್ಟಾಂಪು ಕಳುಹಿಸಿದರೆ
1 ಪ್ರತಿಯನ್ನು ಕಳಿಸಬಹುದು.
ಬರಹಗಾರ್ತಿಯರು:—
ಶ್ರೀಮತಿ ಮಟ್ಟಿಪಲ್ಲಿ ಕಮಲಾಕ್ಷಿ
ಈ ಪುಸ್ತಕದ ಕುರಿತು ಪ್ರಾಚ್ಯನ ವಿಮರ್ಶ ವಿಚಕ್ಷಣ ಕರ್ಣಾಟಕ ವಿದ್ಯಾವೈಭವ, ರಾವ್ ಬಹದ್ದೂರ್ ಆರ್. ನರಸಿಂಹಾಚಾರ್ಯ M A, M.R A.S. ಇವರು ಬೆಂಗಳೂರಿನಿಂದ ಹೀಗೆ ಅಭಿಪ್ರಾಯ ಕಳುಹಿದ್ದಾರೆ 'ಗ್ರಂಥದ ಶೈಲಿ ಗಂಭೀರವಾಗಿಯೂ ಹೃದಯಂಗಮವಾಗಿಯೂ ಇದೆ. ಪ್ರತಿಪಾದಿತವಾದ ವಿಷಯವು ನೀತಿಬೋಧಕವಾಗಿಯೂ ದುರ್ಮತಿ ನಿವಾರಕವಾಗಿಯೂ ಇದೆ. ಸ್ತ್ರೀಯರಿಗೆ ಬೋಧಪ್ರದವಾದ ಗ್ರಂಥ. ....'
ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ESTD. 1921 ಸ್ಥಾಪನೆ

FOUNDER:
SRI. A. B. SHETTY, M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

NAVAYUGA
ನವಯುಗ

ಚಂದಾ ವಿವರ:
1 ವರ್ಷಕ್ಕೆ - ರೂ. 3-4-0
6 ತಿಂಗಳಿಗೆ - ರೂ. 1-12-0
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹ ಸಂಪಾದಕ:
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೩೪

ಉಡುಪಿ, ಗುರುವಾರ, ೨—೫—೧೯೪೦.
UDIPI, THURSDAY, 2-5-1940.

VOL. 19
No. 34

ಇಟಲಿ ಕಾಲು ಕೆರೆದು ಜಗಳ ಕಾಯುತ್ತಿದೆ

ಈ ವಾರದಲ್ಲಿ ಲೋಕದ ಲಕ್ಷ್ಯವನ್ನೆಳೆದಿರುವ ವಿಶೇಷ ವಾರ್ತೆಯೆಂದರೆ ಇಟಲಿಯ ಯುದ್ಧ ಸ್ಪರ್ಧೆ. ಬ್ರೆನ್ನರ್ ಕಣಿವೆಯಲ್ಲಿ ಹಿಟ್ಲರರು ಮುಸಲಿನಿಗಳೊಡನೆ ಸಂಭಾಷಿಸಿದುದು, ಮುಸಲಿನಿಗಳನ್ನು ಭೂಮಧ್ಯ ಸಮುದ್ರಕ್ಕಿಳಿಸುವದಕ್ಕಾಗಿ ಎಂದು ಈಗೀಗ ಸ್ಪಷ್ಟವಾಗುತ್ತಿದೆ. ಇಟಲಿಯು ಯುಗೋಸ್ಲೇವಿಯದಿಂದ ಒಂದು ಬಂದರನ್ನು ಕೇಳುವದರೊಂದಿಗೆ ಭೂ ಮ ಧ್ಯ ಸಮುದ್ರದಲ್ಲಿರುವ ಬ್ರಿಟಿಷರ ಅಧಿಕಾರಕ್ಕೆ ಸಕಾರ ಹೇಳಲಾರಂಭಿಸಿದೆ. ಪ್ಯಾರಿಸಿನಲ್ಲಿ ಸೇರಿದ ಮಿತ್ರರಾಷ್ಟ್ರಗಳ ಪ್ರಮುಖ ಯುದ್ಧ ಮಂಡಲದ ಸಭೆಯಲ್ಲಿ ಯುಗೋಸ್ಲೇವಿಯ ಮತ್ತು ಇತರ ಬಾಲ್ಕನ್ ರಾಷ್ಟ್ರಗಳ ಸ್ವಾತಂತ್ರ್ಯಕ್ಕೆ ಧಕ್ಕೆಯೊದಗಿದಲ್ಲಿ ಅನುಸರಿಸಬೇಕಾದ ಧೋರಣೆಯ ಕುರಿತು ಆಲೋಚನೆ ನಡೆದಿತ್ತು. ಯುಗೋಸ್ಲೇವಿಯದ ಮೇಲೆ ನಡೆಯುವ ಆಕ್ರಮಣವು ಮಿತ್ರರಾಷ್ಟ್ರಗಳ ವಿರೋಧಕ್ಕೊಳಗಾಗುವದು ಎಂಬುದು ಸ್ಪಷ್ಟವಿದೆ. ಇದು ಖಾಸಗಿ ಯುದ್ಧಗಳಿಗೆಡೆ ಕೊಡುವ ಕಾಲ ವಲ್ಲ ಎಂದು ಜವಾಬ್ದಾರಿಯುಳ್ಳ ಮಿತ್ರ ಪಕ್ಷದವರೆಲ್ಲರ ಅಭಿಪ್ರಾಯ.

ಮಿತ್ರರಾಷ್ಟ್ರಗಳ ಹಿಡಿತ ಸಡಿಲಾಗಬೇಕು

ರೋಮಿನ ಪ್ರಾಮುಖ್ಯ ಸಭೆಯೊಂದರಲ್ಲಿ ಇಟಲಿಯ ಡಿಪ್ಯುಟಿಗಳಲ್ಲೊಬ್ಬರಾದ ಸಿಗ್ನರ್ ಗ್ರಿಂಟಾರವರು ಭಾಷಣಮಾಡುತ್ತ, ಭೂಮಧ್ಯ ಸಮುದ್ರದ ಬ್ರಿಟಿಷ್ ವರ್ಚಸ್ಸನ್ನು ಹಾಗೆಯೇ ಇರಗೊಡಿಸಲು ಇಟಲಿ ಸಿದ್ಧವಿಲ್ಲವೆಂಬುದನ್ನು ಸ್ಪಷ್ಟಪಡಿಸಿರುವರು. "ಯಾರ ಸಾಮರ್ಥ್ಯವು ಅನುಮಾನಕ್ಕಾಸ್ಪದವೀಯುತ್ತಿದೆಯೋ ಆ ಬ್ರಿಟಿಷರಿಗೆ ಇಟಲಿಯೊಡನಿರುವ ಮಿತ್ರತ್ವ ಯಥಾರ್ಥವಾದುದಲ್ಲ" ಎಂದು ಗ್ರಿಂಟಾರ ಮಾತು. "ಇಂದಿನ ಯುದ್ಧವು ಆಕ್ರಮಣಗಾರ ಪ್ರಪಂಚದ ವಿರುದ್ಧವಾಗಿ ಜನಸಮುದಾಯವು ಹೂಡಿದ ಯುದ್ಧವೆನ್ನಿಸುವವರೆಗೂ ವಿಸ್ತಾರ ಹೊಂದುವುದು" ಎಂಬ ಗ್ರಿಂಟಾರವರ ಮಾತಿನಿಂದ ಇಟಲಿಯು ಇಂದಿನ ಯುದ್ಧ ವಿಸ್ತಾರಕ್ಕೆ ಕಾರಣವಾಗುವದೆಂಬ ಊಹೆಗೆ ಬೆಂಬಲ ದೊರೆತಿದೆ. ಫ್ರಾನ್ಸಿನ ಕುರಿತು ಮಾತನಾಡುವಾಗ ಇಟಾಲಿಯನ್ ಡಿಪ್ಯುಟಿಯವರು "ಫ್ರಾನ್ಸು ತಮ್ಮನ್ನು ಸದಾ ಕಾಲ ವಿರೋಧಿಸುತ್ತ ಬಂದಿರುವುದೆಂಬುದನ್ನು ನಾವು ಮರೆಯುವಂತಿಲ್ಲ" ಎಂದರು. ಭೂಮಧ್ಯ ಸಮುದ್ರದ ಸಮಸ್ಯೆಯನ್ನು ಬಿಡಿಸಲು ಇಟಲಿಯೇಕೆ ಕೈಹಾಕಬಾರದೆಂದು ಪ್ರಶ್ನಿಸಿ, ಮುಸಲಿನಿಯವರನ್ನು ಅನುಕರಿಸುವ ಅವಶ್ಯತೆ ಇಂದಿನಷ್ಟು ಹಿಂದೆಂದೂ ಇರಲಿಲ್ಲವೆಂದು ಇಟಲಿಯ ಪರಿಗೆ ಬೋಧಿಸಿ "ವಿಶ್ವಾಸವಿಡಿರಿ, ವಿಧೇಯರಾಗಿರಿ, ಹೋರಾಡಿರಿ" ಎಂದು ರಣನಾದಮಾಡಿರುವರು.

ಸಮಾಚಾರ ಸಂಗ್ರಹ

ಫ್ರೆಂಚ್ ಪ್ರಧಾನರ ಉತ್ತರ

ಇಟಲಿಯ ಆರೋಪಕ್ಕೆ ಫ್ರೆಂಚ್ ಮುಖ್ಯ ಮಂತ್ರಿಗಳಾದ ಎಮ್. ರೈನಾಡರು ಉತ್ತರವಿತ್ತಿರುವರು. ಇಟಲಿ-ಫ್ರಾನ್ಸುಗಳೊಳಗಿರುವ ಪರಸ್ಪರ ಸಂದೇಹ ಹೇತುಗಳಾದ ವಿಷಯಗಳ ಕುರಿತು, ಪರಸ್ಪರ ಅಭಿಪ್ರಾಯ ವಿನಿಮಯ ಮಾಡಿಕೊಳ್ಳಲಾಗದ ಜವಾಬ್ದಾರಿ ಫ್ರಾನ್ಸಿನ ಮೇಲೆ ಬೀಳುವದಿಲ್ಲ. ಭೂಮಧ್ಯ ಸಮುದ್ರ ಪಕ್ಕದ ರಾಷ್ಟ್ರಗಳ ನ್ಯಾಯಶೀಲವಾದ ಮತ್ತು ಕ್ರಮಬದ್ಧವಾದ ಅಧಿಕಾರಗಳಿಗೆ ಹಾನಿ ಬರುವ ಸಂಭವವಿರುವದೆಂದು ಫ್ರಾನ್ಸ್ ಸರಕಾರಕ್ಕೆ ತಿಳಿದು ಬಂದುದರಿಂದ ಅಭಿಪ್ರಾಯ ವಿನಿಮಯಕ್ಕೆ ಎಡೆದೊರೆತದಂತಾಗಿದೆ ಎಂಬುದೇ ಫ್ರೆಂಚ್ ಪ್ರಧಾನರ ಅಭಿಮತ. ಅಂತೂ ಭೂಮಧ್ಯ ಸಮುದ್ರದಲ್ಲಿ ಹಾಲಾಹಲವೇಳುವ ಲಕ್ಷಣಗಳು ಕಂಡು ಬರುತ್ತಿವೆ

ನಾರ್ವೇ ಯುದ್ಧ

ನಾರ್ವೆಯ ಪ್ರಾಮುಖ್ಯ ಬಂದರವಾದ ನಾರ್ವಿಕನ್ನು ವಶಪಡಿಸಿಕೊಳ್ಳಲು ಮಿತ್ರರಾಷ್ಟ್ರಗಳ ಜಲ ಮತ್ತು ನೆಲ ಧಾಳಿಯು ಪ್ರಬಲ ಸನ್ನಾಹ ನಡೆದಿದೆ. ರಸ್ತೆಗಳ ಅಭಾವ ಮತ್ತು ವಿಪರೀತ ಛಳಿಯಿದ್ದರೂ ಬ್ರಿಟಿಷ್ ಮತ್ತು ನಾರ್ವೆ ಸೈನ್ಯಗಳು ನಿಧಾನವಾಗಿ ಮುಂದುವರಿದು ನಾರ್ವಿಕನ್ನು ಸುತ್ತುಗಟ್ಟಿವೆ. ನಾರ್ವಿಕ್‌ನ ಮೇಲೆ ಬ್ರಿಟಿಷರ ವಿಮಾನ ಧಾಳಿ ನಡೆದಿದೆ. ವೈಸ್ ಎಡ್ಮಿರಲ್ ವ್ಹಿಟ್‌ವರ್ಥ ಇವರ ನಾಯಕತ್ವದಲ್ಲಿ ಎಲ್ಲಾ ತರಗತಿಯ ಯುದ್ಧ ನಾವೆಗಳಿದ್ದ ದಳವೊಂದು ಒಫ್ಟ್, ಎಫೋರ್ಡ್ ಮತ್ತು ನಾರ್ವಿಕನ್ನು ಮುತ್ತಿಗೆ ಹಾಕಿರುವದು. ಅತಿ ಕಷ್ಟದ ಹಾದಿಯಲ್ಲಿ ಜರ್ಮನ್ ವಿನಾಶಕ ನಾವೆಗಳನ್ನು ಇದಿರಿಸಿ ಈ ದಳವು ಹಿಂದಕ್ಕಟ್ಟಿರುವದು.

For Everything in Insurance Consult

TROPICAL
INSURANCE CO. LTD.,

Head office: NEW DELHI.

Chairman: SJT. SUBASH CHANDRA BOSE.

Founder Directors: PANDIT MOTILAL NEHRU, Dr. M. A. ANSARI, HAKIM AJMAL KHAN, Sri. S. SRINIVASA IYENGER.

1. This cent per cent national has issued Policies for THREE CRORES
2. Has given Bonus since the Inception
3. Has attractive Schemes for Agents & Organisers.
4. Liberal Terms for Field Staff;

For Particulars Apply to:—

M. SUNDERRAM SHETTY, *Branch Manager,* HAMPANKATTA, MANGALORE, S. K.

OR

K. S. RAMAMURTHY, M. A., *Branch Secretary,* 160/- MOUNT ROAD, MADRAS.

ಒಟ್ಟು ಕ್ಷೇತ್ರದಲ್ಲಿದ್ದ ಬ್ರಿಟಿಷ್ ಸೈನ್ಯ ನಿಲ್ದಾಣಗಳ ಮೇಲೆ ಜರ್ಮನರು ವಿಮಾನ ಧಾಳಿ ನಡೆಸಿದರೂ ಬ್ರಿಟಿಷರಿಗೇನೂ ನಷ್ಟವಾಗಿರುವದಿಲ್ಲ. ಲಿಲ್ಲಾಮರ್ ಎಂಬಲ್ಲಿದ್ದ ಬ್ರಿಟಿಷ್ ಸೇನೆಗಳು ಜರ್ಮನರ ಪ್ರಬಲ ಒತ್ತಾಟದ ಭಯದಿಂದ ಹಿಂದೆ ಸರಿದಿರುವವು. ಟ್ರೊಂಡ್ಹೆಮ್‌ನ್ನು ಮುಂದಾಗಿ ಪ್ರವೇಶಿಸಿದ ಒಂದು ಸೈನ್ಯ ಭಾಗವು, ಜಲ ಮೂಲಕ ನಡೆಯುವ ಜರ್ಮನ್ ಧಾಳಿಯಿಂದಾಗಿ, ತಮ್ಮ ಮುಖ್ಯ ಸೈನ್ಯದ ಸಂಬಂಧ ಕಡಿದುಹೋಗುವ ಭಯದಿಂದಾಗಿ ಅಲ್ಲಿಂದ ಕಾಲ್ತೆಗೆದಿರುವುದು. ಬ್ರಿಟಿಷ್ ಸೈನ್ಯವು ಸಿಕ್ಕಿಬಿದ್ದು ಚದರಿ ಹೋಗಿರುವದೆಂದು ಜರ್ಮನರ ಪ್ರಕಟಣೆಯಲ್ಲಿರುವದು ಸುಳ್ಳೆಂದು ಇಂಗ್ಲಾಂಡು ಪ್ರಕಟಿಸಿದೆ.

ಜರ್ಮನ್ ಸೇನೆ ಮುಂದೊತ್ತಿತು

ಸ್ಟೆಂಕ್ಜೆರ್ ಎಂಬುದನ್ನು ಸ್ವಾಧೀನಪಡಿಸಿಕೊಂಡು ಜರ್ಮನ್ ಸೇನೆಯು ಟ್ರೊಂಡ್ಹೆಮಿನ ಉತ್ತರ ಭಾಗದ ಮುಖ್ಯ ದ್ವಾರಗಳನ್ನು ವಶಪಡಿಸಿಕೊಂಡಿರುವದೆಂದು ಜರ್ಮನ್ ವಾರ್ತೆಯಿಂದ ತಿಳಿದು ಬರುತ್ತದೆ. ಸ್ಟೆಂಕ್ಜರಿನಲ್ಲಿ ಬ್ರಿಟಿಷ್ ಸೇನಾವಿಭಾಗವೊಂದಕ್ಕೂ ಜರ್ಮನ್ ಸೇನೆಗೂ ಭೀಕರ ಕಾಳಗ ನಡೆಯುತ್ತಲೂ ಇದೆ. ರೋಯರೋಸ್ ಎಂಬ ನಗರವನ್ನು ಸ್ವಾಧೀನ ಪಡಿಸಿಕೊಂಡು ಜರ್ಮನರು ಮಿತ್ರರಾಷ್ಟ್ರಗಳ ಕೈಯಲ್ಲಿರುವ ಸ್ಟೋಯರೆನ್ ರೀಲ್ವೇ ಜಂಕ್ಷನಿನ ಕಡೆಗೆ ಮುಂದೊತ್ತುತ್ತಿದ್ದಾರೆ. ಒಸ್ಲೋದ ಉತ್ತರಗಡೆಯಲ್ಲಿ ಜರ್ಮನಿಯ ಸರ್ವ ಸನ್ನದ್ಧ ಸೇನೆಯು ವಿರೋಧೀ ಸೈನ್ಯಗಳನ್ನು ಸೋಲಿಸಿ ಮುಂದೊತ್ತುತ್ತಿರುವದೆಂದೂ, ಕೆಲವೆಡೆಗಳಲ್ಲಿ ಮಿತ್ರರಾಷ್ಟ್ರಗಳ ಸೇನೆ ಹಿಂದೆಗೆಯಲ್ಪಟ್ಟಿರುವದೆಂದೂ ಜರ್ಮನರ ಪ್ರಕಟಣೆ. ಮಿತ್ರರಾಷ್ಟ್ರಗಳ ಸಬ್‌ಮೆರಿನುಗಳೆರಡು ನಾಶವಾದವು. ನ್ಯಾಂಗರಾಕ್ ಬಂದರವನ್ನು ಪ್ರವೇಶಿಸುವಾಗ ಕಡೆದ ಫ್ರೆಂಚ್ ಡಿಸ್ಟ್ರೋಯರುಗಳೊಡನೆ ಹೋರಾಡಿ ಅವುಗಳನ್ನು ಹಿಂದಕ್ಕಟ್ಟಲಾಗಿದೆ. ನಾರ್ವೆಯ ಸಮುದ್ರದಲ್ಲಿರುವ ಮಿತ್ರರಾಷ್ಟ್ರಗಳ ಹಡಗುಗಳ ಮೇಲೆ ಭೀಕರ ವಿಮಾನ ಧಾಳಿ ನಡೆಸಿದೆವೆಂದು ಜರ್ಮನ್ ಪ್ರಕಟಣೆಯಲ್ಲಿದೆ.

ಆರೋಪ ನಿರಾಕರಣೆ

ಹೀಡೇ ನಗರದ ಮೇಲೆ ಬ್ರಿಟಿಷ್ ವಿಮಾನಗಳು ಎಪ್ರಿಲ್ 23ರಲ್ಲಿ ಬೋಂಬು ಸುರಿಸಿದವೆಂದೂ ಅಲ್ಲಿ ಸೈನ್ಯಗಳೇನೂ ಇರಲಿಲ್ಲವಾದ್ದರಿಂದ ರಕ್ಷಣಾಹೀನರಾಗಿದ್ದ ಜನರ ಮೇಲೆ ಬ್ರಿಟಿಷರು ಬೋಂಬು ಸುರಿಸಿದರೆಂದೂ ಜರ್ಮನ್ ಪ್ರಕಟಣೆಯಲ್ಲಿತ್ತು. ಬ್ರಿಟನಿನ ವಿಮಾನ ಮಂತ್ರಿಗಳು ಈ ಆರೋಪವನ್ನು ಅಲ್ಲಗಳೆದು, ಜರ್ಮನಿಯ ಸುರಕ್ಷಿತ ವಿಮಾನ ನಿಲ್ದಾಣಗಳ

ಲ್ಲೊಂದಾದ ಸೈಲ್ಟ್‌ನ ಮೇಲೆ ಮಾತ್ರ ಬೋಂಬು ಧಾಳಿ ನಡೆಸಲಾಗಿತ್ತು, ಎಂದು ಪ್ರಕಟಿಸಿದ್ದಾರೆ. ಆದರೆ ಮಾರ್ಚ್ 17ರಲ್ಲಿ ಓರ್ಕ್‌ನೇಸ್ ನಗರದ ಮೇಲೆ ಜರ್ಮನರು ವಿಮಾನಧಾಳಿ ನಡೆಸಿ ನಿಶ್ಶಸ್ತ್ರ ನಾಗರಿಕರನ್ನು ಹತಮಾಡಿದ್ದಾರೆಂದು ಆ ಪ್ರಕಟಣೆಯಲ್ಲಿದೆ. ಸ್ಕಾವೆಂಜರಿನ ಮೇಲೆ ಬ್ರಿಟಿಷರ ವಿಮಾನಧಾಳಿ ನಡೆಯಿತು. ಅಲ್ಲಿ ಪೂರಿದ್ದ ಜರ್ಮನಿ ವಿಮಾನಗಳಿಗೂ ಬೆಂಕಿಹತ್ತಿತು.

ಆರ್. ಎ. ಎಫ್. ದಳದ ಜಯಶೀಲ ಧಾಳಿ

ಬ್ರಿಟಿಷರ ಆರ್. ಎ. ಎಫ್ ದಳದ ಫೈಟರ್ ವಿಮಾನಗಳು ನೋರ್ವೆಯಲ್ಲಿ ಸುರಕ್ಷಿತವಾಗಿ ಬಂದಿಳಿದಿರುವುದರಿಂದ ಜರ್ಮನ್ ವಿಮಾನಧಾಳಿಯನ್ನು ತಡೆಗಟ್ಟಲು ಸಾಧ್ಯವಾಗುವದೆಂದು ನಂಬಲಾಗಿದೆ. ತಾ. 25ರಲ್ಲಿ ರಾತ್ರಿಹಗಲು ಬ್ರಿಟಿಷ್ ವಿಮಾನ ದಳಗಳು ನಾರ್ವೆ ಮತ್ತು ಡೆನ್ಮಾರ್ಕಿನಲ್ಲಿರುವ ವಿರೋಧಿ ನಿಲ್ದಾಣಗಳ ಮೇಲೆ ಭೀಕರ ಧಾಳಿ ನಡೆಸಿರುವವು ಓಸ್ಲೋ ಫ್ಯೋರ್ಡಿನ ಎಣ್ಣೆಬಾವಿಗಳ ಮೇಲೆ ಎಡೆಬಿಡದೆ ಬೋಂಬು ಸುರಿಸಿ ಬೆಂಕಿ ಹಿಡಿಸಲಾಗಿದೆ ಸ್ಟಾವೆಂಜರಿನ ಸೀಪ್ಲೇನ್ ನಿಲ್ದಾಣದ ಮೇಲೂ ಅದರ ಈಶಾನ್ಯಗಡೆಯಲ್ಲಿದ್ದ ನಾಲ್ಕು ದೊಡ್ಡ ಹಡಗುಗಳ ಮೇಲೂ ಬೋಂಬು ಸುರಿಸಲಾಯಿತು. ಜರ್ಮನಿಯ ಒಂದು ಆಕಾಶಬೋಟು ಧ್ವಂಸವಾಗಿದೆ. ಉತ್ತರ ಸಮುದ್ರದಲ್ಲಿ ಒಂದು ವಿಮಾನವನ್ನು ಹೊಡೆದುರುಳಿಸಲಾಯಿತಲ್ಲದೆ ಎರಡು ಆಕಾಶಬೋಟುಗಳನ್ನು ಜಖಂಗೊಳಿಸಲಾಯಿತು. ಈ ಯುದ್ಧದಲ್ಲಿ ಬ್ರಿಟಿಷರ 5 ವಿಮಾನಗಳು ಕಾಣೆಯಾಗಿವೆ. ಜರ್ಮನರ ಆರು ವಿಮಾನಗಳು ನೆಲಕ್ಕುರುಳಿವೆ. ಧಾಳಿಯ ದೆಸೆಯಿಂದ ಕೆಲವು ಬ್ರಿಟಿಷ್ ವಿಮಾನಗಳು ಹಾಳಾಗಿವೆ ಸ್ಟಾವೆಂಜರ್ ಮತ್ತು ಓಸ್ಲೊಫ್ಯೋರ್ಡ್ ಧಕ್ಕೆಯ ಬಳಿಯಿದ್ದ ಜರ್ಮನ್ ಸಪ್ಲೈ ಹಡಗುಗಳ ಮೇಲೂ ಧಾಳಿ ನಡೆಯಿತು. ಹತ್ತು ದೊಡ್ಡ ಸಪ್ಲೈ ಹಡಗುಗಳಿದ್ದುವೆಂದೂ ಹೊಡೆತದ ಪರಿಣಾಮವೇನೆಂಬುದು ಸರಿತೋರದಿದ್ದ ದೆಸೆಯಿಂದ ಗೊತ್ತಾಗಲಿಲ್ಲವೆಂದೂ 5,000 ಟನ್ನೇಜಿನ ಹಡಗುಗಳು ವಿನಾಶಕಾರೀ ಹೊಡೆತ ತಿಂದಿರಬೇಕೆಂದೂ ತಿಳಿದುಬರುತ್ತದೆ.

ರೋಯಿರೋಸ್ ನಗರದಿಂದ ಪಲಾಯನ

ರೋಯಿರೋಸ್ ನಗರವನ್ನು ಮಿಂಚಿನ ವೇಗದಿಂದ ವಶಪಡಿಸಿಕೊಂಡ ಜರ್ಮನ್ ಸೇನೆಯು ನೋರ್ವೇ ಸೈನ್ಯವು ನಡೆಸಬಹುದಾದ ಆಕಸ್ಮಿಕ ಧಾಳಿಯ ಭಯದಿಂದ ಅದನ್ನು ಬಿಟ್ಟು 30 ಮೈಲು ಹಿಂದೆ ಸರಿದಿರುವದು. ಪೂರ್ವ ನೋರ್ವೆಯಲ್ಲಿ ಹಲವು ಕ್ಷೇತ್ರಗಳಲ್ಲಿ ನೋರ್ವೆ ಸೈನಿಕರು ತಡೆಗಟ್ಟಿರುವರು. ಇನ್ನೂ ಆ ಭಾಗದ ಒಟ್ಟಾ ಎಂಬಲ್ಲೇ ಬ್ರಿಟಿಷ್ ಸೇನೆಯಿದೆ. ಟ್ರೋಂಡ್ಜೆಮಿನಲ್ಲಿರುವ ಜರ್ಮನರ ಹೊರ ಸಂಬಂಧವನ್ನು ಬೇರ್ಪಡಿಸುವ ಸಲುವಾಗಿ ಸುತ್ತಲಿನ ಸಂಕ ಮೊದಲಾದುವನ್ನು ನೋರ್ವೆ ಸೈನಿಕರು ಕಡಿದು ಹಾಕಿದ್ದಾರೆ. ದಕ್ಷಿಣ ನೋರ್ವೆಯಲ್ಲಿದ್ದ ಬ್ರಿಟಿಷ್ ಸೇನೆಯು ವಿಮಾನ, ಟಾಂಕಿ ಮೊದಲಾದುವುಗಳ ಬೆಂಬಲವುಳ್ಳ ಸನ್ನದ್ಧವಾದ ಪ್ರಬಲ ಜರ್ಮನಿ ಸೈನ್ಯವನ್ನು ಡೊಂಬಾಸ್ ಎಂಬಲ್ಲಿ ಇದಿರಿಸಬೇಕಾಗಿ ಬಂದಿದೆ. ಆದ್ದರಿಂದ ಅಲ್ಲಿಂದ ಕೆಲ ಮಟ್ಟಿಗೆ ಹಿಂದೆಗೆಯಬೇಕಾಗುವದೆಂದು ಬ್ರಿಟಿಷ್ ಯುದ್ಧ ಕಚೇರಿಯು ಪ್ರಕಟಣೆಯಲ್ಲಿದೆ.

ಹಿಂದೀ ಸೈನ್ಯಾಧಿಕಾರಿಗಳ ಉಪಯುಕ್ತ ಸಹಾಯ

ಡೊಂಬಾಸ್ ಪ್ರಾಂತ್ಯದ ಒಟ್ಟೋವಿನಲ್ಲಿ ಬ್ರಿಟಿಷರ ಮೇಲೆ ಬಿದ್ದ ಜರ್ಮನ್ ಸೇನೆ ವಿಪರೀತ ನಷ್ಟ ಹೊಂದಿ ಹಿಂದೆಗೆದಿದೆ. ನಾಮ್ಸಸ್ ರಣ ಕ್ಷೇತ್ರವೀಗ ಬ್ರಿಟಿಷರ ಹತೋಟಿಯಲ್ಲಿದೆ. ಉಭಯ ಪಕ್ಷೀಯರ ಕಾವಲುಗಾರ ದಳಗಳೊಳಗೆ ಹೋರಾಟ ನಡೆದು ಹಲವು ಜರ್ಮನರು ಸೆರೆಸಿಕ್ಕಿರುವರು, ಬೆರ್ಗ್ಹಾಲಿನ ಎಲ್ಲಾ ಕಡೆಗಳಿಂದಲೂ ಮುಂದೊತ್ತಿ ಬರುತ್ತಿರುವ ಜರ್ಮನರಿಗಿದಿರಾಗಿ ನೋರ್ವೆಯವರು ವೋಸ್ ನಗರದ ಬಳಿಯಲ್ಲಿ ನಿಂತಿರುವರು. ಹಾರ್ಡಂಗರ್ ಎಂಬಲ್ಲಿ ಜರ್ಮನಿ ಸೇನೆ ನಿಂತಿದೆ. ಬೆರ್ಗನಿನ ಪೂರ್ವ ಭಾಗದಲ್ಲಿ ನೋರ್ವೆಯರು ವಿರೋಧಿ ಸೈನ್ಯದೊಡನೆ ಹೋರಾಡುತ್ತಿರುವರೆಂದು ತಿಳಿದು ಬರುತ್ತದೆ, ನಾರ್ವೆ ರಣಕ್ಷೇತ್ರಗಳಲ್ಲಿ ಮಿತ್ರ ರಾಷ್ಟ್ರಗಳವರು ಹಿಂದೀ ಸೈನಿಕ ಆಫೀಸರರ ಪೂರ್ಣ ಸಲಹೆ, ಮತ್ತು ಸಹಾಯಗಳ ಉಪಯೋಗ ಪಡೆಯುತ್ತಿದ್ದಾರೆ. ಇಂತಹ ತರಗತಿಯ ಯುದ್ಧದಲ್ಲಿ ಹಿಂದೀಯರಿಗೆ ವಿಶೇಷ ಅನುಭವವಿದೆಯಂತೆ ಕ್ವಾಮ್ ಕ್ಷೇತ್ರದಲ್ಲಿ ಧಾಳಿ ನಡೆಸಿ ವಿಪರೀತ ನಷ್ಟ ಹೊಂದಿ ಜರ್ಮನರು ಹಿಂದೆಗೆದರಂತೆ. ಆಲ್‌ಹೇಮರ್ ಎಂಬಲ್ಲಿಗೆ ಧಾಳಿಯಿಟ್ಟಾಗ ಇದಿರಾದ ಬ್ರಿಟಿಷ್ ಸೇನೆಯನ್ನು ಸೋಲಿಸಿ ಡೊಂಬಾಸಿನ ಕಡೆಗೆ ಓಡಿಸಿದ್ದೇವೆಂದೂ ಬ್ರಿಟಿಷರ ಕಮಾಂಡರನೊಂದಿಗೆ 300 ಮಂದಿಯನ್ನು ಸೆರೆ ಹಿಡಿದಿರುವೆವೆಂದೂ ಜರ್ಮನ್ ಹೈಕಮಾಂಡಿನ ಪ್ರಕಟಣೆಯಲ್ಲಿದೆ. ಅವರೊಟ್ಟಿಗೆ ರಾಜಕೀಯ ಹಾಗೂ ಸೈನ್ಯ ಸಂಬಂಧದ ಹಲವು ಪ್ರಾಮುಖ್ಯ ದಾಖಲೆಗಳೂ ಜರ್ಮನರ ಸ್ವಾಧೀನವಾಗಿವೆಯಂತೆ.

ಜರ್ಮನಿಯ ಅಪಪ್ರಚಾರ

ನೋರ್ವೆ ಮತ್ತು ಜರ್ಮನಿಯ ಸೈನ್ಯವಿಹೀನ ನಗರಗಳ ಮೇಲೆ ಬ್ರಿಟಿಷರು ಬೋಂಬು ಹಾಕುತ್ತಿದ್ದಾರೆಂಬ ಪ್ರಚಾರ ಮಾಡಲು ಜರ್ಮನಿ ಪತ್ರಿಕೆಗಳಿಗೆ ಪ್ರಚಾರಾಧಿಕಾರಿಗಳ ಅಪ್ಪಣೆಯಾಗಿದೆಯಂತೆ. ಓಸ್ಲೋ ನಗರದ ಹೊರಗಿದ್ದ ವಿಮಾನ ನಿಲ್ದಾಣದ ಮೇಲೆ ನಡೆದ ಬೋಂಬು ಧಾಳಿಯನ್ನು 'ಓಸ್ಲೋವಿನ ನಿಶ್ಶಸ್ತ್ರ ಜನರ ಮೇಲೆ ಬ್ರಿಟಿಷ್ ಬೋಂಬು ಹಾಕಿತು' 'ಇದಕ್ಕೆ ತಕ್ಕ ಪ್ರತೀಕಾರವನ್ನು ಬೋಂಬಿಗೆ ಬೋಂಬನ್ನು ಜರ್ಮನಿಯೂ ಕೊಡುವದು' ಎಂದು ಅಲ್ಲಿಯ ಪತ್ರಿಕೆಗಳು ಗರ್ಜಿಸಲಾರಂಭಿಸಿವೆ. ಬ್ರಿಟನು ಈ ಆರೋಪವನ್ನು ಅಲ್ಲಗಳೆದಿದೆ.

ಸ್ವೀಡನಿಗೆ ಆಕ್ರಮಣ ಭಯ

ಜರ್ಮನಿಯು ಶೀಘ್ರದಲ್ಲಿಯೇ ಸ್ವೀಡನಿನ ಮೇಲೆ ಬೀಳ ಬಹುದೆಂಬ ಭಯವೆದ್ದಿದೆ. ಸ್ವೀಡನಿನ ಮೂಲಕ ನೋರ್ವೆಗೆ ಯುದ್ಧ ಸಾಧನಗಳನ್ನೊಯ್ಯಲು ಬಿಡುವಂತೆಯೂ, ಸ್ವೀಡಿಶ್ ನಿಲ್ದಾಣಗಳಲ್ಲಿ ನಾಜೀ ವಿಮಾನಗಳನ್ನು ನಿಲ್ಲಿಸಲು ಬಿಡುವಂತೆಯೂ ಜರ್ಮನ್ ಹೈಕಮಾಂಡಿಗೆ ಸ್ವೀಡಿಶ್ ಟೆಲಿಗ್ರಾಫ್ ಮತ್ತು ಟೆಲಿಫೋನುಗಳ ಸಂಬಂಧವಿರುವಂತೆಯೂ ನಾಜೀ ಅಧಿಕಾರಿಗಳು ಸ್ವೀಡಿಶ್ ಸರಕಾರವನ್ನು ಕೇಳಿಕೊಂಡಿರುವರೆಂದು ತಿಳಿದುಬರುತ್ತದೆ. ಜರ್ಮನಿಯ ಬಾಲ್ಟಿಕ್ ಕರಾವಳಿಯ ಬಂದರುಗಳಲ್ಲಿ ಒಂದೇ ಸವನೆ ಜರ್ಮನಿ ಸೇನೆಗಳ ಸಂಗ್ರಹವಾಗುತ್ತಿದೆ. ಮೆಮೆಲ್, ಡಾನ್ಜಿಗ್ ಮತ್ತು ಕೊಯಿನಿಗ್ಸ್ ಬರ್ಗನಲ್ಲಿ ನಾಜೀ ಸೇನೆಗಳು ತುಂಬಿಹೋಗಿವೆ. ಸೈನ್ಯಗಳು ಭರದಿಂದ ಸಾಗಿಸಲ್ಪಡುತ್ತಿವೆ. ಅವರೊಟ್ಟಿಗೆ ಐಸ್ ಬೇಧಕರೂ ಇರುವದರಿಂದ ಅನುಮಾನಕ್ಕೆ ಇನ್ನಷ್ಟು ಆಸ್ಪದ ದೊರೆತಿದೆ. ಸ್ವೀಡನಿಗೆ ಮೊದಲೇ ರಕ್ಷಣೆಯ ಆಶ್ವಾಸನೆಯಿತ್ತುದರಿಂದ ಮಿತ್ರರಾಷ್ಟ್ರಗಳು ಕೂಡಲೇ ಸ್ವೀಡನಿನ ಸಹಾಯಕ್ಕೆ ಹೋಗುವವೆಂದು ನಂಬಲಾಗಿದೆ.

ರಿಬ್ಬೆಂಟ್ರಾಪನ ಯುಕ್ತಿಯುಕ್ತ ಭಾಷಣ

ಬರ್ಲಿನ್ ಚಾನ್ಸೆಲರಿಯಲ್ಲಿ ಎಪ್ರಿಲ್ ತಾ. 27ರಲ್ಲಿ ಭಾಷಣವೀಯುತ್ತಾ ಜರ್ಮನಿಯ ವಿದೇಶೀ ಮಂತ್ರಿ ಹರ್. ವೋನ್ ರಿಬ್ಬೆಂಟ್ರಾಪನು ಹಲವು ಸಂಗತಿಗಳನ್ನು ಬೆಳಕಿಗೆ ಹಾಕಿರುವನು. ಯುದ್ಧಾರಂಭದಲ್ಲೇ ಜರ್ಮನಿಯ ಸಿಗ್‌ಫ್ರಿಡ್ ಕೋಟೆಯನ್ನು ಗೆಲ್ಲುವದಸಾಧ್ಯವೆಂದು ತಿಳಿದಿದ್ದ ಮಿತ್ರರಾಷ್ಟ್ರಗಳು ಪೋಲೆಂಡಿನ ಪತನದ ನಂತರ ರಣಕಣವಾಗಿ ಮಾರ್ಪಡಿಸಲು ಬೇರೆ ತಟಸ್ಥ ರಾಷ್ಟ್ರಗಳನ್ನು ಹುಡುಕುತ್ತಿದ್ದವೆಂದೂ ನಾರ್ವೆಯನ್ನಾಕ್ರಮಿಸಲು ಅವುಗಳು ದೀರ್ಘಕಾಲದಿಂದ ಹೊಂಚು ಹಾಕಿದ್ದವೆಂದೂ ಅವನ ಅಂಬೋಣ. ನೋರ್ವೆಯು ಆದಿಯಿಂದಲೂ ಮಿತ್ರರಾಷ್ಟ್ರಗಳ ಪಕ್ಷಪಾತಿಯಾಗಿತ್ತು ಎಂಬುದಕ್ಕೆ ನಮ್ಮಲ್ಲಿ ದಾಖಲೆಗಳಿವೆ. ದುರದೃಷ್ಟಕ್ಕೊಳಗಾದ ಕಳ್ಳ ಜನವರಿ ತಾ. 21ರ ಭಾಷಣದೊಡನೆ ಮಿ. ಚರ್ಚಿಲ್ಲರು ತಟಸ್ಥ ರಾಷ್ಟ್ರಗಳನ್ನು ಯುದ್ಧಕ್ಕೆಳೆಯುವ ಹಂಚಿಕೆಗಾರಂಭಿಸಿದರು. ಎಪ್ರಿಲ್ 8ರಲ್ಲಿ ನೋರ್ವೆ ಸಮುದ್ರದಲ್ಲಿ ಮೈನ್ ಚೆಲ್ಲಿದುದು ತಮ್ಮ ಸೈನ್ಯಗಳನ್ನು ನೋರ್ವೆಯೊಳಗೆ ಹೊಗಿಸುವ ಸಲುವಾಗಿ. ಎಪ್ರಿಲ್ 9ರಲ್ಲಿ ನೋರ್ವೆಯ ಬೆರ್ಗನ್, ಟ್ರೋಂಡ್ಜೆಮ್ ಮತ್ತು ಸ್ಟಾವೆಂಜರಿನಲ್ಲಿ ಇಳಿಯಲು ಬ್ರಿಟಿಷ್ ಸೇನೆ ಸಿದ್ಧವಾಗಿತ್ತು. ಆದರೆ ಸಮಯಕ್ಕೆ ಸರಿಯಾಗಿ 9ನೇ ಬೆಳಿಗ್ಗೆ ಜರ್ಮನಿ ತಡೆಗಟ್ಟಿದುದರಿಂದ ಆ ಹಂಚಿಕೆ ಮುರಿದುಬಿತ್ತು. ಮಾರ್ಚ್ ತಾ. 12ರಲ್ಲಿ ಪ್ಯಾರಿಸಿನಲ್ಲಿದ್ದ ಫಿನ್ನಿಶ್ ಮಂತ್ರಿಯು ತನ್ನ ಸರಕಾರಕ್ಕೆ ಬರೆದ ಪತ್ರದಲ್ಲಿ ಚರ್ಚಿಲ್ಲರೂ, ದಲಾದಿಯಾರರೂ ಮಿತ್ರರಾಷ್ಟ್ರಗಳ ಸೈನ್ಯವು ನೋರ್ವೆಗೆ ಹೊರಡಲು ಬಂದರವೊಂದರಲ್ಲಿ ಸಿದ್ಧವಾಗಿದೆ ಎಂದು ಆಶ್ವಾಸನೆಯಿತ್ತಿರುವರೆಂದು ಬರೆದಿದ್ದ ಸಂಗತಿ ನಮಗೆ ಗೊತ್ತಾಗಿದೆ. ರಶ್ಯಾ-ಫಿನ್ಲೆಂಡ್ ರಾಜಿಯನ್ನು ಮುರಿಯಲು ಕೊನೆಯ ಪ್ರಯತ್ನಕ್ಕಾಗಿ ಚರ್ಚಿಲ್ಲರು ತಾ. 11ರಲ್ಲಿ ಪ್ಯಾರಿಸಿಗೆ ಧಾವಿಸಿದ್ದರು. ನಾರ್ವಿಕ್ ಮತ್ತು ನಾರ್ವೆಯಲ್ಲಿ ನಮಗೆ ಸಿಕ್ಕಿರುವ ದಾಖಲೆಗಳಿಂದ ಬ್ರಿಟಿಷ್ ಗುಪ್ತ ಪೋಲೀಸರು ನೋರ್ವೆಯ ಪಶ್ಚಿಮ ಕರಾವಳಿಯಲ್ಲೆಲ್ಲಾ ಸೈನ್ಯ ನಿಲ್ಲಿಸಲಾಗುವ ಸ್ಥಳಗಳನ್ನು ಶೋಧಿಸುತ್ತಿದ್ದರೆಂದು ಗೊತ್ತಾಗುತ್ತದೆ. ನಾರ್ವೇ ಸರಕಾರವು ಗುಟ್ಟಿನಲ್ಲಿ ಈ ಸಂಚಿಕೆಗೆ ಪ್ರೋತ್ಸಾಹಕೊಡುತ್ತಿತ್ತು.

ಪತ್ರಿಕಾ ಪ್ರತಿನಿಧಿಗಳ ಪರಿಷತ್ತೊಂದರಲ್ಲಿ ಭಾಷಣವೀಯುವಾಗ ಮಿ. ಚರ್ಚಿಲ್ಲರು ನೋರ್ವೆ, ಸ್ವೀಡನ್, ಡೆನ್ಮಾರ್ಕುಗಳ ಮೇಲೆ ಉರಿಕಾರ ಅವುಗಳ ಕಬ್ಬಿಣ ಮೊದಲಾದುವು ಜರ್ಮನಿಗೆ ಹೋಗದಂತೆ ತಡೆಗಟ್ಟಿಬಿಡುವೆನೆಂದು ಗರ್ಜಿಸಿದ್ದರು. ಇದಕ್ಕೆ ಸುಲಭೋಪಾಯವೆಂದರೆ ಸ್ಕಾಂಡಿನೇವಿಯಾ ರಾಷ್ಟ್ರಗಳನ್ನು ಯುದ್ಧಕ್ಕೆಳೆದು ಅವು ಫಿನ್ಲೆಂಡಿನೊಡನೆ ಭುಜಕ್ಕೆ ಭುಜ ಕೊಟ್ಟು ಹೋರಾಡುವದೆಂದು ಅವರ ಸಂಕಲ್ಪವಿತ್ತು. ಈ ಹಂಚಿಕೆಗಳು ಮುರಿದು ಬಿದ್ದು ಈಗ ನಾರ್ವೆಯ ಎಲ್ಲಾ ಕಡೆಗಳಲ್ಲೂ ಜರ್ಮನರು ಬ್ರಿಟಿಷರನ್ನು ಹಿಂದಕ್ಕಟ್ಟುತ್ತಿದ್ದಾರೆ ಎಂಬುದೇ ರಿಬ್ಬೆಂಟ್ರಾಪನ ಭಾಷಣದ ಸಾರಾಂಶ. ಜರ್ಮನಿ ಆಕ್ರಮಣದ ಮೊದಲೇ ಬ್ರಿಟಿಷರು ನಾರ್ವೆಯಲ್ಲಿ ಕಾಲೂರುವುದಕ್ಕಾಗಿ ಮಾಡಿದ್ದ ಹಂಚಿಕೆಗಳ ವಿವರವಾದ ವರದಿಯೊಂದು ಜರ್ಮನಿಯ ಅಧಿಕಾರೀ ವಾರ್ತಾ ಪ್ರಚಾರಕ ಸಂಸ್ಥೆಯಿಂದ ಪ್ರಕಟಿಸಲ್ಪಟ್ಟಿದೆ.

THULUNAD BANK
OF SUPPLY AGENCY LIMITED.

Authorised & Issued Capital	...	Rs 1,00,000
Subscribed & Paid up Capital	....	Rs 31,340
Reserves & other Funds	...	Rs. 22,052

ವಿಶೇಷ ರಿಯಾಯಿತಿ

Rs. 1000

ತಾ. 30-6-1940ರ ಒಳಗೆ ರೂ. 1000 ಯಾ ಅದಕ್ಕಿಂತ ಮೇಲ್ಪಟ್ಟು ಠೇವು ಕೊಡುವವರಿಗೆ ಕೆಲವು ವಿಶೇಷ ರಿಯಾಯಿತಿಗಳು ಕೊಡಲ್ಪಡುವವು.

ಹೆಚ್ಚಿನ ಮಾಹಿತಿಗೆ ಬರೆಯಿರಿ:—

ಮೆನೇಜಿಂಗ್ ಡೈರೆಕ್ಟರ್

ತುಳುನಾಡ್ ಬೇಂಕ್

ಆಫ್ ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ.

Degrees: Books: Medicines.

Free H. L. M. S., H. M. B., H. M. D. etc Free Homeo-Ayur-Unani-Nature degrees by post also—Practioners also get soons Homeo Materiamedica, Rs. 3. Homeo Practice book Rs. 4. Insanity Cure Pills Rs. 10 Enclose 2 annas stamp:—

Principal, Indian Homeopathic Institute and Society (Govt Regd.)
P. O. MAHUVA, (Kathiawar Dt. India.

ಪೂರ್ವ ವೈಭವದ ದೇಶ—ನಾರ್ವೆ.

ಅಂದು ನರ್ತನವಾಡುತ್ತಿದ್ದ ರಾಜ್ಯ ಇಂದು ಹೊರಳಾಡುತ್ತಿದೆ!

ಒಂದು ದೇಶವೂ ಒಬ್ಬ ಮನುಷ್ಯನಂತೆಯೇ ಕಾಲಗತಿಗೊಳಗಾಗಬೇಕಾಗುತ್ತದೆ. ಚರಿತ್ರೆಯನ್ನವಲೋಕಿಸಿದಲ್ಲಿ, ವೈಭವವೆಂಬುದು ನಮ್ಮಲ್ಲಿಯ ಜಿಲ್ಲಾ ಬೋರ್ಡುಗಳ ಉಪಾಧ್ಯಾಯರಂತೆ ಆಗಾಗ ವರ್ಗಾಯಿಸಲ್ಪಟ್ಟುದನ್ನು ಕಾಣಬಹುದು. ನಿನ್ನೆ ಸಿರಿವಂತನೆನ್ನಿಸಿಕೊಂಡಿದ್ದವನು ಇಂದು ದಿವಾಳಿಗಿರಿಗೇರುತ್ತಾನೆ; ಒಂದು ಕಾಲದಲ್ಲಿ ವೈಭವ ಶರಧಿಯಲ್ಲೋಲಾಡುತ್ತಿದ್ದ ದೇಶಗಳು ಇಂದು ಘರ್ಷಣೆಯ ಹಾಲಾಹಲಕ್ಕೆ ತುತ್ತಾಗಿವೆ. ಕಾಲಗತಿಯು ಯಾರಾರಿಗೆ ಯಾವಾವುದನ್ನು ತರಬಲ್ಲುದೆಂದು ಊಹಿಸುವುದು ಕಷ್ಟ.

ಶಾಂತಿಯುಂಡ ದೇಶ

ದೃಷ್ಟಾಂತಕ್ಕಾಗಿ ನಾರ್ವೆಯನ್ನು ತೆಗೆದುಕೊಂಡರಾಯಿತು. ಅದಿಂದು ಇಂಗ್ಲೆಂಡ್, ಫ್ರಾನ್ಸ್, ಮತ್ತು ಜರ್ಮನಿಗಳ ಕಾಲ್ತುಳಿತಕ್ಕೆ ಸಿಕ್ಕಿದೆ. ತನ್ನ ಪ್ರಾಣದ ಪ್ರಶ್ನೆಗೆ ಉತ್ತರ ಕೊಡುವ ಒದ್ದಾಟದಲ್ಲಿದೆ. ಆದರೆ ಅದು ಹಿಂದಿನಿಂದಲೂ ಹೋರಾಟಕ್ಕೆ ವಿರಾಮವಿದ್ದ ಕ್ಷೇತ್ರವೆಂದು ಭಾವಿಸಬೇಡಿ. ಯಥಾರ್ಥವಾದರೆ, ನಾರ್ವೆಗೆ ಇಂದು ಒದಗಿರುವ ವಿಪತ್ತೆಂದರೆ, ದೀವಿಗೆಯಡಿಯಲ್ಲಿ ನಡೆಯುವ ತುಂಡುಫೋರಿ ಕಗ್ಗತ್ತಲೆಗೆ ಸಿಕ್ಕಿಕೊಂಡರೆ ಹೇಗೋ ಹಾಗೆ! ಈ ತನಕ ಇಂತಹ ಅವಘಡಕ್ಕೆ ಸಿಕ್ಕಿದ ಅನುಭವವು ನಾರ್ವೆಗಿಲ್ಲ. ನಾರ್ವೆಯ ವಾತಾವರಣವು ಅಲ್ಲಿಯವರನ್ನು ಯುದ್ಧಪ್ರಿಯ ಜನಾಂಗವಾಗಿ ಮಾಡಿದೆ. ಒಬ್ಬ ಮನುಷ್ಯನಲ್ಲಿ ಅವನು ಹುಟ್ಟಿ ಬೆಳೆದ ವಾತಾವರಣಕ್ಕನುಗುಣವಾದ ಸ್ವಭಾವವನ್ನು ಕಾಣಬಹುದು; ಅಂತೆಯೇ ಒಂದು ದೇಶದವರ ಸ್ವಭಾವವು ಅಲ್ಲಿಯ ವಾತಾವರಣ ಮತ್ತು ಹವಾಮಾನವನ್ನು ಹೊಂದಿಕೊಂಡಿದೆ. ಇಂಗ್ಲೆಂಡಿನವರು ಸೋಲರಿಯದ ಜನರು; ಅವರ ಅಸ್ತಿತ್ವವನ್ನು—ಮೂಲ ಭೂತ ಹಕ್ಕುಗಳನ್ನು—ಅಲ್ಲಗಳೆಯುವ ವಿಪತ್ತು ಅವರಿಗೆಂದೂ ಒದಗಿದುದಿಲ್ಲ. ಆದ್ದರಿಂದ ಅವರಲ್ಲಿ ಯುದ್ಧೋನ್ಮತ್ತತೆ ಕಡಿಮೆ. ಜರ್ಮನರೆಂದರೆ ಒಮ್ಮೆ ನಷ್ಟಕ್ಕೊಳಗಾದ ಜನರು. ಆದ್ದರಿಂದ ಅವರಲ್ಲಿ ಉದ್ವೇಗ ಅಧಿಕ. ಮರಿಗಳನ್ನು ಮಗ್ಗುಲಲ್ಲೇ ಇರಿಸಿಕೊಂಡಿರುವ ತಾಯಿಯಲ್ಲಿಲ್ಲದ ಒಂದು ಆತುರವು ಮರಿಯನ್ನಗಲಿದ ತಾಯಿಯಲ್ಲಿರುತ್ತದೆ. ನಾರ್ವೆಯು ಬಹುಕಾಲದಿಂದ ಶಾಂತಿಯನ್ನನುಭವಿಸುತ್ತಾ ಬಂದಿತ್ತು. ಕೆಲವು ಬಾರಿ ಪರರಮೇಲೆ ಪರಾಕ್ರಮತೋರುವ ಸಂದರ್ಭವದಕ್ಕೆ ಬಂದಿತ್ತೇ ಹೊರತು ಪ್ರಾಣಕ್ಕಾಗಿ ಪರಿತಪಿಸುವ ವಿಪತ್ತೊದಗಿರಲಿಲ್ಲ ಹೀಗಾಗಿ ನಾರ್ವೆಯ ಜನರು ಯುದ್ಧೋತ್ಸಾಹಿಗಳೇ ಇದ್ದರೂ ಯುದ್ಧಾಪೇಕ್ಷಿಗಳಾಗಿಲ್ಲ. ಅವರು ಶಾಂತವಾಗಿ ಸುಪ್ಪತ್ತಿಗೆಯಲ್ಲಿ ಪ್ರಾಣ ಬಿಡುವದನ್ನು ಅಪೇಕ್ಷಿಸುತ್ತಾರೆ. ಹೊರತು ಯುದ್ಧ ಕಣದಲ್ಲಿ ಹೊಂದುವ ವೀರ ಸ್ವರ್ಗವನ್ನು ಇಚ್ಛಿಸುವದಿಲ್ಲ.

ಮಧ್ಯ ಕಾಲದ ಮಹಾ ಸಾಹಸಿಗಳು

ಆದರೆ ಮಧ್ಯ ಕಾಲದಲ್ಲಿ ಅವರು ವಿದೇಶೀ ಭಯಂಕರರಾಗಿದ್ದರು. ಆಗಿನ ಕಾಲ ಚಕ್ರದ ಸುತ್ತಾಟದಲ್ಲಿ ನಾರ್ವೆಯು ಮೇಲ್ಭಾಗಕ್ಕೆತ್ತಲ್ಪಟ್ಟಿತ್ತು. ತಮ್ಮ ನೀಳವಾದ ಮತ್ತು ಅಗಲವಾದ ಕಪ್ಪು ಬೋಟುಗಳಲ್ಲಿ ಕುಳಿತುಕೊಂಡು ನಾರ್ವೆಯ ಜನರು ಸಾಹಸ ಪ್ರದರ್ಶನ ಮತ್ತು ವಿಜಯಕ್ಕಾಗಿ ಸಮುದ್ರ ಯಾತ್ರೆ ಹೊರಡುತ್ತಿದ್ದರು. "ದೇವರೇ! ಉತ್ತರದ ಜನರ ನಾವೆಗಳಿಂದ ನಮ್ಮನ್ನು ಕೆಳಗಿಳಿಸು!" ಎಂದು ಆ ಕಾಲದಲ್ಲಿ ಇಂಗ್ಲಿಷ್ ಕರಾವಳಿಯಲ್ಲಿನ ಚರ್ಚುಗಳಲ್ಲಿ ಪಾದ್ರಿಗಳು ಪ್ರಾರ್ಥನೆ ಮಾಡುತ್ತಿದ್ದರು.

ಆ ಅವಧಿಯಲ್ಲಿ ಅವರು ಮೂರು ಬಾರಿ ಪ್ಯಾರಿಸನ್ನು ಜಯಿಸಿದ್ದರು. ಅವರ ಕಪ್ಪು ಬೋಟುಗಳು ಅಟ್ಲಾಂಟಿಕ್ ಸಮುದ್ರದಲ್ಲಿ ವಿಜಯ ಯಾತ್ರೆ ನಡೆಸಿದ್ದವು. 'ಕೊಲಂಬಸ್' ನಿರ್ಮಾಣವಾಗುವ ಶತಮಾನಗಳಿಗೆ ಮೊದಲೇ ನಾರ್ವೆಯವರು ಅಮೇರಿಕಾ, ಐಸ್‌ಲೇಂಡ್, ಗ್ರೀನ್‌ಲೇಂಡ್‌ಗಳಲ್ಲಿ ತಮ್ಮ ವಸಾಹತುಗಳನ್ನ ಸ್ಥಾಪಿಸಿದ್ದರು. 'ವೈನ್‌ಲೇಂಡ್' ಎಂದು ಅದಕ್ಕೆ ಹೆಸರಿಟ್ಟಿದ್ದರು. ರಾಜಾ ಕೆನೂಟ್ ಮತ್ತು ರಾಜಾ ವಿಲಿಯಮ್, ಇಬ್ಬರೂ ಇಂಗ್ಲೆಂಡಿಗೆ ಹೋಗಿ ನಿಂತ ನಾರ್ವೆ ಜನರ ವಂಶಜರು. ಇಂದು ಬ್ರಿಟಿಷರ ವೈನ್ ಫಿಲೋಧಳ ದಳ, ಮೀನು ಹಿಡಿಯುವ ನಾವಿಕಪಳ ಮೊದಲಾದುವುಗಳಲ್ಲಿರುವ ಜನರಲ್ಲಿ ಒಂದು ಭಾಗ ಅಂದು ನಾರ್ವೆಯಿಂದಾಗಮಿಸಿದವರ ವಂಶಜರೇ ಆಗಿದ್ದಾರೆ

ಸಮುದ್ರ ಸಂಚಾರಿಗಳು

ನಾರ್ವೇ ಜನರು ಸಮುದ್ರ ಪ್ರೇಮಿಗಳು; ಸಮುದ್ರ ಸಂಚಾರಿಗಳು. ಅಲ್ಲಿಯ ಜನ ಸಂಖ್ಯೆಯಷ್ಟು ಹೆಚ್ಚಿನವರು ಒಂದಲ್ಲೊಂದು ವಿಧದ ನಾವಿಕರು; ಅಂಥವರ ಕೆಲಸದ ಸಮಯದ ಹೆಚ್ಚಿನ ಘಂಟೆಗಳು ಕಳೆದು ಹೋಗುವದು ಸಮುದ್ರದಲ್ಲಿ. ಹೀಗಾಗಿ, ನಾರ್ವೆಯವನ ಆಯುಷ್ಯಕ್ಕೂ ಸಮುದ್ರಕ್ಕೂ ಗಂಟು ಎಂಬಂತಾಗಿದೆ. ಸಣ್ಣ ರಾಷ್ಟ್ರವಾದರೂ ಲೋಕದ ಮುಖ್ಯ ಸಮುದ್ರ ಸಂಬಂಧೀ ರಾಷ್ಟ್ರಗಳ ಸಾಲಿಗೆ ನಾರ್ವೆಯೂ ಸೇರುತ್ತದೆ. ಹಲವು ದೊಡ್ಡ ರಾಷ್ಟ್ರಗಳಿಗಿರುವದಕ್ಕಿಂತ ದೊಡ್ಡದಾದ ವ್ಯಾಪಾರೀ ಯಾನಗಳು ನಾರ್ವೆಯೊಡನಿವೆ.

ವರುಷದ ಮೊದಲಿನ ಮೂರು ತಿಂಗಳುಗಳಲ್ಲಿ ನಾರ್ವೆಯ ಮೀನು ಬೇಟೆಗಾರರು ಆರ್ಕ್‌ಟಿಕ್ ಕ್ಷೇತ್ರಕ್ಕೆ ಸುಮಾರು ನೂರು ಮೈಲು ಉತ್ತರದ ಕಡೆಗೆ ಹೋಗಿ ಹೇರಳ ಮೀನು ಹಿಡಿಯುವ ವಾಡಿಕೆಯಿದೆ. ಹಾಗೆ ತಂದು ಉಪ್ಪು ಹಾಕಿ ಒಣಗಿಸಿದ ಮೀನೇ ನಾರ್ವೆಯಿಂದ ರಫ್ತಾಗುವ ಅತಿ ಹೆಚ್ಚಿನ ಮಾಲು. ಈ ಒಣ ಮೀನು ಹೆಚ್ಚಾಗಿ ರೋಮನ್ ಕೆಥೋಲಿಕ್ ರಾಷ್ಟ್ರಗಳಿಗೆ ರಫ್ತಾಗುತ್ತದೆ ಅಲ್ಲಿಯವರಿಗೆ ಶುಕ್ರವಾರ ಮತ್ತು ಹಬ್ಬಗಳಿಗೆ ಇದೊಂದು ಉತ್ತಮ ಫಲಾಹಾರ.

ಸಮುದ್ರದಷ್ಟು ಅನುಕೂಲವಾದ ಕಾರ್ಯಕ್ಷೇತ್ರವು ನಾರ್ವೆಯವರಿಗೆ ಬೇರೊಂದಿಲ್ಲ ಆ ಸಣ್ಣ ದೇಶದ ಮುಂಭಾಗದ ಹೆಚ್ಚಿನ ಪ್ರದೇಶದಲ್ಲಿ ಪರ್ವತಗಳ ಸಾಲು ಮುಚ್ಚಿಕೊಂಡಿದೆ. ದೇಶದ ಇಪ್ಪತ್ತನೇ ಒಂದಂಶಕ್ಕೂ ಕಡಿಮೆಯ ಕ್ಷೇತ್ರವು ಮಾತ್ರ ಬೇಸಾಯ ಯೋಗ್ಯವಾದುದು.

ಪ್ರಜಾಸತ್ತೆಗೊಳಪಟ್ಟ ದೊರೆ

ನಾರ್ವೆಯಲ್ಲಿ ಪುನಃ ರಾಜಸತ್ತೆಯ ಸ್ಥಾಪನೆಯಾದುದು ಇತ್ತೀಚೆಗೆ. ಈಗಿನ ರಾಜಾ ಹಾಕೋನರು, ಆರಡಿ ನಾಲ್ಕು ಇಂಚು ಎತ್ತರವಿರುವ ಘನದೇಹಿ ಇತ್ತೀಚೆಗೆ ಮೃತಪಟ್ಟ ಅವರ ಸಹಧರ್ಮಿಣಿ—ಪ್ರಿನ್ಸೆಸ್ ಮೋಡ್, ಇವರು ಏಳನೇ ಎಡ್ವರ್ಡರ ಮಗಳು. ನಾರ್ವೆಯು ರಾಜರಿಗೆ 15,000 ಪೌಂಡುಗಳಷ್ಟು ವರ್ಷಾಶನವಿದೆ. ಒಬ್ಬ ಅರಸನಿಗೆ ಇಷ್ಟು ಉತ್ಪತ್ತಿಯಿರುವದೊಂದು ವಿಶೇಷವಲ್ಲ. ವಿಶೇಷವೆಂದರೆ ರಾಜಾ ಹಾಕೋನರಲ್ಲಿರುವ ಪ್ರಜಾಸತ್ತಾ ಪ್ರೇಮ, ಅವರು ಪ್ರಜಾಸತ್ತೆಯ ಪ್ರತಿಬಿಂಬದಂತಿದ್ದಾರೆ ಹೊರತು, ಕಿರೀಟವಿಟ್ಟು ಪೂಜೆ ಕೈಕೊಳ್ಳುವ 'ರಾಜಾ ಪ್ರತ್ಯಕ್ಷ ದೇವತಾ' ಆಗಿಲ್ಲ. ನಾರ್ವೆಯ ಸಾಮಾನ್ಯ ನಾಗರಿಕನಂತೆ ರಾಜಾ ಹಾಕೋನರು, ರಾಜಧಾನಿಯಾದ ಓಸ್ಲೋ ಪಟ್ಟಣದಲ್ಲಿ ಬೇಕಾದುದನ್ನು ಕೊಂಡುಕೊಳ್ಳಲು ಸ್ವತಃ ಸಂಚರಿಸುವದಿದೆ. ಅರಸನ ಗುರುತು ಹತ್ತಿದ ಪಟ್ಟಣಿಗರು ತಮ್ಮ ಹೇಟನ್ನು ತೆಗೆದು ಮುಂದಕ್ಕೆ ಸಾಗುತ್ತಾರೆ. ನಾರ್ವೆಯ ಉದ್ಯೋಗ ಹೀನರಾದ 2,500,000 ಪ್ರಜೆಗಳಂತೆಯೇ ಅಲ್ಲಿಯ ರಾಜರೂ 'ಶಾಂತಿಯೇ ದೇವನ ವರ' ಎಂಬ ವಿಶ್ವಾಸದಲ್ಲಿದ್ದಾರೆ

ಆದರೆ ಮಾಡುವದೇನು? ನಾರ್ವೆಯು ಇಚ್ಛೆಗೆ ವಿರುದ್ಧವಾಗಿ ಇದಿಂದು ಬದುಕು—ಸಾವುಗಳ ನಡುವೆ ಸಿಕ್ಕಿ ಒದ್ದಾಡುತ್ತಿದೆ. ರಾಜರು ಮಂತ್ರಿಮಂಡಲದೊಡನೆ ಅರಮನೆಬಿಟ್ಟು ಕಾಡುಗುಡ್ಡಗಳಲ್ಲಿ ಅಲೆದಾಡುತ್ತಿದ್ದಾರೆ ನಾಜಿಗಳ ನಾರ್ವೇ ಯುದ್ಧದ ವೈಶಿಷ್ಟ್ಯವೆಂದರೆ ಮೊದಲಾಗಿ ರಾಜರನ್ನು ಕೊಂದುಬಿಡಬೇಕೆಂಬ ಪ್ರಯತ್ನ. ಆ ಪ್ರಯತ್ನದಲ್ಲಿ ಮೂರು ಬಾರಿ ಜರ್ಮನರು ಸಫಲರಾಗಲಿಲ್ಲ. ಈಗ ರಾಜರೂ ಮಂತ್ರಿಗಳೂ ಸುರಕ್ಷಿತ ನೆಲೆ ಸೇರಿದ್ದಾರೆಂಬ ವಾರ್ತೆಯಿದೆ. ಪ್ರಕೃತ ವಿಶ್ವ ಎಲ್ಲಾ ದೇಶಗಳಿಗಿಂತ ಮುಂದಾಗಿ ಅದೃಷ್ಟ ಪರೀಕ್ಷೆಗೊಳಗಾಗಿರುವ ದೇಶವೆಂದರೆ ಪೂರ್ವ ವೈಭವದ ಈ ಚಿಕ್ಕ ರಾಷ್ಟ್ರ ನಾರ್ವೆ!

ಕೆನರಾ ಬೇಂಕ್ ಲಿಮಿಟೆಡ್

ಲಿಮಿಟೆಡ್ ಜವಾಬ್ದಾರಿಯಿಂದ ಬ್ರಿಟಿಷ್ ಇಂಡಿಯದಲ್ಲಿ ಸ್ಥಾಪಿತವಾದುದು.

೧೯೩೯ನೇ ಇಸವಿ ದಶಂಬರ ೩೧ಕ್ಕೆ ಅಂತ್ಯವಾಗುವ ವರ್ಷದ ಆಯವ್ಯಯದ ಸಾರಾಂಶ ಪಟ್ಟಿ.

	ರೂ. ಆ. ಪೈ.
ಮೂಲಧನ	
ಕೊಟ್ಟಿದ್ದು	6,00,000-0-0
ರೈಟ್ ಆಫ್	3,91,342-0-0
ರಿಜರ್ವ ಫಂಡು	4,50,000-0-0
ಡಿಪೋಸಿಟ್	
ಕರೆಂಟ್, ಸೇವಿಂಗ್	
ಇತ್ಯಾದಿ	81,21,622-8-1
ಶೇರಿನವರಿಗೆ ಸಲ್ಲತಕ್ಕದ್ದು	ಇಲ್ಲ
ಇತರ	10,51,799-1-7
ಈ ವರ್ಷದ ಲಾಭ	55,003-0-6
ಒಟ್ಟು	1,00,69,766-10-2

	ರೂ. ಆ. ಪೈ.
ಕಟ್ಟಡ ಮತ್ತು ಸಾಮಾನು	
ಮೊದಲಾದುವುಗಳಿಗೆ ಸ್ಥಾಪಿತ	
ಮೂಲ ವ್ಯಯ	95,489-4-3
ವ್ಯಾಪಾರಿಗಳಿಗೆ ಎಡ್ವಾನ್ಸ್ ಕೊಟ್ಟದ್ದು	
ಬೆಲೆಬಾಳುವ	
ಸೆಕ್ಯೂರಿಟಿ	40,97,741-5-6
ಜಂಗಮ ಆಸ್ತಿ	
ಮೊದಲಾದುವುಗಳು	10,30,649-2-10
ಸೇವಿಂಗ	20,64,586-2-0
ವಿವಿಧ	9,82,093-10-4
ನಗದು	17,99,207-1-3
ಒಟ್ಟು	1,00,69,766-10-2

ನಾಟಕದಲ್ಲಿ

ಕಾಲದ ಸ್ಫೂರ್ತಿಯು ಮೂರ್ತಿಮತ್ತಾಗಿ ತೋರಬೇಕು.

ಆ ಸ್ಫೂರ್ತಿಯಿಂದ ವಾಚಕರೂ ಪ್ರೇಕ್ಷಕರೂ ಜಾಗೃತರಾಗಬೇಕು

ಅಂತಹ ನಾಟಕವೇ

ದೇಶಭಕ್ತ

ಕಾಂಗ್ರೆಸ್ ಹೋರಾಟದ ತ್ಯಾಗ ಸಂಕಷ್ಟಗಳನ್ನೂ ಅದನ್ನು ತಡೆಗಟ್ಟಲು ಅಧಿಕಾರಿ ವರ್ಗವು ಹೂಡುವ ಕುತಂತ್ರಗಳನ್ನೂ ಕಣ್ಣಮುಂದಿರಿಸಿ ಸಮತಾವಾದವನ್ನು ಪ್ರತಿಪಾದಿಸಿ, ನವಜಾಗೃತಿಯನ್ನು ಮಾಡುವ ನವೀನ ಸಾಮಾಜಿಕ ನಾಟಕ.

ವಿಶೇಷವಾಗಿ ಆಶ್ರಿತ ಸಂಸ್ಥಾನಗಳಲ್ಲಿ ಇಂದು ನಡೆಯುತ್ತಿರುವ ಸ್ವಾತಂತ್ರ್ಯ ಸಂಗ್ರಾಮದ ನೈಜ ಚಿತ್ರ. **ಪ್ರತಿಯೊಬ್ಬರೂ ಓದತಕ್ಕ ನವೀನ ಪುಸ್ತಕ.**

ಲೇಖಕರು—ಕೆ. ಕೆ. ಶೆಟ್ಟಿ. ಬೆಲೆ: ೦—೧೨—೦

11 ಆಣೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಲಾಗುವುದು.

ನವಯುಗ ಆಫೀಸು, ಉಡುಪಿ.

ನನ್ನ ವಾಮ ಪಂಥ

(ಲೇಖಕರು: ಶ್ರೀ ಆನಂದಪ್ರಿಯ.)
(ಅನುವಾದಕರು: S. L. ಸುಬ್ರಹ್ಮಣ್ಯಂ, ಹರಿಹರ.)

ವ್ಯಂಗ್ಯ ಬರಹ—

ನನಗೆ ಕಾಂಗ್ರೆಸಿನ ವಿಚಾರದಲ್ಲಿ ಇಷ್ಟೊಂದು ಅಭಿರುಚಿ ಇದ್ದರೂ, ವಾಮ ಪಂಥ, ದಕ್ಷಿಣ ಪಂಥವೇನೆಂಬುದೇ ನನಗೆ ತಿಳಿದಿರುವುದಿಲ್ಲ 'ರೈಟಿಸ್ಟ್ಸ್' ಮತ್ತು 'ಲೆಫ್ಟಿಸ್ಟ್ಸ್' ಎಂಬ ಶಬ್ದಗಳನ್ನೇ ನಾನು ಕೇಳಿರಲಿಲ್ಲ. ಆದರೆ ಇತ್ತೀಚೆಗೆ ವಾಮ ಪಂಥಗಳ ಮುಖಂಡರ ಭಾಷಣಗಳನ್ನೂ ಪತ್ರಿಕೆಗಳಲ್ಲಿನ ಅವರ ಪ್ರಕಟನೆಗಳನ್ನೂ ನೋಡುತ್ತಿದ್ದೇನೆ. ನಾನು ತಿಳಿದಿರುವುದು ಸರಿಯೋ ತಪ್ಪೋ ಅಂತೂ ನನ್ನ ಅಭಿಪ್ರಾಯದಲ್ಲಿ Leftists ಅಥವಾ ಎಡ ಪಕ್ಷದವರೆಂದರೆ, ಒಪ್ಪಂದಮಾಡಿಕೊಳ್ಳಲು ಸಿದ್ಧರಾಗಿರದೆ, ಯಾವಾಗಲೂ ಕಾದಾಡುತ್ತಿರುವವರೇ-ಕಾದಾಡದಿದ್ದರೂ, ಕಾದಾಟದ ಮಾತನ್ನಾದರೂ ಆಡುತ್ತಿರುವವರು. ಇನ್ನೊಂದು ವಿಶೇಷವೇನೆಂದರೆ ಇವರು ಎಡ ಬದಿಯಲ್ಲೇ ಅಥವಾ ವಕ್ರ ಮಾರ್ಗದಲ್ಲೇ ಹೋಗುವುದು. ಈ ಗುಣಗಳಿಂದಲೇ ಇವರನ್ನು ಯಾರಾದರೂ ಗುರುತಿಸಬಹುದಾದುದು!

ಒಂದು ದಿನ ನಾನೊಬ್ಬ ವಾಮ ಪಂಥಿಗಳ ಭಾಷಣವನ್ನು ಕೇಳಿ ಹಿಂದಿರುಗುತ್ತಿದ್ದೆನು. ಇವರು ಇಷ್ಟೊಂದು ದೊಡ್ಡ ಮುಖಂಡರಾಗಲು ಇವರಲ್ಲಿರುವ ವಿಶೇಷ ಗುಣಗಳಾದರೂ ಏನು? ಎಂಬುದಾಗಿ ಯೋಚಿಸಲಾರಂಭಿಸಿದೆನು. "ಒಪ್ಪಂದ ಮಾಡಿಕೊಳ್ಳುವವರ ವಿಚಾರದಲ್ಲಿ ಎಚ್ಚರಿಕೆಯಿಂದಿರಿ, ಇಲ್ಲವಾದರೆ ರಸಾತಳಕ್ಕೆ ಹೋದೀರಿ. ಎಂದಿಗೂ ಬಲ ಮಾರ್ಗದಲ್ಲಿ ಹೋಗಬೇಡಿರಿ" ಇದೇ ತಾನೇ ಅವರು ಹೇಳುತ್ತಿದ್ದುದು! ನನಗೂ 'Leftists'ರ ಮುಖಂಡನಾಗುವುದರಲ್ಲಿ ಅಡ್ಡಿ ಏನು? ಪರೀಕ್ಷಿಸಿ ನೋಡೋಣ ಎಂದುಕೊಂಡೆನು. ಆಗ ನಾನು ಮಾರ್ಗದ ಮಧ್ಯ ಭಾಗದಲ್ಲಿ ಹೋಗುತ್ತಿದ್ದೆನು, ಈ ಯೋಚನೆಯುಂಟಾದ ಕೂಡಲೆ, ರಸ್ತೆಯ ಎಡಗಡೆ ಹೋಗಲಾರಂಭಿಸಿದೆನು (Foot Path ನಲ್ಲಿ) ಇನ್ನು ಮುಂದೆ ಎಂದಿಗೂ ರಸ್ತೆಯ ಬಲ ಭಾಗದಲ್ಲಿ ನಡೆಯುವುದೇ ಇಲ್ಲವೆಂದು ಶಪಥಮಾಡಿಬಿಟ್ಟೆನು. ಮತ್ತು ಟ್ರಾಂ ಮತ್ತು ಬಸ್ಸಿನಲ್ಲಿ ಸಹ ಬಲಗಡೆ ಸೀಟಿನಲ್ಲಿ ಕುಳಿತುಕೊಳ್ಳುವುದಿಲ್ಲವೆಂದು ಸಹ ಪ್ರತಿಜ್ಞೆ ಮಾಡಿದೆನು. ಅಷ್ಟೇ ಅಲ್ಲ, ಬಲಗೈ ಮತ್ತು ಬಲಗಾಲಿನಲ್ಲಿ ಸಹ ಕೆಲಸಮಾಡುವುದಿಲ್ಲವೆಂದು ನಿಶ್ಚಯಿಸಿದೆನು. ನನ್ನ ಶರೀರದ ಬಲ ಭಾಗವನ್ನು ಕಂಡು ಸಹ ನನಗೆ ಸಿಟ್ಟಾಗಿ ಆ ಭಾಗದ ಅಂಗಗಳೆಲ್ಲವೂ ನಿರುಪಯೋಗವೆಂಬ ಭಾವನೆಯುಂಟಾಯಿತು!

ಈ ರೀತಿ ಯೋಚಿಸುತ್ತ ಮನೆಗೆ ಬಂದೆನು. ಶ್ರೀಮತಿ ಲಲಿತಾ ದೇವಿಯು ಅಡಿಗೆ ಮಾಡಿ ನನಗಾಗಿ ಕಾಯುತ್ತ ಕುಳಿತಿದ್ದಳು. ನನ್ನನ್ನು ನೋಡಿ "ಇಷ್ಟು ಹೊತ್ತು ಎಲ್ಲಿಗೆ ಹೋಗಿದ್ದಿರಿ." ಎಂದು ಕೇಳಿದಳು.

"ಎಲ್ಲಿಯೂ ಇಲ್ಲ, ಯಾವುದೋ ಒಂದು ಸಭೆಗೆ ಹೋಗಿದ್ದೆ ಅಷ್ಟೆ"

"ಈ ಹಾಳು ಸಭೆಗಳಿಗೆ ಹೋಗುವ ರೋಗವೆಷ್ಟು ದಿನದಿಂದ ಅಂಟಿಕೊಂಡಿದೆ ನಿಮಗೆ? Leader ಆಗಬೇಕೆಂಬ ಖಯಾಲೇ"

"ಏ, ಏನು ಹೇಳ್ತಿದ್ದೀಯೆ, ಸಭೆಗಳಿಗೆ ಹೋಗುವುದು ರೋಗವೇ? ಈಗಿನ ಕಾಲದಲ್ಲಂತೂ, ಸಭೆಗಳಿಗೆ ಹೋಗಿ, ಭಾಷಣ ಕೇಳುವುದು ಗುಲ್ಲೆಬ್ಬಿಸುವುದು-ಇವೆಲ್ಲವೂ ಪ್ರತಿಯೊಬ್ಬ ನಾಗರಿಕನ ಕರ್ತವ್ಯವೇ ಅಲ್ಲವೇ? ಆ ರೀತಿ ಮಾಡದೆ ಹೋದರೆ ಬಲ ಪಕ್ಷದವರ ಆಲೋಚನೆಗಳೆಲ್ಲವೂ ಸಫಲವಾಗೇ ಬಿಟ್ಟಾವು! ನಂತರ ಒಪ್ಪಂದವಾಗಿ ಬಿಡುವುದು. ಒಪ್ಪಂದದಿಂದ ದೇಶವು ಪರಾಧೀನವಾಗುವುದು! ಈ ಪರಾಧೀನತೆಯ ಕಳಂಕವು ದೇಶದೊಡನೆ ವಿಶ್ವಾಸ ಘಾತುಕ ರೀತಿಯಿಂದ ವರ್ತಿಸುತ್ತಿರುವ 'ಹೈಕಮಾಂಡಿ'ನವರ ಹಣೆಗೆ ಹಚ್ಚಿಕೊಳ್ಳುವುದು"

"ಇದೇನು ನೀವು ಹೇಳುತ್ತಿರುವುದಿವತ್ತು? ಭಂಗಿಗಿಂಗಿ ಏನಾದರೂ ಸ್ವಲ್ಪ-?"

ನಾನು ಈ ರೀತಿ ಉತ್ತರವಿತ್ತೆನು-"ನನ್ನ ಮಾತನ್ನು ಪೂರ್ತಿಯಾಗಿ ಕೇಳುವ ಮೊದಲೇ ಮಾತಿಗಾರಂಭಿಸಿ ಬಿಟ್ಟೆಯಲ್ಲಪ್ಪ! ಲೀಡರ್ ಆಗುವಿರೆಂದು ಕೇಳಿದೆಯಲ್ಲವೇ? ಹೌದು ಆಗೇ ಆಗುವೆನು. ನೀನು ನನಗೆ ಏನೇ ಹೇಳು, ನಿನ್ನ ವಚನ ಬಾಣಗಳಿಂದ ನನ್ನ ಹೃದಯವನ್ನು ಚುಚ್ಚಿದರೂ ಸರಿಯೆ, ನಾನಂತೂ ನನ್ನ ನಿಶ್ಚಯವನ್ನು ಬದಲಾಯಿಸುವುದೇ ಇಲ್ಲ ನಿನ್ನಂತಹ ಪತಿ ಪರಾಯಣೆಯೂ ಪತಿ ಹಿತರತೆಯೂ ಆದ ಕುಲ ಲಲನೆಯರ ವಚನ ಬಾಣಗಳ ಪರಿಣಾಮವಾಗಿಯೇ ಒಬ್ಬ ಕ್ಷುದ್ರ ಬಾಲಕನು ಮಹಾಕವಿಯೂ ಭಕ್ತ ತುಳಸೀದಾಸನೂ ಆದನು. ಕಾಳಿದಾಸನಿಗೆ ಅಮರ ಕವಿಯೆಂಬ ಬಿರುದು ಬಂದಿತು. ಸೂರದಾಸರು ಭಕ್ತಿ ಪಥದ ಪಥಿಕರಾದರು. ಅದೇ ರೀತಿ ನಿನ್ನ ಈ ಟೀಕೆಯೂ ಸಹ ನಾನು ಸದ್ಯದಲ್ಲೇ ದೊಡ್ಡ ಮುಖಂಡನಾಗುವುದಕ್ಕೆ ಸಹಾಯ ಮಾಡೇ ಮಾಡುವುದೆಂಬ ದೃಢ ವಿಶ್ವಾಸವು ನನಗಿದೆ."

ನಾನು ಏನು ಹೇಳುತ್ತಿರುವೆನೆಂಬುದು ಲಲಿತೆಗೆ ತಿಳಿಯಲೇ ಇಲ್ಲ. ಸುಮ್ಮನೆ ಚರ್ಚಿಸುವುದರಿಂದ ಪ್ರಯೋಜನವಿಲ್ಲವೆಂದರಿತು "ಒಳ್ಳೆಯದು ಹಾಗೇ ಆಗಲಿ, ಈಶ್ವರನು ನಿಮ್ಮನ್ನು ದೊಡ್ಡ ಮುಖಂಡರನ್ನಾಗೇ ಮಾಡಲಿ. ನೀವು ಮುಖಂಡರಾದಿರೆಂದರೆ, ನನಗಿಂತ ಸೌಭಾಗ್ಯಶಾಲಿನಿ ಯಾರಿರುವರು? ಸದ್ಯಕ್ಕೆ ಊಟಕ್ಕೇಳಿರಿ, ಅಡಿಗೆಯೆಲ್ಲ ಆರಿ ಹೋಗುತ್ತದೆ" ಎಂದಳು.

ಸರಿ, ನಾನು ಊಟಕ್ಕೆ ಕುಳಿತೆನು. ತಟ್ಟೆಯಲ್ಲಿ ಎಲ್ಲವನ್ನೂ ಬಡಿಸಲಾಗಿದ್ದಿತು. ನಾನು ಬಲಗೈಯನ್ನು ಮುಚ್ಚಿಟ್ಟುಕೊಂಡು ಎಡಗೈಯಿಂದಲೇ ಊಟ ಮಾಡಲಾರಂಭಿಸಿದೆನು. ನನ್ನ ಬಲಗೈಗೆ ಏನಾದರೂ ಅಪಾಯವುಂಟಾಗಿರಬಹುದೆಂದು, ಲಲಿತೆಗೆ ಹೆದರಿಕೆಯುಂಟಾಯಿತು, ಅದಕ್ಕೆ ಆಕೆಯು "ಇದೇನಿದು, ಎಡಗೈಯಿಂದೇಕೆ ಊಟ ಮಾಡುತ್ತಿರುವಿರಿ? ಬಲಗೈಗೇನಾಗಿದೆ? ಏನಾದರೂ ಗಾಯವಾಗಿದೆಯೇ?" ಎಂದು ಕೇಳಿದಳು.

ನಾನು ಸಿಟ್ಟಾಗಿ ಈ ರೀತಿ ಹೇಳಿದೆನು-"ಅಯ್ಯೋ, ಅದಕ್ಕೆ ಅಪಾಯವುಂಟಾದರೆ ಮತ್ತೂ ಒಳ್ಳೆಯದೇ ಆಯಿತು. ಕತ್ತರಿಸಿ ಕೆಳಗೆ ಬಿದ್ದರಂತೂ ಈ ಪಾಪಿಯ ಸಹವಾಸವೇ ತಪ್ಪಿದಂತಾಯಿತು ಅನ್ನು! ನಾನು ಇನ್ನೂ ಈ ಕೈಯಿಂದ ಊಟ ಮಾಡುವುದೇ ಇಲ್ಲ, ಎಡಗೈಯಿಂದಲೇ ಮಾಡುವುದು!"

"ಇದಿರಲಿ, ಬಲಗೈ ಮಾಡಿದ ಅಪರಾಧವಾದರೂ ಏನು? ನಿಮಗೆ ಅದರ ಮೇಲೇಕೆ ಇಷ್ಟು ಕೋಪ"?

"ಇದು ವಿಶ್ವಾಸಘಾತಮಾಡಿದೆ ಒಪ್ಪಂದಮಾಡಿಕೊಳ್ಳಲು ಸಿದ್ಧವಾಗಿದೆ."

"ಯಾರೊಡನೆ ವಿಶ್ವಾಸ ಘಾತ? ಒಪ್ಪಂದವ್ಯಾರೊಡನೆ?"

"ನನಗೆ ತಿಳಿದಿರುವುದಿಷ್ಟು- ಇದು ವಿಶ್ವಾಸ ಘಾತ ಮಾಡಿದೆ, ಒಪ್ಪಂದಮಾಡಿಕೊಳ್ಳಲು ಸಿದ್ಧವಾಗಿದೆ. ಅದರ ಹೊರತು ಇನ್ನೇನೂ ತಿಳಿಯದು. ನೀನೇನಾದರೂ ತಲೆ ಹರಟೆ ಮಾತುವಿಯಾದರೆ, ನಾನು ಗುಲ್ಲೆಬ್ಬಿಸಿ ಕಪ್ಪು ಧ್ವಜವನ್ನು ಪ್ರದರ್ಶಿಸುವೆನು. ಆಗಲೂ ಒಪ್ಪದಿದ್ದಲ್ಲಿ ನಿನ್ನ ಮೇಲೆ ಎಕ್ಕಡವನ್ನೆಸೆಯುವೆನು-ಹಿಂದಿನಿಂದ ನಿನ್ನ ಕ್ಷಮೆ ಯಾಚಿಸಿದರೂ ಸರಿಯೆ!"

ನನ್ನ ಈ ವಿಚಿತ್ರ ವರ್ತನೆಯನ್ನು ನೋಡಿ ಲಲಿತೆಯು ಮನಸ್ಸಿನಲ್ಲೇ "ಓ ಈಶ್ವರಾ, ಇವರಿಗೇನಾಗಿ ಹೋಯಿತು. ಹುಚ್ಚು ನಾಯಿಯೇನೂ ಕಡಿದಿಲ್ಲ ತಾನೇ" ಎಂದುಕೊಂಡಳು.

ಊಟವಾದ ನಂತರ ನಾನು ಮಂಚದ ಮೇಲೆ ಮಲಗಿಕೊಂಡೆನು. ಬಹಳ ಹೊತ್ತಿನ ವರೆಗೂ ನಿದ್ದೆ ಬರಲಿಲ್ಲವಾಗಿ ಹೊರಳಾಡುತ್ತಿದ್ದಂತೆ ನಿದ್ದೆ ಬಂದಿತು. ಆಗ ಒಂದು ಸ್ವಪ್ನವನ್ನು ಕಂಡೆನು- ನನ್ನ ದೇಹದ ಎಡ ಭಾಗವು ಮಧ್ಯದಲ್ಲಿ ಬೇರೆಯಾಗಿ ಹೋಗಿದೆ ನನ್ನ ಪ್ರಾರ್ಥನೆಯನ್ನು ಈಶ್ವರನು ಕೇಳಿ ನನ್ನನ್ನು ಒಬ್ಬ ಪಕ್ಕಾ 'Leftist' ಆಗಿ ಮಾಡಿದನಲ್ಲ ಎಂಬ ಸಂತೋಷವುಂಟಾಯಿತು. ನನಗೆ ಬೇಕಾಗಿದ್ದುದೂ ಅದೇ. ಇನ್ನು ನಾನು ಮನೆಯಲ್ಲಿರಬಾರದು. ಕೂಡಲೆ ಹೋಗಿ ದಕ್ಷಿಣ ಪಂಥಿಗಳನ್ನು ವಿರೋಧಿಸಿ, ನನ್ನ ವಾಮ ಪಂಥವನ್ನು ಪ್ರಚಾರ ಮಾಡಲು ನನ್ನ ಸರ್ವ ಶಕ್ತಿಯನ್ನು ವಿನಿಯೋಗಿಸಬೇಕೆಂದುಕೊಂಡೆನು.

ಸ್ವಲ್ಪ ಹೊತ್ತಿನಲ್ಲೇ ನಾನೊಂದು ವಿಂ-ಟ್ ಸಭೆಯಲ್ಲಿ ಭಾಷಣ ಮಾಡುತ್ತಿದ್ದೆನು. "ಬಂಧುಗಳೇ, ಇಷ್ಟು ಅಧಿಕ ಸಂಖ್ಯೆಯಲ್ಲಿ ನಿಮ್ಮನ್ನು ನೋಡಿ ನನಗೆ ಬಹಳ ಆನಂದವಾಗಿದೆ ದಕ್ಷಿಣ ಪಂಥಿಗಳು ಇಲ್ಲಿಗೆ ಬಂದು, ದೇಶದಲ್ಲಿ ಅವರಿಗೆಷ್ಟು ವಿರೋಧವಿದೆ ಎಂಬುದನ್ನು ನೋಡಲಿ. ಹೈಕಮಾಂಡಿನವರ ಕೃತ್ಯಗಳ ಕತೆಗಳನ್ನು ಇಲ್ಲಿಯೇ ಎಷ್ಟೋ ಸಾರಿ ಹೇಳಿರುವೆನು. ಅದನ್ನು ಪುನಃ ಹೇಳುವುದಿಲ್ಲ. ಈಗ ಮಾತಿನ ಕಾಲವಲ್ಲ, ಕೆಲಸದ ಕಾಲ. ನೀವೆಲ್ಲ ದಕ್ಷಿಣ ಪಂಥಿಗಳನ್ನು ತೀವ್ರವಾಗಿ ವಿರೋಧಿಸಿ, ಅವರು ಒಪ್ಪಂದಕ್ಕೆ ಬರದಂತೆ ಮಾಡಬೇಕು."

ಒಂದು ಧ್ವನಿ, "ಮಹಾಶಯರೇ, ದಯಮಾಡಿ ತಮ್ಮ ವಾಮ ಪಂಥವೇನೆಂಬುದನ್ನು ತಿಳಿಸಿ. ಅದರ ಅನುಯಾಯಿಗಳ್ಯಾರು ದಕ್ಷಿಣ ಪಂಥಿಗಳ್ಯಾರು, ಅವರು ಯಾರೊಡನೆ ಒಪ್ಪಂದ ಮಾಡಿಕೊಳ್ಳುವುದು?"

ಕೂಡಲೆ ನನ್ನ ಸಮರ್ಥಕರು ನಾಲ್ಕೂ ಕಡೆಯಿಂದಲೂ ಗುಲ್ಲೆಬ್ಬಿಸಿ, ಅವನ ಮೇಲೆ ಬಿದ್ದರು. ಆಗ ನಾನು ಅವರನ್ನು ಶಾಂತಗೊಳಿಸಿ "ಮಹಾಶಯರೇ, ನನಗದೊಂದೂ ತಿಳಿಯದು. ವಾಮ ಪಂಥಿಗಳೆಂದರೆ ದಕ್ಷಿಣ ಪಂಥಿಗಳ ವಿರೋಧವಾಗಿ ಕೆಲಸ ಮಾಡುವವರೆಂದರ್ಥ. ವಾಮ ಪಂಥಿಯು ಒಪ್ಪಂದ ಮಾಡಿಕೊಳ್ಳುವವನಲ್ಲ, ಜಗಳ ಮಾಡತಕ್ಕವನೇ. ಸುಮ್ಮನೆ ಕುಳಿತಿರತಕ್ಕವನಲ್ಲ, ಗಲಾಟೆ ಎಬ್ಬಿಸತಕ್ಕವನು. ಅವನು ಸೂಚನೆ ಸಲಹೆಗಳನ್ನು ಕೊಡದೆ, ಕಾರ್ಯಮಾಡುವನು; ಜಗಳದ ವಿನಹ ಅವನಿಗೆ ಇನ್ನೇನೂ ತಿಳಿಯದು. ಬಂಧುಗಳೇ, ಎಲ್ಲರೂ ನನ್ನ ಮಾತನ್ನು ಕೇಳಿ, ನನ್ನ ಸಂದೇಶವನ್ನು ಮನೆ ಮನೆಗೂ ಮುಟ್ಟಿಸಿ, ಇಂದಿನಿಂದಲೇ ಕಾದಾಟವನ್ನಾರಂಭಿಸಿರಿ!"

ಶ್ರೋತೃಗಳಲ್ಲೊಬ್ಬರು ಈ ರೀತಿ ಹೇಳಿದರು "ಯಾರ ಕೂಡ ಜಗಳವಾಡುವುದು?"

ನಾನು- "ಯಾರೊಡನೆ ಬೇಕಾದರೂ ಆಡಬಹುದು. ಯಾರೂ ದೊರೆಯದಿದ್ದಲ್ಲಿ ನಿಮ್ಮ ಹೆಂಡತಿಯರೊಡನೆ ಕಾದಾಡಿ; ನಿಮ್ಮ ಮಕ್ಕಳೊಡನೆ ಕಾದಿರಿ. ನಿಮ್ಮ ಸಹೋದರರೊಡನೆ ಜಗಳ ಮಾಡಿ; ನಿಮ್ಮ ನೆರೆಹೊರೆಯವರೊಡನೆ ಗುದ್ದಾಟ ಮಾಡಿ. [illegible]ನವರೊಡನೆ, ನಿಮ್ಮ ದೇಶದವರೊಡನೆ! ಸುಮ್ಮನೆ ಮಾತ್ರ ಇರಬೇಡಿ. ಎದುರಿನಲ್ಲಿ ಯಾರು ಬಂದರೂ ಅವರ ಜೊತೆಯಲ್ಲಿಯೇ ಕಾದಾಡಿ."

ನಾನು ಈ ರೀತಿ ಹೇಳುತ್ತಿದ್ದಂತೆಯೇ "ಇಂಕಿಲಾಬ್ ಜಿಂದಾಬಾದ್" (ಕ್ರಾಂತಿಯು ಅಮರವಾಗಲಿ) ಎಂದು ಘೋಷಿಸುತ್ತ ಸಭಿಕರು ಒಬ್ಬರ ಮೇಲೊಬ್ಬರು ಬೀಳಲಾರಂಭಿಸಿದರು. ಕೆಲವರ ತಲೆಯೊಡೆಯಿತು, ಕೆಲವರ ಮೂಗೇ ಮುರಿಯಿತು. ತಮ್ಮ ಪ್ರಾಣವನ್ನುಳಿಸಿಕೊಳ್ಳಲು ಓಡುತ್ತಿದ್ದವರು ಕೆಲವರು, ಪಂಚೆಯನ್ನು ಬಿಗಿ ಮಾಡಿ ಕಾದುತ್ತಿದ್ದವರು ಕೆಲವರು. ನಾನು ವೇದಿಕೆಯ ಮೇಲೆ ಕುಳಿತು ಕಣ್ಣಿಂದ ಸಂಚಲಿತವಾದ ಆಂದೋಲನದ ಈ ಸಫಲ ದೃಶ್ಯವನ್ನು ಕಂಡು, ಮನಸ್ಸಿನಲ್ಲೇ ನಗುತ್ತಿದ್ದೆನು. ಕಾಲೇಜಿನ ವಿದ್ಯಾರ್ಥಿಗಳ ಗುಂಪು ಬಂದು ನನ್ನ ಮೇಲೆ ಬಿದ್ದಿತು. "ಅಯ್ಯಯ್ಯೋ, ಇನ್ನೇನು ಗತಿ" ಎಂದು ಕಿರಚುತ್ತ ಕೆಳಗೆ ಬಿದ್ದು ಓಡಲಾರಂಭಿಸಿದೆನು.

ಇಷ್ಟರಲ್ಲಿ ಕಣ್ಣು ತೆರೆಯಿತು. ನೋಡಲು ಮಂಚದ ಕೆಳಗೆ ಬಿದ್ದಿದ್ದೇನೆ, ಪಕ್ಕದಲ್ಲೇ ಲಲಿತಳು ನಿಂತು ನನ್ನನ್ನು ಕಂಡು ಹಾಸ್ಯ ಮಾಡುತ್ತ ನಗುತಿದ್ದಾಳೆ!!!

ಸ್ಥಾಪನೆ: [illegible] 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೀಲ್ ಲೆಟರ್ [illegible] ಬೆಸ್ತು, ನೋಟೋಗ್ರಾಫ್ ಸೀಲು ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co., 18 Balmat Road, MANGALORE.

Approved firm by the Govt. of Mysore. Certified by the Agent of the Govt. of India in Ceylon

ಮೈಸೂರು ಪತ್ರ

(ನವಯುಗ ಬಾತ್ಮೀದಾರರಿಂದ)

ಮೈಸೂರು, ಮೇ 2.

ವಕೀಲ್ ಬಿ ವೆಂಕಟರಂಗಂ ಕೃಷ್ಣನ ಕೊಲೆಯ ಮುಕದ್ದಮೆಯು ಸ್ಪೆಶಲ್ ಮ್ಯಾ। ಶ್ರೀ. ಆರ್. ವಿ. ಲಕ್ಷ್ಮಣನವರ ಮುಂದೆ ಮುಂದುವರೆದು ಇನ್ನೂ ಕೆಲ ಸಾಕ್ಷಿಗಳು ಕೋರ್ಟ ರುಜುವಾತಿಗಾಗಿ ಸಾಕ್ಷಿ ಕೊಟ್ಟರು. ಈ ಮೊಕದ್ದಮೆಯಲ್ಲಿ ಅಪಾದಿತರಾದ ಶ್ರೀ. ಯುಸ್. ಕೆ. ವೆಂಕಟರಂಗೈಂಗಾರು ಒಂದು ಯುದ್ಧಕೈದಿಗೆ ಒಳಗಾಗಬೇಕಾಗಿ ಬಂತು. ಅವರ ... ವರ್ಷ ಬಾಲಕ ನಾರಾಯಣನೆಂಬುವವನು ಆಮ ಶ್ವಾಸದಿಂದ ಮೃತ್ಯುವಿಗೆ ಈಡಾದನು. ಇದು ... ವೆಂಕಟರಂಗರಿಗೆ ಬಹಳ ಹೊತ್ತಿದ ವೇಳೆ ತಿಳಿಯಿತು. ಶ್ರೀಯುತರು ಅಳತೊಡಗಿದರು. ಶ್ರೀಯುತರ ... ಮೃತಪಟ್ಟ ಬಾಲಕನನ್ನು ನೋಡಲು ಮನೆಗೆ ಹೋಗಲು ಅವಕಾಶವಾಗಲಿಲ್ಲವಾಗಿ, ಜೈಲಿನ ಅಧಿಕಾರಿಗಳ ಅಪ್ಪಣೆ ಮೇರೆ ಆ ಮೃತದೇಹವನ್ನು ಜೈಲು ಬಾಗಿಲಬಳಿ ತರಲು ಶ್ರೀಯುತರ ಕೋರಿಕೆ ... ದುಃಖವು ವರ್ಣನಾತೀತವಾಗಿದೆ. ಶ್ರೀಯುತರು ಈ ಮೃತ ದೇಹ ನೋಡಿ ನಂತರ ಮುಂದಿನ ಕಾರ್ಯಕ್ಕೆ ಅಪ್ಪಣೆಯಿತ್ತರು. ಮಾರನೆ ದಿನ ಶ್ರೀಯುತರನ್ನು ವಿಚಾರಣೆಗಾಗಿ ಕೋರ್ಟಿಗೆ ತಂದು ... ನಲ್ಲಿ ಕಳ್ಳಿಸಿದಾಗ ಶ್ರೀಯುತರ ತಂದೆಯವರು ಇವರನ್ನು ನೋಡಿ ಕಣ್ಣೀರಿಟ್ಟರುವುದನ್ನು ನಿಮ್ಮ ಪ್ರತಿನಿಧಿಗಳಿಗೆ ಗೊತ್ತಾಗಲು ಅವರು ಬಹಳ ಹೊತ್ತು ಯೋಚನೆಯಲ್ಲಿ ತೊಡಗಿದರು. ಈ ದೃಶ್ಯವು ಎಂಥ ... ಮನಕರಗಿಸುವಂತಿತ್ತು. ಈ ಮುಕದ್ದಮೆಯಲ್ಲಿ ಅಪಾದಿತ ಶ್ರೀ ವೆಂಕಟರಂಗೈಂಗಾರ್ ರ ವಕಾಲತ್ತು ವಹಿಸುವ ಶ್ರೀ. ಸಿ. ವಿ. ನರಸಿಂಹೈಂಗಾರು, ಪ್ರಾಸಿಕ್ಯೂಶನ್ ಪರ ಸಾಕ್ಷ್ಯವಿತ್ತು ಶ್ರೀ ... ರಂಗೈಂಗಾರು ಮದ್ರಾಸಿಗೆ ಪ್ರಯಾಣ ಮಾಡಿದ ವಿಷಯ ತಿಳಿಸಿದರು. ಮತ್ತೊಬ್ಬರು ಸಾಕ್ಷ್ಯವಿತ್ತು ಶ್ರೀ. ... ರೆಡ್ಡಿಗಳು ಬರೆಸಿದ ವಿಚಾರ ತಿಳಿಸಿದರು. ಮದ್ರಾಸ್‌ನ ಪ್ರಸಿದ್ಧ ವಕೀಲ್ ಶ್ರೀ. ಟಿ. ಆರ್. ವೆಂಕಟರಮಣ ಶಾಸ್ತ್ರಿಗಳು ಪ್ರಾಸಿಕ್ಯೂಶನ್ ಪರ ಸಾಕ್ಷ್ಯ ನೀಡುವವರು. ಇದು ವರೆಗೆ ಸುಮಾರು ...0 ಮಂದಿ ಸಾಕ್ಷ್ಯ ನುಡಿದಿರುತ್ತಾರೆ. ಮುಕದ್ದಮೆ ಮುಂದುವರಿಯುತ್ತಿದೆ.

ವಿಜಯನಗರದ ರಾಣಿಯವರು ಬೆಂಗಳೂರಿಗೆ ಬಂದಿರುತ್ತಾರೆ. ಕರ್ನಾಟಕ ಥಿಯಸಾಫಿಕಲ್ ಸಮ್ಮೇಳನದ 31ನೇ ಅಧಿವೇಶನವು ಮೈ. ಹೈ. ನಿವೃತ್ತ ಚೀಫ್ ಜ. ಕೆ. ಶಂಕರನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ತುಂಕೂರಿನಲ್ಲಿ ನಡೆಯಿತು. ಬೆಂಗಳೂರು ... ಚಾಮರಾಜ ಪೇಟೆಯಲ್ಲಿ ಎರಡು ಮೋಟಾರ್ ಬಂಡಿಗಳಿಗೆ ಡಿಕ್ಕಿ ಹೊಡೆದು ಅಪಘಾತ ನಡೆದು ಒಂದು ಮೋಟಾರ್ ಮೊಗಚಿಕೊಂಡು ಇಬ್ಬರಿಗೆ ಗಾಯಗಳಾಗಲು ಅವರನ್ನು ಆಸ್ಪತ್ರೆಗೆ ಚಿಕಿತ್ಸೆಗೆ ಸಾಗಿಸಲು ... ಗುಣಮುಖರಾಗುತ್ತಿದ್ದಾರೆ. ಮೈ. ರೈಲ್ವೇ ... ಪರಿಸ್ಥಿತಿಯನ್ನು ಉತ್ತಮಗೊಳಿಸಿ ... ಧಾರಣೆ ಮಾಡಲು ಲೇಬರ್ ಕಮಿಷನರ್ ಶ್ರೀ. ... ಎ. ಮೊದಲಿಯಾರ್ರು ಮೈಸೂರಿಗೆ ಬಂದು ... ಕೆಲಸಗಾರರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಬೆಂಗಳೂರು ಇಂಡಿಯನ್ ಇನ್ಸ್ಟಿಟ್ಯೂಟ್ ... ವೇಳೆ 8 ಹೊಸ ಅಪಾದನೆಗಳು ಬಂದಿವೆ.

ಯುವತಿ ಒಡವೆ ಆಸೆಗಾಗಿ ಹಾದಿಯಿಂದ ಕಳ್ಳಿಸಿಕೊಂಡು ಪ್ರಾಣಬಿಟ್ಟ ಒಂದು ಸ್ವಾರಸ್ಯ ಪ್ರಸಂಗ — ಮೈಸೂರಿಗೆ ಸ್ವಲ್ಪ ದೂರದಲ್ಲಿರುವ ... ಗ್ರಾಮದ ಊರಿನ ಬಳಿ ಮೊನ್ನೆ ಒಂದು ಸ್ವಾರಸ್ಯ ಪ್ರಸಂಗ ನಡೆದ ಸುದ್ದಿಯು ಇಲ್ಲಿಗೆ ಬಂದಿದೆ. ಆ ಊರಿನಲ್ಲಿ ವಾಸಮಾಡುತ್ತಿದ್ದಳೆಂದು ಹೇಳಲಾಗಿರುವ ... ವರ್ಷ ಯುವತಿಯು ಗಂಡನ ಮನೆಯಲ್ಲಿ ಜಗಳ ... ಕೊಂಡು ತಾಯಿಮನೆಗೆ ನಡೆದುಕೊಂಡು ಹೋಗುತ್ತಿರುವಾಗ್ಗೆ ಆಕೆಯ ಮೈಮೇಲಿದ್ದ ಚಿನ್ನದ ಒಡವೆಗಳನ್ನು ಅಪಹರಿಸಬೇಕೆಂದು ಆ ಯುವತಿಯು ಹೋಗುತ್ತಿದ್ದ ದಾರಿಯಲ್ಲೇ ಹೋಗುತ್ತಿದ್ದ ... ಗಾಡಿಯವನು ಆಕೆಯನ್ನು ಹಿಡಿದುಕೊಂಡು ಎತ್ತಿ ಗಾಡಿಯಲ್ಲಿ ಹಾಕಿ ... ಕಳ್ಳ ಹಾಗೆ ಬಾಯಿಗೆ ಬಟ್ಟೆ ... ಮೈಮೇಲಿದ್ದ ಒಡವೆ ಅಪಹರಿಸಿಕೊಂಡು ... ಯನ್ನು ಕೊಲ್ಲಬೇಕೆಂದು ದಾರಿಯ ಪಕ್ಕದಲ್ಲಿದ್ದ ಒಂದು ದೊಡ್ಡ ಕಲ್ಲುಬಂಡೆಯ ಮೈ ಮೇಲೆ ... ಹಾಕಿಕೊಂಡು ಆ ಬಂಡೆಯನ್ನು ಎತ್ತಿ

ಬೊಂಬಾಯಿ

(ನಮ್ಮ ಸ್ವಂತ ಬಾತ್ಮೀದಾರರಿಂದ)

ಬಿಲ್ಲವರ ಎಸೋಸಿಯೇಶನ್ ಮುಂಬಯಿ— ಈ ಕೆಳಗಿನ ಮಹನೀಯರನ್ನು ಬಿಲ್ಲವರ ಎಸೋಸಿಯೇಶನ 1940-41ರ ಕಾರ್ಯಕಾರಿ ಸಮಿತಿಯನ್ನಾಗಿ ಆರಿಸಲಾಗಿದೆ.

1. ಯಂ. ಆರ್. ಬಂಗೇರ್ (ಅಧ್ಯಕ್ಷ.) 2. ಕೆ. ವೆಂಕಪ್ಪ ಸುವರ್ಣ, (ಉಪಾಧ್ಯಕ್ಷ,) 3. ಕೃಷ್ಣಪ್ಪ ಡಿ. ಪೂಜಾರಿ (ಜನರಲ್ ಕಾರ್ಯದರ್ಶಿ,) 4. ಬಿ ಸಂಕಪ್ಪ ಅಮೀನ್ (ಉಪಕಾರ್ಯದರ್ಶಿ,) 5. ಬಾಬು ಎಸ್. ಅಮೀನ್ (ಕೋಶಾಧಿಕಾರಿ,) 6. ಯಂ. ಪಿ ... ಸನಿಲ್ (ಅಧ್ಯಕ್ಷ ವಿದ್ಯಾಸಮಿತಿ,) 7. ಕೆ. ರಾಮ ... (ಕಾರ್ಯದರ್ಶಿ ವಿದ್ಯಾಸಮಿತಿ,) 8. ವೈ. ಮಂಜಪ್ಪ ಕೋಟ್ಯಾನ್ (ಅಧ್ಯಕ್ಷ ಸರ್ವಸಾಧಾರಣ ಸಹಾಯ ಸಮಿತಿ,) 9. ತಿಮ್ಮಪ್ಪ ಎಸ್. ಕೋಟ್ಯಾನ್ (ಕಾರ್ಯದರ್ಶಿ,) 10. ಬಿ. ವಿ. ಕರ್ಕೇರ್ ಕಾರ್ 11. ಬಿ. ಕೆ. ಅಮೀನ್, 12. ಗೋವಿಂದ ಯು. ಸಾಲಿಯನ್, 13 ದಂ. ಅಪ್ಪಣ್ಣ, 14. ಬೊಗ್ರ ಪೂಜಾ, 15. ಮುತ್ತಪ್ಪ ಎನ್. ಸುವರ್ಣ, 16. ಸೀರಪ್ಪ ಡಿ. ಸುವರ್ಣ, 17. ಅಣ್ಣಪ್ಪ ಜೆ. ಸನಿಲ್, 18. ಗಂಗಯ ಸಿ ಕುಕ್ಯಾನ್, 19. ಎಸ್. ಕೆ. ಬೇಳರ್ ಕಾರ್ 20. ಬಿ ಯುಸ್. ಕಿರೋಡಿಯಾನ್, 21. ಕೆ. ಯಂ. ಕೋಟ್ಯಾನ್, 22. ಸೋಮಪ್ಪ ಡಿ. ಕೋಟ್ಯಾನ್, 23. ಸಿ. ರಾಮ ಐತಪ್ಪ, 24. ಬಿ. ಕೆ. ಕೋಟ್ಯಾನ್ 25. ತಿಮ್ಮಪ್ಪ ಸಿ. ಕುಕ್ಯಾನ್.

... ಲು ಹೋದಾಗ ಅದರಡಿಯಲ್ಲಿದ್ದ ಒಂದು ನಾಗರಹಾವು ಆ ಗಾಡಿಯವನನ್ನು ಕಚ್ಚಿತೆಂದು ಇದರಿಂದ ಪಿಶಾಚಿ ಅವನು ತಕ್ಷಣ ಮೃತನಾದನೆಂದೂ ನಂತರ ದಾರಿಯಲ್ಲಿ ಬರುತ್ತಿದ್ದವರು ಇದನ್ನು ಕಂಡು ಆ ಯುವತಿಯನ್ನು ಬಂಧನದಿಂದ ಬಿಡಿಸಿ ಇದನ್ನು ಪೋಲೀಸರಿಗೆ ತಿಳಿಸಲಾಯಿತೆಂದೂ ಹೇಳಲಾಗಿದೆ.

ಡಾ॥ ನಾಗೇಶ್ವರಯ್ಯರ ವರದಿ ರಾಜಕೀಯ ಕೈದಿಗಳಿಗೆ ಹಿಂಸೆಕೊಟ್ಟ ವಿಚಾರಣೆ—ಜೈಲುಗಳಲ್ಲಿದ್ದ ರಾಜಕೀಯ ಕೈದಿಗಳಿಗೆ ಪೋಲೀಸರು ಹಿಂಸೆ ಮಾಡಿದರೆಂದು ಆರೋಪಿಸಲಾಗಿದ್ದನ್ನು ವಿಚಾರಣೆ ನಡೆಸಲು ಮೈ॥ ಸರ್ಕಾರದವರಿಂದ ನೇಮಿತರಾಗಿದ್ದ ಡಾ॥ ನಾಗೇಶ್ವರಯ್ಯರವರು ಸಂಸ್ಥಾನದ ವಿವಿಧ ಊರುಗಳಿಗೆ ಹೋಗಿ ಇದನ್ನು ವಿಚಾರ ಮಾಡಿದ ಸುದ್ದಿ 'ನವಯುಗ'ದಲ್ಲಿ ಹಿಂದೆ ತಿಳಿಸಲಾಗಿತ್ತಷ್ಟೆ. ಈಗ ಈ ವಿಚಾರಣೆ ವರದಿ ಹೊರಬಿದ್ದಿದೆ. ಈ ವಿಚಾರಣೆಯಲ್ಲಿ ಸರ್ಕಾರದ ಪಕ್ಷದವರು ಸಾಕ್ಷ್ಯವಿತ್ತರೆಂದು ಕೈದಿಗಳು ಸಾಕ್ಷ್ಯವೀಯುವ ಅವಕಾಶ ತೋರಿಸಿದರಿಂದ ಚಿತ್ರಹಿಂಸೆಗಳು ನಡೆಯಲಿಲ್ಲವೆಂದೂ ಕೈದಿಗಳಿಗೆ ಸರ್ವಸೌಕರ್ಯವು ಸಮರ್ಪಕವಾಗಿದೆಂದೂ ಎಲ್ಲೋ ಕೆಲವು ಭಾಗಗಳಲ್ಲಿರುವ ತೊಂದರೆಯನ್ನು ಸರಿಪಡಿಸಲಾಗುತ್ತದೆಂದೂ ತಿಳಿಸಿ ಇನ್ನೂ ಅನೇಕ ಸಲಹೆಯ ವಿಷಯ ಅಡಗಿರುವ ದೊಡ್ಡ ವರದಿಯನ್ನು ಇಲ್ಲಿ ಬರೆಯಲು ಸ್ಥಳಸಂಕೋಚಕ್ಕೆ ವಿಷಾದ ಪಡುವೆವು. ಈ ವರದಿ ಬಗ್ಗೆ ಸರ್ಕಾರದವರು ಡಾ॥ ನಾಗೇಶ್ವರಯ್ಯರನ್ನು ವಂದಿಸಿರುತ್ತಾರೆ.

ವಿಶೇಷ ಸುದ್ದಿಗಳು—ಇಂಡಿಯನ್ ರೆಡ್ ಕ್ರಾಸ್ ಸಂಘ ಮೈಸೂರು ಶಾಖೆಯ ವಾರ್ಷಿಕ ಸಭೆಯು ದ್ವಿತೀಯ ಸಚಿವರಾದ ರಾಜಮಂತ್ರಪ್ರವೀಣ ಅನಂತರಾಮನ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಮುಂಡ್ಕೂರ್ ಕೋ ಆಪರೇಟಿವ್ ಸೊಸೈಟಿಯ ರಜತ ಮಹೋತ್ಸವವು ದ್ವಿತೀಯ ಸಚಿವರ ಅಧ್ಯಕ್ಷತೆಯಲ್ಲಿ ನಡೆಯಿತು. ಮದ್ರಾಸಿನ ಮಾಜಿ ಮಂತ್ರಿ ಡಾ॥ ಟಿ. ಯಸ್. ಯಸ್. ರಾಜನರು ಮೈಸೂರಿಗೆ ಬಂದಿದ್ದರು. ಕುರಂದವಾಡ ಜೂನಿಯರ್ ಮಹಾರಾಣಿಯವರು ಮೈಸೂರಿಗೆ ಬಂದು ಲಲಿತಮಹಲಿನಲ್ಲಿ ಬಿಡಾರ ಮಾಡಿರುತ್ತಾರೆ. ಬರಲಿರುವ ಸಾರ್ವಜನಿಕ ಚುನಾವಣೆ ಸಲುವಾಗಿ ಮೈ. ಕಾಂ. ಅಧ್ಯಕ್ಷರು ಇತರರೂ ಸಂಸ್ಥಾನದಾದ್ಯಂತ ಪ್ರಚಾರ ನಡಸುತ್ತಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದವರು ಈ ವರ್ಷ ನಡೆಸಿದ ವಿವಿಧ ಪರೀಕ್ಷೆಗಳಲ್ಲಿ ಹೆಚ್ಚು ಮಂದಿ ಸ್ತ್ರೀಯರು ಉತ್ತೀರ್ಣರಾಗಿರುವುದು ಮೈಸೂರಿಗೊಂದು ಹೆಮ್ಮೆ

ದಕ್ಷಿಣ ಕನ್ನಡ

ವಸಂತ ಸಾಹಿತ್ಯ ಉತ್ಸವ, ಮೂಡಬಿದ್ರೆ—ಮೂಡಬಿದ್ರೆ ಸಾರ್ವಜನಿಕ ಧರ್ಮಾರ್ಥ ವಾಚನಾಲಯದ ಹಾಗು ದಕ್ಷಿಣ ಕರ್ನಾಟಕ ಪ್ರಾಂತ ಸಮಿತಿಯ ಆಶ್ರಯದಲ್ಲಿ ಈ ಏಪ್ರಿಲು 30ರಿಂದ ಮೇ 2ರ ತನಕ ಸ್ಥಳೀಯ ಮೂಡಬಿದ್ರೆಯ ಬೋರ್ಡ ಹೈಯರ್ ಎಲಿಮೆಂಟರಿ ಶಾಲೆ ಕಾರ್ಯಕ್ರಮ ಏಪ್ರಿಲು 30ನೇ ಮಂಗಳವಾರ ಬೆಳಿಗ್ಗೆ-8 ಘಂಟೆಗೆ ಪ್ರಾರಂಭ ಉತ್ಸವ-ಸ್ವಾಗತ ಹಾಡುಗಳು ಉಪನ್ಯಾಸ "ಸಾಹಿತ್ಯದಲ್ಲಿ ವಿನಂಬಿಕೆ" ಶ್ರೀ. ಜಿ. ಪಿ. ರಾಜರತ್ನಂ- ಎಂ ಎ. ಇವರಿಂದ ಸಾಯಂ 6 ಘಂಟೆಗೆ ಉಪನ್ಯಾಸ-"ಚಲಚ್ಚಿತ್ರಗಳಿಂದ ಲಾಭನಷ್ಟಗಳು" ಶ್ರೀ. ಜಿ. ಆರ್. ರಂಗಸ್ವಾಮಿ, ಎಂ ಎ. ಇವರಿಂದ ಉಪನ್ಯಾಸ-"ಕನ್ನಡದ ಕೊಡಗೆಗೆ?" ಶ್ರೀ. ರಾಜಗೋಪಾಲಕೃಷ್ಣ ಬಿ. ಎಂ. ಶ್ರೀ ಕೆಂಚಯ್ಯನವರಿಂದ ವಾಚನ-"ನಾಟಕ ಎಂಬ ನಾಟಕ" (ಶ್ರೀ ಕಾರಂತರಿಂದ) ಮೇ 1ನೇ ಬುಧವಾರ ಬೆಳಿಗ್ಗೆ-8 ಘಂಟೆಗೆ ಉಪನ್ಯಾಸ-"ಸಮ್ಯಕ್ ಮುದ್ರಣ" ಶ್ರೀ. ಹುಳಿಯ ತಿಮ್ಮಪ್ಪಯ್ಯನವರಿಂದ ಉಪನ್ಯಾಸ-"ಹೊಸ ಜೀವನದ ದೃಷ್ಟಿ" ಶ್ರೀ. ಶಿವರಾಮ ಕಾರಂತರಿಂದ ಸಾಯಂ 6 ಘಂಟೆಗೆ ಉಪನ್ಯಾಸ-"ಕರ್ನಾಟಕ ಏಕೀಕರಣ" ಶ್ರೀ. ಕಡೆಂಗೋಡ್ಲು ಶಂಕರಭಟ್ಟರು ಉಪನ್ಯಾಸ-"ಕಾಳಿದಾಸನ ಅನ್ಯಪದಕೃತಿ" ಶ್ರೀ. ಶಿವರಾಮ ಶಾಸ್ತ್ರಿಗಳು, ಎಂ ಎ.-ಇವರಿಂದ ವಾಚನ "ಮಹಾಭಾರತದಿಂದ" ಶ್ರೀ. ಬಡಕ್ಕಿಲ ಶಂಕರನಾರಾಯಣ ರಾಯರಿಂದ ಮೇ 2ನೇ ಗುರುವಾರ ಬೆಳಿಗ್ಗೆ-8 ಘಂಟೆಗೆ ಉಪನ್ಯಾಸ- "ನಮ್ಮ ನಾಡಿಗೆ ಕೈಸರು ಕೊಟ್ಟ ಬದುಕು" ಶ್ರೀ ಜಿ. ಪಿ. ರಾಜರತ್ನಂರವರು, ಎಂ. ಎ. ಉಪನ್ಯಾಸ-"ಜನರೂ ಸಾಹಿತ್ಯದಿಂದ ಜನಗಳಿಗೆ ಲಾಭವಾಯಿತೇ?" ಶ್ರೀ ರಾಜಗೋಪಾಲಕೃಷ್ಣ ಬಿ. ಎಂ. ಶ್ರೀ ಕೆಂಚಯ್ಯನವರು, ಉಪಸಂಹಾರ ಅದೇ ದಿನ ಸಂಜೆ 6 ಘಂಟೆಗೆ ಮೂಡಬಿದ್ರೆ ಧರ್ಮಾರ್ಥ ವಾಚನಾಲಯದ ವರ್ಧಂತಿ ಉತ್ಸವವು ಶ್ರೀ. ಡಿ. ಎಂ ಶ್ರೀ ಕಂಠಯ್ಯನವರ ಅಧ್ಯಕ್ಷತೆಯಲ್ಲಿ ಜರಗುವುದು. ಈ ಯಾವತ್ತು ಕಾರ್ಯಕ್ರಮಗಳಿಗೆ ತಾವು ಇಷ್ಟಮಿತ್ರರೊಡಗೂಡಿ ಬರಬೇಕಾಗಿ ವಿನಂತಿ. ಶ್ರೀ ಹುಳಿಯ ತಿಮ್ಮಪ್ಪಯ್ಯನವರು, ಅಧ್ಯಕ್ಷರು ದ. ಕರ್ನಾಟಕ ಪ್ರಾಂತ ಸಮಿತಿ. ಸ್ವಾಗತ ಸಮಿತಿ, ಮೂಡಬಿದ್ರೆ.

ಬಂಟರ ಯಾನೆ ನಾಡವರ ಸಂಘ ಬೊಂಬಾಯಿ — ಮುಂಬಾಯಿಯಲ್ಲಿ ಸಿಡುಬು ರೋಗದಿಂದ ಆಸ್ಪತ್ರೆಯಲ್ಲಿ ಅನೇಕ ದಿವಸಗಳಿದ್ದು ಅನೇಕ ಇತರ ಕಷ್ಟಕ್ಕೀಡಾಗಿ ಅಲ್ಲಿ ಪೇಟಾರುತ್ತಿದ್ದ ಉಡುಪಿ ತಾಲೂಕು ಶಿರ್ವ ಗ್ರಾಮದ ಮಟ್ಟಾರು ನಡುಮನೆ ಮು. ರಾ. ಜೋಗಪ್ಪ ಹೆಗ್ಡೇರ ಅಳಿಯ ಮೈಂದ ಹೆಗ್ಡೆಯವರನ್ನು ಸಿದ್ದಿಯವರ ಅರ್ಜಿ ಮೇರೆಗೆ ಈ ಸಂಘದಿಂದ ರೂಪಾಯಿ 15|-ನ್ನು ಕೊಟ್ಟು ಊರಿಗೆ ಕಳುಹಿಸುವೆವು.

ದಿ ಪ್ರೋಟೆಸ್ಟ ಫ್ರೆಂಡ್ಸ್ ಯೂನಿಯನ್ ಬೊಂಬಾಯಿ— ಈ ಹೆಸರಿನ ಸಂಘವು ತಾರೀಕು 25-3-40ರಲ್ಲಿ ಮುಂಬೈ ನಗರದಲ್ಲಿ ಸ್ಥಾಪಿಸಲ್ಪಟ್ಟಿದೆ. ಬೇರೆ ವ್ಯಕ್ತಿಯಲ್ಲಿರುವವರು ಈ ಸಂಘದ ಮೆಂಬರರಾಗಬೇಕೆಂದು ಸಂಘದ ಕಾರ್ಯದರ್ಶಿ ಸೋಮಯ್ಯನವರು ವಿನಂತಿಸುತ್ತಾರೆ.

ನೀರ್ಚಾಲು— ಇದೇ ಕಳೆದ 27ನೇ ಶನಿವಾರ ಪೂರ್ವಾಹ್ನ ಘಂಟೆ 11ಕ್ಕೆ ನೀರ್ಚಾಲು ಸೆಂಟರಿನ ಉಪಾಧ್ಯಾಯರ ಸಂಘದ ಸಭೆಯು ನೀರ್ಚಾಲು ಬೋರ್ಡ ಶಾಲೆಯಲ್ಲಿ, ಕಾಸರಗೋಡ ರೇಂಜ್ ಶಾಲಾ ಡೆಪ್ಯುಟಿ ಇನ್ಸ್ಪೆಕ್ಟರರಾದ ಶ್ರೀ. ಬಿ. ವೆಂಕಟ್ರಮಣ ಬಿ ಎ. ಯಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಜರಗಿತು.

ಶಂಕರನಾರಾಯಣ—ಇಲ್ಲಿನ ಬೋರ್ಡ ಹಾಯರ್ ಎಲಿಮೆಂಟರಿ ಶಾಲೆಗೆ ನೂತನವಾಗಿ ಕಟ್ಟಿಸಿದ ಕಟ್ಟೋಣವನ್ನು ತೆರೆಯುವ ಸಮಾರಂಭವು ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರಾದ ಮಾನ್ಯ ಶ್ರೀ ಅರೂರು ಲಕ್ಷ್ಮೀನಾರಾಯಣ ರಾಯರ ದಿವ್ಯ ಹಸ್ತಗಳಿಂದಲೂ, ತಾಲೂಕು ದಿನಾಚರಣೆಯು ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಮಾನ್ಯ ಶ್ರೀ. ಕೆ. ವಿಟ್ಠಲ ಶೆಟ್ಟಿಯವರ ಅಧ್ಯಕ್ಷತೆಯಲ್ಲಿಯೂ ಕಳೆದ ತಾ. 19-4-40ಕ್ಕೆ ಬಹು ವಿಜೃಂಭಣೆಯಿಂದ ನಡೆದುವು.

ಸಾಯಂಕಾಲ ಘಂಟೆ 4ಕ್ಕೆ ಹೊಸ ಕಟ್ಟೋಣ ಪ್ರವೇಶೋತ್ಸವವು ನಡೆಯಿತು. ಬಳಿಕ ಮಾನ್ಯ ಶ್ರೀ. ಕೆ. ವಿಟ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಶಾಲಾ ವರದಿ ಓದಿದ ಬಳಿಕ, ಮಕ್ಕಳಿಗೆ ಬಹುಮಾನ ಸಮರ್ಪಣೆಗಳು ನಡೆದುವು. ಅಧ್ಯಕ್ಷರು ತಮ್ಮ ಸರಸವಾದ ಭಾಷಣದಲ್ಲಿ ಹಳ್ಳಿಯ ವಿದ್ಯಾಭಿವೃದ್ಧಿಯ ಕಾರ್ಯದಲ್ಲಿ ಉಪಾಧ್ಯಾಯರ ಹೊಣೆ ... ಗಳನ್ನು ತಿಳಿಸಿ ಹೇಳಿದರು. ವಿವಿಧ ವಿನೋದ ಪ್ರದರ್ಶನದೊಡನೆ ಕಾರ್ಯಕ್ರಮವು ಕೊನೆಗೊಂಡಿತು.

ರಾತ್ರಿ "ಬದರ್ಪಣೆ" ಅಲ್ಲದೆ "ರಾಯರ ಸೊಸೆ" ಎಂಬ ಸಾಮಾಜಿಕ ನಾಟಕವು ಅಭಿನಯಿಸಲ್ಪಟ್ಟಿತು.

2. ಸ್ಥಳೀಕ ಉಪಾಧ್ಯಾಯ ಕೂಟದ ಪ್ರಥಮ ವಾರ್ಷಿಕೋತ್ಸವವೂ ಕೆಲಸದಿಂದ ನಿವೃತ್ತರಾಗಲಿರುವ ಕುಂದಾಪುರ ರೇಂಜ ಶಾಲಾ ಡೆಪ್ಯುಟಿ ಇನ್ಸ್ಪೆಕ್ಟರರಾದ ಶ್ರೀ. ಕೆ. ಲಕ್ಷ್ಮಣ ಭಟ್ಟರನ್ನು ಬೀಳ್ಕೊಳ್ಳುವ ಸಮಾರಂಭವೂ ತಾ 20-4-1940ನೇ ಪೂರ್ವಾಹ್ನದಲ್ಲಿ ಸಂಘದ ಮುಖಾಂತರ ನಡೆಸಲ್ಪಟ್ಟವು. ಉಡುಪಿ ಸೆಂಟರ ಶ್ರೀ. ಕೃಷ್ಣ ಅನಂತರಾಯರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಸಂಘದ ಕಾರ್ಯದರ್ಶಿಗಳಾದ ಶ್ರೀ. ಕೆ. ಗಂಗಾಧರ ಐತಾಳರು, ಗತವರ್ಷಗಳಲ್ಲಿ ಜರಗಿದ ಕಾರ್ಯ ಕಲಾಪಗಳ ವಿವರ ಓದಿದ ಬಳಿಕ ಹಲವು ಉಪಾಧ್ಯಾಯರು ಮಾನ್ಯ ಶ್ರೀ ಕೆ. ಲಕ್ಷ್ಮಣ ಭಟ್ಟರು ತಮ್ಮ ಉದ್ಯೋಗದಿಂದ ನಿವೃತ್ತರಾಗಲಿರುವುದರಿಂದ, ತಮಗಾಗುವ ಬೇಸರವನ್ನು ವ್ಯಕ್ತ ಪಡಿಸಿ ಸಮಯೋಚಿತ ಭಾಷಣ ಮಾಡಿದರು. ತರುವಾಯ ಶ್ರೀ ಭಟ್ಟರು ತಮ್ಮ ಚಿಕ್ಕ ಭಾಷಣದಲ್ಲಿ ಉಪಾಧ್ಯಾಯರಿಗೆ ಯೋಗ್ಯ ಸಲಹೆಗಳನ್ನಿತ್ತು ಅಧ್ಯಕ್ಷರ ಭಾಷಣದೊಂದಿಗೆ ಕಾರ್ಯಕ್ರಮಗಳು ಕೊನೆಗೊಂಡವು.

ವಿದ್ಯೆಯ ದಾರಿ? ಅಥವಾ ವಿದ್ಯೆದ ತಾದಿ?

ತುಳುನಾಟಕ ಪ್ರದರ್ಶನ

ಈ ನಾಟಕವು ಮಂಗಳೂರು ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ಅಭಿನಯಿಸಲ್ಪಟ್ಟು ಬಹುಮಾನ ಪಡೆದಿದೆ; ಬಹಳ ಪ್ರಶಂಸೆಗೊಳಗಾಗಿದೆ.

ತಾ. 5-5-40ನೇ ಆದಿತ್ಯವಾರ ರಾತ್ರಿ 9-30ಕ್ಕೆ ಬಿಣಗುಡ್ಡೆ ಶ್ರೀ ದುರ್ಗಾ ಪರಮೇಶ್ವರೀ ಶಾಲೆಯ ಸಹಾಯಾರ್ಥವಾಗಿ ಕಟಪಾಡಿ ಶ್ರೀ ವೆಂಕಟರಮಣ ಸ್ವಾಮಿ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಮಂಗಳೂರಿನ "ತುಳುನಾಡ್ ಎಮೆಚೂರ್ಸ್" ಇವರಿಂದ ಅಭಿನಯಿಸಲ್ಪಡುವದು.

ಉಡುಪಿ ಮುನಿಸಿಪಲ್ ಚೆಯರ್‌ಮೇನರಾದ ಎಡ್ವೊಕೇಟ್

ಶ್ರೀ. ಅರೂರು ಲಕ್ಷ್ಮೀನಾರಾಯಣ ರಾವ್, ಬಿ. ಎ, ಬಿ ಎಲ್. ಇವರು ಅಧ್ಯಕ್ಷರಾಗಲೊಪ್ಪಿರುವರು.

ಎಲ್ಲರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of

The Canara Banking Corporation Limited.
(Incorporated in British India)
Estd: 19..

ಉಡುಪಿ, ಗುರುವಾರ ತಾ. ೨-೫-'೪೦

ಯುರೋಪು ಯುದ್ಧ ಮತ್ತು ಸೋವಿಯೆಟ್ ರಶ್ಯಾ

ಯುರೋಪು ಯುದ್ಧಕ್ಕೆ ಇಂದಿನ ರೂಪಕೊಡುವದರಲ್ಲಿ ಸೋವಿಯೆಟ್ ರಶ್ಯಾವು ವಹಿಸಿದ ಭಾಗವು ದೊಡ್ಡದು; ಕಷ್ಟನಷ್ಟಗಳಿಗೆದೆಗೊಟ್ಟು ಹೋರಾಡುತ್ತಿರುವ ಇಕ್ಕಡೆಯವರಿಗಿಂತಲೂ ಹೆಚ್ಚಾಗಿ ಈ ಯುದ್ಧಕ್ಕೆ ಇಂದಿನ ಬಣ್ಣ ಬರೆದುದು ರಶ್ಯ. ಆದರೆ ಯುದ್ಧ ಪ್ರೇರಣೆಯ ಅಪವಾದ ಅದರ ತಲೆಯ ಮೇಲೆ ಬೀಳುವಂತಿಲ್ಲ. ಆದಿಯಲ್ಲಿ ಕಾವೋರ್ಡವು ಕವಿಯುತ್ತಿದ್ದುದು ರಶ್ಯದ ಮೇಲೆ; ಅಲ್ಲಿಂದದ್ದಗುಳಿ ಮಾತ್ರ ಅದನ್ನು ಪಶ್ಚಿಮದೆಡೆಗೆ ಕೊಂಡುಹೋಯಿತು. ತಾವು ಹಾರೈಸಿದವರಲ್ಲೆಲ್ಲಾ ನ್ಯಾಯವಿದೆ ಎಂದು ಭಾವಿಸುವದು ಎಲ್ಲರ ಸ್ವಭಾವ; ನಿಜ್ಜವರ ಇಂತಹ ಹಾರೈಕೆಗಳನ್ನು ಯುದ್ಧಪೂರ್ವದಿಂದ ಈ ವರೆಗೆ ರಶ್ಯವು ಹಲವು ಬಾರಿ ನಿರರ್ಥಕಗೊಳಿಸಿದೆ-'ಅನ್ಯಾಯ'ಮಾಡಿದೆ. ಈ ಧೋರಣೆಯೇ ಪ್ರಕೃತ ಅದರ ರಕ್ಷಣಾಕವಚವೂ ಆಗಿದೆ.

ಯುದ್ಧಕಾಲದಲ್ಲಿ ರಾಷ್ಟ್ರಗಳ ಕ್ರಮಪ್ರಾಪ್ತ ರೀತಿನೀತಿಗಳ ಆಧಾರದಿಂದ ಭವಿಷ್ಯತ್ಕಾಲದ ಚಿತ್ರ ಬಿಡಿಸಲು ಸಾಧ್ಯವಿಲ್ಲ. ಹೋರಾಟಕ್ಕಿಳಿದವರ ಧ್ಯೇಯವು ಯುದ್ಧದಲ್ಲಿ ಗೆಲ್ಲಬೇಕೆಂಬುದೊಂದೇ. ಆ ಗುರಿ ಸಾಧಿಸುವದಕ್ಕಾಗಿ ಅವರು ಮಾಡಬಾರದ ವ್ಯಾಯಾಮಗಳನ್ನಾದರೂ ಮಾಡುವರು. ಇದು ಆಪದ್ಧರ್ಮ. ಆದರೆ ಈಗಿನ ಯುದ್ಧದಲ್ಲಿ ರಶ್ಯವಾಡಿದ ಆಟದಲ್ಲಿ ಮತ್ತೂ ನವೀನತೆಯಿದೆ.

ಯುದ್ಧ ಪೂರ್ವದಲ್ಲಿ ಇಂಗ್ಲಾಂಡು, ಫ್ರಾನ್ಸಿನೊಂದಿಗೆ ರಶ್ಯಾ ಸೇರುವ ಸಂಭವ ಕಂಡುಬಂತು. ಆ ಸಂಬಂಧದ ಚರ್ಚೆಯು ತಿಂಗಳುಗಳು ತುಂಬಿದರೂ ಸಫಲವಾಗದೆ ಹೋಯಿತು ದೊಡ್ಡಯೋಜನೆಗೆ ದೀರ್ಘಕಾಲ ಬೇಕೆಂಬ ಮಿತ್ರರಾಷ್ಟ್ರಗಳ ನೀತಿಯನ್ನು ಹುಸಿಮಾಡಿ ಥಟ್ಟನೆ ಜರ್ಮನಿ-ರಶ್ಯಾಗಳು ಒಪ್ಪಂದಕ್ಕೆ ಬಂದವು. ಈ ಮಿತ್ರತ್ವದ ಸಂತೋಷಾರ್ಥವಾಗಿ ಔತಣವು ಜತೆಯಲ್ಲಿಯೇ ನಡೆಯಿತು. ಪೋಲೆಂಡ್ ಎಂಬೆಲೆಗೆ ಇಬ್ಬರು ಮಿತ್ರರು ಎರಡು ಕಡೆಯಲ್ಲಿ ಕ್ಕಪಾಕ ಸಹಭೋಜನ ಧರ್ಮಾನುಸಾರ ಉಂಡರು. ಆ ಬಳಿಕ ಫಿನ್ಲೆಂಡು ಯುದ್ಧ ಪ್ರಾರಂಭದ ವರೆಗೆ ರಶ್ಯಾ ಮಾಡುತ್ತಿದ್ದುದು ಮಿತ್ರರಾಷ್ಟ್ರಗಳ ಟೀಕೆಯೊಂದನ್ನೇ. ಜರ್ಮನಿಯೊಡನೆ ಕೊಟ್ಟುಪಡೆಯುವ ಸಂಬಂಧವಷ್ಟೇ ಹೊರತು ಭುಜಕ್ಕೆ ಭುಜಕೊಡುವ ಲಕ್ಷಣಗಳನ್ನೇನೂ ರಶ್ಯಾ ತೋರಿಸಿಲ್ಲ. ಆದರೆ ಮಿತ್ರರಾಷ್ಟ್ರಗಳು ರಶ್ಯವನ್ನು ಕೆರಳಿಸುವದಕ್ಕೆ ಕಾರಣಗಳಿವೆ

ಈಗ ಪುನಃ ರಶ್ಯಾ-ಇಂಗ್ಲಾಂಡು ವ್ಯಾಪಾರ ಸಂಬಂಧ ಚರ್ಚೆಗಾರಂಭವಾಗಿರುವುದೆಂದು ಕೇಳುತ್ತೇವೆ. ಲಂಡನಿನಲ್ಲಿ ರಶ್ಯನ್ ರಾಯಭಾರಿಯಾಗಿರುವ ಎಮ್ ಮೈಸ್ಕಿ ಮತ್ತು ಇಂಗ್ಲಂಡಿನ ವಿದೇಶ ಮಂತ್ರಿ ಲೋರ್ಡ್ ಹೆಲಿಫೇಕ್ಸರು ಆ ಕುರಿತು ಚರ್ಚೆನಡಿಸಿರುವರು. ಇನ್ನೊಂದುಹೊಸ ಅಧ್ಯಾಯದಕ್ಕೆ ಶೀರಿಕೆ ಬರೆದಿರುವರು. ಯುದ್ಧಕಾಲದಲ್ಲಿ ವ್ಯಾಪಾರೀ ಸಂಬಂಧವನ್ನು ಪ್ರತ್ಯೇಕ ಜಾತಿಯ ಒಂದು ಪ್ರಶ್ನೆಯೆಂ ಭಾವಿಸಲಾಗುವದಿಲ್ಲ ಯುದ್ಧದಲ್ಲಿ ನೈತಿಕಶಕ್ತಿ ಪೋಷಣೆಯದಾದರೆ ವ್ಯಾಪಾರೀ ಪೀಡೆಯು ಎರಡನೆಯದು. ಆದ್ದರಿಂದ ಕೊನೆಯ ಪರಿಣಾಮವನ್ನೂ ಹಿಸುವುದು ಸುಲಭವಲ್ಲವಾದರೂ ಇಂಗ್ಲಂಡು ರಶ್ಯಾಗಳ ನಡುವೆ ಪ್ರಾರಂಭವಾದ ಚರ್ಚೆಯು ಬಹಳ ಪ್ರಾಮುಖ್ಯವಾದುದಿದೆ.

ಯುದ್ಧ ಪ್ರಾರಂಭದಲ್ಲಿ ಸ್ಟಾಲಿನ್ನನ ಕಡೆಗೇನೇ ಇದ್ದ ಹಿಟ್ಲರನ ದೃಷ್ಟಿ ಈಗ ಮುಸಲಿನಿಯ ಕಡೆಗೆ ಹರಿದಿದೆ. ಸ್ಟಾಲಿನನನ್ನು ರಂಗಭೂಮಿಗೆ ತಂದಾಯಿತು; ಇನ್ನು ಮುಸಲಿನಿಯವರನ್ನು ಕರತಂದರಾಯಿತು; ಹೀಗೆ ಮೂವರು ಸರ್ವಾಧಿಕಾರಿಗಳು ಸೂದಿಕಟ್ಟುವರೆಂಬುದು ಸರ್ವಸಾಮಾನ್ಯ ಊಹೆ. ಈ ಊಹೆಯು ಕಾರಣಯುಕ್ತವಾದುದೇನೋ ನಿಜ. ಜರ್ಮನಿ ಇಟಲಿಗಳು ಕಡೆಗೆ, ರಶ್ಯ ಇಂಗ್ಲಂಡಿನ ಕಡೆಗೆ ಮುಖ ತಿರುಗಿಸಿರುವದರಿಂದ ಕಾರ್ಯಜ್ಞರು ಭಿನ್ನರೀತಿ ಹಿಡಿಯಲೂ ಬಹುದು ಎಂಬ ಊಹೆಗೂ ಅಷ್ಟೇ ಆಧಾರಗಳಿವೆ. ಮೇಲಾಗಿ ಸ್ವೀಡನಿನ ಭದ್ರತೆ ರಶ್ಯಕ್ಕೆ ಬೇಕಾಗಿದೆ. ಸ್ವೀಡನಿನಲ್ಲಿಂದು ಬಿಸಿವಾತಾವರಣ ಅಲೆಗಳೇಳುತ್ತಿವೆ- ಜರ್ಮನ್ ಧಾಳಿಯ ಭೀತಿಯಿಂದ. ಸ್ವೀಡನ್ ಸರಕಾರಕ್ಕೆಗೆ ಹೋದರೆ, ರಶ್ಯವು ಫಿನ್ಲೆಂಡಿನಿಂದ ಪಡೆದ ಅನುಕೂಲತೆಗಳೆಲ್ಲಾ ಬಹುತೇಕ ಅಪ್ರಯೋಜಕವಾಗುವವು. ಇದನ್ನು ಗಮನಿಸಿಯೇ, ಸ್ವೀಡನಿನ ತಾಟಸ್ಥ್ಯವನ್ನು ಕಾಪಾಡಿರೆಂಬ ಒತ್ತಾಯದ ಹೇಳಿಕೆಯನ್ನು ಜರ್ಮನಿ ಮತ್ತು ಮಿತ್ರರಾಷ್ಟ್ರಗಳಿಗೆ ರಶ್ಯವು ಕಳುಹಿರುವದೆಂದು ನಂಬಲರ್ಹವಾದ ವಾರ್ತೆಯಿದೆ. ಇದರಿಂದ ಇಂಗ್ಲಾಂಡು ಫ್ರಾನ್ಸುಗಳಿಗಿಂತ ಹೆಚ್ಚಾಗಿ ಜರ್ಮನಿಯ ಮೇಲೆ ಪರಿಣಾಮವಾಗುವದು. ಸೋವಿಯೆಟಿನ ಇಂತಹ ಧೋರಣೆ ಜರ್ಮನಿಯ ಕಾರ್ಯ ಮತ್ತು ಮನೋವೃತ್ತಿಗೆ ಪ್ರತಿಕೂಲವಾದುದು.

ರಶ್ಯಾ-ಇಂಗ್ಲಾಂಡುಗಳೊಳಗೆ ಒಪ್ಪಂದವಾಗಲು ಮೂಲಭೂತ ತೊಡಕುಗಳಾವುವೂ ಇಲ್ಲ. ಯುದ್ಧಕಾಲದ ರಶ್ಯದ ಧೋರಣೆಯೆಂದರೆ ಸ್ವರಕ್ಷಣೆ ಅಥವಾ ಸ್ವಬಲವರ್ಧನೆ. ಈ ಹಾದಿಯನ್ನನುಸರಿಸುವಾಗ ಅದು ಬ್ರಿಟನಿನ ಮನೋವೃತ್ತಿಗೆ ದಕ್ಕೆ ಕೊಡೆದುದಿದೆ; ಆದರೆ ಜರ್ಮನಿಗಾಮನೋವನ್ನೂ ಮಾಡಲಿಲ್ಲವೆನ್ನಲು ಒರುವದಿಲ್ಲ. ಉದ್ಯೋಗಪ್ರಿಯ ಬ್ರಿಟನು ಸಂದೇಹವಿಲ್ಲದೆ ಮುಂದೆ ಬಂದರೆ ಬ್ರಿಟನ್-ರಶ್ಯಾಗಳ ಹಸ್ತಜೋಡಣೆಯಾಗಲು ಸಾಧ್ಯವಿದೆ. ಕಳೆದ ಸಪ್ಟಂಬರ ೩೧ರಲ್ಲಿ ಲೋರ್ಡ್ ಹೆಲಿಫೇಕ್ಸರು ಎಮ್ ಮೈಸ್ಕಿಯವರನ್ನು ಆಮಂತ್ರಿಸಿ, ಯುದ್ಧಕಾಲದಲ್ಲಿ ರಶ್ಯದ ಧೋರಣೆ ಯಾವುದೆಂದು ವಿಚಾರಿಸಿದ್ದರು; ತನ್ನ ಸರಕಾರದೊಡನೆ ಯೋಚಿಸಿ, ರಶ್ಯವು ತಟಸ್ಥವಿರುವದೆಂದೂ ಬ್ರಿಟನಿನೊಡನೆ ವ್ಯಾಪಾರ ಒಪ್ಪಂದ ನಡೆಸಲು ಸಿದ್ಧವಿರುವದೆಂದೂ ತಾ. 27ರಲ್ಲಿ ಮೈಸ್ಕಿಯವರು ತಿಳಿಸಿದ್ದರು. ಆದರೆ ಬ್ರಿಟನು ಆ ಕಡೆಗೆ ಗಮನಕೊಡಲಿಲ್ಲ. ಗರತಿಯ ಸಿಟ್ಟಿನಂತಹ ವೈರಾಗ್ಯ ಪ್ರದರ್ಶಿಸಿತು! ಒಂದು ತಿಂಗಳ ನಂತರ ವ್ಯಾಪಾರೀ ಬೋರ್ಡಿನ ಅಧ್ಯಕ್ಷ ಮಿ. ಒಲಿವರ್ ಸ್ಟಾನ್ಲಿಯವರು ಸಾಮಾನುಗಳ ಪಟ್ಟಿಯೊಂದನ್ನು ಮುಂದಿಡುವಾಗ ಮಿತ್ರರಾಷ್ಟ್ರಗಳ ಕುರಿತು ರಶ್ಯವು ತೀರಾ ಕೆಟ್ಟ ಅಭಿಪ್ರಾಯಕ್ಕೆ ಬಂದಿತ್ತು. ಉಭಯರೊಳಗೆ ಮಾತುಕತೆ ನಡೆಯಲಿಲ್ಲ. ಆಮೇಲಿನ ನಾಲ್ಕು ತಿಂಗಳು ಫಿನ್ಲೆಂಡು ಯುದ್ಧದ ಗೊಂದಲದಲ್ಲಿ ಕಳೆದುಹೋದವು ರಶ್ಯಾ-ಇಂಗ್ಲಾಂಡು ವೈಷಮ್ಯವೆಂಬುದು ಮಿತ್ರರಾಷ್ಟ್ರಗಳು ರಶ್ಯಕ್ಕೆದುರಾಗಿನಡುಬಿಗಿಯುವಷ್ಟು ಬೆಳೆದುಹೋದುದರಿಂದ ವ್ಯಾಪಾರ ಮಾತುಕತೆ ಊಹೆಗೂ ನಿಲುಕದಷ್ಟು ದೂರ ಉಳಿಯಿತು. ಈಗ ರಶ್ಯಕ್ಕೆ ವಿರಾಮ ದೊರೆತಿದೆ ಮಾರ್ಚಿ 27ರಲ್ಲಿ ಮೈಸ್ಕಿಯವರು ಮೊದಲಿನ ಮಾತನ್ನೇ ಪುನಃ ಮುಂದೆ ತಂದರು, ರಶ್ಯದ ಈ ನೂತನ ವ್ಯವಸ್ಥೆಯನ್ನು ಕಂಡು ಇಂಗ್ಲಾಂಡೇನೂ ಉದ್ವೇಗಗೊಂಡಿಲ್ಲ. ಬದಲಿಗೆ 'ಆಲೋಚಿಸುವಾ' ಅಂದಿದೆ.

ಈ ಸಂದರ್ಭದಲ್ಲಿ ಸಹಜವಾದ ಹೆದರಿಕೆಯೊಂದು ಬ್ರಿಟನಿಗಿದೆ. ರಶ್ಯದೊಡನೆ ವ್ಯಾಪಾರೀ ಒಡಂಬಡಿಕೆಯಾಯಿತು, ಇದರಿಂದಾಗಿ ಬ್ರಿಟನಿನ ಸಾಮಗ್ರಿಗಳು ರಶ್ಯದ್ವಾರದಿಂದ ಜರ್ಮನಿಗೆ ಹೋದವು,ಎಂದಾದರೆ ಜರ್ಮನಿಯನ್ನು ದಿಗ್ಬಂಧಿಸುವ ಧೋರಣೆಯಲ್ಲಿ ಮತ್ತಾವ ಹುರುಳಿದೆ? ತಾನು ಹೆಬ್ಬಾಗಿಲು ತೆರೆದಿಟ್ಟು ಅನ್ಯರನ್ನು ಹೊರತಳ್ಳಿ ಮುಚ್ಚಿರಲು ಕೇಳಿಕೊಂಡಂತಾಗದೆ? ಹಾಗಾಗಲಾರದೆಂದೂ ಆ ಕುರಿತು ಸ್ಪಷ್ಟ ಭರವಸೆಕೊಡಬಹುದೆಂದೂ ಮೋಸ್ಕೋ ಅಭಿಪ್ರಾಯ ಸೂಚಿಸಿದೆ.

ಇಂಗ್ಲಾಂಡು ಈ ಸುವರ್ಣಸಂಧಿಯನ್ನು ಕಳಕೊಳ್ಳುವದೆ? ತೀರಾ ಅಪ್ರಾಗತಿಕರ ಹೊರತು ರಶ್ಯಾವನ್ನು ಇದಿರು ದಳದಲ್ಲಿ ಕಾಣಲು ಹಾತೊರೆಯುವವರು ಬೇರೆಯಾರೂ ಇಂಗ್ಲಾಂಡಿನಲ್ಲಿಲ್ಲ. ಸ್ಕಾಂಡಿನೇವಿಯಾ ಮತ್ತು ಬಾಲ್ಕನ್‌ಗಳ ಕಡೆಗೆ ಯುದ್ಧಜ್ವಾಲೆ ಹರಡಿರುವ ಈ ಸಂದರ್ಭದಲ್ಲಿ ಮಿತ್ರನಲ್ಲವಾದರೂ ರಶ್ಯವನ್ನು ಪೂರ್ಣ ತಟಸ್ಥವಿರಿಸಲು ಬ್ರಿಟನಿಗೆ ಸಾಧ್ಯವಾದರೆ ಅದು ಗೆದ್ದಂತೆಯೇ ಸರಿ. ಬ್ರಿಟನಿನ ಕಡೆಗೆ ಸೌಜನ್ಯ ಪ್ರದರ್ಶಿಸಲು ರಶ್ಯಕ್ಕೆ ಮನಸ್ಸಿದೆ ಎಂಬುದಕ್ಕೆ ದೃಷ್ಟಾಂತಗಳೂ ದೊರೆಯುತ್ತಿವೆ. ರಶ್ಯದ ಸರಕಾರೀ ಪತ್ರಿಕೆಯಾದ 'ಪ್ರಾವ್ದಾ' ಮೊದಲು ಮಿತ್ರರಾಷ್ಟ್ರಗಳನ್ನು ಕಠಿಣವಾಗಿ ಟೀಕಿಸುತ್ತಿತ್ತು. ಅವು ಜರ್ಮನಿಯೊಡನೆ ವೈಯಕ್ತಿಕ ಯುದ್ಧವನ್ನಷ್ಟೇ ನಡೆಸುತ್ತಿರುವುದು ಸೋವಿಯೆಟ್ಟನ್ನು ಪುಡಿಗುಟ್ಟುವ ಉದ್ದೇಶದಿಂದ ಎಂದು ಮೊದಲು ಅದರ ಟೀಕೆಯಿತ್ತು. ಈಗ ಸ್ವರ ಬದಲಾವಣೆಯಾಗಿದೆ ಫಿನ್ನಿಶ್ ಗಡಿಗೆ ಒರವ ಇಚ್ಛೆ ಆಂಗ್ಲೋ ಫ್ರೆಂಚರಿಗಿರಲಿಲ್ಲವೆಂದೂ, ಬೊಲ್ಶೆವಿಕರೊಡನೆ ಯುದ್ಧವೆಂಬ ನೆವದಿಂದ ಸ್ಕಾಂಡಿನೇವಿಯಾ ರಾಷ್ಟ್ರಗಳಿಗೆ ಜರ್ಮನಿಯನ್ನೆಳೆದು ಹೊಡೆಯುವುದೇ ಅವುಗಳ ಇಚ್ಛೆಯಾಗಿತ್ತೆಂದೂ ಅದೀಗ ಹೇಳಲಾರಂಭಿಸಿದೆ. ಹೀಗೆ ರಶ್ಯವು ತನ್ನ ಮನೋವೃತ್ತಿಯನ್ನು ಅಡಿಮೇಲುಮಾಡಿ ತೋರಿಸಲಾರಂಭಿಸಿದೆ ಇಂತಹ ವಾದಗಳು ಬೇರು ತನಕ ಸಿಹಿಯಾಗಿವೆ ಇವೆ ಎಂಬ ಅರ್ಥವಲ್ಲ. ರಶ್ಯಾದ ಧೋರಣೆಯ ಆಧಾರದಿಂದ ಇಷ್ಟನ್ನು ಹೇಳಬಹುದು: ಈಗ ಮಿತ್ರ ರಾಷ್ಟ್ರಗಳು ಸೋವಿಯೆಟಿನಿಂದೊದಗಬಹುದಾದ ಅಪಾಯ ನಿರೀಕ್ಷಣೆಯಲ್ಲಿವೆ. ಅದರ ನಿವಾರಣೆಯನ್ನು ಅನ್ಯೋಪಾಯಗಳಿಂದ ಸಾಧಿಸುವ ಅಗತ್ಯವಿರುವದಾದರೆ ಅದಕ್ಕೊಂದು ಸಂದರ್ಭ ಈಗ ದೊರೆತಿದೆ. ಬ್ರಿಟನು ಫ್ರಾನ್ಸುಗಳು ಅದನ್ನು ಕಳೆದುಕೊಳ್ಳದಿರುವದು ಉತ್ತಮ

ಸರಿಯಾದ ಮಾರ್ಗದರ್ಶಿತ್ವ

ಡಿಲ್ಲಿಯಲ್ಲಿ ಸೇರಿದ ಅಖಿಲಭಾರತ ಆಜಾದ್ ಮುಸ್ಲಿಂ ಪರಿಷತ್ತು ಮುಸಲ್ಮಾನ ಜನತೆಗೆ ಸರಿಯಾದ ಹಾದಿಯನ್ನು ತೋರಿಸಿ ಕೊಟ್ಟಿದೆ. ಅದರ ಅಧ್ಯಕ್ಷರಾದ ಮಿ. ಅಲ್ಲಾ ಭಕ್ಷರು ಮುಸ್ಲಿಮ್ ಲೀಗಿನ ವಾದದಲ್ಲಿರುವ ಹಾನಿಯ ವಿರಾಟ್ರೂಪವನ್ನು ಬಿಡಿಸಿ ತೋರಿಸಿರುವರು. ರಾಷ್ಟ್ರದ ಹಿತಬೇರೆ, ಮುಸ್ಲಿಮ್ ಸಮಾಜದ ಅಭ್ಯುದಯ ಪ್ರತ್ಯೇಕವೆಂಬುದಕ್ಕೆ ಆಧಾರವಿಲ್ಲವೆಂಬುದನ್ನು ಪರಿಷದಧ್ಯಕ್ಷರ ಭಾಷಣದಿಂದ ಸ್ಪಷ್ಟವಾಗಿ ತಿಳಿಯಬಹುದು. ಮಿ. ಜಿನ್ನರ ವಿಭಾಗ ಯೋಜನೆಯ ದುಷ್ಪರಿಣಾಮಗಳ ಅತ್ಯಂತ್ಯವನ್ನೆಲ್ಲಾ ಅನುಭವಿಸುವ ವಿಪತ್ತಿಗೊಳಗಾಗುವ ವಿಭಾಗವೊಂದಿರುವುದಾದರೆ ಅದು ಮುಸ್ಲಿಮ್ ಸಮಾಜ. ಹಾಗಿದ್ದರೆ ಇತರರೇಕೆ ಅದನ್ನು ಇಷ್ಟೊಂದು ವಿರೋಧಿಸುತ್ತಿದ್ದಾರೆಂಬ ಪ್ರಶ್ನೆ ಏಳಬಹುದು; ಇಂತಹ ಪ್ರಶ್ನೆಗಳಿಗೆ ಸಂಕುಚಿತ ಸ್ವಾರ್ಥದ ಹೊರತು ಬೇರೆ ಆಧಾರವಿಲ್ಲ. ಮುಸ್ಲಿಮ್ ಸಮಾಜಕ್ಕೆ ಹಾನಿ, ದೇಶದ ಅಸ್ತಿತ್ವಕ್ಕೆ ಭಂಗವನ್ನು ಏಕ ಕಾಲದಲ್ಲಿ ತರುವ ಗಂಡಾಂತರವದು. ಆಧಾರ

ದಿಂದ ದೇಶ... ದು ಮ... ಳು ಬೇರೆ... ಯಬಹು... ಪರಿಷತ್ತು... ನ್ನು ಖಂಡಿ... ನ್ನು ಸಮರ್ಥ... ಮುಸಲ್ಮಾನ... ತಂತ್ರ್ಯ ಸ... ಸಮಾಜದ... ಗಿ ಉಳಿ... ಅವರು... ದೊಂದು... ವದಕ್ಕಿಂತ... ಜೇಡೊಂದಿ... ಆಜಾದ್ ಪ... ನ ವಹಿಸು... ನ ಅವರಾಧ... ಸ್ವಾತಂತ್ರ್ಯ... ಕೊಡಕ... ಯೋಜನೆ... ಸಧದ... ವಿಧಾಯಕ... ದನ್ನು... ಯವಾದ... ಲ್ಲೀ... ರಾಜದ ಅಭ...

ದಿನ...

ಕರ್ನಾಟ... ಬ್ರಾಂಗಿದ... ತರ ನಿದ... ಗೋಪುರ... ತಾಯಿ ತು... ತಾ ೨೧... ನೇ ದಿ... ನ್ನಡ ಸಾ... ವರು ಸಗ... ದ್ದರು. ... ಮೊದಲಾದ... ಕಾಮತರ... ದಲ್ಲಿ ಹು... ತಾ ಶ್ರೀ ... ನ್ನು ಹದ... ರ ನೆನಪು... ಲ್ಲೊಂದಾಗಿ... ದಿವಂಗತ... ಎನಿಸಿದ... ವರ ಸಾಹಿತ್ಯ... ಗೊಳಿಸುವ... ಕತೆ, ಕವಿತೆ... ರು ಅವುಗಳ... ಲೇಖಕರನ್ನು... ಶ್ರೀ. ರಾ... ಕೃಷ್ಣ ಸಾಹಿ...

ಸ್ವೀಡನಿನ ತಾಟಸ್ಥ್ಯಕ್ಕಾಗಿ ರಶ್ಯದ ಒತ್ತಾಯ!
ನಾರ್ವೆಯಲ್ಲಿ ಪ್ರಬಲ ಹೋರಾಟ

ವ್ಯತ್ಯಾಸಕ್ಕನುಗುಣವಾದ ಸೃಷ್ಟಿಯನ್ನು ಮಾಡಬಲ್ಲ ಹಿರಿಯ ಸಾಹಿತಿಗಳಲ್ಲಿ ಶ್ರೀ ಕಾಮತರೊಬ್ಬರಾಗಿದ್ದರು. ಅವರು ಕನ್ನಡಿಗರಾದುದು ಕರ್ನಾಟಕದ ದೌರ್ಭಾಗ್ಯ; ದಕ್ಷಿಣ ಕನ್ನಡಕ್ಕಿದು ಮರೆಯಲಾಗದ ದುಃಖ! ದಿವಂಗತರ ಆತ್ಮಕ್ಕೆ ಶಾಂತಿ ಯುಂಟಾಗಲಿ.

ಸ್ವಾಮಿ ಸಹಜಾನಂದರಿಗೆ ಕಠಿಣ ಶಿಕ್ಷೆ

ಅಖಿಲಭಾರತ ಕಿಸಾನ್ ಸಭೆಯ ಮುಖ್ಯ ಕಾರ್ಯದರ್ಶಿ ಸ್ವಾಮಿ ಸಹಜಾನಂದರ ವಿಚಾರಣೆಯಾಗಿ ಒಂದು ವರುಷ ಕಠಿಣ ಸಜೆ ವಿಧಿಸಲ್ಪಟ್ಟಿದೆ. ಅವರ ಮೇಲೆ ಮೂರು 'ಚಾರ್ಜ್'ಗಳಿದ್ದು ಪ್ರತಿಯೊಂದಕ್ಕೂ ಒಂದೊಂದು ವರುಷದ ಕಠಿಣ ಸಜೆಯನ್ನು ಬಿಹಾರಿನ ಸಬ್ ಡಿವಿಜನಲ್ ಆಫೀಸರರು ವಿಧಿಸಿರುವರು. ಶಿಕ್ಷೆಗಳನ್ನು ಒಟ್ಟಿಗೆ ಅನುಭವಿಸಬಹುದಾಗಿದೆ. ಸ್ವಾಮಿ ಸಹಜಾನಂದರು ನಗುಮುಖದಿಂದ ತೀರ್ಪನ್ನು ಕೇಳಿದರು. ಅವರನ್ನು ಹಜಾರೀಬಾಗ್ ಜೈಲಿಗೆ ಕಳುಹಿಸಲಾಗಿದೆ.

ಶ್ರೀ. ಎಚ್. ವಿ. ಕಾಮತರ ಬಿಡುಗಡೆ.

ಎಪ್ರಿಲ್ ತಾ. 6ರಲ್ಲಿ ಬೊಂಬಾಯಿಯ ಫೋರ್ವರ್ಡ್ ಬ್ಲೋಕಿನವರು ನಡೆಸಿದ್ದ ಸಭೆಯೊಂದರಲ್ಲಿ ದಸ್ತಗಿರಿ ಮಾಡಲ್ಪಟ್ಟು ಜಾಮೀನಿನಲ್ಲಿ ಬಿಡಲ್ಪಟ್ಟಿದ್ದ ಶ್ರೀ ಎಚ್. ವಿ. ಕಾಮತರ ವಿಚಾರಣೆ ಎಪ್ರಿಲ್ ತಾ. 29ರಲ್ಲಿ ನಡೆದು ಅವರು ಬಿಡುಗಡೆಹೊಂದಿರುವರು. ಶ್ರೀ ಕಾಮತರ ವಿರುದ್ಧ ಸಾಕ್ಷ್ಯಗಳು ತಮ್ಮಲ್ಲಿಲ್ಲವೆಂದು ಪೋಲೀಸರು ಹೇಳಿದುದರಿಂದ ಮೆಜಿಸ್ಟ್ರೇಟರು ಬಿಟ್ಟರು.

ಬಂಗಾಳಕ್ಕೆ ಕವಿ ಠಾಗೋರರ ಹಿತ ಬೋಧೆ

"ಇಂದು ತಂಟೆ ಖೋರ ಮಕ್ಕಳಂತೆ ಬಂಗಾಳಿಗಳು ಗಲಭೆ ಮಾಡಹತ್ತಿದ್ದಾರೆ. ಇದು ಬುದ್ಧಿವಂತಿಕೆಯ ಅಭಾವದಿಂದಲ್ಲ. ಗೊಂದಲವೆಬ್ಬಿಸುವ ಸ್ಫೂರ್ತಿಯಿಂದ. ಸ್ವಾರ್ಥಯುಕ್ತ ಮತ್ತು ಶಿಸ್ತುರಹಿತ ಕಾರ್ಯವು ಸಾರ್ವತ್ರಿಕ ಹಿತದ ಜ್ಞಾನವನ್ನು ಅಪಹರಿಸಿದೆ. ಇದನ್ನು ಸಾಧಿಸುವ ಧುರೀಣರೆಷ್ಟೇ ಪ್ರಸಿದ್ಧರಿರಲಿ, ಅವರು ದೇಶ ದ್ರೋಹಿಗಳು. ಬಂಗಾಳದ ಧುರೀಣರು ಹೋರಾಟದ ಮಾತನ್ನಾಡುತ್ತಾರೆ. ಆದರೆ ಅದಕ್ಕೆ ಸಂಘಟನೆಯ ಅವಶ್ಯಕತೆಯಿದೆ ಎಂಬುದನ್ನು ಮರೆಯುತ್ತಾರೆ. ಇಂತಹ ವರ್ತನೆ ಲೋಕದ ಬೇರೆಲ್ಲಿಯೂ ಕಂಡು ಬರಲಾರದು. ಅವರು ಹೋರಾಡುವುದು ಹೊರಗಿನ ವಿರೋಧಿಯಸ್ನಲ್ಲ- ತಮ್ಮೊಳಗೇನೇ. ಈ ಹೋರಾಟದಲ್ಲಿ ಪರಸ್ಪರ ಕೆಸರೆರಚಿಕೊಳ್ಳುವುದೇ ಅವರ ಸಾಧನ. ಬಂಗಾಳಿಗಳು ಬೇರೆಯವರಲ್ಲಿರುವ ಮಹತ್ವವನ್ನು ಮನ್ನಿಸಲು ಕಲಿಯಬೇಕು! ದೇಶದ ಘನತೆ ಹೆಚ್ಚಿಸಿದವರೆದಿರಲ್ಲಿ ತಲೆ ತಗ್ಗಿಸಲು ಕಲಿಯಬೇಕು" ಎಂದು ಕವಿ ಠಾಗೋರರೆಂದಿದಾರೆ.

ಯುದ್ಧ ಕೋಣೆಗೊಂದು ಸಮಸ್ಯೆಯಾಗಿ ಪರಿಣಮಿಸಿರುವ ಸ್ಟಾಲಿನ.

ಪಂಡಿತ ನೆಹರುಗಳ ಬೋಧನೆ

ಪೂನದ ಸಭೆಯೊಂದರಲ್ಲಿ ಭಾಷಣಮಾಡುತ್ತಾ ಪಂಡಿತ ನೆಹರುಗಳು ಮುಸ್ಲಿಂ ಲೀಗು, ಹಿಂದೂ ಮಹಾಸಭೆಗಳಿಗಾವ ನಿಶ್ಚಿತ ಧೋರಣೆ ಅಥವಾ ಕಾರ್ಯಕ್ರಮವಿಲ್ಲವೆಂದು ಟೀಕಿಸಿ ಪಾಕಿಸ್ತಾನ ಯೋಜನೆಯ ತಿಳಿಗೇಡಿತನವನ್ನು 24 ಘಂಟೆ ಟೀಕಿಸಿದರೂ ಮುಗಿಯುವಂತಿಲ್ಲವೆಂದರು. ಚರಕವು ಭಾರತ ಸ್ವಾತಂತ್ರ್ಯ ಸಮರದಲ್ಲಿ ಮುಖ್ಯವಾದ ಉಪಕರಣವೆಂದು ಹೇಳಿ ಎಲ್ಲರೂ ಕಾಂಗ್ರೆಸಿಗೆ ಬೆಂಬಲವೀಯಬೇಕೆಂದರು.

ರಾಷ್ಟ್ರೀಯ ಮುಸ್ಲಿಮ್ ಪರಿಷತ್ತು

ಅಖಿಲಭಾರತ ಅಜಾದ್ ಪರಿಷತ್ತು ಎಪ್ರಿಲ್ ತಾ. 27-28ರಲ್ಲಿ ಡಿಲ್ಲಿಯಲ್ಲಿ ಖಾನ್ ಬಹದೂರ್ ಅಲ್ಲಾಭಕ್ಷರ ಅಧ್ಯಕ್ಷತೆಯಲ್ಲಿ ಜರಗಿತು. ಮುಸಲ್ಮಾನ ಧರ್ಮ ಸಂಸ್ಕೃತಿಯ ರಕ್ಷಣೆಯುಳ್ಳ ಪೂರ್ಣ ಸ್ವಾತಂತ್ರ್ಯವೇ ತಮ್ಮ ಗುರಿಯೆಂದೂ, ಅದರ ಸಾಧನೆಗಾಗಿ ಹಿಂದೆ ಮಾಡಿದಂತೆ ಮುಂದೆಯೂ ತ್ಯಾಗಮಾಡಲು ಸಿದ್ಧರಿರುವೆವೆಂದೂ ಠರಾವಾಗಿದೆ.

ನಾರ್ವಿಕದಲ್ಲಿ ಜರ್ಮನರ ಕುಯುಕ್ತಿ

ನಾರ್ವಿಕದಲ್ಲಿ ನಡೆದ ಯುದ್ಧದಲ್ಲಿ ಜರ್ಮನರು ಹೆಂಗಸರು ಮಕ್ಕಳಿರುವ ನಾಗರಿಕರನ್ನು ಮುಂಭಾಗಕ್ಕೆ ಕಳುಹಿಸಿದರೆಂದೂ ಆದರಿಂದಾಗಿ ಕೆಲವು ಸೈನಿಕರು ಹಿಂಜರಿದು ಅವರ ಸ್ವಾಧೀನವಾಗಬೇಕಾಯಿತೆಂದೂ, ಕೊನೆಗೆ ತಮ್ಮ ಸೈನ್ಯವು ಧೈರ್ಯಗೊಂಡು ಮುಂದೊತ್ತಿತೆಂದೂ ನಾರ್ವೇ ಸರಕಾರವು ಪ್ರಕಟಿಸಿದೆ. ವೆಸ್ಟ್ ಫ್ಜೊರ್ಡನ್ ಮತ್ತು ಅದಕ್ಕೆ ಬಂದು ಹೋಗುವ ಕಡೆಗಳಲ್ಲಿ ಮಿತ್ರರಾಷ್ಟ್ರಗಳು ಮೈನ್ ಹಾಕಿರುವವು. ಸ್ಥಳೀಕ ನಾವಿಕ ಅಧಿಕಾರಿಗಳ ಸೂಚನೆ ವಿನಹಾ ಯಾವ ಹಡಗೂ ಆ ಕಡೆಗೆ ಹೋಗಬಾರದೆಂದು ಎಚ್ಚರಿಕೆ

ಕೊಡಲಾಗಿದೆ. ಜರ್ಮನನ್ನು ರೈಲ್ವೇ ದ್ವಾರದಲ್ಲಿ ಬ್ರಿಟಿಷರು ಹಿಡಿದಿದ್ದಾರೆ. ಅಲ್ಲಿದ್ದ ಜರ್ಮನ್ ಸೇನೆಯು ಪರ್ವತಗಳ ಕಡೆಗೆ ಸರಿಯುತ್ತಿದೆ.

ಸ್ವೀಡನಿನ ಕುರಿತು ರಶ್ಯದ ಬೇಡಿಕೆ

ಸ್ವೀಡನಿನ ತಾಟಸ್ಥ್ಯವನ್ನೊಪ್ಪಬೇಕೆಂದು ರಶ್ಯವು ಬರ್ಲಿನಿಗೆ ಒತ್ತಾಯದ ಕೇಳಿಕೆ ಕಳುಹಿರುವುದೆಂದು ತಿಳಿದುಬರುತ್ತದೆ. ಅದೇ ರೀತಿಯ ಬೇಡಿಕೆ ಮಿತ್ರ ರಾಷ್ಟ್ರಗಳಿಗೂ ಕಳುಹಲ್ಪಟ್ಟಿರುವದಂತೆ. ಲಂಡನಿನಲ್ಲಿ ಆ ವಾರ್ತೆಯಿಲ್ಲ.

ಫಿನ್ಲೆಂಡ್ ಸಮುದ್ರಕ್ಕೂ ಮೈನ್ ಬಿತ್ತು

ಎಸ್ಟೋನಿಯಾ ಬದಿಯ ಸಮುದ್ರದ ಎರಡು ಕ್ಷೇತ್ರಗಳಲ್ಲಿ ಮೈನ್ ಹಾಕಿರುವುದರಿಂದ ಆ ಕಡೆ ತಮ್ಮ ಹಡಗುಗಳು ಹೋಗಕೂಡದೆಂದು ಜರ್ಮನ್ ಸರಕಾರವು ಎಚ್ಚರಿಕೆಕೊಟ್ಟಿದೆ. ಈ ಅಪಾಯಕಾರೀ ಕ್ಷೇತ್ರಗಳ ಪೈಕಿ ಒಂದು ರಶ್ಯಾವು ಎಸ್ಟೋನಿಯದಿಂದ ಪಡೆದುಕೊಂಡ ಬಾಲ್ಟಿಕ್ಸ್ಕಿ ಬಂದರದ ಹೊರಗಿದ್ದು ಪೂರ್ವದಿಂದ ಪಶ್ಚಿಮಕ್ಕೆ ಇಪ್ಪತ್ತು ಮೈಲು, ದಕ್ಷಿಣದಿಂದ ಉತ್ತರಕ್ಕೆ ಸರಾಸರಿ ಎಂಟು ಮೈಲು ವಿಸ್ತೀರ್ಣವುಳ್ಳದಾಗಿದೆ. ಎರಡನೇ ಕ್ಷೇತ್ರವು ಹೆಲ್ಸಂಕಿ ಇದಿರುಗಡೆಯಲ್ಲಿ ಕೋಲ್ಕೋವಿನ ಪೂರ್ವ ಕಡೆಯಲ್ಲಿ ಸರಾಸರಿ ಉತ್ತರದಿಂದ ದಕ್ಷಿಣಕ್ಕೆ ಹನ್ನೆರಡು ಮೈಲು, ಪೂರ್ವದಿಂದ ಪಶ್ಚಿಮಕ್ಕೆ ಆರು ಮೈಲು ವಿಸ್ತಾರವುಳ್ಳದ್ದಾಗಿದೆ.

ಸ್ವೀಡನಿಗೆ ಬ್ರಿಟನಿನ ನಿಷೇಧ ಸೂಚನೆ

ಸ್ವೀಡನಿನಲ್ಲಿ ಬ್ರಿಟಿಷ್ ಲಿಗೇಶನಿನವರು ಪ್ರಕಟಿಸುತ್ತಿದ್ದ 'ಗ್ರೇಟ್‌ಬ್ರಿಟನಿನ ವಾರ್ತೆ' ಎಂಬ ಪ್ರಕಟಣೆಯನ್ನು ಜಪ್ತಿಮಾಡಿಡಬೇಕೆಂದು ಸ್ವೀಡನಿನ ಮಂತ್ರಿಮಂಡಲದ ಸಭೆಯಲ್ಲಿ ನಿರ್ಧಾರವಾಗಿದೆ. ಇದರಿಂದ ವಿದೇಶೀ ರಾಜ್ಯವೊಂದರ ಮೇಲೆ ತಪ್ಪಭಿಪ್ರಾಯ ಹರಡಿದಂತಾಗುವದೆಂಬುದೇ ಈ ನಿರ್ಧಾರಕ್ಕೆ ಕಾರಣ. ಬ್ರಿಟಿಷರು ಇದಕ್ಕಾಗಿ ನಿಷೇಧ ಸೂಚಿಸಲಿರುವರು. ಅಲ್ಲಿ ಜರ್ಮನ ಲಿಗೇಶನಿನವರು ಇದೇ ಮಾದರಿಯ ಪ್ರಕಟಣೆ ಮತ್ತು ಇತರ ವಿಧಗಳಿಂದ ಈಗಲೂ ನಾಜೀ ಪ್ರಚಾರಮಾಡುತ್ತಿದ್ದಾರೆ.

ಫ್ರಾನ್ಸಿಸಿನ ಅಭಿಪ್ರಾಯ

ನೋರ್ವೇ ಯುದ್ಧದ ಫಲಿತಾಂಶವೇನೆಂಬುದು ಗೊತ್ತಾಗದೆ ಹಿಟ್ಲರ್ ಸ್ವೀಡನನ್ನು ಆಕ್ರಮಿಸುವಂತಿಲ್ಲವೆಂದು ಫ್ರಾನ್ಸಿನ ಅಭಿಪ್ರಾಯ.

ನಿಶ್ಶಸ್ತ್ರ ನಾಗರಿಕರ ಮೇಲೆ ಬಾಂಬು

ಆಲೆಸಿಂಡ್ ಎಂಬ ರಕ್ಷಣಾಹೀನ ನಗರದ ಮೇಲೆ ಕಳೆದ ವಾರಾಂತ್ಯದಲ್ಲಿ ಜರ್ಮನಿ ವಿಮಾನಗಳು ಎಡೆಬಿಡದೆ ಎರಡು ಘಂಟೆಗಳ ವರೆಗೆ ಬಾಂಬು ಸುರಿಸಿದವೆಂದು ಗೊತ್ತಾಗಿದೆ. ಪಟ್ಟಣದಲ್ಲಿ ನಾಗರಿಕರನ್ನೂ, ಗಾಯಗೊಂಡವರ ಚಿಕಿತ್ಸೆಗೆ ಬಂದ ರೆಡ್ ಕ್ರಾಸ್ ತಕ್ಷ್ರಪಾ ದಳದವರನ್ನೂ ಮೆಶಿನ್ ಗನ್ನುಗಳಿಂದ ಹೊಡೆದು ಓಡಿಸಲಾಯಿತಂತೆ.

'ರಾಜಕೀಯವು ನನ್ನ ಜೀವ ದುಸಿರು'

ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನರು ಅಲ್ಲಿಯ ಕಾಂಗ್ರೆಸನ್ನು ಬಿಟ್ಟರೆಂಬ ವಾರ್ತೆಯ ಕುರಿತು ಪ್ರಶ್ನಿಸಲ್ಪಟ್ಟಾಗ ರಾಜಕೀಯವು ನನ್ನ ಧರ್ಮ ಮತ್ತು ಜೀವದುಸಿರಾಗಿದೆ. ನಾನು ಅದರಿಂದ ಹೇಗೆ ದೂರವಾಗಲಿ? ಕಾಂಗ್ರೆಸು ದೇಶದ ದೀನ ಜನರ ಏಕ ಮಾತ್ರ ಉದ್ಧಾರಕ ಸಂಸ್ಥೆಯಾಗಿದೆ ನಾನು ಅದರ ಸಂಬಂಧವನ್ನು ಹೇಗೆ ಕಡಿದುಕೊಳ್ಳಲಿ?" ಎಂದು ಉತ್ತರವಿತ್ತರು. ಡಾ। ಖಾನ್ ಸಾಹೇಬರು ಆ ಕುರಿತು ಹೇಳುತ್ತಾ ತಾವು ಕಾಂಗ್ರೆಸಿನಿಂದ ಬೇರಾಗಬೇಕೆಂದು ಇಚ್ಛಿಸುವ ಹಿತಶತ್ರುಗಳು ನಿರಾಶೆಹೊಂದಬೇಕಾಗಿ ಬಂದುದಕ್ಕಾಗಿ ಸಹಾನುಭೂತಿ ಸೂಚಿಸುತ್ತೇವೆ, ಎಂದರು.

ರಿಬ್ಬೆಂಟ್ರೋಪನ ತೀವ್ರ ಟೀಕೆಗೊಳಗಾದ ವಿ. ಚರ್ಚಿಲ್.

ಎಸೆಂಬ್ಲಿ ಉಪಚುನಾವಣೆ

ಕೇಂದ್ರ ಎಸೆಂಬ್ಲಿಗೆ ದಕ್ಷಿಣ ಆರ್ಕೋಟ್-ಚೆಂಗಲ್ಪೇಟೆ ಮತದಾರ ಕ್ಷೇತ್ರದಿಂದ ನಡೆದ ಮಹಮ್ಮದೀಯರಲ್ಲದ ಉಪಚುನಾವಣೆಯಲ್ಲಿ ದಕ್ಷಿಣ ಆರ್ಕೋಟ್ ಜಿಲ್ಲಾ ಬೋರ್ಡಿನ ಅಧ್ಯಕ್ಷ ಶ್ರೀ. ಕೆ. ಸೀತಾರಾಮ ರೆಡ್ಡಿಯಾರರು ಪ್ರತಿಸ್ಪರ್ಧಿಯಿಲ್ಲದೆ ಗೆದ್ದುಬಂದಿರುವರು.

ಮಲಬಾರು ಲೀಗು ಪರಿಷತ್ತು

ಮಲಬಾರು ಮುಸ್ಲಿಂ ಲೀಗಿನ ಪರಿಷತ್ತು ಎಪ್ರಿಲ್ ತಾ 29ರಲ್ಲಿ ಬಂಗಾಳದ ಮಿ. ಫಜ್ಲುಲ್ ಹಕ್ಕರ ಅಧ್ಯಕ್ಷತೆಯಲ್ಲಿ ಆರಂಭವಾಗಿದೆ. ಸ್ವಾಗತಾಧ್ಯಕ್ಷ ಮಿ. ಶಂಗಾಲರು ತನ್ನ ಭಾಷಣದಲ್ಲಿ ಪಾಕಿಸ್ತಾನ ಯೋಜನೆಯನ್ನು ಸಮರ್ಥಿಸಿದರು.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಶ್ರೀ. ಹನುಮಜ್ಜಯಂತಿ— ಸ್ಥಳೀಯ ಸ್ವಾಸ್ಥ್ಯ ಸಂಘದ ಆಶ್ರಯದಲ್ಲಿ ಕಳೆದ ತಾ. 22ನೇ ಸೋಮವಾರ ಸಾಯಂಕಾಲ ಶ್ರೀ ಹನುಮಜ್ಜಯಂತ್ಯುತ್ಸವವು ಬಹು ಯಶಸ್ವಿಯಾಗಿ ನೆರವೇರಿತು. ಅಂದು ಬೆಳಿಗ್ಗೆ ಶ್ರೀ ಹನುಮಂತ ದೇವರಿಗೆ ಪೂಜೆ ನಡೆದು ಸದಸ್ಯರಿಗೆ ಟೀಪಾರ್ಟಿ ಸತ್ಕಾರವು ನಡೆಯಿತು. ಸಾಯಂಕಾಲ ಅಡ್ವೋಕೇಟ್ ಶ್ರೀ. ಕೆ. ವೈ. ಪೂಜಾರಿಯವರ ಅಧ್ಯಕ್ಷತೆಯಲ್ಲಿ ಮಹಾ ಸಭೆಯು ಜರಗಿತು. ಅಧ್ಯಕ್ಷರು ತಮ್ಮ ಆರಂಭ ಭಾಷಣದಲ್ಲಿ ವ್ಯಾಯಾಮ ಸಂಘಗಳ ಆವಶ್ಯಕತೆಯನ್ನು ತಿಳಿಸಿ, ಅಂಗ ಸಾಧನೆಯಿಂದ ಅನೇಕ ರೋಗಗಳನ್ನು ನಿವಾರಿಸಬಹುದೆಂದರು. ಮತ್ತು ಮಂಗಳೂರಲ್ಲಿ ಒಂದು ಆಧುನಿಕ ವ್ಯಾಯಾಮಮಂದಿರವು ಆಗತ್ಯವೆಂದೂ ಮಠದೇವಸ್ಥಾನಗಳವರು ಈ ಸಂಸ್ಥೆಗಳನ್ನು ಸ್ಥಾಪಿಸಬಹುದೆಂದೂ ಸೂಚಿಸಿದರು. ಅನಂತರ ಸ್ವಾಸ್ಥ್ಯ ಸಂಘದ ಡೈರೆಕ್ಟರರಾದ ಶ್ರೀ. ಕೆ. ಕೆ. ಶೆಟ್ಟಿಯವರೂ ಅವರ ಶಿಷ್ಯರೂ ಮತ್ತು ಉಳ್ಳಾಲದ ಮೊಗವೀರ ಆರ್ಯ ಯುವಕ ವ್ಯಾಯಾಮ ಸಂಘದವರೂ ತಮ್ಮ ಅದ್ಭುತವಾದ ಅಂಗಸಾಧನೆಯ ಚಮತ್ಕಾರಗಳನ್ನು ಪ್ರದರ್ಶಿಸಿದರು. ಸಭಿಕರ ಪರವಾಗಿ ಅಡ್ವೋಕೇಟ್ ಶ್ರೀ. ಬಿ. ಆರ್. ಪ್ಯಾಸರಾಯಾಚಾರ್ಯರು ಭಾಷಣ ಮಾಡಿ ಸ್ವಾಸ್ಥ್ಯ ಸಂಘದವರಿಗೆ ಸರ್ವ ಸನ್ಮಂಗಳಗಳಾಗಲೆಂದು ಹರಸಿದರು. ಶ್ರೀ. ಕೆ. ಕೃಷ್ಣರಾಯರು ಭಾಷಣಮಾಡುತ್ತಾ ಭಾರತದ ಉದ್ಧಾರಕ್ಕೆ ವೀರ ಯೋಧರು ಬೇಕಾಗಿರುವರೆಂದೂ ಅಂತಹ ಯೋಧರನ್ನು ತಯಾರಿಸುವ ಕೆಲಸವನ್ನು ವ್ಯಾಯಾಮ ಮಂದಿರಗಳು ವಹಿಸಬೇಕೆಂದೂ ಹೇಳಿದ್ದಲ್ಲದೆ ಹಿಂದೀಯರು ಸ್ವಶಕ್ತಿಯಿಂದ ಕಾದಾಡಲು ಸಮರ್ಥರಾದೊಡನೆಯೇ ಸ್ವರಾಜ್ಯವು ಹಸ್ತಗತವಾಗಲು ಸಾಧ್ಯವಿದೆಯೆಂದೂ ಹೇಳಿದರು. ಶ್ರೀ. ಅಳ್ಳಂಗೆ ರಜತಪದಕವು ಬಹುಮಾನವಾಗಿ ಸಭೆಯಲ್ಲಿ ಕೊಡಲಾಯಿತು. ಅಧ್ಯಕ್ಷರ ಸಮಯೋಚಿತ ಭಾಷಣ. ಶ್ರೀ. ವಿ. ಎಸ್. ಬಿಜೂರರ ಧನ್ಯವಾದಾರ್ಪಣೆಗಳೊಂದಿಗೆ ಸಭಾಂತ್ಯವಾಯಿತು.

ಹಿಂದೂಸ್ಥಾನ್ ಚಳುವಳಿ—ಹಿಂದೂಸ್ಥಾನ್ ಸ್ಕೌಟ್ ಎಸೋಸಿಯೇಶನಿನವರು ಮಂಗಳೂರು ಬಸೆಂಟ್ ಶಾಲೆಯಲ್ಲಿ ಮೇ ತಾ. 5 ರಿಂದ 10ರವರೆಗೆ ಪ್ಲೋಕ್ (Flock) ಲೀಡರರ ತರಬೇತಿ ನಡೆಸುವರು. ಮಂಜೇಶ್ವರದ ಅನಂತೇಶ್ವರ ಹಾ. ಎ. ಶಾಲೆಯಲ್ಲಿ ಮೇ ತಾ. 11ರಿಂದ 16ರವರೆಗೆ ಕಬ್ ಮಾಸ್ತರರ ಕ್ಯಾಂಪು ಶ್ರೀ. ಯಂ. ಬಡಗೇರ ಪಾಲನೆಯವರಿಂದ ನಡೆಸಲ್ಪಡುವುದು.

ಎಡಿಶನಲ್ ಸಬ್ ಕೋರ್ಟು—ಮಂಗಳೂರಿನ ಎಡಿಶನಲ್ ಸಬ್ ಕೋರ್ಟನ್ನು ತಾ. 22-4-40 ರಿಂದ ಒಂದು ವರ್ಷದ ವರೆಗೆ ಮುಂದುವರಿಸಿರುವರು.

ಜಿ. ಕೋರ್ಟಿನಲ್ಲಿ ಹೊಸ ನೇಮಕ—ಇದೇ ಬರುವ ಜೂನ್ ತಾ. 1ರಲ್ಲಿ ನಿವೃತ್ತರಾಗಿರುವ ಜಿ. ಕೋರ್ಟು ಶಿರಸ್ತೇದಾರರಾದ ಶ್ರೀ. ಬಿ. ಸಿ. ಅನಂತ ಅಯ್ಯರವರ ಸ್ಥಾನಕ್ಕೆ ಶ್ರೀ. ಕೊಲ್ನಾಡು ರಾಮಚಂದ್ರರಾಯರು ನೇಮಕಹೊಂದಿರುವರು. ಶ್ರೀ. ನಂದಿಕೂರು ಸೀತಾರಾಮ ಉಪಾಧ್ಯಾಯ ಬಿ. ಎ. ಇವರು ಜಿ. ಕೋರ್ಟು ಹೆಡ್ ಕ್ಲಾರ್ಕರಾಗಿಯೂ, ಮಿ. ಬಿ. ಯಂ. ಡಿ'ಸೋಜರು ಜಿ. ಕೋರ್ಟು ಟ್ರಾನ್ಸ್ಲೇಟರರಾಗಿಯೂ, ಕುಂದಾಪುರ ಡಿ. ಮು. ಕೋರ್ಟಿನ ಕ್ಲಾರ್ಕ ಮಿ. ಅಬ್ದುಲ್ ಕರೀಂ ಸಾಹೇಬರು ಜಿ. ಕೋರ್ಟಿನ ಕಾಪಿಯಿಸ್ಟ್ ಸುಪರಿಂಟೆಂಡೆಂಟರಾಗಿಯೂ ನೇಮಕಹೊಂದಿರುವರು.

ಮೂಲ್ಕಿರ ಶ್ರೀರಾಮ ಸೇವಾಸಮಿತಿ— ಈ ಸಂಘದ ವಾರ್ಷಿಕೋತ್ಸವದ ಮಹಾಸಭೆಯು ಶ್ರೀ ರಾಂದಾ ಬಿಲ್ಡಿಂಗಿನಲ್ಲಿ ಕಳೆದ ವಾರ ನಡೆಯಿತು.

ಶೋಚನೀಯ ನಿಧನ— ಮಂಗಳೂರಿನ ಸುಪ್ರಸಿದ್ಧ ಸಾಹಿತಿಗಳಾದ ಶ್ರೀಮಾನ್ ಯಂ. ಎನ್. ಕಾಮತರು ಕಳೆದ ತಾ. 24ನೇ ಸಾಯಂಕಾಲ ತಮ್ಮ 57 ವರ್ಷ ಪ್ರಾಯದಲ್ಲಿ ದಿವಂಗತರಾದರೆಂದು ತಿಳಿಸಲು ತುಂಬ ವಿಷಾದಪಡುತ್ತೇವೆ. ದಿವಂಗತರು ಸ್ವಲ್ಪ ಅಸೌಖ್ಯದಿಂದಿದ್ದರು. ಆದರೆ ಇಷ್ಟು ಬೇಗನೆ ಅವರು ಕಣ್ಮರೆಯಾಗುವರೆಂದು ಯಾರೂ ಭಾವಿಸಿರಲಿಲ್ಲ. ದಿವಂಗತರ ನಿಧನದಿಂದ ಅವರ ಬಂಧುಮಿತ್ರರಿಗುಂಟಾದ ದುಃಖದಲ್ಲಿ ನಮ್ಮ ಸಹಾನುಭೂತಿಯನ್ನು ವ್ಯಕ್ತಗೊಳಿಸುತ್ತೇವೆ.

ಉಡುಪಿ

ಮುನಿಸಿಪಲ್ ಸಭೆ—ಉಡುಪಿ ಮುನಿಸಿಪಲ್ ಕೌನ್ಸಿಲಿನ ಸಾಮಾನ್ಯ ಸಭೆಯೊಂದು ತಾ. 29-4-'40ನೇ ಸೋಮವಾರ ಸಂಜೆ ಚೆಯರ್ಮೆನ್ ಶ್ರೀ ಎ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕ್ರಿಶ್ಚಿಯನ್ ಸೀಟಿಗೆ ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿಸಲ್ಪಟ್ಟ ಮಿ. ರೂಡಲ್ಫ್ ಎ. ಸ್ವಾಮಿನ್ನರು ಬೈಬಲ್ ಪುಸ್ತಕ ಹಿಡಿದುಕೊಂಡು ರಾಜಭಕ್ತಿ ಪ್ರಮಾಣವನ್ನು ಮಾಡಿದರು. ದೀವಟಿಂಧ ಸಿ. ಎಫ್. ಎಂಡ್ರ್ಯೂಸರ ನಿಧನದ ಕುರಿತು ಸಂತಾಪಸೂಚಕ ಠರಾವಾಯಿತು. ಮುನಿಸಿಪಲ್ ಮ್ಯಾನ್ ಶಾಲೆಯ ಕಟ್ಟೋಣವನ್ನು ವಿಸ್ತರಿಸುವರೆ ರೂಪಾಯಿ 1900/- ಅಂದಾಜು ಖರ್ಚು ಸಂಕ್ಷೇ

ದುಃಖಸೂಚಕ ಸಭೆ— ನಿನ್ನೆಯ ದಿನ ಸಾಯಂಕಾಲ ಕೆನರಾ ಹೈಸ್ಕೂಲಿನಲ್ಲಿ ಮಿತ್ರಮಂಡಳಿಯ ಆಶ್ರಯದಲ್ಲಿ ಒಂದು ದುಃಖಸೂಚಕ ಸಭೆಯು ಶ್ರೀ ಕೆ. ಗೋಪಾಲರಾಯರ ಅಧ್ಯಕ್ಷತೆಯಲ್ಲಿ ಸೇರಿತು. ವಿದ್ವಾನ್ ಕಡೆಂಗೋಡ್ಲು ಶಂಕರಭಟ್ಟರು ದಿವಂಗತ ಎಂ. ಎನ್. ಕಾಮತರ ಗುಣಕಥನ ಮಾಡಿ ಅವರು ಸಾಹಿತ್ಯಪ್ರಪಂಚದಲ್ಲಿ ಮಾಡಿದ ಮಹತ್ಕಾರ್ಯಗಳನ್ನು ವಿವರಿಸಿ ಅವರಿಗೆ ತಕ್ಕುದಾದ ಒಂದು ಸ್ಮಾರಕವನ್ನು ನಿರ್ಮಿಸುವುದು ಮಂಗಳೂರಿನ ಕರ್ತವ್ಯವಿದೆಯೆಂದರು. ಶ್ರೀ. ಎಚ್. ಭೀಮರಾಯರು ತಮಗೆ ಶ್ರೀ. ಕಾಮತರೊಡನಿದ್ದ ವಾತ್ಸಲ್ಯವನ್ನು ತಿಳಿಸಿ ಸ್ಮಾರಕದ ಅಭಿಪ್ರಾಯವನ್ನು ಒತ್ತಿ ಹೇಳಿದರು. ಶ್ರೀ. ಗೋಪಾಲರಾಯರು ದಿವಂಗತರ ಸಾಹಿತ್ಯಸೇವೆಯ ಕುರಿತು ಮಾತಾಡಿದರು. ಅನಂತರ ಶ್ರೀ. ಯಂ. ಎನ್. ಕಾಮತರ ನಿಧನದ ಬಗ್ಗೆ ಸಂತಾಪ ಸೂಚಿಸಿ ಠರಾವಾಯಿತು. ಎಲ್ಲರೂ ಎದ್ದು ನಿಂತು ಠರಾವನ್ನು ಮಂಜೂರುಮಾಡಿದರು.

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್—ಶ್ರೀ. ಎಮ್. ಸಿಟಿ ಎಮ್. ಚಿದಂಬರಂ ಚೆಟ್ಟಿಯಾರ್, ಮೆಂಬರ್ ಕೌನ್ಸಿಲ್ ಒಫ್ ಸ್ಟೇಟ್, ಇವರು ಮೇಲ್ಕಂಡ ಕಂಪೆನಿಯ ಡೈರೆಕ್ಟರರ ಆಮಂತ್ರಣದಂತೆ ಆ ಕಂಪೆನಿಯ ಚೆಯರ್ಮೇನರಾಗಿ ಡೈರೆಕ್ಟರ ಬೋರ್ಡಿನಲ್ಲಿರಲು ಅನುಗ್ರಹಪೂರ್ವಕ ಒಪ್ಪಿರುವರು. ಮೊದಲಿನ ಚೆಯರ್ಮೇನ್ ಸ್ವೇಚ್ಛೆಯಿಂದ ನಿವೃತ್ತಿಹೊಂದಿದ್ದಾರೆ. ಈ ಕೆಳಗಿನ ಮಹನೀಯರು ಕಂಪೆನಿಯ ಬೋರ್ಡು ಮೆಂಬರರಾಗಿರುವರು ಓನರೇಬಲ್, ಶ್ರೀ. ಚಿದಂಬರಂ ಚೆಟ್ಟಿಯಾರ್ ಅವರ್ಗಳ್ (ಚೆಯರ್ಮೇನ್) ಶ್ರೀ. ಓ. ಎ. ಕೆ. ಆರ್. ಎಮ್. ಅಣ್ಣಾಮಲೈ ಚೆಟ್ಟಿಯಾರ್, ಶ್ರೀ. ಎ. ಆರ್. ರಾಮನಾಥನ್ ಚೆಟ್ಟಿಯಾರ್, ಶ್ರೀ. ಎಸ್. ಪಿ. ಸಿವಸುಬ್ರಮಣಿಯನ್.

ಪೋಲಿಸಿ ಹೋಲ್ಡರರು, ಶೇರ್ ಹೋಲ್ಡರರು ಮತ್ತು ಸಾರ್ವಜನಿಕರು ಉತ್ಸಾಹದಿಂದ ಕಂಪೆನಿಯ ಸರ್ವತೋಮುಖ ಅಭಿವೃದ್ಧಿಯ ಕಾರ್ಯದಲ್ಲಿ ಸಹಕರಿಸಬೇಕಾಗಿ ಕಂಪೆನಿಯ ಡೈರೆಕ್ಟರರು ವಿನಂತಿ ಮಾಡಿಕೊಳ್ಳುತ್ತಾರೆ.

ನ್ ಮಾಡಲಾಯಿತು. ಬ್ರಹ್ಮಗಿರಿ ಕಡೆಯಿಂದ ರಸ್ತೆಯು ಬದಿಯಲ್ಲಿರುವ ಸ್ಮಶಾನಭೂಮಿಗೆ ಆವರಣಹಾಕುವರೆ ರೂಪಾಯಿ 300/-ರಷ್ಟು ಖರ್ಚುಮಾಡಬಹುದೆಂದಾಯಿತು. ಮುನಿಸಿಪಾಲಿಟಿಯ ಚಾಲ್ತಿ ವರುಷದ ಬಜೆಟು ಸರಕಾರದ ಮಂಜೂರಾತಿ ಪಡೆಯಲು ಬಾಕಿಯಿರುವುದರಿಂದ ಈ ಖರ್ಚಿನ ಬಾಬಿನಲ್ಲಿ ಮಾತ್ರ ಶ್ರೀಗಳಾದ ಎ. ಮಂಜುನಾಥ ರಾವ್, ಯು. ಎಮ್. ಇಬ್ರಾಹಿಮ್ ಸಾಹೇಬರು ಆಕ್ಷೇಪಿಸಿದರು. ಜಿಲ್ಲಾ ಕಲೆಕ್ಟರರ ಸೂಚನೆಯ ಮೇರೆಗೆ ಮುನಿಸಿಪಲ್ ಲ್ಯಾಬ್ರರಿ, ವಾಚನಾಲಯ, ಮ್ಯೂಸಿಯಮ್‌ಗಳಿಗೆ ಜಾತಿಮತ ಭೇದವಿಲ್ಲದೆ ಎಲ್ಲರಿಗೂ ಪ್ರವೇಶವಿರಬೇಕೆಂದು ನಿರ್ಣಯವಾಯಿತು. ಲ್ಯಾಬ್ರರಿಗೆ ಶ್ರೀ. ಎಲ್. ಎಸ್. ನಾಯಕರು 19 ಪುಸ್ತಕಗಳನ್ನು ದಾನವಿತ್ತ ಬಗ್ಗೆ ಧನ್ಯವಾದಗಳನ್ನರ್ಪಿಸಲಾಯಿತು.

ಮಿ. ರೂಡಲ್ಫ್ ಸ್ವಾಮಿನ್ನರು ಹಾಜರಿದ್ದ ಕೌನ್ಸಿಲರುಗಳಿಗೂ, ಶಿಬಂಧಿಗೂ ಪತ್ರಿಕಾ ಪ್ರತಿನಿಧಿಗಳಿಗೂ ಕೌನ್ಸಿಲು ಪ್ರವೇಶದ ಸಂಭ್ರಮಸೂಚನಾರ್ಥವಾಗಿ ಟೀಪಾರ್ಟಿಯನ್ನಿತ್ತರು. ಸಾರ್ವಜನಿಕ ಕಾರ್ಯಗಳಲ್ಲಿ ಬದ್ಧಕಂಕಣರಾದ ಮಿ. ಸ್ವಾಮಿನ್ನರಿಗೆ ಸರ್ವರೂ ಶ್ರೇಯಸ್ಸನ್ನು ಕೋರಿದರು

ಮುನಿಸಿಪಲ್ ಕಮಿಶನರ್ ಶ್ರೀ. ಬಿ ಸೂರ್ಯನಾರಾಯಣ ರಾಯರಿಗೆ ಒಂದು ತಿಂಗಳ ರಜೆ ಮಂಜೂರಾಗಿದೆಯೆಂದೂ ಸದ್ಯಕ್ಕೆ ಅವರ ಸ್ಥಾನಕ್ಕೆ ಮಂಗಳೂರು ಮುನಿಸಿಪಾಲಿಟಿಯ ಮೆನೇಜರ್ ಶ್ರೀ. ಟಿ. ಹರಿಶ್ಚಂದ್ರ ರಾಯರನ್ನು ನೇಮಿಸಿದೆಯಾಗಿಯೂ ಸೂಚಿಸಿದ ಸರಕಾರೀ ಹುಕುಮನ್ನು ಓದಲಾಗಿತ್ತು. ಪ್ರೊಫೆಸರ್ ಟೆಕ್ಸ್ ರಿವಿಜನ್ ಅರ್ಜಿಗಳು ಮೇ ತಿಂಗಳಲ್ಲೇ ಇತ್ಯರ್ಥವಾಗತಕ್ಕದ್ದಿದ್ದು ಈ ಸಮಯದಲ್ಲೇ ಅನುಭವಸ್ಥ ಕಮಿಶನರು ರಜೆಪಡೆದು ಹೊಸಬರ ನೇಮಕವಾದುದರ ಅಂತರಂಗವೇನಿರಬಹುದು?

ಹಿಂದೂ ಮಹಾಸಭೆಯ ಪ್ರಚಾರ ಕಾರ್ಯ—ಕಳೆದ ತಾ. 29ರಲ್ಲಿ ರಥಬೀದಿಯಲ್ಲಿ ಹಿಂದೂ ಮಹಾಸಭೆಯ ಆಶ್ರಯದಲ್ಲಿ ಮಹಾಜನ ಸಭೆಯೊಂದು ಜರಗಿತು. ಶಿವಮೊಗ್ಗದ ಶ್ರೀ. ಕೃಷ್ಣರಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಆರ್. ಮಂಜುನಾಥ ಶೆಣೈ, ಎ. ಸೀತಾರಾಮಯ್ಯನವರು ಹಿಂದೂ ಮಹಾಸಭೆಯ ಧ್ಯೇಯಗಳನ್ನೆತ್ತಿ ಭಾಷಣಗಳನ್ನಿತ್ತರು. ಅಧ್ಯಕ್ಷರ ಸಮಯೋಚಿತ ಭಾಷಣವಾಗಿ ಶ್ರೀ. ಕೆ ಕೆ. ಕುಡ್ವರ ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ವರ್ಧಂತಿಯುತ್ಸವ—ಮುನಿಸಿಪಲ್ ಬಡಗಬೆಟ್ಟು ಶಾಲೆಯ ವರ್ಧಂತ್ಯುತ್ಸವವು ತಾ. 4-5-'40ನೇ ಶನಿವಾರ 5 ತಾಸಿಗೆ ಸದ್ರಿ ಶಾಲಾ ವಠಾರದಲ್ಲಿ ಮುನಿಸಿಪಲ್ ಚೆಯರ್ಮೆನ್ ಶ್ರೀ. ಎ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಲಿರುವುದೆಂದೂ ಈ ಸಮಾರಂಭಕ್ಕೆ [illegible] ಯೆಂದೂ ಸದ್ರಿ ಶಾಲಾ ಹೆಡ್ಮಾಸ್ತರರು ತಿಳಿಸುತ್ತಾರೆ.

ಉದ್ಯಾವರ—ಇಲ್ಲಿನ ಬಿ. ಇ ಯಂ. ಹಯರ್ ಎಲಿಮೆಂಟರಿ ಶಾಲಾ ವರ್ಧಂತ್ಯುತ್ಸವವು, 24-4-40ನೇಯ ಬುಧವಾರ ಉಡುಪಿ ರೇಂಜಿನ ಸೀನಿಯರ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ. ಯು. ಕೃಷ್ಣರಾವ್ B. A. L. T. ಅವರ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಸಭಿಕರ ಭಾಷಣವಾದ ಬಳಿಕ, ಅಧ್ಯಕ್ಷರು ಬೋಧಪ್ರದವೂ ಕಾಲೋಚಿತವೂ ಆದ ಭಾಷಣವನ್ನಿತ್ತರು. ಶಾಲಾ ವಿದ್ಯಾರ್ಥಿಗಳಭಿನಯಿಸಿದ 'ತೌಳವ ಸ್ವಾತಂತ್ರ್ಯ' ವೆಂಬ ಐತಿಹಾಸಿಕ ನಾಟಕವು ಅಂದು ಅಭಿನಯಿಸಲ್ಪಟ್ಟಿತು. ಸಭೆಯಲ್ಲಿದ್ದ ಮುಖ್ಯೋಪಾಧ್ಯಾಯರು ಧನ್ಯವಾದವನ್ನರ್ಪಿಸಲು ಸಮಾರಂಭವು ಕೊನೆಗೊಂಡಿತು.

ಮುಲ್ಕಿ ಫಿಶರೀಸ್ ಶಾಲೆಯ ಬಡ ವಿದ್ಯಾರ್ಥಿ ಸಂಘ—ಈ ಸಂಘವು 24-5-39 ರಲ್ಲಿ ಮುಲ್ಕಿಯಲ್ಲಿ ಸ್ಥಾಪಿಸಲ್ಪಟ್ಟು, ಹಲವು ಮಂದಿ ಹಳೆ ವಿದ್ಯಾರ್ಥಿ ಮೆಂಬರರುಗಳಿಂದ ಕೂಡಿದ್ದಾಗಿರುತ್ತದೆ. ಕಳೆದ ವರ್ಷ ಊರ ಮಹನೀಯರ ಆಶ್ರಯದಿಂದ ಸದ್ರಿ ಶಾಲೆಯ 80 ಬಡ ಮಕ್ಕಳಿಗೆ ಉಡುಪು ವಗೈರೆ ದೊರಕಿಸಿಕೊಟ್ಟಿರುತ್ತದೆ. ಸಂಘಕ್ಕೆ ಧನಸಹಾಯವನ್ನಪೇಕ್ಷಿಸಿ ಕಾರ್ಯದರ್ಶಿಯವರು ವಿನಂತಿಸಿದ್ದಾರೆ.

ಹಿರಿಯಡ್ಕ—ತಾ 25-4-40ರಲ್ಲಿ ಹಿರಿಯಡ್ಕ ಹಯರ್ ಎಲಿಮೆಂಟರಿ ಶಾಲೆಯ ಸ್ಕೌಟು ದಳದವರು ಜಯಶೀಲನಾಗಿ ಶಿಬಿರಾಗ್ನಿ ಪ್ರದರ್ಶನ ನಡೆಸಿದರು. ಅಂದಿನ ಸಭೆಯ ಅಧ್ಯಕ್ಷತೆಯನ್ನು ಶ್ರೀ. ಬಾಕ್ಯಟ್ಟು ಬೀಡು ಕೃಷ್ಣಯ್ಯ ಹೆಗ್ಡೆ, ಡಿ. ಬೋ. ಮೆಂಬರ್, ಇವರು ವಹಿಸಿದ್ದರು. ಅಧ್ಯಕ್ಷರು ಬಾಲಚರಮಂಡಳದ ಚಟುವಟಿಕೆಗಳನ್ನು ಪ್ರಶಂಸಿಸಿ, ಸ್ಕೌಟುಗಳ ಆವಶ್ಯಕತೆಯನ್ನು ವಿವರಿಸಿ ಭಾಷಣವಿತ್ತರು.

ನೋಟೀಸು—ದಕ್ಷಿಣಕನ್ನಡ ಜಿಲ್ಲಾ ಬೋರ್ಡಿಗೆ ಸಂಬಂಧಪಟ್ಟ ಶಾರ್ಕೋರು ತಾಲೂಕಿನ ಶಿರ್ವಾಲ್ ಗ್ರಾಮದಲ್ಲಿರುವ S. No.1516/6ನೇ ಸ್ಥಳವು ಕಾಸರಗೋಡಿನ ಎಲ್. ಎಫ್ ಸೆಕ್ಷನ್ ಆಫೀಸರರಿಂದ, ಮೇ 25, 1940ನೇ ಶನಿವಾರ ಅದೇ ಸ್ಥಳದಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು. ಭಾಗವಹಿಸುವವರು ಪ್ರಥಮತಃ 10 ರೂ. ಡಿಪೋಸಿಟ್ ಕಟ್ಟಬೇಕು ಮತ್ತು ವಹಿಸಿಕೊಂಡವರು ಏಲಮಾದ ಮೊತ್ತದ ಪೂರ್ಣ ಹಣವನ್ನು ಆ ದಿನವೇ ತೆರತಕ್ಕದ್ದು ಎಂದು ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಡಾ. ಪಟ್ಟಾಲ ಶೆಟ್ಟರು ತಿಳಿಸುತ್ತಾರೆ.

ಫರಂಗಿ ಪೇಟೆ—ಫರಂಗಿ ಪೇಟೆ ಶ್ರೀ ರಾಮಾ ಹಾಯರ್ ಎಲಿಮೆಂಟರಿ ಶಾಲೆಯ 23 ನೆಯ ವರ್ಧಂತ್ಯುತ್ಸವವು ತಾ. 16-4-40ನೇ ಮಂಗಳವಾರ, ದಕ್ಷಿಣಕನ್ನಡ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ. ಯು. ಕೃಷ್ಣ B. A. L. T. ಯವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು. ಅಧ್ಯಕ್ಷರನ್ನು ಸ್ವಾಗತೀಕರಿಸಿದ ತರುವಾಯ 6 ಘಂಟೆಗೆ ಪ್ರಾರ್ಥನೆ, ಕಾಲಾಭಿನಂದನ, ವರದಿ ವಾಚನಗಳು ನಡೆದ ಬಳಿಕ ಅಧ್ಯಕ್ಷರಿಂದ ವಿದ್ಯಾರ್ಥಿಗಳಿಗೆ ಪಾರಿತೋಷಕಗಳು ಹಂಚಲ್ಪಟ್ಟುವು. ಅಧ್ಯಕ್ಷ ಮಹಾಶಯರು ತಮ್ಮ ಭಾಷಣದಲ್ಲಿ ಈ ಶಾಲೆಯ ವಿದ್ಯಾರ್ಥಿಗಳ ಚಟುವಟಿಕೆಗಳನ್ನು ವಿವರಿಸಿದರು. ಅಧ್ಯಾಪಕರೂ ದುಡಿಯುವುದರ ಜರಿಣಾ ಮವೇ ಜಿಲ್ಲೆಯ ಹೆಸರುವಾಸಿಯಾದ ಶಾಲೆಗಳ ಸ್ಥಾನಕ್ಕೆ ಈ ಶ್ರೀ ರಾಮಾ ಹಾ. ಎ. ಶಾಲೆಯೂ ಬರಲು ಕಾರಣವಾಯಿತೆಂದೂ ಪುರಸ್ಕರಿಸಿ ನುಡಿದರು. ತರುವಾಯ ಡಾ| ಎಫ್. ಎಚ್. ಒಡೆಯರ್ ಹುಕ್ಕು ಎಚ್ ದಾಮೋದರ ರಾಯರು ಭಾಷಣ ಕೊಟ್ಟರು. ಬಳಿಕ ಹುಡುಗರ ವಿವಿಧ ನೃತ್ಯಗಳೂ, ಆಟಗಳೂ ಪಡೆದು "ಕೃತಕ ಅಧ್ಯಯನ" ವೆಂಬ ಸಂಗೀತ ನಾಟಕವೂ, "ಅದೃಷ್ಟ" ವೆಂಬ ಪ್ರಹಸನವೂ ಅಭಿನಯಿಸಲ್ಪಟ್ಟವು. ಹುಡುಗಿಯರಿಂದಲೇ ಅಭಿನಯಿಸಲ್ಪಟ್ಟ ಯಕ್ಷಗಾನ ನಾಟಕದ ಒಂದು ದೃಶ್ಯವು ಪಠ ಚಿತ್ತಾಕರ್ಷಕವಾಗಿತ್ತು. ಆ ಬಳಿಕ ಶಾಲಾ ಹೆಡ್ ಮಾಸ್ತರರು ಅಂದಿನ ಸಮಾರಂಭವನ್ನು ನೆರವೇರಿಸಲು ಸಹಾಯಕರಾದ ಸರ್ವರಿಗೂ ಕೃತಜ್ಞತಾ ವಂದನೆಗಳನ್ನರ್ಪಿಸಿದರು. ಸುಮಾರು ರಾತ್ರಿ ಘಂಟೆ 10ಕ್ಕೆ ಅಂದಿನ ಸಮಾರಂಭವು ಕೊನೆಗೊಂಡಿತು. ಮುಂದಿನ ದಿನ ಶಾಲಾ ವಿದ್ಯಾರ್ಥಿಗಳಿಂದ ಸಹಭೋಜನವು ವಿಧ ವ್ಯಾಪಾರಿ ಹಸ್ತ ಪ್ರದರ್ಶನವು ಶ್ರೀ K. ಕಾರಮುರಂಗ ಪೈಗಳವರಿಂದ ತೆರೆಯಲ್ಪಟ್ಟಿತು.

ನೋಟೀಸು.

The Vijaya Bank, Limited.,

KAUP.

ದಿ. ವಿಜಯಾ ಬೇಂಕ್ ಲಿಮಿಟೆಡ್, ಕಾಪು.

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಆಧಾರದ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡದೆ ಬಡ್ಡಿ ಸಹ ಕಟ್ಟದ ಸಮಯ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದ ಸದ್ರಿಯವರಿಗೆ ಬಟ್ಟೆ ರಿಜಿಸ್ಟ್ರಿ ನೋಟೀಸು ಜಾರಿ ಆಗದೆ ವಾಪಾಸು ಬಂದಿರುವುದರಿಂದ ಈ ಮೂಲಕ ಜಾಹೀರುಪಡಿಸುವುದೇನೆಂದ್ರೆ—

ಸದ್ರಿ ನಗಗಳನ್ನು 4-5-1940ನೇ ಶನಿವಾರ ಮಧ್ಯಾಹ್ನ ಘಂಟೆ 1ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂ ಅದೇ ದಿವಸ ಸಂಪೂರ್ಣ ಆಗದೆ ಇದ್ದರೆ ಬೇಂಕಿಗೆ ಯುಕ್ತಕಂಡ ದಿವಸಕ್ಕೆ ಮುಂದುವರಿಸಲ್ಪಡುವುದು. ತಿಳಿದಿರುವುದು.

ಸಾಲದ ನಂಬ್ರ	ಅಸಾಮಿಯ ಹೆಸರು	ಸಾಲದ ಮೊಬಲಗು
16/38	ಚಂದ್ರ ಮರಕಾಲ, ಗುರುವ ಮರಕಾಲನ ಅಳಿಯ ಕಾಪು ಪಟ್ಣ, ಮೂಡ ಗ್ರಾಮ.	60—0—0.

Office of the Bank KAUP. Date 25-4-1940

K. Sitaram Shetty,
Agent in charge.

ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ.

(ಯಥಾರ್ಥ ಪ್ರಶ್ನೆಗೆ ಯಥಾರ್ಥ ಉತ್ತರ, ವ್ಯಂಗ್ಯ ಪ್ರಶ್ನೆಗೆ ವ್ಯಂಗ್ಯ ಉತ್ತರ ಕೊಡಲಾಗುವುದು)

ನಮ್ಮ ಒಪ್ಪಿಗೆ

"ಪ್ರಶ್ನೋತ್ತರಗಳನ್ನು ಪ್ರಕಟಿಸುವದು ಆಧುನಿಕ ಪತ್ರಿಕಾಯುಗದ ಧರ್ಮವಾಗಿ ಹೋಗಿದೆ. ಗಹನ ವಿಷಯಗಳ ಕುರಿತು ಚುಟುಕಿನಿಂದ ತಿಳಿಸುವದಕ್ಕೂ ನ್ಯಾಯಾನ್ಯಾಯಗಳ ತೀರ್ಮಾನಕ್ಕೂ ಪ್ರಶ್ನೋತ್ತರಗಳಷ್ಟು ಸುಗಮವಾದ ದಾರಿ ಬೇರೊಂದಿಲ್ಲ. ನೀವೇಕೆ ಅದಕ್ಕೆ ಮನಸ್ಸುಕೊಡಬಾರದು?"– ಸಿ. ಆರ್. ಆರ್, ಬೆಂಗಳೂರು.

ನಿಮ್ಮಲ್ಲಿ ಈ ಯೋಚನೆ ಮೂಡಿದಂತೆಯೇ ನಾವೂ ಹಾಗೆಂದು ಯೋಚಿಸಿದ್ದೆವು. ಹೀಗೆ ಏಕ ಕಾಲದಲ್ಲಿ ಇತ್ತಂಡದವರೂ ಸನ್ನದ್ಧರಾದುದರಿಂದ 'ಕೇಳುವದಕ್ಕೂ ಹೇಳುವದಕ್ಕೂ ಇದು ಸಮಯ!'

ಅದೇ ಅರ್ಥ

"ವಾರ್ಧಾದಲ್ಲಿ ಮೊನ್ನೆ ತಾನೆ ಸೇರಿದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಸತ್ಯಾಗ್ರಹ ಪ್ರಾರಂಭಕ್ಕೊಂದು ನಿಶ್ಚಿತ ಅವಧಿಯನ್ನು ತಿಳಿಸಲಿಲ್ಲ. 'ನನ್ನ ಶರ್ತಗಳು ಪೂರೈಸಲ್ಪಟ್ಟರೆ ಒಂದು ತಿಂಗಳೊಳಗೆ ಪ್ರಾರಂಭಿಸುವ ಅವಧಿ ಸೂಚಿಸಬಹುದು' ಎಂದು ಗಾಂಧಿಯವರು ಹೇಳಿ ತಿಂಗಳಾಯಿತು. ಮಹಾತ್ಮಾ ಗಾಂಧಿಯವರ ಶರ್ತಗಳಿಗೆ ದೇಶವು ಸಾಕಷ್ಟು ಬೆಂಬಲ ಕೊಟ್ಟಿಲ್ಲವೆಂದು ಇದರ ಅರ್ಥವೆ?– ಶ್ರೀ. ಎನ್. ಎಸ್. ಕೆ, ಮಂಗಳೂರು.

ಹಾಗಲ್ಲದೆ ಮತ್ತೇನು ಗಾಂಧಿಯವರು ಒಂದು ತಿಂಗಳ 30 ದಿನಗಳನ್ನು ಕೂಡಿಸುವದರಲ್ಲಿ ತಪ್ಪಿ ಬಿದ್ದರೆಂಬ ಅರ್ಥವೆ?

ತರಬೇತಿಯಿದ್ದ ಕಾರ್ಯ

"ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸತ್ಯಾಗ್ರಹ ಪ್ರತಿಜ್ಞೆ ತೆಗೆದುಕೊಂಡ ಕೆಲವು ಮಹನೀಯರುಗಳ ಹೆಸರು ಕೇಳುವಾಗ ನನಗೂ ಉತ್ಸಾಹವೇಳುತ್ತದೆ. ಸತತ ಖಾದಿ ಧರಿಸುವ ಮತ್ತು ನೂಲುವ ಪ್ರತಿಜ್ಞೆಗೆ ಸಹಿಹಾಕಿದ ಕೆಲವು ಮಹನೀಯರಲ್ಲಿ ನಾಟಕದ ಡ್ರೆಸ್ಸಿನಂತೆ ಸಭೆಗಳ ಅಧ್ಯಕ್ಷತೆ ವಹಿಸುವದಕ್ಕೆ ಮಾತ್ರ ಮಾಡಿಟ್ಟಿರುವ ಒಂದೊಂದು ಜತೆ ಖಾದಿ ಪೋಷಾಕು ಇದೆ ಎಂಬುದನ್ನು ನಾನು ಪ್ರತ್ಯಕ್ಷ ಕಂಡು ಬಲ್ಲೆ; ಇಂಥವರ ಮುಂದೆ ಚರಕವನ್ನು ತಂದಿಟ್ಟು, ಇದರಲ್ಲಿ ತಿರುಗಿಸುವ ಹಿಡಿ ಯಾವುದು ಎಂದು ಪ್ರಶ್ನಿಸಿದರೆ ಉತ್ತರ ಕೊಡಲು ಹದಿನೈದು ಮಿನಿಟು ಬೇಕಾದೀತು. ಈ ತರಗತಿಯ ಮಹನೀಯರೂ ಸತ್ಯಾಗ್ರಹ ಪ್ರತಿಜ್ಞೆಗೆ ದಸ್ಕತು ಹಾಕಿದುದರ ಮರ್ಮವೇನು?" ಎಮ್. ವಿ. ಎಸ್. ಮಂಗಳೂರು.

ಸಾವಧಾನ! ಆ ಮಹನೀಯರ ಕಷ್ಟದ ರೀತಿ ನಿಮ್ಮಷ್ಟೇ ನಮಗೂ ಗೊತ್ತು. ಆದರೆ ಚರಕಾ ಹಿಡಿಯುವಷ್ಟು ಕಷ್ಟ ಪ್ರತಿಜ್ಞೆಗೆ ಸಹಿ ಹಾಕುವ ಪೆನ್ನು ಹಿಡಿಯುವುದರಲ್ಲಿಲ್ಲ. ಅವರು ಸಹಿ ಹಾಕಿದ್ದು ಮಾತ್ರ; ಅದರಲ್ಲೂ ಅವರಿಗೆ ತರಬೇತಿಯಿಲ್ಲವೆನ್ನುವಿರಾ?

ಉಪ್ಪುಪೆಟ್ಟಿ ನಿದ್ರೆ

"ಉಡುಪಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯಿಲ್ಲ; ರಾಷ್ಟ್ರೀಯ ವಾರದ ಸುದ್ದಿಯಿಲ್ಲ. ಕುಗ್ಗಿನಂತಹ ಪರೀಕ್ಷಾ ಕಾಲದಲ್ಲಿಯೂ ಉಡುಪಿ ಕಾಂಗ್ರೆಸ್ ಕಮಿಟಿಗೆ ಎಚ್ಚರವಾಗಿಲ್ಲ. ನಿಮ್ಮ ಪತ್ರಿಕೆ ಉಡುಪಿಯಲ್ಲಿಂದಲೇ ಹೊರಡುವದಿದ್ದರೂ ಅವರನ್ನು ಎಚ್ಚರಿಸುವ ಗೊಡವೆಗೆ ಹೋಗಲಿಲ್ಲ. ಇವೆಲ್ಲಾ ಕರ್ತವ್ಯಬಾಹಿರತನಗಳಲ್ಲವೆ?" ಜಿ. ಎಸ್. ಉಡುಪಿ.

ನಿಜವಾಗಿ ನಿದ್ರೆ ಬಂದವರನ್ನು ಎಚ್ಚರಿಸಬಹುದು; ಪರೀಕ್ಷಾ ಕಾಲ ಬಂದಾಗ ಬೇಕೆಂದು ಕಣ್ಣುಮುಚ್ಚಿದವರನ್ನು ಎಚ್ಚರಿಸುವ ವಿದ್ಯೆ ನಮಗರಿತಿಲ್ಲ. ನಮ್ಮಿಂದಾಗದು—ಇಲೆಕ್ಷನ್ ಬರಲಿ!

ತಪ್ಪು ಪಾಲನೆ

"ರಾಷ್ಟ್ರಪತಿ ಆಜಾದರು, ಸ್ಥಳೀಕ ಸಂಸ್ಥೆಗಳ ಕಾಂಗ್ರೆಸ್ ಮೆಂಬರರು ರಾಜೀನಾಮೆ ಕೊಡಬೇಕಾಗುವದೆಂದು ಎಚ್ಚರಿಸಿದ್ದರು. ಆದರೆ ಕಾಂಗ್ರೆಸ್ ಕಮಿಟಿಯವರು ಅದಕ್ಕೆ ನಿಗಾ ಕೊಡದಿರಲು ಕಾರಣವೇನಿರಬಹುದು?" ವಿ. ಎಸ್. ಆರ್. ತುಮಕೂರು

ಸ್ಥಳೀಕ ಸಂಸ್ಥೆಗಳು ನಮ್ಮ ಸರಕಾರದ ಪ್ರತ್ಯಕ್ಷ ಅಂಗಗಳಲ್ಲವೆಂಬುದು ಅವರ ಕಾರಣವಿರಬಹುದು; ಪರಿಶುದ್ಧ ಅಹಿಂಸೆಯನ್ನು ಸಾರುವ ಕಾಂಗ್ರೆಸ್ಸು, ತನ್ನ ಸದಸ್ಯರಲ್ಲಿ ಹೆಚ್ಚಿನವರ ಹೃದಯ ಸ್ತಂಭನಗೊಳಿಸುವ ಹಿಂಸೆಗೆ ಸಿದ್ಧವಿಲ್ಲದಿರುವದೂ ಒಂದು ಕಾರಣವೆಂದು ನಮಗನ್ನಿಸುತ್ತದೆ.

'ಹತ್ತಿರವಿದ್ದರೆ ಹದಿನಾರು ಶತ್ರು!'

"ನನ್ನ ನೆರೆಮನೆಯ ಹುಡುಗಿಯ ಮೇಲೆ ನನಗೆ ಪ್ರೇಮವಿದೆ; ಅವಳಿಗೂ ನನ್ನಲ್ಲಿ ಅನುರಾಗವಿದೆ ಆದರೆ ನಮ್ಮಿಬ್ಬರ ಮನೆಯವರೊಳಗೆ ದೀರ್ಘ ಕಾಲದ ದ್ವೇಷವಿದೆ. ಅದರಿಂದಾಗಿ ನಮ್ಮ ವಿವಾಹದ ಪ್ರಶ್ನೆಯೆತ್ತಲು ಆಗುವದಿಲ್ಲ; ನಾವಿಬ್ಬರು ಒಟ್ಟಾಗುವದಕ್ಕೂ ಆಗುವುದಿಲ್ಲ. ಗುಟ್ಟು ಹೇಳುವದಾದರೆ ಇಬ್ಬರೂ ಜೈಲೊಳಗಿದ್ದಂತೆ ಇದ್ದೇವೆ. ಈ ಸಂಕಷ್ಟದಿಂದ ಹೇಗೆ ಪಾರಾಗಬಹುದು?–ಎಸ್. ಎ. ಎಚ್. ಶಿರ್ಸಿ.

ಗೊಂದಲಗೊಳ್ಳಬೇಡಿ; ಎಂದಿಗೂ ನಿಮ್ಮಿಬ್ಬರ ಮನೆಗಳ ನಡುವಿನ ಗೋಡೆ ಹಾರುವ ಮನಸ್ಸು ಮಾಡಬೇಡಿ. ಜೈಲೊಳಗೆ ಇದ್ದಂತೆ ಇರುವ ಬದಲಿಗೆ ಪ್ರತ್ಯಕ್ಷ ಇರುವ ಸಂಭವ ಬಂದೀತು! ಎರಡು ಮನೆಗಳು ಹತ್ತಿರವಿದ್ದುದೇ ಹಿರಿಯರೊಳಗಿನ ವೈಷಮ್ಯಕ್ಕೂ ನಿಮ್ಮೊಳಗಿನ ಪ್ರೇಮಕ್ಕೂ ಕಾರಣ. ನಿಮ್ಮಿಬ್ಬರ ಹೃದಯ ದೂರವಾಗಲೊಲ್ಲದಾದರೆ, ನೀವಿಬ್ಬರೂ ಮನೆಯಿಂದ ದೂರವಾಗುವದು ವಾಸಿ.

ಅವರ ಏಕಾದಶಿ!

"ಈಗೀಗ ಅನ್ನ ಸತ್ಯಾಗ್ರಹ ಹಿಡಿಯುವ ಚಟವು ಬೆಳೆಯುತ್ತಾ ಬರುತ್ತಿದೆ. ಮಂಗಳೂರಿನಲ್ಲಿ ಶ್ರೀ. ವೆಂಕಟಪ್ಪಯ್ಯ ಬಾಳಿಗರ ಮನೆ ಮುಂದೆ ಇಬ್ಬರು ಸತ್ಯಾಗ್ರಹಿಗಳು ಒಟ್ಟಿಗೆ ಒಂದು ದಿನದ ಉಪವಾಸ ಮಾಡಿದರು. ಡಾ ಯು. ಪಿ ಮಲ್ಯರ ಭರವಸೆಗೊಪ್ಪಿ ಉಪವಾಸ ಬಿಟ್ಟರು. ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು?" ಯು. ಕೆ. ಕಾ, ಮಂಗಳೂರು.

ಸತ್ಯಾಗ್ರಹಿಗಳು ಮುಂದಿಟ್ಟ ಕಾರಣ ಯಥಾರ್ಥವಾದುದು; ಆದರೆ ಅವರ ಉಪವಾಸಕ್ಕೆ ಅರ್ಥವಿಲ್ಲ. ಅದು ಜಯಶೀಲವಾಗಲೂ ಇಲ್ಲ. ಸ್ಪಷ್ಟ ಹೇಳುವದಾದರೆ ಅವರು ತಿಥಿ ತಪ್ಪಿಸಿ ಏಕಾದಶೀ ಆಚರಣೆ ಮಾಡಿದರು!

ಪರೋಪಕಾರವಲ್ಲ–ಸ್ವಕಾರ್ಯ

"ಹರಿಜನೋದ್ಧಾರವೆಂದು ಮೇಲ್ಜಾತಿಯವರಾದ ನಾವು ಅವರನ್ನು ಸಮಾನತೆಯಿಂದ ಕಾಣುತ್ತಿದ್ದೇವಾದರೂ ಹರಿಜನರೊಳಗೆ ಇನ್ನೂ ಭೇದವಿದೆ. ಮುಂಡಾಳರು ಕೊರಗರನ್ನು ಮುಟ್ಟುವದಿಲ್ಲ. ಮೇಲ್ಜಾತಿಯ ಹರಿಜನರು ಕೀಳ್ಜಾತಿಯ ಹರಿಜನರನ್ನು ಸ್ಪರ್ಶಿಸಲು ಎಷ್ಟಕ್ಕೂ ಕೇಳುವದಿಲ್ಲ. ಅವರೊಳಗೆನೇ ಇಷ್ಟು ವ್ಯತ್ಯಾಸವಿರುವಾಗ ಅಸ್ಪೃಶ್ಯತಾ ನಿವಾರಣೆಯೆಂಬ ಸೊಲ್ಲಿಗೆ ಅರ್ಥವಿದೆಯೆ?– ಕೆ. ರಾ. ಎಸ್. ಉಡುಪಿ

ಪ್ರಥಮತಃ ವ್ಯತ್ಯಾಸವಾಗಬೇಕಾದುದು ನಿಮ್ಮಂತಹ ಹರಿಜನೋದ್ಧಾರಕರ ಮನೋಗತಿ. ನೀವು ಅಸ್ಪೃಶ್ಯತಾ ನಿವಾರಣೆಯೆಂದರೆ ಹರಿಜನರಿಗೆ ಮಾಡುವ ಉಪಕಾರವೆಂಬ ಭಾವನೆ ಬಿಟ್ಟು ಸ್ವಕರ್ತವ್ಯ ಪಾಲನೆ ಎಂದು ಭಾವಿಸಿಕೊಂಡಲ್ಲಿ ಈ ಆಕ್ಷೇಪ ಹೂಡಲು ಮತ್ತೆ ನಿಮ್ಮಿಂದಾಗದು. ಹರಿಜನರು ನಿತ್ಯ ಸ್ನಾನ ಮಾಡದಿದ್ದರೆ ನೀವೂ ಮಾಡದಿರುವಿರಾ? ಹರಿಜನರೊಳಗಿನ ಭೇದಕ್ಕೆ ಮೇಲ್ಪಂಕ್ತಿ ಹಾಕಿದವರು ಮೇಲ್ಜಾತಿಯವರೇ. ಅವರದನ್ನು ತಿದ್ದಿಕೊಳ್ಳಬೇಕು; ಉತ್ತಮ ಮಾದರಿಯನ್ನು ಹಾಕಿಕೊಡಬೇಕು; ಕೊನೆಗೆ ಹರಿಜನರು ತಮ್ಮೊಳಗಿನ ವ್ಯವಹಾರದಲ್ಲೂ ಅದನ್ನು ಅನುಕರಿಸಬೇಕು; ಹೀಗೆ ಅನುಕ್ರಮವಾಗಿ ಮೆಟ್ಟಲು ಹತ್ತಬೇಕು.

ಸುಲಭೋಪಾಯ

"ಕಾರ್ಕಳದಿಂದ ಮೂಡಬಿದ್ರಿ ವರೆಗಿನ ರಸ್ತೆಯು ಬಹಳ ಕೆಟ್ಟು ಹೋಗಿದೆ. ಜಿಲ್ಲೆಯೊಳಗಿನ ಪ್ರಾಮುಖ್ಯ ರಸ್ತೆಯಲ್ಲೊಂದಾದ ಇದರ ಇಂತಹ ದುರವಸ್ಥೆಯು ಜಿಲ್ಲಾ ಬೋರ್ಡಿನವರ ಗಮನಕ್ಕೆ ಬಂದಿಲ್ಲವೆನ್ನಲು ಕಾರಣವಿಲ್ಲ. ಆದರೂ ರಸ್ತೆಯು ಯೋಗ್ಯ ರೀತಿಯಲ್ಲಿ ರಿಪೇರಿಯಾಗಲಿಲ್ಲ. ಆ ಕಡೆಗೆ ಜಿಲ್ಲಾ ಬೋರ್ಡಿನ ಲಕ್ಷ್ಯವನ್ನೆಳೆಯುವ ಉಪಾಯವೇನು?"– ಜಿ. ಎಸ್. ಎಮ್. ಕಾರ್ಕಳ.

ಉಪಾಯವೊಂದೇ ಗತಿಯೆ? ಹಾಗಾದರೆ ಮೂಡಬಿದ್ರೆಯಿಂದ ಕಾರ್ಕಳದ ವರೆಗಿನ ಶಾಲೆಗಳು ಮಾರ್ಕೆಟುಗಳು ಮತ್ತು ಯಾವುದೇ ವಿಧದ ಸಾರ್ವಜನಿಕ ಸದನಗಳು, ಇವೆಲ್ಲಾ ವರ್ಧಂತ್ಯುತ್ಸವಗಳನ್ನು ಆಚರಿಸಲಿ. ಅಧ್ಯಕ್ಷತೆಗೆ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರನ್ನೇ ಆನೆ, ಬೇಂಡುಗಳ ಗದ್ದಲದೊಡನೆ ಬರಮಾಡಿಸಿಕೊಳ್ಳಿ. ಅವರು ಎಂಟು ಹತ್ತು ಬಾರಿ ಆ ರಸ್ತೆಯಲ್ಲಿ ಬಂದು ಹೋಗುವಂತಾಗಲಿ.

ನಮ್ಮ ರಕ್ಷಣೋಪಾಯ

"ಭಾರತದ ಮೇಲೆ ಪರದೇಶೀಯರ ಧಾಳಿ ನಡೆಯಲೂ ಬಹುದೆಂದು ನಾನಾ ವಿಧದಲ್ಲಿ ಊಹಾಪೋಹಗಳೆದ್ದಿವೆ. ಸಂಗತಿ ಸುಳ್ಳಾಗಲಿ ಎಂದು ನಾವೂ ಹಾರೈಸುತ್ತೇವೆ. ಆದರೆ ಒಂದೊಮ್ಮೆಗೆ ಆಂತಹ ಗಂಡಾಂತರವೊದಗುವದಾದರೆ ಪರಕೀಯರ ಧಾಳಿಯನ್ನು ತಡೆಗಟ್ಟುವ ಯಾವ ಉಪಾಯ ನಮ್ಮಲ್ಲಿದೆ?"

ಕಾರ್ಕಳ–ಮೂಡಬಿದ್ರೆ ರಸ್ತೆಯಂತಹ ರಸ್ತೆಗಳು ನಮ್ಮಲ್ಲಿವೆ; ರಸ್ತೆ ದುರಸ್ತಿಯನ್ನು ಕಂಟ್ರಾಕ್ಟಿಗೆ ಕೊಡುವ ಅಧಿಕಾರ ನಮ್ಮ ಜಿಲ್ಲಾ ಬೋರ್ಡುಗಳಿಗಿದೆ.

—ಸ್ಪಷ್ಟವಾದಿ.

THE
BOMBAY LIFE ASSURANCE
Company Limited.
[ESTD. 1908]
COMPARE
Your Life Assurance with any other property you possess what is its guaranteed value
If you live–today–a few years more–when you are old?
If you die–to your family and dependants?
REMEMBER THAT If you live, Life Insurance takes the place of your professional income during your old age.
If you die, it provides your family with enough income for their maintenance and the education of your children.
"BOMBAY LIFE" offers all that is best in Life Assurance.
1938 Record.

Completed Business	... ...	Rs. 1,44,91,000
Life Assurance Fund	... ..	Rs. 1,17,69,748
Total Assets	... ...	Rs. 1,31,28,998

To Insure or to represent it pays you to consult
KOCHIKAR BROTHERS LTD.,
MADRAS BRANCH SECRETARIES,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI.

Post Box No. 337, Mount Road, MADRAS	Visweswarapuram Circle, BANGALORE CITY.	Charni Road, Girgaum, BOMBAY No. 4.
Car Street, MANGALORE.	Puttaiyara, CALICUT.	Central Station Road, TRIVANDRUM.

ಕಷಾಯ ಬಿಂದು

ಶ್ರೀ. ಲಠ್ಠೆಯವರು ಬೊಂಬಾಯಿಯ ಮಾಜಿ ಕಾಂಗ್ರೆಸ್ ಮಂತ್ರಿಗಳು. ಕಾಂಗ್ರೆಸ್ ಮಂತ್ರಿ ಮಂಡಲದಲ್ಲಿ ಇವರಿಗಿದ್ದುದು ಹಣಕಾಸಿನ ಆಡಳಿತೆ.

oo oo oo

ದುಡ್ಡಿನ ಸ್ವಭಾವವೇ ಹಾಗೆ - ನಿಂತಲ್ಲೇ ನಿಲ್ಲುವುದಿಲ್ಲ. ಶ್ರೀ. ಲಠ್ಠೆಯವರಂತೆ ಹಣಕಾಸಿನ ಆಡಳಿತ ಕೈಕೊಂಡವರು ಎಷ್ಟೋ ಮಂದಿ ಇದ್ದಾರೆ. ಆದ್ದರಿಂದ ಇವರಿಗಾಗಿ ಸ್ಪೆಶ್ಯಲ್ ಸಹಾನುಭೂತಿ ತೋರಿಸಬೇಕೆಂದಿಲ್ಲ.

oo oo oo

'ಹಬ್ಬ ತಪ್ಪಿದರೂ ಹೋಳಿಗೆ ತಪ್ಪಲಿಲ್ಲ' ಎಂಬಂತೆ ಅಧಿಕಾರ ಹೋದರೂ ಅದರ ವಾಸಿ ಹೋಗಲಿಲ್ಲ.

oo oo oo

ಬೊಂಬಾಯಿಯಲ್ಲಿ ಸತ್ಯಾಗ್ರಹ ಪ್ರತಿಜ್ಞೆಗೆ ಸಹಿ ಹಾಕುವವರು ಕೇಳುತ್ತಿದ್ದ ಪ್ರಶ್ನೆಯೊಂದೇ—"ಮಾಜಿ ಮಂತ್ರಿಗಳು ಸಹಿ ಹಾಕಿದರೆ?"

oo oo oo

ಶ್ರೀ ಲಠ್ಠೆಯವರನ್ನು ಬಿಟ್ಟು ಮಿಕ್ಕವರೆಲ್ಲಾ ಹಾಕಿದರು. "ಹಾಂ! ಇವರೇಕೆ ಹಾಕಲಿಲ್ಲ?"

oo oo oo

ಶ್ರೀ. ಲಠ್ಠೆಯವರು ಹೇಳುತ್ತಾರೆ: "ನಾನು ಪ್ರತಿಜ್ಞೆಗೆ ಸಹಿಹಾಕದಿರಬಹುದು; ಆದರೆ ಎಲ್ಲರಿಗಿಂತ ಮೊದಲು ಜೈಲಿಗೆ ಹೋಗುವುದು ನಾನೇ!"

oo oo oo

ಆಂಧ್ರ ಮಾಜಿ ಅರ್ಥಿಕ ಮಂತ್ರಿಗಳು ಪ್ರತಿಜ್ಞೆ ಬರೆದು ಕೊಡಲಿಲ್ಲ; ಬಾಯಿಯಲ್ಲಿ ಹೇಳಿದರು.

oo oo oo

ಇದರ ಗುಟ್ಟೇನು? ಪ್ರತಿಜ್ಞೆಗೆ ಸಹಿ ಹಾಕುವದರಿಂದ ಜೈಲಿಗೆ ಹೋಗುವ ಸಂದರ್ಭ ತಪ್ಪುವದೆಂಬ ಭಯವಿದೆಯೆ?

oo oo oo

ಮೊದಲು ಬೇರೆಯಾಗಿ ಇದ್ದ ಶ್ರೀ ಲಠ್ಠೆಯವರನ್ನು ಮಂತ್ರಿಪದ ಸ್ವೀಕರಿಸಲು ಕಾಂಗ್ರೆಸಿನವರು ಕರೆದುದಿದೆ; ಆದರೆ ಜೈಲಿಗೆ ಕಳುಹಿಸಲು ನೋಡಿದವರಿಲ್ಲ. ಮಾವನ ಮನೆಗೆ ಹೊರಟ ಮದುಮಗಳಂತೆ ಇದಿರಿಗೆ ಸಿಕ್ಕಿದವರೊಡನೆ 'ಹೋಗಿ ಬರುತ್ತೇನೆ' ಎಂದು ಶ್ರೀ ಲಠ್ಠೆಯವರೇ ಹೇಳುತ್ತಿದ್ದಾರಲ್ಲಾ!

oo oo oo

ಸಹಿ ಹಾಕುವ ಸಂದರ್ಭ ಬಂದಾಗ "ನಾನು ಅದನ್ನು ಮಾಡುವುದಿಲ್ಲ-ಜೈಲಿಗೇ ಹೋಗುತ್ತೇನೆ" ಎನ್ನುವದರ ಮರ್ಮವೇನು? ಜೈಲಾದರೂ ಆಗಬಹುದು, ಸತ್ಯಾಗ್ರಹ ಪ್ರತಿಜ್ಞೆ ಬೇಡ ಎಂಬ ಅರ್ಥವೇ?

oo oo oo

ಉಪಾಧ್ಯಾಯನ ಬೆತ್ತ ಮುಂದೆ ಬಂದೊಡನೆ "ನಾನು ಬರೆಯುತ್ತೇನೆ, ಸಾರ್!" ಎಂದು ವಿದ್ಯಾರ್ಥಿ ಸ್ಲೇಟನ್ನು ಅಡ್ಡ ಹಿಡಿಯುವದಿದೆ. ಬರೆಯುವ ಜ್ಞಾನದಿಂದಲ್ಲ-ಬೆತ್ತವನ್ನು ಹಿಂದೆ ಕಳುಹಿಸುವದಕ್ಕಾಗಿ!

"ಕಾಂಗ್ರೆಸ್ ಮಂತ್ರಿಗಳು ಪುನಃ ಅಧಿಕಾರ ಸ್ವೀಕರಿಸಿದ ಹೊರತು ಜಾತೀಯ ಬಿಕ್ಕಟ್ಟು ಒಂದು ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಕಾಂಗ್ರೆಸು ಪುನಃ ಅಧಿಕಾರ ಸ್ವೀಕರಿಸಬೇಕು" ಎಂದು ವೈಸರಾಯರ ಎಕ್ಸಿಕ್ಯುಟಿವ್ ಕೌನ್ಸಿಲಿನ ಮಾಜಿ ಸದಸ್ಯರಾದ ಸರ್. ಜಗದೀಶ ಪ್ರಸಾದರೆನ್ನುತ್ತಾರೆ

oo oo oo

"ಸರ್. ಪ್ರಸಾದರ ಮಾತು ಸಂಪೂರ್ಣ ಸತ್ಯ. ಕಾಂಗ್ರೆಸು ಪದವಿ ಬಿಟ್ಟುದರಿಂದ ದೇಶ ಹಿತ ಸಾಧಿಸುವ ಅದರ ಬಲ ಬಗಿದಾಗುತ್ತಾ ಬಂದಿದೆ" ಎಂದು ಇಂಡಿಯಾ ಸರಕಾರದ ಮಾಜೀ ಕಾನೂನು ಮಂತ್ರಿ ಸರ್. ಎನ್. ಎನ್. ಸರ್ಕಾರರೆನ್ನುತ್ತಾರೆ.

oo oo oo

ಇಬ್ಬರು ಮಹಾಶಯರ ಹೆಸರಿನ ಹಿಂಗಡೆಯಲ್ಲೂ 'ಸರ್' ಪದವಿದೆ. ಆ ಆಧಾರದಿಂದಲಾದರೂ ಅವರ ಮಾತುಗಳ ಮುಂಭಾಗದಲ್ಲಿ 'ಸರಿ' ಎಂದು ಒತ್ತಿ ಬರೆಯಬೇಡವೆ?

oo oo oo

ಕಾಂಗ್ರೆಸು ಅಧಿಕಾರಕ್ಕೆ ಬಂದರೆ ಜಾತೀಯ ಪ್ರಶ್ನೆ ತೀರ್ಮಾನ ಹೊಂದುವದಂತೆ. ಅಂದರೆ, ಜಾತೀಯ ಪ್ರಶ್ನೆಯ ತೀರ್ಮಾನಮಾಡುವ ಅಧಿಕಾರವೇ ಬೇಕಲ್ಲವೆ?

oo oo oo

ಕಾಂಗ್ರೆಸ್ ರಾಗದ ಧಾಟಿಯೂ ಅದೇ. ಆ ಅಧಿಕಾರ ಬೇಕು; ಅದಕ್ಕಾಗಿ ಕಾನ್‌ಸ್ಟಿಟ್ಯೂಯೆಂಟ್ ಎಸೆಂಬ್ಲಿಯ ರಚನೆಯಾಗಬೇಕು-ಎಂಬುದೇ.

oo oo oo

ಆದರೆ 'ಅಧಿಕಾರ'ದ ಬದಲು ಲೋರ್ಡ್ ಝುಟ್ಲೆಂಡರಿಂದ 'ಅ-ಧಿಕ್ಕಾರ' ದೊರೆಯುತ್ತಾ ಇದೆಯಲ್ಲಾ. ಇದಕ್ಕೆ 'ಸರ್'ಗಳೇನೆನ್ನುವರು?

oo oo oo

ದೊಡ್ಡ ಮನುಷ್ಯರಲ್ಲಿ ಅಲ್ಪಬುದ್ಧಿಯಿರುವದಿಲ್ಲ. ಶಬ್ದಗಳೊಳಗಿನ ದೀರ್ಘ, ಒತ್ತಕ್ಷರಗಳನ್ನು ಗಣಿಸುವಷ್ಟು ಜಿಪುಣರು ಅವರಲ್ಲ!

ನಮ್ಮ ಮಾಜೀ ಪ್ರಧಾನ ಮಂತ್ರಿ ಶ್ರೀ. ಸಿ. ರಾಜಗೋಪಾಲಾಚಾರ್ಯರು ಒಂದೆಡೆಯಲ್ಲಿ ಮಾತನಾಡುತ್ತ, ಮಿ. ಚೇಂಬರ್ಲೇನರು ಅವತಾರಪುರುಷರೆಂದರು.

oo oo oo

ಇನ್ನು ರಾಜಾಜಿಯವರನ್ನು 'ಅವತಾರ ಬಿಟ್ಟವರು' ಎಂದು ಸಂಬೋಧಿಸುವದಕ್ಕಡ್ಡಿಯಿಲ್ಲ.

oo oo oo

ಮಿ. ಚೇಂಬರ್ಲೇನರು ಬ್ರಿಟನಿನ ಮುಖ್ಯ ಮಂತ್ರಿಗಳಾಗಿದ್ದಾರೆ. ಶ್ರೀ. ಆಚಾರ್ಯರು ಮದ್ರಾಸಿನ ಪ್ರಧಾನತ್ವ ತ್ಯಾಗ ಬಿಟ್ಟಿದ್ದಾರೆ

oo oo oo

ಮಂತ್ರಿಗಳಾಗುವದೆಂದರೆ ಅವತಾರ ಧರಿಸುವದೆಂಬ ಗುಟ್ಟು ಜನರಿಗೆ ತಿಳಿದಿರಲಿಲ್ಲ. ಅನುಭವವಿದ್ದವರೇ ಕಲಿಸಬೇಕಾಯಿತು.

oo oo oo

ಮೈಯಲ್ಲಿ ಆವೇಶ ಬಂದಾಗ ಪಾತ್ರಿಯ ನುಡಿ ಬೇರೆ; ಆವೇಶವಿಳಿದು ನಿಜ ಮನುಷ್ಯನಾಗುವಾಗ ಅವನ ಮಾತು ಬೇರೆ-ನಿತ್ಯದ ಮಾತು. ಅಂದರೆ ಆ ವೇಷ ಬೇರೆ, ಈ ವೇಷ ಬೇರೆ!

oo oo oo

ಅಂದು ಶ್ರೀ. ಆಚಾರ್ಯರು ಅವತಾರ ಧರಿಸಿದ್ದರು; ಇಂದು ಅವತಾರ ತ್ಯಜಿಸಿದ್ದಾರೆ. ಆದರೆ ಅವತಾರದ ಹೊರತು ಅನ್ಯಥಾ ನಮಗೆ ಗತಿಯಿಲ್ಲವೆಂಬುದರಿಂದ ಇದ್ದ ಅವತಾರಗಳನ್ನು ತೋರಿಸಿಕೊಡುತ್ತಿದ್ದಾರೆ!

—ಪಂಡಿತ.

Every Policyholder is a Member

IN

The Canara Mutual

ASSURANCE COMPANY, LTD.

(Head Office:- UDIPI, S India.)

Everyday the Membership increases.

The Company issues all the well-known plans of Assurance.

Female lives accepted.

JOIN ITS EVER INCREASING MEMBERSHIP.

ಸತ್ಯಾಗ್ರಹ ಹೂಡಬೇಕಾದರೆ ಸಾವಿರಬಾರಿ ಯೋಚಿಸಬೇಕು!

ಮಹಾತ್ಮಾ ಗಾಂಧಿಯವರ ಸ್ಪಷ್ಟಾಭಿಪ್ರಾಯ

'ಈ ವಾರದ 'ಹರಿಜನ' ಪತ್ರಿಕೆಯಲ್ಲಿ 'ಕಾಯಿದೇ ಭಂಗ ಚಳವಳ' ಎಂಬ ಶಿರೋನಾಮೆಯ ಕೆಳಗೆ ಗಾಂಧಿಯವರು ಸತ್ಯಾಗ್ರಹ ಚಳವಳ ಮತ್ತು ದೇಶದ ಪರಿಸ್ಥಿತಿಯ ಕುರಿತು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಕೊಟ್ಟಿರುವರು. ಅವರ ಅಭಿಪ್ರಾಯದಂತೆ ಸಾಮೂಹಿಕ ಚಳವಳವು ಬಹುಬೇಗವಾಗಿ ಪ್ರಾರಂಭಿಸಲ್ಪಡುವಂತಿಲ್ಲವೆನ್ನಬಹುದು. ಲೇಖನದ ಪ್ರಮುಖ್ಯಾಂಶಗಳನ್ನು ಕೆಳಗೆ ಕೊಡಲಾಗಿದೆ.

ಸತ್ಯಾಗ್ರಹದಲ್ಲಿ ಯಾರಿಗೂ ಕೇಡಿಲ್ಲ

ನ್ಯಾಯಬದ್ಧ ಸತ್ಯಾಗ್ರಹ ಚಳವಳವು ಯಥಾರ್ಥವಾಗಬೇಕಾದರೆ ವಿರೋಧಿಗೂ ನ್ಯಾಯವೇ ದೊರಕಬೇಕು. ತನಗೇನಾದರೂ ಕೇಡುಕು ಮಾಡುವ ಉದ್ದೇಶವದರಲ್ಲಿಲ್ಲವೆಂದು ಅವನು ತಿಳಿಯುವಂತಾಗಬೇಕು. ಅಹಿಂಸೆಯೆಂದರೆ ಅದೊಂದು ಬರಿಯ ಅನುಕೂಲತೆಯೆಂದು ಸರ್ವಸಾಧಾರಣವಾಗಿ ಇಂಗ್ಲಿಷರ ಭಾವನೆ. ಮುಸ್ಲಿಂ ಲೀಗಿನವರು ಕಾಯಿದೇ ಭಂಗವು ಬ್ರಿಟಿಷರಿಗಿಂತ ಹೆಚ್ಚಾಗಿ ತಮ್ಮನ್ನೇ ಗುರಿಯಾಗಿಟ್ಟುಕೊಂಡಿದೆ ಎಂಬ ಭಾವನೆಯಿಂದಿದ್ದಾರೆ. ಬ್ರಿಟಿಷರನ್ನು ಸಂಕಷ್ಟಕ್ಕೆ ಗುರಿ ಮಾಡುವ ಇಚ್ಛೆ-ಅದರಲ್ಲೂ ಅವರು ಬದುಕು-ಸಾವುಗಳ ಹೋರಾಟದಲ್ಲಿ ಸಿಕ್ಕಿರುವ ಈ ಕಾಲದಲ್ಲಿ ಅಂತಹ ಭಾವನೆ ನನ್ನಲ್ಲಿದೆ ಎಂಬುದನ್ನು ನಾನು ನನ್ನ ಸರ್ವ ಶಕ್ತಿಯಿಂದ ವಿರೋಧಿಸುತ್ತೇನೆ. ಬ್ರಿಟಿಷರಿಗೆ ಕಾಂಗ್ರೆಸಿನ ಸಹಕಾರದಿಂದ ದೊರೆಯುವ ನೈತಿಕ ಬಲವನ್ನು ನಿರಾಕರಿಸುವದೊಂದನ್ನೇ ಕಾಯಿದೇ ಭಂಗ ಚಳವಳದ ಮೂಲಕ ನಾನು ಅಪೇಕ್ಷಿಸುತ್ತೇನೆ. ತಮ್ಮ ಅಧಿಕಾರದಲ್ಲಿರುವ ಭಾರತದ ಸಾಮಗ್ರಿ ಮತ್ತು ಜನ ಬಲವನ್ನು ಬ್ರಿಟಿಷ ಸರಕಾರವು ಇಷ್ಟರಲ್ಲೇ ಉಪಯೋಗಿಸಿಕೊಂಡಿದೆ.

ಮುಸ್ಲಿಂ ಲೀಗಿಗೆ ಅಭಯ

ಕಾಂಗ್ರೆಸಿಗೆ ಬ್ರಿಟಿಷ ಸರಕಾರವನ್ನು ಸಂಕಟಕ್ಕೆ ಗುರಿಮಾಡುವ ಇಚ್ಛೆಯಿಲ್ಲವೆಂದಾದ ಮೇಲೆ ಮುಸ್ಲಿಂ ಲೀಗನ್ನು ದಣಿಸುವ ಭಾವನೆಯಂತೂ ಎಂದೆಂದಿಗೂ ಇಲ್ಲ. ಕಾಂಗ್ರೆಸಿನ ಪರವಾಗಿ ಬ್ರಿಟಿಷರಿಗೆ ಕೊಡುವ ಆಶ್ವಾಸನೆಗಿಂತ ಹೆಚ್ಚಿನ ಆಶ್ವಾಸನೆಯನ್ನು ಈ ಮಟ್ಟಿಗೆ ನಾನು ಲೀಗಿಗೆ ಕೊಡಬಲ್ಲೆ. ಒಂದು ಕಡೆಯಲ್ಲಿ ಅನುಮಾನ ಮತ್ತು ತಪ್ಪು ತಿಳುವಳಿಕೆ, ಇನ್ನೊಂದೆಡೆಯಲ್ಲಿ ಕಾಂಗ್ರೆಸ್ಸಿನ ಒಳಗೂ ಹೊರಗೂ ಹರಡಿರುವ ಅಕ್ರಮ ವರ್ತನೆ ಇವುಗಳಿಂದಾಗಿ ಕಾಯಿದೆಭಂಗ ಚಳವಳ ಹೂಡುವ ಮೊದಲು ನಾನು ಸಾವಿರ ಬಾರಿ ಯೋಚಿಸಿಕೊಳ್ಳಬೇಕಾಗುತ್ತದೆ. ಈ ತನಕ ನನಗೆ ಕಂಡುಬರುವ ಮಟ್ಟಿಗೆ ಸಾಮೂಹಿಕ ಸತ್ಯಾಗ್ರಹ ಪ್ರಾರಂಭಿಸುವ ಸಂಭವವಿಲ್ಲ. ದೊಡ್ಡ ಪರಿಮಾಣದಲ್ಲಿ ವ್ಯಕ್ತಿಗತ ಸತ್ಯಾಗ್ರಹವೋ, ತೀರಾ ಕಡಿಮೆ ಪರಿಮಾಣದಲ್ಲಿಯೋ, ಅಥವಾ ನಾನೊಬ್ಬನೆಯೋ ಎಂಬುದನ್ನು ನಿರ್ಧರಿಸಬೇಕಾಗಿದೆ. ಹೇಗಿದ್ದರೂ ಇಡೀ ಕಾಂಗ್ರೆಸ್ ಸಂಸ್ಥೆಯ ಮತ್ತು ಕಾಂಗ್ರೆಸ್ ರಿಜಿಸ್ಟ್ರಿಯಲ್ಲಿಲ್ಲದಿದ್ದರೂ ಸದಾಕಾಲ ತಮ್ಮ ಅಪ್ರತ್ಯಕ್ಷ ಹಾಗೂ ಅತ್ಯಂತ ಪರಿಣಾಮಕಾರೀ ಬೆಂಬಲವನ್ನು ಕಾಂಗ್ರೆಸಿಗೀಯುತ್ತಿದ್ದ ಮೂಕ ಮಿಲಿಯ ಜನರ ಬೆಂಬಲ ಬೇಕು.

ನೂಲುವದು ಮತ್ತು ಖಾದಿ ಧರಿಸುವದು, ಕಾಯಿದೇ ಭಂಗ ಚಳವಳದಲ್ಲಿ ಪ್ರತ್ಯಕ್ಷ ಭಾಗವಹಿಸುವದಕ್ಕಿಂತ ಕಡಿಮೆಯದಲ್ಲವೆಂದೂ, ಅಸ್ಪೃಶ್ಯತಾ ನಿವಾರಣೆ, ಸಾಮಾಜಿಕ ಒಗ್ಗಟ್ಟುಗಳ ಲಕ್ಷಣಗಳನ್ನು ತಾನು ಖಾದಿ ಧರಿಸುವದರಲ್ಲಿ ಕಾಣುವೆನೆಂದೂ ಅದೇ ಕಾಂಗ್ರೆಸಿನವರು ಈಗ ಕೊಡಬೇಕಾಗಿರುವ ಪರಿಣಾಮಕಾರೀ ಬೆಂಬಲವೆಂದೂ ಬರೆದಿರುವರು.

ಸತ್ಯಾಗ್ರಹ ಸೇನಾನಿ.

"ಸತ್ಯಾಗ್ರಹ ಯೋಧನ ಕೊರಳಿಗೆ ಹೂವಮಾಲೆ ಬೀಳಬೇಕಾದರೆ ಮುಂದಿಟ್ಟ ಶರ್ತಗಳನ್ನು ಪಾಲಿಸಿಕೊಳ್ಳಬೇಕು."

ಭಾರತದ ಸ್ಥಾನವಾವುದು?

ಅಮೇರಿಕನ್ ಪತ್ರಿಕಾಪ್ರತಿನಿಧಿಗೆ ಗಾಂಧಿಯವರ ಉತ್ತರ.

"ಸಾಮಂತ ಸ್ವರಾಜ್ಯವಿರಲಿ, ಅಥವಾ ಬೇರೆ ಯಾವ ರೀತಿಯೇ ಇರಲಿ, ಅದರ ಕ್ರಮಬದ್ಧ ಸ್ಥಾಪನೆಯು ಯುದ್ಧ ಮುಗಿದನಂತರವೇ ನಡೆಯಬೇಕಾಗಿದೆ. ತತ್ಕಾಲಕ್ಕೆ ಸಾಮಂತ ಸ್ವರಾಜ್ಯದಿಂದಲೇ ಭಾರತವು ತೃಪ್ತಿಹೊಂದುವದೋ ಎಂಬುದು ಈಗ ಮುಂದೆ ಬಂದಿರುವ ಪ್ರಶ್ನೆಯಲ್ಲ. ಬ್ರಿಟಿಷರ ಘೋಷಣೆಯಾವುದೆಂಬುದೇ ಸದ್ಯದ ನಿಜ ಮಾತ್ರ ಪ್ರಶ್ನೆ. ಭಾರತದ ಸ್ಥಾನ ನಿರ್ಧಾರ ಮಾಡುವ ಹಕ್ಕು ಕೇವಲ ತನ್ನದೆಂದು ಬ್ರಿಟನು ಈಗಲೂ ಭಾವಿಸಿರುವದೋ? ಅಥವಾ ತನ್ನ ಅದೃಷ್ಟವನ್ನು ತಾನೇ ನಿರ್ಧರಿಸಿಕೊಳ್ಳುವ ಹಕ್ಕು ಭಾರತದ್ದೋ?— ಎಂಬುದೇ ಈಗಿನ ಪ್ರಶ್ನೆ. ಈಯೊಂದು ಪ್ರಶ್ನೆ ಏಳುವದಲ್ಲವಾಗಿದ್ದರೆ ಇಂದಿನ ಚರ್ಚೆಯಂಥವುಗಳಿಗೆ ಆಸ್ಪದವಿರುತ್ತಿದ್ದಿಲ್ಲ. ಆ ಪ್ರಶ್ನೆ ಮುಂದೆ ಬಂದಿದೆ— ಅದನ್ನು ಮುಂದೊತ್ತುವದು ಭಾರತದ ಹಕ್ಕಾಗಿದೆ. ಆದ್ದರಿಂದ ನನ್ನ ಶಕ್ತಿಯನ್ನೆಲ್ಲಾ ಕಾಂಗ್ರೆಸಿನ ಕಡೆಯಲ್ಲಿ ವ್ಯಯಿಸುವದು ನನ್ನ ಕರ್ತವ್ಯವಾಗಿದೆ. ವೈಸರಾಯರೊಡನೆ ನಡೆದ ಪ್ರಥಮ ಸಂಭಾಷಣೆಯ ನಂತರ ನಾನು ಹಾಕಿಕೊಂಡ ಈ ಪ್ರಶ್ನೆಯನ್ನು ಈಗಲೂ ಪುನರಾವರ್ತಿಸಬಲ್ಲೆ: 'ಬ್ರಿಟನ್ ಮತ್ತು ಫ್ರಾನ್ಸು ಸೋಲಿಸಲ್ಪಟ್ಟರೆ ಭಾರತ ಸ್ವಾತಂತ್ರ್ಯಕ್ಕೇನು ಬೆಲೆ?' ಆ ರಾಷ್ಟ್ರಗಳು ಸೋತರೆ ಯುರೋಪಿನ ಮತ್ತು ಪ್ರಪಂಚದ ನಕಾಶೆಯು ಯಾವ ರೀತಿ ಬರೆಯಲ್ಪಡುವದೆಂಬುದನ್ನು ಯಾರೂ ಅರಿಯರು. ಆದ್ದರಿಂದ ನನ್ನ ಪ್ರಶ್ನೆಗೊಂದು ಸ್ವಂತ ಅಸ್ತಿತ್ವವಿದ್ದೇ ಇದೆ. ಹಿಂದುಸ್ಥಾನಕ್ಕೆ ನ್ಯಾಯ ಮಾಡುವ ಮೂಲಕ ಇಡೀ ಲೋಕದ ಅಭಿಪ್ರಾಯದಲ್ಲಿ ನ್ಯಾಯವಂತರೆನ್ನಿಸಿಕೊಂಡು ಬ್ರಿಟನು ಮಿತ್ರರಾಷ್ಟ್ರಗಳ ವಿಜಯವನ್ನು ಸಂಪಾದಿಸಬಹುದು." ಎಂದು ಗಾಂಧಿಯವರು 'ನ್ಯೂಯೋರ್ಕ್ ಟೈಮ್ಸ್' ಪತ್ರಿಕಾ ಪ್ರತಿನಿಧಿಯೊಡನೆ ನಡೆದ ಸಂಭಾಷಣೆಯಲ್ಲಿ ಹೇಳಿರುವರು.

ಪ್ರಾಪಂಚಿಕ ಸಂಯುಕ್ತ ಸಭೆ

ಭಾರತವನ್ನು ಸೇರಿಸಿಕೊಳ್ಳುವ ಬಿಳಿ ಜನರ ಹದಿನೈದು ಪ್ರಜಾಸತ್ತಾ ರಾಷ್ಟ್ರಗಳು ಒಂದುಗೂಡಿ ಫೆಡರೇಶನೊಂದನ್ನು ರಚಿಸಿಕೊಳ್ಳಬೇಕೆಂಬ ಯೋಜನೆಯ ಕುರಿತು ಪ್ರಶ್ನಿಸಲ್ಪಟ್ಟಾಗ ಗಾಂಧಿಯವರಿಂದರು: "ಲೋಕದ ಎಲ್ಲಾ ರಾಷ್ಟ್ರಗಳ ಫೆಡರೇಶನೊಂದನ್ನು ಸ್ಥಾಪಿಸುವ ಯೋಜನೆಗೆ ನನ್ನ ಸುಸ್ವಾಗತವಿದೆ. ಕೇವಲ ಪಾಶ್ಚಿಮಾತ್ಯ ರಾಷ್ಟ್ರಗಳ ಫೆಡರೇಶನೆಂದರೆ ಅದೊಂದು ಅಪವಿತ್ರ ಒಗ್ಗಟ್ಟು ಮತ್ತು ಮಾನವತ್ವಕ್ಕೊಂದು ಆತಂಕ. ನನ್ನ ಅಭಿಪ್ರಾಯದಲ್ಲಿ ಭಾರತವಿಲ್ಲದ ಫೆಡರೇಶನ್ ಸ್ಥಾಪಿಸುವದು ಆಗದ ಮಾತು. ತೀರಾ ಅಲ್ಲಗಳೆಯಲ್ಪಡುವ ಸ್ಥಿತಿಯಿಂದ ಭಾರತವೆಂದೋ ಪಾರಾಗಿದೆ" ಎಂದರು.

ಕಾನ್ಸ್ಟಿಟ್ಯೂಯೆಂಟ್ ಎಸೆಂಬ್ಲಿಯ ನಿಧಾನವನ್ನು ಪುನರಾವರ್ತಿಸುತ್ತ ಗಾಂಧಿಯವರು ಹೇಳಿದರು: "ಮೇಲ್ದರ್ಜೆಯ ಇಂಗ್ಲಿಷರು ಮತ್ತು ಉತ್ತಮ ಹಿಂದೀಯರು ತಾವೊಂದು ನಿರ್ಧಾರಕ್ಕೆ ಬಾರದೆ ಅಗಲಲಾರೆವೆಂಬ ದೃಢ ವಿಶ್ವಾಸದಿಂದ ಒಟ್ಟುಗೂಡಿದರೆ, ಆ ಎಸೆಂಬ್ಲಿಯನ್ನು ಕರೆಯುವ ಹಾದಿಯು ಖಂಡಿತವಾಗಿ ಗೋಚರಿಸುವದು. ಆದರೆ ಅವರೆಲ್ಲರ ಧ್ಯೇಯವೂ ಬುದ್ಧಿಯೂ ಒಂದೇ ಆಗಿರಬೇಕು."

ನೋಡಿದರೆ ಸಾಕು ಓದದೆ ಬಿಡಲಾರಿರಿ!

ಮುಗಿದಾಗ ಮುಗಿದು ಹೋಯಿತಲ್ಲಾ ಎನಿಸುವ,
ತೊಡಗಿದಾಗ ಹೇಗೆ ಮುಗಿಯುವುದಿದು? —ಎಂದು
ಕೌತುಕಪಡಿಸುವ ಹನ್ನೆರಡು ಚಿಕ್ಕ ಕಥೆಗಳ ಸಂಗ್ರಹ

ಅಂತರಂಗದ ಕಥೆಗಳು

೧೧೬ ಪುಟಗಳು ಸೊಗಸಿನ ಮುದ್ರಣ ಅಂದದ ಹೊರ ಹೊದಿಕೆ

[ಬೆಲೆ:— ಎಂಟಾಣೆ]

ಅಂತರಂಗವನ್ನು ಬೆಳಗಿ ಬಹಿರಂಗವನ್ನು ಹೊಳೆಸಿ ಹರಿಯುವ ಮಾತು

ಅಂತರಂಗದ ಎಲ್ಲಾ ಏಜಂಟರುಗಳಲ್ಲಿಯೂ ದೊರೆಯುತ್ತವೆ.

ಬೆಂಗಳೂರು ಸೋಲ್ ಏಜಂಟರು:
ಶ್ರೀ. ಪಿ. ಎ. ಉಪಾಧ್ಯಾಯರು
೪೩, ಎ, ಎಸ್, ಸ್ಟ್ರೀಟ್, ಬೆಂಗಳೂರು.

ಅಂತರಂಗ ಕಾರ್ಯಾಲಯ,
ಉಡುಪಿ.

ನಿಮ್ಮ ಮನೆಯಲ್ಲಿ ಸದಾ ಆನಂದದ ಜ್ಯೋತಿಯು
ಬೆಳಬೆಳಗುತ್ತಿರಬೇಕೇ? ಹಾಗಿದ್ದರೆ— —

ನಂದಾದೀಪ

ಎಂಬ ಉತ್ಕೃಷ್ಟ ಚಿಕ್ಕಕತೆಗಳ ಪ್ರತಿಯೊಂದನ್ನಿಟ್ಟುಕೊಳ್ಳಿ.
ಕರ್ನಾಟಕದ ಪ್ರಸಿದ್ಧ ಕತೆಗಾರರಲ್ಲೊಬ್ಬರಾದ ಶ್ರೀ ಕೊರಡ್ಕಲ್
ಶ್ರೀನಿವಾಸ ರಾಯರು ಬರೆದ ಮನೋಹರವಾದ
ಹನ್ನೊಂದು ಕತೆಗಳ ಸಂಗ್ರಹ.
ಪ್ರತಿಯೊಂದು ಕತೆಯೂ ನಿಮ್ಮ ಹೃದಯದಲ್ಲೊಂದು
ಬಗೆಯ ಹೊಸ ಬೆಳಕನ್ನು ಬೆಳಗಿಸುವುದು.
ಬೆಲೆ: 0-8-0 ಟಪ್ಪಾಲು ದ್ವಾರ: 0-9-0

ಕಿರಿಯರ ಪ್ರಪಂಚ, ಉಡುಪಿ.

(0-9-0 ಸ್ಟ್ಯಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.)

ನಮ್ಮ ವ್ಯವಸಾಯ-ಅಂಕೆಗಳಲ್ಲಿ

ಕೆಲವು ಸ್ವಾರಸ್ಯವಾದ ಮುಖ್ಯ ವಿಚಾರಗಳು.

ಭಾರತದ ಜನರ ಜೀವನವು ವ್ಯವಸಾಯವನ್ನೇ ಅವಲಂಬಿಸಿಕೊಂಡಿದೆ. ದೇಶದ ನೇ 90 ಜನರು 7ಲಕ್ಷ ಹಳ್ಳಿಗಳಲ್ಲಿರುವರು. ಪ್ರತಿಯೊಂದು ಊರಿನಲ್ಲಿ 4 ನೂರು ರೈತರಿದ್ದಾರೆ. ಇವರ ಜೀವನವು ಬಹಳ ಕಷ್ಟದಿಂದ ಜರಗುತ್ತಿದ್ದು ಎಲ್ಲ ವಿಧವಾದ ಪ್ರಕೃತಿ ಜನ್ಯವಾದ ಅಧಿಕಾರಗಳಿಂದ ವಂಚಿತರಾಗಿದ್ದಾರೆ.

ಕಳೆದ 50 ವರ್ಷಗಳಲ್ಲಿ ದೇಶದ ಜನಸಂಖ್ಯೆಯು ಸುಮಾರಾಗಿ ಎರಡರಷ್ಟು ಹೆಚ್ಚಿದೆ. ಆಂಗ್ಲರ ಪ್ರಭುತ್ವದಲ್ಲಿ ಹಳ್ಳಿಗಳ ಕೈಗಾರಿಕೆಗಳು, ವಿದೇಶೀ ಯಂತ್ರಗಳ ಅಗ್ಗವಾದ ಮಾಲುಗಳೆದುರಿನಲ್ಲಿ ನಾಶವಾಗಿ ಹೋದುವು

ಕೈಗಾರಿಕೆಗಳ ಅಭಾವದಿಂದಲೇ ಜನರು ವ್ಯವಸಾಯವನ್ನವಲಂಬಿಸಬೇಕಾಯಿತು. ಕೃಷಿಮಾಡುವವರ ಸಂಖ್ಯೆಯು ಹೆಚ್ಚುತ್ತ ಬಂದಂತೆಲ್ಲ ಕೃಷಿಮಾಡುವ ಭೂಮಿಯು ಕಡಿಮೆಯಾಗುತ್ತಾ ಬಂದಿತು.

ಸರ್ಕಾರಿ ಲೆಕ್ಕದನುಸಾರವಾಗಿ ಪ್ರತಿಯೊಬ್ಬನ ಭಾಗಕ್ಕೂ ಸರಾಸರಿ 3-3ಎಕರೆ ಜಮೀನಿದೆ. ಆದರೆ ಇಂಗ್ಲಿಷಿನವನು 126 ಎಕರೆಯನ್ನೂ ವ್ಯವಸಾಯಮಾಡುತ್ತಿದ್ದಾನೆ. ಕೆನಡಾದ ರೈತನು 140 ಎಕರೆಯನ್ನೂ ಜಪಾನಿನವನು 14-2 ಎಕರೆಯನ್ನೂ ವ್ಯವಸಾಯ ಮಾಡುವನು.

ಕೇವಲ ಸಂಯುಕ್ತ ಪ್ರಾಂತ್ಯದಲ್ಲಿಯೇ 40 ಲಕ್ಷ ಎಕರೆ ಜಮೀನು ಬಂಜರಾಗಿದೆ. ಇದೆಲ್ಲವೂ ಕೃಷಿಯೋಗ್ಯವಾದರೆ ರೈತನ ಆದಾಯವು ಹೆಚ್ಚಲನುಕೂಲವಾಗುವುದು. ಬ್ರಿಟಿಷ್ ಭಾರತದಲ್ಲೇ 15ಕೋಟಿ ಎಕರೆ ಜಮೀನು ಪಾಳು ಬಿದ್ದಿದೆ. ಇದನ್ನೂ ರೈತರು ಮಾಡಲಾರರು. ಸರ್ಕಾರವೇ ಮಾಡಿದರೆ ಅದು ಎಂತಹ ಸರ್ಕಾರ, ನಮ್ಮ ದೇಶದ ಸರ್ಕಾರವೇ ಆದಾಗ ಮಾತ್ರ

ಈಗಿನ ಆಂಗ್ಲ ಪ್ರಭುತ್ವದಲ್ಲಿ ವ್ಯವಸಾಯದ ಕೆಲಸದಲ್ಲಿ ಸಾಕಷ್ಟು ಹಣವನ್ನೂ ಖರ್ಚುಮಾಡುತ್ತಿಲ್ಲ. ಬ್ರಿಟಿಷ ಸರಕಾರವು ತನ್ನ ದೇಶದಲ್ಲಿ ವ್ಯವಸಾಯವಾಗುವ ಪ್ರತಿ ಸಾವಿರ ಎಕರೆ ಜಮೀನಿನ ಮೇಲೆ 1380 ರೂ. ಖರ್ಚು ಮಾಡಿದರೆ ಭಾರತದ ಸರಕಾರವು ಅಷ್ಟೇ ಭಾಗಕ್ಕೆ ಕೇವಲ 21ರೂ. ಖರ್ಚು ಮಾಡುತ್ತಿದೆ. ಸರಕಾರವು ಜನರಿಂದ ಕಂದಾಯವನ್ನು ವಸೂಲುಮಾಡುವುದರಲ್ಲಿ ಹಿಂಜರಿಯದಿದ್ದರೂ, ಸಾರ್ವಜನಿಕ ಕೆಲಸಕಾರ್ಯಗಳಿಗೆ ಹಣ ಕೇಳಿದಾಗ ಮಾತ್ರ "ಸಾಧ್ಯವಿಲ್ಲ" ಎಂದೇ ಉತ್ತರಕೊಡುವನು. ಆದರೆ ಸರಕಾರಿ ಅಧಿಕಾರಿಗಳ ವೇತನಗಳ, ಪೆನ್‌ಷನ್ನುಗಳ ಪ್ರಶ್ನೆಬಂದಾಗ ಭಾರತದ ಬಡತನವನ್ನು ಗಮನಿಸುವುದೇ ಇಲ್ಲ

ಭೂಮಿಯ ಉತ್ಪತ್ತಿಯ ದೃಷ್ಟಿಯಿಂದಲೂ ನಮ್ಮ ದೇಶದ ಭೂಮಿಯ ಉತ್ಪನ್ನವು ಬಹಳ ಕಡಿಮೆ ಜಾವಾದಲ್ಲಿ ಒಂದು ಎಕರೆ ಭೂಮಿಯಲ್ಲಿ 40ಟನ್ ಕಬ್ಬು ಬೆಳೆದರೆ ಭಾರತದಲ್ಲಿ ಕೇವಲ 10 ಟನ್ನು ಬೆಳೆಯುತ್ತದೆ. ಇದೇ ರೀತಿ ಅಮೇರಿಕದಲ್ಲಿ ಒಂದು ಎಕರೆಯಲ್ಲಿ 700 ಪೌಂಡು ಹತ್ತಿ ಬೆಳೆದರೆ ಈಜಿಪ್ಟಿನಲ್ಲಿ 450 ಪೌಂಡು, ಭಾರತದಲ್ಲಿ ಕೇವಲ 98ಪೌಂಡುಬೆಳೆಯುತ್ತದೆ.

ಇದರಿಂದ ನಮ್ಮ ದೇಶದ ವ್ಯವಸಾಯವು ಎಷ್ಟು ಹೀನ ಸ್ಥಿತಿಯಲ್ಲಿದೆ ಎಂಬುದು ಗೊತ್ತಾಗುವುದು. ನಾವು ನಮ್ಮ ಈ ತೊಂದರೆಯು ದೈವ ದತ್ತವಾದುದೆಂದು ಭಾವಿಸಿರುವೆವು! ಇದು ಸರಿಯಲ್ಲ. ಈಶ್ವರೀಯವಾದ ತೊಂದರೆಗಳು ಎಲ್ಲ ದೇಶಗಳಲ್ಲಿಯೂ ಒಂದೇ ರೀತಿಯಲ್ಲಿರುವುವು. ಉತ್ತಮರೀತಿಯಲ್ಲಿ ನವೀನ ರೀತಿಯಲ್ಲಿ ವ್ಯವಸಾಯ ಮಾಡಿದರೆ, ಒಳ್ಳೆ ಗೊಬ್ಬರ ಹಾಕಿ ಉತ್ತಮವಾದ ಬೀಜವನ್ನೂ ಬಿತ್ತಿ, ನೀರಾವರಿಗೆ ತಕ್ಕ ಅನುಕೂಲಗಳನ್ನೇರ್ಪಡಿಸಿಕೊಂಡರೆ, ಆಗ ದೇವರ ಚಿತ್ತವು ನಮಗೆ ವಿರೋಧವಾಗಿ ಆಗುವುದಿಲ್ಲ.

ಈ ದೇಶದಲ್ಲಿರುವ ಜಮೀನ್ದಾರರ ಪದ್ಧತಿಯು ಸಹ ರೈತನ ಪ್ರಾಣಕ್ಕೆ ಸಂಚಕಾರ ತಂದಿದೆ ದೊಡ್ಡ ದೊಡ್ಡ ಜಮೀನ್ದಾರರು ತಾವು ತಮ್ಮ ರೈತರ ರಾಜರೆಂದು ತಿಳಿದು ಅವರ ಮೇಲೆ ಮನಸ್ಸಿ ಅತ್ಯಾಚಾರಗಳನ್ನು ನಡೆಸುವರು. ಅವರು ರೈತರನ್ನೂ ಕೂಲಿಯವರನ್ನೂ ತಾವು ಕೊಂಡು ತಂದ ಗುಲಾಮರೆಂದು ತಿಳಿದಿರುವರು. ಅವರಿಂದ ಉಚಿತವಾದ ಸೇವೆಯನ್ನೂ ತೆಗೆದುಕೊಳ್ಳುವುದರಲ್ಲಿ ಹೆಮ್ಮೆ ಪಡುವರು.

ಜೊತೆಗೆ ಸಾಲದ ಹೊರೆಯು ಒದಗಿ ರೈತನು ತಲೆ ಎತ್ತಲವಕಾಶವಿಲ್ಲದಂತೆ ಮಾಡಿದೆ. ಒಂದು ಎಕರೆ ಜಮೀನಿಗೂ ಸರಾಸರಿ 35 ರೂಪಾಯಿಗಳಷ್ಟು ಸಾಲವಿದೆ ಎಂದು ಅಂದಾಜು ಮಾಡಲಾಗಿದೆ. ಇದರ ಮೇಲೆ ವರ್ಷಕ್ಕೆ 5 ರೂಪಾಯಿಗಳ ಬಡ್ಡಿ ಬೇರೆ ತೆರಬೇಕು. ದೀನರೂ ದರಿದ್ರರೂ ಆದ ರೈತರು ಅನೇಕ ಸಾರಿ ಈ ಬಡ್ಡಿಯನ್ನೂ ತೆರಲಾರದೆ ತೊಂದರೆಗೊಳಗಾಗುವರು. ಇದರ ಫಲವಾಗಿ ಸಾಲದ ಮೊಬಲಗು ಹೆಚ್ಚುತ್ತ ಬಂದು ಅವರ ಭೂಮಿ ದನಕರುಗಳು ಅದಕ್ಕೆ ಆಹುತಿಯಾಗುವುವು

ಇಷ್ಟು ಭೂಮಿಯಲ್ಲಿ ಬೆಳೆಯುವ ವಸ್ತುಗಳ ಆದಾಯವಂತೂ ತೀರ ಕಡಿಮೆಯಾಗಿದೆ. 1ಎಕರೆ ಭೂಮಿಯಲ್ಲಿ ಬೆಳೆದ ದವಸದ ಬೆಲೆಯು ಸುಮಾರು 32 ರೂ ಆಗಬಹುದು. ವ್ಯವಸಾಯದ ವೆಚ್ಚ 8 ರೂ. ಕಂದಾಯ, ಸುಂಕ, ಜಮೀನ್ದಾರನಿಗೆ ಸಲ್ಲುವ ಭಾಗ, ಸಾಲ ಇವೆಲ್ಲವೂ 8 ರೂ. (ಪ್ರತಿ ಎಕರೆಗೆ) ಆಗುವುದು. ಅಂದರೆ ಪ್ರತಿ ರೈತನ ದಿನವಹಿ ಸರಾಸರಿ ಉತ್ಪತ್ತಿಯು 9ಕಾಸಿನಷ್ಟಾಯಿತು. ರೈತನಿಗೆ ಛಳಿ ಬಿಸಿಲಿನಲ್ಲಿ ಶರೀರವನ್ನೂ ರಕ್ಷಿಸಿಕೊಳ್ಳಲು ಸಾಕೆಷ್ಟು ಉಡುಪಿಲ್ಲ. ಹೊಟ್ಟೆ ತುಂಬ ರೊಟ್ಟಿಯಿಲ್ಲ. ದಿನದಿನಕ್ಕೂ ಹೊಸ ತೆರಿಗೆಗಳ ಹೊರೆ ಬೇರೆ ಈ ಹೊಸ ತೆರಿಗೆಯ ಹಣವನ್ನೂ Imperial Research Council ನ ಸಹಾಯಕ್ಕೆ ಕೊಡುವರು. ಇದರಿಂದ ರೈತನಿಗಾದ ಲಾಭವೇನು? ಅಧಿಕಾರಿಗಳಿಗೆ ಹಣ ಹೋಯಿತಷ್ಟೆ?

ಒಮ್ಮೆ ತೊಡಗಿದಿರೆಂದರೆ ಕಡೆತನಕವೂ ಓದದೆ ಬಿಡಲಾಗದ ಪುಸ್ತಕ—

ಪಂಚಾರತಿ

'ಭಾರತೀ ಗ್ರಂಥಮಾಲೆ'ಯವರು ನೂತನವಾಗಿ ಪ್ರಕಟಿಸಿದ ಕರ್ನಾಟಕದ ಪ್ರಸಿದ್ಧ ಬರಹಗಾರರೈವರ ಐದು ಏಕಾಂಕ ನಾಟಕಗಳ ಸಂಗ್ರಹ.

(೧) ಮುಸುಕು (ಶ್ರೀ. ಎನ್ ಕೆ. ಕುಲಕರ್ಣಿ, ಎಂ. ಎ)
(೨) ನಾಯಿ ಶ್ರೀಕೃ (ಶ್ರೀ ಎಸ್. ವೆಂಕಟರಾಜ.)
(೩) ಜ್ವಾಲಾಮುಖಿ (ಶ್ರೀ. ಬಿ. ಅಶ್ವತ್ಥನಾರಾಯಣ ರಾವ್)
(೪) ಭಾವಿಯ ಭಾಗ್ಯೋದಯ (ಪ್ರೊ. ಆರ್. ವಿ. ಜಾಗೀರ್‌ದಾರ್ ಎಂ. ಎ. (ಲಂಡನ್)
(೫) ಓಂ ಚೋರಿಬಸ್ವಗೆ ಮೂರು ಸಾವಿರ (ಶ್ರೀ ಕೊರಡ್ಕಲ್ ಶ್ರೀನಿವಾಸ ರಾವ್)

ಮನೋಹರವಾದ ಅಂತರಂಗ! ಚಿತ್ತಾಕರ್ಷಕ ಬಹಿರಂಗ!!

80ಪುಟಗಳು ಬೆಲೆ 0—4—0

ನವಭಾರತ ಪುಸ್ತಕ ಭಂಡಾರ, ಉಡುಪಿ.

(0—5—0ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು)

ನಿಮಗೆ ದೊಡ್ಡ ಆಕಾಂಕ್ಷೆ ಇದೆಯೇ ?

ಜೀವವಿಮೆಯು ಇಂದಿನ ಅತಿ ಗೌರವ ವೃತ್ತಿಯೆಂದು ಲೋಕದಲ್ಲೆಲ್ಲಾ ಅಂಗೀಕೃತವಾಗಿದೆ ಒಳ್ಳೇ ವಿಕ್ರಯಿಗೆ ಜೀವವಿಮೆಯು ಬಹಳ ಲಾಭದಾಯಕ ವೃತ್ತಿಯಾಗಿದೆ, ಕ್ರಮವಾಗಿ ಜೀವವಿಮೆಯನ್ನು ವಿಕ್ರಯಿಸಿ ನೀವು ನಿಮ್ಮ ಸ್ನೇಹಿತರಿಗೂ ಸಂಬಂಧಿಕರಿಗೂ, ಮಾನವಕೋಟಿಗೆ ಬಹಳ ಒಳ್ಳೇ ಸೇವೆಮಾಡಿ, ಸಂಕಷ್ಟಕ್ಕೊಳಗಾಗಿರುವ ಹಲವು ಕುಟುಂಬಗಳ ಆಶೀರ್ವಾದ ಪಡೆದು ಯೋಗ್ಯವಾದ ಪ್ರತಿಫಲ ಪಡೆಯಬಹುದು.

ಮಹತ್ತಾದ ಸಂದರ್ಭ

ಲಾಭದಾಯಕವಾದ ಜನರಲ್ ಏಜೆನ್ಸಿಯನ್ನು ಸ್ಥಾಪಿಸಲು ನಿಮಗೆ ಹೇಗೆ ಸಹಾಯಮಾಡಬೇಕೆಂಬುದನ್ನು ಚೆನ್ನಾಗಿ ಅರಿತಿರುವ ಈ ಕೆಳಗಣ ಕಂಪೆನಿಯಲ್ಲಿ ಉದಾರ ಏಜೆನ್ಸಿ ಕಂಟ್ರಾಕ್ಟು ಪಡೆದು ಕೆಲಸಮಾಡಲು ಇಂದೀಗ ಮಹತ್ತಾದ ಸಂದರ್ಭವೊಂದು ಮುಂದೆ ಬಂದು ನಿಂತಿರುವುದು. ನೀವು ನಿಮ್ಮ ಸ್ವಂತ ಏಜೆನ್ಸಿಯನ್ನು ಸ್ಥಾಪಿಸಿ ಬೆಳೆಸಬಹುದು. ನಿಮ್ಮ ವಿಕ್ರಯ ಶಕ್ತಿಯನ್ನು ವೃದ್ಧಿಗೊಳಿಸಬಹುದು. ನಿಮ್ಮ ಸಂಪಾದನೆಯನ್ನು ಹೆಚ್ಚಿಸಿ ನಿಮ್ಮ ಸಮಾಜದಲ್ಲಿ ಸ್ಥಿರವಾದ ವ್ಯವಹಾರ ವಹಿವಾಟಿನ ಮುಖಂಡನಾಗಬಹುದು. ನಿಮಗೆ ಆಸಕ್ತಿಯಿದ್ದಲ್ಲಿ ನಿಮ್ಮೊಡನೆ ಸಹಕರಿಸಿ ಸಹಾಯಮಾಡಲು ನಾವು ಸಂತೋಷಪಡುವೆವು. ವಿಳಂಬಮಾಡಬೇಡಿರಿ, ನಮಗೆ ಬರೆಯಿರಿ.

ಈಸ್ಟ್ ಎಂಡ್ ವೆಸ್ಟ್ ಇನ್ಶೂರೆನ್ಸ್ ಕೋ. ಲಿಮಿಟೆಡ್,
ಈಸ್ಟ್ ಎಂಡ್ ವೆಸ್ಟ್ ಬಿಲ್ಡಿಂಗ್ಸ್,
ಅಪೊಲ್ಲೋ ಸ್ಟ್ರೀಟ್, ಫೋರ್ಟ್ ಬೊಂಬೇ.

ನವಜೀವಾತು ಎಂಬ ಸೂತಿಕಾ

ರ ಸಾ ಯ ನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೪ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬೇಕಾದವು. ಅಂದರೆ, ಕೇವಲ ೪ ರೂಪಾಯಿಗಳು ಒಂದು ಬಾಣಂತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಎಸ್. ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ. ೮ ಕೊಡಿಯಾಲಬೈಲು, ದ.ಕ.

— ನವಯುಗಕ್ಕೆ ಇಂದೇ ಚಂದಾದಾರರಾಗಿರಿ. —

ಈ ವಾರದ ಭವಿಷ್ಯ

ತಾರೀಕು **2-5-1940**ರಿಂದ **9-5-1940** ರವರೆಗೆ

ಮೇಷ—ಲೋಕದಲ್ಲಿ ಅನೇಕ ರೀತಿಯ ರೋಗಗಳಿದ್ದರೂ ಮನೋರೋಗಕ್ಕೆ ಸಮಾನಾದ ರೋಗವು ಬೇರೊಂದಿಲ್ಲ. ಅದು ಕೇವಲ ಇಚ್ಛಾಪೂರ್ತಿಯಿಂದಲೇ ಗುಣಹೊಂದುವುದಲ್ಲದೆ ಯಾವ ತೆರನಾದ ಔಷಧಿಯೂ ಅದಕ್ಕಿಲ್ಲವು. ಈ ತನಕ ನಿಮ್ಮನ್ನದು ಬಹುವಾಗಿ ಪೀಡಿಸುತ್ತಲಿತ್ತು. ಆದರೆ ಈಗೀಗ ನಿಮ್ಮ ಪರಿಸ್ಥಿತಿಯು ಮುಂಚಿಗಿಂತ ಕೊಂಚ ಸುಧಾರಿಕೆ ಸ್ಥಿತಿಗೆ ಬಂದಿದೆ. ಸಾಹಸ ಕಾರಕನಾದ ಅಂಗಾರಕನೂ ಧನಪತಿಯಾದ ಶುಕ್ರನೂ ವಿಕ್ರಮ ಸ್ಥಾನದಲ್ಲಿ ಕೂಡಿರುವುದರಿಂದ ನೀವು ಸಾಹಸದಿಂದ ಕಷ್ಟಪಟ್ಟು ದುಡಿದು ತಕ್ಕ ಪ್ರತಿಫಲವನ್ನು ಹೊಂದುವಿರಿ. ಭೂಸಂಬಂಧವಾಗಿಯೂ ವ್ಯಾಪಾರ ವೃತ್ತಿಯಿಂದಲೂ ಕೂಡ ಧನಸಂಪಾದಿಸುವಿರಿ. ಆದರೂ ನಿಮ್ಮ ಆರೋಗ್ಯವು ಪೂರ್ಣ ಸರಿಯಿಲ್ಲದಿರುವುದರಿಂದಲೂ ಪ್ರಯಾಸಾದಿಗಳನ್ನು ಮಾಡಬೇಕಾಗಿರುವುದರಿಂದಲೂ ಸಾಂಸಾರಿಕ ತಾಪತ್ರಯಗಳು ಹಲವಾರಿರುವುದರಿಂದಲೂ ಆಯಕ್ಕಿಂತ ವ್ಯಯವೇ ಅಧಿಕವಾಗಲಿದೆ. ಸ್ವಜನವಿಯೋಗದಿಂದಲೂ ಗುರುಹಿರಿಯರಲ್ಲಿನ ಕಲಹದಿಂದಲೂ ಮನಸ್ಸಿಗೆ ಶಾಂತಿಯಿರದು. ತಾ. 3, 4, 5 ಮತ್ತು 8, 9 ಈ ಸಹಕಾರಿಗಳಾಗಿವೆ.

ವೃಷಭ—ಹಾಸಿಗೆ ಇದ್ದಷ್ಟು ಕಾಲು ಚಾಚಬೇಕೆಂಬ ನ್ಯಾಯವನ್ನನುಸರಿಸಲು ನಿಮ್ಮಿಂದ ಸಾಧ್ಯವಾಗುವಂತಿಲ್ಲವು. ಸರ್ವತೋಮುಖದಿಂದಲೂ ಖರ್ಚುಗಳು ದಿನೇ ದಿನೇ ಪ್ರಬಲವಾಗುತ್ತಾ ಬರುತ್ತಿವೆ. ಖರ್ಚು ಪ್ರಬಲವಾದಂತೆ ಆದಾಯವು ಹಿಂಗುತ್ತಾ ಬರುವುದು. ಇದೀಗ ನಿಮ್ಮ ಅತ್ಯಂತ ಕಷ್ಟಕಾಲವು ಪ್ರಾಪ್ತವಾಗಿರುವುದೆಂದರೆ ತಪ್ಪಾಗದು. ಧನಭಾಗ್ಯ ಲಾಭಪತಿಗಳೆಲ್ಲರೂ ವ್ಯಯಸ್ಥಾನವನ್ನು ಹೊಂದಿರುವುದರಿಂದ ಹಣದ ತಾಪತ್ರಯವು ಬಹಳ ವಿಶೇಷವಾಗಲಿದೆ. ಕಷ್ಟನಷ್ಟಗಳೂ ವ್ಯೋಮಾನರ್ಥಗಳೂ ಮೇಲಿಂದ ಮೇಲೆ ಪ್ರಾಪ್ತವಾಗುವವು. ಸಾಲದ್ದಕ್ಕೆ ಆರೋಗ್ಯವೂ ಕಡಿಮೆ. ತಾ. 6-7 ಬಹಳ ಹಾನಿಕಾರಿಗಳಾಗಿರುವುದರಿಂದ ಜಾಗರೂಕರಾಗಿರಿ.

ಮಿಥುನ—"ಹಣವಿದ್ದರೂ ಚಿಂತೆ, ಇಲ್ಲದಿದ್ದರೂ ಚಿಂತೆ" ಎಂದು ಉದಾಸೀನಿಸುವ ವಚನವು ನಿಮ್ಮ ವಿಷಯದಲ್ಲಿ ಒಪ್ಪುವಂತೆ ತೋರುವುದು. ಕಾರಣ ಸದ್ಯ ನಿಮಗೆ ಧನಾಗಮದ ಬಾಗಿಲುಗಳು ಪೂರ್ಣ ತೆರೆದಿರುವವು. ಸರ್ವತೋಮುಖದಿಂದಲೂ ಧನವನ್ನು ಗಳಿಸುವಿರಿ. ಯಾವ ರೀತಿಯ ಅನ್ಯಾಯದ ಬಾಧೆಗಳೂ ಇರಕ್ಕಿಲ್ಲವು. ಆದರೆ ನಿಮ್ಮ ವಿರೋಧಿಗಳು ಮಾತ್ರ ಯಾವ ರೀತಿಯಿಂದಲಾದರೂ ನಿಮ್ಮ ಕೋಶವನ್ನು ಬರಿದುಮಾಡಬೇಕೆಂಬ ದುರುದ್ದೇಶದಿಂದ ಸಮಯ ಸಾಧಿಸುತ್ತಿರುವರು. ಅವರ ಬಲೆಗೆ ಸಿಕ್ಕದಂತೆ ನೀವು ಎಚ್ಚರಿಕೆಯಿಂದಿರಬೇಕು. ನಿಮ್ಮ ಉತ್ಪತ್ತಿಯನ್ನು ದಾನಧರ್ಮಗಳಿಗೆ ಹಂಚಿಹಾಕಿರಿ. ಹೀಗೆ ಉಪಯೋಗಿಸದೆ ಇಟ್ಟದ್ದರೆ ನಿಶ್ಚಯವಾಗಿಯೂ "ಬಚ್ಚಿಟ್ಟದ್ದು ಪರರಿಗೆ" ಎಂಬ ಹಿರಿಯರ ನಾಣ್ಣುಡಿಯಂತೆ ಕಳ್ಳಕಾಕರ ವಶತ್ರುಗಳ ಕೈಸೇರೀತು. ತಾ. 3ರಿಂದ 7ರ ವರೆಗಿನ ದಿನಗಳು ಸರ್ವೋತ್ಕೃಷ್ಟಗಳಾಗಿವೆ.

ಕರ್ಕಾಟಕ—"ಕ್ಷೇಶಲಬ್ಧಮಧಿಕಾಫಲದಂ ತ." ಸಕಲರಿಗೂ ಸ್ವಯಂ ಕಷ್ಟಾರ್ಜಿತವಾದ ಧನದಲ್ಲಿ ವಿಶೇಷ ಆದರವಿರುವುದು ಸ್ವಾಭಾವಿಕ. ಹೀಗೆ ಕಷ್ಟಪಟ್ಟು ದುಡಿದ ಹಣವು ವ್ಯರ್ಥ ವ್ಯಯವಾದರೆ ಯಾರಿಗೆ ತಾನೇ ದುಃಖವಾಗಲಿಕ್ಕಿಲ್ಲ. ಇಷ್ಟರವರೆಗೆ ನೀವು ಬೆವರು ಸುರಿಸಿ ದುಡಿದ ಹಣವು ವ್ಯರ್ಥ ನಾಶವಾಗುವ ಸಂಭವ ಬಂದಿದೆ. ಇಲ್ಲಸಲ್ಲದ ಕಲಹಗಳು ಗಂಟು ಬಿದ್ದು ನಾನಾರೀತಿಯ ಕಷ್ಟಕ್ಕೆ ಗುರಿಯಾಗಲಿರುವಿರಿ. ಆದರೂ ಸಂಸಾರ ನಿರ್ವಹಣಕ್ಕೆ ಇತರರನ್ನು ಆಶ್ರಯಿಸಬೇಕಾಗಿಲ್ಲ. ಕಷ್ಟಕ್ಕೆ ತಕ್ಕ ಫಲ ದೊರೆಯದಿರುವುದರಿಂದ ಮನಸ್ಸು ಸದಾ ಅಶಾಂತತೆಯ ಮಡುವಿನಲ್ಲಿ ಮುಳುಗಿರುವುದು. ಜನರ ನಿಂದೆಗೂ ಹಿರಿಯರ ಪ್ರಕೋಪಕ್ಕೂ ಸಿಲುಕುವಿರಿ. ಮಿತ್ರರಲ್ಲಿ ನಿಮಗೆ ವಿಶ್ವಾಸವಿಲ್ಲದಾಗುವದು. ತಾ. 6ರಿಂದ 9 ಈ ದಿನಗಳಲ್ಲಿ ಇಷ್ಟಸಿದ್ಧಿಯುಂಟಾಗಿ ಮಾನಸಿಕ ಸುಖ, ಮಿತ್ರ ಸಮಾಗಮದಿಂದ ಸಂತೋಷ ಲಭಿಸಲಿವೆ.

ಸಿಂಹ—ಮನೋರಥವು ಫಲಿಸುತ್ತಾ ಬಂದಲ್ಲಿ ಮನದ ಉತ್ಸಾಹವೂ ವೃದ್ಧಿಯಾಗುವುದು. ವಿಘ್ನಪರಂಪರೆಯಿಂದ ಕಾರ್ಯಗಳು ಫಲಿಸದಿದ್ದಲ್ಲಿ ಅಸಹ್ಯವಧಿಕವಾಗುವುದು. ಇದು ಜನಸಾಮಾನ್ಯರ ಲಕ್ಷಣ. ಪ್ರಸ್ತುತ ನಿಮ್ಮ ಅಭೀಷ್ಟಗಳು ಹೆಚ್ಚಿನಂಶ ಸಿದ್ಧಿಸುವುದರಿಂದ ನೀವು ದಿನೇ ದಿನೇ ಒಂದೊಂದು ಹೆಜ್ಜೆ ಮುಂದುವರಿಯುತ್ತಾ ಹೋಗುವಿರಿ. ಧನಧಾನ್ಯಗಳ ವಿಚಾರದಲ್ಲಿ ನಿಶ್ಚಿಂತರಾಗುವಿರಿ. ಜನತೆಯಲ್ಲಿ ಗೌರವವನ್ನು ಪಡೆಯುವಿರಿ. ಆದರೆ ನೀವು ಕ್ರಿಯಾಭ್ರಷ್ಟರಂತೆ ವರ್ತಿಸುವುದರಿಂದ ಹಲವರಿಗೆ ನಿಮ್ಮಲ್ಲಿ ಅಸಮಾಧಾನ ಹುಟ್ಟುವುದು. ಶತ್ರುಗಳಿಂದ ವ್ಯಾಪಾರೋದ್ಯೋಗಕ್ಕೆ ಬಾಧೆ ಧನಸಂಬಂಧವಾದ ಕಲಹ ಇತ್ಯಾದಿಗಳು ನಿಮ್ಮನ್ನು ವ್ಯಸನಕ್ಕೆ ಗುರಿಮಾಡುವವು. ತಾ. 2ರಿಂದ 5ರ ವರೆಗೆ ರಾಜಕೀಯ ಕಾರ್ಯದಲ್ಲಿ ವಿಘ್ನಗಳೂ ಉದರರೋಗವೂ ತಲೆದೋರುವವು.

ಕನ್ಯಾ—"ವಿಧಿಯೂ ಕೇವಲ ವಿಚಿತ್ರ ರೀತಿ" ಹೌದು ಶಕ್ತಿಯಿಂದಲೂ ಅದೃಷ್ಟದ ಗತಿಯು ಎಷ್ಟೋ ಬಲವತ್ತರವಾದುದು. ಸದ್ಯ ನಿಮ್ಮ ವಿಧಿಯು ಬಹಳ ಅವನತಿಗೆ ಬಂದಿರುವುದರಿಂದ ನಿಮಗೆ ನೀವು ಗ ಒಂದಿಷ್ಟು ಸುಖವಿಲ್ಲವೆಂದರೆ ತಪ್ಪಾಗದು. ನಿಮ್ಮ ಸಂಗಡಿಗರು ನಿಮ್ಮನ್ನೇ ಊರುವಿಲ್ಲದ ಉದ್ಯೋಗದ ಕ್ಕೆ ಬಳಸುವರು. ಆರೋಗ್ಯವು ಬಹಳವಾಗಿ ಕೆಡಲಿದೆ. ನಿತ್ಯ ಗೃಹಕಲಹ ತಪ್ಪದು, ದಿವಸಂಪ್ರತಿ ಪೀಡಿತರಾಗುವಿರಿ. ವಾತಮೂತ್ರಗಳಿಂದ ಬಹಳ ಪೀಡೆಯುಂಟಾಗುವುದು. ಧೈರ್ಯವು ಕುಂದುವುದು. ತಾ. 2-8 9 ಬಹಳ ಆನಿಷ್ಟಕಾರಿಗಳಾಗಿವೆ.

ತುಲಾ—ನೀವು ಒಳ್ಳೇ ಉದಾತ್ತರಿರುವಿರಾದರೂ ಅವರಕ್ಕನುರೂಪವಾದ ಫಲವು ಸದ್ಯ ನಿಮಗಿಲ್ಲವು. ನೀವೆಣಿಸಿದಂತೆ ಕಾರ್ಯವು ಕೊನೆಗೊಳ್ಳುವುದಾದರೂ ಮಧ್ಯೇ ಬಹಳ ವಿಘ್ನ ವಿಪ್ಲವಗಳು ಬಂದು ಕಡೆ ಹಾಕುವವು. ಅವನ್ನೆಲ್ಲಾ ಸ್ಪರ್ಧಿಸಿ ಮುಂದರಿದರೆ ಫಲವು ಸಿದ್ಧ. ಆಕಸ್ಮಿಕ ಪರ್ಯಟನ ದೇಹಾಲಸ್ಯ ಇತ್ಯಾದಿಗಳಿಂದ ಹೆಚ್ಚಿನ ಹಣ ವ್ಯಯವಾಗುವುದಲ್ಲದೆ ಮನಸ್ಸಿಗೂ ಶಾಂತಿಯಿರದು. ಅನಾರೋಗ್ಯಕ್ಕೆ ಮೂಲವಾದ ನಿಶ್ಶಕ್ತಿಯು ತಲೆದೋರುವುದು. ಧೈರ್ಯಗೆಡಬೇಡಿ ಭಾಗದಲ್ಲೂ ನ್ಯೂನತೆಯುಂಟಾಗದು. ತಾ. 3ರಿಂದ 7ರ ವರೆಗೂ ಅನುಕೂಲ.

ವೃಶ್ಚಿಕ—ಶತ್ರು ಜನರನ್ನು ಬಹುದೇಕ ನೀವು ಜಯಿಸುವಿರಾದರೂ ತತ್ಕ್ಷಣ ಪಶ್ಚಾತ್ತಾಪವು ಅಸಹನೀಯ ಮನೋವೇದನೆಗೆ ನಿಮ್ಮನ್ನು ಗುರಿಪಡಿಸುವದು. ಧನ ವಾಹನಗಳಿಗೆ ನಿಸ್ಸಂಶಯವಾಗಿ ಧಕ್ಕೆ ತಗಲಲಿದೆ. ಹುಣ್ಣು ಗಾಯಾದಿಗಳಿಂದ ದೇಹವು ಪೀಡೆಗೊಳಗಾಗಲಿದೆಯಾದರೂ ಆಂತರಿಕ ವ್ಯಾಧಿಗಳೇನೂ ಕಂಡುಬರುವುದಿಲ್ಲವು. ಸ್ತ್ರೀವ್ಯಕ್ತಿಯಲ್ಲಿ ಅತ್ಯುತ್ತಮವಾಗಿ ಫಲ ಹೊಂದುವಿರಿ. ಸಂಪನ್ನ ಸ್ತ್ರೀಯರ ಗೆಳೆತನವಾಗುವದು. ಅಧಿಕಾರಿಗಳ ಅನುಗ್ರಹದಿಂದ ಉತ್ತಮ ಶ್ರೇಣಿಯನ್ನು ಸೇರುತ್ತಿರಿ ನಿಮಗೆ ಸಂಸಾರ ಸುಖವೂ ಚೆನ್ನಾಗಿರುವುದು ತಾ. 6ರಿಂದ ವಾರಾಂತ್ಯದ ವರೆಗೂ ಅತ್ಯುತ್ತಮ.

ಧನು—"ಭಾರ್ಯಾ ರೂಪವತೀ ಶತ್ರು" ಎಂಬುದಿ ತಮಾ ಧಿಗ್ ಧಿಗ್ ಗೃಹಸ್ಥತ್ವಂ" ಇಷ್ಟರಮಟ್ಟಿಗೆ ದಾಂಪತ್ಯದಲ್ಲಿ ಉಳಿದವರ ಗೃಹಸ್ಥಾಶ್ರಮಕ್ಕೆ ಬೆಂಕಿ ಬೀಳಲಿ ಎಂಬ ಸುಭಾಷಿತಕಾರರಿಂದ ಸೂಕ್ತ ನಿಮಗೆ ಒಪ್ಪುವಂತೆ ಅನುಭವಕ್ಕೆ ಬರುವದು. ಕಾರಣ ಈ ವಾರದಲ್ಲಿ ಪ್ರತಿದಿನವೂ ನಿಮ್ಮಲ್ಲಿ ಕಲಹ ತಪ್ಪಲಾರದು. ತಂದೆ ಮಕ್ಕಳಲ್ಲಿ ಅಧಿಕಾರಿ ಸೇವಕರಲ್ಲೂ ವೈಮನಸ್ಯವುಂಟಾಗಲಿದೆ. ವಿದ್ಯಾರ್ಥಿಗಳು ಕಾಲ ಕಾಲಕ್ಕೆ ದೊರೆಯದೆ ದೇಹಾರೋಗ್ಯವು ಕೆಡುವುದು ಆದರೂ ಗುರು ಮಹಾಶಯನ ಪೂರ್ಣ ದೃಷ್ಟಿಗೆ ನೀವು ಸಿಕ್ಕಿರುವುದರಿಂದ ತಾ. 2, 5, 9ರಲ್ಲಿ ಹೆಚ್ಚಿನ ಕಷ್ಟಕ್ಕೆ ಸಿಗಲಾರಿರಿ.

ಮಕರ—ಸುಮುದಾಯಾದ್ಯುದಯಗಳಿಂದ ಇದಿರಾಳಿಗಳನ್ನು ಒಳಕ್ಕೊಂಡು ಸ್ವಕಾರ್ಯ ಸಾಧನೆ ಮಾಡುವಿರಿ. ಪ್ರಯತ್ನವು ಬಹುತೇಕ ಫಲಕಾರಿಯಾಗುವುದು. ಕಾರ್ಯ ಸಾಧನೆಗೆ ಬೇಕಿದ್ದ ಧನ ಜನಬಲವೂ ನಿಮಗೀಗ ಇದೆ. ಆದರೆ ಹಿಡಿದ ಕೆಲಸವನ್ನು ಪೂರ್ಯಸುವ ವರೆಗೆ ನಿಮಗೆ ಸಹನೆಯಿಲ್ಲ. ಅರ್ಧದಲ್ಲೇ ನಿಚ್ಚಳವು ಕೈಬಿಟ್ಟು ಹೋಗುವವು. ಸದ್ಯ ನಿಮಗೆ ಬಂಧುಗಳಿಂದ ನಾನಾರೀತಿಯ ಹಾನಿಯೊದಗಲಿದೆ. ಅವರಿಂದ ದೂರವಾಗಿದ್ದಷ್ಟು ಹಿತವು. ಉಷ್ಣ ವಿಕಾರದಿಂದ ದೇಹದಲ್ಲಿ ಜ್ವರ ಕಾಣೀತು. ತಾ. 3, 4, 5ರಲ್ಲಿ ದಕ್ಷಿಣ ಇಷ್ಟಾರ್ಥಗಳು ಸಿದ್ಧಿಸಬಹುದು.

ಕುಂಭ—ನಿಮ್ಮ ಉದ್ಯೋಗದಲ್ಲಿ ಫಲವು ಉತ್ತಮ ರೀತಿಯಲ್ಲಿ ದೊರಯದು. ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಿದ್ದ ಸಣ್ಣ ಮಕ್ಕಳ ಕಾಹಿಲೆ ವಗೈರೆಗಳಿಂದ ಚಿಂತೆಗೀಡಾಗುವಿರಿ. ವಾಕ್ ವರ್ಗಗಳಲ್ಲಿ ಭಿನ್ನ ಕೋರಿ ಅಧಿಕಾರಿಗಳ ಅಪ್ರಸನ್ನತೆಗೆ ಗುರಿಯಾಗುವ ಸಂಭವವಿದೆ. ಇಚ್ಛಿಸಿದ ಕಾರ್ಯವನ್ನು ಸಾಧಿಸಿಯೇ ಬಿಡುವಿರಿ. ಎಷ್ಟಕ್ಕೂ ಪರಾಗಿ ಕಟ್ಟೆ ಬಾಗಿ ನಡೆಯಲಾರಿರಿ. ಗುರು ಹಿರಿಯರಲ್ಲಿ ಹಿತ ವಿದದು ಭೂಮಿ ಮಿತ್ರ ಧನ ವ್ಯಯಿಸುವಿರಿ ತಾ. 2 6, 7 ನಿಮಗನುಕೂಲವಾಗಿವೆ.

ಮೀನ—ದೇಹದಲ್ಲಿ ಶಕ್ತಿಯು ಕಡಿಮೆಯಿರುವುದರಿಂದ ಧೈರ್ಯವು ಕುಗ್ಗುವುದು. ನೇತ್ರೋದರ ರೋಗಗಳು ಆಗಾಗ ಪೀಡಿಸುತ್ತಲಿರುವವು. ಉತ್ತಮ ರೀತಿಯಿಂದ ನೀವು ದುಡಿದು ಸಿರಿಯಾದರೂ ಆ ಕಡೆಯಿಂದ ಬಂದರೆ ಈ ಕಡೆಯಿಂದ ಹೋಗಿ ಬಿಡುವದು. ಇಂತಿರುವುದು ನಿಮ್ಮ ವ್ಯವಹಾರ. ಅನೇಕ ಮಿತ್ರರಿದ್ದರೂ ನಿಮ್ಮ ಹಣವನ್ನೇ ತಿಂದು ನಿಮಗೇ ಎರಡೆಂಬೆಣಿಸತಕ್ಕವರೇ ಬಹಳ. ಆದ್ದರಿಂದ ತಾ. 2, 6, 7 ಈ ದಿನಗಳಲ್ಲಿ ವಿಶೇಷ ಜಾಗರೂಕತೆಯಿಂದಿರಬೇಕು. ಇಲ್ಲವಲ್ಲಿ ಅನರ್ಥಕ್ಕೆ ಸಿಲುಕಿಕೊಳ್ಳುವಿರಿ.

ಪ್ರಕಟಣೆ

ಮಂಗ್ಳೂರು ಗ್ರಾಮದಲ್ಲಿರುವ ಸೊಂಕಾಡಿ ದುಗ್ಗಪ್ಪ ಭಂಡಾರಿಗಳ ಅಳಿಯ ರಾಮಯ್ಯ ಭಂಡಾರಿಯು ಈ ಮೂಲಕ ತಿಳಿಯಪಡಿಸುವದೇನಂದ್ರೆ.

ನನ್ನ ಮಾವ ಅಣ್ಣ ಮಂಜಪ್ಪ ಭಂಡಾರಿಯು ಕೆಲವು ದಿವಸಗಳಿಂದ ನನ್ನ ಕವರಿನ ಆಸ್ತಿಗಳ ಆಸಕ್ತಿ ನೋಡಿಕೊಂಡು ಬರುವಲ್ಲಿ ಕವರಿನ ಆಸ್ತಿಗಳ ಉತ್ಪತ್ತಿಯಿಂದ ಆತನ ಹೆಂಡ್ತಿ ಮಕ್ಕಳ ಹೆಸರಲ್ಲಿ ಹೆಚ್ಚಿನ ಆಸ್ತಿಗಳು ಖರೀದಿ ಕೊಂಡು ಬಂದದ್ದಲ್ಲದೆ ಈಗ ಕೆಲವು ಸಮಯದ ಈಚೆಗೆ ಕವರಿನ ಇತರ ಮೆಂಬರರಿಗೆ ಮೋಸವಾಗುವ ಕೆಟ್ಟ ಇರಾದೆಯಿಂದ ಕವರಿಗೆ ಹಾನಿಕರವಾದ ಹೆಚ್ಚಿನ ಅಕೃತ್ಯಗಳು ನಡೆದುದರಿಂದ ಆತನನ್ನು ಆಡಳ್ತೆಯಿಂದ ತೆಗೆದು ಹಾಕುವರೆಗೆ ಆತ ವಿನಾ ಕಾರಣಗಳು ರದ್ದು ಪಡಿಸ್ಸಿವರೆ, ಮ ಇತರ ವ್ಯಕ್ತಿಗಳ ಬಗ್ಗೆ ನಾನು ಮತ್ತು ಇತರ ಮೆಂಬರರು ಕ್ಯಾಪ್ಟೆನ್ ಉದ್ಯುಕ್ತರಾಗಿ ಆ ಬಾರಿಕ ರಿವಾರ್ಜುಗಳು ಸಂಗತಿಸುವ ಸಲ್ಲಿ ಸದ್ರಿ ಮಂಜಪ್ಪ ಭಂಡಾರಿಯು ತಿಳಕೊಂಡು ನಮ್ಮ ಕವರಿಗೆ ಇನ್ನು ಹೆಚ್ಚಿನ ಮೋಸಕೊಡಬೇಕೆಂಬ ಕೆಟ್ಟ ಇರಾದೆಯಿಂದ ನಮ್ಮ ಕವರಿಗೆ ಬರತಕ್ಕ ಕೆಲವು ಆದಾಯ ಬಾಕಿಗಳು ವಗೈರೆ ವಸೊಂದು ಪ್ರತಿಫಲ ಪಡೆಯದೆ ಅನ್ಯರ ಹೆಸರಲ್ಲಿ ಬಿನಾಮಿ ಮಾಡಿಕೊಡುವ ಇರಾದೆಯಲ್ಲಿ ಇರುವದಾಗಿ ತಿಳಿಯಬರುವದರಿಂದ ತಿಳಿಸುವದೇನಂದ್ರೆ, ಈಗಿರುವ ಸ್ಥಿತಿಯಲ್ಲಿ ಕವರಿನ ಪರವಾಗಿ ಅಂದ್ರೆ ಕವರಿನ ಆಡಳ್ತೆ ಮಾಡುವ ನೆಲೆಯಲ್ಲಿ ಸದ್ರಿ ಮಂಜಪ್ಪ ಭಂಡಾರಿಯಿಂದ ಯಾರೊಬ್ಬರೂ ಯಾವದೊಂದು ದಸ್ತಾವೇಜುಗಳು ಬರ್ಸಿಕೊಂಡದ್ದಾದ್ರೆ ಅಂಥಾ ದಸ್ತಾವೇಜುಗಳು ಕವರಿನ ಇತರ ಮೆಂಬರ್ರ ಮೇಲಾಗಲಿ ಕವರಿನ ಆಸ್ತಿಗಳ ಮೇಲಾಗಲಿ ಬಾಧಿಸುವಂತಿಲ್ಲ. ಇದಕ್ಕೆ ವಿರೋಧವಾಗಿ ನಡಕೊಳ್ಳುವವರು ಅಸ್ತು ಸಿಧಕ ಬಾಧಕಗಳನ್ನು ಅವರೇ ಸಹಿಸಿಕೊಳ್ಳತಕ್ಕದ್ದು ಎಂಬ ಸಂಗ್ತಿ ಸರ್ವರೂ ತಿಳಿದುಕೊಳ್ಳಬೇಕು.

ಮಂಗ್ಳೂರು 20-4-40 } ರಾಮಯ್ಯ ಭಂಡಾರಿ ರುಜು

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ

"ಗೊನೊಕಿಲರ್" (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನವ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ದಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಠ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ಜನತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್" ಹೆಸರನ್ನೂ ಗಮನಿಸಿರಿ

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೋ ಹೋಮ್ಯೋಪತ್ ಡಿಸ್‌ಪೆನ್ಸರಿ.

Sole Manufacturer DR. D. N. JASANI, Vitalbhai Patel Road, BOMBAY 4

ನವಯುಗದಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ನಿಮ್ಮ ವ್ಯವಹಾರ ವೃದ್ಧಿಗೊಳಿಸಿರಿ!

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ಶೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ

Kanara Printing Works,
Hampankatte, **MANGALORE**

ಮೂಲವ್ಯಾಧಿ

ಸಾಧುವೊಬ್ಬನ ಸಿದ್ಧಿಯಾಗಿರುವ ವಿಚಿತ್ರ ಹಾಗೂ **ಅಪೂರ್ವ ಔಷಧಿ.**

ಆರ್ಶಮಾರಾ (ರಿಜಿಸ್ಟರ್ಡ್)

ರಕ್ತ ಸುರಿಯುವ ಅಥವಾ ಒಣಗಿರುವ ಹಳೆಯ ಅಥವಾ ಹೊಸ ತಾದ ಒಳಗಿನ ಅಥವಾ ಹೊರಗಿನ ಯಾವಸ್ಥಿತಿಯದ್ದೇ ಆದ ಮೂಲವ್ಯಾಧಿಯ 'ಆರ್ಶಮಾರಾ'ವನ್ನು ಒಂದೆರಡು ಹಚ್ಚಿದ ಕೂಡಲೆ ಅತ್ಯಾಶ್ಚರ್ಯವಾಗಿ ಗುಣಹೊಂದುತ್ತದೆ. ನೋವು ತುರಿಸಾಟ, ಉರಿಯುವಿಕೆ, ತೀವ್ರ, ರಕ್ತಸ್ರಾವವಾಗುವುದನ್ನೆಲ್ಲಾ ಕೂಡಲೆ ನಿಲ್ಲಿಸಿಬಿಡುತ್ತದೆ. ಕೇವಲ 3 ದಿನ ಹಚ್ಚಿದರೆ ಯಾವ ತರದ ಒಪರೇಶನೂ ಇಲ್ಲದೆ ಮೂಲವ್ಯಾಧಿ ಅಥವಾ ಮೊಳೆಗಳನ್ನು ಗುಣಪಡಿಸುತ್ತದೆ. ಈ ಔಷಧಿಯಿಂದ ಸಾವಿರಾರು ರೋಗಿಗಳು ಗುಣಹೊಂದಿ ಇತರರಿಗೆ ಅದನ್ನು ಶಿಫಾರಸು ಮಾಡುತ್ತಿದ್ದಾರೆ. ಗುಣಪಡಿಸದಿದ್ದಲ್ಲಿ ಹಣ ವಾಪಸು. ಬೆಲೆ ರೂ. 2-0-0.

ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿನಿಮ್ಮ ಕೈಗೆಸೇರುವುದು ಸೀಸೆ1ಕ್ಕೆ13ಆಣೆ, ಟ.ಖ.4ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟ್ರು:- **ನವಭಾರತ ಬುಕ್‌ಡಿಪೋ, ಉಡುಪಿ**

THE **MOOLKY BANK, LTD.,**
MOOLKY.
ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ. ಭಂಗಾರದ ಸರಕಿನ ಈಡಿನ ಮೇಲೆ ನೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ನೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ನೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R Punja,	ಯಂ. ಆರ್. ಪೂಂಜ,
President & Manager,	ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!
K. R. K. SHET
Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕೊಲೇಜಿನ ಎದುರು, **ಹಂಪನಕಟ್ಟೆ, ಮಂಗಳೂರು.**

ಹೊಸ ಪುಸ್ತಕ! ಸೆಲ್ಫ್ ಇಂಗ್ಲಿಷ್ ಸ್ಟಡಿ ಈಗಲೇ ಪ್ರಿಂಟಾಗಿದೆ!
SELF ENGLISH STUDY
ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ **1-8-0**

ಕನ್ನಡ ಓದಲಿಕ್ಕೆ ತಿಳಿದವರು ಬೇರೆ ಸಹಾಯವಿಲ್ಲದೆ ಇಂಗ್ಲಿಷ್ ಓದುವುದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ 3 ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕ ಇದುವರೆಗೆ ಯಾರೂ ತಯಾರಿಸಲಿಲ್ಲ. ದೊಡ್ಡ ಪುಸ್ತಕ, ಸ್ವಲ್ಪ ಪ್ರತಿಗಳು ಮಾತ್ರ ಇರುವವು, ಬೇಗನೇ ಬರೆಯಿರಿ. ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರ್ಯಾರೇ ಆಗಲಿ ಅವರು ಕೆಲವು ದಿವಸಗಳಲ್ಲಿ ಇಂಗ್ಲಿಷ್ ಕಲಿತುಕೊಳ್ಳಬಹುದು, ನೀವು ಅದಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ. ಮನೆಯಲ್ಲೇ ಈ ಪುಸ್ತಕ ಓದಿ, ಇಂಗ್ಲೀಷ್ ಓದುಬರಹ ಎಲ್ಲಾ ಸುಲಭವಾಗಿ ಬರುತ್ತೆ. ಪುಸ್ತಕದ ಕ್ರಯ ರೂ.1—8—0.

Western Swiss Watch Co	**ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,**
[illegible] G. P. O. MADRAS	ಪೋಸ್ಟ್ ಬಾಕ್ಸ್ ನಂ. 68. ಮದರಾಸ್.

ಮುಚ್ಚಿದರೆ ಮುಗುಳು ! ಬಿಚ್ಚಿದರೆ ಅರಳು !!

ಶ್ರೀ. ಕೆ. ಹೊನ್ನಯ್ಯ ಶೆಟ್ಟಿರಿಂದ ಪೋಣಿಸಲ್ಪಟ್ಟ

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಮಾಲೆಯು

ಮುಗುಳು

ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಅತ್ಯುಪಯುಕ್ತವಾದ ಸಚಿತ್ರ ಪದ್ಯ ಪುಸ್ತಕ.

(ಮದ್ರಾಸ್, ಬೊಂಬಾಯಿ, ಮೈಸೂರು ಟೆಕ್ಸ್ಟ್ ಬುಕ್ ಕಮಿಟಿಗಳಿಂದ ಮಂಜೂರಾಗಿದೆ.

ಅಭಿನಯಕ್ಕೆ, ನರ್ತನಕ್ಕೆ, ಕೋಲಾಟಕ್ಕೆ, ಎಲ್ಲಕ್ಕೂ ಅತ್ಯನುಕೂಲವಾದ, ಮಕ್ಕಳ ವಯೋಗುಣಕ್ಕನುಗುಣವಾದ ಪದ್ಯಗಳಿಂದೊಡಗೂಡಿದೆ.

ಅಧ್ಯಾಪಕರೆಲ್ಲಾ ಇದನ್ನು ಮಕ್ಕಳ ಕೈಗೆ ಕೊಟ್ಟು, ಉಲಿದಾಡಿಸಿ, ಕುಣಿದುಂಬಿಸಬೇಕಾಗಿ ಪ್ರಾರ್ಥನೆ.

ಎಂಟನೆಯ ಆವೃತ್ತಿ] [ಬೆಲೆ: ೦—೨—೬

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಕೆಳಗಿನವರಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಿನ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತಾ.

ಸದ್ವೈದ್ಯಶಾಲಾ ನಂಜನಗೂಡು ಇವರ

"ಸುಬಲಾ" ಶಕ್ತಿಸಂಕಟ, ಮಲಬದ್ಧತೆ ಇವುಗಳನ್ನು ಹೋಗಲಾಡಿಸಿ, ರಕ್ತ ವೃದ್ಧಿ ಪಡಿಸಿ, ಶರೀರಕ್ಕೆ ಬಲವನ್ನು ಕೊಡತಕ್ಕದ್ದು ಬಹಳ ರುಚಿಯಾಗಿರುತ್ತದೆ.

ಬ್ರಾಂಚ್:-ರಥಬೀದಿ ಮಂಗಳೂರು.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಲಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

PRINTED BY S. S KARANTH AT THE THULUNAD PRESS, UDIPI. AND PUBLISHED BY K. H. SHETTY AT "NAVAYUGA OFFICE, UDIPI, S. INDIA.

…red No. M. 3618 9-5-1940.

ನವಯುಗ

navayuga

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಛೇರಿ:— ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

ಭದ್ರತೆಯಿಂದಲೂ, ಖಾತ್ರಿಯುಳ್ಳ ನಫೆ ಹಂಚಿಕೆಯಿಂದಲೂ, ಜಾಗ್ರತೆಯಾಗಿ ಹಕ್ಕುಗಳನ್ನು ಕೊಡುವುದರಿಂದಲೂ ಮತ್ತು ಉದಾರವಾದ ಜೀವವಿಮೆಯ ನಿಯಮಗಳಿಂದಲೂ ಈ ಸಂಸ್ಥೆಯು ಪ್ರಖ್ಯಾತಿಪಡೆದಿರುತ್ತದೆ.

ಪ್ರೊಫೆಸರ್ ಕೆ. ಬಿ. ಮಾಧವ, ಎಂ.ಎ., ಎಫ್ ಆರ್ ಎ ಎಸ್., ಎ.ಐ.ಎ (ಲಂಡನ್) ಪ್ರೊಫೆಸರ್, ಮಹಾರಾಜ ಕಾಲೇಜು, ಮೈಸೂರು ಅವರ್ಕಳ ಅಭಿಪ್ರಾಯ ಸಾರಾಂಶ.

"ಕಳೆದ ೧೦ ವರ್ಷಗಳಿಂದ ನಿಮ್ಮ ಸಂಘವು ಬಹಳವಾಗಿ ಮುಂದುವರಿಯುತ್ತಿರುವುದಲ್ಲದೆ ಕಳೆದ ಮೂರು ವರ್ಷಗಳಿಂದ ಆದರ್ಶವಾದ ಪೆಟ್ಟಿ, ಬಡ್ಡಿಯ ಫಲ, ದಪ್ಪಾದ ಪಾಲಿಸಿಗಳ ಸಂಖ್ಯೆ ಇವೇ ಮೊದಲಾದ ಜೀವವಿಮೆಯ ನಿಯಮಗಳನ್ನು ಉತ್ತಮಗೊಳಿಸಲು ಸಹಕಾರಿಯಾಗುವ ವಿಷಯಗಳಲ್ಲಿ ಹೊಂದಿರುವ ಅಭಿವೃದ್ಧಿಯು ಪ್ರಶಂಸನೀಯವಾಗಿದೆ. .. ..ಶೀಘ್ರ ಸಹಿತವಾದ ಅಭಿವೃದ್ಧಿಗೆ ಉದಾಹರಣೆಯಾಗಿರುವ ಏಷ್ಯಾಟಿಕ್ಕಿನ ಅಪ್ರತಿಹತವಾದ ಕಾರ್ಯಕಲಾಪಗಳಿಗಾಗಿ . . ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸೂಚಿಸಲು ಉಂಟಾಗುವ ಸಂತೋಷವನ್ನು ಕಳೆದುಕೊಳ್ಳಲಾರೆನು"

ಕೊಟ್ಟಿರುವ ವಿಮಾ ಹಕ್ಕಿನ ಹಣಗಳು: ೫,೦೦,೦೦೦—೦—೦.

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

H. Venkataramiah, *Divisional Superintendent* or **R. Purniah** *Lg. Genera Manager.*

The Asiatic Govt. Security Life Assu Co. Ltd.,
Asiatic Building, BANGALORE CITY.

ಝಂಡು ಮಲೇರಿಯಾ ಮಿಕ್ಸ್ಚರ್

ಮಲೇರಿಯಾ, ವಿಷಪ್ರಣಗಳಿಂದುಂಟಾಗುವ ಎಲ್ಲಾ ತರದ

ಕಠಿಣ ಜ್ವರಗಳಿಗೆ

ಖಾತ್ರಿಯಾದ ಸಿದ್ಧೌಷಧ

ಕ್ರಯ: ಆಣೆ 0—14—0 ಮಾತ್ರ.

ಸ್ಥಳೀಯ ಏಜಂಟರು:— ಪಿ. ಎ. ಪೈ ಬ್ರದರ್ಸ್.

ಕಾರ್ಕಳದ ಏಜಂಟರು:— ವಿ. ವಿ. ಶೆಣೈ, ಕೆಮಿಸ್ಟ್ಸ್.

ಮಂಗಳೂರಿಗೂ ದಕ್ಷಿಣ ಕನ್ನಡ ಜಿಲ್ಲೆಯ ಇತರ ಮುಖ್ಯ ಸ್ಥಳಗಳಿಗೂ ಏಜಂಟರು ಬೇಕಾಗಿದ್ದಾರೆ.

ಕರಪಗಳಿಗೂ ಏಜನ್ಸಿಗಳಿಗೂ ಮುಖ್ಯ ಏಜಂಟರಿಗೆ ಬರೆಯಿರಿ:—

ದಾಮೋದರ್ ಎಂಡ್ ಕೊ,

ಮುಖ್ಯ ಏಜಂಟರು,

ZANDU

೭೮ ಚೈನಾ ಬಜಾರ್ ರೋಡ್, ಜಿ. ಟಿ. ಮದರಾಸು

DAMODER & CO.,
78 China Bazaar Road, **G. T. MADRAS**

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುವಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು.

ಮೈಸೂರು ಸೇಂಡಲ್ ಸೋಪು

ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತು ವಿಕಾರ ಮೊದಲಾದವುಗಳನ್ನು ಶೀಘ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು.

ಕ್ರಯ:- 40 ಮಾತ್ರೆಗಳ ಡಬ್ಬಿ 1ಕ್ಕೆ ರೂ. 1—0—0.

ಮದನಮಂಜರಿ ಫಾರ್ಮಸಿ, 184 ಚೈನಾಬಜಾರ್ ಮದ್ರಾಸ್.

ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

ಸರ್ವಾಂಗ ಭದ್ರತೆಯ ಹಾಗೂ ಅಭಿವೃದ್ಧಿಯ ಮೇಲ್ಮೆಯುಳ್ಳರುವ ಜೀವ ವಿಮಾ ಸಂಘಯಾವುದೆಂದು ಸರ್ವದಾ ಚಿಂತಿಸುತ್ತಿರುವ ಜೀವವಿಮಾದಾರರಿಗೂ ಪ್ರಾತಿನಿಧ್ಯ ಪಡೆಯಲಪೇಕ್ಷಿಸುವ ಗೃಹಸ್ಥ ಗೃಹಿಣಿಯರಿಗೂ ಶೀಘ್ರದಲ್ಲೇ ಇಷ್ಟಾರ್ಥ ಸಿದ್ಧಿಯಾಗಬೇಕೆಂದಿದ್ದರೆ ಕೂಡಲೇ ನಮ್ಮೊಡನೆ ವಿಚಾರಿಸಿರಿ:-

ಶಾಖಾ ಕಾರ್ಯಾಲಯ,
ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಸೂರೆನ್ಸ್ ಕೊ. ಲಿಮಿಟೆಡ್, ಮದ್ರಾಸು.
ಮಂಗಳೂರು ಬ್ರಾಂಚ್

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ
ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ

Kanara Printing Works,
Hampankatte, MANGALORE

ಮೂಲವ್ಯಾಧಿ

ಸಾಧುವೊಬ್ಬನ ಸಿದ್ಧಿಯಾಗಿರುವ ವಿಚಿತ್ರ ಹಾಗೂ ಅಪೂರ್ವ ಔಷಧಿ.

ಆರ್ಶಮಾರಾ (ರಜಿಸ್ಟರ್ಡ್)

ರಕ್ತ ಸುರಿಯುವ ಅಥವಾ ಬಿಂದಿ ಗಿರುವ ಹಳೆಯ ಅಥವಾ ಹೊಸ ತರದ ಒಳಗಿನ ಅಥವಾ ಹೊರಗಿನ ಯಾವಸ್ಥಿತಿಯದ್ದೇ ಆದ ಮೂಲವ್ಯಾಧಿಯು 'ಅರ್ಶಮಾರಾ'ವನ್ನು ಒಂದೊಮ್ಮೆ ಹಚ್ಚಿದ ಕೂಡಲೆ ಅದ್ಭುತ ರೀತಿ ಗುಣಹೊಂದುವದು. ನೋವು ತುರಿಸಾಟ, ಉರಿಯುವಿಕೆ, ಶೀತ, ರಕ್ತಸ್ರಾವವಾಗುವದನ್ನೆಲ್ಲಾ ಕೂಡಲೆ ನಿಲ್ಲಿಸಿಬಿಡುವುದು. ಕೇವಲ 3 ದಿನ ಹಚ್ಚಿದರೆ ಯಾವ ತರದ ಶಸ್ತ್ರಚಿಕಿತ್ಸೆ ಇಲ್ಲದೆ ಮೂಲವ್ಯಾಧಿ ಅಥವಾ ಮೊಳೆಗಳನ್ನು ಗುಣಪಡಿಸುವದು. ಈ ಔಷಧಿಯಿಂದ ಸಾವಿರಾರು ರೋಗಿಗಳು ಗುಣಹೊಂದಿ ಇತರರಿಗೆ ಅದನ್ನು ಶಿಫಾರಸು ಮಾಡುತ್ತಿದ್ದಾರೆ. ಗುಣವಾಗದಿದ್ದಲ್ಲಿ ಹಣ ವಾಪಸು. ಬೆಲೆ ರೂ. 2-0-0

ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ ಅತಿಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿನಿಮ್ಮಕೈಗೆಸೇರುವುದು ಸೀಸೆ1ಕ್ಕೆ12ಅಣೆ, ಟ.ಖ.೯ಅಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪೋ, ಉಡುಪಿ**

THE MOOLKY BANK, LTD.,
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.
ಬಂಗಾರ ವ ಸರಕಿನ ಈಡಿನ ಮೇಲೆ ಸೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು
ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ ಬ್ಯಾಂಕ್ ಸೇಕಡ 3½ ವರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುವು.
ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!

K. R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕಾಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಹೊಸ ಪುಸ್ತಕ! **ಸೆಲ್ಫ್ ಇಂಗ್ಲಿಷ್ ಸ್ಟಡಿ** ಈಗಲೇ ಪ್ರಿಂಟಾಗಿದೆ!

SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ 1-8-0

ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವದನ್ನೂ, ಮಾತನಾಡುವದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವದನ್ನೂ ೩ ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕ ಇದುವರೆಗೆ ಯಾರೂ ತಯಾರಿಸಲಿಲ್ಲ. ದೊಡ್ಡ ಪುಸ್ತಕ. ಸ್ವಲ್ಪ ಪ್ರತಿಗಳು ಮಾತ್ರ ಇರುವವು, ಬೇಗನೇ ಬರೆಯಿರಿ. ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರ್ಯಾರೇ ಆಗಲಿ ಅರವತ್ತು ದಿವಸಗಳಲ್ಲಿ ಇಂಗ್ಲಿಷ್ ಕಲಿಯಬಹುದು. ಇದಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ. ಮನೆಯಲ್ಲೇ ಈ ಪುಸ್ತಕ ಓದಿರಿ, ಇಂಗ್ಲೀಷ್ ಓದುಬರಹ ಎಲ್ಲಾ ಸುಲಭವಾಗಿ ಬರುತ್ತೆ. ಪುಸ್ತಕದ ಕ್ರಯ ರೂ 1—8—0.

Western Swiss Watch Co. | **ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,**
[illegible] | ಪೋಸ್ಟ್ ಬಾಕ್ಸ್ ನಂ. 68, ಮದರಾಸ್.
G. P. O MADRAS

ಮುಟ್ಟಿದರೆ ಮುಗುಳು ! **ಬಿಚ್ಚಿದರೆ ಅರಳು !!**

ಶ್ರೀ. ಕೆ. ಹೊನ್ನಯ್ಯ ಶೆಟ್ಟರಿಂದ ಪೋಣಿಸಲ್ಪಟ್ಟ

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಮಾಲಿಯುವು

ಮುಗುಳು

ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಅತ್ಯುಪಯುಕ್ತವಾದ ಸಚಿತ್ರ ಪದ್ಯ ಪುಸ್ತಕ.
(ಮದ್ರಾಸ್, ಬೊಂಬಾಯಿ, ಮೈಸೂರು ಟೆಕ್ಸ್ಟ್ ಬುಕ್ ಕಮಿಟಿಗಳಿಂದ ಮಂಜೂರಾಗಿದೆ.
ಅಭಿನಯಕ್ಕೆ, ನರ್ತನಕ್ಕೆ, ಕೋಲಾಟಕ್ಕೆ, ಎಲ್ಲಕ್ಕೂ ಅತ್ಯನುಕೂಲವಾದ,
ಮಕ್ಕಳ ವಯೋಗುಣಕ್ಕನುಗುಣವಾದ ಪದ್ಯಗಳಿಂದೊಡಗೂಡಿದೆ.
ಅಧ್ಯಾಪಕರೆಲ್ಲಾ ಇದನ್ನು ಮಕ್ಕಳ ಕೈಗೆ ಕೊಟ್ಟು, ಉಲಿವಾಡಿಸಿ,
ಕುರಿದುಂಬಿಸಬೇಕಾಗಿ ಪ್ರಾರ್ಥನೆ.

ಎಂಟನೆಯ ಆವೃತ್ತಿ] [ಬೆಲೆ: ೦—೨—೬

ಪ್ರತಿಗಳು ನಮ್ಮಲ್ಲಿ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಕೆಳಗಿನವರಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —
ಇನ್ನುಮೇಲೆ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.
ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತಾ.

ಸದ್ವೈದ್ಯಶಾಲಾ ನಂಜನಗೂಡು ಇವರ

"ಸುಬಲಾ"

ಶಕ್ತಿಹೀನತೆ, ಮಲಬದ್ಧತೆ ಇವುಗಳನ್ನು ಹೋಗಲಾಡಿಸಿ, ರಕ್ತ ವೃದ್ಧಿಪಡಿಸಿ, ಶರೀರಕ್ಕೆ ಬಲವನ್ನು ಕೊಡುತ್ತದೆ ಬಹಳ ರುಚಿಯಾಗಿರುತ್ತದೆ.

ಬ್ರಾಂಚ್:-ರಥಬೀದಿ ಮಂಗಳೂರು



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ನಾನಾಪ್ರಕಾರದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಲಂಚೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

PRINTED BY S. S KARANTH AT THE THULUNAD PRESS, UDIPI. AND PUBLISHED BY K H. SHETTY AT "NAVAYUGA OFFICE, UDIPI, S. INDIA.

red No. M. 3618 9-5-1940.

ನವಯುಗ
NAVAYUGA

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಛೇರಿ:— ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

ಭದ್ರತೆಯಿಂದಲೂ, ಖಾತ್ರಿಯುಳ್ಳ ನಫೆ ಹಂಚಿಕೆಯಿಂದಲೂ, ಜಾಗ್ರತೆಯಾಗಿ ಹಕ್ಕುಗಳನ್ನು ಕೊಡುವುದರಿಂದಲೂ ಮತ್ತು ಉದಾರವಾದ ಜೀವವಿಮೆಯ ನಿಯಮಗಳಿಂದಲೂ ಈ ಸಂಸ್ಥೆಯು ಪ್ರಖ್ಯಾತಿಪಡೆದಿರುತ್ತದೆ.

ಪ್ರೊಫೆಸರ್ ಕೆ. ಬಿ. ಮಾಧವ, ಎಂ.ಎ., ಎಫ್ ಆರ್ ಎ ಎಸ್., ಎ.ಐ.ಎ (ಲಂಡನ್) ಪ್ರೊಫೆಸರ್, ಮಹಾರಾಜ ಕಾಲೇಜು, ಮೈಸೂರು ಅವರ್ಕಳ ಅಭಿಪ್ರಾಯ ಸಾರಾಂಶ.

"ಕಳೆದ ೧೦ ವರ್ಷಗಳಿಂದ ನಿಮ್ಮ ಸಂಘವು ಬಹಳವಾಗಿ ಮುಂದುವರಿಯುತ್ತಿರುವುದಲ್ಲದೆ ಕಳೆದ ಮೂರು ವರ್ಷಗಳಿಂದ ಆದೇಶದ ವೆಚ್ಚ, ಬಡ್ಡಿಯ ಫಲ, ದಪ್ಪದ ಪಾಲಿಸಿಗಳ ಸಂಖ್ಯೆ ಇವೇ ಮೊದಲಾದ ಜೀವವಿಮೆಯ ನಿಯಮಗಳನ್ನು ಉತ್ತಮಗೊಳಿಸಲು ಸಹಕಾರಿಯಾಗುವ ವಿಷಯಗಳಲ್ಲಿ ಹೊಂದಿರುವ ಅಭಿವೃದ್ಧಿಯು ತೃಪ್ತಿಕರವಾಗಿದೆ . . . ಸೌಕರ್ಯ ಸಹಿತವಾದ ಅಭಿವೃದ್ಧಿಗೆ ಉದಾಹರಣೆಯಾಗಿರುವ ಏಷ್ಯಾಟಿಕ್ಕಿನ ಅಸ್ತಿತ್ವಕಾರ್ಯಕರ್ತರಿಗೆ . . . ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸೂಚಿಸಲು ಉಂಟಾಗುವ ಸಂತೋಷವನ್ನು ಕಳೆದುಕೊಳ್ಳಲಾರೆನು"

ಕೊಟ್ಟಿರುವ ವಿಮಾ ಹಕ್ಕಿನ ಹಣಗಳು: ೫,೦೦,೦೦೦—೦—೦

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

H. Venkataramiah, Divisional Superintendent } or { R. Purniah, Ag. Gen. Manager

The Asiatic Govt. Security Life Assu Co. Ltd.,
Asiatic Building, BANGALORE CITY.

ಝಂಡು ಮಲೇರಿಯಾ ಮಿಕ್ಸ್ಚರ್

ಮಲೇರಿಯಾ, ವಿಷಜ್ವರಗಳಿಂದುಂಟಾಗುವ ಎಲ್ಲಾ ತರದ ಕಠಿಣ ಜ್ವರಗಳಿಗೆ

ಖಾತ್ರಿಯಾದ ಸಿದ್ಧೌಷಧ

ಕ್ರಯ: ಆಣೆ 0–14–0 ಮಾತ್ರ.

ಸ್ಥಳೀಯ ಏಜಂಟರು:- ಪಿ. ಎ. ಪೈ ಬ್ರದರ್ಸ್.
ಕಾರ್ಕಳದ ಏಜಂಟರು:- ವಿ. ವಿ. ಶಣೈ, ಕೆಮಿಸ್ಟ್ಸ್.

ಮಂಗಳೂರಿಗೂ ದಕ್ಷಿಣ ಕನ್ನಡ ಜಿಲ್ಲೆಯ ಇತರ ಮುಖ್ಯ ಸ್ಥಳಗಳಿಗೂ ಏಜಂಟರು ಬೇಕಾಗಿದ್ದಾರೆ.

ಶರ್ತಗಳಿಗೂ ಏಜನ್ಸಿಗಳಿಗೂ ಮುಖ್ಯ ಏಜಂಟರಿಗೆ ಬರೆಯಿರಿ:—

ದಾಮೋದರ್ ಎಂಡ್ ಕೊ,
ಮುಖ್ಯ ಏಜಂಟರು,
78 ಚೀನಾ ಬಜಾರ್ ರೋಡ್, ಜಿ. ಟಿ. ಮದರಾಸು

ZANDU

DAMODER & CO.,
78 China Bazaar Road, **G. T. MADRAS**

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳೆಲ್ಲಾ ಸರ್ವೋತ್ಕೃಷ್ಟವಾದುದು.

ಮೈಸೂರು ಸೇಂಡಲ್ ಸೋಪು

ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಶೀಘ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು.

ಕ್ರಯ:- 40 ಮಾತ್ರೆಗಳ ಡಬ್ಬಿ 1ರ ರೂ. 1—0—0.

ಮದನಮಂಜರಿ ಫಾರ್ಮಸಿ, 184 ಚೈನಾಬಜಾರ್ ಮದ್ರಾಸ್.

ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

ಸರ್ವಾಂಗ ಭದ್ರತೆಯ ಹಾಗೂ ಅಭಿವೃದ್ಧಿಯ ಮೇಲ್ಮೆಯುಳ್ಳರುವ ಜೀವ ವಿಮಾ ಸಂಘವಾವುದೆಂದು ಸರ್ವದಾ ಚಿಂತಿಸುತ್ತಿರುವ ಜೀವವಿಮಾದಾರರಿಗೂ ಪ್ರಾತಿನಿಧ್ಯ ಪಡೆಯಲಪೇಕ್ಷಿಸುವ ಗೃಹಸ್ಥ ಗೃಹಿಣಿಯರಿಗೂ ಕ್ಷಿಪ್ರದಲ್ಲೇ ಇಷ್ಟಾರ್ಥ ಸಿದ್ಧಿಯಾಗಬೇಕೆಂದಿದ್ದರೆ ಕೂಡಲೇ ನಮ್ಮೊಡನೆ ವಿಚಾರಿಸಿರಿ:—

ಶಾಮರಾಯ ರಾವ್,
ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್, ಮದ್ರಾಸು.
ಮಂಗಳೂರು ಬ್ರಾಂಚ್

THE

PANGAL NAYAK BANK LTD.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು)

Season Deposits for a period of 3, 4, 5 or 6 months are accepted at all the offices of the Bank and interest is allowed at 4% per annum till maturity or the 30th June 1940, as the case may be, whichever is earlier.

For further information please communicate with or call at any of our offices.

THE VIJAYA BANK LTD.,

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ--- ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು

ಬಡಬಗ್ಗರಿಂದ ಅಮಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಬಾಲಕರು ಆರೋಗ್ಯಶಾಲಿಗಳಾಗಲು **ಪ್ರಭೂಸ್–ಬಾಲಾಮೃತ**

ಒಂದೆರಡು ವಾರಗಳಲ್ಲಿ ಅದ್ಭುತ ಗುಣ.

— ಕಮನೀಯವಾದ ಕೇಶಕಲಾಪ ತಂಪಾದ ಮಿದುಳು ಶುಭ್ರ ನೇತ್ರಗಳು ಇವುಗಳನ್ನು ಹೊಂದಲು —

ಪುಷ್ಪಗಂಧಾಮೋದಿತ **ಆಮಲಕೀ ತೈಲ** ಬಹು ಗುಣಯುಕ್ತ ವಾಯುಮಾತ್ರೆಗಳೆಂಬ --- **ಧಾನ್ವಂತರಿ ಗುಟಿಕಾ** --- ಇವುಗಳನ್ನು ಸೇವಿಸಿ ವಾಯುವೆಂಬ ರೋಗವನ್ನು ಗುಣಪಡಿಸಿಕೊಳ್ಳಿರಿ

ಮಾತ್ರೆ–12ಕ್ಕೆ 0-4-0, 25ಕ್ಕೆ 0-7-0, 50ಕ್ಕೆ 0-13-0, 100ಕ್ಕೆ 1-5-0

5 ಆಣೆಯ ಸ್ಟಾಂಪು ಕಳುಹಿಸಿದರೆ 12 ಮಾತ್ರೆಗಳನ್ನು ಕಳುಹಿಸುತ್ತೇವೆ.

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಕುಂಜಾಲು, ಬ್ರಹ್ಮಾವರ, ದ. ಕ

ನಮ್ಮ ಸ್ಟಾಕಿಸ್ಟರು:–

ನವಭಾರತ ಬುಕ್ ಡಿಪೋ, ಉಡುಪಿ ದ. ಕನ್ನಡ. ಜನರಲ್ ಸಪ್ಲಾಯರ್ಸ್ ಲಿಮಿಟೆಡ್, ಉಡುಪಿ ಪೋಸ್ಟ್ ದ. ಭಾರತ, ಕೆನರಾ ನ್ಯೂಸ್ ಏಜನ್ಸಿ, ಎ. ಆರ್ ಪ್ರಭು, ಒಟ್ಟುವಾಲಾ ಮನ್ಸನ್, ಲಾಲ್‌ಬಾಗ್ ಮುಂಬೈ ನಂ. 12, ಗಣಪಯ್ಯ ಲಕ್ಷ್ಮಣ ನಾಯಕ್ ಎಂಡ ಬ್ರದರ್ಸ್, ಕೋಟ, ದ ಕನ್ನಡ.

ಸೀರೆಗಳು ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ

Transport & Car Owners



ARE SPECIALLY INVITED TO VISIT

OUR SHOW ROOM *for economical transport maintenance.*

CANARA AUTOMOBILES - - - - - - MANGALORE

ಕೋಲಿನ್ಸ್ ನ ಬಿಳೀ ಟೂಥಪೇಸ್ಟ ಅಲುಗಾಡುವ ಹಲ್ಲುಗಳನ್ನು ಗಟ್ಟಿಮಾಡುತ್ತದೆ



ಅಲುಗಾಡುವ ಹಲ್ಲುಗಳನ್ನು ಮತ್ತೆ ಗಟ್ಟಿಮಾಡಿ ರಕ್ತ ಸೋರುವದನ್ನು ನಿಂದು ಮಾಡಿ ವಸಡಿಯನ್ನು ಗಟ್ಟಿ ಮಾಡುವದು. ತಯಾರಿಸುವವರು— ಕೋಲಿನ್ಸ್ ಕೆಮಿಕಲ್ ಕಂ, (ಮಾಲಕರು --- ಮುಗನಭಾಯಿ) ಅವಿನ್ ಅಂಡ್ ಕಂಪನಿ ದಿ-ಂಬಯಿ.

"ನಾಮರ್ದಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ನರೋನಿಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ.

"ನಮಿನಾ ಟೊನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನ ವುಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ

ಕಿಮ್ಮತು ರೂ. 3-0-0 ಡಬ್ಬಿ 0-8-0

ಸೊರತ್ ಫಾರ್ಮೆಸಿ,

ನಳ್ ಬಜಾರ್, ದಂಕನ್ ರೋಡ್,

ಮುಂಬಾಯಿ 4

Sorath Pharmacy,

Null Bazar, Duncan Road,

BOMBAY 4

ಭಾರತೀ ಗ್ರಂಥಮಾಲೆಯ ಪುಸ್ತಕಗಳು.

ಬೆಳಕು (ಚಿಕ್ಕ ಕತೆಗಳ ಸಂಗ್ರಹ.)

ತಿನಿಸು (ಕತೆ, ಕವನ, ಪ್ರಬಂಧಗಳ ಸಂಗ್ರಹ)

ಪ್ರತೀಕಾರ (ನವಪೌರಾಣಿಕ ನಾಟಕ)

ಲೋಪಾಮುದ್ರೆ (ಪೌರಾಣಿಕ ಕತೆ)

ಚಿಗುರು (10 ಚಿಕ್ಕ ಕತೆಗಳ ಸಂಗ್ರಹ)

ಪಂಚಾರತಿ (5 ಏಕಾಂಕ ನಾಟಕಗಳ ಸಂಗ್ರಹ)

ಪ್ರತಿಯೊಂದರ ಬೆಲೆ ನಾಲ್ಕಾಣೆ ಮಾತ್ರ (ಅಂಚೆವೆಚ್ಚ 0-0-6 ಪ್ರತ್ಯೇಕ)

ರೂ 1-8-0 ಕಳಿಸಿದ್ದಲ್ಲಿ ಆರೂ ಪುಸ್ತಕಗಳನ್ನು ಕಳಿಸಲಾಗುವದು. (ಅಂಚೆವೆಚ್ಚ ಪುಕ್ಕಟೆ)

ವ್ಯಾಪಾರಿಗಳಿಗೆ ಧಾರಾಳ ಕಮಿಶನ್.

ಪ್ರತಿಗಳಿಗೆ ಬರೆಯಿರಿ:–

ಮೆನೇಜರ್,

ನವಭಾರತ ಪುಸ್ತಕ ಭಂಡಾರ

ಉಡುಪಿ.

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಆಬಕಾರಿ ವಿಕ್ರಯ ಟೇಕ್ಸ್.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಆಕ್ಟಿನಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ, ಕ್ರಮವಾದ ಜಮಾ ಖರ್ಚಿನ ಲೆಖ್ಖವಿಲ್ಲದೂ ಸಾಲದು. ಆದರಿಂದ ತಯಾರಿಸಿದ ಸಾರಾಂಶದ ವಿಷಕ್ತವು ಕೇವಲ ನಿಯಮಗಳಲ್ಲಿ ತನ್ನಿಯ ಆಫೀಸರರಿಗೆ ಒಪ್ಪಿಗೆಯಾಗದೇ ಕು ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ಸಮಜಾಯಿಶಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು, ಪರಿಣಾಮವಾಗಿ ನಿಮ್ಮಿಂದ ಸಸಲಾಗುವ ಟೇಕ್ಸ ಕಮ್ಮಿಯಾಗುವದು. ಸಂದರ್ಭಾನುಸಾರ ಟೇಕ್ಸ ಕೊಡಬೇಕಿಲ್ಲವೆಂದೂ ತೀರ್ಮಾನವ ಗಬಹುದು. "ರಿಟರ್ನ್" ಕಳ್ಸಿಯಾಗಿ ಹೋಗಿದ್ದರೂ ತಡವಾಗಲಿಲ್ಲ ಲೆಖ್ಖ ಹಾಜರು ಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸಕಾಣಿಸಿದವರೊಡನೆ ಪತ್ರವ್ಯವಹಾರ ನಡಿಸಿರಿ.

ಎಸ್. ಎಸ್. ಪುರಾಣಿಕ,

ಇನ್ಕಮ್ ಟೇಕ್ಸ್ ಪ್ರೇಕ್ಟೀಶನರ್,

ಕೃಷ್ಣಾ ಡಿಸ್ಪೆನ್ಸರೀ ಬಿಲ್ಡಿಂಗ್,

ಹಂಪನಕಟ್ಟೆ, **ಮಂಗಳೂರು.**

ಕನ್ನಡ ಮುದಿವೆಣ್ಣೊಂದು ಕನ್ನಡಗಿತ್ತಿಯ ಕಿರುಗಾಣಿಕೆ

ಇಬ್ಬರ ಸೋದರಿಯರ ನೈಜ ಜೀವನದ ದುರಂತ ಚಿತ್ರವನ್ನೂ, ಸ್ತ್ರೀ-ಪುರುಷ ಹೃದಯಗಳ ಆಳವನ್ನೂ ಹೃದಯಂಗಮವಾಗಿ ಚಿತ್ರಿಸುವ ರಮ್ಯ ಕಥಾನಕ

ವತ್ಸಲಾ.

ಸಾಮಾಜಿಕ ಕಾದಂಬರಿ

ಬೆಲೆ: ೦-೭-೬.

0—8—0 ಸ್ಟಾಂಪು ಕಳುಹಿಸಿದರೆ 1 ಪ್ರತಿಯನ್ನು ಕಳಿಸಲಾಗುವುದು,

ಬರಹಗಾರ್ತಿಯರು:–

ಶ್ರೀಮತಿ ಮಟ್ಪಾಡಿ ಕಮಲಾಕ್ಷಿ

ಈ ಪುಸ್ತಕದ ಕುರಿತು ಪ್ರಖ್ಯಾತ ವಿಮರ್ಶಕರೂ ವಿಚಕ್ಷಣ ಕರ್ಣಾಟಕ ವಿದ್ಯಾವೈಭವ, ರಾವ್ ಬಹದೂರ್ ಆರ್. ನರಸಿಂಹಾಚಾರ್ಯ M. A., M. R. A. S. **ಇವರು** ಬೆಂಗಳೂರಿನಿಂದ ಹೀಗೆ ಅಭಿಪ್ರಾಯ ಪಡುತ್ತಾರೆ 'ಗ್ರಂಥದ ಶೈಲಿ ಗಂಭೀರವಾಗಿಯೂ ಹೃದಯರಂಜಕವಾಗಿಯೂ ಇದೆ, ಪ್ರತಿಪಾದಿತವಾದ ವಿಷಯವು ನೀತಿಬೋಧಕವಾಗಿಯೂ ಮತ್ತು ಮನೋರಂಜಕವಾಗಿಯೂ ಇದೆ, ಸ್ತ್ರೀಯರಿಗೆ ಬೋಧಪ್ರದವಾದ ಗ್ರಂಥ ....'

ಪ್ರತಿಗಳು ಸಿಗುವ ಸ್ಥಳ:

ನವಭಾರತ ಪುಸ್ತಕ ಭಂಡಾರ,

ಉಡುಪಿ.

ESTD. 1921 ಸ್ಥಾಪಿತ

FOUNDER:
SRI. A. B. SHETTY, M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA

ಚಂದಾ ವಿವರ:
1 ವರ್ಷಕ್ಕೆ - ರು. 3 4
6 ತಿಂಗಳಿಗೆ - ರು. 1 12 0

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹ ಸಂಪಾದಕ:
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೩೫

ಉಡುಪಿ, ಗುರುವಾರ, ೯—೫—೧೯೪೦.
UDIPI, THURSDAY, 9-5-1940.

VOL. 19
No. 35

ಬಿಕ್ಕಟ್ಟು ನಿವಾರಣೆಯ ಹಾದಿ

ಬ್ರಿಟಿಷ್ ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ ಕೇಳಲ್ಪಟ್ಟ ಪ್ರಶ್ನೆಯೊಂದಕ್ಕೆ ಉತ್ತರ ಕೊಡುವಾಗ ಭಾರತದ ಉಪ ಕಾರ್ಯದರ್ಶಿ ಸರ್. ಹ್ಯೂಗ್ ಓನ್ನೈಲ್ ಇವರು ಹೀಗೆಂದರು "ಗಾಂಧಿಯವರು ಇಂಗ್ಲಿಷ್ ಪತ್ರಿಕೆಯೊಂದಕ್ಕೆ ತಿಳಿಸಿದ ತನ್ನ ವ್ಯಕ್ತಿಗತ ಅಭಿಪ್ರಾಯಕ್ಕನುಸಾರವಾಗಿ ಭಾರತದ ಬಿಕ್ಕಟ್ಟಿಗೆ ಕಾರಣವಾದ ಪ್ರಶ್ನೆಗಳನ್ನು ತೀರ್ಮಾನಿಸಲು ಎಲ್ಲಾ ಪಕ್ಷಗಳ ಪ್ರತಿನಿಧಿಗಳಿರುವ ಚಿಕ್ಕದೊಂದು ಸಮಿತಿಯ ರಚನೆಯಾಗುವದರಲ್ಲಿ ಸರಕಾರದ ಸಮ್ಮತಿಯಿದೆ. ಈ ಸಮಿತಿಯನ್ನು ಆರಿಸುವ ಕೆಲಸ ಭಾರತದ ಜನಪ್ರತಿನಿಧಿಗಳದ್ದೇ ಆಗಿದೆ. ಸಣ್ಣ ಸಮಿತಿಯನ್ನು ರಚಿಸುವುದು ಕಾರ್ಯಕ್ಕನುಕೂಲ. ಭಾರತದ ಎಲ್ಲಾ ಪಕ್ಷೀಯರಿಗೆ ಇದು ಸಮ್ಮತವೆಂದಾದರೆ ವೈಸರಾಯರು ಅಗತ್ಯವುಳ್ಳ ಸಹಾಯವನ್ನು ಖಂಡಿತವಾಗಿ ಕೊಡುವರು."

ಬ್ರಿಟಿಷರ ವಿಮಾನಗಳಲ್ಲೊಂದು

ಆದು ಬ್ರಿಟಿಷರ ಅಧಿಕಾರ

ಸರ್. ಓನ್ನೈಲರ ಮಾತಿಗೆ ಮಹಾತ್ಮರು ಉತ್ತರವಿತ್ತಿದ್ದಾರೆ "ಚುನಾಯಿತ ಮುಖಂಡರ ಪರಿಷತ್ತನ್ನು ಜರಗಿಸುವ ಏಕಮಾತ್ರ ಅಧಿಕಾರಿಯೆಂದರೆ ಬ್ರಿಟಿಷ್ ಸರಕಾರ. ತನ್ನ ಸ್ವಾತಂತ್ರ್ಯದ ರೂಪರೇಖೆಯನ್ನು ಬಿಡಿಸುವ ಭಾರತದ ಹಕ್ಕನ್ನೊಪ್ಪಿ, ಅಧಿಕಾರದಿಂದ ದೂರವಾಗಲು ಬ್ರಿಟನು ಮನಸ್ಸುಮಾಡಿದಾಗಲೇ ಅವರು ಈ ಕಾರ್ಯಕ್ಕನುಕೂಲವಾದ ಹಾದಿಯನ್ನು ಕಂಡುಕೊಳ್ಳುವರು."

ವಿಭಾಗರಹಿತ ಭಾರತ

ಗ್ವಾಲಿಯರ್ ಸಂಸ್ಥಾನದ ಶುಜಾಲ್‌ಪುರದಲ್ಲಿ ಸೇರಿದ ಮಧ್ಯ ಭಾರತ ಸಂಸ್ಥಾನಗಳ ಪ್ರಜಾಪರಿಷತ್ತಿನ ಉದ್ಘಾಟನೆಮಾಡುತ್ತಾ ಸಮತಾವಾದಿ ಪಕ್ಷದ ಕಾರ್ಯದರ್ಶಿ ಯೂಸುಫ್ ಮೆಹರಾಲಿಯವರು ಹೀ

ಸಮಾಚಾರ ಸಂಗ್ರಹ

ಗೆಂದರು. "ಇಡೀ ಭಾರತವಿಂದು ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟಕ್ಕನುವಾಗಿದೆ. ಭಾರತವು ಅಭೇದ್ಯವಾದುದು. ಸಂಸ್ಥಾನಗಳ ಪ್ರಜೆಗಳು ಸ್ವಾತಂತ್ರ್ಯ ವಿಜಯದಲ್ಲಿ ಭಾಗ ತೆಗೆದುಕೊಳ್ಳುವರು. ಆದರೆ ನಮ್ಮ ಸ್ವಾತಂತ್ರ್ಯವು ಅವಿಶ್ರಾಂತ ಪರಿಶ್ರಮದಿಂದ ದೊರೆಯಬೇಕಾಗಿದೆ"

ಲಾಹೋರಿನಲ್ಲಿ ಖಾಕ್ಸಾರರ ಗಲಭೆ

ಲಾಹೋರಿನ ಸುವರ್ಣ ಮಸೀದಿಯಲ್ಲಡಗಿರುವ ಖಾಕ್ಸಾರರಿಗೆ ಸಹಾಯಮಾಡುತ್ತಿದ್ದ ಕೆಲವು ಖಾಕ್ಸಾರ್ ಮಹಿಳೆಯರ ದಸ್ತಗಿರಿಯಾಗಿದೆ. ಸೈನಿಕ ರೀತಿಯಿಂದ ಹೋಗುತ್ತಿದ್ದ ಖಾಕ್ಸಾರ್ ದಳವೊಂದರ ದಸ್ತಗಿರಿ ನಡೆದಿದೆ. ಮೂರು ಮಸೀದಿಗಳ ಹೊರಗಡೆ ಮಹಿಳಾ ಪೋಲೀಸು ದಳಗಳನ್ನಿಡಲಾಗಿದೆ. ಮಸೀದಿಯ ಸುತ್ತುವಳಯದ ಸಾಹುಕಾರರಿಗೆ ಸರಕಾರವು ಎಚ್ಚರಿಕೆ ಕೊಟ್ಟುದನ್ನು ಖಂಡಿಸಿ ಸಿಟಿ ಮೆಜಿಸ್ಟ್ರೇಟರಲ್ಲಿಗೆ ವ್ಯಾಪಾರಿಗಳ ಡೆಪ್ಯುಟೇಶನ್ ಹೋಗಿ ತಮ್ಮ ಅಂಗಡಿಗಳನ್ನು ಮುಚ್ಚುವದರಿಂದ ಅಥವಾ ಅಲ್ಲಿ ಪೋಲೀಸು ರಾಜ್ಯವಿರುವದರಿಂದ ತಮಗಾಗುವ ಕಷ್ಟನಷ್ಟಗಳ ಕುರಿತು ಹೇಳಿಕೊಂಡಿವೆ. ಮೆಜಿಸ್ಟ್ರೇಟರು ಅಭಯವಿತ್ತಿದ್ದಾರೆ.

'ಪಾಕಿಸ್ತಾನ'ದೊಡನೆ ಸಂಧಾನವಿಲ್ಲ

"ನಾನು ಪಾಕಿಸ್ತಾನ ಯೋಜನೆಯೊಂದು ಅಬದ್ಧವೆಂದು ಕರೆದಿದ್ದೇನೆ. ಅದರೊಡನೆ ಸಂಧಾನವಿಲ್ಲ. ಎಂಟು ಕೋಟಿ ಮುಸಲ್ಮಾನರು ಅದನ್ನಪೇಕ್ಷಿಸುವುದಾದರೆ ಅದಕ್ಕಾತಂಕವಾವುದೂ ಪ್ರಪಂಚದಲ್ಲಿಲ್ಲ. ಆದರೆ ಅದು ಒಪ್ಪಂದ ಮೂಲಕ ಬರಲಾರದು. ಧರ್ಮಕ್ಕನುಸಾರವಾಗಿ ಇಸ್ಲಾಮಿನ ವಿರುದ್ಧ ವರ್ತನೆಯಿದು" ಎಂದು ಗಾಂಧಿಯವರು ಬರೆಯುತ್ತಾರೆ.

ರಂಗೂನಿನ ಗಲಭೆ ಮುಕ್ತಾಯ

ರಂಗೂನಿನಲ್ಲಿ ನಡೆದ ಜಾತೀಯ ಜಗಳವೀಗ ಮುಕ್ತಾಯಹೊಂದಿದೆ. ಇಂತಹ ನಾಚಿಕೆಕರ ವರ್ತನೆಯನ್ನು ನಿಲ್ಲಿಸಿರೆಂದೂ ಹೊರ ಭಾಗದಲ್ಲಾದರೂ ಹಿಂದೂ ಮುಸ್ಲಿಮರು ಹೊಡೆದಾಡುವವರೇ ಎನ್ನಿಸಿಕೊಳ್ಳಬಾರದೆಂದೂ ಗಾಂಧೀ, ನೆಹರು, ಅಜಾದ್, ರಾಜಗೋಪಾಲಾಚಾರಿ ಮೊದಲಾದವರು ವಿನಂತಿ ಮಾಡಿಕೊಂಡಿದ್ದಾರೆ.

ಶಾಹಿದ್‌ಗಂಜ್ ಅಪೀಲು ತೆಗೆದು ಹಾಕಲ್ಪಟ್ಟಿತು

ಲಾಹೋರಿನ ಶಾಹಿದ್‌ಗಂಜ್ ವಿವಾದದ ಕುರಿತು ಪ್ರಿವಿ ಕೌನ್ಸಿಲಿಗೆ ಮುಸ್ಲಿಮರ ಪರವಾಗಿ ನಡೆದ ಅಪೀಲು ತಳ್ಳಿಹಾಕಲ್ಪಟ್ಟಿದೆ. ಸಿಖ್ಖರಿಗೆ ಸಂಬಂಧಪಟ್ಟ ಶಾಹಿದ್‌ಗಂಜ್ ಕ್ಷೇತ್ರದಲ್ಲಿ ಮಸೀದಿ ಹಾಗೂ ಧರ್ಮ ವಿಧಿಗಳನ್ನು ನಡೆಯಿಸುವ ಹಕ್ಕನ್ನು ಮುಸಲ್ಮಾನರು ಕೇಳಿ 1935ರಲ್ಲಿ ದೊಡ್ಡ ಗಲಭೆಯೆದ್ದಿತು. ವಿವಾದವು ಕೋರ್ಟಿಗೆ ಹೋಗಿ 1938ರಲ್ಲಿ ಲಾಹೋರು ಹೈಕೋರ್ಟು ಸಿಖ್ಖರಿಗನುಕೂಲ ತೀರ್ಮಾನ ಕೊಟ್ಟಿತು. ಅದರ ಮೇಲೆ ಪ್ರಿವಿ ಕೌನ್ಸಿಲಿನಲ್ಲಿ ಆದ ಅಪೀಲು ಈಗ ತೆಗೆದು ಹಾಕಲ್ಪಟ್ಟಿದೆ

ಇಟೆಲಿಯ ಕಾದುನೋಡುವ ಧೋರಣೆ

ಭೂಮಧ್ಯ ಸಮುದ್ರದ ಪಕ್ಕಿಗಾಗಿ ಇಟೆಲಿಯು ಪ್ರಕೃತ ರಣಕಣಕ್ಕಿಳಿಯುವುದಿಲ್ಲವೆಂದು ತಿಳಿದುಬರುತ್ತದೆ. ರೋಮಿನಲ್ಲಿದ್ದ ಅಮೇರಿಕದ ರಾಯಭಾರಿ ಮತ್ತು ಮುಸಲೊನಿಯವರೊಳಗೆ ದೀರ್ಘ ಸಂಭಾಷಣೆ ನಡೆಯಿತು. ಅಮೇರಿಕದಲ್ಲಿದ್ದ ಇಟಲಿ ರಾಯಭಾರಿಯು ಸಮ್ನರ್ ವೆಲ್ಸರೊಡನೆಯೂ ಪ್ರೆಸಿಡೆಂಟ್ ರೂಸ್‌ವೆಲ್ಟರೊಡನೆಯೂ ಮಾತಾಡಿರುವನು. ಮುಂಜಾಗ್ರತೆಗಾಗಿ ಬ್ರಿಟಿಷರು ಭೂಮಧ್ಯ ಸಮುದ್ರದಲ್ಲಿದ್ದ ವ್ಯಾಪಾರೀ ಹಡಗುಗಳ ವಹಿವಾಟನ್ನು ನಿಲ್ಲಿಸಿ ತಕ್ಕ ಪೂರ್ವಸನ್ನಾಹ ಕೈಕೊಂಡಿರುವರು. ಅಲೆಕ್ಸಾಂಡ್ರಿಯಾಕ್ಕೆ ಮಿತ್ರರಾಷ್ಟ್ರಗಳ ಪ್ರಬಲ ನಾವಿಕದಳ ಹೋಗಿ ಸರ್ವಸನ್ನದ್ಧವಾಗಿ ನಿಂತಿದೆ. ಡೋಡೆಕೇನಸ್ ಎಂಬಲ್ಲಿ ಇಟೆಲಿಯ ನಾವೆಗಳು ಜಮೆಯಾಗಿವೆ. ಆದರೆ ತಾವು ಪ್ರಕೃತ ಯುದ್ಧಕ್ಕಿಳಿಯುವುದಿಲ್ಲವಾಗಿ ಇಟೆಲಿ ವಿದೇಶಮಂತ್ರಿಯು ಅಮೇರಿಕದ ರಾಯಭಾರಿಗಿತ್ತ ಆಶ್ವಾಸನೆಯಲ್ಲಿದೆ.

ರೂಸ್‌ವೆಲ್ಟರ ಭರವಸೆ

ಯುದ್ಧವು ಇತರ ಕಡೆಗೆ ಹಬ್ಬಿ ಏಕ್ಕರಾಷ್ಟ್ರಗಳೂ ಅದರಲ್ಲಿ ಸಿಲುಕುವಂತಾಗುವ ಮೊದಲೇ ಅದನ್ನು ನಿಲ್ಲಿಸಲು ತನ್ನ ಸರಕಾರವು ಸಾಧ್ಯವಿದ್ದ ಪ್ರಯತ್ನ ಮಾಡುವದೆಂದು ಅಮೇರಿಕದ ಅಧ್ಯಕ್ಷ ರೂಸ್‌ವೆಲ್ಟರು ಹೇಳಿರುವರು.

For Everything in Insurance Consult

TROPICAL
INSURANCE CO. LTD.,

Head office: NEW DELHI.

Chairman: SJT. SUBASH CHANDRA BOSE.

Founder Directors:
PANDIT MOTILAL NEHRU,
Dr. M. A. ANSARI,
HAKIM AJMAL KHAN,
Sri. S. SRINIVASA IYENGER.

1. This cent per cent national has issued Policies for THREE CRORES
2. Has given Bonus since the Inception
3. Has attractive Schemes for Agents & Organisers.
4. Liberal Terms for Field Staff;

For Particulars Apply to:—

M. SUNDERRAM SHETTY, *Branch Manager*, HAMPANKATTA, MANGALORE, S. K.

K. S. RAMAMURTHY, M. A., *Branch Secretary*, 160/- MOUNT ROAD, MADRAS.

ವಿವಿಧ ವಿಷಯ

ಲೋಕದ ಬಹು ದೊಡ್ಡ ಸತ್ಯವಂತ

ಜೀವಂತ ಮಹಾ ಪುರುಷರಲ್ಲಿ ಮಹಾತ್ಮಾ ಗಾಂಧಿಯವರು ಒಂದನೇ ನಂಬ್ರದ ಯಥಾರ್ಥವಾದಿಯೆಂಬ ಅಭಿಪ್ರಾಯವು ಯುರೋಪು ಮತ್ತು ಅಮೇರಿಕಾದಲ್ಲೆಲ್ಲಾ ಇದೆ. ಗಾಂಧಿಯವರ ಯುರೋಪಿಯನ್ ಶಿಷ್ಯರ ಪೈಕಿ ಮಿಸ್ಟರ್ ಬೆನ್ನರರು ಲಾಹೋರಿನ ವೈಸ್ಮ್ಯಾಲೊಂದರಲ್ಲಿ ಭಾಷಣಮಾಡುತ್ತಾ ತನ್ನ ಅನುಭವಗಳನ್ನು ಹೇಳಿರುವರು. ಬಿಳಿ ಜನರ ದೇಶಗಳಲ್ಲಿ ಮಿಸ್ಟರ್ ಬೆನ್ನರರು ಸಂಚರಿಸುತ್ತಿದ್ದಾಗ ಪದ್ಧತಿಯಂತೆ ಅವರ ಸಾಮಾನು ಜಡ್ತಿಮಾಡಿ ಯಾರೂ ನೋಡಿದ್ದಿಲ್ಲವಂತೆ. ಪ್ರಯಾಣಿಕರನ್ನು ಸೂಕ್ಷ್ಮವಾಗಿ ಪರೀಕ್ಷಿಸಿಬಿಡುವ ಯುರೋಪಿನ ಬಂದರವೊಂದರಲ್ಲಿ ಗಾಂಧೀ ಶಿಷ್ಯ ಯೆಂಬುದರಿಂದ ಮಿಸ್ಟರ್ ಬೆನ್ನರ ತಂಟೆಗಾರೂ ಹೋಗಿರಲಿಲ್ಲ. ಅವರು ತನ್ನ ಸಾಮಾನು ಪಟ್ಟಿಯನ್ನು ತೋರಿಸಿದೊಡನೆಯೇ ಬಿಟ್ಟುಬಿಟ್ಟರಂತೆ.

ಗಾಂಧಿಯವರು ಬಲು ದೊಡ್ಡ ಸತ್ಯವಂತನೆಂದು ಯುರೋಪಿನ ರಾಷ್ಟ್ರಗಳೂ ಒಪ್ಪುತ್ತವೆ. ಆದರೆ ಅವರ ಮಾತಿನ ಕಡೆಗೆ ಆ ರಾಷ್ಟ್ರಗಳು ಗಮನಕೊಡುತ್ತಿಲ್ಲ. ಅವೆಲ್ಲಾ ಅಸತ್ಯಾಚರಣೆಯಲ್ಲಿವೆ ಎಂಬುದಕ್ಕೆ ಬೇರೆ ನಿದರ್ಶನ ಬೇಕೆ?

ಮದುವೆಯ ಮಹತ್ವ ಬಲ್ಲ ಚರ್ಚಿಲ್ಲರು

ಥೋಮಸ್ ಗಿಬ್ಸನ್ ಎಂಬವನು ಬ್ರಿಟನಿನ ಡಿಸ್ಟ್ರೋಯರ್ ಹಡಗವೊಂದರಲ್ಲಿ, ಯುದ್ಧ ದೆಸೆಯಿಂದ ಬಿಡುವಿಲ್ಲದೆ ಕೆಲಸದ ಮೇಲಿದ್ದವ. ಅವನ ಪ್ರಣಯಿನಿ ಎಲೀಸ್ ವಿನ್ಸೆಂಟ್ ಎಂಬವಳಿಗೆ ಈ ಸಮಯದಲ್ಲೇ ಮದುವೆಯಾಗಬೇಕೆಂಬ ಆಶೆ. 21ವರ್ಷದ ಯುವತಿ ವಿನ್ಸೆಂಟ್, ತನ್ನ ಮದುವೆಗಾಗಿ ಮೂರು ಬಾರಿ ಸರ್ವ ಸಿದ್ಧತೆಗಳನ್ನು ಮಾಡಿ ನಿರಾಶೆಗೊಂಡಿದಳು. ಪ್ರಾಣದಾಸೆ ಬಿಟ್ಟು ಸಮುದ್ರಕ್ಕಿಳಿಯಬೇಕಾದ ನಾವಿಕನಿಗೆ ಈ ಕಠಿಣ ಯುದ್ಧ ಕಾಲದಲ್ಲಿ ಮದುವೆಯ ಸಂಭ್ರಮಕ್ಕಾಗಿ ರಜೆ ದೊರಕೀತೆ! ವಿನ್ಸೆಂಟ್ ಹೊಸಗೊಂದು ಉಪಾಯ ಹೂಡಿದಳು. ನಾವಿಕ ದಳದ ಶಿರಸ್ಸಾಗಿರುವ ಮಿ. ಚರ್ಚಿಲ್ಲರಿಗೊಂದು ಖಾಸಗಿ ಪತ್ರ ಬರೆದಳು. "ಮಿ. ಚರ್ಚಿಲ್ಲರೇ, ನಮ್ಮ ಮದುವೆಗನುಕೂಲವಾಗುವಂತೆ ಥೋಮಸನಿಗೆ ದಯವಿಟ್ಟು ಸ್ಪೆಶ್ಯಲ್ ರಜೆಕೊಡಿರಿ. ನಾವು ಮೂರು ಬಾರಿ ತೀವ್ರವಾಗಿ ನಿರಾಶೆ ಹೊಂದಿದೆವು. ಈಗ ಮದುವೆಯಾಗಲು ಬಹಳ ಆತುರದಲ್ಲಿದ್ದೇವೆ" ಕೆಲವು ದಿವಸಗಳಲ್ಲಿ ಆವಳಿಗೊಂದು ಟೆಲಿಗ್ರಾಮು ಬಂತು. ಅದರಲ್ಲಿ ಥೋಮಸನಿಗೆ ಏಳು ದಿನಗಳ ರಜೆ ಕೊಡಲಾಗಿದೆ ಎಂಬ ಸುದ್ದಿಯಿತ್ತು.

ಯುದ್ಧ ಹಡಗಾದರೇನು, ಸಾಂಸಾರಿಕ ನಾವೆಯಾದರೇನು, ಮಧ್ಯದಲ್ಲೇ ಒಡೆದು ಹೋದರೆ ಬಹಳ ಕಷ್ಟವಷ್ಟೆ. ಈ ಗುಟ್ಟು ನಾವಿಕ ದಳದ ಶಿರಸ್ಸಾಗಿರುವ ಚರ್ಚಿಲ್ಲರಿಗೆ ಸರಿಯಾಗಿ ತಿಳಿದಿದೆ!

ಸಮತಾವಾದವು ಕಾಯಿದೇ ವಿರುದ್ಧ ವಿಷಯವೆ?

ಸಂಯುಕ್ತ ಸಂಸ್ಥಾನದ ಸ್ಪೆಶ್ಯಲ್ ಪೋಲೀಸು ದಳದವರು ಸುಪ್ರಸಿದ್ಧ 'ಕಿತಾಬಿಸ್ತಾನ್' ಪ್ರಕಾಶಕರ ಆಫೀಸನ್ನು ಜಪ್ತಿಮಾಡಿ ವಿವಿಧ ಪುಸ್ತಕಗಳ 1779 ಪ್ರತಿಗಳನ್ನು ವಶಪಡಿಸಿಕೊಂಡರಂತೆ. ಭಾರತ ಸರಕಾರವು ತನ್ನದೊಂದು ಪ್ರಕಟಣೆಯ ಮೂಲಕ ಬಹಿಷ್ಕಾರ ಹಾಕಿದ

ಪುಸ್ತಕಗಳು ಅಲ್ಲಿದ್ದುವಂತೆ, ಈ ಕುರಿತು ಬರೆಯುತ್ತಾ ಪಂಡಿತ ಜವಾಹರಲಾಲರನ್ನುತ್ತಾರೆ. "ಸಮತಾವಾದ ಮತ್ತು ರಷ್ಯವು ಬಹಿಷ್ಕಾರ ಯೋಗ್ಯ ವಿಷಯಗಳಾಗಿದ್ದರೆ ನಾನೂ ಒಬ್ಬ ಬಹಿಷ್ಕೃತನೇ; ನಾನು ಇವುಗಳ ವಿಷಯವಾಗಿ ಬರೆಯುತ್ತಿದ್ದೇನೆ, ಸಮತಾವಾದದ ಕುರಿತು ಇನ್ನೂ ಲೇಖನ, ಭಾಷಣ ಕೊಡುತ್ತಾ ಹೋಗುವೆನಲ್ಲದೆ ಭಾರತದಲ್ಲಿ ಸಮತಾವಾದಕ್ಕನುಸಾರವಾದ ರಾಜ್ಯಭಾರ ಸ್ಥಾಪನೆಗೆ ನನ್ನ ಕೈಲಾದ ಪ್ರಯತ್ನ ಮಾಡುತ್ತೇನೆ."

ಸರಕಾರದ ನಿಷೇಧವು ಅಚ್ಚು ಹಾಕಲ್ಪಟ್ಟ ಪುಸ್ತಕಗಳ ಮೇಲೆ; ಪಂಡಿತ ನೆಹರುಗಳು ಸಮತಾವಾದದ ಸಜೀವ ಪುಸ್ತಕವಾಗಿರ ಬಹುದು. ಸರಕಾರೀ ಪ್ರಕಟನೆಯಲ್ಲಿ ಪ್ರಸ್ತುತ ಈ ಜಾತಿಯ ಪುಸ್ತಕಗಳನ್ನು ಸೇರಿಸಿಲ್ಲವೆಂಬುದನ್ನು ಪಂಡಿತರು ಓದಿನೋಡಿಲ್ಲವೆ?

ಮುಸಲಿನಿಯ ಭರತ-ಇಳಿತ!

ಭೂಮಧ್ಯ ಸಮುದ್ರಕ್ಕೆ ಕಾಲಿಡುವ ಅಬ್ಬರ ಪ್ರದರ್ಶಿಸುತ್ತಾ ಬಂದ ಮುಸಲಿನಿ ಈಗ ತತ್ಕಾಲಕ್ಕೆ ತಣ್ಣಗಾದಂತೆ ಕಂಡು ಬರುತ್ತದೆ. ಪ್ರಕೃತ ಪರಿಸ್ಥಿತಿಯನ್ನವಲೋಕಿಸುತ್ತಾ ಇರುವೆನಾಗಿ ಮುಸಲಿನಿ ತಾನೆಬ್ಬಿಸಿದ ಗೊಂದಲವನ್ನು ತಾನಾಗಿ ಶಾಂತಪಡಿಸಿದ್ದಾನೆ. ಈ ವ್ಯತ್ಯಾಸಕ್ಕೇನು ಕಾರಣ? ಗುಟ್ಟೆಂದರೆ ಇಟಲಿಯ ಸೈನಿಕ ಶಕ್ತಿಯಲ್ಲಿ ಬಲವೆನುವೆಂದರೆ ಮುಸಲಿನಿಯ ಬಾಯಿ ಭೇರಿಯೊಂದೆ! ಕಳೆದ ಹನ್ನೆರಡು ತಿಂಗಳುಗಳಿಂದ ಇಟಲಿಯ ವೈಮಾನಿಕ ಬಲವು ಅಪ್ರಾಮುಖ್ಯವೆಂದು ಪರಿಗಣಿಸಲ್ಪಟ್ಟಿದೆ. ಯುದ್ಧ ಪ್ರವೃತ್ತ ರಾಷ್ಟ್ರಗಳ ಆಧುನಿಕ ರೀತಿಯ ವಿಮಾನ ಯಂತ್ರಗಳೆದುರಲ್ಲಿ ಇಟಲಿಯ ಹಳೆ ಮಾದರಿಯ ಯಂತ್ರಗಳು ಜೀರ್ಣವಾಗಿವೆ. ಅದರ ನಾವಿಕ ದಳ ಉತ್ಕೃಷ್ಟವಿದ್ದರೂ ಭೂಮಧ್ಯ ಸಮುದ್ರದಲ್ಲಿ ಆಂಗ್ಲೋ ಫ್ರೆಂಚರ ದಳಗಳನ್ನೆದುರಿಸುವ ಶಕ್ತಿಯಿಲ್ಲ. ಇನ್ನು ಕಾಲ್ದಳದ ಅಧಿನಾಯಕ ಮಾರ್ಶಲ್ ಬೊಡೊಗ್ಲಿಯೋರವರು ಈಗ ಯುದ್ಧಕ್ಕಿಳಿಯುವುದೆಂದರೆ ಫೇಸಿಸ್ಟ್ ಸಾಮ್ರಾಜ್ಯವನ್ನು ಕಳಕೊಂಡಂತೆ, ಎಂಬ ಅಭಿಪ್ರಾಯ ಸೂಚಿಸಿದ್ದಾರೆಂಬ ಸುದ್ದಿಯಿದೆ. ಸುಯೇಜ್ ಕಾಲುವೆ ಮೂಲಕ ಅಬಿಸೀನಿಯಾ ಬಿಂಗಡಿಸಲ್ಪಡುತ್ತದೆ. ಇಜಿಪ್ಟಿನ ಮೂಲಕ ಪೂರ್ವದಿಂದಲೂ ಫ್ರೆಂಚ್ ಟ್ಯುನಿಸಿಯಾದ ಮೂಲಕ ಪಶ್ಚಿಮದಿಂದಲೂ ಧಾಳಿಯಿಟ್ಟರೆ ಇಟಲಿಯು 'ಲಿಬ್ಯಾ'ವನ್ನು ಕಳಕೊಂಡಂತೆಯೇ ಸರಿ. ಹೀಗಾಗಿ ಮುಸಲಿನಿಯು ಕಾದಾಡಿ ಓಡುವದಕ್ಕಿಂತ ಕಾದು ನೋಡುವದುತ್ತಮವೆಂದು ಒಮ್ಮೆ ಸಿದ್ಧನಾದವನೀಗ ಹಿಂಜರಿದಿದ್ದಾನೆ.

ಭೀಕರ ಗುಡುಗನ್ನನುಸರಿಸಿ ಜಡಿ ಮಳೆ ಸುರಿಯಲೇಬೇಕೆಂಬ ನಿಯಮವಿದೆಯೇನು? ಪರ್ವತ ಪ್ರಸವವೆನ್ನುವದು ಇದಕ್ಕೇನೆ!

ಅರ್ಜಿ ಹಾಕಿದ-ಆಗುವುದಿಲ್ಲ ವೆಂದೂ ಹೇಳಿದ!

ಮಿ ಒಲಿವರ್ ಸ್ಟೇನ್ಲಿಯವರು ಹೊದಲು ವ್ಯಾಪಾರೀ ಬೋರ್ಡಿನ ಅಧ್ಯಕ್ಷರಾಗಿದ್ದರು. ಆ ಸಮಯದಲ್ಲಿ, ಸ್ವಿಸ್ಸ್ ದಲ್ಲಿರುವ ಚತುರ ಮನುಷ್ಯರನ್ನು ಬಿಡಬೇಕೆಂದು ವಿನಂತಿಸಿಕೊಂಡು ಒಂದು ಪತ್ರವನ್ನು ಯುದ್ಧ ಕಚೇರಿಗವರು ಕಳುಹಿದ್ದರು. ಆ ಮೇಲೆ ಸ್ಟೇನ್ಲಿಯವರೇ ಯುದ್ಧ ಕಾರ್ಯದರ್ಶಿಯಾಗಿ ನೇಮಕಗೊಂಡರು. ಮೊನ್ನೆ ನಡೆದ 'ಕಾಮನ್ಸ್' ಸಭೆಯಲ್ಲಿ ಸ್ಟೇನ್ಲಿಯವರು ಮಾತಾಡುತ್ತಾ ಆ ಪತ್ರ ತನ್ನ ಡೆಸ್ಕಿನಲ್ಲಿ ದೊರೆಯಿತೆಂದೂ ಈಗ ತಾವದಕ್ಕೆ ಕೊಡುವ ಉತ್ತರವೆಂದರೆ 'ಆಗುವದಿಲ್ಲ' ಎಂಬುದೆಂದೂ ತಿಳಿಸಿದರು. ತಮ್ಮ ಮಾತನ್ನು ತಾವೇ ಮುರಿದುಕೊಳ್ಳುವವರು ಬೇಕಷ್ಟು ಮಂದಿ ಇದ್ದಾರೆ; ಮಿ. ಸ್ಟಾನ್ಲೆಯವರಂಗ ಆವರಲ್ಲೊಬ್ಬರು?

THE

BOMBAY LIFE ASSUARNCE Company Limited.

[ESTD. 1908]

COMPARE

Your Life Assurance with any other property you possess what is its guaranteed value

If you live—today—a few years more—when you are old?
If you die—to your family and dependants?

REMEMBER THAT If you live, Life Insurance takes the place of your professional income during your old age.
If you die, it provides your family with enough income for their maintenance and the education of your children.

"BOMBAY LIFE" offers all that is best in Life Assurance.

1938 Record.

Completed Business	Rs.	1,44,91,000
Life Assurance Fund	Rs.	1,17,69,748
Total Assets	Rs.	1,31,28,998

To insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,
BOMBAY LIFE BUILDING,
Sir Lalubhai Samaldas Road,
GANDHI NAGAR, **UDIPI.**

Post Box No. 337, Mount Road, MADRAS	Visweswarapuram Circle BANGALORE CITY.	Charni Road, Girgaum, BOMBAY No. 4.
Car Street, MANGALORE.	Puthiyara, CALICUT.	Central Station Road, TRIVANDRUM.

ಉಡುಪಿ ಡಿ. ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 40/40.

ಗೋವಿಂದ್ರಾಯ ನ್ಯಾಕ ಕೊಡಾ—ವಾದಿಯು.

ಮತ್ತು

1 ಪುತ್ತು ಯಾನೆ ವೆಂಕಟ್ರಮಣ ನ್ಯಾಕ }
2 ರಾಮನ್ಯಾಕ } ಪ್ರತಿವಾದಿ
3 ದೇವಣ್ಣ ನ್ಯಾಕ } ಗಳು
ಶ್ರೀನಿವಾಸ ನ್ಯಾಕರ ಮಕ್ಕಳು.

ಉಪ್ಪಿತಾಲ್ಲೂಕು ನಂಚಾರ ಗ್ರಾಮದ ಮುಂದಾರ ಮುಂಡಿ.

ವಾದಿಯ ತಂದೆ ಮೃತ ರಾಮಚಂದ್ರ ನ್ಯಾಕರಿಗೆ, ಪ್ರತಿವಾದಿಯ ತಂದೆ ಮೃತ ಶ್ರೀನಿವಾಸ ನ್ಯಾಕರು, ತಾ. 31-1-'27ರಲ್ಲಿ ರೂ. 250ಕ್ಕೆ ರಿ.ಜಿ ಬರಕೊಟ್ಟ ಸ್ಥಿರಾಸ್ತಿ ಈಡುದಸ್ತಾವೇಜಿನಲ್ಲಿ ರೂ 237-2-5ನ್ನು ಬರನೂಡಿಕೊಳ್ಳುವರೆ ತಂದ ದಾವೆಯು ತಾ. 12-6-1940ಕ್ಕೆ ಇಟ್ಟದೆ. ಅದ್ದರಿಂದ ಅದ್ದಿನ್ನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ 2ನೆ 3ನೆ ಪ್ರತಿವಾದಿರು ಸ್ವತಃ ಯಾ ವಕೀಲರ ದ್ವಾರಾ ಹಾಜರಾಗಿ ಉತ್ತರಕೊಡದಿದ್ದರೆ 2ನೇ 3ನೇ ಪ್ರತಿವಾದಿರನ್ನು ಏಕ್ಸ್‌ಪಾರ್ಟಿ ಮಾಡಿ ಗುದಕ್ಕೆ ತೀರ್ಮಾನಿಸಲ್ಪಡುವುದೆಂತ ಈ ಮೂಲಕ ತಿಳಿಸಲಾಗುತ್ತದೆ.

Varadaraya Pai
Advocate for Plaintiff

ಉಡುಪಿ, ತಾ .3-5-1940.

ಯಾವುದೊಂದು ಕೆಲಸದಲ್ಲಿ ಜಯವಾ ಬೇಕಾದರೆ ಸಾಮಾನ್ಯವಾಗಿ ಜನರು ಎರಲ್ಲೊಂದು ದಾರಿಯನ್ನು ಹಿಡಿಯುತ್ತಾ. (೧) ಇನ್ನೊಬ್ಬರ ಮರ್ಜಿ ಹಿಡಿಯುದು, (೨) ತಮ್ಮ ಬಲವನ್ನೇ ಹೆಚ್ಚಿಸಿಕೊಳ್ಳುವುದು. ಈ ಎರಡರಲ್ಲಿ ಒಂದು ದೌರ್ಬಲ್ಯದ ಮಾರ್ಗ, ಇನ್ನೊಂದು ಶಕ್ತಿಯ ಮಾರ್ಗ. ಮರ್ಜಿ ಹಿಡಿದು ಹೋಗುದು ಎತ್ತಿನ ಬಾಲ ಹಿಡಿದು ನಡೆದಂತೆ. ವಿಚಾರವಿನಿಮಯಕ್ಕೆ ತಕ್ಕ ಸ್ಥಾನವನ್ನು ಕೊಡದೆ, ತಮ್ಮ ಸ್ವೇಚ್ಛೆಯನ್ನೇ ಬಜಾಯಿಸಬೇಕು ಎಂದು ತಿಳಕೊಂಡವರ ಮರ್ಜಿಗೆ ಬಗ್ಗುತ್ತ ಹೋದರೆ, ಆಗುವ ಪರಿಣಾಮ ಎಂದರೆ ಸರ್ವನಾಶ ಒಂದೇ. ಬಗ್ಗುವ ಮನೋಗತಿಯುಳ್ಳವರು ದಿನೇದಿನೇ ಕೆಳವಾದಿಗಳಾಗುತ್ತಾರೆ. ಅವರಿಗೆ ಬಗ್ಗುವವರು ಬರಬರುತ್ತ ಅವರ ಯಂತ್ರಗಳೇ ಆಗಿಬಿಡುತ್ತಾರೆ. ಬಗ್ಗಿದವರನ್ನು ಇನ್ನೂ ಇನ್ನೂ ಬಗ್ಗಿಸುತ್ತಾ ಹೋಗುವುದೇ ಸಾಮಾನ್ಯ ಜನರ ಸ್ವಭಾವ. ಇಂದಿನ ಮುಸ್ಲಿಮ್ ಲೀಗಿನ ತಲೆಬಾಲವಿಲ್ಲದ ಬೇಡಿಕೆಗಳೂ ಈ ಮನೋಧರ್ಮವನ್ನೇ ಅನುಸರಿಸಿದೆ.

ಕೊಂಗ್ರೆಸಿಗೆ ಇಂದಿರುವ ಅಂತಸ್ತು ಎಂದೆಂದಿನಿಂದ ಅದು ಮುಸಲ್ಮಾನರ ಬೇಡಿಕೆಗಳಿಗೆ ಬಹಳವಾಗಿ ಸೊಪ್ಪುಹಾಕುತ್ತಾ ಹೋಗಿದೆ. "ಕೊಂಗ್ರೆಸ್" ಹಿಂದೂಗಳ ಕೂಟವಲ್ಲ, ಅದಕ್ಕೆ ಜಾತಿ-ಮತಗಳಿಲ್ಲ" ಎಂದು ಮಹಾತ್ಮಾಜಿಯವರಿಂದ ಹಿಡಿದು, ಸಾಮಾನ್ಯನೆಯ ಸದಸ್ಯನ ವರೆಗೆ ಎಲ್ಲರೂ ಕೇಳಬಹುದು. ಇದು ತತ್ವತಃ ಉದ್ದೇಶತಃ ನಿಜವಹುದು; ಆದರೆ ಗಹನವಾಗಿ ವಿಚಾರಿಸಿ ನೋಡಿದರೆ ವಸ್ತುತಃ ನಿಜವಲ್ಲ ಎಂದು ಹೇಳಬೇಕಾಗುತ್ತದೆ. ಯಾಕೆಂದರೆ ಮುಸಲ್ಮಾನರೂ ಹಿಂದೂಗಳೂ ಒಂದೇ ಸಂಸ್ಥೆಯ ಸದಸ್ಯರಾಗಿದ್ದಮೇಲೆ, ಇಬ್ಬರೂ ಆ ಸಂಸ್ಥೆಯ ಮೂಲೋದ್ದೇಶಗಳನ್ನು ಪೂರೈಸಲಿಕ್ಕಾಗಿ ದುಡಿಯಬೇಕೇ ಅಲ್ಲದೆ, ತಮ್ಮತಮ್ಮ ಮತಧರ್ಮಗಳ ವಿಷಯಗಳ ಚರ್ಚೆಗೇ ಆಗಲಿ, ತೀರ್ಮಾನಕ್ಕೇ ಆಗಲಿ ಅಲ್ಲಿ ಎಡೆ ಕೊಡಬಾರದು. ದುರ್ದೈವವಶಾತ್ ಒಳಗಿಂದೊಳಗೇ ಕಲಹ ಮನಸ್ತಾಪಗಳುಂಟಾದರೆ ಸ್ವಾರ್ಥ ಪಕ್ಷಪಾತಗಳಿಲ್ಲದ ಮೂರನೆಯ ಕಡೆ ನ್ಯಾಯವನ್ನು ಬಗೆಹರಿಸಿಕೊಳ್ಳಬೇಕಲ್ಲವೆ? ಕೊಂಗ್ರೆಸ್‌ನಲ್ಲಿ ಮುಸಲ್ಮಾನರು ತಮಗಾಗಿ ವಿಧವಿಧವಾದ ಹಕ್ಕುಗಳನ್ನು ಬೇಡುತ್ತಾ ಹೋದಾಗ, ಅವರಿಗೆ ಆ ಹಕ್ಕುಗಳನ್ನು ಕೊಡುವ ತೀರ್ಮಾನವನ್ನು ಯಾರು ಮಾಡುತ್ತಾ ಹೋದರು? ಹಿಂದೂ ಸದಸ್ಯರೇ ಅಲ್ಲವೇ? ಅವನ್ನು ಯಾರ ಪರವಾಗಿ ಮಾಡಿದರು? ಕೊಂಗ್ರೆಸಿನ ಪರವಾಗಿಯೋ? ಹಿಂದೂಗಳ ಪರವಾಗಿಯೋ? ಹಾಗಿದ್ದರೆ ಕೊಂಗ್ರೆಸಿನ ಒಳಗೆ ಹಿಂದೂತನವನ್ನಿಟ್ಟುಕೊಂಡ ಹಿಂದೂಗಳಿಗೆ ಬೇರೆಯಾದ ಜಾಗೆಯಿಲ್ಲದೆ? ಹಾಗಿಲ್ಲ, 'ಕೊಂಗ್ರೆಸ್‌ನ ಪರವಾಗಿ' ಅಂದರೆ, ಕೊಂಗ್ರೆಸ್‌ಗೆ ಎಲ್ಲಾ ಹಿಂದೂ ಜನಾಂಗದ ಪ್ರಾತಿನಿಧ್ಯವನ್ನು ಕೊಟ್ಟವರಾರು? ಆ ಪ್ರಾತಿನಿಧ್ಯವು ಅದಕ್ಕೆ ಸಹಜವಾಗಿಯೇ ಇದೆ ಎಂದುಕೊಂಡರೆ "ಕೊಂಗ್ರೆಸ್ ಹಿಂದೂಗಳ ಕೂಟ" ಎಂದು ಜಿನ್ನಾ ಅವರು ಹಾಡುವುದಕ್ಕೆ ಆಕ್ಷೇಪಣೆಯೇಕೆ? ಸಾರಾಂಶ ಕೊಂಗ್ರೆಸ್ ಹಿಂದೂಗಳ ತೀರ್ಮಾನವು ಕೊಂಗ್ರೆಸ್‌ನ ಪರವಾಗಿ ಎನ್ನಲಿಕ್ಕೆ,

ಧ್ಯೇಯ ಕ್ಷಯ! ಅನಾಹುತ!!

ಲೇಖಕರು: ಪಂಡಿತ್ ತಾರಾನಾಥರು.

●

ಮುಸಲ್ಮಾನರು ಮತ್ತು ಹಿಂದುಗಳು ಒಂದು ಸಂಸ್ಥೆಯ ಸದಸ್ಯರಾಗಿದ್ದ ಮೇಲೆ ಇಬ್ಬರೂ ಆ ಸಂಸ್ಥೆಯ ಮೂಲೋದ್ದೇಶಕ್ಕಾಗಿ ದುಡಿಯಬೇಕಲ್ಲದೆ ತಮ್ಮತಮ್ಮ ಮತ ಧರ್ಮಗಳ ವಿಷಯ ಚರ್ಚೆಗಾಗಲಿ ತೀರ್ಮಾನಕ್ಕಾಗಲಿ ಅಲ್ಲಿ ಎಡೆ ಕೊಡಬಾರದು. ಆದರೆ ಕಾಂಗ್ರೆಸು ಒಂದು ಕಡೆಗೆ ಓರೆಯಾಗಿದೆ. ತಾನಿಟ್ಟುಕೊಂಡ ಗಮ್ಯವನ್ನು ಸ್ವಲ್ಪವಾದರೂ ಸಾಧಿಸದೆ ತನ್ನ ಉಚ್ಚ ಧ್ಯೇಯಗಳನ್ನು ಮುಸ್ಲಿಂ ಲೀಗಿನ ಮರ್ಜಿಗೆ ಬಲಿದಾನಮಾಡಿದೆ. ಕಾಂಗ್ರೆಸು ರೈತರ ಸುಧಾರಣೆ ಮೊದಲಾದ ತನ್ನ ಕಾರ್ಯವನ್ನು ತಾನು ನೋಡಿಕೊಳ್ಳಬಾರದೇಕೆ? — ಎಂದು ಪಂಡಿತರ ತರ್ಕ.

ಕೊಂಗ್ರೆಸಿನ ತತ್ತ್ವಧ್ಯೇಯಗಳಲ್ಲಿ ಅದರೊಳಗೆ ಬೇರೆಯಾಗಿ ಹಿಂದೂ ತಂಡಕ್ಕೇ ಆಗಲಿ ಮತ್ತಾವ ಮತಧರ್ಮಕ್ಕೆ ಸಂಬಂಧಪಟ್ಟ ತಂಡಕ್ಕೇ ಅಳಲಿ ಎಡೆಯೇ ಇಲ್ಲ. ಹಿಂದೂಗಳ ಪರವಾಗಿ ಚರ್ಚೆ ತೀರ್ಮಾನಗಳನ್ನು ಮಾಡುವ ಹಕ್ಕು ಕೊಂಗ್ರೆಸಿನ ಯಾವ ಹಿಂದೂಗಳಿಗೂ ಇರಲಾರದು. ಇದೆಯೆಂದರೆ ಅದಾವ ನ್ಯಾಯವೋ ದೇವರೇ ಬಲ್ಲ! ವಸ್ತುಸ್ಥಿತಿಯಲ್ಲಿ ಇಂಥ ಅವ್ಯವಸ್ಥೆ ಇದೆ ಎಂದೇ ಹಿಂದೂ ಮಹಾಸಭೆಯೂ ತಲೆಯೆತ್ತಿ "ಹಿಂದೂಗಳ ಪರವಾಗಿ ಯಾವ ತೀರ್ಮಾನವನ್ನೂ ಮಾಡುವ ಹಕ್ಕು ಕೊಂಗ್ರೆಸಿಗೆ ಇಲ್ಲವೇ ಇಲ್ಲ" ಎಂದು ಡಂಗುರಿಸತೊಡಗಿದೆ.

ಆ ಮಹಾಸಭೆಯು ಎನ್ನುವುದಿಷ್ಟೇ:- ಮುಸ್ಲಿಮ್ ಲೀಗಿನ ಮರ್ಜಿ ಹಿಡಿದು ನಡೆದಂತೆ ಅವರ ಹಕ್ಕುಗಳು, ಬೇಡಿಕೆಗಳು ಬೆಳೆಯುತ್ತಾ ಹೋದವು. ಕೊಂಗ್ರೆಸ್ಸಿನಲ್ಲಿ ಮುಸಲ್ಮಾನರನ್ನು ಸೇರಿಸಿಕೊಂಡಿರಬೇಕು. ಎಂಬ ಒತ್ತಟ್ಟಿನ ಅಭಿಲಾಷೆಯಿಂದ ಅವರಿಗೆ ಬೇಕಾದ ಹೊಸ ಹೊಸ ಹಕ್ಕುಗಳನ್ನು ಕೊಡಬೇಕಾಯಿತು. ಹಿಂದುಗಳು ಇದ್ದ ಹಕ್ಕನ್ನೂ ಕಳಕೊಳುತ್ತ ಹೋಗಬೇಕಾಯಿತು. ಅಷ್ಟಕ್ಕೂ ತೃಪ್ತಿಯಿಲ್ಲದೆ ಮುಸ್ಲಿಮ್ ಲೀಗ್ ಇನ್ನೂ ಇನ್ನೂ ಹಕ್ಕುಗಳನ್ನು ಬೇಡುತ್ತಲೇ ಇದೆ! ಹೀಗೆ ಇದ್ದ ಹಕ್ಕುಗಳನ್ನು ಕಳಕೊಂಡು ಒಂದು ವೇಳೆ ಮುಸಲ್ಮಾನರಿಗೆ ತೃಪ್ತಿಯಾಗಿ ಅದರಿಂದ ಹಿಂದೂ ಮುಸ್ಲಿಮರಿಗೆ ಒಕ್ಕಟ್ಟಾಗಿ, ಕೊಂಗ್ರೆಸಿಗೆ ಬಲಬಂದು ಸ್ವರಾಜ್ಯ ಬಂದರೂ ಅದರಿಂದ ಹಿಂದೂ ಜನಾಂಗಕ್ಕೆ ಆಗುವ ಹಿತವೇನು? ಒಬ್ಬರ ಕೈಯಿಂದ ಜುಟ್ಟು ಬಿಡಿಸಲಿಕ್ಕೆ ಹೋಗಿ ಇನ್ನೊಬ್ಬರ ಕೈಗೆ ಇಡೀ ತಲೆಯನ್ನೇ ಕೊಟ್ಟಂತಾಗಲಿಕ್ಕಿಲ್ಲವೆ? ಬೇಲಿ ಹಬ್ಬಿ ತೋಟವನ್ನೇ ನುಂಗಿದಂತಾಗಲಿಕ್ಕಿಲ್ಲವೇ? ಇದೇ ಮಹಾಸಭೆಯ ತರ್ಕ. ಒಟ್ಟಾರೆ ಇತರರಿಗೆ ನಷ್ಟವಾಗಿ ತಮಗೆ ಲಾಭವಾಗಬೇಕೆಂದು ಮಹಾಸಭೆ ಕೋರುವುದಿಲ್ಲ. ಆದರೆ ತಾವೇ ಕಟ್ಟು ಇನ್ನೊಬ್ಬರಿಗೆ ಲಾಭಮಾಡಿಕೊಡುವ ಔದಾರ್ಯಕ್ಕೂ ಹೋಗಲೊಪ್ಪುವದಿಲ್ಲ. ಹಾಗೆ ಹೋಗುವದರಿಂದ ಹಿಂದೂ-ಮುಸಲ್ಮಾನರಿಗೆ ಒಕ್ಕಟ್ಟಾಗಿ ಸ್ವರಾಜ್ಯ ಬರುವುದು ಎಂಬುದು ಹಗಲ ಕನಸು ಎಂದೇ ಮಹಾಸಭೆಯ ವಿಶ್ವಾಸ.

ಕೊಂಗ್ರೆಸ್ ಯಾವಾಗ ಪ್ರತ್ಯೇಕ "ಇಲೆಕ್ಟೋರೇಟ್" 'ವೈಟೇಜ್' ಮುಂತಾದ ಅನ್ಯಾಯಗಳಿಗೂ, (ಮೊದಲು ತಾವು ಇದಿರಿಸಿದ್ದರೂ) ಮುಕ್ತ ತಲೆಬಾಗಿಸಿ ಕೌನ್ಸಿಲ್‌ಗಳನ್ನು ಹೊಕ್ಕು ಸರಕಾರವನ್ನು ನಡೆಸಲಿಕ್ಕೆ ಮೊದಲು ಮಾಡಿತೋ ಅಂದೇ ಅದು **ತನ್ನ ಉಚ್ಚ ಧ್ಯೇಯಗಳನ್ನು ಮುಸ್ಲಿಮ್ ಲೀಗಿನ ಮರ್ಜಿಗೆ ಬಲಿದಾನಮಾಡಿತು.** ಹಾಗೆ ಎಂದು ಮಾಡಿತೋ, ಅಂದೇ ಅದು ಇಂದು ಅಂಕುರಿಸಿದ ಪಾಕಿಸ್ಥಾನದ ಬೀಜವನ್ನು ನೆಟ್ಟಿತು. "ಪ್ರತ್ಯೇಕ ಇಲೆಕ್ಟೋರೇಟ್‌ನ ಸಂತತಿಯೇ ಇದು. ಈ ಇಂದಿನ ಹಿಂದೂಸ್ಥಾನ, ಪಾಕೀಸ್ಥಾನ ರಚನೆಯು ರಗಳೆ" ಎಂದು ಪಂಡಿತ ಮಾಲವೀಯರು ಹೇಳಿದ ಮಾತು ಅಕ್ಷರಶಃ ನಿಜವೇ. ಆ ದುಷ್ಟ ವಿಧಾನಕ್ಕೆ ಬಾಯಿಮುಚ್ಚಿ ಶಾಸನ ಸಭೆಗಳ ಮೆಟ್ಟಿಲೇರಿದ್ದು ಆಶ್ಚರ್ಯವೇ ಸರಿ! ಮಹಾತ್ಮರು ಕೂಡ ಕೊಂಗ್ರೆಸ್ಸಿನ ಈ ಹೊಸ ಧೋರಣೆಯ ತತ್ತ್ವನ್ಯಾಯಗಳನ್ನು ಕುರಿತು ಇಂದಿನ ವರೆಗೂ ಯಾವ ಪ್ರಸ್ತಾಪವನ್ನೇ ಆಗಲಿ ಎತ್ತಲಿಲ್ಲ! ಆದರೆ ಮುಸ್ಲಿಮ್ ಲೀಗಿಗೆ ಮಾತ್ರ ಅದರಿಂದ ಭಯ ಶಂಕೆಯುಗಳಿಗೆ ಆಸ್ಪದ ಸಿಕ್ಕಿತು. ಅದರ ಆಧಾರದ ಮೇಲೆ ತನ್ನ ಪ್ರಚಾರವನ್ನೂ ಪ್ರಾಬಲ್ಯವನ್ನೂ ಬೆಳಸಲಿಕ್ಕೆ ಅವಕಾಶದೊರಕಿತು.

'ಭಾರತೀಯ ಸ್ವಾತಂತ್ರ್ಯವನ್ನು ಸಾಧಿಸುವುದಕ್ಕಾಗಿ ಶಾಸನ ಸಭೆಗಳನ್ನು ಸೇರಿದೆವು' ಎಂದು ಕೊಂಗ್ರೆಸ್ ಹೇಳಬಹುದು. (ತನ್ನ ಧ್ಯೇಯ ವಿರುದ್ಧವಾಗಿ ನಡೆಯುವ) 'ಆ ಸಭೆಗಳನ್ನು ಧ್ವಂಸಮಾಡಲಿಕ್ಕಾಗಿಯೇ' ಸಭಾಪ್ರವೇಶ ಎಂದು ಅದರ ಮುಂದಾಳುಗಳು ಹೇಳುತ್ತಾರೆ. ಆದರೆ ಆ ಸಭೆಗಳನ್ನು ಮುರಿಯಲಿಕ್ಕೇ ಆಗಲಿ ಅಥವಾ ಅವುಗಳ ಮೂಲಕ ಸ್ವರಾಜ್ಯವನ್ನು ಸಂಪಾದಿಸುವದಕ್ಕೇ ಆಗಲಿ, ಸುಮಾರು ಎರಡು ವರ್ಷಗಳ ಕಾಲದಲ್ಲಿ ಅವುಗಳನ್ನು ಹೊಕ್ಕು ದುಡಿದ ಕೊಂಗ್ರೆಸ್ ಮಾಡಿದ ಪ್ರಯತ್ನವು ಯಾವದು ಎಂದು ಯಾರಾದರೂ ಕೇಳಬಹುದಲ್ಲವೆ? ಕೊಂಗ್ರೆಸ್ಸಿನ ಸರಕಾರಗಳು ಅಲ್ಪಸ್ವಲ್ಪ ಸಂಸ್ಕರಣಗಳನ್ನು ಅಲ್ಲಲ್ಲಿ ಮಾಡಿಲ್ಲವೆಂದು ನಾವು ಹೇಳುವುದಿಲ್ಲ. ಆದರೆ ಆ ಸಭೆಗಳನ್ನು ತಾವು ಹೊಕ್ಕುವದು ನ್ಯಾಯ ಎಂದು ಮೊದಲು ಜನರಿಗೆ ತೋರಿಸಲಿಕ್ಕಾಗಿ, **ತಾವಿಟ್ಟುಕೊಂಡ ಗಮ್ಯಗಳನ್ನು ಮಾತ್ರ ಕೊಂಗ್ರೆಸ್ ಸ್ವಲ್ಪವಾದರೂ ಸಾಧಿಸಲಿಲ್ಲ** ಎಂದು ಒತ್ತಿ ಹೇಳಬೇಕಾಗುತ್ತದೆ. ಸುಭಾಸ್‌ಬಾಬು ಅವರು ಹೇಳುವುದೂ ಇದೇ. 1935ನೆಯ ಗವರ್ನ್‌ಮೆಂಟ್ ಓಫ್ ಇಂಡಿಯಾ ಎಕ್ಟನ್ನು ಸುಲಭವಾಗಿ ನಡೆಸಿ ಗವರ್ನರರ ಕಡೆಯಿಂದ 'ಭಲರೆ!'ಎನ್ನಿಸಿಕೊಳ್ಳಲಿಕ್ಕಾಗಿ ಅಲ್ಲ ಕೋಂಗ್ರೆಸ್ ಶಾಸನ ಸಭಾ ಪೀಠಗಳನ್ನು ಅಲಂಕರಿಸಿದ್ದು. ಒಂದು ಕಡೆ ಗವರ್ನರರ ಮರ್ಜಿ ಹಿಡಿಯುವುದು, ಇನ್ನೊಂದು ಕಡೆ ಮುಸಲ್ಮಾನರ ಮರ್ಜಿ ಹಿಡಿಯುವುದು. ಇಂಥ ಮನೋಗತಿ, ಕಾರ್ಯ ಧೋರಣೆಗಳಿಂದಲೇ ಕೊಂಗ್ರೆಸಿನ ಧ್ಯೇಯ ದೌರ್ಬಲ್ಯವು ಹೊರಬಿತ್ತು. ಈ ಎರಡು ಕಡೆ ಬಗ್ಗಿ ನಡೆಯುವುದರಲ್ಲಿ ಮೂರನೆಯವರ ಅವಶ್ಯಕತೆಗಳು ಹಕ್ಕುಗಳು ಮರೆತು ಹೋಗುವವರ ಕಡೆಗೆ ಇಣಿಕಿ ನೋಡಲಿಕ್ಕೆ ಕೂಡ ಕೋಂಗ್ರೆಸಿಗೆ ಬಿಡುವು ಸಿಕ್ಕಲಿಲ್ಲ! ಅಷ್ಟೇ ಏಕೆ, ಕೊಂಗ್ರೆಸಿನ ಅಂಧ ಧೋರಣೆಯಿಂದ ತಮಗಿದ್ದ ಹಕ್ಕುಗಳು ಹಾಳಾಗುತ್ತಿವೆ ಎಂದು ಯಾರಾದರೂ ಎಚ್ಚರಿಕೆಯ ಧ್ವನಿಯನ್ನೆತ್ತಿದರೋ, ಅದಕ್ಕೆ 'ಕಮ್ಯೂನಲ್ ಇಸ್ಮ್', ಮತಾಭಿಮಾನದ ಕೇಕೆ ಎಂದದನ್ನು ಕೂಡಲೇ ಕೋಂಗ್ರೆಸ್ ಮುಖಂಡರು ಬೇಯಾಳಿಸಿ ದಬಾಯಿಸತೊಡಗಿದರು. ತಮ್ಮ ಧ್ಯೇಯ ಕ್ಷಯವನ್ನು ಮುಚ್ಚಿಡಲಿಕ್ಕೆ ಅಂಥ ವಿಕಾರಗಳು ಹುಟ್ಟುವದು ಸಹಜವೇ ಅಲ್ಲವೆ?

ಅದೇ, ರೈತರ ಕೂಲಿಯಾಳುಗಳ ಪ್ರಗತಿಯ ಕಡೆಗೆ ಸಾಕಷ್ಟು ಧ್ಯಾನ ಕೊಟ್ಟು, ತೆರಿಗೆಯ ಭಾರ ತಗ್ಗಿಸುವುದು, ಅವರ ಆರ್ಥಿಕ ಸ್ಥಿತಿಯನ್ನು ಸ್ಥಿರಿಸುವದು, ಅವರಲ್ಲಿ ಸಾಕ್ಷರತೆಯನ್ನೂ ಶಿಕ್ಷಣವನ್ನೂ ಹೆಚ್ಚಿಸುವದು, ಇವೇ ಮೊದಲಾದ ಅನುಕೂಲತೆಗಳನ್ನು ಮಾಡಿಕೊಟ್ಟಿದ್ದರೆ ಕೊಂಗ್ರೆಸಿಗೆ ಈ ಮರ್ಜಿ ಹಿಡಿಯುವ ದುಃಸ್ಥಿತಿ ಬರುತ್ತಿದ್ದಿಲ್ಲ. ಜನಬಲ ಹೆಚ್ಚಿಸಿದಂತೆ ತನ್ನ ಬಲವೂ ಹೆಚ್ಚುತ್ತಿತ್ತು. ಅದನ್ನು ಗಮನಿಸದೆ ಹೋಗಿ, ಕೊಂಗ್ರೆಸ್ ಯಾರ ಬಲವನ್ನು ಹೆಚ್ಚಿಸುವದಕ್ಕಾಗಿ ದುಡಿಯಿತೋ!! ಇನ್ನಾದರೂ ಕೊಂಗ್ರೆಸ್, ಧ್ಯೇಯದ ಹಾದಿಯ ಕಡೆಗೆ ತಿರುಗಿದರೆ ಅದಕ್ಕೆ ಬದುಕು, ಜನರಿಗೆ ಹಿತ. ಅದಾಗದೆ ಇಂದು ದೇಶದ ರಾಜಕೀಯ ವಿಷಯಕ್ಕೆ ಬಿದ್ದ ಸಿಕ್ಕನ್ನು ಯಾರಿಂದಲೂ ಬಿಡಿಸಲಿಕ್ಕಾಗದು.

ನೋಟೀಸು

ಕುಂದಾಪುರ ತಾಲೂಕು ಕುಂದಾಪುರ ಕಸಬಿಯ ಲ್ಲಿರುವ ಅತ್ರಾಡಿ ಹಿರ್ಯಣ್ಣ ಶೆಟ್ಟಿ, ತಮ್ಮ ಜವಳಿ ಸಾಹುಕಾರ ಹಿರಿಯಣ್ಣ ಶೆಟ್ರು ಎ. ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವದೇನಂದ್ರೆ—ಉಡುಪಿ ತಾಲೂಕು ಬಿಲ್ಲಾಡಿ ಗ್ರಾಮದ, ಸೈಬ್ರಕಟ್ಟೆ ದೊಡ್ಡ ಮನೆಯಲ್ಲಿರುವ ನನ್ನ ಭಾವ ನಾಗು ಮ ಅಣ್ಣಪ್ಪ ಶೆಟ್ಟಿ ಮತ್ತು ನವಿಯಣ್ಣ ಹೆಗ್ಡೇರು ಇವರಿಬ್ಬರು ಕೂಡಿ ನನ್ನ ಜತ್ತು ಕುಂದಾಪುರ ಕಸಬಿಯಲ್ಲಿರುವ ಜವಳಿ ಅಂಗಡಿಯಲ್ಲಿ ಇಟ್ಟಿದ್ದ ನನ್ನ ಹೆಸರಲ್ಲಿದ್ದ ನಾನು ಹಿವಾಸು ಒಂದು ಮಾಹಿತಿ ಹಿಂದಿನಿಂದ ಲೂ ಉಪಯೋಗಿಸಿದ ಸ್ವಲ್ಪ ಮಾಡಿಗಿದ ಮರಬ್ಬರ್ ಮೊಹರು ಒಂದು, ಮತ್ತು ನನ್ನ ಹೆಸರಿನ ಲೆಟ್ಟರ್ ಹೆಡ್ ಪೇಪರುಗಳು ಕೂಡ, ಮರೂರು ನನ್ನ ಅಂಗಡಿಯಿಂದ ನನ್ನ ತಿಳುವಳಿಕೆಯಿಲ್ಲದೆ ಕೊಂಡು ಹೋಗಿದ ತ್ತಾರೆಂತ ಇತ್ತೀಚಾಗಿ ನನ್ನ ತಿಳುವಳಿಕೆಗೆ ಬಂದಿರುತ್ತದೆ ಆದುದರಿಂದ ಆ ಇಬ್ಬರು ಮೇಲಿನವರು ಹಿಲಿನಿಂದ ನನ್ನ ಮಕ್ತ್ಯೇಸರ ಹೆಸರಿನ ಪೇಪರುಗಳ ಮೇಲಾಗಲೀ, ಮತ್ತು ಕಾಗದದ ಮೇಲಾಗಲೀ, ಅದರ ಆಧಾರದಿಂದ ಅವರು ಯಾವ ತರದ ರಿತಾಪ್ಪತಿಗ ಳನ್ನು ಯಾರ ಹೆಸರಿನಿಂದಾದರೂ ತಯಾರಿಸಿದಲ್ಲಿ ಯಾ ಬರೆದಿ ವಗ್ಯೆರೆ ಕೊಟ್ಟಲ್ಲಿ ಅಂಥಾ ರಿತಾಪತ್ರಗಳು, ನನ್ನ ಮೇಲೆ ಬದ್ಧವಾದವುಗಳಲ್ಲ ಮತ್ತು ಅಂಥಾ ಹಾಗಗಳ್ಳವುಗಳಲ್ಲ. ನವ್ಯ ಅಣ್ಣಪ್ಪ ಶೆಟ್ರು ನವಿಯಣ್ಣ ಹೆಗ್ಡೇರು ಕೂಡಾ ಆ ಮೊಹರಿನ ಯಾ ಲೆಟರ್ ಹೆಡ್‌ನ ಯಾ ಕಾಗದ ಮೇಲೆ ಮಾಡುವ ವ್ಯವಹಾರ ಯಾವದೇ ರಿತಾಪತ್ರಗಳು ಮಂಜೂರಾಗತಕ್ಕವುಗಳಲ್ಲವೆಂತಲೂ, ತಪ್ಪಿ ಇಬ್ಬರು ಮೊಹರು ಶುವಾಸು ಒಂದು ವರುಷದಿಂದ ಇದ್ದು ಮಾಡಿರುತ್ತದೆಂತಲೂ, ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುತ್ತೇನೆ.

Atradi Hirianna Shetty,
2-5 40.

ನಮ್ಮ ಸ್ತ್ರೀ ಸಮಾಜವೂ ಅದಕ್ಕೆ ಸಂಬಂಧಪಟ್ಟ ಕೆಲವು ಮುಖ್ಯ ಸಮಸ್ಯೆಗಳೂ.

ಲೇಖಿಕೆ:—ಶ್ರೀಮತಿ ಸುಶೀಲಾದೇವಿ.

ಶ್ರೀಮತಿ ಸರೋಜಿನಿ ನಾಯುಡು.

ಕಾಂಗ್ರೆಸ್ಸು ದೇಶಕ್ಕೆ ಸ್ವರಾಜ್ಯವನ್ನು ದೊರಕಿಸಲು 1921ರಲ್ಲಿ ಆರಂಭವಾಗ ಅಸಹಯೋಗದ ಆಂದೋಳನವನ್ನೆಬ್ಬಿಸಿತೋ, ಆಗ ದೇಶದ ಮಹಿಳಾ ಸಮಾಜವು ಶೀಘ್ರಪ್ರಗತಿಯಿಂದ ಜಾಗೃತಗೊಂಡಿತು. ಪತಿ, ಪುತ್ರ, ಸಹೋದರರು, ತಂದೆಗಳು, ದೇಶಕ್ಕಾಗಿ, ಸೆರೆಮನೆಗೆ ಹೋಗಲು ಸಿದ್ಧರಾದಾಗ, ಮಹಿಳೆಯರ ಮೇಲೆ ಇದರ ಪ್ರಭಾವವು ಬೀಳದಿರಲು ಹೇಗೆತಾನೇ ಸಾಧ್ಯ? ಆಗ ಅವರು ತಮ್ಮ ಅಣ್ಣತಮ್ಮಂದಿರಿಗೆ, ಪುತ್ರರಿಗೆ ತಿಲಕಹಚ್ಚಿ, ಆರತಿ ಎತ್ತಿ ವಿಜಯ ಯಾತ್ರೆಗೆ, ವೀರಭಗಿನಿ, ವೀರಮಾತೆಯರಂತೆ, ಆನಂದದಿಂದ ಕಳುಹಿಸಿದುದು ಮಾತ್ರವಲ್ಲದೆ, ತಾವೇ ಸ್ವಯಂ ಕಾರ್ಯಕ್ಷೇತ್ರದಲ್ಲಿಳಿದು, ಜೈಲುಗಳಲ್ಲಿನ ಕಷ್ಟವನ್ನೂ ಸ್ವೀಕರಿಸಿದರು.

ಭಾರತೀಯ ಸ್ತ್ರೀಯರಲ್ಲಿ ಭಾವುಕತೆಯಂತೂ ಇದ್ದೇ ಇದೆ ಆದರೆ ತ್ಯಾಗ ಮತ್ತು ಕಷ್ಟ ಸಹಿಷ್ಣುತೆಗಳು ಅವರ ಸ್ವಾಭಾವಿಕ ಗುಣಗಳು. ಈ ಗುಣಗಳಿಂದಲೇ ಭಾರತದ ನಾರೀ ಸಮಾಜವು ವಿಶ್ವದ ಇತಿಹಾಸದಲ್ಲಿ ಬಹಳ ಪ್ರಾಮುಖ್ಯವಾದುದಾಗಿದೆ ಬೇಕಸೇನೆ, ಲೋಕೋಪಕಾರವಾಡಲು ಬೇಕಾಗಿರುವುದಿನ್ನೇನು? ಸ್ವಾತಂತ್ರ್ಯದ ಆಹ್ವಾನವು ಅವರ ಮೇಲೆ ಮಂತ್ರದಂತಹ ಪ್ರಭಾವವನ್ನುಂಟುಮಾಡಿತು. ಉರಿಯ ಪೆಟ್ಟುಗಳನ್ನು ಧೈರ್ಯದಿಂದ ಎದುರಿಸಿ, ಜೈಲಿಗೆ ಹೋಗಿ ತಮ್ಮ ಅದ್ಭುತ ಪರಾಕ್ರಮ, ಅಪೂರ್ವ ಸಾಹಸ ಮತ್ತು ಅನಂತ ಧೈರ್ಯಗಳ ಪರಿಚಯ ಮಾಡಿಕೊಟ್ಟರು.

ಭಾರತ ಮಹಿಳೆಯರನ್ನು ಈ ರೀತಿ ನೋಡಿದವರೆಲ್ಲರೂ ಬೆರಗಾಗಿದ್ದಾರೆ ವಿದೇಶಿಯರು ಸಹ ತಮ್ಮ ಮೂಗಿನ ಮೇಲೆ ಬೆರಳಿಟ್ಟುಕೊಂಡಿರುವರು. ದೇಶವು ಸ್ವತಂತ್ರವಾಗುವವರೆಗೂ ದೇಶದ ಸಮಸ್ಯೆಗಳು ಬಗೆಹರಿಸಲ್ಪಡುವುದಿಲ್ಲವೆಂಬುದನ್ನು ಎಲ್ಲರೂ ಬಲ್ಲರು. ಈ ಸಮಸ್ಯೆಗಳು ಕೇವಲ ರಾಜಕೀಯವಾಗಿರದೆ, ಸಾಮಾಜಿಕವೂ ಶಿಕ್ಷಣಕ್ಕೆ ಸಂಬಂಧಪಟ್ಟವೂ ಆಗಿವೆ. ಸಾಮಾಜಿಕ ಸುಧಾರಣೆಯ ವಿಚಾರದಲ್ಲಂತೂ ಈ ದೇಶದ ಸರಕಾರದ ದೃಷ್ಟಿಕೋನವು ಬೇರೆ ಜನಕವೇ ಆಗಿದೆ. ಶಿಕ್ಷಣದ ವಿಚಾರವೂ ಹೀಗೆಯೇ.

ಶಿಕ್ಷಣವನ್ನೇ ತೆಗೆದುಕೊಳ್ಳೋಣ! ಲಾರ್ಡ್ ಮೆಕಾಲೆಯ ಪ್ರಯತ್ನದಿಂದ ಇಲ್ಲಿ ಶಿಕ್ಷಣ ವ್ಯವಸ್ಥೆಯಾಗುವ ಮೊದಲು, ಇಲ್ಲಿ ಶಿಕ್ಷಣದ ಯಾವ ವಿಧವಾದ ಪ್ರಬಂಧವೂ ಇರಲೇ ಇಲ್ಲವಂತೆ. ಆದರೆ ಇದು ಸರಿಯಾದ ಅಭಿಪ್ರಾಯವಲ್ಲ. ಆಗ ಹಳ್ಳಿಹಳ್ಳಿಗಳಲ್ಲಿಯೂ ಶಾಲೆಗಳಿರುತ್ತಿದ್ದವು. ಈಸ್ಟ್ ಇಂಡಿಯಾ ಕಂಪೆನಿಯವರು ಶಿಕ್ಷಣ ವ್ಯವಸ್ಥೆ ಮಾಡಿದುದು ಅವರ ಕೆಲಸಕ್ಕೆ ಬೇಕಾದ ಗುಮಾಸ್ತರನ್ನು ನಿರ್ಮಿಸಿಕೊಳ್ಳುವುದಕ್ಕಾಗಿ. ನಮಗೆ ಮೊದಲು ಸಿಗುತ್ತಿದ್ದ ಶಿಕ್ಷಣವು ನಮ್ಮ ಜೀವನಕ್ಕನುಗುಣವಾಗಿರುತ್ತಿತ್ತು ಆದರೆ ಹೊಸ ಶಿಕ್ಷಣದಲ್ಲಿ ಯಾವ ಉಪಯೋಗವೂ ಇಲ್ಲದೆ ಆಡಂಬರವೇ ಹೆಚ್ಚಾಯಿತು ಇದರ ಪರಿಣಾಮವಾಗಿ ಜೀವನದಲ್ಲಿ ವಿಶೃಂಖಲತೆಯುಂಟಾಯಿತು ಮಹಿಳಾ ಸಮಾಜದ ಮೇಲೆ ಇದರ ಪರಿಣಾಮವು ಬಹಳವಾಗಿ ಆಯಿತು ಆ ಸ್ತ್ರೀಯ ಜೀವನ ಸಂಬಂಧವಾದ ದೃಷ್ಟಿಕೋನವು ಅಸ್ಪಷ್ಟವಾಯಿತು. ಸಂಕೀರ್ಣತೆಯು ಹೆಚ್ಚಿತು, ಸ್ತ್ರೀಪುರುಷರಲ್ಲಿ ಅಂತರವು ಹೆಚ್ಚಾಯಿತು.

ದೇಶದಲ್ಲಿ ಇತಿಹಾಸದಲ್ಲೇ ಪ್ರಥಮ ಸಾರಿ, ಕಾಂಗ್ರೆಸ್ ಸರಕಾರವಿದ್ದಾಗ, ಸಾರ್ವತ್ರಿಕ ಸಾಕ್ಷರತಾ ಪ್ರಸಾರದ ಕಾರ್ಯವು ಸಾಮೂಹಿಕವಾಗಿ ನಡೆದು, ಆರ್ಥಿಕ ಸಹಾಯವೂ ದೊರೆಯಿತು ಇಷ್ಟಾದರೂ ಆಗಿರುವುದೇನು? 35ಕೋಟಿ 30ಲಕ್ಷ ಜನರಲ್ಲಿ 40ಲಕ್ಷ ಸ್ತ್ರೀಯರು, ಸುಮಾರು 2ಕೋಟಿ ಪುರುಷರು ಅಕ್ಷರಸ್ಥರಾಗಿದ್ದಾರೆ. ಇದು ಯಾವ ಸರಕಾರಕ್ಕೇ ಆಗಲಿ ಕೀರ್ತಿ ತರುವುದಿಲ್ಲ. ಆದರೆ ಸೇ. 8ರಷ್ಟು ಹಣವನ್ನು ಮಾತ್ರ ಶಿಕ್ಷಣಕ್ಕೆಂದು ಖರ್ಚು ಮಾಡುತ್ತಿರುವ ಶಾಸನ ವ್ಯವಸ್ಥೆಯಲ್ಲಿ ಇದಕ್ಕಿಂತ ಹೆಚ್ಚಿನ ನಿರೀಕ್ಷಣೆಯನ್ನು ಹೇಗೆ ತಾನೇ ಮಾಡಬಹುದು? ಬ್ರಿಟಿಷ್ ಭಾರತದಲ್ಲಿ ವರ್ಷಕ್ಕೆ ಸುಮಾರು 29 ಕೋಟಿ ರೂ.ಗಳು ಖರ್ಚಾಗುತ್ತವೆ. ಆದರೆ ಅದರಲ್ಲಿ ಸುಮಾರು 18ಕೋಟಿ ರೂ.ಗಳಂತೂ ಸರ್ಕಾರಿ ಖಜಾನೆಗಳು, ಸ್ಥಳೀಯ ಸಂಸ್ಥೆಗಳಿಂದ ವಸೂಲಾಗಿ, ಉಳಿದುದು ಇತರ ಸಾಧನೆಗಳಿಂದ ಬರುತ್ತವೆ. ಇದರಲ್ಲಿ ಸ್ತ್ರೀ ಶಿಕ್ಷಣಕ್ಕೆ ಕೇವಲ 2½ಕೋಟಿ ಖರ್ಚಾಗುತ್ತವೆ. ಅನೇಕ ಶಾಲೆಗಳಲ್ಲಿ ಒಬ್ಬರೇ ಅಧ್ಯಾಪಕ, ಅಧ್ಯಾಪಕಿ ಇರುವರು. ಶಾಲೆಗಳಲ್ಲಿ ದೊರೆಯುವ ಶಿಕ್ಷಣವೂ ಸಹ ಅಸಂಪೂರ್ಣವೇ ಆಗಿರುತ್ತದೆ. ಮನೆಯ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗಳು ಉಚ್ಚ ಶಿಕ್ಷಣಕ್ಕೆ ಅವಕಾಶ ಕೊಡುವುದಿಲ್ಲ ನೂರರಲ್ಲಿ 10ಮಂದಿ ಬಾಲಕಿಯರೂ ಸಹ 4ನೇ ತರಗತಿಗೆ ಹೋಗುವುದಿಲ್ಲ. ಮನೆಗೆ ಹೋದ ಮೇಲೆ 1–2 ವರ್ಷಗಳ ಕಾಲ ಶಾಲೆಯಲ್ಲಿ ಕಲಿತಿರುವುದನ್ನೂ ಮರೆಯುವರು.

ಬಾಲಕಿಯರ ಶಿಕ್ಷಣದಲ್ಲಿ ಹೆಚ್ಚು ಅಡ್ಡಿಯಾಗಿರುವುದು ಅವರ ವಿವಾಹ. ಬಾಲವಿವಾಹವು ಒಂದು ದೋಷವೇ; ಅದರಿಂದ ಇನ್ನೂ ಅನೇಕ ದೋಷಗಳು ಸಮಾಜದಲ್ಲಿ ಹುಟ್ಟಿಕೊಳ್ಳುತ್ತವೆ. ಈ ಅಂಕೆಗಳು ಸ್ವಯಂ ತಮ್ಮ ಕತೆಯನ್ನು ತಾವೇ ಹೇಳಿಕೊಳ್ಳುವವು.

ಬಾಲಿಕೆಯರ ವಯಸ್ಸು ವರ್ಷ ತಿಂಗಳು	ಸಾವಿರದಲ್ಲಿ ವಿವಾಹಿತೆಯರು
0—5	30
5—10	193
10—15	381

ಅಂದರೆ 15 ವರ್ಷಕ್ಕೆ ಮೊದಲೇ ಅರ್ಧಕ್ಕಿಂತ ಹೆಚ್ಚು ಬಾಲೆಯರು ವಿವಾಹವಾಗುವರು ಕೆಲವರಿಗಂತೂ 6 ವರ್ಷ ವಯಸ್ಸಾಗುವ ಮೊದಲೇ ವಿವಾಹವಾಗುವುದು. ಇದರಿಂದ ಸ್ತ್ರೀ ಸಮಾಜದ ಸ್ಥಿತಿಯು ಎಷ್ಟು ಶೋಚನೀಯವೆಂಬುದು ತಿಳಿಯುವುದು. ರಾಷ್ಟ್ರದ ಭವಿಷ್ಯವು ಯಾವ ಮಾತೆಯರನ್ನವಲಂಬಿಸಿರುವುದೋ, ಅಂತಹ ಮಾತೆಯರ ಸ್ಥಿತಿಯು ಎಷ್ಟು ಭಯಂಕರವಾಗಿದೆ ಎಂಬುದನ್ನು ಊಹಿಸಬೇಕಾಗಿದೆ.

ಬಾಲವಿವಾಹದ ದುಷ್ಟ ಪದ್ಧತಿಯ ಪ್ರಭಾವವು ಸೇ. 13 ಮಂದಿ ಬಾಲಿಕೆಯರ ಮೇಲೆ ಉಂಟಾಗುತ್ತದೆ. ಪ್ರತಿವರ್ಷವೂ ಸುಮಾರು ಎರಡು ಲಕ್ಷ ಸ್ತ್ರೀಯರು ಪ್ರಸವಿಸಿ ಮರಣಹೊಂದುವರು. ಇದೇನೂ ಆಶ್ಚರ್ಯಕರವಾದುದಲ್ಲ. ಎಷ್ಟೋ ಮಂದಿಗೆ ಪುಷ್ಟಿಕರವಾದ ಆಹಾರವೇ ದೊರೆಯುತ್ತಿಲ್ಲ. ಜೀವನವನ್ನು ಜೀವನವನ್ನಾಗಿ ಮಾಡುವ ಎಲ್ಲ ಅನುಕೂಲತೆಗಳ ಪೂರ್ಣ ಅಭಾವವಿರುವುದು. ಔಷಧಿ ಉಪಚಾರಗಳಂತೂ ಕೇಳಲೇ ಬೇಕಾಗಿಲ್ಲ. ಬಾಲವಿವಾಹದ ಕಾರಣವಾಗಿ ಅಕಾಲದಲ್ಲೇ ಗರ್ಭವತಿಯರಾಗಿ ಶರೀರವು ದುರ್ಬಲವಾಗುವುದು. ಒಂದು ಕಡೆ ಸಾಮಾಜಿಕ ಕುರೀತಿಗಳು, ಮತ್ತೊಂದು ಕಡೆ ಅತೀತ ಗೌರವವನ್ನು ಕುರಿತು ಹೆಮ್ಮೆ ಪಡುವುದು.

ವಿವಾಹವಾಯಿತೋ ಇಲ್ಲವೋ ಬಾಲಿಕೆಯರ ಬಾಲ್ಯವು ಮುಗಿದಂತೆಯೇ! ಬಾಲ್ಯದ ಆಟಪಾಟಗಳಿಂದ ಸಹ ವಂಚಿತರಾಗಿ ಬಿಡುವರು. ಶಾಲೆಗೆ ಹೋಗುವುದರಿಂದ ಮನೋವಿಕಾಸಕ್ಕೆ ಅವಕಾಶ ತಪ್ಪುವುದು.

ಇನ್ನೀ ಸಮಾಜದ ಸಮಸ್ಯೆಗಳಲ್ಲಿ ವಿಧವೆಯರ ಪ್ರಶ್ನೆಯೂ ಸೇರಿದೆ. ವಿಧವೆಯರ ಕಷ್ಟವನ್ನರಿತವರೂ, ಅವರ ತೊಂದರೆಯನ್ನು ತಿಳಿಯಬಲ್ಲವರೂ ಸಹ ಧೈರ್ಯದಿಂದ ಮುಂದೆ ಬಂದು, ತಮ್ಮ ಕರ್ತವ್ಯವನ್ನು ಪಾಲಿಸುವುದಿಲ್ಲ. ರೂಢಿಗಳ ಅಂಧಭಕ್ತ ಸಮಾಜವು ಸಾಹಸಿ ಸುಧಾರಕರಿಗೆ ತೊಂದರೆಗಳನ್ನೇ ಒಡ್ಡುತ್ತಿರುವುದು. ಒಂದು ಕಡೆ ಅಂಧ ಶ್ರದ್ಧೆಯಲ್ಲಿರುವ ಸಮಾಜ, ಇನ್ನೊಂದು ಕಡೆ ಲಕ್ಷಾಂತರ ವಿಧವೆಯರು. 1931ರ ಜನಗಣನೆಯ ವರದಿಯಿಂದ ತೆಗೆದ ಕೆಲವು ಅಂಕೆಗಳಿವು.

ವಿಧವೆಯರ ವಯಸ್ಸು		ಸಂಖ್ಯೆ
0– 1	ವರ್ಷ	151
1– 2	,,	178
2– 3	,,	348
3– 4	,,	807
4– 5	,,	15,01
5–10	,,	1,05,44
10–15	,,	1,83,99
15–20	,,	5,14,39
20–25	,,	8,46,95

ವಿಧವೆಯರ ಪಟ್ಟಿಯಲ್ಲಿ ಹಾಲು ಕುಡಿಯುವ ಮಕ್ಕಳಿರುವುದನ್ನು ನೋಡಿ ಯಾರ ಹೃದಯವು ತಾನೇ ಬಿರಿಯದಿರುವುದು! ಜಗತ್ತಿನ್ನೇ ಕಾಣದ ಪತಿಯೆಂದರೇನೆಂಬುದನ್ನು ಸಹ ಅರಿಯದ ಬಾಲಿಕೆಯರು ವಿಧವೆಯರಾದರೆ, ಅಪರಾಧಿಗಳ್ಯಾರು? ಯಾರ ಅಪರಾಧಕ್ಕಾಗಿ ಅವರು ಜೀವನಪರ್ಯಂತ ವೈಧವ್ಯದ ಕಷ್ಟವನ್ನನುಭವಿಸಬೇಕು? ಬ್ರಹ್ಮಚರ್ಯ ಮತ್ತು ಸಂಯಮಗಳು ಒಳ್ಳೆ ವಸ್ತುಗಳೇನೋ ಹೌದು. ಆದರೆ ಅವು ಸ್ತ್ರೀಯರಿಗೆಷ್ಟು ಒಳ್ಳೆಯವೋ, ಪುರುಷರಿಗೂ ಅಷ್ಟೇ ಒಳ್ಳೆಯವಲ್ಲವೇ! ಪುರುಷನು ಎಷ್ಟು ವಯಸ್ಸಾದರೂ ಸರಿಯೆ, ಪುನರ್ವಿವಾಹವಾಗುತ್ತಲೇ ಇದ್ದು ಸುಮಾರು 2½ ಕೋಟಿ ವಿಧವೆಯರು ಪುನರ್ವಿವಾಹವಾಗಬಾರದೆಂದು ಹೇಳುವದು ಎಂತಹ ದುಃಖಕರವಾದ ವಿಚಾರ! ಇದರಿಂದ ಗುಪ್ತಪ್ರೇಮ, ಭ್ರೂಣಹತ್ಯೆ, ಗೃಹತ್ಯಾಗ ಮತ್ತು ವೇಶ್ಯಾವೃತ್ತಿ ಮೊದಲಾದುವು ಸಮಾಜದ ಮುಂದೆ ಬರುವವು ಇಷ್ಟಾದರೂ ಸಮಾಜವು ಈ ವಿಚಾರದಲ್ಲಿ ವಿನುಮಾಡುವುದಕ್ಕೂ ಸಿದ್ಧವಾಗಿಲ್ಲ ಸ್ವಾರ್ಥೀ ಸಮಾಜವು ಪುನರ್ವಿವಾಹವಾಗ ಬಯಸುವ ವಿಧವೆಯರ, ಅವರೊಡನೆ ವಿವಾಹವಾಗಲು ಸಿದ್ಧರಾಗುವ ಸಾಹಸಿ ಸುಧಾರಕರ ಮಾರ್ಗದಲ್ಲಿ ಅಡ್ಡಿಯಾಗಿ ತೊಂದರೆಯುಂಟುಮಾಡುತ್ತಿದೆ.

—S. L

THULUNAD BANK
OF SUPPLY AGENCY LIMITED.

Authorised & Issued Capital	...	Rs 1,00,000
Subscribed & Paid up Capital	....	Rs. 31,340
Reserves & other Funds	...	Rs. 22,052

ವಿಶೇಷ ರಿಯಾಯಿತಿ

Rs. 1000

ತಾ. 30-6-1940ರ ಒಳಗೆ ರೂ. 1000 ಯಾ ಅದಕ್ಕಿಂತ ಮೇಲ್ಪಟ್ಟು ನಿರಖು ಠೇವಣಾತಿಗಳನ್ನು ಇಡುವವರಿಗೆ ಕೆಲವು ವಿಶೇಷ ರಿಯಾಯಿತಿಗಳು ಕೊಡಲ್ಪಡುವವು.

ಹೆಚ್ಚಿನ ಮಾಹಿತಿಗೆ ಬರೆಯಿರಿ:—
ಮೆನೇಜಿಂಗ್ ಡೈರೆಕ್ಟರ್
ತುಳುನಾಡ್ ಬೇಂಕ್
ಆಫ್ ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮೇ ದಿನಾಚರಣೆ—ಇದೇ ಮೇ ತಿಂಗಳ ತಾ. ೧ರಲ್ಲಿ ಮಂಗಳೂರಿನ ಮಜೂರ ಸಂಘಗಳ ಆಶ್ರಯದಲ್ಲಿ ಮೇ ದಿನಾಚರಣೆಯು ಯಶಸ್ವಿಯಾಗಿ ನೆರವೇರಿತು. ಅಂದಿನ ದಿನ ಬಾಕಿ ಉದ್ಯಮಗಳನ್ನು ಬಂದ್ ಇಟ್ಟ ಮಜೂರ ಸ್ವಯಂಸೇವಕರು ನಗರದಲ್ಲಿ ಕೆಂಪು ಧ್ವಜವನ್ನು ಹಿಡಿದುಕೊಂಡು ಮೆರವಣಿಗೆಯನ್ನು ನಡೆಸಿದರು. ಸಾಯಂಕಾಲ 6-30ಕ್ಕೆ ಮಂಗಳೂರು ಮೈದಾನದಲ್ಲಿ ಮಹಾಜನರ ಸಭೆ ಸೇರಿತು. ಕಾಮ್ರೇಡ್ ಎಸ್. ಎನ್. ಹೊಳ್ಳರು ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀಗಳಾದ ಕೇಶವ ಕಾಮತ್, ಮತ್ತು ಕೇಶವ ನಾಯಕ್ ಇವರೇ ಮೊದಲಾದವರು ಭಾಷಣ ಮಾಡಿ ಮಜೂರರ ಹಕ್ಕು ಬಾಧ್ಯತೆಗಳ ವಿಷಯವಾಗಿ ಮಾತಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮಜೂರರು ಸುಸಂಘಟಿತರಾಗುವ ಆವಶ್ಯಕತೆಯನ್ನೂ ಭಾರತ ರಾಷ್ಟ್ರ ಸಭೆಗೆ ಸೇರಿ ಅದನ್ನು ಬಲಪಡಿಸಿ ದೇಶದ ಸ್ವಾತಂತ್ರ್ಯವನ್ನು ಸಂಪಾದಿಸಲು ನೆರವಾಗಬೇಕೆಂಬ ಸಂಗತಿಯನ್ನೂ ವಿವರಿಸಿ ಹೇಳಿದರು. ಅನಂತರ ಅಧ್ಯಕ್ಷರಿಗೂ ಭಾಷಣಕರ್ತರಿಗೂ ಧನ್ಯವಾದಾರ್ಪಣೆಯಾದ ಬಳಿಕ ಸಭಾಂತ್ಯವಾಯಿತು.

ಪಂಡಿತ ಸಂಘದ ಸಭೆ—ಕಳೆದ ತಾ. 3ನೇ ಸಾಯಂಕಾಲ ದ. ಕನ್ನಡ ಜಿಲ್ಲಾ ಪಂಡಿತ ಸಂಘದ ಸಭೆಯೊಂದು ಗಣಪತಿ ಹೈಸ್ಕೂಲಿನಲ್ಲಿ ಸಂಘದ ಅಧ್ಯಕ್ಷರಾದ ವಿದ್ವಾನ್ ಶ್ರೀ ನಾರಾಯಣ ಶ್ರೀನಿವಾಸಾಚಾರ್ಯರ ಅಧ್ಯಕ್ಷತೆಯಲ್ಲಿ ಸೇರಿ, ದ. ಕನ್ನಡದ ಸುಪ್ರಸಿದ್ಧ ಕನ್ನಡ ಸಾಹಿತಿಗಳಾಗಿದ್ದ ಶ್ರೀ ಯಂ. ಎನ್. ಕಾಮತರ ಅಕಾಲ ನಿಧನಕ್ಕಾಗಿ ಸಂತಾಪ ಸೂಚಕ ಠರಾವು ಮಾಡಿತು.

ಮೊಗವೀರ ಮಾಪಿಳ್ಳೆಯರ ಮನಸ್ತಾಪ—ಕಳೆದ ತಿಂಗಳ 26ನೇ ತಾರೀಕಿನ ದಿವಸ ಮೀನು ಹಿಡಿದುಕೊಂಡು ಬಂದಿದ್ದ ಓರ್ವ ಮೊಗವೀರ ಹೆಂಗಸಿನ ದೋಣಿಗೆ ಉಳ್ಳಾಲದ ಮಾಪಿಳ್ಳೆಯೊಬ್ಬನು ಒಂದು ಮೋರಿಯನ್ನು ತಂದು ಬೇಕೆಂತಲೇ ದಿಕ್ಕಿ ಹೊಡೆದನು. ಹೆಂಗಸು ಆಕ್ಷೇಪಿಸಲಾಗಿ ಮಾಪಿಳ್ಳೆಯು ಮಾನಕ್ಕೆ ಕಡಿಮೆಯಾಗಿ ಮಾತಾಡಿದನು. ಆ ಸ್ತ್ರೀಯ ಸಹೋದರನೂ, ಅವನ ಸಂಗಾತಿಯೊಬ್ಬನೂ ಮಧ್ಯೆ ಮಾತಾಡಲು ಮಾಪಿಳ್ಳೆಯು ಸ್ತ್ರೀಯ ಸಹೋದರನಿಗೆ ಹೊಡೆದನು. ಕೃಷ್ಣಪ್ಪ ಎಂಬವನು ಕಾದಾಟಕ್ಕೆ ಪ್ರತಿಕಾರವ ಕೊಡಲು ಮಾಪಿಳ್ಳೆಯು ಪೆಟ್ಟು ತಿಂದು ಹಿಂದಕ್ಕೆ ಸರಿದನು. ಇಷ್ಟಾದ ಸ್ವಲ್ಪ ಹೊತ್ತಿನಲ್ಲಿ ಕೆಲವು ಮಾಪಿಳ್ಳೆಗಳು ಒಟ್ಟಿಗೆ ಸೇರಿ ಬಂದು ಕೃಷ್ಣಪ್ಪ ಮತ್ತು ಅವನ ಸಂಗಾತಿ ಸಿದ್ಧಪ್ಪ ಎಂಬಿಬ್ಬರಿಗೆ ಬಹಳವಾಗಿ ಹೊಡೆದು ಜಖಂ ಪಡಿಸಿದರು. ಇವರಿಬ್ಬರನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಅಷ್ಟರಲ್ಲಿ ಮೊಗವೀರರ ಮೇಲೆ ಮಾಪಿಳ್ಳೆಯರು ಬಿದ್ದ ಮಾತೇಯು ಬೆಂಗರೆಯ ಮೊಗವೀರರಿಗೆ ತಿಳಿಯಲು ಅವರು ಕೂಡಲೆ ಬಂದರು. ಮಾಪಿಳ್ಳೆಯ ಪೈಕಿ ಎಲ್ಲರೂ ತಪ್ಪಿಸಿಕೊಂಡರು. ಮೊಗವೀರರು ತಾವು ಸೇಡು ತೀರಿಸಿಕೊಳ್ಳುವುದಾಗಿ ನಿರ್ಧರಿಸಿದರು. ಕೊನೆಗೆ ಮ್ಯುನಿಸಿಪಲ್ ಕೌನ್ಸಿಲರ್‌ರಾದ ಮಿ| ಕೆ ಅಬ್ದುಲ್ಲ ಸಾಹೇಬರು ಶ್ರೀ ಮೋಹನಪ್ಪ ತಿಂಗಳಾಯರೇ ಮೊದಲಾದ ಮುಖಂಡರನ್ನು ನೋಡಿ ಜಗಳವನ್ನು ಪರಿಹರಿಸಬೇಕೆಂದು ಪ್ರಯತ್ನಿಸಿದರು. ಮೊಗವೀರರು ಮುಂದಾಳುಗಳ ಮಾತಿಗೆ ಅಲಕ್ಷ್ಯ ಭಾವ ತೋರಿಸಲಿಲ್ಲ. ಮೊದಲು ಜಗಳ ತೆಗೆದು ಅನ್ಯಾಯಕ್ಕೆ ಕಾರಣನಾದ ಮಾಪಿಳ್ಳೆಗೆ ಹತ್ತು ರೂಪಾಯಿ ಜುಲ್ಮಾನೆ ಪಂಚಾತಿಗೆದಾರರು ವಿಧಿಸಿ ಆ ರೂ. 5ನ್ನು ಮಹಮ್ಮದೀಯರ ಮಸೀದಿಗೂ ಮಿಕ್ಕ ಐದು ರೂಪಾಯಿಗಳನ್ನು ಮೊಗವೀರರ ಕಾಣಿಗೂ(?) ಕೊಡಬೇಕೆಂದು ನಿರ್ಧರಿಸಲಾಯಿತು. ಈ ಪಂಚಾಯತಿಕೆಯ ದೆಸೆಯಿಂದ ಇಕ್ಕೆಡೆಯವರಲ್ಲಿದ್ದ ಮನಸ್ತಾಪವು ಮಾಯವಾಗಿ ಮೊದಲಿನಂತೆಯೇ ಸೌಹಾರ್ದವು ನೆಲಸುವಂತಾಯಿತು. ಪೋಲೀಸ್ ಸಭೆಯವರೂ ಕೂಡ ಗಲಭೆಯಾಗದಂತೆ ಬಹಳ ಜಾಗರೂಕತೆಯಿಂದಿದ್ದರು.

ಪ್ರೊ. ಬಿ. ಯಂ. ಶ್ರೀ ಕಂಠಯ್ಯನವರು—ಮೂಡಬಿದ್ರೆಯ ವಸಂತ ಸಾಹಿತ್ಯೋತ್ಸವಕ್ಕೆ ದಯಮಾಡಿದ್ದ ಪ್ರೊ. ಬಿ. ಯಂ. ಶ್ರೀಕಂಠಯ್ಯನವರು ತಾ 4ನೇ ಸಾಯಂಕಾಲ ಥಿಯೊಸೊಫಿಕಲ್ ಲಾಜನಲ್ಲಿ, ಶ್ರೀ ಕೆ. ಬಿ. ಜಿನರಾಜ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ 'ಕನ್ನಡ ನುಡಿ'ಯ ಮೇಲೆ ಒಂದು ಉಪನ್ಯಾಸ ಮಾಡಿದರು. ಮೊದಲು ಅವರು ಕರ್ನಾಟಕ ಸಾಹಿತ್ಯ ಪರಿಷತ್ತಿನ ರಜತೋತ್ಸವಕ್ಕೆ ಈ ಜಿಲ್ಲೆಯ ಕನ್ನಡಾಭಿಮಾನಿಗಳನ್ನು ಆಮಂತ್ರಿಸಿ ಅನಂತರ ಕನ್ನಡ ಭಾಷೆಯಲ್ಲಿ ಆಗಾಗ್ಗೆ ಉಂಟಾದ ಕ್ರಾಂತಿಗಳ ವಿಷಯವಾಗಿ ಭಾಷಣ ಮಾಡಿದರು. ಕನ್ನಡವು ಒಂದು ಸಜೀವವಾದ ಭಾಷೆಯಾಗಿದ್ದು, ಅದರಲ್ಲಿ ಆಗಿಂದಾಗ್ಗೆ ದೊಡ್ಡ ದೊಡ್ಡ ಕ್ರಾಂತಿಗಳುಂಟಾಗಿದ್ದು ಸಾಹಿತ್ಯದಲ್ಲಿ ಬಹಳ ಬದಲಾವಣೆಗಳಾಗಿದ್ದವೆಂದೂ, ಜೈನರು ಕನ್ನಡವನ್ನು ತಮ್ಮ ಧರ್ಮ ಪ್ರಚಾರದ ಭಾಷೆಯನ್ನಾಗಿ ಮಾಡಿದರೆಂದೂ, ಆ ಸಮಯದಲ್ಲಿ ಕನ್ನಡದಲ್ಲಿ ಒಂದು ದೊಡ್ಡ ಬದಲಾವಣೆಯಾಯಿತೆಂದೂ, ಅನಂತರ ವೀರಶೈವರ ಗುರುಗಳಾದ ಶ್ರೀ ಬಸವಣ್ಣನವರು ತಮ್ಮ ಧರ್ಮವನ್ನು ಸುಲಭ ಶೈಲಿಯ ಕನ್ನಡದಲ್ಲಿಯೇ ಪ್ರಚಾರ ಮಾಡತೊಡಗಿದರೆಂದೂ ಆಗ ಕನ್ನಡದ ಸಾಹಿತ್ಯದಲ್ಲಿ ಮತ್ತೊಂದು ದೊಡ್ಡ ಕ್ರಾಂತಿಯಾಯಿತೆಂದೂ ಹೇಳಿದರು. ಮತ್ತೆ ಕನ್ನಡದಲ್ಲಿ ಬಹಳ ಉತ್ತಮ ಕವಿಗಳು ತಮ್ಮ ಗ್ರಂಥಗಳನ್ನು ಬರೆದಿಟ್ಟುದುದರಿಂದಲೂ ಹೇಳಿದರು. ಅಧ್ಯಕ್ಷರ ಸಮಯೋಚಿತ ಭಾಷಣವಾದ ಅನಂತರ ಶ್ರೀ ಎಸ್. ಮಂಗೇಶರಾಯರು ಅಧ್ಯಕ್ಷರಿಗೂ ಪ್ರೊ. ಶ್ರೀ ಕಂಠಯ್ಯನವರಿಗೂ ಧನ್ಯವಾದಗಳನ್ನರ್ಪಿಸಿದರು.

ಉಡುಪಿ

ಜಿಲ್ಲಾ ಸಹಕಾರಿ ಪರಿಷತ್ತು—ದ. ಕ. ಜಿಲ್ಲಾ ಸಹಕಾರಿ ಪರಿಷತ್ತು ಉಡುಪಿಯಲ್ಲಿ ಇದೇ ತಾ. 28 ಮತ್ತು 29ರಲ್ಲಿ ಜರಗಲಿರುವುದು.

ಗುರುಗಳ ಆರಾಧನೆ—ಶ್ರೀ ಅದಮಾರು ಮಠದ ಶ್ರೀ ವಿಬುಧಪ್ರಿಯತೀರ್ಥ ಸ್ವಾಮಿಗಳವರ ಆರಾಧನೆಯು ಇದೇ ತಾ 6ರಲ್ಲಿ ಶ್ರೀ ಕೃಷ್ಣ ಮಠದಲ್ಲಿ ಬಹು ವಿಜೃಂಭಣೆಯಿಂದ ಜನರಲ್ ಏಜೆಂಟ್ ಶ್ರೀ. ವೆಂಕಟೇಶಾಚಾರ್ಯರ ನೇತೃತ್ವದಲ್ಲಿ ಜರಗಿತು. ಅಂದು ಮಧ್ಯಾಹ್ನ ಬ್ರಾಹ್ಮಣ ಸಂತರ್ಪಣೆ ರಾತ್ರಿ ಬ್ರಹ್ಮರಥೋತ್ಸವವೂ ನಡೆಯಿತು.

ಭೀಮನಕಟ್ಟೆ ಸ್ವಾಮಿಗಳವರು—ಶ್ರೀ ಭೀಮನಕಟ್ಟೆ ಮಠದ ಸ್ವಾಮಿಗಳವರು ಇದೇ ತಾ 10ರಲ್ಲಿ ಪಜಕಕ್ಷೇತ್ರಕ್ಕೆ ಬರಲಿರುವರು. ಪರ್ಯಾಯ ಅದಮಾರು ಮಠದ ಕಡೆಯಿಂದ ಸ್ವಾಗತ ಮೆರವಣಿಗೆಯ ಸಿದ್ಧತೆಗಳು ನಡೆಯುತ್ತಲಿವೆ.

ವರ್ಧಂತ್ಯುತ್ಸವ—ಮ್ಯುನಿಸಿಪಲ್ ಸಾರ್ವಜನಿಕ ರೀಡಿಂಗ್ ರೂಮಿನ ವರ್ಧಂತ್ಯುತ್ಸವವು ತಾ. 4 5-40ರಲ್ಲಿ ಶ್ರೀ. ಅಮೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ವರದಿ ವಾಚನ, ಶ್ರೀಗಳಾದ ಕೆ. ರಾಮಚಂದ್ರ ರಾವ್, ಕೆ. ಶೀನ ಶೆಟ್ಟರು ಉಡುಪಿ ರೇಂಜಿನ ಸ್ಕೂಲ್ಸ್ ಇನ್ಸ್ಪೆಕ್ಟರ್ ಮತ್ತು ಮ್ಯುನಿಸಿಪಲ್ ಕಮಿಶನರು ಭಾಷಣಕರ್ತರು. ಬಹುಮಾನ ವಿತರಣೆ ನಡೆದು ಅಧ್ಯಕ್ಷರು ಮ್ಯುನಿಸಿಪಲ್ ಉಪಾಧ್ಯಕ್ಷರು ಅನಂತರ ಸಮಯೋಚಿತ ಧನ್ಯವಾದ ಭಾಷಣವಿತ್ತ ಮೇಲೆ, ಬಾಲಕಿಯರಿಂದ ಗಾಯನ ಮತ್ತು 'ಭಕ್ತ ಮಾರ್ಕಂಡೇಯ'ನ ಟಕ ಪ್ರದರ್ಶನ ನಡೆಯಿತು.

ದಕ್ಷಿಣ ಕನ್ನಡ

ಸುಬ್ರಹ್ಮಣ್ಯ—ಇಲ್ಲಿಗೆ ಶ್ರೀಕಾಶೀ ಮಠದ ವಿವೇಕಾನಂದ ದಾಸರವರು ಕಳೆದ ತಾ 24ಕ್ಕೆ ದಯಮಾಡಿದ್ದರು. ಇವರ ಹರಿಕಥಾ ಕಾಲಕ್ಷೇಪಗಳು ತಾ 25, 26ನೇ ದಿನಗಳಲ್ಲಿ ರಾ. ಬ. ಶ್ರೀನಿವಾಸರಾಯರ ಹೊಸ ಛತ್ರದ ಕಟ್ಟಡದಲ್ಲಿಯೂ, ಸುಬ್ರಹ್ಮಣ್ಯ ದೇವಸ್ಥಾನದಲ್ಲಿಯೂ ನಡೆದುವು.

ಕಡಂದಲೆ—ಇಲ್ಲಿಯ ಬೋ. ಹಾ. ಪ್ರಾ. ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ. ಎಸ್. ಎಸ್. ಕಡಂದಲೆಯವರಿಗೆ ನಂದಳಿಕೆ ಬೋ. ಹಾ. ಪ್ರಾ. ಶಾಲೆಗೆ ವರ್ಗವಾಗಿ ಅವರ ಸ್ಥಾನಕ್ಕೆ ನಂದಳಿಕೆಯಿಂದ ಶ್ರೀ. ಪಿ ಮಹಾಲಿಂಗ ಶೆಟ್ಟರು ವರ್ಗಾಯಿಸಲ್ಪಟ್ಟಿರುವರು. ವರ್ಗವಾಗಿ ಹೋಗುವ ಎಸ್ ಎಸ್. ಕಡಂದಲೆಯವರನ್ನೂ ಶಾಲೆಗೆ ಲಕ್ಕೆ ದಾನವ ಕೊಟ್ಟಿರುವ ಶ್ರೀ. ಕಣ್ವರ ಶೆಟ್ರನ್ನೂ ಬೀಳ್ಕೊಡುವ ಸಭೆಯೊಂದನ್ನು ಶ್ರೀ. ಬಿಸ್ಪ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿಸಲಾಯಿತು. ಹಾಜರಿದ್ದವರ ಭಾಷಣದೊಡನೆ ಸಭೆಯು ಮುಕ್ತಾಯವಾಯಿತು.

ಮೂಲ್ಕಿ—ಸ್ಥಳೀಕ ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿ ಶಾಲೆಯ 13ನೇ ವರ್ಷದ ವರ್ಧಂತ್ಯುತ್ಸವವು ಇದೇ ಬರುವ ತಾ. 12-5-1940ನೇ ರವಿವಾರ ಸಾಯಂಕಾಲ ಘಂಟೆ 5-30ಕ್ಕೆ ಮನೋರಮಾ ಭವನದಲ್ಲಿ ಮಂಗಳೂರು ರೇಂಜ್ ಶಾಲೆಗಳ ಜ್ಯೂನಿಯರ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಟಿ. ಲಕ್ಷ್ಮೀನಾರಾಯಣ ಐತಾಳ್, ಬಿ. ಎ., ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಡುವುದು, ಸರ್ವರಿಗೂ ಸುಸ್ವಾಗತವಿದೆ ಎಂದು ಶಾಲಾ ಮ್ಯಾನೇಜರ್ ಶ್ರೀ ಬಿ. ಮೋಹನರಾಯರು ತಿಳಿಸುತ್ತಾರೆ.

ಇಲ್ಲಿಯ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಕೆ. ಜಿ. ನಾಡಿಗರವರಿಗೆ ಮೂಡಬಿದ್ರೆಗೆ ವರ್ಗವಾಯಿತು, ಇವರ ಸ್ಥಾನದಲ್ಲಿ ಶ್ರೀ. ಯಂ. ಸುಬ್ಬಯ್ಯ ಭಂಡಾರಿ, ಬಿ ಎ. ರವರು ನೇಮಿಸಲ್ಪಟ್ಟು ಚಾರ್ಜು ವಹಿಸಿಕೊಂಡಿರುವರು.

ಸಹಕಾರಿ ಸಂಘಗಳ ಡೆಪ್ಯುಟಿ ರಿಜಿಸ್ಟ್ರಾರ್, ತಾ. 22-4-40ರಿಂದ ತಾ 28-4-40ರ ವರೆಗೆ ಇಲ್ಲಿ ಮೊಕ್ಕಾಂ ಮಾಡಿಕೊಂಡಿದ್ದು ಸರಕಾರಿಯು ಎಲ್ಲಾ ಸಂಘಗಳ ತನಿಖೆ ನಡೆಸಿ ಮಂಗಳೂರಿಗೆ ಹಿಂತಿರುಗಿದರು.

ಕಾರ್ಕಳ—ಕಾರ್ಕಳ ಜೈನ ಬೋರ್ಡಿಂಗ್ ಆಶ್ರಮದಲ್ಲಿ ಇದೇ ತಾ. ಬರುವ ತಾ. 1-6-1940ರ ಬಳಿಕ 12 ವಿದ್ಯಾರ್ಥಿಗಳಿಗೆ ಧರ್ಮಾರ್ಥ ಊಟ ಮತ್ತು ವಸತಿ ಕೊಟ್ಟು ಕ್ರಮವಾಗಿ ಓದಿಸುವ ಸಂಕಲ್ಪವಿದೆ. ಹೋಗಿಲ್ಲಿ ಪ್ರಯೋಜನ ಹೊಂದಲು ಇಚ್ಛಿಸುವ ಬಡ ವಿದ್ಯಾರ್ಥಿಗಳು ತಮ್ಮ ಹೆಸರು, ವಿಳಾಸ ತಾವು ಈಗ ಕಲಿಯುವ ಕ್ಲಾಸು, ವಯಸ್ಸು, ಶಾಲೆಯ ಹೆಸರು ಮತ್ತು ಶಾಲೆಯ ಮುಖ್ಯೋಪಾಧ್ಯಾಯರ ಸರ್ಟಿಫಿಕೇಟು ಸಹಿತ ಅರ್ಜಿಯನ್ನು ಕೆಳಗಿನ ವಿಳಾಸಕ್ಕೆ ತಾ. 24-5-1940ರ ಒಳಗೆ ಕಳುಹಿಸಬೇಕೆಂದು ಈ ಮೂಲಕ ತಿಳಿಸಲಾಗುತ್ತದೆ. 5ನೇ ಸ್ಟಾಂಡರ್ಡಿಗಿಂತ ಕೆಳ ಕ್ಲಾಸಿನವರು ಅರ್ಜಿ ಕಳುಹಿಸುವ ಅವಶ್ಯವಿಲ್ಲವೆಂದು ಕಾರ್ಕಳ ಜೈನ ಸೇವಾಸಂಘದ ಅಧ್ಯಕ್ಷರು ತಿಳಿಸುತ್ತಾರೆ.

ಹಿರಿಯಡ್ಕ—ಇಲ್ಲಿ ತಾ. 22-4-40ರಿಂದ 26-4-40ರ ವರೆಗೆ ಶ್ರೀ ವೀರಭದ್ರ ದೇವಸ್ಥಾನದ ಜಾತ್ರೆಯು ಬಹಳ ವಿಜೃಂಭಣೆಯಿಂದ ನೆರವೇರಿತು. ಈ ಸಮಯದಲ್ಲಿ ಆರ್ಯಸಮಾಜದ ಕಡೆಯಿಂದ ಪ್ರಚಾರ ಕೆಲಸಕ್ಕಾಗಿ ನೇಮಿಸಲ್ಪಟ್ಟ ಶ್ರೀ. ಮಂಜುನಾಥ ರಾವ್ ಪ್ರಭುಗಳು ಬಂದು ವೈದಿಕ ಧರ್ಮದ ಹಿನ್ನೆಲೆ, ಹಳ್ಳಿಯ ಜನರಿಗೆ ಮನದಟ್ಟಾಗುವಂತೆ ಭಾಷಣಗಳನ್ನು ಕೊಟ್ಟು ತಾ. 25-4-40ನೇ ದಿನ ಧ್ವಜಾರೋಹಣವನ್ನು ಶ್ರೀ. ಅಂಪಣ್ಣ ಶೆಟ್ಟಿಯವರು ಮಾಡಿದ ತರುವಾಯ ಶ್ರೀ. ಮಂಜುನಾಥ ಪ್ರಭುಗಳು ಹಿಂದೂ ಧರ್ಮ ಮತ್ತು ಧ್ವಜದ ವಿಷಯದಲ್ಲಿ ಚೆಲುವ ಭಾಷಣವನ್ನಿತ್ತರು.

ಜಾತ್ರೆಯ ಸಮಯದಲ್ಲಿ ಸ್ಥಳೀಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯ ಹೆಡ್ ಮಾಸ್ಟರ್ ದಳವಾಯಿ ಜನೋಪಕಾರಕ್ಕಾಗಿ ಹಗಲು ರಾತ್ರಿ ಶ್ರಮ ವಹಿಸಿ ಕೆಲಸ ಮಾಡಿದ್ದು, ಸ್ಕೌಟ್. ಡಿ. ಜೀ. ಮೆಂಬರ್, ಪಾಲ್ಗೊಂಡ ... ಹೆಗ್ಡೆ. ಎರಡು ಬಡ ಸ್ಕೌಟು ಬಾಲಕರಿಗೆ ತಮ್ಮ ಶಿಕ್ಷಕ ಸ್ಕೌಟ್ ಡ್ರೆಸ್ ಮಾಡಿಸಿಕೊಟ್ಟದ್ದು ತುಂಬಾ ಸಂತೋಷದಾಯಕವಾಗಿದೆ.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಸಾಧಾರಣ ಸಭೆ—ತಾ. 24-4-'40ರಲ್ಲಿ ಡಾ। ಆರ್. ನಾಗನ ಗೌಡರವರ ಅಧ್ಯಕ್ಷತೆಯಲ್ಲಿ ಜರಗಿತು, ಸಭೆಯಲ್ಲಿ ಮೇಲಿನ ಗೊತ್ತುವಳಿಗಳು ಪಾಸಾದುವು,

ಕರ್ನಾಟಕ ಕೇಸರಿಯವರಾದ ಶ್ರೀನಿವಾಸರಾವ್ ಕೌಜಲಗಿ, ದೀನಬಂಧು ಆಂಡ್ರ್ಯೂಜ ಹಾಗೂ ಮಾ. ರಾಮ ಯಶವಂತ ... ಇವರ ನಿಧನದ ಬಗ್ಗೆ ಈ ಸಭೆಯು ತನ್ನ ಅತ್ಯಂತ ದುಃಖವನ್ನು ವ್ಯಕ್ತ ಮಾಡುತ್ತದೆ. ತನ್ನ ಅನುತಾಪವನ್ನು ಸೂಚಿಸಲು ಈ ಸಭೆಯು ಎರಡು ನಿಮಿಷ ಎದ್ದು ನಿಲ್ಲುತ್ತದೆ.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಾರ್ಯಕಾರೀ ಮಂಡಳವನ್ನು ಪ್ರಾಂತೀಯ ಸತ್ಯಾಗ್ರಹ ಸಮಿತಿಯನ್ನಾಗಿ ಪರಿವರ್ತಿಸಲು ಈ ಸಭೆಯು ನಿರ್ಧರಿಸುತ್ತದೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಘೋಷಣೆ ಹಾಗೂ ಅದರಿಂದ ಆಗಾಗ್ಗೆ ಕೊಡಲ್ಪಟ್ಟ ಸೂಚನೆಗಳಂತೆ ಸತ್ಯಾಗ್ರಹ ನಡೆಸಲು ಪ್ರಾಂತದಲ್ಲಿಯ, ಎಲ್ಲ ಜಿಲ್ಲಾ ಕಾಂಗ್ರೆಸ್ ಕಮಿಟಿಗಳೂ ತಮ್ಮ ಅಧೀನದಲ್ಲಿರುವ ಕಾರ್ಯಕಾರೀ ಮಂಡಲಗಳನ್ನು ಸತ್ಯಾಗ್ರಹ ಸಮಿತಿಗಳನ್ನಾಗಿ ಪರಿವರ್ತಿಸಬೇಕೆಂದು ಈ ಸಭೆಯು ಕೇಳುತ್ತದೆ. ಈ ರೀತಿ ಸತ್ಯಾಗ್ರಹ ಸಮಿತಿಗಳಾಗಿ ಬದಲಾಯಿಸಲ್ಪಟ್ಟ ಕಾರ್ಯಕಾರೀ ಮಂಡಳಗಳಲ್ಲಿಯ ಪ್ರತಿಜ್ಞಾಪತ್ರಕ್ಕೆ ಸಹಿ ಮಾಡದ ಸದಸ್ಯರು ತಮ್ಮ ಆ ಕಾರ್ಯಕಾರೀ ಮಂಡಳದ ಸದಸ್ಯತ್ವಕ್ಕೆ ರಾಜೀನಾಮೆ ಕೊಡಬೇಕೆಂದು ಸೂಚಿಸುತ್ತದೆ. ಸತ್ಯಾಗ್ರಹ ಶಿಬಿರಗಳನ್ನು ಪ್ರಾರಂಭಿಸಲು ಮತ್ತು ಇತರ ಕಾರ್ಯಗಳನ್ನು ಭರದಿಂದಲೂ ಶಿಸ್ತಿನಿಂದಲೂ ಸಾಗಿಸಲು ಈ ಕೆಳಗೆ ಕಾಣಿಸಿದ ಕಾರ್ಯಸಂಘಟನ-ಸಮಿತಿಯು ನೇಮಿಸಲ್ಪಟ್ಟಿತು.

ಡಾ| ಆರ್ ನಾಗನಗೌಡ, ಶ್ರೀ ಕೃಷ್ಣಾಬಾಯಿ ಪಂಜೀಕರ ಮತ್ತು ಚನಬಸಪ್ಪ ಅಂಬಲಿ.

ಶ್ರೀ ಸ. ಬ್ರಾ. ಹಳದೀಪುರಕರ, ರಾಮದುರ್ಗ ಹಾಗೂ ಶ್ರೀ. ಎಂ. ಪಿ. ಪಾಟೀಲ, ಇವರು ತಮ್ಮ ಕಾರ್ಯಕಾರೀ ಮಂಡಲದ ಸದಸ್ಯತ್ವಕ್ಕೆ ಕೊಟ್ಟ ರಾಜೀನಾಮೆಯನ್ನು ಈ ಸಭೆಯು ಸ್ವೀಕರಿಸುತ್ತದೆ. ಪ್ರಾಂತೀಯ ಸತ್ಯಾಗ್ರಹ ಸಮಿತಿಯಲ್ಲಿ ಖಾಲಿ ಬಿದ್ದ ಸ್ಥಾನಗಳಿಗೆ ಶ್ರೀ. ದ. ಪ. ಕರಮರಕರ ಮತ್ತು ಶ್ರೀ. ಇಪ್ಪಾಣಿ ಸಾಹೇಬ ಟೋಕೆ ಇವರನ್ನು ಸಭೆಯು ನೇಮಿಸುತ್ತದೆ. ಪ್ರಾಂತೀಯ ಸತ್ಯಾಗ್ರಹ ಸಮಿತಿಯ ಉಪಾಧ್ಯಕ್ಷ ಸ್ಥಾನಕ್ಕೆ ಶ್ರೀ. ಯು. ಶ್ರೀನಿವಾಸ ಮಲ್ಯರನ್ನೂ, ಕೋಶಾಧ್ಯಕ್ಷ ಸ್ಥಾನಕ್ಕೆ ಶ್ರೀ. ದ. ಪ. ಕರಮರಕರ ಇವರನ್ನೂ ಈ ಸಭೆಯು ಆರಿಸುತ್ತದೆ.

ಸಿಂಧ್ ಪ್ರಾಂತದಲ್ಲಿಯ ಸರಕಾರದವರಲ್ಲಿನ ಈ ಸಿಗರೇಟು ಕಾರ್ಖಾನೆಯು ಕೆಲಸಗಾರರು ಕಳೆದ ಎರಡೂವರೆ ತಿಂಗಳಿಂದ, ಮುಷ್ಕರ ಹೂಡಿದ್ದಾರೆ. ಇವರಲ್ಲಿ ಮೃಗಶಿರ ... ಪ್ರಾಂತೀಯ ಸಮಿತಿಯ ಹಾಗು ಸರಕಾರದ ಲೇಬರ್ ಕಮಿಶನರರು ಮಾಡಿದ ಪ್ರಯತ್ನಗಳೆಲ್ಲಾ ಮಾಲೀಕರು ಒಪ್ಪದ್ದರಿಂದ ನಿಷ್ಫಲವಾದುವು. ಈ ಸಂಪಿನ ಅವಧಿಯಲ್ಲಿ ಮುಷ್ಕರಗಾರರಿಗೆ ದೊರಕಿದ್ದ 85 ಮಂದಿಗೆ ಊಟ ನೌಕರಿ ಬಿದ್ದಿದೆ.

10ನೇ ಪುಟ ನೋಡಿರಿ.

ONE REASON.

Love does much, but in this materialistic world, money does more. Save therefore for the sake of those you love.

RESOURCES OF A CRORE. ESTD. 1906.

Canara Bank Limited.

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ನವಯುಗ

ಉಡುಪಿ, ಗುರುವಾರ ತಾ. ೯-೫-'೪೦

ಮುಂದೇನು?

ಭಾರತದ ಇಂದಿನ ರಾಜಕೀಯ ಸ್ತಂಭನೆಯು ಅತ್ಯಂತ ಶೋಚನೀಯವಿದೆ. ಈಗ ಒದಗಿರುವ ಸಂದರ್ಭವೆಷ್ಟು ಪ್ರಾಮುಖ್ಯವಾದುದೆಂಬುದನ್ನು ಬೇರೆ ಹೇಳಬೇಕೆಂದಿಲ್ಲ. ಪ್ರಪಂಚದ ಪ್ರತಿಯೊಂದು ರಾಷ್ಟ್ರವೂ ಪರಿಸ್ಥಿತಿಗನುಗುಣವಾಗಿ ತನ್ನ ಸರ್ವ ಶಕ್ತಿಯನ್ನು ಒಂದಲ್ಲೊಂದು ವಿಧದಿಂದ ಕಾರ್ಯಕ್ಕೆ ಹಚ್ಚಿದೆ. ಇಂದಿನ ಸನ್ನಿವೇಶವೆಂತಹದು; ಒದಗಿ ಬರುವ ಪ್ರತಿಯೊಂದು ಘಟನೆಯೂ ಭವಿಷ್ಯದಲ್ಲಿ ಬಹು ದೂರದ [illegible]ನ್ನು ಛಾಯೆಯನ್ನು ಹರಡುವಂತಹದು. ಆದರೆ ಭಾರತವು ಇದಕ್ಕೊಂದು ಅಪವಾದ. ಅದೀಗ ಕಾಲದ ಕರೆಗೆ ಹೊಂಗುಟ್ಟುವ ಸ್ಥಿತಿಯಲ್ಲಿಲ್ಲ; ರಾಜಕೀಯ ಮೂರ್ಛಾವಸ್ಥೆಯಲ್ಲಿದೆ. ಮಹಾತ್ಮಾ ಗಾಂಧಿಯವರು ಸತ್ಯಾಗ್ರಹ ಪ್ರಯೋಗ ಮೂಲಕ ಚೇತನಕೊಡುವರೆಂಬ ಸ್ಪಷ್ಟ ಭರವಸೆಯೂ ಪ್ರಕೃತ ಇಲ್ಲ.

ಮುಂದೇನು? ಈ ಬಿಕ್ಕಟ್ಟು ನಿವಾರಣೆಗಾವ ಹಾದಿಯಾದರೂ ಸಧ್ಯಕ್ಕಿದೆಯೆ? ಪೂರ್ಣ ಸ್ವಾತಂತ್ರ್ಯವು ಕಾಂಗ್ರೆಸಿನ ಗುರಿ; ತನ್ನ ಭವಿಷ್ಯವನ್ನು ರೂಪಿಸಿಕೊಳ್ಳುವ ಹಕ್ಕು, ಮತ್ತು ಅದಕ್ಕಾಗಿ ಕಾನ್ಸ್ಟಿಟ್ಯೂಯೆಂಟ್ ಎಸೆಂಬ್ಲಿ ಬೇಕೆಂದು ಕಾಂಗ್ರೆಸು ಸುಸ್ಪಷ್ಟ ವಾಣಿಯಲ್ಲಿ ಕೇಳಿಕೊಂಡಿದೆ. ಎಲ್ಲಕ್ಕೂ ಮಿಗಿಲಾಗಿ ತಾವು ನ್ಯಾಯವಾದಿಗಳೆನ್ನಿಸಿಕೊಳ್ಳುವ ಆಗತ್ಯಬಿದ್ದ ಬ್ರಿಟಿಷರು ಈ ಬೇಡಿಕೆಗಿಲ್ಲದಿರುವ ತತ್ವಕ್ಕೆ [illegible] ಹೇಳುವದಿಲ್ಲ. 'ನಿಮ್ಮೊಳಗೇ ನಿಮಗೆ ತೊಂದರೆ' ಎಂದು ಹಿಂದೀಯರಲ್ಲಿರುವ ಅನೈಕ್ಯಮತವನ್ನು ತೋರಿಸಿಕೊಡುತ್ತಾ ಬಂದಿದ್ದಾರೆ. ಸರ್. ಶಿವಸ್ವಾಮಿ ಅಯ್ಯರರಂತಹ ಮಂದ ಪಕ್ಷೀಯರೂ ಬ್ರಿಟಿಷರಿಗೆ ಸ್ಮರಣೆ ಕೊಡುತ್ತಿದ್ದಾರೆ "ಹಿಂದೂ-ಮುಸ್ಲಿಮ್ ಒಕ್ಕಟ್ಟಿಲ್ಲದೆ ಸ್ವರಾಜ್ಯ ಅಸಾಧ್ಯವೆಂದು ಗಾಂಧಿಯವರೂ ಹೇಳುತ್ತಾರೆ. ಲೋರ್ಡ್ ಜೆಟ್ಲೆಂಡ್ [illegible] ಇದರ ಆಸ್ಪದ [illegible] ಹೇಳಲೇನು [illegible]" ಎಂದು ಸರ್. ಅಯ್ಯರರ ಮಾತು. ಈ ವಾದದಲ್ಲಿ ಬ್ರಿಟಿಷ್ ಪಕ್ಷಪಾತದ ಹೊರತು ಬೇರಾವ ಅರ್ಥವೂ ಇಲ್ಲ. ಜಾತೀಯ ಪ್ರಶ್ನೆಯ ತೀರ್ಮಾನಕ್ಕಾಗಿ ಗಾಂಧಿಯವರಷ್ಟೇ ಜೆಟ್ಲೆಂಡರೂ ಆತುರದಲ್ಲಿರುವರಾದರೆ "ಆ ಸಮಸ್ಯೆಯನ್ನು ಅಧಿಕಾರ ಪೂರ್ವಕ ಬಿಡಿಸಬಲ್ಲ 'ಕಾನ್ಸ್ಟಿಟ್ಯೂಯೆಂಟ್' ಎಸೆಂಬ್ಲಿಯ ರಚನೆಮಾಡಿ" ಎಂಬುವರ ಕಡೆಗೆ ಕಿವುಡಾಗಿರುವದೇಕೆ? ತಮ್ಮ ಕೊರತೆಗಳನ್ನು ತಾವೇ ನಿವಾರಿಸಿಕೊಳ್ಳಬೇಕೆಂಬ ಧರ್ಮ ಹಿಂದೀಯರಿಗೆ ಮಾತ್ರ ಅನ್ವಯಿಸುವಂತಹದೆ? ಬ್ರಿಟಿಷರ ಧರ್ಮವೆಂದರೆ ಹಿಂದೀಯರ ಕರ್ತವ್ಯ ನ್ಯೂನತೆಯ ಪ್ರಯೋಜನ ಪಡೆಯುವದೇ ಆಗಿದೆಯೆ? ಹಿಂದೂ ಮುಸ್ಲಿಂ ಪ್ರಶ್ನೆಯು ಭಾರತದ ಮನೆಯೊಳಗಿನ ಪಂಚಾಯತಿಕೆ. ಆ ಕುರಿತು ಗಾಂಧಿಯವರಷ್ಟೇ ಜೆಟ್ಲೆಂಡರೂ ಆತುರಗೊಳ್ಳಬೇಕೆಂದಿಲ್ಲ. ಅವರ ಕರ್ತವ್ಯ ಪ್ರತ್ಯೇಕವಿದೆ. ಜಾತೀಯ ಪ್ರಶ್ನೆಯನ್ನು ಅಡ್ಡದಿಡ್ಡ ಹೆಣೆದಿಟ್ಟ ಸೂತ್ರದ ಗಂಟು ಬ್ರಿಟಿಷರ ಕೈಯಲ್ಲಿದೆ. ಆ ಕೈಯನ್ನವರು ಸಡಿಲಿಸಿದಲ್ಲಿ—ಅಧಿಕಾರವುಳ್ಳ ಕಾನ್ಸ್ಟಿಟ್ಯೂಯೆಂಟ್ ಎಸೆಂಬ್ಲಿಯನ್ನವರು ಕೊಟ್ಟಲ್ಲಿ—ಈ ಜಟಿಲವನ್ನು ನಾವೇ ಬಿಡಿಸಿಕೊಳ್ಳುವೆವು ಎಂದು ಕಾಂಗ್ರೆಸಿನ ಹೇಳಿಕೆ. 'ಹಿಂದೀಯರ ಒಳ ಜಗಳದ ತೀರ್ಮಾನ ಮಾಡಿರಿ' ಎಂಬ ಬ್ರಿಟಿಷರ ವಾದದಲ್ಲಿ ಕಪಟವಿಲ್ಲವಾದರೆ ಅವರು ಈ ಅನುಕೂಲತೆಯನ್ನು ಕೊಡುವುದಿಲ್ಲವೇಕೆ? ಅನ್ಯರ ಕರ್ತವ್ಯ ನ್ಯೂನತೆಯನ್ನು ಎತ್ತಿ ತೋರಿಸುವದೊಂದು ಸ್ವಕರ್ತವ್ಯವಲ್ಲ. ಆದರಲ್ಲೂ ಬ್ರಿಟಿಷರ ವಾದದ ಯಥಾರ್ಥತೆ ಮೇಲೆ ಹೇಳಿದಂತೆ ಪ್ರದರ್ಶಿಸಲ್ಪಡದಿದ್ದರೆ ಕರ್ತವ್ಯ ನ್ಯೂನತೆಯ ಅಪರಾಧ ಹಿಂದೀಯರದಾಗುವುದಿಲ್ಲ. ಜಾತೀಯ ಜಡುವು ಬಿಡಿಸಲ್ಪಡಬೇಕೋ, ಅದನ್ನು ಬಿಗಿದ ಸೂತ್ರ ಸಡಿಲಾಗಬೇಕು; ಆ ಸೂತ್ರ ಸಡಿಲಿಸಲು ಬ್ರಿಟಿಷರು ಒಪ್ಪುತ್ತಿಲ್ಲವಾದರೆ ಆ ಕಾರ್ಯವನ್ನು ಅಸಾಧ್ಯಗೊಳಿಸಿದವರ ಹೊಣೆ ಬ್ರಿಟಿಷರ ತಲೆಯ ಮೇಲೆ! ಹೀಗಿದ್ದೂ "ನಾವು ಹೇಗೆ ಕೊಡಲಿ, ನೀವು ಒಟ್ಟಾಗಿ ಕೇಳುವದಿಲ್ಲ!" ಎಂಬುದು ಸ್ವಾರ್ಥ ವಂಚನೆಯ ಅತಿ ಕೆಟ್ಟ ನಮೂನೆ. ಸರ್. ಶಿವಸ್ವಾಮಿ ಅಯ್ಯರಂತಹ ಬ್ರಿಟಿಷ ಭಕ್ತರ ಹೊರತು ಮಿಕ್ಕವರು ಅದರ ಅಂತರ್ಯವನ್ನು ತಿಳಿಯದಿಲ್ಲ.

ದಿನ ಹೋದಂತೆ ಬ್ರಿಟನಿನ ವೈತಪ್ಪಿಸಿಕೊಳ್ಳುವ ಮನೋವೃತ್ತಿಯು ಹೊಸ ಹೊಸ ನಿದರ್ಶನಗಳಲ್ಲಿ ಬೇರೆರೂಪದಿ ನಮಗೆ ಗೋಚರಿಸುತ್ತಿದೆ. ಭಾರತದ ಉಪ ಕಾರ್ಯದರ್ಶಿಯರು ಪಾರ್ಲಿಮೆಂಟಿನಲ್ಲಿ ಕೊಟ್ಟ ಉತ್ತರವು ಇಂಥವುಗಳಲ್ಲೊಂದು. ಇಂಗ್ಲಾಂಡಿನ 'ನ್ಯೂಸ್ ಕ್ರಾನಿಕಲ್' ಪತ್ರಿಕೆಯು ಗಾಂಧಿಯವರನ್ನು ಪ್ರಶ್ನಿಸಿತು "ಕೊನೆಯ ವಿಧಾಯಕ ತೀರ್ಮಾನಕ್ಕನುಕೂಲವಾಗುವಂತೆ, ಭಾರತದ ಸರ್ವ ಪಕ್ಷಗಳ ಪ್ರತಿನಿಧಿ ಧುರೀಣರುಳ್ಳ ಚಿಕ್ಕ ಸಮಿತಿಯೊಂದನ್ನು ಮುಂದಾಗಿ ರಚಿಸಬೇಕೆಂಬ ಸೂಚನೆಯ ಕುರಿತು ನಿಮ್ಮ ಅಭಿಪ್ರಾಯವೇನು? ಗಾಂಧಿಯವರು ತನ್ನ ವ್ಯಕ್ತಿಗತ ಅಭಿಪ್ರಾಯವನ್ನು ತಿಳಿಸುವಾಗ "ಅಂಗೀಕಾರಾರ್ಹ ಕಾರ್ಯಕ್ರಮಗಳನ್ನು ಚರ್ಚಿಸುವರ್ರೆ ಚುನಾವಣೆಯೊಂದಿಗೆ ಧುರೀಣರ ಚಿಕ್ಕ ಸಮಿತಿಯೊಂದನ್ನು ರಚಿಸುವದು ಆಕರ್ಷಣೀಯವಿದೆ" ಎಂದಿದ್ದರು. ಆ ಪ್ರಸ್ತಾಪ ಬಂದಾಗ ಅಂಡರ್ ಸೆಕ್ರೆಟರಿಯವರು ಪಾರ್ಲಿಮೆಂಟಿನಲ್ಲಿತ್ತ ಉತ್ತರದ ಅಭಿಪ್ರಾಯವಿದು: ಭಾರತೀಯ ಸರ್ವ ಪಕ್ಷಗಳಿಗೆ ಒಪ್ಪಿಗೆಯಾಗಬೇಕು; ಸಮಿತಿಯನ್ನು ರಚಿಸುವ ಜವಾಬ್ದಾರಿಯೂ ಅವರದೇ. ಅಷ್ಟನ್ನವರು ಮಾಡುವರಾದರೆ ಸರಕಾರವು ಆಗತ್ಯವುಳ್ಳ ಸಹಾಯವನ್ನು ಕೊಡುವದು. ಇದಕ್ಕೆ ಗಾಂಧಿಯವರ ಉತ್ತರ: ಸಮಿತಿ ರಚನೆಯ ಅಧಿಕಾರ ಮತ್ತು ಹೊಣೆಗಾರಿಕೆಯು ಇರುವದು ಬ್ರಿಟಿಷ್ ಸರಕಾರಕ್ಕೆ. ಭಾರತದ ಸ್ವನಿರ್ಧಾರದ ಹಕ್ಕನ್ನೊಪ್ಪಿಕೊಂಡರೆ ಹಾದಿ ತನ್ನಂತೆ ಗೋಚರಿಸುವದು.

ಈ ತರ್ಕಗಳು ಕೂಡ ಯಾವ ನವೀನ ಆಶೆಗೂ ಎಡೆಗೊಡುವದಿಲ್ಲ. ಗಾಂಧಿಯವರು, ಸಮಿತಿಯು ಕಾರ್ಯಾನುಕೂಲತೆಗಾಗಿ, ಕಾನ್ಸ್ಟಿಟ್ಯೂಯೆಂಟ್ ಎಸೆಂಬ್ಲಿಯ ಪ್ರತಿನಿಧಿಯಾಗಿ ಬಂದಲ್ಲಿ ಮಾತ್ರ ಸ್ವಾಗತಿಸುತ್ತಾರೆ; ಅಂಡರ್ ಸೆಕ್ರೆಟರಿ ಸರ್ ಒನ್ನೆಲರ ಅರ್ಥವೆಂದರೆ "ಹಿಂದೀಯರು ತಾವೇ ಇತ್ಯರ್ಥಿಸಿಕೊಳ್ಳಲಿ" ಎಂಬ ಬ್ರಿಟಿಷ್ ವಾದ, ಈ ಸಮಿತಿಯಾಗಿ ರೂಪುಗೊಳ್ಳಲಿ ಎಂಬುದೇ! ಅರ್ಥಾತ್ ಅಂತಹ ಸಮಿತಿಯಲ್ಲಿ ಜೀವವಿರಬೇಕೆಂದು ಗಾಂಧಿಯವರ ಇಚ್ಛೆಯಾದರೆ, ಗೊಂಬೆಯನ್ನು ಕೊಟ್ಟು ಆಡಿಸುವ ಬಯಕೆ ಬ್ರಿಟಿಷ ಸರಕಾರದ್ದು. ಹೀಗೆ ಮೂಲಭೂತ ಮತಭೇದಗಳಿರುವಾಗ, ಕೇವಲ ಕಾರ್ಯ ರೀತಿಯ ಸಂಬಂಧವುಳ್ಳ ಯಾವ ಸೂಚನೆಯೇ ಮುಂದೆ ಬರಲಿ, ಅದು ನಮ್ಮ ಹಾದಿಗೊಂದು ಮಿಂಚಿನ ಬೆಳಕಾಗಿ ಮಾಯವಾಗುವ ಕ್ಷಣಜೀವಿ ಹೊರತು ಕೈ ದೀವಿಗೆಯಾಗುವಂತಿಲ್ಲ.

ಕಾಂಗ್ರೆಸು ಈಗ ಮಾಡಬೇಕಾದುದೇನು ಎಂಬ ಪ್ರಶ್ನೆಯಿದೆ. ಮೊದಲಾಗಿ ತನ್ನ ಮಾರ್ಗಕ್ಕೆ ಹೊರಗಿನಿಂದ ಸಮರ್ಥನೆ ದೊರೆಯಬಹುದೆಂಬ ಆಶೆಯನ್ನದು ಬಿಡಬೇಕು. ಸರ್ವ ಲಕ್ಷ್ಯವನ್ನು ತನ್ನ ಶಕ್ತಿ ವರ್ಧನೆಯಲ್ಲಿ ಕೇಂದ್ರೀಕರಿಸಬೇಕು. ಗಾಂಧಿಯವರನ್ನು ಸಂದೇಹಕ್ಕೊಳಗುಮಾಡುವ ಕಾಂಗ್ರೆಸ್ ದೌರ್ಬಲ್ಯವೇನಿದೆಯೋ ಅದನ್ನು ತಡಮಾಡದೆ ನಿವಾರಿಸಿಕೊಳ್ಳಬೇಕು. ಇಂದಿನಂತಹ ಪ್ರಾಮುಖ್ಯ ಕಾಲವನ್ನು ತನ್ನಂತೆ ಹೋಗಗೊಡದೆ ಸ್ವಾತಂತ್ರ್ಯ ಸಾಧನೆಯನ್ನು ಮಾಡಿಯೇ ತೀರಬೇಕು. ಇಂತಹ ಸ್ವನಿರ್ಧಾರ ಮತ್ತು ಸ್ವಬಲ ಪ್ರದರ್ಶನದ ಹೊರತು ಕಾಂಗ್ರೆಸಿಗನ್ಯಥಾ ಹಾದಿಯಿಲ್ಲ.

ಮಿತ್ರ ರಾಷ್ಟ್ರಗಳಿಗೊಂದು ಪಾಠ

ದಕ್ಷಿಣ ನೋರ್ವೆಯಲ್ಲಿ ಮಿತ್ರ ರಾಷ್ಟ್ರಗಳ ಸೇನೆ ಸಂಪೂರ್ಣ ಹಿಂದೆಗೆಯಲ್ಪಡಬೇಕಾಗಿ ಬಂದ ದುರ್ಘಟನೆಯು ಆಂಗ್ಲೋ-ಫ್ರೆಂಚರ ಯುದ್ಧ ರೀತಿಯನ್ನು ಕಟುವಿಮರ್ಶೆಗೊಳಪಡಿಸಿದೆ. ಹೀಗೆ ಹಿಂಜರಿದುದಕ್ಕೆ ಕಾರಣವನ್ನು ಚೇಂಬರ್ಲೆನ್ ಮಂತ್ರಿಮಂಡಲವು ಕೊಡಬೇಕಾಗಿ ಬಂದಿದೆ. ಈ ವಾರದಲ್ಲಿ ನಡೆಯುತಿರುವ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಈ ಕುರಿತು ಸವಿವರ ಚರ್ಚೆ ನಡೆಯಲಿದೆ. ಪಾರ್ಲಿಮೆಂಟನ್ನು ಸಮಾಧಾನ ಪಡಿಸುವದನ್ನು ಹೊಂದಿಕೊಂಡು ಸದ್ಯದ ಬ್ರಿಟಿಷ್ ಮಂತ್ರಿಮಂಡಲದ ಭವಿಷ್ಯವಿದೆಯೆಂಬುದನ್ನು ಮರೆಯಬಾರದು.

ದಕ್ಷಿಣ ನೋರ್ವೆಯಲ್ಲಿ ಚಾತುರ್ಯದಿಂದ ಕಾಲು ಹಿಂದೆಗೆದು ಮಿತ್ರರಾಷ್ಟ್ರಗಳ ಸೇನೆಗಳು ಅಪಾರ ನಷ್ಟವನ್ನು ತಪ್ಪಿಸಿಕೊಂಡವೆಂಬುದು ನಿಜ. ಆದರೆ ಅದರಿಂದ ಮಿತ್ರ ರಾಷ್ಟ್ರಗಳ ಯುದ್ಧ ರೀತಿಗೆ ಬಿದ್ದ ಹೊಡೆತವು ದೊಡ್ಡದು. ಹಿಟ್ಲರನು ತತ್ವ ಅಥವಾ ಅಂತರಾಷ್ಟ್ರೀಯ ನೀತಿ ಯಾವುದನ್ನೂ ಗಣಿಸದೆ ಯುದ್ಧದಲ್ಲಿ ವ್ಯಾಘ್ರ ತುಲ್ಯ ಬೇಟೆ ನಡೆಸುವವನೆಂಬುದು ನಿಜ. ಮಿತ್ರ ರಾಷ್ಟ್ರಗಳ ಯುದ್ಧ ರೀತಿ ಅದಕ್ಕೆ ಭಿನ್ನವಾದುದೆಂಬುದೂ ಸತ್ಯ. ಆದರೆ ನಾಜೀ ಸೈನ್ಯಕ್ಕೆದುರಾದ ಮೇಲೆ ಗೋಚರಿಸಬಾರದ ಕೆಲವು ಕೊರತೆಗಳು ಮಿತ್ರರಾಷ್ಟ್ರಗಳ ಕಡೆಯಲ್ಲಿ ತೋರಿ ಬಂದುವೆಂಬುದನ್ನು ಒಪ್ಪಲೇಬೇಕು.

ಇದ್ದ ಕೊರತೆಗಳಾವುವು?

ನೋರ್ವೆಯಲ್ಲಿ ಆಂಗ್ಲೋ-ಫ್ರೆಂಚರ ಸೈನಿಕರು ಉತ್ಕೃಷ್ಟ ದರ್ಜೆಯ ಯುದ್ಧ ವಿದ್ಯೆ ಪ್ರದರ್ಶಿಸಿದ್ದರು. ಆದರೆ ಅವರ ಸಂಖ್ಯೆಯಾಗಲಿ ಯುದ್ಧೋಪಕರಣಗಳಾಗಲಿ ಸಾಕಷ್ಟಿರಲಿಲ್ಲ. ಇದು ಆಶ್ಚರ್ಯದ ಸಂಗತಿ. ನೋರ್ವೆ ಸಮುದ್ರಕ್ಕೆ 'ಮೈನ್' ಹಾಕುವಾಗ ಜರ್ಮನಿಯ ಧಾಳಿಯನ್ನೆದುರಿಸಲು ಸರ್ವ ಸಿದ್ಧತೆಗಳನ್ನು ಮಿತ್ರ ರಾಷ್ಟ್ರಗಳು ಮಾಡಿಕೊಳ್ಳಬೇಕಿತ್ತು. ಕಳೆದ [illegible] ವರುಷಗಳ ನಾಜೀ ಮಾರ್ಗದ ಅನುಭವವುಳ್ಳವರು ಇಂತಹ ಅಪಾಯವನ್ನು ನಿರೀಕ್ಷಿಸದಿರಲು ಸಾಧ್ಯವಿಲ್ಲ. ಮಿ. ಚೇಂಬರ್ಲೆನರಿತ್ತ ಹೇಳಿಕೆಯಿಂದ, ನೋರ್ವೆಯಲ್ಲಿ ವಿಮಾನ ನಿಲ್ದಾಣದ ಅಭಾವದಿಂದಾಗಿಯೇ ಮಿತ್ರರಾಷ್ಟ್ರಗಳ ಸೇನೆ ಹಿಂಜರಿಯಬೇಕಾಯಿತೆನ್ನಬಹುದು. ಇದು ಮಿತ್ರ ರಾಷ್ಟ್ರಗಳ ಅಪೂರ್ಣ ಸಿದ್ಧತೆಗೆ ಮತ್ತೊಂದು ನಿದರ್ಶನ. ನೋರ್ವೆಯಲ್ಲಿ ಜರ್ಮನರ ಉತ್ಕೃಷ್ಟ ವಿಮಾನಬಲದಿದಿರು ಆಂಗ್ಲೋ-ಫ್ರೆಂಚರ ಕೈಸಾಗದಾಯಿತೆಂಬುದು ಸ್ಪಷ್ಟವಿದೆ. ಎರಡು ಪ್ರಬಲ ಸಾಮ್ರಾಜ್ಯಗಳಿಗಿರುವ ಸರ್ವಾನುಕೂಲತೆ ಮತ್ತು ಇಷ್ಟರಲ್ಲೇ ಆಗಿರುವಂತೆ ಅಮೇರಿಕ ಮೊದಲಾದವರಿಂದ ಕ್ರಯಕ್ಕೆ ಪಡೆಯುವ ವ್ಯವಸ್ಥೆ ಇದ್ದೂ ಇಂದಿಗೂ ಮಿತ್ರ ರಾಷ್ಟ್ರಗಳು ವಿಮಾನಬಲದಲ್ಲಿ ಜರ್ಮನಿಗೆ ಸರಿಗಟ್ಟಿಲ್ಲವೆಂಬುದು ಎತ್ತಿ ಹೇಳತಕ್ಕ ವಿಷಯ. ಸರ್. ಸಾಮುವೆಲ್ ಹೋರರೇ ಈ ಕಠೋರ ಸತ್ಯವನ್ನೊಪ್ಪಿಕೊಂಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಮಿತ್ರ ರಾಷ್ಟ್ರಗಳ ಯುದ್ಧ ರೀತಿ ಮತ್ತು ಸಿದ್ಧತೆಯನ್ನು ತೀವ್ರ ಬದಲಾವಣೆಯಾಗಬೇಕೆಂಬ ಅಭಿಪ್ರಾಯ ಎಲ್ಲೆಡೆಗಳಲ್ಲಿಯೂ

ದಕ್ಷಿಣ ನಾರ್ವೆಯಲ್ಲಿ ಬ್ರಿಟಿಷ್ ಸೇನೆ ಹಿಮ್ಮೆಟ್ಟಿತು!

ಆಗದವರ ಅಪಹಾಸ್ಯಕ್ಕೆ ತನ್ನವರ ಕಟುಟೀಕೆಗೆ ಮಂತ್ರಿಮಂಡಲ ಗುರಿಯಾಯಿತು!

ನಾರ್ವಿಕದಲ್ಲಿ ತೀವ್ರ ಘರ್ಷಣೆ! ಲ್ಲೋಯ್ಡ್ ಜೋರ್ಜರ ಖಂಡನೆ!! ಪಾರ್ಲಿಮೆಂಟ್ ಏನೆನ್ನುವುದು?



ಬ್ರಿಟಿಷ್ ಮಂತ್ರಿಮಂಡಲದ ಕಟುವಿಮರ್ಶಕ ಲ್ಲೋಯ್ಡ್ ಜೋರ್ಜ್.

ಇಟೆಲಿಯ ಪರಿಹಾಸ್ಯ

ಇಟೆಲಿಯ ಪತ್ರಿಕೆಗಳು ಈ ಸೋಲಿಗಾಗಿ ಇಂಗ್ಲಾಂಡನ್ನು ಪರಿಹಾಸ್ಯ ಮಾಡುತ್ತಿವೆ "ಹಿಟ್ಲರನಿಗೆ ನೋರ್ವೆಯಲ್ಲಿ ಇಷ್ಟರಲ್ಲೇ ಬಸ್ಸು ತಪ್ಪಿಹೋಗಿದೆ" ಎಂದು ಮಿ. ಚೇಂಬರ್ಲೇನರು ಹಿಂದೊಮ್ಮೆ ಹೇಳಿದ್ದುದಕ್ಕೆ ವ್ಯಂಗ್ಯವಾಗಿ "ಬ್ರಿಟಿಷರಿಗೆ ಬಸ್ಸು ತಪ್ಪಿ ಹೋದುದಷ್ಟೇ ಅಲ್ಲ, ಅವರ ಬೇಗು, ಸಾಮಾನುಗಳು ಕೂಡ ಹಿಂದೆಯೇ ಉಳಿದವು" ಎಂದು ಅಪಹಾಸ್ಯಮಾಡಿವೆ. ಇಟೆಲಿಯಲ್ಲಿ ಬ್ರಿಟಿಷರ ಕುರಿತು ತೀವ್ರ ವಿರುದ್ಧ ಪ್ರಚಾರ ನಡೆಯುತ್ತಿದೆ.

ಸೋಲಿಗೇನು ಕಾರಣ?

ದಕ್ಷಿಣ ನೋರ್ವೆಯಲ್ಲಿ ಬ್ರಿಟಿಷರು ಹಿಂಜರಿಯಲು ಮುಖ್ಯ ಕಾರಣವೇನೆಂದರೆ ಮಧ್ಯನೋರ್ವೆಯಲ್ಲಿ ಮಿತ್ರರಾಷ್ಟ್ರಗಳಿಗೊಂದು ವಿಮಾನನಿಲ್ದಾಣವಿಲ್ಲದುದೇ. ಟ್ರೋಂಡ್ಜೆಮಿನ ಕಡೆಗೆ ಜರ್ಮನರು ಭರದಿಂದ ಮುನ್ನುಗ್ಗುವವನ್ನು ತಡೆಯುವ ಸಿದ್ಧತೆಗಳು ಮಿತ್ರರಾಷ್ಟ್ರಗಳ ಸೈನ್ಯಗಳೊಡನಿರಲಿಲ್ಲ. ಆ ಭಾಗದಲ್ಲಿದ್ದ ನಾರ್ವೆ ಸೈನ್ಯಕ್ಕೆ ಬೆಂಬಲ ಕೊಡುವ ಸಲುವಾಗಿ ಸೇನೆಗಳನ್ನೊದಗಿಸಲಾಯಿತು ಆದರೆ ಆ ಸೈನ್ಯಗಳಿಗಾಗಿ ಬರುವ ಯುದ್ಧೋಪಕರಣಗಳ ಹಡಗುಗಳ ಮೇಲೂ, ಸೈನ್ಯಗಳ ಮೇಲೂ ಬಲವಾಗಿ ಬೋಂಬು ಸುರಿಸಿ ಜೇಸ-ಡಿಸಲು ಜರ್ಮನರು ಶಕ್ತರಾದರು. ಆ ವೇಳೆ ನಡೆಯುವ ಜರ್ಮನ್ ಧಾಳಿಯಿಂದ ತಪ್ಪಿಸಿಕೊಳ್ಳುವರೆ ಮಿತ್ರರಾಷ್ಟ್ರಗಳ ಸೇನೆ ಹಿಂದೆಗೆಯಬೇಕಾಯಿತು

ಲೋಯಿಡ್ ಜೋರ್ಜರ ಕಟುಟೀಕೆ

ಕಳೆದ ಮಹಾಯುದ್ಧದ ವೇಳೆ ಮುಖ್ಯ ಮಂತ್ರಿಯಾಗಿದ್ದ ಲೋಯ್ಡ್ ಜೋರ್ಜರು ದಕ್ಷಿಣ ನೋರ್ವೆಯ ಪರಾಜಯಕ್ಕಾಗಿ ಬ್ರಿಟನಿನ ಯುದ್ಧ ರೀತಿಯನ್ನು ಹಳಿದಿರುವರು ನೋರ್ವೆಯ ಸಮುದ್ರದಲ್ಲಿ ಕಾಲಿಡುವಾಗ ನಾವು ಯಾವ ಸಿದ್ಧತೆಯಲ್ಲಿಯೂ ಇರಲಿಲ್ಲ ಅಗತ್ಯವಾದ ಯುದ್ಧಸಾಧನಗಳಿಲ್ಲದ ಅವಸರದ ಸೈನ್ಯವನ್ನು ನೋರ್ವೆಗೆ ಕಳುಹಿಸಲಾಯಿತು. ಅದ್ದರಿಂದ ಹೀಗಾಗುವದು ಅಸಂಭವವಲ್ಲ ಎನ್ನುತ್ತಾ ಸರಕಾರ ಕೊಡುವ ಸಮಾಧಾನವನ್ನು ಖಂಡಿಸಿ "ನನ್ನ ಸರಕಾರೀ ಪತ್ರವನ್ನು ಇನ್ನಾರು ಬರೆಕೊಡುವರು! ಎಂದು ಪ್ರಶ್ನಿಸಿ ಮಿತ್ರರಾಷ್ಟ್ರಗಳ ಯುದ್ಧದಲ್ಲಿ ವಿರೋಧಿಗಳಂತೆ ಕಾಣಿಸಿ. ಎಂಬುದನ್ನು ಸೂಚಿಸುತ್ತ ಮುಂದೂ ಯುದ್ಧ ನಡೆಸುವ ಅಧಿಕಾರಿವರ್ಗ ಮತ್ತು ರೀತಿಯಲ್ಲಿ ಬದಲಾವಣೆಯಾಗದಿದ್ದರೆ ಅಪಾಯವು ಸಂಭವಿಸುವುದೆಂದೂ ಹೇಳಿರುವರು

ಮುಂದಿನ ಘೋಷಣೆಯೇನು?

ಬ್ರಿಟಿಷ್ ಪಾರ್ಲಿಮೆಂಟು ಇದೇ ತಾ. 7ರಲ್ಲಿ ಪ್ರಾರಂಭಿಸಲ್ಪಟ್ಟಿದೆ. ಅಲ್ಲಿ ನೋರ್ವೇ ಯುದ್ಧ ಮತ್ತು ಯುದ್ಧ ನಡೆಯುವ ರೀತಿಯ ಕುರಿತು ಸವಿಸ್ತಾರ ಚರ್ಚೆ ನಡೆಯಲಿದೆ ನೋರ್ವೇ ಯುದ್ಧದ ಕುರಿತು ಮಂತ್ರಿ ಮಂಡಲದ ಸದಸ್ಯರಲ್ಲಿ ಭಿನ್ನಾಭಿಪ್ರಾಯಗಳಿಲ್ಲವಂತೆ. ಆದರೆ ಯುದ್ಧವನ್ನು ಪ್ರಬಲವಾಗಿ ಮುಂದೊತ್ತಬೇಕೆಂಬ ಅಭಿಪ್ರಾಯ ತೋರಿದೆ. ಮಂತ್ರಿ ಮಂಡಲದ ಸದಸ್ಯರಲ್ಲಿ ಕೆಲವು ವ್ಯತ್ಯಾಸಗಳಾಗಬಹುದು. ತಟಸ್ಥ ರಾಷ್ಟ್ರಗಳಲ್ಲಿ ಉಂಟಾಗಿದ್ದ ಅನುಮಾನ ನಿವಾರಣೆಗೆ ತಕ್ಕಂತೆ ಯುದ್ಧದಲ್ಲಿ ಕಠಿಣವಾಗಿ ವರ್ತಿಸಲಾಗುವದು. ಇದು ಕಾದು ನೋಡುವ ಯುದ್ಧವಲ್ಲವೆಂದೂ ಅಮೇರಿಕಾ ಪತ್ರಿಕೆಗಳು ಮಿತ್ರರಾಷ್ಟ್ರಗಳಿಗೆ ಎಚ್ಚರ ಕೊಡುತ್ತಿವೆ.

ಮಿತ್ರರಾಷ್ಟ್ರಗಳ ಪಕ್ಷಪಾತಿ ಪ್ರೆಸಿಡೆಂಟ್ ರೂಸ್‌ವೆಲ್ಟ್.

ಇಂಗ್ಲೆಂಡಿನ ಮೇಲೆ ಧಾಳಿಯೆ?

ಇಟೆಲಿಯ ಕೌಂಟ್ ಸಿಯಾನೋನ ಪತ್ರಿಕೆಯ ಸಂಪಾದಕ ಸಿನ್ನರ್ ಅನ್ಸಾಲ್ಡೊನು ಇಂಗ್ಲಾಂಡಿನ ಮೇಲೆ ಜರ್ಮನಿ ಧಾಳಿ ನಡೆಸುವದೆಂದು ಪ್ರಕಟಿಸಿದ್ದಾನೆ. "ನಪೋಲಿಯನನು ಪ್ರಯತ್ನಿಸಿದಂತೆಯೇ ಇಂಗ್ಲಾಂಡನ್ನು ಆಕ್ರಮಿಸುವ ಪ್ರಯತ್ನ ಖಂಡಿತವಾಗಿ ಮತ್ತೂ ಬೇಗನೆ ಈ ಯುದ್ಧದಲ್ಲಿ ನಡೆಯಲಿದೆ" ಎಂದು ಅವನ ಹೇಳಿಕೆ. ಅಮೇರಿಕದಲ್ಲಿಯೂ ಈ ವಾರ್ತೆ ಹಬ್ಬಿದೆ ಇಟೆಲಿಯಲ್ಲಿ ಮಿತ್ರರಾಷ್ಟ್ರಗಳ ವಿರುದ್ಧ ಪ್ರದರ್ಶನಗಳಾಗುತ್ತಿವೆ. ಅಲ್ಲಿಯ ಒಂದೆಡೆಯ ಗೋಡೆಗಳಲ್ಲಿ "ಹಿಟ್ಲರಿಗೆ ಲಂಡನ್ ಮತ್ತು ಮುಸಲಿನಿಗೆ ಪ್ಯಾರಿಸ್!" ಎಂದು ಬರೆಯಲ್ಪಟ್ಟಿದೆ,

ನಾರ್ವಿಕದಲ್ಲಿ ಭೀಕರ ಹೋರಾಟ

ಬ್ರಿಟನ್, ಫ್ರಾನ್ಸ ಮತ್ತು ನೋರ್ವೆ ಸೈನ್ಯಗಳು ನಾರ್ವಿಕ್ ಬಂದರದ ಕಡೆಗೆ ಮುಂದೊತ್ತಿ ತೀವ್ರ ಕಾಳಗ ನಡೆಯುತ್ತಿದೆ. ಜಲ ಮತ್ತು ನೆಲಮಾರ್ಗದಿಂದ ಮಿತ್ರರಾಷ್ಟ್ರಗಳು ಪ್ರಬಲ ಹೋರಾಟ ಹೂಡಿವೆ ಸ್ಟೆಂಕ್ಜರಿನಿಂದ ತಮ್ಮ ಸೇನೆ ಉತ್ತರಕ್ಕೆ ಮುಂದೊತ್ತಿ ನಾಮ್ಸಸ್ ಮತ್ತು ಗ್ರೋಂಗ್ ನಗರವನ್ನು ಹಿಡಿದಿರುವದೆಂದೂ ಆ ಭಾಗದ ನೋರ್ವೆ ದಳಪತಿ ಶರಣುಹೊಕ್ಕಿರುವನೆಂದೂ ಜರ್ಮನರ ಪ್ರಕಟನೆಯಿದೆ. ರೋಯಿರೋಸ್ ನಗರದ ಮೇಲೆ ಬೋಂಬು ಸುರಿಸುತ್ತಾ ಜರ್ಮನರು ಅದರೊಳಗೆ ಹೊಕ್ಕಿರುವರು.

ಉತ್ತರದಲ್ಲೂ ಅದೇ ರೋಗವೆ?

ನಾರ್ವಿಕ್ ಕ್ಷೇತ್ರದಲ್ಲಿ ಕಾವು ವಿಮಾನ ಬಲದಲ್ಲಿ ಮೇಲ್ಮೈಯಾಗಬೇಕೆಂದು ಜರ್ಮನರು ಶತಪ್ರಯತ್ನದಲ್ಲಿದ್ದಾರೆ. ಒಂದೇ ದಿವಸ ನೂರಕ್ಕೂ ಮಿಕ್ಕಿದ ವಿಮಾನಗಳು ಉತ್ತರಕಡೆಗೆ ಹಾರಾಡಿರುವವು. ಅದರೆ ಅಲ್ಲಿ ಮಿತ್ರರಾಷ್ಟ್ರಗಳ ವಿಮಾನಭೇದಕ ಯಂತ್ರಗಳಿರುವವು. ಮಧ್ಯ ನೋರ್ವೆಯಲ್ಲಿಯೂ ಯುದ್ಧ ನಡೆಯುತ್ತಿರುವ ವಾರ್ತೆ ಬಂದಿದೆ ಅಲ್ಲಿ ಸಂಘಟನೆ ಹೊಂದಿದ ಸೇನೆಯೆಂದರೆ ನೋರ್ವೆಯ 25ಸಾವಿರ ಸೈನಿಕರುಳ್ಳ ಪಡೆಯೊಂದು ಮಾತ್ರ. ಓಸ್ಲೋವಿನ ವಾರ್ತೆಯಂತೆ ಜರ್ಮನರು ಶಕ್ತ್ಯಸಾಧ್ಯರ ನೋರ್ವೆ ಜನರನ್ನು ಹಿಡಿದು ಬೇಸಾಯ ಮತ್ತು ಕೈಗಾರಿಕೆಗಳ ಕೆಲಸಕೊಟ್ಟಿರುವರೆಂದು ತಿಳಿದುಬರುತ್ತದೆ.

ಸರ್. ಅಯ್ಯರರ ಹೇಳಿಕೆ

ಸರ್. ಶಿವಸ್ವಾಮಿ ಅಯ್ಯರರು, ತನ್ನ ಹೇಳಿಕೆಯೊಂದರಲ್ಲಿ ಭಾರತದ ಪ್ರಕೃತದ ಅಂತಃಕಲಹ ಅತಿ ಶೋಚನೀಯವಾದುದ, ಈಗೀನ ಜನರು ವಿದ್ಯಮಾನಗಳನ್ನು ತಿಳಿದುಕೊಳ್ಳಹತ್ತಿರುವರು. ಅಹಿಂಸಾತ್ಮಕ ಹೋರಾಟವು ಜಾತೀಯ ಜಗಳ ಮತ್ತು ಶಾಂತಿಭಂಗಕ್ಕೆ ಅವಕಾಶವೀಯುವದ, ಮಹಾತ್ಮರ ನಡತೆಯು ಹಲವು ವೇಳೆ ಸಮಸ್ಯಾತ್ಮಕವಾಗಿರುವದು, ಪಾಕಿಸ್ತಾನ ವಿಭಜನೆಯು ಅಂತರಿಕ ಕಲಹವೆದ್ದರೂ ಕೂಡ ಖಂಡಿಸಲ್ಪಡಲೇಬೇಕು, ಕಾಂಗ್ರೆಸು ಅಧಿಕಾರ ಸ್ವೀಕರಿಸಬೇಕು ಎಂಬ ಅಭಿಪ್ರಾಯ ಸೂಚಿಸಿರುವರು.

ಹಂಗೇರಿ-ಸ್ಲೋವೇಕಿಯಾ ವಿವಾದ

ಸ್ಲೋವಾಕ್ ಸರಕಾರವು ಅಸಹನೀಯ ರೀತಿಯಲ್ಲಿ ಹಂಗೇರಿಯನ್ನು ಕಣಕುತ್ತಿರುವದೆಂದೂ, ಈ ಕುರಿತು ಒಮ್ಮತದಿಂದ ವರ್ತಿಸುವರೆ ಹಾಸ್ಯ ನಡೆಸಿದ ಪ್ರಯತ್ನಕ್ಕೆ ಬೆಲೆಕೊಡದೆ ಸ್ಲೋವೇಕಿಯವು ನೇರ ವಿವಾದ ವರ್ತಿಸುತ್ತಿರುವದೆಂದೂ ಹಂಗೇರಿ ಸರಕಾರದ ಸಾರಿದೆ.

ಬ್ರಿಟನ ಪರರಾಷ್ಟ್ರ ಮಂತ್ರಿ ಲಾರ್ಡ ಹಲಿಫ್ಯಾಕ್ಸ್.

ಸಾಧ್ಯವಿಲ್ಲದವರು ರಾಜಿ ಕೊಡಿರಿ

ಸತ್ಯಾಗ್ರಹ ಪ್ರತಿಜ್ಞೆಗೆ ಸಹಿಹಾಕದೆ ದೇಶದ ಎಲ್ಲಾ ಕಡೆಯ ಕಾಂಗ್ರೆಸ್ ಕಮಿಟಿಗಳ ಕಾರ್ಯಕಾರೀ ಮಂಡಲಿಯ ಸದಸ್ಯರು ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಡಬೇಕೆಂದು ಅಖಿಲ ಭಾರತ ರಾಷ್ಟ್ರಸಭೆಯ ಕಾರ್ಯದರ್ಶಿ ಆಚಾರ್ಯ ಕೃಪಲಾನಿಯವರು ತಿಳಿಸಿದ್ದಾರೆ.

ಮದ್ರಾಸು ಬೀಡಿ ಕೆಲಸಗಾರರ ಮುಷ್ಕರ

ಹೊಗೆಸೊಪ್ಪಿನ ತೆರಿಗೆ ಬಂದಂದಿನಿಂದ ಹಾಕಲ್ಪಟ್ಟ ತಮ್ಮ ಸಂಬಳ ಕಡಿತವನ್ನು ತೆಗೆದುಹಾಕಬೇಕೆಂದು ಮದ್ರಾಸು ಬೀಡಿ ಕೆಲಸಗಾರರು ತಾ. ೬ರಿಂದ ಮುಷ್ಕರವನ್ನಾರಂಭಿಸಿರುವರು. ಪಟ್ಟಣದಲ್ಲಿರುವ 4000 ಬೀಡಿ ಕೆಲಸಗಾರರಲ್ಲಿ ಹೆಚ್ಚಿನವರು ಮುಷ್ಕರದಲ್ಲಿ ಸೇರಿರುವರು. ಪಹರೆ ನಡೆಸುತ್ತಿದ್ದ ಸುಮಾರು ೩೦ ಮಂದಿಯ ದಸ್ತಗಿರಿ ನಡೆದು 16 ಮಂದಿಗೆ ಐದೈದು ರೂಗಳ ಜುಲ್ಮಾನೆ ಅಥವಾ ಒಂದೊಂದು ವಾರದ ಶಿಕ್ಷೆ ವಿಧಿಸಲ್ಪಟ್ಟಿದೆ.

ಮೈಸೂರು ರೈಲ್ವೇ ಕೆಲಸಗಾರರ ವಿವಾದ ನಿಂತಿತು

ಮೈಸೂರಿನ ರೈಲ್ವೇ ಕೆಲಸಗಾರರ ವಿವಾದವು ದಿವಾನ್ ಸರ್. ಮಿರ್ಜಾರವರ ಆಶ್ವಾಸನೆಯಂತೆ ನಿಲ್ಲಿಸಲ್ಪಟ್ಟಿದೆ.

ಮೈಸೂರು ಪತ್ರ

(ನಮ್ಮ ಸ್ವಂತ ಬಾತ್ಮೀದಾರರಿಂದ)

ಅಖಿಲ ಮೈಸೂರು ಸಂಸ್ಥಾನ ಮುಸ್ಲಿಮ್ ಸಮ್ಮೇಳನ

ಬಂಗಾಳ ಮುಖ್ಯ ಮಂತ್ರಿಗಳ ಭಾಷಣ

ಬಂಗಾಳ ಮುಖ್ಯ ಮಂತ್ರಿ ಮಾನ್ಯ ಮು ಕೆ. ಫಜ್ಲುಲ್ ಹಕ್ಕರು ಮಹಾಪ್ರವಾಸದ ಬೆಂಗಳೂರಿಗೆ ಆಗಮಿಸಿದರು. ಅವರನ್ನು ಸ್ವಾಗತಿಸಲು ಸಂಸ್ಥಾನದ ಅನೇಕ ಉತ್ಸಾಹಿಗಳೂ, ಮುಸ್ಲಿಂ ಬಾಂಧವರೂ ರೈಲ್ವೇ ನಿಲ್ದಾಣದಲ್ಲಿ ಕೂಡಿದ್ದರು. ಹಕ್ಕರಿಗೆ ಪುಷ್ಪಹಾರ ಅರ್ಪಿಸಿ, ಸ್ವಯಂಸೇವಕರು ಗಾರ್ಡ್ ಆಫ್ ಆನರ್ ಕೊಟ್ಟು ಚೈತನ್ಯ ಮಾಡಿದರು. ನಂತರ ಫಜ್ಲುಲ್ ಹಕ್ಕರು ಕುಮಾರ ಕೃಪಾ ಬಂಗಲೆಗೆ ಹೋಗಿ ಸ್ವಲ್ಪ ವಿಶ್ರಾಂತಿ ಪಡೆಯುವ ಹೊತ್ತಿಗೆ ಮೈಸೂರು ದಿವಾನ್ ಸರ್. ಮಿರ್ಜಾರವರು ಅವರನ್ನು ಭೇಟಿ ಮಾಡಿ ಕುಶಲಪ್ರಶ್ನೆ ನಡೆಸಿದರು. ಕೊನೆಗೆ ಫಜ್ಲುಲ್ ಹಕ್ಕರನ್ನು ದಿವ್ಯವಾಗಿ ಅಲಂಕರಿಸಿದ್ದ ಮೋಟಾರುಬಂಡಿಯಲ್ಲಿ ಕೂಡ್ರಿಸಿ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿಕೊಂಡು, ನರಸಿಂಹರಾಜ ರಸ್ತೆಯಲ್ಲಿ ನಿರ್ಮಿಸಿದ್ದ ಪೆಂಡಾಲಿಗೆ ಕರೆದೊಯ್ಯಲಾಯಿತು. ಈ ಪ್ರದೇಶದಲ್ಲಿ ಮೈಸೂರು ಸಂಸ್ಥಾನದ ಮುಸ್ಲಿಮರು ತಮ್ಮ ಪ್ರಥಮ ಸಮ್ಮೇಳನವನ್ನು ನೆರವೇರಿಸಿದರು.

ಸಮ್ಮೇಳನದ ಸಭೆಯು ಕುರಾನ್ ಪ್ರಾರ್ಥನೆಯೊಡನೆ ನಡೆದು, ಸ್ವಾಗತಸಮಿತಿ ಅಧ್ಯಕ್ಷ ಭಾಷಣ ಮತ್ತು ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಮಿ. ಮಹಮ್ಮದ್ ಷರೀಫರ ಅಧ್ಯಕ್ಷ ಭಾಷಣ ನಡೆಯಿತು. ಸಮ್ಮೇಳನವು ಯಶಸ್ವಿಯಾಗಿ ನಡೆಯಲೆಂದು ಹಾರೈಸಿ ಬಂದಿದ್ದ ಪತ್ರಗಳನ್ನೋದಲಾಯಿತು. ನಂತರ ಫಜ್ಲುಲ್ ಹಕ್ಕರಿಗೆ ಮಾನಪತ್ರವನ್ನು ಅರ್ಪಿಸಲಾಯಿತು. ಅದನ್ನು ಸ್ವೀಕರಿಸಿ ಶ್ರೀ ಹಕ್ಕರು ಸಂಸ್ಥಾನದ ರಾಜರ ಮತ್ತು ಮಂತ್ರಿಗಳ ಪ್ರಶಂಸೆಮಾಡಿದರು. ಮೈಸೂರು ಮುಸ್ಲಿಮರ ಹಿತಸಂರಕ್ಷಣೆ ಕೋರಿದರು, ಸರ್ಕಾರದವರು ದಯಪಾಲಿಸಿರುವ ನೂತನ ರಾಜಕೀಯ ಸುಧಾರಣೆ ಸಂತೃಪ್ತಿ ಮತ್ತು ಇನ್ನೂ ಅನೇಕ ಮುಖ್ಯ ನಿರ್ಣಯಗಳು ಪಂಗೀಕಾರವಾದವು. ಸಮ್ಮೇಳನವು ಯಶಸ್ವಿಯಾಗಿ ನಡೆದು ಮುಕ್ತಾಯಗೊಂಡಿತು. ನಂತರ ಫಜ್ಲುಲ್ ಹಕ್ಕರು ಸ್ಪೆಶಲ್ ವಿಮಾನದಲ್ಲಿ ಮದ್ರಾಸಿಗೆ ಪ್ರಯಾಣ ಬೆಳೆಸಿದರು.

ವಿಶೇಷ ಸುದ್ದಿಗಳು

ಕೋಲಾರ ಜಿಲ್ಲಾ ಬೋರ್ಡಿಗೆ ಪರಿಪೂರ್ಣ ಸಂಘದಿಂದ ವಿಶೇಷ ಚುನಾವಣೆ ನಡೆಯಿತು ಇದಕ್ಕೆ ಕಾಂಗ್ರೆಸಿನವರು ಪ್ರತಿಸ್ಪರ್ಧಿಸಿ ನಿಲ್ಲಲಾಯಿತು. ಆದರೆ ಈ ಚುನಾವಣೆಯಲ್ಲಿ ಕೆಲವು ಆಶ್ಚರ್ಯ ಮತ್ತು ಸರ್ಕಾರಿ ಅಧಿಕಾರಿ ಕೈವಾಡ ನಡೆಯಿತೆಂದೂ ತಿಳಿಸಿ ಮೈ. ಕಾಂ. ನ. ಸದಸ್ಯರೂ, ವೀರ ಭಕ್ತರೂ ಆದ ಶ್ರೀ ಕೆ. ಚೆಂಗಲರಾಯ ರೆಡ್ಡಿಗಳು ಒಂದು ವಾರ ಉಪವಾಸ ವ್ರತವನ್ನು ಆರಿಸಿದರು. ಮೈ. ಕಾಂ. ಸಾಮಾ ಇಲಾಖೆ ಅಧ್ಯ ತನಿಖೆ ಮಾಡಲು ಸರ್ಕಾರದವರು ಮೂವರು ಹೊಸ ಅಧಿಕಾರಿಗಳನ್ನು ನೇಮಿಸಿದ್ದಾರೆ.

ಮೈ. ದಿವಾನ್ ಸರ್ ಮಿರ್ಜಾರವರ ಉದಕ ಮಂಡಲದಿಂದ ಮೈಸೂರಿಗೆ ಬಂದು, ಕಂಚಿ ಪೇಟೆ ಮತ್ತು ಮೈಸೂರು ನಗರ ಪರೀಕ್ಷೆ ನ ಡೆಸಿದರು. ಮತ್ತು ಮೈ. ರೈಲ್ವೇ ಸೆಂಟ್ರಲ್ ವರ್ಕ್‌ಷಾಪಿಗೆ ಭೇಟಿಯಿತ್ತು, ಅಲ್ಲಿ ಕೆಲಸಗಾರರ ಕಷ್ಟನಿಷ್ಠುರ ಕೇಳಿ ಅವರಿಗೆ ಕೈಲಾದ ಸಹಾಯ ಮಾಡಲಾಗುತ್ತದೆಂದು ಭರವಸೆ ಇತ್ತರು. ದಿವಾನರ ಆಗಮನಾರ್ಥವಾಗಿ ನಗರವನ್ನು ಶೃಂಗರಿಸಿ ಮುಚ್ಚಲಾಗಿತ್ತು. ಈ ರೀತಿ ಅರ್ಧ ದಿನ ಮುಚ್ಚಲಾಗಿದ್ದರೂ ಕೆಲಸಗಾರರಿಗೆ ಆ ದಿನದ ಕೂಲಿ ಕೊಡಲಾಗಿತು. ದಿವಾನರು ಬೆಂಗಳೂರಿಂದ ನೀಲಗಿರಿಗೆ ಈ ದಿನ ಮತ್ತೆ ಪ್ರಯಾಣ ಮಾಡಿದರು. ಮೈ. ನ್ಯಾಯ ವಿಧಾಯಕ ಸಭೆ ಅಧಿವೇಶನ ಸಭೆಯು ಜೂನ ತಾ. 24ನೇ ಬೆಂಗಳೂರಲ್ಲಿ ನಡೆಯುತ್ತೆ. ಮೈಸೂರು ಪ್ರಿನ್ಸ್ ಮಹಾರಾಜ ಮತ್ತು ಪಾರ್ಟಿಯವರು ಕೆಮ್ಮನಗುಂಡಿಯಿಂದ ಆಗಮಿಸಿ ಶೀಘ್ರದಲ್ಲೇ ನೀಲಗಿರಿಗೆ ಹೋಗುತ್ತಾರೆ

ಮೈಸೂರು ಸಂಸ್ಥಾನ ಜಿಲ್ಲಾ ಬೋರ್ಡುಗಳಿಗೆ ಚುನಾವಣೆ ಕಾಂಗ್ರೆಸಿಗೆ ಅದ್ಭುತ ವಿಜಯ

ಇದೇ ಮಾಹೆ ತಾ. 1ರಲ್ಲಿ ಮೈ. ಸಂ ಉದ್ದಂಪೂ ಜಿಲ್ಲಾ ಬೋರ್ಡುಗಳಿಗೆ ಚುನಾವಣೆ ನಡೆಯಿತು ಇದಕ್ಕೆ ಕಾಂಗ್ರೆಸಿನವರು ತಮ್ಮ ಉಮೇದುವಾರರುಗಳನ್ನು ನಿಲ್ಲಿಸಿದ್ದರು. ಚುನಾವಣೆಯು ಬಹಳ ರಭಸದಿಂದ ನಡೆಯಿತು. ಕಾಂಗ್ರೆಸಿನವರುಗಳು ಅದ್ಭುತ ವಿಜಯಪಡೆದು ಅನೇಕ ಬಿರುದು ಪಡೆದಿರುವ ಪ್ರಮುಖರುಗಳನ್ನೂ ಸೋಲಿಸಿರುವರು ಚಿತ್ರದುರ್ಗ ಜಿ. ಮ್ಯಾ. ಒಂದು ಅಕ್ಷರ ಹೊರಡಿಸಿ "ಓಟಿನ ಕಾಲದಲ್ಲಿ ಯಾರೂ ಯಾವ ವಿಧವಾದ ವಾಹನಗಳನ್ನು ಓಟು ಕೊಡುವವರು ಉಪಯೋಗಿಸಕೂಡದೆಂದರು" ಹೀಗಾದರೂ ಓಟುಗಳು ಮೈಲಿದೂರ ನಡೆದು ಬಂದು ಓಟು ಕಾಂಗ್ರೆಸಿನವರಿಗೆ ಕೊಟ್ಟದ್ದು ಮೈಸೂರಿನ ಜನರ ಕಾಂಗ್ರೆಸ್ ಪ್ರೇಮವನ್ನು ಸೂಚಿಸುತ್ತದೆ

ಮೋಕ್ಷಗುಂಡಂ ಕೃಷ್ಣಮೂರ್ತಿಯವರ ಕೊಲೆ ಮೊಕದ್ದಮೆ

ಮೇಲ್ಕಂಡ ಕೊಲೆ ಮೊಕದ್ದಮೆ ಮುಂದುವರಿಯಿತು. ಆಪಾದಿತ ನಾರಾಯಣ ರೆಡ್ಡಿಯವರ ತಾಯಿ ಮತ್ತು ಶ್ರೀ. ಮೋಕ್ಷ ಗುಂಡಂಪ್ಪನವರ ಕಕ್ಷಿ ಲಕ್ಷ್ಮಮ್ಮನವರ ಸಾಕ್ಷ್ಯ ಬಹು ಮುಖ್ಯವಾಗಿತ್ತು.

NAVAYUGA
Advertisement Tariff

1 Page	Rs. 25/-	per insertion
½ "	Rs. 15/- "	"
¼ "	Rs 8/- "	"
⅛ "	Rs. 5/- "	"

Per Single inch col. Re. 1 ,,
Contract rates on application
Manager Navayuga UDIPI.

ಶ್ರೀಮತಿ ಕಮಲಾದೇವಿಯವರು

ಇತ್ತೀಚೆಗೆ ಅಮೇರಿಕಾ ಪ್ರವಾಸದಲ್ಲಿ ದ್ದಾಗ ಅಲ್ಲಿಯ ಹಲವು ಸಂಘಸಂಸ್ಥೆಗಳು ಶ್ರೀಮತಿಯವರನ್ನು ಆಮಂತ್ರಿಸಿ ಗೌರವಿಸಿರುವವು. ಜಾನ್ ಅಂತ್ಯದ ವರೆಗೆ ಅಮೇರಿಕಾದಲ್ಲಿದ್ದು ಪಶ್ಚಿಮ ಕರಾವಳಿ ವಿಶ್ವವಿದ್ಯಾಲಯದ ಆಮಂತ್ರಣದಂತೆ ಪೆಸಿಫಿಕ್ ಕೋಸ್ಟಿಗೆ ಹೋಗಿ ಜುಲೈಯ ಅಂತ್ಯಕ್ಕೆ ಹೊರಡಲೂಬಹುದೆಂದು ಆಗಮಿಸುವರು. ಮೊದಲು ಜೈನಾ ಜಪಾನುಗಳನ್ನು ಸಂದರ್ಶಿಸಿ ಭಾರತಕ್ಕೆ ಹಿಂದಿರುಗುವರೆಂದು ತಿಳಿದುಬರುತ್ತದೆ.

Sidh-Kalpa Kavach (Regd.)

No 3 Rs 2 No 2 Rs 5 No 1 Rs 7, Special Rs 10 Extra Special Rs 17 for love marriage health wealth Ask any six questions with M O Re 1/4 and get correct answer by return post Life read ing Rs 2 No. V P P. Send M O. Free pamphlets

Prof. Dr N. H. Chhatbar,
P. O Mannvi (Lathrwar, India)

(7ನೇ ಪುಟದಿಂದ ಮುಂದರಿಸಿದ್ದು)

ಸಂಯುಕ್ತ ಪ್ರಾಂತೀಯ ಸಮಿತಿಯವರು ಇವೆಲ್ಲ ಷರತ್ತುಗಳನ್ನು ಓಟ ಸಿ. ಈ ಸಿಗರೇಟುಗಳನ್ನು ಬಹಿಷ್ಕರಿಸಬೇಕೆಂದು ತಮ್ಮ ಹಾಗು ಪರಪ್ರಾಂತಿಯರಿಗೆ ವಿನಂತಿಮಾಡಿಕೊಂಡಿದ್ದಾರೆ. ನಮ್ಮ ಕರ್ಣಾಟಕದವರಾದರೂ ಈ ಕಂಪೆನಿಯ ಸಿಗರೇಟುಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸಿ ಕೂಲಿಕಾರರಿಗೆ ಸಹಾಯಕರಾಗಬೇಕೆಂದು ಬಿನ್ನಹ.

ಈ ಕೆಳಗೆ ಕಾಣಿಸಿರುವ ಗುರುತಿನ ಸಿಗರೇಟುಗಳು ಇಂಪೀರಿಯಲ್ ಟೊಬ್ಯಾಕೋ ಕಂಪೆನಿಯವು— (ಕಂಪೆಯ ಟ್ರೇಡ್ ಮಾರ್ಕ್ —

"W. D. & H. O. WILL Co. LTD"

ಕಟಪಾಡಿ —ಏಣಗುಡ್ಡೆ ಶ್ರೀ ದುರ್ಗಾಪರಮೇಶ್ವರೀ ದೇವಿಯ ಸಹಾಯಾರ್ಥವಾಗಿ ಕಟಪಾಡಿ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಮಂಗಳೂರಿನ 'ತುಳುನಾಡ ಎಮೆಚೂರ್ಸ್'ನವರು 'ವಿನ್ನದ ಕಾಡಿ?' ಎಂಬ ತುಳು ನಾಟಕವನ್ನು ತಾ. 5ರಲ್ಲಿ ಅಭಿನಯಿಸಿದರು. ಶ್ರೀ. ಜಿರೂಪು ಲಕ್ಷ್ಮೀನಾರಾಯಣ ರಾಯರು ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷರು ನಾಟಕ ಕರ್ತರನ್ನೂ, ನಟರನ್ನೂ, ಶಾಲಾ ಮೆನೇಜರರನ್ನೂ ಅಭಿನಂದಿಸಿದರು. ನಾಟಕಕರ್ತ ಶ್ರೀ ಪಿ. ಶಿವಣ್ಣ ಹೆಗ್ಡೆಯವರೂ, ಶಾಲಾ ಮೆನೇಜರ್ ಶ್ರೀ. ವೈ. ನಂದ್ಯಪ್ಪ ಹೆಗ್ಡೆಯವರೂ ಧನ್ಯವಾದಗಳನ್ನಿತ್ತರು. ಜನರ ಪ್ರೋತ್ಸಾಹವು ಸಾಕಷ್ಟಿದ್ದು ನಾಟಕವು ಜಯಶೀಲವಾಗಿ ಅಭಿನಯಿಸಲ್ಪಟ್ಟಿತು.

ದಿ. ಬಾರ್ಕೂರು ಬಿಲ್ಲವ ಚಾರಿಟಿ ಸಂಘ, ಮುಂಬಯಿ—"ಈ ಮೇಲಿನ ಸಂಘದ 1940–41ನೇ ಇಸವಿಯ ಕಾರ್ಯನಿರ್ವಾಹಕ ಸಭೆಯ ಚುನಾವಣೆಯಲ್ಲಿ 29 ಮಂದಿ ಉಮೇದ್ವಾರರ ಪೈಕಿ, ಸಂಘದ ಕೃತ ನಿಬಂಧನೆಗನುಸಾರವಾಗಿ ಈ ಕೆಳಗಿನ 15 ಮಂದಿ ಆರಿಸಲ್ಪಟ್ಟಿರುವರು.

(1) ವೈ. ಸಬ್ಬ, (2) ಸಿ ಕೆ. ಸುವರ್ಣ, (3) ಟಿ. ತನಿಯ, (4) ಎನ್. ಎಮ್. ಉದಿಯಾವರ್, (5) ಕೆ. ಎಮ್. ಬಂಗೇರ, (6) ಎಮ್. ಬೇಲ ಅಂಚನ್, (7) ಎ ಸಿ. ಅಮೀನ್, (8) ಎಸ್. ಜನಾರ್ಧನ, (9) ಎಮ್. ಕೆ. ಪೂಜಾರ್ಯ, (10) ಆರ್. ಎಸ್. ಅಂಚನ್, (11) ಕೆ. ಅನಂತ, (12) ಕೆ. ನಾರಾಯಣ, (13) ಬಿ. ಜಿ ಅಂಚನ್, (14) ಯು ಎಮ್. ಕೋಟ್ಯಾನ್, ಮತ್ತು (15) ಪಿ. ಕರಿಯಪ್ಪ "

ಕಾರ್ಯಾದ ವರದಿ—ವರದಿಗಳನ್ನು ಕಳಿಸುವ ಬಗ್ಗೆ ಅನೇಕ ಸಲ ಬರೆದರೂ ಕೆಲವು ಜಿಲ್ಲಾ ಸಮಿತಿಗಳು ಏನೂ ಉತ್ತರಕೊಟ್ಟಿಲ್ಲ. ಹೀಗಾದರೆ ಪ್ರಾಂತೀಯ ವರದಿಯು ಆಯಾ ಜಿಲ್ಲೆಯ ಮಟ್ಟಿಗೆ ಅಪೂರ್ಣವಾಗುವದು. ಕಾರಣ ಜಿಲ್ಲಾ ಸಮಿತಿಗಳೂ ಕೂಡಲೇ ಜಿಲ್ಲೆಗಳಲ್ಲಿ ನಡೆ ಮಾಡಿದ ಸತ್ಯಾಗ್ರಹಿಗಳ ಯಾದಿ, ರಚನಾತ್ಮಕ ಕಾರ್ಯದ ವರದಿ ಮತ್ತು ರಾಮಗಡ ನಿರ್ಣಯ ಗಾಂಧೀಜಿಯವರ ಸೂಚನೆಗಳನ್ನು ಪ್ರಚಾರ ಮಾಡಲು ಕೈಕೊಂಡ ಕಾರ್ಯಕ್ರಮ ... ಕಚೇರಿಗೆ ಕಳುಹಿಸಬೇಕು.

ಮಂಗಳೂರು ಮತ್ತು ಉಡುಪಿಗೆ ಬಂದಾಗ ನಿಮಗೆ
ಸುಖವಾದ ನಿವಾಸ ದೊರೆಯಬೇಕೋ?
— ಹಾಗಾದರೆ —
ಸುಖನಿವಾಸಕ್ಕೆ ಬನ್ನಿ.
ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,
ವಿದ್ಯುದ್ದೀಪಾಲಂಕೃತ ಕೋಣೆ.
ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವುದೆಲ್ಲಿ?
ಸುಖನಿವಾಸ ದಲ್ಲಿ ಮಾತ್ರ.
ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯ ವಿದೆ.
ಮಂಗಳೂರಿನಲ್ಲಿ ಜೋಡುಗುಡ್ಡೆಯಲ್ಲಿಯೂ, ಉಡುಪಿಯಲ್ಲಿ ತಾಲೂಕು ಕಚೇರಿಯ
ಬಳಿಯಲ್ಲಿಯೂ ಇರುವ 'ಸುಖನಿವಾಸ'ವನ್ನು ಒಮ್ಮೆ ಸಂದರ್ಶಿಸಿರಿ
ಪ್ರೊಪ್ರೈಟರ್, ಸುಖನಿವಾಸ.

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ವೇದ ಮತ್ತು ಪ್ರಕೃತಿದ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ ಅನೋಘವಾದ ಸುಭುರ ದ್ರವ ರಸಾಯನ ಕಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿದೆ ಪ್ರತಿ.
ಆ ಬೈಸನ ಬಾಟ್ಲಿಗಳು ಕಟ್ಟ ಕಡೆ ೪೦ ದಿವಸಗಳಿಗೆ ಆಗುವವು. ಅಂದರೆ, ಕೇವಲ ೪ ರೂಪಾಯಿಗಳು. ಒಂದು ಬಾಟ್ಲಿಯನ್ನು ಸಾಕಾಗುವುದು ... ವಿಶೇಷ ವಿವರದ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಎಮ್. ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ 6 ಕೊಡಿಯಾಲಬೈಲು, ದ.ಕ.



ಕಷಾಯ ಬಿಂದು

ಮೈಸೂರು ಸಂಸ್ಥಾನದಲ್ಲಿ ಡಿಸ್ಟ್ರಿಕ್ಟ್ ಬೋರ್ಡುಗಳ ಚುನಾವಣೆ ನಡೆಯಿತು. ಕಾಂಗ್ರೆಸ್ ಪ್ರತಿನಿಧಿಗಳು ಅದ್ಭುತವಿಜಯ ಪಡೆದರು.

x x x

ವಿಜಯವು ಅದ್ಭುತವಾಗಲು ಕಾರಣ ಆ ಸರ್ಕಾರಿ ಜಿಲ್ಲಾ ಬೋರ್ಡುಗಳ ಅಧ್ಯಕ್ಷರಾಗಿದ್ದ ಕೆಲವರು ಕೂಡ ಕಾಂಗ್ರೆಸ್ ಪ್ರತಿನಿಧಿಗಳೊಡನೆ ಸ್ಪರ್ಧಿಸಿ ಸೋತುಹೋದುದು.

x x x

ಸೋತವರಿಗೆ ಪಕ್ಷಗಳೇ ಇರಲಿಲ್ಲ; ಗೆದ್ದವರಿಗೆ ಕಾಂಗ್ರೆಸ್ ಪಕ್ಷವಿತ್ತು.

x x x

ಮೈಸೂರು ಕಾಂಗ್ರೆಸಿನವರು ಈಗ ಸತ್ಯಾಗ್ರಹವನ್ನು ತ್ಯಜಿಸಿದ್ದಾರೆ; ಚುನಾವಣೆಗೆ ನಿಂತು ಜಯಿಸಿದ್ದಾರೆ.

x x x

ಸತ್ಯಾಗ್ರಹ ಮಾಡಿದವರು ಚುನಾವಣೆಗೆ ನಿಲ್ಲುವುದೂ ಉಪವಾಸ ಮಾಡಿದವ ಫಲಾಹಾರ ಸ್ವೀಕರಿಸುವುದೂ ಒಂದೇ— ಆ ಸಮಯದಲ್ಲಿ ಇದಿರು ಬಿದ್ದುದನ್ನು ಪೂರ್ತಿ ಗೆಲ್ಲುತ್ತಾರೆ!

x x x

ಬ್ರಿಟಿಷ್ ಭಾರತದಲ್ಲಿಯೂ ಹಾಗೆಯೇ ಆಯಿತು; ಮೈಸೂರಿನಲ್ಲಿಯೂ ಅಂತೆಯೇ ಆಗಿದೆ.

x x x

ಭಾರತವನ್ನು ಬ್ರಿಟಿಷ್ ಭಾರತ, ಆಶ್ರಿತ ಭಾರತವೆಂದು ವಿಂಗಡಿಸಲು ಬರುವುದಿಲ್ಲವೆಂದು ಈಗಲಾದರೂ ತಿಳಿಯಿತೆ?

'ಪಾಕಿಸ್ತಾನ'ದ ಬದಲಿಗೆ 'ಝೋರಿಸ್ತಾನ'ವನ್ನು ರಚಿಸಿದರೆ ಮಿ. ಜಿನ್ನಾರು ತೃಪ್ತಿಹೊಂದಬಹುದೆಂದು ಮನೋಶಾಸ್ತ್ರಜ್ಞರ ಶೋಧನೆ.

x x x

ಮುಸ್ಲಿಂ ಲೀಗಿನ ಧುರೀಣರೊಬ್ಬರು 'ಲೀಗಿನ ಪಾಕಿಸ್ತಾನ ಯೋಜನೆ ಗಾಢವಾದ ಯೋಚನೆಯ ಬಲದಿಂದ ಹುಟ್ಟಿದುದೇನೂ ಅಲ್ಲ'ವೆಂದರು.

x x x

ಆದರೆ ಅದು ಮಿಕ್ಕವರನ್ನು ಗಾಢಾಲೋಚನೆಗೆ ಗುರಿಮಾಡಿದೆ.

x x x

'ಇದು ಕಾರ್ಯತಃ ಎಲ್ಲಾ ರೀತಿಯಲ್ಲಿಯೂ ಅಸಾಧ್ಯವಾದುದು' ಎಂದು ಆಜಾದ ಮುಸ್ಲಿಂ ಸಮ್ಮೇಳನವು ಸಾರಿದೆ.

x x x

ಬ್ಯಾ. ಜಿನ್ನಾರೇಕೆ ಈ ವಾದವನ್ನು ಮುಂತಂದಿದ್ದಾರೆ, ಎಂಬ ಪ್ರಶ್ನೆಯನ್ನು ಉತ್ತರಿಸಲು ಇನ್ನು ಕಷ್ಟವಿಲ್ಲ. ಕೆಲಸಕ್ಕೆ ಬೇಡದ ಮಾತನ್ನಾಡುವುದು ರೂಢಿಯಾಗಿದೆ!

x x x

ಮಿ. ಜಿನ್ನಾರಂತಹ ಝೋರೀವಾಲರು ಭಾರತದಲ್ಲಿ ಹಲವರಿದ್ದಾರೆ. 'ಝೋರಿಸ್ತಾನ'ವನ್ನು ರಚಿಸಿ ಇಂಥವರನ್ನೆಲ್ಲಾ ಒತ್ತಟ್ಟಿಗಿರಗೊಡಿಸಿದರೆ ಜಿನ್ನಾರ ಉಪಟಳ ನಿಲ್ಲುವುದು ಖಂಡಿತ!

"ಬಹುಸಂಖ್ಯಾಕ ಕಾಂಗ್ರೆಸಿಗರ ರಾಜ್ಯಭಾರವಿದ್ದಲ್ಲಿ ಮುಸ್ಲಿಮರ ರಾಷ್ಟ್ರೀಯ ಆಹಾರವಾದ ಗೋಮಾಂಸ ಭಕ್ಷಣೆಗೆ ಕಾನೂನು ಮೂಲಕ ಸಮ್ಮತಿ ಸಿಗಬಹುದೆ?" ಎಂದು ಗಾಂಧಿಯವರನ್ನು ಒಬ್ಬ ಮುಸಲ್ಮಾನ ಮಿತ್ರನು ಪ್ರಶ್ನಿಸಿದ್ದಾನೆ.

x x x

"ಗೋಮಾಂಸವು ಮುಸಲ್ಮಾನರ ರಾಷ್ಟ್ರೀಯ ಆಹಾರವಲ್ಲ. ಆಹಾರ ವಿಹಾರಗಳು ಅವರವರ ಆರ್ಥಿಕ ಪರಿಸ್ಥಿತಿಯನ್ನು ಹೊಂದಿಕೊಂಡಿವೆ. ಬಡತನದ ದೆಸೆಯಿಂದ ಯಾವ ಮಾಂಸವನ್ನೂ ತಿನ್ನಲಿಕ್ಕಾಗದ ಮುಸಲ್ಮಾನರು ಸಾವಿರಾರು ಮಂದಿ ಇದ್ದಾರೆ. ಆಡಳಿತೆಯು ರಾಜಕೀಯಕ್ಕೆ ಸಂಬಂಧಿಸಿದೆ. ಧರ್ಮ ಸಂಬಂಧವದಕ್ಕಿಲ್ಲ. ಗೋವು ನನ್ನ ಮಾತೆ. ಆದರೆ ಮುಸಲ್ಮಾನರ ಗೋಹತ್ಯೆ ಮಾಡುವ ಪದ್ಧತಿಯನ್ನು ಖಂಡಿತವಾಗಿಯೂ ಕಾನೂನು ಮೂಲಕ ವಿರೋಧಿಸುವಂತಿಲ್ಲ" ಎಂದು ಗಾಂಧಿಯವರಂದಿದ್ದಾರೆ.

x x x

ಗಾಂಧಿಯವರು ಹಸಿ ಧಾನ್ಯ ಜಗಿಯುವವರು. ಆದರೂ ಮಾಂಸಾಹಾರಿಗಳ ಪ್ರಶ್ನೆಗೆ ಉತ್ತರ ಕೊಡಬೇಕಾಗಿ ಬರುತ್ತದೆ.

x x x

ಆಡಳಿತಕ್ಕೆ ಸಂಬಂಧಪಟ್ಟದ್ದು ಆಹಾರಕ್ಕೂ ಸಂಬಂಧಿಸುತ್ತದೆ. 'ಉದರನಿಮಿತ್ತಂ ಬಹುಕೃತವೇಷಂ' ಹೊಟ್ಟೆಪಾಡಿಗೆ ಮಿಕ್ಕಿದ ಕಾರ್ಯವಿಲ್ಲ

x x x

"ನಾವೆಂದರೆ ಹುಲಿಗಳು, ಸಿಂಹಗಳು!" ಎಂದು ಬಂಗಾಳದ ಪ್ರಧಾನರಾದ ಮಿ. ಫಜ್ಲುಲ್-ಹಕ್ಕರು [illegible] ಒಮ್ಮೆ ಗರ್ಜಿಸಿದ್ದರು. ಅದನ್ನು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳಿ!

ಪಂಜಾಬು ಎಸೆಂಬ್ಲಿಯಲ್ಲಿ ಕಾಂಗ್ರೆಸ್ ಪಕ್ಷದ ಧುರೀಣರಾಗಿದ್ದ ಡಾ| ಗೋಪಿಚಂದ ಭಾರ್ಗವರವರು ತನ್ನ ಸದಸ್ಯತನಕ್ಕೆ ರಾಜೀನಾಮೆ ಕೊಟ್ಟರು.

x x x

ಅಲ್ಲಿಯ ಪ್ರಧಾನರಾದ ಸರ್. ಸಿಕಂದರ್ ಹಾಯತ್ ಖಾನರೇ ಆದಿಯಾಗಿ ಎಲ್ಲರೂ ಶ್ರೀ. ಭಾರ್ಗವರ ಕೆಲಸಗಳನ್ನು ಬಹಳವಾಗಿ ಕೊಂಡಾಡಿದರು.

x x x

ಪಂಜಾಬು ಎಸೆಂಬ್ಲಿಯಲ್ಲಿ ಮಂತ್ರಿಮಂಡಲಕ್ಕೂ ಕಾಂಗ್ರೆಸ್ ಪಕ್ಷಕ್ಕೂ ಕೆಲವು ಬಾರಿ ತೀವ್ರ ತಿಕ್ಕಾಟ ನಡೆದುದಿದೆ. ಸರಕಾರೀ ಮೆಂಬರರು ಡಾ| ಭಾರ್ಗವರ ಮೇಲೆ ಕೆರಳಿದುದಿದೆ.

x x x

ಎಲ್ಲರಿಂದಲೂ ಶ್ಲಾಘನೆ ಪಡೆಯಬೇಕಾದರೆ ಮಾಡಬೇಕಾದುದೇನು—ಎಂಬ ಒಂದೇ ಯೋಚನೆಯಿರುವವರು ಹಲವರಿದ್ದಾರೆ ಅಂಥವರು ಡಾ| ಭಾರ್ಗವರ ಮಾದರಿಯನ್ನನುಸರಿಸಿದರಾಯಿತು. —ಪಂಡಿತ

ಇಂಡಿಯನ್ ಮ್ಯೂಚುಯಲ್

ಲೈಫ್ ಅಸೋಸಿಯೇಷನ್ ಲಿಮಿಟೆಡ್

ಹೆಡ್ ಆಫೀಸ್:- ನಂ. ೧೧೦, ಮೌಂಟ್ ರೋಡ್, ಮದರಾಸು

— ಡೈರೆಕ್ಟರುಗಳ ಬೋರ್ಡ್ —

ಸರ್ ವೇಪಾ ರಮೇಶಂ, ಕೆ. ಟಿ ರಿಟೈರ್ಡ್ ಜಡ್ಜ್, ಮದರಾಸ್ ಹೈಕೋರ್ಟ್, ಮದರಾಸು.
ರಾವ್ ಬಹದ್ದೂರ್ ಮ|| ಕೆ. ಬಲರಾಮ ಅಯ್ಯರ್, ಬಿ.ಎ. ರಿಟೈರ್ಡ್ ಅಕೌಂಟೆಂಟ್ ಜನರಲ್ ಮದರಾಸ್.
ಮ|| ಸಿ. ಕೃಷ್ಣಮೂರ್ತಿ ಮೊದಲಿಯಾರ್ ಲ್ಯಾಂಡ್ ಲಾರ್ಡ್, ಸಿಯಾಲಿ.
ದಿವಾನ್ ಬಹದ್ದೂರ್ ಮ|| ಎ. ವಿ ರಾಮಲಿಂಗ ಅಯ್ಯರ್, ಮದರಾಸ್ ಸರಕಾರದ ರಿಟೈರ್ಡ್ ಚೀಫ್ ಇಂಜನಿಯರು.
ಮ|| ಟಿ. ಎಸ್. ನಾರಾಯಣ ಸ್ವಾಮಿ, ಎಂ.ಎ, ಅಸಿಸ್ಟೆಂಟ್ ಕೆಮಿಸ್ಟ್, ಬಕಿಂಗ್‌ಹ್ಯಾಂ ಮಿಲ್ಸ್, ಮದರಾಸ್.
ದಿವಾನ್ ಬಹದ್ದೂರ್ ಮ|| ವಿ. ಭಾಷ್ಯಂ ಅಯ್ಯಂಗಾರ್, ರಿಟೈರ್ಡ್ ಮದರಾಸ್ ಹೈಕೋರ್ಟ್ ಜಡ್ಜ್.
ಮ|| ಸಿ ಎಂ. ಶ್ರೀನಿವಾಸನ್, ಬಿ.ಎ.,ಬಿ.ಎಲ್. (ಎಕ್ಸ್-ಅಫೀಷಿಯೋ) ಮದ್ರಾಸ್.

ಮ್ಯಾನೇಜರ್:- ಮ|| ಎಂ. ಸತೀಶನ್, ಎಂ.ಎ, ಚೀಫ್ ಮೆಡಿಕಲ್ ಆಫೀಸರ್:- ಲೆ. ಕ|| ವಿ. ಮಹದೇವನ್, ಐ ಎಂ ಎಸ್.

ಬ್ಯಾಂಕರುಗಳು:— ಇಂಡಿಯನ್ ಬ್ಯಾಂಕ್ ಲಿಮಿಟೆಡ್, ಮದರಾಸ್. ಮದರಾಸ್ ಪ್ರೊವಿನ್ಸಿಯಲ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್. ಇಂಡೋ-ಕಮರ್ಷಿಯಲ್ ಬ್ಯಾಂಕ್ ಲಿಮಿಟೆಡ್, ದಿ ಬ್ಯಾಂಕ್ ಆಫ್ ಮೈಸೂರು, ಲಿಮಿಟೆಡ್.

ಬ್ರಾಂಚುಗಳು:—ಕಲ್ಕತ್ತಾ, ಲಾಹೋರ್, ಜೋಧಪೂರ್, ಮಧುರೆ, ಕಲ್ಲಿಕೋಟೆ, ಬೆಜವಾಡ, ಅಲಹಾಬಾದ್ ಬೊಂಬಾಯಿ, ಅಹಮದಾಬಾದ್, ಪೂನಾ

ಮೈಸೂರು ಸರಕಾರದ ಹೊಸ ವಿಮಾ ಕಾನೂನನ್ನು ಅನುಸರಿಸಿ ಕಂಟ್ರೋಲರವರಲ್ಲಿ ಠೇವಣಾತಿ ಮೊಬಲಗು ಇಡಲಾಗಿದೆ.

ಕರ್ನಾಟಕದಲ್ಲೆಲ್ಲಾ ಯೋಗ್ಯರಾದ ಮತ್ತು ಪ್ರತಿಭಾಶಾಲಿಗಳಾದವರಿಂದ ಏಜನ್ಸಿಗಳಿಗೆ ಅರ್ಜಿಗಳು ಸ್ವೀಕರಿಸಲ್ಪಡುವುವು.

ಉತ್ತಮ ಕೆಲಸಮಾಡುವವರಿಗೆ ಒಳ್ಳೇ ಷರತ್ತುಗಳು. ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಮ|| ಸಿ. ಎಂ. ಶ್ರೀನಿವಾಸನ್, ಬಿ. ಎ, ಬಿ. ಎಲ್. ಜನರಲ್ ಸೆಕ್ರೆಟರಿ. ಇಂಡಿಯನ್ ಮ್ಯೂಚುಯಲ್ ಲೈಫ್ ಅಸೋಸಿಯೇಷನ್ ಲಿಮಿಟೆಡ್, 10 ಮೌಂಟ್ ರೋಡ್, ಮದ್ರಾಸ್.

ಬಿ. ಕರುಣಾಕರ ಹೆಗ್ಡೆ ಇನ್ಸ್‌ಪೆಕ್ಟರ್ ಆಫ್ ಏಜನ್ಸೀಸ್, ಜನರಲ್ ಸ್ಟೋರ್ಸ್, ಉಡುಪಿ.

Bonus: Endowment Rs. 15. Whole life Rs. 10. Last valuation.

ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ.

ಸುಧಾರಣೆ-ಮೌನಧಾರಣೆ

"ನಾನು ಸ್ತ್ರೀಸುಧಾರಣೆಯನ್ನು ಸಂಪೂರ್ಣ ಸಮರ್ಥಿಸುವವ. ಆದರೆ ನನ್ನ ಈ ಧೋರಣೆಯಿಂದಾಗಿ ನನ್ನ ಮನಸ್ಸಿಗೆ ಶಾಂತಿಯುಲ್ಲದಂತಾಗಿದೆ. ಮನೆಯಲ್ಲಿ ನನ್ನ ತಾಯಿ ಮತ್ತು ಪತ್ನಿಯರಿದ್ದಾರೆ. ಇಬ್ಬರಿಗೂ ಅವರವರ ಸ್ಥಾನಕ್ಕನುಗುಣವಾದ ಸ್ವಾತಂತ್ರ್ಯವನ್ನು ನಾನು ಕೊಟ್ಟಿದ್ದೇನೆ. ಇದರ ಪರಿಣಾಮವಾಗಿ ಮನೆಯ ಒಡತಿಯಾದ ಅತ್ತೆ-ಸೊಸೆಗೆ ಹಲವು ವಿಧದ ಪೀಡೆ ಕೊಡುತ್ತಿದ್ದಾಳೆ ಅವರೊಳಗೆ ದಿನಂಪ್ರತಿ ಜಗಳ ನಡೆಯುತ್ತಿದೆ. ಅಂತಹ ಸಂದರ್ಭಗಳಲ್ಲಿ ನಾನು ಹೇಗೆ ವರ್ತಿಸಬೇಕು?"–ಕೆ. ಎಮ್. ಎಮ್. ಹುಬ್ಬಳ್ಳಿ.

ಒಳ್ಳೆಯ ಸಮಸ್ಯೆ ನಿಮ್ಮದು! ನಿಮ್ಮ ವರ್ತನೆಗೆ 'ಸ್ತ್ರೀ ಸುಧಾರಣೆ' ಎಂಬ ಬಿರುದನ್ನು ನೀವೇ ಕೊಡಬೇಕು; ಅನ್ಯರು ಕೊಡಲಾರರು. ಸೊಸೆಯ ಹಕ್ಕು ಅಪಹರಿಸಲ್ಪಟ್ಟಿದೆ; ಅತ್ತೆಗೆ ಸುಧಾರಿಸಲ್ಪಡದ ಅಧಿಕಾರವೇ ದೊರೆತಿದೆ. ಅವರ ಜಗಳದ ನಡುವೆ ಹೋಗದೆ ಸ್ವೇಚ್ಛೆಯಿಂದ ವರ್ತಿಸುವ ಸ್ವಾತಂತ್ರ್ಯವನ್ನು ಮಾತ್ರ ನೀವು ನಿಮ್ಮ ಮನೆಯ ಹೆಂಗಸರಿಗೆ ಕೊಟ್ಟಿರುವಿರಿ. ನಿಮ್ಮದು ಸುಧಾರಣೆಯಲ್ಲ–ಮೌನಧಾರಣೆ. ಅಥವಾ ನಿಮ್ಮ ಮರ್ಜಿಗನುಸಾರವಾಗಿಯೇ ಹೇಳಬೇಕಾದರೆ, ಇನ್ನಾದರೂ ನೀವು ಸ್ತ್ರೀ ಸುಧಾರಣೆಯನ್ನು ಬಿಟ್ಟು ಪುರುಷ ಸುಧಾರಣೆಯನ್ನು ಆರಂಭಿಸಬೇಕು.

ಎಲ್ಲಾ ಸರಿ, ಒಂದು ತಪ್ಪು!

"ನಾವು ಬಿಳಿ ಜನಾಂಗದವರ ಆಳ್ವಿಕೆಯಿಂದ ಪಾರಾಗಬೇಕೆಂದು ಬಹಳ ಒದ್ದಾಡುತ್ತಿದ್ದೇವೆ ಆದರೆ ಸಾಮಾನ್ಯರಿಂದ ಹಿಡಿದು ದೊಡ್ಡ ಧುರೀಣರ ತನಕ ಹಿಂದೀಯರಿಗೆ ಸಮಯದ ಬೆಲೆ, ಮಾತಿನ ಬೆಲೆ ಗೊತ್ತೇ ಇಲ್ಲ. ಸಾಮಾನ್ಯರ ಮಾತಂತಿರಲಿ, ದೊಡ್ಡ ಧುರೀಣರು ಕೂಡಾ 7ಘಂಟೆಯ ಕಾರ್ಯಕ್ರಮ ತೀರಿಸಲು 12ಘಂಟೆಗೆ ಬರುವ ವಾಡಿಕೆ. ನಮ್ಮವರ ನಡತೆಯಲ್ಲಿ ವ್ಯಾಪಾರವಹಿವಾಟುಗಳಿಂದ ಹಿಡಿದು ಸಾರ್ವಜನಿಕ ಕಾರ್ಯಗಳ ವರೆಗೆ, ಸಮಯ ಮೀರಿ ವರ್ತಿಸುವದೊಂದು ಕ್ರಮವೇ ಆಗಿಹೋಗಿದೆ; ಆದರೆ ಬಿಳಿ ಜನರು ಅದನ್ನೊಂದು ಮಹಾಪರಾಧವೆಂದು ಗಣಿಸುತ್ತಾರೆ. ದೊಡ್ಡ ದೊಡ್ಡ ಬಿಳಿ ಆಫೀಸರರು ತಮ್ಮ ಕಾರ್ಯಕ್ರಮಗಳಲ್ಲಿ ಒಂದೇ ಒಂದು ಮಿನಿಟು ತಡಮಾಡುವದಿಲ್ಲ. ಬಿಳಿ ಜನರಿಂದ ಅಧಿಕಾರ ಕೇಳಬೇಕಾದರೆ ನಾವು ಆ ಯೋಗ್ಯತೆಯನ್ನು ಸಂಪಾದಿಸಿಕೊಳ್ಳುವ ಅಗತ್ಯವಿಲ್ಲವೇ?–ಕೆ. ಎಮ್. ಆರ್. ಅಂಕೋಲಾ

ನಿಮ್ಮ ಪ್ರಶ್ನೆ ಯಥಾರ್ಥವಾದುದು. ಬಿಳಿ ಜನರನ್ನು ಅನುಕರಿಸುವವರು ನಮ್ಮಲ್ಲಿಷ್ಟೋ ಮಂದಿ ಇದ್ದಾರೆ–ವೇಷ, ಭೂಷಣ, ಠೀವಿಯ ಮಟ್ಟಿಗೆ ಮಾತ್ರ ನಾವು ಬಿಳಿ ಜನರಿಂದ ಸಮಯದ ಬೆಲೆಯನ್ನು ಕಲಿಯಬೇಕಾಗಿದೆ ಆದರೆ ಬಿಳಿ ಜನರ ಆಡಳಿತೆಯನ್ನು ನಾವು ವಿರೋಧಿಸುವುದು ಸಮಯಕ್ಕನುಗುಣವಾಗಿದೆ. ಎಂಬುದನ್ನೂ ಈ ಮಟ್ಟಿಗೆ ಮಾತ್ರ ಬಿಳಿ ಜನರು ಸಮಯಕ್ಕೆ ಸರಿಯಾಗಿ ವರ್ತಿಸುತ್ತಿಲ್ಲ ಎಂಬುದನ್ನೂ ಮರೆಯಬೇಡಿ.

ಪುರುಷರ ಅಭಿರುಚಿ

"ಮಂಗಳೂರು ನಗರ ಸಭೆಯ ವಾಚನ ಮಂದಿರವು ವಾರಕ್ಕೊಂದಾವರ್ತಿಯಾದರೂ ಪ್ರತ್ಯೇಕವಾಗಿ ಸ್ತ್ರೀಯರಿಗೆ ಸ್ವಾಗತವನ್ನೀಯುತ್ತಿರುವಾಗ ಉಡುಪಿ ನಗರ ಸಭೆಯ ವಾಚನಾಲಯವು ಮಾಸಕ್ಕೆ ಒಂದಾವರ್ತಿಯಾದರೂ ಸ್ತ್ರೀಯರ ಸ್ವಾಗತವನ್ನು ಬಯಸದಿರಲು ಕಾರಣವೇನಿರಬಹುದು, ವ್ಯಂಗ್ಯವಿಲ್ಲದ ಉತ್ತರದಿಂದ ದಯವಿಟ್ಟು ತಿಳಿಸುವಿರಾ?" 'ಶಂಕರಾನುಜ' ಉಡುಪಿ.

ತಿಳಿಸಬಹುದು. ಸ್ತ್ರೀಯರ ವಾಚನಕ್ಕನುಕೂಲವಾಗುವಂತೆ ವಾಚನಾಲಯದಲ್ಲಿ ಪ್ರತ್ಯೇಕ ವಿಭಾಗವೊಂದನ್ನು ರಚಿಸಬೇಕೆಂದು ಉಡುಪಿ ನಗರ ಸಭೆಯಲ್ಲೊಮ್ಮೆ ನಿರ್ಧಾರವಾಗಿತ್ತೆಂದು ನಮ್ಮ ನೆನಪು ಆದರೆ ಮಹಿಳೆಯರು ಓದುವ ಸಲುವಾಗಿ ನಗರ ಸಭೆಯ ವಾಚನಾಲಯಕ್ಕೆ ಬರುವದಿಲ್ಲವಾದರೆ ಸ್ಥಳ ವಿಂಗಡಿಸುವ ಶಾಸ್ತ್ರ ತೀರಿಸಿಯೇ ಬಿಡಬೇಕೆನ್ನುವದರಲ್ಲಿ ನ್ಯಾಯವಿಲ್ಲ; ಸ್ಥಳ ಸಂಕೋಚವಿಲ್ಲದೆ, ಪುರುಷರಾದರೂ ಸಾಕಷ್ಟು ದೂರ ದೂರ ಕುಳಿತು ಓದುವದಕ್ಕಡ್ಡಿಯಿಲ್ಲವಷ್ಟೆ. ಉಡುಪಿ ಮಹಿಳೆಯರು ವಾಚನಾಲಯಕ್ಕೆ ಹೋಗಿ ಓದುವದರಲ್ಲಿ, ಮಹಿಳಾ ಸಭೆಯಂತಹ ಚಟುವಟಿಕೆಗಳಲ್ಲಿ, ಮಂಗಳೂರಿನವರನ್ನು ಮುಂದುವರಿದಿಲ್ಲವೆಂದು ನಮ್ಮ ಅಭಿಪ್ರಾಯ. ಆದ್ದರಿಂದ ಮಂಗಳೂರು ನಗರ ಸಭೆಯನ್ನು ಉಡುಪಿ ನಗರ ಸಭೆ ಅನುಕರಿಸಬೇಕೆಂದಿಲ್ಲ.

ಒಟ್ಟಿಗುಂಟಲಿ ಒಳ್ಳೆಯದು ?

"ಈಗ ಹರಿಜನರೊಟ್ಟಿಗೆ ಮೇಲ್ಜಾತಿಯವರು ಕುಳಿತು ಊಟಮಾಡಿದ ವಾರ್ತೆ ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಕಡೆಗಳಿಂದ ಬರುತ್ತದೆ. ಮೂಲ್ಕಿಯ ಹರಿಜನ ಪರಿಷತ್ತಿನಲ್ಲಿಯೂ, ಯುಗಾದಿಯ ದಿನ ಉಡುಪಿಯಲ್ಲಿಯೂ ಮಿಶ್ರಭೋಜನ ನಡೆಯಿತಷ್ಟೆ. ಮೇಲ್ಜಾತಿಯವರೊಟ್ಟಿಗೆ ಉಂಡ ಮಾತ್ರಕ್ಕೆ ಹರಿಜನರ ಹೊಟ್ಟೆ ತುಂಬುವದೇ?" ಕೆ. ಜಿ. ಎಸ್. ಉಡುಪಿ.

ಎಷ್ಟುಕ್ಕೂ ಇಲ್ಲ. ಪ್ರಥಮತಃ ಮೇಲ್ಜಾತಿಯವರ ಪಂಗ್ತಿಯಲ್ಲಿ ಕುಳಿತ ಹರಿಜನರು ಪರಂಪರಾಗತ ಧರ್ಮಸಂಕಟ ಮತ್ತು ಸಂಕೋಚದ ದೆಸೆಯಿಂದ ಹೊಟ್ಟೆ ತುಂಬಾ ಉಣ್ಣದಂತಾಗುವ ಸಂಭವವೇ ಅಧಿಕ! ಮೇಲ್ಜಾತಿಯವರಿಗಿಂತ ದೂರವಾಗಿರುವದು ತಪ್ಪು ಧರ್ಮವೆಂಬ ಭಾವನೆ ಇನ್ನೂ ಹರಿಜನರಲ್ಲಿದೆ ಎಂಬುದು ಆ ಸಂಕೋಚದ ಅರ್ಥ. ಅದನ್ನು ಹೋಗಲಾಡಿಸಿ 'ಎಲ್ಲರೂ ಸಮಾನರು' ಎಂಬುದನ್ನು ಕಲಿಸಲು ಮಿಶ್ರಭೋಜನಗಳು ಅನುಕೂಲಗಳಾಗಿವೆ, ಅಷ್ಟೆ.

ಯುಗಧರ್ಮ

"ತಮ್ಮ ಅಮೂಲ್ಯ ವಾರಪತ್ರಿಕೆಯಲ್ಲಿ ಪ್ರಕಟಣೆಮಾಡಿ ಅನುಗ್ರಹಿಸಿರಿ ಎನ್ನುತ್ತಾ ನಾನು ಮೂರು ಬಹಳ ಉತ್ತಮವಾದ ಲೇಖನಗಳನ್ನು ಕಳುಹಿಸಿಕೊಟ್ಟಿದ್ದೇನೆ ನೀವು ಅವುಗಳನ್ನು ಕಸದ ಬುಟ್ಟಿಗೆ ಹಾಕುತ್ತೀರೆಂದು ನಂಬದೆ ಇದ್ದೇನೆ. ನಾಲ್ಕು ವಾರಗಳಾಯಿತು. ನನ್ನ ಲೇಖನದಲ್ಲಿ ಒಂದು ಕೂಡ ಪ್ರಕಟವಾದದ್ದು ಕಂಡು ಬರುವುದಿಲ್ಲ ನಿಮಗೆ ಆಗುವದಿಲ್ಲವಾದರೆ ಲೇಖನ ಹಿಂದೆ ರವಾನಿಸಬೇಕಿತ್ತು, ಅದರ

ಎಳೆಪ್ರಾಯದಲ್ಲೇ ಮಿತವ್ಯಯದ ಅಭ್ಯಾಸವನ್ನು ಪ್ರೋತ್ಸಾಹಿಸಿ ನಿಮ್ಮ ಹುಡುಗರ ಜೀವನಕ್ಕೆ ಕಳೆ ಏರ್ಪಾಡುಮಾಡಿರಿ

ಮಕ್ಕಳಿಗಾಗಿ ಮುಂದುವರಿಸಲ್ಪಡುವ ವಿಮೆಯ ಪಾಲಿಸಿಯೊಂದನ್ನು

ಸುಭದ್ರವೂ ಅತ್ಯಂತ ಜನಪ್ರಿಯವೂ ಆದ ಭಾರತೀಯ ಜೀವ ವಿಮಾಸಂಸ್ಥೆ

ಓರಿಯಂಟಲ್‌ನಲ್ಲಿ ಪಡೆಯಿರಿ.

--- ಮಕ್ಕಳ ಮುಂದುವರಿಸಲ್ಪಡುವ ವಿಮೆಯು ---

ನವೀನವಾದ ವಿಮಾಯೋಜನೆಯು. ಈ ಪ್ರಕಾರ ಬಹಳ ಕಡಿಮೆ ಪ್ರೀಮಿಯಮ್ ಸಾವತಿಯಿಂದ ಹೆತ್ತವರು ತಮ್ಮ ಮಕ್ಕಳ ಪೋಷಣೆಗೆ ಇಡೀ ಜೀವಮಾನದ ಯಾ ಉಂಬಳಿ ವಿಮೆಯ ಪಾಲಿಸಿಯನ್ನು ಸಂಗ್ರಹಿಸಲು ಅನುಕೂಲವಾಗುವಂತೆ ತಯಾರಿಸಿದೆ. ಇವರಲ್ಲಿ ೨೨ನೇ ವರ್ಷಕ್ಕಿಂತ ಮುಂಚಿತವಾಗಿ ಒಂದು ನಿಶ್ಚಿತ ಪ್ರಾಯದಲ್ಲಿ "ರಿಸ್ಕ" ಆರಂಭವಾಗುವುದು.

ಹೆಚ್ಚಿನ ಮಾಹಿತಿಗೆ ಇವರಿಗೆ ಬರೆಯಿರಿ:—

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್

ಸ್ಥಾಪನೆ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನ ಕಾರ್ಯಾಲಯ—ಮುಂಬಯಿ

ಅಥವಾ ದಿ ಬ್ರಾಂಚ್ ಸೆಕ್ರೆಟರಿ,

ಓರಿಯಂಟಲ್ ಲೈಫ್ ಆಫೀಸು, ಓರಿಯಂಟಲ್ ಬಿಲ್ಡಿಂಗ್ಸ್,

ಸೌತ್‌ಪರೇಡ್ ಬೆಂಗಳೂರು.

—ORIENTAL—

GOVERNMENT SECURITY LIFE ASSURANCE CO., LTD.

ಕಾರಣವನ್ನು ಕೂಡ ನೀವು ತಿಳಿಸಲಿಲ್ಲ. ದಯವಿಟ್ಟು ತಿಳಿಸುವಿರಾ?" —ಎನ್. ಎಚ್. ಕೆ. ಬೆಂಗಳೂರು.

ತಿಳಿಸೋಣ. ಲೇಖನ ಕಳುಹಬೇಕಾದರೆ ಚೀಟು ಅಂಟಿಸಬೇಕೆಂಬ ಕ್ರಮವು ಸರ್ವಸಾಧಾರಣ ಎಲ್ಲಾ ಲೇಖಕರಿಗೂ ಗೊತ್ತು. ಪತ್ರ ಪಡೆಯುವವರು ಚೀಟು ಅಂಟಿಸಬೇಕೆಂಬ ಟಪ್ಪಾಲು ಕಾನೂನಿಲ್ಲ ವೆಂಬುವನ್ನು ಕೆಲವು ಲೇಖಕರು ಸ್ಪಷ್ಟ ತಿಳಿದಿರುತ್ತಾರೆ. ತನ್ನ ಲೇಖನವು ಅಮೂಲ್ಯವಾದುದೆಂದು ಗಾಳಿಯೂದಿದ ಚೆಂಡಿನಂತೆ ಪ್ರತಿಯೊಬ್ಬ ಲೇಖಕನೂ ತನ್ನತ್ತ ಹಿಗ್ಗುವ ಸಂಪ್ರದಾಯವೊಂದಿದೆ. ವ್ಯಸನದ ಸಂಗತಿಯೆಂದರೆ ಅವರ ಲೇಖನಕ್ಕೆ ಅದೇ ಶಕ್ತಿಯಿರುವುದಿಲ್ಲ. ಗಾಳಿ ತುಂಬಿದ ಚೆಂಡಿನಂತೆ ಗುರಿಗೆ ತಾಗಿ ಅಂತೆಯೇ ಹಿಂದೆ ಹೋಗಿ ಬೀಳುವರೆ ಅದ ಕ್ಕಾಗುವುದಿಲ್ಲ. ಅಂದರೆ ಕಳುಹಿಸುವವರೂ ಟಪ್ಪಾಲು ಚೀಟು ಅಂಟಿಸಬೇಕು, ಅದನ್ನು ಹಿಂದಕ್ಕೆ ಕಳುಹುವ ಸಂಪಾದಕರೂ ಟಪ್ಪಾಲು ಚೀಟು ಅಂಟಿಸಲೇಬೇಕು. ನೀವು ಹಿಂದೆ ಕಳುಹುವರೆ ಅಥವಾ ಉತ್ತರ ಕಳುಹುವರೆ ಚೀಟು ಇಟ್ಟಿರಲಿಲ್ಲ.

ನಿಮ್ಮ ಲೇಖನಗಳು ಮೂರೇ. ಇದ್ದುದಾದರೂ ಅವುಗಳಲ್ಲಿ ನಾಮನಾಮಕಾರದ ಮೂರು ಹೆಜ್ಜೆಗಳ ಮಹತ್ವವೆಲ್ಲಾ ಇತ್ತು. ಪರಸ್ಪರ ಸಂಬಂಧವಿಲ್ಲದ ಮುನ್ನೂರು ವಿಷಯಗಳು ನಿಮ್ಮ ಮೂರರಲ್ಲಡಗಿದ್ದವು. ಪ್ರಕಟಿಸಲು ನಾವು ಹೆದರಿದೆವು;

ಸರಕಾರಿ ಬೆಂಬಲ

"ಮದ್ರಾಸ್ ಪಬ್ಲಿಕ್ ಹೆಲ್ತ್ ಆಕ್ಟಿನ ೧೨೬ (೧)ನೇ ಸೆಕ್ಷನಿನಂತೆ ಉಡುಪಿ ಮುನಿಸಿಪಾಲಿಟಿಯನ್ನು ಯಾತ್ರಾಕೇಂದ್ರವಾಗಿ ಮದ್ರಾಸ ಸರಕಾರವು ಹೇಳುವುದು ಹೊರಡಿಸಿರುವದೆಂದೂ ಅವಶ್ಯಕನುಗುಣವಾಗಿ ಡಿಸೆಂಬರ ತಿಂಗಳಾದಿಯಿಂದ ಫೆಬ್ರವರಿ ತಿಂಗಳಾಂತ್ಯದ ವರೆಗೆ ಉಡುಪಿಗೆ ಬರುವ ವಾಹನಾದಿಗಳ ಮೇಲೆ ಸುಂಕ ಹಾಕುವ ನಿರ್ಣಯವು ಮುನಿಸಿಪಾಲಿಟಿಯಲ್ಲಾಯಿತೆಂದೂ ಕೇಳುತ್ತೇನೆ. ಇದರಿಂದ ಯಾತ್ರಾರ್ಥಿಗಳ ಸಂಖ್ಯೆ ಕಡಿಮೆಯಾಗಲಾರದೆ?"–ಕೆ. ಯು. ಜೆ. ಎಮ್. ಉಡುಪಿ.

ಉಡುಪಿಯು ಯಾತ್ರಾಸ್ಥಳವೆಂಬುದಕ್ಕೆ ಈಗ ತಾನೇ ಸರಕಾರದ ಮೊಹರು ಬಿದ್ದಂತಾಯಿತು. ಇನ್ನಾವ ಅನುಮಾನಕ್ಕೂ ಆಸ್ಪದವಿಲ್ಲ. ಸರಕಾರಿ ಮಂಜೂರಾತಿಯಿಂದಾಗಿ ಯಾತ್ರಾರ್ಥಿಗಳ ಸಂಖ್ಯೆ ಹೆಚ್ಚಬೇಕಲ್ಲವೇ?

ಪ್ಯಾಲೆಸ್ತೈನ್ ಪ್ರಶ್ನೆ!

"ಹೋದವಾರ ಕೇಳಲ್ಪಟ್ಟ ಪ್ರಶ್ನೆಯೊಂದಕ್ಕೆ ನೀವು ಉತ್ತರ ಕೊಟ್ಟಿದ್ದೀರಷ್ಟೆ. ಆ ಪ್ರಶ್ನೋತ್ತರದಿಂದ ಕಾರ್ಕಳದಿಂದ ಮೂಡಬಿದ್ರೆಯ ವರೆಗಿನ ರಸ್ತೆ ಪೂರ್ಣ ಕೆಟ್ಟು ಹೋಗಿದೆಯೆಂಬ ಅರ್ಥ ಬರುತ್ತದೆ. ಅದು ಎಲ್ಲಿ ವರೆಗೆ, ಮತ್ತು ಎಷ್ಟು ದೂರಕ್ಕೆ ಹಾಳಾಗಿದೆಯೆಂದು ತಿಳಿಸುವಿರಾ?"-ಕೆ. ಆರ್. ಎಸ್. ಕಾರ್ಕಳ.

ಪಬ್ಲಿಕ್ ವರ್ಕ್ಸ್‌ನವರು ಮೈಲುಕಲ್ಲೆಂದು ಭಾವಿಸಿದಿರಾ?

ಒಂದೇ ಕಾರಣ

"ಈಗೀಗ ನಿಮ್ಮ ಪತ್ರಿಕೆಯಲ್ಲಿಯೂ ಹಿಂದು ಮುಸ್ಲಿಂ ಸಂಘ ಸಂಸ್ಥೆಗಳ ಪ್ರಚಾರಕಾರ್ಯ ಆರಂಭವಾಗಿರುತ್ತದೆ. ಪಶ್ಚಿಮ ಹಿಂದೂಸ್ಥಾನದಲ್ಲಿ ಅದರಲ್ಲೂ ನಮ್ಮ ಜಿಲ್ಲೆಯಲ್ಲಿ ಮೊದಲು ಇಂತಹ ಜಗಳಗಳಾಗುತ್ತಿರಲಿಲ್ಲ. ಉತ್ತರ ಭಾರತದಲ್ಲಿದ್ದ ಚಟುವಟಿಕೆ ಈ ಕಡೆಗೆ ಹರಡುವರೆ ಕಾರಣವಾವುದಿರಬಹುದು?" ಆರ್. ಎಸ್. ಆರ್. ಮಂಗಳೂರು

ಅದೊಂದು ಅಂಟುರೋಗವಾಗಿರುವದೇ ಕಾರಣ.

ಫ್ಲಿಟ್ ಹಾಕಿ!

'ನಾನು ಹೆಚ್ಚಿನ ಖರ್ಚು ಮಾಡಿ ಮತ್ತು ಬಹಳ ಪ್ರಯಾಸಪಟ್ಟು ಮನೆಯಿಂದಿರಲ್ಲಿ ಕಲ್ಲುಕಂಭದ ಚಪ್ಪರ ಹಾಕಿಸಿದ್ದೇನೆ. ಈಗ ನ ಮ್ಯೂನಿಸಿಪಾಲಿಟಿಯವರು ಅದನ್ನು 24 ಘಂಟೆಗಳೊಳಗೆ ತೆಗೆಯಿಸದಿದ್ದರೆ ಪ್ರಾಸಿಕ್ಯೂಟ್ ಮಾಡಲಾಗುವದೆಂದು ನೋಟೀಸು ಕೊಟ್ಟಿದ್ದಾರೆ! ಅದರಿಂದ ನನಗೆ ಬಹಳ ನಷ್ಟ ಹೇಗೂ ಆಗುತ್ತದೆ. ಅವಧಿಯೊಳಗೆ ತೆಗೆಯಿಸೋಣವೆಂದರೆ ಅಷ್ಟು ಜನಸಹಾಯ ಕೂಡ ಇಲ್ಲ. ನಿಮ್ಮ ಉತ್ತರ ಬರುವದರೊಳಗೆ ಏನಾದರೂ ಒಂದು ಇತ್ಯರ್ಥವಾಗಿ ಮುಗಿಯುವದೆಂದು ನಾನು ಬಲ್ಲೆ. ಆದರೆ ಇಂತಹ ಸಂದರ್ಭಗಳಲ್ಲಿ ಏನು ಮಾಡಬೇಕಾಗುವದೆಂದು ತಿಳಿಸ ಬಹುದೆ?" ಎಸ್. ಆರ್.

ಬೇರೇನು ತಿಳಿಸಲಿ. ಹೀಗೆ ಕ್ರಿಮಿಗಳನ್ನು ನಾಶಮಾಡುವದಕ್ಕಾಗಿ 'ಫ್ಲಿಟ್' ಎಂಬ ಪಿಚಕಾರಿಯ ರಚನೆಯಾಗಿರುವದನ್ನು ಬಲ್ಲೆವು.

ನಾಗರೀಕತೆಯಾಕಲಿ

"ಮಂಗಳೂರಲ್ಲಿ ಸಣ್ಣ ಕಾರಣದಿಂದ ಹುಟ್ಟಿದ ಜಗಳವು ಮೊಗವೀರ-ಮಾಪಿಳ್ಳೆ ಜಗಳವಾಗಿ ಪರಿಣಮಿಸುವಷ್ಟು ಭಯಂಕರವಾಗುವದರಲ್ಲಿತ್ತು. ಬೆಂಗರೆಯಿಂದ ಬರುತ್ತಿದ್ದ ಮೊಗವೀರರ ದೋಣಿಯೊಂದಕ್ಕೆ ಮಾಪಿಳ್ಳೆಯೊಬ್ಬನ ದೋಣಿ ಢಿಕ್ಕಿ ಹೊಡೆದು ಅಲ್ಲಿ ಹೊಡೆದಾಟ ನಡೆಯಿತು. ಆ ವೇಳೆ ಪೇಟೆಯಲ್ಲಿ ಆ ದೋಣಿಯಲ್ಲಿದ್ದ ಮೊಗವೀರರಿಗೆ ಪೆಟ್ಟು ಬಿತ್ತು. ಜಗಳ ದೊಡ್ಡದಾಗುವದರಲ್ಲಿರುವಾಗ ಕೆಲವರು ರಾಜಿಮಾಡಿ ತಪ್ಪಿತಸ್ಥ ಮಾಪಿಳ್ಳೆಗೆ 10 ರೂ. ದಂಡ ವಿಧಿಸಿದುದರಿಂದ ಎಲ್ಲವೂ ಶಾಂತವಾಯಿತು. ಹಿಂದು ಮುಸ್ಲಿಂ ಜಗಳವನ್ನು ದೊಡ್ಡದು ಮಾಡುವ ಬದಲಿಗೆ ಹೀಗೆ ತೀರ್ಮಾನಪಡಿಸುವದು ಉತ್ತಮವಲ್ಲವೆ?"–ಎನ್. ಕೆ. ಎಸ್. ಮಂಗಳೂರು

ನಿಜ. ಆದರೆ ಇಂತಹ ತೀರ್ಮಾನಗಳು ಕಾಕತಾಳೀಯ ರಮನಗಳಾಗಿರಬಾರದು. 'ಹತ್ತು ರೂಪಾಯಿ ಕೊಡಿಸಿಟ್ಟು ಇಬ್ಬರಿಗೆ ಹೊಡಿ' ಎಂಬ ಗಾದೆ ಜ್ಞಾಪಿಯಲ್ಲಿರದಂತೆ ನೋಡಿಕೊಂಡರಾಯಿತು.

ಗುಟ್ಟಿಗೆ ಗುಟ್ಟು

"ನಾನೊಬ್ಬ ವಿದ್ಯಾರ್ಥಿ. ನನ್ನ ದರ್ಜೆಯ ವಿದ್ಯಾರ್ಥಿನಿಯೊಬ್ಬಳನ್ನು ಪ್ರೀತಿಸಿ ಹಲವು ಬಾರಿ ನಿರಾಶೆ ಹೊಂದಿದ್ದೆ. ನನ್ನ ಸಹಪಾಠಿಗಳ ಪರಿಹಾಸ್ಯಕ್ಕೆ ಹಲವು ಬಾರಿ ಒಳಗಾಗಿದ್ದೆ. ಈಗ ಅವಳು ನನ್ನನ್ನು ಪ್ರೀತಿಸಹತ್ತಿದ್ದಾಳೆ. ಆದರೆ ಅವಳ ಪ್ರೇಮವು ಗುಪ್ತವಾದುದು ನಾನು ಜಯಿಸಿದೆನೆಂಬುದನ್ನು ಸಹಪಾಠಿಗಳಿಗೆ ದೃಷ್ಟಾಂತ ಮೂಲಕ ತಿಳಿಸುವುದಕ್ಕೆ ಅವಳು ಅವಕಾಶವನ್ನೇ ಕೊಡುವುದಿಲ್ಲ. ಮಿಕ್ಕವರಿದಿರಲ್ಲಿ ಮೊದಲಿನಷ್ಟೇ ಗಂಭೀರವಾಗಿ ವರ್ತಿಸುತ್ತಾಳೆ. ಅವಳು ಬಹು ಸಂಕೋಚ ಸ್ವಭಾವದವಳು. ಅವಳು ನನ್ನನ್ನು ನಿಸ್ಸಂಕೋಚವಾಗಿ ಪ್ರೀತಿಸಬೇಕಾದರೆ ನಾನೇನು ಮಾಡಬೇಕು?"-ಎಲ್. ಎಸ್. ಎಲ್. ಕುಲಬುರ್ಗಿ.

ಆ ಕೊರತೆ ಹೀಗೆ ಅಕ್ಕರೊಡನೆ ಪ್ರಶ್ನೆ ಕೇಳದಿರಬೇಕು.

—ಪ್ರಶ್ನಕಾರಿ

ಅಂತರಂಗದ CINEMA SPECIAL NUMBER

ಅಥವಾ

"ಚಲಚ್ಚಿತ್ರಾಂಕ"

ತಾ. 30—6—'40ಕ್ಕೆ ಹೊರಬೀಳಲಿದೆ.

ಜಾಹೀರಾತಿಗೆ ಉತ್ತಮ ಸಾಧನ

ದರಗಳಿಗೆ ಬರೆಯಿರಿ.

Advertisement Manager,

Antaranga, Udipi.

ಒಮ್ಮೆ ತೊಡಗಿದಿರೆಂದರೆ ಕಡೆತನಕವೂ ಓದದೆ ಬಿಡಲಾಗದ ಪುಸ್ತಕ—

ಪಂಚಾರತಿ

'ಭಾರತೀ ಗ್ರಂಥಮಾಲೆ'ಯವರು ನೂತನವಾಗಿ ಪ್ರಕಟಿಸಿದ ಕರ್ನಾಟಕದ ಪ್ರಸಿದ್ಧ ಬರಹಗಾರರೈವರ ಐದು ಏಕಾಂಕ ನಾಟಕಗಳ ಸಂಗ್ರಹ.

(೧) ಮುಸುಕು (ಶ್ರೀ. ಎಸ್ ಕೆ. ಕುಲಕರ್ಣಿ, ಎಂ ಎ)
(೨) ದಾಯ ಶಿಕ್ಷೆ (ಶ್ರೀ ಎಸ್. ವೆಂಕಟರಾಜ.)
(೩) ಜ್ವಾಲಾಮುಖಿ (ಶ್ರೀ. ಬಿ ಅಶ್ವತ್ಥನಾರಾಯಣ ರಾವ್)
(೪) ಭಾಮಿನಿಯ ಭಾಗ್ಯೋದಯ (ಪ್ರೊ. ಆರ್. ವಿ. ಜಾಗೀರ್‌ದಾರ್ ಎಂ. ಎ. (ಲಂಡನ್)
(೫) ಒಂದು ಜೋಡಿಗೆ ಮೂರು ಸಾವಿರ (ಶ್ರೀ ಕೊರಡ್ಕಲ್ ಶ್ರೀನಿವಾಸ ರಾವ್)

ಮನೋಹರವಾದ ಅಂತರಂಗ! ಚಿತ್ತಾಕರ್ಷಕ ಬಹಿರಂಗ!!

80 ಪುಟಗಳು ಬೆಲೆ 0—4—0

ನವಭಾರತ ಪುಸ್ತಕ ಭಂಡಾರ, ಉಡುಪಿ.

(0—5—0 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು)

ಸ್ಥಾಪನೆ 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತು ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೀಲ್ ಲೆಟರ್ಸ್ ಪಾಕೆಟ್ ಸ್ಟಾಂಪು, ಮೊನೊಗ್ರಾಮ್ ಸೀಲು ಇತ್ಯಾದಿಗಳು ಕ್ಲಪ್ತ ಕಾಲದಲ್ಲಿ ಮಾಡಿಕೊಡಲ್ಪಡುವವು.

Crown Rubber Stamp Co., 18 Balmat Road, MANGALORE

Approved firm by the Govt. of Mysore. Certified by the Agent of the Govt. of India in Ceylon

ನಿಮ್ಮ ಮನೆಯಲ್ಲಿ ಸದಾ ಆನಂದದ ಜ್ಯೋತಿಯು ಬೆಳಬೆಳಗುತ್ತಿರಬೇಕೇ? ಹಾಗಿದ್ದರೆ— —

ನಂದಾದೀಪ

ಎಂಬ ಉತ್ಕೃಷ್ಟ ಚಿಕ್ಕಕತೆಗಳ ಪ್ರತಿಯೊಂದನ್ನಿಟ್ಟುಕೊಳ್ಳಿ.

ಕರ್ನಾಟಕದ ಪ್ರಸಿದ್ಧ ಕತೆಗಾರರಲ್ಲೊಬ್ಬರಾದ ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರು ಬರೆದ ಮನೋಹರವಾದ ಹನ್ನೊಂದು ಕತೆಗಳ ಸಂಗ್ರಹ.

ಪ್ರತಿಯೊಂದು ಕತೆಯೂ ನಿಮ್ಮ ಹೃದಯದಲ್ಲೊಂದು ಬಗೆಯ ಹೊಸ ಬೆಳಕನ್ನು ಬೆಳಗಿಸುವುದು.

ಬೆಲೆ: 0-8-0 ಟಪ್ಪಾಲು ದ್ವಾರ: 0-9-0

ಕಿರಿಯರ ಪ್ರಪಂಚ, ಉಡುಪಿ.

(0-9-0 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು)

ಈ ಯುದ್ಧದ ಭವಿಷ್ಯ ಹೇಳಿದವರು!

ಭವಿಷ್ಯಗಳನ್ನು ನಂಬುವವರು ಈಗ ಪ್ರಪಂಚದ ಪ್ರತಿಯೊಂದು ದೇಶದಲ್ಲಿಯೂ ಇದ್ದಾರೆ. ಸಾಮಾನ್ಯ ಸಂಗತಿಗಳ ಮಾತಂತಿರಲಿ, ಪ್ರಪಂಚದ ದೊಡ್ಡ ದೊಡ್ಡ ಘಟನೆಗಳ ಕುರಿತು ಭವಿಷ್ಯಹೇಳಿ ಹೌದೆನ್ನಿಸಿಕೊಂಡವರೆಷ್ಟೋ ಮಂದಿ ಇದ್ದಾರೆ. ಈಗ ನಡೆಯುತ್ತಿರುವ ಯುರೋಪು ಯುದ್ಧವು ಎಂಟು ಶತಮಾನಗಳ ಪೂರ್ವದಲ್ಲಿಯೇ ಒಂದು ಕವಿತಾರೂಪದಲ್ಲಿ ಉಲ್ಲೇಖಿಸಲ್ಪಟ್ಟದ್ದಿತೆಂದರೆ ನಿಮಗೆಲ್ಲಾ ಆಶ್ಚರ್ಯವಾಗಬಹುದು.

ಸನ್ಯಾಸಿಯ ಕವನ

ಹಿಟ್ಲರನ ಮತ್ತು ಅವನ ಆಡಳಿತೆಯ ಪತನವನ್ನು ವರ್ಣಿಸುವ ಕವಿತೆಯೊಂದು ಜರ್ಮನಿಯಲ್ಲಿ ಗುಟ್ಟಾಗಿ ಪ್ರಚಾರದಲ್ಲಿದೆ. ಅದನ್ನು ಹನ್ನೆರಡನೆಯ ಶತಮಾನದಲ್ಲಿ ಬರೆಯಲಾಗಿತ್ತಂತೆ. ಬ್ರಾಂಡೆನ್‌ಬರ್ಗಿನಲ್ಲಿದ್ದ ಒಬ್ಬ ಸನ್ಯಾಸಿಯು ಅದನ್ನು ರಚಿಸಿದನೆಂದೂ, ದೈವಿಕ ಸ್ಫುರಣೆಯಿಂದ ಆ ಕವಿತೆ ಹೊರಬಿತ್ತೆಂದೂ ಅದನ್ನು ಗುಟ್ಟಿನಿಂದ ಪ್ರಚಾರಮಾಡುವವರನ್ನುತ್ತಾರೆ. ಆ ಕವಿತೆಯಲ್ಲಿದ್ದ ಕೆಲವಂಶಗಳನ್ನು ಚರಿತ್ರೆಯು ಉದ್ಧರಿಸುವಂತಾಗಿದೆ-ಅವು ಇಷ್ಟರಲ್ಲೇ ನಡೆದುಹೋಗಿವೆ. ಇನ್ನು ಕೆಲವು ವಿಷಯಗಳ ಸತ್ಯಾಸತ್ಯತೆಯನ್ನು ಭವಿಷ್ಯತ್ಕಾಲದಲ್ಲಿ ಕಾಣಲಿಕ್ಕಿದೆ.

ಆ ಕವಿತೆಯಲ್ಲಿ ಕೈಸರನು ಪತನಹೊಂದುವನೆಂದೂ ಒಬ್ಬ ಅಲ್ಪ ಮನುಷ್ಯನು ಇಡೀ ಜರ್ಮನಿಯನ್ನು ಹತೋಟಿಯಲ್ಲಿಟ್ಟುಕೊಳ್ಳುವ ಪದವಿಗೇರುವನೆಂದೂ ಉಲ್ಲೇಖಿಸಲ್ಪಟ್ಟಿದೆ. ಅದರಲ್ಲಿ ಮುಂದೆ [illegible] ಜರ್ಮನಿಯಲ್ಲಿ ನಡೆ[illegible] ಎಂದಿದೆ. ಜರ್ಮನಿಯು ಈ ನಾಯಕನು ದೇಶವನ್ನು ಸಂಪೂರ್ಣ ನಿರ್ನಾಮಗೊಳಿಸುವ ಅಪಾಯಕಾರೀ ಯುದ್ಧವೊಂದಕ್ಕಿಳಿಸುವನೆಂದೂ ಆ ಕವಿತೆಯಲ್ಲಿದೆ! ಹೀಗೆ ಅದು ಬರಿಯ ಒಂದು ಕವನವಾಗಿರದೆ ಹಿಟ್ಲರ್ ಮತ್ತು ಜರ್ಮನಿಯ ಸ್ಪಷ್ಟ ಜಾತಕದಂತಿದೆ!

ಸೇನಾಧಿಪತಿಯ ಭವಿಷ್ಯ

ಮೇಲಿನ ಸಂಗತಿಯಲ್ಲಿ ವಿಮರ್ಶೆಗವಕಾಶವಿದೆ. ಅದು ಹಿಟ್ಲರ್ ವಿರೋಧಿಗಳ ಚಾತುರ್ಯಪೂರ್ಣ ಅಪಪ್ರಚಾರವಾಗಿರಬಾರದೇಕೆ? ಆ ಕವನ ಹನ್ನೆರಡನೆ ಶತಮಾನದಲ್ಲೇ ಬರೆಯಲ್ಪಟ್ಟದ್ದಿತೆಂಬುದಕ್ಕೆ ದಾಖಲೆಯೇನು? ಮುಂತಾದ ಅನುಮಾನಗಳೇಳಬಹುದು. ಇಂತಹ ಸಂದೇಹಗಳಿಗೆ ಎಡೆಯಿರದ ಮತ್ತೊಂದು ಮಾತಿದೆ. 1904ರಲ್ಲಿ ರಶ್ಯಾ-ಜಪಾನು ಯುದ್ಧ ನಡೆಯುತ್ತಿತ್ತು. ಆ ಯುದ್ಧದ ಅಂತಿಮ ಭಾಗದಲ್ಲಿ ಜಪಾನೀ ಸೈನ್ಯದ ಕಮಾಂಡರನಾಗಿದ್ದ ಸುಪ್ರಸಿದ್ಧ ಜನರಲ್ ನೋಗಿಯು ತನ್ನ ಸಹೋದ್ಯೋಗಿಗಳನ್ನು ಸೇರಿಸಿ ಸಂಭಾಷಣೆಗೆ ತೊಡಗಿದ್ದ. ಯುದ್ಧ ಸಂಗತಿಗಳ ಮಾತುಕತೆಯ ನಡುವೆ ಜನರಲ್ ನೋಗಿ ಹೇಳಿದ:-"ಮಿತ್ರರೇ, ಇಂದಿನ ಯುದ್ಧ ಮೇತದವು! ಇದು ಮುಂದೆ ಸಂಭವಿಸಲಿರುವ ಅನರ್ಥಕಾರೀ ಮಹಾಯುದ್ಧಗಳೆ [illegible] ಫ್ರೆಂಚ [illegible] ರಷ್ಯಾ ಕೈಯನ್ನು [illegible] ದುಕೊಳ್ಳುವದು. ಅದರ ಪರಿಣಾಮವಾಗಿ ಆಂಗ್ಲೋ-ಫ್ರೆಂಚರ ಸಂಬಂಧ ಉತ್ತಮಗೊಳ್ಳುವದಲ್ಲದೆ ಆಂಗ್ಲೋ-ಜರ್ಮನಿಗಳು ಪ್ರತಿಸ್ಪರ್ಧಿಗಳಾಗಿ ನಿಲ್ಲುವವು. ಎರಡನೇ ಯುದ್ಧದಲ್ಲಿ ಫ್ರಾನ್ಸು ಮತ್ತು ಜರ್ಮನಿಗಳು ಇದಿರಿದಿರಾಗುವವು. ಈ ಯುದ್ಧದ ಪರ್ಯವಸಾನ ಹೇಗೆಂಬುದರಲ್ಲೂ ನನಗನುಮಾನವಿಲ್ಲ. ಫ್ರಾನ್ಸು ನೆಲದ ಮೂಲಕವೂ ಇಂಗ್ಲೆಂಡು ಜಲ ಮಾರ್ಗವಾಗಿಯೂ ಜರ್ಮನಿಯನ್ನು ಪುಡಿಗುಟ್ಟುವವು. ಈ ಯುದ್ಧವೆ ದೀರ್ಘ ಕಾಲದವರೆಗೆ, ಬಹುಶಃ ಎಂದೆಂದಿಗೂ ಕೊನೆಯ ಯುದ್ಧವಾಗುವದು."

ಜಪಾನೀ ಸೇನಾಧಿಪತಿಯ ಭವಿಷ್ಯದ ಒಂದಂಶವು ಅಕ್ಷರಶಃ ನಿಜವಾಗಿ ಪರಿಣಮಿಸಿದೆ. ಕಳೆದ ಮಹಾಯುದ್ಧದ ಮುಂದಾಗಿಯಲ್ಲ, ನಂತರ ಹೇಳಿದನೋ ಎಂಬಷ್ಟು ಸತ್ಯವಾಗಿದೆ! ಎರಡನೆ ಯುದ್ಧದ ಕುರಿತು ಅವನಾಡಿರುವ ಭವಿಷ್ಯವಾದರೂ, ಈ ತನಕ ಸತ್ಯವೇ ಆಗಿದೆ. ಅವನ ಕೊನೆಯ ಮಾತಿನ ಸತ್ಯಾಸತ್ಯತೆಯನ್ನು ತೋರಿಸುವ ಕಾಲವು ಮುಂದಕ್ಕಿದೆ. ಇದೇನು, ಯುದ್ಧಗತಿ, ಕಾಲಗತಿಯ ಕುರಿತು ಜಪಾನೀ ಕಮಾಂಡರನಿಗಿದ್ದ ಅಸಾಧಾರಣ ಜ್ಞಾನದ ಪರಿಣಾಮವೋ? ಜ್ಯೋತಿಷ್ಯದ ಪ್ರಭಾವವೋ?

ಪ್ರಾಣ ಬಿಡುವಷ್ಟು ನಂಬಿಕೆ!

ಇವೆರಡಕ್ಕಿಂತಲೂ ಆಶ್ಚರ್ಯಕರವಾದ ಭವಿಷ್ಯವೆಂದರೆ ಫ್ರಾನ್ಸಿನ ಮುತ್ಸದ್ದಿ ಎಮ್. ಹೆನ್ರಿ ಡಿ ಜೋವೆನಲ್ ಎಂಬವನದು. ಜೋವೆನಲ್ ಆ ಕಾಲದ ಫ್ರಾನ್ಸಿನ ಪ್ರಸಿದ್ಧ ವ್ಯಕ್ತಿಗಳಲ್ಲೊಬ್ಬ. ಅವ ರೋಮ್‌ನಲ್ಲಿ ಫ್ರೆಂಚ್ ರಾಯಭಾರಿಯಾಗಿ ಕೆಲಕಾಲ ಕೆಲಸ ಮಾಡಿಯೂ ಇದ್ದ.

ಜೋವೆನಲ್ ಪ್ರಾಪಂಚಿಕ ವಿದ್ಯಮಾನಗಳ ಗಾಢ ವಿಮರ್ಶಕ. ಅವನ ಬುದ್ಧಿಶಕ್ತಿಯು ಪರಿಚಿತರನ್ನೆಲ್ಲಾ ಆಶ್ಚರ್ಯಗೊಳಿಸುವಷ್ಟಿತ್ತು. 1927ರಲ್ಲಿ ಜನಾಂಗಸಭೆಯ ಪ್ರತಿನಿಧಿಯಾಗಿ ಆರಿಸಲ್ಪಟ್ಟುದರಿಂದ ಅವ ತನ್ನ ಸ್ಥಾನಕ್ಕೆ ರಾಜಿಕೊಡಬೇಕಾಯಿತು. ಒಂದು ಸಾರ್ವಜನಿಕ ಔತಣ ಸಮಾರಂಭದಲ್ಲಿ ಭಾಷಣಮಾಡುವಾಗ ಅವನಾಡಿದ ಮಾತುಗಳಿವು:- "1935ನೇ ವರುಷದ ಕಡೆಗೆ ಲಕ್ಷ್ಯವಿರಲಿ. ಯುರೋಪಿನಲ್ಲಿ ಯುದ್ಧವೇಳುವದು. ಆ ವರುಷಾನಂತರದ ಕಾಲವು ನನಗೆ ಅತಿ ಭಯಂಕರವಾಗಿ ಕಾಣುತ್ತಿದೆ. ಯುದ್ಧಜ್ವಾಲೆ ಅಟ್ಲಾಂಟಿಕಿನಿಂದ ರಶ್ಯದ ಗಡಿಯವರೆಗೆ, ಬಾಲ್ಟಿಕಿನಿಂದ ಏಡ್ರಿಯಾಟಿಕಿನವರೆಗೆ ಹಬ್ಬಬಹುದು." ಇಷ್ಟನ್ನು ಹೇಳಿ ಅವನು ಯುದ್ಧಕ್ಕಿಳಿವ ರಾಷ್ಟ್ರಗಳ ಹೆಸರು ಮತ್ತು ಕಾರಣಗಳನ್ನೆಲ್ಲಾ ಸವಿವರವಾಗಿ ಹೇಳಿಬಿಟ್ಟ. ತನ್ನ ಪಿತೃಭೂಮಿ ಫ್ರಾನ್ಸು ಯುದ್ಧಕ್ಕಿಳಿದು ಸಾವಿರಾರು ಪುತ್ರರನ್ನು ಬಲಿಕೊಡಬೇಕಾಗುವದೆಂದು ಜೋವೆನಲ್ ಗದ್ಗದಕಂಠದಿಂದ ಉದ್ಗಾರ ತೆಗೆದಿದ್ದ.

1935ರಲ್ಲಿ ಎದ್ದ ಸ್ಪೈನ್ ಯುದ್ಧಾರಂಭವೇ ಇಂದಿನ ಗೊಂದಲದ ಮೂಲವೆಂದು ಬೇರೆ ಹೇಳಬೇಕಾಗಿಲ್ಲ. ಜೋವೆನಲ್ ತನ್ನ ಭವಿಷ್ಯದಲ್ಲಿ ಎಷ್ಟೊಂದು ವಿಶ್ವಾಸವಿಟ್ಟಿದ್ದನೆಂಬುದಕ್ಕೆ ಅವನ ಮರಣವೊಂದು ನಿದರ್ಶನ.

1935ರಲ್ಲಿ ಒಂದು ದಿನ ಪತ್ರಿಕೆಯೊಂದನ್ನು ತೆಗೆದುಕೊಂಡು ಬಿಡಿಸಿದಾಗಲೇ ಸ್ಪೈನ್ ಯುದ್ಧಾರಂಭವಾಯಿತೆಂದಿದ್ದ [illegible] ಅಕ್ಷರಗಳು ಜೋವೆನಲನ ಕಣ್ಣಿಗೆ ಬಿದ್ದವು. ಒಡನೆಯೇ ಅವನು ವಿದ್ಯುತ್ಪ್ರವಾಹಕ್ಕೆ ಸಿಕ್ಕಿದಂತಾಗಿ ಹೋದ. ಆ ಅವಘಡದಲ್ಲಿ ಸಾಯುವಾಗ: "ಇದೀಗ ಪ್ರಾರಂಭ ಮಾತ್ರ...." ಎನ್ನುತ್ತಾ ಪ್ರಾಣಬಿಟ್ಟ!

ಆದರೆ ಆ ಸಮಯದಲ್ಲಿ ಆ ಮಾತಿಗೆ ಅಷ್ಟು ಬೆಲೆ ಯಾರು ಕೊಡಬೇಕು? ಪತ್ರಿಕೆಗಳು ಪದ್ಧತಿಯಂತೆ ಅವನ ಕೊನೆಯ ಶಬ್ದಗಳನ್ನು ಮರಣದ ವಾರ್ತೆಯೊಂದಿಗೆ ಪ್ರಕಟಿಸಿ ಒಂದು ದಾಖಲೆಯನ್ನೇನೋ ಮಾಡಿದವು. ಅವನ ಮರಣಕ್ಕೆ ಅನಗತ್ಯ ನಿರಾಶೆಯ ಕಾರಣದಿಂದ ಹೊಂದಿದ ನಿತ್ರಾಣವೇ ಕಾರಣವೆಂದು ಪ್ರಕಟಿಸಿದವು. ಆದರೆ ಅದಿಂದು ಬ್ರಹ್ಮ ನಿಘಂಟುವಿನಷ್ಟು ಸತ್ಯವಾಗಿ ಪರಿಣಮಿಸಿದೆ!

DEGREES! BOOKS! MEDICINE!

Free H. L. M. S. H. M. D. Homoeo-Ayur—Unani—Naturo— E. H. Bioch—Degrees by correspondence also. Practitioners also, get soon. Homoeo-materia-medica Rs. 5/— Homoeo-practice book Rs. 4/-Insanity cure pills Rs. 10/-Enclose 2 annas stamps:—

Principal, **Indian Homoeo-Inst-Society**
(Govt. Regd)
P. O. Mahuva (Kathiawar, India)

ಈ ವಾರದ ಭವಿಷ್ಯ

ತಾರೀಖು 9-5-1940ರಿಂದ 16-5-1940ರ ವರೆಗೆ

ಮೇಷ—ನಿಮ್ಮ ಶಕ್ತಿ ಸಾಹಸಗಳ ಪ್ರದರ್ಶನಕ್ಕಿದು ಸುಸಮಯವು. ಮಾಡತಕ್ಕ ಕಾರ್ಯವು ಯಾವೊಂದು ರೀತಿಯ ತೊಂದರೆಗಳಿಲ್ಲದೆ ಕೊನೆಗೊಂಡು ಇಷ್ಟಾರ್ಥವನ್ನು ಪೂರೈಸಲಿದೆ. ಆದರೆ ಆಯುಕ್ತಿಯ ದ್ವಿಗುಣವಾಗಿರತಕ್ಕ ನಿಮ್ಮ ಖರ್ಚನ್ನು ಯಾವ ವಿಧದಿಂದಲೂ ಕಡಿಮೆ ಮಾಡಲು ಬರದು. ಅದಕಾರಣದಿಂದಲೇ ನಿಮಗೆ ಅಡಚಣೆ ಮೇಲಿಂದ ಮೇಲೆ ಹುಟ್ಟುತ್ತಿದೆ. ನಿಮ್ಮಲ್ಲಿರತಕ್ಕ ಧೀರ ಸ್ವಭಾವವೇ ನಿಮ್ಮ ಪ್ರಗತಿಗೆ ತುಂಬಾ ಅಡ್ಡಿ ಮಾಡುತ್ತಿದೆ. ಆದರೂ ತಾ. 11, 12 ಈ ದಿವಸಗಳಲ್ಲಿ ನೀವು ಶ್ರಮಪೂರ್ವಕವಾಗಿ ನಿಮ್ಮ ಧ್ಯೇಯವನ್ನು ಸಾಧಿಸುವಿರಿ.

ವೃಷಭ—ಈ ವಾರದಲ್ಲೇ ನಿಮ್ಮ ಜನ್ಮರಾಶಿಗೆ ರವಿಯು ಬರುವನು, ಪಾಲಿಗ್ರಹ ಸಮಾಗಮದಲ್ಲಿ ಸಿಲುಕಿರತಕ್ಕ ನಿಮಗೆ ಚಿತ್ರವಿಚಿತ್ರ ವಿಚಾರಗಳಿಂದ ದೇಹಪೀಡೆಯುಂಟಾಗುತ್ತಿದೆ. ರಾಜಕೀಯ ಕ್ಷೇತ್ರದಲ್ಲಿ ಪ್ರವಾಸಾದಿಗಳಿಂದಲೂ ಹಣವು ನೀರಿನಂತೆ ವ್ಯಯಿಸಿ ಹೋಗುತ್ತದೆ. ಇಷ್ಟಾರ್ಥಗಳಿಂದಲೂ ನಿದ್ವಿಷಕಾರರ ಸದಾ ಕೋಪಾಗ್ನಿಯಿಂದ ತಪ್ತರಾಗುವಿರಿ. ಗುರುಹಿರಿಯರಿಂದಲೂ ಕೆಳವರ್ಗದ ಜನರಿಂದಲೂ ಅಧಿಕಾರಿ ವರ್ಗದವರಿಂದಲೂ ಮನೋವೇದನೆಯು ವೃದ್ಧಿಯಾಗಲಿದೆ. ಹಣದ ಅಡಚಣೆಯು ವಿಶೇಷವಾಗಲಿದೆ, ಆದರೂ ತಾ. 9, 13, 14 ಈ ಮೂರು ದಿನಗಳಲ್ಲಿ ದೈವಾಚಾರ್ಯರ ಕೃಪೆಯಿಂದಲೂ ಚಂದ್ರ ಬಲದಿಂದಲೂ ಗೃಹಸುಖ, ಇಷ್ಟ ಭೋಜನ, ಮಿತ್ರ ಸಮಾಗಮಾದಿಗಳು ಜರಗಲಿವೆ.

ಮಿಥುನ—ಈಗೀಗ ನಿಮ್ಮ ಜೀವನ ಪಥದಲ್ಲಿ ಕಂಟಕ ಕೊಂಬ ವಿಘ್ನಗಳು ಬಂದು ಅಸ್ತಂಗತವಾಗಲಿವೆ, ಆದರೂ "ಸ್ವಧರ್ಮೇ ನಿಧನಂ ಶ್ರೇಯಃ" ಎಂಬ ಗೀತಾವಾಕ್ಯಾನುಸಾರವಾಗಿ ಅಧರ್ಮಕ್ಕೆ ಮನಗೊಡದೆ ಸದುದ್ದೇಶದಲ್ಲೇ ಮುಂದುವರಿದರೆ ಹಲವು ತೊಡಕುಗಳಿಂದ ಪಾರಾಗುವಿರಿ. ಸ್ವದೇಶದ ವಿಚಾರವಾಗಿ ಹೆಚ್ಚಿನ ಎಚ್ಚರಿಕೆ ತೆಗೆದುಕೊಳ್ಳಿರಿ. ಆಕಸ್ಮಿಕ ಪೆಟ್ಟು ಗಾಯ ವಗೈರೆಗಳು ಸಂಭವಿಸುವಂತಿವೆ, ಉದ್ಯೋಗವು ನಿರರ್ಗಳವಾಗಿರುವುದರಿಂದ ತುಂಬಾ ಲಾಭವನ್ನು ಪಡೆಯುವಿರಿ. ಗುರುದೇವತಾನುಗ್ರಹದಿಂದ ಸಂಸಾರದಲ್ಲಿ ಸುಖ ಸಂತೋಷದಿಂದ ನಲಿಯುವಿರಿ. ತಾ. 10, 11, 12, 15, 16 ಈ ದಿನಗಳು ಸಫಲೋತ್ಕೃಷ್ಟಗಳಾಗಿವೆ.

ಕರ್ಕಟಕ—"ಉದ್ಯೋಗಂ ಪುರುಷಲಕ್ಷಣಂ" ಎಂಬ ನೀತಿ ವಾಕ್ಯಕ್ಕನುಸಾರವಾಗಿ ನೀವು ಒಳ್ಳೇ ಹುರುಪಿನಿಂದ ಕೆಲಸ ಮಾಡುವಿರಿ, ನಿಮ್ಮ ಪ್ರಯತ್ನಕ್ಕೆ ತಕ್ಕ ಫಲವೂ ದೊರೆಯುವುದು. ಆದರೂ ನಿಮ್ಮ ಅಡಚಣೆ ತಪ್ಪುವಂತಿಲ್ಲ. ನಿಮ್ಮ ಖರ್ಚಿನ ವಿಚಾರವಾಗಿ ನೀವು ವಹಿಸುವ ಅಲಕ್ಷ್ಯವೇ ಇದಕ್ಕೆ ಕಾರಣವೆನ್ನಬಹುದಲ್ಲ. ಕಷ್ಟಾರ್ಜಿತವಾದ ಧನದಲ್ಲಿ ಈ ರೀತಿಯ ಔದಾರ್ಯಕ್ಕೆ ನಿಮ್ಮ ವಿಧಿಯೇ ಕಾರಣವು, ಆರೋಗ್ಯವೂ ಕೂಡ ಸಂಪೂರ್ಣ ಉತ್ತಮವಾಗಿರದು. ನೌಕರಿ ವ್ಯಾಪಾರಾದಿಗಳಲ್ಲಿ ರಾಜಕೀಯ ಕ್ಷೇತ್ರಗಳಲ್ಲಿ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಬೇಕಾಗಿಲ್ಲ. ತಾ. 10, 11, 12, 15, 16ರಲ್ಲಿ ವಿರೋಧಿಗಳಿಂದ ಧನ ವಾಹನಗಳಿಗೆ ಹಾನಿಯೂ ಆರೋಗ್ಯಕ್ಕೆ ಕೊಂಚ ಧಕ್ಕೆಯೂ ಉಂಟಾಗಲಿದೆ.

ಸಿಂಹ—ಭಾಗ್ಯ ಸ್ಥಾನದಲ್ಲಿ ಗುರುವು ಕರ್ಮದಲ್ಲಿ ರವಿಯೂ ಲಾಭದಲ್ಲಿ ಕುಜ ಶುಕ್ರರೂ ಆಸೀನರಾಗಿರುವುದರಿಂದ ನಿಮ್ಮ ಪರಿಸ್ಥಿತಿಯು ಸದ್ಯ ಉತ್ತಮ ರೀತಿಗೆ ಬರಲಿದೆ. ನಾನಾರೀತಿಯಿಂದ ಧನ ಸಂಪಾದಿಸಿ ಹಿಂದಿನ ಋಣದಿಂದ ಮುಕ್ತರಾಗಲಿರುವಿರಿ. ಪ್ರತಿಯೊಂದು ಕಾರ್ಯದಲ್ಲೂ ನವ ಸ್ಫೂರ್ತಿಯಿಂದ ಮುಂದುವರಿವಿರಿ, ಧನ ಜನ ಬಲವು ಸಾಕಷ್ಟಿರುವುದರಿಂದ ಯಾವ ಚಿಂತೆಯೂ ನಿಮ್ಮನ್ನು ಕೊರೆಯಲಾರದು. ನಿಮ್ಮಲ್ಲಿ ರೂಢ ಮೂಲವಾಗಿರುವ ನಾಸ್ತಿಕತ್ವದ ಫಲವೋ ಎಂಬಂತೆ ಕೆಲವರು ಮಹಾ ಜನರೇ ನಿಮಗೆ ವಿರೋಧವಾಗಿ ನಿಲ್ಲುವ ಸಂಭವವಿದೆ, ಯಾವುದನ್ನೂ ಸದ್ಯ ಪ್ರತಿಭಟಿಸುವ ಶಕ್ತಿ ನಿಮಗಿರುವುದರಿಂದ ತಾ. 13, 14ನ್ನು ಬಿಟ್ಟು ಇತರ ದಿನಗಳನ್ನು ಅನಾಯಾಸದಿಂದ ಕಳೆಯುವಿರಿ.

ಕನ್ಯಾ—ಬಲವತ್ತರವಾದ ವಿಧಿಯು ಸದ್ಯ ನಿಮ್ಮನ್ನು ಕಾಡುತ್ತಲಿದೆ. ಜಪ ಸ್ತೋತ್ರಾದಿಗಳಿಂದ ಇವುಗಳ ಉಪಟಳವನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಿಕೊಳ್ಳಬಹುದು. ಸ್ತ್ರೀಯರೂ ಹಿರಿಯರೂ ಸಕಲರೂ ನಿಮ್ಮ ಭಾಗಕ್ಕೆ ವೈರಿಗಳಂತೆ ತೋರುವರು, ಖರ್ಚಿನ ವೃತ್ತಿ ವಿಶೇಷವಾಗಿ ಬೆಳೆಯುತ್ತಾ ಹೋಗುವುದು, ಸಾಂಸಾರಿಕ ಚಿಂತೆ, ದೇಹಾಲಸ್ಯ, ಹಣದ ಬಿಕ್ಕಟ್ಟು ಇವುಗಳಿಂದ ಕ್ಷಣಕಾಲವೂ ನಿಮ್ಮ ಚಿತ್ತವು ಶಾಂತಿಯಿಂದಿರಲಾರದು. ಆಕಸ್ಮಿಕವಾಗಿ ಪ್ರವಾಸಾದಿಗಳು ಸಂಭವಿಸುವವು. ಲೇವಾದೇವಿ ನಿಮಿತ್ತ ಕೋರ್ಟು ಕಛೇರಿಗೂ ಹೋಗಬೇಕಾಗಿ ಬಂದೀತು, ತಾ. 10ರಿಂದ 14ರ ವರೆಗಿನ ದಿನಗಳಲ್ಲಿ ಬುಧ ಚಂದ್ರರ ಅನುಗ್ರಹದಿಂದ ಸ್ವಲ್ಪ ಅನಿಷ್ಟಗಳು ಕಡಿಮೆಯಾಗುವಂತಿವೆ.

ತುಲಾ—ನೀವು ಪ್ರತ್ಯಕ್ಷವಾಗಿ ವೈರಿಗಳೇನೋ ನಿಜ, ಆದರೆ ಬಹುಕಾಲದಲ್ಲಿಯೂ ಫಲವು ನಿಮಗೆ ದೊರೆಯಲಾರದು. ಆತ್ಮ ಶಕ್ತಿಯು ಬಹಳ ಕಡಿಮೆಯಿರುವುದರಿಂದ ದಿನದಿಂದ ದಿನಕ್ಕೆ ನಿರುತ್ಸಾಹವೇ ಅಧಿಕವಾಗುತ್ತಾ ಹೋಗುವುದು. ಗೃಹಚಿಛಿದ್ರದಿಂದಾಗಿ ಗೃಹದಲ್ಲಿ ನಿತ್ಯ ಕಲಹ ಸಂಭವಿಸುವಂತಿದೆ. ಸ್ತ್ರೀ ಪುತ್ರರ ವಿರಹ, ವಿರೋಧಿಗಳ ಕಾಟಗಳಿಂದ ಮನಸ್ಸಿಗೆ ನೆಮ್ಮದಿಯಿಲ್ಲವು. ವಿಚಾರಿಯುವುದರಿಂದ ಆಕಸ್ಮಿಕ ಕಲಹವಾಗುವವಾದರೂ ಮಾತಿನಲ್ಲಿ ಬಲು ಜಾಣರಾದ ನೀವು ವಿಷಯಾಂತರದಿಂದದನ್ನು ಅಟ್ಟಾಡಿಸುವಿರಿ. ಕೃತಿಗೆ ತಕ್ಕ ಫಲ ದೊರೆಯದಿದ್ದರೂ ಮನೋರಥವು ಪೂರ್ಣ ಸಿದ್ಧಿಸದೆ ಇರುವುದರಿಂದ ಸದಾ ಅಸಮಾಧಾನದಿಂದಿರುವಿರಿ ತಾ. 13ರಿಂದ 16ರ ವರೆಗಿನ ದಿನಗಳು ಉತ್ತಮವಾಗಿರುವವು

ವೃಶ್ಚಿಕ—ಪ್ರತಿಸ್ಪರ್ಧಿಗಳು ಸಮಯವನ್ನು ಸಾಧಿಸುತ್ತಿರುವರು ಮಹಾ ಜನರ ಬೆಂಬಲವೂ ನಿಮಗಿಲ್ಲವು ಆದಕಾರಣ ಹಾದು ಮುಂದು ನೋಡದೆ ಯಾವ ಕಾರ್ಯದಲ್ಲೂ ಪ್ರವೃತ್ತರಾಗಬೇಡಿ. ಉದ್ಯೋಗ ವ್ಯಾಪಾರಾದಿಗಳಲ್ಲಿ ನೀಚ ಜನರ ಮುಖದಿಂದ ಲಾಭದೊರೆವುದು. ಆಯ ವ್ಯಯಗಳು ಸಮತೋಲದಲ್ಲಿ ನಿಲ್ಲುವುದರಿಂದ ಹಣದ ಅಡಚಣೆಯುಂಟಾಗದು, ಸಹೋದರರೊಳಗೆ ವೈಮನಸ್ಯವುಂಟಾಗುವ ಚಿಹ್ನೆಗಳಿವೆ. ಅನಿರೀಕ್ಷಿತವಾಗಿ ಪ್ರವಾಸಗಳು ಗಂಟುಬೀಳುವವು. "ಶರೀರ ಮಾದ್ಯಂ ಖಲು ಧರ್ಮ ಸಾಧನಂ" ಎಂಬ ನೀತಿಯನ್ನು ಅನುಸರಿಸಿ ಪಾಲಿಸಬೇಕಾಗುತ್ತೆ. ಕಾರಣ ಶರೀರದಲ್ಲಿ ಅನಾರೋಗ್ಯವೂ ಚರ್ಮ ರೋಗಗಳೂ ಕಾಣಿಸಿಕೊಂಡು ನಿತ್ಯಕರ್ಮಗಳಿಗೆ ಅಡ್ಡಿಯುಂಟಾಗಲಿದೆ, ಗೃಹ ಸುಖವು ಉತ್ತಮವಾಗಿದೆಯೆಂದು ಹೇಳಬಹುದು. ತಾ. 7, 15, 16, ಈ ದಿನಗಳಲ್ಲಿ ಪ್ರವಾಸ, ಇಷ್ಟ ಸಿದ್ಧಿ ಮಿತ್ರ ಸಮಾಗಮಗಳುಂಟಾಗಲಿವೆ.

ಧನು—"ಒಲಿದರೆ ನಾರಿ, ಮುನಿದರೆ ಮಾರಿ" ಎಂಬ ಹಿರಿಯರ ಮಾತು ಜ್ಞಾಪಕದಲ್ಲಿರಲಿ. ಈ ವಾರದಲ್ಲಿ ನೀವು ಹೆಂಗಸರ ಸಲುವಾಗಿ ಬಹಳ ಜಾಗ್ರತೆ ತೆಗೆದುಕೊಳ್ಳಬೇಕು, ವಿನಾಕಾರಣವಾಗಿಯಾದರೂ ನಿಮಗವರಿಂದ ಅನೇಕ ಅನಿಷ್ಟಗಳು ಪ್ರಾಪ್ತವಾಗುವಂತಿವೆ, ಕೈಹಿಡಿದಾಕೆಯೂ ನಿತ್ಯ ಪೀಡಿಸುವಳು, ತಂದೆ ಮಕ್ಕಳಿಗೂ ಕೂಡ ಕಲಹವಾಗಲಿವೆ, ಕೆಲವೊಮ್ಮೆ ನೇತ್ರ ರೋಗವೂ ಆಹಾರ ದೋಷದಿಂದಾಗಿ ಉದರ ರೋಗವೂ ಕಂಡು ಬಂದೀತು, ಸಂಪತ್ಸ್ಥಾನದಲ್ಲಿ ಹೆಚ್ಚಿನಂಶ ಸುಧಾರಣೆಯಾಗುವುದು. ಕೈಗೊಂಡ ಕಾರ್ಯಗಳಿಗೆ ಹೊರಗಿನಿಂದ ವಿಘ್ನಗಳು ಬಾರದಿದ್ದರೂ ನೌಕರಿ ವ್ಯಾಪಾರಗಳಲ್ಲಿ ಇಷ್ಟಪ್ರಾಪ್ತಿಯಾಗದು, ತಾ 9ರಿಂದ 12ರ ವರೆಗೆ ಆರೋಗ್ಯವೂ ಧನವೂ ತಕ್ಕಮಟ್ಟಿಗೆ ಲಭಿಸಲಿದೆ.

ಮಕರ—ನೀವು ಸಕಲರಲ್ಲೂ ಮೈತ್ರೀಭಾವ ವಿಡಿಬೇಕೆಂದು ಪ್ರಯತ್ನಿಸಿದರೂ ಕೂಡ ಅವು ವಿಪರೀತವಾಗಿ ಹಲವರಲ್ಲಿ ವಿರೋಧವೇ ಹುಟ್ಟುಗುತ್ತಿದೆ, ಇಂದ್ರಿಯವನ್ನು ನಿಗ್ರಹಿಸಿ ಸ್ವಾಧೀನಪಡಿಸಿಕೊಳ್ಳಲು ಅಶಕ್ತರಾದುದರಿಂದ ಕೀಳ್ಪಂಕ್ತಿಯಲ್ಲಿ ಬಂದು ವರ್ಗದವರಲ್ಲಿ ಕಲಹಗಳೂ ಅನಾವಶ್ಯಕ ಖರ್ಚುಗಳೂ ಹೆಚ್ಚುವವು. ಅತ್ಯ ಮಿತ್ರರಿಂದ ಪರವರ್ತನೆಯು ನಿಮಗೆ ತೀರಾ ಭಿನ್ನವಾಗಿ ತೋರೀತು. ನೌಕರಿ ಮೂಲಕವಾಗಿಯೂ ಸಾಹಸದಿಂದಲೂ ನೀವು ತಕ್ಕಮಟ್ಟಿಗೆ ಧನ ಗಳಿಸುವಿರಿ, ಸಾಮಾಜಿಕ ಕಾರ್ಯಗಳಲ್ಲಿ ವಿಜಯಿಗಳಾದರೂ ರಾಜಕೀಯದಲ್ಲಿ ಯಶಸ್ಸು ದೊರೆಯದು. ತಾ. 15ರಿಂದ 14ರ ವರೆಗಿನ ದಿನಗಳಲ್ಲಿ ಹೆಚ್ಚಿನ ಅನುಕೂಲಗಳು ಪ್ರಾಪ್ತವಾದಾವು.

ಕುಂಭ—ದಿನ ಹೋದಂತೆ ನಿಮ್ಮ ವಿಧಿಯು ಕಡೆತ್ತಾ ಬರುತ್ತಿದೆ. ಚಿತ್ತ ಚಾಂಚಲ್ಯವಧಿಕವಾಗುವುದರಿಂದ ಕಾರ್ಯದಲ್ಲಿ ವಿಮಾನಸ್ಯ ಹುಟ್ಟುವುದು. ಖರ್ಚನ್ನು ಕಡಿಮೆಮಾಡಬೇಕೆಂದೆನಿಸಿದಷ್ಟು ಅದು ಹೆಚ್ಚುತ್ತಾ ಹೋಗುವುದು. ಒಂಧುವಿ ತ್ರಿರ ಸಹಕಾರವು ಚೆನ್ನಾಗಿರುವುದರಿಂದ ಶತ್ರು ಜನರನ್ನು ನಿಗ್ರಹಿಸಲು ಬೇಕಾದ ಕಾರ್ಯವನ್ನು ಕೈಗೊಳ್ಳುವಿರಿ, ಸಾಂಸಾರಿಕ ತಾಪತ್ರಯಗಳೇನೂ ಕಂಡು ಬರಲಾರವು, ನೌಕರಿ ನಿಮಿತ್ತಾಂತರವೂ ಕಾಯಕಷ್ಟದಿಂದಲೂ ಖರ್ಚಿನ ಮಟ್ಟಿಗೆ ದುಡಿಯುವಿರಿ, ಅಧಿಕಾರಿ ಸೇವಕರಲ್ಲಿ ಪರಸ್ಪರ ವೈಮನಸ್ಯವುಂಟಾದೀತು, ಅಕ್ಕನ ದೇಹಾಲಸ್ಯವೂ ಮಕ್ಕಳ ಅನಾರೋಗ್ಯವೂ ಕಾಣಿಸಿಕೊಳ್ಳುವುದು. ಈ ವಾರದ 4 ದಿನಗಳು ಪ್ರವಾಸ ಬೇಟೆಗಳಿಗೆ ಸಾಧಕವಾದಾವು.

ಮೀನ—ಚಿತ್ತ ವೃತ್ತಿಯು ದಿನಕಳೆದಂತೆ ನಷ್ಟವಾಗುವುದು. ಅನೇಕ ಸಮಾಯಗಳಲ್ಲಿ ಭಾಗಿಗಳಾಗುವಿರಿ ಎಷ್ಟೋ ಖರ್ಚಿದ್ದರೂ ಕೂಡ ಅದನ್ನು ಸಹಾಯಿಸಿಕೊಂಡು ಅದಕ್ಕನಿವಾಗಿದಲೂ ಕೂಡ ಬೇಕಾದಷ್ಟು ನೀವು ದುಡಿಯುವಿರಿ. ಮಿತ್ರರ ಸಹಾಯವು ಲಭಿಸುವುದು. ಪ್ರತಿಯೊಂದು ಉದ್ಯಮದಲ್ಲೂ ಹೊಸ ಚೈತನ್ಯದಿಂದ ಮುಂದರಿಯುವಿರಿ, ಆಲಸ್ಯವು ನಿಮ್ಮಿಂದ ದೂರ ಸರಿಯುವುದು. ಕಿಂಚಿದ್ದೇಹಾಲಸ್ಯವೂ ಸಂಗದೋಷದಿಂದ ಜನರ ಅಪವಾದಕ್ಕೆ ಗುರಿಯಾಗುವ ಚಿಹ್ನೆಗಳಿವೆ. ತಾ. 10ರಿಂದ 14ರ ವರೆಗೆ ಅಕ್ಷರರಲ್ಲಿ ವೈಮನಸ್ಯ, ಆಲಸ್ಯ ಆಕಸ್ಮಿಕ ಪ್ರವಾಸಗಳೂ ಸಂಭವಿಸಬಹುದು.

ಪ್ರಕಟಣೆ

ಮಂಗಳೂರು ಗ್ರಾಮದಲ್ಲಿರುವ ಸೊಂಟಾಡಿ ದುಗ್ಗಪ್ಪ ಭಂಡಾರಿಗಳ ಅಳಿಯ ರಾಮಯ್ಯ ಭಂಡಾರಿಯು ಈ ಮೂಲಕ ತಿಳಿಯಪಡಿಸುವದೇನಂದ್ರೆ.

ನನ್ನ ತಾಯಿ ಅಣ್ಣ ಮಂಜಪ್ಪ ಭಂಡಾರಿಯು ಕೆಲವು ವರುಷಗಳಿಂದ ನಮ್ಮ ಕವರಿನ ಆಸ್ತಿಗಳ ಆಡಳ್ತೆ ನೋಡಿಕೊಂಡು ಬರುವಲ್ಲಿ ಕವರಿನ ಆಸ್ತಿಗಳ ಉತ್ಪತ್ತಿಯಿಂದ ಆತನ ಹೆಂಡ್ತಿ ಮಕ್ಕಳ ಹೆಸರಲ್ಲಿ ಹೆಚ್ಚಿನ ಆಸ್ತಿಗಳು ಬರೆಸಿಕೊಂಡು ಬಂದದ್ದಲ್ಲದೆ ಈಗ ಕೆಲವು ಸಮಯದ ಈಚೆಗೆ ಕವರಿನ ಇತರ ಮೆಂಬರಿಗೆ ಮೋಸಮಾಡುವ ಕೆಟ್ಟ ಇರಾದೆಯಿಂದ ಕವರಿಗೆ ಹಾನಿಕರವಾದ ಹೆಚ್ಚಿನ ಅಕೃತ್ಯಗಳು ನಡೆಸಿದ್ದರಿಂದ ಆತನನ್ನು ಆಡಳ್ತೆಯಿಂದ ತೆಗೆದು ಹಾಕುವ ರೀತಿ ಮಾಡಿದ ಮಧ್ಯದಲ್ಲಿ ನಾವು ಇತರ ಮೆಂಬರರ ವ್ಯವಹಾರಕ್ಕೆ ಅಧಿಕೃತವಾಗಿ ಅಟ್ಟಿರುವ ಕಾರ್ಯಗಳು ಸಂಗ್ರಹಿಸುವ ಸಂಗ್ತಿ ನನ್ನ ಮಂಜಪ್ಪ ಭಂಡಾರಿಯು ತಿಳಕೊಂಡು ನಮ್ಮ ಕವರಿಗೆ ತಪ್ಪು ಹೆಚ್ಚಿನ ಮೋಸಕೊಡಬೇಕೆಂಬ ಕೆಟ್ಟ ಇರಾದೆಯಿಂದ ನಮ್ಮ ಕವರಿಗೆ ಒಂದಕ್ಕೆ ಕೆಲವು ಆರವಾದ ಕಾಗದಗಳು ಬರೆದು ಪ್ರತಿಫಲ ಪಡೆಯದೆ ಅನ್ಯರ ಹೆಸರಲ್ಲಿ ಬರಾಮು ಮೇಲಬೀಟು ಮಾಡಿಕೊಡುವ ಇರಾದೆಯಲ್ಲಿ ಇರುವದಾಗಿ ತಿಳಿಯ ಬರುವುದರಿಂದ ತಿಳಿಸುವದೇನಂದ್ರೆ ಈಗಿರುವ ಸ್ಥಿತಿಯಲ್ಲಿ ಕವರಿನ ಪರವಾಗಿ ಆಗಲಿ ಕವರಿನ ಆಡಳ್ತೆದಾರನ ನೆಲೆಯಲ್ಲಿ ಸದ್ರಿ ಮಂಜಪ್ಪ ಭಂಡಾರಿಯಿಂದ ಯಾರೊಬ್ಬರೂ ಯಾವದೊಂದು ದಸ್ತೈವಜುಗಳು ಬರೆಸಿಕೊಂಡದ್ದಾದ್ರೆ ಅಂಥಾ ದಸ್ತೈವಜುಗಳು ಕವರಿನ ಇತರ ಮೆಂಬರ್ರ ಮೇಲಾಗ್ಲಿ ಕವರಿನ ಆಸ್ತಿಗಳ ಮೇಲಾಗ್ಲಿ ಬಾಧಿಸುವಂತಾದ್ದಲ್ಲ. ಇದಕ್ಕೆ ವಿರೋಧವಾಗಿ ನಡಕೊಳ್ಳುವವರು ಅದ್ರ ಸಾಧಕ ಬಾಧಕಗಳನ್ನು ಅವರೇ ಸಹಿಸಿಕೊಳ್ಳತಕ್ಕದ್ದು ಎಂಬ ಸಂಗ್ತಿ ಸರ್ವರೂ ತಿಳಿಯತಕ್ಕದ್ದು.

ಮಂಗ್ಳೂರು } ರಾಮಯ್ಯ ಭಂಡಾರಿ ರುಜು
20-4-40 }

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ

"ಗೊನೊಕಿಲರ್" (ರಿಜಿಸ್ಟರ್ಡ್)

GONO KILLER

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅತ್ಯುತ್ತಮ ಔಷಧ. ಇಂಗ್ಲೀಷ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನವ **ಗೊನೊಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೋ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೊನೊಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವತ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಹೊಸದೇ ಆಗಿಯಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೊರಿಯಾದಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 60 ಮಾತ್ರೆಗಳ ಬುದ್ದಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕೋಮಾಲೀಕರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೊ ಹೋಮ್ಯೋಪತ್ ಡಿಸ್‌ಪೆನ್ಸರಿ.

ಜಗತ್ಪ್ರಸಿದ್ಧ

ನಕಲಿ ಮತ್ತು ಗಳಿಗೆ ಮರುಳಾಗಬೇಡಿ. ಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನು 'ಗೊನೊಕಿಲರ್' ಹೆಸರನ್ನು ಗಮನಿಸಿರಿ

Sole Manufacturer DR. D. N. JASANI, Vitalbhai Patel Road, BOMBAY 4

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುಪ್ಪಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ
ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ

Kanara Printing Works,
Hampankatte, **MANGALORE**

ಕಿವುಡರೂ ಸಂಪೂರ್ಣವಾಗಿ ಕೇಳಬಹುದು.

ಬಧಿರತಾ ಹರಣ
ವಿಜ್ಞಾನದ ನವೀನ ಮತ್ತು
ವಿಚಿತ್ರ ಶೋಧ

ಕಿವಿಸೋರುವದ, ಸೋಷ, ಉರಿಯುವದು, ಶಬ್ದವೇಳುವದು, ಕುರಿಸ ಸ್ರಾವ, ಶುಷ್ಕ ಅಥವಾ ನೋವಾಗುವದು, ಕರ್ಣಕುಹರದ ದೋಷ, ಶೀತ ಅಥವಾ ಜ್ವರದ ನಿಮಿತ್ತ ಕ್ವಿನೀನು ತೆಗೆದುಕೊಂಡ ಪರಿಣಾಮವಾಗಿ ಉಂಟಾದ ಅರ್ಧ ಯಾ ಸಂಪೂರ್ಣ ಕಿವುಡತನವೇ ಮೊದಲಾದ ಎಂತಹ ಕರ್ಣರೋಗವಾಗಲಿ, ಅತ್ಯಂತ ಕಠಿಣ ಕಿವುಡುತನವಾಗಲಿ ನವ್ಯ ವಿಚಿತ್ರ 'ಬಧಿರತಾಹರಣ' ಎಣ್ಣೆಯನ್ನು ಉಪಯೋಗಿಸುವದರಿಂದ ಖಾತ್ರಿಗಳಹೊಂದುವದು ಈ ಸಿದ್ಧೌಷಧಿಯಿಂದ ನೂರಾರು ಮಂದಿ ಕಿವುಡರು ಚೆನ್ನಾಗಿ ಶ್ರವಣ ಶಕ್ತಿಯನ್ನು ಪಡೆದಿರುತ್ತಾರೆ. ಫಲಕಾರಿಯಾಗದಿದ್ದರೆ ಬೆಲೆಯನ್ನು ವಾಪಸು ಕೊಡಲಾಗುವದು ಬಾಟ್ಲು 1ರ ಬೆಲೆ ರೂ 2, 3 ಬಾಟ್ಲಿಗಳಿಗೆ ರೂ. 5, ಟಪ್ಪಾಲು ಖರ್ಚು ಪ್ರತ್ಯೇಕ

ವಿಳಾಸ:—ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಯಿ 4.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು ಇದು ಮಧುರವಾಗಿದೆ ಆಶಪಟ್ಟಿರುವ ನಿಮ್ಮ ಮಕ್ಕಳು ತಿರುಗಿಸಿವ್ಯತ್ಯೆಗಸೀರುವುದು. ಸೀಸೆ1ಕ್ಕೆ12ಆಣೆ, ಟಖರ್ಚುಆಣೆ

ಎಸ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ.
ಉಡುಪಿ ಸ್ಟಾಕಿಸ್ಟರು - **ನವಭಾರತ ಬುಕ್‌ಡಿಪೋ, ಉಡುಪಿ**

THE MOOLKY BANK, LTD.,
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಉನ್ನತಿಗಾಗಿ ಯತ್ನಿಸುವ ಸಂಸ್ಥೆ. ಭಂಗಾರದ ಸರಕಿನ ಆಧಿನ ಮೇಲ ಸೇಕಡ7 ಪ8ರ ದರದಲ್ಲಿ ಸಾಲಕೊಡಲಾಗುವುದು

ಸ್ಥಿರ ಠೇವಣಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R Punja, ಎಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!

K. R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಂಟ್ವರ್ಪ್ ನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣಗಿಂತ 5 ಪರ್ಸೆಂಟಿಗೆ ಕಡಿಮೆಯಾಗವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇವನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇವರ ಶಾಪೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕೊಲೇಜಿನ ಎದುರು.
ಹಂಪನಕಟ್ಟೆ, ಮಂಗಳೂರು.

ಹೊಸ ಪುಸ್ತಕ! ಸೆಲ್ಫ್ ಇಂಗ್ಲಿಷ್ ಸ್ಟಡಿ ಈಗಲೇ ಪ್ರಿಂಟಾಗಿದೆ!

SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ **1-8-0**

ಕನ್ನಡ ಓದಲಿಕ್ಕೆ ತಿಳಿದವರ ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವದನ್ನೂ, ಮಾತನಾಡುವದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ನಡೆಸುವದನ್ನೂ 9 ತಿಂಗಳಲ್ಲಿ ಕಲಿತುಕೊಳ್ಳಬಹುದು ಇಂಥಾ ಪುಸ್ತಕ ಇದುವರೆಗೆ ಯಾರೂ ತಯಾರಿಸಲಿಲ್ಲ. ದೊಡ್ಡ ಪುಸ್ತಕ, ಸ್ವಲ್ಪ ಪ್ರತಿಗಳು ಮಾತ್ರ ಇರುವವು ಬೇಗನೇ ಬರೆಯಿರಿ ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರ್ಯಾರೇ ಆಗಲಿ ಅವರವರು ದಿವಸಗಳಲ್ಲಿ ಇಂಗ್ಲಿಷ್ ಕಲಿತುಕೊಳ್ಳಬಹುದು. ಇದು ಅವಶ್ಯಾಗಿ ಎಲ್ಲಾ ಜನರಿಗೂ ಬೇಕಾಗಿದೆ, ಮನೆಯಲ್ಲೇ ಈ ಪುಸ್ತಕ ಓದಿರಿ, ಇಂಗ್ಲೀಷ್ ಓದುಬರಹ ಎಲ್ಲಾ ಸುಲಭವಾಗಿ ಬರತ್ತೆ. ಪುಸ್ತಕದ ಕ್ರಯ ರೂ 1—8—0.

Western Swiss Watch Co
Box No. Post Box No 68
G. P. O MADRAS

ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ 68, ಮದರಾಸ್.

ಮುಚ್ಚಿದರೆ ಮುಗುಳು ! ಬಿಚ್ಚಿದರೆ ಅರಳು !!

ಶ್ರೀ. ಕೆ. ಹೊನ್ನಯ್ಯ ಶೆಟ್ಟರಿಂದ ಪೋಣಿಸಲ್ಪಟ್ಟ
ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಮಾಲೆಯಿದು

ಮುಗುಳು

ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಅತ್ಯುಪಯುಕ್ತವಾದ ಸಚಿತ್ರ ಪದ್ಯ ಪುಸ್ತಕ.
(ಮದ್ರಾಸ್, ಬೊಂಬಾಯಿ, ಮೈಸೂರು ಟೆಕ್ಸ್ಟ್ ಬುಕ್ ಕಮಿಟಿಗಳಿಂದ ಮಂಜೂರಾಗಿದೆ.
ಅಭಿನಯಕ್ಕೆ, ನರ್ತನಕ್ಕೆ, ಕೋಲಾಟಕ್ಕೆ, ಎಲ್ಲಕ್ಕೂ ಅನುಕೂಲವಾದ,
ಮಕ್ಕಳ ವಯೋಗುಣಕ್ಕನುಗುಣವಾದ ಪದ್ಯಗಳಿಂದೊಡಗೂಡಿದೆ.
ಅಧ್ಯಾಪಕರೆಲ್ಲಾ ಇದನ್ನು ಮಕ್ಕಳ ಕೈಗೆ ಕೊಟ್ಟು, ಉಲಿದಾಡಿಸಿ,
ಕುರಿದುಂಬಿಸಬೇಕಾಗಿ ಪ್ರಾರ್ಥನೆ.

ಎಂಟನೆಯ ಆವೃತ್ತಿ] [ಬೆಲೆ ೦—೨—೬

ಶಾಲೆ ಸಾಹುಕಾರ ಪುಸ್ತಕ ವ್ಯಾಪಾರಿಗಳಿಗೆ ಸರಿದ್ದರ ಕಳಿಸಲಾಗಿ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —
ಇತ್ತರ ದರೆಗಳ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸವಾದರಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವೆಂಬ ಕುರಿತು ಖಾತ್ರಿ ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಷಡ್ವೈದ್ಯಶಾಲಾ ಸಂಜನಗೂಡು ಇವರ

"ಸುಬಲಾ" ಪಿತ್ತಸಂಕಟ, ಮಲಬದ್ಧತೆ ಇವುಗಳನ್ನು ಹೋಗಲಾಡಿಸಿ ರಕ್ತ ವೃದ್ಧಿಮಾಡಿ, ಶರೀರಕ್ಕೆ ಬಲವನ್ನು ಕೊಡುತ್ತದೆ ಬಹಳ ರುಚಿಯಾಗಿರುತ್ತದೆ

ಬ್ರಾಂಚ್:—ರಥಬೀದಿ ಮಂಗಳೂರು

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

PRINTED BY S. S. KARANTH AT THE THULUNAD PRESS, UDIPI. AND PUBLISHED BY K. H SHETTY AT "NAVAYUGA OFFICE, UDIPI, S. INDIA.

Registered No. M. 3618 — 16-5-1940.

ನವಯುಗ

Navayuga

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಛೇರಿ.— ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

ಭದ್ರತೆಯಿಂದಲೂ, ಖಾತ್ರಿಯುಳ್ಳ ಹಣ ಹಂಚಿಕೆಯಿಂದಲೂ, ಜಾಗ್ರತೆಯಾಗಿ ಹಕ್ಕುಗಳನ್ನು ಕೊಡುವುದರಿಂದಲೂ ಮತ್ತು ಉದಾರವಾದ ಜೀವವಿಮೆಯ ನಿಯಮಗಳಿಂದಲೂ ಈ ಸಂಸ್ಥೆಯು ಪ್ರಖ್ಯಾತಿಪಡೆದಿರುತ್ತದೆ.

ಪ್ರೊಫೆಸರ್ ಕೆ. ಬಿ ಮಾಧವ, ಎಂ ಎ, ಎಫ್ ಆರ್ ಎ ಎಸ್., ಎ.ಐ ಎ (ಲಂಡನ್)

ಪ್ರೊಫೆಸರ್, ಮಹಾರಾಜ ಕಾಲೇಜು, ಮೈಸೂರು ಇವರ

ಅಭಿಪ್ರಾಯ ಸಾರಾಂಶ.

"ಕಳೆದ ೧೦ ವರ್ಷಗಳಿಂದ ನನ್ನ ಸಂಬಂಧ ಬಹಳವಾಗಿ ಏರ್ಪಡುವರಿಯುತ್ತಿರುವುದಲ್ಲದೆ ಕಳೆದ ಮೂರು ವರ್ಷಗಳಿಂದ ಆಡಳಿತದ ವೆಚ್ಚ, ಬಡ್ಡಿಯ ಹಲ, ದಸ್ತಾವೇಜುಗಳ ನರ್ಸ್ಕೀ ಇವೇ ಮೊದಲಾದ ಜೀವವಿಮೆಯ ನಿಯಮಗಳನ್ನು ಉತ್ತಮಗೊಳಿಸಲು ಸಹಕಾರಿಯಾಗುವ ವಿಷಯಗಳಲ್ಲಿ ಹೊಂದಿರುವ ಅಭಿವೃದ್ಧಿಯು ತೃಪ್ತಿಕರವಾಗಿದೆ ... ಸೌಕರ್ಯ ಸಹಿತವಾದ ಅಭಿವೃದ್ಧಿಗೆ ಉದಾಹರಣೆಯಾಗಿರುವ ಏಷ್ಯಾಟಿಕ್ಕಿನ ಅಪ್ರತಿಹತವಾದ ಕಾರ್ಯಕರ್ತರಿಗಾಗಿ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಕೊಡುತ್ತಾ ಉಂಟಾಗುವ ಸಂತೋಷವನ್ನು ತಿಳಿಸಬಯಸುತ್ತೇನೆ."

ಕೊಟ್ಟಿರುವ ವಿಮಾ ಹಕ್ಕಿನ ಹಣಗಳು. ೫,೦೦,೦೦೦—೦—೦.

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

H. Venkataramiah, *Divisional Superintendent* or **R Purniah** *General Manager*

The Asiatic Govt. Security Life Assu Co. Ltd.,

Asiatic Building, BANGALORE CITY

ಝಂಡು ಮಲೇರಿಯಾ ಮಿಕ್ಸ್ಚರ್

ಮಲೇರಿಯಾ, ವಿಷಪ್ರಾಣಿಗಳಿಂದುಂಟಾಗುವ ಎಲ್ಲಾ ತರದ

ಕಠಿಣ ಜ್ವರಗಳಿಗೆ

ಖಾತ್ರಿಯಾದ ಸಿದ್ಧೌಷಧ

ಕ್ರಯ: ಆಣೆ 0—14—0 ಮಾತ್ರ.

ಶೀಘ್ರ ಗುಣ

ಸ್ಥಳೀಯ ಏಜಂಟರು:— **ಪಿ. ಎ. ಶೈ ಬ್ರದರ್ಸ್.**

ಕಾರ್ಕಳದ ಏಜಂಟರು.— **ವಿ ವಿ. ಶೆಣೈ, ಕೆಮಿಸ್ಟ್ಸ್.**

ಮಂಗಳೂರಿಗೂ ದಕ್ಷಿಣ ಕನ್ನಡ ಜಿಲ್ಲೆಯ ಇತರ ಮುಖ್ಯ ಸ್ಥಳಗಳಿಗೂ ಏಜಂಟರು ಬೇಕಾಗಿದ್ದಾರೆ.

ಶರ್ತಗಳಿಗೂ ಏಜನ್ಸಿಗಳಿಗೂ ಮುಖ್ಯ ಏಜಂಟರಿಗೆ ಬರೆಯಿರಿ:—

ದಾಮೋದರ್ ಎಂಡ್ ಕೊ,

ಮುಖ್ಯ ಏಜಂಟರು,

ZANDU

78 ಚೈನಾ ಬಜಾರ್ ರೋಡ್, **ಜಿ. ಟಿ. ಮದರಾಸು**

DAMODER & CO.,

78 China Bazaar Road, **G T. MADRAS**

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಸ್ವಚ್ಛ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು.

ಮೈಸೂರು ಸೇಂಡಲ್ ಸೋಪು

ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ನಿಃಶಕ್ತಿ, ಸ್ವಪ್ನಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಶೀಘ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು.

ಕ್ರಯ:— 40 ಮಾತ್ರೆಗಳ ಡಬ್ಬಿ 1ಕ್ಕೆ ರೂ. 1—0—0

ಮದನಮಂಜರಿ ಫಾರ್ಮಸಿ, 184 ಚೈನಾಬಜಾರ್ ಮದ್ರಾಸ್.

ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

Your anxiety in finding a sound and progressive Life Office both to insure or to represent will end on consultation with:

Branch Secretary,

The New Guardian of India Life Ins Co. Ltd., Madras.

BANGALORE Branch.

THE

PANGAL NAYAK BANK LTD.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(೧೯೨೦ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.)

Season Deposits for a period of 3, 4, 5 or 6 months are accepted at all the offices of the Bank and interest is allowed at 4% per annum till maturity or the 30th June 1940, as the case may be, whichever is earlier.

For further information please communicate with or call at any of our offices.

THE VIJAYA BANK LTD.,

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ--- ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಆಮಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಬಾಲಕರ ಆರೋಗ್ಯಕ್ಕಾಗಿ ಮಾಂಸಾಂಗಗಳು **ಪ್ರಭೂಸ್--ಬಾಲಾಮೃತ**

ಒಂದೆರಡು ವಾರಗಳಲ್ಲಿ ಅದ್ಭುತ ಗುಣ.

— ಕಮನೀಯವಾದ ಕೇಶಕಲಾಪ ತಂಪಾದ ಮೆದುಳು ಶುಭ್ರ ನೇತ್ರಗಳು ಇವುಗಳನ್ನು ಹೊಂದಲು —

ಪುಷ್ಪಗಂಧಾಮೋದಿತ **ಆಮಲಕೀ ತೈಲ** ಬಹು ಗುಣಯುಕ್ತ

ವಾಯುಮಾತ್ರೆಗಳೆಂಬ --- **ಧಾನ್ವಂತರಿ ಗುಟಿಕಾ** --- ಇವುಗಳನ್ನು

ಸೇವಿಸಿ ವಾಯುವೆಂಬ ರೋಗವನ್ನು ಗುಣಪಡಿಸಿಕೊಳ್ಳಿರಿ

ಮಾತ್ರೆ–12ಕ್ಕೆ 0-4-0, 25ಕ್ಕೆ 0-7-0, 50ಕ್ಕೆ 0-13 0, 100ಕ್ಕೆ 1-5-0

5 ಆಣೆಯ ಸ್ಟಾಂಪು ಕಳುಹಿಸಿದರೆ 12 ಮಾತ್ರೆಗಳನ್ನು ಕಳುಹಿಸುತ್ತದೆ

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಕುಂಜಾಲು, ಬ್ರಹ್ಮಾವರ, ದ. ಕ.

ನಮ್ಮ ಸ್ಟಾಕಿಸ್ಟರು:-

ನವಭಾರತ ಬುಕ್ ಡಿಪ್ಪೋ, ಉಡುಪಿ ದ. ಕನ್ನಡ. ಜನರಲ್ ಸಪ್ಲೈಸ್ ಲಿಮಿಟೆಡ್, ಉಡುಪಿ ಪೋಸ್ಟ ದ. ಭಾರತ, ಕೆನರಾ ನ್ಯೂಸ್ ಏಜನ್ಸಿ, ಪಿ. ಆರ್ ಪ್ರಭು, ಟಟಟ-ಬಾಲಾ ಮೆನ್ಶನ್, ಲಾಲ್‌ಭಾಗ್ ನಂಬ್ರ 12, ಗೋಪಿನಾಥ ಲಕ್ಷ್ಮಣ ನಾಯಕ್ ಎಂಡ ಬ್ರದರ್ಸ್, ಕೋಟ, ದ. ಕನ್ನಡ.

ಸೀರೆಗಳು ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಶೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

Transport & Car Owners



ARE SPECIALLY INVITED TO VISIT

OUR SHOW ROOM *for economical transport maintenance.*

CANARA AUTOMOBILES - - - - - MANGALORE



KOPRAN

Tooth Paste

ಹಿಂದೂದೇಶದ ಜನಪ್ರಿಯ ದಂತಾಂಜನ

ಜಾಗರಿಗರ ತತ್ವಗಳನ್ನನುಸರಿಸಿಕೊಂಡು ತಯಾರಿಸಲ್ಪಟ್ಟಿರುವ ಉತ್ತಮ ದಂತಾಂಜನ ಹಿಂದೂಸ್ಥಾನದಲ್ಲೆಲ್ಲಾ ವಿಕ್ರಯಿಸಲ್ಪಡುವುದು.

KOPRAN CHEMICAL CO. BOMBAY

"ನಾಮುರ್ದಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ನಸೋನಿ ಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿರ್ಮೂಲಿಸುತ್ತದೆ.

"ಸಮಿಸಾ ಟೋನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನ ಹುಟ್ಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ

ಕಿಮ್ಮತು ರೂ. 3-0-0 ಡಬ್ಬಿ 0-8-0

ಸೊರತ್ ಫಾರ್ಮಸಿ,

ನಳ್ ಬಜಾರ, ಡಂಕನ್ ರೋಡ್,

ಮುಂಬಾಯಿ 4

Sorath Pharmacy,

Null Bazar, Duncan Road

BOMBAY 4

ಭಾರತೀ ಗ್ರಂಥಮಾಲೆಯ ಪುಸ್ತಕಗಳು.

ಬೆಳಕು (ಚಿಕ್ಕ ಕತೆಗಳ ಸಂಗ್ರಹ.)

ತಿನಿಸು (ಕತೆ, ಕವನ, ಪ್ರಬಂಧಗಳ ಸಂಗ್ರಹ.)

ಪ್ರತೀಕಾರ (ನವಪೌರಾಣಿಕ ನಾಟಕ)

ಲೋಪಾಮುದ್ರೆ (ಪೌರಾಣಿಕ ಕತೆ)

ಚಿಗುರು (10 ಚಿಕ್ಕ ಕತೆಗಳ ಸಂಗ್ರಹ)

ಪಂಚಾರತಿ (5 ಏಕಾಂಕ ನಾಟಕಗಳ ಸಂಗ್ರಹ)

ಪ್ರತಿಯೊಂದರ ಬೆಲೆ ನಾಲ್ಕಾಣೆ ಮಾತ್ರ (ಅಂಚೆವೆಚ್ಚ 0-0-6 ಪ್ರತ್ಯೇಕ)

ರೂ. 1 8-0 ಕಳುಹಿಸಿದ್ದಲ್ಲಿ ಆರೂ ಪುಸ್ತಕಗಳನ್ನು ಕಳಿಸಲಾಗುವುದು. (ಅಂಚೆವೆಚ್ಚ ಪುಕ್ಕಟೆ)

ವ್ಯಾಪಾರಿಗಳಿಗೆ ಧಾರಾಳ ಕಮಿಶನ್.

ಪ್ರತಿಗಳಿಗೆ ಬರೆಯಿರಿ:-

ಮೆನೇಜರ್,

ನವಭಾರತ ಪುಸ್ತಕ ಭಂಡಾರ

ಉಡುಪಿ

ಇನ್ಕಮ್ ಟೇಕ್ಸ್ ಮತ್ತು ಪ್ರೊಫೆಶನ್ಸ್ ನ ಇತರ ವಿಕ್ರಯ ಟೇಕ್ಸುಗಳು

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1.4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಅರ್ಥಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಕೇವಲವಾದ ಜಮಾ ಖರ್ಚಿನ ಲೆಕ್ಕವಿದ್ದರೂ ಸಾಲದು. ಅದರಿಂದ ತಯಾರಿಸಿದ ಸಾರಾಂಶದ ನಿಜತ್ವವು ಕೇವಲ ನಿಮಿಷಗಳಲ್ಲಿ ತನ್ನಿಯ ಆಫೀಸರಿಗೆ ಒಪ್ಪಿಗೆಯಾಗಬೇಕು ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದು ಆಸೀಸರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸ್ ಕಮ್ಮಿಯಾಗುವುದು ಸಂದರ್ಭಾನುಸಾರ ಟೇಕ್ಸ್ ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನ್" ತಪ್ಪಿಯಾಗಿ ಹೋಗಿದ್ದರೂ ತಡವಾಗಲಿಲ್ಲ. ಲೆಕ್ಕ ಪಾಸು ಮಾಡುವ 15 ದಿನಗಳ ಮುಂಚೆಯಾದರೂ ಕೆಳಗೆ ವಿಳಾಸಕ್ಕೆ ಕಾಣಿಸಿದವರೊಡನೆ ಪತ್ರ ವ್ಯವಹಾರ ನಡೆಸಿರಿ.

ಎಸ್. ಎಸ್. ಪುರಾಣಿಕ,

ಇನ್ಕಮ್ ಟೇಕ್ಸ್ ಪ್ರಾಕ್ಟೀಶನರ್,

ಕೃಷ್ಣಾ ರೆಸ್ಟೋರೆಂಟ್ ಬಿಲ್ಡಿಂಗ್,

ಹಂಪನಕಟ್ಟೆ, ಮಂಗಳೂರು.

ಕನ್ನಡ ನುಡಿವೆಣ್ಣಿಗೊಂದು ಕನ್ನಡಗಿತ್ತಿಯ ಕಿರುಗಾಣಿಕೆ

ನಾಡ ಸೋದರಿಯರ ನೈಜ ಜೀವನದ ದುರಂತ ಚಿತ್ರವನ್ನೂ, ಸ್ತ್ರೀ-ಪುರುಷ ಹೃದಯಗಳ ಆಳವನ್ನೂ ಹೃದಯಂಗಮವಾಗಿ ಚಿತ್ರಿಸುವ ರಮ್ಯ ಕಥಾನಕ

ವತ್ಸಲಾ

ಸಾಮಾಜಿಕ ಕಾದಂಬರಿ

ಬೆಲೆ: 0-೭-೩.

0—8—0 ಸ್ಟಾಂಪು ಕಳುಹಿಸಿದರೆ 1 ಪ್ರತಿಯನ್ನು ಕಳಿಸಬಹುದು.

ಬರೆದವರು:-

ಶ್ರೀಮತಿ ಮಟ್ಪಾಡಿ ಕಮಲಾಕ್ಷಿ

ಈ ಪುಸ್ತಕದ ಕುರಿತು ಪ್ರಾಕ್ಟನ ವಿಮರ್ಶ ವಿಚಕ್ಷಣ ಕರ್ನಾಟಕ ವಿದ್ಯಾವೈಭವ, ರಾವ್ ಬಹದೂರ್ ಆರ್. ನರಸಿಂಹಾಚಾರ್ಯ M.A., M.R.A.S. ಇವರು ಬೆಂಗಳೂರಿನಿಂದ ಹೀಗೆ ಅಭಿಪ್ರಾಯ ಪಡುತ್ತಾರೆ 'ಗ್ರಂಥದ ಶೈಲಿ ಗಂಭೀರವಾಗಿಯೂ ಹೃದಯರಂಜಕವಾಗಿಯೂ ಇದೆ. ಪ್ರತಿಪಾದಿತವಾದ ವಿಷಯವು ನೀತಿಬೋಧಕವಾಗಿಯೂ ಬುದ್ಧಿ ವಿಕಾಸಕವಾಗಿಯೂ ಇದೆ. ಸ್ತ್ರೀಯರಿಗೆ ಬೋಧಪ್ರದವಾದ ಗ್ರಂಥ ......'

ಪ್ರತಿಗಳು ಸಿಗುವ ಸ್ಥಳ:

ನವಭಾರತ ಪುಸ್ತಕ ಭಂಡಾರ,

ಉಡುಪಿ.

ESTD. 1921 ಸ್ಥಾಪಿತ

FOUNDER
SRI. A B SHETTY, M L A,
ಸಂಸ್ಥಾಪಕರು
ಶ್ರೀ. ಎ. ಬಿ ಶೆಟ್ಟರು, ಎಂ ಎಲ್ ಎ

ಸಂಪಾದಕ
ಕೆ. ಕೆ ಶೆಟ್ಟಿ.

NAVAYUGA
ನವಯುಗ

ಚಂದಾ ವಿವರ:
1 ವರ್ಷಕ್ಕೆ - ರೂ 3—4—0
6 ತಿಂಗಳಿಗೆ - ರೂ 1 12 0
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹ ಸಂಪಾದಕ
ಕೆ. ಎಚ್ ಶೆಟ್ಟಿ.

ಸಂಪುಟ ೧೯
ಸಂಚಿಕೆ ೩೬

ಉಡುಪಿ, ಗುರುವಾರ, ೧೬—೫—೧೯೪೦.
UDIPI, THURSDAY, 16-5-1940.

VOL 19
No. 36

ಹಿಟ್ಲರ್ ಹೊಲ್ಲೆಂಡ್ ಬೆಲ್ಜಿಯಮುಗಳ ಮೇಲೆ ನುಗ್ಗಿದ

ಕಳೆದ ವಾರ ತಾ. 7ರಲ್ಲಿ ಪ್ರಾರಂಭವಾಗಿದ್ದ ಬ್ರಿಟಿಷ್ ಪಾರ್ಲಿಮೆಂಟು ನೋರ್ವೇ ಯುದ್ಧದ ಕುರಿತು ಕಡುತರ ಖಂಡನೆ ಮಂಡನೆಗಳನ್ನು ನಡೆಯಿಸಿ ಮುಗಿಸುವದರೊಳಗೆ ಜರ್ಮನಿ ಇದೇ 10ರಲ್ಲಿ ಹೊಲ್ಲೆಂಡ ಬೆಲ್ಜಿಯಮು ಮತ್ತು ಲಕ್ಸೆಂಬರ್ಗಗಳ ಮೇಲೆ ಧಾಳಿಯಿಟ್ಟಿತು. ಜರ್ಮನಿ ಸೈನಿಕರು ಹೊಲ್ಲೆಂಡಿನ ಹೊಳ ಮಾರ್ಗದಿಂದ ಮುಂದೊತ್ತಿದರು. ಗಾಳಿ ಕೊಡೆಗಳ ಮೂಲಕ ಬಂದಿಳಿದರು. ಹೊಲ್ಲೆಂಡು ಮತ್ತು ಬೆಲ್ಜಿಯಮುಗಳು ತಮ್ಮ ಸರ್ವಶಕ್ತಿಯೊಡನೆ ಕಾಳಗ ಕೊಡುತ್ತಿವೆ. ಮಿತ್ರರಾಷ್ಟ್ರಗಳಿಗೆ ಸಹಾಯಕ್ಕಾಗಿ ಮೊದಲೇ ಯಿಟ್ಟುಕೊಂಡ ಆಂಗ್ಲೋ-ಫ್ರೆಂಚರ ಸೈನ್ಯಗಳು ಆ ರಣಕ್ಷೇತ್ರಕ್ಕೆ ಧಾವಿಸಿ ಅಲ್ಲಿ ಈಗ ಘೋರ ಸಂಗ್ರಾಮ ನಡೆಯುತ್ತಿದೆ

ಪ್ರಧಾನ ಪಟ್ಟದಿಂದ ಕೆಳಗಿಳಿದ ಮಿ. ಚೇಂಬರ್ಲೇನರು

ಚೇಂಬರ್ಲೇನರ ರಾಜೀನಾಮೆ

ಬ್ರಿಟಿಷ್ ಪ್ರಧಾನರಾದ ಮಿ. ಚೇಂಬರ್ಲೇನರು ಇದೇ ತಾ 10ರಲ್ಲಿ ಚಕ್ರವರ್ತಿಗಳಿಗೆ ತನ್ನ ರಾಜೀನಾಮೆಯನ್ನೊಪ್ಪಿಸಿದರು. ಮಿ. ಚರ್ಚಿಲ್ಲರು ಪ್ರಧಾನ ಮಂತ್ರಿತ್ವವನ್ನು ಸ್ವೀಕರಿಸಿದರು

ಪಾರ್ಲಿಮೆಂಟಿನ ಚರ್ಚೆ

ಕಳೆದ ವಾರ ಸೇರಿದ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ನಾರ್ವೆ ಯುದ್ಧದ ಸ್ಥಿತಿಗತಿಯನ್ನು ವಿವರಿಸಿ ಚರ್ಚಿಲ್ಲರನ್ನು ಯುದ್ಧ ಖಾತೆಗಳ ಹಿರಿಯನ್ನಾಗಿ ನೇಮಿಸಿ, ಮಿ ಚೇಂಬರ್ಲೇನರು ಸರಕಾರದ ಧೋರಣೆಯನ್ನು ಸಮರ್ಥಿಸಿದರು. ಮಿ ಚರ್ಚಿಲ್ಲರೂ ಯುದ್ಧದ ಅನಾನುಕೂಲತೆಯನ್ನು ಮನಗಾಣಿಸಿ ಭಾಷಣವಿತ್ತರು. ಮಿ. ಅಟ್ಲೀ, ಲ್ಲೊಯ್ಡ್ ಜೋರ್ಜ್ ಮೊದಲಾದವರು ಸರಕಾರದ ಯುದ್ಧ ನಡಯಿಸುವ ರೀತಿಯನ್ನು ಕ

ಸಮಾಚಾರ ಸಂಗ್ರಹ

ಠಿನವಾಗಿ ಟೀಕಿಸಿ ಅದು ಎಲ್ಲರ ಅವಿಶ್ವಾಸಕ್ಕೆ ಪಾತ್ರವಾಗಿದೆ ಎಂದರು. ಜನಾಭಿಪ್ರಾಯದ ಪ್ರತಿಕೂಲತೆಯು ಪಾರ್ಲಿಮೆಂಟು ಚರ್ಚೆಗಳಿಂದ ಒಡೆದು ತೋರಿತು. ಕೊನೆಗೆ ಸರಕಾರದ ಖಂಡನಾ ಸೂಚನೆಯು ವೋಟಿಗೆ ಹಾಕಲ್ಪಟ್ಟಿತು. ಸರಕಾರದ ಪರವಾಗಿ ೨೮೧, ವಿರುದ್ಧ ೨೦೦ ಮತಗಳು ದೊರೆತವು. ಸರಕಾರದ ಕಡೆಯ ೪೧ ಮಂದಿ ವಿರುದ್ಧ ಮತ ಕೊಟ್ಟಿದ್ದ

ಬ್ರಿಟಿಷ ಸಾರ್ವಭೌಮರು

ರಲ್ಲದೆ ೧೩೦ ಮಂದಿ ತಟಸ್ಥರಾಗಿದ್ದರು. ಮಂತ್ರಿಮಂಡಲದಲ್ಲಿ ಬದಲಾವಣೆಮಾಡಲಿಚ್ಚಿಸಿದ ಮಿ. ಚೇಂಬರ್ಲೇನರೊಡನೆ ಸಹಕರಿಸಲು ಲೇಬರ್ ಪಕ್ಷದವರೊಪ್ಪಲಿಲ್ಲ. ತಾ 10ರಲ್ಲಿ ಹೊಲ್ಲೆಂಡ್ ಬೆಲ್ಜಿಯಮುಗಳ ಮೇಲೆ ಧಾಳಿಯೂ ನಡೆಯಿತು. ಅಂದೇ ಮಿ ಚೇಂಬರ್ಲೇನರು ತನ್ನ ಮುಖ್ಯ ಮಂತ್ರಿ ಪದಕ್ಕೆ ರಾಜೀನಾಮೆಯಿತ್ತರು. ಮಿ. ಚರ್ಚಿಲ್ಲರು ಪ್ರಧಾನರಾದರೆ.

ಚೇಂಬರ್ಲೇನರ ವಿನಂತಿ

ರಾಜೀನಾಮೆಯಿತ್ತ ಮಿ ಚೇಂಬರ್ಲೇನರು ರೇಡಿಯೋ ಭಾಷಣವೀಯುತ್ತಾ ಬ್ರಿಟನಿಗೆ ಹಿಂದೆಂದೂ ಬಾರದಿದ್ದ ಗಂಡಾಂತರವೀಗ ಬಂದಿರುವದೆಂದೂ ವಿರೋಧಿಯನ್ನೆದುರಿಸಲು ಎಲ್ಲರೂ ಚರ್ಚಿಲ್ ಮಂತ್ರಿಮಂಡಲಕ್ಕೆ ಪೂರ್ಣ ಬೆಂಬಲವೀಯಬೇಕೆಂದೂ ತಾನೂ ತನ್ನಿಂದಾಗುವ ಸಹಾಯವನ್ನೀಯುವದಾಗಿಯೂ ತಮಗೆ ಜಯವು ಸಿಕ್ಕುವದೆಂದೂ ದೇಶದೊಡನೆ ವಿನಂತಿ ಮಾಡಿಕೊಂಡರು.

ಚರ್ಚಿಲ್ ಮಂತ್ರಿಮಂಡಲ

ಮುಖ್ಯ ಮಂತ್ರಿ ಮಿ. ವಿನ್‌ಸ್ಟನ್ ಚರ್ಚಿಲ್ಲರು ಈ ಕೆಳಗಣ ಸದಸ್ಯರಿರುವ ಯುದ್ಧ ಮಂತ್ರಿಮಂಡಲವನ್ನು ರಚಿಸಿರುವರು. ಮಿ. ಚರ್ಚಿಲ್ (ಮುಖ್ಯ ಮಂತ್ರಿ ಮತ್ತು ರಕ್ಷಣಾ ಖಾತೆಯ ಮಂತ್ರಿ) ಮಿ. ಚೇಂಬರ್ಲೇನ್ (ಕೌನ್ಸಿಲಿನ ಲೋರ್ಡ್ ಪ್ರಸಿಡೆಂಟ್) ಮಿ ಸಿ. ಆರ್. ಅಟ್ಲೀ (ಲೋರ್ಡ್ ಪ್ರಿವಿ ಸೀಲ್) ಲೋರ್ಡ್ ಹೆಲಿ

ಪ್ರಧಾನ ಪಟ್ಟವೇರಿದ ಮಿ ಚರ್ಚಿಲ್

ಫೇಕ್ಸ್ (ವಿದೇಶ ಮಂತ್ರಿ) ಮಿ ಗ್ರೀನ್‌ವುಡ್ (ಯಾವ ಖಾತೆಯೂ ಇಲ್ಲದ ಮಂತ್ರಿ) ಮತ್ತು ಮಿ. ಆಂತೋನಿ ಎಡೆನರು ಯುದ್ಧ ಕಾರ್ಯದರ್ಶಿಯಾಗಿಯೂ ಮಿ. ಎ ವಿ. ಅಲೆಕ್ಸಾಂಡರರು ನಾವಿಕ ಖಾತೆಯ ಸಚಿವರಾಗಿಯೂ ಸರ್. ಆರ್ಚಿಬಾಲ್ಡ್ ಸಿಂಕ್ಲೇರ್ ಇವರು ವೈಮಾನಿಕ ಕಾರ್ಯದರ್ಶಿಯಾಗಿಯೂ ನೇಮಕಗೊಂಡಿರುವರು. ಮಿ. ಚೇಂಬರ್ಲೇನರು ಲೋಕಾಧಿಕಾರಿಯಾಗಿ ಬರುವವರೆಲ್ಲವೆ 'ಹೌಸ್ ಓಫ್ ಕಾಮನ್ಸ್' ಸಭೆಯ ನಾಯಕ ಹುದ್ದೆ ವಹಿಸಿ ಪಾರ್ಲಿಮೆಂಟ್ ಕಾರ್ಯಕಲಾಪಗಳ ಜವಾಬ್ದಾರಿಯು ಮಿ. ಚರ್ಚಿಲ್ಲರಿಗೆ ತಪ್ಪುವಂತೆ ಮಾಡುವರೆಂಬ ಒಲವಾದ ವದಂತಿಯಿದೆ.

(೬ನೇ ಪುಟ ನೋಡಿ)

For Everything in Insurance Consult

TROPICAL
INSURANCE CO. LTD.,

Head office. NEW DELHI.

Chairman SJT SUBASH CHANDRA BOSE.

Founder Directors
PANDIT MOTILAL NEHRU,
Dr M A ANSARI,
HAKIM AJMAL KHAN,
Sri S. SRINIVASA IYENGER.

1. This cent per cent national has issued Policies for THREE CRORES
2. Has given Bonus since the Inception
3. Has attractive Schemes for Agents & Organisers
4. Liberal Terms for Field Staff;

For Particulars Apply to:—

M. SUNDERRAM SHETTY, *Branch Manager,* HAMPANKATTA, MANGALORE, S. K.

Or

K S RAMAMURTHY, M A, *Branch Secretary,* 160/ MOUNT ROAD, MADRAS.

ಹಾಲೆಂಡ್ ಬೆಲ್ಜಿಯಮ್‌ನ ಮೇಲೆ ಜರ್ಮನಿ ದಾಳಿಯಿಟ್ಟಿತು!

— ಇದಿರಿಗೆ ಆಂಗ್ಲೋ-ಫ್ರೆಂಚರ ಪ್ರಬಲ ಸೇನೆ ನುಗ್ಗಿತು! —

• ವಿನಾಶಕಾರಿ ಉದ್ವೇಗಮಯ ಹೋರಾಟ ನಡೆಯುತ್ತಿದೆ! •

ತಾ. 10-5-40ನೇ ಬೆಳಗ್ಗೆ ಘಂಟೆ ಮೂರಕ್ಕೆ ಜರ್ಮನಿಯು ಹಾಲೆಂಡ್ ಮತ್ತು ಬೆಲ್ಜಿಯಮುಗಳ ಮೇಲೂ ಲಕ್ಸೆಂಬರ್ಗಿನ ಮೇಲೂ ನುಗ್ಗಿ ಬಂತು. ನಾಜೀ ಸೈನಿಕರು ವಾಲ್ ಹೊಳೆಯನ್ನು ರಬ್ಬರ್ ಬೋಟುಗಳಲ್ಲಿ ದಾಟಿ ಬಂದರು; ಗಾಳಿ ಕೊಡೆಗಳ ಮೂಲಕ ಹಾಲೆಂಡಿನ ಗಡಿ ದಾಟಿ ಇಳಿಯುತ್ತಿದ್ದರು ಇಳಿಯುವ ಜರ್ಮನಿನ ಸೋಲ್ಜರರು ಹೆಚ್ಚಾಗಿ ಡಚ್ಚರ ಪೋಷಾಕಿನಲ್ಲಿದ್ದರು. ಹಾಲೆಂಡಿನ ವಿಮಾನ ನಿಲ್ದಾಣಗಳ ಮೇಲೆ ಧಾಳಿನಡಿಸುತ್ತಿದ್ದಾಗ ಮೊದಲೇ ಸಿದ್ಧವಿದ್ದ ವಿಮಾನಭೇದಕ ಮೆಶೀನುಗನ್ನುಗಳೂ ವಿಮಾನಗಳೂ ಅವನ್ನಿಳಿಸಿದವು. ಸುಮಾರು ಹನ್ನೆರಡು ಜರ್ಮನ್ ವಿಮಾನಗಳನ್ನು ಹೊಡೆದುರುಳಿಸಿದವು ಹಾಲೆಂಡಿನ ಹಲವು ಭಾಗಗಳಲ್ಲಿ ಪ್ರವಾಹವನ್ನು ಹರಿಯಬಿಟ್ಟು ನಾಜೀ ಸೈನ್ಯದ ಮುನ್ನುಗ್ಗುವಿಕೆಯನ್ನು ತಡೆಯಲಾಗಿದೆ. ಜರ್ಮನ್ ವಿಮಾನದಳವು ಹಲವು ವೈಮಾನಿಕ ನಿಲ್ದಾಣಗಳನ್ನು ವಶಪಡಿಸಿಕೊಂಡಿದೆ.

ರಾಣಿಯ ಹೇಳಿಕೆ

ಹಾಲೆಂಡಿನ ರಾಣಿ ವಿಲ್ ಹೆಲ್ಮಿನಾ ಜರ್ಮನಿಯ ಮೇಲೆ ಯುದ್ಧ ಜಾಹೀರು ಮಾಡಿ "ಇಷ್ಟು ತಿಂಗಳುಗಳ ತನಕ ಪೂರ್ಣ ತಾಟಸ್ಥ್ಯವನ್ನು ಕಾಪಾಡಿಕೊಂಡು ಬಂದರೂ ಜರ್ಮನಿ ನಮ್ಮ ದೇಶದ ಮೇಲೆ ಎಚ್ಚರ ಕೂಡ ಕೊಡದೆ ಆಕಸ್ಮಿಕ ಧಾಳಿ ನಡೆಸಿದೆ. ನನ್ನ ಸರಕಾರವು ತನ್ನ ಕರ್ತವ್ಯವನ್ನು ಮಾಡುವದು" ಎಂದು ಜಾಹೀರು ಮಾಡಿದ್ದಾಳೆ. ಶತ್ರು ವಿಮಾನ ಬಲ ಮತ್ತು ಕಾಲ್ಬಲವು ಹಲವು ಕಡೆಗಳಲ್ಲಿ ಸೈರಿಯನ್ನಿದಿರಿಸಿ ಹಲವು ವಿಮಾನಗಳನ್ನು ಕೆಳಕ್ಕುರುಳಿಸಿರುವವೆಂದು ಡಚ್ ಸರಕಾರದ ಪ್ರಕಟನೆಯಿಂದ.

ಬೆಲ್ಜಿಯಮಿನ ಮೇಲೆ ಧಾಳಿ

ತಾ. 10ರಲ್ಲಿ ಬೆಲ್ಜಿಯಮಿನ ಮೇಲೆ ಜರ್ಮನಿಯ 37 ವಿಮಾನಗಳು ಹಾರಾಡಿ ಬೋಂಬು ಸುರಿಸಿದವು. ಎಂಟ್‌ವರ್ಪ್ ಎಂಬಲ್ಲಿಯ ಒಂದು ಮಿಲಿಟರಿ ಆಸ್ಪತ್ರೆ ಪುಡಿ ಪುಡಿಯಾಗಿದೆ. ಬೆಲ್ಜಿಯಮಿನಲ್ಲಿ ಸಾರ್ವತ್ರಿಕ ಸೈನ್ಯ ಸಿದ್ಧತೆಯ ಹುಕುಮು ಜಾರಿಯಾಗಿರುವದಲ್ಲದೆ ವಿಮಾನಭೇದಕ ಯಂತ್ರಗನ್ನು ಅಲ್ಲಲ್ಲಿರಿಸಲಾಗಿದೆ. ನಾಜೀ ಸೈನ್ಯವು ಬೆಲ್ಜಿಯಮ್ ಮುಖ್ಯ ಪಟ್ಟಣವಾದ ಬ್ರುಸೆಲ್ಸಿನ ಕಡೆಗೆ ಮುಂದೊತ್ತಿ ಫ್ರಾನ್ಸ್-ಬೆಲ್ಜಿಯಮುಗಳ ವಾರ್ತಾಸಂಬಂಧವನ್ನು ಕಡಿದುಹಾಕಲು ಪ್ರಯತ್ನಿಸುವದು ಗಾಳಿಕೊಡೆಗಳ ಮೂಲಕ ಡಚ್ ವೇಷದಲ್ಲಿ ಬಂದಿಳಿಯುವ ನಾಜೀ ಸೈನಿಕರ ಸಂಖ್ಯೆ ಕ್ಷಣಕ್ಷಣಕ್ಕೆ ಹೆಚ್ಚುತ್ತಿದೆ. ಲಕ್ಸೆಂಬರ್ಗಿನ ಮೇಲೆ ಆಕ್ರಮಣ ನಡೆದಾಗ ಅಲ್ಲಿಯ ಸರಕಾರವು ವಿದೇಶೀ ಮಂತ್ರಿಯೊಬ್ಬನನ್ನು ಬಿಟ್ಟು ಪಲಾಯನ ಮಾಡಿದೆ.

ರಿಬ್ಬೆಂಟ್ರಾಪನ ಅಬ್ಬರ

ಜರ್ಮನಿಯು ಹಾಲ್ಲೆಂಡ್ ಮತ್ತು ಬೆಲ್ಜಿಯಮ್ ಸರಕಾರಗಳಿಗೊಪ್ಪಿಸಿದ ಕಾರಣಪತ್ರದಲ್ಲಿ ಮಿತ್ರರಾಷ್ಟ್ರಗಳು ಅವೆರಡು ರಾಷ್ಟ್ರಗಳನ್ನು ನುಗ್ಗಿ ಜರ್ಮನಿಯ ಮೇಲೆ ಧಾಳಿ ನಡೆಸಲು ಎಣಿಸಿವೆ ಎಂಬುದಕ್ಕೆ ಆಧಾರವಿದೆಯೆಂದೂ, ಈ ರಾಷ್ಟ್ರಗಳ ತಾಟಸ್ಥ್ಯ ರಕ್ಷಣೆಗಾಗಿ ಜರ್ಮನ್ ಸೇನೆ ಮುಂದಾಗಿ ನುಗ್ಗಬೇಕಾಯಿತೆಂದೂ ಹೇಳಲ್ಪಟ್ಟಿದೆ. ಹಾಲೆಂಡ್ ಬೆಲ್ಜಿಯಮುಗಳು ಜರ್ಮನಿಯನ್ನು ಸದಾಕಾಲ ಸಂಶಯದೃಷ್ಟಿಯಿಂದ ಕಂಡು ಜರ್ಮನಿಯ ದಿಕ್ಕಿನಲ್ಲೇ ರಕ್ಷಣೋಪಾಯಗಳನ್ನು ಕೈಗೊಂಡಿದ್ದುದಲ್ಲದೆ ಮಿತ್ರರಾಷ್ಟ್ರಗಳ ಕುರಿತು ಜಾಗ್ರತೆ ತೆಗೆದುಕೊಂಡಿಲ್ಲವೆಂದೂ ಅದರಲ್ಲಿ ಹೇಳಲಾಗಿದೆ. ರಿಬ್ಬೆಂಟ್ರಾಪನೂ ಅದೇ ತಾತ್ಪರ್ಯದ ಹೇಳಿಕೆ ಕೊಟ್ಟಿದ್ದಾನೆ. "ಜರ್ಮನ್ ಸೇನೆಯೀಗ ಬ್ರಿಟನ್ ಫ್ರಾನ್ಸುಗಳೊಡನೆ ಎಂದೆಂದಿಗೂ ಫಲಕೊಡುವಂತಹ ನಿರ್ಣಯಮಾಡಲು ಹೊರಟಿದೆ" ಎಂದು ಅಬ್ಬರಿಸಿದ್ದಾನೆ.

ಬ್ರಿಟನು ಫ್ರಾನ್ಸುಗಳ ಸಕಾಲ ಸಹಾಯ

ಜರ್ಮನಿಯು ಆಕ್ರಮಣ ಮಾಡಿದೊಡನೆ ಹಾಲೆಂಡ್ ಬೆಲ್ಜಿಯಮುಗಳು ಸಹಾಯಕ್ಕಾಗಿ ಮಿತ್ರರಾಷ್ಟ್ರಗಳನ್ನು ಪ್ರಾರ್ಥಿಸಿಕೊಂಡವು. ತಮ್ಮಿಂದೆ ಸಾಧ್ಯವಿರುವ ಸಹಾಯವನ್ನೆಲ್ಲಾ ಕೊಡುವದಾಗಿ ಇಂಗ್ಲಾಂಡು ಫ್ರಾನ್ಸುಗಳು ಅಭಯಕೊಟ್ಟು ತಮ್ಮ ಸೇನೆಯನ್ನು ಬೆಲ್ಜಿಯಮಿನೊಳಗೆ ಹೊಗಿಸಿವೆ. ಮಿತ್ರರಾಷ್ಟ್ರಗಳ ವೈಮಾನಿಕ ದಳವು ಸಹಾಯಕ್ಕಾಗಿ ಹೊರಟಿದೆ ಹಾಲೆಂಡ್ ಬೆಲ್ಜಿಯಮುಗಳ ಜನರು ಮಿತ್ರರಾಷ್ಟ್ರಗಳ ಸೇನೆಗಳನ್ನು ಅತ್ಯಾದರದಿಂದ ಸ್ವಾಗತಿಸಿದ್ದಾರೆ.

(೩ನೇ ಪುಟದಿಂದ)

ಮಿ. ಲ್ಲೊಯ್ಡ್ ಜೋರ್ಜರೂ ಬಹುತೇಕವಾಗಿ ಮಂತ್ರಿ ಮಂಡಲದ ಸದಸ್ಯರಾಗುವ ಸಂಭವವಿದೆ ಈ ಬದಲಾವಣೆಯಿಂದ ಹೆಚ್ಚಿನವರು ಸಮಾಧಾನ ಸೂಚಿಸಿರುವರು.

ರಷ್ಯದ ಚಟುವಟಿಕೆ

ಹೆರ್. ಹಿಟ್ಲರನು ಹಾಲ್ಲೆಂಡಿಗೆ ಧಾಳಿಯಿಡುವ ಮೊದಲೇ ಸ್ವೀಡನಿನ ತಾಟಸ್ಥ್ಯವನ್ನು ಕಾಪಾಡುವದಾಗಿ ಆಶ್ವಾಸನೆಯಿತ್ತಿದ್ದಾನೆ. ಈಗ ರಷ್ಯವು ಸ್ವೀಡನ್, ಫಿನ್ಲೆಂಡುಗಳೊಡನೆ ಕಳೆದ ವರುಷ ಲೇಟ್ವಿಯಾ ಮೊದಲಾದುವುಗಳೊಡನೆ ಮಾಡಿಕೊಂಡಂತಹ ಒಂದು ಒಪ್ಪಂದಮಾಡಿಕೊಳ್ಳುವ ಹಂಚಿಕೆಯಲ್ಲಿದೆ. ರಷ್ಯದ ಸೂಚನೆಗಳಲ್ಲಿ ಸುತ್ತಲೂ ಕೋಟೆಕಟ್ಟಿ ಭದ್ರಪಡಿಸಿಕೊಳ್ಳುವ ಮತ್ತು ಅಲಾಂಡ್ ದ್ವೀಪಗಳನ್ನು ರಕ್ಷಿಸುವ ವಿಷಯಗಳೂ ಇವೆ. ತನ್ನ ಸೂಚನೆಗಳಿಗೊಪ್ಪಿಗೆ ಕೊಟ್ಟಲ್ಲಿ ಕರೇಲಿಯನ್ ಪ್ರಾಂತ್ಯಗಳನ್ನು ಹಿಂದಿರುಗಿ ಕೊಡಲು ರಷ್ಯವು ಸಿದ್ಧವಿದೆಯೆಂದು ತಿಳಿದು ಬರುತ್ತದೆ. ವ್ಯಾಪಾರೋದ್ಯಮ ಮತ್ತು ಹಡಗು ಚಲಾವಣೆಯ ಕುರಿತು ಇರಾನ್-ರಶ್ಯಾ ಒಪ್ಪಂದವಾಗಿದ್ದು ಅದು ಇರಾನ್ ಪಾರ್ಲಿಮೆಂಟನಲ್ಲಿ ಮಂಜೂರಾತಿಪಡೆದಿದೆ.

'ಸಂಧಾನಕ್ಕೆ ಸದಾ ಸಿದ್ಧನೇ!'

"ನಾನು ಗೌರವಾರ್ಹ ಒಪ್ಪಂದವನ್ನು ಸ್ವಾಗತಿಸುವವನಿದ್ದೇನೆ. ಅದಕ್ಕೆ ಸರ್ವದಾ ನಾನು ಸಿದ್ಧನೆಂಬುದು ವೈಸರಾಯರಿಗೆ ಗೊತ್ತಿದೆ" ಎನ್ನುತ್ತಾ ಗಾಂಧಿಯವರನ್ನುತ್ತಾರೆ: "ದೇಶದ ರಕ್ಷಣೆ ಮತ್ತು ವ್ಯಾಪಾರದ ಕುರಿತು ಬ್ರಿಟನಿನೊಡನೆ ಒಪ್ಪಂದಕ್ಕೆ ಬರುವುದರಲ್ಲಿ ನನ್ನ ಆಕ್ಷೇಪವಿಲ್ಲ. ಹಾಗೆ ಮಾಡಿಕೊಂಡ ಒಪ್ಪಂದವನ್ನು ಕಾನ್ಸಿಟ್ಯೂಯೆಂಟ್ ಎಸೆಂಬ್ಲಿಯ ಮುಂದೆ ತಂದರಾಯಿತು. ಕಾನ್ಸಿಟ್ಯೂಯೆಂಟ್ ಎಸೆಂಬ್ಲಿಯೇ ಒಂದು ಸಮಾಧಾನಕರ ಕಾರ್ಯಕ್ರಮವೆಂದು ನಾನು ವ್ಯಕ್ತಿಶಃ ನಂಬುವದಾದರೂ ಅದಕ್ಕಿಂತ ಉತ್ತಮ ಉಪಾಯವನ್ನು ಸೂಚಿಸುವವರಿದ್ದರೆ ನಾನದನ್ನು ಸಂತೋಷಪೂರ್ವಕ ವಿಚಾರಕ್ಕೆ ತೆಗೆದುಕೊಳ್ಳುವೆನು. ಪ್ರಾಯಸ್ಥರೆಲ್ಲರ ಮತಾಧಿಕಾರದಿಂದ ಎಸೆಂಬ್ಲಿ ಚುನಾವಣೆಯಾಗಬೇಕೆಂದು ನಾನು ಹೇಳುವುದಾದರೂ ಜನಪ್ರತಿನಿಧಿ ಮುಖಂಡರ ಬೆಂಬಲವುಳ್ಳ ಇತರ ಸೂಚನೆಗಳು ಮುಂದೆ ಬಂದಲ್ಲಿ ಅವಲೋಕಿಸಲು ನಾನು ಸಿದ್ಧನಿದ್ದೇನೆ"

ಮಿತ್ರರಾಷ್ಟ್ರಗಳು ಜಯಿಸಬೇಕು

"ಯುರೋಪಿನಲ್ಲಿ ಒಂದರ ಬಳಿಕೊಂದರಂತೆ ರಾಷ್ಟ್ರಗಳ ಬಲಿಯಾಗುತ್ತಿರುವದನ್ನು ಕಾಣುವದು ನನ್ನಂಥವರಿಗೊಂದು ವಿಷಮ ಪರಿಸ್ಥಿತಿಯೇ ಸರಿ. ನಿಸ್ಸಂದೇಹವಾಗಿ ನಮಗೆ ಬ್ರಿಟನಿನೊಡನೆ ಮನಸ್ತಾಪವಿದೆ ಅದು ಭಾರತದೊಡನೆ ನ್ಯಾಯವಾಗಿ ವರ್ತಿಸಿಲ್ಲ. ಸರ್ವಾಧಿಕಾರಿಗಳಿಗಿಂತ ಇಂಗ್ಲಾಂಡು ಉತ್ತಮವೆಂದು ನಾನು ನಂಬುತ್ತೇನೆ. ಆದ್ದರಿಂದ ಮಿತ್ರರಾಷ್ಟ್ರಗಳ ಜಯವನ್ನು ನಾನು ಹಾರೈಸುತ್ತೇನೆ ಇಂಗ್ಲಾಂಡು ಭಾರತದ ನ್ಯಾಯವಾದ ಬೇಡಿಕೆಯನ್ನು ಮಾನ್ಯಮಾಡಲು ಅನುಮಾನಿಸುತ್ತಿದೆಯಾದರೂ, ಲೋಕ ಪರಿಸ್ಥಿತಿಯ ಕಡೆಗೆ ಕುರುಡಾಗಿರಲು ನಮಗೆ ಸಾಧ್ಯವಿಲ್ಲ ನಮ್ಮ ಸಹಾನುಭೂತಿಯು ಸ್ವಾತಂತ್ರ್ಯಕ್ಕೆ ಘಾತಬಂದ ಪೋಲೆಂಡ್, ಫಿನ್‌ಲೇಂಡ್, ನೋರ್ವೆ, ಡೆನ್ಮಾರ್ಕ್, ಹಾಲ್ಲೆಂಡ್, ಬೆಲ್ಜಿಯಮು ಮತ್ತು ಜೆಕೊಸ್ಲೊವೇಕಿಯದ ಜನರ ಕಡೆಗಿದೆ" ಎಂದು ಬಾಬು ರಾಜೇಂದ್ರ ಪ್ರಸಾದರಂದಿದ್ದಾರೆ.

ನೆಹರುಗಳ ಹೇಳಿಕೆ

ನಾಜೀ ಪದ್ಧತಿಯು ಲೋಕದ ಒಂದು ಕಂಟಕವೆಂದೂ, ಯುರೋಪು ಯುದ್ಧವಿಂದು ನೆಪೋಲಿಯನ್ ಅಧ್ಯಾಯದಲ್ಲಿಗೆ ಬಂದವೆಯೆಂದೂ ಬ್ರಿಟಿಷರ ಅಸ್ಪಷ್ಟ ನೀತಿಯು ಇವಕ್ಕೊಂದು ಕಾರಣವೆಂದೂ, ಭಾರತ ಸ್ವಾತಂತ್ರ್ಯದ ಒಪ್ಪಿಗೆ ದೊರೆಯದೆ ಏನು ಬಂದರೂ ಅದು ಯಾವನೊಬ್ಬ ವ್ಯಕ್ತಿ ಅಥವಾ ದೇಶಕ್ಕೆ ಸಹಕಾರವೀಯುವಂತಿಲ್ಲವೆಂದೂ, ವಿದ್ಯಮಾನಗಳಿಂದ ಉದ್ವೇಗಗೊಳ್ಳದೆ ದೃಢವಾಗಿ ಬಂದುದನ್ನೆದುರಿಸಲು ತಯಾರಾಗಬೇಕೆಂದೂ ಪಂಡಿತ ನೆಹರುಗಳಂದಿದ್ದಾರೆ.

THE

BOMBAY LIFE ASSUARNCE Company Limited.

[ESTD. 1908]

COMPARE

Your Life Assurance with any other property you possess what is its guaranteed value

If you live-today-a few years more-when you are old?
If you die-to your family and dependants?

REMEMBER THAT If you live, Life Insurance takes the place of your professional income during your old age.
If you die, it provides your family with enough income for their maintenance and the education of your children.

"BOMBAY LIFE" offers all that is best in Life Assurance.

1938 Record.

Completed Business	**Rs.**	**1,44,91,000**
Life Assurance Fund	**Rs.**	**1,17,69,748**
Total Assets	**Rs.**	**1,31,28,998**

To Insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI.

Post Box No. 337, Mount Road, MADRAS	Visweswarapuram Circle, BANGALORE CITY.	Charni Road, Girgaum, BOMBAY No. 4.
Car Street, MANGALORE.	Puthiyara, CALICUT.	Central Station Road, TRIVANDRUM.

ಹಡಗು ಭಂಜಕ ಪ್ರಳಯ ಶೂಲ—ಮೈನ್!

ಮೈನ್ ಮತ್ತು ಹಡಗು ಒಂದನ್ನೊಂದು ಬೇಟೆಯಾಡುವ ವಿಧಾನ

ಮೈನ್ ಅಥವಾ ಸಮುದ್ರ ಕೋಟೆ ಸಾಧಿಸಿದ ಅದ್ಭುತವು ಇಂದಿನ ಯುದ್ಧದ ವಾರ್ತೆ ಬಲ್ಲವರಿಗೆಲ್ಲಾ ತಿಳಿದದ್ದೇ. ಆದರೆ ಆ ಕೋಟೆಗಳ ಒಳಗುಟ್ಟು ಬಲ್ಲವರೆಷ್ಟು ಮಂದಿ? ಬಹಳ ಕಡಿಮೆ. ಈ ಲೇಖನದಲ್ಲಿ ಸ್ವಾರಸ್ಯವಾಗಿ ಮತ್ತು ಮನದಟ್ಟಾಗುವಂತೆ ಸಮುದ್ರ ಕೋಟೆಗಳ ಸ್ಥಿತಿಗತಿಯನ್ನು ವಿವರಿಸಲಾಗಿದೆ. ಈ ಅಮೂಲ್ಯ ಲೇಖನವು ಕನ್ನಡ ವಾಚಕರ ತಿಳುವಳಿಕೆಗೆ ಒಂದಂಶವನ್ನು ಸೇರಿಸುವಂತಹದು. ಆದ್ದರಿಂದ ಇಲ್ಲಿ ಕೊಡಲಾಗಿದೆ.

ನೀವು 'ಮೈನ್' ಎಂಬ ಹಡಗಧ್ವಂಸಕ ಸಿಡಿಗುಂಡಿನ ಅದ್ಭುತವನ್ನು ಕೇಳಿರಬಹುದು; 'ಎಂತಹ ವಿಚಿತ್ರವಪ್ಪಾ ಅದು!' ಎಂದು ಮೂಗಿನ ಮೇಲೆ ಬೆರಳೇರಿಸಿರಬಹುದು. ಮೈನ್ ಮಾಡಿದ ಕಾರ್ಬಾರು ಅಂತಹದು. ಅದರ ರೀತಿ, ಸ್ಥಾನ, ಹೊಡೆಯುವ ವಿಧಾನ ಎಲ್ಲವೂ ಅತ್ಯಂತ ನೂತನವಾದುದು, ಆತ್ಯದ್ಭುತವಾದುದು. ಆಧುನಿಕ ಯುದ್ಧದಲ್ಲಿ ಮೈನ್ ಮಾತ್ರವೆಂದೇನು—ವಿಷಗಾಳಿ ಕಡಿಮೆಯದೆ? ವೈಮಾನಿಕ ಧಾಳಿ ಕಡಿಮೆಯದೆ?—ಎನ್ನಬೇಡಿ. ಇವೆಲ್ಲವುಗಳಿಗಿಂತ ಹೆಚ್ಚಿನದು 'ಮೈನ್'. ಬೋಂಬು ಅಥವಾ ವಿಷಗಾಳಿಯು ಸಮುದ್ರ ಕೋಟೆಯಷ್ಟು ಅಪಾಯಕರವಾದುದೂ ಅಲ್ಲ; ಅಜೇಯವಾದುದೂ ಅಲ್ಲ. ಬೋಂಬು ಬೀಳುವ ಸಂಜ್ಞೆಗಳು ಮುಂದಾಗಿ ತಿಳಿಯುತ್ತವೆ, ಅಂತಹ ಸಂದರ್ಭಗಳಲ್ಲಿ ಜನರು ಬದರಿ ಹೋಗಿ ರಕ್ಷಣಾನಿಲಯಗಳನ್ನು ಸೇರಿಕೊಳ್ಳುವ ಅನುಕೂಲತೆಯನ್ನು ಯುದ್ಧಕ್ಕಿಳಿದ ಸರಕಾರಗಳು ತಮ್ಮ ಪ್ರಜೆಗಳಿಗೊದಗಿಸಿಕೊಟ್ಟಿವೆ. ವಿಷಗಾಳಿಗೂ ಅಂತಹ ಪರಿಹಾರವಿದೆ. ಮುಖವಾಡವನ್ನು ಕೊಟ್ಟು ಮಾನವವದನವನ್ನು ಹಂದೀ ಮುಖವಾಗಿ ಮಾರ್ಪಡಿಸಿಕೊಂಡರಾಯಿತು.

ಅಪಾಯದ ಪರಮಾವಧಿ

ಆದರೆ ಜಲಕೋಟೆಯ ಮಾತು ಬೇರೆ. ಅದರ ವಿಧ್ವಂಸಕ ಶಕ್ತಿಯನ್ನು ಪ್ರತಿಭಟಿಸುವ ಸುಲಭೋಪಾಯವಾವುದೂ ಈ ವರೆಗೆ ಕಂಡು ಹಿಡಿಯಲ್ಪಟ್ಟಿಲ್ಲ. ಅದರ ಅನಾಹುತವನ್ನು ಕಡಿಮೆ ಮಾಡಲಿಕ್ಕಾದರೂ ಸಾಧ್ಯವೆ? ಅದೂ ಇಲ್ಲ. ಈ ಸಿಡಿಗುಂಡುಗಳು ಬಂದು ಬಡಿಯುವದು ತುಂಬಿದ ಹಡಗಿಕ್ಕೆ. ಸಿಡಿಲೆರಗಿದಂತೆ ಬೀಳುವ ಹೊಡೆತಕ್ಕೆ ಹಡಗು ಎದೆ ಬಿರಿದಂತೆ ಬಿರಿವಾಗಲ ರಭಸವನ್ನು ಊಹಿಸಿ ತಿಳಿಯುವದು ಕಷ್ಟ. ಹಡಗದ ಸಾಮಾನುಗಳೆಲ್ಲಾ ನುಚ್ಚುನೂರಿಯಾಗಿ ಸರಕ್ಕನೆ ಮೇಲೆ ಹಾರುವವು. ಆ ಶಬ್ದವು ಮೈಲು ದೂರದಲ್ಲಿದ್ದವರ ಕಿವಿ ಕಿವುಡಾಗುವಷ್ಟು ದೊಡ್ಡದು; ಅಂತಹ ಅವಘಡಕ್ಕೆ ಸಿಕ್ಕಿದ ಹಡಗದಲ್ಲಿದ್ದವರ ಪ್ರಾಣವು ಉಳಿದೀತೆ? ಈ ಅಪಾಯವನ್ನು ಮುಂದಾಗಿ ತಿಳಿದುಕೊಳ್ಳುವದೂ ಪರಮ ಕಷ್ಟ. ಬೋಂಬು ಹಾಕಲು ಅಥವಾ ವಿಷಗಾಳಿ ಚೆಲ್ಲಲು ಬರುವ ವಿಮಾನಗಳು ಸಿಂಹಗರ್ಜನೆ ಕೊಡುತ್ತಾ ಬರುತ್ತವೆ; ಸ್ಥಳೀಯ ಅಧಿಕಾರಿಗಳಿಂದ ಮುಂದಾಗಿ ಎಚ್ಚರಿಕೆಯೂ ಕೊಡಲ್ಪಡುತ್ತದೆ. ಮತ್ತೂ ಮೇಲ್ಭಾಗದಲ್ಲಿ ಬರುವ ವೈರಿ ವಿಮಾನಗಳೊಡನೆ ಹೋರಾಡಿ ಹಿಂದಕ್ಕಟ್ಟುವ ವಿಮಾನಗಳೂ ಕೆಳಗಿನಿಂದ ಹೊಡೆಯುವ ವಿಮಾನಭೇದಕ ಮೆಶಿನುಗನ್ನುಗಳೂ ಸದಾಕಾಲ ಸಿದ್ಧವಾಗಿಯೇ ಇರುತ್ತವೆ. ಹೀಗಾಗಿ ಧಾಳಿ ನಡೆಸಲು ಬರುವ ವಿಮಾನಗಳ ಕೊಳ್ಳೆಗಳು ತಪ್ಪಿಹೋಗುವ ಸಂಭವವೂ ಇದೆ; ಹೊಡೆಯಲು ಬಂದ ಅವುಗಳು ತಾವೇ ಹೊಡೆತ ತಿಂದುಹೋಗುವ ಸಂಭವವೂ ಇದೆ. ಆದರೆ ಸಮುದ್ರ ಕೋಟೆಗಳ ರೀತಿ ಹಾಗಿಲ್ಲ. ಅವು ಸಿಡಿಯಲು ಮನುಷ್ಯ ಸಹಾಯ ಬೇಕೆಂದಿಲ್ಲ. ಅವು ಜ್ವಾಲಾಮುಖಿಯ ಜಾತಿಯ ಯಂತ್ರಗಳು. ಸಮಾಚಾರ ಗ

ತವಾಗದನ್ನು ಧೂಳಿಪಟ್ಟವನ್ನಾಗಿ ಪುಡಿ ಹಾರಿಸುವ ಹಾಳುಗಳದ ಕಿಡಿಗಳು. 'ಮೈನ್' ಎಂದರೇನು? ಅವು ಪ್ರಳಯ ರುದ್ರನ ನಿಟಿಲಾಗ್ನಿಯ ಪ್ರತಾಪವನ್ನು ತೋರುವ ವಿಧಾನವಾವುದು? ಮನಸ್ಸು ನಾಡಿಸದೆ ಸಂದರ್ಭಕ್ಕೆ ತಕ್ಕಂತೆ ಆಡುವ ಚಮತ್ಕಾರ ಅವಕ್ಕೆಲ್ಲಿಂದ ಬಂತು? ಈ ಸಿಡಿಗುಂಡುಗಳನ್ನು ಗೆಲ್ಲುವ ವಿಧಾನವಾವುದು? ಇತ್ಯಾದಿಗಳನ್ನು ಕುರಿತು ನಿಮಗೇನಾದರೂ ತಿಳಿದಿದೆಯೆ? ಪ್ರಾಯಶಃ ಇಲ್ಲ. ಮೈನ್ ಹಾಕಿ ಹಡಗು ಪುಡಿಮಾಡಿದ ಅದ್ಭುತ ಕಥೆಗಳು ನಿಮ್ಮ ಕಣ್ಣ ಮುಂದಿರಬಹುದು. ನೋರ್ವೇ ಸಮುದ್ರವನ್ನು ಅವು ಮುಳ್ಳಿನ ಬೇಲಿಯಂತೆ ತಡೆಗಟ್ಟಿದ ರೀತಿಯನ್ನು ನೀವು ಕೇಳಿರಬಹುದು, ಅರ್ಥಾತ್ ಅವುಗಳ ಪ್ರತಾಪದ ಪರಿಚಯ ನಿಮಗಿರಬಹುದು. 'ಮೈನ್'ನ ಒಳಗುಟ್ಟು ನಿಮಗರಿತಿದೆಯೆ?—ಇಲ್ಲ. ಹಾಗಾದರೆ ಮೈನ್ ಎಂದರೇನು ಎಂಬುದರ ಅಲ್ಪ ಪರಿಚಯವನ್ನು ಇಲ್ಲಿ ಕೊಡಲಾಗಿದೆ. ಚಿಕಿತ್ಸಕ ಬುದ್ಧಿಯಿಂದ ಅದನ್ನು ಪರಿಶೀಲಿಸಿ ಬಿಡಿ.

ಮೈನ್ ವಿಧಾನಗಳು

ಬಂದರ ಕೋಟೆ (ಒಬ್ಸರ್ವೇಶನ್ ಮೈನ್ಸ್ ಫೋರ್ಟ್ ಮೈನ್ಸ್) ತಾಗುವಿಕೆ ಕೋಟೆ (ಕೊಂಟೆಕ್ಟ್ ಮೈನ್ಸ್) ಕೊಂಬುಳ್ಳ ಕೋಟೆ (ಹೋರ್ನ್‌ಡ್ ಮೈನ್ಸ್) ಮೀಸೆಯುಳ್ಳ ಕೋಟೆ (ಅಂಟೇನಾ ಮೈನ್ಸ್) ಸೂಜಿಕಲ್ಲು ಕೋಟೆ (ಮೆಗ್ನೇಟಿಕ್ ಮೈನ್ಸ್) ತಂತಿ ರಹಿತ ಕೋಟೆ (ಅನ್‌ಮೂರ್ಡ್ ಲಿಯೋನ್ ಮೈನ್ಸ್) ಹೀಗೆ ಬೇರೆ ಬೇರೆ ವಿಧಾನಗಳಿವೆ. ಎಲ್ಲವುಗಳ ಕೆಲಸವೂ ಒಂದೇ—ನೀರಿನೊಳಗಡಗಿದ್ದು ಅದೃಷ್ಟವಾಗಿದ್ದು ತಮ್ಮ ಕಡೆಗೆ ಬರುವ ಹಡಗುಗಳನ್ನು ಪುಡಿಗಟ್ಟುವದೇ. ಈ ಧ್ಯೇಯವನ್ನು ವಿವಿಧ ರೀತಿಯಿಂದ ಸಾಧಿಸುವದಕ್ಕಾಗಿ ಮೈನ್‌ಗಳಲ್ಲೂ ಬೇರೆ ಬೇರೆ ಜಾತಿಗಳಿವೆ. ಅವುಗಳನ್ನು ಸಮುದ್ರದೊಳಗೆ ಇಳಿಯಬಿಡುವ ರೀತಿಯಲ್ಲೂ ವೈವಿಧ್ಯವಿದೆ. ಮಾನವನಂತೆಯೇ ಮೈನ್‌ಗಳಲ್ಲಿ ಕೂಡ ತೀವ್ರ ಉದ್ವೇಗಿಗಳು ನಿಧಾನಿಗಳು ಎಂಬ ವ್ಯತ್ಯಾಸವಿದೆ. ಕೆಲವರನ್ನು ಸಿಟ್ಟಿಬ್ಬಿಸಬೇಕಾದರೆ ಒಂದೇ ಒಂದು ಆಗದ ಮಾತನ್ನಾಡಿದರಾಯಿತು. ಇನ್ನು ಕೆಲವರು ನಿಧಾನವಾಗಿ ಹೋಗಿ ಒಡೆಯದೆ ಅವರಾಗಿ ಮೈನೆಂದರೆ ಬಿಳುವಂತಿಲ್ಲ. ಅಂತೆಯೇ 'ಶಬ್ದ' ಸ್ಪರ್ಶ ಮಾತ್ರದಿಂದ, ವಿನಾಶಯ ಸ್ಪರ್ಶವಾದೊಡನೆ ಧಬಾರನೆ ಸಿಡಿಯುವ ಮೈನ್‌ಗಳಿವೆ. ಹಡಗ ಬಂದ ತಾಗಿದಾಗ ಮಾತ್ರ ಒಡೆಯುವ ಕೋಟೆಗಳಿವೆ.

ಬಂದರ ಕೋಟೆಗಳು

ತಮ್ಮ ಬಂದರಕ್ಕೆ ವೈರಿ ಹಡಗಗಳ ಭೀತಿಯಿದೆ ಎಂದಾದರೆ ಒಬ್ಸರ್ವೇಶನ್ ಮೈನ್ಸ್ ಅಂದರೆ ವಿವೇಚನಾತ್ಮಕ ಕೋಟೆಗಳನ್ನಿಡುತ್ತಾರೆ. ಈ ಕೋಟೆಗಳನ್ನು ಸ್ಫೋಟಗೊಳಿಸುವರೆಬ್ಬಿಸುವ ವಿದ್ಯುಚ್ಛಕ್ತಿ ಗುಂಡಿಯು ಬಂದರದ ದಡದಲ್ಲಿ ಒಂದು ಸುರಕ್ಷಿತ ನೆಲೆಯಲ್ಲಿ ಗುಪ್ತವಾಗಿ ಇರುತ್ತದೆ. ಸರಿಗೆಗಳಲ್ಲಿ ಸಿಡಿಗುಂಡುಗಳನ್ನು ಬೇಕಾದಷ್ಟು ಸಿಕ್ಕಿಸಿ ಸಮುದ್ರದೊಳಕ್ಕೆ ಇಳಿಯಬಿಡುತ್ತಾರೆ. ಅವು ನೀರಿನ ಮೇಲ್ಪಟ್ಟದ ಅಂಡಿಯಿಂದ ಹತ್ತಡಿವರೆಗಿನ ತಗ್ಗಿನಲ್ಲಿ ತಮ್ಮನ್ನು ಜಿಗಿದ ಸರಿಗೆಯ ಬಲದಿಂದ ನಿಂತುಬಿಡುತ್ತವೆ. ಇಂತಹ ಕೆಲವು ಸರಿಗೆಗಳು ಇರುವ ಒಂದು ಇಲೆಕ್ಟ್ರಿಕ್ ತಂತಿಯು ದಡದಲ್ಲಿರುವ ಚಾಲಕ ನಿಲ್ದಾಣದ ಕಡೆಗೆ ಹೋಗಿ ಸೇರಿಕೊಂಡಿರುತ್ತದೆ. ಆ ನಿಲ್ದಾಣದಲ್ಲಿರುವ ಇಲೆಕ್ಟ್ರಿಕ್ ಗುಂಡಿಯನ್ನೊತ್ತಿದಾಗ ಮಾತ್ರ ಸಮುದ್ರದಲ್ಲಿರುವ ಮೈನ್‌ಗಳು ಸಿಟಿಲಾಗ್ನಿಯಂತೆ ಸಿಡಿಯುವವು ಹೊರತು ಇನ್ನು ಸಂದರ್ಭಗಳಲ್ಲಿ ಅವು ಬೀಸುವ ಬಲೆಯ ಗುಂಡುಗಳಂತೆ ಶಾಂತವೇ ಸರಿ. ಬಂದರದ ದಡದಲ್ಲಿರುವ ಗುಂಡಿಯೊತ್ತುವ ಸ್ಟೇಶನಿಗೆ ದೂರದಲ್ಲಿ—ಒಂದು ಗುಪ್ತ ಸ್ಥಳದಲ್ಲಿ ಹಡಗಗಳನ್ನು ಪರಿಚಯಮಾಡಿಕೊಳ್ಳುವವರ ಠಾಣ್ಯವಿರುತ್ತದೆ. ಅಂದರೆ ಸಮುದ್ರದಲ್ಲಿ ಬರುವ ಹಡಗು ಯಾರದೆಂಬುದನ್ನು ಅಲ್ಲಿರುವ ಪರೀಕ್ಷಕರು 'ಟೆಲಿಸ್ಕೋಪ್' ಇಟ್ಟು ಸೂಕ್ಷ್ಮವಾಗಿ ನೋಡಿಕೊಳ್ಳುತ್ತಾರೆ. 'ಹೋ! ಇದು

ವೈರೀ ಹಡಗು' ಎಂದು ಖಚಿತವಾದೊಡನೆ ಮತ್ತು ಅದು ಮೈನ್ ಹಾಕಿದ ಕ್ಷೇತ್ರಕ್ಕೆ ಕಾಲಿಟ್ಟಿತು ಎಂದು ತಿಳಿದೊಡನೆ ಆ ದರ್ಶಕನು ಗುಂಡಿಯೊತ್ತುವ ಸ್ಟೇಶನಿಗೆ 'ಫೋನ್' ಮಾಡುತ್ತಾನೆ. ಸರಿ ಇವನು ಗುಂಡಿಯೊತ್ತುವದೇ ತಡ. ಅದಕ್ಕೆ ತಾಗಿರುವ ಸರಿಗೆಯಲ್ಲಿ ಹುಟ್ಟಿದ ವಿದ್ಯುಚ್ಛಕ್ತಿಯು ಒಡಿದು ಅಂಟೆ

ಮಂಗಳೂರು ಮತ್ತು ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

— ಹಾಗಾದರೆ —

ಸುಖನಿವಾಸಕ್ಕೆ ಬನ್ನಿ.

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ.

ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವದೆಲ್ಲಿ?

ಸುಖನಿವಾಸ ದಲ್ಲಿ ಮಾತ್ರ.

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ. ಮಂಗಳೂರಿನಲ್ಲಿ ಜೆಪ್ಪುಗುಡ್ಡೆ ಮಲ್ಲಿಯೂ, ಉಡುಪಿಯಲ್ಲಿ ತಾಲೂಕು ಕಚೇರಿಯ ಬಳಿಯಲ್ಲಿಯೂ ಇರುವ 'ಸುಖನಿವಾಸ'ವನ್ನು ಒಮ್ಮೆ ಸಂದರ್ಶಿಸಿರಿ.

ಪ್ರೊಪ್ರೈಟರ್, **ಸುಖನಿವಾಸ.**

ಕೊಂಡಿರುವ ವೈನ್‌ಗಳನ್ನು ಸ್ಫೋಟಗೊಳಿಸುತ್ತದೆ. ಪರಿಸ್ಥಿತಿಗೆ ತಕ್ಕಂತೆ ಎಲ್ಲಾ ವೈನ್‌ಗಳನ್ನೊಡೆಯಲೂಬಹುದು; ಬೇಕಾದಷ್ಟನ್ನೇ ಸ್ಫೋಟಗೊಳಿಸುವದಕ್ಕೂ ಬರುತ್ತದೆ. ಇಂತಹ ವೈನ್‌ಗಳು ಸುಮಾರು 40 ಇಂಚು ಗಾತ್ರವಿದ್ದು ಅವುಗಳೊಳಗೆ 200 ಪೌಂಡು ಸಿಡಿಮದ್ದುಗಳು ತುಂಬಿರುತ್ತವೆ. ವೈನ್‌ಗಳಲ್ಲಿರುವ ಅಪಾಯಕಾರೀ ಶಕ್ತಿಯ ಉಗಮಸ್ಥಾನವು ದಡದಲ್ಲಿರುವ ನಿಲ್ದಾಣ. ಆ ನಿಲ್ದಾಣದಲ್ಲಿರುವ ಗುಂಡಿಯನ್ನೊತ್ತದ ವೇಳೆಯಲ್ಲಿ ಸಿಡಿಗುಂಡುಗಳಿಗೆ ತಾಗಿಕೊಂಡೇ ಹಡಗು ಹೋದರೂ ಏನೂ ಅಪಾಯವಾಗುವಂತಿಲ್ಲ. ದಡದ ಗುಪ್ತ ನಿಲ್ದಾಣಗಳಲ್ಲಿರುವ ದೂರದರ್ಶಕ ಯಂತ್ರ ಹಿಡಿದವ ಮತ್ತು ಗುಂಡಿಯೊತ್ತುವ ಭಟ—ಇವರಿಬ್ಬರ ಅನುಗ್ರಹವೊಂದಿದ್ದರೆ ಈ ಸಿಡಿಗುಂಡುಗಳಿಗೆ ಅವುಗಳಲ್ಲಿರುವ ಸಾಮಾನಿನಷ್ಟೇ ಬೆಲೆ. ಆದರೆ ವಿರೋಧಿ ಹಡಗವೊಂದು ಆ ಕಡೆಗೆ ಬಂದರಾಯಿತು ಪ್ರಥಮತಃ ದೂರದರ್ಶಕ ಯಂತ್ರದವ ಮತ್ತು ನೋಟ ಬೀರಿದ; ಗುಂಡೀ ನಿಲ್ದಾಣದವ ವಿದ್ಯುಚ್ಛಕ್ತಿಯ ಸ್ವಿಚ್ಚನ್ನು ಪ್ರಯೋಗ ಮಾಡಿದ; ಮರುಕ್ಷಣದಲ್ಲಿ ಆ ಕ್ಷೇತ್ರದಲ್ಲಿ ಕಾಲಿಟ್ಟ ಹಡಗವು ಸಹಸ್ರಾರಿಂದು ನುಚ್ಚುನುರಿಯಾಗುವದೊಂದೇ ವಿಧಿ! ಈ ಜಾತಿಯ ವೈನ್‌ಗಳು ಸ್ವಂತ ರಕ್ಷಣೆಗಾಗಿ ಉಪಯೋಗಿಸಲ್ಪಡುತ್ತಿವೆ. ಅಮೇರಿಕದವರು ತಮ್ಮ ಸಮುದ್ರದಲ್ಲಿ ಇಂತಹ ತೋಟಿಗಳನ್ನು ಹಾಕಿಟ್ಟಿರುವರು. ಆ ಕಡೆಯ ಜನ ಸಂಚಾರವನ್ನು ಸರಕಾರವು ಟಿಪ್ಪಣೆ ಮೂಲಕ ನಿಷೇಧಿಸಿದೆ. ಒಮ್ಮೆ ಮೋನ್ರೋಯಿ ಬಂದರದಲ್ಲಿ ಕೃತ್ರಿಮ ಹಡಗವೊಂದನ್ನಿಳಿಸಿ ಪ್ರಯೋಗಾರ್ಥ ವೈನ್ ಸ್ಫೋಟಗೊಳಿಸಿ ಅದನ್ನು ಧ್ವಂಸಮಾಡಲಾಯಿತು. ಇದನ್ನು ಕಾಣುವ ಸುಯೋಗವು ಅಲ್ಲಿಯ ಕೆಲವು ನಾಗರಿಕರಿಗೂ ದೊರಕಿತ್ತು.

ತಾಗುವ ತೋಟಿಗಳು

ಕೊಂಟೇಕ್ಟ್ ವೈನ್ಸ್ ಅಂದರೆ ತಾಗಿದಲ್ಲಿ ಮಾತ್ರ ಸಿಡಿಯುವ ತೋಟಿಗಳು ಮತ್ತೊಂದು ಜಾತಿಯವು. ಬಂದರ ತೋಟಿಗಳು ರುಚಿನೋಡಿ ತಿನ್ನುವ ಜಾತಿಯವುಗಳಾದರೆ ಈ ತಾಗುವ ತೋಟಿಗಳು ಸಿಕ್ಕಿದ್ದನ್ನು ಮುಕ್ಕುವದೇ ಸರಿ! ಸ್ವಪರಭೇದವೆಂಬ ದುರ್ಗುಣ ಅವುಗಳಲ್ಲಿಲ್ಲವೇ ಇಲ್ಲ! ಯಾವ ಹಡಗವೇ ಇರಲಿ, ತನಗೆ ಬಂದು ತಾಗಿದೊಡನೆ ಅದು ಸ್ಫೋಟವಾಗುವದು. ಸಿಡಿಮದ್ದುಗಳನ್ನು ತುಂಬಿಸಿಟ್ಟ ದೊಡ್ಡ ಗುಡಾಣವಾಗಿರುವ ಈ ವೈನ್‌ಗಳ ಅಡಿಭಾಗದಲ್ಲಿ ಸರಿಗೆ ತುಂಬಿದ ಒಂದು ಪೆಟ್ಟಿಗೆ ಇರುತ್ತದೆ. ವೈನ್ ನೀರಿಗೆ ಸೇರಿದೊಡನೆ ಸರಿಗೆಯು ಪೆಟ್ಟಿಗೆಯನ್ನು ಕೆಳಗಿಳಿಸಿ ತಳ ಹಿಡಿಸುತ್ತದೆ. ಸಮುದ್ರವೆಷ್ಟೇ ಆಳವಿದ್ದರೂ ಈ ವೈನ್‌ಗಳು ಕಾರ್ಯಕ್ಕನುಕೂಲವಾಗುವಷ್ಟು ಮೇಲ್ಭಾಗದಲ್ಲಿ ನಿಲ್ಲಲಾಗುತ್ತದೆ. ಅಂದರೆ ಸಮುದ್ರ ತಳದಲ್ಲಿ ಪೆಟ್ಟಿಗೆ ನಿಂತಾಗ ಜಲಮಟ್ಟದ ಆರೆಂಟಡಿ ಆಳದಲ್ಲಿರುವ ವೈನನ್ನಾಧರಿಸಿ ತಂತಿಯೊಂದು ತಳದ ಪೆಟ್ಟಿಗೆಗೂ ವೈನಿಗೂ ಮಧ್ಯದಲ್ಲಿರುತ್ತದೆ. ಒಂದು ಮನೆಯ ತಳಗಟ್ಟು ಮತ್ತು ಮೇಲಿನ ಮಾಡಿಗೆ ಮಧ್ಯದಲ್ಲಿ ಕಂಭವಿರುತ್ತದಲ್ಲಾ—ಹಾಗೆ. ಸಮುದ್ರ ಆಳವಿದ್ದಷ್ಟು ಉದ್ದಕ್ಕೂ ಸರಿಗೆಯು ಅಡಿಯ ಪೆಟ್ಟಿಗೆಯನ್ನು ಇಳಿಸಬಲ್ಲುದಾಗಿರಿಂದ ಇಂತಹ ವೈನ್‌ಗಳನ್ನು ಯಾವ ಕಡೆಯಲ್ಲಾದರೂ ಹಾಕಬಹುದು. ಇಷ್ಟು ಹೊರತು ಬೇರೇನೂ ಮಾಡಬೇಕೆಂದಿಲ್ಲ. ಆ ಮೇಲಿನ ಕೆಲಸ ಹಡಗಿನದು. ಅದು ಬಂದು ಸಿಡಿಗುಂಡಿಗೆ ತಾಗಿದಲ್ಲಿ ಇದು ಸ್ಫೋಟವಾಗುವದು; ಇಲ್ಲವಾದರೆ ಇಲ್ಲ. ಇವುಗಳನ್ನು ಬಂದರಗಳಲ್ಲಿ ಹಾಕು

ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್

ವದೆಂದರೆ ಬಲವಾದ ಕೋಟೆ ಕಟ್ಟಿದಂತೆ. ತಮ್ಮ ಬಂದರುಗಳಲ್ಲಿ ಹಾಕಿ ವಿರೋಧಿ ಹಡಗುಗಳು ಬಾರದಂತೆಯೂ, ವೈರಿ ಬಂದರಕ್ಕೆ ಹಾಕಿ ಅಲ್ಲಿಂದ ಹಡಗುಗಳು ಹೊರಡದಂತೆಯೂ ಮಾಡಬಹುದು. ಈ ತರಗತಿಯ ವೈನ್ ಬಿದ್ದ ಕ್ಷೇತ್ರವೆಂದರೆ ಭೇತಾಳ ಕಟ್ಟೆಯಂತಿದ್ದು ಅದನ್ನು ಹಾದುಹೋಗುವವರಿಗೆ ಭೂತಬಡಿಯುವದಂತೂ ಖಂಡಿತ. ಈಗ ಬ್ರಿಟಿಷರು ಉಪಯೋಗಿಸುತ್ತಿರುವ ಸಿಡಿಗುಂಡಿನ ಜಾತಿ ಇದೇ.

ಕೊಂಬುಗಳಿರುವ ತೋಟಿಗಳು

ಹೋರ್ನ್‌ಡ್ ವೈನ್ಸ್ ಅಂದರೆ ಕೋಡುಗಳಿರುವ ತೋಟಿಗಳ ಜಾತಿಯೊಂದಿದೆ. ಈ ವೈನ್‌ಗಳು ಆಕಾರದಲ್ಲಿ ಮೇಲಿನವುಗಳಂತೆ ವರ್ತುಲಾಕಾರವಾಗಿ ದೊಡ್ಡ ಗುಡಾಣಗಳಂತಿವೆ. ವಿಶೇಷವೆಂದರೆ ಅವುಗಳ ಹೊರಭಾಗದಲ್ಲಿ ಐದೈದು ಇಂಚು ಉದ್ದದ ಕೊಂಬುಗಳಿರುತ್ತವೆ. ಈ ಕೋಡುಗಳ ಕೆಲಸವೇನು ಗೊತ್ತೆ? ಯಾವುದಾದರೊಂದು ಹಡಗ ಬಂದು ಈ ಕೊಂಬುಗಳಲ್ಲೊಂದಕ್ಕೆ ಬಡಿದರಾಯಿತು; ಕೊಂಬಿನ ಒಳಗಡೆಯಿರುವ ರಸಾಯನ ದ್ರವವೊಂದರ ಬಾಟ್ಲಿಯೊಡೆಯುವದು. ಆ ದ್ರವವು ವೈನಿನೊಳಗಿರುವ, ಝಿಂಕ್ ಮೊದಲಾದುವುಗಳಿಂದ ತುಂಬಿದ ಮತ್ತೊಂದು ಬಾಟ್ಲಿಯೊಳಗೆ ಸೇರುತ್ತಲೇ ಅದರಿಂದ ಹುಟ್ಟಿದ ವಿದ್ಯುಚ್ಛಕ್ತಿಯು ವೈನಿನ ಸ್ಫೋಟಕ ಯಂತ್ರಕ್ಕೆ ಬಡಿದು ವೈನ್ ಸಿಡಿಯುವಂತಾಗುವದು. ಈ ಜಾತಿಯ ವೈನ್‌ಗಳು ಮೇಲ್ಗಡೆ ನಮೂದಿಸಿರುವ ಕೋಂಟೇಕ್ಟ್ ವೈನ್‌ಗಳಂತೆ ಸುಲಭದಲ್ಲಿ ಸಿಡಿಯುತ್ತವೆ. ಕೋಂಟೇಕ್ಟ್ ವೈನ್‌ಗಳು ಕೆರಳುವದು ತಲೆಗೆ ಪೆಟ್ಟು ಕೊಡಿದಾಗ ಮಾತ್ರ; ಇವುಗಳ ಬೆರಳು ಮುಟ್ಟಿದರೆ ಸಾಕು!

ಸೂಜಿಕಲ್ಲು ತೋಟಿಗಳು

ಮೆಗ್ನೆಟಿಕ್ ವೈನ್ಸ್ ಅಥವಾ ಸೂಜಿಕಲ್ಲು ತೋಟಿಗಳು ಮತ್ತೂ ವಿಚಿತ್ರವಾದವುಗಳು. ಈ ಜಾತಿಯವುಗಳಲ್ಲಿ ಮೀಸೆ ಹೊತ್ತ ಗುಂಡುಗಳ ಜಾತಿಯೊಂದಿದೆ. ದೊಡ್ಡ ಗುಡಾಣದಂತಿರುವ ಈ ವೈನ್‌ಗಳಲ್ಲಿ ಬೆಕ್ಕಿನ ಮುಖದಲ್ಲಿ ಮೀಸೆಯಿರುವಂತೆ ಸಪೂರ ತಂತಿಗಳು ಸುತ್ತಲೂ ಹರಡಿರುತ್ತವೆ. ಈ ಸರಿಗೆಗಳನ್ನು ಅಕ್ಕಳ ಮೀಸೆಗೆ ಹೋಲಿಸಬಹುದು. ಅಕ್ಕಳೆಯು ತನ್ನ ಕಾರ್ಯ ಸಾಧಿಸಬೇಕಾದರೆ ಮೀಸೆಯಿಂದ ಮುಟ್ಟಿ ನೋಡಿಕೊಳ್ಳುತ್ತದೆ. ಅಂತೆಯೆ ವೈನ್ ಮೀಸೆಯ ತುದಿಗೆ ಹಡಗದ ಕೆಳಭಾಗ ತಾಗುವದೊಂದೇ ಬಾಕಿ—ಆ ಹಡಗ ಸರಿಗೆಗೆ ತಾಗಿದ್ದಲ್ಲ, ಯಮಪಾಶಕ್ಕೆ ಸಿಲುಕಿದ್ದೆಂದು ಹೇಳುವದಕ್ಕಡ್ಡಿಯಿಲ್ಲ. ಹಡಗದ ಕೆಳಭಾಗವು ಕಬ್ಬಿಣವಷ್ಟೆ. ಆ ಕಬ್ಬಿಣಕ್ಕೆ ವೈನ್ ಮೀಸೆ ಮುಟ್ಟಿದೊಡನೆ ಅಲ್ಲಿ ಸಣ್ಣ ವಿದ್ಯುಚ್ಛಕ್ತಿಯುಂಟಾಗುತ್ತದೆ. ಆ ಬೆಂಕಿ ವೈನಿನೊಳಗಡೆಯಿರುವ ಸಿಡಿಗುಂಡಿಗೆ ಬೆಂಕಿ ತಾಗಿಸಿ ಸ್ಫೋಟಕಗೊಳಿಸುತ್ತದೆ. ಹೀಗೆ ಮುಖ ತುಂಬ ಮೀಸೆಯಿದ್ದದ್ದೇನೆ ಅಂತಹ ಗಂಡಸುತನವನ್ನು ಪ್ರದರ್ಶಿಸುವ ಮತ್ತೊಂದು ಜಾತಿಯ ವಿದ್ಯುಚ್ಛಕ್ತಿ ತೋಟಿಗಳಿವೆ. ಜರ್ಮನರು ಇಂತಹ ತೋಟಿಗಳನ್ನು ಚೆಲ್ಲಿಯೇ ವಿರೋಧಿಗಳ ಹೆಚ್ಚಿನ ಹಡಗುಗಳನ್ನು ಮುಳುಗಿಸಿದ್ದರೆಂಬುದು ಎಲ್ಲರಿಗೂ ಗೊತ್ತಿದ್ದ ವಿಷಯ. ಇವುಗಳಿಗಿಂತ ಸ್ವಲ್ಪ ಭಿನ್ನವಾಗಿರುವ ಮತ್ತೊಂದು ಜಾತಿಯ ತೋಟಿಯೆಂದರೆ 'ಹಲವು ಮೀಸೆಗಳಿದ್ದೇನು, ಒಂದು ಕೊಕ್ಕು ಇದ್ದರಾಯಿತು' ಎಂಬಂತಿರುವ, ಮೇಲ್ಭಾಗದಲ್ಲಿ ಪೆಟ್ಟಿಗೆಯ ಒಂದೇ ಸರಿಗೆಯಿರುವ ಜಾತಿ. ಇದಕ್ಕೆ ಸಾಧಾರಣವಾಗಿ ತೊಟ್ಟು ಇರುವ ಬುಗರೀ ಹಣ್ಣನ್ನು ಅಡಿಮೇಲು ಮಾಡಿದರೆ ಬರುವ ಆಕೃತಿಯೇ ಇರುತ್ತದೆ. ಈ ತೊಟ್ಟಿಗೆ ಒಂದು ಹಡಗು ತಾಗಿದಾಗ ವೈನಿನೊಳಗೆ ತಕ್ಷಣ ಪ್ರಳಯಮಂಥನವಾರಂಭವಾಗಿ ಧಡಾರನೆ ಒಡೆಯುತ್ತದೆ. 1918ನೇ ಇಸವಿಯಲ್ಲಿ ಇದೇ ಜಾತಿಯ ಸುಮಾರು 70,000 ವೈನ್‌ಗಳನ್ನು ಸ್ಕೋಟ್ಲೇಂಡಿನಿಂದ ನೋರ್ವೆಯ ವರೆಗೆ ಹಾಕಿ ಬ್ರಿಟಿಷರು ಜರ್ಮನಿಯ ಸಬ್‌ಮೆರೀನುಗಳ ಚಲನವಲನವನ್ನು ಜಯಶೀಲವಾಗಿ ತಡೆಗಟ್ಟಿದ್ದರು. ಎಲ್ಲಾ ಜಾತಿಯ ವೈನ್‌ಗಳೂ ಸರಾಸರಿ 300 ಪೌಂಡುಗಳಷ್ಟು ಸಿಡಿಮದ್ದುಗಳನ್ನು ತುಂಬಿಕೊಂಡಿರುತ್ತವೆ. ನೀರಿನ ಮೇಲ್ಮಟ್ಟದಿಂದ ಸರ್ವಸಾಧಾರಣ ಇಪ್ಪತ್ತಡಿ ಕೆಳಗಡೆ ಅವು ನಿಲ್ಲುವ ವಾಡಿಕೆ.

ಸೂತ್ರರಹಿತ ತೋಟಿ

ನೀವು ಈ ತನಕ ಕೇಳಿದ ತೋಟಿಗಳಿಗೆಲ್ಲಾ ಅವನ್ನು ನಿಶ್ಚಿತ ಸ್ಥಳದಲ್ಲಿ ನಿಲ್ಲಿಸಲು ಕೆಳಗಡೆ ಸರಿಗೆಯಿದ್ದೇ ಇರುತ್ತದೆ. ಹೀಗೆ ತಂತಿಯಿರುವದರಿಂದಲೇ ವೈನ್‌ಗಳನ್ನು ಗುಡಿಸಿ ತೆಗೆಯುವರೆ ಹಡಗುಗಳಿಗೆ ಅನುಕೂಲ. ಅದು ಹೇಗೆಂಬುದನ್ನು ಕಡೆಗೆ ಹೇಳೋಣ. ಇಂತಹ ಸೂತ್ರವಿಲ್ಲದೆ, ಬಾಲಕಳೆದ ನರಿಯಂತಿರುವ ಅಪಾಯಕಾರೀ ತೋಟಿಯೊಂದು ಸ್ವೀಡನಿನವರಿಂದ ರಚಿಸಲ್ಪಟ್ಟಿದೆ. ಇದಕ್ಕೆ "ಲಿಯೋನ್" ವೈನ್' ಅನ್ನುತ್ತಾರೆ. ಆದರೆ ಇಂತಹ ವಿಪರೀತಕಾರಿಯ ಆಯುಷ್ಯ ಮಾತ್ರ ಇಪ್ಪತ್ತನಾಲ್ಕೇ ಘಂಟೆ. ಅವುಗಳ ಆಕಾರ ಉದ್ದ ಉರುಟು. ಈ ತೋಟಿಯನ್ನು ನೀರಿಗಿಳಿಸಿದೊಡನೆ ಅದು ಸ್ವಾಭಾವಿಕವಾಗಿ ನೀರಿನ ಒತ್ತಡದಿಂದ ಕೆಳಗಿಳಿಯಲಾರಂಭಿಸುತ್ತದೆ. ಹಾಗೆ ಸಾಕಷ್ಟು ಕೆಳಗಿಳಿಯುವಾಗಲೇ ನೀರಿನ ಒತ್ತಡದಿಂದ ವೈನಿನ ಕೆಳಭಾಗದಲ್ಲಿ ಒಳಗಡೆಯಿರುವ ಒಂದು ಸಣ್ಣ ಪೆಟ್ಟಿಗೆಯ ಕದ ತೆರೆಯಲ್ಪಟ್ಟು ಅಲ್ಲಿ ಹುಟ್ಟಿದ ವಿದ್ಯುಚ್ಛಕ್ತಿಯ ಬಲದಿಂದ ಅದರ ಮೇಲ್ಭಾಗದ ಯಂತ್ರವೊಂದು ಗರ್ರನೆ ತಿರುಗುತ್ತಾ ತೋಟಿಯನ್ನು ಮೇಲಕ್ಕೇರಿಸುತ್ತದೆ. ಮೇಲೆ ಹೋದಂತೆ ನೀರಿನ ಒತ್ತಾಟ ಕಡಿಮೆಯಾಗಿ, ಒಳಗಿನ ಯಂತ್ರ ತಿರುಗುವದು ನಿಂತೊಡನೆ ತೋಟಿ ಪುನಃ ಕೆಳಗಿಳಿಯುತ್ತದೆ. ಕೆಳಗಿಳಿದಾಗ ಅಲ್ಲಿ ಯಥಾ ಪ್ರಕಾರ ಯಂತ್ರ ಚಾಲೂಗಿ ತೋಟಿಯನ್ನು ಮೇಲಕ್ಕೆತ್ತುತ್ತದೆಯಷ್ಟೆ. ಹೀಗೆ ಅದರೊಳಗಿನ ಬೆಟರಿ ಖರ್ಚಾಗುವವರೆಗೆ ಅಂದರೆ 24 ಘಂಟೆಗಳ ತನಕ ತೋಟಿಯು ಮೇಲಕ್ಕೂ ಕೆಳಕ್ಕೂ ಹೋಗುತ್ತಲೇ ಇರುತ್ತದೆ. ಒಳಗಿನ ಬೆಟರಿ ಖರ್ಚಾದ ಕೂಡಲೆ ಅದು ಕೊರಡಿಗೆ ಸಮವಾಗಿ ಬಿದ್ದುಬಿಡುತ್ತದೆ. ಅದನ್ನು ಹಾಕಿದ 24 ಘಂಟೆಯೊಳಗಿನ ಅವಧಿಯಲ್ಲಿ ಯಾವುದಾದರೂ ಒಂದು ಹಡಗವು ಆ ಕಡೆಗೆ ಬರುವದೆಂದರೆ ಆಯುಷ್ಯಪೂರ್ತಿ ಮಾಡಿಕೊಳ್ಳುವದಕ್ಕಾಗಿಯೆ!

ಕಿವಿಯುಳ್ಳ ತೋಟಿ

ಮೇಲಿನ ಹೆಸರನ್ನು ಕೇಳಿದೊಡನೆ ನಿಮಗಾಶ್ಚರ್ಯವಾಗಬಹುದು. ಈ ತನಕ ಕೇಳಿದ ತೋಟಿಗಳಿಗೆಲ್ಲಾ ಜೀವವಿದೆ ಎಂದೊಪ್ಪಿಕೊಂಡರೂ ಕಿವಿಯಿದೆ ಎಂಬು

(೧೧ನೇ ಪುಟ ನೋಡಿರಿ.)

THULUNAD BANK
OF SUPPLY AGENCY LIMITED.

Authorised & Issued Capital	...	Rs 1,00,000
Subscribed & Paid up Capital	....	Rs. 31,340
Reserves & other Funds	...	Rs. 22,052

ವಿಶೇಷ ರಿಯಾಯಿತಿ

Rs. 1000

ತಾ. 30-6-1940ರ ಒಳಗೆ ರೂ. 1000 ಯಾ ಅದಕ್ಕಿಂತ ಮೇಲ್ಪಟ್ಟು ನಿರಖು ಠೇವಣಾತಿಗಳನ್ನು ಇಡುವವರಿಗೆ ಕೆಲವು ವಿಶೇಷ ರಿಯಾಯಿತಿಗಳು ಕೊಡಲ್ಪಡುವವು.

ಹೆಚ್ಚಿನ ಮಾಹಿತಿಗೆ ಬರೆಯಿರಿ:—
ಮೆನೇಜಿಂಗ್ ಡೈರೆಕ್ಟರ್
ತುಳು ನಾಡ್ ಬೇಂಕ್
ಆಫ್ ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಉತ್ಸವ—ಕಳೆದ ತಾ. 8ನೇ ದಿನ ಸಾಯಂಕಾಲ ಸ್ಥಳೀಯ ಥಿಯಾಸಾಫಿಕಲ್ ಆಶ್ರಮದಲ್ಲಿ "ವೈಟ್ ಲೋಟಸ್" ದಿನಾಚರಣೆಯು ಯಶಸ್ವಿಯಾಗಿ ನಡೆಯಿತು. ಆ ದಿನ ಬೆಸೆಂಟ್‌ನಿಂದ ಬಂದಿದ್ದ ಶ್ರೀ. ಸೀತಾರಾಮ್ ಬಿ. ಆಚಾರ್ಯರು "ರಮಣ ಮಹರ್ಷಿಗಳ ಸಂದೇಶ"ದ ಮೇಲೆ ಭಾಷಣವಿತ್ತರು. ಶ್ರೀ. ರಮಣ ಮಹರ್ಷಿಗಳು ವಿಶ್ವಬಂಧುತ್ವದ ತತ್ವವನ್ನು ಲೋಕಕ್ಕೆ ಸಾರಿರುವರೆಂದು ಭಾಷಣಕಾರರ ಅಭಿಪ್ರಾಯದ ಸಾರ.

ಬೆಂಕಿಯ ಅನಾಹುತ—ಕಳೆದ ತಾ. 8 ನೇ ರಾತ್ರಿ ಮಂಗಳೂರು ಶಹರ ಶ್ರೀ. ವೆಂಕಟರಮಣ ದೇವಸ್ಥಾನದ ಸಮೀಪದಲ್ಲಿ ಶ್ರೀ. ವೈಕುಂಠ ಭಂಡಾರಿಗಳ ಅಕ್ಕಿ ದಾಸ್ತಾನಿನ ಕೋಣೆಗೆ ಬೆಂಕಿ ಬಿದ್ದು ಅದರಲ್ಲಿದ್ದ ಸುಮಾರು 1713 ಮುಡಿ ಅಕ್ಕಿಯು ಸಂಪೂರ್ಣವಾಗಿ ನಾಶಹೊಂದಿದೆ. ಬೆಂಕಿಯು ಯಾವಾಗ ಹತ್ತಿತೆಂಬುದು ಯಾರಿಗೂ ಗೊತ್ತಿಲ್ಲ. ನಷ್ಟವು ಸುಮಾರು 8-9 ಸಾವಿರ ರೂಪಾಯಿಗಳಿಗಿಂತಲೂ ಅಧಿಕವಾಗಬಹುದು. ಮಂಗಳೂರಿನಂತಹ ದೊಡ್ಡ ನಗರಕ್ಕೆ ಒಂದು ಬೆಂಕಿ ಆರಿಸುವ ಯಂತ್ರವು ಇಲ್ಲದಿರುವುದರಿಂದ ಮೇಲಿನಂತಹ ಸಂಕಷ್ಟಗಳು ಬರುವಾಗ ನಾಗರಿಕರಿಗೆ ಸಹಾಯ ಕೊಡಲು ಅನುಕೂಲವಿಲ್ಲದೆ ಹೋಗುತ್ತದೆ.

ಶೋಚನೀಯ ನಿಧನ—ಮಂಗಳೂರಿನ ಕೆಥೋಲಿಕ್ ಸಮಾಜದ ಅಧ್ಯಕ್ಷ ಮಹಾಶಯರೂ, ಪರೋಪಕಾರಿಗಳೂ ಮತ್ತು ಬಡಜನರ ಬಂಧುಗಳೂ ಆಗಿದ್ದ ದಿವಾನ್ ಬಹದ್ದೂರ್ ಶ್ರೀ. ಎಸ್. ಎಲ್. ಮಥಾಯಸ್‌ರು ಬರೇ ಒಂದೇ ಸಾರಿ ಕಾಹಿಲೆಯಾಗಿ ಕಳೆದ ಶುಕ್ರವಾರ ದಿವಸ ಪ್ರಾತಃಕಾಲ ದಿವಂಗತರಾದರೆಂದು ತಿಳಿಸಲು ತುಂಬ ವಿಷಾದವೆನಿಸುತ್ತದೆ. ದಿವಂಗತರ ಅಂತಿಮಕ್ರಿಯೆಯು ಶನಿವಾರ ದಿವಸ ನಡೆಯಿತು. ದಿವಂಗತರ ಆತ್ಮಕ್ಕೆ ಚಿರಶಾಂತಿಯೂ, ಅವರ ಬಂಧುಮಿತ್ರರಿಗೆ ಈ ದುಃಖದಿಂದ ಪಾರಾಗಲು ಶಕ್ತಿಯೂ ದೊರಕಲೆಂದು ಹಾರೈಕೆ.

ವ್ಯಾಯಾಮ ಶಿಕ್ಷಣ ಶಿಬಿರ—ಕಳೆದ ತಾ. 1ರಿಂದ ಶ್ರೀ. ಈಶ್ವರಾನಂದ ಮಹಿಳಾ ಸೇವಾಶ್ರಮದ ಆವರಣದಲ್ಲಿ ಸ್ವಾಸ್ಥ್ಯಸಂಘದ ಆಶ್ರಯದಲ್ಲಿ ಸ್ತ್ರೀಯರಿಗಾಗಿ ವ್ಯಾಯಾಮ ಶಿಕ್ಷಣ ಶಿಬಿರವು ತೆರೆಯಲ್ಪಟ್ಟಿದೆ. ಅನೇಕ ಮಂದಿ ಮಹಿಳೆಯರು ವ್ಯಾಯಾಮ ಶಿಕ್ಷಣವನ್ನು ಹೊಂದುತ್ತಿದ್ದಾರೆ. ಶ್ರೀ. ಕೆ. ಕೆ. ಶೆಟ್ಟಿ, ವ್ಯಾಯಾಮ ವಿಶಾರದರು ಈ ಶಿಬಿರದ ಮೇಲ್ವಿಚಾರಕರಾಗಿದ್ದಾರೆ. ವ್ಯಾಯಾಮ ಶಿಕ್ಷಣ ಮಾತ್ರವಲ್ಲದೆ ಪ್ರತಿನಿತ್ಯವೂ ಬೇರೆ ಬೇರೆ ಉಪಯುಕ್ತ ವಿಷಯಗಳ ಮೇಲೆ ಉಪನ್ಯಾಸಗಳನ್ನು ಏರ್ಪಡಿಸಿದ್ದಾರೆ. ಶುಕ್ರವಾರ ಬೆಳಗ್ಗೆ ವಿಷಯದಲ್ಲಿ ಶ್ರೀ. ಪಿ. ಯನ್. ಬಿ. ... ರವರು ಎರಡು ಉಪನ್ಯಾಸಗಳನ್ನು ಕೊಟ್ಟರು. ಕಳೆದ ಶನಿವಾರ ಶ್ರೀ. ಕೆ. ಕೃಷ್ಣರಾಯರು "ಮಹಿಳೆಯರಿಗೆ ವ್ಯಾಯಾಮದ ಅವಶ್ಯಕತೆ"ಯ ಮೇಲೆ ಭಾಷಣಮಾಡಿದರು. ಶ್ರೀ. ... ರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಭಾಷಣಾಂತ್ಯದಲ್ಲಿ ಶ್ರೀ. ಕೆ. ಕೆ. ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಶ್ರೀ. ಶಂಕರಾಚಾರ್ಯರ ಪ್ರತಿಮೆಯ ಅನಾವರಣೋತ್ಸವ—ನಿನ್ನೆಯ ದಿವಸ ಉಳ್ಳಾಲದ ಅಶ್ವತ್ಥಕಟ್ಟೆಯಲ್ಲಿ ಶ್ರೀ. ಶಂಕರ ಜಯಂತ್ಯುತ್ಸವವು ಶ್ರೀ. ಎ. ರಂಗನಾಥ ರಾವ್ ಯಂ. ಎ. ಬಿ. ಎಲ್., ಎಡ್ವೊಕೇಟ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರ್ಥನಾನಂತರ ಅಧ್ಯಕ್ಷರು ಶ್ರೀ ಶಂಕರಜಯಂತಿಯ ಮಹತ್ವವನ್ನೂ, ಅದನ್ನು ಆಚರಿಸಬೇಕಾದ ವಿಧಾನವನ್ನೂ ಸ್ವಲ್ಪದಲ್ಲಿ ವಿವರಿಸಿದರು. ಅನಂತರದಲ್ಲಿ ಪಾಲ್‌ಘಾಟ್ ಕಾಲೇಜಿನ ಸಂಸ್ಕೃತ ಪಂಡಿತರಾದ ಶ್ರೀ. ಕೆ. ಎಸ್. ಗಣಪತಿ ಶಾಸ್ತ್ರಿಗಳ್ ಅವರು ಶ್ರೀ. ಶಂಕರಾಚಾರ್ಯರ ಜೀವನಚರಿತ್ರೆಯನ್ನೂ, ಅವರು ಬರೆದಿರುವ ಉದಾತ್ತ ಗ್ರಂಥಗಳ ವಿಷಯವನ್ನೂ ಸಂಸ್ಕೃತ ಭಾಷೆಯಲ್ಲಿ ಹೇಳಿ ಶ್ರೀಮದಾಚಾರ್ಯರ ವಿಗ್ರಹದ ಅನಾವರಣ ಸಮಾರಂಭವನ್ನು ನೆರವೇರಿಸಿದರು. ಅನಂತರ ಶ್ರೀ. ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ಅವರು ಶ್ಲೋಕಪದ್ಯಗಳನ್ನೂ ಅಷ್ಟಮಂಗಳ ಮತ್ತು ಪ್ರತಿಮೆಗೆ ವಂದನೆಯನ್ನು ತೆತ್ತ ಮಹಾಶಯರ ಹೆಸರುಗಳನ್ನೂ ಸಭೆಯ ಮುಂದೆ ಓದಿ ಸಕಲರೂ ಶ್ರೀಮದಾಚಾರ್ಯರ ಕೃಪೆಗೆ ಪಾತ್ರರಾಗಲೆಂದು ಪ್ರಾರ್ಥಿಸಿದ್ದಲ್ಲದೆ, ಅನೇಕ ಮಹಾಶಯರು ಕಳುಹಿ...

ಉಡುಪಿ

ದ. ಕ. ಜಿಲ್ಲಾ ಹಿಂದೂ ಮಹಾಸಭೆಯ ಕಾರ್ಯಕಾರಿ ಮಂಡಲಿಯ ಅಧಿವೇಶನವು ತಾ. 8-5-40ರಲ್ಲಿ ಉಡುಪಿಯಲ್ಲಿ ಜರಗಿತು. ಶ್ರೀ. ಎಸ್. ಕೆ. ಭಾರದ್ವಾಜರ್ ಮತ್ತು ಶ್ರೀ. ಬನ್ನಂಜೆ ರಾಮಾಚಾರ್ಯರನ್ನು ಕಾರ್ಯಕಾರಿ ಮಂಡಳಿಯ ಸದಸ್ಯರನ್ನಾಗಿ ಆರಿಸಲಾಯಿತು. ಪುರಿಯ, ಬ್ರಹ್ಮಾವರ, ಕೋಟೇಶ್ವರ, ಉಡುಪಿ ಮೊದಲಾದವರ ಹಿಂದೂ ಸಭೆಗಳನ್ನು ಈ ಸಭೆಯ ಶಾಖೆಗಳನ್ನಾಗಿ ಸಂಯೋಜಿಸಿಕೊಳ್ಳಲಾಯಿತು. ಶ್ರೀ. ಎಸ್. ಎನ್. ಕಾಮತರವರ ನಿಧನಕ್ಕಾಗಿ ಸಂತಾಪವನ್ನು ಸೂಚಿಸಲಾಯಿತು. ಮುಸ್ಲಿಂ ಲೀಗಿನ ಪಾಕಿಸ್ಥಾನ ಯೋಜನೆಯು ಅಕ್ರಮ ಮತ್ತು ಅರಾಷ್ಟ್ರೀಯವೆಂದು ಖಂಡಿಸಿ...

...ಸಿದ್ಧ ಶುಭಸಂದೇಶಗಳನ್ನು ಓದಿ ಹೇಳಿದರು. ಶ್ರೀ. ಪಿ. ಉಪೇಂದ್ರಾಚಾರ್ಯರು ಶ್ರೀಮದಾಚಾರ್ಯರ ಜೀವನಚರಿತ್ರವನ್ನು ಕೆಲವೇ ಪದ್ಯಗಳಲ್ಲಿ ಹಾಡಿ ತೋರಿಸಿ ತಮ್ಮ ಕವಿತಾಶಕ್ತಿಯನ್ನು ಪ್ರದರ್ಶಿಸಿದರು. ಅನಂತರ ಅಧ್ಯಕ್ಷರು ಶ್ರೀ ಶಂಕರಾಚಾರ್ಯರ ಕಾಲದ ಹಿಂದೆ ಮತ್ತು ಆನಂತರದಲ್ಲಿ ಹಿಂದೂ ಧರ್ಮದ ಪರಿಸ್ಥಿತಿಯು ಹೇಗಿತ್ತೆಂಬುದನ್ನು ತಿಳಿಸಿದರು. ಮತ್ತು ಆಚಾರ್ಯರು ಹೇಗೆ ವೈದಿಕ ಧರ್ಮವನ್ನು ಸ್ಥಾಪಿಸಿದರೆಂಬುದನ್ನೂ ವಿವರಿಸಿದರು. ಅಧ್ಯಕ್ಷರ ಭಾಷಣವಾದ ತರುವಾಯ ಶ್ರೀ. ಗೋಪಾಲದಾಸರ ಹರಿಕಥೆ ನಡೆಯಿತು. ಮಂಗಳಾರತಿ, ಪ್ರಸಾದ ವಿತರಣೆ, ಧನ್ಯವಾದಾರ್ಪಣೆಗಳಾದ ತರುವಾಯ ಸಮಾರಂಭವು ಮುಕ್ತಾಯವಾಯಿತು.

ಜಿಲ್ಲಾ ಬೋರ್ಡು ಸಭೆ—ದ. ಕನ್ನಡ ಜಿಲ್ಲಾ ಬೋರ್ಡುಸಭೆಯು ಜಿ. ಬೋ. ಅಧ್ಯಕ್ಷರಾದ ಮಾನ್ಯ ಡಾ. ಕೆ. ವಿಟ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಈ ದಿನ ಜರಗಿತು. ಅಧ್ಯಕ್ಷರು ಆರಂಭದಲ್ಲಿ ದೀನಬಂಧು ಸಿ. ಎಫ್. ಎಂಡ್ರೂಸ್; ಮೌಲಾನ ಯಾಕೂಬ್ ಹಸನ ಮತ್ತು ದಿವಾನ್ ಬಹದ್ದೂರು ಎಸ್. ಎಲ್. ಮಥಾಯಸ್ ಇವರುಗಳ ನಿಧನದ ಬಗ್ಗೆ ಬೋರ್ಡಿನ ಸಂತಾಪವನ್ನು ಸೂಚಿಸಿ ಠರಾವುಗಳನ್ನು ತಂದರು. ಅವುಗಳೆಲ್ಲವೂ ಮಾನ್ಯವಾದುವು. ಅವೇಳೆ ಪ್ರಶ್ನೋತ್ತರಗಳು ನಡೆದುವು. ರಾ ಪಿ. ಜಿ. ಆಚಾರ್ಯರನ್ನು ಸದಸ್ಯನನ್ನಾಗಿ ಪುನಃ ತೆಗೆದುಕೊಳ್ಳಲಾಯಿತು. ಬೋರ್ಡಿನವರು ರೂ. 25,000 ಸಾಲವನ್ನು ಸರಕಾರದಿಂದ ಪಡೆಯಬೇಕೆಂದು ನಿರ್ಧಾರವಾಯಿತು. ಹಳ್ಳಿಯ ಮುಖ್ಯ ರಸ್ತೆಗಳನ್ನು ದುರಸ್ತಿಪಡಿಸಲು ಐದು ವರ್ಷದ ಯೋಜನೆಯನ್ನು ಮಾಡಬೇಕೆಂದು ನಿರ್ಧಾರವಾಯಿತಲ್ಲದೆ ಸದ್ಯದಲ್ಲಿ ಕೆಲ ರಸ್ತೆಗಳನ್ನು ದುರಸ್ತಿ ಪಡಿಸಬೇಕೆಂದಾಯಿತು. ಸರಕಾರಿ ಆರ್ಡರುಗಳನ್ನು ಓದಿ ರೆಕಾರ್ಡುಮಾಡಿದ ತರುವಾಯ ಸಭೆಯು ಮುಕ್ತಾಯವಾಯಿತು.

...ಅದನ್ನು ವಿರೋಧಿಸಬೇಕಾಗಿ ನಿರ್ಣಯಿಸಲಾಯಿತು, ಬೆಂಗಳೂರಿನ ಹಿಂದೂಗಳ ಧಾರ್ಮಿಕ ಚಟುವಟಿಕೆಗಳಿಗೆ ಅಡ್ಡಿಯನ್ನುಂಟುಮಾಡಿದ ಸರಕಾರೀ ಅಧಿಕಾರಿಗಳ ಧೋರಣೆಯನ್ನು ಖಂಡಿಸಲಾಯಿತು, ಮತ್ತು ಬೆಂಗಳೂರಿನ ಹಿಂದೂಗಳಲ್ಲಿ ಸಹಾನುಭೂತಿಯನ್ನು ಸೂಚಿಸಲಾಯಿತು. ಹೈದರಾಬಾದು ಸಂಸ್ಥಾನದ ಬೀದರಿನಲ್ಲಿ ನಡೆದ ಅತ್ಯಾಚಾರಗಳನ್ನು ತೀವ್ರವಾಗಿ ಖಂಡಿಸಲಾಯಿತು. ಮತ್ತು ಆ ಕುರಿತು ನ್ಯಾಯವಾದ ವಿಚಾರಣೆ ನಡಿಸಿ ತಪ್ಪಿತಸ್ಥರಿಗೆ ಶಿಕ್ಷೆಯನ್ನು ಕೊಡಬೇಕೆಂದೂ, ನಷ್ಟ ಹೊಂದಿದವರಿಗೆ ಪರಿಹಾರವನ್ನು ಕೊಡಬೇಕೆಂದೂ ಇಂಡಿಯಾ ಸರಕಾರದವರನ್ನು ಪ್ರಾರ್ಥಿಸಿ, ಸರಕಾರದವರನ್ನು ಕೇಳಿಕೊಳ್ಳಬೇಕಾಗಿ ನಿರ್ಣಯಿಸಲಾಯಿತು.

ಜಿಲ್ಲಾ ಸಹಕಾರಿ ಪರಿಷತ್ತಿನ ಸ್ವಾಗತ ಮಂಡಳಿಯ ಸಭೆಯು—ತಾ. 8-5-40ರಲ್ಲಿ ಬಡಗಬೆಟ್ಟು ಸಹಕಾರಸಂಘದ ಆಫೀಸಿನಲ್ಲಿ ಶ್ರೀ. ಯು ವೆಂಕಟ್ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತ ಮಂಡಳಿಗೆ ಶ್ರೀಗಳಾದ ಪಟೇಲ್ ಕೆ. ಜಿ. ಬಲ್ಲಾಳ್ (ಅಧ್ಯಕ್ಷ) ಕೊಚ್ಚಿಕಾರ್ ಸಾದಾರಾಮ ಪೈ. (ಉಪಾಧ್ಯಕ್ಷ) ಕೆ. ರಾಮಚಂದ್ರ ಶೆಣೈ, (ಜನರಲ್ ಸೆಕ್ರೆಟರಿ ಮತ್ತು ಖಜಾಂಚಿ) ಎಸ್. ವಾಮನಭಟ್, (ಜತೆಕಾರ್ಯದರ್ಶಿ) ಎಸ್. ಅನಂತ್ಯಾಪ್, ಪಿ. ಎ ಪೈ. ಪಿ ಕೆ. ಕೃಷ್ಣರಾವ್, ಕೇಶವ ಪಂಜಿಯಾರ್, ಎಚ್. ಎನ್. ನಾಯಕ್ ಮತ್ತು ಆರ್. ಎಸ್. ಅಂಡ್ರಾಡೆ (ಇವರು ಕಾರ್ಯಕಾರೀ ಮಂಡಳಿಯ ಮೆಂಬರರು) ಇವರು ಆರಿಸಲ್ಪಟ್ಟರು.

ಪರಿಷತ್ತಿನ ವಿಷಯನಿಯಾಮಕ ಸಭೆಯು ತಾ. 27-5-40ರಲ್ಲಿ ಸಂಜೆ ಜರಗುವುದು ತಾ. 28ರಲ್ಲಿ ಶ್ರೀ. ವೆಂಕಟಪ್ಪ ಬಾರಿಗ, ಎಮ್. ಎಲ್. ಎ. ಯವರು ಸಹಕಾರಿ ಸಭೆಯನ್ನು ಉದ್ಘಾಟಿಸುವರು. ಶ್ರೀ. ಎ. ಬಿ. ಶೆಟ್ಟಿ, ಎಮ್. ಎಲ್. ಎ. ಯವರು ಕೃಷಿಕೈಗಾರಿಕೆ ವಸ್ತುಪ್ರದರ್ಶನವನ್ನು ಆರಂಭಿಸುವರು. ಜನಾಬ್ ಎಚ್. ಎಸ್. ಹುಸೈನ್ ಸಾಹೇಬ್, ಎಮ್. ಎಲ್. ಎ ಯವರು ಪರಿಷತ್ತಿನ ಉದ್ಘಾಟನೆಯನ್ನು ನೆರವೇರಿಸುವರು. ಶ್ರೀ. ಪಿ. ಎಲ್. ಮಹತಾರವರು ಪರಿಷತ್ ಅಧಿವೇಶನದ ಅಗ್ರಪೀಠವನ್ನಲಂಕರಿಸುವರು. ತಾ. 29ರಲ್ಲಿ ಬ್ರಹ್ಮಾವರ ಸಹಕಾರ ಸಂಘದ ರಜತೋತ್ಸವವು ಶ್ರೀ. ಪಿ. ಎಲ್. ಮಹತಾರವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಡುವುದು.

ಶ್ರೀ. ಭೀಮನಕಟ್ಟೆ ಮಠಾಧಿಪತಿಗಳ ಆಗಮನ—ಶ್ರೀ. ಭೀಮನಕಟ್ಟೆ ಮಠದ ಶ್ರೀ. ರಘುತಿಲಕತೀರ್ಥ ಸ್ವಾಮಿಗಳವರು ಇದೇ ತಾ. 10ರಲ್ಲಿ ಶ್ರೀ ಕೃಷ್ಣ ಸಂದರ್ಶನಾರ್ಥವಾಗಿ ಶ್ರೀಮದುಡುಪಿಗೆ ಚಿತ್ತೈಸಿದರು. ಕಡಿಯಾಳಿಯಿಂದ ಶ್ರೀಕೃಷ್ಣಮಠಕ್ಕೆ ಶ್ರೀ. ರಘುಪತಿರವರು ಪರ್ಯಾಯ ಶ್ರೀ. ಅದಮಾರು ಮಠದ ಕಡೆಯಿಂದ ವಾದ್ಯಘೋಷ ಬಿರುದಾವಳಿಗಳಿಂದ ಸ್ವಾಗತಿಸಲ್ಪಟ್ಟರು. ಶ್ರೀ. ಶೀರೂರು ಮಠದ ಸ್ವಾಮಿಗಳವರೂ ಪರ್ಯಾಯ ಶ್ರೀ ಅದಮಾರು ಮಠದ ಸ್ವಾಮಿಗಳವರೂ ಭೀಮನಕಟ್ಟೆ ಮಠಾಧಿಪತಿಗಳಿಗೆ ಉಚಿತ ಸತ್ಕಾರವನ್ನಿತ್ತು ಗೌರವಿಸಿದರು. ಶ್ರೀ. ರಘುತಿಲಕರು ಶ್ರೀ ಕೃಷ್ಣನಿಗೆ ಬ್ರಹ್ಮೋತ್ಸವ ಸೇವೆಯನ್ನು ಸಲ್ಲಿಸಿದರು. ಶ್ರೀ. ಶ್ರೀಗಳವರು ರಜತಪೀಠದಲ್ಲೇ ಮೊಕ್ಕಾಂ ಮಾಡಿರುವರು.

ದಕ್ಷಿಣ ಕನ್ನಡ ಜಿಲ್ಲಾ ಸಹಕಾರೀ ಪರಿಷತ್ತು ಮತ್ತು ಕೃಷಿ-ಕೈಗಾರಿಕೆ ವಸ್ತುಪ್ರದರ್ಶನ, ಉಡುಪಿ.

ಪ್ರಕಟಣೆ ನಂಬ್ರ 1

ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಅಭಿವೃದ್ಧಿ ಸಂಘದವರು ನಿರ್ಣಯಿಸಿದಂತೆ ಇದೇ ಮೇ ತಿಂಗಳ ತಾ. 28 ಮತ್ತು 29ರಲ್ಲಿ ಉಡುಪಿಯಲ್ಲಿ ಜಿಲ್ಲಾ ಸಹಕಾರಿ ಪರಿಷತ್ತು, ಕೃಷಿ-ಕೈಗಾರಿಕೆ ವಸ್ತುಪ್ರದರ್ಶನವೂ ಜರಗುವುವು. ಬೊಂಬಾಯಿಯ ಸುಪ್ರಸಿದ್ಧ ಸಹಕಾರಿ ಮುಖಂಡರಾದ ಶ್ರೀ. ವೈಕುಂಠ ಎಲ್. ಮೆಹತಾ ಇವರು ಪರಿಷತ್ತಿನ ಅಧ್ಯಕ್ಷರಾಗಲು ಒಪ್ಪಿರುವರು. ಜಿಲ್ಲೆಯ ಎಲ್ಲಾ ಸಹಕಾರಿ ಸಂಘದವರು ಸಂಘಕ್ಕೊಬ್ಬರಂತೆ ಪ್ರತಿನಿಧಿಗಳನ್ನು ಆರಿಸಿ, ಪರಿಷತ್ತಿಗೆ ಕಳುಹಬೇಕೆಂದೂ ಸಹಕಾರಿ ಇಲಾಖೆಯ ಪ್ರತಿನಿಧಿ ಹಾಕಲು, ರೂ. 2ರಂತೆ ಸಂಘದ ಫಂಡಿನಿಂದ ಖರ್ಚುಮಾಡಬಹುದಾಗಿಯೂ ತಾ. 2-5-40 ನೇ R. C. No. 763/40 ಸರ್ಕ್ಯುಲರ್ ಮೂಲಕ ರಿ. ಡೆಪ್ಯುಟಿ ರಿಜಿಸ್ಟ್ರಾರವರು ಸಮ್ಮತಿಯಿತ್ತಿರುವರು. ಹೆಚ್ಚಿನ ಪ್ರತಿನಿಧಿಗಳನ್ನು ಸಂಘದವರು ಕಳುಹಿಸಬಹುದಾಗಿಯೂ ಆದರೆ ಅಂತಹ ಪ್ರತಿನಿಧಿಗಳ ಪ್ರತಿನಿಧಿ ಹಾಕಲು ವಗೈರೆ ಖರ್ಚುಗಳನ್ನು ಆಯಾಯ ಪ್ರತಿನಿಧಿಗಳೇ ನೋಡಿಕೊಳ್ಳಬೇಕಾಗಿಯೂ ಸೂಚಿಸಿರುವರು.

ಈ ಬಗ್ಗೆ ಉಡುಪಿಯಲ್ಲಿ ಏರ್ಪಟ್ಟ ಸ್ವಾಗತಮಂಡಳಿಯವರು ಪ್ರತಿನಿಧಿಗಳಿಗೆ ಉಡುಪಿಯಲ್ಲಿ ಉಳಕೊಳ್ಳುವ ಹಾಗೂ ಊಟ ವಗೈರೆ ವ್ಯವಸ್ಥೆಗಳ ಬಗ್ಗೆ ತಕ್ಕ ಏರ್ಪಾಡುಗಳನ್ನು ಮಾಡಲು ನಿಶ್ಚಯಿಸಿರುವರು.

ಈ ಪರಿಷತ್ತು ಯಶಸ್ವಿಯಾಗಿ ಜರಗುವಂತೆ ಪ್ರತಿಯೊಂದು ಸಹಕಾರಿ ಸಂಘದವರು ತಮ್ಮ ಸಂಘದ ಪ್ರತಿನಿಧಿಗಳನ್ನು ಚುನಾಯಿಸಿ ಅವರ ಹೆಸರನ್ನು ಕಾರ್ಯದರ್ಶಿ, ಜಿಲ್ಲಾ ಸಹಕಾರೀ ಪರಿಷತ್ತಿನ ಸ್ವಾಗತಮಂಡಳಿ, ಉಡುಪಿ. ಎಂಬ ವಿಳಾಸಕ್ಕೆ ತಾರೀಕು 21-5-'40ರೊಳಗೆ ತಲಪುವಂತೆ ಕಳುಹಿಸಬೇಕಾಗಿಯೂ, ಆ ಬಾಬ್ತು ಪ್ರತಿನಿಧಿ ಹಾಕಲನ್ನು ಮೇಲಿನ ವಿಳಾಸಕ್ಕೇನೇ ಸೇರಿಸಿಯಾಗಲೀ ದಕ್ಷಿಣಕನ್ನಡ ಸೆಂಟ್ರಲ್ ಕೋ-ಓಪರೇಟಿವ್ ಬೇಂಕಿನ ಯಾವುದೇ ಬ್ರಾಂಚಿನಲ್ಲಾಗಲೀ ಜಿಲ್ಲಾ ಪರಿಷತ್ತಿನ ಲೆಕ್ಕಕ್ಕೆ ಪಾವತಿ ಮಾಡಿ ಆ ವಿಷಯವನ್ನು ನಮಗೆ ತಿಳಿಸಬೇಕಾಗಿಯೂ ಅಪೇಕ್ಷಿಸಲಾಗುತ್ತದೆ.

ಜಿಲ್ಲಾ-ಕೃಷಿ-ಕೈಗಾರಿಕೆ ವಸ್ತುಪ್ರದರ್ಶನದ ಬಗ್ಗೆ ವಸ್ತುಗಳನ್ನು ಕೆಳಗಿನ ವಿಳಾಸಕ್ಕೇನೇ ರವಾನಿಸಬೇಕಾಗಿಯೂ, ಅಂತಹ ವಸ್ತುಗಳನ್ನು ಮಾರಾಟಮಾಡಬಹುದಾದರೆ ಮಾರಾಟದ ಕ್ರಯ ಪಟ್ಟಿಯನ್ನೂ ಸಹ ಕಳಿಸಬೇಕಾಗಿಯೂ ಕೇಳಿಕೊಳ್ಳಲಾಗುತ್ತದೆ. ಮಾರಾಟವಾಗದ ಉಳಿದ ವಸ್ತುಗಳನ್ನು ಸಂಘದವರೇ ಹಿಂದಕ್ಕೆ ಕೊಂಡು ಹೋಗಬಹುದು.

ಉಡುಪಿ ತಾಲೂಕಿನ ಸಹಕಾರಿ ಸಂಘಗಳು ಪ್ರತಿನಿಧಿಹಾಕಲು ಜಿಲ್ಲಾ ಪರಿಷತ್ತಿನ ಖರ್ಚಿಗಾಗಿ ರೂ. 5ರಂತೆ ಮಂಜೂರು ಮಾಡಬಹುದಾಗಿಯೂ, ಸಾರ್ವಜನಿಕ ನಿಧಿಯಲ್ಲಿ ಹಣ ಇದ್ದ ಸಂಘದವರು ಇದಕ್ಕೆಂದೇ ಹೆಚ್ಚಿಗೆ ಹಣವನ್ನು ವಂತಿಗೆಯಾಗಿ ಕೊಡಬಹುದಾಗಿಯೂ ರಿ. ಡೆಪ್ಯುಟಿ ರಿಜಿಸ್ಟ್ರಾರವರು ಸಮ್ಮತಿಯನ್ನಿತ್ತಿರುವರು. ಆದುದರಿಂದ ಉಡುಪಿ ತಾಲೂಕಿನ ಪ್ರತಿಯೊಂದು ಸಹಕಾರಿ ಸಂಘದವರು ಆದಷ್ಟು ಹೆಚ್ಚಿಗೆ ವಂತಿಗೆಯನ್ನು ಪಾವತಿ ಮಾಡಿ ಪರಿಷತ್ತು ಯಶಸ್ವಿಯಾಗಿ ಜರಗುವಂತೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗುತ್ತದೆ.

ಉಡುಪಿ ತಾಲೂಕಿನ ಮಹಾಜನರು ಸ್ವಾಗತಮಂಡಳಿಯ ಸದಸ್ಯರಾಗಬೇಕಾಗಿಯೂ ವಿನಂತಿ. ಸ್ವಾಗತಮಂಡಳಿಯ ಪ್ರಥಮ ತರಗತಿಯ ಸದಸ್ಯತನದ ಬಗ್ಗೆ ರೂ. 5-0-0, ದ್ವಿತೀಯ ತರಗತಿಯ ಸದಸ್ಯತನದ ಬಗ್ಗೆ ರೂ. 2-0-0 ಹಾಕಲು ನಿಶ್ಚಯಿಸಲಾಗಿದೆ ಎಂದು ಸ್ವಾಗತಮಂಡಳಿಯ ಕಾರ್ಯದರ್ಶಿಯವರು ತಿಳಿಸುತ್ತಾರೆ.

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ಉಡುಪಿ, ಗುರುವಾರ ತಾ. ೧೬-೫-'೪೦

ಹಾಲೆಂಡ್ ಬೆಲ್ಜಿಯಮ್ ಆಕ್ರಮಣ

ಮೇ ತಾ. 10ರಲ್ಲಿ ಹಾಲೆಂಡ್, ಬೆಲ್ಜಿಯಮ್, ಲಕ್ಸೆಂಬರ್ಗಿನ ಮೇಲೆ ಏಕಕಾಲದಲ್ಲಿ ಜರ್ಮನ್ ಸೇನೆ ನುಗ್ಗಿದೆ. ಯುರೋಪು ಯುದ್ಧ ಪ್ರಾರಂಭವಾದಾಗಲೇ ಈ ವಿಷಯವನ್ನು ಹಾಲೆಂಡ್ ಬೆಲ್ಜಿಯಮುಗಳು ನಿರೀಕ್ಷಿಸಿದ್ದವು. ಯುದ್ಧ ನಿರೀಕ್ಷಕರು ಜರ್ಮನಿಯು ಕೊಳ್ಳೆಯಾಗಬಲ್ಲ ಸಣ್ಣ ರಾಷ್ಟ್ರಗಳ ಪಂಕ್ತಿಯಲ್ಲಿ ನೋರ್ವೆಗಿಂತ ಮೊದಲಿನ ಸ್ಥಾನವನ್ನು ಈ ರಾಷ್ಟ್ರಗಳಿಗೆ ಕೊಟ್ಟಿದ್ದರು. ಅವುಗಳ ಸರ್ತಿ ಈಗ ಬಂತು. ಇಂದಿನ ಯುದ್ಧದಲ್ಲಿ ಜರ್ಮನಿ ಮತ್ತು ಮಿತ್ರ ರಾಷ್ಟ್ರಗಳ ಧೋರಣೆಯಲ್ಲಿ ಕಂಡುಬರುವ ಪ್ರಬಲ ವ್ಯತ್ಯಾಸವೆಂದರೆ ಸಮಯದ ಉಪಯೋಗದ ರೀತಿಯಲ್ಲಿ. ಮಿತ್ರ ರಾಷ್ಟ್ರಗಳು ವಿಶೇಷ ಜಾಗರೂಕತೆಯಿಂದ ಕಾಲಹರಣಮಾಡುತ್ತಿರಲಾಗ, ಜರ್ಮನಿಯು ಒಂದೊಂದು ಕ್ಷಣದಲ್ಲಿ ಒಂದೊಂದು ದಶ ಮಾಸಗಳ ಸಾಹಸವನ್ನು ಪ್ರದರ್ಶಿಸಲು ತೊಡಗಿರುವಂತಿದೆ. ನೋರ್ವೆಯ ಪ್ರಕರಣ ಪೂರ್ತಿ ಮುಗಿಯುವ ಮೊದಲೇ ಒಂದೇ ಬಾರಿಗೆ ಹಾಲೆಂಡ್, ಬೆಲ್ಜಿಯಮ್, ಲಕ್ಸೆಂಬರ್ಗ್‌ಗಳ ಮೇಲೆ ನಾಜೀ [illegible] ನಡೆದಿದೆ.

ನ್ಯಾಯವಿದರು ಈ ಪುಟ್ಟ ರಾಷ್ಟ್ರಗಳ ದೀನ ಸ್ಥಿತಿಗಾಗಿ ಸಹಾನುಭೂತಿಪಡದಿರಲಾರರು. ಯುರೋಪಿನಲ್ಲಿ ಯುದ್ಧ ಸ್ಫೋಟವಾದಂದಿನಿಂದ ಮೇ ತಾ. 10ನೇ ಶುಕ್ರವಾರ ಪ್ರಾತಃಕಾಲದವರೆಗೆ ಧೈರ್ಯವಾದ ಬಳಿಯಿದ್ದವನಂತೆ ನಿಶ್ಚಲ ತಾಟಸ್ಥ್ಯವ ಹಿಡಿದ್ದ ದೇಶಗಳಿಷ್ಟು ರಿಬ್ಬೆಂಟ್ರಾಪನು ಮುಂದಿಟ್ಟ ಯುದ್ಧ ಕಾರಣಗಳು ತೋಳ ಕುರಿಮರಿ ಕತೆಯ ವಾದದಂತಿವೆ ಹೊರತು ಯಾವ ಸತ್ಯಾಂಶವನ್ನೂ ಒಳಗೊಂಡಿಲ್ಲ. ಹಾಲೆಂಡು ಬೆಲ್ಜಿಯಮುಗಳನ್ನು ಸ್ವಕಾರ್ಯ ಸಾಧನೆಗಾಗಿ ಆಕ್ರಮಿಸುವ ಅಗತ್ಯ ಜರ್ಮನಿಗೆ ಬಿತ್ತು. ಅದಕ್ಕಾಗಿ ಸೈನ್ಯ ಪಥವನ್ನು ಕಂಡುಹಿಡಿದ ನಾಜೀ ಮುಂದಾಳುಗಳು, ಅಂತೆಯೇ ಹೊರಿಸಬೇಕಾದ ಅಪವಾದವೊಂದನ್ನೂ ಶೋಧಿಸಿಕೊಂಡರು. ಹೊರತು ಬೇರಾವ ಅರ್ಥವೂ ಅದಕ್ಕಿಲ್ಲ. ಚಿಕ್ಕ ರಾಷ್ಟ್ರಗಳ ಪಾಲಿಗೆ ತಪ್ಪಿಸಲಾರದ ಆಪತ್ತಿದು. ಒಂದೇ ಮಾತಿನಲ್ಲಿ ಹೇಳುವದಾದರೆ ದುರ್ಬಲ ರಾಷ್ಟ್ರಗಳ ಸ್ವಾತಂತ್ರ್ಯ ರಕ್ಷಣೋಪಾಯವಾವುದೂ ಈ ವರೆಗಿನ ಜಗತ್ತಿನಲ್ಲಿ ನಿರ್ಮಾಣಗೊಂಡಿಲ್ಲ. 'ನೀವು ನಮಗಾಹುತಿಯಾಗಬೇಕು' ಎಂದು ಬಾಯಿಬಿಟ್ಟು ಹೇಳುವಷ್ಟು ಪ್ರಾಪಂಚಿಕ ಬರ್ಬರತನವು ಮುಂದುವರಿದಿಲ್ಲವಾದುದರಿಂದ ಆ ರೀತಿ ಯಾರೂ ಹೇಳುತ್ತಿಲ್ಲ. ಆದರೆ ಆ ಪದ್ಧತಿಯು ಕಾರ್ಯತಃ ಆಚರಣೆಯಲ್ಲಿದೆ. ಶಕ್ತಿ ಸಂಪನ್ನ ರಾಷ್ಟ್ರಗಳು ದುರ್ಬಲ ರಾಷ್ಟ್ರಗಳ ಮೇಲೆ ಶತಮಾನಗಳಿಂದ ಸೌಮ್ಯ ರೀತಿಯಲ್ಲಿ ಆಚರಣೆಗೆ ತಂದಿದ್ದುದನ್ನು ಕಳೆದ ಏಳು ವರುಷಗಳಿಂದ ಜರ್ಮನಿ ಉಗ್ರ ರೀತಿಯಲ್ಲಿ ಪ್ರದರ್ಶಿಸಿ ತೋರಿಸಿದೆ. ಜರ್ಮನಿಯ ಈ ಬಾರಿಯ ಬೇಟೆಯಾಟ ಕೂಡ ಅದೇ ಆಕ್ರಮಣ ಚರಿತ್ರೆಯ ಒಂದು ಹೊಸ ಅಧ್ಯಾಯ ಹೊರತು ಬೇರೇನೂ ಅಲ್ಲ. ಬೇರೆ ಕಾರಣವಿಲ್ಲದೆ, ತನ್ನ ಹೊಟ್ಟೆ ತುಂಬಿಸಿಕೊಳ್ಳುವದಕ್ಕಾಗಿಯೆ ಅನ್ಯರನ್ನು ನುಂಗುವದು ನ್ಯಾಯವಲ್ಲವೆಂಬ ನೀತಿಯೊಂದು ಲೋಕಾಭಿಪ್ರಾಯವನ್ನಾದರಿಸಿಕೊಂಡು ಇನ್ನೂ ನೇತಾಡುತ್ತದೆ. ಆದ್ದರಿಂದ ಈ ಆಕ್ರಮಣಕ್ಕೊಂದು ಬೇರೆ ಕಾರಣವನ್ನು ಜರ್ಮನಿ ಕೊಡಬೇಕಾಗಿ ಬಂತು; ಕೊಟ್ಟಿದೆ! ಇಂತಹ ಪರಿಸ್ಥಿತಿಯಲ್ಲಿ ಸಣ್ಣ ರಾಷ್ಟ್ರಗಳಿಗೆ ರಕ್ಷಣೋಪಾಯವೆಂಬುದು ಸರ್ವಥಾ ಇಲ್ಲ. ಯಾವ ನೀತಿಯನ್ನನುಸರಿಸಿಯಾದರೂ ಹೊಡೆಯಲಿಚ್ಛಿಸುವವರ ಕೈ ಬಾಯಿಗಳಿಂದ ತಪ್ಪಿಸಿಕೊಳ್ಳುವೆವೆಂದರೆ ಸಾಧ್ಯವಿಲ್ಲ. ಆಕ್ರಮಣಗಾರರು ತಮ್ಮ ಧಾಳಿಗನುಕೂಲವಾದ ಹಾದಿಯನ್ನು ಕಂಡುಕೊಳ್ಳುವಂತೆಯೇ, ತಮ್ಮ ಬೇಟೆಯಾಗತಕ್ಕವರ ಧೋರಣೆಯನ್ನು ಖಂಡಿಸಿ ಕಾರಣಕೊಡುವ ರೀತಿಯನ್ನು ತಿಳಿದೇ ಇರುತ್ತಾರೆ. ಅದ್ದರಿಂದ ತಟಸ್ಥರಾಗಿರುವ ಮೂಲಕ ತಮ್ಮ ರಕ್ಷಣೆ ಮಾಡಿಕೊಳ್ಳುವೆವೆಂದು ದುರ್ಬಲ ರಾಷ್ಟ್ರಗಳು ಹಾರೈಸುವದು ಬಯಲು ಭ್ರಾಂತಿಯೇ ಸರಿ. ಇದಕ್ಕೆ ಹಾಲೆಂಡ್, ಬೆಲ್ಜಿಯಮ್, ಲಕ್ಸೆಂಬರ್ಗ್, ನಾರ್ವೆಗಳ ಪರಿಸ್ಥಿತಿಗೂ ಮಿಕ್ಕಿದ ನಿದರ್ಶನ ಬೇರೇನು ಬೇಕು?

ಇದರ ಪರಿಣಾಮವೇನು?

ಈ ದುರ್ಘಟನೆಯಿಂದ ಒಂದು ವಿಷಯವು ಸ್ಪಷ್ಟವಾದಂತಾಯಿತು. ಇಡೀ ಯುರೋಪನ್ನು ಬಗಲೊಳಗೆ ಸೇರಿಸಿಕೊಳ್ಳಬೇಕೆಂಬ ಹಿಟ್ಲರನ ಮಹತ್ವಾಕಾಂಕ್ಷೆಯ ಕುರಿತು ಇನ್ನಾವ ಅನುಮಾನವೂ ಉಳಿದಿಲ್ಲ. ನೋರ್ವೆಯಲ್ಲಿ ಮಿತ್ರರಾಷ್ಟ್ರಗಳು ಮೈನ್ ಹಾಕಿದುದರಿಂದ ಎಲ್ಲರಿಗರ್ಥವಾಗುವ ಒಂದು ಕಾರಣ ಕೊಡಲು ಹಿಟ್ಲರನು ಸಮರ್ಥನಾದ. ಹಾಲೆಂಡ್ ಬೆಲ್ಜಿಯಮುಗಳು ಮಾಡಿದ ಅಪರಾಧವೇನು? ರಿಬ್ಬೆಂಟ್ರಾಪನು ಹೇಳಿದಂತೆ ಜರ್ಮನಿಯನ್ನು ಸೆಟ್ಟ ದೃಷ್ಟಿಯಿಂದ ನೋಡುತ್ತಿದ್ದುದೊಂದು ತಪ್ಪೆ? ಜರ್ಮನಿ ಧಾಳಿಯಿಟ್ಟು ಅವುಗಳ ಸಂದೇಹವು ಸತ್ಯವಾದುದೆಂದು ರುಜು ಪಡಿಸಿತು. ಸ್ವೀಡನ್ ಕೂಡ ಹಿಟ್ಲರನ ಅಭಯ ದೊರಕುವ ವರೆಗೆ ಈ ರಾಷ್ಟ್ರಗಳಂತೆಯೇ ಬೆದರು ಕಂಗಳಿಂದ ಜರ್ಮನಿಯನ್ನು ನೋಡುತ್ತಿತ್ತು. ಈ ಅನುಮಾನಕ್ಕಾಗಿ ಸ್ವೀಡನಿಗೆ ಆಶ್ವಾಸನೆ ದೊರಕಿತು; ಹಾಲೆಂಡು ಬೆಲ್ಜಿಯಮುಗಳ ಸಂದೇಹ ಮಾತ್ರ ಈ ಶಿಕ್ಷೆಯ ಹೊರತು ನಿವೃತ್ತಿಗೊಂಡುವಂತಿರಲಿಲ್ಲವೆಂಬ ಪಕ್ಷ ದಾಖಲೆಯೇನು? ಸತ್ಯಸ್ಥಿತಿ ಹಾಗಲ್ಲ. ಸ್ವೀಡನ್ ತಾಟಸ್ಥ್ಯದ ಕುರಿತು ರಷ್ಯವು ಆತುರ ತೋರಿಸಿತು; ಜರ್ಮನಿಯು ಅದಕ್ಕೆ ತನ್ನಂತೆ ಶಮನವಾಯಿತು. ಹಾಲೆಂಡು ಬೆಲ್ಜಿಯಮುಗಳ ಪಕ್ಷ ಹಿಡಿಯತಕ್ಕವರು ಮೊದಲೇ ಇದಿರು ಬಿದ್ದಿರುವ ಮಿತ್ರರಾಷ್ಟ್ರಗಳು. ಅವಸರದಿಂದ ಕಾರ್ಯ ಸಾಧಿಸಿಬಿಟ್ಟರೆ ಅನಿರೀಕ್ಷಿತವಾದುದೇನೂ ಜೇರಿ ಸಂಭವಿಸುವಂತಿಲ್ಲ ಎಂಬುದರಿಂದಲೇ ಜರ್ಮನಿ ಹಾಲೆಂಡು ಬೆಲ್ಜಿಯಮುಗಳ ಆಕ್ರಮಣಕ್ಕೆ ತಡಮಾಡಲಿಲ್ಲ. ಈ ಘಟನೆಯಿಂದ ಸ್ಪಷ್ಟವಾಗುವ ಜರ್ಮನಿಯ ನೈತಿಕ ದಿವಾಳಿಗರಿಯು ಲೋಕದ ಎಲ್ಲಾ ರಾಷ್ಟ್ರಗಳ ಕಣ್ಣನ್ನು ತೆರೆಯಿಸಲು ಸಾಕಾಗಿದೆ. ಇದರಿಂದ ಅಮೇರಿಕದ ಜನಾಭಿಪ್ರಾಯದಲ್ಲಿ ತೀವ್ರ ಮಂಥನ ಪ್ರಾರಂಭವಾಗಿದೆ. ಅಧ್ಯಕ್ಷ ರೂಸ್‌ವೆಲ್ಟರು ತನ್ನ ಕಾಲಡಿಯಲ್ಲೇ ಅಪಾಯ ಕಂಡವರಂತೆ ಉದ್ವೇಗಗೊಂಡಿದ್ದಾರೆ. ಭಾರತದ ಕಾಂಗ್ರೆಸ್ ಮುಖಂಡರುಗಳಲ್ಲಿ ಕೂಡ ಅದು ಪರಿಣಾಮವನ್ನುಂಟುಮಾಡಿದೆ ಎಂಬುದಕ್ಕೆ ಗಾಂಧೀ, ಪ್ರಸಾದ್, ನೆಹರುಗಳ ಹೇಳಿಕೆಯೇ ನಿದರ್ಶನ. ಅಂತೂ ನಾಜಿಗಳ ಬಲ ವರ್ಧಿಸುತ್ತಾ ಬಂದಂತೆ, ಅವರ ವಿರೋಧೀ ಶಕ್ತಿಯು ಮತ್ತೊಂದೆಡೆಯಲ್ಲಿ ಪುಟಗೊಳ್ಳುತ್ತಿದೆ ಎಂಬುದನ್ನು ಮರೆಯಲಾಗುವದಿಲ್ಲ.

ರಣಕಣದ ಪರಿಸ್ಥಿತಿ

ಹಾಲೆಂಡ್ ಬೆಲ್ಜಿಯಮುಗಳ ಮೇಲೆ ನಡೆಸಿದ ಆಕ್ರಮಣದಿಂದ ಜರ್ಮನಿಯು ಪೂರ್ಣವಾಗಿ ನೈತಿಕ ಪರಾಭವವನ್ನು ಪಡೆದಿದೆ. ಯುದ್ಧದ ಪ್ರತ್ಯಕ್ಷ ಪರಿಣಾಮವು ಹೇಗಾಗಬಹುದೆಂಬ ಪ್ರಶ್ನೆಯಿದೆ. 1914ರ ಮಹಾಯುದ್ಧದಲ್ಲಿ ಜರ್ಮನ್ ಧಾಳಿಗೆ ಮೊದಲಾಗಿ ಸಿಕ್ಕಿ ಅದಕ್ಕೆ ಅನಿರೀಕ್ಷಿತ ಪರಾಜಯವನ್ನು ತಂದೊಡ್ಡಿದ ರಾಷ್ಟ್ರ ಬೆಲ್ಜಿಯಮ್. ಆ ಕಾಲದಲ್ಲಿ ಫ್ರಾನ್ಸ್-ಜರ್ಮನಿ ಗಡಿಯಲ್ಲಿದ್ದ ಫ್ರೆಂಚ್ ಸೇನೆಯನ್ನು ಮುರಿಯಲು ಹಾಲೆಂಡಿನ ಮೇಲೂ ಧಾಳಿ ನಡಿಸುವ ಹಂಚಿಕೆಯಾಗುತ್ತಿದ್ದರೂ ಕಾರ್ಯತಃ ಆಚರಣೆಯಲ್ಲಿ ಬರಲಿಲ್ಲ. ಹಾಗೆ ಮಾಡದೆ ತಪ್ಪಿಬಿದ್ದೆವು ಎಂದು ಜರ್ಮನಿಯ ಯುದ್ಧ ತಜ್ಞರು ಅನಂತರ ಅಭಿಪ್ರಾಯಪಟ್ಟಿದ್ದರು. ಈ ಬಾರಿ ಜರ್ಮನಿ ಅಂತಹ ತಪ್ಪನ್ನು ಮಾಡದೆ ಏಕಕಾಲದಲ್ಲಿ ಬೆಲ್ಜಿಯಮ್ ಹಾಲೆಂಡುಗಳನ್ನು ಆಕ್ರಮಿಸಿದೆ. ಇವರಲ್ಲಿರುವ ಉದ್ದೇಶವೆಂದರೆ ಫ್ರಾನ್ಸಿನ ಮೆಜಿನೋ ಲೈನನ್ನು ಹೊಡೆಯುವದೊಂದೇ ಅಲ್ಲ; ಇಂಗ್ಲಿಷ್ ಕಾಲುವೆಯನ್ನಾಕ್ರಮಿಸಿ ನಿಂತು ಬ್ರಿಟಿಷ್ ದ್ವೀಪಗಳ ಕಡೆಗೆ ಭಯ ಬೀರುವಂತಾಗಬೇಕೆಂಬುದೂ ಇದೆ. ಈ ಹಂಚಿಕೆಗನುಸಾರವಾದ ರೀತಿಯಲ್ಲಿಯೇ ನಾಜೀ ಸೈನ್ಯವು ಮುಂದೊತ್ತಿದೆ. ವಿಮಾನ ಧಾಳಿಗೆ ಇವೆರಡು ರಾಷ್ಟ್ರಗಳೂ ಅತ್ಯನುಕೂಲ ಕ್ಷೇತ್ರಗಳು. ಜರ್ಮನಿಯ ವಿಮಾನ ನಿಲ್ದಾಣ ಕ್ಷೇತ್ರ ಕೊಲೋನ್ನಿಯಿಂದ ಹಾಲೆಂಡಿನ ಅಮ್‌ಸ್ಟರ್ಡಮ್ ಅಥವಾ ರೋಟ್ಟರ್ಡಾಮಿಗೆ ಇರುವ 130 ಮೈಲಿನ ಮೇಲೆ ವಿಮಾನಧಾಳಿ ನಡಿಸಲು ಬೇಕಾಗುವ ಸಮಯ 32 ಮಿನಿಟು ಮಾತ್ರ. ಬೆಲ್ಜಿಯಮಿನ ಪಟ್ಟಣಗಳು ಇದಕ್ಕಿಂತಲೂ ಸುಲಭಸಾಧ್ಯವಾದವುಗಳು. ಕೊಲೋನ್ನಿಯಿಂದ ಬೆಲ್ಜಿಯಮಿನ ಏಂಟ್‌ವರ್ಪ್ ಅಥವಾ ಬ್ರಸೆಲ್ಸಿನ ಮೇಲೆ 27 ಮಿನಿಟಿನೊಳಗೆ ಲೀಜ್‌ನ ಮೇಲೆ 20 ಮಿನಿಟಿನೊಳಗೆ ಭಾರಿ ಬಾಂಬು ಹಾಕಬಹುದು. ಈ ಅನುಕೂಲತೆಯನ್ನು ಜರ್ಮನ್ ಸೇನೆ ಸಮರ್ಥ ರೀತಿಯಲ್ಲಿ ಉಪಯೋಗಿಸಿಕೊಂಡಿದೆ. ನಾಜೀ ವಿಮಾನಗಳಿಂದ ಬಾಂಬುಗಳಿಳಿಯುತ್ತಿರುವದಷ್ಟೇ ಅಲ್ಲ; ಗಾಳಿಕೊಡೆಗಳ ಮೂಲಕ ಬಹುಸಂಖ್ಯೆಯಲ್ಲಿ ಜರ್ಮನಿ ಸೈನಿಕರೂ ಇಳಿದುಬಂದಿದ್ದಾರೆ. ಯುದ್ಧಾರಂಭದ ಪ್ರಥಮ ಮೂರು ದಿನಗಳಲ್ಲಿ ನಾಜೀ ಸೈನ್ಯ ವಾಯುವೇಗದಿಂದ ಮುಂದೊತ್ತಿ ಪ್ರಾಮುಖ್ಯ ಸ್ಥಳಗಳನ್ನು ಹಿಡಿದುಕೊಂಡಿದೆ.

ವಿರೋಧಿಗಳ ಒತ್ತಾಟದ ಬಲದಿಂದ ಕೆಲವು ಮುಖ್ಯ ಸ್ಥಳಗಳ ರಕ್ಷಣಾ ಸೈನಿಕರು ಹಿಮ್ಮೆಟ್ಟಬೇಕಾಗಿಬಂತು. ಇಂತಹ ವಿಷಮ ವಾತಾವರಣದ ಭೀಕರತೆಯನ್ನು ಬಚ್ಚಿಟ್ಟು ಪ್ರಯೋಜನವೇನೂ ಇಲ್ಲ. ಇದನ್ನು ಪ್ರತಿಭಟಿಸುವುದರಲ್ಲಿ ಸ್ಥಳೀಯ ಸೈನ್ಯಗಳ ಬೆಂಬಲಕ್ಕೊದಗಿದ ಮಿತ್ರರಾಷ್ಟ್ರಗಳ ಸೇನೆಗಳು ಮುಖ್ಯವಾಗಿ ವಿಮಾನಬಲವು ಶ್ಲಾಘನೀಯ ಸಾಹಸವನ್ನು ಪ್ರದರ್ಶಿಸಿದೆ. ಬ್ರಿಟಿಷರ ಆರ್. ಎ. ಎಫ್. ದಳವು ಕಠಿಣ ಹೊಡೆತಕಾರಿಯೆಂದು ರುಜುವಾಗಿದೆ. ಆಕ್ರಮಣ ನಡೆದ 24 ಘಂಟೆಗಳ ಒಳಗೆ ಮಿತ್ರರಾಷ್ಟ್ರಗಳು ಸೇನಾ ಬೆಂಬಲಕೊಟ್ಟು ಹಾಲೆಂಡು ಬೆಲ್ಜಿಯಮುಗಳನ್ನು ಹುರಿದುಂಬಿಸಿವೆ. ಮಾತ್ರವಲ್ಲ, ಫ್ರಾನ್ಸಿನಲ್ಲಿರುವ ಬ್ರಿಟಿಷ್ ಮುಖ್ಯ ವಿಮಾನನಿಲ್ದಾಣಕ್ಕೆ ಈ ಚಿಕ್ಕರಾಷ್ಟ್ರಗಳು ಅನತಿ ದೂರದಲ್ಲೇ ಇದ್ದು ಹಾಲೆಂಡು ಬೆಲ್ಜಿಯಮುಗಳಲ್ಲಿ ವಿಮಾನನಿಲ್ದಾಣಗಳು ದೊರೆಯುವ ಅನುಕೂಲತೆಯೂ ಇರುವದರಿಂದ ನಾರ್ವೆಯಲ್ಲಿದ್ದಂತಹ ಅಡಚಣೆ ಮಿತ್ರರಾಷ್ಟ್ರಗಳಿಗಿಲ್ಲಿ ಒದಗುವಂತಿಲ್ಲ. ಆದರೆ ಈ ವರೆಗಿನ ಯುದ್ಧವನ್ನು ಸೂಕ್ಷ್ಮವಾಗಿ ಅವಲೋಕಿಸಿದಲ್ಲಿ ಆಶಾಸ್ಪದವಾವುದೂ ತೋರುವದಿಲ್ಲ. ಮುಂದೊತ್ತುವ ನಾಜೀ ಸೇನೆ ಪ್ರಬಲ ಹೊಡೆತ ತಿಂದೇ ತೀರಬೇಕು—ಬಿದ್ದು ಎದ್ದು ಮುನ್ನಡೆಯಬೇಕು—ಹೊರತು ಎದೆಯುಬ್ಬಿಸಿಕೊಂಡು ಮುನ್ನುಗ್ಗುವದಾಗದು ಎಂಬುದು ಸ್ಪಷ್ಟವಾಗಿದೆ. ಆದರೆ ಮುಂದೊತ್ತುವವರನ್ನು ಅಷ್ಟೇ ತೀವ್ರಗತಿಯಿಂದ ಹಿಂದಟ್ಟುವ ಲಕ್ಷಣವಾವುದೂ ಕಂಡುಬರುತ್ತಿಲ್ಲ. ಆದರೂ ಬೆಲ್ಜಿಯಮಿಗೆ ಸಹಾಯ ಕೊಡಲಿರುವಷ್ಟು ಅನುಕೂಲತೆ ಹಾಲೆಂಡಿನ ಮಟ್ಟಿಗೆ ಮಿತ್ರರಾಷ್ಟ್ರಗಳಿಗಿಲ್ಲ. ಇಡೀ

...ಗ ಹೋಲೆಂಡಿ
...ತವಾಗಿದೆಯೆ?
...ಂಬ ಉತ್ತರ
...ಗೆ ಬಂದಿರುವ
...ಯೆಂದು ಬೆಲ್ಜಿ
...ರ್ಟ್. ಪಿಯರ್ಲ್
...ಂಡಿನ ರಾಣಿ
...ಂದೇಶವು ಧೀ
...ನತನವನ್ನು
... ಸಂದೇಶದ
ಪೂರ್ಣ ತಟ
ಹೋಗಿಹೋರು
ದವರು—ಎಂಬ
ಸರಕಾರವು
...ರುವದೆಂದಿಷ್ಟೇ
...ದ್ದಾರೆ. ಇಂದಿನ
...ನ ಸರಕಾರಕ್ಕೆ
...ರಣೆ ಕೊಡುವ
...ಷ್ಟ. ಸಿಂಹಾಸನದ
...ಣಿಕುವರಿಯು
...ಲಾಯನಮಾಡಿ
...ನ್ನಾಹದಲ್ಲಿರುವ
...ಲ್ಲವನ್ನೂ. ಗಾಢ
...ವಾಗ ಈ ಸಂಚಿ
...ಸೇರುವದರೊಳಗೆ
...ಕ್ಯವನ್ನು ಕಳಕೊ
...ವಲ್ಲ.

...ಬರ್ಲಿನರ
...ಮೆ

... ಪರಿಣಾಮವಾಗಿ
ಬ್ರಿಟಿಷ್ ಮುಖ್ಯ
...ನಾಮೆಕೊಡಬೇ
...ರ್ಲಿನರ ಸೌಮ್ಯ
...ಡಗತಿಗಿಂತ ಭಿನ್ನ
... ಮಿ. ಚರ್ಚಿಲ್ಲರು
...ದ್ದರು. ಯುದ್ಧ
...ಣಿಯ ಬದಲಾ
... ಪ್ರಧಾನರು ತನ್ನ
...ದ ಅಂತ್ಯದ ವರೆಗೂ
...ಳಿಸುವದರಲ್ಲಿ
... ಹಿಟ್ಲರ್ ಧೋ
...ರ್ಲಿನರನ್ನು ಗಲಿ
...ಕೊನೆಯ ತನಕ
...ಜೆಕೋಸ್ಲೊವೇಕಿ
...ಪ್ರಾರಂಭಿಸಲ್ಪಟ್ಟ
...ಕ್ಷಿಯ ನಾರ್ವೇ
...ಮೂಲಕ ಮಿ.
...ಗದ್ದುಗೆಯಿಂದಿಳಿಸು
...ಯುತ್ತೆನ್ನಬಹುದು.
ಮಿ. ಚರ್ಚಿಲ್ಲರು
...ದ್ಧರೆಂದು ಯು
...ಸಿಗೊಂಡವರು. ಈ
ಬ್ರಿಟಿಷ್ ನಾಯಕ
...ವರೆಗೂ ಅಂದಿನ
...ಸ್ಸಲ್ಲು ಳಿಸಿಕೊಂಡು
... ವ್ಯಕ್ತಿ. ಇವರ
...ಪಡೆದುದರಿಂದ ಬ್ರಿ
...ಮು ಒಂದು ಮುಖ್ಯ
...ಕೊಂಡಿತೆಂದು ಹೇ

—

...ತೀವ್ರಗತಿ

... ಫೈಸರ ವಿಮಾನ

ಹೋಲ್ಲೇಂಡ್ ಬೆಲ್ಜಿಯಮುಗಳಲ್ಲಿ ತೀವ್ರ ವಿಮಾನ ಹೋರಾಟ!

ನಾಜೀ ಸೈನ್ಯದ ವಾಯುವೇಗ! ವಿಮಾನನಿಲ್ದಾಣಗಳ ಕೈಬದಲಾವಣೆ! ಬ್ರಿಟಿಷ್ ವಿಮಾನಗಳ ಹೊಡೆತ!

ಹೋಲೆಂಡು ಜರ್ಮನಿಯ ಬಗಲೊಳಗಾಗುವದೆ

ಯುದ್ಧದಲ್ಲಿ ತಮ್ಮ 35 ವಿಮಾನಗಳೂ ವಿರೋಧಿಗಳ 300 ವಿಮಾನಗಳೂ ನಾಶವಾದವೆಂದು ಜರ್ಮನ್ ಪ್ರಕಟಣೆಯಿದೆ. ಪಶ್ಚಿಮ ಕಡೆಯಲ್ಲಿ ತಾವು ಎಲ್ಲಾ ಭಾಗದಲ್ಲೂ ಮುಂದೊತ್ತುತ್ತಿರುವದಾಗಿ ಆ ಹೇಳಿಕೆಯಲ್ಲಿದೆ. ನಾಜೀ ಸೇನೆಯು ನ್ಯಗ್ಗತ್ತಾ ಪೂರ್ವ ಕಾಲುವೆಯ ಒಂದು ಬದಿಯನ್ನು ಸೇರಿರುವದಂತೆ. ಹೋಲೆಂಡಿನ ಗಡಿಯಲ್ಲಿದ್ದ 5000 ಸೈನಿಕರನ್ನು ತಾವು ಸೆರೆ ಹಿಡಿದಿರುವದಾಗಿ ಜರ್ಮನರೆಂದಿದ್ದಾರೆ. 'ಕೀಲ್' ನಾಮಾಂಕಿತ ಸಬ್‌ಮೆರಿನ್ ಕಾಣೆಯಾಗಿರುವದೆಂದೂ ಅದರಲ್ಲಿದ್ದವರು ಸೆರೆ ಸಿಕ್ಕಿರಬಹುದೆಂದೂ ಲಂಡನಿನ ವಾರ್ತೆ ಇದೆ.

ಫ್ರಾನ್ಸಿನ ನಗರಗಳ ಮೇಲೆ ಬಲವಾದ ಬೋಂಬು!

ಹೋಲೆಂಡ್ ಬೆಲ್ಜಿಯಮುಗಳ ಮೂಲಕ ನುಗ್ಗಿದ ನಾಜೀ ವಿಮಾನಗಳು ಫ್ರಾನ್ಸಿನ ಉತ್ತರ ಮತ್ತು ಪೂರ್ವ ಭಾಗಗಳ ಮೇಲೆ ಹಾರಾಡಿ ಹಲವು ನಗರಗಳ ಮೇಲೆ ಬೋಂಬಿನ ಮಳೆಗರೆದಿರುವವು. ವಿಮಾನ ನಿಲ್ದಾಣ, ರೈಲ್ವೇ ಲೈನ್ ಮತ್ತು ಕಾರ್ಖಾನೆಗಳ ಮೇಲಲ್ಲದೆ ಶಾಂತ ನಾಗರಿಕರ ಮೇಲೂ ಬೋಂಬು ಬಿತ್ತು. ಪ್ಯಾರಿಸಿನ ಮೇಲೆ ನಾಲ್ಕು ವಿಮಾನಗಳು ಹಾರಾಡಿದವೆಂದೂ, ಆದರೆ ಬೋಂಬು ಹಾಕಲಿಲ್ಲವೆಂದೂ ತಿಳಿದುಬರುತ್ತದೆ. ನಾನ್ಸಿ ಎಂಬಲ್ಲಿ ಹದಿನಾರು ಜನರು ಮರಣಹೊಂದಿ 30 ಮಂದಿ ನಾಗರಿಕರು ಘಾಯಗೊಂಡರು. ಫ್ರಾನ್ಸಿನ ಸೈಂಟ್ ಓಮರ್, ಏಪ್ರ್, ಅ-ಫ್ರಾಂಕೋಯಿಸ್, ವೆಟ್ಸ್ ಮೊದಲಾದ ಕಡೆಗಳ ವಿಮಾನ ನಿಲ್ದಾಣಗಳನ್ನು ಧ್ವಂಸಗೊಳಿಸಿದವೆಂದೂ, ಡಚ್, ಬೆಲ್ಜಿಯಮುಗಳು ವೈರಿಗಳ ಸಹಾಯ ಕೇಳಿದುದರಿಂದ ವಿಮಾನ ಧಾಳಿಯನ್ನು ಬಲಗೊಳಿಸಲಾಯಿತಲ್ಲದೆ ಹಲವು ನಿಲ್ದಾಣಗಳೂ ಸುತ್ತಲಿನ ಕ್ಷೇತ್ರಗಳೂ ತಮ್ಮ ವಶವಾಗಿವೆ ಎಂದೂ, ಜರ್ಮನಿಯು ಪ್ರಕಟಿಸಿದೆ. ಹೋಲೆಂಡ್ ಬೆಲ್ಜಿಯಮುಗಳ ಸಮುದ್ರದಲ್ಲೆಲ್ಲಾ ವಿರೋಧಿಗಳ ಪ್ರವೇಶಕ್ಕಾತಂಕವಾಗುವಂತೆ ಜರ್ಮನರು ಮೈನ್ ಹಾಕಿರುವರು

ಹೋಲೆಂಡಿನ ಪ್ರತಿ ಹೊಡೆತ

ಜರ್ಮನರು ಸಿಡಿಲಿನಂತೆ ಬಿದ್ದು ಹೋಲೆಂಡನ್ನು ದಂಗು ಬಡಿಯಿಸಿ ವಶಪಡಿಸಿಕೊಂಡ ವಿಮಾನ ನಿಲ್ದಾಣಗಳಲ್ಲಿ ಒಂದನ್ನು ಬಿಟ್ಟು ಮಿಕ್ಕವೆಲ್ಲವನ್ನೂ ಹೋಲೆಂಡ್ ಸೈನ್ಯ ತಿರುಗಿ ಕಿತ್ತುಕೊಂಡಿದೆ. ಬೇರೆ ಬೇರೆ ನಗರಗಳಲ್ಲಿ ಒಟ್ಟಿಗೆ ನೂರು ವೈರಿ ವಿಮಾನಗಳನ್ನು ಹೊಡೆದುರುಳಿಸಿದವು; 14 ವಿಮಾನಗಳನ್ನು ಇದ್ದಂತೆ ಹಿಡಿದಿರುವೆವೆಂದು ಹೋಲೆಂಡು ಸರಕಾರ ಪ್ರಕಟಿಸಿದೆ. ಡಚ್ಚರು ಸಂಕ ಸೇತುವೆಗಳನ್ನು ಕಡಿದು ಹಾಕಿ ಜರ್ಮನ್ ಸೇನೆ ಮುಂದೊತ್ತುವಲ್ಲಿ ಅಲ್ಲಾ ತಡೆಗಟ್ಟಿದ್ದಾರೆ.

ರಾಣಿಯನ್ನಪಹರಿಸುವ ಯತ್ನ

ಹೋಲೆಂಡಿಗೆ ಧಾಳಿ ನಡೆದ ಪ್ರಥಮ ದಿನದಲ್ಲೇ ಅಲ್ಲಿಯ ರಾಣಿಯನ್ನು ಸೆರೆ ಹಿಡಿಯಲು ಜರ್ಮನ್ ವಿಮಾನಗಳ ಪ್ರಯತ್ನ ನಡೆಯಿತು. 16 ದೊಡ್ಡ ನಾಜೀ ವಿಮಾನಗಳು ರಾಣಿಯು ವಸಂತ ವಿಹಾರಕ್ಕಾಗಿ ನಿಲ್ಲುವ ರೋಗೆನ್‌ಹೋ ಎಂಬಲ್ಲಿ ಇಳಿಯುವಾಗ ಪ್ರತಿಯೊಂದರಲ್ಲಿಯೂ ಕಡಿಮೆ ಎಂದರೆ 20ರಂತೆ ಸೋಲ್ಜರರಿದ್ದು, ಎಲ್ಲರ ಕೈಯಲ್ಲಿಯೂ ಮೆಶಿನ್ ಗನ್ ಮತ್ತು ಪಿಸ್ತೂಲುಗಳಿದ್ದವು. ಅಲ್ಲಿ ಹೋಲೆಂಡ್ ಸರಕಾರದ ಮುಂಜಾಗ್ರತೆ ವಿಶೇಷವಿದ್ದುದರಿಂದ ರಾಣಿ ಮತ್ತು ಇತರ ಅಧಿಕಾರಿಗಳನ್ನು ಹಿಡಿಯಲಾಗಲಿಲ್ಲ. ನಾಜೀ ಸೈನ್ಯ ನುಗ್ಗಿದಲ್ಲೆಲ್ಲಾ ಟೆಲಿಗ್ರಾಫ್ ಮತ್ತು ಟೆಲಿಫೋನ್ ಸಂಬಂಧಗಳನ್ನು ಕಡಿಯುತ್ತಾ ಹೋಗಿದ್ದಾರೆ.

ಬೆಲ್ಜಿಯಮಿನ ದೃಢ ನಿರ್ಧಾರ

ಸ್ವತಃ ಬೆಲ್ಜಿಯಮಿನ ರಾಜಾ ಲಿಯೋಪೋಲ್ಡರು ಬ್ರಾಡ್‌ಕಾಸ್ಟ್ ಭಾಷಣವಿತ್ತು ಹೇಳಿದರು. "ಕಾಲು ಶತಮಾನಗಳ ನಂತರ ನನ್ನ ರಾಜನೀತಿ ಮತ್ತು ತಾಟಸ್ಥ್ಯವನ್ನು ಸಂಪೂರ್ಣವಾಗಿ ರಕ್ಷಿಸಿಕೊಂಡುಬಂದಿದ್ದ ಬೆಲ್ಜಿಯಮಿನ ಮೇಲೆ ಜರ್ಮನ್ ಸಾಮ್ರಾಜ್ಯವು ಎರಡನೇ ಬಾರಿ ಆಕ್ರಮಣಮಾಡಿದೆ. 1914ರಲ್ಲಿ ಕೊಟ್ಟಂತಹ ವಿರೋಧವನ್ನೇ 1940ರ ಬೆಲ್ಜಿಯಮು ಕೊಡಲಿದೆ. ಕೊನೆಯ ಕ್ಷಣದವರೆಗೂ ನಾವು ವಿಶ್ವಾಸಪೂರ್ವಕ ನಮ್ಮ ತಾಟಸ್ಥ್ಯ ನೀತಿಯನ್ನು ಕಾಪಾಡಿಕೊಂಡು ಬಂದಿದ್ದೆವು. ನನ್ನ ಧೈರ್ಯಶಾಲಿ ಸಿಪಾಯಿಗಳಿಗೆ ಅಭಿವಂದನೆಗಳು. ಅವರು ಇಂಚು ಇಂಚಿಗೆ ವಿರೋಧಿಗೆ ಪ್ರಬಲ ವಿರೋಧವೊಡ್ಡಿ ತಡೆಗಟ್ಟುವರು. ಇಂದಿನ ಬೆಲ್ಜಿಯಮ್ 1914ರಲ್ಲಿದ್ದುದಕ್ಕಿಂತ ಬಲಶಾಲಿಯಾಗಿದೆ. ಆಂಗ್ಲೋ-ಫ್ರೆಂಚರು ನಮಗೆ ಪೂರ್ಣ ಸಹಾಯವೀಯುತ್ತಿದ್ದಾರೆ. ನಮ್ಮ ಯುದ್ಧವು ಕಷ್ಟದಾಯಕವಾಗಿದ್ದರೂ ಕೊನೆಯ ಪರಿಣಾಮದ ಕುರಿತು ಯಾವ ಅನುಮಾನವೂ ಇಲ್ಲ. 1914ರಲ್ಲಿ ನನ್ನ ತಂದೆಯವರು ಮಾಡಿದ್ದಂತೆ ಸ್ವತಃ ನಾನೇ ಇಂದು ಸೈನ್ಯಾಧಿಪತಿಯಾಗಿರುವೆನು" ಬೆಲ್ಜಿಯಮಿನ ಚೇಂಬರಿನಲ್ಲಿ ವಿದೇಶ ಮಂತ್ರಿ ಎಮ್. ಸ್ಪಾಕ್ ಇವರು ಜರ್ಮನಿಯ ಆಕ್ರಮಣವನ್ನು ಖಂಡಿಸಿ ಆಂಗ್ಲೋ-ಫ್ರೆಂಚರ ಸಹಾಯದ ಪ್ರಸ್ತಾಪವೆತ್ತಿದಾಗ ಇಡೀ ಸಭೆ ಎದ್ದುನಿಂತು ಜಯಕಾರಮಾಡಿತು.

ನಿಲ್ದಾಣ ಧಾಳಿ ನಿಷ್ಪ್ರಯೋಜಕ

ಜರ್ಮನರು ಬೆಲ್ಜಿಯಮು ವಿಮಾನ ನಿಲ್ದಾಣಗಳ ಮೇಲೆ ಧಾಳಿ ನಡೆಸುವ ಮೊದಲೇ ಅಲ್ಲಿಂದ ವಿಮಾನಗಳನ್ನು ತೆಗೆದಿದ್ದುದರಿಂದ ಒಂದೆರಡು ವಿಮಾನಗಳು ಮಾತ್ರ ನಾಶವಾಗಿದ್ದುವೆಂದು ಬೆಲ್ಜಿಯಮಿನ ರಕ್ಷಣಾ ಮಂತ್ರಿಗಳು ಹೇಳಿದ್ದಾರೆ. ಗಾಳಿ ಕೊಡೆಗಳಲ್ಲಿ ಬಂದಿಳಿಯುವ ನಾಜೀ ಸೈನಿಕರನ್ನು ಸ್ವಯಂ ಸೈನಿಕರು ಸುಟ್ಟುಗೊಲ್ಲುತ್ತಿದ್ದಾರೆ.

ಅಮೇರಿಕ ಉದ್ವೇಗಗೊಂಡಿದೆ!

ಜರ್ಮನಿಯ ಆಕ್ರಮಣದಿಂದ ಅಮೇರಿಕದ ಜನಾಭಿಪ್ರಾಯವು ತೀವ್ರವಾಗಿ ಮಾರ್ಪಾಟುಗೊಳ್ಳುತ್ತಿದೆ. ಪ್ರೆಸಿಡೆಂಟ್ ರೂಸ್‌ವೆಲ್ಟರು ತನ್ನವರನ್ನುದ್ದೇಶಿಸಿ "ಅಮೇರಿಕನರು ಪಾಶ್ಚಾತ್ಯ ಸಂಸ್ಕೃತಿಯ ಮತ್ತು ಕ್ರೈಸ್ತ ನಾಗರಿಕತೆಯ ರಕ್ಷಕರು. ಮಿಲಿಯಾವಧಿ ಜನರನ್ನು ತಮ್ಮ ಅಧಿಕಾರ ಛತ್ರದಡಿಗೆ ಸೇರಿಸಲು ಹೊರಟವರು ಜಯಿಸಿದರೆ ಅವರು ಭೂಲೋಕದ ಪ್ರತಿಯೊಬ್ಬ ಮನುಷ್ಯ ಮತ್ತು ಪ್ರತಿಯೊಂದು ಮೈಲು ನೆಲವನ್ನೂ ಆಕ್ರಮಿಸಲು ನೋಡುವರೆಂಬುದನ್ನು ನಾವರಿತುಕೊಳ್ಳಬೇಕು. ಅಮೇರಿಕವು ಕೂಡಲೇ ಬಿಡಿಸಬೇಕಾದ ಒಂದು ಸಮಸ್ಯೆಯನ್ನು ಕಾಣುತ್ತಿದೆ. ಮಿಕ್ಕವರ ಶಾಂತಮಯ ಸ್ಥಿತಿ ಹಾಳಾಗುತ್ತಾ ಬರುತ್ತಿರುವಾಗ ಅಮೇರಿಕವು ಪ್ರತ್ಯೇಕ ಜೀವನ ಧರ್ಮವನ್ನು ಅನುಸರಿಸಲು ಸಾಧ್ಯವಿದೆಯೆ? ಪ್ರಾಯಶಃ ಇಲ್ಲ. ಪರಿಸ್ಥಿತಿಯನ್ನು ಸರಿಯಾಗಿ ನೋಡಿಕೊಂಡು ಅದಕ್ಕೆ ತಕ್ಕಂತವರ ಮುಖದಿಂದ ಕಾರ್ಯ ಕೈಕೊಳ್ಳುವ ಸಮಯ ಅಮೇರಿಕದ [illegible]ರಿಗೆ ಬಂದಿದೆ" ಎಂದರು. ಅಮೇರಿಕಾ ಸಂಬಂಧವುಳ್ಳ ಹೋಲೆಂಡಿನ ಡಚ್ ವೆಸ್ಟ್ ಇಂಡೀಸ್ ಪ್ರಾಂತ್ಯಗಳ ಪರಿಸ್ಥಿತಿಯ ಕುರಿತು ಸರಕಾರವು ಆಲೋಚಿಸುತ್ತಿದೆ. ಅಮೇರಿಕದಲ್ಲಿರುವ ಡಚ್ ಮತ್ತು ಬೆಲ್ಜಿಯಮ್ ಸಂಪತ್ತನ್ನು ಜರ್ಮನಿಯು ಜಪ್ತಿಮಾಡಲಾಗದಂತೆ ರೂಸ್‌ವೆಲ್ಟರೊಂದು ಹೊಸ ಶಾಸನ ಹೊರಡಿಸಿರುವರು.

ನಾಜೀ ಸೈನ್ಯ ದಳಗಳನ್ನು ಬೇರ್ಪಡಿಸುವ ಯತ್ನ

ಅಲ್ಬರ್ಟ್ ಪ್ರವಾಹವನ್ನು ಹಾದು ಬೆಲ್ಜಿಯಮಿನೊಳಗೆ ರಭಸದಿಂದ ನುಗ್ಗುತ್ತಾ ಬರುತ್ತಿರುವ ಜರ್ಮನ್ ಸೇನೆಯನ್ನು ತಡೆಯುವದಕ್ಕಾಗಿ ಮಾಸ್ಟ್ರಿಚಿನ ಒಳಬಿಕ್ಕಟ್ಟಿನ ಸೇತುವೆಯ ಮೇಲೆ ಮಿತ್ರ ರಾಷ್ಟ್ರಗಳ ವಿಮಾನಗಳು ಒಂದೇ ಸಮನೆ ಬೋಂಬಿನ ಮಳೆಗರೆಯುತ್ತಿವೆ. ಮುಂದಾಗಿ ನುಗ್ಗಿದ ನಾಜಿಗಳ ಮೋಟಾರು ಸೈನ್ಯಗಳ ಸಹಾಯಕ ಸೈನ್ಯದ ದೊಡ್ಡ ಭಾಗವು ಆ ಕಡೆಯಲ್ಲಿ ಇನ್ನೂ ಹಿಂದಿರುವದಂತೆ. ಅವುಗಳು ಬಂದು ಸೇರದಂತೆ ಈ ಪ್ರಾಮುಖ್ಯ ಸ್ಥಳದಲ್ಲಿ ಕಠಿಣ ಧಾಳಿ ನಡೆಯುತ್ತಿದೆ. ಬೆಲ್ಜಿಯಮು ಸೈನ್ಯಗಳು ಕೆಳಗಡೆಯಲ್ಲಿ ಯುದ್ಧ ಹೂಡುತ್ತಿವೆ. ಜರ್ಮನಿಯು ಹೋಲೆಂಡಿನಲ್ಲಿ ಕೈಗೊಂಡ ಹಂಚಿಕೆಯನ್ನು ಇಲ್ಲಿಯೂ ಪ್ರಯೋಗಿಸುತ್ತಿದೆಯಾದರೂ ಇಲ್ಲಿ ವಿಮಾನ ಬಲದಲ್ಲಿ ಜರ್ಮನಿಯ ಕೈ ಮೇಲಾಗುವಂತಿಲ್ಲ. ಬೆಲ್ಜಿಯಮಿನಲ್ಲಿರುವ ಆಂಗ್ಲೋ—ಫ್ರೆಂಚ್ ಸೈನ್ಯಗಳ ಚಲನವಲನವು ಬಹಳ ಗುಟ್ಟಾಗಿರಿಸಲ್ಪಟ್ಟಿದೆ. ಅದರಿಂದ ಅವು ವೈರಿ ವಿಮಾನಗಳ ಕಣ್ಣಿಗೆ ಸಿಕ್ಕದೆ ಮುಂದೊತ್ತುತ್ತಿವೆ ಎಂದು ತಿಳಿದುಬರುತ್ತದೆ.

ಮೆಜಿನೋ ಲೈನಿನಲ್ಲಿ ಸಿದ್ಧತೆ

ಫ್ರಾನ್ಸಿನ ಮೆಜಿನೋ ಲೈನಿನ ಮೇಲೆ ತಾ. 12ರಲ್ಲಿ ಮೊದಲು ಬಲವಾದ ಬೋಂಬು ಧಾಳಿ ನಡೆದುದರಿಂದ ಅಲ್ಲಿ ಈಗ ಫ್ರೆಂಚರು ಸರ್ವ ಸನ್ನಾಹಗಳನ್ನು ಅಣಿಮಾಡಿರುವರು. ಹೋಲೆಂಡಿನಲ್ಲಿ ತಮ್ಮ ಸೈನ್ಯವಿಳಿಸಲು ಜರ್ಮನರು ಉಪಯೋಗಿಸುತ್ತಿರುವ ವಿಮಾನ ನಿಲ್ದಾಣಗಳ ಮೇಲೆ ಬೋಂಬು ಸುರಿಸಿ ಹಾವಳಿಮಾಡಲಾಗಿದೆ. ಮಾಸ್ಟ್ರಿಚಿನ ಸೇತುವೆ, ರಸ್ತೆ, ರೈಲ್ವೇ ಲೈನುಗಳನ್ನು ಕಡಿದುಹಾಕಿ ಬೆಲ್ಜಿಯಮು ಮತ್ತು ಲಕ್ಸೆಂಬರ್ಗಿಗೆ ಮುಂದಾಗಿ ನುಗ್ಗಿದ ಪ್ರಬಲ ನಾಜೀ ಸೇನೆಗಳಿಗೆ ಹೊರಗಿನ ಸಂಬಂಧವಿಲ್ಲದಂತೆ ಮಾಡಲಾಗಿದೆ. ರೈನ್ ಮತ್ತು ಡಚ್ ಗಡಿಯ ಮಧ್ಯದ ರಸ್ತೆ, ಹಾಗೂ ರೈಲ್ವೇ ಲೈನುಗಳನ್ನು ಹಾಳುಗೆಡಹಲಾಯಿತಲ್ಲದೆ ರೈಲ್ವೇ ಸ್ಟೇಶನ್ ಮತ್ತು [illegible]ಗಳ ಮೇಲೆ ಬೋಂಬು ಚೆಲ್ಲಿ ಹಾಳುಮಾಡಲಾಗಿದೆ.

ಮುನ್ನುಗ್ಗಾಟ ಮತ್ತು ತಡೆ

ಹೋಲೆಂಡಿನ ಸೈನ್ಯಗಳು ಮಿತ್ರ ರಾಷ್ಟ್ರಗಳ ವಿಮಾನ ಬಲದ ಬೆಂಬಲದಿಂದ ಚೇತರಿಸಿಕೊಂಡು ತಡೆಯೊಡ್ಡುತ್ತಿವೆ. ಬೆಲ್ಜಿಯಮಿನಲ್ಲಿ ಮಾಸ್ಟ್ರಿಚ್ ಮತ್ತು ಕೋಂಗ್ರೆಸ್ ಕ್ಷೇತ್ರಗಳಲ್ಲಿ ನಾಜೀ ಸೇನೆ ರಭಸದಿಂದ ಮುಂದೊತ್ತುತ್ತಿದೆ. ರಸ್ತೆ, ಸೇತುವೆಗಳನ್ನು ಕಡಿದುದರಿಂದ ಜರ್ಮನಿಗೆ ದೊಡ್ಡ ತಡೆಯುಂಟಾಗಿದೆ. ಮಧ್ಯ ಬೆಲ್ಜಿಯಮಿನಲ್ಲಿ ಮಿತ್ರ ರಾಷ್ಟ್ರಗಳ ಸೇನೆಯ ಧಾ[illegible]ರ ಮುಂದುವರಿಯುತ್ತಿದೆ. ಒಂದೆಡೆಯಲ್ಲಿ ಜರ್ಮನರು ಪ್ರಬಲ ಪ್ರಯತ್ನದಿಂದ ಮುಂದೆ ಬಿದ್ದರಾದರೂ ವಿರೋಧಿಗಳ ಪ್ರತಿಹೊಡೆತ ತಿಂದು ಭಗ್ನ ಮನೋರಥರಾದರು. ಲಕ್ಸೆಂಬರ್ಗ್ ಗಡಿಯಲ್ಲಿಯೂ ಯುದ್ಧ ನಡೆಯುತ್ತಿದೆ. ಸಾರ್ ಮತ್ತು ವಾಂಟ್ ಅರಣ್ಯದ ಮಧ್ಯ ಕ್ಷೇತ್ರದಲ್ಲಿದ್ದ ಮಿತ್ರ ರಾಷ್ಟ್ರಗಳ ಸೇನೆಯ ಮೇಲೆಯೂ ಜರ್ಮನ್ ಧಾಳಿ ನಡೆಯಿತು. ಫ್ರಾನ್ಸಿನ ಉತ್ತರದ ಈಶಾನ್ಯ ಮತ್ತು ಪೂರ್ವ ದಿಕ್ಕಿನ ಕಡೆಗಳಲ್ಲಿ ಜರ್ಮನರು ವಿಶೇಷ ಚಟುವಟಿಕೆಯಲ್ಲಿರುವಂತೆ ಕಾಣುತ್ತದೆ. ಆ ಭಾಗದ ಸೈನ್ಯಗಳ ಮೇಲೆ ವಿಮಾನಧಾಳಿ ನಡೆಯಿತು. 30 ವೈರಿ ವಿಮಾನಗಳನ್ನು ಗುಂಡಿಟ್ಟು ಉರುಳಿಸಲಾಯಿತು. ತಾ. 13ರಲ್ಲಿ ಒಟ್ಟಿಗೆ 100ಕ್ಕೂ ಮಿಕ್ಕಿದ ಜರ್ಮನ್ ವಿಮಾನಗಳು ವಿರೋಧಿ ಕೊ[illegible]ಕ್ಕೆ ಬಲಿಯಾದವೆಂದು ತಿಳಿದುಬರುತ್ತದೆ.

ಲಂಡನಿಗೆ ಹೋಲೆಂಡ್ ಯುವರಾಣಿಯ ಆಗಮನ

ಹೋಲೆಂಡಿನ ಯುವರಾಣಿ ಜೂಲಿಯಾನಾರವರು ಇಬ್ಬರು ಸಣ್ಣ ಕುವರಿಯರೊಡನೆ ಲಂಡನಿಗೆ ಬಂದು ತಲುಪಿರುವರು. ಅಲ್ಲಿಯ ಡಚ್ ಜನರು ಒಂದೊಮ್ಮೆ ತಾತ್ಕಾಲಿಕ ಅನಾಹುತ ಹೋಲೆಂಡಿಗೆ ಸಂಭವಿಸಿದರೂ ತಮ್ಮ ರಾಣಿ ಸುರಕ್ಷಿತಳಾಗಿರುವಳೆಂದು ಸಂತೋಷ ಪ್ರಕಟಿಸುವರು.

ಬೊಂಬಾಯಿ

(ನಮ್ಮ ಸ್ವಂತ ಬಾತ್ಮೀದಾರರಿಂದ)

ತಾ. 4-5-1940

ನ್ಯಾಶನಲ್ ಸ್ಪಿನ್ನಿಂಗ್ ಕಂಪೆನಿಯ ಪಾಲುದಾರರ ಸಭೆಯು ಪಂಡಿತ ಜವಾಹರಲಾಲ ನೆಹರೂರವರ ಅಧ್ಯಕ್ಷತೆಯಲ್ಲಿ ಮೇ ಒಂದನೆಯ ತಾರೀಕಿನಿಂದ ನಡೆಯುತ್ತಿದೆ. ಪ್ರಾಮುಖ್ಯ ರಸಾಯನ ಶಾಸ್ತ್ರಜ್ಞರು ಸಹಾ ಹಾಜರಿರುವರಲ್ಲದೆ ಶ್ರೀ. ವಿ. ವಿ. ಗಿರಿಯವರು ಮದ್ರಾಸಿನಿಂದಲೂ ತದ-ನಯಿವರು ಸಿಂಧಿನಿಂದಲೂ, ಅದ್ವಾನಿಯವರು ಮುಂಬಯಿ ಸರಕಾರದ ಪ್ರತಿನಿಧಿಯಾಗಿಯೂ, ಎನ್. ಎಂ. ಜೋಶಿಯವರು ಟ್ರೇಡ್ ಯೂನಿಯನಿನ ಪರವಾಗಿಯೂ ಹಾಜರಿರುವರು. ಈ ಸಭೆಯು ಪ್ರತಿನಿಧಿಗಳೂ ಉಪಸಮಿತಿಯು ರಿಪೋರ್ಟುಗಳ ಕುರಿತು ಚರ್ಚಿಸಿ ಅಂತಿಮ ರಿಪೋರ್ಟನ್ನು ತಯಾರಿಸುವರೆ ಪ್ರಯತ್ನ ಮಾಡುತ್ತಿದೆ. ಒಟ್ಟಿಗೆ 29 ಉಪಸಮಿತಿಗಳಿದ್ದು ಅವುಗಳಲ್ಲಿ 18 ಸಮಿತಿಗಳು ತಮ್ಮ ರಿಪೋರ್ಟುಗಳನ್ನು ಅಧ್ಯಕ್ಷರಿಗೆ ಒಪ್ಪಿಸಿವೆ. ಇನ್ನುಳಿದವುಗಳು ಅತಿಶೀಘ್ರದಲ್ಲೇ ತಮ್ಮ ರಿಪೋರ್ಟುಗಳನ್ನು ತಯಾರಿಸುವವೆಂದು ಭರವಸೆಯಿದೆ.

ಉಡುಪಿಯ ಪ್ರಸಿದ್ಧ ರಾಷ್ಟ್ರೀಯ ವಾರಪತ್ರಿಕೆಯ ಸಂಪಾದಕ ಮತ್ತು ಪ್ರಕಾಶಕರು, ಶ್ರೀಗಳಾದ ಕೆ.ಜೆ ಬಲ್ಲಾಳರವರು ಮತ್ತು ಶ್ರೀ. ಶ್ಯಾಮರಾಯ ಶೆಟ್ಟರೊಡನೆ ಮುಂಬಯಿಗೆ ಬಂದಿರುವರು. ಇವರು ಮುಂಬಯಿಯಲ್ಲಿಯ ಕನ್ನಡಿಗರನ್ನು ಸಂದರ್ಶಿಸಿ ತಮ್ಮ 'ನವಯುಗ ಎಂಟರ್ ಪ್ರೈಸ್' ಎಂಬ ನೂತನ ಸಂಸ್ಥೆಗೆ ಪಾಲು ಕೂಡಿಸಲು ಬಂದಿರುವರು. 'ನವಯುಗ' ಪತ್ರಿಕೆಯ ಸಂಪಾದಕರಿಗೆ ಮುಂಬಯಿ ಕನ್ನಡಿಗರು ಕೊಡುತ್ತಿರುವ ಸ್ವಾಗತವೇನೂ ವಿಶೇಷವಲ್ಲ. 'ನವಯುಗ' ಸಂಪಾದಕ ಮಂಡಲವೂ ಈ ಶುಭ ಚಿಹ್ನೆಯೇ ಭವಿಷ್ಯ ಚಿಹ್ನೆ ಎಂದು ತಿಳಿದುಕೊಂಡು ಕನ್ನಡಿಗರಿಗೆ ಇನ್ನೂ ಉತ್ತಮ 'ನವಯುಗ' ವನ್ನೊದಗಿಸಿಕೊಡುವರೆಂದು ಮುಂಬಯಿ ಕನ್ನಡಿಗರ ಅಭಿಪ್ರಾಯ.

ಬೊಂಬಾಯಿ ಪ್ರೋಟೋರ್ ಅಯರ್ ಸಮಾಜ—ತಾ. 5-5-40ರಲ್ಲಿ ಜರಗಿದ ವಾರ್ಷಿಕ ಮಹಾಸಭೆಯಲ್ಲಿ 1940ನೇ ಇಸವಿಯ ಕಾರ್ಯಕಾರಿ ಮಂಡಳಿಯನ್ನು ಆರಿಸಿರುವರು. ಶ್ರೀ. ಡಾ. ವಿ. ಯಸ್. ಕೆ. ಶೆಟ್ಟಿಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

ಧರ್ಮಾರ್ಥ ಯೋಗಿಕ ಮತ್ತು ನಿಸರ್ಗ ಉಪಚಾರ—ಶ್ರೀ. ರಾಮತೀರ್ಥ ಯೋಗಾಶ್ರಮದಲ್ಲಿ ಪ್ರತಿ ಒಂದು ಆದಿತ್ಯವಾರ ಬೆಳಗ್ಗೆ ೮॥ ಗಂಟೆಯಿಂದ ೧೦ ಗಂಟೆಯ ವರೆಗೆ ಆಸ್ವಾಸ್ಥ್ಯ ರೋಗ ನಿವಾರಣೆ ಸಲುವಾಗಿ ಸೂರ್ಯಕಿರಣ ಚಿಕಿತ್ಸೆ, ಮಸಾಜ, ಮೂಗಿನ ಉಪಚಾರ, ನೀರಿನ ಚಿಕಿತ್ಸೆ, ಆ ಪ್ರಕಾರದ ಮಲನಿವಾರಣ ಕ್ರಿಯೆ, ಬಳ ಆಸನಗಳು, ಆಹಾರದ ಪ್ರಾಣಾಯಾಮಗಳನ್ನೂ ಉಚಿತವಾಗಿ ಕೊಡಲ್ಪಡುತ್ತದೆ. ಸ್ತ್ರೀಯರಿಗೆ ಸ್ತ್ರೀಯರೇ ಚಿಕಿತ್ಸೆ ಮಾಡುತ್ತಾರೆ. ಅಲ್ಲದೆ ಸ್ಥಳ ಸಹಾ ಪ್ರತ್ಯೇಕವೇ ಇದೆ ಎಂದು ಸಂಚಾಲಕರು ತಿಳಿಸುತ್ತಾರೆ.

ಮೈಸೂರು

(ನವಯುಗ ಬಾತ್ಮೀದಾರರಿಂದ)

ವಕೀಲ್ ನೋಟೀಸುಗಳಿಂದಂ ಕೊಲೆ ಮೊಕದ್ದಮೆಯು ಸ್ವಾ। ವ್ಯಾ। ಶ್ರೀ. ಆರ್. ವಿ. ಮಲ್ಲಪ್ಪನವರ ಮುಂದೆ ವಿಚಾರಣೆ ಇನ್ನೂ ಕೆಲವರ ಸಾಕ್ಷ್ಯ ತೆಗೆದುಕೊಳ್ಳಲಾಯಿತು. ಸಾಮಾರು 99 ಮಂದಿಗಳು ಪ್ರಾಸಿಕ್ಯೂಷನ ಪರ ಸಾಕ್ಷ್ಯ ವಿತ್ತ ತರುವಾಯ ಅಪರಾಧಿಗಳನ್ನು ನೀವೇನು ಹೇಳುವಿರಿ? ಎಂದು ಪ್ರಶ್ನೆ ಕೇಳು ನೆಡೆದ ನಂತರ ಶ್ರೀ. ರಾಮರೆಡ್ಡಿಗಳು ತಮ್ಮನ್ನು ಈ ಕೋರ್ಟಿನಲ್ಲಿ ಕ್ರಾಸ್ ಎಗ್ಸಾಮಿನ್ ಮಾಡಲಿಲ್ಲವಾಗಿ ಸ್ಸೆಷನ್ಸ್‌ನಲ್ಲಿ ಹೇಳಿಕೊಡುವೆವೆಂದರು. 2–3–4ನೇ ರಾಮ, ಮುನಿಗ, ಮದ್ದನು ತಮಗೇನೂ ಗೊತ್ತಿಲ್ಲವೆಂದರು. 36ನೇ ಅಪಾದಿತರಾದ ಶ್ರೀ. ಯಸ್. ಕೆ. ವೆಂಕಟರಂಗೈಂಗಾರು ಕನ್ನಡದಲ್ಲಿ ಒಂದು ಹೇಳಿಕೆಯಿತ್ತು ಈ ಮೊಕದ್ದಮೆಯಲ್ಲಿ ತಾವು ನಿರಪರಾಧಿ ಮತ್ತು ನಿರ್ದೋಷಿ ಎಂದೂ ತಾವು ಗೌರವಸ್ಥ ವಂಶದ ವಕೀಲರೆಂದೂ, ಕೋರ್ಟಿನಲ್ಲಿ ನಿಲ್ಲಿಸಿರುವುದು ಕಷ್ಟಂದೂ, ಶ್ರೀ. ರೆಡ್ಡಿಗಳ ಬಿಲ್ಲನ್ನು ಶ್ರೀ. ಮುನಿ ನಂಜಪ್ಪನವರು ಬದುಕಿರುವಾಗಲೇ ಬರೆಯಲಾಗಿತ್ತೆಂದೂ ನೊ। ಕೃಷ್ಣಮೂರ್ತಿಗಳ ಮೇಲೆ ತಮಗೆ ಯಾವ ಕರಾರು ಜಿದ್ದು ಇರಲಿಲ್ಲವೆಂದು ತಿಳಿಸಿ ಶ್ರೀ. ಕೃಷ್ಣಮೂರ್ತಿಗಳ ಕೊಲೆ ನಡೆದ ಮತ್ತು ಅದರ ಹಿಂದಿನ ದಿನ ತಮ್ಮ ಚಲನವಲನಗಳನ್ನು ಹೇಳಿದರು. ನೇತರ ಸರ್ಕಾರ ಪ। ಪ್ರಾಸಿಕ್ಯೂಟರು ವಾದ ನಡೆಸಿ ಕೆಲವರ ಸಾಕ್ಷ್ಯಗಳಿಂದ ಶ್ರೀ. ಯಸ್. ಕೆ. ವಿ. ರವರು ದೋಷಿಯಾಗಿರುತ್ತಾರೆಂದು ಇವರುಗಳ ಮೇಲೆ ಛಾರ್ಜ್ ಮಾಡಬೇಕೆಂದರು. ಕೊನೆಗೆ ಶ್ರೀ. ಯಸ್. ಕೆ. ವಿ. ಪರ ಮದ್ರಾಸ್ ಸುಪ್ರಸಿದ್ಧ ವಕೀಲ್ ಶ್ರೀ ವಿ. ವಿ. ಶ್ರೀನಿವಾಸೈಂಗಾರು ವಾದಿಸಿ ಶ್ರೀ ಯಸ್. ಕೆ. ವಿ. ಯವರ ನಿರ್ದೋಷಿಗಳೆಂದರು. ಶ್ರೀ. ಶ್ರೀನಿವಾಸೈಂಗಾರ್ಯ ವಾದವು ಗಮನಾರ್ಹವಾದುದು. ವ್ಯಾ। ಮೊಕದ್ದಮೆಯನ್ನು ಸೆಷನ್ಸ್ ಕೋರ್ಟಿನಲ್ಲಿ ವಿಚಾರಣೆಗೆ ಹಾಕಿದರು.

ಮೈಸೂರು ಸರ್ಕಾರದ ನೂತನ ರಾಜಶಾಸನ

ಮೈ। ಸಂ। ನೂತನ ರಾಜ್ಯಾಂಗ ಶಾಸನವನ್ನು ಇದೇ ಮಾಹೆ ತಾ. 10ರಲ್ಲಿ ಶ್ರೀಮನ್ ಮಹಾರಾಜ ಸರ್ಕಾರದವರು ಪ್ರಸಿದ್ಧಪಡಿಸಿದರು. ಮೈ। ರಾಜಕೀಯ ಸುಧಾರಣಾ ಸಮಿತಿ ವರದೀ ಮೇಲೆ ಹೊರಬಿದ್ದ ಆಜ್ಞೆಯಂತೆ ಈಗ ಒಂದು ನೂತನ ಆಕ್ಟನ್ನು ಶ್ರೀಮನ್ಮಹಾರಾಜರು ಒಪ್ಪಿ ವಿಧಾಯಕವಾಗಿದ್ದಾರೆ. ಇದಕ್ಕೆ ದಿ ಗವರ್ನ್‌ಮೆಂಟ್ ಓಫ್ ಮೈಸೂರು ಏಕ್ಟ್ ಎಂದು ಹೆಸರು.

ವಿಶೇಷ ವಾರ್ತೆಗಳು— ಮೈಸೂರು ಪತ್ರಿಕಾ ಶಾಸನವು ಮೇರೆಗೆ ಶಿಕ್ಷೆ ಅನುಭವಿಸುತ್ತಿದ್ದ ತುಮಕೂರಿನ ಶ್ರೀ. ಎ. ಆರ್. ಯಸ್. ಆರಾಧ್ಯರು ಜೈಲಿನಲ್ಲಿರುವಾಗ್ಯೆ ತಮ್ಮ ಸಹೋದರರಿಗೆ ಒಂದು ಪತ್ರ ಬರೆದು ಕಳುಹಿಸಲು ಜೈಲಧಿಕಾರಿಗಳು ಇದನ್ನು ಸಂಬಂಧಪಟ್ಟವರಿಗೆ ತಲುಪಿಸದೆ, ಶ್ರೀ. ಆರಾಧ್ಯರನ್ನು ಶಿಕ್ಷಿಸಿದರೆಂದೂ, ಇದನ್ನು ವಿಚಾರವಾಡಬೇಕೆಂದೂ ಶ್ರೀ. ಆರಾಧ್ಯರು ಸರ್ಕಾರ ಚೀಫ್ ಸೆಕ್ರೆಟರಿಗಳಿಗೆ ಒಂದು ಪತ್ರ ಬರೆದಿದ್ದಾರೆ. ಪ್ರಸಂಗದಲ್ಲೇ ಹೆಸರಾದ ನಡೆದು ಪ್ರಸಿದ್ಧ ಕ್ಷೌರದೋಗ ವೈದ್ಯರಾಗಿದ್ದ ಡಾ। ಚಾರಿ ಮುತ್ತಣ್ಣನವರು ಮೃತರಾದರು. ಓವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಲಿಲ್ಲವೆಂದು ಸುಮಾರು 12 ವರ್ಷ ಬಾಲಕ ವ ಜುಡ್ ಎಂಬುವನು ನೇಣು ಹಾಕಿಕೊಂಡು ಸತ್ತನು. ಔಂಧ ಸಂಸ್ಥಾನ ರಾಜರು ಮೈಸೂರು ಶ್ರೀಮನ್ ಮಹಾರಾಜರ ವರ್ಧಂತಿ ಕಾಲದಲ್ಲಿ ಅತಿಥಿಗಳಾಗಿ ಮೈಸೂರಿಗೆ ಬರುವ ಸಂಭವವಿದೆ. ಸಿಮ್ಲಾದಲ್ಲಿ ನಡೆಯಲಿರುವ ಸಂಸ್ಥಾನ ಮಂತ್ರಿಗಳ ಸಮ್ಮೇಳನಕ್ಕೆ ಮೈಸೂರು ದಿವಾನ್. ಸರ್. ಮಿರ್ಜಾರವರು ಹೋಗುವ ಸಂಭವವಿಲ್ಲವೆಂದು ಹೇಳಲಾಗಿದೆ. ಏಡೀಸ್ ಕೃಷ್ಣೇ ಅಧೀನದಲ್ಲಿರುವ ಮೈ। ರೈಲ್ವೆ ಕೆಲವು ಭಾಗಗಳನ್ನು ಮೈ। ಸರ್ಕಾರದವರು ವಾಪಾಸು ಪಡೆಯಲು ಇಂ। ಸರ್ಕಾರದೊಂದಿಗೆ ಮೈ। ಸರ್ಕಾರದವರು ವ್ಯವಹರಿಸುತ್ತಿರುವರು.

ಜಗಜಟ್ಟಿ ಗಾಮಾ ಪಾರ್ಟಿಯವರು ಪಾಟಿಯಾಲದಿಂದ ಬೆಂಗಳೂರಿಗೆ ಬಂದಿರುತ್ತಾರೆ. ಮೈ। ಸಂ। ಸ್ಥಾನ ಪ್ರೈಮರಿ ಪಾಠಶಾಲೆಗಳ ಉಪಾಧ್ಯಾಯರುಗಳ ಸಂಬಳವು ಪುನರ್ವ್ಯವಸ್ಥೆಗಾಗಿ ಸರ್ಕಾರ ಹೊಸ ಹಂಚಿಕೆ ನಡೆಯುತ್ತಿದೆಂದೂ, ಇದರ ಬಗ್ಗೆ ಶೀಘ್ರದಲ್ಲಿ ಒಂದು ಸರ್ಕಾರ ಆಜ್ಞೆ ಹೊರಬೀಳುತ್ತದೆಂದೂ ಹೇಳಲಾಗಿದೆ. ಶಿಕಾರಿಪುರದಲ್ಲಿ ಹಿಂದೂ-ಮುಸ್ಲಿಮ್ ಜೋಂಬಿ ನಡೆದು, ಅಂಗಡಿಗಳಿಗೆ ಬೆಂಕಿಹಾಕಿ ಲೂಟಿ ಜೋಂಬಿ ನಡೆದು ಗಲಭೆಯಾಯಿತೆಂದೂ ಸಶಸ್ತ್ರ ಪೋಲೀಸರು ಇವನ್ನಡಗಿಸಿ ಒಂದು ತಹಬಂದಿಗೆ ತಂದರೆ ಪೋಲೀಸ್ ಉಸ್ತುವಾರಿ ಮಾಡಲು ಈಗ ಎಲ್ಲಾ ಶಾಂತವಾಗಿದೆಂದೂ ಹೇಳಲಾಗಿದೆ. ಬಕ್ರೀದ ಹಬ್ಬದ ಸಂಬಂಧ ಗಲಭೆ ನಡೆಯಿತೆಂದೂ ವಂಬಲರ್ ವಾದಿಗಳಲ್ಲಿ ಹೇಳಲಾಗಿದೆ. ಎಳೆ ಮಗುವೊಂದನ್ನು ಯಾರೋ ದುರಾತ್ಮರು ಸಾಯಿಸಿ ಮೈಸೂರಿನಲ್ಲಿ ಒಂದು ತೊಟ್ಟಿಯಲ್ಲಿ ಬಿಸಾಡಿದ್ದರು.

ಪತ್ರವ್ಯವಹಾರ

(ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ) —ಸಂ. ನ.

ಮೂಡಬಿದ್ರೆಯ ವಸಂತೋತ್ಸವ

ಅಯ್ಯಾ ಪತ್ರಿಕಾಕರ್ತರೇ,

ಮೂಡಬಿದ್ರೆಯ ವಸಂತೋತ್ಸವವು ಬಹಳ ವಿಜೃಂಭಣೆಯಿಂದ ನಡೆಯಿತೆಂದರೆ ಅತಿಶಯೋಕ್ತಿ ಆಗಲಾರದು. ಕರ್ನಾಟಕದ ಸಾಹಿತ್ಯದ ಮುಖ್ಯಾಂಶಗಳು ಚರ್ಚಿಸಲ್ಪಟ್ಟವು. ಅದನ್ನು ಕೇಳುತ್ತಲೇ ನನ್ನ ಮನಸ್ಸಿನಲ್ಲಿ ಸ್ವಲ್ಪ ಭಾವನೆಗಳು ಹುಟ್ಟಿದವು. ಅದನ್ನು ತಮ್ಮ ವಾಚಕರ ಅವಗಾಹನೆಯ ಬಗ್ಗೆ ತಮ್ಮ ಪತ್ರದ ಮುಖಾಂತ್ರ ಇಡಬೇಕೆಂತ ಇದ್ದೇನೆ.

1. ವಸಂತೋತ್ಸವದಲ್ಲಿ ಈ ಭಾಷಣಗಳ ಮುಖ್ಯ ಸಾರಾಂಶವನ್ನಾದರೂ ಪ್ರತ್ಯೇಕವಾಗಿ ಛಾಪಿಸುವದು ಅಗತ್ಯ.

2. ಹಳ ಹಳ ಸಾಹಿತ್ಯದಿಂದ ಕರ್ನಾಟಕ ಸಾಹಿತ್ಯಕ್ಕೆ ಆದ ಪ್ರಯೋಜನ ಜೈನರ ಜಾತಕದ ವಿಷಯ ನವಜೀವನದ ವಿಷಯ ಕರ್ನಾಟಕ ಶಿರೋಮಣಿಗಳ ಅಭಿಪ್ರಾಯವನ್ನು ನಾವು ಕೇಳಿದೆವು. ಆದರೆ ಸಾಮಾನ್ಯ ಜನರ ಹಿಂದಿನ ಕರ್ನಾಟಕದಲ್ಲಿಯ ಜೀವನ ಕ್ರಮ, ಅದರಿಂದ ಸಾಹಿತ್ಯಕ್ಕೆ ಉಂಟಾದ ಪ್ರಯೋಜನ, ಆದರ ವಿಷಯ ನಮ್ಮ ಸಾಹಿತ್ಯದಲ್ಲಿರುವ ಸೂಚನೆಗಳು (ಅವು ಪದ್ಯವಾಗಿ ಸಾಹಿತ್ಯದಲ್ಲಿ ಹೆಚ್ಚಾಗಿರುವವು) ನಮ್ಮ ಹಿಂದಿನ ಪ್ರಾಚೀನ ಸಾಹಿತ್ಯ ಆ ವಿಷಯ ಏನಾದರೂ ಇರುವದೇ?

3. ಮತಾಂತರ ಉತ್ಕ್ರಾಂತಿಗಳಲ್ಲದೆ ರಾಜಕೀಯ ಉತ್ಕ್ರಾಂತಿಗಳು ಇತ್ತೇ? ಪ್ರಜಾಪ್ರಭುತ್ವದ ಈ ಆಧುನಿಕ ಸಮಯದಲ್ಲಿ ಈ ವಿಷಯ ಚರ್ಚಿಸುವದು ಅತೀ ಅಗತ್ಯ.

4. ಈಗ ಕರ್ನಾಟಕ ಸಾಹಿತ್ಯಕ್ಕೆ ಹೊಸ ಅರ್ಥದ ಆಂಗ್ಲ ಈ ಶಬ್ದಗಳು ಅನೇಕ ಸೇರಿಸುವ ಅಗತ್ಯ ಉಂಟು. ಈ ವಿಷಯ ಜಯಕರ್ನಾಟಕ ಪತ್ರಿಕೆಯು ತನ್ನ ಸೂಚನೆಯನ್ನು ಕೊಟ್ಟಿರುವದು. ಆ ರೀತಿ ಪ್ರೊಫೆಸರ್ ಶ್ರೀಕಂಠಯ್ಯನವರು ಇತರರೂ ಸೇರಿ ಅಂಗ್ಲೇಯ ಶಬ್ದಗಳ ಪೈಕಿ ಪ್ರತಿ ಶಬ್ದಕ್ಕೆ ಬಗ್ಗೆ ಸಮಗ್ರ ಕನ್ನಡಿಗರು ಏಕ ರೀತಿಯಲ್ಲಿ ಒಂದೇ ಶಬ್ದಗಳನ್ನು ಉಪಯೋಗಿಸುವ ಏರ್ಪಾಟು ಮಾಡುವರೆ ಸಾಧ್ಯ ಉಂಟೇ? ಆ ರೀತಿ ಕರ್ನಾಟಕದಲ್ಲಿ ಯಾವದಾದ ಈ ಸಂಸ್ಥೆಯುಂಟೇ? ಈ ಕೆಲವು ಆಲೋಚನೆಗಳು ನನ್ನ ಮನಸ್ಸಿನಲ್ಲಿ ಹುಟ್ಟಿದವು.

ಇತಿ ತಮ್ಮ ಕೃಪಾಭಿಲಾಷಿ,

ಕೆ. ಲಕ್ಷ್ಮಣ ಕೆಮ್ಮಾ.

ದಕ್ಷಿಣ ಕನ್ನಡ

ಇಂಡಿಯನ್ ಮ್ಯೂಚುಯಲ್ ಲೈಫ್ ಅಸೋಸಿಯೇಶನ್ ಲಿಮಿಟೆಡ್

ಕಳೆದ ವಾರದ ಸಂಚಿಕೆಯಲ್ಲಿ ಈ ಕಂಪೆನಿಯ ಜಾಹೀರಾತಿನಲ್ಲಿ 'Whole Life Rs. 10' ಎಂದು ತಪ್ಪಾಗಿ ಬಿದ್ದಿದೆ, ಅದನ್ನು 'Whole Life Rs. 18' ಎಂದು ತಿದ್ದುಕೊಳ್ಳತಕ್ಕದ್ದು.

ಬಾರಕೂರು—ಉಡುಪಿ ತಾಲೋಕಿನ ಬಾರಕೂರು ಗ್ರಾಮದ ಮತ್ತು ಅದರ ಸುತ್ತುಮುತ್ತಲಿರುವ ಸುಮಾರು 15 ಗ್ರಾಮಗಳ ಬಡರೋಗಿಗಳ ಉಪಯೋಗಕ್ಕಾಗಿ ಬಾರಕೂರಿನ ಲೋಕಲ್ ಫಂಡ್ ಆಸ್ಪತ್ರೆಯು ಕಂಪೌಂಡಿನಲ್ಲಿ 8 ಜನರಿಗೆ ಉಳಕೊಳ್ಳುವರೆ ಮತ್ತು ಮೆಟರ್ನಿಟಿಯನ್ನು ಮಾಡಿದ್ದಾರೆ.

ಸಾಧಾರಣ ರೂಪಾಯಿ 500 ಸಂಗ್ರಹವಾಗದೆಯಂದು ತಿಳಿಸಲು ಸಂತೋಷಪಡುತ್ತೇನೆ. ಕೆಲವು ಶ್ರೀಮಂತ ಮನೆತನದ 3 ಮನೆಯವರು ಸದ್ರಿ ಆಸ್ಪತ್ರೆ ಕಟ್ಟಿಸುವರೆ ಅವಶ್ಯವುಳ್ಳ ಮರಗಳನ್ನು ಕೊಡುತ್ತೇವೆಂದು ಶ್ರೀ. ಬಿ. ಸಬ್ಬಣ್ಣ ಶೆಟ್ಟಿ ಮತ್ತು ಮಾಗ್ಗನ ಕೊಪ್ಪರು ಇತ್ತಿರೆ.

ಶಿರಿಯಾರು ಸಂಕೀರ್ತನೆ—ಇಲ್ಲಿ ಹೋದ ವರ್ಷ ಪ್ರಾರಂಭಿಸಲ್ಪಟ್ಟ ಭಜನಾಸಪ್ತಾಹವು ತಾ. 13-5-40ರಲ್ಲಿ ಪ್ರಾರಂಭವಾಗಿ ತಾ. 19-5-40ರ ವರೆಗೆ ಯಾವತ್ ಭಜನಾ ಮಂಡಲಿಯವರಿಂದ ಆಚರಿಸಲ್ಪಡುತ್ತಿದೆ. ಪ್ರಥಮ ದಿನದ ಪೂಜೆಯು ಸಂಕೀರ್ತನ ಪ್ರವರ್ತಕರಲ್ಲೊಬ್ಬರಾದ ಶ್ರೀ. ಕೆ. ಅಣ್ಣಯ್ಯನವರಿಂದ ನಡೆಸಲ್ಪಟ್ಟಿತು. ಈ ಸಪ್ತಾಹವು ನಿರಂತರ ನಡೆಯಲಿದೆ. ಎಲ್ಲರಿಗೂ ಸ್ವಾಗತವಿದೆ.

ಮುಂಬಯಿ ಕನ್ನಡಿಗರಿಗೆ ಅಪೂರ್ವ ಸುಸಂಧಿ—ಶ್ರೀಕೃಷ್ಣಪುರದಲ್ಲಿ ಎರಡು ವರ್ಷಗಳ ಕಾಲ ಅತಿರ್ಕ ಪರ್ಯಾಯವನ್ನು ನಡಿಸಿ ಜಯಜಯಕ್ಕೆ ಪಾತ್ರರಾದ ಶ್ರೀ. ಫಲಿಮಾರು ಮಠದ ಶ್ರೀ ರಘುಮಾನ್ಯತೀರ್ಥ ಶ್ರೀ. ಪಾದಂಗಳವರು ಶಿಷ್ಯಕ್ಕಂದಿರ ಆಮಂತ್ರಣ ಮೇರೆಗೆ ಬೊಂಬಾಯಿಯಲ್ಲಿ ಸತ್ಯದೇ ಚಾತುರ್ಮಾಸ್ಯ ಕುಳಿತುಕೊಳ್ಳುವರು. ದಕ್ಷಿಣ ಕನ್ನಡ ಜಿಲ್ಲೆಯ ಕನ್ನಡಿಗ ಬಾಂಧವರೂ ಇತರ ಮಹಾಶಯರುಗಳೂ ಶ್ರೀಗಳವರಿಗೆ ಸುಸ್ವಾಗತವನ್ನಿತ್ತು ಶ್ರೀ ಕೃಷ್ಣನ ಪರಮಾನುಗ್ರಹಕ್ಕೆ ಪಾತ್ರರಾಗುವರೆಂದು ಹಾರೈಸುತ್ತೇವೆ.

ನೋಟೀಸು

ಉಡುಪಿ ತಾಲೂಕು ಹೆರಂಗ್ರಾಮದಲ್ಲಿರುವ ಕಟ್ಟಬೆಟ್ಟು ಲಕ್ಷ್ಮಿ ಹೆಗ್ಗಡ್ತಿಯವರ ಮಗಳು ಸೀತ್ರ ಹೆಗ್ಗಡ್ತಿಯು ಸರ್ವ ಜನರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

ನನ್ನ ತಾಯಿ ಲಕ್ಷ್ಮಿ ಹೆಗ್ಗಡ್ತಿಯವರು ಮೃತಪಟ್ಟಂದಿನಿಂದ ನಾನು ಕುಟುಂಬದ ಯಜಮಾನತಿ ಪಟ್ಟದಾರತಿ ವ ಅಧಿಕಾರವುಳ್ಳವಳಾಗಿ ಇರುತ್ತೇನೆ. ಕುಟುಂಬದ ಆಸ್ತಿಗಳ ಬಾಬ್ತು ವಕ್ಕಲುಗಳಿಂದ ಎದುರು ನೂರಾರುಗಳನ್ನು ವಸೂಲು ಮಾಡಿಕೊಂಡು ಕೆಲವು ಮೂಡ್ಲಿನ ಗೇಣಿ ವಸೂಲು ಮಾಡುತ್ತೇನೆ. ನನ್ನ ಆಶಕ್ತತೆಯಲ್ಲಿ ನನ್ನ ತಂದೆ ರಾಮಯ್ಯ ಹೆಗ್ಗಡೆಯವರು ಸಹಾಯಕರಾಗಿರುವದರಿಂದ ನನ್ನ ಬಾಬ್ತು ಯಾವತ್ತೂ ರಿಕಾರ್ಡು ದಸ್ತಾವೇಜು ವಗೈರೆಗಳನ್ನು ನನ್ನ ಹೆತ್ತಬೆಟ್ಟಿನ ಗುರುತು ಉಳ್ಳದೆ ನನ್ನ ತಂದೆ ರಾಮಯ್ಯ ಹೆಗ್ಗಡೆಯವರ ಸಾಕ್ಷಿ ಹಾಕಲ್ಪಟ್ಟು ಆಗಬೇಕಾಗಿರುತ್ತದೆ, ಈ ಈ ಕುರಿತು ತಾ. 29-12-39ರಲ್ಲಿ ನವಯುಗ ವಾರಪತ್ರಿಕೆಯಲ್ಲಿ ಪ್ರಕಟಿಸಿರುತ್ತೇನೆ. ಈ ತನ್ಮಧ್ಯೆ ನನ್ನ ತಮ್ಮ ದಾಸಯ್ಯ ಹೆಗ್ಗಡೆಯು ನನ್ನ ವಿರೋಧಿಯಾದ ನನ್ನ ತಂಗಿ ಚಂದ್ರಭಾಗಿ ಹೆಗ್ಗಡ್ತಿಯ ಒಳಸಂಚಿಗೆ ಸೇರಿ ತಾ. 23-8-39ರಲ್ಲಿ ಮೋಸದಿಂದಲೂ ಬಲಾತ್ಕಾರದಿಂದಲೂ ನನ್ನ ಮನೆಯಿಂದ ನನ್ನನ್ನು ಕೊಂಡು ಹೋಗಿ ಬಾರಕೂರ ವ ಉಡುಪಿ ತಾಲೂಕಿನ ಬೇರೆ ಬೇರೆ ಕಡೆಗಳಲ್ಲಿ ಬಂಧನದಲ್ಲಿ ಅಡಗಿಸಿಟ್ಟಿದ್ದರು. ತಾ. 10-5-40ರಲ್ಲಿ ಕುಂದಾಪುರ ಪೋಲಿಸ್ ಸಬ್ ಇನ್ಸ್ಪೆಕ್ಟರ ಸಹಾಯದಿಂದ ನಾನು ಬಿಡುಗಡೆ ಹೊಂದಿ ಈಗ ಪುನಃ ನನ್ನ ತಂದೆ ಸದ್ರಿ ರಾಮಯ್ಯ ಹೆಗ್ಗಡೆರ ಜೊತೆಯಲ್ಲಿ ಜೀವಿಸುತ್ತೇನೆ ವ ಅವರ ಸಹಾಯದಿಂದ ನಾನೇ ಕುಟುಂಬದ ಆಡಳಿತ ನೋಡುತ್ತೇನೆ. ಸದ್ರಿ ದಾಸಯ್ಯ ಹೆಗ್ಗಡೆ ವ ಚಂದ್ರಭಾಗಿ ಹೆಗ್ಗಡ್ತಿಯಾಗಲೀ ಸದ್ರಿ ಆಡಳಿತೆಯಲ್ಲಿ ಪ್ರವೇಶಿಸುವಲ್ಲಿ ಯಾವ ತರದ ಹಕ್ಕೂ ಇರುವದಿಲ್ಲ. ನಾನು ಬಂಧನದಲ್ಲಿರುವಾಗ ಬಲಾತ್ಕಾರದಿಂದ ಅನೇಕ ಕಾಗದಗಳಿಗೆ ಸದ್ರಿ ದಾಸ ಹೆಗ್ಗಡೆ ನನ್ನ ದಸ್ಕತನ್ನು ವ ಹೆಬ್ಬೆಟ್ಟುಗಳನ್ನು ಹಾಕಿಸಿರುತ್ತಾರೆ. ನಾನು ಸ್ವಂತ ಇಚ್ಛೆಯಿಂದ ಯಾವ ಕಾಗದಕ್ಕಾದರೂ ಹೆಬ್ಬೆಟ್ಟನ್ನು ಹಾಕಲಿಲ್ಲ. ಅಂತಹ ಕಾಗದಗಳನ್ನು ಉಪಯೋಗಿಸಿಕೊಂಡು ಸದ್ರಿ ದಾಸ ಹೆಗ್ಗಡೆ ವ ಚಂದ್ರಭಾಗಿ ಹೆಗ್ಗಡ್ತಿ ಕೊಡಮಾಡಿಸಿರಬಹುದಾದ ಯಾವತ್ತು ರಿಕಾರ್ಡುಗಳು ನಾನು ಒಪ್ಪತಕ್ಕದ್ದಲ್ಲ, ಯಾರೂ ನಂಬತಕ್ಕದ್ದಲ್ಲ.

● ಈ ಎಡಹೆಬ್ಬೆಟ್ಟಿನ ಗುರುತು ಸೀತ್ರ ಹೆಗ್ಗಡ್ತಿ ರುಜು.

ರಾಮಯ್ಯ ಹೆಗ್ಡೆ ಸಾಕ್ಷಿ.

ತಾ. 12-5-'40, ಹೆರಂಗ.

ಸ್ಥಾಪನೆ: 1926

18 ಬಲ್ಮಠ ರಸ್ತೆ, ಮಂಗಳೂರು,

ಮೊಹರುಗಳು ಅಧಿಕಾರಿಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್ಸಿಲ್ ಪ್ಲೇಟುಗಳು ಪಿತಾಳೆಯ ಬಿಲ್ಲೆ, ನೇಮ್‌ಪ್ಲೇಟು ಸೀಲು ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co., 18 Balmat Road, MANGALORE.

Approved firm by the Govt. of Mysore. Certified by the Agent of the Govt. of India in Ceylon

(೬೫ ಪುಟದಿಂದ ಮುಂದರಿಸಿದ್ದು)

ದಕ್ಕೆ ಪ್ರದರ್ಶನಗಳಿಲ್ಲ. ಆದರೆ ಶಬ್ದ ಕೇಳಿದೊಡನೆ ಹಾರಾಗಿ ಬಂದು ಹಡಗಿಗೆ ಬಡಿಯುವ ಉದ್ದ ಮಿಶಾಪಿಶಾಚಾರದ ತೋಟಿಯೊಂದು ಹೇಗೋ ಹಾಳಾಗಿಬಂದುದು ಬ್ರಿಟಿಷರ ಸಮುದ್ರದಲ್ಲಿ ಸಿಕ್ಕಿರುವದಂತೆ. ಅದರ ಕುರಿತು ಶೋಧನೆ ನಡಿಸಲು ಇಂಗ್ಲಿಷ ತಜ್ಞರು ಮೇಲಕ್ಕೆ ತಂದು ಪರೀಕ್ಷಿಸುತ್ತಿದ್ದಾರೆ. ಇದರ ಹಿಂಭಾಗಕ್ಕೆ ಸರಿಗೆ ಸುತ್ತು ಗಟ್ಟಿದೆ. ನೀರಡಿಯಲ್ಲಿ ಅದು ಅಡಗಿರುವ ವೇಳೆ ಹಡಗವೊಂದು ಬಂತೆಂದು ಭಾವಿಸಿಕೊಳ್ಳಿ. ಅದು ಬರುವ ಶಬ್ದದ ಅಲೆಗಳನ್ನು ಹೀರಿಕೊಳ್ಳುವ ಕಿವಿಯೊಂದು ತೋಟಿಯ ನಡು ಪ್ರದೇಶದ ಮೇಲ್ಭಾಗದಲ್ಲಿರುತ್ತದೆ. ಆ ಕಿವಿಗೂ ತೋಟಿಯ ಹಿಂಗಡೆಯಲ್ಲಿ ಒಳಗಡೆಯಿರುವ ಚಕ್ರಗಳಿಗೂ ಸಂಬಂಧವಿರುತ್ತದೆ. ಹಡಗು ಬರುವ ಶಬ್ದದಲೆಗಳು ಕಿವಿಯ ಮೂಲಕ ಪ್ರವೇಶಿಸಿ ಚಕ್ರವನ್ನು ಗರ್ರನೆ ತಿರುಗಿಸುತ್ತವೆ. ಆ ಚಕ್ರದ ಸಂಬಂಧವಿಟ್ಟುಕೊಂಡಿರುವ ಒಳಭಾಗದ ಯಂತ್ರಗಳೆಲ್ಲಾ ಒಂದೇಸವನೆ ಚಾಲೂಗುವ ರಭಸಕ್ಕೆ ತೋಟಿಯು ಹಿಂಭಾಗದ ಸರಿಗೆಯನ್ನು ಕಡಿದುಕೊಂಡು ಸರ್ರನೆ ಹೋಗಿ ಶಬ್ದ ಬರುವಲ್ಲಿಗೇ ಬಡಿಯುತ್ತದೆ-ಹುಲ್ಲೆಯನ್ನು ಕಂಡ ಬಂಧಿತ ವ್ಯಾಘ್ರ ಹಗ್ಗ ಕಡಿದುಕೊಂಡು ಹಾರುವಂತೆ! ಇದಿರುವಾದಿಯನ್ನು ತೋರಿಸಿಕೊಟ್ಟು, ಕೊಡಬೇಕಾದ ಆಜ್ಞಾಪನೆಗಳನ್ನೆಲ್ಲಾ ಕೊಟ್ಟು 'ಹೊಡಿ! ಹಾಕಿದ್ದೇನೆ!' ಎಂದು ಬೆನ್ನು ತಟ್ಟಿಸಿದರೂ ಹೋಗಿ ಹೊಡೆಯುವ ಚಮತ್ಕಾರ ಎಲ್ಲಾ ಮನುಷ್ಯರಿಗೆ ಬರುವದಿಲ್ಲ. ಈ ತೋಟಿಗಳು ತಾವಾಗಿ ಮಾಡುವ ಕಾರ್ಬಾರನ್ನು ಕಂಡಿರಾ!

ಇವುಗಳನ್ನು ಗೆಲ್ಲುವ ಬಗೆ ಹೇಗೆ?

ಸರಿ. ನೀವು ಮೈನ್‌ಗಳ ವೈವಿಧ್ಯವನ್ನೆಲ್ಲಾ ತಿಳಿದಿರಿ. ಇವುಗಳನ್ನು ಗೆಲ್ಲುವ ಉಪಾಯವೇನಾದರೂ ಇದೆಯೆ? ಅಥವಾ ಅವುಗಳ ಕಡೆಗೆ ಅಸ್ಪೃಶ್ಯತಾ ಧರ್ಮಬುದ್ಧಿ ಪ್ರದರ್ಶಿಸಿ ದೂರವಾಗಿರುವದೊಂದೇ ದಾರಿಯೇ? ತಮ್ಮ ಕುಲಕ್ಕೆ ಆತುರಪ್ರಾಯರಾಗಿರುವ ಈ ತೋಟಿಗಳಿಗೆ ಪ್ರತೀಕಾರಮಾಡಲು ಹಡಗುಗಳಿಗೆಷ್ಟುವರೂ ಸಾಧ್ಯವಿದೆಯೆ? ಎಂಬುದನ್ನು ಈಗ ವಿಚಾರಿಸೋಣ. ಮೈನ್ ಬಡಿದರೂ ಪೆಟ್ಟಾಗದಂತಹ ಹಡಗ ರಕ್ಷಣಾ ಕವಚವಾವುದೂ ಈ ವರೆಗೆ ಕಂಡುಹಿಡಿಯಲ್ಪಟ್ಟಿಲ್ಲ. ಮೂರಿಂಗ್ ಕೇಬ್‌ಲ್ ಎಂದು ಕರೆಯಲ್ಪಡುವ ಸರಿಗೆಯಿರುವ ತೋಟಿಗಳನ್ನು ಗುಡಿಸಿತೆಗೆಯುವ ಉಪಾಯವೊಂದು ಮಾತ್ರ ಈಗ ಜಾರಿಯಲ್ಲಿದೆ. ಆ ಕಾರ್ಯದಲ್ಲಿ ಕೂಡ ಬಹಳ ಜಾಗರೂಕತೆಯಿರಬೇಕಾಗುತ್ತದೆ. ಎರಡು ಹಡಗುಗಳು ಮಧ್ಯದಲ್ಲೊಂದು ಕತ್ತರಿಯಿರುವ ಉದ್ದ ಹಗ್ಗವೊಂದರ ಎರಡು ತುದಿಗಳನ್ನು ಹಿಡಿದುಕೊಂಡು ತೋಟಿ ಬಿದ್ದ ಕ್ಷೇತ್ರಕ್ಕೆ ಬರುತ್ತವೆ. ಎರಡು ಬದಿಯಲ್ಲಿ ಹಡಗದ್ವಯವು ತಾವು ಹಿಡಿದುಕೊಂಡ ಒಂದೇ ಹಗ್ಗವನ್ನು ನೀರೊಳಗೆಳೆಯುತ್ತಾಹೋದಂತೆ ತೋಟಿಯ ಕೆಳಭಾಗದ ತಂತಿಯು ಆ ಹಗ್ಗದ ನಡುವೆ ಸಿಕ್ಕಿಕೊಂಡು ಮಧ್ಯದಲ್ಲಿರುವ ಕತ್ತರಿಗೆ ತಾಗಿ ಕತ್ತರಿಸಲ್ಪಡುತ್ತದೆ. ದೃಷ್ಟಾಂತಕ್ಕಾಗಿ ಕೆರೆಯಲ್ಲೊಂದು ತಾವರೆಯಿದೆಯೆಂದಿಟ್ಟುಕೊಳ್ಳಿ. ನಿಮ್ಮಲ್ಲಿಬ್ಬರು ಹಗ್ಗಕ್ಕೊಂದು ಕೊಕ್ಕಸಿಕ್ಕಿಸಿ, ಎರಡು ತುದಿಗಳನ್ನು ಇಬ್ಬರು ಹಿಡಿದುಕೊಂಡು ಅದನ್ನು ತಾವರೆಯ ದಂಟಿನ ಆ ಬದಿಗೆ ಹಾಕಿ ಎರಡು ಬದಿಗಳಿಂದಲೂ ಎಳೆದರೆ ಹೇಗಾಗುವದು? ಮೊದಲಾಗಿ ತಾವರೆಯ ದಂಟು ಹಗ್ಗಕ್ಕೆ ಸಿಕ್ಕಿಕೊಳ್ಳುವದು; ಮತ್ತೂ ಎಳೆದರೆ ನಿಮ್ಮ ಹಗ್ಗದಲ್ಲಿರುವ ಕೊಕ್ಕಿಗೆ ಸಿಕ್ಕಿ ದಂಟು ತುಂಡಾಗಿಹೋಗುವದು. ಅದೇ ರೀತಿ ಮೈನ್‌ನ ಕೆಳಭಾಗದ ಸರಿಗೆಯು ಹಡಗುಗಳ ಮಧ್ಯದ ಹಗ್ಗದ ವಿಮಾನಾಕೃತಿಯ ಕೊಕ್ಕೆಯು ಕಡಿಯುವ ಭಾಗಕ್ಕೆ ಸಿಕ್ಕಿದೊಡನೆ ತುಂಡರಿಸಲ್ಪಡುವದು. ಈ ರೀತಿ ಆಧಾರ ತಪ್ಪಿದ ತೋಟಿ ನೀರಿನ ಮೇಲ್ಭಾಗದಲ್ಲಿ ಕಾಣಿಸಿಕೊಂಡೊಡನೆಯೇ ಹಡಗದಲ್ಲಿದ್ದವರು ಅದನ್ನು ಗುಂಡುಹೊಡೆದು ಧ್ವಂಸಮಾಡುವರು. ಕೆಳಭಾಗದ ಸರಿಗೆಯಿಲ್ಲದ ಮೈನ್‌ಗಳನ್ನು ಈ ರೀತಿಯಲ್ಲಿ ಗೆಲ್ಲುವದಕ್ಕೂ ಸಾಧ್ಯವಿಲ್ಲ.

ಮೈನ್ ಚೆಲ್ಲುವ ವಿಧಾನ

ಹೀಗೆ ಮುಟ್ಟಿದೊಡನೆ ಸಿಡಿದು ಬೀಳುವ ತೋಟಿಗಳನ್ನು ಸಮುದ್ರದೊಳಕ್ಕೆ ಇಳಿಯಬಿಡುವಾಗ ಅವು ಸ್ಫೋಟವಾಗುವದಿಲ್ಲವೆ? ಎಂದು ನೀವು ಪ್ರಶ್ನಿಸಬಹುದು. ಅದಕ್ಕೂ ಉಪಾಯವಿದೆ. ಮೈನ್‌ಗಳನ್ನು ಹಡಗುಗಳ ಮೂಲಕ, ಸಬ್‌ಮೆರಿನುಗಳಿಂದ ಮತ್ತು ವಿಮಾನಗಳಿಂದ ಹಾಕಲಿಕ್ಕಾಗುತ್ತದೆ. ಹಾಕುವಾಗ ಅವುಗಳಿಗೆ ಒಂದಿಷ್ಟು ಪೆಟ್ಟು ಆಗದಂತಹ ಹಂಚಿಕೆಗಳಿವೆ. ಹಡಗುಗಳ ಹಿಂಭಾಗವನ್ನು ವಿದ್ಯುಚ್ಛಕ್ತಿ ಪ್ರೇರಿತವಲ್ಲದ ಲೋಹಗಳಿಂದ ಮುಚ್ಚಿ ಅವುಗಳಲ್ಲಿ ಮೈನ್‌ಗಳನ್ನು ತುಂಬಿಸಿ, ಮೈನ ಗಳನ್ನುದ್ರೇಕಿಸದಂತಹ ಉಪಕರಣಗಳಿಂದ ಅವುಗಳನ್ನು ಸಮುದ್ರದೊಳಕ್ಕೆ ಇಳಿಯಬಿಡುತ್ತಾರೆ. ವಿಮಾನಗಳಲ್ಲಿಯೂ ಹಾಗೆಯೇ ತುಂಬಿಸಿಕೊಂಡು ಬಂದು ಅತಿ ತಗ್ಗಿನಲ್ಲಿ ಹಾರಾಡಿ ಗಾಳಿ ಕೊಡೆ (ಪೆರಾಚೂಟ್ಸ್)ಗಳ ಮೂಲಕ ಮೈನ್‌ಗಳನ್ನು ಸಮುದ್ರದೊಳಕ್ಕೆ ಇಳಿಸಲಾಗುತ್ತದೆ. ಕೆಲಕಾಲಕ್ಕೆ ಹಿಂದೆ—ಒಂದೇ ಸವನೆ ಬ್ರಿಟಿಷ್ ಹಡಗುಗಳು ತೋಟಿಗಳಿಗೆ ಬಲಿಯಾಗುವ ಸ್ವಲ್ಪ ದಿನಗಳ ಮೊದಲು—ಜರ್ಮನ್ ವಿಮಾನಗಳು ಬ್ರಿಟಿಷರ ಸಮುದ್ರದಲ್ಲಿ ಯಾವ ಹಾನಿಯನ್ನೂ ಮಾಡದೆ

ಫೀಲ್ಡ್ ಮಾರ್ಶಲ್ ಹರ್ಮಾನ್ ಗೋರಿಂಗ್

ಬಹು ತಗ್ಗಿನಲ್ಲಿ ಹಾರಾಡಿದವೆಂಬ ವಾರ್ತೆ ಪ್ರಕಟವಾಗಿತ್ತು. ಆ ವಿಮಾನಗಳು ಗಾಳಿಕೊಡೆಗಳ ಮೂಲಕ ಮೈನ್‌ಗಳನ್ನಿಟ್ಟು ಹೋದುದೇ ಆ ವೇಳೆಯ ಹಡಗು ವಿನಾಶಕ್ಕೆ ಕಾರಣ. ಮತ್ತೊಂದು ಜಾತಿಯ ಮೈನ್‌ಗಳನ್ನು ಸಬ್‌ಮೆರಿನುಗಳ ಮೂಲಕ ಹಾಕಲಾಗುತ್ತದೆ. ತೋಟಿಗಳನ್ನು ತುಂಬಿಸಿಕೊಂಡು ಬಂದು ಸಬ್‌ಮೆರಿನುಗಳು ಹಿಂಭಾಗದ ದ್ವಾರದಿಂದ ಒಂದೊಂದನ್ನೇ ಹೊರಚೆಲ್ಲುತ್ತಾ ಹೋಗಿಬಿಡುವವು. ಕಾಯಿ ತುಂಬಿಸಿದ ಚೀಲಕ್ಕೆ ಹಿಂದಿನಿಂದ ತೂತು ಮಾಡಿ ಆ ಚೀಲವನ್ನು ಮುಂದಕ್ಕೆಳೆಯುತ್ತಾ ಹೋದರೆ ಹಿಂಭಾಗದಿಂದ ಒಂದೊಂದೇ ಕಾಯಿ ಹೊರಬೀಳುವದಿಲ್ಲವೇ-ಹಾಗೆ! ಇಲ್ಲಿ ಒಂದು ಪ್ರಶ್ನೆಯೇಳಬಹುದು. ಹೀಗೆ ಸಬ್

ಮೈನ ಹೊರಚೆಲ್ಲುವಾಗ ಸಬ್‌ಮೆರಿನುಗಳಲ್ಲೇ ಮೈನ್ ಒಡೆಯುವದಿಲ್ಲವೆ? ಇಲ್ಲ. ಆ ಮೈನ್‌ಗಳ ರಚನೆ ಅಷ್ಟು ವಿಚಿತ್ರ ರೀತಿಯಲ್ಲಾಗಿದೆ. ಹೀಗೆ ಸಬ್‌ಮೆರಿನ್ ಗರ್ಭಪಾತವಾಗುವ ಮೈನ್‌ಗಳೊಳಗಿನ ಗ್ಲಾಸಿನ ಶೀಶೆಯಲ್ಲೊಂದು ವಿಚಿತ್ರ ದ್ರವವಿದೆ. ಮೈನ್ ಸ್ಫೋಟಕವಾಗಬೇಕಾದರೆ ಆ ದ್ರವ ಸರಿಯಾಗಿ ಕರಗಬೇಕು; ದ್ರವ ಕರಗಬೇಕಾದರೆ ಅದಕ್ಕೆ ಇಪ್ಪತ್ತು ಮಿನಿಟುಗಳ ವರೆಗೆ ಉಪ್ಪು ನೀರು ಸೇರಬೇಕು. ಉಪ್ಪು ನೀರು ಸೇರುವಂತೆ ಚಿಕ್ಕದೊಂದು ರಂಧ್ರವಿದೆ. ಆ ಮೊದಲು ಅದು ನಿರಪಾಯಕಾರಿ. ಮೈನಿನ ಒಳಗೆ ರಂಧ್ರ ಮೂಲಕ ಉಪ್ಪು ನೀರು ಸೇರಿ ಅದು ಸ್ಫೋಟಕ್ಕೆ ಸಿದ್ಧವಾಗುವ ಮೊದಲೇ, ಹೊರ ತಳ್ಳಿದ ಸಬ್‌ಮೆರಿನ್ ಹೊರಟುಹೋಗುತ್ತದೆ-ದುಷ್ಟ ಪುತ್ರನನ್ನು ಹೆತ್ತಗಲಿದ ಮಾತೆಯಂತೆ!

ಇಷ್ಟು ಮೈನ್‌ಗಳ ಒಳಚರಿತ್ರೆಯಾಯಿತು. ಇಂದಿನ ಯುದ್ಧದಲ್ಲಿ ಮೈನ್‌ಗಳಷ್ಟು ಆಶ್ಚರ್ಯಕರವೂ ಅಪಾಯಕಾರಿಯೂ ಆದ ಮತ್ತೊಂದು ಯುದ್ಧ ಸಾಧನ ಈ ವರೆಗೆ ಬೆಳಕಿಗೆ ಬಂದಿಲ್ಲ. ಯಾವುದಕ್ಕೂ ಅಳುಕದ ಕಠೋರ ಹೃದಯದ ಕುಟಿಲರು ಮಾತಾಡುವಾಗ 'ಅದಕ್ಕೆ ಮೈನ್ ಬೀಳಲಿ!' ಎಂದು ಶಪಿಸುವಂತಾಗುವ ಕಾಲ ಬಂದಿದೆ. ಮೈನಿನ ಪ್ರತಾಪ ಅಷ್ಟೂ ಜಗದ್ವ್ಯಾಪಿಯಾಗಿದೆ. ಕಂಬಮುಹಿವಿ!

ಮಗು—ಅಪ್ಪಾ ನೀನು ದಿವಸಾಗಲೂ ಕೆಲಸಕ್ಕೆ ಹೋಗುವದೇಕೆ?

ತಂದೆ—ದುಡ್ಡು ಸಂಪಾದಿಸುವದಕ್ಕೆ

ಮಗು—ದುಡ್ಡು ಸಂಪಾದಿಸುವದೇಕೆ?

ತಂದೆ—ನಿನಗೆ ತಿಂಡಿ ತೆಗೆದುಕೊಳ್ಳುವದಕ್ಕೆ

ಮಗು—ಹಾಗಾದರೆ ನನ್ನೊಡನೆ ಆಡಲಿಕ್ಕೆ ಬಾ ಅಪ್ಪಾ. ನನಗೀಗ ಹಸಿವೆಯಾಗುವದಿಲ್ಲ.

ಮೆಜಿಸ್ಟ್ರೇಟ್—ಅವ ಕುಡಿದಿದ್ದನೆಂದು ಹೇಗೆ ತಿಳಿದಿ?

ಪೋಲಿಸ್—ಅವ ನನ್ನ ಹತ್ತಿರ ಬಂದು ಬೈದ.

ONE REASON.

Love does much, but in this materialistic world, money does more. Save therefore for the sake of those you love.

RESOURCES OF A CRORE } ESTD. 1906. **Canara Bank Limited.**

ಅಂತರಂಗದ
CINEMA SPECIAL NUMBER
ಅಥವಾ
" ಚಲಚ್ಚಿತ್ರಾಂಕ "
ತಾ. 30—6—40ಕ್ಕೆ ಹೊರಬೀಳಲಿದೆ.
ಜಾಹೀರಾತಿಗೆ ಉತ್ತಮಸಾಧನ ದರಗಳಿಗೆ ಬರೆಯಿರಿ.
Advertisement Manager,
Antaranga, Udipi.

ಇದೊಂದು ಕನಸು

ಲೇಖಕರು:-ಶ್ರೀ ಕೆ ಎಲ್. ಕುಡ್ವ, ವಕೀಲ್, ಕಾರ್ಕಳ.

1939ನೇ ಇಸವಿ ನವಂಬರ ತಾ. 29ರಲ್ಲು ಇಂಗ್ಲೆಂಡಿನ ಮಂತ್ರಿಗಳ ಮನ್ಯವನು ಪಾರ್ಲಿಮೆಂಟಿನಲ್ಲಿ ಭಾಷಣವನ್ನು ಮಾಡುವಾಗ್ಗೆ ಬ್ರಿಟಿಷರಿಗೆ ಯುದ್ಧ ಸಂಬಂಧ ವರುಷಕ್ಕೆ 3100/- ಮಿಲಿಯ ಪವನು ಖರ್ಚಾಗಲಿಕ್ಕೆಂತಲೂ, ಅಂದರೆ 3600 ಕೋಟಿ ರೂಪಾಯಿ ಕ್ಕೂ ಮಿಕ್ಕಂತ ಅಭಿಪ್ರಾಯಪಟ್ಟರು. ಸಾಧಾರಣವಾಗಿ ದಿವಸ 1ಕ್ಕೆ 9½ ಕೋಟಿ ರೂಪಾಯಿ ಪ್ರಕಾರ ಆಂಗ್ಲೇಯರು ಖರ್ಚುಮಾಡಬೇಕಾದರೆ ಜರ್ಮನರ ಫ್ರೆಂಚರ ಮತ್ತು ಇತರ ರಾಜ್ಯದವರ ಖರ್ಚು ಒಟ್ಟಾರೆ ಇದಕ್ಕಿಂತ ಕಡಿಮೆಯಾಗಲಾರದು. ಈ ಖರ್ಚು ಪಾಶ್ಚಾತ್ಯ ರಾಜ್ಯಗಳಲ್ಲಿ. ಅತ್ತ ಮಿಲಿಯ ಚೀನಾದೇಶದ ಜನರೂ ಜಪಾನಿಯವರೂ ಯುದ್ಧ ಮಾಡುತ್ತಲಿರುವರು ಎಲ್ಲಿಯೂ ನಾಶ ಉತ್ಪ್ರಾಂತಿ, ನಮ್ಮ ನಾಗರಿಕತೆಯು ಏನೂ ಪ್ರಯೋಜನವಾಗುವದಿಲ್ಲ ಎಲ್ಲಿಯೂ ಮನುಷ್ಯನ ದುರ್ಗುಣಗಳೇ ವ್ಯಕ್ತವಾಗುವವು. ರಶ್ಯದವರು ತಮ್ಮ ರಾಜ್ಯದ ಸಂಸ್ಥೆಯ ರಕ್ಷಣೆಗೆ ಎಂಬದಾಗಿ ಹೇಳಿ ವಿನಾಕಾರಣವಾಗಿ Finland ಪ್ರವೇಶ ಮಾಡಿರುವರು

ಭೂಲೋಕದ ಜನರಿಗೆ ಹುಚ್ಚು ತಾಗಿಯದೋ?

ಯುದ್ಧವು ಸಮಾಪ್ತಿಯಾದ ನಂತರ ಹೊಸ ಸಂಸ್ಕೃತಿಯೂ ಹೊಸ ನಾಗರಿಕತನವೂ ಹುಟ್ಟೀತೇ?

ಪಾರ್ಲಿಮೆಂಟಿನ ಲೇಬರ ಮುಖಂಡರಾದ Atlee ಎಂಬವರ ಯುದ್ಧದ ಗುರಿಯ ವಿಷಯ ತಮ್ಮ ಅಭಿಪ್ರಾಯವನ್ನು ಪ್ರಕಟಿಸಿರುವರು,

"ರಾಜಕೀಯ ಆದನಂತರ ಮುಂದಿನ ಕರ್ತವ್ಯಗಳು ಒಂದು ದೇಶಕ್ಕೆ ಸಂಬಂಧಪಟ್ಟಂಗಳು ಮಾತ್ರವಲ್ಲ ಭೂಲೋಕದ ಜನತೆಯು ಮುಂದಿನ ಮನ್ನಣೆಯ ವಿಷಯ ಎಲ್ಲರೂ ಆಲೋಚನೆ ಮಾಡಬೇಕು. ಯುರೋಪರಾಜ್ಯದ ಜನರ ದೃಷ್ಟಿಯಿಂದ ಮಾತ್ರ ನಾವು ಆಲೋಚನೆ ಮಾಡಬಾರದು. ರಾಜಕೀಯ ಕಾರ್ಯಗಳಲ್ಲಿ ಯುದ್ಧ ಮಾಡುವರೂ ತಟಸ್ಥರೂ ಸಮಭಾಗವನ್ನು ವಹಿಸಿ ಇವರ ಪರಸ್ಪರ ಸಹಾಯದಿಂದಲೂ ಒಮ್ಮತದಿಂದಲೂ ಸಹಾಯದಿಂದಲೂ ರಾಜಕೀಯ ಇತ್ಯರ್ಥವಾಗಬೇಕು. ಎಲ್ಲ ಜನಾಂಗಗಳಿಗೂ ಮುನ್ನಡೆಗೆ ಸಮ ಹಕ್ಕಿರಬೇಕು, ಬಲಾತ್ಕಾರವು ಯಾವದನ್ನೂ ಇತ್ಯರ್ಥ ಮಾಡದು, ಬಲಾತ್ಕಾರವನ್ನು ಜನಾಂಗಗಳು ಬಿಡಬೇಕು; ಅಲ್ಪಸಂಖ್ಯಾಕರ ಸಂಸ್ಕೃತಿಯು, ಜನತೆಯು, ಮತದ, ಹಕ್ಕನ್ನು ಎಲ್ಲರೂ ಒಪ್ಪಬೇಕು ಬೇರೆ ಜನರ ಮೇಲಣ ಪ್ರಭುತ್ವವನ್ನು ಬಿಡಬೇಕು, ಅಂತರರಾಷ್ಟ್ರೀಯ ವಿವಾದಗಳನ್ನು, ಒಂದು ಸಂಸ್ಥೆಯನ್ನು ನಿರ್ಮಾಣ ಮಾಡಿ ಆ ಸಂಸ್ಥೆಯ ಮೂಲಕ ಇತ್ಯರ್ಥಿಸಿಕೊಳ್ಳಬೇಕು ಪರರಾಜ್ಯಗಳ ಮೇಲಣ ಅಧಿಕಾರವನ್ನು (Imperialism) ಬಿಟ್ಟು ಭೂಲೋಕದ ಸಮಗ್ರ ಜನತೆಗೆ ಸ್ವಾತಂತ್ರ್ಯವನ್ನು ಕೊಟ್ಟು ಭೂಲೋಕದ ಒಳ್ಳೆಯ ಪದಾರ್ಥ ವಸ್ತುಗಳನ್ನು ಉಪಯೋಗಿಸಿಕೊಳ್ಳಲು ಎಲ್ಲರಿಗೂ ಹಕ್ಕಿರಬೇಕು."

ಹೀಗೆ ಈ ಲೇಬರ ಮುಖಂಡರ ಭಾಷಣವೂ ಅಭಿಪ್ರಾಯವೂ ಸರಿ. ಈಗಿನ ಅರಸರ ನಡತೆಯಲ್ಲಿ ಇದು ಕನಸು, ಅದು ಬಾರಿಗೆ ಒಂದು ಜನತೆಗೆ ಸ್ವಾತಂತ್ರ್ಯ ಸಿಕ್ಕುವದು ಅಸಾಧ್ಯವೆಂಬಂತೆ ಕಾಣುತ್ತದೆ. ಎಲ್ಲಿಯೂ ಬಡವನನ್ನು ಐಶ್ವರ್ಯವಂತನು ಪೀಡಿಸುವನು ಮಹಾ ಅರಸರ ಸ್ವಾರ್ಥತೆಯಿಂದ ತಟಸ್ಥರಿಗೆ ಶಾಂತಿಯಿಲ್ಲ

ಈ ರೀತಿ ಮುಂದಿನ ಭೂಲೋಕದ ಸ್ಥಿತಿಯನ್ನು ಮಾರ್ಪಾಟು ಮಾಡಬೇಕಾದರೆ ಪ್ರಭುತ್ವದಲ್ಲಿ ಯಾವ ಬದಲಾವಣೆಗಳು ಆಗಬೇಕು,

ಯಾವ ಯುದ್ಧಗಳಾದರೂ ಜನಾಂಗಗಳ ಆತ್ಯಾಶೆಯಿಂದಲೇ ಹುಟ್ಟುವವು. ಜನಾಂಗಗಳ ಅತ್ಯಾಶೆ, ಬೇರೆ ಜನಾಂಗಗಳ ಹೆದರಿಕೆ ತಮ್ಮ ಜನರು ಶ್ರೇಷ್ಠ ಜನರು ತಾವು ದೇವರಿಂದ ಆರಿಸಲ್ಪಟ್ಟ ಮುಖ್ಯ ಜನಾಂಗವೆಂಬೀ ಭಾವನೆಯೇ ಯುದ್ಧದ ಮೂಲ ಇದನ್ನು ಕಿತ್ತು ತೆಗೆಯಬೇಕು ಎಲ್ಲಾ ಜನಾಂಗಗಳೂ ಒಟ್ಟು ಸೇರಿ ಭೂಲೋಕದ ವಸ್ತುಗಳನ್ನು ಎಲ್ಲರೂ ಸಹಮತಿಯಿಂದ ಪಾಲು ಮಾಡಿಕೊಂಡು ರಾಷ್ಟ್ರೀಯತೆಯನ್ನು ಬಿಟ್ಟು ಭೂಲೋಕವೇ ಒಂದು ರಾಜ್ಯ ಎಂತ ಭೂಲೋಕದಲ್ಲಿ ಒಂದೇ ಪ್ರಭುತ್ವವನ್ನು ಇಡುವದೇ ಇದಕ್ಕೆ ಮುಖ್ಯ ಉಪಾಯ. ರಾಷ್ಟ್ರೀಯ ಜನರು ಅಯುಧಪಾಣಿಗಳಾಗಿರುವಷ್ಟರ ವರೆಗೆ ನಮಗೆ ಯುದ್ಧವು ತಪ್ಪದೆಂಬ ಭಾವನೆಯು ಭೂಲೋಕದ ಜನರಲ್ಲಿ ಕೂಡಿರುವದು. ಇದಕ್ಕೆ ಸಂಶಯವಿಲ್ಲ ಈ ಯುದ್ಧದ ಅಂತ್ಯದಲ್ಲಿ ಯುರೋಪಿನ ಮುಖ್ಯ ಜನಾಂಗದವರು ಒಟ್ಟಾಗಿ "United States of Europe" ಎಂಬ ಏಕ ಪ್ರಭುತ್ವದ ಒಂದು ಸಂಸ್ಥೆಯನ್ನು ಸ್ಥಾಪಿಸಿ ನಂತರ ಅದೇ ರೀತಿ ಪೂರ್ವ ರಾಜ್ಯಗಳಲ್ಲಿಯೂ ಆದೀತೇ? ಬ್ರಿಟಿಷರು ನಮ್ಮ ಹಿಂದೂದೇಶದ ಪ್ರಭುತ್ವವನ್ನು ಬಿಟ್ಟು ಈ ಸಂಸ್ಥೆಗಳಿಗೆ ಒಪ್ಪಿಗೆ ಕೊಡುವರೇ.

ಇದು ಕನಸೋ, ಯಾವದು ಫಲಿತಾಂಶಕ್ಕೆ ಬಂದೀತೋ?

ಒಂದಿಷ್ಟು ನಗು

ರಶ್ಯಕ್ಕೆ ಹೊರಟವನೊಬ್ಬನು ತನ್ನ ಸ್ನೇಹಿತನೊಡನೆ ಹೇಳಿದ್ದ. ನಾನು ನನ್ನ ಕಾಗದದಲ್ಲಿ ನೀಲಿ ಶಾಯಿಯಲ್ಲಿ ಬರೆದ ವಿಷಯಗಳೆಲ್ಲಾ ಸತ್ಯವೆಂದು ತಿಳಿದುಕೊಳ್ಳಿ, ಕೆಂಪು ಶಾಯಿಯಲ್ಲಿ ಬರೆದರೆ ಸತ್ಯ ಸಂಗತಿಯು ಅದರಲ್ಲಿರುವ ವಿಷಯಕ್ಕೆ ಪ್ರತಿ ವಿರುದ್ಧವಾಗಿರುವದೆಂದು ತಿಳಿದುಕೊಳ್ಳಿ-ಎಂದು

ರಶ್ಯದಿಂದ ಅವನ ಕಾಗದ ಬಂತು. "ಇಲ್ಲಿ ನಾನು ಬಹಳ ಸುಖವಾಗಿದ್ದೇನೆ. ಸೊಗಸಾದ ಕೋಣೆ, ಬೇಕಾದಷ್ಟು ಹಣ-ಎಲ್ಲಾ ಸುಖ ಸಂಪತ್ತುಗಳಿವೆ ಇಲ್ಲಿ ದೊರೆಯದಿರುವದೆಂದರೆ ಕೆಂಪು ಶಾಯಿಯೊಂದೇ"

An Insurance Company belonging to its Policyholders!

In other words a Mutual Office without Shareholders to absorb any part of its profits, or any obligations except to its assured Members. The "Canara Mutual" is such a Company. It is one of the most successful Mutual Life Offices in India.

Take a Policy in the Company and become one of its Members.

Economical Management.] [Handsome Bonuses.

The Canara Mutual
ASSURANCE COMPANY, LTD.
(Head Office:- UDIPI, S India.)

ಕಷಾಯ ಬಿಂದು

ಕಲ್ಕತ್ತದ ದೊಡ್ಡ ಮನುಷ್ಯರೊಬ್ಬರು ಔತಣಸಮಾರಂಭವೇರ್ಪಡಿಸಿದ್ದರು; ಅದಕ್ಕೆ ಬಾಯಿಬಲವಿದ್ದವರೆಲ್ಲಾ ಬಂದಿದ್ದರು.

೦೦ ೦೦ ೦೦

ಬಾಯಿ.ಬಲಶಾಲಿಗಳಲ್ಲಿ ಮಿ. ಹಕ್ಕರೂ ಶ್ರೀ. ಬೋಸರೂ ಅಗ್ರಗಣ್ಯರಷ್ಟೆ. ದೊಡ್ಡ ಔತಣಕೂಟವು ದೊಡ್ಡ ಬಾಯಿಯ ಅತಿಥಿಗಳ ವಿನಹಾ ಸಾಂಗವಾದೀತೆ?

೦೦ ೦೦ ೦೦

ಬೋಸರು ಮತ್ತು ಹಕ್ಕರು ಒಂದೇ ಮೇಜಿನ ಬಳಿ ಕುಳಿತು ಉಂಡರು. ಎಷ್ಟು ಉಂಡರೂ ಹೊಟ್ಟೆಯು ತಣಿಯಲಿಲ್ಲ.

೦೦ ೦೦ ೦೦

ಹೊಟ್ಟೆ ತಣಿಸುವ ಸಲುವಾಗಿ ಬೋಸರು ಹೇಳಿದರು. "ನಿಮ್ಮ ಮಂತ್ರಿಮಂಡಲದಲ್ಲಿ ನಮ್ಮ ಕಡೆಯವರನ್ನು ಸೇರಿಸಿಕೊಳ್ಳಿ; ನಿಮ್ಮನ್ನು ಬಂಗಾಳ ಮಾತ್ರವಲ್ಲ, ಇಡೀ ಭಾರತದ 'ಅನಭಿಷಿಕ್ತ ರಾಜ'ನನ್ನಾಗಿ ಮಾಡಿಬಿಡುತ್ತೇನೆ".

೦೦ ೦೦ ೦೦

ದೊಡ್ಡ ಮನಸ್ಸು, ದೊಡ್ಡ ಹೊಟ್ಟೆಯ ಹಕ್ಕರಿಗೆ ಈ ದೊಡ್ಡ ತಿಂಡಿ ದೊರೆತೊಡನೆ ತೇಗು ಬಂದಿರಬೇಕು.

೦೦ ೦೦ ೦೦

"ಗಾಂಧಿಯವರ ಮಾತು ಬಿಡಿ. 'ಗಾಂಧಿ' ಎಂಬುದನ್ನು ಮಾಡಿದವರು ನಾವೇ; ಇನ್ನದನ್ನು ತೆಗೆಯಲಿಕ್ಕೂ ಬಲ್ಲೆವು" ಎಂದು ಸುಭಾಷರು ಭಾಷೆಯಿತ್ತರಂತೆ.

೦೦ ೦೦ ೦೦

"ಈ ಬಿನ್ನಹದ ಕುರಿತು ಆಲೋಚಿಸಿ ಹೇಳುತ್ತೇನೆ"–ಎಂದು ಮಿ. ಹಕ್ಕರು ಭರವಸೆ ಕೊಟ್ಟರಂತೆ.

೦೦ ೦೦ ೦೦

ಊಟದ ಕೋಣೆಯ ಗೋಡೆಯಲ್ಲಿ 'ದಯವಿಟ್ಟು ಮಾತಾಡಬಾರದು' ಎಂದಿರುವ ಬೋರ್ಡನ್ನು ತೂಗಹಾಕುವುದು ತಮ್ಮ ಪ್ರಥಮ ಕೆಲಸವೆಂದು ಔತಣಕೂಟ ಏರ್ಪಡಿಸುವವರು ಇನ್ನು ಮುಂದಾದರೂ ತಿಳಕೊಳ್ಳತಕ್ಕದ್ದು.

ತಮ್ಮ ವಾದವನ್ನು ಯಾರೂ ಮನ್ನಿಸದಿದ್ದಲ್ಲಿ ಎಂಥವರಿಗಾದರೂ ಬೇಸರ ಬರುವ ವಾಡಿಕೆ. ಕಾಂಗ್ರೆಸು ಹಾಗೆ ಬೇಸರಿಸಬೇಕೆಂದಿಲ್ಲ.

೦೦ ೦೦ ೦೦

ಕಾಂಗ್ರೆಸಿನ ವಾದವನ್ನು ಇಜಿಪ್ಟಿನ ನಹಾಸ್ ಪಾಶಾ ಇವರು ಅನುಕರಿಸಿದ್ದಾರೆ. ಭಾರತದ ರಾಗದ ಧಾಟಿ ಹಿಡಿದು ಇಜಿಪ್ಟ ಕೂಡಾ ಹಾಡುತ್ತಿದೆ.

೦೦ ೦೦ ೦೦

"ಇಜಿಪ್ಟಿನಲ್ಲಿರುವ ಬ್ರಿಟಿಷ ಸೇನೆಯನ್ನು ಹಿಂದೆಗೆಯಬೇಕು; ಯುದ್ಧಾನಂತರ ಹಿಂದೆಗೆದರೆ ಸಾಕು—ಈಗ ಆ ಕುರಿತು ಆಶ್ವಾಸನೆ ಕೊಡಬೇಕು. ಬ್ರಿಟನ್–ಇಜಿಪ್ತಗಳು ಒಟ್ಟಾಗಿ ಆಳುತ್ತಿರುವ ಸುಡಾನ್‌ನ ಕುರಿತು ರಾಜಿಯಿಂದ ಇತ್ಯರ್ಥಗೊಳಿಸಿಕೊಳ್ಳಬೇಕು" ಎಂದು ನಹಾಸ್ ಪಾಶರು ಕೇಳಿದ್ದಾರೆ.

೦೦ ೦೦ ೦೦

ಭಾರತ ಮತ್ತು ಇಜಿಪ್ಟ್ ಏಕ ಕಂಠದಿಂದಿವೆ. ಯುದ್ಧಾನಂತರವೂ ಇಂಗ್ಲಂಡು ಶಾಂತಿಯನ್ನನುಭವಿಸಬಾರದೆಂದು ಇವುಗಳ ಸಾಧನೆಯೇ?

೦೦ ೦೦ ೦೦

ಕೆಲಸಕ್ಕೆ ಹೊರಟವರನ್ನು ಮಾತಾಡಿಸಿ ನಿಲ್ಲಿಸುವದು ತಪ್ಪಲ್ಲವೆ? ಯುದ್ಧ ಹೊಗೆಯಿಂದ ಉಸಿರು ಕಟ್ಟಿದವರ ಬಾಯಿಬಿಡಿಸುವಾಗ ಅವರಿಗೆಷ್ಟೋ ಸಂಕಟವಾಗುವದೆಂಬ ಅರಿವಿಲ್ಲವೇಕೆ?

೦೦ ೦೦ ೦೦

ಅಥವಾ ಯಾವ ದುರ್ಬಲ ರಾಷ್ಟ್ರವನ್ನೂ ಕೈಬಿಡಬಾರದೆಂಬ ಸರ್ವೋತ್ಕೃಷ್ಟ ಧ್ಯೇಯದಿಂದ ಯುದ್ಧಕ್ಕಿಳಿದಿರುವ ಬ್ರಿಟನು ಯುದ್ಧಾನಂತರ ಈ ರಾಷ್ಟ್ರಗಳ ಕೈಬಿಡಲಿಕ್ಕಾಗುತ್ತದೆಯೆ? ಪ್ರಶ್ನೆ ಬಾಯಿಬಿಡಲಿಕ್ಕಾದರೂ ಆಗುತ್ತದೆಯೆ?

"ತನ್ನನ್ನು ತಾನರಿಯದವ, ತನಗೆ ತಾನೇ ವೈರಿ" ಎಂಬ ಮಾತಿದೆ. ಇದು ಬ್ರಿಟನಿನ ವಿದೇಶ ಧೋರಣೆಗೂ ಅನ್ವಯಿಸುವದೇ?

೦೦ ೦೦ ೦೦

ಲೋರ್ಡ್ ಹೆಲಿಫೇಕ್ಸರು ಇಂಗ್ಲಂಡಿನ ವಿದೇಶ ಮಂತ್ರಿಗಳು; ಈ ಹುದ್ದೆಗೇರುವ ಮೊದಲು ಕೂಡ ತನ್ನನ್ನು ತಾನೇ ಚುಂಬಿಸಿಕೊಳ್ಳುವ ಬುದ್ಧಿ ಅವರಲ್ಲಿತ್ತೆಂದು ಇಂಗ್ಲಂಡಿನ ಪತ್ರಿಕೆಯೊಂದರಲ್ಲಿ ಪ್ರಕಟವಾಗಿರುವ ಒಂದು ವಿನೋದಕರ ಸತ್ಯ ಸಂಗತಿಯಿಂದ ತಿಳಿಯಲಾಗುತ್ತದೆ.

೦೦ ೦೦ ೦೦

ಲೋರ್ಡ್ ಹೆಲಿಫೇಕ್ಸರು ಕಾಲೇಜು ವಿದ್ಯಾರ್ಥಿಯಾಗಿದ್ದ ಕಾಲ; ಆಗ ಅವರ ಹೆಸರು 'ಎಡ್ವರ್ಡ್ ವುಡ್'–ಎಂದು.

೦೦ ೦೦ ೦೦

ಅವರೊಮ್ಮೆ ಟ್ರೇನಿನಲ್ಲಿ ಹೋಗುತ್ತಿದ್ದರಂತೆ. ಮಿ. ಎಡ್ವರ್ಡ್‌ವುಡ್ ಇದ್ದ ಬಂಡಿಯಲ್ಲಿ ಬೇರೆ ಇದ್ದವರೆಂದರೆ ಇಬ್ಬರು ಮಹಿಳೆಯರು ಮಾತ್ರ.

೦೦ ೦೦ ೦೦

ಆ ಬಂಡಿ ಒಂದು ಸುರಂಗದೊಳಗಿನಿಂದ ಹೋಗುವಾಗ ಗಾಡಿಯೊಳಗೆ ಕತ್ತಲಾಯಿತು. ಮಿ. ಎಡ್ವರ್ಡರು ತಡಮಾಡದೆ ತನ್ನ ಕೈಯ್ಯ ಹಿಂಬದಿಯನ್ನು ಬಲವಾಗಿ ಚುಂಬಿಸಿದರು.

೦೦ ೦೦ ೦೦

ಅತ್ತ ಬೆಳಕು ಬೀಳುವಾಗ ಇತ್ತ ಇವರು ಕೆಳಗಿಳಿಯುವ ಸ್ಟೇಶನು ಬಂತು. ಎಡ್ವರ್ಡರು ಆ ಸ್ತ್ರೀಯರ ಕಡೆಗೆ ನೋಡಿ ಮುಗುಳು ನಗೆಯೊಡನೆ ಹೇಳಿದರಂತೆ. "ಬಂಡಿಯಲ್ಲಾದ ಆನಂದದ ಘಟನೆಗಾಗಿ ನಾನು ನಿಮ್ಮಿಬ್ಬರಲ್ಲಿ ಯಾರಿಗೆ ಋಣಿಯಾಗಿರಬೇಕು?"

೦೦ ೦೦ ೦೦

ಇಬ್ಬರು ಮಹಿಳೆಯರೂ ಆಶ್ಚರ್ಯದಿಂದ ಒಬ್ಬರ ಮುಖವನ್ನೊಬ್ಬರು ನೋಡಹತ್ತಿದರು. ಆಗ ಎಡ್ವರ್ಡ್‌ವುಡ್ಡರಿಗೆ ತನ್ನ ಪ್ರಮಾದ ತಿಳಿದು ಬಂದು ಬೇಗನೆ ಅಲ್ಲಿಂದ ಹೊರಟರಂತೆ!

೦೦ ೦೦ ೦೦

ಲೋರ್ಡ್ ಹೆಲಿಫೇಕ್ಸರಿಗೂ ಅಂತಹ ಪ್ರಮಾದಗಳಿಗೂ ಗಂಟು ಎಂಬಂತೆ ತೋರುತ್ತದೆ.

೦೦ ೦೦ ೦೦

ವಿದೇಶ ಮಂತ್ರಿತ್ವದಲ್ಲಿಯೂ ಅವರು ಅಂತಹ ಘಟನೆಗಳಿಗೊಳಗಾಗಬೇಕೆ?

—ಪಂಡಿತ.

ಇಂಡಿಯನ್ ಮ್ಯೂಚುಯಲ್

ಲೈಫ್ ಅಸೋಸಿಯೇಷನ್ ಲಿಮಿಟೆಡ್

ಹೆಡ್ ಆಫೀಸ್:- ನಂ. ೧೦, ಮೌಂಟ್ ರೋಡ್, ಮದರಾಸು

—— ಡೈರೆಕ್ಟರುಗಳ ಬೋರ್ಡ ——

ಸರ್ ವೇಪಾ ರಮೇಶಂ, ಕೆ. ಟಿ. ರಿಟೈರ್ಡ್ ಜಡ್ಜ್, ಮದರಾಸ್ ಹೈಕೋರ್ಟ್, ಮದರಾಸು.
ರಾವ್ ಬಹದ್ದೂರ್ ಮ|| ಕೆ ಬಲರಾಮ ಅಯ್ಯರ್, ಬಿ.ಎ. ರಿಟೈರ್ಡ್ ಅಕೌಂಟೆಂಟ್ ಜನರಲ್ ಮದರಾಸ್.
ಮ|| ಸಿ. ಕೃಷ್ಣಸ್ವಾಮಿ ಮೊದಲಿಯಾರ್ ಲ್ಯಾಂಡ್ ಲಾರ್ಡ್, ಸಿಯಾಲಿ.
ದಿವಾನ್ ಬಹದ್ದೂರ್ ಮ|| ಎ. ವಿ ರಾಮಲಿಂಗ ಅಯ್ಯರ್, ಮದರಾಸ್ ಸರಕಾರದ ರಿಟೈರ್ಡ್ ಚೀಫ್ ಇಂಜನಿಯರು.

ಮ|| ಟಿ ಎಸ್. ನಾರಾಯಣ ಸ್ವಾಮಿ, ಎಂ ಎ, ಅಸಿಸ್ಟೆಂಟ್ ಕೆಮಿಸ್ಟ್, ಬಕಿಂಗ್‌ಹ್ಯಾಮ್ ಮಿಲ್ಸ್, ಮದರಾಸ್.
ದಿವಾನ್ ಬಹದ್ದೂರ್ ಮ|| ವಿ. ಭಾಷ್ಯಂ ಅಯ್ಯಂಗಾರ್, ರಿಟೈರ್ಡ್ ಮದರಾಸ್ ಹೈಕೋರ್ಟ್ ಜಡ್ಜ್.
ಮ|| ಸಿ ಎಂ. ಶ್ರೀನಿವಾಸನ್, ಬಿ.ಎ., ಬಿ.ಎಲ್. (ಎಕ್ಸ್–ಅಫೀಷಿಯೋ) ಮದ್ರಾಸ್.

ಮ್ಯಾನೇಜರ್:–ಮ|| ಎಂ. ಸಬೇಶನ್, ಎಂ.ಎ. ಚೀಫ್ ಮೆಡಿಕಲ್ ಆಫೀಸರ್:– ಡಾ|| ಡಿ. ಸುಬ್ಬೇಶನ್, ಬಿ. ಎಂ ಎಸ್.

ಬ್ಯಾಂಕರುಗಳು:— ಇಂಡಿಯನ್ ಬ್ಯಾಂಕ್ ಲಿಮಿಟೆಡ್, ಮದರಾಸ್. ಮದರಾಸ್ ಪ್ರೊವಿನ್ಷಿಯಲ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್.
ಇಂಡೊ-ಕಮರ್ಷಿಯಲ್ ಬ್ಯಾಂಕ್ ಲಿಮಿಟೆಡ್, ದಿ ಬ್ಯಾಂಕ್ ಆಫ್ ಮೈಸೂರು, ಲಿಮಿಟೆಡ್.

ಬ್ರಾಂಚುಗಳು:—ಕಲ್ಕತ್ತ, ಲಾಹೋರ್, ಜೋಧಪೂರ್, ಮಧುರ, ಕಲ್ಲಿಕೋಟೆ, ಬೆಜವಾಡ, ಅಲಹಾಬಾದ್ ಬೊಂಬಾಯಿ, ಅಹಮದಾಬಾದ್, ಪೂನಾ

ಮೈಸೂರು ಸರಕಾರದ ಹೊಸ ವಿಮಾ ಕಾನೂನನ್ನು ಅನುಸರಿಸಿ ಕಂಟ್ರೋಲರವರಲ್ಲಿ ಠೇವಣಾತಿ ಮೊಬಲಗು ಇಡಲಾಗಿದೆ.

ಕರ್ನಾಟಕದಲ್ಲೆಲ್ಲಾ ಯೋಗ್ಯರಾದ ಮತ್ತು ಪ್ರತಿಭಾಶಾಲಿಗಳಾದವರಿಂದ ಏಜನ್ಸಿಗಳಿಗೆ ಅರ್ಜಿಗಳು ಸ್ವೀಕರಿಸಲ್ಪಡುತ್ತವೆ.

ಉತ್ತಮ ಕೆಲಸಮಾಡುವವರಿಗೆ ಒಳ್ಳೇ ಷರತ್ತುಗಳು. **ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—**

ಮ|| ಸಿ. ಎಂ. ಶ್ರೀನಿವಾಸನ್, ಬಿ. ಎ., ಬಿ. ಎಲ್. ಜನರಲ್ ಸೆಕ್ರೆಟರಿ.
ಇಂಡಿಯನ್ ಮ್ಯೂಚುಯಲ್ ಲೈಫ್ ಅಸೋಸಿಯೇಷನ್ ಲಿಮಿಟೆಡ್,
10 ಮೌಂಟ್‌ರೋಡ್, ಮದ್ರಾಸ್.

ಬಿ. ಕರುಣಾಕರ ಹೆಗ್ಡೆ ಇನ್ಸ್‌ಪೆಕ್ಟರ್ ಆಫ್ ಏಜನ್ಸೀಸ್,
ಜನರಲ್ ಪೋಸ್ಟ್, ಉಡುಪಿ.

Bonus: Endowment Rs. 15. Whole life Rs. 18. Last valuation.

ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ.

ಬಹುಮಾನದ ಆಶೆ

"ಹಿಟ್ಲರನನ್ನು ಸಜೀವವಾಗಿ ಹಿಡಿದು ತಂದೊಪ್ಪಿಸಿದವನಿಗೆ 10 ಲಕ್ಷ ಡಾಲರುಗಳನ್ನು ಬಹುಮಾನ ಕೊಡುವೆನೆಂದು ಅಮೇರಿಕದ ಒಂದು ಸಂಸ್ಥೆಯ ಅಧ್ಯಕ್ಷರು ಪ್ರಕಟಣೆ ಕೊಟ್ಟಿದ್ದಾರೆಂದು ಪತ್ರಿಕೆಗಳಿಂದ ತಿಳಿದುಬರುತ್ತದೆ. ಇದು ಬಹಳ ಕಷ್ಟದ ಕೆಲಸವಾದರೂ ಆ ಕೆಲಸ ಸಾಧಿಸಿದರೆ ತಕ್ಕ ಪ್ರತಿಫಲ ದೊರೆಯುವ ಆಶೆಯೊಂದಿದೆ. ಈ ಮಹತ್ಕಾರ್ಯವನ್ನು ಯಾರು ಸಾಧಿಸಬಹುದೆಂದು ತಿಳಿಸಬಲ್ಲಿರಾ?"— ಕೆ. ಆರ್ ಎಮ್. ಮಂಗಳೂರು.

ಸಾಧಿಸುವ ಶಕ್ತನು ಹಿಟ್ಲರನೊಬ್ಬನೇ. ಯುದ್ಧೋಪಕರಣಗಳಿಗಾಗಿ ಜರ್ಮನಿಯಲ್ಲಿ ಕಬ್ಬಿಣದ ಗೇಟುಗಳನ್ನೂ ಹಿಟ್ಲರನೇ ಮೊದಲಾದರ ವಿಗ್ರಹಗಳನ್ನೂ ಕೀಳಲಿಕ್ಕೆ ತೊಡಗಿರುವವರಂತೆ ಸಣ್ಣಪುಟ್ಟ ಅನುಕೂಲತೆಗಾಗಿ ತನ್ನ ವಿಗ್ರಹವನ್ನು ತಾನೇ ಅಪಹರಿಸುವವ ತನ್ನನ್ನು ತಾನೇ ಮಾರಿಕೊಂಡು ದೊಡ್ಡ ನಿಧಿಯನ್ನು ಸಂಪಾದಿಸಲು ಮನಸ್ಸು ಮಾಡಿದರಾಗಬಹುದು. ಹೊರತು ನೀವೇ ಸಾಹಸಕ್ಕೆ ಕೈಯಿಕ್ಕುವ ಆಶೆಮಾಡಬೇಡಿ.

ಕ್ಷೇತ್ರಬಾಹುಳ್ಯದ ಭಯವಿಲ್ಲದವರು

"ಹೋಲ್ಲೇಂಡ್ ಮತ್ತು ಬೆಲ್ಜಿಯಮುಗಳ ಮೇಲೂ ಹಿಟ್ಲರನು ಧಾಳಿಯಿಟ್ಟನೆಂಬ ವಾರ್ತೆ ಬಂದಿದೆ. ಇದರಿಂದ ಯುದ್ಧಕ್ಷೇತ್ರವು ವಿಸ್ತಾರ ಹೊಂದಿದಂತಾಯಿತು. ಇಂಗ್ಲೆಂಡ್-ಫ್ರಾನ್ಸ್‌ಗಳಿಗೆ ಜರ್ಮನಿಯನ್ನು ಎಲ್ಲಾ ಕಡೆಗಳಲ್ಲಿಯೂ ಇದಿರಿಸುವದೆಂದರೆ ಬಹಳ ಕಷ್ಟದ ಕೆಲಸವಾಗದೆ?" ಕೆ. ಎಸ್. ಕೆ. ಕಾರ್ಕಳ.

ನೀವು ಹೆದರಬೇಡಿ. ಇಂಗ್ಲಂಡು-ಫ್ರಾನ್ಸ ಸಾಮ್ರಾಜ್ಯಗಳಿಗೆ ಕ್ಷೇತ್ರವಿಸ್ತಾರದ ಭಯ ಹಿಂದೆ ಇದ್ದರಲ್ಲವೇ ಈಗ ಇರಬೇಕು? ಅವುಗಳ ಸಾಮ್ರಾಜ್ಯವು ಲೋಕದ ಎಲ್ಲಾ ಕಡೆಗಳಲ್ಲಿಯೂ ವಿಸ್ತರಿಸಿಕೊಂಡಿದೆ ಎಂಬುದು ನಿಮಗರಿತಿಲ್ಲವೆ?

ಗಮನಾರ್ಹ ವಿಷಯ

"ನಮ್ಮೂರಿನ 58 ವರ್ಷ ಪ್ರಾಯದ ಮುದುಕನಿಗೆ ಅವನ ಮೊಮ್ಮಗಳಾಗುವಷ್ಟು ಕಡಿಮೆ ಪ್ರಾಯದವಳನ್ನು ಕೊಟ್ಟು ಮದುವೆಮಾಡಿದರು. ಅವನು ಅಷ್ಟೊಂದು ದೊಡ್ಡ ಸಿರಿವಂತನಲ್ಲ. ಆದರೂ ಆ ಎಳೇ ಹುಡುಗಿಯನ್ನು ಹಣ್ಣು ಹಣ್ಣು ಮುದುಕನಿಗೆ ಯಾವುದನ್ನು ನೋಡಿ ಕೊಟ್ಟರೋ ತಿಳಿಯುವುದಿಲ್ಲ."— ಎನ್. ಎಸ್. ಎಸ್. ಕರಂಪಾಡಿ.

ನಾವು ತಿಳಿಸುತ್ತೇವೆ. ಹುಡುಗಿಯನ್ನು ಕೊಡುವ ಮೊದಲು ಅವ ತೆಗೆದ ಇನ್ಸ್ಯೂರಿನ ಮೊಬಲಗೆಷ್ಟು ಎಂಬುದನ್ನಾದರೂ ನೋಡಿರಬೇಕು.

ಆಶೆಯಿದೆ

"ಅಳಿಯಸಂತಾನ ಕಟ್ಟಿನ ಸುಧಾರಣೆಗಾಗಿ ಎರಡು ಮೂರು ಬಾರಿ ಪ್ರಯತ್ನ ನಡೆಯಿತು. ಎಲ್ಲಾ ಪ್ರಯತ್ನಗಳೂ ಅರ್ಧಮಾರ್ಗದಲ್ಲೇ ನಿಲ್ಲಿಸಲ್ಪಟ್ಟವು. ಕಳೆದ ವರುಷ ಆ ಕುರಿತು ಭರದಿಂದ ನಡೆಯುತ್ತಿದ್ದ ಪ್ರಚಾರವನ್ನು ಕಂಡು ಈ ಬಾರಿಯಾದರೂ ಅದು ಯಶಸ್ವಿಯಾಗುವದೆಂದು ನಂಬಿದ್ದೆ. ಆದರೆ ಈಗಿನ ಪರಿಸ್ಥಿತಿಯನ್ನು ನೋಡುವಾಗ ಸುಧಾರಣೆಯಾಗುವ ಯೋಗವೇ ಇಲ್ಲವೇನೋ ಅನ್ನಿಸು

ಕ್ತದೆ. ನೀವೇನನ್ನುವಿರಿ?" ಎಮ್. ಕೆ. ಎಚ್. ಕುಂದಾಪುರ.

ಇಷ್ಟು ನಿರಾಶರಾಗಬೇಡಿ. ಅಂದಿನ ಸುಧಾರಕರು ಈಗಲೂ ಇದ್ದಾರೆ. ಆದ್ದರಿಂದ ಮತ್ತೇನಿಲ್ಲದಿದ್ದರೂ ಸುಧಾರಣೆಯ ಆಶೆ ಇರಲೇ ಬೇಕು!

ಕಾಯಿದೇಶೀರ ದಕ್ಷಿಣೆ

"ಮಧ್ಯಪ್ರಾಂತ್ಯದ ಎಸೆಂಬ್ಲಿಯಲ್ಲಿ ಹಿಂದೊಮ್ಮೆ 600ರೂ.ಗೆ ಮಿಕ್ಕಿ ವರದಕ್ಷಿಣೆ ಪಡೆಯಕೂಡದೆಂಬ ಕಾನೂನುಮಾಡುವ ಮಸೂದೆಯೊಂದು ಮುಂದೆ ಬಂದಿತ್ತಷ್ಟೆ. ಅಂತಹ ಕಾನೂನುಮಾಡಿದರೆ, ವರದಕ್ಷಿಣೆಯ ಕಾರಣದಿಂದ ಈಗ ಹಿಂದೂ ಸಮಾಜದಲ್ಲಿ ನಡೆಯುತ್ತಿರುವ ವಿಷಮ ವಿವಾಹಗಳನ್ನು ತಡೆಗಟ್ಟಿದಂತಾಗುವದಿಲ್ಲವೆ?"—ವಿ. ಆರ್. ಎಸ್. ಹುಬ್ಬಳ್ಳಿ.

ವರದಕ್ಷಿಣೆಗೆ ಬಂದ ಕಾನೂನು ದಾನದಕ್ಷಿಣೆಗೂ ಬರಬಹುದು. ವರದಕ್ಷಿಣೆ ಕೊಟ್ಟುದೆಷ್ಟು ಪಡೆದುದೆಷ್ಟು ಎಂಬುದರ ಸತ್ಯ ವಾರ್ತೆ ಕಾನೂನಿನ ಭಯವಿಲ್ಲದ ಈ ಕಾಲದಲ್ಲಿ ಕೂಡ ಅನ್ಯರಿಗೆ ತಿಳಿಯದಷ್ಟು ಗುಟ್ಟಾಗಿರುವ ವಾಡಿಕೆ. ಇನ್ನು ಕಾನೂನುಮಾಡಿದಲ್ಲಿ ವರದಕ್ಷಿಣೆಯ ಪ್ರಸ್ತಾಪವು ವಧೂವರರ ಕಡೆಯವರೊಳಗಿನ ಕಿವಿಮಾತಾಗಿ ಮಾತ್ರ ನಿಲ್ಲುವಂತೆ ಸಾಧಿಸಬಹುದು. ನಿಮಗೆಬೇಕಾದುದೇನು? ವರದಕ್ಷಿಣೆಯ ಪ್ರಸ್ತಾಪವಿಲ್ಲದಂತಾಗಬೇಕೊ? ವರದಕ್ಷಿಣೆಯನ್ನೊಂದು ಮಿತಕ್ಕೆ ತರಬೇಕೊ?

ನಿಮ್ಮ ಸಹಾಯಕರು

"ತಮ್ಮ ಸಂಕಷ್ಟಗಳನ್ನು ತಿಳಿಸಿ ಪ್ರಶ್ನೆ ಹಾಕಿದವರಿಗೆ ನೀವು ಯೋಗ್ಯ ಉತ್ತರಗಳನ್ನು ಕೊಡುತ್ತಿರುವಿರಷ್ಟೆ. ನಾನೀಗ ಹಣದ ಅಡಚಣೆಯಿಂದ ಇದ್ದೇನೆ. ಏನು ಮಾಡುವದಕ್ಕೂ ತೋರುವದಿಲ್ಲ. ತಲೆಯಲ್ಲೆಲ್ಲಾ ಬೇಸರ ತುಂಬಿದೆ. ನನ್ನ ಉತ್ಪತ್ತಿ ಬಹಳ ಕಡಿಮೆಯಿರುವದರಿಂದ ಸಾಲ ಕೊಡಲಿಕ್ಕೂ ಯಾರೂ ಕೇಳುವದಿಲ್ಲ. ಸಹಾಯಮಾಡುವರಾರೂ ತೋರುವುದಿಲ್ಲ. ಪ್ರಪಂಚದೊಡನೆ ವೈರಾಗ್ಯ ಹುಟ್ಟುವಷ್ಟು ಕಲಬಿಸಿಯಾಗಿದೆ. ನಾನು ಯಾರ ಸಹಾಯ ಪಡೆಯಬಹುದೆಂದು ತೋರಿಸಿಕೊಡುವಿರಾ?"—ಆರ್. ಆರ್. ಎಸ್. ನೀಲಗಿರಿ.

'ಚಿತ್ತ ವಿಧ್ವಂಸಿನಿ' 'ಆಯಾಸ ಪರಿಹಾರಕ' 'ಶಿರೋ ಭೂಷಣ'—ಇತ್ಯಾದಿ ಅಮೂಲ್ಯ ತೈಲಗಳನ್ನು ಮಾಡುತ್ತಿರುವ ಯುನಾನಿ ವೈದ್ಯರ ಸಹಾಯ ಪಡೆಯಬಹುದು.

ಬ್ರಹ್ಮನ ಅನುಕರಣೆ

"ಮೈಸೂರು ಸಂಸ್ಥಾನದ ಊರೊಂದರಲ್ಲಿ ಒಬ್ಬ ದುರಾತ್ಮನು ಮಗಳನ್ನೇ ಮೋಹಿಸಿ ಪೀಡೆ ಕೊಟ್ಟಿದ್ದ ವಾರ್ತೆಯನ್ನು ನೀವು ಬೇರೆ ಪತ್ರಿಕೆಗಳಿಂದ ತಿಳಿದಿರಬಹುದು. ಇಂದಿನ ಸುಧಾರಣೆಯ ಯುಗದಲ್ಲಿ ಈ ರೀತಿಯ ಅತ್ಯಾಚಾರ ನಡೆಸಿದದವನಿಗೆ ಜಡ್ಜರು ಕಠಿಣ ಶಿಕ್ಷೆ ಕೊಟ್ಟು 'ಅವನು ಮನುಷ್ಯನಲ್ಲ; ಮೃಗದಂತೆ ವರ್ತಿಸಿದ್ದಾನೆ' ಎಂದು ಟೀಕಿಸಿದ್ದಾರೆ. ಇಂತಹ ಅತ್ಯಾಚಾರಗಳು ನಡೆಯುವದೆಂದರೇನು?"— ಎಮ್. ಎ. ಆರ್. ಶಿವಮೊಗ್ಗ.

ಇದು ಬ್ರಹ್ಮ ಸೃಷ್ಟಿ!

ಪೂರ್ವ ಸಿದ್ಧತೆಯೆ?

"ಈ ವರ್ಷಾಂತ್ಯದೊಳಗೆ ವಾಡಿಕೆಯಂತೆ ನಮ್ಮಲ್ಲಿಯ ಜಿಲ್ಲಾ ಬೋರ್ಡಿನ ಚುನಾವಣೆಯಾಗಲಿದೆಯೆಂದು ತಿಳಿದು ಬರುತ್ತದೆ. ಈ ಬಾರಿಯೂ ಕಾಂಗ್ರೆಸಿನ ಕಡೆಯಿಂದ ಉಮೇದ್ವಾರಿಗಳನ್ನು ನಿಲ್ಲಿಸಲಾಗುವದೆ?" —ಎಚ್. ಎಮ್. ಕೆ. ಕಾಸರಗೋಡು.

ಹೇಗಾಗುವದೋ ಈಗ ಹೇಳುವದು ಕಷ್ಟ. ಈಗಿನ ಜಿಲ್ಲಾ ಬೋರ್ಡುಗಳ ಕುರ್ಚಿಗಳನ್ನಲಂಕರಿಸಿರುವವರನ್ನೇ ಕೈಹಿಡಿದೆಬ್ಬಿಸಿ ನಿಲ್ಲಿಸುವ ಸೂಚನೆಯನ್ನು ಕಾಂಗ್ರೆಸ್ ಅಧ್ಯಕ್ಷರೊಮ್ಮೆ ಮುಂತಂದಿದ್ದರು. ಹಾಗೆ ನಿಲ್ಲಿಸುವ ಹೆದರಿಕೆ ಸದ್ಯಕ್ಕಿಲ್ಲ. ಅದಿರಲಿ, ಮುಂದಿನ ಭವಿಷ್ಯವನ್ನು ನಿಮಗೀಗಲೇ ತಿಳಿಯುವ ಅಗತ್ಯವೇನು ಬಂತು? ಏನು, ದೀರ್ಘಕಾಲ ಒದ್ದಾಡಿಯಾದರೂ ಒಂದು ಸೀಟು ಸಂಪಾದಿಸುವ ಅಪೇಕ್ಷೆ ಇದೆಯೆ?

ದೇವರೇ ಗತಿ!

"'ನಾನು ಸಂಧಾನಕ್ಕಾಗಿ ಬಹಳ ಆತುರದಲ್ಲಿದ್ದೇನೆ' ಎಂದು ಗಾಂಧಿಯವರು ಈಗೀಗ ಪ್ರತಿದಿನ ಹೇಳುತ್ತಿದ್ದಾರೆ. ಇದರಿಂದ ಸತ್ಯಾಗ್ರಹ ಯುದ್ಧದಲ್ಲಿ ಸೇರಬೇಕೆಂಬ ಉತ್ಕಟೇಚ್ಛೆಯಿದ್ದವರು ನಿರಾಶೆ ಪಡುವಂತಾಗಿದೆ. ಇಂದಿನ ಪರಿಸ್ಥಿತಿಯಲ್ಲಿ ಹೀಗೆ ಮಾಡುವದು ಸರಿಯಾದ ಮಾರ್ಗವಲ್ಲವೆಂಬ ಬುದ್ಧಿಯನ್ನು ಯಾವ ದೇವರಾದರೂ ಅವರಿಗೆ ದಯಪಾಲಿಸಲಾರರೆ?" —ಎಸ್. ಆರ್. ಕುಮಟಾ.

ಯಾವ ದೇವರಿಗಾದರೂ ಹರಕೆ ಹೇಳುವದನ್ನು ಬಿಟ್ಟು ನಮ್ಮನ್ನೇಕೆ ಕೇಳಿದಿರಿ?

ಕೃಷ್ಣಪಾಣಿ.

ನವಯುಗಕ್ಕೆ
ಇಂದೇ
ಚಂದಾದಾರರಾಗಿರಿ

ಈ ವಾರದ ಭವಿಷ್ಯ

ತಾರೀಕು 16-5-1940ರಿಂದ 23-5-1940ರ ವರೆಗೆ

ಮೇಷ—ಕಳೆದ ವಾರಕ್ಕಿಂತಲೂ ಈ ವಾರವು ನಿಮಗೆ ಎಷ್ಟೋ ಲೇಸೆನಿಸುವದು. ನಿಮ್ಮ ಸ್ಥಿತಿಗತಿಗಳು ಒಂದು ರೀತಿಯ ಮಟ್ಟಕ್ಕೆ ಬಂದು ನಿಲ್ಲುವವು. ಉದ್ಯಮಶಕ್ತಿಯು ನಿಮ್ಮಲ್ಲಿರುವದಾದರೂ ವಸನ್ನಿನ ಅತಿಶಯ ಆಲಸ್ಯ ಇವುಗಳಿಂದ ಕಾರ್ಯಪ್ರವೃತ್ತರಾಗಲು ಹಿಂಜರಿಯುವಿರಿ. ಜೀವನಯಾತ್ರೆಯು ಸುಗಮವಾಗಿ ಮುಂದರಿಯುವದು. ನೌಕರಿ ಮೂಲಕವೂ ವ್ಯಾಪಾರೀ ವೃತ್ತಿಯಿಂದಲೂ ಸಾಕಷ್ಟು ಧನಸಂಚಯ ಮಾಡುವಿರಿ. ನೇತ್ರರೋಗ ಪ್ರಯುಕ್ತ ವೈದ್ಯರುಗಳಿಂದ ಹೆಚ್ಚಿನ ಹಣವ್ಯಯ ಮಾಗಲಿದೆಯಾದರೂ ಹಣದ ಅಡಚಣೆಯುಂಟಾಗದು. ಸಾರ್ವಜನಿಕ ಕಾರ್ಯಗಳಲ್ಲಿ ವಿಜಯಿಗಳಾದರೂ ಆಪ್ತಜನವಿರೋಧಿಗಳಿಂದ ಚಿತ್ತಕ್ಕೆ ನೆಮ್ಮದಿಯಿರದು. ತಾ. 17ರಿಂದ 20ರವರೆಗೆ ಅನುಕೂಲ.

ವೃಷಭ—ದೇಹಾರೋಗ್ಯವು ಕೆಟ್ಟುಹೋಗಿ ನಾನಾ ರೀತಿಯ ಪೀಡೆಗಳಿಗೆ ಗುರಿಯಾಗುವಿರಿ. ಸಂಪಾದನೆಯ ಮಾರ್ಗವು ಕಾಣದಾದರೂ ಬಹುವಿಧದಿಂದ ಖರ್ಚುಗಳು ಪ್ರಾಪ್ತವಾಗುವದರಿಂದ ಬೇರೆಯವರ ಕೂಡೆ ಸಾಲವೆತ್ತುವ ಪ್ರಸಂಗ ಬರುವದು. ಜನತೆಯಲ್ಲಿ ಕಲಹಗ್ರೈವರಿಂದ ಹಲವರಿಗೆ ಅಪ್ರಿಯರಾಗುವಿರಿ. ರಾಜಕೀಯ ಕ್ಷೇತ್ರದಲ್ಲಿ ಅಪಾಯ ಸಂಭವಿಸಲಿದೆ. ಆಕಸ್ಮಿಕ ಪ್ರವಾಸವು ಒದಗಿ ಬಹುವಿಧದ ಕಷ್ಟನಷ್ಟಗಳಿಗೆ ಗುರಿಯಾಗುವಿರಿ. ಸುತ್ತುಮುತ್ತಲಿಂದಲೂ ಅನರ್ಥಪರಂಪರೆಗಳೇ ನಿಮ್ಮನ್ನಾವರಿಸುವದರಿಂದ ಸದಾ ಶೋಕಸಾಗರದಲ್ಲಿ ನಿಮ್ಮ ಚಿತ್ತವು ಮುಳುಗಿರುವುದು. ಆದರೂ ತಾ 19ರಿಂದ 22ರವರೆಗೆ ಕಿಂಚಿತ್ಸ್ವಬಲವಿರುವುದರಿಂದ ವ್ಯಾಪಾರ ವ್ಯವಹಾರಗಳ ಮೂಲಕ ಸ್ವಲ್ಪ ಧನಲಾಭ ಕಿಂಚಿದಾರೋಗ್ಯ ಪ್ರಾಪ್ತವಾಗಲಿದೆ.

ಮಿಥುನ—ನಿಮ್ಮ ವ್ಯಯಸ್ಥಾನದಲ್ಲಿದ್ದ ರವಿಯೊಡನೆ ಈ ವಾರದಲ್ಲಿ ಬುಧನು ಸೇರುವನು. ಇದರ ಫಲವಾಗಿ ಕೆಲವು ಅನಾವಶ್ಯಕ ಖರ್ಚುಗಳೂ, ಶತ್ರುಪೀಡೆಯಿಂದ ಕೆಲವು ಕಾರ್ಯಗಳಲ್ಲಿ ಪರಾಜಯವೂ ಪ್ರಾಪ್ತವಾಗಲಿದೆ. ಆರೋಗ್ಯವು ತೃಪ್ತಿಕರವಿದ್ದರೂ ಅಪಘಾತಾದಿಗಳಿಗೆ ಗುರಿಯಾಗಲಿರುವಿರಿ. ಗುರುಹಿರಿಯರ ಮತ್ತು ಸುಹೃಜ್ಜನರ ಬೆಂಬಲವು ಸದಾ ಇದ್ದೇ ಇರುವುದು. ಸಂಸಾರಸುಖವು ಉತ್ತಮವಾಗಿದ್ದು ದಿನಗಳನ್ನು ಸಂತೋಷದಿಂದಲೇ ಕಳೆಯುವಿರಿ. ನೌಕರಿಭಾಗದಲ್ಲಿ ಅತೃಪ್ತಿಯುಂಟಾದೀತು. ತಾ. 16, 21, 22, 23 ಈ ದಿನಗಳಲ್ಲಿ ಕಾರ್ಯಜಯ, ಗೌರವಾದರಗಳು, ಧನವೂ ದೊರೆಯಲಿದೆ.

ಕರ್ಕಾಟಕ—ಸದ್ಯ ನಿಮ್ಮ ಅದೃಷ್ಟವು ಇಷ್ಟಾನಿಷ್ಟಗಳಿಂದ ಕೂಡಿ ಮಿಶ್ರಫಲದಾಯಕವಾಗಿದೆ. ವಿದ್ಯಾಬುದ್ಧಿಗಳಲ್ಲಿ ಸಾಕಷ್ಟು ಚತುರರಾಗಿದ್ದು ಕಾಣಿಕೆ ವ್ಯಾಪಾರ ವ್ಯವಹಾರ ಮತ್ತು ಕೋರ್ಟು ಕಚೇರಿಗಳ ಕಾರ್ಯಗಳಲ್ಲಿ ಇಷ್ಟಸಿದ್ಧಿಯಾಗಲಿದೆ. ನಿಮ್ಮ ಮಾತಿಗೂ ಕೃತಿಗೂ ಅಂತರ ಸಂಬಂಧವಿಲ್ಲದಿರುವದರಿಂದ ಸ್ವಸ್ಥಾನದಿಂದ ಚ್ಯುತರಾಗುವ ಸಂಭವವಿದೆ. ಮಾತ್ರವಲ್ಲ ಕೆಲವರ ದ್ವೇಷಕ್ಕೂ ಗುರಿಯಾಗುವಿರಿ. ಧನಿಕರ ಹೆಚ್ಚಿನ ಸಂಪತ್ತನ್ನು ಅಪಹರಿಸುವ ಯೋಜನೆಯಾಗಿ ಖರ್ಚಿನ ವಿಚಾರದಲ್ಲಿ ಆ ಸ ದಿನದ ಖರ್ಚಿಗೆ ಕಡಿಮೆಯಾಗದು. ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾಗುವಿರಿ. ತಾ. 17 18, 23 ಈ ದಿನಗಳಲ್ಲಿ ಮಿತ್ರಭೇಟಿ ಸ್ತ್ರೀಸುಖ, ಧನ ಲಾಭಗಳಾಗಲಿವೆ.

ಸಿಂಹ—ಜೀವನಸಂಗ್ರಾಮದಲ್ಲಿ ಹೋರಾಡಿ ಕಷ್ಟಕಡಿಗೆ ನೀವು ವಿಜಯಿಗಳಾದಿರಿ. ಇಂದೀಗ ನಿಮ್ಮ ಭಾಗ್ಯವು ಅತ್ಯುತ್ತಮ ರೀತಿಗೆ ಬಂದಿರುವುದು. ಯಾವ ಭಾಗದಲ್ಲೂ ನಿಮಗೆ ಕೊರತೆಯಿರದು. ಗುರುವಿನ ಗ್ರಹವು ಪೂರ್ಣಬಲವುಳ್ಳದರಿಂದಲೂ ಇತರ ರವಿ ಕುಜ ಬುಧಶುಕ್ರರು ಶುಭಸ್ಥಾನಗತರಾಗಿರುವದರಿಂದಲೂ ನಿಮ್ಮ ಕಾರ್ಯಗಳು ಏನೊಂದೂ ವಿಘ್ನ ವಿಪತ್ತುಗಳಿಲ್ಲದೆ ಸುಖದಿಂದ ಗುರಿಯನ್ನು ಮುಟ್ಟುವವು. ನಿಮ್ಮ ಆರ್ಥಿಕ ಸಂಪತ್ತು ಅತ್ಯುತ್ತಮ ರೀತಿಗೆ ಬರುವದು. ಅಧಿಕಾರಿಗಳ ಕೃಪೆಯೂ ಸಮಾಜದ ಗೌರವಾದರಗಳಿಗೂ ಪಾತ್ರರಾಗುವಿರಿ. ಆದರೂ ನಾಸ್ತಿಕತೆಯು ನಿಮ್ಮಲ್ಲಿರತಕ್ಕ ದೊಡ್ಡ ದೋಷವಾಗಿ ಕಾಣುತ್ತಲಿದೆ. ತಾ. 16, 19, 20 ಅತ್ಯುತ್ತಮ.

ಕನ್ಯಾ—ನಿಮ್ಮ ಅವಸ್ಥೆಯು ಒಹಳ ಕಠಿಣ ಪರಿಸ್ಥಿತಿಗೆ ಬಂದಿದೆ. ಸಕಲ ಗ್ರಹರೂ ಅನಿಷ್ಟಸ್ಥಾನವನ್ನಾಶ್ರಯಿಸಿರುವುದರಿಂದ ದೈವಬಲವು ಕಿಂಚಿತ್ತೂ ನಿಮಗಿಲ್ಲವೆಂದರೆ ತಪ್ಪಾಗದು. ಆದುದರಿಂದ ನಿಮ್ಮ ಪೌರುಷವನ್ನಿಟ್ಟರೂ ಅದು ಸೀರಿನಲ್ಲಿ ಹೋಮ ಮಾಡಿದ ಹವಿಸ್ಸಿನಂತೆ ವ್ಯರ್ಥವಾಗಲಿದೆ. ಆಪ್ತಜನರಿಂದಲೂ ಬೇಕಾದವರಿಂದಲೂ ಹೆಚ್ಚಿನ ರೋಗಕ್ಕೆ ಗುರಿಯಾಗುವಿರಿ. ಸಾಲಿಗರ ಕಾಟಕ್ಕೆ ಸಿಲುಕಿ ಬಹಳ ಪೇಚಾಡುವಿರಿ. ಸರ್ವತೋಮುಖದಿಂದ ಖರ್ಚು ಬೆಳೆಯುತ್ತಲೇ ಹೋಗುವುದರಿಂದ ದಿನಗಳೆಯುವುದು ಬಹಳ ಕಷ್ಟವಾಗುವುದು. ಯಾವ ಭಾಗದಲ್ಲೂ ಶಾಸನ ಪ್ರಯೋಜನ ಸಿಗದು. ಮಿತಭಾಷಿಯಾಗಿದ್ದರೂ ಪರರೊಡನೆ ಕಲಹ ಅವಮಾನಗಳು ತಪ್ಪಲಾರವು. ಎಷ್ಟೇ ಜಾಗರೂಕರಾಗಿದ್ದರೂ ತಾ. 16, 19, 20, 23 ಈ ದಿನಗಳಲ್ಲಿ ಅನಿಷ್ಟಪಾಯಗಳಿಂದ ಪಾರಾಗಲಾರಿರಿ.

ತುಲಾ—ಪಾಪಿಗ್ರಹಗಳ ವಕ್ರದೃಷ್ಟಿಯು ನಿಮ್ಮ ಮೇಲಿದ್ದರೂ ಕೂಡ ಸದ್ಗುರುವಿನ ಕೃಪಾಛತ್ರದ ನೆಳಲಲ್ಲಿ ನೀವು ಇರುವಿರಿ. ಆದಕಾರಣ ನೀವು ಕಷ್ಟಗಳಲ್ಲೂ ಲಾಭಾಲಾಭಗಳಲ್ಲೂ ಸಮ ಭಾಗಿಗಳಾಗುವಿರಿ. ಧಾತುವ್ಯಯದಿಂದ ದೇಹದಲ್ಲಿ ದೌರ್ಬಲ್ಯ ಹೆಚ್ಚಲಿದೆ. ಮಾತ್ರವಲ್ಲ ಆರೋಗ್ಯವು ಕೆಡುವುದು. ಆಕಸ್ಮಿಕ ಪ್ರವಾಸ ಅನಾರೋಗ್ಯದ ಸಲುವಾಗಿ ಹಣವ್ಯಯಿಸುವಿರಿ. ಆದರೂ ಉದ್ಯೋಗ ವ್ಯಾಪಾರಾದಿಗಳಲ್ಲಿ ಲಾಭವು ತೃಪ್ತಿಕರವಾಗಿರುವುದು. ವಾಕ್ಚಾತುರ್ಯದಿಂದಲೂ ಬುದ್ಧಿಬಲದಿಂದಲೂ ಜನತೆಯಲ್ಲಿ ಗೌರವಸ್ಥಾನವನ್ನು ಹೊಂದುವಿರಿ. ಮಿತ್ರಬಂಧುಗಳ ಸಹಾಯದಿಂದ ಹೆಚ್ಚಿನ ಕಾರ್ಯಗಳಲ್ಲಿ ವಿಜಯವಾಗಲಿದೆ. ಇಷ್ಟಿದ್ದರೂ ನಿತ್ಯ ಗೃಹಕಲಹವು ತಪ್ಪಲಾರದು. ತಾ. 16, 19, 20, 23 ಈ ದಿನಗಳು ಉತ್ತಮವಿವೆ.

ವೃಶ್ಚಿಕ—ದಿನಗಳೆದಂತೆ ನಿಮ್ಮ ಭಾಗ್ಯಚಕ್ರವು ದುರ್ದೈವದ ಕಡೆಗೆ ಸಾಗುತ್ತಾ ಬರುತ್ತಿದೆ. ಇಂದೀಗ ನಿಮ್ಮ ಪರಿಸ್ಥಿತಿಯು ಇಷ್ಟಕ್ಕಿಂತ ದ್ವಿಗುಣವಾಗಿ ಅನಿಷ್ಟವು ಸಂಭವಿಸುವಂತಿದೆ. ಪ್ರತಿಸ್ಪರ್ಧಿಗಳ ಪೀಡೆಯು ದಿನಹೋದಂತೆ ಹೆಚ್ಚುವದು. ಪ್ರವಾಸ, ಆರ್ಥಿಕ ಬಿಕ್ಕಟ್ಟು, ಇವುಗಳಿಂದ ಮನೋವ್ಯಥೆಯು ಹೆಚ್ಚಿ ತನ್ಮೂಲಕ ಆರೋಗ್ಯವು ಕೆಡಲಿದೆ. ಆಕಸ್ಮಿಕ ಅಪಘಾತಗಳಿಗೂ ಚರ್ಮರೋಗಗಳಿಗೂ ಗುರಿಯಾಗಲಿರುವಿರಿ. ಆದರೂ ನೀಚ ಜನರ ಮೂಲಕವೂ ವ್ಯಾಪಾರೀ ವೃತ್ತಿಯಲ್ಲೂ ಕೊಂಚ ಧನ ಲಾಭವಾಗುವುದು. ಸಾಂಸಾರಿಕ ತಾಪತ್ರಯಗಳು ಬಾಧಿಸವು. ಸ್ತ್ರೀಸುಖವೂ ಸಂತತಿಯಿಂದ ಸ್ತ್ರೀಯರ ಲಾಭವೂ ಪ್ರಾಪ್ತವಾಗಲಿದೆ. ತಾ. 19, 20 23 ಹೆಚ್ಚಿನ ಪ್ರತಿಕೂಲಕಾರಿಗಳಾಗಿವೆ.

ಧನು—ಕೈಗೊಂಡ ಕಾರ್ಯಗಳಲ್ಲಿ ಹೆಚ್ಚಿನವು ನಿಶ್ಚಯಿಸಿದಂತೆ ಕೊನೆಗಾಣುವವು. ರಾಜಕೀಯದಲ್ಲಿ ವಿಜಯಿಗಳಾಗುವಿರಿ. ಬಂಧುಗಳಿಗೂ ನಿಮಗೂ ಪರಸ್ಪರರಿಗೆ ಒಟ್ಟು ಮನಸ್ತಾಪದಿಂದ ಮುಕ್ತರಾಗಿ ಮೈತ್ರೀಭಾವದಿಂದ ವರ್ತಿಸುವಿರಿ. ನೌಕರಿ ಭಾಗದಲ್ಲಿ ತೃಪ್ತಿಯಿದ್ದೀತು. ಆರ್ಥಿಕ ಸಂಪತ್ತು ತಕ್ಕಮಟ್ಟಿಗಿರುವುದು. ವ್ಯಾಪಾರಾದಿಗಳ ಲಾಭವಿದ್ದರೂ ನಷ್ಟ ಸಂಭವಿಸದು. ಸ್ತ್ರೀಯರಿಂದಾಗಿ ಗೃಹಕಲಹವು ಹುಟ್ಟುವದು. ತಂದೆ ಮಕ್ಕಳಿಗೂ ಸ್ವಾಮಿ ಸೇವಕರಿಗೂ ಪರಸ್ಪರ ಘರ್ಷಣೆಯುಂಟಾಗಲಿದೆ. ಗೃಹಕೃತ್ಯ ವಿಚಾರದಲ್ಲಿ ಮನಸ್ಸಿಗೆ ಸುಖಶಾಂತಿಗಳಿರವು. ಆದರೂ ಕೂಡ ಅತಿಗಳೊಂದನ್ನೂ ಮನಸ್ಸಿಗೆ ಹಚ್ಚಿಕೊಳ್ಳದೆ ಕರ್ತವ್ಯವನ್ನು ಮುಂದರಿಸುವಿರಿ. ತಾ. 17ರಿಂದ 20ರ ವರೆಗೆ ಅತ್ಯುತ್ತಮ.

ಮಕರ—ಸದ್ಯ ನಿಮಗೆ ಕೇತು ಮತ್ತು ಪಕ್ಷಸ್ಥ ಅಂಗಾರಕನೊಬ್ಬನ ಹೊರತು ಮತ್ತಾರ ಆನುಗ್ರಹವೂ ಕಾಣಬರದು. ಆದಕಾರಣ ನೀವು ಇತರರ ಬರಿಕೆ ಮಾತಿಗೆ ಹೆದರಿ ಉದಾಸೀನರಾಗಿ ಕುಳಿತಿರಬೇಡಿರಿ. ಅದಿಲ್ಲಾಗಲಿ, ಮಾಡುವ ಕಾರ್ಯವನ್ನು ಮಾಡಿಯೇ ತೀರುವೆನೆಂಬ ಹಠವಿದ್ದರೆ ನಿಮಗೆ ಇತರರ ಸಹಾಯವಿಂತಿರಲಿ, ಅತ್ಮೀಯರೆಂದೆನಿಸಿದ ಬಂಧು-ಬಳಗ, ಸ್ನೇಹಿತ ಮತ್ತು ಪತ್ನೀಪುತ್ರರ ಬೆಂಬಲವೂ ಸಿಗುವ ಸಂಭವವಿಲ್ಲ. ಎಲ್ಲರೂ ಸ್ವಾರ್ಥಕ್ಕೆ ನಿಮ್ಮನ್ನಿಷ್ಟವುಳ್ಳವರಲ್ಲೇ ಆಸಕ್ತರಾಗಿರುವರು. ಯಾವೊಂದು ಉದ್ಯೋಗದಲ್ಲೂ ಸುಖವಿರದು. ಇದೇ ಸಂಬಂಧವೇ ಕಾಯಿಲೆಯಲ್ಲಿ ಸಿಲುಕುವ ಸಂಭವವಿದೆ. ಅನಾವಶ್ಯಕವಾಗಿ ಖರ್ಚುಮಾಡತಕ್ಕ ನಿಮಗೆ ಆರ್ಥಿಕ ದುರವಸ್ಥೆಯು ಹೆಚ್ಚುತ್ತಿರುವುದು. ತಾ. 16, 17, 18, 23 ಅತೀವ ಅನಿಷ್ಟಕಾರಿಯಾಗಿವೆ.

ಕುಂಭ—ಬೇಕೆಂದು ಹಂಬಲಿಸುವ ಒಡವೆಯು ಬಹಳ ದುರ್ಲಭವಾಗುವುದು. ಮನಸ್ಸಿನ ಇಚ್ಛೆಗಳಿಲ್ಲವೂ ಸಂಕಲ್ಪದಲ್ಲೇ ಕೊನೆಗಾಣುವವು. ಬಂಧುಮಿತ್ರರ ಬೆಂಬಲ, ಆರ್ಥಿಕ ಸಂಪತ್ತು ಇವುದರಲ್ಲಿ ಉತ್ತಮವಾಗಿಯೇ ಇದೆಯೆನ್ನಬಹುದು. ಆದರೆ ಗುರುಹಿರಿಯರಲ್ಲಿನ ತಾತ್ಸಾರಭಾವನೆಯಿಂದಾಗಿ ನಿಮಗೆ ದೈವಬಲವು ಕಡಿಮೆಯಾಗಿದೆ. ಆಕಸ್ಮಿಕವಾಗಿ ವಿರೋಧಿಗಳಿಂದ ಮಾನಕ್ಕೆ ಹಾನಿಯೂ ಸಂಭವಿಸುವಂತಿದೆ. ದೇಹಾರೋಗ್ಯವು ಸ್ವಲ್ಪ ಮಟ್ಟಿಗೆ ಕೆಡುವದು. ಅಪತ್ಯ ವರ್ಗದಿಂದ ಮನಸ್ಸಿಗೆ ಒಂದಿಲ್ಲೊಂದು ಚಿಂತೆಯು ಆಗಾಗ ಕಾಡದೇ ಇರದು. ತಾ. 16, 21, 22, 23, ಈ ದಿನಗಳಲ್ಲಿ ಮಿತ್ರಸಮಾಗಮ, ಸ್ತ್ರೀಸುಖ, ಧನಾದಿಗಳು ಲಭಿಸಲಿವೆ.

ಮೀನ—ಶ್ರೀಕೃಷ್ಣರಾದರೆ ನಾಯಿ ಮೊಸರು ದೀಕ್ಷೆಯಂತೆ ಕಷ್ಟಕ್ಕೆ ತಕ್ಕ ಫಲವನ್ನು ಹೊಂದದೇ ಇರುವಿರಿ. ನಿಮ್ಮ ಹಣದ ಅಡಚಣೆಯು ಬಹುತೇಕ ನಿವಾರಣವಾಗಿ ಕೈಯಲ್ಲಿ ನಾಲ್ಕು ಕಾಸು ಉಳಿಯಲಿದೆ. ಆಲಸ್ಯದಿಂದ ಸೋಮಾರಿಗಳಾಗಿ ಕಾಲಹರಣ ಮಾಡತಕ್ಕ ದಿನಗಳು ಕಳೆದು ಹೋದವು. ಇಂದೀಗ ಒಳ್ಳೇ ಆಸಕ್ತಿಯಿಂದ ಕಾರ್ಯದಲ್ಲಿ ಪ್ರವರ್ತಿಸುವಿರಿ. ಗೃಹಸುಖವೂ ಉತ್ತಮವಾಗಿದ್ದೀತು. ಆದರೆ ಅಧಿಕಾರಿಗಳ ಆಗ್ರಹಕ್ಕೆ ನೀವು ಬೇಕೆಂದೇ ತುತ್ತಾಗಲಿರುವಿರಿ. ಉದರರೋಗ ಶಾವಜ್ವರಗಳು ಆಗಾಗ ಪೀಡಿಸುವವು. ದೇಹದಲ್ಲಿ ನಿಶ್ಶಕ್ತಿ ಹೆಚ್ಚಲಿದೆ. ಅಲ್ಪಜನರ ಸಹವಾಸದೋಷದಿಂದ ಧನಾಪಹಾರಕ್ಕೆ ತಪ್ಪಿಗೂ ಗುರಿಯಾಗುವಿರಿ. ಜಾಗ್ರತೆ—ತಾ. 19ರಿಂದ 22ರ ವರೆಗೆ ಬಹಳ ಜಾಗರೂಕರಾಗಿರತಕ್ಕದ್ದು.

Degrees. Books: Medicines.
Free H. L. M S , H. M. B, H. M. D. etc
Free Homeo Ay r-Unani-Naturo degrees.
by post also—Practioners also get soons
Homeo Materiamedica, Rs. 5. Homeo-
Practice book Rs. 4. Insanity Cure Pills
Rs. 10 Enclose 2 annas stamp:—

Principal, Indian Homeopathic Institute and Society (Govt Regd)
P. O. MAHUVA, (Kathiawar Dt, India.

Sidh-Kalpa Kavach"(Regd)
No. 3 Rs 2, No. 2 Rs. 5, No 1 Rs 7. Special Rs. 10. Extra Special Rs 17, for love, marriage health. wealth. Ask any six questions with M. O Re. 1/4 and get correct answers by return post. Life reading Rs. 2 No. V. P.P. Send M. O. Free pamphlets.

Prof Dr. N. N Chhatbar,
P. O. Mahuva. (Kathiawar, India)

NAVAYUGA
Advertisement Tariff
1 Page Rs. 25/- per insertion
½ „ Rs. 15/- „ „
¼ „ Rs. 8/- „ „
⅛ „ Rs. 5/- „ „
Per Single inch col. Re. 1 „
Contract rates on application
Manager-**Navayuga UDIPI.**

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ

"ಗೊನೊಕಿಲರ್" (ರಿಜಿಸ್ಟರ್ಡ್)

GONO KILLER

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನವ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ಜೀರ್ಣರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋರಿಯಾ ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೬೦ ಮಾತ್ರೆಗಳ ಬುದ್ದಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ಜಗತ್ಪ್ರಸಿದ್ಧ
ನಕಲಿ ಮದ್ದುಗಳಿಗೆ ಮರುಳಾಗಬೇಡಿ.
ಪತಳೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ
ಗೊನೊಕಿಲರ್" ಹೆಸರನ್ನೂ ಗಮನಿಸಿರಿ

ತಯಾರಿಸುವ ಫಿಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೊ ಹೋಮ್ಯೊಪತಿ ಡಿಸ್‌ಪೆನ್ಸರಿ.

Sole Manufacturer Dr. D. N. JASANI, Vitalbhai Patel Road, BOMBAY 4

ನವಯುಗದಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ನಿಮ್ಮ ವ್ಯವಹಾರ ವೃದ್ಧಿಗೊಳಿಸಿರಿ!

ಸ್ಥಾಪನೆ] ಕೆನರಾ ಛಾಪಖಾನೆ [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುಪ್ಪಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Kanara Printing Works,
Hampankatte, **MANGALORE**

ಮೂಲವ್ಯಾಧಿ

ಸಾಧ್ಯ ಪೊಬ್ಬನ ಸಿದ್ಧಿಯಾಗಿರುವ ವಿಚಿತ್ರ ಹಾಗೂ **ಅಪೂರ್ವ ಔಷಧಿ.**

ಅರ್ಶಮಾರಾ (ರಿಜಿಸ್ಟರ್ಡ್)

ರಕ್ತ ಬೀಳುವ ಅಥವಾ ಬೀಳದಿರುವ ಸಳೆಯು ಅಥವಾ ಹೊರ ಇವ ಒಳಗಿನ ಅಥವಾ ಹೊರಗಿನ ಯಾವಸ್ಥಿತಿಯದ್ದೇ ಆದ ಮೂಲ ವ್ಯಾಧಿಯು 'ಅರ್ಶಮಾರಾ'ವನ್ನು ಒಂದೊಮ್ಮೆ ಹಚ್ಚಿದ ಕೂಡಲೆ ಅದ್ಭುತವಾಗಿ ಗುಣಹೊಂದುತ್ತದೆ. ನೋವು ತುರಿಸುವಿಕೆ, ಉರಿಯುವಿಕೆ, ಶೀತ, ರಕ್ತಸ್ರಾವ, ಗುಪ್ತದೆಸ್ಥಲ್ಲಿ ಕೊಂಡೆ ಏಳುವುದು, ಕೇವಲ 3 ದಿನ ಹಚ್ಚಿದರೆ ಯಾವ ತರದ ಶಸ್ತ್ರಚಿಕಿತ್ಸೆಯೂ ಇಲ್ಲದೆ ಮೂಲವ್ಯಾಧಿ ಅಥವಾ ಮೊಳೆಗಳನ್ನು ಗುಣಪಡಿಸುವದು. ಈ ಔಷಧಿಯಿಂದ ಸಾವಿರಾರು ರೋಗಿಗಳು ಗುಣಹೊಂದಿ ಇತರರಿಗೆ ಅದನ್ನು ಶಿಫಾರಸು ಮಾಡುತ್ತಿದ್ದಾರೆ. ಗುಣವಾಗದಿದ್ದಲ್ಲಿ ಹಣ ವಾಪಸು. ಬೆಲೆ ರೂ. 2-0-0

ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

ಬಾಲಾರ್ಕ ಮಧು



ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ. ಅಳಬಿಟ್ಟಿರುವ ನಿಮ್ಮ ಮಕ್ಕಳು ಅದುಗನಿವಾರ್ಯವಾಗಿ ಕೇಳುವುದು. ಸೀಸೆ 1ಕ್ಕೆ 12 ಆಣೆ, ಟ.ಖ.ಆಣೆ.

ಎಸ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ.
ಉಡುಪಿ ಸ್ಟಾಕಿಸ್ಟರು:- ನವಭಾರತ ಬುಕ್‌ಡಿಪೋ, ಉಡುಪಿ

THE MOOLKY BANK, LTD.,
MOOLKY.
ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ಸಹಾಯದಿಂದ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ. ಭಂಡಾರವ ಸರಕಿನ ಈಡಿನ ಮೇಲೆ ಸೇಕಡ 7 ಪರ್ಸೆಂಟ್ ದರದಲ್ಲಿ ಸಾಲಕೊಡಲಾಗುವುದು. ನಿರಖು ಠೇವಣಾತಿ ಸೇಕಡ 5¼ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು. ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನೆರವು ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!

K. R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! ವಜ್ರಗಳು BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾವ (first quality, selected) ಎಂಬ ಸ್ಥಿತಿಯಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಹೊಸ ಪುಸ್ತಕ! ಸೆಲ್ಫ್ ಇಂಗ್ಲಿಷ್ ಸ್ಟಡಿ ಈಗಲೇ ಬರೆಯಿರಿ!

SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ 1-8-0

ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದಲು ಬರೆಯಲು, ಮಾತನಾಡುವದನ್ನು, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವದನ್ನು ಸ್ವಲ್ಪ ಅವಧಿಯಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕ ಈ ವರೆಗೆ ಯಾರೂ ತಯಾರಿಸಲಿಲ್ಲ. ದೊಡ್ಡ ಪುಸ್ತಕ, ಸ್ವಲ್ಪ ಪ್ರತಿಗಳು ಮಾತ್ರ ಇರುವವು. ಜಾಗ್ರತೆ ಬರೆಯಿರಿ. ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರ್ಯಾರೇ ಆಗಲಿ ಅವರವರು ತಮ್ಮ ಮನೆಗಳಲ್ಲಿ ಇಂಗ್ಲಿಷ್ ಕಲಿಯಬಹುದು, ಇದು ಅವರಿಗಾಗಿ ಎಲ್ಲಾ ಸೌಕರ್ಯವನ್ನು ಮನೆಯಲ್ಲೇ ಈ ಪುಸ್ತಕ ಓದಿ ಇಂಗ್ಲೀಷ್ ಓದುವದನ್ನು ಬಹಳ ಸುಲಭವಾಗಿ ಬರುತ್ತೆ. ಪುಸ್ತಕದ ಕ್ರಯ ರೂ 1—8—0.

Western Swiss Watch Co
Book Sellers, Post Box No 68
G. P. O MADRAS

ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ 68, ಮದರಾಸ್.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಶ್ರೀ. ಕೆ. ಹೊನ್ನಯ್ಯ ಶೆಟ್ಟರಿಂದ ಪೋಣಿಸಲ್ಪಟ್ಟ ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಮಾಲೆಯಿದು

ಮುಗುಳು

ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಅತ್ಯುಪಯುಕ್ತವಾದ ಸಚಿತ್ರ ಪದ್ಯ ಪುಸ್ತಕ.

(ಮದ್ರಾಸ್, ಬೊಂಬಾಯಿ, ಮೈಸೂರು ಟೆಕ್ಸ್ಟ್ ಬುಕ್ ಕಮಿಟಿಗಳಿಂದ ಮಂಜೂರಾಗಿದೆ.

ಅಭಿನಯಕ್ಕೆ, ನರ್ತನಕ್ಕೆ, ಕೋಲಾಟಕ್ಕೆ, ಎಲ್ಲಕ್ಕೂ ಅತ್ಯನುಕೂಲವಾದ, ಮಕ್ಕಳ ಮಯ್ಯುಂಬಿಸುವ ಪದ್ಯಗಳಿಂದೊಡಗೂಡಿದೆ.

ಅಧ್ಯಾಪಕರೆಲ್ಲಾ ಇದನ್ನು ಮಕ್ಕಳ ಕೈಗೆ ಕೊಟ್ಟು, ಉಲಿದಾಡಿಸಿ, ಹುರಿದುಂಬಿಸಬೇಕಾಗಿ ಪ್ರಾರ್ಥನೆ.

ಎರಡನೆಯ ಆವೃತ್ತಿ] [ಬೆಲೆ: ೦—೪—೦

ಪ್ರತಿಗಳು ... ಕೆಳಗಿನ ವಿಳಾಸಕ್ಕೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇನ್ನು ಮೇಲೆ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯಾಕ್ಯಾನಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ದುರ್ಬಳಕೆಯಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಲಿಲ್ಲವೆಂಬುದು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ

ಸದ್ವೈದ್ಯಶಾಲಾ ನಂಜನಗೂಡು ಇವರ

"ಸುಬಲಾ"

ಶಕ್ತಿಸಂಕಟ, ಮಲಬದ್ಧತೆ ಇವುಗಳನ್ನು ಹೋಗಲಾಡಿಸಿ, ರಕ್ತ ವೃದ್ಧಿ ಪಡಿಸಿ, ಶರೀರಕ್ಕೆ ಬಲವನ್ನು ಕೊಡುತ್ತದೆ ಬಹು ಉಪಯೋಗವಾಗಿರುತ್ತದೆ.

ಬ್ರಾಂಚ್:- ರಥಬೀದಿ ಮಂಗಳೂರು

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಕಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಿಯೇ ಕೊಳ್ಳಲು ಬೇಕೆನ್ನು ಮನಮಾಡುಗೆವಿ.

PRINTED BY S. S. KARANTH AT THE THULUNAD PRESS, UDIPI, AND PUBLISHED BY K. H. SHETTY AT "NAVAYUGA OFFICE, UDIPI, S. INDIA.

Registered No. M. 3618 23-5-1946

ನವಯುಗ
NAVAYUGA

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ
ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಛೇರಿ:— ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

ಭದ್ರತೆಯಿಂದಲೂ, ಖಾತ್ರಿಯುಳ್ಳ ನಫೆ ಹಂಚಿಕೆಯಿಂದಲೂ, ಜಾಗ್ರತೆಯಾಗಿ ಹಕ್ಕುಗಳನ್ನು ಕೊಡುವುದರಿಂದಲೂ ಮತ್ತು ಉದಾರವಾದ ಜೀವವಿಮೆಯ ನಿಯಮಗಳಿಂದಲೂ ಈ ಸಂಸ್ಥೆಯು ಪ್ರಖ್ಯಾತಿಪಡೆದಿರುತ್ತದೆ.

ಪ್ರೊಫೆಸರ್ **ಕೆ. ಬಿ. ಮಾಧವ,** ಎಂ.ಎ., ಎಫ್.ಆರ್.ಎ.ಎಸ್., ಎ.ಐ.ಎ (ಲಂಡನ್)
ಪ್ರೊಫೆಸರ್, ಮಹಾರಾಜ ಕಾಲೇಜು, ಮೈಸೂರು ಆಕ್ಚ್ಯುಯರಿಯವರ
ಅಭಿಪ್ರಾಯ ಸಾರಾಂಶ.

"ಕಳೆದ ೧೦ ವರ್ಷಗಳಿಂದ ನಿಮ್ಮ ಸಂಸ್ಥೆಯು ಬಹಳವಾಗಿ ಮುಂದುವರಿಯುತ್ತಿರುವುದಲ್ಲದೆ ಕಳೆದ ಮೂರು ವರ್ಷಗಳಿಂದ ಆದೇಶದ ವೆಚ್ಚ, ಬಡ್ಡಿಯ ಫಲ, ದಸ್ತಾದ ಪಾಲಿಸಿಗಳ ಸಂಖ್ಯೆ ಇವೇ ಮೊದಲಾದ ಜೀವವಿಮೆಯ ನಿಯಮಗಳನ್ನು ಉತ್ತಮಗೊಳಿಸಲು ಸಹಕಾರಿಯಾಗುವ ವಿಷಯಗಳಲ್ಲಿ ಹೊಂದಿರುವ ಅಭಿವೃದ್ಧಿಯು ತೃಪ್ತಿಕರವಾಗಿದೆ .... ಸೌಕರ್ಯ ಸಹಿತವಾದ ಅಭಿವೃದ್ಧಿಗೆ ಉದಾಹರಣೆಯಾಗಿರುವ ಏಷ್ಯಾಟಿಕ್ಕಿನ ಆಸ್ತಿಕ ಹಿತಕಾರ್ಯಕರ್ತರಿಗಾಗಿ . . ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸೂಚಿಸಲು ಉಂಟಾಗುವ ಸಂತೋಷವನ್ನು ತಳೆದು ಕೊಳ್ಳಲಾರೆನು."

ಕೊಟ್ಟಿರುವ ವಿಮಾ ಹಕ್ಕಿನ ಹಣಗಳು: ೫,೦೦,೦೦೦—೦—೦.

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

H. Venkataramiah, *Divisional Superintendent.* or **R. Purniah** *Ag. General Manager*

The Asiatic Govt. Security Life Assu Co. Ltd.,
Asiatic Building. BANGALORE CITY.

ಝಂಡು ಮಲೇರಿಯಾ ಮಿಕ್‌ಶ್ಚರ್

ಶಿಖರಾಂ ಔಷಧಿ

ಮಲೇರಿಯಾ, ವಿಷಮಜ್ವರಗಳಿಂದುಂಟಾಗುವ ಎಲ್ಲಾ ತರದ
ಕಠಿಣ ಜ್ವರಗಳಿಗೆ
ಖಾತ್ರಿಯಾದ ಸಿದ್ಧೌಷಧ
ಕ್ರಯ: ಆಣೆ 0—14—0 ಮಾತ್ರ.

ಸ್ಥಳೀಯ ಏಜಂಟರು:— **ಓ. ಎ. ಪೈ ಬ್ರದರ್ಸ್.**
ಕಾರ್ಕಳದ ಏಜಂಟರು:— **ವಿ. ವಿ. ಶೆಣೈ, ಕೆಮಿಸ್ಟ್ಸ್.**
ಮಂಗಳೂರಿಗೂ ದಕ್ಷಿಣ ಕನ್ನಡ ಜಿಲ್ಲೆಯ ಇತರ.
ಮುಖ್ಯ ಸ್ಥಳಗಳಿಗೂ ಏಜಂಟರು ಬೇಕಾಗಿದ್ದಾರೆ.
ಶರ್ತಗಳಿಗೂ ಏಜನ್ಸಿಗಳಿಗೂ ಮುಖ್ಯ ಏಜಂಟರಿಗೆ ಬರೆಯಿರಿ:—
ದಾಮೋದರ್ ಎಂಡ್ ಕೊ,
ಮುಖ್ಯ ಏಜಂಟರು,

ZANDU

78 ಚೈನಾ ಬಜಾರ್ ರೋಡ್, **ಜಿ. ಟಿ. ಮದರಾಸು**

DAMODER & CO.,
78 China Bazaar Road, **G T. MADRAS**

ಚರ್ಮವನ್ನು
ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು
ನುಣುಪಾಗಿಯೂ ನಯವಾ
ಗಿಯೂ ಇರಿಸುವ ಮತ್ತು
ದೇಹ ಸೌಂದರ್ಯವನ್ನು
ಬೆಳಗಿಸುವ ಸಾಬೂನುಗಳಲ್ಲೆಲ್ಲಾ
ಸರ್ವೋತ್ಕೃಷ್ಟವಾದುದು.
ಮೈಸೂರು
ಸೇಂಡಲ್ ಸೋಪು
ಜನಮನರಂಜನೆಯ ಈ ಸಾಬೂನನ್ನು
ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಶೀಘ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು.

ಕ್ರಯ:- 40 ಮಾತ್ರೆಗಳ ಡಬ್ಬಿ 1ರ ರೂ. 1—0—0.

ಮದನಮಂಜರಿ ಫಾರ್ಮಸಿ, 184 ಚೈನಾಬಜಾರ್ ಮದ್ರಾಸ್.

ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

ಸರ್ವಾಂಗ ಭದ್ರತೆಯ ಹಾಗೂ ಅಭಿವೃದ್ಧಿಯ ಮೇಲ್ಮೆಯನ್ನಿರುವ ಜೀವ ವಿಮಾ ಸಂಘ ಯಾವುದೆಂದು ಸದಾ ಚಿಂತಿಸುತ್ತಿರುವ ಜೀವವಿಮಾದಾರರಿಗೂ ಪ್ರಾತಿನಿಧ್ಯ ಪಡೆಯಲಪೇಕ್ಷಿಸುವ ಗೃಹಸ್ಥ ಗೃಹಿಣಿಯರಿಗೂ ಶೀಘ್ರದಲ್ಲೇ ಇಷ್ಟಾರ್ಥ ಸಿದ್ಧಿಯಾಗಬೇಕೆಂದಿದ್ದರೆ ಕೂಡಲೇ ನನ್ನೊಡನೆ ವಿಚಾರಿಸಿರಿ:—

ಶಾಖಾ ಕಾರ್ಯದರ್ಶಿ,
ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್, ಮದ್ರಾಸು.
ಮಂಗಳೂರು ಬ್ರಾಂಚ್.

THE

PANGAL NAYAK BANK LTD.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.)

Season Deposits for a period of 3, 4, 5 or 6 months are accepted at all the offices of the Bank and interest is allowed at 4% per annum till maturity or the 30th June 1940, as the case may be, whichever is earlier.

For further information please communicate with or call at any of our offices.

THE VIJAYA BANK LTD.,

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ— ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಆರಂಭಿಸಿ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಬಾಲಕರು ಆರೋಗ್ಯಶಾಲಿಗಳಾಗಲು **ಪ್ರಭೂಸ್–ಬಾಲಾಮೃತ**

ಒಂದೆರಡು ವಾರಗಳಲ್ಲಿ ಅದ್ಭುತ ಗುಣ.

— ಕಪ್ಪಾಗಿಯೂ ದಟ್ಟವಾಗಿಯೂ ಕೇಶಕಲಾಪ ತಂಪಾದ ಮೆದುಳು ಶುಭ್ರ ನೇತ್ರಗಳು ಇವುಗಳನ್ನು ಹೊಂದಲು —

ಪುಷ್ಪಗಂಧಾಮೋದಿತ **ಆಮಲಕೀ ತೈಲ** ಬಹು ಗುಣಯುಕ್ತ

ವಾಯುಮಾತ್ರೆಗಳೆಂಬ — **ಧಾನ್ವಂತರಿ ಗುಟಿಕಾ** — ಇವುಗಳನ್ನು

ಸೇವಿಸಿ ವಾಯುವೆಂಬ ರೋಗವನ್ನು ಗುಣಪಡಿಸಿಕೊಳ್ಳಿರಿ

ಮಾತ್ರೆ–12ಕ್ಕೆ 0-4-0, 25ಕ್ಕೆ 0-7-0, 50ಕ್ಕೆ 0-13-0, 100ಕ್ಕೆ 1-5-0

5 ಆಣೆಯ ಸ್ಟಾಂಪು ಕಳುಹಿಸಿದರೆ 12 ಮಾತ್ರೆಗಳನ್ನು ಕಳುಹಿಸುತ್ತದೆ.

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಕುಂಜಾಲು, ಬ್ರಹ್ಮಾವರ, ದ. ಕ.

ನಮ್ಮ ಸ್ಟಾಕಿಸ್ಟರು:–

ನವಭಾರತ ಬುಕ್ ಡಿಪೋ, ಉಡುಪಿ, ದ. ಕನ್ನಡ. ಜನರಲ್ ಸಪ್ಲೈಸ್ ಲಿಮಿಟೆಡ್, ಉಡುಪಿ ಪೋಸ್ಟ್, ದ. ಭಾರತ, ಕೆನರಾ ನ್ಯೂಸ್ ಏಜನ್ಸಿ, ವಿ. ಆರ್ ಪ್ರಭು, ಟಿ.ಟಿ.ಟವಾಲಾ ಮೆನ್ಶನ್, ಲಾಲ್‌ಬಾಗ್ ಮೆಂಬ್ರಿ ನಂಬ್ರ 12, ಗುರುಮಯ್ಯ ಲಕ್ಷ್ಮಣ ನಾಯಕ್ ಎಂಡ್ ಬ್ರದರ್ಸ್, ಕೋಟ, ದ. ಕನ್ನಡ.

ಕೋಪ್ರಾನದ ಬಿಳೀ ಟೂಥಪೇಸ್ಟ ಅಲುಗಾಡುವ ಹಲ್ಲುಗಳನ್ನು ಗಟ್ಟಿಮಾಡ್ತದೆ

ಅಲುಗಾಡುವ ಹಲ್ಲುಗಳನ್ನು ಮತ್ತೆ ಗಟ್ಟಿಮಾಡಿ ರಕ್ತ ಸೋರುವದನ್ನು ಬಂದು ಮಾಡಿ ವಸಡನ್ನು ಗಟ್ಟಿ ಮಾಡುವದು. ತಯಾರಿಸುವವರು— ಕೋಪ್ರಾನ್ ಕೆಮಿಕಲ್ ಕಂ. (ಮಾಲಕರು— ಮಗನಭಾಯಿ ಅಮೀನ್ ಆಂಡ್ ಕಂಪೆನಿ ಮುಂಬಯಿ.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

Transport & Car Owners



ARE SPECIALLY INVITED TO VISIT

OUR SHOW ROOM *for economical transport maintenance.*

CANARA AUTOMOBILES ----- MANGALORE

"ನಾಮುದಾಸಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ನಸೋನಿ ಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ.

"ಸಮಿನಾ ಟೋನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನವುಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯೂನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ

ಕಿಮ್ಮತು ರೂ. 3-0-0 ಡಬ್ಬಿ 0-8-0

ಸೊರತ್ ಫಾರ್ಮಸಿ,

ನಲ್ ಬಜಾರ್, ಡಂಕನ್ ರೋಡ್,

ಮುಂಬಯಿ. 4

Sorath Pharmacy,

Null Bazar, Duncan Road,

BOMBAY 4.

ಭಾರತೀ ಗ್ರಂಥಮಾಲೆಯ ಪುಸ್ತಕಗಳು.

ಬೆಳಕು (ಚಿಕ್ಕ ಕತೆಗಳ ಸಂಗ್ರಹ.)

ತಿನಿಸು (ಕತೆ, ಕವನ, ಪ್ರಬಂಧಗಳ ಸಂಗ್ರಹ)

ಪ್ರತೀಕಾರ (ನವಪೌರಾಣಿಕ ನಾಟಕ)

ಲೋಪಾಮುದ್ರೆ (ಪೌರಾಣಿಕ ಕತೆ)

ಚಿಗುರು (10 ಚಿಕ್ಕ ಕತೆಗಳ ಸಂಗ್ರಹ)

ಪಂಚಾರತಿ (5 ಏಕಾಂಕ ನಾಟಕಗಳ ಸಂಗ್ರಹ)

ಪ್ರತಿಯೊಂದರ ಬೆಲೆ ಹನ್ನೆರಡಾಣೆ ಮಾತ್ರ

(ಅಂಚೆವೆಚ್ಚ 0-0-6 ಪ್ರತ್ಯೇಕ)

ರೂ. 1-8-0 ಕಳಿಸಿದ್ದಲ್ಲಿ ಆರೂ ಪುಸ್ತಕಗಳನ್ನು ಕಳಿಸಲಾಗುವುದು. (ಅಂಚೆವೆಚ್ಚ ಪುಕ್ಕಟೆ)

ವ್ಯಾಪಾರಿಗಳಿಗೆ ಧಾರಾಳ ಕಮಿಶನ್.

ಪ್ರತಿಗಳಿಗೆ ಬರೆಯಿರಿ:–

ಮೆನೇಜರ್,

ನವಭಾರತ ಪುಸ್ತಕ ಭಂಡಾರ

ಉಡುಪಿ

ಇನ್ಕಮ್ ಟೇಕ್ಸ್ ಮತ್ತು ಪೋಸ್ಟೇಜ್ ಹೊರತು ವಿ ಇತರ ವಿಕ್ರಯ ಟೇಕ್ಸ್‌ಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸದಾದ ವಿಕ್ರಯ ಟೇಕ್ಸಿನ ಆಕ್ಟಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಈ ವಿಷಯದ ಜವಾಬ್ದಾರಿಯನ್ನು ತಿಳಿದಿದ್ದವರು ಸಾಲದು. ಅದರಿಂದ ತಯಾರಿಸಿದ ಸಾಧಾರಣ ಲೆಕ್ಕವು ಕೆಲವು ನಿಯಮಗಳಲ್ಲಿ ತಪ್ಪಾಗಿ ಅಧಿಕಾರಿಗೆ ಒಪ್ಪಿಗೆಯಾಗದು. ಅಂಥಾ ಘಟ್ಟಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು. ಹೆಚ್ಚಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅವಶ್ಯವಿದ್ದ ಸಲಹೆಯನ್ನು ಸಮಾಧಾನಪಡಿಸಿ ತಾಯಿ ದೆಯಿಂದ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಸಾಧಾರಣವಾಗಿ ತಿಳಿದಿರುವ ಟೇಕ್ಸು ಕಮ್ಮಿಯಾಗುವುದು. ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದು ತೀರ್ಮಾನವಾಗಬಹುದು. "ರಿಟರ್ನ" ಕಳ್ಳಿಸಿ ಹೋಗಿದ್ದರೆ ತಡಮಾಡಿಲ್ಲದೆ ಹಾಜರು ಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸಕ್ಕೆ ಬರೆದವರೊಡನೆ ಪತ್ರ ವ್ಯವಹಾರ ನಡೆಸಿರಿ.

ಎಸ್. ಎಸ್. ಪುರಾಣಿಕ,

ಇನ್ಕಮ್ ಟೇಕ್ಸ್ ಪ್ರಾಕ್ಟೀಶನರ್,

ಕೃಷ್ಣಾ ರೆಸ್ಟೋರೆಂಟ್ ಬಿಲ್ಡಿಂಗ್,

ಹಂಪನಕಟ್ಟೆ, ಮಂಗಳೂರು.

ಕನ್ನಡ ನುಡಿವೆಣ್ಣಿಗೊಂದು ಕನ್ನಡಗಿತ್ತಿಯ ತಿರುಗಾಣಿಕೆ

ನಾಡ ಸೋದರಿಯರ ನೈಜ ಜೀವನದ ದುರಂತ ಚಿತ್ರವನ್ನೂ, ಸ್ತ್ರೀ-ಪುರುಷ ಹೃದಯಗಳ ಆಳವನ್ನೂ ಹೃದಯಂಗಮವಾಗಿ ಚಿತ್ರಿಸುವ ರಮ್ಯ ಕಥಾನಕ

ವತ್ಸಲಾ

ಸಾಮಾಜಿಕ ಕಾದಂಬರಿ

ಬೆಲೆ: ೦-೭-೩.

0—8—0 ಸ್ಟಾಂಪು ಕಳುಹಿಸಿದರೆ

1 ಪ್ರತಿಯನ್ನು ಕಳಿಸಬಹುದು.

ಬರಹಗಾರ್ತಿಯರು:–

ಶ್ರೀಮತಿ ಮಟ್ಟಾಡಿ ಕಮಲಾಕ್ಷಿ

ಈ ಪುಸ್ತಕದ ಕುರಿತು ಪ್ರಾಕ್ತನ ವಿಮರ್ಶವಿಚಕ್ಷಣ ಕರ್ಣಾಟಕ ವಿದ್ಯಾವೃದ್ಧರ, ರಾವ್ ಬಹದೂರ್ ಆರ್. ನರಸಿಂಹಾಚಾರ್ಯ,F M A., M R A S. ಇವರು ಬೆಂಗಳೂರಿನಿಂದ ಹೀಗೆ ಅಭಿಪ್ರಾಯ ಕಳುಹಿದ್ದಾರೆ "ಗ್ರಂಥದ ಶೈಲಿ ಗಂಭೀರವಾಗಿಯೂ ಕೃತಿ ಯ ರಂಜಕವಾಗಿಯೂ ಇದೆ. ಪ್ರತಿಪಾದಿತವಾದ ವಿಷಯವು ನೀತಿಬೋಧಕವಾಗಿಯೂ ಮನೋಹರವಾಗಿಯೂ ಇದೆ. ಸ್ತ್ರೀಯರಿಗೆ ಯೋಗ್ಯವಾದ ಗ್ರಂಥ ......"

ಪ್ರತಿಗಳು ಸಿಗುವ ಸ್ಥಳ:

ನವಭಾರತ ಪುಸ್ತಕ ಭಂಡಾರ,

ಉಡುಪಿ.

ESTD. 1921 ಸ್ಥಾಪಿತ

FOUNDER:
SRI. A. B. SHETTY, M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

NAVAYUGA
ನವಯುಗ

ಚಂದಾ ವಿವರ:
1 ವರ್ಷಕ್ಕೆ — ರೂ. 3—4—0
6 ತಿಂಗಳಿಗೆ — ರೂ. 1-12—0

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹ ಸಂಪಾದಕ:
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೩೭

ಉಡುಪಿ, ಗುರುವಾರ, ೨೩—೫—೧೯೪೦.
UDIPI, THURSDAY, 23-5-1940.

VOL. 19
No. 37

ಹೊಲ್ಲೇಂಡ್ ಡೊಗ್ಗಾ ಉರುಳಿತು!

ಹೊಲ್ಲೇಂಡಿಗೆ ನುಗ್ಗಿದ ನಾಜೀ ಸೇನೆಯು ಎಲ್ಲಾ ಕಡೆಗಳಲ್ಲಿಯೂ ಮುಂದೊತ್ತಿ ಪ್ರಾಮುಖ್ಯ ಸ್ಥಳಗಳನ್ನು ಹಿಡಿದುಕೊಂಡುದರಿಂದ ಹೊಲ್ಲೇಂಡಿನ ಕಮಾಂಡರ್-ಇನ್-ಚೀಫ್, ತನ್ನ ಸೈನ್ಯಗಳು ಶಸ್ತ್ರತ್ಯಾಗ ಮಾಡುವಂತೆ ಹೇಳಿಕೊಂಡರು. ಜರ್ಮನಿಯ ಪ್ರಬಲ ಸೇನೆಯು ಮೋರ್ಡಿಕ್ ಸೇತುವೆಯನ್ನು ದಾಟಿತು, ರೋಟರ್ಡಾಮ್ ನಗರದ ಮೇಲೆ ಭೀಕರ ವಿಮಾನ ಧಾಳಿ ನಡೆಯಿಸಿ ಸ್ವಾಧೀನ ಪಡಿಸಿಕೊಂಡಿತು. ಹೀಗಾಗಿ ಡಚ್ ಕಾಲುವೆಯ ಹಿಂಭಾಗದಲ್ಲಿದ್ದ ಹೋಲೆಂಡಿನ ಮುಖ್ಯ ಸೈನ್ಯ ವಿಭಾಗದ ಮೇಲೂ ವೈರಿಗಳು ಬೀಳುವ ಅನುಕೂಲತೆಯೊದಗಿತು. ಇನ್ನೊಂದೆಡೆಯಲ್ಲಿ ಹೋಲೆಂಡಿನ ಹೃದಯದಂತಹ ಮುಖ್ಯ ಭಾಗದ ಕಡೆಗೆ ನುಗ್ಗಲು ಜರ್ಮನರಿಗಾತಂಕವಾವುದೂ ಉಳಿಯಲಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯೊದಗಿದಾಗ ಹೊಲ್ಲೆಂಡಿನ ಸೇನಾಧಿಪತಿಗಳು ಮೇ ತಾ 14ಲ್ಲಿ ಶಸ್ತ್ರ ಕೆಳಗಿಡಿರೆಂದು ತನ್ನ ಸೈನಿಕರಿಗೆ ಸಾರಿ ಶರಣು ಹೊಕ್ಕ ಸೂಚನಾರ್ಥವಾಗಿ ಬಿಳಿ ಧ್ವಜವನ್ನೇರಿಸಿದರು. ಹೊಲ್ಲೆಂಡಿನ ರಾಣಿಯವರು ಆ ಮೊದಲೇ ಲಂಡನಿಗೆ ಹೋಗಿ ಅಲ್ಲಿ ಸಂಭ್ರಮದ ಸ್ವಾಗತ ಪಡೆದಿದ್ದರು.

ಸೇನಾಧಿಪತಿಗಳ ಹೃದಯಸ್ಪರ್ಶೀ ಹೇಳಿಕೆ

ಹೊಲೆಂಡಿನ ಸೇನಾಪತಿ ಜನರಲ್ ವಿಂಕಲ್‌ಮನ್ ಇವರು ತನ್ನ ಶಸ್ತ್ರತ್ಯಾಗದ ಹೇಳಿಕೆಯಲ್ಲಿ ಪರಿಸ್ಥಿತಿ ತಮ್ಮ ಕಂಠ ಬಿಗಿಯುವ ವರೆಗೆ ಬಂದಿದೆ ಎಂಬುದನ್ನು ವಿವರಿಸಿ "ನಾವು ನಮ್ಮ ಸಾಧ್ಯತೆಯ ತುತ್ತ ತುದಿಯತನಕ ದೇಶರಕ್ಷಣೆ ಮಾಡಬೇಕೆಂದು ನಿರ್ಧರಿಸಿದ್ದೆವು. ದೇಶದ ಎಲ್ಲಾ ಕಡೆಗಳಿಂದ ನನಗೆ ದೊರೆತಿರುವ ವಾರ್ತೆಗನುಸಾರವಾಗಿ ನಾವಿಂದು ಆ ತುದಿಯನ್ನು ಮುಟ್ಟಿದ್ದೇವೆ. ನಿರ್ವಾಹವಿಲ್ಲದೆ ನಾವು ಆಯುಧ ಕೆಳಗಿಡಬೇಕಾಗಿ ಬಂತು. ನಮ್ಮ ಸೈನಿಕರು ಅಸಾಧಾರಣ ಧೈರ್ಯ ಸಾಹಸ ಪ್ರದರ್ಶಿಸಿದರು; ಆದರೆ ಮಾನವ ಧೀರತ್ವವನ್ನು ನಿಷ್ಫಲಗೊಳಿಸುವ ಅತ್ಯಾಧುನಿಕ ಯುದ್ಧೋಪಕರಣಗಳಿಗೆ ಇದಿರಾಗಿ ಅವರು ಸಾವಿರ ಸಂಖ್ಯೆಯಲ್ಲಿ ಮಡಿಯಬೇಕಾಯಿತು" ಎಂದರು. ಸೇನಾಪತಿಗಳು ರಾಣಿ ಮತ್ತು ಪರಿವಾರವು ಸಂರಕ್ಷಿತವಾಗಿರುವದಕ್ಕೆ ಸಂತೋಷ ಸೂಚಿಸಿ ಜನರು ಹೋಲೆಂಡಿನ ಭವಿಷ್ಯದ ಕುರಿತು ಭರವಸೆ ಇಡಬೇಕೆಂದೂ ವಿನಂತಿಮಾಡಿಕೊಂಡರು. ಲಂಡನಿನಲ್ಲಿರುವ ರಾಣಿಯವರೂ ತನ್ನ ಜನರಿಗೆ ಇದೇ ರೀತಿಯ ಸಂದೇಶವಿತ್ತಿದ್ದಾರೆ. ಆ ಶಸ್ತ್ರತ್ಯಾಗ ಆಜ್ಞೆಯು ಹೊಲ್ಲೆಂಡಿನ ಕಾಲ್ಬಲಕ್ಕೆ ಮಾತ್ರ ಅನ್ವಯಿಸುವದರಿಂದ ನೌಕಾಬಲವು ಶರಣು ಹೋಗಿಲ್ಲ. ಹೋಲ್ಲೆಂಡಿನಲ್ಲಿ ಪೆಟ್ರೋಲ್ ಮತ್ತು ಆಹಾರ ಸಾಮಗ್ರಿಗಳ ಉಪಯೋಗದ ಕುರಿತು ನಿರ್ಬಂಧಹಾಕುವ ಕಠಿಣ ಶಾಸನವು ಇಷ್ಟರಲ್ಲೇ ನಾಜಿಗಳಿಂದ ಜಾರಿಯಾಗಿದೆ

ಸಮಾಚಾರ ಸಂಗ್ರಹ

ಬೆಲ್ಜಿಯಮಿನಲ್ಲಿ ಭಯಂಕರ ಯುದ್ಧ

ಹೊಲ್ಲೆಂಡು ಶರಣು ಬಂದೊಡನೆ ಬೆಲ್ಜಿಯಮಿನಲ್ಲಿ ನಾಜೀ ಸೈನ್ಯದ ಮುನ್ನುಗ್ಗುವಿಕೆ ಮತ್ತು ಮಿತ್ರರಾಷ್ಟ್ರಗಳ ತಡೆಯು ಒತ್ತಾಟ ತೀವ್ರವಾಯಿತು. ಬೆಲ್ಜಿಯಮಿನ ನಾಮೂರ್‌ನಿಂದ ಫ್ರಾನ್ಸಿನ ಸೆಡಾನಿನ ವರೆಗಿನ ಕ್ಷೇತ್ರವು ಭೀಕರ ಯುದ್ಧರಣವಾಗಿ ಮಾರ್ಪಾಟಹೊಂದಿತು. ವಿಮಾನಗಳ ಮತ್ತು ಅಸಾಧ್ಯ ಟ್ಯಾಂಕಿಗಳ ಸಮೂಹದೊಡನೆ ಅಭೇದ್ಯ ರೀತಿಯಲ್ಲಿ ಜರ್ಮನಿ ಸೇನೆ ಧಾಳಿಯಿಟ್ಟಿತು. ಮಿತ್ರರಾಷ್ಟ್ರಗಳ ಸೇನೆಗಳೂ ವಿಮಾನಗಳೂ ಅಷ್ಟೇ ಸರ್ವಶಕ್ತಿಯಿಂದ ಜರ್ಮನಿ ಸೇನೆಯನ್ನು ತಡೆಗಟ್ಟಿ ನಿಂತವು. ತೀವ್ರವಾಗಿ ಮುಂದೊತ್ತಬೇಕೆಂಬ ಹಂಚಿಕೆಗನುಸಾರವಾಗಿ ನಾಜೀ ಸೇನೆಯು ಚಿಕ್ಕ ಕ್ಷೇತ್ರವನ್ನಾರಿಸಿಕೊಂಡು ಅಲ್ಲಿ ತನ್ನ ಸರ್ವಬಲವನ್ನು ನಷ್ಟವನ್ನು ಲೆಕ್ಕಿಸದೆ ಉಪಯೋಗಿಸುತ್ತಿರುವದೆಂದೂ, ಭಯಂಕರ ಟ್ಯಾಂಕಿಗಳನ್ನು ತಂದಿರುವರೆಂದೂ ಅಲ್ಲಿಯ ವಿಮಾನಗಳೂ ಮಿತ್ರರಾಷ್ಟ್ರಗಳವುಗಳಿಗಿಂತ ಎರಡು ಮೂರು ಪಾಲು ಮೇಲ್ದರ್ಜೆಯವುಗಳೆಂದೂ ಬೆಲ್ಜಿಯಮಿನ ವಿದೇಶಮಂತ್ರಿ ಎಮ್. ಸ್ಪಾಕ್‌ರವರೆಂದಿರುವರು. ಆದರೆ ಜರ್ಮನಿಯ ವಿಮಾನಧಾಳಿ ಮತ್ತು ಅಗೋಚರವಾಗಿ ಬಂದು ಹೊಡೆಯುವ ಹಂಚಿಕೆಯನ್ನಿದಿರಿಸಲು ತಕ್ಕ ಉಪಾಯ ಕೈಗೊಂಡಿರುವರಂತೆ. ಫ್ರಾನ್ಸಿನೊಳಗೆ ನುಗ್ಗಲಿಕ್ಕಾಗಿ ಸರ್ವಶಕ್ತಿಯನ್ನುಪಯೋಗಿಸುತ್ತಿರುವ ನಾಜೀ ಸೇನೆಯನ್ನು ಸೆಡಾನ್ ಕ್ಷೇತ್ರದಲ್ಲಿ ತಡೆದು ತೀವ್ರಗತಿಯಿಂದ ಬಂದ ಜರ್ಮನಿ ಧಾಳಿಯ ಆಟೋಪ ತಗ್ಗಿಸಿರುವರು. ಅಲ್ಲಿ ಹಲವು ದಿನಗಳ ವರೆಗೆ ಯುದ್ಧ ನಡೆಯಬಹುದೆಂಬ ನಿರೀಕ್ಷೆಯಿದೆ.

ಉದ್ವೇಗವೊಮ್ಮೆ ಶಾಂತವಾಯಿತು.

ಪ್ರಥಮ ದಿನ ಮಿಂಚಿನಂತೆ ಸೆಡಾನಿನಲ್ಲಿ ನಾಜೀಸೈನ್ಯ ಮುಂದೊತ್ತಿ ಆತುರಕ್ಕೆಡೆಯಾಗಿತ್ತು. ಆದರೆ ಮರುದಿನ ಮಿತ್ರರಾಷ್ಟ್ರಗಳ ಸೇನೆ ನಿಶ್ಚಿತ ಸ್ಥಳದಲ್ಲಿ ಆಕ್ರಮಿಸಿ ನಿಂತು ಬಲವಾಗಿ ಹೋರಾಡಿದುದರಿಂದ ವಿರೋಧಿ ಸೇನೆ ಮುಂದುವರಿಯದಂತಾಗಿ ಮ್ಯೂಸ್ ದಡದಲ್ಲಿ ತಂಗಿರುವರು. ಲೊವೇನ್ ಎಂಬಲ್ಲಿಗೆ ಭೀಕರ ಟ್ಯಾಂಕುಗಳು ಮತ್ತು ವಿಮಾನಗಳೊಡನೆ ಮುಂದುವರಿದ ನಾಜೀ ಸೇನೆಯ ಹಾದಿಯ ಸೇತುವೆಯನ್ನು ಬ್ರಿಟಿಷ್ ಸೇನೆ ಕಡಿದು ಹಾಕಿತು. ಟ್ರೈಲ್ಮಿ ಸ್ಟೇಷನನ್ನು ಹಿಡಿಯಲು ಮುಂದೊತ್ತಿದ ವಿರೋಧಿಗಳ ಮೇಲೆ ಮೂರು ಬಾರಿ ಬಿದ್ದು ಬ್ರಿಟಿಷ್ ಸೇನೆ ಹಿಂದಕ್ಕಟ್ಟಿತು. ತಮ್ಮ ಸೇನೆ ನಮೂರಿನ ನೈಋತ್ಯ ದಿಕ್ಕಿನಿಂದ ಮುಂದೊತ್ತಿ ಮ್ಯೂಸ್ ನದಿಯ ಪಶ್ಚಿಮ ಭಾಗದ ವರೆಗೆ ಆಕ್ರಮಿಸಲು ಸಮರ್ಥವಾಯಿತೆಂದೂ ಆಂಟರ್‌ಬರ್ಗಿನ ಸಮೀಪದ ವರೆಗೆ ಸೈನ್ಯ ವಿಭಾಗಗಳನ್ನು ಕಳುಹಿಸಲನುಕೂಲವಾಗಿದೆ ಎಂದೂ ಜರ್ಮನರ ಪ್ರಕಟಣೆ. ತಾ. 15ರ ಯುದ್ಧದಲ್ಲಿ ವಿರೋಧಿಗಳ 98 ವಿಮಾನಗಳೂ ತಮ್ಮ 18 ವಿಮಾನಗಳೂ ನಾಶವಾದವೆಂದು ಜರ್ಮನರೆನ್ನುತ್ತಾರೆ. ವಿರೋಧಿ ವಿಮಾನಗಳು ಜರ್ಮನಿಯ ಗಡಿಯೊಳಗೆ ಹಾರಾಡಿ ರೇಂಡರ್ ಎಂಬಲ್ಲಿ ಬಾಂಬು ಸುರಿಸಿ ಕೆಲವು ಪಟ್ಟಣಿಗರನ್ನು ಕೊಂದು ಘಾಸಿ ಮಾಡಿವವೆಂದೂ ಜರ್ಮನರ ಪ್ರಕಟಣೆಯಿದೆ. ಸೆಡಾನಿನಿಂದ ಮುಂದೊತ್ತಲು ಪ್ರಯತ್ನಿಸಿದ ವೈರಿಗಳನ್ನು ಹಿಮ್ಮೆಟ್ಟಿಸಲಾಯಿತಲ್ಲದೆ ನೇಮುರಿನಲ್ಲಿ ಧಾಳಿ ನಡೆಸಿದವರೂ ಪ್ರತಿ ಹೊಡೆತದಿಂದ ಹಿಮ್ಮೆಟ್ಟಿರುವರೆಂದು ಫ್ರಾನ್ಸು ಜಾಹೀರು ಮಾಡಿದೆ.

ಬೆಲ್ಜಿಯಮ್ ಸರಕಾರ ರಾಜಧಾನಿ ಬಿಟ್ಟಿತು

ಬೆಲ್ಜಿಯಮಿನ ಮುಖ್ಯ ಪಟ್ಟಣವಾದ ಬ್ರುಸೆಲ್ಸಿನ ಮೇಲೆ ಜರ್ಮನ್ ಧಾಳಿಯಾಗುವ ಭಯದಿಂದ ಅಲ್ಲಿಯ ಸರಕಾರವು ಒಸ್ಟೆಂಡಿಗೆ ಪಯಣಮಾಡಿದೆ. ಅಲ್ಲಿಯ ವಿದೇಶೀ ರಾಯಭಾರೀ ನಿಲಯಗಳಲ್ಲಿ ಕೆಲವು ಸ್ಥಳಬಿಟ್ಟವೆ. ಅಮೇರಿಕಾ ನಿವಾಸವೊಂದು ಅಲ್ಲೇ ನಿಂತಿದೆ. ಲೋವೇನಿನ ದಕ್ಷಿಣದಲ್ಲಿ ಬ್ರಿಟನ್-ಫ್ರಾನ್ಸ್ ಸೈನ್ಯಗಳ ತಡೆಯಿಲ್ಲದ ಪಸೆಯಿಂದ ಮುಂದುವರಿದ ತಮ್ಮ ಸೇನೆ ಬ್ರುಸೆಲ್ಸ್ ನಗರವನ್ನು ಪ್ರವೇಶಿಸಿದೆ ಎಂದು ಜರ್ಮನಿ ಹೈಕಮಾಂಡಿನ ಪ್ರಕಟಣೆಯಲ್ಲಿದೆ. ಸೆಡಾನ್ ಕ್ಷೇತ್ರದಲ್ಲಿ ತೀವ್ರ ಘರ್ಷಣೆ ನಡೆದು ಅಲ್ಲಿಯ ಕಾಡುಗಳೂ ಹಳ್ಳಿಗಳೂ ಹಲವು ಬಾರಿ ಕೈಬದಲಾವಣೆ ಹೊಂದಿದವು. ಉತ್ತರ ಕಡೆಯಿಂದ ಮುಂದೊತ್ತಿದ ನಾಜೀ ಸೇನೆ ಪಂಚಮರ್ಷಿ ಕೋಟೆಯ ಕಡೆಗೆ ಧಾವಿಸುತ್ತಿದೆ. ಲೊವೇನ್ ಜರ್ಮನರ ಹಸ್ತಗತವಾಯಿತು. ಪಂಬ್ಲಮೀನ ಸುತ್ತಲೂ ಭೀಕರ ಕದನವಾರಂಭವಾಗಿರುತ್ತದಲ್ಲದೆ ಮಧ್ಯ ಬೆಲ್ಜಿಯಮಿನಲ್ಲಿ ಮಿತ್ರರಾಷ್ಟ್ರಗಳು ಆಕ್ರಮಿಸಿಕೊಂಡಿದ್ದ ಕ್ಷೇತ್ರಗಳ ಮೇಲೆ ಅಸಹನೀಯ ಜರ್ಮನ್ ಧಾಳಿ ನಡೆಯಿತು.

ಬೆಲ್ಜಿಯಮಿನ ಸಂದಿಗ್ಧ ಪರಿಸ್ಥಿತಿ

ಬೆಲ್ಜಿಯಮು ಸರಕಾರವು ರಾಜಧಾನಿ ಬಿಟ್ಟು ಬೇರೆ ಕಡೆಗೆ ಹೋಗಬೇಕಾಗಿ ಬಂದುದರಿಂದ ಅಲ್ಲಿಯ ಪರಿಸ್ಥಿತಿ ವಿಷಮವಾಗಿದೆ ಎನ್ನಬಹುದು. ಕಳೆದ ಮಹಾಯುದ್ಧದ ಪ್ರಥಮ ವಾರದಲ್ಲಿ ಇಂತಹ ಕಷ್ಟಕಾಲವೇ ಬೆಲ್ಜಿಯಮಿಗೆ ಒದಗಿತ್ತಾದರೂ ಕೊನೆಗೆ ತಾವು ಗೆದ್ದಂತೆಯೇ ಈ ಬಾರಿಯೂ ಗೆಲ್ಲುವೆವಾಗಿ ಅಲ್ಲಿಯ ಮಂತ್ರಿ ಎಮ್. ವಾಂಡರ್ ಪೂರ್ಟೆನ್ನುತ್ತಾರೆ.

ನಿಮ್ಮ ಮನೆಯಲ್ಲಿ ಸದಾ ಆನಂದದ ಜ್ಯೋತಿಯು ಬೆಳಬೆಳಗುತ್ತಿರಬೇಕೇ? ಹಾಗಿದ್ದರೆ—

ನಂದಾದೀಪ

ಎಂಬ ಉತ್ಕೃಷ್ಟ ಚಿಕ್ಕ ಕತೆಗಳ ಪ್ರತಿಯೊಂದನ್ನಿಟ್ಟುಕೊಳ್ಳಿ.
ಕರ್ನಾಟಕದ ಪ್ರಸಿದ್ಧ ಕತೆಗಾರರಲ್ಲೊಬ್ಬರಾದ ಶ್ರೀ ಕೊರದ್ಕಲ್ ಶ್ರೀನಿವಾಸ ರಾಯರು ಬರೆದ ಮನೋಹರವಾದ ಹನ್ನೊಂದು ಕತೆಗಳ ಸಂಗ್ರಹ.
ಪ್ರತಿಯೊಂದು ಕತೆಯೂ ನಿಮ್ಮ ಹೃದಯದಲ್ಲೊಂದು ಬಗೆಯ ಹೊಸ ಬೆಳಕನ್ನು ಬೆಳಗಿಸುವುದು.
ಬೆಲೆ: 0-8-0 ಟಪ್ಪಾಲು ದ್ವಾರ: 0-9-0

ಕಿರಿಯರ ಪ್ರಪಂಚ, ಉಡುಪಿ.

(0-9-0 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.)

ಜರ್ಮನ್ ಸೇನೆ ಮೆಜಿನೆಟ್ ಕೋಟೆಯ ಬಾಲ ಮುರಿದು ಫ್ರಾನ್ಸಿಗೆ ನುಗ್ಗಿತು!

ಫ್ರಾನ್ಸ್ ರಣಕಣದಲ್ಲಿ ಜರ್ಮನಿಯು ಸರ್ವತ್ರಾಣವನ್ನು ಪ್ರಯೋಗಿಸುತ್ತಿದೆ!

ಮೇ ತಾ 17ರಲ್ಲಿ ಇಂದಿನ ಯುದ್ಧದ ಒಂದು ಮಹತ್ವಾದ ದಿನವೆನ್ನಬಹುದು. ಆದಿನ ಮಿತ್ರರಾಷ್ಟ್ರಗಳ ಪರಿಸ್ಥಿತಿಯ ಕುರಿತು ಆತಂಕವನ್ನು ಹುಟ್ಟಿಸುವ ದುರ್ಘಟನೆಯೊದಗಿತು. ಬೆಲ್ಜಿಯಮ್ ರಣಕಣದಲ್ಲಿ ಅತ್ಯಂತ ಸಂಘಟನೆಯಿಂದ ಮುಂದೊತ್ತಿದ ಜರ್ಮನ್ ಸೇನೆ ಫ್ರಾನ್ಸಿನ ಮೆಜಿನೆಟ್ ಕೋಟೆಯ ದುರ್ಬಲ ಭಾಗವೊಂದನ್ನು ಪುಡಿಗುಟ್ಟಿ ಫ್ರಾನ್ಸಿನೊಳಗೆ ನುಗ್ಗಿತು. ಜರ್ಮನರು ಧ್ವಂಸಮಾಡಿದ ಭಾಗವು ನಿಜವಾದ ಮೆಜಿನೆಟ್ ಕೋಟೆಯಲ್ಲವೆಂದೂ ಬೆಲ್ಜಿಯಮ್ ಗಡಿಗೂ ಹರಡಿರುವ ಅದರ ಅಲ್ಪಭಾಗ ಮಾತ್ರವೆಂದೂ ತಿಳಿದು ಬರುತ್ತದೆ. ಆ ಭಾಗವನ್ನು ಕಳೆದ ಹನ್ನೆರಡು ತಿಂಗಳುಗಳೊಳಗೆ ಹೊಸದಾಗಿ ಕಟ್ಟಿದ್ದರಂತೆ.

ಜರ್ಮನ್ ವಿಜಯಕ್ಕೆ ಕಾರಣವೇನು?

ಬೆಲ್ಜಿಯಮ್ ರಣಕಣವನ್ನು ದಾಟಿ ಫ್ರಾನ್ಸಿನ ಗಡಿಯೊಳಗೆ ದೂರದವರೆಗೂ ನುಗ್ಗಿದ ಜರ್ಮನ್ ಸೇನಾ ವಿಜಯವು ಕೋಲಾಹಲವನ್ನುಂಟುಮಾಡಿದೆ. ಜರ್ಮನಿಯ ಬಹು ಬಲವುಳ್ಳ ಟ್ಯಾಂಕುಗಳು ನೆಲದಮೇಲೆ ಅವ್ಯಾಹತವಾಗಿ ಹಾದಿಮಾಡಿಕೊಂಡು ಮುಂದೊತ್ತುವಾಗ ಮೇಲಿನಿಂದ ಅತಿ ತಗ್ಗಿನಲ್ಲಿ ಹಾರಾಡುವ ವಿಮಾನಗಳು ಅವುಗಳಿಗೆ ಸಹಾಯ ಮಾಡುತ್ತಾ ಬರುತ್ತಿದ್ದವು. ಈ ಭಾಗದಲ್ಲಿ ಬ್ರಿಟಿಷ್ ವಿಮಾನ ಬಲವು ಅಸಾಧಾರಣ ಯುದ್ಧ ಶಕ್ತಿಯನ್ನು ಪ್ರದರ್ಶಿಸಿರುವದೆಂದು ತಿಳಿದು ಬರುತ್ತದೆ. ಈ ವಿಮಾನಗಳೊಡನೆ ಹೋರಾಡುವ ಸಂದರ್ಭ ಬಂದಾಗಲೆಲ್ಲಾ ಜರ್ಮನಿ ವಿಮಾನಗಳು ತಪ್ಪಿಸಿಕೊಳ್ಳುತ್ತಿದ್ದುವಂತೆ. ನಾಜೀ ಮತ್ತು ಬ್ರಿಟಿಷ್ ವಿಮಾನಗಳನ್ನೂ ವೈಮಾನಿಕರನ್ನೂ ತುಲನೆ ಮಾಡಿದರೆ ಬ್ರಿಟಿಷರ ವಿಮಾನ ದಳವೇ ಮೇಲ್ಗೈ ಎಂದು ಸ್ಪಷ್ಟವಾಗಿದೆ. ಜರ್ಮನಿಯಲ್ಲಿ ಪೆಟ್ರೋಲಿನ ಮತ್ತು ವಿಮಾನ ಚಾಲಕರ ತರಬೇತಿಯ ಅಭಾವವಿರುವದೇ ಈ ಕೊರತೆಗೆ ಕಾರಣವೆಂಬ ಊಹೆಯಿದೆ. ಪ್ರಥಮ ಬಾರಿಯ ಈ ಧಾಳಿಯಲ್ಲಿ ಜರ್ಮನಿ ಸೇನೆ ಗೆದ್ದುದು ನಿಜವಾದರೂ ಕೊನೆಯ ಪರಿಣಾಮದ ಕುರಿತು ಲಂಡನ್ ಮತ್ತು ಪ್ಯಾರಿಸಿನವರು ತಾವು ಗೆಲ್ಲುವೆವೆಂಬ ಪೂರ್ತಿ ಭರವಸೆಯಿಂದಿದ್ದಾರೆ. ಮುಂದಿನ ಧಾಳಿಯು ಮಿತ್ರರಾಷ್ಟ್ರಗಳ ಪ್ರಯಾಣಾನುಕೂಲತೆಗಳನ್ನು ಭಂಗಿಡಿಸುವರೆ ಈಶಾನ್ಯ ದಿಕ್ಕಿನಿಂದಾಗಲೀ, ನೈಋತ್ಯ ದಿಕ್ಕಿನಲ್ಲಾಗಲೀ ನಡೆಯಬಹುದೆಂಬ ಊಹೆಯಿದೆ. ಅಷ್ಟರೊಳಗೆ ಫ್ರೆಂಚರು ಎರಡೂ ಕಡೆಯಲ್ಲಿ ಸರ್ವಸನ್ನದ್ಧರಾಗುವರೆಂದೂ ಜರ್ಮನಿ ಕಡೆಯವರ ಪೆಟ್ರೋಲ್ ಸಂಗ್ರಹವು ಅಷ್ಟರಲ್ಲೇ ಬರಿದಾಗಿರುತ್ತದೆಂದೂ ತಿಳಿದುಬರುತ್ತದೆ.

ಸೈನ್ಯ ರಹಿತ ನಗರದ ಮೇಲೆ ಬೋಂಬು

ಫ್ರಾನ್ಸ್ ಬೆಲ್ಜಿಯಮುಗಳ ಗಡಿನಾಡಿನ ಪಟ್ಟಣವೊಂದರ ಮೇಲೆ ಜರ್ಮನರು ವಿಮಾನ ಧಾಳಿಯಿಟ್ಟು ಹಲವು ನಿಶ್ಶಸ್ತ್ರ ನಾಗರೀಕರನ್ನು ಕೊಂದಿರುವರು. ಯುದ್ಧ ಕ್ಷೇತ್ರವಲ್ಲದ ಆ ಪಟ್ಟಣದಲ್ಲಿ 35000 ಜನ ಸಂಖ್ಯೆಯಿದ್ದು 20000ದ ವರೆಗಿನ ನಿರ್ಗತಿಕರು ಅಲ್ಲಿ ತಂಗಿದ್ದರಂತೆ. ಅಲ್ಲಿಯ ರೈಲ್ವೇ ಸ್ಟೇಶನು, ರಸ್ತೆಗಳು ಮತ್ತು ಕಟ್ಟೋಣಗಳ ಮೇಲೆಲ್ಲಾ ಬೋಂಬಿನ ಮಳೆ ಸುರಿದು ಪಟ್ಟಣವಿಡೀ ಯಜ್ಞಕುಂಡದಂತೆ ಧಗಧಗಿಸುತ್ತಿತ್ತು. ಫ್ರಾನ್ಸಿನೊಳಗೆ ಮುಂದೊತ್ತಿದ ನಾಜೀ ವಿಮಾನಗಳು ಮಾರ್ಲೆ ಎಂಬಲ್ಲಿನ ಆಸ್ಪತ್ರೆಯ ಮೇಲೂ ಬೋಂಬು ಚೆಲ್ಲಿರುವವು. ಮತ್ತು ಪಟ್ಟಣದ ಕೆಲವು ಭಾಗಗಳನ್ನು ಪುಡಿಮಾಡಿರುವವು.

ಜರ್ಮನಿಯ ವಿಜಯೋದ್ಗಾರ

ಜರ್ಮನಿಯ ಪ್ರಕಟಣೆಯೊಂದರಲ್ಲಿ ಫ್ರಾನ್ಸಿನ ಮೆಜಿನೆಟ್ ಕೋಟೆಯನ್ನು 100 ಕಿಲೋಮೀಟರಿನಷ್ಟು ಉದ್ದಕ್ಕೆ ಪುಡಿಗುಟ್ಟಿ ತಮ್ಮ ಸೈನ್ಯ ಮುನ್ನುಗ್ಗಿತು. ಡಿನಾಂಟ್ ಎಂಬಲ್ಲಿಯ ಪಶ್ಚಿಮ ದಿಕ್ಕಿನಲ್ಲಿ ತಮ್ಮ ಟಾಂಕಿಗಳನ್ನಿದಿರಿಸಿದ ಸಶಸ್ತ್ರ ಫ್ರೆಂಚ್ ಸೇನೆ ಸೋತು ಹೋಯಿತು; ಸಿಡಾನ್‌ನಲ್ಲಿ ಇಬ್ಬರು ಸೇನಾಧಿಕಾರಿಗಳು ಮತ್ತು ಕೆಲವು ಗನ್ನುಗಳ ಸಮೇತ 12 ಸಾವಿರ ಜನರನ್ನು ಸೆರೆಹಿಡಿದಿರುವೆವು. ತಮ್ಮ ರಾಸ್ಟಾಟ್ ಎಂಬ ನಿಶ್ಶಸ್ತ್ರ ನಗರದ ಮೇಲೆ ಬೋಂಬು ಹಾಕಿದ್ದಕ್ಕೆ ಪ್ರತೀಕಾರವಾಗಿ ಫ್ರಾನ್ಸಿನ ಡಾಗೆನಾವ್ ನಗರದ ಮೇಲೆ ಬೋಂಬು ಸುರಿಸಿದೆವು ಎಂದು ಹೇಳಲಾಗಿದೆ. ಉತ್ತರ ಸಮುದ್ರದಲ್ಲಿ ಕೆಲವು ವಿರೋಧೀ ಹಡಗುಗಳು ಸಬ್‌ಮೆರಿನುಗಳಿಗೆ ಹಾನಿಮಾಡಿದ್ದಲ್ಲದೆ 59 ಯುದ್ಧ ವಿಮಾನಗಳನ್ನುರುಳಿಸಿದೆವೆಂದು ಜರ್ಮನ್ ಪ್ರಕಟಣೆಯಲ್ಲಿದೆ.

ಜರ್ಮನ್ ಸೇನೆ 30 ಮೈಲು ಮುಂದೊತ್ತಿತು

ಫ್ರಾನ್ಸಿನೊಳಗೆ ನುಗ್ಗಿದ ಜರ್ಮನ್ ಸೈನ್ಯವು ತನ್ನ ಅತಿರೇಕ ನಷ್ಟವನ್ನು ಕಡೆಗಣಿಸಿ ಎಲ್ಲಾ ಶಕ್ತಿಯನ್ನೂ ಪ್ರಯೋಗಿಸಿ ತಾ. 17ರಲ್ಲಿ 30 ಮೈಲುಗಳ ವರೆಗೆ ಮುನ್ನುಗ್ಗಿರುವದು. ಈ ಧಾಳಿಯಲ್ಲಿ ನಾಜಿಗಳು ಭೀಕರ ಟಾಂಕಿಗಳನ್ನೇ ಅತಿರೇಕವಾಗಿ ಉಪಯೋಗಿಸಿದ್ದರೆಂದು ತಿಳಿದು ಬರುತ್ತದೆ. ಇಲ್ಲಿಯ ಯುದ್ಧವು ಕೆಲವು ವಾರಗಳ ತನಕ ನಡೆಯಬಹುದೆಂದು ತಿಳಿದುಬರುತ್ತದೆ. ತಮ್ಮ ನಷ್ಟವನ್ನು ಗಣಿಸದೆ ಯಂತ್ರದಂತೆ ಒಂದೇಸಮನೆ ಮುಂದೊತ್ತುತ್ತಿರುವ ಜರ್ಮನಿ ಸೇನೆಯು ವಿರೋಧಿಗಳಿಗಿಂತ ಎರಡು ಮೂರು ಪಾಲಷ್ಟು ಹೆಚ್ಚಿನ ನಷ್ಟಕ್ಕೊಳಗಾಗಬೇಕಾಯಿತು. ಈ ಕಡೆಯ ಕೆಲವು ಗ್ರಾಮಗಳು ಹಲವು ಬಾರಿ ಫ್ರಾನ್ಸು ಜರ್ಮನಿ ಸೈನ್ಯಗಳೊಳಗೆ ಕೈಬದಲಾವಣೆ ಹೊಂದಿವೆವು.

ಪ್ಯಾರಿಸ್ ಶಾಂತವಾಗಿದೆ.

ಉತ್ತರ ಫ್ರಾನ್ಸಿನೊಳಗೆ ಬಂದ ಜರ್ಮನ್ ಸೇನೆಯ ಸಂಖ್ಯೆ ಬಹಳವಿರುವದೆಂಬ ಭಯೋದ್ವೇಗವು ಪ್ಯಾರಿಸಿನಲ್ಲಿ ಗಾಳಿಸುದ್ದಿಗಳ ಮೂಲಕ ಹರಡಿದ್ದರ ಕುರಿತು ಫ್ರಾನ್ಸಿನ ಮುಖ್ಯ ಮಂತ್ರಿ ರೈನೋರವರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿರುವರು. ಈ ಸುದ್ದಿಯು ಬೆಲ್ಜಿಯಮು ಕಡೆಯಿಂದ ಸ್ಥಾನಚ್ಯುತರಾಗಿ ಬಂದಿದ್ದವರು ತಳಮಳಗೊಂಡು ಹಬ್ಬಿಸಿದ್ದೆಂದೂ ನಿರಾಧಾರವಾದುದೆಂದೂ ಅಭಯ ದೊರಕಿದೆ. ಫ್ರಾನ್ಸು ತನ್ನ ರಕ್ಷಣೆಮಾಡಿಕೊಳ್ಳಲು ಶಕ್ತವಿರುವದೆಂದು ರೈನಾಡರು ಉದ್ಘೋಷಿಸಿದ್ದಾರೆ. ಪ್ಯಾರಿಸಿನ ಜನರ ಚಲನವಲನೆಗಳಿಗೆ ಕೆಲವು ನಿರ್ಬಂಧ ಹಾಕಲ್ಪಟ್ಟು ಅಲ್ಲಲ್ಲಿ ಸೈನಿಕ ಕಾವಲನ್ನಿರಿಸಲಾಗಿದೆಯಾದರೂ ಪಟ್ಟಣವು ಶಾಂತವಾಗಿದೆ. ಯುದ್ಧಕ್ಷೇತ್ರಗಳ ಸ್ಥಾನಭ್ರಷ್ಟರನ್ನು ತುಂಬಿಸಿಕೊಂಡು ಬರುವ ಮೋಟಾರುಕಾರು ಮತ್ತು ಲೋರಿಗಳ ಚಲನವಲನವು ವಿಶೇಷವಾಗಿದ್ದು ಪ್ಯಾರಿಸಿನ ಉತ್ತರ ಗಡಿಯ ಮುಖ್ಯ ದ್ವಾರದಲ್ಲಿ ಮಿಕ್ಕವರು ಪ್ರವೇಶಿಸದಂತೆ ತಡೆ ಹಾಕಲಾಗಿದೆ. ಫ್ರಾನ್ಸಿನ ಪರಿಸ್ಥಿತಿಯು ಬಹಳ ಕಠಿಣವಾಗಿರುವದಾದರೂ ಕೊನೆಯ ಪರಿಣಾಮದ ಕುರಿತು ಅನುಮಾನವೇ ಇಲ್ಲವೆಂದು ಲಂಡನಿನಲ್ಲಿ ಭರವಸೆಯಿದೆ.

ಮಿ. ಚರ್ಚಿಲ್ಲರ ಯುದ್ಧ ಸಂಚಾರ

ಇಂಗ್ಲಾಂಡಿನ ಪ್ರಧಾನರಾದ ಮಿ. ಚರ್ಚಿಲ್ಲರು ಪಶ್ಚಿಮ ರಣರಂಗದ ಕಡೆಗೆ ಪ್ರಯಾಣ ಬೆಳೆಸಿ ಪ್ಯಾರಿಸಿನಲ್ಲಿ ಮುಖ್ಯ ಮಂತ್ರಿ ರೈನೋರೊಡನೆಯೂ ಜನರಲ್ ಗ್ಯಾಮ್ಲಿನರೊಡನೆಯೂ ಮಾತಾಡಿ ಬಂದಿರುವರು. ತಾ. 17ರಲ್ಲಿ ಯುದ್ಧ ಮಂಡಲದ ಸಭೆಯಲ್ಲಿ ಫ್ರಾನ್ಸ್ ಯುದ್ಧದ ಸ್ಥಿತಿಗತಿಗಳನ್ನು ವಿವರಿಸಿದವರು. ಫ್ರಾನ್ಸ್ ಸರಹದ್ದಿನ ಆರ್ಡೆನ್ಸ್ ಎಂಬಲ್ಲಿಯ ಪರ್ವತಪ್ರದೇಶದಲ್ಲಿ ಮಿಕ್ಕ ಕಡೆಗಳಿಗಿಂತ ಫ್ರಾನ್ಸ್ ಸೇನೆ ಕಡಿಮೆ ಸಂಖ್ಯೆಯಲ್ಲಿದ್ದು ಜರ್ಮನರು ಆ ಭಾಗದ ಮೇಲೆ ಅಕಸ್ಮಾತ್ತಾಗಿ ಪ್ರಬಲ ಧಾಳಿ ನಡೆಯಿಸಿದುದರಿಂದ ನಾಜೀ ಸೇನೆ ಮುಂದೊತ್ತುವಂತಾಯಿತೆಂದೂ ತಿಳಿದುಬರುತ್ತದೆ. ಪ್ರಬಲ ಟಾಂಕಿಗಳು ಮತ್ತು ತಗ್ಗಿನಲ್ಲಿ ಹಾರಾಡುವ ಜರ್ಮನ್ ವಿಮಾನಗಳಲ್ಲಿ ಕೆಲವು ಆಕಾಶದ ಕಡೆಗೂ ಮುಂದುವರಿದುದರಿಂದ ಬೆಲ್ಜಿಯಮಿನಲ್ಲಿ ಹೋರಾಡುತ್ತಿದ್ದ ಮಿತ್ರರಾಷ್ಟ್ರಗಳ ಸೇನೆಗಳು ಸುಸ ಹಿಂದೆ ಸರಿದು ಬ್ರುಸೆಲ್ಸಿನ ಪಶ್ಚಿಮಭಾಗದಲ್ಲಿ ಠಾವೂರಬೇಕಾಯಿತಂತೆ. ಜರ್ಮನಿಯ ವಿಮಾನ ದಳದ ಪ್ರಾಬಲ್ಯವು ಒಂದು ಮುಖ್ಯ ತೊಂದರೆಯಾಗಿರುವದೆಂದೂ, ಅತಿ ತಗ್ಗಿನಲ್ಲಿ ಹಾರಿ ಬೋಂಬುಹಾಕುವ ಅವುಗಳನ್ನು ತಡೆಯಲು ಸಾಧ್ಯವಾದರೆ ಧಾಳಿಕಾರರನ್ನು ಜಯಶೀಲವಾಗಿ ಹಿಂದಕ್ಕಟ್ಟಲು ಸಾಧ್ಯವಾಗುವದೆಂದೂ ಅಂದಾಜುಮಾಡಲಾಗಿದೆ.

THE
BOMBAY LIFE ASSURANCE
Company Limited.
[ESTD. 1908]
COMPARE
Your Life Assurance with any other property you possess what is its guaranteed value
If you live-today-a few years more-when you are old?
If you die-to your family and dependants?
REMEMBER THAT If you live, Life Insurance takes the place of your professional income during your old age.
If you die, it provides your family with enough income for their maintenance and the education of your children.
"BOMBAY LIFE" offers all that is best in Life Assurance.
1938 Record.

Completed Business	... ...	Rs.	1,44,91,000
Life Assurance Fund	... ...	Rs.	1,17,69,748
Total Assets	... ...	Rs.	1,31,28,998

To Insure or to represent it pays you to consult
KOCHIKAR BROTHERS LTD.,
MADRAS BRANCH SECRETARIES,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI.

Post Box No. 337, Mount Road, MADRAS	Visweswarapuram Circle BANGALORE CITY.	Charni Road, Girgaum, BOMBAY No. 4.
Car Street, MANGALORE.	Puthiyara, CALICUT.	Central Station Road, TRIVANDRUM.

ಭಾರತದ ನವಸಚಿವ ಮಿ. ಸ್ಟೆನೆಟ್ ಅಮೆರಿ.

ಹೊಸ ನೇಮಕವಾಯಿತು! - - - - ಹೊಸ ಆಸೆಗಾಸ್ಪದವಿದೆಯೆ?



ಭಾರತ ಕಾರ್ಯದರ್ಶಿ ಸ್ಥಾನದ ಹೊಸ ನೇಮಕಕ್ಕೆ ಮಹತ್ವಕೊಡಬಾರದೆಂದು ಹೇಳಿದ
ಪಂಡಿತ ನೆಹರು

ಇಂಗ್ಲಾಂಡಿನಲ್ಲಿ ಮಿ. ಚೇಂಬರ್ಲಿನರ ಪತನವಾಗಿ ಮಿ. ಚರ್ಚಿಲ್ಲರು ಪ್ರಧಾನ ಮಂತ್ರಿಗಳಾದರು. ಅದನ್ನನುಸರಿಸಿ ಭಾರತ ಕಾರ್ಯದರ್ಶಿಯಾಗಿದ್ದ ಲೋರ್ಡ್ ಜೆಟ್ಲೆಂಡರು ಸ್ಥಾನಚ್ಯುತರಾಗಿ ಮಿ. ಅಮೆರಿಯವರು ಆ ಪದವಿಗೆ ಬಂದರು. ಈ ಬದಲಾವಣೆಯಿಂದ ಭಾರತದ ರಾಜಕೀಯದ ಮೇಲೆ ಏನಾದರೂ ವಿಶೇಷ ಪರಿಣಾಮವಾಗಬಹುದೆ? ಎಂಬ ಪ್ರಶ್ನೆಯೆದ್ದಿದೆ. ಈ ಕುರಿತು ಪ್ರಶ್ನಿಸಲ್ಪಟ್ಟಾಗ ಪಂಡಿತ ನೆಹರುಗಳಂದಿದ್ದಾರೆ: "ಭಾರತದ ಸಮಸ್ಯೆಗೂ ಅಧಿಕಾರದ ಗದ್ದುಗೆಯನ್ನು ಹತ್ತಿಳಿವ ವ್ಯಕ್ತಿಗಳಿಗೂ ಹೆಚ್ಚಿನ ಸಂಬಂಧವೇನೂ ಇಲ್ಲ. ಅದು ನಮ್ಮ ಸ್ವನಿರ್ಧಾರ ಮತ್ತು ಪರಿಸ್ಥಿತಿಯನ್ನು ಹೊಂದಿಕೊಂಡಿರತಕ್ಕ ವಿಷಯ." ನೆಹರುಗಳ ಈ ಮಾತು ಕೆಲವರ ಅನಗತ್ಯ ಆತುರಕ್ಕೊಂದು ದಿವ್ಯೌಷಧವೆನ್ನಬೇಕು. 'ಇಂಡಿಯಾ ಸೆಕ್ರೆಟರಿ ಹುದ್ದೆ'ಯಲ್ಲಿ ಸ್ವತಃ ಮಹತ್ವವಿರುವ ಪ್ರಭಾವವು ಅಸ್ಪಷ್ಟವಾಗಿರುವ ವರೆಗೆ ಅದನ್ನು ಹತ್ತುವ ಇಳಿವವರ ವ್ಯಕ್ತಿತ್ವದ ಕಡೆಗೆ ವಿಶೇಷ ಲಕ್ಷ್ಯಕೊಡಬೇಕೆಂದೇನೂ ಇಲ್ಲ. ಆದರೆ ಧೋರಣೆಯನ್ನು ರೂಪಿಸುವ ಕೆಲಸದಲ್ಲಿ ಈ ಗದ್ದುಗೆಯಲ್ಲಿರುವವರ ಕೈ ಮುಖ್ಯವಾಗಿ ಇರಬೇಕಾಗಿದೆ. ಆ ಮುಷ್ಟಿಗೆ ಹೇಗಾಗಬಹುದೆಂದು ಊಹಿಸುವದೂ ತಪ್ಪಲ್ಲ.

ಚರ್ಚಿಲ್ಲರ ಖಂಡ ತುಂಡ ಧೋರಣೆ

ಈಗಿನ ಮುಖ್ಯ ಮಂತ್ರಿ ಮಿ. ಚರ್ಚಿಲ್ಲರು ಭಾರತಕ್ಕೆ ಅಪರಿಚಯಸ್ಥರಲ್ಲ. 1931ರ ಸತ್ಯಾಗ್ರಹ ಸಮಯದ ವೇಳೆಯಲ್ಲಿ "ಅರೆಬತ್ತಲೆ ಫಕೀರನು ಘನ ಸಾಮ್ರಾಜ್ಯದ ಪ್ರತಿನಿಧಿಯೊಡನೆ ಸಂಭಾಷಿಸುವದೆಂದರೇನು?" ಎಂದು ಆ ಕಾಲದ ಗಾಂಧೀ-ವೈಸರಾಯರ ಭೇಟಿಗಾಗಿ ಹೀಯ್ಯಾಳಿಸಿದವರು ಇದೇ ಚರ್ಚಿಲ್ಲರು! ಈಗ ಚರ್ಚಿಲ್ಲರ ಕೈಕೆಳಗೆ ವಿದೇಶ ಮಂತ್ರಿಯಾಗಿರುವ ಲೋರ್ಡ್ ಹೆಲಿಫೇಕ್ಸರು—ಅಂದಿನ ಲೋರ್ಡ್ ಇರ್ವಿನರು—ಗಾಂಧಿಯವರನ್ನು ಸಂಧಾನಕ್ಕಾಗಿ ಕರೆದವರು. ಬ್ರಿಟನ್-ಭಾರತ ಸಂಬಂಧದ ಪ್ರಶ್ನೆಗಿಂತ ಕಠಿಣತಮವಾದ ಬೇರೆ ಸಮಸ್ಯೆಯು ಇಂಗ್ಲಾಂಡನ್ನಿದಿರಿಸದ ಕಾಲವಾಗುತ್ತಿದ್ದರೆ ಮಿ. ಚರ್ಚಿಲ್ಲರ ಸ್ವರ ಬದಲಾವಣೆಯಾಗಿರಬಹುದೆಂದು ಈಗ ಕೂಡ ನಿರೀಕ್ಷಿಸಲು ಸಾಧ್ಯವಿರಲಿಲ್ಲ. ಬ್ರಿಟಿಷ್ ಸಾಮ್ರಾಜ್ಯ ರಕ್ಷಣೆಗಾಗಿ ನಡುಬಿಗಿದ ಪ್ರಥಮ ಶ್ರೇಣಿಯ ನಾಯಕರಲ್ಲಿ ಮಿ. ಚರ್ಚಿಲ್ಲರು ಅಗ್ರಗಣ್ಯರು. ಅಂಥವರ ಸೂತ್ರಚಾಲನೆಗೊಳಗಾಗಿರುವ ಭಾರತ ಕಾರ್ಯದರ್ಶಿಯ ಧೋರಣೆಯ ಕುರಿತು ಪ್ರತ್ಯೇಕವಾಗಿ ವಿಚಾರಿಸಿ ತಿಳಿದುಕೊಳ್ಳುವ ಅಂಶವೇನೂ ಇಲ್ಲ. ಆದರೆ ಈಗಿನ ಪರಿಸ್ಥಿತಿಯಲ್ಲಿ ಖಂಡತುಂಡ ವರ್ತನೆಯ ಮಿ. ಚರ್ಚಿಲ್ಲರಿಗಾಗಿ ನಾವು ಭಯಪಡಬೇಕಾಗಿಲ್ಲ. "ಸರ್ವವನ್ನು ಬಲಿದಾನ ಮಾಡಿಯಾದರೂ ಯುದ್ಧ ಜಯಿಸಬೇಕು" ಎಂಬ ಶಪಥದೊಡನೆ ಗದ್ದುಗೆಯೇರಿದ ಚರ್ಚಿಲ್ಲರ ತ್ಯಾಗಗಳಲ್ಲಿ ಭಾರತ ಸಂಬಂಧವೂ ಒಂದಾಗಿ ಸೇರುವ ಸಂದರ್ಭ ಬರಬಹುದು. ಅಂತಹ ಸಂದರ್ಭಗಳಲ್ಲಿ ನಿಸ್ಸಂಕೋಚತ್ವದಿಂದ ವರ್ತಿಸಬಲ್ಲ ಮಿ. ಚರ್ಚಿಲ್ಲರಂಥವರಿಂದ ಕೆಡುಕಿಲ್ಲ.

ಯಥಾರ್ಥವಾದಿ ಮಿ. ಅಮೆರಿ

ಮುಖ್ಯ ಮಂತ್ರಿಯು ಭಾರತ ವಿಚಾರಗಳಲ್ಲಿ ಧೋರಣೆಯ ಉಗಮಸ್ಥಾನ ಮಾತ್ರ. ಎಲ್ಲಾ ವಿಷಯಗಳ ದಿಗ್ದರ್ಶಕನೆಂದರೆ ಭಾರತ ಕಾರ್ಯದರ್ಶಿ. ಲೋರ್ಡ್ ಜೆಟ್ಲೆಂಡರು ಹೋಗಿ ಮಿ. ಅಮೆರಿಯವರು ಬಂದುದರಿಂದ ಭಾರತದಲ್ಲಾರೂ ವ್ಯಸನಪಟ್ಟಿಲ್ಲ. ಬದಲಾಗಿ ಸ್ಥೂಲ ರೂಪದಲ್ಲಾದರೂ ಸೂಕ್ಷ್ಮವಾಗಿ ಒಂದು ರೀತಿಯ ಸಮಾಧಾನವೇ ಪ್ರದರ್ಶಿಸಲ್ಪಟ್ಟಿದೆ. ಶ್ರೀ. ಸತ್ಯಮೂರ್ತಿಗಳು ಲೋರ್ಡ್ ಜೆಟ್ಲೆಂಡರ ಪತನಕ್ಕಾಗಿ ಸಂತೋಷ ಸೂಚಿಸಿ ಮಿ. ಅಮೆರಿಯವರು ಪರಿಸ್ಥಿತಿಗನುಸಾರವಾಗಿ ವರ್ತಿಸಬಲ್ಲ ಸ್ಟೇಟ್ ಸೆಕ್ರೆಟರಿ ಎಂದು ಹೊಗಳಿದ್ದಾರೆ. ಮಾನವ ಹಕ್ಕು ಮೊದಲಾದ ತತ್ವಗಳನ್ನು ಬದಿಗಿಟ್ಟು ಕೇವಲ ತುಲನಾತ್ಮಕ ದೃಷ್ಟಿಯಿಂದ ನೋಡಿದಲ್ಲಿಯೂ ಭಾರತವು ಸ್ವಾತಂತ್ರ್ಯ ಪಡೆಯುವ ಪರಿಸ್ಥಿತಿಗೆಂದೋ ಮುಟ್ಟಿತ್ತು. ಆದರೆ ಪರಿಸ್ಥಿತಿಗೆ ತಕ್ಕಂತೆ ವರ್ತಿಸುವ ಗುಣವು ಬ್ರಿಟಿಷರಲ್ಲಿಲ್ಲದ ದೆಸೆಯಿಂದ ಆ ಪ್ರಶ್ನೆ ಈ ತನಕ ಕೊಳೆಯಬೇಕಾಯಿತು. ಇಂಥ ಅಸಾಧಾರಣ ಪರಿಸ್ಥಿತಿಯೊದಗಿರುವದೂ, ಪರಿಸ್ಥಿತಿಗೆ ತಕ್ಕಂತೆ ನಡೆನುಡಿಯಬಲ್ಲ ಮಂತ್ರಿ ದೊರಕಿರುವದೂ ಈ ಸಮಸ್ಯೆಯ ತೀರ್ಮಾನಕ್ಕೆ ಅತ್ಯನುಕೂಲ. ಈ ದೃಷ್ಟಿಯಿಂದಲ್ಲದೆ ಬೇರಾವ ವಿಧದ ಮಹತ್ವವನ್ನೂ ಇಂಗ್ಲಾಂಡಿನ ಅಧಿಕಾರ ಬದಲಾವಣೆಗೆ ಭಾರತದ ಮುಷ್ಟಿಗೆ ಕೊಡಲು ಸಾಧ್ಯವಿಲ್ಲ.

ಚರ್ಚಿಲ್ಲರ ವಿಮರ್ಶಕ

ಮಿ. ಅಮೆರಿಯವರ ಗತಕಾಲದ ಭಾವನೆಯು ಮಿ. ಚರ್ಚಿಲ್ಲರ ಭಾವನೆಗೆ ತೀರಾ ವ್ಯತಿರಿಕ್ತವಾಗಿತ್ತು. ಭಾರತವು ಏಕಕಂಠದಿಂದ ವಿರೋಧಿಸಿದ್ದ ಫೆಡರಲ್ ಯೋಜನೆಯು ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಬಂದಾಗ, ಅಷ್ಟನ್ನು ಕೂಡ ಕೊಡಬಾರದೆಂದು ವಿರೋಧಿಸಿದವರು ಮಿ. ಚರ್ಚಿಲ್ಲರು. ಈಗಿನ ಭಾರತ ಸಚಿವರು ಆ ಕಾಲದಲ್ಲಿ ಅವರ ಪ್ರಬಲ ವಿಮರ್ಶಕರಾಗಿ ನಿಂತು ಮಿ. ಚರ್ಚಿಲ್ಲರನ್ನು ಕಠಿಣವಾಗಿ ಖಂಡಿಸಿದ್ದರು. ಮಿ. ಅಮೆರಿಯವರ ಮಾತಿನಲ್ಲಿ ಚರ್ಚಿಲ್ಲರ ಮನಃಕಷಾಯವಾಗತಕ್ಕಂತಹ ಅಂಶಗಳಿದ್ದವು. ಭಾರತಕ್ಕೆ ಸಾಮಂತ ಸ್ವರಾಜ್ಯ ನೀಡುವ ಕುರಿತು ಅಮೆರಿಯವರು ಆ ಕಾಲದಲ್ಲಿ ಅನುಕೂಲಾಭಿಪ್ರಾಯವುಳ್ಳವರಿದ್ದರು. "ನಾವು ಎಲ್ಲೆಲ್ಲಿ ಸಾಮಂತ ಸ್ವರಾಜ್ಯ ಕೊಟ್ಟಿರುವೆವೋ ಅಲ್ಲೆಲ್ಲಾ ವಿಜಯಿಗಳಾಗಿದ್ದೇವೆ; ನಾವು ಸಾಮ್ರಾಜ್ಯವನ್ನು ಬಲಗೊಳಿಸುವದರಲ್ಲಿ ಹಲವು ಬಾರಿ ವಿಶ್ವಾಸಪೂರ್ವಕ ವರ್ತಿಸಿ ವಿಜಯಿಗಳಾಗಿದ್ದೇವೆ. ಭಾರತದ ಸಮಸ್ಯೆಯೂ ನಮ್ಮ ಪ್ರಮುಖ ಪ್ರಶ್ನೆಗಳಲ್ಲೊಂದಾಗಿದೆ" ಎಂದು ಆ ಕಾಲದಲ್ಲಿ ಹೇಳಿದ್ದ ಮಿ. ಅಮೆರಿಯವರು ಇಂದು ಅದನ್ನು ಮರೆಯಲಾರರಾದರೆ ಹಿಂದೀಯರ ವಿಶ್ವಾಸ ಸಂಪಾದನೆಮಾಡುವುದೇನೂ ಕಷ್ಟವಲ್ಲ. ಇಂಗ್ಲಾಂಡಿನ 'ಮೆಂಚೆಸ್ಟರ್ ಗಾರ್ಡಿಯನ' ಪತ್ರಿಕೆಯು ಇದೇ ಅಭಿಪ್ರಾಯ ಸೂಚಿಸಿ "ಮಿ. ಚರ್ಚಿಲ್ಲರ ಹಿಂದಿನ ಅಭಿಪ್ರಾಯವು ಮೂರ್ತೀಭವಿಸಿದಲ್ಲಿ ಅದು ವಿಶೇಷ ಗೊಂದಲಕಾರಿಯಾಗಬಹುದು." ಎಂದು ಎಚ್ಚರಿಸಿದೆ. ಭಾರತ ಪ್ರಶ್ನೆಯ ಕುರಿತು ತನ್ನ ಧೋರಣೆಯ ಪ್ರತಿ ವಿರುದ್ಧಾಭಿಪ್ರಾಯವಿದ್ದ ಮಿ. ಅಮೆರಿಯವರನ್ನೇ ಚರ್ಚಿಲ್ಲರು ನೇಮಕಮಾಡಿದುದು ಗಮನಾರ್ಹ ವಿಷಯ. ಕಳೆದ ಮಾರ್ಚ ತಿಂಗಳಲ್ಲಿ ಭಾರತದ ಯುನೈಟೆಡ್ ಪ್ರೆಸ್ಸಿನವರಿಗಿತ್ತ ಭೇಟಿಯ ವೇಳೆ "ಭಾರತವು ಸ್ವಾತಂತ್ರ್ಯಹೊಂದಲು ಯೋಗ್ಯವಾದ ಪರಿಸ್ಥಿತಿಗೀಗ ಬಂದಿದೆ" ಎಂದು ಮಿ. ಅಮೆರಿಯವರು ಹೇಳಿದ್ದರು. ಭಾರತವು ಆ ಸ್ಥಾನಕ್ಕೆ ಬಂದಿದೆ; ಅಂದಿನ ಮಾತಿನಂತೆ ವರ್ತಿಸಿ ತೋರಿಸಲನುಕೂಲವುಳ್ಳ ಸ್ಥಾನಕ್ಕೆ ಮಿ. ಅಮೆರಿಯವರೂ ಈಗ ಬಂದಿದ್ದಾರೆ. ಅವರು ಹೇಗೆ ವರ್ತಿಸುವರೋ ಮುಂದೆ ನೋಡಲಿದೆ.

ಭಾರತದಲ್ಲೇ ಜನನ

ಇಂದಿನ ಇಂಡಿಯಾ ಸೆಕ್ರೆಟರಿ ಮಿ. ಲಿಯೋಪೋಲ್ಡ್ ಸ್ಟೆನ್ನೆಟ್ ಅಮೆರಿಯವರು 1873ರಲ್ಲಿ ಭಾರತಭೂಮಿಯ ಗೋರಖಪುರದಲ್ಲಿ ಜನ್ಮವೆತ್ತಿದವರು. ಅವರ ತಂದೆ ಇಲ್ಲಿಯ ಫೋರೆಸ್ಟ್ ಡಿಪಾರ್ಟಮೆಂಟಿನಲ್ಲಿ ಒಬ್ಬ ಆಫೀಸರರಾಗಿದ್ದರು. ಮಿ. ಅಮೆರಿಯವರು ಹೇರೋ ಮತ್ತು ಓಕ್ಸಫೋರ್ಡ್‌ನಲ್ಲಿ ವಿದ್ಯಾಭ್ಯಾಸ ಮುಗಿಸಿ ಲಂಡನಿನ ಸುಪ್ರಸಿದ್ಧ 'ಟೈಮ್ಸ್' ಪತ್ರಿಕೆಯ ಸಂಪಾದಕ ಮಂಡಲಿಯಲ್ಲಿದ್ದು ಕಳೆದ ಮಹಾಯುದ್ಧದ ಕಾಲ ಹಲವು ವಿಧದಲ್ಲಿ ದೇಶದ ಸೇವೆಮಾಡಿದವರು. 1917ರಲ್ಲಿ ಯುದ್ಧ ಮಂಡಲದ ಸಹಾಯಕ ಕಾರ್ಯದರ್ಶಿಯಾಗಿ ಕೆಲಸಮಾಡಿದ್ದರು. 1911ರಿಂದ ಪಾರ್ಲಿಮೆಂಟ್ ಸದಸ್ಯರಾಗಿದ್ದು 1922-24ರ ವರೆಗೆ ನೌಕಾಮಂತ್ರಿಯಾಗಿಯೂ 1924-29ರ ತನಕ ವಸಾಹತು ಮಂತ್ರಿಯಾಗಿಯೂ ಕಾರ್ಯಭಾರ ವಹಿಸಿದ್ದರು. 'ಸೌತ್ ಆಫ್ರಿಕನ್ ಯುದ್ಧ ಚರಿತ್ರೆ' 'ಸೈನ್ಯ ಸಮಸ್ಯೆ' 'ಹೊಸ ಯುಗದ ಸಾಮ್ರಾಜ್ಯ' 'ಜರ್ಮನ್ ವಸಾಹತು ಬೇಡಿಕೆ' ಇತ್ಯಾದಿ ಪ್ರಕಟಣೆಗಳು ಮಿ. ಅಮೆರಿಯವರ ಕೃತಿಗಳು.

ಯುರೋಪು ಯುದ್ಧವು ಮಿತ್ರರಾಷ್ಟ್ರಗಳಿಗೆ ಅತ್ಯಂತ ಕಠಿಣ ಕಾಲವನ್ನು ತಂದೊಡ್ಡಿರುವ ಈ ಸಂದರ್ಭಕ್ಕೆ ತಕ್ಕಂತಹ ಮಾತುಗಳು ಭಾರತ ಸಚಿವರ ಬಾಯಿಯಿಂದ ಬಂದಿವೆ. ವಿಳಂಬವಿಲ್ಲದೆ ಭಾರತದ ಸಹಾನುಭೂತಿಯನ್ನು ಬ್ರಿಟಿಷ್ ಸರಕಾರವು ಸಂಪಾದಿಸಿಕೊಂಡರೆ ಅವರ ಯುದ್ಧನೀತಿಯು ಯಥಾರ್ಥವೆನ್ನಿಸಬಹುದು. ಹಾಗಾಗುವದೆಂದು ನಿರೀಕ್ಷಿಸಬಹುದೆ?

ಮಂಗಳೂರು ಮತ್ತು ಉಡುಪಿಗೆ ಬಂದಾಗ ನಿಮಗೆ
ಸುಖವಾದ ನಿವಾಸ ದೊರೆಯಬೇಕೋ?
— ಹಾಗಾದರೆ —
ಸುಖನಿವಾಸಕ್ಕೆ ಬನ್ನಿ.
ರುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,
ವಿದ್ಯುದ್ದೀಪಾಲಂಕೃತ ಕೋಣೆ.
ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವುದೆಲ್ಲಿ?
ಸುಖನಿವಾಸದಲ್ಲಿ ಮಾತ್ರ.
ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.
ಮಂಗಳೂರಿನಲ್ಲಿ ಜೇಡಿಗುಡ್ಡೆಯಲ್ಲಿಯೂ, ಉಡುಪಿಯಲ್ಲಿ ತಾಲೂಕು ಕಚೇರಿಯ ಬಳಿಯಲ್ಲಿಯೂ ಇರುವ 'ಸುಖನಿವಾಸ'ವನ್ನು ಒಮ್ಮೆ ಸಂದರ್ಶಿಸಿರಿ.
ಪ್ರೊಪ್ರೈಟರ್, ಸುಖನಿವಾಸ.

ವಿವಿಧ ವಿಷಯ

ಪಾರ್ಲಿಮೆಂಟಿನ ಅಸಡ್ಡೆ

ಲಂಡನಿನ ಹೌಸ್ ಓಫ್ ಕಾಮನ್ಸ್ ಸಭೆಯಲ್ಲಿ ಸದಸ್ಯರ ಆಸನಗಳು ಖಾಲಿ ಬೀಳಬೇಕಾದರೆ ಅಲ್ಲಿ ಭಾರತದ ವಿಷಯು ಚರ್ಚೆಗೆ ಬರಬೇಕು. ಹಿಂದೀಯ ಪ್ರಶ್ನೆಯೊಪ್ಪುದಾದರೂ ಸಭೆಯ ಮುಂದೆ ಬಂದಾಗ ಕಾಮನ್ಸ್ ಸಭೆಯ 614 ಮೆಂಬರರಲ್ಲಿ ಹೆಚ್ಚೆಂದರೆ 30 ಮಂದಿ ಹಾಜರಿರುವ ಪದ್ಧತಿ! ಕೆಲವು ಸಂದರ್ಭಗಳಲ್ಲಂತೂ 12 ಮಂದಿಗೆ ಮಿಕ್ಕಿ ಕುಳಿತುಕೊಳ್ಳುವದೇ ಇಲ್ಲವಂತೆ. 'ಹೇಗಾದರೂ ತೀರ್ಮಾನಿಸುವದು' ಎನ್ನುತ್ತಾರಲ್ಲ-ಹಾಗೆ 'ಫಾರ್ಸ್'ಮಾಡಿ ಮುಗಿಸಿಬಿಡುತ್ತಾರೆ. ಹಿಂದೀ ಪ್ರಶ್ನೆಗೆ ಬ್ರಿಟಿಷರೆಷ್ಟು ಲಕ್ಷ್ಯಕೊಡುತ್ತಿದ್ದಾರೆ ಎಂಬುದಕ್ಕೆ ಇದೊಂದು ಒಳ್ಳೆಯ ದೃಷ್ಟಾಂತ.

ಭಾರತದ ಪ್ರಶ್ನೆಯೆಂದರೆ ಹೇಗೂ ಗಾಳಿಗೆ ತೂರಿಸಿಬಿಡುವ ವಿಷಯ; ಹೋಗಲಿ, ನಾವೇ ತುಸು ಗಾಳಿ ತಿಂದುಕೊಂಡು ಆರೋಗ್ಯ ಸಂಪಾದಿಸೋಣವೆಂದು ಸದಸ್ಯರೆಲ್ಲಾ ಸವಾರಿ ಹೊರಡುತ್ತಿರಬೇಕು. ಹಿಂದೂದೇಶದಿಂದಾಗಿ ಬ್ರಿಟಿಷರ ಆರ್ಥಿಕ ಸ್ಥಿತಿ ಸುಧಾರಿಸಿತು ಎಂದು ಮಾತ್ರ ಹೇಳುವುದೇಕೆ; ಅವರ ಆರೋಗ್ಯವೂ ಸುಧಾರಿಸಿತು ಎನ್ನುವದಕ್ಕೇನಡ್ಡಿ?

ಶ್ಯುಸ್ಟರರ ಸ್ಪಷ್ಟವಾಣಿ

ಹಿಂದೊಮ್ಮೆ ಭಾರತ ಸರಕಾರದ ಆರ್ಥಿಕ ಸಚಿವರಾಗಿದ್ದ ಸರ್. ಜೋರ್ಜ್ ಶ್ಯುಸ್ಟರರು ಪಾರ್ಲಿಮೆಂಟಿನಲ್ಲೊಂದು ರಸವತ್ತಾದ ಭಾಷಣವಿತ್ತು ಭಾರತದ ಬೇಡಿಕೆಯನ್ನು ಸಮರ್ಥಿಸಿದರು. "ಭಾರತೀಯರುಪಯೋಗಿಸುತ್ತಿರುವ 'ಸಾಮಂತ ಸ್ವರಾಜ್ಯ' 'ಸಂಪೂರ್ಣ ಸ್ವಾತಂತ್ರ್ಯ' ಎಂಬ ಶಬ್ದಭೇದಗಳಿಗೆ ನಾನು ಹೆಚ್ಚಿನ ಮಹತ್ವ ಕೊಡುವುದಿಲ್ಲ. ತನ್ನನ್ನು ತಾನು ನೋಡಿಕೊಳ್ಳುವ ಸ್ಥಿತಿಗೆ ಬಂದಾಗ ಬ್ರಿಟಿಷ್ ಸಾಮ್ರಾಜ್ಯದಿಂದ ಬೇರೆಯಾಗುವ ಇಚ್ಛೆ ಭಾರತಕ್ಕೆ ಹುಟ್ಟಿದರೆ ಅದಕ್ಕೆ ಆತಂಕವಾವುದೂ ಇಲ್ಲ. ನಾವು ಲೋಕದಲ್ಲಿ ಭಾರತವೊಂದು ಸ್ಥಾನ ಸಂಪಾದಿಸುವಂತೆ ಸಹಾಯ ಮಾಡಬೇಕು. ತನ್ನ ಸ್ವಾತಂತ್ರ್ಯ ಸಂಪಾದಿಸಿಕೊಂಡ ಭಾರತವು ಬ್ರಿಟಿಷ್ ಕೋಮನ್‌ವೆಲ್ತಿನ ಒಬ್ಬ ಸದಸ್ಯನಾಗಿ ನಿಲ್ಲುವದು." ಎಂದು ಶ್ಯುಸ್ಟರರ ವಾದ.

ಸರ್. ಶ್ಯುಸ್ಟರರು ಹಿಂದೂದೇಶದ ಹಣಕಾಸಿನ ಆಡಳಿತೆ ನೋಡಿಕೊಂಡಿದ್ದನರು. ಲೆಕ್ಕಾಚಾರ ಹಾಕಿಯೇ ಈ ಮಾತನ್ನಾಡಿರಬಹುದು. ಆದರೆ ಅವರು ಪ್ರಥಮತಃ ಅಲ್ಲಿ ಹಾಜರಿರುವ ಸದಸ್ಯರ ಸಂಖ್ಯೆಯನ್ನು ಲೆಕ್ಕಿಸಿಕೊಂಡು ಆ ಪಾಮಾಕಯದಲ್ಲಿ ತನ್ನ ಮಾತಿಗೆಷ್ಟು ಬೆಲೆ ದೊರಕೀತು ಎಂಬುದನ್ನು ನೋಡಬೇಕಿತ್ತಲ್ಲವೆ? ದೊಡ್ಡ ಪ್ರೊಫೆಸರರೂ ಒಮ್ಮೊಮ್ಮೆ ಸಣ್ಣ ಲೆಕ್ಕದಲ್ಲಿ ತಪ್ಪಿ ಬೀಳುತ್ತಾರೆನ್ನುವದು ಇದಕ್ಕೇನೆ!

ಸರ್. ಸಿಕಂದರರ ತಳಮಳ

ಪಂಜಾಬಿನ ಪ್ರಧಾನರಾದ ಸರ್. ಸಿಕಂದರ್ ಹಯಾತ್ ಖಾನರು ಭೀಕರ ಸ್ವಪ್ನಗಳನ್ನು ಕಾಣುತ್ತಿದ್ದಾರೆ. ಪ್ರಪಂಚ ಗೆಲ್ಲಲು ಹೊರಟಿರುವ ಸರ್ವಾಧಿಕಾರಿ ರಾಷ್ಟ್ರಗಳು ಹಾಗೆಯೇ ಮುಂದುವರಿದು ಭೂಮಧ್ಯ ಸಮುದ್ರಗಡಿಯಿಂದ ಹಿಡಿದು ಭಾರತದ ವರೆಗಿನ ಮುಸಲ್ಮಾನ ರಾಷ್ಟ್ರಗಳನ್ನೂ ಆಹುತಿಗೊಳ್ಳಬಹುದು. ಈ ಯುದ್ಧದಲ್ಲಿ ಪ್ರಜಾಸತ್ತಾ ರಾಷ್ಟ್ರಗಳು ಅಪಜಯ ಹೊಂದಿ, ಬೋಸ್ಫರಸ್‌ನಿಂದ ಖೈಬರ್ ವರೆಗಿನ ಏಸ್ಯಾಖಂಡದ ರಾಷ್ಟ್ರಗಳೆಲ್ಲಾ ಬಲಿಬಿದ್ದರೆ ಮತ್ತೆ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವೆಲ್ಲಿಯದು? ಎಂದು ಸಿಕಂದರರ ಪ್ರಶ್ನೆ.

ಸರ್. ಸಿಕಂದರರ ಕನಸು ಸತ್ಯವಾಯಿತೆಂದೇ ಭಾವಿಸೋಣ. ಆಗ ಹಿಂದುಸ್ಥಾನವು ಕಳಕೊಳ್ಳಬೇಕಾಗಿ ಬರುವ ಸ್ವಾತಂತ್ರ್ಯವಾವುದು? ಒಬ್ಬ ಸಿಕಂದರರು ಒಂದೆಡೆಯ ಪಂಜಾಬಿನಲ್ಲಿ ಪ್ರಧಾನಮಂತ್ರಿಗಳಾಗಿರುವದೇ ಹಿಂದುಸ್ಥಾನದ ಸ್ವಾತಂತ್ರ್ಯವೆ? ತನ್ನ ಸೊತ್ತು ಕಳವಾಗುತ್ತಿರುವಾಗ ನೆರೆಯವನ ಮನೆಪಹರೆಮಾಡಲು ಹೊರಟ ಸರ್. ಸಿಕಂದರರ ಅಂತರ್ಯವೇನು?

ಜುಲಾಯಿಯೊಳಗೆ ಯುದ್ಧಾಂತ್ಯ?

ಜುಲಾಯಿ ತಾ. ೧ರೊಳಗೆ ಯುದ್ಧ ಜಯಿಸಬೇಕೆಂದು ನಾಜಿಗಳ ದೃಢ ಸಂಕಲ್ಪವಿರುವದಂತೆ. ಅಷ್ಟರೊಳಗೆ ಪ್ಯಾರಿಸಿನ ಮೇಲೆ ಧಾಳಿ ನಡೆಯಿಸಿ ಹೊರಗಟ್ಟುವ ಹೊಡೆತ ಕೊಡಬೇಕೆಂದು ಹಿಟ್ಲರರ ನಿರ್ಧಾರವಂತೆ. ಅಮೇರಿಕದ ಸಮ್ನರ್‌ವೆಲ್ಸರೊಡನೆಯೂ ಚೆಂಬರ್ಲೇನ್ ಕಣಿವೆಯಲ್ಲಿ ಮುಸಲಿನಿಯೊಡನೆಯೂ ಹಿಟ್ಲರ್ ತನ್ನ ಯುದ್ಧ ನಡೆಯಿಸುವ ರೀತಿಯನ್ನೆಲ್ಲಾ ಹೇಳಿರುವನಂತೆ. ಜರ್ಮನಿಯ ಪತ್ರಿಕೆಗಳು ನಾಜಿಗಳ ಹೊಸ ಶೋಧನೆಯಾದ ಒಂದು ಮಹಾ ಫಿರಂಗಿಯ ಚಿತ್ರಗಳನ್ನು ಪ್ರಕಟಿಸಹತ್ತಿವೆ.

ಹೀಗೆ ಜರ್ಮನರ ವಾಯಿದೆಯೂ ಸಮೀಪ; ಆಯುಧವೂ ದೊಡ್ಡದು. ತೋರುತ್ತಿರುವದು ಈ ಶಪಥ, ಆ ಆಯುಧ ಕಟ್ಟಿಕೊಂಡು ಪ್ಯಾರಿಸಿಗೆ ಸುರಕ್ಷಿತವಾಗಿ ಹೋಗಿ ಮುಟ್ಟುವ ಮಟ್ಟಿಗೆ ಮಾತ್ರ!

ಮುಸಲನಿ 'ಬಸ್ಕಿ' ತೆಗೆಯುತಿದ್ದಾನೆ!

ವ್ಯಾಯಾಮ, ವಿಹಾರಗಳಲ್ಲಿ ಎಲ್ಲಾ ಸರ್ವಾಧಿಕಾರಿಗಳಲ್ಲಿ ಮೊದಲಿಗನು ಮುಸಲನಿ. ಈ ಬಾರಿ ಕೂಡ ಅವನು ಸುಮ್ಮಗಿಲ್ಲವೆಂಬುದು ಸಂತೋಷದ ವಿಷಯ. ಭೂಮಧ್ಯ ಸಮುದ್ರಕ್ಕೆ ಧುಮುಕಿಯೇ ಸಿದ್ಧವೆಂದು ಒಮ್ಮೆ ನಡು ಬಿಗಿದ; ಆಮೇಲೆ ಸ್ವಲ್ಪ ಸಮಯ ಕಾದು ನೋಡುವೆನಾಗಿ ಭರವಸೆ ಕೊಟ್ಟ. ಹೊಲ್ಲೇಂಡು ಆಕ್ರಮಣದ ವೇಳೆ ಇಟೆಲಿಯಲ್ಲಿಯೂ ಗುಡುಗಾಟವೇ ಗುಡುಗಾಟ; ಮುಸಲನಿಯ ಆವೇಶವೇ ಆವೇಶ! ಪ್ರೆಸಿಡೆಂಟ್ ರೂಸ್‌ವೆಲ್ಟರು "ಶಾಂತವಾಗಲಿ" ಎಂದು ಮುಸಲಿನಿಯ ಆವೇಶದ ಮೇಲೆ ಮಂತ್ರಾಕ್ಷತೆ ಚೆಲ್ಲಿದರು. ಈಗ ಪುನಃ ಸ್ವಲ್ಪ ಶಾಂತವಾದಂತೆ ಕಾಣುತ್ತದೆ.

ಹೀಗೆ ಸರ್ವಾಧಿಕಾರಿ ಮುಸಲನಿಯು ಎರಡು ಸಲ ಎದ್ದು ಎರಡು ಸಲ ಕುಳಿತು ಸ್ವಬಲವರ್ಧನೆಯ ವ್ಯಾಯಾಮಮಾಡಿದ. ಭೂಮಧ್ಯ ಸಮುದ್ರ ಆಳವಾದದ್ದು; ವಿಸ್ತಾರವಾದುದು. ಅದನ್ನು ದಾಟ ದಡಸೇರಬೇಕಾದರೆ ಮೈಬಲಗೂ ಬೇಕು. ಯಾವುದು ಬೇಕೋ ಅದನ್ನು ಮುಸಲನಿ ಸಂಪಾದಿಸಿಯೇ ತೀರುತ್ತಾನೆ ಎಂಬುದಕ್ಕೆ ಈ ವ್ಯಾಯಾಮವೊಂದು ನಿದರ್ಶನವಲ್ಲವೆ?

ಬೆಳ್ಳಗಿದ್ದೊಡನೆ ಶ್ರೇಷ್ಠವಲ್ಲ!

ಬ್ರಿಟಿಷ್ ಸಾಮ್ರಾಜ್ಯದೊಳಗಿನ ಒಟ್ಟು ಜನಸಂಖ್ಯೆ 440 ಮಿಲಿಯ. ಈ ಪೈಕಿ 380 ಮಿಲ್ಯ ಜನರು ಶ್ವೇತವರ್ಣೀಯರಲ್ಲ ಅಂದರೆ ಸಾಮ್ರಾಜ್ಯದ ಪ್ರಜೆಗಳಲ್ಲಿ ದೊಡ್ಡ ಭಾಗವು ಇತರ ವರ್ಣೀಯರದು. ಹೀಗೆ ಬಹುಸಂಖ್ಯಾಕರಾಗಿರುವ ವಿವರ್ಣೀಯರನ್ನು ಬ್ರಿಟಿಷರು ತಮ್ಮ ಸಾಮ್ರಾಜ್ಯಹಿತಕ್ಕಾಗಿಯಾದರೂ ಸಮಾನತೆಯಿಂದ ಕಾಣುತ್ತಿದ್ದಾರೆಯೆ? ಇಂಗ್ಲೆಂಡಿನ ಧರ್ಮಗುರುಗಳಲ್ಲೊಬ್ಬರಾದ ವೆರಿ ರೆವರೆಂಡ್ ಸಿ. ಎ. ಅಲಿಂಗ್ಟನ್‌ರವರು ಬರೆಯುತ್ತಾರೆ: "ನಾವು ಉತ್ತಮ ಜನಾಂಗದವರು, ಅನ್ಯರು ಕನಿಷ್ಠರೆಂಬ ಭಾವನೆ ಜರ್ಮನಿಯಲ್ಲಿ ಮಾತ್ರವಲ್ಲ; ಬ್ರಿಟನಿನಲ್ಲಿಯೂ ಹರಡಿದೆ. ಈ ಭಾವನೆ ಕ್ರೈಸ್ತಧರ್ಮತತ್ವಗಳೀ, ಬ್ರಿಟನು ಈಗ ಯುದ್ಧ ಕೈಕೊಂಡಿರುವ ತತ್ವಕ್ಕಾಗಲಿ ಹೊಂದಿಕೆಯಾಗುವಂತಹದಲ್ಲ. ಪೋಲರು, ಜೆಕ್ಕರು, ಭಾರತೀಯರು, ಆಫ್ರಿಕಾನರು ಎಂಬ ಭೇದವಿಲ್ಲದೆ ನ್ಯಾಯವು ಎಲ್ಲರಿಗೂ ಸಮನಾಗಿ ಸಿಗತಕ್ಕದ್ದು." ಈ ಗುರುಗಳು ಮುಖ್ಯವಾಗಿ ವಿದೇಶೀ ವಿದ್ಯಾರ್ಥಿಗಳನ್ನು ಕಾಣುವ ರೀತಿಯ ಕುರಿತು ಎಚ್ಚರಿಕೆ ಕೊಡುತ್ತಾ "ವಿದ್ಯಾರ್ಥಿಗಳು ನಮ್ಮಲ್ಲಿ ಬಂದು ಹೋಗುವಾಗ ಸಮಾನತೆಯನ್ನು ಅನುಭವಿಸದಿದ್ದರೆ ಹಿಂದಿರುಗಿ ತಮ್ಮ ಪ್ರದೇಶಕ್ಕೆ ಹೋದವರು ಬ್ರಿಟಿಷರ ಉದ್ದೇಶದ ಕುರಿತು ಕೆಟ್ಟ ಅಭಿಪ್ರಾಯ ಹರಡುವರು" ಎನ್ನುತ್ತಾರೆ.

ಗುರುಗಳ ಮಾತು ಗುರುತರವಾದುದೇನೋ ನಿಜ. ಆದರೆ ಎಲ್ಲರೂ ಸಮಾನರೆಂದರೆ ಬ್ರಿಟಿಷರಿಗವಮಾನವಲ್ಲವೆ? ಮೇಲ್ಗದ್ದೆ ಗೇರಿದವರು ಹಿಮ್ಮೆಟ್ಟಿ ಮಿಕ್ಕವರ ಸಾಲಿಗೆ ಸೇರುವದೆಂದರೆ ಹೇಗೆ? ಅದೇನು ನೋರ್ವೆಯೆ?

THULUNAD BANK
OF SUPPLY AGENCY LIMITED.

Authorised & Issued Capital	...	Rs 1,00,000
Subscribed & Paid up Capital	....	Rs. 31,340
Reserves & other Funds	...	Rs. 22,052

ವಿಶೇಷ ರಿಯಾಯಿತಿ

Rs. 1000

ತಾ. 30-6-1940ರ ಒಳಗೆ ರೂ. 1000 ಯಾ ಅದಕ್ಕಿಂತ ಮೇಲ್ಪಟ್ಟು ನಿರಖು ಠೇವಣಾತಿಗಳನ್ನು ಇಡುವವರಿಗೆ ಕೆಲವು ವಿಶೇಷ ರಿಯಾಯತಿಗಳು ಕೊಡಲ್ಪಡುವವು.

ಹೆಚ್ಚಿನ ಮಾಹಿತಿಗೆ ಬರೆಯಿರಿ:-
ಮೆನೇಜಿಂಗ್ ಡೈರೆಕ್ಟರ್
ತುಳುನಾಡ್ ಬೇಂಕ್
ಆಫ್ ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಷ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ್ತ್ಯೆಲುವಾಗಿಯೇ ದೇಹ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ನ್ಯೆಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ ಅನೋಘವಾದ ಸುಪ್ರಿಮ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಶಿಟ್ಟು ಕಟಿನ. ೪೦ ದಿವಸಗಳಿಗೆ ಬರುವವು. ಅಂಚೆ, ಕೇವಲ ೮ ರೂಪಾಯಿಗಳು ಒಂದು ಬಾಣಂತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಸ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. ೬ ಕೊಡಿಯಾಲಬೈಲು, ದ.ಕ.

ಪ್ರಬಲ ಹೊಡೆತಕೊಟ್ಟು ಮೇಲ್ಗೈಯಾಗಬೇಕು !

ಮಿ. ಚರ್ಚಿಲ್ಲರ ರಣಘರ್ಜನೆ.

ಬ್ರಿಟನಿನ ಪ್ರಧಾನ ಮಂತ್ರಿ ಮಿ. ವಿನ್ಸ್ಟನ್ ಚರ್ಚಿಲ್ಲರು ಇದೇ ತಾ. 19ನೇ ರಾತ್ರಿ 8-30ಕ್ಕೆ ಬ್ರಾಡ್‌ಕಾಸ್ಟ್ ಭಾಷಣವಿತ್ತರು. ಜರ್ಮನ್ ಸೇನೆಗಳ ಆಕ್ರಮಣದ ವಿಜಯದಿಂದಾಗಿ ಲೋಕದಲ್ಲೆಲ್ಲಾ ಹರಡಿದ್ದ ನಿರುತ್ಸಾಹದ ನಿಶ್ಶಾಣಕ್ಕೆ ಚರ್ಚಿಲ್ಲರ ಸ್ಫೂರ್ತಿಯುಕ್ತ, ಉತ್ತೇಜಕ ಹಾಗೂ ದೃಢ ನಿರ್ಧಾರದ ಭಾಷಣವು 'ಟಾನಿಕ್' ಕೊಟ್ಟಂತಾಗಿದೆ ಎನ್ನಬಹುದು. ಅದರ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.

ಜರ್ಮನ್ ಧಾಳಿಯೊಂದು ವಿಜಯವಲ್ಲ

“ಆಕಾಶ ಧಾಳಿ ಮತ್ತು ಪ್ರಬಲ ಶಸ್ತ್ರ ಸನ್ನದ್ಧ ಟ್ಯಾಂಕಿಗಳ ಅಸಾಧಾರಣ ಸಂಘಟನೆಯಿಂದ ಜರ್ಮನ್ ಸೇನೆಯು ಮೆಜಿನೊ ಲೈನಿನ ಉತ್ತರ ಕಡೆಯ ಫ್ರೆಂಚ್ ರಕ್ಷಣಾ ವಿಭಾಗವನ್ನೊಡೆದು ಒಳನುಗ್ಗಿದೆ. ನಮ್ಮ ಲೈನಿನ ಹಿಂಬದಿಯ ಅನಿರೀಕ್ಷಿತ ಸ್ಥಳಗಳಲ್ಲಿ ವಿರೋಧಿ ಸೈನಿಕಯಾನಗಳು ಹೊಕ್ಕುವೆಂದು ವಿಪರೀತಾಭಿಪ್ರಾಯವುಳ್ಳವರಾಗಬಾರದು. ಅವರು ನಮ್ಮ ಲೈನಿನ ಹಿಂಗಡೆಗೆ ಬಂದಿದ್ದರೆ ಫ್ರೆಂಚರೂ ಹಲವು ಕಡೆಗಳಲ್ಲಿ ಅವರ ಲೈನಿನ ಹಿಂಬದಿಯಲ್ಲಿ ಹೋರಾಡುತ್ತಿದ್ದಾರೆ. ಎರಡು ಕಡೆಗಳು ಅಪಾಯಕರ ಸ್ಥಿತಿಯಲ್ಲಿವೆ. ನನ್ನ ನಂಬಿಕೆಯಂತೆ ಫ್ರೆಂಚರ ಮತ್ತು ನಮ್ಮ ಸೈನ್ಯಗಳು ಯೋಗ್ಯ ರೀತಿಯಲ್ಲಿ ವರ್ತಿಸಿದರೆ–ಈ ಮೊದಲು ಪ್ರಸಿದ್ಧಿಹೊಂದಿದಂತೆ ಫ್ರೆಂಚ್ ಸೇನೆಗಳು ಸುಧಾರಿಸಿಕೊಳ್ಳುವದರಲ್ಲಿ ಮತ್ತು ಪ್ರತಿಯಾಗಿ ಹೊಡೆಯುವದರಲ್ಲಿ ಪ್ರತಿಭೆ ತೋರಿಸಿದರೆ–ಗತಕಾಲದಲ್ಲಿ ಹಲವು ಒಳ್ಳೆಯ ನಿದರ್ಶನಗಳನ್ನು ತೋರಿಸಿದ್ದ ಬ್ರಿಟಿಷ್ ಸೇನೆಯು ಈಗಲೂ ಅಸಾಧಾರಣ ದೃಢತೆ ಮತ್ತು ಒಪ್ಪುವ ಕಾದಾಡುವ ಶಕ್ತಿಯನ್ನು ಪ್ರದರ್ಶಿಸಿದರೆ–ಆಗ ಕೂಡಲೇ ಸದ್ಯದ ಪರಿಸ್ಥಿತಿಯು ರೂಪಾಂತರಗೊಳ್ಳಲಿದೆ. ಸದ್ಯದ ಪರಿಸ್ಥಿತಿಯ ವಿಷಮತೆಯನ್ನು ಯೋಚಿಸದಿರುವದು ಶುದ್ಧ ಅವಿವೇಕತನ. ಎಷ್ಟೇ ಬಲಶಾಲಿಯಿರಲಿ, ಎಷ್ಟೇ ತರಬೇತಿ ಮತ್ತು ಯುದ್ಧೋಪಕರಣಗಳಿರಲಿ, ಮೂರು ಅಥವಾ ನಾಲ್ಕು ಮಿಲ್ಯ ಸೈನ್ಯಗಳು ಕೆಲವು ವಾರಗಳಲ್ಲಿ ಅಥವಾ ಕೆಲವು ತಿಂಗಳುಗಳಲ್ಲಿ ಗೆದ್ದು ಬಿಡಬಹುದೆಂದು ಎಣಿಸುವದು ಇನ್ನಷ್ಟು ಅವಿವೇಕತನವೇ ಸರಿ.

ಫ್ರೆಂಚ್ ಸೈನ್ಯದ ಮೇಲೆ ಅಖಂಡ ವಿಶ್ವಾಸ

ನನ್ನ ಮಟ್ಟಿಗೆ ಫ್ರೆಂಚ್ ಸೈನ್ಯದ ಮೇಲೂ ಅವರ ನಾಯಕರ ಮೇಲೂ ಅಚಲ ವಿಶ್ವಾಸವಿದೆ. ಫ್ರೆಂಚ್ ಸೈನ್ಯದ ಅತಿ ಸಣ್ಣ ಭಾಗ ಮಾತ್ರ ಈ ವರೆಗೆ ಮೈಮರಿದು ಕಾದಾಡಿದೆ. ಫ್ರಾನ್ಸಿನ ಅತ್ಯಲ್ಪ ಭಾಗ ಮಾತ್ರ ಆಕ್ರಮಿಸಲ್ಪಟ್ಟಿದೆ. ಆ ಸ್ಥಳಕ್ಕಾಗಿ ವಿರೋಧಿಯು ಶ್ರೇಷ್ಠವಾದ ಮತ್ತು ಯಾಂತ್ರಿಕ ಸಲಕರಣೆಗಳುಳ್ಳ ಎಲ್ಲಾ ಸೈನ್ಯವು ಉಪಯೋಗಿಸಲ್ಪಟ್ಟಿದೆ ಎಂಬುದಕ್ಕೆ ಉತ್ತಮ ದಾಖಲೆಗಳಿವೆ. ಅಧಿಕಾರಿಯಿಂದ ಹಿಡಿದು ಸಾಮಾನ್ಯರ ವರೆಗೆ, ವಿಮಾನಗಳಿಂದ ಹಿಡಿದು ಸೈನ್ಯಗಳ ವರೆಗೆ, ವಿರೋಧಿಗಳಿಗೆ ಘರ್ಷಣೆ ಕೊಟ್ಟವರಲ್ಲಿ ಯಾರೂ ಕೊನೆಯ. ಸಪ್ಪೇಣಾಮುಕ್ಕನು ಕೂಲವಾಗುವ ಸೇನೆಯನ್ನರ್ಪಿಸದೆ ಹೋಗಿಲ್ಲ. ನಮ್ಮ ಸೈನ್ಯಗಳು ಸುಭದ್ರ ಕೋಟೆಯ ಮೇಲೆ ಧಾಳಿಯಿಡುವ ಅಭಿಪ್ರಾಯವನ್ನು ಇಟ್ಟುಕೊಂಡಿರಬೇಕು. ಮತ್ತು ನಾವು ಮೇಲ್ಗೈ ಎಂಬುದನ್ನು ಪುನಃ ಹೊಂದಬೇಕಾದರೆ ಕಠಿಣವಾದ ಪ್ರತಿ ಹೊಡೆತ ಕೊಟ್ಟೇ ತೀರಬೇಕೆಂಬುದನ್ನು ತಿಳಿದಿರಬೇಕು. ಈ ಸ್ಫೂರ್ತಿಯು ಕೇವಲ ಹೈಕಮಾಂಡಿನವರಲ್ಲಿದ್ದರೆ ಸಾಲದು; ಪ್ರತಿಯೊಬ್ಬ ಸೋಲ್ಜರನಲ್ಲಿಯೂ ಅದು ತುಂಬಿರಬೇಕು.

ವಿಮಾನಬಲದಲ್ಲಿ ನಾವು ಮೇಲ್ಗೈ

ಆಕಾಶ ಯುದ್ಧದ ಮಟ್ಟಿಗೆ ಹಲವು ಕಠಿಣ ಸನ್ನಿವೇಶಗಳಲ್ಲಿ, ನಾವು ನಮ್ಮ ಒಂದು ವಿಮಾನಕ್ಕೆ ಪ್ರತಿಯಾಗಿ ವಿರೋಧಿಯ ಮೂರು ಅಥವಾ ನಾಲ್ಕು ವಿಮಾನಗಳಂತೆ ಕೆಡಗುರುಳಿಸಿದ್ದೇವೆ. ಬ್ರಿಟಿಷ್ ಮತ್ತು ಜರ್ಮನ್ ವಿಮಾನಬಲದ ತುಲನೆ ಮಾಡಿದರೆ ಯುದ್ಧದ ಆದಿಯಲ್ಲಿದ್ದುದಕ್ಕಿಂತ ಈಗ ನಾವು ಎಷ್ಟೋ ಅನುಕೂಲ ಪರಿಸ್ಥಿತಿಗೆ ಬಂದಿದ್ದೇವೆ. ನಮ್ಮ ಬಾಂಬು ಚೆಲ್ಲುವ ವಿಮಾನಗಳು ಜರ್ಮನಿಯ ಯಾಂತ್ರಿಕ ಬಲದ ಕಾಲ್ಬುಡಕ್ಕೇನೆ ಬಾಂಬು ಹಾಕಿ, ಲೋಕಜಯ-ದ ನಾಜೀ ಪ್ರಯತ್ನದ ಮೂಲ ಆಧಾರವಾವುದೋ ಆ ಎಣ್ಣೆಯ ಸಂಗ್ರಹಾಲಯಕ್ಕೇನೆ ವಿಪರೀತ ಹಾನಿಮಾಡಿವೆ. ಪಶ್ಚಿಮ ರಣರಂಗವೊಂದು ನಿರ್ಧಾರಕ್ಕೆ ಬಂದೊಡನೆಯೇ, ಹಾಲೇಂಡನ್ನು ಕೆಲವೇ ದಿನಗಳಲ್ಲಿ ಹೊಗೆಯಾಡಿಸಿದ ಶಕ್ತಿಯು ನಮ್ಮ ಮೇಲೆ ಸಾಗಿ ಬರಲಿದೆ ಎಂಬ ನಿರೀಕ್ಷೆಯಲ್ಲಿ ನಾವಿರಬೇಕು. ನಮ್ಮ ಜನರು ಅಂತಹ ಪರಿಸ್ಥಿತಿಗೆದುರಾಗಲು ತಯಾರಿರುವರೆಂದು ನನಗೆ ಭರವಸೆ ಇದೆ.

ಅಂತಹ ಸಂಕಷ್ಟವನ್ನನುಭವಿಸುವ ಸಂದರ್ಭಗಳಲ್ಲಿ ತಮ್ಮ ದೇಶಬಾಂಧವರಾದ ಸೋಲ್ಜರರ, ನಾವಿಕರ ಮತ್ತು ವೈಮಾನಿಕರು ತಿನ್ನುವ ಬೀಕರ ಹೊಡೆತಗಳಲ್ಲೊಂದಂಶವನ್ನು ತಾವು ಪಡೆಯುವುದಕ್ಕಾಗಿ ಹೆಗ್ಗಳಿಕೆ ಪಡುವ ಎಷ್ಟೋ ಸ್ತ್ರೀಪುರುಷರಿರಬಹುದು. ಇಂಥ ಎಲ್ಲರೂ ತಮ್ಮ

(೯ನೇ ಪುಟಕ್ಕೆ ಮುಂದರಿಯುವುದು)

TROPICAL

TROPICAL INSURANCE CO., LTD. does not boast of "Big" Figures. It has not been writing crores of business every year. That was never its intention. It never aimed at breaking "records" at dangerous cost Whatever it did it wrote sound business that endures in the books of the Company. Thus although not the biggest it is one of the best of Life offices in India.

The Company, founded by Pandit Moti Lal Nehru, Dr. Ansari and Hakim Ajmal Khan, and guided now under the Chairmanship of Sjt. Subhas Chandra Bose, offers excellent chances to young men of culture and education to forge out their careers.

Tropical Insurance Co. Ltd.,

Branch Office:-NIVAS BUILDING, HAMPANKATTA,

Mangalore.

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ನವಯುಗ

ಉಡುಪಿ, ಗುರುವಾರ ತಾ. ೨೩-೫-'೪೦

ಸುಸಂದರ್ಭ

ಭಾರತದ ಭವಿಷ್ಯ ನಿರ್ಧಾರಕ್ಕೆ ಅತ್ಯಪರೂಪ ಸುಸಂದರ್ಭವೊಂದು ಈಗ ಬಂದಿದೆ. 'ಭಾರತವೀಗ ಜವಾಬ್ದಾರೀ ಸರಕಾರದ ಹೊಣೆ ಹೊರುವ ಸ್ಥಾನಕ್ಕೆ ಬಂದಿದೆ' ಎಂದು ಹಿಂದೊಮ್ಮೆ ಹೇಳಿದ್ದ ಮಿ. ಅಮೆರಿಯವರು ಭಾರತ ಕಾರ್ಯದರ್ಶಿ ಪದವಿಯಲ್ಲಿದ್ದಾರೆ. ಭಾರತವು ಸ್ವಾತಂತ್ರ್ಯವನ್ನನುಭವಿಸುವ ಯೋಗ್ಯತೆಯನ್ನೆಂದೋ ಪಡೆದಿತ್ತು; ಈ ವರೆಗೂ ಇರುವ ಅಭಾವವೆಂದರೆ ಬ್ರಿಟನು ಭಾರತದ ಮಟ್ಟಿಗೆ ವಸ್ತುಸ್ಥಿತಿಗನುಗುಣವಾಗಿ ನಡೆಯದಿದ್ದುದೊಂದೇ! ಇಂದಾದರೂ ತಮ್ಮೊಳಗಿನ ಸಂಬಂಧ ಸುಧಾರಣೆಗಾಗಿ ಹಿಂದೂದೇಶಕ್ಕೆ ಸ್ವಾತಂತ್ರ್ಯ ದಾನಮಾಡಬೇಕೆಂಬ ಬುದ್ಧಿ ಬ್ರಿಟನಿಗೆ ಬಂದಿರುವದೆಂಬುದಕ್ಕೆ ಪ್ರತಿಕೂಲವಾದ ನಿದರ್ಶನಗಳೇ ದೊರಕುತ್ತಿವೆ. ಆದರೆ ಈ ವಿರೋಧವು ಕಾಲ ಚಕ್ರದಡಿಯಲ್ಲಿ ಸಿಕ್ಕುವಂತಹದೆಂಬುವಕ್ಕೆ ಇಂದಿನ ಪರಿಸ್ಥಿತಿಯೇ ಒಂದು ದೃಷ್ಟಾಂತ. ಭಾರತದ ಇಚ್ಛಾಪೂರ್ತಿಗೊಳಿಸುವದು ಪರೋಪಕಾರದೃಷ್ಟಿಯಿಂದಲ್ಲ; ಸ್ವಕಾರ್ಯ ಸಾಧನೆಗಾಗಿ ಎಂಬಂತಹ ಸಂದರ್ಭ ಈಗ ಬ್ರಿಟನಿಗೊದಗಿದೆ. ಇಂಗ್ಲಾಂಡು ಇಂತಹ ಸುವರ್ಣ ಸಂದರ್ಭವನ್ನು ಕಳಕೊಂಡಲ್ಲಿ ಅದು ಈ ವರೆಗೆ ಹೊತ್ತಂತೆ ಅನುದಾರತ್ವದ ಅಪವಾದಕ್ಕೆ ಗುರಿಯಾಗುವದು ಮಾತ್ರವಲ್ಲ; ಅಚಾತುರ್ಯದ ಪರಮಾವಧಿಯನ್ನು ಪ್ರದರ್ಶಿಸಿದಂತೆಯೂ ಆಗುವದು. ಭಾರತದ ಸ್ವನಿರ್ಧಾರದ ಹಕ್ಕನ್ನೊಪ್ಪಿಕೊಂಡಲ್ಲಿ ಬ್ರಿಟನಿಗೊದಗಿರುವ ಈ ದಿನದ ಅಸಾಧಾರಣ ಆಪತ್ತಿನ ವೇಳೆ ದೊರೆಯುವ ಭಾರತದ ಸರ್ವತೋಮುಖ ಬೆಂಬಲವು ಅತ್ಯಂತ ಪ್ರಯೋಜನಕಾರಿಯಾಗಬಹುದು. ಯುದ್ಧ ಸ್ಥಿತಿಯು ವಿಷಮವಾಗುತ್ತಾಬರುತ್ತಿದ್ದಂತೆ ಭಾರತದಲ್ಲಿ ಸಲವರು ಈ ಕುರಿತು ಆತುರತೋರಿಸುತ್ತಿದ್ದಾರೆ. ಆದರೆ ಕಾಂಗ್ರೆಸು ತನ್ನ ಅಸ್ತಿತ್ವದೆಂತಿರುವ ಸ್ವನಿರ್ಧಾರ ಧ್ಯೇಯಕ್ಕಿಂತ ಮಿಕ್ಕಿದ ಬೆಲೆಯನ್ನು ಮಿಕ್ಕ ಯಾವ ಮಹತ್ವದ ವಿಷಯಕ್ಕಾದರೂ ಕೊಡಲು ಸಾಧ್ಯವಿಲ್ಲ. ಆದ್ದರಿಂದ ಕಾಂಗ್ರೆಸಿನ ಹೇಳಿಕೆಗೆ ತಕ್ಕ ಮಾನ್ಯತೆಕೊಟ್ಟು ತಮ್ಮ ಆದಚಣೆಗದು ಒದಗುವಂತೆ ಮಾಡುವ ಜವಾಬ್ದಾರಿ ಬ್ರಿಟಿಷ್ ಮುತ್ಸದ್ದಿಗಳ ಮೇಲಿದೆ. ಹಾಗೆ ಮಾಡಲೇಬೇಕಾಗುವಂತಹ ಪರಿಸ್ಥಿತಿಯಿಂದು ನಾಲ್ಕು ಕಡೆಯಿಂದ ಕೂಡಿಬಂದಿದೆ. ಇದಕ್ಕೂ ಇಂಗ್ಲಾಂಡು ವ್ಯತಿರಿಕ್ತವಾಗಿ ವರ್ತಿಸಿದಲ್ಲಿ ಮಹತ್ವ ಸಾಧನೆಗಾಗಿ ಸ್ವಾರ್ಥದ ಬಿಂದುವನ್ನು ಕೂಡ ಕಳಕೊಳ್ಳಲಾರದ ವ್ಯವಹಾರಚಿಪುಣತೆಯ ಪರಮಾವಧಿಯನ್ನು ಬ್ರಿಟನು ಪ್ರದರ್ಶಿಸಿದಂತಾಗಬಹುದು. ಈ ವರೆಗಿನ ಆಡಳಿತೆಯು ಪ್ರದರ್ಶಿಸಿದ ಅಚಾತುರ್ಯವನ್ನು ಅದು ಮುಂದಕ್ಕೂ ಬಂತ್ತಿಕಟ್ಟಿಕೊಂಡಿರಲು ಸಿದ್ಧವಿದೆ ಎಂಬುದನ್ನು ತೋರಿಸಿದಂತಾಗಬಹುದು! ಇಂದಿನ ಯುದ್ಧ ಪರಿಸ್ಥಿತಿಯಲ್ಲಿ ಗ್ರೇಟ್‌ಬ್ರಿಟನು ಈ ರೀತಿ ಸ್ತಬ್ಧವಾಗಿರಲು ಸಾಧ್ಯವಿದೆಯೆ?

ಭಾರತದ ಹೊಸ ಕಾರ್ಯದರ್ಶಿ ಮಿ. ಅಮೆರಿಯವರು ಅಧಿಕಾರ ಸ್ವೀಕರಿಸಿದೊಡನೆ ಪತ್ರಿಕಾ ಪ್ರತಿನಿಧಿಗಳಿಗಿತ್ತ ಭೇಟಿಯಲ್ಲಿ ಹಿಂದೂದೇಶದ ಪ್ರಶ್ನೆಯ ಕುರಿತು ಹೃದಯಶುದ್ಧತೆಯನ್ನು ಪ್ರದರ್ಶಿಸಿರುವರು. "ಸ್ವರಾಜ್ಯಾಧಿಕಾರವು ಒಂದು ದೇಶದ ಸ್ವಂತ ಹಿತಕ್ಕೇನೇ ಅಲ್ಲ; ಬ್ರಿಟಿಷ್ ಕಾಮನ್‌ವೆಲ್ತಿನ ಸ್ವತಂತ್ರ ಪಾಲುಗಾರರಾಗಿರುವ ಎಲ್ಲಾ ರಾಷ್ಟ್ರಗಳೊಳಗಿನ ನಿಕಟ ಸಂಬಂಧಕ್ಕೂ ಅತ್ಯನುಕೂಲ" ಎಂಬ ತತ್ವದಲ್ಲಿ ಮಿ. ಅಮೆರಿಯವರು ಅಚಲ ವಿಶ್ವಾಸ ಸೂಚಿಸಿರುವರು. ಹೀಗೆ ಕೂಡಲೆ ಭಾರತವನ್ನು ಸ್ವನಿರ್ಧಾರಕ್ಕೆ ಬಿಡುವದು ತತ್ವಕ್ಕನುಗುಣ ಕಾರ್ಯಕ್ಕನುಕೂಲವಾಗಿರುವಾಗ ಬ್ರಿಟಿಷ್ ಮುತ್ಸದ್ದಿಗಳು ಇನ್ನೂ ಕೈತಡೆಯುವ ಅಗತ್ಯವೇನುಂಟು? ಈ ವರೆಗಿನ ವಿಳಂಬವು ಕೇವಲ ಆಗಿನ ಅಧಿಕಾರಿಗಳ ಆಲಸ್ಯ ಮನೋವೃತ್ತಿಯ ಪರಿಣಾಮವೆಂಬುದನ್ನು ತನ್ನ ಭಿನ್ನವಾದ ಕಾರ್ಯಕ್ರಮದಿಂದ ಅಮೆರಿಯವರು ತೋರಿಸಿಕೊಡುವರೇ? "ಸದ್ಯದ ಕಾರ್ಯಸ್ತಬ್ಧತೆಯನ್ನು ಹೀಗೆ ಮುಂದುವರಿಯಗೊಡಲು ಸಾಧ್ಯವಿಲ್ಲ; ಅದು ಹೀಗೆ ಅಥವಾ ಹಾಗೆ ತೀರ್ಮಾನಗೊಳ್ಳಲೇ ಬೇಕು" ಎಂದು ಗಾಂಧಿಯವರು ತನ್ನ ಇತ್ತೀಚೆಗಿನ ಲೇಖನದಲ್ಲಿ ಬರೆದಿರುವರು. "ಹೋರಾಟವನ್ನು ತಡೆಯಲು ನನ್ನ ಸರ್ವಶಕ್ತಿಯಿಂದ ನೋಡುತ್ತೇನೆ; ಆದರೆ ಅದು ಅನಿವಾರ್ಯವಾಗಬಹುದು" ಎಂದು ಮಹಾತ್ಮಗಾಂಧಿಯವರ ಹೃದಯಪೂರಿತ ಮಾತು. ಹೀಗೆ ಇತ್ತಂಡದವರನ್ನೂ ಪರಿಸ್ಥಿತಿಯು ಒಂದೆಡೆಗೊಯ್ಯುತ್ತಿರುವಾಗ ದೂರ ಸರಿಯುವ ಪ್ರತ್ಯೇಕ ಸಾಹಸವೊಂದನ್ನು ಇಂಗ್ಲಾಂಡು ತನ್ನ ಕಂಠದ ವರೆಗೆ ಬಗಿದು ಬಂದಿರುವ ಇಂತಹ ಸಂದಿಗ್ಧ ಕಾಲದಲ್ಲಿಯೂ ಪ್ರದರ್ಶಿಸುವದಾದರೆ ಅದಕ್ಕಿಂತ ದೊಡ್ಡ ದುರ್ಘಟನೆ ಬೇರೊಂದಿರಲಾರದು. ಬ್ರಿಟಿಷ್ ರಾಜಕಾರಣಿಗಳು ಇಂತಹ ತಪ್ಪು ಹೆಜ್ಜೆಗೆ ಊರುಗೋಲಾಗಿ ಈ ವರೆಗೂ ಉಪಯೋಗಿಸುತ್ತಾ ಬಂದುದೆಂದರೆ ಭಾರತೀಯರಲ್ಲಿರುವ ಭಿನ್ನಾಭಿಪ್ರಾಯವೊಂದನ್ನೆ. ಆದರೆ ಮಿ. ಅಮೆರಿಯವರು ಲೋರ್ಡ್ ಜೆಟ್ಲೆಂಡರಂತೆ ಅದನ್ನೊಂದು ಅದ್ಭುತವಾಗಿ ಚಿತ್ರಿಸದೆ, ಅದು ಕಡೆಹಾಯಲಾಗುವ ತಡೆ ಎಂದು ಯಥಾರ್ಥತೆ ಭರವಸೆ ಸೂಚಿಸಿರುವದು ಸಂತೋಷದ ಸಂಗತಿ. ಬ್ರಿಟಿಷ್ ಸರಕಾರದ ಲಕ್ಷ್ಯವೀಗ ಸಂಪೂರ್ಣವಾಗಿ ಯುದ್ಧ ಕಣದ ಮೇಲಿದೆ ಎಂಬುದು ನಿಜ. ಯುದ್ಧ ನೀತಿ ಮತ್ತು ಯುದ್ಧ ಗೆಲ್ಲುವ ರೀತಿ, ಇವೆರಡಕ್ಕೂ ಭಾರತದ ಪ್ರಶ್ನೆಗೂ ನಿಕಟ ಸಂಬಂಧವಿದೆ. ಇಂಗ್ಲಾಂಡಿನ ನೀತಿ ಮತ್ತು ಶಕ್ತಿಯನ್ನು ಏಕಕಾಲದಲ್ಲಿ ಬಲಗೊಳಿಸುವ ಶಕ್ತಿ ಭಾರತ ಸ್ವಾತಂತ್ರ್ಯಕ್ಕಿದೆ. ಇಂಗ್ಲಾಂಡು ಇಂತಹ ಸಂದರ್ಭವನ್ನು ವ್ಯರ್ಥಗೊಳಿಸಿದರೆ–ಭಾರತ ಪ್ರಶ್ನೆಗೆ ಮಹತ್ವ ಕೊಡದೆ ಹೋದರೆ–ಪರಿಸ್ಥಿತಿಯು ಪರಿಣಾಮದಲ್ಲಿಯ ತುತ್ತ ತುದಿಗೇರುವುದರಲ್ಲಿ ಅನುಮಾನವಿಲ್ಲ.

ಮಿತ್ರ ರಾಷ್ಟ್ರಗಳ ಪರೀಕ್ಷಾ ಕಾಲ

ಬ್ರಿಟನು ಫ್ರಾನ್ಸುಗಳು ತಮ್ಮ ಸರ್ವ ಭಾರವನ್ನು ಹೊರಿಸಿ ತಗ್ಗಿಸಬೇಕಾದಂತಹ ದೊಡ್ಡ ಕಂಟಕವೊಂದು ಅವುಗಳೆದಿರು ಈಗ ತಲೆಯೆತ್ತಿದೆ. ಜರ್ಮನ್ ಸೇನೆ ಹೊಲ್ಲೆಂಡ್ ಬೆಲ್ಜಿಯಮುಗಳನ್ನು ವಾಯುವೇಗದಿಂದ ಆಕ್ರಮಿಸಿಕೊಂಡುದು ಮಾತ್ರವಲ್ಲ, ಈಶಾನ್ಯ ದಿಕ್ಕಿನಲ್ಲಿ ಫ್ರಾನ್ಸ್ ಗಡಿಯನ್ನೊಡೆದು ನುಗ್ಗಿ ಬಹು ದೂರ ಮುಂದೊತ್ತಿದೆ. ಇದು ಮಿತ್ರ ರಾಷ್ಟ್ರಗಳ ಪಾಲಿಗೆ ಉದ್ವೇಗಜನಕ ಕಠಿಣ ಪರಿಸ್ಥಿತಿಯೇ ಸರಿ. 1914ರಲ್ಲಿ ತಿಂಗಳುಗಟ್ಟಲೆಯಲ್ಲಿ ಸಾಧಿಸಲಾಗದುದನ್ನು ಈ ಬಾರಿ ಜರ್ಮನಿ ಹತ್ತೇ ದಿನಗಳೊಳಗೆ ಸಾಧಿಸಿದೆ. ಪ್ರಕೃತಿ ದತ್ತವಾದ ಅಥವಾ ಮಾನವ ನಿರ್ಮಿತವಾದ ತಡೆಗಳೆಲ್ಲವನ್ನೂ ಹಸುಮೋಳ್ಳಂಘನೆಮಾಡಿ ನಾಜೀ ಸೇನೆಯು ಮುಂದೊತ್ತಿರುವ ಈ ರೀತಿಯು ಅದ್ಭುತವೇ ಸರಿ. ಹೊಲ್ಲೆಂಡಿನ ರಕ್ಷಣಾಗಡಿಗಳು, ಲೀಜಿನ ಕೋಟೆ, ಅರ್ಡನೆಸ್ ಅರಣ್ಯಕ್ಷೇತ್ರದ ತಡೆ, 'ಮೂಸ್'ನ ರಕ್ಷಣಾ ಜಲಪ್ರವಾಹಗಳು–ಇವುಗಳಲ್ಲಾವುದೂ ಜರ್ಮನಿ ಸೇನೆಯನ್ನು ಒಂದೆರಡು ದಿನಗಳವರೆಗೆ ತಡೆದಿಡಲು ಶಕ್ತವಾಗಲಿಲ್ಲ. ಮಾತ್ರವಲ್ಲ; ತಾ. 19ರ ಒಳಗೆ ಪ್ಯಾರಿಸಿನ 70ಮೈಲು ದೂರದ ತನಕ ವಿರೋಧಿಗಳು ಮುಂದೊತ್ತಿದಾಗಿದೆ. ಮೆಜಿನೋ ಕೋಟೆಗೆ ಹೊಸತಾಗಿ ಸೇರಿಸಿ ಕಟ್ಟಿದ ಭಾಗವೊಂದನ್ನೊಡೆದು ನಾಜಿಗಳು ಫ್ರಾನ್ಸಿನೊಳಗೆ ಕಾಲಿಟ್ಟುದೊಂದು ವಿಶೇಷ ಸಂಗತಿ. ನಿಜವಾದ ಮೆಜಿನೋ ಲೈನಿಗೂ ಈ ಭಾಗಕ್ಕೂ ವ್ಯತ್ಯಾಸವಿದ್ದರೂ, ಅದು ಸೈನ್ಯ ಸಲಕರಣೆಗಳು ಬರುವವರೆಗೆ ವಿರೋಧಿಯನ್ನು ತಡೆದಿಡಲು ಶಕ್ತವಾಗುವದೆಂಬ ಭರವಸೆಯಿತ್ತು; ಆ ಲೈನಿನೊಂದಿಗೆ ಈ ಆಶೆಯೂ ನಾಜೀ ಹೊಡೆತದ ಪ್ರಾಬಲ್ಯದಿಂದ ಜರಿದುಬಿತ್ತು! ವಿರೋಧಿಗಳನ್ನು ಬಂದರಗಳನ್ನು ಹಿಡಿಯಲು ಸಮುದ್ರದ ಕಡೆಗೆ ಧಾವಿಸಲೂಬಹುದು; ಪ್ಯಾರಿಸಿಗೆ ಮುಂದೊತ್ತಲೂಬಹುದು. ಇಷ್ಟರಲ್ಲೇ ಹೊಲ್ಲೆಂಡು ಕರಾವಳಿಯಲ್ಲಿ ನಾಜೀ ಅಧಿಕಾರ ವ್ಯವಸ್ಥೆಯಾರಂಭವಾಗಿದ್ದು ಅದು ದೃಢವಾದರೆ ಬ್ರಿಟನಿನ ದ್ವೀಪಗಳಿಗೆ ಅಪಾಯವು ತಪ್ಪಿದ್ದಲ್ಲ.

ಸದ್ಯ ಸ್ಥಿತಿಯು ವಿಷಮಾವಸ್ಥೆಯ ಚಿತ್ರವು ಮಿ. ಚರ್ಚಿಲ್ಲರ ಮಾತುಗಳಲ್ಲಿಯೂ ಮೂಡಿದೆ. ಜನರಲ್ ಗ್ಯಾಮ್ಲಿನವರ ಬದಲಿಗೆ ಹೋರಾಟಪ್ರೇಮಿ ಜನರಲ್ ವೇಗಾಂಡರ ನೇಮಕವಾಗಿರುವುದನ್ನು ನೋಡಿದರೆ ಮಿತ್ರರಾಷ್ಟ್ರಗಳು ಸ್ವರಕ್ಷಣೆಯನ್ನು ಮಾತ್ರವಲ್ಲ; ಪ್ರತೀಕಾರವನ್ನು ಮಾಡಲು ಅಣಿಯಾಗಿವೆ ಎನ್ನಬಹುದು. ಜರ್ಮನ್ ಸೇನೆಯನ್ನು ಈ ಬಾರಿ ಹಿಂದಕ್ಕಟ್ಟಿದರೆ ಮೇಲಿಂದಮೇಲೆ ಹಿಂದೂಡಲಾಗುವದೆಂಬ ಅಭಿಪ್ರಾಯವನ್ನು ಬ್ರಿಟನ್ ಫ್ರಾನ್ಸುಗಳ ಯುದ್ಧತಜ್ಞರು ಸೂಚಿಸಿರುವರು. ಅಂತೂ ಈ ರಣಕಣದಲ್ಲಿ ತನ್ನ ಶಕ್ತಿಯನ್ನೆಲ್ಲಾ ಜರ್ಮನಿ ವ್ಯಯಿಸುತ್ತಿದೆ. ಮಿತ್ರರಾಷ್ಟ್ರಗಳು ತಮ್ಮದೆಲ್ಲವನ್ನೂ ಕೇಂದ್ರೀಕರಿಸಿಕೊಂಡು ಪ್ರತಿಭಟಿಸಲುದ್ಯುಕ್ತರಾಗಿರುವರು. ಇದರ ಪರಿಣಾಮವಾಗಿ ಯುದ್ಧವು ಇನ್ನಷ್ಟು ಭೀಕರವಾಗುವದು, ಇತ್ತಂಡದವರ ಬದುಕುಸಾವುಗಳ ತೀರ್ಮಾನದ ಕಾಲ ಸಮೀಪಿಸುತ್ತಿರುವದು ಎಂಬುದಕ್ಕನುಮಾನವಿಲ್ಲ.

ಭಾರತ ಕಾರ್ಯದರ್ಶಿಯವರ ಹೇಳಿಕೆ.

ಪತ್ರಿಕಾ ಪ್ರತಿನಿಧಿಗಳಿಗೆ ಭೇಟಿ

ಮಿ. ಅಮೆರಿಯವರು ಅಧಿಕಾರಕ್ಕೆ ಬಂದವರೇ ತಾ. 17ರಲ್ಲಿ ಇಂಡಿಯಾ ಆಫೀಸಿನಲ್ಲಿ, ಭಾರತದ ವಿವಿಧ ಪತ್ರಿಕೆಗಳ ಪ್ರತಿನಿಧಿಗಳಿಗಿತ್ತ ಭೇಟಿಯಲ್ಲಿ ಆಶೋದಯವನ್ನುಂಟುಮಾಡಿದ್ದಾರೆ. ತಾನು ಭಾರತದಲ್ಲೇ ಜನಿಸಿದವನಿರುವುದರಿಂದ ಅದರೊಡನೆ ಸ್ವಾಭಾವಿಕ ಸಹಾನುಭೂತಿಯಿದೆ; ಹಾಗೆಯೇ ಜವಾಬ್ದಾರಿ ಸರಕಾರದ ವಿಶಾಲ ತತ್ವಗಳಲ್ಲಿ ಪೂರ್ಣ ನಂಬಿಕೆಯಿದೆ ಎಂಬುದನ್ನವರು ಸೂಚಿಸಿ ಭಾರತದ ಗುರಿಸೇರುವ ವಿಧಾಯಕ ಪಥದ ಯಾವ ಕಂಟಕ ನಿವಾರಣೆಗಾಗಿ ಭಾರತದ ಹೃದಯ ಮತ್ತು ನಮ್ಮ ಯಥಾರ್ಥ ಉದ್ದೇಶ ನಟ್ಟಿರುವುದೋ ಆ ತತ್ವಗಳ ಅರಿವು ನನಗೆ ಪೂರ್ಣವಿದೆ. ಆ ಕುರಿತು ಈಗಲೇ ನಿನ್ನನ್ನೂ ಹೇಳುವದಸಾಧ್ಯವಾದರೂ, ಸಂದೇಹರಹಿತ ಸ್ವಚ್ಛ ಬುದ್ಧಿ ಮತ್ತು ಉತ್ತಮಾಪೇಕ್ಷೆಯೊಡನೆ ನಾನು ಆ ದೊಡ್ಡ ಸಮಸ್ಯೆಯನ್ನು ಪರ್ಯಾಲೋಚಿಸಲಿದ್ದೇನೆ" ಎಂದು ಆಶ್ವಾಸನೆಯಿತ್ತಿದ್ದಾರೆ.

NOTICE

Notice is hereby given that as the culvert in 1/1 on the road from Puttur to Uppinangadi is declared unsafe, all vehicular traffic passing on the culvert will be diverted to the diversion road. All users of vehicular traffic will take notice of this.

Mangalore, 17-5-1940 — (Sd.) U Ziauddin, Dt. Supdt. of Police and Secretary, Road Traffic Board, S K.

ಫ್ರಾ...

ಫ್ರಾನ್ಸ್ ...

ಫ್ರಾನ್ಸಿನೊ... ಗ್ಲಿಸ್ ಮತ್ತು ... ತ್ರಗಳ ಮಧ್ಯ... ಯಿತು. ... ಕಾವ ಕೆಲವು ... ಸ್ವಾಧೀನಪಡಿ... ಹೇಳಿಕೆಯಿದೆ.

ಬೆಲ್ಜಿ...

ಬೆಲ್ಜಿಯಮಿ... ಇಂಗ್ಲಾಂಡು ... ನೆಗಳು ತಾವ... ವು. ತಾ. 18ರ... ಸೀಸ್ ನಡೆ... ಕರ ಹೋರಾಟ... ಟಾಂಕಿಗಳು, ... ಗಳ ಸಂಘಟ... ಹೋರಾಡದ... ಣ ಭಾಗಕ್ಕೆ ... ದಿಗೂ ಯುದ್ಧ ... ವಿಶೇಷಾನುಕ... ಗಳು ಮುಂದೊ... ದೂರದ ಸೇಂಟ್... ನ ವರೆಗೆ ಜೊ...

ಇಂದಿನ ...

ಫ್ರಾನ್ಸ್ ... ಇತ್ತೀಚೆಗಿನ ... ಉತ್ತರ ಬೆಲ್ಜಿ... ಗಳು ಸ್ವೀಚ್... ಮತ್ತು ಲಿಂ... ಫ್ರಾನ್ಸ್ ರಣ... ಪ್ಯಾರಿಸಿಗೆ ಸಮ... ಲ್ಲಿಗೆ ಜರ್ಮನಿಯ... ಮುಖ; ಮತ್ತು ... ಭಾಗದಲ್ಲಿ ... ಇವೆಲ್ಲಾ ... ಭಾಗದಲ್ಲಿ ... ಯಲ್ಲಿರುವ ... ಏನಾಯಿತೆಂದು ... ಅವರ ಕೋಟೆ... ಹೋರಾಟವು ...

ಯುದ್ಧ ...

ಪರಿಸ್ಥಿತಿಯು ... ವಿರೋಧಿಗಳನ್ನು ... ವಲ್ಲವೆಂದು ... ಕೊಳ್ಳರು ... ಯೋಜನೆಗಳ ... ದಕ್ಷಿಣ ... ಯುತಬಹುದು ... ಪೈಕವಾಂಚ್ ... ಕಡೆಗೆ ಧಾಳಿ... ಯೂ ಮೆಜಿನ... ಸ್ಥಿತಿಯಲ್ಲಿ ... ಅಲ್ಲಿಯವರ ...

ಜರ್ಮನಿ ...

ಹೊಲ್ಲೆಂಡಿ... ಕೊನೆಯ ... ಈಗ ಇತ್ತ ...

ರಣರಂಗದಲ್ಲಿ ಇತ್ತಂಡದವರ ಸರ್ವಶಕ್ತಿ ಪ್ರಯೋಗ!

ಲ್ಲಿ ಘೋರ

...ವ್ಯ ದಿಕ್ಕಿನಲ್ಲಿ
... ಎಂಬ ಕ್ಷೇ
...ರಾಟ ನಡೆ
...ನ ಯುದ್ಧದಲ್ಲಿ
... ಹಿಂದಿರುಗಿ
...ಸ ಫ್ರೆಂಚರ

...ರಂಗ
ರಣರಂಗದಲ್ಲಿ
...ಯುವು ಸೇ
...ಯುತ್ತಿರುವ
...ತ್ತು ಲೇಂಡ್ರೆ
...ನವಿಡೀ ಘೋ
ಜರ್ಮನರು
ಮತ್ತು ಶಸ್ತ್ರ
ಪ್ರಬಲವಾಗಿ
...ಬಲ್ಲಿಯ ದಕ್ಷಿ
...ವಾಯವ್ಯ ಕ
ಜರ್ಮನಿಯ
...ಕೊಂಡು ಸೇನೆ
...80 ಮೈಲು
...ಬೈನ ಎಂಬಲ್ಲಿ

...ಣಗಳು
...ಕ್ಷೇತ್ರಗಳಲ್ಲಿ
...ಸ್ಥಿತಿಯಿದೆ.
ಮಿತ್ರರಾಷ್ಟ್ರ
...ವೆದು; ಗ್ರೀಸ್
...ಎಂಬಲ್ಲಿವರೆಗಿನ
...ಕರ ಯುದ್ಧ;
...ಯೇನ್ ಎಂಬ
ಸೇನೆಗಳ ಆಗ
...ಸಾನ್ ಮಧ್ಯ
...ಹೋರಾಟ,
...ನಿನ ಪೂರ್ವ
...ಾಗಿದೆ. ಗಡಿ
...ನವ ಪರಿಸ್ಥಿತಿ
...ದಿಲ್ಲ. ಆದರೆ
...ಮಗಡೆಯಲ್ಲಿ
...

...ಭಿಪ್ರಾಯ
...ಜನಕವಿದ್ದರೂ
...ವದು ಶಕ್ಯ
...ಜೀ ಜನರಲ
...ಮಿನ ರೀತಿ
...ಫ್ರೆಂಚರು
...ಯಾಗಿ ಧಾಳಿ
...ಂದಜರ್ಮನಿ
...ದೆ. ಪ್ಯಾರಿಸಿನ
...ಾಗಿ ಬಂದಲ್ಲಿ
... ಒಡೆಯುವ
... ಇದೆ ಎಂದು

...ಮಾಚಾರ
...ರ್ ದ್ವೀಪದ
...ನುರಿದರೆಂದೂ
...ದರ ದ್ವೀಪ

ಜರ್ಮನಿಯ ಎಣ್ಣೆ ಕೆರೆಗಳ ಮೇಲೆ ಬೋಂಬು!

ಜನರಲ್ ವೇಗಾಂಡರ ನೇಮಕ!!

ನಾಜೀ ಸೇನೆ ಪ್ಯಾರಿಸ್ ನುಗ್ಗುವದೇ—ಬಂದರಗಳನ್ನು ಹಿಡಿಯುವದೆ?

ಗೆಲಿಡನೆ ಜರ್ಮನಿಯ ವಶವಾಗಿರುವದೆಂದೂ ನಾಜೀ ಪ್ರಕಟಣೆಯಿದೆ. ಉತ್ತರ ಬೆಲ್ಜಿಯಮಿನಲ್ಲಿ ಎಂಟ್‌ವರ್ಪನ್ನು ಸ್ವಾಧೀನಪಡಿಸಿಕೊಂಡು ಮುಂದೊತ್ತಿದ ಸೇನೆ ವಿರೋಧಿಗಳನ್ನು ಪಶ್ಚಿಮ ಕಡೆಗಟ್ಟಿದೆ. ಪಶ್ಚಿಮ ಬ್ರುಸೆಲ್ಸಿನ ಕಡೆಯಲ್ಲಿ ಡೆಂಡ್ರೆ ವಿಭಾಗವನ್ನು ಸೇರಿದ್ದೇವೆ. ದಕ್ಷಿಣ ಭಾಗದಲ್ಲಿ ಬಲವಾದ ನಾಜೀ ಸೇನೆಯು ರಾಸೆಲ್ ಬಳಿಯ ಐಸ್ನೆ ಮತ್ತು ಲಾವನ್‌ನ ಉತ್ತರ ಕ್ಷೇತ್ರವನ್ನು ಪ್ರವೇಶಿಸಿರುವುದು. ಹೋರಾಟದಲ್ಲಿ ಮೋಂಟ್‌ಮೆಡಿಯ ವಾಯವ್ಯ ದಿಕ್ಕಿನಲ್ಲಿ ಮೆಜಿನೆಟ್ ಲೈನಿನ 505ನೇ ನಂಬ್ರದ ಬಲವಾದ ಭಾಗವು ನಮ್ಮ ಕೈವಶವಾಗಿದೆ. ಡಚ್ ಸೇನೆಯ ಹೊರತಾಗಿ ಈ ತನಕ 110000 ಜನರನ್ನೂ ಹಲವು ವಿಧದ ಗನ್ನುಗಳನ್ನೂ ಸೆರೆಹಿಡಿದಿರುವೆವು. ಫ್ರಾನ್ಸ್ ಕರಾವಳಿಯಲ್ಲಿ 6000 ಟನ್ನಿನ ಕಾರ್ಗೋ ಹಡಗವನ್ನು ಮುಳುಗಿಸಿರುವೆವಲ್ಲದೆ ಒಂದು ಡಿಸ್ಟ್ರೋಯರ್ ವಿಪರೀತ ಜಖಂ ಗೊಳಿಸಲಾಗಿದೆ. ವಿರೋಧಿಗಳ 147 ವಿಮಾನಗಳನ್ನುರುಳಿಸಿದೆವು, ಎಂದೆಲ್ಲಾ ಜರ್ಮನರು ಜಾಹೀರುಮಾಡಿದ್ದಾರೆ.

ಎಡೆಬಿಡದೆ ಹೋರಾಟ!

ತಾ. 18ನೇ ರಾತ್ರಿ ಬ್ರುಸೆಲ್ಸಿನ ನೈಋತ್ಯದಿಕ್ಕಿನಿಂದ ಧಾಳಿನಡೆಸಿದ ಮಿತ್ರರಾಷ್ಟ್ರಗಳನ್ನು ಹಿಂದಕ್ಕಟ್ಟಲಾಯಿತಂತೆ. ಈ ಯುದ್ಧದಲ್ಲಿ 30 ಶಸ್ತ್ರಸಾರುಗಳು ವಿತ್ರರಿಗೆ ನಷ್ಟವಾದವು. ತಾ. 19ರಲ್ಲಿ ಸಾಂಬ್ರೆ ಮತ್ತು ಮ್ಯೂಸ್ ಮಧ್ಯಕ್ಷೇತ್ರದಲ್ಲಿ ಅವಿಶ್ರಾಂತ ಹೋರಾಟ ನಡೆಯಿತು. ಸೈಂಟ್ ಕ್ವೇಂಟನ್‌ಗೆ ಹೊಕ್ಕ ಜರ್ಮನಿಯ ಒತ್ತು ಸೇನೆಯ ಮೇಲೆ ಹಲವು ಬಾರಿ ಫ್ರೆಂಚ್ ಮುತ್ತಿಗೆ ನಡೆಯಿತು. ಕ್ವಾಂಟನಿನ ಆಗ್ನೇಯ ದಿಗಡೆಯಲ್ಲಿ ಅತಿ ಮುಖ್ಯ ಯುದ್ಧ ನಡೆಯುತ್ತಿದೆ. ಮೋಂಟಮೆಡಿಯಲ್ಲಿ ಧಾಳಿಯಿಟ್ಟ ವಿರೋಧಿ ಸೇನೆಯನ್ನು ಫ್ರೆಂಚರು ಹಿಮ್ಮೆಟ್ಟಿಸಿದ್ದಾರೆ. ವಿರೋಧಿಗಳಿಗೆ ಹೇರಳ ನಷ್ಟವಾಗಿರುವುದೆಂದೂ ಅವರ ಹದಿನೈದು ವಿಮಾನಗಳಲ್ಲಿ 3ನೇ ಅಂಶ ಹಾಳಾಯಿತೆಂದೂ ಫ್ರೆಂಚರು ತಿಳಿಸುತ್ತಾರೆ. ಜರ್ಮನರು ತಮ್ಮ ಎಲ್ಲಾ ಶಕ್ತಿಯನ್ನು ಕೇಂದ್ರೀಕರಿಸಿಕೊಂಡು ಹೋರಾಡಿದರೂ ಸಫಲರಾಗಲಿಲ್ಲವಾದ್ದರಿಂದ ಎಂದಿಗಿಂತಲೂ ಈಗ ಹೆಚ್ಚಿನ ಆಶೆಯಿದೆ ಎಂದು ಎಮ್. ಚಾರ್ಲೆಸ್ ಮೋರಿಸರು ಬರೆಯುತ್ತಾರೆ. ಡೀಪ್ಪೆ ಎಂಬ ಪಟ್ಟಣದ ಮೇಲೂ ನಾಜೀ ವಿಮಾನಗಳು ಬೋಂಬು ಹಾಕಿರುವವು.

ಜರ್ಮನಿಯ ಎಣ್ಣೆ ಸಂಗ್ರಹದ ಮೇಲೆ ಬ್ರಿಟಿಷ್ ವಿಮಾನ ಧಾಳಿ

ಬ್ರಿಟಿಷರ ಬೋಂಬು ಉಗುಳುವ ವಿಮಾನಗಳು ಜರ್ಮನಿಯ ಹೋನವರ್ ಬ್ರೆಮೆನ್ ಮತ್ತು ಹೇಂಬರ್ಗಿನ ಎಣ್ಣೆ ಮತ್ತು ಪೆಟ್ರೋಲ್ ಸಂಗ್ರಹಗಳ ಮೇಲೆ ಬೋಂಬು ಸುರಿಸಿ ಬೆಂಕಿ ಹಿಡಿಸಿರುವವು. ಬ್ರೆಮೆನಿನ ಸಂಗ್ರಹದ ಮೇಲೆ 300ಕ್ಕೂ ಮಿಕ್ಕಿದ ಬೋಂಬುಗಳು ಬಿದ್ದುವು. ಪೆಟ್ರೋಲ್ ತುಂಬಿದ ಕೆರೆಯೊಂದಕ್ಕೆ ನೇರಾಗಿ ಬಿದ್ದ ಬೋಂಬಿನಿಂದ ಹತ್ತಿದ ಬೆಂಕಿ 2000 ಅಡಿಯಷ್ಟು ಎತ್ತರಕ್ಕೆ ಧಗಧಗಿಸುತ್ತಿತ್ತಂತೆ. ಇಡೀ ಪಟ್ಟಣವು ಹೊಗೆಯ ಕರಿ ಮೋಡದಿಂದಾವರಿಸಲ್ಪಟ್ಟಿತ್ತು. ಒಂದು ಇಡೀ ರಾತ್ರಿ ಹೇಂಬರ್ಗ್ ಎಣ್ಣೆ ಸಂಗ್ರಹದ ಮೇಲೆ ಬೋಂಬು ಸುರಿಯುತ್ತಲೇ ಇತ್ತು. ಅಲ್ಲಿಯ ಬೆಂಕಿ ಕಕ್ಸಾವನ್ ಎಂಬ ದೂರದ ಸ್ಥಳಕ್ಕೂ ತೋರುತ್ತಿತ್ತಂತೆ. ಇತರ ಎಣ್ಣೆ ಗವಿಗಳ ಮೇಲೂ ಮೇಲಿಂದ ಮೇಲೆ ಧಾಳಿ ನಡೆಯಿತು. ಕೊನೆಯ ಧಾಳಿಗಾರರು ಹೇಂಬರ್ಗನ್ನು ಬಿಡುವಾಗ ಆ ಭಾಗಗಳೆಲ್ಲಾ ಕರಿ ಮೋಡಗಳಿಂದ ಮುಚ್ಚಿ ಹೋಗಿದ್ದುವು.

ಎಲ್ಲೆಲ್ಲಿಯೂ ಬ್ರಿಟಿಷ್ ವಿಮಾನಗಳ ಹೊಡೆತ

ತಾ. 19ನೇ ರಾತ್ರಿ ಬ್ರಿಟನಿನ ಆರ್. ಎ. ಎಫ್. ದಳದ ವಿಮಾನಗಳು ಫ್ರಾನ್ಸು ಮತ್ತು ಬೆಲ್ಜಿಯಮಿನ ರಣಕ್ಷೇತ್ರಗಳ ಮೇಲೆ ಹಾರಾಡಿ ವೈರೀ ಸೈನ್ಯ ಸಂಚಾರದ ರಸ್ತೆ, ರೈಲ್ವೇ ಲೈನು, ಸೇತುವೆ, ವಿಮಾನ ನಿಲ್ದಾಣಗಳ ಮೇಲೆಲ್ಲಾ ಎಡೆಬಿಡದೆ ಬೋಂಬು ಸುರಿಸಿ ಪರಿಣಾಮಕಾರೀ ಹಾವಳಿ ಮಾಡಿರುವವು. ಕಡಿಮೆಯೆಂದರೆ 20 ನಾಜೀ ವಿಮಾನಗಳನ್ನುರುಳಿಸಿರುವವು. ಇವುಗಳ ಹೊಡೆತದಿಂದ ಜರ್ಮನ್ ಸೇನೆಯ ಚಲನವಲನದಲ್ಲಿ ಪ್ರಬಲ ವ್ಯತ್ಯಾಸವಾಗಿರುವದಲ್ಲದೆ ಮಿತ್ರರಾಷ್ಟ್ರಗಳ ಸೇನೆಯು ಬಲಗೊಂಡು ಮುಂದೊತ್ತುವಂತಾಗಿದೆ.

ರೋಟ್ಟರ್ಡಮನ್ನು ಪುಡಿಗುಟ್ಟಿದ ರೀತಿ

ಪ್ಯಾರಿಸಿನಲ್ಲಿರುವ ಡಚ್ ಮಂಡಲದವರ ಒಂದು ಪ್ರಕಟಣೆಯಲ್ಲಿ ರೋಟರ್ಡಮ್ಮನ್ನು ಜರ್ಮನರು ಧ್ವಂಸಗೊಳಿಸಿದ ರೀತಿಯ ಉಲ್ಲೇಖವಿದೆ. ಜರ್ಮನರ ಹೊಡೆತದಿಂದ ಕಡಿಮೆಯೆಂದರೆ ಅಲ್ಲಿ ಒಂದು ಲಕ್ಷ ಜನರು ಮೃತಪಟ್ಟರೆಂದೂ ಪಟ್ಟಣದ ಮೂರನೇ ಒಂದು ಭಾಗವು ಪುಡಿ ಪುಡಿಯಾಯಿತೆಂದೂ ಹೇಳಲ್ಪಟ್ಟಿದೆ. ತೀರಾ ತಗ್ಗಿನಲ್ಲಿ ಹಾರುವ ವಿಮಾನಗಳಲ್ಲಿ ಬಂದು 4500 ಅಡಿ ಮೇಲಿನಿಂದ 2000 ಪೌಂಡು ಭಾರದ ಬೋಂಬುಗಳನ್ನು ಸುರಿಸಿದರಂತೆ. ಬೋಂಬುಗಳು ತಡವಾಗಿ ಸಿಡಿಯುವ ಜಾತಿಯವುಗಳಿದ್ದು ಭೂಕಂಪವನ್ನೇ ತಂದೊಡ್ಡಿದುವಂತೆ. ಒಂದು ಸಲ ಬೋಂಬು ಸುರಿಸಿ ಹೋದವರು ಸ್ವಲ್ಪಗಳಿಗೆ ವಿರುದ್ಧವಾಗಿ ಪುನಃ ಪುನಃ ಬಂದು ಬೋಂಬು ಸುರಿಸುತ್ತಿದ್ದರಂತೆ.

ಮಿತ್ರರಾಷ್ಟ್ರಗಳ ಹೊಸ ದಳಪತಿ ಜನರಲ್ ವೇಗಾಂಡ್

ಜನರಲ್ ಗೇಮ್ಲಿನರ ಸ್ಥಾನಕ್ಕೆ ಮಿತ್ರರಾಷ್ಟ್ರಗಳ ಸಕಲ ಕಾಲ್ಬಲದ ಪ್ರಧಾನ ದಳಪತಿಯಾಗಿ ಜನರಲ್ ವೇಗಾಂಡರ ನೇಮಕವಾಗಿದೆ. ಮಾಜೀ ಕಮಾಂಡರ್-ಇನ್-ಚೀಫ್ ಗ್ಯಾಮ್ಲಿನರಿಗಾವ ಸ್ಥಾನವೆಂಬುದು ಈ ತನಕ ತಿಳಿದಿಲ್ಲ. ಫ್ರಾನ್ಸಿನ ಪ್ರಧಾನ ಎಮ್. ರೈನಾಡ್, ಮಾರ್ಶಲ್ ಪೆಟೇನ್ ಜನರಲ್ ವೇಗೇಂಡರು ತಮ್ಮೊಳಗೆ ಮಾತಾಡಿದುದರ ಪರಿಣಾಮವಾಗಿ ಪ್ರೆಸಿಡೆಂಟ್ ಲೆಬರ್ನರು ವೇಗಾಂಡರನ್ನು ಕಮಾಂಡರ್-ಇನ್-ಚೀಫ್ ಆಗಿ ನೇಮಕಮಾಡಿರುವರು. ಜನರಲ್ ವೇಗಾಂಡರು ಹಿಂದಿನಯುದ್ಧಗಳಲ್ಲಿ ಮಾರ್ಶಲ್ ಫೋಚರ ಬಲಗೈಯಂತಿದ್ದ ಸೇನಾಪತಿ. ‘ಎಂದೆಂದಿಗೂ ಅಪಜಯವರಿಯದ ಮನುಷ್ಯ’ ಎಂದು ವೇಗಾಂಡರು ಪ್ರಸಿದ್ಧಿ ಹೊಂದಿದ್ದಾರೆ. ತನ್ನ ಯುದ್ಧ ಚಮತ್ಕಾರ ಪ್ರದರ್ಶನಕ್ಕೆ ಎಡೆಕೊಡುವ ಅಪಾಯಕರ ಪರಿಸ್ಥಿತಿಗಾಗಿ ಹಿಗ್ಗುವ ಧೀರರು ವೇಗಾಂಡರು. ಎಂತಹ ವಿಷಮ ಪರಿಸ್ಥಿತಿ ಬಂದರೂ ಸದ್ಯದ ದಳಪತಿ ನಿರಾಶೆಯನ್ನು ಕಾಣುವಂಥವರಲ್ಲ. 1867ರಲ್ಲಿ ಬ್ರುಸೆಲ್ಸಿನಲ್ಲಿ ಜನ್ಮವೆತ್ತಿದ ಈ ನೂತನ ಸೈನ್ಯಾಧಿಪತಿಯು ಹಲವು ಯುದ್ಧಗಳಲ್ಲಿ ಮುಂದಾಳುತನವಹಿಸಿ ಅನುಭವವಿದ್ದವರು. ನೆಪೋಲಿಯನನಿಗೆ ಬರ್ಥಿಯರಿದ್ದಂತೆ ಜನರಲ್ ಫೋಚರಿಗೆ ಬಲಗೈಯಾಗಿ ನಿಂತು ಅಸಾಮಾನ್ಯ ಧೈರ್ಯ ಸಾಹಸ ದೃಢತೆಯನ್ನು ಹಲವು ಸಂದರ್ಭಗಳಲ್ಲಿ ಪ್ರದರ್ಶಿಸಿದ್ದರು. 1920ರಲ್ಲಿ ಸೋವಿಯೆಟ್ ಸೇನೆಯು ವಾರ್ಸಾದ ಕಡೆಗೆ ಧಾಳಿಯಿಟ್ಟು 20 ಕಿಲೋಮೀಟರಿನಷ್ಟು ದೂರದಲ್ಲಿದ್ದಾಗ ಜನರಲ್ ವೇಗಾಂಡರು ಪೋಲೇಂಡ್ ಸೇನೆಯನ್ನು ಸಂಘಟಿಸಿ ಚಮತ್ಕಾರ ಪೂರ್ವಕ ನಡೆಸಿ ರಶ್ಯಾ ಸೇನೆಯನ್ನು ಹಿಂದಕ್ಕಟ್ಟಿದ್ದರು. ಇಂತಹ ದಳಪತಿ ಬಂದುದಕ್ಕಾಗಿ ಮಿತ್ರರಾಷ್ಟ್ರಗಳ ಪಕ್ಷಪಾತಿ ದೇಶಗಳೆಲ್ಲಾ ತೃಪ್ತಿ ಸೂಚಿಸಿವೆ.

ಹೋರಾಟವು ಯಥಾಸ್ಥಿತಿಯಲ್ಲಿದೆ

ತಾ. 20ರವರೆಗಿನ 24 ಘಂಟೆಗಳ ಹೋರಾಟದ ಪರಿಣಾಮದಲ್ಲಿ ವಿಶೇಷವೇನೂ ವ್ಯತ್ಯಾಸವಾಗಿಲ್ಲ. ಕೇಂಬ್ರಾಯಿಯ ಪೂರ್ವಭಾಗದಲ್ಲಿ ಜರ್ಮನರನ್ನು ಹಿಮ್ಮೆಟ್ಟಿಸಲಾಗಿದೆ; ಪಶ್ಚಿಮಗಡೆಯಲ್ಲಿ ಅವರು ಮುಂದೊತ್ತುತ್ತಿದ್ದಾರೆ. ಇತರ ಎಲ್ಲಾ ಕಡೆಯಲ್ಲಿಯೂ ವೈರಿಗಳ ಮುನ್ನುಗ್ಗಾಟವನ್ನು ತಡೆಯಲಾಗಿದೆ. ಎಥಾಲಿನ ಬದಿಯಲ್ಲಿ ಐಸ್ನೆಯ ಕಡೆಗೆ ಮುಂದುವರಿಯುತ್ತಿದ್ದ ವೈರಿಗಳನ್ನು ರಾತ್ರಿಯುದ್ಧದಲ್ಲಿ ಹಿಂದಕ್ಕಟ್ಟಲಾಗಿದೆ. ಪಶ್ಚಿಮ ಜರ್ಮನಿಯ

ಸೈನಿಕ ಕೇಂದ್ರಗಳ ಮೇಲೂ ಪ್ರಯಾಣಪಥಗಳ ಮೇಲೂ ಯಥಾಪ್ರಕಾರ ಬ್ರಿಟಿಷ್ ವಿಮಾನಧಾಳಿ ನಡೆಯುತ್ತಿದೆ.

ಹೊಲ್ಲೆಂಡಿನಲ್ಲಿ ನಾಜೀ ಆಳ್ವಿಕೆ

ಡಾ. ಸೈಸ್ ಇಂಕ್ವಾರ್ಟ್ ಇವರನ್ನು ರೀಚ್ ಆಡಳಿತೆಯ ಕಮಿಶನರಾಗಿ ಹಿಟ್ಲರ್ ಹೊಲ್ಲೆಂಡಿಗೆ ನೇಮಿಸಿದ್ದಾನೆ. ಬೆಲ್ಜಿಯಮಿನ ಯೂಪೆನ್, ಮಲ್ಮೆಡಿ ಮತ್ತು ಮೋರೆಸ್ನೆಟ್ ಭಾಗಗಳನ್ನೂ ರೀಚ್ ಆಳ್ವಿಕೆಗೊಳಪಡಿಸಲಾಗಿದೆ.

ಮಿ. ಚರ್ಚಿಲ್ಲರ ಘರ್ಜನೆ.

(೬ನೇ ಪುಟದಿಂದ ಮುಂದರಿಸಿದ್ದು)

ಸರ್ವಶಕ್ತಿಯನ್ನು ಉಪಯೋಗಕ್ಕೆ ಹಚ್ಚುವ ಕಾಲವಲ್ಲವೆ? ಅದಕ್ಕಾಗಿ ತೂಡಲೇ ಎಲ್ಲಾ ವಿಧದ ಯುದ್ಧೋಪಕರಣಗಳನ್ನೂ ದಗಿಸಿಕೊಳ್ಳಬೇಕಾಗಿದೆ. ಫ್ರಾನ್ಸ್ ಯುದ್ಧದ ಶಕ್ತಿ ಕುಂದಿದೊಡನೆ ನಮ್ಮ ದ್ವೀಪದ ಸರ್ತಿ ಬರಲಿದೆ. ನಮ್ಮಲ್ಲಿರುವ ಮತ್ತು ನಮ್ಮದಾಗಿರುವ ಸರ್ವವೂ ಅಪಕ್ಕೊಳಗಾಗಬಹುದು. ಅಂತಹ ಸಂದರ್ಭಕ್ಕಾಗಿ ಒಂದಂಶವನ್ನೂ ಬಾಕಿ ಇಡದೆ ನಾವು ಈಗಲೇ ಸಿದ್ಧರಾಗಬೇಕು. ಸ್ವಂತ ಸೊತ್ತು ಮತ್ತು ಕೆಲಸದ ಸಮಯ ಇತ್ಯಾದಿಗಳು ನಮ್ಮ ಪ್ರಾಣ, ಮಾನ ಮತ್ತು ಸ್ವಾತಂತ್ರ್ಯದ ಪ್ರಶ್ನೆಯಿದಿರು ಲೆಕ್ಕಕ್ಕೆ ನಿಲ್ಲುವ ಸಂಗತಿಗಳಲ್ಲ. ಏನೇ ಬರಲಿ ತಾವು ಕೊನೆತನಕ ಹೋರಾಡುವೆವೆಂಬ ತಮ್ಮ ಪವಿತ್ರ ಪ್ರತಿಜ್ಞೆಯನ್ನು ಫ್ರಾನ್ಸಿನವರು ಮುಖ್ಯವಾಗಿ ಅಲ್ಲಿಯ ಅತಿ ಸಮರ್ಥ ಮುಖ್ಯ ಮಂತ್ರಿ ರೈನೋಡರು ನನಗೆ ತಿಳಿಸಿರುವರು.

ನಾವು ಜಯಿಸುವೆನಾದ್ದರಿಂದ ಜಯಿಸಬೇಕು

ನಮ್ಮ ಸಹಾಯಕ ರಾಜ್ಯಗಳೊಡನೆ ಬ್ರಿಟನ್ ಮತ್ತು ಫ್ರಾನ್ಸ್ ಸಾಮ್ರಾಜ್ಯದ ಜನರು, ಚರಿತ್ರೆಯಲ್ಲೇ ಕೇಳದಿದ್ದಂತಹ ಮಾನವತ್ವವಿರೋಧಿ, ಅತ್ಯಾಚಾರ ಅಂಧಕಾರಮಯ ಕಂಟಕವೊಂದನ್ನು ದಿರಿಸಲು ಒಟ್ಟಾಗಿದ್ದಾರೆ. ನಮ್ಮ ಹಿಂದೆ ಸ್ವಾತಂತ್ರ್ಯ ಕಳಕೊಂಡ ಎಲ್ಲಾ ದೇಶಗಳಿವೆ. ನಾವು ಇಲ್ಲದಿದ್ದರೆ ಇವರೆಲ್ಲರ ಮೇಲೆ ಕವಿದಿರುವ, ಯಾವ ಆಶಾಕಿರಣವೂ ಭೇದಿಸಲಾರದ ಕಗ್ಗತ್ತಲೆಯು ಚಿರಸ್ಥಾಯಿಯಾಗುವದು. ನಾವು ಜಯಿಸುವೆವು, ಜಯಿಸಬೇಕು.

ಮಿ. ಚರ್ಚಿಲ್ಲರ ಭಾಷಣ ಕೇಳುತ್ತಿದ್ದ ಅಮೇರಿಕದ ಅಸಂಖ್ಯಾತ ಜನರು ಉತ್ಸಾಹದಿಂದ ತುಂಬಿಹೋದರು. ಬ್ರಿಟನು ಚರ್ಚಿಲ್ಲರ ನಾಯಕತ್ವದಲ್ಲಿ ಭದ್ರವಾಗಿದೆಯೆಂದು ಮಿತ್ರರಾಷ್ಟ್ರಗಳು, ಜರ್ಮನಿಗೆ ಪ್ರತೀಕಾರ ಮಾಡುವ ಸಂಸ್ಥೆಗಳು ಅವರ ಭಾಷಣದಲ್ಲಿವೆಯೆಂದೂ ಅಲ್ಲಿಯ ಅಭಿಪ್ರಾಯ. ಕೆನಡಾದಲ್ಲಿ ವೈಮಾನಿಕ ತರಬೇತಿ ಹೆಚ್ಚುವಂತೆ ತೋರುತ್ತದೆ. ಬಾಲ್ಕನಿನಲ್ಲಿಯೂ ಈ ಭಾಷಣದ ಪರಿಣಾಮವಾಗಿ ಹೊಸಜೀವ ಬಂದಂತಾಗಿದೆ.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ತಾ. 19 5 40

ಕರ್ನಾಟಕ ಸಾಮ್ರಾಜ್ಯ ದಿನಾಚರಣೆ— ಸ್ಥಳೀಯ ಧರ್ಮಸಭೆಯ ಆಶ್ರಯದಲ್ಲಿ ಕಳೆದ ತಾ. 14ನೇ ಸಂಜೆ ಕರ್ನಾಟಕ ಸಾಮ್ರಾಜ್ಯ ದಿನಾಚರಣೆಯು ವಿಶೇಷರೀತಿಯಾಗಿ ಆಚರಿಸಲ್ಪಟ್ಟಿತು. ಶ್ರೀ. ಕೆ. ಬಿ. ಜಿನರಾಜ ಹೆಗ್ಡೆ ಬಿ. ಎ., ಎಲ್. ಎಲ್. ಬಿ. ಇವರು ಅಗ್ರಾಸನವಹಿಸಿದ್ದರು. ಶ್ರೀಗಳಾದ ಎಸ್. ಯು. ಪಣಿಯಾಡಿ, ಬಿ. ನಾರಾಯಣ ಭಟ್, ವಿದ್ವಾನ್ ಇವರು ಕರ್ನಾಟಕ ಸಾಮ್ರಾಜ್ಯದ ಏಳ್ಗೆ, ಅದು ಪಡೆದ ಕೀರ್ತಿ ಮತ್ತು ಅದರ ಪತನ—ಇವೇ ಮೊದಲಾದ ವಿಷಯಗಳನ್ನು ಕುರಿತು ಭಾಷಣಮಾಡಿದರು. ಮಾನ್ಯ ಅಧ್ಯಕ್ಷರು ಭಾಷಣಕಾರರ ಅಭಿಪ್ರಾಯಗಳನ್ನು ಪುಷ್ಟೀಕರಿಸಿ ಭಾಷಣವಿತ್ತರು. ಧನ್ಯವಾದಸಮರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಬಾಲಮಾರುತಿ ವ್ಯಾಯಾಮ ಮಂಡಲ— ಈ ಮಂಡಲದ ಆಶ್ರಯದಲ್ಲಿ ನಡೆಯುತ್ತಿದ್ದ ಶಿಬಿರವು ತಾ. 14ರಲ್ಲಿ ಮುಕ್ತಾಯವಾಯಿತು. ರಾವ್ ಸಾಹೇಬ್ ಆನಂದಬಾಳಿಗ ಬಿ. ಎ., ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ಮಹಾ ಸಭೆ ಸೇರಿತು. ಶ್ರೀ. ಕೆ. ವಿ. ಉಪಾಧ್ಯರು ಶಿಬಿರದ ವರದಿಯನ್ನೋದಿದರು. ಅನಂತರ ವ್ಯಾಯಾಮ ಶಿಬಿರದಲ್ಲಿ ತರಬೇತಿ ಹೊಂದಿದ ವಿದ್ಯಾರ್ಥಿಗಳು ತಮ್ಮ ಅಂಗಸಾಧನೆಯ ಪ್ರದರ್ಶನಗಳನ್ನು ಮಾಡಿದರು. ಅಧ್ಯಕ್ಷರು ವ್ಯಾಯಾಮದ ಅವಶ್ಯಕತೆಯನ್ನು ವಿವರಿಸಿ, ವ್ಯಾಯಾಮ ಮಂದಿರಗಳು ದೇಶದಲ್ಲಿ ಹೆಚ್ಚು ಹೆಚ್ಚಾಗಿ ಸ್ಥಾಪಿಸಲ್ಪಡಬೇಕೆಂದೂ, ಮಠ ದೇವಸ್ಥಾನಗಳು ಇಂತಹ ವ್ಯಾಯಾಮ ಶಿಬಿರಗಳನ್ನು ಸ್ಥಾಪಿಸಬೇಕೆಂದೂ ಸೂಚಿಸಿದರು.

ಸ್ವಾಸ್ಥ್ಯಸಂಘದ ಆಶ್ರಯದಲ್ಲಿ ವ್ಯಾಯಾಮ ಶಿಬಿರ— ಮಂಗಳೂರು ಸ್ವಾಸ್ಥ್ಯ ಸಂಘದ ಆಶ್ರಯದಲ್ಲಿ ಕಳೆದ ತಾ. 10ರಂದ ಆರಂಭವಾದ ವ್ಯಾಯಾಮ ಶಿಕ್ಷಣ ಶಿಬಿರವು (ಸ್ತ್ರೀಯರ ವಿಭಾಗ) ಕಳೆದ ತಾ. 15ರಲ್ಲಿ ಮುಕ್ತಾಯವಾಯಿತು. ತಾ. 15ನೇ ಸಾಯಂಕಾಲ ಶ್ರೀ. ಈಶ್ವರಾನಂದ ಮಹಿಳಾ ಸೇವಾಶ್ರಮದ ಹಿಂದಿನ ಮೈದಾನದಲ್ಲಿ ಮಹಾಸಭೆಯು ಸೇರಿತು. ಮಿಸೆಸ್ ಎಮ್. ಸೋನ್ಸರು ಅಧ್ಯಕ್ಷತೆವಹಿಸಿದ್ದರು. ಅನೇಕ ಮಹಿಳೆಯರೂ ಮಹನೀಯರೂ ಹಾಜರಿದ್ದರು. ಶ್ರೀ. ವಿ. ಎಸ್. ಬಿಜೂರರು ಶಿಬಿರದ ಸಂಕ್ಷಿಪ್ತ ವರದಿಯನ್ನು ಓದಿದರು. ಮಂಗಳೂರಲ್ಲಿ ಸ್ತ್ರೀಯರು ಇಂಥಹ ಶಿಬಿರಗಳಲ್ಲಿ ತರಬೇತಿಹೊಂದಿದುದು ಇದೇ ಮೊದಲನೆಯ ಬಾರಿಯೆಂದೂ, ಜಿಲ್ಲೆಯ ಎಲ್ಲಾ ಭಾಗಗಳಲ್ಲಿಯ ಮಹಿಳೆಯರು ಮುಂದೆ ಬಂದು ದೈಹಿಕ ಶಿಕ್ಷಣ ಪಡೆದು ತಮ್ಮ ಆರೋಗ್ಯವನ್ನಷ್ಟೆ ಅಲ್ಲದೆ ಭವಿಷ್ಯ ಸಂತಾನದ ಉದ್ಧಾರಕ್ಕೆ ಸಹಾಯವಾಗಬೇಕೆಂದರು. ಮತ್ತು ಸ್ತ್ರೀಯರ ಈ ಶಿಕ್ಷಣ ಶಿಬಿರಕ್ಕೆ ಸರ್ವವಿಧದಿಂದಲೂ ಸಹಾಯಮಾಡಿದ ಮತ್ತು ಇವರ ಶಿಕ್ಷಕಿಗೆ ಸಹಾಯ ಮಾಡಿದ ಶ್ರೀಮತಿ ಶಾಂತಾಬಾಯಿಯವರನ್ನು ಬಹಳವಾಗಿ ವಂದಿಸಿ ಇನ್ನು ಮುಂದಕ್ಕೂ ಅವರು ಇದೇ ರೀತಿ ಸಹಾಯಮಾಡುವಂತೆ ಕೇಳಿಕೊಂಡರು. ಬರುವ ರಜೆಯ ತಿಂಗಳಲ್ಲಿ ಪುನಃ ಸ್ತ್ರೀಯರ ಉಪಯೋಗಾರ್ಥವಾಗಿ ಶಿಕ್ಷಣ ಶಿಬಿರವು ಏರ್ಪಡಿಸಲ್ಪಡುವುದೆಂದೂ, ಅದರಲ್ಲಿ ಹೆಚ್ಚು ಮಂದಿ ಮಹಿಳೆಯರು ಸೇರಿ ಪ್ರಯೋಜನಹೊಂದಬೇಕೆಂದೂ ಹೇಳಿದರು.

ಅನಂತರ ಸಭಿಕರ ಪರವಾಗಿ ಶ್ರೀ. ಕೆ. ಕೃಷ್ಣರಾಯರು ಭಾಷಣಮಾಡುತ್ತಾ ವ್ಯಾಯಾಮವು ಪುರುಷರಿಗೆ ಹೇಗೆ ಅಗತ್ಯವೋ ಹಾಗೆಯೇ ಸ್ತ್ರೀಯರಿಗೂ ಅಗತ್ಯವೆಂದೂ, ಅದಕ್ಕಿಂತ ಹೆಚ್ಚು ಹೆಚ್ಚಾಗಿ ಸ್ತ್ರೀಯರು ಇಂತಹ ಶಿಕ್ಷಣ ಶಿಬಿರಗಳಲ್ಲಿ ತರಬೇತಿಹೊಂದಬೇಕೆಂದೂ, ಭವಿಷ್ಯದಲ್ಲಿ ನಡೆಯುವ ಶಿಬಿರಕ್ಕೆ ನೂರಾರು ಮಂದಿ ಮಹಿಳೆಯರು ಸೇರಿ ತರಬೇತಿ ಹೊಂದಿ ಅನಂತರ ತಮ್ಮ ತಮ್ಮ ಗ್ರಾಮಗಳ ಸ್ತ್ರೀಯರನ್ನು ತರಬೇತುಮಾಡಿ ದೇಶದ ಹಿತಸಾಧಿಸಬೇಕೆಂದು ಪ್ರಾರ್ಥಿಸಿದರು. ಅಧ್ಯಕ್ಷೆಯರು ತಮ್ಮ ಉಪಸಂಹಾರ ಭಾಷಣದಲ್ಲಿ ಸ್ವಾಸ್ಥ್ಯಸಂಘವು ಮಾಡುತ್ತಿರುವ ಲೋಕೋಪಕಾರದ ಕೆಲಸವನ್ನು ಶ್ಲಾಘಿಸಿ ಅದಕ್ಕೆ ಉತ್ತರೋತ್ತರ ಅಭಿವೃದ್ಧಿಯಾಗಲೆಂದು ಹರಸಿದರು.

ಅಧ್ಯಕ್ಷೆಯರ ಭಾಷಣವಾದ ಮೇಲೆ ಶಿಬಿರದಲ್ಲಿ ತರಬೇತಿಹೊಂದಿದ ಮಹಿಳೆಯರು ಅಂಗಸಾಧನೆಯ ಪ್ರದರ್ಶನಗಳನ್ನು ಮಾಡಿದರು. ಯೋಗಾಸನಗಳು, ಫೀಜಿಕಲ್ ಡ್ರಿಲ್, ಡಂಬೆಲ್ಸ್ ಡ್ರಿಲ್, ಸೂರ್ಯನಮಸ್ಕಾರ ಇನ್ನಿತರ ಆಟಗಳು, ಗದೆಯನ್ನು ತಿರುಗಿಸುವದು, ಜೊತೆಯ ಡ್ರಿಲ್ ಇವೇ ಮೊದಲಾದವು ಬಹು ವಿಶೇಷವಾದವುಗಳಾಗಿದ್ದುವು. ಶ್ರೀಮತಿ (ವಿದ್ವಾನ್) ರಮಾಬಾಯಿಯವರು ಶಿಬಿರದಿಂದ ತಮಗೆ ದೊರೆತ ಪ್ರಯೋಜನವನ್ನು ಕುರಿತು ಮಾತಾಡಿದರು. ವಿವಿಧ ವಿನೋದಾವಳಿಗಳಾದ ತರುವಾಯ ಶ್ರೀ. ಬಿಜೂರರು ಅಧ್ಯಕ್ಷೆಯರಿಗೂ ಇತರರಿಗೂ ಮತ್ತು ಶಿಬಿರವನ್ನು ಯಶಸ್ವಿಯಾಗಿ ನಡೆಸಿದ ವ್ಯಾಯಾಮ ವಿನೋದ ಶ್ರೀ. ಕೆ. ಕೆ. ಬೆಟ್ಟಂಗಳ ಸ್ವಾಸ್ಥ್ಯಸಂಘದ ಪರವಾಗಿ ಹೃತ್ಪೂರ್ವಕ ಧನ್ಯವಾದಗಳನ್ನರ್ಪಿಸಿದರು. ಮಂಗಳಗೀತೆಯೊಂದಿಗೆ ಸಭಾಕಾರ್ಯವು ಮುಕ್ತಾಯವಾಯಿತು.

ಉಡುಪಿ

ತಾ. 18ರಲ್ಲಿ ತೇರ ಬೀದಿಯಲ್ಲಿ ಹಿಂದೂ ಮಹಾಸಭೆಯ ಆಶ್ರಯದಲ್ಲಿ ಸಾರ್ವಜನಿಕ ಸಭೆಯೊಂದು ಯು. ವೆಂಕಟರಮಣ ಆಚಾರ್ಯರ ಅಧ್ಯಕ್ಷತೆಯಲ್ಲಿ ಕೂಡಿ ಸಾರ್ವಜನಿಕ ಸ್ಥಳಗಳಲ್ಲಿರತಕ್ಕ ಅಶ್ವತ್ಥದ ಮರಗಳನ್ನು ಕಡಿಯುವ ಉಡುಪಿ ಮುನಿಸಿಪಾಲಿಯ ಘೋರಣೆಯನ್ನು ಖಂಡಿಸಿ ಮಹಾ ಜನರಿಂದ ಠರಾವೊಂದು ಮಂಜೂರಾಯಿತು.

ಉಡುಪಿ ತಾಲೋಕು ಎಲಿಮೆಂಟರಿ ಶಾಲಾ ಮೇಸ್ಟರರ ಬಂದು ಸ್ಪೆಶ್ಯಲ್ ಮಹಾಸಭೆಯು ಇದೇ ತಾ 25ನೇ ಶನಿವಾರ ದಿನ ಅಪರಾಹ್ನ ಘಂಟೆ 2ಕ್ಕೆ ಮಹಾಸಭೆಯ ಜರಗುವುದು. ಎಯಿಡೆಡ್ ಶಾಲೆಗಳ ಪರವಾಗಿ ಪಠ್ಯಪುಸ್ತಕಗಳ ಆ ಮಾಪಣೆಯು ಈ ಸಭೆಯಲ್ಲಿ ನಡೆಯುವುದು. ತಾಲೂಕಿನ ಎಲ್ಲಾ ಮೇಸ್ಟರರು ಈ ಸಭೆಗೆ ಹಾಜರಾಗುವಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆಂದು ಕಾರ್ಯದರ್ಶಿ ಟಿ. ಲಕ್ಷ್ಮಯ್ಯನವರು ತಿಳಿಸುತ್ತಾರೆ.

ಶ್ರೀಮದನಂತೇಶ್ವರ ಚಂದ್ರೇಶ್ವರ ದೇವಸ್ಥಾನಗಳಲ್ಲಿ ಕಳೆದ ಶುಕ್ರವಾರ ಪರ್ಯಾಯ ಶ್ರೀ. ಅದಮಾರು ಮಠದ ಶ್ರೀ. ವಿಬುಧಮಾನ್ಯ ತೀರ್ಥ ಶ್ರೀಪಾದಂಗಳವರು ರಾಶಿಪೂಜೆ ಸೇವೆಯನ್ನು ಮಾಡಿಸಿದರು.

ಶ್ರೀಕೃಷ್ಣ ಮಠ ಮತ್ತು ಶ್ರೀ. ವೆಂಕಟರಮಣ ದೇವಸ್ಥಾನಗಳಲ್ಲಿ ಕಳೆದ ಆದಿತ್ಯವಾರ ಹಗಲು ವಸಂತೋತ್ಸವವು ಸಾಂಗವಾಗಿ ನೆರವೇರಿತು.

ಕಳೆದ ಸೋಮವಾರ ರಾತ್ರಿ ಉಡುಪಿಯಲ್ಲಿ ಭಾರೀ ಮಳೆ.

ಉಡುಪಿ ಬೋರ್ಡ್ ಹೈಸ್ಕೂಲು ಹಳೆ ವಿದ್ಯಾರ್ಥಿಗಳ ಸಂಘವೊಂದನ್ನು ಸ್ಥಾಪಿಸುವ ಸಲುವಾಗಿ ಹಳೆ ವಿದ್ಯಾರ್ಥಿಗಳ ಕೂಟವೊಂದು ತಾ. 26–5–40ನೇ ಆದಿತ್ಯವಾರ ಸಾಯಂಕಾಲ 3ಗಂಟೆಗೆ ಬೋರ್ಡ್ ಹೈಸ್ಕೂಲಿನಲ್ಲಿ ಜರಗಲಿರುವುದು.

ಶ್ರೀ. ಸೋದಾ ವಾದಿರಾಜ ಮಠದಲ್ಲಿ ವಸಂತೋತ್ಸವ—ಶ್ರೀ. ಸೋದಾ ವಾದಿರಾಜ ಮಠದಲ್ಲಿ ಶ್ರೀಮದ್ವಿಷ್ವೇಂದ್ರ ತೀರ್ಥ ಶ್ರೀಪಾದಂಗಳವರು ಇದೇ ತಾ. 21ರಲ್ಲಿ ಶ್ರೀ ಭೂತರಾಜ ಮಧುಸೂದನನ ಪ್ರೀತ್ಯರ್ಥವಾಗಿ ರಾತ್ರಿ ವಸಂತೋತ್ಸವವನ್ನು ಜರಗಿಸಿದರು. ಭಕ್ತವೃಂದಕ್ಕೆ ಸ್ವಾಮಿಗಳವರು ಮಂತ್ರಾಕ್ಷತೆಯನ್ನಿತ್ತು ಘನತರ ಫಲಹಾರವನ್ನಿತ್ತರು.

ಮುಸ್ಲಿಮ್ ಸೇವಾ ಸಂಘ, ಉಡುಪಿ— ಮುಸ್ಲಿಮ್ ಬಡಜನತೆಯ ಪರಿಸ್ಥಿತಿಯನ್ನು ಸುಧಾರಿಸುವುದಕ್ಕಾಗಿ ಕೆಲವು ಉತ್ಸಾಹೀ ತರುಣರು ಒಂದಾಗಿ 'ಮುಸ್ಲಿಂ ಸೇವಾಸಂಘ'ವೆಂಬೊಂದು ಸಂಸ್ಥೆಯನ್ನು ಉಡುಪಿಯಲ್ಲಿ ಸ್ಥಾಪಿಸಿ ಈಗಾಗಲೇ ಕಾರ್ಯಾರಂಭಿಸಿದ್ದಾರೆ. ನಿರಕ್ಷರಿಗಳಿಗೆ ಅಕ್ಷರಜ್ಞಾನ ನೀಯುವುದಕ್ಕಾಗಿ ರಾತ್ರಿಶಾಲೆಗಳನ್ನೂ ನಿರುದ್ಯೋಗಿಗಳು ಚಿಕ್ಕ ಚಿಕ್ಕ ಕೈಗಾರಿಕೆಗಳಿಗೆ ಕೈಹಚ್ಚುವಂತೆ ಧನಸಹಾಯವನ್ನೂ, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮತ್ತು ಪಠ್ಯಪುಸ್ತಕಗಳ ದಾನವನ್ನು ಕೊಡಲು ಈಗಾಗಲೇ ಸಿದ್ಧತೆಗಳು ಭರದಿಂದ ನಡೆಯುತ್ತಿವೆ. ಕಳೆದ ಆದಿತ್ಯವಾರ ಸೇವಾಸಂಘದ ಹಿತಚಿಂತಕರು ಸಭೆಸೇರಿ ಈ ಕೆಳಗಿನ ಅಧಿಕಾರಿಗಳನ್ನು ಆರಿಸಿದ್ದಾರೆ. ಜನಾಬ್ ಯು. ಜಿ. ಇಬ್ರಾಹಿಮ್ ಸಾಹೇಬ್ (ಅಧ್ಯಕ್ಷ ಮತ್ತು ಖಜಾನ್ಚಿ) ಎಂ. ಎ. ರಹ್ಮಾನ್ (ಉಪಾಧ್ಯಕ್ಷ) ಕೆ. ಹೈದರ್ (ಜನರಲ್ ಸೆಕ್ರೆಟರಿ) ಯಂ. ಯಸ್. ಇಬ್ರಾಹಿಮ್ (ಜತೆ ಕಾರ್ಯದರ್ಶಿ) ಸಂಘದ ಕಾರ್ಯಕಾರೀ ಸಮಿತಿಯ ಸದಸ್ಯರಾಗಿ ಮಹಮ್ಮದ್ ಸಾಹೇಬ್, ಜಿ. ಶಮ್ಸುದ್ದೀನ, ನಸೀಬ್ ಸಾಹೇಬ್, ಕೆ. ಯಂ ಬ್ಯಾರಿಯ, ಬಿ. ಅಬ್ದುಲ್ ಖದ್ದೂಸ್, ಶೇಕ್ ಇಮಾಮ್ ಸಾಹೇಬ್ ಮತ್ತು ಯು. ಯಾಕೂಬ್ ಸಾಹೇಬರವರು ಆರಿಸಲ್ಪಟ್ಟರು.

ಗೀತಾಪ್ರಚಾರ ಸಭೆ— ಪ್ರತಿ ಆದಿತ್ಯವಾರ ಬೆಳಗ್ಗೆ 8½ ಘಂಟೆಯಿಂದ 9½ ಘಂಟೆ ವರೆಗೆ ಶ್ರೀರಾಮಕೃಷ್ಣಮಂದಿರ (ಪಿನೇಮಾ ಥಿಯೇಟರ) ದಲ್ಲಿ ಶ್ರೀಮದ್ಭಗವದ್ಗೀತಾ ಪ್ರವಚನವು ನಡೆಯುವದು. ರಿಟಾಯರ್ಡ್ ಡಿಸ್ಟ್ರಿಕ್ಟ್ ಕಲೆಕ್ಟರ್ ಟಿ. ರಾಘವೇಂದ್ರ ಪ್ರಭುಗಳು ವ್ಯಾಖ್ಯಾನಮಾಡುವರು. ಗೀತಾಭಿಮಾನಿಗಳೆಲ್ಲರೂ ಸಕಾಲಕ್ಕೆ ಬಂದು ಈ ಕಾರ್ಯದಲ್ಲಿ ಭಾಗವಹಿಸಬೇಕಾಗಿ ವಿನಂತಿ.

(ಪಿ. ಎ. ಪೈ ಕಾರ್ಯದರ್ಶಿ)

ದ. ಕ. ಜಿಲ್ಲಾ ಸಹಕಾರೀ ಪರಿಷತ್ತು ಮತ್ತು ಕೃಷಿ-ಕೈಗಾರಿಕೆ ವಸ್ತು ಪ್ರದರ್ಶನ ಉಡುಪಿ ಪ್ರಕಟಣೆ ನಂಬ್ರ 2

ಈ ಮೊದಲೇ ತಿಳಿಸಿದಂತೆ ದ. ಕ. ಜಿಲ್ಲಾ ಸಹಕಾರೀ ಪರಿಷತ್ತು ಮತ್ತು ಕೃಷಿ ಕೈಗಾರಿಕೆ ವಸ್ತು ಪ್ರದರ್ಶನವು ಉಡುಪಿಯಲ್ಲಿ ಇದೇ ತಿಂಗಳ ತಾ. 28 ಮತ್ತು 29ರಲ್ಲಿ ಜರಗುವುದು. ವಿಷಯ ನಿಯಾಮಕ ಸಭೆಯು ತಾ. 27–5–40ನೇ ಸೋಮವಾರ ಜರಗುವದರಿಂದ ಪರಿಷತ್ತಿನ ಮುಂದೆ ಆಲೋಚಿಸಲಿಕ್ಕಿರುವ ಸೂಚನೆಗಳಾವುದಾದರೂ ಇದ್ದರೆ ಅವುಗಳನ್ನು ತಾ. 26 5–40ರೊಳಗೆ ಕಳುಹುವಂತೆ ದಯಮಾಡಿ ಜಿಲ್ಲೆಯ ಎಲ್ಲಾ ಸಹಕಾರ ಸಂಘಗಳನ್ನು ಅಪೇಕ್ಷಿಸಲಾಗುತ್ತದೆ.

ಈಗಾಗಲೇ ಜಿಲ್ಲೆಯ ಅನೇಕ ಸಂಘಗಳು ತಮ್ಮ ಪ್ರತಿನಿಧಿಗಳನ್ನು ಪರಿಷತ್ತಿಗೆ ಕಳುಹಿಸುವ ಏರ್ಪಾಡು ಮಾಡಿರುವುದು ಸಂತೋಷಕರ. ಉಳಿದ ಸಂಘಗಳ ಚಾಲಕರೂ ಕೂಡ ತಮ್ಮ ಪ್ರತಿನಿಧಿಗಳನ್ನೂ ವಸ್ತು ಪ್ರದರ್ಶನದ ಬಗ್ಗೆ ಸಾಮಾನುಗಳನ್ನೂ ಕಳುಹಿಸುವ ಏರ್ಪಾಡ ಮಾಡಿ ಪರಿಷತ್ತಿನ ಮತ್ತು ಪ್ರದರ್ಶನದ ಕಾರ್ಯಕ್ರಮಗಳು ಯಶಸ್ವಿಯಾಗಿ ಜರಗುವಂತೆ ಸಹಕರಿಸಬೇಕಾಗಿ ವಿನಂತಿ.

ಪರಿಷತ್ತು ಮತ್ತು ವಸ್ತು ಪ್ರದರ್ಶನವು ಉಡುಪಿಯ ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗುವುವು. ಪ್ರತಿನಿಧಿಗಳ ವಸತಿ ಹಾಗೂ ಭೋಜನದ ಬಗ್ಗೆ ಉಡುಪಿ ಬೋರ್ಡ್ ಹೈಸ್ಕೂಲಿನ ಮಾಳಿಗೆಯಲ್ಲಿ ವ್ಯವಸ್ಥೆ ಮಾಡಿರುತ್ತದೆ.

ಕಾರ್ಯಕ್ರಮ

27–5–40 ಸಾಯಂಕಾಲ 5–5–30 ವಿಷಯ ನಿಯಾಮಕ ಸಭೆ. 28–5–40 ಪೂರ್ವಾಹ್ನ 8-45 ಪ್ರಾರ್ಥನೆ ಸಹಕಾರ ಧ್ವಜಾರೋಹಣ, 9ರಿಂದ 10 ವಸ್ತು ಪ್ರದರ್ಶನ ಉದ್ಘಾಟನಾ ಸಮಾರಂಭ– ಶ್ರೀ. ಎ. ಬಿ. ಶೆಟ್ಟಿ ಎಮ್. ಎಲ್. ಎ. ರಿಂದ. 10-12 ಪರಿಷತ್ತು ಉದ್ಘಾಟನಾ ಸಮಾರಂಭ—ಜನಾಬ್ ಎಚ್. ಎಸ್. ಹುಸೇನ್, ಬಿ. ಎ. ಬಿ. ಎಲ್, ಎಮ್. ಎಲ್. ಸಿ. ರಿಂದ. ಸ್ವಾಗತ ಭಾಷಣ–ಸ್ವಾಗತ ಮಂಡಳಿಯ ಅಧ್ಯಕ್ಷ ಶ್ರೀ. ಕೆ. ಟಿ. ಆಳ್ವಾ ಬಿ. ಎ. ಎಲ್. ಎಲ್. ಬಿ. ರಿಂದ. ಸಂದೇಶಗಳು, ಅಧ್ಯಕ್ಷರ ಭಾಷಣ—ಶ್ರೀ. ವಿ. ಎಲ್. ಮೆಹತಾ ಬಿ. ಎ. ಯವರಿಂದ. ಸಾಯಂಕಾಲ 4-7 ಪರಿಷತ್ತು. ರಾತ್ರಿ 9-30–11 ವಿನೋದಾವಳಿಗಳು. 29–5–40 ಪೂರ್ವಾಹ್ನ 8-30ರಿಂದ 12 ಪರಿಷತ್ತು. ಸಭಾ ಸಮಾಪ್ತಿ ಭಾಷಣ–ಅಧ್ಯಕ್ಷರಿಂದ ಧನ್ಯವಾದಗಳು.

ಕಾರ್ಕಳ—ತಾ. 18–5–40ರ ದಿನ ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ. ಕೆ. ಕೃಷ್ಣ ಪೈಗಳವರ ಅಧ್ಯಕ್ಷತೆಯಲ್ಲಿ ಕಾಶಿ ಹಿಂದೂ ವಿಶ್ವವಿದ್ಯಾಲಯದ ಶ್ರೀ. ಆರ್. ಅಣ್ಣಾರಾಮ ಶೆಣೈಯವರು ನಿತ್ಯಜೀವನದಲ್ಲಿ ಗೀತೆಯ ಮಹತ್ವ ಎಂಬ ಕುರಿತು ಇಂಗ್ಲೀಷಿನಲ್ಲಿ ಭಾಷಣ ಕೊಟ್ಟರು.

ಇಲ್ಲಿಯ ಚರ್ಚ್ ಎಲಿಮೆಂಟರೀ ಶಾಲೆಯ ಕಟ್ಟಡದ ಪ್ರವೇಶೋತ್ಸವ ಸಂದರ್ಭ ಅಧ್ಯಕ್ಷಸ್ಥಾನವನ್ನು ವಹಿಸಿ ಜನಾಬ್ ಯ. ಬ್. ಯಸ್. ಹುಸೈನ ಸಾಹೇಬರವರು ಸರ್ವಸಾಧಾರಣ ಶಾಲೆಗಳಲ್ಲಿ ಅಲ್ಪಸಂಖ್ಯಾಕ ಜಾತಿಗಳ ಮಕ್ಕಳಿಗೆ ಅವರ ಧರ್ಮಸಂಸ್ಕೃತಿ ಸಭ್ಯತೆಗನುಕೂಲವಾದ ಶಿಕ್ಷಣವು ದೊರೆಯಲಿಕೆ ಇಲ್ಲದಿರುವುದರಿಂದ, ಅವರ ಬಗ್ಗೆ ಕೋಮುವಾರು ಶಾಲೆಗಳೇ ಬೇಕೆಂದಿದ್ದಾರೆ.

ರಾಜಸೇವಾಸಕ್ತ ಬಿ. ಯಮ್. ಶ್ರೀಕಂಠಯ್ಯ ಯಂ. ಎ. ಬಿ. ಯಲ್. ಮತ್ತು ಪ್ರೊಫೆಸರ ರಂಗಸ್ವಾಮಿಯವರು ಇಲ್ಲಿಯ ಬೋರ್ಡ್ ಹೈಸ್ಕೂಲಿನಲ್ಲಿ ಕನ್ನಡಸಂಸ್ಕೃತಿಯ ಕುರಿತು ರಸಭರಿತ ಭಾಷಣಗಳನ್ನು ಕೊಟ್ಟರು ಶ್ರೀ. ಕೆ. ಲಕ್ಷ್ಮಣ ಕುದ್ವರು ಅಧ್ಯಕ್ಷರಾಗಿದ್ದರು. ಶ್ರೀ. ಶಿವರಾಮ ಕಾರಂತರು ಸಭಿಕರಿಗೆ ಭಾಷಣಕರ್ತರ ಪರಿಚಯಮಾಡಿಕೊಟ್ಟರು. ದಿವಂಗತ ಮೌಲಾನಾ ಯಾಕೂಬ್ ಹಸನರ ಅಕಾಲ ಮರಣದ ಕುರಿತು ಶೋಕಪ್ರದರ್ಶನ ಮಾಡುವ ಒಂದು ಠರಾವು ಇಲ್ಲಿಯ ಪಂಚಾಯತ ಬೋರ್ಡಿನಲ್ಲಿ ಮಂಜೂರಾಗಿದೆ.

ನೋಟೀಸು

ಬಿಲ್ಲವರ ಎಸೋಸಿಯೇಶನ್, ಮುಂಬೈ ವಿದ್ಯಾರ್ಥಿವೇತನ

ಇದು ಬಿಲ್ಲವ ಜಾತಿಯ ಬಡ ವಿದ್ಯಾರ್ಥಿಗಳಿಗೆ ಮಾತ್ರ. ಈ ಮೇಲಿನ ಸಂಸ್ಥೆಯಿಂದ ವೇತನವನ್ನು ಅಪೇಕ್ಷಿಸುವ ಬಿಲ್ಲವ ಬಡ ವಿದ್ಯಾರ್ಥಿಗಳು ಬರುವ ತಾ. 30-6-40ರ ಒಳಗೆ ಈ ಕೆಳಗೆ ನಮೂದಿಸಿದ ಪ್ರಶ್ನೆಗಳಿಗೆ ಉತ್ತರ ಸಮೇತ ಈ ಕೆಳಗಿನ ವಿಳಾಸಕ್ಕೆ ಬರಕೊಂಡಲ್ಲಿ ವೇತನವನ್ನು ಪಡೆಯಲು ಅರ್ಹರೆಂದು ಕಂಡುಬಂದವರಿಗೆ ವೇತನವನ್ನು ಕೊಡಲಾಗುವದು. ಕಾಲೇಜು ವಿದ್ಯಾರ್ಥಿಗಳಿಗೆ ವೇತನವನ್ನು ಕೊಡಲಾಗುವುದಿಲ್ಲ.

(1) ವಿದ್ಯಾರ್ಥಿಯ ಸಂಪೂರ್ಣ ಹೆಸರು, (2) ತಂದೆ ಯಾ ರಕ್ಷಕನ ಹೆಸರು, (3) ಇತರ ಸಂಬಂಧಿಕರ ಹೆಸರು ಮತ್ತು ವಿಳಾಸ, (4) ಕಲಿಯುತಕ್ಕ ದರ್ಜೆ ಮತ್ತು ಶಾಲೆಯ ಹೆಸರು, (5) ಕಳೆದ ಪರೀಕ್ಷೆಯ ಮಾರ್ಕುಪಟ್ಟಿ, (6) ಶಾಲಾ ಸಂಬಳ, (7) ವಿದ್ಯಾರ್ಥಿಯ ಗುಣನಡತೆಯ ವಿಷಯ ಶಾಲಾ ಮುಖ್ಯೋಪಾಧ್ಯಾಯರ ಶಿಫಾರಸು ಪತ್ರ, (8) ವೇತನವನ್ನು ಪಡೆಯಲು ಅರ್ಹನೆಂಬುದರ ಕುರಿತು ಊರಿನ ಮೆಜಿಸ್ಟ್ರೇಟರ ಅಥವಾ ಪ್ರಸಿದ್ಧ ವಕೀಲರ ಪತ್ರ.

ಎಸೋಸಿಯೇಶನಿನಿಂದ ಗತವರುಷ ವಿದ್ಯಾರ್ಥಿ ವೇತನ ಪಡೆದ ವಿದ್ಯಾರ್ಥಿಗಳು ಈ ವರ್ಷ ಸಹ ವಿದ್ಯಾರ್ಥಿವೇತನಪಡೆಯಲಿಚ್ಛಿಸುತ್ತಿದ್ದರೆ ತಾರೀಖು 30–5–'40ರ ಒಳಗೆ ಅರ್ಜಿ ಕಳುಹಿಸಿಕೊಡತಕ್ಕದ್ದು.

ವಿಳಾಸ.—

ಮಾನನೀಯ ಜನರಲ್ ಕಾರ್ಯದರ್ಶಿ,
ಬಿಲ್ಲವರ ಎಸೋಸಿಯೇಶನ್ ಧತ್ತಂ ಕರೀಮ
ಬಿಲ್ಡಿಂಗ್ ದಿವಾನ್ ಕಂಪೆನಿ, ಫೋರ್ಟ ಮುಂಬಯಿ.

ಶಾಲಾ ಪುಸ್ತಕ ಸಾಹಿತ್ಯ ಗಳಿಗೆ
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸ್ಥಾಪನೆ 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಕ್ಕರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೀಲ್ ಚೇಂಜಿಂಗ್ ಡೇಟರ್, ಮೊನೊಗ್ರಾಮ್ ಸೀಲು ಅಚ್ಚುಗಳು ಕ್ಲುಪ್ತವಾಗಿ ಮಾಡಿಕೊಡಲ್ಪಡುವವು.

Crown Rubber Stamp Co., 18 Balmat Road, MANGALORE.

Approved firm by the Govt. of Mysore. Certified by the Agent of the Govt. of India in Ceylon

ನಮ್ಮ ಸಮಾಜದಲ್ಲಿ ಆಗುತ್ತಿರುವ ಅಪವ್ಯಯ

ನಾವು ತಿಳಿದುಕೊಳ್ಳಬೇಕಾದ ಕೆಲವು ಅಂಶಗಳು.

[S. L. ಸುಬ್ರಹ್ಮಣ್ಯಂ, ಹರಿಹರ.]

ನಮ್ಮ ದೇಶದ ರೈತರು ತೀರ ಬಡವರು. ಜಗತ್ತಿನ ಉಳಿದ ಯಾವ ದೇಶದ ರೈತರೂ ಪ್ರಾಯಶಃ ಇಷ್ಟು ಕಷ್ಟಪಟ್ಟು ದುಡಿದೂ ಇಷ್ಟು ದರಿದ್ರರಾಗಿರಲಿಕ್ಕಿಲ್ಲ. ಹಗಲೆಲ್ಲ ಬಿಸಿಲಿನಲ್ಲಿ ದುಡಿಯುವರು; ರಾತ್ರಿಯ ವೇಳೆಯಲ್ಲಿ ಬೆಳೆಯನ್ನೂ ಕಾಯುವರು. ಹೀಗೆ 24ತಾಸು ಕಷ್ಟಪಟ್ಟರೂ ಅವರಿಗೆ ಸಾಕಷ್ಟು ಸಂಪಾದನೆಯಿಲ್ಲ, ಶುಭಾಶುಭಕಾರ್ಯಗಳನ್ನು ಸಾಲಮಾಡದೇ ಮಾಡುವಂತಿಲ್ಲ. ಬೆಳೆಯುವದು ಗೋಧಿ, ಭತ್ತವನ್ನು, ತಿನ್ನುವದು ಹುರುಳಿಕಾಳನ್ನು! ಅವರು ಹೊಲಗಳಲ್ಲಿ ಹತ್ತಿಯನ್ನು ಬೆಳೆದರೂ ಅವರ ಹೆಂಗಸರು ಮಕ್ಕಳಿಗೆ ಮೈ ಮೇಲೆ ಚಿಂದಿಬಟ್ಟೆಗೂ ಗತಿಯಿಲ್ಲ, ಗಂಡಸರ ಶರೀರದ ಮೇಲಂತೂ ಲಂಗೋಟಿಯೇ ಕಾಣುತ್ತಿರುವುದು. ಬಿಸಿಲಿನಲ್ಲಿ ಒಣಗುವದು, ಛಳಿಯಲ್ಲಿ ನಡುಗುವದು. ದೇಶದಲ್ಲಿ ನೂರು ಮಂದಿಯಲ್ಲಿ ಕೇವಲ ಹನ್ನೆರಡು ಮಂದಿಗೆ ಮಾತ್ರ ಹಾಲು ದೊರೆಯುತ್ತದೆ. ರೈತರಿಗಂತೂ ಹಾಲು ತುಪ್ಪಗಳು ದೊರೆಯುವುದೇ ದುರ್ಲಭ; ಇದರಿಂದ ಸಾಧಾರಣವಾದ ರೋಗ ಬಂದರೂ ತೀರ ದುರ್ಬಲರಾಗಿ ಬಿಡುವರು. ಅಥವಾ ಇಹಲೋಕ ಯಾತ್ರೆಯನ್ನು ಮುಗಿಸಿಬಿಡುವರು.

ಉಳಿದ ದೇಶಗಳಲ್ಲಿನ ಸರಾಸರಿ ಆಯುಃಪರಿಮಿತಿಯು 45ರಿಂದ 55 ವರ್ಷಗಳಷ್ಟಿದೆ. ನಮ್ಮ ದೇಶದಲ್ಲಿ (ನೂ. 75ರಷ್ಟು ಮಂದಿ ರೈತರೇ ಇರುವರು.) ಸರಾಸರಿ ಆಯುಃಪರಿಮಿತಿಯು 23ಕ್ಕಿಂತ ಹೆಚ್ಚಾಗಿಲ್ಲ. ನಮ್ಮ ರೈತರು ಉತ್ತಮ ಗೊಬ್ಬರ, ಬೀಜ ಮತ್ತು ನೇಗಿಲುಗಳ ಉಪಯೋಗವನ್ನು ಸರಿಯಾಗಿ ತಿಳಿಯರು. ಮನೆಯಲ್ಲಿರುವವರೆಲ್ಲರ ಜೀವನನಿರ್ವಾಹವೇ ಆಗದೆ, ಅವರು ದಿನದಿನಕ್ಕೆ ಬಡವರೇ ಆಗುತ್ತ ಬಂದಿರುವರು.

ಜವಾಬ್ದಾರಿ ಯಾರದು?

ರೈತರು ತಮ್ಮ ಬಡತನಕ್ಕೆ ಉತ್ತರವಾದಿಗಳು, ತಾವೇ ತಮ್ಮ ನಾಶಕ್ಕೆ ಕಾರಣರಾಗಿದ್ದಾರೆ. ತಮ್ಮ ಬಡತನವನ್ನು ಹೋಗಲಾಡಿಸಿಕೊಳ್ಳಲು ಅವರು ತಮ್ಮ ಹೊಲದ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳಬೇಕು. ಅಲ್ಲದೆ ತಮ್ಮ ವಿವಾಹಾದಿ ಕಾರ್ಯಗಳಲ್ಲಿ ಆಗುತ್ತಿರುವ ಅಪವ್ಯಯವನ್ನು ಕಡಿಮೆ ಮಾಡಿಕೊಳ್ಳಬೇಕು. ಇವೆರಡೂ ಅವರ ಕೈಗಳಲ್ಲಿಯೇ ಇವೆ. ಒಳ್ಳೆಯ ಗೊಬ್ಬರ, ಉತ್ತಮವಾದ ಬೀಜಗಳ ವಿನಹ ಬೆಳೆಯು ಹೆಚ್ಚಾಗುವುದಿಲ್ಲ. ಹಿಂದಿನ ಕಾಲದಲ್ಲಿ (ಶಾಸ್ತ್ರಗಳಲ್ಲಿ ಬರೆದಿರುವಂತೆ) 8, 6, ಮತ್ತು 4 ಎತ್ತುಗಳ ನೇಗಿಲನ್ನೂ ಉಪಯೋಗಿಸುತ್ತಿದ್ದರು. 8 ಎತ್ತುಗಳಿಂದ ನಡೆಯುತ್ತಿದ್ದ ನೇಗಿಲಿಗೆ ಹಲಧರ್ಮವೆನ್ನುತ್ತಿದ್ದರು. ಎರಡೇ ಎತ್ತುಗಳ ನೇಗಿಲಿಟ್ಟುಕೊಂಡಿದ್ದವನಿಗೆ ಪಾಪಿಯೆಂದು ಕರೆಯುತ್ತಿದ್ದರು. 6, 8 ಎತ್ತುಗಳ ನೇಗಿಲಿನಿಂದ ಭೂಮಿಯು ಆಳವಾಗಿ ಉಳಲ್ಪಡುತ್ತಿತ್ತು, ಬೆಳೆಯು ಹೆಚ್ಚಿಗೆ ದೊರೆಯುತ್ತಿತ್ತು. ಇದರಿಂದ ರೈತರು ಸುಖಸಂಪತ್ತಿನಿಂದ ಬಾಳುತ್ತಿದ್ದರು.

ಹಿಂದಿನ ಕಾಲದಲ್ಲಿ ಪ್ರತಿಯೊಂದು ಮನೆಯಲ್ಲಿಯೂ ಕನಿಷ್ಠಪಕ್ಷ ಹಾಲುಕೊಡುತ್ತಿದ್ದ ಒಂದು ಹಸುವಾದರೂ ಇರುತ್ತಿತ್ತು. ಅತ್ರಿಮುನಿಗಳು "ಯಾರ ಮನೆಯಲ್ಲಿ ಹಾಲುಕರೆಯುವ ಒಂದು ಹಸುವಾದರೂ ಇಲ್ಲವೋ ಅವನು ಪಾಪಿ ಎಂದಿಗೂ ಅವನಿಗೆ ಒಳ್ಳೆಯದಾಗುವುದಿಲ್ಲ. ಅವನ ಪಾಪಗಳು ಕ್ಷಮಿಸಲ್ಪಡಲಾರವು" ಎಂದು ಹೇಳಿರುವರು. ಶಾಸ್ತ್ರಗಳಲ್ಲೆಲ್ಲಿಯೂ ದುಂದುವೆಚ್ಚದ ಹೆಸರೇ ಇಲ್ಲ. ಹೆಚ್ಚು ಬೆಳೆ ಕಡಿಮೆ ಖರ್ಚುಗಳಿಂದ ಎಲ್ಲರೂ ಸುಖದಿಂದಿರುತ್ತಿದ್ದರು.

ಈಗಿನ ಕಾಲದಲ್ಲಿ ರೈತರು ಶುಭಾಶುಭ ಕಾರ್ಯಗಳಲ್ಲಿ ಹುಚ್ಚರಂತೆ ಖರ್ಚುಮಾಡುತ್ತಿದ್ದಾರೆ. ಧರ್ಮದಲ್ಲಿ ಹೇಳಿರುವಂತೆ ಖರ್ಚುಮಾಡುವುದು ಅವರ ಕರ್ತವ್ಯವೆಂದು ತಿಳಿದಿರುವರು. ಇದು ತೀರ ನಿರಾಧಾರವಾದುದು. ಶಾಸ್ತ್ರಗಳ ಆಧಾರವನ್ನು ಕೊಟ್ಟೇ ಇದನ್ನು ಜನರಿಗೆ ತಿಳಿಸುವ ಉದ್ದೇಶದಿಂದಲೇ ಈ ಲೇಖನವನ್ನು ಬರೆಯಲಾಗಿದೆ. ಹಿಂದಿನ ಕಾಲದ ಋಷಿಮುನಿಗಳು ಈ ರೀತಿಯ ದುಂದುವೆಚ್ಚವನ್ನು ನಿಂದಿಸಿದ್ದರಲ್ಲದೆ, ಅದು ಬಹಳ ಕೆಟ್ಟದ್ದೆಂದು ಸಹ ಹೇಳಿದ್ದರು.

ಹಬ್ಬಗಳೂ-ಶಾಸ್ತ್ರಗಳೂ

ಸೀಮಂತ, ನಾಮಕರಣ, ಚೂಡಾಕರ್ಮ, ಕಿವಿ ಚುಚ್ಚುವುದು, ಉಪನಯನ, ವಿವಾಹ ಇವೇ ಕೆಲವು ಮುಖ್ಯವಾದ ಹಬ್ಬಗಳು. ಸ್ತ್ರೀಯು ಗರ್ಭಿಣಿಯಾಗಿರುವಾಗ ಸೀಮಂತ ಮಾಡುವರು. ಆ ಸಮಯದಲ್ಲಿ ಸಹೋದರರಿಗೆ ಆಮಂತ್ರಣವಾಗುವುದು, ಇಂತಹ ಸಂದರ್ಭಗಳಿಗೆ ಹೋಗಿ ಊಟಮಾಡುವುದು ನಿಷೇಧವೆಂದೆಣಿಸಲ್ಪಟ್ಟಿದೆ. ಆ ರೀತಿ ಊಟಮಾಡಿದವರು ಚಾಂದ್ರಾಯಣ ವ್ರತವನ್ನು ಮಾಡಬೇಕೆಂಬರ್ಥದ ಶ್ಲೋಕವಿದೆ.

ಪರಾಶರ ಋಷಿಗಳು ಈ ರೀತಿ ಹೇಳಿದ್ದಾರೆ

ಚೂಡಾಹೋಮದ ನಂತರ, ಅಥವಾ ನಾಮಕರಣವಾಗುವ ಮೊದಲು, ಪ್ರಸವಿತ ಕಾಲದಲ್ಲಿ ಊಟಮಾಡಿದವರು ಪಾಪಕ್ಕೆ ಒಳಗಾಗುವರು. ದೊಡ್ಡ ದೊಡ್ಡ ಶಾಸ್ತ್ರಕಾರರು, ಆಶ್ವಲಾಯನ, ಆಪಸ್ತಂಭ ಮತ್ತು ಮನು ಇವರೂ ಸಹ ಕಿವಿಚುಚ್ಚುವುದು ಯಾವ ಒಂದು ವಿಶೇಷ ಸಂದರ್ಭವೇ ಅಲ್ಲವೆಂದು ಹೇಳಿರುವರು. ಇಂದ ಮೇಲೆ ಇಂತಹ ಸಮಯಗಳಲ್ಲಿ ವಿಶೇಷವಾಗಿ ಖರ್ಚುಮಾಡುವುದು ಅಪವ್ಯಯವಾಗುವುದು.

ವಿವಾಹ

ಎಲ್ಲಕ್ಕಿಂತ ಹೆಚ್ಚಿನ ಹಬ್ಬವೆಂದರೆ ವಿವಾಹವೇ. ಶಾಸ್ತ್ರಗಳಿಗನುಸಾರವಾಗಿ ವಿವಾಹದ ಉದ್ದೇಶವು ಸತಿಪತಿಗಳಿಬ್ಬರೂ ಸೇರಿ ಧರ್ಮ ಮತ್ತು ಸಂತಾನವನ್ನು ಸಾಧಿಸಿ, ಮುಕ್ತಿಯನ್ನು ಪಡೆಯುವುದೇ ಆಗಿದೆ. ವಿವಾಹವಾದ ಮೇಲೆ ಮನುಷ್ಯನು ಪೂರ್ಣನಾಗುವನು ಒಂದು ವ್ಯಕ್ತಿಯು ಮತ್ತೊಂದು ವ್ಯಕ್ತಿಯೊಡನೆ ಆಜೀವ ಸಂಬಂಧವನ್ನುಂಟುಮಾಡಿಕೊಳ್ಳುವುದು ಸಾಮಾನ್ಯವಾದ ಮಾತಲ್ಲ

ಮಂತ್ರಗಳಿಲ್ಲದ ವಿವಾಹವು ಬಣ್ಣಗಳಿಲ್ಲದ, ಕೇವಲ ಗೆರೆ ಬರೆದ ಚಿತ್ರದಂತಿರುವುದು. ಗೃಹಸೂತ್ರದಲ್ಲಿ ಇದರ ವಿವರವರ್ಣನೆಯು ದೊರೆಯುತ್ತದೆ. ಆದರೆ ಅದರಲ್ಲಿ ಈಗಿನ ಕಾಲದ ದುಂದುವೆಚ್ಚದ ಮಾತೇ ಕಾಣಿಸುವುದಿಲ್ಲ. ಶಾಸ್ತ್ರಗಳಿಗನುಸಾರವಾಗಿಂತೂ 1ಆಣೆಯು ಕಟ್ಟಿಗೆ, 2–3 ಆಣೆಯ ತುಪ್ಪ ಸಾಕು. ಯಾವ ಶಾಸ್ತ್ರದಲ್ಲಿಯೂ ದಿಬ್ಬಣದ ವಿಚಾರವೇ ಇಲ್ಲ. ಹೆಣ್ಣಿನ ಕಡೆಯವರು ಔತಣಗಳಿಗೆ, ಬೀಗರಿಗೆ, ವರದಕ್ಷಿಣೆ ಮುಂತಾದವುಗಳಿಗೆ ಮಾಡುತ್ತಿರುವ ದುಂದುವೆಚ್ಚವು ಈ ಶಾಸ್ತ್ರಗಳ ಮುಖಕ್ಕೆ ಮಸಿ ಬಳಿದಂತಾಗುವುದಿಲ್ಲವೇ?

ನಮ್ಮ ದೇಶದ ರೈತರ ಆದಾಯವು ಕಡಿಮೆ ಎಂದು ಮೇಲೆ ಹೇಳಲಾಗಿದೆ. ನಮ್ಮಲ್ಲಿ ಎಲ್ಲ ವಸ್ತುಗಳೂ ಹುಟ್ಟಿ, ನಾವು ಮಕ್ಕಳ ಹೊಟ್ಟೆಯ ಮೇಲೆ ಹೊಡೆದು, ಅತಿಥಿಗಳಿಗೆ, ದೇವ ಭಕ್ತರಿಗೆ ಔತಣಮಾಡಿಸುತ್ತಾ ಬಂದರೆ, ಗಾನ ನರ್ತನಗಳಲ್ಲಿ ಹಣವನ್ನು ಹಾಳು ಮಾಡಿದರೆ, ನಮ್ಮ ಕೊಡಲಿಯಿಂದ ನಮ್ಮ ಕಾಲನ್ನೇ ಕಡಿದುಕೊಂಡಂತಾಗುತ್ತದೆ. ಈ ಅನಾವ್ಯಯದಿಂದ ರೈತರ ಬಳಿ ಇದ್ದ ಅಲ್ಪ ಸ್ವಲ್ಪ ಭೂಮಿಯೂ ಹೋಯಿತು! ದೊಡ್ಡ ದೊಡ್ಡ ಔತಣ ಸಮಾರಂಭಗಳಿಂದ ವಧೂವರರಿಗೆ ಯಾವ ಲಾಭವೂ ಉಂಟಾಗುವುದಿಲ್ಲ.

ಆಶ್ಚರ್ಯಕರ ಗಡಿಯಾರ

ರಾಮು— ನೀನು ಕೊಂಡುಕೊಂಡ ಗಡಿಯಾರ ಯಾವುದು?

ಶ್ಯಾಮು— ಆಶ್ಚರ್ಯಕರ ಗಡಿಯಾರ.

ರಾಮು— ಆಶ್ಚರ್ಯಕರ ಗಡಿಯಾರ! ಅಂದರೆ?

ಶ್ಯಾಮು— ಹೌದು ಮಹಾರಾಯಾ! ಅದನ್ನು ನೋಡಿದಷ್ಟು ಸಲವೂ ಘಂಟೆ ಎಷ್ಟಾಯಿತೆಂಬುದು ತಿಳಿಯದೆ ನಾನು ಆಶ್ಚರ್ಯಪಡುತ್ತೇನೆ.

ooo ooo ooo

'ತಂಗಿ'

ಅವಳು— ಊಹೂಂ, ನಾನು ನಿಮಗೆ ತಂಗಿಗೆ ಸಮಾನ!

ಅವನು— ಒಳ್ಳೇದು, ನಾನು ಹೋಗುತ್ತೇನೆ.

ಅವಳು— ಹೋಗುವಾಗ ತಂಗಿಯನ್ನು ಚುಂಬಿಸಿ ಹೋಗುವಷ್ಟು ಮಮತೆ ಬೇಡವೆ?

ಅಂತರಂಗದ
CINEMA SPECIAL NUMBER
ಅಥವಾ
"ಚಲಚ್ಚಿತ್ರಾಂಕ"
ತಾ. 30—6—'40ಕ್ಕೆ ಹೊರಬೀಳಲಿದೆ.
ಜಾಹೀರಾತಿಗೆ ಉತ್ತಮಸಾಧನ. ದರಗಳಿಗೆ ಬರೆಯಿರಿ.
Advertisement Manager,
Antaranga, Udipi.

ONE REASON.
Love does much, but in this materialistic world, money does more. Save therefore for the sake of those you love.
RESOURCES OF A CRORE } ESTD. 1906. Canara Bank Limited.

ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ.

ನಗದಿ ವ್ಯಾಪಾರವೆ?

"ಈಗಿನ ಕಾಲದಲ್ಲಿ ವರದಕ್ಷಿಣೆಯ ದೆಸೆಯಿಂದಾಗಿ ಕನ್ಯಾಪಿತೃಗಳಿಗೆ ತಮ್ಮ ವಧುಗಳಿಗೆ ತಕ್ಕ ವರರನ್ನು ಹುಡುಕಲು ತುಂಬಾ ಪ್ರಯಾಸಕರವಾದುದರಿಂದ ನಮ್ಮ ಜಿಲ್ಲೆಯಲ್ಲೊಂದು "ವರವಿಕ್ರಯ ಕಾರ್ಯಾಲಯ" ಎಂಬ ಒಂದು ಸಂಸ್ಥೆಯನ್ನು ಸ್ಥಾಪಿಸಿ ತನ್ಮೂಲಕ ಕನ್ಯಾಪಿತೃಗಳ ಕೊಂಚಮಟ್ಟಿನ ಭಾರವನ್ನಾದರೂ ನಿವಾರಿಸಬೇಕೆಂಬ ಯೋಚನೆಯಲ್ಲಿರುವೆವು. ಈ ವಿಷಯ ತಮ್ಮ ಅಭಿಪ್ರಾಯವೇನೆಂದು ದಯವಿಟ್ಟು ತಿಳಿಸುವಿರಾ"

—"ಶಂಕರಾನುಜ" ಕಳಸ.

ಆಗಬಹುದು, ಆದರೆ 'ನಗದಿ ವ್ಯಾಪಾರ' ಎಂಬ ಕಟ್ಟುನಿಟ್ಟು ಮಾತ್ರ ಇರಬೇಕು. ಈಗ ಶೇಕಡಾ ತೊಂಭತ್ತೊಂಭತ್ತರಂತೆ ಕಡವಹಿವಾಟು ನಡೆಯುತ್ತಿರುವಾಗ ನೀವೂ ಆ ಧೋರಣೆಯನ್ನನುಸರಿಸಿದರೆ ನಿಮ್ಮ ಸರಕುಗಳಿಗೆ ಗಿರಾಕಿಗಳ ಬರಗಾಲ ಬರುವಂತಿಲ್ಲ. ಮತ್ತೊಂದು ಜಾಗ್ರತೆಯಿರಲಿ. ಸಾಧ್ಯವಿದ್ದ ಮಟ್ಟಿಗಾದರೂ ಉತ್ತಮ ಮ್ಹಾಲುಗಳನ್ನೇ ಶೇಖರಿಸಿಟ್ಟುಕೊಳ್ಳಿ. ಇಲ್ಲವಾದರೆ ನಿಮ್ಮ 'ವರವಿಕ್ರಯ ಕಾರ್ಯಾಲಯದಿದಿರಲ್ಲಿ 'ಓಂ ಮಂಡಲಿ'ಯ ಆಫೀಸು ತೆರೆಯಲ್ಪಟ್ಟು ಸ್ಪರ್ಧೆಗಿಳಿಯಬೇಕಾದೀತು!

೦೦೦ ೦೦೦

ಭೀಮ-ದುರ್ಯೋಧನ ಸಮಾನರು

"ಯೂರೋಪಿನಲ್ಲಿ ಈಗ ಪ್ರಬಲ ಯುದ್ಧ ನಡೆಯುತ್ತಿರುವುದು. ಅಲ್ಲದೆ 'ಹಿಟ್ಲರಿಜಂ' 'ಚರ್ಚಿಲ್ಲಿಜಂ' ಎಂಬ ಪರಸ್ಪರ ಟೀಕೆಗಳೆರಡೂ ಕಡೆಯ ಯುದ್ಧ ರಾಷ್ಟ್ರಗಳಲ್ಲಿ ನಡೆಯುತ್ತಿರುವಾಗ ಸಮಬಲರೆಂದು ಹೆಸರುಗೊಂಡಿರುವ ಹಿಟ್ಲರರೂ ಚರ್ಚಿಲ್ಲರೂ, "ದುರ್ಯೋಧನ-ಭೀಮರ" ಧರ್ಮಯುದ್ಧದಂತೆ ಇವರೂ ಎದುರೆದುರಾಗಿ ತಮ್ಮ ಬಾಹುಬಲದಿಂದ ಕಾದಾಡಬಾರದೇಕೆ?"

—ಬಿ. ಆರ್. ಪೈ, ಉಡುಪಿ.

ಅವರು ಹಾಗೆ ಮಾಡುತ್ತಿದ್ದರೆ ನಾವು ಟಿಕೇಟು ಪಡಕೊಂಡಾದರೂ ನೋಡುತ್ತಿದ್ದೆವು ಆದರೆ ಸಾಧ್ಯವಿಲ್ಲ. ಭೀಮ-ದುರ್ಯೋಧನರು ಕುರುಕ್ಷೇತ್ರದ ಒಂದೆಡೆಯಲ್ಲಿ ಗೇಣುದ್ದದ ಗದೆಗಳನ್ನು ಹಿಡಿದುಕೊಂಡು ಇದಿರಿದಿರಾಗಿದ್ದರು. ಈಗಿನ ದುರ್ಯೋಧನ ಹಿಟ್ಲರ್ ಅಲ್ಲಿ ಜರ್ಮನಿಯ ಪರ್ವತಾಗ್ರದಲ್ಲಿದ್ದಾನೆ; ನಿಮ್ಮ ಭೀಮ ಚರ್ಚಿಲ್ಲರು ಇಲ್ಲಿ ಲಂಡನಿನ ಡೌನಿಂಗ್ ಸ್ಟ್ರೀಟಿನಲ್ಲಿದ್ದಾರೆ. ನಿಮಗೆ ದ್ವಾಪರ ಯುಗದ ಮಾದರಿಯ ಯುದ್ಧವನ್ನೇ ಕಾಣಬೇಕೆಂದಿದ್ದರೆ ಅಲ್ಲಿಂದಿಲ್ಲಿಗೆಟಕುವ ಎರಡು ಗದೆಗಳನ್ನು ನೀವು ತಯಾರಿಸಿ ಕೊಡಬೇಕಾದೀತು. ಯಾಕೆಂದರೆ ಅಮೇರಿಕದವರು ಕೂಡ ಈ ವಿಧದ ಯುದ್ಧೋಪಕರಣವನ್ನು ಸಪ್ಲೈಮಾಡುತ್ತಿಲ್ಲ.

೦೦೦ ೦೦೦

ಮಿಂಚು ಬಡಿದರೆ?

"ನಾಜೀ ಸೈನ್ಯವು ಮೆಜಿನೆಟ್ ಕೋಟೆಗೆ ಮಿಂಚು ಬಡಿದಂತೆ ಬಡಿದು ಒಂದೆಡೆಯಲ್ಲಿ ಪುಡಿಮಾಡಿ ಫ್ರಾನ್ಸಿನೊಳಗೆ ಹೊಕ್ಕಿರುವರೆಂಬ ವಾರ್ತೆ ಸತ್ಯವೆ? ಸತ್ಯವಾಗಿದ್ದರೆ ಆ ಸಮಯದಲ್ಲಿ ಫ್ರೆಂಚ್ ಸೇನೆ ಏನು ಮಾಡುತ್ತಿತ್ತು?"

—ಬಿ. ಎಮ್. ಕೆ. ಹುಬ್ಬಳ್ಳಿ.

ನಿಮಗೆ ಬಂದ ವಾರ್ತೆ ನಮಗೂ ಬಂದಿದೆ. 'ಮಿಂಚು ಬಡಿದಂತೆ ಬಡಿವಾಗ ಫ್ರೆಂಚ್ ಸೇನೆ ಮಾಡುತ್ತಿದ್ದುದೇನು?' ಎಂದು ನಿಮ್ಮ ಪ್ರಾಸಬದ್ಧ ಪ್ರಶ್ನೆ. ಮಿಂಚು ಬಡಿವಾಗ ಹೇಗಾಗುವದೆಂಬುದು ನಿಮಗೆ ಗೊತ್ತಿಲ್ಲವೆ? ಕೆಲವರು ಮಿಂಚಿನ ಪೆಟ್ಟಿನಿಂದ ಸಾಯುತ್ತಾರೆ; ಮತ್ತೆ ಕೆಲವರು ಕಣ್ಣು ಮುಚ್ಚಿಕೊಳ್ಳುತ್ತಾರೆ; ಬೇರೆ ಕೆಲವರು ಸಿಕ್ಕಾಬಟ್ಟೆ ಓಡುತ್ತಾರೆ!

೦೦೦ ೦೦೦

ತಿದ್ದುಪಡಿ ಸೂಚನೆ

"ಅಮೇರಿಕದ ಕೆಲವು ಧನಿಕ ಮಹಾಶಯರು ಹಿಟ್ಲರನನ್ನು ಹಿಡಿದೊಪ್ಪಿಸಿದವರಿಗೆ ೧ ಮಿಲ್ಯ ಪೌಂಡು ಕೊಡುವದಾಗಿ ಜಾಹೀರುಮಾಡಿದ್ದಾರಷ್ಟೆ. ಆ ಹಣವನ್ನು ಇನ್ನು ಮುಂದಾದರೂ ಹಿಟ್ಲರನ ಧಾಳಿಗೆ ಸಿಕ್ಕಿ ಕಷ್ಟನಷ್ಟಗಳಿಗೆ ಗುರಿಯಾದವರಿಗೆ ಸಹಾಯಕ್ಕಾಗಿ ಉಪಯೋಗಿಸಲು ಯಾವುದಾದರೊಂದು ಸಂಸ್ಥೆಗೆ ದಾನಮಾಡುವುದು ಲೇಸಲ್ಲವೇ?"

—ಎಸ್. ಎಮ್. ಎಮ್. ಸಂಗಳವಾಡಿ.

ಸಂಘಕ್ಕೆ ಕಟ್ಟಿದ ನಿಧಿಯನ್ನು ಪರೋಪಕಾರಕ್ಕೆ ವ್ಯಯಿಸಲಾಗುವದಿಲ್ಲ. ಆದರೆ ಅಮೇರಿಕನ್ ಸಂಸ್ಥೆಯವರು ತಮ್ಮ ಭಾಷೆಯ ತಿದ್ದುಪಡಿಮಾಡುವದುತ್ತಮ. ಹಿಟ್ಲರ್ ಸೈನ್ಯಕ್ಕೆ ಸಿಕ್ಕಿಯೂ ತಪ್ಪಿಸಿಕೊಂಡು ಬಂದವರಿಗೆ ಈ ನಿಧಿಯನ್ನು ಕೊಡಲಾಗುವದೆಂದು ಇನ್ನು ತಿದ್ದಿಕೊಳ್ಳುವದು ವಾಸಿ.

೦೦೦ ೦೦೦

ಸಹಾನುಭೂತಿ, ಸಹಾಯಗಳ ಭೇದ

"ಕಾಂಗ್ರೆಸಿನ ಮಾಜೀ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರು ಬ್ರಿಟನ್ ಮತ್ತು ಫ್ರಾನ್ಸುಗಳು ಜಯಿಸಬೇಕೆಂದು ಹಾರೈಸಿದ್ದಾರೆ. ಕಾಂಗ್ರೆಸು ಈ ಯುದ್ಧದಲ್ಲಿ ತಟಸ್ಥವಾಗಿರುವದೆಂದು ಸಾರುತ್ತಿದ್ದರೂ ಅದರ ಧುರೀಣರು ಮಿತ್ರರಾಷ್ಟ್ರಗಳ ಗೆಲುವನ್ನು ಮನಃಪೂರ್ವಕ ಹಾರೈಸುತ್ತಾರೆ. ಹೀಗೆ ಮನಸ್ಸಿರುವಾಗ ಅದನ್ನು ತಡೆದಿಟ್ಟುಕೊಳ್ಳುವದಕ್ಕಿಂತ ಈ ಕಷ್ಟಕಾಲದಲ್ಲಿ ಕಾಂಗ್ರೆಸಿನವರು ಬ್ರಿಟನಿಗೆ ಸಹಾಯಕೊಡಬಾರದೇಕೆ?"

—ಕೆ. ಕೆ. ಆರ್. ಬೆಂಗಳೂರು.

ಬಾಬುರಾಜೇಂದ್ರರು ಸೂಚಿಸಿದಂತಹ ಸಹಾನುಭೂತಿಗೆ ಬ್ರಿಟನು ಅರ್ಹವಿದೆ. ಇಂಗ್ಲಾಂಡಿನ ಧುರೀಣರು ಭಾರತವು ಸ್ವತಂತ್ರವಾಗಬೇಕೆಂದು ಹಾರೈಸುತ್ತಾರೆ; ಆದರೆ ಅಗತ್ಯಬೀಳುವ ಸಹಾಯಕೊಡುವುದಿಲ್ಲ. ಅದಕ್ಕೆ ಪ್ರತಿಯಾಗಿ ಕಾಂಗ್ರೆಸೂ ಹಾರೈಸುತ್ತದೆ; ಸಹಾಯಕೊಡುವದಿಲ್ಲ. ಮಾತಿಗೆ ಮಾತು; ಸಹಾನುಭೂತಿಗೆ ಸಹಾನುಭೂತಿ; ಸಹಾಯಕ್ಕೆ ಸಹಾಯ-ಇದು ವ್ಯವಹಾರ ನೀತಿ!

೦೦೦ ೦೦೦

ನಿದ್ರಾಭಂಗ

"ನಮ್ಮತ್ತ ಕಡೆಯ ಪ್ರಸಿದ್ಧರಾದ ಸಾಹಿತಿಗಳು ನಿಮ್ಮ ಜಿಲ್ಲೆಯ ಮೂಡಬಿದ್ರೆಯಂಬಲ್ಲಿಗೆ ವಸಂತ ಸಾಹಿತ್ಯೋತ್ಸವದ ಸಲುವಾಗಿ ಆಗಮಿಸಿದ್ದರಷ್ಟೆ. ಅವರ ಚಟುವಟಿಕೆಯಿಂದ ನಿಮ್ಮ ಜಿಲ್ಲೆಯ ಜನರಲ್ಲಿ ಎಚ್ಚರಿಕೆ ಹುಟ್ಟಿತೆ?"

—ಆರ್. ಆರ್. ಎಸ್. ಮೈಸೂರು.

ಹೌದು, ವಸಂತೋತ್ಸವದಲ್ಲಿ ರಾತ್ರಿ ಹೊತ್ತಿನಲ್ಲಿಯೂ ಸಭೆ ಭಾಷಣಗಳಿದ್ದುವು.

೦೦೦ ೦೦೦

ಅಸಾಧ್ಯ ಖಾನೇಶುಮಾರಿ

"ಜರ್ಮನಿಯ ಸೇನೆಗಳು ಮಿತ್ರರಾಷ್ಟ್ರಗಳು ಇದಿರುಬಿದ್ದ ಯುದ್ಧ ಕ್ಷೇತ್ರಗಳಲ್ಲಿ ಕೂಡ ಏನೂ ತಡೆಯಿಲ್ಲದೆ ತೀವ್ರಗತಿಯಿಂದ ಮುಂದೊತ್ತುತ್ತಿರುವದನ್ನು ಕಾಣುವಾಗ ಇತ್ತಂಡದವರ ಸೈನ್ಯ ಶಕ್ತಿಯೆಷ್ಟು ಎಂಬುದನ್ನು ತಿಳಿಯುವ ಆತುರ ಹುಟ್ಟುತ್ತದೆ. ಎರಡು ಕಡೆಯವರಲ್ಲಿ ಎಷ್ಟೆಷ್ಟು ವಿಮಾನಗಳು; ಎಷ್ಟು ಸೈನ್ಯಗಳು; ಎಷ್ಟು ಟಾಂಕಿಗಳು ಇವೆ ಎಂಬುದನ್ನು ತಿಳಿಸುವಿರಾ?"

ಎನ್. ಕೆ. ಬೈಂದೂರು.

ಎಲ್ಲವನ್ನೂ ಒಟ್ಟಿಗೆ ಕಡೆಗೆ ಹೇಳೋಣ, ಈಗ ಖಾನೇಶುಮಾರಿ ತೆಗೆಯಲು ಸಾಧ್ಯವಿಲ್ಲ ಪ್ರತಿದಿನ ಸಾವಿರಗಟ್ಟಲೆಯಲ್ಲಿ ನಾಶವಾಗುತ್ತಿರುವಾಗ ನಾವು ಇಲ್ಲಿ ಅಂಕೆ ಸಂಖ್ಯೆಗಳನ್ನು ಕೊಟ್ಟರೆ ನಿಮಗೆ ಅದು ಗೊತ್ತಾಗುವ ಮೊದಲೇ ಅಲ್ಲಿ ಹೆಚ್ಚು ಕಡಿಮೆಯಾಗಬಹುದು. ಆದ್ದರಿಂದ ಸದ್ಯಕ್ಕೆ ಸುಮ್ಮನಿರಿ.

೦೦೦ ೦೦೦

ತರಬೇತಿ ನಿಲಯ

"ನಮಗೆ ನಿಮ್ಮ ಜಿಲ್ಲೆಯ ಪ್ರಯಾಣಿಕ ಬಂಗಲೆಗಳಲ್ಲಿ ಉಳಿದುಕೊಳ್ಳಬೇಕಾಗುವ ಸಂದರ್ಭ ಕೆಲಸಮಯಕ್ಕೆ ಮೊದಲು ಒದಗಿ ಬಂತು. ದಕ್ಷಿಣ ಕನ್ನಡದ ಬಂಗಲೆಗಳಿಗಿಂತ ನಮ್ಮ ಮೈಸೂರಿನ ಬಂಗಲೆಗಳು ಎಷ್ಟೋ ಉತ್ತಮವೆಂದು ನನಗೆ ತೋರಿತು. ನಿಮ್ಮ ಜಿಲ್ಲಾ ಬೋರ್ಡು ಮದ್ರಾಸು ಸಂಸ್ಥಾನದ ಮೇಲ್ತರಗತಿಯ ಬೋರ್ಡುಗಳಲ್ಲೊಂದೆಂದು ನಾವು ಕೇಳಿದ್ದೇವೆ. ಮತ್ತು ಎಷ್ಟೋ ಜನೋಪಕಾರೀ ಕಾರ್ಯಗಳನ್ನು ಅದು ಮಾಡುತ್ತಿದೆ ಎಂಬುದನ್ನೂ ಬಲ್ಲೆವು. ಆದರೆ ಟ್ರಾವೆಲರ್ಸ್ ಬಂಗ್ಲೆಗಳನ್ನು ಸುಧಾರಿಸುವ ಕೆಲಸವನ್ನೇಕೆ ಅದು ಕೈಗೊಳ್ಳುವದಿಲ್ಲ?"

—ಎಚ್. ಎಮ್. ಎ. ಬೆಂಗಳೂರು.

ನೀವು ಸುಖದಲ್ಲಿಯೂ ಪರಮ ಸುಖವನ್ನು ಹುಡುಕುವ ವರ್ಗದವರು. ನಮ್ಮ ದಕ್ಷಿಣ ಕನ್ನಡವೆಂದರೆ ಸತ್ಯಾಗ್ರಹ ಸಿದ್ಧತೆ ನಡೆಯುತ್ತಿರುವ ಬ್ರಿಟಿಷ್ ಭಾರತದ ಒಂದು ಭಾಗವಾಗಿದೆ ಎಂಬುದನ್ನು ಪ್ರಥಮತಃ ನೆನಪಿನಲ್ಲಿಟ್ಟುಕೊಳ್ಳಿ. ಬೇರೆ ಕಡೆಗಳಲ್ಲಿ ಸತ್ಯಾಗ್ರಹ ಶಿಬಿರಗಳೇರ್ಪಟ್ಟು ಜೈಲು ಜೀವನ ನಡೆಯಿಸುವ ತರಬೇತಿ ದೊರೆಯುತ್ತಿರುವಾಗ ದಕ್ಷಿಣ ಕನ್ನಡದಲ್ಲಿ ಆದಕ್ಕಾಗಿ ಪ್ರತ್ಯೇಕ ಶಿಬಿರಗಳೇರ್ಪಡಾಗಿಲ್ಲ ನಮ್ಮಲ್ಲಿಯ ಪ್ರಯಾಣಿಕ ಬಂಗಲೆಗಳು ಆ ತರಬೇತಿಯನ್ನೀಯುವದರಲ್ಲವೆ ನಿಮಗೆ ಮತ್ಸರವೆ? ನಮ್ಮ ಜಿಲ್ಲಾ ಬೋರ್ಡು ಈಗ ಇರುವದು ಕಾಂಗ್ರೆಸ್ ಪಕ್ಷೀಯರ ಕೈಯಲ್ಲಿ-ತಿಳಿಯಿತೆ?

೦೦೦ ೦೦೦

ಅಶ್ವತ್ಥಮರ ದೇವರ ದುರ್ಗತಿ

"ಹಿಂದುಗಳು ತಲೆಬಾಗಿ ಪೂಜಿಸುತ್ತಿರುವ ಅಶ್ವತ್ಥವೃಕ್ಷಗಳನ್ನು ಕತ್ತರಿಸಲು ಉಡುಪಿ ಪಟ್ಟಣದ ಒಂದೆರಡು ಕಡೆಗಳಲ್ಲಿ ಪ್ರಾರಂಭಿಸಿರುವುದರಿಂದ ಹಲವರು ಉದ್ವೇಗಗೊಂಡಿದ್ದಾರೆಂದು ತಿಳಿದುಬರುತ್ತದೆ. ಉಡುಪಿಯ ಹಿಂದೂ ಮಹಾಸಭೆಯವರು ವಿರುದ್ಧ ಸಭೆಯೊಂದನ್ನು ಮಾಡಿದ್ದರೆಂದೂ ಕೇಳುತ್ತೇವೆ. ಆ ಕುರಿತು ನಿಮ್ಮ ಅಭಿಪ್ರಾಯವೇನು?"

—ಕೆ. ಜಿ. ಎಸ್. ಉಡುಪಿ

ಅಶ್ವತ್ಥಮರ ದೇವರಿಗೆ ತಲೆಬಾಗಿಸುವವರಿರುವರೆಂಬುದು ನಿಜ. ಆದರೆ ಭಕ್ತರು, ಭಕ್ತರಲ್ಲದವರು ಎಂಬ ಭೇದವರಿಯದ ಆ ದೇವರು ಸ್ವತಃ ಜನರ ತಲೆಯ ಮೇಲೆ ಬಿದ್ದು ಅದನ್ನು ಬಗ್ಗಿಸಲು ತಯಾರಾದರೆ ಆಗ ಯಾವ ಪೂಜೆ ಸಲ್ಲಿಸಬೇಕು? ಆ ರೀತಿ ದೇವಸಾನ್ನಿಧ್ಯ ಹೊಂದಲು ತಯಾರಿರುವ ಭಕ್ತರಾರೂ ಇಲ್ಲದಿರುವದೇ ಅಶ್ವತ್ಥಮರ ದೇವರ ದುರ್ಗತಿಗೆ ಕಾರಣ.

—ಕೃಷ್ಣ [illegible]

The Canara Industrial & Banking Syndicate Ltd.

Estd] HEAD OFFICE: UDIPI, (S. INDIA.) [1925

Member: RESERVE BANK OF INDIA, BANKERS' CLEARING HOUSE, BOMBAY.

Five years' Cash Certificates ar issued at the preie of **Rs. 8/-, Rs. 80/- Rs 400/- & Rs. 800/-.**

repayable on maturity at **Rs. 10/-, Rs. 100/-, Rs. 500/- & Rs. 1000/- respectively.**

You can cash the Certificates at any time before maturity.

An investment which is liquid and yet very remmunerative.

FURTHER PARTICULARS ON APPLICATION.

GENERAL BANKING BUSINESS TRANSACTED.

— ಮೈಸೂರು ಪತ್ರ —

(ನಮ್ಮ ಸ್ವಂತ ಬಾತ್ಮೀದಾರರಿಂದ) ಮೈಸೂರು, ಜೂ 20.

ಮೈಸೂರು ವಿಶ್ವವಿದ್ಯಾನಿಲಯದ ಪ್ರೋಛಾನ್ಸಲರ್—ಶ್ರೀಮದ್ಯುವರಾಜ ಶ್ರೀ ಜಯಚಾಮರಾಜ ಒಡೆಯರನ್ನು ಮೈಸೂರು ವಿಶ್ವವಿದ್ಯಾನಿಲಯ ಪ್ರೋಛಾನ್ಸಲರನ್ನಾಗಿ ನೇಮಕ ಮಾಡಲಾಗಿದೆ.

ಉದಾರ ದಾನ—ಅಂಗವಿಹೀನರ ಪೋಷಣೆಗಾಗಿ ಮೈಸೂರಿನಲ್ಲಿ ಒಂದು ಆಲಯ ಸ್ಥಾಪಿಸಲು, ಮತ್ತು 'ಎಕ್ಸ್‌ರೇ' ಉಪಕರಣಗಳನ್ನು ಕೊಳ್ಳುವುದಕ್ಕೆ ಗತಿಸಿದ ರಾಜಕುಮಾರಿ ಚೆಲುವಾಜಮ್ಮಣ್ಣಿ (ಶ್ರೀಮಾನ್ ಮಹಾರಾಜರ ಸೋದರಸೊಸೆ)ಯವರ ಜ್ಞಾಪಕಾರ್ಥದಲ್ಲಿ, ಸರ್ದಾರ್ ಎಂ. ಲಕ್ಷ್ಮೀಕಾಂತರಾಜ ಅರಸು ಸುಮಾರು 20 ಸಾವಿರ ರೂ. ಗಳನ್ನು ದಾನಮಾಡಿದ್ದಾರೆ.

ವಿಶೇಷ ಸುದ್ದಿಗಳು—ಮೈಸೂರ್ ಉಪದ್ರವಕ್ಕೆ ಕಾರಣ ಮೊಕದ್ದಮೆಯಲ್ಲಿ ದಸ್ತಗಿರಿಯಾಗಿ, ಬೇಲ್ ಮೇಲೆ ಬಿಡಲಾಗಿದ್ದ ಶ್ರೀ. ಹೆಚ್. ಕೆ. ವೀರಯ್ಯನವರನ್ನು ಪುನಃ ದಸ್ತಗಿರಿಮಾಡಬೇಕೆಂದು ಸರ್ಕಾರ ಅರ್ಜಿ ಹಾಕಿದೆ. ಟ್ರಿನಿಟಿ ಕಾಲೇಜ್ ದ ಮೇಯು ಮುಂದಿನ ವಾರ ಜು. 5ರಲ್ಲಿ ಮದ್ರಾಸಿನಲ್ಲಿ ಪ್ರಾರಂಭವಾಗಲಿದೆ. ಬೆಂಗಳೂರು ಮೈಸೂರು ನಗರಗಳ ರೋಡುಗಳನ್ನು ಕಾಂಕ್ರೀಟ್ ರೋಡುಮಾಡಿ ಅಭಿವೃದ್ಧಿಪಡಿಸಲು ವಿಚಾರವಾಗುತ್ತಿದೆ. ಇದೇ ಮಾಹೆ ಜು. 19ರಲ್ಲಿ ಮೈ. ಕಾಂ. ನವರು 'ರಾಜಕೀಯ ಕೈದಿಗಳ ದಿನ' ಆಚರಿಸಿ ಸಂಸ್ಥಾನದ ಅನ್ಯಾಯಕ್ಕೂ ಸಭೆ ನಡೆಸಿ ಸರ್ಕಾರ ದಬ್ಬಾಳಿಕೆ ಖಂಡಿಸಿ ಉತ್ಸಾಹ ಭಾಷಣಗಳನ್ನು ಮಾಡಿದರು. ಬೊಂಬಾಯಿ ಶಾಸನ ಸಭಾಧ್ಯಕ್ಷರಾದ ಶ್ರೀ ಮಾವಳಂಕರರು ಪತ್ನಿ ಮತ್ತು ಮಕ್ಕಳೊಡನೆ ಮೈ. ಸಂ. ಕೆಲವು ಭಾಗಗಳಲ್ಲಿ ಸಂಚರಿಸಿ ಆರೋಗ್ಯ ಲಾಭ ಪಡೆಯಲು ಬೆಂಗಳೂರಿಗೆ ಬಂದು ಬಿಡಾರವಾಗಿದ್ದರು. ಮೈ. ಜಿಲ್ಲಾ ಸಮ್ಮೇಳನದ ಪ್ರಥಮ ಸಭೆಯ ಅಧ್ಯಕ್ಷತೆಯಲ್ಲಿ ಮೈಸೂರಿನಲ್ಲಿ ರಂಗಾಚಾರ್ಲು ಪಟ್ಟಣದಲ್ಲಿ ನಡೆಯಿತು. ಬೆಂಗಳೂರಿನಲ್ಲಿರುವ ಮಿತ್ರಸಂಘದವರು, ಸುಪ್ರಸಿದ್ಧ ಸಾಹಿತಿ ಗತಿಸಿದ ಶ್ರೀ. ಎ. ಎನ್. ರಾಮಶೇಷರವರಿಗೆ ಸಂತಾಪ ಸೂಚಿಸಲು ಶ್ರೀ ಪಿ. ಕೆ. ಭಾರದ್ವಾಜರ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿಸಿದ್ದರು. ಈ ಸಭೆಯಲ್ಲಿ ಅನೇಕ ಕನ್ನಡ ಸಾಹಿತಿಗಳೂ ಮತ್ತು 'ಸುಬೋಧ' ಪತ್ರಿಕೆ ಸಂಪಾದಕ ಶ್ರೀ. ಎಂ. ರಾಮರಾಯರು ಅತ್ಯುತ್ತಮ ಭಾಷಣಗಳನ್ನು ಮಾಡಿ, ದಿವಂಗತರ ಗುಣಗಾನಮಾಡಿ ಸಂತಾಪಸೂಚನೆಯ ಮಾಡಿದರು. ಕೋಲಾರ್ ಜಿಲ್ಲಾ ಸಮ್ಮೇಳನವು ದ್ವಿತೀಯ ಕಟುವಾದ ಅಧ್ಯಕ್ಷತೆಯಲ್ಲಿ ನಡೆಯಿತು. ಸುಪ್ರಸಿದ್ಧ ಯಾತ್ರಾಸ್ಥಳವಾದ ಶ್ರೀರಂಗಪಟ್ಟಣ ಕೋಟೆ ಗೋಡೆಗಳನ್ನು ಭದ್ರಪಡಿಸಿ ಸ್ಥಿರಪಡಿಸಲು ಏಳುವರ್ಷದ ಯೋಜನೆಯೊಂದು ತಯಾರಾಗಿ ಸರ್ಕಾರದವರು ಈಗ ಸುಮಾರು 2 ಸಾವಿರ ರೂ. ಖರ್ಚುಮಾಡಿ ಕಾರ್ಯ ಪ್ರಾರಂಭಿಸಿರುತ್ತಾರೆ. ಮೈ. ಸಂ. ಬಸ್ಸು ಮಾಲೀಕರುಗಳ ಸಮ್ಮೇಳನವೊಂದು ಮುಂದಿನ ವಾರ ಜು 5ರಲ್ಲಿ ಮೈಸೂರಿನಲ್ಲಿ ನಡೆಯಲಿದೆ. ರಾ. ಬ. ಚಂದ್ರಶೇಖರಯ್ಯನವರನ್ನು ಅಧ್ಯಕ್ಷತೆವಹಿಸಿಕೊಳ್ಳಲು ಮತ್ತು ಬಿರುಸಾದ ಏರ್ಪಾಡುಗಳು ನಡೆಯುತ್ತಿವೆ. ಬೆಂಗಳೂರು ಇಂಪೀರಿಯಲ್ ಟುಬ್ಯಾಕೋ ಕಾರ್ಖಾನೆ ಮುಂದೆ ಮುಷ್ಕರ ನಡೆಸಿದರೆಂದು 15 ಮಂದಿ ದಸ್ತಗಿರಿಯಾಗಿ ಶಿಕ್ಷೆಯಾಯಿತು. ಮುಷ್ಕರವು ಶಾಂತರೀತಿಯಿಂದ ಇನ್ನೂ ನಡೆಯುತ್ತಿದೆ.

ಪಬ್ಲಿಸಿಟಿ ಆಫೀಸರರ ವಿಶೇಷ ಲೇಖನಗಳು—ಮೈ. ಸರ್ಕಾರ ಪಬ್ಲಿಸಿಟಿ ಆಫೀಸರು "ಕಾಫಿ ವ್ಯವಸಾಯಗಾರರಿಗೆ ಸರ್ಕಾರದಿಂದ ಸುಲಭ ಬಡ್ಡಿದರ ಸಾಲ ಒದಗಿಸುವನ್ನು, ಆಹಾರ ವಿಜ್ಞಾನ ಶಾಸ್ತ್ರಗಳು, ಮೈ. ಸಂ. ಏಲಕ್ಕಿ ವ್ಯವಸಾಯ ಮೈ. ಏಲಕ್ಕಿ ಅತ್ಯುತ್ತಮವಾದ್ದು, ಸಂ ಬೆಳ್ಳಿ ಮತ್ತು ಚಿನ್ನ ಆಗರಗಳ ಕೆಲಸ, 1 ವರ್ಷಕ್ಕೆ 1 ಕೋಟಿ 32 ಲಕ್ಷ ರೂಪಾಯಿಗಿಂತಲೂ ಹೆಚ್ಚು ಬೆಲೆಬಾಳುವ ಎಣ್ಣೆ ಮತ್ತು ಹುಲ್ಲು ಇವುಗಳ ವಿನಿಯೋಗವಾಗುತ್ತಿದೆ. ಯೂರೋಪ್ ಯುದ್ಧವೂ ಮೈ. ಕೈಗಾರಿಕೆ, ಗ್ರಾಫೈಟಿನ ಎಲೆಕ್ಟ್ರಿಕ್ ಕಯಾರಿಗೆ" ಮುಂತಾದ ವಿಶೇಷ ಲೇಖನಗಳನ್ನು ಪ್ರಕಟಣೆಗೆ ಕಳುಹಿಸಿದ್ದಾರೆ. (ಸ್ಥಳಸಂಕೋಚದಿಂದ ಪ್ರಕಟಿಸಲಾಗಲಿಲ್ಲ. ಸಂ. ನ)

ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಗ್ರಂಥ ಮತ್ತು ಪತ್ರಿಕೆಗಳ ಪ್ರದರ್ಶನ—ಕನ್ನಡ ಸಾಹಿತ್ಯ ಪರಿಷತ್ತಿನ ರಜತ ಮಹೋತ್ಸವವನ್ನು ಜೂನ್ ತಿಂಗಳು 30ನೆಯ ತಾರೀಖು ಭಾನುವಾರ ಜರುಗಿಸಲು ನಿಶ್ಚಯಿಸಿರುವ ಸಂಗತಿ ಈಗಾಗಲೇ ಎಲ್ಲ ಕನ್ನಡಿಗರಿಗೂ ತಿಳಿದ ವಿಷಯವಾಗಿದೆ. ಈ ಸಂದರ್ಭದಲ್ಲಿ ಒಂದು ಕನ್ನಡ ಗ್ರಂಥಪ್ರದರ್ಶನವನ್ನು ನಡೆಸಬೇಕೆಂದು ನಿಶ್ಚಯಿಸಿದೆ. ಜತೆಗೆ ಕನ್ನಡ ಪತ್ರಿಕೆಗಳ ಪ್ರದರ್ಶನವೊಂದನ್ನೂ ಏರ್ಪಡಿಸಬೇಕೆಂದಿದೆ.

ಗ್ರಂಥ ಪ್ರದರ್ಶನ—ಗ್ರಂಥ ಪ್ರದರ್ಶನದಲ್ಲಿ 1915ನೆಯ ಇಸವಿಯಿಂದ ಈಚೆಗೆ ಪ್ರಕಟವಾದ ಎಲ್ಲ ಕನ್ನಡ ಗ್ರಂಥಗಳಿಗೂ ಸ್ಥಳವುಂಟು. ಗ್ರಂಥಗಳು ಪೂರ್ತಿಯಾಗಿಲ್ಲದಿದ್ದರೆ ಸ್ವಲ್ಪ ಭಾಗವಾದರೂ ಅಚ್ಚಾಗಿರಬೇಕು. ಎಲ್ಲ ಗ್ರಂಥಗಳೂ ಜೂನ್ 15ರೊಳಗಾಗಿ ಸಾಹಿತ್ಯ ಪರಿಷತ್ತಿನ ಕಾರ್ಯಾಲಯಕ್ಕೆ ಬಂದಿರಬೇಕು.

ಪ್ರದರ್ಶನ ಮುಗಿದ ಬಳಿಕ ಗ್ರಂಥಗಳನ್ನು ಪ್ರಕಟನಕಾರರಿಗೆ ಪರಿಷತ್ತಿನ ಖರ್ಚಿನಿಂದ ಹಿಂದಿರುಗಿಸಲಾಗುತ್ತದೆ.

ಪತ್ರಿಕೆಗಳ ಪ್ರದರ್ಶನ—ಈ ಪ್ರದರ್ಶನದಲ್ಲಿ ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ, ತ್ರೈಮಾಸಿಕ ಪತ್ರಿಕೆ ಮೊದಲಾದ ಎಲ್ಲ ಬಗೆಯ ಕನ್ನಡ ಪತ್ರಿಕೆಗಳನ್ನೂ ಪ್ರದರ್ಶಿಸಲಾಗುವುದು. ಪತ್ರಿಕೆಯ ಪ್ರತಿಗಳನ್ನು ಜೂನ್ 15ರೊಳಗೆ ಪರಿಷತ್ತಿನ ಕಾರ್ಯಾಲಯಕ್ಕೆ ಕಳಿಸಬೇಕು. ಪ್ರತಿಯೊಂದು ಪತ್ರಿಕೆಯು ಸದ್ಯದ ಸಂಚಿಕೆಯೊಂದನ್ನೂ, ಮೊತ್ತ ಮೊದಲನೆಯ ಅಥವಾ ಆದಷ್ಟು ಹಿಂದಿನ ಸಂಚಿಕೆಯೊಂದನ್ನೂ ಕಳಿಸಬೇಕು. ಮೊತ್ತ ಮೊದಲನೆಯ ಅಥವಾ ಬಹಳ ಹಿಂದಿನ ಸಂಚಿಕೆಗಳನ್ನು ಎಚ್ಚರಿಕೆಯಿಂದ ನೋಡಿಕೊಂಡು ಪ್ರದರ್ಶನ ಮುಗಿದ ಬಳಿಕ ಅವನ್ನು ಪರಿಷತ್ತಿನ ಖರ್ಚಿನಿಂದ ಪ್ರಕಾಶಕರಿಗೆ ಹಿಂದಿರುಗಿಸಲಾಗುತ್ತದೆ.

ಹೆಚ್ಚಿನ ವಿವರಗಳನ್ನು ಕಾರ್ಯದರ್ಶಿಗಳಿಂದ ತಿಳಿಯಬಹುದು.

ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು,

ಬಿ. ವೆಂಕೋಬ ರಾವ್

ಕಾರ್ಯದರ್ಶಿ.

ನವಯುಗದಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ನಿಮ್ಮ ವ್ಯವಹಾರ ವೃದ್ಧಿಗೊಳಿಸಿರಿ!

ಓರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್

ಸ್ಥಾಪಿತ ವರ್ಷ 1874] **ಎಶೂರೆನ್ಸ್ ಕಂಪೆನಿ ಲಿಮಿಟೆಡ್** [ಪ್ರಧಾನ ಕಾರ್ಯಾಲಯ—ಮುಂಬಯಿ

ನಿಮ್ಮನ್ನು ಆಶ್ರಯಿಸಿಕೊಂಡಿರುವವರಿಗೆ, ಮುಪ್ಪಿನಲ್ಲಿ ನಿಮಗೆ ಮತ್ತು ನಿಮ್ಮನ್ನು ಹೊಂದಿಕೊಂಡಿರುವವರಿಗೆ ದುಡ್ಡಿಗಾಗಿ ಪರಾವಲಂಬಿಗಳಾಗದೆ ತಕ್ಕಷ್ಟು ಆರ್ಥಿಕ ಸ್ವಾತಂತ್ರ್ಯವು ನಿಸ್ಸಂದೇಹವಾಗಿ ದೊರಕುವಂತಹ ನಿಧಿಯು ಕ್ಲಪ್ತ ಅವಧಿಗಳ ಚಿಕ್ಕಪಾವತಿಗಳಿಂದ ನಿಶ್ಚಯವಾಗಿ ಬೆಳೆದು ಬರುವಂತೆ ಮಾಡುವ ಏಕಮಾತ್ರ ಸಾಧನವೆಂದರೆ **ಜೀವವಿಮೆ ಮಾಡುವುದೇ.**

ಯೋಗ್ಯಾಯೋಗ್ಯತೆಯನ್ನು ಪರಿಶೀಲಿಸಬಲ್ಲ ಸಾವಿರಾರುಮಂದಿ ಪ್ರತಿ ವರ್ಷವೂ "ಓರಿಯಂಟಲ್" ನಲ್ಲೇ ತಮ್ಮ ಜೀವವಿಮೆಮಾಡಿ ತಮ್ಮನ್ನು ಅವಲಂಬಿಸಿಕೊಂಡಿರುವವರಿಗೂ ವೃದ್ಧಾಪ್ಯದಲ್ಲಿ ತಮಗೂ ತಮ್ಮ ಆಶ್ರಿತರಿಗೂ **ಆರ್ಥಿಕ ಸ್ವಾತಂತ್ರ್ಯದ ತಳಹದಿ** ಹಾಕುತಿದ್ದಾರೆ.

ನೀವೇಕೆ ಕಾಲಹರಣ ಮಾಡುವಿರಿ?

ಇಂದೇ ಓರಿಯಂಟಲಿನ ಒಂದು ವಿಮಾಪತ್ರ ಹೊಂದಿರಿ!

ವಿಷಯ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ಡಿ ಇನ್ಸ್‌ಪೆಕ್ಟರ್,
ಓರಿಯಂಟಲ್ ಲೈಫ್ ಆಫೀಸು,
ಮೈನ್ ರೋಡ್, ಮಡಿಕೇರಿ, (ಕೊಡಗು)

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸು,
ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು.

ORIENTAL

GOVERNMENT SECURITY LIFE ASSURANCE CO., LTD.

ಕಷಾಯ ಬಿಂದು

ಡಾ| ಅರುಂಡೇಲ್ ಇವರು ಮದ್ರಾಸಿನ 'ನ್ಯೂ ಇಂಡಿಯಾ ಲೀಗ'ನ ಅಧ್ಯಕ್ಷರು. ಈ ಮಹನೀಯರು ವೈಸರಾಯರಿಗೊಂದು, ಗಾಂಧಿಯವರಿಗೊಂದು, ಜಿನ್ನರಿಗೊಂದು–ಹೀಗೆ ಮೂರು ಟೆಲಿಗ್ರಾಮುಗಳನ್ನು ಒಂದೇ ಬಾರಿಗೆ ಬಿಟ್ಟಿದ್ದಾರೆ.

೦೦೦ ೦೦೦ ೦೦೦

ಹೊಲ್ಲೆಂಡ್, ಬೆಲ್ಜಿಯಮ್, ಲಕ್ಸೆಂಬರ್ಗ್‌ಗಳ ಮೇಲೆ ಹಿಟ್ಲರನು ಒಂದೇ ಬಾರಿಗೆ ಧಾಳಿಮಾಡಿದ್ದ. ಡಾ| ಅರುಂಡೇಲರ ಟೆಲಿಗ್ರಾಮುಗಳ ಸಂಖ್ಯೆ ಅದಕ್ಕಿಂತ ಕಡಿಮೆಯಿಲ್ಲ.

೦೦೦ ೦೦೦ ೦೦೦

ಲೋಕ ನಾಗರಿಕತೆಯ ರಕ್ಷಣೆಗಾಗಿ ಯುದ್ಧ ಹೂಡಿರುವ ಮಿತ್ರ ರಾಷ್ಟ್ರಗಳ ವಿಜಯದ ಕುರಿತು ಪೂರ್ಣ ಭರವಸೆ ತೋರಿಸಿದ್ದಾರೆ ಡಾ| ಅರುಂಡೇಲರು ವೈಸರಾಯರಿಗೆ ಬಿಟ್ಟ ತಂತಿಯಲ್ಲಿ.

೦೦೦ ೦೦೦ ೦೦೦

ಆ ವಿಜಯವು ಭಾರತಕ್ಕೆ ಕೂಡಲೆ ಜವಾಬ್ದಾರೀ ಸರಕಾರ ಕೊಡುವದನ್ನು ಹೊಂದಿಕೊಂಡಿದೆ ಎಂದೂ ಅವರು ಸೂಚಿಸಿದ್ದಾರೆ.

೦೦೦ ೦೦೦ ೦೦೦

ಹಾಗೆ ಮಾಡಿರೆಂದು ವೈಸರಾಯರೊಡನೆ ಡಾ| ಅರುಂಡೇಲರ ಒತ್ತಾಯವಿದೆ; ಅಂದರೆ ಹಾಗಾಗುವದೆಂಬ ಭರವಸೆ ಮಾತ್ರ ಇವರಿಗಿಲ್ಲವೆಂದಾಯಿತು.

೦೦೦ ೦೦೦ ೦೦೦

ಆದರೆ ಅದನ್ನು ಹೊಂದಿಕೊಂಡಿರುವ ಮಿತ್ರರಾಷ್ಟ್ರಗಳ ವಿಜಯದ ಕುರಿತು ಭರವಸೆ ಮಾತ್ರ ಪೂರ್ತಿಯಾಗಿಯೇ ಇದೆ. ಇದೊಂದು ಸಮಸ್ಯೆ!

೦೦೦ ೦೦೦ ೦೦೦

"ಸಂದಿಗ್ಧ ಯುದ್ಧ ಪರಿಸ್ಥಿತಿಯು ಬೆಸೆಯಿಂದ ಭಾರತದ ರಕ್ಷಣೆ ಮತ್ತು ಸ್ವಾತಂತ್ರ್ಯಕ್ಕಾಗಿ ಒಗ್ಗಟ್ಟಾಗುವ ಅವಶ್ಯಕತೆಯಿದೆ. ನಿಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಡಬೇಕು, ಇಲ್ಲವೆ ಸಮಜಾಯಿಸಿಕೊಳ್ಳಬೇಕು" ಎಂದು ಗಾಂಧೀ ಜಿನ್ನರಿಗೆ ಅರುಂಡೇಲರ ಆಗ್ರಹಪೂರ್ವಕ ವಿನಂತಿ

೦೦೦ ೦೦೦ ೦೦೦

ಗಾಂಧೀ ಜಿನ್ನರ ಆಯುಧಗಳೆಂದರೆ ಅವರವರ ಅಭಿಪ್ರಾಯ ಯುದ್ಧಕ್ಕಾಗಿ ಆ ಆಯುಧಗಳನ್ನು ಬಿಟ್ಟು ಬನ್ನಿರೆಂದು ಕರೆಯುವದು ಎಲ್ಲಾದರೂ ಉಂಟೇ?!

೦೦೦ ೦೦೦ ೦೦೦

ಇಲ್ಲವೇ ಸಮಜಾಯಿಸಿಕೊಳ್ಳಲು ಅಲ್ಲಿಯ ಯುದ್ಧಕ್ಕಿಂತ ಇಲ್ಲಿಯ ಯುದ್ಧ ಸುಲಭವೆಂದು ಅರುಂಡೇಲರು ಹೇಗೆ ತಿಳಿದರು?

ಅಮೇರಿಕವೂ ಭರದಿಂದ ಯುದ್ಧ ಸಂಗ್ರಹ ಮಾಡುತ್ತಿದೆ 'ಆಕ್ರಮಣಗಾರರು ಲೋಕದ ಒಬ್ಬನೇ ಒಬ್ಬ ಮನುಷ್ಯನನ್ನು ಬಿಡುವಂತಿಲ್ಲ' ಎಂದು ಹೇಳಿದ ಪ್ರೆಸಿಡೆಂಟರು ಸುಮ್ಮನೆ ಕುಳಿತಾರೆ?

೦೦೦ ೦೦೦ ೦೦೦

ಈ ಸಂಗ್ರಹ ಕಾರ್ಯದಲ್ಲಿ ಅತಿ ಮುಖ್ಯವಾದುದೆಂದರೆ ಅನ್ಯ ದೇಶಗಳಲ್ಲಿರುವ ಸ್ವದೇಶೀಯರ ಆಮದು. ಇಟೆಲಿ, ಟರ್ಕಿಗಳಲ್ಲಿರುವ ಅಮೇರಿಕನರು ಅಲ್ಲಿಂದ ಹೊರಟು ಬರಬೇಕೆಂದು ಎಚ್ಚರಿಕೆಹೋಗಿದೆ.

೦೦೦ ೦೦೦ ೦೦೦

ಗಂಟುಮೂಟೆ ಕಟ್ಟಿಕೊಂಡು ಅಮೇರಿಕನರು ಸಾವಿರ ಸಂಖ್ಯೆಯಲ್ಲಿ ಹಡಗ ಹತ್ತಿದ್ದಾರೆ. ಎಲ್ಲರೂ ಅಮೇರಿಕದಲ್ಲಿ ಜಮೆಯಾಗುವರು.

೦೦೦ ೦೦೦ ೦೦೦

ಒಬ್ಬನನ್ನೂ ಬಿಡದ ಆಕ್ರಮಣಗಾರರನ್ನು ಪರಾಜಯಗೊಳಿಸುವುದೆಂದರೆ ಹೀಗೆ. ತನ್ನವರೆಲ್ಲರನ್ನೂ ಅಮೇರಿಕಾಧ್ಯಕ್ಷರು ತಪ್ಪಿಸಿಬಿಟ್ಟರು!

ಟರ್ಕಿ ಪತ್ರಿಕೆಗಳು ಉಳಿದಿರುವ ಸಣ್ಣ ರಾಷ್ಟ್ರಗಳಿಗೆ ಎಚ್ಚರಿಕೆಕೊಡುತ್ತಿವೆ: ಹೊಲ್ಲೇಂಡು ಬೆಲ್ಜಿಯಮುಗಳಿಂದ ಪಾಠ ಕಲಿಯಿರಿ. ಕೂಡಲೇ ಮಿತ್ರರಾಷ್ಟ್ರಗಳೊ ಒಪ್ಪಂದಮಾಡಿಕೊಳ್ಳಿರಿ ಎಂದು.

೦೦೦ ೦೦೦ ೦೦೦

ಇನ್ನು ಕಲಿಯಲಿಕ್ಕಿರುವವರ ಸಂಖ್ಯೆ ಕಡಿಮೆ; ಕಲಿಸು ನಾಸಾದವರು ಹೆಚ್ಚಿಗೆ.

೦೦೦ ೦೦೦ ೦೦೦

ಉಳಿದಿರುವವರು ಹೊಲ್ಲೇಂಡು ಬೆಲ್ಜಿಯಮುಗಳು ಕಲಿತ ಪಾಠವನ್ನು ಎಂದೆಂದಿಗೂ ಮರೆಯದಂತಾಗಿದೆ

೦೦೦ ೦೦೦ ೦೦೦

ಹೀಗೆ ಒಂದು ಪಾಠ ಪ್ರವಚನದಲ್ಲಿದ್ದವರಿಗೆ ಹೊಸ ಪಾಠಕೊಡಲು ಟರ್ಕಿ ಪತ್ರಿಕೆಗಳು ಮುಂದೆಬಂದಿವೆ.

೦೦೦ ೦೦೦ ೦೦೦

ಕಲಿಯುವವರಿಗಿಂತ ಕಲಿಸುವವರ ಸಂಖ್ಯೆ ಈ ರೀತಿ ಹೆಚ್ಚಾದುದರಿಂದಲೇ ಲೋಕವಿಂದು ಹಲವು ಪಾಠಗಳನ್ನು ಕಲಿಯುವಂತಾಗಿದೆ.

೦೦೦ ೦೦೦ ೦೦೦

ನಮ್ಮ ವಿದ್ಯಾ ಇಲಾಖೆಯವರು ಈ ವರ್ಷ ಶಾಲೆಗೆ ತಂದಿದ್ದ ಗ್ರೇಂಟ್ ಕಡಿತದಂತಹ ಕತ್ತರಿ ಬೀಳಬೇಕು–ಈ ಗೊಂದಲ ನಿಲ್ಲಬೇಕಾದರೆ!

ಫ್ರಾನ್ಸಿನ ಗಡಿಯೊಳಗೆ ಜರ್ಮನ್ ಸೇನೆ ನುಗ್ಗಿದ್ದೇನೋ ಹೌದು. ಒಳಗೆ ಹೊಕ್ಕ ಜಾಜೀ ವಿಮಾನಗಳು ಯುದ್ಧದಿಂದ ತಪ್ಪಿಸಿಕೊಳ್ಳಲು ನೋಡುವುದಂತೆ–ಯಾಕೆ?

೦೦೦ ೦೦೦ ೦೦೦

ನೋರ್ವೆ, ಹೊಲ್ಲೆಂಡ್, ಬೆಲ್ಜಿಯಮುಗಳ ಮೇಲೆ ಹಾರಾಡಿದ್ದ ಅವುಗಳಿಗೆ ಅಲ್ಲಿಯ ಗಾಳಿ ತಾಗಿರಬೇಕು; ತಟಸ್ಥವಾಗಿರಲು ಮನಸಾಯಿತೇನೊ!

೦೦೦ ೦೦೦ ೦೦೦

ಹಾಗಲ್ಲ; ಅವುಗಳಿಗೆ ಪೆಟ್ರೋಲಿನ ಅಭಾವವಿತ್ತಂತೆ. ಪೆಟ್ರೋಲು ಹಾಕದೆ ಸಿಕ್ಕಾಬಟ್ಟೆ ಹೊಡೆಯಲು ಆಗುವದಿಲ್ಲ.

೦೦೦ ೦೦೦ ೦೦೦

ಆದರೆ ಜರ್ಮನಿಯಲ್ಲಿ ಕಾಂಗ್ರೆಸ್ ಸರಕಾರವಿಲ್ಲ; ಅಲ್ಲಿ ಮದ್ಯಪಾನ ನಿಷೇಧ ಕಾನೂನು ಜಾರಿಯಲ್ಲಿಲ್ಲ. ವಿಮಾನಗಳು ಮತ್ತೊನ್ನು ಪೆಟ್ರೋಲು ಕುಡಿದುಕೊಂಡು ಬರಬಹುದು.

೦೦೦ ೦೦೦ ೦೦೦

ಆ ಮಾತು ಬೇರೆ ಒಮ್ಮೆ ತಪ್ಪಿಸಿಕೊಳ್ಳಲು ನೋಡಿದ್ದು ಹೌದಷ್ಟೆ. ಈ ರೀತಿಯಲ್ಲಾದರೂ ನಾಜೀ ವಿಮಾನಗಳಿಗೆ ಹಿಂಜರಿಯುವ ದುರ್ವಿಧಿ ಬರುತ್ತದಲ್ಲಾ ಎನ್ನುವುದೊಂದು ಸಂತೋಷಕರ ವಾರ್ತೆ.

—ಪಂಡಿತ.

ಇಂಡಿಯನ್ ಮ್ಯೂಚುಯಲ್
ಲೈಫ್ ಅಸೋಸಿಯೇಷನ್ ಲಿಮಿಟೆಡ್

ಹೆಡ್ ಆಫೀಸ್:- ನಂ. ೧೦, ಮೌಂಟ್ ರೋಡ್, ಮದರಾಸು

— ಡೈರೆಕ್ಟರುಗಳ ಬೋರ್ಡ್ —

ಸರ್ ವೇಪಾ ರಮೇಶಂ, ಕೆ. ಟಿ ರಿಟೈರ್ಡ್ ಜಡ್ಜ್, ಮದರಾಸ್ ಹೈಕೋರ್ಟ್, ಮದರಾಸು.
ರಾವ್ ಬಹದ್ದೂರ್ ಮ|| ಕೆ. ಬಲರಾಮ ಅಯ್ಯರ್, ಬಿ.ಎ. ರಿಟೈರ್ಡ್ ಅಕೌಂಟೆಂಟ್ ಜನರಲ್ ಮದರಾಸ್.
ಮ|| ಸಿ. ಕೃಷ್ಣಮೂರ್ತಿ ಮೊದಲಿಯಾರ್ ಲ್ಯಾಂಡ್ ಲಾರ್ಡ್, ಸಿಯಾಲಿ.
ದಿವಾನ್ ಬಹದ್ದೂರ್ ಮ|| ಎ. ವಿ. ರಾಮಲಿಂಗ ಅಯ್ಯರ್, ಮದರಾಸ್ ಸರಕಾರದ ರಿಟೈರ್ಡ್ ಚೀಫ್ ಇಂಜನಿಯರು.

ಮ|| ಟಿ ಎಸ್. ನಾರಾಯಣ ಸ್ವಾಮಿ, ಎಂ ಎ, ಅಸಿಸ್ಟೆಂಟ್ ಕೆಮಿಸ್ಟ್, ಬಕಿಂಗ್‌ಹ್ಯಾಂ ಮಿಲ್ಸ್, ಮದರಾಸ್.
ದಿವಾನ್ ಬಹದ್ದೂರ್ ಮ|| ವಿ. ಭಾಷ್ಯಂ ಅಯ್ಯಂಗಾರ್, ರಿಟೈರ್ಡ್ ಮದರಾಸ್ ಹೈಕೋರ್ಟ್ ಜಡ್ಜ್.
ಮ|| ಸಿ. ಎಂ. ಶ್ರೀನಿವಾಸನ್, ಬಿ. ಎ., ಬಿ. ಎಲ್. (ಎಕ್ಸ್–ಅಫೀಷಿಯೋ) ಮದ್ರಾಸ್.

ಮ್ಯಾನೇಜರ್:–ಮ|| ಎಂ. ನಟೇಶನ್, ಎಂ.ಎ.

ಚೀಫ್ ಮೆಡಿಕಲ್ ಆಫೀಸರ್:– ಲೆ. ಕ|| ವಿ. ಮಹದೇವನ್, ಐ. ಎಂ ಎಸ್.

ಬ್ಯಾಂಕರುಗಳು:— ಇಂಡಿಯನ್ ಬ್ಯಾಂಕ್ ಲಿಮಿಟೆಡ್, ಮದರಾಸ್. ಮದರಾಸ್ ಪ್ರೋವಿನ್ಷಿಯಲ್ ಕೋ–ಅಪರೇಟಿವ್ ಬ್ಯಾಂಕ್ ಲಿಮಿಟೆಡ್. ಇಂಡೊ–ಕಮರ್ಷಿಯಲ್ ಬ್ಯಾಂಕ್ ಲಿಮಿಟೆಡ್, ದಿ ಬ್ಯಾಂಕ್ ಆಫ್ ಮೈಸೂರು, ಲಿಮಿಟೆಡ್.

ಬ್ರಾಂಚುಗಳು:–ಕಲ್ಕತ್ತ, ಲಾಹೋರ್, ಜೋಧಪೂರ್, ಮಧುರೆ, ಕಲ್ಲಿಕೋಟೆ, ಬೆಜವಾಡ, ಅಲಹಾಬಾದ್ ಬೊಂಬಾಯಿ, ಅಹಮದಾಬಾದ್, ಪೂನಾ.

ಮೈಸೂರು ಸರಕಾರದ ಹೊಸ ವಿಮಾ ಕಾನೂನನ್ನು ಅನುಸರಿಸಿ ಕಂಟ್ರೋಲರವರಲ್ಲಿ ಠೇವಣಾತಿ ಮೊಬಲಗು ಇಡಲಾಗಿದೆ.

ಕರ್ನಾಟಕದಲ್ಲೆಲ್ಲಾ ಯೋಗ್ಯರಾದ ಮತ್ತು ಪ್ರತಿಭಾಶಾಲಿಗಳಾದವರಿಂದ ಏಜನ್ಸಿಗಳಿಗೆ ಅರ್ಜಿಗಳು ಸ್ವೀಕರಿಸಲ್ಪಡುವುವು.

ಉತ್ತಮ ಕೆಲಸಮಾಡುವವರಿಗೆ ಒಳ್ಳೇ ಷರತ್ತುಗಳು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಮ|| ಸಿ ಎಂ. ಶ್ರೀನಿವಾಸನ್, ಬಿ. ಎ, ಬಿ. ಎಲ್. ಜನರಲ್ ಸೆಕ್ರೆಟರಿ.
ಇಂಡಿಯನ್ ಮ್ಯೂಚುಯಲ್ ಲೈಫ್ ಅಸೋಸಿಯೇಷನ್ ಲಿಮಿಟೆಡ್,
10 ಮೌಂಟ್‌ರೋಡ್, ಮದ್ರಾಸ್.

ಟಿ. ಕರುಣಾಕರ ಹೆಗ್ಡೆ ಇನ್ಸ್‌ಪೆಕ್ಟರ್ ಆಫ್ ಏಜನ್ಸೀಸ್,
ಹರಿಕರ ಬ್ರೋಸ್, ಉಡುಪಿ.

Bonus: Endowment Rs. 15. Whole life Rs. 18. Last valuation.

ಈ ವಾರದ ಭವಿಷ್ಯ

ತಾರೀಕು 23-5-1940ರಿಂದ 30-5-1940ರ ವರೆಗೆ

ಮೇಷ—ಒಂದಲ್ಲೊಂದು ಕಾರಣದ ಮನೋವ್ಯಥೆಯು ನಿಮ್ಮನ್ನು ಸದಾ ಪೀಡಿಸುವುದರಿಂದ ನಿಶ್ಚಿಂತರಾಗಿ ಒಂದು ದಿನವೂ ನಿದ್ರಿಸಲಾರಿರಿ. ಎಷ್ಟೆಷ್ಟು ನೀವು ಹೆಚ್ಚಾಗಿ ದುಡಿಯುವಿರೋ ಅಷ್ಟೇ ನಿಮ್ಮ ಖರ್ಚು ಬೆಳೆಯುತ್ತಾ ಹೋಗುವುದು. "ಇದಮೇವ ಸಲ ದ್ವಿತ್ವಂ ಆಯಾದಲ್ಪತರೋ ವ್ಯಯಃ" ಎಂಬ ನೀತಿವಾಕ್ಯದಂತೆ ಉತ್ಪತ್ತಿಗಿಂತ ಖರ್ಚನ್ನು ಕಡಿಮೆ ಮಾಡಿ ಅಪವ್ಯಯವಾಗಿ ಸಂಗ್ರಹಿಸಿದ ಹಣ ಬುದ್ಧಿವಂತರ ಲಕ್ಷಣ. ವ್ಯಾಪಾರ ವ್ಯವಹಾರಾದಿಗಳಲ್ಲಿ ಒಳ್ಳೇ ಚತುರರಾದ ನಿಮಗೆ ರಾಜಕೀಯ ಕ್ಷೇತ್ರದಲ್ಲಿ ಅಸ್ವಾರ್ಥವು ಸಿದ್ಧಿಸುವಂತಿಲ್ಲ. ನೇತ್ರರೋಗದಿಂದ ಪೀಡಿಸಲ್ಪಡುವಿರಿ. ತಾ. 26ರಿಂದ 29ರವರೆಗೆ ಬಹುಮುಖದಿಂದ ಧನವನ್ನು ಸಂಪಾದಿಸುವಿರಿ. ಇಷ್ಟಸಿದ್ಧಿಯ ಜೊತೆಗೂ ಮಿತ್ರಸಮಾಗಮದಿಂದಲೂ ಸುಖದಿಂದ ಕಾಲಕಳೆಯುವಿರಿ.

ವೃಷಭ— "ಮರಣಿಕ್ರಮಾ ಕಾಲಗತಿಃ" ಕಾಲಗತಿಯನ್ನು ಅತಿಕ್ರಮಿಸಲು ಸಮರ್ಥನಿಂದಲೂ ಅಸಮರ್ಥನಿಂದಲೂ ಎಷ್ಟರಲ್ಲೂ ಶಕ್ಯವಲ್ಲವು. ಬರತಕ್ಕ ಸುಖದುಃಖಗಳನ್ನು ಅನುಭವಿಸಲೇ ಬೇಕು. ಸದ್ಯ ನಿಮ್ಮ ರಾಶಿಗೆ ದ್ವಿತೀಯದ ಶುಕ್ರ ಏಕಾದಶದ ಕೇತು ಇವರಲ್ಲದೆ ಇತರರೆಲ್ಲರೂ ಅನಿಷ್ಟಸ್ಥಾನದಲ್ಲಿರುವುದರಿಂದ ನಿಮ್ಮ ಪಾಂಡಿತ್ಯವಾಗಲೀ ಪರಾಕ್ರಮವಾಗಲೀ ಎಳ್ಳಷ್ಟೂ ಬೆಳಗಲಾರವು. ನಾನಾ ರೀತಿಯಿಂದ ದೇಹಪೀಡೆಯುಂಟಾಗುವುದು. ಮಾರ್ಗದಲ್ಲಿ ಅನೇಕ ವಿಧದ ಕಷ್ಟನಷ್ಟಗಳಿಗೆ ಗುರಿಯಾಗುವಿರಿ. ಧನವ್ಯಯಕಾರಿಗಳಾದ ಅನೇಕ ಅನರ್ಥಗಳೂ ಶೋಕಸೂಚಕಗಳೂ ನಿಮ್ಮನ್ನು ನೆರಳಿನಂತೆ ಹಿಂಬಾಲಿಸುವವು. ಆದರೂ ಮುಂದಿನ ಮೂರು ದಿನಗಳಲ್ಲಿ ಸದ್ಗ್ರಹ ಬಲದಿಂದ ಕುಟುಂಬ ಸುಖ ಧನಲಾಭಗಳುಂಟಾಗುವವು.

ಮಿಥುನ—ನಿಮ್ಮ ಸಂಸಾರರಥವು ಮುಂಚಿನಷ್ಟು ನಿರಾತಂಕವಾಗಿ ಈಗ ಮುಂದರಿಯದು. ಮಧ್ಯೆ ಮಧ್ಯೆ ಎಡರುತೊಡರುಗಳು ಮಾರ್ಗಕ್ಕೆ ಅಡ್ಡಲಾಗಿ ಬರುತ್ತಿವೆ. ಶತ್ರುಗಳ ಉಪಟಳವು ದಿನೇ ದಿನೇ ಹೆಚ್ಚುತ್ತಿದೆ. ಕೆಲವು ಕಾರ್ಯಗಳಲ್ಲಿ ಅಪಜಯವು ಪ್ರಾಪ್ತವಾಗುವಂತಿವೆ. ನ್ಯಾಯಾನ್ಯಾಯವನ್ನು ವಿಮರ್ಶಿಸಲು ಶಕ್ತರಾದ ನೀವು ಅಡ್ಡದಾರಿಯನ್ನು ಹಿಡಿಯದೆ ನೇರಾ ಮುಂದುವರಿದರೆ ದೈವವು ನಿಮಗೆ ಬಹಳ ಸಹಾಯಕಾರಿಯಾದೀತು. ವ್ಯಾಪಾರೀ ಜನರೂ ಕೇಬಲವರ್ಗದವರೂ ಸೇವಕವೃತ್ತಿಯವರೂ ತಕ್ಕಮಟ್ಟಿಗೆ ಸುಖಬಂದಲೀ ಕಾಲಕಳೆಯುವರು. ಆಕಸ್ಮಿಕವಾಗಿ ದೇಹಾಪಾಯವು ಪ್ರಾಪ್ತವಾಗುವಂತಿದೆ. ಜಾಗರೂಕರಾಗಿರಿ. ತಾ. 23, 24, 25, 30 ಈ ದಿನಗಳು ಇಷ್ಟಸಾಧಕಗಳಾಗಿವೆ.

ಕರ್ಕಾಟಕ— "ಉದ್ಯೋಗಂ ಪುರುಷ ಲಕ್ಷಣಂ" ಎಂಬ [illegible] ವ್ಯರ್ಥಗೊಳಿಸದೆ ಉದ್ಯೋಗದಲ್ಲಿ ಸಮಯವನ್ನು ವ್ಯಯಿಸುವುದು ಪುರುಷರ ಲಕ್ಷಣವು. ಅಂತೆಯೇ ನೀವೂ ಕೂಡ ಕಾಲವನ್ನು ವ್ಯರ್ಥ ಕಳೆಯುವವರಲ್ಲ. ಆದರೂ ಮಾಡತಕ್ಕ ಕಾರ್ಯಗಳು ಯುಕ್ತವಾದವುಗಳೋ ಅಯುಕ್ತವಾದವುಗಳೋ ಎಂಬ ವಿಚಾರವನ್ನು ಮಾಡದೆ ಹೆಚ್ಚಿನ ಹಣವನ್ನು ನಿರರ್ಥಕವನ್ನಾಗಿ ಮಾಡುವಿರಿ. ವೃತ್ತಿ, ವ್ಯಾಪಾರ, ನೌಕರಿ ಈ ಭಾಗಗಳಲ್ಲಿ ತಕ್ಕಮಟ್ಟಿಗೆ ಯಶೋಲಾಭವಿರುವುದು. ದುರ್ಜನ ಸಂಸರ್ಗದಿಂದ ಹೆಚ್ಚಿನ ನಷ್ಟಕ್ಕೂ ನಿಂದೆಗೂ ಗುರಿಯಾಗುವಿರಿ. ಪಿತ್ತವಿಕಾರದಿಂದ ಆರೋಗ್ಯದಲ್ಲಿ ವ್ಯತ್ಯಾಸ ತಂದೀತು. ತಾ. 23ರಿಂದ 27ರ ವರೆಗೂ ಶತ್ರುಕ್ಷಯ, ಧನಲಾಭ ಗೃಹಸುಖಾದಿಗಳು ಪ್ರಾಪ್ತವಾಗುವಂತಿವೆ.

ಸಿಂಹ—ಶನಿ ರಾಹು ಕೇತುಗಳನ್ನು ಬಿಟ್ಟರೆ ಮಿಕ್ಕವರೆಲ್ಲರೂ ನಿಮ್ಮ ಉನ್ನತಿಗೆ ಸಕಲ ವಿಧದಿಂದಲೂ ನೆರವಾಗುವರು. ಭಾಗ್ಯದಲ್ಲಿ ಬೃಹಸ್ಪತಿ, ಕರ್ಮದಲ್ಲಿ ರವಿ ಬುಧ, ಲಾಭದಲ್ಲಿ ಕುಜ ಶುಕ್ರರು ಈ ರೀತಿಯಲ್ಲಿ ಗ್ರಹಸ್ಥಿತಿಯಿರುವಲ್ಲಿ ನಿಮ್ಮ ಅದೃಷ್ಟವನ್ನು ಕೇಳಬೇಕೇ? ಅರ್ಧಮರ್ಧವಾಗಿ ಉಳಿದಿರುವ ಕಾರ್ಯಗಳು ಶೀಘ್ರದಲ್ಲೇ ಪೂರ್ತಿಯಾಗಲಿವೆ, ಬಹುಮುಖದಿಂದ ಧನವು ನಿಮ್ಮ ಕೈಸೇರಿ ಅಧಿಕ ಭಾಗವು ಉತ್ತಮ ಸ್ಥಿತಿಗೆ ಬರಲಿದೆ. ಅಲ್ಪಾಯಾಸದಿಂದ ಮಹತ್ಕಾರ್ಯವನ್ನು ಸಾಧಿಸುವಿರಿ. ಕೀರ್ತಿಭಾಜನರಾಗುವಿರಿ. ನಿಮ್ಮ ಮನಸ್ಸು ಅಧರ್ಮದ ಕಡೆಗೆ ಸೆಳೆಯಲ್ಪಡುವುದರಿಂದ ಸ್ವಲ್ಪ ಧನವ್ಯಯ ಪ್ರಾಪ್ತವಾಗಲಿದೆ. ತಾ. 26ರಿಂದ 29ರ ವರೆಗೂ ಇಷ್ಟವು ಅನಾಯಾಸವಾಗಿ ಸಿದ್ಧಿಸಲಿದೆ.

ಕನ್ಯಾ— ನಿಮ್ಮ ದುರ್ದೈವವು ಮೂರ್ತಿವತ್ತಾಗಿ ನಿಮ್ಮೆದುರಿಗೆ ಬಂದು ನಿಂತಿದೆಯೆಂದರೂ ಅತಿಶಯವೆನಿಸದು. ಸಕಲ ಗ್ರಹಗಳೂ (ಮುಂದಿನ ಮೂರು ದಿನಗಳ ಚಂದ್ರನನ್ನು ಬಿಟ್ಟು) ನಿಮಗೆ ಪ್ರತಿಕೂಲವಾಗಿ ನಿಂತಿರುವ ಈ ಕಾಲದಲ್ಲಿ ಯಾರಿಂದ ಎಂಥ ಕಾಲಕ್ಕೆ ನಿಮಗೆ ಅನರ್ಥಗಳೊದಗುವವೆಂಬುದು ಹೇಳಲಾಗದು. ಮನೆಯವರಾಗಲೀ ಹೊರಗಿನವರಾಗಲೀ ನಿಮಗೆ ಸಹಾಯವೂ ಸಿಗದು. ಸುಖದುಃಖಗಳ ಭಾಜನವಾದ ಶರೀರವು ಸದಾ ರೋಗದಿಂದಲೂ ದುರ್ವ್ಯಸನದಿಂದಲೂ ಪೀಡಿಸಲ್ಪಡುವುದು. ಸ್ವಕೀಯರೆಂಬವರೇ ನಿಮ್ಮ ಭಾಗಕ್ಕೆ ಇಲ್ಲದಂತಾಗುವರು. ಶತ್ರುಜನರು ಶಕ್ತಿ ಮೀರಿ ಉಪದ್ರವಿಸುವರು. ಹಣದ ಅಡಚಣೆಯಿಂದ [illegible] ಇದೇ ಮುಂದಿನ 3 ದಿನಗಳಲ್ಲಿ ಹೆಚ್ಚಿನ ಕಷ್ಟಕ್ಕೆ ಗುರಿಯಾಗಲಾರಿರಿ.

ತುಲಾ—ದುರ್ಭಾಗ್ಯಕರ ಶುಭದೃಷ್ಟಿ ಪಾಪಿಗಳ ಪಾಪದೃಷ್ಟಿ ಇವೆರಡೂ ಸಮಬಲವಾಗಿ ನಿಮಗಿರುವ ಕಾರಣ ಸಜ್ಜನವೃಂದಕ್ಕೆ ಇಷ್ಟಾಧಿಕ್ಯವೂ ದುರ್ಜನರ ಭಾಗಕ್ಕೆ ಅಶುಭವೂ ಹೆಚ್ಚಾಗಿ ಸಂಭವಿಸುವಂತಿದೆ. ಬಂಧು ಮಿತ್ರರ ಸಹಕಾರವು ಚೆನ್ನಾಗಿರುವುದು. ಕಷ್ಟಕ್ಕೆ ತಕ್ಕುದಾದ ಫಲವೂ ದೊರೆಯುವುದು. ನೌಕರಿ ವ್ಯಾಪಾರಾದಿಗಳಲ್ಲಿ ಇಷ್ಟಸಿದ್ಧಿಯು ಅನಾಯಾಸದಿಂದ ಲಭಿಸುವುದಾದರೂ, ದೇಹಪೀಡೆಯು ಶಾರೀರಕ ಸುಖವನ್ನು ಅಪಹರಿಸುವುದು. ಗೃಹಕಲಹದಿಂದ ಮನಸ್ಸಿಗೆ ನೆಮ್ಮದಿಯಿರದು. ಆಕಸ್ಮಿಕವಾಗಿ ಪ್ರಾಪ್ತವಾಗತಕ್ಕ ಪ್ರವಾಸಾದಿಗಳು ವ್ಯರ್ಥ ಧನವ್ಯಯಕ್ಕೆ ನಿಮ್ಮನ್ನು ಗುರಿಮಾಡಲಿವೆ. ಆರೋಗ್ಯ ವಿಚಾರದಲ್ಲಿ ಹೆಚ್ಚಿನ ಗಮನವಿಡುವುದೊಳ್ಳಿತು. ತಾ 26ರಿಂದ 29ರ ವರೆಗೆ ಆಪ್ತರಲ್ಲಿ ಮನಸ್ತಾಪ, ಕಾರ್ಯವಿಘ್ನ ಪ್ರವಾಸಗಳು ಸಂಭವಿಸುವವು.

ವೃಶ್ಚಿಕ— ದುಡಿತದ ಫಲವೂ ಕರ್ಮಶೇಷವೂ ಸಮಾನವಾಗಿದ್ದಲ್ಲಿ ಮಾತ್ರ ನೀನು ದುಡಿದ ಫಲವನ್ನು ಅನುಭವಿಸಲರ್ಹನಾಗುವೆನು. ಸದ್ಯ ನಿಮ್ಮ ದುಡಿತಕ್ಕೆ ಕರ್ಮಶೇಷದ ಪ್ರತಿಬಂಧಕವಿರುವುದರಿಂದ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವೆಂಬ ಗಾದೆಯಂತಾಗುವುದು. ದಿನೇ ದಿನೇ ಶತ್ರುಜನವೃಂದವು ಬೆಳೆಯುತ್ತಾ ಹೋಗುವುದು. ಹಲವೇಳೆ ಮಾನಹಾನಿಯ ಪ್ರಸಂಗವೊದಗಬಹುದು. ಶರೀರದಲ್ಲಿ ಹುಣ್ಣು, ಕಜ್ಜಿ, ಗಾಯಾದಿಗಳು ಉಂಟಾಗುವವು. ಆದರೂ ಕಷ್ಟಪಟ್ಟು ಸಂಸಾರದ ಉನ್ನತಿಗೆ ಬೇಕಾದಷ್ಟು ದುಡಿಯುವಿರಿ, ಗುರುಹಿರಿಯರ ಪ್ರಕೋಪದಿಂದಾಗಿ ಕಾರ್ಯಕ್ಕೆ ವಿಘ್ನವಿಪತ್ತುಗಳು ಅಧಿಕವಾಗುವವು. ತಾ. 26-27 ಹೊರತಾಗಿ ಇತರ ದಿನಗಳೆಲ್ಲವೂ ಅನಿಷ್ಟಕಾರಿಗಳಾಗಿ ಪರಿಣಮಿಸಬಹುದು.

ಧನು—ಆದಿಯು ಮುಂದಿದೆ ಸ್ವರ್ಗ, ಆದಿಯು ಹಿಂದಿದೆ ನರಕ ಎಂಬುದು ಆರ್ಯರ ವಚನವಿರುವುದು. ವರ್ತಮಾನದಲ್ಲಿ ನಿಮಗೆ ಜನಬಲವೂ ಧನಬಲವೂ ಸಾಕಷ್ಟಿರುವುದರಿಂದ ಪ್ರಯತ್ನಿಸಿದ ಇಷ್ಟಸಿದ್ಧ ಕಾರ್ಯವು ಕೈಗೂಡುವುದರಲ್ಲಿ ಸಂದೇಹವಿಲ್ಲ. ದೇಹಾರೋಗ್ಯವು ತಕ್ಕಮಟ್ಟಿಗೆ ಉತ್ತಮವಿರುವುದು. ವ್ಯಸನಗಳ ನಿವಾರಣೆಯಾಗುವವು. ಶತ್ರುಜನರ ಪೀಡೆಯಿಂದ ಮುಕ್ತರಾದ ನಿಮಗೆ ರಾಜಕೀಯ ಸಾಮಾಜಿಕ ಕಾರ್ಯಗಳಲ್ಲಿ ವಿಜಯವಾಗಲಿದೆ, ನೌಕರಿ ಭಾಗದಲ್ಲಿ ಉನ್ನತಿಯನ್ನು ಹೊಂದುವಿರಿ. ಆದರೆ ಸ್ತ್ರೀಯರ ಪೀಡೆಯು ಸದಾ ನಿಮಗಿರುವುದು. ನಾನಾ ರೀತಿಯ ಅಪಶಕುನಗಳು ಸ್ತ್ರೀಯರಿಂದಲೇ ಪ್ರಾಪ್ತವಾಗುವಂತಿವೆ. ಗೃಹದಲ್ಲಿ ಸಿಕ್ಕ ಜಗಳ ತಪ್ಪದು. ತಾ. 26, 27, 30 ಈ ದಿನಗಳಲ್ಲಿ ದೌರ್ಬಲ್ಯವು ಉದರ ರೋಗಾದಿಗಳು ಕಂಡು ಬರಲಿವೆ.

ಮಕರ— ಧನಮಾನಗಳನ್ನು ಪಡೆಯಬೇಕೆಂಬ ಉತ್ಕಟೇಚ್ಛೆಯು [illegible] ಶತ್ರುಜನವನ್ನು [illegible] ಸಾಮರ್ಥ್ಯಗಳು ನಿಮಗಿದ್ದರೂ ಆಪ್ತಬಂಧುಗಳೆಂದೆನಿಸುವವರಿಂದ ಸಮಾಜಬಂಧುಗಳೇ ನಿಮ್ಮ ಅಭಿವೃದ್ಧಿಗೆ ಬೇಕಾದ ಅಡೆ ಮಾಡುತ್ತಿರುವರು. ಆದಕಾರಣ ನಿಮ್ಮ ಮನೋರಥಗಳು ಈಡೇರವು. ವಿಷಯ ಚಾಪಲ್ಯಕ್ಕೆ ಸಿಲುಕಿ ಧನವ್ಯಯಕ್ಕೂ ದೇಹಪೀಡೆಗೂ ಗುರಿಯಾಗುವಿರಿ. ಪುತ್ರರೂ ಕಳತ್ರರೂ ಕಲಹಪ್ರಿಯರಂತೆ ಸದಾ ಜಗಳಾಡುವುದರಿಂದ ಮನಸ್ಸಿನಲ್ಲಿ ಅಶಾಂತಿಯು ನೆಲೆಮಾಡುವುದು. ಉದ್ಯೋಗದಲ್ಲಿ ಅಸ್ಥಿರತೆಯುಂಟಾಗುವುದು. ಆದಾಯಕ್ಕಿಂತ ವ್ಯಯವಾಗುವುದರಿಂದ ಹಣದ ಅಡಚಣೆಯು ಹೆಚ್ಚುವುದು. ತಾ. 26, 27, 30 ಈ ಮೂರು ದಿನಗಳು ಇದ್ದುದರಲ್ಲಿ ಕ್ಷೇಮದಾಯಕವು.

ಕುಂಭ—ಸದ್ಯದ ಗ್ರಹಸ್ಥಿತಿಯಿಂದ ಈ ವಾರದಲ್ಲಿ ನಿಮಗೆ ಸಮಾನ ಆಯವ್ಯಯಗಳು ಹೆಚ್ಚಾಗಿ ಪರಿಣಮಿಸಲಿವೆ. ಅನಾರೋಗ್ಯದ ನಿಮಿತ್ತ ಮತ್ತು ಸಾಂಸಾರಿಕ ಆಪತ್ತಿನ ನಿಮಿತ್ತ ಹಣವನ್ನು ವ್ಯಯಿಸುವುದಾದರೂ ಕಷ್ಟಪಟ್ಟು ಬೆವರು ಸುರಿಸಿ ದುಡಿಯುವಿರಿ. ಕಷ್ಟಕ್ಕೆ ತಕ್ಕ ಫಲವನ್ನು ನೀವು ಹೊಂದುವಿರಿ. ಸಹೋದ್ಯೋಗಿಗಳ ಬೆಂಬಲವು ಚೆನ್ನಾಗಿರುವುದರಿಂದ ಯಶಸ್ಸು ಗಳಿಸಲಾರಿರಿ. ಕೆಲವೊಮ್ಮೆ ದುರ್ವಿಧಿಯಿಂದಾಗಿ ಕಾರ್ಯವು ಅನ್ಯಥಾ ಆಗುವ ಸಂಭವವಿದೆ. ಅನುದಿನದ ಖರ್ಚಿಗೆ ನಿಮಗಾವ ಭಾಗದಲ್ಲೂ ಕೊರತೆಯುಂಟಾಗದು, ರಾಜಕೀಯ ಮತ್ತು ಸಾರ್ವಜನಿಕ ಕಾರ್ಯಕ್ಕೆ ಇದು ಸಮಯವಲ್ಲ. ತಾ. 23, 24, 25, 28, 29 ಈ ದಿನಗಳು ಇಷ್ಟಸಾಧಕಗಳಾಗಿವೆ.

ಮೀನ—ನಿಮ್ಮ ಸ್ವಾಮಿಸ್ಥಾನವನ್ನು ಪ್ರಯಿಸುವ ಅಂಗಾರಕನು ಎಂದಿಗೂ ನಿಮ್ಮ ಮನಸ್ಸಿಗೆ ಶಾಂತಿಯನ್ನು ಕೊಡನು. ಒಂದಲ್ಲೊಂದು ರೀತಿಯ ಚಿಂತೆಯು ನಿಮಗೆ ಅನುದಿನವೂ ಪ್ರಾಪ್ತವಾಗುವುದು. ನಿಮ್ಮ ಪ್ರತಿಸ್ಪರ್ಧಿಗಳು ತಣ್ಣಗಾಗಿರುವುದರಿಂದ ನಿಮ್ಮ ಉದ್ಯೋಗಕ್ಕೆ [illegible]. ಮಿಂಚಿದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲವೆಂಬ ಗಾದೆಯಂತೆ ಅಧಿಕಾರಿಗಳಿಗೂ ನಿಮಗೂ ಉಂಟಾದ ಮನಸ್ತಾಪವು ತಾನಾಗಿಯೇ ಅಲ್ಪಕಾಲದಲ್ಲಿ ಸರಿಹೋಗುವುದು, ಅದಕ್ಕಾಗಿ ನೀವು ಬೇಸರಿಸಬೇಕಾಗಿಲ್ಲ. ಸಿಕ್ಕಿದ ಹಣವನ್ನು ಸಂಗ್ರಹಿಸುವುದು ನಿಮ್ಮಿಂದ ತತ್ಕಾಲದಲ್ಲಿ ಎಷ್ಟರಲ್ಲೂ ಸಾಧ್ಯವಾಗಲಾರದು. ಅಂತೂ ಅವಹೇಳನಕ್ಕೊಳಗಾಗಲಾರಿರಿ. ತಾ. 28, 29 ಮಾತ್ರ ಅನಿಷ್ಟಕಾರಿಯಾಗಿವೆ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ :

"ಗೊನೊಕಿಲರ್" (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇಂಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನವ **ಗೊನೊಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೊನೊಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಧಾತು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋರಿಯಾದಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಪೆಟಿ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ವಿಳಾಸವು ಡಾಕ್ಟರ್ ಡಿ. ಎನ್. ಜಸಾನಿ, ವಿಠ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೋ ಹೋಮ್ಯೋಪತಿಕ್ ಡಿಸ್ಪೆನ್ಸರಿ.

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಖರೀದಿಸುವ ಮೊದಲು ಲೇಬಲ್ ಗುರುತ ಸರಿಯಾದ ಗುರುತನ್ನು "ಗೊನೊಕಿಲರ್" ಹೆಸರನ್ನು ಗಮನಿಸಿರಿ

Sole Manufacturer Dr. D. N. JASANI, Vitalbhai Patel Road, BOMBAY 4

Degrees Books. Medicines.
Free H L M S, H M B H, M D etc Free Homeo Ay r-Unani-Naturo degrees by post also—Practioners also get soons Homeo Materiamedica Rs. 5. Homeo-Practice book Rs. 4, Insanity Cure Pills Rs. 10 Enclose 2 annas stamp:—

Principal, Indian Homeopathic Institute and society (Govt Regd)
P. O. MAHUVA, (Kathiawar Dt, India.

Sidh-Kalpa Kavach (Regd)
No 3 Rs 2, No 2 Rs. 5, No. 1 Rs 7, Special Rs 10 Extra Special Rs 17 for love, marriage health wealth. Ask any six questions with M O Re. 1/4 and get correct answers by return post Life read ing Rs. 2 No. V P P Send M O Free pamphlets. **Prof Dr. N. H Chhatbar,** P. O. Mahuva, (Kathiawar, India)

NAVAYUGA
Advertisement Tariff

1 Page	Rs. 25/-	per insertion	
½ „	Rs. 15/-	„	„
¼ „	Rs. 8/-	„	„
⅛ „	Rs. 5/-	„	„

Per Single inch col. Re. 1 „
Contract rates on application
Manager-**Navayuga UDIPI**

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Kanara Printing Works,
Hampankatte, **MANGALORE.**

ಕಿವುಡರೂ ಸಂಪೂರ್ಣವಾಗಿ ಕೇಳಬಹುದು.

ಬಧಿರತಾ ಹರಣ

ವಿಜ್ಞಾನದ ನವೀನ ಮತ್ತು
ವಿಚಿತ್ರ ಶೋಧ

ಕಿವಿಗೋರುವದು, ಸೋರುವದು, ಉರಿಯುವುದು, ಶಬ್ದ ಕೇಳುವುದು, ತುರಿಸುವದು, ಕಿವಿ ಅಥವಾ ಮೋರೆ ನೋವು, ಕರ್ಣ ಕುಹರದ ದೋಷ, ಶೀತ ಅಥವಾ ಜ್ವರದ ನಿಮಿತ್ತ ಕ್ವಿನೈನು ತೆಗೆದುಕೊಂಡದ್ದರಿಂದ ಉಂಟಾದ ಅರ್ಧ ಯಾ ಸಂಪೂರ್ಣ ಕಿವುಡತನವೇ ಮೊದಲಾದ ಎಂತಹ ಕರ್ಣರೋಗವಾಗಲಿ, ಅತ್ಯಂತ ಕಠಿಣ ಕಿವುಡುತನವಾಗಲಿ ನಮ್ಮ ವಿಚಿತ್ರ 'ಬಧಿರತಾಹರಣ' ಎಣ್ಣೆಯನ್ನು ಉಪಯೋಗಿಸುವದರಿಂದ ಖಾತ್ರಿಗುಣಹೊಂದುವದು. ಈ ಸಿದ್ಧೌಷಧಿಯಿಂದ ನೂರಾರು ಮಂದಿ ಕಿವುಡರು ಚೆನ್ನಾಗಿ ಶ್ರವಣ ಶಕ್ತಿಯನ್ನು ಪಡೆದರು. ಫಲಕಾರಿಯಾಗದಿದ್ದರೆ ಬೆಲೆಯನ್ನು ವಾಪಸು ಕೊಡಲಾಗುವದು. ಬಾಟ್ಲಿ 1ರ ಬೆಲೆ ರೂ 2, 3 ಬಾಟ್ಲಿಗಳಿಗೆ ರೂ. 5, ಟಪ್ಪಾಲು ಖರ್ಚು ಪ್ರತ್ಯೇಕ.

ವಿಳಾಸ:—ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.



ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು ಇದು ಮಧುರವಾಗಿದೆ ಆಶಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿ ನಿಮ್ಮ ಕೈಗೆ ಸೇರುವುದು. ಸೀಸೆ 1ಕ್ಕೆ 12 ಆಣೆ, ಟ.ಖ. 4 ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,

ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪೋ, ಉಡುಪಿ**

THE **MOOLKY BANK, LTD.,**
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.
ಭಂಗಾರ ವ ಸರಕಿನ ಈಡಿನ ಮೇಲೆ ನೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು
ನಿಯಮಿತ ರೇವಣಿ ತಿ ನೇಕಡ 5½ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ನೇಕಡ 3½ ವರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುವು.
ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Panja, — ಯಂ. ಆರ್. ಪೂಂಜ,
President & Manager, — ಪ್ರಸಿಡೆಂಟ್ ಮತ್ತು ಮೆನೇಜರ್.

DAIMONDS! **DAIMONDS!**

K. R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಂಟ್ವರ್ಪ್ ದಿಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಹೊಸ ಪುಸ್ತಕ! **ಸೆಲ್ಫ್ ಇಂಗ್ಲಿಷ್ ಸ್ಟಡಿ** ಈಗಲೇ ಪ್ರಿಂಟಾಯಿತು!

SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ **1-8-0**

ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವುದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ 3 ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕ ಇದುವರೆಗೆ ಯಾರೂ ತಯಾರಿಸಲಿಲ್ಲ. ದೊಡ್ಡ ಪುಸ್ತಕ. ಸ್ವಲ್ಪ ಪ್ರತಿಗಳು ಮಾತ್ರ ಇರುವವು. ಬೇಗನೇ ಬರೆಯಿರಿ. ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರ್‍ಯಾರೇ ಆಗಲಿ ಆರನೆತ್ತು ದಿವಸಗಳಲ್ಲಿ ಇಂಗ್ಲಿಷ್ ಕಲಿತುಕೊಳ್ಳಬಹುದು, ನೀವು ಇದಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ, ಮನೆಯಲ್ಲೇ ಈ ಪುಸ್ತಕ ಓದಿರಿ. ಇಂಗ್ಲೀಷ್ ಓದುಬರಹ ಎಲ್ಲಾ ಸುಲಭವಾಗಿ ಬರುತ್ತೆ. ಪುಸ್ತಕದ ಕ್ರಯ ರೂ 1—8—0.

Western Swiss Watch Co.
Book Sellers, Post Box No 68
G. P. O. MADRAS

ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ 68, ಮದರಾಸ್.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಪ್ರೊ. ಕೆ. ಹೊನ್ನಯ್ಯ ಶೆಟ್ಟರಿಂದ ಪೋಣಿಸಲ್ಪಟ್ಟ

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಮಾಲೆಯಿದು

ಮುಗುಳು

ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಅತ್ಯುಪಯುಕ್ತವಾದ ಸಚಿತ್ರ ಪದ್ಯ ಪುಸ್ತಕ.
(ಮದ್ರಾಸ್, ಬೊಂಬಾಯಿ, ಮೈಸೂರು ಟೆಕ್ಸ್ಟ್ ಬುಕ್ ಕಮಿಟಿಗಳಿಂದ ಮಂಜೂರಾಗಿವೆ.
ಅಭಿನಯಕ್ಕೆ, ನರ್ತನಕ್ಕೆ, ಕೋಲಾಟಕ್ಕೆ, ಎಲ್ಲಕ್ಕೂ ಅತ್ಯನುಕೂಲವಾದ,
ಮಕ್ಕಳ ವಯೋಗುಣಕ್ಕನುಗುಣವಾದ ಪದ್ಯಗಳಿಂದೊಡಗೂಡಿದೆ.

ಅಧ್ಯಾಪಕರೆಲ್ಲಾ ಇದನ್ನು ಮಕ್ಕಳ ಕೈಗೆ ಕೊಟ್ಟು, ಉಲಿದಾಡಿಸಿ,
ಹುರಿದುಂಬಿಸಬೇಕಾಗಿ ಪ್ರಾರ್ಥನೆ.

ಎರಡನೆಯ ಆವೃತ್ತಿ] [ಬೆಲೆ: ೦—೩—೬

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಕೆಳಗಿನವರಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇನ್ನುಮುಂದೆ ನಮ್ಮ
ವಿಲಿಯಮ್ಸ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ಪ್ರತ್ಯೇಕಮಾಡಲಾಗಿದೆ

ಅಮೃತಾಂಜನ ಡಿಪೋವಿನ ಪ್ರಿನರ್ಜಿಪ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಬದಲಾವಣೆಯಿಂದ ನಮ್ಮ ಔಷಧ ತಯಾರಿಯಲ್ಲಿ ಯಾತರ ವ್ಯತ್ಯಾಸವೂ ಆಗಿಲ್ಲವೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತೆ

ಸದ್ವೈದ್ಯಶಾಲಾ ನಂಜನಗೂಡು ಇವರ

"ಸುಬಲಾ" ಪಿತ್ತಸಂಕಟ, ಮಲಬದ್ಧತೆ ಇವುಗಳನ್ನು ಹೋಗಲಾಡಿಸಿ, ರಕ್ತ ವೃದ್ಧಿಪಡಿಸಿ, ಶರೀರಕ್ಕೆ ಬಲವನ್ನು ಕೊಡುತ್ತದೆ. ಬಹಳ ರುಚಿಯಾಗಿರುತ್ತದೆ.

ಬ್ರಾಂಚ್:-ರಥಬೀದಿ ಮಂಗಳೂರು



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

PRINTED BY S. S. KARANTH AT THE THULUNAD PRESS, UDIPI, AND PUBLISHED BY K. H. SHETTY AT NAVAYUGA OFFICE, UDIPI, S. INDIA.

tered No M 3618 30-5-1940.

ನವಯುಗ
NAVAYUGA

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಛೇರಿ:— ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

ಭದ್ರತೆಯಿಂದಲೂ, ಖಾತ್ರಿಯುಳ್ಳ ನಫೆ ಹಂಚಿಕೆಯಿಂದಲೂ, ಜಾಗ್ರತೆಯಾಗಿ ಹಕ್ಕುಗಳನ್ನು ಕೊಡುವುದರಿಂದಲೂ ಮತ್ತು ಉದಾರವಾದ ಜೀವವಿಮೆಯ ನಿಯಮಗಳಿಂದಲೂ ಈ ಸಂಸ್ಥೆಯು ಪ್ರಖ್ಯಾತಿಪಡೆದಿರುತ್ತದೆ.

ಪ್ರೊಫೆಸರ್ ಕೆ. ಬಿ ಮಾಧವ, ಎಂ ಎ, ಎಫ್ ಆರ್.ಎ ಎಸ್., ಎ ಐ.ಎ (ಲಂಡನ್) ಪ್ರೊಫೆಸರ್, ಮಹಾರಾಜ ಕಾಲೇಜು, ಮೈಸೂರು ಇವರ ಅಭಿಪ್ರಾಯ ಸಾರಾಂಶ.

"ಕಳೆದ ೧೦ ವರ್ಷಗಳಿಂದ ನಿಮ್ಮ ಸಂಸ್ಥೆಯು ಬಹಳವಾಗಿ ಮುಂದುವರಿಯುತ್ತಿರುವುದಲ್ಲದೆ ಕಳೆದ ಮೂರು ವರ್ಷಗಳಿಂದ ಆದಳಿತ ವೆಚ್ಚ, ಒತ್ತಿಯ ಸಲ, ರದ್ದಾದ ಪಾಲಿಸಿಗಳ ಸಂಖ್ಯೆ ಇವೇ ಮೊದಲಾದ ಜೀವವಿಮೆಯ ನಿಯಮಗಳನ್ನು ಉತ್ತಮಗೊಳಿಸಲು ಸಹಕಾರಿಯಾಗುವ ವಿಷಯಗಳಲ್ಲಿ ಹೊಂದಿರುವ ಅಭಿವೃದ್ಧಿಯು ತೃಪ್ತಿಕರವಾಗಿದೆ ... ...ಸೌಕರ್ಯ ಸೂಚಕವಾದ ಅಭಿವೃದ್ಧಿಗೆ ಉದಾಹರಣೆಯಾಗಿರುವ ಏಷ್ಯಾಟಿಕ್ಕಿನ ಅತ್ಯುತ್ತಮವಾದ ಕಾರ್ಯಕಲಾಪಗಳಿಗಾಗಿ . . . ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸೂಚಿಸಲು ಉಂಟಾಗುವ ಸಂತೋಷವನ್ನು ಹೇಳಿಕೊಳ್ಳಲಾರೆನು."

ಕೊಟ್ಟಿರುವ ವಿಮಾ ಹಕ್ಕಿನ ಹಣಗಳು: ೫,೦೦,೦೦೦—೦—೦.

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

H. Venkataramiah, Divisional Superintendent or R Purniah, Ag. General Manager.

The Asiatic Govt. Security Life Assu Co. Ltd.,
Asiatic Building, BANGALORE CITY

ಝಂಡು ಮಲೇರಿಯಾ ಮಿಕ್ಶ್ಚರ್

ಮಲೇರಿಯಾ, ವಿಷಜ್ವರಗಳಿಂದುಂಟಾಗುವ ಎಲ್ಲಾ ತರದ

ಕಠಿಣ ಜ್ವರಗಳಿಗೆ

ಖಾತ್ರಿಯಾದ ಸಿದ್ಧೌಷಧ

ಕ್ರಯ: ಆಣೆ 0-14-0 ಮಾತ್ರ.

ಸ್ಥಳೀಯ ಏಜಂಟರು:- ಪಿ. ಎ. ಪೈ ಬ್ರದರ್ಸ್.

ಕಾರ್ಕಳದ ಏಜಂಟರು:- ವಿ. ವಿ. ಶೆಣೈ, ಕೆಮಿಸ್ಟ್ಸ್.

ಮಂಗಳೂರಿಗೂ ದಕ್ಷಿಣ ಕನ್ನಡ ಜಿಲ್ಲೆಯ ಇತರ ಮುಖ್ಯ ಸ್ಥಳಗಳಿಗೂ ಏಜಂಟರು ಬೇಕಾಗಿದ್ದಾರೆ.

ಶರ್ತಗಳಿಗೂ ಏಜನ್ಸಿಗಳಿಗೂ ಮುಖ್ಯ ಏಜಂಟರಿಗೆ ಬರೆಯಿರಿ:—

ದಾಮೋದರ್ ಎಂಡ್ ಕೊ,

ಮುಖ್ಯ ಏಜಂಟರು,

ZANDU

78 ಚೀನಾ ಬಜಾರ್ ರೋಡ್, ಜಿ. ಟಿ. ಮದರಾಸು

DAMODER & CO.,
78 China Bazaar Road, **G T. MADRAS.**

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು.

ಮೈಸೂರು ಸೇಂಡಲ್ ಸೋಪು

ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಶೀಘ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು.

ಕ್ರಯ:- 40 ಮಾತ್ರೆಗಳ ಡಬ್ಬಿ 1ಕ್ಕೆ ರೂ. 1-0-0.

ಮದನಮಂಜರಿ ಫಾರ್ಮಸಿ, 184 ಚೈನಾಬಜಾರ್ ಮದ್ರಾಸ್.

ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

Your anxiety in finding a sound and progressive Life Office both to insure or to represent will end on consultation with:

Branch Secretary,
The New Guardian of India Life Ins Co. Ltd, Madras.
BANGALORE Branch.

THE VIJAYA BANK LTD.,

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛೆಸುವಿರಾದರೆ--- ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ಕೃಷ್ಟ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಆರಂಭಿಸಿ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಒಮ್ಮೆ ತೊಡಗಿದಿರೆಂದರೆ ಕಡೆತನಕವೂ ಓದದೆ ಬಿಡಲಾಗದ ಪುಸ್ತಕ—

ಪಂಚಾರತಿ

'ಭಾರತೀ ಗ್ರಂಥಮಾಲೆ'ಯವರು ನೂತನವಾಗಿ ಪ್ರಕಟಿಸಿದ ಕರ್ನಾಟಕದ ಪ್ರಸಿದ್ಧ ಬರಹಗಾರರೈವರ ಐದು ಏಕಾಂಕ ನಾಟಕಗಳ ಸಂಗ್ರಹ.

(೧) ಮುಸುಕು (ಶ್ರೀ. ಎನ್. ಕೆ. ಕುಲಕರ್ಣಿ, ಎಂ. ಎ.)
(೨) ಪ್ರಾಯಶ್ಚಿತ್ತ (ಶ್ರೀ ಎಸ್. ವೆಂಕಟರಾಜ)
(೩) ಜ್ವಾಲಾಮುಖಿ (ಶ್ರೀ. ಟಿ. ಅಶ್ವತ್ಥನಾರಾಯಣ ರಾವ್)
(೪) ಭಾವಿನಿಯ ಭಾಗ್ಯೋದಯ (ಪ್ರೊ. ಆರ್. ವಿ. ಜಾಗೀರ್‌ದಾರ್ ಎಂ. ಎ. (ಲಂಡನ್)
(೫) ಒಂದು ಬೋರಿಬಸ್ಸಿಗೆ ಮೂರು ಸಾವಿರ (ಶ್ರೀ ಕೊರಟ್ಕರ್ ಶ್ರೀನಿವಾಸ ರಾವ್)

ಮನೋಹರವಾದ ಅಂತರಂಗ! ಚಿತ್ತಾಕರ್ಷಕ ಬಹಿರಂಗ!!

80 ಪುಟಗಳು   ಬೆಲೆ 0—4—0

ನವಭಾರತ ಪುಸ್ತಕ ಭಂಡಾರ, ಉಡುಪಿ.

(0—5—0 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು).

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಹಜವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ನಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ ಅಮೋಘವಾದ ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ, ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಮ್. ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ 5 ಕೊಡಿಯಾಲಬೈಲು, ದ.ಕ.

ಸ್ಥಾಪನೆ [illegible] 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್ಸಿಲ್ ಪ್ಲೇಟುಗಳೂ, ಮೊನೊಗ್ರಾಮ್ ಸೀಲು ಇತ್ಯಾದಿಗಳು ತ್ವರಿತವಾಗಿ ಮಾಡಿಕೊಡಲ್ಪಡುವವು.

Crown Rubber Stamp Co., 18 Balmat Road, MANGALORE

Approved firm by the Govt of Mysore   Certified by the Agent of the Govt of India in Ceylon

ಬಾಲಕರು ಆರೋಗ್ಯಶಾಲಿಗಳಾಗಲು **ಪ್ರಭೂಸ್–ಬಾಲಾಮೃತ**

ಒಂದೆರಡು ವಾರಗಳಲ್ಲಿ ಅದ್ಭುತ ಗುಣ.

— ಕಮನೀಯವಾದ ಕೇಶಕಲಾಪ ತಂಪಾದ ಮೆದುಳು ಶುಭ್ರ ನೇತ್ರಗಳು ಇವುಗಳನ್ನು ಹೊಂದಲು —

ಪುಷ್ಪಗಂಧಾಮೋದಿತ **ಆಮಲಕೀ ತೈಲ** ಬಹು ಗುಣಯುಕ್ತ

ವಾಯುಮಾತ್ರೆಗಳೆಂಬ --- **ಧಾನ್ವಂತರಿ ಗುಟಿಕಾ** --- ಇವುಗಳನ್ನು

ಸೇವಿಸಿ ವಾಯುವೆಂಬ ರೋಗವನ್ನು ಗುಣಪಡಿಸಿಕೊಳ್ಳಿರಿ.

ಮಾತ್ರೆ–12ಕ್ಕೆ 0-4-0, 25ಕ್ಕೆ 0-7-0, 50ಕ್ಕೆ 0-13-0, 100ಕ್ಕೆ 1-5-0

5 ಆಣೆಯ ಸ್ಟಾಂಪು ಕಳುಹಿಸಿದರೆ 12 ಮಾತ್ರೆಗಳನ್ನು ಕಳುಹಿಸುತ್ತದೆ.

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಕೆಂಜಾಲು, ಬ್ರಹ್ಮಾವರ, ದ. ಕ.

ನಮ್ಮ ಸ್ಟಾಕಿಸ್ಟರು:–

ನವಭಾರತ ಬುಕ್ ಡಿಪೋ, ಉಡುಪಿ, ದ. ಕನ್ನಡ, ಜನರಲ್ ಸಪ್ಲೈಯರ್ಸ್ ಲಿಮಿಟೆಡ್, ಉಡುಪಿ ಹೋಟೆಲ್ ದ ಭಾರತ, ಕೆನರಾ ಮೆಡಿಕಲ್ ಏಜನ್ಸಿ, ವಿ. ಆರ್ ಪ್ರಭು, ಟಿಪ್ಪುಸುಲ್ತಾನ ಮಸ್ಜಿದ್, ಬಾಲ್ಗುಣ ಮುಂಬೈ ನಂ. 12, ಗಣಪಯ್ಯ ಲಕ್ಷ್ಮಣ ನಾಯಕ್ ಎಂಡ್ ಬ್ರದರ್ಸ್, ಕೊಟ, ದ. ಕನ್ನಡ.

THE

PANGAL NAYAK BANK LTD.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು)

Season Deposits for a period of 3, 4, 5 or 6 months are accepted at all the offices of the Bank and interest is allowed at 4% per annum till maturity or the 30th June 1940, as the case may be, whichever is earlier.

For further information please communicate with or call at any of our offices.



KOPRAN
Tooth Paste

ಹಿಂದೂದೇಶದ ಅತ್ಯುತ್ತಮ ದಂತಮಂಜನ

ಆರೋಗ್ಯದ ಹಲ್ಲುಗಳನ್ನೊಳಗೊಂಡು ಕಾಯ್ದಿರಿಸಲ್ಪಟ್ಟಿರುವ ಉತ್ತಮ ದಂತಮಂಜನ. ಪ್ರತ್ಯಕ್ಷ ನೋಡ್ವದು ವಿಶ್ವಾಸಕವಾದದು.

Transport & Car Owners



ARE SPECIALLY INVITED TO VISIT

OUR SHOW ROOM *for economical transport maintenance.*

CANARA AUTOMOBILES - - - - - MANGALORE

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಅಪೇಕ್ಷೆಯಂತೆ ತಯಾರಾಗುವ ಉಗಿಸ ಅಧಿಕಮಿಗೆ ಒಳ್ಳೆ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಗಡಿಯಲ್ಲಿ ಕಡಿಮೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಅಸ್ಪತ್ರೆ ಎದುರು, ಉಡುಪಿ.

ESTD. 1921 ಸ್ಥಾಪನೆ

FOUNDER:
SRI. A. B. SHETTY, M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

NAVAYUGA
ನವಯುಗ

ಚಂದಾ ವಿವರ:
1 ವರ್ಷಕ್ಕೆ – ರೂ. 3—4—0
6 ತಿಂಗಳಿಗೆ – ರೂ. 1—12—0
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹ ಸಂಪಾದಕ.
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೩೮

ಉಡುಪಿ, ಗುರುವಾರ, ೩೦—೫—೧೯೪೦.
UDIPI, THURSDAY, 30-5-1940.

VOL. 19
No. 38

ಸಮಾಚಾರ ಸಂಗ್ರಹ

ಇಂಗ್ಲೆಂಡಿನ ಮುಖದಿದಿರಲ್ಲಿ ಜರ್ಮನ್ ಸೇನೆ!

ಬೆಲ್ಜಿಯಮ್ ಗಡಿಯ ಮೂಲಕ ಫ್ರಾನ್ಸಿಗೆ ನುಗ್ಗಿದ ಜರ್ಮನ್ ಸೇನೆ ಪ್ಯಾರಿಸಿನ ಕಡೆಗೆ ಧಾಳಿಯಿಡದೆ ಕರಾವಳಿ ಪ್ರಾಂತ್ಯದ ಕಡೆಗೆ ಮುಂದೊತ್ತಿ ಅಸಾಧಾರಣ ಸಾಹಸದಿಂದ ಒಂದೊಂದೇ ಬಂದರುಗಳನ್ನು ಹಿಡಿಯುತ್ತಾ ಬರುತ್ತಿರುವದೇ ಈ ವಾರದ ಮುಖ್ಯ ಯುದ್ಧ ವಾರ್ತೆ. ಸೊಮ್ಮೆ ಎಂಬಲ್ಲಿಯ ಉತ್ತರ ರಣಕ್ಷೇತ್ರದಲ್ಲಿ ಮುಂದೊತ್ತಿದ ನಾಜೀ ಸೇನೆ ಎಮಿಯನ್ಸ್ ಮತ್ತು ಅರಾಸ್ ಪಟ್ಟಣಗಳನ್ನು ಸ್ವಾಧೀನಪಡಿಸಿಕೊಂಡಿತು. ಅರಾಸ್ ಮತ್ತು ಡೊವಾಯಿ ಮಧ್ಯಪ್ರದೇಶದಲ್ಲಿ ಮಿತ್ರ ರಾಷ್ಟ್ರಗಳ ಸೇನೆಗಳು ಪ್ರಬಲ ಹೋರಾಟ ಕೊಟ್ಟವಾದರೂ ಪ್ರಯೋಜನ ಹೊಂದಲಿಲ್ಲ. ಸೊಮ್ಮೆ ವಿಭಾಗದ ಲೈನನ್ನು ಮಿತ್ರರ ಸೇನೆಗಳು ಸ್ಥಿರವಾಗಿ ಹಿಡಿದು ನಿಂತು ಸರ್ವಶಕ್ತಿಯಿಂದ ಪ್ರತಿಭಟಿಸಿದುವು. ಅಬ್ಬೆವಿಲ್ಲೆ ವಿಭಾಗದ ಜರ್ಮನ್ ಸೇನೆಗಳು ಪ್ರಾಮುಖ್ಯ ಬಂದರವಾದ ಬೊಲೋನನ್ನು ಸ್ವಾಧೀನಪಡಿಸಿಕೊಳ್ಳುವದರಲ್ಲಿ ಜಯಶಾಲಿಗಳಾಗಿರುವರೆಂದು ಒಂದು ವಾರ್ತೆ. ಅಲ್ಲಿಂದ ಬ್ರಿಟಿಷ್ ಸೇನೆ ಸುರಕ್ಷಿತವಾಗಿ ಹಿಂದೆಗೆಯಲ್ಪಟ್ಟಿರುವುದರಿಂದ ಆ ಪ್ರಾಮುಖ್ಯ ಬಂದರವು ಹೋರಾಟವಿಲ್ಲದೆ ಜರ್ಮನರ ಹಸ್ತಗತವಾಗಿರುವದೆಂದು ವಾರ್ತೆಯಿದೆ. ಬೊಲೋನಿನ ಉತ್ತರ ಗಡಿಯ ಇನ್ನೊಂದು ಪ್ರಾಮುಖ್ಯ ಬಂದರವಾದ ಕೆಲೆಯಲ್ಲಿ ಅತಿ ಭಯಂಕರ ಕಾಳಗ ನಡೆಯುತ್ತಿದೆ. ಬೊಲೋನ್ ತಾ. 25ರ ವರೆಗೆ ತಮ್ಮ ಕೈಯಲ್ಲೇ ಇದೆ ಎಂದು ಮಿತ್ರರಾಷ್ಟ್ರಗಳ ಹೇಳಿಕೆಯಿದೆ. ಈ ಕರಾವಳಿಯ ಬಂದರಗಳಿಗೂ ಇಂಗ್ಲಾಂಡಿಗೂ ಮಧ್ಯದಲ್ಲಿರುವದು ಇಂಗ್ಲಿಷ್ ಚೆನಲ್ ಮಾತ್ರ. ಆದ್ದರಿಂದ ಫ್ರಾನ್ಸ್ ಕರಾವಳಿಯ ಊರುಗಳನ್ನು ವಿರೋಧಿಗಳು ಸ್ವಾಧೀನಪಡಿಸದಂತೆ ಮಿತ್ರರಾಷ್ಟ್ರಗಳ ಸೇನೆಗಳು ಕಡುತರವಾದ ಕಾದಾಟ ಕೊಡುತ್ತಿವೆ. ಇಂಗ್ಲಾಂಡಿನ ಡೋವರ್ ತಯಾರಿನ ಮೇಲೆ ಬೋಂಬು ಧಾಳಿ ನಡೆದಿದೆ. ಅಂತೂ ಈಗ ಜರ್ಮನಿ ಸೇನೆ ಕಾಲಿಟ್ಟಿರುವ ವಿಭಾಗವು, ಮಿತ್ರರಾಷ್ಟ್ರಗಳೊಳಗಿನ ಸೈನ್ಯಸಂಬಂಧಗಳಿಗೂ, ಇಂಗ್ಲಾಂಡಿನ ಭದ್ರತೆಗೂ ಮುಖ್ಯವಾದ ಸ್ಥಳವಾದುದರಿಂದ ಇಲ್ಲಿಯ ಹೋರಾಟವು ಇನ್ನಷ್ಟು ಭೀಕರವಾಗುವ ಚಿಹ್ನೆಗಳಿವೆ.

ಅಂತರಿಕ ಪಿತೂರಿ

ಬ್ರಿಟನಿನ ಗೃಹರಕ್ಷಣಾ ಮಂತ್ರಿಗಳಾದ ಸರ್. ಜೋನ್ ಎಂಡರ್ಸನರ ಅಪ್ಪಣೆಯಂತೆ ಇಂಗ್ಲಾಂಡಿನಲ್ಲಿ ಹಲವು ಪ್ರಮುಖ ವ್ಯಕ್ತಿಗಳ ದಸ್ತಗಿರಿ ನಡೆದಿದೆ. ಬ್ರಿಟನಿನ ಫೇಸಿಸ್ಟ್ ಯೂನಿಯನ್ ಸಂಸ್ಥೆಯ ಅಧ್ಯಕ್ಷರಾದ ಸರ್. ಓಸ್‌ವಾಲ್ಡ್ ಮೋಸ್ಲೆ ಮತ್ತು ಇತರ ಮುಂದಾಳುಗಳೂ ದಸ್ತಗಿರಿಮಾಡಲ್ಪಟ್ಟಿರುವರು. ಕೆಲವರ ಮನೆ ಜಪ್ತಿ ನಡೆದಿದೆ. ಕಾಮನ್ಸಿನ ಮಾಜೀ ಸದಸ್ಯ ಜೋನ್ ಬೆಕೆಟ್, ಪಾರ್ಲಿಮೆಂಟ್ ಮೆಂಬರ್ ಕೆಪ್ಟನ್ ರಾಮ್ಸೇ ಮೊದಲಾದವರನ್ನು ಸೈದುಮಾಡಲಾಗಿದೆ. ಫೇಸಿಸ್ಟ್ ಯೂನಿಯನಿನ ಮುಖ್ಯ ಕಾರ್ಯಾಲಯವನ್ನು ಪೋಲೀಸ್ ಅಧಿಕಾರಿಗಳು ವಶಪಡಿಸಿಕೊಂಡು ಕಾವಲಿರಿಸಿದ್ದಾರೆ. ಸದ್ಯ ಸ್ಥಿತಿಯಲ್ಲಿ ದೇಶಹಿತದ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳುವ ಅಗತ್ಯವಿದೆಯೆಂದು ಮಿ. ಎಂಡರ್ಸನರೆಂದಿರುವರು. ಇಂತಹ ಸುಮಾರು 5000 ಜನರನ್ನು ಈ ಕಾನೂನಿನನ್ವಯ ಪ್ರತಿಬಂಧಿಸಲಾಗಿದೆಯೆಂದು ತಿಳಿದುಬರುತ್ತದೆ. ಮಿತ್ರ ರಾಷ್ಟ್ರಗಳ ಹೊಸ ಸೈನ್ಯಾಧಿಪತಿ ಜನರಲ್ ವೇಗಾಂಡರು 15 ಮಂದಿ ದಳಾಧಿಪತಿಗಳನ್ನು ಕೆಲಸದಿಂದ ತೆಗೆದು ಹಾಕಿರುವರು. ಪ್ಯಾರಿಸಿನಲ್ಲಿ 500 ಕ್ಕೂ ಮಿಕ್ಕಿದ ದಸ್ತಗಿರಿ ನಡೆದಿರುವದೆಂದು ತಿಳಿದು ಬಂದಿದೆ. ಅಂತೂ ಯುದ್ಧವು ವಿಷಮಾವಸ್ಥೆಗೇರಿರುವ ಈ ಕಾಲದಲ್ಲಿ ಮಿತ್ರ ರಾಷ್ಟ್ರಗಳ ಮೇಲಧಿಕಾರಿಗಳು ಅಗತ್ಯವುಳ್ಳ ಸಂಘಟನೆಯನ್ನು ಒಳಗೂ ಹೊರಗೂ ಅತಿ ತೀವ್ರವಾಗಿ ನಡೆಸುತ್ತಿದ್ದಾರೆ. ಫ್ರಾನ್ಸಿನ ಮುಖ್ಯ ಮಂತ್ರಿ ರೈನೋಡರು ಅಲ್ಲಿಯ ಸಿನೇಟಿನಲ್ಲಿತ್ತ ಭಾಷಣದಲ್ಲಿ "ಫ್ರಾನ್ಸನ್ನು ಮತ್ತು ಇಂಗ್ಲಾಂಡು ಸಾಮ್ರಾಜ್ಯಗಳನ್ನು ಹೊಡೆದುಹಾಕಲು ಸಾಧ್ಯವಿಲ್ಲ; ಅವು ಸಾಯುವಂತಿಲ್ಲ" ಎಂದು ಉದ್ಘೋಷಿಸಿ ಬೆಲ್ಜಿಯಮ್ ಫ್ರಾನ್ಸು ರಣಕಣದಲ್ಲಾಗಿರುವ ಅಗೌರವಕರ ಪ್ರಮಾದಗಳ ಕುರಿತು ಪ್ರಸ್ತಾಪಿಸಿದರು. ಮ್ಯೂಸ್ ನದಿಯ ಸೇತುವೆಯನ್ನು ಕಡಿಯದೆ ಬಿಟ್ಟ ತಪ್ಪನ್ನು ಹೇಳಿ ಆ ಅಪರಾಧವು ಶಿಕ್ಷಿಸಲ್ಪಡಲಿದೆ ಎಂದರು. ವಿರೋಧಿಗಳು ಟೆಲಿಫೋನ್ ಮೂಲಕ ಸುಳ್ಳು ಸೂಚನೆಕೊಟ್ಟು ಸೈನ್ಯಾಧಿಕಾರಿಗಳಲ್ಲುಂಟುಮಾಡುವ ಗಲಿಬಿಲಿಯ ಪ್ರಸ್ತಾಪವೆತ್ತಿ ತಾವಿನ್ನು ಹೊಸ ರೀತಿಯ ಯುದ್ಧ ನಡೆಸಿ ಜಯಶಾಲಿಗಳಾಗುವೆವೆಂಬ ಭರವಸೆ ಸೂಚಿಸಿರುವರು.

ಸಾಮ್ರಾಜ್ಯಕ್ಕೆ ಬ್ರಿಟಿಷ್ ಸಾಮ್ರಾಟರ ಸಂದೇಶ

ತಾ. 24ರಲ್ಲಿ ಸಾಮ್ರಾಟ ದಿನದ ಸಂದೇಶ ರೂಪವಾಗಿ ಆರನೇ ಜೋರ್ಜರು ಬ್ರಾಡ್‌ಕಾಸ್ಟ್ ಭಾಷಣವಿತ್ತರು. "ಈ ದಿನ ನಮ್ಮ ಸಾಮ್ರಾಜ್ಯದ ಮಹಾ ಪಾಪಕಾರೀ ಪದ್ಧತಿಯೊಂದರೊಡನೆ ತೀವ್ರ ಘರ್ಷಣೆಯಲ್ಲಿದೆ. ನಮ್ಮ ವಿರೋಧಿಗಳು ನಮ್ಮ ಕುರಿತು 'ಸಾಮ್ರಾಜ್ಯವಾದ' ಎಂಬ ಶಬ್ದವನ್ನು ಉಪಯೋಗಿಸುತ್ತಿದ್ದಾರೆ. ಸಾಮ್ರಾಜ್ಯದ ಸ್ವತಂತ್ರ ಪ್ರಜೆಗಳಾದ ನಾವು ಆ ಶಬ್ದವನ್ನೀಗ ಅಪರ ಮುಖಕ್ಕೇನೆ ಒಗೆಯುತ್ತೇವೆ. ದುರಭಿಲಾಷೆಯುಳ್ಳವರೆಂದರೆ ನಮ್ಮ ವಿರೋಧಿಗಳು ಹೊರತು ನಾವಲ್ಲ. ಸದಾಚಾರ ನಮ್ಮಲ್ಲಿರುವ ಉದ್ದೇಶವೆಂದರೆ ಶಾಂತಿ. ನಮ್ಮ ವಾದಿಗಳು ಬಲ ಹೊಂದುವ—ನಮ್ಮ ಜನರ ಸ್ಥಿತಿಗತಿಯು ಸುಧಾರಿಸಲ್ಪಡುವ—ಸರಕಾರಗಳ ಸಮಸ್ಯೆಗಳು ಸದುದ್ದೇಶಪೂರ್ವಕ ತೀರ್ಮಾನಗೊಳ್ಳುವ ಶಾಂತಿಯನ್ನೇ ನಮಗೆ ಬೇಕಾಗಿದೆ. ಈ ಶಾಂತಿಯು ನಮ್ಮ ವಿರೋಧಿಗಳಿಂದ ಅಪಹರಿಸಲ್ಪಟ್ಟಿದೆ. ನಮ್ಮ ಗೌರವಕ್ಕೆ ಪ್ರತಿಯಾಗಿ ಅಗೌರವ, ನಮ್ಮ ವಿಶ್ವಾಸಕ್ಕೆ ಬದಲಾಗಿ ಅವಿಶ್ವಾಸ, ನಮ್ಮ ನೀತಿಯ ಬದಲು ಪಶುಬಲವನ್ನು ಅವರು ತೋರಿಸಿದ್ದಾರೆ.

ಈಗ ಎರಡು ಶಕ್ತಿಗಳು ಸ್ಪಷ್ಟವಾದ ರೀತಿಯಲ್ಲಿ ಒಂದನ್ನೊಂದು ಇದಿರಿಸಿನಿಂತಿವೆ. ಅಖಿಲ ಸಾಮ್ರಾಜ್ಯದ ಜನರಲ್ಲುಂಟಾಗಿರುವ ನವ ಜಾಗ್ರತಿಯು ಮುಂದೇನಾಗಬೇಕೆಂಬುದನ್ನು ನಿಸ್ಸಂದೇಹವಾಗಿ ಸೂಚಿಸುತ್ತದೆ. ತಾವು ಒಯ್ಯಬೇಕಾದ ಒಂದು ಪಾಲು ಸಂಗತಿಗಿದಿರಾಗಿ ಸಾಮ್ರಾಜ್ಯದ ಜನರೆದ್ದಿದ್ದಾರೆ. ಅವರ ನಿರ್ಧಾರವನ್ನು ಅಲುಗಾಡಿಸಲು ಯಾವುದಕ್ಕೂ ಸಾಧ್ಯವಿಲ್ಲ. ತಮ್ಮ ಏಕೋದ್ದೇಶದ ಬಲದಿಂದ ಅವರು ತಮ್ಮ ಪ್ರಾಣ ರಕ್ಷಣೆಮಾಡಿಕೊಳ್ಳುವರಲ್ಲದೆ, ಯೋಗ್ಯ ಜೀವನ ನಡೆಸಲು ಮಾಡಬೇಕಾದುದೆಲ್ಲವನ್ನೂ ಸಾಧಿಸುವರು. ನಾನು ನಮಗಿದಿರಾಗಿರುವ ವಿಪತ್ತು ಮೊಡ್ಡದೆಂದೊಡನೆ ನನ್ನ ವಿಶ್ವಾಸವು ಕುಂದಿದೆ ಎಂದು ಯಾರೂ ಭಾವಿಸಬಾರದು. ತದ್ವಿರುದ್ಧವಾಗಿ ನಿಮ್ಮ ಹೃದಯದಲ್ಲಿದ್ದಷ್ಟೇ ಪ್ರಕಾಶಮಾನವಾದ ಭರವಸೆಯು ನನ್ನ ಹೃದಯದಲ್ಲಿಯೂ ಇದೆ. ಆದರೆ ಬರಿಯ ವಿಶ್ವಾಸವೊಂದಿದ್ದರೆ ಸಾಲದು. ಅದಕ್ಕೆ ಧೈರ್ಯ, ದೃಢನಿರ್ಧಾರದ ಬೆಂಬಲವಿರಬೇಕು. ನೆಲ, ಜಲ, ಆಕಾಶ ಮೂಲಕ ಅವ್ಯಾಹತ ಜನಪ್ರವಾಹಗಳು ಸ್ವದೇಶದಿಂದಲೂ ಹೊರಗಿನಿಂದಲೂ ಬರುತ್ತಿರುವದು ಮಹತ್ತಾದ ಸಂಗತಿ ಎಂದು ಹೇಳಿ ಸಾಮ್ರಾಟರು ತನ್ನ ಭಾಷಣದ ಕೊನೆಯಲ್ಲಿ "ನಿಮ್ಮಲ್ಲಿರುವ ಎಲ್ಲಾ ಧೈರ್ಯೋದ್ದೇಶಗಳನ್ನು ನೀವೆಂದು ಕೈಗೊಂಡಿರುವ ಕಾರ್ಯಕ್ಕುಪಯೋಗಿಸಿರಿ. ನಿಮ್ಮ ಹೃದಯದಲ್ಲಿ ಹೆಗ್ಗಳಿಕೆ ಮತ್ತು ನಿರ್ಧಾರದಲ್ಲಿ ದೃಢತೆಯಿರಲಿ. ನಾವು ತುಟಿಯಲ್ಲಿ ನಗೆ ಮಿಂಚಿಸಿಕೊಂಡು, ತಲೆಯೆತ್ತಿ ಏಕಸ್ಥೈರ್ಯದಿಂದ ಮುಂದೊತ್ತೋಣ. ದೇವರ ದಯೆಯಿಂದ ನಾವು ಸೋಲುವಂತಿಲ್ಲ." ಎಂದರು.

ಬಾಲ್ಕನ್ ರಾಷ್ಟ್ರಗಳಿಗೆ ಇಟೆಲಿಯ ಭರವಸೆ

ಬಾಲ್ಕನ್ ರಾಷ್ಟ್ರಗಳಲ್ಲಿ ತಾನಾವ ಕಾರ್ಯಕ್ಕೂ ಕೈಹಾಕುವದಿಲ್ಲವೆಂದು ಇಟೆಲಿ ಸರಕಾರವು ಅಲ್ಲಿಯ ರಾಷ್ಟ್ರಗಳಿಗೆ ಸ್ಪಷ್ಟ ಭರವಸೆ ಕೊಟ್ಟಿರುವದೆಂದು ತಿಳಿದುಬರುತ್ತದೆ. ಮಾತ್ರವಲ್ಲ, ಯುದ್ಧವು ಬಾಲ್ಕನ್ ರಾಷ್ಟ್ರಗಳ ಕಡೆಗೆ ಹಬ್ಬದಂತೆ ಮಾಡಲು ಇಟೆಲಿಯು ನಿರ್ಧರಿಸಿರುವದು.

ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾಗಿದೆ.

ಹಾಯರ್ ಎಲಿಮೆಂಟರಿ ಕ್ಲಾಸುಗಳಿಗೆ ಅತ್ಯುಪಯುಕ್ತವಾದುದು.

ಶ್ರೀ. ಕೆ. ಕೆ. ಶೆಟ್ಟರಿಂದ ವಿರಚಿತವಾದ

ಕುಶಲವ

ನವಪೌರಾಣಿಕ ನಾಟಕ

-- ಬೆಲೆ ನಾಲ್ಕಾಣೆ ಮಾತ್ರ --

ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತದೆ.

ನವಭಾರತ ಪುಸ್ತಕಭಂಡಾರ, ಉಡುಪಿ.

ಹೊಸಾಧಿಕಾರಿಗಳು ಹಳೆಯ ಹಾಡನ್ನೇ ಹಾಡಿದರು.

ಮಿ. ಅಮೆರೀವರ ಹೇಳಿಕೆ. - - - ಭಾರತ ಮುಖಂಡರ ಅಭಿಪ್ರಾಯ.

ಭಾರತದ ಕುರಿತು ಬ್ರಿಟಿಷ ಮುತ್ಸದ್ದಿಗಳ ಹೃದಯತರಂಗಗಳು ಎಲ್ಲಿಲ್ಲಿ ಏಳುತ್ತವೆ-ಬೀಳುತ್ತವೆ ಎಂಬುದನ್ನು ತಿಳಿಯಲು ಪಾರ್ಲಿಮೆಂಟಿನಲ್ಲಾಗುವ ಪ್ರಶ್ನೋತ್ತರಗಳು ಅತ್ಯನುಕೂಲ. ಈಗಿನ ಭಾರತ ಕಾರ್ಯದರ್ಶಿ ಮಿ. ಅಮೆರಿಯವರು, ಈ ಬಾರಿಯ ಪಾರ್ಲಿಮೆಂಟಿನಲ್ಲಿ ಉತ್ತರಿಸಿದ ರೀತಿಯಲ್ಲಿ ಚಾತುರ್ಯವಿತ್ತು; ಲೋರ್ಡ್ ಜೆಟ್ಲೆಂಡರಲ್ಲಿಲ್ಲದ ಮೃದುತ್ವವಿತ್ತು. ಹೊರತು ಬೇರಾವ ಅರ್ಥಗಾಂಭೀರ್ಯವೂ ಇರಲಿಲ್ಲ.

ಮಿ. ಅಮೆರಿಯವರ ಮಾತು

ಮಿ. ವೆಜವುಡ್ ಬೆನ್ ಮತ್ತು ಮಿ. ಹಾರ್ನೆಯವರು ಒಂದೊಂದು ಪ್ರಶ್ನೆ ಹಾಕಿ ಭಾರತ ಮಂತ್ರಿಗಳ ಬಾಯಿ ಬಿಡಿಸಿದರು. 'ಭಾರತದಲ್ಲಿ ತಮ್ಮನ್ನೆದುರಿಸಿರುವ ಸಮಸ್ಯೆಯ ಕುರಿತು ತಮ್ಮ ಧೋರಣೆಯೇನೆಂಬುದನ್ನು ತಿಳಿಸಬಹುದೇ?' ಎಂದು ಮಿ. ಬೆನ್ನರ ಪ್ರಶ್ನೆ. "ಮ. ಗಾಂಧಿ ಮತ್ತು ಜವಾಹಿರಲಾಲರ ಹೇಳಿಕೆಗಳು ಅನುಕೂಲಮಾಡಿಕೊಟ್ಟಂತೆ, ಭಾರತದ ಸರ್ವಪಕ್ಷಗಳ ಪ್ರತಿನಿಧಿಗಳುಳ್ಳ ಪರಿಷತ್ತನ್ನು ರಚಿಸಲು ಯಾವ ಕಾರ್ಯವನ್ನಾದರೂ ಕೈಗೊಂಡಿರುವಿರಾ?" ಎಂದು ಮಿ. ಹಾರ್ನೆಯವರ ಸವಾಲು. ಇವುಗಳಿಗೆ ಮಿ. ಅಮೆರಿಯವರು ಕೊಟ್ಟ ಉತ್ತರದ ಸಾರಾಂಶವಿದು: "ಹಿಂದಿನ ಸರಕಾರಕ್ಕಿದ್ದಂತೆಯೇ ಬ್ರಿಟಿಷ್ ಕಾಮನ್‌ವೆಲ್ತಿನಲ್ಲಿ ಸಮಾನತೆಯ ಮತ್ತು ಸ್ವತಂತ್ರವಾದ ಸ್ಥಾನವನ್ನು ಭಾರತವು ಹೊಂದಬೇಕೆಂಬುದೇ ನಮ್ಮ ಗುರಿಯಾಗಿದೆ. ಭಾರತದ ಸ್ಥಿತಿಗತಿಗಳಿಗನುಕೂಲವಾಗುವ ಒಂದು ರಾಜ್ಯಸೂತ್ರ ತಯಾರಿ ಕಾರ್ಯದಲ್ಲಿ ಭಾರತೀಯರೇ ಮುಖ್ಯ ಭಾಗ ತೆಗೆದುಕೊಳ್ಳತಕ್ಕದ್ದೆಂದು ನನ್ನ ಪೂರ್ವಾಧಿಕಾರಿಯು ಎಪ್ರಿಲ್ ತಾ. 18ರಲ್ಲಿ ಹೇಳಿದ್ದನ್ನು ನಾವು ಪುನರಾವರ್ತಿಸುತ್ತೇವೆ. 1935ರ ಇಂಡಿಯಾ ಯೋಜನೆಯು ಅಗತ್ಯವುಳ್ಳ ತಿದ್ದುಪಡಿಗಾಗಿ ಯುದ್ಧಾಂತ್ಯದಲ್ಲಿ ಪುನರ್ವಿಮರ್ಶಿಸಲ್ಪಡಬಹುದೆಂಬ ಆಶ್ವಾಸನೆಯನ್ನು ಮೊದಲೇ ಕೊಟ್ಟಾಗಿದೆ. ಆ ಕುರಿತು ಚರ್ಚೆ, ಸಂಧಾನ ನಡೆಸುವವರಿಲ್ಲದೆ ಅಧಿಕಾರ ಚಾಲನೆ ಮಾಡುವಂತಿಲ್ಲ. ಈ ಕುರಿತು ಕಾಲ ವಿಳಂಬ ಮಾಡುವ ಇಚ್ಛೆ ನಮ್ಮಲ್ಲಿ ಎಳ್ಳಷ್ಟೂ ಇಲ್ಲ. ಭಾರತೀಯರಲ್ಲಿರುವ ಮೂಲಭೂತ ಅಭಿಪ್ರಾಯ ಭಿನ್ನತೆಗಳೇ ನಿಜವಾದ ತೊಡಕುಗಳಾಗಿದ್ದರೂ ಅವುಗಳನ್ನೊಂದುಗೂಡಿಸುವದು ಅಸಾಧ್ಯವಲ್ಲ. ಮುಖ್ಯ ಪ್ರಶ್ನೆಗಳ ತೀರ್ಮಾನವು ಕೂಡಲೇ ಆಗುವದು ಅಸಾಧ್ಯವಾಗಿ ಕಂಡರೂ ಕೂಡ, ಅದರ ಪೂರ್ವ ತಯಾರಿಗಾಗಿ, ಜನ ಪ್ರತಿನಿಧಿಗಳು ಪ್ರಾಂತ್ಯಾಧಿಕಾರ ವಹಿಸುವದು ಮತ್ತು ವೈಸರಾಯರ ಮಂತ್ರಿಮಂಡಳದಲ್ಲಿ ಜನತಾ ಪ್ರತಿನಿಧಿಗಳನ್ನು ಸೇರಿಸುವದು ಭಾರತೀಯರಿಗಾಗಿರುವ ಮೇರೆಯ ಹೊರಗಿನದೆಂದು ನಾನೆಣಿಸುವದಿಲ್ಲ. ಈ ರೀತಿಯ ಪೂರ್ವಸನ್ನಾಹದಿಂದ ಭಾರತೀಯ ಬಿಕ್ಕಟ್ಟನ್ನು ನಿವಾರಿಸುವ ಅಲ್ಲಿಯ ಬಹುಮತೀಯರಿಗೆ ಸನ್ಮತವಾಗಬಹುದೆಂದು ನಾನೆಣಿಸುತ್ತೇನೆ. ಇದೀಗ ನಾಗರಿಕ ಪ್ರಪಂಚವನ್ನು ಎದುರಿಸುವ ಇಂದಿನ ಪರಿಸ್ಥಿತಿಯಲ್ಲಿ ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಭಾರತದ ರಾಜಕೀಯ ಧುರೀಣರೆಲ್ಲಾ ಒಗ್ಗಟ್ಟಾಗುವರೆಂಬುದು ನಮ್ಮ ಸರಕಾರದ ಯಥಾರ್ಥ ಆಶೆ."

ಈ ಸಂದರ್ಭದಲ್ಲಿ ಮಿ. ಸೋರೆನ್ಸನ್ ಎಂಬ ಸದಸ್ಯರು ಕೇಳಿದರು: "ಸದ್ಯ ಸ್ಥಿತಿಯಲ್ಲಿ 'ಕಾಯಿದೆಭಂಗ ಚಳವಳವನ್ನು ಅಮಾನತಿಡಲಾಗುವದೆಂದು ಪಂಡಿತ ನೆಹರುಗಳು ಸೂಚಿಸಿದುದಕ್ಕಾಗಿ ನೀವು ಶ್ಲಾಘನೆ ಸೂಚಿಸುವಿರಾ? ಮತ್ತು ಸಾಧ್ಯವಿದ್ದರೆ ಇಂಡಿಯಾ ಸೆಕ್ರಿಟರಿಯವರು ಸ್ವತಃ ಭಾರತಕ್ಕೆ ಹೋಗಿ ಅಲ್ಲಿಯ ಜವಾಬ್ದಾರೀ ಮನುಷ್ಯರನ್ನು ಕಾಣುವರೇ?" ಈ ಪ್ರಶ್ನೆಗೆ ಮಿ. ಅಮೆರಿಯವರು "ಭಾರತ ಸಂದರ್ಶನದ ವಿಚಾರವು ಅಂಥ ಸಂದರ್ಭವೊದಗಿದಾಗಲೇ ಪರ್ಯಾಲೋಚಿಸಲ್ಪಡುವದು. ಕಾಯಿದೆಭಂಗವನ್ನು ಪ್ರಕೃತಕ್ಕೆ ನಿಲ್ಲಿಸಲಾಗಿದೆ ಎಂದು ನಾನು ತಿಳಿದಿಲ್ಲ. ಪಂಡಿತ ನೆಹರುಗಳು ನಮ್ಮ ಸಂಕಷ್ಟದ ಪ್ರಯೋಜನ ಪಡೆಯುವಂತಿಲ್ಲವೆಂದು ಹೇಳಿದುದು ನಿಜ. ಅದನ್ನು ನಾನು ಶ್ಲಾಘಿಸುತ್ತೇನೆ." ಎಂದರು.

ಗಾಂಧಿಜಿಯವರ ಹೇಳಿಕೆ

ಮಿ. ಅಮೆರಿಯವರ ಉತ್ತರದ ಕುರಿತು ತಮ್ಮಭಿಪ್ರಾಯವೇನೆಂದು ಪ್ರಶ್ನಿಸಲ್ಪಟ್ಟಾಗ ಮಹಾತ್ಮಾ ಗಾಂಧಿಯವರೆಂದರು: "ಸಷ್ಟಿನು ದೇಶಗಳಲ್ಲಿ ಕೊಲೆಗಡಿಕತನವು ಅವ್ಯಾಹತವಾಗಿ ನಡೆಯುತ್ತಿದ್ದು ಶಾಂತಿಮಯ ಮನೆಗಳು ಜರಿದು ಬೀಳುತ್ತಿರುವ ಈ ಕಾಲದಲ್ಲಿ ಮಿ. ಅಮೆರಿಯವರ ಮಾತಿನ ಕುರಿತು ಬಹಿರಂಗವಾಗಿ ಏನನ್ನೂ ಹೇಳಲು ಎಡೆಯಿಲ್ಲದವನಾಗಿದ್ದೇನೆ. ಸದ್ಯದ ಬಿಕ್ಕಟ್ಟಿಗೊಂದು ಶಾಂತಮಯ ಗೌರವಾರ್ಹ ತೀರ್ಮಾನ ಪಡೆಯುವರೆ, ಮುಂದೆ ಬರುವದಾವುದನ್ನಾದರೂ ಪರ್ಯಾಲೋಚಿಸದೆ ಬಿಡುವಂತಿಲ್ಲ" ಆ ಕುರಿತು ಏನನ್ನಾದರೂ ಹೇಳುವ ಬದಲು ಕಾದು ನೋಡುವದುತ್ತಮವೆಂದು ಶ್ರೀ. ಸಿ. ರಾಜಗೋಪಾಲಾಚಾರ್ಯರ ಮಾತು. ಮಿ. ಅಮೆರಿಯವರು ಗಾಂಧಿಜಿಯವರನ್ನು ಕಾಣಬೇಕೆಂದು ಸತ್ಯಮೂರ್ತಿಗಳೆನ್ನುತ್ತಾರೆ.

ಅಲ್ಲಿಂದಲ್ಲಿಗೆ ತೇಪೆಹಚ್ಚಿ ಫಲವಿಲ್ಲ

ಪಂಡಿತ ನೆಹರುಗಳ ಸ್ಪಷ್ಟ ಹೇಳಿಕೆ

ಮಿ. ಅಮೆರಿಯವರ ಮಾತಿಗೆ ಪಂಡಿತ ನೆಹರುಗಳು ಅತ್ಯಂತ ಸ್ಪಷ್ಟವಾದ ಉತ್ತರ ಕೊಟ್ಟಿದ್ದಾರೆ. ಜವಾಬ್ದಾರಿಯ ಅಮಲು ಶಾಂತಿಮಯ ರೀತಿಯಿಂದ ನಡೆದು ಆಂತರಿಕ ಗೊಂದಲಕ್ಕೆ ಎಡೆದೊರೆಯದಿರಲೆಂದು ಕಾಂಗ್ರೆಸ್ ಹಾರೈಸುತ್ತದಾದರೂ, ಈ ಬದಲಾವಣೆಯು, ತಮ್ಮ ಸಾಮ್ರಾಜ್ಯಾಧಿಕಾರವುಳಿಸಲು ಬ್ರಿಟಿಷರ ಕೈವಾಡವಾಗಿರಲು ಸಾಧ್ಯವಿಲ್ಲ. ಕಾಂಗ್ರೆಸಿನ ಹಿಂದಿರುವ ಮುಖ್ಯ ಬಲವೆಂದರೆ ಅದರೊಡನೆ ಸಹಾನುಭೂತಿ ಇರುವ ಮತ್ತು ಅದರ ಮಾರ್ಗದರ್ಶಿತ್ವವನ್ನೊಪ್ಪುವ ಮಿಲಿಯ ಮಂದಿಯ ನೈತಿಕಬಲ. ಶಾಂತಿಸ್ಥಿತಿ ಸ್ಥಾಪನೆಗಾಗಿಯಾದರೂ ನಾವು ಸಾಮ್ರಾಜ್ಯತ್ವ ವಿರೋಧ ಧೋರಣೆಯನ್ನು ದುರ್ಬಲಗೊಳಿಸಿದಲ್ಲಿ ಅಥವಾ ಸಾಮ್ರಾಜ್ಯಶಾಹಿಯ ಏಜಂಟರಾಗಿ ವರ್ತಿಸಿದಲ್ಲಿ ಆ ಬಲವು ಚದರಿಹೋಗಬಹುದು. ಇಂದಿನ ಪರಿಸ್ಥಿತಿಯು ಹಲವು ಅಪಾಯಗಳಿಂದ ಕೂಡಿರುವದೆಂಬುದು ನಿಜ. ಆದರೆ ಅದರ ನಿವಾರಣೆಗಾಗಿ ಕಾಂಗ್ರೆಸಿಗಿರುವ ಯಥಾರ್ಥ ಹಾದಿಯೆಂದರೆ ಭಾರತ ಸ್ವಾತಂತ್ರ್ಯವನ್ನಪೇಕ್ಷಿಸುವವರೆಲ್ಲರೊಡನೆ ಸಹಕರಿಸಿ ಅವರ ಬೆಂಬಲವನ್ನು ಪಡೆಯುವದು. ದುಸ್ಸಂದರ್ಭವಶಾತ್ ಅಪಾಯಕಾರೀ ಕಾಲವನ್ನು ಹಾದುಹೋಗುವ ಸಂದರ್ಭ ನಮಗೊದಗಿದರೂ ಭಾರತ ಜನತೆಯ ಸದುದ್ದೇಶ ಮತ್ತು ಒಗ್ಗಟ್ಟಿನ ಬಲದಿಂದ ನಾವು ಕೊನೆಗೆ ಉತ್ತಮ ಫಲವನ್ನೇ ಹೊಂದುವೆವು. ಯಾವ ಸಂದರ್ಭದಲ್ಲಿಯೂ ನಮ್ಮನ್ನು ಎದೆಗುಂದಿಸುವ ಅಥವಾ ದಿಗಿಲುಗೊಳಿಸುವ ಪರಿಸ್ಥಿತಿಯುಂಟಾಗುವಂತಿಲ್ಲ. ಏನೇ ಬರಲಿ, ಎದೆಗಾರಿಕೆಯೊಡನೆ ಸಂತೋಷಪೂರ್ವಕವಾಗಿ ಅದನ್ನೆದುರಿಸಬೇಕು.

ಸತ್ಯಾಗ್ರಹಕ್ಕೆ ಸಮಯ

ಕೂಡಲೇ ಸತ್ಯಾಗ್ರಹವಾರಂಭಿಸಬೇಕೆಂದು ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಕಮಿಟಿಯಲ್ಲಿ ಬಂದ ಠರಾವನ್ನು ಎರಡು ಕಾರಣಗಳಿಂದಾಗಿ ನಾನು ನಿರೋಧಿಸಿದ್ದೆ. ಒಂದನೆಯದಾಗಿ ಈ ವಿಷಯವು ಮಹಾತ್ಮಾ ಗಾಂಧಿಯವರಿಗೆ ಬಿಡಲ್ಪಟ್ಟಿದೆ. ಎರಡನೆಯದಾಗಿ ಇಂದಿನ ಯುದ್ಧದಲ್ಲಿ ಇಂಗ್ಲಾಂಡಿಗೆ ಅತ್ಯಂತ ವಿಷಮಪರಿಸ್ಥಿತಿಯೊದಗಿರುವಾಗ ನಾವೀ ಸಂದರ್ಭವನ್ನು ಈ ರೀತಿ ಉಪಯೋಗಿಸಿಕೊಳ್ಳುವದು ಅಗೌರವಕರವಿದೆ. ಇದು ತತ್ಕಾಲಕ್ಕೆ ಸಂಬಂಧಪಟ್ಟುದು ಹೊರತು ದೀರ್ಘಸಮಯದವರೆಗಲ್ಲ. ನಾವು ಕೈಕೊಳ್ಳುವ ಯಾವ ಕಾರ್ಯಕ್ರಮಕ್ಕಾದರೂ ಗಾಢವಾದ ಆಲೋಚನೆ ಬೇಕು; ಇಂದಿನ ಪ್ರತಿಯೊಂದು ಕಾರ್ಯವು ದೀರ್ಘಕಾಲದ ವರೆಗೆ ಪರಿಣಾಮವನ್ನೀಯುವಂತಹದಿದೆ. ದಿನದಿಂದ ದಿನಕ್ಕೆ ಬದಲಾಗುತ್ತಿರುವ ಇಂದಿನ ವಾತಾವರಣದಲ್ಲಿ ಅವಸರದಿಂದ ಕಾರ್ಯಕೈಕೊಳ್ಳುವುದು ದೊಡ್ಡ ತಪ್ಪು. ತನ್ನ ಎದುರಾಳಿಯ ಕಷ್ಟಕಾಲದಲ್ಲಿ ಸಂದರ್ಭ ಸಾಧಿಸುವದು ಅಥವಾ ಹಾನಿಮಾಡುವ ಉದ್ದೇಶವು ಎಂದೆಂದಿಗೂ ಗಾಂಧಿಯವರಲ್ಲಿಲ್ಲ. ವಿರೋಧಿಯು ದೊಡ್ಡ ಸಂಕಟದಲ್ಲಿರುವ ಇಂದಿನ ಕಾಲದಲ್ಲಂತೂ ಗಾಂಧಿಯವರು ಅಂತಹ ಯೋಚನೆಮಾಡುವಂತೆಯೇ ಇಲ್ಲ. ಭಾರತದ ಗೌರವ ಮತ್ತು ಪರಿಸ್ಥಿತಿಯ ದೃಷ್ಟಿಯಿಂದ ಕಾರ್ಯಕೈಗೊಳ್ಳುವ ಆಗತ್ಯಬಿದ್ದರೆ ಆಗ ವಿರೋಧಿಗೆ ತೊಂದರೆಯಾಗುವ ಸಂದರ್ಭದಲ್ಲಿಯೂ ಗಾಂಧಿಯವರದನ್ನು ಕೈಗೊಳ್ಳುವರು. ಆದ್ದರಿಂದ ಸತ್ಯಾಗ್ರಹವು ಯುದ್ಧಾಂತ್ಯದ ವರೆಗೆ ಮುಂದುವರಿಸಲ್ಪಟ್ಟಿತೆಂದು ಭಾವಿಸಬಾರ

(೧೪ನೇ ಪುಟಕ್ಕೆ ಮುಂದರಿಯುವದು)

THE
BOMABY LIFE ASSURANCE Company Limited.
[ESTD, 1908]
COMPARE
Your Life Assurance with any other property you possess what is its guaranteed value
If you live-today-a few years more-when you are old?
If you die-to your family and dependants?
REMEMBER THAT If you live, Life Insurance takes the place of your professional income during your old age.
If you die, it provides your family with enough income for their maintenance and the education of your children.
"BOMBAY LIFE" offers all that is best in Life Assurance.
1938 Record.

Completed Business	... ...	Rs. 1,44,91,000
Life Assurance Fund	... ...	Rs. 1,17,69,748
Total Assets	... .	Rs. 1,31,28,998

To Insure or to represent it pays you to consult
KOCHIKAR BROTHERS LTD.,
MADRAS BRANCH SECRETARIES,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI.

Post Box No. 317, Mount Road, MADRAS	Visweswarapuram Circle BANGALORE CITY.	Chirni Road, Girgaum, BOMBAY No. 4.
Car Street, MANGALORE	Puthiyara, CALICUT.	Central Station Road, TRIVANDRUM.

ಬ್ರಿಟಿಷ್ ಸಾಮ್ರಾಜ್ಯ

ಲೇಖಕ:- ಕೆ. ಎಲ್. ಕುಡ್ವ, ಬಿ. ಎ., ಬಿ. ಎಲ್., ವಕೀಲ್, ಕಾರ್ಕಳ.

1914-1918ರ ಯುದ್ಧದಲ್ಲಿ ಬ್ರಿಟಿಷ ಸಾಮ್ರಾಜ್ಯದ ರಾಜಘಟನೆಯು ಹೆಚ್ಚಿನ ಬದಲಾವಣೆಯನ್ನು ಹೊಂದಿದೆ. ಭೂಲೋಕದಲ್ಲಿ ಈ ವರೆಗೂ ಇಂತಹ ಸಾಮ್ರಾಜ್ಯವು ಇರಲಿಲ್ಲ. ಬ್ರಿಟಿಷ ವಸಾಹತುಗಳಿಗೆ ಈಗ ಸ್ವಾತಂತ್ರ್ಯವಿದೆ. ಹಿಂದುದೇಶದ ಸ್ವಾತಂತ್ರ್ಯವು ಕೆಲವು ವರ್ಷಗಳಲ್ಲಿ ಸಿಕ್ಕುವುದು, ಅಥವಾ ಹುಟ್ಟುವದು.

ವಸಾಹತುಗಳ ಪೈಕಿ ಕೆನಡಾ, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ, ನ್ಯೂಜೀಲೇಂಡ್ ಎಂಬ ವಸಾಹತುಗಳು ಮುಖ್ಯ ಇವು, ಬ್ರಿಟನ್ ಮತ್ತು ಐರ್ (Eire) ಅಥವಾ ಐರ್ಲೇಂಡ್ ಕೂಡಿ ಬ್ರಿಟಿಷ ಸಾಮ್ರಾಜ್ಯದಲ್ಲಿ ಮುಖ್ಯ 6 ಪ್ರದೇಶಗಳು ಅವುಗಳ ರಾಜ್ಯಘಟನೆಯು ಏಕ ರೀತಿಯಲ್ಲಿದ್ದು ಇವುಗಳ ಮೇಲೆ ಕೇಂದ್ರ ಪ್ರಭುತ್ವ ಸಂಸ್ಥೆಯು ಇರುವದಿಲ್ಲ. ರಾಜಕೀಯ ಬದಲಾವಣೆಯಿಂದ ಕಾಲಕ್ರಮೇಣ ಈ ಸಾಮ್ರಾಜ್ಯವು ಹುಟ್ಟಿತು. ಇವುಗಳಿಗೆ ಇರುವ ಪರಸ್ಪರ ಸಂಬಂಧ ಮತ್ತು ಅಧಿಕಾರಗಳ ವಿಷಯ ಬ್ರಿಟನಿಗೂ ವಸಾಹತುಗಳಿಗೂ ಚರ್ಚೆಯು ಬಂದ ಸಮಯದಲ್ಲಿ ಪ್ರತಿ ಒಂದು ವಸಾಹತಿಗೆ ಕಾನೂನಿನಲ್ಲಾಗಲೀ ರಾಜಕೀಯ ಪದ್ಧತಿಯಲ್ಲಾಗಲೀ (Custom) ಸ್ಪಷ್ಟವಾದ ಕಾನೂನಿಲ್ಲದಿದ್ದರೆ ಪ್ರತಿ ಒಂದು ಸಂಸ್ಥೆಗೆ ಪೂರಾ ಸ್ವಾತಂತ್ರ್ಯವು ಇದೆ. ಈ ವಿಷಯ ಜನತೆಯಲ್ಲಿ ಇರಬಹುದಾದ ಯಾವ ಸಂಶಯಗಳೂ ಈಗ ಇರುವದಿಲ್ಲ. ಕೆನಡಾ ದೇಶದ ಮುಖ್ಯಮಂತ್ರಿಗಳಾದ (Sir Robert Borden) ಬೋರ್ಡನ್ ಎಂಬವರ ಅಪೇಕ್ಷೆ ಮೇರೆಗೆ ಆಗಿನ ಮುಖ್ಯ ಮಂತ್ರಿಯಾದ ಲ್ಲೊಯ್ಡ ಜೋರ್ಜರು 1917ರಲ್ಲಿ ವಸಾಹತಿಗಳ ಸ್ವಾತಂತ್ರ್ಯವನ್ನು ಒಪ್ಪಿರುವರು. 1926ರಲ್ಲಿ ಬಾಲ್ಫರ್ (Balfour) ಕಮಿಟಿಯವರು ಇದನ್ನು ಒಪ್ಪಿ 1930ರಲ್ಲಿ (Statute of west-minister) ಎಂಬ ಕಾನೂನು ಪಾರ್ಲಿಮೆಂಟಿನಲ್ಲಿ ಪಾಸಾಯಿತು. ಈ ಕಾನೂನು ಮೇರೆಗೆ ಬ್ರಿಟಿಷ್ ಸಂಸ್ಥೆಗಳು ಸ್ವಾತಂತ್ರ್ಯವನ್ನೇ ಮುಖ್ಯ ಧ್ಯೇಯವಾಗಿ ಇಟ್ಟುಕೊಂಡಿರುವಂತಲೂ ಪ್ರತಿ ಒಂದು ಕಲೋನಿಯು ಸರಿಸಮಾನವಾಗಿದ್ದು ಅವುಗಳ ಪೈಕಿ ಪ್ರತಿ ಒಂದು ವಸಾಹತಿಗೂ ತನ್ನ ಸ್ವಂತದ ಮತ್ತು ಪರಕೀಯ ರಾಜ್ಯಗಳ ವಿಷಯದ ವ್ಯವಹಾರಗಳಲ್ಲಿ ಸ್ವಾತಂತ್ರ್ಯವು ಇರಬೇಕೆಂತಲೂ ಇದೆ. ಬ್ರಿಟಿಷ್ ಅರಸರ ಮೇಲಣ ಭಕ್ತಿಯೇ ಈ ಸಂಸ್ಥೆಗಳ ಬಂಧನವಾಗಿರಬೇಕೆಂಬದೇ ಮುಖ್ಯ ತಾತ್ಪರ್ಯ; ವ ಈ ಕಾನೂನಿನ ಪ್ರಥಮ ಸೂತ್ರ. ನಮಗೆ ಕೊಡತಕ್ಕ ಸಾಮಂತ (Dominion status) ಸ್ವರಾಜ್ಯ ಎಂಬುದು ಈ ಕಾನೂನು ಮೇರೆಗೆ ಇರತಕ್ಕ ಸ್ವಾತಂತ್ರ್ಯ; ಬ್ರಿಟಿಷ್ ಪಾರ್ಲಿಮೆಂಟಿನವರು ಜಾರಿಗೆ ತರಬಹುದಾದ ಯಾವದೊಂದು ಕಾನೂನು ಅವರ ಈ ವಸಾಹತಿಗಳ ಒಪ್ಪಿಗೆ ಇಲ್ಲದೆ ಈ ವಸಾಹತಿಗಳ ಮೇಲೆ ಬಾಧಿಸಲಾರದು.

ಈ ಬಂಧನಗಳು ಅಸ್ಪಷ್ಟ. ಇನ್ನಷ್ಟು ಸ್ಪಷ್ಟಪಡಿಸುವ ಅಗತ್ಯವಿಲ್ಲ ಎಂಬುದಾಗಿ ಆಗ ವಸಾಹತಿಗಳ ರಾಜಕೀಯ ಧುರೀಣರ ಅಭಿಪ್ರಾಯವಿತ್ತು. ಈ ರೀತಿ ಈ ಕಾನೂನಿನ ಬಂಧನಗಳು ಶಿಥಿಲವೆಂಬುದಾಗಿ ತೋರಿದರೂ ಅದು ಈ ವರೆಗೆ ಅತ್ಯುತ್ತಮ ರೀತಿಯಿಂದ ನಡೆದುಕೊಂಡುಬಂದಿದೆ. ಇಂಗ್ಲಂಡಿಗೂ ವಸಾಹತಿಗಳಿಗೂ ಇರುವ ಪ್ರೇಮಪಾಶಗಳು ಅತೀ ಬಿಗಿಯಾಗಿರುವವು.

ರಾಜ್ಯಗಳು ಸೇರಿ ಜನಾಂಗಗಳ ಒಂದು (League) ಅಥವಾ ಸಂಸ್ಥೆಯನ್ನು ಏರ್ಪಡಿಸಬೇಕೆಂಬ ಭಾವನೆಯು ಬ್ರಿಟಿಷ ಸಾಮ್ರಾಜ್ಯದಲ್ಲಿ ಪ್ರಥಮತಃ ಅಂಕುರಿಸಿತು. ಅಬಿಸೀನಿಯದ ಯುದ್ಧದಲ್ಲಿ (League of nations) ಈ ಲೀಗಿನ ಪ್ರಾಬಲ್ಯವು ಕಡಿಮೆಯಾದರೂ, ಸಾಮ್ರಾಜ್ಯದಲ್ಲಿ ಏಕತ್ವವನ್ನು ಹುಟ್ಟಿಸಿ ಸಾಮ್ರಾಜ್ಯದ ಜನಾಂಗಗಳ ಒಂದು ಸಂಸ್ಥೆಯನ್ನು ನಿರ್ಮಿಸಿ ಆ ಮೂಲಕ ಸ್ನೇಹಭಾವವನ್ನೂ ಪರಸ್ಪರ ಸಹಾಯದ ಸೂತ್ರಗಳನ್ನೂ ಭೂಲೋಕದ ಜನಾಂಗಗಳ ನಡತೆಯಲ್ಲಿ ಜಾರಿಗೆ ತರಬೇಕೆಂಬ ಭಾವನೆಯು ಆಂಗ್ಲೇಯ ಮುಖಂಡರಲ್ಲಿ ಹುಟ್ಟಿತು. ಬ್ರಿಟಿಷ ಮಂತ್ರಿಯಾಗಿದ್ದ ಬಾಲ್ಡ್ವಿನರು 1937ರಲ್ಲಿ (Imperial conference) ನಲ್ಲಿ ಕೊಟ್ಟ ಗಂಭೀರ ಭಾಷಣದಲ್ಲಿ:

“ನಾವು ಎಲ್ಲರೂ ಒಂದು ರಾಜಕೀಯ ಒಂದು ಕೆಲಸದ ಪಾಲುಗಾರರು; ನಾವು ಒಂದು ರಾಜಕೀಯ ಪ್ರಯೋಗವನ್ನು ಈ ಭೂಲೋಕದಲ್ಲಿ ಜಾರಿಗೆ ತರುವ ಜವಾಬ್ದಾರಿಯನ್ನು ಕೈಗೊಂಡಿದ್ದೇವೆ. ಅದರ ಜಯಾಪಜಯದ ಮೇಲೆ ಭೂಲೋಕದ ಮುಂದಿನ ಮುನ್ನಡೆಯು ಅವಲಂಬಿಸಿರುವದು.” ಎಂಬುದಾಗಿ ಹೇಳಿರುವರು.

“ಬ್ರಿಟಿಷರು ಈ ಭೂಲೋಕದ ಎಲ್ಲಾ ಕೊರತೆಗಳನ್ನು ನಿವಾರಿಸುವರು” ತಾವು ಸ್ವಾರ್ಥ ದೃಷ್ಟಿಯನ್ನು ಬಿಟ್ಟು ತಮ್ಮ ಸಾಮ್ರಾಜ್ಯದ ಎಲ್ಲ ಜನಾಂಗಗಳಿಗೆ ತಾವು ಜಾರಿಗೆ ತಂದಿರುವ ಪ್ರಜಾಪ್ರಭುತ್ವದ ಸಂಸ್ಥೆಗಳ ಮೂಲಕ ಯಾವತ್ತು ಆರ್ಥಿಕ ರಾಜಕೀಯ ಸುಖವನ್ನು ಕೊಡಬೇಕೆಂಬ ಮುಖ್ಯ ಘನತರವಾದ ಅಭಿಲಾಷೆಯನ್ನು ಬ್ರಿಟಿಷ ರಾಜತಂತ್ರ ವಿಶಾರದರು ತೋರ್ಪಡಿಸಿದರು.

ಈ ದೃಷ್ಟಿಯಿಂದ ಸಾಮ್ರಾಜ್ಯವನ್ನು ಆರ್ಥಿಕ ಮಾರ್ಗದಲ್ಲಿ ಏಕತ್ವದಿಂದ ನಡೆಸುವ ಬಗ್ಗೆ ತಮ್ಮ (Free Trade) ಪೋಲಿಸಿಯನ್ನು (ಸುಂಕವಿಲ್ಲದ ಆಮದು ರಫ್ತು) ಬ್ರಿಟಿಷರು ಬಿಟ್ಟಿರುವರು. ಬ್ರಿಟಿಷರ ಈಗಿನ ನಿವೃತ್ತ ಮಂತ್ರಿ ನೆವಿಲ್ ಚೆಂಬರ್ಲೇನರ ತಂದೆಯಾದ ಜೋಸೆಫ್ ಚೆಂಬರ್ಲೇನರು ಹೊಸತಾಗಿ ಹಿಂದೆ ಹೂಡಿದ “ಸಾಮ್ರಾಜ್ಯದ ಸಾಮಾನುಗಳ ಮೇಲೆ ಮಾತ್ರ ತೆರಿಗೆಯನ್ನು ಹಾಕಬಾರದು; ಪರರಾಜ್ಯದ ಆಮದಿನ ಮೇಲೆ ತೆರಿಗೆಗಳನ್ನು ಹಾಕಬೇಕೆಂಬ “Imperial Preference” ಎಂಬ ಹೊಸ ಸೂತ್ರವನ್ನು ಜಾರಿಗೆ ಇಂಗ್ಲಂಡು ತಂದಿತು. ಆ ಬಗ್ಗೆ ಒಟ್ಟಾವಾ (Ottawa) ಎಂಬಲ್ಲಿ ಒಂದು ಕೊನ್ಫರೆನ್ಸ್ ನಡೆಯಿತು. ಕೊಚ್ಚಿನ್ ರಾಜ್ಯದ ಈಗಿನ ದಿವಾನರಾದ ಸರ್ ಷಣ್ಮುಗಂ ಚೆಟ್ಟಿಯಾರರು ನಮ್ಮ ದೇಶದ ಪ್ರತಿನಿಧಿಯಾಗಿ ಅಲ್ಲಿಗೆ ಹೋಗಿದ್ದರು. ಆ ರೀತಿ ಆದ ಒಟ್ಟಾವಾ ಒಪ್ಪಂದದಿಂದ ನಮ್ಮ ದೇಶಕ್ಕೆ ಹೆಚ್ಚಿನ ಪ್ರಯೋಜನವಾಗಲಿಲ್ಲ ಎಂಬ ಅಭಿಪ್ರಾಯವು ನಮ್ಮ ದೇಶದಲ್ಲುಂಟು. ಆದರೂ ಅದು ಸಾಮ್ರಾಜ್ಯದ ಆರ್ಥಿಕ ಏಕತ್ವದ ಪ್ರಥಮ ಹೆಜ್ಜೆಯೆನ್ನಬಹುದು.

1914-1918ನೇ ಯುದ್ಧದಲ್ಲಿ ಕೆನಡಾ ದೇಶದಿಂದಲೂ ನ್ಯೂಜಿಲೇಂಡ್ ದಕ್ಷಿಣ ಆಫ್ರಿಕದಿಂದಲೂ ಬ್ರಿಟಿಷರ ಸಹಾಯಕ್ಕೆ ಸೈನಿಕರು ಬಂದಿದ್ದರು. ಆಸ್ಟ್ರೇಲಿಯದವರು ಗೆಲ್ಲಿಪೋಲಿ ಮೊದಲಾದ ಯುದ್ಧರಂಗದಲ್ಲಿ ತಮ್ಮ ಜೀವನವನ್ನು ಸಾಮ್ರಾಜ್ಯ ಹಿತಕ್ಕಾಗಿ ಒಪ್ಪಿಸಿದರು. ಹಿಂದೂದೇಶದಿಂದ ಈ ಎಲ್ಲ ವಸಾಹತಿಗಳಿಗಿಂತ ಹೆಚ್ಚಿನ ದ್ರವ್ಯಸಹಾಯವೂ ಜನಸಹಾಯವೂ ಸಿಕ್ಕಿದ್ದಿತು. ಐರ್ಲೆಂಡು ಆಗ ಸ್ವತಂತ್ರ ರಾಜ್ಯವಾಗಿರಲಿಲ್ಲ.

ಈಗಿನ ಯುದ್ಧದಲ್ಲಿಯೂ ಬ್ರಿಟಿಷರಿಗೆ ನಮ್ಮ ದೇಶದಿಂದ ಮೊದಲಿನಂತೆ ಧನಸಹಾಯವೂ ಜನಸಹಾಯವೂ ಸಿಕ್ಕಿಯದೆ. ನಮ್ಮ ದೇಶಕ್ಕೆ ಬ್ರಿಟಿಷರು ಸ್ವಾತಂತ್ರ್ಯ ಕೊಡುತ್ತೇವೆಂಬುದಾಗಿ ಭರವಸೆ ಕೊಟ್ಟಲ್ಲಿ ಇನ್ನಷ್ಟು ಸಹಾಯವು ಸಿಕ್ಕದಿರಲಾರದು. ಐರ್ಲೆಂಡು ಈಗ ತಟಸ್ಥವಾಗಿರುವದು. ದಕ್ಷಿಣ ಆಫ್ರಿಕದಲ್ಲಿ ಯುದ್ಧವಿಷಯ ಪ್ರಥಮ ಭಿನ್ನಾಭಿಪ್ರಾಯಗಳಿದ್ದರೂ ಹೊಲ್ಜೋಗರನ್ನು ಜನರಲ್ ಸ್ಮಟ್ಸರು ಸ್ವಾಧೀನಮಾಡಿಕೊಂಡನಂತರ ಈ ಅಭಿಪ್ರಾಯವು ಇರಲಾರದು. ಕೆನಡಾದಿಂದ ಜನಸಹಾಯವು ಬಂದಿರುವದು. ಅಲ್ಲಿಯ ಸೈನ್ಯಕ್ಕೆ ಬೇಕಾಗುವ ವಾಯುವಿಮಾನಗಳು ಮತ್ತು ಯುದ್ಧಸಾಮಗ್ರಿಗಳು ತಯಾರಾಗುವವು. ಅದಕ್ಕೆ ಬ್ರಿಟಿಷರು ದ್ರವ್ಯಸಹಾಯಮಾಡಿ ಬ್ರಿಟನಿನಲ್ಲಿರುವ ವಾಯು ಹಡಗಗಳನ್ನು ತಯಾರು ಮಾಡುವ ಕಂಪೆನಿಯವರು ತಮ್ಮದೊಂದು ಶಾಖೆಯನ್ನು ಅಲ್ಲಿ ತೆರೆಯುವಂತೆ ಮಾಡಿರುವರು. ಹಿಂದೂದೇಶದ ಜನರ ಮೇಲೆ ಬ್ರಿಟಿಷರಿಗೆ ಇನ್ನೂ ಭರವಸೆಯಿಲ್ಲವೆಂಬಂತೆ ಕಾಣುತ್ತದೆ. ವಿಶಾಖಪಟ್ಣದಲ್ಲಿಯೂ ಕಲ್ಕತ್ತೆಯಲ್ಲಿಯೂ “ವ್ಯಾಪಾರದ” ಹಡಗಗಳನ್ನು ತಯಾರಿಸಲು ಬೇಕಾದ (Yards) ಅಥವಾ ದೊಡ್ಡ ಕಟ್ಟೋಣಗಳನ್ನು ಕಟ್ಟಿಸಬೇಕೆಂಬ ಆಲೋಚನೆಯು ನಮ್ಮ ಸರ್ಕಾರದಲ್ಲಿ ಹುಟ್ಟಿಯದೆ.

ಈ ಯುದ್ಧದ ನಂತರ ಈ ಸಾಮ್ರಾಜ್ಯವು ಯಾವ ರೀತಿಯಲ್ಲಿ ಪರಿಣಮಿಸೀತು ಎಂಬವಾಗಿ ಹೇಳಲು ಸಾಧ್ಯವಿಲ್ಲ. ದೂರದಲ್ಲಿರುವ ವಸಾಹತಿಗಳು ಬೇರೆ ಬೇರೆ ರಾಜ್ಯಗಳ ಕೂಡೆ ಸೇರಿ ಬ್ರಿಟಿಷ್ ಸಾಮ್ರಾಜ್ಯವನ್ನು ಬಿಡುವವು ಎಂಬುದನ್ನು ಕಾಲಕ್ರಮೇಣ ನಾವು ತಿಳಿಯಲಿರುವೆವು.

ಅಮಲು ಜೋರ

ಡಾಕ್ಟರ್- ನಿನ್ನ ರೋಗವು ಬಹಳ ವಿಲಕ್ಷಣವಾಗಿ ನನಗೆ ಕಾಣುತ್ತದೆ; ಕುಡಿಯುವ ಅಭ್ಯಾಸವಿರುವಂತೆ ತೋರುತ್ತದೆ.

ರೋಗಿ- ಆಗಲಿ ಡಾಕ್ಟರೇ! ಅಮಲಿಳಿಯುವ ಹೊತ್ತಿಗೇನೆ ಮತ್ತೆ ಬರುತ್ತೇನೆ.

ಮಂಗಳೂರು ಮತ್ತು ಉಡುಪಿಗೆ ಬಂದಾಗ ನಿಮಗೆ
ಸುಖವಾದ ನಿವಾಸ ದೊರೆಯಬೇಕೋ?
— ಹಾಗಾದರೆ —
ಸುಖನಿವಾಸಕ್ಕೆ ಬನ್ನಿ.
ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,
ವಿದ್ಯುದ್ದೀಪಾಲಂಕೃತ ಕೋಣೆ.
ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವುದೆಲ್ಲಿ?
ಸುಖನಿವಾಸದಲ್ಲಿ ಮಾತ್ರ.
ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.
ಮಂಗಳೂರಿನಲ್ಲಿ ಹೇಮಿಂಗ್ಟೆಯಲ್ಲಿಯೂ, ಉಡುಪಿಯಲ್ಲಿ ತಾಲೂಕು ಕಚೇರಿಯ
ಬಳಿಯಲ್ಲಿಯೂ ಇರುವ 'ಸುಖನಿವಾಸ'ವನ್ನು ಒಮ್ಮೆ ಸಂದರ್ಶಿಸಿರಿ.
ಪ್ರೊಪ್ರೈಟರ್, ಸುಖನಿವಾಸ.

ನಿಮ್ಮ ಮನೆಯಲ್ಲಿ ಸದಾ ಆನಂದದ ಜ್ಯೋತಿಯು
ಬೆಳಬೆಳಗುತ್ತಿರಬೇಕೇ? ಹಾಗಿದ್ದರೆ--- ---
ನಂದಾದೀಪ
ಎಂಬ ಉತ್ಕೃಷ್ಟ ಚಿಕ್ಕಕತೆಗಳ ಪ್ರತಿಯೊಂದನ್ನಿಟ್ಟುಕೊಳ್ಳಿ.
ಕರ್ನಾಟಕದ ಪ್ರಸಿದ್ಧ ಕತೆಗಾರರಲ್ಲೊಬ್ಬರಾದ ಶ್ರೀ ಕೊರಡ್ಕಲ್
ಶ್ರೀನಿವಾಸ ರಾಯರು ಬರೆದ ಮನೋಹರವಾದ
ಹನ್ನೊಂದು ಕತೆಗಳ ಸಂಗ್ರಹ.
ಪ್ರತಿಯೊಂದು ಕತೆಯೂ ನಿಮ್ಮ ಹೃದಯದಲ್ಲೊಂದು
ಬಗೆಯ ಹೊಸ ಬೆಳಕನ್ನು ಬೆಳಗಿಸುವುದು.
ಬೆಲೆ: 0-8-0 ಅಂಚೆ ಸಹಿತ: 0-9-0
ಕಿರಿಯರ ಪ್ರಪಂಚ, ಉಡುಪಿ.
(0-9-0 ಸ್ಟಾಂಪು ಕಳಿಸಿದವರ ಒಂದು ಪ್ರತಿಯನ್ನು ಕಳಿಸಲಾಗುವುದು)

ಆನೆಯು ಮೊದಲು ಅಂಬಾರಿಯ ಯೋಚನೆ!

ನಾಜಿಗಳಿಗೆ ಇಂಗ್ಲಾಂಡು ಆಳುವ ತರಬೇತಿ!

ಹಿಟ್ಲರನ ದೊಡ್ಡ ಗುಟ್ಟೊಂದು ಈಗ ಹೊರಬಿದ್ದಿದೆ. ಸದ್ಯದ ಪರಿಸ್ಥಿತಿಯೇನೋ ಬಹಳ ಭೀಕರವಾಗಿ ಕಾಣುತ್ತದೆ. ಜ್ಯೋತಿಷ್ಯಭಕ್ತರ ಭಾಷೆಯಲ್ಲಿ ಹೇಳುವದಾದರೆ ಹಿಟ್ಲರನಿಗೀಗ ನಡೆಯುತ್ತಿರುವದು ಬುಧದಶೆ! ಇಂತಹ ಕಾಲದಲ್ಲಾದರೂ ಕೇಳುವಾಗ ಹಾಸ್ಯಾಸ್ಪದವಾಗಿ ತೋರುವ ಒಂದು ಗೂಢ ಕಾರ್ಯಕ್ರಮವನ್ನು ಜರ್ಮನಿಯಲ್ಲಿ ನಾಜಿಗಳು ಎಂದೋ ಕೈಗೊಂಡಿದ್ದರು. ಅದು ಮತ್ತಾವುದೂ ಅಲ್ಲ. ಇಂಗ್ಲಾಂಡನ್ನಾಳಲು ನಾಜೀ ತರುಣರಿಗೆ ತರಬೇತಿ ಕೊಡುವ ಗುಪ್ತ ಶಾಲೆಯೊಂದು ಜರ್ಮನಿಯಲ್ಲಿ ಕೆಲವು ವರುಷಗಳಿಗೆ ಮೊದಲೇ ಸ್ಥಾಪಿಸಲ್ಪಟ್ಟಿತ್ತು. ಈ ಗುಟ್ಟನ್ನು ಕೆಲವು ಕಾಲ ಆ ಶಾಲೆಯ ವಿದ್ಯಾರ್ಥಿಯಾಗಿದ್ದು ಜರ್ಮನಿಯಿಂದ ಹೇಗೂ ತಪ್ಪಿಸಿಕೊಂಡು ಬಂದು ಈಗ ಅಮೇರಿಕದ ಹಾದಿ ಹಿಡಿದಿರುವ ಫ್ರಿಟ್ಸ್ ಗೆರ್ಬರ್ ಎಂಬ ಜರ್ಮನಿ ಯುವಕನೊಬ್ಬನು ಬೆಳಕಿಗೆ ಹಾಕಿರುವನು.

ಸವಿಾಪದ ವಾಯಿದೆ

ಬ್ರಿಟನ್ ಸಾಮ್ರಾಜ್ಯ ಲೋಕದ ಅತಿ ಪ್ರಬಲವಾದ ಶಕ್ತಿಯಾಗಿರುವದೇನೋ ನಿಜ. ಆದರೆ ಹಿಟ್ಲರನು ಅದನ್ನು ಗೆದ್ದು ಇಂಗ್ಲಾಂಡನ್ನು ಆಳುವುದಕ್ಕೆ ಇಟ್ಟಿರುವ ವಾಯಿದೆಯಾವುದು ಗೊತ್ತೆ? 1944 ನೇ ಇಸವಿ! ಇದು ವಾರಕ್ಕೊಂದು ದೇಶವನ್ನು ಫಲಾಹಾರಮಾಡುತ್ತಾ ಬಂದ ಇಂದಿನ ಯುದ್ಧಾರಂಭದ ನಂತರ ಮಾಡಿದ ಪ್ರತಿಜ್ಞೆ ಕೂಡ ಅಲ್ಲ. ಮ್ಯೂನಿಚ್ ಪ್ರಕರಣದ ಮೊದಲು ನಾಜಿಗಳು 1948ರೊಳಗೆ ಇಂಗ್ಲಾಂಡನ್ನು ಜಯಿಸಬೇಕೆಂಬ ಸಂಕಲ್ಪ ಮಾಡಿದ್ದರಂತೆ. ಆದರೆ ಮ್ಯೂನಿಚ್ ಒಪ್ಪಂದವಾದ ವೇಳೆ ಹಳೆ ನಿಧಾನವನ್ನೆಲ್ಲಾ ಕಂಡುಹಿಡಿದು, ಅದಕ್ಕೂ ನಾಲ್ಕು ವರುಷ ಮೊದಲೇ ಇಂಗ್ಲಾಂಡನ್ನು ಗೆಲ್ಲಬಹುದೆಂಬ ನಿರ್ಧಾರಕ್ಕೆ ಬಂದರು. ಇಂದಿನ ಯುದ್ಧಾನಂತರ ಆ ವಾಯಿದೆ ಇನ್ನಷ್ಟು ಸವಿಾಪಕ್ಕೆ ಬಂದಿರಲೂ ಸಾಕು. ಅಂತೂ ಆ ಮೊದಲು ಇದ್ದ ವಾಯಿದೆಯೆಂದರೆ 1944ನೇ ವರುಷ. ಶತಮಾನಗಳ ಸ್ವಾತಂತ್ರ್ಯವನ್ನನುಭವಿಸಿದ್ದ ದೇಶಗಳ ಆಯುಸ್ಸನ್ನು ಪರಿಪಾಕ್ಕೊಂದೊಂದು ಘಂಟೆಯಂತೆ ಪರಿಹಾಸಿಬಿಟ್ಟ ಹಿಟ್ಲರನಿಗೆ 1944ರ ವರೆಗೆ ಕಾಯುವಷ್ಟು ತಾಳ್ಮೆಯಿತ್ತೆಂಬುದೊಂದು ವಿಶೇಷವಲ್ಲವೇನು? ನಾಜಿಗಳಲ್ಲಿ ಹರಡಿರುವ ಅಭಿಪ್ರಾಯವೆಂದರೆ ತಾವು ತಮ್ಮ ಜನ್ಮದ್ವೇಷಿ ಬ್ರಿಟನನ್ನು ಅಳಿಯೇ ತೀರುವೆವು; 1944ರೊಳಗೆ ಆಳುವದಂತೂ ಖಂಡಿತವೆಂಬುದೇ! ಆ ಮೇಲೆ ಇಂಗ್ಲಾಂಡನ್ನಾಳುವ ಕೆಲಸವೊಂದುಂಟಷ್ಟೆ. ಅದಕ್ಕಾಗಿ ಜರ್ಮನಿಯ ಸಿಗ್‌ಫ್ರಿಡ್ ಕೋಟೆಯೊಳಗೆ ಡಸ್ಸೆಲ್‌ಡೋರ್ಫ್ ಊರಿನ ಬಳಿಯ ಬ್ರೋಟ್ಸಿಂಗೆನ್ ಎಂಬಲ್ಲಿ ಒಂದು ತರಬೇತಿನಿಲಯವೇ ಸ್ಥಾಪಿಸಲ್ಪಟ್ಟಿದೆ. ಅಲ್ಲಿ ಇಂಗ್ಲಾಂಡಿನ ಭಾವೀ ಜಿಲ್ಲಾಧಿಕಾರಿಗಳ ತರಬೇತಿ ನಡೆಯುತ್ತಿದೆ. ಪಾಪ, ಇಂಗ್ಲಾಂಡಿನವರಿಗೇನು ಗೊತ್ತು, ತಮ್ಮನ್ನಾಳುವವರು ಜರ್ಮನಿಯಲ್ಲಿ ತಯಾರಾಗುತ್ತಿದ್ದಾರೆ ಎಂದು ಫ್ರಿಟ್ಸ್ ಗೆರ್ಬರನೊಬ್ಬನು ತಪ್ಪಿಸಿಕೊಂಡು ಬರುವದಲ್ಲವಾಗಿದ್ದರೆ ಇಂದಿಗೂ ಆ ಸಂಗತಿ ಗುಟ್ಟಾಗಿಯೇ ಇರುತಿತ್ತು. ಅವನ ಚರಿತ್ರೆಯನ್ನು ಕೇಳಿ.

ಜಿಲ್ಲಾಧಿಕಾರೀ ತರಬೇತಿ

ಫ್ರಿಟ್ಸ್ ಗೆರ್ಬರ್ ಎಂದರೆ ಆಶಾವಾದೀ ತರುಣ. ಅಂಕೆಬಿಂಕೆಗಳಿಗೊಳಗಾಗುವ ಸ್ವಭಾವದವನಲ್ಲ. ಅವನನ್ನುತ್ತಾನೆ:— 1939ನೇ ಫೆಬ್ರವರಿ ತಾ. 11ರಲ್ಲಿ ನನಗೊಂದು ಹುಕುಮು ಬಂತು. ಗ್ವಾಲಿಯಸ್ಟರದ ಕಾಲೇಜಿನ ತರಬೇತಿ ಪಡೆಯುವರೆ ಅರ್ಜಿ ಕಳುಹಿಸಬೇಕೆಂಬ ಅಪ್ಪಣೆ ಅದರಲ್ಲಿತ್ತು. ಆ ಕಾಲೇಜಿರುವ ಸ್ಥಳ ಪರಿಚಯವೇ ನನಗಿರಲಿಲ್ಲ. ಅನ್ಯಥಾ ಭಾವಿಸಿಕೊಂಡು ನಾನಲ್ಲಿಗೆ ಹೋದಾಗ 'ಗ್ವಾಲಿಯಟರ್ಸ್ ಕಾಲೇಜಿ'ನ ಡೈರೆಕ್ಟರರಾದ ಹೆರ್ ವೊನ್ ಲೆಸ್ಸಿಂಗೆನ್ ರವರಂದರು, "ನಾವಿಲ್ಲಿ ಇಂಗ್ಲಾಂಡಿನ ಭಾವೀ ಅಧಿಕಾರಿಗಳ ತರಬೇತಿಮಾಡುತ್ತಿದ್ದೇವೆ. ಬ್ರಿಟನ್ ಆಳ್ವಿಕೆಯ ತರಗತಿಗಳೆಲ್ಲಾ ಹೆಚ್ಚೆಂದರೆ 1944ರೊಳಗೆ ಮುಗಿಯಬೇಕು. ಇದು ಬಹಳ ಮುಖ್ಯವಾದ ಕಾರ್ಯ. ನೀನು ಇತರ ಸಹಪಾಠಿಗಳಂತೆ ಅದಕ್ಕೀಗ ಸಿದ್ಧನಾಗಬೇಕು" ಈ ಬ್ರೋಟ್ಸಿಂಗೆನಿನ ಕಾಲೇಜು ಒಂದು ಕಾಲದಲ್ಲಿ ಸುಪ್ರಸಿದ್ಧ ಭಂಗಾರ ವ್ಯಾಪಾರಿಯೊಬ್ಬನ ಅತಿ ಸುಂದರ ಕಟ್ಟಡವಾಗಿತ್ತು. ಇಲ್ಲಿಯ ವಿದ್ಯಾರ್ಥಿಗಳು ಮಿಲಿಟರಿ ಕಾನೂನಿನನ್ವಯ ನಡೆಯಬೇಕಾಗಿತ್ತಲ್ಲದೆ ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ರಾತ್ರಿಹಗಲು ಪಹರೆಮಾಡುತ್ತಿದ್ದರು. ಇಲ್ಲಿಯ ಕ್ಲಾಸುಗಳ ಕುರಿತು ಯಾರಿಗೂ ಪತ್ರ ಬರೆಯದಂತೆ ನಿರ್ಬಂಧವಿತ್ತು. ನಾವು ಅತ್ಯಂತ ಶಿಸ್ತಿನಿಂದ ನಡೆದುಕೊಳ್ಳಬೇಕಾಗಿತ್ತು. ಬೆಳಗ್ಗೆ 6 ಘಂಟೆಗೆ ಎದ್ದು ಮಿಲಿಟರಿ ವ್ಯಾಯಾಮಮಾಡಿ ಫಲಾಹಾರವಾದೊಡನೆ ಎರಡು ಘಂಟೆ ನಾಜೀ ರೀತಿನೀತಿಗಳ ಪಾಠ ದೊರೆಯುತ್ತಿತ್ತು. ಆ ಮೇಲೆ ದಿನವಿಡೀ ಇಂಗ್ಲಾಂಡನ್ನಾಳುವ ರೀತಿಯ ಕುರಿತು ಪಾಠಪ್ರವಚನ. ಹೀಗೆ ದೀರ್ಘಕಾಲ ಸ್ವಾತಂತ್ರ್ಯವನ್ನನುಭವಿಸಿ ಜಡವೇರಿದ್ದ ಬ್ರಿಟಿಷರ ಮೇಲೆ ಅಧಿಕಾರ ಚಾಲುಮಾಡುವ ವಿದ್ಯಾಭ್ಯಾಸವಾಗಲಿ ಗಳಿಂದ ತಾವು ಪ್ರತ್ಯಕ್ಷ ಯಮಭಟರೆನ್ನಿಸುವಷ್ಟು ತರಬೇತಿಯನ್ನಲ್ಲಿ ಪಡೆಯುತ್ತಿದ್ದೆವೆಂದು ಮಿ| ಗೆರ್ಬರನನ್ನುತ್ತಾನೆ.

ಯಹೂದೀ ಸಂಬಂಧಕ್ಕಾಗಿ ಡಿಸ್‌ಮಿಸ್!

ಆ ಕಾಲೇಜಿನಲ್ಲಿ ಒಟ್ಟಿಗೆ 40 ಮಂದಿ ವಿದ್ಯಾರ್ಥಿಗಳಿದ್ದರು-ಇವರಿಗೆಲ್ಲಾ ಜಿಲ್ಲಾಧಿಕಾರ ನಡೆಸುವ ತರಬೇತಿ ದೊರೆಯುತ್ತಿತ್ತು. ಆಗಾಗ ನಾಜೀ ಪ್ರಮುಖರ ಭಾಷಣಗಳ ಏರ್ಪಾಡೂ ಇತ್ತು. ಫ್ರಿಟ್ಸ್ ಗೆರ್ಬರನಿಗೆ ಸರ್ರೇ ಪ್ರಾಂತ್ಯದ ಅಧಿಕಾರವನ್ನು ಕೊಟ್ಟಿದ್ದರಂತೆ. ಇಂಗ್ಲಾಂಡು, ಸ್ಕೋಟ್ಲೇಂಡ್ ಮತ್ತು ವೇಲ್ಸಿನ ಜಿಲ್ಲೆಗಳಲ್ಲೊಂದೊಂದಕ್ಕೆ ಒಬ್ಬೊಬ್ಬನು ಅಧಿಕಾರಿಯಾಗಿ ತರಬೇತು ಪಡೆಯುತ್ತಿದ್ದನು. ಹೇಗಿದೆ ಸ್ವಾರಸ್ಯ! ತಿರುಕನ ಸ್ವಪ್ನದಂತಹ ಕನಸು ಲೋಕದಲ್ಲಿ ಹಲವರಿಗೆ ಬೀಳುತ್ತಿದೆ ಎಂಬುದಕ್ಕೆ ನಿದರ್ಶನವಿದು. ಇಡೀ ಇಂಗ್ಲಾಂಡನ್ನು ಇಪ್ಪತ್ತು ವಿಭಾಗವನ್ನಾಗಿ ಮಾಡಿ ನಾಜೀ ಆಳ್ವಿಕೆಗೆ ಸಂಬಂಧಪಟ್ಟ ಎಲ್ಲಾ ವಿಷಯಗಳಲ್ಲೂ ಬೇರೆ ಬೇರೆಯಾಗಿ ಪಾಠ ದೊರೆಯುತ್ತಿತ್ತು.

ಗೆರ್ಬರನು ಎರಡು ತಿಂಗಳ ತರಬೇತಿ ಹೊಂದಿದ. ಆ ಮೇಲೆ ಅವನ ವಿಭಾಗವಾದ ಸರ್ರೇ ಪ್ರಾಂತ್ಯದ ಪ್ರಕೃತಿ ಶಾಸ್ತ್ರಾನುಭವಮಾಡಿಕೊಳ್ಳುವದಕ್ಕಾಗಿ ರಿಚ್‌ಮಾಂಡ್ ಎಂಬಲ್ಲಿಗೆ ಕಳುಹಲ್ಪಟ್ಟ. ಇವನಂತಹ ಇತರ ಐದು ಮಂದಿಗ್ಳಾಯಿಟ್ಟರು ಯೋರ್ಕ್‌ಶೇರ್, ಸ್ಕೋಟ್ಲೇಂಡ್, ಮಿಡ್‌ಲೇಂಡುಗಳಿಗೆ ಪ್ರತ್ಯಕ್ಷಾನುಭವ ಪಡೆಯಲು ಕಳುಹಲ್ಪಟ್ಟಿದ್ದರು. ಗೆರ್ಬರನು ಹಿಂದಿರುಗಿದವನೇ 'ಎರ್ನ' ಎಂಬವಳಿಗೆ ಗಂಟುಬಿದ್ದು ಅವರೊಳಗೆ ವಿವಾಹ ನಿಶ್ಚಯವೂ ಆಗಿಹೋಯಿತು.

ಗೆರ್ಬರನಿಗೆ ನಾಲ್ಕು ತಿಂಗಳ ತರಬೇತಿ ದೊರೆಯಿತು. ಇಂಗ್ಲಾಂಡಿನ ಜಿಲ್ಲೆಯೊಂದನ್ನಾಳುವ ಸಾಮರ್ಥ್ಯ ಅವನ ತನುಮನದಲ್ಲಿ ಒಡೆದು ಮೂಡುತ್ತಾ ಬಂತೆನ್ನಿ. ಭಾವೀ ಅಧಿಕಾರಿ ಎಂಬುದರಿಂದ ಗೆಸ್ಟಪೋ ಪೋಲೀಸರು ಬೆನ್ನು ಹಿಡಿಯದೆ ಬಿಡುವದುಂಟೆ? ಅವರಿಗೆ ಗೆರ್ಬರ್-ಎರ್ನಾರೊಳಗಿನ ಸಂಬಂಧವು ತಿಳಿದುಹೋಯಿತು. ಗೆಸ್ಟಪೋ ದಳದವರು ಎರ್ನಾಳ ತಾಯಿ, ಅಜ್ಜ, ಮುತ್ತಜ್ಜಿಯರ ಜಾತಕ ಶೋಧನೆಮಾಡಹತ್ತಿದರು. ಎರ್ನಾಳ ಮುತ್ತಜ್ಜಿಯು ಯಹೂದಿಯಳಂತೆ! ಯಹೂದಿಯಳ ಮೊಮ್ಮಗಳ ಮಗಳಲ್ಲಿ ಯಹೂದೀ ರಕ್ತದ ಬಿಂದುವಾದರೂ ಇರದೆ ಹೋದೀತೇ? ಅಂಥವಳ ಸಂಬಂಧಿಕ ಶುದ್ಧ ನಾಜಿಯಾಗುವದೆಂದರೆ ಸಾಧ್ಯವೆ? ಎಂಬುದಕ್ಕಾಗಿ ಗೆರ್ಬರನನ್ನು ತರಬೇತಿ ನಿಲಯದಿಂದ ಹೊರಗಟ್ಟಲಾಯಿತು. ಮತ್ತಾವ ದುರ್ಗತಿಯು ಅವನನ್ನು ಹೊಂಚುತ್ತಿತ್ತೋ-ಅಷ್ಟರೊಳಗೆ ಯಾವ ಉಪಾಯದಿಂದಲೋ ಗೆರ್ಬರನಲ್ಲಿಂದ ತಪ್ಪಿಸಿಕೊಂಡು ಎರ್ನಾಳೊಡನೆ ಸ್ವಿಜರ್ಲೇಂಡಿಗೆ ಪಲಾಯನ ಮಾಡಿದ. ಈ ನಡುವೆ ಎರಡು ಬಾರಿ ಗೆಸ್ಟಪೋಗಳಿಂದ ಪಾರಾಗುವಾಗ ಅವನಿಗೆ ಸಾಕು ಸಾಕೆನ್ನಿಸಿತಂತೆ! ಅಲ್ಲಿ ಎರ್ನಾ-ಗೆರ್ಬರರೊಳಗೆ ವಿವಾಹ ನಡೆದುಹೋಯಿತು. ಈಗ ದಂಪತಿಗಳು ಅಲ್ಲಿಂದ ಅಮೇರಿಕಕ್ಕೆ ಹೊರಟಿದ್ದಾರೆ.

ಯುದ್ಧ ಪ್ರಾರಂಭವಾಯಿತೆಂದು ಈ ತರಬೇತಿ ಗೃಹವನ್ನು ಮುಚ್ಚಲಿಲ್ಲವಂತೆ. ಅಲ್ಲಿ ಈಗಲೂ ಕ್ರಮಪ್ರಕಾರ ತರಗತಿಗಳು ನಡೆಯುತ್ತಲೇ ಇವೆ. ನಮ್ಮಲ್ಲಿಯ ಐ. ಸಿ. ಎಸ್. ಆಫೀಸರರ ದರ್ಜೆ ಇವರದು. ಮುಂದೆ ಇವರು ದಂಡಧಾರಿಗಳಾಗಿ ಇಂಗ್ಲಾಂಡಿಗೆ ಹೋಗುವರೋ ಶೃಂಖಲಾಬದ್ಧರಾಗಿ ತೆರಳುವರೋ ಎಂಬುದನ್ನು ನೋಡಲಿಕ್ಕಿರುವದಷ್ಟೆ.

ಇನ್ಸೂರ್‌ಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ಹಲವಾರು ವಿಷಯಗಳು ಅನೇಕ ಇವೆ. [illegible] ಮಾಡಿದ ಆಮ ಸರ್ಟಿನ ಲೆಕ್ಕವಿದ್ದರೂ ಸಾಲದು. ಅದರಿಂದ ತಯಾರಿಸಿದ ಸಾರಾಂಶದ ನಕಲನ್ನು ಕೆಲವು ವಿಷಯಗಳಲ್ಲಿ ಟೇಕ್ಸಿನ ಆಫೀಸರರಿಗೆ ಒಪ್ಪಿಗೆಯಾಗಬೇಕು. ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ಸಮ್ಮತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಮ್ಮಿಂದ ಪಡೆಯಲಾಗುವ ಟೇಕ್ಸು ಕಡಿಮ್ಮೆಯಾಗುವದು ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನ್" ಕಳುಹಿಸಲಾಗಿ ಹೋಗಿದ್ದರೂ ತರ್ತುಗಳಿಲ್ಲದಿಲ್ಲ, [illegible] ಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸಕ್ಕೆ ಬರೆದವರೊಡನೆ ಪತ್ರವ್ಯವಹಾರ ನಡೆಸಿರಿ.

ಎಸ್. ಎಸ್. ಪುರಾಣಿಕ,
ಇನ್ಕಮ್ ಟೇಕ್ಸ್ ಪ್ರಾಕ್ಟೀಶನರ್,
ಕೃಷ್ಣಾ ರೆಸ್ಟೋರೆಂಟ್ ಬಿಲ್ಡಿಂಗ್,
ಹಂಪನಕಟ್ಟೆ, ಮಂಗಳೂರು.

ನವಯುಗದಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ನಿಮ್ಮ ವ್ಯವಹಾರ ವೃದ್ಧಿಗೊಳಿಸಿರಿ!

ಅಂತರಂಗದ

CINEMA SPECIAL NUMBER

ಅಥವಾ

" ಚಲಚ್ಚಿತ್ರಾಂಕ "

ತಾ. 30—6—'40ಕ್ಕೆ ಹೊರಬೀಳಲಿದೆ.

ಜಾಹೀರಾತಿಗೆ ಉತ್ತಮಸಾಧನ. ದರಗಳಿಗೆ ಬರೆಯಿರಿ.

Advertisement Manager,

Antaranga, Udipi.

ಉಡುಪಿಯಲ್ಲಿ ದ. ಕ. ಜಿಲ್ಲಾ ಸಹಕಾರೀ ಪರಿಷತ್ತು

ದಕ್ಷಿಣಕನ್ನಡ ಜಿಲ್ಲೆಯ ಸಹಕಾರೀ ಪರಿಷತ್ತು ಮೇ ತಾ. 27, 28, ರಲ್ಲಿ ಉಡುಪಿಯ ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲಾ ಕಟ್ಟೋಣದಲ್ಲಿ ಬೊಂಬಾಯಿಯ ಶ್ರೀ. ವಿ. ಎಲ್. ಮೆಹತಾರವರ ಅಧ್ಯಕ್ಷತೆಯಲ್ಲಿ ಜರಗಿತು. 27ನೇ ಸಂಜೆ ಪರಿಷದಧ್ಯಕ್ಷರು ಆಗಮಿಸಿ ಸ್ವಾಗತ ಪಡೆದರು. ಅಂದು ರಾತ್ರಿ ವಿಷಯ ನಿಯಾಮಕ ಮಂಡಳಿಯ ಸಭೆ ಜರಗಿತು. ತಾ. 28 ಬೆಳಿಗ್ಗೆ ಸಹಕಾರ ಧ್ವಜವನ್ನು ಶ್ರೀ. ಬಿ. ವೆಂಕಟ್ರಾಯಬಾಳಿಗ ಎಂ.ಎಲ್.ಎ. ಇವರು ಆರೋಹಣ ಮಾಡುತ್ತಾ ಸಹಕಾರೀ ಪದ್ಧತಿಯು ಜನಜೀವನವನ್ನು ಸುಧಾರಿಸುವ ರೀತಿಯನ್ನು ವಿವರಿಸಿದರು. ವಸ್ತುಪ್ರದರ್ಶನದ ಉದ್ಘಾಟನೆಮಾಡಿದ ಶ್ರೀ ಎ.ಬಿ. ಶೆಟ್ಟಿ ಎಂ.ಎಲ್.ಎ. ಇವರು ಸ್ವದೇಶೀ ಮತ್ತು ಸಹಕಾರೀ ತತ್ವಗಳ ಕುರಿತು ವಿಸ್ತರಿಸಿ ಹೇಳಿ ಕಾಂಗ್ರೆಸ್ ಸರಕಾರವು ಈ ಕುರಿತು ಮಾಡಿದ ಪ್ರಯೋಜನಗಳನ್ನು ತಿಳಿಸಿ ಪ್ರದರ್ಶನದ ಮಹತ್ವವನ್ನು ಮನಗಾಣಿಸಿದರು. ಪರಿಷತ್ತಿನ ಉದ್ಘಾಟನಾ ಸಮಾರಂಭ ಜರಗಿಸುತ್ತಾ ಜನಾಬ್ ಎಚ್. ಎಸ್. ಹುಸೇನ್ ಎಂ.ಎಲ್.ಎ. ಇವರ ಸಹಕಾರೀ ತತ್ವದಲ್ಲಿ ಅಲ್ಪಸಂಖ್ಯಾಕ ಪ್ರಶ್ನೆಯಿಲ್ಲವೆಂದು ಹೇಳಿ ಉಡುಪಿಯು ಕಾರ್ಯದಕ್ಷರಾದ ಶ್ರೀ. ಕೆ. ಜೆ. ಬಲ್ಲಾಳರ ಮತ್ತು ಅವರ ಸಹಾಯಕರ ನೇತೃತ್ವದಲ್ಲಿ ಸಹಕಾರೀ ಪ್ರಚಾರದಲ್ಲಿ ಮಾರ್ಗದರ್ಶಿಯಾಯಿತೆಂದು ಹೇಳಿದರು. ಆ ಮೇಲೆ ಸ್ವಾಗತಾಧ್ಯಕ್ಷರ ಮತ್ತು ಅಧ್ಯಕ್ಷರ ಭಾಷಣಗಳಾದುವು. ಅವುಗಳ ಕೆಲವಂಶವನ್ನು ಇಲ್ಲಿ ಕೊಡಲಾಗಿದೆ.

ಸ್ವಾಗತಾಧ್ಯಕ್ಷರಾದ ಶ್ರೀ. ಕೆ. ಜೆ. ಬಲ್ಲಾಳರ ಭಾಷಣ.

"ನಮ್ಮ ಆರ್ಥಿಕ ಮತ್ತು ಸಾಮಾಜಿಕ ಅವಶ್ಯಕತೆಗಳನ್ನು ಸಂಪಾದಿಸಲಿಕ್ಕೆ ಮಾತ್ರವಲ್ಲ; ಸಾರ್ವತ್ರಿಕ ಸಹೋದರಭಾವದ ಸಾಧನೆಗೆ ಸಹಕಾರೀ ಪದ್ಧತಿಯ ವ್ಯವಸ್ಥೆಯು ಅತ್ಯುತ್ತಮ ವಿಧಾನವೆಂಬುದನ್ನು ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇತಿಹಾಸದ ರುಜುವಾತುಗಳು ಖಂಡಿತೋಕ್ತಿಯಿಂದ ತಿಳಿಸುವಂತೆ ಹಿಂದುಸ್ಥಾನದ ಗ್ರಾಮಗಳು ಸಹಕಾರದ ತವರೂರಾಗಿದ್ದರೂ ಈಗಿನ ರೂಪದಲ್ಲಿ ಸಹಕಾರತ್ವ ನಮ್ಮ ದೇಶದಲ್ಲಿ 1904ರಲ್ಲಿ ಅಂತೆಯೇ ನಮ್ಮ ಜಿಲ್ಲೆಯಲ್ಲಿ 1909ರಲ್ಲಿ ಆರಂಭವಾಯಿತು. ಅಂದಿನಿಂದ ಈ ಚಳವಳವು ವಿಸ್ತರಿಸುತ್ತಲಿದ್ದು ಈಗ ನಮ್ಮ ಜಿಲ್ಲೆಯಲ್ಲಿ 427 ಸಂಘಗಳಿರುತ್ತವೆ. ಇವುಗಳ ಪೈಕಿ ಸೆಂಟ್ರಲ್ ಬೇಂಕು 1, ಯೂನಿಯನ್ ಸಂಘಗಳು 9, ಕೃಷಿಕರ ಸಂಘಗಳು 345 ಮತ್ತು ಕೃಷಿಕರಲ್ಲದವರ ಸಂಘಗಳು 71." ಕಡೆಯ ಎರಡು ತರಗತಿಯ ಸಂಘಗಳ ಪೂರ್ಣ ಮಾಹಿತಿಯನ್ನು ತಿಳಿಸಿ ಸ್ವಾಗತಾಧ್ಯಕ್ಷರು ಹೀಗಂದರು.

"ಕೃಷಿಕರ ಭಂಡಸಾಲಿ ಸಹಕಾರಿ ಸಂಘವು ತುಂಬಾ ಜನಪ್ರೀತವಾಗಿದೆ. ಈಗ ಜಿಲ್ಲೆಯಲ್ಲಿ ಈ ಸಂಘದ 49 ಶಾಖೆಗಳಿವೆ. ಈ ಸಂಘದ ಪಾಲು ಭಂಡವಲ ಮತ್ತು ಹೊರಬಾಕಿ ಸಾಲಗಳು ತಾ 30-6-39 ರಲ್ಲಿ ಕ್ರಮವಾಗಿ ರೂ. 2472 ಮತ್ತು ರೂ. 104,683 ಇದ್ದವು. ಸಂಘದ ಕ್ಷೇಮನಿಧಿ ರೂ. 9075ರಷ್ಟು ಬೆಳೆದಿದೆ. ಕಳೆದ ವರುಷದ ಚಲಾವಣೆ ಭಂಡವಲವು ರೂ. 139,183 ಇತ್ತು. ರೂ. 716,388 ರಷ್ಟು ಸಾಲ ಕೊಡಲಾಗಿತ್ತು. ಸಂಘವು 73,527ಮುಡಿ ಅಕ್ಕಿಯನ್ನೂ ಕೃಷಿಕರ ಇತರ 18 ತೆರನಾದ ಉತ್ಪತ್ತಿಗಳನ್ನೂ ಮಾರಾಟಮಾಡಲು ವಹಿಸಿಕೊಂಡಿತ್ತು. ಸಂಘವು ಮಾಡಿದ ಒಟ್ಟು ಮಾರಾಟದ ಮೊಬಲಗು ರೂ. 589,113 ಸದಸ್ಯರಿಗೆ ಸಿಕ್ಕಿದ ಲಾಭವು ರೂ. 10,409 ಇದ್ದು, ಸಂಘದ ನಿವ್ವಳ ಲಾಭವು ರೂ. 2361 ಇತ್ತು. ಬಿನಪತ್ತಿನ ಇತರ ವಿಧದ ಸಂಘಗಳು ಇನ್ನೂ ಬಾಲ್ಯಾವಸ್ಥೆಯಲ್ಲಿಯೇ ಇವೆ ಎನ್ನಬಹುದು. ಜಿಲ್ಲೆಯ 799 ಗ್ರಾಮಗಳಲ್ಲಿರುವ 1,400,000ದಷ್ಟು ಜನಸಂಖ್ಯೆಗೆ ಇದುವರೆಗೆ ಸಾಧಿಸಿದ ಪ್ರಗತಿಯು ಸಾಕಷ್ಟು ಇಲ್ಲವೆಂಬುದು ನಿಜವಿರುತ್ತದೆ. ಮಾತ್ರವಲ್ಲ, ಚಳವಳದ ಪ್ರತ್ಯಕ್ಷ ಕಾರ್ಯದಲ್ಲಿ ಹಲವು ನ್ಯೂನತೆಗಳೂ, ಕುಂದು-ಕೊರತೆಗಳೂ ಇರುತ್ತವೆಂಬುದೂ ನಿಜ. ಕೆಲವು ಮಂದಿ ಟೀಕಾಕಾರರೂ, ಹಿತಚಿಂತಕರೂ ಹೇಳುವಷ್ಟುಮಟ್ಟಿಗೆ ಈ ಪರಿಸ್ಥಿತಿಯನ್ನ ಶೋಚನೀಯವೆನ್ನುವಂತಿಲ್ಲವು. ಮಂದಪ್ರಗತಿ, ನ್ಯೂನತೆ ಹಾಗೂ ಕುಂದುಕೊರತೆಗಳು ಯಾವ ಚಳವಳದಲ್ಲಿಯಾದರೂ ಆರಂಭದಲ್ಲಿ ಅನಿವಾರ್ಯವಿರುತ್ತವೆ. ಇತರ ಕಡೆಗಳಲ್ಲಿಯಂತೆಯೇ ಜಿಲ್ಲೆಯಲ್ಲಿ ಕೂಡಾ ಜನಸಂಖ್ಯೆಯ ದೃಷ್ಟಿಯಿಂದ ಸಹಕಾರವು ಅತ್ಯಲ್ಪ ಪ್ರಮಾಣದಲ್ಲಿ ಮಾತ್ರ ನಡೆಯುತ್ತಿದೆ ಎಂಬುದರಿಂದಲೂ, ಇದರ ವಿಸ್ತರಣೆಗೆ ಅಮಿತವಾದ ಆಸ್ಪದವಿರುತ್ತದೆ ಎಂಬುದರಿಂದಲೂ ಈ ಚಳವಳವು ಪೂರ್ಣ ಬೆಳೆಯುವಾಗ ಇದು ಸರ್ವಹಿತದ ಅತಿ ಮಹತ್ವದ ವಿಶಾಲ ಚಳವಳವಾಗಿ ಪರಿಣಮಿಸುತ್ತದೆಂಬ ವಿಶ್ವಾಸದಿಂದ ನಾವು ತೃಪ್ತರಾಗಿ ಧೈರ್ಯ ತಾಳಬೇಕಾಗಿದೆ."

ಚಳವಳವನ್ನು ಪೂರ್ಣ ಬೆಳೆಯುವಂತೆ ಹೇಗೆ ಸಾಧಿಸಬಹುದೆಂಬ ವಿಷಯವನ್ನು ಸವಿವರವಾಗಿ ಹೇಳುತ್ತಾ ಲೇವಾದೇವಿ ಮಾತ್ರವಲ್ಲದೆ ಕೃಷಿ ವ್ಯಾಪಾರಗಳನ್ನು ಸುಧಾರಿಸುವ ಸಹಕಾರೀ ಸಂಘಗಳು ಜಿಲ್ಲೆಯಲ್ಲೆಲ್ಲಾ ಸ್ಥಾಪಿಸಲ್ಪಡಬೇಕೆಂದೂ ಚಳವಳವು ಯಶಸ್ವಿಯಾಗಬೇಕಾದರೆ ಅಧಿಕ ಸಂಖ್ಯೆಯಿಂದ ಸಮಾಜಸೇವಕರು ಮುಂದೆ ಬರಬೇಕು; ಶಿಕ್ಷಣ ಮತ್ತು ಪ್ರಚಾರಕಾರ್ಯ ಕೈಕೊಳ್ಳಬೇಕೆಂದು ವಿಶದೀಕರಿಸಿದರು. ಕೊನೆಗೆ ಅಧ್ಯಕ್ಷ ಶ್ರೀ. ಮೆಹತಾರವರನ್ನು ಅಭಿನಂದಿಸಿ ಎಲ್ಲರಿಗೂ ಸ್ವಾಗತ ಬಯಸಿದರು.

ಪರಿಷದಧ್ಯಕ್ಷರಾದ ಶ್ರೀ ವೈಕುಂಠ ಎಲ್. ಮೆಹತಾ ಇವರ ಭಾಷಣ

ಅಧ್ಯಕ್ಷರು ದಕ್ಷಿಣ ಕನ್ನಡವು ತನಗಿತ್ತ ಗೌರವಕ್ಕಾಗಿ ಪ್ರಥಮತಃ ಅಭಿವಂದನೆಯನ್ನರ್ಪಿಸಿದರು. ಎಲ್ಲೆಲ್ಲೂ ಕೃಷಿಕರಿಗೆ ಆರ್ಥಿಕ ಅಧಃಪತನವು ಪ್ರಾಪ್ತವಾದಂದಿನಿಂದ ಪುನರ್ರಚನೆಯ ಅವಶ್ಯಕತೆಯನ್ನು ಅಲ್ಲಗಳೆಯಲು ಶಕ್ಯವಿಲ್ಲ. "ಕಳೆದ 80 ವರ್ಷಗಳಲ್ಲಿ ಈ ರೀತಿ ದರ ಬಿದ್ದು ಕೃಷಿಕರ ಜೀವನದಲ್ಲಿ ಬಂದಿರುವ ಗಂಡಾಂತರವು ಬೇರೊಂದಿಲ್ಲ"ವೆಂದು ಇತ್ತೀಚೆಗೆ ಸರ್ ಮೇಲ್ಕೊಂಡಾರ್ಲಿಂಗ್ ಇವರು ಹೇಳಿರುವರು. ಪ್ರತಿಯೊಂದು ದೇಶದಲ್ಲೂ ಸರಕಾರವು ಎಚ್ಚತ್ತು ಸಾಗುವಳಿಗಾರರ ಸ್ಥಿತಿಯನ್ನು ಸುಧಾರಿಸಿ ಸಹಾಯಮಾಡುತ್ತಿದೆ. ಹಿಂದೂಸ್ಥಾನವು ಮಾತ್ರ ಇದಕ್ಕೆ ಅಪವಾದವಾಗಿದೆ. ಇಲ್ಲಿ ಪ್ರಾಂತಿಕ ಸ್ವಾತಂತ್ರ್ಯ ಬರುವ ಮೊದಲು ಇಂಡಿಯಾ ಸರಕಾರವಾಗಲೀ ಪ್ರಾಂತಿಕ ಸರಕಾರಗಳಾಗಲೀ ಕೃಷಿಕರ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಆದ ಪ್ರಯುಕ್ತ ಕೃಷಿಕರಿಗೂ ಅವರ ಸಹಾಯಕ್ಕಾಗಿ ಸ್ಥಾಪಿಸಲ್ಪಟ್ಟ ಸಹಕಾರೀ ಸಂಸ್ಥೆಗಳಿಗೂ ಆರ್ಥಿಕ ಮುಗ್ಗಟ್ಟನ್ನು ಸುರಕ್ಷಿತವಾಗಿ ಎದುರಿಸಲು ಬಲು ಕಷ್ಟವಾಯಿತು. ತಾತ್ಕಾಲಿಕವಾಗಿ ಸಾಲದ ವ್ಯಾದೆಯನ್ನು ಮುಂದುವರಿಸಿ ಹಾಕುವುದು, ಸಾಲದ ಬಡ್ಡಿಯ ದರಗಳನ್ನಿಳಿಸುವುದು, ದೀರ್ಘ ವಾಯಿದೆಗಳನ್ನು ಕೊಡುವುದು. ಕೃಷಿಕರಿಗೆ ಸಾಲವನ್ನೊದಗಿಸುವುದು, ಹಣದ ಚಲಾವಣೆಯನ್ನು ನಿಯಮಕ್ಕೊಳಪಡಿಸಿ ಅಗತ್ಯವಿದ್ದಂತೆ ವಿನಿಮಯದ ಧಾರಣೆಗಳನ್ನು ಬದಲಾಯಿಸುವುದು, ಕೃಷಿಯ ಸಾಮಾನುಗಳ ಆಮದು ರಫ್ತುಗಳನ್ನು ಅಂಕೆಯಲ್ಲಿಡುವುದು, ಇವೆಲ್ಲ ಕೃಷಿಕರ ದುಃಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಬೇರೆ ಬೇರೆ ದೇಶಗಳಲ್ಲಿ ಹೂಡಿದ ಉಪಾಯಗಳಾಗಿವೆ. ಪ್ರಾಂತಿಕ ಸರಕಾರಗಳು ತಮ್ಮ ಹಿಂದಣ ಬೇಜವಾಬ್ದಾರೀ ಸರಕಾರಗಳಿಂದ ಆಡಳಿತೆಯನ್ನು ವಹಿಸಿಕೊಂಡ ನಂತರ ತಮಗಿದ್ದ ಅಲ್ಪ ಅಧಿಕಾರದಿಂದ ರೈತರ ಉದ್ಧರಣೆಯ ಯೋಜನೆಗಳನ್ನು ಮಾಡಬೇಕಾಯಿತು. ಇಂತಹ ಯೋಜನೆಗಳನ್ನು ಎಲ್ಲೆಲ್ಲಿ ಕೈಗೊಂಡರೋ ಅಲ್ಲೆಲ್ಲಾ ರೈತರ ಸಂಕಷ್ಟವು ಕೆಲಮಟ್ಟಿಗಾದರೂ ಕಡಿಮೆಯಾಗಿದೆ. ಆದರೆ ತಾತ್ಕಾಲಿಕ ನಿವಾರಣೆಗೆ ಮಾಡಿದ ಯೋಜನೆಗಳಿಂದ ಹೆಚ್ಚಿನ ಪ್ರಯೋಜನವಾಗಲಾರದು. ಹಳ್ಳಿಯ ರೈತರ ಶೋಷಣೆಯನ್ನು ತಡೆಗಟ್ಟುವುದಕ್ಕೂ, ಆರ್ಥಿಕ ಗಂಡಾಂತರಗಳಿಂದ ಪಾರಾಗಿ ಗ್ರಾಮ ಜೀವನವನ್ನು ಸುವ್ಯವಸ್ಥೆಗೊಳಿಸುವದಕ್ಕೂ ಅನುಕೂಲವಾಗುವಂತೆ ಇನ್ನೂ ಹೆಚ್ಚಿನ ಕಾರ್ಯವನ್ನು ಕೈಕೊಳ್ಳಬೇಕಾಗಿದೆ. ಪುನರ್ರಚನೆಯ ಈ ಯೋಜನೆಯನ್ನು ಸ್ವಾಭಾವಿಕವಾಗಿ ರಾಷ್ಟ್ರೀಯ ಇಲ್ಲವೆ ಪ್ರಾಂತಿಕ ದೃಷ್ಟಿಯಿಂದ ಮಾಡಬೇಕಾಗಿದೆ. ಆದರೆ ಇದು ಸಂಕಷ್ಟ ನಿವಾರಣೆ ಮತ್ತು ರಕ್ಷಣೆಯ ಮಟ್ಟಿಗೆ ಹೆಚ್ಚಾಗಿ ಅನ್ವಯಿಸುತ್ತದೆ. ಪುನರ್ರಚನೆಯ ಯೋಜನೆಯು ಆಯಾ ಜಿಲ್ಲೆಯ ಅಥವಾ ಪ್ರದೇಶದ ವಿದ್ಯಮಾನ ಮತ್ತು ಅವಶ್ಯಕತೆಗಳ ಮೇಲೆ ಹೆಚ್ಚಿನ ಮಟ್ಟಿಗೆ

(೯ನೇ ಪುಟಕ್ಕೆ ಮುಂದುವರಿಯುತ್ತದೆ)

ONE REASON.

Love does much, but in this materialistic world, money does more. Save therefore for the sake of those you love.

RESOURCES OF A CRORE | ESTD. 1906. Canara Bank Limited.

—ಸೌಕರ್ಯ—

ಆರ್ಥಿಕ ಮುಗ್ಗಟ್ಟಿನ ಈ ದುಃಸ್ಥಿತಿಯಲ್ಲಿ ಕಡಿಮೆ ವೆಚ್ಚದಲ್ಲಿ ಹೆಚ್ಚು ಸೌಕರ್ಯವನ್ನು ಯಾರು ತಾನೆ ಅಪೇಕ್ಷಿಸುವುದಿಲ್ಲ? ಅದನ್ನು ಸದಾ ಒದಗಿಸಿಕೊಡುವುದೇ

ರಾಮಾ ರೆಸ್ಟೋರೆಂಟಿನ ಧ್ಯೇಯವಾಗಿದೆ.

ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳು!

ವಿದ್ಯಾರ್ಥಿಗಳಿಗೆ ರಿಯಾಯತಿ ದರಗಳು!!

ಒಮ್ಮೆ ಸಂದರ್ಶಿಸಿರಿ! ತೃಪ್ತಿ ಪಡೆಯಿರಿ!!

Sri Rama Restaurant
Kashi Mutt Building,
UDIPI.

ಶ್ರೀರಾಮಾ ರೆಸ್ಟೋರೆಂಟ್
ಕಾಶಿ ಮಠದ ಕಟ್ಟೋಣ, ಉಡುಪಿ

ಮಾಲಕ:— ಎಚ್. ರಾಮಚಂದ್ರ ನಾಯಕ್.

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ಉಡುಪಿ, ಗುರುವಾರ ತಾ. ೩೦-೫-'೪೦

ದ. ಕ. ಜಿಲ್ಲಾ ಸಹಕಾರಿ ಪರಿಷತ್ತು

ಉಡುಪಿಯಲ್ಲಿ ನೇ ತಾ. 28-29ರಲ್ಲಿ ಜರಗಿದ ಜಿಲ್ಲಾ ಪರಿಷತ್ತು ಸಹಕಾರ ಚಳವಳದಲ್ಲಿ ಮುಂದುವರಿದಿರುವ ದಕ್ಷಿಣ ಕನ್ನಡದ ಕೀರ್ತಿಯನ್ನು ಒಂದು ತೂಕದಷ್ಟು ಹೆಚ್ಚಿಸಿದೆ. ಪರಿಷತ್ತಿನ ಅಧ್ಯಕ್ಷರಾದ ಶ್ರೀ. ವಿ. ಎಲ್. ಮೆಹತಾರವರು ಬೊಂಬಾಯಿ ಪ್ರಾಂತ್ಯದಲ್ಲಿ ಹೆಸರಾದ ಸಹಕಾರಿ ಮುಖಂಡರು. ಜಿಲ್ಲೆಯ ಎಲ್ಲಾ ಕಡೆಗಳಿಂದಲೂ ಸಾಕಷ್ಟು ಪ್ರತಿನಿಧಿಗಳು ಬಂದಿದ್ದು ಪರಿಷತ್ತು ಜಯಶೀಲವಾಗಿ ನಡೆಯಿತು. ಪರಿಷತ್ತಿನ ಒಂದು ಅಂಗವಾಗಿದ್ದ ಪ್ರದರ್ಶನವು ತೃಪ್ತಿಕರವಾಗಿತ್ತು.

1924ರ ನಂತರ ದಕ್ಷಿಣ ಕನ್ನಡದಲ್ಲಿ ಜಿಲ್ಲಾ ಸಹಕಾರೀ ಪರಿಷತ್ತು ಸೇರಿರಲಿಲ್ಲ. ಈ ಜಿಲ್ಲೆಯು ಹಲವು ವಿಭಾಗಗಳಲ್ಲಿ ಮುಂದುವರಿದ ಜಿಲ್ಲೆಯಾಗಿದೆ ಅವುಗಳಲ್ಲಿ ಸಹಕಾರ ಚಳವಳವೂ ಒಂದು. ಜಿಲ್ಲೆಯ ಅದರಲ್ಲೂ ಮುಖ್ಯವಾಗಿ ಹಳ್ಳಿಗಳ ಆರ್ಥಿಕ ವಿಭಾಗದಲ್ಲಿ ಸ್ಥಳೀಕ ಸಹಕಾರೀ ಸಂಘಗಳು ಗಣನೀಯವಾದ ಭಾಗವಹಿಸಿವೆ. ಅಧಿಕಾರಯುತ ಸ್ಥಾನ ಸಂಪಾದಿಸಿವೆ. ಇಂತಹ ಅಸ್ತಿತ್ವವಿರುವ, ತತ್ವ ಮತ್ತು ಕಾರ್ಯಕ್ರಮಗಳುಳ್ಳ ಚಳವಳವೊಂದರ ಪ್ರಾಮುಖ್ಯತೆಯನ್ನು ಪ್ರದರ್ಶಿಸುವದಕ್ಕೂ ಕಾರ್ಯದ ರೀತಿಯನ್ನು ನಿರ್ಧರಿಸಿಕೊಳ್ಳುವದಕ್ಕೂ ವರುಷಕ್ಕೊಮ್ಮೆ ಪರಿಷತ್ತು ಸೇರುವ ಆಗತ್ಯವಿದೆ. ಈ ವರುಷ ಉಡುಪಿಯಲ್ಲಿದನ್ನು ಸೇರಿಸುವ ಪ್ರಯತ್ನ ಕೈಗೊಂಡು ಜಯಶೀಲರಾದ ಸ್ವಾಗತ ಸಮಿತಿಯವರ ಪರಿಶ್ರಮವು ಸ್ತುತ್ಯವಿದೆ.

ಪರಿಷದಧ್ಯಕ್ಷರ, ಸ್ವಾಗತಾಧ್ಯಕ್ಷರ ಭಾಷಣಗಳಲ್ಲಿಯೂ, ಪರಿಷತ್ತಿನ ಠರಾವುಗಳಲ್ಲಿಯೂ, ರೈತರ ಆರ್ಥಿಕಸ್ಥಿತಿ ಸುಧಾರಣೆಯನ್ನು ಸಾಧಿಸಬೇಕೆಂಬಿದ್ದ ಅಂಶವು ಪ್ರಮುಖ್ಯವಾದುದೆಂದು ನಾವು ಭಾವಿಸುತ್ತೇವೆ. ಒಂದು ಲೇವಾದೇವಿಯನ್ನು ನಡೆಸುವ ಸಹಕಾರ ಸಂಘಗಳು ರೈತರೋದ್ಧಾರದ ದೃಷ್ಟಿಯಿಂದ ಸಫಲತೆಹೊಂದಿಲ್ಲವೆಂದು ನಮ್ಮ ಅಭಿಪ್ರಾಯ. ಲೇವಾದೇವಿ ಸಂಘಗಳಿಂದ ರೈತನಿಗೆ ದೊರೆತಿರುವದು ಸಾಲ ದೊರೆಯುವ ಸೌಕರ್ಯವೊಂದೆ! ಇದನ್ನು ಸಾಲನಿವಾರಣೆಯೆಂದಾಗಲೀ, ಸ್ಥಿತಿಸುಧಾರಣೆಯೆಂದಾಗಲೀ ಕರೆಯಲು ಸಾಧ್ಯವಿಲ್ಲ. ಈ ಸೌಕರ್ಯದಿಂದ ತದ್ವಿರುದ್ಧ ಪರಿಣಾಮವುಂಟಾದ ದಾಖಲೆಗಳು ದಕ್ಷಿಣಕನ್ನಡದಲ್ಲಿ ಬೇಕಾದಷ್ಟಿವೆ. ಸಹಕಾರತತ್ವ ರೈತರ ಜೀವನದಲ್ಲಿ ಶಾಂತಗೂಡಿಸುವ ಭಕ್ತಿ ಬರಬೇಕಾದರೆ ಅಧ್ಯಕ್ಷರು ತನ್ನ ಭಾಷಣದಲ್ಲಿ ಹೇಳಿರುವಂತೆ, ಕೃಷಿಸುಧಾರಣೆಗಳ ಅನುಕೂಲತೆಯೊದಗಿಸಿಕೊಡುವ ಸಂಘಗಳ ಸ್ಥಾಪನೆಯಾಗುವದು ಅತ್ಯಗತ್ಯ. ಸನಾತನ ಧರ್ಮಾಚರಣೆಯನ್ನು ದಕ್ಷಿಣ ಕನ್ನಡದ ರೈತರ ವ್ಯವಸಾಯ ವೃತ್ತಿಯಲ್ಲಿ ಕಾಣುವಂತೆ ಬೇರೆ ಕಡೆಗಳಲ್ಲಿ ಕಾಣಲು ಸಾಧ್ಯವಿಲ್ಲ! ಶತಮಾನಗಳ ಮೊದಲಿನ ರೀತಿಯಲ್ಲೇ ಇಂದೂ ವ್ಯವಸಾಯ ನಡೆಯುತ್ತಿದೆ. ಸುಧಾರಿತ ಬೀಜ, ಗೊಬ್ಬರಗಳ ಪರಿಚಯವು ಈ ವರೆಗೂ ರೈತರಿಗಾಗಿರುವದಿಲ್ಲ. ದಕ್ಷಿಣಕನ್ನಡದ ಮುಖ್ಯ ಬೆಳೆ ಭತ್ತ. ಜಿಲ್ಲೆಯ 83.43 ಮಿಲಿಯ ಎಕ್ರೆಗಳಲ್ಲಿ ಬತ್ತದ ಬೆಳೆಯಾಗುತ್ತಿದೆ; ಅರ್ಧ ಶತಮಾನದಿಂದ ವ್ಯವಸಾಯ ಇಲಾಖೆಯವರು ರೈತರ ಸ್ಥಿತಿಸುಧಾರಣೆಯ ಗುರಿಯುಳ್ಳ ಸಂಸ್ಥೆಯವರು ಕೆಲಸಮಾಡುತ್ತಿದ್ದಾರೆ. ಆದರೆ ಕೇವಲ 4.58 ಮಿಲಿಯ ಎಕ್ರೆಗಳಷ್ಟು ಕ್ಷೇತ್ರಗಳಲ್ಲಿ ಮಾತ್ರ ಸುಧಾರಿತ ಬೀಜವು ಪ್ರಯೋಗಕ್ಕೆ ಬಂದಿದೆ, ಈ ಸುಧಾರಣೆಯಾದರೂ ಹೆಚ್ಚಿನ ಕಡೆಗಳಲ್ಲಿ ಬೀಜದ ಮಟ್ಟಿಗೆ ಮಾತ್ರ. ಹಳೇ ಪದ್ಧತಿಯ ಬೇಸಾಯಕಾರ್ಯ, ಮತ್ತು ಇತರ ತೊಂದರೆಗಳಿಂದ ಅದೂ ನಿರೀಕ್ಷಿಸಿದಷ್ಟು ಸಫಲಹೊಂದಿಲ್ಲ. ಭತ್ತದ ವಿನಹಾ ಬೇರೆ ಧಾನ್ಯಗಳು 38.69 ಮಿಲಿಯ ಎಕ್ರೆಗಳಲ್ಲಿ ಬೆಳೆಯುವವಾದರೂ ಹೆಚ್ಚೆಂದರೆ 34ಮಿಲಿಯ ಎಕ್ರೆಗಳಲ್ಲಿ ಮಾತ್ರ ಹೊಸ ಬೀಜವ ಪ್ರಯೋಗವಾಗುತ್ತಿವೆ. ಕೃಷಿಪದ್ಧತಿಯಲ್ಲಿಯೇ ಸುಧಾರಣೆಯಾಗದೆ, ಬಿತ್ತ ರೀತಿಯ ಶಮನವಷ್ಟೇ ನಮಗೆ ಫಲವಿಲ್ಲ. ಮತ್ತೊಂದು ಮುಖ್ಯವಾದ ಅಡಚಣೆಯೆಂದರೆ ರೈತರ ಉತ್ಪತ್ತಿ ಮಾರಾಟಕ್ಕೊಂದು ಸರಿಯಾದ ವ್ಯವಸ್ಥೆಯಿಲ್ಲದಿರುವುದು; ಮೊದಲನೆಯದಾಗಿ ತಮ್ಮ ಉತ್ಪತ್ತಿಯ ಯೋಗ್ಯ ಪ್ರತಿಫಲವೆಷ್ಟೆಂಬುದನ್ನು ತಿಳಿಯುವ ಮತ್ತು ಅದನ್ನು ಪಡೆಯುವ ಚಾತುರ್ಯವಿಂದು ರೈತರಲ್ಲಿಲ್ಲ; ಎರಡನೆಯದಾಗಿ ಅದಕ್ಕೆ ಸರಿಯಾದ ಅನುಕೂಲತೆಯೂ ಇಲ್ಲ.

ಬದಲಿಗೆ ಸದಾ ಆರ್ಥಿಕಾಡಚಣೆಯಲ್ಲಿರುವ ರೈತರ ಉತ್ಪತ್ತಿಗಳು ಬೆಳೆಸಿದವರ ಬಾಯಾರಿಕೆಗೊಂದು ತಾತ್ಕಾಲಿಕ ಶಮನ ಕೊಟ್ಟು ನಿಜವಾದ ಪ್ರತಿಫಲವನ್ನು ಗಳಿಸಲು ಅನ್ಯರ ಹಸ್ತಗತವಾಗುವ ದುರ್ವ್ಯಾಪಾರವು ಈ ವರೆಗೂ ಇದೆ. ಪಡೆದು ಮಾರುವ ವ್ಯವಹಾರಕ್ಕಾಗಿ ಸಹಕಾರಿ ಸಂಘಗಳು "ಸ್ಟೋರ್ಸ್"ಗಳನ್ನು ತೆರೆಯುವ ಕ್ರಮವೇನೋ ಉಂಟು. ಆದರೆ ದಕ್ಷಿಣ ಕನ್ನಡದಲ್ಲ ಅವು ಹೆಸರಿಗೆ ಮಾತ್ರವಾಗಿವೆ ಎನ್ನಬಹುದು.

ಹಿಂದೂದೇಶದ ಬೇರೆ ಕಡೆಗಳಲ್ಲಿಯೂ ಈ ಪದ್ಧತಿಯು ಗಣ್ಯಸ್ಥಾನ ದೊರಕಿಸಿಕೊಂಡಿಲ್ಲವೆಂಬುದು ಖೇದಾಶ್ಚರ್ಯದ ವಿಷಯ. ಸಹಕಾರೀ ಚಳವಳದಲ್ಲಿ ಮುಂದುವರಿದಿರುವ ಇತರ ಎರಡು ಪ್ರಾಂತ್ಯಗಳೆಂದರೆ ಬೊಂಬಾಯಿ ಮತ್ತು ಪಂಜಾಬು ಅವುಗಳಲ್ಲ ದಕ್ಷಿಣ ಹಿಂದುಸ್ಥಾನದಷ್ಟಾದರೂ 'ಸ್ಟೋರ್ಸ್'ಗಳ ಸ್ಥಾಪನೆಯಾಗಿಲ್ಲ. ಇಲ್ಲಿಯೂ ಅದು ನಾಮ ಮಾತ್ರವಾಗಿರುವಾಗ ಆ ಪದ್ಧತಿಯೇ ವ್ಯವಹಾರಿಕವಲ್ಲವೆಂಬ ಅರ್ಥವೆ? ಸತ್ಯ ಸ್ಥಿತಿಯೆಂದರೆ ಅವುಗಳ ಪ್ರಯೋಜನ ಹೊಂದುವದನ್ನರಿಯದ ರೈತರ ಜಡ ಸ್ವಭಾವವು ಈ ಕೊರತೆಗೊಂದನೆಯ ಕಾರಣ; ಆ ಕಾರಣದಿಂದಾಗಿ ಲಾಭ-ನಷ್ಟಗಳ ದೃಷ್ಟಿಯಲ್ಲಿ ಸಿರಾಶೆಗೆ ಕಾರಣವಿರುವದರಿಂದ 'ಸ್ಟೋರ್ಸ್' ಸಂಘಗಳು ತಾವಾಗಿ ಕ್ಷೀಣ ಹೊಂದುವದು ಎರಡನೆಯ ಕಾರಣ. ಈ ಕುರಿತು ರೈತರಲ್ಲಿ ಅಗತ್ಯವುಳ್ಳ ಪ್ರಚಾರಮಾಡಲು ಶಕ್ಯಲದ ಭರವಸೆ ಹುಟ್ಟಿಸಬಲ್ಲ ಕಾರ್ಯ ಕೈಕೊಳ್ಳಲು ಸಹಕಾರ ಸಂಘಗಳು ತಾವಾಗಿ ಇಳಿದಿಲ್ಲ. ಅತಿಮುಖ್ಯವಾದ ಈ ಕಾರ್ಯಕ್ರಮವು ಎಲ್ಲಾ ಕಡೆಗಳಲ್ಲಿಯೂ ಯಶಸ್ವಿಯಾಗುವದರಲ್ಲಿ ಅನುಮಾನವಿಲ್ಲ.

ಉಡುಪಿ ಪರಿಷತ್ತಿನಲ್ಲಿ ಮಂಜೂರಾದ ನಿರ್ಣಯಗಳಲ್ಲಿ ಸಹಕಾರ ತತ್ವಗಳಿಗೆ ಸಂಬಂಧಪಟ್ಟ ಕೆಲವು ಮುಖ್ಯ ಕಾರ್ಯಕ್ರಮಗಳನ್ನು ಕೈಗೊಳ್ಳುವ ಸೂಚನೆಗಳಿವೆ. ಠರಾವುಗಳೆಲ್ಲಾ ಮುಖ್ಯವಾಗಿ ಹಳ್ಳಿಗರ ಆರ್ಥಿಕ ಸುಧಾರಣೆಗೆ ಸಂಬಂಧಪಟ್ಟವುಗಳಿದ್ದು ದಕ್ಷಿಣಕನ್ನಡದ ಇಂದಿನ ಪರಿಸ್ಥಿತಿಗೆ ಅತಿ ಮುಖ್ಯವಾದವುಗಳಿರುವದರಿಂದ ಕಾರ್ಯತಃ ಆಚರಣೆಯಲ್ಲಿ ಬರಲೆಂದು ಹಾರೈಸುತ್ತೇವೆ.

ಸಮುಜಾಯಿಸಿ ಸಫಲಹೊಂದಬಹುದೇ?

ಇಂದಿನ ಯುದ್ಧವು ಬ್ರಿಟಿಷ್ ಮುತ್ಸದ್ದಿಗಳನ್ನು ಹಲವು ವಿಧದ ಪರೀಕ್ಷೆಗೊಳಗುಪಡಿಸಿವೆ. ಅವುಗಳ ಪೈಕಿ ಭಾರತದ ಪ್ರಶ್ನೆಯು ಅವರ ಅಂತರ್ಯವನ್ನು ಸ್ಪಷ್ಟವಾಗಿ ಬೆಳಕಿಗೆ ಹಿಡಿದಿವೆ. ಹಿಂದೀಯರನ್ನು ಸಮಜಾಯಿಸಿಯೇ ಕಾರ್ಯ ಸಾಧಿಸುವ ಘೋಷಣೆಯು ಈ ಸಂದಿಗ್ಧ ಕಾಲದಲ್ಲಾದರೂ ವ್ಯಕ್ತವಾಗಿಲ್ಲ-ಮತ್ತಷ್ಟು ಪುಟಗೊಂಡಿದೆ. ಈ ಕಷ್ಟ ಕಾಲವನ್ನು ತಡೆಹಾಯಲಿಕ್ಕಾಗಿ ಹಿಂದೀಯರ ಒಮ್ಮತದ ಸಹಾಯ ಯಾಚನೆಮಾಡಿ, ಅವರಿಂದ ದೊರೆತ ನೈತಿಕ ಬೆಂಬಲಕ್ಕಾಗಿ ಕೃತಜ್ಞತೆ ಸೂಚಿಸುವ ಸಂದರ್ಭವಾದರೂ ಅವರು ವ್ಯರ್ಥಗೊಳಿಸಿಲ್ಲ ಮಿ. ಚರ್ಚಿಲ್ಲರು ವೈಸರಾಯರಿಗಿತ್ತ ಸಂದೇಶದಲ್ಲಿ "ಭಾರತವು ತನ್ನ ಜನ, ಧನ ಮತ್ತು ಸಾಮಗ್ರಿಗಳನ್ನೂ ಅವೆಲ್ಲವುಗಳಿಗೆ ಹೆಚ್ಚಿನದಾದ ಅಂತರಿಕ ಸಹಾನುಭೂತಿಯನ್ನು ಈ ಯುದ್ಧದಲ್ಲಿ ನಮಗೆ ಕೊಟ್ಟಿದ್ದಾರೆ" ಎಂದಿದ್ದಾರೆ. ಮಿ. ಅಮೆರಿಯವರೂ ವೈಸರಾಯರೂ ಹಾಗೆಯೇ ಹಾಡಿ, ಭಾರತೀಯರು ಪೂರ್ಣ ಮನಸ್ಸಿನಿಂದ ಸಹಕರಿಸಬೇಕೆಂದು ಕೇಳಿಕೊಂಡಿದ್ದಾರೆ. ಈ ಉದ್ದೇಶವು ಸಾಧ್ಯವಾದುದೇನೋ ನಿಜ. ಆದರೆ ಕಾಂಗ್ರೆಸು ತನ್ನ ಬೇಡಿಕೆ ಮತ್ತು ಅದನ್ನು ಪೂರೈಸುವ ಸ್ಪಷ್ಟ ಹಾದಿ-ವಿವರಣನ್ನು ಮುಂದಿಟ್ಟು ಅದು ಬ್ರಿಟಿಷರಿಂದ ಅಂಗೀಕರಿಸಲ್ಪಡದಿದ್ದುದು ಶೋಚನೀಯವಿದೆ; ಆಶ್ಚರ್ಯಕರವಿದೆ. ಬ್ರಿಟಿಷರಿಗಿಂದು ಒದಗಿರುವ ಪರಿಸ್ಥಿತಿಯಲ್ಲಾವ ಲಘುತ್ವವನ್ನೂ ಕಾಂಗ್ರೆಸು ಕಂಡಿಲ್ಲ; ಅದರ ಕಠಿಣತೆಯನ್ನು ಮನಗಂಡೇ ಭಾರತ ರಾಷ್ಟ್ರ ಸಭೆಯು ಹಲವು ಸ್ಪುರಣೆಗಳನ್ನು ತಡೆದಿಟ್ಟುಕೊಂಡು ಕಾದು ನಿಂತಿದೆ: ಬ್ರಿಟನಿನ ಸಂಕಷ್ಟವನ್ನೂ ಆವಶ್ಯಕತೆಯನ್ನೂ ತುಲನೆಗೆ ಹಚ್ಚಿ, ಸಮಯೋಚಿತಕ್ಕಾಗಿ ಕಾಯುವಷ್ಟು ಕೈತಡೆದು ನಿಂತು ಕಾಂಗ್ರೆಸು ತನ್ನ ಸುಸ್ವಭಾವವನ್ನು ಪ್ರದರ್ಶಿಸಿದೆ. ಈ ಸೌಹಾರ್ದತೆಯನ್ನು ಬ್ರಿಟನು ಉತ್ತರಿಸಿದ ರೀತಿಯು ಗೌರವಾರ್ಹವಾದುದೇ? ಭಾರತದ ಮೇಲೆ ತಮ್ಮ ಅಡಚಣೆ, ಅಭಿಲಾಷೆಯನ್ನು ಮರುಮಾತು ಕೇಳದೆ ಹೊರಿಸಲಿಚ್ಛಿಸುವ ಮೂಲಕ ಬ್ರಿಟಿಷರು ಕಾಂಗ್ರೆಸಿನ ಬೇಡಿಕೆಯ ಅಸ್ತಿತ್ವವನ್ನೇ ಅಲ್ಲಗಳೆದಿದ್ದಾರೆ. ತಮಗೊದಗುವ ನೋವಿನ ಒಂದು ಪಾಲು ಭಾರತಕ್ಕೂ ಸಲ್ಲಬೇಕು; ತಾವನುಭವಿಸುತ್ತಿರುವ ಉದರ ಶೂಲೆಯನ್ನು ಒತ್ತಿಹಿಡಿದುಕೊಂಡೇ ಭಾರತವು ಇದನ್ನೂ ಅನುಭವಿಸಲು ಮುಂದೆ ಬರಬೇಕು-ಎಂಬುದೇ ಬ್ರಿಟಿಷ್ ಅಧಿಕಾರಿಗಳ ಮಾತಿನ ಮಥಿತಾರ್ಥ. ಇದಕ್ಕೆ ಪಂಡಿತ ನೆಹರುಗಳು ಕೊಟ್ಟಿರುವ ಉತ್ತರವು ಅಖಿಲ ಭಾರತದಭಿಪ್ರಾಯದ ಧ್ವನಿಯಾಗಿದೆ.

ಸಂಧಿಗ್ಧ ಪರಿಸ್ಥಿತಿ

ಯುರೋಪಿನ ಯುದ್ಧ ಸ್ಥಿತಿಯು ಮಿತ್ರರಾಷ್ಟ್ರಗಳ ಕುರಿತು ಆತುರವನ್ನು ಹುಟ್ಟಿಸುವಲ್ಲಿಗೆ ಈಗ ಬಂದಿದೆ. ಫ್ರಾನ್ಸಿಗೆ ನುಗ್ಗಿದ ಜರ್ಮನಿ ಸೇನೆ ಕರಾವಳಿಯತ್ತ ಮುಖ ತಿರುಗಿಸಿ ಇಂಗ್ಲೆಂಡು ಜಲಸಂಧಿನಲ್ಲಿರುವ ಬೂಲೋನ್ ಮತ್ತು ಕಲೇ ಬಂದರಗಳೊಳಗೆ ನುಗ್ಗಿ ಮಿತ್ರ ರಾಷ್ಟ್ರಗಳಿಗೆ ವಿಷಮಾವಸ್ಥೆಯನ್ನು ತಂದೊಡ್ಡಿದೆ. ಈ ಪ್ರಾಮುಖ್ಯ ಬಂದರಗಳ ಸ್ಥಿತಿಯು, 'ನಾಜಿಗಳ ಕೈಯೊಳಗಾದವು-ಇದುವರೆಗಾಗಿಲ್ಲ' ಎಂಬ ಕನಕ ಕಟ್ಟುಹೋಗಿದೆ. ಪರಿಸ್ಥಿತಿಗೆ ತಕ್ಕಂತಹ ಸರ್ವಸಿದ್ಧತೆಯಲ್ಲಿ ಮಿತ್ರ ರಾಷ್ಟ್ರಗಳೀಗ ಹಿಂದೆ ಬಿದ್ದಿಲ್ಲ. ಅಂತೂ ಈ ವರೆಗಿನ ಯುದ್ಧ ಸ್ಥಿತಿಯು ಜರ್ಮನಿಯ ಧಕ್ಕೆ ಸೋಸಾಯುವನ್ನೂ ಮಿತ್ರ ರಾಷ್ಟ್ರಗಳು ಧಕ್ಕೆ ಚೋಪಾಯುವನ್ನೂ ಬೈಕೆಂಡು ನೋಡುತ್ತಿರುವಷ್ಟು ಏರು ತಗ್ಗಾಗಿ ನಿಂತಿದೆ. ಮಿತ್ರ ರಾಷ್ಟ್ರಗಳು ತಮ್ಮ ತಮ್ಮ ಸರ್ವಶಕ್ತಿಯನ್ನು ಕೇಂದ್ರೀಕರಿಸಿ ವಿರೋಧಿಯಿದಿರಲ್ಲದಷ್ಟು ಸ್ಫೋಟನೆಗೊಳಿಸಿಯೇ ಪಾರಾಗಬೇಕು. ಕೊನೆಗೆ ಜಯಸಬೇಕು ಹೊರತು ಅನ್ಯಥಾ ಸಾಧ್ಯವಿಲ್ಲ. ಮುಂದಿನ ವಾರದಲ್ಲಿ ಇಂತಹ ಮಾರ್ಪಾಟು ಉಂಟಾಗಲೂಬಹುದು. ಪ್ರಸ್ತುತ ಆ ಕುರಿತು ಭವಿಷ್ಯವಾಡುವುದು ಸುಲಭವಲ್ಲ.

(ಒನೇ ಪು...) ಅವಲಂಬಿಸಿ... ಲವು ವರ್ಗಗಳ... ವ್ಯ ನಿಮ್ಮ ಜ... ಜರಗಿದುದು... ಯ ಆರ್ಥಿಕ ಜ... ದಿನನಿತ್ಯದ ಆ... ಯ ಉದಾರ... ತಿಯುಳ್ಳ ಕೆಲಸ... ಲ್ಲಿಯ ಮುಂದಿ... ನೆಯನ್ನು ಮಾ...

ಈ ಜಿಲ್ಲೆಯ... ಸಹಕಾರದ್ಯಕ್ಷ... ದ ಜಿಲ್ಲೆಗಳಲ್ಲಿ... ಯಲ್ ಕಮಿ... ಎಂಬ ಆವಿಲ... ಸಮಿತಿಯವರು... ಅಭಿವೃದ್ಧಿಯು... ನರನ್ನು ಮುಟ್ಟಿ... 14 ಲಕ್ಷ ಜನ... ಕ್ಕಿಂತ ಹೆಚ್ಚಿಗೆ... ರಾಗಿಲ್ಲ. ಕೃಷಿಕ... ವಶ್ಯ ಬೇಕಾಗು... ರಸಿ ಈಗ ಅವ... ಳಿಂದ ವರ್ಷ... ತ್ರಲಿರುವ ಅದ... ಸಾಹಾಗುತ್ತ... ಣ, ಅಂತೆಯೇ... ಅವರನ್ನು ನಿಷ್ಠ... ಕ್ಕೆ ಅಸ್ತಿ... ಬಾದ ಸಹಕಾರಿ... ಟ್ಟಿರುವ ಸಹಕಾ... ಕೃತ ಮೊದಲಾ... ಷ್ಟು ಸಾಲ... ಬುದನ್ನು ವಿಚಾ... ಗಳಿಗೂ ಒಂದೇ... ರೆ ಆ ಉತ್ತರದ... ತ ಇರುವ ಸಹ... ಪಿಸಿದವರ ಉತ... ಯೆಂದರ್ಥವಾಗ... ಎಲ್ಲಾ ಭಾಗಗಳ... ಯೇ ಇದೆ... ಕಡೆಗೆ ಮಾತ್ರ... ಹಿಂದೂಸ್ಥಾನದ... ಕಾರೀ ಚಳವಳ... ಗೆ ಮುಟ್ಟಿದ್ದ... ದಲ್ಲಿ ಯಾವ ಸ... ಲ್ಲವೆಂದೂ ಹೇಳ... ಲ್ಲ ಜನರನ್ನು... ಯೊಳಗೆ ತರುವ... ಗಳಿವೆ. ಮೊದ... ಮೆಂಬರಿಕೆಯ... ಕ್ಯದಾಗಿ ಸಂಘ... ತಮ್ಮ ಆರ್ಥಿಕ... ಕೊಳ್ಳುವುದಕ್ಕೆ... ಕೊಳ್ಳುವ... ದಾಗಿ ಎಲ್ಲರೂ... ಅನುಸಂಧಿಸಲು... ತ್ತು ಮುಂದಿ... ಇಂತಹ ಸಂಸ್ಥೆ... ಸಹಕಾರೀ ದೃಷ್ಟಿ... ಸ್ಪಿರವಾಗುವುದ... ಸಂಘಟನೆಗೊ... ಬರೇ ಭಕ್ತಿ...

...ರಿಸಿದ್ದು)
...ವುದರಿಂದ ಕೆ
...ದರೂ ತಿರಿಗೊ
...ೀ ಪರಿಷತ್ತು
...ಗಿದ್ದು ಹಳ್ಳಿ
...ಸಂಕಷ್ಟಗಳ
...ಮತ್ತು ಹಳ್ಳಿ
...ಸಹಾನುಭೂ
...ಟ್ಟು ಕೂಡಿ ಜಿ
...ಯ ಯೋಜ
...ಗಿದೆ.

...ಸ್ಥಾನದಲ್ಲೆಲ್ಲಾ
...ತ ಮುಂದುವರಿ
...ವೆಂದು 'ಕೋ
...ಎಗ್ರಿಕಲ್ಚರ್'
...ವಿಚಾರಣಾ
...ಇಲ್ಲಿ ಆದ
...ವ್ಯಾಕರಣದ ಜ
...ಕು. ಜಿಲ್ಲೆಯ
...ಅರ್ಧ ಲಕ್ಷ
...ಘಗಳ ಸದಸ್ಯ
...ವರ್ಷವೂ ಆ
...ವೆಂದು ವಿಚಾ
...ಬೇರೆ ಸಂಘಗ
...ವಾಗಿ ಕೊಡು
...ಉಪಾಯಗಳು
...ನೋಡೋ
...ಸಾಲಗಳಿಂದ
...ಮಾಡುವುದ
...ಬೇಂಕು ಮೊದ
...ಯಿಂದ ಈಗ ಕೊ
...ಕೋ ಅಥವಾ
...ರಗಳಿಗೆ ಸಾಕ
...ತಿದೆಯೇ ಎಂ
...ಎಲ್ಲಾ ಪ್ರಶ್ನೆ
...ರುವುದು. ಆದ
...ಜಿಲ್ಲೆಯಲ್ಲಿ ಪ್ರಶ್ನೆ
...ಸ್ಥೆಗಳನ್ನು ಸ್ಥಾ
...ಸಗಳು ಕಡಿಮೆ
...ಸುದು... ಸ್ಥಿ
...ಸ್ಥಿತಿಯು ಹೀಗೆ
...ಯ ಪ್ರಶ್ನೆಯು
...ಸ್ನ ತಿರುಗಿಸಿದರೆ
...ಮಾನ್ಯಕ್ಕೆ ಸಹ
...ಲ್ಲವೆಂದೂ, ಹಾ
...ರ್ಷಕ ಜೀವನ
...ನ್ನುಂಟುಮಾಡಿ
...ಹಳ್ಳಿಯ ಎ
...ವೀ ಚಳವಳಿ
...ನೇಕ ಅಡಚಣೆ
...ಗಿ ಸಂಘದ
...ವಿಲ್ಲದೆ ಅಗತ
...ಮಂದಿ ಕೂಡಿ
...ನ್ನು ಸುಧಾರಿಸಿ
...ದ ಏರ್ಪಡಿಸಿ
...ಎರಡನೆಯ
...ಪದ್ಧತಿಯನ್ನು
...ರಬಹುದು. ಈ
...ರರು ಕೂಡಿ
...ಸಿದರೆ ಅದು
...ಹೇಗಿ ಹಾಸ್ಯ
...ದೇ ಅಧಿಕ
...ಶ್ಯವಿಲ್ಲದೆ
...ಸಹಾಯಕ್ಕೆ

ಯೋಗ್ಯರಾದವರನ್ನು ಇದರಲ್ಲಿ ಸೇರಿಸಲಿ ಕ್ಕಿಸುವುದೂ ಹಾಸ್ಯಾಸ್ಪದವೇ ಸರಿ. ಹಾಗೆ ಮಾಡುವದರಿಂದ ನಿಮ್ಮ ಜಿಲ್ಲೆಯಲ್ಲಿ ಹಳ್ಳಿಯ ಕೂಲಂಕುಷ ಪರಿಶೀಲನೆಯನ್ನು ಮಾಡುವುದರಿಂದ ಮಾತ್ರವೇ ಬೇರೆ ಬೇರೆ ಸಂಘಗಳಿಗೆ ಎಷ್ಟೆಷ್ಟು ಮಂದಿ ಹಳ್ಳಿಯ ಕೃಷಿಕರು ಸೇರುತ್ತಾರೆಂಬ ಲೆಕ್ಕವು ಸಿಗಬಹುದು. ಈ ಲೆಕ್ಕವು ಸಹಕಾರೀ ಚಳವಳವನ್ನು ಬಲಪಡಿಸುವುದಕ್ಕೂ ದೂರದೃಷ್ಟಿಯ ಯೋಜನೆಯನ್ನು ತಯಾರಿಸುವುದಕ್ಕೂ ಅತ್ಯಾವಶ್ಯಕವಾಗಿದೆ.

ಈಗ ನಮ್ಮಲ್ಲಿ ಬೆಳೆದು ಬಂದಿರುವ ಲೇವಾದೇವೀ ಪದ್ಧತಿಯು ಕೃಷಿಕರ ಹಣದ ಅಡಚಣೆಯನ್ನು ತೀರಿಸುವುದಕ್ಕೆ ಅನುಕೂಲವಾಗಿದೆಯೇ ಎಂಬುದು ಇನ್ನೊಂದು ಪ್ರಶ್ನೆ. ಈ ಪ್ರಶ್ನೆಯ ಕುರಿತು ಇದುವರೆಗೆ ಎಷ್ಟೋ ಕಮಿಟಿಗಳು ಪರಿಶೀಲನೆ ಮಾಡಿರುವುವು. ಮತ್ತು ಇದೇ ಸಲುವಾಗಿ ನೇಮಿಸಲ್ಪಟ್ಟ ಮದ್ರಾಸ್ ಸಹಕಾರೀ ವಿಚಾರಣಾ ಸಮಿತಿಯು ಕೂಡ ತನ್ನ ಕಾರ್ಯವನ್ನು ಈಗಾಗಲೇ ಮುಗಿಸಿರುತ್ತದೆ. ಸಾಲಪಡೆಯುವವನ ಅನುಕೂಲತೆಗಳ ಪ್ರಶ್ನೆಯು ಹೆಚ್ಚು ಮಹತ್ವದ್ದೆಂದು ನನ್ನ ಮನಸ್ಸಿಗೆ ಕಾಣುತ್ತದೆ. ನಮ್ಮ ಸಂಸ್ಥೆಗಳಲ್ಲಿ ಸಾಮಾನ್ಯವಾಗಿ ಆಗುವ ವಿಳಂಬ ಮೊದಲಾದ ಅನಾನುಕೂಲತೆಗಳು ಬೇರೆ ಕಡೆಗಳಿಂದ ಹೆಚ್ಚಿನ ತೊಂದರೆ ಮತ್ತು ವಿಳಂಬವಿಲ್ಲದೆ ಹಣಪಡೆಯಬಹುದಾದ ಹಳ್ಳಿಗರಿಗೆ ಅಸಹನೀಯವಾಗಿವೆ. ನಮ್ಮ ಸಂಘಗಳನ್ನು ತಮ್ಮ ಜವಾಬ್ದಾರಿಯನ್ನು ತೃಪ್ತಿಕರವಾಗಿ ವಹಿಸಬಲ್ಲ ಹಳ್ಳಿಯ ಬೇಂಕುಗಳನ್ನಾಗಿ ಮಾರ್ಪಡಿಸಬೇಕು. ಈಗಿನ ಸಂಸ್ಥೆಗಳಲ್ಲಿರುವ ಅನೇಕ ಕ್ರಮಗಳು ಅನಿವಾರ್ಯವಾಗಿವೆ. ಆದರೆ ಸಂಪೂರ್ಣವಾಗಿ ತಿಕ್ಕೊತ್ತೆಗೆಯದಿದ್ದರೂ ಬಹುಮಟ್ಟಿಗೆ ಕಡಿಮೆ ಮಾಡಬಹುದಾದ ಅನೇಕ ವಿಧಾನಗಳು ನಮ್ಮ ಸಂಸ್ಥೆಗಳಲ್ಲಿವೆ. ಹಳ್ಳಿಯ ಸಂಘಗಳ ಆಡಳಿತೆಯು ಉತ್ತಮವಾದಂತೆ ತಮ್ಮ ಹಣದ ಆಡಳಿತೆಯಲ್ಲಿ ಅವರಿಗೆ ಹೇರಿದ ಹಕ್ಕನ್ನು ಕೊಡತಕ್ಕದ್ದು. 'ಯಾವ ಮೆಂಬರನು ತನ್ನ ಲೇವಾದೇವಿಯ ಯೋಗ್ಯತೆಯನ್ನು ವ್ಯಕ್ತಗೊಳಿಸುತ್ತಾನೋ ಅಂತಹ ಮೆಂಬರನಿಗೆ ಅವನು ಕೊಡುವ ಜವಾಬ್ದಾರಿ ಮತ್ತು ಅವನ ಪ್ರಕೃತದ ಆವಶ್ಯಕತೆಯ ಮೇಲಿಂದ 'ಕೇಶ್ ಕ್ರೆಡಿಟ್' (ಉಚಾಪತಿ)ಯ ಸೌಕರ್ಯಗಳನ್ನು ಕೂಡ ಒದಗಿಸಿ ಕೊಡಬಹುದು. ಕೇಶ್ ಕ್ರೆಡಿಟ್ ಪದ್ಧತಿಯನ್ನು ಕೆಲವು ಸಂಘಗಳ ಮಟ್ಟಿಗೆ ಈ ಜಿಲ್ಲೆಯ ಸೆಂಟ್ರಲ್ ಬೇಂಕಿನವರು ಅನುಸರಿಸಿರುತ್ತಾರೆನ್ನುವುದು ಆನಂದದ ಸಂಗತಿಯಾಗಿದೆ. 'ಕಂಟ್ರೋಲ್ಡ್ ಕ್ರೆಡಿಟ್ ಪದ್ಧತಿಯನ್ನು ವ್ಯವಸ್ಥೆಗೊಳಿಸಬೇಕೆಂದು ಒತ್ತಾಯಪಡಿಸುತ್ತಿರುವ ಈ ಸಮಯದಲ್ಲಿ ನಾನು ಈ ಮೊದಲು ಮಾಡಿದ ಸೂಚನೆಯನ್ನು ಅಂಗೀಕರಿಸುವುದು ಸುಲಭವಲ್ಲವೆಂದು ನನಗೆ ಗೊತ್ತಿದೆ. ಆದರೂ ಈ ಎರಡೂ ಕ್ರಮಗಳು ಸ್ಥಳೀಯ ಆಡಳಿತೆಯನ್ನು ಕೈಕೊಂಡವರಲ್ಲಿ ಅಧಿಕ ಜವಾಬ್ದಾರಿಯ ಕಲ್ಪನೆಯನ್ನುಂಟು ಮಾಡಿ, ಉತ್ಸಾಹವುಳ್ಳ ಸ್ಥಳೀಯ ಸಂಸ್ಥೆಯ ಮೂಲಕ ಮೇಲ್ವಿಚಾರಣೆಯನ್ನು ನಡೆಯಿಸುತ್ತಿದ್ದರೆ, ಅಸಮಂಜಸವಾಗಲಿಕ್ಕಿಲ್ಲ.

ಇನ್ನೊಂದು ದೃಷ್ಟಿಯಿಂದ ಈ ಪ್ರಶ್ನೆಯನ್ನು ಪರಿಶೀಲಿಸಿದರೆ ನಮ್ಮ ಕೃಷಿಕರ ಲೇವಾದೇವಿ ಸಂಘಗಳ ವಹಿವಾಟಿನಲ್ಲಿ ಇಂತಹ ಸಂಸ್ಥೆಗಳ ಭದ್ರತೆಗೆ ಅತ್ಯಗತ್ಯವಾಗಿರುವ ಜವಾಬ್ದಾರಿ, ಕ್ಲಪ್ತಕಾಲಕ್ಕೆ ಮರುಪಾವತಿಯಾಗಬೇಕೆಂಬ ಭಾವನೆ, ಕೊಟ್ಟ ಸಾಲವು ಹಿಂದೆ ಬಂದೀತೆಂಬ ಭರವಸೆ ಇವೆಲ್ಲವುಗಳ ಅಭಾವವು ಕಂಡುಬರುತ್ತದೆ. ರೂಢಮೂಲವಾಗಿರುವ ಸಾಲದ ಹೊರೆ ಮತ್ತು ಬಡತನಗಳಿಂದ ಇಂತಹ ನೈತಿಕ ಕರ್ತವ್ಯ ದೃಷ್ಟಿಯು ಸ್ವಲ್ಪ ಮಟ್ಟಿಗೆ ಮಂದವಾಗುವುದೆಂಬುದೇನೋ ನಿಜ. ಆದರೂ ಸಹಕಾರಿಗಳ ಸಮುದಾಯದಲ್ಲಿ ಈ ಭಾವನೆಯು ಹೊರಗಿನವರಲ್ಲಿರುವುದಕ್ಕಿಂತ ತೀವ್ರವಾಗಿಲ್ಲದೆ ಇರುವುದು ದುಃಖದ ಸಂಗತಿ. ಈ ಸ್ಥಿತಿಗೆ ಸಾಲ ಮತ್ತು ಬಡತನ ಇವನ್ನು ಅಳಿಸುವ ಉಪಾಯಗಳ ಹೊರತಾಗಿ ಎರಡು ರೀತಿಯಲ್ಲಿ ಮುಂದರಿಸಿದರೆ ಸಹಾಯವಾಗಬಹುದೆಂದು ನನಗೆ ತೋರುತ್ತದೆ. ಲೇವಾದೇವಿ ಸಂಘದಿಂದ ಬೇಕಾದ ಸಾಲವು ವಿಳಂಬವಿಲ್ಲದೆ ಮತ್ತು ಜಟಿಲವಾದ ನಿಯಮಗಳ ಅಭ್ಯಂತರವಿಲ್ಲದೆ ದೊರೆಯುವಂತೆ ಸಂಘದ ಕ್ರಮಗಳನ್ನು ಇಟ್ಟುಕೊಂಡಲ್ಲಿ, ಕೃಷಿಕನಿಗೆ ತನ್ನ ಸಂಘದಲ್ಲಿ ಶ್ರದ್ಧೆಯುಟ್ಟು ಅದರ ವಿಶ್ವಾಸವನ್ನು ಕಳಕೊಳ್ಳದಂತೆ ನಡೆಯಬೇಕೆಂದು ಸಹಜವಾಗಿ ಆಸೆಯಾಗುವದು. ಎರಡನೆಯದಾಗಿ ಈಗ ಸಂಘಗಳ ಕಾರ್ಯದಲ್ಲಿ ಗಮನಿಸದೆ ಇರುವ ಆವಶ್ಯಗತ್ಯವಾದ ಒಂದೆರಡು ಸೂತ್ರಗಳನ್ನು ಆಚರಣೆಗೆ ತರುವುದರಿಂದ ಸಂಘಗಳಿಗೂ ಅವುಗಳ ಸದಸ್ಯರಿಗೂ ಪ್ರಯೋಜನವಾಗದೆ ಇರದು, ಸಾಲ ಮತ್ತು ಮಾರಾಟದ ವ್ಯವಸ್ಥೆ ಹಾಗೂ ಬೇಕಾದ ಸಾಮಗ್ರಿಗಳನ್ನು ಒದಗಿಸಿಕೊಳ್ಳುವಿಕೆ ಇವುಗಳೊಳಗೆ ನಿಕಟವಾದ ಸಂಬಂಧವನ್ನು ಕಲ್ಪಿಸುವುದೇ ಇಂತಹ ಮುಂಜಾಗ್ರತೆಗಳಲ್ಲಿ ಪ್ರಧಾನವಾದದ್ದು. ರಿಜರ್ವ ಬೇಂಕಿನ ಎಗ್ರಿಕಲ್ಚರಲ್ ಕ್ರೆಡಿಟ್ ಶಾಖೆಯವರು ಈ ಸಿದ್ಧಾಂತವನ್ನು ಹೊಸತಾಗಿ ಪ್ರತಿಪಾದಿಸಿರುವರೆನ್ನುವುದು ಸರಿಯಲ್ಲ. ನಮ್ಮ ಹಳ್ಳಿಯ ಸಂಘಗಳು ಯಶಸ್ವಿಯಾಗಬೇಕಾದರೆ ಸಾಹುಕಾರನ ಪದ್ಧತಿಯನ್ನೇ ಅವರ ಸುಲಿಗೆಯ ಅಂಶವನ್ನಷ್ಟೆ ಬಿಟ್ಟು ಅನುಸರಿಸಬೇಕೆಂದು ಕಡಿಮೆಯೆಂದರೆ 20 ವರ್ಷಗಳಿಂದ ಬೊಂಬಾಯಿಯ ನಮ್ಮಲ್ಲಿ ಕೆಲವರು ಹೇಳುತ್ತ ಬಂದಿರುವೆವು. ಸಾಧ್ಯವಿರುವಷ್ಟರ ಮಟ್ಟಿಗೆ ಧಾನ್ಯ, ಉಪಕರಣ, ಸಾಹಿತ್ಯಗಳ ರೂಪದಲ್ಲೇ ಸಾಲ ಕೊಡುವುದು. ಅದನ್ನು ಅಗತ್ಯವಿರುವಾಗ ಸ್ವಲ್ಪ ಸ್ವಲ್ಪವಾಗಿ ಬಟವಾಡೆ ಮಾಡುವುದು—ಇದರಿಂದ ಸಾಲದ ಹಣದ ದುರುಪಯೋಗದ ಸಂಭವವು ಕಡಿಮೆಯಾಗಿ ಉತ್ಪತ್ತಿಯ ಪರಿಮಾಣಕ್ಕೆ ಸರಿಯಾಗಿ ಸಾಲವನ್ನು ಮಿತಗೊಳಿಸುವುದರಲ್ಲಿಯೂ ಸಹಾಯವಾಗುವುದು.

ಶಾಲಾ ಪುಸ್ತಕಗಳಿಗೆ
ನವಭಾರತ ಪುಸ್ತಕ ಭಂಡಾರ, ಉಡುಪಿ.

ಬ್ರಿಟಿಷ್ ಜಲಸಂಧಿನ ಬಳಿ ಅತ್ಯುಗ್ರ ಹೋರಾಟ!

ಇಂಗ್ಲಾಂಡಿನಲ್ಲಿ ಹೊಸ ಶಾಸನ

ಯುದ್ಧ ಸಲಕರಣೆಗಾಗಿ ಎಲ್ಲಾ ಮನುಷ್ಯರ ಮತ್ತು ಸೊತ್ತುಗಳನ್ನು ಕಟ್ಟೋಟೆಗೊಳಪಡಿಸುವ ಅವಸರದ ಮಸೂದೆಯು ಬ್ರಿಟಿಷ್ ಪಾರ್ಲಿಮೆಂಟಿನ ಮುಂದೆ ಬಂದು ಕೆಲವು ಘಂಟೆಗಳೊಳಗೆ ಮಂಜೂರಾಗಿರುವದು. ಈ ಕಾನೂನಿನಂತೆ ಕೆಲಸಗಾರರು ಸರಕಾರದ ಅಪೇಕ್ಷೆಯಷ್ಟು ಸಮಯ ಕೆಲಸ ಮಾಡಿ ಸಂಬಳ ಪಡೆಯಬೇಕು. ದೇಶದ ಸಂಗ್ರಹಿತ ಸಂಪತ್ತು ಯಾವುದಿದ್ದರೂ ಅದನ್ನು ಉಪಯೋಗಿಸುವ ಹಕ್ಕು ಸರಕಾರಕ್ಕಿದೆ.

ಯೋರ್ಕ್‌ಶಯರಿನ ಮೇಲೆ ಬೋಂಬು

ಕಳೆದ ತಾ. 24ನೇ ರಾತ್ರಿ ಇಂಗ್ಲಾಂಡಿನ ಯೋರ್ಕ್‌ಶಯರಿನ ಮೇಲೆ ಬೋಂಬು ಧಾಳಿ ನಡೆದು 8 ಮಂದಿ ಕೊಲ್ಲಲ್ಪಟ್ಟು ಕೆಲವರು ಜಖಂಗೊಂಡಿರುವರು. ಆಸ್ಪತ್ರೆಯೊಂದಕ್ಕೂ ಬೋಂಬು ಬಿದ್ದಿದೆ. ಹಾಗೆಯೇ ಪೂರ್ವ ಎಂಗ್ಲಿಯಾದ ಮೇಲೂ ವಿಮಾನ ಧಾಳಿ ನಡೆಯಿತು.

'ಐದನೇ ಕಲಮಿನ ಉಪಟಳ'

ಅನ್ಯದೇಶಗಳಲ್ಲಿ ಮುಂದಾಗಿ ಒಳಸಂಚು ನಡಿಸಿ ಹಾವಳಿ ಮಾಡುವ ಜರ್ಮನಿಯ 'ಐದನೇ ಕಲಮು'ದಳದವರ ಉಪಟಳ ನಿವಾರಣೆಗೆ ಅಮೇರಿಕಾ, ಕೆನಡಾ ಮೊದಲಾದ ಸರಕಾರಗಳು ತೀವ್ರವಾಗಿ ಪರಿಹಾರ ಕೈಗೊಂಡಿವೆ. ಇಂಗ್ಲಾಂಡು ಫ್ರಾನ್ಸುಗಳಲ್ಲಿ ಈ ಸಂಬಂಧವಾಗಿ ನೂರಾರು ಮಂದಿಯ ದಸ್ತಗಿರಿ ನಡೆದಿದೆ.

ಜಲಸಂಧಿನ ಬಂದರಗಳಲ್ಲಿ ಭೀಕರ ಯುದ್ಧ

ಬ್ರಿಟಿಷ್ ಕಾಲುವೆಯ ಬಳಿಯ ಬೂಲೋನ್ ಕೆಲೇಸ್ ಬಂದರಗಳಲ್ಲಿ ಘನಘೋರ ಸಂಗ್ರಾಮ ನಡೆಯುತ್ತಿದೆ. ತಾ. 27ರ ತನಕ ಕೆಲೇಬಂದರವು ತಮ್ಮ ಕೈಯಲ್ಲಿಯೇ ಇದೆ ಎಂದು ಫ್ರೆಂಚರ ಪ್ರಕಟಣೆಯಿದೆ. ನಾಜೀ ಸೇನೆಯು, ಟಾಂಕಿ ವಿಮಾನಗಳ ಸಂಘಟನೆಯಿಂದ ಅತಿ ಕಠಿಣ ಧಾಳಿ ನಡೆಸುತ್ತಿದೆಯಾದರೂ ಫ್ರೆಂಚ್, ಇಂಗ್ಲಾಂಡು, ಬೆಲ್ಜಿಯಮುಗಳು ಈ ವರೆಗೂ ಅಸಾಧಾರಣ ಸಾಹಸದಿಂದ ಹೋರಾಡುತ್ತಿವೆ. ಬ್ರಿಟಿಷ್ ವಿಮಾನಗಳು ಎಂದಿನಂತೆ ಜಯಶೀಲ ಧಾಳಿನಡಿಸುತ್ತಿರುವವು. ಕೆಲೇ ಬಂದರ ವಿಭಾಗದಲ್ಲಿ ವಿಮಾನ ಘೇದಕ ಮಿಶಿನುಗಳ ತೊಡೆತವನ್ನು ಲೆಕ್ಕಿಸದೆ ಧಾಳಿ ನಡೆಸಿ ದಿನವಿಡೀ ವಿರೋಧಿ ಸೇನೆ ಮುಂದೊತ್ತದಂತೆ ಮಾಡಿರುವವು. ತಮ್ಮ ಚಲನ ವಲನಗಳ ಪ್ರಕಟನೆಯಿಂದ ವಿರೋಧಿಗೆ ಗುಟ್ಟು ತಿಳಿಯುವ ಸಂಭವವಿರುವದರಿಂದ ಆ ಭಾಗದ ಯುದ್ಧವಾರ್ತೆಯನ್ನು ಕೆಲಕಾಲದ ವರೆಗೆ ಗುಪ್ತವಾಗಿ ಇರಗೊಡಿಸುವೆವೆಂದು ಮಿತ್ರರಾಷ್ಟ್ರೀಯರು ಪ್ರಕಟಿಸಿರುವರು.

ತೀವ್ರ ಘರ್ಷಣೆ

ಬೆಲ್ಜಿಯಮ್, ಫ್ರಾನ್ಸ್ ಗಡಿಗಳಲ್ಲಿ ಉಭಯ ಸೈನ್ಯಗಳೊಳಗಿನ ಕಾದಾಟವು ಅತಿ ತೀವ್ರವಾಗಿವೆ. ವಿಲ್ಲಿಯಮಿನ ಕೆಲ್ಲೆ ವಿಭಾಗವನ್ನು ಭೇದಿಸಿಕೊಂಡು ಕರಾವಳಿ ಯುದ್ಧ ಕ್ಷೇತ್ರದ ಕಡೆಗೆ ಮುಂದೊತ್ತುತ್ತಿರುವ ವಿರೋಧಿಸೇನೆಯನ್ನು ತಡೆಯಲು ಮಿತ್ರರಾಷ್ಟ್ರಗಳ ಸೈನ್ಯಗಳು ಉತ್ತರದಿಂದಲೂ ದಕ್ಷಿಣದಿಂದಲದಿ ಮುನ್ನುಗ್ಗುತ್ತಿವೆ. ಅಲ್ಲಿ ಕಠಿಣ ಯುದ್ಧ ನಡೆಯುತ್ತಿದೆ.

ಸಿಗ್‌ಫ್ರಿಡ್ ಲೈನಿನಲ್ಲಿ ಚಲನವಲನ

ಸಿಗ್‌ಫ್ರಿಡ್ ಕೋಟೆಯ ಬಳಿಯಲ್ಲಿದ್ದ ಜರ್ಮನ್ ಸೈನ್ಯಗಳು ದೊಡ್ಡ ಪರಿಮಾಣದಲ್ಲಿ ಉತ್ತರ ಫ್ರಾನ್ಸಿನ ಯುದ್ಧರಂಗಕ್ಕೆ ಸಾಗುತ್ತಿವೆ. ಇದರಿಂದ ಅಲ್ಲಿಯ ಯುದ್ಧವು ಭೀಕರವಿರುವುದೆಂದೂ ಜರ್ಮನಿಯು ತನ್ನ ಹೆಚ್ಚಿನ ಸೇನಾಬಲವನ್ನು ಅಲ್ಲಿ ಉಪಯೋಗಿಸಲುತೊಡಗಿರುವುದೆಂದೂ ಊಹಿಸಬಹುದು. ಅಲ್ಲಿಯ ಭೂಸ್ಥಿತಿಯು ಮಿತ್ರರಾಷ್ಟ್ರಗಳ ಸೇನೆಗನುಕೂಲವಾಗಿರುವದಲ್ಲದೆ ವಿರೋಧಿಗೆ ಪ್ರಬಲ ಪ್ರತಿಬಂಧಕವಾಗುವ ಸ್ಥಳವೊಂದನ್ನು ಫ್ರೆಂಚ್ ಸೇನೆ ಇಷ್ಟರಲ್ಲೇ ಆಕ್ರಮಿಸಿ ನಿಂತಿದೆ. ಬೆಲ್ಫ್ ಎಂಬಲ್ಲಿ ತಯಾರಾಗಿರಿಸಿದ್ದ ಸೇನೆಗಳನ್ನು ಮಿತ್ರಪಕ್ಷೀಯರು ಹಿಂದೆಗೆದಿರುವರು.

ಜರ್ಮನಿಯ ಉತ್ಸಾಹ ಕುಂದಿದೆಯೆ?

ಯುದ್ಧ ವಾರ್ತೆ ಗುಟ್ಟಾಗಿದ್ದರೂ, ಮಿತ್ರ ಪಕ್ಷೀಯರು ಸುಧಾರಣೆಗೊಳ್ಳುತ್ತಿದ್ದಾರೆಂಬ ವ್ಯಾಖ್ಯಾನಿಸಿನವರಲ್ಲೀಗ ಸ್ಪಷ್ಟವಾದ ಭರವಸೆಮೂಡಿರುವದು. ಜರ್ಮನಿಯ ಪ್ರಚಾರಕ ಖಾತೆಯು ಯುದ್ಧ ವಿಜಯವು ದೂರದಲ್ಲಿದೆ ಎಂಬ ಅಭಿಪ್ರಾಯವನ್ನು ಹರಡಹತ್ತಿದೆ. ಅಲ್ಲಿಯ ಪತ್ರಿಕೆಗಳು ಮೊದಲಿನಷ್ಟು ವಿಜಯದ ಹೆಗ್ಗಳಿಕೆ ಸೂಚಿಸುತ್ತಿಲ್ಲವಾದ್ದರಿಂದ ಜರ್ಮನ್ ಹೈಕಮಾಂಡಿಗೆ ತನ್ನ ಹಾದಿಯಲ್ಲಿರುವ ಸಂಕಷ್ಟದ ಅರಿವಾಗಹತ್ತಿದೆ ಎಂಬ ಊಹೆಯಿದೆ.

ಇಂಗ್ಲಾಂಡಿನ ರಕ್ಷಣಾ ಸಿದ್ಧತೆ

ಇಂಗ್ಲಾಂಡಿನಲ್ಲಿ ಧಾಳಿಯ ಕಾಲದ ರಕ್ಷಣೆಗಾಗಿ ಪ್ರಬಲ ಸಿದ್ಧತೆ ನಡೆಯುತ್ತಿದೆ. ಜನರಲ್ ಸರ್. ಎಡ್ಮಂಡ್ ಇರೋನ್‌ಸೈಡ್‌ರವರು ಗೃಹರಕ್ಷಣಾ ವಿಭಾಗದ ಕಮಾಂಡರ್–ಇನ್–ಚೀಫ್ ಆಗಿ ನೇಮಕಹೊಂದಿರುವರು. ಕರಾವಳಿಯ ಪಟ್ಟಣಗಳನ್ನು ಖಾಲಿಮಾಡಬೇಕೆಂಬ ಸೂಚನೆಯಾಗಿದೆ.

ವೈಸರಾಯರ ಸಂದೇಶ

ತಾ 26ನೇ ರಾತ್ರಿ ಬ್ರಾಡ್‌ಕಾಸ್ಟ್ ಭಾಷಣವೀಯುತ್ತಾ ಇಂಡಿಯಾದ ವೈಸರಾಯರು ಭಾರತೀಯರು ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಐಕ್ಯತೆಯಿಂದ ಯುದ್ಧಸಹಾಯವೀಯಬೇಕೆಂದು ಕೇಳಿಕೊಂಡರು.

ಭಾರತದ ರಕ್ಷಣೆಗಾಗಿ ಸಿದ್ಧತೆ

ಸಮೀಪದ ಭವಿಷ್ಯತ್ಕಾಲದಲ್ಲೇ ಭಾರತಕ್ಕೆ ಒದಗಬಹುದಾದ ಅಪಾಯದ ನಿವಾರಿಸಲು ಸೈನ್ಯ ಮತ್ತು ಯುದ್ಧೋಪಕರಣಗಳನ್ನು ಹೆಚ್ಚಿಸುವ ಆಜ್ಞೆಗಳು ಇಂಡಿಯಾ ಸರಕಾರದಿಂದ ಹೊರಟಿವೆ. ಬೊಂಬಾಯಿ ನ್ಯಾಯ ವಿಧಾಯಕ ಸಭೆಗಳ ಮೆಂಬರರ ಮತ್ತು ಅಧಿಕಾರಿಗಳ ಸಂಬಳ, ಬತ್ತೆ ಮುಂತಾದವನ್ನು ಜುಲಾಯಿ ತಾ. 1ರಿಂದ ಕಮ್ಮಿಪಡಿಸುವ ನಿರ್ಣಯವನ್ನು ಬೊಂಬಾಯಿ ಗವರ್ನರರು ಮಾಡಿರುವರು.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)
ಮಂಗಳೂರು, ತಾ. 27-5-40

ಮಂಗಳೂರು ನಗರ ಸಭೆ—ಮಂಗಳೂರು ನಗರ ಸಭೆಯು ಕಳೆದ ತಾ 20ನೇ ಸೋಮವಾರ ದಿನ ಸಾಯಂಕಾಲ ನಡೆಯಿತು. ಮಂಗಳೂರು ಟ್ರೇಡ್ ಸ್ಕೂಲಿನಲ್ಲಿ ಕಲಿಯುವ ಆರು ಮಂದಿ ವಿದ್ಯಾರ್ಥಿಗಳಿಗೆ ನಗರ ಸಭೆಯವರು ವೇತನ ಕೊಡುವ ದಕ್ಕೆ ಆ ಬಗ್ಗೆ ಹಣವು ಮಂಜೂರಾಯಿತು. ಗ್ರೇಡ್ ಪ್ರಕಾರ ವೇತನ ಕೇವಲ ಸಾಧ್ಯವಿಲ್ಲದೆ ಹೋದರೆ ನಗರ ಸಭೆಯ ಶಾಲೆಗಳಲ್ಲಿ ಇಂಗ್ಲಿಷ್ ಕಲಿಸುವುದನ್ನು ನಿಲ್ಲಿಸಬೇಕೆಂದೂ, ಪ್ರತಿಯೊಂದು ಶಾಲೆಯಲ್ಲಿಯೂ ಯಾವುದಾದರೂ ಒಂದು ಕೈಗಾರಿಕೆಯನ್ನು ಖಡ್ಡಾಯವಾಗಿ ಕಲಿಸುವ ಏರ್ಪಾಡು ಮಾಡಬೇಕೆಂದೂ ಸೂಚಿಸಿ ಬಂದಿದ್ದ ಸರಕಾರಿ ಹುಕುಮುಗಳು ಓದಲ್ಪಟ್ಟು ರಿಕಾರ್ಡ್ ಮಾಡಲಾಯಿತು.

ಶ್ರೀ ಬುದ್ಧ ಜಯಂತಿ—ಕಳೆದ ಮಂಗಳವಾರ ದಿನ ಸಾಯಂಕಾಲ ಸ್ಥಳೀಯ ಥಿಯಸಾಫಿಕಲ್ ಲಾಜಿನಲ್ಲಿ, ಕಲ್ಚರಲ್ ಎಸೋಸಿಯೇಶನಿನ ಆಶ್ರಯದಲ್ಲಿ ಶ್ರೀ ಬುದ್ಧ ಜಯಂತ್ಯುತ್ಸವವು ಯಶಸ್ವಿಯಾಗಿ ಜರಗಿತು. ಶ್ರೀ ಎಸ್ ಮುಕುಂದ ರಾಯರು ಜಾತಕ ಗ್ರಂಥದಿಂದ (ಬೌದ್ಧರ ಧರ್ಮ ಗ್ರಂಥ) ಒಂದೆರಡು ಕಥೆಗಳನ್ನು ಓದಿ ಹೇಳಿದರು. ಅನಂತರ ಶ್ರೀಮಾನ ಬಿ. ಸಂಜೀವ ರಾವ್ ಎಂ. ಎ., ಎ. ಇ. ಎಸ್ ಇವರು ಭಗವಾನ್ ಬುದ್ಧದೇವನು ಲೋಕಕ್ಕೆ ಕೊಟ್ಟ ಸಂದೇಶವನ್ನು ವಿವರಿಸಿ ಭಾಷಣ ಮಾಡಿದರು.

ಉಪನ್ಯಾಸ—ಕಳೆದ ತಾ. 24ರಲ್ಲಿ ಶ್ರೀ ಬಿ. ಸಂಜೀವ ರಾಯರು ಥಿಯಸಾಫಿಕಲ್ ಲಾಜಿನಲ್ಲಿ "ಬಿಲೀಫ್ ಎಂಡ್ ಏಕ್ಷನ್" ಎಂಬ ವಿಷಯದಲ್ಲಿ ಮಾತಾಡುತ್ತಾ ಮಾನವನು ಅನೇಕ ಸಂಗತಿಗಳನ್ನು ನಂಬುತ್ತಾನೆ. ಆದರೆ ಕಾರ್ಯತಃ ನಂಬುವುದಿಲ್ಲ. ಇದಕ್ಕೆ ಉದಾಹರಣೆಯನ್ನು ಕೊಡುತ್ತಾ ಒಬ್ಬ ಜಿಯಾಲಾಜಿ ಪಂಡಿತರು ಧರ್ಮ (ಕ್ರಿಸ್ತ)ದ ವಿಷಯವಾಗಿ ಮಾತಾಡುವಾಗ ಪ್ರಪಂಚವು ನಿರ್ಮಾಣವಾಗಿ ಒಟ್ಟು 5000 ವರ್ಷಗಳಾದುವೆಂದು ಹೇಳುತ್ತಿದ್ದರೆಂದೂ ಆದರೆ ಅದೇ ಮನುಷ್ಯರು ಜಿಯಾಲಜಿ ಶಾಸ್ತ್ರವನ್ನು ಕಲಿಸುವಾಗ ಈ ಭೂಮಿಯು ಹುಟ್ಟಿ ಸಾವಿರ ಮಿಲಿಯ ವರ್ಷಗಳಾದುವೆಂದು ಹೇಳುತ್ತಿದ್ದರೆಂದೂ ಮುಖ್ಯವಾಗಿ ಮನುಷ್ಯರು ಒಂದೊಂದು ಸಂದರ್ಭದಲ್ಲಿ ಒಂದೊಂದು ವಿಧವಾಗಿ ನಡೆಯುವುದು ಗೋಚರಕ್ಕೆ ಬರುವುದೆಂದೂ ಮಾರ್ಮಿಕವಾಗಿ ಹೇಳಿದರು.

ಶೋಚನೀಯ ನಿಧನ—ದ್ರಾವಿಡ ಬ್ರಾಹ್ಮಣ ಸಮಾಜಕ್ಕೆ ಸೇರಿದ ವಯೋವೃದ್ಧರೂ ಜ್ಞಾನವೃದ್ಧರೂ, ಪರೋಪಕಾರಿಗಳೂ ಆಗಿದ್ದ ಶ್ರೀಯುತ ಪಾಂಗಾಳ ರಾಮಚಂದ್ರಯ್ಯನವರು ಕಳೆದ ಸೋಮವಾರ ತಮ್ಮ ಎಪ್ಪತ್ತಾರನೇ ವರ್ಷ ಪ್ರಾಯದಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದವೆನಿಸುತ್ತದೆ. ಶ್ರೀಯುತರ ಬಂಧು ಮಿತ್ರರ ದುಃಖದಲ್ಲಿ ನಮ್ಮ ಸಹ ಸಂತಾಪ ಸೂಚಿಸುತ್ತೇವೆ.

ಉಡುಪಿ

ದ. ಕ. ಜಿಲ್ಲಾ ಸಹಕಾರೀ ಪರಿಷತ್ತು ಮಂಜೂರಾದ ಠರಾವುಗಳು

1. ಸಹಕಾರೀ ಸಂಘದ ಶಾಖೆಗಳಿಲ್ಲದ ಹಳ್ಳಿಗಳಲ್ಲಿ ಅವನ್ನು ಸ್ಥಾಪಿಸಬೇಕಲ್ಲದೆ ಎಲ್ಲಾ ಕಡೆಗಳಲ್ಲಿ ಬಹು ವಿಧಗಳನ್ನು ಬಳಗೊಳಿಸುವ ಯೋಜನೆ ತಯಾರಿಸಬೇಕು. 2. ಕೃಷಿಯ ಧಾರಣೆ, ಗ್ರಾಮಾಂತರಗಳ ಸುಧಾರಣೆ, ಆರೋಗ್ಯ, ನಿರಕ್ಷರತಾ ನಿವಾರಣೆ ಇತ್ಯಾದಿ ಗ್ರಾಮಸುಧಾರಣೆಗಳು ತಮ್ಮ ಮೂಲಭೂತ ಕರ್ತವ್ಯವೆಂದು ಎಲ್ಲಾ ಸಹಕಾರಿ ಸಂಘಗಳು ತಿಳಿದು, ಅವಕ್ಕಾಗಿ ಸರಕಾರದ ಅಭಿವೃದ್ಧಿ ಶಾಖೆಯ ಪ್ರಯೋಜನ ಪಡೆಯುವ ಉಪಾಯ ಕೈಗೊಳ್ಳಬೇಕು. 3. ಎಲ್ಲಾ ಯೂನಿಯನ್ ಕಾರ್ಯಕ್ಷೇತ್ರಗಳ ಸ್ಥಿತಿ ಅರಿಸಿದ ಕೆಲವು ಸಂಘಗಳಲ್ಲಿ 'ಸಾಲ ಹಕೋಟಿ' ಪದ್ಧತಿಯನ್ನು ಜಾರಿಮಾಡಬೇಕು. 4 ಯೂನಿಯನ್ ಸಂಸ್ಥೆಗಳು ಈಗ ಹೀನಸ್ಥಿತಿಯಲ್ಲಿರುವದರಿಂದ ಅವುಗಳನ್ನು ಬಲಪಡಿಸಿ ಸಹಕಾರದ ಸರ್ವತೋಮುಖ ಚಟುವಟಿಗಳನ್ನು ಅವುಗಳ ಮೂಲಕ ಸಾಧಿಸಬೇಕು. 5. ಸಹಕಾರೀ ಪ್ರಚಾರಕಾರ್ಯದ ಪ್ರಾಮುಖ್ಯತೆಯನ್ನು ಪ್ರಿನ್ಸಿಪಾಲ್ಯದಲ್ಲದೆ ಪ್ರಚಾರಕ್ಕಾಗಿ ಕಾರ್ಯಕರ್ತರ ದಳವೊಂದನ್ನು ತಯಾರಿಸಬೇಕು. 6 ಕೃಷಿಕರ ಭಂಡಸಾಲೆ ಸಂಘದ ಪ್ರಯೋಜನವು ಜಿಲ್ಲೆಯ ಎಲ್ಲಾ ಕಡೆಗಳಿಗೂ ದೊರಕುವಂತಾಗಬೇಕಲ್ಲದೆ ಮುಖ್ಯ ಗ್ರಾಮಕೇಂದ್ರಗಳಲ್ಲಿ ಮಾಲು ದಾಸ್ತಾನಿನ ಸಂಗ್ರಹಾಲಯಗಳನ್ನು ತೆರೆಯಬೇಕು. 7. ಸ್ಟೋರ್ಸ್‌ಗಳನ್ನು ಎಲ್ಲಾ ಕಡೆಗಳಲ್ಲಿಯೂ ಸ್ಥಾಪಿಸಿ ಅವುಗಳಿಗೂ ಮಾರಾಟಸಂಘ ಮತ್ತು ಉತ್ಪಾದನ ಸಂಘಗಳಿಗೂ ನಿಕಟ ಸಂಬಂಧವನ್ನುಂಟು ಮಾಡುವ ಯೋಜನೆ ತಯಾರಿಸಬೇಕು. 8. ಗ್ರಾಮೋದ್ಯೋಗ ಸುಧಾರಕ ಸಂಘಸ್ಥಾಪನೆಯಾಗಿರುವದು ಬಹಳ ಪ್ರಾಮುಖ್ಯ ಕಾರ್ಯವೆಂದು ಪರಿಷತ್ತು ಭಾವಿಸುತ್ತದೆ. ಮತ್ತು ಅದರ ಮೂಲಕ ಕೈನೂಲು, ಮಗ್ಗ, ತಾಳೆಹಗ್ಗ, ಓಲೆಬೆಲ್ಲ, ಕಾಗದ ಚರ್ಮ ಬಟ್ಟೆ, ಜೇನು ಇತ್ಯಾದಿಗಳ ತಯಾರಿ ಕೈಗಾರಿಕೆಗೆ ಬೆಂಬಲಕೊಡತಕ್ಕದ್ದು. 9. ಹೊಲಿ ಮತ್ತು ಕಡಪತ್ತಿಯ ಹಾವಳಿ ನಿವಾರಣೆಗಾಗಿ ಜೀವಾದೇವಿ ಸಂಘಗಳು ಧಾನ್ಯದ ಸಾಲಕೊಡುವ ವ್ಯವಸ್ಥೆಯಾಗಬೇಕು. 10. ಜಿಲ್ಲೆಯಲ್ಲಿರುವ 80 ಹರಿಜನ ಸಂಘಗಳನ್ನು ಬಲಪಡಿಸಿ ಅವು ಹರಿಜನರಿಗೆ, ಹಣ ಸಂಪಾದನೆಯ ಕೆಲಸ ದೊರಕಿಸುವದು, ಕೈಗಾರಿಕೆ ಮತ್ತು ಶಿಕ್ಷಣದ ಏರ್ಪಾಡು, ವಿತರಣೆಯ ವತ್ತು ಜೀವನವನ್ನು ಕಲಿಸಿ ಆರ್ಥಿಕ ಸುಧಾರಣಮಾಡುವಂತಾಗಬೇಕು. 11. ಜಿಲ್ಲೆಯ ಸಹಕಾರಿ ಜೀವವಿಮಾ ಸಂಘವನ್ನು ಬಲಪಡಿಸಲು ಎಲ್ಲಾ ಸಹಕಾರೀ ಕಾರ್ಯಕರ್ತರು ಪ್ರಯತ್ನಿಸಬೇಕು.

ಪರಿಷದಂತ್ಯದಲ್ಲಿ ಸಹಕಾರಿ ಸಂಘಗಳ ರಿಜಿಸ್ಟ್ರಾರರಾದ ಶ್ರೀ ಗಿರಿಯಪ್ಪನವರು ಜಿಲ್ಲೆಯ ಸಹಕಾರೀ ಕಾರ್ಯಕಲಾಪಗಳನ್ನು ವಿವರಿಸಿ ಉತ್ತಮ ಭಾಷಣ ವಿತ್ತರು. ಅಧ್ಯಕ್ಷರು ಮುಕ್ತಾಯ ಭಾಷಣಮಾಡುತ್ತಾ ಹರಿಜನ ಸುಧಾರಣೆಯು ಸಹಕಾರ ಪದ್ಧತಿಯ ಒಂದು ಮುಖ್ಯ ಭಾಗವೆಂದು ಹೇಳಿ ದಕ್ಷಿಣ ಕನ್ನಡದ ಅಭಿವೃದ್ಧಿಯನ್ನು ಶ್ಲಾಘಿಸಿದರು. ರಾತ್ರಿ ವಿವಿಧ ವಿನೋದಾವಳಿಗಳ ಪ್ರದರ್ಶನವು ಬೋರ್ಡ್ ಹೈಸ್ಕೂಲಿನ ವಠಾರದಲ್ಲಿ ನಡೆಯಿತು. ಪರಿಷತ್ತಿನ ವಸ್ತು ಪ್ರದರ್ಶನದಲ್ಲಿ ಜಿಲ್ಲೆಯ ಮುಖ್ಯ ಕೈಗಾರಿಕೆಗಳು ಇಡಲ್ಪಟ್ಟದ್ದು ಪ್ರದರ್ಶನವು ಪ್ರೇಕ್ಷಣೀಯವಿತ್ತು. ಪರಿಷತ್ತಿನ ಕಾರ್ಯಕಲಾಪಗಳು ತಾ. 28ರಲ್ಲೇ ಮುಗಿದುವು.

ಕಾರ್ಕಳ ಮೂಡಬಿದ್ರೆ ರಸ್ತೆಯ ವಿಚಾರ—ಒಂದೆರಡು ತಿಂಗಳ ಹಿಂದೆ ಶ್ರವಣಬೆಳಗೊಳದಲ್ಲಿ ನಡೆದ ಶ್ರೀ. ಗೋಮಟೇಶ್ವರ ಮಹಾ ಮಸ್ತಕಾಭಿಷೇಕದ ವಿಚಾರ ಎಲ್ಲರಿಗೂ ತಿಳಿದೇ ಇದೆ. ಈ ಮಹೋತ್ಸವದ ಸಲುವಾಗಿ ಉತ್ತರ ಹಿಂದೂದೇಶದಿಂದಲೂ (ಇಂದೋರು ಮುಂತಾದ ಸಂಸ್ಥಾನಗಳಿಂದ) ಸಾವಿರಾರು ಮಂದಿ ಯಾತ್ರಿಕರು ಬಂದು ಜೈನರ ಪವಿತ್ರ ಸ್ಥಳಗಳಾದ ಕಾರ್ಕಳ ಹಾಗೂ ಮೂಡಬಿದ್ರೆಗಳ ವರೆಗೂ ಪ್ರಯಾಣ ಬೆಳೆಸಿಕೊಂಡು ಹೋದುದುಂಟು. ಹಾಗೆ ಹೊರ ದೇಶಗಳಿಂದ ಬಂದ ಯಾತ್ರಿಕರು ನಾಲ್ವತ್ತು ಐವತ್ತು ಮಂದಿ ಕುಳಿತುಕೊಳ್ಳುವಂಥ ದೊಡ್ಡ ದೊಡ್ಡ ಭಾರವಾದ ಮೋಟಾರುಬಂದಿಗಳನ್ನು ತಂದುಬಿಡೆ. ಕಾರ್ಕಳ ಮೂಡಬಿದ್ರೆ ರಸ್ತೆಯು ವಿಶೇಷವಾಗಿ ಹಾಳಾಗುವುದಕ್ಕೆ ಇದೇ ಮುಖ್ಯ ಕಾರಣವೆಂದು ಖಂಡಿತವಾಗಿ ಹೇಳಬಹುದು. ಗುರುಪುರದ ಮೂಡಬಿದ್ರೆ ರಸ್ತೆಯು ಕೂಡ ಇದೇ ಕಾರಣದಿಂದ ಹೀಗೆಯೇ ಕೆಟ್ಟುಹೋಗಿದೆ. ಆ ಸಮಯದಲ್ಲಿ ಈ ರಸ್ತೆಗಳ ಮೇಲೆ 500ರ ಮೇಲ್ಪಟ್ಟು ಸೈಕಲ್ ಮೋಟಾರುಬಂಡಿಗಳು ಓಡಾಡಿದುದರ ಇದೆ. ಇದಿಷ್ಟು ನಿಜಸ್ಥಿತಿ. ಈ ಕಾರಣದ ವಾಸ್ತವ ವಿಚಾರವನ್ನು ಜನತೆಯ ಮುಂದಿಡುವುದು ನನ್ನ ಕರ್ತವ್ಯವೆಂದು ಭಾವಿಸಿ ಅದನ್ನಿಲ್ಲಿ ತಿಳಿಸಿದ್ದೇನೆ. ಬರುವ ಮಳೆಗಾಲದ ಸಮಯ ಬೋರ್ಡಿನವರು ಧನಸಹಾಯವನ್ನು ಒದಗಿಸಿಕೊಂಡು ಕೆಟ್ಟುಹೋದ ಇವೆರಡೂ ರಸ್ತೆಗಳನ್ನು ದುರಸ್ತಿಪಡಿಸಿ ಉತ್ತಮ ಸ್ಥಿತಿಗೆ ತರುವರೆ ಸರ್ವ ಪ್ರಯತ್ನಗಳನ್ನೂ ಮಾಡಲಾಗುವುದೆಂದು ಈ ಮೂಲಕ ಮಹಾ ಜನರಿಗೆ ತಿಳಿಸಲು ಬಯಸುತ್ತೇನೆ.

ಕೆ. ವಿಟ್ಠಲ ಶೆಟ್ಟಿ,
ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್

(ಈ ಕುರಿತು ನವಯುಗದ ಮೇ ತಾ. 3ರ ಸಂಚಿಕೆಯಲ್ಲಿ ಪ್ರಕಟವಾದ ಟೀಕೆಗಾಗಿ ವಿಷಾದಪಡುತ್ತೇವೆ. ಸಂ. ನ)

ಮೊಳ್ಕಿ—ಕೆಲವು ದಿನಗಳಿಂದ ತಮ್ಮ ದೇಶಾವರಗಳನ್ನೇ ಪ್ರದರ್ಶಿಸುತ್ತಿದ್ದ ದಿ ಶಿವಾಜಿ ಗ್ರೇಂಡ್ ಸರ್ಕಸ್‌ನವರ ಧೇರೆಯಲ್ಲಿ ಬೊಂಬಾಯಿಯ ಪ್ರಸಿದ್ಧ ಸೇಂಡೋ ಶ್ರೀ. ಶೇಷಪ್ಪನವರಿಗೆ ತರಬೇತುಹೊಂದಿ, ಹುಬ್ಬಳ್ಳಿ ಚಾಂಪಿಯನ್ ಪತಾಕ್ ಪ್ಹೇಮ್‌ವಾನರ ಶಿಷ್ಯರಾದ ಶ್ರೀನಿವಾಸ ಪೈಲ್‌ವಾನರಿಗೂ, ಫಲಿಮಾರು ಶ್ರೀ. ಶ್ರೀಗಳವರ ಕೃಪಾಛತ್ರದಲ್ಲಿರುವ ಪೈಲ್ವಾನ್ ಮಿರ್ಜಾರವರ ಶಿಷ್ಯರಾದ ಶ್ರೀ. ಸಂಕಪ್ಪ ಸುವರ್ಣರಿಗೂ ಜಂಗೀಕುಸ್ತಿ ಪಂದ್ಯಾಟ ನಡೆದು ಶ್ರೀ. ಸಂಕಪ್ಪ ಸುವರ್ಣರು ಜಯಶೀಲರಾದರು.

ಕಾರ್ಕಳ—ಡಾ. ಕೆ. ನಾರಾಯಣಾಚಾರ್ಯರ ದ್ವಿತೀಯ ಪುತ್ರ ಶ್ರೀಯುತ ಪತಿತ ಪಾವನ ಯವರು ಮದ್ರಾಸು ಯೂನಿವರ್ಸಿಟಿಯ ಎಫ್. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ.

ಮಂಗಳೂರು ಗವರ್ನ್‌ಮೆಂಟ್ ಕಾಲೇಜಿನ ಹಿಂದೀ ಅಧ್ಯಾಪಕರಾದ ಶ್ರೀ ವೆಂಕಟರಾವ್ ಉಪಾಧ್ಯಾಯರ B A, ರವರು ಮದ್ರಾಸು ಯೂನಿವರ್ಸಿಟಿಯ B.O.L., ಡಿಗ್ರಿಯನ್ನು ಪಡೆದಿರುತ್ತಾರೆ.

ಬಾರ್ಕೂರು—ಹೊಸ ಪೇಟೆ ಮತ್ತು ಎಮರ್ಜನ್ಸಿ ವಾರ್ಡುಗಳನ್ನು ಕಟ್ಟಿಸುವರೆ, ಡಾಕ್ಟರ್ ಎ. ಎಸ್. ಹೆಬ್ಬಾರರು, ಶ್ರೀ ವಿಟ್ಠಲ ಶೆಟ್ರು ಶ್ರೀ. ಗೋವಿಂದ ಶೆಟ್ರು, ಶ್ರೀ. ಗೋಪಿ ಕಾಮತ್, ಶ್ರೀ. ವೆಂಕಟೇಶ ಕಾಮತ್, ಬಾರಕೂರಿನ ಬಡೇನ ಗುರುಗಳು, ಶ್ರೀ. ಬಿ. ಸುಬ್ಬಣ್ಣ ಶೆಟ್ರಿ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರು ಇತ್ಯಾದಿಯವರು ಕೆಲವು ದಿವಸಗಳ ಹಿಂದೆ ರೂಪಾಯಿ 500ನ್ನು ಈ ವರೆಗೆ ಸಂಗ್ರಹಿಸಿದ್ದಾರೆಂದು ತಿಳಿದುಬರುತ್ತದೆ.

ನೋಟೀಸು

ಪುತ್ತೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ

O. S. 317/38 R. I. A. 52/1940

ಲಕ್ಷ್ಮಿ ಹೆಂಗಸು, ದೇವಕ್ಕ ತಿಮ್ಮಕ್ಕ ರೈಗಳ ಮೊಮ್ಮಗಳು ಭಾಗದ ಯಜಮಾನ್ತಿ ವ ಅದಲ್ಲಿದಾರ್ತಿ ಪುತ್ತೂರು ತಾಲೂಕು ಪುಣಚಪ್ಪಾಡಿ ಗ್ರಾಮದ ದೇವಕ್ಕ. . . . . —ವಾದಿಳು,

ಮತ್ತು

1 ವಾಸುದೇವ ಅಚ್ಚುತ ಹೆಬ್ಬಾರ, 2 ರಾಮಚಂದ್ರ ಹೆಬ್ಬಾರ, 3 ಶಿವಶಂಕರ ಹೆಬ್ಬಾರ, 4 ವೆಂಕಟೇಶ ಹೆಬ್ಬಾರ, 5 ಪುಂಡರೀಕಾಕ್ಷ ಹೆಬ್ಬಾರ.

ಪರಮೇಶ್ವರ ಹೆಬ್ಬಾರರ ಮಕ್ಕಳು, ಇವರು ಕಾಸರಗೋಡು ತಾಲೂಕು ಅಡೂರು ಕಸಬಾ ಗ್ರಾಮದ ಕಡುಮನದ್ಕ ಎಂಬಲ್ಲಿರುವವರು —ಪ್ರತಿವಾದಿರು.

ಇವರೊಳಗೆ

1ರಿಂದ 5ನೇ ವರೇಗಿನ ಪ್ರತಿವಾದಿರಿಗೆ ತಿಳಿಸುವುದೇನೆಂದರೆ–

ವಾದಿಳು ಪ್ರತಿವಾದಿರ ಮೇಲೆ ಪಡೆದ ಪ್ರಿಲಿಮ್ನರಿ ಡಿಕ್ರಿಗನುಸರಿಸಿ ಫೈನಲ್ ಡಿಕ್ರಿ ಕೊಡಿಸಬೇಕಾಗಿ ವಾದಿಳು ಮಾಡಿದ ಮೇಲ್ಕಂಡ R. I A. 52/40 ನೇ ಅರ್ಜಿ ವ್ಯವಹರಣೆಯು ತಾ. 5-6-1940ಕ್ಕೆ ನೋಟೀಸು ತಮ್ಮ ಮ್ಯಾದೆ ಆಗಿರುವುದರಿಂದ ಸದರಿ ವ್ಯವಹರಣೆಯಲ್ಲಿ ನಿಮ್ಮ ಆಕ್ಷೇಪವಿದ್ದರೆ ಸದರಿ ಮ್ಯಾದೆಗೆ ಈ ಕೋರ್ಟ್ ಮುಂದೆ ಹಗಲು 11 ಘಂಟೆಗೆ ನೀವು ತಪ್ಪದೆ ಸ್ವತಃ ಯಾ ವಕೀಲರ ಮುಖಾಂತರ ನಿಮ್ಮ ಆಕ್ಷೇಪಣೆಗಳನ್ನು ಜಾಹೀರುಮಾಡಿಕೊಳ್ಳತಕ್ಕದ್ದು. ಇಲ್ಲವಾದರೆ ನಿಮ್ಮನ್ನು ಸದರಿ ವ್ಯವಹರಣೆಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾಗುತ್ತದೆ. ವಾದಿಳ ಕಡೆಯಿಂದ ಕೊಟ್ಟ R.I.A.416/1940 ನೇ ಅರ್ಜಿ ಹುಕುಂ ಪ್ರಕಾರ ಈ ನೋಟೀಸು ಮಾಡಿಯದೆ.

ಮೊಕ್ಕಾಂ: ಪುತ್ತೂರು ತಾ. 15-5-'40.

H. Sanjiva Shetty,
Advocate for Plaintiff.

Degrees Books: Medicines.
Free H. L. M S. H M. B. H. M. D etc Free Homeo Ayur-Unani-Naturo degres. by post also—Practioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10 Enclose 2 annas stamp.—

Principal, Indian Homeopathic Institute and Society (Govt Regd.)
P. O. MAHUVA, (Kathiawar Dt. India.

Sidh-Kalpa Kavach (Regd)
No. 3 Rs 2, No. 2 Rs. 5, No. 1 Rs 7. Special Rs. 10, Extra Special Rs 17, for love, marriage health wealth. Ask any six questions with M. O. Re. 1/4 and get correct answers by return post Life reading Rs. 2 No. V P P. Send M.O. Free pamphlets. **Prof Dr. B. M Gabatbar,**
P. O. Mahuva. (Kathiawar, India.)

ನೋಟೀಸು.

The Catholic Bank Ltd., Udipi.

ದಿ ಕೆಥೋಲಿಕ್ ಬ್ಯಾಂಕ್ ಲಿಮಿಟೆಡ್, ಉಡುಪಿ.

ಈ ಕೆಳಗೆ ಹೆಸರು ಕಾಣಿಸಿದವರು ಈ ಬ್ಯಾಂಕಿನಿಂದ ಚಿನ್ನಾಭರಣಗಳ ಆಧಾರದ ಮೇಲೆ ಪಡೆದ ಸಾಲವನ್ನು ಮರುಪಾವತಿಮಾಡದೆ ಬಡ್ಡಿ ಸಹ ಹೆಚ್ಚು ಹಣವು ಕೊಡದೆ ಬಾಕಿಮಾಡಿಕೊಂಡಿರುವುದರಿಂದ ಸಮ್ಮಿಯ ಸರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು ಬಾರಿ ಆಗದೆ ವಾಪಾಸುಬಂದಿರುವುದರಿಂದ ಈ ಮೂಲಕ ಜಾಹೀರುಪಡಿಸುವುದೇನೆಂದರೆ ಸದ್ರಿ ನಗಗಳನ್ನು ತಾ. 8-6-40ನೇ ಶನಿವಾರ ಮಧ್ಯಾಹ್ನ 3ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂಮಾಡಲಾಗುವುದು. ಏಲಂ ಅದೇ ದಿವಸ ಸಂಪೂರ್ಣ ಆಗದೆ ಇದ್ದರೆ ಬ್ಯಾಂಕಿಗೆ ಯುಕ್ತ ಕಂಡ ದಿವಸಕ್ಕೆ ಮುಂದುವರಿಸಲಾಗುವುದು. ತಿಳಿದಿರುವುದು.

2 ಮತ್ತು 3ನೆಯವರು ಮೃತಪಟ್ಟಿರುವುದರಿಂದ ಅವರ ವಾರೀಸುದಾರರು ತಮ್ಮ ಹಕ್ಕು ಬಾಧ್ಯತೆಯನ್ನು ರುಜುಪಡಿಸಿ ಸದರಿ ನಗಗಳನ್ನು ಬಿಡಿಸಿ ಕೊಂಡು ಹೋಗುವರೆ ನಮ್ಮಿಂದ ಆಕ್ಷೇಪವಿಲ್ಲ. ಮುಂಚಿತವಾಗಿ ಬಿಡಿಸಿಕೊಂಡುಹೋಗದಿದ್ದ ಪಕ್ಷದಲ್ಲಿ ಈ ನಗಗಳನ್ನೂ ತಾ. 8-6-40ನೇ ಮಧ್ಯಾಹ್ನ 3 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂಮಾಡಲಾಗುವುದು.

ತಾರೀಕು	ಜೆ. ಎಲ್. ನಂಬ್ರ	ಹೆಸರು ಮತ್ತು ವಿಳಾಸ	ಬರತಕ್ಕಂಥಾ ಮವೇಜು
16- 5 38	13/861	ಕಯ್ಯನಾಡು ಅನಂತನ್ c/o ಅಡಿಯಂ ಅನಂತನ ಮೇಸ್ತ್ರಿ ಕೋಸ್ಟಂಟ್ ರೋಡ, ಉಡುಪಿ ಪೋಸ್ಟು.	10—0—0
5- 1-38	13/492	ಮಿಸೆಸ್ ವಿ. ಜೆ. ಬಂಗೇರ, ಮಿಸ್ಟರ್ ಜೆ. ಇ ಬಂಗೇರರ ಪಿಥವೆ, ಅಜ್ಜರಕಾಡು ವಿಕ್ಟನ್ ಕಂಪೌಂಡಿನ ಹತ್ತಿರ, ಉಡುಪಿ ಟೌನ್.	30—0—0
22 10-39	15/183	ಟೋನ್ ಮಿಶೇದಸ್, ಇಗ್ನಾಸಿಯಸ್ ಮಿನೇಜರ ಮಗ ಕಾಪಟಿಟ್ಟು ವಾರ್ಡ, ಮುಡನಿಡಂಬೂರ, ಗ್ರಾಮ, ಉಡುಪಿ ಟೌನ್.	175—0—0

For CATHOLIC BANK LTD.,

UDIPI,
30-5-1940.

V. Anrade,
Agent.

ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ

ಪ್ರತೀಕಾರವೇ ಪರಿಹಾರ!

'ಉದರ ನಿಮಿತ್ತಂ ಬಹುಕೃತ ವೇಷಂ' ಎಂಬಂತೆ ನಾವೆಲ್ಲಾ ಊರುಕೇರಿ ಬಿಟ್ಟು ಹೊಟ್ಟೆಪಾಡಿಗಾಗಿ ಬೊಂಬಾಯಿಗೆ ಬಂದು ಏನಾದರೊಂದು ಉದ್ಯೋಗ ಕೈಗೊಂಡು ದಿವಸ ತೆಗೆಯುತ್ತಿದ್ದೇವೆ. ಇಲ್ಲಿ ಪೇಟೆಯಲ್ಲಿರುವ ನನ್ನೊಡನೆ, ನಮ್ಮ ಊರು ಜಿಲ್ಲೆಗಳಿಂದ ಸೋಡ್ತಿ ಟಿಕೇಟು ಗಳಿಂದ ಹಿಡಿದು, ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್ ಕಂಪೆನಿಗಳ ವರೆಗೆ ಎಲ್ಲರೂ ಬಂದು ಹಣ ಕೇಳುತ್ತಿದ್ದಾರೆ. ನಮ್ಮ ಈ ಉಪದ್ರವಕ್ಕೊಂದು ಪರಿಹಾರವೇನೆಂಬುದನ್ನು ದಯವಿಟ್ಟು ತಿಳಿಸುವಿರಾ"

—ಎನ್. ಎಲ್. ಶೆಟ್ಟಿ, ಬೊಂಬಾಯಿ.

ಓಹೋ! ನೀವೇ ಸಂಕಷ್ಟದಲ್ಲಿರುವಿರಾ? ಹಾಗಾದರೆ ನೀವೊಂದು "ಸಂಕಷ್ಟನಿವಾರಕ ಸಂಘ" ಸ್ಥಾಪಿಸಿಕೊಳ್ಳಲಿಲ್ಲವೇಕೆ? ಆ ಸಂಘದ ಕೆಲವು ರಶೀದಿ ಪುಸ್ತಕಗಳನ್ನು ಮಾಡಿಟ್ಟುಕೊಂಡು ಬಂದವರು ತಮ್ಮ ಸೋಡ್ತಿ ಪುಸ್ತಕ ತೆಗೆಯುವ ಮೊದಲೇ ನೀವು ನಿಮ್ಮ ಪುಸ್ತಕವನ್ನು ಅವರ ಮುಖದಿದಿರು ಚಾಚಿದರಾಯಿತು. ಹಾಗೆ ಮಾಡದೆ ಇಲ್ಲಿಂದಲ್ಲಿಗೋಡಿಬರುವವರಿದಿರಲ್ಲಿ ದಾಕ್ಷಿಣ್ಯದಿಂದ ಮೈಮುದುಡಿಸಿದ ಮಾತ್ರಕ್ಕೆ ಅವರು ಬಿಡುವ ಹಾಗುಂಟೆ?

೦೦೦ ೦೦೦

ಲೆಕ್ಕಶಾಸ್ತ್ರದ ಹೊಸಮಾದರಿ

"ಈ ವರುಷ ನಮ್ಮ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಗ್ರಾಂಟಿನಲ್ಲಿ ಆಗಿರುವ ಕಡಿತದ ರೀತಿ ತಮಗೂ ಗೊತ್ತಿರಬಹುದು. ಶೇಕಡಾ ೮೩ಕ್ಕೂ ಮಿಕ್ಕಿ ಗ್ರಾಂಟ್ ಕಡಿತವಾದರೆ ಬಡ ಶಾಲಾ ಮೆನೇಜರರು ಶಾಲೆಯನ್ನು ಹೇಗೆ ನಡೆಸಬೇಕೆಂಬುದನ್ನು ಸ್ವಲ್ಪ ಹೇಳಿಕೊಡುವಿರಾ?"

—ಎಸ್. ಎಮ್. ಆರ್. ಪುಂಜಾಲಕಟ್ಟೆ.

ನಮಗೂ ಲೆಕ್ಕಶಾಸ್ತ್ರ ಕಲಿತು ಬರುವದಿಲ್ಲ. ವಿದ್ಯಾ ಇಲಾಖೆಯವರ ಗಮನಕ್ಕೂ ಅದು ಬಂದಿಲ್ಲವೆಂದು ನಮ್ಮ ಭಾವನೆ. ನಿಮ್ಮ ಶಾಲಾಪರೀಕ್ಷೆಗೆ ವಿದ್ಯಾಧಿಕಾರಿಗಳು ಬರುವದುಂಟಲ್ಲಾ. ಬಂದವರು ಕುರ್ಚಿಗೊರಗಿಕೊಂಡು 'ಲೆಕ್ಕಪಾಠ ಮಾಡಿ ನೋಡೋಣ!' ಎನ್ನುವಾಗ ನೀವು ಈ ಲೆಕ್ಕವನ್ನೇ ಬೋರ್ಡಿನಲ್ಲಿ ಬರೆಯಿರಿ "100-83½ ಉಳಿಯುವದೆಷ್ಟು?" ಆ ಲೆಕ್ಕದ ಉತ್ತರ ನೋಡಿ ಏನು ರಿಮಾರ್ಕ್ ಬರೆಯುತ್ತಾರೋ ನೋಡೋಣ.

೦೦೦ ೦೦೦

ನಮ್ಮೂರ ಹೆಗ್ಗಳಿಕೆ

"ಉಡುಪಿಯ ಅಷ್ಟಮಠದವರಿಗೆ ಬಂದ ಘಾತದ ಕುರಿತು ನಿಮ್ಮ ಕಳೆದ ವಾರದ ಸಂಚಿಕೆಯಲ್ಲಿ ಒಬ್ಬರ ಪ್ರಶ್ನೆಯೂ ನಿಮ್ಮ ಉತ್ತರವೂ ಬಂದಿತ್ತು. ಅಲ್ಲಿ ನಿಷೇಧ ಸೂಚಿಸಿದ ಹಿಂದೂ ಧರ್ಮಾಭಿಮಾನಿಗಳ ಕುರಿತು ನೀವು ಹೆಗ್ಗಳಿಕೆ ಪಡುವ ಬದಲಿಗೆ ಆ ರೀತಿ ವ್ಯಂಗ್ಯ ಉತ್ತರ ಕೊಟ್ಟದ್ದು ನ್ಯಾಯವೆ?"

—ಎಸ್. ಕೆ. ರಾವ್, ಪಡುಬಿದ್ರಿ.

ನಾವು ಹೆಗ್ಗಳಿಕೆಪಡಲಿಲ್ಲವೆಂದು ಹೇಗೆ ತಿಳಿದಿರಿ? ನಮ್ಮ ಮಾತು ಬಿಡಿ, ಬೋಂಬು ಧಾಳಿಯ ಭಯವಿರುವ ಲಂಡನಿನವರಾದರೂ ಇಂಥವರಿಗಾಗಿ ಹೆಗ್ಗಳಿಕೆಪಟ್ಟಾರು. ವಿಮಾನಧಾಳಿಯ ಈ ಯುಗದಲ್ಲಿ ಮಠದ ಕೊಂಬೆ ಮುರಿಯಲುಬಿಡದವರು ಮನೆಯ ಮಾಡಿಗೆ ಬೋಂಬು ಬೀಳಲು ಎಷ್ಟಕ್ಕೂ ಬಿಡಲಾರರೆಂಬುದರಿಂದ ಅಂಥವರಿಗಾಗಿ ಹೆಗ್ಗಳಿಕೆಪಡಲೇಬೇಕು!

೦೦೦ ೦೦೦

ದೇವ-ಮಾನವ ಸಂಬಂಧ

"ಇದೇ ತಾ. 26ರಲ್ಲಿ ಇತರ ಕಡೆಗಳಲ್ಲಿ ನಡೆದಂತೆ ಉಡುಪಿಯ ದೇವಸ್ಥಾನ, ಚರ್ಚುಗಳಲ್ಲಿಯೂ ಮಿತ್ರ ರಾಷ್ಟ್ರಗಳ ಜಯಕ್ಕಾಗಿ ಪ್ರಾರ್ಥನೆ ನಡೆಯಿತೆಂದು ಕೇಳಿದ್ದೇನೆ. ನಮ್ಮ ಜಿಲ್ಲೆಯ ಕೀರ್ತಿವಂತ ಆಧುನಿಕ ಕಾಂಗ್ರೆಸ್ ಮುಂದಾಳುಗಳೂ, ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರೂ ಆದ ಶ್ರೀ. ಆರೂರು ಲಕ್ಷ್ಮೀನಾರಾಯಣರಾಯರು ಒಂದು ಪ್ರಾರ್ಥನಾ ಸಭೆಯ ಅಧ್ಯಕ್ಷರಾಗಿದ್ದರೆಂದು ಕೇಳುತ್ತೇನೆ. ಈ ವರ್ತನೆಯು ಕಾಂಗ್ರೆಸ್ ನಿಯಮಕ್ಕನುಸಾರವಾಗಿದೆಯೋ ಇಲ್ಲವೋ ಎಂಬುದನ್ನು ತಿಳಿಸುವಿರಾ?"

—ಆರ್. ಆರ್. ಎಮ್. ಉಡುಪಿ.

ಕಾಂಗ್ರೆಸ್ ನಿಯಮಗಳನ್ನು ಮನುಷ್ಯರ ಮೇಲಲ್ಲದೆ ದೇವರ ಮೇಲೆ ಜ್ಯಾರಿಮಾಡಲು ಸಾಧ್ಯವಿಲ್ಲ. ನೀವು ಹೆಸರೆತ್ತಿದ ಮಹನೀಯರು ಯಾವ ಮನುಷ್ಯನನ್ನೂ ಕೇಳಿಕೊಳ್ಳದೆ ದೇವರ ಸಹಾಯವನ್ನಷ್ಟೇ ಕೇಳಿದರು. ದೇವರು ಒಳ್ಳೇದುಮಾಡಲಿ! ನೀವು ಅನಗತ್ಯವಾಗಿ ಪ್ರಾರ್ಥನಾಭಂಗದ ಪಾಪ ಕಟ್ಟಿಕೊಳ್ಳಬೇಡಿ.

೦೦೦ ೦೦೦

ಅಗತ್ಯದ ಮೊದಲು ಅತ್ಯಗತ್ಯ!

"ಇಲ್ಲಿಯ ಚರ್ಚ್ ಶಾಲೆಯೊಂದರ ಸಮಾರಂಭದ ವೇಳೆ ಭಾಷಣಮಾಡುವಾಗ ಜನಾಬ್ ಎಚ್. ಎಸ್. ಹುಸ್ಸೇನರು ಜಾತೀಯ ಶಾಲೆಗಳು ಅಗತ್ಯವೆಂದು ಭಾಷಣ ಮಾಡಿದರು. ನನ್ನ ಅಭಿಪ್ರಾಯದಲ್ಲಿ ಜಾತೀಯ ಶಾಲೆಗಳನ್ನು ಮಾಡುವದೆಂದರೆ ಜಾತಿ ಜಗಳವು ಮುಂದಿನ ಜನಾಂಗದಲ್ಲಿಯೂ ಇರುವಂತೆ ಸಾಧಿಸುವದೆಂದೇ ಅರ್ಥ. ಹೀಗಿರುವಾಗ ಜಾತಿ ಶಾಲೆಗಳ ಅಗತ್ಯವೇನಾದರೂ ಇದೆಯೆ?"

—ಎನ್. ಎನ್. ಎಸ್, ಕಾರ್ಕಳ.

ಮಿ. ಹುಸ್ಸೇನ ಸಾಹೇಬರ ಮಾತಿನಿಂದ ನೀವಾ ಅಗತ್ಯವನ್ನು ಮನಗಾಣಲಿಲ್ಲವೆ? ಅವರು ಅಗತ್ಯವೆಂದು ಹೇಳಿದ ಮೇಲೂ 'ಏನಗತ್ಯ'ವೆಂದು ನೀವು ಕೇಳಬಹುದೆ? ಹಾಗಾದರೆ ಸಾಹೇಬರು ಜಾತೀಯ ಶಾಲೆಗಳನ್ನು ಒಮ್ಮೆಗೇ ತೆರೆಯದೆ 'ಜಾತೀಯ ಶಾಲೆಗಳು ಅಗತ್ಯ'ವೆಂಬುದನ್ನು ಕಲಿಸುವ ಶಾಲೆಗಳನ್ನು ಪ್ರಥಮತಃ ತೆರೆಯುವದು ವಾಸಿ.

೦೦೦ ೦೦೦

ನಿಜ

ನಾಜೀ ಸೇನೆ ಆಯರ್ಲೆಂಡನ್ನು ಆಕ್ರಮಿಸಬಹುದೆಂಬ ಗೊಂದಲವೆದ್ದಿದೆ; ಇದು ನಿಜವೆ?

—ಕೆ. ಎನ್. ಎಸ್. ಹುಬ್ಬಳ್ಳಿ.

ಗೊಂದಲವೆದ್ದಿರುವದು ನಿಜ.

೦೦೦ ೦೦೦

ನಮಗಾಗುವ ಲಾಭ

"ಇಂದಿನ ಯುರೋಪು ಯುದ್ಧಾಂತ್ಯದಲ್ಲಿ ನಮಗೆ ಈಗ ಇರುವದಕ್ಕಿಂತ ಹೆಚ್ಚಿಗೆ ಏನಾದರೂ ದೊರೆಯಬಹುದೆ?"

—ಆರ್. ಎಸ್. ಕುಮಟಾ.

ನಮ್ಮ ನಿಮ್ಮ ಪ್ರಾಯದಲ್ಲಿ ಕಡಿಮೆ ಎಂದರೆ ಎರಡೆರಡು ವರ್ಷಗಳಾದರೂ ಹೆಚ್ಚಾಗಬಹುದು.

೦೦೦ ೦೦೦

ದೃಷ್ಟಿ ದೋಷ

"ನನ್ನ ಪ್ರಶ್ನೆಯು ವ್ಯಂಗವಾದುದೆಂದು ನೀವು ಕಟ್ಟಿಕೊಳ್ಳಬಾರದೆಂದು ಮೊದಲಾಗಿ ಹೇಳುತ್ತೇನೆ. ನಮ್ಮಲ್ಲೀಗ ಆಧುನಿಕ ಫೇಶನಿನಿಂದಾಗಿ ಹೆಂಗಸರಾರು, ಗಂಡಸರಾರು ಎಂದು ಗುರುತಿಸುವದು ಕಷ್ಟವಾಗುತ್ತಾ ಬಂದಿದೆ. ಒಂದೇ ರೀತಿಯ ಮುಖ, ಕೂದಲು, ಕನ್ನಡಕ ಇರುವವರನ್ನು ಅಷ್ಟಷ್ಟು ಬೆಳಕಿನಲ್ಲಿ ಕಾಣುವ ಸಂದರ್ಭ ಬಂದರೆ ಥಕ್ಕನೆ ಗುರುತವೇ ಹತ್ತುವದಿಲ್ಲ. ಇದಕ್ಕೇನು ಉಪಾಯವೆಂಬುದನ್ನು ತಿಳಿಸುವಿರಾ?"

ನಿಮಗೆಲ್ಲಿಯಾದರೂ ಸ್ತ್ರೀಪುರುಷರ ಪ್ರತ್ಯೇಕ ಜನಗಣನೆಮಾಡುವ ಕೆಲಸ ದೊರಕಿಲ್ಲವಷ್ಟೆ. ಹಾಗಾದರೆ ನಿಮ್ಮಂಥವರ ಇಚ್ಛೆಗೆ ವಿರುದ್ಧವಾಗಿಯಾದರೂ ಸ್ತ್ರೀಪುರುಷರನ್ನು ಸಮಾನತೆಯಿಂದ ಕಾಣುವಂತಾಗುವ ಕಾಲ ಬಂದುದು ಸಂತೋಷಕರ.

೦೦೦ ೦೦೦

ಕಾಸರಗೋಡಿನ ಅಭಿಮಾನ

"ಕಾಸರಗೋಡು ತಾಲೂಕಿನ ದಕ್ಷಿಣ ಭಾಗದಲ್ಲಿ ಕೇರಳ ಕಾಂಗ್ರೆಸ್ ಸಮಿತಿಯವರೇ ಕಾಂಗ್ರೆಸ್ ಕಮಿಟಿಗಳನ್ನು ಸ್ಥಾಪಿಸಿದ್ದಾರೆ. ಮೊನ್ನೆ ತಾ. 19ರಲ್ಲಿ ನೀಲೇಶ್ವರದಲ್ಲಿ ಗ್ರಾಮ ರಾಜಕೀಯ ಪರಿಷತ್ತು ಕೇರಳದ ರಾಜಕೀಯ ಕೆಲಸಗಾರರಿಂದಲೇ ನೆರವೇರಿಸಲ್ಪಟ್ಟಿತು. ಇವೆಲ್ಲವುಗಳ ಪರಿಣಾಮವಾಗಿ ಕಾಸರಗೋಡಿನ ಅರೆವಾಸಿಯನ್ನು ನಮ್ಮ ಕನ್ನಡ ನಾಡು ಕಳಕೊಳ್ಳುವಂತಾಗುವದಿಲ್ಲವೆ?"

—'ಕನ್ನಡಾಭಿಮಾನಿ' ಕಾಸರಗೋಡು.

ನಾವಿದಕ್ಕೆ ಉತ್ತರಕೊಡುವದಿಲ್ಲ. ಯಾಕೆಂದರೆ ಕನ್ನಡದಲ್ಲಿ ಉತ್ತರಿಸಿದರೆ ಕಾಸರಗೋಡಿನ ಆ ಭಾಗದ ಹೆಚ್ಚಿನವರಿಗೆ ಅರ್ಥವಾಗುವದಿಲ್ಲ.

೦೦೦ ೦೦೦

ಬೊಮ್ಮಗನ ಮುಮುಕ್ಷೆ

"ನನ್ನನ್ನು ಬಹು ಪ್ರೀತಿಯಿಂದ ಸಾಕಿರುವಂಥ ಮುತ್ತಾತನು ಈಗಲೂ ಬದುಕಿದ್ದಾನೆ. ಆವನೀಗ ಬಹಳ ನಿತ್ರಾಣದ ದೆಸೆಯಿಂದ ಹಾಸಿಗೆ ಹಿಡಿದಿದ್ದಾನೆ. ಪಂಡಿತ ಮಾಲವೀಯರು ಮಾಡಿಸಿದಂತಹ ಕಾಯಕಲ್ಪ ಚಿಕಿತ್ಸೆ ನಡೆಸಿದರಾಗಬಹುದೆಂದು ನಾನು ಆಶಿಸುತ್ತೇನೆ. ಖರ್ಚಿನ ಮಟ್ಟಿಗೆ ನಾನು ಹೆದರುವದಿಲ್ಲ. ಹಾಗೆ ಮಾಡಿದರೆ ಪ್ರಯೋಜನ ದೊರಕಬಹುದೇ?"

—ಕೆ. ಎನ್. ಎಲ್. ಶೇ.

ಪಂಡಿತ ಮಾಲವೀಯರಿಗೆ ದೊರೆತ ಪ್ರಯೋಜನ ನಿಮ್ಮ ಮುತ್ತಾತನಿಗೂ ದೊರಕಬಹುದು. ಪಂಡಿತರಿಗೆ ದೊರಕಿರುವ ಪ್ರಯೋಜನವೆಂದರೆ ಬಿಳಿಮೀಸೆಯ ಬದಲಿಗೆ ಬೂದುಮೀಸೆ ದೊರೆತು ವಿಶ್ರಾಂತಿ ಪಡೆಯುವದೊಂದೇ. ನಿಮಗೀ ಯೋಚನೆ ಯಾಕೆ ಬಂತು. ನಿಮ್ಮ 'ವಿಲ್‌ನಾಮೆ' ಬರೆಯುವ ಬುದ್ಧಿ ಇನ್ನೂ ಮುತ್ತಾತನಿಗೆ ಬಂದಿಲ್ಲವೆ?

ಕೃಷ್ಣವಾದಿ.

ಹಿಟ್ಲರ್

ಅವಳು—ನೀವು ನಿಮ್ಮ ಕೋಟು ಮೀಸೆಯನ್ನು ತೆಗೆಯಬೇಕು; ನೋಡುವಾಗ ಹಿಟ್ಲರನಂತೆಯೇ ಕಾಣುತ್ತೀರಿ.

ಆವನು—ನೀನು ಹೆದರಬೇಡ ಪ್ರಿಯೆ. ನೆರೆಮನೆಯವರ ಜಾಗ್ರತೆ ತಪ್ಪದಂತೆ ಪಾಲಿಸಬೇಕಾಗಿರುವದು ನಾನು!

"ನಾಮುದ್ರಾಯಿ"

ಧಾತುಸ್ತಂಭನವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತ, ನಪುಂಸಕತ್ವ ಮೊದಲಾದ ಅನೇಕ ಕೆಟ್ಟ ಗುಪ್ತ ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ.

"ನಿಮಿಷಾ ಟಾನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನ ಉಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ಶಕ್ತಿ, ವಿಲಾಯತಿ, ಯುನಾನಿ ಪೇಟೆಂಟ್ ಔಷಧಿ ಮತ್ತು ರಸಾಯನ ಅನುಭವಿಕ.

ಕಿಮ್ಮತು ರೂ. 3-0-0 ಹಚ್ಚು 0-8-0

ಸೊರಥ್ ಫಾರ್ಮಸಿ,
ನಳ್ ಬಜಾರ್, ಡಂಕನ್ ರೋಡ್,
ಮುಂಬಾಯಿ. 4

Sorath Pharmacy,
Null Bazzar, Duncan Road,
BOMBAY 4.

THULUNAD BANK
OF SUPPLY AGENCY LIMITED.

Authorised & Issued Capital	....	Rs 1,00,000
Subscribed & Paid up Capital	....	Rs. 31,240
Reserves & other Funds	....	Rs. 22,052

ವಿಶೇಷ ರಿಯಾಯಿತಿ

Rs. 1000

ತಾ. 30-6-1940ರ ಒಳಗೆ ರೂ. 1000 ಯಾ ಅದಕ್ಕಿಂತ ಮೇಲ್ಪಟ್ಟು ಠೇವು ಕೊಡುವವರಿಗೆ ಇತರ ರಿಗೆ ಕೆಲವು ವಿಶೇಷ ರಿಯಾಯಿತಿಗಳು ಕೊಡಲ್ಪಡುವವು.

ಹೆಚ್ಚಿನ ಮಾಹಿತಿಗೆ ಬರೆಯಿರಿ:-
ಮೆನೇಜಿಂಗ್ ಡೈರೆಕ್ಟರ್
ತುಳುನಾಡ್ ಬೇಂಕ್
ಆಫ್ ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ.

ಮಹಾತ್ಮಾ ಗಾಂಧಿಜಿಯವರ ರಾಮರಾಜ್ಯ

"ವಸುಧೈವ ಕುಟುಂಬಕಂ" ಎಂಬ ಶ್ರೇಷ್ಠ ಸಿದ್ಧಾಂತ

ತಿಂದು ತಿಂದು ಅಜೀರ್ಣದಿಂದ ನರಳುತ್ತಿರುವ ಬಂಡವಾಳಗಾರರ ಭವ್ಯ ಭವನಗಳೊಂದು ಕಡೆ!

ಹಗಲೆಲ್ಲ ದುಡಿದರೂ, ಹೊಟ್ಟೆಗಿಲ್ಲದೆ ಸಾಯುವವರ ಗುಂಪೊಂದು ಕಡೆ!

ಯಂತ್ರಯುಗವು ಜಗತ್ತಿಗೆ ಕೊಟ್ಟಿರುವ ಶಾಪ!

ಗಾಂಧೀ ವಾದವು ಅನುಗ್ರಹಿಸಿರುವ ವರಪ್ರಸಾದ!

ಆಧ್ಯಾತ್ಮಿಕ ಮತ್ತು ಭೌತಿಕ ವಾದಗಳ ನಡುವೆ ಇರುವ ಘರ್ಷಣೆ!

ಲೇಖಕ: ಶ್ರೀ ರಾಮ.ಗೋವರ್ಧನ ರಸೂಲ್‌ಪುರೀ
ಅನುವಾದಕ: S. L. ಸುಬ್ರಹ್ಮಣ್ಯಂ, ಹರಿಹರ

ಮನುಷ್ಯನು ತನ್ನನ್ನು ತಾನು ಸಭ್ಯತೆಯ ಆವರಣದಿಂದ ಆಚ್ಛಾದಿತಮಾಡಿಕೊಳ್ಳಲಾರಂಭಿಸಿ, ಸಂಸ್ಕೃತಿಯ ಉಡುಪನ್ನು ಧರಿಸಿ, ಜೀವನವನ್ನು ಅತ್ಯಂತ ಸುಖಶಾಂತಿಪೂರ್ಣವನ್ನಾಗಿ ಮಾಡಲು ಆರಂಭಿಸಿದಾಗಿನಿಂದಲೇ, ಆತನ ವಿಚಾರ ಧಾರೆಗಳು ಎರಡು ಭಾಗವಾಗಿ ವಿಭಾಗವಾದುವು. ಇವೆರಡು ವಿಚಾರ ಧಾರೆಗಳನ್ನೇ ನಮ್ಮವರು ಆಧಿಭೌತಿಕ ಮತ್ತು ಆಧ್ಯಾತ್ಮಿಕವೆಂಬ ಶಬ್ದಗಳಿಂದ ಕರೆದರು. ಇವೆರಡರ ನಡುವೆ ಆದಿ ಕಾಲದಿಂದಲೂ ಘರ್ಷಣೆ ನಡೆಯುತ್ತಲೇ ಇದೆ, ಅರ್ಥಾತ್ ಎಲ್ಲಿ ಆಧಿಭೌತಿಕತೆಯು ಸಮಾಪ್ತವಾಗುವುದೋ ಅಲ್ಲಿಂದಲೇ ಆಧ್ಯಾತ್ಮಿಕತೆಯು ಪ್ರಾರಂಭವಾಗುವುದು!

ಅತ್ಯಂತ ಪ್ರಾಚೀನ ಕಾಲದಿಂದಲೂ ಭಾರತೀಯ ಸಭ್ಯತೆಯ ಸಾರ್ಥಕತೆಯು ಆಧ್ಯಾತ್ಮ ವಾದದಲ್ಲೇ ಇದ್ದು, ಭೌತಿಕ ವಾದ ಅಥವಾ ಪಶುಬಲವು ಉಪೇಕ್ಷಿಸಲ್ಪಡುತ್ತಲೇ ಬಂದಿದೆ. ನಮ್ಮ ಸಂಸ್ಕೃತಿಯಲ್ಲಿ ಮಾನವ ಜೀವನದ ದೃಷ್ಟಿಕೋಣವು ಬಹಳ ವ್ಯಾಪಕವಾದುದಾಗಿದೆ. ನಮ್ಮ ಸಂಸ್ಕೃತಿಯು ಸಮಸ್ತ ವಿಶ್ವವನ್ನೇ ತನ್ನ ಪರಿವಾರದಂತೆ ತಿಳಿಯುತ್ತ ಬಂದಿದೆ. 'ವಸುಧೈವ ಕುಟುಂಬಕಂ' ಎಂಬ ಸಿದ್ಧಾಂತವೇ ಭಾರತೀಯ ಸಂಸ್ಕೃತಿಯ ವಿಶ್ವಕೀರ್ತಿಯ ವರಪ್ರಸಾದ. ಇನ್ನು ಸ್ವಲ್ಪ ಮುಂದೆ ಹೋಗಿ ನೋಡಿದರೆ, 'ಆತ್ಮವತ್ ಸರ್ವಭೂತೇಷು' ಎನ್ನುತ್ತ ಜಗತ್ತಿನ ಪ್ರಾಣಿಮಾತ್ರದ ಆತ್ಮವನ್ನು ತನ್ನ ಆತ್ಮದ ಅಸ್ತಿತ್ವದಲ್ಲಿ ಸೇರಿಸಿಕೊಳ್ಳುವ ಸರ್ವ ಶ್ರೇಷ್ಠವಾದ ಸಿದ್ಧಾಂತವನ್ನೂ ನಮ್ಮ ಪೂರ್ವಜರು ಶಾಶ್ವತಗೊಳಿಸಿದ್ದರು. ಇಂದಿಗೂ ಜಗತ್ತಿನ ಶ್ರೇಷ್ಠತಮವಾದ ವೇದಾಂತವೂ ಸಹ ಈ ತತ್ವದೆದುರಿನಲ್ಲಿ ನತಮಸ್ತಕವಾಗಿರದೆ ವಿಧಿಯೇ ಇಲ್ಲದಂತಾಗಿದೆ. ಇಂತಹ ಆಧ್ಯಾತ್ಮಿಕ ವಾದದ ಈ ಉಚ್ಚ ಸಿದ್ಧಾಂತವು ಸ್ಥಿರವಾಗಿದ್ದರೂ, ಪಾಶವಿಕ ಶಕ್ತಿ ಅಥವಾ ಭೌತಿಕತೆಯ ಅಸ್ತಿತ್ವವು ವಿನಾಶವಾಗದೆ ಇರಲಿಲ್ಲ. ಈ ಕಾರಣದಿಂದಲೇ "ಆತ್ಮವತ್ ಸರ್ವ ಭೂತೇಷು" ಎಂಬ ಸಿದ್ಧಾಂತದಂತೆಯೇ "ಆತ್ಮಾರ್ಥಂ ಪೃಥ್ವೀಂ ತ್ಯಜೇತ್" ಎಂಬುದೂ ವ್ಯವಹಾರದಲ್ಲಿ ಬಂದಿತು.

ತನಗಾಗಿ ಸಂಸಾರವನ್ನೂ (ವಿಶ್ವ) ತ್ಯಾಗಮಾಡಬೇಕೆಂಬ ಭಾವನೆಯು ಜಾಗೃತವಾದಾಗಿನಿಂದಲೇ "ಅಹಂ" ಭಾವನೆಯು ಸೃಷ್ಟಿಯಾಯಿತು. ಇದರ ಮೂಲಕವೇ 'ನನ್ನ, ನಾನು' ಎಂಬುದರ ಪ್ರಾದುರ್ಭಾವವಾಯಿತು. ನನ್ನ ಪರಿವಾರ, ನನ್ನ ಜಾತಿ, ನನ್ನ ಐಶ್ವರ್ಯ ಇವೆಲ್ಲವೂ ಈ 'ಅಹಂ' ಭಾವನೆಯ ದ್ಯೋತಕಗಳೇ ಆಗಿವೆ. ಈ 'ಅಹಂ' ಭಾವವೇ ಇಂದು ಪೂರ್ಣವಾಗಿ ವಿಕಾಸಹೊಂದಿ, ಸಾಮ್ರಾಜ್ಯವಾದ ಎಂಬ [illegible] ರೂಪದಲ್ಲಿ ರಾಜಿಸುತ್ತಿರುವುದು. ಈ 'ನಾನು ನನ್ನ' ಇವುಗಳ ಮೂಲಕವೇ ಬಲವಂತನೂ, ಬುದ್ಧಿವಂತನೂ ಆದವನು ತನಗಿಂತ ದುರ್ಬಲನೂ ಬುದ್ಧಿಹೀನನೂ ಆದ ಮನುಷ್ಯನ ಮೇಲೆ ಅಧಿಪತ್ಯ ನಡೆಸಲು ಮನಸ್ಸುಮಾಡಿ, ತನ್ನ ಮಾಲಿಕ ರಾಜಸತ್ತೆಯನ್ನೂ ಶಾಶ್ವತಗೊಳಿಸಿದನು. ಈ ಅಹಮನ್ಯತೆಯು ವೃದ್ಧಿಹೊಂದುತ್ತಿರುವ ದಾಹವೇ ರಾಜತಂತ್ರವನ್ನೂ ಸಾಮ್ರಾಜ್ಯದ ರೂಪಿನಲ್ಲಿ ಪರಿಣತವಾಗಿ ಮಾಡಿತು. ಜಗತ್ತಿನ ಇತಿಹಾಸವೆಂದರೆ ಸಾಮ್ರಾಜ್ಯಗಳ ಉತ್ಥಾನ ಮತ್ತು ಪತನಗಳ ಇತಿಹಾಸವಾಗಿದೆ ಎಂದರೆ ಅತ್ಯುಕ್ತಿಯಾಗಲಾರದು.

18ನೆಯ ಶತಮಾನದಲ್ಲಿ ಪ್ರಾರಂಭವಾದ ವೈಜ್ಞಾನಿಕ ಆವಿಷ್ಕಾರಗಳ ಮತ್ತು ಅವರಿಂದುಂಟಾದ ಔದ್ಯೋಗಿಕ ಮಹಾಕ್ರಾಂತಿಯ ಪ್ರಭಾವವು ಕೆಲವೇ ಶತಾಬ್ದಿಗಳಲ್ಲಿ ಜಗತ್ತನ್ನೆಲ್ಲ ವ್ಯಾಪಿಸದೆ ಬಿಡಲಿಲ್ಲ. ಅನೇಕ ದೇಶಗಳಲ್ಲಿ ರಾಜ್ಯ ಕ್ರಾಂತಿಗಳಾದವು. ಯಂತ್ರಗಳಿಂದ ವಸ್ತುಗಳ ಉತ್ಪಾದನ ಶಕ್ತಿಯು ಹೆಚ್ಚಿ, ಅವುಗಳ ಮಾರಾಟಕ್ಕೆ ಅಂಗಡಿಯನ್ನು ಹುಡುಕುವುದರಲ್ಲಿಯೇ ಹೆಚ್ಚುಮದ ಮುಂದರಿದ ರಾಷ್ಟ್ರಗಳು ಮಹಾಸಾಗರಗಳನ್ನೂ ದಾಟಲಾರಂಭಿಸಿದವು. ಹಿಂದೆ ಬಿದ್ದಿದ್ದ ದೇಶಗಳೆಲ್ಲವೂ ವ್ಯಾಪಾರಿಕ ದೃಷ್ಟಿಯಿಂದ ಅವುಗಳ ಉಪನಿವೇಶಗಳಾದುವು. ಈ ರೀತಿಯಾಗಿ ಕೆಲವು ಅಗ್ರಗಾಮಿ ರಾಷ್ಟ್ರಗಳು ತಮ್ಮ ಪಾಶವಿಕ ಶಕ್ತಿಯ ಜೋರಿನಿಂದ, ರಾಜಕೀಯ ಮತ್ತು ವ್ಯಾಪಾರಿಕ ಅಧಿಕಾರಗಳನ್ನು ಹೊಂದಿದವು. ಯಂತ್ರಗಳಿಂದ ಅವಶ್ಯಕ್ಕಿಂತ ಹೆಚ್ಚಿನ ವಸ್ತುಗಳ ನಿರ್ಮಾಣವಾಯಿತು. ಅನೇಕರು ನಿರುದ್ಯೋಗಿಗಳಾದರು. ವಸ್ತುಗಳ ಬೆಲೆಯು ಬಿದ್ದು ಹೋಯಿತು. ಬಂಡವಾಳಗಾರರಿಗೆ ಚಿಂತೆ ಹತ್ತಿತು. ಜೀವನೋಪಯೋಗಿಯಾದ ಅನೇಕ ವಸ್ತುಗಳನ್ನು ನಾಶಮಾಡಬೇಕಾಗಿ ಬಂದಿತು. ಆಗ ವ್ಯಾಪಾರವು ಪುನಃ ಪ್ರಾರಂಭವಾಯಿತು. ತಿರುಗಿ ಅದೇ ಮಂದಿ; ಅದೇ ಆರ್ಥಿಕ ತೊಂದರೆ!

ಬಂಡವಾಳ ಪ್ರಧಾನವಾದ ಈ ಯಂತ್ರಯುಗದಲ್ಲಿ ಕೈಯ್ಯ ಕಲಾಕೌಶಲ್ಯ ಮತ್ತು ಗೃಹ ಕೈಗಾರಿಕೆಗಳು ಯಂತ್ರಗಳ ಪ್ರತಿಸ್ಪರ್ಧೆಯಲ್ಲಿ ನಷ್ಟವಾದುವು. ಜಗತ್ತಿನಲ್ಲಿ ಬಹಳ ಕಡಿಮೆ ಸಂಖ್ಯೆಯ ಸಾಮ್ರಾಜ್ಯವಾದಿಗಳ ಬಂಡವಾಳಗಾರರ ಏಕಾಧಿಪತ್ಯವಾಗಿ ಹೋಯಿತು. ಯಂತ್ರಯುಗವು ಜಗತ್ತಿಗೆ ಕೊಟ್ಟ ವರಪ್ರಸಾದವೆಂದರೆ ಶೋಷಣೆ! ವ್ಯಾಪಾರಿಕ ಮತ್ತು ವ್ಯಾವಸಾಯಿಕ ಲೂಟಿಯ ಕಾರಣದಿಂದ ಬಂಡವಾಳಗಾರರು ದಿನದಿನಕ್ಕೆ ಹೆಚ್ಚು ಹಣವನ್ನು ಶೇಖರಿಸಲಾರಂಭಿಸುತ್ತ ಬಂದರು. ಜನಸಾಮಾನ್ಯರು ದಿನದಿನಕ್ಕೆ ನಾಶವಾಗುತ್ತ ಬಂದರು. ಈಗಂತೂ ಈ 'ಅಹಂ' ಭಾವನೆಯ ಯಾವ ಪ್ರಚಂಡವೂ ನಗ್ನವೂ ಆದ ರೂಪವು ಸಮಾಜದೆದುರಿನಲ್ಲಿರುವುದೋ ಅದು ಅಭೂತಪೂರ್ವವಾದುದು. ಒಂದು ಕಡೆ ಒಂದಲ್ಲ, ಎರಡಲ್ಲ; 50-100 ಅಂತಸ್ತಿನ ಮಹಡಿ ಮನೆಗಳು, ಇನ್ನೊಂದು ಕಡೆ ಸಾವಿರಾರು ಲಕ್ಷಾಂತರ ಪ್ರಾಣಿಗಳು, ಹಗಲೆಲ್ಲ ದುಡಿದರೂ ರಸ್ತೆಯ ಪಕ್ಕದಲ್ಲಿ ಶೀತ, ಉಷ್ಣ, ಮಳೆ, ಬಿಸಿಲಿಗೆ ಸಿಕ್ಕಿ ಹಸಿವಿನಿಂದ ಪೀಡಿತರಾಗಿ ಬಿದ್ದಿದ್ದಾರೆ. ಒಂದು ಕಡೆ 'ಗೋಡೌನ್'ಗಳಲ್ಲಿ ಅನ್ನ ಬಟ್ಟೆ ಮತ್ತು ಜೀವನದ ಇತರ ಅಗತ್ಯ ವಸ್ತುಗಳ ರಾಶಿ ರಾಶಿಯೇ ಬಿದ್ದಿದೆ. ಇನ್ನೊಂದು ಕಡೆ ಕೋಟ್ಯಾಂತರ ಜನರು ಹಸಿವಿನಿಂದ ಪೀಡಿತರಾಗಿ, ನಗ್ನರಾಗಿದ್ದು, ಜೀವನದ ಅತ್ಯಗತ್ಯ ವಸ್ತುಗಳ ಅಭಾವದಿಂದ ಒದ್ದಾಡಿ ಒದ್ದಾಡಿ ತಮ್ಮ ಕೊನೆಯ ಘಳಿಗೆಯನ್ನು ಕಳೆಯುತ್ತಿರುವರು.

ಯಾವುದೇ ಒಂದು ವಿಚಾರವು ಯಾವಾಗ ತನ್ನ ಎಲ್ಲೆಯನ್ನು ಮುಟ್ಟುವುದೋ ಅದರಲ್ಲಿ ಸ್ವಾಭಾವಿಕವಾಗಿ ಪ್ರತಿಕ್ರಿಯೆಯಾರಂಭವಾಗುವುದು. ಸಾಮ್ಯವಾದ, ವರ್ಗವಾದ, ಕಮ್ಯೂನಿಜಮ್, ಮತ್ತು ಅರಾಜಕವಾದಗಳಿಗೆ ಸಂಬಂಧಪಟ್ಟ ವಿಚಾರಧಾರೆಗಳು ಇದರ ಪ್ರತಿಕ್ರಿಯೆಯ ಸ್ವರೂಪವಾಗಿ ಉಳಿತಿವೆ. ಸಾಮ್ಯವಾದ ಅಥವಾ ಸಮಾಜವಾದದಲ್ಲಿ ಬಂಡವಾಳವು ಯಾವುದೇ ಒಂದು ವ್ಯಕ್ತಿ ವಿಶೇಷದ ಸಂಪತ್ತಲ್ಲ. ಅದು ಸಂಪೂರ್ಣವಾಗಿ ರಾಷ್ಟ್ರದ ಸಂಪತ್ತು. ಆಧುನಿಕ ಬಂಡವಾಳಪದ್ಧತಿಯನ್ನು ಚೂರು ಚೂರುಮಾಡಿ ಸಮಾಜದ ಸಂಘಟನೆಯನ್ನು ಶ್ರಮಶಕ್ತಿಯ ಆಧಾರದ ಮೇಲೆ ಮಾಡಬೇಕೆಂದೇ ಸಮಾಜವಾದಿಗಳ ಬಯಕೆ. ಸಮಾಜವಾದವು ಶಕ್ತಿಯ ಯೋಗ್ಯತೆಗನುಕೂಲವಾದ ಶ್ರಮವನ್ನು ಬಯಸುತ್ತದಲ್ಲದೆ ಅಗತ್ಯಕ್ಕನುಸಾರವಾಗಿ ಅದರ ವ್ಯವಸ್ಥೆಯನ್ನೂ ಮಾಡುತ್ತದೆ. ಬಡ್ಡಿಬಾಡಿಗೆ, ಕಂದಾಯ ಮೊದಲಾದವುಗಳಿಗೆ ಸಮಾಜವಾದದಲ್ಲಿ ಸ್ಥಾನವೇ ಇಲ್ಲ. ಇವೆಲ್ಲವೂ ಬಂಡವಾಳ ಪದ್ಧತಿಯವರ ಪ್ರಸಾದವೇ!

ಈ ವಿಚಾರದಲ್ಲಿ ರಷ್ಯವು ಶಿಕ್ಷಿತರ ಪರಿಶ್ರಮದಿಂದ ಒಂದು ಸಫಲವಾದ ಪ್ರಾಯೋಗಿಕ ಆದರ್ಶವನ್ನು ಇಟ್ಟಿದೆ. ಪಶ್ಚಿಮದ ಸಾಮ್ರಾಜ್ಯವಾದ ಮತ್ತು ಬಂಡವಾಳವಾದಗಳು ಯಾವರೀತಿ ಭೌತಿಕತೆಯ ಆಧಾರದ ಮೇಲೆ ಪಶುಬಲದಿಂದ ನಿಂತಿದೆಯೋ ಅದೇ ರೀತಿ ಸಮಾಜವಾದವೂ ಸಹ ಅದೇ ಭೌತಿಕತೆಯ ಆಧಾರದಮೇಲೆ ಪಶು-ಬಲದ ಆಶ್ರಯದಲ್ಲೇ ಸಮಾಜವಾದೀ ರಾಷ್ಟ್ರವನ್ನು ಸ್ಥಾಪನೆಮಾಡಬಯಸುತ್ತದೆ. ಸಮಾಜವಾದವು ಯಂತ್ರಗಳನ್ನು ವಿರೋಧಿಸುವುದಿಲ್ಲ. ಜನ ಸಾಧಾರಣರಿಗೆ ಅವುಗಳ ಮೇಲೆ ಅಧಿಕಾರವಿರಬೇಕೆನ್ನುತ್ತದೆ.

(೧೯ನೇ ಪುಟಕ್ಕೆ ಮುಂದರಿಯುವುದು.)

The Canara Industrial & Banking Syndicate Ltd.

Estd] HEAD OFFICE: UDIPI, (S. INDIA.) [1925.

Member: RESERVE BANK OF INDIA, BANKERS' CLEARING HOUSE, BOMBAY.

Five years' Cash Certificates ar issued at the preie of
Rs 8/-, Rs 80/- Rs 400/- & Rs. 800/-.

repayable on maturity at
Rs 10/-, Rs 100/-, Rs. 500/- & Rs. 1000/- respectively

You can cash the Certificates at any time before maturity.

An investment which is liquid and yet very remunerative.

FURTHER PARTICULARS ON APPLICATION.

GENERAL BANKING BUSINESS TRANSACTED.

ಮಹಾತ್ಮಾ ಗಾಂಧಿಜಿಯವರ ರಾಮರಾಜ್ಯ

(೧೨ನೇ ಪುಟದಿಂದ ಮುಂದರಿದುದು.)

ಮಾರ್ಕ್ಸ್ ಮತ್ತು ಲೆನಿನ್ನರು ಪಶ್ಚಿಮದ ವಿಭೂತಿಗಳು ಮೊದಲಿಂದಲೂ ಭೌತಿಕತೆಗೆ ಆಶ್ರಯವಿತ್ತಿದ್ದ ಭೂಭಾಗ ಈ ಕಾರಣದಿಂದ ಈ ರೋಗಕ್ಕೆ ಆಧ್ಯಾತ್ಮಿಕರೂಪದಿಂದ ಯಾವುದಾದರೂ ಚಿಕಿತ್ಸೆ ಉಂಟೋ ಇಲ್ಲವೋ ಎಂಬುದನ್ನು ಅವರು ಯೋಚಿಸುವುದಾದರೂ ಹೇಗೆ ಸಾಧ್ಯ?

ನಮ್ಮಲ್ಲಿ ಪಶುಬಲದ ವ್ಯವಹಾರವು ಇದ್ದರೂ ನಮ್ಮ ಆದರ್ಶವು ಯಾವಾಗಲೂ ಆಧ್ಯಾತ್ಮವಾದದ ಕಡೆಗೇ ಇರುತ್ತಬಂದಿದೆ ಇಂದು ಶಸ್ತ್ರ ಭಾರದಿಂದ ತ್ರಾಹಿ ತ್ರಾಹಿ ಎಂದು ಕೂಗುತ್ತಿರುವ ಭೂಮಿಗೆ ಗಾಂಧೀವಾದವು ಒಂದು ಅಪೂರ್ವವಾದ ಪರಿಷ್ಕಾರದಂತೆ ಪ್ರಾಪ್ತವಾಗಿದೆ. ಇಂದಿನ ಮದಾಂಧ ವಿಶ್ವವು ಇದನ್ನು ಎಷ್ಟು ಅವ್ಯವಹಾರಿಕವೆಂದೇ ತಿಳಿಯಲಿ ಒಂದಾನೊಂದು ಕಾಲಕ್ಕಾದರೂ ಈ ವಿಶ್ವವು ಗಾಂಧೀವಾದದ ಮುಂದೆ ತಲೆ ಬಾಗಲೇ ಬೇಕಾಗುವುದು.

ಮಹಾತ್ಮರ ರಾಮರಾಜ್ಯ

ಸಮಾಜ ಸಂಘಟಣೆಯಲ್ಲಿ ಗಾಂಧಿಯವರು ರಾಮರಾಜ್ಯದ ಸಂದೇಶವಾಹಕರಂತಿದ್ದಾರೆ. ಮಹಾತ್ಮರ ರಾಮರಾಜ್ಯದಲ್ಲಿ ರಾಜ ಪ್ರಜೆ, ಸಾಹುಕಾರ, ಕೂಲಿಗಾರ, ಅಮೀರ ಫಕೀರ, ಜಮೀನ್ದಾರ, ರೈತ ಇವರಿರುವರು. ವರ್ಗಗಳಿದ್ದೂ ಸಹ ಗಾಂಧೀವಾದದಲ್ಲಿ ವರ್ಗಯುದ್ಧದ ಅವಶ್ಯಕತೆಯಿಲ್ಲ ಕಾರಣ ಅಲ್ಲಿ ಒಬ್ಬನು ಇನ್ನೊಬ್ಬನ ಸಹಯೋಗಿಯಾಗಿದ್ದಾನೆಯೇ ಹೊರತು, ಪ್ರತಿಯೋಗಿಯಲ್ಲ. ಸಂಪತ್ತಿನ ಯಜಮಾನನು ತಾನು ಅದರ ರಕ್ಷಕನೆಂದು ತಿಳಿದು ಅದರಂತೆ ಖರ್ಚು ಮಾಡುತ್ತ ಬಂದರೆ ಆಗ ವ್ಯಕ್ತಿಗತ ಸಂಪತ್ತಿಗೆ ಅಧಿಕಾರಿಯಾಗಿದ್ದರೂ ಅದರಿಂದ ಪ್ರಜಾಹಿತಸಾಧನೆಯಾಗುವುದು ಯಾರದೇಲೂ ದ್ವೇಷವಿರುವುದಿಲ್ಲ ಅಧಿಕಾರಿಯು ಆ ಸಂಪತ್ತಿನ ಟ್ರಸ್ಟಿಯುಮಾತ್ರ.

ಗಾಂಧಿವಾದವು ವಿಧಾಯಕವಾದುದು, ವಿಧ್ವಂಸಕವಾದುದಲ್ಲ ಒಂದು ಕಡೆ ಇದು ವ್ಯಕ್ತಿಗತ ಸಂಪತ್ತನ್ನು ಒಪ್ಪಿದರೂ, ಇನ್ನೊಂದು ಕಡೆ ಅಪರಿಗ್ರಹದ ಸಿದ್ಧಾಂತವನ್ನು ಪ್ರತಿಷ್ಠಿಸುತ್ತದೆ. ಅಸತ್ಯ ಮತ್ತು ಹಿಂಸೆಯಿಂದ ದೊರೆಯುವ ಸ್ವಾತಂತ್ರ್ಯವು ಅವರಿಗೆ ಅಗ್ರಾಹ್ಯವಾಗಿದೆ. ಇದರಿಂದಲೇ ಮಹಾತ್ಮರು ಯಂತ್ರವಾದಕ್ಕೆ ವಿರೋಧಿಗಳಾಗಿದ್ದಾರೆ, ಕಾರಣ ಇದರಿಂದ ಅನೇಕರು ನಿರುದ್ಯೋಗಿಗಳಾಗುವರು. ನಾಗರಿಕರು ನಿರುದ್ಯೋಗಿಗಳಾಗದಿದ್ದರೆ ಅವರು ಇದನ್ನು ವಿರೋಧಿಸುತ್ತಿರಲಿಲ್ಲ. ಆದರೆ ಪರಾಧೀನ ರಾಷ್ಟ್ರದಲ್ಲಿ ಇದು ಅಸಂಭವ. ಅದುದರಿಂದಲೇ ಗಾಂಧಿ ವಾದವು ಗೃಹ ಕೈಗಾರಿಕೆಗಳಿಗೆ ವಿಶೇಷ ಪ್ರಾಧಾನ್ಯವನ್ನೀಯುವುದು.

ಮಹಾತ್ಮರ 'ರಾಮರಾಜ್ಯ'ದಲ್ಲಿ ರಾಜನೂ ರಾಮನೇ, ಪ್ರಜೆಯೂ ರಾಮನೇ ಬಂಡವಾಳಗಾರರು, ಕೂಲಿಯವರು, ವ್ಯಾಪಾರಿ, ನಾಗರಿಕರು ಎಲ್ಲರೂ ರಾಮರೇ. ಎಲ್ಲಿ ವರ್ಗದ್ವಂದದ ಅಸ್ತಿತ್ವವೇ ಇಲ್ಲವೋ, ಅಲ್ಲಿ ಗಾಂಧಿಯವರ ಕಲ್ಪನಾ ಲೋಕದ "ರಾಮರಾಜ್ಯ"ವಿದೆ.

ಹೊಸಾಧಿಕಾರಿಗಳು ಹಳೆಯ ಹಾಡನ್ನೇ ಹಾಡಿದರು.

(೪ನೇ ಪುಟದಿಂದ ಮುಂದರಿದ್ದು)

ದು. ಸತ್ಯಾಗ್ರಹವು ಯುದ್ಧವನ್ನು ಸಂಬಂಧಿಸಿಕೊಂಡಿರದೆ ಬ್ರಿಟಿಷ್ ಸರಕಾರದ ಘೋಷಣೆ ಮತ್ತು ಕಾರ್ಯವನ್ನಾವಲಂಬಿಸಿಕೊಂಡಿದೆ. ರಾಮಘರ್ ಕಾಂಗ್ರೆಸಿನ ನಿರ್ಧಾರವು ಸ್ಪಷ್ಟವಿದೆ; ಬ್ರಿಟಿಷ್ ಸರಕಾರದ ಘೋಷಣೆಯಲ್ಲಾವ ವ್ಯತ್ಯಾಸವೂ ಆಗಿಲ್ಲ. ಭಾರತದ ಸದ್ಯ ಸ್ಥಿತಿಯು ದೀರ್ಘಕಾಲದ ತನಕವಿರಬಹುದೆಂದು ನಾವು ನಿರೀಕ್ಷಿಸಬಾರದು. ಸತ್ಯಾಗ್ರಹ ಹೂಡುವ ಮೊದಲು ಆಂತರಿಕ ಹಾಗೂ ಹೊರಗಿನ ಘಟನೆಗಳ ಅನುಕೂಲತೆಗಾಗಿ ಕಾಯಬೇಕಾಗುತ್ತದೆ. ಮುಂದಿನ ಕೆಲವು ವಾರಗಳೊಳಗೆ ಪ್ರಾಯಶ್ಯಃ ಬದಲಾವಣೆಗಳಾಗಬಹುದು. ಬ್ರಿಟಿಷ್ ಸರಕಾರದೊಡನೆ ಒಪ್ಪಂದವಾಗಬಹುದೆಂಬ ಲಕ್ಷಣವಾವುದೂ ಈ ವರೆಗೆ ನನಗೆ ಕಾಣುವದಿಲ್ಲ. ಇಂದಿನ ಯುದ್ಧ ಪರಿಸ್ಥಿತಿಯಲ್ಲಾದರೂ ನಮ್ಮೊಳಗಿನ ಬಿರುಕು ಮುಚ್ಚಲ್ಪಡುವ ಆಶೆಯಿಲ್ಲ. ಆದ್ದರಿಂದ ಕಾಂಗ್ರೆಸ್ ಮಂತ್ರಿಗಳು ಪುನಃ ಅಧಿಕಾರಕ್ಕೆ ಬರುವ ಇಚ್ಛೆಯೇ ಯಾವ ರೀತಿಯಿಂದಲಾದರೂ ಯುದ್ಧ ಸಹಾಯ ನೀಡುವ ಅಥವಾ ಕೇಂದ್ರ ಸರಕಾರದಲ್ಲಿ ಕೇವಲ ಹೆಚ್ಚಿನ ಸಂಘಾನವಾಡುವ ಪ್ರಶ್ನೆಯೇ ಇಲ್ಲ ಸಾಮ್ರಾಜ್ಯಶಾಹಿಯು ಜೀರ್ಣವಾಗಿಲ್ಲಾ ಕಡಿದು ಹಾಕಕೊಳ್ಳುವ ಮೂಲ ಚಿಕಿತ್ಸೆಯು ದೊರೆತು ಭಾರತದ ಆದಿವ್ಯಾಧಿಯು ನಿವಾರಣೆ ಹೊಂದುವಂತಿಲ್ಲ"

ರಾಷ್ಟ್ರಪತಿ ಅಜಾದರ ಹೇಳಿಕೆ

ಬ್ರಿಟಿಷ್ ಮಂತ್ರಿಮಂಡಲವು ಭಾರತದ ಕುರಿತು ಕಟ್ಟಿಕೊಂಡಿರುವ ಭಾವನೆಯಲ್ಲಿ ಒಂದಿಷ್ಟು ಬದಲಾವಣೆಯಾಗಲಿಲ್ಲ ನೆಂಬುದು ವಿಷಾದಕರ ರೀತಿಯಲ್ಲಿಯೂ ಭಾವನೆಯಲ್ಲಿಯೂ ಹೊಸ ಸೆಕ್ರೆಟರಿಯವರ ಹೇಳಿಕೆಯು ತನ್ನ ಹಿಂದಿನ ಅಧಿಕಾರಿಯ ಹೇಳಿಕೆಯನ್ನೇ ಹೋಲುತ್ತಿದೆ ಆ ಕುರಿತು ಕಾಂಗ್ರೆಸು ತನ್ನ ಸ್ಪಷ್ಟಾಭಿಪ್ರಾಯವನ್ನು ಹಲವುಬಾರಿ ಪ್ರಕಟಿಸಿದೆ ಎಂದು ಮೌಲಾನ ಅಬುಲ್ ಕಲಾಮ್ ಅಜಾದರೆಂದಿರುವರು.

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 18

ಗಣಪತಿ ಭಟ್ಟ — ವಾದಿ
ನಾರಕ್ ಭಟ್ಟ — ಪ್ರತಿವಾದಿ

ಸದ್ರಿ ಪ್ರತಿವಾದಿಗೆ ತಿಳಿಯ ಪಡಿಸುವ ಡೇಸಂದ್ರ—

ವಾದಿಗೆ ಬರಕೊಟ್ಟ ಡಿ. ಫ್ರೋ ನೋಟಿನ ಮೇಲೆ ದಾಖ್ಲೆಮಾಡಿದ ನೇಟ್ಕಂದ ವ್ಯಾಜ್ಯವು ತಕ್ಕ ಬಗ್ಗೆ ತಾ. 1-6-40ಕ್ಕೆ ಇಟ್ಟದೆ. ಅದ್ರಿಂದ ಆ [illegible] 10ಘಂಟೆಗೆ ಸರಿಯಾಗಿ ಸದ್ರಿ ಕೋರ್ಟಿನ [illegible] ಸ್ವತಃ ಅಗ್ಲಿ [illegible] ಆಗಿ ತಲೆಕೊಳ್ಳತಕ್ಕದ್ದು ತಪ್ಪಿದ್ರೆ [illegible] ವಿಚಾರಣೆಯ [illegible] ದಿಂದ

ಪುತ್ತೂರು } 3-4-40 } C. S. Shasthry *Vakil for Plaintiff*

ಇಂಡಿಯನ್ ಮ್ಯೂಚುಯಲ್ ಲೈಫ್ ಅಸೋಸಿಯೇಷನ್ ಲಿಮಿಟೆಡ್

ಹೆಡ್ ಆಫೀಸ್:- ನಂ. ೧೦, ಮೌಂಟ್ ರೋಡ್, ಮದರಾಸು

—— ಡೈರೆಕ್ಟರುಗಳ ಬೋರ್ಡ್ ——

ಸರ್ ವೇಪಾ ರಮೇಶಂ, ಕೆ. ಟಿ ರಿಟೈರ್ಡ್ ಜಡ್ಜ್, ಮದರಾಸ್ ಹೈಕೋರ್ಟ್, ಮದರಾಸು.
ರಾವ್ ಬಹದ್ದೂರ್ ಮ॥ಕೆ.ಬಲರಾಮ ಅಯ್ಯರ್, ಬಿ.ಎ ರಿಟೈರ್ಡ್ ಅಕೌಂಟೆಂಟ್ ಜನರಲ್ ಮದರಾಸ್.
ಮ॥ ಸಿ. ಕೃಷ್ಣಮೂರ್ತಿ ಮೊದಲಿಯಾರ್ ಲ್ಯಾಂಡ್ ಲಾರ್ಡ್, ಸಿಯಾಲಿ.
ದಿವಾನ್ ಬಹದ್ದೂರ್ ಮ॥ ಎ. ವಿ ರಾಮಲಿಂಗ ಅಯ್ಯರ್, ಮದರಾಸ್ ಸರಕಾರದ ರಿಟೈರ್ಡ್ ಚೀಫ್ ಇಂಜನಿಯರು.
ಮ॥ ಟಿ. ಎಸ್. ನಾರಾಯಣ ಸ್ವಾಮಿ, ಎಂ.ಎ, ಅಸಿಸ್ಟೆಂಟ್ ಕೆಮಿಸ್ಟ್, ಬಕಿಂಗ್‌ಹ್ಯಾಂ ಮಿಲ್, ಮದರಾಸ್.
ದಿವಾನ್ ಬಹದ್ದೂರ್ ಮ॥ ವಿ. ಭಾಷ್ಯಂ **ಅಯ್ಯಂಗಾರ್**, ರಿಟೈರ್ಡ್ ಮದರಾಸ ಹೈಕೋರ್ಟ್ ಜಡ್ಜ್
ಮ॥ ಸಿ ಎಂ.ಶ್ರೀನಿವಾಸನ್, ಬಿ.ಎ.,ಬಿ.ಎಲ್. (ಎಕ್ಸ್-ಆಫೀಷಿಯೋ) ಮದ್ರಾಸ್.

ಮ್ಯಾನೇಜರ್:-ಮ॥ ಎಂ. ಸತೀಶನ್, ಎಂ.ಎ. ಚೀಫ್ ಮೆಡಿಕಲ್ ಆಫೀಸರ್:- **ಲೆ. ಕ॥ ವಿ. ಮಹದೇವನ್**, ಐ. ಎಂ ಎಸ.

ಬ್ಯಾಂಕರುಗಳು:— ಇಂಡಿಯನ್ ಬ್ಯಾಂಕ್ ಲಿಮಿಟೆಡ್, ಮದರಾಸ್. ಮದರಾಸ್ ಪ್ರೋವಿನ್ಷಿಯಲ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್. ಇಂಡೊ-ಕಮರ್ಷಿಯಲ್ ಬ್ಯಾಂಕ್ ಲಿಮಿಟೆಡ್, ದಿ ಬ್ಯಾಂಕ್ ಆಫ್ ಮೈಸೂರು, ಲಿಮಿಟೆಡ್.

ಬ್ರಾಂಚುಗಳು:—ಕಲ್ಕತ್ತ, ಲಾಹೋರ್, ಜೋಧಪೂರ್, ಮಧುರ, ಕಲ್ಲಿಕೋಟೆ, ಬೆಜವಾಡ, ಅಲಹಾಬಾದ್ ಬೊಂಬಾಯಿ, ಅಹಮದಾಬಾದ್, ಪೂನಾ

ಮೈಸೂರು ಸರಕಾರದ ಹೊಸ ವಿಮಾ ಕಾನೂನನ್ನು ಅನುಸರಿಸಿ ಕಂಟ್ರೋಲರವರಲ್ಲಿ ಠೇವಣಾತಿ ಮೊಬಲಗು ಇಡಲಾಗಿದೆ.

ಕರ್ನಾಟಕದಲ್ಲೆಲ್ಲಾ ಯೋಗ್ಯರಾದ ಮತ್ತು ಪ್ರತಿಭಾಶಾಲಿಗಳಾದವರಿಂದ ಏಜನ್ಸಿಗಳಿಗೆ ಅರ್ಜಿಗಳು ಸ್ವೀಕರಿಸಲ್ಪಡುವುವು.

ಉತ್ತಮ ಕೆಲಸಮಾಡುವವರಿಗೆ ಒಳ್ಳೇ ಷರತ್ತುಗಳು. **ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—**

ಮ॥ ಸಿ ಎಂ ಶ್ರೀನಿವಾಸನ್, ಬಿ. ಎ., ಬಿ. ಎಲ್. ಜನರಲ್ ಸೆಕ್ರೆಟರಿ. ಇಂಡಿಯನ್ ಮ್ಯೂಚುಯಲ್ ಲೈಫ್ ಅಸೋಸಿಯೇಷನ್ ಲಿಮಿಟೆಡ್, 10 ಮೌಂಟ್‌ರೋಡ್, ಮದ್ರಾಸ್.

ಬಿ. ಕರುಣಾಕರ ಹೆಗ್ಡೆ ಇನ್ಸ್‌ಪೆಕ್ಟರ್ ಆಫ್ ಏಜನ್ಸೀಸ್, **ಕಾರ್ಕಳ ಪೋಸ್ಟ್**, ಉಡುಪಿ.

Bonus: Endowment Rs. 15. Whole life Rs. 18. Last valuation.

ಕಷಾಯ ಬಿಂದು

ವಾಯುವ್ಯ ಗಡಿನಾಡಿನ ಕಾಂಗ್ರೆಸ್ ಧುರೀಣರ ಕರಬೇತಿ ಶಿಬಿರವಲ್ಲಿ ಒಂದು ಮಾದರಿ ಶಿಕ್ಷೆ ವಿಧಿಸಲ್ಪಟ್ಟಿತು. ಅಲ್ಲಿಯ ಮಾಜಿ ಮಂತ್ರಿಗಳೊಬ್ಬರು ಮತ್ತು ಮಾಜಿ ಪಾರ್ಲಿಮೆಂಟರಿ ಸೆಕ್ರೆಟರಿಯರೊಬ್ಬರು ಶಿಕ್ಷಿಸಲ್ಪಟ್ಟರು.

೦೦೦ ೦೦೦ ೦೦೦

ಕಾಂಗ್ರೆಸ್ ಧುರೀಣರಿಗೆ ಶಿಕ್ಷೆಯಾದ ವಾರ್ತೆ ಕೇಳಿದೊಡನೆ ಹರತಾಳದ ಸಿದ್ಧತೆ ಮಾಡುವ ಪ್ರಯತ್ನವನ್ನಾರೂ ಮಾಡದಿರಲಿ; ಅದು ಶಿಬಿರದ ಕಾನೂನಿನನ್ವಯ ದೊರೆತ ಶಿಕ್ಷೆ.

೦೦೦ ೦೦೦ ೦೦೦

ಒಬ್ಬರು ಮುಂಜಾನೆ ಏಳುವಾಗ ತಡ ಮಾಡಿದರಂತೆ. ಅದಕ್ಕಾಗಿ ಶಿಬಿರದ ಕಾನೂನಿನಂತೆ ಅವರನ್ನು ಇಪ್ಪತ್ತು ಸಲ ಕುಳಿತು ಏಳುವ ಬಸ್ಕಿ ತೆಗೆಯಿಸಲಾಯಿತು.

೦೦೦ ೦೦೦ ೦೦೦

ಪಾಪ, ಆ ವ್ಯಕ್ತಿ ನೋವಿನಿಂದ ಮರುದಿನ ಬೆಳಗ್ಗೆ ಏಳುವಾಗಿನ ಘಂಟೆ ಹಿಂದಿನ ದಿನಕ್ಕಿಂತ ಪಿಕ್ಕಿರಬಹುದೆಂದು ನಮ್ಮ ಅನುಮಾನ.

೦೦೦ ೦೦೦ ೦೦೦

ಈ ಕಾನೂನು ಇಂಗ್ಲಾಂಡಿನಲ್ಲಿ ಜಾರಿಯಲ್ಲಿರುತ್ತಿದ್ದರೆ ಈ ಯುದ್ಧಕಾಲದಲ್ಲಿ ಕೆಲವು ಅಧಿಕಾರಿಗಳು ಎಷ್ಟು ಸಹಸ್ರ ಬಾರಿ ಕುಳಿತೇಳಬೇಕಾಗುತ್ತಿತ್ತೋ!

೦೦೦ ೦೦೦ ೦೦೦

ಮಿ. ಚೇಂಬರ್ಲೇನರಿಗೆ ತಡಮಾಡಿದರೆಂದು ಈ ಶಿಕ್ಷೆಯ ಸಾಮ್ಯತೆಯಿರುವ ಶಿಕ್ಷೆಯೇ ದೊರೆಯಿತು; ವ್ಯತ್ಯಾಸವೆಂದರೆ ಚೇಂಬರ್ಲೇನರು ಕುಳಿತಲ್ಲಿಂದ ಏಳಬೇಕಾಯಿತು—ಎದ್ದು ಬೇರೆ ಕಡೆ ಕುಳಿತುಕೊಳ್ಳಬೇಕಾಯಿತು.

೦೦೦ ೦೦೦ ೦೦೦

ನಮ್ಮ ಕಾಂಗ್ರೆಸ್ ಮಾದರಿಯ ಶಿಕ್ಷೆಯೆಂದರೆ ಅಲ್ಲಿಂದಲ್ಲಿಯೇ ಕುಳಿತೇಳುವದು. ನಮ್ಮ ಧುರೀಣರನ್ನು 'ಮೇಲೆ ಕೆಳಗೆ' ಮಾಡಲಿಚ್ಛಿಸುವವರು ಇದರಿಂದ ಪಾಠ ಕಲಿಯಲಿ!

ಬೊಂಬಾಯಿಯ ಪ್ರಾಂತಿಕ ಮುಸ್ಲಿಂಲೀಗು ಪರಿಷತ್ತು ಹುಬ್ಬಳ್ಳಿಯಲ್ಲಿ ಸೇರಿದೆ. ಮಿ. ಜಿನ್ನರದಕ್ಕಿತ್ತ ಸಂದೇಶದಲ್ಲಿ ಮೂರು ಲೋಕವೇ ತುಂಬಿಕೊಂಡಿತ್ತು.

೦೦೦ ೦೦೦ ೦೦೦

"ಕಾಂಗ್ರೆಸ್ ಹೈಕಮಾಂಡಿನವರು ಬೊಬ್ಬಿಡುತ್ತಿರುವ ಜಾತೀಯ ಒಗ್ಗಟ್ಟಿಂದರೆ ಅಯೋಗ್ಯ ಸ್ವಾರ್ಥ ಮತ್ತು ಅಲ್ಪತನದ ಚಿಹ್ನೆ" ಎಂದು ಬ್ಯಾ. ಜಿನ್ನಾರವರ ಮಾತು.

೦೦೦ ೦೦೦ ೦೦೦

ಅವರ ಸಂದೇಶದಲ್ಲಿ ಮತ್ತಷ್ಟು ಸ್ವಾರಸ್ಯದ ಭಾಗವೊಂದಿದೆ "ಕಾಂಗ್ರೆಸಿನವರು ಹಿಂದೂ ರಾಜ್ಯಸ್ಥಾಪನೆಗಾಗಿ ಬ್ರಿಟಿಷರ ಬಲವನ್ನು ನಂಬಿಕೊಂಡಿದ್ದಾರೆ. ಆದರೆ ಸದಾಕಾಲ ಹಾಗಾಗುವುದು ಸಾಧ್ಯವಿಲ್ಲ"

೦೦೦ ೦೦೦ ೦೦೦

ಈ ಘೋಷಗಳನ್ನು ಕೇಳುವಾಗ ಮುಸ್ಲಿಂಲೀಗು ಸಂಪತ್ತಿನಲ್ಲಿ ಜಿನ್ನರ ಜಯಘೋಷವೇಳದೆ ಹೋದೀತೆ?

೦೦೦ ೦೦೦ ೦೦೦

"ನಾವು ಅಪಪ್ರಚಾರಗಳ ದೆಸೆಯಿಂದಾಗಿ ಬ್ರಿಟಿಷ್ ಪ್ರಜೆಗಳಲ್ಲಿ ಹಬ್ಬಿರುವ ತಪ್ಪಭಿಪ್ರಾಯವನ್ನು ಕಿತ್ತಲು ಶಕ್ತರಾದೆವಾದರೆ ಚತುರರಾದ ಬ್ರಿಟಿಷ್ ಮುತ್ಸದ್ದಿಗಳು ನಮ್ಮ ವಾದದ ನ್ಯಾಯವನ್ನರಿಯುವರು" ಎಂಬ ಭರವಸೆಯಿದೆ ಜಿನ್ನರಲ್ಲಿ.

೦೦೦ ೦೦೦ ೦೦೦

ಜಿನ್ನರ ಅಬ್ಬರಗಳ ಗುರಿಯಾವುದೆಂಬುದನ್ನು ಈಗ ತಿಳಿಯಬಹುದು.

೦೦೦ ೦೦೦ ೦೦೦

ಎಚ್ಚರಗೊಂಡಿರುವ ಭಾರತೀಯರ ಕಿವಿ ಕಿವುಡಾಗಬೇಕೆಂಬ ಧ್ಯೇಯವಲ್ಲ; ಸಂಗತಿಯರಿಯದ ಬ್ರಿಟಿಷ್ ಪ್ರಜೆಗಳ ನಿದ್ರೆ ಹಾಳಾಗಬೇಕೆಂಬುದೇ ಈ ಆರ್ಭಟಿ ಉದ್ದೇಶ.

೦೦೦ ೦೦೦ ೦೦೦

ಆದ್ದರಿಂದ ಮಿ. ಜಿನ್ನರ ಗರ್ಜನೆಗಳ ಕಡೆಗೆ ನಾವು ಕಿವಿ ಮುಚ್ಚಿಕೊಳ್ಳುವದಕ್ಕಡ್ಡಿಯಿಲ್ಲ.

ಇಂಗ್ಲಾಂಡು, ಫ್ರಾನ್ಸುಗಳಲ್ಲಿ ಕೆಲವು ದಿನಗಳಲ್ಲಿ ಹಲವು ದಸ್ತಗಿರಿಗಳು, ಡಿಸ್‌ಮಿಸ್‌ಗಳು ನಡೆದಿವೆ.

೦೦೦ ೦೦೦ ೦೦೦

ಜರ್ಮನಿಯೊಡನೆ ಚಕ್ಕಂದವಾಡುವವರು, ತಮ್ಮೊಳಗೇ ಚಕ್ಕಂದವಾಡಿ ಕೆಲಸ ಕೆಡಿಸುವವರು—ಇಂಥವರನ್ನೆಲ್ಲಾ ಹಿಡಿಯಲಾಗಿದೆ. ಇಂಗ್ಲಾಂಡಿನ ಎಂ. ಪಿ. ಒಬ್ಬರೂ ಕೋಣೆ ಸೇರಿದರು.

೦೦೦ ೦೦೦ ೦೦೦

ನಾಜೀ ಸೇನೆ ಮುಂದೊತ್ತುವಾಗ ಒಳಗಿಂದೊಳಗೆ ಹಿಂದೊತ್ತುವವರಿರುವದು ಅಪಾಯಕರವೆಂದು ಮಿ. ಏಂಡರ್ಸನರೆಂದಿದ್ದಾರೆ.

೦೦೦ ೦೦೦ ೦೦೦

ಯುದ್ಧದಲ್ಲಿ ವಿರೋಧಿಗಳ ಬಗರಿಗೆ ಬೀಳದಂತೆ ಊರೂರುಗಳಲ್ಲಿ ಸೈನ್ಯವಿರಬೇಕು ಊರ ಜನರಿಗೂ ಕಾವಲಿರಬೇಕೆಂದರೆ ಕಷ್ಟವಲ್ಲವೆ? —ಪಂಡಿತ.

ಭಾರತೀ ಗ್ರಂಥಮಾಲೆಯ ಪುಸ್ತಕಗಳು.

ಬೆಳಕು (ಚಿಕ್ಕ ಕತೆಗಳ ಸಂಗ್ರಹ.)
ತಿನಿಸು (ಕತೆ, ಕವನ, ಪ್ರಬಂಧಗಳ ಸಂಗ್ರಹ.)
ಪ್ರತೀಕಾರ (ನವಪೌರಾಣಿಕ ನಾಟಕ)
ಲೋಪಾಮುದ್ರೆ (ಪೌರಾಣಿಕ ಕತೆ)
ಚಿಗುರು (10 ಚಿಕ್ಕ ಕತೆಗಳ ಸಂಗ್ರಹ)
ಪಂಚಾರತಿ (6 ಏಕಾಂಕ ನಾಟಕಗಳ ಸಂಗ್ರಹ)

ಪ್ರತಿಯೊಂದರ ಬೆಲೆ ನಾಲ್ಕಾಣೆ ಮಾತ್ರ
(ಅಂಚೆವೆಚ್ಚ 0-0-6 ಪ್ರತ್ಯೇಕ)
ರೂ 1-8-0 ಕಳಿಸಿದ್ದಲ್ಲಿ ಆರೂ ಪುಸ್ತಕಗಳನ್ನು ಕಳಿಸಲಾಗುವುದು. (ಅಂಚೆವೆಚ್ಚ ಪುಕ್ಕಟೆ)
ವ್ಯಾಪಾರಿಗಳಿಗೆ ಧಾರಾಳ ಕಮಿಶನ್.
ಪ್ರತಿಗಳಿಗೆ ಬರೆಯಿರಿ:-
ಮೆನೇಜರ್,
ನವಭಾರತ ಪುಸ್ತಕ ಭಂಡಾರ
ಉಡುಪಿ

TROPICAL

TROPICAL INSURANCE CO., LTD., does not boast of "Big" Figures. It has not been writing crores of business every year. That was never its intention. It never aimed at breaking "records" at dangerous cost. Whatever it did it wrote sound business that endures in the books of the Company. Thus although not the biggest it is one of the best of Life offices in India.

The Company, founded by Pandit Moti Lal Nehru, Dr. Ansari and Hakim Ajmal Khan, and guided now under the Chairmanship of Sjt. Subhas Chandra Bose, offers excellent chances to young men of culture and education to forge out their careers

Tropical Insurance Co. Ltd.,

Branch Office:-NIVAS BUILDING, HAMPANKATTA,

Mangalore.

ಈ ವಾರದ ಭವಿಷ್ಯ

ತಾರೀಖು 30-5-1940ರಿಂದ 6-6-1940ರ ವರೆಗೆ

ಮೇಷ—"ಸಹಜ ವಿಧೀತ ನ ಕ್ರಿಯಾಂ ಅನಿಶೀ; ಶರವಣಪದಾಂ ಪದಂ" ಎಂಬ ನೀತಿ ವ ಚನದಂತೆ ಯಾವೊಂದು ಕಾರ್ಯವನ್ನು ಪೂರ್ವಾಪ ರ ವಿಚಾರವಿಲ್ಲದೆ ಮಾಡಲಾಗದು. ಹಾಗೆ ವಿಚಾರ ಪೂರ್ವಕವಾಗಿ ಮುಂದರಿದರೆ ಅಶಕ್ತ ಸಿದ್ಧವೆ. ಈ ವಿ ಷಯವನ್ನು ಅನುಸರಿಸಿದ್ದರೂ ಕೆಲವು ಅದನ್ನು ಗಮನ ಕ್ಕೆ ತಾರದೆ ಮಾಡಿದ ಕರ್ತವ್ಯಗಳ ಫಲವನ್ನು ಅನು ಭವಿಸಲಿರುವಿರಿ. ಆದಾಯಕ್ಕಿಂತಲೂ ಅಧಿಕವಾಗಿ ವೆ ಚ್ಚವಾಗುವ ಸಂಭವವಿರುವುದರಿಂದ ಖರ್ಚಿನ ಭಾಗ ದಲ್ಲಿ ಸ್ವಲ್ಪ ಜಾಗ್ರತೆ ದೃಷ್ಟಿಯನ್ನಿಡಿರಿ. ಮನಸ್ಸಿನ ಲ್ಲೊಂದು ಕೃತಿಯಲ್ಲೊಂದು ಕೆಲವಾಗಿ ವರ್ತಿಸುತ್ತಿ ರುವ ಮಿತ್ರರ ಸಹವಾಸದಿಂದ ಅಗ್ರಹಕ್ಕೆ ಪಾತ್ರರಾ ಗುವಿರಿ. ಗೃಹ ಸುಖದ ತೃಪ್ತಿ ಕೆಲವಿದ್ದರೂ ದೈಹಿಕ ಸುಖವಿರಲಾರದು. ತಾ. 2-3ನ್ನು ಬಿಟ್ಟುಳಿದ ದಿನಗ ಳು ಶಾಂತಿಕರಗಳಾಗಿವೆ.

ವೃಷಭ—ಉನ್ನಾಹಗಳಿಂದೂ ಸೆವೀರದ ಆರೋಗ್ಯ ಮತ್ತು ಹಣದ ಅಭಿವೃದ್ಧಿಯು ಬಹಳವಾಗು ವುದರಿಂದ ನಿಮ್ಮ ಮನೋರೋಗವು ದಿನೇ ದಿನೇ ವೃ ದ್ಧಿ ಹೊಂದುತ್ತಾ ಹೋಗುವುದು. ವಾತ್ರವಲ್ಲ ಕೂ ಲಿ, ಇತರ ವಸ್ತುಕ ವಾಹಿನಿಗಳಿಗೂ ತುತ್ತಾಗಲಿರುವಿರಿ. ವಿದ್ಯೋಪಜೀವಿಗಳಿಗೆ ಕೈಗಾರಿಕಾ ಕೆಲಸದವರಿಗೂ ವ್ಯಾ ಪಾರಿ ಜನರಿಗೆ ದಿನನಿತ್ಯದ ಖರ್ಚಿಗೆ ಬೇಕಾದಷ್ಟು ಸಂಪಾದಿಸಲು ಶಕ್ತರಿರುವರು. ಅಲ್ಲಲ್ಲದ ಪ್ರವಾಸ ಗಳು ಸಂಭವಿಸಿ ಕಷ್ಟನಷ್ಟಗಳಿಗೆ ನಿಮ್ಮನ್ನು ಗುರಿ ಮಾಡಲಿವೆ. ರಾಜಕೀಯದಲ್ಲಿ ಧನವ್ಯಯವೂ ವಿನಾ ಶ್ಲೆಯವೂ ಸಂಭವಿಸುವಂತಿರುವುದರಿಂದ ನನ್ನ ಆ ಪಿಟಾಚಕ್ಕೆ ಕೈಯಿಕ್ಕದಿರಿ. ತಾ. 2-3ರಲ್ಲಿ ವಿಶೇಷ ವೆಚ್ಚವೂ, ಖರ್ಚುಗಳು ಪ್ರಾಪ್ತವಾಗುವವು.

ಮಿಥುನ—ದಿನಕರನ ಏಳುಗೆಗಳ ಅಗಿರ ಕ್ಕೆ ಜನರಿಗೆ ಈ ವಾರವು ಬಹುವಿಧದಿಗೆ ಸ ವಿವಾ ಯಕರಾಗಿರುವುದು. ಸರ ಸಜ್ಜಾವಾದಿಗಳಿಂದ ಕೆಲ ವ ಖಾಲಿ ತೀಯವೆಲ್ಲದು. ವ್ಯವಹಾರದಲ್ಲಿ ಮಿತ ವಾಗಿದ್ದಷ್ಟು ಉತ್ತಮ. ಇಲ್ಲದಲ್ಲಿ ಹಲವರಲ್ಲಿ ವೈ ಥರ ನಿಷ್ಠುರ ಕೆಲಸಗಳಿಗೆ ಗುರಿಯಾಗುವಿರಿ. ನೌಕ ರಿ ಜನರಿಗೂ ವೈದ್ಯರಿಗೂ ಈ ವಾರವು ಶ್ರೇಯಸ್ಕರ ವಾಗಿಲ್ಲವೆ. ಆದರೂ ಸಾಂಪತ್ತಿಕ ಭಾಗದಲ್ಲಿ ಯಾವ ಕೊರತೆಯೂ ಉಂಟಾಗದು. ಹಿಂದಿನ ಕಾರ್ಯಗಳ ಲ್ಲಿ ವಿಜಯ ಪ್ರಾಪ್ತಿಯಾಗುವುದು. ಅವಳುಡಗಳಿಗೆ ಸಿ ಬ್ಬಂದಿ ಆಕ್ರಗಳಿರುವುದರಿಂದ ತಾಳ್ಮೆಯಿಂದಾಗಿ ಪ್ರಯಾಣವನ್ನು ಕೈಬಿಡಿರಿ. ತಾ. 4, 5, 6ರ ವಟ್ಟಿ ಗೆ ಪ್ರತಿಕೂಲಗಳಾಗಲಿವೆ.

ಕರ್ಕಾಟಕ—ಆಯಕ್ಕಿಂತ ಅತ್ಯಧಿಯಾಗಿ ಮಿತ್ರಾಗುವ ಸಂಭವವಿದೆ. ಹಾಗೆ ಇದ್ದಷ್ಟೇ ಕಾಲು ವಾಯಿಕೊಂಡು ತಮ್ಮಮಿತ್ರಸ ಸರಿಸಿದರೂ ಕೆಲವೇ ನ್ನು ನಿಮ್ಮ ಹಿತಯನ್ನಪೇಕ್ಷಿಸುವ ಹೋಗುವುದು. ಅದರೂ ಸಾಹಸಾಧಿಕಾರ ಪ್ರಸಂಗವೊದಗದು. ರಾಜಕೀಯ ರಂಗದಲ್ಲಿ ಸಾಕ ವಿಜಯಗಳಾಗುವುದಾದ ರೂ ಇತರ ಸಾವಾಜಿಕ ವ್ಯವಹಾರಗಳಲ್ಲಿ ಶತ್ರುಗಳ ಅವಹೇಳನ ಪರಿಣಾಮಕಾರಿಯಾಗಲಿವೆ. ಸರಾದಾ ಶಾಗ ಗುರ ಹಿರಿಯರ ಅಗ್ರಹಕ್ಕೆ ಪಾತ್ರರಾಗುವಿರಿ ಆರೋಗ್ಯವೂ ಕೆಡಲಿದೆ. ಸ್ವಾತಂತ್ರ್ಯ ಜೊಂದರೆಗೀ ಗೀಡಾಗುವಿರಿ. ನೌಕರಿ ಭಾಗದಲ್ಲಿ ನಡಾವಿಯ ಹೆಚ್ಚ ಲಿದೆ, ಸ್ವೀಕೃತ ಕಾರ್ಯಗಳಲ್ಲಿ ಹಿಚ್ಚಿನ ಕೆಲಸಗಾ ರರಾಗುವಿರಿ. ತಾ. 2ರಿಂದ 6ರ ವರೆಗೆ ಸ್ವಲ್ಪ ಅಭಿವೃ ದ್ಧಿಯ ಚಿಹ್ನೆಗಳು ಕಂಡುಬರುತ್ತವೆ.

ಸಿಂಹ—ಸದ್ಯ ನಿಮ್ಮ ಅದೃಷ್ಟವು ಬಹಳ ಉ ತ್ತಮ ರೀತಿಗೆ ಬಂದಿರುವುದು. ಇದು ಸಫಲವಾಗಬೇ ಕಾಗಿದ್ದಲ್ಲಿ ನಿಕ್ಕ ಪೌರುಷವನ್ನು ಉಪಯೋಗಿಸ ಬೇಕಾಗಿದೆ. ಬಿದಾಸೀನ್ಯದಿಂದ ಕುಳಿತರೆ ಮುಂದೆ ಪ ಶ್ಚಾತ್ತಾಪ ಪಡಬೇಕಾಗಿ ಬಂದೀತು. ಆರೋಗ್ಯ ಭಾಗ್ಯ ವು ಉತ್ತಮವಾಗಿರುವುದರಿಂದ ಯಾವ ಕಾರ್ಯವ ನ್ನು ಮಾಡಲಿಕ್ಕೆ ಬೇಕಾದ ಶಕ್ತಿ ಉತ್ಸಾಹಗಳು ನಿ ಮಗಿವೆ. ಆರ್ಥಿಕ ಭಾಗದಲ್ಲಿ ಬಹಳ ಮುಂದರಿಯು ವಿರಿ. ವ್ಯಾಪಾರ ನೌಕರಿ ಮೊದಲಾದವುಗಳಲ್ಲಿ ಮನ ಸ್ಸಿಗೆ ತೃಪ್ತಿಕರವಾಗುವ ರೀತಿಯಲ್ಲಿ ಕಾರ್ಯ ಸಾ ಗುವುದು. ಶ್ರಮಜೀವಿಗಳಾದ ಸಾವಿರ ಜನರನ್ನು ಹೊರತಾಗಿ ಇತರ ಸಕಲ ವರ್ಗದವರಿಗೂ ಇಷ್ಟಾ ರ್ಥಗಳು ಅಚಿರದಲ್ಲೇ ನೆರವೇರಲಿವೆ. ತಾ. 4-5-6 ಬಹಳ ಉತ್ತಮವಿರುವುದರಿಂದ ಮಹಾ ಸ ಖ ವು ತ್ತ ಲಾಭಗಳನ್ನ ಪಡೆಯ ಏರಿ.

ಕನ್ಯಾ—"ದೈವೇ ದುರ್ಬಲವಾಗಿತೇ ಕ್ಷಣ ಮಪಿ ಸ್ವಾಪೇಕ್ಷ ವಿಚ್ಛಾಯತೇ" ದ ಶ್ಲೋಕದ ನರ ರಿಗೆ ಕ್ಷಣವೂ ಕೂಡ ವಿಶ್ವಸಂತೆ ಕಾವಾಗಿ ಏರಿ ಬಾಸಿಸುವದು. ಕತ್ತಾಲದಲ್ಲಿ ನಿಮ್ಮ ವಿಧಿಯು ಬಹಳ ಕೆಟ್ಟದಾಗಿರುವುದರಿಂದ ಪ್ರತಿಯೊಂದು ಭಾಗದಲ್ಲೂ ಮ ನಸ್ಸಿಗೆ ಅಸಮಾಧಾನವೇ ಹೆಚ್ಚಾದೀತು. ನಿಮ್ಮ ಕರ್ಮ ಫಲವ ಸಲುವಾಗಿ ಏರಿಪ ಅವಕಾಶಗೊಳಗಾಗುವಿರಿ. ಅನಾವಶ್ಯಕವಾದ ಖರ್ಚುಗಳು ಮೇಲಿಂದ ಮೇಲೆ ಪ್ರಾಪ್ತವಾಗುವುದರಿಂದ ಹಣದ ಅಡಚಣೆ ವಿಶೇಷವಾ ಗುವುದು ಆರೋಗ್ಯವೂ ಬಹಳ ಹೀನಸ್ಥಿತಿಗೆ ಬರಲಿ ದೆ. ವ್ಯವಹಾರದಲ್ಲಿ ಹಲವರೊಡನೆ ಕಲಹವಾಗುವು ದರಿಂದ ಅವಮಾನಕ್ಕೆ ವ್ಯಸನಕ್ಕೂ ಗುರಿಯಾಗು ವಿರಿ. ತಾ. 30-31-1 ಈ ಮೂರು ದಿನಗಳಲ್ಲಿ ಶಂ ಚಿಲ್ಲವಲ್ಲವಿರುವುದರಿಂದ ಸ್ತ್ರೀ ಮೂಲಕ ಧನಪ್ರಾ ಪ್ತಿ ಸುಖಗಳು ದೊರೆಯಲಿವೆ.

ತುಲಾ—ದೀರ್ಘಕಾಲದಿಂದ ಗುರು ಹಿ ರಿಯರ ಅನುಗ್ರಹಕ್ಕೆ ಪಾತ್ರರಾಗಿರುವ ನಿಮಗೆ ಸಮಾ ಜದಲ್ಲಿ ಮನ್ನಣೆಯೂ ಧರ್ಮಮಾರ್ಗದಲ್ಲಿ ಇಷ್ಟಸಿದ್ಧಿಯೂ ಪ್ರಾಪ್ತವಾಗಲಿದೆ. ಸಾಂಸಾರಿಕ ಜವಾಬ್ದಾರಿಗಳು ಕ ತಿಮಿತಿಯಾಗಿದ್ದರೂ ಸ್ತ್ರೀಯು ನಿಮಗೆ ವಿರೋಧವಾ ಗಿ ವರ್ತಿಸುವಳು. ಅನಾರೋಗ್ಯದಿಂದಾಗಿ ದೈಹಿಕ ಶಕ್ತಿಯು ಕುಗ್ಗುವುದು. ವಿರೋಧಿಗಳ ತಂತ್ರವು ಹ ಲವೆಡೆಗಳಲ್ಲಿ ನಿಮ್ಮ ಕಾರ್ಯಕ್ಕೆ ವಿಘ್ನವನ್ನುಂಟು ಮಾಡಲಿದೆ. ಆಪ್ತ ಜನರ ವಿರಹದಿಂದ ಮನಸ್ಸು ಸ ದಾ ಚಿಂತಾಗ್ರಸ್ತವಾಗಿರುವುದು. ಪ್ರವಾಸಕ್ಕೀ ಸಮ ಯವು ಒಳ್ಳೆಯದಲ್ಲ. ಧರ್ಮ ಕರ್ಮ ಪ್ರಿಯರಾದ ನಿ ಮಗೆ ಗೃಹ ಸುಖವೂ ಮೃಷ್ಟಾನ್ನ ಭೋಜನವೂ ಭೋಗ್ಯ ವಸ್ತುಗಳೂ ಹೇರಳವಾಗಿ ದೊರೆಯಲಿವೆ. ತಾ. 30ರಿಂದ 3ರ ವರೆಗಿನ ದಿನಗಳು ಅಶುಭದಾಯಕಗ ಳಾಗಿವೆ.

ವೃಶ್ಚಿಕ—ನಾನಾ ರೀತಿಯಿಂದ ನಿಮ್ಮ ವಿ ರೋಧಿಗಳು ನಿಮ್ಮನ್ನು ಕಾಡುವರು. ಧನ ಮತ್ತು ಮಾನಕ್ಕೆ ಧಕ್ಕೆಯುಂಟಾಗಲಿದೆ. ಆದರೆ ಮಧ್ಯಾಗೆ ಮಧ್ಯೆ ಆಕಸ್ಮಿಕವಾಗಿ ಉತ್ತಮವಾದ ಲಾಭಕ್ಕೆಯುಂ ದ ಜೀವನಕ್ಕೆ ಸಂದರ್ಭ ಸಾಧಿಸಿ ಪ್ರತಿ ಕ್ರಿಯೆ ಹೊ ದುವಿರಿ. ವಿದ್ಯಾಬುದ್ಧಿಗಳಲ್ಲಿ ಚತುರರಾಗಿರುವ ನಿಮ ಗೆ ಉದ್ಯೋಗದಲ್ಲಿ ವಿಜಯವೂ ಧನ ಲಾಭವೂ ಆಗ ಲಿದೆ. ಆರೋಗ್ಯವು ಸಾಮಾನ್ಯ ರೀತಿಯಲ್ಲಿರುವುದು. ಗೃಹಸ್ಥಾಶ್ರಮಿಗಳಿಂದ ಮನ್ನಣೆಯನ್ನಿತ್ತು, ಶಯ್ಯಾ ಸ ಖವೂ ಉತ್ತಮವಾಗಿ ದೊರೆಯಲಿದೆ. ಏಟಿಗೆ ಶಿಕ್ಷಣ ವಿಷಯಕ ಕಾರ್ಯಕ್ಕೆ ಆದೇಶವಾದುದರಿಂದ ಧನದ ಚಿಂತೆ ಯೊದಗದು. ಆದರೂ ಮನೋರೋಗವೊಂದು ಸದಾ ಸಿಮ್ಮನ್ನು ಬಾಧಿಸಲಿದೆ. ತಾ. 2ರಿಂದ ವಾರಾಂತ್ಯದ ವರೆಗೂ ಉತ್ತಮವಾಗಿದೆ.

ಧನು—ಬಹುಕಾಲ ನಿಮ್ಮ ಮನದಿಚ್ಛೆಯು ಪೂರ್ತಿಗೊಳ್ಳುವುದರಿಂದ ನೆಮ್ಮದಿಯುಕ್ತರಾಗುವಿರಿ. ಪಶುಪಶ್ಚಿಮಾದಿಗಳೂ ಬಂಧು ಮಿತ್ರರೂ ನಿಮಗಾಸ ಕೆಲಸದಲ್ಲಿರುವುದರಿಂದ ನಾನಾಕಾರ್ಯಗಳನ್ನು ಆ ನಾಯಾಸದಿಂದ ಕೊನೆಗೊಳಿಸುವಿರಿ. ಶತ್ರುನಿಗ್ರಹ ದಿಂದ ಸಂತುಷ್ಟರಾಗುವಿರಿ. ಆದರೆ ಉದರರೋಗ ಕಣ್ಣುನೋವು ಮುಂತಾದವುಗಳಿಂದ ದೇಹಕ್ಕೆ ಸ್ವಲ್ಪ ದುರ್ಬಲತೆಯುಂಟಾಗುವುದು. ಕೈಹಿಡಿದವಳಿಯಿಂ ದಲೂ ಇತರ ಪ್ರೇಮಿಗಳಿಂದಲೂ ನಿಮಗೆ ಕೆಲವು ಆಸ ಕ್ತಿಗಳು ಹಣ ತಪ್ಪವಂತಿಲ್ಲ. ನೌಕರಿ ಭಾಗದಲ್ಲಿ ಪ್ರತಿಸ್ಪರ್ಧಿಗಳಿಂದಾಗಿ ಮನಸ್ಸಿಗೆ ಅಸಮಾಧಾನವುಂ ಟಾಗಲಿದೆ. ತಾ. 30ರಿಂದ 3ರ ವರೆಗೂ ಪ್ರವಾಸ ವ್ಯಸನ ಕೆಲಸಗಳು ಸಂಭವಿಸುವವು.

ಮಕರ—ಈ ವಾರದಲ್ಲಿ ನಿಮಗೆ ಶರೀರದ ಆ ರೋಗ್ಯವು ಚೆನ್ನಾಗಿ ಉಳಿಯಲಾರದು. ಬಂಧುಗಳು ಶತ್ರುಗಳು ಎಂಬ ಭೇದವೂ ಕೂಡ ಉಳಿಯಲಾರ ದು. ಇದರ ಅಂತರಂಗದಲ್ಲೊಂದು ಬಹಿರಂಗ ದಲ್ಲೊಂದು ವಿಧವಾಗಿ ವರ್ತಿಸಿಕ್ಕೆ ನಿಮ್ಮ ಬಂಧು ಜನರು ಶತ್ರುಗಳೆನಿಸಲೂ ಅಹಿತರಾಗಿ ವರ್ತಿಸು ವುದರ. ನಿಮ್ಮ ಪ್ರಯತ್ನಕ್ಕೆ ತಕ್ಕ ಫಲ ದೊರೆ ಯುತ್ತದೆಂದು ಖರ್ಚಿಗೆ ಸಾಕು ಕೊಡಲಾರಿರಿ. ಸಾಂ ಸಾರಿಕ ಜವಾಬ್ದಾರಿಗಳು ಬಹಳವಾಗಿ ಹೆಚ್ಚುತ್ತಿದ್ದ ರೂ ಕಷ್ಟಕೋಟಲೆಗಳಾದ ನೀವು ಅದೊಂದನ್ನು ಗಣ ನೆಗೆ ತರಲಾರಿರಿ. ಆತ್ಮೀಯರಿಗೆ ವಿರೋಧಿಗಳಾದ ರೂ ಪರರಿಗೆ ಉಪಕಾರಿಗಳಾಗಿ ಪರಿಣಮಿಸುವಿರಿ. ತಾ. 2ರಿಂದ 6ರ ವರೆಗೆ ಸ್ವಲ್ಪ ಅನಿಷ್ಟಕಾಲವಾದುದರಿಂ ದ ಜಾಗರೂಕರಾಗಿ ಕೆಲಸಮಾಡಿರಿ.

ಕುಂಭ—ಹಿಡಿದ ಕಾರ್ಯಗಳನ್ನು ಬಹಳ ಕಷ್ಟದಿಂದ ಕೊನೆಗೊಳಿಸುವಿರಿ. ಸ್ವಕೀಯರ ಬೆಂ ಬಲವಿಲ್ಲದಿದ್ದರೂ ಮಿತ್ರಜನರ ಆಶ್ರಯವೂ ಸಿಂ ಹಾ ಇರುವುದು. ಉದ್ಯೋಗದಲ್ಲಿ ಕಷ್ಟಕ್ಕೆ ತಕ್ಕ ಪ್ರತಿಫಲ ದೊರೆಯದಿರುವುದರಿಂದ ದಿನೇ ದಿನೇ ನಿರು ತ್ಸಾಹ ಹೆಚ್ಚಲಿದೆ. ಶರೀರದ ಅವಯವಗಳೆಲ್ಲವೂ ನೋವಿನಿಂದ ಪೀಡಿಸುವವು. ರಾಜಕೀಯ ವ ಸಾ ಮಾಜಿಕ ಕಾರ್ಯಗಳಲ್ಲಿ ಉತ್ಸಾಹಪೂರ್ವಕವಾಗಿದೆ ವ್ಯರ್ಥ ಸಾಹಸಕ್ಕೆ ತೊಡಗಲಿರುವಿರಿ. ಗೃಹದಲ್ಲಿ ಕಂದ ಮಕ್ಕಳಿಗೂ ಗಂಡ ಹೆಂಡಿರಿಗೂ ನಿತ್ಯವೂ ಕಲಹ ವುಂಟಾಗುವವು. ಮಕ್ಕಳು ಮರಿಗಳ ಆರೋಗ್ಯವೂ ಕೂಡ ಕೆಡಲಿದೆ. ತಾ. 2-3 ಈ ದಿನಗಳನ್ನು ಹೊರತು ಇತರ ದಿನಗಳಲ್ಲಿ ಪ್ರತಿಕೂಲ ಹೆಚ್ಚಲಿವೆ.

ಮೀನ—ದೇಹಾಲಸ್ಯವೂ ಸೋಮಾರಿತನವೂ ನಿಮ್ಮಲ್ಲಿ ಹೆಚ್ಚುತ್ತಿರುವವು. ಕಷ್ಟಪಟ್ಟು ಕೆಲಸ ಮಾಡಿದರೆ ತಕ್ಕ ಫಲವನ್ನು ಹೊಂದಲು ಸಾಧ್ಯ ಆ ಹಾರಿದ ವಿರಿ ದೈವವು ಬಹುಮಟ್ಟಿಗೆ ನಿಮಗನು ಕೂಲವಾಗಿರುವುದು. ಆದರೆ ಗೆಳೆಯರ ಒಡನಾಟ ದಿಂದ ಸಮಯವನ್ನು ಹಾಳುಮಾಡುವಿರಿ. ವ್ಯರ್ಥಾ ಲಾಪದಿಂದ ಕಾಲಕಳೆವಿರಿ. ಹೆಚ್ಚಿನಂಶ ಆರ್ಥಿಕ ಸುಧಾರಣೆಯಾಗಲಿದೆ. ಪ್ರತಿಸ್ಪರ್ಧಿಗಳನ್ನು ಸ ಮರ್ಪಕವಾಗಿ ಗೆಲ್ಲುವಿರಿ. ಪಶುಭೂಮ್ಯಾದಿ ಗೃಹಕೃತ್ಯ ಕೆಲಸಗಳಲ್ಲಿ ಯಾವುದಕ್ಕೂ ಕೊರತೆಯಿಲ್ಲದಿರುವುದ ರಿಂದ ಸಾಂಸಾರಿಕ ಸುಖವನ್ನು ಪೂರ್ಣವಾಗಿ ಅನು ಭವಿಸುವಿರಿ. ತಾ. 2-3 ಈ ದಿನಗಳು ಉತ್ತಮ ವಾಗಿಲ್ಲವು.

ಕನ್ನಡ ನುಡಿವೆಣ್ಣಿಗೊಂದು
ಕನ್ನಡಗಿತ್ತಿಯ ಕಿರುಗಾಣಿಕೆ
ಶಾಂತ ಸೋದರಿಯರ ನೈಜ ಜೀವನದ ದುರಂತ ಚಿತ್ರವನ್ನೂ, ಸ್ತ್ರೀ-ಪುರುಷ ಹೃದಯಗಳ ಆಳವನ್ನೂ ಹೃದಯಂಗ ಮವಾಗಿ ಚಿತ್ರಿಸುವ ರಮ್ಯ ಕಥಾನಕ

ವತ್ಸಲಾ

ಸಾಮಾಜಿಕ ಕಾದಂಬರಿ
ಬೆಲೆ: ೧-೭-೩.
0—8—0 ಸ್ಟಾಂಪು ಕಳುಹಿಸಿದರೆ
1 ಪ್ರತಿಯನ್ನು ಕಳಿಸಲಾಗುವುದು.
ಬರೆದವರು:-
ಶ್ರೀಮತಿ ಮುತ್ತಾರಿ ಕಮಲಾಕ್ಷಿ

ಈ ಪುಸ್ತಕದ ಕುರಿತು ಪ್ರಾಚ್ಯನ ವಿಮರ್ಶ ವಿಚಕ್ಷಣ ಕರ್ನಾಟಕ ವಿದ್ಯಾವೃಧ, ರಾವ್ ಬಹದೂರ್ ಆರ್. ನರಸಿಂಹಾ ಚಾರ್ಯ F. M. A., M. R. A. S. ಇವರು ಬೆಂಗಳೂರಿನಿಂದ ಹೀಗೆ ಅಭಿಪ್ರಾಯಪಡುತ್ತಾರೆ 'ಗ್ರಂಥದ ಶೈಲಿ ಗಂಭೀರವಾಗಿಯೂ ಹೃದ ಯರಂಜಕವಾಗಿಯೂ ಇವೆ. ಪ್ರತಿಪಾದಿತವಾದ ವಿಷಯವು ನೀತಿಬೋಧಕವಾಗಿಯೂ ಮನೋ ಹಾರಕವಾಗಿಯೂ ಇವೆ. ಸ್ತ್ರೀಯರಿಗೆ ಬೋಧ ಪ್ರದವಾದ ಗ್ರಂಥ.........'

ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ

NAVAYUGA
Advertisement Tariff

1 Page Rs. 25/- per insertion
½ " Rs. 15/- " "
¼ " Rs. 8/- " "
⅛ " Rs. 5/- " "
Per Single inch col. Re. 1 "
Contract rates on application
***Manager*-Navayuga UDIPI.**

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ

"ಗೊನೊಕಿಲರ್" (ರಜಿಸ್ಟರ್ಡ್)

GONO KILLER

ಜಗತ್ಪ್ರಸಿದ್ಧ

ಕಠಿಣ ಮದ್ದುಗಳಿಗೆ ಮಣಿಯದಂಥ, ಹಳೆಯದಾದ ಮೊದಲು ಕಂಡ ಗುಣಹೊಂದ ಸಂಶಯದ ಗುಣವನ್ನು ಗೊನೊಕಿಲರ್ ಕೊಡುವನ್ನು ಗಮನಿಸಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮ, ವಾತಪ್ರಮೇಹದಿಂದ ಕೀವು ಹೋಗು ವದು, ವೀರ್ಯಸ್ರಾವ, ಮೂತ್ರ ಕಟ್ಟಿಕೊಂಡಾಗಿ ಹೋಗುವುದು ಮತ್ತು ಉರಿವು ಬೀಳುವುದು, ಮೂತ್ರ ಮಾರ್ಗ ದ ಒಳಗೆ ಆಗಿರುವ ಬಾತ ಅಥವಾ ಗಾಯ, ಸ್ತ್ರೀಯರ ಯೋನಿಯಲ್ಲಿ ಆಗುವ ಬಿಳುಪುಸ್ರಾವ, 'ಗೊನೊ-ಕಾಕಸ' ಎಂಬ ವಿಕಾರಿ, ಅದೇ ವೇಳೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ವ ತ್ತು ತತ್ಸಂಬಂಧವಾದ ಅನೇಕ ದುಃಖದಾಯಕ ವಿಕಾರಗಳಲ್ಲ ಈ ಔಷಧದಿಂದ ಶೀಘ್ರವಾಗಿ ಮತ್ತು ಸಮೂಲವಾಗಿ ನಾಶವಾಗುವವು.

ಬೆಲೆ: ೩೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಚಾರ್ಜು 0-6-0 ಪ್ರತ್ಯೇಕ. ಎಲ್ಲಾ ಔಷಧಿವ್ಯಾಪಾರಿ ಅಂಗಡಿಗಳಲ್ಲಿ ಮಾರುತ್ತಾರೆ.

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಠ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer DR. D. N. JASANI, Vitalbhai Patel Road, BOMBAY 4

[ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ರಾವ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.
ಈಗ ದರವನ್ನು ಪೂರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Kanara Printing Works,
Hampankatte, **MANGALORE.**

ಮೂಲವ್ಯಾಧಿ

ಸಾಧಃಪ್ರೊಬ್ಬನ ಸಿದ್ಧಿಯಾಗಿರುವ ವಿಚಿತ್ರ ಹಾಗೂ ಅಪೂರ್ವ ಔಷಧಿ.

ಆರ್ಶಮಾರಾ (ರಜಿಸ್ಟರ್ಡ್)

ರಕ್ತ ಸುರಿಯುವ ಅಥವಾ ಬಿಂದ ಗಿಯುವ ಹಳೆಯ ಅಥವಾ ಹೊಸ ... ಮೂಲವ್ಯಾಧಿಯ 'ಅರ್ಶಮಾರಾ'ವನ್ನು ಒಂದೊಬ್ಬೆ ಹಚ್ಚಿದ ಕೂಡಲೆ ಅದ್ಭುತ ... ಕೇವಲ 3 ದಿನ ಹಚ್ಚಿದರೆ ಯಾವ ತರದ ಶಸ್ತ್ರಚಿಕಿತ್ಸೆ ಇಲ್ಲದೆ ಮೂಲವ್ಯಾಧಿ ಅಥವಾ ಮೊಳೆಗಳನ್ನು ಗುಣಪಡಿಸುತ್ತದೆ. ಈ ಔಷಧಿಯಿಂದ ಸಾವಿರಾರು ರೋಗಿಗಳು ಗುಣಹೊಂದಿ ಇತರರಿಗೆ ಅದನ್ನು ಶಿಫಾರಸು ಮಾಡುತ್ತಾರೆ. ಗುಣವಾಗದಿದ್ದಲ್ಲಿ ಹಣ ವಾಪಸು. ಬೆಲೆ ರೂ. 2-0-0.

ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ, ಗೂಡು ಕಟ್ಟಿ ಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ. ಆದಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿನಿಮ್ಮ ಕೈಗೆಸಿಗುವುದು ಸೀಸಾ ಕ್ಕೆ 12 ಆಣೆ, ಟಪಾಲ್ 4 ಆಣೆ.

ಎಸ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪೋ. ಉಡುಪಿ**

THE MOOLKY BANK, LTD.,
MOOLKY.
ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.
ಭಂಗಾರದ ಸರಿತೆನ ಈಡಿನ ಮೇಲೆ ನೇಕಡ 7 ವರೆರ ದರದಲ್ಲಿ ಸಾಲಕೊಡಲಾಗುವುದು.
ನಿರಖು ಠೇವಣಾತಿ ಸೇಕಡ 5ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.
ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, *President & Manager,* — **ಯಂ. ಆರ್. ಪೂಂಜ,** ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!

K. R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾಯಿತ (first quality, selected) ಎಮ್‌ಸ್ಟ್ರೆಮ್ಸನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕೊಲೇಜಿನ ಎದುರು, **ಹಂಪನಕಟ್ಟೆ, ಮಂಗಳೂರು.**

ಎರಡನೆ ಮುದ್ರಣ **ಸೆಲ್ಫ್ ಇಂಗ್ಲಿಷ್ ಸ್ಟಡಿ** ಕೆಂಪೇ ಪ್ರಿಂಟಾಗಿದೆ!

SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ **1-8-0**

ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ ಓದುವದನ್ನೂ, ಮಾತನಾಡುವದನ್ನೂ, ಇಂಗ್ಲೀಷನಲ್ಲಿ ಪತ್ರವ್ಯವಹಾರ ಮಾಡುವದನ್ನೂ 3 ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕ ಇದುವರೆಗೆ ಯಾರೂ ತಯಾರಿಸಲಿಲ್ಲ. ದೊಡ್ಡ ಪುಸ್ತಕ, ಸ್ವಲ್ಪ ಕ್ರಯ ... ಕನ್ನಡ ಓದಬಲ್ಲವರ್ಯಾರೇ ಆಗಲಿ ಆದವರು ... ಇಂಗ್ಲಿಷ ಕಲಿತುಕೊಳ್ಳಬಹುದು. ... ಪುಸ್ತಕದ ಕ್ರಯ ರೂ. 1—8—0.

Western Swiss Watch Co. — **ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,**
Book-Sellers, Post Box No 68 — ಪೋಸ್ಟ್ ಬಾಕ್ಸ್ ನಂ. 68. ಮದರಾಸ್.
G. P. O. MADRAS

ಮುಚ್ಚಿದರೆ ಮುಗುಳು ! — ಬಿಚ್ಚಿದರೆ ಅರಳು !!

ಶ್ರೀ. ಕೆ. ಹೊನ್ನಯ್ಯ ಶೆಟ್ಟರಿಂದ ಪೋಣಿಸಲ್ಪಟ್ಟ
ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಮಾಲಿಯಮ

ಮುಗುಳು

ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಅತ್ಯುಪಯುಕ್ತವಾದ ಸಚಿತ್ರ ಪದ್ಯ ಪುಸ್ತಕ.
(ಮದ್ರಾಸ್, ಬೊಂಬಾಯಿ, ಮೈಸೂರು ಟೆಕ್ಸ್ಟ್ ಬುಕ್ ಕಮಿಟಿಗಳಿಂದ ಮಂಜೂರಾಗಿದೆ.
ಅಭಿನಯಕ್ಕೆ, ಪಠನಕ್ಕೆ, ಕೋಲಾಟಕ್ಕೆ, ಎಲ್ಲಕ್ಕೂ ಅತ್ಯನುಕೂಲವಾದ,
ಮಕ್ಕಳ ವಯೋಗುಣಕ್ಕನುಗುಣವಾದ ಪದ್ಯಗಳಿಂದೊಡಗೂಡಿದೆ.
ಅಧ್ಯಾಪಕರೆಲ್ಲಾ ಇದನ್ನು ಮಕ್ಕಳ ಕೈಗೆ ಕೊಟ್ಟು, ಉಲಿದಾಡಿಸಿ,
ಹುರಿದುಂಬಿಸಬೇಕಾಗಿ ಪ್ರಾರ್ಥನೆ.

ಎರಡನೆಯ ಆವೃತ್ತಿ] [ಬೆಲೆ: ೦—೨—೬

ಪ್ರತಿಗಳು ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಕೆಳಗಿನವರಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —
ಇದರ ಹರಿಗೆ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ನಾತ್ರು ರಾಜಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಿನಂತೆ ವ್ಯಾಖ್ಯಾಸಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮೂಲಕವಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಸಪ್ತೈದ್ಯಶಾಲಾ ಸಂಜನಗೂಡು ಇವರ

"ಸುಬಲಾ"

ಪಿತ್ತಸಂಕಟ, ವಾತಬದ್ಧತೆ ಇವುಗಳನ್ನು ಹೋಗಲಾಡಿಸಿ, ರಕ್ತ ಶುದ್ಧಿಪಡಿಸಿ, ದೇಹಕ್ಕೆ ಬಲವನ್ನು ಕೊಡುತ್ತದೆ. ಬಹಳ ರುಚಿಯಾಗಿರುತ್ತದೆ.

ಬ್ರಾಂಚ್:—ರಥಬೀದಿ ಮಂಗಳೂರು.

ಉಡುಪಿಗೆ ಬಂದಾಗ



ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ,
ಹಿತ್ತಾಳಿ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

PRINTED BY S. S. KARANTH AT THE THULUNAD PRESS, UDIPI. AND PUBLISHED BY K. H. SHETTY AT "NAVAYUGA OFFICE, UDIPI, S. INDIA.

Registered No M. 3618 6.6.1

ನವಯುಗ

NAVAYUGA

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಛೇರಿ:— ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

ಭದ್ರತೆಯಿಂದಲೂ, ಖಾತ್ರಿಯುಳ್ಳ ನಫೆ ಹಂಚಿಕೆಯಿಂದಲೂ, ಜಾಗ್ರತೆಯಾಗಿ ಹಕ್ಕುಗಳನ್ನು ಕೊಡುವುದರಿಂದಲೂ ಮತ್ತು ಉದಾರವಾದ ಜೀವವಿಮೆಯ ನಿಯಮಗಳಿಂದಲೂ ಈ ಸಂಸ್ಥೆಯು ಪ್ರಖ್ಯಾತಿಪಡೆದಿರುತ್ತದೆ.

ಪ್ರೊಫೆಸರ್ ಕೆ. ಬಿ ಮಾಧವ, ಎಂ ಎ, ಎಫ್ ಆರ್ ಎ ಎಸ್., ಎ ಐ.ಎ. (ಲಂಡನ್) ಪ್ರೊಫೆಸರ್, ಮಹಾರಾಜ ಕಾಲೇಜು, ಮೈಸೂರು ಆಕ್ಚ್ಯುಯರಿಯವರ ಅಭಿಪ್ರಾಯ ಸಾರಾಂಶ.

"ಕಳೆದ ೧೦ ವರ್ಷಗಳಿಂದ ನಿಮ್ಮ ಸಂಘವು ಬಹಳವಾಗಿ ಮುಂದುವರಿಯುತ್ತಿರುವುದಲ್ಲದೆ ಕಳೆದ ಮೂರು ವರ್ಷಗಳಿಂದ ಆದಳಿತದ ವೆಚ್ಚ, ಬಡ್ಡಿಯ ಫಲ, ರದ್ದಾದ ಪಾಲಿಸಿಗಳ ಸಂಖ್ಯೆ ಇವೇ ಮೊದಲಾದ ಜೀವವಿಮೆಯ ನಿಯಮಗಳನ್ನು ಉತ್ತಮಗೊಳಿಸಲು ಸಹಕಾರಿಯಾಗುವ ವಿಷಯಗಳಲ್ಲಿ ತೋಂಪಿರುವ ಅಭಿವೃದ್ಧಿಯು ತೃಪ್ತಿಕರವಾಗಿದೆ... ... ...ಸೌಕರ್ಯ ಸಹಿತವಾದ ಅಭಿವೃದ್ಧಿಗೆ ಉದಾಹರಣೆಯಾಗಿರುವ ಏಷ್ಯಾಟಿಕ್ಕಿನ ಅತ್ಯಾಶ್ಚರ್ಯವಾದ ಕಾರ್ಯಕಲಾಪಗಳಿಗಾಗಿ . . ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸೂಚಿಸಲು ಉಂಟಾಗುವ ಸಂತೋಷವನ್ನು ಕಳೆದುಕೊಳ್ಳಲಾರೆನು"

ಕೊಟ್ಟಿರುವ ವಿಮಾ ಹಕ್ಕಿನ ಹಣಗಳು: ೫,೦೦,೦೦೦—೦—೦.

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

H. Venkataramiah, *Divisional Superintendent* } or { **R. Purniah** *Ag. General Manager*

The Asiatic Govt. Security Life Assu Co. Ltd.,

Asiatic Building, BANGALORE CITY.

ಝಂಡು ಮಲೇರಿಯಾ ಮಿಕ್ಶ್ಚರ್

ಮಲೇರಿಯಾ, ವಿಷಮಜ್ವರಗಳಿಂದುಂಟಾಗುವ ಎಲ್ಲಾ ತರದ ಕಠಿಣ ಜ್ವರಗಳಿಗೆ ಖಾತ್ರಿಯಾದ ಸಿದ್ಧೌಷಧ

ಕ್ರಯ: ಆಣೆ 0—14—0 ಮಾತ್ರ.

ಸ್ಥಳೀಯ ಏಜಂಟರು:— ಪಿ. ಎ. ಪೈ ಬ್ರದರ್ಸ್.

ಕಾರ್ಕಳದ ಏಜಂಟರು:— ವಿ. ವಿ. ಶೆಣೈ, ಕೆಮಿಸ್ಟ್ಸ್.

ಮಂಗಳೂರಿಗೂ ದಕ್ಷಿಣ ಕನ್ನಡ ಜಿಲ್ಲೆಯ ಇತರ ಮುಖ್ಯ ಸ್ಥಳಗಳಿಗೂ ಏಜಂಟರು ಬೇಕಾಗಿದ್ದಾರೆ.

ಶರ್ತಗಳಿಗೂ ಏಜನ್ಸಿಗಳಿಗೂ ಮುಖ್ಯ ಏಜಂಟರಿಗೆ ಬರೆಯಿರಿ:—

ದಾಮೋದರ್ ಎಂಡ್ ಕೊ,

ಮುಖ್ಯ ಏಜಂಟರು,

ZANDU

78 ಚೀನಾ ಬಜಾರ್ ರೋಡ್, ಜಿ. ಟಿ. ಮದರಾಸು

DAMODER & CO.,

78 China Bazaar Road, **G T. MADRAS**

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು. ಮೈಸೂರು ಸೇಂಡಲ್ ಸೋಪು ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

ಮುಚ್ಚಿದರೆ ಮುಗುಳು ! ಬಿಚ್ಚಿದರೆ ಅರಳು !!

ಶ್ರೀ. ಕೆ. ಹೊನ್ನಯ್ಯ ಶೆಟ್ಟಿರಿಂದ ಪೋಣಿಸಲ್ಪಟ್ಟ

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಮಾಲೆಯಿದು

ಮುಗುಳು

ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಅತ್ಯುಪಯುಕ್ತವಾದ ಸಚಿತ್ರ ಪದ್ಯ ಪುಸ್ತಕ.

(ಮದ್ರಾಸ್, ಬೊಂಬಾಯಿ, ಮೈಸೂರು ಟೆಕ್ಸ್ಟ್ ಬುಕ್ ಕಮಿಟಿಗಳಿಂದ ಮಂಜೂರಾಗಿದೆ.

ಅಭಿನಯಕ್ಕೆ, ನರ್ತನಕ್ಕೆ, ಕೋಲಾಟಕ್ಕೆ, ಎಲ್ಲಕ್ಕೂ ಅತ್ಯನುಕೂಲವಾದ, ಮಕ್ಕಳ ವಯೋಗುಣಕ್ಕನುಗುಣವಾದ ಪದ್ಯಗಳಿಂದೊಡಗೂಡಿದೆ.

ಅಧ್ಯಾಪಕರೆಲ್ಲಾ ಇದನ್ನು ಮಕ್ಕಳ ಕೈಗೆ ಕೊಟ್ಟು, ಓಲಿದಾಡಿಸಿ, ಹುರಿದುಂಬಿಸಬೇಕಾಗಿ ಪ್ರಾರ್ಥನೆ.

ಎಂಟನೆಯ ಆವೃತ್ತಿ] [ಬೆಲೆ: ೦—೨—೬

ಮಗ್ಗಿ ಪುಸ್ತಕ

ಸಣ್ಣದು ೦—೦—೬ ದೊಡ್ಡದು ೦—೧—೦

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಕೆಳಗಿನವರಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

THE VIJAYA BANK LTD.,

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ--- ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯಾಪಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಅನಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯಾಪಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಒಮ್ಮೆ ತೊಡಗಿದಿರೆಂದರೆ ಕಡೆತನಕವೂ ಓದದೆ ಬಿಡಲಾಗದ ಪುಸ್ತಕ—

ಪಂಚಾರತಿ

'ಭಾರತೀ ಗ್ರಂಥಮಾಲೆ'ಯವರು ನೂತನವಾಗಿ ಪ್ರಕಟಿಸಿದ ಕರ್ನಾಟಕದ ಪ್ರಸಿದ್ಧ ಬರಹಗಾರರೈವರ ಐದು ಏಕಾಂಕ ನಾಟಕಗಳ ಸಂಗ್ರಹ.

(೧) ಮುಸುಕು (ಶ್ರೀ. ಎಸ್. ಕೆ. ಕುಲಕರ್ಣಿ, ಎಂ. ಎ)
(೨) ಪ್ರಾಯಶ್ಚಿತ್ತ (ಶ್ರೀ ಎಸ್. ವೆಂಕಟರಾಜ)
(೩) ಜ್ವಾಲಾಮುಖಿ (ಶ್ರೀ. ಬಿ. ಅಶ್ವತ್ಥನಾರಾಯಣ ರಾವ್)
(೪) ಭಾಮಿನಿಯ ಭಾಗ್ಯೋದಯ (ಪ್ರೊ. ಆರ್. ಶಿ. ಜಾಗೀರ್‌ದಾರ್ ಎಂ. ಎ. (ಲಂಡನ್)
(೫) ಓಂ ಚೋರಬಸ್ತಿಗೆ ಮೂರು ಸಾವಿರ (ಶ್ರೀ ಕೈರಂಗಲ್ ಶ್ರೀನಿವಾಸ ರಾವ್)

ಮನೋಹರವಾದ ಅಂತರಂಗ! ಚಿತ್ತಾಕರ್ಷಕ ಬಹಿರಂಗ!!

80 ಪುಟಗಳು ಬೆಲೆ 0—4—0

ನವಭಾರತ ಪುಸ್ತಕ ಭಂಡಾರ, ಉಡುಪಿ.

(0—5—0 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು)

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ್ಗೆಂದಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ ಅಮೋಘವಾದ ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ, ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 ಕೊಡಿಯಾಲಬೈಲು, ದ.ಕ.

ಸ್ಥಾಪನೆ. **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೀಲ್ ಜೋಡಣೆ ಮಾಡಿದ ಬೀಜ, ಮೊನೋಗ್ರಾಮ್ ಸೀಲು ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co., 18 Balmat Road, **MANGALORE**

Approved firm by the Govt. of Mysore   Certified by the Agent of the Govt. of India in Ceylon

ನಾಟಕದಲ್ಲಿ ಕಾಲದ ಸ್ಫೂರ್ತಿಯು ಮೂರ್ತಿಮತ್ತಾಗಿ ತೋರಬೇಕು.
ಆ ಸ್ಫೂರ್ತಿಯಿಂದ ವಾಚಕರೂ ಪ್ರೇಕ್ಷಕರೂ ಜಾಗೃತರಾಗಬೇಕು

ಅಂತಹ ನಾಟಕವೇ

ದೇಶಭಕ್ತ

ಕಾಂಗ್ರೆಸ್ ಹೋರಾಟದ ತ್ಯಾಗ ಸಂಕಷ್ಟಗಳನ್ನೂ ಅದನ್ನು ತಡೆಗಟ್ಟಲು ಅಧಿಕಾರಿ ವರ್ಗವು ಹೂಡುವ ಕುತಂತ್ರಗಳನ್ನೂ ಕಣ್ಣ ಮುಂದಿರಿಸಿ ಸಮತಾವಾದವನ್ನು ಪ್ರತಿಪಾದಿಸಿ, ನವಜಾಗೃತಿಯನ್ನು ಮಾಡುವ ನವೀನ ಸಾಮಾಜಿಕ ನಾಟಕ.

ವಿಶೇಷವಾಗಿ ಆಶ್ರಿತ ಸಂಸ್ಥಾನಗಳಲ್ಲಿ ಇಂದು ನಡೆಯುತ್ತಿರುವ ಸ್ವಾತಂತ್ರ್ಯ ಸಂಗ್ರಾಮದ ನೈಜ ಚಿತ್ರ. **ಪ್ರತಿಯೊಬ್ಬರೂ ಓದತಕ್ಕ ನವೀನ ಪುಸ್ತಕ.**

ಲೇಖಕ - ಕೆ. ಕೆ. ಶೆಟ್ಟಿ   ಬೆಲೆ ೦—೧೦—೦

11 ಆಣೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಲಾಗುವುದು.

ನವಯುಗ ಆಫೀಸು, ಉಡುಪಿ.

THE

PANGAL NAYAK BANK LTD.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.)

Season Deposits for a period of 3, 4, 5 or 6 months are accepted at all the offices of the Bank and interest is allowed at 4% per annum till maturity or the 30th June 1940, as the case may be, whichever is earlier.

For further information please communicate with or call at any of our offices.



KOPRAN *Tooth Paste*

ಹಿಂದೂದೇಶದ ಜನಪ್ರಿಯ ದಂತಾಂಜನ

ಜಾಣಿಗಿಡದ ತತ್ವಗಳನ್ನೊಳಗೊಂಡು ತಯಾರಿಸಲ್ಪಟ್ಟಿರುವ ಉತ್ತಮ ದಂತಾಂಜನ, ತೀವ್ರ ಸತ್ವವುಳ್ಳದ್ದು, ವಿಷಹಾರಕವಾದದು,

KOPRAN CHEMICAL CO., BOMBAY

Transport & Car Owners



ARE SPECIALLY INVITED TO VISIT
OUR SHOW ROOM *for economical transport maintenance.*
CANARA AUTOMOBILES - - - - - MANGALORE

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜಾತಿಯವರು ತಯಾರಾಗುವ ಉಗಿನ ಅಧಿಕಾರಿಗೆ ಒಪ್ಪಿನ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ. ಪಿ. ಎ. ಪೈ ಬ್ರದರ್ಸ್, ಅಶ್ವತ್ಥ ಎದುರು, ಉಡುಪಿ.

ESTD. 1921 ಸ್ಥಾಪಿತ

FOUNDER:
SRI. A. B. SHETTY, M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

NAVAYUGA
ನವಯುಗ

ಚಂದಾ ವಿವರ:
1 ವರ್ಷಕ್ಕೆ – ರೂ. 3—4—0
6 ತಿಂಗಳಿಗೆ – ರೂ. 1-12—0
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹ ಸಂಪಾದಕ:
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೩೯

ಉಡುಪಿ, ಗುರುವಾರ, ೬—೬—೧೯೪೦.
UDIPI, THURSDAY, 6-6-1940.

VOL. 19
No. 39

ಹಿಂದೀ ಸೇನೆಯ ಹೆಚ್ಚಳ.

ಮೇ ತಾ. 31ರಲ್ಲಿ ಹಿಂದೀ ಸೇನಾಧ್ಯಕ್ಷರಾದ ಜನರಲ್ ಸರ್ ರೋಬರ್ಟ್ ಕಾಸೆಲ್ಸರು ಆಲ್ ಇಂಡಿಯಾ ರೇಡಿಯೋ ಸ್ಟೇಶನಿನಲ್ಲೊಂದು ಭಾಷಣವಿತ್ತು ಹಿಂದೀ ಸೇನೆಯನ್ನು ಎಷ್ಟರ ಮಟ್ಟಿಗೆ ಹೆಚ್ಚಿಸಲಾಗುವುದೆಂಬುದನ್ನು ನಿರೂಪಿಸಿರುವರು. ಕಳೆದ ೯ ತಿಂಗಳುಗಳಿಂದ ಹಿಂದೀ ಸೇನೆಯನ್ನು ಬಹಳವಾಗಿ ಹೆಚ್ಚಿಸಲಾಗಿದೆ. ತೋಪು, ಮದ್ದು ಗುಂಡು ಮೊದಲಾದುವುಗಳು ಮೊದಲಿಗಿಂತ ಹತ್ತುಹನ್ನೆರಡು ಪಾಲು ಹೆಚ್ಚು ತಯಾರಾಗುತ್ತಿವೆ. ಯುದ್ಧ ಆರಂಭವಾದಂದಿನಿಂದ 53,000 ಜನರು ಹೆಚ್ಚಿಗೆಯಾಗಿ ಸೇನೆಗೆ ಸೇರಿಸಲ್ಪಟ್ಟಿದ್ದಾರೆ. ಇನ್ನು ಯಾಂತ್ರಿಕ ದಳಗಳಿಗಾಗಿ ಹಲವು ಸೈನಿಕರು ಸೇರಿಸಲ್ಪಡಲಿದ್ದಾರೆ. ಹೀಗೆ ಒಟ್ಟು ಒಂದು ಲಕ್ಷ ಸೈನಿಕರನ್ನು ಹೆಚ್ಚಿಗೆ ಸೇರಿಸಿ ತರಬೇತಿ ಮಾಡಲಾಗುವುದು. ಹಿಂದೀ ನೌಕಾಪಡೆಯ ನಾವಿಕರ ಸಂಖ್ಯೆಯನ್ನು ೨½ ಪಾಲನ್ನು ಹೆಚ್ಚಿಸಲಾಗಿದೆ. ಹಿಂದೀ ಬಂದರುಗಳನ್ನು ರಕ್ಷಿಸಲು ಬೇಕಾದ ಯುದ್ಧನಾವೆಗಳು ಹೆಚ್ಚಿಗಾಗಿ ತಯಾರಿಸಲ್ಪಡುತ್ತಿವೆ. ಹಿಂದೀ ವಿಮಾನಪಡೆಯು ನಾಲ್ಕರಷ್ಟು ಹೆಚ್ಚಿಸಲ್ಪಡುವುದೆಂಬುದೇ ಸರ್. ಕಾಸೆಲ್ಸರ ಭಾಷಣದ ಸಾರಾಂಶ.

ಕಾಯಿದೆಭಂಗಕ್ಕಿದು ಸಮಯವಲ್ಲ

ಈಗ ಕಾನೂನುಭಂಗ ಹೂಡಲು ಸುಸಂದರ್ಭವೆಂದು ಸೂಚಿಸಿ ಶ್ರೀ. ರಾಮಮನೋಹರ ಲೋಹಿಯರವರು ಗಾಂಧಿಜಿಯವರಿಗೆ ಬರೆದ ಪತ್ರಕ್ಕವರು ಉತ್ತರವಿತ್ತು ಹರಿಜನದಲ್ಲೊಂದು ಲೇಖನ ಬರೆದಿರುವರು. ಬ್ರಿಟಿಷ್ ಸರಕಾರವು ಹಿಂದುದೇಶಕ್ಕೆ ಸ್ವಾತಂತ್ರ್ಯವಿತ್ತು, ತಮ್ಮ ಸ್ವಾರ್ಥ ಮತ್ತು ರಾಜನೀತಿಯ ಘಟನೆಯನ್ನು ನಿಶ್ಚೈಸುವ ಹಕ್ಕನ್ನು ಹಿಂದೀಯರಿಗೀಯದಿದ್ದರೆ, ಯುರೋಪಿನ ಯುದ್ಧದ ತೀವ್ರತೆಯು ಕಡಿಮೆಯಾಗಿ ಪರಿಸ್ಥಿತಿಯು ಸುಧಾರಿಸುವತನಕ ಹಿಂದೀಯರು ಕಾಯಬೇಕು. ಬ್ರಿಟಿಷರ ವಿನಾಶದ ಸಂದರ್ಭದಲ್ಲಿ ಹಿಂದೀಯರು ಸ್ವಾತಂತ್ರ್ಯ ಸಾಧಿಸಲು ಮುಂದಾಗಬಾರದು. ಅಹಿಂಸಾ ವಿಧಾನವಲ್ಲ. ನಮ್ಮಲ್ಲಿ ನಿಜವಾದ ಶಕ್ತಿಯುದ್ದರೆ ಅದನ್ನು ಪ್ರದರ್ಶಿಸುವ ಸಂದರ್ಭಗಳು ಮುಂದೆ ಬೇಕಷ್ಟು ದೊರೆಯಲಿರುವವು. ಎಂದಾದರೊಂದು ದಿನ ಶಾಂತಿಯಾಗುವಾಗ ನಾವು ನಮ್ಮ ಶಕ್ತಿಯನ್ನು ತೋರಿಸಬಹುದೆಂದೇ ಗಾಂಧಿಯವರ ಅಭಿಮತ.

ಇಟಲಿಯು ಯುದ್ಧಕ್ಕೆ ಸೇರುವುದೇ?

ಇಟಲಿಯನ್ನು ಯುದ್ಧಕ್ಕೆಳೆಯುವಂತೆ

ಸಮಾಚಾರ ಸಂಗ್ರಹ

ಜರ್ಮನಿಯು ಒತ್ತಾಯಪಡಿಸುತ್ತಿರುವುದು. ಇಟಲಿಯ ಸಾಮಾನುಗಳ ಆಮದು ರಫ್ತನ್ನು ಕೆಲವೊಂದು ಶರ್ತಗಳ ಮೇಲೆ ನಿರಾತಂಕವಾಗಿ ನಡೆಯಬಿಡುವ ಕುರಿತು ಅದು ಇಂಗ್ಲೆಂಡಿನೊಡನೆ ಒಡಂಬಡಿಕೆಗೆ ಬರುವುದರಲ್ಲಿರುವಾಗ ಅದನ್ನೀಗ ಇಟಲಿಯು ಥಕ್ಕನೆ ಕಡಿದುಹಾಕಿದೆ. ಇದರಿಂದ ಇಂಗ್ಲೆಂಡು ಆಶ್ಚರ್ಯಗೊಂಡಿದೆ. ಇದರ ಕಾರಣವೇನೆಂದು ಈ ವರೆಗೆ ತಿಳಿದಿಲ್ಲ. ಹಿಟ್ಲರರು ಇಟಲಿಯಾನ ರಾಯಭಾರಿಯನ್ನು ಕಂಡು ಮಾತಾಡಿರುವರು. ಇಟಲಿಯಲ್ಲೆಲ್ಲಾ ಇಂಗ್ಲೆಂಡಿನ ಕುರಿತು ವಿರೋಧಭಾವವು ಬೆಳೆಯುತ್ತಿರುವುದು. ಫ್ಲೆಂಡರ್ಸಿನ ಯುದ್ಧವು ಮುಗಿಯಿತು. ಪೆರಿಸ್ ಮತ್ತು ಲಂಡನುಗಳ ಮೇಲಿನ್ನು ಜರ್ಮನರು ಧಾಳಿ ಇಡಲು ಬಹಳ ಅನುಕೂಲವಾಯಿತು. ಈ ಗಂಡಾಂತರದ ಸಮಯದಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡುಗಳು ತಮ್ಮ ಸೇನೆಗಳನ್ನು ಬೇರೆ ಬೇರೆ ಭಾಗಗಳಲ್ಲಿಟ್ಟುಕೊಂಡಿವೆಯೆಂದು ಇಟಲಿಯ ಪತ್ರಿಕೆಗಳು ಟೀಕಿಸುತ್ತಿವೆ. ತಾನು ಜರ್ಮನಿಗೆ ಕೊಟ್ಟ ವಾಗ್ದಾನದ ಮೇರೆಗೆ ನಡೆದು ಸಹಾಯಮಾಡುವೆನೆಂದು ಮುಸಲೋನಿಯವರು ಪ್ರೆಸಿಡೆಂಟ್ ರೂಸ್‌ವೆಲ್ಟರಿಗೆ ತಿಳಿಸಿರುವರೆಂದು ಸುದ್ದಿಯುಂಟಾಗಿದೆ.

ಜರ್ಮನಿಯಲ್ಲಿ ಮೃತ್ಯುದಳ ಸಂಗ್ರಹ

ಮರಣವನ್ನು ಧಿಕ್ಕರಿಸಿ ಫ್ರಾನ್ಸಿನ ಮೆಗಿನೋ ಕೋಟೆಗಳನ್ನು ಭೇದಿಸುವ ಸಾಹಸಮಾಡುವ ಮೃತ್ಯುದಳವೆಂಬ ಸೈನಿಕ ದಳವು ಜರ್ಮನಿಯಲ್ಲೀಗ ಒಟ್ಟುಗೂಡಿಸಲ್ಪಡುತ್ತಿದೆಯೆಂದು ತಿಳಿದುಬರುತ್ತದೆ. ಈ ದಳಕ್ಕೆ ಸೇರಿಸಲ್ಪಡುವವರು ಎಳೆಪ್ರಾಯದವರು ಮತ್ತು ಉತ್ಕೃಷ್ಟ ಹಾಗೂ ದೃಢಕಾಯರು. ಮೃತ್ಯುವಿನ ಬಾಯಿಗೆನೇ ಹಾರಲು ಇವರು ಸಿದ್ಧರಿರಬೇಕು. ಅಂತಹ ಪ್ರತಿಜ್ಞೆಯನ್ನೇ ಅವರು ತೆಗೆದುಕೊಳ್ಳಬೇಕು. ಈ ದಳದವರು ಮೆಗಿನೋ ಕೋಟೆಗಳು ಭೇದಿಸಲ್ಪಡುವ ತನಕ ಅಥವಾ ಅವರು ಸಂಪೂರ್ಣವಾಗಿ ನಾಶವಾಗುವತನಕ ಧಾಳಿ ನಡಿಸುತ್ತಾ ಹೋಗುವರು. ಇಂತಹ ಸೇನೆಯೊಂದು ಕೆಲಕಾಲದಿಂದೀಗ ಗುಪ್ತವಾಗಿ ಸೇರಿಸಲ್ಪಡುತ್ತಿದೆ. ಈ ದಳಕ್ಕೆ ಸೇರಿಸಲ್ಪಡುವವರು ಸೇನೆಗೆ ಸೇರದವರಿದ್ದು ಒಪ್ಪೀ ತರಬೇಕಾದವರಿರುವರು. ಹಿಟ್ಲರರು ತನ್ನ ಸರ್ವಸ್ವವನ್ನೂ ಬಲಿಯಿತ್ತು ಹೋರಾಡಿ ಬರುವ ಜುಲೈ ತಿಂಗಳೊಳಗೆ ಶಾಂತಿಸ್ಥಾಪಿಸುವ ನಿರ್ಧಾರವುಳ್ಳವರಿರುವರೆಂದು ನಂಬಲಾಗಿದೆ.

ಕೊನೆಯತನಕವೂ ಹೋರಾಡಿಯೇ ಸಿದ್ಧ!

ತಾನು ಕೈಸರರ ಹಾಗೆ ಯುದ್ಧದಲ್ಲಿ ಸರ್ವಸ್ವವನ್ನೂ ಉಪಯೋಗಿಸುವ ಕುರಿತು ಶಂಕೆಪಡದೆ ಕೊನೆಯತನಕವೂ ಹೋರಾಟ ನಡಿಸುವೆನು. ಒಂದಿಷ್ಟು ಕರುಣೆಯಿಲ್ಲದೆ ಎಲ್ಲಾ ತರದ ಉಪಕರಣಗಳನ್ನೂ ಒಂದೇ ಸವನೆ ಉಪಯೋಗಿಸುವೆನು. ಇಟಲಿ ಮತ್ತು ಜಾಪಾನುಗಳು ತನ್ನೊಂದಿಗೆ ಸೇರುವುದು ನಿಶ್ಚಯ. ಇಂದಿನ ಹೋರಾಟದಲ್ಲಿ ಪ್ರಾಮುಖ್ಯವಾದುದೆಂದರೆ ವಿಮಾನಪಡೆ. ಇಂಗ್ಲೆಂಡಿನಲ್ಲಿ 136,000 ಮಂದಿ ವೈಮಾನಿಕರಿದ್ದಾರೆ. ಫ್ರಾನ್ಸಿನಲ್ಲಿ 75,000 ಮಂದಿ ಮಾತ್ರ. ಆದರೆ ಜರ್ಮನಿಯಲ್ಲಿ ಶಾಂತಿಯ ಕಾಲದಲ್ಲೇ 6 ಲಕ್ಷ ವೈಮಾನಿಕರಿರುತ್ತಾರೆ. ಯುದ್ಧದ ಸಂದರ್ಭದಲ್ಲಿ 1,000,000 ಮಂದಿ ತಯಾರಿರುತ್ತಾರೆ. ಜರ್ಮನಿಯ ವಿಮಾನಧಾಳಿ ನಿರೋಧಕ ಸಾಧನವು ಇಡೀ ಲೋಕದಲ್ಲೇ ಶ್ರೇಷ್ಠವಾದುದೆಂದು ಹರ್ ಹಿಟ್ಲರರೇ ಯುದ್ಧವಾರಂಭವಾಗುವ ಮೊದಲು ಡಾನ್ಸಿಗಿನ ಲೀಗ್ ಕಮಿಶನರಾದ ಪ್ರೊಫೆಸರ್ ಬುರ್ಕಾರ್ಟರೊಡನೆ ಹೇಳಿರುವರೆಂದು ಪ್ರಕಟವಾಗಿದೆ.

ವಿವಾಹವಿಲ್ಲದೆ ಮಕ್ಕಳು

ಆದೊಂದು ನಿಶ್ಚಿತಪ್ರಾಯದ ಮೇಲಿನ ಪ್ರತಿಯೊಬ್ಬ ಜರ್ಮನ್ ಸ್ತ್ರೀಗೆ ಮದುವೆಯಾಗದೇನೇ ಮಕ್ಕಳು ಪಡೆಯುವ ಹಕ್ಕಿರಬೇಕು. ಅಂತಹ ಸ್ತ್ರೀಯರ ಹೆರಿಗೆಗಾಗಿ ಸರಕಾರವು ಹಣ ಸಹಾಯಮಾಡಬೇಕು. ಇಂತಹ ಮಾತೆಯರನ್ನು ನಿಂದಿಸುವವರು ಶಿಕ್ಷೆಗೊಳಗಾಗಬೇಕೆಂದು ಜರ್ಮನಿಯಲ್ಲಿ ಸ್ತ್ರೀಯರೇ ಚಳವಳಿಸುತ್ತಿದ್ದಾರೆ. ಪ್ರತಿಯೊಬ್ಬ ಸೈನಿಕನೂ ರಣರಂಗದಲ್ಲಿ ಪ್ರಾಣವನ್ನರ್ಪಿಸುವ ಮೊದಲು ಯಾವಾದರೊಬ್ಬ ಸ್ತ್ರೀಗೆ ಗರ್ಭದಾನಮಾಡಿ ತನ್ನ ಸಂತತಿಯನ್ನುಳಿಸಬೇಕೆಂಬ ಅಭಿಪ್ರಾಯವು ಬಲಗೊಳ್ಳುತ್ತಿದೆ.

ಬ್ರಿಟಿಷ್ ಮತ್ತು ಫ್ರೆಂಚ್ ಸೇನೆ ತಪ್ಪಿಸಿಕೊಂಡಿತು

ಬೆಲ್‌ಜಿಯಮಿನಲ್ಲಿ ಸುಮಾರು ಒಂದು ಮಿಲ್ಯದಷ್ಟು ಮಿತ್ರ ರಾಷ್ಟ್ರಗಳ ಸೇನೆಯು ಜರ್ಮನರೊಡನೆಯುದ್ಧಮಾಡುತ್ತಿದ್ದಿತು. ಆದರೆ ಜರ್ಮನರು ಅಬೆವಿಲ್ಲೆ ಮತ್ತು ಬೊಲೋನುಗಳನ್ನು ವಶಪಡಿಸಿಕೊಂಡು ಕೆಳಬದಿಯಿಂದ ಅವರನ್ನು ಆವರಿಸಿದರು. ಬೆಲ್‌ಜಿಯಮಿನ ಅರಸ ಲಿಯೋಪೋಲ್ಡರು ಸುಮಾರು ಅರ್ಧಮಿಲ್ಯ ಸೇನೆಯೊಂದಿಗೆ ಜರ್ಮನರಿಗೆ ಶರಣಾಗತರಾದುದರಿಂದ ಉತ್ತರದಿಂದಲೂ ಮಿತ್ರ ರಾಷ್ಟ್ರಗಳ ಸೇನೆಯು ಆವರಿಸಲ್ಪಡುವಂತಾಯಿತು. ಹೀಗೆ ಮೂರು ಕಡೆಗಳಿಂದ ಆವರಿಸಲ್ಪಟ್ಟ ಸೇನೆಯು ಗೂಡೊಳಗೆ ಸಿಕ್ಕಿಬಿದ್ದಂತೆ ತಮ್ಮ ಕೈಗೆ ಸಿಕ್ಕಿ ನಾಶವಾಗುವುದೆಂದು ಜರ್ಮನರು ಜಂಭಹೊಡೆಯುತ್ತಿದ್ದರು. ತಮ್ಮ ವಿಮಾನಗಳು ಬಹಳ ಕೆಳಗಿಳಿದು ಹೋಗಿ ಬೊಂಬೆಸೆಯುವ ನಿಮಿತ್ತ ಸಮುದ್ರಮಾರ್ಗವಾಗಿ ತಪ್ಪಿಸಿಕೊಂಡುಹೋಗಲು ಸಾಧ್ಯವೇ ಇಲ್ಲೆಂದು ಜರ್ಮನರು ನೆನಸಿದ್ದರು. ಮತ್ತು ಸಮುದ್ರ ಕಂದಾಪಳಿಯಿಂದಲೂ ಈ ಸೇನೆಯನ್ನು ಆವರಿಸಲು ಪ್ರಯತ್ನಿಸುತ್ತಿದ್ದರು. ಆದರೆ ಬ್ರಿಟಿಷ್ ಮತ್ತು

THULUNAD BANK
OF SUPPLY AGENCY LIMITED.

Authorised & Issued Capital	...	Rs 1,00,000
Subscribed & Paid up Capital	....	Rs. 31,340
Reserves & other Funds	...	Rs. 22,052

ವಿಶೇಷ ರಿಯಾಯಿತಿ

Rs. 1000

ತಾ. 30-6-1940ರ ಒಳಗೆ ರೂ. 1000 ಯಾ ಅದಕ್ಕಿಂತ ಮೇಲ್ಪಟ್ಟು ನಿರಖು ಠೇವಣಾತಿಗಳನ್ನು ಇಡುವವರಿಗೆ ಕೆಲವು ವಿಶೇಷ ರಿಯಾಯತಿಗಳು ಕೊಡಲ್ಪಡುವವು.

ಹೆಚ್ಚಿನ ಮಾಹಿತಿಗೆ ಬರೆಯಿರಿ:–
ಮೆನೇಜಿಂಗ್ ಡೈರೆಕ್ಟರ್
ತುಳುನಾಡ್ ಬೇಂಕ್
ಆಫ್ ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ.

ಫ್ರೆಂಚ್ ಸೇನೆಯು ಡಂಕರ್ಕ್ ಎಂಬ ಪ್ರಾಮುಖ್ಯ ಸಮುದ್ರ ರೇವನ್ನು ರಕ್ಷಿಸಿಕೊಂಡು ಅಲ್ಲೀಗ ಭೀಷಣ ಕದನ ನಡೆಯುತ್ತಿರುವುದು. ಈ ಸಂದರ್ಭದಲ್ಲಿ ಬ್ರಿಟಿಷ್ ಮತ್ತು ಫ್ರೆಂಚ್ ಯುದ್ಧ ವಿಮಾನಗಳು ಜರ್ಮನ್ ವಿಮಾನಗಳೊಡನೆ ಜಯಶೀಲವಾಗಿ ಹೋರಾಡಿ ತಡೆಗಟ್ಟಿ, ಬೆಲ್ಜಿಯಮಿನಲ್ಲಿನ ಸಹಸ್ರಗಟ್ಲೆ ಬ್ರಿಟಿಷ ಮತ್ತು ಫ್ರೆಂಚ್ ಸೈನಿಕರು ಹಡಗಗಳ ಮೂಲಕ ಇಂಗ್ಲೆಂಡಿಗೆ ಹೋಗಿರುವರು. ಕೆಲವು ವೇಳೆ ಜರ್ಮನರು ಈ ಹಡಗಗಳ ಮೇಲೆ ಬೋಂಬು ಮತ್ತು ಗುಂಡುಗಳ ಸುರಿಮಳೆಗರೆದು ಕೆಲವನ್ನು ಮುಳುಗಿಸಿರುವರು. ಆದರೂ ಹೆಚ್ಚಿನ ಸೈನಿಕರು ಸುರಕ್ಷಿತವಾಗಿ ಇಂಗ್ಲೆಂಡಿಗೆ ಮುಟ್ಟಿರುವರು. ಅವರ ಮುಖ್ಯ ನಾಯಕರಾದ ಲೋರ್ಡ್ ಗೋರ್ಟರೂ ಲಂಡನಿಗೆ ಹೋಗಿ ಚಕ್ರವರ್ತಿಗಳಿಂದ ಸನ್ಮಾನಿಸಲ್ಪಟ್ಟಿರುವರು.

ನಾರ್ವಿಕಿನಲ್ಲಿ ಜರ್ಮನರ ಅಪಜಯ

ನೋರ್ವೆಯ ಪ್ರಾಮುಖ್ಯ ಬಂದರುಗಳಲ್ಲೊಂದಾದ ನಾರ್ವಿಕನ್ನು ಬ್ರಿಟಿಷ್ ಮತ್ತು ಫ್ರೆಂಚ್ ಸೈನಿಕರು ಮೇ ತಾ. ೨೯ರಲ್ಲು ಜರ್ಮನರಿಂದ ಗೆದ್ದಿರುವರು. ಬ್ರಿಟಿಷ್ ಯುದ್ಧ ಹಡಗಗಳು ಈ ಯುದ್ಧದಲ್ಲಿ ಪ್ರಾಮುಖ್ಯ ಭಾಗ ವಹಿಸಿರುವವು. ಬ್ರಿಟಿಷ್ ಯುದ್ಧ ಹಡಗಗಳು ಜರ್ಮನ್ ಸೇನೆಯ ಮೇಲೆ ಫಿರಂಗಿಗಳ ಮೂಲಕ ಗುಂಡು ಹಾರಿಸಿದಾಗ ಫ್ರೆಂಚ್ ಪೋಲಿಶ್ ಮತ್ತು ನೋರ್ವೀಜಿಯನ್ ಸೈನಿಕರು ಮೂರು ಕಡೆಗಳಿಂದಲೂ ಅದನ್ನು ಆವರಿಸಿ ಮುಂದೊತ್ತಿ ಜರ್ಮನರನ್ನು ಸೋಲಿಸಿ ನೂರಾರು ಮಂದಿಯನ್ನು ಸೆರೆಹಿಡಿದಿರುವರು. ನಾರ್ವಿಕನ್ನು ಬಿಟ್ಟು ಹೋಗುವ ಮೊದಲು ಜರ್ಮನರು ರೈಲ್ವೇ ಸ್ಟೇಶನು ಮೊದಲಾದುವುಗಳನ್ನು ನಾಶ ಮಾಡಿದ್ದರು.

ರೂಸವೆಲ್ಟರಿಗೆ ಮೂರನೆ ಸಲ ಪ್ರೆಸಿಡೆಂಟಿಕನ

ಅಮೆರಿಕದಲ್ಲಿ ಮೂರನೇ ಸಲ ಯಾರಾದರೂ ಪ್ರೆಸಿಡೆಂಟರಾಗಿ ಆರಿಸಲ್ಪಡುವುದೇ ಅಪರೂಪ. ಆದರೆ ಪ್ರೆಸಿಡೆಂಟ್ ರೂಸವೆಲ್ಟರು ಮೂರನೇ ಸಲವೂ ಪ್ರೆಸಿಡೆಂಟರಾಗಿ ಆರಿಸಲ್ಪಡುವ ಸಂಭವ ತೋರುತ್ತದೆ. ಪ್ರೆಸಿಡೆಂಟತನಕ್ಕೆ ಉಮೇದ್ವಾರರೆಂದು ಪರಿಗಣಿಸಲ್ಪಟ್ಟಿದ್ದ ಮಿ. ಪೌಲ್ ಮೆಕ್ನಟರೆಂಬವರೇ, ಈ ಗಂಡಾಂತರದ ಪರಿಸ್ಥಿತಿಯಲ್ಲಿ ಮಿ. ರೂಸವೆಲ್ಟರೇ ಪುನಃ ಪ್ರೆಸಿಡೆಂಟರಾಗಿ ಆರಿಸಲ್ಪಡಬೇಕೆಂದು ಸೂಚಿಸಿರುವರು.

ಅಮೇರಿಕದ ರಕ್ಷಣಾ ಸಿದ್ಧತೆ

ಯುರೋಪಿನ ಪರಿಸ್ಥಿತಿಯಿಂದ ಅಮೇರಿಕವು ಚಕಿತವಾಗಿದೆ. ಯುದ್ಧವು ಎಲಾ ಭೂಖಂಡಗಳಿಗೂ ಹಬ್ಬಬಹುದೆಂಬ ಭೀತಿಯಿಂದ ಅಮೇರಿಕವು ಭರದಿಂದ ರಕ್ಷಣಾ ಸಿದ್ಧತೆ ಮಾಡುತ್ತಿದೆ. ಅತಿ ದೊಡ್ಡದಾದ ಹೊಸ ಯುದ್ಧ ಹಡಗಗಳನ್ನು ಕಟ್ಟುತ್ತಿದೆ. ೧೯೪೧ನೇ ಜುಲೈ ತಿಂಗಳೊಳಗೆ 10,000 ಹೊಸ ಯುದ್ಧ ವಿಮಾನಗಳನ್ನು ಅಮೇರಿಕವು ತಯಾರಿಸಲಿದೆ. ಇದಕ್ಕಾಗಿ ಪುನಃ 1000 ಮಿಲ್ಯ ಡೋಲರುಗಳನ್ನು ಪ್ರಜಾಪ್ರತಿನಿಧಿ ಸಭೆಯು ಪ್ರೆಸಿಡೆಂಟರ ಸೂಚನೆ ಮೇರೆಗೆ ಮಂಜೂರು ಮಾಡಿದೆ. ಅಮೇರಿಕದ ರಕ್ಷಣಾಸಿದ್ಧತೆಗಾಗಿ ಕೂಡಲೆ ಒಟ್ಟು 1300 ಮಿಲ್ಯ ಡೋಲರು ವ್ಯಯಿಸಲ್ಪಡುವುದು. ಅಮೇರಿಕಾದ ಕಂಪೆನಿಗಳು ಮಿತ್ರರಾಷ್ಟ್ರಗಳಿಗೆ ಯುದ್ಧ ವಿಮಾನಗಳನ್ನು ಭರದಿಂದ ತಯಾರಿಸಿ ಕಳುಹಿಸಹತ್ತಿವೆ. ಅಮೇರಿಕವು ಮಿತ್ರರಾಷ್ಟ್ರಗಳ ಸಹಾಯಕ್ಕೆ ಹೋಗಬೇಕೆಂಬ ಅಭಿಪ್ರಾಯವು ಬಲಗೊಳ್ಳುತ್ತಿದೆ. ಇಟೆಲಿಯು ಯುದ್ಧಕ್ಕೆ ಸೇರಿದರೆ ಅಮೇರಿಕವು ಮಿತ್ರರಾಷ್ಟ್ರಗಳ ಸಹಾಯಕ್ಕೆ ಹೋಗುವ ಸಂಭವ ಮತ್ತೂ ಹೆಚ್ಚು. ಜರ್ಮನಿಯ ವಿಜಯದಿಂದ ಹೆಚ್ಚಿನ ಅಮೇರಿಕಾನರು ವಿಸ್ಮಯಗೊಂಡಿರುತ್ತಾರೆ. ಪ್ರೆಸಿಡೆಂಟ್ ರೂಸ್‌ವೆಲ್ಟರು ಕೂಡಾ ಕಳವಳಗೊಂಡಿರುತ್ತಾರೆ.

ಸರ್ ಸ್ಟ್ಯಾಫೋರ್ಡರ ರಶ್ಯಾಕ್ಕೆ

ಬ್ರಿಟಿಷ್ ರಾಜಕೀಯ ನೀತಿಜ್ಞರಲ್ಲಿ ರಶ್ಯದ ಕುರಿತು ತುಂಬಾ ಸಹಾನುಭೂತಿಯುಳ್ಳವರು ಕೆಲವೇ ಮಂದಿ. ಅವರಲ್ಲೊಬ್ಬರು ಸರ್. ಸ್ಟ್ಯಾಫೋರ್ಡ್ ಕ್ರಿಪ್ಸರು. ಫಿನ್ಲೆಂಡಿನ ಮೇಲೆ ರಶ್ಯವು ನಡೆಸಿದ ಧಾಳಿಯನ್ನು ಪ್ರತಿಪಾದಿಸಿದವರಿವರು. ಇವರು ಸರಕಾರದ ವಕ್ರ ದೃಷ್ಟಿಗೆ ಪಾತ್ರರಾಗಿದ್ದರು. ಬ್ರಿಟಿಷ್ ರಾಜಕೀಯ ಪಕ್ಷಗಳು ಇವರನ್ನು ತಿರಸ್ಕಾರ ದೃಷ್ಟಿಯಿಂದ ನೋಡುತ್ತಿದ್ದರು. ಅಂಥವರೇ ಈಗ ರಶ್ಯವನ್ನು ಒಲಿಸಿಕೊಳ್ಳಲು ಬ್ರಿಟಿಷ್ ಸರಕಾರದ ಪ್ರತಿನಿಧಿಯಾಗಿ ಮೋಸ್ಕೋ ಪಟ್ಟಣಕ್ಕೆ ಕಳುಹಿಸಲ್ಪಟ್ಟಿದ್ದಾರೆ. ಇವರನ್ನು ರಶ್ಯವು ಯಾವ ರೀತಿಯಲ್ಲಿ ನೋಡುವುದೆಂದು ಹೇಳಬರುವುದಿಲ್ಲ.

೬ ಲಕ್ಷ ಸೈನಿಕರು ಕರೆಯಲ್ಪಟ್ಟಿರು

ಬ್ರಿಟಿಷ್ ಸರಕಾರವು ರಿಜರ್ವಾಗಿದ್ದ 6ಲಕ್ಷ ಸೇನೆಯನ್ನು ಯುದ್ಧಕ್ಕಾಗಿ ಕರೆದಿರುವದು. ಇಂಗ್ಲೆಂಡಿನಲ್ಲಿದ್ದ ಫೆಸಿಸ್ಟರೆಲ್ಲಾ ಕೈದುಮಾಡಲ್ಪಡುತ್ತಿದ್ದಾರೆ. ಪತ್ರಿಕೆಗಳ ಮೇಲೆ ಕೂಡಾ ನಿರ್ಬಂಧ ಹಾಕಲಾಗಿದೆ. ಸರಕಾರವು 1600 ಆಹಾರ ಡಿಪೋಗಳನ್ನು ತೆರೆದಿರುತ್ತದೆ.

ಎಸೆಂಬ್ಲಿ ಮೆಂಬರರ ಸಂಬಳ ನಿಲ್ಲಿಸಲ್ಪಟ್ಟಿತು

ಗವರ್ನರರ ವಿಶೇಷಾಧಿಕಾರವೇ ಇನ್ನೂ ಒಂದು ವರ್ಷ ಮುಂದುವರಿಸಲ್ಪಟ್ಟು ಬೇಗನೆ ಎಸೆಂಬ್ಲಿಯು ಪುನರುಜ್ಜೀವಿತವಾಗುವ ಸಂಭವ ತೋರಿಬಾರದುದರಿಂದ ಎಸೆಂಬ್ಲಿ ಮೆಂಬರರಿಗೆ ಸಂಬಳಕೊಡುವ ಅವಶ್ಯವಿಲ್ಲೆಂದು ಬೊಂಬಾಯಿ, ಬಿಹಾರ್, ಮಧ್ಯಪ್ರಾಂತ, ಮದ್ರಾಸ್, ವಾಯುವ್ಯ ಗಡಿನಾಡು ಮೊದಲಾದ ಪ್ರಾಂತಗಳ ಗವರ್ನರರು ಎಸೆಂಬ್ಲಿ ಮೆಂಬರರು ಮತ್ತು ಇತರ ಎಸೆಂಬ್ಲಿ ಅಧಿಕಾರಿಗಳಿಗೆ ಸಂಬಳ ಕೊಡುವುದನ್ನು ನಿಲ್ಲಿಸಿರುವರು. ಇದು ಅನ್ಯಾಯ ಮತ್ತು ಅಕ್ರಮವೆಂದು ಶ್ರೀ ಸತ್ಯಮೂರ್ತಿಗಳೇ ಮೊದಲಾದ ಕಾಂಗ್ರೆಸ್ ಮುಖಂಡರು ಟೀಕಿಸಿರುವರು.

ರೈಲ್ವೇ ಅಪಘಾತ

ಮೇ ತಾ. 28ನೇ ಅಪರಾಹ್ನ ಮದ್ರಾಸಿನಿಂದ ಧನುಷ್ಕೋಟಿಗೆ ಹೋಗುತ್ತಿದ್ದ ಪ್ರಯಾಣಿಕರ ಟ್ರೈನು ಟಿಂಡಿವನಮ್ ಮತ್ತು ಪಂಚಲಮ್ ರೈಲ್ವೇ ಸ್ಟೇಶನುಗಳ ನಡುವೆ ಕೆಂಬತಪ್ಪಿ ಬಿದ್ದು 5ಮಂದಿ ಕೊಲ್ಲಲ್ಪಟ್ಟು 61 ಮಂದಿ ಗಾಯಗೊಂಡಿರುವರು. ಮಳೆ ಮತ್ತು ಬಿರುಗಾಳಿಯು ಬಲವಾಗಿ ಬೀಸಿ ಟ್ರೈನಿನ 6ಗಾಡಿಗಳೂ ಮಗುಚಿಬೀಳಲು ಕಾರಣವಾಯಿತೆಂದು ತಿಳಿದುಬರುತ್ತದೆ.

ಇಂಗ್ಲೆಂಡಿನ ಮೇಲೆ ಧಾಳಿಯ ಭೀತಿ

ಬೆಲ್ಜಿಯಮ್ ಮತ್ತು ಬ್ರಿಟಿಷ್ ಜಲಸಂಧಿನ ಬಳಿಯ ಬಂದರುಗಳೀಗ ಜರ್ಮನರ ವಶವಾಗಿರುವುದರಿಂದ ಇಂಗ್ಲೆಂಡಿನ ಮೇಲೆ ಜರ್ಮನರ ಧಾಳಿಯ ಭೀತಿಯು ಜನತೆಯಲ್ಲಿ ಪ್ರಬಲವಾಗಿ ಹಬ್ಬಿದೆ. ಸರಕಾರವು ರಕ್ಷಣೆಯ ಏರ್ಪಾಡುಗಳನ್ನೆಲ್ಲಾ ಭರದಿಂದ ನಡೆಸುತ್ತಿದೆ. ಚಿಕ್ಕ ದೋಣಿಗಳ ಮೂಲಕ ಜರ್ಮನ್ ಸೈನಿಕರು ಬ್ರಿಟಿಷ್ ಜಲಸಂಧಿಯನ್ನು ದಾಟಿ ಇಂಗ್ಲೆಂಡಿನ ಮೇಲೇರಿ ಹೋಗುವರೆಂದು ನಂಬಲಾಗಿದೆ. ಆದರೆ ಬ್ರಿಟಿಷ ನೌಕಾಪಡೆಯು ಎಂದಿಗಿಂತಲೂ ಹೆಚ್ಚು ಪ್ರಬಲವಾಗಿದ್ದು ಇಂಗ್ಲೆಂಡನ್ನು ರಕ್ಷಿಸುತ್ತಿದೆ. ಲಂಡನಿನ ಸುತ್ತಲೂ ವಾಯುಬುಟ್ಟಿಯ ಕೋಟೆಯಿದೆ. ಹಿಟ್ಲರರು ಬ್ರಿಟಿಷ್ ಬಂದರುಗಳ ಮೇಲೆ ಪ್ರಚಂಡ ವಿಮಾನಧಾಳಿ ನ

(೭ನೇ ಪುಟಕ್ಕೆ ಮುಂದರಿಯುವುದು)

"ನಾಮರ್ದಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ನಸೋನಿಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ.

"ಸನಿಮಾ ಟೊನಿಕ್ ಪಿಲ್ಸ್"

ಇದರ ಸೇವನೆಯಿಂದ ನವಜೀವನ ವುಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ.

ಕಿಮ್ಮತು ರೂ. 3-0-0 ಡಬ್ಬಿ 0-8-0

ಸೊರತ್ ಫಾರ್ಮೆಸಿ,
ನಲ್ ಬಜಾರ್, ಡಂಕನ್ ರೋಡ್,
ಮುಂಬಾಯಿ ೪

Sorath Pharmacy,
Null Bazar, Duncan Road,
BOMBAY 4.

THE
BOMBAY LIFE ASSURANCE Company Limited.
[ESTD. 1908]

COMPARE
Your Life Assurance with any other property you possess what is its guaranteed value

If you live–today–a few years more–when you are old?
If you die–to your family and dependants?

REMEMBER THAT If you live, Life Insurance takes the place of your professional income during your old age.
If you die, it provides your family with enough income for their maintenance and the education of your children.

"BOMBAY LIFE" offers all that is best in Life Assurance.

1938 Record.

Completed Business	... ...	Rs. 1,44,91,000
Life Assurance Fund	... ...	Rs. 1,17,69,748
Total Assets	... ...	Rs. 1,31,28,998

To Insure or to represent it pays you to consult
KOCHIKAR ROTHERS LTD.,
MADRAS BRANCH SECRETARIES,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI.

Post Box No. 317, Mount Road, MADRAS	Visweswarapuram Circle BANGALORE CITY.	Charni Road, Girgaum, BOMBAY No. 4.
Car Street, MANGALORE.	Puthiyara, CALICUT.	Central Station Road, TRIVANDRUM.

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಈ ಕಾಯಿದೆಗಳ ಬಗ್ಗೆ ಸಲಹೆ ... [illegible]. ಅದರಿಂದ ತಯಾರಿಸಿದ ಸಾರಾಂಶದ ನಕಲು ... ಮೇ ನಿಯಮಗಳಲ್ಲಿ ತನ್ನಯ ಅಫೀಸರರಿಗೆ ಒಪ್ಪಿಗೆಯಾಗಬೇಕು. ಅಂಥಾ ಭೇಟಿಗಳ ಸಮಯದಲ್ಲಿಯೂ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ... ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗುವುದು. ಸಂದರ್ಭಾನುಸಾರ ಟೇಕ್ಸು ಕೊಡಬೇಕಾಗಿಲ್ಲದೆಯೂ ಇರಬಹುದು. "ರಿಟರ್ನ್" ಕೊಡದೆಯಾಗಿ ಹೋಗಿದ್ದರೂ ... [illegible] 15 ದಿವಸಗಳ ಮುಂಚೆಯಾದರೂ ಕೆಳಗೆ ಕಾಣಿಸಿದವರೊಡನೆ ಪತ್ರವ್ಯವಹಾರ ಮಾಡಿರಿ.

ಎಸ್. ಎಸ್. ಪುರಾಣಿಕ್,
ಇನ್ಕಮ್ ಟೇಕ್ಸ್ ಪ್ರಾಕ್ಟೀಶನರ್,
ಕೃಷ್ಣಾ ರೆಸ್ಟೋರೆಂಟ್ ಬಿಲ್ಡಿಂಗ್,
ಹಂಪನಕಟ್ಟೆ, ಮಂಗಳೂರು.

ಹಿಂದೂದೇಶದ ಮೇಲೆ ಧಾಳಿಯ ದಿಗಿಲು

ಜರ್ಮನಿ, ಇಟಲಿ, ರಷ್ಯ ಮತ್ತು ಜಪಾನುಗಳು ಹಿಂದೂದೇಶದ ಮೇಲೆ ಧಾಳಿ ನಡೆಸುವ ಸಂಭವವಿದೆಯೇ? ಅಂತಃಕಲಹದ ಹೊರತು ಪರರಾಷ್ಟ್ರಗಳ ಧಾಳಿಯು ಗಂಡಾಂತರವೇ ಹಿಂದೂದೇಶಕ್ಕಿರುವಂತಿಲ್ಲ.

ಹಿಂದೀಯರು ಒಕ್ಕಟ್ಟು ಮತ್ತು ಆತ್ಮವಿಶ್ವಾಸವುಳ್ಳವರಾಗಿ ಒಂದುಗೂಡಿ ಪ್ರಯತ್ನಿಸಿದರೆ ಶೀಘ್ರವಾಗಿ ಸ್ವತಂತ್ರರಾಗಬಹುದು. ಯಥಾಪ್ರಕಾರ ಪರಸ್ಪರ ಕಚ್ಚಾಡಿಕೊಂಡರೆ ಬಂಧವಿಮೋಚನೆಯ ಸುವರ್ಣ ಸಂದರ್ಭವನ್ನು ಕಳಕೊಳ್ಳಬೇಕಾಗುವುದು.

ಹಿಂದೂದೇಶಕ್ಕೆ ಪರರಾಷ್ಟ್ರಗಳ, ವಿಶೇಷವಾಗಿ ರಷ್ಯದ ಧಾಳಿಯ ಅಪಾಯವಿದೆ. ಅಂತಹ ಸಂದರ್ಭದಲ್ಲಿ ಹಿಂದೀಯರಿಗೆ ಆತ್ಮರಕ್ಷಣೆ ಮಾಡಿಕೊಳ್ಳಲು ಸಾಧ್ಯವಿಲ್ಲ ಆದುದರಿಂದ ಬ್ರಿಟಿಷರ ರಕ್ಷಣೆಯು ಅತ್ಯಾವಶ್ಯಕವಾಗಿ ಬೇಕಾಗಿದೆಯೆಂಬ ಪ್ರಚಾರವು ಯುದ್ಧವು ಆರಂಭವಾದಾಗ ನಡೆದಿತ್ತು. ಅದಕ್ಕೇನೂ ಆಧಾರವಿಲ್ಲವೆಂದು ಪಂಡಿತ ಜವಾಹರಲಾಲರೇ ಮೊದಲಾದ ಕಾಂಗ್ರೆಸ್ ಮುಖಂಡರು ಉದ್ಘೋಷಿಸಿದ್ದರು. ಅನಂತರ ಕಾಶ್ಮೀರದ ಎಲ್ಲೆಯ ವರೆಗೆ ಸೋವಿಯಟ್ ಸೈನ್ಯವು ಬಂದು ನಿಂತಿದೆ. ಅಫಘಾನಿಸ್ಥಾನದೊಡನೆ ರಷ್ಯವು ಒಪ್ಪಂದ ಮಾಡಿಕೊಂಡಿದೆಯೆಂದೆಲ್ಲಾ ಸುದ್ದಿಗಳು ಹಬ್ಬಿದುವು. ಆದರೆ ಇದನ್ನು ಅಫಘಾನಿಸ್ಥಾನದ ವಿದೇಶ ಮಂತ್ರಿಗಳೇ ಅಲ್ಲಗಳೆದರು. ಇದು ಹೊರತು ಮಧ್ಯ ಏಷ್ಯಾಖಂಡದ ಮರಳುಗಾಡು ಮತ್ತು ಪರ್ವತಪ್ರದೇಶವನ್ನು ದಾಟಿ ಹಿಂದೂ ದೇಶದ ಮೇಲೆ ಧಾಳಿ ನಡೆಸುವುದು ಅಸಾಧ್ಯ ಕೆಲಸವೆಂದು ಯುದ್ಧಶಾಸ್ತ್ರಜ್ಞರು ಅಭಿಪ್ರಾಯಪಡುತ್ತಿರುವರು.

ಇಂದೀಗ ಜರ್ಮನಿಯು ಎಲ್ಲೆಲ್ಲಿಯೂ ಜಯ ಹೊಂದುತ್ತಿರುವುದು. ಇಂಗ್ಲೆಂಡಿನ ಬಾಗಿಲಿನ ಪ್ರದೇಶವನ್ನು ಗೆದ್ದು ವಶಪಡಿಸಿಕೊಂಡಿರುವುದು. ಬ್ರಿಟಿಷ್ ಮತ್ತು ಫ್ರೆಂಚ್ ಸೇನೆಗಳಿಗೆ ಜರ್ಮನ್ ಸೇನೆಯ ಧಾಳಿಯನ್ನು ಈ ವರೆಗೆ ತಡೆಗಟ್ಟಲು ಸಾಧ್ಯವಾಗಿರುವುದಿಲ್ಲ. ಬೆಲ್‌ಜಿಯಮಿನ ಅರಸ ಲಿಯೊಪೋಲ್ಡರು ಸುಮಾರು ಅರ್ಧ ಮಿಲ್ಯ ಸೇನೆಯೊಂದಿಗೆ ಹಿಟ್ಲರನಿಗೆ ಶರಣಾಗತರಾದುದರಿಂದ ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳು ಮತ್ತೂ ದೊಡ್ಡ ಗಂಡಾಂತರಕ್ಕೊಳಗಾಗಿವೆ. ಇಂತಹ ಪರಿಸ್ಥಿತಿಯಲ್ಲಿ ಇಂಗ್ಲೆಂಡು ಸೋತರೆ ಹಿಂದುದೇಶದ ಪಾಡೇನು? ಅದು ಅನಾಯಾಸವಾಗಿ ಜರ್ಮನಿಯ ವಶವಾಗಿ ಬಿಡುವುದು. ಬ್ರಿಟಿಷರ ಯೂನಿಯನ್ ಜೇಕುಗಳ ಸ್ಥಾನದಲ್ಲಿ ಜರ್ಮನ್ ಸ್ವಸ್ತಿಕ ಧ್ವಜಗಳೇರಿಸಲ್ಪಡುವವು ಎಂಬ ನಾನಾ ರೀತಿಯ ಭೀತಿಯು ಜನತೆಯಲ್ಲುಂಟಾಗಿರುವುದು. ಹಳ್ಳಿಹಳ್ಳಿಗಳಲ್ಲಿಯೂ ಆ ಕುರಿತು [illegible] ಮಾತುಕತೆಗಳು ನಡೆಯುತ್ತಿರುವವು.

ಯುದ್ಧವು ಇದೇ ರೀತಿ ನಡೆದ ಪಕ್ಷದಲ್ಲಿ ಹಿಟ್ಲರನು ಫ್ರಾನ್ಸ್ ಮತ್ತು ಇಂಗ್ಲೆಂಡುಗಳನ್ನು ಕೂಡಾ ಗೆಲ್ಲುವುದು ಅಸಾಧ್ಯವೆಂದು ಹೇಳಬರುವುದಿಲ್ಲ. ಅಷ್ಟೊಂದು ಆಶ್ಚರ್ಯಕರವಾಗಿ ಜರ್ಮನ್ ಸೇನೆಯು ಅದೊಂದು ಪ್ರಚಂಡ ಜಲಪ್ರವಾಹದಂತೆ ಮುಂದೊತ್ತಿರುವುದು. ಒಂದೊಮ್ಮೆ ಚಕಿತವಾದ ಬ್ರಿಟಿಷ್ ಮತ್ತು ಫ್ರೆಂಚ್ ಸೇನೆಯು ಈಗ ಸಾವರಿಸಿಕೊಂಡು ಪ್ರಾಣದ ಹಂಗು ತೊರೆದು ಭೀಷಣ ಕದನಹೂಡಿ ಜರ್ಮನರನ್ನು ಅಲ್ಲಲ್ಲಿ ತಡೆಗಟ್ಟಲೆತ್ನಿಸುತ್ತಿದೆ. ಫ್ಲೇಂಡರ್ಸ್ ಮತ್ತು ಸೋಮ್ಮೆ ರಣರಂಗದಲ್ಲಿ ರಕ್ತದ ಕಾಲುವೆ ಹರಿದಿದೆ. ಜರ್ಮನರು ಇಷ್ಟರಲ್ಲೇ ಅರ್ಧಮಿಲ್ಯದ ವರೆಗಣ ಸೇನೆಯನ್ನು ಕಳಕೊಂಡಿರುವರೆಂದು ಅಂದಾಜುಮಾಡಲಾಗಿದೆ. ಆದುದರಿಂದ ಇನ್ನು ಮುಂದೆ ಜರ್ಮನರಿಗೆ ಆರಂಭದಷ್ಟು ಭರದಿಂದ ಮುಂದೊತ್ತಲು ಸಾಧ್ಯವಾಗಲಾರದು. ಈಗ ಗೆದ್ದುದಕ್ಕಿಂತ ಹೆಚ್ಚಿನ ಪ್ರದೇಶವನ್ನು ಗೆಲ್ಲುವುದು ಕೂಡಾ ಅವರಿಗೆ ಅಸಾಧ್ಯವಾಗಬಹುದು ಅದರೆ ಅವರು ಗೆದ್ದ ಪ್ರದೇಶಗಳನ್ನು ಕಾಪಾಡಿಕೊಂಡರೂ ಫ್ರಾನ್ಸ್ ಮತ್ತು ಇಂಗ್ಲೆಂಡುಗಳಿಗೆ ದೊಡ್ಡ ಗಂಡಾಂತರವೇ ಸರಿ. ಒಮ್ಮೆ ಗೆದ್ದ ಪ್ರದೇಶಗಳನ್ನು ಜರ್ಮನರಿಂದ ಕಸಕೊಳ್ಳುವುದು ಬಹಳ ಕಷ್ಟ. ಆದುದರಿಂದ ಉತ್ತರ ಫ್ರಾನ್ಸ್ ಮತ್ತು ಬೆಲ್ಜಿಯಮ್ ಮೊದಲಾದುವುಗಳನ್ನು ಮಿತ್ರರಾಷ್ಟ್ರಗಳು ಪುನಃ ಪಡೆಯುವ ಬಗೆ ಹೇಗೋ ತಿಳಿಯದು. ಆದರೆ ಜರ್ಮನರು ಇನ್ನು ಮುಂದೊತ್ತಿ ಪೆರಿಸ್ ಮತ್ತು ಲಂಡನುಗಳನ್ನು ಗೆದ್ದು ವಶಪಡಿಸಿಕೊಳ್ಳುವುದು ಅಸಂಭವವೆಂದು ಧೈರ್ಯದಿಂದ ಹೇಳಬಹುದು.

ಒಂದು ವೇಳೆ ಈ ಯುದ್ಧದಲ್ಲಿ ಬ್ರಿಟಿಷರು ಸೋತರೂ ಜರ್ಮನಿಗೆ ಹಿಂದೂದೇಶವನ್ನು ವಶಪಡಿಸಿಕೊಳ್ಳಲು ಸಾಧ್ಯವಿಲ್ಲ. ಯುದ್ಧಾಂತ್ಯದಲ್ಲಿ ಜರ್ಮನಿಗೆ ಎರಡು ಮೂರು ಸಾವಿರ ಮೈಲು ದೂರದ ಹಿಂದೂ ದೇಶದ ಮೇಲೆ ಧಾಳಿನಡೆಸುವದಂತೂ ಸಾಧ್ಯವೇ ಇಲ್ಲ. ಅಂದಮೇಲೆ ಜರ್ಮನರು ಜಲ ಅಥವಾ ಆಕಾಶಮಾರ್ಗವಾಗಿ ಏರಿಬರಬೇಕು. ಜರ್ಮನಿಯೊಡನೆ ದೊಡ್ಡ ನೌಕಾಪಡೆಯೇ ಇರುವುದಿಲ್ಲ ಆದುದರಿಂದ ಜಲಮಾರ್ಗವಾಗಿ ಹೆಚ್ಚಿನ ಸೇನೆ ತರಲು ಸಾಧ್ಯವಿಲ್ಲ. ಆಕಾಶಮಾರ್ಗವಾಗಿ ಎರಡುಸಾವಿರ ಮೈಲು ಸಂಚರಿಸಿ ಹೆಚ್ಚಿನ ಸೇನೆಯನ್ನು ತಂದಿಳಿಸುವುದಂತೂ ಅಸಾಧ್ಯಕೆಲಸ. ಕೆಲವೇ ವಿಮಾನಗಳು ಏರಿಬಂದು ಅಲ್ಲಲ್ಲಿ ಬೋಂಬುಗಳನ್ನು ಸುರಿದು ಜನತೆಯನ್ನು ದಿಗಿಲುಗೊಳಿಸಬಹುದೇ ಹೊರತು ದೇಶವನ್ನು ಗೆಲ್ಲಲು ಸಾಧ್ಯವಿಲ್ಲ. ಹಾಗೆ ಏರಿಬರುವ ಕೆಲವೇ ವಿಮಾನಗಳನ್ನು ತಡೆಗಟ್ಟುವ ಶಕ್ತಿ ಹಿಂದೂದೇಶಕ್ಕೂ ಇದೆ. ಪಿಸ್ತೂಲು ಎತ್ತಿದೊಡನೆಯೇ ಕೈಯೆತ್ತಿ ಶರಣಾಗತವಾಗುವಂತಹ ಸ್ಥಿತಿಯಲ್ಲಿ ಹಿಂದೂದೇಶವು ಈಗ ಇರುವುದಿಲ್ಲ.

ಹಿಂದೂ ದೇಶಕ್ಕೆ ಕೆಲಮಟ್ಟಿನ ಭೀತಿ ಇರುವುದಾದರೆ ಇಟಲಿ, ಜಪಾನು ಮತ್ತು ರಷ್ಯಗಳಿಂದ. ಚೀನಾ ಯುದ್ಧಕ್ಕೆ ಕೈಹಾಕಿ ಜಪಾನಿಗೆ ಸಾಕು ಸಾಕಾಗಿದೆ. ಒಂದೊಮ್ಮೆ ಅದು ನೌಕಾಪಡೆಯ ಮೂಲಕ ಹಿಂದೂ ದೇಶದ ಮೇಲೆ ಧಾಳಿ ನಡೆಸುವ ಮನಸ್ಸು ಮಾಡಿದುದೇ ಆದರೆ ಅಮೇರಿಕವು ಕೂಡಲೆ ತಡೆಗಟ್ಟದಿರಲಾರದು ಆದುದರಿಂದ ಜಪಾನು ತಟಸ್ಥವಾಗಿರಲೇ ಬೇಕಾಗುವುದು. ಇಟಲಿಯು ಹಿಂದೂದೇಶವನ್ನು ವಶಪಡಿಸಿಕೊಳ್ಳಲೆತ್ನಿಸಿದರೂ ರಷ್ಯವು ಸುಮ್ಮನಿರಲಾರದು. ಇತರ ಎಲ್ಲಾ ದೇಶಗಳಿಗಿಂತ ಇಟಲಿಯಿಂದಲೇ ಹಿಂದೂದೇಶಕ್ಕೆ ಅಪಾಯ ಹೆಚ್ಚು. ಇಟಲಿಯ ಧಾಳಿಯನ್ನು ಅಮೇರಿಕವೂ ವಿರೋಧಿಸಬಹುದು.

ರಷ್ಯಕ್ಕೆ ಹಿಂದೂದೇಶದ ಮೇಲೆ ದಾಳಿಯಿಡುವುದೇನೂ ಸುಲಭ ಕೆಲಸವಲ್ಲ. ಅದು ಸಾಮ್ರಾಜ್ಯವಾದಿ ರಾಷ್ಟ್ರವೂ ಅಲ್ಲ. ಸದಾ ವೈರಿಗಳಿಗೆ ಆಶ್ರಯವಿತ್ತು ತನ್ನನ್ನು ಧಿಕ್ಕರಿಸುತ್ತಿದ್ದ ತನ್ನದೇ ಭಾಗವಾಗಿದ್ದ ಫಿನ್ಲೆಂಡಿನ ಮೇಲೆ ಅದು ಆಕ್ರಮಣ ನಡೆಸಿತಾದರೂ ಹಿಂದೂದೇಶದ ಮೇಲೆ ಎಂದೂ ಧಾಳಿ ಇಡಲಾರದು. ಆದುದರಿಂದ ಹಿಂದೂ ದೇಶಕ್ಕೆ ಪರರಾಷ್ಟ್ರಗಳ ಧಾಳಿಯ ಭೀತಿಯೇ ಇರುವ ಹಾಗಿಲ್ಲ.

ಒಂದು ವೇಳೆ ಫ್ರೆಂಚರು ಮತ್ತು ಬ್ರಿಟಿಷರು ಸೋಲುವಂತಾದರೆ ಕೂಡಲೆ ರಾಜಿಯಾಗಿ ಅಮೇರಿಕದ ಮಧ್ಯಸ್ಥಿಕೆಯಿಂದ ಇಡೀ ಲೋಕದ ಪುನರ್ವ್ಯವಸ್ಥೆಯಾಗಬಹುದು. ಇಂಗ್ಲೆಂಡು ಮತ್ತು ಫ್ರಾನ್ಸುಗಳು ಗೆದ್ದು ಜರ್ಮನಿಯು ನಿಪಾತವಾಗುವಂತಾದರೆ ಆಗಲೂ ಅಮೇರಿಕವು ಮಧ್ಯಸ್ಥಿಕೆವಹಿಸಿ ಲೋಕದ ಪುನರ್ಘಟನೆಯ ಏರ್ಪಾಡು ಆಗಬಹುದು. ಆಗ ಕೂಡ ಹಿಂದೂದೇಶದ ಸ್ವಾತಂತ್ರ್ಯದ ಪ್ರಶ್ನೆಯು ಮುಂದೆ ಬಂದು ಇತ್ಯರ್ಥವಾಗಬಹುದು.

ಹಿಂದೂದೇಶದ ಗಂಡಾಂತರವು ಪ್ರಾಮುಖ್ಯವಾಗಿ ಆಂತರಿಕವಾದುದು. ಹಿಂದೀಯರೆಲ್ಲರೂ ಒಕ್ಕಟ್ಟಿನಿಂದ ಸ್ವಾಭಿಮಾನ ಮತ್ತು ಆತ್ಮವಿಶ್ವಾಸದಿಂದ ಸ್ವಾತಂತ್ರ್ಯವನ್ನು ಸಾಧಿಸಲು ಕಟಿಬದ್ಧರಾದರೆ ಅವರ ಪಾರತಂತ್ರ್ಯವು ದೂರವಾಗುವ ದಿನವು ಸಮೀಪಿಸಿರುವುದೆಂದು ಧೈರ್ಯದಿಂದ ಹೇಳಬಹುದು. ಯುದ್ಧವು ಯಾವ ರೀತಿಯಲ್ಲಿ ಅಂತ್ಯವಾದರೂ ಹಿಂದೂದೇಶವು ಸ್ವತಂತ್ರವಾಗುವ ಸಂದರ್ಭವುಂಟಾಗಬಹುದು. ಆದರೆ ಹಿಂದೀಯರೊಳಗೇನೇ ಒಕ್ಕಟ್ಟಿಲ್ಲದೆ ಮುಸಲ್ಮಾನರು ಪಾಕಿಸ್ಥಾನವನ್ನು ಸ್ಥಾಪಿಸಲೆತ್ನಿಸಿದರೆ, ಹಿಂದುಗಳು ಹಿಂದೂಸ್ಥಾನವನ್ನು ಕಟ್ಟುವ ಪ್ರಯತ್ನಮಾಡಿದರೆ ದೇಶದಲ್ಲೆಲ್ಲಾ ಅಂತಃಕಲಹವೆದ್ದು ಹಿಂದಿನ ಇತಿಹಾಸವೇ ಪುನರಾವರ್ತಿತವಾಗಬಹುದು. ಸ್ವಾತಂತ್ರ್ಯ ಸಾಧಿಸುವ ಸುವರ್ಣ ಸಂದರ್ಭವನ್ನು ಹಿಂದೀಯರು ಕಳಕೊಳ್ಳುವಂತಾಗಬಹುದು.

ಮಂಗಳೂರು ಮತ್ತು ಉಡುಪಿಗೆ ಬಂದಾಗ ನಿಮಗೆ
ಸುಖವಾದ ನಿವಾಸ ದೊರೆಯಬೇಕೋ?
— ಹಾಗಾದರೆ —
ಸುಖನಿವಾಸಕ್ಕೆ ಬನ್ನಿ.
ರುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,
ವಿದ್ಯುದ್ದೀಪಾಲಂಕೃತ ಕೋಣೆ.
ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವುದೆಲ್ಲಿ?
ಸುಖನಿವಾಸದಲ್ಲಿ ಮಾತ್ರ.
ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.
ಮಂಗಳೂರಿನಲ್ಲಿ ಜೇಡಿಗುಡ್ಡೆಯಲ್ಲಿಯೂ, ಉಡುಪಿಯಲ್ಲಿ ತಾಲೂಕು ಕಚೇರಿಯ
ಬಳಿಯಲ್ಲಿಯೂ ಇರುವ 'ಸುಖನಿವಾಸ'ವನ್ನು ಒಮ್ಮೆ ಸಂದರ್ಶಿಸಿರಿ.
ಪ್ರೊಪ್ರೈಟರ್, ಸುಖನಿವಾಸ.

ONE REASON.
Love does much, but in this materialistic world, money does more. Save therefore for the sake of those you love.
RESOURCES OF A CRORE | ESTD. 1906. Canara Bank Limited.

ಜ್ಞಾನಬಿಂದು

ಏಕಾಗ್ರತೆ

ಪ್ರತಿದಿನದ ಪ್ರಾತಃಕಾಲದಲ್ಲಿ ಅಂದು ಅತ್ಯಗತ್ಯವಾಗಿ ಪ್ರಧಾನವಾಗಿ ಮಾಡಲೇಬೇಕಾದ ಕೆಲಸಗಳೇನೆಂಬುದನ್ನು ನಿರ್ಧರಿಸು; ಮತ್ತು ಆ ಕೆಲಸಗಳಿಗೆ ಮೊದಲು ಗಮನವನ್ನು ಕೊಡು. ಈ ರೀತಿ ಮಾಡುವುದು ಒಮ್ಮೆ ನಿಮಗೆ ಅಭ್ಯಾಸವಾದರೆ ನಿಮ್ಮ ಮನಸ್ಸಿಗೆ ಹೆಚ್ಚು ತೃಪ್ತಿಯ ಭಾವನೆಯುಂಟಾಗುವುದು. ಒಂದು ದಿನದಲ್ಲಿ ವಾಸ್ತವವಾಗಿ ಕೆಲಸಮಾಡುವ ಕಾಲವು ಬಹಳ ಸ್ವಲ್ಪ. ದಿನದ ಈ ಅಲ್ಪಕಾಲದಲ್ಲಿ ಇಟ್ಟುಕೊಂಡ ಅನೇಕ ಕೆಲಸ ಕಾರ್ಯಗಳನ್ನು ಮುಂದುಹಾಕಬೇಕಾಗುತ್ತದೆ. ಆದುದರಿಂದ ಯೋಚಿಸುವುದಕ್ಕೆ ಕಾಲವನ್ನು ತೆಗೆದುಕೊ, ಮತ್ತು ಜಾಗರೂಕತೆಯಿಂದ ಏನು ಮಾಡಬೇಕೆಂಬುದನ್ನು ನಿರ್ಧರಿಸು. ಹೀಗೆ ಮಾಡುವುದರಿಂದ ಪ್ರತಿ ದಿನವೂ ಫಲಿತಾಂಶದಲ್ಲಿ ಹೆಚ್ಚು ಹೆಚ್ಚು ಪ್ರಯೋಜನವಾಗುವಂತೆ ಮಾಡಬಹುದು. ಜೀವನದ ನಿಜವಾದ ಬೆಲೆಯನ್ನು ತಿಳಿದುಕೊಂಡು ಅತಿ ಮುಖ್ಯ ವಿಚಾರಗಳಿಗೆ ಮೊದಲು ನಿನ್ನ ಯೋಚನೆಯಲ್ಲಿ ಸ್ಥಳ ಕೊಟ್ಟು, ಸಾಮಾನ್ಯವಾದ ಸಣ್ಣ ವಿಚಾರಗಳು ಸುಲಭವಾಗಿ ನಿನ್ನ ಕಾಲವನ್ನು ಕಬಳಿಸದಂತೆ ನೋಡಿಕೋ. ನೀನು ಎಷ್ಟು ಎಷ್ಟು ಹೆಚ್ಚಾಗಿ ಈ ರೀತಿ ಅಭ್ಯಾಸಮಾಡುತ್ತಾ ಬರುವೆಯೋ ಅಷ್ಟೂ ನಿನ್ನ ಜೀವನದ ರೀತಿನೀತಿಗಳು ಸುವ್ಯವಸ್ಥಿತವಾಗುವಂತೆ ಏರ್ಪಾಡುಮಾಡಿಕೊಳ್ಳಲು ನಿನಗೆ ಸುಲಭಸಾಧ್ಯವಾಗುವುದು.

ಭಾವನೆಯು ವಿಶಾಲವಾಗಿರಲಿ

ನಿನ್ನ ಭಾವನೆಯು ವಿಶಾಲವಾಗಿಯೂ ಉದಾರವಾದುದಾಗಿಯೂ ಇರಲಿ. ನಿನ್ನ ಅಭಿಪ್ರಾಯಗಳಿಗಿಂತ ಭಿನ್ನವಾದ ಅಭಿಪ್ರಾಯವುಳ್ಳವರೊಡನೆ ಸಮಾಧಾನದಿಂದಿರು. **ಸತ್ಯವು ನಿನಗೊಬ್ಬನಿಗೇ ಸೇರಿರುವ ಹಕ್ಕೆಂದು ಭಾವಿಸಬೇಡ.** ನಿನ್ನ ಅಭಿಪ್ರಾಯವು ಸಂಪೂರ್ಣವಾಗಿ ಸರಿಯಾದುದಲ್ಲದಿರಬಹುದು; ಮತ್ತು ನಿನ್ನ ವಿರೋಧಿಯ ಅಭಿಪ್ರಾಯವು ಸಂಪೂರ್ಣವಾಗಿ ತಪ್ಪಾಗಿಲ್ಲದಿರಬಹುದು. ಇತರರ ಭಾವನೆ ಮತ್ತು ತೀರ್ಮಾನಗಳ ಮೇಲೆ ವಿಜಯವನ್ನು ಪಡೆಯಬೇಕೆಂಬ ಭಾವನೆಯಿಂದ ಇರುವುದಕ್ಕಿಂತ ನಿಮ್ಮ ಆಶಯವು ನ್ಯಾಯವಾಗಿರಬೇಕೆಂಬುದಕ್ಕಾಗಿ ಇರಲಿ. ಸತ್ಯವು ಸ್ವಯಂ ಪ್ರಕಾಶವಾದುದು. ನಿನ್ನ ಆಶಯಗಳು ನ್ಯಾಯವಾಗಿದ್ದಾಗ ನೀನು ವಿಮರ್ಶೆ ಮತ್ತು ಟೀಕೆಗಳಿಗೆ ಹೆದರದೆ ಧೈರ್ಯವಾಗಿ ಎದುರಿಸಿ ನಿಲ್ಲಬಹುದು. ಸತ್ಯವಾಗಿ ನಡೆಯಬೇಕೆಂಬ ಆಶೆಯು ನಿನ್ನ ಉತ್ತಮೋತ್ತಮ ರಕ್ಷಣೆಯಾಗಿರುವುದು. ಸಹನೆ, ನ್ಯಾಯವಾದ ಧ್ಯೇಯಗಳು, ಉತ್ತಮ ಆದರ್ಶ ಇವುಗಳು ನಿನ್ನ ಪ್ರಜ್ಞೆಯನ್ನು ಬಲಪಡಿಸಿ ಕಾಪಾಡುವವು. ನಿನ್ನ ನಿತ್ಯದ ಜೀವನವು ನಿನ್ನ ಆದರ್ಶವನ್ನು ತೋರಿಸುವಂತಿರಲಿ.

ಯೋಚಿಸು

ನಿನಗೆ ಬೇಡದ ವಸ್ತುಗಳ ವಿಚಾರಗಳನ್ನು ಯೋಚಿಸುವುದನ್ನು ಬಿಡು; ನಿನಗೆ ಬೇಕಾದ ವಸ್ತುಗಳ ವಿಚಾರವಾಗಿ ಯೋಚಿಸುವುದನ್ನು ಹೆಚ್ಚುಮಾಡು. ಯುದ್ಧ, ಶಸ್ತ್ರಾಸ್ತ್ರ, ಅನಾಹುತ, ಬಡತನ, ಕೇಡುಕು, ಅಪಜಯ, ಭಿನ್ನಾಭಿಪ್ರಾಯ, ದುರದೃಷ್ಟ, ಕಷ್ಟಕಾಲ, ರೋಗ ಮತ್ತು ಸಾವು ಈ ವಿಚಾರಗಳನ್ನು ಯೋಚಿಸುವುದನ್ನೂ ಮಾತಾಡುವುದನ್ನೂ ಬಿಡು. ಶಾಂತಿ, ತೃಪ್ತಿ, ಆರೋಗ್ಯ, ಜೀವನ, ಅವಕಾಶ, ನಂಬುಗೆ, ಸುಖ, ಏಳಿಗೆ, ಶಕ್ತಿ, ಸಾಧನೆ, ಸತ್ಯ, ಜಯ, ನ್ಯಾಯ ಇವುಗಳ ವಿಚಾರವಾಗಿಯೇ ಯೋಚಿಸುವುದನ್ನೂ ಮಾತಾಡುವುದನ್ನೂ ಹೆಚ್ಚುಮಾಡು. ನಿನ್ನ ಯೋಚನೆಯೇ ಪ್ರಪಂಚದ ಈಗಿನಂತೆ ಇರುವುದಕ್ಕೆ ಕಾರಣವಾಗಿದೆ. "ಯದ್ಭಾವಂ ತದ್ಭವತಿ" ನೀನು ಹೇಗೆ ಯೋಚಿಸಿದರೆ ಹಾಗೆ ಆಗುತ್ತದೆ. ಆದುದರಿಂದ ಪ್ರಪಂಚವು ಹೇಗಾಗಬೇಕೋ ಹಾಗೆ ಮಾಡಲು ಪ್ರಯತ್ನಿಸಿ, ಸ್ಪರ್ಧೆಯ ಬದಲು ಸಹಕಾರವನ್ನೂ, ಯುದ್ಧದ ಬದಲು ಶಾಂತಿಯನ್ನೂ, ದ್ವೇಷದ ಬದಲು ಪ್ರೀತಿಯನ್ನೂ, ಸಂಶಯಕ್ಕೆ ಬದಲು ನಂಬುಗೆಯನ್ನೂ, ಸ್ವಾರ್ಥತೆಗೆ ಬದಲು ಸೇವೆಯನ್ನೂ ಅಭ್ಯಾಸಮಾಡು. ಪ್ರಪಂಚದ ಮಾನವರಲ್ಲಿ ಸೌಹಾರ್ದತೆಯನ್ನೂ ಶಾಂತಿಯನ್ನೂ ಉಂಟುಮಾಡಲು ಸರಿಯಾದ ಯೋಚನೆಯೇ ಅತ್ಯಂತ ಬಲವತ್ತರವಾದ ಶಕ್ತಿಯಾಗಿರುವುದು.

(ವಿ. ವಾ)

ಭಾರತೀ ಗ್ರಂಥಮಾಲೆಯ ಪುಸ್ತಕಗಳು.

ಚಿಳಕು (ಚಿಕ್ಕ ಕತೆಗಳ ಸಂಗ್ರಹ.)
ತಿನಿಸು (ಕತೆ, ಕವನ, ಪ್ರಬಂಧಗಳ ಸಂಗ್ರಹ)
ಪ್ರತೀಕಾರ (ನವಪೌರಾಣಿಕ ನಾಟಕ)
ಲೋಪಾಮುದ್ರೆ (ಪೌರಾಣಿಕ ಕತೆ)
ಚಿಗುರು (10 ಚಿಕ್ಕ ಕತೆಗಳ ಸಂಗ್ರಹ)
ತಂಬೂರಿ (5 ಏಕಾಂಕ ನಾಟಕಗಳ ಸಂಗ್ರಹ)
ಪ್ರತಿಯೊಂದರ ಬೆಲೆ ಪಾವಾಣೆ ಮಾತ್ರ
(ಅಂಚೆವೆಚ್ಚ 0-0-6 ಪ್ರತ್ಯೇಕ)
ರೂ 1-8-0 ಕಳುಹಿದ್ದಲ್ಲಿ ಆರೂ ಪುಸ್ತಕಗಳನ್ನು ಕಳಿಸಲಾಗುವುದು. (ಅಂಚೆವೆಚ್ಚ ಪ್ರತ್ಯೇಕ)
ವ್ಯಾಪಾರಿಗಳಿಗೆ ಧಾರಾಳ ಕಮಿಷನ್.
ಪ್ರತಿಗಳಿಗೆ ಬರೆಯಿರಿ:-
ಮೆನೇಜರ್,
ನವಭಾರತ ಪುಸ್ತಕ ಭಂಡಾರ
ಉಡುಪಿ

Degrees, Books: Medicines. Free H. L. M. S. H. M. B. H. M. D. etc Free Homeo-Ayrr-Unani-Naturo degrees, by post also—Practioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10 Enclose 2 annas stamp:—
Principal, Indian Homeopathic Institute and Society (Govt Regd.)
P. O. MAHUVA, (Kathiawar Dt. India.

Sidh-Kalpa Kavach (Regd)
No. 3 Rs 2. No 2 Rs. 5. No. 1 Rs 7 Special Rs. 10. Extra Special Rs. 17. for love, marriage health, wealth Ask any six questions with M. O Re. 1/4 and get correct answers by return post Life reading Rs. 2 No. V. P.P. Send M. O. Free pamphlets. **Prof. Dr. N. M. Chhatbar,** P. O. Mahuva, (Kathiawar, India.)

ಎಳೆಪ್ರಾಯದಲ್ಲೇ ಮಿತವ್ಯಯದ ಅಭ್ಯಾಸವನ್ನು ಪ್ರೋತ್ಸಾಹಿಸಿ ನಿಮ್ಮ ಹುಡುಗನ ಜೀವನಕ್ಕೆ ತಕ್ಕ ಏರ್ಪಾಡುಮಾಡಿರಿ

ಮಕ್ಕಳಿಗಾಗಿ ಮುಂದುವರಿಸಲ್ಪಡುವ ವಿಮೆಯ ಪಾಲಿಸಿಯೊಂದನ್ನು
ಸುಭದ್ರವೂ ಅತ್ಯಂತ ಜನಪ್ರಿಯವೂ ಆದ ಭಾರತೀಯ ಜೀವ ವಿಮಾಸಂಸ್ಥೆ
ಓರಿಯಂಟಲ್‌ನಲ್ಲಿ ಪಡೆಯಿರಿ.

--- ಮಕ್ಕಳ ಮುಂದುವರಿಸಲ್ಪಡುವ ವಿಮೆಯು ---
ನವೀನವಾದ ವಿಮಾಯೋಜನೆಯು. ಈ ಪ್ರಕಾರ ಬಹಳ ಕಡಿಮೆ ಪ್ರೀಮಿಯಮ್ ಪಾವತಿಯಿಂದ ಹೆತ್ತವರು ತಮ್ಮ ಮಕ್ಕಳ ಪೋಷಣೆಗೆ ಇಡೀ ಜೀವಮಾನದ ಯಾ ಉಂಬಳಿ ವಿಮೆಯ ಪಾಲಿಸಿಯನ್ನು ಸಂಗ್ರಹಿಸಲು ಅನುಕೂಲವಾಗುವಂತೆ ತಯಾರಿಸಿದೆ. ಇದರಲ್ಲಿ 22ನೇ ವರ್ಷಕ್ಕಿಂತ ಮುಂಚಿತವಾಗಿ ಒಂದು ನಿಶ್ಚಿತ ಪ್ರಾಯದಲ್ಲಿ "ರಿಸ್ಕ್" ಆರಂಭವಾಗುವುದು.

ಹೆಚ್ಚಿನ ಮಾಹಿತಿಗೆ ಇವರಿಗೆ ಬರೆಯಿರಿ:—
ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್
ಸ್ಥಾಪನೆ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನ ಕಾರ್ಯಾಲಯ—ಮುಂಬಯಿ.
ಅಥವಾ ದಿ ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸು, ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್‌ಪೇರೇಡ್ ಬೆಂಗಳೂರು.

—ORIENTAL—
GOVERNMENT SECURITY LIFE ASSURANCE CO., LTD.

(ಆಚೇ ಪುಟದಿಂದ ಮುಂದರಿಸಿದ್ದು)
ದಿಸಿ ಸ್ಟೀಮರುಗಳ ಚಲಾವಣೆಯನ್ನು ತಡೆಗಟ್ಟಬಹುದು. ಇಲ್ಲವೆ ಬ್ರಿಟಿಷ್ ಯುದ್ಧ ಹಡಗುಗಳ ಮೇಲೆ ಆಕಾಶ ಮಾರ್ಗ ದಾಳಿ ಧಾಳಿಯಿಟ್ಟು ನಾಶಮಾಡಲಿಕ್ಕೆ ಸಾಧ್ಯವಿರಬಹುದು. ಇಂಗ್ಲೆಂಡಿನ ನೌಕಾಬಲವನ್ನು ಮುರಿಯದೆ ಹಿಟ್ಲರರಿಗೆ ಇಂಗ್ಲೆಂಡನ್ನು ಬಗ್ಗುಬಡಿಯಲು ಸಾಧ್ಯವಿಲ್ಲ.

ಚುಂಕಿಂಗಿನ ಮೇಲೆ ಎಡೆಬಿಡದೆ ವಿಮಾನ ಧಾಳಿ

ಚೀನೀ ರಾಷ್ಟ್ರೀಯ ಸರಕಾರದ ಮುಖ್ಯ ಪಟ್ಟಣವಾದ ಚುಂಕಿಂಗಿನ ಮೇಲೆ ಜಪಾನರು 10 ದಿನಗಳ ವರೆಗೆ ಎಡೆಬಿಡದೆ ವಿಮಾನ ಧಾಳಿ ನಡಿಸಿ ಹೆಚ್ಚಿನ ಹಾವಳಿ ಮಾಡಿರುವರು. ತಾ. 28ರ ವಿಮಾನ ಧಾಳಿಯ ಪರಿಣಾಮವಾಗಿ 300 ಮಂದಿ ಕೊಲ್ಲಲ್ಪಟ್ಟಿದ್ದಾರೆ. ವಿಶ್ವವಿದ್ಯಾಲಯ ಕಟ್ಟಡವು ನಾಶವಾಗಿದೆ.

ಪಂಡಿತ ಜವಾಹರಲಾಲ ನೆಹರು

ಗಳು ಪಂಜಾಬು ಮತ್ತು ವಾಯವ್ಯ ಗಡಿನಾಡಿನ ಕೆಲವು ಭಾಗಗಳಲ್ಲಿ ಸಂಚರಿಸಿ ಮೇ ತಾ. 29ರಲ್ಲು ಖಾನ್ ಅಬ್ದುಲ್ ಗಾಫರ್ ಖಾನರೊಂದಿಗೆ ಕಾಶ್ಮೀರಕ್ಕೆ ಹೋಗಿರುವರು.

ಖಾಕ್ಸಾರರ ಗಲಾಟೆ

ಮೇ ತಾ. 29ರಲ್ಲು ಲಾಹೋರಿನ ಸುವರ್ಣ ಮಸೀದಿಯಿಂದ 11 ಮಂದಿ ಖಾಕ್ಸಾರರು ಪೋಷಾಕು ಹಾಕಿಕೊಂಡು ಬೆಲ್ಚಗಳನ್ನು ಹಿಡಿದುಕೊಂಡು ಹೊರಬಂದಾಗ ಲಾಹೋರ ಪೋಲೀಸರು ಹೋಗಿ ತಡೆದು ಬಿಡಬೇಕೆಂದು ಹೇಳಿದರು. ಖಾಕ್ಸಾರರು ಬಿಡಲಿಲ್ಲ. ಪೋಲೀಸರು ಅವರನ್ನು ಕೈದು ಮಾಡಹೋದಾಗ ದೂಡಿ ಬೆಲ್ಚಗಳಿಂದ ಹೊಡೆದರು. ಆಗ ಪೋಲೀಸ್ ಸಬ್ ಇನ್ಸ್ಪೆಕ್ಟರರು ರಿವಾಲ್ವರ್ ಉಪಯೋಗಿಸಿ 3 ಮಂದಿ ಕೊಲ್ಲಲ್ಪಟ್ಟು ಇಬ್ಬರು ಜಖಮ್ ಹೊಂದಿರುವರು.

ಕನ್ನಡ ನುಡಿವೆಣ್ಣಗೊಂದು
ನಿತ್ಯ ದಗಿತ್ತಿಯ ಕಿರುಗಾಣಿಕೆ
ಇಬ್ಬರು ಸೋದರಿಯರ ನೈಜ ಜೀವನದ
ದುರಂತ ಚಿತ್ರವನ್ನೂ, ಸ್ತ್ರೀ-ಪುರುಷ
ಹೃದಯಗಳ ಆಳವನ್ನೂ ಹೃದಯಂಗ
ಮವಾಗಿ ಚಿತ್ರಿಸುವ ರಮ್ಯ ಕಥಾನಕ

ವತ್ಸಲಾ

ಸಾಮಾಜಿಕ ಕಾದಂಬರಿ
ಬೆಲೆ: ೦-೭-೬.
0—8—0 ಸ್ಟಾಂಪು ಕಳುಹಿಸಿದರೆ
1 ಪ್ರತಿಯನ್ನು ಕಳಿಸಲಾಗುವುದು.
ಬರೆದವರು:—
ಶ್ರೀಮತಿ ಮುಳ್ಳಾದಿ ಕಮಲಾಕ್ಷಿ
ಈ ಪುಸ್ತಕದ ಕುರಿತು ಪ್ರಾಕ್ತನ ವಿಮರ್ಶ
ವಿಚಕ್ಷಣ ಕರ್ನಾಟಕ ವಿದ್ಯಾವೃದ್ಧರ,
ರಾವ್ ಬಹದೂರ್ ಆರ್. ನರಸಿಂಹಾ
ಚಾರ್ಯ M.A., M.R.A.S. ಇವರು
ಬೆಂಗಳೂರಿನಿಂದ ಹೀಗೆ ಅಭಿಪ್ರಾಯಪಡುತ್ತಾರೆ
'ಗ್ರಂಥವು ಶೈಲಿ ಗಂಭೀರವಾಗಿಯೂ ಹೃದ
ಯಂಗಮವಾಗಿಯೂ ಇದೆ, ಪ್ರತಿಪಾದಿತವಾದ
ವಿಷಯವು ಸುಬೋಧಕವಾಗಿಯೂ ಧರ್ಮನೀತಿ
ಬೋಧಕವಾಗಿಯೂ ಇವೆ. ಸ್ತ್ರೀಯರಿಗೆ ಬೋಧ
ಪ್ರದವಾದ ಗ್ರಂಥ........'
ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಚಲಚಿತ್ರ ಪ್ರಪಂಚ

(ಯನ್. ಕೃಷ್ಣ ಉಪಾಧ್ಯಾಯ, ಮುಂಬಯಿ.)

ವೈ ಹಾರಿ

ರಜನಿಯು ಮುದಿ ಮೊಗವೀರನ ಸಾಕು ಮಗಳು. ಗೋಪಾಲನು ಮಗ. ರಜನಿ ಗೋಪಾಲರೊಳಗೆ ಪ್ರೇಮವು ಬೆಳೆದಿದ್ದು ವಿವಾಹವೂ ನಿಶ್ಚಯವಾಗಿತ್ತು. ಆದರೆ ಆ ದೊಂದು ದಿನದ ಆ ಘಟನೆಯಿಂದಾಗಿ ರಜನಿಯ ಮೋಹಲತೆಯು ಮುರಿಯುವಂತಾಯಿತು.

ಒಂದು ದಿನ ಗೋಪಾಲನು ನೀರಿಳಿಯುತ್ತಾ ಗಾನ ದೇವತೆಯನ್ನು ಪೂಜಿಸುತ್ತಿದ್ದ. ಮೊಗವೀರರ ಜೀವನ ರೀತಿಯನ್ನು ಕಲಿಯಲು ದಿಗ್ದರ್ಶಕನ ಜೊತೆಯಲ್ಲಿ ಹಳ್ಳಿಗೆ ಬಂದಿದ್ದ ರಾಗಿಣಿಯು, ಗೋಪಾಲನ ಆ ಸುಮಧುರ ಗಾನವನ್ನೂ, ಮನೋಹರ ರೂಪವನ್ನೂ ಕಂಡು ಮೋಹಾನ್ವಿತೆಯಾಗಿ ಅವನನ್ನೇ ದಿಟ್ಟಿಸಿ ನೋಡುತ್ತ ಸವಿಾಪಸ್ಥೆಯಾಗುತ್ತಿರಲು ಗೋಪಾಲನು ಈ ರೂಪರಾಣಿಯು ಯಾರೆಂದು ಆಶ್ಚರ್ಯದಿಂದ ನೋಡುತ್ತಿರಲು ಇಬ್ಬರ ಅಕ್ಷಿಗಳೂ ಸಮ್ಮಿಲಿತವಾದವು. ದಿಗ್ದರ್ಶಕನಿಂದಾಗಿ ರಾಗಿಣಿಯು ಹಿಂದಿರುಗಬೇಕಾಯಿತು. ಪ್ರಥಮ ದರ್ಶನದ ಕಟಾಕ್ಷವೇ ಇವರಿಬ್ಬರನ್ನು ಬಂಧಿಸಿರಲು ರಾಗಿಣಿಯು ತನ್ನ ಮೋಹವನ್ನು ತಡೆಯಲಾರದೆ ಗೋಪಾಲನನ್ನು ಹುಡುಕಿಕೊಂಡು ಬಂದು ಇಬ್ಬರೂ ಸಮುದ್ರ ತೀರದಲ್ಲಿ ಬೆರೆಯುವರು. ರಾಗಿಣಿಯು ತನ್ನ ಜೊತೆಯಲ್ಲಿ ಪಟ್ಟಣಕ್ಕೆ ಬರಬೇಕೆಂದು ಗೋಪಾಲನೊಡನೆ ಹೇಳಲು, ಏನೂ ತಿಳಿಯದ ಗೋಪಾಲನು ತನ್ನ ಬಂಧುಗಳ ಮಾತು ಕೇಳದೆ ಪ್ರಿಯೆಯ ಜೊತೆಯಲ್ಲಿ ಹೋಗುವನು.

ಎಷ್ಟೆಂವರೂ ಒಡತನದ ಆ ಬಡತ್ವವನ್ನು ತಗದೂಗೆಯುವುದು ಅತಿ ಕಷ್ಟ. ರಾಗಿಣಿಯ ಸುಖಜೀವನವು ಇವನ ಮನಸ್ಸೊಗ್ಗಲಿಲ್ಲ. ಆದರೆ ಮೋಹಿನಿಯನ್ನು ತೊರೆಯುವುದೆಂತು?

ದಿಗ್ದರ್ಶಕ ಮಹಾಶಯರಿಗೆ ರಾಗಿಣಿಯಲ್ಲಿ ಪ್ರೇಮವಿತ್ತು. ಆಕೆಯು ಅಪ್-ಟು-ಡೇಟ್ ಫೇಶನಿನಲ್ಲಿದ್ದ ನನ್ನನ್ನು ತೊರೆದು ಮೊಣಗಾಲಿನ ತನಕ ಅರ್ಧ ಮುಂಡನ್ನುಟ್ಟುಕೊಂಡು, ನದಿಯಲ್ಲಿ ಮಿಾನು ಹಿಡಿಯುವ ಗೋಪಾಲನನ್ನು ಮೋಹಿಸಿ ತನ್ನ ಮನೆಯಲ್ಲಿರಿಸಿಕೊಂಡುದನ್ನು ನೋಡಿ ಇವನಿಂದ ತಡೆಯಲಾಗದೆ ಹಲವು ಕುತಂತ್ರಗಳನ್ನು ಮಾಡಿದರೂ ಆಕೆಯ ಪ್ರೇಮವು ಚಲಿಸಲಿಲ್ಲ. ಒಂದು ದಿವಸ ದಿವಸ ದಿಗ್ದರ್ಶಕ ಕುತಂತ್ರದಿಂದ ಎಲ್ಲರ ಸಮ್ಮುಖದಲ್ಲಿ ತನ್ನ ಪ್ರಿಯನಿಂದಾಗಿ ತನಗೆ ಅಪಮಾನವಾಗುತ್ತಿರುವುದನ್ನು ಕಂಡು ಇನ್ನು ಈ ಸಿರಿ ಜೀವನವನ್ನು ತೊರೆದು ಪ್ರಿಯನಿಗೆ ಒಗ್ಗುವ ರೀತಿಯಲ್ಲೇ ಒಂದು ಹಳ್ಳಿಯಲ್ಲಿ ಜೀವನಮಾಡಬೇಕೆಂದು ನಿಶ್ಚಯಿಸಿ ಹಳ್ಳಿ ಸೇರುವಳು.

ದಿಗ್ದರ್ಶಕನು ರಾಗಿಣಿಯನ್ನು ಪಡೆಯಬೇಕೆಂದು ಕುತಂತ್ರ ಹೂಡಿ ಗೋಪಾಲನ ತಂದೆಯನ್ನೂ ರಜನಿಯನ್ನೂ ಪಟ್ಟಣಕ್ಕೆ ತಂದು, ಆಕೆಗೆ ದರ್ಶನ ಕಲಿಸುವನು. ಒಂದು ದಿವಸ ಗೋಪಾಲನು ಹೊರಗೆ ಹೋಗಿರಲು ಮುದುಕನು ರಾಗಿಣಿಯ ಮನೆಗೆ ಬಂದು ದಿಗ್ದರ್ಶಕನು ಹೇಳಿಕೊಟ್ಟಂತೆ, ಗೋಪಾಲನಿಗೊಂದು ಪತ್ನಿ ಇದ್ದಾಳೆಂದೂ ಆಕೆಗೆ ಮೋಸಮಾಡಿ ಬಂದಿರುವನೆಂದೂ ಸುಳ್ಳು ಹೇಳುವನು. ಇದನ್ನು ಕೇಳಿ ಆಕೆಯು ದುಃಖಿಸುತ್ತಿರಲು ದಿಗ್ದರ್ಶಕನು ಬಂದು ಆಕೆಯನ್ನು ಕರೆಕೊಂಡು ಹೋಗುವನು. ಗೋಪಾಲನು ಪ್ರಿಯೆಯನ್ನು ಮನೆಯಲ್ಲಿ ಕಾಣದೆ, ಮೋಸ ಮಾಡಿರಬಹುದೆಂದು ತಿಳಿದು ಊರಿಗೆ ಹಿಂದಿರುಗಲು ತಂದೆಯನ್ನೂ ರಜನಿಯನ್ನೂ ಕಂಡು ಸಂತೋಷಪಡುವನು. ಆದರೆ ರಾಗಿಣಿಗೆ ತನ್ನ ಪ್ರಿಯನನ್ನು ಮರೆಯಲಾಗದೆ ದಿಗ್ದರ್ಶಕನ ಜೊತೆಯಲ್ಲಿ ಗೋಪಾಲನನ್ನು ಹುಡುಕಿಕೊಂಡು ಹೋಗಲು ಗೋಪಾಲನೂ ರಜನಿಯೂ ಸುಖದಲ್ಲಿರುವುದನ್ನು ಕಂಡು ಅಲ್ಲಿ ಆಕೆಯ ಜೀವಾಂತ್ಯವಾಗುವುದು.

ಶ್ರೀ ಜಹಗೀರದಾರರವರು ಈ ಚಿತ್ರವನ್ನು ದಿಗ್ದರ್ಶಿಸಿರುವರು. ಪ್ರಖ್ಯಾತ ಟಿ.ವಿ. ರೋಡಿಯವರ ಕಥೆಯಿದು.

ಹಿಂದೀ ಚಲಚಿತ್ರ ಪ್ರಪಂಚದ ಸೌಂದರ್ಯದ ರಾಣಿಯಾದ ನಜೀಮಳು ರಾಗಿಣಿಯ ಪಾತ್ರವನ್ನು ಅತ್ಯಂತ ಯೋಗ್ಯ ರೀತಿಯಲ್ಲಿ ನಟಿಸಿರುವಳು. ನವೀನ ಯಾಜ್ಞಿಕರವರು ಗೋಪಾಲನ ಪಾತ್ರವನ್ನೂ, ಶ್ರೀಮತಿ ಮಾಯಾದೇವಿಯು, ರಜನಿಯ ಪಾತ್ರವನ್ನೂ ನಟಿಸಿರುವರು.

ಬಡವ ಬಲ್ಲಿದನೆಂಬುದನ್ನು ಗಣಿಸದೆ, ಪ್ರೇಮವು ಪ್ರೇಮಿಯನ್ನು ಸೇರಿಕೊಳ್ಳುತ್ತದೆಂಬುದನ್ನು ಈ ಚಿತ್ರವು ತೋರ್ಪಡಿಸುತ್ತದೆ. My Defeat, ಮೈ ಹಾರಿ, ಅಂದರೆ ರಾಗಿಣಿಯ ಸೋಲು, ಅಂದರೆ ಪ್ರೇಮಕ್ಕಾಗಿ ತನ್ನ ಜೀವನವನ್ನರ್ಪಿಸಿದಳು.

ಇಷ್ಟಂಟೆ—ಕೃಷಿಯ ಶಿಷ್ಟ ಪ್ರಾರ್ಥನಾಸ್ಥಾನ, ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕ ಉತ್ಸವವು ತಾ. 2-6-40ರಲ್ಲಿ ಎಲ್ಲಾ ವಿದ್ಯಾಧಿಕಾರಿಗಳಾದ ಶ್ರೀ. ಯು. ಕಣ್ಣಪ್ಪನವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ಆರಗಿತು. ಹೆಡ್ಮಾಸ್ಟರರಾದ ಶ್ರೀ. ಶ್ರೀನಿವಾಸ ಮಿತ್ತಂತಾಯರು ಶಾಲೋನ್ನತಿಗಾಗಿ ಪಡುವ ಪ್ರಯತ್ನವು ಸ್ತುತ್ಯವಾಗಿದೆ.

ಚಂದಾದಾರರಲ್ಲಿ ವಿನಂತಿ.

ನವಯುಗದ ಚಂದಾ ಹಣ ಬಾಕಿಯಿರುವವರು ದಯಮಾಡಿ ಅದನ್ನು ಕೂಡಲೇ ಕಳಿಸಿಕೊಡುವಂತೆ ಈ ಮೂಲಕ ವಿನಂತಿಸಲಾಗುತ್ತದೆ.

ಮೆನೇಜರ್.

—ಸೌಕರ್ಯ—

ಆರ್ಥಿಕ ಮುಗ್ಗಟ್ಟಿನ ಈ ದುಸ್ಕಾಲದಲ್ಲಿ ಕಡಿಮೆ ವೆಚ್ಚದಲ್ಲಿ
ಹೆಚ್ಚು ಸೌಕರ್ಯವನ್ನು ಯಾರು ತಾನೆ ಅಪೇಕ್ಷಿಸುವುದಿಲ್ಲ?
ಅದನ್ನು ಸದಾ ಒದಗಿಸಿಕೊಡುವುದೇ

ರಾಮಾ ರೆಸ್ಟೋರೆಂಟಿನ ಧ್ಯೇಯವಾಗಿದೆ.

ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳು!
ವಿದ್ಯಾರ್ಥಿಗಳಿಗೆ ರಿಯಾಯತಿ ದರಗಳು!!

ಒಮ್ಮೆ ಸಂದರ್ಶಿಸಿರಿ! ತೃಪ್ತಿ ಪಡೆಯಿರಿ!!

Sri Rama Restaurant
Kashi Mutt Building,
UDIPI.

ಶ್ರೀರಾಮಾ ರೆಸ್ಟೋರೆಂಟ್
ಕಾಶಿ ಮಠದ ಕಟ್ಟೋಣ, ಉಡುಪಿ

ಪ್ರೊಪ್ರೈಟರ:— ಎಚ್. ರಾಮಚಂದ್ರ ನಾಯಕ್.

ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾಗಿದೆ.

ಹಾಯರ್ ಎಲಿಮೆಂಟರಿ ಕ್ಲಾಸುಗಳಿಗೆ
ಅತ್ಯುಪಯುಕ್ತವಾದುದು.

ಶ್ರೀ. ಕೆ. ಕೆ. ಕಟ್ಟರಿಂದ ವಿರಚಿತವಾದ

ಕು ಶ ಲ ವ

ನವಪೌರಾಣಿಕ ನಾಟಕ

--- ಬೆಲೆ ನಾಲ್ಕಾಣೆ ಮಾತ್ರ ---

ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತದೆ.
ನವಭಾರತ ಪುಸ್ತಕಭಂಡಾರ, ಉಡುಪಿ.

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ಉಡುಪಿ, ಗುರುವಾರ ತಾ. ೬-೬-'೪೦

ಇದೆಂತಹ ರಕ್ಷಣಾ ಸಿದ್ಧತೆ!

ಮೇ ತಾ. 31ರಲ್ಲಿ ಹಿಂದೀ ಸೇನಾಧ್ಯಕ್ಷರಾದ ಜನರಲ್ ಸರ್ ರೋಬರ್ಟ್ ಕಾಸ್ಸೆಲ್ಸರು, ಕಳೆದ ಏಳೆಂಟು ತಿಂಗಳುಗಳಲ್ಲಿ ಹಿಂದೂದೇಶದ ರಕ್ಷಣೆಯ ದೃಷ್ಟಿಯಿಂದ ಸರಕಾರವು ಮಾಡಿರುವ ಸೇನಾಸಿದ್ಧತೆಗಳನ್ನು ವಿವರಿಸಿ, ಹಿಂದೀಯರು ಹೆಚ್ಚೆಚ್ಚಾಗಿ ಸೇನೆಗೆ ಸೇರಿ ಲೋಕದ ನಾಗರಿಕತೆಗುಂಟಾಗಿರುವ ದೊಡ್ಡ ವಿಪತ್ತಿನಿಂದ ಅದನ್ನು ಪಾರುಮಾಡುವುದರಲ್ಲಿ ನೆರವಾಗಬೇಕೆಂದು ವಿನಂತಿಮಾಡಿಕೊಂಡಿರುವರು. ಭೂಸೈನ್ಯಕ್ಕೆ ಸುಮಾರು ಒಂದು ಲಕ್ಷ ಮಂದಿಯನ್ನು ಹೆಚ್ಚಿಗೆಯಾಗಿ ಸೇರಿಸಿ ಹೆಚ್ಚೆಚ್ಚಾಗಿ ಹಿಂದೀಯರನ್ನು ಅಧಿಕಾರಿಗಳನ್ನಾಗಿ ತರಬೇತಿಮಾಡಲಾಗುವುದು. ವಿಮಾನ ಪಡೆಯನ್ನು 3 ದಳಗಳಿಂದ 12 ದಳಕ್ಕೇರಿಸಲಾಗುವುದು. ನೌಕಾ ಪಡೆಯೂ ಹೆಚ್ಚಿಸಲ್ಪಟ್ಟಿರುವುದು. ನಾವಿಕರ ಸಂಖ್ಯೆಯನ್ನು 2 ಪಾಲಷ್ಟು ಹೆಚ್ಚಿಸಲಾಗಿದೆ. ಯುದ್ಧೋಪಕರಣ ಮತ್ತು ಮದ್ದುಗುಂಡು ತಯಾರಿಸುವ ಕೆಲಸವೂ ಹಿಂದೂದೇಶದಲ್ಲೇ ಬಹಳ ಹೆಚ್ಚಾಗಿ ನಡೆಸಲ್ಪಡುತ್ತಿದೆ. ಹಿಂದೂದೇಶ ರಕ್ಷಣೆಯ ದೃಷ್ಟಿಯಿಂದ ಅವಶ್ಯವಾದ ಸಿದ್ಧತೆಗಳನ್ನು ಸರಕಾರವು ಭರದಿಂದ ನಡಿಸುತ್ತಿದೆ. ಅದಕ್ಕೆ ಹಿಂದೀಯರ ಉತ್ಸಾಹಪರ ಸಹಕಾರಬೇಕಾಗಿದೆಯೆಂದೇ ಸೇನಾಧ್ಯಕ್ಷರ ನಿರೂಪಣೆ.

ಲೋಕವಿನಾಶಕವಾದ ಯುದ್ಧವು ಆರಂಭವಾಗಿ, ಇಂಗ್ಲೆಂಡಿನ ಮೇಲೆಯೇ ಧಾಳಿ ನಡಿಸಲ್ಪಡುವ ಗಂಡಾಂತರ ಬರಬೇಕಾಯಿತು. ಸರಕಾರಕ್ಕೆ ಹಿಂದೂದೇಶದ ರಕ್ಷಣೆಯ ವಿಷಯವನ್ನು ಬೆಳಕಿಗೆ ತರಲಿಕ್ಕೆ! ಸುಮಾರು 35 ಕೋಟಿ ಜನಸಂಖ್ಯೆಯುಳ್ಳ ಒಂದು ಭೂಖಂಡವೇ ಆಗಿದ್ದು ವಿಶಾಲವಾದ ಸಮುದ್ರ ಕರಾವಳಿ ಇರುವ ಹಿಂದೂದೇಶದ ರಕ್ಷಣೆಯ ಕುರಿತು ಸರಕಾರವು ಮಾಡಿರುವ ಸಿದ್ಧತೆಯು ಅಪಹಾಸ್ಯಕರವಿರುವುದು. ಹಿಂದೂದೇಶಕ್ಕಿಂತ 10 ಪಾಲು ಚಿಕ್ಕ ರಾಷ್ಟ್ರಗಳು ಲಕ್ಷಗಟ್ಲೆ ಸೇನಾಸಿದ್ಧತೆಮಾಡುತ್ತಿರುವಾಗ ಹಿಂದೀ ಸರಕಾರವು ಒಂದೆರಡು ಲಕ್ಷ ಸೈನಿಕರನ್ನು ಸಿದ್ಧಗೊಳಿಸುವುದೆಂದರೆ ಇನ್ನಾದರೂ ಸರಕಾರದ ಮನೋವೃತ್ತಿಯು ಬದಲಾಗಿಲ್ಲೆಂಬುದು ಸಿದ್ಧವಾಗುವುದು. ಹಿಂದೀ ನೌಕಾಪಡೆಯು ಒಂದು ಬಂದರನ್ನು ಕೂಡಾ ರಕ್ಷಿಸಲು ಸಾಲದು. ಈ ಪಡೆ 1939-40ರಲ್ಲಿದ್ದ ಹಿಂದೀ ಆಫೀಸರರು ಕೇವಲ 18 ಮಂದಿ. ಹಿಂದೀ ವಿಮಾನ ಪಡೆಯಲ್ಲಿ 1939-40ರಲ್ಲಿದ್ದ ಆಫಿಸರರು ಬರೇ 16 ಮಂದಿ ಮತ್ತು ಇತರ ವೈಮಾನಿಕರು 156 ಮಂದಿ. ಸರ್. ರೋಬರ್ಟ್ ಕಾಸ್ಸೆಲ್ಸರ ಅಭಿಪ್ರಾಯದಂತೆ ಈ ಸಂಖ್ಯೆಯನ್ನು 4 ಪಾಲು ಹೆಚ್ಚಿಸಿದರೆ 64 ಆಫೀಸರರು ಮತ್ತು 624 ಸರ್ವಸಾಮಾನ್ಯ ವೈಮಾನಿಕರಾಗುವರು. ಬೇರೆ ಸ್ವತಂತ್ರ ರಾಷ್ಟ್ರಗಳ ಮಾತಂತಿರಲಿ, ಹಿಂದೂದೇಶಕ್ಕಿಂತ ಬಹಳ ಚಿಕ್ಕದಾಗಿದ್ದು ಬ್ರಿಟಿಷ್ ಸಾಮ್ರಾಜ್ಯದ ಅಧೀನ ರಾಷ್ಟ್ರವಾದ ಕೆನಡದಲ್ಲಿ ಹಿಂದುದೇಶಕ್ಕಿಂತ 12 ಪಾಲು ಹೆಚ್ಚು ವಿಮಾನಪಡೆಯಿದೆ. ಹಿಂದೂದೇಶದಲ್ಲಿ ವೈಮಾನಿಕ ಯಾಂತ್ರಿಕರ ಅಭಾವವಿದೆಯೆಂದು ಸೇನಾಧ್ಯಕ್ಷರ ಅಂಬೋಣ. ಈ ಅಭಾವವು ಆಸ್ಟ್ರೇಲಿಯಾ ಮೊದಲಾದ ದೇಶಗಳಲ್ಲಿಯೂ ಇದ್ದಿತು. ಆದರೆ ಇತ್ತಲಾಗಿ ಆಸ್ಟ್ರೇಲಿಯದಲ್ಲಿ 400ರವರೆಗೆ ಶಾಲೆಗಳು ತೆರೆಯಲ್ಪಟ್ಟು ಯುವಕರನ್ನು ಚತುರ ವೈಮಾನಿಕರಾಗಿ ತರಬೇತುಮಾಡಲಾಯಿತು. ಜರ್ಮನಿಯು ಮಿತ್ರರಾಷ್ಟ್ರಗಳ ಎದೆ ನಡುಗುವಂತೆ ಲಕ್ಷಗಟ್ಲೆ ವೈಮಾನಿಕರನ್ನು ಮತ್ತು ವಿಮಾನ ಪಡೆಯನ್ನು ತಯಾರಿಸಿರುವುದು. ಕೇವಲ ಕಳೆದ ಐದಾರು ವರ್ಷಗಳಲ್ಲಿ ಬ್ರಿಟಿಷ್ ಸರಕಾರವು ಕೆಲವೇ ವರ್ಷಗಳ ಮೊದಲು ಕಣ್ಣು ತೆರೆದು ಹಿಂದೀಯರ ಮೇಲೆ ವಿಶ್ವಾಸವಿಟ್ಟು ದೊಡ್ಡ ಸೇನೆಯನ್ನು ಸಿದ್ಧಗೊಳಿಸುವಷ್ಟರ ವಿವೇಕವುಳ್ಳದಾಗಿದ್ದರೆ ಇಂದು ಅದಕ್ಕೆ ಹಿಂದೂದೇಶವು ದೊಡ್ಡ ಆಶ್ರಯವಾಗುತ್ತಿತ್ತು. ಇನ್ನಾದರೂ ಅದು ಬುದ್ಧಿ ಕಲಿಯುವುದೇ ಎಂಬುದು ಸಂದೇಹಕರ.

ಲೋಕದ ನಾಗರಿಕತೆಯ ರಕ್ಷಣೆಗಾಗಿ ಹಿಂದೀಯರು ಮುಂದಾಗಬೇಕೆಂದು ವಿನಂತಿಮಾಡಿಕೊಂಡರೆ ಹಿಂದೀಯರ ಹೃದಯದಲ್ಲಿದು ಉತ್ಸಾಹವನ್ನುಂಟುಮಾಡಲಾರದು. ಬ್ರಿಟಿಷ್ ಸರಕಾರವು ನಿಜವಾಗಿಯೂ ಪ್ರಜಾಸತ್ತೆಯ ರಕ್ಷಣೆಗಾಗಿ ಹೋರಾಡುವುದಾದರೆ ಹಿಂದೀಯರಿಗೆ ಕೂಡಲೆ ಸ್ವಾತಂತ್ರ್ಯವನ್ನೀಯುವ ನಿರೂಪಣೆ ಹೊರಡಿಸಿ ಹಿಂದೂದೇಶದಲ್ಲಿ ನಿಜವಾದ ಪ್ರಜಾಸತ್ತಾತ್ಮ ರಾಜ್ಯಭಾರವನ್ನು ಆರಂಭಿಸಬೇಕು. ಆಗ ಹಿಂದೀಯರೆಲ್ಲರೂ, ಇಂಗ್ಲೆಂಡಿನ ಗಂಡಾಂತರ ತಮ್ಮ ಗಂಡಾಂತರವೆಂದು ಬಗೆದು ಅತ್ಯುತ್ಸಾಹದಿಂದ ಅದಕ್ಕೆ ನೆರವಾಗದಿರಲಾರರು. ಬ್ರಿಟನಿಗೆ ಬೇಕಾದ ಜನ ಮತ್ತು ಧನ ಸಹಾಯವನ್ನು ಹಿಂದುದೇಶವು ಸಂತೋಷದಿಂದ ಒದಗಿಸಿಕೊಡದಿರಲಾರದು. ಆದರೆ ಹಿಂದೀ ಸ್ವಾತಂತ್ರ್ಯದ ಪ್ರಶ್ನೆಯನ್ನು ಇನ್ನೂ ಇನ್ನೂ ಮುಂದೆ ಹಾಕುತ್ತಾ ಹಾಡಿದ್ದನ್ನೇ ಹಾಡುತ್ತಾ ಬಂದರೆ ಬ್ರಿಟನಿಗೆ ಸಹಾಯಮಾಡಲು ಹಿಂದೀಯರು ಉತ್ತೇಜನ ಪಡಲಾರರು. ಮಾತ್ರವಲ್ಲದೆ, ಹಿಂದೂದೇಶದಲ್ಲೇ ವಿಷಮ ಪರಿಸ್ಥಿತಿಯುಂಟಾಗಬಹುದು.

ಮತ್ತೂ ದೊಡ್ಡ ಗಂಡಾಂತರ!

ಇನ್ನು ಕೆಲವೇ ದಿನಗಳಲ್ಲಿ ಇಟಲಿಯು ಯುದ್ಧಕ್ಕೆ ಸೇರುವುದು ನಿಶ್ಚಯವೆಂದು ಹೇಳಬಹುದು. ಅದು ಪ್ರಥಮವಾಗಿ ರಾಜಿಯ ಪ್ರಯತ್ನ ಮಾಡುವುದು. ಯುದ್ಧವನ್ನು ನಿಲ್ಲಿಸಿ ಶಾಂತಿಯ ಪರಿಷತ್ತೊಂದನ್ನು ಕರೆದು ಸಂಧಿಯ ಶರ್ತಗಳನ್ನದರಲ್ಲಿ ಚರ್ಚಿಸಿ ಇತ್ಯರ್ಥಗೊಳಿಸಬೇಕೆಂದು ಸೂಚಿಸುವುದು. ಅದಕ್ಕೆ ಮಿತ್ರರಾಷ್ಟ್ರಗಳೊಪ್ಪದಿದ್ದಲ್ಲಿ ಅದೂ ಜರ್ಮನಿಯೊಂದಿಗೆ ಯುದ್ಧಕ್ಕಿಳಿಯುವುದು. ಈ ಸಂದರ್ಭದಲ್ಲಿ ಜರ್ಮನಿಯೊಡನೆ ಯಾವ ತರದ ರಾಜಿಮಾಡುವುದಕ್ಕೂ ಮಿತ್ರರಾಷ್ಟ್ರಗಳು ಸಿದ್ಧವಿರಲಾರವು. ಹಿಟ್ಲರರು ಬೆಲ್ಜಿಯಮನ್ನು ಗೆದ್ದು ಫ್ರಾನ್ಸಿನ ಕೆಲವು ಭಾಗವನ್ನು ವಶಮಾಡಿಕೊಂಡಿರುವರಾದರೂ ಯುದ್ಧದಲ್ಲಿ ಜಯಹೊಂದಿರುವುದಿಲ್ಲ. ಫ್ರೆಂಚ್ ಸೇನೆಯು ದಕ್ಷಿಣದಲ್ಲಿ ಇನ್ನೂ ಪ್ರಬಲವಾಗಿ ಸುಸಂಘಟಿತವಾಗಿರುವುದು. ಬ್ರಿಟಿಷ್ ಸೇನೆಯೊಡನೆ ದೊಡ್ಡ ಯುದ್ಧವೇನೂ ಇನ್ನೂ ನಡೆದಿಲ್ಲ. ಫ್ಲಾಂಡರ್ಸಿನಿಂದಲೂ ಮಿತ್ರರಾಷ್ಟ್ರಗಳ ಸೇನೆಗಳು ಸುರಕ್ಷಿತವಾಗಿ, ಒಂದಿಷ್ಟು ಧೃತಿಗೆಡದೆ ಹಿಂದೆ ಬಂದಿರುವವು. ಆದುದರಿಂದ ಜಯಾಪಜಯ ನಿಶ್ಚಯದ ಪ್ರಚಂಡ ಯುದ್ಧವು ಇನ್ನೂ ಮುಂದೆ ನಡೆಯಬೇಕು. ಬ್ರಿಟಿಷ್ ನೌಕಾ ಪಡೆಯು ಅತಿ ಪ್ರಬಲವಾಗಿಯೇ ಉಳಿದಿರುವುದು. ವಿಮಾನ ಯುದ್ಧದಲ್ಲಿ ಜರ್ಮನಿಯು ಅತಿ ಪ್ರಬಲವಾಗಿರುವುದಾದರೂ ನೆಲ ಜಲ ಸೇನೆಗಳಲ್ಲಿ ಮಿತ್ರರಾಷ್ಟ್ರಗಳೇ ಬಲಶಾಲಿಗಳಾಗಿರುವವೆಂದರೂ ತಪ್ಪಾಗಲಾರದು. ಹಿಟ್ಲರರು ತನ್ನ ಸರ್ವ ಸೇನಾಬಲವನ್ನು ಫ್ಲಾಂಡರ್ಸ್ ರಣರಂಗದಲ್ಲಿ ಉಪಯೋಗಿಸಿ ಅಪಾರ ನಷ್ಟಕ್ಕೊಳಗಾಗಿರುವರು. ಆದರೆ ಮಿತ್ರರಾಷ್ಟ್ರಗಳು ಈ ವರೆಗೆ ಅಂತಹ ದೊಡ್ಡ ನಷ್ಟವನ್ನೇನೂ ಪಡೆದಿರುವುದಿಲ್ಲ. ಆದುದರಿಂದ ಹಿಟ್ಲರರೀಗ ಇಟಲಿಯು ಯುದ್ಧಕ್ಕಿಳಿಯುವಂತೆ ಒತ್ತಾಯಪಡಿಸಿ ಈ ಕಂಟಕ ಕಾಲದಲ್ಲಿ ಮಿತ್ರರಾಷ್ಟ್ರಗಳು ಸಾವರಿಸಿಕೊಳ್ಳುತ್ತಿರುವಾಗ ಅವನ್ನು ಮತ್ತಷ್ಟು ಕಂಗೆಡಿಸಿ ಬಗ್ಗುಬಡಿಯಬೇಕೆಂದು ಪ್ರಯತ್ನಿಸುತ್ತಿರುವರು. ಆದರೆ ಪ್ರೆಸಿಡೆಂಟ್ ರೂಸ್‌ವೆಲ್ಟರು, ಇಟಲಿಯು ಯುದ್ಧಕ್ಕಿಳಿಯದಂತೆ ತಡೆಗಟ್ಟಲು ಸಾಧ್ಯವಾದ ಪ್ರಯತ್ನವನ್ನೆಲ್ಲಾ ಮಾಡುತ್ತಿರುವರು. ಆದರೆ ಅದರಿಂದೇನೂ ಫಲವಾಗುವ ಹಾಗೆ ತೋರುವುದಿಲ್ಲ. ಅವರೇ ನಿರಾಶೆಗೊಂಡು ಯುದ್ಧವು ಒಂದಲ್ಲಹಲವು ಭೂಖಂಡಗಳಿಗೆ ಹಬ್ಬುದೆಂದು ಉದ್ಗಾರವೆತ್ತಿರುವರು.

ಇಟಲಿಯು ಸಂದರ್ಭಾನುಸಾರ ಯುದ್ಧಕ್ಕಿಳಿಯಬಹುದೆಂಬ ಸಂಶಯವು ಮಿತ್ರರಾಷ್ಟ್ರಗಳಿಗೆ ಇದ್ದೇ ಇದ್ದಿತು. ಆದುದರಿಂದ ಈ ಗಂಡಾಂತರದ ಸಂದರ್ಭದಲ್ಲೂ ಅವರು ತಮ್ಮ ಸಾಮ್ರಾಜ್ಯ ಸಂದುಕಟ್ಟಿನ ಸ್ಥಳಗಳಲ್ಲಿರಿಸಿರುವ ಸೇನೆಗಳನ್ನು ಹಿಂದೆ ಕರೆಸಿರುವುದಿಲ್ಲ. ಭೂಮಧ್ಯ ಸಾಗರದಲ್ಲಿ ದೊಡ್ಡ ಬ್ರಿಟಿಷ್ ನೌಕಾಪಡೆಯಿದೆ. ಸೂಯೆಜ್, ಪೋರ್ಟ್‌ಸೈಡ್, ಕೈರೋ, ಅಲೆಗ್ಜಾಂಡ್ರಿಯಾ ಮೊದಲಾದ ಸ್ಥಳಗಳ ರಕ್ಷಣೆಯ ವ್ಯವಸ್ಥೆಯನ್ನು ಇಂಗ್ಲೆಂಡು ಮೊದಲೇ ಮಾಡಿದೆ. ಜಿಬೌತಿ ಮೊದಲಾದ ಸ್ಥಳಗಳಲ್ಲಿ ಫ್ರೆಂಚ್ ಸೇನೆಯೂ ಇದೆ. ಆದರೆ ಇಟಲಿಯು ಈ ಸಂದರ್ಭದಲ್ಲಿ ಯುದ್ಧಕ್ಕಿಳಿದರೆ ಮಿತ್ರ ರಾಷ್ಟ್ರಗಳು ಮತ್ತೂ ದೊಡ್ಡ ಗಂಡಾಂತರಕ್ಕೊಳಗಾಗುವವು. ಯುದ್ಧವು ಪೂರ್ವಕ್ಕೂ ಹಬ್ಬಿ ವ್ಯಾಪಿಸುವಂತಾಗುವುದು, ಭೂಮಧ್ಯ ಸಾಗರದಲ್ಲಿ ಅತಿ ದೊಡ್ಡ ಜಲಯುದ್ಧವಾಗಲಿರುವುದು. ಇಟಲಿಯ ಸಹಾಯಕ್ಕೆ ಸ್ಪೈನು ಕೂಡಾ ಬಾರದೆ ನಿರ್ವಾಹವೇ ಇಲ್ಲ. ಆಗ ಜಿಬ್ರಾಲ್ಟರ್ ಸಮುದ್ರ ಕೋಟೆಗೂ ಅಪಾಯ ತಪ್ಪಲಾರದು, ಭೂಮಧ್ಯ ಸಾಗರ, ಸೂಯೆಜ್ ಕಾಲುವೆ, ಕೋರ್ಸಿಕ ಮತ್ತು ಜಿಬೌತಿ ಮೊದಲಾದವುಗಳನ್ನು ತನ್ನ ಅಧೀನಪಡಿಸಿಕೊಳ್ಳಲು ಇಟಲಿಯು ತನ್ನ ಸರ್ವ ಶಕ್ತಿಯನ್ನೂ ಉಪಯೋಗಿಸಿ ಪ್ರಯತ್ನಿಸುವುದಂತೂ ನಿಶ್ಚಯ. ಫ್ರಾನ್ಸಿನ ಮೇಲೆ ಪೂರ್ವದಿಂದ ಇಟಲಿಯು ಧಾಳಿಯಿಡಬಹುದು. ಅತ್ತ ಸ್ಪೈನೂ ಯುದ್ಧಕ್ಕಿಳಿದರೆ ಫ್ರಾನ್ಸಿನ ಅವಸ್ಥೆಯೇನಾಗುವುದೆಂದು ಹೇಳಬರುವುದಿಲ್ಲ. ಈ [illegible] ತೋರಿಬರುವ ಒಂದೇ ಒಂದು ಆಶಾಕಿರಣವೆಂದರೆ ಅಮೇರಿಕ. ಇಟಲಿಯು ಯುದ್ಧಕ್ಕಿಳಿದರೆ ತಾನು ಮಿತ್ರ ರಾಷ್ಟ್ರಗಳ ಪಕ್ಷ ಹಿಡಿಯಬೇಕಾಗುವುದೆಂದು ಸ್ಪಷ್ಟಪಡಿಸಿ ಅಮೇರಿಕವು ಆ ಪ್ರಕಾರ ನಡೆದರೆ ಮಾತ್ರ [illegible] ವಿಪತ್ತಿನಿಂದ ಪಾರಾಗಬಹುದು.

ಸರ್ವಾಂಗ ಭದ್ರತೆಯೂ ಹಾಗೂ ಅಭಿವೃದ್ಧಿಯ ಮೇಲ್ಮೆಯುಳ್ಳಿರುವ ಜೀವ ವಿಮಾ ಸಂಘೆಯಾವುದೆಂದು ಸರ್ವದಾ ಚಿಂತಿಸುತ್ತಿರುವ ಜೀವವಿಮಾದಾರರಿಗೂ ಪ್ರಾತಿನಿಧ್ಯ ಪಡೆಯಲಪೇಕ್ಷಿಸುವ ಗೃಹಸ್ಥ ಗೃಹಿಣಿಯರಿಗೂ ಶೀಘ್ರದಲ್ಲೇ ಇಷ್ಟಾರ್ಥ ಸಿದ್ಧಿಯಾಗಬೇಕೆಂದಿದ್ದರೆ ಕೂಡಲೇ ನಮ್ಮೊಡನೆ ವಿಚಾರಿಸಿರಿ:—

ಶಾಖಾ ಕಾರ್ಯದರ್ಶಿ,
ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್, ಮದ್ರಾಸು.
ಮಂಗಳೂರು ಬ್ರಾಂಚ್.

ಎಷ್ಟರ…

ಹಿಂದೀ ಸ…
ಕಾರಕ್ಕೆ ಈಗ…
ಪಸ್ಸಿರುವಂತೆ ಕ…
ಲ್ಲಿ ಹಿಂದುದೇಶ…
ಕ್ಕಾಗಿ ಅದರ ಪ್ರ…
ಕಾಂಕ್ಷೆಯ…
ತಿಳಿ ಸಹಾನುಭ…
ಬ್ರಿಟಿಷ್ ಸರಕ…
ದೊಡುವ ನಿದ…
ಕ್ಕೀಗ ಪ್ರಾಂತ…
ಗಳು ಪುನಃ…
ಕೂಡಾ ತೊಡ…
ಸಿರುವಂತಿದೆ.
ಕೆಲಕಾಲ ಪ್ರ…
ಅದಕ್ಕಿರುವಂತಿ…
ಬ್ಲಿ ಮೆಂಬರ…
ದು. ಮುಸ್ಲಿಮ…
ಬ್ರಿಟಿಷ್ ಸರಕ…
ವಾಗಿದೆ. ಅದ…
ನ ಬೋಧನೆಕ…
ವಂತಾಗಿರುತ್ತದ…
ರೂ ಕೆಲಕಾಲ…
ಕೊಳ್ಳುವರೆಂದು…
ರು ಇತ್ತಲಾಗಿ…
ಲೇಖನದಿಂದ…
ದಿನ ಗಂಡಾಂ…
ಸ್ವಾತಂತ್ರ್ಯಸ…
ಲು ಅವರಿಗೆ…
ಅಹಿಂಸಾ ಭಾ…
ಆದುದರಿಂದ
ಕಾಪಾಡುವವರ…
ನ್ನೇನೂ ಹೂಡ…
ಯುದ್ಧದ ಬಿಸಿ…
ಗೆ ಅದು ಮತ್ತ…
ತೋರುತ್ತಿದೆ. ಕ…
…
ಸ್ಥಾಪಿಸಿ ಹಿಂದ…
ಹಾಯವನ್ನು…
ಟಿಷ್ ಸರಕಾರ…
ಲ್ಲ ಮಹಾತ್ಮ…
ರಾಗಿ ನಿಲ್ಲುವರ…
ಯೂ ಇರುವುದಿ…
ಕ್ಕೆ ಕಟ್ಟಬಿದ್ದ…
ಸ್ವಾತಂತ್ರ್ಯಸ…
ಷ್ಟು ಕಳಕೊಳ್…
ಆದರ್ಶವಾದವ…
ಮುಸ್ಲಿಮ್ ಲೀ…
ಕ್ಕೆ ಕಾರಣವೇ…
ಗದು. ವಾಸ್ತವ…
ಪರ ಕಾಲ್ಪನಿಕ…
ಸುವುದು ರಾಜ…
ದೊಡ್ಡ ಪ್ರಮಾ…
ಣ ಪ್ರಮಾದವ…
ತೀಯದಲ್ಲಿ ನಡೆ…
ಅಭಿಮತ.

ಯುದ್ಧವು ಹ…
ಹೊಂದಿ ಶಾಂತಿ…
ದೇಶಕ್ಕೆ 'ಶಕ್ತಿಯ…
ಸಂದರ್ಭದಲ್ಲಿ ತ…
ಯನ್ನು ಮುಂ…

... ತಟಸ್ಥ

...ಕುರಿತು ಸರ ...ವುದಕ್ಕೂ ಮ ...ಲ್ಲ. ಯುದ್ಧದ ...ರುವ ಸಹಾಯ ...ತ್ತು ಅದರ ಅ ...ಲ ಬಾಯಿಮಾ ...ಷ್ಟೇ ಕೋರಿಸಿ ...ದಷ್ಟು ಸಮಯ ...ರುವಂತಿದೆ. ಕಾ ...ಂಗ್ರೆಸ್ ಮಂತ್ರಿ ...ಕ್ಕೆ ಬರುವುದು ...ರ್ಕಾರವು ಭಾವಿ ...ಯನ್ನು ಇನ್ನು ...ಸುವ ಮಹಸ್ಸೇ ...ದರಿಂದ ಎನೆಂ ...ನ್ನು ನಿಲ್ಲಿಸಿರುವು ...ಘೋಷಣೆಯು ...ಲ ಅನುಕೂಲ ...ಯರಿಗೆ ಒಕ್ಕಟ್ಟ ...ಕಾಲ ಕಳೆಯು ...ಕಾಂಗ್ರೆಸ್ಸಿನವ ...ಸುಮ್ಮಗೆ ಕುಳಿತು ...ಗಾಂಧಿಯವ ...ಲ್ಲಿ ಪ್ರಕಟಿಸಿರುವ ...ಸುತ್ತದೆ. ಇಂಗ್ಲೆಂ ...ಹಿಂದುದೇಶದ ...ಉಪಯೋಗಿಸ ...ಅದು ಅವರ ...ಹೋಗುವುದಿಲ್ಲ. ...ನ ಯುದ್ಧದ ...ಾಯಿದೆಭಂಗವ ...ವಹಿಸುವರು. ...ದರೂ ಯಾವಾ ...ವ ಸಂಭವವೇ ...ಕದಲ್ಲೂ ಹಿಂ ...ಸರಕಾರವನ್ನು ...ಪರ ಸ ...ಮನಸ್ಸು ಬ್ರಿ ...ತೋರುವುದಿ ...ವರು ತಟಸ್ಥ ...ಆ ಅವಶ್ಯಕತೆ ...ಆದರ್ಶ ವಾದ ...ತ್ಮರು ದೇಶದ ...ಸಂದರ್ಭವ ...ರುತ್ತದೆ. ಈ ...ಗ್ರೆಸ್ ಮತ್ತು ...ಗಣ ವೈಷಮ್ಯ ...ದರೂ ತಪ್ಪು ...ಯಿದೆ, ಆದರ್ಶ ...ಲ್ಲಿಯೇ ಏಕರಿ ...ದೃಷ್ಟಿಯಿಂದ ...ಬಾರದು, ಅಂತ ...ಹಿಂದೀ ರಾಜ ...ಶವೆಂದು ತಮ್ಮ

...ಮ ದಿಕ್ಕ ಕೊಡ ...ದೇಶ, ಹಿಂದೂ ...ಶಾಂತಿಯಾಗುವ ...ತಂತ್ರ್ಯದ ಪ್ರಶ್ನೆ ...ಈಗ ಅದು

ತ್ತಪ್ತಿಕರವಾಗಿ ಇತ್ಯರ್ಥ ಹೊಂದಬಹು ದೆಂಬ ಆಶೆಯು ಗಾಂಧಿಜಿಯವರ ಲೇಖನ ದಲ್ಲಿ ತೋರಿಬರುತ್ತದೆ. ಹಿಂದೂದೇಶವು ಇದೇ ರೀತಿಯ ಸಿದ್ಧತೆಯನ್ನು ಮುನ್ನ ಡಿಸಿ ಲೋಕದ ಸಹಾನುಭೂತಿಪಡೆಯ ಬೇಕು ಯುದ್ಧ ಮುಗಿದು ಶಾಂತಿಯಾ ಗುವಾಗ ಲೋಕ ಮತದ ಸಮಕ್ಷಮ ದಲ್ಲಿ ತನ್ನ ಸ್ವಾತಂತ್ರ್ಯದ ಪ್ರಶ್ನೆಯ ನ್ನು ಮುಂದೊತ್ತಬೇಕೆಂಬುದೇ ಮಹಾ ತ್ಮರ ಅಭಿಪ್ರಾಯವಿರುವಂತಿದೆ. ಈಗ ಯುದ್ಧದಲ್ಲಿ ನಿರತವಾಗಿರುವುದು ಯು ರೋಪಿನ ರಾಷ್ಟ್ರಗಳು. ಅವುಗಳಲ್ಲಿ ಪ್ರತಿ ಯೊಂದೂ ಸಾಮ್ರಾಜ್ಯವಾದಿ ರಾಷ್ಟ್ರವಾಗಿ ದೆ. ಅವುಗಳು ರಾಜಿಮಾಡಿಕೊಳ್ಳುವಾಗ ಲೋಕದ ರಾಜ್ಯಗಳನ್ನು ಯಾಂತ್ಯರೊಳಗೆ ಎಷ್ಟೆಷ್ಟು ಹಂಚಿಕೊಳ್ಳಬೇಕೆಂಬ ಪ್ರಶ್ನೆ ಯೇ ಮುಖ್ಯವಾಗುವುದೇ ಹೊರತು ಲೋ ಕದ ರಾಷ್ಟ್ರಗಳೆಲ್ಲಾ ಸ್ವತಂತ್ರವಾಗಿ ಪ್ರಜಾ ಸತ್ತಾತ್ಮಕ ರಾಜ್ಯಭಾರ ಪಡೆದು ಸರಿಸ ಮಾನ ಬಾಂಧವ್ಯದಿಂದ ಇರಬೇಕೆಂಬ ವಿ ಷಯವೇ ಬರಲಾರದು. 1914ರ ಯುದ್ಧ ದಿಂದ ಹಿಂದೀಯು ಚಿತ್ತವೇಧಕವಾಗಿ ಕಲಿ ತ ಪಾಠವಿದು. ಆಸಲ ಹಿಂದೀಯರೆಲ್ಲಾ ಒಮ್ಮತದಿಂದ ಬ್ರಿಟಿಷರಿಗೆ ಸಹಾಯಮಾ ಡಿನೋಡಿದರು. ಈಸಲ ಸುಮ್ಮಗೆ ಕೈಕಟ್ಟಿ ಕುಳಿತು ನೋಡಿದರಾಯಿತು. ಯುದ್ಧ ಮುಗಿಯುವವರೆಗೆ ಹೀಗೆಯೇ ಕೈಕಟ್ಟಿ ಕುಳಿತು ಆಮೇಲೆ ಚಳವಳಹೂಡಿದರೆ ಅದ ನ್ನಡಗಿಸುವುದೇನೂ ಕಷ್ಟವಾಗಲಾರದು. ಬಿಸಿಯಿದ್ದಾಗಲೇ ಬಲವಾಗಿ ಬಡಿದರೆ ಮಾತ್ರ ಕಬ್ಬಿಣವು ಬೇಕಾದಂತೆ ಬಗ್ಗು ವುದು.

ಮೊಗವೀರ ವ್ಯವಸ್ಥಾಪಕ ಮತ್ತು ಧರ್ಮೋದ್ಧಾರಕ ಮಂಡಳಿಗಳ ಸಮ್ಮೇಳನ

ಕೆಲವು ವರ್ಷಗಳಿಂದೀಚೆಗೆ ಮೊಗವೀರ ಸಮಾಜ ದಲ್ಲಿ ಸರ್ವಸಾಧಾರಣ ಒಂದೇ ತರದ ಉದ್ದೇಶಗಳ ನ್ನೊಳಗೊಂಡ ಮೊಗವೀರ ವ್ಯವಸ್ಥಾಪಕ ಮತ್ತು ಮೊಗವೀರ ಧರ್ಮೋದ್ಧಾರಕವೆಂಬ ನಾಮಧೇಯ ಗಳಿಂದ ಪ್ರತ್ಯಪ್ರತ್ಯೇಕವಾಗಿ ಕೆಲಸಮಾಡುತ್ತಿರು ವುದು ಜಾತಿಯ ಒಕ್ಕಟ್ಟಿಗೆ ತೊಡಕಾಗಿರುವದು. ಈ ಎರಡು ಸಂಸ್ಥೆಗಳ ಪರಸ್ಪರ ಭಿನ್ನಭಿಪ್ರಾಯಗ ಳನ್ನು ಮರೆಯಿಸಿ ಜಾತಿಯ ಉನ್ನತಿ ಮತ್ತು ಐಕ್ಯ ತೆಯನ್ನು ಸಾಧಿಸುವ ಧ್ಯೇಯದಿಂದ ಶ್ರೀ. ಕಜ್ಜಾಡಿ ಮೋಹನ, ಬಿ. ಪುತ್ರನವರು ಗೈದ ಪ್ರಯತ್ನದ ಫಲ ದಾಯಕ ಪರಿಣಾಮವಾಗಿ ಎರಡೂ ಮಂಡಳಿಗಳು ಕ್ರಮವಾಗಿ ತಮ್ಮ ಮಹಾಸಭೆಗಳ ಮಂಜೂರಾತಿ ಗಳಿಂದ ತಾ. 11-4-40ರಲ್ಲಿ ಸಮ್ಮೇಳನವಾಗಿರು ವುದನ್ನು ಈ ಮೂಲಕ ಸರ್ವರಿಗೂ ತಿಳಿಸಲು ಹರ್ಷ ಪಡುವೆವು.

ಈ ಸುಸಂಧಿಯಲ್ಲಿ ತಮ್ಮೊಡನೆ ಸಮ್ಮಿಲನ ಹೊಂದಿ ದ ಮೊಗವೀರ ಧರ್ಮೋದ್ಧಾರಕ ಮಂಡಳಿಯ ಪ್ರತಿ ನಿಧಿಗಳನ್ನು ಯಥೇಚ್ಛೆಯಾಗಿ ಕಾರ್ಯಕಾರಿ ಸಮಿ ತಿಗೂ ವಾರುಷಕ್ಯಗಾರತನಕ್ಕೂ ಸೇರಿಸಿಕೊಳ್ಳುವ ನಿರ್ಣಯದಿಂದ ತಮ್ಮ ಭ್ರಾತೃಭಾವವನ್ನೂ, ಅನ್ಯೋನ್ಯತೆಯನ್ನೂ ತೋರಿಸಲ್ಪಡಲಾಗಿದೆ,

ಮೊಗವೀರ ಧರ್ಮೋದ್ಧಾರಕ ಮಂಡಳಿ

ಬಿ. ಯನ್. ರಾವ್

ಎ. ಬಿ. ಕೋಟ್ಯಾನ್

ಮಾಜಿ ಜತೆ ಕಾರ್ಯದರ್ಶಿಗಳು.

ಮೊಗವೀರ ವ್ಯವಸ್ಥಾಪಕ ಮಂಡಳಿ

ಆರ್. ಕೆ. ಕುಂದರ್

ಬಿ. ಶಿವಸಾಲಿಯಾನ್

ಮಾಜಿ ಜತೆ ಕಾರ್ಯದರ್ಶಿಗಳು.

ಮುಸಲೋನಿಯವರು ಎಂದು ಯುದ್ಧ ಹೂಡುವರು?

ಇಟಲಿಯು ಯುದ್ಧಕ್ಕಿಳಿಯುವುದೀಗ ನಿಶ್ಚಯವೆಂದು ಫ್ರಾನ್ಸ್ ಮತ್ತು ಇಂಗ್ಲೆಂ ಡುಗಳಿಗೆ ತಿಳಿದಿದೆ. ಆದರೆ ಯಾವಾಗ ಮತ್ತು ಯಾವ ರೀತಿಯಲ್ಲಿ ಮುಸಲೋನಿ ಯವರು ಯುದ್ಧ ಹೂಡುವರೆಂಬುದು ತಿಳಿ ದಿಲ್ಲ. ಫ್ರಾನ್ಸಿನ ಮೇಲೆ ಧಾಳಿನಡಿಸುವರೇ? ಅಥವಾ ಮಾಲ್ಟಾ, ಸುಯೆಜ್ ಕಾಲುವೆ, ಜಿಬ್ರಾಲ್ಟರ್ ಮೊದಲಾದುವುಗಳನ್ನು ವಶಪಡಿ ಸಿಕೊಳ್ಳಲೆತ್ನಿಸುವರೋ ಎಂಬುದು ತಿಳಿದಿ ಲ್ಲ. ಕಳೆದ ಆರೇಳು ತಿಂಗಳುಗಳಿಂದ ಇಟ ಲಿಯು ಭರದಿಂದ ಯುದ್ಧಸಿದ್ಧತೆಮಾಡು ತ್ತಾ ಬಂದಿದೆ. ಇಂದೀಗ ಅದರ ಸೇನೆಯು ಹೋರಾಡಲು ಅಣಿಯಾಗಿ ನಿಂತಿದೆ.

"ನೈತಿಕ ಮತ್ತು ರಾಜಕೀಯ ಕಾರಣಗ ಳ ನಿಮಿತ್ತ ಇಟಲಿಯು ಇಂದು ಯುದ್ಧಕ್ಕೆ ಹೋಗಬೇಕಾಗಿದೆ. ಯುರೋಪಿನ ದೊಡ್ಡ ರಾಷ್ಟ್ರಗಳೆಲ್ಲಾ ಭಾಗವಹಿಸಿರುವ ಯುರೋ ಪಿನ ಅದೃಷ್ಟವೇ ನಿಶ್ಚಿಸಲ್ಪಡುವ ಯುದ್ಧ ದಲ್ಲಿ ಇಟಲಿಯಂತಹ ಮಹಾರಾಷ್ಟ್ರವು ಸೇ ರದಿರಲು ಸಾಧ್ಯವಿಲ್ಲ. ನಾವು ಸಕಾಲದಲ್ಲಿ ಯುದ್ಧಕ್ಕಿಳಿಯದ ಪಕ್ಷದಲ್ಲಿ ದೊಡ್ಡ ಜ ನಾಂಗವೆನಿಸಲು ಅರ್ಹರಲ್ಲ. ಇಟಲಿಯು ಯುದ್ಧಕ್ಕೆ ಸೇರಲು ರಾಜಕೀಯ ಕಾರಣ ವೆಂದರೆ ಭೂಮಧ್ಯ ಸಾಗರ ಮತ್ತು ವಸಾ ಹತುಗಳ ವಿಷಯದಲ್ಲಿ ನ್ಯಾಯವನ್ನು ಪ ಡೆಯುವುದು. ಕಳೆದ ಮಹಾಯುದ್ಧದಲ್ಲಿ ಇಟಲಿಯು ಆಲ್ಪ್ಸ ಪರ್ವತ ಭಾಗದ ಎಲ್ಲೆ ಯನ್ನೇನೋ ಪಡೆಯಿತು. ಆದರೆ ಭೂಮ ಧ್ಯ ಸಾಗರದಲ್ಲದು ಸಂಪೂರ್ಣ ಸ್ವಾತಂತ್ರ್ಯ ಪಡೆಯಬೇಕು. ಅದಕ್ಕಾಗಿ ನಾವು ಹೋ ರಾಡಬೇಕು. ಅದೇನೂ ಹಣ್ಣಾದ ಸೇಬಿನ ಹಣ್ಣಿನಂತೆ ಉದುರಿಬೀಳಲಾರದು" ಎಂದು ಕೌಂಟ್ ಸಿಯಾನೋರವರ 'ಟೆಲಿಗ್ರಾಫೋ' ಎಂಬ ಪತ್ರಿಕೆಯ ಸಂಪಾದಕ ಸಿನರ್ ಅ ನ್ಸಾಲ್ಡೋರವರು ರೇಡಿಯೋ ಭಾಷಣದಲ್ಲಿ ಹೇಳಿರುವರು.

ಇಟಲಿಯು ಯುದ್ಧಕ್ಕಿಳಿದರೂ ಸ್ಪೈ ನು ಯಥಾಪ್ರಕಾರ ತಟಸ್ಥವಾಗಿರುವುದೆಂ ದು ನೇದ್ರಿದಿನಿಂದ ವಾರ್ತೆ ಬಂದಿದೆ. ಆ ದರೆ ಇದನ್ನು ನಂಬಲಾಗುವುದಿಲ್ಲ. ಏಗು ಪ್ತದಲ್ಲಿ ಮುಂಜಾಗ್ರತೆಯಿಂದ ರಕ್ಷಣಾ ಸಿದ್ಧತೆಗಳೆಲ್ಲಾ ನಡೆದಿವೆ.

ಕ್ಯಾಲೆ ಮತ್ತು ಡಂಕರ್ಕಗಳಲ್ಲಿ ತೀವ್ರ ಯುದ್ಧ

ಕ್ಯಾಲೆ ಕೋಟೆಯು ಇನ್ನೂ ಜರ್ಮನ ರ ವಶವಾಗಿರುವುದಿಲ್ಲ. ಈ ಕೋಟೆಗೆ ಸೇನೆಯನ್ನು ಗಾಳಿಕೊಡೆಗಳ ಮೂಲಕ ಇಳಿಸಲಾಗಿದೆ. ಇಲ್ಲಿರುವ ಚಿಕ್ಕ ಬ್ರಿಟಿಷ್ ಸೇನೆಯು ದೊಡ್ಡ ಜರ್ಮನ್ ಸೇನೆಯ ನ್ನು ಜಯಶೀಲವಾಗಿ ತಡೆಗಟ್ಟಿದೆ. ಬ್ರಿಟಿ ಷ್ ವಿಮಾನಗಳು ಬೋಂಬೆಸೆದು ಜರ್ಮ ನರಲ್ಲಿ ಹೆಚ್ಚಿನ ಪ್ರಾಣಹಾನಿಮಾಡಿವೆ. ಜರ್ಮನರು ಎಷ್ಟೊಂದು ಪ್ರಯತ್ನಿಸಿದರೂ ಕ್ಯಾಲೆಕೋಟೆಯನ್ನವರಿಗೆ ಇಷ್ಟರ ವರೆಗೆ ವಶಪಡಿಸಿಕೊಳ್ಳಲು ಸಾಧ್ಯವಾಗಿರುವು ದಿಲ್ಲ.

ಡಂಕರ್ಕನ್ನು ಕೂಡಾ ಜರ್ಮನರು ಈ ವರೆಗೆ ವಶಪಡಿಸಿಕೊಂಡಿಲ್ಲ. ಬ್ರಿಟಿಷ್ ಮತ್ತು ಫ್ರೆಂಚ್ ಸೈನಿಕರು ಡಂಕರ್ಕ ಮಾರ್ಗವಾಗಿ ಕಳುಹಿಸಲ್ಪಡುತ್ತಲೇ ಇ ದ್ದಾರೆ. ಡಂಕರ್ಕ ಬಂದರವು ಎರಡು ಕಡೆಗಳಲ್ಲಿ ನೀರಿನಿಂದ ಆವರಿತವಾಗಿದೆ. ಫ್ರೆಂಚ್ ಮತ್ತು ಬ್ರಿಟಿಷ್ ಸೈನಿಕರು ಕೋ ಟೆಯೊಳಗಿಂದ ವೀರಾವೇಶದಿಂದ ಕಾದಾ ಡುತ್ತಿದ್ದಾರೆ ಬ್ರಿಟಿಷ್ ವಿಮಾನಗಳು ಜ ರ್ಮನ್ ವಿಮಾನಗಳನ್ನು ಚೆದರಿಸಿ ಜರ್ಮ ನ್ ಸೈನಿಕರ ಮೇಲೆ ಬೋಂಬೆಸೆದು ಅನೇ ಕರು ಕೊಲ್ಲಲ್ಪಟ್ಟಿದ್ದಾರೆ. ಕೊಲ್ಲಲ್ಪಟ್ಟವ ರೂ ಗಾಯಗೊಂಡವರೂ ನೀರೊಳಗೆ ಮು ಳುಗಿ ಅದೃಶ್ಯರಾಗಿಬಿಡುತ್ತಾರೆ. ಡಂಕರ್ಕ ನ ಬಳಿ ಭೀಷಣ ಹಾಗೂ ಅತ್ಯಂತ ಕ್ರೂ ರ ಹೋರಾಟ ನಡೆಯುತ್ತಿರುವುದು. ಜ ರ್ಮನರು ತಮ್ಮ ದೊಡ್ಡ ತೋಪುಗಳನ್ನು ತಂದು ಕೋಟೆಯನ್ನು ಭೇದಿಸಲೆತ್ನಿಸು ತ್ತಿದ್ದಾರೆ.

ಮಕ್ಕಳು ಬೇರೆ ಕಡೆ ಕಳುಹಿಸಲ್ಪಟ್ಟರು

ಇಂಗ್ಲೆಂಡಿನ ಬ್ರಿಟಿಷ್ ಜಲಸಂಧಿನ ಕ ರಾವಳಿಯ ಪಟ್ಟಣಗಳಿಂದ 40,000 ಮ ಕ್ಕಳನ್ನು ಬ್ರಿಟಿಷ್ ಸರಕಾರವು ವೇಲ್ಸ್ ಮತ್ತು ಮಿಡ್‌ಲೇಂಡ್ಸ್ ಪ್ರದೇಶಕ್ಕೆ ಕಳು ಹಿಸಿರುವುದು.

ಸಶಸ್ತ್ರ ಢಕಾಯಿತಿ

ಫರಕಿಬಾದ್ ಪಟ್ಟಣದ ಬಳಿಯ ಒಂದು ಹಳ್ಳಿಯಲ್ಲಿ 25 ಮಂದಿ ಸಶಸ್ತ್ರ ಢಕಾಯಿತರು ಒಂದು ಮನೆಗೆ ನುಗ್ಗಿ ಸ್ತ್ರೀ ಯರನ್ನು ಕ್ರೂರವಾಗಿ ಹಿಂಸಿಸಿ, ಹಳ್ಳಿಗರ ಮೇಲೆ ಗುಂಡುಹಾರಿಸಿ, 8ಮಂದಿಯನ್ನು ಕೊಂದುಹಾಕಿ ರೂ. 7000ದಷ್ಟರ ಹಣ ಮತ್ತು ಆಭರಣಗಳನ್ನೊಯ್ದಿರುವರು.

ಬಾಲಸಾಹಿತ್ಯಮಂಡಲ ಲಿಮಿಟೆಡ್

— ನಮ್ಮ ಹೊಸ ಪ್ರಕಟಣೆಗಳು —

ಈ ಕೆಳಗಿನ ನಮ್ಮ ಹೊಸ ಪ್ರಕಟಣೆಗಳು

ಕ್ಲಾಸು ಉಪಯೋಗಕ್ಕೆ

ಮದ್ರಾಸ್ ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಮಂಜೂರಾತಿ ಪಡೆದಿದೆ.

Vide consocidated list of approved books Fort. St. Georg. Gazate Nos. 17A & 17B d/30-4-40 pages. 59, 60, 62, 68, 70, 71, 86, 87, 88, 92 & 155.

1. ಹೊಸ ಕನ್ನಡ ವಾಚನಮಾಲೆ 1, 2, 3, 4 ಮತ್ತು 5ನೇ ದರ್ಜೆಗಳಿಗೆ.
2. ನೂತನ ಬಾಲಗಣಿತ 3, 4, 5ನೇ ದರ್ಜೆಗಳಿಗೆ ಮತ್ತು VI VII ಮತ್ತು VIII ದರ್ಜೆಗಳಿಗೆ ಅಥವಾ I, II & III ಫಾರ್ಮುಗಳಿಗೆ.
3. ನೂತನ ಸಾಮಾನ್ಯಗಣಿತ IV ಫಾರ್ಮಿಗೆ
4. ಭಾರತದ ಇತಿಹಾಸ I, II, III, IV ಮತ್ತು V ಫಾರ್ಮುಗಳಿಗೆ.
5. „ VI, VII ಮತ್ತು VIIIನೇ ದರ್ಜೆಗಳಿಗೆ.

ಶಾಲಾ ಸೌಕರ್ಯಗೋಸ್ಕರವಾಗಿ ಇದೇ ಜೂನ್ 1ರಿಂದ ನಮ್ಮ ಒಂದು ಶಾಖೆಯನ್ನು ಉಡುಪಿಯ ರಿ ರಿ ಜೀ ದಿ ನಲ್ಲಿ ತೆರೆದಿರುತ್ತೇವೆ.

ಹೆಚ್ಚಿನ ಮಾಹಿತಿಗೆ ಈ ಕೆಳಗಿನವರಿಗೆ ಬರೆದುಕೊಳ್ಳಿರಿ:-

Madiman Padmanabhaya,

Agent: **Balashathya Mandal Ltd.**

Udipi Branch.

ನೋಟೀಸು

ಕುಂದಾಪುರ ದಿ. ಮು. ಕೋರ್ಟಿನಲ್ಲಿ.

O. C. 37/40

ಅರ್ಜಿದಾರಳು—ಸಾರದ ಅಮ್ಮ

ಸದ್ರಿ ಅರ್ಜಿ ವ್ಯವಹರಣೆಯಲ್ಲಿ ಅರ್ಜಿದಾರಳು ತಿಳಿಸುವುದೇನೆಂದರೆ—

ಉಡ್ಪಿ ತಾಲ್ಲೂಕು ಕೋಟ ಪಡ್ಕು ಗ್ರಾಮದ ಪಾಂಡ ವ್ಪನಲ್ಲಿರುವ ಅರ್ಜಿದಾರಳ ಗಂಡ ರಾಮಕೃಷ್ಣ ಹಂದೇರು ತಾರೀಕು 17-9-36ರಲ್ಲು ಬೆಂಗಳೂ ರು ಸಿಟಿ ವಿಶ್ವೇಶ್ವರಪುರ ಸರ್ಕಲ್ ಮಾರುತಿ ಭವನ ಕಾಫಿ ಹೋಟೆಲಿನಲ್ಲಿ ಸಿಸ್ಸಂತತಿಯವರಾಗಿ ಮೃತಪಟ್ಟಿರು ವದ್ರಿಂದ ಸದ್ರಿಯ ಮಗೆ ಅರ್ಜಿದಾರಳು ಹಾರಸುದಾ ರಳಾಗಿದ್ದು ಸದ್ರಿ ರಾಮಕೃಷ್ಣ ಹಂದೇರ ವಶಿಷ್ಟಸ್ಥಿರ ಚರ ಸೊತ್ತುಗಳಿಗೆ ಮತ್ತು ಅವರಿಗೆ ಹೊರಗಿನಿಂದ ಬರತಕ್ಕ ಸಾಲವಸೂಲು ಮಾಡಲಿಕ್ಕೂ ಅರ್ಜಿದಾ ರಳು ಅರ್ಹಳಾಗಿದ್ದವಳಿಂದ ಸದ್ರಿ ರಾಮಕೃಷ್ಣ ಹಂದೇರಿಗೆ ಬರತಕ್ಕ ಅರ್ಜಿಯಲ್ಲಿ ಕಾಣಿಸಿದ ಸಾಲ ವಸೂಲು ಮಾಡುವರೆ ತನಗೆ ವಾರಿಸು ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರಳು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 10-6-40ಕ್ಕೆ ತನ್ನಿಗೆ ಇಡಲಾಗಿಯದೆ. ಈ ಕುರಿತು ಯಾರಿಗಾ ದರೂ ಆಕ್ಷೇಪಣೆ ಇದ್ದ ಪಕ್ಷದಲ್ಲಿ ಸದ್ರಿ ತಾರೀಕಿಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಮಾಡಿಕೊಳ್ಳ ಬೇಕೆಂದು ಈ ಮೂಲಕ ತಿಳಿಸಲಾಗುತ್ತದೆ.

3-6-40 | **B. Mahabala Holla.**

ಕುಂದಾಪುರ | *Advocate for petnr.*

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು, ತಾ. 3-6-40

ಶ್ರೀ. ವೈಕುಂಠ ಎಲ್. ಮೆಹತಾರವರ ಭಾಷಣ— ಉಡುಪಿ ಸಹಕಾರಿ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ವಹಿಸಿದ್ದ ಶ್ರೀ. ವೈಕುಂಠ ಎಲ್. ಮೆಹತಾರವರು ತಾ. 30ರಲ್ಲಿ ಮಂಗಳೂರಿಗೆ ಚಿತ್ತೈಸಿದರು, ಅಂದು ಸಾಯಂಕಾಲ ಥಿಯೊಸಾಫಿಕಲ್ ಹಾಲಿನಲ್ಲಿ, ಮಂಗಳೂರು ಕಲ್ಚರಲ್ ಎಸೋಸಿಯೇಶನಿನ ಆಶ್ರಯದಲ್ಲಿ 'ಹಳ್ಳಿಯ ಕೈಗಾರಿಕೆಗಳು' ಎಂಬ ವಿಷಯದಲ್ಲಿ ಉಪನ್ಯಾಸಮಾಡಿದರು. ಶ್ರೀ. ಯಂ. ಎಸ್. ಮಾಧವರಾಯರು ಶ್ರೀ. ವೈಕುಂಠ ಮೆಹತಾರವರ ಪರಿಚಯವನ್ನು ಸಭಿಕರಿಗೆ ಮಾಡಿಕೊಟ್ಟರು.

ಉಪನ್ಯಾಸಕರು ಆರಂಭದಲ್ಲಿ ಹಿಂದುಸ್ಥಾನದ ಪ್ರಕೃತದ ಪರಿಸ್ಥಿತಿಯನ್ನು ಕುರಿತು ವಿವರಿಸಿದರು. ಒಂದಾನೊಂದು ಕಾಲದಲ್ಲಿ ಹಿಂದುಸ್ಥಾನವು ಕೈಗಾರಿಕೆಯಲ್ಲಿ ಬಹಳ ಮುಂದುವರಿದಿತ್ತೆಂದೂ, ಆದರೆ ಆಮೇಲೆ ಸರಕಾರದವರ ಧೋರಣೆಯಿಂದಾಗಿ ಇಲ್ಲಿಯ ಹಳ್ಳಿಯ ಕೈಗಾರಿಕೆಗಳು ನಶಿಸಿದುವೆಂದೂ, ಕಳೆದ ನಲುವತ್ತು-ಐವತ್ತು ವರ್ಷಗಳಲ್ಲಿ ಮುಂಬಯಿಯಲ್ಲಿ ಹತ್ತಿಯ ಗಿರಣಿಗಳು ಸ್ಥಾಪಿಸಲ್ಪಟ್ಟು ಇಂದು ದೇಶಕ್ಕೆ ಬೇಕಾದ ವಸ್ತ್ರದಲ್ಲಿ ಹೆಚ್ಚಿನ ಅಂಶವು ದೇಶದಲ್ಲಿಯೇ ತಯಾರಾಗುವುದೆಂದೂ ಹೇಳಿದರು. ಆದರೆ ಈ ಗಿರಣಿಗಳು ಇಷ್ಟು ಉಚ್ಛ್ರಾಯಸ್ಥಿತಿಗೆ ಬಂದರೂ ಅವುಗಳು ಬಹಳ ಹೆಚ್ಚು ಮಂದಿಗೆ ಕೆಲಸವನ್ನು ದೊರಕಿಸಿಕೊಡುತ್ತಿಲ್ಲವೆಂದೂ ಹೇಳಿದರು. ಹಿಂದುಸ್ಥಾನದ ಜನಸಂಖ್ಯೆಯ ಅಭಿವೃದ್ಧಿಯ ವಿಷಯವಾಗಿ ಹೇಳುತ್ತಾ ಜನಸಂಖ್ಯೆಯು ಬಹಳ ಹೆಚ್ಚುತ್ತಿದೆ ಎಂದು ಜನಸಂಖ್ಯೆಗೆ ತಕ್ಕಷ್ಟು ಜೀವನಕ್ಕೆ ಇಲ್ಲದೆ ಅವರು ವ್ಯವಸಾಯವನ್ನೇ ವೃತ್ತಿಯಾಗಿ ಅನುಸರಿಸುವರೆಂದೂ ಕಳೆದ ಮೂವತ್ತು ನಲವತ್ತು ವರ್ಷಗಳಿಂದ ವ್ಯವಸಾಯವಮಾಡಿ ಜೀವಿಸುವವರ ಸಂಖ್ಯೆಯು ನೇಕಡಾ 59ರಿಂದ 75ರ ವರೆಗೆ ಏರಿದೆಯೆಂದೂ ಇದೇ ರೀತಿ ಜನಸಂಖ್ಯೆಯೂ ವೃದ್ಧಿಹೊಂದಿದರೆ ವ್ಯವಸಾಯದಿಂದ ಸಾಕಾಗುವಷ್ಟು ಉತ್ಪತ್ತಿ ದೊರೆಯದೆ ಜನರು ಕಷ್ಟಪಡಬೇಕಾದೀತೆಂದೂ ಹೇಳಿ, ಇಂತಹ ಸಂಕಷ್ಟದಿಂದ ಪಾರಾಗಬೇಕಾದರೆ ಸಣ್ಣ ಸಣ್ಣ ಗುಡಿ ಕೈಗಾರಿಕೆಗಳು ದೇಶದ ಎಲ್ಲೆಡೆಗಳಲ್ಲಿಯೂ ಸ್ಥಾಪಿಸಲ್ಪಡಬೇಕೆಂದೂ ಹೇಳಿದರು. ಆಯಾ ಪ್ರಾಂತದಲ್ಲಿ ದೊರಕುವ ಕಚ್ಚಾಮಾಲುಗಳನ್ನು ಗಮನಿಸಿ ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂದರು. ಹೀಗೆ ಮಾಡದೆ ಹೋದರೆ ರೈತನಿಗೆ ಜೀವನ ನಡೆಸಲು ಕಷ್ಟವಾಗುವುದೆಂದೂ, ಮನೆಕೈಗಾರಿಕೆಯ ಮೂಲಕ ರೈತನು ತನ್ನ ಉತ್ಪತ್ತಿಯನ್ನು ಸ್ವಲ್ಪ ಮಟ್ಟಿಗೆ ಹೆಚ್ಚಿಸಬಹುದೆಂದೂ ಹೇಳಿದರು. ಶ್ರೀ. ಕೆ. ಜನರಾಜ ಹೆಗ್ಗಡೆಯವರು ಧನ್ಯವಾದಗಳನ್ನರ್ಪಿಸಿದ ತರುವಾಯ ಸಭೆಯು ಮುಕ್ತಾಯವಾಯಿತು.

ಸಂದರ್ಶನ— ಶ್ರೀ. ವೈಕುಂಠ ಎಲ್. ಮೆಹತಾರವರು ತಾ. 30ನೇ ರಾತ್ರಿ 8ಘಂಟೆಗೆ ಬಿ. ಸಿ. ಯಂ ಶಾಲೆಯನ್ನು ಸಂದರ್ಶಿಸಿ ಅಲ್ಲಿಯ ಕೈಗಾರಿಕೆ ವಿಭಾಗಗಳನ್ನು ನೋಡಿ ತಮ್ಮ ಸಂತೋಷವನ್ನು ವ್ಯಕ್ತಗೊಳಿಸಿದರು, ತಾ. 31ರಲ್ಲಿ ಬೆಸೆಂಟ್ ಬಾಲಿಕಾ ಪಾಠಶಾಲೆಯನ್ನು ಸಂದರ್ಶಿಸಿ ಅಲ್ಲಿನ ಸಂಗತಿಗಳನ್ನು ವಿಚಾರಿಸಿ ತಿಳಿದು ತಮ್ಮ ಸಂತೋಷವನ್ನು ವ್ಯಕ್ತಗೊಳಿಸಿದರು.

ಪತ್ರಿಕೋದ್ಯಮಿಗಳ ಸಂಘ— ಜೂನ್ ತಾ. 9ರಲ್ಲಿ ದ. ಕ. ಜಿಲ್ಲಾ ಪತ್ರಿಕೋದ್ಯಮಿಗಳ ಸಂಘದ ವಾರ್ಷಿಕ ಸಭೆಯು ಜರಗುವುದಾಗಿ ತಿಳಿದು ಬರುತ್ತದೆ.

ಸಾರ್ವಜನಿಕ ವಾಚನಾಲಯದ ವರ್ಧಂತಿ— ಕಡಂಬೂರು ಸಾರ್ವಜನಿಕ ವಾಚನಾಲಯದ ತೃತೀಯ ವರ್ಷದ ವಾರ್ಷಿಕೋತ್ಸವವು ಕಳೆದ ತಾ. 28ರಲ್ಲಿ ಶ್ರೀ. ಯಂ. ದಾಸ ದೇವರಾವ್ ಬಿ. ಎ. ಯವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು, ಅದೇ ದಿನ ಶ್ರೀ. ಮಹಾಬಲ ನೋಂಡರ ಓದುವಿಕೆಯಿಂದಲೂ ಶ್ರೀ. ಬಾಲಕೃಷ್ಣದಾಯರ ಅರ್ಥವಿವರಣೆಯಿಂದಲೂ ಧ್ರುವಚರಿತ್ರೆಯ ವಾಚನವೂ ಇತ್ತು.

ಹೆಂಗಸರ ಟ್ರೈನಿಂಗ್ ಶಾಲೆ— ಕನ್ನಡವೇ ಪ್ರಧಾನವಾದ ಮಂಗಳೂರಿನ ಹೆಂಗಸರ ಸೆಕೆಂಡರಿ ಟ್ರೈನಿಂಗ್ ಶಾಲೆಗೆ ಈ ವರೆಗೂ ಕನ್ನಡಬಲ್ಲ ಮುಖ್ಯಾಧ್ಯಾಪಕಿಯನ್ನು ಸರಕಾರವು ಕೊಡದಿರುವುದು ಅತ್ಯಂತ ಆಶ್ಚರ್ಯವೂ ವಿಷಾದವೂ ಆಗಿದೆ. ಈ ಶಾಲೆಗೆ ಕನ್ನಡಬಲ್ಲ ಅಧ್ಯಾಪಕಿಯು ಎಷ್ಟು ಅವಶ್ಯವೆಂದು ವಿವರಿಸುವ ಅಗತ್ಯವಿಲ್ಲ. ಆದರೂ ಮಂಗಳೂರು ನಾಗರಿಕರು ಈ ಕುರಿತು ತಾಟಸ್ಥ್ಯ ವಹಿಸಿರುವರು. ನಮ್ಮ ಜಿಲ್ಲೆಯಲ್ಲಿ ಈ ಕೆಲಸಕ್ಕೆ ಯೋಗ್ಯರಾದ ಕನ್ನಡಿತಿಯು ಇರುವಾಗ ಜಿಲ್ಲೆಯ ಕನ್ನಡಿಗರು ಈ ಕುರಿತು ಚಳವಳಿಸದಿರುವುದು ವಿಚಿತ್ರವಾಗಿದೆ. ಇನ್ನಾದರೂ ಜನರು ತಕ್ಕ ಚಳವಳಿ ಹೂಡಿ, ಕನ್ನಡಬಲ್ಲ ಪ್ರಿನ್ಸಿಪಾಲರನ್ನು ಈ ಶಾಲೆಗೆ ಸರಕಾರದವರು ಕೂಡಲೇ ನೇಮಿಸುವಂತೆ ಮಾಡಬೇಕಾಗಿ ವಿನಂತಿ ಎಂದು ಬಾತ್ಮೀದಾರರೊಬ್ಬರು ಬರೆಯುತ್ತಾರೆ.

ಉಡುಪಿ

ಉಡುಪಿ ಕ್ಲಬ್ ಸ್ಥಾಪನೆ— ಇಲ್ಲಿಯ ಕೆಲವು ಉತ್ಸಾಹೀ ತರುಣರ ಸಾಹಸದಿಂದ ಹೆಮ್ಮಕ್ಕಳ ಟ್ರೈನಿಂಗ್ ಶಾಲೆಯ ಬಳಿಯ 'ಬಿಲ್‌ಕುಶ್' ಮಂದಿರದಲ್ಲಿ ದಿ ಉಡುಪಿ ಕ್ಲಬ್ ಎಂಬ ಹೊಸ ಕ್ಲಬ್ಬೊಂದು ತಾ. 2-6-10ರಲ್ಲಿ ತೆರೆಯಲ್ಪಟ್ಟಿರುತ್ತದೆ. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಡಾ. ಟಿ. ಮಾಧವ ಪೈಗಳು ವಹಿಸಿದ್ದರು. ಆರಂಭದಲ್ಲಿ ಕ್ಲಬ್ ಸ್ಥಾಪನೆಗೆ ಪ್ರಮುಖರಲ್ಲೊಬ್ಬರಾದ ಶ್ರೀ. ಕೃಷ್ಣನ್ ನಂಬಿಯಾರರು ನೂತನ ಕ್ಲಬ್ಬಿನ ಆವಶ್ಯಕತೆ, ಉದ್ದೇಶಾದಿಗಳನ್ನು ಪ್ರಕಟಪಡಿಸಿದರು. ಅಧ್ಯಕ್ಷರು ಬಹುಮುಖವಾಗಿ ಪ್ರಗತಿಹೊಂದುತ್ತಿರುವ ಉಡುಪಿಗೆ ಕ್ಲಬ್ಬು ಆಗತ್ಯವೆಂದೂ ಉತ್ತಮ ಆದರ್ಶ ಕಮಿಟಿಯಿಂದೊಡಗೂಡಿದ ಈ ಕ್ಲಬ್ಬು ಸುಗಮವಾಗಿ ಆದರ್ಶರೀತಿಯಲ್ಲಿ ನಡೆವ ಆಸೆಯವನಾದವಿರದೆಂದೂ ಹೇಳಿ ಕ್ಲಬ್ಬಿನ ಉದ್ಘಾಟನೆಮಾಡಿದರು. ಅನಂತರ ಶ್ರೀ. ಗಣೇಶ್ (ತಹಶೀಲ್ದಾರ) ಡಾ. ಪಿ. ಜಿ. ಆಚಾರ್ ಇವರು ನೂತನ ಕ್ಲಬ್ಬಿನ ಶುಭಾಕಾಂಕ್ಷೆ ಮಾಡಿದರು. ಶ್ರೀ ಬೈಲೂರು ವಾಸುದೇವರಾಯರು ಧನ್ಯವಾದಗಳನ್ನರ್ಪಿಸಲು ಉಪಾಹಾರ ಸತ್ಕಾರದೊಂದಿಗೆ ಸಭಾಂತ್ಯವಾಯಿತು. ಆ ಮೇಲೆ ಕ್ಲಬ್ಬಿನ ಅಧ್ಯಕ್ಷರಾದ ಶ್ರೀ. ಕೆ. ಟಿ ಬಲ್ಲಾಳರ ಅಧ್ಯಕ್ಷತೆಯಲ್ಲಿ ಕಮಿಟಿ ಮೆಂಬರರ ಸಭೆ ಜರಗಿ ಕಾರ್ಯಕ್ರಮ, ನಿಯಮಾವಳಿಗಳನ್ನು ಚರ್ಚಿಸಲಾಯಿತೆಂದು ತಿಳಿದುಬರುತ್ತದೆ. ಚಾಲ್ತಿ ವರ್ಷಕ್ಕೆ ಶ್ರೀ ಕೆ. ಟಿ ಬಲ್ಲಾಳರು ಅಧ್ಯಕ್ಷರಾಗಿ, ಶ್ರೀಗಳಾದ ಕೊಟ್ಟಿಕಾರ್ ಪಾಂಡುರಂಗ ಪೈ ಮತ್ತು ಟಿ. ಎನ್. ಕೇಳುನಂಬಿಯಾರರು ಉಪಾಧ್ಯಕ್ಷರುಗಳಾಗಿ, ಶ್ರೀಗಳಾದ ಬಿ. ವಾಸುದೇವರಾವ್ ಮತ್ತು ಗೋವಿಂದ್ರಾಯ ಕಾಮತರು ಜತೆಕಾರ್ಯದರ್ಶಿಗಳಾಗಿ, ಶ್ರೀ ಬಿ. ಸಚ್ಚಿದಾನಂದ ಹೆಗ್ಡೆಯವರು ಟ್ರೆಜರರಾಗಿ ಆರಿಸಲ್ಪಟ್ಟಿದ್ದಾರೆ.

ಹಳೆ ವಿದ್ಯಾರ್ಥಿ ಸಂಘ— ಬೋರ್ಡು ಹೈಸ್ಕೂಲ್ ಹಳೆ ವಿದ್ಯಾರ್ಥಿ ಸಂಘದ ಮಹಾಸಭೆಯೊಂದು ತಾ. 7ನೇ ಶುಕ್ರವಾರ ಸಂಜೆ 5 ಘಂಟೆಗೆ ಬೋರ್ಡು ಹೈಸ್ಕೂಲಲ್ಲಿ ದಾ. ಸುಂದರ ರಾಮಪೈಗಳ ಅಧ್ಯಕ್ಷತೆಯಲ್ಲಿ ಕ್ರಮನಿಯಮ ರಚನೆಗಾಗಿ ಜರಗಲಿರುವದೆಂದೂ ಹಳೆವಿದ್ಯಾರ್ಥಿಗಳೆಲ್ಲರೂ ಬರಬೇಕೆಂದೂ ಕಾರ್ಯದರ್ಶಿಗಳು ವಿನಂತಿಸುತ್ತಾರೆ.

ಹವಾಮಾನ— ಇಷ್ಟರಲ್ಲೇ ಪ್ರಾರಂಭವಾಗಬೇಕಾಗಿದ್ದ ಮಳೆಯು ಈ ವರೆಗೂ ಬಂದಿಲ್ಲ. ಸೆಖೆಯು ವಿಪರೀತವಾಗಿರುತ್ತದೆ. ತಾ. 4ನೇ ರಾತ್ರಿ ಸಾಧಾರಣ ಮಳೆ ಬಂದಿದೆ.

ಹರಿಜನ ವಿದ್ಯಾರ್ಥಿ ಭವನ— ಇದರ ಆಡಳಿತ ಕಮಿಟಿಯ ಮೀಟಿಂಗು ತಾ. 1-6-40ರಲ್ಲಿ ಶ್ರೀ. ಕೆ. ಟಿ. ಬಲ್ಲಾಳರವರ ಅಧ್ಯಕ್ಷತೆಯಲ್ಲಿ ಕೂಡಿ ಹೈಸ್ಕೂಲುಗಳಲ್ಲಿ 8 ನೆ ತರಗತಿಯಿಂದ ವಿದ್ಯಾಭ್ಯಾಸ ಮಾಡುವವರನ್ನು ಭವನಕ್ಕೆ ಸೇರಿಸಿಕೊಳ್ಳಬಹುದೆಂದಾಯಿತು, ಹೊಸ ಅರ್ಜಿಗಳ ಕುರಿತು ವಿಚಾರಿಸಲು ಕಮಿಟಿಯೊಂದನ್ನು ರಚಿಸಲಾಯಿತು, ಖರ್ಚಿನ ಬಿಲ್ಲನ್ನು ಜಿಲ್ಲಾ ಸಂಘಕ್ಕೆ ಕಳಿಸಬೇಕೆಂದಾಯಿತು.

ಸಹಕಾರಿ ಪರಿಷತ್ತು— ತಾ. 28-5-40ರಲ್ಲಿ ಉಡುಪಿಯಲ್ಲಿ ಜರಗಿದ ದ. ಕ. ಜಿಲ್ಲಾ ಸಹಕಾರಿ ಪರಿಷತ್ತು ಮತ್ತು ಕೃಷಿಕೈಗಾರಿಕೆ ವಸ್ತುಪ್ರದರ್ಶನದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜರಗಿಸುವುದರಲ್ಲಿ ದ. ಕ. ಜಿಲ್ಲಾ ಸಹಕಾರಿ ಅಭಿವೃದ್ಧಿ ಸಂಘದವರೊಡನೆ ಸಹಕರಿಸಿದ ಪರಿಷತ್ತಿನ ಸ್ವಾಗತ ಮಂಡಳಿಯವರಿಗೂ ಅಧ್ಯಕ್ಷ ವಕೀಲ್ ಶ್ರೀ ಕೆ. ಜಿ. ಬಲ್ಲಾಳರಿಗೂ ಜನರಲ್ ಸೆಕ್ರೆಟರಿ ಶ್ರೀ. ಕೆ ಆರ್. ಶೆಣೈಯವರಿಗೂ ವಸ್ತುಪ್ರದರ್ಶನವನ್ನು ವ್ಯವಸ್ಥೆಗೊಳಿಸುವುದರಲ್ಲಿ ಹೆಚ್ಚಿನ ಉತ್ಸಾಹದಿಂದ ಶ್ರಮ ವಹಿಸಿದ ಮತ್ತು ಪರಿಷತ್ತಿನ ಜತೆಕಾರ್ಯದರ್ಶಿಯವರಾಗಿದ್ದ ಶ್ರೀ. ಎಮ್. ವಾಮನ ಭಟ್ಟರಿಗೂ ಪ್ರತಿನಿಧಿಗಳ ಊಟ ಮತ್ತು ವಿಶ್ರಾಂತಿಗಳ ಬಗ್ಗೆ ಯೋಗ್ಯ ಏರ್ಪಾಡುಗಳನ್ನು ಮಾಡುವುದರಲ್ಲಿ ಸಹಕರಿಸಿದ ಶ್ರೀ. ಬಿ. ಯಂ. ಬಾಳಿಗ, ಶ್ರೀಮತಿ ಬಿ. ಯಂ. ಬಾಳಿಗ, ಶ್ರೀ. ಯು. ವೆಂಕಟರಾವ್, ಬಿ. ಎ ಎಲ್. ಟಿ. ಶ್ರೀ ಕೆ. ಲಕ್ಷ್ಮೀನಿಧಿರಾವ್ ಮೊದಲಾದವರಿಗೂ ಉಡುಪಿ ಹಿಂದುಸ್ಥಾನ್ ಸ್ಕೌಟ್ ದಳದವರಿಗೂ, ವಿವಿಧ ವಿನೋದಾವಳಿಗಳ ಕಾರ್ಯಕ್ರಮದಲ್ಲಿ ಭಾಗವಹಿಸಿದ ಉಡುಪಿ ಬೋರ್ಡ್ ಹೈಸ್ಕೂಲ್ ಮತ್ತು ಕಟಪಾಡಿ ಎಸ್. ವಿ. ಎಸ್. ಹಯರ್ ಎಲಿಮೆಂಟರಿ ಶಾಲಾ ವಿದ್ಯಾರ್ಥಿ ವೃಂದಕ್ಕೂ, ಉಡುಪಿ ಮುನಿಸಿಪಲ್ ಸ್ಟೋರ್ಸ್ ಎಂಡ್ ಸೈರಂಜರ್ಸ್ ಸಹಕಾರ ಸಂಘದವರಿಗೂ, ದ. ಕ. ಜಿಲ್ಲಾ ಸಹಕಾರಿ ಅಭಿವೃದ್ಧಿ ಸಂಘದವರು ಉಪಕಾರ ಸ್ಮರಣೆಯನ್ನು ಮಾಡುವರು ಎಂದು ಸದ್ರಿ ಸಂಘದ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಮೂಲ್ಕಿ— ಸ್ಪೋರ್ಟ್ ಯೂನಿಯನ್ ಕ್ಲಬ್ಬಿನ 25ನೇ ವರ್ಷ ವರ್ಧಂತ್ಯುತ್ಸವವೂ ದಿವಂಗತ ಡಾಕ್ಟರ್ ಬೋಳದಾಮರಾಯರ ಜನ್ಮ ದಿನಾಚರಣೆಯೂ ಇದೇ ಬರುವ ತಾ. 16-6-40ನೇ ರವಿವಾರ ಅಪರಾಹ್ನ ಘಂಟೆ 4-30ಕ್ಕೆ ಕ್ಲಬ್ಬಿನ ಸಭಾಮಂದಿರದಲ್ಲಿ ಜರಗಿಸಲ್ಪಡುವುದಾಗಿ ತಿಳಿದು ಬರುತ್ತದೆ, ಈ ಸಂದರ್ಭದಲ್ಲಿ ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ. ಕೆ. ವಿಠಲ ಸೆಟ್ರು ಅಧ್ಯಕ್ಷಸ್ಥಾನವನ್ನು ಅಲಂಕರಿಸಲು ದಯಭಾವದಿಂದ ಒಪ್ಪಿರುವರು.

ಮಲ್ಪೆ— ಈ ಪ್ರಾಂತದ ಬಿಲ್ಲವ ಸಮಾಜದ ಪ್ರಮುಖ ವ್ಯಕ್ತಿಯಾಗಿದ್ದ ಗುತ್ತೇದಾರ ಶ್ರೀ। ರಾಮ ಪೂಜಾರಿಯವರು ತಾ. 25-5-40ರಲ್ಲಿ ದಿವಂಗತರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ದಿವಂಗತ M. ಅಣ್ಣಯ್ಯನವರ ಜ್ಯೇಷ್ಠ ಪುತ್ರರಾಗಿದ್ದು ಉದಾರಿಗಳೂ ಪರೋಪಕಾರಿಗಳೂ ಬಡವರಿಗೆ ಆಶ್ರಯದಾತರೂ ಧರ್ಮಶ್ರದ್ಧೆಯುಳ್ಳವರೂ ಆಗಿದ್ದರು.

ಕಾರ್ಕಳ— ಕಾರ್ಕಳ ತಾಲ್ಲೂಕು ಮೂಡುಮಾರ್ನಾಡು ಬಸ್ತಿ ಪದ್ಮಯ ಇಂದ್ರರ ಮಗಳು 14 ವರ್ಷ ದಾಟದ ಶ್ರೀಯಾಳ ಎಂಬ ಹುಡುಗಿಯನ್ನು ತಾ. 5-1-40 ರಲ್ಲಿ ವೃಷಭ ಇಂದ್ರನು ವಿವಾಹ ಮಾಡಿದನೆಂದು ಹುಡುಗಿಯ ತಂದೆ ತಾಯಿ ಕೊಡದ ಮಾವ ಹುಡುಗ ಅವನ ಅಕ್ಕ ತಂದೆಯ ಮಗ, ಪುರೋಹಿತ ಇವರ ಮೇಲೆ ಸಿದ್ದ ಶೆಟ್ಟಿ ಸುರಪ್ಪ ಇಂದ್ರನು ಕುಂದಾಪುರ ಜ್ಯಾಂಟ್ ಮೆಜಿಸ್ಟ್ರೇಟರ ಕೋರ್ಟಿನ C. C. ನಂಬ್ರ 26/1940 ಕ್ಕೆ ಮಾಡಿದ ಪಿರ್ಯಾದಿಯಲ್ಲಿ ತನಿಖೆ ನಡೆದು ಹುಡುಗಿ 14 ವರ್ಷ ದಾಟಿದವಳೆಂದು ರುಜುವಾಗದೆ ಪಿರ್ಯಾದಿ ತೆಗೆದು ಹಾಕಲ್ಪಟ್ಟಿತು. ಮುದ್ದೆ ಕಡೆಯಿಂದ ಶ್ರೀ ಕೆ. ಸದಾನಂದ ಹೆಗಡೆಯೂ ಆರೋಪಿ ಕಡೆಯಿಂದ ಶ್ರೀ ಪಾದೂರು ವಾಸುದೇವ ಉಪಾಧ್ಯಾಯರೂ ವಕೀಲರು ನಡೆಯಿಸಿದ್ದರು. ಇದು ನಮ್ಮ ಜಿಲ್ಲೆಯಲ್ಲಿ ಶಾರ್ದಾ ಆಕ್ಟ ಮೇರೆಗಿನ ಪ್ರಥಮ ಪಿರ್ಯಾದಿಯೆಂದು ತಿಳಿದುಬರುತ್ತದೆ.

ದುರ್ಗದ ಹೊಸಹಿತ್ಲು ಅನಂತ ಭಟ್ಟ ಸೋಮನಾಥ ಭಟ್ಟ ಮತ್ತು ಹರಿಜನ ದೋಬು ಎಂಬವರೊಳಗೆ ಆದ ಹೊಡೆದಾಟ ಸಂಬಂಧವಾದ ವಿವಾದದಲ್ಲಿ, ದೋಬುವಿನ ದೂರು ಮಹಾತ್ಮಾ ಗಾಂಧಿಯವರ ತನಕ ಹೋಗಿದ್ದು, ಸ್ಥಳೀಯ ಹರಿಜನ ಸೇವಾ ಸಂಘದ ಮಧ್ಯಸ್ಥಿಕೆಯಿಂದ ಆ ವಿವಾದವು ರಾಜಿ ಆಗಿದೆ ಎಂದೂ ಶ್ರೀಯುತ ಭಟ್ಟರು ದೋಬುವಿನ ಕೊಂಡದ ಮೇವಳವನ್ನು ಅವನಿಗೆ ಹಿಂತಿರುಗಿ ಕೊಡಲಿಕ್ಕೂ ಹರಿಜನ ಸಂಘಕ್ಕೆ 10ರೂಪಾಯಿ ವಂತಿಗೆ ಕೊಡಲಿಕ್ಕೂ ಒಪ್ಪಿರುವರೆಂದೂ ತಿಳಿದು ಬರುತ್ತದೆ.

ಕಾರ್ಕಳ ಕೇಂದ್ರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಸಭೆಯು ತಾ. 1-6-40ರ ದಿನ ಸ್ಥಳೀಯ ಡೆಪ್ಯುಟಿ ಇನ್ಸ್‌ಪೆಕ್ಟರರಾದ ಶ್ರೀ. ಬಿ. ವಿ. ಶರ್ಮ ಬಿ. ಎ. ಯಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಭಾಸ್ಕರ ರಾಯರು ವ್ಯವಸಾಯಿಕ ಲಕ್ಷ್ಯಗಳು ಮತ್ತು ಅವನ್ನು ಮಕ್ಕಳಿಗೆ ಕಲಿಸುವ ಆವಶ್ಯಕತೆಯ ಕುರಿತು ಭಾಷಣವಿತ್ತರು.

TROPICAL

In the wake of the two great movements that swept over the country in the early twenties of this century TROPICAL INSURANCE CO. LTD., was founded by Pt. Moti Lal Nehru, Hakim Ajmal Khan and Dr Ansari, and although the hands of Providence snatched them one after another the Company has not lost its ideals and is now under the guidance of DESHAGAURAB SJ. SUBHAS CHANDRA BOSE, WHO IS THE CHAIRMAN OF ITS BOARD OF DIRECTORS.

TROPICAL INSURANCE COMPANY, LTD.

Branch Office: NIVAS Building, Hampankatta

MANGALORE.

ಟ್ರಾಪಿಕಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಬ್ರಾಂಚ್ ಆಫೀಸು:- ನಿವಾಸ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

1 ಘಂಟೆಯಲ್ಲಿ ನವ ಯೌವನ!

ಕಾಮಶಕ್ತಿಯನ್ನು ಹೆಚ್ಚಿಸಿ ವೀರ್ಯ ಸ್ತಂಭನೆ ಮಾಡುವ

ರಮಣವಿಲಾಸಿನಿ

ಸ್ತ್ರೀಯರಿಗೂ ವಾರ್ಧಕ್ಯ ಹೊಂದಿದವರಿಗೂ ನವಯೌವನದ ಸ್ಫೂರ್ತಿ ರತಿಸುಖದಲ್ಲಿ ಪರಮಾನಂದವನ್ನು ಕೊಡುತ್ತದೆ.

ಡಬ್ಬಿ 16ರ ಕ್ರಯ ರೂ. 1/-

ಮದನ ಮಂಜರಿ ಫಾರ್ಮಸಿ,

184, ಬೈನಾಬಜಾರ್, ಮದ್ರಾಸ್

ಇಂದಿನ ಮಹಾಸೇನಾನಿ ಜನರಲ್ ವೈಗಾಂಡರು.

ಜರ್ಮನರ ಧಾಳಿಯನ್ನು ತಡೆಗಟ್ಟಿ ಅವರನ್ನು ಹಿಂದಕ್ಕಟ್ಟುವ ಸಾಹಸಮಾಡುತ್ತಿರುವ ಮಹಾವೀರ.

ಫಕ್ಕನೆ ಬಾಯ್ತೆರೆದು ನುಂಗಲು ಬರುವ ಗಂಡಾಂತರವನ್ನು ಪಾರುಮಾಡಲಸಾಧ್ಯವಾದ ಎಂತಹ ಮಹಾವ್ಯಕ್ತಿಯಾದರೂ ಜನತೆಯ ವಿಶ್ವಾಸವನ್ನು ಕಳಕೊಂಡು ಪದಚ್ಯುತನಾಗಲೇಬೇಕು. ಗಂಡಾಂತರವನ್ನು ತಡೆಹಾಯಿಸುವ ಶಕ್ತಿ ಮತ್ತು ಉತ್ಸಾಹವುಳ್ಳ ವ್ಯಕ್ತಿಯು ಆ ಸಂದರ್ಭಕ್ಕೆ ಸರಿಯಾಗಿ ಮೇಲಕ್ಕೇರಿ ಬರುವನು. ಫ್ರಾನ್ಸಿನ ಇಂದಿನ ಪ್ರಾಣಸಂಕಟದ ಸಂದರ್ಭದಲ್ಲಿ ಅದರ ರಕ್ಷಕನಾಗಿ ಮುಂದೆ ಬಂದವರೇ ಜನರಲ್ ವೈಗಾಂಡರು. ಇಡೀ ಲೋಕದಲ್ಲೇ ಅತ್ಯಂತ ಮೇಧಾವಿ ಸೇನಾನಿಯೆನಿಸಿ ಬ್ರಿಟಿಷ್ ಮತ್ತು ಫ್ರೆಂಚ್ ಸೇನೆಗಳ ಮುಖ್ಯ ಸೇನಾನಾಯಕಸ್ಥಾನಕ್ಕೇರಿಸಲ್ಪಟ್ಟಿದ್ದ ಮಾರ್ಶಲ್ ಗೆಮಲಿನರು ಇಂದು ಫಕ್ಕನೆ ಪರದೆಯೊಳಗೆ ಮರೆಯಾಗಿಹೋಗಿರುವರು. 1914ರ ಮಹಾಯುದ್ಧದಲ್ಲಿ ಜರ್ಮನರು ಪೆರಿಸನ್ನು ಆಪತಿಸಿದಾಗ ಚಾತುರ್ಯ ಮತ್ತು ಸಾಹಸದಿಂದ ಅವರ ಮೇಲೆ ಬಿದ್ದು ಸೋಲಿಸಿ ಪೆರಿಸನ್ನು ಉಳಿಸಿದವರು ಮಾರ್ಶಲ್ ಗೆಮೆಲಿನರು. ಆದರೆ ಇಂದು ಅವರಿಗೆ ಜರ್ಮನರ ಧಾಳಿಯನ್ನು ತಡೆಗಟ್ಟಲು ಸಾಧ್ಯವಾಗಲಿಲ್ಲ. ಆದುದರಿಂದ ಅವರು ಪದಚ್ಯುತರಾದರು.

ಇಂದೀಗ ಮಾರ್ಶಲ್ ಗೆಮೆಲಿನರ ಸ್ಥಾನಕ್ಕೇರಿರುವ ಜನರಲ್ ವೈಗಾಂಡರ ವಯಸ್ಸು 73. ಆದರೂ ಅವರು ಅಷ್ಟು ಪ್ರಾಯವಾದವರಂತೆ ತೋರುವುದಿಲ್ಲ. ಅತಿ ಗಾತ್ರವಾದ ಮತ್ತು ಸಪೂರವಾದ ಕಟ್ಟಾಳು. ಸೈನಿಕ ವೃತ್ತಿಗೇನೇ ಜೀವನವನ್ನು ವಿಸಾಸಲರ್ಪಿಸಿದವರು. 1935ನೇ ಇಸ್ವಿಯಲ್ಲಿ ತನ್ನ ಉದ್ಯೋಗದಿಂದ ನಿವೃತ್ತರಾದರು. ಯುದ್ಧ ಆರಂಭವಾದೊಡನೆಯೇ ಪುನಃ ಕರೆಯಲ್ಪಟ್ಟು ಪೂರ್ವದ ಫ್ರೆಂಚ್ ಸೇನೆಗಳನ್ನು ಕ್ರೋಡೀಕರಿಸಲು ನೇಮಿಸಲ್ಪಟ್ಟಿದ್ದರು. ಮೇಕ್ಸಿಮ್ ವೈಗಾಂಡರು ಯಾವ ಸಂದರ್ಭದಲ್ಲೂ ಧೃತಿಗೆಡದ ಪ್ರಸಂಗಾವಧಾನತೆಯುಳ್ಳ ಅತ್ಯಂತ ಶಾಂತವೃತ್ತಿಯವರು. ಅತಿ ಸರಳವಾದ ಜೀವನ ಅವರದು. ಯಾವ ತರದ ಆಡಂಬರಕ್ಕೂ ಮನಸ್ಸು ಕೊಡದವರು. ತ್ರಿಕರಣಪೂರ್ವಕವಾದ ಅವಿಶ್ರಾಂತ ಪರಿಶ್ರಮಿಯು, ತನ್ನ ಕೆಳ ಅಧಿಕಾರಿಗಳ ಪ್ರೀತಿಗೂ, ಮೇಲಧಿಕಾರಿಗಳ ಗೌರವಕ್ಕೂ ಪಾತ್ರರಾಗಿ ಕೆಲಸ ಮಾಡುವವರು.

ಸೈನಿಕ ಶಿಕ್ಷಣ ತರಬೇತಿ ಶಾಲೆಯ ವಿದ್ಯಾರ್ಥಿಯಾಗಿರುವಾಗಲೆ ಜನರಲ್ ವೈಗಾಂಡರು ವಿಶೇಷ ಪ್ರವೀಣತೆ ತೋರಿಸಿ ಸರ್ವಪ್ರಥಮವಾಗಿ ಉತ್ತೀರ್ಣರಾದರು. 1907ರಲ್ಲಿ ಸೈನಿಕ ದಳವೊಂದರ ನಾಯಕರಾದರು. 1912ರಲ್ಲಿ 1914ರ ಯುದ್ಧದ ಪ್ರಖ್ಯಾತ ಫ್ರೆಂಚ್ ಸೇನಾನಿಯಾದ ಮಾರ್ಶಲ್ ಫೋಕರ ಕೈಕೆಳಗೆ ಕೆಲಸಮಾಡಿದರು. ಆ ವೇಳೆ ಜನರಲ್ ಜೋಫ್ರೆಯವರು ರಜ್ಜೆಗೆ ಹೋಗುವಾಗ ವೈಗಾಂಡರನ್ನು ತನ್ನೊಂದಿಗೆ ಕರದೊಯ್ದರು.

1914ರಲ್ಲಿ ಯುದ್ಧ ಆರಂಭವಾದಾಗ ಲೆಫ್ಟಿನೆಂಟ್ ಕರ್ನಲ್ ವೈಗಾಂಡರು ನಾನ್ಸಿ ಎಂಬಲ್ಲಿ ಜನರಲ್ ಫೋಕರ ಕೈಕೆಳಗಿದ್ದರು. ಆವೇಳೆ ಜನರಲ್ ಫೋಕರು ಅವರನ್ನು ತನ್ನ ಕೈಕೆಳಗಣ ಮುಖ್ಯ ಸೇನಾನಿಯಾಗಿ ನೇಮಿಸಿದರು. ವೈಗಾಂಡರು 9 ವರ್ಷಗಳ ವರೆಗೆ ಜನರಲ್ ಫೋಕರ ಕೈಕೆಳಗೆ ಸಂಪೂರ್ಣವಾಗಿ ಅವರ ವಿಶ್ವಾಸಕ್ಕೆ ಪಾತ್ರರಾಗಿ ಕೆಲಸಮಾಡಿದರು.

1918ನೇ ಇಸ್ವಿ ನವಂಬರ ತಾ. 11 ರಲ್ಲು ಸಂಧಿಯಾದಾಗ ಜರ್ಮನ್ ಪ್ರತಿನಿಧಿಗಳಿಗೆ ಶರ್ತಗಳನ್ನು ಓದಿ ಹೇಳಿದವರು ವೈಗಾಂಡರು. ಜನರಲ್ ಫೋಕ್ ಮತ್ತು ಜನರಲ್ ವೈಗಾಂಡರೊಳಗೆ ನಿಕಟ ಬಾಂಧವ್ಯ ಬೆಳೆಯಿತು. 1916ರಲ್ಲಿ ವೈಗಾಂಡರು ಜನರಲರಾಗಿ ಮಾಡಲ್ಪಟ್ಟರು. ಏನಾದರೂ ತೊಡಕುಂಟಾದಾಗ ಫೋಕರು ವೈಗಾಂಡರನ್ನು ಕರೆದು ಅದನ್ನು ನಿವಾರಿಸಲು ನೇಮಿಸುತ್ತಿದ್ದರು. 1919ನೇ ಜುಲ್ಯ ತಾ. 14ರಲ್ಲು ಪೆರಿಸಿನಲ್ಲಿ ಪ್ರಚಂಡ ವಿಜಯ ಪ್ರದರ್ಶನ ನಡೆದಾಗ ಜನರಲ್ ವೈಗಾಂಡರು ಜನರಲ್ ಜಾಫ್ರೆ ಮತ್ತು ಜನರಲ್ ಫೋಕರ ಹಿಂದೆ ಅಶ್ವಾರೋಹಿಯಾಗಿ ನಡೆದರು.

1920ನೇ ಜುಲ್ಯ ತಿಂಗಳಲ್ಲಿ ಪೋಲಂಡಿನ ಮೇಲೆ ಸೋವಿಯೆಟ್ ಸೇನೆಯು ಧಾಳಿನಡಿಸಿದಾಗ ಜನರಲ್ ವೈಗಾಂಡರು ಅಲ್ಲಿಗೆ ಕಳುಹಿಸಲ್ಪಟ್ಟು ಅವರ ಪ್ರಯತ್ನದಿಂದ ಪೋಲಿಶ್ ಸೇನೆಯು ಪುನರ್ಘಟಿಸಲ್ಪಟ್ಟು ವೈರಿಗಳನ್ನು ಹಿಂದಕ್ಕಟ್ಟಿತು. 1931ರಲ್ಲಿ ಜನರಲ್ ವೈಗಾಂಡರು ಸೇನಾನಿಗಳ ಮುಖ್ಯಸ್ಥರಾಗಿ ಮರುವರ್ಷ ಯುದ್ಧ ಕೌನ್ಸಿಲಿನ ಉಪಾಧ್ಯಕ್ಷರಾದರು.

1914ರ ಯುದ್ಧದಲ್ಲಿ ಜರ್ಮನರ ಧಾಳಿಯನ್ನು ತಡೆಗಟ್ಟಿ ಫ್ರಾನ್ಸನ್ನು ರಕ್ಷಿಸಿದವರಲ್ಲಿ ಅಗ್ರಗಣ್ಯ ಸೇನಾನಿಗಳೆಂದರೆ ಮಾರ್ಶಲ್ ಜಾಫ್ರೇ ಮತ್ತು ಮಾರ್ಶಲ್ ಫೋಕರು. ಅವರಿಬ್ಬರೂ ಈಗ ಮೃತರಾಗಿರುವರು. ಅವರ ಸಹವ್ಯವಸಾಯಿಗಳಾಗಿದ್ದ ಜನರಲ್ ಪೆಟೈನ್ ಮತ್ತು ಜನರಲ್ ವೈಗಾಂಡರು ಇಂದೀಗ ಫ್ರಾನ್ಸಿಗೆ ಜರ್ಮನರ ಧಾಳಿಯಿಂದುಂಟಾಗಿರುವ 1914ಕ್ಕಿಂತಲೂ ದೊಡ್ಡ ಅಪಾಯದಿಂದ ಅದನ್ನು ರಕ್ಷಿಸುವ ಜವಾಬ್ದಾರಿ ವಹಿಸಿರುವರು. ಜನರಲ್ ವೈಗಾಂಡರು ಸರ್ವ ಫ್ರೆಂಚ್ ಸೇನೆಯ ಮುಖ್ಯ ಸೇನಾನಾಯಕರಾಗಿ ಸೈನಿಕರಲ್ಲಿ ನವ ಉತ್ಸಾಹವನ್ನೂ ಜನತೆಯಲ್ಲಿ ಆಶೋದಯವನ್ನೂ ಉಂಟುಮಾಡಿರುವರು.

ಇಂಡಿಯನ್ ಮ್ಯೂಚುಯಲ್
ಲೈಫ್ ಅಸೋಸಿಯೇಷನ್ ಲಿಮಿಟೆಡ್

ಹೆಡ್ ಆಫೀಸ್:- ನಂ. ೧೧, ಮೌಂಟ್ ರೋಡ್, ಮದರಾಸು

— ಡೈರೆಕ್ಟರುಗಳ ಬೋರ್ಡ್ —

ಸರ್ ಸೇಷಾ ರಮೇಶಂ, ಕೆ. ಟಿ ರಿಟೈರ್ಡ್ ಜಡ್ಜ್, ಮದರಾಸ್ ಹೈಕೋರ್ಟ್, ಮದರಾಸು.
ರಾವ್ ಬಹದ್ದೂರ್ ಮ॥ ಕೆ. ಬಲರಾಮ ಅಯ್ಯರ್, ಬಿ.ಎ. ರಿಟೈರ್ಡ್ ಅಕೌಂಟೆಂಟ್ ಜನರಲ್ ಮದರಾಸ್.
ಮ॥ ಸಿ. ಕೃಷ್ಣಮೂರ್ತಿ ಮೊದಲಿಯಾರ್ ಲ್ಯಾಂಡ್ ಲಾರ್ಡ್, ಸಿಯಾಲಿ.
ದಿವಾನ್ ಬಹದ್ದೂರ್ ಮ॥ ಎ. ಎ. ರಾಮಲಿಂಗ ಅಯ್ಯರ್, ಮದರಾಸ್ ಸರಕಾರದ ರಿಟೈರ್ಡ್ ಚೀಫ್ ಇಂಜಿನಿಯರು.

ಮ॥ ಟಿ. ಎಸ್. ನಾರಾಯಣ ಸ್ವಾಮಿ, ಎಂ.ಎ, ಅಸಿಸ್ಟೆಂಟ್ ಕೆಮಿಸ್ಟ್, ಬಕಿಂಗ್‌ಹ್ಯಾಂ ಮಿಲ್ಸ್, ಮದರಾಸ್.
ದಿವಾನ್ ಬಹದ್ದೂರ್ ಮ॥ ವಿ. ಭಾಷ್ಯಂ ಅಯ್ಯಂಗಾರ್, ರಿಟೈರ್ಡ್ ಮದರಾಸ್ ಹೈಕೋರ್ಟ್ ಜಡ್ಜ್.
ಮ॥ ಸಿ. ಎಂ. ಶ್ರೀನಿವಾಸನ್, ಬಿ.ಎ., ಬಿ.ಎಲ್. (ಎಕ್ಸ್-ಅಫೀಷಿಯೋ) ಮದ್ರಾಸ್.

ಮ್ಯಾನೇಜರ್:- ಮ॥ ಎಂ. ಸರ್ವೇಶನ್, ಎಂ.ಎ.
ಚೀಫ ಮೆಡಿಕಲ್ ಆಫೀಸರ್:- ಲೆ. ಕ॥ ವಿ. ಸುಬ್ರದೇವನ್, ಐ. ಎಂ. ಎಸ್.

ಬ್ಯಾಂಕರುಗಳು:— ಇಂಡಿಯನ್ ಬ್ಯಾಂಕ್ ಲಿಮಿಟೆಡ್, ಮದರಾಸ್. ಮದರಾಸ್ ಪ್ರೊವಿನ್‌ಸಿಯಲ್ ಕೋ-ಅಪರೇಟಿವ್ ಬ್ಯಾಂಕ್ ಲಿಮಿಟೆಡ್.
ಇಂಡೊ-ಕಮರ್ಶಿಯಲ್ ಬ್ಯಾಂಕ್ ಲಿಮಿಟೆಡ್, ದಿ ಬ್ಯಾಂಕ್ ಆಫ್ ಮೈಸೂರು, ಲಿಮಿಟೆಡ್.

ಬ್ರಾಂಚುಗಳು:—ಕಲ್ಕತ್ತ, ಲಾಹೋರ್, ಜೋಧಪೂರ್, ಮಧುರ, ಕಲ್ಲಿಕೋಟೆ, ಬೆಜವಾಡ, ಅಲಹಾಬಾದ್ ಬೊಂಬಾಯಿ, ಅಹಮದಾಬಾದ್, ಪೂನಾ.

ಮೈಸೂರು ಸರಕಾರದ ಹೊಸ ವಿಮಾ ಕಾನೂನನ್ನು ಅನುಸರಿಸಿ ಕಂಟ್ರೋಲರವರಲ್ಲಿ ಠೇವಣಾತಿ ಮೊಬಲಗು ಇಡಲಾಗಿದೆ.

ಕರ್ನಾಟಕದಲ್ಲೆಲ್ಲಾ ಯೋಗ್ಯರಾದ ಮತ್ತು ಪ್ರತಿಭಾಶಾಲಿಗಳಾದವರಿಂದ ಏಜನ್ಸಿಗಳಿಗೆ ಅರ್ಜಿಗಳು ಸ್ವೀಕರಿಸಲ್ಪಡುವುವು.

ಉತ್ತಮ ಕೆಲಸಮಾಡುವವರಿಗೆ ಒಳ್ಳೇ ಷರತ್ತುಗಳು.
ಮ॥ ಸಿ. ಎಂ. ಶ್ರೀನಿವಾಸನ್, ಬಿ. ಎ., ಬಿ. ಎಲ್. ಜನರಲ್ ಸೆಕ್ರೆಟರಿ.
ಇಂಡಿಯನ್ ಮ್ಯೂಚುಯಲ್ ಲೈಫ್ ಅಸೋಸಿಯೇಷನ್ ಲಿಮಿಟೆಡ್,
10 ಮೌಂಟ್‌ರೋಡ್, ಮದ್ರಾಸ್.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—
ಬಿ. ಕರುಣಾಕರ ಹೆಗ್ಡೆ ಇನ್ಸ್‌ಪೆಕ್ಟರ್ ಆಫ್ ಏಜನ್ಸೀಸ್,
ಕರ್ನಲ ಹೌಸ್, ಉಡುಪಿ.

Bonus: Endowment Rs. 15 Wole life Rs. 18 Last valuation.

INDIAN MUTUAL LIFE ASSOCIATION, LIMITED.

Head Office–No 11, Mount Road, Madras.

ವರ್ಣ ವ್ಯವಸ್ಥೆಯ ನಿಜವಾದ ಸ್ವರೂಪ.

ಸಮಾಜದ ಅವನತಿಯ ಮುಖ್ಯ ಕಾರಣ.

ಅಸ್ವೈಸರ್ಗಿಕ ವರ್ಣವ್ಯವಸ್ಥೆ

ಭಾರತದ ವರ್ಣವ್ಯವಸ್ಥೆಯು ಅತ್ಯಂತ ಅಸ್ವೈಸರ್ಗಿಕವಾದುದೆಂಬುದಕ್ಕೆ ಅತಿ ಮುಖ್ಯ ನಿದರ್ಶನವೇನೆಂದರೆ, ಇಂತಹ ವ್ಯವಸ್ಥೆಯು ಜಗತ್ತಿನ ಇನ್ನೆಲ್ಲಿಯೂ ಇಲ್ಲದಿರುವುದೇ. ಒಂದು ವೇಳೆ ಈ ವ್ಯವಸ್ಥೆಯು ಈಶ್ವರೀಯವಾದುದಾಗಿದ್ದರೆ ಇದು ಜಗತ್ತಿನ ಉಳಿದ ಜನಾಂಗಗಳಲ್ಲಿಯೂ ಕಂಡುಬರಬೇಕಾಗಿದ್ದಿತು. ಇದು ಕೇವಲ ಭಾರತದಲ್ಲಿ ಮಾತ್ರ ಇದ್ದು ಭಾರತದ ಕೇವಲ ಬ್ರಾಹ್ಮಣರು ಅಥವಾ ಇತರ ಕೆಲವರು ತಮ್ಮ ಸ್ವಾರ್ಥಕ್ಕಾಗಿ ಇದನ್ನು ರಚಿಸಿರುವರು. ಆದರೆ ಇದಕ್ಕೆ ಸಮಾಧಾನವಾಗಿ ಕೊಡಲ್ಪಡುವ ಉದಾಹರಣೆ ಏನೆಂದರೆ ಯುರೋಪ್, ಅಮೇರಿಕ ಮುಂತಾದ ದೇಶಗಳಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬವರು ಇಲ್ಲದಿದ್ದರೂ ಆ ದೇಶಗಳಲ್ಲಿಯೂ ಈ ವಿಧವಾದ ವರ್ಣವ್ಯವಸ್ಥೆಯು ಬೇರೆ ರೂಪದಲ್ಲಿದೆ ಎಂಬುದೇ. ಆದರೆ ಇಂದು ಯಾವ ಉದ್ಯೋಗಗಳನ್ನೇ ತೆಗೆದುಕೊಂಡರೂ, ಒಂದೇ ವರ್ಣದವರಿಗೆ ಯಾವ ಉದ್ಯೋಗವೂ ಮೀಸಲಾಗಿಲ್ಲವೆಂದು ದೃಢವಾಗಿ ಹೇಳಬಹುದು.

ಮನುಸ್ಮೃತಿಯಲ್ಲಿರುವವರ್ಣವ್ಯವಸ್ಥೆಯ ವ್ಯಾಖ್ಯೆಯಿಂದ ಸಮಾಜದಲ್ಲಿ ಪ್ರತಿಯೊಬ್ಬನೂ ಇನ್ನೊಬ್ಬನನ್ನು ಧಿಕ್ಕಾರದೃಷ್ಟಿಯಿಂದ ಕಾಣಬೇಕೆಂಬುದು ವಿದಿತವಾಗುವುದು. ಒಂದು ವರ್ಣದವರು ಇನ್ನೊಬ್ಬರನ್ನು ನೀಚವಾದ ದೃಷ್ಟಿಯಿಂದ ಕಂಡು ಪರಸ್ಪರ ಕಲೆಯುವ ಅವಕಾಶವಿಲ್ಲದಂತೆ ಮಾಡಲಾಗಿದೆ. ಮನುಷ್ಯ ಮನುಷ್ಯರಲ್ಲಿ ಒಡಕನ್ನು ಹುಟ್ಟಿಸಿ ತಮ್ಮ ಚತುರತೆಯಿಂದ ತಮ್ಮ ಅಧಿಕಾರದರ್ಪಗಳನ್ನು ಶಾಶ್ವತಗೊಳಿಸಿ ಮೋಜುಮಾಡುವ ವ್ಯವಸ್ಥೆ ಇದು. ಇದಕ್ಕೆ ನಿದರ್ಶನವು ಬ್ರಾಹ್ಮಣರು ಮಾಡಿರುವ ವ್ಯವಸ್ಥೆಯಲ್ಲಿ ಕಾಣುವುದು. ಅಂತೆಯೇ ಮನುಸ್ಮೃತಿಯಲ್ಲಿ ವೈದ್ಯ ಅಕ್ಕಸಾಲೆ, ಅಗಸ, ಬಡಗಿ, ದರ್ಜಿ ಮತ್ತು ಶೂದ್ರರ ಅನ್ನವನ್ನೂ ತಿನ್ನಬಾರದೆಂದಿದೆ. ಸ್ಪೃಶ್ಯಾಸ್ಪೃಶ್ಯತೆಯ ಕ್ರಿಮಿಗಳು ಸಹ ಈ ವರ್ಣದ ವ್ಯವಸ್ಥೆಯಿಂದಲೇ ಹುಟ್ಟಿರಬಹುದೆಂದು ತೋರುತ್ತದೆ. ಜೀವಿತವಾಗಿ ಇರುವಾಗ ಮುಟ್ಟುವುದಂತಿರಲಿ, ಸತ್ತ ಮೇಲೂ ಸಹ ಬ್ರಾಹ್ಮಣರ ಶವವನ್ನು ಶೂದ್ರರು ಮುಟ್ಟಬಾರದು.

ಮನು ಅ. 5-1೦೪.

ಒಂದು ವರ್ಣದವರು ಇನ್ನೊಂದು ವರ್ಣದವರನ್ನು ವಿವಾಹವಾಗಬಾರದೆಂಬುದೂ ಈ ವ್ಯವಸ್ಥೆಯ ಒಂದು ಮುಖ್ಯವಾದ ಭಾಗವೇ ಆಗಿದೆ. ಈ ರೀತಿ ಈ ವ್ಯವಸ್ಥೆಯು ಸಮಾಜದ ಅಂಗಗಳನ್ನೂ ಬೇರೆ ಮಾಡಿ, ಸಾಮಾಜಿಕ ಸಂಬಂಧವೇ ಉಂಟಾಗದಂತೆ ಆಗಿದೆ. ಈ ನಿಯಮಕ್ಕೆ ವಿರೋಧವಾಗಿ ವರ್ತಿಸಿದವರನ್ನು "ವರ್ಣಸಂಕರ"ರೆಂಬ ಹೆಸರಿನಿಂದ ಕರೆದರು ಮತ್ತು ಇಂತಹವರು ಶೂದ್ರರಿಗಿಂತ ಕೀಳೆಂದು ಭಾವಿಸಿದರು.

ಮನು 10-16

ಜಾತಿಭೇದದ ಗೊಂದಲ

ಸನಾತನ ಧರ್ಮಿಗಳು ಜಾತಿ ಭೇದ ಮತ್ತು ವರ್ಣವ್ಯವಸ್ಥೆಗಳೆರಡೂ ಒಂದೇ ಎನ್ನುತ್ತಾರೆ. ಆರ್ಯ ಸಮಾಜವು ಕೇವಲ ವರ್ಣ ವ್ಯವಸ್ಥೆಯೇ ಮುಖ್ಯವೆಂದು ಭಾವಿಸಿ ಇತರ ಜಾತಿಭೇದಗಳನ್ನು ನಿಂದಿಸುತ್ತದೆ. ನಿಜವಾಗಿ ನೋಡಿದರೆ ಯಾವ ಆಧಾರದ ಮೇಲೆ ವರ್ಣವ್ಯವಸ್ಥೆಯಾಗಿದೆಯೋ ಅದೇ ಆಧಾರದ ಮೇಲೆ ಮನುಸ್ಮೃತಿಯಂತೆ, ಜಾತಿ ಉಪಜಾತಿಗಳಿವೆ. ವರ್ಣ ವ್ಯವಸ್ಥೆ ಮತ್ತು ಜಾತಿಭೇದಗಳು ಒಂದಕ್ಕೊಂದು ವಿರೋಧವಾದುವಲ್ಲ. ಇವೆರಡನ್ನೂ ಬೇರೆಬೇರೆಯಾಗಿ ಎಣಿಸಲಾಗುವುದಿಲ್ಲ. ಜಾತಿಭೇದವನ್ನೂ ನಿರ್ಮೂಲ ಮಾಡಬೇಕಾದರೆ ಈ ವರ್ಣವ್ಯವಸ್ಥೆಯನ್ನೇ ಮೊದಲು ಮೂಲೋತ್ಪಾಟನಮಾಡಬೇಕು. ಏಕೆಂದರೆ ಬೇರನ್ನೇ ನಾಶಗೊಳಿಸಿದಲ್ಲಿ, ಕೊಂಬೆಗಳು ತಾನಾಗಿಯೇ ಹಾಳಾಗುವವು. ಈ ರೀತಿ ಬೇರನ್ನೂ ನಾಶಗೊಳಿಸದಿರುವುದರಿಂದಲೇ, ಆರ್ಯ ಸಮಾಜವು ಜಾತಿಭೇದದ ಗೊಂದಲದಲ್ಲಿ ಸಿಕ್ಕಿ ಒದ್ದಾಡುತ್ತಿರುವುದು.

ವರ್ಣಗಳ ಅಧಿಕಾರ ಮತ್ತು ಕರ್ತವ್ಯಗಳನ್ನು ಗಮನಿಸಿದರೆ, ತಿಳಿಯುವುದೇನೆಂದರೆ ಒಂದು ವರ್ಣದವರಿಗೆ ಅಧಿಕಾರಗಳ ರಾಶಿರಾಶಿಯೇ ಇದ್ದು ಇನ್ನೊಬ್ಬರಿಗೆ ಸಾಧಾರಣವಾದ ಹಕ್ಕುಗಳೂ ಇಲ್ಲ. ಇದಕ್ಕನುಸಾರವಾಗಿಯೇ, ಮನುಸ್ಮೃತಿಯಲ್ಲಿ ಬ್ರಾಹ್ಮಣರಿಗೆ ಜಗತ್ತಿನ ಎಲ್ಲ ವಿಧವಾದ ಹಕ್ಕುಗಳೂ ಮೀಸಲಾಗಿವೆ. (1-100) ಅಷ್ಟೇ ಅಲ್ಲ, ಧರ್ಮ ಶಾಸ್ತ್ರವನ್ನೂ ಗೊತ್ತಾದ ವರ್ಣದವರು ವಿನಹ ಇತರರು ಓದುವುದಕ್ಕೂ ಸಹ ಅಧಿಕಾರವಿಲ್ಲ ಮನುಸ್ಮೃತಿಯ ವಿಚಾರವಾಗಿ ಈ ರೀತಿ ಇದೆ—

ವಿದುಷಾ ಬ್ರಾಹ್ಮಣೇನೇದಮಧ್ಯೇತವ್ಯಂ ಪ್ರಯತ್ನತಃ । ಶಿಷ್ಯೇಭ್ಯಶ್ಚ ಪ್ರವಕ್ತವ್ಯಂ ಸಮ್ಯಕ್ ನಾನ್ಯೇನ ಕೇನಚಿತ್ ॥

ಈಗಿನ ಕಾಲದ ವ್ಯಾವಹಾರಿಕ ಭಾಷೆಯಲ್ಲಿ ಹೇಳುವುದಾದರೆ ಅವರಿಗೆ 'ನಾಗರಿಕ ಸ್ವಾತಂತ್ರ್ಯ'ದ ಅಧಿಕಾರವೂ ಇಲ್ಲವೆನ್ನಬಹುದು. ಶೂದ್ರರ ವಿಚಾರದಲ್ಲಂತೂ ವಿಶೇಷ ರೀತಿಯ ಶತ್ರುತ್ವವೇ ತೋರುವುದು. ಅವರಿಗೆ ಯಾವ ವಿಧವಾದ ಧಾರ್ಮಿಕ ಉಪದೇಶವೂ ಕೊಡಲ್ಪಡಲಾಗದು. ಯಾರಾದರೂ ಶೂದ್ರರಿಗೆ ಧರ್ಮೋಪದೇಶ ಅಥವಾ ಪ್ರಾಯಶ್ಚಿತ್ತದ ಉಪದೇಶವನ್ನು ಕೊಟ್ಟಲ್ಲಿ ಅವನು ಘೋರ ನರಕದಲ್ಲಿ ಬೀಳುವನು.

"ಕ್ಷತ್ರಿಯ ಮತ್ತು ವೈಶ್ಯರು ನಿರುದ್ಯೋಗದಿಂದ ದುಃಖಿತರಾಗಿದ್ದಲ್ಲಿ, ಅವರ ಮೇಲೆ ಕರುಣವಿಟ್ಟು ತಮ್ಮ ಕೆಲಸದ ಜೊತೆಗೆ ಬ್ರಾಹ್ಮಣರು ಅವರ ಪೋಷಣೆಯನ್ನೂ ಮಾಡಬೇಕು" ಆದರೆ ಶೂದ್ರರ ವಿಚಾರದಲ್ಲಿ ಈ ರೀತಿಯ ದಯೆಯ ವಿಚಾರವೇ ಇಲ್ಲ.

"ಶೂದ್ರರಿಂದ ಯಾವಾಗಲೂ ಸೇವೆಯನ್ನೇ ಪಡೆಯಬೇಕು ಬ್ರಹ್ಮನು ಬ್ರಾಹ್ಮಣರ ಸೇವೆಗಾಗಿಯೇ ಶೂದ್ರರನ್ನು ಸೃಷ್ಟಿಸಿರುವುದು" ವರ್ಣಸಂಕರ ಜಾತಿಯೊಡನೆ ಧರ್ಮಾಚರಣೆಮಾಡುವುದು, ಮಾತನಾಡುವುದು, ದರ್ಶನಮಾಡುವುದಕ್ಕೆ ಕೂಡ ಅನುಮತಿ ಇಲ್ಲ.

"ಶೂದ್ರರು ಸಮರ್ಥರಾಗಿದ್ದರೂ ಐಶ್ವರ್ಯವನ್ನು ಸಂಗ್ರಹಿಸಬಾರದು. ಏಕೆಂದರೆ ಆ ರೀತಿ ಐಶ್ವರ್ಯವಂತರಾದರೆ ಅವರು ಬ್ರಾಹ್ಮಣರಿಗೆ ತೊಂದರೆಯಾಗುವುದು" ಇದಕ್ಕಿಂತ ಹೆಚ್ಚಿನ ಚತುರತೆಯು ಇನ್ನೆಲ್ಲಿ ತಾನೇ ದೊರೆತೀತು? ತಮ್ಮ ಸ್ವಾರ್ಥಕ್ಕಾಗಿ ಅವರು ಇಂತಹ ನಿಯಮಗಳನ್ನೇ ಮಾಡಿರುವರು!

ಬ್ರಾಹ್ಮಣರ ವಿನಹ ಇತರರು ಪರಸ್ತ್ರೀಯರೊಡನೆ ದುರ್ವ್ಯವಹಾರಮಾಡಿದರೆ ಅವರಿಗೆ ಮರಣದಂಡನೆಯನ್ನು ವಿಧಿಸಬೇಕು. ಯಾವುದೇ ವರ್ಣದ ಕನ್ಯೆಯು ಉಚ್ಚ ವರ್ಣದ ಇತರ ಮನುಷ್ಯರೊಡನೆ ಸಂಭೋಗವಾಡಿದರೆ, ಆ ಕನ್ಯೆಗೆ ಶಿಕ್ಷೆಯಾಗಬೇಕು. ಆದರೆ ಉಚ್ಚ ವರ್ಣದ ಕನ್ಯೆಯೊಡನೆ ನೀಚ ಜಾತಿಯವನು ಸಂಭೋಗ ಮಾಡಿದಲ್ಲಿ ಅವನನ್ನು ಕೊಂದು ಬಿಡಬೇಕು. ಇಂತಹ ಅನ್ಯಾಯವಾದ, ಪಕ್ಷಪಾತಪೂರಿತವಾದ ಉದಾಹರಣೆಗಳು ನೂರಲ್ಲ ಸಾವಿರಾರು ದೊರೆಯುತ್ತವೆ.

ಹಿಂದಿನ ಕಾಲದಲ್ಲಿ ಸಹ ವರ್ಣಗಳ ನಿರ್ಮಾಣವು ಜನ್ಮದಿಂದಲೇ ಆಗುತ್ತಿತ್ತೆಂದು ತೋರುತ್ತದೆ. ಆದರೆ ಬಹಳ ವಿಶೇಷ ರೀತಿಯಲ್ಲಿ ಮಾತ್ರ ಇದಕ್ಕೆ ಅಪವಾದ ವಿರುತ್ತಿತ್ತು. ಅದಕ್ಕೆ ಆಯಾ ವ್ಯಕ್ತಿಯ ಅಲೌಕಿಕ ಪ್ರತಿಭೆ ಯೋಗ್ಯತೆಗಳೇ ಕಾರಣವಾಗಿದ್ದುವು.

ತನ್ನ ಜನ್ಮ ಜಾತಿಯನ್ನು ಬಿಟ್ಟು ಇತರ ವರ್ಣಗಳ ಕೆಲಸವನ್ನು ಮಾಡುವುದೂ ಸಹ ಪ್ರತಿಬಂಧಿತವಾಗಿದ್ದಿತು. ಯಾರು ಯಾವ ವರ್ಣದಲ್ಲಿ ಜನ್ಮಿಸಿರುವನೋ, ಅವನು ಆ ಜಾತಿಗೆ ಸಂಬಂಧಪಟ್ಟ ಕರ್ಮವನ್ನೇ ಮಾಡಬೇಕಾಗಿದ್ದಿತು.

"ನೀಚ ಜಾತಿಯಲ್ಲಿ ಹುಟ್ಟಿದವನು ಉಚ್ಚ ಜಾತಿಯ ಕೆಲಸಗಳನ್ನು ಮಾಡಿದರೆ, ರಾಜನು ಅವನ ಧನವನ್ನು ಕಿತ್ತುಕೊಂಡು ಪರದೇಶಕ್ಕೆ ಕಳುಹಿಸತಕ್ಕದ್ದು."

ಮನು 10—76

ತಮ್ಮ ಸ್ವಾರ್ಥಕ್ಕಾಗಿ ಬ್ರಾಹ್ಮಣರು ಇಂತಹ ನಿಯಮಗಳನ್ನು ಮಾಡಿ ಇದಕ್ಕೆ "ವರ್ಣ ವ್ಯವಸ್ಥೆ" ಎಂಬ ಹೆಸರಿಟ್ಟರು.

ವರ್ಣ ವ್ಯವಸ್ಥೆಯು ಜನ್ಮದಿಂದಾಗಲಿ, ಕರ್ಮದಿಂದಾಗಲಿ, ತೀರ ಅವ್ಯವಹಾರ್ಯವೆಂಬುದು ನಿರ್ವಿವಾದ. ಜಾತಿಭೇದ ಉಚ್ಚನೀಚ ಭಾವನೆಗಳು, ಒಂದೇ ಜಾತಿಗೇ ವಿಶೇಷ ಅಧಿಕಾರಗಳು ಮುಂತಾದುದಕ್ಕೆ ಅವಕಾಶಕೊಡುವ ಈ ವ್ಯವಸ್ಥೆಯನ್ನು ಬೇರು ಸಹಿತ ಕಿತ್ತು ಬಿಸಾಡಬೇಕು. ಮನುಸ್ಮೃತಿಯಂತಹ ಗ್ರಂಥವನ್ನು ಬಹಿಷ್ಕರಿಸಬೇಕು. ಆಗಲೇ ಹಿಂದೂ ಸಮಾಜವು ಜಗತ್ತಿನಲ್ಲಿ ಜೀವಂತ ಸಮಾಜವಾಗುವುದು. ಆಗಲೇ ಕೋಮುವಾರು ಭಾವನೆಯೂ, ಜಾತಿ ಭೇದವೂ ನಾಶವಾಗಿ ಸಂಘಟನೆ, ಐಕ್ಯಮತ್ಯಗಳುಂಟಾಗುವವೇ ವಿನಹ ಅನ್ಯಥಾ ಇಲ್ಲ.

(ಡಾ. ಜಗ ಜೀವನಲಾಲರ ಲೇಖನದ ಅನುವಾದ)

S L S.

ಅಂತರಂಗದ
CINEMA SPECIAL NUMBER
ಅಥವಾ
" ಚಲಚ್ಚಿತ್ರಾಂಕ "
ತಾ. 30—6—'40ಕ್ಕೆ ಹೊರಬೀಳಲಿದೆ.
ಜಾಹೀರಾತಿಗೆ ಉತ್ತಮಸಾಧನ. ದರಗಳಿಗೆ ಬರೆಯಿರಿ.
Advertisement Manager,
Antaranga, Udipi.

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P. ೧೮/೪೦

ನೇಮಿರಾಜ ಬಲ್ಲವ — ಅರ್ಜಿದಾರ.

ಬ್ರಹ್ಮಯ್ಯ ಬಲ್ಲವ — ಎದ್ರಿ.

ಕಾರ್ಕಳ ತಾಲೂಕು ಪುಟ್ಟಮೊಗ್ರು ಗ್ರಾಮದಲ್ಲಿ ಇದ್ದು ತಾ. 9-2-1940ರಲ್ಲು ಮೃತವಾದ ಚಂದಯ್ಯ ಪೂಜಾರಿಯ ಮಗ ಕುಮಾರಯ್ಯ ಬಲ್ಲವಗೆ ಬರಬೇಕಾದ ಸಾಲ ವಗೈರೆ ವಸೂಲು ಮಾಡುವರೆ ತಾನು ಬುದ್ಧಿಸ್ತನಂತ ಮದ್ದಯ್ಯನವನ ಅಕ್ಕ ಅರ್ಜಿದಾರನು 1925ನೇ ಇಸವಿಯ 10ನೇ ಆಕ್ಟ ಪ್ರಕಾರ ಸರ್ಟಿಫಿಕೇಟು ಕೊಡಬೇಕೆಂದು ಕೋರಿ ಅರ್ಜಿ ಕೊಟ್ಟಿರುವುದರಿಂದ ಆಕ್ಷೇಪವುಳ್ಳವರು 1940ನೇ ಇಸವಿಯ ಜೂನ್ ತಾರೀಖು 21ರ ಒಳಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ತಮ್ಮ ಆಕ್ಷೇಪಗಳನ್ನು ಹೇಳಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ ದಾವೆ ತಕ್ಕದಾಗಿ ತೀರ್ಮಾನಿಸಲಾಗುತ್ತದೆಂಬುದನ್ನು ಕೋರ್ಟು ಹುಕುಂ ಮೇರೆಗೆ ಸರ್ವರಿಗೂ ಈ ಮೂಲಕ ತಿಳಿಯಪಡಿಸಿದೆ.

ಕಾರ್ಕಳ. 31-5-'40 } **H. P. A. Jain** *Pleader for Petitioner*

ಫ್ಲೇಂಡರ್ಸ್ ಯುದ್ಧ ಮುಗಿಯಿತು- ಮುಂದೇನು?

ಸೋಮ್ ರಣರಂಗದಲ್ಲಿ ಪ್ರಬಲ ಹೋರಾಟವೇನೂ ನಡೆಯುವುದಿಲ್ಲ.

ಬೆಲ್‌ಜಿಯಮಿನ ಅರಸ ಲಿಯೊಪೋಲ್ಡರು ಶರಣಾಗತರಾದ ಪರಿಣಾಮವಾಗಿ ಫ್ಲೇಂಡರ್ಸಿನ ಯುದ್ಧವು ಕೊನೆಗೊಂಡಂತಾಯಿತು. ಬೆಲ್‌ಜಿಯಮಿನಲ್ಲಿ ಸಿಕ್ಕಿಬಿದ್ದ ಮಿತ್ರ ರಾಷ್ಟ್ರಗಳ ಹೆಚ್ಚಿನ ಸೇನೆಯು ತಪ್ಪಿಸಿಕೊಂಡರೂ ಹಲವು ಸಹಸ್ರ ಮಂದಿ ನಾಶವಾಗಿರುವರು. ಇಡೀ ಬೆಲ್‌ಜಿಯಮ್ ಮತ್ತು ಫ್ರಾನ್ಸಿನ ದೊಡ್ಡ ಭಾಗವು ಜರ್ಮನರ ವಶವಾಗಿರುವುದು. ಬ್ರಿಟಿಷ್ ಜಲಸಂಧಿನ ಸಮೀಪದ ಹಲವು ಪ್ರಮುಖ್ಯ ಫ್ರೆಂಚ್ ಬಂದರುಗಳು ಜರ್ಮನರ ವಶವಾಗಿವೆ. ಇದರಿಂದ ಇಂಗ್ಲೆಂಡಿನ ಮೇಲೆ ಧಾಳಿ ನಡಿಸಲು ಜರ್ಮನರಿಗೆ ಅನುಕೂಲವಾಗಿರುವುದು. ಮಾತ್ರವಲ್ಲದೆ ಫ್ರಾನ್ಸಿಗೆ ಇಂಗ್ಲೆಂಡಿನಿಂದ ಬರುವ ಸಹಾಯವನ್ನೂ ತಡೆಯಲು ಸಾಧ್ಯವಾಗಿರುವುದು.

ಡಂಕರ್ಕಿನ ಯುದ್ಧ

ಫ್ರೆಂಚ್ ಸೈನಿಕರು ತಪ್ಪಿಸಿಕೊಂಡು ಹೋಗಲು ಆಸ್ಪದ ದೊರೆಯುವಂತೆ ಡಂಕರ್ಕ್ ಪಟ್ಟಣವನ್ನು ಮಿತ್ರರಾಷ್ಟ್ರಗಳ ಸೇನೆಯು ರಕ್ಷಿಸಿಕೊಂಡಿರುವುದು. ಅದರ ಎರಡು ಭಾಗಗಳನ್ನೂ ನೀರಿಂದ ಮುಳುಗಿಸಿ ಮೊಣಕಾಲುದ್ದ ನೀರಲ್ಲಿ ನಿಂತು ಸೈನಿಕರು ಹೋರಾಡುತ್ತಿರುವರು. ಡಂಕರ್ಕನ್ನು ವಶಪಡಿಸಿಕೊಳ್ಳಲು ಜರ್ಮನರು ನಡಿಸಿದ ಪ್ರಬಲ ಪ್ರಯತ್ನವು ಇಷ್ಟರ ವರೆಗೆ ಜಯಶೀಲವಾಗಿರುವುದಿಲ್ಲ. ಫ್ಲಂಡರ್ಸ್ ಗುದ್ದದ ಬಳಿ ದೊಡ್ಡ ಕದನ ನಡೆದಿರುವುದು. ಶರಣಾಗತವಾಗಲೊಪ್ಪದ ಬೆಲ್‌ಜಿಯನ್ ಸೈನಿಕರೂ ಡಂಕರ್ಕಿಗೆ ಬಂದು ಸೇರುತ್ತಿರುವರು.

ಫ್ಲೇಂಡರ್ಸಿನ ರಣರಂಗದಲ್ಲಿ ಜರ್ಮನರು ತಮ್ಮ ಸಂಪೂರ್ಣ ಸೇನೆಯನ್ನುಪಯೋಗಿಸಿದ್ದರು. ಮೇ ತಾ. 10ರ ಮೇಲೆಯೇ ಸುಮಾರು ಅರ್ಧಮಿಲ್ಯ ಜರ್ಮನರು ಹತರಾಗಿರುವರೆಂದು ನಂಬಲಾಗಿದೆ. ತರಂಗ ತರಂಗವಾಗಿ ಸೈನಿಕರನ್ನೂ ವಿಮಾನಗಳನ್ನೂ ಜರ್ಮನರು ಎಡೆಬಿಡದೆ ಉಪಯೋಗಿಸಿ ಮಿತ್ರರಾಷ್ಟ್ರಗಳ ಸೇನೆಯನ್ನು ಹಿಂದಕ್ಕಟ್ಟಿದರು. ವಿಮಾನಗಳ ಕೊರತೆಯೇ ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯಗಳ ಅಪಜಯಕ್ಕೆ ಮುಖ್ಯ ಕಾರಣ. "ನಮಗೆ ಹೆಚ್ಚು ವಿಮಾನಗಳನ್ನೀಯಿರಿ" ಎಂಬುದೇ ಮಿತ್ರರಾಷ್ಟ್ರಗಳ ಸೈನಿಕರ ಕೂಗಾಗಿದ್ದಿತು. ಸಹಸ್ರಗಟ್ಲೆಯಲ್ಲಿ ಜರ್ಮನ್ ವಿಮಾನಗಳು ಅವರ ಮೇಲೇರಿ ಬಂದು ಬೋಂಬೆಸೆದು ಅವರನ್ನು ಕಂಗೆಡಿಸಿದುವು. ಬೆಲ್‌ಜಿಯಮಿನಲ್ಲಿ ಸಿಕ್ಕಿಬಿದ್ದ ಎರಡು ದಳ ಫ್ರೆಂಚ್ ಸೇನೆಯ ಗತಿ ಏನಾಯಿತೆಂದು ತಿಳಿದಿಲ್ಲ. ಜನರಲ್ ಪ್ರಿಯುಕ್ಸರೆಂಬ ಫ್ರೆಂಚ್ ಸೇನಾನಿಯು ಸೆರೆಹಿಡಿಯಲ್ಪಟ್ಟಿರುವರೆಂದು ಜರ್ಮನರ ಸುದ್ದಿ. ಅಂತೂ ಅವರ ಶಕ್ತಿ ಇಲ್ಲದಾಗಿದೆ.

ಜರ್ಮನರ ವಿನೂತನ ಧಾಳಿ

ಸೋಮ್ ನದಿ ಪ್ರದೇಶದಲ್ಲಿ ಈಗ ಇಷ್ಟೊಂದು ಪ್ರಬಲ ಯುದ್ಧವೇನೂ ನಡೆಯುತ್ತಿಲ್ಲ. ಜರ್ಮನರು ಮುಂದೊತ್ತಿದಂತೆ ಫ್ರೆಂಚ್ ಸೇನೆಯು ಅಲ್ಲಲ್ಲಿ ತಡೆಗಟ್ಟಿರುವುದು. ಅಬೆವಿಲ್ಲಿಯ ಸಮೀಪದ ಪ್ರದೇಶವನ್ನು ಫ್ರೆಂಚರು ಜರ್ಮನರಿಂದ ಗೆದ್ದಿರುವರೆಂದು ತಿಳಿದುಬರುತ್ತದೆ. ಜರ್ಮನರು ಇಂಗ್ಲೆಂಡಿನ ಮೇಲೆ ದೊಡ್ಡ ವಿಮಾನ ಧಾಳಿಯನ್ನೇನೂ ಇಷ್ಟರ ವರೆಗೆ ನಡಿಸಿರುವುದಿಲ್ಲ. ಆದರೆ ಬ್ರಿಟಿಷ್ ಸರಕಾರವು ಆ ಕುರಿತು ಮುಂಜಾಗ್ರತೆ ತೆಗೆದುಕೊಂಡಿದೆ. ಸಹಸ್ರಗಟ್ಲೆ ಮಕ್ಕಳನ್ನು ಬ್ರಿಟಿಷ್ ಜಲಸಂಧಿನ ಕರಾವಳಿಯ ಪಟ್ಟಣಗಳಿಂದ ಬೇರೆ ಕಡೆಗಳಿಗೆ ಕಳುಹಿಸಿದೆ. ಜರ್ಮನರು ಅಕಸ್ಮಾತ್ತಾಗಿ ಧಾಳಿ ನಡೆಸಿದ ಪಕ್ಷದಲ್ಲಿ ಅದನ್ನು ತಡೆಗಟ್ಟುವ ಏರ್ಪಾಡೂ ಭರದಿಂದ ನಡೆದಿದೆ. ಜರ್ಮನರು ಇದೇ ತಾ. 1ರಲ್ಲಿ ಫ್ರಾನ್ಸಿನ ಲಯನ್ಸ್, ರೋವೆನ್, ಟೂಲೋಸ್, ಮರ್ಸೆಲ್ಸ್ ಮೊದಲಾದ ಪಟ್ಟಣಗಳ ಮೇಲೆ ವಿಮಾನ ಧಾಳಿ ನಡಿಸಿ ಹಲವು ಮಂದಿ ಕೊಲ್ಲಲ್ಪಟ್ಟು ಅನೇಕರು ಗಾಯಗೊಂಡಿರುವರು.

ಮಿತ್ರ ರಾಷ್ಟ್ರಗಳಿಗೆ ಇಟೆಲಿಯ ಶರ್ತ!

ಬೆಲ್‌ಜಿಯಮ್ ಪಾರ್ಲಿಮೆಂಟಿನ ಬೆಂಬಲ

ಬೆಲ್‌ಜಿಯಮಿನ ಅರಸರು ಜರ್ಮನರಿಗೆ ಶರಣಾಗತರಾಗಿ ಬ್ರಸ್ಸೆಲ್ಸಿನ ಕೋಟೆಯೊಂದರಲ್ಲಿ ವಾಸಿಸುತ್ತಿರುವರು. ಅವರನ್ನೂ ಅವರೊಂದಿಗೆ ಶರಣಾಗತವಾದ ಸೇನೆಯನ್ನೂ ಹಿಟ್ಲರರು ಗೌರವಿಸಿರುವರು. ಲಿಯೊಪೋಲ್ಡರು ತನ್ನ ತಂದೆ ಅಲ್ಬರ್ಟರು 1914ರ ಯುದ್ಧದಲ್ಲಿ ಕೊನೆಯವರೆಗೂ ಕಾದಾಡಿದಂತೆಯೇ ಜರ್ಮನರೊಡನೆ ಹೋರಾಡದೆ ಅವರ ಮರೆಹೋಗಲು ಕಾರಣವೇನೆಂಬುದು ಈವರೆಗೆ ವಿವರವಾಗಿ ತಿಳಿದಿಲ್ಲ. ಪ್ರಾಯಶಃ ಅವರು ಜಯದ ಆಶೆಯನ್ನೇ ಕಳಕೊಂಡು ಜರ್ಮನರ ಕೈಗೆ ಸಿಕ್ಕಿ ಬಂದಿಯಾಗುವುದಕ್ಕಿಂತ ಶರಣಾಗತರಾಗುವುದು ಲೇಸೆಂದು ಪರಿಗಣಿಸಿ ಹಾಗೆ ಮಾಡಿರಬೇಕು. ಅವರ ವರ್ತನೆಯನ್ನು ಫ್ರೆಂಚ್ ಮಂತ್ರಿಮಂಡಲವು ನಿಷೇಧಿಸಿ, ತಮ್ಮ ಸಮ್ಮತಿಯ ಹೊರತು ಅರಸರಿಗೆ ಯಾವ ಕೆಲಸವನ್ನೂ ಮಾಡಲು ಸ್ವತಂತ್ರವಿಲ್ಲವೆಂದೂ, ಆದುದರಿಂದ ಅವರು ಶರಣಾಗತರಾದುದು ಬೆಲ್‌ಜಿಯಮ್ ಜನಾಂಗಕ್ಕೊಂದು ಅವಮಾನವಿದ್ದು ಪಾರ್ಲಿಮೆಂಟಿನ ಮೇಲೆ ಅದು ಲಗಾವಾಗಲಾರದೆಂದೂ, ಮೇ. ತಾ 31ರಲ್ಲಿ ಬೆಲ್‌ಜಿಯಮ್ ಪಾರ್ಲಿಮೆಂಟು ಸಭೆಯು ಪೇರಿಸಿನಲ್ಲಿ ಸೇರಿ, ಮಿತ್ರ ರಾಷ್ಟ್ರಗಳಿಗೆ ಸಂಪೂರ್ಣ ಬೆಂಬಲ ನೀಡುವ ನಿರ್ಧಾರಮಾಡಿರುವುದು. ಇದರಿಂದ ಅರಸರೊಂದೆಡೆ ಪಾರ್ಲಿಮೆಂಟು ಇನ್ನೊಂದೆಡೆಯಾದಂತಾಗಿದೆ. ಜನತೆಯ ಬೆಂಬಲ ಕೂಡ ಬಹುತೇಕ ಪಾರ್ಲಿಮೆಂಟಿಗಿರುವಂತಿದೆ.

ಇಟೆಲಿಯು ಯುದ್ಧಕ್ಕೆ ಸೇರುವುದು ನಿಶ್ಚಯ!

ಇದೇ ತಾ 4 ಮತ್ತು 14ರೊಳಗೆ ಇಟೆಲಿಯು ಯುದ್ಧಕ್ಕೆ ಸೇರುವುದು ನಿಶ್ಚಯವೆಂಬಂತೆ ತೋರುತ್ತದೆ. ಜರ್ಮನಿ ಮತ್ತು ಇಟೆಲಿಗಳೊಂದುಗೂಡಿ ಶಾಂತಿ ಸ್ಥಾಪನೆಯ ಶರ್ತಗಳನ್ನು ಮಿತ್ರರಾಷ್ಟ್ರಗಳಿಗೀಯಲಿರುವವೆಂದೂ, ಆ ಸಂಧಿ ಶರ್ತಗಳಿಗೊಪ್ಪದಿದ್ದಲ್ಲಿ ಇಟೆಲಿಯೂ ಯುದ್ಧಕ್ಕೆ ಸೇರಲಿರುವುದೆಂದೂ ತಿಳಿದುಬರುತ್ತದೆ. ಎಲ್ಲರೂ ಯುದ್ಧವನ್ನು ನಿಲ್ಲಿಸಿ ಶಾಂತಿ ಪರಿಷತ್ತೊಂದನ್ನು ಕರೆಯಬೇಕು. ಅದರಲ್ಲಿ ಸಂಧಿಯ ವಿಷಯಗಳು ಚರ್ಚಿಸಲ್ಪಡಬೇಕು. ಇಟೆಲಿಯ ಕೆಲವು ಕೇಳಿಕೆಗಳು ಮಿತ್ರರಾಷ್ಟ್ರಗಳು ಮನ್ನಿಸಬೇಕು. ಇಲ್ಲವಾದರೆ ಇಟೆಲಿಯು ಯುದ್ಧಕ್ಕೆ ಸೇರುವುದೆಂದು ಮುಸಲೋನಿಯವರು ಜರ್ಮನಿ ಮತ್ತು ಇಟೆಲಿಗಳ ಪರವಾಗಿ ಮಿತ್ರರಾಷ್ಟ್ರಗಳಿಗೆ ಶರ್ತಗಳನ್ನು ಹಾಕಲಿರುವರೆಂದೂ, ಅವನ್ನು ಅವುಗಳು ಮಾನಿಸದಿದ್ದಲ್ಲಿ ಅವರೂ ಯುದ್ಧ ಆರಂಭಿಸಲಿರುವರೆಂದೂ ನಂಬಲಾಗಿದೆ.

ಇಟೆಲಿಯ ಯುದ್ಧ ಸಿದ್ಧತೆ

ಇಟೆಲಿಯಲ್ಲಿ ಭರದಿಂದ ಯುದ್ಧ ಸಿದ್ಧತೆ ನಡೆಯುತ್ತಿದೆ. ಉತ್ತರದ ಸೇನೆಯ ಮುಖ್ಯ ನಾಯಕರಾದ ಯುವರಾಜ ಅಂಬೆರ್ಟೋರವರು ಸೇನಾ ಪ್ರದರ್ಶನವೊಂದನ್ನು ಪರೀಕ್ಷಿಸಲು ಮಾರ್ಶಲ್ ಗ್ರೆಜಿಯಾನಿಯವರೊಂದಿಗೆ ಸ್ಪೆಶಲ್ ಟ್ರೈನಿನಲ್ಲಿ ಟೂರಿನಿಗೆ ಹೋಗಿರುವರು. ಇಟೆಲಿಯಲ್ಲಿದ್ದ ವಿದೇಶೀಯರೆಲ್ಲಾ ಹೊರಟುಹೋಗುತ್ತಿರುವರು. ಇಟೆಲಿ ಮತ್ತು ಫ್ರಾನ್ಸುಗಳೊಳಗೆ ವೈಮನಸ್ಯವು ತೀವ್ರ ಸ್ವರೂಪ ತಾಳುತ್ತಿರುವುದು. "50 ವರ್ಷಗಳಿಂದ ಇಟೆಲಿಯು ಕಾಯುತ್ತಿದ್ದ ಸಂದರ್ಭವೀಗ ಬಂದಿದೆ. ಭೂಮಧ್ಯ ಸಾಗರವು ಇಟೆಲಿಯವರದಾಗಿದೆ. ಅದರ ಮೇಲೆ ಫ್ರಾನ್ಸ್ ಮತ್ತು ಇಂಗ್ಲೆಂಡುಗಳಿಗೆ ಅಧಿಕಾರವಿರುವುದರಲ್ಲಿ ಅರ್ಥವಿಲ್ಲ. ಈಗ ಫ್ರೆಂಚರ ಅಧೀನವಿರುವ ಕೊರ್ಸಿಕ ಮತ್ತು ನೈಸ್ ಪಟ್ಟಣಗಳು ಇಟೆಲಿಗೆ ಸೇರಿದುವು. ಜಿಬೌತಿ ಬಂದರ ಮತ್ತು ಸುಯೆಜ್ ಕಾಲುವೆಗಳು ಇಟೆಲಿಗೆ ಸೇರಬೇಕು. ಇಟೆಲಿಯ ವೈರಿಗಳಾದ ಬ್ರಿಟಿಷ್ ಮತ್ತು ಫ್ರೆಂಚರೊಡನೆ ಇಟೆಲಿಯನರು ದೃಢನಿರ್ಧಾರದಿಂದ ಕಾದಾಡುವರು. ಬಲಾತ್ಕಾರದಿಂದ ತಮಗೆ ಸೇರಬೇಕಾದ ಸ್ಥಳಗಳನ್ನು ಗೆದ್ದು ವಶಮಾಡಿಕೊಳ್ಳುವರೆಂದು ಇಟೆಲಿ ಪ್ರಧಾನ ಸರಕಾರದ ಪತ್ರಿಕೆಯೇ ಪ್ರಕಟಿಸಿರುವುದು.

ಸ್ಪೈನಿನಲ್ಲಿ ಬ್ರಿಟನಿಗೆ ವಿರೋಧ ಪ್ರದರ್ಶನ

ಸ್ಪೈನಿನ ರಾಯಭಾರಿಯಾಗಿ ಹೊಸತಾಗಿ ನೇಮಿಸಲ್ಪಟ್ಟ ಸರ್. ಸಾಮುವೆಲ್ ಹೋರರು ಇದೇ ತಾ. 1ರಲ್ಲಿ ಮೇಡ್ರಿಡ್ ಪಟ್ಟಣಕ್ಕೆ ಮುಟ್ಟಿದಾಗ ಮೇಡ್ರಿಡ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಇಂಗ್ಲೆಂಡಿನ ವಿರೋಧ ಪ್ರದರ್ಶನಮಾಡಿದರು. ಜಿಬ್ರಾಲ್ಟರು ಸ್ಪೈನಿಗೆ ಸೇರಿದುದು. ಆದುದರಿಂದ ಬ್ರಿಟನರು ಅದನ್ನು ಸ್ಪೈನಿಗೆ ಬಿಟ್ಟುಕೊಡಬೇಕೆಂದು ಸೈನಿಕರನೇಕರು ಚಳವಳಿಸುತ್ತಿರುವರು. ಇಟೆಲಿಯು ಯುದ್ಧಕ್ಕೆ ಸೇರಿದರೆ ಜನರಲ್ ಫ್ರೇಂಕೋರವರಿಗೆ ಎಷ್ಟರ ಮಟ್ಟಿಗೆ ಸುಮ್ಮನಿರಲು ಸಾಧ್ಯವೋ ತಿಳಿಯದು. ಇಟೆಲಿಯೊಂದಿಗೆ ಸ್ಪೈನೂ ಯುದ್ಧಕ್ಕಿಳಿದರೆ ಬ್ರಿಟನರ ಜಿಬ್ರಾಲ್ಟರ್ ಮತ್ತು ಮಾಲ್ಟಾ ನೌಕಾನಿಲಯಗಳೆರಡೂ ಅಪಾಯಕ್ಕೊಳಗಾಗುವವು. ಆಗ ಬ್ರಿಟಿಷ್ ನೌಕಾಪಡೆಯ ಸತ್ವಪರೀಕ್ಷಾಕಾಲವು ಬರುವುದು.

ವಿದ್ಯಾರ್ಥಿಗಳಿಗೆ ಅಪೂರ್ವ ಸಂದರ್ಭ!

ಉತ್ತಮ ಮಾಲು! ನಾಜೂಕು ಕೆಲಸ! ಕಡಿಮೆ ಕ್ರಯ!

ಎಲಿಮೆಂಟರಿ ಸ್ಕೂಲ್, ಹೈಸ್ಕೂಲ್, ಟ್ರೈನಿಂಗ್ ಸ್ಕೂಲ್, ಕೊನ್ವೆಂಟ್ ಮೊದಲಾದ ಎಲ್ಲಾ ಶಾಲೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಬೇಕಾದ ಎಲ್ಲಾ ವಿಧದ ಪಾಠ ಪುಸ್ತಕಗಳೂ, ಲೇಖನ ಪುಸ್ತಕಗಳೂ, ಸ್ಟೇಶನರಿ ಸಾಮಾನುಗಳೂ ಸುಲಭ ಬೆಲೆಗೆ ದೊರೆಯುತ್ತವೆ.

ಶಾಲೋಪಯೋಗೀ ಸಾಹಿತ್ಯಗಳೆಲ್ಲಾ ನಮ್ಮಲ್ಲಿ ಸದಾ ತಯಾರಿವೆ!

ನಿಮಗೆ ಏನು ಬೇಕಾದರೂ ಮೊದಲು ನಮ್ಮೊಡನೆ ವಿಚಾರಿಸಿರಿ.

ನವಭಾರತ ಪುಸ್ತಕ ಭಂಡಾರ

ಇಗರ್ಜಿ ಎದುರು – – – ಉಡುಪಿ, ದ. ಕ.

For your school requirements:

Navabharat Book Depot, Udipi.

NOTICE.

S R.S. HOME OLD BOARDERS' ASSOCIATION

Mangalore, 3rd June 1940.

A General Body Meeting of the above Association will be held at 3 p. m on Sunday the 9th inst at S. R. S Home, Mangalore. All the members are earnestly solicited to attend the said meeting.

(Sd.) U. Krishna Shetty.
(Sd.) K Bhojaraja Shetty.
Secretaries

NAVAYUGA

Advertisement Tariff

1 Page Rs. 25/- per insertion
½ „ Rs. 15/- „ „
¼ „ Rs. 8/- „ „
⅛ „ Rs. 5/- „ „
Per Single inch col. Re. 1 „
Contract rates on application
Manager-**Navayuga UDIPI.**

ಪುಸ್ತಕ—ವಿಮರ್ಶೆ

ಎಕ್ಸ್-ರೇ ಶ್ರೀ. ಯು ರಾಘವೇಂದ್ರ ಆಚಾರ್ಯ, ಬಿ. ಎಸ್. ಸಿ, (ಆನರ್ಸ್), ಫಿಜಿಕ್ಸ್ ಲೆಕ್ಚರರ್, ಲೊಯೋಲಾ ಕಾಲೇಜು, ಮದ್ರಾಸು, ಇವರಿಂದ. ಒನರೇಬಲ್ ಡಾ। ಯು. ರಾಮರಾವ್, ಎಮ್. ಎಲ್. ಎ, ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲ್ ಪ್ರೆಸಿಡೆಂಟ್, ಇವರ ಮುನ್ನುಡಿ ಸಹಿತ. ಈ ಪುಸ್ತಕಕ್ಕೆ ಮದ್ರಾಸ್ ವಿಶ್ವವಿದ್ಯಾನಿಲಯವು ರೂ 750 ಬಹುಮಾನವನ್ನಿತ್ತಿದೆಯೆಂದ ಬಳಿಕ ಇದರ ಅಪೂರ್ವತೆ, ಉತ್ಕೃಷ್ಟತೆ ಮುಖ್ಯ ಉಪಯುಕ್ತತೆಗಳನ್ನು ಕುರಿತು ವಿಸ್ತಾರವಾಗಿ ಬರೆಯಬೇಕಾಗಿಲ್ಲ. ಇದೀಗ ವಿಜ್ಞಾನ ಯುಗ. ವಿಜ್ಞಾನದ ತತ್ತ್ವ ರಹಸ್ಯಗಳನ್ನಾಧರಿಸಿದ ಯಂತ್ರೋಪಕರಣಗಳೂ ನೂತನ ಶೋಧನೆಗಳೂ ಚಿಕಿತ್ಸಾ ಪದ್ಧತಿಗಳೂ ಜನಸಾಮಾನ್ಯರ ಅನುದಿನದ ಜೀವನದಲ್ಲಿಯೂ ಬಳಕೆಗೆ ಬಂದಿವೆ. ಆದರೆ ಅವುಗಳ ಪ್ರಯೋಗ ಶಕ್ತಿ ರಹಸ್ಯಗಳ ತಿಳುವಳಿಕೆಯು ಮಂದಿಗೆ ಲವಲೇಶವೂ ಇಲ್ಲ. ಅದು ಅವುಗಳ ಅದ್ಭುತ ಚಮತ್ಕಾರಗಳನ್ನು ಕಂಡು ಬೆಪ್ಪುಬಾಯಿ ಕಳೆಯುತ್ತ ತನ್ನ ಹೆಡ್ಡತನವನ್ನು ಮಾತ್ರ ಪ್ರದರ್ಶಿಸುತ್ತಿದೆ. ಈ ದೃಷ್ಟಿಯಿಂದ ಪರಿಶೀಲಿಸಿದರೆ ಜನರಲ್ಲಿ ಅಧಿಕಾಂಶವು ದೊಡ್ಡ ಒಡಲಿನ ಮಕ್ಕಳೇ. ಮಕ್ಕಳಿಗಿಂತಲೂ ನಿಕೃಷ್ಟರೆಂದರೂ ಸರಿಯೇ. ಮಕ್ಕಳಲ್ಲಿ ಏನು ಏಕೆ ಹೇಗೆ ಎಂಬುದರ ವಿಷಯವಾಗಿ ಪ್ರಬಲವಾದ ಕುತೂಹಲವಾದರೂ ಇದೆ. ಇವರಲ್ಲಿ ವಿಧಿವಾಕ್ಯ ಮನೋವೃತ್ತಿಯು ಆಲಸ್ಯದಿಂದ ಆ ಕುತೂಹಲವು ಕುಗ್ಗಿಹೋಗಿದೆ. ಆದುದರಿಂದ ಕಾಲಕ್ಕೆ ಸಲ್ಲದ ಕೀಳು ಜೀವನದಲ್ಲಿ ಆಯುಷ್ಯವನ್ನು ಸವೆಯುವ ಪಾಡುಬಂದಿದೆ. ನಾವು ವೀರ ಧೀರ ಕರ್ಮಯೋಗಿಗಳಾಗಿ ಬಾಳಬೇಕಾದರೆ ನಮ್ಮಲ್ಲಿ ಹಡಿಹಾರಿ ಹರಡಿರುವ ವಿಧಿವಾಕ್ಯವು ದೂರಾಗಬೇಕು. ವಿಜ್ಞಾನ ಮನೋವೃತ್ತಿಯು ನೆಲೆನಿಲ್ಲಬೇಕು. ಆಗ ಮಾತ್ರ ನಮ್ಮ ನಾಡು ಅನ್ಯಾಧೀನತೆಯಿಂದ ತಪ್ಪೀತು, ನಮಗೆ ಸುಖವಾದೀತು. ಹೀಗಾಗಬೇಕಾದರೆ ನಮ್ಮ ದೃಷ್ಟಿ ವಿಚಾರ ಮಾನಸಿಕತೆಗಳಲ್ಲಿ ಎಂತಹ ಪರಿವರ್ತನೆ ಆಗಬೇಕೋ ಅವು ವಿಜ್ಞಾನ ವಿಷಯಗಳ ಸ್ಥೂಲ ಸೂಕ್ಷ್ಮ ಪರಿಚಯಗಳಿಂದಲೇ ಆಗಬೇಕಾಗಿವೆ. ಜನತೆಯಲ್ಲಿ ಇಂತಹ ಮಾರ್ಪಾಟವು ಸುಲಭವಾಗಿಯೂ ಶೀಘ್ರವಾಗಿಯೂ ಉಂಟಾಗಲಿಕ್ಕೆ ವಿಜ್ಞಾನ ವಿಷಯಕ ಪುಸ್ತಕಗಳ ವಾಚನವು ಉತ್ತಮ ಸಾಧನ. ಮಂದಿಯು ಓದಿ ತಿಳಿದುಕೊಳ್ಳಲಾಗುವಂತೆ ವಿಜ್ಞಾನದ ಪ್ರತಿಯೊಂದು ವಿಷಯವಾಗಿ ಆಮೂಲಾಗ್ರವಾದ ಸಾಮಾನ್ಯ ಪರಿಚಯವನ್ನೀಯುವ ಸುಲಭ ಶೈಲಿಯ ಸಚಿತ್ರ ಪುಸ್ತಕಗಳು ಕನ್ನಡದಲ್ಲಿ ಹೇರಳ ಬೇಕು. ಇಂತಹ ಗ್ರಂಥ ನಿರ್ಮಾಣದ ಹಾದಿಯನ್ನು ಒಂದು ಕ್ರಮ ಹಿಡಿದು ಮೊಟ್ಟಮೊದಲು ಮೆಟ್ಟಿದವರೆಂದರೆ ಶ್ರೀ. ರಾಘವೇಂದ್ರ ಆಚಾರ್ಯರು. ಕಿರಿದಾದಂಬರಿಗಳನ್ನು ಬರೆವಷ್ಟು ಸುಲಭ ಹಾದಿಯಲ್ಲ ಇದು. ವಿಷಯದ ಕೂಲಂಕಷ ಸೂಕ್ಷ್ಮ ಪರಿಜ್ಞಾನ ಬೇಕು; ಅದನ್ನು ಸಂಗ್ರಹರೂಪವಾಗಿ ಸುಗಮ ರೀತಿಯಲ್ಲಿ ಹೇಳುವ ಜಾಣ್ಮೆಯಿರಬೇಕು. ಇವೆರಡೂ ಶ್ರೀ. ಆಚಾರ್ಯರಲ್ಲಿ ಸಿದ್ಧಿಸಿವೆ. ಇವರು ಎಕ್ಸ್-ರೇ ಎಂಬ ಅತ್ಯುಪಯುಕ್ತ ವಿಜ್ಞಾನ ವಿಷಯವನ್ನೆತ್ತಿಕೊಂಡು ಅದರ ಪ್ರಥಮ ಶೋಧನೆ, ಅದರ ಉಪಕರಣಗಳು, ರೋಗ ನಿರ್ಣಯದಲ್ಲಿಯೂ ಚಿಕಿತ್ಸೆಯಲ್ಲಿಯೂ ಕೈಗಾರಿಕೆಯಲ್ಲಿಯೂ ಅದರ ಪ್ರಯೋಗ ಮುಂತಾದುವನ್ನು ಸಚಿತ್ರವಾಗಿ ಸಾಮಾನ್ಯರ ಮಾತಿನಲ್ಲಿ ವಿವರಿಸಿದ್ದಾರೆ. ಈ ವಿಜ್ಞಾನ ಯುಗದಲ್ಲಿ ಜಾಣರಾಗಿ ಬಾಳಬೇಕಾದ ನಾಳಿನ ಜನಾಂಗಕ್ಕೆ ಇಂದು ಪಾಠಹೇಳುತ್ತಿರುವ ಪ್ರತಿಯೊಬ್ಬ ಉಪಾಧ್ಯಾಯನೂ ಅವಶ್ಯವಾಗಿ ಓದಬೇಕಾದ ಪುಸ್ತಕವಿದು. ಇದಿಲ್ಲದ ಶಾಲಾ ಪುಸ್ತಕ ಭಂಡಾರವು ಆಧುನಿಕವೆನಿಸಲಾರದು. ಹಲವು ರೋಗ ಚಿಕಿತ್ಸೆಗಳಲ್ಲಿ ಇಂದು ಎಕ್ಸ್-ರೇಯು ಪ್ರಯೋಗಿಸಲ್ಪಡುವುದರಿಂದ ಅಂತಹ ಚಿಕಿತ್ಸೆಯ ತತ್ತ್ವ ಸಾಧಕ ಬಾಧಕಗಳ ಸಾಮಾನ್ಯ ತಿಳುವಳಿಕೆಯು ಪ್ರತಿಯೊಬ್ಬನಿಗೂ ಇರಬೇಕಾದುದು. ಈ ದೃಷ್ಟಿಯಿಂದಲೂ ಪ್ರತಿಯೊಬ್ಬ ಕನ್ನಡಿಗನೂ ಈ ಪುಸ್ತಕವನ್ನೋದುವುದು ಅಗತ್ಯವಿದೆ. ಕನ್ನಡಿಗರು ಈ ಪುಸ್ತಕವನ್ನು ಓದಿ ಪ್ರೋತ್ಸಾಹಿಸಿ ಶ್ರೀ। ಆಚಾರ್ಯರು ಇನ್ನೂ ಹಲವು ವಿಜ್ಞಾನ ಗ್ರಂಥ ರತ್ನಗಳಿಂದ ಕನ್ನಡ ವಾಙ್ಮಯ ಭಂಡಾರವನ್ನು ಉಜ್ವಲಗೊಳಿಸುವಂತಾಗಲಿ! ಶ್ರೀ. ಆಚಾರ್ಯರು ವಿಜ್ಞಾನ ಗ್ರಂಥ ರಚನೆಯ ಕಷ್ಟಮಯ ಹಾದಿಯನ್ನು ದಿಟ್ಟತನದಿಂದ ಹಿಡಿದು ದಕ್ಷರಾಗಿ ಹಿಡಿದು ಯಶಸ್ವಿಯಾಗಿ ಗುರಿಮುಟ್ಟಿದುದಕ್ಕಾಗಿ ಅವರಿಗೆ ನಮ್ಮ ಅಭಿನಂದನೆಗಳು.

—'ಕೋರದ್ಕಲ್.'

ನೋಟೀಸು

ಕಾರ್ಕಳ ತಾಲೂಕು ಬೋಳ ಗ್ರಾಮದ ಕೊಟ್ಟೊಟ್ಟು ಪಂರಿ ಮನೆ ಎಂಬಲ್ಲಿರುವವರು ನಾಡವರ ಜಾತಿ—ರಹಿತರು.

1. ಪದ್ಮಕ್ಕ ಶೆಡ್ತಿ — ಬಾಬು ಶೆಡ್ತಿಯ ಮಗಳು
2. ವಿಜಯಕ್ಕ ಶೆಡ್ತಿ — ಸದ್ರಿ ಬಾಬು ಶೆಡ್ತಿಯ ತಂಗಿ ರುಕ್ಮ ಶೆಡ್ತಿಯ ಮಗಳು
3. ಸರಸು ಶೆಡ್ತಿ — ಸದ್ರಿ ಬಾಬು ಶೆಡ್ತಿ ವ ರುಕ್ಮ ಶೆಡ್ತಿಯ ತಂಗಿ ಚಂದಕ್ಕ ಶೆಡ್ತಿಯ ಮಗಳು

ಕೂಡಾ 3 ಜನರು ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದ್ರೆ

ನಾವು ಕೂಡಾ 12 ಜನರು ನಮ್ಮ ಕುಟುಂಬದ ಸ್ಥಿರಾಸ್ತಿಗಳ ಬಾಬ್ತು ಈ ದಿನ ರಿಜಿಸ್ತ್ರಿ ಮಾಡಿಕೊಂಡ ಫೆಮಿಲಿಯೆಗ್ರಿಮೆಂಟ ನಮೂದು ಪ್ರಕಾರ ನಮ್ಮ ಕುಟುಂಬದ ಪ್ರಯೋಜನದ ಬಗ್ಗೆ ಇನ್ನು ಮುಂದೆ ಎಷ್ಟನ್ನಾದರೂ ಸಾಲ ಮಾಡುವದು ಯಾ ಪಡಿಯುವದು. ಅಗತ್ಯ ಬಿದ್ದಲ್ಲಿ ನಮ್ಮ ಕುಟುಂಬದ ಎಲ್ಲಾ ಮೆಂಬರರು ಒಟ್ಟುಕೂಡಿ ಸಾಲ ಪಡಿಯತಕ್ಕದ್ದೆಂತಲೂ ಆ ಪ್ರಕಾರ ಎಲ್ಲಾ ಮೆಂಬರರು ಸೇರದೆ ಆಸ್ತಿಕ ಒಪ್ಪೊಟ್ಟುರು ಯಾ ಕೆಲವರು ಸೇರಿ ಮಾಡುವ ಸಾಲಗಳು ಯಾ ಜವಾಬ್ದಾರಿಗಳು ಕುಟುಂಬದ ಆಸ್ತಿಗಳ ಮೇಲಾಗಲೀ ಯಾ ಇತರ ಯಾವ ಸೊತ್ತುಗಳ ಮೇಲಾಗಲಿ ಬಾಧಕ ಕೊಡದಾಗಿರುತ್ತದೆ ಎಂತಲೂ ಇದಕ್ಕೆ ವಿರೋಧವಾಗಿ ಮಾಡುವ ಸಾಲಗಳು ಯಾ ಜವಾಬ್ದಾರಿಗಳು ಹಾಗೆ ಸಾಲ ಯಾ ಜವಾಬ್ದಾರಿ ಮಾಡುವವರ ದೇಹ ಜವಾಬ್ದಾರಿಯಿಂದಲೇ ವಸೂಲು ಪಡಿಯತಕ್ಕದ್ದೆಂತಲೂ ಈ ಮೂಲಕ ಸರ್ವ ಜನರಿಗೆ ತಿಳಿಸಲಾಗುತ್ತದೆ. ನಮ್ಮ ಕುಟುಂಬಕ್ಕೆ ಈ ವರೆಗಿನ ಯಾವ ತರದ ಎಷ್ಟುದರೂ ಸಾಲಗಳು ಇರುವದಿಲ್ಲ.

ನಮ್ಮ ಕುಟುಂಬದ ಪ್ರಾಯಸ್ಥ ಮೆಂಬರರ ಹೆಸರು—

1. ಪದ್ಮಕ್ಕ ಶೆಡ್ತಿ. 2. ಕಿಟ್ಟಣ್ಣ ಶೆಟ್ಟಿ. 3 ಸೀನಪ್ಪ ಶೆಟ್ಟಿ. 4. ತಿಮ್ಮಪ್ಪ ಶೆಟ್ಟಿ. — ಬಾಬು ಶೆಡ್ತಿಯ ಮಕ್ಕಳು. 5. ವಿಜಯಕ್ಕ ಶೆಡ್ತಿ. 6. ಬೇಬ ಯಾನೆ ಪರಮೇಶ ಶೆಟ್ಟಿ. 7. ಶಿದ್ದು ಶೆಟ್ಟಿ. 8. ಮಹಾಬಲ ಶೆಟ್ಟಿ.—ಸದ್ರಿ ಬಾಬು ಶೆಡ್ತಿಯ ತಂಗಿ ರುಕ್ಮ ಶೆಡ್ತಿಯ ಮಕ್ಕಳು. 9. ಸರಸು ಶೆಡ್ತಿ. ಸದ್ರಿ ಬಾಬು ಶೆಡ್ತಿ ವ ರುಕ್ಮ ಶೆಡ್ತಿ ಇವರ ತಂಗಿ ಚಂದಕ್ಕ ಶೆಡ್ತಿಯ ಮಗಳು. 10. ಸಂಜೀವ ಶೆಡ್ತಿ. 11. ಸದಾಶಿವ ಶೆಟ್ಟಿ. 1ನೆ ಪದ್ಮಕ್ಕ ಶೆಡ್ತಿಯ ಮಕ್ಕಳು. 12. ನಾಗಣ್ಣ ಶೆಟ್ಟಿ. 13. ಅಂಬು ಶೆಡ್ತಿ. 9ನೆ ಸರಸು ಶೆಡ್ತಿ ಮಕ್ಕಳು. ಈ ರೀತಿ ಹದಿಮೂರು ಜನ ಮೆಂಬರರಾಗಿರುತ್ತೇವೆ."

● ಈ ಹೆ. ಮು. ಸದ್ರಿ 1ನೆ ಪದ್ಮಕ್ಕ ಶೆಡ್ತಿ ರುಜು
● ಈ ಎಡ ಕೈ ಹೆ. ಬೆ. ಗುರ್ತು ||| ಈ ಗೆರೆ ಸಹಾ ಸದ್ರಿ 2ನೆ ವಿಜಯಕ್ಕ ಶೆಡ್ತಿ ರುಜು
● ಈ ಹೆ. ಮು. ಸದ್ರಿ 3ನೆ ಸರಸು ಶೆಡ್ತಿ ರುಜು

ಬೋಳ
25-5-'40

ನವಯುಗದಲ್ಲೇ ನಿಮ್ಮ ಜಾಹೀರಾತು ಪ್ರಕಟಿಸಿರಿ

ದಿ ನೇಶನಲ್ ಸ್ಟಾರ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

ಸ್ಥಾಪನೆ] ಹೆಡ್‌ಆಫೀಸು:- ಮದ್ರಾಸು. [1928.

ಡೈರೆಕ್ಟರುಗಳ ಬೋರ್ಡು

1. ರಾವ್‌ಸಾಹೇಬ್ ಸಿ. ಜಯರಾಮ್ ನ್ಯಾಡುಗಾರು, ಕಂಟ್ರಾಕ್ಟರ್, 'ಕಲ್ಪಟ್‌ಹೌಸ್' ಮದ್ರಾಸು.
2. ಟಿ. ಪಿ. ಮೀನಾಕ್ಷಿಸುಂದರನ್, ಎಸ್‌ಕ್ವಾಯರ್, ಎಂ.ಎ.ಬಿ.ಎಲ್., ಎಮ್.ಎಲ್. Dip (Econ) ಎಡ್ವೋಕೇಟ್, ಆಲ್ಡರ್‌ಮ್ಯಾನ್, ಕೋರ್ಪರೇಶನ್ ಒಫ್ ಮದ್ರಾಸ್, ಮದ್ರಾಸು.
3. ಪಿ ಯಂ. ವರದರಾಜುಲು ನ್ಯಾಡು ಎಸ್‌ಕ್ವಾಯರ್, ಜಿ. ಡಿ. ಎ. ಆರ್. ಎ, ರಿಜಿಸ್ಟರ್ಡ್ ಎಕೌಂಟೆಂಟ್ ಅಂಡ್ ಆಡಿಟರ್, ಮದ್ರಾಸ್.
4. ಕೆ. ಎಸ್. ರಾಜಗೋಪಾಲ್, ಎಸ್‌ಕ್ವಾಯರ್, ಮರ್ಚಂಟ್, ಸಿಕಂದರಾಬಾದ್.
5. ಟಿ ಆರ್. ದೇವರಾಜುಲು, ಎಸ್‌ಕ್ವಾಯರ್, ಬಿ. ಎ., ಬಿ. ಎಲ್., ಮೆನೇಜಿಂಗ್‌ಡೈರೆಕ್ಟರ್.

ಮೆಡಿಕಲ್ ಆಫೀಸರ್:- ಡಾಕ್ಟರ್. ಜಿ ರಾಮಾನುಜುಲು ನ್ಯಾಡು, ಎಲ್.ಎಂ.ಎಸ್. ಕನ್ಸಲ್ಟಿಂಗ್ ಏಕ್ಚುವರಿ:— ಪ್ರೊ. ಕೆ. ಬಿ ಮಾಧವ, ಎಂ.ಎ.ಎ.ಐ.ಎ. (ಲಂಡನ್)

ಇನ್ಶೂರೆನ್ಸಿನ ಹೊಸಕಾನೂನಿನಂತೆ ರೂಪಾಯಿ 2,00,000ಗಳನ್ನು ಸರಕಾರಿ ಭದ್ರತೆಯಾಗಿ ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಡಿಪಾಜಿಟ್ ಮಾಡಲಾಗಿದೆ.

ಪ್ರಥಮ ವೆಲ್ಯುಯೇಶನಿನಲ್ಲಿ ಸೇಕಡಾ 10ರಂತೆ ನಫೆ ಹಂಚಲಾಗಿದೆ.

ಉತ್ತಮ ಕೆಲಸಮಾಡುವವರಿಗೆ ಆಕರ್ಷಕ ಷರತ್ತುಗಳು. ಪ್ರೊಸ್ಪೆಕ್ಟಸ್ಸಿಗೂ, ಏಜನ್ಸಿ ನಿಯಮಗಳಿಗೂ ಬರಕೊಳ್ಳಬಹುದು.

ಎಚ್. ವಿ. ಕಂತ್ರಿ ಎಂಡ್ ಕೊ.
ಚೀಫ್ ಏಜನ್ಸಿ ಆಫೀಸು,
ದಿ ನೇಶನಲ್ ಸ್ಟಾರ್ ಎಶ್ಯೂರೆನ್ಸ್ ಕೊ. ಲಿಮಿಟೆಡ್
ಮಾರುತೀವೀಥಿಕಾ, ಉಡುಪಿ.

ಟಿ. ಆರ್. ದೇವರಾಜುಲು ಎಸ್‌ಕ್ವಾಯರ್,
ಬಿ.ಎ, ಬಿ.ಎಲ್. ಮೆನೆಜಿಂಗ್ ಡೈರೆಕ್ಟರ್.
ದಿ ನೇಶನಲ್ ಸ್ಟಾರ್ ಎಶ್ಯೂರೆನ್ಸ್ ಕೊ
ಲಿಮಿಟೆಡ್ ಮದ್ರಾಸ್.

The National Star Assurance Co. Ltd.

Head Office:- MADRAS.

ಈ ವಾರದ ಭವಿಷ್ಯ

ತಾರೀಖು 6-6-1940ರಿಂದ 13-6-1940ರ ವರೆಗೆ

ಮೇಷ—ಜನ್ಮ ಸ್ಥಾನದ ಗುರು ಶನಿಗಳಿಗೆ ಅಭದ್ರಕಾರಿಯಾಗಿರುವುದು. ಇವರು ನಿಮ್ಮ ರಾಶಿಯ ಭಾಗ್ಯ ಲಾಭಪತಿಗಳಾಗಿದ್ದು ವ್ಯಯ ರಾಶಿಯಲ್ಲಿರುವುದರಿಂದಲೂ ಧನ ಸ್ಥಾನದಲ್ಲಿ ರವಿಯು ದುಸ್ಥನಾಗಿ ಕುಳಿತಿರುವುದರಿಂದಲೂ ನಿಮಗೀ ವಾರದಲ್ಲಿ ಹಣದ ಅಡಚಣೆಯು ಬಹಳವಾಗುವುದು. ದೇಹ ಶ್ರಮದಿಂದಲೂ ಬುದ್ಧಿ ಕೌಶಲದಿಂದಲೂ ತಕ್ಕಮಟ್ಟಿಗೆ ಹಣವು ದುಡಿಯಬಹುದಾದರೂ ನಿಮ್ಮ ಸ್ವಂತ ಖರ್ಚುಗಳು ವಿಪರೀತವಾಗಿರುವುದೇ ಈ ಬಿಕ್ಕಟ್ಟಿಗೆ ಕಾರಣವು. ಯಾಕೇನೆಂದರೆ ಹಣವು ನಿಮ್ಮ ಛಲವನ್ನು ಬಿಡದೆ ಸಾಧಿಸುವಿರಿ. ಅಧಿಕಾರಿಗಳ ಪ್ರಕೋಪ ವಾ ಕಲಹ ಇತ್ಯಾದಿಗಳಿಂದ ಮನಸ್ಸಿಗೆ ಸಮಾಧಾನವಿರದಿದ್ದರೂ ತಾ. 7, 8, 13 ಈ ದಿನಗಳಲ್ಲಿ ಸ್ವಲ್ಪ ಸುಖ ಸಿಗಲಿದೆ.

ವೃಷಭ—ಅಷ್ಟಮಸ್ಥಗ್ರಹಗಳಾದ ನಿಮಗೆ ಈ ವಾರವು ಇಷ್ಟದಾಯಕವಾಗಿ ಪರಿಣಮಿಸುವಂತಿಲ್ಲ. ವ್ಯಾಪಾರಾದಿ ಉದ್ಯೋಗಗಳಲ್ಲಿ ಮನಸ್ಸಿಗೆ ಸಮಾಧಾನವಿದ್ದರೂ ಅನಾರೋಗ್ಯದಿಂದ ಬಹುವಾಗಿ ಪೀಡಿಸಲ್ಪಡುವಿರಿ. ನಿದ್ರಾಭಾವವೂ ದುಃಸ್ವಪ್ನಗಳೂ ಹೆಚ್ಚುವವು, ಆಹಾರ ದೋಷದಿಂದಾಗಿ ಉದರ ರೋಗಾದಿಗಳು ಕಂಡುಬರಲಿವೆ. ಆಕಸ್ಮಿಕವಾಗಿ ಪ್ರಯಾಣಾದಿಗಳು ಸಂಭವಿಸಿ ವ್ಯರ್ಥ ಖರ್ಚಿಗೆ ಗುರಿಯಾಗುವಿರಿ. ಆಯಾಧಿಕ ವ್ಯಯದಿಂದ ಹಣದ ಅಡಚಣೆಯು ಹೆಚ್ಚುವದು. ಆದರೂ ಗೃಹತಾಪತ್ರಯಗಳೊಂದೂ ನಿಮಗೊದಗದು. ತಾ. 6, 9, 10 ಈ ದಿನಗಳಲ್ಲಿ ಕಾರ್ಯ ಜಯ, ಧನ ವಸನಾದಿಗಳ ಲಾಭ ಇಷ್ಟ ಭೋಜನವೂ ದೊರೆಯಲಿದೆ.

ಮಿಥುನ—ಶತ್ರು ಜನರಿಂದ ಯಾವ ಕಾಲಕ್ಕೆ ಏನಪಾಯ ಸಂಭವಿಸುವದೋ ಎಂಬೊಂದು ಭಯವು ನಿಮ್ಮನ್ನಾವರಿಸಿಕೊಂಡಿದೆ. ಪರಸ್ಪರ ಚಾಡಿಯ ಮಾತುಗಳಲ್ಲಿ ಬರಿದು ಅನೇಕರಲ್ಲಿ ಕಲಹವನ್ನೂ ತಿರಸ್ಕಾರವನ್ನೂ ಹೊಂದಲಿರುವಿರಿ. ಶರೀರ ವಿಷಯವಾಗಿ ಅದಷ್ಟು ಜಾಗ್ರತೆ ವಹಿಸಿಕೊಂಡಿರುವುದೊಳ್ಳೇದು. ಉದ್ಯೋಗದಲ್ಲಿ ಫಲವು ತೃಪ್ತಿಕರವಿರುವುದರಿಂದಲೂ ಹಣದ ಅಡಚಣೆಯು ಸದ್ಯ ಕಾಣದಿರುವುದರಿಂದಲೂ ದಿನಗಳನ್ನು ನಿಶ್ಚಿಂತೆಯಿಂದ ಕಳೆಯುವಿರಿ. ಸೇವಕ ಜನರು ಸ್ವಾಮಿಯ ಅನುಗ್ರಹಕ್ಕೆ ಪಾತ್ರರಾಗುವರು. ಅಭಿಲಾಷಿತ ವಸ್ತುಗಳು ಅನಾಯಾಸದಿಂದ ದೊರೆಯಲಿವೆ. ತಾ. 7, 8, 11, 12 ಈ ದಿನಗಳು ಅನುಕೂಲಗಳಾಗಿವೆ.

ಕರ್ಕಾಟಕ—ನೀವು ನಿಮ್ಮ ಕಾರ್ಯ ಸಾಧನೆಗಾಗಿ ಅದೆಷ್ಟೋ ಹಣವನ್ನು ವ್ಯಯಿಸುವಿರಿ. ನಿಮ್ಮ ಕೆಲಸಕ್ಕೆ ತಕ್ಕ ಫಲದೊರೆವುದಾದರೂ ಇಚ್ಛಾಪೂರ್ತಿಯಾಗುವ ಸಂಭವವಿಲ್ಲ. ರಾಜಕೀಯ ಕಾರ್ಯಗಳ್ಳ ನಿಗೆ ಗೆಲುವಿರುವುದಾದರೂ ಇತರ ಭಾಗಗಳಲ್ಲಿ ವಿರೋಧಿಗಳ ಹಂಚಿಕೆಯೇ ಫಲಕಾರಿಯಾಗುವಂತಿದೆ. "ಕ್ಷಣಂ ಪಿತ್ತಂ ಕ್ಷಣಂ ಚಿತ್ತಂ" ಎಂಬಂತೆ ಕ್ಷಣಕ್ಷಣಕ್ಕೂ ನಿಮ್ಮ ಮನಸ್ಸು ಬದಲಾವಣೆಹೊಂದುವದು. ಆರೋಗ್ಯವು ಕೆಡುವುದು. ಜನ ನಿಂದೆಯು ಅನಿವಾರ್ಯವಾಗುವುದು. ಯಾವದೇ ವಿಧದಿಂದಾಗಲಿ ನಿಮ್ಮ ಖರ್ಚಿಗೆ ಕಡಿಮೆಮಾಡಿಕೊಳ್ಳಲಾರಿರಿ. ತಾ. 7, 8, 11, 12 ಈ ದಿನಗಳಲ್ಲಿ ಆರ್ಥಿಕ ಬಿಕ್ಕಟ್ಟು ಮಾನಹಾನಿಯೂ ಪ್ರಾಪ್ತವಾಗುವಂತಿದೆ.

ಸಿಂಹ—ಉನ್ನತಿಯ ಸ್ಥಾನವನ್ನು ಸಮೀಪಿಸುತ್ತಿದ್ದ ನಿಮ್ಮ ಭಾಗ್ಯ ಚಕ್ರವು ಇನ್ನು ಕೆಲವೇ ದಿನಗಳಲ್ಲಿ ಹಿಂದಕ್ಕೆ ಸರಿಯಲಿದೆ. ಪುಣ್ಯ ಕಾಲವೆಲ್ಲವೂ ಸಂಕಲ್ಪದಲ್ಲೇ ಕಳೆಯಿತೆಂಬ ಗಾದೆಯ ಮಾತಿಗೆ ಸಿಲುಕದಿರಿ. ಕಾರ್ಯ ರಂಗಕ್ಕಿಳಿದು ನಿಮ್ಮ ರಾಶಿಯ ಹೆಸರನ್ನು ಅನ್ವರ್ಥಗೊಳಿಸಿರಿ. ಯಾವ ಕಾರ್ಯವೇ ಇರಲಿ ಅದಕ್ಕೆ ಬೇಕಾದ ಧೈರ್ಯ ಸ್ಥೈರ್ಯ ಸಾಹಸ ಮತ್ತು ಚಾತುರ್ಯಗಳು ನಿಮ್ಮಲ್ಲಿರುವ ಕಾರಣ ಅನಾಯಾಸದಿಂದ ಅಪೇಕ್ಷಿತವಾದ ಫಲವನ್ನು ಹೊಂದಲಿರುವಿರಿ. ಆರ್ಥಿಕ ಭಾಗದಲ್ಲಿ ಅಭಿವೃದ್ಧಿ ಉಂಟಾಗುವುದು. ಆರೋಗ್ಯವು ಉತ್ತಮವಾಗಿದ್ದೀತು. ತಾ. 9, 10, 13 ಈ ದಿನಗಳನ್ನುಳಿದು ಇತರ ದಿನಗಳು ಸರ್ವಾಭೀಷ್ಟಪ್ರದಗಳಾಗಿವೆ.

ಕನ್ಯಾ—ಅನಿಷ್ಟ ಸ್ಥಾನವಾದ ಅಷ್ಟಮದಲ್ಲಿ ಗುರು ಶನಿಗಳು, ಭಾಗ್ಯಸ್ಥಾನದಲ್ಲಿ ವ್ಯಯಪತಿಯಾದ ರವಿಯು, ಕರ್ಮದಲ್ಲಿನ ಕುಜ ಶುಕ್ರರು, ಜನ್ಮ ಸಪ್ತಮಗಳಲ್ಲಿನ ರಾಹು ಕೇತುಗಳು ಇವರೆಲ್ಲರೂ ನಿಮಗೆ ಇಲ್ಲ ಸಲ್ಲದ ಕಷ್ಟ ನಷ್ಟಗಳನ್ನು ಕೊಡುವುದರಲ್ಲಿ ಮುಂದಾಳಾಗಿರುವರು. ಆದಕಾರಣ ಶಾರೀರಿಕ ಮಾನಸಿಕ ಸುಖ ಶಾಂತಿಗಳು ಎಳ್ಳಷ್ಟೂ ನಿಮಗಿಲ್ಲವೆಂದರೆ ತಪ್ಪಾಗದು. ಶರೀರಾಲಸ್ಯ, ಹಣದ ತಾಪತ್ರಯ, ಕುಟುಂಬ ಕಲಹ ಇತ್ಯಾದಿಗಳಿಂದ ಚಿಂತಾಕ್ರಾಂತರಾದ ನಿಮ್ಮ ಮುಖದಲ್ಲಿ ಸಂತೋಷದ ಚಿಹ್ನೆಯೂ ಕೂಡ ಕಾಣಸಿಗದು. ಆದರೂ ಬುಧ ಚಂದ್ರರ ಬಲದಿಂದ ತಾ. 7ರಿಂದ 10ರ ವರೆಗೆ ಮಿತ್ರ ಸಮಾಗಮದಿಂದಲೂ ಇಷ್ಟ ಪ್ರಾಪ್ತಿಯಿಂದಲೂ ತೃಪ್ತರಾಗುವಿರಿ.

ತುಲಾ—ಈ ವಾರದಲ್ಲಿ ನಿಮ್ಮ ಅದೃಷ್ಟವು ಸ್ವಲ್ಪ ಬದಲಾವಣೆ ಹೊಂದಿರುವುದು. ಇಷ್ಟಕ್ಕಿಂತ ದ್ವಿಗುಣವಾಗಿ ಅನಿಷ್ಟವು ಸಂಭವಿಸುವಂತಿದೆ. ನಿಮ್ಮ ವಾಚಾಲತ್ವದಿಂದಾಗಿ ಜನಮನ್ನಣೆ, ಖರ್ಚಿಗೆ ಸಾಕಷ್ಟು ಹಣ, ಗೃಹಸುಖ ಇತ್ಯಾದಿಗಳಿಗೆ ಕಡಿಮೆಯಾಗದಾದರೂ ನೀಚ ಶನಿಯು ಪೂರ್ಣ ದೃಷ್ಟಿಯಿಂದ ನೋಡುತ್ತಿರುವ ಕಾರಣ ದೋಷಗಳ ಸಮೂಹಗಳೇ ನಿಮ್ಮ ತಲೆಯ ಮೇಲೆ ಬೀಳಲಿವೆ. ಶತ್ರುಜನರ ಚತುರೋಪಾಯದ ಮುಂದೆ ನಿಮ್ಮ ಧೈರ್ಯಸಾಹಸಾದಿಗಳು ನಿಷ್ಫಲಗಳಾಗುವವು. ಪರ್ಯಟನದಿಂದಲೂ ಗೃಹಛಿದ್ರಗಳಿಂದಲೂ ಮನೋವ್ಯಾಕುಲತೆಯು ಹೆಚ್ಚಿ ಅದೇ ಒಂದು ರೋಗವಾಗಿ ಪರಿಣಮಿಸಲಿದೆ. ತಾ. 9ರಿಂದ 12ರವರೆಗಿನ ದಿನಗಳು ಇಷ್ಟಸಿದ್ಧಿ ಧನ ಲಾಭಕಾರಿಗಳಾಗಿ ಪರಿಣಮಿಸುವವು.

ವೃಶ್ಚಿಕ—ನೌಕರಿ ವ್ಯಾಪಾರ ಮೊದಲಾದ ಉದ್ಯೋಗಗಳಲ್ಲಿ ನೀವು ಒಳ್ಳೇ ಯಶಸ್ಸನ್ನು ಹೊಂದುವಿರಿ. ಪ್ರಯತ್ನಕ್ಕೆ ತಕ್ಕುದಾದ ಫಲಪ್ರಾಪ್ತಿಯೂ ಇರುವುದು. ಸ್ವೀಕೃತ ಕಾರ್ಯಗಳಲ್ಲಿ ಹೆಚ್ಚಿನವು ನಿಮ್ಮಿಚ್ಛೆಯಂತೆ ಕೊನೆಗೊಳ್ಳುವವು. ಶತ್ರುದಮನದಿಂದಲೂ ಗೃಹಸುಖದಿಂದಲೂ ಕೂಡಿರುವ ನಿಮಗೆ ಮನೋರೋಗವೊಂದು ಸದಾ ಬಾಧಿಸುತ್ತಲೇ ಇರುವದು. ದೇಹಾಲಸ್ಯದ ಫಲವಾಗಿ ಹಣವನ್ನು ವ್ಯಯಿಸುವಿರಿ. ಆಕಸ್ಮಿಕವಾಗಿ ಪ್ರವಾಸಾದಿಗಳು ಪ್ರಾಪ್ತವಾಗುವವು. ಗುರುಹಿರಿಯರಿಗೂ ನಿಮಗೂ ಪರಸ್ಪರ ಮನಸ್ತಾಪ ಹೆಚ್ಚಲಿದೆ. ತಾ. 7ರಿಂದ 10ರವರೆಗಿನ ದಿನಗಳಲ್ಲಿ ರಾಜಕೀಯ ಭೀತಿ, ಉಪದ್ರೋಗ, ವ್ಯರ್ಥ ವ್ಯಯಗಳು ಪ್ರಾಪ್ತವಾಗಬಹುದು.

ಧನು—ಪುತ್ರಭೃತ್ಯಾದಿ ಪರಿಜನರೂ ಗೃಹೋಪಕರಣಗಳೂ ಸಾಕಷ್ಟಿರುವುದರಿಂದಲೂ ಪ್ರತಿಸ್ಪರ್ಧಿಗಳು ಪರಾಜಯಹೊಂದುವುದರಿಂದಲೂ ಸದಾ ಪ್ರಸನ್ನಚಿತ್ತರಾಗಿರುವಿರಿ. ಅಲ್ಪಾವಕಾಶದಲ್ಲೇ ಸತ್ಪುರುಷ ದರ್ಶನಲಾಭವೂ ಕೂಡ ಆಗಲಿದೆ. ಉದರ ಶೂಲೆ ನೇತ್ರವೇದನೆಗಳಿಂದ ಸ್ವಲ್ಪ ಪೀಡಿಸಲ್ಪಡುವಿರಿ. ವಿಜಾತೀಯ ಜನರಲ್ಲಿ ವಿಶೇಷತಃ ಸ್ತ್ರೀಯರೊಡನೆ ಕಲಹವಾಗುವ ಸಂಭವವಿರುವುದರಿಂದ ನಾಲಿಗೆಯನ್ನು ಬಹುಮಟ್ಟಿಗೆ ಬಿಗಿಹಿಡಿದು ನಡೆಯಬೇಕಾಗುವದು. ಮನೆಯಾಕೆಯಿಂದಲೂ ನಿಷ್ಠುರವಾತುಗಳನ್ನು ಕೇಳುವ ಪ್ರಸಂಗ ಬರಬಹುದು. ತಾ. 9ರಿಂದ 12ರವರೆಗಿನ ದಿನಗಳಲ್ಲಿ ವ್ಯರ್ಥ ಧನವ್ಯಯವೂ ಸ್ವಾಮಿ ಸೇವಕರಲ್ಲೂ ತಂದೆಮಕ್ಕಳಲ್ಲೂ ಕಲಹವಾದೀತು.

ಮಕರ—ಹಗೆಯವರಿಗೂ ನಿಮಗೂ ಇರತಕ್ಕ ಮನಸ್ತಾಪವು ನಿವೃತ್ತಿಹೊಂದಿ ಪರಸ್ಪರ ಐಕ್ಯಮತ್ಯದಿಂದ ವರ್ತಿಸುವ ಕಾಲವು ಸನ್ನಿಹಿತವಾಗಿದೆ. ಬುದ್ಧಿಗನುಸರಿಸಿ ಶಕ್ತಿಗನುಗುಣವಾಗಿ ಧನಾರ್ಜನೆಮಾಡುವಿರಿ. ಆದರೇನು ಆಯಕ್ಕಿಂತ ದ್ವಿಗುಣವಾಗಿ ಖರ್ಚು ಪ್ರಾಪ್ತವಾಗುವುದರಿಂದ ಹಣದ ಬಿಕ್ಕಟ್ಟಿನಲ್ಲಿ ಸಿಲುಕುವಿರಿ. ದುರ್ವ್ಯಸನಾದಿ ದುಶ್ಚಟಗಳಲ್ಲಿ ನಿಮ್ಮ ಮನಸ್ಸು ಹೆಚ್ಚಾಗಿ ಓಡಾಡುವುದರಿಂದ ಬಂಧುಮಿತ್ರರೀಗ ಹೆಚ್ಚೇಳೆ ಕೈಹಿಡಿವಾಗಲೂ ನಿಮ್ಮಲ್ಲಿ ಅನಾದರವುಂಟಾಗುವುದು. ವೃದ್ಧ ಜನರಿಗೂ ವ್ಯಾಸಂಗಕ್ಷೇತ್ರದಲ್ಲಿರುವವರಿಗೂ ಕಷ್ಟ ನಷ್ಟಗಳು ತಪ್ಪಲಿವೆ. ತಾ. 6, 11, 12, 13 ಈ ನಾಲ್ಕು ದಿನಗಳಲ್ಲಿ ಕಾರ್ಯದಲ್ಲಿ ಪರಾಜಯವೂ ಅನಾರೋಗ್ಯವೂ ಸಂಭವಿಸೀತು.

ಕುಂಭ—ಸೇವಕಜನರ ಬೆಂಬಲವೂ ಮಿತ್ರ ಜನರ ಸಹಾಯವೂ ನಿಮಗೆ ಸಾಕಷ್ಟಿರುವುದರಿಂದ ಬಲಶಾಲಿಗಳಾದ ಇದಿರಾಳಿಗಳನ್ನೂ ಕೂಡ ಜಯಿಸಿ ನಿಮ್ಮ ವಿಜಯಧ್ವಜವನ್ನೇರಿಸಲಿರುವಿರಿ. ಖರ್ಚಿಗೆ ಬೇಕಾದಷ್ಟು ಹಣವನ್ನು ದುಡಿಯಲು ಶಕ್ತರಿರುವುದರಿಂದ ಆರ್ಥಿಕ ಚಿಂತೆಯಿರಲಾರದು. ಆದರೂ ಒಂದಲ್ಲೊಂದು ತೆರನಾದ ಕಾಹಿಲೆಯಿಂದ ದೇಹಪೀಡೆಯೂ ಗೃಹಚ್ಛಿದ್ರದಿಂದ ಪರಸ್ಪರ ಭಿನ್ನಮತವೂ ತಲೆದೋರುವುದರಿಂದ ಮನಸ್ಸಿಗೆ ಕಿಂಚಿತ್ತೂ ನೆಮ್ಮದಿಯಿರಲಾರದು. ಕೆಲವೊಮ್ಮೆ ನಿಮ್ಮ ದುರ್ದೈವದಿಂದಾಗಿ ಸುಲಭಸಾಧ್ಯವಾದ ಕಾರ್ಯವೂ ಕೈಸಾಗದೆ ಹೋಗುವುದು. ತಾ. 9ರಿಂದ 12ರವರೆಗಿನ ದಿನಗಳು ಮಿಕ್ಕ ದಿನಗಳಿಗಿಂತ ಉತ್ತಮಗಳಾಗಿವೆ.

ಮೀನ—ಈ ವಾರದಲ್ಲಿ ನಿಮ್ಮ ಸ್ಥಿತಿಯು ಹೆಚ್ಚಿನಂಶ ಉತ್ತಮವಾಗಿರುವುದು. ನೌಕರಿ ವ್ಯಾಪಾರ ವೈದ್ಯ ಇವೇ ಮೊದಲಾದ ಉದ್ಯೋಗಗಳಲ್ಲಿ ತುಂಬಾ ಧನಸಂಪಾದಿಸುವಿರಿ. ರಾಜಕೀಯ ಕ್ಷೇತ್ರದಲ್ಲೂ ವಿಜಯಿಗಳಾಗಿ ಯಶಸ್ಸಂಪಾದಿಸುವಿರಿ. ಮಿತ್ರರು ಕುಟುಂಬದವರು ಇವರ ಪೂರ್ಣ ಬೆಂಬಲವನ್ನು ಹೊಂದಿರುವ ನಿಮಗೆ ದಿನಗಳು ಸುಖಕರವಾಗಿ ಪರಿಣಮಿಸಲಿವೆ. ಗೃಹತಾಪತ್ರಯಗಳೆಲ್ಲವೂ ನಿವಾರಣೆಹೊಂದುವವು. ಆದರೆ ತಾಪಜ್ವರ ಉದರರೋಗ ಇತ್ಯಾದಿಗಳಿಂದ ದೇಹಪೀಡೆಯುಂಟಾಗಲಿದೆ. ಸಾಂಸರ್ಗಿಕ ದೋಷದಿಂದ ಅಪರಾಧಿಗಳಾಗುವ ಚಿಹ್ನೆಯೂ ಕಂಡುಬರುವದು. ತಾ. 7ರಿಂದ 10ರ ವರೆಗಿನ ದಿನಗಳು ಪ್ರತಿಕೂಲಗಳಾಗಿರುತ್ತವೆ.

ವಿದ್ಯಾರ್ಥಿಗಳಿಗೆ ಆನಂದದ ಬಾತಮಿ.

ಅತಿ ಅಭ್ಯಾಸ ಯಾ ಘಾಬರಿಯಿಂದ ಪರೀಕ್ಷೆಯ ಸಮಯ ನರ್ವಸ್ ವೀಕ್ನೆಸಿನಿಂದ ಸಾಮಾನ್ಯ ನೇಕಡ 50 ವಿದ್ಯಾರ್ಥಿಗಳು ತಿಳಿದು ಯಾ ತಿಳಿಯದೆ ಪರೀಕ್ಷೆಯ ಕಾಲದಲ್ಲಿ ಫಸ್ಟ್‌ಕ್ಲಾಸಿನ ಯೋಗ್ಯತೆಯುಳ್ಳ ವಿದ್ಯಾರ್ಥಿಗಳೂ ಕೂಡ ಥರ್ಡ್ ಕ್ಲಾಸಿನಲ್ಲಿ ಸಹ ಪಾಸಾಗದೆ ನಾಪಾಸಾಗುವ ಪರಿಸ್ಥಿತಿಯು ಬರುತ್ತದೆ. ಈ ಸರ್ವ ವಿಕಾರಗಳಿಗೆ ನಮ್ಮ ದೀರ್ಘ ಅನುಭವದಿಂದ ತಯಾರಿಸಲ್ಪಟ್ಟ ಬಹುಗುಣಯುಕ್ತ ಪುಷ್ಪಗಂಧಾಮೋದಿತ **ಆಮಲಕೀ ತೈಲ**ವನ್ನು ಉಪಯೋಗಿಸುವದರಿಂದ ಲಕ್ಕೀಚಾನ್ಸ್ ಸಿಕ್ಕುತ್ತದೆ. 6 ಯಾ 11 ಆಣೆ ಬೆಲೆಯ 1ಸೀಸೆ ತೈಲವನ್ನು ಕೊಂಡುಕೊಂಡು ಸ್ವಲ್ಪ ತಲೆಗೆ ಹಾಕಿ ಪ್ರೇಷಂಗೆ ಶುರುಮಾಡಿರಿ. ಇದರಿಂದ ಮೆದುಳಿನ ಜ್ಞಾನಶಕ್ತಿ ಯಾ ಸ್ಮರಣಶಕ್ತಿ ವೃದ್ಧಿಯಾಗಿ ಆತ್ಮವಿಶ್ವಾಸವು ಹೆಚ್ಚುವದಲ್ಲದೆ ಕಠಿಣ ತರದ ಪ್ರಶ್ನೆಗಳಲ್ಲಿ ಸುಲಭವಾಗಿ ಯಶಃಪ್ರಾಪ್ತಿಯಾಗುವುದು. ಪರೀಕ್ಷೆಯ ಮೊದಲೇ ಒಂದೆರಡು ಸೀಸೆ ನಮ್ಮ ಆಮಲಕೀ ತೈಲವನ್ನು ತರಿಸಿಕೊಳ್ಳಿರಿ. 4 ಔನ್ಸಿನ ಸೀಸೆ 1ರ ಕ್ರಯ ರೂ. 0-11-0, 2 ಔನ್ಸಿನ ಸೀಸೆ 1ರ ರೂ. 0-6-0 ತಯಾರಿಸುವವರು:-**ಸ್ವದೇಶೀ ಔಷಧಿಭಂಡಾರ**, (ರಜಿಸ್ಟರ್ಡ್)ಕೆಂಜಾಲು, ಪೋಸ್ಟ್ ಬ್ರಹ್ಮಾವರ, ದ. ಭಾರತ.

ನಮ್ಮ ಸ್ಟಾಕಿಸ್ಟರು:-ವಿ.ಆರ್. ಪ್ರಭು, ದಿ ಕೆನರಾ ನ್ಯೂಸ್ ಎಂಡ್ ಬುಕ್ ಏಜೆನ್ಸೀಸ್ ಬಟಾಟವಾಲ್ಲಾ ಮೆನ್ಶನ್, ಲಾಲ್ ಬಾಗ್, ಮುಂಬಯಿ. ಜನರಲ್ ಸಪ್ಲೈಸ್ ಲಿಮಿಟೆಡ್, ಉಡುಪಿ, ನವಭಾರತ ಬುಕ್ ಡಿಪೋ, ಉಡುಪಿ, ಕೆಟಲಾಗಿಗೆ ಬರೆಯಿರಿ.

Advt.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ

"ಗೊನೊಕಿಲರ್" (ರಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಸರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಕಷ್ಟಕರವಾಗಿ ಹೋಗುವುದು ಮತ್ತು ಉರಿವು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗುವ ವೀರ್ಯಸ್ರಾವ, 'ಗೊನೊ-ಕೋಕಸ' ಎಂಬ ವಿಷಕಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹಕಾರಕ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವವು.

ಬೆಲೆ: 20 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಚಾರ್ಜು 0-8-0 ಪ್ರತ್ಯೇಕ. ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಔಷಧಿ ಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲರ್" ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer DR. D. N. JASANI, Vitalbhai Patel Road, BOMBAY 4

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟಿದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ.

Kanara Printing Works,
Hampankatte, **MANGALORE.**

ಕಿವುಡರೂ ಸಂಪೂರ್ಣವಾಗಿ ಕೇಳಬಹುದು.

ಬಧಿರತಾ ಹರಣ
ವಿಜ್ಞಾನದ ನವೀನ ಮತ್ತು
ವಿಚಿತ್ರ ಶೋಧ

ಕಿವಿಸೋರುವುದು, ನೋವು, ಉರಿಯುವುದು, ಶಬ್ದವೇಳುವುದು, ತುರಿಸುವುದು, ಕುರು ಅಥವಾ ಮೊಳವೇಳುವುದು, ಕರ್ಣ ಕುಹರದ ದೋಷ, ಶೀತ ಅಥವಾ ಜ್ವರದ ನಿಮಿತ್ತ ಕ್ವಿನೀನು ತೆಗೆದುಕೊಂಡು ವಂಶಪಾರಂಪರ್ಯವಾಗಿ ಉಂಟಾದ ಅಥವಾ ಯಾ ಸಂಪೂರ್ಣ ಕಿವುಡುತನವೇ ಮೊದಲಾದ ಎಂಥಹ ಕರ್ಣರೋಗವಾಗಲಿ, ಅತ್ಯಂತ ಕಠಿಣ ಕಿವುಡುತನವಾಗಲಿ ನವ್ಯ ವಿಚಿತ್ರ 'ಬಧಿರತಾಹರಣ' ಎಣ್ಣೆಯನ್ನು ಉಪಯೋಗಿಸುವುದರಿಂದ ಖಾತ್ರಿಗುಣಹೊಂದುವುದು. ಈ ಸಿದ್ಧೌಷಧಿಯಿಂದ ನೂರಾರು ಮಂದಿ ಕಿವುಡರು ಚೆನ್ನಾಗಿ ಶ್ರವಣ ಶಕ್ತಿಯನ್ನು ಪಡೆದಿರುತ್ತಾರೆ. ಫಲಕಾರಿಯಾಗದಿದ್ದರೆ ಬೆಲೆಯನ್ನು ವಾಪಸು ಕೊಡಲಾಗುವುದು ಬಾಟ್ಲು 1ರ ಬೆಲೆ ರೂ. 2, 3 ಬಾಟ್ಲುಗಳಿಗೆ ರೂ. 5, ಟಪ್ಪಾಲು ಖರ್ಚು ಪ್ರತ್ಯೇಕ.

ವಿಳಾಸ:—**ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4.**

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿನಿಮ್ಮ ಕೈಗೆಸೇರುವುದು ಸೀಸೆ1ಕ್ಕೆ12ಆಣೆ, ಟ.ಖ.೯ಆಣೆ.

ಎಸ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪೋ, ಉಡುಪಿ**

THE **MOOLKY BANK, LTD.,**
MOOLKY.
ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ಸಹಾಯದಿಂದ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ. ಭಂಗಾರ ವ ಸರಕಿನ ಈಡಿನ ಮೇಲೆ ಸೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, *President & Manager,*
ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!

K. R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ಯಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇವನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಹೊಸ ಪುಸ್ತಕ! **ಸೆಲ್ಫ್ ಇಂಗ್ಲಿಷ್ ಸ್ಟಡಿ** ಈಗಲೇ ಪ್ರಿಂಟಾಗಿದೆ!

SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ **1-8-0**

ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವುದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ 3 ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕ ಇದುವರೆಗೆ ಯಾರೂ ತಯಾರಿಸಲಿಲ್ಲ. ದೊಡ್ಡ ಪುಸ್ತಕ, ಸ್ವಲ್ಪ ಪ್ರತಿಗಳು ಮಾತ್ರ ಇರುವವು, ಬೇಗನೇ ಬರೆಯಿರಿ. ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರ್‍ಯಾರೇ ಆಗಲಿ ಅರವತ್ತು ದಿವಸಗಳಲ್ಲಿ ಇಂಗ್ಲಿಷ್ ಕಲಿತುಕೊಳ್ಳಬಹುದು, ಇದಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ. ಮನೆಯಲ್ಲೇ ಈ ಪುಸ್ತಕ ಓದಿರಿ, ಇಂಗ್ಲೀಷ್ ಓದುವುದು ಎಲ್ಲಾ ಸುಲಭವಾಗಿ ಬರುತ್ತೆ. ಪುಸ್ತಕದ ಕ್ರಯ ರೂ.1—8—0.

Western Swiss Watch Co.
Book-Sellers, Post Box No 68
G. P. O. MADRAS

ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ 68. ಮದರಾಸ್.

ನಿಮ್ಮ ಮನೆಯಲ್ಲಿ ಸದಾ ಆನಂದದ ಜ್ಯೋತಿಯು
ಬೆಳಬೆಳಗುತ್ತಿರಬೇಕೇ? ಹಾಗಿದ್ದರೆ--- ---

ನಂದಾದೀಪ

ಎಂಬ ಉತ್ಕೃಷ್ಟ ಚಿಕ್ಕಕತೆಗಳ ಪ್ರತಿಯೊಂದನ್ನಿಟ್ಟುಕೊಳ್ಳಿ.

ಕರ್ನಾಟಕದ ಪ್ರಸಿದ್ಧ ಕತೆಗಾರರಲ್ಲೊಬ್ಬರಾದ ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರು ಬರೆದ ಮನೋಹರವಾದ ಹನ್ನೊಂದು ಕತೆಗಳ ಸಂಗ್ರಹ.

ಪ್ರತಿಯೊಂದು ಕತೆಯೂ ನಿಮ್ಮ ಹೃದಯದಲ್ಲೊಂದು ಬಗೆಯ ಹೊಸ ಬೆಳಕನ್ನು ಬೆಳಗಿಸುವುದು.

ಬೆಲೆ: 0-8-0 ಟಪ್ಪಾಲು ದ್ವಾರ: 0-9-0

ಕಿರಿಯರ ಪ್ರಪಂಚ, ಉಡುಪಿ.

(0-9-0 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.)

ಸದ್ವೈದ್ಯಶಾಲಾ ನಂಜನಗೂಡು ಇವರ

"ಸುಬಲಾ" ಚಿತ್ತಸಂಕಟ, ಮಲಬದ್ಧತೆ ಇವುಗಳನ್ನು ಹೋಗಲಾಡಿಸಿ, ರಕ್ತ ವೃದ್ಧಿ ಪಡಿಸಿ, ಶರೀರಕ್ಕೆ ಬಲವನ್ನು ಕೊಡುತ್ತದೆ. ಬಹಳ ರುಚಿಯದಾಗಿರುತ್ತದೆ.

ಬ್ರಾಂಚ್:-**ರಥಬೀದಿ ಮಂಗಳೂರು.**

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— **ಡಿಪೋವಿನ ರಿಂಗ್‌ವರ್ಮ್ ಮುಲಾಮು** —

ಇತ್ತರ ವರೆಗಳ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತಾ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

PRINTED BY S. S. KARANTH AT THE THULUNAD PRESS, UDIPI, AND PUBLISHED BY K. H. SHETTY AT "NAVAYUGA OFFICE, UDIPI, S. INDIA.

tered No M 3018 13-6-19

ನವಯುಗ

NAVAYUGA

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಛೇರಿ.— ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

ಭದ್ರತೆಯಿಂದಲೂ, ಖಾತ್ರಿಯುಳ್ಳ ನಷ್ಟ ಹಂಚಿಕೆಯಿಂದಲೂ, ಜಾಗ್ರತೆಯಾಗಿ ಹಕ್ಕುಗಳನ್ನು ಕೊಡುವುದರಿಂದಲೂ ಮತ್ತು ಉದಾರವಾದ ಜೀವವಿಮೆಯ ನಿಯಮಗಳಿಂದಲೂ ಈ ಸಂಸ್ಥೆಯು ಪ್ರಖ್ಯಾತಿಪಡೆದಿರುತ್ತದೆ.

ಪ್ರೊಫೆಸರ್ ಕೆ ಬಿ ಮಾಧವ, ಎಂ.ಎ, ಎಫ್ ಆರ್ ಎ ಎಸ್ , ಎ ಎ (ಲಂಡನ) ಪ್ರೊಫೆಸರ್, ಮಹಾರಾಜ ಕಾಲೇಜು, ಮೈಸೂರು, ಅ ... ರವರ ಅಭಿಪ್ರಾಯ ಸಾರಾಂಶ.

"ಕಳೆದ ೧೦ ವರ್ಷಗಳಿಂದ ನಮ್ಮ ಸಂಪತ್ತು ಬಡಳವಾಗಿ ... ಕಳೆದ ಮೂರು ವರ್ಷಗಳಿಂದ ಆಡಳಿತದ ವೆಚ್ಚ ... ಮೊದಲಾದ ಜೀವವಿಮೆಯ ನಿಯಮಗಳನ್ನು ಉತ್ತಮ ... ಹೊಂದಿರುವ ಅಭಿವೃದ್ಧಿಯು ತೃಪ್ತಿಕರವಾಗಿದೆ ... ಹರಣಯಾಗಿರುವ ಏಷ್ಯಾಟಿಕ್ಕಿನ ಅಸ್ತಿತ್ವದ ... ಕವಾದ ಅಭಿನಂದನೆಗಳನ್ನು ಸೂಚಿಸಲು ಉಂಟಾಗುವ ಸಂತೋಷವನ್ನು ಕಳೆದ ಕೊಳ್ಳುವೆನು"

ಕೊಟ್ಟಿರುವ ವಿಮಾ ಹಕ್ಕಿನ ಹಣಗಳು: ೫,೦೦,೦೦೦—೦—೦

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

H. Venkataramiah, *Divisional Superintendent* } or { **R Purniah** *Ag. General Manager*

The Asiatic Govt. Security Life Assu Co. Ltd.,

Asiatic Building BANGALORE CITY

ಝಂಡು ಮಲೇರಿಯಾ ಮಿಕ್ಸ್ಚರ್

ಝಂಡು ಫಾರ್ಮಸಿ

ಮಲೇರಿಯಾ, ವಿಷಮಜ್ವರಗಳಿಂದುಂಟಾಗುವ ಎಲ್ಲಾ ತರದ

ಕಠಿಣ ಜ್ವರಗಳಿಗೆ

ಖಾತ್ರಿಯಾದ ಸಿದ್ಧೌಷಧ

ಕ್ರಯ: ಆಣೆ 0—14—0 ಮಾತ್ರ.

ಸ್ಥಳೀಯ ಏಜಂಟರು:— ಪಿ. ಎ. ಪೈ ಬ್ರದರ್ಸ್.

ಕಾರ್ಕಳದ ಏಜಂಟರು — ವಿ. ಎ. ಶೆಣೈ, ಕೆಮಿಸ್ಟ್ಸ್.

ಮಂಗಳೂರಿಗೂ ದಕ್ಷಿಣ ಕನ್ನಡ ಜಿಲ್ಲೆಯ ಇತರ. ಮುಖ್ಯ ಸ್ಥಳಗಳಿಗೂ ಏಜಂಟರು ಬೇಕಾಗಿದ್ದಾರೆ.

ಶರ್ತಗಳಿಗೂ ಏಜನ್ಸಿಗಳಿಗೂ ಮುಖ್ಯ ಏಜಂಟರಿಗೆ ಬರೆಯಿರಿ:—

ದಾಮೋದರ್ ಎಂಡ್ ಕೊ,

ಮುಖ್ಯ ಏಜಂಟರು,

ZANDU ೭೮ ಚೀನಾ ಬಜಾರ್ ರೋಡ್, ಜಿ. ಟಿ. ಮದರಾಸು

DAMODER & CO.,

78 China Bazaar Road, **G T MADRAS.**

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು. ಮೈಸೂರು ಸೇಂಡಲ್ ಸೋಪು ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫ್ಯಾಕ್ಟರಿ, ಬೆಂಗಳೂರು

ಮುಚ್ಚಿದರೆ ಮುಗುಳು ! **ಬಿಚ್ಚಿದರೆ ಅರಳು !!**

ಪ್ರೊ. ಕೆ. ಹೊನ್ನಯ್ಯ ಶೆಟ್ಟರಿಂದ ಪ್ರಕಟಿಸಲ್ಪಟ್ಟ

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಮಾಲೆಯ

ಮುಗುಳು

ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಅತ್ಯುಪಯುಕ್ತವಾದ ಸಚಿತ್ರ ಪದ್ಯ ಪುಸ್ತಕ.

(ಮದ್ರಾಸ್, ಬೊಂಬಾಯಿ, ಮೈಸೂರು ಟೆಕ್ಸ್ಟ್ ಬುಕ್ ಕಮಿಟಿಗಳಿಂದ ಮಂಜೂರಾಗಿದೆ.

ಅಭಿನಯಕ್ಕೆ, ನರ್ತನಕ್ಕೆ, ಕಂಠಪಾಠಕ್ಕೆ, ಎಲ್ಲಕ್ಕೂ ಅತ್ಯನುಕೂಲವಾದ, ಮಕ್ಕಳ ವಯೋಗುಣಕ್ಕನುಗುಣವಾದ ಪದ್ಯಗಳಿಂದೊಡಗೂಡಿದೆ.

ಅಧ್ಯಾಪಕರೆಲ್ಲಾ ಇದನ್ನು ಮಕ್ಕಳ ಕೈಗೆ ಕೊಟ್ಟು, ಉಲಿವಾಡಿಸಿ, ಕುಣಿಸಬೇಕಾಗಿ ಪ್ರಾರ್ಥನೆ.

ಎಂಟನೆಯ ಆವೃತ್ತಿ] [ಬೆಲೆ: ೦—೨—೬

ಮಗ್ಗಿ ಪುಸ್ತಕ

ಸಣ್ಣದು ೦—೦—೬ ದೊಡ್ಡದು ೦—೧—೦

ಪ್ರತಿಗಳು ... ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಕೆಳಗಿನವರಿಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ, ಉಡುಪಿ.

THE VIJAYA BANK LTD.,

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ--- ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಆರಂಭಿಸಿ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಒಮ್ಮೆ ತೊಡಗಿದಿರೆಂದರೆ ಕಡೆತನಕವೂ ಓದದೆ ಬಿಡಲಾಗದ ಪುಸ್ತಕ—

ಪಂಚಾರತಿ

'ಭಾರತೀ ಗ್ರಂಥಮಾಲೆ'ಯವರು ನೂತನವಾಗಿ ಪ್ರಕಟಿಸಿದ ಕರ್ನಾಟಕದ ಪ್ರಸಿದ್ಧ ಬರಹಗಾರರೈವರ ಐದು ಏಕಾಂಕ ನಾಟಕಗಳ ಸಂಗ್ರಹ.

(೧) ಮುಸುಕು (ಶ್ರೀ. ಎನ್ ಕೆ. ಕುಲಕರ್ಣಿ, ಎಂ ಎ)
(೨) ಪ್ರಾಯಶ್ಚಿತ್ತ (ಶ್ರೀ ಎಸ್. ವೆಂಕಟರಾಜ)
(೩) ಜ್ವಾಲಾಮುಖಿ (ಶ್ರೀ. ಬಿ ಅಶ್ವತ್ಥನಾರಾಯಣ ರಾವ್)
(೪) ಭಾಮಿನಿಯ ಭಾಗ್ಯೋದಯ (ಪ್ರೊ. ಆರ್. ವಿ. ಜಾಗೀರ್‌ದಾರ್ ಎಂ. ಎ. (ಲಂಡನ್)
(೫) ಓಂ ಪೋರಿಬಸ್ಸಿಗೆ ಮೂರು ಸಾವಿರ (ಶ್ರೀ ಕೆಸರಡ್ಕಲ್ ಶ್ರೀನಿವಾಸ ರಾವ್)

ಮನೋಹರವಾದ ಅಂತರಂಗ! ಚಿತ್ತಾಕರ್ಷಕ ಬಹಿರಂಗ!!

80 ಪುಟಗಳು **ಬೆಲೆ 0—4—0**

ನವಭಾರತ ಪುಸ್ತಕ ಭಂಡಾರ, ಉಡುಪಿ.

(0—5—0 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು)

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ಸಿಕ್ಕಿರಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ ಅಮೋಘವಾದ ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ, ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 ಕೊಡಿಯಾಲಬೈಲು, ದ.ಕ.

ಸ್ಥಾಪನೆ: **ಕ್ರೌನ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್ ಬೋರ್ಡು, ಡವಾನದ ಬೇಜು, ಮೊನೊಗ್ರಾಮ್ ಸೀಲು ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co., 18 Balmat Road, MANGALORE

Approved firm by the Govt. of Mysore. *Certified by the Agent of the Govt. of India in Ceylon*

ನಾಟಕದಲ್ಲಿ ಕಾಲದ ಸ್ಫೂರ್ತಿಯು ಮೂರ್ತಿಮತ್ತಾಗಿ ತೋರಬೇಕು
ಆ ಸ್ಫೂರ್ತಿಯಿಂದ ವಾಚಕರೂ ಪ್ರೇಕ್ಷಕರೂ ಜಾಗೃತರಾಗಬೇಕು

ಅಂತಹ ನಾಟಕವೇ

ದೇಶಭಕ್ತ

ಕಾಂಗ್ರೆಸ್ ಹೋರಾಟದ ತ್ಯಾಗ ಸಂಕಷ್ಟಗಳನ್ನೂ ಅದನ್ನು ಕಡೆಗಟ್ಟಲು ಅಧಿಕಾರಿ ವರ್ಗವು ಹೂಡುವ ಕುತಂತ್ರಗಳನ್ನೂ ಕಣ್ಣಮುಂದಿರಿಸಿ ಸಮತಾವಾದವನ್ನು ಪ್ರತಿಪಾದಿಸಿ, ನವಜಾಗೃತಿಯನ್ನು ಮಾಡುವ ನವೀನ ಸಾಮಾಜಿಕ ನಾಟಕ.

ವಿಶೇಷವಾಗಿ ಆಶ್ರಿತ ಸಂಸ್ಥಾನಗಳಲ್ಲಿ ಇಂದು ನಡೆಯುತ್ತಿರುವ ಸ್ವಾತಂತ್ರ್ಯ ಸಂಗ್ರಾಮದ ನೈಜ ಚಿತ್ರ. **ಪ್ರತಿಯೊಬ್ಬರೂ ಓದತಕ್ಕ ನವೀನ ಪುಸ್ತಕ.**

ಲೇಖಕರು–ಕೆ. ಕೆ. ಶೆಟ್ಟಿ. ಬೆಲೆ ೦—೧೦—೦

11 ಆಣೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಲಾಗುವುದು.

ನವಯುಗ ಆಫೀಸು, ಉಡುಪಿ.

The Pangal Nayak Bank Ltd.,

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿತ್ತು)

ಮುಖ್ಯ ಕಾರ್ಯಾಲಯ–**ಕೋರ್ಟುಬಳಿ, ಉಡುಪಿ, ದ. ಕನ್ನಡ**

ಶಾಖೆಗಳು–ಉಡುಪಿ, ಮಂಗಳೂರು, ಕಟಪಾಡಿ ಮತ್ತು ಕಾಂಞಂಗಾಡ್

ತತ್ತಮೂಲಧನ—ರೂ. 1,82,100/- ಕ್ಷೇಮನಿಧಿಗಳು ರೂ. 1,92,000/-

ಚಿನ್ನಾಭರಣಗಳ, ಮಾರಾಟಕ್ಕೆ ಅನುಕೂಲವಾಗಬಹುದಾದ ಬಾಳುವ ದವಸಗಳ, ಸಮಾಧಾನಕರವಾದ ವ್ಯಾಪಾರದ ಬಿಲ್ಲು, ಹುಂಡಿ ಇತ್ಯಾದಿಗಳ ಭದ್ರತೆಯ ಮೇಲೆ ಸುಲಭ ದರಗಳಲ್ಲಿ ಚಿಕ್ಕ ವ ದೊಡ್ಡ ಸಾಲಗಳು ಕೊಡಲ್ಪಡುತ್ತವೆ.

ದೀರ್ಘ ವ ಅಲ್ಪ ಅವಧಿಯ ನಿರಖು ಠೇವಣಾತಿಗಳು ಶ್ರೀಮಂತರಿಗೂ ಇತರರಿಗೂ ಏಕರೀತಿ ತೃಪ್ತಿಕರವಾದ ಶರ್ತಗಳಲ್ಲಿ ಅಂಗೀಕರಿಸಲ್ಪಡುತ್ತವೆ.

ಬೇಂಕಿನ ಅತ್ಯಾಧುನಿಕ ವಿಧದ ಸಮಸ್ತ ವಹಿವಾಟುಗಳೂ ನಡೆಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ದಯವಿಟ್ಟು ಮೌಖಿಕ ವ ಪತ್ರದ್ವಾರ ವಿಚಾರಿಸಿರಿ.

ಕೋಪನ್ಹಾನದ ಬಿಳೀ ಟೂಥಪೇಸ್ಟ ಅಲುಗಾಡುವ ಹಲ್ಲುಗಳನ್ನು ಗಟ್ಟಿಮಾಡ್ತದೆ.



ಅಲುಗಾಡುವ ಹಲ್ಲುಗಳನ್ನು ಪುನಃ ಗಟ್ಟಿಮಾಡಿ ರಕ್ತ ಬೀಳುವದನ್ನು ಬಂದು ಮಾಡಿ ವಸಡಿಯನ್ನು ಗಟ್ಟಿ ಮಾಡುವದು. ತಯಾರಿಸುವವರು— ಕೋಪನ್ಹಾನ್ ಕೆಮಿಕಲ್ ಕಂ. (ಮಾಲಕರು.—ಮಗನಭಾಯಿ ಅಮೀನ್ ಆಂಡ್ ಕಂಪನಿ ಮುಂಬಯಿ.

Transport & Car Owners



ARE SPECIALLY INVITED TO VISIT

OUR SHOW ROOM *for economical transport maintenance..*

CANARA AUTOMOBILES - - - - - MANGALORE

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ESTD. 1921 ಸ್ಥಾಪನೆ

FOUNDER:
SRI. A. B SHETTY, M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

NAVAYUGA
ನವಯುಗ

ಚಂದಾ ವಿವರ:
1 ವರ್ಷಕ್ಕೆ - ರೂ. 3—4—0
6 ತಿಂಗಳಿಗೆ - ರೂ. 1-12—0

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹ ಸಂಪಾದಕ:
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೪೦

ಉಡುಪಿ, ಗುರುವಾರ, ೧೩—೬—೧೯೪೦.
UDIPI, THURSDAY, 13-6-1940.

VOL. 19
No. 40

ಪೆರಿಸಿನಮೇಲೆ ವಿಮಾನಧಾಳಿ

ಇದೇ ತಾ. ೩ನೇ ಅಪರಾಹ್ನ ಪ್ರಥಮವಾಗಿ ಹಲವು ಜರ್ಮನ್ ವಿಮಾನಗಳು ಪೆರಿಸಿನ ಮೇಲೆ 45 ಮಿನಿಟುಗಳ ವರೆಗೆ ಹಾರಾಡಿ ಬೋಂಬಿಸೆದು 251 ಮಂದಿ ಕೊಲ್ಲಲ್ಪಟ್ಟರು. 652 ಮಂದಿ ಗಾಯಗೊಂಡಿರುವರು. ಕಿಚ್ಚಿಟ್ಟಿಸುವ ಬೋಂಬುಗಳಿಂದಾಗಿ ಹಲವು ಮನೆಗಳಿಗೆ ಬೆಂಕಿಹಿಡಿಯಿತು. ಅಮೇರಿಕದ ರಾಯಭಾರಿಯಾದ ಮಿ. ವಿಲಿಯಮ್ ಬುಲ್ಲಿಟರು ಊಟಮಾಡುತ್ತಿರುವಾಗ ಬೋಂಬೊಂದು ಅವರಿಂದ ಕೇವಲ 6 ಅಡಿದೂರ ಬಿದ್ದು ಸ್ಫೋಟವಾಗದಕಾರಣ ಅವರು ರಕ್ಷಿಸಲ್ಪಟ್ಟರು. ಜರ್ಮನರು ಅತಿ ಎತ್ತರದಿಂದ ಭಾರವಾದ ಸ್ಫೋಟಕ ಬೋಂಬುಗಳನ್ನೆಸೆದಿದ್ದರು. ಇದರ ಪ್ರತೀಕಾರಾರ್ಥವಾಗಿ ಫ್ರೆಂಚರು ಜರ್ಮನ್ ಪಟ್ಟಣಗಳ ಮೇಲೆ ವಿಮಾನಧಾಳಿ ನಡಿಸುವ ನಿರ್ಧಾರ ಮಾಡಿರುವರು ಈ ಧಾಳಿಯಲ್ಲಿ 25 ಜರ್ಮನ್ ವಿಮಾನಗಳು ನಾಶಮಾಡಲ್ಪಟ್ಟಿರುವವೆಂದು ತಿಳಿದು ಬರುತ್ತದೆ

ಡಂಕರ್ಕಿನ ಪತನ

ಇದೇ ತಾ. 4ರಲ್ಲು ಡಂಕರ್ಕಿನಲ್ಲಿದ್ದ ನೆಲ ಮತ್ತು ಜಲ ಸೇನೆಯು ಅದನ್ನು ಬಿಟ್ಟುಹೋಗಿ ಅದು ಜರ್ಮನರ ವಶವಾಗಿರುವುದು. ಬಂದರವು ಸಂಪೂರ್ಣವಾಗಿ ನಾಶವಾಗಿ ಅಪ್ರಯೋಜಕವಾಗಿದೆ. ಡಂಕರ್ಕಿನ ಗೂಲಕ ಸೇನೆಯನ್ನೊಯ್ಯಲು 300 ಫ್ರೆಂಚ್ ಯುದ್ಧ ಮತ್ತು ವ್ಯಾಪಾರಿ ಹಡಗಗಳು 300 ಚಿಕ್ಕ ನಾವೆಗಳೂ ಉಪಯೋಗಿಸಲ್ಪಟ್ಟಿದ್ದವು. 7 ಡಿಸ್ಟ್ರೋಯರ್ ಹಡಗು ಒಂದು ವ್ಯಾಪಾರಿ ಹಡಗು ಮುಳುಗಿಹೋಗಿರುವವು. 6 ಬ್ರಿಟಿಷ್ ಡಿಸ್ಟ್ರೋಯರ್ ಹಡಗ ಮತ್ತು 24 ಇತರ ಚಿಕ್ಕ ನಾವೆಗಳು ಮುಳುಗಿಹೋಗಿವೆ.

ಸರ್. ಸ್ಟಾಫೋರ್ಡರು ರಶ್ಯದ ರಾಯಭಾರಿ

ಇಂದೀಗ ಇಂಗ್ಲೆಂಡು ರಶ್ಯವನ್ನೊಲಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಆದುದರಿಂದಲೇ ರಶ್ಯದ ಕುರಿತು ತುಂಬಾ ಸಹಾನುಭೂತಿಯಿರುವ ಸರ್. ಸ್ಟಾಫೋರ್ಡ್ ಕ್ರಿಪ್ಸರನ್ನದು ರಶ್ಯದ ತನ್ನ ಹೊಸ ರಾಯಭಾರಿಯನ್ನಾಗಿ ನೇಮಿಸಿರುವುದು. ಇದೇ ರೀತಿ ಫ್ರೆಂಚ್ ಸರಕಾರವು ಕೂಡಾ ಮೋನ್‌ಶ್ಯೂರ್ ಲಿಬೋನರನ್ನು ರಶ್ಯದ ಹೊಸ ರಾಯಭಾರಿಯಾಗಿ ನೇಮಿಸಿರುವುದು. ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳೀಗ ರಶ್ಯದೊಡನೆ ಮೈತ್ರಿಯಿಂದಿರಲೆಳಸುತ್ತವೆ.

ರಾಮಮನೋಹರ ಲೋಹಿಯರ ದಸ್ತಗಿರಿ

ಹಿಂದೂ ದೇಶದ ರಕ್ಷಣಾ ಕಾನೂನಿನಂತೆ ಪ್ರತಿದಿನವೂ ಕಾಂಗ್ರೆಸ್ಸಿನೊಳಗಣ ತೀವ್ರಗಾಮಿಗಳ ಮತ್ತು ಮಜೂರ ಮತ್ತು ಕೃಷಿಕ ಮುಖಂಡರ ದಸ್ತಗಿರಿಯು ನಡೆಯುತ್ತಲೇ ಇರುವುದು. ಬಂಗಾಳ, ಸಂಯುಕ್ತಪ್ರಾಂತ, ಪಂಜಾಬು ಮತ್ತು ಬೊಂಬಾಯಿಗಳಲ್ಲಿ ಈ ದಸ್ತಗಿರಿಗಳು ಅತಿ ಹೆಚ್ಚಾಗಿ ನಡೆದಿರುತ್ತವೆ. ಇದೇ ತಾ. 7ರಲ್ಲಿ ಡಾಕ್ಟರ್ ರಾಮಮನೋಹರ ಲೋಹಿಯರವರು ಅಲಹಾಬಾದಿನಲ್ಲಿ ಕೈದುಮಾಡಲ್ಪಟ್ಟಿರುವರು ಡಾಕ್ಟರ್ ಲೋಹಿಯರವರು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಆಫೀಸಿನ ಸಿಬ್ಬಂದಿಯಲ್ಲಿ ಕೆಲಸಮಾಡುತ್ತಿದ್ದರು. ಅವರು ತಾ 6ನೇ ಸಂಜೆ ಕಲ್ಕತ್ತದಿಂದ ಹಿಂದೆಬಂದರು. ಸುಲ್ತಾನಪುರ ಎಂಬಲ್ಲಿ ಅವರು ಕೊಟ್ಟಿದ್ದ ಭಾಷಣವೇ ಈ ದಸ್ತಗಿರಿಗೆ ಕಾರಣ.

ಸಮಾಚಾರ ಸಂಗ್ರಹ

ಮಿತ್ರ ರಾಷ್ಟ್ರಗಳಿಗೆ ಅಮೇರಿಕದ ಸಹಾಯ

ಜರ್ಮನಿಯ ವಿಜಯದಿಂದ ಪ್ರೆಸಿಡೆಂಟ್ ರೂಸವೆಲ್ಟರು ತಳಮಳಗೊಂಡಿರುವರು. ಕೂಡಲೇ ಮಿತ್ರ ರಾಷ್ಟ್ರಗಳಿಗೆ ಯುದ್ಧೋಪಕರಣಗಳ ಸಹಾಯವೀಯಬೇಕೆಂಬ ಭಾವನೆಯು ಬಲಗೊಳ್ಳುತ್ತಿರುವುದು. ಪ್ರೆಸಿಡೆಂಟ್ ರೂಸವೆಲ್ಟರು ಹಳೆಯ ನಮೂನೆಯ ಅಮೇರಿಕದ ಯುದ್ಧ ವಿಮಾನಗಳನ್ನು ಮಿತ್ರ ರಾಷ್ಟ್ರಗಳಿಗೆ ಮಾರುವ ನಿರ್ಧಾರ ಮಾಡಿರುವರು. ಅಮೇರಿಕದ ಕಂಪನಿಗಳು ಅವನ್ನು ತೆಗೆದುಕೊಂಡು ಮಿತ್ರ ರಾಷ್ಟ್ರಗಳಿಗೆ ಮಾರುವವು ಇದರಿಂದ ಅಮೇರಿಕದ ತಾಟಸ್ಥ್ಯದ ಧೋರಣೆಗೆ ಬಾಧಕವಾಗುವಂತಿಲ್ಲವೆಂದು ಇಷ್ಟರಲ್ಲೇ 300ಮಿಲ್ಯ ಡೋಲರು ಬೆಲೆಯ 2500 ಯುದ್ಧ ವಿಮಾನಗಳು ಫ್ರಾನ್ಸಿಗೆ ಕಳುಹಿಸಲ್ಪಟ್ಟಿವೆಯೆಂದು ತಿಳಿದುಬಂದಿದೆ. 300ರಿಂದ 400ರ ವರೆಗಣ ಬೋಂಬರ್ ವಿಮಾನಗಳು ಬೇಗನೆ ಕಳುಹಿಸಲ್ಪಡಲಿರುವವು.

ಉದ್ಧಾಮಸಿಂಗನಿಗೆ ಫಾಶಿ ಶಿಕ್ಷೆ

ಸರ್. ಮೈಕೇಲ್ ಒಡ್ವಾಯರನ್ನು ಗುಂಡೆಸೆದು ಕೊಂದ ಮತ್ತು ಲೋಡ್ ಜೆಟ್ಲೆಂಡರೇ ಮೊದಲಾದವರನ್ನು ಗಾಯಗೊಳಿಸಿದ ಆರೋಪದಿಂದ ಕೈದುಮಾಡಲ್ಪಟ್ಟು ವಿಚಾರಣೆಗೊಳಗಾಗಿದ್ದ ಶ್ರೀ ಉದ್ಧಾಮಸಿಂಗನಿಗೆ ಇದೇ ತಾ. 5ರಲ್ಲು ಫಾಶಿ ಶಿಕ್ಷೆ ವಿಧಿಸಲಾಗಿದೆ. ಶ್ರೀ. ಸಿಂಘನು ಪಂಜಾಬಿನ ಅತ್ಯಾಚಾರದ ಪ್ರತೀಕಾರಾರ್ಥವಾಗಿ ಸರ್. ಮೈಕೆಲರನ್ನು ಕೊಂದುದೆಂದು ಹೇಳಿದರೂ ಕಡೆಗೆ ತನಗೆ ಸರ್. ಮೈಕೆಲರನ್ನು ಕೊಲ್ಲುವ ಉದ್ದೇಶವಿರಲಿಲ್ಲೆಂದೂ, ತಾನು ಸಭೆಯಲ್ಲಿ ನಡೆದ ಭಾಷಣಗಳ ಕುರಿತು ನಿಷೇಧಸೂಚಿಸಲು ಮೇಲಕ್ಕೆ ಗುಂಡುಹಾರಿಸುವಾಗ ಕೆಲವರು ತನ್ನ ಕೈ ತಡೆದು ಪಿಸ್ತೂಲಿನ ಗುಂಡುಗಳು ಸರ್. ಮಿಕೇಲರೇ ಮೊದಲಾದವರಿಗೆ ತಾಗಿದುದೆಂದೂ ಹೇಳಿದನು. ಆದರೆ ಮೆಜಿಸ್ಟ್ರೇಟರೂ ಪಂಚರೂ ಇದನ್ನು ನಂಬದೆ ಶ್ರೀ. ಉದ್ಧಾಮಸಿಂಘನಿಗೆ ಫಾಶಿ ಶಿಕ್ಷೆ ವಿಧಿಸಿದರು ಸಿಂಘನು ಜೈಲಲ್ಲಿ 42ದಿವಸಗಳವರೆಗೆ ಅನ್ನ ಬಹಿಷ್ಕರಿಸಿಡಿದಿದ್ದು ಕೃಶವಾಗಿದ್ದನು. ತನ್ನ ಫಾಶಿ ಶಿಕ್ಷೆಯ ತೀರ್ಪನ್ನು ಕೇಳಿದೊಡನೆಯೇ ಮುಷ್ಟಿಯಿಂದ ಪಿಂಜರಿಯ ಆವರಣಕ್ಕೆ ಬಡಿದು ಕೋರ್ಟಿನೊಳಗೆ ಉಗುಳಿ ತನ್ನ ತಿರಸ್ಕಾರ ತೋರಿಸಿದನು.

ಇಟೆಲಿಯ ಕರಾವಳಿಯು ಅಪಾಯಕರವಿದೆ

ಇಟೆಲಿ, ಅಲ್ಬೇನಿಯ ಮತ್ತು ಇಟೆಲಿಯ ಇತರ ವಸಾಹತುಗಳ ಕರಾವಳಿಯು 12 ಮೈಲುಗಳ ವರೆಗಣ ಸಮುದ್ರ ತೀರವು ಅಪಾಯಕರವಿದೆಯೆಂದೂ, ಹಡಗಗಳು ಅದನ್ನು ಸಮೀಪಿಸಿದರೆ ಅಪಾಯವುಂಟಾಗಬಹುದೆಂದೂ ಇಟೆಲಿಯನ್ ಸರಕಾರವು ಎಚ್ಚರವಿತ್ತಿರುವುದು. ಇಟೆಲಿಯು 12 ಮೈಲುಗಳ ವರೆಗಣ ಸಮುದ್ರ ಪ್ರವೇಶದಲ್ಲಿ ಜಲ ತೋಟೆಗಳನ್ನಿಟ್ಟಿರುವುದೆಂದು ಇದರಿಂದ ಊಹಿಸಬಹುದು.

ಫ್ರೆಂಚ್ ಮಂತ್ರಿಮಂಡಲದಲ್ಲಿ ಪುನಃ ಬದಲಾವಣೆ

ಇದೇ ತಾ. 6ರಲ್ಲು ಫ್ರೆಂಚ್ ಮಂತ್ರಿಮಂಡಲವು ಪುನರ್ಘಟಿಸಲ್ಪಟ್ಟಿರುವುದು. ಎಮ್. ಡೆಲಡಿಯರರು ಈ ಸಲ ಮಂತ್ರಿಮಂಡಲದಲ್ಲೇ ಇರುವುದಿಲ್ಲ. ಪ್ರಧಾನ ಮಂತ್ರಿಗಳಾದ ಎಮ್. ರೈನೋಡರೇ ವಿದೇಶಾಂಗ ಮತ್ತು ಯುದ್ಧಖಾತೆಗಳ ಆಡಳಿತ ವಹಿಸಿರುವರು. ಡೆಲಡಿಯರರು ಮಂತ್ರಿಮಂಡಲದಿಂದಲೇ ಹೊರಬೀಳಲು ಕಾರಣವೇನೆಂದು ತಿಳಿದಿಲ್ಲ ಪ್ರಾಯಶಃ ಅವರಿಗೂ ಮುಖ್ಯ ಮಂತ್ರಿಗಳಿಗೂ ಭಿನ್ನಾಭಿಪ್ರಾಯವುಂಟಾಗಿರಬೇಕು.

TROPICAL

In the wake of the two great movements that swept over the country in the early twenties of this century TROPICAL INSURANCE CO. LTD., was founded by Pt Moti Lal Nehru, Hakim Ajmal Khan and Dr Ansari, and although the hands of Providence snatched them one after another the Company has not lost its ideals and is now under the guidance of DESHAGAURAB SJ. SUBHAS CHANDRA BOSE, WHO IS THE CHAIRMAN OF ITS BOARD OF DIRECTORS

TROPICAL INSURANCE COMPANY, LTD.

Branch Office: NIVAS Building, Hampankatta

MANGALORE.

ಟ್ರೋಪಿಕಲ್

ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಬ್ರಾಂಚ್ ಆಫೀಸು.- ನಿವಾಸ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಜರ್ಮನರಿಗೆ ಹೆಚ್ಚಿನ ಪ್ರಯೋಜನವಿಲ್ಲ

ನೋರ್ವೆ, ಡೆನ್ಮಾರ್ಕ್, ಮತ್ತು ಹೊಲ್ಲೆಂಡ್‌ಗಳನ್ನು ಗೆದ್ದುದರಿಂದ ಜರ್ಮನಿಗೆ ಹೆಚ್ಚಿನ ಸಾಂಪತ್ತಿಕ ಪ್ರಯೋಜನವೇನೂ ಆಗಿರುವುದಿಲ್ಲೆಂದು ಬ್ರಿಟಿಷರ ಹೇಳಿಕೆ. ಬೆಲ್‌ಜಿಯಮಿನ ರೇಡಿಯಮ್ ಮತ್ತು ಕೊಬಾಲ್ಟ್‌ಗಳ ಸಂಗ್ರಹವನ್ನು ಮಿತ್ರರಾಷ್ಟ್ರಗಳು ಮೊದಲೇ ತೆಗೆದುಕೊಂಡು ಹೋಗಿರುತ್ತವೆ. ಹೆಚ್ಚಿನ ಪೆಟ್ರೋಲ್ ಮತ್ತು ಇತರ ಹಲವು ಸಾಮಾನುಗಳು ನಾಶಮಾಡಲ್ಪಟ್ಟಿವೆ. ಆದರೆ ಬೆಲ್‌ಜಿಯಮ್ ಮತ್ತು ಲಕ್ಸೆಂಬರ್ಗಿನಲ್ಲಿದ್ದ ಉಕ್ಕು ಕೈಗಾರಿಕೆ ಮತ್ತು ಗನಿಗಳನ್ನು ಬಹುಮಟ್ಟಿಗೆ ನಾಶ ಮಾಡಲಾಗಲಿಲ್ಲ. ಹೊಲ್ಲೆಂಡ್ ಮತ್ತು ಬೆಲ್‌ಜಿಯಮುಗಳಲ್ಲಿ ಖಾಸಗಿ ಜನರಲ್ಲಿದ್ದ ಹೆಚ್ಚಿನ ಚಿನ್ನ ಮತ್ತು ಇತರ ಭದ್ರತೆಗಳು ಜರ್ಮನರ ವಶವಾಗಿರುತ್ತವೆ. ಡಚ್ಚ್ ಪೆಟ್ರೋಲಿಯಮ್ ಸಂಗ್ರಹ ಮತ್ತು ಹಡಗ ರಚನಾ ಕೈಗಾರಿಕೆಯು ಕೂಡಾ ಬಹುತೇಕ ನಾಶಗೊಳಿಸಲ್ಪಟ್ಟಿವೆ. - - -

ಫ್ಲೆಂಡರ್ಸಿನಲ್ಲಿ ಜರ್ಮನಿಗಾಗಿರುವ ನಷ್ಟ

ಫ್ಲೇಂಡರ್ಸ್ ಯುದ್ಧದಲ್ಲಿ ಜರ್ಮನರು ಸುಮಾರು 80 ದಳ ಸೈನ್ಯಗಳನ್ನು ಉಪಯೋಗಿಸಿದ್ದರು. ಇವುಗಳಲ್ಲಿ 16 ಯಾಂತ್ರಿಕ ದಳಗಳು. ಯಾಂತ್ರಿಕ ದಳಗಳಲ್ಲಿ ಮೂರರಲ್ಲಿ ಒಂದು ಪಾಲಿನಿಂದ ಅರೆವಾಸಿಯ ವರೆಗೆ ನಾಶಹೊಂದಿರುವವೆಂದು ನಂಬಲಾಗಿದೆ. 2ರಿಂದ 2½ ಮಿಲ್ಯಗಳ ವರೆಗಣ ಜರ್ಮನ್ ಸೈನಿಕರಲ್ಲಿ 400,000ರಿಂದ 600,000ದ ವರೆಗಣವರು ಕೊಲ್ಲಲ್ಪಟ್ಟಿರುತ್ತಾರೆ. ಇಲ್ಲವೆ ಗಾಯಗೊಂಡಿರುವರೆಂದು ನಂಬಲಾಗಿದೆ. ಗಾಯಗೊಂಡವರ ಸಂಖ್ಯೆಯು ಬಹಳವಾಗಿ ಹೆಚ್ಚಿ ಅನೇಕ ಕಟ್ಟಡಗಳು ಆಸ್ಪತ್ರೆಗಳಾಗಿ ಮಾರ್ಪಡಿಸಲ್ಪಟ್ಟಿವೆ. ಜರ್ಮನ್ ಸರಕಾರದ ಪ್ರಕಟಣೆ ಮೇರೆಗೆ ಕೊಲ್ಲಲ್ಪಟ್ಟವರು ಕೇವಲ 10,000 ಮಂದಿ ಮತ್ತು ಗಾಯಗೊಂಡವರು 10,000.

ದಕ್ಷಿಣಕನ್ನಡ ಜಿಲ್ಲಾ ಗಜೇಟು ಲೋಕಲ್ ಮತ್ತು ಮುನ್ಸಿಪಲ್ ಸಪ್ಲಿಮೆಂಟು

1934ನೇ ಇಸವಿ ಮೇ ತಾರೀಕು 1ರವರೆಗೆ ತಿದ್ದಿಯಾದ 1920ನೇ ಇಸವಿಯ ಮದ್ರಾಸು ಲೋಕಲ್ ಬೋರ್ಡುಗಳ 10/14ಕ್ಕೆ ಆಕ್ಟಿನ 193 ಮತ್ತು 212 (2)ನೇ ಪ್ರಕರಣಗಳ ನಿಬಂಧನೆಗಳಿಗನುಸಾರವಾಗಿ ಪ್ರಕಟಣೆ.

1939ನೇ ಇಸವಿ ಅಕ್ಟೋಬರ ತಿಂಗಳ ತಾ. 9ರ ನಂಬ್ರ 3655 P. K. A. ಗವರ್ನಮೆಂಟ್ ಹುಕುಮಿಗನುಸಾರವಾಗಿ ದಕ್ಷಿಣಕನ್ನಡ ಜಿಲ್ಲಾ ಬೋರ್ಡಿನಲ್ಲಿ ತಾ. 13-5-1940ರಲ್ಲು ಮಂಜೂರಾದ ನಂಬ್ರ 5ನೇ ನಿರ್ಣಯದ ಮೇರೆಗೆ 1936ನೇ ಇಸವಿ ಆಗೋಸ್ತು ತಿಂಗಳ ತಾ. 20ರ ಜಿಲ್ಲಾ ಗಜೇಟಿನಲ್ಲಿ ಪ್ರಕಟಿಸಲಾದ ಅಪಾಯಕರ ವ್ಯಾಪಾರಗಳನ್ನು ನಡೆಸುವವರು ಸದ್ರಿ ವ್ಯಾಪಾರದ ಲೈಸೆನ್ಸು ಬಗ್ಗೆ ನವೀಕರಣದ ಬಾಬ್ತು ವರ್ಷಾಂತ್ಯದ 30ದಿನಗಳ ಮುಂಚಿತವಾಗಿಯೂ ಹೊಸ ಲೈಸೆನ್ಸುಗಳ ಬಗ್ಗೆ ವ್ಯಾಪಾರವನ್ನು ಪ್ರಾರಂಭಿಸುವ 30ದಿನಗಳ ಮುಂಚಿತವಾಗಿಯೂ ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಿಗೆ ತಲುಪುವಂತೆ ಅರ್ಜಿಗಳನ್ನು ಕಳುಹಿಸದಿದ್ದರೆ ಆಯಾ ವ್ಯಾಪಾರದ ಬಾಬ್ತು ನಿಶ್ಚೈಸಲಾದ ಫೀಸಿನ ಶೇಕಡಾ 12 ದರದಲ್ಲಿ ಹಾಗೂ ಶೇಕಡಾ 25ಕ್ಕೆ ಮೀರದಷ್ಟು ದಂಡವನ್ನು ವಿಧಿಸಲಾದೀತೆಂದು ಈ ಮೂಲಕ ಸಮಸ್ತ ಜನರಿಗೆ ತಿಳಿಸಲಾಗುತ್ತದೆ.

ಸೂಚನೆ:—ಈ ಪ್ರಕಟಣೆಯು ಜಿಲ್ಲಾ ಗಜೇಟಿನಲ್ಲಿ ಪ್ರಕಟವಾದ 60ದಿವಸದ ನಂತರದಿಂದ ಜಾರಿಗೆ ಬರತಕ್ಕದ್ದು.

(*Sd.*) **K. Vittal Shetty,**
President.

ಹಿಂದೀ ಸೇನೆಯ ಧೈರ್ಯ ಮತ್ತು ಸ್ಥೈರ್ಯ

ಫ್ಲೆಂಡರ್ ಯುದ್ಧದಲ್ಲಿ ಹಿಂದೀ ಸೈನಿಕರು ಎಂತಹ ಕಷ್ಟವನ್ನಾದರೂ ಸಹಿಸಿಕೊಂಡು ಅತ್ಯಂತ ಧೈರ್ಯ ಮತ್ತು ಸ್ಥೈರ್ಯದಿಂದ ಹೋರಾಡಿರುವರು. ಅದರಲ್ಲಿ ಹೆಚ್ಚಿನವರೀಗ ಸುರಕ್ಷಿತವಾಗಿ ಹಿಂದಿರುಗಿರುವರು. ಅವರೇನೂ ಉತ್ಸಾಹಗುಂದದೆ ಅತ್ಯಂತ ಶಿಸ್ತು ಮತ್ತು ಉಲ್ಲಾಸದಿಂದಿರುವರು. ಇಂಗ್ಲೆಂಡಿಗೆ ಕಳುಹಿಸಲ್ಪಟ್ಟಿರುವ ಹಿಂದೀ ಸೈನಿಕರ ಪೈಕಿ ಅರೆವಾಸಿ ಮಂದಿ ಫ್ರಾನ್ಸಿನ ರಣರಂಗಗಳಲ್ಲಿ ಕಾದಾಡುತ್ತಿರುವರು.

ನೀಲಂಬೂರಿನ ರಾಜರ ವಿಜಯ

ಕೊಲ್ಲಂಗೋಡಿನ ರಾಜರ ಮರಣದಿಂದ ಖಾಲಿಬಿದ್ದ ಕೇಂದ್ರ ಎಸೆಂಬ್ಲಿಯ ಸ್ಥಾನಕ್ಕೆ ಚುನಾವಣೆ ನಡೆದು ನೀಲಂಬೂರಿನ ರಾಜರು ಮತ್ತು ಪಿತಾಪುರದ ಮಹಾರಾಜರು ಪ್ರತಿಸ್ಪರ್ಧಿಗಳಾಗಿದ್ದರು. ನೀಲಂಬೂರಿನ ರಾಜರಿಗೆ ಕಾಂಗ್ರೆಸಿನವರು ಬೆಂಬಲವಿತ್ತಿದ್ದರು. ಇದೇ ತಾ. 4ರಲ್ಲು ಈ ಚುನಾವಣೆಯ ಫಲಿತಾಂಶವು ತಿಳಿದು ಬಂದು ನೀಲಂಬೂರಿನ ರಾಜರಿಗೆ 290 ಮತ್ತು ಪಿತಾಪುರ ಮಹಾರಾಜರಿಗೆ 218 ಓಟುಗಳು ದೊರೆತು ಮೊದಲಿನವರು ಜಯಶೀಲರಾಗಿರುವರು.

ಭಾರತೀ ಗ್ರಂಥಮಾಲೆಯ ಪುಸ್ತಕಗಳು.

ಬೆಳಕು (ಚಿಕ್ಕ ಕತೆಗಳ ಸಂಗ್ರಹ.)
ತಿನಿಸು (ಕತೆ, ಕವನ, ಪ್ರಬಂಧಗಳ ಸಂಗ್ರಹ)
ಪ್ರತೀಕಾರ (ನವಪೌರಾಣಿಕ ನಾಟಕ)
ಲೋಪಾಮುದ್ರೆ (ಪೌರಾಣಿಕ ಕತೆ)
ಚಿಗುರು (10 ಚಿಕ್ಕ ಕತೆಗಳ ಸಂಗ್ರಹ)
ಪಂಚಾರತಿ (5 ಏಕಾಂಕ ನಾಟಕಗಳ ಸಂಗ್ರಹ)

ಪ್ರತಿಯೊಂದರ ಬೆಲೆ ನಾಲ್ಕಾಣೆ ಮಾತ್ರ
(ಅಂಚೆವೆಚ್ಚ 0-0-6 ಪ್ರತ್ಯೇಕ)
ರೂ 1-8-0 ಕಳಿಸಿದ್ದಲ್ಲಿ ಆರೂ ಪುಸ್ತಕಗಳನ್ನು ಕಳಿಸಲಾಗುವದು. (ಅಂಚೆವೆಚ್ಚ ಪ್ರತ್ಯೇಕ)
ವ್ಯಾಪಾರಿಗಳಿಗೆ ಧಾರಾಳ ಕಮಿಶನ್.
ಪ್ರತಿಗಳಿಗೆ ಬರೆಯಿರಿ:—
ಮೆನೇಜರ್,
ನವಭಾರತ ಪುಸ್ತಕ ಭಂಡಾರ
ಉಡುಪಿ

Degrees· Books· Medicines.
Free H. L. M. S., H. M. B., H. M. D. etc Free Homeo Ayur-Unani Naturo degrees. by post also—Practioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10 Enclose 2 annas stamp.—

Principal, Indian Homeopathic Institute and Society (Govt Regd.)
P. O. MAHUVA, (Kathiawar Dt, India.

Sidh-Kalpa Kavach (Regd)
No. 3 Rs 3, No. 2 Rs. 5, No. 1 Rs 7 Special Rs. 10, Extra Special Rs 17, for love, marriage health, wealth Ask any six questions with M. O Re. 1-1 and get, correct answers by return post Life reading Rs. 2 No. V P.P. Send M. O. Free pamphlets. **Prof. Dr. N. H. Chhatbar,** P. O. Mahuva, (Kathiawar, India)

THE
BOMBAY LIFE ASSURANCE Company Limited.
[ESTD. 1908]
COMPARE
Your Life Assurance with any other property you possess what is its guaranteed value
If you live-today-a few years more-when you are old?
If you die-to your family and dependants?
REMEMBER THAT If you live, Life Insurance takes the place of your professional income during your old age.
If you die, it provides your family with enough income for their maintenance and the education of your children.
"BOMBAY LIFE" offers all that is best in Life Assurance.
1938 Record.

Completed Business	Rs. 1,44,91,000
Life Assurance Fund	Rs. 1,17,69,748
Total Assets	Rs. 1,31,28,998

To Insure or to represent it pays you to consult
KOCHIKAR BROTHERS LTD.,
MADRAS BRANCH SECRETARIES,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI.

Post Box No. 337, Mount Road, MADRAS	Visweswarapuram Circle BANGALORE CITY.	Charni Road, Girgaum, BOMBAY No. 4.
Car Street, MANGALORE	Puthiyara, CALICUT.	Central Station Road, TRIVANDRUM.

ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾಗಿದೆ.
ಹಾಯರ್ ಎಲಿಮೆಂಟರಿ ಕ್ಲಾಸುಗಳಿಗೆ ಅತ್ಯುಪಯುಕ್ತವಾದುದು.
ಶ್ರೀ. ಕೆ. ಕೆ. ಶೆಟ್ಟಿಯಿಂದ ವಿರಚಿತವಾದ
ಕುಶಲವ
ನವಪೌರಾಣಿಕ ನಾಟಕ
--- **ಬೆಲೆ ನಾಲ್ಕಾಣೆ ಮಾತ್ರ** ---
ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತದೆ.
ನವಭಾರತ ಪುಸ್ತಕಭಂಡಾರ, ಉಡುಪಿ.

ಸೌಕರ್ಯ
ಆರ್ಥಿಕ ಮುಗ್ಗಟ್ಟಿನ ಈ ದುಸ್ಕಾಲದಲ್ಲಿ ಕಡಿಮೆ ವೆಚ್ಚದಲ್ಲಿ ಹೆಚ್ಚು ಸೌಕರ್ಯವನ್ನು ಯಾರು ತಾನೆ ಅಪೇಕ್ಷಿಸುವುದಿಲ್ಲ? ಅವನ್ನು ಸದಾ ಒದಗಿಸಿಕೊಡುವುದೇ
ರಾಮಾ ರೆಸ್ಟೋರೆಂಟಿನ ಧ್ಯೇಯವಾಗಿದೆ.
ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳು!
ವಿದ್ಯಾರ್ಥಿಗಳಿಗೆ ರಿಯಾಯಿತಿ ದರಗಳು!!
ಒಮ್ಮೆ ಸಂದರ್ಶಿಸಿರಿ! **ತೃಪ್ತಿ ಪಡೆಯಿರಿ!!**
Sri Rama Restaurant
Kashi Mutt Building,
UDIPI.
ಶ್ರೀರಾಮಾ ರೆಸ್ಟೋರೆಂಟ್
ಕಾಶಿ ಮಠದ ಕಟ್ಟೋಣ, **ಉಡುಪಿ**
ವ್ಯಾಲಕ:— ಎಚ್. ರಾಮಚಂದ್ರ ನಾಯಕ್.

ಮಿತ್ರರಾಷ್ಟ್ರಗಳಿಗುಂಟಾದ ಭೀಕರ ಅನಾಹುತ

ನಿಶ್ಚಯವಾದ ನಾಶದಿಂದ ಸೇನೆಯು ೩,೩೫,೦೦೦ ರಕ್ಷಣೆ.

ಅಪಾರ ಹಾಗೂ ಅಮೂಲ್ಯ ಯುದ್ಧೋಪಕರಣ ನಷ್ಟ.

ಮಿ. ಚರ್ಚಿಲ್ಲರ ಯಥಾರ್ಥ ಮತ್ತು ಧೀರೋದಾತ್ತ ಭಾಷಣ.

ಬ್ರಿಟಿಷ್ ಪ್ರಧಾನ ಮಂತ್ರಿಗಳಾದ ಮಿ. ಚರ್ಚಿಲ್ಲರು ಇದೇ ತಾ. 4 ರಲ್ಲು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ, ಫ್ಲೇಂಡರ್ಸಿನ ಯುದ್ಧದ ವಾಸ್ತವಿಕ ವಿದ್ಯಮಾನಗಳನ್ನು ಮತ್ತು ಅಲ್ಲಿಂದ ಬ್ರಿಟಿಷ್ ಮತ್ತು ಫ್ರೆಂಚ್ ಸೇನೆಗಳು ತಪ್ಪಿಸಿಕೊಂಡ ಸುದ್ದಿಯನ್ನು ಇದ್ದಕ್ಕಿದ್ದಂತೆ ವಿವರಿಸಿ ದೀರ್ಘ ಹಾಗೂ ಮಹತ್ವದ ಭಾಷಣವಿತ್ತಿರುವರು. ಅದರ ಸಾರಾಂಶವನ್ನಿಲ್ಲಿ ಕೊಡುವೆವು.

ಫ್ರೆಂಚ್ ನಾಯಕರ ಅಚಾತುರ್ಯ

"ಮೇ ತಿಂಗಳ ಎರಡನೇ ವಾರಾಂತ್ಯದಲ್ಲಿ ಫ್ರಾನ್ಸಿನ ಸೆಡನ್ ಮ್ಯೂಸ್ ನದಿ ಪ್ರದೇಶದಲ್ಲಿ ಜರ್ಮನರು ಫ್ರೆಂಚ್ ಸೇನೆಯನ್ನು ಭೇದಿಸಿ ಮುಂದೊತ್ತಿದರು. ಇದರಿಂದ ಬೆಲ್ಜಿಯಮಿನ ಅರಸ ಲಿಯೋಪೋಲ್ಡರ ವಿನಂತಿಯ ಮೇರೆಗೆ ಬೆಲ್ಜಿಯಮಿಗೆ ಕಳುಹಿಸಲ್ಪಟ್ಟಿದ್ದ ಉತ್ಕೃಷ್ಟ ಬ್ರಿಟಿಷ್ ಮತ್ತು ಫ್ರೆಂಚ್ ಸೇನೆಯನ್ನು ಹಿಂಬದಿಯಿಂದ ಜರ್ಮನರು ಆವರಿಸುವಂತಾಯಿತು. ಈ ಸಂದರ್ಭದಲ್ಲಿ ಬೆಲ್ಜಿಯಮಿನ ಸೇನೆಯು ಕೂಡಲೇ ಅಮಿಯೆನ್ಸ್ ಮತ್ತು ಅದರ ದಕ್ಷಿಣಕ್ಕೆ ಹಿಂದೆ ಸರಿದು ತನ್ನನ್ನು ರಕ್ಷಿಸಿಕೊಳ್ಳಬೇಕಾಗಿತ್ತು. ಆದರೆ ಇದನ್ನಾಗ ಫ್ರೆಂಚ್ ಸೇನಾನಾಯಕರು ಮನಗಾಣಲಿಲ್ಲ. ಜರ್ಮನರನ್ನು ತಡೆಗಟ್ಟಬಹುದೆಂದವರು ಬಗೆದಿದ್ದಾರೆ. ಉತ್ತರದ ಸೇನೆಯು ಅವರ ಕೈಕೆಳಗಿದ್ದಿತು. ಇದು ಹೊರತು ಈ ಸಂದರ್ಭದಲ್ಲಿ ಫ್ರೆಂಚ್ ಮತ್ತು ಬ್ರಿಟಿಷ್ ಸೇನೆಯು ದಕ್ಷಿಣಕ್ಕೆ ಸರಿದುಬರುತ್ತಿದ್ದರೆ 20ದಳಕ್ಕಿಂತಲೂ ಮಿಕ್ಕಿದ ಬೆಲ್ಜಿಯಮ್ [illegible] ಸಂಪೂರ್ಣ ನಾಶವಾಗಿ ಇಡೀ ಬೆಲ್ಜಿಯಮು ಕೂಡಲೇ ಜರ್ಮನರ ವಶವಾಗುತ್ತಿತ್ತು. ಆದುದರಿಂದ ಉತ್ತರದ ಸೇನೆಯು ಒಂದೆಡೆ ಬೆಲ್ಜಿಯಮ್ ಸೈನಿಕರಿಗೆ ನೆರವಾಗುತ್ತ ಇನ್ನೊಂದೆಡೆ ಸೋಮ್ ನದಿ ಪ್ರದೇಶದಿಂದ ಉತ್ತರಕ್ಕೆ ಮುಂದೊತ್ತುವ ಹೊಸ ಫ್ರೆಂಚ್ ಸೇನೆಯೊಡನೆ ಸಂಬಂಧ ಬೆಳೆಸಲೆತ್ನಿಸಬೇಕಾಯಿತು. ಈ ನಡುವೆ ಜರ್ಮನರು 400ರವರೆಗೆ ಸಹಸ್ರ ವಾಹನಗಳುಳ್ಳ ಎಂಟೊಂಭತ್ತು ಯಾಂತ್ರಿಕ ದಳಗಳನ್ನೂ ಪ್ರಚಂಡ ಸೇನೆಯನ್ನೂ ಒಮ್ಮೆಯೇ ಉಪಯೋಗಿಸಿ ಉತ್ತರದಲ್ಲಿ ಬೆಲ್ಜಿಯಮಿನಲ್ಲಿರುವ ಮತ್ತು ದಕ್ಷಿಣದ ಫ್ರೆಂಚ್ ಸೇನೆಗಳ ಸಂಬಂಧವನ್ನು ಕಡಿದುಹಾಕಿದರು. ಬೆಲ್ಜಿಯಮಿನ ಸೇನೆಗೆ ಮೊದಲು ಅಮಿಯೆನ್ಸ್ ಮತ್ತು ಅನಂತರ ಅಬೆವಿಲ್ಲೆಗಳಿಂದ ಆಹಾರ ಸಾಮಗ್ರಿ ಮತ್ತು ಮದ್ದು ಗುಂಡುಗಳು ಬರುತ್ತಿದ್ದುವು. ಅವೆರಡನ್ನೂ ಜರ್ಮನರು ವಶಪಡಿಸಿಕೊಂಡುಬಿಟ್ಟರು. ಅನಂತರ ವಿಚಿತ್ರ ವೇಗದಿಂದ ಮತ್ತೂ ಮುಂದೊತ್ತಿ ಬೊಲೊನ್, ಕ್ಯಾಲೆ ಮತ್ತು ಡಂಕರ್ಕ್‌ಗಳ ಮೇಲೂ ಧಾಳಿನಡಿಸಿಬಿಟ್ಟರು.

ಕ್ಯಾಲೆಯ ವೀರರಕ್ಷಣೆ

ಫ್ರೆಂಚ್ ಸೇನಾನಾಯಕ ಜನರಲ್ ಗೆಮೆಲಿನರು ಬಂದು ಜರ್ಮನರನ್ನು ತಡೆಗಟ್ಟಲು ಸರ್ವಶಕ್ತಿಯನ್ನೂ ಉಪಯೋಗಿಸಿದರು. ಫ್ರೆಂಚ್ ಸೈನಿಕರಲ್ಲಿ ನವಚೈತನ್ಯವುಂಟಾಯಿತು. ಒಟ್ಟು ಸುಮಾರು 4000 ಮಂದಿ ಬ್ರಿಟಿಷ್ ಮತ್ತು ಫ್ರೆಂಚ್ ಸೈನಿಕರು ಕೊನೆಯ ವರೆಗೂ ವೀರಾವೇಶದಿಂದ ಕಾದಾಡಿ ಕ್ಯಾಲೆಯನ್ನು ರಕ್ಷಿಸಿದರು. ಒಂದು ಘಂಟೆಯೊಳಗೆ ಶರಣಾಗತವಾಗಬೇಕೆಂದು ಜರ್ಮನರ ಹೇಳಿಕೆ ಬಂತು. ಆದರೆ ಕ್ಯಾಲೆಯ ಬ್ರಿಟಿಷ್ ಸೇನಾನಾಯಕನು ಅದನ್ನು ನಿರಾಕರಿಸಿ ಹಲವು ದಿನಗಳ ವರೆಗೆ ರಸ್ತೆ ರಸ್ತೆ, ಗಲ್ಲಿ ಗಲ್ಲಿ, ಮನೆ ಮನೆಗಳಲ್ಲಿ ತುಮುಲ ಕಾಳಗ ನಡೆಯಿತು. ಕಡೆಗೆ ಗಾಯಗೊಳ್ಳದೆ ಉಳಿದಿದ್ದ ಸೈನಿಕರೆಂದರೆ ಕೇವಲ 30 ಮಂದಿ. ಇವರನ್ನು ಯುದ್ಧನಾವೆಗಳ ಮೂಲಕ ರಕ್ಷಿಸಲಾಯಿತು. ಯುದ್ಧದ ಇತಿಹಾಸದಲ್ಲೇ ಅಪೂರ್ವವಾದ ಈ ವೀರ ಸೈನಿಕರ ಆತ್ಮತ್ಯಾಗವು ನಿರರ್ಥಕವಾಗಲಿಲ್ಲ. ಬೆಲ್ಜಿಯಮಿನ ಸೇನೆಯನ್ನು ಭರದಿಂದ ಆವರಿಸುತ್ತಿದ್ದ ಜರ್ಮನ್ ಸೇನೆಯ ದೊಡ್ಡ ಭಾಗವೊಂದನ್ನು ತಡೆದಂತಾಯಿತು. ಡಂಕರ್ಕಿನ ಸುತ್ತಲಿನ ಪ್ರದೇಶವನ್ನು ನೀರಿಂದ ಮುಳುಗಿಸಲು ಅವಕಾಶ ದೊರೆಯಿತು.

ಅರಸ ಲಿಯೋಪೋಲ್ಡರ ದ್ರೋಹ

ಬ್ರಿಟಿಷ್, ಫ್ರೆಂಚ್ ಮತ್ತು ಬೆಲ್ಜಿಯನ್ ಸೇನೆಗಳು ಸುತ್ತಲಿಂದಲೂ ಆವರಿಸಲ್ಪಟ್ಟವು. ಒಂದೇ ಒಂದು ಬಂದರ ಮತ್ತು ಅದರ ಬಳಿಯ ಸಮುದ್ರ ತೀರದ ಹೊರತು ತಪ್ಪಿಸಿಕೊಳ್ಳಲು ಬೇರೆ ದಾರಿಯೇ ಇರಲಿಲ್ಲ. ಪ್ರತಿಯೊಂದು ಬದಿಯಿಂದಲೂ ಪ್ರಚಂಡ ಜರ್ಮನ್ ಸೇನೆಯೂ ಮಿತ್ರರಾಷ್ಟ್ರಗಳ ಸೇನೆಯನ್ನು ಒತ್ತಿ ಬರುತ್ತಿತ್ತು. ಯುದ್ಧದ ಇತಿಹಾಸದಲ್ಲೇ ಅಪೂರ್ವವಾದ ಅತಿದೊಡ್ಡ ಅನಾಹುತವೊಂದು ಅನಿವಾರ್ಯವೆಂಬಂತಾಯಿತು. ಬ್ರಿಟಿಷ್ ಸೇನೆಯ ತಿರುಳಾಗಿದ್ದ ಉತ್ಕೃಷ್ಟ ದಳಗಳು, ಪ್ರಥಮ ಶ್ರೇಣಿಯ ಫ್ರೆಂಚ್ ಸೇನೆ ಮತ್ತು ಬೆಲ್ಜಿಯನ್ ಸೈನಿಕರಿಗೆ, ನಾಶ ಇಲ್ಲವೆ ಶರಣಾಗತತನದ ಹೊರತು ಗತ್ಯಂತರವಿಲ್ಲೆಂಬ ಭೀಷಣ ಪರಿಸ್ಥಿತಿಯುಂಟಾಯಿತು. ಈ ಸಂದರ್ಭದಲ್ಲಿ ಥಟ್ಟನೆ ಬೆಲ್ಜಿಯಮಿನ ಅರಸ ಲಿಯೋಪೋಲ್ಡರು, ಯಾರೊಡನೆಯೂ ಕೇಳದೆ, ಯಾರಿಗೂ ತಿಳಿಸದೆ, ತನ್ನ ಮಂತ್ರಿಮಂಡಲದೊಡನೆ ಕೂಡಾ ಆಲೋಚಿಸದೆ ಏಕಾಏಕಿ ತನ್ನ ಸೇನೆಯೊಂದಿಗೆ ಜರ್ಮನರಿಗೆ ಶರಣಾಗತರಾದರು. ಇದರಿಂದ 30 ಮೈಲುಗಳಿಗಿಂತಲೂ ಮಿಕ್ಕಿದ ರಣರಂಗವನ್ನು ಕೂಡಲೆ ಆವರಿಸಿ ಜರ್ಮನರನ್ನು ತಡೆಗಟ್ಟುವ ಮಹತ್ತಾದ ಜವಾಬ್ದಾರಿಯು ಬ್ರಿಟಿಷ್ ಮತ್ತು ಫ್ರೆಂಚ್ ಸೇನೆಯ ಮೇಲೆ ಹೊಸತಾಗಿ ಬಿತ್ತು. 1914ರ ಯುದ್ಧದಲ್ಲಿ ಬೆಲ್ಜಿಯಮನ್ನು ಜರ್ಮನರಿಂದ ರಕ್ಷಿಸಿದವರು ಮಿತ್ರರಾಷ್ಟ್ರಗಳೆಂಬುದನ್ನು ಮರೆತು ಅರಸ ಲಿಯೋಪೋಲ್ಡರು ಈ ಸಲ ಫ್ರಾನ್ಸ್ ಮತ್ತು ಇಂಗ್ಲೆಂಡುಗಳ ಕಡೆಗೆ ಸೇರದೆ ತಾಟಸ್ಥ್ಯವಹಿಸಿದರು. ಆರಂಭದಲ್ಲೇ ಮಿತ್ರರಾಷ್ಟ್ರಗಳೊಂದಿಗೆ ಸೇರುತ್ತಿದ್ದರೆ ಬೆಲ್ಜಿಯಮನ್ನು ಮಾತ್ರವಲ್ಲದೆ ಹಾಲೆಂಡನ್ನೂ ರಕ್ಷಿಸಬಹುದಿತ್ತು. ಕೊನೆಗೆ ಜರ್ಮನರು ಬೆಲ್ಜಿಯಮಿನ ಮೇಲೆ ಧಾಳಿ ನಡಿಸಿದಾಗ ಮಿತ್ರರಾಷ್ಟ್ರಗಳ ಸಹಾಯ ಕೇಳಿದರು. ಅವುಗಳು ದೊಡ್ಡ ಸೇನೆ ಕಳುಹಿಸಿ ಹೋರಾಟ ಹತ್ತಿದಾಗ ಶತ್ರುಗೆ ಕೈಯಿತ್ತು ತನ್ನ ಸೇನೆಯೊಂದಿಗೆ ಜರ್ಮನರಿಗೆ ಶರಣಾಗತರಾದರು

ಸೇನೆಯು ತಪ್ಪಿಸಿಕೊಂಡ ಬಗೆ ಹೇಗೆ?

ಜರ್ಮನರು ಎಲ್ಲಾ ಕಡೆಗಳಿಂದಲೂ ಬೆಲ್ಜಿಯಮಿನ ಮಿತ್ರರಾಷ್ಟ್ರಗಳ ಸೇನೆಯ ಮೇಲೆ ನುಗ್ಗಿ ಹೋಗಿ ತೀವ್ರ ಹೋರಾಟ ನಡಿಸಿದರು. ಸಂಖ್ಯೆಯಲ್ಲಿ ಬಹಳ ಹೆಚ್ಚಾದ ಅವರ ವಿಮಾನಪಡೆಯು ಎಡೆಬಿಡದೆ ಧಾಳಿ ನಡಿಸಿತು. ಪೂರ್ವದಿಂದಲೂ ಪಶ್ಚಿಮದಿಂದಲೂ ಡಂಕರ್ಕಿನ ಮೇಲೆ ಜರ್ಮನರು ಪ್ರಚಂಡ ಧಾಳಿ ನಡಿಸಿ ಅದನ್ನಾರೂ ಸಮೀಪಿಸದಂತೆ ಮಾಡಲು ಸಾಧ್ಯವಾದ ಪ್ರಯತ್ನವನ್ನೆಲ್ಲಾ ಮಾಡಿದರು. ಡಂಕರ್ಕಿಗೆ ಹಡಗಗಳು ಬಂದುಹೋಗದಂತೆ ಮೆಗ್ನೆಟಿಕ್ ಜಲತೋಟೆಗಳನ್ನು ಸಮುದ್ರ ಭಾಗದಲ್ಲೆಲ್ಲಾ ಸುರಿದರು. ಒಮ್ಮೊಮ್ಮೆ ನೂರರಂತೆ ವಿಮಾನಗಳೇರಿ ಬಂದು ಡಂಕರ್ಕ್ ಧಕ್ಕೆಯ ಮೇಲೆ ಎಡೆಬಿಡದೆ ಬೋಂಬೆಸೆದುವು. ಸಬ್‌ಮೆರೀನ್ ಮತ್ತು ಮೋಟರ್ ಲೋಂಚುಗಳ ಮೂಲಕ ಹಡಗಗಳನ್ನು ಮುಳುಗಿಸಲೆತ್ನಿಸಿದರು. ನಾಲ್ಕೈದು ದಿನ ಸುತ್ತಲಿಂದಲೂ ತೀವ್ರ ಹೋರಾಟ ನಡೆಯಿತು. ಶಸ್ತ್ರವಾಹನ ದಳ, ತೋಪು ದಳ ಮತ್ತು ಕಾಲಾಳುಗಳ ಪ್ರಚಂಡ ಸೇನೆಯೂ ಡಂಕರ್ಕನ್ನು ವಶಪಡಿಸಿಕೊಳ್ಳಲು ಭಗೀರಥ ಯತ್ನ ಮಾಡಿತು. ಆದರೆ ಬ್ರಿಟಿಷ್ ಮತ್ತು ಫ್ರೆಂಚ್ ಸೇನೆಯು ಪ್ರಾಣದ ಹಂಗು ತೊರೆದು ವೀರಾವೇಶದಿಂದ ಕಾದಾಡಿ ಡಂಕರ್ಕನ್ನು ರಕ್ಷಿಸಿಕೊಂಡಿತು. ಈ ಸಂದರ್ಭದಲ್ಲಿ ಸಾವಿರಕ್ಕೂ ಮಿಕ್ಕಿದ ಯುದ್ಧ ಹಡಗ, ವ್ಯಾಪಾರಿ ಹಡಗ, ಲೋಂಚ್, ದೋಣಿ ಮೊದಲಾದುವುಗಳು, ಜರ್ಮನರ ತೋಪು ಗುಂಡು, ವಿಮಾನ ಬೋಂಬು, ಜಲಕೋಟೆ, ಸಬ್‌ಮೆರೀನ್ ಮೊದಲಾದುವುಗಳಿಗೆ ಒಂದಿಷ್ಟು ಬೆದರದೆ, ಗಾಳಿಯೆದ್ದು ಸಮುದ್ರವು ಜೋರಾಗಿದ್ದರೂ ಹಿಂಜರಿಯದೆ 3,35,000 ಸೈನಿಕರನ್ನೊಯ್ಯುವ ಅಸಾಧಾರಣ ಸಾಹಸ ಮಾಡಿದುವು. ಈ ಸಂದರ್ಭದಲ್ಲಿ ಬ್ರಿಟಿ

ವಿದ್ಯಾರ್ಥಿಗಳಿಗೆ ಅಪೂರ್ವ ಸಂದರ್ಭ!

ಉತ್ತಮ ಮಾಲು! ನಾಜೂಕು ಕೆಲಸ! ಕಡಿಮೆ ಕ್ರಯ!

ಎಲಿಮೆಂಟರಿ ಸ್ಕೂಲ್, ಹೈಸ್ಕೂಲ್, ಟ್ರೈನಿಂಗ್ ಸ್ಕೂಲ್, ಕೊನ್ವೆಂಟ್ ಮೊದಲಾದ ಎಲ್ಲಾ ಶಾಲೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಬೇಕಾದ ಎಲ್ಲಾ ವಿಧದ ಸಾರ ಪುಸ್ತಕಗಳೂ, ಲೇಖನ ಪುಸ್ತಕಗಳೂ, ಸ್ಟೇಶನರಿ ಸಾಮಾನುಗಳೂ ಸುಲಭ ಬೆಲೆಗೆ ದೊರೆಯುತ್ತವೆ.

ಶಾಲೋಪಯೋಗೀ ಸಾಹಿತ್ಯಗಳೆಲ್ಲಾ ಕಡಿಮೆ ದರದಲ್ಲಿ ನಮ್ಮಲ್ಲಿ ಸದಾ ತಯಾರಿವೆ!

ನಿಮಗೆ ಏನು ಬೇಕಾದರೂ ಮೊದಲು ನಮ್ಮೊಡನೆ ವಿಚಾರಿಸಿರಿ.

ನವಭಾರತ ಪುಸ್ತಕ ಭಂಡಾರ

ಇಗರ್ಜಿ ಎದುರು — — — ಉಡುಪಿ, ದ. ಕ.

For all your school requirements:

Navabharat Book Depot, Udipi.

ಷ್ ವಿಮಾನಪಡೆಯು ತರಂಗ ತರಂಗವಾಗಿ ಏರಿಬರುವ ಜರ್ಮನ್ ವಿಮಾನಗಳೊಡನೆ ಅತ್ಯಂತ ಧೈರ್ಯ ಮತ್ತು ಸ್ಥೈರ್ಯದಿಂದ ಹೋರಾಡಿ ತನ್ನ ಒಂದಕ್ಕೆ ನಾಲ್ಕರಂತೆ ವೈರಿ ವಿಮಾನಗಳನ್ನು ನಾಶಮಾಡಿದುವು. ಬ್ರಿಟಿಷ್ ಮತ್ತು ಫ್ರೆಂಚ್ ಸೇನೆಯು ತಪ್ಪಿಸಿಕೊಂಡು ಹೋಗದಂತೆ, ಈ ಸೈನಿಕರನ್ನೊಯ್ಯುವ ಸಾವಿರದವರೆಗಣ ಹಡಗಗಳನ್ನೆಲ್ಲ ಮುಳುಗಿಸಿಬಿಡುವಂತೆ ಜರ್ಮನರು ಮಾಡಿದ ಪ್ರಯತ್ನವಾದರೂ ಅಷ್ಟಿಷ್ಟಲ್ಲ! ಅವರ ಈ ಪ್ರಚಂಡ ಯತ್ನವು ಫಲಕಾರಿಯಾಗದಂತೆ ಮಾಡಿದವರೆಂದರೆ ತರುಣ ಬ್ರಿಟಿಷ್ ವೈಮಾನಿಕರು. ಅವರ ಸಾಹಸ, ಶ್ರಮ ಮತ್ತು ಚಾತುರ್ಯವು ಅತ್ಯಂತ ಪ್ರಶಂಸನೀಯವಿದೆ.

ಅಪಾರ ಯುದ್ಧೋಪಕರಣ ನಷ್ಟ

ಬೆಲ್ಜಿಯಮಿನ ಯುದ್ಧದಲ್ಲಿ 30,000 ನಿಷ್ಕ್ರಿಯ ಸೈನಿಕರು ಕೊಲ್ಲಲ್ಪಟ್ಟು, ಗಾಯಗೊಂಡು ಮತ್ತು ಕಾಣೆಯಾಗಿ ನಷ್ಟವಾಗಿರುತ್ತಾರೆ. ಇದಕ್ಕಿಂತ ಎಷ್ಟೋ ಹೆಚ್ಚಿನ ವೈರಿಸೇನೆಯು ನಾಶವಾಗಿದೆ. ನಮ್ಮ ಯುದ್ಧೋಪಕರಣಗಳ ನಷ್ಟವು ಅಪಾರವಾದುದು. ಸುಮಾರು 1900 ತುಪಾಕಿಗಳನ್ನೂ, ಎಲ್ಲಾ ಶಸ್ತ್ರ ಮತ್ತು ಚಲಾವಣೆ ವಾಹನಗಳನ್ನೂ ನಾವು ಕಳಕೊಂಡಿರುತ್ತೇವೆ. ಇದರಿಂದ ನಮ್ಮ ಸೇನಾಶಕ್ತಿಗೆ ಅತಿ ದೊಡ್ಡ ನಷ್ಟವುಂಟಾಗಿದೆ ಒಂದೊಮ್ಮೆ ತಯಾರಾಗಿರುವ ಉತ್ಕೃಷ್ಟ ಉಪಕರಣಗಳು ನಷ್ಟಹೊಂದಿವೆ, ರಾತ್ರಿ ಹಗಲು, ರಜೆ ವಿರಾಮ, ಮಜೂರ ಮ್ಹಾಲಿಕರೆಂದೆನ್ನದೆ ಇಂದೀಗ ಬ್ರಿಟಿಷ್ ಜನಾಂಗವು ಯುದ್ಧೋಪಕರಣಗಳ ತಯಾರಿ ಕೆಲಸದಲ್ಲ ನಿರತವಾಗಿದೆ.

ಮಹತ್ತಾದ ಸೇನಾ ಅನಾಹುತ

ಫ್ರಾನ್ಸ್ ಮತ್ತು ಬೆಲ್‌ಜಿಯಮಿನಲ್ಲಿ ಮಹತ್ತಾದ ಅನಾಹುತಕ್ಕೆ ನಾವು ಬಲಿಯಾಗಿರುತ್ತೇವೆ. ಫ್ರೆಂಚ್ ಸೇನೆಯು ದುರ್ಬಲಗೊಳಿಸಲ್ಪಟ್ಟಿದೆ. ಬೆಲ್‌ಜಿಯಮ್ ಸೇನೆಯನ್ನು ಸಂಪೂರ್ಣವಾಗಿ ನಾವು ಕಳಕೊಂಡಂತಾಗಿದೆ. ಅಭೇದ್ಯವೆನಿಸಲ್ಪಟ್ಟಿದ್ದ ಕೋಟೆಗಳ ಸಾಲುಗಳು ಭೇದಿಸಲ್ಪಟ್ಟಿವೆ. ಅಮೂಲ್ಯ ಗನಿಗಳು ಮತ್ತು ಕಾರ್ಖಾನೆಗಳುಳ್ಳ ಹಲವು ಜಿಲ್ಲೆಗಳು ವೈರಿಗಳ ವಶವಾಗಿವೆ. ಬ್ರಿಟಿಷ್ ಜಲಸಂಧಿಸ ಮುಖ್ಯ ಬಂದರುಗಳೆಲ್ಲಾ ಜರ್ಮನರ ಸ್ವಾಧೀನವಾಗಿವೆ. ಕೂಡಲೇ ಫ್ರಾನ್ಸ್ ಅಥವಾ ಇಂಗ್ಲೆಂಡಿನ ಮೇಲೆ ಇನ್ನೊಂದು ಪ್ರಚಂಡ ಧಾಳಿಯು ನಡೆಯುವುದಿದೆ. ಇಂಗ್ಲೆಂಡಿನ ಮೇಲೆ ಧಾಳಿ ಇಡುವ ಪ್ಲೇನೊಂದನ್ನು ಹಿಟ್ಲರರು ಮಾಡಿರುವರಂತೆ. ಅದೇನೇ ಇರಲಿ. ಇಂಗ್ಲೆಂಡಿನ ರಕ್ಷಣೆಯ ಕುರಿತು ಯಾವ ಭೀತಿಗೂ ಆಸ್ಪದವಿಲ್ಲ. ನಾವು ಪ್ರಬಲ ರಕ್ಷಣಾವ್ಯವಸ್ಥೆಯನ್ನು ಮಾಡಿಕೊಂಡರೆ ಮಾತ್ರ ಸಾಲದು. ನಮ್ಮ ಮಿತ್ರರಾಷ್ಟ್ರಗಳನ್ನು ರಕ್ಷಿಸುವ ಕರ್ತವ್ಯವೂ ನಮ್ಮ ಮೇಲಿದೆ. ಜರ್ಮನರ ಮೇಲೆ ಧಾಳಿನಡಿಸಲು ನಾವು ಕೂಡಲೇ ತಯಾರುಮಾಡಬೇಕು.

ನಮ್ಮ ಮಾತೃಭೂಮಿಯನ್ನು ನಾವು ರಕ್ಷಿಸಿ, ಈ ಯುದ್ಧದ ಬಿರುಗಾಳಿಯ ಮೇಲೆ ಸುರಕ್ಷಿತವಾಗಿ ಸವಾರಿಮಾಡಿ, ಅವಶ್ಯಬಿದ್ದರೆ ಕೆಲವು ವರ್ಷಗಳ ವರೆಗೆ, ಏಕಾಕಿಯಾಗಿಯಾದರೂ ಹೋರಾಡಿ ಈ ಲೋಕಕಂಟಕವನ್ನು ಕೊನೆಗೊಳಿಸುವೆವು. ಬ್ರಿಟಿಷ್ ಸಾಮ್ರಾಜ್ಯವೂ ಫ್ರೆಂಚ್ ಪ್ರಜಾಪ್ರಭುತ್ವವೂ ಒಂದುಗೂಡಿ ಬಂಧುಭಾವದಿಂದ ಪರಸ್ಪರ ಸಹಾಯಮಾಡಿ ತಮ್ಮ ದೇಶವನ್ನು ಪ್ರಾಣಕೊಟ್ಟು ರಕ್ಷಣೆಮಾಡಿಕೊಳ್ಳುವೆವು. ಯೂರೋಪಿನ ಅತಿ ದೊಡ್ಡ ಭಾಗ ಮತ್ತು ಹಲವು ಹಳೆಯ ರಾಷ್ಟ್ರಗಳು ನಾಝಿಗಳ ಕ್ರೂರ ಆಳ್ವಿಕೆಗೊಳಗಾದರೂ ನಾವು ಒಂದಿಷ್ಟು ಹಿಂಜರಿಯೆವು. ಕೊನೆಯವರೆಗೂ ಹೋರಾಡುವೆವು. ಫ್ರಾನ್ಸಿನಲ್ಲಿಯೂ, ಸಾಗರ ಸಮುದ್ರಗಳಲ್ಲಿಯೂ, ಆಕಾಶದಲ್ಲಿಯೂ, ಅಧಿಕಾಧಿಕ ಬಲ ಮತ್ತು ವಿಶ್ವಾಸದಿಂದ ಹೋರಾಡುವೆವು. ಎಂದಿಗೂ ಶರಣಾಗತರಾಗೆವು. ಒಂದು ವೇಳೆ, (ಅದೆಂದೂ ಸಾಧ್ಯವೆಂದು ನಾನೆಣಿಸುವುದಿಲ್ಲ.) ಈ ದ್ವೀಪದ ಹೆಚ್ಚಿನ ಭಾಗವು ಜೈಸಲ್ಪಟ್ಟು ಆಹಾರವಿಲ್ಲದೆ ಕಂಗೆಟ್ಟರೂ, ಸಮುದ್ರದಾಚೆಯ ನಮ್ಮ ಸಾಮ್ರಾಜ್ಯವು ನಮ್ಮ ನೌಕಾಪಡೆಯ ಬಲ ಮತ್ತು ರಕ್ಷಣೆಯಿಂದ ಯುದ್ಧವನ್ನು ಮುನ್ನಡೆಸದಿರಲಾರದು. ನವೀನವಾದೊಂದು ಲೋಕವು ತನ್ನ ಸರ್ವ ಶಕ್ತಿ ಮತ್ತು ಬಲದಿಂದ ಮುಂದೊತ್ತಿ ಹಳೆಯದನ್ನು ರಕ್ಷಿಸಿ ವಿಮೋಚನೆಗೊಳಿಸುವ ಕಾಲವು ದೈವಕೃಪೆಯಿಂದುಂಟಾಗುವನಕ ಈ ಯುದ್ಧವು ಮುನ್ನಡೆಯುವುದು.

ನವಯುಗದಲ್ಲೇ
ನಿಮ್ಮ ಜಾಹಿರಾತು ಪ್ರಕಟಿಸಿರಿ

ನೋಟೀಸು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. E. P. No. 48/40 O. S. No [illegible]

1. ಶ್ರೀನಿವಾಸ ಕಾರಂತ 2. ಮಂಜುನಾಥ ಕಾರಂತ
—ಅರ್ಜಿದಾರರು.

1. ಶ್ರೀನಿವಾಸ ಅಲ್ಸೆ ಕೊಡಾ, 2. ಕಲ್ಲಪ್ಪ ಯಾನೆ ಶರವೆತ್ರಿ ಅಲ್ಸೆ 3. ನಾಗಪ್ಪ ಅಲ್ಸೆ 4. ಶಂಕರನಾರಾಯಣ ಅಲ್ಸೆ —ಎದ್ರಿರು. ಪರೋಟಿ ಮಂಜುನಾಥ ಅಲ್ಸೆ ಮಕ್ಕಳು. T. S. Koil Street Mylapur Madras.

ಸದ್ರಿ 2ನೇ ಯಾಗಾಯ್ತು 4ನೇ ವರೆಗಿನ ಎದ್ರಿಯರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಅರ್ಜಿದಾರರು ಎದ್ರಿರ ಬಾಬ್ತು ಸ್ಥಿರ ಆಸ್ತಿಯನ್ನು ಏಲಮಿಗೆ ಅಪೇಕ್ಷಿಸಿ ಸೇಲ್ ಪೆಟಿಶನ್ ಕೊಡಾ ಹಾಕ್ಸಿದ್ರು. ಅರ್ಜಿದಾರರು ಹಾಜರುಪಡಿಸಿದ ಸೇಲ್ ಪೇಪರಿನ ಕುರಿತು ಆಕ್ಷೇಪಗಳಿದ್ದರೆ ಜಾಹೀರುಮಾಡಿಕೊಳ್ಳಬೇಕಾಗಿ ಎದ್ರಿಯವರಿಗೆ ಮೂರಾವರ್ತಿ ನೋಟೀಸು ಕೊಟ್ಟದ್ದಾಗ್ಯೂ ಈ ಎದ್ರಿಯರು ಜಾರಿಗೆ ತಪ್ಪಿಸಿಕೊಂಡಿರುತ್ತಾರೆ. ಸದ್ರಿ ಅವ್ವಲ್ ಚಾರಿಯು ತಾ. 17-6-1940ಕ್ಕೆ ಉಂಟು, ಆ ದಿವಸ ಎದ್ರಿಯರ ಆಕ್ಷೇಪವಿದ್ದರೆ ತಾ. 17-6-1940ನೇ ದಿವಸ ಹಗಲು ಘಂಟೆ 10ಕ್ಕೆ ಕೋರ್ಟು ಮುಂದೆ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ಆ ರೀತಿ ಎದ್ರಿರು ಹಾಜರಾಗದೆ ಇರುವ ಬಾಬಿನಲ್ಲಿ ಸದ್ರಿ ಅವ್ವಲ್ ಚಾರಿಯಲ್ಲಿ ಮುಂದಿನ ಹುಕುಂ ಆಗುತ್ತದೆಂಬುದು ಈ ಮೂಲಕ ತಿಳಿಸಲಾಗುತ್ತದೆ.

ಅರ್ಜಿದಾರರ ಕಡೆ ಎಡ್ವೊಕೇಟ್

ಕುಂದಾಪುರ
ತಾ. 4-6-40

K. S. Shetti,
Advocate.

ನವಭಾರತ ಪುಸ್ತಕಭಂಡಾರದಲ್ಲಿ
ಶಾಲಾ ಪುಸ್ತಕಗಳು
ದೊರೆಯುತ್ತವೆ.

An Insurance Company belonging to its Policyholders!

In other words a Mutual Office without Shareholders to absorb any part of its profits, or any obligations except to its assured Members. The "Canara Mutual" is such a Company. It is one of the most successful Mutual Life Offices in India.

Take a Policy in the Company and become one of its Members.

Economical Management.] [Handsome Bonuses.

The Canara Mutual
ASSURANCE COMPANY, LTD.
(Head Office:- UDIPI, S India.)

• ಯುದ್ಧದ ಮುಂದಿನ ಸ್ವರೂಪದ ಪರಿಶೀಲನೆ •

ಇಟಲಿಯು ಯುದ್ಧಕ್ಕಿಳಿದುದರಿಂದಾಗುವ ಪರಿಣಾಮ

ಆಫ್ರಿಕಾ ಖಂಡಕ್ಕೂ ಯುದ್ಧವು ವ್ಯಾಪಿಸುವುದು

ಹಿಟ್ಲರನಿಗೆ ಹೆಚ್ಚು ಕಾಲ ಯುದ್ಧ ನಡಿಸಲು ಸಾಧ್ಯವೇ ಇಲ್ಲ ಹೆಚ್ಚೆಂದರೆ ಬರುವ ಛಳಿಗಾಲದೊಳಗೆ ಅವರು ಯುದ್ಧವನ್ನು ಅಂತ್ಯಗೊಳಿಸಲೇ ಬೇಕು. ಆದುದರಿಂದಲೇ ಅವರು ತನ್ನ ಸೇನಾಶಕ್ತಿಯನ್ನೆಲ್ಲಾ ಸಂಪೂರ್ಣವಾಗಿ ಉಪಯೋಗಿಸಿ ಫ್ರಾನ್ಸಿನ ಮೇಲೆ ಧಾಳಿಯಿಟ್ಟಿರುವರು ಅವರ ಪ್ರಚಂಡ ಸೇನೆಯು ಇಷ್ಟರ ವರೆಗೆ ಎಲ್ಲಿಯೂ ಅಪಜಯ ಹೊಂದಿರುವುದಿಲ್ಲ. ಜರ್ಮನರ ಸೈನಿಕರ ಉತ್ಸಾಹವು ದಿನೇ ದಿನೇ ಅಧಿಕವಾಗಲು ಕಾರಣವಿದೆ ಪೋಲಂಡ್, ನೋರ್ವೆ, ಡೆನ್ಮಾರ್ಕ್, ಹೊಲ್ಲೆಂಡ್ ಮತ್ತು ಬೆಲ್ಜಿಯಮುಗಳನ್ನು ವಶಪಡಿಸಿಕೊಂಡುದರಿಂದ ಹಿಟ್ಲರರಿಗೆ ಬಹಳ ಅನುಕೂಲವಾಗಿದೆ ಅವರ ಯುದ್ಧೋಪಕರಣಗಳೂ, ಯುದ್ಧ ಸಾಮಗ್ರಿಗಳೂ ಸೇನಾ ಶಕ್ತಿಯೂ ಹೆಚ್ಚುವಂತಾಗಿದೆ. ಫ್ಲೆಂಡರ್ಸ್ ಯುದ್ಧದಲ್ಲಿ ಜರ್ಮನಿಗೆ ಮಿತ್ರರಾಷ್ಟ್ರಗಳ ಉತ್ಕೃಷ್ಟ ಯುದ್ಧೋಪಕರಣಗಳು ದೊರೆತಿವೆ. ಇಂದೀಗ ಅವರು ಫ್ಲೆಂಡರ್ಸಿಗಿಂತಲೂ ಪ್ರಚಂಡ ಹಾಗೂ ಘೋರ ಸಮರ ಹೂಡಿ ಪರಿಸನ್ನು ವಶಪಡಿಸಿಕೊಂಡು ಫ್ರಾನ್ಸನ್ನು ಸದೆಬಡಿಯಬೇಕೆಂಬ ದೃಢನಿರ್ಧಾರದಿಂದಿದ್ದಾರೆ. ಇಷ್ಟರ ವರೆಗೆ ಅವರ ಇಚ್ಛೆಯಂತೆಯೇ ಕಾರ್ಯವು ನಡೆದಿದೆ

ಈ ವರೆಗೆ ದಂಡೆಯಲ್ಲಿ ಕೂತು ತಮಾಷೆ ನೋಡುತ್ತಿದ್ದ ಇಟಲಿಯು ಇಂದೀಗ ಯುದ್ಧಕ್ಕಿಳಿದಿರುವುದು ಮುಸಲೋನಿಯವರು ಹಿಟ್ಲರರಂತೆ ದುಡುಕುವವರಲ್ಲ. ಸಂಗತಿಗಳನ್ನು ಚೆನ್ನಾಗಿ ಆಳವಾಗಿ ವಿಚಾರಿಸಿ ಕೆಲಸಮಾಡುವವರು ಅವರೀಗ ಸಂದರ್ಭ ನೋಡಿ ತನ್ನ ಸ್ವಾರ್ಥಸಾಧಿಸಲು ಮುಂದ[illegible] ಟಲಿಯ ಸೇನೆಯೂ ಈಗ ಚೆನ್ನಾಗಿ ತರಬೇತಿ ಹೊಂದಿ ಪ್ರಬಲವಾದುದಾಗಿದೆ ಅದು ಪೂರ್ವದಿಂದ ಫ್ರಾನ್ಸಿನ ಮೇಲೆ ಧಾಳಿಯಿಟ್ಟರೆ ಮಿತ್ರರಾಷ್ಟ್ರಗಳು ಎರಡು ರಣರಂಗಗಳಲ್ಲಿ ಹೋರಾಡಬೇಕಾಗುವುದು. ಇಟಲಿಯು ಜರ್ಮನಿಯ ಕಡೆ ಹಿಡಿದಿರುವುದರಿಂದ ಯುದ್ಧವು ಭೂಮಧ್ಯ ಸಾಗರ ಮತ್ತು ಆಫ್ರಿಕಾ ಖಂಡಗಳಿಗೂ ವ್ಯಾಪಿಸದಿರಲಾರದು. ಆದರೆ ಬಾಲ್ಕನ್ ಪ್ರದೇಶಕ್ಕೆ ಹಬ್ಬುವುದೋ ಇಲ್ಲವೋ ಎಂಬುದು ಸಂದೇಹಕರ ಈ ಕುರಿತು ರಶ್ಯವು ಇಟಲಿಗೆ ಎಚ್ಚರವಿತ್ತಿರುವುದೆಂದು ತಿಳಿದುಬರುತ್ತದೆ ಇಟಲಿಯು ಕೂಡಾ ಪ್ರಕೃತದ ಪರಿಸ್ಥಿತಿಯಲ್ಲಿ ಬಾಲ್ಕನ್ ರಾಷ್ಟ್ರಗಳನ್ನು ಕೆಣಕ ಹೋಗಲಾರದು ಆದರೆ ಟರ್ಕಿ ಮತ್ತು ಗ್ರೀಸ್‌ಗಳು ಮಿತ್ರ ರಾಷ್ಟ್ರಗಳ ಪಕ್ಷ ಸೇರಿದರೆ ಬಾಲ್ಕನಿಗೂ ಯುದ್ಧ ವ್ಯಾಪಿಸುವುದು ಆಗ ರಶ್ಯವು ಏನು ಮಾಡುವುದೆಂದು ಹೇಳಬರುವುದಿಲ್ಲ. ಅದು ಪ್ರಾಯಶಃ ಪೋಲಂಡಿನಲ್ಲಿ ಮಾಡಿದಂತೆ ತನಗೆ ಅತ್ಯಾವಶ್ಯಕವಾಗಿ ಬೇಕಾದ ಪ್ರದೇಶಗಳನ್ನು ವಶಪಡಿಸಿಕೊಂಡು ಸುಮ್ಮನಿದ್ದು ಬಿಡಬಹುದು.

ಇಟಲಿಯು ಒಂದಲ್ಲೊಂದು ದಿನ ಯುದ್ಧಕ್ಕಿಳಿಯುವುದೆಂಬ ಸಂದೇಹದಿಂದ ಇಂಗ್ಲೆಂಡ್ ಮತ್ತು ಫ್ರಾನ್ಸುಗಳು ಭೂಮಧ್ಯಸಾಗರದಲ್ಲಿ ದೊಡ್ಡ ನೌಕಾಪಡೆಯನ್ನಿರಿಸಿರುವವು ಪೂರ್ವದ ಆಲ್ಪ್ಸ ಪರ್ವತಗಳ ಎಲ್ಲೆಯಲ್ಲಿ ಫ್ರಾನ್ಸ್ ದೊಡ್ಡ ಸೇನೆಯನ್ನಿಟ್ಟಿರುವುದು. ಭೂಮಧ್ಯಸಾಗರದಲ್ಲಿ ಅತಿ ದೊಡ್ಡ ಜಲ ಮತ್ತು ಆಕಾಶಯುದ್ಧ ನಡೆಯಲಿರುವುದು. ಇಟಲಿಯು ತನ್ನ ಸಂಪೂರ್ಣ ನೆಲಸೇನೆಯನ್ನುಪಯೋಗಿಸಿ ಫ್ರಾನ್ಸಿನ ಮೇಲೆ ಪೂರ್ವದಿಂದ ಏರಿ ಹೋಗಿ ಅದನ್ನು ಸದೆಬಡೆಯಲತ್ನಿಸಬಹುದು

ಇನ್ನು ಕೆಲವೇ ದಿನಗಳಲ್ಲಿ ಈ ಮಹಾಯುದ್ಧದ ಪರಿಣಾಮವೇನಾಗುವುದೆಂದು ಊಹಿಸಿಕೊಳ್ಳಬಹುದು ಇಟಲಿ ಮತ್ತು ಜರ್ಮನಿಗಳಿಗೆ ಫ್ರಾನ್ಸನ್ನು ಈ ತಿಂಗಳೊಳಗೆ ಸದೆಬಡಿಯಲು ಸಾಧ್ಯವಾದರೆ ಇಂಗ್ಲೆಂಡು ರಾಜಿಮಾಡಿಕೊಳ್ಳಲೇ ಬೇಕಾಗುವುದು ಆಗ ಯುರೋಪಿನಲ್ಲಿ ಜರ್ಮನಿ ಮತ್ತು ಇಟಲಿಗಳ ಪ್ರಭಾವವೇ ಹೆಚ್ಚುವುದು. ಅದರ ಬದಲಿಗೆ ಭೂಮಧ್ಯಸಾಗರದಲ್ಲಿರುವ ಪ್ರಬಲ ನೌಕಾಪಡೆಯಿಂದ ಇಂಗ್ಲೆಂಡು ಮತ್ತು ಫ್ರಾನ್ಸುಗಳು ಇಟಲಿಯನ್ನು ಗೆದ್ದರೆ ಜರ್ಮನಿಗೆ ಪ್ರವೇಶಿಸಲು ವಿಶಾಲವಾದ ಎಲ್ಲೆಯು ದೊರೆತು ಜರ್ಮನಿಯೇ ದೊಡ್ಡ ಗಂಡಾಂತರಕ್ಕೊಳಗಾಗುವುದು ಇಟಲಿಯು ಯುದ್ಧಕ್ಕಿಳಿದ ಮೇಲೆ ಸ್ಪೈನಿಗೆ ಸುಮ್ಮನಿರಲು ಸಾಧ್ಯವಾಗುವುದೋ ಎಂಬುದೀಗ ಪ್ರಶ್ನೆ. ಆದರೆ ಸ್ಪೈನಿನ ಈಗಣ ಅವಸ್ಥೆ ನೋಡಿದರೆ ಅದಕ್ಕೆ ಯಾವ ಯುದ್ಧಕ್ಕೂ ಕೈಹಾಕಲು ಸಾಧ್ಯವೇ ಇಲ್ಲ. ಆದುದರಿಂದ ಇಟಲಿಯು ಬೆದರಿಕೆ ಹಾಕದಿದ್ದ ಪಕ್ಷದಲ್ಲಿ ಜನರಲ್ ಫ್ರೇಂಕೋರವರು ತಟಸ್ಥರಾಗಿರಬಹುದು ಅಮೇರಿಕವು ಕೂಡಾ ಮಿತ್ರರಾಷ್ಟ್ರಗಳಿಗೆ ಬೇಕಾದ ಯುದ್ಧೋಪಕರಣಗಳನ್ನು ಒದಗಿಸಬಹುದೇ ಹೊರತು, ಪ್ರತ್ಯಕ್ಷವಾಗಿ ಯುದ್ಧದಲ್ಲಿ ಸೇರಲಾರದು ರಶ್ಯವೂ ತಟಸ್ಥವಾಗಿರುವ ಸಂಭವವೇ ಹೆಚ್ಚು.

ಇಟಲಿಯು ಯುದ್ಧಕ್ಕೆ ಸೇರಿರುವುದರಿಂದ ಮಿತ್ರರಾಷ್ಟ್ರಗಳ ಪರಿಸ್ಥಿತಿಯು ಮತ್ತಷ್ಟು ಭಯಂಕರವಾಗಿದೆ. ಯುದ್ಧವು ಐಗುಪ್ತ, ಅರೇಬಿಯಗಳ ವರೆಗೂ ವ್ಯಾಪಿಸಬಹುದು. ಹಿಂದೂದೇಶದ ಮೇಲೂ ಅದರಿಂದ ಈಗಕ್ಕಿಂತಲೂ ಹೆಚ್ಚಿನ ಪರಿಣಾಮವಾಗಬಹುದು ಯುದ್ಧವು ಆದರ ಬಾಗಿಲಿಗೇನೇ ಬಂದುಬಿಡಬಹುದು ವಿಶೇಷವಾಗಿ ಫ್ರಾನ್ಸಿನ ಪಾಡೇನಾಗುವುದೆಂದು ಊಹಿಸಲು ಸಾಧ್ಯವಿಲ್ಲ ಇತ್ತಲಾಗಿನ 6 ದಿವಸಗಳ ಯುದ್ಧದ ಪರಿಣಾಮವು ಫ್ರಾನ್ಸಿನ ಕುರಿತು ಯಾವ ರೀತಿಯ ಭರವಸೆಯನ್ನೂ ಉಂಟುಮಾಡುವುದಿಲ್ಲ ಇನ್ನೂ ಜರ್ಮನರೇ ಪ್ರಚಂಡ ಧಾಳಿ ನಡಿಸಿ ಮುಂದೊತ್ತುತ್ತಿದ್ದಾರೆ ಇಟಲಿಯು ಪೂರ್ವದಿಂದ ಧಾಳಿಯಿಕ್ಕಿತೆಂದರೆ ಫ್ರಾನ್ಸು ನಡುವೆ ಸಿಕ್ಕಿ ನುಗ್ಗಾಗಿ ಹೋಗುವುದೋ ಎಂಬ ಭೀತಿಗೆ ಆಸ್ಪದವಾಗಿದೆ ಅಮೇರಿಕವು ಕೂಡಲೆ ಸಹಾಯವಿತ್ತರೆ ಇಂಗ್ಲೆಂಡು ತನ್ನ ಸಂಪೂರ್ಣ ಶಕ್ತಿಯನ್ನುಪಯೋಗಿಸಿದರೆ ಮಾತ್ರ ಫ್ರಾನ್ಸನ್ನು ಒಂದುವೇಳೆ ಉಳಿಸಬಹುದಾಗಿದೆ

ಟೀಕೆ–ಟಿಪ್ಪಣಿ.

(೧೩ನೇ ಪುಟದಿಂದ)

ದಿಗಿಲುಂಟಾಗುವುದು ಸ್ವಾಭಾವಿಕ

ಜನರು ಅನಾವಶ್ಯಕವಾಗಿ ದಿಗಿಲುಗೊಂಡು ಪೋಸ್ಟಲ್ ಸೇವಿಂಗ್ಸ್ ಬೇಂಕು, ಬೇಂಕು ಮೊದಲಾದುವುಗಳಿಂದ ರೇವಣಾತಿ ಹಣ ಹಿಂತೆಗೆಯುತ್ತಿದ್ದಾರೆ ನೋಟುಗಳನ್ನು ಕೊಟ್ಟು ಹಣ ಪಡೆಯುತ್ತಿದ್ದಾರೆ. ನಾನಾ ರೀತಿಯ ಆಧಾರರಹಿತ ಸದ್ದಿಗಳಿಂದ ಜನರು ಕಳವಳಗೊಂಡಿರುತ್ತಾರೆ. ಅಂತಹ ದಿಗಿಲಿಗೇನೂ ಕಾರಣವಿಲ್ಲೆಂದು ಇಂಡಿಯಾ ಸರಕಾರವು ಪ್ರಕಟಿಸಿರುವುದು ದಿಗಿಲುಗೊಂಡು ಫಲವಿಲ್ಲ. ಬಂದುದು ಬರಲೆಂಬ ಧೈರ್ಯದಿಂದ ತಾಳ್ಮೆಯಿಂದಿರುವುದೇ ಯುಕ್ತವಾದುದೆಂಬುದೇನೋ ನಿಜ ಆದರೆ ಅಂತಹ ದಿಗಿಲಿಗೆ ಕಾರಣವಿಲ್ಲೆಂಬುದರಲ್ಲಿ ಅರ್ಥವಿಲ್ಲ ಇಷ್ಟರವರೆಗೆ ಮಿತ್ರರಾಷ್ಟ್ರಗಳು ಒಂದರ ಹಿಂದ ಒಂದು ಅಪಜಯಗಳನ್ನೇ ಪಡೆಯುತ್ತಾ ಬಂದಿರುವವು. ಇಂದೀಗ ಫ್ರಾನ್ಸು ಮಹಾ ವಿಪತ್ತಿಗೊಳಗಾಗಿರುವುದು ಇಟಲಿಯು ಯುದ್ಧಕ್ಕಿಳಿದಿರುವುದರಿಂದ ಫ್ರಾನ್ಸಿನ ಗತಿಯೇನಾಗುವುದೆಂದು ಹೇಳಬರುವುದಿಲ್ಲ ಎರಡು ಕಡೆಗಳಿಂದ ಅದರ ಮೇಲೆ ಧಾಳಿ ನಡೆಯುವುದು. ಫ್ರಾನ್ಸು ಜೈಸಲ್ಪಟ್ಟಿತೆಂದರೆ ಇಂಗ್ಲೆಂಡಿನ ಪರಿಸ್ಥಿತಿಯೇನಾಗುವುದೆಂದು ಹೇಳಲು ಸಾಧ್ಯವಿಲ್ಲ ಒಂದೆರಡು ಯುದ್ಧಗಳಲ್ಲಾದರೂ ಮಿತ್ರ ರಾಷ್ಟ್ರಗಳು ಜರ್ಮನರನ್ನು ಸೋಲಿಸಿ ಮತ್ತೆ ಪ್ರಕಟಣೆ ಹೊರಡಿಸಿದರೆ ಮಾತ್ರ ಜನತೆಗ ನಂಬಿಗೆಯಾದೀತು. ಆ ವರೆಗೆ ಜನತೆಯಲ್ಲಿ ದಿಗಿಲುಂಟಾಗುವುದು ಸ್ವಾಭಾವಿಕ

ಜಯ ಮಾತ್ರ ಜರ್ಮನರಿಗೆ

ಮಿತ್ರರಾಷ್ಟ್ರಗಳ ವಿಮಾನಗಳು ಜರ್ಮನರದಕ್ಕಿಂತ ಶ್ರೇಷ್ಠವಾದುವು! ಓಗೆತಿ ಮತ್ತು ತಾಪಕಿಗಳು ಉತ್ತಮವಾದವು ಸೈನಿಕರೂ ಹೋರಾಟದಲ್ಲಿ ಜರ್ಮನರಿಗಿಂತ ಮಿಗಿಲಾದವರು! ಆದರೆ ಹಾವಳಿಯಾಗುವುದೂ ಜರ್ಮನರಿಗೆ! ಆದರೆ ಪ್ರತಿ ಯುದ್ಧದಲ್ಲಿಯೂ ಜಯಹೊಂದುತ್ತಿರುವುದು ಜರ್ಮನರು! ಈಗ ಸೋಮ್ಮೆ ರಣರಂಗದಲ್ಲಿಯೂ ಜರ್ಮನರು ಮುಂದೊತ್ತುತ್ತಿರುವರು ಫ್ರೆಂಚ್ ಸೇನೆಯು ಕ್ರಮವಾಗಿ ಹಿಂದೆ ಸರಿದಿರುವುದು ಒಪ್ಪಿಯಾದರೂ ಫ್ರೆಂಚ್ ಸೇನೆಯು ಜರ್ಮನರನ್ನು ಹಿಂದಕ್ಕಟ್ಟಿದ ಸಮಾಚಾರವೇ ಇಲ್ಲ. ಆಂದ ಮೇಲೆ ಇನ್ನಾದರೂ ಜರ್ಮನರನ್ನು ಮಿತ್ರರಾಷ್ಟ್ರಗಳ ಸೇನೆಯು ಜೈಸುವುದೆಂಬ ಭರವಸೆಯು ಜನತೆಯಲ್ಲಿ ಹುಟ್ಟುವುದು ಹೇಗೆ?

ಜಾಪಾನಿನ ಧೋರಣೆ

ಡಚ್ ಈಸ್ಟ್ ಇಂಡೀಸನ್ನು ಮೊದಲಿನಂತೆಯೇ ಇರಿಸಬೇಕು. ಜಾಪಾನಿಗೆ ಆದನ್ನು ಆಕ್ರಮಿಸುವ ಇಚ್ಛೆಯೇನೂ ಇರುವುದಿಲ್ಲ ಯುರೋಪಿನ ಯುದ್ಧದಲ್ಲಿ ಜಾಪಾನೇನೂ ಕೈಹಾಕುವ ಹಾಗಿಲ್ಲೆಂದು ಜಾಪಾನಿನ ವಿದೇಶ ಮಂತ್ರಿಗಳೂ ಪ್ರಧಾನ ಮಂತ್ರಿಗಳೂ ಹೇಳಿರುವರು. ಚೀನೀ ಯುದ್ಧದಿಂದ ಗೆದ್ದು ಬರುವುದಕ್ಕೆ ಜಾಪಾನಿಗೆ ಪ್ರಾಣಕ್ಕೆ ಬಂದಿದೆ ಇದು ಹೊರತು ಅಮೇರಿಕದ ದೃಷ್ಟಿಯು ಜಾಪಾನಿನ ಮೇಲೆ ಇದ್ದೇ ಇದೆ ಶಾಂತಸಾಗರದಲ್ಲಿದು ದೊಡ್ಡ ನೌಕಾಪಡೆಯನ್ನಿರಿಸಿದೆ ಇದರಿಂದ ಜಾಪಾನು ತಳಮಳಗೊಂಡು ತಟಸ್ಥವಾಗಿರಲೇ ಬೇಕಾಗಿದೆ

ONE REASON.

Love does much, but in this materialistic world, money does more. Save therefore for the sake of those you love.

RESOURCES OF A CRORE } ESTD 1906 **Canara Bank Limited.**

"ನಾಮರ್ದಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ನಸೋನಿಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ

"ಸೆಮಿನಾ ಟೊನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನ ವುಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ

ಕಿಮ್ಮತು ರೂ. 3-0-0 ಡಬ್ಬಿ 0 8 0

ಸೋರಠ್ ಫಾರ್ಮೆಸಿ,
ನಳ್ ಬಜಾರ್, ಡಂಕನ್ ರೋಡ್,
ಮುಂಬಾಯಿ 4

Sorath Pharmacy,
Null Bazar Duncan Road,
BOMBAY 4

ನವಯುಗದಲ್ಲೇ
ನಿಮ್ಮ ಜಾಹಿರಾತು ಪ್ರಕಟಿಸಿರಿ

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ನವಯುಗ

ಉಡುಪಿ, ಗುರುವಾರ ತಾ. ೧೩-೬-'೪೦

ಪ್ರಜಾಸತ್ತೆಯನ್ನು ರಕ್ಷಿಸುವ ಬಗೆ ಹೇಗೆ?

ಇಂದೀಗ ಲೋಕದಾಂತ ಪ್ರಜಾಸತ್ತೆ ಮತ್ತು ನಾಗರಿಕತೆಗೇನೇ ಪ್ರಾಣಾಪತ್ತುಂಟಾಗಿರುವುದು. ಆದರೆ ಇದಕ್ಕೆ ಡಿಕ್ಟೇಟರ್ ಶಾಹಿಯಷ್ಟೇ ಸಾಮ್ರಾಜ್ಯಶಾಹಿಯೂ ಕಾರಣವಾಗಿರುವುದೆಂದರೆ ತಪ್ಪಾಗಲಾರದು. ಇಂದೀಗ ಯುರೋಪಿನ ಡಿಕ್ಟೇಟರುಗಳಾದ ಹಿಟ್ಲರ್ ಮುಸಲೋನಿಯವರೊಡನೆ ಪ್ರಚಂಡ ಯುದ್ಧಮಾಡಬೇಕಾಗಿ ಬಂದಿರುವ ಫ್ರಾನ್ಸ್ ಮತ್ತು ಇಂಗ್ಲೆಂಡುಗಳು ನಿನ್ನೆ ಅವರೊಡನೆ ಹಸ್ತಲಾಘವಮಾಡಲು ಹಾತೊರೆದುಕೊಂಡಿದ್ದವು. ಒಂದೇ ಮಾತಿನಲ್ಲಿ ಹೇಳುವುದಾದರೆ ಅವರನ್ನು ಬೆಳೆಸಿದವುಗಳೇ ಬ್ರಿಟನ್ ಮತ್ತು ಫ್ರಾನ್ಸ್‌ಗಳೆಂದು ಧೈರ್ಯದಿಂದ ಹೇಳಬಹುದು. ಪ್ರಥಮವಾಗಿ ಅಬಿಸೀನಿಯದ ಮೇಲೆ ಇಟೆಲಿಯು ಬರ್ಬರ ಧಾಳಿ ನಡಿಸಿದಾಗ ಈ ರಾಷ್ಟ್ರಗಳು, ಹಾವು ಸಾಯಬಾರದು ಕೋಲು ಮುರಿಯಬಾರದೆಂಬ ದುರ್ಬಲ ಧೋರಣೆ ವಹಿಸಿ, ಅತ್ತ ಅಬಿಸೀನಿಯವೂ ಹೋಗಿ ಇತ್ತ ಮುಸಲೋನಿಯವರ ಬದ್ಧ ವೈರವನ್ನು ಗಳಿಸಿಕೊಂಡಂತಾಯಿತು. ಈ ಸಂದರ್ಭದಲ್ಲಿ ಹಿಟ್ಲರರು ಮುಸಲೋನಿಯವರಿಗೆ ಬೆಂಬಲವಿತ್ತು ಅವರೊಳಗೆ ನಿಕಟ ಬಾಂಧವ್ಯವು ನೆಲೆಗೊಳ್ಳುವಂತಾಯಿತು.

ಮಂಚೂರಿಯದ ಸಂಬಂಧವಾದ ಬ್ರಿಟಿಷ್ ಮತ್ತು ಫ್ರೆಂಚ್ ಸರಕಾರಗಳ ಅವಿವೇಕಪರ ವರ್ತನೆಯಿಂದ ಕ್ರೋಧಗೊಂಡಿದ್ದ ಜಪಾನೂ ಡಿಕ್ಟೇಟರರೊಂದಿಗೆ ಸೇರಿತು. ಮೂರು ರಾಷ್ಟ್ರಗಳೂ ಒಂದುಗೂಡಿ ಲೀಗ್ ಆಫ್ ನೇಶನ್ಸನ್ನು ಧಿಕ್ಕರಿಸಿ ಮೂಲೆ ಗುಂಪುಮಾಡಿದುವು. ಹಿಟ್ಲರರೇ ಮುಸಲೋನಿಯವರ ಸಹಾಯದಿಂದ ಆಸ್ಟ್ರಿಯದ ಮೇಲೆ ಧಾಳಿಯಿಟ್ಟು ಅದನ್ನು ಜರ್ಮನಿಗೆ ಸೇರಿಸಿಕೊಂಡರು. ಅದರಬೆನ್ನಲ್ಲೆ ಜೆಕೋಸ್ಲೋವೇಕಿಯವನ್ನು ಆಕ್ರಮಿಸುವುದರಲ್ಲಿರಲು ರಶ್ಯವು ಅದನ್ನು ಬಲವಾಗಿ ವಿರೋಧಿಸಿ ಜರ್ಮನಿಯೊಡನೆ ಯುದ್ಧಮಾಡಲು ಸಿದ್ಧವಾಗಿತ್ತು. ಆದರೂ ಚೇಂಬರ್ಲೇನ್, ದೆಲಿಡಿಯರು ರಶ್ಯವನ್ನು ಗಣ್ಯಮಾಡದೆ ಹಿಟ್ಲರ ಮುಸಲೋನಿಯವರೊಡಗೂಡಿ ಮ್ಯೂನಿಚ್ ಒಪ್ಪಂದ ಮಾಡಿ, ತಮ್ಮ ಕಾಲದಲ್ಲಿ ಶಾಂತಿಸ್ಥಾಪಿಸಿದೆವೆಂದು ಹಿಗ್ಗಳಿಕೆ ಪಟ್ಟರು. ಈ ಒಪ್ಪಂದದ ಮರುದಿನವೇ ಎಂಬಂತೆ ಹಿಟ್ಲರರು ಜೆಕೋಸ್ಲೋವೇಕಿಯವನ್ನು ಆಕ್ರಮಿಸಿ ಜರ್ಮನಿಯ ಅಧೀನ ಪಡಿಸಿದರು. ಸ್ಪೈನಿನಲ್ಲಿ ಪ್ರಜಾಸತ್ತೆಯನ್ನು ಕೈಬಿಟ್ಟು ಹಾಕಿ ಅಲ್ಲಿ ಮುಸಲೋನಿ ಮತ್ತು ಹಿಟ್ಲರರ ಕೈ ಮೇಲಾಗುವಂತೆ ಮಾಡಿದ ಜವಾಬ್ದಾರಿಯು ಬ್ರಿಟನ್ ಮತ್ತು ಫ್ರಾನ್ಸ್‌ಗಳದ್ದು. ಈ ರಾಷ್ಟ್ರಗಳ ಧೋರಣೆಯಿಂದ ತೀರಾ ಜಿಗುಪ್ಸೆಗೊಂಡ ಸೋವಿಯೆಟ್ ರಶ್ಯವು ಅವುಗಳಿಗಿಂತಲೂ ಡಿಕ್ಟೇಟರ ಮೇಲೆ ನಂಬುವಂತಾಯಿತು.

ಸಾಮ್ರಾಜ್ಯ ಸ್ವಾರ್ಥ ಸಾಧನೆಯೇ ಪ್ರಾಮುಖ್ಯ

ಹಿಟ್ಲರರು ಪೋಲೆಂಡಿನ ಮೇಲೆ ಧಾಳಿ ನಡಿಸುವುದರಲ್ಲಿರುವಾಗ ಬ್ರಿಟಿಷ್ ಸರಕಾರವು ರಶ್ಯದೊಡನೆ ಒಪ್ಪಂದಮಾಡಿಕೊಳ್ಳಲೆತ್ನಿಸಿ ಈ ಒಪ್ಪಂದದ ಮಾತುಕತೆಯನ್ನು ನಡಿಸುವಾಗಲೂ ರಶ್ಯಕ್ಕೆ ಸರಿಯಾದ ಮನ್ನಣೆ ಕೊಡದೆ ಅದನ್ನು ಅವಮಾನಿಸುವಂತಹ ಧೋರಣೆ ವಹಿಸಿತು. ಇದರಿಂದ ರಶ್ಯವು ರೇಗುವಂತಾಯಿತು. ಇಂಗ್ಲೆಂಡು ತಿಂಗಳುಗಟ್ಲೆ ಸಮಯವನ್ನು ಈ ಒಪ್ಪಂದದ ಮಾತುಕತೆಯಲ್ಲೇ ಕಳೆಯುತ್ತಿದ್ದಾಗ ಹಿಟ್ಲರರು ಫಕ್ಕನೆ ತನ್ನ ಧೋರಣೆ ಬದಲಾಯಿಸಿ 3 ದಿನಗಳೊಳಗೆ ರಶ್ಯದೊಡನೆ ಒಡಂಬಡಿಕೆ ಮಾಡಿಕೊಂಡರು. ಬ್ರಿಟಿಷ್ ಸರಕಾರದ ಪ್ರತಿನಿಧಿಗಳು ತಲೆಗೆ ಕೈಯಿಟ್ಟುಕೊಂಡು ಹೋದಂತೆ ಹಿಂದೆಬರಬೇಕಾಯಿತು. ರಶ್ಯದೊಡನೆ ಒಪ್ಪಂದವಾದೊಡನೆಯೇ ಹಿಟ್ಲರರು ಪೋಲೆಂಡಿನ ಮೇಲೆ ಧಾಳಿ ನಡಿಸಿದರು. ಈ ಸಂದರ್ಭದಲ್ಲಿ ಇಂಗ್ಲೆಂಡು ಫ್ರಾನ್ಸುಗಳು ಪೋಲೆಂಡಿಗೆ ಯಾವ ಸಹಾಯವನ್ನೂ ಮಾಡದೆ ಸುಮ್ಮನೆ ಕುಳಿತವು. ಎರಡು ಹಪ್ತೆಗಳಲ್ಲಿ ಪೋಲಂಡನ್ನು ಜರ್ಮನಿ ಮತ್ತು ರಶ್ಯಗಳು ಗೆದ್ದು ಹಂಚಿಕೊಂಡವು. ಇದಾದ ಮೇಲೆ ರಶ್ಯವು ಫಿನ್ಲೆಂಡಿನ ಮೇಲೆ ಧಾಳಿಯಿಟ್ಟಿತು. ಇಂಗ್ಲೆಂಡ್ ಫ್ರಾನ್ಸ್‌ಗಳು ಫಿನ್ಲೆಂಡಿಗೆ ಹೆಚ್ಚಿನ ಸೇನಾ ಸಹಾಯನೀಯಲು ಅಸಾಧ್ಯವಾದರೂ ಅದನ್ನು ರಶ್ಯದ ಎದುರಿಗೆ ಎತ್ತಿಕಟ್ಟಿ, ನಿರ್ನಾಮಗೊಳಿಸಿ ಸೋವಿಯೆಟ್ ಸರಕಾರದ ತೀವ್ರ ದ್ವೇಷ ಸಂಪಾದನೆಮಾಡಿಕೊಂಡವು. ಸ್ಪೈನು ಮತ್ತು ಜೆಕೋಸ್ಲೋವೇಕಿಯಗಳಲ್ಲಿ ಪ್ರಜಾಶಾಹಿ ಸರಕಾರಗಳನ್ನು ಕೈಬಿಟ್ಟುಹಾಕಿ ಲೋಕದ ನಿಂದೆಗೊಳಗಾದ ಆಂಗ್ಲೋ ಫ್ರೆಂಚ್ ಸರಕಾರಗಳು ಪೋಲೆಂಡ್ ಮತ್ತು ಫಿನ್ಲೆಂಡುಗಳಲ್ಲಿ ನಿರಂಕುಶ ಸರಕಾರಗಳನ್ನೆತ್ತಿಹಿಡಿದು ತಿರಸ್ಕಾರಕ್ಕೊಳಗಾದುವು. ಲೀಗ್ ಆಫ್ ನೇಶನ್ಸನ್ನು ತಮ್ಮ ಸ್ವಾರ್ಥಸಾಧಕ ಸೂತ್ರಚಾಲನೆಯ ಕಳವಾಗಿ ಮಾಡಿ ನಾಮಾವಶೇಷಗೊಳಿಸಿದುವು. ಇದರಿಂದ ಬ್ರಿಟನ್ ಮತ್ತು ಇಂಗ್ಲೆಂಡುಗಳು ಈ ವರೆಗೂ ತಮ್ಮ ಸ್ವಾರ್ಥಸಾಧಕ ಕುಟಿಲ ಧೋರಣೆ ವಹಿಸಿರುವುದಲ್ಲದೆ ಪ್ರಜಾಸತ್ತೆಯನ್ನು ರಕ್ಷಿಸುವ ಯಥಾರ್ಥ ಮನೋವೃತ್ತಿಯಿಂದ ನಡೆದಿರುವುದಿಲ್ಲೆಂಬುದು ಸ್ಪಷ್ಟವಾಗುವುದು.

ಎಲ್ಲಿದೆ ಪ್ರಜಾಸತ್ತೆ?

ಇಂದೀಗ ತಾವು ಹೋರಾಡುತ್ತಿರುವುದು ಪ್ರಜಾಸತ್ತೆಯ ರಕ್ಷಣೆಗೆಂದು ಬ್ರಿಟಿಷ್ ಮುತ್ಸದ್ದಿಗಳು ಎಡೆಬಿಡದೆ ಉದ್ಘೋಷಿಸುತ್ತಿದ್ದಾರೆ. ಆದರೆ ಅದರಲ್ಲಿ ಕೂಡಾ ಯಥಾರ್ಥ ಅಂತರ್ಯವಿರುವುದಿಲ್ಲ. ಅದೊಂದು ಭೂಖಂಡವಾದ ಹಿಂದೂದೇಶ ಮತ್ತು ಇತರ ಕೆಲವು ದೇಶಗಳನ್ನು ಗುಲಾಮಗಿರಿಯಲ್ಲಿರಿಸಿಕೊಂಡು, ತಾವು ಪ್ರಜಾಸತ್ತೆಗಾಗಿ ಹೋರಾಡುವೆವೆಂದು ಘೋಷಿಸುವುದಾದರೂ ಹೇಗೆ? ಹಿಂದೀ ಪ್ರಶ್ನೆಯು ಈಗ ಇಡೀ ಲೋಕದಲ್ಲೆಲ್ಲಾ ಚೆನ್ನಾಗಿ ಪ್ರಚಾರವಾಗಿದೆ. ಸಾಲದುದಕ್ಕೆ ಜರ್ಮನರೇ ಆ ಕುರಿತು ಎಡೆಬಿಡದೆ ಪ್ರಚಾರ ಮಾಡಿ ಬ್ರಿಟಿಷರ ಪ್ರಜಾಸತ್ತೆಯ ಸೋಗನ್ನು ಬಯಲಿಗೆಳೆಯುತ್ತಿದ್ದಾರೆ. ಇದರಿಂದಾಗಿಯೇ ಅಮೇರಿಕದ ಯುನೈಟೆಡ್ ಸ್ಟೇಟ್ಸಿನಲ್ಲಿ ಬ್ರಿಟನಿನ ಉದ್ದೇಶದ ಕುರಿತು ಸಂದೇಹವು ನೆಲೆಗೊಂಡಿದೆ. ಮಹಾತ್ಮಾ ಗಾಂಧಿ, ಪಂಡಿತ ಜವಾಹರಲಾಲರೇ ಮೊದಲಾದ ಹಿಂದೀ ಮುಖಂಡರು ತಮ್ಮ ವಿವೇಕಪರ ಮುತ್ಸದ್ದಿತನದಿಂದ ಲೋಕಮತದೆದುರಿಗೆ ಹಿಂದೀ ಪ್ರಶ್ನೆಯನ್ನಿಟ್ಟು ಅವರ ಸಹಾನುಭೂತಿಯನ್ನು ತುಂಬಾ ಪಡೆದಿದ್ದಾರೆ. ಬ್ರಿಟನಿನ ಈ ಕಷ್ಟಕಾಲದಲ್ಲಿ ಹಿಂದೂದೇಶದಲ್ಲಿ ಕಾಯಿದೆಭಂಗ ಹೂಡುವುದು ಸರಿಯಲ್ಲೆಂದು ಮಹಾತ್ಮ ಗಾಂಧಿಯವರು ಅದನ್ನು ಮುಂದೆ ಹಾಕುವ ಉದಾರತೆ ತೋರಿಸಿರುತ್ತಾರೆ. ಆದರೂ ಬ್ರಿಟಿಷ್ ಸರಕಾರದ ಹೃದಯ ಮಾರ್ಪಾಟವಾದಂತೆ ತೋರುವುದಿಲ್ಲ. ಅದು ತನ್ನ ಕಟ್ಟುಕಟ್ಟಳೆಯ ಧೋರಣೆಯನ್ನೇ ಮುನ್ನಡೆಸಿರುವುದು. ಪ್ರಾಂತಗಳಲ್ಲಿ ನೌಕರಶಾಹಿ ರಾಜ್ಯಭಾರವನ್ನೇ ನಡಿಸುವ ನಿರ್ಧಾರಕ್ಕದು ಬಂದಂತಿದೆ. ಯುರೋಪಿಯನರ ಕೇಳಿಕೆಯ ಮೇರೆಗೆ ಪ್ರಾಂತ ಮತ್ತು ಜಿಲ್ಲೆಗಳಲ್ಲಿ ಯುದ್ಧಕಮಿಟಿ ಮತ್ತು ಸಿವಿಕ್ ಗಾರ್ಡ್ಸ್‌ರನ್ನು ಸಂಘಟಿಸಿ ಯುದ್ಧಕ್ಕೆ ಹೆಚ್ಚಿನ ಸಹಾಯಪಡೆಯುವ ಮತ್ತು ಆಂತರಿಕ ಗಲಾಟೆಗಳಿದ್ದರೆ ಅವನ್ನಡಗಿಸುವ ಏರ್ಪಾಡು ನಡೆದಿದೆ. ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ಮೇರೆಗೆ ದಸ್ತಗಿರಿಗಳು ದಿನೇ ದಿನೇ ಹೆಚ್ಚುತ್ತಿವೆ. ಕಠಿಣ ದಬ್ಬಾಳಿಕೆಯನ್ನಾದರೂ ಉಪಯೋಗಿಸಿ ಸರಕಾರವು ಯುದ್ಧಕ್ಕೆ ಬೇಕಾದ ಸಹಾಯವನ್ನು ಪಡೆಯುವ ನಿರ್ಧಾರಕ್ಕೆ ಬಂದಿರುವುದೆಂಬುದು ಸ್ಪಷ್ಟವಿದೆ.

ಕ್ರಾಂತಿಕಾರಕ ಮಾರ್ಪಾಟಾಗಬೇಕು

ಇಂದೀಗ ಜರ್ಮನಿಯೊಂದಿಗೆ **ಇಟೆಲಿ**ಯೂ ಯುದ್ಧಕ್ಕೆ ಸೇರಿ ಬ್ರಿಟನ್ ಮತ್ತು ಇಂಗ್ಲೆಂಡ್ ಬಗ್ಗು ಬಡೆಯ ಹೊರಟಿದೆ. ಈ ಉದ್ದೇಶದಲ್ಲಿ ಅದು ಕೆಲಮಟ್ಟಿಗೆ ಜಯಶೀಲವಾಗಿದೆ ಎಂದು ಹೇಳಬಹುದು. ಫ್ರಾನ್ಸಿನ ಉಳಿಗಾಲವಾದರೂ ಹೇಗೆಂದು ತಿಳಿಯುವುದಿಲ್ಲ ಫ್ರಾನ್ಸ್ ಹೋದರೆ ಇಂಗ್ಲೆಂಡೊಂದರಿಂದ ಏನುಮಾಡಲು ಸಾಧ್ಯವಿದೆ? ಈ ಸಂಭರ್ಭದಲ್ಲಿ ಡಿಕ್ಟೇಟರರುಗಳ ಕೈಯೇ ಮೇಲಾಗದೆ ಲೋಕದಲ್ಲಿ ಪ್ರಜಾಸತ್ತೆಯೇ ಜಯಶೀಲವಾಗುವಂತೆ ಫ್ರಾನ್ಸ್ ಮತ್ತು ಇಂಗ್ಲೆಂಡ್‌ಗಳು ತಮ್ಮ ಧೋರಣೆಯಲ್ಲಿ ಕ್ರಾಂತಿಕಾರಕವಾದ ಬದಲಾವಣೆ ಮಾಡಬೇಕು. ತಮ್ಮ ಸಾಮ್ರಾಜ್ಯ ಸ್ವಾರ್ಥವನ್ನು ತ್ಯಜಿಸಿಬಿಟ್ಟು ತಮ್ಮಾಧೀನವಿರುವ ರಾಜ್ಯಗಳಿಗೆಲ್ಲಾ ಸಂಪೂರ್ಣ ಸ್ವಾತಂತ್ರ್ಯವಿತ್ತು ತಾವು ನಿಜವಾಗಿಯೂ ಪ್ರಜಾಸತ್ತೆಯ ರಕ್ಷಣೆಗಾಗಿ ಹೋರಾಡುವುದೆಂಬುದನ್ನು ಲೋಕಕ್ಕೆಲ್ಲಾ ಖಚಿತಗೊಳಿಸಬೇಕು. ಇಡೀಲೋಕದಲ್ಲಿ ಪ್ರಜಾಸತ್ತೆ, ಸಮಾನತೆ ಶಾಂತಿ ಮತ್ತು ಸುರಕ್ಷಿತತೆಯನ್ನು ನೆಲೆಗೊಳಿಸುವುದೇ ತಮ್ಮ ಉದ್ದೇಶ. ಇಂದೀಗ ಲೋಕಕಂಟಕರಾಗಿರುವ ಡಿಕ್ಟೇಟರರುಗಳನ್ನು ಗೆದ್ದು ಲೋಕದ ಎಲ್ಲಾ ರಾಷ್ಟ್ರಗಳನ್ನೂ ಒಂದುಗೂಡಿಸಿ ಜಾಗತಿಕ ಪ್ರಜಾಶಾಹಿಯನ್ನು ಸ್ಥಾಪಿಸಿ ಲೋಕದಲ್ಲಿ ನಿಜವಾದ ಮಾನವ ಸಹೋದರತೆ ಸೌಹಾರ್ದ ಮತ್ತು ಶಾಂತಿಯನ್ನು ನೆಲೆಗೊಳಿಸುವುದೇ ತಮ್ಮ ಉದ್ದೇಶವೆಂದು ಕಂಠೋಕ್ತವಾಗಿ ಸಾರಿ ಆ ರೀತಿ ಕೂಡಲೆ ನಡೆದರೆ ಮಾತ್ರ ಬ್ರಿಟನ್ ಮತ್ತು ಇಂಗ್ಲೆಂಡುಗಳು ತಾವು ಬದುಕಿ ಲೋಕದ ಪ್ರಜಾಸತ್ತೆಯನ್ನುಳಿಸಿಕೊಳ್ಳಬಹುದು. ಆಗ ಅಮೇರಿಕವೇ ಮೊದಲಾದ ಪ್ರಜಾಶಾಹಿ ರಾಷ್ಟ್ರಗಳೆಲ್ಲಾ ಕೂಡಲೆ ಮಿತ್ರರಾಷ್ಟ್ರಗಳಿಗೆ ಸಹಾಯಮಾಡದಿರಲಾರವು. ರಶ್ಯವೂ ಆಗ ತನ್ನ ಧೋರಣೆಯನ್ನು ಮಾರ್ಪಡಿಸಿ ಅವನ್ನೊಲಿಸಿಕೊಳ್ಳಲು ಇಂಗ್ಲೆಂಡು ಮತ್ತು ಫ್ರಾನ್ಸುಗಳು ಈಗ ಮಾಡುತ್ತಿರುವ ಪ್ರಯತ್ನವು ಜಯಶೀಲವಾಗಬಹುದು. ಆಗ ಬ್ರಿಟಿಷ್ ಮತ್ತು ಫ್ರೆಂಚ್ ಸಾಮ್ರಾಜ್ಯಶಾಹಿಯು ಪೀಡೆಯಿಂದ ಲೋಕವನ್ನು ರಕ್ಷಿಸಿ ಕಲ್ಯಾಣವನ್ನುಂಟುಮಾಡಲು ತಾವು ಹೋರಾಡುತ್ತಿರುವುದೆಂದು ಜರ್ಮನಿ ಮತ್ತು ಇಟೆಲಿಗಳು ಪ್ರಚಾರಮಾಡಲು ಆಸ್ಪದ ದೊರೆಯಲಾರದು.

ಹಿಂದೀ ಪ್ರಶ್ನೆಯ ಇತ್ಯರ್ಥ

ಮಿ. ಚರ್ಚಿಲ್ಲರು ಪ್ರಧಾನ ಮಂತ್ರಿಗಳಾಗಿ ಬಂದ ಮೇಲೆ ಇಂಗ್ಲೆಂಡಿನ ಆಂತರಿಕ ಮತ್ತು ಬಾಹ್ಯ ಆಡಳಿತದಲ್ಲಿ ಕ್ರಾಂತಿಕಾರಕ ಮಾರ್ಪಾಟವಾಗಿದೆ. ರಶ್ಯದೊಡನೆ ಮೈತ್ರಿ ಬೆಳೆಸಲು ಸರ್. ಸ್ಟ್ಯಾಫೋರ್ಡ್ ಕ್ರಿಪ್ಸರು ಕಳುಹಿಸಲ್ಪಟ್ಟಿದ್ದಾರೆ. ಇದೇ ರೀತಿ ಹಿಂದೂದೇಶದ ಸಂಬಂಧವಾದ ಧೋರಣೆಯನ್ನು ಮಾರ್ಪಡಿಸಲಾರದೇಕೋ ತಿಳಿಯದು. ಹಿಂದೂದೇಶದಲ್ಲಿ ಆಹಾರ ಸಂಪದನುಕೂಲತೆಯಿದೆ. ಸಾವಿರಗಟ್ಲೆ ವೈಮಾನಿಕರನ್ನೂ ಮಿಲ್ಯಗಟ್ಲೆ ಸೈನಿಕರನ್ನೂ ಅದು ಒದಗಿಸಬಲ್ಲುದು. ಆದರೆ ಅದಕ್ಕೆ ಕೂಡಲೆ ಡೊಮಿನಿಯನ್ ಸ್ಟೇಟಸ್ ಕೊಡಬೇಕು. ಜನ ಪ್ರತಿನಿಧಿತ್ವವುಳ್ಳ ರಾಷ್ಟ್ರೀಯ

★

ಇಟೆಲಿ ...
ಇದೇ ತಾ...
ನಿಯವರು ...
ಕೇಳಿಕೆಗಳನ್ನು ...
ಟ್ಟರುವರು. ...
ಸಾಗರಗಳನ್ನು ...
ಬೇಕು. ಈಗ ...
ಕ ಮತ್ತು ...
ಕೊಡಬೇಕು. ...
ಮತ್ತು ಸು...
ಬಿಟ್ಟುಕೊಡ...
ಕೇಳಿಕೆಗಳಾಗಿ ...
ಮಾತ್ರಕ್ಕೂ ...
ಸಾಧ್ಯವಿಲ್ಲ.

ಸರಕಾರವನ್ನ...
ತ್ರ ಹಿಂದೂದೆ...
ತರವು ತನ್ನ ...
ಲುಬಿಲ್ಲದೆ ...
ಕಳ್ಳ, ಜೇಕಾದ ...
ವುದಕ್ಕೂ ...
28 ವರ್ಷ...
ಯಲ್ಲಿ ಕೆಲಸ ...
ಮಹಾ ಯ...
ಲೆಫ್ಟಿನೆಂಟ ...
ಡಿನೊಡನೆ ...
ಹಿಂದೀಪ್ರಶ್ನೆ...
ಇರುವ ಕೊಡ...
ಕಾಲೈನಿಕಮ...
ದೇಶದಲ್ಲಿ ರಾ...
ಲ್ಪಡುವ ಅ...
ಲೀಗಿನವರು ...
ಬ್ರಿಟನು ಹಿಂದ...
ಪಿತ್ತರೆ ಮತ್ತು ...
ನಿಜವಾದ ...
ಆಕಾಂಕ್ಷೆಗ...
ಅವರ ಪ್ರತಿನಿ...
ವನ್ನು ರಚಿಸ...
ವಿರಲಾರದೆಂದು ...
ಚಾರ್ಯರು ...
ಪರಿಷತ್ತಿನ ...
ಣದಲ್ಲಿ ಸೂಚ...
ನ್ನು ಪರಿಹರಿ...
ನಡೆಸಲ್ಪಡುವ ...
ಸ್ವಾತಂತ್ರ್ಯ ...
ಸುತ್ತಿರುವುದು...
ಆದರೆ ಈ ಪ್ರ...
ಕಟ್ಟಳೆಯದಾ...
ಸ್ವಾತಂತ್ರ್ಯವನ...
ಕ್ಕೆ ಬೇಕಾದ ...
ಯುಥಾರ್ಥ...
ರುವುದಾದರೆ ...
ಅತ್ಯನುಕೂಲ...
ಖಂಡರು ನ್ಯಾ...
ಪೂರ್ವಕವಾ...
ದ್ದಾರೆ. ಸರ...
ನಿಧಿಗಳ ಚರ್ಚ...
ಆಲೋಚಿಸಿ ...
ಬೇಗ ಪರಿಹರ...
ಜನನಿನೆ ಆದಕ...

ಟಲಿಯು ಜರ್ಮನಿಯೊಂದಿಗೆ ಸೇರಿತು.

ಡಿತು.
ಮುಸಲೋ
ಇಟಲಿಯು
ಳ ಮುಂದಿ
ಭೂಮಧ್ಯ
ಬಿಟ್ಟುಕೊಡ
ುವ ಕೊನ್ಸೀ
ನ್ನು ಬಿಟ್ಟು
ದ ಜಿಜಾತಿ
ಲುವೆಗಳನ್ನು
ಇಟಲಿಯ
ಗಳಿಗೆ ಎಷ್ಟು
ಗೆ ಒಪ್ಪಲು
ಇಟಲಿಯು,

. ಆಗಮಾ
ಡಿನ ಗಂಡಾಂ
ಪ್ರಾಣದ ಹ
ಕಾಡುವುದ
ಯ ವೀಯಿ
ಹುದೆಂದು
ಂದೀ ಸೇನೆ
ದ್ದ ಕಳದ
ರಾಡಿದ್ದ
ರು ಇಂಗ್ಲೆಂ
ಂಡಿರುವರು.
ಗೊಳಿಸಲು
ಕ ಮತ್ತು
ಗ ಹಿಂದು
ವು ಸ್ಥಾಪಿಸ
ಮುಸ್ಲಿಮ್
ತ್ತಿರುವರು.
ಸ್ವಾತಂತ್ರ್ಯ
ಗಿನವರು
ಣೆ ಮತ್ತು
ಗಿ ನಡೆದರೆ
ದ ಸರಕಾರ
ಗೆ ಆಕ್ಷೇಪ
ಗೋಪಾಲಾ
ರಾಜಕೀಯ
ಡಿದ ಭಾಷ
ದೀಬಿಕ್ಕಟ್ಟ
ಪ್ರಯತ್ನ
ವು ಹಿಂದಿ
ಆಲೋಚಿ
ುಂಟಾಗಿದೆ.
ನಂತೆ ಕಟ್ಟು
ಹಿಂದಿಯರಿಗೆ
ದ ಯುದ್ಧ
ನಡೆಯುವ
ಸರಕಾರಕ್ಕೆ
ಈಗ ಆದಕ್ಕೆ
ಗ್ರೆಸ್ ಮು
ತ್ತು ಗೌರವ
ಸಿದ್ಧರೇ ಇ
ದ ಜನಪ್ರತಿ
ನ್ನು ಕರೆಮ
ನ್ನು ಎಷ್ಟು
ಸ್ಟ ಪ್ರಯೋ

ಪೆರಿಸಿನ ಕಡೆಗೆ ಜರ್ಮನರ ಜಯಶೀಲ ಧಾಳಿ

೨ ಮಿಲ್ಯ ಜರ್ಮನ್ ಸೇನೆ ಮತ್ತು ಪ್ರಚಂಡ ಯಾಂತ್ರಿಕ ದಳಗಳ ಉಪಯೋಗ.

ಬ್ರಿಟಿಷ್ ಮತ್ತು ಫ್ರೆಂಚ್ ಸಾಮ್ರಾಜ್ಯಗಳ ಪೀಡೆಯಿಂದ ಯೂರೋಪನ್ನು ಬಿಡಿಸಲು ಜರ್ಮನ್ ಸಹೋದರರೊಂದಿಗೆ ತಾ. 11ರಲ್ಲಿ ಯುದ್ಧಕ್ಕೆ ಸೇರಿರುವುದು.

ಪ್ರೆಸಿಡೆಂಟ್ ರೂಸ್‌ವೆಲ್ಟರ ಎಚ್ಚರಿಕೆ.

ಇಟಲಿಯು ಜರ್ಮನಿಯೊಂದಿಗೆ ಯುದ್ಧಕ್ಕೆ ಸೇರಬಾರದೆಂದೂ, ಸೇರಿದರೆ ಅಮೇರಿಕವು ಮಿತ್ರರಾಷ್ಟ್ರಗಳ ಕಡೆಗೆ ಸೇರಬೇಕಾಗುವುದೆಂದೂ ಪ್ರೆಸಿಡೆಂಟ್ ರೂಸ್‌ವೆಲ್ಟರು ಮುಸಲೋನಿಯವರಿಗೆ ಎಚ್ಚರವಿತ್ತಿರುವರೆಂದೂ ತಿಳಿದುಬರುತ್ತದೆ. ಅಮೇರಿಕದ ಧೋರಣೆಯನ್ನು ವಿವರಿಸಿ ಪ್ರೆಸಿಡೆಂಟ್ ರೂಸ್‌ವೆಲ್ಟರು ಇದೇ ತಾ. 10ನೇ ರಾತ್ರಿ ಪ್ರಾಮುಖ್ಯ ಹೇಳಿಕೆಯೊಂದನ್ನು ಮಾಡಿರುವರು.

ಅಮೇರಿಕವು ಯುದ್ಧಕ್ಕೆ ಸೇರಿದರೆ ಶಾಂತಸಾಗರದಲ್ಲಿರುವ ಯುದ್ಧಹಡಗಗಳನ್ನು ಅಟ್ಲಾಂಟಿಕ ಸಾಗರಕ್ಕೆ ತರಬೇಕಾಗುವುದು. ಇದರಿಂದ ಜಾಪಾನು ತನ್ನಿಚ್ಛಾನುಸಾರ ನಡೆಯುವಂತಾಗುವುದು. ದಕ್ಷಿಣ ಅಮೇರಿಕಾನ್ ರಾಷ್ಟ್ರಗಳ ವ್ಯಾಪಾರವನ್ನು ಅಮೇರಿಕವು ಕಳಕೊಂಡು ಜಾಪಾನಿಗೆ ಆಸ್ಪದವಿತ್ತಂತಾಗುವುದೆಂದು ರಶ್ಯದ ಪ್ರವಾದ ಪತ್ರಿಕೆಯು ಎಚ್ಚರಿಸಿರುವುದು.

ಇಟಲಿಯು ಬಾಲ್ಕನ್ ರಾಷ್ಟ್ರಗಳ ಮೇಲೆ ಧಾಳಿನಡಿಸದೆ ದೂರವಿರಬೇಕೆಂದು ರಶ್ಯವು ಎಚ್ಚರಿಸಿರುವುದಾಗಿ ತಿಳಿದುಬಂದಿದೆ. ರಶ್ಯ ಮತ್ತು ಇಟಲಿ[illegible] ಡಿನ ಸಂಬಂಧವಾಗಿ ಉಂಟಾಗಿದ್ದ ವೈಮನಸ್ಯವು ದೂರವಾಗಿ ಅವುಗಳೊಳಗೆ ಸೌಹಾರ್ದವುಂಟಾಗಿದೆ. ಅವು ಪರಸ್ಪರ ರಾಯಭಾರಿಗಳನ್ನು ಬದಲಾವಣೆ ಮಾಡಿಕೊಂಡಿವೆ.

ಇಟಲಿಯು ಎಲ್ಲಿ ಯುದ್ಧ ಆರಂಭಿಸುವುದು?

ಕೌಂಟ್ ಸಿಯಾನೋರವರ ಪತ್ರಿಕೆಯಾದಾ 'ಟೆಲಿಗ್ರಾಫೋ' ಇದರ ಸಂಪಾದಕ ಸೀನರ ಅನ್ಸಾಲ್ಡೋರವರ ಅಭಿಪ್ರಾಯದಂತೆ ಇಟಲಿಯು ಪ್ರಥಮವಾಗಿ ಉತ್ತರ ಆಫ್ರಿಕದಲ್ಲಿ ಯುದ್ಧವನ್ನಾರಂಭಿಸುವುದು ಪ್ರಾಯಶಃ ಜಿಬೌತಿ ಬಂದರ ಮತ್ತು ಸೂಯೆಜ್ ಕಾಲುವೆಗಳನ್ನು ವಶಪಡಿಸಿಕೊಳ್ಳಲೆತ್ನಿಸುವುದು. ಫ್ರಾನ್ಸಿಗೆ ಹೆಚ್ಚು ಸಮಯ ಜರ್ಮನರನ್ನು ವಿರೋಧಿಸಲು ಸಾಧ್ಯವಾಗಲಾರದು. ಆಮೇಲೆ ಇಂಗ್ಲೆಂಡಿನ ಮೇಲೆ ಏರಿಹೋಗಲಾಗುವುದು. ಆಗ ಇಟಲಿ ಮತ್ತು ಜರ್ಮನಿಗಳು ಅತ್ಯಂತ ಪ್ರಬಲವಾಗಿ ಮತ್ತು ಉತ್ಕೃಷ್ಟವಾಗಿ ಯುದ್ಧನಡಿಸಿ ಬ್ರಿಟಿಷರ ಪೀಡೆಯಿಂದ ಯುರೋಪನ್ನು ವಿಮುಕ್ತಗೊಳಿಸಿ ಲೋಕವನ್ನು ರಕ್ಷಿಸುವವೆಂದೇ ಅನ್ಸಾಲ್ಡೋರವರ ಅಂಬೋಣ. 37 ಇಟಲಿಯಾನ ಹಡಗುಗಳು ತಟಸ್ಥರಾಷ್ಟ್ರಗಳ ಬಂದರಗಳಲ್ಲಿ ಆಶ್ರಯಪಡೆದಿರುವವೆಂದೂ, ಒಂದನ್ನು ಬ್ರಿಟಿಷರು ಮುಳುಗಿಸಿರುವರೆಂದೂ ಎರಡು ತಾವೇ ಮುಳುಗಿ ಆತ್ಮಘಾತಮಾಡಿಕೊಂಡಿವೆಯೆಂದೂ ತಿಳಿದುಬರುತ್ತದೆ.

> — ನೋಟೀಸು —
> **ಕುಂದಾಪುರದಲ್ಲಿ**
> "ನವಯುಗ"ದ ಬಿಡಿ ಪ್ರತಿಗಳನ್ನು ಮಾರಾಟಮಾಡಲು ಹೊಸ ಏಜಂಟರೊಬ್ಬರು ಬೇಕಾಗಿದೆ.
> ಇಷ್ಟವುಳ್ಳವರು ಬರೆಕೊಳ್ಳಬಹುದು. ಮೆನೇಜರ್ 'ನವಯುಗ'

ಜರ್ಮನರು ಐನೇ ನದಿ ದಾಟಿ ಪೆರಿಸಿನ ಕಡೆಗೆ ಸರಿಯುತ್ತಿರುವರು

ತಾ. 5ರಲ್ಲಿ ಆರಂಭವಾದ ಯುದ್ಧವು ತಾ. 9ರ ವರೆಗೂ ಒಂದೇ ಸಮನೆ ಅತ್ಯಂತ ಭೀಷಣವಾಗಿ ನಡೆಯುತ್ತಿರುವುದು. ಪೂರ್ವದಲ್ಲಿ ಜರ್ಮನರು ರಣರಂಗವನ್ನು ಮತ್ತೂ ಕೆಲ ಮೈಲು ವಿಸ್ತರಿಸಿರುವರು. ಪಶ್ಚಿಮದ ಬ್ರೆಸ್ಲೆ ಸಮಿ ಪ್ರದೇಶದಲ್ಲಿ ಜರ್ಮನರ ಒತ್ತಾಟವು ಕಡಿಮೆಯಾಗಿದೆ. ನೊಯೊನ್ ಪಟ್ಟಣದ ಪ್ರದೇಶದಲ್ಲಿ ಜರ್ಮನರು ಹೆಚ್ಚಿನ ಹಾನಿಹೊಂದಿರುತ್ತಾರೆ. ಇದೇ ತಾ 9ರಲ್ಲಿ ಜರ್ಮನರು ಬ್ರೈಸ್, ಸೊಯೊಸನ್, ಮತ್ತು ಐನೆ ಪ್ರದೇಶದಲ್ಲಿ ಹೊಸ ಸೇನೆಯನ್ನುಪಯೋಗಿಸಿ ತೀವ್ರ ಹೋರಾಟ ನಡೆದು ಐನೆ ನದಿಯನ್ನು ದಾಟಿ ಮುಂದುವರಿದಿರುವರು.

ಸಂದಿಗ್ಧ ದಿನ

ಇದೇ ತಾ. 9ನೇ ಬೆಳಿಗ್ಗೆ ಜರ್ಮನರು ಪಶ್ಚಿಮರಣರಂಗದಲ್ಲಿದ್ದ ಸೇನೆಯನ್ನೆಲ್ಲಾ ಉಪಯೋಗಿಸಿ ಹೊಸ ಧಾಳಿಯನ್ನಾರಂಭಿಸಿರುವರು. ಈಗ 1,800,000 ದಿಂದ 2,000,000ದ ವರೆಗಿನ ಜರ್ಮನ್ ಸೈನಿಕರು ಮತ್ತು ಹಲವು ಯಾಂತ್ರಿಕದಳಗಳು ಹೋರಾಡುತ್ತಿರುವವು. ಪಶ್ಚಿಮದಲ್ಲಿ ಸಮುದ್ರ ತೀರದಿಂದ ಪೂರ್ವದಲ್ಲಿ ಅರ್ಗೋನ್ನೆಯವರೆಗೆ ತೀವ್ರ ಹೋರಾಟನಡೆಯುತ್ತಿರುವುದು. ತಾ. 9 ಸಂದಿಗ್ಧದಿನವೆಂದು ಪರಿಗಣಿಸಲಾಗಿದೆ. ಯುದ್ಧವು ಅಭೂತಪೂರ್ವ ಭೀಷಣತೆಯಿಂದ ನಡೆದಿರುತ್ತದೆ. ಅಬ್ಬೆವಿಲ್ಲಿನ ದಕ್ಷಿಣದಲ್ಲಿ ಜರ್ಮನರು ನೋವೆ ನದಿಯಲ್ಲಿರುವ ಬ್ರೆಟ್ಯೂಲಿ ಎಂಬ ಸ್ಥಳಕ್ಕೆ ಮುಟ್ಟಿರುವರು. ಬ್ರೆಸ್ಲೆ ಮತ್ತು ನೊಯೊನ್ ಪ್ರದೇಶದಲ್ಲಿ ಜರ್ಮನರು 40ದಳ ಸೇನೆಯನ್ನು ಉಪಯೋಗಿಸಿ ತೀವ್ರ ಹೋರಾಟನಡಿಸಿ ಮುಂದೊತ್ತುತ್ತಿರುವರು.

ಜರ್ಮನರು ಐನೇ ನದಿ ದಾಟಿ ಸುಮಾರು 15 ಮೈಲು ಮುಂದೊತ್ತಿರುವರು.

ಯುದ್ಧವು ಈಗ ಸ್ವಿಸರ್ಲೆಂಡಿನ ಎಲ್ಲೆಯವರೆಗೆ ವ್ಯಾಪಿಸಿದೆ. ನೂರುಗಟ್ಲೆ ಜರ್ಮನ್ ವಿಮಾನಗಳು ಪೆರಿಸಿನ ಬಳಿಯ ಪ್ರದೇಶಗಳ ಮೇಲೆ ಪ್ರಚಂಡ ಧಾಳಿ ನಡಿಸಿರುವವು.

ವೈರಿಯು ತನ್ನ ಸಂಪೂರ್ಣ ಶಕ್ತಿಯನ್ನುಪಯೋಗಿಸಿರುತ್ತಾನೆ. ಸ್ವಿಸರ್ಲೆಂಡಿನ ವರೆಗೂ ರಣರಂಗವು ವ್ಯಾಪಿಸಿದೆ. ಪ್ರತಿಯೊಬ್ಬನೂ ಹಿಂದೆ ಸರಿಯುವ ಯೋಚನೆಯನ್ನೇ ಬಿಟ್ಟು ಮುಂದೆಯೇ ನೋಡಿ ಕಾದಾಡಬೇಕು. ಸೇನೆಯೂ ವಿಮಾನ ಪಡೆಯೂ ಅತಿ ಹೆಚ್ಚಿನ ಸಾಹಸ ಮತ್ತು ತ್ಯಾಗ ಮಾಡಿರುತ್ತದೆ. ಅವುಗಳಿಗೆ ತನ್ನ ವಂದನೆ. ತಮ್ಮ ಮಾತೃಭೂಮಿಯ ರಕ್ಷಣೆಗಾಗಿ ಸೈನಿಕರೂ ಅಧಿಕಾರಿಗಳೂ ಸಂಪೂರ್ಣ ಧೈರ್ಯ, ಸ್ಥೈರ್ಯ, ಉತ್ಸಾಹ, ಸಾಹಸ ಮತ್ತು ನಿರ್ಧಾರದಿಂದ ಇದ್ದಲ್ಲಿಂದ ಕದಲದೆ, ಇಟ್ಟ ಹೆಜ್ಜೆ ಹಿಂದಿಡದೆ ಹೋರಾಡಬೇಕಾಗಿದೆ. ವೈರಿಯು ಹೆಚ್ಚಿನ ನಷ್ಟಹೊಂದಿರುತ್ತಾನೆ. ಬೇಗನೆ ಆತನ ಪ್ರಯತ್ನದ ಕೊನೆಯು ಮುಟ್ಟಲಿದೆ. ಯುದ್ಧದ ಕೊನೆಯ ಅಂಕವೀಗ ಸಮೀಪಿಸಿದೆ. ಬಿಡದೆ ಹೋರಾಡಿರೆಂದು ಜನರಲ್ ವೈಗಾಂಡರು ಫ್ರೆಂಚ್ ಸೇನೆಗೆ ಸಂದೇಶವಿತ್ತಿರುವರು.

ಫ್ರಾನ್ಸಿಗೆ ಬ್ರಿಟಿಷ್ ಸೇನೆ

ಇಂಗ್ಲೆಂಡು ಸಾಧ್ಯವಾದ ಸಹಾಯವನ್ನು ಫ್ರಾನ್ಸಿಗೆ ಕೊಡುತ್ತಿರುವುದು. ಕಳೆದ ನಾಲ್ಕೈದು ದಿನಗಳಲ್ಲಿ ಸಹಸ್ರಗಟ್ಲೆ ಬ್ರಿಟಿಷ್ ಸೈನಿಕರು ಫ್ರಾನ್ಸಿಗೆ ಕಳುಹಿಸಲ್ಪಟ್ಟಿರುವರು, ಇನ್ನೂ ಕಳುಹಿಸಲ್ಪಡುತ್ತಿರುವರು.

ಜರ್ಮನರು ಪೆರಿಸನ್ನು ವಶಪಡಿಸಿಕೊಳ್ಳಬೇಕೆಂಬ ಉದ್ದೇಶದಿಂದ ತಮ್ಮ ಬಲವನ್ನೆಲ್ಲಾ ಉಪಯೋಗಿಸಿ ಅತಿ ಭೀಕರ ಹೋರಾಟ ನಡಿಸುತ್ತಿರುವರು. ಫ್ರೆಂಚರು ತಮ್ಮ ರಿಸರ್ವ್ ಸೇನೆಯನ್ನು ಉಪಯೋಗಿಸಿ ಉಂಟಾಗುವ ಪರಿಣಾಮದ ಮೇಲೆ ಪರಿಸ್ಥಿತಿಯು ಹೊಂದಿಕೊಂಡಿದೆ. ಇತ್ತಂಡದ ಸೈನಿಕರೂ ಕಾದಾಡಿ ದಣಿದಿರುತ್ತಾರೆ. ಇದೀಗ ಸಹಿಷ್ಣುತೆಯ ಯುದ್ಧವಾಗಿ ಪರಿಣಮಿಸಿದೆ. ಫ್ರೆಂಚರೂ ಈ ಯುದ್ಧದಲ್ಲಿ ತಮ್ಮ ಸರ್ವಶಕ್ತಿಯನ್ನೂ ಉಪಯೋಗಿಸಿರುತ್ತಾರೆ.

ಬ್ರಿಟಿಷರು ನಾರ್ವಿಕನ್ನು ಬಿಟ್ಟರು

ನೋರ್ವೆಯಲ್ಲಿ ಬ್ರಿಟಿಷ್ ಸೈನಿಕರು ಮತ್ತು ನಾವಿಕರು ಯುದ್ಧವನ್ನು ಮುನ್ನಡೆಸಿ ನಾರ್ವಿಕೆಂಬ ಪ್ರಾಮುಖ್ಯ ಬಂದರವನ್ನು ವಶಪಡಿಸಿಕೊಂಡಿರುವರಷ್ಟೆ. ಕಾರಣಾಂತರಗಳಿಂದ ಈಗ ಅದನ್ನು ಸಂಪೂರ್ಣವಾಗಿ ಬಿಟ್ಟಿರುವರೆಂದು ತಿಳಿದುಬರುತ್ತದೆ.

ಮೌಲಾನ ಅಜದರು

ಹಿಂದೂಮುಸಲ್ಮಾನ ಪ್ರಶ್ನೆಯ ಇತ್ಯರ್ಥಕ್ಕಾಗಿ ಎಡೆಬಿಡದೆ ಪ್ರಯತ್ನಿಸುತ್ತಿರುವರು. ಈ ಸಂಬಂಧವಾಗಿ ಅವರು ಬಂಗಾಳದ ಪ್ರಧಾನಮಂತ್ರಿ ಮಿ. ಹಕ್ಕರೊಡನೆ ಮಾತಾಡಿರುವರು. ಹಕ್ಕರು ಕಾಂಗ್ರೆಸ್ ಪ್ರಧಾನ ಮಂತ್ರಿಗಳೆಲ್ಲರ ಸಭೆಯೊಂದನ್ನು ಕರೆದು ವಿಚಾರಿಸುವುದೊಳ್ಳೇದೆಂದು ಸೂಚಿಸಿರುವರು. ಆದರೆ ಅದರಿಂದ ಪ್ರತ್ಯಕ್ಷ ಪ್ರಯೋಜನ ಬರುವಂತಿಲ್ಲೆಂದು ಭಾವಿಸಿ ಮೌಲಾನರು ಸಿಂಧ್ ಪಂಜಾಬು ಮತ್ತು ವಾಯುವ್ಯ ಗಡಿನಾಡಿನ ಪ್ರಧಾನಮಂತ್ರಿಗಳೊಡನೆ ಮೊದಲು ಮಾತಾಡಿ ನೋಡುವ ನಿರ್ಧಾರವಮಾಡಿರುವರು. ಆ ಸಂಬಂಧವಾಗಿ ಡಾಕ್ಟರ್ ಖಾನ್ ಸಾಹೇಬರನ್ನೂ ಸಿಂಧಿನ ಪ್ರಧಾನಮಂತ್ರಿಗಳನ್ನೂ ಅವರು ಡಿಲ್ಲಿಗೆ ಆಮಂತ್ರಿಸಿರುವರು.

ಮಿ. ಅಮೆರಿಯವರು

ಇದೇ ತಾ. 8ರಲ್ಲಿ ಫ್ಲೇಂಡರ್ಸಿನಿಂದ ಹಿಂದೆ ಲಂಡನಿಗೆ ಬಂದಿದ್ದ ಹಿಂದೀ ಸೇನೆಯನ್ನು ಸಂದರ್ಶಿಸಿ ಅವರೊಡನೆ ಮಾತಾಡಿ, ಅವರು ತೋರಿಸಿರುವ ಧೈರ್ಯ ಸ್ಥೈರ್ಯ ಮತ್ತು ಶಿಸ್ತಿಗಾಗಿ ಅವರನ್ನು ಅಭಿನಂದಿಸಿರುವರು

ಉತ್ತರದಲ್ಲಿ ನೌಕಾ ಯುದ್ಧ

ಇದೇ ತಾ 8ರಲ್ಲಿ ಇಂಗ್ಲೆಂಡಿನ ಉತ್ತರದಲ್ಲಿ ಬ್ರಿಟಿಷ್ ಮತ್ತು ಜರ್ಮನ್ ಯುದ್ಧ ಹಡಗಗಳೊಳಗೆ ಯುದ್ಧವಾಗಿರುವುದೆಂದು ತಿಳಿದುಬರುತ್ತದೆ. ಆದರೆ ಈ ಕುರಿತು ವಿವರವೇನೂ ತಿಳಿದಿರುವುದಿಲ್ಲ.

ಕೇಂದ್ರ ಎಸೆಂಬ್ಲಿ

ಇದರ ಅವಧಿಯು ಬರುವ ಅಕ್ಟೋಬರ ತಾ. 1ಕ್ಕೆ ಕೊನೆಗೊಳ್ಳುವುದು. ವೈಸರಾಯರು ಅದನ್ನು ಇನ್ನೊಂದು ವರುಷ ಮುಂದುವರಿಸಿರುವರು.

ಮಂಗಳೂರು ಮತ್ತು ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?
— ಹಾಗಾದರೆ —
ಸುಖನಿವಾಸಕ್ಕೆ ಬನ್ನಿ.
ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ.
ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವುದೆಲ್ಲಿ?
ಸುಖನಿವಾಸ ದಲ್ಲಿ ಮಾತ್ರ.
ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.
ಮಂಗಳೂರಿನಲ್ಲಿ ಜೆಪ್ಪುಗುಡ್ಡೆಯಲ್ಲಿಯೂ, ಉಡುಪಿಯಲ್ಲಿ ತಾಲೂಕು ಕಚೇರಿಯ ಬಳಿಯಲ್ಲಿಯೂ ಇರುವ 'ಸುಖನಿವಾಸ'ವನ್ನು ಒಮ್ಮೆ ಸಂದರ್ಶಿಸಿರಿ.
ಪ್ರೊಪ್ರೈಟರ್, ಸುಖನಿವಾಸ.

ದಕ್ಷಿಣ ಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು, ತಾ. 10-6-40

ಗಾಡಿ ಬಿದ್ದು ಜಖಂ— ಕಳೆದ ಶುಕ್ರವಾರ ಮಧ್ಯಾಹ್ನದ ಸಮಯ ಬಲ್ಮಟ ರಸ್ತೆಯಿಂದ ಸನ್ಯಾಸಿ ಗುಡ್ಡೆ ರಸ್ತೆಗೆ ಇಳಿಯುವಲ್ಲಿ ಒಂದು ಜಟ್ಕಾ ಬಂಡಿಯು ಮಗುಚಿಬಿದ್ದು ಗಾಡಿಯಾಳು ಬಂಡಿಯ ಅಡಿಗೆ ಬಿದ್ದು ಬಹಳ ಜಖಂ ಹೊಂದಿದ್ದಾನೆ. ಅವನನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಕುದುರೆಗೇನೂ ವಿಶೇಷ ಪೆಟ್ಟಾಗಲಿಲ್ಲ.

ಮಳೆ—ನಿನ್ನೆ ಸ್ವಲ್ಪ ಮಳೆಯಿತ್ತು. ಈ ದಿನ ಹಗಲು ಬಿಸಿಲು ಚೆನ್ನಾಗಿ ಕಾಯುತ್ತಿದೆ. ಇನ್ನೂ ಮಳೆಗಾಲದ ಪ್ರಾರಂಭವಾದಂತೆ ತೋರುವುದಿಲ್ಲ.

ವಿದ್ಯಾಸಂಸ್ಥೆಗಳು—ಮಂಗಳೂರಿನ ವಿದ್ಯಾಸಂಸ್ಥೆಗಳೆಲ್ಲವೂ ಕಳೆದ ವಾರ ತೆರೆಯಲ್ಪಟ್ಟುವು. ಸ್ಥಳೀಯ ಮುನ್ಸಿಫ್ ಕೋರ್ಟು ತಾ. 3ನೇ ಜೂನಿನಲ್ಲಿ ತೆರೆಯಲ್ಪಟ್ಟಿದೆ.

ಜಿಲ್ಲಾ ಕೋರ್ಟು— ಮಂಗಳೂರು ಜಿಲ್ಲಾ ಕೋರ್ಟು ಮತ್ತು ಸಬೋರ್ಡಿನೇಟ್ ಜಡ್ಜರ ಕೋರ್ಟು ಇದೇ ತಿಂಗಳ ತಾ. 24ರಲ್ಲಿ ತೆರೆಯಲ್ಪಡುವವು.

ಉಚ್ಚಿಲ ಬೋವಿ ಶಾಲೆ— ಉಚ್ಚಿಲ ಬೋವಿ ಎಲಿಮೆಂಟರಿ ಶಾಲೆಯ ನೂತನ ಕಟ್ಟೋಣದ ಪ್ರವೇಶೋತ್ಸವವೂ ಮತ್ತು ಶಾಲಾ ವರ್ಧಂತಿ ಉತ್ಸವವೂ ಜಿಲ್ಲಾ ಬೋರ್ಡು ಅಧ್ಯಕ್ಷರಾದ ಮಾನ್ಯ ಡಾ. ವಿಟ್ಠಲ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು.

ಉಡುಪಿ

ಬೋರ್ಡು ಹೈಸ್ಕೂಲ್ ಹಳೆ ವಿದ್ಯಾರ್ಥಿ ಸಂಘದ—ಮಹಾಸಭೆಯೊಂದು ತಾ. 7ರಲ್ಲಿ ಡಾ. ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಕಾನ್ಸ್ಟಿಟ್ಯೂಶನಿನ ಕುರಿತು ಚರ್ಚೆಯಾಗಿ ಕೊನೆಗೆ ಅದನ್ನು ಡ್ರಾಫ್ಟ್ ಮಾಡಲು ಶ್ರೀ. ಕೆ. ಜಿ. ಬಲ್ಲಾಳರಿಗೆ ಒಪ್ಪಿಸಲಾಯಿತು.

ಮಳೆಯು— ಬರಲಾರಂಭಿಸಿದೆ, ಮಧ್ಯೆ ಮಧ್ಯೆ ಬಿಸಿಲೂ ಕಾಯುತ್ತಿದೆ.

ಶ್ರೀ ರಾಮಕೃಷ್ಣ ಥಿಯೇಟರ್—ನಲ್ಲಿ ನ್ಯೂ ಥಿಯೇಟರ್ಸಿನವರ "ಮಂಜಿಲ" ಚಿತ್ರವು ಪ್ರದರ್ಶಿಸಲ್ಪಡುತ್ತಿದೆ. ತಾ. [26ರಿಂದ ಎಲ್ಲೆಲ್ಲೂ ಪ್ರಶಂಸೆ ಪಡೆದಿರುವ 1939ರ ಅಗ್ರಸ್ಥಾನದ ಪದಕ ಹೊಂದಿದ 'ಆದ್ಮಿ' ಎಂಬ ಸುಪ್ರಸಿದ್ಧ ಚಿತ್ರವು ಪ್ರಾರಂಭವಾಗಲಿದೆ.

ತೆರೆಯಲ್ಪಟ್ಟುವು—ಸೆಖೆಕಾಲದ ರಜೆಗಾಗಿ ಮುಚ್ಚಲ್ಪಟ್ಟ ಶಾಲೆಗಳೆಲ್ಲಾ ತಿರುಗಿ ತೆರೆಯಲ್ಪಟ್ಟು ಕೆಲಸಕ್ಕಾರಂಭಿಸಿರುವವು.

ಮೊಡರ್ನ್ ಹಾಯರ್ ಎಲಿಮೆಂಟರಿ ಶಾಲೆ—ಯನ್ನು ಮಿಡ್ಲ್ ಸ್ಕೂಲಾಗಿ ಮಾರ್ಪಡಿಸಲು ಪ್ರಯತ್ನಗಳಾಗುತ್ತಿವೆಯೆಂದು ತಿಳಿದುಬರುತ್ತದೆ.

ನರ್ಸಸ್ ಟ್ರೈನಿಂಗ್ ಕ್ಲಾಸು— ಡಾ. ಟಿ. ಮಾಧವ ಪೈಗಳು ಜುಲಾಯಿ 1ರಿಂದ ನರ್ಸಸ್ ಟ್ರೈನಿಂಗ್ ಕ್ಲಾಸೊಂದನ್ನು ಪ್ರಾರಂಭಿಸಲಿರುವರೆಂದು ತಿಳಿದುಬರುತ್ತದೆ. (ಮುಂದರಕ್ಕಾಗಿ ಬರುವ ಸಂಚಿಕೆಯನ್ನು ನಿರೀಕ್ಷಿಸಿರಿ.)

ಜಿಲ್ಲಾ ಕಲೆಕ್ಟರರ ಸರ್ಕ್ಯುಲರು— ಇಂಡಿಯನ್ ಆರ್ಮ್ಸ್ ರೂಲ್ಸುಗಳಿಗನುಗುಣವಾಗಿ ಲ್ಯಾಸೆನ್ಸುಗಳಿಗಾಗಲೀ, ಅವುಗಳ ದ್ವಿಪ್ರತಿಗಳಿಗಾಗಲೀ ಅವುಗಳ ಪುನರಾರಂಭದ ಬಗ್ಗೆಯಾಗಲೀ ಕೊಡತಕ್ಕ ಹಣವನ್ನು ಅರ್ಜಿದಾರರು ಸಮೀಪದ ಖಜಾನೆಗೆ ಪಾವತಿಮಾಡತಕ್ಕದ್ದೆಂದೂ ಹಾಗೆ ಪಾವತಿಮಾಡಿದ ಚಲನ್ ರಶೀದಿಯನ್ನು ಅರ್ಜಿಯೊಂದಿಗೆ ಲಗ್ತೀಕರಿಸಿ ಜಿಲ್ಲಾ ಕಲೆಕ್ಟರರಿಗೆ ಕಳುಹಿಸತಕ್ಕದ್ದೆಂಬ ವಿಷಯವನ್ನು ಮಹಾಜನರ ಅವಗಾಹನೆಗೆ ತರಲಾಗಿಯದೆ.

ಕಾರ್ಕಳ—ಕಳೆದ ವಾರದಲ್ಲಿ ಪ್ರಕಟವಾದ ಹರಿಜನದೋಗು, ಶ್ರೀ. ಹೊಸಹಿತ್ಲು ಅನಂತ ಭಟ್ಟ ಮತ್ತು ಇವರ ಮಗ ಶ್ರೀ. ಸೋಮನಾಥ ಭಟ್ಟ ಈ ಮೂವರ ವಿವಾದ ರಾಜಿಸಂಬಂಧವಾದ ವಾರ್ತೆಯು ಶರ್ತಗಳು ಸಂಪೂರ್ಣ ಸುಳ್ಳೆಂದೂ ಶ್ರೀ. ಅನಂತ ಭಟ್ಟರಾಗಲೀ ಅವರ ಮಗನಾಗಲೀ ಹರಿಜನ ಸಂಘಕ್ಕೆ ಹಣಕೊಡಲಿಲ್ಲವೆಂದೂ ಹರಿಜನ ಸಂಘವು ಅವರಿಂದ ಏನನ್ನೂ ಪಡೆಯಲಿಲ್ಲವೆಂದೂ ತಾರೀಖು 17-5-'40ರಲ್ಲಿ ಗೃಹಸ್ಥರ ಮುಂದೆ ಈ ಮೂವರೊಳಗೂ ಇನ್ನು ಯಾವ ವಿವಾದಗಳೂ ಇಲ್ಲವೆಂದು ಮಾತ್ರ ರಾಜಿ ಆಗಿ ಮೂವರೂ ಒಪ್ಪಿ ರಾಜಿ ಮೆಮೊವಿಗೆ ಹೆಬ್ಬೆಟ್ಟು ಗುರ್ತು ಮತ್ತು ಸಹಿ ಮಾಡಿರುವರೆಂದೂ ಅಧಿಕೃತ ಜನರಿಂದ ಇದೀಗ ತಿಳಿದುಬರುತ್ತದೆ. ಕಳೆದ ಬಾರಿ ಬಾತ್ಮೀದಾರರೊಬ್ಬರು ಕೊಟ್ಟ ಸುಳ್ಳು ಬಾತ್ಮಿಯನ್ನು ಪ್ರಕಟಿಸಿದುದಕ್ಕಾಗಿ ವಿಷಾದಿಸುತ್ತೇವೆ.

ಸಂ. ನ.

ಪ್ರಕಟಣೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 58/1936 R E P. 1510 [illegible]

ಕುಂಜಿಬೆಟ್ಟು ದಾಸಾಚಾರ್ಯ – ಅರ್ಜಿದಾರ ಮತ್ತು H. ಸೀತಾರಾಮ ಕೂಡಾ – ಎದ್ರಿರು ಇವರೊಳಗೆ

1ನೇ ಎದ್ರಿ H. ಸೀತಾರಾಮ, ಹಿರಿಯಡ್ಕ ತಮ್ಮಣ್ಣಯ್ಯನ ಮೊಮ್ಮಗ, ಹಾಲಿ ಬೊಂಬಾಯಿ ಇವರಿಗೆ ತಿಳಿಸುವದೇನೆಂದರೆ—

ಮೇಲ್ಕಂಡ ಡಿಕ್ರಿ ವಸೂಲಿ ಹಕ್ಕು–ವಾದಿ The Canara Banking Corporation Ltd, Udipi. ಈ ಬ್ಯಾಂಕಿನಿಂದ ನ್ಯಾಯಮಾದ ಪ್ರತಿಫಲಕ್ಕೆ ತಾ. 25-9-1937ರಲ್ಲಿ ತನಗೆ ಟ್ರಾನ್ಸ್ಫರ್ ಆದ ಪ್ರಕಾರ ಸದ್ರಿ ಟ್ರಾನ್ಸ್ಫರ್ ಮಂಜೂರುಮಾಡಬೇಕಾಗಿ ವಗೈರೆ ಅರ್ಜಿದಾರನು ದಾಖಲ್ಲುಮಾಡಿದ ಸದ್ರಿ ಅರ್ಜಿಯು ತಾ. 25-6-40 ಕ್ಕೆ ತನ್ನ ಬಗ್ಗೆ ಇಟ್ಟಿದೆ. ಆಕ್ಷೇಪಣೆಯಿದ್ದ್ರೆ ಆ ದಿವ್ಸ ಮೇಲ್ಕಂಡ ಕೋರ್ಟು ಮುಂದೆ ಸದ್ರಿ 1ನೇ ಎದ್ರಿಯು ಸ್ವತಹಾ ಯಾ ಪ್ಲೀಡರ್ ಮುಖಾಂತರ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು ತಪ್ಪಿದ್ರೆ ಆತನ ಗೈರ್ ಹಾಜ್ರಿಯಿಂದ ಸದ್ರಿ ಅಮಲ್ದಾರಿ ಮುಂದರಿಸಲಾದೀತು ಎಂಬ ಸಂಗ್ತಿ ಸದ್ರಿ 1ನೇ ಎದ್ರಿಗೆ ತಿಳಿಸಿಯದೆ.

Narasihma Vittal Kamath,

Advocate for Petitioner.

UDIPI 7-6-'40.

ಕನ್ನಡ ನುಡಿವೆಣ್ಣಿಗೊಂದು ಕನ್ನಡಗಿತ್ತಿಯ ಕಿರುಗಾಣಿಕೆ

ನಾಡ ಸೋದರಿಯರ ನೈಜ ಜೀವನದ ದುರಂತ ಚಿತ್ರವನ್ನೂ, ಸ್ತ್ರೀ-ಪುರುಷ ಹೃದಯಗಳ ಆಳವನ್ನೂ ಹೃದಯಂಗಮವಾಗಿ ಚಿತ್ರಿಸುವ ರಮ್ಯ ಕಥಾನಕ

ವತ್ಸಲಾ

ಸಾಮಾಜಿಕ ಕಾದಂಬರಿ

ಬೆಲೆ: ೦-೭-೩.

0—8—0 ಸ್ಟಾಂಪು ಕಳುಹಿಸಿದರೆ 1 ಪ್ರತಿಯನ್ನು ಕಳಿಸಬಹುದು.

ಬರಹಗಾರ್ತಿಯರು:–

ಶ್ರೀಮತಿ ಮಟ್ಪಾಡಿ ಕಮಲಾಕ್ಷಿ

ಈ ಪುಸ್ತಕದ ಕುರಿತು ಪ್ರಾಕ್ತನ ವಿಮರ್ಶ ವಿಚಕ್ಷಣ ಕರ್ಣಾಟಕ ವಿದ್ಯಾವೈಭವ, ರಾವ್ ಬಹದೂರ್ ಆರ್. ನರಸಿಂಹಾಚಾರ್ಯ M.A., M.R.A.S. ಇವರು ಬೆಂಗಳೂರಿನಿಂದ ಹೀಗೆ ಅಭಿಪ್ರಾಯಪಡುತ್ತಾರೆ 'ಗ್ರಂಥದ ಶೈಲಿ ಗಂಭೀರವಾಗಿಯೂ ಹೃದಯರಂಜಕವಾಗಿಯೂ ಇದೆ. ಪ್ರತಿಪಾದಿತವಾದ ವಿಷಯವು ನೀತಿಬೋಧಕವಾಗಿಯೂ ಧರ್ಮಾನಿವಾರಕವಾಗಿಯೂ ಇದೆ. ಸ್ತ್ರೀಯರಿಗೆ ಬೋಧಪ್ರದವಾದ ಗ್ರಂಥ........'

ಪ್ರತಿಗಳು ಸಿಗುವ ಸ್ಥಳ:

ನವಭಾರತ ಪುಸ್ತಕ ಭಂಡಾರ,

ಉಡುಪಿ.

ಆತ್ಮವಿಶ್ವಾಸವೇ ಸಫಲತೆಯ ಬೀಗದ ಕೈ

ಅನೇಕ ವೇಳೆ ಜನರು ಪ್ರಯತ್ನಪಟ್ಟರೂ ತಮ್ಮ ಕೆಲಸಗಳಲ್ಲಿ ಜಯಶಾಲಿಗಳಾಗುವುದಿಲ್ಲವೆಂಬುದನ್ನು ನಾವು ನೋಡುತ್ತಿದ್ದೇವೆ. ಆದರೆ ದೀರ್ಘವಾಗಿ ವಿಚಾರಿಸಿದರೆ ಅವರ ಆ ಅಸಫಲತೆಗೆ ಕೆಳಗಿನ ಮೂರು ಕಾರಣಗಳಿರುವುವು—

1. ತಮ್ಮಲ್ಲಿ ತಮಗೆ ಭರವಸೆ ಇಲ್ಲದಿರುವುದು.

2. ಕೆಲಸ ಮಾಡುವುದಕ್ಕೆ ಮೊದಲೇ ಹಿಂದೆ ಮುಂದೆ ನೋಡುವುದು.

3. ಕೆಲಸವನ್ನು ಪ್ರಾರಂಭಿಸುವುದಕ್ಕೆ ಮೊದಲೇ, ಪರಿಣಾಮವನ್ನು ಕುರಿತು ಚಿಂತಿಸುವುದು.

ಒಂದು ಗಿಡವು ಚೆನ್ನಾಗಿ ಬೆಳೆದು, ಪುಷ್ಟಿಗೊಂಡು ಫಲ ಬಿಡಲು ಒಳ್ಳೆಯ ಭೂಮಿ, ಉತ್ತಮವಾದ ಗೊಬ್ಬರ, ನೀರು ಗಾಳಿಗಳ ಆವಶ್ಯಕತೆಯಿರುವುದಷ್ಟೆ! ಅಂತೆಯೇ, ಮನುಷ್ಯನು ಸಫಲತೆಯ ಬಳ್ಳಿಯನ್ನು ಆತ್ಮವಿಶ್ವಾಸವೆಂಬ ಫಲವತ್ತಾದ ಭೂಮಿಯಲ್ಲಿ ಬೆಳೆಸಿ, ಧೈರ್ಯಗುಂದದೆ, ಫಲವನ್ನು ಗಮನಿಸದೆ ಇರುವಿಕೆ, ಮುಂತಾದ ಗೊಬ್ಬರ ನೀರನ್ನು ಹಾಕಿದರೆ, ಅದು ಹುಲುಸಾಗಿ ಬೆಳೆದು ಹೂಬಿಟ್ಟು, ರುಚಿಯಾದ, ಸುಖದಾಯಕವಾದ ಫಲವನ್ನು ತಿನ್ನಲವಕಾಶವಾಗುವುದು.

ತನ್ನಲ್ಲಿ ತಾನು ವಿಶ್ವಾಸವಿಟ್ಟುಕೊಳ್ಳಬೇಕಾದರೆ, ಪ್ರತಿಯೊಂದು ಕೆಲಸವನ್ನು ಮಾಡುವ ಮೊದಲು ಈ ರೀತಿ ಯೋಚಿಸಿಕೊಳ್ಳಬೇಕು— 'I Promised My God, I could do it' ಅಂದರೆ 'ನಾನು ಈ ಕೆಲಸ ಮಾಡಬಲ್ಲೆನೆಂದು ಪರಮಾತ್ಮನಿಗೆ ಮಾತುಕೊಟ್ಟಿದ್ದೇನು.' ಇದರಿಂದ ಮನುಷ್ಯನಿಗೆ ಆತ್ಮವಿಶ್ವಾಸವುಂಟಾಗುವುದು. ತನ್ನ ಪ್ರತಿಜ್ಞೆಯಂತೆ ನಡೆಯಲು ಯಾವತೊಂದರೆಯೂ ಉಂಟಾಗುವುದಿಲ್ಲ. ಕೆಲಸವು ಬಹಳ ಸುಲಭವಾಗಿ ತೋರುವುದು. 'He can who thinks' 'ಇಂತಹ ಕೆಲಸವನ್ನು ಮಾಡುವೆನೆಂದು ಯೋಚಿಸುವವನು ಅದನ್ನು ಮಾಡೇ ಮಾಡುವನು.' ಇಷ್ಟೇ ಅಲ್ಲ, ತನ್ನಲ್ಲಿ ತಾನು ವಿಶ್ವಾಸವಿಟ್ಟಿರುವವನಿಗೆ ಪರಮಾತ್ಮನೂ ಸಹಾಯ ಮಾಡುವನು.

'God helps those who help themselves' ತನ್ನಲ್ಲಿ ತಾನು ವಿಶ್ವಾಸವಿಟ್ಟುಕೊಳ್ಳದವನು ಪಾಪಿಯಾಗುವನು. ಅವನು ಈ ಜಗತ್ತಿನ ಕಾರ್ಯಗಳನ್ನು ಮಾಡಲು ಮುಂದೆಬರಲಾರನು. ಯಾವಾಗಲೂ ಅಸಫಲನೇ ಆಗುತ್ತಿರುವನು. ಕೊನೆಗೆ ಧೈರ್ಯಗುಂದಿ ಕುಳಿತುಬಿಡುವನು. ಯಾವ ಕೆಲಸದಲ್ಲೇ ಆಗಲಿ, ಸಫಲತೆಯು ಆತ್ಮವಿಶ್ವಾಸದಿಂದಲೇ ಉಂಟಾಗುವುದೆಂಬುದನ್ನು ಎಲ್ಲರೂ ಗಮನಿಸಬೇಕು.

ತನ್ನಲ್ಲಿ ತಾನು ಭರವಸೆ ಇಟ್ಟುಕೊಳ್ಳದೇ, ಯಾರಾದರೂ ಇದು ವರೆಗೆ ವಿಜಯಿಯಾಗಿರುವರೇ? ಇದು ವರೆಗೆ ಆಗಿಹೋಗಿರುವ ಮಹಾಪುರುಷರೆಲ್ಲರೂ ಆತ್ಮವಿಶ್ವಾಸದಿಂದ ತುಂಬಿದ್ದವರೇ ಆಗಿದ್ದರು. ನೆಪೋಲಿಯನ್ನನು ವಿಶ್ವದಲ್ಲೇ ಹೆಸರಾದುದು ಈ ಆತ್ಮವಿಶ್ವಾಸದಿಂದ. "ಅಸಾಧ್ಯ"ವೆಂಬುದೇನೆಂಬುದನ್ನೇ ಅರಿಯನವನು. ಇಂಗ್ಲೆಂಡಿನ ಮಹಾಪ್ರಧಾನನಾಗಿದ್ದ ಪೀಟ್ ಎಂಬವನು ಕೇವಲ ೨೪ನೇ ವಯಸ್ಸಿನಲ್ಲೇ ಅಷ್ಟು ವಿಶಾಲ ಸಾಮ್ರಾಜ್ಯದ ಮುಖ್ಯಮಂತ್ರಿಯಾದುದು ಅವನ ಆತ್ಮವಿಶ್ವಾಸದಿಂದಲೇ. "None can save England but I" "ನನ್ನ ವಿನಹ ಇಂಗ್ಲೆಂಡನ್ನು ಯಾರೂ ಉಳಿಸಲಾರರು" ಎಂದು ಹೇಳಿದ್ದನು. ಶಿವಾಜಿ, ರೂಜ್‌ವೆಲ್ಟ್ ಮುಂತಾದ ಎಲ್ಲ ಮಹಾ ಪುರುಷರೂ ಈ ಆತ್ಮವಿಶ್ವಾಸಬಲದಿಂದಲೇ ವಿಜಯಿಗಳಾದುದು. ಆತ್ಮವಿಶ್ವಾಸದ ಆಧಾರದ ಮೇಲೆಯೇ ಅವರು ವಿಶ್ವವಿಖ್ಯಾತರಾದುದು. ಇಂದೀಗ ಹಿಟ್ಲರನ ಆತ್ಮ ವಿಶ್ವಾಸವಾದರೂ ಎಷ್ಟೊಂದು ಅದ್ಭುತವಾದುದು.

(S. L. S.) (ಸಂಗ್ರಹ)

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪುವ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಕ್ರಮವಾದ ಜಮಾ ಖರ್ಚಿನ ಲೆಖ್ಖವಿದ್ದರೂ ಸಾಲದು. ಆದರಿಂದ ತಯಾರಿಸಿದ ಸಾರಾಂಶದ ನಿಖರತೆಯು ಕೆಲವೇ ನಿಮಿಷಗಳಲ್ಲಿ ತನ್ನಿಯ ಆಫೀಸರರಿಗೆ ಒಪ್ಪಿಗೆಯಾಗಬೇಕು. ಅಂಥಾ ಸ್ಟೇಟುಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯಿತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗುವುದು ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನ್" ಕಳ್ಸಿಯಾಗಿ ಹೋಗಿದ್ದರೂ ತಡವಾಗಲಿಲ್ಲ ಲೆಖ್ಖ ಹಾಜರು ಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸ ಕಾಣಿಸಿದವರೊಡನೆ ಪತ್ರವ್ಯವಹಾರ ನಡಿಸಿರಿ.

ಎಸ್. ಎಸ್. ಪುರಾಣಿಕ,

ಇನ್ಕಮ್ ಟೇಕ್ಸ್ ಪ್ರಾಕ್ಟೀಶನರ್,

ಕೃಷ್ಣಾ ರೆಸ್ಟೋರೆಂಟ್ ಬಿಲ್ಡಿಂಗ್,

ಹಂಪನಕಟ್ಟೆ, ಮಂಗಳೂರು.

Your anxiety—

in finding a sound and progressive Life Office both to insure or to represent will end on consultation with:–

Branch Secretary–

The New Guardian of India Life Insurance Co. Ltd., Madras.

Mangalore Branch.

★ ಇತಿಹಾಸದಲ್ಲೇ ಅತ್ಯಂತ ಘೋರವಾದ ಕಾಳಗ.

ಮೂರು ಕಡೆಗಳಿಂದ ಪೆರಿಸಿನ ಕಡೆಗೆ ಪ್ರಚಂಡ ಧಾಳಿ

೬ ದಿವಸಗಳ ಭೀಷಣ ಕದನದ ಪರಿಣಾಮ.

ಜರ್ಮನರ ಹೊಸಧಾಳಿ

ಇದೇ ಕಳೆದ ತಾ.5ನೇ ಬೆಳಿಗ್ಗೆ ಜರ್ಮನರಸೇನೆ ಮತ್ತು ವಿಮಾನಪಡೆಯು ಫ್ರಾನ್ಸಿನಲ್ಲಿ ಹೊಸ ಧಾಳಿಯನ್ನಾರಂಭಿಸಿರುವವೆಂದು ಹಿಟ್ಲರರು ನಿರೂಪಣೆ ಹೊರಡಿಸಿರುವರು ಮುಂಬೆಳಕು ಹರಿಯುವಷ್ಟರಲ್ಲಿಯೆ ಜರ್ಮನರು 120 ಮೈಲುಗಳಿಗಿಂತಲೂ ವಿಶಾಲವಾದ ರಣರಂಗದಲ್ಲಿ ತೀವ್ರ ಹೋರಾಟವನ್ನಾರಂಭಿಸಿದರು. ಬೆಳಿಗ್ಗೆ 4 ಘಂಟೆಗೆ ಜರ್ಮನ್ ಫಿರಂಗಿಗಳು ಬೆಂಕಿ ಕಾರತೊಡಗಿದುವು. ಕೆಳಗಿಳಿದು ಧಾಳಿನಡಿಸುವ ವಿಮಾನಗಳು ಫ್ರೆಂಚ್ ಸೇನೆಯ ಮೇಲೆ ಬೋಂಬುಗಳ ಮಳೆಗರೆದುವು ಸೋಮ್ಮೆ ನದಿಯ ಮಧ್ಯಭಾಗದಲ್ಲಿ ಆಮಿಯೆನ್ಸ್ ಪಟ್ಟಣ ಪ್ರದೇಶದಲ್ಲಿಯೂ, ಪೆರೋನ್ಸ್ ಪಟ್ಟಣ ಮತ್ತು ಐಲೆಟ್ ಕಾಲುವೆಯ ಬಳಿ ಜರ್ಮನರ ಧಾಳಿಯು ಅತ್ಯಂತ ಪ್ರಬಲವಾಗಿದೆ. ಸೋಮೆ ನದಿಯ ದಕ್ಷಿಣ ತಟದಲ್ಲಿ ಜರ್ಮನರು ಮೊದಲೇ 3 ಕಡೆಗಳಲ್ಲಿ ಮುಂದೊತ್ತಿರುವುದರಿಂದ ಈ ಪ್ರದೇಶದಲ್ಲಿ ಅವರು ಅತಿದೊಡ್ಡ ಸೇನೆಯನ್ನುಪಯೋಗಿಸಿರುತ್ತಾರೆ.

ಫ್ರೆಂಚರು 3 ಕಡೆಗಳಲ್ಲಿಯೂ ಜರ್ಮನರ ಧಾಳಿಯನ್ನು ತಡೆಗಟ್ಟಿರುವರು. ಈ ಭಾಗದಲ್ಲಿದ್ದ ಜನರು ಮೊದಲೇ ತಮ್ಮ ಮನೆಮಾರು ಬಿಟ್ಟುಹೋಗಿರುವರು. ಮತ್ತು ಭೂಭಾಗವು, ನದಿ, ಕಾಡು, ಏರು ತಗ್ಗುಗಳಿಂದ ತುಂಬಿರುವುದು. ಫ್ರೆಂಚ್ ಸೈನಿಕರು ಟಾಂಕಿಭೇದಕ ತೋಪುಗಳನ್ನು ಅಲ್ಲಲ್ಲಿರಿಸಿರುವರು. ಆದುದರಿಂದ ಜರ್ಮನರ ಧಾಳಿಯನ್ನು ತಡೆಗಟ್ಟಲು ಸಾಧ್ಯವಾಗಿದೆ. ಮೊದಲಿನ ದಿನದ ಯುದ್ಧದ ಪರಿಣಾಮವು ಜರ್ಮನರಿಗೆ ಪ್ರತಿಕೂಲವೆಂದೇ ಹೇಳಬಹುದು. ಇಷ್ಟರವರೆಗೆ ಇಷ್ಟೊಂದು ದೊಡ್ಡ ಸಮರನಡೆದಿರುವುದಿಲ್ಲ. ಫ್ರೆಂಚ್ ಸೈನಿಕರು ಅಸಾಧಾರಣ ಧೈರ್ಯ ಮತ್ತು ಸ್ಥೈರ್ಯದಿಂದ ಕಾದಾಡಿ ನಿಂತಲ್ಲಿಂದ ಕದಲದೆ ಜರ್ಮನರನ್ನು ತಡೆಗಟ್ಟಿರುವರು.

ಜರ್ಮನರ ಧಾಳಿಯ ಉದ್ದೇಶ

ಮೆಗಿನೋ ಕೋಟೆಗಳ ಸಾಲಿನ ಪಶ್ಚಿಮ ಪ್ರದೇಶವನ್ನು ಜರ್ಮನರ ಧಾಳಿಯಿಂದ ರಕ್ಷಿಸಲು ಫ್ರೆಂಚರು ವೈಗಾಂಡ್ ಲೈನ್ ಎಂಬ ರಕ್ಷಣಾವ್ಯವಸ್ಥೆ ಮಾಡಿರುವರು. ಸಮುದ್ರ ಕರಾವಳಿಯಿಂದ ಮೆಗಿನೋ ಕೋಟೆಯ ವರೆಗಣ ಪ್ರದೇಶವು 200 ಮೈಲು ವಿಸ್ತೀರ್ಣವಿದೆ. ಪೆರಿಸಿಗೆ ಅತಿ ಸಮೀಪದ ಹಾದಿಯಾಗುವ ಪ್ರದೇಶದ ಮೇಲೆ ಜರ್ಮನರು ತೀವ್ರ ಧಾಳಿ ನಡಿಸಿರುವರು. ಸೋಮೆ ನದಿಯಿಂದ 12 ಮೈಲುಗಳ ಅಂತರದಲ್ಲಿ ಬ್ರೈಸ್ ಎಂಬ ನದಿಯಿದೆ. ಈ ಪ್ರದೇಶದಲ್ಲೀಗ ಘೋರಯುದ್ಧ ನಡೆಯುತ್ತಿದೆ. ಇದು ಗಟ್ಟಿ ನೆಲವಾಗಿರುವುದರಿಂದ ಟಾಂಕಿಗಳ ಧಾಳಿಗೆ ಅನುಕೂಲವಾಗಿದೆ. ಟಾಂಕಿಗಳ ಮತ್ತು ಕೆಳಗಿಳಿದು ಬರುವ ವಿಮಾನಗಳ ಧಾಳಿಯನ್ನು ತಡೆಗಟುವ ಉದ್ದೇಶದಿಂದ ವೈಗಾಂಡ್ ಲೈನನ್ನು ಏರ್ಪಡಿಸಲಾಗಿದೆ. ಸಡನ್ ಭಾಗದಲ್ಲಿ ಜರ್ಮನರು ಫ್ರೆಂಚ್ ಸೇನೆಯನ್ನು ಭೇದಿಸಿದ ಮೇಲೆ ಪ್ರಧಾನ ಮಂತ್ರಿ ರೈನಾಡರು ಹೊಸ ಜನರು ಹೊಸ ಯುದ್ಧ ವಿಧಾನಗಳನ್ನುಪಯೋಗಿಸಿ 3 ವಾರಗಳಲ್ಲಿ ವೈಗಾಂಡ್ ಲೈನನ್ನು ಕಟ್ಟಿಸಿರುವರು.

ಜರ್ಮನರು 3 ಕಡೆಗಳಿಂದ ಪೆರಿಸಿನ ಕಡೆಗೆ ಧಾಳಿಯಿಟ್ಟಿರುವರು (1) ಪೆರಿಸಿನ ಪಶ್ಚಿಮದಿಂದ ಆಮಿಯೆನ್ಸ್ ಮತ್ತು ಸೋಮೆನದಿಯ ಕೆಳಭಾಗದ ಪ್ರದೇಶದಿಂದ (2) ಮಧ್ಯಭಾಗದಿಂದ ಕೊಂಪ್ಯೆನ್ ಪಟ್ಟಣ ಮತ್ತು ಬ್ರೈಸ್ ನದಿಯ ಮಾರ್ಗವಾಗಿ (3) ಪೂರ್ವದಲ್ಲಿ ಐನೆ ನದಿಯನ್ನು ದಾಟಿ ಮಾರ್ನೆ ತಪ್ಪಲು ಪ್ರದೇಶದ ಮೂಲಕ ಪೆರಿಸನ್ನು ಹಿಡಿಯುವುದು. ಆದರೆ ಪೂರ್ವದ ಲೆವ್ರೋನ್ ಮತ್ತು ರಾತೆಲ್ ಪಟ್ಟಣಗಳ ಪ್ರದೇಶದಲ್ಲಿ ಜರ್ಮನರು ಅತಿ ಹೆಚ್ಚಿನ ಸೇನೆಯನ್ನು ಸಂಗ್ರಹಿಸುತ್ತಿರುವರು. ಇದು ಪೆರಿಸಿಗೆ ಅತಿ ಸಮೀಪದ ಸ್ಥಳವಾಗಿರುತ್ತದೆ.

ಇದೇ ತಾ. 7ರಲ್ಲಿ ಐಲೆಟ್ ಕಾಲುವೆಯ ಪ್ರದೇಶದಲ್ಲಿ ಜರ್ಮನರು ಮುಂದೊತ್ತಿ ವಶಪಡಿಸಿಕೊಂಡ ಸ್ಥಳವನ್ನು ತಿರುಗಿ ಗೆಲ್ಲಲು ಫ್ರೆಂಚರು ಪ್ರಯತ್ನಿಸಿ ಜರ್ಮನರ ಮೇಲೆ ಬಿದ್ದು ಹೋರಾಡಿದರು ಈ ಯುದ್ಧದಲ್ಲಿ ಫ್ರೆಂಚರು ಸಾಧ್ಯವಾದ ಮುಂಜಾಗ್ರತೆಯನ್ನೆಲ್ಲಾ ತೆಗೆದುಕೊಂಡಿರುವರು. ವೈರಿಯು ಈ ಧಾಳಿಯಿಂದ ಹಲ್ಲು ಮುರಿದುಕೊಳ್ಳುವನೆಂದೇ ಫ್ರೆಂಚ್ ಸೇನಾನಿಗಳ ಅಭಿಮತ

ಜರ್ಮನರು 2000[illegible] ದ ಟ್ಯಾಂಕುಗಳನ್ನು ಇನ್ನೂರು ಮುನ್ನೂರು ತಂಡಗಳಾಗಿ ಮುನ್ನುಗ್ಗಿಸಿರುವರು. ಸೋಮ್ಮೆ ನದಿಯ ಕೆಳ ಪ್ರದೇಶದಲ್ಲಿ ಜರ್ಮನರು ಮುಂದೊತ್ತಿ ಫ್ರೆಂಚ್ ಸೇನೆಯನ್ನು ಸಾರಸಮಾಡಿ ಕೆಲವು ಪ್ರದೇಶಗಳನ್ನು ವಶಪಡಿಸಿಕೊಂಡಿರುವರು ಐಲೆಟ್ ಕಾಲುವೆಯ ಪ್ರದೇಶದಲ್ಲಿಯೂ ಜರ್ಮನರು ಮುಂದೊತ್ತಿರುವರು. ಸೋಮೆ ನದಿಯ ಕೆಳಭಾಗದಲ್ಲಿ ಆಬೆವಿಲ್ಲೆಯ ಬಳಿ ಉತ್ತಮ ಬ್ರಿಟಿಷ್ ಸೈನಿಕ ದಳಗಳು ಜರ್ಮನರೊಡನೆ ಹೋರಾಡುತ್ತಿವೆ. ಈ ಪ್ರದೇಶದಲ್ಲಿ ಜರ್ಮನರು ರಾತ್ರಿ ಮುಂದೊತ್ತಿ ಮಿತ್ರ ರಾಷ್ಟ್ರಗಳ ಸೈನಿಕರನ್ನು ಆವರಿಸಿರುವರು. ಜರ್ಮನರ ಪ್ರಚಂಡ ಧಾಳಿಯಿಂದಾಗಿ ಕೆಲವೆಡೆ ಮಿತ್ರ ರಾಷ್ಟ್ರಗಳ ಸೇನೆಯು ಹೆಚ್ಚು ಭದ್ರವಾದ ಸ್ಥಳಗಳಿಗೆ ಹಿಂದೆಸರಿಯಬೇಕಾಗಿದೆ. ತಾ. 7ರಲ್ಲಿ ಪ್ರಖರವಾದ ಬಿಸಿಲಲ್ಲಿ ಹೋರಾಟ ನಡೆಯಿತು. ಸೈನಿಕರು ಶರ್ಟುಗಳನ್ನು ಮಾತ್ರ ಹಾಕಿಕೊಂಡು ಹೋರಾಡಿದರು. ಫ್ರೆಂಚರು ದೊಡ್ಡ ತೋಪುಗಳ ಮೂಲಕ 30,000 ಗುಂಡುಗಳನ್ನೆಸದು ಜರ್ಮನ್ ಸೇನೆಯ ಮೇಲೆ ಹೆಚ್ಚಿನ ಹಾವಳಿಮಾಡಿರುವರು. ಸೋಮ್ಮೆ ನದಿ ಪ್ರದೇಶದ ಹೋರಾಟವು ಮಿತ್ರ ರಾಷ್ಟ್ರಗಳನ್ನು ವಂಚಿಸುವ ನಟನೆಯೋ ಎಂಬ ಸಂದೇಹಕ್ಕೆ ಕಾರಣವಾಗಿದೆ.

500 ಜರ್ಮನ್ ಟಾಂಕಿಗಳ ನಾಶ

ಮಿತ್ರರಾಷ್ಟ್ರಗಳೀಗ ಜರ್ಮನರ ಯುದ್ಧ ಕ್ರಮವನ್ನೇ ಅನುಸರಿಸುತ್ತಿದ್ದಾರೆ. ಅವರು ಜರ್ಮನ ಸೇನೆಯ ಮೇಲೆ ವಿಮಾನ ಧಾಳಿ ನಡಿಸಿ ಹಾವಳಿ ಮಾಡುತ್ತಿದ್ದಾರೆ. ಫಿರಂಗಿ ತುಪಾಕಿಗಳಿಂದ ಎಡೆಬಿಡದೆ ಬೆಂಕಿ ಕಾರಿಸಿ ಜರ್ಮನರು ಮುಂದೊತ್ತದಂತೆ ತಡೆಗಟ್ಟುತ್ತಿದ್ದಾರೆ. ಜರ್ಮನ್ ಟೇಂಕುಗಳ ಮೇಲ್ಭಾಗದಲ್ಲಿ ಒಂದು ತಗಡಿನ ಮುಚ್ಚಳ ಮಾತ್ರವಿರುವುದರಿಂದ ವಿಮಾನಗಳ ಮೂಲಕ ಗುಂಡೆಸೆದು ಅವನ್ನು ನಾಶಮಾಡುತ್ತಿದ್ದಾರೆ. ಹಲವು ಜರ್ಮನ್ ಟೇಂಕುಗಳು ಮುಂದೊತ್ತಿ ಹೋಗಿ ಫ್ರೆಂಚರ ಕೈಗೆ ಸಿಕ್ಕಿವೆ. ಹೀಗೆ ಜರ್ಮನರ 2000 ಟೇಂಕುಗಳ ಪೈಕಿ ಸುಮಾರು 500 ನಾಶವಾಗಿವೆಯೆಂದು ತಿಳಿದು ಬಂದಿದೆ ಜರ್ಮನ್ ಟೇಂಕುಗಳು ಏಳೆಂಟು ಮೈಲು ಮುಂದೊತ್ತಿ ಹೋದರೂ ಎಲ್ಲಿಯೂ ಅವನ್ನು ಬೆಂಬತ್ತಿ ಕಾಲಾಳು ಹೋಗಿರುವುದಿಲ್ಲ.

ಇತಿಹಾಸದಲ್ಲೇ ಅಪೂರ್ವ ಯುದ್ಧ

ಜರ್ಮನರು ಇದೇ ತಾ. 8ರಲ್ಲಿ ಪೂರ್ವದಲ್ಲಿ ಲಿನಾಲೆ ಮತ್ತು ನೋಯ ಪಟ್ಟಣಗಳ ನಡುವಿನ 60 ಮೈಲುದ್ದದ ರಣರಂಗದಲ್ಲಿ ಭಯಂಕರ ಹೋರಾಟ ನಡಿಸಿದರು. ಈ ಯುದ್ಧದಲ್ಲಿ ಅವರು ಸುಮಾರು 3 ಲಕ್ಷ ಸೇನೆಯನ್ನುಪಯೋಗಿಸಿರುವರು. ಐನೇ ನದಿರಣರಂಗದಲ್ಲಿಯೂ ಜರ್ಮನರು ದೊಡ್ಡ ಧಾಳಿನಡಿಸಿರುವರು. ಪಶ್ಚಿಮದಲ್ಲಿ ಸಮುದ್ರ ತೀರದಿಂದ ಪೂರ್ವದಲ್ಲಿ ಪೆನ್ ಡಿ ಡೇನಸ್ ಎಂಬ ಸ್ಥಳದ ವರೆಗಣ ರಣರಂಗದಲ್ಲಿ ಇದೇ ತಾ. 8ರಲ್ಲಿ ನಡೆದ ಯುದ್ಧವು ಇತಿಹಾಸದಲ್ಲೇ ಅತ್ಯಂತ ಪ್ರಚಂಡವಾದುದಾಗಿದೆ. ಇಷ್ಟೊಂದು ಪ್ರಬಲ ಮತ್ತು ಘೋರವಾಗಿ ಈ ವರೆಗೆ ಯಾವ ಯುದ್ಧವೂ ನಡೆದಿರುವುದಿಲ್ಲ. ಒಟ್ಟು 91 ಮೈಲುದ್ದದ ರಣರಂಗದಲ್ಲಿ ಜರ್ಮನರು 1,000 ಟೇಂಕು ಮತ್ತು ಸುಮಾರು ಅರ್ಧಮಿಲ್ಯ ಸೈನಿಕರನ್ನುಪಯೋಗಿಸಿರುವರು. ವಿಧ್ವಂಸಗೊಳಿಸುವ ಫ್ರೆಂಚ್ ಫಿರಂಗಿ ಮತ್ತು ಮಿಶನ್ ತೋಪುಗಳ ಗುಂಡುಗಳ ಸುರಿಮಳೆಯನ್ನು ಗಣ್ಯಮಾಡದೆ ಯುದ್ಧೋನ್ಮತ್ತರಾಗಿ ಜರ್ಮನ್ ಸೈನಿಕರು ಭುಜಕ್ಕೆ ಭುಜಕೊಟ್ಟು ನಡೆಯುತ್ತ ಸುಮಾರು 15 ಮೈಲು ಮುಂದೊತ್ತಿರುವರು. ಈ ಪ್ರದೇಶವನ್ನು ಫ್ರೆಂಚ್ ಸೈನಿಕರು ಮೊದಲೇ ಬಿಟ್ಟುಹೋಗಿದ್ದರು. ಬೆಸ್ಲೆ ಮತ್ತು ಬ್ರೈಸೆ ನದಿಗಳ ನಡುವೆ ಜರ್ಮನರನ್ನು ಮಿತ್ರರಾಷ್ಟ್ರಗಳ ಸೇನೆಯು ತಡೆಗಟ್ಟಿ ಭೀಷಣ ಕದನ ನಡೆದು ಜರ್ಮನರು ಅಪಾರ ಪ್ರಾಣಹಾನಿ ಹೊಂದಿರುವರು. ಬ್ರಿಟಿಷ್ ಮತ್ತು ಫ್ರೆಂಚ್ ವಿಮಾನಗಳು ಜರ್ಮನ್ ಸೇನೆಯ ಮೇಲೇರಿ ಹೋಗಿ ಬೋಂಬೆಸೆದು ಅತಿ ಹೆಚ್ಚಿನ ಹಾವಳಿಮಾಡಿರುವವು. ಜರ್ಮನರು ಮುಂದೊತ್ತಿರುವರಾದರೂ ಫ್ರೆಂಚ್ ಸೇನೆಯನ್ನು ಎಲ್ಲಿಯೂ ಭೇದಿಸಿರುವುದಿಲ್ಲ.

THULUNAD BANK
OF SUPPLY AGENCY LIMITED.

Authorised & Issued Capital	...	Rs 1,00,000
Subscribed & Paid up Capital	....	Rs 31,340
Reserves & other Funds	...	Rs. 22,052

ವಿಶೇಷ ರಿಯಾಯಿತಿ

Rs. 1000

ತಾ. 30-6-1940ರ ಒಳಗೆ ರೂ. 1000 ಯೂ ಅದಕ್ಕಿಂತ ಮೇಲ್ಪಟ್ಟು ನಿರಖು ಠೇವಣಾತಿಗಳನ್ನು ಇಡುವವರಿಗೆ ಕೆಲವು ವಿಶೇಷ ರಿಯಾಯತಿಗಳು ಕೊಡಲ್ಪಡುವವು.

ಹೆಚ್ಚಿನ ಮಾಹಿತಿಗೆ ಬರೆಯಿರಿ:—

ಮೆನೇಜಿಂಗ್ ಡೈರೆಕ್ಟರ್

ತುಳುನಾಡ್ ಬೇಂಕ್

ಆಫ್ ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ.

ನೋಟೀಸು.

ಪುತ್ತೂರು ಡಿ ಮು. ಕೋರ್ಟಿನಲ್ಲಿ

O P. 58/40

ಪರಸ್ಪತಿ ಅಮ್ಮ — ಅರ್ಜಿದಾರಳು.

(In the matter of the assets of the deceased Gowramma mother of Petitioner.)

ಮೇಲೆತ್ತಿರುವ ವ್ಯವಹಾರದಲ್ಲಿ ಅರ್ಜಿದಾರಳು ತನ್ನ ಮೃತ ತಾಯಿಗೆ ಬರಬೇಕಾದ ಹಣವನ್ನು ವಸೂಲು ಮಾಡುವ ಬಗ್ಗೆ ವಾರಿಸು ಸರ್ಟಿಫಿಕೇಟು ಕೊಡಬೇಕೆಂತ ಈ ಕೋರ್ಟಿಗೆ ಅರ್ಜಿಮಾಡಿಕೊಂಡಿದ್ದರಿಂದ ಆ ಬಗ್ಗೆ ಆಕ್ಷೇಪವಿದ್ದವರು ಮೇಲ್ತೋರುವ ಕೋರ್ಟಿಗೆ ತಾ. 26-6-40ನೇ ಹಗಲು ಘಂಟೆ 10ಕ್ಕೆ ಸ್ವತಹಾ ಯಾ ವಕೀಲರ ದ್ವಾರ ಹಾಜರಿರದಿದ್ದರೆ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸುವರು.

(By order of the Court)

ಪುತ್ತೂರು | 7-5-40 | B. Mangesha Rao, *Pleader for Petitioner*,

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು, ತಾ. 10-6-40

ಗಾಡಿ ಬಿದ್ದು ಜಖಂ— ಕಳೆದ ಶುಕ್ರವಾರ ಮಧ್ಯಾಹ್ನದ ಸಮಯ ಬಲ್ಮಟ ರಸ್ತೆಯಿಂದ ಸನ್ಯಾಸಿ ಗುಡ್ಡೆ ರಸ್ತೆಗೆ ಇಳಿಯುವಲ್ಲಿ ಒಂದು ಜಟ್ಕಾ ಬಂಡಿಯು ಮಗುಚಿಬಿದ್ದು ಗಾಡಿಯಾಳು ಬಂಡಿಯ ಅಡಿಗೆ ಬಿದ್ದು ಬಹಳ ಜಖಂ ಹೊಂದಿದ್ದಾನೆ. ಅವನನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಕುದುರೆಗೇನೂ ವಿಶೇಷ ಪೆಟ್ಟಾಗಲಿಲ್ಲ.

ಮಳೆ—ನಿನ್ನೆ ಸ್ವಲ್ಪ ಮಳೆಯಿತ್ತು. ಈ ದಿನ ಹಗಲು ಬಿಸಿಲು ಚೆನ್ನಾಗಿ ಕಾಯುತ್ತಿದೆ. ಇನ್ನೂ ಮಳೆಗಾಲದ ಪ್ರಾರಂಭವಾದಂತೆ ತೋರುವುದಿಲ್ಲ.

ವಿದ್ಯಾಸಂಸ್ಥೆಗಳು— ಮಂಗಳೂರಿನ ವಿದ್ಯಾಸಂಸ್ಥೆಗಳೆಲ್ಲವೂ ಕಳೆದ ವಾರ ತೆರೆಯಲ್ಪಟ್ಟಿವೆ. ಸ್ಥಳೀಯ ಮುನ್ಸಿಫ್ ಕೋರ್ಟು ತಾ. 3ನೇ ಜೂನಿನಲ್ಲಿ ತೆರೆಯಲ್ಪಟ್ಟಿದೆ.

ಜಿಲ್ಲಾ ಕೋರ್ಟು— ಮಂಗಳೂರು ಜಿಲ್ಲಾ ಕೋರ್ಟು ಮತ್ತು ಸಬೋರ್ಡಿನೇಟ್ ಜಡ್ಜರ ಕೋರ್ಟು ಇದೇ ತಿಂಗಳ ತಾ. 24ರಲ್ಲಿ ತೆರೆಯಲ್ಪಡುವವು.

ಉಚ್ಚಿಲ ಬೋವಿ ಶಾಲೆ— ಉಚ್ಚಿಲ ಬೋವಿ ಎಲಿಮೆಂಟರಿ ಶಾಲೆಯ ನೂತನ ಕಟ್ಟೋಣದ ಪ್ರವೇಶೋತ್ಸವವೂ ಮತ್ತು ಶಾಲಾ ವರ್ಧಂತಿ ಉತ್ಸವವೂ ಜಿಲ್ಲಾ ಬೋರ್ಡು ಅಧ್ಯಕ್ಷರಾದ ಮಾನ್ಯ ಗಾ. ವಿಟ್ಠಲ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು.

ಉಡುಪಿ

ಬೋರ್ಡು ಹೈಸ್ಕೂಲ್ ಹಳೆ ವಿದ್ಯಾರ್ಥಿ ಸಂಸ್ಥೆ—ಮಹಾಸಭೆಯೊಂದು ತಾ. 7ರಲ್ಲಿ ಡಾ. ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಕಾನ್ಸ್ಟಿಟ್ಯೂಶನಿನ ಕುರಿತು ಚರ್ಚೆಯಾಗಿ ಕೊನೆಗೆ ಅದನ್ನು ಡ್ರಾಫ್ಟ್ ಮಾಡಲು ಶ್ರೀ. ಕೆ. ಜಿ. ಬಲ್ಲಾಳರಿಗೆ ಒಪ್ಪಿಸಲಾಯಿತು.

ಮಳೆಯು— ಬರಲಾರಂಭಿಸಿದೆ, ಮಧ್ಯೆ ಮಧ್ಯೆ ಬಿಸಿಲೂ ಕಾಯುತ್ತಿದೆ.

ಶ್ರೀ ರಾಮಕೃಷ್ಣ ಥಿಯೇಟರ್—ನಲ್ಲಿ ನ್ಯೂ ಥಿಯೇಟರಿನವರ 'ಮಂಜಿಲ್' ಚಿತ್ರವು ಪ್ರದರ್ಶಿಸಲ್ಪಡುತ್ತಿದೆ. ತಾ. [26ರಿಂದ ಎಲ್ಲೆಲ್ಲೂ ಪ್ರಶಂಸೆ ಪಡೆದಿರುವ 1939ರ ಅಗ್ರಸ್ಥಾನದ ಮೆಡಲು ಹೊಂದಿದ 'ಅಧಿ' ಎಂಬ ಸುಪ್ರಸಿದ್ಧ ಚಿತ್ರವು ಪ್ರಾರಂಭವಾಗುವುದು.

ತೆರೆಯಲ್ಪಟ್ಟವು—ರಜೆಕಾಲದ ರಜೆಗಾಗಿ ಮುಚ್ಚಲ್ಪಟ್ಟ ಶಾಲೆಗಳೆಲ್ಲಾ ತಿರುಗಿ ತೆರೆಯಲ್ಪಟ್ಟು ಕೆಲಸಕ್ಕಾರಂಭಿಸಿರುವವು.

ಮೊಡರ್ನ್ ಹಾಯರ್ ಎಲಿಮೆಂಟರಿ ಶಾಲೆ—ಯನ್ನು ಮಿಡ್ಲ್‌ಸ್ಕೂಲಾಗಿ ಮಾರ್ಪಡಿಸಲು ಪ್ರಯತ್ನಗಳಾಗುತ್ತಿವೆಯೆಂದು ತಿಳಿದುಬರುತ್ತದೆ.

ನರ್ಸಸ್ ಟ್ರೈನಿಂಗ್ ಕ್ಲಾಸು— ಡಾ. ಟಿ. ಮಾಧವ ಪೈಗಳು ಜುಲೈ 1ರಿಂದ ನರ್ಸಸ್ ಟ್ರೈನಿಂಗ್ ಕ್ಲಾಸೊಂದನ್ನು ಪ್ರಾರಂಭಿಸಲಿರುವರೆಂದು ತಿಳಿದುಬರುತ್ತದೆ. (ವಿವರಕ್ಕಾಗಿ ಬರುವ ಸಂಚಿಕೆಯನ್ನು ನಿರೀಕ್ಷಿಸಿರಿ.)

ಜಿಲ್ಲಾ ಕಲೆಕ್ಟರರ ಸರ್ಕಲಾರು— ಇಂಡಿಯನ್ ಆರ್ಮ್ಸ್ ರೂಲ್ಸುಗಳಿಗನುಗುಣವಾಗಿ ಲೈಸೆನ್ಸುಗಳಿಗಾಗಲೀ, ಅವುಗಳ ದ್ವಿಪ್ರತಿಗಳಿಗಾಗಲೀ ಅವುಗಳ ಪುನರಾರಂಭದ ಬಗ್ಗೆಯಾಗಲೀ ಕೊಡತಕ್ಕ ಹಣವನ್ನು ಅರ್ಜಿದಾರರು ಸಮೀಪದ ಖಜಾನೆಗೆ ಪಾವತಿ ಮಾಡತಕ್ಕದ್ದೆಂದೂ ದಾಗೆ ಪಾವತಿ ಮಾಡಿದ ಚಲನ್ ರಸೀದಿಯನ್ನು ಅರ್ಜಿಯೊಂದಿಗೆ ಲಗ್ತೀಕರಿಸಿ ಜಿಲ್ಲಾ ಕಲೆಕ್ಟರರಿಗೆ ಕಳುಹಿಸತಕ್ಕದೆಂಬ ವಿಷಯವನ್ನೂ ಮಹಾಜನರ ಅವಗಾಹನೆಗೆ ತರಲಾಗಿಯದೆ.

ಕಾರ್ಕಳ—ಕಳೆದ ವಾರದಲ್ಲಿ ಪ್ರಕಟವಾದ ಹರಿಜನಸೇವೆಗು, ಶ್ರೀ. ಹೊಸಪೆತ್ತು ಅನಂತ ಭಟ್ಟ ಮತ್ತು ಇವರ ಮಗ ಶ್ರೀ. ಸೋಮನಾಥ ಭಟ್ಟ ಈ ಮೂವರ ವಿವಾದ ರಾಜಿಸಂಬಂಧವಾದ ವಾರ್ತೆಯ ಶರ್ತಗಳು ಸಂಪೂರ್ಣ ಸುಳ್ಳೆಂದೂ ಶ್ರೀ. ಅನಂತ ಭಟ್ಟರಾಗಲೀ ಅವರ ಮಗನಾಗಲೀ ಹರಿಜನ ಸಂಘಕ್ಕೆ ಹಣಕೊಡಲಿಲ್ಲವೆಂದೂ ಹರಿಜನ ಸಂಘವು ಅವರಿಂದ ಏನನ್ನೂ ಪಡೆಯಲಿಲ್ಲವೆಂದೂ ತಾರೀಕು 17-5-'40ರಲ್ಲಿ ಗೃಹಸ್ಥರ ಮುಂದೆ ಈ ಮೂವರೊಳಗೂ ಇನ್ನೂ ಯಾವ ವಿವಾದಗಳೂ ಇಲ್ಲವೆಂಬ ಮಾತ್ರ ರಾಜಿ ಆಗಿ ಮೂವರೂ ಒಪ್ಪಿ ರಾಜಿ ಮಾಡಿಗೆ ಚಿಟ್ಟಿಟ್ಟು ಗುರ್ತ ಮತ್ತು ಸಹಿ ಮಾಡಿರುವರೆಂದೂ ಅಧಿಕೃತ ಜನರಿಂದ ಇದೀಗ ತಿಳಿದುಬರುತ್ತದೆ. ಕಳೆದ ಬಾರಿ ಬಾತ್ಮೀದಾರರೊಬ್ಬರು ಕೊಟ್ಟ ಸುಳ್ಳು ಬಾತ್ಮಿಯನ್ನು ಪ್ರಕಟಿಸಿದುದಕ್ಕಾಗಿ ವಿಷಾದಿಸುತ್ತೇವೆ. ಸಂ. ಸ.

ಪ್ರಕಟಣೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 58/1936 R E P. 1¹/₁₀

ಕುಂಜಿಬೆಟ್ಟು ದಾಸಾಚಾರ್ಯ - ಅರ್ಜಿದಾರ ಮತ್ತು H. ಸೀತಾರಾಮ ಕುಂದಾ - ಎದ್ರಿರು ಇವರೊಳಗೆ

1ನೇ ಎದ್ರಿ H. ಸೀತಾರಾಮ, ಹಿರಿಯಡ್ಕ ತಮ್ಮಣ್ಣಯ್ಯನ ಮೊಮ್ಮಗ, ಹಾಲಿ ಬೊಂಬಾಯಿ ಇವರಿಗೆ ತಿಳಿಸುವದೇನೆಂದರೆ—

ಮೇಲ್ಕಂಡ ಡಿಕ್ರಿ ವಸೂಲಿ ಹಕ್ಕು-ವಾದಿ The Canara Banking Corporation Ltd, Udipi. ಈ ಬ್ಯಾಂಕಿನಿಂದ ನ್ಯಾಯವಾದ ಪ್ರತಿಫಲಕ್ಕೆ ತಾ. 25-9-1937ರಲ್ಲಿ ತನಗೆ ಟ್ರಾನ್ಸ್‌ಫರ್ ಆದ ಪ್ರಕಾರ ಸದ್ರಿ ಟ್ರಾನ್ಸ್‌ಫರ್ ಮಂಜೂರು ಮಾಡಬೇಕಾಗಿ ವಗೈರೆ ಅರ್ಜಿದಾರನು ದಾಖಲು ಮಾಡಿದ ಸದ್ರಿ ಅರ್ಜಿಯು ತಾ. 25 6-40ಕ್ಕೆ ತನ್ನ ಬಗ್ಗೆ ಇಟ್ಟಿದೆ. ಆಕ್ಷೇಪಣೆಯಿದ್ದರೆ ಆ ದಿನ್ನ ಮೇಲ್ಕಂಡ ಕೋರ್ಟು ಮುಂದೆ ಸದ್ರಿ 1ನೇ ಎದ್ರಿಯು ಸ್ವತಹಾ ಯಾ ಪ್ಲೀಡರ್ ಮುಖಾಂತರ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದ್ದರೆ ಆತನ ಗೈರ್ ಹಾಜರಿಯಿಂದ ಸದ್ರಿ ಅರ್ಜಿ ಮುಂದರಿಸಲಾದೀತು ಎಂಬ ಸಂಗ್ತಿ ಸದ್ರಿ 1ನೇ ಎದ್ರಿಗೆ ತಿಳಿಸಿಯದೆ.

Narasibma Vittal Kamath,
Advocate for Petitioner.

UDIPI 7-6-'40.

ಕನ್ನಡ ನುಡಿವೆಣ್ಣಿಗೊಂದು ಕನ್ನಡಗಿತ್ತಿಯ ಕಿರುಗಾಣಿಕೆ

ನಾಡ ಸೋದರಿಯರ ನೈಜ ಜೀವನದ ದುರಂತ ಚಿತ್ರವನ್ನೂ, ಸ್ತ್ರೀ-ಪುರುಷ ಹೃದಯಗಳ ಆಳವನ್ನೂ ಹೃದಯಂಗಮವಾಗಿ ಚಿತ್ರಿಸುವ ರಮ್ಯ ಕಥಾನಕ

ವತ್ಸಲಾ

ಸಾಮಾಜಿಕ ಕಾದಂಬರಿ

ಬೆಲೆ: ೦-೭-೩.

0—8—0 ಸ್ಟಾಂಪು ಕಳುಹಿಸಿದರೆ 1 ಪ್ರತಿಯನ್ನು ಕಳಿಸಬಹುದು.

ಬರಹಗಾರ್ತಿಯರು:-

ಶ್ರೀಮತಿ ಮಟ್ಪಾಡಿ ಕಮಲಾಕ್ಷಿ

ಈ ಪುಸ್ತಕದ ಕುರಿತು ಪ್ರಾಕ್ತನ ವಿಮರ್ಶ ವಿಚಕ್ಷಣ ಕರ್ಣಾಟಕ ವಿದ್ಯಾವೈಭವ, ರಾವ್ ಬಹದೂರ್ ಆರ್. ನರಸಿಂಹಾಚಾರ್ಯ M.A., M.R.A.S. ಇವರು ಬೆಂಗಳೂರಿನಿಂದ ಹೀಗೆ ಅಭಿಪ್ರಾಯಪಡುತ್ತಾರೆ

'ಗ್ರಂಥದ ಶೈಲಿ ಗಂಭೀರವಾಗಿಯೂ ಹೃದಯರಂಜಕವಾಗಿಯೂ ಇದೆ. ಪ್ರತಿಪಾದಿತವಾದ ವಿಷಯವು ನೀತಿಬೋಧಕವಾಗಿಯೂ ದುರ್ಮತಿ ನಿವಾರಕವಾಗಿಯೂ ಇದೆ. ಸ್ತ್ರೀಯರಿಗೆ ಬೋಧಪ್ರದವಾದ ಗ್ರಂಥ........'

ಪ್ರತಿಗಳು ಸಿಗುವ ಸ್ಥಳ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ಆತ್ಮವಿಶ್ವಾಸವೇ ಸಫಲತೆಯ ಬೀಗದ ಕೈ

ಅನೇಕ ವೇಳೆ ಜನರು ಪ್ರಯತ್ನಪಟ್ಟರೂ ತಮ್ಮ ಕೆಲಸಗಳಲ್ಲಿ ಜಯಶಾಲಿಗಳಾಗುವುದಿಲ್ಲವೆಂಬುದನ್ನು ನಾವು ನೋಡುತ್ತಿದ್ದೇವೆ. ಆದರೆ ದೀರ್ಘವಾಗಿ ವಿಚಾರಿಸಿದರೆ ಅವರ ಆ ಅಸಫಲತೆಗೆ ಕೆಳಗಿನ ಮೂರು ಕಾರಣಗಳಿರುವುವು—

1 ತಮ್ಮಲ್ಲಿ ತಮಗೆ ಭರವಸೆ ಇಲ್ಲದಿರುವುದು.

2. ಕೆಲಸ ಮಾಡುವುದಕ್ಕೆ ಮೊದಲೇ ಹಿಂದೆ ಮುಂದೆ ನೋಡುವುದು.

3. ಕೆಲಸವನ್ನು ಪ್ರಾರಂಭಿಸುವುದಕ್ಕೆ ಮೊದಲೇ, ಪರಿಣಾಮವನ್ನು ಕುರಿತು ಚಿಂತಿಸುವುದು.

ಒಂದು ಗಿಡವು ಚೆನ್ನಾಗಿ ಬೆಳೆದು, ಪುಷ್ಟಿಗೊಂಡು ಫಲ ಬಿಡಲು ಒಳ್ಳೆಯ ಭೂಮಿ, ಉತ್ತಮವಾದ ಗೊಬ್ಬರ, ನೀರು ಗಾಳಿಗಳ ಆವಶ್ಯಕತೆಯಿರುವುದಷ್ಟೆ! ಅಂತೆಯೇ, ಮನುಷ್ಯನು ಸಫಲತೆಯ ಬಳ್ಳಿಯನ್ನು ಆತ್ಮವಿಶ್ವಾಸವೆಂಬ ಫಲವತ್ತಾದ ಭೂಮಿಯಲ್ಲಿ ಬೆಳೆಸಿ, ಧೈರ್ಯಗುಂದದೆ, ಫಲವನ್ನು ಗಮನಿಸದೆ ಇರುವಿಕೆ, ಮುಂತಾದ ಗೊಬ್ಬರ ನೀರನ್ನು ಹಾಕಿದರೆ, ಅದು ಹುಲುಸಾಗಿ ಬೆಳೆದು ಹೂಬಿಟ್ಟು, ರುಚಿಯಾದ, ಸುಖದಾಯಕವಾದ ಫಲವನ್ನು ತಿನ್ನಲವಕಾಶವಾಗುವುದು.

ತನ್ನಲ್ಲಿ ತಾನು ವಿಶ್ವಾಸವಿಟ್ಟುಕೊಳ್ಳಬೇಕಾದರೆ, ಪ್ರತಿಯೊಂದು ಕೆಲಸವನ್ನು ಮಾಡುವ ಮೊದಲು ಈ ರೀತಿ ಯೋಚಿಸಿಕೊಳ್ಳಬೇಕು— 'I Promised My God, I could do it' ಅಂದರೆ 'ನಾನು ಈ ಕೆಲಸ ಮಾಡಬಲ್ಲೆನೆಂದು ಪರಮಾತ್ಮನಿಗೆ ಮಾತುಕೊಟ್ಟಿದ್ದೇನು.' ಇದರಿಂದ ಮನುಷ್ಯನಿಗೆ ಆತ್ಮ ವಿಶ್ವಾಸವುಂಟಾಗುವುದು. ತನ್ನ ಪ್ರತಿಜ್ಞೆಯಂತೆ ನಡೆಯಲು ಯಾವತೊಂದರೆಯೂ ಉಂಟಾಗುವುದಿಲ್ಲ. ಕೆಲಸವು ಬಹಳ ಸುಲಭವಾಗಿ ತೋರುವುದು. 'He can who thinks' 'ಇಂತಹ ಕೆಲಸವನ್ನು ಮಾಡುವೆನೆಂದು ಯೋಚಿಸುವವನು ಅದನ್ನು ಮಾಡೇ ಮಾಡುವನು.' ಇಷ್ಟೇ ಅಲ್ಲ, ತನ್ನಲ್ಲಿ ತಾನು ವಿಶ್ವಾಸವಿಟ್ಟಿರುವವನಿಗೆ ಪರಮಾತ್ಮನೂ ಸಹಾಯ ಮಾಡುವನು.

'God helps those who help them salves' ತನ್ನಲ್ಲಿ ತಾನು ವಿಶ್ವಾಸವಿಟ್ಟುಕೊಳ್ಳದವನು ಪಾಪಿಯಾಗುವನು, ಅವನು ಈ ಜಗತ್ತಿನ ಕಾರ್ಯಗಳನ್ನು ಮಾಡಲು ಮುಂದೆಬರಲಾರನು. ಯಾವಾಗಲೂ ಅಸಫಲನೇ ಆಗುತ್ತಿರುವನು. ಕೊನೆಗೆ ಧೈರ್ಯಗುಂದಿ ಕುಳಿತುಬಿಡುವನು. ಯಾವ ಕೆಲಸದಲ್ಲೇ ಆಗಲಿ, ಸಫಲತೆಯು ಆತ್ಮವಿಶ್ವಾಸದಿಂದಲೇ ಉಂಟಾಗುವುದೆಂಬುದನ್ನು ಎಲ್ಲರೂ ಗಮನಿಸಬೇಕು.

ತನ್ನಲ್ಲಿ ತಾನು ಭರವಸೆ ಇಟ್ಟುಕೊಳ್ಳದೇ, ಯಾರಾದರೂ ಇದು ವರೆಗೆ ವಿಜಯಿಯಾಗಿರುವರೇ? ಇದು ವರೆಗೆ ಆಗಿಹೋಗಿರುವ ಮಹಾಪುರುಷರೆಲ್ಲರೂ ಆತ್ಮವಿಶ್ವಾಸದಿಂದ ತುಂಬಿದ್ದವರೇ ಆಗಿದ್ದರು. ನೆಪೋಲಿಯನ್ನನು ವಿಶ್ವದಲ್ಲೇ ಹೆಸರಾದುದು ಈ ಆತ್ಮವಿಶ್ವಾಸದಿಂದ. "ಅಸಾಧ್ಯ"ವೆಂಬುದೇನೆಂಬುದನ್ನೇ ಅರಿಯನವನು. ಇಂಗ್ಲೆಂಡಿನ ಮಹಾಪ್ರಧಾನನಾಗಿದ್ದ ಪಿಟ್ ಎಂಬವನು ಕೇವಲ 21ನೇ ವಯಸ್ಸಿನಲ್ಲೇ ಅಷ್ಟು ವಿಶಾಲ ಸಾಮ್ರಾಜ್ಯದ ಮುಖ್ಯಮಂತ್ರಿಯಾದುದು ಅವನ ಆತ್ಮವಿಶ್ವಾಸದಿಂದಲೇ. "None can save England but I" "ನನ್ನ ವಿನಹ ಇಂಗ್ಲೆಂಡನ್ನು ಯಾರೂ ಉಳಿಸಲಾರರು" ಎಂದು ಹೇಳಿದ್ದನು. ಶಿವಾಜಿ, ರೂಜ್‌ವೆಲ್ಟ್ ಮುಂತಾದ ಎಲ್ಲ ಮಹಾಪುರುಷರೂ ಈ ಆತ್ಮವಿಶ್ವಾಸಬಲದಿಂದಲೇ ವಿಜಯಿಗಳಾದುದು. ಆತ್ಮವಿಶ್ವಾಸದ ಆಧಾರದ ಮೇಲೆಯೇ ಅವರು ವಿಶ್ವವಿಖ್ಯಾತರಾದುದು. ಇಂದೀಗ ಹಿಟ್ಲರನ ಆತ್ಮ ವಿಶ್ವಾಸವಾದರೂ ಎಷ್ಟೊಂದು ಅದ್ಭುತವಾದುದು.

(S. L. S.) (ಸಂಗ್ರಹ)

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಕ್ರಮವಾದ ಜಮಾ ಖರ್ಚಿನ ಲೆಖ್ಖವಿದ್ದರೂ ಸಾಲದು. ಆದರಿಂದ ತಯಾರಿಸಿದ ಸಾರಾಂಶದ ನಿಖರವು ಕೆಲವೇ ನಿಮಿಷಗಳಲ್ಲಿ ತನ್ನಿಯ ಆಫೀಸರರಿಗೆ ಒಪ್ಪಿಗೆಯಾಗಬೇಕು. ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಡಿಮೆಯಾಗುವುದು ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನ್" ಕಳ್ಸಿಯಾಗಿ ಹೋಗಿದ್ದರೂ ತಡವಾಗಲಿಲ್ಲ ಲೆಖ್ಖ ಹಾಜರು ಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸ ಕಾಣಿಸಿದವರೊಡನೆ ಪತ್ರ ವ್ಯವಹಾರ ನಡಿಸಿರಿ.

ಎಸ್. ಎಸ್. ಪುರಾಣಿಕ,
ಇನ್ಕಮ್ ಟೇಕ್ಸ್ ಪ್ರಾಕ್ಟೀಶನರ್,
ಕೃಷ್ಣಾ ರೆಸ್ಟೋರೆಂಟ್ ಬಿಲ್ಡಿಂಗ್,
ಹಂಪನಕಟ್ಟೆ, ಮಂಗಳೂರು.

Your anxiety—

in finding a sound and progressive Life Office both to insure or to represent will end on consultation with:—

Branch Secretary

The New Guardian of India Life Insurance Co. Ltd., Madras.

Mangalore Branch.

★ ಇತಿಹಾಸದಲ್ಲೇ ಅತ್ಯಂತ ಘೋರವಾದ ಕಾಳಗ.

ಮೂರು ಕಡೆಗಳಿಂದ ಪೆರಿಸಿನ ಕಡೆಗೆ ಪ್ರಚಂಡ ಧಾಳಿ

೬ ದಿವಸಗಳ ಭೀಷಣ ಕದನದ ಪರಿಣಾಮ.

ಜರ್ಮನರ ಹೊಸಧಾಳಿ

ಇದೇ ಕಳೆದ ತಾ.೮ನೇ ಬೆಳಗ್ಗೆ ಜರ್ಮನರಸೇನೆ ಮತ್ತು ವಿಮಾನಪಡೆಯು ಫ್ರಾನ್ಸಿನಲ್ಲಿ ಹೊಸ ಧಾಳಿಯನ್ನಾರಂಭಿಸಿರುವವೆಂದು ಹಿಟ್ಲರರು ನಿರೂಪಣೆ ಹೊರಡಿಸಿರುವರು ಮುಂಬೆಳಕು ಹರಿಯುವಷ್ಟರಲ್ಲಿಯೆ ಜರ್ಮನರು 120 ಮೈಲುಗಳಿಗಿಂತಲೂ ವಿಶಾಲವಾದ ರಣರಂಗದಲ್ಲಿ ತೀವ್ರ ಹೋರಾಟವನ್ನಾರಂಭಿಸಿದರು. ಬೆಳಗ್ಗೆ 4ಘಂಟೆಗೆ ಜರ್ಮನ್ ಫಿರಂಗಿಗಳು ಬೆಂಕಿ ಕಾರತೊಡಗಿದುವು. ಕೆಳಗಿಳಿದು ಧಾಳಿ ನಡೆಸುವ ವಿಮಾನಗಳು ಫ್ರೆಂಚ್ ಸೇನೆಯ ಮೇಲೆ ಬಾಂಬುಗಳ ಮಳೆಗರೆದುವು. ಸೋಮ್ಮೆ ನದಿಯ ಮಧ್ಯಭಾಗದಲ್ಲಿ ಅಮಿಯೆನ್ಸ್ ಪಟ್ಟಣ ಪ್ರದೇಶದಲ್ಲಿಯೂ, ಪೆರೊನ್ನ್ ಪಟ್ಟಣ ಮತ್ತು ಐಲೆಟ್ ಕಾಲುವೆಯ ಬಳಿ ಜರ್ಮನರ ಧಾಳಿಯು ಅತ್ಯಂತ ಪ್ರಬಲವಾಗಿದೆ. ಸೋಮೆ ನದಿಯ ದಕ್ಷಿಣ ತಟದಲ್ಲಿ ಜರ್ಮನರು ಮೊದಲೇ 3 ಕಡೆಗಳಲ್ಲಿ ಮುಂದೊತ್ತಿರುವುದರಿಂದ ಈ ಪ್ರದೇಶದಲ್ಲಿ ಅವರು ಅತಿದೊಡ್ಡ ಸೇನೆಯನ್ನುಪಯೋಗಿಸಿರುತ್ತಾರೆ.

ಫ್ರೆಂಚರು 3ಕಡೆಗಳಲ್ಲಿಯೂ ಜರ್ಮನರ ಧಾಳಿಯನ್ನು ತಡೆಗಟ್ಟಿರುವರು. ಈ ಭಾಗದಲ್ಲಿದ್ದ ಜನರು ಮೊದಲೇ ತಮ್ಮ ಮನೆಮಾರು ಬಿಟ್ಟುಹೋಗಿರುವರು. ಮತ್ತು ಭೂಭಾಗವು, ನದಿ, ಕಾಡು, ಏರು ತಗ್ಗುಗಳಿಂದ ತುಂಬಿರುವುದು. ಫ್ರೆಂಚ್ ಸೈನಿಕರು ಟಾಂಕಿಭೇದಕ ತೋಪುಗಳನ್ನು ಅಣ್ಣಿಸಿರುವರು. ಆದುದರಿಂದ ಜರ್ಮನರ ಧಾಳಿಯನ್ನು ತಡೆಗಟ್ಟಲು ಸಾಧ್ಯವಾಗಿದೆ. ಮೊದಲಿನ ದಿನದ ಯುದ್ಧದ ಪರಿಣಾಮವು ಜರ್ಮನರಿಗೆ ಪ್ರತಿಕೂಲವೆಂದೇ ಹೇಳಬಹುದು. ಇಷ್ಟರವರೆಗೆ ಇಷ್ಟೊಂದು ದೊಡ್ಡ ಸಮರನಡೆದಿರುವುದಿಲ್ಲ. ಫ್ರೆಂಚ್ ಸೈನಿಕರು ಅಸಾಧಾರಣ ಧೈರ್ಯ ಮತ್ತು ಸ್ಥೈರ್ಯದಿಂದ ಕಾದಾಡಿ ನಿಂತಲ್ಲಿಂದ ಕದಲದೆ ಜರ್ಮನರನ್ನು ತಡೆಗಟ್ಟಿರುವರು.

ಜರ್ಮನರ ಧಾಳಿಯ ಉದ್ದೇಶ

ಮೆಗಿನೋ ಕೋಟೆಗಳ ಸಾಲಿನ ಪಶ್ಚಿಮ ಪ್ರದೇಶವನ್ನು ಜರ್ಮನರ ಧಾಳಿಯಿಂದ ರಕ್ಷಿಸಲು ಫ್ರೆಂಚರು ವೈಗಾಂಡ್ ಲೈನ್ ಎಂಬ ರಕ್ಷಣಾವ್ಯವಸ್ಥೆ ಮಾಡಿರುವರು. ಸಮುದ್ರ ಕರಾವಳಿಯಿಂದ ಮೆಗಿನೋ ಕೋಟೆಯ ವರೆಗಣ ಪ್ರದೇಶವು 200 ಮೈಲು ವಿಸ್ತೀರ್ಣವಿದೆ. ಪೆರಿಸಿಗೆ ಅತಿ ಸಮೀಪದ ಹಾದಿಯಾಗುವ ಪ್ರದೇಶದ ಮೇಲೆ ಜರ್ಮನರು ತೀವ್ರ ಧಾಳಿ ನಡೆಸಿರುವರು. ಸೋಮೆ ನದಿಯಿಂದ 15 ಮೈಲುಗಳ ಅಂತರದಲ್ಲಿ ಬ್ರೆಸ್ ಎಂಬ ನದಿಯಿದೆ. ಈ ಪ್ರದೇಶದಲ್ಲೀಗ ಘೋರಯುದ್ಧ ನಡೆಯುತ್ತಿದೆ. ಇದು ಗಟ್ಟಿ ನೆಲವಾಗಿರುವುದರಿಂದ ಟಾಂಕಿಗಳ ಧಾಳಿಗೆ ಅನುಕೂಲವಾಗಿದೆ. ಟಾಂಕಿಗಳ ಮತ್ತು ಕೆಳಗಿಳಿದು ಬರುವ ವಿಮಾನಗಳ ಧಾಳಿಯನ್ನು ತಡೆಗಟ್ಟುವ ಉದ್ದೇಶದಿಂದ ವೈಗಾಂಡ್ ಲೈನನ್ನು ಏರ್ಪಡಿಸಲಾಗಿದೆ. ಸೆಡನ್ ಭಾಗದಲ್ಲಿ ಜರ್ಮನರು ಫ್ರೆಂಚ್ ಸೇನೆಯನ್ನು ಭೇದಿಸಿದ ಮೇಲೆ ಪ್ರಧಾನ ಮಂತ್ರಿ ರೈನಾಡರು ಹೊಸ ಜನರು ಹೊಸ ಯುದ್ಧ ವಿಧಾನಗಳನ್ನುಪಯೋಗಿಸಿ 3 ಹಪ್ತೆಗಳಲ್ಲಿ ವೈಗಾಂಡ್ ಲೈನನ್ನು ಕಟ್ಟಿಸಿರುವರು.

ಜರ್ಮನರು 3 ಕಡೆಗಳಿಂದ ಪೆರಿಸಿನ ಕಡೆಗೆ ಧಾಳಿಯಿಟ್ಟಿರುವರು (1) ಪೆರಿಸಿನ ಪಶ್ಚಿಮದಿಂದ ಅಮಿಯೆನ್ಸ್ ಮತ್ತು ಸೋಮೆನದಿಯ ಕೆಳಭಾಗದ ಪ್ರದೇಶದಿಂದ (2) ಮಧ್ಯಭಾಗದಿಂದ ಕೊಂಪ್ಯನ್ ಪಟ್ಟಣ ಮತ್ತು ಬ್ರೆಸ್ ನದಿಯ ಮಾರ್ಗವಾಗಿ (3) ಪೂರ್ವದಲ್ಲಿ ಐನೆ ನದಿಯನ್ನು ದಾಟಿ ಮಾರ್ನೆ ತಪ್ಪಲು ಪ್ರದೇಶದ ಮೂಲಕ ಪೆರಿಸನ್ನು ಹಿಡಿಯುವುದು. ಆದರೆ ಪೂರ್ವದ ಲೆವ್ರೋನ್ ಮತ್ತು ರಾತೆಲ್ ಪಟ್ಟಣಗಳ ಪ್ರದೇಶದಲ್ಲಿ ಜರ್ಮನರು ಅತಿ ಹೆಚ್ಚಿನ ಸೇನೆಯನ್ನು ಸಂಗ್ರಹಿಸುತ್ತಿರುವರು. ಇದು ಪೆರಿಸಿಗೆ ಅತಿ ಸಮೀಪದ ಸ್ಥಳವಾಗಿರುತ್ತದೆ.

ಇದೇ ತಾ. 7ರಲ್ಲು ಐಲೆಟ್ ಕಾಲುವೆಯ ಪ್ರದೇಶದಲ್ಲಿ ಜರ್ಮನರು ಮುಂದೊತ್ತಿ ವಶಪಡಿಸಿಕೊಂಡ ಸ್ಥಳವನ್ನು ತಿರುಗಿ ಗೆಲ್ಲಲು ಫ್ರೆಂಚರು ಪ್ರಯತ್ನಿಸಿ ಜರ್ಮನರ ಮೇಲೆ ಬಿದ್ದು ಹೋರಾಡಿದರು ಈ ಯುದ್ಧದಲ್ಲಿ ಫ್ರೆಂಚರು ಸಾಧ್ಯವಾದ ಮುಂಜಾಗ್ರತೆಯನ್ನೆಲ್ಲಾ ತೆಗೆದುಕೊಂಡಿರುವರು. ವೈರಿಯು ಈ ಧಾಳಿಯಿಂದ ಹಲ್ಲು ಮುರಿದುಕೊಳ್ಳುವನೆಂದೇ ಫ್ರೆಂಚ್ ಸೇನಾನಿಗಳ ಅಭಿಮತ

ಜರ್ಮನರು 2000ಕ್ಕಿಂತಲೂ ಮಿಕ್ಕಿದ ಟ್ಯಾಂಕುಗಳನ್ನು ಇನ್ನೂರು ಮುನ್ನೂರು ತಂಡ[illegible]ಗಿ ಉಪಯೋಗಿಸಿರುವರು. ಸೋಮ್ಮೆ ನದಿಯ ಕೆಳ ಪ್ರದೇಶದಲ್ಲಿ ಜರ್ಮನರು ಮುಂದೊತ್ತಿ ಫ್ರೆಂಚ್ ಸೇನೆಯನ್ನು ಹಾರಿಸಾಡಿ ಕೆಲವು ಪ್ರದೇಶಗಳನ್ನು ವಶಪಡಿಸಿಕೊಂಡಿರುವರು ಐಲೆಟ್ ಕಾಲುವೆಯ ಪ್ರದೇಶದಲ್ಲಿಯೂ ಜರ್ಮನರು ಮುಂದೊತ್ತಿರುವರು. ಸೋಮೆ ನದಿಯ ಕೆಳಭಾಗದಲ್ಲಿ ಅಬೆವಿಲ್ಲೆಯ ಬಳಿ ಉತ್ತಮ ಬ್ರಿಟಿಷ್ ಸೈನಿಕ ದಳಗಳು ಜರ್ಮನರೊಡನೆ ಹೋರಾಡುತ್ತಿವೆ. ಈ ಪ್ರದೇಶದಲ್ಲಿ ಜರ್ಮನರು ರಾತ್ರಿ ಮುಂದೊತ್ತಿ ಮಿತ್ರ ರಾಷ್ಟ್ರಗಳ ಸೈನಿಕರನ್ನು ಆವರಿಸಿರುವರು. ಜರ್ಮನರ ಪ್ರಚಂಡ ಧಾಳಿಯಿಂದಾಗಿ ಕೆಲವೆಡೆ ಮಿತ್ರ ರಾಷ್ಟ್ರಗಳ ಸೇನೆಯು ಹೆಚ್ಚು ಭದ್ರವಾದ ಸ್ಥಳಗಳಿಗೆ ಹಿಂದೆಸರಿಯಬೇಕಾಗಿದೆ. ತಾ. 7ರಲ್ಲಿ ಪ್ರಖರವಾದ ಬಿಸಿಲಲ್ಲಿ ಹೋರಾಟ ನಡೆಯಿತು. ಸೈನಿಕರು ಶರ್ಟುಗಳನ್ನು ಮಾತ್ರ ಹಾಕಿಕೊಂಡು ಹೋರಾಡಿದರು. ಫ್ರೆಂಚರು ದೊಡ್ಡ ತೋಪುಗಳ ಮೂಲಕ 30,000 ಗುಂಡುಗಳನ್ನೆಸದು ಜರ್ಮನ್ ಸೇನೆಯ ಮೇಲೆ ಹೆಚ್ಚಿನ ಹಾವಳಿಮಾಡಿರುವರು. ಸೋಮ್ಮೆ ನದಿ ಪ್ರದೇಶದ ಹೋರಾಟವೂ ಮಿತ್ರ ರಾಷ್ಟ್ರಗಳನ್ನು ವಂಚಿಸುವ ನಟನೆಯೋ ಎಂಬ ಸಂದೇಹಕ್ಕೆ ಕಾರಣವಾಗಿದೆ.

500 ಜರ್ಮನ್ ಟಾಂಕಿಗಳ ನಾಶ

ಮಿತ್ರರಾಷ್ಟ್ರಗಳೀಗ ಜರ್ಮನರ ಯುದ್ಧ ಕ್ರಮವನ್ನೇ ಅನುಸರಿಸುತ್ತಿದ್ದಾರೆ. ಅವರು ಜರ್ಮನ ಸೇನೆಯ ಮೇಲೆ ವಿಮಾನ ಧಾಳಿ ನಡಿಸಿ ಹಾವಳಿ ಮಾಡುತ್ತಿದ್ದಾರೆ. ಫಿರಂಗಿ ತುಪಾಕಿಗಳಿಂದ ಎಡೆಬಿಡದೆ ಬೆಂಕಿ ಹಾರಿಸಿ ಜರ್ಮನರು ಮುಂದೊತ್ತದಂತೆ ತಡೆಗಟ್ಟುತ್ತಿದ್ದಾರೆ. ಜರ್ಮನ್ ಟೇಂಕುಗಳ ಮೇಲ್ಭಾಗದಲ್ಲಿ ಒಂದು ತಗಡಿನ ಮುಚ್ಚಳ ಮಾತ್ರವಿರುವುದರಿಂದ ವಿಮಾನಗಳ ಮೂಲಕ ಗುಂಡೆಸೆದು ಅವನ್ನು ನಾಶಮಾಡುತ್ತಿದ್ದಾರೆ. ಹಲವು ಜರ್ಮನ್ ಟೇಂಕುಗಳು ಮುಂದೊತ್ತಿ ಹೋಗಿ ಫ್ರೆಂಚರ ಕೈಗೆ ಸಿಕ್ಕಿವೆ. ಹೀಗೆ ಜರ್ಮನರ 2000 ಟೇಂಕುಗಳ ಪೈಕಿ ಸುಮಾರು 500 ನಾಶವಾಗಿವೆಯೆಂದು ತಿಳಿದು ಬಂದಿದೆ ಜರ್ಮನ್ ಟೇಂಕುಗಳು ಎಳೆಂಟು ಮೈಲು ಮುಂದೊತ್ತಿ ಹೋದರೂ ಎಲ್ಲಿಯೂ ಅವನ್ನು ಬೆಂಬತ್ತಿ ಕಾಲಾಳು ಹೋಗಿರುವುದಿಲ್ಲ

ಇತಿಹಾಸದಲ್ಲೇ ಅಪೂರ್ವ ಯುದ್ಧ

ಜರ್ಮನರು ಇದೇ ತಾ 8ರಲ್ಲು ಪೂರ್ವದಲ್ಲಿ ಆನಾಲಿ ಮತ್ತು ನೋಯ ಪಟ್ಟಣಗಳ ನಡುವಿನ 60 ಮೈಲುದ್ದದ ರಣರಂಗದಲ್ಲಿ ಭಯಂಕರ ಹೋರಾಟ ನಡಿಸಿದರು. ಈ ಯುದ್ಧದಲ್ಲಿ ಅವರು ಸುಮಾರು 3 ಲಕ್ಷ ಸೇನೆಯನ್ನುಪಯೋಗಿಸಿರುವರು. ಐನೇ ರಣರಂಗದಲ್ಲಿಯೂ ಜರ್ಮನರು ದೊಡ್ಡ ಧಾಳಿನಡಿಸಿರುವರು. ಪಶ್ಚಿಮದಲ್ಲಿ ಸಮುದ್ರ ತೀರದಿಂದ ಪೂರ್ವದಲ್ಲಿ ಪಿವಿ.ನ್ ಡಿ ಡೇಮ್ಸ್ ಎಂಬ ಸ್ಥಳದ ವರೆಗಣ ರಣರಂಗದಲ್ಲಿ ಇದೇ ತಾ. 8ರಲ್ಲು ನಡೆದ ಯುದ್ಧವು 'ಇತಿಹಾಸದಲ್ಲೇ' ಅತ್ಯಂತ ಪ್ರಚಂಡವಾದುದಾಗಿದೆ. ಇಷ್ಟೊಂದು ಪ್ರಬಲ ಮತ್ತು ಘೋರವಾಗಿ ಈ ವರೆಗೆ ಯಾವ ಯುದ್ಧವೂ ನಡೆದಿರುವುದಿಲ್ಲ. ಒಟ್ಟು 94 ಮೈಲುದ್ದದ ರಣರಂಗದಲ್ಲಿ ಜರ್ಮನರು 4,000 ಟೇಂಕು ಮತ್ತು ಸುಮಾರು ಅರ್ಧಮಿಲ್ಯ ಸೈನಿಕರನ್ನುಪಯೋಗಿಸಿರುವರು. ವಿಧ್ವಂಸಗೊಳಿಸುವ ಫ್ರೆಂಚ್ ಫಿರಂಗಿ ಮತ್ತು ಮಿಶನ್ ತೋಪುಗಳ ಗುಂಡುಗಳ ಸುರಿಮಳೆಯನ್ನು ಗಣ್ಯಮಾಡದೆ ಯುದ್ಧೋನ್ಮತ್ತರಾಗಿ ಜರ್ಮನ್ ಸೈನಿಕರು ಭುಜಕ್ಕೆ ಭುಜಕೊಟ್ಟು ನಡೆಯುತ್ತ ಸುಮಾರು 15 ಮೈಲು ಮುಂದೊತ್ತಿರುವರು. ಈ ಪ್ರದೇಶವನ್ನು ಫ್ರೆಂಚ್ ಸೈನಿಕರು ಮೊದಲೇ ಬಿಟ್ಟುಹೋಗಿದ್ದರು. ಬ್ರೆಸ್ಲೆ ಮತ್ತು ಬ್ರೆಸ ನದಿಗಳ ನಡುವೆ ಜರ್ಮನರನ್ನು ಮಿತ್ರರಾಷ್ಟ್ರಗಳ ಸೇನೆಯು ತಡೆಗಟ್ಟಿ ಭೀಷಣ ಕದನ ನಡೆದು ಜರ್ಮನರು ಅಪಾರ ಪ್ರಾಣಹಾನಿ ಹೊಂದಿರುವರು. ಬ್ರಿಟಿಷ್ ಮತ್ತು ಫ್ರೆಂಚ್ ವಿಮಾನಗಳು ಜರ್ಮನ್ ಸೇನೆಯ ಮೇಲೇರಿ ಹೋಗಿ ಬಾಂಬೆಸೆದು ಅತಿ ಹೆಚ್ಚಿನ ಹಾವಳಿಮಾಡಿರುವವು. ಜರ್ಮನರು ಮುಂದೊತ್ತಿರುವರಾದರೂ ಫ್ರೆಂಚ್ ಸೇನೆಯನ್ನು ಎಲ್ಲಿಯೂ ಭೇದಿಸಿರುವುದಿಲ್ಲ.

THULUNAD BANK
OF SUPPLY AGENCY LIMITED.

Authorised & Issued Capital	...	Rs 1,00,000
Subscribed & Paid up Capital	....	Rs. 31,340
Reserves & other Funds	...	Rs. 22,052

ವಿಶೇಷ ರಿಯಾಯಿತಿ

Rs. 1000

ತಾ. 30-6-1940ರ ಒಳಗೆ ರೂ. 1000 ಯಾ ಅದಕ್ಕಿಂತ ಮೇಲ್ಪಟ್ಟು ಠೇವಣಾತಿಗಳನ್ನು ಇಡುವವರಿಗೆ ಕೆಲವು ವಿಶೇಷ ರಿಯಾಯುತಿಗಳು ಕೊಡಲ್ಪಡುವವು.

ಹೆಚ್ಚಿನ ಮಾಹಿತಿಗೆ ಬರೆಯಿರಿ:—

ಮೆನೇಜಿಂಗ್ ಡೈರೆಕ್ಟರ್

ತುಳುನಾಡ್ ಬೇಂಕ್
ಆಫ್ ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ.

ನೋಟೀಸು.

ಪುತ್ತೂರು ಡಿ ಮು. ಕೋರ್ಟಿನಲ್ಲಿ

O P. 58/40

ಸರಸ್ವತಿ ಅಮ್ಮ — ಅರ್ಜಿದಾರಳು.

(In the matter of the assets of the deceased Gowramma mother of Petitioner.)

ಮೇಲೆತ್ತಿರುವ ವ್ಯವಹಾರದಲ್ಲಿ ಅರ್ಜಿದಾರಳು ತನ್ನ ಮೃತ ತಾಯಿಗೆ ಬರುವ ಹಣವನ್ನು ಪಡೆಯುವ ಬಗ್ಗೆ ವಾರಿಸ ಸರ್ಟಿಫಿಕೇಟು ಕೊಡಬೇಕೆಂತ ಈ ಕೋರ್ಟಿಗೆ ಅರ್ಜಿ ಮಾಡಿರುವುದರಿಂದ ಆ ಬಗ್ಗೆ ಆಕ್ಷೇಪವಿದ್ದವರು ಮೇಲೆತ್ತಿರುವ ಕೋರ್ಟಿಗೆ ತಾ. 28-6-40ನೇ ಹಗಲು ಘಂಟೆ 10ಕ್ಕೆ ಸ್ವತಹಾ ಯಾ ವಕೀಲ ದ್ವಾರ ಹಾಜರಿಸದಿದ್ದರೆ ಕೋರ್ಟಿನ ವರಿಗೆ ಯುಕ್ತ ಕಂಡಂತೆ ತೀರ್ಮಾನಿಸುವದು.

(By order of the Court)

ಪುತ್ತೂರು | B. Mangesha Rao,
7-6-40 | *Pleader for Petitioner.*

ಈ ವಾರದ ಕತೆ.

ಗೋಡೆಯಲ್ಲಿ ಕಂಡ ಮುಖ

ಲೇಖಕ:—
ಶ್ರೀಮಾನ್ ಪಾದೂರು ವಾಸುದೇವ ಉಪಾಧ್ಯಾಯ
B. A., B. L.,

ಮೊನ್ನೆ ಸಾಯಂಕಾಲ ನಾವೆಲ್ಲರೂ ಚತುರ್ಮುಖ ಬಂಡೆಯ ಮೇಲೆ ಕುಳಿತು ಗಾಳಿ ಸೇವಿಸುತ್ತಿದ್ದೆವು. ನಮ್ಮ ಹರಟೆ ಮಾತು ನೂರು ಕಡೆಗೆ ತಿರುಗಿ ಭೂತ ಪ್ರೇತ ವಿಷಯಕ್ಕೆ ಬಂತು. ಭೂತ-ಪ್ರೇತಗಳೆಂದರೆ ಅದೆಲ್ಲಾ ಕಲ್ಪನೆ ಎಂದು ನಾನು ಪ್ರಾರಂಭಿಸಿದೆ 'ಹಾಗೆನ್ನಕೂಡದು, ಅದರಲ್ಲಿ ಏನೋ ಒಂದು ಇದೆ,' ಎಂದ ನಮ್ಮ ರಾಮಣ್ಣ, 'ಪೂರಾ ಸುಳ್ಳಲ್ಲ' ಎಂದ ಕೃಷ್ಣರಾವ್, ನಂತರ ಒಬ್ಬೊಬ್ಬರೇ ತಾವು ಭೂತಪ್ರೇತಗಳ ವಿಷಯ ಕೇಳಿದ್ದ ಕತೆಗಳನ್ನು ಹೇಳತೊಡಗಿದರು. ಮಾಡಿನ ಮೇಲೆ ಹುಲ್ಲು ಮೇಯುತ್ತಿದ್ದ ಎಮ್ಮೆ ಕರುವಿನ ಕತೆ, ಹೆಂಗಸಿಗೆ ತಿಳಿಯದೆ ಅವಳ ಸೀರೆ ದಗನಗನೆ ಉರಿಯುತ್ತಿದ್ದ ಕತೆ, ಹೊಲೆಯನ ಮನೆಯ ದೋಸೆ ಧನಿಯ ಬಟ್ಟಲಿಗೆ ಬಂದು ಬಿದ್ದ ಕತೆ, ತೆಂಗಿನ ಮರದಿಂದ ಮಾವಿನ ಹಣ್ಣು ಬಿದ್ದ ಕತೆ ಹೀಗೆ ಒಂದರ ಹಿಂದೊಂದು ಅಂತ್ಯವಿಲ್ಲದೆ ಕತೆಗಳು ಹೊರಟವು. ಕೇಳುವವರಿಗಿಂತಲೂ ಹೇಳುವರ ಉತ್ಸಾಹವು ವಿಶೇಷವಾಗಿ ಕಂಡುಬರುತ್ತಿತ್ತು. ಈ ಕತೆಗಳನ್ನೆಲ್ಲಾ ಮಂಗಳೂರಿನಿಂದ ಬಂದ ಶಾಮರಾಯರೊಬ್ಬರು ಬಹಳ ಆತುರದಿಂದ ಕೇಳುತ್ತಿದ್ದರು. ಅದರೆ ಅವರ ಬಾಯಿಯಿಂದ ಒಂದು ಕತೆಯೂ ಹೊರಡಲಿಲ್ಲ ಇದು ನನಗೆ ಆಶ್ಚರ್ಯ ಕಂಡಿತು "ಏನು ಶಾಮರಾಯರೇ, ನಿಮ್ಮದೇನಾದರೂ ಕತೆಯಿಲ್ಲವೇ?" ಎಂದು ನಾನು ಕೇಳಿದೆ. 'ಈ ರೀತಿಯ ಕತೆಗಳನ್ನು ನಾನೂ ಅನೇಕ ಕೇಳಿದ್ದೆ. ಅದನ್ನೆಲ್ಲಾ ನಾನು ನಂಬುವುದಿಲ್ಲ. ನಾನು ಸ್ವತಃ ಅನುಭವಿಸಿದ ವಿಷಯವೊಂದಿದೆ. ಅದನ್ನು ಬೇಕಾದರೆ ಹೇಳುತ್ತೇನೆ' ಎಂದರು ಶಾಮರಾಯರು.'ಅದೇನು ಹೇಳಿರಿ'—ಎಂದು ಎಲ್ಲರೂ ಆತುರದಿಂದ ಹೇಳಿದರು.

ಶಾಮರಾಯರು ಹೇಳತೊಡಗಿದರು—'ನಾನು ಮುಂಬಾಯಿಯಲ್ಲಿ ಈಗಿನ ಬಿಡಾರವನ್ನು ಬಾಡಿಗೆಗೆ ಹಿಡಿಸಿಕೊಳ್ಳುವ ಮೊದಲು ಅದರಲ್ಲಿ ಒಬ್ಬರು ಮಾರ್ವಾಡಿ ಶೇಟ್ ಇದ್ದರಂತೆ—ನಾನು ಹೋಗುವಾಗ ಬಿಡಾರವು ಅಷ್ಟೊಂದು ನಿರ್ಮಲವಾಗಿರಲಿಲ್ಲ ನೆಲವು ಕೆಲವು ಕಡೆ ಹಾಳಾಗಿತ್ತು. ಗೋಡೆಗಳಿಗೆ ಸುಣ್ಣ ಬಳಿಯದೆ ಎಷ್ಟು ಸಮಯವಾಗಿತ್ತೋ ತಿಳಿಯದು. ಗೋಡೆಯಲ್ಲಿ ಒಂದು ಕಡೆ ಒಂದು ದೊಡ್ಡ ಕಲೆಯಿದ್ದಿತು. ಅದು ನಾನು ಮಲಗಿಕೊಳ್ಳುವ ಮಂಚದ ಎದುರಾಗಿತ್ತು. ಬೆಳಗ್ಗೆ ಕಿಟಕಿಯಿಂದ ಸೂರ್ಯನ ಕಿರಣಗಳು ಅದರ ಮೇಲೆ ಬೀಳುವಾಗ ಅದು ಒಬ್ಬ ಮನುಷ್ಯನ ಮುಖದಂತೆ ನನಗೆ ಕಂಡಿತು. ನಾನು ದಿನಾಲೂ ಅದನ್ನೇ ನೋಡಹತ್ತಿದೆನು. ದಿನಹೋದಂತೆ ಅದು ನಿಜವಾಗಿಯೂ ಒಂದು ಮುಖದಂತೆ ತೋರಿತು. ಅದರ ಉದ್ದವಾದ ಮೂಗು, ದುಂಡಗಾದ ಕೆನ್ನೆಗಳು ಶುಭ್ರವಾದ ಕಣ್ಣುಗಳು ಕೆಂಪಾದ ತುಟಿ ಬಿಳಿಯಾದ ಕೂದಲು ಎತ್ತರವಾದ ಹಣೆ ಒಂದೊಂದಾಗಿ ಕಾಣುತ್ತಿತ್ತು. ಅದು ನನ್ನನ್ನು ದಿಟ್ಟಿಸಿ ನೋಡುತ್ತಿದ್ದಂತೆ ಕಂಡಿತು. ಎಷ್ಟೋ ಸಲ ನನಗೆ ಭಯವಾಗಿ ನಾನು ಹತ್ತಿರ ಹೋಗಿ ಗೋಡೆಯ ಮೇಲೆ ಕೈಯ್ಯಾಡಿಸಿದೆನು. ಸ್ವಲ್ಪ ಸಮಯದ ವರೆಗೆ ಅಲ್ಲೇನೂ ಇರಲಿಲ್ಲ. ಪುನಃ ಹಾಗೆಯೇ ಮುಖವು ಕಾಣುತ್ತಿತ್ತು.

ಕುಳಿತವರೆಲ್ಲರೂ ಇನ್ನಷ್ಟು ಹತ್ತಿರ ಬಂದೆವು. ಶಾಮರಾಯರು ಈಗಲೂ ಭಯಾಕ್ರಾಂತರಾಗಿದ್ದಂತೆ ಕಂಡಿತು. ಕತೆಯನ್ನು ಅವರು ಸ್ವಲ್ಪ ನಿಲ್ಲಿಸಿ ಬಿಟ್ಟರು. 'ಮುಂದರಿಸಿರಿ ಮುಂದರಿಸಿರಿ' ಎಂದು ಎಲ್ಲರೂ ಕೂಗಿದರು. ಶಾಮರಾಯರು ಮುಂದರಿಸಿದರು—'ಇಂತಹದೊಂದು ಮುಖವು ಯಾರಿಗಾದರೂ ಇರಬಹುದೆಂದು ನಾನು ಯೋಚಿಸಿದೆನು. ಮತ್ತು ಈ ಮುಖವಿರುವವರ್‍ಯಾದರೂ ಇದ್ದಾರೋ ಎಂದು ಹುಡುಕಾಡಹತ್ತಿದೆನು. ಜನ ಸಂದಣಿಯುಳ್ಳಲ್ಲೆಲ್ಲಾ ನಿಂತುಕೊಂಡು ಬರುತ್ತಿರುವ ಮುಖಗಳನ್ನೆಲ್ಲ ನೋಡಹತ್ತಿದೆನು. ರೈಲ್ವೆ ಸ್ಟೇಶನ್ನು, ಸಿನೆಮಾ ಮಂದಿರ, ಕ್ರಿಕೆಟ್ ಮೇಚ್ ಈ ಕಡೆಗಳಿಗೆಲ್ಲಾ ಹೋಗಿ ನನ್ನ ಗೋಡೆಯಲ್ಲಿ ಕಾಣುವ ಮುಖದವರು ಯಾರಾದರೂ ಇದ್ದಾರೋ ಎಂದು ನೋಡುತ್ತಾ ನನ್ನ ಸಮಯವನ್ನೆಲ್ಲಾ ಕಳೆದೆನು. ಒಮ್ಮೆ ನನ್ನ ಎದುರಿಗೊಂದು ಕಾರು ಹೋಯಿತು ಅದರಲ್ಲಿ ಒಬ್ಬನ ಕುಳಿತಿದ್ದನು ಅವನನ್ನು ನೋಡುವಾಗ - ಛೇ! ಅವನೇ 'ನನ್ನ ಗೋಡೆಯಲ್ಲಿರುವ ಮುಖದವನೆಂದು ಕಂಡಿತು. ನಾನು ಒಂದು ಟೇಕ್ಸಿಯಲ್ಲಿ ಕುಳಿತು ಅವನ ಹಿಂದೆ ಓಡಿದೆ. ಆದರೂ ಅವನನ್ನು ನಿಲ್ಲಿಸುವಷ್ಟು ಧೈರ್ಯ ನನಗಿರಲಿಲ್ಲ. ಅವನ ಹಿಂದೆಯೇ ಓಡಿದೆನು. ಅವನು ಸಮುದ್ರದ ಬದಿಯಲ್ಲಿರುವ ಒಂದು ದೊಡ್ಡ ಬಂಗಲೆಯ ಹತ್ತಿರ ನಿಂತನು. ನಾನೂ ನಿಂತೆನು. ಅವನು ಕೆಳಗಿಳಿದು ನನ್ನ ಕಾರಿನ ಹತ್ತಿರ ಬಂದು 'ನೀನ್ಯಾರು, ನಿನಗೇನು ಬೇಕೆ'ಂದು ಕೇಳಿದನು. ಅವನ ಮುಖವು ನನ್ನ ಕಾರಿನ ಲೈಟಿನಲ್ಲಿ ನನಗೆ ಸರಿಯಾಗಿ ಕಂಡಿತು ಅದೇ ಮುಖ, ಅವೇ ಕಣ್ಣುಗಳು, ಅವೇ ಕೆನ್ನೆಗಳು, ಅದೇ ತುಟಿ ಅದೇ ಹಣೆ ನಾನು ಅವನ ಮುಖವನ್ನೇ ನೋಡುತ್ತಿರುವಾಗ ಅವನು ಪುನಃ– ನಿನಗೇನು ಬೇಕೆಂದು ಕೇಳಿದನು. ನನಗೇನು ಹೇಳಬೇಕೆಂದು ತಿಳಿಯಲಿಲ್ಲ. ಆದರೂ ಧೈರ್ಯ ತಾಳಿ– ತಮ್ಮ ಹತ್ತಿರ ಸ್ವಲ್ಪ ಕೆಲಸವಿದೆ ಇನ್ನೊಮ್ಮೆ ಬರುತ್ತೇನೆಂದೆನು. 'ಒಳ್ಳೇದು' ಎನ್ನುತ್ತಾ ಅವನು ಗೇಟಿನ ಒಳಗೆ ಹೋದನು. ಗೇಟಿನಲ್ಲಿ 'ಗಂಗಾರಾಮ್ ಶೇಟ್' ಎಂದು ಗ್ಲಾಸಿನ ಬೋರ್ಡ ಇತ್ತು. ನಾನು ಹಿಂತಿರುಗಿ ಮನೆಗೆ ಬಂದು ಗೋಡೆಯಲ್ಲಿದ್ದ ಮುಖ ನೋಡಿದೆನು. –ಛೇ ಅದೇ ಮುಖ ಅದೇ ಕಣ್ಣು ಅದೇ ಹಣೆ ಅದೇ ತುಟಿ ಅವೇ ಕೆನ್ನೆಗಳು,

ಶಾಮರಾಯರು ಕತೆಯನ್ನು ಅಲ್ಲೇ ನಿಲ್ಲಿಸಿ ನಮ್ಮನ್ನು ನೋಡಿದರು. 'ಮುಂದರಿಸಿರಿ' ಎಂದು ನಾವು ಪುನಃ ಕೂಗಿದೆವು. ಅವರು ಹೇಳತೊಡಗಿದರು. ಅನಂತರ ನಾನು ಎರಡು ಮೂರು ಸಲ ಗಂಗಾರಾಮ ಶೇಟರ ಬಂಗಲೆ ಕಡೆಗೆ ಹೋದೆನು. ಅವರು ಇರಲಿಲ್ಲ. ಕಳೆದ ಮೇ ತಾ. 20ರಲ್ಲು ನಾನು ಕ್ರೋನಿಕಲ್ ಪತ್ರಿಕೆಯಲ್ಲಿ 'ಗಂಗಾರಾಮ ಶೇಟರ ಕಾರಿನ ಅಪಘಾತ' ಎಂಬ ದೊಡ್ಡ ಶಿರೋನಾಮೆಯನ್ನು ಓದಿದೆನು. ನನ್ನ ಎದೆ ಧಡಕ್ಕೆನಿಸಿತು. ಆಸ್ಪತ್ರೆಯಲ್ಲಿದ್ದಾರೆಂದೂ ಅವರ ಅವಸ್ಥೆ ಕಠಿಣವಿದೆಯೆಂದೂ ಅದರಲ್ಲಿ ಬರೆದಿತ್ತು. ಯಾವ ಆಸ್ಪತ್ರೆಯಲ್ಲಿ ಎಂದು ಬರೆದಿರಲಿಲ್ಲ. ನಾನು ಕೂಡಲೇ ಕೋಣೆಗೆ ಬಂದು ಅಲ್ಲಿ ಗೋಡೆಯಲ್ಲಿದ್ದ ಮುಖವನ್ನು ನೋಡಿದೆನು. ಅದು ಬಹಳ ಕಂದಿಹೋಗಿದ್ದಿತು. ನನಗೆ ಮತ್ತಷ್ಟು ಭಯವಾಯಿತು. ಮರುದಿನ ಸಾಯಂಕಾಲದ ಕ್ರೋನಿಕಲ್ ತೆಗೆದುಕೊಂಡು ಬಿಡಿಸಿದೆ. ಶೇಟ್ ಗಂಗಾರಾಮರ ಶೋಚನೀಯ ಮರಣ-ವೆಂಬ ಶಿರೋನಾಮೆಯನ್ನು ನೋಡಿದೆನು. ಕೂಡಲೇ ಗಾಬರಿಯಾಗಿ ನನ್ನ ಕೋಣೆಗೆ ಓಡಿ ಬಂದು ಗೋಡೆಯಲ್ಲಿ ನೋಡಿದೆ. ಆ ಮುಖವಿರಲಿಲ್ಲ ಅದರ ಚಿಹ್ನೆ ಕೂಡಾ ಇರಲಿಲ್ಲ. ಸಂಪೂರ್ಣ ಮಾಯವಾಗಿತ್ತು. ಎನ್ನುತ್ತಾ ಶಾಮರಾಯರು ನಮ್ಮ ಕಡೆಗೆ ನೋಡಿದರು "ಆಶ್ಚರ್ಯ–ಅತ್ಯಾಶ್ಚರ್ಯ ಬಹಳ ವಿಚಿತ್ರ"-ಎಂದು ನಾವು ಅಂದೆವು. ಶಾಮರಾಯರು–"ಹೌದು ಆಶ್ಚರ್ಯ–ಇದರಲ್ಲಿ ವಿಚಿತ್ರವಾದ ಸಂಗತಿಗಳು 3. ಗಂಗಾರಾಮರ ಮುಖದಂತೆಯೇ ಗೋಡೆಯಲ್ಲಿ ಮುಖ ಕಂಡದ್ದು ಒಂದು, ಅವರು ಮರಣಪಟ್ಟ ಕೂಡಲೇ ಅದು ಮಾಯವಾದದ್ದು ಎರಡು"-ಎನ್ನುತ್ತಾ ಶಾಮರಾಯರು ಬಂಡೆಯಿಂದ ಕೆಳಗೆ ಇಳಿದರು. ಸ್ವಲ್ಪ ಮುಂದೆ ಹೋಗಿ–ನನಗೆ ತಡವಾಗುತ್ತದೆ ನಾನು ಹೋಗುತ್ತೇನೆ ನಮಸ್ಕಾರವೆಂದರು. ಅಷ್ಟರಲ್ಲಿ ರಾಮಣ್ಣನು-ಶಾಮರಾಯರೇ–ವಿಚಿತ್ರವಾದ ಸಂಗತಿಗಳು ಮೂರು ಎಂದಿರಲ್ಲಾ! ಮೂರನೇ ಸಂಗತಿ ನೀವು ಯಾವುದೆಂದು ಹೇಳಲಿಲ್ಲ. ಎಂದು ಕೂಗಿದ-ಶಾಮರಾಯರು ಹಿಂತಿರುಗಿ-ಹೌದು ಅದನ್ನು ಮರೆತುಬಿಟ್ಟೆ-ನೀವೆಲ್ಲರೂ ಈ ಕತೆಯನ್ನು ಸತ್ಯವೆಂದು ನಂಬಿದ್ದೇ ಮೂರನೇ ವಿಚಿತ್ರ ಸಂಗತಿ ಎಂದು ನಗಾಡುತ್ತಾ ಅವರು ಮುಂದುವರಿದರು. ನಾವು ಒಬ್ಬರ ಮುಖವನ್ನು ಒಬ್ಬರು ನೋಡುತ್ತಾ ಸ್ವಲ್ಪ ಹೊತ್ತು ಕುಳಿತು ಮನೆಗೆ ನಡೆದೆವು. ಆದರೆ ಈ ಕತೆ ಸುಳ್ಳೆಂದು ನಮ್ಮಲ್ಲಿ ಕೆಲವರು ಈಗಲೂ ನಂಬುವುದಿಲ್ಲ.

ನಿಮ್ಮ ಪೂರ್ಣ ತೃಪ್ತಿಗಾಗಿ ಯಾವಾಗಲೂ
ಉತ್ತಮ ಮಾಲನ್ನೆ ಕೊಂಡುಕೊಳ್ಳಿರಿ

ನೀವು ತೃಪ್ತಿಹೊಂದಿದರೆ ದಯಮಾಡಿ ಇತರರಿಗೂ ಶಿಫಾರಸು ಮಾಡಿರಿ
ಇಲ್ಲವಾದರೆ ನಿಮ್ಮ ದೂರು ಏನೆಂಬುದನ್ನು ತಿಳಿಸಿರಿ.

ಅಂದವಾದ ಆಕೃತಿ
ಉತ್ತಮವಾದ ಮಾಲು ಗಟ್ಟಿ ಮತ್ತು ಚಾಲ್ತಿ

ನಂಬ್ರ 401



ನಂಬ್ರ 424–458



ನಂಬ್ರ 428



15 ವಜ್ರಗಳುಳ್ಳ ಲಿವರ್ ಚಲನೆ
ನಂ. 490 ರೋಲ್ಡ್‌ಗೋಲ್ಡ್ 10ವರ್ಷ 23 12
ನಂ. 491 9 ಕ್ಯಾರೆಟ್ ಚಿನ್ನ ರೂ. 34– 0
ಅಂಚೆ ವೆಚ್ಚಕ್ಕೆ 9 ಆಣೆ ಹೆಚ್ಚಿಗೆ
ಹೆಚ್ಚಿನ ವಿವರಗಳಿಗೆ ನಮ್ಮ ಹೊಸ ಕೆಟಲಾಗು ನಂಬ್ರ 16ತರಿಸಿರಿ (ಪತ್ರವ್ಯವಹಾರ ಇಂಗ್ಲಿಷಿನಲ್ಲಿ)

ಎಲ್ಲಾ ಸ್ವಿಸ್ ತಯಾರಿ
ಗ್ಯಾರಂಟಿಯುಳ್ಳ ಲಿವರ್ ವಾಚು
ವೃತ್ತ ಅಥವಾ ಚೌಕಾಕಾರ

ನಂ.401 ಕ್ರೋಮಿಯಂ ಕವಚ ರೂ.4 4
ನಂ.402 ಚಿನ್ನದ ಕವಚ ರೂ.5 2
ನಂ.424 ಕ್ರೋಮಿಯಂ ಕವಚ ರೂ.8 8
ನಂ.425 ಚಿನ್ನದ ಕವಚ ರೂ 9 6
ನಂ.425 ರೋಲ್ಡ್‌ಗೋಲ್ಡ್ 10ವ. 15-4

15 ವಜ್ರಗಳುಳ್ಳ ಲೀವರ್
ನಂ.458 ಕ್ರೋಮಿಯಂ ಕವಚರೂ 17-0
ನಂ.458 ರೋಲ್ಡ್‌ಗೋಲ್ಡ್ ರೂ.22-2
ವಜ್ರಕೂಡ್ರಿಸಿದ ಲೀವರ್ ಚಲನೆ
ನಂ.428 ಕ್ರೋಮಿಯಂ ರೂ.10-4
ನಂ.430 ರೋಲ್ಡ್‌ಗೋಲ್ಡ್ 10ವ.17-0

ಸ್ತ್ರೀಯರಿಗೆ ಪುಟ್ಟವಾಚು
ನಂ.460 490



ಜಿನೇವ ಚಲನೆ
ನಂ.460 ಕ್ರೋಮಿಯಂ ಕವಚ ರೂ.11-14
ನಂ.461 ಚಿನ್ನದ ಕವಚ ರೂ.13-10
ನಂ.462 ರೋಲ್ಡ್‌ಗೋಲ್ಡ್ 10ವ. 17-0

BAPALAL & CO.,
101, Abdul Rehman Street, BOMBAY, 3.

ಬಾಲಸಾಹಿತ್ಯಮಂಡಲ ಲಿಮಿಟೆಡ್

—•— ನಮ್ಮ ಹೊಸ ಪ್ರಕಟಣೆಗಳು —•—

ಈ ಕೆಳಗಿನ ನಮ್ಮ ಹೊಸ ಪ್ರಕಟಣೆಗಳು

ಕ್ಲಾಸು ಉಪಯೋಗಕ್ಕೆ

ಮದ್ರಾಸ್ ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಮಂಜೂರಾತಿ ಪಡೆದಿದೆ.

Vide consocidated list of approved books Fort. St. Georg. Gazate Nos. 17A & 17B d/30-1-40 pages. 59, 60, 62, 68, 70, 71, 86, 87, 88, 92 & 155.

1. **ಹೊಸ ಕನ್ನಡಪಾಠಮಾಲೆ** 1, 2, 3, 4 ಮತ್ತು 5ನೇ ದರ್ಜೆಗಳಿಗೆ.
2. **ನೂತನ ಬಾಲಗಣಿತ** 3, 4, 5ನೇ ದರ್ಜೆಗಳಿಗೆ ಮತ್ತು VI VII ಮತ್ತು VIII ದರ್ಜೆಗಳಿಗೆ ಅಥವಾ I, II & III ಫಾರ್ಮುಗಳಿಗೆ.
3. **ನೂತನ ಸಾಮಾನ್ಯ ಗಣಿತ** IV ಫಾರ್ಮಿಗೆ
4. **ಭಾರತದ ಇತಿಹಾಸ** I, II, III, IV ಮತ್ತು V ಫಾರ್ಮುಗಳಿಗೆ.
5. „ VI, VII ಮತ್ತು VIIIನೇ ದರ್ಜೆಗಳಿಗೆ.

ಶಾಲಾ ಸೌಕರ್ಯಗೋಸ್ಕರವಾಗಿ ಇದೇ ಜೂನ್ 1ರಿಂದ ನಮ್ಮ ಒಂದು ಶಾಖೆಯನ್ನು ಉಡುಪಿಯ ಶಿರಿಬೀಡಿನಲ್ಲಿ ತೆರೆದಿರುತ್ತೇವೆ.

ಹೆಚ್ಚಿನ ಮಾಹಿತಿಗೆ ಈ ಕೆಳಗಿನವರಿಗೆ ಬರೆದುಕೊಳ್ಳಿರಿ:-

Madiman Padmanabhaya,

***Agent*: Balashathya Mandal Ltd.**

Udipi Branch.

ಅಂತರಂಗ

CINEMA SPECIAL NUMBER

ಅಥವಾ

" ಚಲಚ್ಚಿತ್ರಾಂಕ "

ತಾ. 30—6—'40ಕ್ಕೆ ಹೊರಬೀಳಲಿದೆ.

ಜಾಹೀರಾತಿಗೆ ಉತ್ತಮಸಾಧನ. ದರಗಳಿಗೆ ಬರೆಯಿರಿ.

Advertisement Manager,

Antaranga, Udipi.

ತುಂಗಭದ್ರಾ ಪ್ರೇಮ ವಿದ್ಯಾಪೀಠದ ಪದವೀಧರರಿಗೆ

ನಮ್ಮ ವಿದ್ಯಾಪೀಠದ ಭಿಷಗ್ವರ, ಆಯುರ್ವೇದ ಶಿರೋಮಣಿ ಮುಂತಾದ ಡಿಗ್ರಿಗಳೂ ಮತ್ತು ನಿಖಿಲಭಾರತ ಆಯುರ್ವೇದ ಮಹಾಮಂಡಲದ ಭಿಷಕ ಪದವಿಯೂ ಬೊಂಬಾಯಿ ಸರಕಾರದಲ್ಲಿ ಮಾನ್ಯವಾಗಿದೆಯೆಂದೂ, ಮತ್ತು ಅವುಗಳನ್ನು ಪಡೆದವರು ಆ ಸರಕಾರದಲ್ಲಿ ರಿಜಿಸ್ಟರ್ ಮಾಡಿಕೊಳ್ಳಬಹುದೆಂದೂ ಆ ಪ್ರಾಂತ್ಯದ ಸುಪ್ರಸಿದ್ಧ ಪತ್ರಿಕೆಗಳಲ್ಲಿ ಸುಮಾರು ದಿನಗಳ ಹಿಂದೆಯೇ ಪ್ರಕಟವಾಗಿತ್ತು. ಆದರೆ ಈ ಪ್ರಾಂತ್ಯದ ಹಲವು ಕಡೆಗಳಲ್ಲಿ ವೈದ್ಯರಾಗಿರುವ ನಮ್ಮ ಪದವೀಧರರಿಗೆ ಈ ಸಂಗತಿಯು ತಿಳಿದುಬಂದಿರಲಿಕ್ಕಿಲ್ಲ. ಆದಕ್ಕಾಗಿ ಈ ಮಾನ್ಯ ಪತ್ರಿಕೆಯ ದ್ವಾರಾ ಅವರಿಗೆ ತಿಳಿಯಪಡಿಸುವುದೇನೆಂದರೆ ತಮ್ಮ 'ರಿಜಿಸ್ಟ್ರೇಷನ್'ನ ಸಂಪೂರ್ಣ ಮಾಹಿತಿಗಾಗಿ ಅವರು ಕೆಳಗಿನ ವಿಳಾಸಕ್ಕೆ ಕೂಡಲೇ ಬರೆಯಬೇಕು.

ಪಂಡಿತ ತಾರಾನಾಥ

5-6-'40. **24,** ಹಾಸ್ಟೆಲ್ ರೋಡ್, ಬಸವನಗುಡಿ. ಬೆಂಗಳೂರು.

ಟೀಕೆ ಟಿಪ್ಪಣಿ

ಈಗ ಬುದ್ಧಿ ಬಂತು.

ಸರ್. ಸ್ಟಾಫೋರ್ಡ್ ಕ್ರಿಪ್ಸರು ಒಮ್ಮೆ ಇಂಗ್ಲೆಂಡಿನಲ್ಲಿ ಯಾರಿಗೂ ಬೇಡವಾದ ವ್ಯಕ್ತಿಯಾಗಿದ್ದರು. ಬ್ರಿಟಿಷ್ ಲೇಬರ್‌ಪಕ್ಷದಿಂದಲೂ ಸಹಾ ಹೊರದಾಕಲ್ಪಟ್ಟಿದ್ದರು. ಅವರು ಕೆಲತಿಂಗಳ ಮೊದಲು ಹಿಂದುದೇಶಕ್ಕೆ ಬಂದಿದ್ದಾಗ ಡೆಲ್ಲಿಯ ಅಧಿಕಾರಿಗಳು ಅವರನ್ನು ಕಡೆಗಣಿಸಿದ್ದರು. ಸೋವಿಯೆಟ್ ರಷ್ಯವು ಫಿನ್ಲೆಂಡಿನ ಮೇಲೆ ಧಾಳಿ ನಡಿಸಿದುದರಲ್ಲಿ ತಪ್ಪಿಲ್ಲೆಂಬುದ್ದೆಯದಿಂದ ಹೇಳಿದವರವರು. ಇಂದೀಗ ಅವರೇ ರಷ್ಯದ ಬ್ರಿಟಿಷ್ ರಾಯಭಾರಿಯಾಗಿ ನೇಮಕ ಹೊಂದಿದ್ದಾರೆ. ಒಮ್ಮೆ ರಷ್ಯವನ್ನು ವಿಶೇಧಿಸಿ ದೂಡೀಕರಿಸಿದ ಬ್ರಿಟಿಷ್ ಮತ್ತು ಫ್ರೆಂಚ್ ಸರಕಾರಗಳು ಈಗ ಅದನ್ನೊಲಿಸಿಕೊಳ್ಳಲೆತ್ನಿಸುತ್ತಿವೆ. ಇದೇ ಬುದ್ಧಿ ಮೊದಲೇ ಬಂದಿದ್ದರೆ ಯುರೋಪಿನ ಭಯಂಕರ ಪ್ರಳಯವೇ ನಿವಾರಿಸಲ್ಪಡುತ್ತಿದ್ದಿತೋ ಏನೋ?

೨೪ ಘಂಟೆಗಳಲ್ಲಿ ಮಾರ್ಪಾಟು.

ಕಡು 'ಕನ್‌ಸರ್ವೇಟಿವ್' ಆಗಿದ್ದ ಇಂಗ್ಲೆಂಡ್ 24 ಘಂಟೆಗಳಲ್ಲೇ ಬಹುತೇ "ಸೋಸಿಯಲಿಸ್ಟ್" ಆಗಿಹೋಗಿರುವುದು. ಇಂದೀಗ ಇಂಗ್ಲೆಂಡಿನ ಪ್ರಜೆಗಳೂ ಅವರ ಸಕಲ ಸಂಪತ್ತೂ ಸರಕಾರದ ಸೊತ್ತಾಗಿದೆ. ಸರಕಾರವು ಅವನ್ನು ಬೇಕಾದಾಗ ತನಗೆ ತೋರಿದಂತೆ ಉಪಯೋಗಿಸಬಹುದು. ರಷ್ಯದಲ್ಲಿಯೂ ಇಂತಹ ಮಾರ್ಪಾಟುವಾಗಿಲ್ಲೆಂದು, ಮೊದಲು ಬ್ರಿಟಿಷ್ ಸರಕಾರವನ್ನು ಕಟುವಾಗಿ ಟೀಕಿಸುತ್ತಿದ್ದ ಮಿ. ವೆಲ್ಸ್, ಬೆರ್ನಾರ್ಡ್ ಶೋರವರೇ ಮೊದಲಾದವರು ಈಗ ಬಹಳವಾಗಿ ಪ್ರಶಂಸಿಸಹತ್ತಿದ್ದಾರೆ.

ಸಾಮ್ರಾಜ್ಯ ಘೋರಣೆಯು ಯಥಾಪ್ರಕಾರ.

ಬ್ರಿಟನಿನ ಅಂತರಿಕ ಆಡಳಿತವು ವಿಚಿತ್ರ ಮಾರ್ಪಾಟೊಂದಿದರೂ ಅದರ ಸಾಮ್ರಾಜ್ಯ ಘೋರಣೆ ಒಂದಿಷ್ಟು ಮಾರ್ಪಟ್ಟಿಲ್ಲ. ಅದು ಹಿಂದುಸ್ಥಾನದಲ್ಲಿ ಶಾಂತಿಸಮಾಧಾನವ ನೆಲೆಗೊಂಡಂತೆ ವರ್ತಿಸುತ್ತಿದೆ. ಇಂಗ್ಲೆಂಡಿನ ಯುದ್ಧಕ್ಕೆ ಆದಷ್ಟು ಸಹಾಯ ಮಾಡಲು ಯುದ್ಧ ಕಮಿಟಿಗಳು ನೇಮಿಸಲ್ಪಡುತ್ತಿವೆ. ಅಂತರಿಕ ಗಲಾಟೆಗಳೇನಾದರೂ ಎದ್ದರೆ ಅವನ್ನಡಗಿಸಿ ಶಾಂತಿ ಸ್ಥಾಪಿಸಲು ಪೋಲೀಸ್ ಖಾತೆಯ ಒಂದು ಅಂಗವಾಗಿ ಸಿವಿಲ್ ಗಾರ್ಡರನ್ನು ಸೇರಿಸುವ ಏರ್ಪಾಡು ನಡೆದಿದೆ. ವೈಸರಾಯರು ಇತ್ತಲಾಗಿ ಕೊಟ್ಟ ಎರಡು ಭಾಷಣಗಳಲ್ಲೂ ಹಿಂದೀ ರಾಜಕೀಯ ಬಿಕ್ಕಟ್ಟಿನ ಪ್ರಸ್ತಾಪವನ್ನೇ ಎತ್ತದೆ ಮೌನವ ಹಿಡಿದಿದ್ದಾರೆ.

ಹಿಂದೀ ಸ್ವಾತಂತ್ರ್ಯ ಪ್ರಶ್ನೆ

ಬ್ರಿಟನು ಲೋಕದ ಪ್ರಜಾಸತ್ತೆಯ ರಕ್ಷಣೆಗಾಗಿ ಹೋರಾಡುವಾಗ ತನ್ನಾಧೀನ ರಾಜ್ಯವಾದ ಹಿಂದೂದೇಶಕ್ಕೆ ಪ್ರಜಾಸತ್ತೆಯನ್ನು ನಿರಾಕರಿಸಿ, ಗುಲಾಮಗಿರಿಯಲ್ಲಿರಿಸುವುದು ಅನುಚಿತವಾಗಿದೆ. ಇದರಿಂದಲೇ ಅಮೇರಿಕದ ಯುನೈಟೆಡ್ ಸ್ಟೇಟನಲ್ಲಿ ಜನಮತವು ಇಂಗ್ಲೆಂಡಿಗೆ ಅನುಕೂಲವಿರದಂತಾಗಿದೆ. ಅದು ನಿಜವಾಗಿಯೂ ಪ್ರಜಾಸತ್ತೆಗಾಗಿ ಹೋರಾಡುವುದೆಂಬುದನ್ನು ಅನೇಕರು ನಂಬದಂತಾಗಿದೆ. ಆದುದರಿಂದ ಹಿಂದೀ ಪ್ರಶ್ನೆಯನ್ನು ಮುಂದುವರಿಸುತ್ತಾ ಹೋಗದೆ ಕೂಡಲೆ ಇತ್ಯರ್ಥಗೊಳಿಸಬೇಕು, ಹೊಸ ಇಂಡಿಯಾ ಸಕ್ರೆಟರಿಗಳಾದ ಮಿ. ಅಮೆರಿಯವರು ಹಿಂದೂದೇಶಕ್ಕೆ ಹೋಗಿ ಹಿಂದೀ ರಾಜಕೀಯ ಮುಖಂಡರೊಡನೆ ಮಾತಾಡಬೇಕು. ಹಿಂದೂದೇಶಕ್ಕೆ ಸ್ವಾತಂತ್ರ್ಯವಿತ್ತರೆ ಮಾತ್ರ ಬ್ರಿಟನಿಗೆ ಇಡೀ ಲೋಕದ ನೈತಿಕ ಬಲ ದೊರೆಯುವಂತಾಗುವುದು. ಹಿಂದೀಯರು ಅತ್ಯಂತ ಸಂತೋಷ ಮತ್ತು ಉತ್ಸಾಹದಿಂದ ಜನಧನ ಸಹಾಯ ಮಾಡುವಂತಾಗುವುದೆಂದು ಇಂಗ್ಲೆಂಡಿನ ಮೆಂಚೆಸ್ಟರ್ ಗಾರ್ಡಿಯನ್ ಮತ್ತು ನ್ಯೂಸ್ ಕ್ರೋನಿಕಲ್ ಪತ್ರಿಕೆಗಳು ಸಾರಹತ್ತಿವೆ. ಆದರೆ ಇದಕ್ಕೆ ಬ್ರಿಟಿಷ್ ಸರಕಾರವು ಎಷ್ಟರಮಟ್ಟಿಗೆ ಕಿವಿಗೊಡುವುದೋ?

ಹಿಂದೀ ವೈಮಾನಿಕರ ತರಬೇತಿ

ಸಿವಿಲ್ ವಿಮಾನ ಕ್ಲಬ್ಬುಗಳು ಕಳೆದ 10ವರ್ಷಗಳಿಂದ ಹಿಂದೂದೇಶದಲ್ಲಿ ಕೆಲಸಮಾಡುತ್ತಾಬಂದಿರುವವಾದರೂ ಲೈಸೆನ್ಸ್ ಪಡೆದ ವೈಮಾನಿಕರು ತರಬೇತಿಹೊಂದಿದುದು ಕೇವಲ 500ಮಂದಿ. 2ಮಿಲ್ಯ ಚದರೌಕ ಮೈಲು ವಿಸ್ತೀರ್ಣವಿರುವ ಜನಸಂಖ್ಯೆಯು 350ಮಿಲ್ಯಕ್ಕಿಂತಲೂ ಮಿಕ್ಕಿದ ದೇಶದಲ್ಲಿ 10ವರ್ಷಗಳಲ್ಲಿ ತರಬೇತಾದ ವೈಮಾನಿಕ ಸಂಖ್ಯೆಯಿದು. ಜರ್ಮನಿಯು ಆರೇಳು ವರ್ಷಗಳಲ್ಲಿ ಒಂದು ಮಿಲ್ಯ ವೈಮಾನಿಕರನ್ನು ಹೋರಾಡಲು ತರಬೇತಿ ಮಾಡಿರುವುದು. ಹಿಂದೂದೇಶದ 10ವೈಮಾನಿಕ ಕ್ಲಬ್ಬುಗಳೇ ವರ್ಷಕ್ಕೆ 1200 ಮಂದಿ ವೈಮಾನಿಕರನ್ನು ತರಬೇತಿಮಾಡಬಹುದು. ಒಬ್ಬ ವೈಮಾನಿಕನನ್ನು ಸರಿಯಾಗಿ ತರಬೇತಿಮಾಡಲು ಒಟ್ಟು ತಾಗುವ ವೆಚ್ಚವೆಂದರೆ ರೂ. 800. ಸರಕಾರವು ಇದಕ್ಕೆ ಗಮನಕೊಡಲೇ ಇಲ್ಲ. ಈಗ ಮಾತ್ರ ಅದು ಕಣ್ದೆರೆದಿದೆ.

ಖಾಕ್ಸಾರರ ಗಲಾಟೆ

ಈಗ ಹಲವು ವಾರಗಳಿಂದ ಪಂಜಾಬಿನಲ್ಲಿ ಖಾಕ್ಸಾರರ ಗಲಾಟೆಯು ಪ್ರಬಲವಾಗಿದೆ. ಈ ಖಾಕ್ಸಾರರಿಗೂ ಜರ್ಮನ್ ನಾಝಿಗಳಿಗೂ ಸಂಬಂಧವಿರುವುದೆಂಬ ಕುರಿತು ರುಜುವಾತುಗಳೇನ ದೊರೆತಿವೆ ಆದರೂ ಸರಕಾರವು ಆ ಚಳವಳವನ್ನು ವಜ್ರಹಸ್ತದಿಂದ ಅಡಗಿಸದೆ ಸಂಧಿಮಾತಲು ಹಾತೊರೆಯುತ್ತಿದೆ. ಲಾಹೋರಿನಲ್ಲಿ ಪೋಲೀಸರು ಖಾಕ್ಸಾರರ ಮೇಲೆ ಎರಡು ಸಲ ಗೋಳಿಬಾರು ಮಾಡಿದರೂ ಅವರು ಬೆದರದೆ ಪೋಲೀಸರನ್ನು ಧಿಕ್ಕರಿಸಿ ಬೆಲ್ಚಗಳನ್ನು ಹಿಡಕೊಂಡು, ಪೋಷಾಕು ಹಾಕಿ ರಸ್ತೆಗಳಲ್ಲಿ ನಡೆದುಹೋಗುತ್ತಾರೆ. ಹೆಚ್ಚಾಗಿ ಮಸೀದಿಗಳು ಅವರ ಆಶ್ರಯ ಸ್ಥಳಗಳಾಗಿವೆ.

(೭ನೇ ಪುಟಕ್ಕೆ ಮುಂದರಿಯುವುದು)

ದಿಗಿಲುಗೊಳ್ಳಲು ಯಾವ ಕಾರಣವು ಇಲ್ಲ.

ಪಾಶ್ಚಾತ್ಯ ಜನಾಂಗಗಳಿಂದ ಕಲಿಯತಕ್ಕ ಪಾಠ

ಜನತೆಗೆ ಮಹಾತ್ಮಾ ಗಾಂಧಿಯವರ ಸಲಹೆ

ಇಂದೀಗ ಜನತೆಯಲ್ಲಿ ನಾನಾ ಸುದ್ದಿಗಳು ಹಬ್ಬಿ ಜನರು ದಿಗಿಲುಗೊಳ್ಳುತ್ತಿರುತ್ತಾರೆ. ಪತ್ರಿಕೆಗಳಲ್ಲಿ ಪ್ರಕಟವಾಗುವುದಕ್ಕಿಂತಲೂ ಹೆಚ್ಚಿನ ಸುದ್ದಿಗಳು ತಲೆಬುಡವಿಲ್ಲದೆ ಬಾಯಿಂದ ಬಾಯಿಗೆ ಹಬ್ಬಿಬಿಡುತ್ತವೆ. ಈ ಕುರಿತು ಮಹಾತ್ಮ ಗಾಂಧಿಯವರು ಹರಿಜನ ಪತ್ರಿಕೆಯಲ್ಲೊಂದು ಲೇಖನಬರೆದಿರುತ್ತಾರೆ.

"ದಿಗಿಲಿನಷ್ಟು ಅಧೀರಗೊಳಿಸುವ ಸಂಗತಿ ಇನ್ನೊಂದಿಲ್ಲ. ಇಂದೀಗ ಹಿಂದೀಯರು ದಿಗಿಲುಗೊಳ್ಳಲು ಯಾವ ಕಾರಣವೂ ಇರುವುದಿಲ್ಲ. ಏನು ಸಂಭವಿಸಿದರೂ ಒಬ್ಬನು ಧೃತಿಗೆಡಬಾರದು. ಯುದ್ಧವು ಭಯಂಕರ ಹಾನಿಕಾರಕವಾದುದು. ಆದರೆ ಅದು ಭೀತಿಯನ್ನೋಡಿಸಿ ಧೈರ್ಯವನ್ನು ಮೇಲಕ್ಕೆ ತರುವುದು.

ಇಷ್ಟರ ವರೆಗೆ ಮಿತ್ರರಾಷ್ಟ್ರಗಳ ಮತ್ತು ಜರ್ಮನರ ಕಡೆಯಲ್ಲಿ ಹಲವು ಲಕ್ಷ ಜನರ ಪ್ರಾಣ ನಷ್ಟವಾಗಿರಬೇಕು. ಅವರು ನೀರಿನಂತೆ ರಕ್ತವನ್ನು ಸುರಿಸುತ್ತಿರುವರು. ಇಂಗ್ಲೆಂಡ್ ಮತ್ತು ಫ್ರಾನ್ಸುಗಳಲ್ಲಿ ವೃದ್ಧರು, ಸ್ತ್ರೀಯರು ಮತ್ತು ಮಕ್ಕಳು ಯಾವಾಗ ತಮ್ಮ ನಾಶವುಂಟಾಗುವುದೋ ಎಂಬ ಭೀತಿಯಿಂದ ಜೀವಿಸಬೇಕಾಗಿದೆ. ಆದರೂ ಅವರಲ್ಲಿ ದಿಗಿಲಿಲ್ಲ. ಅವರು ದಿಗಿಲಿಗೆ ಬಲಿಬಿದ್ದರೆ, ಜರ್ಮನ್ ಗುಂಡು, ಬಾಂಬು ಮತ್ತು ವಿಷ ವಾಯುವಿಗಿಂತಲೂ ಅದೇ ಅವರ ದೊಡ್ಡ ವೈರಿಯಾಗುವುದು. ಸಂಕಷ್ಟಕ್ಕೊಳಗಾಗಿರುವ ಈ ಪಾಶ್ಚಾತ್ಯ ಜನಾಂಗಗಳಿಂದ ನಾವು ಪಾಠ ಕಲಿತು ದಿಗಿಲನ್ನು ನಮ್ಮಿಂದ ಉಚ್ಚಾಟನೆ ಮಾಡುವ. ಹಿಂದು ದೇಶದಲ್ಲಿ ದಿಗಿಲಿಗೆ ಯಾವ ಕಾರಣವೂ ಇರುವುದಿಲ್ಲ. ಬ್ರಿಟನು ಅಳಿಯುವುದೇ ಕಷ್ಟ. ಒಂದುವೇಳೆ ಅಳಿಯುವುದಾದರೂ ವೀರ ಮರಣವನ್ನದು ಪಡೆಯುವುದು. ಅಪಜಯದ ಸಂಗತಿಗಳನ್ನು ನಾವು ಕೇಳಬಹುದು. ಆದರೆ ಧೃತಿಗೆಟ್ಟು ಉತ್ಸಾಹ ಭಗ್ನವಾದುದನ್ನು ನಾವು ಎಂದೂ ಕೇಳಲಾರೆವು. ಏನು ಸಂಭವಿಸುವುದಾದರೂ ಕ್ರಮವಾಗಿ ನಡೆಯುವುದು. ಅದುದರಿಂದ ನನ್ನ ಮಾತಿಗೆ ಕಿವಿಗೊಡುವಂಥವರಿಗೆ ನಾನು ಹೇಳುವುದೇನೆಂದರೆ, 'ಎಂದಿನಂತೆ ನಿಮ್ಮ ಕೆಲಸ ಅಥವಾ ವ್ಯಾಪಾರ ವಹಿವಾಟನ್ನು ನಡಿಸುತ್ತಾ ಹೋಗಿರಿ. ನಿಮ್ಮ ಠೇವಣಾತಿ ಹಣಗಳನ್ನು ಹಿಂತೆಗೆಯಬೇಡಿರಿ. ನಿಮ್ಮ ಕರೆನ್ಸಿ ನೋಟುಗಳ ನಗದಿ ಹಣವನ್ನು ಪಡೆಯಲು ಅವಸರಗೊಳ್ಳಬೇಡಿರಿ. ನೀವು ಜಾಗರೂಕರಿದ್ದರೆ ಹೊಸ ಹೂಡಿಕೆಗಳನ್ನಾದರೂ ಮಾಡಬೇಡಿರಿ. ನೆಲದೊಳಗೆ ಹೂಳಿಡಲ್ಪಡುವ ಅಥವಾ ಮನೆಯೊಳಗೆ, ತಿಜೂರಿಯೊಳಗಿರಿಸಲ್ಪಡುವ ಧನವು ಬೇಂಕು ಅಥವಾ ಕರೆನ್ಸಿ ನೋಟುಗಳಲ್ಲಿ ಇರುವುದಕ್ಕಿಂತ ಭದ್ರವಾದುದೆಂದು ಪರಿಗಣಿಸಲು ಸಾಧ್ಯವಿಲ್ಲ. ಈಗ ಪ್ರತಿಯೊಂದರಲ್ಲಿಯೂ ಅಪಾಯವು ಇದ್ದೇ ಇದೆ. ಅಂತಹ ಪರಿಸ್ಥಿತಿಯಲ್ಲಿ ಇದ್ದಂತೆಯೇ ಇರುವುದು ಲೇಸು. ನಿಮ್ಮ ಸ್ಥಿರತೆಯೇ ಇತರರಲ್ಲಿಯೂ ನೆಲೆಗೊಂಡರೆ ಆ ಮೂಲಕ ಮಾರ್ಕೆಟು ಕೂಡಾ ಸ್ಥಿರಗೊಳ್ಳುವುದು. ಈಗಣಂತಹ ಪರಿಸ್ಥಿತಿಯಲ್ಲಿ ಪುಂಡಾಟಿಕೆಯ ಭೀತಿಯು ನಿಸ್ಸಂದೇಹವಾಗಿಯೂ ಇದೆ. ಅದನ್ನು ತಡೆಗಟ್ಟಲು ನೀವೇ ಸಿದ್ಧರಿರಬೇಕು. ಅಂಜುಬುರುಕರ ನಡುವೆ ಮಾತ್ರ ಪುಂಡರು ಹೆಚ್ಚುವರು. ಹಿಂಸಾತ್ಮಕವಾಗಿ ಅಥವಾ ಅಹಿಂಸಾತ್ಮಕವಾಗಿ ತಮ್ಮ ರಕ್ಷಣೆಮಾಡಿಕೊಳ್ಳಬಲ್ಲ ಜನರಲ್ಲಿ ಪುಂಡರಿಗೆ ಎಡೆದೊರೆಯಲಾರದು. ಅಹಿಂಸಾತ್ಮಕ ರಕ್ಷಣೆಮಾಡಿಕೊಳ್ಳುವವನು ತನ್ನ ಪ್ರಾಣ ಮತ್ತು ಸೊತ್ತಿಗೆ ಗಣವೇ ಮಾಡಬಾರದು. ಆ ರೀತಿ ನಡೆದ ಪಕ್ಷದಲ್ಲಿ ಕಟ್ಟಕಡೆಗೆ ಪುಂಡಾಟಿಕೆಯು ನಿಶ್ಚಯವಾಗಿಯೂ ನಿರ್ನಾಮವಾಗುವುದು.

ಆದರೆ ಅಹಿಂಸೆಯನ್ನು ಒಂದು ದಿನದಲ್ಲಿ ಅಭ್ಯಾಸಿಸಿ ಆಚರಿಸಲು ಸಾಧ್ಯವಿಲ್ಲ. ಅದಕ್ಕೆ ಸಾಧನೆ ಬೇಕು. ಇಂದಿನಿಂದಲೇ ನೀವು ಸಾಧನೆಯನ್ನಾರಂಭಿಸಬಹುದು. ನೀವು ನಿಮ್ಮ ಪ್ರಾಣವನ್ನಾಗಲಿ, ಸೊತ್ತನ್ನಾಗಲಿ ಅಥವಾ ಎರಡನ್ನೂ ಕಳಕೊಳ್ಳಲು ಸಿದ್ಧರಿರಬೇಕು. ನೀವು ನಿಮ್ಮ ಆತ್ಮ ರಕ್ಷಣೆಗೆ ತಯಾರಿರದಿದ್ದರೆ, ಎಷ್ಟೊಂದು ಬಲಶಾಲಿ ಸರಕಾರವಾದರೂ, ಎಂತಹ ಪ್ರಯತ್ನದಿಂದಲೂ ನಿಮ್ಮನ್ನು ರಕ್ಷಿಸಲು ಸಾಧ್ಯವಿಲ್ಲ. ಜನತೆಯು ಅದರೊಂದಿಗೆ ಸಹಕರಿಸಿದರೆ ಮಾತ್ರ ಅದು ಸಾಧ್ಯ. ಅಧೀರರಾಗದಿರಿ. ನಾಳೆಯೇ ಸರಕಾರವೇನೂ ಇಲ್ಲದೆ ಅರಾಜಕತ್ವವುಂಟಾಗುವುದೆಂದು ಭಾವಿಸಿಕೊಳ್ಳಬೇಡಿರಿ. ಆಗ ನೀವೇ ನಿಮ್ಮ ಸರಕಾರವಾಗಬಹುದು. ನೀವು ಆಲೋಚಿಸುವ ಪರಿಸ್ಥಿತಿಯಲ್ಲಿ ನೀವೇ ನಿಮ್ಮ ಸರಕಾರವಾಗಲೇಬೇಕು. ಇಲ್ಲವಾದರೆ ನಿಮಗೆ ನಾಶದ ನಿಶ್ಚಯ.

---

1 ಘಂಟೆಯಲ್ಲಿ ನವ ಯೌವನ!

ಕಾಮಶಕ್ತಿಯನ್ನು ಹೆಚ್ಚಿಸಿ ವೀರ್ಯ

ಸ್ತಂಭನೆ ಮಾಡುವ

ರಮಣವಿಲಾಸಿನಿ

ವೃದ್ಧರಿಗೂ ವಾರ್ಧಕ್ಯ ಹೊಂದಿದವರಿಗೂ ನವಯೌವನವನ್ನಿತ್ತು ರತಿ ಸುಖದಲ್ಲಿ ಪರಮಾನಂದವನ್ನು ಕೊಡುತ್ತದೆ.

ಡಬ್ಬಿ 1ರ ಕ್ರಯ ರೂ. 1/-

ಮದನ ಮಂಜರಿ ಫಾರ್ಮಸಿ,

184, ಚೈನಾಬಜಾರ್, ಮದ್ರಾಸ್

ಇಂಡಿಯನ್ ಮ್ಯೂಚುಯಲ್

ಲೈಫ್ ಅಸೋಸಿಯೇಷನ್ ಲಿಮಿಟೆಡ್

ಹೆಡ್ ಆಫೀಸ್:- ನಂ. ೧೧, ಮೌಂಟ್ ರೋಡ್, ಮದರಾಸು

— ಡೈರೆಕ್ಟರುಗಳ ಬೋರ್ಡ್ —

ಸರ್ ವೇಪಾ ರಮೇಶಂ, ಕೆ. ಟಿ ರಿಟೈರ್ಡ್ ಜಡ್ಜ್, ಮದರಾಸ್ ಹೈಕೋರ್ಟ್, ಮದರಾಸು.

ರಾವ್ ಬಹದ್ದೂರ್ ಮ|| ಕೆ. ಬಲರಾಮ ಅಯ್ಯರ್, ಬಿ.ಎ. ರಿಟೈರ್ಡ್ ಅಕೌಂಟೆಂಟ್ ಜನರಲ್ ಮದರಾಸ್,

ಮ|| ಸಿ. ಕೃಷ್ಣಮೂರ್ತಿ ಮೊದಲಿಯಾರ್ ಲ್ಯಾಂಡ್ ಲಾರ್ಡ್, ಶಿಯಾಲಿ.

ದಿವಾನ್ ಬಹದ್ದೂರ್ ಮ|| ಎ. ವಿ ರಾಮಲಿಂಗ ಅಯ್ಯರ್, ಮದರಾಸ್ ಸರಕಾರದ ರಿಟೈರ್ಡ್ ಚೀಫ್ ಇಂಜಿನಿಯರು.

ಮ|| ಟಿ. ಎಸ್. ನಾರಾಯಣ ಸ್ವಾಮಿ, ಎಂ ಎ, ಅಸಿಸ್ಟೆಂಟ್ ಕೆಮಿಸ್ಟ್, ಬಕಿಂಗ್‌ಹ್ಯಾಂ ಮಿಲ್ಸ್, ಮದರಾಸ್.

ದಿವಾನ್ ಬಹದ್ದೂರ್ ಮ|| ವಿ. ಭಾಷ್ಯಂ ಅಯ್ಯಂಗಾರ್, ರಿಟೈರ್ಡ್ ಮದರಾಸ್ ಹೈಕೋರ್ಟ್ ಜಡ್ಜ್.

ಮ|| ಸಿ. ಎಂ. ಶ್ರೀನಿವಾಸನ್, ಬಿ.ಎ., ಬಿ.ಎಲ್. (ಎಕ್ಸ್-ಅಫೀಶಿಯೋ) ಮದ್ರಾಸ್.

ಮ್ಯಾನೇಜರ್—ಮ|| ಎಂ. ಸತೀಶನ್, ಎಂ.ಎ.

ಚೀಫ್ ಮೆಡಿಕಲ್ ಆಫೀಸರ್:- ಲೆ. ಕ|| ವಿ. ಮಹದೇವನ್, ಐ. ಎಂ. ಎಸ್.

ಬ್ಯಾಂಕರುಗಳು:— ಇಂಡಿಯನ್ ಬ್ಯಾಂಕ್ ಲಿಮಿಟೆಡ್, ಮದರಾಸ್. ಮದರಾಸ್ ಪ್ರೋವಿನ್ಶಿಯಲ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಇಂಡೋ-ಕಮರ್ಷಿಯಲ್ ಬ್ಯಾಂಕ್ ಲಿಮಿಟೆಡ್, ದಿ ಬ್ಯಾಂಕ್ ಆಫ್ ಮೈಸೂರು, ಲಿಮಿಟೆಡ್.

ಬ್ರಾಂಚುಗಳು:—ಕಲ್ಕತ್ತ, ಲಾಹೋರ್, ಜೋಧಪೂರ್, ಮಧುರ, ಕಲ್ಲಿಕೋಟೆ, ಬೆಜವಾಡ, ಅಲಹಾಬಾದ್ ಬೊಂಬಾಯಿ, ಅಹಮದಾಬಾದ್, ಪೂನಾ.

ಮೈಸೂರು ಸರಕಾರದ ಹೊಸ ವಿಮಾ ಕಾನೂನನ್ನು ಅನುಸರಿಸಿ ಕಂಟ್ರೋಲರವರಲ್ಲಿ ಠೇವಣಾತಿ ಮೊಬಲಗು ಇಡಲಾಗಿದೆ.

ಕರ್ನಾಟಕದಲ್ಲೆಲ್ಲಾ ಯೋಗ್ಯರಾದ ಮತ್ತು ಪ್ರತಿಭಾಶಾಲಿಗಳಾದವರಿಂದ ಏಜನ್ಸಿಗಳಿಗೆ ಅರ್ಜಿಗಳು ಸ್ವೀಕರಿಸಲ್ಪಡುವುವು.

ಉತ್ತಮ ಕೆಲಸಮಾಡುವವರಿಗೆ ಒಳ್ಳೇ ಷರತ್ತುಗಳು.

ಮ|| ಸಿ. ಎಂ. ಶ್ರೀನಿವಾಸನ್, ಬಿ. ಎ., ಬಿ. ಎಲ್, ಜನರಲ್ ಸೆಕ್ರೆಟರಿ.

ಇಂಡಿಯನ್ ಮ್ಯೂಚುಯಲ್ ಲೈಫ್ ಅಸೋಸಿಯೇಷನ್ ಲಿಮಿಟೆಡ್,

10 ಮೌಂಟ್‌ರೋಡ್, ಮದ್ರಾಸ್.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಬಿ. ಕರುಣಾಕರ ಹೆಗ್ಡೆ, ಇನ್ಸ್‌ಪೆಕ್ಟರ್ ಆಫ್ ಏಜನ್ಸೀಸ್,

ಕರ್ಕಳ ಪೋಸ್ಟ್, ಉಡುಪಿ.

Bonus: Endowment Rs. 15. Wole life Rs. 18 Last valuation.

INDIAN MUTUAL LIFE ASSOCIATION, LIMITED.

Head Office—No. 11, Mount Road Madras.

ಈ ವಾರದ ಭವಿಷ್ಯ

ತಾರೀಖು 13-6-1940ರಿಂದ 20-6-1940ರ ವರೆಗೆ

ಮೇಷ— ದುಃಖದಾಯಿಗಳಾದ ದುರ್ದಿನಗಳು ಸಂದುಹೋದವು. ಇಂದಿಗೆ ನಿಮ್ಮ ಜೀವನದಲ್ಲಿ ಅನೇಕ ಮಾರ್ಪಾಟುಗಳುಂಟಾಗಲಿವೆ. ಮುಂದೇನು ಮಾಡಬೇಕೆಂಬುದನ್ನರಿಯದೆ ಅತಿ ಚಪಲರಾಗಿದ್ದ ನೀವು ಈಗೊಂದು ದೃಢಸಿದ್ಧಿಯಕ್ಕೆ ಬಂದಿರುವಿರಿ. ಬಹುಮುಖದಿಂದ ಧನಪ್ರಾಪ್ತಿಯಾಗುವುದರಿಂದ ಆರ್ಥಿಕ ಅಡಚಣೆಯು ದೂರಾಗುವದು. ಸಾಮಾಜಿಕ ಮತ್ತು ರಾಜಕೀಯ ಭಾಗಗಳಲ್ಲಿ ಇಟ್ಟ ಯಂಕಿ ಕಾರ್ಯ ನೆರವೇರುವುದು. ನೌಕರಿ ವ್ಯಾಪಾರಿಗಳಿಗೆ ವಿಪುಲ ಧನಲಾಭವಾಗುವುದು. ಧನಜನಬಲವು ಸಾಕಷ್ಟಿರುವುದರಿಂದ ಶತ್ರುಜನರಿಗೆ ಎಡೆಕೊಡಲಾರಿರಿ. ಆದರೂ ಕಾರಾಂಶ್ಯ ಮೂರು ದಿನಗಳಲ್ಲಿ ಪ್ರವಾಸ ಸ್ವಜನವಿಯೋಗ ಮತ್ತು ಕಲಹಗಳೂ ಸಂಭವಿಸಬಹುದು.

ವೃಷಭ—ಸರ್ವತೋಮುಖದಿಂದಲೂ ದುಃಖಪರಂಪರೆಗಳು ನಿಮ್ಮನ್ನು ಬೆನ್ನಟ್ಟಿಕೊಂಡು ಬರುತ್ತಿವೆ. ಆದಾಯವು ಬಹಳ ಕಡಿಮೆಯಿದ್ದು ಖರ್ಚುಗಳು ವಿಶೇಷವಾಗಿ ಹೆಚ್ಚಿರುವುದರಿಂದ ಆರ್ಥಿಕ ಸಂಕಷ್ಟದಲ್ಲಿ ಸಿಲುಕುವಿರಿ. ರೋಗಪರಂಪರೆಗಳು ಮೇಲಿಂದ ಮೇಲೆ ಪ್ರಾಪ್ತವಾಗುವುದರಿಂದ ಮನೋರೋಗದಿಂದ ಪೀಡಿತರಾದ ನಿಮಗೆ ಆಹಾರನಿದ್ರೆಗಳು ಸಮಯಕ್ಕೆ ದೊರೆಯದೆ ಪಿತ್ತೋಷ್ಣವಿಕಾರದಿಂದ ಆರೋಗ್ಯವೂ ಕೆಡಲಿದೆ. ಅಧಿಕಾರಿಗಳ ಭಯ ಸಮಾಜದವರಿಂದ ತಿರಸ್ಕಾರವನ್ನು ಹೊಂದಿದ ನಿಮಗೆ ದಿನಹೋದಂತೆ ನಿರಾಶೆಯು ಚಿಹ್ನೆಗಳೇ ಹೆಚ್ಚಲಿವೆ. ತಾ. 15ರಿಂದ 19ರವರೆಗಿನ ದಿನಗಳಲ್ಲಿ ಕಂಟಕದ್ವಯವು ಬಲವಿರುವುದರಿಂದ ಹೆಚ್ಚಿನ ಅಪಾಯಕ್ಕೊಳಗಾಗಬಹುದು.

ಮಿಥುನ— ಜನ್ಮಸ್ಥ ರವಿಕುಜರು ಸದ್ಯ ನಿಮಗೆ ಹೊಟ್ಟೆನೋವು ಆಕಸ್ಮಿಕ ಪೆಟ್ಟು ಗಾಯ ಇತ್ಯಾದಿ ದೈಹಿಕ ಅಪಾಯವನ್ನುಂಟುಮಾಡಲಿರುವರು. ಕೋರ್ಟು ವಗೈರೆ ಕಾರ್ಯಗಳಲ್ಲಿ ಕೈಯಿಕ್ಕದಿರಿ, ಆದಕಾರಣ ಈ ಭಾಗಗಳಲ್ಲಿ ನೀವು ಜಾಗ್ರತರಾಗಿದ್ದರೆ ಸದ್ಯ ನಿಮಗಾವ ತೊಂದರೆಯೂ ಕಾಣದು. ಗುರುಹಿರಿಯರ ಅನುಗ್ರಹದಿಂದಾಗಿ ಕೈಗೊಂಡ ಕಾರ್ಯಗಳಲ್ಲಿ ವಿಜಯವೂ ಧನಲಾಭವೂ ಉತ್ತಮವಾಗಿ ದೊರೆಯುವುದು. ಉದ್ಯೋಗ ವ್ಯಾಪಾರ ಸೇವಾವೃತ್ತಿ ಈ ಭಾಗಗಳಲ್ಲಿ ಜನರು ತಮ್ಮಭೀಷ್ಟವನ್ನು ಕೊನೆಗಾಣುವರು, ಕೆಲವೊಮ್ಮೆ ಸಿಟ್ಟಿನ ಭರದಿಂದ ಮಾಡಬಾರದ ಕೆಲಸಗಳನ್ನು ಮಾಡಿದರೂ ನಂತರ ಕೃತಕೃತ್ಯಕ್ಕೆ ಪಶ್ಚಾತ್ತಾಪ ಸೂಚಿಸುವಿರಿ. ತಾ. 18ರಿಂದ 20ರ ವರೆಗಿನ ದಿನಗಳು ಅತ್ಯುತ್ತಮಗಳಾಗಿವೆ.

ಕರ್ಕಾಟಕ— ಸದ್ಯ ನಿಮ್ಮ ಅವನತಿಯು ಕಾಲವು ಸಮೀಪಿಸಿದೆ. ಯಾವ ಕಾರ್ಯವನ್ನೇ ಆರಂಭಿಸಿ ಒಡನೆಯೇ ಅದು ಶತ್ರುಗಳ ಕಾಟದಿಂದ ಕೆಟ್ಟುಹೋಗುವುದು. ಇಲ್ಲದ ನಾನಾ ರೀತಿಯ ಕಷ್ಟನಷ್ಟಗಳಿಗೆ ನಿಮ್ಮನ್ನು ಗುರಿಪಡಿಸುವುದು. ಇದೇ ನಿಮ್ಮ ದುರ್ದೈವದ ಪರಿಣಾಮ. ಪ್ರತಿಯೊಬ್ಬರ ದೋಷವನ್ನೇ ನೀವು ಆರಿಸುವಿರೇ ಹೊರತು ನಿಮ್ಮಲ್ಲಿರತಕ್ಕ ದುರ್ಗುಣಗಳೆಡೆಗೆ ನಿಮ್ಮ ದೃಷ್ಟಿ ಹೋಗದು. ನಿಷ್ಠುರಭಾಷಣದಿಂದ ಕಲಹವೂ, ಜನನಿಂದೆಯೂ ಆರ್ಥಿಕ ಅಡಚಣೆಯೂ ಅನಾರೋಗ್ಯವೂ ಇವಿಷ್ಟು ಏಕದಾ ನಿಮ್ಮನ್ನು ಆವರಿಸಿಕೊಳ್ಳುವವು. ತಾ. 13, 14, 20 ಈ ಮೂರು ದಿನಗಳಲ್ಲಿ ಕಿಂಚಿತ್ಸುಖಗಳನ್ನು ಕಾಣುವಿರಿ.

ಸಿಂಹ— ಈ ವಾರದಲ್ಲಿ ನಿಮ್ಮ ವಿಶಾಲಪದವಲ್ಲಿದ್ದ ಬುಧನು ವ್ಯಯಕ್ಕೆ ಬರೋಣದರಿಂದ ಕೆಲವು ಭಾಗದಲ್ಲಿ ಪ್ರತಿಸ್ಪರ್ಧಿಗಳಿಂದ ನಿಮಗೆ ಪರಾಭವವುಂಟಾಗಲಿದೆ. ಆದರೂ "ಷಡ್ಬಲಾನಾಂ ಬಲಂ ಶ್ರೇಷ್ಠಂ ತತ್ತಜ್ಞಾ ಬಲಮುಚ್ಯತೇ" ಎಂಬ ರೀತ್ಯಾ ಇತರ ಎಲ್ಲಾ ಬಲಗಳಿಗಿಂತಲೂ ಪ್ರಜ್ಞಾಬಲವು (ಬುದ್ಧಿಶಕ್ತಿ) ಮುಖ್ಯವಾದುದರಿಂದಲೂ ಆ ಭಾಗದಲ್ಲಿ ನೀವು ಸಮರ್ಥರಿರುವುದರಿಂದಲೂ ಸರ್ವಜನರಿಂದ ಮಾನಮರ್ಯಾದೆಯನ್ನು ಪಡೆಯುವಿರಿ. ಆರ್ಥಿಕ ಭಾಗವೂ ವೃದ್ಧಿಗೊಳ್ಳುವುದು. ಸಾಮಾಜಿಕ ರಾಜಕೀಯ ಕಾರ್ಯಗಳಲ್ಲಿ ವಿಜಯಿಗಳಾಗುವಿರಿ. ತಾ. 13, 14, 18, 19, 20 ಈ ದಿನಗಳಲ್ಲಿ ನೀಚ ಶನಿಯಿಂದಾಗಿ ಹೃದ್ರೋಗವೂ ವ್ಯರ್ಥ ಖರ್ಚೂ ಸಂಭವಿಸೀತು.

ಕನ್ಯಾ—ಕಷ್ಟಕಾಲವು ಕಳೆಯಲುಪ್ರಕ್ರಮಿಸಿತು. ಈಗಲೀಗ ನಿಮ್ಮ ಅದೃಷ್ಟವು ಕೊಂಚ ಸುಧಾರಣೆಗೆ ಬರುತ್ತಿದೆ. ಕೈಗೊಂಡ ಕಾರ್ಯಗಳಲ್ಲಿ ಕೆಲವು ನಿಮ್ಮ ಇಷ್ಟದಂತೆ ಕೊನೆಹೊಂದುವವು. ಸಾಂಸಾರಿಕ ಬಂಧನಗಳಿಂದ ಮುಕ್ತರಾಗುವಿರಿ, ಮಿತ್ರಸಂಪತ್ತು ಉತ್ತಮವಾಗಿರುವುದು, ಆದರೆ ಆರೋಗ್ಯದ ಮಟ್ಟಿಗೆ ಚೆನ್ನಾಗಿಲ್ಲವು, ವಿನಾಕಾರಣದಿಂದ ಕಲಹವಾಗಲಿದೆ. ಆಕಸ್ಮಿಕ ಪ್ರಯಾಣಗಳು ಪ್ರಾಪ್ತವಾಗಿ ಹೆಚ್ಚಿನ ಕಷ್ಟನಷ್ಟಗಳಿಗೆ ನಿಮ್ಮನ್ನು ಗುರಿಮಾಡುವುದು. ತಾ. 13, 14, 18, 19, ಈ ದಿನಗಳೇನೋ ಶುಭಪ್ರದಗಳಾಗಿವೆ.

ತುಲಾ—ಈ ವಾರದಲ್ಲಿ ನಿಮಗೆ ಶುಭಗ್ರಹರೆಲ್ಲರ ಪೂರ್ಣ ಸಹಾನುಭೂತಿಯು ದೊರೆಯಲಿದೆ, ಅನಿಷ್ಟಸ್ಥಾನಗತರಾದ ರವಿಕುಜಶನಿಗಳು ಮನೋರೋಗ ದೀವಾಲಸ್ಯ ಧನವ್ಯಯಕಾರಿಗಳಾಗುವುದಾದರೂ ಶುಭಗ್ರಹರು ಅವುಗಳನ್ನು ಬಹುಮಟ್ಟಿಗೆ ಕಡಿಮೆ ಮಾಡಿ ಸ್ವಪ್ರಭಾವವನ್ನು ತೋರಲಿರುವರು. ನಿಮ್ಮ ಉದ್ಯೋಗದಲ್ಲಿ ಆದಾಯವು ಚೆನ್ನಾಗಿರುವುದರಿಂದಲೂ ಬಂಧುಮಿತ್ರ [illegible] ಇರುವುದರಿಂದಲೂ ಹಿಡಿದ ಕಾರ್ಯವನ್ನು ಕೊನೆಗಾಣಿಸುವಿರಿ. ಶತ್ರುಜನರೂ ಕೂಡ ನಿಮಗೆ ಶರಣಾಗತರಾಗಲಿರುವರು. ಸಾಂಸಾರಿಕ ಸುಖವೂ ಲಭಿಸುವುದು. ತಾ. 15, 16, 17, 20 ಈ ದಿನಗಳು ಇಷ್ಟಪ್ರದಗಳಾಗಿವೆ.

ವೃಶ್ಚಿಕ— ನಿಮ್ಮ ಜೀವನಪಥದಲ್ಲಿ ಕೆಲವೊಂದು ವಿಶೇಷಗಳುಂಟಾಗುವವು. ನಿಮ್ಮ ಖರ್ಚಿಗೆ ಬೇಕಾದಷ್ಟು ಹಣವನ್ನೊದಗಿಸಲು ನಿಮಗನುಕೂಲರಾದ ಗ್ರಹರು ಶಕ್ತರಿರುವರು, ಆದರೆ ವಿರೋಧಿಗಳಿಂದಾಗಿ ಮನೋರೋಗವು ವೃದ್ಧಿಯನ್ನೈದುವುದು. ಮಾತ್ರವಲ್ಲ ಧನಕ್ಕೂ ಮಾನಕ್ಕೂ ಹಾನಿಯುಂಟಾಗಲಿದೆ. ಆರೋಗ್ಯವೂ ಸರಿಯಾಗಿರದು. ಕೈಹಿಡಿದಾಕೆಯೂ ಸ್ವೇಚ್ಛೆಯಾಗಿದ್ದು ನಿಮಗೆ ಅವಿಧೇಯಳಾಗಿ ವರ್ತಿಸುವಳು, ಆದರೂ ಅಲ್ಪಾವಕಾಶದಲ್ಲೇ ನಿಮ್ಮ ಮನೋಹಾರಿಣಿ ಆಗುವಳು. ತಾ 13, 14, 18, 19, ಈ ನಾಲ್ಕು ದಿನಗಳಲ್ಲಿ ಬಹು ವಿಧದಿಂದ ಧನವೂ, ಮಿತ್ರರ ಕಾಣಿಕೆಯೂ ಮೃಷ್ಟಾನ್ನ ಭೋಜನವೂ ದೊರೆಯುವುವು.

ಧನು—ಯಾವ ಭಾಗದಲ್ಲಿ ನೋಡಿದರೂ ಅನುಕೂಲಕ್ಕಿಂತ ದ್ವಿಗುಣವಾಗಿ ಪ್ರತಿಕೂಲವೇ ಕಂಡುಬರುತ್ತದೆ. ನೌಕರಿ ಮೂಲಕವಾಗಿ ಖರ್ಚಿಗೆ ಸಾಕಷ್ಟು ದುಡಿಯುವಿರಿ ಬಂಧುಮಿತ್ರರ ಸಹಾಯವೂ ನಿಮಗಿದೆ, ಆದರೆ ದೈಹಿಕ ಸುಖದಿಂದ ವಂಚಿತರಾಗಿರುವ ನಿಮಗೆ ಆಗಾಗ ಮರ್ಮಭೇದಕವಾದ ತಿರುಕುಳಗಳು ಬಂದು ಪೀಡಿಸುವವು, ವ್ಯಾಪಾರಿಗಳಿಗೂ ಶ್ರಮಜೀವಿಗಳಿಗೂ ನಷ್ಟಕಷ್ಟಗಳು ಹೆಚ್ಚುವವು. ಗೃಹದಲ್ಲಿ ಅನುದಿನವೂ ಒಂದಲ್ಲೊಂದು ಕಾರಣದಿಂದ ಜಗಳವುಂಟಾಗುವುದು, ತಾ. 18, 19 ಈ ಎರಡು ದಿನಗಳು ವಿಶೇಷ ಹಾನಿಕರಗಳಾಗಿರುವುದರಿಂದ ಧನ ಮತ್ತು ಆರೋಗ್ಯ ವಿಚಾರದಲ್ಲಿ ಜಾಗರೂಕರಾಗಿರಿ.

ಮಕರ— ಯಾಪಶಕ್ತಿಯಿಂದಲಾದರೂ ಪ್ರತಿಸ್ಪರ್ಧಿಯನ್ನು ಜಯಿಸಬೇಕೆಂಬ ನಿಮ್ಮ ಹಂಬಲವು ಈ ವಾರದಲ್ಲಿ ನೆರವೇರುವುದು. ಆದ್ದರಿಂದಲೇ ನಿಮ್ಮ ಮನೋರೋಗವು ಶಾಂತವಾಗಿರುವುದು, ನಿಮ್ಮ ಸಾಹಸವು ಅಪ್ರತಿಹತವಾಗಿರುವುದು. ಆದರೂ ದೈವಬಲದಿಂದ ಯುಕ್ತರಾದ ನಿಮಗೆ ಆಪ್ತ ಜನರೇ ಮೋಸಗೈಯುವರು. ಉಷ್ಣಾಧಿಕ್ಯದಿಂದ ದೇಹ ಪೀಡೆಯುಂಟಾಗಲಿದೆ. ನಿಮ್ಮ ಅಂತರಂಗವು ಬಹುತೇಕ ದುಷ್ಟವಾಗಿರುವುದರಿಂದ ಹಲವರಿಗೆ ನಿಮ್ಮಲ್ಲಿ ಅವಿಶ್ವಾಸವುಂಟಾಗುವುದು, ತಾ. 15ರಿಂದ 19ರ ವರೆಗಿನ ದಿನಗಳು ಇಷ್ಟಸಾಧಕಗಳಾಗಲಿವೆ.

ಕುಂಭ—ಇಷ್ಟಾನಿಷ್ಟ ಗ್ರಹರ ಬಲವು ಸಮಾನವಿರುವುದರಿಂದ ಆಯವ್ಯಯಗಳೂ ಸುಖ ದುಃಖಗಳೂ ಸಮಾನವಾಗಿ ಸಂಭವಿಸಲಿವೆ. ಅನಾರೋಗ್ಯದಿಂದ ನೀವು ಪೀಡಿತರಿರುವಿರಾದರೂ ಕಾರ್ಯೋತ್ಸುಕತೆ ಕುಗ್ಗಿಲ್ಲವು. ಶತ್ರುಜನರ ಉಪಟಳವು ಸಂಧಿಸುವಂತಿದ್ದರೂ ತನ್ನ ವೃತ್ತಿಯ ಶಕ್ತಿಯು ನಿಮ್ಮಲ್ಲಿ ಸಾಕಷ್ಟಿರುವುದು. ವ್ಯಾಪಾರ ನೌಕರಿ ಸೇವಾವೃತ್ತಿ ಈ ಭಾಗದಲ್ಲಿ ಅವಿಚ್ಛಿನ್ನವಾಗಿ ದುಡಿದು ಇಷ್ಟಾರ್ಥವನ್ನು ಹೊಂದುವಿರಿ. ಕೋರ್ಟು ಕಚೇರಿಗಳ ಕಾರ್ಯಗಳು ಮುಂದೆ ಬೀಳುವವು, ಪುತ್ರ ವಿಷಯಕವಾದ ಚಿಂತೆಯು ಪೀಡಿಸಲಿದೆ, ತಾ. 18ರಿಂದ 20ರ ವರೆಗಿನ ದಿನಗಳು ಅನುಕೂಲಗಳಾಗಿವೆ.

ಮೀನ—ಆಹಾರ ದೋಷದಿಂದ ಆಗಾಗ ಉದರ ರೋಗವು ಕಂಡುಬರುವುದು, ಗೃಹದಲ್ಲಿ ಏಕ್ಯಮತ್ಯವಿಲ್ಲದೆ ಒಬ್ಬೊಬ್ಬರೊಂದೊಂದು ಮಾರ್ಗವನ್ನನುಸರಿಸಿ ಶತ್ರುಜನರಿಗೆ ಎಡೆಕೊಡುವಿರಿ, ಮೇಷಾಂತದಿಂದ ನಿಮ್ಮನ್ನಾಶ್ರಯಿಸಿದ ವಿರೋಧಿಜನರು ಸಮಯ ಸಾಧಿಸಿ ಕಾರ್ಯಗೈಯುವರು. ಆದಕಾರಣ ಎಷ್ಟು ಜಾಗರೂಕರಾಗಿದ್ದರೂ ಅದು ಕಡಿಮೆಯೆಂದೇ ಹೇಳಬೇಕಾಗಿದೆ, ನಿಮ್ಮ ಗರ್ಜಿಗೆ ಬೇಕಾದಷ್ಟು ಹಣ ದೊರೆಯುವುದು. ಮಿತ್ರ ಜನರು ಯಾವತ್ತಕ್ಕೂ ಸಹಾಯ ಮಾಡುವರು, ಗೃಹ ಸುಖವೂ ತಕ್ಕಮಟ್ಟಿಗೆ ಉತ್ತಮವಾಗಿರುವುದು, ತಾ. 13, 14, 20 ಈ ದಿನಗಳಲ್ಲಿ ಸ್ತ್ರೀ ಸಹಿತ ಧನ ಲಾಭ ಸುಖಮಾನಗಳು ದೊರೆಯುವವು.

ವಿದ್ಯಾರ್ಥಿಗಳಿಗೆ ಆನಂದದ ಬಾತ್ಮಿ.

ಅತಿ ಅಭ್ಯಾಸ ಯಾ ಘಾಬರಿಯಿಂದ ಪರೀಕ್ಷೆಯ ಸಮಯ ನರ್ವಸ್ ವೀಕ್ನೆಸಿನಿಂದ ಸಾಮಾನ್ಯ ಸೇಕಡ 50 ವಿದ್ಯಾರ್ಥಿಗಳು ತಿಳಿದು ಯಾ ತಿಳಿಯದೆ ಫಸ್ಟ್‌ಕ್ಲಾಸಿನ ಯೋಗ್ಯತೆಯುಳ್ಳವರು ಕೂಡ ಥರ್ಡ್ ಕ್ಲಾಸಿನಲ್ಲಿ ಸಹ ಪಾಸಾಗದೆ ನಾಪಾಸಾಗುವ ಪರಿಸ್ಥಿತಿಯು ಬರುತ್ತದೆ. ಈ ಸರ್ವ ವಿಚಾರಗಳಿಗೆ ನಮ್ಮ ದೀರ್ಘ ಅನುಭವದಿಂದ ತಯಾರಿಸಲ್ಪಟ್ಟ ಬಹುಗುಣಯುಕ್ತ ಪುಷ್ಪಗಂಧಾಮೋದಿತ **ಆಮಲಕೀ ತೈಲ** ವನ್ನು ಉಪಯೋಗಿಸುವದರಿಂದ ಲಕ್ಕೀಚಾನ್ಸ್ ಸಿಕ್ಕುತ್ತದೆ. 6 ಯಾ 11 ಆಣೆ ಬೆಲೆಯ 1 ಸೀಸೆ ತೈಲವನ್ನು ಕೊಂಡುಕೊಂಡು ಸ್ವಲ್ಪ ತಲೆಗೆ ಹಾಕಿ ಪೇಪರಿಗೆ ಶುರುಮಾಡಿರಿ. ಇದರಿಂದ ಮೆದುಳಿನ ಜ್ಞಾನಶಕ್ತಿ ಯಾ ಸ್ಮರಣಶಕ್ತಿ ವೃದ್ಧಿಯಾಗಿ ಆತ್ಮವಿಶ್ವಾಸವು ಹೆಚ್ಚುವದಲ್ಲದೆ ಕಠಿಣತರದ ಪ್ರಶ್ನೆಗಳಲ್ಲಿ ಸುಲಭವಾಗಿ ಯಶಃಪ್ರಾಪ್ತಿಯಾಗುವುದು. ಪರೀಕ್ಷೆಯ ಮೊದಲೇ ಒಂದೆರಡು ಸೀಸೆ ನಮ್ಮ ಆಮಲಕೀ ತೈಲವನ್ನು ತರಿಸಿಕೊಳ್ಳಿರಿ. 4 ಔನ್ಸಿನ ಸೀಸೆ 1ರ ಕ್ರಯ ರೂ. 0-11-0, 2 ಔನ್ಸಿನ ಸೀಸೆ 1ರ ರೂ. 0-6-0 ತಯಾರಿಸುವವರು:-**ಸ್ವದೇಶೀ ಔಷಧಿಭಂಡಾರ,** (ರಜಿಸ್ಟರ್ಡ್), ಕುಂಜಾಲು, ಪೋಸ್ಟ್ ಬ್ರಹ್ಮಾವರ, ದ. ಭಾರತ.

ನಮ್ಮ ಸ್ಟಾಕಿಸ್ಟರು:-ವಿ.ಆರ್. ಪ್ರಭು, ದಿ ಕೆನರಾ ನ್ಯೂಸ್ ಎಂಡ್ ಬುಕ್ ಏಜೆನ್ಸೀಸ್ ಬಟಾಟವಾಲಾ ಮೆನ್ಶನ್, ಲಾಲ್‌ಬಾಗ್, ಮುಂಬೈ. ಜನರಲ್ ಸಪ್ಲೈಸ್ ಲಿಮಿಟೆಡ್, ಉಡುಪಿ, ನವಭಾರತಬುಕ್ ಡಿಪೋ, ಉಡುಪಿ, ಕೆಟಲಾಗಿಗೆ ಬರೆಯಿರಿ.

Advt.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ

"ಗೊನೊಕಿಲರ್" (ರಜಿಸ್ಟರ್ಡ್)



ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಕೊಳ್ಳುವ ಮೊದಲು ಕೋಳಿಗುರುತಿನ ಸರಿಯಾದ ಗುರುತನ್ನೂ 'ಗೊನೊಕಿಲರ್' ಹೆಸರನ್ನೂ ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಕಾಸಕಾಸವಾಗಿ ಹೋಗುವದು ಮತ್ತು ಉರಿವು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, 'ಗೊನೊ-ಕೋಕಸ' ಎಂಬ ವಿಷಕಾರಿ, ಅದೇ ಮೇರೆಗೆ ಸ್ತ್ರೀಯರಿಗಾಗುವ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವವು.

ಬೆಲೆ: 50 ಮಾತ್ರೆಗಳ ಬುದ್ದಿಯೊಂದಕ್ಕೆ ರೂ. 3. ವಿ. ಪಿ. ಚಾರ್ಜು 0-8-0 ಪ್ರತ್ಯೇಕ. ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer Dr. D. N. JASANI, Vitalbhai Patel Road, BOMBAY 4

NAVAYUGA
Advertisement Tariff

1 Page Rs. 25/- per insertion
½ „ Rs. 15/- „ „
¼ „ Rs. 8/- „ „
⅛ „ Rs. 5/- „ „
Per Single inch col. Re. 1 „
Contract rates on application
Manager-Navayuga UDIPI.

ಸ್ಥಾಪನೆ] ಕೆನರಾ ಛಾಪಖಾನೆ [1920

(ಬಂಟರ ಯಾನೆ ನಾಡವರ ಸಂಘಕ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ
ಈಗ ದರವನ್ನು ಹೀರಾ ಕಡಿಮೆಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ.

Kanara Printing Works,
Hampankatte, **MANGALORE.**

ಮೂಲವ್ಯಾಧಿ

ನಾಥಪ್ರೊಬ್ಬನ ಸಿದ್ಧಿಯಾಗಿರುವ ವಿಚಿತ್ರ ಹಾಗೂ ಅಪೂರ್ವ ಔಷಧಿ.

ಆರ್ಶಮಾರಾ (ರಿಜಿಸ್ಟರ್ಡ್)

ರಕ್ತ ಸುರಿಯುವ ಅಥವಾ ಬಿಡುಗಿರುವ ಪಳಿಯ ಅಥವಾ ಹೊಸ ತಾದ ಒಳಗಿನ ಅಥವಾ ಹೊರಗಿನ ಯಾವಸ್ಥಿತಿಯದ್ದೇ ಆದ ಮೂಲ ವ್ಯಾಧಿಯು 'ಅರ್ಶಮಾರಾ'ವನ್ನು ಒಂದೊಮ್ಮೆ ಹಚ್ಚಿದ ಕೂಡಲೆ ಅದ್ಭುತ ವಾಗಿ ಗುಣಹೊಂದುವದು. ನೋವು ತುರಿಸಾಟ, ಉರಿಯುವಿಕೆ, ಕೀವು, ರಕ್ತಸ್ರಾವವಾಗುವುದನ್ನೆಲ್ಲಾ ಕೂಡಲೆ ನಿಲ್ಲಿಸಿಬಿಡುವದು. ಕೇವಲ 3 ದಿನ ಹಚ್ಚಿದರೆ ಯಾವ ತರದ ಶಸ್ತ್ರಕ್ರಿಯೆಯೂ ಇಲ್ಲದೆ ಮೂಲವ್ಯಾಧಿ ಅಥವಾ ಮೊಳೆಗಳನ್ನು ಗುಣಪಡಿಸುವುದು. ಈ ಔಷಧಿಯಿಂದ ಸಾವಿರಾರು ರೋಗಿಗಳು ಗುಣಹೊಂದಿ ಇತರರಿಗೆ ಅದನ್ನು ಶಿಫಾರಸು ಮಾಡುತ್ತಿದ್ದಾರೆ. ಗುಣವಾಗದಿದ್ದಲ್ಲಿ ಹಣ ವಾಪಸು. ಬೆಲೆ ರೂ. 2-0-0.

ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.



ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿ ಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುವು. ಇದು ಮಧುರವಾಗಿದೆ ಅರಿಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿ ನಿಮ್ಮ ಕೈಗೆ ಸಿಕ್ಕುವುದು
ಸೀಸೆ ಒಂದಕ್ಕೆ 12 ಆಣೆ, ಟಪಾಲು 4 ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ.
ಉಡುಪಿ ಸ್ಟಾಕಿಸ್ಟರು:- ನವಭಾರತ ಬುಕ್‌ಡಿಪೋ, ಉಡುಪಿ

THE MOOLKY BANK, LTD.,
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.
ಭಂಗಾರದ ಸರಕಿನ ಈಡಿನ ಮೇಲೆ ಸೇಕಡ7 ಪಡಿರ ದರದಲ್ಲಿ ಸಾಲಕೊಡಲಾಗುವುದು.
ಸಿರಿಯು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.
ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, *President & Manager,*
ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!

K. R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! ವಜ್ರಗಳು BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟರ್ ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.



SALE! SALE!! SALE!!!
ಮುಂಚಿನ ಕ್ರಯ ರೂ. 10.
ಈಗಿನ ಕ್ರಯ ರೂ. 3-12-0

Swiss Lever Wrist Watch

ಭಂಗಾರದ ಲೀವರ್‌ರಿಸ್ಟ್‌ವಾಚ್

ಈ ನವೀನ ಗಡಿಯಾರಗಳು ವಿಲಾಯತಿಯಲ್ಲಿ ಬಹು ಬಲಿಷ್ಠ ಸಾಮಾನುಗಳಿಂದ ತಯಾರಿಸಲ್ಪಟ್ಟ ನೋಡ ತಕ್ಕದ್ದು. ಸ್ತ್ರೀ ಪುರುಷರ ಕೈಯಲ್ಲಿ ಕಟ್ಟಿಕೊಳ್ಳುವುದಕ್ಕೆ ಬಹು ಅಂದವಾಗಿದೆ ಭಂಗಾರದ ಗಡಿಯಾರಗಳನ್ನು ನಾವು ಒಟ್ಟಳ ತರಿಸುವುದರಿಂದ ಸುಲಭ ಕ್ರಯಕ್ಕೆ ಕೊಡುತ್ತೇವೆ ಇಂಡಿಯಾ ದೇಶದಲ್ಲಿ ಎಷ್ಟೋ ಗಿರಾಕಾಗಳು ಖುಷಿಯಾಗಿ ಅನೇಕ ಯೋಗ್ಯತಾಪತ್ರಗಳು ಬಂದಿರುವವು. ಅವು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವವು. ಒಂದನ್ನು ತರಿಸಿ ನೋಡಿದರೆ ಪ್ರತಿಯೊಬ್ಬರೂ ತಲಿಕ್ಕೆ ಪ್ರಯತ್ನ ಪಡುವರು. ಗ್ಯಾರಂಟಿ 4 ವರುಷ. ಕ್ರಯ ರೂ. 3-12-0.

ವೆಸ್ಟರ್ನ ಸ್ವಿಸ್ ವಾಚ್ ಕಂಪೆನಿ, ಪೋಸ್ಟ್ ಬಾಕ್ಸ್ ನಂ 68, ಮದರಾಸ್.
Western Swiss Watch Co., Direct Importers,
Post Box No. 68, MADRAS.

ನಿಮ್ಮ ಮನೆಯಲ್ಲಿ ಸದಾ ಆನಂದದ ಜ್ಯೋತಿಯು
ಬೆಳಬೆಳಗುತ್ತಿರಬೇಕೇ? ಹಾಗಿದ್ದರೆ--- ---

ನಂದಾದೀಪ

ಎಂಬ ಉತ್ಕೃಷ್ಟ ಚಿಕ್ಕಕತೆಗಳ ಪ್ರತಿಯೊಂದನ್ನಿಟ್ಟುಕೊಳ್ಳಿ.
ಕರ್ನಾಟಕದ ಪ್ರಸಿದ್ಧ ಕತೆಗಾರರಲ್ಲೊಬ್ಬರಾದ ಶ್ರೀ ಕೊರಡ್ಕಲ್
ಶ್ರೀನಿವಾಸ ರಾಯರು ಬರೆದ ಮನೋಹರವಾದ
ಹನ್ನೊಂದು ಕತೆಗಳ ಸಂಗ್ರಹ.
ಪ್ರತಿಯೊಂದು ಕತೆಯೂ ನಿಮ್ಮ ಹೃದಯದಲ್ಲೊಂದು
ಬಗೆಯ ಹೊಸ ಬೆಳಕನ್ನು ಬೆಳಗಿಸುವುದು.
ಬೆಲೆ: 0-8-0 ಟಪ್ಪಾಲು ದ್ವಾರ: 0-9-0
ಕಿರಿಯರ ಪ್ರಪಂಚ, ಉಡುಪಿ.
(0-9-0 ಸ್ಟ್ಯಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು)

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —
ಇಷ್ಟರ ವರೆಗಿನ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಚಿತ್ರ ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.
ಅಮೃತಾಂಜನ ಡಿಪೋವಿನ ತ್ರಿಪರ್ಬದ 'ರೈಸಿಂಗ್ ಸನ್'
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂದು ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.
ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.

ಸದ್ವೈದ್ಯಶಾಲಾ ನಂಜನಗೂಡು ಇವರ

"ಸುಬಲಾ"

ಪಿತ್ತಸಂಬಂಧ, ವಾತಪಿತ್ತ ಇವುಗಳನ್ನು ಹೋಗಲಾಡಿಸಿ, ರಕ್ತ ವೃದ್ಧಿಪಡಿಸಿ, ದೇಹಕ್ಕೆ ಬಲವನ್ನು ಕೊಡುತ್ತದೆ ಬಹಳ ರುಚಿಯಾಗಿರುತ್ತದೆ.

ಬ್ರಾಂಚ್:- ರಥಬೀದಿ ಮಂಗಳೂರು.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಾಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

PRINTED BY S. S. KARANTH AT THE THULUNAD PRESS, UDIPI, AND PUBLISHED BY K. H. SHETTY AT "NAVAYUGA OFFICE, UDIPI, S. INDIA.

stered No M 3618 20-6-1940.

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಛೇರಿ:— ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

ಭದ್ರತೆಯಿಂದಲೂ, ಖಾತ್ರಿಯುಳ್ಳ ಸಫೆ ಹಂಚಿಕೆಯಿಂದಲೂ, ಜಾಗ್ರತೆಯಾಗಿ ಹಕ್ಕುಗಳನ್ನು ಕೊಡುವುದರಿಂದಲೂ ಮತ್ತು ಉದಾರವಾದ ಜೀವವಿಮೆಯ ನಿಯಮಗಳಿಂದಲೂ ಈ ಸಂಸ್ಥೆಯು ಪ್ರಖ್ಯಾತಿಪಡೆದಿರುತ್ತದೆ,

ಪ್ರೊಫೆಸರ್ ಕೆ. ಬಿ ಮಾಧವ, ಎಂ.ಎ, ಎಫ್ ಆರ್ ಎ ಎಸ್., ಎ.ಐ.ಎ (ಲಂಡನ್)
ಪ್ರೊಫೆಸರ್, ಮಹಾರಾಜ ಕಾಲೇಜು, ಮೈಸೂರು ಅವರ್ಗಳ ಅಭಿಪ್ರಾಯ ಸಾರಾಂಶ.

"ಕಳೆದ ೧೦ ವರ್ಷಗಳಿಂದ ನಿಮ್ಮ ಸಂಸ್ಥೆಯ ಬೆಳವಣಿಗೆಯನ್ನು ... ಕಳೆದ ಮೂರು ವರ್ಷಗಳಿಂದ ಅದರ ವೆಚ್ಚ, ಬಡ್ಡಿಯ ಫಲ, ... ಪಾಲಿಸಿಗಳ ಸಂಖ್ಯೆ ... ಮೊದಲಾದ ಜೀವವಿಮೆಯ ನಿಯಮಗಳನ್ನು ... ಹೊಂದಿರುವ ಅಭಿವೃದ್ಧಿಯು ತೃಪ್ತಿಕರವಾಗಿದೆ ... ಅಭಿವೃದ್ಧಿಗೆ ಉದಾಹರಣೆಯಾಗಿರುವ ಏಷ್ಯಾಟಿಕ್ ... ಕಾರ್ಯಕಲಾಪಗಳಿಗಾಗಿ ... ಹೃತ್ಪೂರ್ವಕವಾದ ಅಭಿನಂದನೆಗಳನ್ನು ... ಸಂತೋಷ ... "

ಕೊಟ್ಟಿರುವ ವಿಮಾ ಹಕ್ಕಿನ ಹಣಗಳು: ೫,೦೨,೦೦೦—೦—೦

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

H. Venkataramiah, Divisional Superintendent } or { R. Purniah, Ag. General Manager

The Asiatic Govt. Security Life Assu Co. Ltd.,
Asiatic Building, BANGALORE CITY.

ಝಂಡು ಮಲೇರಿಯಾ ಮಿಕ್ಸ್ಚರ್

ಮಲೇರಿಯಾ, ವಿಷಪ್ರಜ್ವರಗಳಿಂದುಂಟಾಗುವ ಎಲ್ಲಾ ತರದ
ಕಠಿಣ ಜ್ವರಗಳಿಗೆ
ಖಾತ್ರಿಯಾದ ಸಿದ್ಧೌಷಧ
ಕ್ರಯ: ಆಣೆ 0—14—0 ಮಾತ್ರ.

ಸ್ಥಳೀಯ ಏಜಂಟರು:— **ಪಿ. ಎ. ಪೈ ಬ್ರದರ್ಸ್.**
ಕಾರ್ಕಳದ ಏಜಂಟರು:— **ವಿ. ವಿ. ಶೆಣೈ, ಕೆಮಿಸ್ಟ್ಸ.**
ಮಂಗಳೂರಿಗೂ ದಕ್ಷಿಣ ಕನ್ನಡ ಜಿಲ್ಲೆಯ ಇತರ.
ಮುಖ್ಯ ಸ್ಥಳಗಳಿಗೂ ಏಜಂಟರು ಬೇಕಾಗಿದ್ದಾರೆ.
ಶರ್ತಗಳಿಗೂ ಏಜನ್ಸಿಗಳಿಗೂ ಮುಖ್ಯ ಏಜಂಟರಿಗೆ ಬರೆಯಿರಿ:—
ದಾಮೋದರ್ ಎಂಡ್ ಕೊ,
ಮುಖ್ಯ ಏಜಂಟರು,
ZANDU 78 ಚೀನಾ ಬಜಾರ್ ರೋಡ್, ಜಿ. ಟಿ. ಮದರಾಸು

DAMODER & CO.,
78 China Bazaar Road, **G T. MADRAS.**

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು.
ಮೈಸೂರು
ಸೇಂಡಲ್ ಸೋಪು
ಜನಮನರಂಜನೆಯ ಈ ಸಾಬೂನನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫ್ಯಾಕ್ಟರಿ, ಬೆಂಗಳೂರು.

ಮುಚ್ಚಿದರೆ ಮುಗುಳು ! ಬಿಚ್ಚಿದರೆ ಅರಳು !!

ಶ್ರೀ. ಕೆ. ಹೊನ್ನಯ್ಯ ಶೆಟ್ಟರಿಂದ ಪೋಣಿಸಲ್ಪಟ್ಟ
ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಮಾಲೆಯಿದು

ಮುಗುಳು

ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಅತ್ಯುಪಯುಕ್ತವಾದ ಸಚಿತ್ರ ಪದ್ಯ ಪುಸ್ತಕ.
(ಮದ್ರಾಸ್, ಬೊಂಬಾಯಿ, ಮೈಸೂರು ಟೆಕ್ಸ್ಟ್ ಬುಕ್ ಕಮಿಟಿಗಳಿಂದ ಮಂಜೂರಾಗಿದೆ.
ಅಭಿನಯಕ್ಕೆ, ನರ್ತನಕ್ಕೆ, ಕೋಲಾಟಕ್ಕೆ, ಎಲ್ಲಕ್ಕೂ ಅತ್ಯನುಕೂಲವಾದ,
ಮಕ್ಕಳ ವಯೋಗುಣಕ್ಕನುಗುಣವಾದ ಪದ್ಯಗಳಿಂದೊಡಗೂಡಿದೆ.
ಅಧ್ಯಾಪಕರೆಲ್ಲಾ ಇದನ್ನು ಮಕ್ಕಳ ಕೈಗೆ ಕೊಟ್ಟು, ಉಲಿದಾಡಿಸಿ, ಕುಣಿದುಂಬಿಸಬೇಕಾಗಿ ಪ್ರಾರ್ಥನೆ.

ಎಂಟನೆಯ ಆವೃತ್ತಿ] [ಬೆಲೆ: ೦—೨—೬

ಮಗ್ಗಿ ಪುಸ್ತಕ

ಸಣ್ಣದು ೦—೦—೬, ದೊಡ್ಡದು ೦—೧—೦

ಪ್ರತಿಗಳು ನಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಕೆಳಗಿನವರಿಗೆ ಬರೆಯಿರಿ,
ನವಭಾರತ ಪುಸ್ತಕ ಭಂಡಾರ, ಉಡುಪಿ.

THE VIJAYA BANK LTD.,

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ— ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಆರಂಭಿಸಿ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ವಿದ್ಯಾರ್ಥಿಗಳಿಗೆ ಅಪೂರ್ವ ಸಂದರ್ಭ!

ಉತ್ತಮ ಮಾಲು! ನಾಜೂಕು ಕೆಲಸ! ಕಡಿಮೆ ಕ್ರಯ!

ಎಲಿಮೆಂಟರಿ ಸ್ಕೂಲ್, ಹೈಸ್ಕೂಲ್, ಟ್ರೈನಿಂಗ್ ಸ್ಕೂಲ್, ಕೊನ್ವೆಂಟ್ ಮೊದಲಾದ ಎಲ್ಲಾ ಶಾಲೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಬೇಕಾದ ಎಲ್ಲಾ ವಿಧದ ಪಾಠ ಪುಸ್ತಕಗಳೂ, ಲೇಖನ ಪುಸ್ತಕಗಳೂ, ಸ್ಟೇಶನರಿ ಸಾಮಾನುಗಳೂ ಸುಲಭ ಬೆಲೆಗೆ ದೊರೆಯುತ್ತವೆ.

ಶಾಲೋಪಯೋಗೀ ಸಾಹಿತ್ಯಗಳೆಲ್ಲಾ ಕಡಿಮೆ ದರದಲ್ಲಿ ನಮ್ಮಲ್ಲಿ ಸದಾ ತಯಾರಿವೆ!

ನಿಮಗೆ ಏನು ಬೇಕಾದರೂ ಮೊದಲು ನಮ್ಮೊಡನೆ ವಿಚಾರಿಸಿರಿ.

ನವಭಾರತ ಪುಸ್ತಕ ಭಂಡಾರ

ಇಗರ್ಜಿ ಎದುರು — — — ಉಡುಪಿ, ದ. ಕ.

For all your school requirements:

Navabharat Book Depot, Udipi.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ಅಜ್ಜರ ವಾರ್ದೆಕ್ಕಾದ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹ ಸ್ಥಿತಿಯನ್ನು ಸಿದ್ಧೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ ಅಮೋಘವಾದ ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಆ ಬಿನ್ನಿನ ೨ ಬಾಟ್ಲಿಗಳು ತಮ್ಮ ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ, ಕೇವಲ ೪ ರೂಪಾಯಿಗಳು ಒಂದು ಬಾಣಂತನಕ್ಕೆ ಸಾಕಾಗುವವು. ವಿವರ ಪಾಡಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಸ್. ಪಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ ೩ ಕೊಡಿಯಾಲಬೈಲು, ದ.ಕ.

The Pangal Nayak Bank Ltd.,

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(೧೯೨೦ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿದೆ)

ಮುಖ್ಯ ಕಾರ್ಯಾಲಯ—ಕೋಟೆಕಾರಬೆಳ್ಳಿ, ಉಡುಪಿ, ದ. ಕನ್ನಡ

ಶಾಖೆಗಳು—ಉಡುಪಿ, ಮಂಗಳೂರು, ಕಟಪಾಡಿ ಮತ್ತು ಕಾಂಞಂಗಾಡ್

ಶೇರು ಮೂಲಧನ—ರೂ. 1,82,100/- ರಿಸರ್ವ ನಿಧಿಯು ರೂ. 1,92 000/-

ಚಿನ್ನಾಭರಣಗಳ, ವ್ಯಾಪಾರಕ್ಕೆ ಅನುಕೂಲವಾಗಬಹುದಾದ ಬಾಳುವ ದವಸಗಳ, ಸವಾಧೀನಕರವಾದ ವ್ಯಾಪಾರದ ಬೀಲು, ಹುಂಡಿ ಇತ್ಯಾದಿಗಳ ಭದ್ರತೆಯ ಮೇಲೆ ಸುಲಭ ದರಗಳಿಗೆ ಚಿಕ್ಕ ವ ದೊಡ್ಡ ಸಾಲಗಳು ಕೊಡಲ್ಪಡುತ್ತವೆ.

ಡಿಪಾಜಿಟ ಇಡ ಅವಧಿಯ ನಿರಖು ರೇಸಹಾತಿಗಳು ಶ್ರೀಮಂತರಿಗೂ ಇತರರಿಗೂ ಪರಸ್ಪರ ತೃಪ್ತಿಕರವಾದ ಶರ್ತಗಳಲ್ಲಿ ಅಂಗೀಕರಿಸಲ್ಪಡುತ್ತವೆ.

ಬೇಂಕಿನ ಅತ್ಯಾಧುನಿಕ ವಿಧದ ಸಮಸ್ತ ವಹಿವಾಟುಗಳೂ ನಡೆಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ದಯವಿಟ್ಟು ಮೊಕ್ತಾ ವ ಪತ್ರದ್ವಾರ ವಿಚಾರಿಸಿರಿ

ಕೋಕ್ತ್ರನದ ಬಿಳೀ ಟೂಥಪೇಸ್ಟ ಅಲುಗಾಡುವ ಹಲ್ಲುಗಳನ್ನು ಗಟ್ಟಿಮಾಡ್ತದೆ.

ಅಲುಗಾಡುವ ಹಲ್ಲುಗಳನ್ನು ಮತ್ತೆ ಗಟ್ಟಿಮಾಡಿ ರಕ್ತ ಬೀಳುವದನ್ನು ಬಂದು ಮಾಡಿ ಒಸಡಿಯನ್ನು ಗಟ್ಟಿಮಾಡುವದು. ತಯಾರಿಸುವವರು— ಕೋಕ್ತ್ರನ್ ಕೆಮಿಕಲ್ ಕಂ, (ಮಾಲಕರು—ಮಗನಭಾಯಿ ಅಮೀನ್ ಅಂಡ್ ಕಂಪೆನಿ ಮುಂಬಯಿ).

ಸ್ಥಾಪಿತ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್ಸಿಲ್ ಮೊದಲಾದ ಪಿತ್ತಳೆ ಬೇಜು, ಮೊನೊಗ್ರಾಮ್ ಸೀಲು ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co , 18 Balmat Road, MANGALORE

Approved firm by the Govt of Mysore Certified by the Agent of the Govt. of India in Ceylon

Transport & Car Owners



ARE SPECIALLY INVITED TO VISIT

OUR SHOW ROOM *for economical transport maintenance.*

CANARA AUTOMOBILES — — — — — MANGALORE

ನಾಟಕದಲ್ಲಿ ಕಾಲದ ಸ್ಫೂರ್ತಿಯು ಮೂರ್ತಿಮತ್ತಾಗಿ ತೋರಬೇಕು.

ಆ ಸ್ಫೂರ್ತಿಯಿಂದ ವಾಚಕರೂ ಪ್ರೇಕ್ಷಕರೂ ಜಾಗೃತರಾಗಬೇಕು

ಅಂತಹ ನಾಟಕವೇ

ದೇಶಭಕ್ತ

ಕಾಂಗ್ರೆಸ್ ಹೋರಾಟದ ತ್ಯಾಗ ಸಂಕಷ್ಟಗಳನ್ನೂ ಅವನ್ನು ತಡೆಗಟ್ಟಲು ಅಧಿಕಾರಿ ವರ್ಗವು ಹೂಡುವ ಕುತಂತ್ರಗಳನ್ನೂ ಕಣ್ಣ ಮುಂದಿರಿಸಿ ಸಮಾಧಾನವನ್ನು ಪ್ರತಿಪಾದಿಸಿ, ನವಜಾಗೃತಿಯನ್ನು ಮಾಡುವ ನವೀನ ಸಾಮಾಜಿಕ ನಾಟಕ.

ವಿಶೇಷವಾಗಿ ಚಿತ್ರಿತ ಸಂಸ್ಥಾನಗಳಲ್ಲಿ ಇಂದು ನಡೆಯುತ್ತಿರುವ ಸ್ವಾತಂತ್ರ್ಯ ಸಂಗ್ರಾಮದ ಸ್ಪಷ್ಟ ಚಿತ್ರ. ಪ್ರತಿಯೊಬ್ಬರೂ ಓದತಕ್ಕ ನವೀನ ಪುಸ್ತಕ.

ಲೇಖಕ: ಕೆ. ಟಿ. ಪೈ ಬೆಲೆ: ೦—೧೦— ೦

11 ಆಣೆ ಸ್ಟಾಂಪು ಕಳುಹಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಲಾಗುವುದು.

ನವಯುಗ ಆಫೀಸು, ಉಡುಪಿ.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ESTD. 1921 ಸ್ಥಾಪಿತ

FOUNDER:
SRI. A. B. SHETTY, M. L. A.,

ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

NAVAYUGA
ನವಯುಗ

ಚಂದಾ ವಿವರ:
1 ವರ್ಷಕ್ಕೆ - ರೂ 3—4—0
6 ತಿಂಗಳಿಗೆ - ರೂ. 1 12 - 0

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹ ಸಂಪಾದಕ:
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೪೧

ಉಡುಪಿ, ಗುರುವಾರ, ೨೦—೬—೧೯೪೦.
UDIPI, THURSDAY, 20-6-1940.

VOL. 19
No. 41

ಒಟ್ಟು ಸತ್ಯಾಗ್ರಹಿಗಳ ಸಂಖ್ಯೆ

ಕಳೆದ ಮೇ ತಿಂಗಳ ಮೂರನೇ ವಾರದ ವರೆಗೆ ಇಡೀ ಹಿಂದೂಸ್ಥಾನದಲ್ಲಿ ಒಟ್ಟು 33,119 ಮಂದಿ ಸತ್ಯಾಗ್ರಹಿಗಳು ಸೆರೆ ಸಲ್ಪಟ್ಟಿರುವರು. ಬಂಗಾಳದ ಸಂಖ್ಯೆಯು ಇಷ್ಟರವರೆಗೆ ತಿಳಿದುಬಾರದುದರಿಂದ ಆ ಸಂಖ್ಯೆಯಲ್ಲಿ ಸೇರಿರುವುದಿಲ್ಲ. ಸಂಯುಕ್ತ ಪ್ರಾಂತವೊಂದರಲ್ಲಿ ಸೆರೆಸಲ್ಪಟ್ಟಿರುವ ಸತ್ಯಾಗ್ರಹಿಗಳೇ 15,000 ಮಂದಿ. ಇತರ ಪ್ರಾಂತಗಳ ಸಂಖ್ಯೆಯು ಈ ಕೆಳಗಣಂತಿರುತ್ತದೆ. ವಾಯುವ್ಯಗಡಿನಾಡು 6000, ತಮಿಳುನಾಡು 2765, ಮಹಾರಾಷ್ಟ್ರ 545, ಕೇರಳ 260, ಪಂಜಾಬು 314, ಉತ್ಕಲ 250, ವಿದರ್ಭ 256, ಗುಜರಾಥ್ 1771, ಅಜ್ಮೀರ್ 72, ಆಂಧ್ರ 1370, ಅಸ್ಸಾಮ್ 571, ಬಿಹಾರು 1991, ಬೊಂಬಾಯಿ 156, ಸಿಂಧ್ 376, ಡಿಲ್ಲಿ 10, ನಾಗಪುರ 174, ಮಹಾಕೋಸಲ 715, ಕರ್ನಾಟಕ 524

ಕಾಂಗ್ರೆಸ್ ವರ್ಕಿಂಗ್ ಕಮಿಟಿ

ಸಭೆಯು ಇದೇ ತಾ. 17ರಲ್ಲಿ ವಾರ್ಧದಲ್ಲಿ ಸೇರಲಿರುವುದಷ್ಟೆ. ಈ ಸಭೆಯವರಿಂದ ಹಲವು ಮಹತ್ವದ ವಿಷಯಗಳು ಬಗೆಹರಿವವು. ಮೌಲಾನ ಆಜಾದರು ಪಂಡಿತ ವಲ್ಲಭ ಪಂತರನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಹೊಸ ಮೆಂಬರರಾಗಿ ನೇಮಕ ಮಾಡಿರುವರು.

ಹಿಂದೀ ವೈಮಾನಿಕ ದಳ

ಇದಕ್ಕೆ 90 ಮಂದಿ ಹಿಂದೀಯರನ್ನು ಹೊಸತಾಗಿ ಸೇರಿಸಿ ತರಬೇತಿ ಮಾಡಲಾಗುವುದು. ಇವರನ್ನು ಪ್ರಥಮವಾಗಿ ದೇಶದ ಬೇರೆ ಬೇರೆ ವಿಮಾನ ಕ್ಲಬ್ಬುಗಳಲ್ಲಿ ತರಬೇತಿ ಮಾಡಿಸಿ ಅನಂತರ ದೇಶ ರಕ್ಷಣಾಧಿಕಾರಿಗಳು ಅವರ ಮುಂದಿನ ತರಬೇತಿಯ ಏರ್ಪಾಡು ಮಾಡಲಿರುವರು. ಹೊಸಬರನ್ನು ಯಾವ ರೀತಿ ತೆಗೆದುಕೊಳ್ಳಲಾಗುವದೆಂಬ ಕುರಿತು ಮುಂದೆ ಪ್ರಕಟಣೆ ಹೊರಡಲಿರುವುದು.

ಬ್ರಿಟಿಷ್ ಹಡಗ ನಷ್ಟ

ಇಂಗ್ಲೆಂಡಿನ ಉತ್ತರದಲ್ಲಿ ಬ್ರಿಟಿಷ್ ಮತ್ತು ಜರ್ಮನ್ ಯುದ್ಧನಾವೆಗಳಿಗುಂಟಾದ ಹೋರಾಟದಲ್ಲಿ 5 ಬ್ರಿಟಿಷ್ ಹಡಗಗಳು ನಷ್ಟಹೊಂದಿರುವವೆಂದು ತಿಳಿದು ಬರುತ್ತದೆ. ಎಚ್. ಎಮ್. ಎಸ್. ಗ್ಲೋರಿಯಸ್ ಎಂಬ ದೊಡ್ಡ ಯುದ್ಧ ಹಡಗ, ಒರಾಮ ಎಂಬ ಸೈನಿಕರನ್ನೊಯ್ಯುವ ಹಡಗ, ಒಯಿಲ್ ಪೈಂಟರ್ ಎಂಬ ಎಣ್ಣೆ ಒಯ್ಯುವ ಹಡಗ, ಅಕಾಸ್ಟ ಮತ್ತು ಆರ್ಡೆಂಟ್ ಎಂಬ ಎರಡು ಡಿಸ್ಟ್ರೋಯರ್ ಹಡಗಗಳು ಮುಳುಗಿಹೋಗಿವೆ.

ಸಮಾಚಾರ ಸಂಗ್ರಹ

ಫೋರ್ಡ್ ಕಂಪೆನಿಯು ಯುದ್ಧ ವಿಮಾನ ತಯಾರಿಸುವುದು.

ಅಮೇರಿಕದ ಫೋರ್ಡ್ ಮೋಟರ್ ಕಂಪೆನಿಯವರು ಯುದ್ಧ ವಿಮಾನ ತಯಾರಿಸಲು ಸಿದ್ಧರಿರುವೆವೆಂದು ಯುನೈಟೆಡ್ ಸ್ಟೇಟ್ಸ್ ಸರಕಾರಕ್ಕೆ ತಿಳಿಸಿರುವರು. ಕಂಪೆನಿಯ ಇಂಜಿನೀಯರರು ಸರಕಾರದ ಯುದ್ಧ ವಿಮಾನ ತಯಾರಿ ಕಾರ್ಖಾನೆಗೆ ಹೋಗಿ ಅದನ್ನು ಪರೀಕ್ಷಿಸಿರುವರು. ಫೋರ್ಡ್ ಕಂಪೆನಿಯವರು 6 ತಿಂಗಳ ಕಾಲದಲ್ಲಿ ದಿನಕ್ಕೆ 1000 ಯುದ್ಧ ವಿಮಾನಗಳನ್ನು ತಯಾರಿಸುವ ಏರ್ಪಾಡು ಮಾಡಲು ಸಿದ್ಧರಿರುವರೆಂದು ತಿಳಿದುಬರುತ್ತದೆ.

ಹಿಂದೂದೇಶದಲ್ಲಿ ಹಡಗ ರಚನೆ

ಸಿಂಧ್ಯ ಸ್ಟೀಮ್ ನೆವಿಗೇಶನ್ ಕಂಪೆನಿಯವರು ಹಿಂದೂದೇಶದಲ್ಲೇ ಹಡಗಗಳನ್ನು ಕಟ್ಟುವ ವ್ಯವಸ್ಥೆ ಮಾಡುತ್ತಿರುವರು. ಕಲ್ಕತ್ತದಲ್ಲಿ ಹಡಗ ಕಟ್ಟುವ ಯಾರ್ಡನ್ನು ತೆರೆಯಬೇಕೆಂದು ನಿರ್ಧಾರವಾಗಿ ಅದಕ್ಕೆ ಬೇಕಾದ ಪೂರ್ವ ಸಿದ್ಧತೆಯೆಲ್ಲಾ ನಡೆದಿತ್ತು. ಆದರೆ ಕಲ್ಕತ್ತ ಪೋರ್ಟ್ ಟ್ರಸ್ಟಿನವರಿಗೂ ಸಿಂಧ್ಯ ಕಂಪೆನಿಯವರಿಗೂ ಕೆಲವು ವಿಷಯಗಳ ಕುರಿತು ಭಿನ್ನಾಭಿಪ್ರಾಯವುಂಟಾಯಿತು. ಬೊಂಬಾಯಿಯಲ್ಲಿಯೇ ಈ ಯಾರ್ಡನ್ನು ತೆರೆಯಬೇಕೆಂದು ಕೆಲಮಂದಿ ವ್ಯಾಪಾರಿಗಳ ಒತ್ತಾಯವಿರುವುದಾದರೂ ಅಲ್ಲಿ ಬಹಳ ವೆಚ್ಚ ತಗಲೀತೆಂದು ಕಂಪೆನಿಯವರು ಒಪ್ಪಲಿಲ್ಲ. ಈಗ ವಿಶಾಖಾ ಪಟ್ಟಣ ಬಂದರದಲ್ಲಿ ಹಡಗ ಕಟ್ಟುವ ಯಾರ್ಡ್ ಸ್ಥಾಪಿಸುವುದೆಂದು ಕಂಪೆನಿಯವರು ನಿರ್ಧರಿಸಿ ಆ ಸಂಬಂಧವಾಗಿ ಪೂರ್ವ ಸಿದ್ಧತೆ ಮಾಡುತ್ತಿರುವರು. ಅದಕ್ಕೀಗ ಇಂಡಿಯಾ ಸರಕಾರದ ಮಂಜೂರಾತಿ ಮಾತ್ರ ದೊರೆಯಬೇಕಾಗಿದೆ.

ತಾತ್ಕಾಲಿಕ ರಾಷ್ಟ್ರೀಯ ಸರಕಾರ

ಮಹಾತ್ಮ ಗಾಂಧಿಯವರೂ ಮಿ. ಜಿನ್ನರವರೂ ಹಿಂದೂ ಮುಸಲ್ಮಾನ ಪ್ರಶ್ನೆಯನ್ನು ಇತ್ಯರ್ಥಪಡಿಸಲು ಇನ್ನೊಮ್ಮೆ ಅತ್ಯಂತ ನಿರ್ಧಾರಪೂರ್ವಕವಾದ ಪ್ರಯತ್ನ ಮಾಡಬೇಕು. ಮುಸ್ಲಿಮ್ ಲೀಗಿನವರೂ ಕಾಂಗ್ರೆಸ್ ಹೈಕಮಾಂಡಿನವರೂ ಪರಸ್ಪರ ಸಮಜಾಯಿಸಿಕೊಳ್ಳುವ ಮನೋವೃತ್ತಿಯುಳ್ಳವರಾಗಬೇಕು. ಬ್ರಿಟಿಷ್ ಸರಕಾರದ ಯುದ್ಧ ಸಂಬಂಧವಾದ ಏರ್ಪಾಡಿನಲ್ಲಿ ಮುಸ್ಲಿಮ್ ಲೀಗಿನವರು ಪ್ರಸ್ತುತ ಸಹಕರಿಸಬಾರದೆಂದು ಮಿ. ಜಿನ್ನರು ಆಜ್ಞಾಪಿಸಿರುವುದು ಅಭಿನಂದನೀಯವಿದೆ. ಕಾಂಗ್ರೆಸ್ ಮತ್ತು ಮುಸ್ಲೀಮ್ ಲೀಗಿನವರು ಒಟ್ಟುಗೂಡಿ, ಕೇಂದ್ರದಲ್ಲಿ ಅಧಿಕಾರವನ್ನು ಜನ ಪ್ರತಿನಿಧಿಗಳಿಗೊಪ್ಪಿಸಬೇಕೆಂದು ಸರಕಾರದೊಡನೆ ಕೇಳಿಕೊಂಡು ತಾತ್ಕಾಲಿಕ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಬೇಕು. ಹಿಂದೂಮುಸಲ್ಮಾನರ ಒಟ್ಟಿನ ಕೇಳಿಕೆಯನ್ನು ಸರಕಾರಕ್ಕೆ ನಿರಾಕರಿಸಲು ಸಾಧ್ಯವಾಗಲಾರದು. ಈ ರಾಷ್ಟ್ರೀಯ ಸರಕಾರದವರು ದೇಶದ ಆಡಳಿತದ ಜವಾಬ್ದಾರಿವಹಿಸಿ, ಯುದ್ಧದ ಗಂಡಾಂತರವು ದೂರವಾದ ಮೇಲೆ ತಾವೇ ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯನ್ನು ಕರೆದು ಮುಂದಿನ ರಾಜಕೀಯ ಘಟನೆಯನ್ನು ಆ ಮೂಲಕ ತಯಾರಿಸಬಹುದೆಂದು ಶ್ರೀ. ಸ. ಭಾಸಚಂದ್ರ ಭೋಸರು ಸೂಚಿಸಿರುವರು.

ರಾಜಕೋಟೆಯ ಅರಸರ ಮರಣ

ರಾಜಕೋಟೆಯ ರಾಜರಾದ ಠಾಕೂರ್ ಸಾಹೇಬ್ ಧರ್ಮೇಂದ್ರಸಿಂಹಜಿಯವರು ಗಿರ್ ಅರಣ್ಯಕ್ಕೆ ಶಿಕಾರಿಗಾಗಿ ಹೋದವರು ಅಕಸ್ಮಾತ್ತಾಗಿ ಹೃದಯಸ್ತಂಭನದಿಂದ ಮರಣಹೊಂದಿರುವರು. ಮೃತರ ತಮ್ಮ ಕುಮಾರ ಪ್ರದ್ಯುಮ್ನ ಸಿಂಹಜಿಯವರು ಹೊಸ ರಾಜರಾಗಿ ಪಟ್ಟಕ್ಕೆ ಬಂದಿರುವರು. ಮೃತರು ಕೇವಲ 30 ವರ್ಷ ಪ್ರಾಯದವರಿದ್ದು 1931ರಲ್ಲಿ ರಾಜ್ಯಭಾರದ ಅಧಿಕಾರ ಪಡೆದರು. 1939 ನೇ ಇಸ್ವಿ ಮಾರ್ಚಿ ತಿಂಗಳಲ್ಲಿ ರಾಜಕೋಟೆಯ ಠಾಕೂರರಿಗೂ ಅಲ್ಲಿಯ ಪ್ರಜಾಪರಿಷತ್ತಿಗೂ ಉಂಟಾದ ಕಲಹದಲ್ಲಿ ಮಹಾತ್ಮ ಗಾಂಧಿಯವರು ಮಧ್ಯಸ್ಥಿಕೆ ಮಾಡಿದರು. ಆ ಮಧ್ಯಸ್ಥಿಕೆಯನ್ನು ನಡೆಯಗೊಡದಂತೆ ಕುತ್ರಚಾಲನೆಮಾಡಿದ್ದ ದಿವಾನ ದರ್ಬಾರ್ ವೀರವಾಲರ, ಕೆಲಸವಿಂದಲೇ ಮೊದಲು ತೀರಿಕೊಂಡಿರುವರು. ಠಾಕೂರರು ವೀರವಾಲರ ಹಸ್ತಕರಾಗಿ ಮದ್ಯಪಾನ ಮತ್ತು ವ್ಯಭಿಚಾರವೇ ಮೊದಲಾದ ದುರ್ವ್ಯಸನವುಳ್ಳವರಾಗಿದ್ದರು. ಇವರ ತಂದೆಯವರು ಬಹಳ ಒಳ್ಳೆಯ ರಾಜರಾಗಿದ್ದು ಮಹಾತ್ಮ ಗಾಂಧಿಯವರ ಮಿತ್ರರೂ ಅನುಯಾಯಿಗಳಲ್ಲೊಬ್ಬರೂ ಆಗಿ ಪ್ರಜೆಗಳಿಗೆ ಹೆಚ್ಚಿನ ಸುಧಾರಣೆಗಳನ್ನೀಯುವ

TROPICAL

In the wake of the two great movements that swept over the country in the early twenties of this century **TROPICAL INSURANCE CO. LTD.**, was founded by Pt. Moti Lal Nehru, Hakim Ajmal Khan and Dr Ansari, and although the hands of Providence snatched them one after another the Company has not lost its ideals and is now under the guidance of **DESHAGAURAB SJ. SUBHAS CHANDRA BOSE, WHO IS THE CHAIRMAN OF ITS BOARD OF DIRECTORS.**

TROPICAL INSURANCE COMPANY, LTD.

Branch Office: NIVAS Building, Hampankatta

MANGALORE.

ಟ್ರೊಪಿಕಲ್

ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಬ್ರಾಂಚ್ ಆಫೀಸು:- ನಿವಾಸ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ವಾಗ್ದಾನಮಾಡಿದ್ದರು ಆದರೆ ಅವರು ಮೃತರಾಗಿ ಹೋದುದರಿಂದ ಅವರ ಸ್ಥಾನದಲ್ಲಿ ಪಟ್ಟಕ್ಕೆ ಬಂದ ಧರ್ಮೇಂದ್ರ ಸಿಂಹರು ತನ್ನ ತಂದೆಗೆ ಪ್ರತಿ ವಿರೋಧವಾಗಿ ನಡೆದರು ತಾನು ಸಾಯುವುದಕ್ಕಿಂತ ಸ್ವಲ್ಪ ಮೊದಲು ವಿವೇಕ ಹೊಳೆದು ಧರ್ಮೇಂದ್ರ ಸಿಂಹರು ತನ್ನ ತಂದೆಯು ವಾಗ್ದಾನಮಾಡಿದ್ದ ರಾಜಕೀಯ ಸುಧಾರಣೆಗಳನ್ನೆಲ್ಲಾ ಜಾರಿಗೆ ತರುವಂತೆ ಹೊಸ ದಿವಾನರಿಗೆ ಅನುಜ್ಞೆಕೊಟ್ಟು ತನ್ನ ಖಾಸಗಿ ವೆಚ್ಚವನ್ನು ಅರೆವಾಸಿ ಕಡಿಮೆಮಾಡಿ ತಿಂಗಳೊಂದರ ರೂ. 9000ನ್ನು ಪ್ರಜೆಗಳ ಹಿತಾರ್ಥವಾಗಿ ಬಿಟ್ಟುಕೊಟ್ಟಿದ್ದರು

ಚೀನಾ ಜಪಾನುಯುದ್ಧ

ಜಪಾನು ಚೈನವನ್ನು ಸಂಪೂರ್ಣವಾಗಿ ಗೆಲ್ಲುವ ದೃಢ ಸಿದ್ಧಾಂತದಿಂದಿರುವುದು ಚೀನೀರಾಷ್ಟ್ರೀಯ ಸರಕಾರದ ನೆಲೆಯಾದ ಚುಂಗ್‌ಕಿಂಗಿನ ಮೇಲೆ ಈಗ ಹಲವು ದಿನಗಳಿಂದ ಎಡೆಬಿಡದೆ ವಿಮಾನಧಾಳಿ ನಡಿಸಿ ಹಾವಳಿಮಾಡುತ್ತಿರುವುದು. ಇದೇ ತಾ 12ರಲ್ಲಿ 117 ಜಪಾನ ಯುದ್ಧ ವಿಮಾನಗಳು ಚುಂಕಿಂಗಿನ ಮೇಲೆ ಏರಿ ಹೋಗಿ 200ಕ್ಕಿಂತಲೂ ಮಿಕ್ಕಿದ ಬೋಂಬುಗಳನ್ನೆಸೆದವು ತಾ. 13ರಲ್ಲಿ ಪುನಃ ಜಪಾನು ವಿಮಾನಗಳೇರಿ ಬಂದು 500ರಕ್ಕಿಂತಲೂ ಮಿಕ್ಕಿದ ಬೋಂಬುಗಳನ್ನು ಸುರಿದು ಪಟ್ಟಣದ ರಸ್ತೆರಸ್ತೆಗಳನ್ನು ನಾಶಮಾಡಿರುವವು ಸಾವಿರಾರು ಜನರು ಪಟ್ಟಣ ಬಿಟ್ಟು ಓಡಿ ಹೋಗುತ್ತಿರುವರು. ಅನೇಕ ಮಂದಿ ಕೊಲ್ಲಲ್ಪಟ್ಟಿರುವರು ಮತ್ತು ಜಖಂ ಹೊಂದಿರುವರು. ಮಧ್ಯ ಚೈನದಲ್ಲಿ ಹೇಂಕೋಪಟ್ಟಣದಿಂದ 150 ಮೈಲು ಪಶ್ಚಿಮದಲ್ಲಿರುವ ಇಚಂಗ್ ಎಂಬ ಪ್ರಮುಖ್ಯ ಪಟ್ಟಣವನ್ನು ವಶಪಡಿಸಿಕೊಳ್ಳಲು ಜಪಾನರು ಬಹಳ ಪ್ರಯತ್ನ ಮಾಡಿ ತೀವ್ರಹೋರಾಟ ನಡೆದು ಕಡೆಗದು ಜಪಾನರ ವಶವಾಗಿರುವುದೆಂದು ತಿಳಿದು ಬರುತ್ತದೆ. ಇದರಿಂದ ಉತ್ತರದ ಮತ್ತು ದಕ್ಷಿಣದ ಚೀನೀ ಸೇನೆಗಳೊಳಗೆ ಸಂಬಂಧ ತಪ್ಪಿದಂತಾಗಿರುವುದೆಂದು ಜಪಾನರ ಅಂಬೋಣ. ಜೂನ್ ತಾ. 1ರಿಂದ 12ರ ವರೆಗೆ 18,000 ಚೀನೀಯರು ಕೊಲ್ಲಲ್ಪಟ್ಟು 3500 ಮಂದಿ ಸೆರೆಯಾಗಿ ಹೆಚ್ಚಿನ ಯುದ್ಧ ಸಾಮಗ್ರಿಗಳು ತಮ್ಮ ವಶವಾಗಿರುವವೆಂದು ಜಪಾನರ ಕಡೆಯ ಸುದ್ದಿ

ಪ್ರೇಮ ವಿದ್ಯಾಪೀಠ, ತುಂಗಭದ್ರಾ
(M. S. M Rly)

ಇದಕ್ಕೆ ಸೇರಿದ 'ಪ್ರೇಮ ಮೆಡಿಕಲ್ ಕಾಲೇಜ್' ಪ್ರತಿವರ್ಷದಂತೆ ಜುಲಾಯಿ 15ಕ್ಕೆ ತೆರೆಯಲ್ಪಟ್ಟು ತನ್ನ ಕಾರ್ಯವನ್ನು ಪ್ರಾರಂಭಿಸುವುದು ಈ ಸಂಸ್ಥೆಯು ಈಗಾಗಲೇ ಸುಪ್ರಸಿದ್ಧವಾಗಿದೆ. ಇಲ್ಲಿ ವೈದ್ಯ ವಿದ್ಯೆಯನ್ನು ಪಡೆದುಹೋದವರು ಕರ್ನಾಟಕ ಮತ್ತು ಆಂಧ್ರದೇಶಗಳಲ್ಲಿ ಹಬ್ಬಿಕೊಂಡು ಜನಸೇವೆಯನ್ನು ಸ್ವತಂತ್ರರಾಗಿ ತಮ್ಮ ಜೀವನವನ್ನು ಮಾನ್ಯ ರೀತಿಯಿಂದ ನಡೆಸಿಕೊಳ್ಳುತ್ತಿದ್ದಾರೆ ಅದರಲ್ಲಿ ನಿರುದ್ಯೋಗಿಗಳು ಒಬ್ಬರಾದರೂ ಇಲ್ಲ. ಸಾಂಕ್ರಾಮಿಕ ವ್ಯಾಧಿಗಳು ಹಬ್ಬಿದಾಗ ಅವರು ಜನಸಮುದಾಯಕ್ಕೆ ಮಾಡಿದ ನಿರ್ಭಯ ಸೇವೆ ಮತ್ತು ಉಪಕಾರಗಳನ್ನು ಸರ್ಕಾರದವರೇ ಎಷ್ಟೋ ಸಾರಿ ಪ್ರಶಂಸಿಸಿದ್ದಾರೆ. ಅವರ ಪೈಕಿ ಅಧಿಕ ಸಂಖ್ಯಾಕರು ಸ್ವತಂತ್ರ ದವಾಖಾನೆಗಳನ್ನಿಟ್ಟುಕೊಂಡಿದ್ದಾರೆ. ಹಲವರು ಡಿಸ್ಟ್ರಿಕ್ಟ್‌ಬೋರ್ಡು ಮತ್ತು ರೂರಲ್ ಮೆಡಿಕಲ್ ಸರ್ವಿಸಿನಲ್ಲಿದ್ದುಕೊಂಡು ದುಡಿಯುತ್ತಿದ್ದಾರೆ.

ಬೊಂಬಾಯಿ ಸರಕಾರದ "ಬೋರ್ಡ್ ಒಫ್ ಇಂಡಿಯನ್ ಸಿಸ್ಟಮ್ಸ್ ಓಫ್ ಮೆಡಿಸಿನ"ದಿಂದ ಪ್ರೇಮವಿದ್ಯಾಪೀಠದ ಡಿಗ್ರಿಗಳಿಗೆ 'ರೆಕಗ್ನೀಶನ'ನ ಮಾನ್ಯತೆಯು ದೊರಕಿದ ಸಂಗತಿ ಮೊನ್ನೆಮೊನ್ನೆಯೇ ವರ್ತಮಾನಪತ್ರಿಕೆಗಳಲ್ಲಿ ಪ್ರಕಟವಾದದ್ದನ್ನು ವಾಚಕರು ಓದಿಯೇ ಇರಬೇಕು.

ಈ ಕೋಲೇಜಿಗೆ ಸೇರಿ ಅಭ್ಯಾಸಮಾಡಲಿಚ್ಛಿಸುವವರು ಇದೇ ಜೂನ್ ತಿಂಗಳ ಅಖೈರಿಯೊಳಗಾಗಿ ಅರ್ಜಿ ಬರಕೊಂಡು ತಮ್ಮ ತಮ್ಮ ಸೀಟುಗಳನ್ನು ಭದ್ರಪಡಿಸಿಕೊಳ್ಳಬೇಕು ಕನಿಷ್ಠ ಪಕ್ಷಕ್ಕೆ ಮೆಟ್ರಿಕ್ಯುಲೇಶನ್ ಎಸ್. ಎಸ್. ಎಲ್. ಸಿ ಪಾಸಾದವರು ಫೋರ್ಮು ತರಿಸಿಕೊಂಡು ಅರ್ಜಿ ಹಾಕಬಹುದು. ಅರ್ಜಿದಾರರಿಂದ ವಿದ್ಯಾರ್ಥಿಗಳನ್ನು ಆರಿಸಿಕೊಳ್ಳುವಾಗ "ಸಾಯನ್ಸ್-ಗ್ರುಪ್‌ನವರ"ನ್ನು ಮುಖ್ಯವಾಗಿ ಆರಿಸಲಾಗುವುದು. "ಪ್ರೊಸ್‌ಪೆಕ್ಟಸ್"ಗಾಗಿ ೩ ಆಣೆ ಸ್ಟಾಂಪು ಇಟ್ಟು ಬರೆದುಕೊಳ್ಳಬಹುದು.

NAVAYUGA
Advertisement Tariff
1 Page Rs 25/ per insertion
½ „ Rs. 15/- „ „
¼ „ Rs. 8/- „ „
⅛ „ Rs. 5/- „ „
Per Single inch col. Re 1 „
Contract rates on application
Manager-**Navayuga UDIPI.**

ನೋಟೀಸು.

ಕಾಸರಗೋಡು ದಿ ಮು. ಕೋರ್ಟಿನಲ್ಲಿ

O S No [illegible] R. I A No. [illegible]
R E P. [illegible]

ಡಿಕ್ರಿಯ ಮೇಲ್ ಚೇಟುದಾರ P. ಮೊಯಿದಿಂ ಕುಂಞ ಬ್ಯಾರಿ, ತಳ್ಳಂಗರೆ ಅಮ್ಮದಬ್ಯಾರಿಗಳ ಮಗ, ಬಡಾಜೆ ಗ್ರಾಮ. —ಅರ್ಜಿದಾರ.

ಮತ್ತು

2ನೇ ರೆಸ್ಪಾಂಡೆಂಟಳು ಬೀಬಿ ಜೆಂಗಮು, ಮೃತಪಟ್ಟ ಶೇಕ್ ಹಸ್ಸನ್ ಸ್ಯಾಬನ ಹೆಂಡತಿ. 3ನೇ ರೆಸ್ಪಾಂಡೆಂಟ ಸೇಕ್ ಜನ್ನಲ್ ಸ್ಯಾಬು, 4ನೇ ರೆಸ್ಪಾಂಡೆಂಟಳು ಆಲಿಂಬಿ, (ಇದ್ರು ಮೃತಪಟ್ಟ) ಸೇಕ್ ಹಸ್ಸನ್ ಸ್ಯಾಬನ ಮಕ್ಕಳು, ಕಾಸರಗೋಡು ತಾಲ್ಲೂಕ ಉಪ್ಪಳ ಗ್ರಾಮಸ್ಥರು. —ರೆಸ್ಪಾಂಡೆಂಟರು.

ಇವರೊಳಗೆ

ನಪ್ರ ಅರ್ಜಿದಾರನ ಕಡೆಯಿಂದ ನೋಟೀಸು—

ಮೇಲ್ಕಂಡ ವ್ಯವಹಾರದಲ್ಲಿ ಮೃತಪಟ್ಟ ಶೇಕ್ ಹಸ್ಸನ್ ಸ್ಯಾಬನ ಹಕ್ಕಿನ ಬಾಬ್ತು ಸದ್ರಿ ರೆಸ್ಪಾಂಡೆಂಟರ ಸ್ವಾಧೀನದಲ್ಲಿರುವ ಸ್ಥಿರಾಸ್ತಿಗಳನ್ನು ಅರ್ಜಿದಾರನು ಏಲಂಗೆ ಅಪೇಕ್ಷಿಸಿ, ವಿಕ್ರಯದ ಇಸ್ತಿಹಾರನ್ನು ನಿರ್ಣಯಮಾಡುವರೆ ತಾ. 24-6-40ಕ್ಕೆ ಇಟ್ಟಿರುವ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ.

Kasargod } **K. P Madhava Rao**
15-6-'40. } *Advocate for Petitioner*

THE
BOMBAY LIFE ASSURANCE
Company Limited.
[ESTD. 1908]

LIFE INSURANCE

Dispels darkness of the mind and brings Enlightenment and Courage, Immortalises major portion of your Income whether you survive or not and thus makes life worth living to you and your dependants in reality

Ask us what particular scheme of Insurance will satisfy your requirements and your purse.

Agency Applications from Active and Influentail Ladies & Gentlemen are invited.

To Insure or to Represent consult:

KOCHIKAR BROTHERS LTD.,
MADRAS-BRANCH-SECRETARIES AND
Chief Agents for Bombay City & Suburbs,
BOMBAY LIFE BUILDING,
Sir Lalubhai Samaldas Road,
GANDHI NAGAR, **UDIPI.**
Or any of their following Offices at:-

Puthiyara, CALICUT.	Car Street, MANGALORE	Central Station Road, TRIVANDRUM
Gautam Nivas Charni Road Girgaum, BOMBAY No. 4.	Post Box No 337, Mount Road, MADRAS	Visweswarapuram Circle BANGALORE CITY

ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾಗಿದೆ.

ಹಾಯರ್ ಎಲಿಮೆಂಟರಿ ಕ್ಲಾಸುಗಳಿಗೆ
ಅತ್ಯುಪಯುಕ್ತವಾದುದು.

ಶ್ರೀ. ಕೆ. ಕೆ. ಶೆಟ್ಟರಿಂದ ವಿರಚಿತವಾದ

ಕುಶಲವ

ನವಪೌರಾಣಿಕ ನಾಟಕ
--- **ಬೆಲೆ ನಾಲ್ಕಾಣೆ ಮಾತ್ರ** ---
ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.
ನವಭಾರತ ಪುಸ್ತಕ ಭಂಡಾರ, ಉಡುಪಿ.

-ಸೌಕರ್ಯ-

ಆರ್ಥಿಕ ಮುಗ್ಗಟ್ಟಿನ ಈ ದುಷ್ಕಾಲದಲ್ಲಿ ಕಡಿಮೆ ವೆಚ್ಚದಲ್ಲಿ ಹೆಚ್ಚು ಸೌಕರ್ಯವನ್ನು ಯಾರು ತಾನೆ ಅಪೇಕ್ಷಿಸುವುದಿಲ್ಲ? ಅವನ್ನು ಸದಾ ಒದಗಿಸಿಕೊಡುವುದೇ

ರಾಮಾ ರೆಸ್ಟೋರೆಂಟಿನ ಧ್ಯೇಯವಾಗಿದೆ.

ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳು!
ವಿದ್ಯಾರ್ಥಿಗಳಿಗೆ ರಿಯಾಯತಿ ದರಗಳು!!

ಒಮ್ಮೆ ಸಂದರ್ಶಿಸಿರಿ! **ತೃಪ್ತಿ ಪಡೆಯಿರಿ!!**

Sri Rama Restaurant
Kashi Mutt Building,
UDIPI.

ಶ್ರೀರಾಮಾ ರೆಸ್ಟೋರೆಂಟ್
ಕಾಶಿ ಮಠದ ಕಟ್ಟೋಣ, ಉಡುಪಿ

ವ್ಯಾಲಕ.— ಎಚ್. ರಾಮಚಂದ್ರ ನಾಯಕ್.

ರಬ್ಬರ್ ಸ್ಟಾಂಪುಗಳು

ಸುಲಭ ದರದಲ್ಲಿ
ಕ್ಲಿಷ್ಟ ಕಾಲದಲ್ಲಿ
ನಾಜೂಕಾಗಿ
ಒದಗಿಸಿ
ಕೊಡಲ್ಪಡುತ್ತವೆ.

ಸ್ವತಃ ಯಾ ಪತ್ರದ್ವಾರಾ ವಿಚಾರಿಸಿರಿ

ನವಭಾರತ ಪುಸ್ತಕ ಭಂಡಾರ
ಅಥವಾ
ನವಯುಗ ಆಫೀಸು
ಉಡುಪಿ.

★ ಹಿಟ್ಲರನ ವಿಜಯಕ್ಕೆ ಕಾರಣವೇನು? ★

ಹಿಟ್ಲರ್

ನಾಝಿ ಪಡೆಯು ಅದೊಂದು ಮಹಾ ಪ್ರವಾಹದಂತೆ ಯುರೋಪಿನ ರಾಷ್ಟ್ರಗಳನ್ನೆಲ್ಲಾ ಆವರಿಸಿ ಮುಳುಗಿಸಿಬಿಟ್ಟಿರುವುದು. ಇಂದೀಗ ಹಿಟ್ಲರರು ಕಾಲಭೈರವರಂತಾಗಿರುವರು. ಜರ್ಮನ್ ಸೇನೆಯ ವಿಚಿತ್ರ ವಿಜಯವು ಇಡೀ ಲೋಕವನ್ನೇ ಬೆರಗುಗೊಳಿಸಿರುವುದು. ಅದರ ಎದುರಿಗೆ ನಿಲ್ಲಲು ಯಾರಿಗೂ ಸಾಧ್ಯವಿಲ್ಲವೆಂಬಷ್ಟು ಶಕ್ತಿ ರಭಸ ಮತ್ತು ಉಗ್ರವಾಗಿ ಅದು ಧಾಳಿ ನಡಿಸುವುದು. ಹಿಟ್ಲರರ ಈ ಪ್ರಚಂಡ ವಿಜಯಕ್ಕೆ ಕಾರಣಗಳೇನೆಂಬುದನ್ನು ವಿಚಾರಿಸುವ—

ಅತಿದೊಡ್ಡ ರಾಜನೈತಿಕ ತಪ್ಪು

ಆರಂಭದಲ್ಲೇ ಇಂಗ್ಲೆಂಡ್ ಮತ್ತು ಫ್ರಾನ್ಸುಗಳು ಅತಿ ದೊಡ್ಡ ರಾಜನೈತಿಕ ತಪ್ಪನ್ನು ಮಾಡಿದುವು. ಸೋವಿಯೆಟ್ ರಷ್ಯವು ನಾಝಿ ಜರ್ಮನಿಯೊಂದಿಗೆ ಹಸ್ತಲಾಘವಮಾಡುವುದು ಸಾಧ್ಯವೇ ಇಲ್ಲೆಂದು ಅವು ಬಗೆದು ರಷ್ಯದೊಡನೆ ಒಪ್ಪಂದ ಮಾಡಿಕೊಳ್ಳುವ ಕುರಿತು ದೀರ್ಘ ಚರ್ಚೆಯಲ್ಲಿ ತೊಡಗಿದವು. ಹಿಟ್ಲರರು ರಾಜನೈತಿಕ 'ಬ್ಲಿಟ್ಸ್ ಕ್ರೈಗ್' (ಮಿಂಚುಧಾಳಿ) ನಡಿಸಿ ರಷ್ಯದೊಡನೆ ಒಪ್ಪಂದಮಾಡಿಕೊಂಡುಬಿಟ್ಟರು. ಇದರಿಂದ ಹಿಟ್ಲರರು ಹಿಂದುಮುಂದಾವುದನ್ನೂ ಯೋಚಿಸದೆ ಸಂದರ್ಭಾನುಸಾರ ಗಾಳಿಬಂದ ಹಾಗೆ ಕೊಡೆ ಹಿಡಿಯುವರೆಂಬುದು ಸ್ಪಷ್ಟವಾಗುವುದು. ಇದರಿಂದ ಅವರು ಎರಡು ರಣರಂಗಗಳಲ್ಲಿ ಹೋರಾಡುವ ಗಂಡಾಂತರವನ್ನು ತಪ್ಪಿಸಿಕೊಂಡರು. ಆದುದರಿಂದಲೇ ಅವರಿಗೀಗ ಮಿಲ್ಯಗಟ್ಲೆ ಜರ್ಮನ್ ಸೇನೆ ಮತ್ತು ಯುದ್ಧೋಪಕರಣಗಳನ್ನೆಲ್ಲಾ ಒಂದೇ ರಣರಂಗದಲ್ಲ ಉಪಯೋಗಿಸಲು ಸಾಧ್ಯವಾಗಿದೆ. ಮಿತ್ರರಾಷ್ಟ್ರಗಳ ಒಬ್ಬ ಸೈನಿಕನಿಗೆ ೪ ಮಂದಿ ಜರ್ಮನರು ಒಂದು ಟೇಂಕಿಗೆ ಮೂರು ಟೇಂಕುಗಳು, ಒಂದು ವಿಮಾನಕ್ಕೆ ಐದಾರು ವಿಮಾನಗಳನ್ನೊತ್ತಿ ವೈರಿಗಳನ್ನು ಸದೆಬಡಿಯಲು ಸಾಧ್ಯವಾಗಿರುವುದು. ರಷ್ಯವು ಮಿತ್ರರಾಷ್ಟ್ರಗಳ ಕಡೆಗೆ ಸೇರುತ್ತಿದ್ದರೆ ಇದು ಸಾಧ್ಯವಾಗುತ್ತಿದ್ದಿಲ್ಲ. ಪೋಲಂಡಿನ ಮೇಲೆ ಧಾಳಿ ನಡಿಸುವಾಗಲೆ ರಷ್ಯವು ಅಡ್ಡಬರುತ್ತಿತ್ತು.

ನಂಬಿ ಕೆಟ್ಟವು.

ಹಿಟ್ಲರರು ರಾಜನೈತಿಕವಾಗಿ ಚಾಣಕ್ಯ ತಂತ್ರವನ್ನೇ ನಡಿಸುತ್ತಿರುವರು. ಯಾವ ರೀತಿಯಲ್ಲಾದರೂ ವೈರಿಯನ್ನು ಗೆಲ್ಲಬೇಕೆಂಬುದೊಂದೇ ಅವರ ಉದ್ದೇಶ. ಮಿಕ್ಕ ಯಾವ ನೀತಿ ನಿಯಮಗಳನ್ನು ಅವರು ಪಾಲಿಸುವವರಲ್ಲ. ತನ್ನ ಪ್ರಯೋಜನಕ್ಕಾಗಿ ಎಂತಹ ವಂಚನೆ ವಿಶ್ವಾಸಘಾತುಕತನಕ್ಕೂ ಅವರು ಹೇಸರು. ನೋರ್ವೆ, ಡೆನ್ಮಾರ್ಕ್, ಹೊಲ್ಲೆಂಡ್ ಮತ್ತು ಬೆಲಜಿಯಮುಗಳು ಹಿಟ್ಲರರನ್ನು ನಂಬಿ ಕೆಟ್ಟವು. ಅವುಗಳ ತಾಟಸ್ಥ್ಯಕ್ಕೆ ಭಂಗವನ್ನುಂಟುಮಾಡಬಾರದೆಂಬ ನ್ಯಾಯ ಬುದ್ಧಿಯಿಂದ ಇಂಗ್ಲೆಂಡು ಫ್ರಾನ್ಸು ಸುಮ್ಮನಿದ್ದು ತಪ್ಪಿಬಿದ್ದುವು. ಹಿಟ್ಲರರು ನೋರ್ವೆ ಡೆನ್ಮಾರ್ಕ್‌ಗಳನ್ನು ವಶಪಡಿಸಿಕೊಂಡ ಮೇಲಾದರೂ ಮಿತ್ರರಾಷ್ಟ್ರಗಳು ಬೆಲ್‌ಜಿಯಮಿನಲ್ಲಿ ಪ್ರಚಂಡ ಸೇನಾ ಸಂಗ್ರಹ ಮಾಡಿ ಜರ್ಮನ್ ಸೇನೆಯನ್ನೆದುರಿಸುವ ಸಿದ್ಧತೆ ಮಾಡುತ್ತಿದ್ದರೆ ಫ್ರಾನ್ಸಿನ ಮೇಲೆ ಜರ್ಮನರಿಗೆ ಅಷ್ಟು ಬೇಗ ಧಾಳಿ ಇಡಲು ಸಾಧ್ಯವಾಗುತ್ತಿದ್ದಿಲ್ಲ.

ಜನರಲ್ ಫ್ರಾಂಕೊ

ಸೇನಾನಿಗಳ ಅಚಾತುರ್ಯ

ಪೋಲೆಂಡಿನ ಮೇಲೆ ಹಿಟ್ಲರರು ನಡಿಸಿದ ಧಾಳಿಯ ವಿಧಾನವನ್ನು ಮಿತ್ರರಾಷ್ಟ್ರಗಳ ಸೇನಾನಿಗಳು ಸರಿಯಾಗಿ ತಿಳಿದುಕೊಂಡು ತಮ್ಮ ಸೇನಾ ಸಿದ್ಧತೆ ಮಾಡಿಕೊಳ್ಳಬೇಕಾಗಿತ್ತು. ಅವರದಕ್ಕೇನು ಹೆಚ್ಚಿನ ಗಮನ ಕೊಡದೆ ತಮ್ಮ ಕಟ್ಟುಕಟ್ಟಳೆಯ ಯುದ್ಧ ಕ್ರಮದಿಂದಲೇ ತೃಪ್ತರಿದ್ದರು. ಹಿಟ್ಲರರ ಹೊಸ ಯುದ್ಧ ಕ್ರಮಕ್ಕೆ ಪೋಲೆಂಡೊಂದು ಪ್ರಯೋಗ ಕ್ಷೇತ್ರವಾಯಿತು. ಅವರ ಸಂಪೂರ್ಣ ಜಯಶೀಲತೆಯಿಂದ ಅವರು ಅದೇ ಕ್ರಮವನ್ನು ಇತರ ಕಡೆಗಳಲ್ಲಿಯೂ ಉಪಯೋಗಿಸಲೆಳೆಗೊಂಡರು. ಒಮ್ಮೆಯೇ ತನ್ನ ಸರ್ವ ಬಲವನ್ನು ವೈರಿಯ ಮೇಲೆ ಉಪಯೋಗಿಸಿ ಅವನನ್ನು ಕಂಗೆಡಿಸಿ ಸದೆಬಡಿಯುವ ಯುದ್ಧ ಕ್ರಮ ಹಿಟ್ಲರರದ್ದು. ಮಿತ್ರರಾಷ್ಟ್ರಗಳ ಸೇನಾನಿಗಳು ಇದನ್ನರಿತುಕೊಳ್ಳದೆ ಅಲ್ಪಸ್ವಲ್ಪ ಸೇನೆಯನ್ನು ನೋರ್ವೆಗೆ ಕಳುಹಿಸಿ ಭಗ್ನ ಮನೋರಥರಾದರು. ಆಮೇಲೆ ಬೆಲ್‌ಜಿಯಮಿಗಾದರೂ ಮಿತ್ರರಾಷ್ಟ್ರಗಳು ತಮ್ಮ ಸರ್ವ ಬಲವನ್ನು ಸಂಗ್ರಹಿಸಿ ಕಳುಹಿಸಿ ಜರ್ಮನರ ಧಾಳಿಯ ಪ್ರವಾಹವನ್ನು ತಡೆಗಟ್ಟಲಿಲ್ಲ

ನೂತನ ಯುದ್ಧ ಕ್ರಮ

ಮಿತ್ರ ರಾಷ್ಟ್ರಗಳ ಸೇನಾನಿಗಳು ಹಳೆಯ ಕಟ್ಟುಕಟ್ಟಳೆಯ ಯುದ್ಧ ಕ್ರಮಕ್ಕೇನೇ ಕಟ್ಟುಬಿದ್ದವರು. ದಿನ ದಿನ ಕ್ಷಣ ಕ್ಷಣ ಸಂಬಂಧಿ ಹೊಸ ರೀತಿಯ ಯುದ್ಧಕ್ರಮಕ್ಕನುಸಾರವಾಗಿ ತಮ್ಮ ಸೇನಾ ಚಲನವಲನವನ್ನು ಬದಲಾಯಿಸುವಷ್ಟರ ಸಾಹಸ ಮತ್ತು ಚಾತುರ್ಯವು ಮಿತ್ರರಾಷ್ಟ್ರಗಳ ತಲೆ ನರೆತ ವೃದ್ಧ ಸೇನಾನಿಗಳಲ್ಲಿರಲಿಲ್ಲ. ಸಹಸ್ರಗಟ್ಲೆ ಸೈನಿಕರು ವಾಯು ಕೊಡೆಗಳ ಮೂಲಕ ವೈರಿಗಳ ಹಿಂಬದಿಗೆ ಹಾರಿಬಂದು ಧಾಳಿ ಇಡುವ ಅತ್ಯಾಧುನಿಕ ಯುದ್ಧ ಕ್ರಮವು ಎಂದಿಗೂ ಫಲಕಾರಿಯಾಗಲಾರದೆಂದು ಮಿತ್ರ ರಾಷ್ಟ್ರಗಳ ಸೇನಾನಿಗಳು ಅದನ್ನು ಕಡೆಗಣಿಸಿದ್ದರು. ಆದರೆ ಜರ್ಮನರು ಅದನ್ನೇ ಫಲಕಾರಿಯಾಗಿ ಪ್ರಯೋಗಿಸಿರುವರು. ಜರ್ಮನರ ಅತಿ ದೊಡ್ಡ ಟೇಂಕುಗಳ ಅತ್ಯಂತ ಸಾಹಸಪರ ಧಾಳಿಯು ಮಿತ್ರ ರಾಷ್ಟ್ರಗಳ ಸೇನೆಯನ್ನು ಧೃತಿಗೆಡಿಸಿಬಿಟ್ಟಿತು. ನೀರನ್ನಲ್ಲಿ ಹಾರುವ, ಎಂತಹ ಕಾಡು ಗುಡ್ಡಗಳನ್ನಾದರೂ ಏರಿ ತೂರಿ ಧುಮುಕುವ ಜರ್ಮನ್ ಟೇಂಕುಗಳನ್ನು ಪ್ರತಿಭಟಿಸುವುದೇ ದೊಡ್ಡ ಸಮಸ್ಯೆಯಾಯಿತು. ಎಲ್ಲಕ್ಕಿಂತಲೂ ಹೆಚ್ಚಾಗಿ ಮಿತ್ರ ರಾಷ್ಟ್ರಗಳ ಸೈನಿಕರಿಗೆ ಹಾವಳಿ ಮಾಡಿದುವವೆಂದರೆ ಅತ್ಯಂತ ಕೆಳಗಿಳಿದು ಧಾಳಿ ನಡಿಸುವ ಜರ್ಮನರ ಸಹಸ್ರಗಟ್ಲೆ ವಿಮಾನಗಳು. ಗಿಡುಗಗಳಂತೆ ಒಮ್ಮೆಯೇ ಕೆಳಗಿಳಿದು ಬೋಂಬು ಮತ್ತು ಗುಂಡೆಸೆವ ಈ ವಿಮಾನಪಡೆಯು ಬ್ರಿಟಿಷ್ ಮತ್ತು ಫ್ರೆಂಚ್ ಸೈನಿಕರನ್ನು ಧೃತಿಗೆಡಿಸಿಬಿಟ್ಟಿತು. ಜರ್ಮನ್ ವಿಮಾನಗಳು ಮಿಡಿತದ ಪಡೆಗಳಂತೆ ಹಾರಿಬಂದು ಮುತ್ತುತ್ತಿದ್ದುವು. ಒಂದು ಮಿಲ್ಯ ಜರ್ಮನ್ ವೈಮಾನಿಕರಿಂದು ಸಿದ್ಧರಾಗಿದ್ದಾರೆ. ಬೇಕಾದರೆ ಇನ್ನೆರಡು ಮಿಲ್ಯವನ್ನು ಸಂಗ್ರಹಿಸಬಹುದೆಂಬ ಹಿಟ್ಲರರ ಮಾತೇನೂ ಒಣ ಜಂಭವಲ್ಲ. ಜರ್ಮನ್ ಮೋಟರ್ ಸೈಕ್ಲ್‌ದಳದ ಸೈನಿಕರ ಸಾಹಸವು ಅತಿ ವಿಚಿತ್ರವಾದುದು, ಅವರು ಪ್ರಾಣದ ಹಂಗು ತೊರೆದು ಎಲ್ಲಿಗಾದರೂ ಮುಂದಾಗಿ ಸರಿದುಬಡುವರು.

ಜರ್ಮನ್ ಸೇನೆಯು ಇಷ್ಟೇ ಇದೆ. ಅದು ಇದೇ ರೀತಿ ಧಾಳಿನಡಿಸುತ್ತದೆಯೆಂಬುದರ ಕಲ್ಪನೆಯೇ ಮಿತ್ರರಾಷ್ಟ್ರಗಳ ಸೇನಾನಿಗಳಿಗಿದ್ದಂತೆ ತೋರುವುದಿಲ್ಲ. ಜರ್ಮನರೇ ಹೊಸ ಹೊಸ ಕ್ರಮ ಮತ್ತು ತಂತ್ರಗಳನ್ನುಪಯೋಗಿಸಿ ಧಾಳಿನಡಿಸಿದುದೇ ಹೊರತು ಇಷ್ಟರ ವರೆಗೆ ಮಿತ್ರರಾಷ್ಟ್ರಗಳ ಸೈನಿಕರು ಒಮ್ಮೆಯಾದರೂ ದೊಡ್ಡ ಧಾಳಿ ನಡಿಸುವ ಸಾಹಸಮಾಡಿದುದಿಲ್ಲ. ಅಂತಹ ಎದೆಗಾರಿಕೆಗವರು ಸಿದ್ಧರೇ ಇರಲಿಲ್ಲ. ಮೊದಲಾಗಿ ಧಾಳಿ ನಡಿಸುವ ಸಾಹಸಮಾಡುವವರಿಗೆ ಎಷ್ಟು ಪ್ರಯೋಜನವೋ ಅಷ್ಟೇ ಅಪಾಯವಿದೆ. ಆ ಅಪಾಯಕ್ಕೊಳಗಾಗಿ ಅನಾವಶ್ಯಕ ಪ್ರಾಣಹಾನಿ ಮಾಡಿಕೊಳ್ಳಲು ಮಿತ್ರರಾಷ್ಟ್ರೀಯರು ಸಿದ್ಧರಿರುವದಿಲ್ಲ. ಪ್ರಾಣಹಾನಿಯನ್ನು ಆದಷ್ಟು ಕಡಿಮೆ ಮಾಡಬೇಕೆಂಬುದೇ ಅವರ ಉದ್ದೇಶವಾಗಿತ್ತು. ಆದರೆ ಹಿಟ್ಲರರು ಘೋರ ಹಿಂಸಾತ್ಮಕ ಹೃದಯರಹಿತ ಬರ್ಬರ ಯುದ್ಧ ನಡಿಸಿರುವರು. ಅವರಿಗೆ ಬೇಕಾದುದು ಜಯ. ಅದೊಂದೇ ಅವರ ದೃಷ್ಟಿ

ಮುಸಲೋನಿ

ಮಂಗಳೂರು ಮತ್ತು ಉಡುಪಿಗೆ ಬಂದಾಗ ನಿಮಗೆ
ಸುಖವಾದ ನಿವಾಸ ದೊರೆಯಬೇಕೋ?
— ಹಾಗಾದರೆ —
ಸುಖನಿವಾಸಕ್ಕೆ ಬನ್ನಿ.
ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,
ವಿದ್ಯುದ್ದೀಪಾಲಂಕೃತ ಕೋಣೆ.
ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವುದೆಲ್ಲಿ?
ಸುಖನಿವಾಸ ದಲ್ಲಿ ಮಾತ್ರ.
ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.
ಮಂಗಳೂರಿನಲ್ಲಿ ಜೇಡಿಗುಡ್ಡೆಯಲ್ಲಿಯೂ, ಉಡುಪಿಯಲ್ಲಿ ತಾಲೂಕು ಕಚೇರಿಯ ಬಳಿಯಲ್ಲಿಯೂ ಇರುವ 'ಸುಖನಿವಾಸ'ವನ್ನು ಒಮ್ಮೆ ಸಂದರ್ಶಿಸಿ.
ಪ್ರೊಪ್ರೈಟರ್, ಸುಖನಿವಾಸ.

ಪಥವಲ್ಲ. ಅದಕ್ಕಾಗಿ ಸೈನಿಕರನ್ನು ಹುಳಗಳಂತೆ ಅವರು ನಾಶಮಾಡಿಸಿರುವರು. ಮುಂದಿಟ್ಟ ಹೆಜ್ಜೆ ಹಿಂದಿಟ್ಟವನಗತಿ ಗುಂಡಿಗೆ ಬಲಿ. ಲಕ್ಷಗಟ್ಲೆ ಸೈನಿಕರು ಸತ್ತು ಬಿದ್ದರೂ ಲಕ್ಷಿಸದೆ ತರಂಗತರಂಗವಾಗಿ ಮತ್ತೂ ಸೈನಿಕರನ್ನು ಮುಂದೊದ್ದಿ ಜಯ ಸಂಪಾದಿಸಿರುವರು. ಜರ್ಮನಿ, ಪೋಲೆಂಡ್ ಆಸ್ಟ್ರಿಯ, ಮೊದಲಾದ ರಾಷ್ಟ್ರಗಳ ಆಸ್ಪತ್ರೆಗಳಲ್ಲಿ ಗಾಯಗೊಂಡ ಲಕ್ಷಗಟ್ಲೆ ಜರ್ಮನ್ ಸೈನಿಕರು ನರಳುತ್ತಿದ್ದಾರೆ. ಸತ್ತವರನ್ನೆಲ್ಲ ರಾಶಿ ರಾಶಿ ಹಾಕಿ ಸುಟ್ಟು ಸಾಮೂಹಿಕ ದಹನ ಕ್ರಿಯೆಮಾಡಲಾಗುತ್ತಿದೆ. ಹಿಟ್ಲರರಿಗೆ ಒಂದಿಷ್ಟು ದಯೆದಾಕ್ಷಿಣ್ಯವಾಗಲಿ ಕನಿಕರವಾಗಲಿ ಇಲ್ಲ. ಒಂದು ವಿಜಯಕ್ಕಾಗಿ ಮಿಲಿಯಗಟ್ಲೆ ಸೈನಿಕರನ್ನವರು ಮೃತ್ಯುದೇವತೆಗೆ ಬಲಿಗೊಡಲು ಸಿದ್ಧರಿದ್ದಾರೆ. ಯುದ್ಧದ ರೀತಿ ಮತ್ತು ಚಾತುರ್ಯದಲ್ಲಿ ಹಿಟ್ಲರರು ಮಿತ್ರರಾಷ್ಟ್ರಗಳ ಸೇನಾನಿಗಳನ್ನು ಕಂಗೆಡಿಸಿರುತ್ತಾರೆ. ಅವರು ಯಾವುದಾದರೊಂದು ನಿಶ್ಚಿತ ಕ್ರಮವನ್ನನುಸರಿಸಿ ಯುದ್ಧಮಾಡುವುದೇ ಇಲ್ಲ. ಒಂದೊಂದು ರಣರಂಗದಲ್ಲಿ ಒಂದೊಂದು ರೀತಿ ಕಾದಾಡುತ್ತಾರೆ. ದಿನದಿನ ಕ್ಷಣಕ್ಷಣಕ್ಕೆ ಕಾದಾಟದ ವಿಧಾನವನ್ನು ಬದಲಾಯಿಸುತ್ತಿದ್ದಾರೆ. ಇಂದು ಟಾಂಕಿಗಳನ್ನು ಮುಂದೆ ಹಾಕಿದರು. ನಾಳೆ ಕಾಲಾಳುಗಳು ಮುಂದೆ ಬರುವವು ಮತ್ತೊಂದು ದಿನ ಮೊದಲಾಗಿ ವಿಮಾನಗಳೇರಿಬರುವವು. ಮಗದೊಂದು ದಿನ ಮೋಟರ್ ಸೈಕ್ಲ್ ದಳಗಳು ಮೊದಲಾಗಿ ಬರುವವು. ಸೈನಿಕರು ಕೂಡಾ ಬಹಳ ಚುರುಕಿನಿಂದ ಒಂದೆಡೆಯಿಂದ ಇನ್ನೊಂದೆಡೆಗೆ ಚಲಿಸಬಲ್ಲರು. ಇವತ್ತು ಸಂಜೆ ಒಂದೆಡೆ ಇದ್ದರೆ ನಾಳೆ 30 ಮೈಲು ದೂರದಲ್ಲಿ ಇನ್ನೊಂದೆಡೆ ಧಾಳಿ ನಡಿಸುವರು. ಮಿತ್ರರಾಷ್ಟ್ರಗಳ ಸೈನಿಕರಂತೆ ಹಾಸಿಗೆ, ಚೀಲ, ಚಾಕರಿಯವರು ಹೆಂಗಸರು ಮೊದಲಾದ ಅನುಕೂಲತೆಗಳೇನೂ ಜರ್ಮನರಿಗೆ ಬೇಕಾಗಿಲ್ಲ. ನೆಟ್ಟಗೆ ಮತ್ತು ಥಕ್ಕನೆ ಅವರು ಒಂದೆಡೆಯಿಂದ ಇನ್ನೊಂದೆಡೆಗೆ ಚಲಿಸಬಲ್ಲರು.

ಫ್ಲೇಂಡರ್ಸ್ ರಣರಂಗದಲ್ಲಾಗಲಿ, ಸೋಮ್ ಯುದ್ಧದಲ್ಲಾಗಲಿ ಮಿತ್ರರಾಷ್ಟ್ರಗಳು ತಮ್ಮ ಸಂಪೂರ್ಣ ಬಲವನ್ನುಪಯೋಗಿಸಿರುವುದಿಲ್ಲ. ಮೆಗಿನೋ ಕೋಟೆಯಲ್ಲಿ ಅಷ್ಟು ಸೈನಿಕರು. ಪೂರ್ವದ ಆಲ್ಪ್ಸ ಬೆಟ್ಟಗಳ ಬಳಿ ಒಂದಷ್ಟು. ಇನ್ನು ಸೀರಿಯ ಮೊದಲಾದ ಆಶ್ರಿತ ರಾಜ್ಯಗಳಲ್ಲಿ ಮತ್ತಷ್ಟು. ಹೀಗೆ ಫ್ರೆಂಚ್ ಸೇನೆಯು ಹಂಚಲ್ಪಟ್ಟಿರುವುದು. ಬ್ರಿಟಿಷ್ ಸೇನೆಯು ಕೂಡಾ ಇದೇ ರೀತಿ. ಮೆಗಿನೋ ಕೋಟೆಗಳ ಮೇಲಿಂದ ಹಿಟ್ಲರರು ಧಾಳಿನಡಿಸುವ ಸೋಗು ಮಾತ್ರ ಹಾಕಿದುದು. ಅಲ್ಲಿ ಹೆಚ್ಚಿನ ಸೇನೆಯನ್ನಿಟ್ಟೇ ಫಲವಿಲ್ಲ. ಇಂದೀಗ ಮೆಗಿನೋ ಕೋಟೆಯು ಫ್ರಾನ್ಸಿನ ರಕ್ಷಣೆಯಾಗುವ ಬದಲಿಗೆ ಅದನ್ನೇ ಫ್ರೆಂಚರು ವೈರಿಯ ಕೈವಶವಾಗದಂತೆ ಕಾಯ್ದುಕೊಳ್ಳಬೇಕಾಗಿದೆ. ಇಂಗ್ಲೇಂಡಿನ ಮೇಲೆ ಹಿಟ್ಲರರು ಧಾಳಿನಡಿಸುವರೆಂಬುದು ದಿಗಿಲುಗೊಳಿಸುವ ಹಂಚಿಕೆ. ಫ್ರಾನ್ಸನ್ನು ಗೆಲ್ಲದೆ ಇಂಗ್ಲೆಂಡಿನ ಮೇಲೆ ಧಾಳಿನಡಿಸುವುದೆಂಬುದು ಬೂಟಾಟಿಕೆ. ಆದುದರಿಂದ ಬ್ರಿಟಿಷರು ಇಂಗ್ಲೆಂಡಿನ ರಕ್ಷಣೆಯ ಗೊಡವೆ ಇಲ್ಲದೆ ತಮ್ಮ ಸಮಸ್ತ ಸೇನೆಯನ್ನೂ ಫ್ರಾನ್ಸಿನ ರಣರಂಗಕ್ಕೆ ಆರಂಭದಲ್ಲೇ ಕಳುಹಿಸಬೇಕಿತ್ತು.

ಮಿತ್ರ ರಾಷ್ಟ್ರೀಯರು ಮೆಗಿನೋ ಕೋಟೆಯನ್ನೇ ಮಹತ್ವವನ್ನಾಗಿಮಾಡಿ ಅಲ್ಲಿಯೇ ಪ್ರಬಲ ಸೇನೆಯನ್ನಿಟ್ಟು ಆ ಮೂಲಕವೇ ಜರ್ಮನರೊಡನೆ ದೀರ್ಘ ಕಾಲ ಯುದ್ಧನಡಿಸಿ ಅವರನ್ನು ಸೋಲಿಸಬೇಕೆಂದು ನಿರ್ಧರಿಸಿದ್ದರು. ಈ ನಡುವೆ ಜರ್ಮನಿಯ ಮೇಲೆ ಸಾಂಪತ್ತಿಕ ಮುತ್ತಿಗೆ ಹಾಕಿ ಬಗ್ಗುಬಡಿಯುವ ಹಂಚಿಕೆಮಾಡಿದ್ದರು. ಆದರೆ ಇಂದೀಗ ಅವರ ಈ ಹಂಚಿಕೆಯೇ ನಿರರ್ಥಕವಾಗಿದೆ. ಯುರೋಪಿನ ಮೇಲೆಲ್ಲಾ ಹಿಟ್ಲರ್ ಅಧಿಕಾರ ನಡಿಸುವಂತಾಗಿದೆ. ಸುಮಾರು ೧ಮಿಲ್ಯ ಇಟಲಿಯಾನ ಸೇನೆ, 4 ಸಾವಿರ ವಿಮಾನಗಳು ಮತ್ತು ಪ್ರಬಲ ನೌಕಾಪಡೆಯಿಂದ ಮುಸಲೋನಿಯವರು ಹಿಟ್ಲರರ ಪಕ್ಷವಹಿಸಿರುವರು. ಇದರಿಂದ ಹಿಟ್ಲರರಿಗೆ ಹೊಸ ಸೇನೆಯ ಸಹಾಯ ದೊರೆತಂತಾಗಿರುವುದು. ಈ ಸಂದರ್ಭ ನೋಡಿ ಮುಸಲೋನಿಯವರು ಯುದ್ಧಕ್ಕಿಳಿದಿರುವರು. ಸ್ಪೈನೂ ಡಿಕ್ಟೇಟರರೊಂದಿಗೆ ಸೇರಬಹುದು. ಜನರಲ್ ಫ್ರೇಂಕೋರವರು ಹೆಚ್ಚುಕಾಲ ತಟಸ್ಥವಾಗಿರಲಾರರು. ಜಿಬ್ರಾಲ್ಟರಿನ ಬಳಿಯ 'ಟೆಂಜಿಯರ್' ಎಂಬ ಅಂತರಾಷ್ಟ್ರೀಯ ಆಡಳಿತಕ್ಕೊಳಗಾಗಿದ್ದ ಸ್ಥಳಕ್ಕೆ ಹೆಚ್ಚಿನ ಸ್ಪೇನಿಶ್ ಸೇನೆಯು ಕಳುಹಿಸಲ್ಪಟ್ಟುದು ಮಿತ್ರರಾಷ್ಟ್ರೀಯರಲ್ಲಿ ಚಿಂತೆಯನ್ನುಂಟುಮಾಡಿದೆ.

— ನೋಟೀಸು —

"ನವಯುಗ"ದ ಬಿಡಿ ಪ್ರತಿಗಳನ್ನು ಮಾರಾಟಮಾಡಲು ಈ ಕೆಳಗಿನ ಸ್ಥಳಗಳಲ್ಲಿ ಹೊಸ ಏಜಂಟರು ಬೇಕಾಗಿದೆ. ಇಷ್ಟವುಳ್ಳವರು ಬರಕೊಳ್ಳಬಹುದು.

1. ಕುಂದಾಪುರ, 2. ಸಕಲೇಶಪುರ, 3. ಕೊಪ್ಪ, 4. ಕಾರ್ಕಳ.

1 ಘಂಟೆಯಲ್ಲಿ ನವ ಯೌವನ!
ಕಾಮಶಕ್ತಿಯನ್ನು ಹೆಚ್ಚಿಸಿ ವೀರ್ಯ ಸ್ತಂಭನೆ ಮಾಡುವ
ರಮಣ ವಿಲಾಸಿನಿ
ಕ್ಷೀಣಶರೀರಿಗಳು ಮಾರ್ಧಕ್ಯ ಹೊಂದಿದವರಿಗೂ ನವಯೌವನವನ್ನಿತ್ತು ರತಿ ಸುಖದಲ್ಲಿ ಪರಮಾನಂದವನ್ನು ಕೊಡುತ್ತದೆ.
ಡಬ್ಬಿ 1ರ ಕ್ರಯ ರೂ. 1/-
ಮದನ ಮಂಜರಿ ಫಾರ್ಮಸಿ,
184, ಚೈನಾಬಜಾರ್, ಮದ್ರಾಸ್



ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಹೊಸ ಮೆಂಬರರಾಗಿ ನೇಮಿಸಲ್ಪಟ್ಟಿರುವ ಸಂಯುಕ್ತ ಪ್ರಾಂತ್ಯದ ಮಾಜಿ ಪ್ರಧಾನ ಮಂತ್ರಿ
ಪಂಡಿತ ವಲ್ಲಭ ಪಂತರು

ಇಂಡಿಯನ್ ಮ್ಯೂಚುಯಲ್ ಲೈಫ್ ಅಸೋಸಿಯೇಷನ್ ಲಿಮಿಟೆಡ್

ಹೆಡ್ ಆಫೀಸ್:- ನಂ. ೧೧, ಮೌಂಟ್ ರೋಡ್, ಮದರಾಸು

— ಡೈರೆಕ್ಟರುಗಳ ಬೋರ್ಡ್ —

ಸರ್ ಮೇಷಾ ರಮೇಶಂ, ಕೆ. ಟಿ. ರಿಟೈರ್ಡ್ ಜಡ್ಜ್, ಮದರಾಸ್ ಹೈಕೋರ್ಟ್, ಮದರಾಸು.
ರಾವ್ ಬಹದ್ದೂರ್ ಮ|| ಕೆ. ಬಲರಾಮ ಅಯ್ಯರ್, ಬಿ.ಎ. ರಿಟೈರ್ಡ್ ಅಕೌಂಟೆಂಟ್ ಜನರಲ್ ಮದರಾಸ್.
ಮ|| ಸಿ. ಕೃಷ್ಣಮೂರ್ತಿ ಮೊದಲಿಯಾರ್ ಲ್ಯಾಂಡ್ ಲಾರ್ಡ್, ಷಿಯಾಲಿ.
ದಿವಾನ್ ಬಹದ್ದೂರ್ ಮ|| ಎ. ವಿ. ರಾಮಲಿಂಗ ಅಯ್ಯರ್, ಮದರಾಸ್ ಸರಕಾರದ ರಿಟೈರ್ಡ್ ಚೀಫ್ ಇಂಜನಿಯರು.
ಮ|| ಟಿ. ಎಸ್. ನಾರಾಯಣ ಸ್ವಾಮಿ, ಎಂ.ಎ., ಅಸಿಸ್ಟೆಂಟ್ ಕೆಮಿಸ್ಟ್, ಬಕಿಂಗ್‌ಹ್ಯಾಂ ಮಿಲ್ಸ್, ಮದರಾಸ್.
ದಿವಾನ್ ಬಹದ್ದೂರ್ ಮ|| ವಿ. ಭಾಷ್ಯಂ ಅಯ್ಯಂಗಾರ್, ರಿಟೈರ್ಡ್ ಮದರಾಸ್ ಹೈಕೋರ್ಟ್ ಜಡ್ಜ್.
ಮ|| ಸಿ.ಎಂ.ಶ್ರೀನಿವಾಸನ್, ಬಿ.ಎ., ಬಿ.ಎಲ್. (ಎಕ್ಸ್–ಆಫೀಷಿಯೋ) ಮದ್ರಾಸ್.

ಮ್ಯಾನೇಜರ್:–ಮ|| ಎಂ. ನಟೇಶನ್, ಎಂ.ಎ. ಚೀಫ್ ಮೆಡಿಕಲ್ ಆಫೀಸರ್:– ಲೆ. ಕ|| ವಿ. ಮಹದೇವನ್, ಐ. ಎಂ. ಎಸ್.

ಬ್ಯಾಂಕರುಗಳು:— ಇಂಡಿಯನ್ ಬ್ಯಾಂಕ್ ಲಿಮಿಟೆಡ್, ಮದರಾಸ್. ಮದರಾಸ್ ಪ್ರೋವಿನ್‌ಷಿಯಲ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್. ಇಂಡೊ–ಕಮರ್ಷಿಯಲ್ ಬ್ಯಾಂಕ್ ಲಿಮಿಟೆಡ್, ದಿ ಬ್ಯಾಂಕ್ ಆಫ್ ಮೈಸೂರು, ಲಿಮಿಟೆಡ್.

ಬ್ರಾಂಚುಗಳು:— ಕಲ್ಕತ್ತ, ಲಾಹೋರ್, ಜೋಧಪೂರ್, ಮಧುರ, ಕಲ್ಲಿಕೋಟೆ, ಬೆಜವಾಡ, ಅಲಹಾಬಾದ್ ಬೊಂಬಾಯಿ, ಅಹಮದಾಬಾದ್, ಪೂನಾ

ಮೈಸೂರು ಸರಕಾರದ ಹೊಸ ವಿಮಾ ಕಾನೂನನ್ನು ಅನುಸರಿಸಿ ಕಂಟ್ರೋಲರವರಲ್ಲಿ ಠೇವಣಾತಿ ನೊಬಲಗು ಇಡಲಾಗಿದೆ.

ಕರ್ನಾಟಕದಲ್ಲೆಲ್ಲಾ ಯೋಗ್ಯರಾದ ಮತ್ತು ಪ್ರತಿಭಾಶಾಲಿಗಳಾದವರಿಂದ ಏಜನ್ಸಿಗಳಿಗೆ ಅರ್ಜಿಗಳು ಸ್ವೀಕರಿಸಲ್ಪಡುವುವು.

ಉತ್ತಮ ಕೆಲಸಮಾಡುವವರಿಗೆ ಒಳ್ಳೇ ಷರತ್ತುಗಳು.
ಮ|| ಸಿ. ಎಂ. ಶ್ರೀನಿವಾಸನ್, ಬಿ. ಎ., ಬಿ. ಎಲ್. ಜನರಲ್ ಸೆಕ್ರೆಟರಿ.
ಇಂಡಿಯನ್ ಮ್ಯೂಚುಯಲ್ ಲೈಫ್ ಅಸೋಸಿಯೇಷನ್ ಲಿಮಿಟೆಡ್,
10 ಮೌಂಟ್‌ರೋಡ್, ಮದ್ರಾಸ್.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—
ಬಿ. ಕರುಣಾಕರ ಹೆಗ್ಡೆ, ಇನ್‌ಸ್ಪೆಕ್ಟರ್ ಆಫ್ ಏಜನ್ಸೀಸ್,
ಪರ್ಕಳ ಪೋಸ್ಟ್, ಉಡುಪಿ.

Bonus: Endowment Rs. 15. Wole life Rs. 18 Last valuation.
INDIAN MUTUAL LIFE ASSOCIATION, LIMITED.
Head Office—No. 11, Mount Road Madras.

ಒಂದು ವಾರದ ಯುದ್ಧ

ಇಟಲಿಯು ಯುದ್ಧಕ್ಕೆ ಸೇರಿದುದರ ಪರಿಣಾಮ!

ಫ್ರಾನ್ಸಿನ ಸಂದಿಗ್ಧ ಪರಿಸ್ಥಿತಿ.

ಪ್ರೆಸಿಡೆಂಟ್ ರೂಸ್‌ವೆಲ್ಟರ ಹೆಚ್ಚೆಚ್ಚು ಸಹಾಯದ ಆಶ್ವಾಸನೆ!

ಇಂಗ್ಲೆಂಡಿನ ಭಂಡವಾಳಶಾಹಿ ತಂಡವನ್ನು ಬಗ್ಗುಬಡಿದು ಅದರ ಸಮುದ್ರದ ಮೇಲಿನ ಅಧಿಕಾರವನ್ನು ಮುರಿಯುವುದೇ ಹಿಟ್ಲರರ ಉದ್ದೇಶ!

ಇದೇ ತಾ. 10ರಲ್ಲು ಇಟಲಿಯು ಯುದ್ಧಕ್ಕೆ ಸೇರುವ ಸಂದರ್ಭದಲ್ಲಿ ಮುಸಲೋನಿಯವರು ಕೊಟ್ಟ ಭಾಷಣದ ಮೇರೆಗೆ ಅವರು ಇಂಗ್ಲೆಂಡು ಮತ್ತು ಫ್ರಾನ್ಸ್‌ಗಳನ್ನು ತೀವ್ರವಾಗಿ ದ್ವೇಷಿಸುವವರಾದರೆ ಯುದ್ಧಾರಂಭದಲ್ಲೇ ಜರ್ಮನಿಯೊಂದಿಗೆ ಸೇರಿ ಕಾದಾಡಬೇಕಿತ್ತು ಅದೇ ನೂ ಮೊಡಲೆ ಅವರು ಇಷ್ಟರ ವರೆಗೆ ಯುದ್ಧವು ಭೂಮಧ್ಯ ಸಾಗರಕ್ಕೆ ವ್ಯಾಪಿಸದಂತೆ ತಾನು ಪ್ರಯತ್ನಿಸುವೆನೆಂದು ಘೋಷಿಸುತ್ತಿದ್ದರು. ಮತ್ತು ಮಿತ್ರರಾಷ್ಟ್ರಗಳೊಡನೆ ವ್ಯಾಪಾರ ವಹಿವಾಟಿನ ಸಂಬಂಧವಾದ ಒಪ್ಪಂದ ಮಾಡಿಕೊಳ್ಳುವುದರಲ್ಲಿದ್ದರು. ಆದರೆ ಹಿಟ್ಲರರು ಫ್ಲೆಂಡರ್ಸ್ ಯುದ್ಧದಲ್ಲಿ ಗೆದ್ದು ಪೆರಿಸನ್ನು ವಶಪಡಿಸಿಕೊಳ್ಳುವುದರಲ್ಲಿರುವಾಗ, ಅವರಿಗೆ ನೆರಯಂತೆ ಅತ್ತಿತ್ತ ನೋಡುತ್ತ ಕುಳಿತಿದ್ದ ಮುಸಲೋನಿಯವರು ಥಕ್ಕನೆ ಜರ್ಮನಿಯೊಂದಿಗೆ ಯುದ್ಧಕ್ಕೆ ಧುಮುಕಿ ಫ್ರಾನ್ಸಿನ ಕಂಟಕಕಾಲದಲ್ಲಿ ಹಿಂದಿನಿಂದ ಅದಕ್ಕೆ ತಿವಿಯುವ ವಿಶ್ವಾಸ ಘಾತುಕ ಮತ್ತು ಹೃದಯರಹಿತ ಕೃತ್ಯಮಾಡಿರುವರು. ಅಪ್ರಗತಿಕ ಮತ್ತು ಭಂಡವಾಳಶಾಹಿ ರಾಷ್ಟ್ರಗಳಾದ ಫ್ರಾನ್ಸ್ ಮತ್ತು ಇಂಗ್ಲೆಂಡುಗಳ ಪೀಡೆಯಿಂದ ಇಟಲಿಯನ್ನೂ, ಯುರೋಪನ್ನೂ, ಲೋಕವನ್ನೂ ಉದ್ಧರಿಸಬೇಕೆಂದು ಈಗ ಹೊಳೆಯುತವರಿಗೆ. ಮುಸಲೋನಿಯವರು ತನ್ನ ಭಾಷಣದಲ್ಲಿ ಏನೇ ಹೇಳಲಿ, ಅವರೀಗ ತುಚ್ಛ ಸ್ವಾರ್ಥ ದೃಷ್ಟಿಯಿಂದ, ಜರ್ಮನಿಯೊಡನೆ ಕೊಳ್ಳೆಯಲ್ಲಿ ಪಾಲು ಪಡೆಯುವ ಅಭಿಲಾಷೆಯಿಂದ ಯುದ್ಧಕ್ಕಿಳಿದಿರುವರೆಂಬುದು ಸಿದ್ಧವಾಗಿದೆ. ಹಿಂದಿನ ಒಪ್ಪಂದಗಳನ್ನು ಬದಲಾಯಿಸಿ ಸಮುದ್ರದ ಮೇಲೆ ಬ್ರಿಟನ್ ಮತ್ತು ಫ್ರಾನ್ಸುಗಳಿಗಿರುವ ಹಿಡಿತವನ್ನು ಬಿಡಿಸಿ ಸರಿಮಾಡುವ ಕುರಿತು ತಾನು ಮಿತ್ರರಾಷ್ಟ್ರಗಳನ್ನು ಒತ್ತಾಯ ಮಾಡಿ ಪ್ರಯತ್ನಿಸುವೆನು. ಇಟಲಿಯು ಯುದ್ಧಕ್ಕೆ ಸೇರಿ ಅದನ್ನು ಮತ್ತಷ್ಟು ಘೋರವಾಗಿ ವ್ಯಾಪಿಸಬಾರದೆಂದು ಪ್ರೆಸಿಡೆಂಟ್ ರೂಸವೆಲ್ಟರು ಮುಸಲೋನಿಯವರೊಡನೆ ಬಗೆ ಬಗೆಯಿಂದ ಕೇಳಿಕೊಂಡರೂ ಅವರು ಕಿವಿಗೊಡಲಿಲ್ಲ.

ಇಟಲಿಯ ಪರಾವಲಂಬನೆ

ಇಟಲಿಯು ಯುದ್ಧಕ್ಕೆ ಸೇರಿದುದರಿಂದ ಅದಕ್ಕಾಗಲಿ ಜರ್ಮನಿಗಾಗಲಿ ನಿಶ್ಚಯವಾದ ಪ್ರಯೋಜನವೇ ಉಂಟಾಗುವುದೆಂದೇ ಹೇಳಲು ಸಾಧ್ಯವಿಲ್ಲ. ಹಾಗಿದ್ದರೆ ಮುಸಲೋನಿಯವರು ಆರಂಭದಲ್ಲೇ ಹಿಟ್ಲರರೊಂದಿಗೆ ಸೇರುತ್ತಿದ್ದರು ಕೆಲಸಮಯದವರೆಗೆ ಯುದ್ಧವು ಭೂಮಧ್ಯಸಾಗರ ಮತ್ತು ಬಾಲ್ಕನ್ ಪ್ರದೇಶಕ್ಕೆ ಹಬ್ಬದಂತೆ ಮಾಡುವುದರಿಂದಲೇ ಜರ್ಮನಿಗೆ ಪ್ರಯೋಜನವಿತ್ತು. ಅದುದರಿಂದಲೇ ಮುಸಲೋನಿಯವರು ಆರಂಭದಲ್ಲಿ ಯುದ್ಧಕ್ಕೆ ಸೇರಲಿಲ್ಲ. ಆಮೇಲೆ ಹಿಟ್ಲರರ ವಿಜಯ ನಿಶ್ಚಯವೆಂದಾಗಿ ಫ್ರಾನ್ಸು ಜೀವನ ಮರಣ ಹೋರಾಟದಲ್ಲಿ ನಿರತವಾಗಿರುವಾಗ ಅದಕ್ಕೆ ಹಿಂದಿನಿಂದ ತಿವಿದು ಅದನ್ನು ನಿರ್ನಾಮಗೊಳಿಸಬೇಕೆಂಬುದೇ ಮುಸಲೋನಿಯವರ ಉದ್ದೇಶ. ಈ ಡಿಕ್ಟೇಟರರು ಬ್ರೆನ್ನರ್ ಗಡಿನಾಡಿನಲ್ಲಿ ಸೇರಿ ಈ ವಿಷಯವನ್ನೆಲ್ಲಾ ಮಾತಾಡಿ ಮೊದಲೇ ನಿಶ್ಚೈಸಿಕೊಂಡಿರಬೇಕು. ಈಗಲಾದರೂ ಇಟಲಿಯು ಯುದ್ಧಕ್ಕೆ ಸೇರಿದುದರಿಂದ ಒಂದು ದೃಷ್ಟಿಯಲ್ಲಿ ಅದಕ್ಕೆ ಹಾನಿಯೇ ಹೊರತು ಒಳ್ಳೆತಾಗಲಾರದು. ಯುದ್ಧವು ದೀರ್ಘಕಾಲ ನಡೆಯುವಂತಾದರೆ ಜರ್ಮನಿಯು ಕೊರಳಿಗೂ ಅದೊಂದು ಕೊರಡಾಗದಿರಲಾರದು. ಯಾಕಂದರೆ ಇಟಲಿಯು ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಮಾಲುಗಳು ಶೇಕಡಾ 80ರಿಂದ 85ರ ವರೆಗೆ ಸುವೇಜ್ ಕಾಲುವೆ ಮತ್ತು ಜಿಬ್ರಾಲ್ಟರಬಂದರದ ಮೂಲಕಬರಬೇಕು. ಉತ್ತರ ಅಮೇರಿಕದಿಂದ ಇಟಲಿಯು ಪ್ರತಿ ವರ್ಷ 3ಮಿಲ್ಯ ಟನ್ನುಗಳಷ್ಟರ ದವಸ ಧಾನ್ಯ, ಹತ್ತಿ, ತಾಮ್ರ, ಸತುವು, ಎಣ್ಣೆ ಮತ್ತು ಉಣ್ಣೆಯಿಂದಾಗುವ ಉತ್ಪತ್ತಿಗಳನ್ನು ತರಿಸುತ್ತಿರುವುದು. 2ಮಿಲ್ಯ ಟನ್ನುಗಳಷ್ಟು ದವಸಧಾನ್ಯ, ಕಾಫಿ, ಸಕ್ಕರೆ, ಉಣ್ಣೆ ಮತ್ತು ಒಣಮಾಂಸವನ್ನದು ದಕ್ಷಿಣ ಅಮೇರಿಕದಿಂದ ತರಿಸಿಕೊಳ್ಳುವುದು. ಉತ್ತರ ಯುರೋಪಿನ ದೇಶಗಳಿಂದ 12 ಮಿಲ್ಯ ಟನ್ನುಗಳಷ್ಟರ ಕಬ್ಬಿಣ ಮತ್ತು ಇದ್ದಲನ್ನು ತಂದುಕೊಳ್ಳುವುದು ಈ ಸಾಮಾನುಗಳೆಲ್ಲಾ ಜಿಬ್ರೋಲ್ಟರಿನ ಮೂಲಕವೇ ಇಟಲಿಗೆ ಬರಬೇಕು, ಹಲವು ಮಿಲ್ಯ ಟನ್ನು ಗೋಧಿ ಮತ್ತು ಎಣ್ಣೆಯು ಇಟಲಿಗೆ ಕಪ್ಪು ಸಮುದ್ರ [illegible] ರಾಷ್ಟ್ರಗಳಿಂದ ಬರಬೇಕು. ಇದು ಟರ್ಕಿಯ ಮಾರ್ಗವಾಗಿ ಬರಬೇಕು. ಟರ್ಕಿಯು ಅದನ್ನು ಒಂದು ಕ್ಷಣದಲ್ಲಿ ಬಂದುಮಾಡಿಬಿಡಬಹುದು. 13 ಲಕ್ಷ ಟನ್ನುಗಳಷ್ಟರ ಕಿತ್ತಾಸುರು, ಹತ್ತಿ, ಚರ್ಬಿ, ರಬ್ಬರು, ತವರ, ಧಾನ್ಯ ಮತ್ತು ಎಣ್ಣೆಗಳು ಇಟಲಿಗೆ ಸುವೇಜ್ ಕಾಲುವೆಯ ಮೂಲಕ ಹಿಂದುಸ್ಥಾನ ಮತ್ತು ಆಸ್ಟ್ರೇಲಿಯ ಮೊದಲಾದ ದೇಶಗಳಿಂದ ಹೋಗಬೇಕು. ಇಟಲಿಗೆ ಅತ್ಯಗತ್ಯವಾದ ಸಾಮಾನುಗಳನ್ನು ತರಿಸುವ ಸಮುದ್ರ ಮಾರ್ಗಗಳೆಲ್ಲಾ ಮಿತ್ರರಾಷ್ಟ್ರಗಳ ಅಧೀನವಿವೆ. ಅವುಗಳನ್ನೆಲ್ಲಾ ಬಂದುಮಾಡಿಬಿಟ್ಟರೆ ಇಟಲಿಯು ಕೆತ್ತು ಹಿಸುಕಿದಂತಾಗುವುದು, ಜಲಾಂತರ್ಗಾಮಿಗಳ ಹೊರತು ಇತರ ಎಲ್ಲಾ ಬಗೆಯ ನೌಕಾಪಡೆಯಲ್ಲಿಯೂ ಮಿತ್ರರಾಷ್ಟ್ರಗಳು ಇಟಲಿಗಿಂತ ಎಷ್ಟೋ ಬಲಶಾಲಿಯಾಗಿವೆ. ಜಲಾಂತರ್ಗಾಮಿಗಳೂ ಮಿತ್ರರಾಷ್ಟ್ರೀಯರಲ್ಲಿ ಇಟಲಿಯಷ್ಟೇ ಇವೆ. ಆದುದರಿಂದ ಇಟಲಿಗೆ ಭೂಮಧ್ಯಸಾಗರದಲ್ಲಿನ ಮಿತ್ರರಾಷ್ಟ್ರೀಯರ ನೌಕಾಬಲವನ್ನು ಮುರಿಯಲು ಸಾಧ್ಯವೇ ಇಲ್ಲ. ಭೂಮಧ್ಯಸಾಗರದ ಮೇಲಿನ ಅಧಿಕಾರವನ್ನು ಇಟಲಿಗೆ ಜರ್ಮನಿಯು ಸಹಾಯದಿಂದ ಪಡೆಯಲು ಹೇಗೆ ಸಾಧ್ಯವಾಗುವುದೋ ತಿಳಿಯದು! ಇಟಲಿಯಾನರ ಸಾಂಪತ್ತಿಕ ಸ್ಥಿತಿಯು ಚೆನ್ನಾಗಿರುವುದಿಲ್ಲ. ಈ ಯುದ್ಧದಿಂದದು ಮತ್ತಷ್ಟು ಕೆಟ್ಟು ಹೋಗುವುದು. ಕಳೆದ ಒಂದು ತಿಂಗಳಿಂದ ಇಟಲಿಯಾನರು ಆಹಾರ ಸಾಮಗ್ರಿಗಳನ್ನು ಅದೊಂದು ಮಿತಿಯಿಂದ ಮಾತ್ರ ಪಡೆಯಬೇಕೆಂದು ನಿರ್ಬಂಧ ಹಾಕಲಾಗಿದೆ. ವಾರಕ್ಕೆ 3 ದಿನ ಅವರು ಮಾಂಸ ತಿನ್ನಲಿಕ್ಕಿಲ್ಲ. ಒಬ್ಬ ಇಟಲಿಯಾನನು ತಿಂಗಳಿಗೊಂದು ರಾತ್ಲು ಸಕ್ಕರೆ 1¼ ಔನ್ಸ್ ಕಾಫಿ ಮಾತ್ರ ಉಪಯೋಗಿಸಬೇಕು. ಯುದ್ಧದಿಂದ ಜನತೆಯು ತೀವ್ರ ಸಂಕಷ್ಟಕ್ಕೊಳಗಾಗಬೇಕಾಗುವುದು. ಜರ್ಮನರು ಇಟಲಿಯಾನರಿಗಿಂತಲೂ ಕಷ್ಟಸ್ಥಿತಿಯಲ್ಲಿರುವರು. ಇಟಲಿಗೆ ವಿಶಾಲ ಸಮುದ್ರ ಕರಾವಳಿ ಇರುವುದರಿಂದ ಮಿತ್ರರಾಷ್ಟ್ರಗಳು ನೌಕಾಧಾಳಿ ನಡಿಸಿ ಅದರ ಪ್ರಾಮುಖ್ಯ ಬಂದರುಗಳನ್ನು ನಾಶಮಾಡಬಹುದು. ಇದು ಹೊರತು ಇಟಲಿಯ ಹೊಸ ಅಧೀನ ರಾಜ್ಯವಾದ ಅಬಿಸೀನಿಯದಲ್ಲಿ ಅತೃಪ್ತಿಯು ನೆಲೆಗೊಂಡು ದಂಗೆಗಳು ನಡೆಯುತ್ತಲೇ ಇವೆ ಮಿತ್ರರಾಷ್ಟ್ರಗಳು ಅಬಿಸೀನಿಯದ ಮಾಜಿ ಚಕ್ರವರ್ತಿಯವರ ಸಹಾಯದಿಂದ ಅಬಿಸೀನಿಯನರನ್ನು ಮತ್ತಷ್ಟು ಎತ್ತಿಕಟ್ಟಿ ಅವರ ಬಂಡಾಯವನ್ನು ಬಲಪಡಿಸಬಹುದು. ಆ ಪ್ರಯತ್ನವು ಇಷ್ಟರಲ್ಲೇ ನಡೆದಿರುವುದು. ಲಿಬಿಯ, ಅರಿಟ್ರಿಯ, ಇಟಲಿಯಾನ ಸೋಮಾಲಿಲೇಂಡ್ ಮೊದಲಾದ ಇಟಲಿಯ ಇತರ; ವಸಾಹತುಗಳ ಮೇಲೂ ಮಿತ್ರರಾಷ್ಟ್ರಗಳು ಧಾಳಿ ಇಡಬಹುದು. ಯಾಕಂದರೆ ಮಧ್ಯಪೂರ್ವದಲ್ಲಿ ಮಿತ್ರರಾಷ್ಟ್ರೀಯರ ಪ್ರಬಲ ಸೇನೆಗಳಿರುತ್ತವೆ, ಅಲ್ಲಿಯ ರಾಷ್ಟ್ರಗಳೂ ಅವರಿಗೆ ಸಹಾಯಮಾಡದಿರಲಾರವು.

ಇಟಲಿಗಾಗುವ ಪ್ರಯೋಜನ

ಮುಸಲೋನಿಯವರು ಅತ್ಯಂತ ವಿವೇಕಶಾಲಿ ಮತ್ತು ಚತುರರು. ಚೆನ್ನಾಗಿ ವಿಚಾರಿಸದೆ ಯಾವ ಕೆಲಸವನ್ನೂ ದುಡುಕಿ ಮಾಡುವವರಲ್ಲ. ಹೆಚ್ಚೆಂದರೆ ಬರುವ ಸೆಪ್ಟಂಬರದೊಳಗೆ ಯುದ್ಧವು ಮುಗಿಯುವುದೆಂದು ಅವರೀಗ ನಿರ್ಧರಿಸಿರುವರು. ಆ ವರೆಗೆ ಬೇಕಾದ ಸಿದ್ಧತೆಯನ್ನವರು ಮಾಡಿಕೊಂಡಿರುವರು. ಇಟಲಿಯಲ್ಲಿ ಖಡ್ಡಾಯವಾಗಿ ಸೇನಾ ತರಬೇತಿಯು ಜ್ಯಾರಿಯಲ್ಲಿರುವುದು. 8ಮಿಲ್ಯದ ವರೆಗಣ ಸೇನೆ, 4000ದವರೆಗಣ ವಿಮಾನಪಡೆ ಮತ್ತು 100ರ ವರೆಗಣ ಜಲಾಂತರ್ಗಾಮಿ ನಾವೆಗಳು ಇಟಲಿಗಿದೆಯೆಂದು ನಂಬಲಾಗಿದೆ. ಜರ್ಮನ್ ಸೇನೆಯು ಫ್ಲೆಂಡರ್ಸ್ ಮತ್ತು ಸೋಮ್ ರಣರಂಗದಲ್ಲಿ ಹೋರಾಡಿ ಸೋತಿರುವಾಗ ಇಟಲಿಯಾನರು ಅವರ ಸಹಾಯಕ್ಕೆ ಹೋದುದು ಬಹಳ ಪ್ರಯೋಜನವಾಯಿತು. ಇಷ್ಟರಲ್ಲೇ ಪಶ್ಚಿಮ ರಣರಂಗದಲ್ಲಿ ಇಟಲಿಯಾನ ಸೈನಿಕರು ಹೋರಾಡುತ್ತಿರುವರೆಂದು ತಿಳಿದುಬಂದಿದೆ. ಇಟಲಿಯಾನರು ಶ್ರೇಷ್ಠ ಸೈನಿಕರೇನೂ ಅಲ್ಲ ಆದರೆ ಚತುರ ಹಾಗೂ ಸಮರ್ಥ ಜರ್ಮನ್ ಸೇನಾನಿಗಳ ಕೈಕೆಳಗೆ ಅವರು ಉತ್ತಮ ಸೈನಿಕರಾಗಿ ಹೋರಾಡದಿರಲಾರರು. ಇಟಲಿಯು ಯುದ್ಧ ಹೂಡಿರುವುದರಿಂದ ಮಿತ್ರ ರಾಷ್ಟ್ರೀಯರು ತಮ್ಮ ಪ್ರಬಲ ನೌಕಾಪಡೆ, ವಿಮಾನಪಡೆ ಮತ್ತು ಸೇನೆಯನ್ನು ಭೂಮಧ್ಯಸಾಗರ ಮತ್ತು ಮಧ್ಯಪೂರ್ವ ಪ್ರದೇಶಗಳಲ್ಲೇ ಇರಿಸಬೇಕಾಗಿದೆ. ಫ್ರಾನ್ಸು ದೊಡ್ಡ ಸೇನೆಯನ್ನು ಪೂರ್ವದ ಆಲ್ಪ್ಸ್ ಪರ್ವತಗಳ ಸಂಧಿನಲ್ಲಿ ಇರಿಸಿವೆ. ಮಿತ್ರ ರಾಷ್ಟ್ರೀಯರು ಎರಡು ರಣರಂಗಗಳಲ್ಲಿ ಹೋರಾಡಬೇಕಾಗುವಂತಾಗಿದೆ. ಹಿಟ್ಲರರು ಫ್ರಾನ್ಸಿನ ಮೇಲೆ ತನ್ನ ಧಾಳಿಯನ್ನು ಯಥಾಪ್ರಕಾರ ಭರದಿಂದ ಮುನ್ನಡೆಸಲು ಅತ್ಯನುಕೂಲವಾಗಿದೆ ಪ. ನ.

(೧೧ನೇ ಪುಟಕ್ಕೆ ಮುಂದರಿಯುತ್ತದೆ.)

THULUNAD BANK
OF SUPPLY AGENCY LIMITED.

Authorised & Issued Capital	...	Rs 1,00,000
Subscribed & Paid up Capital	....	Rs. 31,340
Reserves & other Funds	...	Rs. 22,052

ವಿಶೇಷ ರಿಯಾಯಿತಿ

Rs. 1000

ತಾ. 30-6-1940ರ ಒಳಗೆ ರೂ. 1000 ಯಾ ಅದಕ್ಕಿಂತ ಮೇಲ್ಪಟ್ಟು ನಿರಖು ಠೇವಣಾತಿಗಳನ್ನು ಇಡುವವರಿಗೆ ಕೆಲವು ವಿಶೇಷ ರಿಯಾಯತಿಗಳು ಕೊಡಲ್ಪಡುವವು.

ಹೆಚ್ಚಿನ ಮಾಹಿತಿಗೆ ಬರೆಯಿರಿ:-

ಮೆನೇಜಿಂಗ್ ಡೈರೆಕ್ಟರ್

ತುಳುನಾಡ್ ಬೇಂಕ್

ಆಫ್ ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ.

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS,
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ನವಯುಗ

ಉಡುಪಿ, ಗುರುವಾರ ತಾ. ೨೦-೬-'೪೦

ಫ್ರಾನ್ಸಿನ ದುರ್ದೈವ

ಕಾಲಚಕ್ರದ ಉರುಳಾಟದಲ್ಲಿ ಎಂತಹ ವಿಚಿತ್ರ ಮಾರ್ಪಾಟಗಳೆಲ್ಲಾ ಆಗಿಹೋಗುವುದಿಲ್ಲ! 70 ವರ್ಷಗಳ ಮೊದಲು ಪ್ರಶ್ಶಿಯನರು (ಜರ್ಮನರು) ಪೆರಿಸನ್ನು ಗೆದ್ದು ಫ್ರಾನ್ಸಿನ ಮೇಲೆ ತಮ್ಮಿಚ್ಛೆಯ ಒಪ್ಪಂದವನ್ನು ಹೇರಿದ್ದರು. ಇಂದಿಗೆ ಇಪ್ಪತ್ತು ವರ್ಷಗಳ ಹಿಂದೆ ಫ್ರಾನ್ಸು ಜರ್ಮನಿಯನ್ನು ಜೈಸಿ ಅದರ ಮೇಲೆ ವರ್ಸೇಲ್ ಒಪ್ಪಂದವನ್ನು ಹೊರಿಸಿತು. ಅಂದು ನಿಪಾತವಾದ ಜರ್ಮನಿಯು ಇಂದಿಗೆ ಅತ್ಯಂತ ಪ್ರಭಾವಶಾಲಿಯಾಗಿ ಎದ್ದು ನಿಂತು ಪೆರಿಸನ್ನು ವಶಪಡಿಸಿಕೊಂಡು ಫ್ರೆಂಚರ ಮೇಲೆ ಸಂಧಿಯ ಶರ್ತಗಳನ್ನು ಹಾಕುವುದರಲ್ಲಿರುವುದು. ಒಂದೇ ಒಂದು ತಲಾಂತರದೊಳಗೆ ಎಂತಹ ವಿಸ್ಮಯಕರ ಅವಸ್ಥಾಂತರ!

ಇಂದಿಗ ಫ್ರಾನ್ಸಿನ ಮಾತ್ರವಲ್ಲ ಇಡೀ ಲೋಕದ ದುರ್ದೈವವೆಂದರೂ ಸಲ್ಲುವುದು. ಡಿಕ್ಟೇಟರಶಾಹಿಯ ಧಾಳಿಗೊಳಗಾಗಿ ಲೋಕದ ಪ್ರಜಾಪ್ರಭುತ್ವದ ಪ್ರಥಮ ಶ್ರೇಣಿಯ ಕೋಟೆಯು ಬೇಧಿಸಲ್ಪಟ್ಟು ಮುರಿದು ಬಿದ್ದಿರುವುದು. ಯುರೋಪಿನಲ್ಲಿ ಡಿಕ್ಟೇಟರುಗಳ ಅಧಿಕಾರವೇ ಬಲಗೊಳ್ಳುವಂತಾಗಿರುವುದು. ಅತ್ಯಂತ ನಾಗರಿಕ ಹಾಗೂ ಸುಸಂಸ್ಕೃತ ಪ್ರಜಾಸತ್ತಾತ್ಮಕ ಫ್ರಾನ್ಸು ಕ್ರೂರ ಬರ್ಬರ ನಿರಂಕುಶ ಧಾಳಿಯನ್ನು, ಅಮಾನುಷ ರಕ್ತಪಾತವನ್ನು ಜನಸಾಮಾನ್ಯರ ಹೃದ್ರಾವಕ ದುಃಸ್ಥಿತಿಯನ್ನು ತಾಳಿಕೊಳ್ಳಲಾರದೆ ತಲೆಬಾಗಿರುವುದು. ಈ ಇಪ್ಪತ್ತನೆಯ ಶತಮಾನದಲ್ಲಿ ಕಾಡುತನವು ನಾಡುತನವನ್ನು ಗೆದ್ದು ಅಟ್ಟಹಾಸ ಬೀರುತ್ತಿರುವುದು. ಇತಿಹಾಸವು ಈ ರೀತಿ ಪುನರಾವರ್ತಿತವಾಗುವುದೆಂದು ಯಾರು ಬಗೆದಿದ್ದರು! ಫ್ರಾನ್ಸು ಇಂತಹ ವಿಧಿವಿಲಾಸಕ್ಕೊಳಗಾಗುವುದೆಂದು ಯಾರು ತಾನೆ ಕಲ್ಪಿಸಿದ್ದರು. ಆದರೆ ಮಾನವನ ಬಗೆಗೆ ನಿಲುಕದ ಘಟನೆಗಳೆಷ್ಟು ನಡೆದುಹೋಗುವುದಿಲ್ಲ. ಒಂದು ಬಿರುಗಾಳಿಯು ಮಾನವ ಊಹಾಪೋಹೆಗಳ ಹತ್ತಿರಾದ ಮೋಡಗಳನ್ನೆಷ್ಟು ಹಾರಿಸಿಬಿಡುವುದಿಲ್ಲ. ಅಂತೆಯೇ ಮಿತ್ರ ರಾಷ್ಟ್ರಗಳ ಅವಸ್ಥೆಯಾಗಿರುವುದಿಂದು. ಅವುಗಳ ಎಣಿಕೆಯೆಲ್ಲಾ ಉಸುಬಿನ ಮೇಲಿನ ಕಟ್ಟಡದಂತಾಗಿ ಹೋಗಿರುವುದು.

ಹಿಟ್ಲರರು ಇಷ್ಟೊಂದು ಪ್ರಚಂಡ ವಿಮಾನಪಡೆ, ಟೇಂಕುದಳ, ಯಾಂತ್ರಿಕ ಸೇನೆ ಮತ್ತು ಭೂಸೈನ್ಯದ ಸಿದ್ಧತೆಯುಳ್ಳವರೆಂದು ಮಿತ್ರ ರಾಷ್ಟ್ರೀಯರು ಎಣಿಸಲಿಲ್ಲ. ಇಂಗ್ಲೆಂಡಿನ ಸಹಾಯದಿಂದ ಜರ್ಮನಿಯನ್ನು ಗೆಲ್ಲುವುದೇನೂ ಕಷ್ಟವಾಗದೆಂದು ಫ್ರಾನ್ಸು ನಂಬಿಕೊಂಡಿದ್ದಿತು. ಅಭೇದ್ಯವೆನಿಸುವ ಮೆಗಿನೋ ಕೋಟೆಯೊಳಗಣ ಅದೊಂದು ಬಗೆಯ ಸುರಕ್ಷಿತಾಭಾವವು ಫ್ರಾನ್ಸಿಗೆ ದೊಡ್ಡ ಕೇಡಾಯಿತು. ಫ್ರಾನ್ಸಿನೊಳಗೆ ಜರ್ಮನ್ ಸೇನೆಯು ಪ್ರವೇಶಿಸುವ ಸಂಭವವೇ ಇಲ್ಲೆಂದು ಫ್ರೆಂಚರು ನಂಬಿಕೊಂಡಿದ್ದಂತೆ ತೋರುವುದು. ಹೆಚ್ಚಿನ ಯಾಂತ್ರಿಕಸಿದ್ಧತೆಯ ಕಡೆಗವರು ಗಮನಕೊಟ್ಟಂತೆ ತೋರುವುದಿಲ್ಲ. ಕಡೆಕಡೆಗೆ ವಿಮಾನ ನಡಿಸಲು ಅವರಿಗೆ ಸಾಕಷ್ಟು ವೈಮಾನಿಕರಿಲ್ಲವಾದರು. ಇಂಗ್ಲೆಂಡು ತನ್ನ ಸಂಪೂರ್ಣ ಬಲವನ್ನು ಫ್ರಾನ್ಸಿಗೆ ಕಳುಹಿಸಿಕೊಡಲಾಗಲಿಲ್ಲ. ಫ್ಲೆಂಡರ್ಸ್ ಯುದ್ಧದ ಅನಾಹುತದಿಂದದು ಸಾವರಿಸಿಕೊಳ್ಳುವುದರಲ್ಲೇ ಇರುವಾಗ ಜರ್ಮನರು ಪೆರಿಸನ್ನು ವಶಪಡಿಸಿಕೊಂಡು ಮುಂದೊತ್ತಿಬಿಟ್ಟರು.

ಅಮೇರಿಕವಾಗಲೀ ಇನ್ನಿತರ ಪ್ರಜಾತಾಹಿ ರಾಷ್ಟ್ರವಾಗಲಿ ಫ್ರಾನ್ಸಿಗೆ ಸಹಾಯ ಕೊಡುವಷ್ಟರ ಅವಕಾಶವೇ ದೊರೆಯಲಿಲ್ಲ. ಒಂದುವಾರದ ಯುದ್ಧದಲ್ಲೇ ಫ್ರಾನ್ಸು ಕಂಗೆಡುವಂತಾಗಿರುವುದು. ಜರ್ಮನರು ಶೇಂಪೇನ್ ಪಟ್ಟಣವನ್ನು ಗೆದ್ದು ಮೆಗಿನೋ ಕೋಟೆಯನ್ನು ಒಳಗಿಂದ ಭೇದಿಸಿ ಪುಡಿಮಾಡುವಗಂಡಾಂತರವು ಫ್ರೆಂಚರನ್ನು ಧೃತಿಗೆಡಿಸಿಬಿಟ್ಟಿತು. ಬೆಲ್ಜಿಯಂ, ಉತ್ತರ ಫ್ರಾನ್ಸ್, ಪೆರಿಸನ್ನೆಲ್ಲಾ ಬಿಟ್ಟು ಬಂದ ಮಿಲ್ಯಾಂತರ ಜನರು ಸ್ತ್ರೀಯರು ಮಕ್ಕಳು ಮುದುಕರೇ ಮೊದಲಾದವರು ನಿರಾಶ್ರಿತರಾಗಿ, ನಿರ್ಗತಿಕರಾಗಿ ಕಂಗೆಟ್ಟು ಬೀದಿಬೀದಿಗಳಲ್ಲಿ ಇರುವೆಗಳಂತೆ ಮುತ್ತಿರುವಾಗ ಸಹಸ್ರಗಟ್ಲೆ ಸೈನಿಕರು ಗಾಯಗೊಂಡು, ಮಲಗಲು ಸ್ಥಳವಿಲ್ಲದೆ ನೋಡಲು ಚಿಕಿತ್ಸಕರು ಮತ್ತು ಉಪಚಾರಕರಿಲ್ಲದೆ ನರಳುತ್ತಿರುವಾಗ ಲಕ್ಷಾಂತರ ಸೈನಿಕರು ಒಂದುವಾರದವರೆಗೆ ಎಡೆಬಿಡದೆ ರಾತ್ರಿಹಗಲು ಎಲ್ಲಾ ರೀತಿಯಲ್ಲಿಯೂ ಮೂರು ನಾಲ್ಕುಪಟ್ಟು ಪ್ರಬಲವಾದ ವೈರಿಯೊಂದಿಗೆ ಕಾದಾಡಿ ದಣಿದು ತಲೆಯೆತ್ತಲಾರದಂತಾಗಿರುವಾಗ, ನಿರ್ದುಷ್ಟ ಜನತೆ, ಸುಂದರ ನಗರ ಮತ್ತು ದಟ್ಟ ಪ್ರದೇಶಗಳು ಪೈಶಾಚಿಕ ವಿಮಾನಧಾಳಿಗೊಳಗಾಗಿ ನಾಶವಾಗುವ ಭಯಾನಕ ಪರಿಸ್ಥಿತಿಯು ಉಪಸ್ಥಿತವಾಗಿರುವಾಗ, ಬೇಗನೆ ಹೆಚ್ಚಿನ ಸೇನಾಸಹಾಯ ಸಿಗುವ ಸಂಭವವಿಲ್ಲದೆ ಎಲ್ಲಲ್ಲಿಯೂ ನಿರಾಶೆಯೇ ತೋರಿಬರುತ್ತಿರುವಾಗ ಮತ್ತು ಯುದ್ಧವನ್ನು ಮುನ್ನಡೆಸುವ ಧೈರ್ಯ, ಸ್ಥೈರ್ಯ ಮತ್ತು ನಿಪುಣತೆಯು ಫ್ರೆಂಚ್ ಸೇನಾನಿಗಳಲ್ಲಿಲ್ಲದೆ ಹೋಯಿತು. ಇಂಗ್ಲೆಂಡಿನ ಸೇನಾಸಹಾಯವು ಸಾಲದಾಯಿತು. ಫ್ರೆಂಚ್ ಮಂತ್ರಿಮಂಡಲದೊಳಗೇನೇ ಒಡಕುಂಟಾಯಿತು. ಏನಾದರೂ ಯುದ್ಧವನ್ನು ಕೊನೆಯತನಕ ನಡಿಸಿಯೇ ಸಿದ್ಧವೆಂದಿದ್ದ ಪ್ರಧಾನ ಮಂತ್ರಿ ಎಂ. ರೈನೋಡರು ತನ್ನ ಪದವಿಗೆ ರಾಜಿನಾಮೆ ಕೊಡಬೇಕಾಯಿತು. ಅವರ ಸ್ಥಾನಕ್ಕೆ ಬಂದ ಜನರಲ್ ಪೆಟೈನರು ಯುದ್ಧವನ್ನು ನಿಲ್ಲಿಸುವ ನಿರ್ಧಾರಮಾಡಿ ಹಿಟ್ಲರರೊಂದಿಗೆ ಸಂಧಿ ಪ್ರಸ್ತಾಪ ನಡಿಸಿರುವರು.

ಹಿಟ್ಲರ್ ಮುಸಲೋನಿಗಳು ಇಂದೀಗ ಐತಿಹಾಸಿಕ ಮ್ಯುನಿಚ್ ಪಟ್ಟಣದಲ್ಲಿ ಸೇರಿ ಸಂಧಿಯ ಶರ್ತಗಳ ಕುರಿತು ಆಲೋಚಿಸುತ್ತಿರುವರು. 1918ರಲ್ಲಿ ಮಿತ್ರರಾಷ್ಟ್ರಗಳು ಜರ್ಮನಿಯನ್ನು ಕಂಡುದಕ್ಕಿಂತ ಒಳ್ಳೇ ರೀತಿಯಲ್ಲಿ ಫ್ರಾನ್ಸನ್ನು ಕಾಣಲಾಗುವುದು. ಇಂಗ್ಲೆಂಡು ಫ್ರಾನ್ಸಿಗೆ ತೋರಿಸಿರುವುದಕ್ಕಿಂತ ಹೆಚ್ಚಿನ ಉದಾರತೆಯನ್ನು ತೋರಿಸಲಾಗುವುದೆಂದು ಡಿಕ್ಟೇಟರರು ಆಶ್ವಾಸನೆಯಿತ್ತಿರುವರು. ಆದರೆ ಅವರು ಫ್ರಾನ್ಸಿನ ಮೇಲೆ ಎಂತಹ ಶರ್ತಗಳನ್ನು ಹೊರಿಸುವರೆಂದು ಹೇಳಬರುವುದಿಲ್ಲ. ಇಂಗ್ಲೆಂಡು ಯಥಾಪ್ರಕಾರ ಯುದ್ಧವನ್ನು ಮುಂದುವರಿಸುವ ನಿರ್ಧಾರಮಾಡಿರುವುದರಿಂದ ಮುಂದೆ ಫ್ರಾನ್ಸು ಎಂತಹ ಅವಸ್ಥೆಗೀಡಾಗುವುದೆಂದು ಈಗ ಕಲ್ಪಿಸಲು ಸಾಧ್ಯವಿಲ್ಲ. ಫ್ರೆಂಚರೊಳಗೇ ಒಗ್ಗಟ್ಟು ನೆಲೆಗೊಳ್ಳುವುದು ಕಷ್ಟ. ಆಗ ಡಿಕ್ಟೇಟರರ ಶರ್ತಗಳನ್ನು ಫ್ರಾನ್ಸಿಗೆ ಎಷ್ಟರ ಮಟ್ಟಿಗೆ ಪಾಲಿಸಲು ಸಾಧ್ಯವಾಗುವುದೋ? ಫ್ರಾನ್ಸಿನಲ್ಲಿ ಎಷ್ಟರ ಮಟ್ಟಿನ ಶಾಂತಿ ಮತ್ತು ಸುಭಿಕ್ಷೆಯು ನೆಲೆಗೊಳ್ಳುವುದೋ? ಇಂದೀಗ ದುರ್ದೈವಿ ಫ್ರಾನ್ಸಿನ ಅವಸ್ಥೆಯು ಅತ್ಯಂತ ಕರುಣಾಜನಕವಿರುವುದು. ಆದರಿಂದ ಲೋಕದ ಸಹೃದಯಿಗಳೆಲ್ಲರ ಹೃದಯವು ಕರಗಿ ನೀರಾಗದಿರದು.

ಬ್ರಿಟನು ಕೊನೆಯವರೆಗೂ ಹೋರಾಡುವುದು.

ಇದೇ ತಾ. 18ರಲ್ಲು ಬ್ರಿಟಿಷ್ ಪ್ರಧಾನ ಮಂತ್ರಿಗಳಾದ ಮಿ. ಚರ್ಚಿಲ್ಲರು ಪಾರ್ಲಿಮೆಂಟಿನಲ್ಲಿ ಕೊಟ್ಟ ಭಾಷಣದಿಂದ ಇಂಗ್ಲೆಂಡ್ ಕೊನೆಯತನಕವೂ ಹೋರಾಡುವುದೆಂಬುದು ಸಿದ್ಧವಾಗುವುದು. ಅದು ಜರ್ಮನಿಗೆ ಎಂದಿಗೂ ಮಣಿಯಲಾರದು. ಜರ್ಮನಿಯೊಂದಿಗೆ ಯಾವರೀತಿಯ ಸಂಧಿಯನ್ನೂ ಮಾಡಿಕೊಳ್ಳಲಾರದು. ಫ್ರಾನ್ಸ್ ಹಿಟ್ಲರರೊಂದಿಗೆ ಸಂಧಿಮಾಡಿಕೊಳ್ಳಲಿ, ಏನೇ ಮಾಡಲಿ. ಬ್ರಿಟನು ಒಂದೇಯಾಗಿಯಾದರೂ ಡಿಕ್ಟೇಟರರೊಡನೆ ಹೋರಾಡಲು ಕಟಿಬದ್ಧವಾಗಿರವುದು. ಕಟ್ಟಕಡೆಗೆ ವಿಜಯವು ತನಗೆ ದೊರೆಯುವುದೆಂಬ ವಿಶ್ವಾಸವು ಅದಕ್ಕಿರುವುದೆಂದು ಮಿ. ಚರ್ಚಿಲ್ಲರ ಭಾಷಣದಿಂದ ಸ್ಪಷ್ಟವಾಗುವುದು. ಈ ಯುದ್ಧವನ್ನು ಇನ್ನು ಮುಂದೆ ಇಂಗ್ಲೆಂಡು ತನ್ನ ಯುದ್ಧವಾಗಿ ಹೋರಾಡುವುದು. ಹೆಚ್ಚೆಚ್ಚು ಸೇನೆಯನ್ನು ಸಂಗ್ರಹಿಸಿಕೊಳ್ಳುವುದು. ಅಧಿಕಾಧಿಕವಾಗಿ ಯುದ್ಧೋಪಕರಣಗಳನ್ನು ಅತ್ಯಂತ ಶೀಘ್ರವಾಗಿ ಒದಗಿಸಿಕೊಳ್ಳುವುದು. ಅದು ಫ್ರಾನ್ಸಿಗೆ ತನ್ನ ಸಕಲ ಸೇನೆಯನ್ನೂ ಕಳುಹಿಸಿರುವುದಿಲ್ಲ. ದೇಶದ ರಕ್ಷಣೆಗೆ ಬೇಕಾದ ಪ್ರಬಲ ಸೇನೆಯು ಇಂಗ್ಲೆಂಡಿನಲ್ಲೇ ಇದೆ. ಬ್ರಿಟಿಷ್ ವಿಮಾನಪಡೆಯೂ ದೇಶ ರಕ್ಷಣೆಗೆ ಸಾಕಷ್ಟಿದೆ. ಜರ್ಮನರ ವಿಮಾನಪಡೆಗಿಂತ ಕಡಿಮೆಯಾದರೂ ಅದಕ್ಕಿಂತ ಉತ್ಕೃಷ್ಟವಾಗಿದೆ. ಬ್ರಿಟಿಷ್ ನೌಕಾಪಡೆಯು ಅಜೇಯವಾಗಿದೆ. ಇಂಗ್ಲೆಂಡಿನ ಮೇಲೆ ಸಮುದ್ರ ಮಾರ್ಗವಾಗಿ ಧಾಳಿನಡಿಸುವುದು ಸಾಧ್ಯವಿಲ್ಲ. ಹಿಂದೆ ಸ್ಪೈನು ಆ ಪ್ರಯತ್ನಮಾಡಿ ನಾಮಾವಶೇಷವಾಗಿತ್ತು. ನೆಪೋಲಿಯನರು ಆ ಸಾಹಸಮಾಡಿ ಭಗ್ನಮನೋರಥರಾದರು. ಜರ್ಮನರು ಇಂಗ್ಲೆಂಡಿನ ಮೇಲೆ ಆಕಾಶಮಾರ್ಗವಾಗಿ, ಗಾಳಿಕೊಡೆಗಳ ಮೂಲಕ ಧಾಳಿ ನಡಿಸಲೆತ್ನಿಸಬಹುದು. ಅದನ್ನು ತಡೆಗಟ್ಟಲು ಬೇಕಷ್ಟು ವಿಮಾನ ಪಡೆಯು ಇಂಗ್ಲೆಂಡಿನಲ್ಲಿದೆ. ಬ್ರಿಟಿಷ್ ನೌಕಾಬಲವನ್ನು ಮುರಿದು, ವ್ಯಾಪಾರ ಮಾರ್ಗಗಳನ್ನು ಬಂದುಮಾಡಿದರೆ ಮಾತ್ರ ಇಂಗ್ಲೆಂಡನ್ನು ಬಗ್ಗುಬಡಿಯಬಹುದು. ಅದು ಜರ್ಮನಿ ಮತ್ತು ಇಟೆಲಿಗಳೊಟ್ಟುಗೂಡಿದರೂ ಸಾಧ್ಯವಿಲ್ಲ. ಬ್ರಿಟನಿನ ಯುದ್ಧಕ್ಕೆ ಫ್ರಾನ್ಸು ಯಾವ ರೀತಿಯ ಆತಂಕವನ್ನಾದರೂ ಒಡ್ಡದೆ ತಟಸ್ಥವಿದ್ದರೂ ಇಂಗ್ಲೆಂಡಿಗೆ ಕಟ್ಟಕಡೆಗೆ ಜಯ ನಿಶ್ಚಯವೆಂದೇ ಮಿ. ಚರ್ಚಿಲ್ಲರ ದೃಢ ವಿಶ್ವಾಸ.

ಬ್ರಿಟಿಷ್ ಸ್ತ್ರೀಪುರುಷರೆಲ್ಲಾ ಒಂದುಗೂಡಿ ಇಡೀ ಜನಾಂಗವೇ ಒಂದಾಗಿ ವೈರಿಯನ್ನು ವಿರೋಧಿಸಲಿರುವರು. ಲೋಕವ್ಯಾಪಕವಾದ ಬ್ರಿಟಿಷ್ ಸಾಮ್ರಾಜ್ಯವು ಅವರ ಬೆಂಬಲಕ್ಕೆ ನಿಲ್ಲುವುದು. ಅಮೇರಿಕದ ಯುನೈಟೆಡ್ ಸ್ಟೇಟ್ಸ ಸಾಧ್ಯವಾದ ಸಹಾಯವನ್ನೆಲ್ಲಾ ಕೊಡುವುದು. ಸಂದರ್ಭಾನುಸಾರ ಅದು ಕೂಡಾ ಯುದ್ಧಕ್ಕೆ ಸೇರಬಹುದು. ಆದುದರಿಂದ ಇಂಗ್ಲೆಂಡೇನೂ ನಿರಾಶೆಗೊಳ್ಳಲು ಕಾರಣವಿಲ್ಲ. ಮೊದಲಿಗಿಂತಲೂ ದ್ವಿಗುಣಿತವಾದ ಉತ್ಸಾಹ, ಧೈರ್ಯ ಮತ್ತು ದೃಢನಿರ್ಧಾರದಿಂದ ಬ್ರಿಟನರು ಕಾದಾಡಬೇಕು. ಎಂತಹ ಕಷ್ಟವನ್ನಾದರೂ ಸಹಿಸಿ ಎದೆಗುಂದದಿರಬೇಕು. ಸರ್ವಸ್ವವನ್ನೂ ತ್ಯಾಗಮಾಡಲು ಮುಂದಾಗಬೇಕು. ಮುಂದೆ ಎಂತಹ ವಿಪತ್ತು ಬರುವುದೆಂದು ಹೇಳಬರುವುದಿಲ್ಲ. ಆದರೆ ಬ್ರಿಟನಿಗಿದೇನೂ ಹೊಸ ಅನುಭವವಲ್ಲ. ಅದು ಎಂದಿನಂತೆ ಇಂದಿನ ಮಹಾವಿಪತ್ತಿನಿಂದಲೂ ಪಾರಾಗಿ ವೈರಿಯನ್ನು ಜೈಸಿ ಯುರೋಪನ್ನು ಡಿಕ್ಟೇಟರ್ ಶಾಹಿಯ ಪೀಡೆಯಿಂದ ವಿಮುಕ್ತವನ್ನಾಗಿ ಮಾಡುವುದು. ಲೋಕದಲ್ಲಿ ಶಾಂತಿ ಮತ್ತು ಪ್ರಜಾಸತ್ತೆಯನ್ನು ನೆಲೆಗೊಳಿಸುವುದು. ಫ್ರಾನ್ಸು ಜರ್ಮನಿಯೊಡನೆ ಸಂಧಿಮಾಡಿಕೊಂಡರೂ ಅದರೊಂದಿಗೆ ಇಂಗ್ಲೆಂಡು ಮುಂದಾದರೂ ಬಂಧುಭಾವದಿಂದಲೇ ನಡೆಯುವುದು. ಬರುವ ಚಳಿಗಾಲದ ವರೆಗೆ ಇಂಗ್ಲೆಂಡು ಯುದ್ಧವನ್ನು ಮುನ್ನಡೆಸಿದರೆ ಅನಂತರ ಡಿಕ್ಟೇಟರರುಗಳ ಪತನವಂತೂ ನಿಶ್ಚಯ. ಆಗ ಯುರೋಪ್ ಖಂಡವು ಆಹಾರದ ಅಭಾವದಿಂದ ಕಂಗೆ

ಟ್ಟು ಬಕಳ ...
ದು ಆಗ ...
ಯದು. ಆಗ ...
ವದೆಂದು ಬ್ರಿ...
ಗಳು ನಿಶ್ಚ...
ಪ್ರಸಂಗಾವಧ...
ಆತ್ಮ ವಿಶ್ವಾ...
ಗಾಗದಿರಲ...
ವಾಗಿರುವ ...
ಯಿಂದ ಲೋ...
ಜಗತ್ತಿನಲ್ಲಿ ನಿಜ...
ಮತ್ತು ಪ್ರಜಾ...
ಯಥಾರ್ಥವಾ...
ಟ್ಟೆ ಅದೇ ರೀತಿ...
ಇನ್ನಾದರೂ ...
ನ್ನು ಗೆಲ್ಲಲು ...
ಯಶ್ರೀಯು ...
ರಲ್ಲಿ ಸಂದೇಹವ...

ಮುಂದಿ...

ಹಿಟ್ಲರ್ ...
ಮೇಲೆ ಎಂ ...
ರೆಂದು ಹೇ...
ಯುದ್ಧಪ್ರಕಾ...
ವರಿಸುವ ...
ಅವರು ಫ್ರಾನ್...
ತಮ್ಮ ಕಡೆಗೆ...
ಅಂತೂ ಫ್ರಾನಿ...
ಗೂ ರಾಜಿನಾ...
ಸ್ಥ ನಿಲ್ಲಬಹ...
ಹಾಯವೂ ಇ...
ದು ಅವರ ಸಾ...
ಗಳನ್ನೂ ಇಟಲಿ...
ಅದು ಸಾಂಪತ್ತಿ...
ನೆರವಾಗಬೇಕ...
ರೋಪಿನಲ್ಲಿ ...
ನೌಕಾ ಪಡೆ...
ಇಲ್ಲದಾಗುವುದ...
ಭೂಮಧ್ಯ ಸಾಗ...
ದಲ್ಲಿ ಇಂಗ್ಲೆಂಡಿ...
ವುದು. ...
ನೆರವಾಗುವ...
ಬಾಲ್ಕನ್ ...
ಮೇನಿಯಗಳ...
ವು ಮಿತ್ರರಾಷ್ಟ್ರ...
ರಸ್ಯವು ಏನ...
ವುದಿಲ್ಲ. ...
ಬಲಪಡಿಸುತ್ತಿದೆ...
ಡಿರುವ ಪೋಲೆಂ...
ಸೇನೆಯನ್ನು ...
ಬಂದಿದೆ ...
ಮತ್ತು ಲಿಟೋವಿ...
ಸೈನಿಕರನ್ನೊಯ...
ಗಳು ತಾನು ...
ಮಾಡಿದೆ ಸ್ವೀ...
ಲವು ಸ್ಥಳಗಳನ...
ವುದೋ ಎಂಬ...

ಫ್ರಾನ್ಸು ರಾ...
ಇಂಗ್ಲೆಂಡಿನ ಮೇ...
ನಡಿಸುವ ಪ್ರಯತ್ನ...
ಹುವ ಸಂಭವವಿ...
ಇಲ್ಲ. ಡೆನ್ಮಾರ್ಕ್,...
ಯು ಕೊಡೆಗಳ...
ದಿನಲ್ಲಿದರೆ ಕೋ...

ಯಾಗುವು
ಟವು ನಡೆ
ದೊರೆಯ
ಮಂತ್ರಿ
ಟನಿನ ಈ
ರ ಮತ್ತು
ಟ್ಟಿಗೆಗೊಳ
ಕಂಟಕ
ಹಾವಳಿ
ಗೊಳಿಸಿ
ಸುರಕ್ಷತತೆ
ಗೊಳಿಸುವ
ಮುಂದಿ
ರಾಡಿದರೆ
ಲೋನಿಗಳ
ಟ್ಕಡೆಗೆ ಜ
ನಕೆಂಬುದ

ದ್ಧದ

ಫ್ರಾನ್ಸಿನ
ಹೊರಿಸುವ
ಇಂಗ್ಲೆಂಡ್
ಮುಂದು
ವುದರಿಂದ
ಗಿ ಕಂಡು
ಬಹುದು.
ಇಟಲಿಗಳ
ಫ್ರಾನ್ಸ್ ತಟ
ಯಾವ ಸ
ರಿಯಲಾರ
ವು ಪ್ರದೇಶ
ಬಹುದು.
ಟರರಿಗೆ
ದು. ಯು
ಫ್ರೆಂಚ್
ಇಂಗ್ಲೆಂಡಿಗೆ
ವಾಗಿ
ಧ್ಯ ಪೂರ್ವ
ಯಾಗುವು
ಕ್ಟೇಟರರಿಗೇ
ಗಬಹುದು.
ಮತ್ತು ರು
ಗೆ ಸಹಾಯ
ಬಹುದು.
ಹೇಳಬರು
ವನ್ನು ಈಗ
ಪಡಿಸಿಕೊಂ
ಬಲವಾದ
ದು ತಿಳಿದು
ಥುವೇನಿಯ
ಹೆಚ್ಚಿನ
ಸರಕಾರ
ಕೇಳುವಂತೆ
ಭಾಗದ ಕೆ
ಸಿಕೊಳ್ಳಲು
ಪ್ಪವಿದೆ.
ದ ಮೇಲೆ
ವಾಗಿ ಥಾಳಿ
ಟ್ಲರರು ಮಾ
ಸಾಧ್ಯವೂ
ಗಳಂತೆ ವಾ
ರಿ ಇಂಗ್ಲೆಂ
ನಿಶ್ಚಯ. ಏ

ಮಾನಥಾಳಿಯನ್ನು ಬ್ರಿಟಿಸರು ಜಯಶೀಲವಾಗಿ ತಡೆಗಟ್ಟುವ ಏರ್ಪಾಡು ಮೊದಲೇ ಮಾಡಿದ್ದಾರೆ. ಯುನೈಟೆಡ್ ಸ್ಟೇಟ್ಸ್ ಇಂಗ್ಲೆಂಡಿಗೆ ಸಹಸ್ರಗಟ್ಟಲೆ ವಿಮಾನಗಳನ್ನು ಕೂಡಲೆ ಒದಗಿಸಿಕೊಡಲಾರದು. ಆದುದರಿಂದ ಇಂಗ್ಲೆಂಡಿನ ಮೇಲೆ ಜಯಶೀಲ ವಿಮಾನಥಾಳಿನಡಿಸಿ ಗೆಲ್ಲಲು ಸಾಧ್ಯವೆಂದು ಹೇಳಬರುವುದಿಲ್ಲ. ಮುಂದೆ ಭೂಮಧ್ಯ ಸಾಗರ ಮತ್ತು ಮಧ್ಯ ಪೂರ್ವದಲ್ಲಿ ಪ್ರಬಲ ಹೋರಾಟ ನಡೆಯಲಿರುವುದು. ಜರ್ಮನಿ ಮತ್ತು ಇಟಲಿಯಾನ ವಿಮಾನಪಡೆಗಳೊಂದುಗೂಡಿ ಬ್ರಿಟಿಷ್ ನೌಕಾಪಡೆಯ ಮೇಲೆ ಥಾಳಿಯಿಟ್ಟು ನಾಶಮಾಡಲೆತ್ನಿಸಬಹುದು. ಸ್ಪೈನಿನ ಸಹಾಯದಿಂದ ಜಿಬ್ರಾಲ್ಟರನ್ನೂ ಸುವೇಜ್ ಕಾಲುವೆಯನ್ನೂ ವಶಪಡಿಸಿಕೊಳ್ಳಲು ಪ್ರಬಲ ಪ್ರಯತ್ನ ಮಾಡಬಹುದು. ಫ್ರೆಂಚರ ಬಲ ತಪ್ಪಿದುದರಿಂದ ಭೂಮಧ್ಯ ಸಾಗರ ಮತ್ತು ಮಧ್ಯ ಪೂರ್ವ ಪ್ರದೇಶದ ಹೋರಾಟದ ಪರಿಸ್ಥಿತಿಯು ಹೇಗೆ ನಿಲ್ಲುವುದೆಂದು ಹೇಳಬರುವುದಿಲ್ಲ. ಇಟಲಿಯೊಡನೆಯೂ ದೊಡ್ಡ ನೌಕಾಪಡೆಯಿದೆ. ಜರ್ಮನಿ ಮತ್ತು ಇಟಲಿಗಳೊಂದುಗೂಡಿದರೆ ಅವುಗಳ ವಿಮಾನಪಡೆಯು ಅಜೇಯವಾಗಬಹುದು. ಜಿಬ್ರಾಲ್ಟರ್ ಮತ್ತು ಸುವೇಜ್ ಕಾಲುವೆಗಳನ್ನು ಡಿಕ್ಟೇಟರರಿಗೆ ವಶಪಡಿಸಿಕೊಳ್ಳಲು ಸಾಧ್ಯವಾದರೆ ಇಂಗ್ಲೆಂಡಿಗೆ ಅತಿದೊಡ್ಡ ಹಾನಿಯುಂಟಾಗುವುದು. ಮುಂದಿನ ಯುದ್ಧಕಳವೇ ಭೂಮಧ್ಯಸಾಗರ ಪ್ರದೇಶವಾಗುವುದೆಂಬುದರಲ್ಲಿ ಸಂದೇಹವಿಲ್ಲ. ಟರ್ಕಿ ಮತ್ತು ಐಗುಪ್ತಗಳು ಇಷ್ಟರವರೆಗೆ ತಟಸ್ಥವಿರುತ್ತವೆ. ಐಗುಪ್ತಕ್ಕೆ ಬ್ರಿಟಿಷರ ಕಡೆಯಿಂದ ಯುದ್ಧಕ್ಕೆ ಸೇರದೆ ನಿವಾಕಹವೇ ಇಲ್ಲದಾಗುವುದು. ಆದರೆ ಟರ್ಕಿಯು ಸೇರುವ ಸಂಭವ ತೋರುವುದಿಲ್ಲ. ಅದು ಸೇರಿದರೆ ಯುದ್ಧವು ಬಾಲ್ಕನ್ ಪ್ರದೇಶಕ್ಕೂ ಹಬ್ಬಿ ರಶ್ಯವು ಪೋಲೆಂಡಿನಂತೆಯೇ ತನ್ನ ಸಮೀಪದ ಪ್ರದೇಶಗಳನ್ನು ವಶಪಡಿಸಿಕೊಳ್ಳಬಹುದು. ಇಷ್ಟರ ಮಟ್ಟಿಗೆ ಬಾಲ್ಕನ್ ಪ್ರದೇಶಕ್ಕೆ ಯುದ್ಧವು ಹಬ್ಬುವ ಸಂಭವ ತೋರುವುದಿಲ್ಲ. ಮುಂದೆ ಭೂಮಧ್ಯ ಸಾಗರ ಮತ್ತು ಮಧ್ಯ ಪೂರ್ವದಲ್ಲಿ ಬ್ರಿಟಿಷರ ಪಕ್ಷಪಾತ್ರಿ ಯಾಗಲಿದೆ. ಸ್ಪೇನ್ ಮತ್ತು ಜಿಬ್ರಾಲ್ಟರುಗಳನ್ನು ರಕ್ಷಿಸಿಕೊಂಡು ಇಟಲಿಯನ್ನು ಸದೆಬಡೆಯಲು ಬ್ರಿಟಿಷ್ ನೌಕಾಪಡೆಗೆ ಸಾಧ್ಯವಾದರೆ ಮುಂದೆ ಇಂಗ್ಲೆಂಡಿಗೆ ಜಯ ನಿಶ್ಚಯವೆಂದೇ ಹೇಳಬಹುದು. ಸ್ಪೈನು ಡಿಕ್ಟೇಟರರಕಡೆಗೊಲಿದಿರುವುದರಿಂದ ಮತ್ತು ಫ್ರೆಂಚರು ರಾಜಮಾಡಿರುವುದರಿಂದ ಇದು ಬಹಳ ಪ್ರಯಾಸದ ಕೆಲಸವಾಗಿದೆ. ಅಂತೂ ಯುದ್ಧವು ಬೇಗನೇ ಕೊನೆಗೊಳ್ಳುವ ಹಾಗಿಲ್ಲ.

ರಾಷ್ಟ್ರೀಯ ಸರಕಾರ ಬೇಕಾಗಿದೆ

ಬ್ರಿಟನು ಜರ್ಮನಿಯೊಡನೆ ಕೊನೆಯ ತನಕವೂ ಹೋರಾಡುವ ನಿರ್ಧಾರಮಾಡಿರುವುದರಿಂದ ಯುದ್ಧವು ದೀರ್ಘಕಾಲ ನಡೆಯುವುದೆಂಬುದರಲ್ಲಿ ಸಂದೇಹವಿಲ್ಲ. ಮಾತ್ರವಲ್ಲದೆ ಅದು ಆಫ್ರಿಕ, ಅರೇಬಿಯ, ಪರ್ಶಿಯದ ವರೆಗೂ ಹಬ್ಬಿ ಕೊನೆಗೆ ಹಿಂದೂದೇಶದವರೆಗೂ ಬಂದುಬಿಡಬಹುದು. ಇಂಗ್ಲೆಂಡು ಈಗ ಒಂಟಿಯಾಗಿ, ಯುರೋಪಿನ ಪ್ರಬಲ ಡಿಕ್ಟೇಟರರೊಡನೆ ಹೋರಾಡುವ ಗಂಡಾಂತರವುಂಟಾಗಿರುವುದರಿಂದ ಹಿಂದೂದೇಶದಿಂದ ಹೆಚ್ಚಿನ ಜನ, ಧನ ಮತ್ತು ಸಾಮಗ್ರಿಗಳ ಸಹಾಯವು ಅದಕ್ಕೆ ಹೋಗಬೇಕಾಗುವುದು. ಆಗ ಇಂಗ್ಲೆಂಡಿಗೆ ಹಿಂದೂದೇಶವು ದೊಡ್ಡ ಆಶಯವಾಗುವುದು. ಆಗ ವೈರಿಗಳಿಗೆ ಅದರ ಮೇಲೆ ಸ್ವಾಭಾವಿಕವಾಗಿ ಕಣ್ಣು ಬಿದ್ದು ಬೇರೇನಲ್ಲದಿದ್ದರೂ ವಿಮಾನಥಾಳಿಯ ಹಾವಳಿಯುಂಟಾಗಬಹುದು. ಯುದ್ಧವು ಅತಿ ದೀರ್ಘವಾಗಿ ನಡೆದರೆ ಪರಿಸ್ಥಿತಿಯು ಹೇಗೆ ನಿಲ್ಲುವುದೆಂದು ಹೇಳಬರುವುದಿಲ್ಲ. ಆದುದರಿಂದ ಹಿಂದೀಯರೀಗ ತಮ್ಮ ದೇಶದ ರಕ್ಷಣೆಯ ಕುರಿತು ಅತಿ ಶೀಘ್ರವಾಗಿ ಮತ್ತು ಪ್ರಾಮುಖ್ಯವಾಗಿ ಗಮನ ಕೊಡಲೇಬೇಕು. ಈಗ ಸರಕಾರವು ಮಾಡುತ್ತಿರುವ ಪ್ರಯತ್ನವಾದರೂ ಬಹುತೇಕ ಇಂಗ್ಲೆಂಡಿಗೆ ಹೆಚ್ಚೆಚ್ಚಿನ ಸಹಾಯಮಾಡುವುದಕ್ಕಾಗಿ. ದೇಶದ ರಕ್ಷಣೆಗಾಗಿ ಹಿಂದೀ ಸೇನಾಧ್ಯಕ್ಷರು ಹೊಸತಾಗಿ ಕೈಕೊಂಡಿರುವ ವ್ಯವಸ್ಥೆಯು ಏನೇನೂ ಸಾಲದು. ಮತ್ತು ದೇಶದ ರಕ್ಷಣೆಯ ವ್ಯವಸ್ಥೆಯನ್ನು ಈಗಣ ಸರಕಾರದಿಂದ ತೃಪ್ತಿಕರವಾಗಿ ನಡಿಸಲು ಸಾಧ್ಯವೇ ಇಲ್ಲ. ಆದುದರಿಂದ ಈ ಸಂಧಿಕಾಲದಲ್ಲಿ ಸ್ವದೇಶರಕ್ಷಣೆಗಾಗಿ ಹಿಂದೀಯರೆಲ್ಲರೂ ತಮ್ಮ ಭಿನ್ನಭೇದಗಳನ್ನು ಮರೆತು ಒಂದಾಗಿ ರಾಷ್ಟ್ರೀಯ ಸರಕಾರವನ್ನು ರಚಿಸುವುದು ಅತ್ಯಾವಶ್ಯಕ. ಇಂಗ್ಲೆಂಡೇ ದೊಡ್ಡ ಗಂಡಾಂತರಕ್ಕೊಳಗಾಗಿರುವಾಗ ಅದಕ್ಕೇನೇ ಹಿಂದೀಯರು ಸಹಾಯಮಾಡಬೇಕಾಗುವುದಲ್ಲದೆ ಅದರ ರಕ್ಷಣೆಯ ನಿರೀಕ್ಷೆಯಿಂದ ಸುಮ್ಮನಿರುವುದು ಮೂರ್ಖತನ.

ಹಿಂದೂ ಮುಸಲ್ಮಾನ ವೈಮನಸ್ಯವು ರೂಢಿಮೂಲವಾಗಿರುವಾಗ, ಸರಕಾರವೂ ಕಾಂಗ್ರೆಸಿನ ಕೇಳಿಕೆಗೆ ಗಮನಕೊಡದೆ ತನ್ನಿಚ್ಛೆಯಂತೆ ನಡೆಯುತ್ತಿರುವಾಗ ಹಿಂದೀಯರೆಲ್ಲರೂ ಒಟ್ಟಾಗುವುದು ಹೇಗೆ? ರಾಷ್ಟ್ರೀಯ ಸರಕಾರವನ್ನು ರಚಿಸುವುದಾದರೂ ಹೇಗೆ? ಎಂಬುದೀಗ ಪ್ರಶ್ನೆ. ಕಾಂಗ್ರೆಸಿನವರಾಗಲಿ, ಇನ್ನಾರೇ ಆಗಲಿ, ತಮ್ಮ ಹಠವನ್ನೇ ಸಾಧಿಸಲು ಮುಂದಾಗಬಾರದು. ಒಬ್ಬರನ್ನೊಬ್ಬರು ಸಮಜಾಯಿಸಿಕೊಂಡು ಹೇಗಾದರೂ ಒಕ್ಕಟ್ಟನ್ನು ಸಾಧಿಸಬೇಕು. ಹಿಂದೂ ಮುಸಲ್ಮಾನರ ಒಕ್ಕಟ್ಟಿನ ಕೇಳಿಕೆಯನ್ನು ಬ್ರಿಟಿಷ್ ಸರಕಾರಕ್ಕೆ ಈ ಸಂದರ್ಭದಲ್ಲಿ ನಿರಾಕರಿಸಲು ಧೈರ್ಯ ಬರಲಾರದು. ಆದೇ ಹಿಂದೂದೇಶಕ್ಕೆ ಸ್ವಾತಂತ್ರ್ಯವಿತ್ತು ಹಿಂದೀಯರನ್ನೊಲಿಸಿಕೊಳ್ಳುವ ಪರಿಸ್ಥಿತಿಯು ಈಗ ಉಂಟಾಗಿರುವುದು. ಇದೇ ತಾ. 10ರಲ್ಲಿ ಮುಂಬಾಯಿಯಲ್ಲಿ ಸೇರಿ ಮುಸ್ಲಿಮ್ ಲೀಗಿನ ವರ್ಕಿಂಗ್ ಕಮಿಟಿಯವರು ಹಿಂದೂದೇಶದ ರಕ್ಷಣೆಯ ಅವಶ್ಯಕತೆಯನ್ನು ಆ ಕುರಿತು ಸರಕಾರವು ಕೈಕೊಂಡಿರುವ ಘೋರಣೆಯ ಅಸಮರ್ಪಕತೆಯನ್ನು ಚೆನ್ನಾಗಿ ಮನಗಂಡಿರುವರು. ಹಿಂದೀ ಪ್ರಶ್ನೆಯನ್ನು ಅಖಿಲಭಾರತ ರೂಪದಲ್ಲಿ ಇತ್ಯರ್ಥಿಸಿ ದೇಶದ ಅಂತರಿಕ ಮತ್ತು ಬಾಹ್ಯ ರಕ್ಷಣೆಯ ಕುರಿತು ಕೂಡಲೆ ತಕ್ಕ ವ್ಯವಸ್ಥೆ ಮಾಡಬೇಕೆಂದು ಲೀಗಿನವರೀಗ ನಿರ್ಣಯಮಾಡಿರುವರು. ಅಂತಿಮವಾಗಿ ಇತ್ಯರ್ಥಪಡಿಸಬೇಕೆಂಬ ಹಠವನ್ನೀಗ ಅವರು ಬಿಟ್ಟಿರುವರು. ಈ ಸಂಬಂಧವಾಗಿ ಮಿ. ಜಿನ್ನರು ವೈಸರಾಯರೊಡನೆ ಮಾತುಕತೆ ನಡಿಸಲಿರುವರು. ಮಧ್ಯ ಪೂರ್ವದ ಮುಸಲ್ಮಾನ ರಾಜ್ಯಗಳೆಲ್ಲಾ ಹೆಚ್ಚಾಗಿ ಬ್ರಿಟಿಷರಿಗೆ ಸಹಾಯಮಾಡಲು ಮುಂದಾಗಿರುವುದರಿಂದ ಮುಸ್ಲಿಮ್ ಲೀಗಿನವರು ಅದೇ ರೀತಿ ಮಾಡಬಹುದು. ಜಿನ್ನರು ವೈಸರಾಯರೊಡನೆ ಮಾತಾಡಿ ಮುಸ್ಲಿಮ್ ಲೀಗು ಇನ್ನು ಮುಂದೆ ಸರಕಾರದೊಡನೆ ಸಹಕರಿಸಿ ಸಹಾಯಮಾಡುವಂತಾಗುವುದೆಂದು ನಿರೀಕ್ಷಿಸಬಹುದು.

ಮುಸ್ಲಿಮ್ ಲೀಗಿನ ಅಗ್ರಗಣ್ಯ ಮುಖಂಡರಾದ ಮಿ. ಫಜ್ಲುಲ್ ಹಕ್ ಮತ್ತು ಸರ್ ಸಿಕಂದರ್ ಹಯಾತ್ ಖಾನರು ಕಾಂಗ್ರೆಸಿನೊಡನೆ ರಾಜಿಮಾಡುವ ಆತುರದಿಂದಿರುವರು. ಆದರೆ ಮಿ. ಜಿನ್ನರೇ ಮೊದಲಾದವರು ಕೇವಲ ಸ್ವಪ್ರತಿಷ್ಠೆಯಿಂದ ಪ್ರೇರಿತರಾಗಿ, ಕಾಂಗ್ರೆಸ್ಸನ್ನು ಕಡೆಗಣಿಸಿ ಸರಕಾರದೊಡನೆ ಸಂಧಿಮಾಡಿಕೊಳ್ಳಲು ಹಾತೊರೆಯುತ್ತಿರುವರು. ಮಿ. ಜಿನ್ನರೊಡನೆ ಸಂಧಿಮಾಡಿಕೊಳ್ಳುವಾಗ ಸರಕಾರವು ಕಾಂಗ್ರೆಸ್ ಮುಖಂಡರನ್ನು ಕರೆದುಮಾತಾಡಿ ಪ್ರಕೃತದ ಬಿಕ್ಕಟ್ಟನ್ನು ಪರಿಹರಿಸಲು ಸಹ ಪ್ರಯತ್ನಿಸಬಹುದು. ಆದರೆ ಲೀಗಿನವರು ವೈಸರಾಯರನ್ನು ಅಭ್ಯೈಸುವ ಬದಲಿಗೆ ಸರ್. ಸಿಕಂದರ್ ಖಾನ್ ಮತ್ತು ಮಿ. ಫಜ್ಲುಲ್ ಹಕ್ಕರು ಕಾಂಗ್ರೆಸ್ ಪ್ರೆಸಿಡೆಂಟರಾದ ಮೌಲಾನಾ ಅಜಾದರೊಡನೆ ನಡಿಸಿದ ಮಾತುಕತೆಯ ಸರಣಿಯನ್ನೇ ಹಿಡಿದು ಮುಂದುವರಿಯುತ್ತಿದ್ದರೆ ಹಿಂದೂ ಮುಸಲ್ಮಾನ ಪ್ರಶ್ನೆಯನ್ನು ಹಿಂದೀಯರು ತಾವಾಗಿಯೇ ಬಿಡಿಸಿಕೊಂಡು ಬ್ರಿಟಿಷ್ ಸರಕಾರವೂ ತಮ್ಮ ಕೇಳಿಕೆಗಳಿಗೊಪ್ಪುವಂತೆ ಮಾಡುವ ಸ್ವಾಭಿಮಾನಪೂರ್ವಕವಾದ ಸುಯೋಗವು ಉಂಟಾಗುತ್ತಿತ್ತು. ಆದರೆ ಲೀಗಿನವರು ಹಾಗೇನೂ ಮಾಡದೆ ಅಖಿಲಭಾರತ ರಾಷ್ಟ್ರೀಯ ಸಂಸ್ಥೆಯಾದ ಕಾಂಗ್ರೆಸ್ಸನ್ನು ಕಡೆಗಣಿಸಿ ವೈಸರಾಯರನ್ನು ಆಶ್ರಯಿಸಿರುವರು. ಕಾಂಗ್ರೆಸ್ ಮುಖಂಡರ ಒಪ್ಪಿಗೆಯ ವಿನಹ ಯಾವ ಇತ್ಯರ್ಥವನ್ನಾದರೂ ವೈಸರಾಯರು ಮಾಡುವುದು ಹೇಗೆ? ವೈಸರಾಯರು ಕಾಂಗ್ರೆಸ್ ಮುಖಂಡರನ್ನು ಪುನಃ ಆಮಂತ್ರಿಸಿ ಮಾತುಕತೆ ನಡಿಸಿ ಹಿಂದೀ ಬಿಕ್ಕಟ್ಟು ಪರಿಹಾರವಾಗುವಂತಾಗಿ, ಹಿಂದೂದೇಶದಲ್ಲಿ ಎಲ್ಲಾ ಪಕ್ಷಗಳೊಂದೊಡಗೂಡಿದ ರಾಷ್ಟ್ರೀಯ ಸರಕಾರವು ಸ್ಥಾಪಿಸಲ್ಪಟ್ಟು ಹಿಂದೂದೇಶವು ಸ್ವತಂತ್ರವಾಗಿ ಬ್ರಿಟನಿಗೆ ಬೇಕಾಗುವ ಸಹಾಯಮಾಡುತ್ತಾ ತನ್ನ ರಕ್ಷಣೆಯ ವ್ಯವಸ್ಥೆಯನ್ನೂ ಮಾಡುವಂತಾಗಲೆಂದು ಆಶಿಸಬಹುದೇ?

ಫ್ರಾನ್ಸ್ ಯುದ್ಧ ನಿಲ್ಲಿಸಿತು.

ಹಿಟ್ಲರ್ ಮುಸಲೋನಿಗಳು ಸಂಧಿಯ ಶರ್ತಗಳ ಕುರಿತು ಆಲೋಚಿಸುತ್ತಿದ್ದಾರೆ.

ಬ್ರಿಟನೊಂದೇ ಯುದ್ಧವನ್ನು ಯಥಾಪ್ರಕಾರ ಮುನ್ನಡೆಸುವುದು.

ಫ್ರೆಂಚ್ ಮಂತ್ರಿಮಂಡಲದ ರಾಜಿನಾಮೆ

ಇದೇ ತಾ. 15 ಮತ್ತು 16ರಲ್ಲಿ ಫ್ರೆಂಚ್ ಮಂತ್ರಿಮಂಡಲದ ಸಭೆ ನಡೆದು ತೀವ್ರ ಚರ್ಚೆಯಾಗಿ ಪ್ರಧಾನ ಮಂತ್ರಿಗಳಾದ ಎಮ್. ರೈನೋಡರು ರಾಜಿನಾಮೆ ಕೊಟ್ಟಿರುವರು. ತಾ. 17ರಲ್ಲಿ ಪೆಟೈನರು ಹೊಸ ಮಂತ್ರಿಮಂಡಲವನ್ನೇ ರ್ಪಡಿಸಿರುವರು. ಇದರಲ್ಲಿ ಹಳೆಯ ಮಂತ್ರಿಗಳಾರೂ ಸೇರಿರುವುದಿಲ್ಲ. ಜನರಲ್ ವೈಗಾಂಡರು ದೇಶರಕ್ಷಣ ಖಾತೆಯ ಮಂತ್ರಿಗಳಾಗಿ ನೇಮಕಹೊಂದಿರುವರು.

ಯುದ್ಧ ನಿಲ್ಲಿಸುವ ನಿರ್ಧಾರ

ಮಾರ್ಶಲ್ ಪೆಟೈನರ ಮಂತ್ರಿಮಂಡಲವು ಸಭೆಸೇರಿ ವಿಚಾರಿಸಿ ಯುದ್ಧವನ್ನು ನಿಲ್ಲಿಸುವ ನಿರ್ಧಾರ ಮಾಡಿರುವುದು. "ಹೋರಾಟವು ಕೊನೆಗೊಳ್ಳಲ್ಪಡಬೇಕು. ಯುದ್ಧವನ್ನು ನಿಲ್ಲಿಸುವ ವಿಧಾನದ ಕುರಿತು ನಾನು ನಿನ್ನೆ ರಾತ್ರೆ ವೈರಿಯೊಡನೆ ಮಾತಾಡಿರುವೆನು. ಯೋಧರೊಳಗೆಂಬಂತೆ ಗೌರವಪೂರ್ವಕವಾಗಿ ಅದು ಸಾಧ್ಯವಿದೆಯೆಂದು ನನ್ನ ಆಶೆ. ಯುದ್ಧದ ಆಘಾತದಿಂದ ಮನೆಮಾರುಗಳಿಂದ ಹೊರಗೋಡಿಸಲ್ಪಟ್ಟ ಸ್ತ್ರೀಪುರುಷರೊಡನೆ ನಾನು ಸಹಾನುಭೂತಿ ಪಡುತ್ತೇನೆ. ಯುದ್ಧವನ್ನು ಗೌರವ ಪೂರ್ವಕವಾಗಿ ಕೊನೆಗೊಳಿಸುವ ಕುರಿತು ವೈರಿಯೊಡನೆ ಮಾತಾಡಿರುವೆನು. ಫ್ರಾನ್ಸಿನ ಸಂಧಿಕಾಲದಲ್ಲಿ ಫ್ರೆಂಚರೆಲ್ಲಾ ನನ್ನ ಸುತ್ತಲೂ ಒಕ್ಕಟ್ಟಾಗಿ ನಿಲ್ಲಲಿ" ಎಂದೇ ಫ್ರೆಂಚ್‌ಜನಾಂಗಕ್ಕೆ ಮಾರ್ಶಲ್ ಪೆಟೈನರ ಸಂದೇಶ.

ಮ್ಯೂನಿಚಿನಲ್ಲಿ ಡಿಕ್ಟೇಟರರ ಸಮಾಲೋಚನೆ

ಫ್ರಾನ್ಸ್ ಯುದ್ಧ ನಿಲ್ಲಿಸಿದುದರಿಂದ ಇಟಲಿ ಮತ್ತು ಜರ್ಮನಿಯ ಜನರಲ್ಲಿ ಸಂತೋಷದ ಬಿರುಗಾಳಿಯೇ ಎದ್ದಿರುವುದು. ಹಿಟ್ಲರ್ ಮತ್ತು ಮುಸಲೋನಿಯವರು ಮ್ಯೂನಿಚ್ ನಗರದಲ್ಲಿ ಒಟ್ಟು ಸೇರಿ ಫ್ರಾನ್ಸಿನೊಡನೆ ಮಾಡಿಕೊಳ್ಳಬೇಕಾದ ಸಂಧಿಯ ಶರ್ತಗಳ ಕುರಿತು ಆಲೋಚಿಸುತ್ತಿರುವರು. ಡಿಕ್ಟೇಟರರಿಬ್ಬರಿಗೂ ಹೆಚ್ಚಿಗೆ ದ್ವೇಷವಿರುವುದೆಂದರೆ ಇಂಗ್ಲೆಂಡಿನ ಮೇಲೆ. ಇಂಗ್ಲೆಂಡಿನ ಸಮುದ್ರಾಧಿಕಾರವನ್ನು ಮುರಿಯಬೇಕೆಂದೇ ಇವರ ಆಕಾಂಕ್ಷೆ. ಇದು ಹೊರತು ಇಂಗ್ಲೆಂಡು ಏಕಾಕಿಯಾಗಿಯೇ ಯುದ್ಧವನ್ನು ಮುಂದುವರಿಸುವ ನಿರ್ಧಾರವಮಾಡಿರುವುದರಿಂದ, ಫ್ರಾನ್ಸನ್ನು ಡಿಕ್ಟೇಟರರು ಉದಾರವಾಗಿ ಕಾಣಬಹುದು. ಆ ಆಶ್ವಾಸನೆಯನ್ನು ಅವರು ಫ್ರಾನ್ಸಿಗೆ ಕೊಟ್ಟಿರುತ್ತಾರೆ.

ಮಿ. ಚರ್ಚಿಲ್ಲರ ಭಾಷಣ

ಇದೇ ತಾ. 18ರಲ್ಲಿ ಬ್ರಿಟಿಷ್ ಪ್ರಧಾನಮಂತ್ರಿಗಳಾದ ಮಿ. ಚರ್ಚಿಲ್ಲರು ಪಾರ್ಲಿಮೆಂಟಿನಲ್ಲಿ ಯುದ್ಧದ ಪರಿಸ್ಥಿತಿಯ ಕುರಿತು ಮಹತ್ವದ ಭಾಷಣವಿತ್ತು, ಫ್ರಾನ್ಸು ಜರ್ಮನಿಯೊಡನೆ ರಾಜಿಮಾಡಿಕೊಂಡರೂ ಇಂಗ್ಲೆಂಡು ಮತ್ತು ನೃಪಥನಿರ್ಧಾರದಿಂದ ಮತ್ತು ಹೆಚ್ಚಿನ ಸಿದ್ಧತೆಯಿಂದ ವಿಶಾಲವಾದ ಬ್ರಿಟಿಷ್ ಸಾಮ್ರಾಜ್ಯದ ಮತ್ತು ಅಮೆರಿಕದ ಯುನೈಟೆಡ್ ಸ್ಟೇಟ್ಸಿನ ಉತ್ಸಾಹದ ಸಹಾಯದಿಂದ ಕೊನೆಯವರಿಗೂ ಕಾದಾಡಿ ಜಯಹೊಂದುವುದೆಂದು ಸ್ಪಷ್ಟಗೊಳಿಸಿರುವರು.

ದಕ್ಷಿಣ ಕನ್ನಡ

ಮಂಗಳೂರು

(ನಮ್ಮ ಸ್ವಂತ ವಾರ್ತಾದಾರರಿಂದ)

ತಾ. 17-6-40

ಆಗಮನ—ಮೈಸೂರು ಸಂಸ್ಥಾನಕ್ಕೆ ಸೇರಿದ ಶ್ರೀ. ಭೀಮನಕಟ್ಟೆ ಮಠದ ಶ್ರೀ. ರಘುತಿಲಕ ತೀರ್ಥ ಶ್ರೀಪಾದಂಗಳವರು ತಾ. 13ನೇ ಸಂಧ್ಯಾಕಾಲ ತಮ್ಮ ಪರಿವಾರ ಸಮೇತ ಮಂಗಳೂರಿಗೆ ಚಿತ್ತೈಸಿದರು. ಅವರೀಗ ಸ್ಥಳೀಯ ಕದ್ರಿ ಶ್ರೀ. ಮಂಜುನಾಥ ದೇವರ ದೇವಳದ ಪಕ್ಕದಲ್ಲಿರುವ ಮಠದಲ್ಲಿರುವರು. ಶ್ರೀ ಶ್ರೀಗಳವರು ಸ್ವಲ್ಪ ದಿವಸಗಳ ಪರ್ಯಂತ ಇಲ್ಲಿಯೇ ಇದ್ದು ಆಸ್ತಿಕ ಮಹಾಶಯರುಗಳಿಗೂ ತಮ್ಮ ಶಿಷ್ಯವರ್ಗದವರಿಗೂ ದರ್ಶನಪಾಲಿಸುವರು.

ಇಟೆಲಿಯ ಪ್ರಜೆಗಳ ದಸ್ತಗಿರಿ—ಇಟೆಲಿಯು ಬ್ರಿಟಿಷ್ ಸಾರ್ವಭೌಮರ ಸಾಮ್ರಾಜ್ಯದ ಮೇಲೆ ಯುದ್ಧ ಸಾರಿದ್ದರಿಂದ ಬ್ರಿಟಿಷ್ ಸರಕಾರದವರು ಇಟಲಿಯ ಪ್ರಜೆಗಳನ್ನು ದಸ್ತಗಿರಿಮಾಡುತ್ತಿದ್ದಾರೆ. ಸ್ಥಳೀಯ ಸ್ಟಂಟ್ ಎಲೋಶಿಯಸ್ ಕಾಲೇಜಿನ ಓರ್ವ (ಇಟೆಲಿಯ) ಗುರುಗಳನ್ನೂ, ಜಪ್ಪು ಸಿಮಿನರಿಯ ಓರ್ವ (ಇಟೆಲಿಯನ್) ಬ್ರದರ್‌ರವರನ್ನೂ ಅವರವರ ವಾಸಸ್ಥಾನದಲ್ಲಿಯೇ ಬಂಧನದಲ್ಲಿರಿಸಿದ್ದಾರೆ. ಅವರ ಮನೆಗಳಿಗೆ ಪೋಲೀಸು ಪಹರೆಯನ್ನು ಇರಿಸಿದ್ದಾರೆ. ಜಿಲ್ಲೆಯಲ್ಲಿ ಸುಮಾರು 15ಮಂದಿ ಬೋಧಕರೂ (ಪಾದ್ರಿ) ಸುಮಾರು 28ಮಂದಿ ಮಾದ್ರಿಗಳೂ ಇದ್ದಾರಾಗಿಯೂ ಇವರೆಲ್ಲರನ್ನೂ ಸರಕಾರದವರು ದಸ್ತಗಿರಿಮಾಡಿರುವರಾಗಿಯೂ, ಅವರುಗಳಿರುವ ಸ್ಥಳದಿಂದ ಅಪ್ಪಣೆ ವಿನಹ ಅವರುಗಳು ಬೇರೆ ಕಡೆಗಳಿಗೆ ಸಂಚರಿಸದಂತೆ ಆಜ್ಞೆಮಾಡಿರುವರಾಗಿಯೂ ತಿಳಿದುಬರುತ್ತದೆ.

ಹಿಂದೂ ವಿಗ್ರಹಗಳ ನಾಶ-ಅಪಹರಣ—ಕದ್ರಿ ಜೋಗಿ ಮಠದಲ್ಲಿ ಬಹಳ ಹಿಂದಿನ ಕಾಲದಿಂದಲೂ ಇದ್ದ ಶ್ರೀ ಮಚ್ಛೇಂದ್ರನಾಥ ಮತ್ತು ಶ್ರೀ. ಗೋರಖನಾಥ ಎಂಬವರ ಶಿಲಾ ವಿಗ್ರಹಗಳನ್ನು ತಾ. 13ರಲ್ಲಿ ಯಾರೋ ದುರಾತ್ಮರು ಅಪವಿತ್ರಗೊಳಿಸಿ ಒಂದು ಶಿಲಾ ವಿಗ್ರಹವನ್ನು (ದೊಡ್ಡದನ್ನು) ಎತ್ತಿಕೊಂಡುಹೋಗಲಾರದೆ ರುಂಡ ಬೇರೆ ಮುಂಡ ಬೇರೆಮಾಡಿ ಅಲ್ಲಿಯೇ ಬಿಸಾಡಿರುವುದಾಗಿಯೂ, ಸಣ್ಣ ವಿಗ್ರಹವನ್ನು ಅಪಹರಿಸಿಕೊಂಡುಹೋಗಿರುವುದಾಗಿಯೂ ತಿಳಿದುಬರುತ್ತದೆ. ಕದ್ರಿಯ ಹಿಂದೂಗಳಲ್ಲಿ ಬಹಳ ಭೀತಿಯೂ, ಕೋಪವೂ, ಉಂಟಾಗಿದೆ. ಈ ವಿಷಯದಲ್ಲಿ ಪೋಲೀಸರಿಗೆ ದೂರು ಹೋಗಿರುವುದಾಗಿಯೂ ತಿಳಿದುಬರುತ್ತದೆ.

ಕನ್ನಡ ಮೊಲಿಯವರ ಯುವಕ ಸಂಘ—ಈ ಸಂಘದ ವಾರ್ಷಿಕೋತ್ಸವವು ನಿನ್ನೆಯ ದಿನ ಅಪರಾಹ್ನ ಪಂಟ್ಲೆಂಟ್ ಪೇಟೆಯ ಒಂದು ದೇವಸ್ಥಾನದ ಚಾವಡಿಯಲ್ಲಿ ಸೇರಿತು. ವಿದ್ವಾನ್ ಶ್ರೀ. ಯಂ.ಆರ್. ಶಾಸ್ತ್ರಿಗಳು ಅಧ್ಯಕ್ಷತೆ ವಹಿಸಿದ್ದು ಯುವಕ ಸಂಘದವರಿಗೆ ಹಲವು ಉಪಸೂಚನೆಗಳನ್ನು ಕೊಟ್ಟರು. ವರದಿ ವಾಚನ ಇತ್ಯಾದಿ ಕಾರ್ಯಕ್ರಮಗಳಾಗಿ ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಉಡುಪಿ

ಬೋರ್ಡ್ ಹೈಸ್ಕೂಲ್ ಹಳೆ ವಿದ್ಯಾರ್ಥಿಗಳ ಸಂಘ—ದ ಮಹಾಸಭೆಯೊಂದು ತಾ. 12ರಲ್ಲಿ ಬೋರ್ಡ್ ಹೈಸ್ಕೂಲ್ ಕಟ್ಟಡದಲ್ಲಿ ಡಾ. ಸುಂದರರಾವ್ ಪೈಗಳ ಅಧ್ಯಕ್ಷತೆಯಲ್ಲಿ ಜರಗಿ, ಸಂಘದ ಕಾನ್ಸ್ಟಿಟ್ಯೂಶನನ್ನು ರೂಪಿಸಿ, ಆಡಳಿತ ಕಮಿಟಿಯೊಂದನ್ನು ಆರಿಸಲಾಯಿತು. ಡಾ. ಸುಂದರರಾವ್ ಪೈಗಳು ಅಧ್ಯಕ್ಷರಾಗಿ, ಶ್ರೀ. ಕೆ. ಜಿ. ಬಲ್ಲಾಳ, ಡಾ. ಟಿ. ಯಂ. ಪೈ, ಶ್ರೀ ಬಿ. ಪಿ. ರಾವ್ ಮತ್ತು ಶ್ರೀ. ಪಿ. ಎಸ್. ರೈಕರ್ ಉಪಾಧ್ಯಕ್ಷರಾಗಿ, ಶ್ರೀ. ಎಂ. ಎನ್. ರಾಯರು ಖಜಾಂಜಿಯಾಗಿ, ಶ್ರೀ. ಜೆ. ಆರ್. ಪಿಂಟರು ಕಾರ್ಯದರ್ಶಿಯಾಗಿ ಮಿಸ್. ಬಿ. ಲಲಿತಾಬಾಯಿ ಮತ್ತು ಶ್ರೀ. ಎನ್. ಎಸ್. ಪರ್ಕಳರು ಸಹಾಯಕ ಕಾರ್ಯದರ್ಶಿಗಳಾಗಿ ಮತ್ತು ಇತರ 12 ಮಂದಿ ಕಮಿಟಿ ಮೆಂಬರರಾಗಿ ಆರಿಸಲ್ಪಟ್ಟಿದ್ದಾರೆ.

ಹರಿಜನ ವಿದ್ಯಾರ್ಥಿ ಭವನ—ಉಡುಪಿ ಹರಿಜನ ವಿದ್ಯಾರ್ಥಿ ಭವನದ ಆಡಳಿತ ಕಮಿಟಿಯ ಸಭೆಯು ತಾ. 16-6-40ರಲ್ಲಿ ಶ್ರೀ ಕೆ. ಜಗನ್ನಾಥ ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿ 13 ಜನ ಹೈಸ್ಕೂಲ ವಿದ್ಯಾರ್ಥಿಗಳಿಗೆ ಬೋರ್ಡಿಂಗಿನಲ್ಲಿ ಪ್ರವೇಶ ಕೊಡಬೇಕಾಗಿ ನಿರ್ಣಯಿಸಲಾಯಿತು. ವಿದ್ಯಾರ್ಥಿಗಳ ರಕ್ಷಕರೂ ಸಭೆಗೆ ಹಾಜರಿದ್ದರು. ಪ್ರತೀ ವಾರದಲ್ಲಿ ಒಂದು ದಿವಸ ಬೋರ್ಡಿಂಗಿನ ಮಕ್ಕಳು ನಗರದ ಎಲ್ಲಾ ಪೇಟೆಗಳಲ್ಲಿಯೂ ಸಂಚರಿಸಿ ಧನಧಾನ್ಯಗಳನ್ನು ಶೇಖರಿಸಬೇಕಾಗಿಯೂ ಮಹಾಜನರು ಈ ಸಂಸ್ಥೆಗೆ ತಮ್ಮ ಯಥಾಶಕ್ತಿ ಉದಾರ ದಾನಗಳಿಂದ ಸಹಾಯಮಾಡಬೇಕಾಗಿಯೂ ಹಾಗೆ ಸಹಾಯಮಾಡುವವರು ಸದ್ರಿ ಭವನದ ಅಧ್ಯಕ್ಷ ಮತ್ತು ಕಾರ್ಯದರ್ಶಿಯವರ ಸಹಿಯಿರುವ ದುಪ್ಲಿಕೇಟ್ ರಶೀದಿಯನ್ನು ಪಡೆಯಬೇಕಾಗಿಯೂ ವಿಸಂ[illegible] ಎಂತ ಸಂಬಂಧಪಟ್ಟವರು ತಿಳಿಸುತ್ತಾರೆ.

ಕಾರ್ಕಳ ಕಂಟ್ರಾಕ್ಟರರ ಸಭೆ—ಕಾರ್ಕಳ ತಾಲೂಕಿನ ಲೋಕಲ್ ಬೋರ್ಡ್ ರಿಜಿಸ್ಟರ್ಡ್ ಕಂಟ್ರಾಕ್ಟರರ ಸಭೆಯು ತಾ. 26-5-40ರಲ್ಲಿ ಘಂ. 3ಕ್ಕೆ ಬೋರ್ಡ್ ಹೈಸ್ಕೂಲಿನಲ್ಲಿ ಶ್ರೀ. ಕೆ. ಸದಾನಂದ ಹೆಗ್ಡೆರ ಅಧ್ಯಕ್ಷತೆಯಲ್ಲಿ ಸೇರಿ ಕೆಳಗಿನ ಠರಾವುಗಳು ಪಾಸುಮಾಡಲಾಯಿತು.

1. ಕಾರ್ಕಳ ತಾಲೂಕು ರಿಜಿಸ್ಟರ್ಡ್ ಕಂಟ್ರಾಕ್ಟರರ ಸಂಘವನ್ನು ಸ್ಥಾಪಿಸಬೇಕಾಗಿ ನಿರ್ಣಯಿಸಲಾಯಿತು. 2. ಸದ್ರಿ ಸಂಘವು ಕಾರ್ಕಳ ತಾಲೂಕು ಲೋಕಲ್ ಫಂಡ್ ರಿಜಿಸ್ಟರ್ಡ್ ಕಂಟ್ರಾಕ್ಟರರ ಸಂಘವೆಂದು ಕರೆಯಲ್ಪಡುವದು. 3. ಸದ್ರಿ ಸಂಘಕ್ಕೆ ಪ್ರತ್ಯೇಕ ಒಬ್ಬ ಅಧ್ಯಕ್ಷ, ಒಬ್ಬ ಕಾರ್ಯದರ್ಶಿ ಮತ್ತು ಖಜಾಂಜಿ ಮತ್ತು 7 ಜನರಿರುವ ಒಂದು ಕಮಿಟಿಯನ್ನು ನೇಮಿಸಬೇಕಾಗಿ ನಿರ್ಣಯಿಸಲಾಯಿತು. ಸಂಘದ ಉದ್ದೇಶ ಮತ್ತು ಕೋನ್ಸ್ಟಿಟ್ಯೂಶನ್ ನಿರ್ಣಯಿಸುವರೇ ಈ ಮೇಲಿನ ಕಮಿಟಿಯವರು ಡ್ರಾಫ್ಟ್ ತಯಾರುಮಾಡಿ ಬರುವ ಮಹಾಸಭೆಯಲ್ಲಿ ಇಡಬೇಕಾಗಿ ನಿರ್ಣಯಿಸಲಾಯಿತು. 4. ಬರುವ ಮಹಾಸಭೆ ವರೆಗೆ ಈ ಕೆಳಗೆ ಕಾಣಿಸಿದವರನ್ನು ಮೇಲೆ ಹೇಳಿದ ಸ್ಥಾನಗಳಿಗೆ ನೇಮಿಸಲಾಯಿತು. 5. ಅಧ್ಯಕ್ಷ ಶ್ರೀ. ಕೆ. ರಾಮಯ್ಯ ಹೆಗ್ಡೆ, ಕಾರ್ಯದರ್ಶಿ ಮತ್ತು ಖಜಾಂಜಿ ಶ್ರೀ. ಎಲ್. ಪಿಂಟೋ, ಕಮಿಟಿ ಶ್ರೀಗಳಾದ ರುಕ್ಮಪ್ಪ ಶೆಟ್ಟಿ, ಎ. ನಾರಾಯಣ ಹೆಗ್ಡೆ, ಕಡಿಂಜೆ ಮಂಜಯ್ಯ ಹೆಗ್ಡೆ, ಬಿ. ವಿಟ್ಠಲ ಹೆಗ್ಡೆ, ಕೆ ಪದ್ಮನಾಭ, ಕೆ. ಮಹಾಬಲ ಕಡಂಬ ಮತ್ತು ಎ. ದೂಮಣ್ಣ ಶೆಟ್ಟಿ.

ಸಿಡಿಲು ಬಡಿತದಿಂದ ದನಗಳ ಮರಣ—ಜೂನ್ ತಾ. ೭ನೇ ಶುಕ್ರವಾರ ಬೆಳಗ್ಗೆ ಸುಮಾರು ೯-೪೫ಕ್ಕೆ ಕಾಸರಗೋಡು ಪೇಟೆಯಿಂದ ಬಡಗು ಹೋಗುವ ಮಧೂರ ರಸ್ತೆಯ ಬದಿಯಲ್ಲಿ ಮಣ್ಣಪ್ಪಾಡಿ ಎಂಬ ಸ್ಥಳದ ಒಂದು ಗುಡ್ಡದ ಮೇಲೆಯಲ್ಲಿ ಮೇಯುತ್ತಿದ್ದ ೮ ದನಗಳು ಸತ್ತುಹೋಗಿವೆ. ಒಂದು ದನವು ಕಾಲಿಗೆ ಜಖಂ ಆಗಿ ಓಡಿಹೋಗಿದೆ. ಇದರ ಕುತ್ತಿಗೆಯಲ್ಲಿ ಕಬ್ಬಿಣದ ಸರಪಳಿ ಇತ್ತು. ಸತ್ತ ಎಂಟು ದನಗಳ ಕುತ್ತಿಗೆಯಲ್ಲಿ ಯಾವ ಲೋಹದ ವಸ್ತುವೂ ಇರಲಿಲ್ಲ. ಸಿಡಿಲಿನ ಬಡಿತವು ಸಾಧಾರಣ ೩೫-೪೦ ಗಜ ವಿಸ್ತೀರ್ಣಕ್ಕೆ ಹೊಡೆದಿದೆ ಎಂತ ಬಿದ್ದ ದನಗಳ ಶವಗಳನ್ನು ನೋಡುವಾಗ ತಿಳಿಯುತ್ತದೆ.

ಬೊಂಬಾಯಿ

ಕರ್ನಾಟಕದ ಪ್ರಖ್ಯಾತ ವ್ಯಂಗ್ಯಚಿತ್ರಗಾರರಾದ ಶ್ರೀಯುತ ಆರ್. ಎಸ್. ನ್ಯಾಷಾರರವರು, ಡಿಫೆನ್ಸ್ ಆಫ್ ಇಂಡಿಯಾ ಆರ್ಡಿನೆನ್ಸಿನಂತೆ ಮೊನ್ನೆ ಬುಧವಾರ ಮುಂಬಯಿಯಲ್ಲಿ ಸೆರೆಹಿಡಿಯಲ್ಪಟ್ಟರು. ಇವರು ಬೆಂಗಳೂರಿನವರು 1929-30ರ ಸತ್ಯಾಗ್ರಹದಲ್ಲಿ ಭಾಗವಹಿಸಿ, ಎರಡು ಸಲ ಜೈಲುವಾಸವನ್ನನುಭವಿಸಿದ್ದರು. ಕಳೆದ ಮೇ ತಿಂಗಳಲ್ಲಿ ಯುರೋಪ ಖಂಡವನ್ನೆಲ್ಲಾ ಸುತ್ತಾಡಿ, ನವೆಂಬರದಲ್ಲಿ ಹಿಂದುಸ್ಥಾನಕ್ಕೆ ಹಿಂದಿರುಗಿದ್ದರಷ್ಟೆ. ಇವರು ಸಾಮ್ರಾಜ್ಯವಿರೋಧಿಗಳಾಗಿದ್ದು ಭಾರತದ ಸ್ವಾತಂತ್ರ್ಯಕ್ಕಾಗಿ ಉತ್ಸಾಹದಿಂದ ಹೋರಾಡುತ್ತಿದ್ದರು. ಈಗವರು ಎರವಡಾ ಜೈಲಿನಲ್ಲಿರುವರು.

ಸೇನಾದಳವು, ಯಾವ ಜಾತಿಗೂ ಸಂಬಂಧವಿಲ್ಲದಿರಬೇಕು ಮತ್ತು ಯಾವ ಪಾರ್ಟಿ ಪೊಲಿಟಿಕ್ಸಿಗೂ ಎಡೆಮಾಡಿಕೊಡಬಾರದೆಂದು ಮುಂಬಯಿ ಲೆಜಿಸ್ಲೇಟಿವ್ ಕೌನ್ಸಿಲಿನ ಅಧ್ಯಕ್ಷರಾದ ಶ್ರೀ. ಪಕ್ವಾಸರವರು, ಮುಂಬಯಿ ನೇಶನಲ್ ಗಾರ್ಡ್ಸಿನ ವಾರ್ಷಿಕ ಸತ್ಯಾಗ್ರಹ ಟ್ರೈನಿಂಗ್ ಕೇಂಪಿನಲ್ಲಿ ಭಾಷಣಕೊಡುತ್ತಾ ಹೇಳಿದರು. ಭಾರತವು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವಾಗ ಅದೂ ಈ ಪರಿಸ್ಥಿತಿಯಲ್ಲಿ ಇಂಥ ಸೇವಕದಳದ ಅಗತ್ಯವಿದೆ. ಈ ದಳದ ಪ್ರತಿಯೊಬ್ಬ ಸೇವಕನೂ, ಬುದ್ಧಿವಂತನಾಗಿರಬೇಕು, ವಿದ್ಯಾವಂತನಾಗಿರಬೇಕು. ಹಾಗಾದರೇನೇ ಅವನು ಯಾವ ಅತಂಕವಿಲ್ಲದೆ, ತನ್ನ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಬಲ್ಲನು ಎಂದು ಉತ್ಸಾಹಪೂರಿತ ಭಾಷಣವನ್ನಿತ್ತರು.

ಸಿಂಧಿನ ಮುಸ್ಲಿಂ ಎಂ. ಎಲ್. ಎ. ಯವರಾದ ಶ್ರೀ. ಅಮೀರಾಂ ಕೋಸೋ ಎಂಬವರು ಮುಂಬಯಿಯಲ್ಲಿ ಜರಗಲಿರುವ ಅಧಿವೇಶನದಲ್ಲಿ ಅಧ್ಯಕ್ಷತೆಯನ್ನು ವಹಿಸಿರುವರು. ಯಾವ ಕಾಂಗ್ರೆಸ್ ಸದಸ್ಯನೂ ಇದರಲ್ಲಿ ಸಹಕರಿಸಬಾರದೆಂದು ಬಿ. ಪಿ. ಸಿ.ಯ ಕಾರ್ಯದರ್ಶಿಯವರು ಪ್ರಕಟಿಸಿರುವರು. ಇದು ಬರೀ ನಾಲ್ಕಾಣೆ ಕಾಂಗ್ರೆಸ್ ಸದಸ್ಯರ ಅಧಿವೇಶನ. ಆದ್ದರಿಂದ ತನ್ನ ಅಭಿಪ್ರಾಯವನ್ನು ಪ್ರಕಟಿಸುವರೆ ಕಾಂಗ್ರೆಸ್ ಅಧಿಕಾರಿಗಳ ಅಡ್ಡಿಯೇನು?

ಬಾರ್ಕೂರು ಜಿಲ್ಲೆಯ ಟೆಂಟ ಸಂಘ—ಈ ಸಂಘದ 1940-41ನೇ ಇಸವಿಯ ಕಾರ್ಯನಿರ್ವಾಹಕ ಸಮಿತಿಯು, ಸಂಘದ ಕ್ರಮ ನಿಬಂಧನೆ 10ರ ಪ್ರಕಾರ ತಾ. 9-6-1940ರಲ್ಲಿ ಆರಿಸ ಮೀಟಿಂಗಿನಲ್ಲಿ ಶ್ರೀಗಳಾದ 1. ಎನ್. ಎಮ್. ಉದ್ಯಾವರರನ್ನು ಅಧ್ಯಕ್ಷರನ್ನಾಗಿಯೂ, 2. ಕೆ. ಎಮ್. ಬಂಗೇರರವರನ್ನು ಉಪಾಧ್ಯಕ್ಷರನ್ನಾಗಿಯೂ, 3. ಎಮ್. ಕೆ. ವೀರಯನವರನ್ನು ಮಾನಾರ್ಥ ಜನರಲ್ ಕಾರ್ಯದರ್ಶಿಯರನ್ನಾಗಿಯೂ, 4. ಜಿ. ಅಂಚನರನ್ನು ಉಪಕಾರ್ಯದರ್ಶಿಯರನ್ನಾಗಿಯೂ ಮತ್ತು ಶ್ರೀ. ಟಿ ತನಿಯನವರನ್ನು ಕೋಶಾಧಿಕಾರಿಯನ್ನಾಗಿಯೂ ಚುನಾಯಿಸಿರುತ್ತದೆ.

ಈ ಸಂಘದ ಇಪ್ಪತ್ತ ಮೂರನೇ ವಾರ್ಷಿಕ ಮಹಾಸಭೆಯು ಇದೇ ತಿಂಗಳ ತಾ. 23ನೇ ರವಿವಾರ ಅಪರಾಹ್ನ ಘಂಟೆ 2-30ಕ್ಕೆ (S. T.) ಪುತ್ಲೀಬಾಯಿ ಎಕೌಂಟೆನ್ಸಿ ಟ್ರೈನಿಂಗ್ ಇನ್ಸ್ಟಿಟ್ಯೂಟ (ಟ್ರಸ್ಟ್ ಹೌಸ್, ಮಸ್ಬನ್ ರೋಡ್)ನ ಆವಾರದಲ್ಲಿ ಜರಗುವುದು.

ನೋಟೀಸು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 152/1940

ಶ್ರೀಧರ ಕಮ್ತಿ ಸಹಾ —ವಾದಿರು.

ರಾಮು ಪೂಜಾರಿ ಸಹಾ —ಪ್ರತಿವಾದಿರು.

4ನೇ ಪ್ರತಿವಾದಿ ರಾಗು ಪೂಜಾರಿ ಕನೀರೆ ಬಾಬು ಪೂಜಾರಿ ಮೊಮ್ಮಗ, ಉಡುಪಿ ತಾಲ್ಲೂಕು ಸಾಂತೂರು ಗ್ರಾಮದ ಸಾಂತೂರು ಕೊಪ್ಪದಲ್ಲಿರುವವರಿಗೆ—

ವಾದಿರು ಪ್ರತಿವಾದಿರ ಮೇಲೆ ಮೂಲಗೇಣಿ ಗೇಣಿ ವ ಹುಟ್ಟುವಳಿ ಸಮೇತ ಆಸ್ತಿ ಸ್ವಾಧೀನತೆ ಬಗ್ಗೆ ಕೂಡಾ ರೂಪಾಯಿ 102-3-10ಕ್ಕೆ ದಾಖಲ್ಮಾಡಿದ ಸದ್ರಿ ದಾವೆಯಲ್ಲಿ 4ನೇ ಪ್ರತಿವಾದಿಗೆ ಪುನಃ ನೋಟೀಸಿಗೆ ಹುಕುಂ ಆಗಿ ತಾ. 15-7-40ಕ್ಕೆ ತಸ್ಕಿಗೆ ಇಟ್ಟಿರುತ್ತದೆ. ಆದುದರಿಂದ ಸದ್ರಿ ನಂಬ್ರ ತಸ್ಕಿಗೆ ಇಟ್ಟ ತಾರೀಕು 15-7-40ನೇ ದಿನ ಹಗಲು 10ಘಂಟೆಗೆ 4ನೇ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಈ ಕೋರ್ಟಿನ ಮುಂದೆ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದರೆ ಸದ್ರಿ ವ್ಯಾಜ್ಯವನ್ನು 4ನೇ ಪ್ರತಿವಾದಿಯ ಗೈರ್ ಹಾಜರಿಯಲ್ಲಿ ಫೈಸಲ್ಮಾಡಲಾಗುವದೆಂತಲೂ ಈ ಮೂಲಕ ತಿಳಿಸಲಾಗುತ್ತದೆ.

ಕಾರ್ಕಳ 12-6-40 } **M. Mukunda Kamath**
Pleader for Plaintiffs.

Imperial Bank of India, MANGALORE.

NOTICE.

Notice is hereby given that the following gold ornaments of the weights specified against each will be sold by public auction at the Imperial Bank of India Mangalore, on Thursday the 27th June 1940 at 3-30 P. M. (Ornaments relating to Udipi Pay Office Gold Loan No. 1/184).

Ornaments.	Tolas.
Broken Patti Pieces	2 5/8
23 Rings ...	2 3/16
1 Nose ring and ... 2 Alikes	2 3/8
2 Bangles ...	6 1/8
	13 5/16

Dated 13-6-'40 } Sd. T L. L. Bean *Agent.*

ಟೆಂಡರ್ ನೋಟೀಸು.

ಉಡುಪಿ ಮುನಿಸಿಪಾಲಿಟಿಗೆ ಸಂಬಂಧಿಸಿದ ಈ ಕೆಳಗೆ ನಮೂದಿಸಿದ ಕಾಮಗಾರಿಯ ಬಗ್ಗೆ ತಾ. 8-7-40ನೇ ಸೋಮವಾರ ಅಪರಾಹ್ನ ಮೂರು ಗಂಟೆಯ ತನಕ ಕಂಟ್ರಾಕ್ಟರರಿಂದ ಟೆಂಡರುಗಳು ಸ್ವೀಕರಿಸಲಾಗುವವು. ಮುನಿಸಿಪಾಲಿಟಿಯ ದಾಖಲೆಯಲ್ಲಿ ರಿಜಿಸ್ಟ್ರಿಯಾಗದ ಉಮೇದ್ವಾರರು ರೂ. 5/- ನ್ನು ಮುನಿಸಿಪಲ್ ಖಜಾನೆಗೆ ಪಾವತಿಮಾಡಿ ರಿಜಿಸ್ಟರ್ಡ್ ಕಂಟ್ರಾಕ್ಟರರಾಗಬಹುದು.

ಕಾಮಗಾರಿಕೆ	ಅಂದಾಜು ಖರ್ಚು			ಟೆಂಡರ್ ಡಿಪೋಸಿಟ್		
	ರೂ.	ಆ.	ಪೈ	ರೂ.	ಆ.	ಪೈ
ಮೈನ್ ಶಾಲೆ ಕಟ್ಟೋಣವನ್ನು ವಿಸ್ತರಿಸೋಣ.	1900	0	0	100	0	0

ಮುನಿಸಿಪಲ್ ಆಫೀಸು, ಉಡುಪಿ ತಾ. 13-6 1940 }

Harischandra Rao,
ಕಮಿಶನರ್, ಉಡುಪಿ ಮುನಿಸಿಪಾಲಿಟಿ, ಉಡುಪಿ.

"ನಾಮರ್ದಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ನಸೋನಿಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ.

"ಸಮಿನಾ ಟೋನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನ ಉಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ.

ಕಿಮ್ಮತ್ತು ರೂ. 3-0-0 ಡಬ್ಬಿ 0-8-0

ಸೋರತ್ ಫಾರ್ಮಸಿ,
ನಲ್ ಬಜಾರ್, ಡಂಕನ್ ರೋಡ್,
ಮುಂಬಾಯಿ. 4

Sorath Pharmacy,
Null Bazar, Duncan Road,
BOMBAY 4.

(೭ನೇ ಪುಟದಿಂದ ಮುಂದರಿಸಿದ್ದು)

ಬೇಗನೆ ನಿಪಾತವಾಗಿ ಇಂಗ್ಲೆಂಡು ರಾಜಿಗೆ ಬರುವುದು. ಆಗ ಜರ್ಮನಿಯ ಸಹಾಯದಿಂದ ಭೂಮಧ್ಯಸಾಗರದ ಮೇಲಿನ ಸ್ವಾಮಿತ್ವವನ್ನು ಇಟಲಿಯು ಪಡೆಯಬಹುದಂದೇ ಮುಸಲೋನಿಯವರ ಎಣಿಕೆ. ಹಿಂದಿನ ರೋಮನ್ ಸಾಮ್ರಾಜ್ಯದ ವೈಭವ ಮತ್ತು ಕೀರ್ತಿಯ ಕನಸುಗಳನ್ನವರು ಕಾಣುತ್ತಿದ್ದಾರೆ. ಆ ಸ್ಫೂರ್ತಿಯಿಂದ ಇಟಲಿಯನರನ್ನು ಹುರಿಗೊಳಿಸುತ್ತಾರೆ.

ಪೇರಿಸು ಜರ್ಮನರ ವಶವಾಯಿತು

ಇತಿಹಾಸದಲ್ಲೇ ಅತ್ಯಂತ ಪ್ರಚಂಡ ಮತ್ತು ಅಭೂತಪೂರ್ವ ರೀತಿಯ ಜರ್ಮನ್ ಸೇನೆಯ ಧಾಳಿಯನ್ನು ಅತ್ಯಂತ ಕಡಿಮೆ ಸಂಖ್ಯೆಯ ಮತ್ತು ಅತಿ ಕಡಿಮೆ ಯುದ್ಧೋಪಕರಣ ಸಿದ್ಧತೆಯ ಫ್ರೆಂಚ್ ಸೇನೆಯು ತಾ. ೫ರಿಂದ ೧೨ರ ವರೆಗೆ ಏಳು ದಿನ ತಡೆಗಟ್ಟಿ, ರಾತ್ರಿ ಹಗಲು ಹೋರಾಡಿ ತೋರಿಸಿದ ಧೈರ್ಯ ಮತ್ತು ಸ್ಥೈರ್ಯವು ಇಡೀ ಲೋಕದ ಪ್ರಶಂಸೆಗೆ ಪಾತ್ರವಾಗಿರುವುದು. ಅವರು ತೀವ್ರ ಸೆಕೆಯಲ್ಲಿ ಹಾತೆಗಳಂತೆ ಎರಗುವ ವೈರಿಗಳ ವಿಮಾನಪಡೆಯ ಬೋಂಬುಗಳ ಕಲ್ಮಳೆ ಸುರಿದರೂ, ಮಿಶನ್ ತೋಪುಗಳ ಜಡಿಮಳೆ ಹೊಡೆದರೂ, ನೂರಾರು ಟಾಂಕಿಗಳ ಧಾಳಿನಡಿಸಿ ನುಚ್ಚುನೂರುಮಾಡಿದರೂ ಧೃತಿಗೆಡದೆ ಹಿಂಜರಿಯದೆ ವೀರಾವೇಶದಿಂದ ಕಾದಾಡಿರುವರು. ಅವರೊಂದಿಗೆ ಬ್ರಿಟಿಷ್ ಸೈನಿಕರೂ ಭುಜಕ್ಕೆ ಭುಜಕೊಟ್ಟು ಹೋರಾಡಿರುವರು. ಜರ್ಮನರ ಸೈನ್ಯವೂ ಮಿತ್ರ ರಾಷ್ಟ್ರೀಯ ಸೇನೆಗಿಂತ ಮೂರು ನಾಲ್ಕಡಿ ಅಧಿಕವಾಗಿದೆ. ಗುಂಡು ಬಿಟ್ಟು ಬಿಟ್ಟು ತುಪಾಕಿಗಳು ಕೆಂಡದಂತೆ ಕೆಂಪಾದರೂ, ಏಳೆಂಟು ದಿನ ಒಂದಿಷ್ಟು ವಿರಮಿಸಲು ಅವಕಾಶವಿಲ್ಲದಿದ್ದರೂ, ಬ್ರಿಟಿಷ್ ಮತ್ತು ಫ್ರೆಂಚ್ ಸೈನಿಕರು ಅಸಾಧಾರಣ ಸ್ಥೈರ್ಯದಿಂದ ಹೋರಾಡಿರುವರು. ಇದೇ ತಾ ೧೧ರಲ್ಲಿ ಫ್ರಾನ್ಸಿನ ಎಲ್ಲಾ ರಣರಂಗಗಳಲ್ಲಿಯೂ ಹೋರಾಟವು ಅತ್ಯಂತ ಉಗ್ರ ಸ್ವರೂಪ ತಾಳಿರುವುದು. ಜರ್ಮನರು ಹೊಗೆಯ ಮೋಡವೆಬ್ಬಿಸಿ ಅದರ ಮರೆಯಲ್ಲಿ ಸೈನ್ ಮತ್ತು ಒೈಸ ನದಿಗಳ ಮೇಲೆ ದೋಣಿಗಳ ಸಾಲಿನ ಸೇತುವೆಕಟ್ಟಿ ಅವನ್ನು ದಾಟಿರುವರು. ಮತ್ತು ಟಾಂಕಿಗಳು ಕೂಡಾ ದಾಟಿರುವವು. ಚಾಂಪನ್ನೆಯನ್ನು ವಶಪಡಿಸಿಕೊಂಡು ಮೆಗಿನೋ ಕೋಟೆಯನ್ನು ಹಿಂಬದಿಯಿಂದ ಆವರಿಸಲು ಜರ್ಮನರು ಬಹಳವಾಗಿ ಪ್ರಯತ್ನಿಸುತ್ತಿರುವರು. ಹರ್ ಹಿಟ್ಲರರು ಉತ್ತರ ಫ್ರಾನ್ಸಿನ ಸೈಂಟ್ ಕ್ವೆಂಟಿನ್ ಎಂಬಲ್ಲಿ ತನ್ನ ಕೇಂದ್ರ ಸ್ಥಳವನ್ನು ಸ್ಥಾಪಿಸಿರುವರು. ಇದೇ ತಾ ೧೨ರಲ್ಲಿ ಜರ್ಮನರು ಪೇರಿಸಿನಿಂದ ೨೦ಮೈಲು ದೂರದವರೆಗೆ ಮುಂದೊತ್ತಿದ್ದರು. ಫ್ರೆಂಚ್ ಮಂತ್ರಿಮಂಡಲವು ಪೇರಿಸನ್ನು ಬಿಟ್ಟು ಹೋಗಿ ಪಟ್ಟಣದ ರಕ್ಷಣೆಯು ಮಿಲಿಟರಿ ಗವರ್ನರೊಬ್ಬರಿಗೆ ಒಪ್ಪಿಸಲ್ಪಟ್ಟಿತು. ಮಿಲ್ಯಕ್ಕಿಂತಲೂ ಮಿಕ್ಕಿದ ಪೇರಿಸಿನ ಜನರು ಮೋಟರ್‌ಕಾರು, ಸೈಕಲ್, ಗಾಡಿ, ಕಾಲು ನಡಿಗೆಯಿಂದ ಸಾಧ್ಯವಾದ ಸಾಮಾನುಗಳನ್ನೆಲ್ಲಾ ಹಿಡಿದುಕೊಂಡು ಪಟ್ಟಣ ಬಿಟ್ಟು ಹೋಗುವ ದೃಶ್ಯವು ಅತ್ಯಂತ ಕರುಣಾಜನಕವಾಗಿದ್ದಿತು. ತಾ. ೧೪ರಲ್ಲಿ ಫ್ರೆಂಚರು ಪೇರಿಸನ್ನು ಜರ್ಮನಿಗೆ ಬಿಟ್ಟುಹೋಗಿ ಜರ್ಮನ್ ಸೇನೆಯು ಪೇರಿಸಿಗೆ ಪ್ರವೇಶಿಸಿರುವುದು. ಹೀಗೆ ಕಳೆದ ೭೦ವರ್ಷಗಳಿಂದ ಸ್ವಾತಂತ್ರ್ಯದ ಮತ್ತು ಪ್ರಜಾಶಕ್ತಿಯ ಧ್ವಜವನ್ನು ಹಾರಿಸುತ್ತ, ಲೋಕದ ಅತಿ ಸುಂದರ ನಗರವೆನಿಸಿದ ಪಟ್ಟಣವಾಗಿ ಇಡೀ ಲೋಕದ ಜನತೆಯ ಕಣ್ಮನ ಸೆಳೆಯುತ್ತಿದ್ದ ಪೇರಿಸು ಇಂದು ಜರ್ಮನರ ಅಧೀನವಾದಂತಾಯಿತು. ಪೇರಿಸಿನಲ್ಲಿ ಯುದ್ಧನಡಿಸಿ ಜರ್ಮನರ ವಿಮಾನಧಾಳಿಯಿಂದ ಅದು ನಾಶವಾಗದಂತೆ ಮಾಡುವ ಉದ್ದೇಶದಿಂದ ಫ್ರೆಂಚರು ಅದನ್ನು ಬಿಟ್ಟು ಹೋಗಿರುವರೆಂದು ಹೇಳಲಾಗಿದೆ. ಪೇರಿಸಿನ ಹೊರ ವಳಯದಲ್ಲಿ ಫ್ರೆಂಚರು ಹೋರಾಟನಡಿಸುತ್ತಿದ್ದಾರೆ. ಪೇರಿಸಿಗೆ ಜರ್ಮನರು ಪ್ರವೇಶಿಸುವಾಗ ಅದು ಸ್ಮಶಾನದಂತೆ ಮೌನವಾಗಿದ್ದಿತು. ಫ್ರೆಂಚರು ಪೇರಿಸನ್ನು ಬಿಟ್ಟುಹೋಗುವಾಗ ಅಲ್ಲಿದ್ದ ಯುದ್ಧಸಾಮಗ್ರಿ ತಯಾರಿ ಕಾರ್ಖಾನೆಗಳನ್ನೆಲ್ಲಾ ಸ್ಫೋಟಗೊಳಿಸಿರುವರು. ಪಟ್ಟಣದಲ್ಲಿ ಯಾವ ರೀತಿಯ ದಿಗಿಲು ಗಲಿಬಿಲಿಗಳೇನೂ ನಡೆದಿರುವುದಿಲ್ಲ. ಎಲ್ಲೆಲ್ಲಿಯೂ ಗಂಭೀರ ಶಾಂತತೆಯು ನೆಲೆಗೊಂಡಿದ್ದಿತು.

ಪ್ರೆಸಿಡೆಂಟ್ ರೂಸ್‌ವೆಲ್ಟರು

ಅಮೇರಿಕಕ್ಕೆ ಫ್ರಾನ್ಸಿನ ಆಗ್ರಹದ ವಿನಂತಿ

"ಕಳೆದ ೭ ದಿವಸಗಳಿಂದ ನಮ್ಮ ಸೈನಿಕರು ಒಂದಿಷ್ಟು ಬಿಡುವಿಲ್ಲದೆ, ಪ್ರಚಂಡ ವೈರಿ ಸೇನೆಯೊಂದಿಗೆ ವೀರಾವೇಶದಿಂದ ಕಾದಾಡಿರುವರು. ವೈರಿಯು ಈಗ ಪೇರಿಸಿನ ದ್ವಾರಕ್ಕೆ ಬಂದಿರುವನು. ನಾವು ಪೇರಿಸಿನ ಸುತ್ತಮುತ್ತಲೂ ಹೋರಾಡುವೆವು. ನಮ್ಮ ಪ್ರಾಂತವೊಂದಕ್ಕೆ ಹೋಗಿ ಕಾದಾಡುವೆವು. ಅಗತ್ಯ ಬಿದ್ದರೆ ಉತ್ತರ ಆಫ್ರಿಕಕ್ಕೂ, ಅಮೇರಿಕದ ನಮ್ಮ ವಸಾಹತುಗಳಿಗೂ ಹೋಗಿ ಕಾದಾಡುವೆವು ನಾವೀಗ ಲೋಕದ ಎಲ್ಲಾ ಜನತೆಯ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವೆವು. ಅದಕ್ಕಾಗಿ ಪ್ರಾಣ ತ್ಯಾಗಕ್ಕೂ ಸಿದ್ಧರಿರುವೆವು. ಅಮೇರಿಕವು ಈಗ ನಮಗೆ ಯುದ್ಧ ಸಾಮಗ್ರಿಗಳ, ಯುದ್ಧ ವಿಮಾನಗಳ ಸಹಾಯವನ್ನು ಕೊಡಬೇಕಾಗಿದೆ. ಕೂಡಲೆ ಕೊಡದಿದ್ದರೆ ಮತ್ತೆ ಬಹಳ ವಿಳಂಬವಾಗಿ ಹೋಗಬಹುದು. ಆದುದರಿಂದ ಕೂಡಲೆ ಯುದ್ಧ ಸಾಮಗ್ರಿಗಳನ್ನಿತ್ತು ಫ್ರಾನ್ಸಿಗೆ ಸಹಾಯಮಾಡಬೇಕಾಗಿ ಆಗ್ರಹದಿಂದ ಬೇಡಿಕೊಳ್ಳುತ್ತೇನೆ" ಎಂದು ಫ್ರೆಂಚ್ ಪ್ರಧಾನ ಮಂತ್ರಿ ರೈನೋಡರು ಅಮೇರಿಕದ ಪ್ರೆಸಿಡೆಂಟ ರೂಸ್‌ವೆಲ್ಟರೊಡನೆ ವಿನಂತಿ ಮಾಡಿಕೊಂಡಿರುವರು. ರೂಸ್‌ವೆಲ್ಟರು ಈ ವಿನಂತಿಯನ್ನು ಕೂಡಲೆ ಮನ್ನಿಸಿ, ಫ್ರೆಂಚ್ ಸೈನಿಕರ ಧೈರ್ಯ ಮತ್ತು ಸ್ಥೈರ್ಯವನ್ನು ಬಹಳವಾಗಿ ಪ್ರಶಂಸಿಸಿ, ಮಿತ್ರ ರಾಷ್ಟ್ರಗಳು, ಅನ್ಯಾಯವಾದ ಆಕ್ರಮಣ ನಡಿಸಿರುವ ವೈರಿಯನ್ನು ಕಡೆಯ ವರೆಗೂ ವಿರೋಧಿಸುವ ನಿರ್ಧಾರದವರಾದರೆ ಅಮೇರಿಕವು ಹೆಚ್ಚೆಚ್ಚಾಗಿ ದ್ವಿಗುಣಿತವಾಗಿ ಯುದ್ಧೋಪಕರಣಗಳನ್ನು ಕಳುಹಿಸುವ ಆಶ್ವಾಸನೆ ಕೊಡುವುದು. ಯುನೈಟೆಡ್ ಸ್ಟೇಟ್ಸಿನ ಕಾಂಗ್ರೆಸಿನ ಸಮ್ಮತಿಯ ವಿನಹ ಸೇನಾಸಹಾಯವೀಯಲು ಸಾಧ್ಯವಿಲ್ಲೆಂದು ತಿಳಿಸಿರುವರು.

ಫ್ರಾನ್ಸಿನ ಸಂದಿಗ್ಧ ಪರಿಸ್ಥಿತಿ

೨ ಮಿಲ್ಯ ಸೇನೆ ೪೦೦೦ಕ್ಕಿಂತಲೂ ಮಿಕ್ಕಿದ ಟೇಂಕ್‌ಗಳು ಮತ್ತು ಅಗಣಿತ ವಿಮಾನಗಳ ಪ್ರಚಂಡಧಾಳಿಯನ್ನು ಫ್ರೆಂಚ್ ಸೇನೆಯು ಎಷ್ಟರವರೆಗೆ ಎದುರಿಸಬಲ್ಲದೆಂಬುದು ಅತ್ಯಂತ ಚಿಂತಾಜನಕ ವಿಷಯವಾಗಿದೆ. ಜರ್ಮನರು ಪೇರಿಸನ್ನು ವಶಪಡಿಸಿಕೊಂಡು ಕೂಡಲೆ ಮುಂದೊತ್ತಿರುತ್ತಾರೆ. ಫ್ರೆಂಚ್ ಸೇನೆಯು ಎಷ್ಟರವರೆಗೆ ಎದುರಿಸಬಲ್ಲದೆಂಬುದು ಅತ್ಯಂತ ಚಿಂತಾಜನಕ ವಿಷಯವಾಗಿದೆ. ಜರ್ಮನರು ಪೇರಿಸನ್ನು ವಶಪಡಿಸಿಕೊಂಡು ಕೂಡಲೆ ಮುಂದೊತ್ತಿರುತ್ತಾರೆ. ಫ್ರೆಂಚ್ ಸೇನೆಯು ಹೋರಾಡಬೇಕಾಗಿರುವ ರಣರಂಗವು ಮತ್ತೂ ವಿಶಾಲವಾಗಿರುತ್ತದೆ. ಪಶ್ಚಿಮ ಮತ್ತು ಪೂರ್ವ ಬದಿಗಳಲ್ಲಿ ಪರಿಸ್ಥಿತಿಯು ಆತ್ಯಪಾಯಕರವಿದೆ. ಪಶ್ಚಿಮದಲ್ಲಿ ಸಮುದ್ರ ತೀರದಲ್ಲಿ ಜರ್ಮನಿಯ ಹೊಸ ಯಾಂತ್ರಿಕ ಮತ್ತು ಮೋಟರ್ ದಳಗಳು ಜೋರದಿಂದ ಮುಂದೊತ್ತತೊಡಗಿವೆ. ಪೂರ್ವ ಬದಿಯಲ್ಲಿಯೂ ಪರಿಸ್ಥಿತಿಯು ಸಂದಿಗ್ಧವಾಗಿದೆ. ಮೆಗಿನೋ ಕೋಟೆಯ ಸಂದಿನ ಸ್ಥಳವನ್ನು ಫ್ರೆಂಚ್ ಸೇನೆಯು ಈ ವರೆಗೆ ಕಾಪಾಡಿಕೊಂಡಿದೆ. ಇನ್ನು ಒಂದೆರಡು ದಿನಗಳಲ್ಲಿ ಪರಿಸ್ಥಿತಿಯು ಹೇಗೆ ನಿಲ್ಲುವುದೆಂದು ಹೇಳಬರುವುದಿಲ್ಲ. ಇತರ ಪ್ರಜಾಶಾಹಿ ರಾಷ್ಟ್ರಗಳು ಫ್ರೆಂಚರಿಗೆ ಕೂಡಲೆ ಸೇನಾಸಹಾಯವೀಯದಿದ್ದರೆ ಭಯಂಕರ ಅನಾಹುತಕ್ಕವರು ಬಲಿಬೀಳುವುದು ನಿಶ್ಚಯ. ಫ್ರಾನ್ಸಿನ ಇತಿಹಾಸದಲ್ಲೇ ಅತ್ಯಂತ ವಿಷಾದಕರವಾದ ಅವಸ್ಥೆಯಲ್ಲಿದು ಅಮೇರಿಕಾದ ವಿಮಾನಗಳ ಸಹಾಯಕ್ಕಾಗಿ ಅಟ್ಲಾಂಟಿಕ ಸಾಗರದತ್ತ ಕತ್ತುನೀಡಿ ಕಣ್ಣಿಟ್ಟುಕೊಂಡಿರುವುದು. ಕೂಡಲೆ ಸಾವಿರಾರು ವಿಮಾನಗಳ ಸಹಾಯ ದೊರೆತರೆ ಮಾತ್ರ ಫ್ರಾನ್ಸು ಬದುಕುವಂತಾಗಬಹುದು. ಫ್ರೆಂಚ್ ಮಂತ್ರಿಮಂಡಲವು ಟೂರ್ಸ್ ಎಂಬ ಪಟ್ಟಣದಲ್ಲಿದ್ದಿತು ಈಗ ಅದನ್ನು ಬಿಟ್ಟು ಇನ್ನೊಂದೆಡೆ ಹೋಗಿರುವುದು. ಮ್ಯೂಸ್ ನದಿ ಪ್ರದೇಶದ ಕೋಟೆಗಳನ್ನು ಮುರಿದು ಜರ್ಮನರು ವರ್ಡನನ್ನು ವಶಪಡಿಸಿಕೊಂಡಿರುವರೆಂದು ತಿಳಿದುಬಂದಿದೆ. ಇದೇ ತಾ. ೧೫ರಲ್ಲಿ ಫ್ರೆಂಚ್ ಸೇನೆಯ ಮೇಲೆ ಜರ್ಮನರ ಒತ್ತಾಟವು ಅತಿ ಪ್ರಬಲವಾಗಿದೆ ಫ್ರೆಂಚ್ ಸೇನೆಗೆ ಅದನ್ನು ತಡೆಕೊಳ್ಳಲು ಅಸಾಧ್ಯವೆಂಬಂತಾಗಿದೆ.



ಫ್ರೆಂಚರಿಗೆ ಹೆಚ್ಚೆಚ್ಚು ಸೇನಾ ಸಹಾಯ ಮಾಡುತ್ತಾ ಕೊನೆಯ ಆಂಗ್ಲೇಯನು ಜೀವಂತವಿರುವನಕ ಜರ್ಮನರೊಡನೆ ಹೋರಾಡಿಯೇ ಸಿದ್ಧವೆಂದು ನಿರ್ಧರಿಸಿರುವ ಬ್ರಿಟಿಷ್ ಪ್ರಧಾನ ಮಂತ್ರಿ ಮಿ. ಚರ್ಚಿಲ್ಲರು

ಹಿಟ್ಲರರ ಉದ್ದೇಶವೇನು?

ಅಮೇರಿಕದ ಪತ್ರ ವ್ಯವಸಾಯಿಯಾದ ಕಾರ್ಲ್‌ವಾನ್ ವೈಗಾಂಡರೆಂಬವರಿಗೆ ಹೆರ್ ಹಿಟ್ಲರರು ಇದೇ ತಾ. ೧೩ರಲ್ಲಿ ಭೇಟಿ ಕೊಟ್ಟು ತನ್ನ ಉದ್ದೇಶವನ್ನು ಈ ರೀತಿ ನಿರೂಪಿಸಿರುವರು. "ಅಮೇರಿಕವು ಅಮೇರಿಕಾನರಿಗೆ, ಯುರೋಪು ಯುರೋಪಿಯಾನರಿಗೆ ಎಂಬುದೇ ನನ್ನ ಧೋರಣೆ ಅಮೇರಿಕದ ಮೇಲೆ ನಾನು ಧಾಳಿ ನಡಿಸುವೆನೆಂಬುದು ಕೇವಲ ಮುಕ್ಕಳಾಟಿಕೆಯ ಮಾತು. ಮತ್ತು ಅತ್ಯಂತ ವಿಕಟ ವಿಷಯ. ಪಶ್ಚಿಮಾರ್ಧ ಗೋಳಕ್ಕೆ ಕೈಹಾಕುವ ಕಲ್ಪನೆಯನ್ನೇ ನಾನು ಮಾಡಿರುವುದಿಲ್ಲ. ಅಮೇರಿಕದಲ್ಲಿ ಜರ್ಮನಿಯ ಸೂತ್ರಚಾಲಕರಿರುವರೆಂಬುದು ಮೂರ್ಖತನ ಮತ್ತು ಕೇವಲ ಕಲ್ಪನೆಯ ಮಾತು. ಪ್ರಚಾರಕರು ತಾವೇ ಕಲ್ಪಿಸಿಕೊಂಡು ಹರಡಿಸುವ ಸುದ್ದಿಗಳವು. ಬ್ರಿಟಿಷ್ ಸಾಮ್ರಾಜ್ಯವನ್ನು ನಾಶಮಾಡುವ ಉದ್ದೇಶವೇ ನನಗಿಲ್ಲ. ಆ ಸಾಮ್ರಾಜ್ಯ ನಾಶಕರನ್ನೇ ನಾನು ನಾಶಮಾಡುವೆನು. ಅಮೇರಿಕವು ಈಗ ಭರದಿಂದ ಯುದ್ಧೋಪಕರಣ ಸಂಗ್ರಹಿಸುತ್ತಿದೆ. ಆದರೆ ಅಮೇರಿಕದ ಧೋರಣೆಯ ಗೊಡವೆ ನನಗೆ ಬೇಡ. ಅದರಲ್ಲಿ ನನಗೇನೂ ಆಸಕ್ತಿಯಿಲ್ಲ. ಮಿತ್ರರಾಷ್ಟ್ರೀಯರಿಗೆ ಅಮೇರಿಕವು ಕೊಡುವ ಸಹಾಯದಿಂದ ಯುದ್ಧದ ಫಲಿತಾಂಶದ ಮೇಲೇನೂ ಪರಿಣಾಮವಾಗಲಾರದು. ಮೊದಲು ಜರ್ಮನಿಗಿದ್ದ ವಸಾಹತುಗಳನ್ನೆಲ್ಲಾ ಪುನಃ ಪಡೆಕೊಂಡು ಇಂಗ್ಲೆಂಡಿನ ಭಂಡವಾಳಶಾಹಿ ತಂದವನ್ನು ನಾಶಮಾಡಿ, ಸಮುದ್ರದ ಮೇಲಿನ ಬ್ರಿಟಿನಿನ ಅಧಿಕಾರವನ್ನು ಮುರಿಯುವುದೇ ನನ್ನ ಉದ್ದೇಶ. ಜರ್ಮನಿಗೆ ಬೇಕಾದುದು ಶಾಂತಿ. ಒಪ್ಪಂದಗಳಿಂದ ಶಾಂತಿಯ ಉದ್ದೇಶವನ್ನು ಸಾಧಿಸಲು ಸಾಧ್ಯವಿಲ್ಲ. ರಾಷ್ಟ್ರಗಳಲ್ಲಿ ವಿವೇಕೋದಯವಾಗಬೇಕು."

ನವಯುಗದಲ್ಲೇ ನಿಮ್ಮ ಜಾಹಿರಾತು ಪ್ರಕಟಿಸಿರಿ

ಖಾಕ್ಸಾರರು ಹಿಂದುಸ್ಥಾನದ ನಾಝಿಗಳು!

ಇಡೀ ಲೋಕದಲ್ಲಿ ಇಸ್ಲಾಮ್ ರಾಜ್ಯ ಮತ್ತು ಧರ್ಮಸ್ಥಾಪನಾಕಾಂಕ್ಷೆ.

ಹಿಂದುಗಳು ನಿರ್ವೀರ್ಯರು ಮತ್ತು ಪೌರುಷಹೀನರೆಂದು ತಿರಸ್ಕಾರ

ಕತ್ತಿಯ ತತ್ವ ಮತ್ತು ಸೈನಿಕ ರೀತಿನೀತಿಗೆ ಪುರಸ್ಕಾರ.

—o—

ಗಾಂಧಿಜಿಯವರ ಅಹಿಂಸೆ, ಸತ್ಯಾಗ್ರಹ ಮತ್ತು ಕಾಯಿದೆಭಂಗವು ಅಪ್ರಯೋಜಕವಿದ್ದು ಇಸ್ಲಾಮ್ ಧರ್ಮ, ಸಂಸ್ಕೃತಿ ಮತ್ತು ಸಂಪ್ರದಾಯಕ್ಕೇನೇ ಕಳಂಕಪ್ರಾಯವಾದುದೆಂದು ಅಪಪ್ರಚಾರ.

★

ಪಂಜಾಬು ಸಂಯುಕ್ತಪ್ರಾಂತ ಮತ್ತು ವಾಯುವ್ಯ ಗಡಿನಾಡಿನ ಮುಸಲ್ಮಾನರಲ್ಲಿ ಪ್ರಬಲವಾಗಿ ಹಬ್ಬಿರುವ ಖಾಕ್ಸಾರ್ ಚಳವಳದ ಸಂಸ್ಥಾಪಕರಿಗೂ ಜರ್ಮನಿಯ ನಾಝಿಗಳಿಗೂ ಸಂಬಂಧವಿರುವುದೆಂದು ಇತ್ತಲಾಗಿ ರುಜುವಾಗಿದೆ. ಪಂಜಾಬಿನ ಪ್ರಧಾನಮಂತ್ರಿ ಸರ್. ಸಿಕಂದರ್ ಹಾಯತ್ ಖಾನರೇ ಅದನ್ನೊಪ್ಪಿ ಹೇಳಿಕೆ ಹೊರಡಿಸಿರುತ್ತಾರೆ. ಮನೆ ಮಸೀದಿಗಳಿಗೆಲ್ಲಾ ಪೋಲೀಸರು ಹೊಕ್ಕು ಖಾಕ್ಸಾರರನ್ನು ದಸ್ತಗಿರಿಮಾಡುತ್ತಿದ್ದಾರೆ.

ಜರ್ಮನಿಯಿಂದ ಸಹಾಯ

ಖಾಕ್ಸಾರರ ಮುಖಂಡರು ಕೆಲವರು ಜರ್ಮನಿಯ ನಾಝಿಗಳಿಂದ ಗುಪ್ತವಾಗಿ ಸಹಾಯಪಡೆದಿರುವರೆಂಬುದೀಗ ಸಿದ್ಧವಾಗಿದೆ. ಖಾಕ್ಸಾರ್ ಚಳವಳದ ಮೂಲ ಸ್ಥಾಪಕರಾದ ಇನಯಿತುಲ್ಲಾ ಖಾನ್ ಯಾನೆ ಅಲ್ಲಮ ಮಶ್ರಿಕಿಯವರು ಹಿಟ್ಲರರ ರೀತಿನೀತಿಗಳನ್ನು ಬಹಳವಾಗಿ ಮೆಚ್ಚುವವರು. ಅವರು ಜರ್ಮನಿಗೆ ಹೋಗಿ ನಾಝಿಗಳ ಸಂಘಟನಾ ವಿಧಾನಗಳನ್ನು ಸ್ವತಃ ನೋಡಿ ಹಿಟ್ಲರರಿಂದ ಸನ್ಮಾನಿಸಲ್ಪಟ್ಟವರೆಂದು ತಿಳಿದುಬಂದಿದೆ. ಖಾಕ್ಸಾರರು ಉಪಯೋಗಿಸುವ ಬಿಲ್ಲೆಗಳನ್ನೇ ನಾಝಿಗಳೂ ಹಿಡಿದುಕೊಳ್ಳುತ್ತಾರೆ. ಖಾಕ್ಸಾರ್ ದಳದ ಸಂಘಟನೆ, ಪೋಷಾಕು, ಕವಾತು, ಶಿಸ್ತು, ನಿಯಮಗಳೆಲ್ಲಾ ನಾಝಿ 'ಸ್ಟ್ರೋಮ್ ಟ್ರೂಪ್' ದಳದ ಅನುಕರಣೆಯಾಗಿದೆ. ಖಾಕ್ಸಾರರು ಹಿಂದೂಸ್ಥಾನದಲ್ಲಿ ನಾಝಿಗಳ ಹಸ್ತಕರಾಗಿ ಕೆಲಸಮಾಡುವ ಸಂಭವವಿದ್ದಿತೆಂದು ಹೇಳಲು ಸಾಕಷ್ಟು ಆಧಾರ ದೊರೆತಿದೆ. ವಾಯುವ್ಯ ಗಡಿನಾಡಿನ ಗಲಾಟೆಗೂ ನಾಝಿಗಳ ಸೂತ್ರಚಾಲನೆಯೇ ಕಾರಣವಿರಬಹುದೋ ಎಂಬ ಊಹೆಗೆ ಕೂಡಾ ಅವಕಾಶವುಂಟಾಗಿದೆ.

ದ್ವೇಷ, ದರ್ಪ ಮತ್ತು ಅಹಂಭಾವ

'ಖಾಕ್ಸಾರ್' ಎಂಬ ಶಬ್ದದ ಅರ್ಥವು "ಧೂಳಿನಂತೆ" ಎಂದು ಅತಿ ವಿನಯವನ್ನು ಸೂಚಿಸುವುದಾದರೂ ಅದು ಕೇವಲ ಸೋಗುಮಾತ್ರ. ಹೆಸರಿಗೂ ಖಾಕ್ಸಾರರ ರೀತಿನೀತಿಗೂ ಲೇಶಮಾತ್ರವೂ ಸಂಬಂಧವಿಲ್ಲ. ಖಾಕ್ಸಾರರು ದ್ವೇಷ, ದರ್ಪ ಮತ್ತು ಅಹಂಭಾವದ ಪ್ರತಿಮೂರ್ತಿಗಳು. ಮಾನವಕೋಟಿಯ ಸೇವೆಯೇ ಖಾಕ್ಸಾರರ ತೋರಿಕೆಯ ಉದ್ದೇಶವಾದರೂ, ಹಿಂದುದೇಶ ಮತ್ತು ಲೋಕವನ್ನು ಜೈಸಿ ಆಳುವುದೇ ಅವರ ಒಳಗಿಂದೊಳಗಿನ ಆಕಾಂಕ್ಷೆ. ಮುಖ್ಯವಾಗಿ ಹಿಂದುಸ್ಥಾನದಲ್ಲಿ ಇಸ್ಲಾಂ ಧರ್ಮ ಸಂಸ್ಕೃತಿ ಮತ್ತು ರಾಜ್ಯವನ್ನು ಸ್ಥಾಪಿಸಿ ಅಧಿಕಾರ ನಡೆಸಬೇಕೆಂದೇ ಅವರ ತೀವ್ರವಾದ ಇಚ್ಛೆ. ಹಿಂದಿನ ಮುಸಲ್ಮಾನ ದಿಗ್ವಿಜಯಿಗಳು ಮತ್ತು ಸಾಮ್ರಾಜ್ಯಸ್ಥಾಪಕರಂತೆ ಹಿಂದೀ ಮುಸಲ್ಮಾನರೂ ಇಸ್ಲಾಂ ರಾಜ್ಯ ಕಟ್ಟಬೇಕೆಂದೇ ಖಾಕ್ಸಾರರ ಹಾರೈಕೆ.

ಲೋಕ ಪ್ರಭುತ್ವದ ಆಕಾಂಕ್ಷೆ.

ಖಾಕ್ಸಾರರು ಸದಾ ತಮ್ಮ ಮುಂದಿಟ್ಟುಕೊಂಡು ಅನುಸರಿಸಬೇಕಾದ ಮೂಲಸೂತ್ರಗಳು ಕೆಲವನ್ನು ಸದ್ರಿ ಚಳವಳದ ಸ್ಥಾಪಕರು ಈ ರೀತಿ ನಿರೂಪಿಸಿರುವರು ಖಾಕ್ಸಾರನು ಹೋರಾಟದ ಮತ್ತು ಸೈನಿಕ ಮನೋವೃತ್ತಿಯನ್ನು ಬೆಳೆಸಿಕೊಳ್ಳಬೇಕು. ಲೋಕಪ್ರಭುತ್ವದ ಮತ್ತು ಕಟ್ಟಕಡೆಗೆ ಇಸ್ಲಾಮಿನ ಸಂಪೂರ್ಣ ದಿಗ್ವಿಜಯದ ಆಕಾಂಕ್ಷೆಯನ್ನು ತನ್ನ ಮುಂದಿಟ್ಟುಕೊಳ್ಳಬೇಕು. ಇಸ್ಲಾಮಿಗಾಗಿ ಖಾಕ್ಸಾರನು ತನ್ನ ತನು ಮನ ಧನವನ್ನರ್ಪಿಸಲು ಸದಾಸಿದ್ಧನಿರಬೇಕು. ಖಾಕ್ಸಾರರೆಲ್ಲರೂ ಸುಸಂಘಟಿತ ಸೈನಿಕದಳವಾಗಿ ಸೈನಿಕ ಚಲನವಲನ ಮತ್ತು ಕವಾತುಗಳಿಗೆ ಹೋಗಬೇಕು ಮತ್ತು ಯಾವಾಗಲೂ ಒಬ್ಬರೊಬ್ಬರಿಗೆ ಸೈನಿಕ ರೀತಿಯ ವಂದನೆಯನ್ನೇ ಮಾಡಬೇಕು. ಖಡ್ಗ ಪ್ರಯೋಗದಿಂದ ಇಡೀ ಲೋಕವನ್ನೇ ಜೈಸಿ ಇಸ್ಲಾಮು ಧರ್ಮವನ್ನು ಸ್ಥಾಪಿಸಿ ರಾಜ್ಯವನ್ನು ಕಟ್ಟಿ ಲೋಕಪ್ರಭುಗಳಾಗಿ ಆಳಬೇಕೆಂಬುದೇ ಖಾಕ್ಸಾರರ ಹಿರಿಯ ಬಯಕೆ.

ಗಾಂಧಿಜಿ ಮತ್ತು ಹಿಂದುಗಳ ಕುರಿತು ತಿರಸ್ಕಾರ

"ಗಾಂಧಿಯವರು ಸತ್ವಹೀನ ಮುಖಂಡರು. ತನ್ನ ಜೀವನದಲ್ಲಿ ಖಡ್ಗವನ್ನೇ ಹಿಡಿಯದ ನಿರ್ವೀರ್ಯ ಜನಾಂಗವಾದ ಹಿಂದುಗಳಿಗೆ ಗಾಂಧಿಯವರಂಥ ಮುಖಂಡರೇ ಬೇಕು. ಹಿಂದುಗಳು ಎಂದೂ ಶೌರ್ಯದಿಂದ ಹೋರಾಡಿದವರಲ್ಲ. ನೂರಾರು ವರ್ಷಗಳಿಂದ ಒಂದೇ ಒಂದು ಕೋಟೆಯನ್ನು ಕೂಡಾ ಗೆದ್ದವರಲ್ಲ, "ನೀವು ಪೆಟ್ಟು ತಿನ್ನುವುದಕ್ಕೇನೇ ಅರ್ಹರು. ಆದುದರಿಂದ ನಿಮಗೆ ಹೊಡೆಯಲೇ ಬೇಕು" ಎಂಬ ಉಪದೇಶವನ್ನು ಸ್ವಾತಂತ್ರ್ಯ ಸಾಧನೆಗಾಗಿ ಇಂಥವರಿಗೆ ಕೊಡಬೇಕು. ತನ್ನ ಜಾತಿಯು ಅಪ್ರಯೋಜಕವಾದುದೆಂಬುದನ್ನರಿತು ಆ ಬಡ ಮನುಷ್ಯನು [ಗಾಂಧಿಯವರು] ಹಿಂದೂ ವೇದಾಂತದ ಹೆಸರಲ್ಲಿ ಸತ್ಯಾಗ್ರಹ, ಅಹಿಂಸೆ, ಕಾಯಿದೆಭಂಗ ಮೊದಲಾದ ಅಪಹಾಸ್ಯಕರ ತತ್ವಗಳನ್ನು ಕಾರ್ಯಕ್ಕೆ ಹಚ್ಚಿ ಲೋಕವನ್ನು ವಿಸ್ಮಯಗೊಳಿಸಿರುವನು."

ಇಸ್ಲಾಮಿಗೆ ಅಪಮಾನ

"ಅನೇಕರವು ಕೂಡಾ ಅದರಿಂದ ಆಶ್ಚರ್ಯಗೊಂಡಿರುವುದು, ಗಾಂಧಿಯ ಜೀವನ ಮತ್ತು ಬೋಧನೆಗಳು ಕ್ರೈಸ್ತನಂತೆಂದು ಪ್ರಚಾರ ನಡೆದಿರುವುದು. ಅವನನ್ನು ಇಡೀ ಲೋಕದ ಮಹಾಪುರುಷನೆಂದು ಉದ್ಘೋಷಿಸಲಾಗಿದೆ. ಮಹಾತ್ಮರು ಇಡೀಲೋಕದ ಕಣ್ಣಿಗೆ ಮಣ್ಣು ಹಾಕಿರುವರು. ಒಬ್ಬ ಮನುಷ್ಯನ ಕೈಯಲ್ಲಿ ಖಡ್ಗವಿರುವುದು ತಪ್ಪು. ದುರ್ಬಲರ ಹಸ್ತ ಶಸ್ತ್ರವಿರುವುದು ತಪ್ಪು. ಸಿಂಹದ ಪಾದಗಳಲ್ಲಿ ನಖಗಳಿರುವುದು ತಪ್ಪು. ಚೇಳುಗಳಲ್ಲಿ ಚುಚ್ಚುವ ಕೊಂಡಿಯಿರುವುದು ತಪ್ಪು. ಸಂಕ್ಷೇಪವಾಗಿ ಹೇಳುವುದಾದರೆ ಖಡ್ಗದ ತತ್ವವೇ ತಪ್ಪೆಂದು ಲೋಕವು ನಂಬುವಂತೆ ಗಾಂಧಿಯವರು ಯತ್ನಿಸಿರುವರು. ಈ ಹಿಂದೂ ವೇದಾಂತಕ್ಕೆ ಕಟ್ಟುಬಿದ್ದು ಕಳೆದ 10 ವರ್ಷಗಳಲ್ಲಿ ಮುಸಲ್ಮಾನರು ವಿಚಿತ್ರವಾಗಿ ವರ್ತಿಸಿರುವರು. ಹಿಂದೂ ಸಂಸ್ಕೃತಿ ಮತ್ತು ಜೀವನ ಕ್ರಮಗಳನ್ನನುಸರಿಸಿರುವರು. ಇವೆಲ್ಲಾ ಇಸ್ಲಾಮಿಗೆ ಹಾನಿಕರ ಮತ್ತು ದೊಡ್ಡ ಅಪಮಾನ. ಇಸ್ಲಾಮ್ ತತ್ವಕ್ಕೇನೇ ವಿರೋಧವಾದುದಿದು".

ಮುಸಲ್ಮಾನನು ತುಕ್ಕು ಹಿಡಿದ ಹಿರಿಯರ ಖಡ್ಗವನ್ನಾದರೂ ನೋಡಿಕೊಳ್ಳಬೇಕಿತ್ತು. ತನ್ನ ಜನಾಂಗದ ಗಂಡಸುತನವನ್ನು ಕಂಡುಕೊಳ್ಳಬೇಕಿತ್ತು. ಲೋಕದಲ್ಲಿ ತನ್ನ ಉಚ್ಚ ಮತ್ತು ಗೌರವಾನ್ವಿತ ಸ್ಥಾನವನ್ನು ಮನಗಂಡುಕೊಳ್ಳಬೇಕಿತ್ತು. ಪ್ರಾಣ ಬಲಿದಾನವಿತ್ತ ಮುಸಲ್ಮಾನ ವೀರರನ್ನು ಸ್ಮರಿಸಿಕೊಳ್ಳಬೇಕಾಗಿತ್ತು. ಮುಸ್ತಾಫ ಕೆಮಲ್ ಮತ್ತು ಇಬನ್ ಸಾವುದನ್ನು ದೃಷ್ಟಿ ಪಥದ ಮುಂದಿಟ್ಟುಕೊಳ್ಳಬೇಕಿತ್ತು. ತಿಲಕ, ಗೋಖಲೆ ಮತ್ತು ಗಾಂಧಿಯವರ ಮೇಲೆ ಮುಸಲ್ಮಾನನು ದೃಷ್ಟಿ ಇಡುವ

ONE REASON.

Love does much, but in this materialistic world, money does more. Save therefore for the sake of those you love.

RESOURCES OF A CRORE. | ESTD. 1906. Canara Bank Limited.

ಅಂತರಂಗ

CINEMA SPECIAL NUMBER

ಅಥವಾ

" ಚಲಚ್ಚಿತ್ರಾಂಕ "

ತಾ. 30—6—'40ಕ್ಕೆ ಹೊರಬೀಳಲಿದೆ.

ಜಾಹೀರಾತಿಗೆ ಉತ್ತಮಸಾಧನ. ದರಗಳಿಗೆ ಬರೆಯಿರಿ.

Advertisement Manager,

Antaranga, Udipi.

ದು ಇಸ್ಲಾಮ್ ರೀತಿನೀತಿಗೇನೇ ಬಾಹಿರವಾದುದು." ಇದೀಗ ಖಾಕ್ಸಾರರ ನಾಯಕರು ಅವರಿಗೆ ಕೊಟ್ಟಿರುವ ಉಪದೇಶದ ಮುಖ್ಯಾಂಶ. ಇದರಿಂದ ಅವರ ಉದ್ದೇಶ ಮತ್ತು ಮನೋವೃತ್ತಿಯು ಸ್ಪಷ್ಟವಾಗುವುದು.

ಮುಸಲ್ಮಾನರ ಪ್ರಬಲ್ಯಬೆಂಬಲ

ಇಸ್ಲಾಮ್ ರಾಜ್ಯ ಕಟ್ಟಿ 'ಇಸ್ಲಾಮ್' ಧರ್ಮವನ್ನು ಲೋಕವ್ಯಾಪಕವಾಗಿ ನೆಲೆಗೊಳಿಸಿ ಲೋಕ ಪ್ರಭುತ್ವವನ್ನು ಸ್ಥಾಪಿಸಬೇಕೆಂಬ ಈ ಆಕಾಂಕ್ಷೆಗೆ ಮರುಳಾಗದ ಧರ್ಮಾಂಧ ಮುಸಲ್ಮಾನನಾದರೂ ಯಾರು? ಅಂತೆಯೇ ಖಾಕ್ಸಾರ ಚಳವಳಿವು ಒಂದೆರಡು ವರ್ಷಗಳಲ್ಲಿ ಉತ್ತರ ಹಿಂದುಸ್ಥಾನದಲ್ಲೇ ಪ್ರಬಲವಾಗಿ ಬೆಳೆಯಿತು. ಹೈದರಾಬಾದಿನ ನೈಜಾಮರೇ ಮೊದಲಾದ ಮುಸಲ್ಮಾನ ಸಂಸ್ಥಾನಾಧಿಪತಿಗಳು ಅದಕ್ಕೆ ಉದಾರ ಆಶ್ರಯವಿತ್ತು ಪ್ರೋತ್ಸಾಹಿಸಿದರು. ಮುಸ್ಲಿಮ್ ಲೀಗಿನ ಮುಖಂಡರೂ ಅದಕ್ಕೆ ಬೇಕಷ್ಟು ಪ್ರೋತ್ಸಾಹವಿತ್ತರು. ಮೊದಲಾಗಿ ಸಂಯುಕ್ತ ಪ್ರಾಂತ್ಯದಲ್ಲಿ ಕಾಂಗ್ರೆಸ್ ಮಂತ್ರಿಮಂಡಲವಿರುವಾಗ ಖಾಕ್ಸಾರರಿಗೂ ಸರಕಾರಕ್ಕೂ ಘರ್ಷಣ ಉಂಟಾಗಿ ಸರಕಾರವು ಕಠಿಣ ಗಬ್ಬಾಳಿಕೆಯನ್ನುಪಯೋಗಿಸಿ ಅವರ ಉಪಟಳವನ್ನಡಗಿಸಬೇಕಾಯಿತು. ಆಗ ಮುಸ್ಲಿಮ್ ಲೀಗಿನವರು ಬಹಳವಾಗಿ ರೇಗಿ ಕಾಂಗ್ರೆಸ್ ಮಂತ್ರಿಮಂಡಲದ ವರ್ತನೆಯನ್ನು ಬಹಳವಾಗಿ ನಿಷೇಧಿಸಿದರು. ಯುರೋಪಿನಲ್ಲಿ ಯುದ್ಧಾರಂಭವಾದೊಡನೆಯೇ 50,000 ಸೇನೆಯನ್ನೊದಗಿಸಿಕೊಡುವೆನೆಂದು ಹೇಳಿ ಖಾಕ್ಸಾರರ ಮುಖಂಡರು ಸರಕಾರಕ್ಕೆ ಮಂಕುಬೂದಿಬಳಿಯಲೆತ್ನಿಸಿದರು. ಸೈನಿಕರಂತೆ ಪೋಷಾಕುಹಾಕಿ ನಡೆದುಹೋಗಬಾರದೆಂಬ ಪಂಜಾಬು ಸರಕಾರದ ಹುಕುಮನ್ನು ಉಲ್ಲಂಘಿಸಹೋಗಿ ಪೋಲೀಸರಿಗೂ ಅವರಿಗೂ ಜಗಳವಾಗಿ ಪೋಲೀಸರು ಅವರ ಕೈಯಿಂದ ಪೆಟ್ಟುತಿಂದು ಗುಂಡುಹಾರಿಸಿದಾಗ ಮುಸಲ್ಮಾನರು ಉದ್ರೇಗಗೊಂಡರು. ಮುಸ್ಲೀಮ್ ಲೀಗಿನವರು ಖಾಕ್ಸಾರರ ಕುರಿತು ತುಂಬಾ ಸಹಾನುಭೂತಿ ತೋರಿಸಿದರು. ಅಂದಿನಿಂದ ಪಂಜಾಬಿನಲ್ಲಿ ಖಾಕ್ಸಾರರಿಗೂ ಪೋಲೀಸರಿಗೂ ತಿಕ್ಕಾಟವು ನಡದೇ ಇದೆ. ಖಾಕ್ಸಾರರು ಮಸೀದಿ ಮತ್ತು ಖಾಸಗಿ ಮನೆಗಳಲ್ಲಿ ಅವಿತುಕೊಂಡು ಸಂಧಿ ಸಾಧಿಸಿ ಪೋಷಾಕು ಹಾಕಿ ನಡೆದುಹೋಗುತ್ತಿದ್ದರು. ಪೋಲೀಸರು ಅವರನ್ನು ತಡೆಗಟ್ಟಲೆತ್ನಿಸುತ್ತಿದ್ದರು. ಕಳೆದ ವಾರ ಪೋಲೀಸರು ಮಸೀದಿಗಳಿಗೂ ಹೊಕ್ಕು 300ಕ್ಕಿಂತ ಮಿಕ್ಕಿದ ಖಾಕ್ಸಾರರನ್ನು ದಸ್ತಗಿರಿಮಾಡಿರುವರು. ಲಾಹೋರು ಪಟ್ಟಣವನ್ನು ಗಲಾಟೆಯ ಸ್ಥಳವಾಗಿ ಪರಿಗಣಿಸಲಾಗಿದೆ. ಹೆಚ್ಚಿನ ಪೋಲೀಸರನ್ನು ಹೊರಗಿಂದ ತರಿಸಿ ಬಂದೋಬಸ್ತಿಗಾಗಿ ನೇಮಿಸಲಾಗಿದೆ. ಇವರ ವೆಚ್ಚವು ಲಾಹೋರಿನ ಮುಸಲ್ಮಾನರ ಮೇಲೆ ಹಾಕಲ್ಪಟ್ಟಿದೆ. ಈಗ ಮುಸ್ಲೀಮ್ ಲೀಗಿನವರೇನು ಮಾಡುವರೋ ನೋಡಬೇಕಾಗಿದೆ.

ಸ್ವೀಕಾರ–ವಿಮರ್ಶೆ

ಹರಿಭಕ್ತಿಸಾರ, ದಶಾವತಾರ-ಸ್ತುತಿ, ಶ್ರೀಕೃಷ್ಣಾಷ್ಟೋತ್ತರ ಶತನಾಮಸ್ತೋತ್ರ—ಎಂಬ ಮೂರು ಪುಸ್ತಕಗಳು ಶ್ರೀ. ಪಿ. ಶ್ರೀನಿವಾಸ ತಂತ್ರಿಗಳಿಂದ ಪರಿಶೋಧಿಸಲ್ಪಟ್ಟು ಬೆಂಗಳೂರಿನ ಶ್ರೀ. ಪಿ. ಎ. ಉಪಾಧ್ಯಾಯರಿಂದ ಪ್ರಕಟಿಸಲ್ಪಟ್ಟು ವಿಮರ್ಶೆಗಾಗಿ ನಮ್ಮೆಡೆಗೆ ಬಂದಿವೆ. ಮೂರೂ ದಿನಚರಿಯ ಪ್ರಾರ್ಥನೆಗೆ ಅತ್ಯುಪಯುಕ್ತವಾದ ಪುಸ್ತಕಗಳು. ಬೆಲೆ ಮೊದಲಿನೆರಡಕ್ಕೆ ೦-೨-೬ ಯಂತೆ; ಕಡೆಯದ್ದಕ್ಕೆ ೦-೧-೦.

ಹಿಂದುಗಳು ಹತವೀರ್ಯರೇ?—'ಉದಯ ಭಾರತ' ಗ್ರಂಥಮಾಲೆಯ ಪ್ರಥಮ ಪುಷ್ಪ. ಲೇಖಕರು—ಶ್ರೀ. ಕೆ. ಕೇಶವ ಕುಡುವರು, ಪ್ರಕಾಶಕರು—ಶ್ರೀ. ಅಪ್ಪಾಜು ಶೀನಪ್ಪಯ್ಯನವರು, ಬೆಲೆ: ೦-೧-೦. ಈ ಚಿಕ್ಕ ಲೇಖನದಲ್ಲಿ ಭಾರತೀಯರಲ್ಲಿ ರಾಷ್ಟ್ರೀಯತ್ವದ ಅರಿವುಂಟಾಗಿ ಅದು ವಿಕಾಸಗೊಂಡ ವಿಚಾರವನ್ನು ಸಂಕ್ಷೇಪವಾಗಿ ವಿವರಿಸಲಾಗಿದೆ. ಇಂತಹ ಪ್ರಕಟಣೆಗಳಿಂದ ಹಿಂದೂ ಸಂಘಟನೆಗೆ ಸಹಾಯವಾಗಬಹುದೆಂದು ನಿರೀಕ್ಷಿಸಬಹುದಾಗಿದೆ.

ಗೋಶಾಲಭೇಷಜಾಶ್ರಮ ಮಂಗಳೂರು—1939 ದಶಂಬರ 31ಕ್ಕೆ ಅಂತ್ಯವಾಗುವ ಇದರ 29ನೇ ವಾರ್ಷಿಕ ವರದಿಯು ನಮ್ಮ ಹಸ್ತಗತವಾಗಿದೆ. ಕರ್ನಾಟಕದಲ್ಲೆಲ್ಲಾ ಪ್ರಖ್ಯಾತರಾದ ಆಯುರ್ವೇದಭೂಷಣ ಶ್ರೀ. ಎಂ. ವಿ. ಶಾಸ್ತ್ರಿಗಳೇ ಈ ಆಶ್ರಮ ಸ್ಥಾಪಿಸಿದವರು ಮತ್ತು ಈವರೆಗೂ ನಡೆಸಿಕೊಂಡು ಬರುತ್ತಿರುವವರು. ಇದೀ ವರ್ಷದಲ್ಲಿ 19,932 ರೋಗಿಗಳು ಚಿಕಿತ್ಸೆಯೆಂದಿದ್ದಾರೆಂದೂ ತಿಂಗಳಿನ ಸರಾಸರಿ ಸಂಖ್ಯೆ 1,661, ದಿವಸಕ್ಕೆ 55·3 ಎಂದೂ ತಿಳಿಯಬರುತ್ತದೆ. ಇದರಿಂದಲೇ ಆಶ್ರಮವು ಎಷ್ಟು ಜನಪ್ರಿಯವಾಗಿದೆ ಎಂದು ತಿಳಿಯಬಹುದು. ಅದಷ್ಟು ಕಡಿಮೆ ಕ್ರಯದಲ್ಲಿ ಬಡರೋಗಿಗಳಿಗೆ ಅರ್ಧದರದಲ್ಲಿ ಮತ್ತು ಧರ್ಮಾರ್ಥವಾಗಿ ಕೂಡ ಔಷಧಗಳು ಕೊಡಲ್ಪಟ್ಟಿರುವವು. ಶ್ರೀ. ಶಾಸ್ತ್ರಿಗಳ ಪರೋಪಕಾರ ಬುದ್ಧಿಯನ್ನು ವ್ಯಕ್ತಪಡಿಸುತ್ತದೆ. ಬಡವರಬಂಧುವಾದ ಈ ಆಶ್ರಮಕ್ಕೆ ಸಕಲರೂ ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನೀಯುವರೆಂದು ನಂಬುತ್ತೇವೆ.

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಯಿ—ಇದರ 1939 ದಶಂಬರ 31ಕ್ಕೆ ಅಂತ್ಯವಾಗುವ 37ನೇ ವಾರ್ಷಿಕ ವರದಿಯು ನಮ್ಮ ಕೈ ಸೇರಿದೆ. ಮುಂಬಯಿ ಕನ್ನಡಿಗರ ಸಂಘಗಳಲ್ಲಿ ಮೊಗವೀರ ವ್ಯವಸ್ಥಾಪಕ ಮಂಡಳಿಯು ಅತ್ಯಂತ ಸುಸಂಘಟಿತವಾದುದು. ಮತ್ತು ಸತ್ಕಾರ್ಯತತ್ಪರವಾದುದು. ಸಮಾಜದ ಸುವ್ಯವಸ್ಥೆಗಾಗಿಯೂ, ವಿದ್ಯಾಭಿವೃದ್ಧಿಗಾಗಿಯೂ ಐಕ್ಯತೆ ಮತ್ತು ಸಂಘಶಕ್ತಿಯ ಅಭಿವೃದ್ಧಿಗಾಗಿಯೂ ಅವಿಶ್ರಾಂತವಾಗಿ ಕೆಲಸಮಾಡುತ್ತಿರುವ ಹಿರಿಯ ಸಂಸ್ಥೆಯಿದು. ಈ ಸಂಘವು 'ಮೊಗವೀರ ಫ್ರೀ ನೈಟ್ ಹೈಸ್ಕೂಲ್', ರೀಡಿಂಗ್ ರೂಮ್ ಎಂಡ್ ಲೈಬ್ರೆರಿ 'ಮೊಗವೀರ' ತ್ರೈಮಾಸಿಕ ಪತ್ರಿಕೆ ಮೊದಲಾದುವನ್ನು ನಡೆಸಿಕೊಂಡು ಮೊಗವೀರ ಬಂಧುಗಳಲ್ಲಿ ವಿದ್ಯಾಬುದ್ಧಿ, ವಿಚಾರ ವಿವೇಕಾದಿಗಳನ್ನುಂಟುಮಾಡುತ್ತಿರುವುದು ಪ್ರಶಂಸನೀಯವಾಗಿದೆ. ಸಂಘವನ್ನು ಪ್ರಗತಿಪಥದಲ್ಲಿ ನಡೆಸಿಕೊಂಡು ಹೋಗುತ್ತಿರುವ ಕಾರ್ಯಕಾರಿ ಮಂಡಳಿಯ ಕಾರ್ಯಚತುರತೆಯು ಅಭಿನಂದನೀಯವಿದೆ.

ಬಾರ್ಕೂರು ಬಿಲ್ಲವ ಚೆರಿಟಿ ಸಂಸ್ಥೆ, ಬೊಂಬಾಯಿ—ಎಪ್ರಿಲ್ ತಾ 30ಕ್ಕೆ ಅಂತ್ಯವಾಗುವ 23ನೇ ವರ್ಷದ ವರದಿಯನ್ನು ಆತ್ಮಾದರದಿಂದ ಸ್ವೀಕರಿಸಿದ್ದೇವೆ. ಇದು 1917ರಲ್ಲಿ ಸ್ಥಾಪಿತವಾಗಿ 1935ರಲ್ಲಿ ರಿಜಿಸ್ಟರಾಗಲ್ಪಟ್ಟು ಸಮಾಜದ ಉನ್ನತಿಗಾಗಿ ಹೋರಾಡುತ್ತಿದೆ. ಪರಸ್ಪರ ಸಹಾಯಕ ಫಂಡು, 'ಬಿಲ್ಲವ ಪುಸ್ತಕ'ಗಳನ್ನು ನಡೆಸಿಕೊಂಡು ಬರುತ್ತಿದೆ 'ವಿದ್ಯಾದಿವೇತನ'ವನ್ನು ಕೊಟ್ಟು ಬಡವಿದ್ಯಾರ್ಥಿಗಳಿಗೆ ಸಹಾಯಮಾಡುತ್ತಿದೆ. ಸಮಾಜದ ಸರ್ವಾಭಿವೃದ್ಧಿಯ ಪವಿತ್ರ ಧ್ಯೇಯದಿಂದ ಸ್ಥಾಪನೆಗೊಂಡ ಈ ಸಂಘಕ್ಕೆ ಸಕಲರೂ ಮುಂಬಯಿಗರು ಇದನ್ನು ಇನ್ನಷ್ಟು ಬಲಪಡಿಸಿ, ಇದರ ಮೂಲಕ ಹೆಚ್ಚಿನ ಸಮಾಜಸೇವೆಯನ್ನು ಮಾಡಿಕೊಳ್ಳುವಂತಾಗಲೆಂದು ಹಾರೈಸುವೆವು.

ಓರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲ್ಯಾಫ್

ಸ್ಥಾಪನೆ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನ ಕಾರ್ಯಾಲಯ— ಮುಂಬಯಿ

ನಿಮ್ಮನ್ನು ಆಶ್ರಯಿಸಿಕೊಂಡಿರುವವರಿಗೆ, ಮುಪ್ಪಿನಲ್ಲಿ ನಿಮಗೆ ಮತ್ತು ನಿಮ್ಮನ್ನು ಹೊಂದಿಕೊಂಡಿರುವವರಿಗೆ ದುಡ್ಡಿಗಾಗಿ ಪರಾವಲಂಬಿಗಳಾಗದೆ ತಕ್ಕಷ್ಟು ಆರ್ಥಿಕ ಸ್ವಾತಂತ್ರ್ಯವು ನಿಸ್ಸಂದೇಹವಾಗಿ ದೊರಕುವಂತಹ ನಿಧಿಯು ಕ್ಲಪ್ತ ಅವಧಿಗಳ ಚಿಕ್ಕಪಾವತಿಗಳಿಂದ ನಿಶ್ಚಯವಾಗಿ ಬೆಳೆದು ಬರುವಂತೆ ಮಾಡುವ ಏಕಮಾತ್ರ ಸಾಧನವೆಂದರೆ **ಜೀವವಿಮೆ ಮಾಡುವುದೇ.**

ಯೋಗ್ಯಾಯೋಗ್ಯತೆಯನ್ನು ಪರಿಶೀಲಿಸಬಲ್ಲ ಸಾವಿರಾರುಮಂದಿ ಪ್ರತಿ ವರ್ಷವೂ "ಓರಿಯಂಟಲ್"ನಲ್ಲೇ ತಮ್ಮ ಜೀವವಿಮೆಮಾಡಿ ತಮ್ಮನ್ನು ಅವಲಂಬಿಸಿಕೊಂಡಿರುವವರಿಗೂ ವೃದ್ಧಾಪ್ಯದಲ್ಲಿ ತಮಗೂ ತಮ್ಮ ಆಶ್ರಿತರಿಗೂ **ಆರ್ಥಿಕ ಸ್ವಾತಂತ್ರ್ಯದ** ತಳಹದಿ ಹಾಕುತಿದ್ದಾರೆ.

ನೀವೇಕೆ ಕಾಲಹರಣ ಮಾಡುವಿರಿ?

ಇಂದೇ ಓರಿಯಂಟಲಿನ ಒಂದು ವಿಮಾಪತ್ರ ಹೊಂದಿರಿ!

ವಿಷಯ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ದಿ ಇನ್ಸ್‌ಪೆಕ್ಟರ್,	ಅ	ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲ್ಯಾಫ್ ಆಫೀಸು,	ಥ	ಓರಿಯಂಟಲ್ ಲ್ಯಾಫ್ ಆಫೀಸು,
ಮೈನ್‌ರೋಡ್, ಮಡಿಕೇರಿ, (ಕೊಡಗು)	ವಾ	ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

—ORIENTAL—

GOVERNMENT SECURITY LIFE ASSURANCE CO., LTD.

ಮಾನವ ಧರ್ಮ

ನಾವು ಧರ್ಮದಲ್ಲಿ ಹಿಂದುಗಳಲ್ಲ, ಮುಸಲ್ಮಾನರಲ್ಲ, ಮೊಟ್ಟ ಮೊದಲು ನಾವು ಮನುಷ್ಯರು.

ಶ್ರೇಷ್ಠ ಮನುಷ್ಯತ್ವವೇ ನಮ್ಮ ಏಕಮಾತ್ರ ಧರ್ಮ.

ಈ ಭೂಮಿಯ ಮೇಲೆ ಕೋಟ್ಯಂತರ ಜನರು ಬೇರೆಬೇರೆ ದೇಶಗಳಲ್ಲಿ ವಾಸಿಸುವರು. ಇವರಲ್ಲಿ ಯಾರನ್ನಾದರೂ ಇಬ್ಬರನ್ನೊ ಒಂದು ಕಡೆ ನಿಲ್ಲಿಸಿದರೆ ನಾವು ನೋಡುವುದೇನು? ನಾನಾವಿಧದ ಭಿನ್ನತೆಗಳ ನಡುವೆ ನಾವು ಮನುಷ್ಯರಲ್ಲಿ ಒಂದೇ ರೀತಿಯಾದ ಜೀವನದಲ್ಲಿ ಆಸಕ್ತಿ, ಸುಖದುಃಖಗಳ ಒಂದೇ ಒಂದು ಅನುಭವ, ಕಲ್ಯಾಣದಲ್ಲಿ ಅನುರಾಗ, ಅಕಲ್ಯಾಣದಲ್ಲಿ ವಿರಾಗ, ಮಹತ್ವದ ಬಗ್ಗೆ ಒಂದೇರೀತಿಯ ಶ್ರದ್ಧೆಗಳು ಇವುಗಳನ್ನೇ ನಾವು ಕಾಣುವುದು. ಆದರೆ ಇತಿಹಾಸದ ಕಡೆಗೆ ದೃಷ್ಟಿಯನ್ನು ತಿರುಗಿಸಿ ನಾವು ನೋಡಿದ್ದೇನು? ಪ್ರತಿಯೊಂದು ಯುಗದಲ್ಲಿಯೂ ಮನುಷ್ಯನು ಮನುಷ್ಯನ ವಿರೋಧವಾಗಿ ಸಂಗ್ರಾಮಕ್ಕೆ ಹೊರಟಿದ್ದಾನೆ. ಮನುಷ್ಯನು ಮನುಷ್ಯನನ್ನು ಚೂರುಚೂರುಮಾಡಲೆತ್ನಿಸಿದ್ದಾನೆ. ತನ್ನ ಸಹೋದರನ ಹೃದಯದ ರಕ್ತದಿಂದ ಇಟ್ಟಿಗೆಗಳನ್ನು ಮಾಡಿ ಗೋಡೆಯನ್ನು ನಿರ್ಮಿಸಿದ್ದಾನೆ. ಘೃಣದ ಕಪ್ಪುಧ್ವಜವನ್ನೂ ನಾಲ್ಕು ಕಡೆಯಲ್ಲಿಯೂ ಎತ್ತಿ ಮನುಷ್ಯನು ತನ್ನ ಶ್ರೇಷ್ಠತೆಯನ್ನು ಪ್ರಕಟಗೊಳಿಸಿದ್ದಾನೆ. ತಮ್ಮ ಜಾತಿಯು ಈಶ್ವರನಿಗೆ ಬಹಳ ಪ್ರಿಯವೆಂದು ಕೆಲವರು ಹೇಳಿದರೆ ಕೆಲವರು ತಮ್ಮ ಧರ್ಮವೇ ಈಶ್ವರ ನಿರ್ದಿಷ್ಟವಾದ ಧರ್ಮವೆನ್ನುವರು. ನಮ್ಮ ಸಮಾಜವೇ ಸನಾತನವೆಂದೂ ಈಶ್ವರನೇ ಅದನ್ನು ನಿರ್ಮಿಸಿದನೆಂದೂ ಕೆಲವರು ಹೇಳುವರು. ಮತ್ತೆ ಕೆಲವರು ತಮ್ಮ ದೇಶವೇ ಈಶ್ವರನ ಲೀಲಾ ಭೂಮಿ ಎಂದೂ, ಅಲ್ಲೇ ಈಶ್ವರನು ಅವತಾರ ಮಾಡುವನೇ ವಿನಹ ಇನ್ನೆಲ್ಲಿಯೂ ಇಲ್ಲವೆಂದೂ ವಾದಿಸುವರು.

ಆದರೆ ಇದುವರೆಗೆ ಮನುಷ್ಯರೆಲ್ಲರೂ ಸೇರಿ ಏಕ ಸ್ವರದಿಂದ ನಾವೆಲ್ಲರೂ ದೇವರಿಗೆ ಪ್ರಿಯರೆಂದೂ, ನಮ್ಮೆಲ್ಲರ ಧರ್ಮವು ಭಾಗವತ ಧರ್ಮವೆಂದೂ, ನಮ್ಮ ಸಮಾಜವು ಒಂದು ಅವಿಚ್ಛಿನ್ನವಾದ ಮಾನವ ಸಮಾಜವೆಂದೂ ಎಂದಿಗೂ ಹೇಳಿರುವುದಿಲ್ಲ. ನಮ್ಮ ಏಕಮಾತ್ರ ಸ್ವದೇಶವು ಈ ವಿಶಾಲವಾದ ವಿಶ್ವವೇ ಆಗಿದೆ. ಮನುಷ್ಯ ಜಾತಿಯು ಸಾವಿರಾರು ಸಂಗಡಗಳಾಗಿ ಒಡೆದು ಹೋಗಿ, ಮಮಕಾರದ ಕಾರಣದಿಂದ ಸ್ವತಂತ್ರ ಯುದ್ಧದಲ್ಲಿ ತೊಡಗಿದೆ. ಮನುಷ್ಯತ್ವದ ಅಭಿಮಾನವು ಅಸಂಖ್ಯಾತ ಮನುಷ್ಯರ ಹೃದಯದಲ್ಲಿರುವ ಧರ್ಮವನ್ನು ತುಳಿದುಬಿಟ್ಟಿದೆ. ಮನುಷ್ಯನ ಹೃದಯದಲ್ಲಿದ್ದ ಪರಮ ಪವಿತ್ರವಾದ ಭ್ರಾತೃಭಾವವು ಅಹಂಕಾರದಿಂದ ದಾನವ ರೂಪವನ್ನು ಧರಿಸಿ, ಸಹೋದರರನ್ನು ಬೀಸಿ ಹಾಳುಮಾಡುತ್ತಿದೆ.

ಸತ್ಯದ್ರಷ್ಟ ಋಷಿಯು ವಿಶ್ವವಾಸಿಗಳೆಂದ ಎಲ್ಲ ಮನುಷ್ಯರನ್ನೂ 'ಅಮೃತಸ್ಯ ಪುತ್ರಾಃ' ಎಂದು ಕರೆದಿರುವರು. ನಾವು ಆ ಋಷಿಯ ಹಣೆಯ ಮೇಲೆ 'ಹಿಂದೂ' 'ಆರ್ಯ' ಎಂಬ ಹೆಸರನ್ನು ಬರೆದು ಇವರು ಹಿಂದುಗಳ ಋಷಿಗಳು ಎಂದೆವು. ಶ್ರೀಕೃಷ್ಣ ಭಗವಾನನು "ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ" ಎಂದು ಹೇಳಿರುವನು. ಸರಿ ಹಿಂದುಗಳು ಕೃಷ್ಣನ ಹಣೆಯ ಮೇಲೆ ತಿಲಕ ಹಚ್ಚಿ, ಮುಂದಿಂದಲ್ಲಿ ಕೂಡಿ ಈ ಚಾತುರ್ವರ್ಣ್ಯವು ಕೇವಲ ಹಿಂದುಗಳಿಗಾಗಿಯೇ ಎಂದೂ, ಈ ಈಶ್ವರೀಯ ವರ್ಣವ್ಯವಸ್ಥೆಯಲ್ಲಿ ಉಳಿದ ಯಾರಿಗೂ ಸ್ಥಾನವಿಲ್ಲವೆಂದೂ ಹೇಳಿಬಿಟ್ಟರು. ಇನ್ನೂ ಈ ಚಾತುರ್ವರ್ಣದ ರಕ್ಷಣೆಯ ಉತ್ತರವಾದಿಯಾಗಿ, ಕ್ಷುದ್ರ ಹಿಂದೂ ಸಮಾಜವು ದಿನದಿನವೂ ಸಂಕುಚಿತವಾಗುತ್ತ ಬಂದಿದೆ. ಇದೇ ರೀತಿ ಕೃಷ್ಣನನ್ನು ಹಿಂದುವನ್ನಾಗಿಯೂ, ಬುದ್ಧನನ್ನು ಬೌದ್ಧನನ್ನಾಗಿ ಮಾಡಿ ಮನುಷ್ಯನು ಮಹಾ ಮಾನವತೆಯನ್ನೇ ವ್ಯರ್ಥಮಾಡಿಬಿಟ್ಟಿರುವನು. ಲೋಕದಲ್ಲಿ ಶಾಂತಿ ಮತ್ತು ಆನಂದವನ್ನುಂಟುಮಾಡುವ ದೇವವಾಣಿಯನ್ನು ಮನುಷ್ಯನು ತನ್ನ ಅಹಂಕಾರ ಮತ್ತು ಡಂಭಗಳಿಂದ ವಿಧ್ವಂಸಮಾಡಿ ಪದದಲಿತ ಮಾಡಲು ಪ್ರಯಾಸಪಡುತ್ತಿದ್ದಾನೆ. ಭಗವಾನನ ಕಲ್ಯಾಣಮಯಿಯಾದ ಪ್ರತಿಯೊಬ್ಬರ ಹೃದಯದಲ್ಲಿಯೂ ಪ್ರಕಾಶವನ್ನುಂಟುಮಾಡುವ ವಾಣಿಯನ್ನು ಮನುಷ್ಯನು ಸ್ವೀಕರಿಸದೆ, ಅದನ್ನು ಅಪಮಾನಗೊಳಿಸಿ ಹಿಂಡಕ್ಕೆ ಕಳಿಸಿದನು. ಈಶ್ವರನ ವಾಣಿಯು ಹಿಂದುಗಳೆಂದು ಕೆಲವರು ಹೆಮ್ಮೆಪಟ್ಟರು. ಅದು ಮುಸಲ್ಮಾನರದೆಂದು ಕೆಲವರು ಹೇಳಿ ಬಲಾತ್ಕಾರದಿಂದ ಇತರರನ್ನೂ ಅದರ ದಾರಿಯಲ್ಲಿ ತಲೆಬಗ್ಗಿಸುವಂತೆ ಮಾಡಿದರು. ಭಗವಂತನ ವಾಣಿ ಗಾನ ಇದುವರೆಗೆ ಎಷ್ಟು ತರ್ಕವಿತರ್ಕಗಳಾದುವು! ಕೊಲೆಗಳಾದುವು! ಅತ್ಯಾಚಾರ ಅವಿಚಾರಗಳು ನಡೆದುವು! ಈಶ್ವರ ವಾಣಿಯು ಆದಿ ವಿಶ್ವ ಮಾನವನ ವೇದನೆಯ ಅಂಧಕಾರದಲ್ಲಿ ಕಣ್ಣೀರನ್ನು ಸುರಿಸುತ್ತ ಹೊರಟುಹೋಯಿತು. ಇದುವರೆಗೆ ಅದನ್ನು ಪುನಃ ಕರೆಯುವ ಸಮಯ ಬರಲಿಲ್ಲವೇ? ಇಂದು ಯಾರಾದರೂ ವಿಶ್ವ ಭ್ರಾತೃತ್ವದ ಮಹಾ ತತ್ವಗಳನ್ನು ಬೋಧಿಸಲು ಯಾರಾದರೂ ಒಂದು ವೇಳೆ ಬಂದರೂ, ನಾವು ಅವರನ್ನು ಸ್ವಾಗತಿಸುವುದೇ ಇಲ್ಲ

ನಾವು ಧರ್ಮದಲ್ಲಿ ಹಿಂದುಗಳಲ್ಲ, ಮುಸಲ್ಮಾನರಲ್ಲ. ಮೊಟ್ಟಮೊದಲು ನಾವು ಮನುಷ್ಯರು, ಶ್ರೇಷ್ಠ ಮನುಷ್ಯತ್ವವೇ ನಮ್ಮ ಏಕಮಾತ್ರ ಧರ್ಮವಾಗಿದೆ. ದೇಶಪ್ರೇಮವೇ ನಮ್ಮ ಅಂತಿಮ ಲಕ್ಷ್ಯವಲ್ಲ. ನಮ್ಮ ಗುರಿ ಇರುವುದು ವಿಶ್ವ ಪ್ರೇಮದಲ್ಲಿ. ದೇಶ ಪ್ರೇಮವು ವಿಶ್ವ ಪ್ರೇಮವನ್ನು ಅವಮಾನಗೊಳಿಸಿದರೆ, ಅದು ನಿಜವಾದ ದೇಶಪ್ರೇಮವಾಗಲಾರದು. ಎಲ್ಲ ಮನುಷ್ಯರೂ ಸೇರಿಯೇ ಸಮಾಜವಾಗುವುದೆಂದು ನಾವು ಮುಕ್ತಕಂಠರಾಗಿ ಹೇಳಬೇಕಾಗಿದೆ.

ನಾವು ಇಂದು ಅಹಂಕಾರವನ್ನು ದೂರಮಾಡಿ ವ್ಯಕ್ತಿತ್ವವನ್ನು ಸ್ವೀಕರಿಸಬೇಕು. ಮನುಷ್ಯತ್ವದ, ವಿಶ್ವಮಾನವತೆಯ ಯಾವ ಅನಂತವಾದ ವಿಚಿತ್ರವಾದ ಪ್ರಕಾಶವು ಅನೇಕ ವ್ಯಕ್ತಿಗಳಲ್ಲಿ ತೋರುತ್ತ ಬಂದಿದೆಯೋ ಅದನ್ನೇ ನಾವು ಸುಳ್ಳೆಂದು ಹೇಳಿದರೆ, ವಿಶ್ವಮಾನವತೆಯನ್ನೇ ದೂರ ಮಾಡಬೇಕಾಗುವುದು. ವಿಶ್ವಮಾನವತೆಯು ಯಾವುದೇ ಒಂದು ವರ್ಣಹೀನವಾದ ವೈಚಿತ್ರ್ಯಹೀನವಾದ ಅಸ್ಪಷ್ಟ ಬ್ರಹ್ಮದಂತಹ ವಸ್ತುವಲ್ಲ, ಅದು ಒಂದು ಅನಂತ ವೈಚಿತ್ರ್ಯಶಾಲೀ ಸತ್ಯವಾಗಿದೆ.

ಆದುದರಿಂದ ಯಾರಾದರೂ ತನ್ನ ವಿಕಾಸವೇ ಮಾನವತೆಯ ವಿಕಾಸವೆಂದು ತಿಳಿದರೆ, ಆಗ ಅವನ ವ್ಯಕ್ತಿತ್ವವು ಮಿಥ್ಯವಾದ ಅಹಂಕಾರವೆಂಬ ಹೆಸರಿನ ನಾಮಾಂತರ ಮಾಡಲಾಗುವುದು. ಪ್ರತ್ಯೇಕ ಮನುಷ್ಯನ, ದೇಶದ, ಸಮಾಜದ, ಧರ್ಮದ ವಿಶೇಷತೆಗಳು ಹೇಯವಲ್ಲ ಪರಮ ಗೌರವದ ವಸ್ತುವದು. ಇದನ್ನರಿತು ಮನುಷ್ಯನು ಮನುಷ್ಯನನ್ನು ಆದರಿಸಿದ್ದಾನೆ. ಒಂದು ದೇಶವು ಮತ್ತೊಂದನ್ನು ಗೌರವಿಸದೆ, ಅದರ ಅಸ್ತಿತ್ವವನ್ನೇ ನಾಶಮಾಡಲು ಮದ್ದುಗುಂಡನ್ನು ತಯಾರಿಸಿದರೆ, ತನ್ನ ಅಸ್ತಿತ್ವವೇ ಇದರಿಂದ ನಾಶವಾಗುವುದು. ಇದನ್ನು ತಿಳಿಯುವ ಕಾಲವಿನ್ನೂ ಬಂದಿಲ್ಲವೇ? ಇತರರ ಶ್ರೇಷ್ಠತೆಯ ಪೂಜೆಮಾಡಿಯೇ ತನ್ನ ಶ್ರೇಷ್ಠತೆಯನ್ನು ಸಾರ್ಥಕಪಡಿಸಿಕೊಳ್ಳಬೇಕು ಮೋಹಮುಕ್ತರಾಗಬೇಕು.

ಇಂತಹ ಸತ್ಯವು ಮಾನವನ ಚಿತ್ತದಲ್ಲಿ ಶರತ್ ಸೂರ್ಯನಂತೆ ಎಂದಿಗೆ ಉಜ್ವಲವಾಗುವುದೋ?

S. L. S.

ಶ್ರೀ. ಮಹೇಂದ್ರಚಂದ್ರ ರಾಯ್, ಬಿ. ಎ. ಎಲ್‌ಟಿ. ಯವರ ಲೇಖಾನುವಾದ.

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಕ್ರಮವಾದ ಜಮಾ ಖರ್ಚಿನ ಲೆಖ್ಖವಿದ್ದರೂ ಸಾಲದು. ಅದರಿಂದ ತಯಾರಿಸಿದ ಸಾರಾಂಶದ ನಿಜತ್ವವು ಮೇಲವೇ ನಿಯಮಗಳಲ್ಲಿ ತಕ್ಕಿಯ ಆಫೀಸರರಿಗೆ ಒಪ್ಪಿಗೆಯಾಗಬೇಕು. ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗುವುದು ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನ್" ಕಳ್ಸಿಯಾಗಿ ಹೋಗಿದ್ದರೂ ತಡವಾಗಲಿಲ್ಲ ಲೆಖ್ಖ ಹಾಜರು ಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸಕಾಣಿಸಿದವರೊಡನೆ ಪತ್ರ ವ್ಯವಹಾರ ನಡಿಸಿರಿ,

ಎಸ್. ಎಸ್. ಪುರಾಣಿಕ,
ಇನ್ಕಮ್ ಟೇಕ್ಸ್ ಪ್ರಾಕ್ಟೀಶನರ್,
ಕೃಷ್ಣಾ ರೆಸ್ಟೋರೆಂಟ್ ಬಿಲ್ಡಿಂಗ್,
ಹಂಪನಕಟ್ಟೆ, ಮಂಗಳೂರು.

ಬಾಲಸಾಹಿತ್ಯಮಂಡಲ ಲಿಮಿಟೆಡ್

ನಮ್ಮ ಹೊಸ ಪ್ರಕಟಣೆಗಳು

ಈ ಕೆಳಗಿನ ನಮ್ಮ ಹೊಸ ಪ್ರಕಟಣೆಗಳು

ಕ್ಲಾಸು ಉಪಯೋಗಕ್ಕೆ

ಮದ್ರಾಸ್ ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಮಂಜೂರಾತಿ ಪಡೆದಿದೆ.

Vide consocidated list of approved books Fort. St. Georg. Gazate Nos. 17A & 17B d/30-4-40 pages. 59, 60, 62, 68, 70, 71, 86, 87, 88, 92 & 155.

1. **ಹೊಸ ಕನ್ನಡ ಪಾಠಮಾಲೆ** 1, 2, 3, 4 ಮತ್ತು 5ನೇ ದರ್ಜೆಗಳಿಗೆ,
2. **ನೂತನ ಬಾಲಗಣಿತ** 3, 4, 5ನೇ ದರ್ಜೆಗಳಿಗೆ ಮತ್ತು VI VII ಮತ್ತು VIII ದರ್ಜೆಗಳಿಗೆ ಅಥವಾ I, II & III ಫಾರ್ಮುಗಳಿಗೆ
3. **ನೂತನ ಸಾಮಾನ್ಯ ಗಣಿತ** IV ಫಾರ್ಮಿಗೆ
4. **ಭಾರತದ ಇತಿಹಾಸ** I, II, III, IV ಮತ್ತು V ಫಾರ್ಮುಗಳಿಗೆ,
5. „ VI, VII ಮತ್ತು VIIIನೇ ದರ್ಜೆಗಳಿಗೆ.

ಶಾಲಾ ಸೌಕರ್ಯಗೋಸ್ಕರವಾಗಿ ಇದೇ ಜೂನ್ 1ರಿಂದ ನಮ್ಮ ಒಂದು ಶಾಖೆಯನ್ನು ಉಡುಪಿಯ ರಥಬೀದಿಯಲ್ಲಿ ತೆರೆದಿರುತ್ತೇವೆ.

ಹೆಚ್ಚಿನ ಮಾಹಿತಿಗೆ ಈ ಕೆಳಗಿನವರಿಗೆ ಬರೆಯಿರಿಕೊಳ್ಳಿರಿ:-

Madiman Padmanabhaya,

Agent: **Balashathya Mandal Ltd.**

Udipi Branch

Degrees: Books. Medicines.

Free H. L. M. S., H. M. B. H. M. D. etc Free Homeo-Ayur-Unani-Nature degrees. by post also—Practioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10 Enclose 2 annas stamp:—

Principal, Indian Homeopathic Institute and Society (Govt Regd)
P. O. MAHUVA, (Kathiawar Dt, India.

Sidh-Kalpa Kavach (Regd)

No. 3 Rs 2, No. 2 Rs. 5, No. 1 Rs 7 Special Rs. 10, Extra Special Rs. 17, for love, marriage, health, wealth. Ask any six questions with M. O. Re. 1/4 and get, correct answers by return post Life reading Rs. 2 No. V. P.P. Send M. O. Free pamphlets, **Prof. Dr B. M. Chhatbar,**
P. O. Mahuva. (Kathiawar. India)

ಈ ವಾರದ ಭವಿಷ್ಯ

ತಾರೀಖು 20-6-1940ರಿಂದ 27-6-1940ರ ವರೆಗೆ

ಮೇಷ—ಕಲಿಕಾಲದಲ್ಲಿ ಅಧರ್ಮವು ಪ್ರಬಲವಾಗಿದ್ದರೂ ಸತ್ಯ, ಧರ್ಮ, ನ್ಯಾಯ ಇತ್ಯಾದಿ ಧರ್ಮಕರ್ಮಗಳಿಗೆ ಯೋಗ್ಯವಾದ ಫಲವು ದೊರೆಯದೇ ಇರುವುದು. ಧರ್ಮಾಚಾರಗಳಲ್ಲಿ ಆಸಕ್ತರಾದ ನಿಮಗೆ ಕುಟುಂಬಿಕರ ಸಹಾಯವೂ ದೈವಾನುಗ್ರಹವೂ ದೊರೆಯಲಿದೆ. ವಿಪಕ್ಷೀಯರು ಸ್ವಕಾರ್ಯದಲ್ಲಿ ಕೃತಕೃತ್ಯರಾಗದೆ ಹಿಂದಿರುಗುವರು. ಆರ್ಥಿಕ ಭಾಗದಲ್ಲಿ ಸುಧಾರಣೆಹೊಂದಿರತಕ್ಕ ನಿಮಗೆ ದಿನಗಳು ಸುಖಾಂತಗಳಾಗಿ ಪರಿಣಮಿಸಲಿವೆ. ಹೊಟ್ಟೆನೋವು ಜ್ವರ ಮಸ್ತಿರೆಗಳಿಂದ ಆರೋಗ್ಯವು ಕೆಡಲಿದೆ. ಗುಪ್ತ ಶತ್ರುಗಳ ಕುತಂತ್ರಕ್ಕೆ ಬಲಿಬೀಳಲಿರುವಿರಿ. ತಾ 20, 21, 27 ಈ ಮೂರು ದಿನಗಳಲ್ಲಿ ದೇಹಾಲಸ್ಯ ವ್ಯರ್ಥ ಧನ ವ್ಯಯಾದಿಗಳು ಪ್ರಾಪ್ತವಾಗಬಹುದು.

ವೃಷಭ—ಇಷ್ಟಸಿದ್ಧಿಗಿಂತಲೂ ಅನಿಷ್ಟಾಗಮನಗಳು ದ್ವಿಗುಣಗಳಾಗಿರುವವಾದರೂ ಕಳೆದ ದಿನಗಳಿಗಿಂತ ಈ ವಾರವು ನಿಮಗೆ ಎಷ್ಟೋ ಲೇಸೆನ್ನಿಸುವದು. ಅನಿಷ್ಟ ಕಠಗಳು ಸಮುದ್ರವೀಚಿಗಳಂತೆ ನಿರಂತರವಾಗಿ ಮುಂಬರುವವಾದರೂ ಒಮ್ಮೆಗೆ ಎದೆಗೊಟ್ಟು ಇದಿರು ನಿಲ್ಲುವೆನೆಂಬ ಧೈರ್ಯಶಕ್ತಿಯು ನಿಮ್ಮಲ್ಲಿ ದೃಢವಿದೆ. ಹಿರಿಯರನ್ನು ಆದಷ್ಟು ಕದಿವೆಮಾಡಿ ಆದಾಯದ ಮಟ್ಟಕ್ಕೆ ನಿಲ್ಲಿಸುವಿರಿ ಸ್ವಾಮಿ ಸೇವಕರಲ್ಲಿ ಪರಸ್ಪರ ಐಕಮತ್ಯವು ತಲೆದೋರದು. ಮನೆ ಧಾನ್ಯಾದಿ ಗೃಹೋಪಕರಣಗಳಿಗೆ ಕೊರತೆಯಿಲ್ಲದುದರಿಂದ ಸಂಸಾರ ರಥವು ಸುಗಮವಾಗಿ ಸಾಗುವುದು ತಾ 20 ರಿಂದ 23ರ ವರೆಗಿನ ದಿನಗಳಲ್ಲಿ ದೇಹಾಲಸ್ಯ ಪ್ರವಾಸ ರಾಜಭೀತಿ ಮೊದಲಾದುವುಗಳಿಗೆಡೆಯುಂಟು.

ಮಿಥುನ—ಜನ್ಮದಲ್ಲಿನ ರವಿಯೂ ದ್ವಿತೀಯದಲ್ಲಿನ ಕುಜನೂ ನಿಮ್ಮ ದೃಷ್ಟಿಶಕ್ತಿಯನ್ನು ಕೆಡಿಸಲಿರುವರು. ಉಷ್ಣ ಮತ್ತು ಪಿತ್ತ ಪ್ರಕೋಪಗಳಿಂದ ಉಂಟಾಗುವ ಶಿರೋವೇದನೆಗಳು ಬಂದುಬರುವವು. ದೇವತಾರಾಧನೆಯಲ್ಲೂ ಗೌರವ ವ್ಯವಹಾರ ಮೊದಲಾದವುಗಳಿಂದಲೂ ನೀವು ಹೆಚ್ಚಿನ ಧನ ದುಡಿಯುವಿರಾದರೂ ಅವುಗಳಲ್ಲಿ ಹೆಚ್ಚಿನಂಶ ರಾಜ ಬೊಕ್ಕಸವನ್ನು ಸೇರುವುದು. ಲೇಖಕರಿಗೂ ವಿದ್ಯಾರ್ಥಿಗಳಿಗೂ ಪ್ರಗತಿಯ ಕಾಲವಿದು. ಮುಂಗುಸಿಯನ್ನು ಕಂಡ ಸರ್ಪದಂತೆ ಶತ್ರುಗಳು ತಲೆಬಾಗುವರು. ಇಂದ್ರಿಯ ಸುಖಗಳು ತೃಪ್ತಿಕರಗಳಾಗಿ ದೊರೆಯಲಿವೆ. ಕೈಗೊಂಡ ಕಾರ್ಯಗಳು ನಿರ್ವಿಘ್ನದಿಂದ ಅಲ್ಪಾವಕಾಶದಲ್ಲಿ ಕೊನೆಗೊಂಡುವವು ತಾ. 20, 21, 27 ಈ ದಿನಗಳು ಅತ್ಯುತ್ತಮವಿವೆ.

ಕರ್ಕಾಟಕ—ನಿಮ್ಮ ದುರ್ದೈವವು ಬಲವತ್ತರವಾಗಿದೆ. ಆದಕಾರಣ "ನೋಡಿ ನಡೆದವರಿಗೆ ಕೇಡು ಇಲ್ಲವು" ಎಂಬ ಪ್ರಾಚೀನರ ವಚನವನ್ನು ಸಾರವಾಗಿ ನೆನೆಪೃಸ್ಥು ಜಾಗ್ರತೆ ... ಒಳ್ಳೆಯದು. ಪ್ರಯಾಣಾದಿಗಳನ್ನು ಸದ್ಯ ಕೈಬಿಡುವದೊಳ್ಳಿತು ನೌಕರಿ ಭಾಗದಲ್ಲಿ ತೃಪ್ತಿಯಿರದು. ಇಷ್ಟದಂತೆ ಕಾರ್ಯಗಳೊಂದೂ ನೆರವೇರಲಾರವು. ಮಾನಸಿಕ ರೋಗವು ದಿನದಿನಕ್ಕೆ ವೃದ್ಧಿಗೊಳ್ಳುವದು. ಆರ್ಥಿಕ ಬಿಕ್ಕಟ್ಟು ಬಹಳವಾಗಿರುವುದರಿಂದ ನಿಮ್ಮ ಆಸೆ ದಿನದ ಹಿರ್ಜಗೆ ಕೊರತೆಯುಂಟಾಗದು. ಧನಾರ್ಜನೆಯಲ್ಲಿ ಪ್ರವರ್ತ ಸತತ ಮನಸ್ಸನ್ನು ಬಿಗಿ ಹಿಡಿಯಲು ಸಾಧ್ಯವಾಗದ ನಿಮಗೆ ಜನರ ಅಪವಾದವೂ ಕೊಡಬಹುದಿದೆ. ತಾ. 24ರಿಂದ 27ರ ವರೆಗಿನ ದಿನಗಳಲ್ಲಿ ರಾಜಭೀತಿ ಮತ್ತು ಅನಾರೋಗ್ಯದ ಚಿಹ್ನೆಗಳು ಕಾಣಿಸುವವು.

ಸಿಂಹ—ಕಳೆದ ವಾರಕ್ಕಿಂತ ಈ ವಾರವು ಸ್ವಲ್ಪ ಕಷ್ಟವಾಗಿ ಕಾಣಬಹುದು. ಶತ್ರು ಜನರ ಪೀಡೆಯು ಅಧಿಕವಾಗುವುದರಿಂದ ಕೆಲವು ಕಾರ್ಯಗಳನ್ನು ಸದ್ಯ ಮುಂದರಿಸಲಾಗದು. ಆಯವ್ಯಯ ಸಮಾನವಾಗಿರುವುದರಿಂದ ಹಣದ ಅಡಚಣೆಯು ಸಂಭವಿಸುವಂತಿಲ್ಲವು. ರಾಜಕೀಯ ರಂಗದಲ್ಲಿ ಇಷ್ಟಾರ್ಥವು ಸಿದ್ಧಿಸುವಂತಿದೆ. ಪಿತ್ತ ವಿಕಾರದಿಂದ ದುಃಸ್ವಪ್ನಾದಿಗಳು ಹೆಚ್ಚುವವು. ವೃಥಾ ಸ್ತ್ರೀಯರೊಡನೆ ಕಲಹಗೈವ ಪ್ರಸಂಗವೊದಗುವದು. ಸಾಂಸಾರಿಕ ಆಪತ್ತುಗಳಿಂದ ಮುಕ್ತರಿದ್ದರೂ ದೇಹಾಲಸ್ಯದಿಂದ ತ್ರಸ್ತರಾಗವಿರಿ. ತಾ. 22ರಿಂದ 26ರ ವರೆಗಿನ ದಿನಗಳು ಕಷ್ಟಮಟ್ಟಿಗೆ ಯಶಸ್ವಿಗಳಾಗಿರುವುದರಿಂದ ಜನ ಮನ್ನಣೆ ರಸ ನ ಸ ಮಿ ಧನ ಲಾಭಾದಿಗಳುಂಟಾಗುವವು.

ಕನ್ಯಾ—ಅನೇಕ ಸಮಯದಿಂದ ಜೀವನದಲ್ಲಿ ನೀರಸಭಾವವನ್ನು ಕಳೆದ ನಿಮಗೆ ಇದೀಗಲೇ ಶುಭ ಚಿಹ್ನೆಗಳು ಮೇಲಿಂದ ಮೇಲಕ್ಕೆ ಕಾಣಬರುತ್ತಿವೆ. ಮನದಲ್ಲಿ ನೆನೆದ ಕಾರ್ಯಗಳು ನಿಮ್ಮ ಕೌಶಲ ಸಾಹಸಗಳಿಂದ ಕಾರ್ಯರೂಪಕ್ಕೆ ಬರಲಿವೆ. ಗುರ್ವನುಗ್ರಹದಿಂದ ಮುಕ್ತರಾಗಿದ್ದರೂ ಕೂಡ ಧನ ಜನ ಬಲವು ಸಾಕಷ್ಟಿರುವುದರಿಂದ ಕೋರ್ಟು ಕಚೇರಿಗಳ ಕಾರ್ಯಗಳಲ್ಲಿ ನೌಕರಿ ಭಾಗದಲ್ಲೂ ಇಷ್ಟವನ್ನು ಹೊಂದುವಿರಿ. ವರ್ಗ ಜನರಿಗೆ ಸ್ವವೃತ್ತಿಯಲ್ಲಿ ಕಷ್ಟ ನಷ್ಟ ನಿಷ್ಠುರಗಳು ಹೆಚ್ಚಲಿವೆ. ಅನಾರೋಗ್ಯದಿಂದಲೂ ಪ್ರವಾಸದಿಂದಲೂ ವ್ಯರ್ಥ ಧನ ವ್ಯಯವಾಗಲಿದೆ. ತಾ. 24ರಿಂದ ವಾರಾಂತ್ಯದ ವರೆಗೂ ದಿನಗಳನುಕೂಲಗಳಾಗಿವೆ.

ತುಲಾ—ಬುದ್ಧಿಶಕ್ತಿಯೂ ಮಾತ್ಸರ್ಯವೂ ನಿಮ್ಮಲ್ಲಿ ಸಾಕಷ್ಟಿರುವುದರಿಂದ ವಿಪಕ್ಷೀಯರೀ ಇದರ ಲಾಭವನ್ನೆಗೆ ನೀವವರನ್ನು ನಿಮ್ಮ ಹಂದ ಸುಯಪಾಯಗಳನ್ನಾಗಿ ಪರಿವರ್ತಿಸವಿರಿ. ನೀಯ ಉಪಭೋಗಗಳಿಗೆ ಮಾತ್ರ ಭಂಗವಿಲ್ಲ ನಿಮಗೆ ಆದಿಸೆಯಾಗದ, ಸ್ವೀಕೃತ ಕಾರ್ಯಗಳು ನಿಮ್ಮ ಇಚ್ಛೆಯಂತೆಯೇ ಕೊನೆಗೊಂಡುವವು. ವಿದ್ಯೋಪಜೀವಿಗಳೂ ವ್ಯಾಪಾರಿಗಳೂ ಸಹಾಯದಿಂದ ಕಾಲಯಾಪನೆ ಮಾಡುವರು. ಶ್ರಮಜೀವಿಗಳಾದ ಭೃತ್ಯವೃಂದಕ್ಕೆ ಮಾನ ಹಾನಿಯ ರದು. ಲೇವಾದೇವಿ ಸಂಬಂಧವಾದ ಕಲಹಗಳು ಸಂಭವಿಸುವ ಚಿಹ್ನೆಗಳಿವೆ. ಅಂಕರಿಕವಾಗಿ ಮನೋರೋಗವು ನಿಮ್ಮನ್ನು ಪೀಡಿಸುತ್ತಿರುವುದು. ತಾ 20. 21. 27 ಇಷ್ಟ ಸಾಧಕ ದಿನಗಳಾಗಿವೆ.

ವೃಶ್ಚಿಕ—ಕಾಲಗತಿಯು ಬಹಳ ಕಠಿಣವಿರುವುದರಿಂದ ಯಾವೊಂದು ಕಾರ್ಯವನ್ನಾದರೂ ಸರಿಯು ಕೂಲಂಕಷವಾಗಿ ಪೂರ್ವಾಪರ ವಿಚಾರ ಮಾಡಿ ಮಾಡಬೇಕಾಗಿದೆ. ಪ್ರಕೃತ ನಿಮ್ಮ ಹಗೆಯವರಿಗೆ ಅಭಿವೃದ್ಧಿಯ ಕಾಲವಿರುವುದರಿಂದ ನೀವಾವ ಕಾರ್ಯವನ್ನಾರಂಭಿಸಿದರೂ ಅದು ಪೂರ್ಣವಾಗುವಂತಿಲ್ಲವು. ಕಷ್ಟಪಟ್ಟು ದುಡಿಯುವಿರಿ. ಆದರೆ ಬಿಡಿಸ ವಿಚಾರದಲ್ಲಿ ಬಹಳ ಸೂಕ್ಷ್ಮವಾಗಿ ವರ್ತಿಸುವಿರಿ. ಅದ್ದರಿಂದಲೇ ಅವಸ್ಥನವಾಗಿ ಕೆಲವಂಶ ಸಂಗ್ರಹಿಸಲು ಶಕ್ತರುವಿರಿ. ಗೃಹಸ್ಥ ದವರ್ಗವಲಂಬಿಗಳಿಗೆ ಪರ್ಯಾಪ್ತ ಸುಖವು ಉತ್ತಮವಿರುವುದು. ಮಾನಸಿಕ ವ್ಯಥೆಯಿಂದ ಪೀಡಿತರಾದ ನಿಮಗೆ ನಿದ್ರಾನಾಶದಿಂದಾಗಿ ಆರೋಗ್ಯ ಕೆಡುವ ಸಂಭವವಿದೆ. ತಾ. 22, 23 ಹೊರತು ಉಳಿದ ದಿನಗಳು ಪ್ರತಿಕೂಲಗಳಾಗಿವೆ.

ಧನು—ಕಷ್ಟಪಟ್ಟು ಸಂಪಾದಿಸುತ್ತಿದು, ಇಷ್ಟಬಂದಂತೆ ಖರ್ಚು ಮಾಡುತ್ತಿದು, ಇದೇ ನಿಮ್ಮ ಸದ್ಯದ ಉಪಯೋಗವಾಗಿದೆ. ನಾಳಿನ ವಿಚಾರ ಹೇಗೇ ಇರಲಿ, ಈ ತೆರನಾದ ಭಾವನೆಯು ನಿಮ್ಮ ಮನದಲ್ಲಿ ಮನೆಮಾಡಿದೆ. ವಿರೋಧಿ ಜನರಿಂದ ನಿಮ್ಮ ಮಾನಹಾನಿಗೆ ಹೆಚ್ಚಿನ ಸಾಧ್ಯತೆಯಿದೆ ಆಕಸ್ಮಿಕ ಪ್ರಯಾಣವು ಸಂಭವಿಸಿ ವಾಹನಗಳಲ್ಲಿ ಅಪಘಾತವಿರಗಳಿಗೆ ಗುರಿಯಾಗಲಿರುವಿರಿ. ಸ್ತ್ರೀಯರಿಂದಾಗಿ ಹಲವು ಜೀವನದ ಕಷ್ಟ ನಷ್ಟಗಳಿಗೆ ಗುರಿಯಾಗವಿರಿ, ವ್ಯಾಪಾರ ವ್ಯವಹಾರಗಳಲ್ಲಿ ಲಾಭಕ್ಕಿಂತಲೂ ನಷ್ಟವೇ ಅಧಿಕವಾಗಲಿದೆ. ತಾ. 22, 23, 27 ಈ ದಿನಗಳಲ್ಲಿ ಉದರ ರೋಗ, ಮಿತ್ರರಲ್ಲಿ ಮನಃಕಲಹ ಮಾನಹಾನಿ ಇತ್ಯಾದಿಗಳು ಪ್ರಾಪ್ತವಾಗಬಹುದು.

ಮಕರ—ಗ್ರಹಮಾನವು ಬಹಳ ಕೆಟ್ಟದಿರುವುದರಿಂದ ನೀವು ಬಹುವಿಧಗಳಾದ ತಾಪತ್ರಯಗಳಿಗೆ ಸಿಲುಕಿ ಶೋಕ ಸಾಗರದಲ್ಲಿ ಮುಳುಗುವಿರಿ. ಗುರು ದೇವನೊಬ್ಬನು ನಿಮ್ಮ ಕಲ್ಯಾಣಕಾರಿಯಾಗಿದ್ದರೂ ಇತರ ಎಲ್ಲಾ ಗ್ರಹರು ವಿಮುಖರಾಗಿರುವ ಈ ಕಾಲದಲ್ಲಿ ಅಮೃತವೂ ವಿಷವಾದೀತು. ಮಿತ್ರರು ಶತ್ರುಗಳಾದರು. ಮನೆಯಲ್ಲಿನ ಒಡಕುಗಳಿಂದ ಗೃಹವನ್ನು ... ಗಿರುವುದೇ ಲೇಸೆಂದು ತೋರುವುದು. ಹೊರಗಿನಿಂದ ಜೊತೆಗೇ ಇರಬೇಂದರೆ ಸಾಲಿಗರ ಕಾಟದಿಂದ ತಪ್ಪಿಸಿಕೊಳ್ಳುವಂತಿಲ್ಲ. ಸಕಲ ಬಲಗಳಿಂದಲೂ ವಿಮುಕ್ತರಾಗಿದ್ದ ಈ ಕಾಲದಲ್ಲಿ ಶತ್ರುಗಳು ತಮ್ಮ ಸೇಡನ್ನು ತೀರಿಸಲೆತ್ನಿಸುವರು. ಆದರೂ ತಾ. 22, 23, 27 ಈ ಮೂರು ದಿನಗಳಲ್ಲಿ ಹೆಚ್ಚಿನ ತಾಪತ್ರಯಗಳಿಗೆ ಸಿಲುಕಲಾರಿರಿ.

ಕುಂಭ—ಸಂದು ಗೊಂದುಗಳಲ್ಲಿನ ನೋವಿನಿಂದ ನೀವು ನರಳುತ್ತಿರಬಹುದು. ಆದರೂ ನಿಮಗದೊಂದು ವಿಶೇಷವಾಗಿ ಪೀಡಿಸಲಾರದು. ನೀವದನ್ನು ಗಮನಕ್ಕೂ ತರವಂತಿಲ್ಲ. ಬಂಧು ಮಿತ್ರರ ಸಹಾಯವು ನಿಮಗೊಂದು ವರ್ಧಕವಾದಂತಿದೆ. ಪ್ರತಿಕ್ರಿಯೆಯನ್ನು ಮಾಡಬೇಕೆಂದು ಬಂದ ವಿರೋಧಿಗಳು ಅದರ ಫಲವನ್ನು ತಾವೇ ಪಡೆದು ಹಿಂತಿರುಗುವರು. ಸ್ವೋದ್ಯೋಗದಲ್ಲಿ ವೃದ್ಧಿಯನ್ನೈದುವಿರಿ. ನಿಮ್ಮ ಶ್ರಮಕ್ಕೆ ಅಧಿಕವಾಗಿಯೇ ಫಲ ದೊರೆಯುವುದು ಕಷ್ಟವು ಸುಖರೂಪವಾಗಿ ಪರಿವರ್ತಿಸುವದು ನೌಕರಿ ವ್ಯಾಪಾರಾದಿಗಳಲ್ಲಿ ಇಷ್ಟಾಧಿಕ ಫಲ ಪ್ರಾಪ್ತಿಯದೆ ಕೆಲವೊಮ್ಮೆ ಕಾರ್ಯಗಳು ವಿಫಲವಾಗಲಿವೆ ಅದು ನಿಮ್ಮ ತಪ್ಪಿನಿಂದಲ್ಲ. ತಾ 22, 23, 27 ಈ ದಿನಗಳಲ್ಲಿ ಮಿತಿಗೆಡದಿರಿ.

ಮೀನ—ಶರೀರಕ್ಕೆ ಸಮಾಧಾನವೇನೋ ಮನ ಶ್ಯಾಂತಿ ದೊರೆಯಿತು. ಚಿಂತಾ ಸಮುದ್ರದಲ್ಲಿ ನಿಮ್ಮನ್ನಾವರಿಸಿರುವಾಗ ನಿಮಗಲ್ಲಿಯ ಸುಖ, ಶಾಂತಿಯು ಕಲಹ ಗಂಧ ಹೊಂದಿದಲ್ಲಿ ಅಪ್ಪ ದಮ್ಮಯ್ಯೆಂದಿರಲ್ಲೂ ಕಲಹಗಳುಂಟಾಗಿ ಪರಸ್ಪರ ಭಿನ್ನರಾಗುವರು. ಬಾಳಿನಿಯಿಂದ ಸಂಸಾರವೇ ನರಕಪ್ರಿಯವದು. ಅಗತ್ಯಬೇಕಾದ ವಸ್ತುಗಳು ಸಮಯಕ್ಕೆ ದೊರೆಯವು. ಶತ್ರು ಜನರಿಂದ ಅಪಮಾನವಾಗುವ ಚಿಹ್ನೆಗಳು ಕಂಡುಬರುತ್ತಿವೆ. ಇವೆಲ್ಲಾ ಕಷ್ಟಗಳಾವರಿಸಿರುವಾಗ ನಿಮಗಲ್ಲಿಯ ಸುಖ, ಎಲ್ಲಿಯ ಮನಶ್ಶಾಂತಿ ? ಆದರೊಂದು, ಹೆದರಬೇಕಾಗಿಲ್ಲ, ಹಗಲು ಚಿಂತಾಕುಲಿತರಿದ್ದರೂ ರಾತ್ರಿಯಲ್ಲೆಲ್ಲವನ್ನು ಮರೆಯುವಿರಿ. ತಾ. 24, 25, 26 ಈ ದಿನಗಳಲ್ಲಿ ಹಲವು ವಿಚಾರಗಳು ಪ್ರಾಪ್ತವಾಗಬಹುದು.

ವಿದ್ಯಾರ್ಥಿಗಳಿಗೆ ಆನಂದದ ಬಾತಮಿ.

ಅತಿ ಅಭ್ಯಾಸ ಯಾ ಘಾಬರಿಯಿಂದ ಪರೀಕ್ಷೆಯ ಸಮಯ ನರ್ವಸ್ ಪೀಕ್ನೆಸಿನಿಂದ ಸಾಮಾನ್ಯ ಸೇಕಡ 50 ವಿದ್ಯಾರ್ಥಿಗಳು ತಿಳಿದು ಯಾ ತಿಳಿಯದೆ ಫಸ್ಟ್‌ಕ್ಲಾಸಿನ ಯೋಗ್ಯತೆಯುಳ್ಳವರು ಕೂಡ ಥರ್ಡ್ ಕ್ಲಾಸಿನಲ್ಲಿ ಸಹ ಪಾಸಾಗದೆ ನಾಪಾಸಾಗುವ ಪರಿಸ್ಥಿತಿಯು ಬರುತ್ತದೆ ಈ ಸರ್ವ ವಿಚಾರಗಳಿಗೆ ನಮ್ಮ ದೀರ್ಘ ಅನುಭವದಿಂದ ತಯಾರಿಸಲ್ಪಟ್ಟ ಬಹುಗುಣಯುಕ್ತ ಪುಷ್ಪಗಂಧಾಮೋದಿತ **ಆಮಲಕೀ ತೈಲ** ವನ್ನು ಉಪಯೋಗಿಸುವದರಿಂದ ಲಕ್ಷೀಚಾನ್ಸ್ ಸಿಕ್ಕುತ್ತದೆ. 6 ಯಾ 11 ಆಣೆ ಬೆಲೆಯ 1 ಸೀಸೆ ತೈಲವನ್ನು ಕೊಂಡುಕೊಂಡು ಸ್ವಲ್ಪ ತಲೆಗೆ ಹಾಕಿ ಸೇವನೆಗೆ ಶುರುಮಾಡಿರಿ. ಇದರಿಂದ ಮೆದುಳಿನ ಜ್ಞಾನಶಕ್ತಿ ಯಾ ಸ್ಮರಣಶಕ್ತಿ ವೃದ್ಧಿಯಾಗಿ ಆತ್ಮವಿಶ್ವಾಸವು ಹೆಚ್ಚುವದಲ್ಲದೆ ಕಠಿಣತರದ ಪ್ರಶ್ನೆಗಳಲ್ಲಿ ಸುಲಭವಾಗಿ ಯಶಃಪ್ರಾಪ್ತಿಯಾಗುವುದು. ಪರೀಕ್ಷೆಯ ಮೊದಲೇ ಒಂದೆರಡು ಸೀಸೆ ನಮ್ಮ ಆಮಲಕೀ ತೈಲವನ್ನು ತರಿಸಿಕೊಳ್ಳಿರಿ 4 ಔನ್ಸಿನ ಸೀಸೆ 1ರ ಕ್ರಯ ರೂ. 0-11-0, 2 ಔನ್ಸಿನ ಸೀಸೆ 1ರ ರೂ. 0-6-0 ತಯಾರಿಸುವವರು:-ಸ್ವದೇಶೀ ಔಷಧಿಭಂಡಾರ, (ರಿಜಿಸ್ಟರ್ಡ್) ಕುಂದಾಪುರ, ಪೋಸ್ಟ್ ಬ್ರಹ್ಮಾವರ, ದ. ಭಾರತ.

ನಮ್ಮ ಸ್ಟಾಕಿಸ್ಟರು:—ವಿ.ಆರ್. ಪ್ರಭು, ದಿ ಕೆನರಾ ನ್ಯೂಸ್ ಎಂಡ್ ಬುಕ್ ಏಜೆನ್ಸೀಸ್ ಚಟಾಟವಾಲಾ ಮೆನ್ಶನ್, ಲಾಲ್ ಬಾಗ್, ಮುಂಬಯಿ. ಜನರಲ್ ಸಪ್ಲೈಸ್ ಲಿಮಿಟೆಡ್, ಉಡುಪಿ, ನವಭಾರತಬುಕ್ ಡಿಪೋ, ಉಡುಪಿ, ಕಟಪಾಡಿಗಳ ಒದಗಿ

Advt.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ

"ಗೊನೊಕಿಲರ್" (ರಜಿಸ್ಟರ್ಡ್)

GONO KILLER

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್" ಹೆಸರನ್ನೂ ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರಿವು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗುವ ವೀರ್ಯಸ್ರಾವ, 'ಗೊನೊ-ಕೊಕಸ' ಎಂಬ ವಿಷಾಣು, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವವು.

ಬೆಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಚಾರ್ಜು 0-8-0 ಪ್ರತ್ಯೇಕ. ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer DR. D. N. JASANI, Vitalbhai Patel Road, BOMBAY 4

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ರಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Kanara Printing Works,
Hampankatte, **MANGALORE.**

ಕಿವುಡರೂ ಸಂಪೂರ್ಣವಾಗಿ ಕೇಳಬಹುದು.

ಬಧಿರತಾಹರಣ
ವಿಜ್ಞಾನದ ನವೀನ ಮತ್ತು
ವಿಚಿತ್ರ ಶೋಧ

ಕಿವಿಸೋರುವುದು, ಸೋಂಕು, ಉರಿಯು ಪುಣ್ಣು, ಶಬ್ದವೇಳುವುದು, ತುರಿಸುವುದು, ಕಿವುಡು ಅಥವಾ ನೆಂಟಕಪೋವುದು, ಕರ್ಣಕುಹರದ ದೋಷ, ಶೀತ ಅಥವಾ ಜ್ವರದ ನಿಮಿತ್ತ ಕ್ವಿನೀನು ತೆಗೆದುಕೊಂಡು ಪರಿಣಾಮವಾಗಿ ಉಂಟಾದ ಅರ್ಧ ಯಾ ಸಂಪೂರ್ಣ ಕಿವುಡತನವೇ ಮೊದಲಾದ ಎಂತಹ ಕರ್ಣರೋಗವಾಗಲಿ, ಅತ್ಯಂತ ಕಠಿಣ ಕಿವುಡುತನವಾಗಲಿ ನಮ್ಮ ವಿಚಿತ್ರ 'ಬಧಿರತಾಹರಣ' ಎಣ್ಣೆಯನ್ನು ಉಪಯೋಗಿಸುವುದರಿಂದ ಖಾತ್ರಿಗುಣಹೊಂದುವುದು. ಈ ಸಿದ್ಧೌಷಧಿಯಿಂದ ನೂರಾರು ಮಂದಿ ಕಿವುಡರು ಚೆನ್ನಾಗಿ ಶ್ರವಣ ಶಕ್ತಿಯನ್ನು ಪಡೆದಿರುತ್ತಾರೆ. ಫಲಕಾರಿಯಾಗದಿದ್ದರೆ ಬೆಲೆಯನ್ನು ವಾಪಸು ಕೊಡಲಾಗುವುದು. ಬಾಟ್ಲಿ 1ರ ಬೆಲೆ ರೂ. 2, 3 ಬಾಟ್ಲಿಗಳಿಗೆ ರೂ. 5, ಟಪ್ಪಾಲು ಖರ್ಚು ಪ್ರತ್ಯೇಕ.

ವಿಳಾಸ:—ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4.

ಬಾಲಾರ್ಕ ಮಧು



ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.
ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ ಅತಿಬೆಟ್ಟಿರುವ ನಿಮ್ಮ ಮಕ್ಕಳು ತಿರುಗಿನಿಮ್ಮ ಕೈಗೆಸೇರುವುದು
ಸೀಸೆ1 ಕ್ಕೆ 12ಆಣೆ, ಟ. ಖ. 4ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ.
ಉಡುಪಿ ಸ್ಟಾಕಿಸ್ಟರು:- ನವಭಾರತ ಬುಕ್‌ಡಿಪೋ, ಉಡುಪಿ

THE **MOOLKY BANK, LTD.,**
MOOLKY.
ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.
ಭಂಗಾರ ವ ಸರಕಿನ ಈಡಿನ ಮೇಲೆ ಸೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು.
ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.
ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!
K. R. K. SHET
Opposite Govt. College, Hampankatte, MANGALORE
SHOW-ROOM & WORK SHOP.
SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಪೊಂದನ್ನು ಗವರ್ನಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕೋಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.



SALE! SALE!! SALE!!
ನಿಮುಂಚಿನ ಕ್ರಯ ರೂ. 10.
ಈಗಿನ ಕ್ರಯ ರೂ 3-12-0



Swiss Lever Wrist Watch
ಭಂಗಾರದ ಲೀವರ್ ರಿಸ್ಟ್‌ವಾಚ್

ಈ ನಮೂನೆ ಗಡಿಯಾರಗಳು ಸ್ವಿಟ್ಜರ್ಲಂಡಿನಲ್ಲಿ ಬಹು ಬಲಿಷ್ಠ ಸಾಮಾನುಗಳಿಂದ ತಯಾರಿಸಲ್ಪಟ್ಟು ಸ್ತ್ರೀ ಪುರುಷರ ಕೈಯಲ್ಲಿ ಕಟ್ಟಿಕೊಳ್ಳುವದಕ್ಕೂ ಬಹು ಅಂದವಾಗಿದೆ. ಭಂಗಾರದ ಗಡಿಯಾರಗಳನ್ನು ನಾವು ಬಹಳ ತರಿಸುವುದರಿಂದ ಸುಲಭ ಕ್ರಯಕ್ಕೆ ಕೊಡುತ್ತೇವೆ. ಇಂಡಿಯಾ ದೇಶದಲ್ಲಿ ಎಷ್ಟೋ ಗಡಿಯಾರಗಳು ವಿಟಾಗಿ ಅನೇಕ ಯೋಗ್ಯತಾಪತ್ರಗಳು ಬಂದಿರುವವು. ಅವು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವವು. ಒಂದನ್ನು ತರಿಸಿ ನೋಡಿದರೆ ಪ್ರತಿಯೊಬ್ಬರೂ ತರಿಸಲಿಕ್ಕೆ ಪ್ರಯತ್ನ ಪಡುವರು, ಗ್ಯಾರಂಟಿ 3 ವರುಷ. ಕ್ರಯ ಒಕ್ಕೆ 3-12-0.

ವೆಸ್ಟರ್ನ ಸ್ವಿಸ್ ವಾಚ್ ಕಂಪೆನಿ, ಪೋಸ್ಟ್ ಬಾಕ್ಸ್ ನಂ. 68, ಮದರಾಸ್.
Western Swiss Watch Co , Direct Importers,
Post Box No 68, MADRAS.

ನಿಮ್ಮ ಮನೆಯಲ್ಲಿ ಸದಾ ಆನಂದದ ಜ್ಯೋತಿಯು
ಬೆಳಬೆಳಗುತ್ತಿರಬೇಕೇ? ಹಾಗಿದ್ದರೆ--- ---

ನಂದಾದೀಪ

ಎಂಬ ಉತ್ಕೃಷ್ಟ ಚಿಕ್ಕಕತೆಗಳ ಪ್ರತಿಯೊಂದನ್ನಿಟ್ಟುಕೊಳ್ಳಿ.
ಕರ್ನಾಟಕದ ಪ್ರಸಿದ್ಧ ಕತೆಗಾರರಲ್ಲೊಬ್ಬರಾದ ಶ್ರೀ ಕೊರಡ್ಕಲ್
ಶ್ರೀನಿವಾಸ ರಾಯರು ಬರೆದ ಮನೋಹರವಾದ
ಹನ್ನೊಂದು ಕತೆಗಳ ಸಂಗ್ರಹ.
ಪ್ರತಿಯೊಂದು ಕತೆಯೂ ನಿಮ್ಮ ಹೃದಯದಲ್ಲೊಂದು
ಬಗೆಯ ಹೊಸ ಬೆಳಕನ್ನು ಬೆಳಗಿಸುವುದು.
ಬೆಲೆ: 0-8-0 ಟಪ್ಪಾಲು ದ್ವಾರ: 0-9-0
ಕಿರಿಯರ ಪ್ರಪಂಚ, ಉಡುಪಿ.
(0-9-0 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು)

ಸದ್ವೈದ್ಯಶಾಲಾ ನಂಜನಗೂಡು ಇವರ
"ಸುಬಲಾ" ರಕ್ತ ಸಂಕಟ, ಮಲಬದ್ಧತೆ ಇವುಗಳನ್ನು ಹೋಗಲಾಡಿಸಿ, ರಕ್ತ ವೃದ್ಧಿಪಡಿಸಿ, ಶರೀರಕ್ಕೆ ಬಲವನ್ನು ಕೊಡುತ್ತದೆ ಬಹಳ ರುಚಿಯಾಗಿರುತ್ತದೆ.
ಬ್ರಾಂಚ್:-ರಥಬೀದಿ ಮಂಗಳೂರು

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ
— ಡಿಪೋವಿನ ರಿಂಗ್‌ವರ್ಮ್ ಮುಲಾಮು —
ಇತ್ತೀಚೆ ತರಿಸಿದ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.
ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮೂಲಕವೇ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.
ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.



ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಾಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ

PRINTED BY S. S. KARANTH AT THE THULUNAD PRESS, UDIPI AND PUBLISHED BY K. H. SHETTY AT "NAVAYUGA OFFICE, UDIPI S. INDIA

gistered No. M 3618

27-6-1940.

ನವಯುಗ

NAVAYUGA

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಛೇರಿ:— **ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.**

ಭದ್ರತೆಯಿಂದಲೂ, ಖಾತ್ರಿಯುಳ್ಳ ನಫೆ ಹಂಚಿಕೆಯಿಂದಲೂ, ಜಾಗ್ರತೆಯಾಗಿ ಹಕ್ಕುಗಳನ್ನು ಕೊಡುವುದರಿಂದಲೂ ಮತ್ತು ಉದಾರವಾದ ಜೀವವಿಮೆಯ ನಿಯಮಗಳಿಂದಲೂ ಈ ಸಂಸ್ಥೆಯು ಪ್ರಖ್ಯಾತಿಪಡೆದಿರುತ್ತದೆ.

ಪ್ರೊಫೆಸರ್ ಕೆ. ಬಿ. ಮಾಧವ, ಎಂ.ಎ, ಎಫ್.ಆರ್.ಎ.ಎಸ್., ಎ.ಐ.ಎ (ಲಂಡನ್) ಪ್ರೊಫೆಸರ್, ಮಹಾರಾಜ ಕಾಲೇಜು, ಮೈಸೂರು ಅವರ್ಕ್ಯುರಿಯವರ ಅಭಿಪ್ರಾಯ ಸಾರಾಂಶ.

"ಕಳೆದ ೧೦ ವರ್ಷಗಳಿಂದ ನಿಮ್ಮ ಸಂಘವು ಬಹಳವಾಗಿ ಮುಂದುವರಿಯುತ್ತಿರುವುದಲ್ಲದೆ ಕಳೆದ ಮೂರು ವರ್ಷಗಳಿಂದ ಆಡಳಿತದ ವೆಚ್ಚ, ಬಡ್ಡಿಯ ಫಲ, ರದ್ದಾದ ಪಾಲಿಸಿಗಳ ಸಂಖ್ಯೆ ಇವೇ ಮೊದಲಾದ ಜೀವವಿಮೆಯ ನಿಯಮಗಳನ್ನು ಉತ್ತಮಗೊಳಿಸಲು ಸಹಕಾರಿಯಾಗುವ ವಿಷಯಗಳಲ್ಲಿ ಹೊಂದಿರುವ ಅಭಿವೃದ್ಧಿಯು ತೃಪ್ತಿಕರವಾಗಿದೆ... .....ಸೌಕರ್ಯ ಸಹಿತವಾದ ಅಭಿವೃದ್ಧಿಗೆ ಉದಾಹರಣೆಯಾಗಿರುವ ಏಷ್ಯಾಟಿಕ್ಕಿನ ಅಪ್ರತಿಹತವಾದ ಕಾರ್ಯಕಲಾಪಗಳಿಗಾಗಿ . . . .ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸೂಚಿಸಲು ಉಂಟಾಗುವ ಸಂತೋಷವನ್ನು ತಿಳಿದುಕೊಳ್ಳಲಾರೆನು"

ಕೊಟ್ಟಿರುವ ವಿಮಾ ಹಕ್ಕಿನ ಹಣಗಳು: ೫,೦೦,೨೦೦—೮—೦.

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

H. Venkataramiah, *Divisional Superintendent,* or **R. Purniah** *Ag. General Manager.*

The Asiatic Govt. Security Life Assu. Co. Ltd.,
Asiatic Building, BANGALORE CITY.

ಝಂಡು ಮಲೇರಿಯಾ ಮಿಕ್ಸ್ಚರ್

ಮಲೇರಿಯಾ, ವಿಷಪ್ರಜ್ವರಗಳಿಂದುಂಟಾಗುವ ಎಲ್ಲಾ ತರದ

ಕಠಿಣ ಜ್ವರಗಳಿಗೆ

ಖಾತ್ರಿಯಾದ ಸಿದ್ಧೌಷಧ

ಕ್ರಯ: ಆಣೆ 0—14—0 ಮಾತ್ರ.

ಶೀಘ್ರಗುಣ ಖಚಿತ

ಸ್ಥಳೀಯ ಏಜಂಟರು:– ಪಿ. ಎ. ಪೈ ಬ್ರದರ್ಸ್.

ಕಾರ್ಕಳದ ಏಜಂಟರು:– ವಿ. ವಿ. ಶೆಣೈ, ಕೆಮಿಸ್ಟ್ಸ್.

ಮಂಗಳೂರಿಗೂ ದಕ್ಷಿಣ ಕನ್ನಡ ಜಿಲ್ಲೆಯ ಇತರ, ಮುಖ್ಯ ಸ್ಥಳಗಳಿಗೂ ಏಜಂಟರು ಬೇಕಾಗಿದ್ದಾರೆ.

ಶರ್ತಗಳಿಗೂ ಏಜನ್ಸಿಗಳಿಗೂ ಮುಖ್ಯ ಏಜಂಟರಿಗೆ ಬರೆಯಿರಿ:—

ದಾಮೋದರ್ ಎಂಡ್ ಕೊ,

ಮುಖ್ಯ ಏಜಂಟರು,

ZANDU

೭೯ ಚೀನಾ ಬಜಾರ್ ರೋಡ್, ಜಿ. ಟಿ. ಮದರಾಸು

DAMODER & CO.,
79 China Bazaar Road, **G. T. MADRAS.**

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇತ್ತೀಚೆಗೆ ಬರಿಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕ್‌ಳ್ಳ ರಿಂಗ್‌ವರ್ಮ್

ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು

ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತಾ.

ಮುಚ್ಚಿದರೆ ಮುಗುಳು ! ಬಿಚ್ಚಿದರೆ ಅರಳು !!

ಪ್ರೋ. ಕೆ. ಪೊನ್ನಯ್ಯ ಶೆಟ್ಟರಿಂದ ಪೋಣಿಸಲ್ಪಟ್ಟ

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಮಾಲಿಕೆಯಿದು

ಮುಗುಳು

ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಅತ್ಯುಪಯುಕ್ತವಾದ ಸಚಿತ್ರ ಪದ್ಯ ಪುಸ್ತಕ.

(ಮದ್ರಾಸ್, ಬೊಂಬಾಯಿ, ಮೈಸೂರು ಟೆಕ್ಸ್ಟ್ ಬುಕ್ ಕಮಿಟಿಗಳಿಂದ ಮಂಜೂರಾಗಿದೆ.

ಅಭಿನಯಕ್ಕೆ, ನರ್ತನಕ್ಕೆ, ಕೋಲಾಟಕ್ಕೆ, ಎಲ್ಲಕ್ಕೂ ಅತ್ಯನುಕೂಲವಾದ,

ಮಕ್ಕಳ ವಯೋಗುಣಕ್ಕನುಗುಣವಾದ ಪದ್ಯಗಳಿಂದೊಡಗೂಡಿದೆ.

ಅಧ್ಯಾಪಕರೆಲ್ಲಾ ಇದನ್ನು ಮಕ್ಕಳ ಕೈಗೆ ಕೊಟ್ಟು, ಉಲಿದಾಡಿಸಿ, ಹುರಿದುಂಬಿಸಬೇಕಾಗಿ ಪ್ರಾರ್ಥನೆ.

ಪ್ರತಿಗಳು ಎಲ್ಲೆಲ್ಲಿಯೂ ದೊರೆಯುತ್ತವೆ] [ಬೆಲೆ: ೦—೨—೬

ಕರ್ನಾಟಕದ ಪ್ರಸಿದ್ಧ ಕವಿಗಳ ಆಧುನಿಕ ಕವಿತಾ ಸಂಗ್ರಹ

ಕಾವ್ಯಸಾಮ್ರಾಜ್ಯ

ಕಿರಿಯರ ಪ್ರಪಂಚದ ಪ್ರಕಟಣೆ—ಬೆಲೆ ಹನ್ನೆರಡಾಣೆ.

ವಿಕ್ರಯಾಧಿಕಾರಿಗಳು:—ನವಭಾರತ ಪುಸ್ತಕ ಭಂಡಾರ, ಉಡುಪಿ.

ವ್ಯಭಿಚಾರಿಣಿ ಯಾರು ?

ಕ್ರಾಂತಿಕಾರಕ ನವೀನ ಸಾಮಾಜಿಕ ನಾಟಕ

ಬೆಲೆ ೦—೧೦—೦.

ವಿಕ್ರಯಾಧಿಕಾರಿಗಳು— Navabharat Book Depot, Udipi

THE VIJAYA BANK LTD.,

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ
ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು
ಇಚ್ಛಿಸುವಿರಾದರೆ—ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯುಳ್ಳವರೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ
ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಹಿಡಿದು ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರ
ವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು
ನಮ್ಮಲ್ಲಿ ಭರದಿಂದ ಸಾಗುತ್ತಿರುವವು

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ವಿದ್ಯಾರ್ಥಿಗಳಿಗೆ ಅಪೂರ್ವ ಸಂದರ್ಭ!

ಉತ್ತಮ ಪುಸ್ತಕಗಳು! ನಾಜೂಕು ಕೆಲಸ! ಕಡಿಮೆ ಕ್ರಯ!

ಎಲಿಮೆಂಟರಿ ಸ್ಕೂಲ್, ಹೈಸ್ಕೂಲ್, ಟ್ರೈನಿಂಗ್ ಸ್ಕೂಲ್, ಕೊನ್ವೆಂಟ್ ಮೊದಲಾದ ಎಲ್ಲಾ ಶಾಲೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಬೇಕಾದ ಎಲ್ಲಾ ವಿಧದ ಪಾಠ ಪುಸ್ತಕಗಳೂ, ಲೇಖನ ಪುಸ್ತಕಗಳೂ, ಸ್ಟೇಶನರಿ ಸಾಮಾನುಗಳೂ ಸುಲಭ ಬೆಲೆಗೆ ದೊರೆಯುತ್ತವೆ.

ಶಾಲೋಪಯೋಗೀ ಸಾಹಿತ್ಯಗಳೆಲ್ಲಾ ಕಡಿಮೆ ದರದಲ್ಲಿ ನಮ್ಮಲ್ಲಿ ಸದಾ ತಯಾರಿವೆ!

ನಿಮಗೆ ಏನು ಬೇಕಾದರೂ ಮೊದಲು ನಮ್ಮೊಡನೆ ವಿಚಾರಿಸಿರಿ.

ನವಭಾರತ ಪುಸ್ತಕ ಭಂಡಾರ

ಇಗರ್ಜಿ ಎದುರು – – – ಉಡುಪಿ, ದ. ಕ.

For all your school requirements:

Navabharat Book Depot, Udipi.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರೀಕ್ಷಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ ಅಮೋಘವಾದ ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ, ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಮ್. ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ. ೬ ಕೊಡಿಯಾಲಬೈಲು, ದ.ಕ.

The Pangal Nayak Bank Ltd.,

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(೧೯೨೦ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿತು)

ಮುಖ್ಯ ಕಾರ್ಯಾಲಯ—ಕೋರ್ಟುಬಳಿ, ಉಡುಪಿ, ದ. ಕನ್ನಡ

ಶಾಖೆಗಳು—ಉಡುಪಿ, ಮಂಗಳೂರು, ಕಟಪಾಡಿ ಮತ್ತು ಕಾಂಞಂಗಾಡ್

ತೆತ್ತ ಮೂಲಧನ—ರೂ. 1,82,100/- ಕ್ಷೇಮನಿಧಿಗಳು ರೂ 1,92,000/-

ಚಿನ್ನಾಭರಣಗಳ, ವ್ಯಾಪಾರಕ್ಕೆ ಅನುಕೂಲವಾಗಬಹುದಾದ ಬಗೆಯ ವಸ್ತುಗಳ, ಸಮಾಧಾನಕರವಾದ ವ್ಯಾಪಾರದ ಬಿಲ್ಲು, ಹುಂಡಿ ಇತ್ಯಾದಿಗಳ ಭದ್ರತೆಯ ಮೇಲೆ ಸುಲಭ ದರಗಳಲ್ಲಿ ಚಿಕ್ಕ ವ ದೊಡ್ಡ ಸಾಲಗಳು ಕೊಡಲ್ಪಡುತ್ತವೆ.

ದೀರ್ಘ ವ ಅಲ್ಪ ಅವಧಿಯ ಠೇವಣಾತಿಗಳು ಶ್ರೀಮಂತರಿಗೂ ಇತರರಿಗೂ ಏಕರೀತಿ ತೃಪ್ತಿಕರವಾದ ಶರ್ತಗಳಲ್ಲಿ ಅಂಗೀಕರಿಸಲ್ಪಡುತ್ತವೆ.

ಬೇಂಕಿನ ಅತ್ಯಾಧುನಿಕ ವಿಧದ ಸಮಸ್ತ ವ್ಯವಹಾರಗಳೂ ನಡೆಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ದಯವಿಟ್ಟು ಮುಖತಾ ವ ಪತ್ರದ್ವಾರ ವಿಚಾರಿಸಿರಿ.



KOPRAN
Tooth Paste

ಹಿಂದೂದೇಶದ ಜನಪ್ರೀತ
ದಂತಾಂಜನ

ಜಾಲಿಗಿಡದ ತತ್ವಗಳನ್ನೊಳಗೊಂಡು ತಯಾರಿಸಲ್ಪಟ್ಟಿರುವ ಉತ್ತಮ ದಂತಾಂಜನ.
ಶೀಘ್ರಸತ್ಫಲಪ್ರದ್ದು, ವಿಷಯುಕ್ತವಲ್ಲದು.

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್ಸಿಲ್ ಬೋರ್ಡು, ಜರ್ಮನ್ ಬೆಳ್ಳಿ, ಮೊನೊಗ್ರಾಮ್ ಸೀಲು ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co., 18 Balmat Road, MANGALORE

Appointed firm by the Govt. of Mysore   Certified by the Agent of the Govt. of India in Ceylon

Transport & Car Owners



ARE SPECIALLY INVITED TO VISIT

OUR SHOW ROOM *for economical transport maintenance.*

CANARA AUTOMOBILES – – – – – MANGALORE

ನಾಟಕದಲ್ಲಿ ಕಾಲದ ಸ್ಫೂರ್ತಿಯು ಮೂರ್ತಿಮತ್ತಾಗಿ ತೋರಬೇಕು.
ಆ ಸ್ಫೂರ್ತಿಯಿಂದ ನಾಟಕಕಾರರೂ ಪ್ರೇಕ್ಷಕರೂ ಜಾಗೃತರಾಗಬೇಕು

ಅಂತಹ ನಾಟಕವೇ

ದೇಶಭಕ್ತ

**ಕಾಂಗ್ರೆಸ್ ಹೋರಾಟದ ತ್ಯಾಗ ಸಂಕಷ್ಟಗಳನ್ನೂ ಅದನ್ನು ತಡೆಗಟ್ಟಲು
ಅಧಿಕಾರಿ ವರ್ಗವು ಹೂಡುವ ಕುತಂತ್ರಗಳನ್ನೂ ಕಣ್ಣಮುಂದಿರಿಸಿ
ಸಮತಾವಾದವನ್ನು ಪ್ರತಿಪಾದಿಸಿ, ನವಜಾಗೃತಿಯನ್ನು
ಮಾಡುವ ನವೀನ ಸಾಮಾಜಿಕ ನಾಟಕ.**

ವಿಶೇಷವಾಗಿ ಆಶ್ರಿತ ಸಂಸ್ಥಾನಗಳಲ್ಲಿ ಇಂದು ನಡೆಯುತ್ತಿರುವ ಸ್ವಾತಂತ್ರ್ಯ ಸಂಗ್ರಾಮದ ನೈಜ ಚಿತ್ರ. **ಪ್ರತಿಯೊಬ್ಬರೂ ಓದತಕ್ಕ ನವೀನ ಪುಸ್ತಕ.**

ಲೇಖಕರು- ಕೆ. ಕೆ. ಶೆಟ್ಟಿ. ಬೆಲೆ ೦—೧೦—೦

11 ಆಣೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಲಾಗುವುದು.

ನವಯುಗ ಆಫೀಸು, ಉಡುಪಿ.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ESTD. 1921 ಸ್ಥಾಪನೆ

FOUNDER:
SRI. A. B. SHETTY, M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿಯವರು, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ

NAVAYUGA

ಚಂದಾ ವಿವರ:
1 ವರ್ಷಕ್ಕೆ – ರೂ. 3—4—0
6 ತಿಂಗಳಿಗೆ – ರೂ. 1-12—0

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹ ಸಂಪಾದಕ:
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೪೨

ಉಡುಪಿ, ಗುರುವಾರ, ೨೭—೬—೧೯೪೦.
UDIPI, THURSDAY, 27-6-1940.

VOL. 19
No. 42

ಸಮಾಚಾರ ಸಂಗ್ರಹ

ರೂ. 20 ಕೋಟಿ ಬೇಕಾಗಿದೆ

ಇಂದೀಗ ಇಂಡಿಯಾ ಸರಕಾರವು ಇಡೀ ಹಿಂದೂ ದೇಶದಿಂದೆಲ್ಲಾ ಸೈನಿಕರನ್ನು ಸೇರಿಸುವ ನಿರ್ಧಾರವಮಾಡಿರುವದು ಆಂಗ್ಲೇಯರಿಗೇನೇ ಮೀಸಲಾಗಿಟ್ಟಿರುವ ಹಿಂದೀ ಸೇನಾಧಿಕಾರಿಗಳ ಸ್ಥಾನಕ್ಕೂ ಇನ್ನು ಮುಂದೆ ಹಿಂದೀಯರನ್ನೇ ನೇಮಿಸಲಾಗುವುದು. ವಿಮಾನ, ಮಿಶನ್ ತೋಪು, ಟೇಂಕ್ ಮೊದಲಾದ ಆಧುನಿಕ ಯುದ್ಧೋಪಕರಣಗಳನ್ನೆಲ್ಲಾ ಹಿಂದೂ ದೇಶದಲ್ಲೇ ತಯಾರಿಸಬೇಕೆಂದು ಹಿಂದೀ ಸರಕಾರವು ಈಗ ನಿರ್ಧರಿಸಿರುತ್ತದೆ. ಆದರೆ ಬ್ರಿಟಿಷ್ ಸರಕಾರದ ಒಪ್ಪಿಗೆ ಇನ್ನೂ ಬಂದಿರುವಂತಿಲ್ಲ. ಈ ಸೇನಾಸಿದ್ಧತೆಗೆ ವರ್ಷಕ್ಕೆ ರೂ. 20 ಕೋಟಿ ಹಣಬೇಕು. ಈ ಹಣವನ್ನು ಶೇಖರಿಸುವುದು ಹೇಗೆ? ಮತ್ತು ಅಷ್ಟೊಂದು ಹಣದ ವಿನಿಯೋಗದ ಜವಾಬ್ದಾರಿಯನ್ನು ನೌಕರಶಾಹಿಗೊಪ್ಪಿಸುವುದು ಹೇಗೆಂಬುದೀಗ ಪ್ರಶ್ನೆ. ಈ ಸಂದರ್ಭದಲ್ಲಿ ರಾಷ್ಟ್ರೀಯ ಸರಕಾರವೊಂದು ಸ್ಥಾಪಿಸಲ್ಪಟ್ಟು ನೆರವಾದರೆ ಒಳ್ಳೆದಾದೀತೆಂದು ಅಧಿಕಾರಿಗಳಿಗೂ ಅನಿಸಹತ್ತಿದೆ.

ಪವನು ಕಳುಹಿಸದುದಕ್ಕೆ ಜುಲ್ಮಾನೆ

ಬೊಂಬಾಯಿ ಕರಾಚಿ ಮೊದಲಾದ ಬಂದರುಗಳಿಂದ ಸಮುದ್ರ ಮತ್ತು ವಿಮಾನ ಮಾರ್ಗವಾಗಿ ಪವನುಗಳನ್ನು ಗುಪ್ತವಾಗಿ ಹೊರಗೆ ಕಳುಹಿಸುವ ಪ್ರಯತ್ನ ನಡೆಯುತ್ತಿದೆ. ಪರ್ಶಿಯ ಕೊಲ್ಲಿಯ ಬಂದರುಗಳಿಗೆ ರೂ. 4 ಲಕ್ಷದಷ್ಟರ ಪವನುಗಳನ್ನು ಕಳುಹಿಸುವ 3 ಒಳಸಂಚನ್ನು ಕರಾಚಿಯ ಕಷ್ಟಮ್ ಖಾತೆಯವರು ಕಂಡುಹಿಡಿದು ಈ ಒಳಸಂಚುಗಳಲ್ಲೊಂದು ಖಟ್ಲೆಯಲ್ಲಿ ರೂ. 12,000 ಜುಲ್ಮಾನೆ ವಿಧಿಸಿ 400 ಪವನುಗಳನ್ನು ವಶಪಡಿಸಿಕೊಳ್ಳಲಾಗಿದೆ.

84 ಹೊಸ ಯುದ್ಧ ಹಡಗು ರಚನೆ

ಅಮೇರಿಕದ ಯುನೈಟೆಡ್ ಸ್ಟೇಟ್ಸ್ ಸರಕಾರವು 1200 ಮಿಲ್ಯ ಡೋಲರು ವ್ಯಯಿಸಿ 84 ಹೊಸ ಯುದ್ಧ ಹಡಗಗಳನ್ನು ಕಟ್ಟುವ ನಿರ್ಧಾರ ಮಾಡಿರುವುದು. ಇವುಗಳಲ್ಲಿ 3 ವಿಮಾನ ವಾಹಕ ಹಡಗಗಳು. 12 ಕ್ರ್ಯೂಸರ್ ನಾವೆಗಳು. 41 ಡಿಸ್ಟ್ರೋಯರ್ ಹಡಗಗಳು ಮತ್ತು 28 ಸಬ್‌ಮೆರೀನುಗಳು. ಇತ್ತಲಾಗಿ ಯುನೈಟೆಡ್ ಸ್ಟೇಟ್ಸು ಸುಮಾರು 200 ಯುದ್ಧ ಹಡಗಗಳನ್ನು ತನ್ನ ನೌಕಾಪಡೆಗೆ ಹೆಚ್ಚಿಗೆಯಾಗಿ ಕಟ್ಟಿಕೊಳ್ಳುವ ನಿರ್ಧಾರವು ಮಾಡಿರುವುದು. ಈ ಕಾರ್ಯಕ್ರಮವು ಸಂಪೂರ್ಣವಾದರೆ ಇಡೀ ಲೋಕದಲ್ಲೇ ಯುನೈಟೆಡ್ ಸ್ಟೇಟ್ಸಿನ ಹಡಗು ಪಡೆಯು ಅತಿದೊಡ್ಡದಾಗುವುದು.

ಗಾಂಧಿಯವರಿಗೊಂದು ಹಳ್ಳಿ ದಾನ

ಬಿಹಾರಿನ ರಾಮ ನಗರದ ರಾಜರು ಮಹಾತ್ಮಾ ಗಾಂಧಿಯವರಿಗೊಂದು ಹಳ್ಳಿಯನ್ನು ದಾನವಾಗಿ ಕೊಟ್ಟಿರುವರು. ಬಿಟಿಹರಾವ ಎಂದು ಈ ಹಳ್ಳಿಯ ಹೆಸರು. ಚಂಪಾರಾನ್ ಸತ್ಯಾಗ್ರಹದ ಸಂದರ್ಭದಲ್ಲಿ ಮಹಾತ್ಮರು ಹೆಚ್ಚಿನ ಸಮಯವನ್ನು ಈ ಹಳ್ಳಿಯಲ್ಲೇ ಕಳೆದಿದ್ದರು. ಇದರ ಬೆಲೆ ಸುಮಾರು 30,000 ರೂಪಾಯಿ. ರಾಮ ನಗರದಲ್ಲಿ ಸಾರ್ವಜನಿಕ ಸಭೆಯೊಂದನ್ನು ನಡಿಸಿ ಈ ದಾನವನ್ನು ಪ್ರಕಟಿಗೊಳಿಸಲಾಯಿತು. ಈ ದಾನದ ವಿಷಯವನ್ನು ಗಾಂಧಿಯವರಿಗೆ ತಿಳಿಸುವಂತೆ, ಸಾರ್ವಜನಿಕ ಸಭೆಯ ಅಧ್ಯಕ್ಷತೆ ವಹಿಸಿದ್ದ ಬಾಬು ರಾಜೇಂದ್ರ ಪ್ರಸಾದರನ್ನು ರಾಮ ನಗರದ ರಾಜರು ಕೇಳಿಕೊಂಡರು

ಬಿರುಗಾಳಿಯಿಂದ ಇಡೀ ಹಳ್ಳಿ ನಾಶ

ಇದೇ ತಾ. 17ರಲ್ಲಿ ಪಂಜಾಬಿನ ಫಿರೋಜಪುರ ಜಿಲ್ಲೆಯ ಲಂಬಿತ ಎಂಬ ಹಳ್ಳಿಯಲ್ಲಿ ಭಯಂಕರ ಬಿರುಗಾಳಿ ಬೀಸಿ, ಅದರೊಂದಿಗೆ ಜಡಿಮಳೆ ಸುರಿದು ಇಡೀ ಹಳ್ಳಿಯ 500 ಮನೆಗಳೂ ಬಿದ್ದುಹೋಗಿರುವವು ಸುಮಾರು 6 ಮಂದಿ ಕೊಲ್ಲಲ್ಪಟ್ಟು 40 ಮಂದಿ ಗಾಯಗೊಂಡಿರುವರು ಮರಗಳೆಲ್ಲಾ ಉರುಳಿಬಿದ್ದಿರುವವು. ಅನೇಕ ಜಾನುವಾರುಗಳು ಕೊಲ್ಲಲ್ಪಟ್ಟಿರುವವು.

ನೇಶನಲ್ ಗಾರ್ಡ್ಸ್ ದಳದ ಸಂಘಟನೆ

ಬೊಂಬಾಯಿಯಲ್ಲಿ ಸೇರಿದ ಮುಸ್ಲಿಮ್ ಲೀಗ್ ವರ್ಕಿಂಗ್ ಕಮಿಟಿಯವರು ತಮ್ಮದೇ ಆದೊಂದು ಸ್ವಯಂಸೇವಕ ದಳವನ್ನು ಸಂಘಟಿಸುವ ನಿರ್ಧಾರವಮಾಡಿರುವರು 'ನೇಶನಲ್ ಗಾರ್ಡ್ಸ್' ಎಂದೇ ಅದರ ಹೆಸರು ಅದರ ಉದ್ದೇಶ ಮತ್ತು ತತ್ವವನ್ನು ನಿರೂಪಿಸಿ ಒಂದು ಸಬ್ ಕಮಿಟಿಯೊಂದನ್ನು ಸ್ಥಾಪಿಸಿರುವರು. ಈಗ ಸರಕಾರವು [illegible] ಮುಸ್ಲಿಮ್ ಲೀಗಿನ ನೇಶನಲ್ ಗಾರ್ಡ್ಸರಿಗೆ [illegible]

ಕೂಡಲೇ ಡೊಮಿನಿಯನ್ ಸ್ಟೇಟಸ್ ಕೊಡಬೇಕು

ಇಂಡಿಯಾಕ್ಕೆ ಕೂಡಲೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯಕೊಟ್ಟು, ಆ ಮೂಲಕ ಇಂಗ್ಲೆಂಡು ಯುದ್ಧ ಸಹಾಯಪಡೆಯಬೇಕೆಂದು ಕಲ್ಕತ್ತದ ಸ್ಟೇಟ್ಸ್‌ಮೆನ್ ಪತ್ರಿಕೆಯ ಸಂಪಾದಕರಾದ ಮಿ. ಆರ್ಥರ್ ಮೂರರು ಇದೇ ತಾ. 18ರಲ್ಲಿ ಕಲ್ಕತ್ತದ ರೋಟರಿ ಕ್ಲಬ್ಬಿನಲ್ಲಿ ಕೊಟ್ಟ ಭಾಷಣದಲ್ಲಿ ಉದ್ಘೋಷಿಸಿರುವರು. ಇಂದೀಗ ಇಂಗ್ಲೆಂಡಿನ ಯುದ್ಧ ಕವಚದ ಒಂದೇ ಒಂದು ದೋಷವೆಂದರೆ ಹಿಂದೂಸ್ಥಾನ. ಬ್ರಿಟಿಷ್ ಸಾಮ್ರಾಜ್ಯ ಸರಪಳಿಯ ಮಧ್ಯಪ್ರದೇಶದಲ್ಲಿ ಪ್ರಾಮುಖ್ಯ ಸ್ಥಾನ ಪಡೆದು, 400 ಮಿಲ್ಯ ಜನತೆಯ ಆಲಯವಾಗಿದ್ದು, ಬ್ರಿಟನಿಗೆ ಅಪಾರ ಜನ ಮತ್ತು ಸಾಮಗ್ರಿ ಸಹಾಯದ ನೆಲೆಯಾಗಿರುವ ಹಿಂದೂದೇಶವು ಬ್ರಿಟಿಷ್ ರಾಷ್ಟ್ರ ಕೂಟದಲ್ಲೊಂದಾಗಿರುವುದಿಲ್ಲ. ಕೆನಡಾ, ಆಸ್ಟ್ರೇಲಿಯ, ದಕ್ಷಿಣ ಆಫ್ರಿಕಗಳಂತಹ ಸ್ಥಾನವು ಅದಕ್ಕಿಲ್ಲ. ಇಂಗ್ಲೆಂಡಿನ ಮೇಲೆ ಒಂದು ವೇಳೆ ಹಿಟ್ಲರ್ ಮುಸಲೋನಿಗಳು ಆಧಿಕಾರ ನಡಿಸುವಂತಾದರೆ ಹಿಂದೂದೇಶವು ಸ್ವತಃ [illegible]ವಾಗುವುದು. ಇಂತಹ ಅಸಹನೀಯ ಪರಿಸ್ಥಿತಿಯನ್ನು ಕೂಡಲೇ ಕೊನೆಗೊಳಿಸಬೇಕು. ಹಿಂದೂದೇಶವು ಇನ್ನು ಮುಂದೆ ತನ್ನ ಅದೃಷ್ಟ ಧ್ರುವವನ್ನೇ ಹಿಡಿದು ನಡೆಯಬೇಕು. ಆದುದರಿಂದ ಅದಕ್ಕೆ ಒಡನೆಯೇ ಡೊಮಿನಿಯನ್ ಸ್ಟೇಟಸ್ ಕೊಡಬೇಕು. ಬ್ರಿಟನು ಮೊದಲಾಗಿ ಹಿಂದೀಯರಿಗೆ ಡೊಮಿನಿಯನ ಸ್ಟೇಟಸ್ ಕೊಟ್ಟರೆ, ಹಿಂದೀಯರೆಲ್ಲಾ ಒಟ್ಟಾಗಿ ರಾಷ್ಟ್ರೀಯ ಸರಕಾರವನ್ನು ರಚಿಸಿ ಇಂಗ್ಲೆಂಡಿಗೆ ಬೇಕಾದ ಸಹಾಯವೀಯದಿರಲಾರರು. ಅಂತಹ ಸಂದರ್ಭದಲ್ಲಿ ಮಿ. ಜಿನ್ನ ಮತ್ತು ಮಹಾತ್ಮ ಗಾಂಧಿಯವರು ಒಂದಾಗದಿರಲಾರರು. ಇಂಗ್ಲೆಂಡು ತನ್ನ ಕರ್ತವ್ಯವನ್ನು ಮೊದಲು ಮಾಡಬೇಕು. ಹಿಂದೀ ಬಿಕ್ಕಟ್ಟನ್ನು ಕೂಡಲೆ ಪರಿಹರಿಸಬೇಕು. ಇಂದೀಗ ಮುಸ್ಲಿಮ್ ಲೀಗಿನವರೂ ಕಾಂಗ್ರೆಸ್ಸಿನವರೂ ಯುದ್ಧ ಕಮಿಟಿಗಳಲ್ಲಿ ಸಹಕರಿಸದೆ ತಮ್ಮದೇ ಆದ ಬೇರೆ ರಕ್ಷಕ ದಳಗಳನ್ನು ಸಂಘಟಿಸಿ

TROPICAL.

TROPICAL INSURANCE CO. LTD. does not boast of 'big' figures. It has not been writing crores of Busines every Year. That was never its intention. It never aimed at breaking "records" at dangerous cost. Whatever it did it wrote sound business that endures in the books of the Company. Thus although not the biggest it is one of the best of Life Offices in India.

The Company, founded by Pandit Moti Lal Nehru, Dr. Ansari and Hakim Ajmal Khan, and guided now under the Chairmanship of Sj. Subhas Chandra Bose offers excellent chances to young men of culture & education to forge out their careers.

THE
Tropical Insurance Co., Ltd.
Branch Office: NIVAS BUILDING, Hampankatta,
MANGALORE.

Manager: M. SUNDER RAM SHETTY.

ಕೊಳ್ಳುತ್ತಿದ್ದಾರೆ. ಅದು ಹುಚ್ಚುತನ. ಅದನ್ನು ಇಂಗ್ಲೆಂಡು ಕೊನೆಗೊಳಿಸಬೇಕು. ಈ ಯುದ್ಧದಲ್ಲಿ ಅಮೇರಿಕವು ಪ್ರಾಮುಖ್ಯ ಭಾಗ ವಹಿಸಲಿದೆ. ಅಲ್ಲಿ ಹೆಚ್ಚಿನ ಪ್ರಚಾರ ನಡೆಯಬೇಕಾಗಿದೆ ಈಗ ಇಂಗ್ಲೆಂಡಿನ ಪರವಾಗಿ ಪ್ರಚಾರಮಾಡುವವರಿಗೆ ಅಮೇರಿಕದಲ್ಲಿ ಹೆಚ್ಚಿನ ಪ್ರೋತ್ಸಾಹ ದೊರೆಯುವುದಿಲ್ಲ. ಮಾನ್ಯ ಶ್ರೀನಿವಾಸ ಶಾಸ್ತ್ರಿ ಮತ್ತು ಪಂಡಿತ ಜವಾಹರಲಾಲರಂಥವರು ಅಮೇರಿಕಕ್ಕೆ ಹೋಗಿ ಪ್ರಚಾರಮಾಡಿದರೆ ಅಮೇರಿಕಾನರು ಉದಾರ ಸಹಾಯವೀಯದಿರಲಾರರು. ಹಿಂದೀಯರು ತಾವಾಗಿಯೇ ಯುದ್ಧದಲ್ಲಿ ಸೇರುವಂತೆ ಇಂಡಿಯಾ ಸರಕಾರದ ರಚನೆಯಾಗಬೇಕೆಂದು ಮಿ. ಅರ್ಥರ್ ಮೂರರು ಬ್ರಿಟಿಷ್ ಸರಕಾರದೊಡನೆ ಆಗ್ರಹದಿಂದ ವಿನಂತಿಮಾಡಿಕೊಂಡಿರುವರು

ನೋಟುಗಳನ್ನು ಸ್ವೀಕರಿಸದುದಕ್ಕೆ ಶಿಕ್ಷೆ

ಸಂಯುಕ್ತ ಪ್ರಾಂತದ ರಿಷಿಕೇಶ್ ಎಂಬಲ್ಲಿಯ ಮಿಹಾರ್‌ಸಿಂಗ್ ಎಂಬ ವ್ಯಾಪಾರಿಯು ತನ್ನ ಅಂಗಡಿಯಲ್ಲಿ ಹಿಟ್ಟನ್ನು ತೆಗೆದುಕೊಂಡ ಯಾತ್ರಿಕರಿಂದ ನೋಟನ್ನು ಪಡೆಯಲು ನಿರಾಕರಿಸಿದ ಆರೋಪದಿಂದ ಖಟ್ಲೆಗೊಳಗಾಗಿ 9 ತಿಂಗಳ ಕಠಿಣ ಶಿಕ್ಷೆ ಮತ್ತು ರೂ. 100 ಜುಲ್ಮಾನೆಗೊಳಗಾಗಿರುವನು. ಇದೇ ಆರೋಪದಿಂದ ಇನ್ನಿಬ್ಬರು ವ್ಯಾಪಾರಿಗಳೂ ದಸ್ತಗಿರಿ ಮಾಡಲ್ಪಟ್ಟಿರುವರು ಪ್ರತಿ ಐದು ರೂಪಾಯಿ ನೋಟಿನ ಮೇಲೆ ಒಂದೊಂದು ರೂಪಾಯಿ ಕಮಿಶನು ಪಡೆದು ರೂಪಾಯಿ ಕೊಟ್ಟ ಆರೋಪದಿಂದ ಇನ್ನೊಬ್ಬ ವ್ಯಾಪಾರಿಯೂ 6 ತಿಂಗಳ ಶಿಕ್ಷೆಗೊಳಗಾಗಿರುವನು.

ಶ್ರೀ. ಸುಭಾಸ ಭೋಸರು

ಇದೇ ತಾ. 19ರಲ್ಲಿ ನಾಗಪುರದಲ್ಲಿ ನಡೆದ ಅಖಿಲ ಭಾರತ ಫೋರ್ವರ್ಡ್ ಬ್ಲೋಕಿನ ಎರಡನೇ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸಿ ಅನಂತರ ಅಲ್ಲಿಂದ ಇದೇ ತಾ. 21ರಲ್ಲಿ ವಾರ್ಧಕ್ಕೆ ಹೋಗಿ ಗಾಂಧಿಜಿಯವರೊಡನೆ 2 ಘಂಟೆಯ ವರೆಗೆ ದೇಶದ ಪ್ರಕೃತದ ರಾಜಕೀಯ ಪರಿಸ್ಥಿತಿಯ ಕುರಿತು ಮಾತುಕತೆ ನಡಿಸಿದರು ಅಲ್ಲಿಂದ ಶ್ರೀ ಭೋಸರು ತಾ. 22ರಲ್ಲಿ ಬೊಂಬಾಯಿಗೆ ಹೋಗಿ ಮಿ. ಜಿನ್ನರೊಡನೆ ಮಾತಾಡಿರುವರು. ಇದರ ಉದ್ದೇಶವೇನೆಂದು ಸ್ಪಷ್ಟವಾಗಿ ತಿಳಿದುಬಂದಿಲ್ಲ. ಫೋರ್ವರ್ಡ್ ಬ್ಲೋಕ್ ಮತ್ತು ಮುಸ್ಲಿಮ್ ಲೀಗಿನವರು ಸಹಕರಿಸಿ ನಡೆಯುವದೇ ಈ ಮಾತುಕತೆಯ ಉದ್ದೇಶವೆಂದು ಸುದ್ದಿಯು ಉಂಟಾಗಿದೆ. ಶ್ರೀ. ಭೋಸರು ಹಿಂದು ಮಹಾ ಸಭೆಯ ಅಧ್ಯಕ್ಷರಾದ ಶ್ರೀ. ಸಾವರ್ಕರರೊಡನೆಯೂ ಮಾತಾಡಿರುವರೆಂದು ತಿಳಿದುಬರುತ್ತದೆ.

ಹಿಂದೀಯರೆಲ್ಲಾ ಒಂದೇ ಜನಾಂಗವಾಗಬೇಕು

ಅಹಿಂಸೆ ಮತ್ತು ಸತ್ಯಾಗ್ರಹದಿಂದ ಹಿಂದೂದೇಶದ ಸಂರಕ್ಷಣೆ ಮಾಡಬಹುದೆಂಬುದು ಮಕ್ಕಳಾಟಿಕೆ. ಆದುದರಿಂದ ಇಂದು ಹಿಂದೀಯರು ತಮ್ಮ ದೇಶರಕ್ಷಣೆಯ ವ್ಯವಸ್ಥೆಯನ್ನು ಶೀಘ್ರವಾಗಿ ಕೈಕೊಳ್ಳಬೇಕು. ಇಂಗ್ಲೆಂಡಿನ ಮಾದರಿಯನ್ನನುಸರಿಸಿ ಹಿಂದೂದೇಶದ ಎಲ್ಲಾ ಪಕ್ಷಗಳೂ ಒಂದಾಗಿ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿಕೊಳ್ಳಬೇಕು. ದೇಶದಲ್ಲಿ ಭಿನ್ನ ಭಿನ್ನ ಪಕ್ಷಗಳಿಂದೇ ಇರಕೂಡದು ಮುಸ್ಲಿಮ್ ಲೀಗ್ ಮತ್ತು ಗಾಂಗ್ರೆಸ್ಸಿನವರು ಒಂದುಗೂಡಬೇಕು. ಪ್ರತಿ ಪ್ರಾಂತ ಮತ್ತು ಕೇಂದ್ರದಲ್ಲಿ ಸಮ ಸಮ ಮುಸಲ್ಮಾನ ಮತ್ತು ಹಿಂದು ಮತ್ತು ಇತರ ಅಲ್ಪಸಂಖ್ಯಾಕ ಸಮಾಜಗಳ ಒಬ್ಬೊಬ್ಬ ಮಂತ್ರಿಗಳಿರುವ ಸಂಯುಕ್ತ ಮಂತ್ರಿಮಂಡಲವು ಸ್ಥಾಪಿಸಲ್ಪಡಬೇಕು. ಏಕಜನಾಂಗ ಮತ್ತು ಏಕರಾಷ್ಟ್ರೀಯ ಭಾವನೆಯಿಂದ ಹಿಂದೀಯರೆಲ್ಲರೂ ಕೂಡಿಗೊಂಡು ಇಂದಿನ ತಮ್ಮ ರಕ್ಷಣೆಯ ಏರ್ಪಾಡನ್ನೂ ಭವಿಷ್ಯ ನಿರ್ಮಾಣವನ್ನೂ ಮಾಡಬೇಕೆಂದೇ ಶ್ರೀಮಾನ್ ಶ್ರೀನಿವಾಸ ಐಯ್ಯಂಗಾರರ ಸೂಚನೆ.

ಸುಯೆಜ್ ಕಾಲುವೆಯ ಮೇಲೆ ಇಟಲಿಯ ಕಣ್ಣು

ಡಿಲಿಸೆಪ್ಸ್‌ನೆಂಬ ಫ್ರೆಂಚ್ ಇಂಜನೀಯರನು ಸುವೇಜ್ ಕಾಲುವೆ ಕಟ್ಟಿ ಹಿಂದೂಸ್ಥಾನ ಮತ್ತು ಇಂಗ್ಲೆಂಡುಗಳ ವ್ಯಾಪಾರ ಮಾರ್ಗವನ್ನು 4000 ಮೈಲು ಸಮೀಪಗೊಳಿಸಿದನು. ಇಷ್ಟೊಂದು ಆಯಕಟ್ಟಿನ ಸ್ಥಳ ಇದೀ ಲೋಕದಲ್ಲೇ ಇರಲಾರದು. ಈ ಕಾಲುವೆಯ ರಕ್ಷಣೆಯ ಜವಾಬ್ದಾರಿಯನ್ನು ಇಂಗ್ಲೆಂಡು ಹೊತ್ತಿದೆ. 1888ನೇ ಒಪ್ಪಂದದ ಮೇರೆಗೆ ಯುದ್ಧ ಸಂದರ್ಭದಲ್ಲಿ ಕೂಡಾ ಸುವೇಜು ಎಲ್ಲಾ ರಾಷ್ಟ್ರಗಳಿಗೂ ತೆರೆದಿಡಲ್ಪಡಬೇಕು. ಈ ಕಾಲುವೆಯಲ್ಲಾಗಲಿ, ಅದರ ತುದಿಬುಡದಲ್ಲಾಗಲಿ ಅದಕ್ಕೆ ಮೂರು ಮೈಲು ವಿಸ್ತೀರ್ಣದಲ್ಲಾಗಲೀ ಯುದ್ಧ ಮಾಡಬಾರದು. ಸೇನೆ ಇರಬಾರದೆಂಬ ನಿಯಮವಿದೆ. ಒಡಂಬಡಿಕೆ ಮೇರೆಗೆ ಈ ಕಾಲುವೆಯ ಕುರಿತು ಐಗುಪ್ತಕ್ಕೆ ಹೆಚ್ಚಿನ ಸ್ವಾತಂತ್ರ್ಯವಿದೆ. ಅದರೊಡನೆ ಸಂಧಿಮಾಡಿಕೊಂಡು ಬ್ರಿಟಿಷರು ಸುವೇಜನ್ನು ಯುದ್ಧಹಡಗ, ಸೇನೆ ಮತ್ತು ವಿಮಾನಪಡೆಗಳಿಂದ ರಕ್ಷಿಸುತ್ತಿದ್ದಾರೆ. ಅದರೊಳಗೆ ಪ್ರವೇಶಿಸುವ ಹಡಗಗಳನ್ನೆಲ್ಲಾ ಪರೀಕ್ಷಿಸುತ್ತಾರೆ. ಇತ್ತಲಾಗಿ ಎರಡು ಇಟಲಿಯಾನ ಸಬ್‌ಮೆರೀನ್‌ಗಳನ್ನೂ ಹೋಗಬಿಟ್ಟಿದ್ದರು. ಅಬಿಸೀನಿಯ ಯುದ್ಧದಲ್ಲಿ ಸುವೇಜ್ ಕಾಲುವೆ ಮುಚ್ಚಿಬಿಡುತ್ತಿದ್ದರೆ ಪ್ರಾಯಶಃ ಅದು ರಕ್ಷಿಸಲ್ಪಡುತಿತ್ತು. ಫ್ರೆಂಚ್ ಮತ್ತು ಬ್ರಿಟಿಷ್ ಸರಕಾರಗಳು ಅದಕ್ಕೆ ಸಿದ್ಧವಿರಲಿಲ್ಲ ಆಫ್ರಿಕದ ಇಟಲಿಯಾನ ವಸಾಹತುಗಳಿಗೆ ಸುವೇಜ್ ಕಾಲುವೆಯೆಂಬುದೇ ರಕ್ತನಾಡಿ. ಬ್ರಿಟಿಷ್ ಸಾಮ್ರಾಜ್ಯಕ್ಕೆ ಅದೇ ಹೃದಯ. ತನ್ನ ವಸಾಹತಾದ ಅಬಿಸೀನಿಯ, ಅಂಟ್ರಿಯ, ಎಬಿಯ ಮತ್ತು ಸೋಮಾಲೀಲೆಂಡುಗಳಿಗೆ ಹೋಗಲು ಇಟಲಿಗೆ ಬೇರೆ ದಾರಿಯೇ ಇಲ್ಲ. ಆದುದರಿಂದ ಈ ಕಾಲುವೆಯ ಮೇಲೆ ಇಟಲಿಯು ಕಣ್ಣುಹಾಕಿದೆ. ಅದನ್ನೆಲ್ಲಿಯಾದರೂ ಇಟಲಿಯು ವಶಪಡಿಸಿಕೊಳ್ಳಲೆತ್ನಿಸಿದರೆ ಅದರ ಬಾಯಿಯ ಸಮೀಪ ಭೂಮಧ್ಯಸಾಗರದಲ್ಲಿ ಅತಿ ದೊಡ್ಡ ಜಲಯುದ್ಧ ನಿಶ್ಚಯ

ಪೂರ್ವ ಆಫ್ರಿಕದ ಪರಿಸ್ಥಿತಿ

ಇಟಲಿಯು ಯುದ್ಧಕ್ಕಿಳಿದಂದಿನಿಂದ ಪೂರ್ವ ಆಫ್ರಿಕಕ್ಕೂ ಸಮರವು ವ್ಯಾಪಿಸಿದೆ. ಬ್ರಿಟಿಷ ವಿಮಾನಗಳು ಕೂಡಲೆ ಅಬಿಸೀನಿಯ, ಲಿಬಿಯ, ಅರಿಟ್ರಿಯದ ವಿಮಾನ ನಿಲಯಗಳ ಮೇಲೆ ವಿಮಾನಧಾಳಿ ನಡಿಸಿ ಹಾವಳಿ ಮಾಡಿದುದಲ್ಲದೆ ಗಡಿನಾಡುಗಳಲ್ಲಿ ಹೋರಾಟವೂ ನಡದಿದೆ ಇಟಲಿಯಾನ ವಿಮಾನಗಳೂ ಏಡೆನ್, ಅಲೆಗ್ಸಾಂಡ್ರಿಯ ಮೊದಲಾದ ಸಂದುಕಟ್ಟಿನ ಸ್ಥಳಗಳ ಮೇಲೆ ಬೋಂಬೆಸೆದಿವೆ. ಐಗುಪ್ತ ಮತ್ತು ಟರ್ಕಿಗಳು ಈ ವರೆಗೆ ತಟಸ್ಥನಿಂತಿವೆ. ಆದರೆ ಐಗುಪ್ತಕ್ಕೆ ಬ್ರಿಟಿಷರ ಪಕ್ಷ ಹಿಡಿಯದೆ ನಿರ್ವಾಹವಿಲ್ಲವಾಗುವುದು. ಪೂರ್ವ ಆಫ್ರಿಕದಲ್ಲಿ ಇಟಲಿಯಾನ್ ಸೋಮಾಲೀಲೆಂಡ್ ಎಂಬುದು ಹಿಂದು ಸಾಗರ ಮತ್ತು ಏಡನ್ ಕೊಲ್ಲಿಗಳಿಗೆ ತಾಗಿಕೊಂಡಿದೆ. ಏಡನ್ ಕೊಲ್ಲಿಯ ಉತ್ತರದಲ್ಲಿ ಅರೇಬಿಯ ಮತ್ತು ದಕ್ಷಿಣದಲ್ಲಿ ಬ್ರಿಟಿಷ್ ಮತ್ತು ಫ್ರೆಂಚ್ ಸೋಮಾಲೀಲೆಂಡ್‌ಗಳಿವೆ. ಇವುಗಳ ದಕ್ಷಿಣದಲ್ಲಿ ಅಬಿಸೀನಿಯವಿದೆ. ಅಬಿಸೀನಿಯದ ಕೆಳಗೆ ಬ್ರಿಟಿಷರಿಗೆ ಸೇರಿದ ಕನ್ಯ ಮತ್ತು ದಕ್ಷಿಣ ಆಫ್ರಿಕ ಮೊದಲಾದುವು ಇವೆ. ಏಡೆನ್ ಕೊಲ್ಲಿಯ ನಂತರ ಉತ್ತರಕ್ಕೆ ಕೆಂಪು ಸಮುದ್ರವಿದೆ. ಈ ಸಮುದ್ರದ ಪೂರ್ವದಲ್ಲಿ ಅರೇಬಿಯವಿದೆ. ಪಶ್ಚಿಮದಲ್ಲಿ ಇಟಲಿಗೆ ಸೇರಿದ ಅಂಟ್ರಿಯವಿದೆ. ಅಂಟ್ರಿಯದ ಪಶ್ಚಿಮ ಮತ್ತು ಉತ್ತರದಲ್ಲಿ ಐಗುಪ್ತವಿದೆ. ದಕ್ಷಿಣ ಆಫ್ರಿಕವು ಈಗಲೇ ಬ್ರಿಟಿಷರ ಪಕ್ಷ ಹಿಡಿದಿದೆ. ಐಗುಪ್ತವು ಮುಂದೆ ಸೇರುವುದಂತೂ ನಿಶ್ಚಯ ಇವುಗಳ ಸಹಾಯದಿಂದ ಬ್ರಿಟನು ಮೂರು ಕಡೆಗಳಿಂದ ಇಟಲಿಯಾನ ವಸಾಹತುಗಳ ಮೇಲೆ ಹಲ್ಲೆ ನಡಿಸುವುದು. ಹಿಂದೀ ಸೈನಿಕರು ಇಷ್ಟರಲ್ಲೇ ಐಗುಪ್ತದಲ್ಲಿದ್ದಾರೆ ಇನ್ನಾದರೂ ಹೆಚ್ಚು ಹಿಂದೀ ಸೇನೆಯು ಐಗುಪ್ತಕ್ಕೆ ಕಳುಹಿಸಲ್ಪಡಬಹುದು. ಯುದ್ಧವು ಭೂಮಧ್ಯಸಾಗರಕ್ಕೂ ಹಬ್ಬಬಹುದು. ಇಟಲಿಗೂ ಕೆಲವು ಅನುಕೂಲತೆಗಳಿವೆ. ಅದು ಬ್ರಿಟಿಷ್ ಮತ್ತು ಫ್ರೆಂಚ್ ಸೋಮಾಲೀಲೆಂಡುಗಳನ್ನು ನಾಲ್ಕು ಕಡೆಗಳಿಂದ ಮುತ್ತಬಹುದು. ಕೆಂಪು ಸಮುದ್ರ ಮಾರ್ಗವಾಗಿ ಹಡಗ ಸಂಚಾರವಾಗದಂತೆ ತಡೆಗಟ್ಟಬಹುದು. ಅರಿಟ್ರಿಯದ ಮಸಾವದಲ್ಲಿ ಇಟಲಿಯ ಸಬ್‌ಮೆರಿನ್ ಮತ್ತು ವಿಮಾನ ನಿಲಯಗಳಿವೆ. ಇಲ್ಲಿಂದ ಅದು ಬ್ರಿಟಿಷ್ ವಸಾಹತು ಮತ್ತು ಹಿಂದೂ ದೇಶದ ಮೇಲೂ ಹಲ್ಲೆ ನಡಿಸಬಹುದು.

ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 109/1938 R. I. A. 1311/1940

1. ಬಾಡೂರು ತಿಂಮಣ್ಣ ಆಳ್ವ ವಾದಿ ಪ್ರತಿವಾದಿರಲ್ಲಿ 2. ಅಂತಕ್ಕೆ ಹೆಂಗ್ಸು ಅರ್ಜಿದಾರಳು.

ಮಂಮ್ಮು ಬ್ಯಾರಿ ಕೂಡಾ ಪ್ರತಿವಾದಿರು. ರೆಸ್ಪೋಡೆಂಟರು.

ಕಾಸ್ರಗೋಡು ತಾಲ್ಲೂಕು ಬಾಡೂರು ಗ್ರಾಮದ ಕೋಲಾರು ಎಂಬಲ್ಲಿರುವ ಮೂರುಮಗ 7ನೇ ಪ್ರತಿವಾದಿ ಕೊರಗನಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೇಲ್ಕಂಡ ಪ್ರಿಲಿಮಿನರಿ ಡಿಕ್ರಿ ಪ್ರಕಾರ ಬಾಕಿ ಐವಜುಗಳನ್ನು ಪ್ರತಿವಾದಿರು ವಸೂಲುಕೊಡದ್ದರಿಂದ ಸದ್ರಿ ಪ್ರಿಲಿಮಿನರಿ ಡಿಕ್ರಿ ಪ್ರಕಾರ ಬಾಕಿ ಐವಜುಗಳನ್ನು ದಾವಾ ಆಸ್ತಿ ಮಾರಾಟದಿಂದ ಬರಮಾಡುವರೆ ಸದ್ರಿ ಪ್ರಿಲಿಮಿನರಿ ಡಿಕ್ರಿಗನುಸರಿಸಿ ಫೈನಲ್ ಡಿಕ್ರಿ ಕೊಡಿಸಬೇಕು ಎಂತ ವಾದಿಯು ಮಾಡಿದ ಮೇಲ್ಕಂಡ ಅರ್ಜಿ ತನ್ನಿ ಕವಾಯ ಸದ್ರಿ ವಾದಿಯು ಮೃತಪಟ್ಟಿರುವುದರಿಂದ ಸದ್ರಿ ಮೃತವಾದಿಯ ಸ್ಥಾನಕ್ಕೆ 2ನೇ ಅರ್ಜಿದಾರಳು ಅಂತಕ್ಕೆ ಹೆಂಗ್ಸು ವಾರಿಸ್ದಾರಳಾಗಿ ಸೇರಿ ಸದ್ರಿ 2ನೇ ಅರ್ಜಿದಾರಳ ಹೆಸ್ರಿಗೆ ಫೈನಲ್ ಡಿಕ್ರಿ ಕೊಡಿಸಬೇಕು ಎಂತ ಮಾಡಿದ ಮೇಲ್ಕಂಡ ಅರ್ಜಿಯು ತಾ. 8-7-40ಕ್ಕೆ ತನಿಕೆಗೆ ಇರುವದ್ರಿಂದ ಆ ಕುರಿತು ನಿಮ್ಮ ಆಕ್ಷೇಪಣೆಯಿದ್ರೆ ಸದ್ರಿ ತಾರೀಕಿಗೆ ಈ ಕೋರ್ಟು ಮುಂದೆ ಸ್ವತಃ ಯಾ ವಕೀಲರ ಮುಖಾಂತ್ರ ನಿಮ್ಮ ಆಕ್ಷೇಪಣೆಗಳನ್ನು ಜಾಹೀರುಮಾಡಿಕೊಳ್ಳದಿದ್ರೆ ಏಕಪಕ್ಷವಾಗಿ ತೀರ್ಮಾನಿಸಲಾದೀತು

ಪುತ್ತೂರು 17-6-40 — **H. Sanjiva Shetty,** *Advocate for Plaintiff.*

THE

BOMBAY LIFE ASSURANCE Company Limited.

[ESTD. 1908]

LIFE INSURANCE

Dispels darkness of the mind and brings Enlightenment and Courage, Immortalises major portion of your Income whether you survive or not and thus makes life worth living to you and your dependants in reality.

—○—

Ask us what particular scheme of Insurance will satisfy your requirements and your purse.

—○—

Agency Applications from Active and Influential Ladies & Gentlemen are invited.

To Insure or to Represent consult

KOCHIKAR BROTHERS LTD.,

MADRAS BRANCH SECRETARIES AND

Chief Agents for Bombay City & Suburbs,

BOMBAY LIFE BUILDING,

Sir Lalubhai Samaldas Road,

GANDHI NAGAR, **UDIPI.**

Or any of their following Offices at:—

Puthiyara, CALICUT.	Car Street, MANGALORE.	Central Station Road, TRIVANDRUM.
Gautam Nivas, Charni Road, Girgaum, BOMBAY No. 4.	Post Box No. 337, Mount Road, MADRAS	Visveswarapuram Circle BANGALORE CITY.

ಉಪಾಧ್ಯಾಯರ ವ್ಯಂಗ್ಯ ಚಿತ್ರ ೧.

ನಮ್ಮ ವಿಷ್ಣುಮೂರ್ತಿ

ವಿಷ್ಣುಮೂರ್ತಿಯ ಕಾರ್ಣಿಕದಿಂದ ತಪ್ಪಿಸಿಕೊಂಡು ಹೋದ ಎಮ್ಮೆ ಪುನಃ ಹಟ್ಟಿ ಸೇರಿತು; ಗೋವಿಂದ ಶೆಟ್ಟಿಯ ನಂಬ್ರ ಗುಣವಾಯಿತು; ಆದರೆ ಹರಿಕೆ ಪೂರೈಸದ ರಾಮಪ್ಪನ ಹುಡುಗ ಸತ್ತುಹೋಯಿತು; ಕಿಟ್ಟಣ್ಣನ ಕರುವೂ ಸತ್ತಿತು. ಸುಬ್ಬಣ್ಣನ ಮನೆಯೇ ಸುಟ್ಟಿತು. ವಿಷ್ಣುಮೂರ್ತಿ ಕಾರ್ಣಿಕ ತೋರಿಸದೆ ಮತ್ತೇನು ಮಾಡಲಿ? ಕೋರ್ಟಿಗೆ ಹೋಗುವುದೇ?

ಲೇಖಕರು:- ಶ್ರೀ. ಪಾವೂರು ವಾಸುದೇವ ಉಪಾಧ್ಯಾಯ, ಬಿ.ಎ. ಎಲ್.ಎಲ್.ಬಿ.,

ಯಾರು ಏನೇ ಹೇಳಲಿ, ನಮ್ಮ ಹಳ್ಳಿಯ ವಿಷ್ಣುಮೂರ್ತಿಗಿಂತ ದೊಡ್ಡ ದೇವರಿಲ್ಲ ಅಂತ ನನ್ನ ಅಭಿಪ್ರಾಯ. ಅದೆಲ್ಲಾ ಅವರವರ ವಿಶ್ವಾಸ ಅನ್ನಿ. ಆದರೂ, ಅಲ್ಲಾ, ಅವನಿಗೊಂದು ಗಂಟೆ ಪ್ರಕಾರ ಪೂಜೆ ಅಲ್ಲ, ವರ್ಷಕ್ಕೊಂದು ಉತ್ಸವ ಅಲ್ಲ, ಏನೋ ಒಂದು ಶಾಸ್ತ್ರಕ್ಕೆ ತಕ್ಕ ಅಪ್ಪ ತಪಡಿ ನಂದಾದೀಪ ನಡೆಯುತ್ತಿದೆ ಎನ್ನಬಹುದು. ಅದೂ ನಮ್ಮ ಗೋಪಣ್ಣ ಭಟ್ರಿಗೆ ಪುರುಸೋತು ಆದ ಹಾಗೆ, ಆದರೂ ಒಂದು ನಾಲ್ಕಾಣೆ ಪಂಚಕಜ್ಜಾಯ ಮಾಡಿಸುತ್ತೇನೆ ಮಹಾರಾಯಾ, ಇಂತಹದೊಂದು ಕೆಲಸ ನಿನ್ನಿಂದ ಆಗಬೇಕೆಂದು ಒಬ್ಬ ಬಂದು ಹೇಳಿಕೊಂಡರೆ ಈ ವರೆಗೆ ಅದು ಆಗದೆಹೋದದ್ದು ಇಂತಿಲ್ಲ. ಅದೇಕೆ? ಮೊನ್ನೆ ನಮ್ಮ ಶೀನಪ್ಪಯ್ಯನ ಎಮ್ಮೆ ತಪ್ಪಿಸಿಕೊಂಡುಹೋದದ್ದನ್ನು ಅವರು ಎಷ್ಟು ಕಡೆ ಹುಡುಕಿದರು, ಎಷ್ಟು ಪ್ರಶ್ನೆ ಕೇಳಿದರು, ಹಗ್ಗ ಮಂತ್ರಿಸಿದರು, ಎಲ್ಲೆಲ್ಲಿಯ ಪೇಟೆಯ ದೇವರುಗಳಿಗೆಲ್ಲಾ ಹರಕೆ ಹೇಳಿಕೊಂಡರು. ಏನೂ ಪ್ರಯೋಜನಕ್ಕೆ ಬೀಳಲಿಲ್ಲ. ಕಡೆಗೆ ನಮ್ಮ ಗೋಪಣ್ಣ ಭಟ್ರು, "ಇರಲಿ, ಶೀನಪ್ಪಯ್ಯಾ! ದೊಡ್ಡ ದೊಡ್ಡ ದೇವರುಗಳಿಗೆಲ್ಲಾ ನೀವು ಈ ವರೆಗೆ ಹರಕೆ ಹೇಳಿ ನೋಡಿದಿರಲ್ಲಾ? ನಮ್ಮಲ್ಲಿಯ ವಿಷ್ಣುಮೂರ್ತಿಗೊಂದು ನಾಲ್ಕಾಣೆಯ ಪಂಚಕಜ್ಜಾಯ ಹೇಳಿಕೊಂಡು ನೋಡಿ," ಎಂದರಂತೆ. ಶೀನಪ್ಪಯ್ಯನವರಿಗೆ ನಮ್ಮ ದೇವರೆಂದರೆ ಸ್ವಲ್ಪ ಹಾಗ್ಹಾಗೆ. ತನ್ನ ವೆಂಕಟ್ರಮಣ ದೇವರನ್ನು ಹೊಗಳಿ ಪೂರೈಸದು ಅವರಿಗೆ. ಆದರೂ ಎಮ್ಮೆ ಹುಡುಕಿ ಹುಡುಕಿ ಸೋತವರಾದ್ದರಿಂದ "ಆಗಲಿ, ದೇವರೆಲ್ಲರೂ ಒಂದೇ; ನನಗೆ ಭೇದ ಇಲ್ಲ. ಎಮ್ಮೆ ಸೌಖ್ಯದಲ್ಲಿ ಹಟ್ಟಿಗೆ ಬಂದರೆ ನಿಮ್ಮ ವಿಷ್ಣುಮೂರ್ತಿಗೆ ನಾಲ್ಕಾಣೆಯ ಪಂಚಕಜ್ಜಾಯ ಮಾಡಿಸುವುದೊಂದು ಏನು ದೊಡ್ಡ ವಿಷಯ," ಎಂದು ಹೇಳಿ ಶೀನಪ್ಪಯ್ಯ ಮನೆಗೆ ಹೋಗಿ ನೋಡುವಾಗ ಹಟ್ಟಿಯಲ್ಲಿ ಎಮ್ಮೆ ನಿಂತುಕೊಂಡು ಕೂಗುತ್ತಿದೆಯಂತೆ! ನಂತರ ಈಗ ಯಾವ ಕಷ್ಟ ಬಂದರೂ ನಮ್ಮ ವಿಷ್ಣುಮೂರ್ತಿಗೆ ಶೀನಪ್ಪಯ್ಯನವರ ನಾಲ್ಕಾಣೆ ಉಂಟೇ ಉಂಟು. ಇನ್ನೊಂದು ವಿಷಯ ಕೇಳಿ:- ವಿಷ್ಣುಮೂರ್ತಿಗೆ ಹರಕೆ ಹೇಳಿಕೊಳ್ಳುವುದಲ್ಲವಾದರೆ ನಮ್ಮ ಗೋವಿಂದ ಶೆಟ್ಟಿಯು ನಂಬರ ಗುಣವಾಗುತ್ತಿತ್ತೇ? ವಿಚಾರಣೆ ಮುಗಿದ ಕೂಡಲೇ ಅವನ ವಕೀಲರು "ನಂಬ್ರವನ್ನು ಒಳ್ಳೇ ಮಾತಿನಲ್ಲಿ ರಾಜಿಮಾಡಿಕೋ, ಇಲ್ಲವಾದರೆ ನಿನಗೆ ಟೊಪ್ಪಿ ಬೀಳುವುದು ಖಂಡಿತ" ಎಂದು ಎಷ್ಟು ಹೇಳಿದರೂ 'ಏನೋ ನಮ್ಮ ಊರಿನ ವಿಷ್ಣುಮೂರ್ತಿಯಿದ್ದಾನೆ, ಅವನನ್ನು ನಂಬಿದ್ದೇನೆ. ಈ ವರೆಗೆ ನನ್ನ ಮರ್ಯಾದೆ ಅವನು ಕಾಪಾಡಿದ್ದಾನೆ' ಎಂದು ಗೋವಿಂದ ಶೆಟ್ಟಿ ಗಟ್ಟಿಯಾಗಿ ನಿಂತುಬಿಟ್ಟ. ಹೇರಂಗಿ ಕಾಲದಲ್ಲಿ ವಕೀಲರಿಗೆ ಬಾಯಿ ಎತ್ತಲಿಕ್ಕೆ ಬಿಡದ ಮುನ್ಸಿಫರು ಗೋವಿಂದ ಶೆಟ್ಟಿಯ ಗುಣಕ್ಕೆ ಡಿಕ್ರಿ ಬರೆಯುವುದೆಂದರೆ ಅದು ಹೇಗೆ ಹೇಳಿ! ಆದರೆ ಏನು ಮಾಡುವುದು ಹೇಳಿ, ನಮ್ಮ ವಿಷ್ಣುಮೂರ್ತಿ ಎಲ್ಲಾದರೂ ಪೇಟೆಯಲ್ಲಿ ಬೀಳಬೇಕಿತ್ತು! ನಮ್ಮ ಸಾಹುಕಾರ ಬಗೆಯವರ ಕೈಯಲ್ಲಿ ಅವ ಇರಬೇಕಿತ್ತು! ಹಾಗಿದ್ದರೆ ಅದರ ತಮಾಷೆಯೇ ಬೇರೆಯಿತ್ತು!

ದೇವರಿಗೆ ಬರೇ ಆಕರ್ಷಕವೊಂದೇ ಇದ್ದರೆ ಸಾಲದು. ದೇವಸ್ಥಾನವೆಂದ ಮೇಲೆ ಅದು ಒಂದು ರೀತಿಯಿರಬೇಕು. ದೇವರೆಂದು ಬರೀ ಕಲ್ಲಿನ ಮೂರ್ತಿಯೊಂದು ನೆಟ್ಟಗೆ ನಿಂತುಕೊಂಡರೆ ಅದನ್ನು ಯಾರು ಕೇಳುತ್ತಾರೆ? ಚಿನ್ನದ ಕವಚ ಇಲ್ಲದಿದ್ದರೂ ಆಭರಣಗಳಾದರೂ ಬೇಕು. ಎದುರಲ್ಲಿ ನಾಲ್ಕು ದೀಪಗಳೂ ಬೇಕು. -ಮಿನುಗೆಲೆ ಮಿನುಗೆಲೆ ನಕ್ಷತ್ರ- ಎಂದು ಚಿಕ್ಕ ಮಕ್ಕಳು ಹೇಳುವಂತೆ ಹಸುರು ಬಣ್ಣದ ಸಣ್ಣದೊಂದು ನಂದಾದೀಪ ಇದ್ದರೆ ಸಾಲದು. ದೇವಸ್ಥಾನದ ಕಟ್ಟೋಣವೂ ಗಂಭೀರವಾಗಿರಬೇಕು. ರಾತ್ರಿ ಕಾಲದಲ್ಲಿ ಅಲ್ಲಲ್ಲಿ ಗ್ಯಾಸ್ ಅಥವಾ ಇಲೆಕ್ಟ್ರಿಕ್ ದೀಪಗಳು ಜಗ್ಗನ್ನುತ್ತಿರಬೇಕು, ಹಾಗಿದ್ದರೆ ಮಾತ್ರ ದೇವಸ್ಥಾನದೊಳಗೆ ಯಾರಿಗಾದರೂ ಹೋಗುವಾ ಎಂದು ಕಾಣುತ್ತದೆ. 'ದೇವಸ್ಥಾನದೊಳಗೆ ಬಂದವರು ಬರುತ್ತಾರೆ ನಮಗೆ ಬಂದ ಕಷ್ಟವೇನು?' ಎಂದು ದೇವಸ್ಥಾನದವರು ಎಣಿಸಕೂಡದು. ಬರುವವರನ್ನು ಪೂಜೆಯ ಭಟ್ಟರು ಹಸನ್ಮುಖರಾಗಿ ಸ್ವಾಗತೀಕರಿಸಿ ಅವರ ಯೋಗಕ್ಷೇಮವನ್ನು ವಿಚಾರಿಸಬೇಕು. ಎದುರು ಕಂಭಕ್ಕೆ ಸೇವೆಗಳ ಪಟ್ಟಿಯನ್ನು ಹಚ್ಚಿರಬೇಕು. ಯಾವ್ಯಾವ ಸೇವೆಯಿಂದ ಯಾವ್ಯಾವ ಪುಣ್ಯಫಲಗಳವೆಯೆಂದು ಭಕ್ತಾದಿಗಳಿಗೆ ವಿವರಿಸಿ ಹೇಳಬೇಕು. ಬಂದ ಭಕ್ತರನ್ನು ಉದ್ಧಾರಮಾಡೆಂದು ಭಕ್ತಿಪೂರ್ವಕವಾಗಿ ದೇವರನ್ನು ಪ್ರಾರ್ಥಿಸಿ ಸಂತೋಷದಿಂದ ತೀರ್ಥಪ್ರಸಾದ ಕೊಡಬೇಕು. ಹೀಗೆಲ್ಲಾ ಮಾಡಿದರೆ ಅದು ಒಂದು ದೇವಸ್ಥಾನ. ಇಂತಹ ಸಂಭ್ರಮಗಳೇನೂ ನಮ್ಮ ಹಳ್ಳಿಯ ವಿಷ್ಣುಮೂರ್ತಿಗೆಲ್ಲಿದೆ? ಆದರೂ ನಮ್ಮವರಿಗೆ ವಿಷ್ಣುಮೂರ್ತಿಯ ಮೇಲೆ ಭಕ್ತಿ ಬೇಕಾದಷ್ಟಿದೆ. ಅವನೂ ಈ ವರೆಗೆ ನಮ್ಮನ್ನೆಲ್ಲಾ ಹಾಗೆಯೇ ನಡಿಸಿದ್ದಾನೆ. ಗೋಪಣ್ಣ ಭಟ್ರು ದೇವರೆದುರಲ್ಲಿ ನಿಂತು ಹೇಳಿದ ಮಾತು ಯಾವುದೂ ಈ ವರೆಗೆ ಖಾಲಿಯಾಗಲಿಲ್ಲ. ಹಾಗಾಗಿ ದೇವರಿಗೆ ಹರಕೆ ಕಾಣಿಕೆಗಳು ಕಡಿಮೆಯಾಗಲೂ ಇಲ್ಲ.

ಆದರೆ ಹರಿಕೆ ಹೇಳಿ ಕೆಲಸವಾದ ನಂತರ ಹರಕೆ ಕೊಡದಿದ್ದರೆ ಮಾತ್ರ ನಮ್ಮ ದೇವರು ಕೇಳುವವನಲ್ಲ. ಹೇಗಾದರೂ ವಸೂಲು ಮಾಡಿಯೇ ಮಾಡುತ್ತಾನೆ. ಮದುವೆ ಮುಗಿಯುವ ವರೆಗೆ ಮಳೆ ಬಾರದಿದ್ದರೆ ನಾಲ್ಕಾಣೆಯ ಪಂಚಕಜ್ಜಾಯ ಮಾಡಿಸುತ್ತೇನೆಂದು ರಾಮಪ್ಪ ಹರಕೆ ಹೇಳಿಕೊಂಡಿದ್ದ. ನಂತರ ಮಾಡಿಸಲಿಲ್ಲ. 2 ತಿಂಗಳೊಳಗೆ ಹುಡುಗ ಸತ್ತುಹೋಯಿತು. ಸೌಖ್ಯದಲ್ಲಿ ದನ ಕರು ಹಾಕಿದರೆ ನಾಲ್ಕಾಣೆಯ ಪಂಚಕಜ್ಜಾಯ ಮಾಡಿಸುತ್ತೇನೆಂದು ಹರಕೆ ಹೇಳಿದ್ದ ಕಿಟ್ಟಣ್ಣ. ಕರು ಹಾಕಿ ತಿಂಗಳಾದರೂ ಮಾಡಿಸಲಿಲ್ಲ. ಕರು ಸತ್ತೇಹೋಯಿತು. ಪೈರಿನಲ್ಲಿ ಹಿಡಿದ ಹುಳ ಬಿಟ್ಟುಹೋದರೆ ನಾಲ್ಕಾಣೆಯ ಪಂಚಕಜ್ಜಾಯ ಮಾಡಿಸುತ್ತೇನೆಂದು ಹರಕೆ ಹೇಳಿದ್ದ ಸುಬ್ಬಣ್ಣ. ಭತ್ತ ರಾಶಿ ಹಾಕಿದ್ದೆ ವಿನಾ ಪಂಚಕಜ್ಜಾಯ ಮಾಡಿಸಲಿಲ್ಲ. ಅದರ ಫಲವಾಗಿ ಮನೆಗೆ ಬೆಂಕಿ ಬಿದ್ದು ಎಲ್ಲವೂ ಸುಟ್ಟು ಬೂದಿಯಾಯಿತು. ಅದಕ್ಕೆಲ್ಲಾ ಏನುಮಾಡಬಹುದಿತ್ತು? ಕಾರಣ ಎಂದರೆ ಹಾಗೆ! ಹೇಳಿಕೊಂಡ ಹರಿಕೆಯನ್ನು ಜನರು ಸಲ್ಲಿಸದಿದ್ದರೆ ದೇವರಾದರೂ ಏನು ಮಾಡಬೇಕು? ಕೋರ್ಟಿಗೆ ಹೋಗಿ ವ್ಯಾಜ್ಯಮಾಡಲಿಕ್ಕಾಗುತ್ತದೆಯೋ? ಗುಡ್ಡೆ ತನ್ನ ಹೆಸರಿಗೆ ದರ್ಖಾಸ್ತು ಮಾಡಿಕೊಟ್ಟರೆ ಏನಾದರೂ ನಡೆದುಕೊಳ್ಳುತ್ತೇನೆಂದು ಹೇಳಿ ದರ್ಖಾಸ್ತು ಹುಕುಂ ಬಂದ ನಂತರ ಶಾನುಭೋಗರನ್ನು ಕಣ್ಣೆತ್ತಿ ನೋಡದಿದ್ದರೆ ಅವರೇನು ಸುಮ್ಮನೆ ಬಿಡುತ್ತಾರೆಯೋ? ಅದಕ್ಕೆ ನಾವು ಅವರನ್ನು ದೂರಿ ಪ್ರಯೋಜನವೇನು?

"ನಾಮದಾರಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ನರೋನಿಶಕ್ತಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ.

"ಸೆಮಿನಾ ಟೋನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನ ವುಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯೂನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ.

ಕಿಮ್ಮತ್ತು ರೂ. 3-0-0 ಡಬ್ಬಿ 0-8-0

ಸೊರತ್ ಫಾರ್ಮಸಿ,
ನಲ್ ಬಜಾರ್, ಡಂಕನ್ ರೋಡ್,
ಮುಂಬಯಿ 4

Sorath Pharmacy,
Null Bazzar, Duncan Road,
BOMBAY 4.

ONE REASON.

Love does much, but in this materialistic world, money does more. Save therefore for the sake of those you love.

RESOURCES OF A CRORE. } ESTD. 1906.
Canara Bank Limited.

ಮಂಗಳೂರು ಮತ್ತು ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

— ಹಾಗಾದರೆ —

ಸುಖನಿವಾಸಕ್ಕೆ ಬನ್ನಿ.

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ.

ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವುದೆಲ್ಲಿ?

ಸುಖನಿವಾಸ ದಲ್ಲಿ ಮಾತ್ರ.

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.
ಮಂಗಳೂರಿನಲ್ಲಿ ಜೋಡಿಗುಡ್ಡೆಯಲ್ಲಿಯೂ, ಉಡುಪಿಯಲ್ಲಿ ತಾಲೂಕು ಕಚೇರಿಯ ಬಳಿಯಲ್ಲಿಯೂ ಇರುವ 'ಸುಖನಿವಾಸ'ವನ್ನು ಒಮ್ಮೆ ಸಂದರ್ಶಿಸಿರಿ.

ಪ್ರೊಪ್ರೈಟರ್, ಸುಖನಿವಾಸ.

ಚರ್ಚಿಲ್ ಹಿಟ್ಲರ್ ಕಾಳಗದಲ್ಲಿ — ಜಯ ಯಾರಿಗೆ?

★

ಇಬ್ಬರೂ ಸಮುದ್ಧಿಗಳು ಕಳೆದ ಮಹಾ ಯುದ್ಧದಲ್ಲಿ ಹೋರಾಡಿ ನುರಿತ ಯೋಧರು. ಇಬ್ಬರ ಜೀವನವೂ ಉದ್ವೇಗಪೂರ್ಣವಾಗಿ, ಹೋರಾಟಮಯವಾಗಿ ಚಿತ್ರವು ಯಮಾದುದು. ಇಬ್ಬರೂ ಗಂಡಾಂತರಕ್ಕೆ ಸದ್ದು ಕೊಡದು ಅದರದೆ ಮೆಟ್ಟಿ ನಿಲ್ಲುವ ಸಾಹಸಿಗಳು. ಬ್ರಿಟಿಷ್ ಸಾಮ್ರಾಜ್ಯದ ಬೆನ್ನ ಮೂಳೆ ಮುರಿದು ಲೋಕದಲ್ಲೆಲ್ಲಾ ಪ್ರಭಾವಶಾಲಿಯಾಗಿ ಮೆರೆಸಿಬಿಡಬೇಕು ಜರ್ಮನಿಯನ್ನೆಂದು ಬದ್ಧಕಂಕಣರಾಗಿದ್ದಾರೆ ಹಿಟ್ಲರರು. ಲೋಕಕಂಟಕವಾಗಿರುವ ಹಿಟ್ಲರ್ ರಾಜ್ಯವನ್ನು ನಿರ್ನಾಮಗೊಳಿಸಿ ಬ್ರಿಟಿಷ್ ಸಾಮ್ರಾಜ್ಯದ ಅಧಿಕಾರ ಮತ್ತು ಪ್ರಭಾವವನ್ನು ಯಥಾಪ್ರಕಾರ ಉಳಿಸಬೇಕೆಂದು ಭೀಷ್ಮ ನಿರ್ಧಾರ ಚರ್ಚಿಲ್ಲರದು. ಈ ಮಹಾ ವ್ಯಕ್ತಿಗಳ ಕೈಗಳಲ್ಲೀಗ ತೂಗಾಡುತ್ತಿದೆ ಯುರೋಪಿನ ಹಾಗೂ ಇಡೀ ಲೋಕದ ಅದೃಷ್ಟ. ಈ ಜಗಜಟ್ಟಿಗಳಲ್ಲಿ ಜಯಲಕ್ಷ್ಮಿಯು ಯಾರಿಗೊಲಿಯುವಳೋ ನೋಡಬೇಕು.

ಇಂಗ್ಲೆಂಡಿನ ಅಧಿನಾಯಕ ಚರ್ಚಿಲ್ಲರು

ವಿನ್ನಿಯು (ವಿನ್‌ಸ್ಟನ್ ಚರ್ಚಿಲ್ಲರು) ಸುದೈವದಿಂದು ಹೆಸರುವಾಸಿಯಾದವರು. ಅಂತೆಯೇ ಇಂದೀಗ ಇಂಗ್ಲೆಂಡಿನ ಸಂಧಿಕಾಲದಲ್ಲಿ ಅದರ ಅಧ್ಯಕ್ಷನಾವೆಯ ಕರ್ಣಧಾರನಾಗಿರುವರು ಪ್ರಭಾವಪೂರ್ಣ ಕರ್ತೃತ್ವಶಾಲಿ ವ್ಯಕ್ತಿತ್ವ ವಿನ್‌ಸ್ಟನ್ ಚರ್ಚಿಲ್ಲರದು. ೧೯೧೪ರ ಯುದ್ಧದಲ್ಲಿ ಪ್ರಖ್ಯಾತರಾದವರವರು. 'ಚರ್ಚಿಲ' ಇಲ್ಲದ ಯುದ್ಧವಿಲ್ಲ–ಚರ್ಚಿಲ್ಲನಿದ್ದಲ್ಲಿ ಯುದ್ಧವಿದೆ' ಎಂಬ ಗಂಡುಗಲಿ ಅವರು. ವಿಲಕ್ಷಣ ಮನೋವೃತ್ತಿ ಮತ್ತು ತೀಕ್ಷ್ಣ ಬುದ್ಧಿಯವರು. ಜನರೆಲ್ಲರದು ಒಂದು ದಾರಿಯಾದರೆ ಚರ್ಚಿಲ್ಲರದು ಮತ್ತೊಂದು. ತಾನೊಬ್ಬನೇ ಆದರೂ, ತನ್ನನ್ನು ದೇಶಕ್ಕೆ ದ್ರೋಹವೇ ತಲೆತಿರುಕನೆಂದು ತಿರಸ್ಕರಿಸಿದರೂ ಮತ್ತಷ್ಟು ಉಗ್ರವಾಗಿ ತನ್ನ ಮತ ಪ್ರತಿಪಾದಿಸುವ ಹಂಥಪ್ರಕೃತಿಯವರು ತುಳಿದಷ್ಟು ಚೂಪಾಗಿ ತಲೆಯೆತ್ತುವ ನೆಗ್ಗಿನ ಮುಳ್ಳಿನಂತವರ ರೀತಿ

ರಷ್ಯದ ಸಮಾಜವಾದವನ್ನು ತೀವ್ರವಾಗಿ ದ್ವೇಷಿಸುತ್ತಿದ್ದ ಇಂಗ್ಲೆಂಡಿನ ಕನ್ಸರ್ವೆಟಿವ್ ಪಕ್ಷದವರು ಸ್ಟೈಲಿನರನ್ನು ಕಡೆಗಣಿಸಿ, ಆಗ ರಷ್ಯದ ಬದ್ಧ ವೈರಿ ಹಿಟ್ಲರನನ್ನೊಲಿಸಿಕೊಳ್ಳಲು ಮುಂದಾದಾಗ "ಹಿಟ್ಲರರ ಮಾತನ್ನು ನಂಬಬೇಡಿರಿ. ಅವನು ಕೊಂಲುವುದೆಂದು ಹಾಹುವುದಿಲ್ಲವು. ಅವನ ಸ್ನೇಹದಿಂದ ವಂಚಿತರಾಗಬೇಡಿರಿ. ಹಿಟ್ಲರನು ರಷ್ಯದ ಸಹಾಯದಕ್ಕೆ ವಿರೋಧಿಯಾದಂತ್ಲಾ ಇಂಗ್ಲೆಂಡಿನ ಗೆಳೆತನಕ್ಕೆ ಅರ್ಹನೆಂದು ತಿಳಿಯುವುದು ಮೂರ್ಖತನ. ಯುರೋಪನ್ನೆಲ್ಲಾ ಆಕ್ರಮಿಸಿ ಗೆಲ್ಲುವ ಹವಣಿಕೆ ಆತನದು. ಅವನ ಬಾಂಧವ್ಯದ ಮಾತಿನ ಜಾಲಕ್ಕೆ ಬಿದ್ದು ಸಂಕಟಕ್ಕೀಡಾಗುವಿರಿ. ನಿಮ್ಮ ಶಕ್ತಿ ಬೆಳಸಿರಿ. ಯಾರು ಎಷ್ಟೇ ಆಪ್ತರಾಗಿದ್ದರೂ ಯುದ್ಧದ ಸಂದರ್ಭದಲ್ಲಿ ಯಾರು ಯಾರ ಪಕ್ಷಕ್ಕೆ ಸೇರುವರನ್ನಲಾಗುವುದಿಲ್ಲ. ಜಾಗ್ರತೆ! ವೈಮನಸ್ಯ ಅನಂತರ ಪೇಚಾಟಪಡಬೇಕಾದೀತು.' ಎಂದು ಸಕಾಲದಲ್ಲೇ ದೂರದೃಷ್ಟಿಯಿಂದ ಬ್ರಿಟಿಷ್ ಸರಕಾರಕ್ಕೆ ಎಚ್ಚರಿಸಿತ್ತವರು. ಚೇಂಬರ್ಲೇನರ ಹಿಟ್ಲರ್ ಪಕ್ಷಪಾತಿ ಧೋರಣೆಯನ್ನು ಕಟುವಾಗಿ ಟೀಕಿಸಿ ದ್ವೇಷ ಸಂಪಾದಿಸಿದವರು. ಅವರನ್ನ ಬ್ರಿಟಿಷ್ ಮಂತ್ರಿಮಂಡಲಕ್ಕೆ ಸೇರಿಸಿಕೊಳ್ಳುವ ಆಲೋಚನೆ ನಡೆದಿದ್ದಾಗ ಹಿಟ್ಲರನು ತೀವ್ರ ವಿರೋಧ ಸೂಚಿಸಿದುದರಿಂದ ಚೇಂಬರ್ಲೇನರು ಅದನ್ನು ಬಿಟ್ಟುಬಿಟ್ಟರೆಂದು ಕೂಡಾ ಸುದ್ದಿಯುಂಟಾಗಿತ್ತು. ಹಿಟ್ಲರರೆಂದರೆ ಉರಿದುಬೀಳುತ್ತಿದ್ದರು ಚರ್ಚಿಲ್ಲರು. ಚರ್ಚಿಲ್ಲರೆಂದರೆ ಬುಸುಗುಟ್ಟಿ ಹೆಡೆಯರಳಿಸುತ್ತಿದ್ದರು ಹಿಟ್ಲರರು. ಮಿ. ಚೇಂಬರ್ಲೇನರು ಹಿಟ್ಲರರೊಡನೆ ಸಂಧಾನ ದೆಶ್ನೆಮಾಡುತ್ತಿದ್ದಾಗಲೆ ಯುದ್ಧಸಿದ್ಧತೆಯು ಕೂಗೆಬ್ಬಿಸಿದವರು ಚರ್ಚಿಲ್ಲರು. ಸ್ಪಾನ್ಸಿಗೆ ಹೋಗಿ ಮೆಗಿನೋ ಕೋಟೆಯನ್ನು ಪರೀಕ್ಷಿಸಿದವರು

೧೮೭೧ರಲ್ಲಿ ಜನ್ಮತಾಳಿದರು. ಲೋರ್ಡ್ ರೂಡೋಲ್ಫ್ ಚರ್ಚಿಲ್ಲರೇ ವಿನ್‌ಸ್ಟನ್ ಚರ್ಚಿಲ್ಲರ ತಂದೆ ತನ್ನ ಕಾಲದಲ್ಲಿ ಇಂಗ್ಲೆಂಡಿನ ಘನತೆಗಾಗಿ ಹೆಣಗಿದವರು ಲೋರ್ಡ್ ರೂಡೋಲ್ಫರು. ಇಂಗ್ಲೆಂಡಿನ ಸುಪ್ರಸಿದ್ಧ ಹ್ಯಾರೋ ಶಾಲೆಯಲ್ಲಾಯಿತು ಚರ್ಚಿಲ್ಲರ ಶಿಕ್ಷಣ. ಅಮೇಲೆ ಕೆಲವರ್ಷ ಸೈನ್ಯದಲ್ಲಿ ಸೇರಿಕೊಂಡರು. ದಕ್ಷಿಣ ಆಫ್ರಿಕದ ಬೋವರ್ ಯುದ್ಧದಲ್ಲಿ ದೇಶಭಕ್ತಿಯಾಗಿ ಭಾಗವಹಿಸಿದರು. ಬರವಣಿಗೆಯಲ್ಲಿ ಚತುರರಿದ್ದುದರಿಂದ ಯುದ್ಧದ ವಿಶೇಷ ಸುದ್ದಿಗಾರನ ಕೆಲಸಕ್ಕೆ ನೇಮಿಸಲ್ಪಟ್ಟು ಆ ಕೆಲಸ ಮಾಡುತ್ತಿದ್ದಾಗ ಬಂಧಿಸಲ್ಪಟ್ಟರು. ಪ್ರಾಣಾಪಾಯಕ್ಕೂ ಅಂಜದೆ ಒಂದು ತಿಂಗಳೊಳಗೇನೇ ಬಂದೀಖಾನೆಯಿಂದ ನುಸುಳಿ ಪಾರಬಂದುಬಿಟ್ಟರು. ಚರ್ಚಿಲ್ಲರು ಎಲ್ಲಾ ಕ್ಷೇತ್ರಗಳಲ್ಲಿಯೂ ಕೆಲಸಮಾಡಿದವರು, ಮೇಲುಗೈಯಾಗಿ ನಡೆದವರು. ಸೈನಿಕ, ಸುದ್ದಿಗಾರ, ಬರಹಗಾರ, ಮಾತುಗಾರ, ಮುತ್ಸದ್ದಿ, ನೌಕಾಮಂತ್ರಿ, ಗೃಹಮಂತ್ರಿ, ಯುದ್ಧಮಂತ್ರಿ, ಅರ್ಥ ಸಚಿವ ಮೊದಲಾದ ಹುದ್ದೆ ಉದ್ಯೋಗಗಳಲ್ಲಿ ಹೆಸರು ಪಡೆದು ಶ್ರಮಿಸಿದವರು. ಚರ್ಚಿಲ್ಲರ ಜೀವನದ ಸನ್ನಿವೇಶಗಳೆಲ್ಲಾ ವಿಚಿತ್ರವಾದುವು, ವಿಲಕ್ಷಣವಾದುವು. ಜೀವನದ ಏರಿಳಿತಗಳ ಹೊಯ್ದಾಟದಲ್ಲಿ ಸಿಕ್ಕಿ ಚೆನ್ನಾಗಿ ಪಳಗಿದವರವರು. ನೌಕಾಮಂತ್ರಿ, ಯುದ್ಧಮಂತ್ರಿ, ಮತ್ತು ಅರ್ಥ ಸಚಿವ ಪದವಿಗಳಲ್ಲಿ ಪಾರ್ಲಿಮೆಂಟನ್ನೆದುರಿಸಿರುವಷ್ಟೇ ಚಾತುರ್ಯ ಮತ್ತು ದಕ್ಷತೆಯನ್ನು ಸರ್ವಸಾಮಾನ್ಯ ಸದಸ್ಯರಾಗಿಯೂ ತೋರಿಸಬಲ್ಲರವರ

೧೯೦೦ರಲ್ಲಿ ಯೂನಿಯನಿಸ್ಟ್ ಪಕ್ಷದ ಉಮೇದ್ವಾರರಾಗಿ ಪಾರ್ಲಿಮೆಂಟಿಗೆ ಆರಿಸಿಬಂದರು ನಡುವೆ ೩ ವರ್ಷ ಮಾತ್ರ ಬಿಟ್ಟು ಅಂದಿನಿಂದ ಈ ವರೆಗೂ ಪಾರ್ಲಿಮೆಂಟ್ ಮೆಂಬರರಾಗಿರುವರು. ಸುಮಾರು ೪೦ ವರ್ಷಗಳಿಂದ ಬ್ರಿಟಿಷ್ ರಾಜಕೀಯ ಕ್ಷೇತ್ರದಲ್ಲಿ ಅವ್ಯಾಹತವಾಗಿ ದುಡಿದವರು. ಸ್ವಚ್ಛಂದ ವೃತ್ತಿ ಇವರದು. ತನ್ನ ಮನಸ್ಸಿಗೆ ಸರಿತೋರಿದುದನ್ನು ಇದ್ದಕ್ಕಿದ್ದಂತೆ ಹೇಳಿಬಿಡುವವರು. ಯಾವ ಪಕ್ಷ ಮತ್ತು ಪಂಥಕ್ಕೂ ಕಟ್ಟುಬಿದ್ದು ನಡೆಯುವವರಲ್ಲ. ಮಾರ್ಮಿಕವಾಗಿ, ಕಟುವಾಗಿ, ಚುಚ್ಚುವಂತೆ ಒಮ್ಮೊಮ್ಮೆ ಎರಡನೆಯವರ ಎದೆ ಬಿರಿಯುವಂತೆ ಟೀಕೆಮಾಡುವ ಬಿರುಸು ಸ್ವಭಾವದವರು. ದೇಶದ ಘನತೆ, ಹಿರಿಮೆ, ಹಿತಸಾಧನೆಯೇ ಅವರು ಮೊದಲಾಗಿ ಗಮನಿಸುವ ವಿಷಯ. ಪಕ್ಷ ಪಂಗಡಗಳು ನಾಡಿನ ಉನ್ನತಿಗಾಗಿರುವ ಸಾಧನಗಳು. ತನ್ನ ಪಕ್ಷದ ಯಾವುದಾದರೊಂದು ಕಾರ್ಯದಿಂದ ನಾಡಿನ ಹಿತಕ್ಕೆ ಧಕ್ಕೆ ತಗಲುವುದಾದರೆ ಅದನ್ನು ಉಗ್ರವಾಗಿ ಖಂಡಿಸಲು ಎಂದೂ ಹಿಂಜರಿವವರಲ್ಲ.

ನಿಮ್ಮ ಪೂರ್ಣ ತೃಪ್ತಿಗಾಗಿ ಯಾವಾಗಲೂ ಉತ್ತಮ ಮಾಲನ್ನ ಕೊಂಡುಕೊಳ್ಳಿರಿ

ನೀವು ತೃಪ್ತಿಹೊಂದಿದರೆ ದಯಮಾಡಿ ಇತರರಿಗೂ ಶಿಫಾರಸು ಮಾಡಿರಿ.
ಇಲ್ಲವಾದರೆ ನಿಮ್ಮ ದೂರುಗಳೇನೆಂಬುದನ್ನು ತಿಳಿಸಿರಿ.

ಅಂದವಾದ ಆಕೃತಿ
ಉತ್ತಮವಾದ ಮಾಲು ಗಟ್ಟಿ ಮತ್ತು ಬಾಳ್ಕೆ

ಎಲ್ಲಾ ಸ್ವಿಸ್ ತಯಾರಿ
ಗ್ಯಾರಂಟಿಯುಳ್ಳ ಲಿವರ್ ವಾಚು
ವೃತ್ತ ಅಥವಾ ಚೌಕಾಕಾರ

ನಂಬ್ರ 401



ನಂ.401 ಕ್ರೋಮಿಯಂ ಕವಚ ರೂ 4-4
ನಂ.402 ಚಿನ್ನದ ಕವಚ ರೂ 5-2
ನಂ.424 ಕ್ರೋಮಿಯಂ ಕವಚ ರೂ.6 8
ನಂ 425 ಚಿನ್ನದ ಕವಚ ರೂ 9-6
ನಂ.425 ರೋಲ್ಡ್‌ಗೋಲ್ಡ್ 10ವ. 15 4

ನಂಬ್ರ 421-458



15 ವಜ್ರಗಳುಳ್ಳ ಲೀವರ್
ನಂ.458 ಕ್ರೋಮಿಯಂ ಕವಚ ರೂ 17 0
ನಂ.458 ರೋಲ್ಡ್‌ಗೋಲ್ಡ್ ರೂ.22-2
ವಜ್ರಕೂಡ್ರಿಸಿದ ಲೀವರ್ ಚಲನೆ
ನಂ 428 ಕ್ರೋಮಿಯಂ ರೂ.10 4
ನಂ 430 ರೋಲ್ಡ್‌ಗೋಲ್ಡ್ 10ವ 17 0

ನಂಬ್ರ 428



15 ವಜ್ರಗಳುಳ್ಳ ಲಿವರ್ ಚಲನೆ
ನಂ. 490 ರೋಲ್ಡ್‌ಗೋಲ್ಡ್ 10ವರ್ಷ 23-12
ನಂ. 491 9 ಕ್ಯಾರೆಟ್ ಚಿನ್ನ ರೂ 34- 0
ಅಂಚೆ ವೆಚ್ಚಕ್ಕೆ 9 ಆಣೆ ಹೆಚ್ಚಿಗೆ
ಹೆಚ್ಚಿನ ವಿವರಗಳಿಗೆ ನಮ್ಮ ಹೊಸ ಕೆಟಲಾಗು ನಂಬ್ರ 16 ತರಿಸಿರಿ (ಚಿತ್ರವುಳ್ಳ ಇಂಗ್ಲಿಷಿನಲ್ಲಿ)

ಸ್ತ್ರೀಯರಿಗೆ ಪುಟ್ಟವಾಚು
ನಂ 460 490



ಜಿನೇವ ಚಲನೆ
ನಂ.460 ಕ್ರೋಮಿಯಂ ಕವಚ ರೂ.11-14
ನಂ.461 ಚಿನ್ನದ ಕವಚ ರೂ.13-10
ನಂ 462 ರೋಲ್ಡ್‌ಗೋಲ್ಡ್, 10ವ. 17-0

BAPALAL & CO.,
101, Abdul Rehman Street, BOMBAY, 3.

ಯಾವುದಕ್ಕೂ ಅಂಜಿ ದೂರ ನಿಲ್ಲುವುದು ಚರ್ಚಿಲ್ಲರ ಸ್ವಭಾವವೇ ಅಲ್ಲ. ಚೇಂಬರ್ಲೇನರಂತೆ ಗಂಡಾಂತರಗಳನ್ನು ಮುಂದೆ ಹಾಕುವ ಮನೋವೃತ್ತಿಯವರೂ ಅಲ್ಲ. ಅವನ್ನು ಕಂಡುಹಿಡಿದು ಅವುಗಳೊಳಗೆ ಹೊಕ್ಕು ಸೆಣಸಾಡಿ, ತನ್ನ ಶಕ್ತಿ ಸಾಮರ್ಥ್ಯದಿಂದ ಅವನ್ನು ಜೈಸಿ ಮೇಲೆ ಬರುವ ಸಾಹಸಿ. ಉತ್ಕೃಷ್ಟ ಲೇಖಕರಾಗಿ ತನ್ನ ಆತ್ಮವೃತ್ತವನ್ನು ಬರೆದಿರುವರು. ಮಾತುಗಾರಿಕೆಯಿಂದ ಜನತೆಯನ್ನು ಮಂತ್ರಮುಗ್ಧರನ್ನಾಗಿ ಮಾಡಬಲ್ಲರು. ಚುಚ್ಚು ಮಾತುಗಳಿಂದ ಎದುರಾಳಿಗಳು ಬೆಚ್ಚಿಬೀಳುವಂತೆ ಮಾಡಬಲ್ಲರು. ನಗೆ ಮಾತು, ಕಟು ವಿನೋದೋಕ್ತಿಗಳಿಂದ ಎಂತಹ ಬಿಂಕದವರನ್ನಾದರೂ ನಗಿಸಿಬಿಡಬಲ್ಲರು. ನಾಝಿಗಳು ಪುಂಡಾಟಿಕೆಯಲ್ಲಿ ಮೊಂಡುಮೊಂಡು ಮಾತಾಡಿದರೆ, ಅವರನ್ನು ತುಂಡು ತುಂಡುಮಾಡಿ ಖಂಡಿಸಿಬಿಡುವ ಗಂಡುಶೈಲಿಯ ಉತ್ತರಕೊಡಬಲ್ಲರು. ಹಿಟ್ಲರರನ್ನು ಬೆದರಿಸಲು ಚರ್ಚಿಲ್ಲರು; ಚರ್ಚಿಲ್ಲರನ್ನು ಎದುರಿಸಲು ಹಿಟ್ಲರರು. ಹಿಟ್ಲರರ ಮಾತಿನ ಮರ್ಮ ಚರ್ಚಿಲ್ಲರಿಗೆ ತಿಳಿದಂತೆ ಚರ್ಚಿಲ್ಲರ ಉತ್ತರವು ಹಿಟ್ಲರರ ಮನಮುಟ್ಟುವುದು. ತಂಟೆಕುಂಟರಿಗೆ ಗಂಟುಬಿದ್ದಿದೆ. ನಾಝಿಗಳ ಬಡಿವಾರವನ್ನೂ ಬೂಟಾಟಿಕೆಯನ್ನೂ ಹುಡಿಹಾರಿಸಬಲ್ಲರು ಚರ್ಚಿಲ್ಲರು. ಮೊಂಟೆವಿಡಿಯೋದಲ್ಲಿ ಗ್ರಾಫ್‌ಸ್ಪೀ ಮತ್ತು ಬ್ರಿಟಿಷ್ ಹಡಗಗಳೊಳಗೆ ನಡೆದ ಜಲಯುದ್ಧದಲ್ಲಿ, ತಾವು ಜಯಹೊಂದಿರುವೆವೆಂದು ಜರ್ಮನರು ಘೋಷಿಸಿದುದೇ ತಡ; ನೌಕಾ ಮಂತ್ರಿ ಚರ್ಚಿಲ್ಲರು ಆದ ಕ್ಷಣ ಹತ್ತು ಸಾಲು ಬಾಯಿಹಾರಿಸಿ ಅದೆಂತಹ ಸುಳ್ಳಿನ ಕಂತೆಯೆಂದು ಲೋಕವಿಶ್ರುತಗೊಳಿಸಿಬಿಟ್ಟರು. ಚರ್ಚಿಲ್ಲರ ಭಾಷಣವೆಂದರೆ ನಾಝಿಗಳ ಎದೆ ಕಂಪಿಸುವುದು. ಅವರು ಸಂಕಷ್ಟರಾಗಿ ಉರಿದೇಳುವರು. ೬೫ ವರ್ಷ ವಯಸ್ಸು ಮೀರಿದ್ದರೂ ಹರೆಯದ ಹುಡುಗರಂತೆ ಪುಟಿದೆದ್ದು ಕೆಲಸಮಾಡುವವರು ಚರ್ಚಿಲ್ಲರು.

ಏಳೆಂಟು ತಿಂಗಳ ಮೊದಲು ಯಾವ ಪಕ್ಷದ ಬೆಂಬಲವೂ ಇಲ್ಲದೆ, ತಾನೇ ತಾನಾಗಿದ್ದ ಚರ್ಚಿಲ್ಲರು ಇಂದು ಇಡೀ ರಾಷ್ಟ್ರದ ಒಮ್ಮತದ ಬೆಂಬಲ ಪಡೆದು ಪ್ರಧಾನ ಮಂತ್ರಿಗಳಾಗಿರುವರು. ಕೂಡಲೆ ತನ್ನ ರಾಷ್ಟ್ರದ ಆಡಳಿತ ಮತ್ತು ಧೋರಣೆಯಲ್ಲಿ ಕ್ರಾಂತಿಕಾರಕ ಬದಲಾವಣೆಮಾಡಿಬಿಟ್ಟಿರುವರು. ಕಡು ಪ್ರತಿಗಾಮಿಯಾದರೂ ಅತ್ಯಂತ ತೀವ್ರಗಾಮಿ ಸರ್. ಸ್ಟಾಫೋರ್ಡ್ ಕ್ರಿಪ್ಸರನ್ನು ಬ್ರಿಟನಿನ ರಾಯಭಾರಿಯಾಗಿ ರಷ್ಯಕ್ಕೆ ಕಳುಹಿಸಿ ಅದನ್ನೊಲಿಸಿಕೊಳ್ಳಲೆತ್ನಿಸಿರುವರು. ಎಂಥವನಾದರೂ ಅಧೀರನಾಗಿ ನಿರಾಶೋದ್ಗಾರವೆತ್ತುವ ಇಂಗ್ಲೆಂಡಿನ ಮಹಾಗಂಡಾಂತರದ ಸಂದರ್ಭವಿದು. ಇಂಗ್ಲೆಂಡಿನ ಹೃದಯದಂತಿದ್ದ ಫ್ರಾನ್ಸನ್ನು ಪುಡಿಪುಡಿ ಮಾಡಿ ಹಿಟ್ಲರನು ಯುರೋಪಿನಲ್ಲೆಲ್ಲಾ ತನ್ನ ವಿಜಯಪತಾಕೆಯನ್ನೇರಿಸಿಬಿಟ್ಟಿರುವನು. ಎಲ್ಲೆಲ್ಲಿಯೂ ಕಗ್ಗತ್ತಲೆಯೇ ಹಬ್ಬಿ ದಾರಿಕಾಣದಾಗಿರುವುದು. ಫ್ರಾನ್ಸು ಶರಣಾಗತವಾಗಿರುವುದು. ಇಂತಹ ಪರಿಸ್ಥಿತಿಯಲ್ಲಿಯೂ ಒಂದಿಷ್ಟು ಎದೆಗುಂದದೆ, ಧೃತಿಗೆಡದೆ, "ಇನ್ನು ಮುಂದೆ ಇಂಗ್ಲೆಂಡೊಂದೇ ಕಾದಾಡುವುದು. ಇಂಗ್ಲೆಂಡಿನ ಯುದ್ಧ ಇಂದೀಗ ಆರಂಭಿಸಿರುವುದು. ಬ್ರಿಟನ್ನಳಿದು ಹಿಟ್ಲರನುಳಿಗಾಲವಿಲ್ಲ. ಇಂಗ್ಲೆಂಡಳಿಯಬೇಕು ಹಿಟ್ಲರನು ಗೆಲಿಯಬೇಕಾದರೆ ಬ್ರಿಟಿಷ್ ನೌಕೆಯನ್ನು ಗೆದ್ದವನು ಇಡೀ ಲೋಕವನ್ನೇ ಗೆಲ್ಲುವನು. ಬ್ರಿಟಿಷ್ ಹಡಗುಪಡೆಯನ್ನಿದಿರಿಸುವ ಶಕ್ತಿಯೇ ಇಲ್ಲ ಹಿಟ್ಲರನಿಗೆ. ಅವನ ವಿಮಾನಧಾಳಿಯನ್ನು ತಡೆಗಟ್ಟಲು ಸಾಕಷ್ಟು ವಿಮಾನಗಳಿವೆ ಇಂಗ್ಲೆಂಡಿನಲ್ಲಿ. ಗಾಳಿಕೊಡೆಗಳ ಮೂಲಕ ಜರ್ಮನರಿಳಿದರೆ ಕ್ಷಣಮಾತ್ರದಲ್ಲಿ ಅವರಿಗೆ ಗತಿಕಾಣಿಸಲು ಗೊತ್ತಿದೆ ತಮಗೆ. ಇಟಲಿಗೆ ದೊಡ್ಡ ಹಡಗುಪಡೆಯಿದೆಯಂತೆ. ಇದ್ದರೆ ಬರಲಿ ಸಮರಂಗಕ್ಕೆ. ಎಲ್ಲಿಯಾದರೂ, ಯಾವ ರೀತಿಯಲ್ಲಾದರೂ ಅದರೊಡನೆ ಹೋರಾಡಲು ಸಿದ್ಧನೇ ಇದೆ ಬ್ರಿಟಿಷ್ ನೌಕಾಪಡೆ. ಇಂಗ್ಲೆಂಡಿನಲ್ಲೀಗ ಒಂದು ಮಿಲ್ಯ ಸುಸಜ್ಜಿತ ಸೇನೆಯಿದೆ. ಅರ್ಧ ಮಿಲ್ಯ ತಯಾರಾಗುತ್ತಿದೆ. ಲೋಕವಿಸ್ತೃತ ಬ್ರಿಟಿಷ್ ಸಾಮ್ರಾಜ್ಯದ ಅಪಾರ ಸಹಾಯದ ಆಶಯ ಬ್ರಿಟನಿಗಿದೆ. ಅಮೇರಿಕವು ಇಂಗ್ಲೆಂಡಿನ ಬೆಂಬಲಕ್ಕೆ ನಿಂತಿದೆ. ಹಿಟ್ಲರ್ ಶಾಹಿಯನ್ನು ಪಡೆಬಡಿವೇ ಸಿದ್ಧ"ವೆಂದು ವೈರಿಯೆದೆ ಕಂಪಿಸುವಂತೆ ಉದ್ಘೋಷಿಸಿ ಇಡೀ ಲೋಕದಲ್ಲೇ ಆರೋಗ್ಯವನ್ನುಂಟುಮಾಡಿರುತ್ತಾರೆ ಚರ್ಚಿಲ್ಲರು. ಇಂತಹ ತೇಜಸ್ವೀ ಪುರುಷಸಿಂಹರು ಇಂಗ್ಲೆಂಡಿನ ಅತಿ ದೊಡ್ಡ ಗಂಡಾಂತರದಲ್ಲಿ ಅದರ ಅದೃಷ್ಟಚಾಲಕರಾಗಿ ಬಂದುದೊಂದು ಸುದೈವವೇ ಸರಿ.

ನೋಟೀಸು

ಪುತ್ತೂರು ದಿ ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 53/1940.

ದಿ ನವರ್ ಲೇಂಡ್ ಟ್ರಸ್ಟ್ ಲಿಮಿಟೆಡ್—ವಾದಿ.
ಕೇಶವ ಜೋಯಿಸ ವಗೈರೆ—ಪ್ರತಿವಾದಿಗಳು.

ಈ ವ್ಯಾಜ್ಯದ 1ನೇ ಪ್ರತಿವಾದಿ, ಕೃಷ್ಣ ಜೋಯಿಸರ ಮಗ ಕೇಶವ ಜೋಯಿಸ, ಪಂಜಿಕಲ್ಲು ಗ್ರಾಮದ ಮುಕ್ಕೂರ, ಪುತ್ತೂರು ತಾಲೂಕು.

3ನೇ ಪ್ರತಿವಾದಿ ಆಸವಗೆಡು ತಾಲೂಕು ನಿಟ್ಟೂರ ಗ್ರಾಮದ ನಿಟ್ಟೂರ ಮಹಾರಾಜರ ಹೈಸ್ಕೂಲಿನ ವಿದ್ಯಾರ್ಥಿ ಜೋಸನ ರಾಮಯ್ಯ ಭಟ್ಟರ ಮಗ ತಿಮ್ಮಪ್ಪ ಭಟ್ಟ ಕೂಡು 2 ಜನರಿಗೆ ಈ ಮೂಲಕ ತಿಳಿಸುವುದೇನೆಂದರೆ-

1. ಸದರಿ ವಾದಿಯು ಕೇಶವ ಜೋಯಿಸ ಕೂಡ 3 ಜನರ ಮೇಲೆ ಪುತ್ತೂರು ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಮಾಡಿದ ಕ್ರಮ ನಂಬ್ರ 53/1940 ಸದರೀ ಕೋರ್ಟಿನಲ್ಲಿ ತಾ. 10 7 1940ಕ್ಕೆ ಹಗಲು 11 ಘಂಟೆಗೆ ಪ್ರತಿವಾದಿದ ಹಾಜರಾತಿಗೆ ನಿಶ್ಚಯಿಸಿ ಇಟ್ಟದೆ. ಅದಿನ ಮೇಲೆ ಹೆಸರು ಕಾಣಿಸಿದ ಪ್ರತಿವಾದಿಯು ಖುದ್ದಾಗಿಯಾಗಲಿ ಯಾ ವಕೀಲರ ಮುಖಾಂತರವಾಗಲಿ ಹಾಜರಾಗಿ ಉತ್ತರಿಸಲಿಕ್ಕೆ ತಪ್ಪಿದರೆ ಪ್ರತಿವಾದಿಯನ್ನು ಏಕ್ಸ್‌ಪಾರ್ಟೆ ಮಾಡಿ ವ್ಯಾಜ್ಯದ ತನ್ಖೆ ಮುಂದರಿಸಲಾಗುವುದು. ತಿಳಿದಿರಲಿ

ಪುತ್ತೂರು, 17-6-40. } **ಕೃಷ್ಣನಾರಾಯಣ ಮಲ್ಯ**
ವಾದಿ ಕಡೆ ವಕೀಲ.

_Your anxiety—

in finding a sound and progressive Life Office both to insure or to represent will end on consultation with:-

Branch Secretary -

The New Guardian of India Life Insurance Co. Ltd., Madras.
Mangalore Branch.

ಇಂಡಿಯನ್ ಮ್ಯೂಚುಯಲ್
ಲೈಫ್ ಎಸೋಸಿಯೇಷನ್ ಲಿಮಿಟೆಡ್

ಹೆಡ್ ಆಫೀಸ್:- ನಂ. ೧೦, ಮೌಂಟ್ ರೋಡ್, ಮದರಾಸು

—— ಡೈರೆಕ್ಟರುಗಳ ಬೋರ್ಡ್ ——

ಸರ್ ವೇಪಾ ರಮೇಶಂ, ಕೆ. ಟಿ ರಿಟೈರ್ಡ್ ಜಡ್ಜ್, ಮದರಾಸ್ ಹೈಕೋರ್ಟ್, ಮದರಾಸು.
ರಾವ್ ಬಹದ್ದೂರ್ ಮ॥ ಕೆ ಬಲರಾಮ ಅಯ್ಯರ್, ಬಿ.ಎ. ರಿಟೈರ್ಡ್ ಅಕೌಂಟೆಂಟ್ ಜನರಲ್ ಮದರಾಸ್.
ಮ॥ ಸಿ. ಕೃಷ್ಣಮೂರ್ತಿ ಮೊದಲಿಯಾರ್ ಲ್ಯಾಂಡ್ ಲಾರ್ಡ್, ಶಿಯಾಳಿ.
ದಿವಾನ್ ಬಹದ್ದೂರ್ ಮ॥ ಎ. ವಿ ರಾಮಲಿಂಗ ಅಯ್ಯರ್, ಮದರಾಸ್ ಸರಕಾರದ ರಿಟೈರ್ಡ್ ಚೀಫ್ ಇಂಜನಿಯರು.
ಮ॥ ಟಿ. ಎಸ್ ನಾರಾಯಣ ಸ್ವಾಮಿ, ಎಂ.ಎ, ಅಸಿಸ್ಟೆಂಟ್ ಕೆಮಿಸ್ಟ್, ಬಕಿಂಗ್‌ಹ್ಯಾಂ ಮಿಲ್ಸ್, ಮದರಾಸ್.
ದಿವಾನ್ ಬಹದ್ದೂರ್ ಮ॥ ವಿ. ಭಾಷ್ಯಂ ಅಯ್ಯಂಗಾರ್, ರಿಟೈರ್ಡ್ ಮದರಾಸ್ ಹೈಕೋರ್ಟ್ ಜಡ್ಜ್.
ಮ॥ ಸಿ.ಎಂ. ಶ್ರೀನಿವಾಸನ್, ಬಿ.ಎ., ಬಿ.ಎಲ್. (ಎಕ್ಸ್–ಅಫೀಶಿಯೋ) ಮದ್ರಾಸ್.

ಮ್ಯಾನೇಜರ್:—ಮ॥ ಎಂ. ನಟೇಶನ್, ಎಂ.ಎ. ಚೀಫ್ ಮೆಡಿಕಲ್ ಆಫೀಸರ್:— ಲೆ. ಕ॥ ವಿ ಮಹದೇವನ್, ಐ. ಎಂ ಎಸ್.

ಬ್ಯಾಂಕರುಗಳು:— ಇಂಡಿಯನ್ ಬ್ಯಾಂಕ್ ಲಿಮಿಟೆಡ್, ಮದರಾಸ್. ಮದರಾಸ್ ಪ್ರೊವಿನ್ಶಿಯಲ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಇಂಡೋ–ಕಮರ್ಷಿಯಲ್ ಬ್ಯಾಂಕ್ ಲಿಮಿಟೆಡ್, ದಿ ಬ್ಯಾಂಕ್ ಆಫ್ ಮೈಸೂರು, ಲಿಮಿಟೆಡ್.

ಬ್ರಾಂಚುಗಳು:—ಕಲ್ಕತ್ತಾ, ಲಾಹೋರ್, ಜೋಧಪೂರ್, ಮಧುರ, ಕಲ್ಲಿಕೋಟೆ, ಬೆಜವಾಡ, ಅಲಹಾಬಾದ್ ಬೊಂಬಾಯಿ, ಅಹಮದಾಬಾದ್, ಪೂನಾ

ಮೈಸೂರು ಸರಕಾರದ ಹೊಸ ವಿಮಾ ಕಾನೂನನ್ನು ಅನುಸರಿಸಿ ಕಂಟ್ರೋಲರವರಲ್ಲಿ ಠೇವಣಾತಿ ಮೊಬಲಗು ಇಡಲಾಗಿದೆ.
ಕರ್ನಾಟಕದಲ್ಲೆಲ್ಲಾ ಯೋಗ್ಯರಾದ ಮತ್ತು ಪ್ರತಿಭಾಶಾಲಿಗಳಾದವರಿಂದ ಏಜನ್ಸಿಗಳಿಗೆ ಅರ್ಜಿಗಳು ಸ್ವೀಕರಿಸಲ್ಪಡುವುವು.

ಉತ್ತಮ ಕೆಲಸಮಾಡುವವರಿಗೆ ಒಳ್ಳೇ ಷರತ್ತುಗಳು.
ಮ॥ ಸಿ ಎಂ. ಶ್ರೀನಿವಾಸನ್, ಬಿ. ಎ, ಬಿ ಎಲ್, ಜನರಲ್ ಸೆಕ್ರೆಟರಿ.
ಇಂಡಿಯನ್ ಮ್ಯೂಚುಯಲ್ ಲೈಫ್ ಅಸೋಸಿಯೇಷನ್ ಲಿಮಿಟೆಡ್,
10 ಮೌಂಟ್‌ರೋಡ್, ಮದ್ರಾಸ್.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—
ಬಿ. ಕರುಣಾಕರ ಹೆಗ್ಡೆ, ಇನ್ಸ್‌ಪೆಕ್ಟರ್ ಆಫ್ ಏಜನ್ಸೀಸ್,
ಹರೇಕಳ ಪೋಸ್ಟ್, ಉಡುಪಿ.

Bonus: Endowment Rs. 15. Wole life Rs. 18 Last valuation.

INDIAN MUTUAL LIFE ASSOCIATION, LIMITED.

Head Office—No. 10, Mount Road Madras

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ನವಯುಗ

ಉಡುಪಿ, ಗುರುವಾರ ತಾ. ೨೭-೬-'೪೦

ಕಾಂಗ್ರೆಸಿನ ಅಚಲ ನಿರ್ಧಾರ

ವಾರ್ಧಾದಲ್ಲಿ ನೆರೆದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಸದ್ಯದ ಪ್ರಾಮುಖ್ಯ ಪ್ರಶ್ನೆಯಾದ ಯುದ್ಧದ ಕುರಿತು ತನ್ನ ಮೊದಲಿನ ಧೋರಣೆಯನ್ನೇ ಸಮರ್ಥಿಸಿಕೊಂಡಿದೆ. ಸರಕಾರವು ಯುದ್ಧಸನ್ನಾಹಕ್ಕಾಗಿ ಮಾಡುತ್ತಿರುವ ವ್ಯವಸ್ಥೆಗಳಲ್ಲಿ ಕಾಂಗ್ರೆಸಿನವರು ಭಾಗವಹಿಸುವಂತಿಲ್ಲವೆಂಬುದೇ ಆ ನಿರ್ಧಾರ. ಇದು ಕಾಂಗ್ರೆಸಿನ ಹೃದಯ ಶುದ್ಧತೆ ಮತ್ತು ಧ್ಯೇಯ ಪಾವಿತ್ರ್ಯಕ್ಕೊಂದು ನಿದರ್ಶನ. ಯುದ್ಧ ಆರಂಭವಾದೊಡನೆ ಕಾಂಗ್ರೆಸು ಆ ಕುರಿತು ತನ್ನ ಧೋರಣೆಯನ್ನು ಸ್ಪಷ್ಟಪಡಿಸುವ ಅಗತ್ಯವಿತ್ತು. ಅದು ತನ್ನ ತಾಟಸ್ಥ್ಯವನ್ನು ಸಾರಿತು. ಕಾಲ ಸರಿಹೋದಂತೆ ಯುದ್ಧವೇಗ ತೀವ್ರವಾಯಿತು. ಆದರೆ ಕಾಂಗ್ರೆಸಿನ ಆದಿಯ ನಿರ್ಧಾರವನ್ನು ಬದಲಾಯಿಸುವ ಪರಿಸ್ಥಿತಿಯೊದಗಲಿಲ್ಲ. ಅಂತಹ ಪರಿಸ್ಥಿತಿಯೊದಗಲೆಂದು ಕಾಂಗ್ರೆಸು ಯಥಾರ್ಥವಾಗಿ ಹಾರೈಸಿತು. ಆದರೆ ಬಯಕೆ ಕೈಗೂಡಲಿಲ್ಲ. ಪರಿಸ್ಥಿತಿಯು ಆದಿಯ ಸ್ಥಾನಕ್ಕಿಂತ ಹಿಂದೆ ಅಥವಾ ಮುಂದೆ ಸರಿಯದಂತೆ ಕಾಂಗ್ರೆಸನ್ನು ತಡೆದಿಟ್ಟಿದೆ. ಇದರ ಹೊಣೆಗಾರಿಕೆ ಯಾರದೆಂಬ ಕುರಿತು ಪುನಃ ವರ್ಣನೆ ಬೇಕಾಗಿಲ್ಲ. ಕಾಂಗ್ರೆಸು ತನ್ನ ನಿರಪರಾಧಿತ್ವವನ್ನು ಸಾರುವದರಲ್ಲಿ-ರುಜುಪಡಿಸುವದರಲ್ಲಿ-ಹಿಂದೆಬಿದ್ದಿಲ್ಲ. ಆದರೆ ಸರಕಾರದಿಂದ ಅದರ ನ್ಯಾಯವಾದ ಬೇಡಿಕೆಗೆ ಮನ್ನಣೆ ದೊರೆಯದಾಯಿತು. ಸರಕಾರವು ಮುಂದೆ ಬರಲಿಲ್ಲ- ಕಾಂಗ್ರೆಸೂ ಮುಂದಾಗಲಿಲ್ಲ. ಭಾರತದ ಮುಖ್ಯ ಪ್ರಶ್ನೆಯೂ ಆ ಪ್ರಶ್ನೆಯ ಹಿಂದುಮುಂದಿನ ಪಕ್ಷಗಳಾದ ಕಾಂಗ್ರೆಸು ಮತ್ತು ಸರಕಾರವೂ ಇದ್ದಲ್ಲೇ ಇವೆ. ಸದ್ಯದ ಯುರೋಪು ಯುದ್ಧವು ಎಷ್ಟೋ ಪ್ರಾಮುಖ್ಯ ಮಾರ್ಪಾಟುಗಳನ್ನು ತಂದೊಡ್ಡಿತು; ಭಾರತದ ಪರಿಸ್ಥಿತಿಯು ಇದಕ್ಕೊಂದು ಅಪವಾದ.

ವಾರ್ಧಾದ ಸಭೆಯಲ್ಲಾದ ಇನ್ನೊಂದು ಮುಖ್ಯ ತೀರ್ಮಾನ ಹಾಗೂ ಏಕಮಾತ್ರ ಬದಲಾವಣೆಯೆಂದರೆ ಮಹಾತ್ಮಾ ಗಾಂಧೀ ಪ್ರತ್ತವಾದ ಅಹಿಂಸಾ ತತ್ವಕ್ಕೊಂದು ಮಿತಿಯನ್ನು ತಂದೊಡ್ಡಿದುದು. ಕಾಂಗ್ರೆಸಿನಲ್ಲಿ ಅಹಿಂಸೆಯು ತತ್ವತಃ ಅಂಗೀಕರಿಸಲ್ಪಡಬೇಕು, ಪ್ರತಿಯೊಂದು ಕಾರ್ಯದಲ್ಲೂ ಅದೇ ಜೀವಾಳವಾಗಿರಬೇಕು ಎಂಬುದು ಗಾಂಧಿಯವರ ಸಿದ್ಧಾಂತ. ಇದು ಕಾರ್ಯತಃ ಸಾಧ್ಯವೋ ಅಸಾಧ್ಯವೋ ಎಂಬುದನ್ನು ಹೊಸತಾಗಿ ವಿಮರ್ಶಿಸಿ ಕಾರ್ಯಕಾರೀ ಸಮಿತಿಯವರು ಈ ಬದಲಾವಣೆ ಮಾಡಿರುದೇನೂ ಅಲ್ಲ. ಆ ವಿಚಾರವು ಹಿಂದೆಯೇ ನಡೆದಿತ್ತು. ಕಾಂಗ್ರೆಸು ಅದನ್ನು ತನ್ನ ತತ್ವವಾಗಿ ಅಂಗೀಕರಿಸಿತ್ತು. ಆದರೆ ಸದ್ಯದ ಪರಿಸ್ಥಿತಿ ಅತ್ಯಪೂರ್ವವಾದುದು. ಇಂದಿನ ಪ್ರಕ್ಷುಬ್ಧ ವಾತಾವರಣದಲ್ಲಿ ಒಂದೊಂದು ಮುಹೂರ್ತವು ಒಂದೊಂದು ತಲಾಂತರದ ಬದಲಾವಣೆಯನ್ನು ತಂದೊಡ್ಡುತ್ತಿದೆ. ವಾಯುವೇಗದ ಕಾರ್ಯಾಚರಣೆಯಿಲ್ಲದವರು ಎಷ್ಟೋ ಹಿಂದೆ ಬಿದ್ದು ಬಿಡುವ ಸಂಭವವಿದೆ. ಮಹಾತ್ಮರ ಅಹಿಂಸಾ ವ್ರತವು ಒಂದೆರಡು ದಿನಗಳ ಅಭ್ಯಾಸದಿಂದ ಮೈಗೂಡಿಸಿಕೊಳ್ಳಲು ಬರುವಂತಹದಲ್ಲ. ಅಹಿಂಸಾ ಪಾಠ ದೊರೆತು ಹಲವು ವರುಷಗಳು ಸಂದರೂ ಭಾರತವದರಲ್ಲಿ ತೇರ್ಗಡೆಹೊಂದಿಲ್ಲ. ಹೀಗಾಗಿ ಸದ್ಯದ ಪರಿಸ್ಥಿತಿಗೆ ಅದನ್ನು ತತ್ಕ್ಷಣ ಸೇರಿಸಿಕೊಳ್ಳುವದು ಅಸಾಧ್ಯ. ಆದರೆ ಗಾಂಧಿಯವರಿಗೆ ಅಹಿಂಸೆಯೊಂದು ಸಾಧನ ಮಾತ್ರವಲ್ಲ; ಅವರದನ್ನು ಕಾಂಗ್ರೆಸಿಗೊಂದು ರಕ್ಷಣಾ ಕವಚವಾಗಿ ದಾನಮಾಡಿದುದಲ್ಲ. ಕಾಂಗ್ರೆಸಿನ ಹೃದಯವನ್ನೇ ಅದರಿಂದ ತುಂಬಿಸಬೇಕು, ಆಗ ಮಾತ್ರನೇ ನಾವು ಗುರಿಸೇರಬಲ್ಲೆವೆಂದು ಅದನ್ನು ಸರ್ವಸ್ವವಾಗಿ ಮಾಡಿಬಿಟ್ಟರು. ಒಳಗೂಹೊರಗೂ ಅದುಸರ್ವಾಂತರ್ಯಾಮಿಯಾಗಿರಬೇಕೆಂದು ಬಗೆದರು. ಅಹಿಂಸಾ ವ್ರತಕ್ಕೊಂದು ಮಿತಿಯನ್ನು ಹಾಕುವುದೆಂದರೆ ಗಾಂಧೀ ತತ್ವವನ್ನು ಅಲ್ಲಗಳೆದಂತೆ. ಅದ್ದರಿಂದಲೇ ಕಾಂಗ್ರೆಸು ಆ ಹೊಣೆಗಾರಿಕೆಯಿಂದ ಗಾಂಧಿಯವರನ್ನು ಮುಕ್ತಗೊಳಿಸಿದೆ. ಆ ಮೂಲಕ ಪರಿಸ್ಥಿತಿಗನುಗುಣವಾದ ಕಾರ್ಯಾಚರಣೆಗೆ ಪ್ರಾಮುಖ್ಯತೆ ಕೊಟ್ಟಿದೆ.

ಭಾರತೀಯರ ಮನೋಗತಿಯನ್ನು ಯಥಾರ್ಥವಾಗಿ ತಿಳಿಯಬಿಚ್ಛಿಸುವವರು-ಭಾರತದ ಬೆಂಬಲವನ್ನು ಅಪೇಕ್ಷಿಸುವವರು-ವಾರ್ಧಾದ ನಿರ್ಣಯವನ್ನು ಅಲಕ್ಷಿಸಲು ಸಾಧ್ಯವಿಲ್ಲ. ಬೊಂಬಾಯಿಯಲ್ಲಿ ಸೇರಿದ ಮುಸ್ಲಿಂ ಲೀಗಿನ ಕಾರ್ಯಕಾರೀ ಸಮಿತಿಯೂ ಸರಕಾರದ ಯುದ್ಧಸಿದ್ಧತೆಯಲ್ಲಿ ಭಾಗವಹಿಸಬಾರದೆಂಬ ನಿರ್ಧಾರವನ್ನು ಮಾಡಿರುವದು. ಭಾರತೀಯರಲ್ಲಿ ಏಕಾಭಿಪ್ರಾಯವಿಲ್ಲ; ಭಾರತದ ವಿಮೋಚನೆಗೆ ಅದೊಂದೇ ಪ್ರತಿಬಂಧಕವೆಂದು ಈ ವರೆಗೂ ಹಾಡುತ್ತಿರುವವರು ಈ ಏಕಾಭಿಪ್ರಾಯವನ್ನು ಗಮನಿಸಬೇಕು. ಧುರೀಣರೊಳಗೆ ಭಿನ್ನಾಭಿಪ್ರಾಯಗಳಿರುವ ವಿಷಯಗಳೆಷ್ಟೋ ಇವೆ. ಆದರೆ ದೇಶದ ಮುಖ್ಯ ಪ್ರಶ್ನೆಯ ಕುರಿತು ಅಭಿಪ್ರಾಯ ವ್ಯತ್ಯಾಸವಿಲ್ಲ. ಆ ಮುಖ್ಯ ಪ್ರಶ್ನೆಯೇ ಪ್ರಜಾ-ಸರಕಾರಗಳೊಳಗಿನ ಸಂಬಂಧ. ಸರಕಾರವು ತನ್ನ ಪಾಲಿನ ಕರ್ತವ್ಯವನ್ನು ಮಾಡಿಲ್ಲವೆಂಬ ಕುರಿತು ಭಾರತೀಯರೊಳಗೆ ಭಿನ್ನಾಭಿಪ್ರಾಯವಿಲ್ಲ. ಬ್ರಿಟಿಷ್ ಮುತ್ಸದ್ದಿಗಳು ಇಂದಿನ ಕಠಿಣ ಸನ್ನಿವೇಶದಲ್ಲಾದರೂ ತಮ್ಮ ಅಂತರ್ಯ ಶೋಧನೆಗಳಿಗಿಳಿದಿಲ್ಲವೆಂದ ಮೇಲೆ ಈ ವಿಪರ್ಯಾಸಕ್ಕೇನೆನ್ನಬೇಕು? ಇಂಗ್ಲಾಂಡು ಇಂದಿನ ಪರೀಕ್ಷಾ ಕಾಲದ ಮಹತ್ವವನ್ನರಿತಿದೆ. ಸದ್ಯ ಸ್ಥಿತಿಯ ಮೂಲಹೇತುಗಳಾಗಿದ್ದ ಹಲವು ಕೊರತೆಗಳನ್ನು ಶ್ಲಾಘನೀಯ ರೀತಿಯಿಂದ ನಿವಾರಿಸಿಕೊಂಡಿದೆ. ಅದರ ಸ್ವಬಲವರ್ಧನಾ ಕಾರ್ಯಕ್ಕೆ ಹಲವು ಜಾಡ್ಯಗಳು ಬಲಿಬಿದ್ದವು. ಆದರೆ ಭಾರತದ ಪ್ರಶ್ನೆಯೊಂದು ಇದಕ್ಕಪವಾದ. ಅದರಲ್ಲಿರುವ ಮಹತ್ವವನ್ನು ಇಂಗ್ಲಾಂಡು ಇನ್ನೂ ಕಡೆಗಣಿಸುವದಾದರೆ ಬ್ರಿಟಿಷರ ಪಾಲಿಗೆ ಅದಕ್ಕೂ ಮಿಕ್ಕಿದ ಪ್ರಮಾದ ಮತ್ತೊಂದಿರಲಾರದು.

ವೈಸರಾಯರ ವಿನಂತಿ

ವೈಸರಾಯರು ತಾ. 19ರಲ್ಲಿ ಮಾಡಿದ ಬ್ರಾಡ್‌ಕಾಸ್ಟ್ ಭಾಷಣದಲ್ಲಿ ಭಾರತೀಯರೊಳಗಿನ ಒಕ್ಕಟ್ಟಿಗಾಗಿ, ಸರಕಾರದೊಡನೆ ಪೂರ್ಣ ಸಹಕಾರಕ್ಕಾಗಿ ದೇಶದೊಡನೆ ಕಳಕಳಿಯ ವಿನಂತಿಮಾಡಿಕೊಂಡಿರುವರು. ಇಂದಿನ ಪರೀಕ್ಷಾಕಾಲದಲ್ಲಿ ರಾಜಕೀಯ ಭಿನ್ನಾಭಿಪ್ರಾಯಗಳನ್ನು ತಾತ್ಕಾಲಿಕವಾಗಿ ಬಿಟ್ಟುಕೊಟ್ಟು ಸರ್ವರ ಹಿತಸಾಧನೆಗಾಗಿ ಒಕ್ಕಟ್ಟಿನಿಂದ ಪ್ರಯತ್ನಿಸಬೇಕು. ಸುಖದಾಯಕ ಕಾಲಬರುವ ವರೆಗೆ ನಾವು ಆಂತರಿಕ ಭೇದಗಳನ್ನು ಮರೆತು ಒಂದಾಗಬೇಕು. ತಾನು ವ್ಯಕ್ತಿಶಃ ಈ ಒಗ್ಗಟ್ಟಿನ ಸಾಧನೆಗಾಗಿ ಆತ್ಯಾತುರನಿದ್ದೇನೆ, ಸಹಾಯಕ್ಕೆ ಸದಾ ಸಿದ್ಧನಿದ್ದೇನೆ ಎಂಬುದೇ ವೈಸರಾಯರ ಅಗ್ರಹದ ವಿನಂತಿ. ಅವರ ಮಾತು ಬ್ರಿಟಿಷ್ ಸರಕಾರದ ಅಂತರ್ಯದ ಧ್ವನಿಯಾಗಿದೆ. ಕಾಂಗ್ರೆಸಿನ ಮತ್ತು ಇತರ ಭಾರತೀಯ ಪಕ್ಷಗಳ ಬೇಡಿಕೆ ಒಂದು ಕಡೆಯಲ್ಲಿ, ವೈಸರಾಯರ ವಿನಂತಿ ಮತ್ತೊಂದೆಡೆಯಲ್ಲಿ-ಇವುಗಳನ್ನು ಒಂದುಗೂಡಿಸುವುದೇ ಪ್ರಕೃತ ಹಿಂದೂದೇಶದಲ್ಲಿ ಅತ್ಯಗತ್ಯವಾಗಿ ಸಾಧಿಸಲ್ಪಡಬೇಕಾದ ಒಗ್ಗಟ್ಟು. ಭಾರತದ ವೈಸರಾಯರಾಗಲೀ, ಸ್ಟೇಟ್ ಸೆಕ್ರೆಟರಿ ಮಿ. ಅಮೆರಿಯವರಾಗಲೀ ಪ್ರಥಮತಃ ನೆರವಾಗಬೇಕಾದುದು ಈ ಒಗ್ಗಟ್ಟಿಗೆ. ಇವನ್ನು ಸಾಧಿಸುವ ಉಪಾಯವಿದ್ದರೂ ವೈಸರಾಯರು ಆ ಕುರಿತು ಮೌನತಾಳುವ ಪದ್ಧತಿಯನ್ನು ಬಿಟ್ಟಿಲ್ಲ. ಸದ್ಯದ ಕಾರ್ಮೋಡಗಳು ತೊಲಗಿ ವಾತಾವರಣವು ಬೆಳಗಿದಾಗ ನಾವೊಂದು ತೀರ್ಮಾನಕ್ಕೆ ಬರಬಹುದೆಂಬ ಆಶೆಯನ್ನು ವೈಸರಾಯರು ತನ್ನ ಭಾಷಣದಲ್ಲಿ ತೋರಿಸಿದ್ದಾರೆ. ಅಂದರೆ ಹೇಗೆ? ಯುದ್ಧ ಮುಗಿದ ಮೇಲೆ ಪುನಃ ರೌಂಡ್ ಟೇಬಲ್ ಪರಿಷತ್ತನ್ನು ಕರೆಯಬಹುದು; ಇಲ್ಲವೆ ಅಂತ್ಯರಹಿತ ಭೇಟಿಗಳಲ್ಲಿ ಮಾತುಕತೆಗಳಲ್ಲಿ ತೊಡಗಬಹುದು. ಇವೆಲ್ಲವುಗಳ ಕೊನೆಯ ಪರಿಣಾಮವಿಷ್ಟೇ ಎಂಬುದನ್ನು ಇನ್ನು ಕಲಿಯಬೇಕೆಂದಿಲ್ಲ. ಇಂತಹ ಮಾಧ್ಯಮಿಕ ಮಾತುಗಳಿಗಾಗಿ ಭಾರತೀಯ ಮುಖಂಡರು ಮೇಲಿಂದ ಮೇಲೆ ಬೇಸರ ಸೂಚಿಸಿದರೂ ಬ್ರಿಟಿಷ್ ಮುತ್ಸದ್ದಿಗಳು ಇನ್ನೂ ತಮ್ಮ ಸ್ವಭಾವವನ್ನು ಬಿಟ್ಟಿಲ್ಲ ಮಾತ್ರವಲ್ಲ, ತಮ್ಮ ಈ ಕಷ್ಟ ಕಾಲದಲ್ಲಿ ಅದನ್ನೇ ಆಧಾರವಾಗಿ ಅಂಗೀಕರಿಸಿದ್ದಾರೆಂಬುದು ಜಿಗುಪ್ಸಾದಾಯಕವಾದ ವಿಷಯ. ಯುದ್ಧಾಂತ್ಯದಲ್ಲಾದರೂ ಭಾರತೀಯರನ್ನು ತೃಪ್ತಿಪಡಿಸಬೇಕೆಂಬ ಯಥಾರ್ಥ ಇಚ್ಛೆ ಬ್ರಿಟಿಷರಲ್ಲಿರುವದಾದರೆ ಅದನ್ನು ಸ್ಪಷ್ಟವಾಗಿ ತಿಳಿಸಲು ಆಕ್ಷೇಪವೇನು? ಭಾರತೀಯರಲ್ಲಿರುವ ಅತೃಪ್ತಿಯಾವುದೆಂಬುದು ಇನ್ನೂ ತಿಳಿದುಬಂದಿಲ್ಲವೆ? ಭಾರತೀಯರ ಸ್ವನಿರ್ಧಾರದ ಹಕ್ಕನ್ನು ಕಂಠೋಕ್ತವಾಗಿ ಒಪ್ಪಿಕೊಂಡು, 'ಯುದ್ಧ ಮುಗಿದೊಡನೆ ನಿಮ್ಮ ಭವಿಷ್ಯವನ್ನು ನಿಮ್ಮ ಕೈಗೊಪ್ಪಿಸುವೆವು' ಎಂದು ಈಗ ಜಾಹೀರು ಮಾಡುವದಕ್ಕೇನಡ್ಡಿ? ಈ ರೀತಿಯ ಸ್ಪಷ್ಟತೆಯಿಲ್ಲದ ಬಾಯುಪಚಾರದ ಮಾತಿನಿಂದಾಗಿ ಮೊದಲೇ ಜಡ್ಡಾಗಿರುವ ಭಾರತೀಯರ ಮನಸ್ಸಿನ ಮೇಲೆ ಮತ್ತೂ ಮತ್ತೂ ಆ ಪ್ರಯೋಗವನ್ನು ನಡೆಸಿ ಪುರುಷಾರ್ಥವೇನು? ಮಾನ್ಯ ವೈಸರಾಯರು ಗಾಂಧಿಜಿ, ಜಿನ್ನ ಮೊದಲಾದ ಮುಖಂಡರನ್ನು ಪುನಃ ಆಮಂತ್ರಿಸಿರುವರೆಂಬ ವಾರ್ತೆ ಬಂದಿದೆ. ಈ ಬಾರಿಯ ಮಾತುಕತೆಯಲ್ಲಿ ನಾವು ಹೊಸತನ್ನು ನಿರೀಕ್ಷಿಸಬಹುದೆ? ವೈಸರಾಯರ ಭಾಷಣದ ಧ್ವನಿಯು ಹಿಂದಿನದಕ್ಕಿಂತ ಭಿನ್ನವಾಗಿಲ್ಲ. ಈ ಸಂಭಾಷಣೆಗಳ ಗತಿಯೂ ಹಿಂದಿನದೇ ಆದೀತೆ? ಯುದ್ಧ ರೀತಿಯಿಂದ ಹಿಡಿದು ದೇಶಗಳ ಆಳ್ವಿಕೆಯ ವರೆಗೆ ಸದ್ಯದ ಬ್ರಿಟಿಷ್ ಆಡಳಿತೆಯು, ಪುರಾತನ ರೀತಿನೀತಿಗಳಿಗೇನೆ ಕಟ್ಟುಬಿದ್ದು ಕಾರ್ಯ ಕೆಡಿಸಿತು ಎಂಬ ಅಪವಾದವಿದೆ. ಇದಕ್ಕೆ ಚಿಕಿತ್ಸೆಯು ಬ್ರಿಟಿಷರ ಹಿತದೃಷ್ಟಿಯಿಂದಲೇ ಅಗತ್ಯವಿದೆ. ವೈಸರಾಯರ ಹೊಸ ಸಂಭಾಷಣೆಗಳಾದರೂ ಈ ಚಿಕಿತ್ಸೆಯ ರೀತಿಯಲ್ಲಿರಲೆಂದು ಹಾರೈಸುತ್ತೇವೆ.

ಒರಿಯೆಂಟಲ್ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಇವರ 65ನೇ ವಾರ್ಷಿಕ ವರದಿಯು ನಮ್ಮ ಬಳಿಗೆ ಬಂದಿದೆ. ಕಳೆದ ವರ್ಷದಲ್ಲಿ ಈ ಕಂಪೆನಿಯು ನಡಿಸಿರುವ ವಿಮಾ ವಹಿವಾಟವು 39,965 ಪೋಲಿಸಿಗಳಿಂದ ರೂ. 773 ಲಕ್ಷದಷ್ಟಾಗಿದೆ. ವರದಿಯ ವರ್ಷದಲ್ಲಿ ಕಂಪೆನಿಯ ಪ್ರೀಮಿಯಮ್ ಆದಾಯವು ರೂ. 365 ಲಕ್ಷವಾಗಿರುತ್ತದೆ. ಕಳೆದ ವರ್ಷಕ್ಕಿಂತ ಇದು ರೂ. 15½ ಲಕ್ಷ ಹೆಚ್ಚಾಗಿದೆ. ಬಡ್ಡಿ ಆದಾಯವು ಈ ವರ್ಷ ರೂ. 106 ಲಕ್ಷ. ಇದು ಕೂಡಾ ಕಳೆದ ವರ್ಷಕ್ಕಿಂತ ರೂ. 9 ಲಕ್ಷ ಹೆಚ್ಚಿಗೆಯಾಗಿದೆ. ಮರಣಪಟ್ಟ ನಿಮಿತ್ತ ವರದಿಯ ವರ್ಷದಲ್ಲಿ ರೂ. 62½ ಲಕ್ಷದಷ್ಟು ಕ್ಲೈಮುಗಳನ್ನು ಕೊಡಲಾಗಿದೆ. ಕಂಪೆನಿಯ ಫಂಡುಗಳು ಈ ವರ್ಷ ಒಟ್ಟು ರೂ. 25½ ಕೋಟಿಗೇರಿದೆ. ಕಳೆದ ವರ್ಷ ರೂ. 23½ ಕೋಟಿಯಾ

ಲ್ಯ...

ಗಿದ್ದಿತು. ಪ್ರಕಾರ ಸು... ಯೋಗಿಸಲ್ಪ... ಡ್ಡಿಯನ್ನು... ಯ ವರ್ಷ... ಡಿವಿಡೆಂಡು... ದ ಅಗ್ರ... ದಾದ ಒಟ್ಟು... ಪತ್ರಿಕ ದ... ನಾಹುತದ... ಹಿವಾಟನ್ನು... ನಿಯ ಭಂ... ತ ವೆಚ್ಚ... ತೆಯಿಂದ... ಯ ಪೆಟ್ಟ... ನೀಯವಿದೆ

ಇಂಗ್ಲೆ...

ತಾ. 1... ವಿಮಾನಗ... ಗದ ಮೇಲೆ... ನಡಿಸತೊ... ಎಸ್ಸೆಕ್ಸಿನ... ಕೊಲ್ಲಲ್ಪಟ್ಟ... ಸುಮಾರು... ಗಳು ಇಂಗ್ಲೆ... ಭಾಗದ ಪ... ಕೆಲವುಟ್ಟ... ಹಲವು... ಬೊಂಬೆ... ಧಾಳಿಯಿಂ... ಆಗಿರುವುದಿ... ವಾಗಿರುವ... ಭಾಗದ... ಗಿದೆ ಕೆಲ... ಕೆಲವುಟ್ಟ... 8ಮಂದಿ... ಮಂದಿ... 21ರಲ್ಲಿಯ... ವಳಿಯ... ಳೇರಿ ಹೋ... 20ಕ್ಕಿಂತ... ನಗಳು ಕೇ...

ಫ್ರಾ...

ಜರ್ಮ... ವೀಗ ಪ್ರಕ... ಶರ್ತಗಳಲ್ಲಿ... ನ್ನೊಪ್ಪಿದ... ಯುದ್ಧ... ಮಾತಿನಂ... ಇಟಲಿ ಸೇ... ತ್ರಿವೆ. ಫ... ಪಟ್ಟಣರ... ಇಟಲಿ ಪ... ಸಮಯದ... ದ ಫ್ರೆಂಚ... ಕ್ಸ್ ನಗರ... ಒಟ್ಟರು... ಅತ್ಯಂ... ಈ ಶ...

ಸರಕಾರವು ಅಪಮಾನಕರ ಶರ್ತಗಳಿಗೊಪ್ಪಿ ನಿಸ್ತೇಜವಾಯಿತು!

ಬೋರ್ಡೋಕ್ಸ್ ಸರಕಾರಕ್ಕೆ ಇಂಗ್ಲಾಂಡಿನ ನಕಾರ!

ಚರ್ಚಿಲ್ಲರಿಗೆ ಪೆಟೈನರ ಉತ್ತರ! —·— ಪುನಃ ಗಾಂಧೀ-ವೈಸರಾಯಿ ಸಂಭಾಷಣೆ!

...ಳವು ಯಥಾ
ಪ್ರತಿಗಳಲ್ಲಿ ವಿನಿ
13ಕ್ರಿಶ್ಚಿಯನ್ನರ ಬ
...ಯು ವರದಿ
...ರ ರೂ. 125
ಹಿಂದೂದೇಶ
...ಸೈನಿಗಳಲ್ಲೊಂ
...ಸೈನಿಯು ಸಾಂ
...ಯುದ್ಧದ ಆ
...ಯೂ ತನ್ನ ವ
...ನಡಿಸಿ ಕಂಪೆ
...ದೋಗ, ಅದಳ
...ಕಿ ಜಾಗರೂಕ
...ದ ಅಭಿವೃದ್ಧಿ
...ಅತ್ಯಧಿಕದಿಂದ

...ವಿಮಾನ

...ದೆ ಜರ್ಮನ್
...ಪೂರ್ವ ಭಾ
...ವಿಮಾನ ಧಾಳಿ
...ತಾ. 18ರಲ್ಲು
...ಮು 9ಮಂದಿ
...19ನೇ ರಾತ್ರಿ
...ನ್ ವಿಮಾನ
...ಮತ್ತು ಪೂರ್ವ
...ಬೋಂಬೆಸೆಯ
...ಮಾಗಿರುವುದು.
...ಗಳ ಮೇಲಿ
...ಮೂ ವಿಮಾನ
...ಕಾರ್ಖಾನೆಯೇನೂ
...ನೆಗಳು ನಾಶ
...ನ ಈಹಾನ್ನ
...ಂಬೆಸೆಯಲಾ
...ಖಾನೆಗಳಿಗೂ
...ಗಿದೆ. ಒಟ್ಟು
...ನೂರು 60
...ತ್ತಾರೆ. ತಾ.
...ಪೂರ್ವ ಕರಾ
...ವಿಮಾನಗ
...ಸುವವು. ಒಟ್ಟು
...ನ್ ವಿಮಾ
...ವವು

...ನಿಯು

...ಪೂರ್ಣ ವಿವರ
...ತಾತ್ಕಾಲಿಕ
...ಯ ಶರ್ತಗಳ
...ನಂತರವೇ
...ಟ್ಲರರ
...ನಿ ಮತ್ತು
...ಮುಂದೊತ್ತು
...ಮಾರ್ಶಲ್
...ನಿ ಫ್ರಾನ್ಸ್—
...ಡಿಸುತ್ತಿರುವ
...ನೆಯು ಸದ್ಯ
...ದ ಬೋರ್ಡಾ
...ವಿಲ್ಲವೆಂದು
...

...ರ ಶರ್ತ

...ಸುವಂಥವು

ಮತ್ತು ನಾಚಿಕೆಕರವೆಂದು ಲಂಡನಿನಲ್ಲಿ ಜುಗುಪ್ಸೆ ಮತ್ತು ವೇದನೆಯು ಗಲಿಬಿಲಿಯೆದ್ದಿದೆ. ಈ ಶರ್ತಗಳಿಂದಾಗಿ ಫ್ರಾನ್ಸಿನ ಸಶಸ್ತ್ರ ಸೈನಿಕರು ಸಂಗ್ರಹಗಳು ಮತ್ತು ಸಾಮಗ್ರಿಗಳು ಜರ್ಮನಿಯ ಹಸ್ತಗತವಾಗುವವು. ಹಾಗೆಯೇ ಫ್ರಾನ್ಸಿನ ದೊಡ್ಡ ಭಾಗವು ಬ್ರಿಟನಿನೊಡನೆ ಯುದ್ಧ ನಡೆಸಲನುಕೂಲವಾಗಿ ವಿರೋಧಿಗೆ ಸೇರುವದು. ಫ್ರೆಂಚ್ ಸರಕಾರವು ಸಣ್ಣ ಭಾಗದಲ್ಲಿ ಪೂರ್ಣವಾಗಿ ಜರ್ಮನಿಯ ಪರಾಧೀನತೆ ನಿರ್ಗತಿಕವಾಗಿರಬೇಕಾಗುವದು ಒಂದೇ ಮಾತಿನಲ್ಲಿ ಫ್ರಾನ್ಸು ಸಂಪೂರ್ಣವಾಗಿ ಜರ್ಮನಿಯ ಸ್ವಾಧೀನವಾಯಿತು ಎಂದು ಲಂಡನಿನ ಅಭಿಪ್ರಾಯವಿದೆ. ಪೆಟೈನ್ ಸರಕಾರದ ವಿದೇಶಮಂತ್ರಿ ಎಮ್. ಬಾಡೋನ್ ಇವರು ಹಾನಿಕಾರಕ ಮತ್ತು ನಾಚಿಕೆಕರ ಶರ್ತಗಳಿಗೆ ಫ್ರಾನ್ಸು ಒಪ್ಪಲಾರದೆಂದು ಹೇಳಿದ್ದರು; ಇದಕ್ಕಿಂತ ಹೆಚ್ಚಿನ ಅಪಮಾನಕಾರೀ ಶರ್ತಗಳಾವುವೂ ಇಲ್ಲ. ತನ್ನ ಮಿತ್ರ ರಾಷ್ಟ್ರವಾದ ಇಂಗ್ಲಾಂಡಿನ ವಿರುದ್ಧ ಉಪಯೋಗಿಸಲು ಸಾಮಗ್ರಿ ಮತ್ತು ಸ್ಥಳವನ್ನು ವಿರೋಧಿಗೆ ಬಿಟ್ಟುಕೊಡುವದಕ್ಕಿಂತ ಹೆಚ್ಚಿನ ನಾಚಿಕೆಯಿನ್ನಾವುದು? ಪ್ರತ್ಯೇಕ ಒಪ್ಪಂದ ಮಾಡಿಕೊಳ್ಳುವುದಿಲ್ಲವೆಂದು ಇಂಗ್ಲಾಂಡಿನೊಡನೆ ಆಗಿರುವ ಕರಾರನಾಮೆಗೆ ಬೋರ್ಡೋನರ ಮಾತಿಗೂ ಈ ಶರ್ತದ ಅಂಗೀಕಾರವು ಪೂರ್ಣ ವಿರುದ್ಧವೆಂದು ಲಂಡನ್ ಅಭಿಪ್ರಾಯ ಪಡುತ್ತಿದೆ.

ಜನರಲ್ ಡಿ ಗ್ಯಾಲೆಯುವರ ಪ್ರತಿ ಸರಕಾರ

ಈಗ ಲಂಡನಿನಲ್ಲಿರುವ ಫ್ರಾನ್ಸಿನ ಜನರಲ್ ಡಿ ಗೋಲೆಯುವರು ಬೋರ್ಡೋಕ್ಸ್ ಸರಕಾರದ ವರ್ತನೆಯನ್ನು ಪ್ರತಿಭಟಿಸಿ ತಾತ್ಕಾಲಿಕ 'ಫ್ರೆಂಚ್ ರಾಷ್ಟ್ರೀಯ ಸಮಿತಿ'ಯೊಂದನ್ನು ಇಂಗ್ಲಾಂಡಿನಲ್ಲಿ ರಚಿಸಿ ಯುದ್ಧವನ್ನು ಮುನ್ನಡೆಸುವ ನಿರ್ಧಾರ ಮಾಡಿರುವರು. ಅವರು ತಾ 23ರಲ್ಲಿ ಲಂಡನಿನಿಂದ ಬ್ರಾಡ್‌ಕಾಸ್ಟ್ ಭಾಷಣವೀಯುತ್ತಾ ಪೆಟೈನ್ ಸರಕಾರವು ಒಪ್ಪಿದ ಶರ್ತಗಳಿಂದ ಫ್ರಾನ್ಸು ಪೂರ್ಣ ಪರಾಧೀನವಾದಂತಾಗುವದೆಂದೂ, ಯುದ್ಧದ ಎಲ್ಲಾ ಸಾಧನೆಗಳು ಪೂರ್ಣ ಬರಿದಾಗುವ ಮೊದಲೇ ಈ ಕರಾರಿಗೆ ಸಹಿಹಾಕಲಾಯಿತೆಂದೂ ಫ್ರಾನ್ಸಿನ ಸ್ವಾತಂತ್ರ್ಯ ಮತ್ತು ಹಿತರಕ್ಷಣೆಯ ಜವಾಬ್ದಾರಿಯುಳ್ಳ ಸರಕಾರವಾವುದೂ ಈಗ ಫ್ರಾನ್ಸಿನಲ್ಲಿಲ್ಲವೆಂದೂ ಪ್ರಕೃತ ಅಲ್ಲಿಯ ರಾಜಕೀಯ ಸಂಸ್ಥೆಗಳಿಗೆ ಅಥವಾ ಜನರಿಗೆ ತಮ್ಮ ಅಭಿಪ್ರಾಯ ತಿಳಿಸುವ ಅನುಕೂಲತೆ ಕೂಡ ಇಲ್ಲವೆಂದೂ ಅದಕ್ಕಾಗಿ ಬ್ರಿಟಿಷ್ ಸರಕಾರದೊಡನೆ ಒಪ್ಪಂದ ಮಾಡಿಕೊಂಡು ಫ್ರಾನ್ಸಿನ ಹಿತರಕ್ಷಣೆಯ ಪ್ರಾತಿನಿಧ್ಯವುಳ್ಳ 'ಫ್ರೆಂಚ್ ರಾಷ್ಟ್ರೀಯ ಸಮಿತಿ'ಯೊಂದನ್ನು ರಚಿಸಿ, ಕೊನೆಯ ವಿಜಯದ ವರೆಗೆ ಮಿತ್ರರಾಷ್ಟ್ರಗಳೊಡನೆ ಸೇರಿ ಯುದ್ಧ ಮುಂದೊತ್ತಲಾಗುವದೆಂದೂ ತಿಳಿಸಿರುವರು. "ಯುದ್ಧವು ಮುಗಿದಿಲ್ಲ; ದೇಶವು ಮರಣಹೊಂದಿಲ್ಲ; ಆಶೆಯು ಬರಿದಾಗಿಲ್ಲ; ಫ್ರಾನ್ಸು ಚಿರಂಜೀವಿಯಾಗಲಿ!" ಎಂದು ಜನರಲರ ಭಾಷಣದ ಕೊನೆಯ ಉದ್ಗಾರ.

ಬ್ರಿಟನು ಬೋರ್ಡೋಕ್ಸ್ ಸರಕಾರವನ್ನು ನಿರಾಕರಿಸಿತು

ಜನರಲ್ ಡಿ ಗೋಲೆಯುವರ ಭಾಷಣಾನಂತರ ಬ್ರಿಟಿಷ್ ಸರಕಾರವು ರೇಡಿಯೋ ಹೇಳಿಕೆಯೊಂದನ್ನಿತ್ತು ಫ್ರಾನ್ಸಿನ ಸದ್ಯದ ಬೋರ್ಡೋಕ್ಸ್ ಸರಕಾರಕ್ಕೆ ನಿರಾಕರಣೆಯಿತ್ತಿದೆ. ಬೋರ್ಡೋಕ್ಸ್ ಸರಕಾರವು ಸಹಿಹಾಕಿರುವ ಒಪ್ಪಂದವು ಈ ಮೊದಲು ಮಿತ್ರರಾಷ್ಟ್ರಗಳೊಳಗಾಗಿದ್ದ ಒಡಂಬಡಿಕೆಗೆ ಪೂರ್ತಿ ವಿರುದ್ಧ. ಸಂಧಿ ಶರ್ತಗಳಂತೆ ಪೂರ್ತಿ ವಿರೋಧಿಯ ಸ್ವಾಧೀನವಾಗುವಂತಾಗುವುದರಿಂದ ಸ್ವತಂತ್ರ ಫ್ರೆಂಚ್ ನಾಗರಿಕರ ಪ್ರತಿನಿಧಿಯೆನ್ನಿಸುವ ಅಧಿಕಾರವನ್ನು ಬೋರ್ಡೋಕ್ಸ್ ಸರಕಾರವು ಕಳೆದುಕೊಂಡಿದೆ. ಆದ್ದರಿಂದ ನಮ್ಮ ಸರಕಾರವು ಸ್ವತಂತ್ರ ರಾಷ್ಟ್ರದ [ಸರಕಾರವಾಗಿ ಬೋರ್ಡೋಕ್ಸ್] ಸರಕಾರವನ್ನು ಇನ್ನು ಮುಂದೆ ಒಪ್ಪುವಂತಿಲ್ಲ. ಸ್ವತಂತ್ರ ಫ್ರೆಂಚರ ಪ್ರಾತಿನಿಧ್ಯವುಳ್ಳ ಅಂತರ್ರಾಷ್ಟ್ರೀಯ ಕರಾರುಗಳ ಪಾಲನೆಗಾಗಿ ಯುದ್ಧವನ್ನು ಮುನ್ನಡೆಸುವ ನಿರ್ಧಾರವುಳ್ಳ 'ಫ್ರೆಂಚ್ ರಾಷ್ಟ್ರೀಯ ಸಮಿತಿ'ಯೊಂದರ ರಚನೆಯಾಗಲಿರುವದರಿಂದ ನಮ್ಮ ಸರಕಾರವದನ್ನೊಪ್ಪಿಕೊಂಡು ಯುದ್ಧ ಸಂಬಂಧದ ಎಲ್ಲಾ ಸಂಗತಿಗಳಲ್ಲಿ ಅದರೊಡನೆ ಸಹಕರಿಸಿ ವಿರೋಧಿಯೊಡನೆ ಹೋರಾಡುವದು ಎಂದು ಬ್ರಿಟಿಷ್ ಸರಕಾರದ ಹೇಳಿಕೆ. 'ಗ್ರೇಟ್‌ಬ್ರಿಟನು ಫ್ರೆಂಚರ ಹಿತಸಾಧನೆಯನ್ನೂ ತನ್ನ ಲಕ್ಷ್ಯವಾಗಿ ಇಟ್ಟುಕೊಳ್ಳುವದು. ಫ್ರಾನ್ಸಿನ ಘನತೆಯನ್ನು ಪುನಃ ಪಡೆಯಲು ಮತ್ತು ಫ್ರೆಂಚರನ್ನು ಸ್ವತಂತ್ರರನ್ನಾಗಿ ಮಾಡಲು ಇಂಗ್ಲಾಂಡು ವಿಜಯಿಯಾಗುವದೊಂದೇ ಉಪಾಯ" ಎಂದು ಬ್ರಿಟಿಷ್ ಪ್ರಧಾನರಂದಿದ್ದಾರೆ.

ಫ್ರೆಂಚ್ ವಸಾಹತುಗಳ ಯುದ್ಧಾತುರ

ಫ್ರೆಂಚ್ ಸಾಮ್ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಯುದ್ಧವನ್ನು ಮುಂದೊತ್ತಲೇಬೇಕೆಂಬ ಉತ್ಸಾಹವೆದ್ದಿದೆ. ಸಿರಿಯಾದ ಫ್ರೆಂಚ್ ಸೇನಾಧಿಪತಿಗಳು ಯುದ್ಧ ನಡೆಯಿಸುವ ದೃಢ ನಿರ್ಧಾರವನ್ನು ಸಾರಿರುವರು. ಇಂಡೋಚೀನದಲ್ಲಿ ಫ್ರೆಂಚ್ ಗವರ್ನರ್ ಜನರಲರು ತಾನು ಧ್ವಜವನ್ನು ಕೆಳಗಿಳಿಯಬಿಡಲಾರೆನೆಂದಿರುವರು. ಟ್ಯುನಿಸಿನ ಮುಖ್ಯಾಧಿಕಾರಿಯೂ ಯುದ್ಧ ನಡೆಯಬೇಕೆಂಬ ದೃಢ ಸಂಕಲ್ಪದಲ್ಲಿರುವರು. ಮೊರೊಕ್ಕೋ, ಸೆನಗಲ್, ಕೆಮರೂನ್ಸ್, ಜಿಬೌಟಿ ಮೊದಲಾದೆಡೆಗಳಿಂದ ಯುದ್ಧ ನಡೆಸಲು ಬೆಂಬಲದ ಆಶ್ವಾಸನೆ ದೊರೆತಿರುವದೆಂದು ಲಂಡನಿನ ವಾರ್ತೆ.

ಚರ್ಚಿಲ್ಲರಿಗೆ ಪೆಟೈನರ ಉತ್ತರ

ಬೋರ್ಡೋಕ್ಸ್ ಸರಕಾರದ ಪ್ರಧಾನರಾದ ಎಮ್. ಪೆಟೈನರು ರೇಡಿಯೋ ಭಾಷಣದ ಮೂಲಕ ಚರ್ಚಿಲ್ಲರಿಗುತ್ತರವಿತ್ತಿರುವರು. "ಚರ್ಚಿಲ್ಲರಿಗೆ ತನ್ನ ದೇಶದ ಕುರಿತಿರುವ ಆತುರೋದ್ವೇಗವು ನಮಗರಿತಿದೆ. ಚರ್ಚಿಲ್ಲರು ತನ್ನ ದೇಶದ ಸ್ಥಿತಿಗತಿ ನಿಯಾಮಕರಾಗಿರುವರೇ ಹೊರತು ನಮ್ಮ ದೇಶಕ್ಕಲ್ಲ; ಅದಿನ್ನೂ ಫ್ರಾನ್ಸಿನ ಗೌರವವಾಗಿಯೇ ಉಳಿದಿದೆ. ನಮ್ಮ ಧ್ವಜವು ಈಗಲೂ ಕಳಂಕರಹಿತವಾಗಿದೆ. ನಮ್ಮ ಸೈನ್ಯವು ಧೈರ್ಯದಿಂದ ಮತ್ತು ವಿಧೇಯತೆಯಿಂದ ಕಾದಾಡಿತು. ಆಯುಧಗಳಲ್ಲಿ ಮತ್ತು ಸಂಖ್ಯೆಯಲ್ಲಿ ಕಡಿಮೆದರ್ಜೆಯದಾಗಿದ್ದುದರಿಂದ, ಆಯುಧ ಕೆಳಗಿಡಲು ಕೇಳಿಕೊಳ್ಳಬೇಕಾಯಿತು. ಇಂದಿನ ಕಷ್ಟಕಾಲದಲ್ಲಿ ಫ್ರಾನ್ಸನ್ನು ಯಾವ ಹಂಚಿಕೆಯೂ ವಿಭಂಗಿಸಲಾರದು. ಪ್ರಯತ್ನದಲ್ಲಿ ಅಥವಾ ರಕ್ತಕೊಡುವದರಲ್ಲಿ ಫ್ರಾನ್ಸು ಯಾವ ಅಂಶವನ್ನೂ ಬಾಕಿಬಿಡಲಿಲ್ಲ. ಜಗತ್ತಿನ ಗೌರವಕ್ಕೆ ಫ್ರಾನ್ಸು ಅರ್ಹವಿದೆ ಎಂಬುದು ಅದಕ್ಕರಿತಿದೆ. ಫ್ರೆಂಚರು ವರ್ತಮಾನ ಭವಿಷತ್ಕಾಲಗಳನ್ನು ಇದ್ದಕ್ಕಿದ್ದಂತೆ ನೋಡುವವರೆಂಬುದು ಚರ್ಚಿಲ್ಲರಿಗೆ ತಿಳಿದಿಲ್ಲವೆ? ವ್ಯರ್ಥವಾದ ಹಾಗೂ ಅಸಂಬದ್ಧಕರವಾದ ಯೋಜನೆಗಳ ಅಂಗೀಕಾರದ ಬದಲಿಗೆ ಸೋಲಿನಲ್ಲಿಯೇ ಫ್ರೆಂಚರ ಅಧಿಕ ಮಹತ್ವ ಗೋಚರವಾಗುತ್ತದೆ. ತಮ್ಮ ಭವಿಷ್ಯವು ಧೈರ್ಯ ಮತ್ತು ಸಂಘಟನೆಯನ್ನವಲಂಬಿಸಿದೆ ಎಂಬುದು ಅವರಿಗೆ ತಿಳಿದಿದೆ."

ಗಾಂಧೀ ಜಿನ್ನರಿಗೆ ವೈಸರಾಯರ ಆಮಂತ್ರಣ

ತಮ್ಮನ್ನು ಸಿಮ್ಲಾದಲ್ಲಿ ಕಾಣಬೇಕೆಂದು ವೈಸರಾಯರಿಂದ ಆಮಂತ್ರಣ ಬಂದಂತೆ ಗಾಂಧಿಯವರು ಈ ವಾರಾಂತ್ಯದೊಳಗೆ ಸಿಮ್ಲಾಕ್ಕೆ ಹೋಗಲಿರುವರೆಂದು ತಿಳಿದುಬರುತ್ತದೆ. ಹಾಗೆಯೇ ಮಿ. ಜಿನ್ನರಿಗೂ ಆಮಂತ್ರಣ ಬಂದಿದ್ದು ಅವರು ತಾ. 27ರಲ್ಲಿ ವೈಸರಾಯರೊಡನೆ ಸಂಭಾಷಿಸಲಿರುವರು. ಸಿಮ್ಲಾಕ್ಕೆ ಹೊರಟಿದ್ದಾರೆ.

20,000 ಆಂಗ್ಲೇಯ ಮಕ್ಕಳು ಕಳುಹಿಸಲ್ಪಟ್ಟಿರುವವು

ಇಂಗ್ಲೆಂಡಿನ ಲಂಡನ್ ಸಮುದ್ರ ಕರಾವಳಿ ಪ್ರದೇಶದಲ್ಲಿರುವ ಮಕ್ಕಳನ್ನೆಲ್ಲಾ ಸರಕಾರವು ಕೆಲಮಟ್ಟಿಗೆ ವೇಲ್ಸ್ ಮೊದಲಾದ ಒಳಪ್ರದೇಶಗಳಿಗೆ ಕಳುಹಿಸಿರುವದು. ಬ್ರಿಟಿಷ್ ವಸಾಹತುಗಳವರ ಆಮಂತ್ರಣದ ಮೇರೆಗೆ ಪ್ರಕೃತ 20,000 ಮಕ್ಕಳನ್ನು ಹೊರಗೆ ಕಳುಹಿಸುವ ನಿರ್ಧಾರಕ್ಕೆ ಬಂದಿದೆ ಯುದ್ಧ ಮಂತ್ರಿಮಂಡಲ. 10,000 ಮಕ್ಕಳನ್ನು ಕೆನಡಕ್ಕೂ, 5000ವನ್ನು ಆಸ್ಟ್ರೇಲಿಯಕ್ಕೂ, ಉಳಿದ 5000ವನ್ನು ನ್ಯೂಜಿಲೇಂಡ್ ಮತ್ತು ದಕ್ಷಿಣ ಆಫ್ರಿಕಕ್ಕೂ ಕಳುಹಿಸಲಾಗುವುದು.

ಜರ್ಮನಿಯಲ್ಲಿ ಹಾವಳಿ

ಇದೇ ತಾ. 17ರಲ್ಲು ಬ್ರಿಟಿಷ್ ವಿಮಾನಗಳು ರೈನ್‌ಲೆಂಡ್, ರ್ಹೂರ್ ಮತ್ತು ಜರ್ಮನಿಯ ವಾಯವ್ಯಭಾಗದ ಮೇಲೆ ಧಾಳಿನಡಿಸಿ ಹಾವಳಿಮಾಡಿರುವವು. ಹೇಂಬರ್ಗ್ ಮೊದಲಾದ ಪ್ರಾಮುಖ್ಯ ಪಟ್ಟಣಗಳ ಮೇಲೆ ಎಡೆಬಿಡದೆ ವಿಮಾನಧಾಳಿ ನಡಿಸಲಾಗಿದೆ

ಪ್ರಕಟಣೆ.

ಉಡುಪಿ ತಾಲೂಕು ನಂಬ್ರ 33ನೇ ಶಿರೂರು ಗ್ರಾಮದ ಬೈಲೂರ ಮನೆ ಅಕ್ಕಮ್ಮ ಶೆಡ್ತೀರ ಮಕ್ಕಳು ಕಾವೇರಿ ಶೆಡ್ತಿ 1, ಕೊರಗಿ ಶೆಡ್ತಿ 1, ಅಂತಮ್ಮ ಶೆಟ್ಟಿ ಕೂಡಾ 3 ಜನರು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸ ಬಯಸುವದರೆ—

ನಮ್ಮ ಕುಟುಂಬದ ಬಾಬ್ತು ಆಸ್ತಿ ಮನೆ ಹುಟ್ಟುವಳಿ ವಹಿವಾಟು ವಗೈರೆಗೆ ನಮ್ಮ ಅಣ್ಣ ಮುತ್ತಯ್ಯ ಶೆಟ್ಟಿ ಎಂಬವನು ಆಡಳ್ತೆದಾರನಾಗಿರುವದಲ್ಲದೆ ನಮ್ಮೆಲ್ಲರ ಹಿಂದಿನ ಹಣಗಳೂ ಕೂಡಾ ಅವನ ವಹಿವಾಟಿನಲ್ಲಿಯೇ ಇದ್ದಿತ್ತು.

ಸದ್ರಿಯವನು ನ ನಾಕ್ಷೆಯನ್ನು ಕುಟುಂಬದ ಹಿರೇ ಹೆಂಗಸು ಮ, ಆಡಳ್ತೆದಾರನ ಹೆಸರಲ್ಲಿ ಆಸ್ತಿಗಳನ್ನು ಸಂಪಾದಿಸಿ ಇಡಬೇಕೆಂಬ ತಹ ಕೂಡಾ ಇರುತ್ತದೆ ಕುಟುಂಬಕ್ಕೆ ಲಗ್ತಿಯಾಗಿ ಬೆಟ್ಟು ಬೆಳೆಯ ಆಸ್ತಿಗಳನ್ನು ಕೊಂಡ ಕೊಳ್ಳಬೇಕೆಂದು ಯಾವಾಗಲೂ ನಮ್ಮೊಡನೆ ಹೇಳುತ್ತಾ ಇದ್ದಿದ್ದ. ಕುಟುಂಬದ ಬಾಬ್ತು ಎಲ್ಲಾ ರಿಕಾರ್ಡುಗಳು ಆತನ ವಶವೇ ಇದ್ದಿತ್ತು. ನಮ್ಮ ಕುಟುಂಬದ ಉತ್ಪತ್ತಿಯಿಂದ ಸದರಿ ಮುತ್ತಯ್ಯ ಶೆಟ್ಟಿ ಹೆಸರಲ್ಲಿ ಕ್ರಯ ಮಾಡಿದ ಬಾಬ್ತು [illegible] 13 ಮೂಡಾರು 50 ಮುಡಿ ಅಕ್ಕಿ ಹುಟ್ಟುವಳಿಯ ಆಸ್ತಿಯೂ ಅಲ್ಲದೆ ಸೊತ್ತು, ಕರಾರು, ಡಿಕ್ರಿ, ಲೇವಾದೇವಿ ವಗೈರೆಯ ಮೇಲೆ ಸುಮಾರು 6000-0-0ದ ಮಟ್ಟಿನ ಬರುವಂತಾ ಹಣಗಳು ಇರುತ್ತದೆ. ಮಾತ್ರವಲ್ಲ ಇತ್ತಲಾಗಿ ಸುಮಾರು ರೂ 3500 0 0 ನಗದು ಹಣಗಳೂ ಅವನ ಸ್ವಾಧೀನ ಇದ್ದಿತ್ತು.

ಸದರಿ ಮುತ್ತಯ್ಯ ಶೆಟ್ಟರು ಸ್ವಲ್ಪ ದಿವಸಗಳ ಜ್ವರ ವಗೈರೆ ಕಾಹಿಲೆಯಿಂದ ತಾ. 3 6 '40 ರಲ್ಲಿ ಮೃತಪಟ್ಟಿರುತ್ತಾರೆ. ಅವರ ಕಾಹಿಲೆ ಕಾಲದಲ್ಲಿ ಮ ಮೃತಪಡುವಾಗ ಕೂಡಾ ನಾವು ಮ ಕುಟುಂಬದ [illegible] ಇರಲಿಲ್ಲ. ಅವರ ಒಟ್ಟಿನಲ್ಲಿ ಅವರ ಮಗ ಅಡಿ ಹಿರಿಯಣ್ಣ ಶೆಟ್ಟಿ ಮತ್ತು ಸದರಿಯವರ ಮಗಳಂದಿರ ಗಂಡಂದಿರು ಇದ್ದು ನಮಗೆ ವರ್ತಮಾನ ಸಹಾ ಕೊಡಲಿಲ್ಲ. ನಮಗೆ ವರ್ತಮಾನ ಸಿಕ್ಕಿ ಬಂದು ನೋಡುವಾಗ ಕುಟುಂಬದ ಬಾಬ್ತು ಮುತ್ತಯ್ಯ ಶೆಟ್ಟಿ ಸ್ವಾಧೀನತೆಯಲ್ಲಿದ್ದ ರಿಕಾರ್ಡುಗಳು ಮತ್ತು ನಗದು ಹಣಗಳು ಯಾವತ್ತೂ ಇರಲಿಲ್ಲ. ಅವುಗಳ ಸ್ಥಿತಿ ಸದರಿಯವನ ಮಗ ಹಿರಿಯಣ್ಣ ಶೆಟ್ಟಿಯು ಕೊಂಡುಹೋಗಿರ ಮುಗಿಯ ಮುತ್ತಯ್ಯ ಶೆಟ್ಟಿ ಮೃತಪಡುವ ಮುಂಚೆ ಕಾಹಿಲೆ ಕಾಲದಲ್ಲಿ ಅವರಿಂದ ಖಾಲಿ ಕಾಗದಗಳ ಮೇಲೆ ಹೆಬ್ಬೆಟ್ಟು ಮೊಹರುಗಳನ್ನು ತೆಗೆದಿರುತ್ತಾನಾಗಿಯೂ ತಿಳಿದು ಬಂದು ಕೇಳಿದರೆ ನಮಗೆ ಉಡಾಫೆ ಜವಾಬು ಕೊಟ್ಟಿರುತ್ತಾನೆ. ಸದರಿ ಹೆಬ್ಬೆಟ್ಟು ಮೊಹರುಗಳ ಆಧಾರದ ಮೇಲೆ ಮಾಡಲ್ಪಡುವ ಯಾವ ರಿಕಾರ್ಡುಗಳೂ ಮ ಕುಟುಂಬಕ್ಕೆ ಸಲ್ಲವೆಂತಲೂ ಸದರಿ ಮುತ್ತಯ್ಯ ಶೆಟ್ಟಿ ಹೆಂಡತಿ ಮಕ್ಕಳ ನೋಟಕ್ಕೆ ಒಳಪಟ್ಟು ತನ್ನ ಹೆಸರಲ್ಲಿದ್ದ ಒಂದೇ ಕಾರಣದ ಮೇಲೆ ಏನಾದರೂ ಪರಭಾರೆ ವಗೈರೆ ಯಾವ ತರದ ರಿಕಾರ್ಡುಗಳು ಮಾಡಲ್ಪಟ್ಟಿದ್ದರೆ ಅವುಗಳು ಕಿಂಚಿತ್ತಾಗ ಹಕ್ಕುದಲ್ಲವೆಂತಲೂ ನಮ್ಮ ಹಕ್ಕುಬಾಧ್ಯತೆಗಳಿಗೆ ಬಾಧಕತಕ್ಕದ್ದಲ್ಲವೆಂತಲೂ ಆತನ ಹೆಸರಲ್ಲಿರುವ ಎಲ್ಲಾ ಸೊತ್ತುಗಳಿಗೂ ಹಣ ವಗೈರೆಗೂ ನಾವೇ ನ್ಯಾಯವಾದ ಹಕ್ಕುದಾರರೆಂತಲೂ ತಿಳಿಸಿರುತ್ತೇವೆ.

ಶಿರೂರು, ತಾ 6-5-1940.

|| ಈ ಎಡದು ಗೆರೆ ಕಾವೇರಿ ಶೆಡ್ತಿ ರುಜು.

|| ಈ ಎಡದು ಗೆರೆ ಕೊರಗಿ ಶೆಡ್ತಿ ರುಜು.

ಅಂತಮ್ಮ ಶೆಟ್ಟಿ ಸಹಿ

ದಕ್ಷಿಣ ಕನ್ನಡ

ಮೊಗ್ರಾಲ್—ಜನಾಬ್ ಎಂ. ಸಿ. ಪು ವ್ಪಿಯ ಶಾಯಿಯೂ ಜನಾಬ್ ಎಂ. ಸಿ. ಅಹ ಮದ್ B.A.B.L., ರವರ ದೊಡ್ಡ ಶಾಯಿಯೂ ಆದ ಬಿದಜುನ್ನಾನವರು ತಾ 21-6-40ರಲ್ಲಿ ಆಸ್ಪತ್ರೆಗೆ ಸ್ವಂತವೆಟ್ಟಿರುವುದು ಶೋಚನೀ ಯವಿದೆ ಇವರು ಧರ್ಮ ಕಾರ್ಯಗಳಿಗೆ ತುಂಬ ದಾನಮಾಡುತ್ತಿದ್ದರು

ಪ್ರೊಳೆಲಿ—ಇಲ್ಲಿಯ ಪಂಚಾಯತಬೋರ್ಡಿಗೆ ಸೇರಿಸಬೇಕೆಂದಿದ್ದ ಜನರಲ್ ಫಂಡಿಗೆ ಅನೇಕ ಮಹನೀಯರು ಸಹಾಯಮಾಡಿರುತ್ತಾರೆ. ಈ ವರೆಗೆ ರೂ. 116-0-0 ವಸೂಲಾಗಿರುತ್ತದೆ ಇನ್ನೂ ವಸೂಲಾಗುತ್ತಿದೆ. ಅದರ ವಿವರವನ್ನು ಮುಂದಿನಿಂದ ಕೊಡಲಾಗುವುದೆಂದೂ ಸಹಾಯಮಾಡಿದ ಮಹನೀಯರೆಲ್ಲರಿಗೂ ಧನ್ಯವಾದಗಳೆಂದೂ ಪ್ರೆಸಿಡೆಂಟ್ ಶ್ರೀ. ಕೆ. ಎ. ಪೂಂಜರು ತಿಳಿಸುತ್ತಾರೆ.

ಹರಿಜನ ವಿದ್ಯಾರ್ಥಿ ಭವನ, ಕುಂದಾಪುರ—ತಾ. 23-6-1940ರಲ್ಲಿ ಹರಿಜನ ವಿದ್ಯಾರ್ಥಿ ಭವನವನ್ನು ತೆರೆಯುವ ಸಮಾರಂಭವು ಮಾನ್ಯ ಸಬ್ ಕಲೆಕ್ಟರ್ ಯಸ್. ಕೆ. ಚೆಟ್ಟ್ಯಾರ್ ಐ. ಸಿ. ಯಸ್. ರವರ ಅಧ್ಯಕ್ಷತೆಯಲ್ಲಿ ಜರಗಿತು. ಮಕ್ಕಳ ಪ್ರಾರ್ಥನೆಯಾದ ಮೇಲೆ ಹರಿಜನ ಸೇವಕರಾದ ಶ್ರೀ. ನಾರಾಯಣ ಶೆಟ್ಟಿಯವರು ಸಂಘದ ಇತಿಹಾಸವನ್ನೂ, ವಿದ್ಯಾರ್ಥಿ ಭವನದ ಉದ್ದೇಶವನ್ನೂ ಕುರಿತು ಮಾತಾಡಿದರು. ಅಧ್ಯಕ್ಷರು ಹರಿಜನೋನ್ನತಿಯ ಅಗತ್ಯದ ಬಗ್ಗೆಯೂ, ವಿದ್ಯಾರ್ಥಿ ಭವನಗಳ ಆವಶ್ಯಕತೆಯ ಕುರಿತು ಮಾತಾಡಿ, ಇಂದಿನ ಪರಿಸ್ಥಿತಿಯನ್ನು, ಯುದ್ಧದ ಸಮಾಚಾರವನ್ನೂ ಹೃದಯಂಗಮವಾಗಿ ವಿವರಿಸಿ, ಊರಲ್ಲಿ ಸುಳ್ಳು ಸುದ್ದಿಗಳು ಹರಡದಂತೆ ಜನರು ಜಾಗ್ರತೆಯಿಂದಿರುವಂತೆಯೂ, ಸಮಯ ಬಂದಾಗ ಸ್ವಾರ್ಥತ್ಯಾಗಕ್ಕೆ ಸಿದ್ಧರಾಗಿರುವಂತೆಯೂ ಕೇಳಿಕೊಂಡು ಭವನದ ಶ್ರೇಯಸ್ಸು ಪ್ರಾರ್ಥನೆಮಾಡಿದರು. 2ಮಂದಿ ಹರಿಜನ ಮಕ್ಕಳಿಗೆ ಶ್ರೀ. ಕಣ್ಣನ್ ನಂಬಿಯಾರರ ಉದಾರತೆಯಿಂದ ದೊರಕಿರುವ ಎಲೆ ಕೊಡೆಗಳನ್ನು ಹಂಚಿದರು. ವಕೀಲ್ ಶ್ರೀ. ಕೆ. ಯಲ್. ಭಂಡಾರ್‌ರವರು ಉಪಕಾರ ಸ್ಮರಣೆಯನ್ನು ಮಾಡಿದ ಮೇಲೆ ಸಭೆಯು ಅಂತ್ಯಗೊಂಡಿತು.

ತಾ. 17ರಿಂದ 23ರ ತನಕ ಶ್ರೀ. ಶೆಟ್ಟಿಯವರು ಕಮಿಟಿಯ ಸಹಾಯದಿಂದ ರೂ. 13-2-0ರ ತನಕ ಸಂಗ್ರಹಿಸಿರುತ್ತಾರೆ. ಧನ ಸಹಾಯಮಾಡಿದವರಿಗೆ ಬೇರೆ ತೆರದ ಸಹಾಯ ಕೊಟ್ಟವರಿಗೂ ಶ್ರೀ ಶೆಟ್ಟಿಯವರ ವಂದನೆಗಳು. ತಾ. 24ನೇ ದಿನ ಮಧ್ಯಾಹ್ನ ಹಂಗಾರಕಟ್ಟೆಯಲ್ಲಿ 13 ಮಕ್ಕಳಿಗೆ ನಡೆಯುತ್ತಿರುವ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ನೋಡಿಕೊಂಡು ಉಡುಪಿಗೆ ಬಂದಿರುತ್ತಾರೆ.

ನೋಟೀಸು

ಉಡ್ಪಿ ದಿ ಮು. ಕೋರ್ಟಿನಲ್ಲಿ

S. C. 114/40

ವಿಜಯಾ ಬ್ಯಾಂಕ್ ಲಿಮಿಟೆಡ್ ಉಡ್ಪಿ } ವಾದಿ

ಮತ್ತು

1. ದಾಮೋದರಾಚಾರಿ ಕೊಡಾ ಪ್ರತಿವಾದಿರು ಇವರೊಳಗೆ

2ನೇ ಪ್ರತಿವಾದಿ ಉಡ್ಪಿ ಕಸಬಾ ಬೈಲ್‌ಕರೆಯಲ್ಲಿರುವ P. ನಾರಾಯ ಣಾಚಾರಿ ಮಗ P. ರಾಮಚ್ಯಾರಿಗೆ ತಿಳಿಯಪಡಿಸುವದೇನೆಂದರೆ:–

ಪ್ರತಿವಾದಿರು ವಾದಿ ಬ್ಯಾಂಕಿಗೆ ತಾ. 5-7-37ರಲ್ಲಿ ರೂಪಾಯಿ 100/-ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಬಾಬ್ತು ಬರಬೇಕಾದ ಅಸಲು ಬಡ್ಡಿ ಸೇರಿಗೆ ವಾದಿರು ತಂದ ಮೇಲ್ಕಂಡ ದಾವೆಯನ್ನು ತಾರೀಖು 19-7-40ಕ್ಕೆ ತನ್ಗಿಗೆ ಇಟ್ಟಿರುತ್ತದೆ. ಆ ವ್ಯಾಜ್ಯದಲ್ಲಿ 2ನೇ ಪ್ರತಿವಾದಿಯು ಉಪಾಹರಿಸಬೇಕಾದರೆ ಆತನು ಸದ್ರಿ ತಾ. 19-7-40ನೇ ದಿನ ಬೆಳಿಗ್ಗೆ 10 ಘಂಟೆಗೆ ಈ ಕೋರ್ಟಿಗೆ ಹಾಜರಾಗಿ ಜವಾಬು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಸದ್ರಿ ವ್ಯಾಜ್ಯವನ್ನು ಸದ್ರಿ 2ನೇ ಪ್ರತಿವಾದಿಯ ಗೈರು ಹಾಜರಿನಲ್ಲಿ ತೀರ್ಮಾನಿಸಲಾಗುವುದು.

Y. Dumanna Hegde,
Advocate for Plaintiff,
UDIPI, Date 21-6-1940.

ಮೂಲ್ಕಿ—ಸ್ಥಳೀಕ ಯೂನಿಯನ್ ಕ್ಲಬ್ಬಿನ 25ನೇ ವರ್ಷವರ್ಧಂತ್ಯುತ್ಸವವು "ದಿವಂಗತ ಡಾಕ್ಟರ್ ಬೋಳ ಶ್ಯಾಮರಾಯರ" ಜನ್ಮದಿನಾಚರಣೆಯು ತಾ. 16-6-40ರಲ್ಲಿ ಡಾ. ಕೆ. ವಿಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾಧ್ಯಕ್ಷರ ಪ್ರಾರಂಭ ಭಾಷಣವಾದೊಡನೆ ಶ್ರೀ. ಯಂ. ರಾಮಣ್ಣ ಸೆಟ್ರು "ದಿವಂಗತ ಡಾಕ್ಟರ್ ಬೋಳ ಶ್ಯಾಮರಾಯರ" ಜನ್ಮಚರಿತ್ರೆಯನ್ನು ಓದಿಹೇಳಿದರು. ಶ್ರೀ. ಹಿರಿಯಡ್ಕ ರಾಮರಾಯ ಮಲ್ಯರು ಸಂಸ್ಥೆಯ ಪ್ರಗತಿಪರವಾದ ಕಾರ್ಯತತ್ಪರತೆಯ ಕುರಿತು ಪ್ರಶಂಸಿಸಿ ಕೆಲವೇ ಮಾತುಗಳಿಂದ ಸಂಸ್ಥೆಯ ಸ್ವಸ್ತಿವಾಚನವನ್ನು ಮಾಡಿದರು. ಕ್ಲಬ್ಬಿನ ಗೌ| ಕಾರ್ಯದರ್ಶಿ ಶ್ರೀ. ಬಿ. ಭೋಜರಾಯರು ಸಂಸ್ಥೆಯ 25ನೇ ವಾರ್ಷಿಕವರದಿಯನ್ನು ಓದಿದರು. ರಜತೋತ್ಸವ ಸಮಿತಿಯ ರಚನೆ, ಅದಕ್ಕೆ ಕಮಿಟಿಯ ಚುನಾವಣೆ ಮೊದಲಾದ ಕಾರ್ಯಕ್ರಮಗಳಾದ ಮೇಲೆ ಸಭಾಧ್ಯಕ್ಷರ ಅಮೂಲ್ಯ ಭಾಷಣವಾಯಿತು. ರಜತೋತ್ಸವವು ಯಶಸ್ವಿಯಾಗಿ ಜರಗುವಂತೆ ಹರಸಿ ಸಂಸ್ಥೆಗೆ ಉತ್ತರೋತ್ತರ ಶ್ರೇಯೋಭಿವೃದ್ಧಿಯನ್ನು ಕೋರಿ ಸಮಾರಂಭವನ್ನು ಅಂತ್ಯಪಡಿಸಿದರು.

ಕಾರ್ಕಳ—ಅಖಿಲಭಾರತ ರೆಡ್‌ಕ್ರಾಸ ಜನಸೇವಾಸಂಘದ ಮದ್ರಾಸು ಶಾಖೆಯ ಕಾರ್ಯದರ್ಶಿಗಳಾದ ಶ್ರೀಮತಿ ಮ್ಯಾನಿಯಲ್ ಸ್ಯಾಮನ್ಸರವರು ಕಾಸ್ಮೊಪೊಲಿಟನ ಕ್ಲಬ್ಬಿನಲ್ಲಿ ಸಂಘದ ಧ್ಯೇಯೋದ್ದೇಶ ಮತ್ತು ಕಾರ್ಯನಿರ್ವಾಹದ ಕುರಿತು ಭಾಷಣವಿತ್ತರು.

ಕಾರ್ಕಳ ಕೋಪರೇಟಿವ್ ಸ್ಟೋರ್ಸ್ ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸಿಫ ಶ್ರೀ. ಎ. ಪೋಲುರೆಡ್ಡಿಯವರ ಅಧ್ಯಕ್ಷತೆಯಿಂದ ತೆರೆಯಲ್ಪಟ್ಟು ಆಶಾತೀತವಾದ ಅಭಿವೃದ್ಧಿಯನ್ನು ಹೊಂದುತ್ತಾ ಇದೆ.

ಕಟಪಾಡಿ—ಇಲ್ಲಿಯ ಶ್ರೀ. ವೆಂಕಟ್ರಮಣಸ್ವಾಮಿ ಹಾಯರ್ ಎಲಿಮೆಂಟರಿ ಶಾಲೆ ಕಟ್ಟಡದ ಹೊಸ ಪಾರ್ಶ್ವವನ್ನು ತೆರೆಯುವ ಸಮಾರಂಭವು ಶ್ರೀ. ವಿಠಲ ಶಾಂತಾರಾಮ ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ತಾ 22-6-40ರಲ್ಲಿ ಜರಗಿತು. ಶಾಲಾ ಸ್ಕೌಟ್ ದಳದವರು ಅಧ್ಯಕ್ಷರಿಗೆ "ಗಾರ್ಡ್ ಓಫ್ ಓನರ್" ಕೊಟ್ಟು ಸ್ವಾಗತಿಕರಿಸಲು ಶ್ರೀ. ಪಿ ರಾಮನಾಥ ನಾಯಕ್ ಬಿ ಎ , ಎಲ್ ಟಿ. ಯವರಿಂದ ಸ್ವಾಗತ ಭಾಷಣ, ಮುಖ್ಯ ಅಧ್ಯಾಪಕ ಶ್ರೀ. ಕೆ. ಆರ್. ಶೆಣೈಯವರಿಂದ ಶಾಲಾ ಸಂಕ್ಷಿಪ್ತ ವರದಿ ವಾಚನವಾಯಿತು. ಬಳಿಕ ಶ್ರೀಗಳಾದ ಪಿ. ಲಕ್ಷ್ಮೀನಾರಾಯಣ ನಾಯಕ್ ಕೆ. ವಾಸುದೇವ ಕಾಮತ್ ಮಾ| ಸೆಬಿಸ್ಟಿನ್ ಫರ್ನಾಂಡಿಸ್, ಡಾಕ್ಟರ್ ಕೆ ಗಿರಿಧರರಾವ್ ಮೊದಲಾದವರಿಂದ ಭಾಷಣಗಳಾದುವು. ಆನಂತರ ಶಾಲೆಯ ಏಳಿಗೆಗಳಲ್ಲಿ ಮಾಡಿದ ವಿದ್ಯಾಪ್ರಚಾರಕಾರ್ಯವನ್ನು ಅಧ್ಯಕ್ಷರು ಕೊಂಡಾಡಿ, ಶಾಲೆಯನ್ನು ಆರಸಿ ಭಾಷಣಮಾಡಿ ಕಟ್ಟಡವನ್ನು ತೆರೆದು ಶಾಲೆಗೆ ರೂ. 100ರ ಉದಾರದಾನವನ್ನಿತ್ತರು. ಆಮೇಲೆ ವಿದ್ಯಾರ್ಥಿಗಳಿಂದ ವಿವಿಧ ವಿನೋದಗಳು ಪ್ರದರ್ಶಿಸಲ್ಪಟ್ಟಿದ್ದುವು.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು, ತಾ. 24-6-'40.

ದುಃಖಪ್ರದರ್ಶನ—ತಾ. 17ರಲ್ಲಿ ಮಂಗಳೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ, ಈ ಜಿಲ್ಲೆಯಲ್ಲಿ ಕಳೆದ ರಜಾಕಾಲದ ವರೆಗೆ ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜರಾಗಿದ್ದ ಶ್ರೀ| ಪಿ. ರಾಜಗೋಪಾಲಾಚಾರ್ಯರ ಅಕಾಲ ನಿಧನಕ್ಕಾಗಿ ದುಃಖವು ಪ್ರದರ್ಶಿಸಲ್ಪಟ್ಟಿತು. ಶ್ರೀ| ಯಂ. ಮಾಧವ ರಾಯರು ದಿವಂಗತರ ಗುಣಕಥನಮಾಡಿದರು. ಡಿ| ಮುನ್ಸೀಫರಾದ ಶ್ರೀ| ವೈದ್ಯನಾಥ ಅಯ್ಯರ್‌ರವರು ಶ್ರೀ| ಮಾಧವರಾಯರ ಅಭಿಪ್ರಾಯಗಳನ್ನು ಸಮರ್ಥಿಸಿದರು. ಬಳಿಕ ದುಃಖಸೂಚಕ ಠರಾವಾಯಿತು.

ಮಂಗಳೂರಿಗೊಂದು ಯುದ್ಧ ಸಮಿತಿ—ಕಳೆದ ತಾ. 18ರಲ್ಲಿ ಸ್ಥಳೀಯ ಬೆಂಚ್ ಕೋರ್ಟ್ ಸಭಾಸ್ಥಾನದಲ್ಲಿ ಜಿಲ್ಲಾ ಕಲೆಕ್ಟರರಾದ ರಾ. ಬಹದ್ದೂರು ವಿ. ಪೊನ್ನುಸ್ವಾಮಿ ಪಿಳ್ಳೆಯವರ ಅಧ್ಯಕ್ಷತೆಯಲ್ಲಿ ಯುದ್ಧಸಮಿತಿಯನ್ನೇರ್ಪಡಿಸುವ ಬಗ್ಗೆ ಒಂದು ಪುರಜನರ ಸಭೆಯು ಸೇರಿತು. ಅನೇಕ ಮಹನೀಯರು ಆಮಂತ್ರಿತರಾಗಿದ್ದರು. ಅನೇಕ ವಿಷಯಗಳು ಚರ್ಚಿಸಲ್ಪಟ್ಟು ಸುಳ್ಳು ಸುದ್ದಿಗಳನ್ನು ತಡೆಗಟ್ಟುವುದಕ್ಕೆ ಸೇನೆಗೆ ಯೋಧರು ಸೇರುವಂತೆ ಪ್ರೋತ್ಸಾಹಿಸಲು ಮತ್ತು ನಿಧಿಯನ್ನು ಶೇಖರಿಸಲು ಮೂರು ಬೇರೆ ಬೇರೆ ಉಪಸಮಿತಿಗಳು ಏರ್ಪಟ್ಟವು.

ಉಡುಪಿ

ಜಿಲ್ಲಾ ಜಡ್ಜರಿಗೆ ಸತ್ಕಾರಕೂಟ—ದ. ಕ. ಜಿಲ್ಲಾ ಜಡ್ಜರಾದ ಶ್ರೀ. ಟಿ. ಎಸ್. ರಾಮಚಂದ್ರನ್‌ರವರು ತಾ. 23ರಲ್ಲಿ ಸ್ಥಳೀಯ ಮುನ್ಸಿಫ್ ಕೋರ್ಟು ಇನ್ಸ್‌ಪೆಕ್ಷನ್ ನಡಿಸಿದರು. ಈ ಸಂದರ್ಭದಲ್ಲಿ ಬಾರ್ ಎಸೋಶಿಯೇಶನಿನವರು ಸತ್ಕಾರಕೂಟವೊಂದನ್ನೇರ್ಪಡಿಸಿದರು. 'ಹಿಂದೆ ಕುಂದಾಪುರ ಡಿವಿಜನಿನ ಸಬ್ ಕಲೆಕ್ಟರರಾಗಿದ್ದವರೇ ಇಂದು ಜಿಲ್ಲಾ ಜಡ್ಜರಾಗಿ ಬಂದುದು ಸಂತೋಷಕರವೆಂದೂ, ನಿಮ್ಮ ತಂದೆಯವರಾದ ಸರ್. ಟಿ. ಸದಾಶಿವಯ್ಯರು ಹೈ ಕೋರ್ಟು ಜಡ್ಜರಾಗಿದ್ದ ವೇಳೆ ವಕೀಲ ವೃತ್ತಿಯವರಿಗೆ ಮಾಡಿರುವ ಉಪಕಾರವು ಮರೆಯತಕ್ಕದ್ದಲ್ಲವೆಂದೂ ಹಿಂದೂ ಪದ್ಧತಿಯಲ್ಲಿರುವ ಅನೇಕ ಕುಂದುಕೊರತೆಗಳನ್ನು ಬಯಲಿಗೆಳೆದು ಸಮಾಜ ಸುಧಾರಣೆಯ ಅಭಿಮಾನವನ್ನು ಎತ್ತಿತೋರಿಸಿದ ಆ ಸುಧಾರಕ ಮಹನೀಯರ ಸತ್ಪುತ್ರರಾದ ನೀವೂ ಅವರಂತೆ ಪದವಿಗೇರುವಂತಾಗಲೆಂದೂ ಅತಿಥಿಗಳನ್ನು ಸ್ವಾಗತೀಕರಿಸುತ್ತ ಬಾರ್ ಎಸೋಸಿಯೇಶನಿನ ಪ್ರೆಸಿಡೆಂಟ್ ಶ್ರೀ. ಕೆ. ಜಿ. ಬಲ್ಲಾಳರು ಹೇಳಿದರು. ಜಿಲ್ಲೆಯಲ್ಲಿ ಎರಡನೆದಾದ ಉಡುಪಿ ಕೋರ್ಟಿನ ವ್ಯವಹಾರದ ಗ್ರಾಮಗಳು ಇತರ ಕೋರ್ಟು ಚಕ್‌ಬಂದಿಗೆ ಸೇರಿಸಲ್ಪಟ್ಟಿವೆ, ಅವು ನಮ್ಮ ವ್ಯವಹಾರ ಕ್ಷೇತ್ರಕ್ಕೇನೇ ಸೇರುವಂತಾಗಲು ನೀವು ನೆರವಾಗಬೇಕೆಂದೂ ನಿವೇದಿಸಿಕೊಂಡರು. ಜಡ್ಜರು ತಮ್ಮ ತಂದೆಯವರ ಕುರಿತು ಹೇಳಿದ ಅಭಿಪ್ರಾಯಗಳಿಗೆ ಧನ್ಯವಾದ ಸೂಚಿಸಿ, ತಾನು ಸಹ ಅವರ ಮೇಲ್ಪಂಕ್ತಿಯನ್ನು ಅನುಸರಿಸುವೆನೆಂದೂ ಕೋರ್ಟು ಚಕ್‌ಬಂದಿಯ ಕುರಿತು ಪ್ರಕೃತ ತನ್ನಿಂದ ಯಾವ ಆಶ್ವಾಸನೆಕೊಡಲು ಸಾಧ್ಯವಿಲ್ಲೆಂದೂ ಹೇಳಿದರು.

ಮೈಸೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಡಾ. ಕೆ. ವಿಟ್ಠಲ ಶೆಟ್ಟಿ ಮತ್ತು ಶ್ರೀ ಶಿವರಾವ್—ದಕ್ಷಿಣ ಕನ್ನಡ ಜಿಲ್ಲಾಬೋರ್ಡು ಅಧ್ಯಕ್ಷ ಡಾ| ಕೆ. ವಿಟ್ಠಲ ಶೆಟ್ಟಿ ಮತ್ತು ಮಂಗಳೂರಿನ ಸುಪ್ರಸಿದ್ಧ ಅಡ್ವೋಕೇಟ್ ಶ್ರೀ| ಬಿ. ಶಿವರಾವ್ ರವರುಗಳು ಶ್ರೀಮನ್ ಮಹಾರಾಜರ ವರ್ಧಂತಿ ಮಹೋತ್ಸವದಲ್ಲಿ ರಾಜ ಅತಿಥಿಗಳಾಗಿ ಮೈಸೂರಿಗೆ ಬಂದು ದಿವಾನರ ಬಳಿ 'ಲೇಕ್‌ವ್ಯೂ' ಕಟ್ಟೋಣದಲ್ಲಿ ಬಿಡಾರಮಾಡಿದ್ದರು. ಶ್ರೀಯುತರುಗಳನ್ನು ದಿವಾನರು ಕೃಷ್ಣರಾಜ ನಗರಕ್ಕೂ ಇತರ ಸ್ಥಳಗಳಿಗೂ ಕರೆದುಕೊಂಡುಹೋಗಿದ್ದರು. ಶ್ರೀಯುತರುಗಳು ಇಷ್ಟಲ್ಲದೆ ಅನೇಕ ಪ್ರೇಕ್ಷಣೀಯ ಸ್ಥಳಗಳಿಗೂ ಹೋಗಿ ಅನೇಕ ಸಂಸ್ಥೆಗಳಿಗೆ ಭೇಟಿಯಿತ್ತರು.

ಮೈಸೂರು ನ್ಯಾಯವಿಧಾಯಕ ಸಭೆ—ಮೈಸೂರು ನ್ಯಾಯವಿಧಾಯಕ ಸಭೆಯ ಬಜೆಟ್ ಅಧಿವೇಶನವು ಬೆಂಗಳೂರಲ್ಲಿ ನ್ಯಾಯವಿಧಾಯಕ ಸಭೆಯ ಕಟ್ಟೋಣದಲ್ಲಿ ಅಧ್ಯಕ್ಷ ದಿವಾನ ಸರ್. ಮಿರ್ಜಾರವರ ಅಧ್ಯಕ್ಷತೆಯಲ್ಲಿ ಇಂದಿನಿಂದ ಪ್ರಾರಂಭವಾಯಿತು. ಸಭೆಗೆ ಪ್ರಥಮ ಮತ್ತು ದ್ವಿತೀಯ ಸಚಿವರುಗಳು, ಸರ್ಕಾರದ ಇಲಾಖೆಯ ಮುಖ್ಯಾಧಿಕಾರಿಗಳು, ಸಭೆಯ ಸದಸ್ಯರುಗಳು ಸರ್ಕಾರಿ ರಿಪೋರ್ಟರುಗಳ ಪತ್ರಿಕೆಗೆ ವರದಿಮಾಡುವವರು ಮತ್ತು ಅನೇಕ ಮಾನ್ಯ ಪ್ರೇಕ್ಷಕರುಗಳೂ ಆಗಮಿಸಿ ತಮ್ಮ ತಮ್ಮ ಆಸನಗಳಲ್ಲಿ ಕುಳಿತರು. ಸಭೆಯು ಪ್ರಾರಂಭವಾದೊಡನೆ, ಇಂದು ನಡೆಯುತ್ತಿರುವ ಯುದ್ಧದಲ್ಲಿ ಬ್ರಿಟನ್ನಿನವರಿಗೆ ಜಯಕೋರುವ, ಶ್ರೀ. ಜಯ ಚಾಮರಾಜ ಒಡೆಯರು ಯುವರಾಜರ ಪದವಿಗೇರಿದ್ದಕ್ಕೆ ಸಂತೋಷ ವ್ಯಕ್ತಪಡಿಸಿ ದಿ| ಯುವರಾಜರ ಅನಂತಾಪ ಬಗ್ಗೆ ಭಾಷಣಗಳು ನಡೆಯಿತು. ಸಭೆಯಲ್ಲಿ ಚರ್ಚಿಸಲು ಅನೇಕ ನಿರ್ಣಯ ಪ್ರಶ್ನೆ ಮತ್ತು ಮಸೂದೆಗಳು ಬಂದಿವೆ. ಪ್ರ| ಪ್ರ| ಸಭೆಯಲ್ಲಿ ಪಾಸ್‌ಮಾಡಿರುವ ಅನೇಕ ಮಸೂದೆಗಳ ಮೇಲೆ ಇಲ್ಲಿ ಚರ್ಚೆ ನಡೆಯುತ್ತೆ. ಮೈ| ಸಂಸ್ಥಾನ ಒಂದು ಲಾ ಕಾಲೇಜ್ ಸ್ಥಾಪನೆ, ಬರಲಿರುವ ಚುನಾವಣೆಗಳನ್ನು ಮುಂದುವರಿಸುವ ದಾವಣಗೆರೆಯಲ್ಲಿ ಒಂದು ಟೆಕ್ನಿಕಲ್ ಮತ್ತು ಇಂಡಸ್ಟ್ರಿಯಲ್ ಸ್ಕೂಲ್ ಸ್ಥಾಪಿಸುವ ಮತ್ತು ಇತರ ವಿಷಯಗಳ ಬಗ್ಗೆ ಚರ್ಚೆ ನಡೆಯಲಿದೆ. ಸಭೆಯು ಒಂದು ವಾರ ನಡೆಯುತ್ತೆ. (ವಿವರಗಳು ಬರುವ ವಾರ)

ಮದ್ರಾಸ್ ಮೇಯರ್ ಶ್ರೀ| ಸತ್ಯಮೂರ್ತಿಗಳು—ಇವರು ಕಳೆದ ವಾರಾಂತ್ಯದಲ್ಲಿ ನೀಲಗಿರಿಯಿಂದ ಬೆಂಗಳೂರಿಗೆ ಆಗಮಿಸಿ ಬಹಳ ಕಾರ್ಯಕ್ರಮಗಳನ್ನಿಟ್ಟುಕೊಂಡಿದ್ದರು. ನಗರ ಪ್ರದಕ್ಷಿಣೆ, ಧಂಡಿನ ವೈ. ಎಂ. ಸಿ. ಅಶ್ರಯದಲ್ಲಿ 'ನಗರಶೃಂಗಾರ' ವಿಚಾರ ಸ್ವಾರಸ್ಯ ಭಾಷಣಮಾಡಿದರು. ವಿಶ್ವವಿದ್ಯಾನಿಲಯದಾಶ್ರಯದಲ್ಲಿ ಸರ್. ಪುಟ್ಟಣ್ಣ ಶೆಟ್ಟಿ ಕಟ್ಟೋಣದಲ್ಲಿ ಮೈ| ವಿ| ಪ್ರೆಸ್ ಛಾನ್ಸಲರಧ್ಯಕ್ಷತೆಯಲ್ಲಿ 'ಅಹಿಂಸೆ ಸವಾಲು' ಎಂಬುದರ ಮೇಲೆ ಅಮೋಘ ಭಾಷಣಮಾಡಿದರು, ಇನ್ನೂ ಅನೇಕ ಕಾರ್ಯದಲ್ಲಿ ತೊಡಗಿದ್ದರು.

— ನೋಟೀಸು —

"ನವಯುಗ"ದ ಬಿಡಿ ಪ್ರತಿಗಳನ್ನು ಮಾರಾಟಮಾಡಲು ಈ ಕೆಳಗಿನ ಸ್ಥಳಗಳಲ್ಲಿ ಹೊಸ ಏಜಂಟರು ಬೇಕಾಗಿದೆ, ಇಚ್ಛೆಯುಳ್ಳವರು ಬರಕೊಳ್ಳಬಹುದು.

1. ಕುಂದಾಪುರ, 2. ಸಕಲೇಶಪುರ, 3. ಕೊಪ್ಪ, 4. ಕಾರ್ಕಳ.

Degrees. Books: Medicines. Free H. L. M S , H. M. B. H. M. D. etc Free Homeo-Ayur-Unani-Naturo degres. by post also—Practioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10 Enclose 2 annas stamp:—

Principal, Indian Homeopathic Institute and Society (Govt Regd.)
P. O. MAHUVA, (Kathiawar Dt, India.

Sidh-Kalpa Kavach (Regd)
No. 3 Rs 2, No 2 Rs. 5, No. 1 Rs 7 Special Rs. 10. Extra Special Rs 17. for love, marriage health wealth Ask any six questions with M. O. Re. 1/4 and get, correct answers by return post Life read ing Rs 2 No. V. P P. Send M. O. Free pamphlets, **Prof. Dr N. H. Chhatbar,** P. O. Mahuva, (Kathiawar, India.)

ವಿದ್ಯಾರ್ಥಿಗಳಿಗೆ
ಆನಂದದ ಬಾತಮಿ.

ಅತಿ ಅಭ್ಯಾಸ ಯಾ ಘಾಬರಿಯಿಂದ ಪರೀಕ್ಷೆಯ ಸಮಯ ನರ್ವಸ್ ವೀಕ್ನೆಸಿನಿಂದ ಸಾಮಾನ್ಯ ಸೇಕಡ 50 ವಿದ್ಯಾರ್ಥಿಗಳು ತಿಳಿದು ಯಾ ತಿಳಿಯದೆ ಫಸ್ಟ್‌ಕ್ಲಾಸಿನ ಯೋಗ್ಯತೆಯುಳ್ಳವರು ಕೂಡ ಥರ್ಡ್ ಕ್ಲಾಸಿನಲ್ಲಿ ಸಹ ಪಾಸಾಗದೆ ನಾಪಾಸಾಗುವ ಪರಿಸ್ಥಿತಿಯು ಬರುತ್ತದೆ. ಈ ಸರ್ವ ವಿಚಾರಗಳಿಗೆ ನಮ್ಮ ದೀರ್ಘ ಅನುಭವದಿಂದ ತಯಾರಿಸಲ್ಪಟ್ಟ ಬಹುಗುಣಯುಕ್ತ ಪುಷ್ಪಗಂಧಾಮೋದಿತ **ಆಮಲಕೀ ತೈಲ**ವನ್ನು ಉಪಯೋಗಿಸುವದರಿಂದ ಲಕ್ಷೀಚಾನ್ಸ್ ಸಿಕ್ಕುತ್ತದೆ. 6 ಯಾ 11 ಆಣೆ ಬೆಲೆಯ 1 ಸೀಸೆ ತೈಲವನ್ನು ಕೊಂಡುಕೊಂಡು ಸ್ವಲ್ಪ ತಲೆಗೆ ಹಾಕಿ ಪೇಪರಿಗೆ ಶುರುಮಾಡಿರಿ. ಇದರಿಂದ ಮೆದುಳಿನ ಜ್ಞಾನಶಕ್ತಿ ಯಾ ಸ್ಮರಣಶಕ್ತಿ ವೃದ್ಧಿಯಾಗಿ ಆತ್ಮವಿಶ್ವಾಸವು ಹೆಚ್ಚುವದಲ್ಲದೆ ಕಠಿಣ ತರದ ಪ್ರಶ್ನೆಗಳಲ್ಲಿ ಸುಲಭವಾಗಿ ಯಶಃಪ್ರಾಪ್ತಿಯಾಗುವುದು. ಪರೀಕ್ಷೆಯ ಮೊದಲೇ ಒಂದೆರಡು ಸೀಸೆ ನಮ್ಮ ಆಮಲಕೀ ತೈಲವನ್ನು ತರಿಸಿಕೊಳ್ಳಿರಿ. 4 ಔನ್ಸಿನ ಸೀಸೆ 1ರ ಕ್ರಯ ರೂ. 0-11-0, 2 ಔನ್ಸಿನ ಸೀಸೆ 1ರ ರೂ. 0-6-0 ತಯಾರಿಸುವವರು:-**ಸ್ವದೇಶೀ ಔಷಧಿಭಂಡಾರ**, (ರಿಜಿಸ್ಟರ್ಡ್)ಕುಂಜಿಬೆಟ್ಟು, ಪೋಸ್ಟ್ **ಬ್ರಹ್ಮಾವರ**, ದ. ಭಾರತ.

ನಮ್ಮ ಸ್ಟಾಕಿಸ್ಟರು:–ವಿ. ಆರ್. **ಪ್ರಭು,** ದಿ ಕೆನರಾ ನ್ಯೂಸ್ ಎಂಡ್ ಬುಕ್ ಏಜೆಂಸ್ಸೀಸ್ ಬಟಾಟವಾಲಾ ಮೆನ್ಶನ್, ಲಾಲ್‌ಬಾಗ್, ಮುಂಬೈ. **ಜನರಲ್ ಸಪ್ಲೈಸ್ ಲಿಮಿಟೆಡ್,** ಉಡುಪಿ, **ನವಭಾರತ ಬುಕ್ ಡಿಪೋ,** ಉಡುಪಿ, ಕೆಟಲಾಗಿಗೆ ಬರೆಯಿರಿ.

Advt.

ಒಂದು ವಾರದ ಯುದ್ಧ

ಫ್ರಾನ್ಸಿನ ಪತನಕ್ಕೆ ಕಾರಣವೇನು?
ಅತ್ಯಂತ ಅಪಮಾನಕರ ಸಂಧಿ

ಇಂಗ್ಲೆಂಡಿನ ಮೇಲೆ ಪ್ರಬಲ ವಿನಾಶ ಧಾಳಿ-ಜರ್ಮನಿಯಲ್ಲಿ ಹೆಚ್ಚಿನ ಹಾವಳಿ-ಇಟೆಲಿಯ ಕಾರ್ಖಾನೆಗಳ ನಾಶ-ಪೂರ್ವ ಆಫ್ರಿಕದಲ್ಲಿ ಯುದ್ಧ.

ಮಾರ್ಶಲ್ ಪೆಟೈನರ ಹೇಳಿಕೆ

ಫ್ರಾನ್ಸಿನ ಈಗಿನ ಪ್ರಧಾನ ಮಂತ್ರಿಗಳಾದ ಮಾರ್ಶಲ್ ಪೆಟೈನರು ಇದೇ ತಾ. 30ರಲ್ಲಿ ಕೊಟ್ಟ ರೇಡಿಯೋ ಭಾಷಣದಲ್ಲಿ ಫ್ರೆಂಚ್ ಸೇನೆಯ ಅಪಜಯದ ಕಾರಣಗಳನ್ನು ಕೊಟ್ಟಿರುವರು. ಫ್ಲೆಂಡರ್ಸಿನಲ್ಲಿ ದೊಡ್ಡ ಅಪಜಯವಾದರೂ ಸೋಮನದಿ ರಣರಂಗದಲ್ಲಿ ಜರ್ಮನರನ್ನು ತಡೆಗಟ್ಟಬಹುದೆಂಬ ನಿರೀಕ್ಷೆಯಿತ್ತು. ಜನರಲ್ ವೈಗಾಂಡರು ಸೇನೆಯನ್ನು ಪುನರ್ಘಟಿಸಿದ್ದರು. ಆದರೆ ಅದೂ ನಿರರ್ಥಕವಾಯಿತು. ಜೂನ್ ತಾ. 13ರ ಅನಂತರ ಹೋರಾಡಿ ಫಲವಿಲ್ಲೆಂದಾಯಿತು ಸೇನಾ ಪರಿಸ್ಥಿತಿಯಿಂದಾಗಿ "ಸಂಧಿಮಾಡಿಕೊಳ್ಳುವುದು ಆವಶ್ಯವಾಯಿತು. ಅಂತೆಯೇ ತಾನು ಧೈರ್ಯದಿಂದ ಯುದ್ಧ ನಿಲ್ಲಿಸುವ ನಿರ್ಧಾರ ಮಾಡಿದೆನೆಂದೇ ಮಾರ್ಶಲ್ ಪೆಟೈನರ ಅಂಬೋಣ. ಅವರು 1917ರ ಮತ್ತು ಈ ಸಲದ ಯುದ್ಧದ ಪರಿಸ್ಥಿತಿಗಳನ್ನು ಈ ರೀತಿ ಹೋಲಿಸಿರುವರು. 1917ನೇ ಇಸ್ವಿ ಮೇ ತಾ. 1ರಲ್ಲಿ, 3 ವರ್ಷಗಳ ಘೋರ ರಕ್ತಪಾತದ ಅನಂತರವೂ ನಮ್ಮಲ್ಲಿ 3,280,000 ಸೈನಿಕರಿದ್ದರು. ಈಗಣ ಯುದ್ಧಾನಂತರ ನಮ್ಮಲ್ಲಿರುವ ಸೇನೆ ಅರ್ಧಮಿಲ್ಯ ಕಡಿಮೆಯಾಗಿದೆ. 1918ನೇ ಮೇ ತಿಂಗಳಲ್ಲಿ 85 ದಳ ಬ್ರಿಟಿಷ್ ಸೇನೆಯು ಫ್ರಾನ್ಸಿನಲ್ಲಿ ಹೋರಾಡುತ್ತಿತ್ತು. 1940ನೇ ಮೇ ತಿಂಗಳಲ್ಲಿ ನಮ್ಮೊಡನಿರುವುದು 10ದಳ ಮಾತ್ರ. 1918ನೇ ಮೇಯಲ್ಲಿ 58 ಇಟೆಲಿಯನ್ ಮತ್ತು 12 ಅಮೇರಿಕಾನ ದಳಗಳು ನಮ್ಮೊಂದಿಗಿದ್ದುವು. ನಮ್ಮ ಯುದ್ಧೋಪಕರಣಗಳು ಬಹಳ ಕಡಿಮೆಯಾಗಿ ಅತಿ ಕಳತೆಯವಾಗಿವೆ. ನಮ್ಮ ಒಂದು ವಿಮಾನವು 6 ಜರ್ಮನ್ ವಿಮಾನಗಳನ್ನೆದುರಿಸಬೇಕಾಗಿತ್ತು. ಎಲ್ಲಾ ಜನಾಂಗಗಳಿಗೂ ಏರಿಳಿತವೆಂಬುದಿದೆ. ಅದನ್ನು ಜನತೆಯು ಹೇಗೆ ಸಹಿಸಿಕೊಳ್ಳುವುದೆಂಬುದೇ ಪ್ರಾಮುಖ್ಯ. ನಾವು ಅಪಜಯ ಹೊಂದಿದ ಈ ಯುದ್ಧದಿಂದ ಪಾಠ ಕಲಿತು ಕೊಳ್ಳಬೇಕು. 1918ರ ಯುದ್ಧಾನಂತರ ಫ್ರಾನ್ಸು ತ್ಯಾಗಕ್ಕಿಂತ ಸುಖವಿಲಾಸದಲ್ಲೇ ಹೆಚ್ಚಿನ ಆಸಕ್ತಿ ತೋರಿಸಿರುವುದು. ಜನತೆಯು ಕೊಡುವುದಕ್ಕಿಂತ ಕೇಳುವುದನ್ನೇ ಹೆಚ್ಚು ಮಾಡಿದರು. ಕಷ್ಟಪಡಲು ಅವರು ಸಿದ್ಧರಿರಲಿಲ್ಲ ಆದುದರಿಂದಲೇ ಇಂದೀಗ ಫ್ರಾನ್ಸಿಗೆ ದುರ್ದೈವ ಬಂದಿರುವುದು."

ಫ್ರೆಂಚ್ ಸೇನಾನಾಯಕರ ಅವಿವೇಕ

ಫ್ಲೆಂಡರ್ಸಿನ ಪರಾಜಯದೊಂದಿಗೆ ಜನರಲ್ ಗಮೆಲಿನರ ಪತನವಾಯಿತು ಅವರೇ ಫ್ರೆಂಚ್ ಸೇನಾನಾಯಕರಾಗುತ್ತಿದ್ದರೆ ಫ್ರಾನ್ಸು ಇಂತಹ ಅಪಮಾನಕಾರಕ ಅವಸ್ಥೆಗೀಡಾಗುತ್ತಿತ್ತೆಂದು ಹೇಳಬರುವುದಿಲ್ಲ. ಫ್ರೆಂಚ್ ಸೇನೆಯೊಂದಿಗೆ ಸಮೀಪ ಸಂಪರ್ಕದಿಂದಿದ್ದು ಸರ್ವಸಂಗತಿಯನ್ನೂ ಅರಿತಿದ್ದರವರು. ಎಂದಿಗೂ ಹಿಟ್ಲರಿಗೆ ತಲೆಬಾಗುತ್ತಿದ್ದಿಲ್ಲ. ಪ್ರಧಾನ ಮಂತ್ರಿ ರೈನೋಡರನ್ನವರು ಹುರಿದುಂಬಿಸುತ್ತಿದ್ದರೇ ಹೊರತು ನಿರುತ್ಸಾಹಗೊಳಿಸುತ್ತಿದ್ದಿಲ್ಲ ಈಗಣ ಪ್ರಧಾನ ಮಂತ್ರಿಗಳಾಗಿ ಫ್ರೆಂಚ್ ಜನಾಂಗದ ಮೇಲೆ ಅತ್ಯಂತ ಅಪಮಾನಕಾರಕ ಸಂಧಿ ಹೊರಿಸಲು ಕಾರಣರಾದ ಮಾರ್ಶಲ್ ಪೆಟೈನರು ಸ್ಪೈನಿನ ರಾಯಭಾರಿಯಾಗಿದ್ದವರು. ಜನರಲ್ ಫ್ರೇಂಕೋರವರ ಮಿತ್ರರು. ಫೆಸಿಸ್ಟಂ ಪಕ್ಷಪಾತಿಯೆಂದರೂ ಸಲ್ಲುವುದು. ಜನರಲ್ ವೈಗಾಂಡರು ಮಧ್ಯಪೂರ್ವದಲ್ಲಿದ್ದವರು. ಇಬ್ಬರು ಪ್ರಾಯಸಂದ ಹಳೆಯ ಸಂಪ್ರದಾಯಿಗಳು. ನೆಪೋಲಿಯಾನ ಮತ್ತು ಕಳೆದ ಮಹಾಯುದ್ಧದ ರೀತಿನೀತಿಯಲ್ಲೇ ನಂಬಿದವರು ಜರ್ಮನರೊಡನೆ ಕೆಲವು ಹೋರಾಟ ನಡೆಸಿದ ಮೇಲೂ ಪಾಠ ಕಲಿತು ತಮ್ಮ ಯುದ್ಧ ಕ್ರಮವನ್ನು ಬದಲಾಯಿಸಿಕೊಳ್ಳಲಿಲ್ಲ. ಫ್ರಾನ್ಸು ಎಂದೂ ಶರಣಾಗತವಾಗಕೂಡದೆಂದು ಛಲ ಹಿಡಿದು ಈಗ ಲಂಡನಿಗೆ ಹೋಗಿ ಯುದ್ಧವನ್ನು ಯಥಾಪ್ರಕಾರ ಮುನ್ನಡೆಸುವ ನಿರ್ಧಾರಮಾಡಿರುವ ಜನರಲ್ ಡಿ ಗೋಲರೇ ಮೊದಲಾದವರು ಯುದ್ಧದ ಕ್ರಮ ಬದಲಾಯಿಸಬೇಕೆಂದು ಸೂಚಿಸಿದರೂ ಫಲ ಬರಲಿಲ್ಲ. ಕಾಲಾಳುಗಳ ವ್ಯೂಹ ಚಾತುರ್ಯದ ಯುದ್ಧ ಕ್ರಮಕ್ಕೇನೇ ಫ್ರೆಂಚ ಸೇನಾನಿಗಳು ಕಟ್ಟುಬಿದ್ದು ಕೆಟ್ಟರು. ಜರ್ಮನರು ಸಾವಿರಾರು ಟೇಂಕು ಮತ್ತು ವಿಮಾನಗಳಿಂದ ಫ್ರೆಂಚ್ ಸೇನೆಯನ್ನು ಸದೆಬಡಿದುಬಿಟ್ಟರು. ಡಂಕರ್ಕಿನ ಯುದ್ಧವು ಫ್ರೆಂಚ್ ಸೇನೆಗೆ ಅನಾಹುತಕಾರಿಯಾಯಿತು. ಆ ಮೇಲೆ ಅದು ನಾಲ್ಕು ಪಂಗಡಗಳಾಗಿ ವಿಂಗಡಿಸಲ್ಪಟ್ಟು ಒಂದಕ್ಕೊಂದು ಸಂಪರ್ಕವಿಲ್ಲದೆ ಕಂಗೆಡುವಂತಾಯಿತು. ಮೆಗಿನೋ ಕೋಟೆಗಳಲ್ಲಿ 4 ತಿಂಗಳುಗಳ ವರೆಗೆ ಹೋರಾಡಲು ಸಾಮಗ್ರಿ ಸಿದ್ಧತೆಯಿತ್ತು. ಅದನ್ನು ಕಾಪಾಡುವುದಕ್ಕೂ ಫ್ರೆಂಚರಿಂದ ಸಾಧ್ಯವಾಗಲಿಲ್ಲ. ಅದನ್ನು ಜರ್ಮನರು ಹಿಂಬದಿಯಿಂದ ಆವರಿಸಿಬಿಟ್ಟರು. ಸರಕಾರವು ಪರಿಸಿನಲ್ಲಿ ಯುದ್ಧ ನಡಿಸದೆ ಅದನ್ನು ಬಿಟ್ಟುಹೋದುದರಿಂದ ಪರಿಣಾಮವು ಬಹಳ ಕೆಟ್ಟದಾಯಿತು. ಶರಣಾಗತವಾಗುವ ಸುದ್ದಿಯಂ ದಟ್ಟವಾಗಿ ಹಬ್ಬಿತು. ಫ್ರೆಂಚ್ ಸೇನೆಯ ಮತ್ತು ಜನತೆಯ ಉತ್ಸಾಹ ಕುಂದಿತು. ಫ್ರೆಂಚ್ ಸರಕಾರವು ಟೂರ್ಸ್ ಪಟ್ಟಣಕ್ಕೆ ಬಂದ ಮೇಲೂ ಮಾರ್ಶಲ್ ಪೆಟೈನ್ ಮತ್ತು ಜನರಲ್ ವೈಗಾಂಡರು ಆಲೋಚಿಸುತ್ತಿದ್ದುದು ಶರಣಾಗತವಾಗುವ ವಿಷಯವನ್ನು. ತಾವು ಜರ್ಮನ್ ಸೇನಾನಿಗಳೊಡನೆ ಸಂಧಿಮಾಡಿಕೊಳ್ಳಬೇಕೆಂದು ಕೇಳಿಕೊಂಡರೆ ಫ್ರಾನ್ಸು ಗೌರವ ಪೂರ್ವಕ ಸಂಧಿಯನ್ನು ಪಡೆದು ಭಯಂಕರ ರಕ್ತಪಾತವು ನಿಲ್ಲುವಂತಾಗುವುದೆಂದೇ ಅವರ ಅಭಿಪ್ರಾಯವಿತ್ತು. ಹಿಟ್ಲರರಂಥ ವೈರಿಯೊಡನೆ ನೀವು ಸಂಧಿ ಪ್ರಸ್ತಾಪ ಮಾತುವುದೆಂಬುದನ್ನು ಸ್ಮರಿಸಿಕೊಳ್ಳಿರೆಂದು ಎಮ್. ರೈನೋಡ್, ಎಮ್. ಮೆಂಡೆಲರೇ ಮೊದಲಾದವರು ಎಷ್ಟೊಂದು ಎಚ್ಚರಿಸಿದರೂ ಫಲವಾಗಲಿಲ್ಲ. ಸರಕಾರವು ಬೂರ್ಸಿನಿಂದ ಬೋರ್ಡೋ ಪಟ್ಟಣಕ್ಕೆ ಹೋದಾಗ ಅಲ್ಲಿ ಯಾವ ತರದ ಆಡಳಿತ ವ್ಯವಸ್ಥೆಯೂ ಇಲ್ಲದೆ ನಿರಾಶೆಯೇ ಹೆಚ್ಚಿತು. ಅನಂತರ ಮಂತ್ರಿಮಂಡಲವನ್ನೇ ಬದಲಾಯಿಸಿ ಸಂಧಿಮಾಡಿಕೊಳ್ಳುವ ಮನಸ್ಸುಳ್ಳವರೇ ಹೊಸ ಸಚಿವ ಮಂಡಲವನ್ನೇರ್ಪಡಿಸಿದರು. ಫ್ರೆಂಚ್ ಸೇನಾನಿಗಳು ಒಂದೋ ಸಂಧಿಯ ಶರ್ತಗಳನ್ನು ಮೊದಲಾಗಿ ಅತಿ ರಹಸ್ಯವಾಗಿ ನಿಶ್ಚೈಸಿಕೊಂಡು ಅನಂತರ ಯುದ್ಧ ನಿಲ್ಲಿಸುವ ನಿರ್ಧಾರ ಮಾಡಬೇಕಿತ್ತು, ಇಲ್ಲವೆ ಕೂಡಲೆ ಯುದ್ಧ ನಿಲ್ಲಿಸಿ ಆ ಮೇಲೆ ಸಂಧಿ ಪ್ರಸ್ತಾಪ ಮಾಡಬೇಕಿತ್ತು. ಒಂದಡೆ ಯುದ್ಧವನ್ನು ಮುನ್ನಡೆಸಿ ಇನ್ನೊಂದೆಡೆ ಬಹಿರಂಗ ಸಂಧಿ ಪ್ರಸ್ತಾಪ ಮಾಡುವುದೆಂದರೆ ಫ್ರೆಂಚ್ ಸೈನಿಕರ ಕೊರಳು ಕೊಯ್ದಂತೆಯೇ ಸರಿ. ಅವರಿಗೆ ಹೋರಾಡುವ ಉತ್ಸಾಹವೇ ಇರಲಿಲ್ಲ. ಅವರು ಹಿಂದೆ ಹಿಂದೆಯೇ ಸರಿಯುತ್ತಿದ್ದರು. ಜರ್ಮನ್ ಸೇನೆಯು ದಿವಸಕ್ಕೆ 20-30 ಮೈಲು ಗೆದ್ದು ಮುಂದುವರಿಯಿತು.

ಫ್ರಾನ್ಸನ್ನು ನಿರ್ನಾಮಗೊಳಿಸುವ ಸಂಧಿಯ ಶರ್ತಗಳು

ಫ್ರೆಂಚ್ ಮಂತ್ರಿಮಂಡಲವು ಯುದ್ಧ ನಿಲ್ಲಿಸಿ ಸಂಧಿಪ್ರಸ್ತಾಪವಮಾಡುವ ಸೂಚನೆಯನ್ನು ಕಳೆದ 16ರಲ್ಲಿ ಮಾಡಿದೊಡನೆಯೇ ಹಿಟ್ಲರ್ ಮತ್ತು ಮುಸಲೋನಿಗಳು ಮ್ಯೂನಿಚ್ ಪಟ್ಟಣದಲ್ಲಿ ಕೂಡಿ ಕಠಿಣ ರೀತಿಯ ಸಂಧಿಯನ್ನು ಫ್ರಾನ್ಸಿನ ಮೇಲೆ ಹೊರಿಸುವುದೆಂಬುದನ್ನು ಮಾತಾಡಿಕೊಂಡಿರುವರು. ಒಟ್ಟಾಗಿ ಸಂಧಿಮಾಡುವ ಬದಲಿಗೆ ಪ್ರತ್ಯಪ್ರತ್ಯೇಕ ಮಾಡಿಕೊಳ್ಳುವುದೊಳ್ಳೇದೆಂದು ನಿಶ್ಚೈಸಿ ಅಗಲಿದರು. ಈ ಮೇರೆಗೆ ಸಂಧಿಯ ಕುರಿತು ಮಾತಾಡಲು ಸರ್ವ ಅಧಿಕಾರ ಪಡೆದಿರುವ ನಾಲ್ಕು ಮಂದಿಯನ್ನು ಜರ್ಮನರ ಬಳಿಗೂ 4ಮಂದಿಯನ್ನು ಇಟೆಲಿಗೂ ಕಳುಹಿಸಬೇಕೆಂದು ತಿಳಿಸಿದರು. ಅದೇ ರೀತಿ 4 ಮಂದಿ ಪ್ರತಿನಿಧಿಗಳನ್ನು ಜರ್ಮನರ ಬಳಿಗೆ ಕಳುಹಿಸಲಾಯಿತು. ಕ್ಯಾಂಪೀನ್ ಎಂಬ ಪಟ್ಟಣದ ಒಳಿಯ ಕಾಡಿನಲ್ಲಿ ರೈಲುಗಾಡಿಯೊಂದರಲ್ಲಿ ಫ್ರೆಂಚ್ ಪ್ರತಿನಿಧಿಗಳನ್ನು ಹರ್ ಹಿಟ್ಲರ್, ಹೆರ್ ವಾನ್‌ರಿಬೆಂಟ್ರಪ್, ಜನರಲ್ ಕಿಟ್ಟೆಲ್ ಮತ್ತು ಮಾರ್ಶಲ್ ಗೋರಿಂಗರು ಸಂಧಿಸಿ ಮಾತುಕತೆನಡಿಸಿದರು. 1918ನೇ ನವಂಬರ 11ರಲ್ಲಿ ಇದೇ ಸ್ಥಳದಲ್ಲಿ, ರೈಲುಗಾಡಿಯಲ್ಲೇ ಮಿತ್ರ ರಾಷ್ಟ್ರಗಳು ಜರ್ಮನ ಪ್ರತಿನಿಧಿಗಳ ಮೇಲೆ ಸಂಧಿಯ ಶರ್ತಗಳನ್ನು ಹೊರಿಸಿದ್ದಂತೆ ಆ ಸಂಧಿಯು ಜರ್ಮನಿಗೂ ಫ್ರಾನ್ಸಿಗೂ ಇದೇ

(೧೩ನೇ ಪುಟಕ್ಕೆ ಮುಂದರಿಸಿದೆ)

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R.E.F. 1338 in S.C.S. 1545

ಸ್ಟ್ಯಾನಿನ್ ಫೆರ್ನಾಂಡಿಸ್—ಅರ್ಜಿದಾರ

ಮತ್ತು

ದುಮಿಂಗ್ ರುಜಾರಿ ಶೆಣೈ-ಪಾಸ್ಕಲ್ ಶೆಣೈರ ಮಗ-ಮಂಗಳೂರು ತಾಲೂಕು ಕೊಲ್ಲೂರು ಗ್ರಾಮಸ್ಥ-ಹಾಲಿ-ಬೊಂಬಾಯಿಯಲ್ಲಿ—ಮಜ್‌ಗೋನ್ ವೊಂಟ್‌ರೋಡಿನಲ್ಲಿ ಯಸ್. ಯಸ್. ವಿ.ರಾಂದ ಎಂಡ್ ಕಂಪೆನಿ ಎಂಬಲ್ಲಿರುವವ. } ಎದ್ರಿ.

ಸದರಿ ಎದ್ರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ:—

ನಿಮ್ಮ ಬಾಬ್ತು ಸ್ಥಿರಆಸ್ತಿಗಳನ್ನು ಅರ್ಜಿದಾರನು ಏಲಂಗೆ ಅಪೇಕ್ಷಿಸಿ ಬರಕೊಂಡ ಏಲಂ ಇಸ್ತಹಾರಿನ ಶರತುಗಳನ್ನು ನಿಶ್ಚೈಸುವ ಬಗ್ಗೆಯೂ, ಮತ್ತು ಏಲಂ ಕಾಲದಲ್ಲಿ ಅರ್ಜಿದಾರಗೆ ಬಿಡ್ ಮಾಡುವರ ವ ಬಿಡ್ ಮಿಜನ್ನು ಡಿಕ್ರಿಯ ಮೊಬಲಗಿನಲ್ಲಿ ಮುಜ್ರೆಕೊಡಬೇಕಾಗಿ ವಗೈರೆಗೆ ಅರ್ಜಿದಾರನು ಕೇಳಿ ಬರಕೊಂಡ ಅರ್ಜಿಯನ್ನು ವಿಚಾರ ತಾರೀಖು 4-7-1940ಕ್ಕೆ ಇಟ್ಟಿರುವುದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪಗಳಿದ್ದರೆ ಅವುಗಳನ್ನು ಆ ದಿನ ಬೆಳಗ್ಗೆ 10 ಘಂಟೆಗೆ ಕೋರ್ಟು ಮುಂದೆ ಹಾಜರಾಗಿ ತಿಳಿಯಪಡಿಸಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿಯಿಂದ ಸದರಿ ವ್ಯವಹಾರವು ಕೋರ್ಟು ಕ್ರಮಪ್ರಕಾರ ತೀರ್ಮಾನಿಸಲ್ಪಡುವುದು.

ಮೊಕ್ಕಾಂ:- ಕಾರ್ಕಳ ತಾ. 19-6-1940 | P. Y. Upadhyaya, B.A., L.L.B., Vakil for Petitioner.

ತುಳುನಾಡ್ ಬೇಂಕ್

ಆಫ್ ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ.

Authorised & Issued Capital	...	Rs. 1,00,000
Subscribed & Paid up Capital	....	Rs. 31,340
Reserves & other Funds	...	Rs. 22,052

ನಿರಖು ಠೇವಣಾತಿಗಳು ರಿಯಾಯತಿ ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.

ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳೂ ನಡೆಸಲ್ಪಡುತ್ತವೆ. ಹೆಚ್ಚಿನ ವಿವರಗಳಿಗೆ ಬರೆಯಿರಿ.

THULUNAD BANK

OF SUPPLY AGNCFY LIMITFD.

ನಗುವೇ ಐಶ್ವರ್ಯ! ಅಳುವೇ ಬಡತನ!

ಹಸನ್ಮುಖಿಯಾಗಿದ್ದು, ಜೀವನದ ಸುಖವನ್ನನುಭವಿಸಬೇಕು.

ನಗುವುದು ಮತ್ತು ನಗುತ್ತಿರುವುದು ಜೀವನದ ಗುರುತು, ಅಳು ಮೋರೆಯು ಮರಣದ ಗುರುತು. ನಗುವವನ ಬಳಿ ಶಕ್ತಿ ಇರುತ್ತದೆ. ಸದಾ ಅಳುತ್ತಲೇ ಇರುವವನು ಶವಕ್ಕಿಂತ ಕಡೆ. ಜೀವನದಲ್ಲಿ ಆನಂದವನ್ನನುಭವಿಸಬೇಕೆಂದಿದ್ದರೆ, ಯಾವಾಗಲೂ ನಗುತ್ತಿರಿ.

ನಗುವುದು ಎಂದಿಗೂ ವ್ಯರ್ಥವಾಗುವುದಿಲ್ಲ. ಇದರಿಂದ ಮಿತ್ರರೂ ಬಂಧುಗಳೂ ಸಹ ಸಂತೋಷಪಡುವರು. ಮನುಷ್ಯನು ನಗುತ್ತ ಇರುವವರೆಗೂ, ಮೃತ್ಯುವು ಅವನಿಂದ ದೂರವಾಗುವುದು ಅಂದರೆ ಮನುಷ್ಯನು ಹೆಚ್ಚುಹೆಚ್ಚಾಗಿ ನಗುತ್ತಿದ್ದಂತೆಲ್ಲ ಅವನು ದೀರ್ಘಾಯುವಾಗುವನು. ಆದುದರಿಂದ ನೀವು ಹೆಚ್ಚು ಕಾಲ ಬದುಕಬೇಕೆಂದಿದ್ದರೆ ನಗುತ್ತಿರಿ ಬಹಳ ಕಾಲದವರೆಗೂ ನಗುತ್ತಲೇ ಇರಿ.

ಬಾಯಿ ಮುಚ್ಚಿಕೊಂಡು ಸುಮ್ಮನೆ ಕುಳಿತಿರುವುದು, ಮರಣವನ್ನು ನಿರೀಕ್ಷಿಸಿಕೊಂಡು ಕುಳಿತಿರುವುದಕ್ಕೆ ಸಮನಾಗಿದೆ. ಇದರಿಂದ ಮನುಷ್ಯನ ಚಟುವಟಿಕೆಯು ಕಡಿಮೆಯಾಗುವುದು! ರಕ್ತ ಸಂಚಾರವು ನಿರೋಧಿಸಲ್ಪಡುವುದು ಅಂಗಾಂಗಗಳು ದುರ್ಬಲವಾಗುವುವು. ಮೂದೇವಿಯು, ದರಿದ್ರ ಲಕ್ಷ್ಮಿಯು, ಮನೆಯಲ್ಲಿ ವಾಸಿಸುವಳು. ಜಗತ್ತೇ ಶೂನ್ಯವಾಗಿ ತೋರುವುದು. ಇವೆಲ್ಲವುಗಳಿಂದ ಪಾರಾಗಬೇಕೆಂದಿದ್ದರೆ, ನಗಿರಿ, ಚೆನ್ನಾಗಿ ನಗುತ್ತಿರಿ.

ಸುಖವಿರುವಾಗಂತೂ ಎಲ್ಲರೂ ನಗುವರು. ಆದರೆ ದುಃಖದಲ್ಲಿ ಸಹ ನಗುವವನು ಪ್ರಥಮ ಶ್ರೇಣಿಯ ವೀರನೆನಿಸುವನು. ನಿಜಸ್ಥಿತಿ ಏನೆಂದರೆ, ಮನುಷ್ಯನು ಸುಖದುಃಖಗಳಿಂದಲ್ಲ ಸುಖಿದುಃಖಿಯಾಗುವುದು. ಸುಖದಿಂದ ಸುಖಿಯೂ, ಚಿಂತೆಯಿಂದ ದುಃಖಿಯೂ ಆಗುವನು. ಆದುದರಿಂದ ಸುಖಿಯಾಗಿರಬಯಸುವುದಾದರೆ, ಆನಂದದಿಂದಿರಬೇಕು. ಜಗತ್ತಿನಿಂದಲೇ ದೂರವಾಗಿದ್ದುಕೊಂಡು ನಗುತ್ತ ಇರಿ. ನಗುತ್ತ ಇದ್ದು ಚಿಂತೆಯನ್ನು ದೂರಮಾಡಿ, ನಂತರ ನಿಮಗೆ ದುಃಖವನ್ನುಂಟುಮಾಡುವವನೇ ಇರುವುದಿಲ್ಲ.

ನಗೆಯು ಹೆಸರೇ ಐಶ್ವರ್ಯ, ಅಳುವಿನ ಹೆಸರೇ ಬಡತನ. ನಗೆಯೇ ಶರೀರದ ಸಂಪತ್ತು, ಆತ್ಮದ ಐಶ್ವರ್ಯ, ಮನೆಯ ಭಾಗ್ಯ, ಸಮಸ್ತ ಸಮಾಜದ ಸೌಭಾಗ್ಯ. ಸುಪ್ರಸಿದ್ಧ ಶಿಲ್ಪಿಯಾದ ಅಂಡರ್‌ಸನ್ನನು ಯಾವಾಗಲೂ ನಗುತ್ತಲೇ ಇದ್ದನು. ತಾನು ತಿರುಗುತ್ತಿದ್ದ ಬೀದಿಗಳನ್ನು ನಗಿಸುತ್ತಿದ್ದನು. ರಾಬರ್ಟ್ ಸ್ಟೀವನ್ಸನ್ನನು ಸಹ ಜೀವನ ಪರ್ಯಂತವೂ ನಗುತ್ತಲೇ ಇದ್ದನು, ಅವನು ಹೇಳುತ್ತಿದ್ದುದೇನೆಂದರೆ ಈ ನಗೆಯು ಕತ್ತಲೆಯ ಕೋಣೆಯಲ್ಲಿ ಬೆಳಕನ್ನುಂಟುಮಾಡುತ್ತದೆ. ಅಳು ಮೋರೆಯವನೊಬ್ಬನು ನೂರು ರೂಪಾಯಿಗಳನ್ನು ಕೊಟ್ಟರೂ, ಅವನನ್ನು ಹತ್ತಿರ ಸೇರಿಸಬೇಡಿ. ನೂರು ರೂಪಾಯಿ ಖರ್ಚಾದರೂ ಸರಿಯೆ, ಹಸನ್ಮುಖಿಯನ್ನರಸಿಕೊಂಡು ಬನ್ನಿ." ನೂರು ರೂಪಾಯಿಯನ್ನೇ ಖರ್ಚುಮಾಡಬೇಕಾಗಿಲ್ಲ. ನೀವೆಲ್ಲಿದ್ದರೂ ಅಲ್ಲಿ ನಗುತ್ತಿರಿ, ನೋಡಿ ಎಷ್ಟು ಜನ ನಗುವವರು ದೊರೆಯುವರೆಂಬುದನ್ನು. ಸಿಂಹಾಸನದ ಮೇಲಿದ್ದಾಗಲೂ ನಗುತ್ತಿರಿ. ಗ್ರಾವೈಕರಾತ್ರಿಯಂತೆ ಜೀವನಮಾಡುತ್ತಿರುವಾಗಲೂ ನಗುತ್ತಲೇ ಇರಿ. ದಾರಿದ್ರ್ಯದಲ್ಲಿ ನಗುತ್ತಿರಿ, ಯಾವಾಗಲೂ ನಗುತ್ತಲೇ ಇರಿ.

ಜೀವನವನ್ನು ಉತ್ತಮ ರೀತಿಯಿಂದ ನಡೆಸುವ ಒಳ್ಳೆಯ ಸಾಧನೆ ಎಂದರೆ ನಗುತ್ತಿರುವುದೇ. ಎಚ್ಚರವಾಗಿರುವಾಗ ನಗುತ್ತಿರಿ. ನಿದ್ರಿಸುತ್ತಿರುವಾಗ ನಗುತ್ತಿರಿ. ಯಾವ ಕೆಲಸ ಮಾಡಿದರೂ ನಗುತ್ತ ಮಾಡಿರಿ ಕುಳಿತುಕೊಳ್ಳುವಾಗ ನಗುತ್ತ ಕುಳಿತುಕೊಳ್ಳಿ. ಮಿತ್ರರನ್ನು ನಗಿಸುತ್ತಿರಿ ನಡೆಯುವಾಗ ನಗುತ್ತಿರಿ ನಗುನಗುತ್ತ ನೀವು ದೊಡ್ಡ ದೊಡ್ಡ ಸಮುದ್ರವನ್ನೂ ಸಹ ದಾಟಬಲ್ಲಿರಿ. ಪರ್ವತಗಳ ಎತ್ತರವಾದ ಶಿಖರವನ್ನೂ ಸಹ ನಗುತ್ತಿದ್ದರೆ, ಸುಲಭವಾಗಿ ಹತ್ತಬಲ್ಲಿರಿ.

ಯಾರಿಗಾದರೂ ಏನಾದರೂ ಕೊಟ್ಟರೆ, ನಗುತ್ತ ಕೊಡಿರಿ, ಇದರಿಂದ ನೀವು ಕೊಡುವ ಸಾಧಾರಣ ವಸ್ತುವು ಅಮೂಲ್ಯವಾದುದಾಗುವುದು. ಯಾರಾದರೂ ನಿಮಗೇನಾದರೂ ಕೊಟ್ಟಲ್ಲಿ ನಗುತ್ತ ಸ್ವೀಕರಿಸಿರಿ, ಇದರಿಂದ ನಿಮ್ಮ ಮರ್ಯಾದೆಯು ಹೆಚ್ಚುವುದು, ಕೊಡುವವನ ಉತ್ಸಾಹವೂ ಇಮ್ಮಡಿಯಾಗುವುದು

ಶರೀರದಲ್ಲಿ ಆಲಸ್ಯವುಂಟಾಗಿ, ಚಟುವಟಿಕೆಯು ಕಡಿಮೆಯಾದರೆ ಮನಸ್ಸಿನಲ್ಲೇ ನಗುತ್ತಿರಿ, ಆಲಸ್ಯವು ದೂರವಾಗಿ ಬಿಡುವುದು.

ನಿತ್ಯವೂ ಸೂರ್ಯೋದಯಕ್ಕೆ ಮೊದಲು ಏಳಿ, ಕನ್ನಡಿಯಲ್ಲಿ ಮುಖವನ್ನು ನೋಡಿಕೊಳ್ಳಿ, ಅದನ್ನೂ ನೋಡಿ ನಗಿರಿ ಮುಖ ತೊಳೆದು ಪುನಃ ಕನ್ನಡಿಯಲ್ಲಿ ನೋಡಿಕೊಂಡು ನಗಿರಿ. ಹಗಲಿನಲ್ಲಿ ಅನೇಕ ವೇಳೆ ಕನ್ನಡಿಯಲ್ಲಿ ಮುಖವನ್ನು ನೋಡಿಕೊಳ್ಳುತ್ತಿರಿ. ಕೆಲಸಮಾಡುವಾಗ ನಗುತ್ತಿರಿ, ಧೈರ್ಯದಿಂದ ಕೆಲಸಮಾಡಿರಿ, ಏನಾದರೂ ತಿನ್ನಬೇಕಾದರೆ ಇತರರೊಡನೆ ಹಂಚಿ ತಿನ್ನಿ. ಒಂಟಿಯಾಗಿ ತಿನ್ನುವುದರಲ್ಲಿ ರುಚಿ ಇರುವುದಿಲ್ಲ. ತಿಂದಾದ ನಂತರ ಕುಳಿತು ನಗಿರಿ.

ನಗುವುದೇ ಉತ್ತಮ ವ್ಯಾಯಾಮ; ಶ್ರೇಷ್ಠವಾದ ಔಷಧಿ!

S. L. ಸುಬ್ರಹ್ಮಣ್ಯ.

ನವಭಾರತ ಪುಸ್ತಕಭಂಡಾರದಲ್ಲಿ
ಲೈಬ್ರೆರಿ ಪುಸ್ತಕಗಳು
ದೊರೆಯುತ್ತವೆ.

An Insurance Company belonging to its Policyholders!

In other words a Mutual Office without Shareholders to absorb any part of its profits, or any obligations except to its assured Members. The "Canara Mutual" is such a Company. It is one of the most successful Mutual Life Offices in India.

Take a Policy in the Company and become one of its Members.

Economical Management.] [Handsome Bonuses.

The Canara Mutual
ASSURANCE COMPANY, LTD.
(Head Office:- UDIPI, S. India.)

ನಿಮ್ಮ ಆಕಾಂಕ್ಷೆ—
ನೀವು ಮಾಡಲಿಕ್ಕಾಗಲೀ, ಪ್ರಾತಿನಿಧ್ಯತೆ ಪಡೆಯಲಿಕ್ಕಾಗಲೀ
ಭದ್ರತೆ ಮತ್ತು **ಪ್ರಗತಿ**
ಪರ ಜೀವವಿಮಾ ಸಂಸ್ಥೆ ಯಾವುದೆಂದು ನೀವು ಯೋಚಿಸುತ್ತಿರುವುದಾದರೆ ನಮ್ಮೊಡನೆ ವಿಚಾರಿಸಿರಿ.
ಶಾಖಾ ಕಾರ್ಯದರ್ಶಿ,
ದಿ ನ್ಯೂ ಗಾರ್ಡಿಯನ್
ಒಫ್ ಇಂಡಿಯಾ ಲೈಫ್ ಇನ್ಶ್ಯೂರೆನ್ಸ್ ಕೊ. ಲಿಮಿಟೆಡ್, ಮದ್ರಾಸು
ಮಂಗಳೂರು ಬ್ರಾಂಚ್.

ಒಂದು ವಾರದ ಯುದ್ಧ

(೧೧ನೇ ಪುಟದಿಂದ ಮುಂದರಿಸಿದ್ದು.)

ಲೋಕಕ್ಕೂ ನಾಚಿಕೆಕರವಾದುದು. ಆ ಕಳಂಕವನ್ನು ತೊಡೆದುಹಾಕಲು ಜರ್ಮನರು ಇಂದು ಅಂತಹ ಸನ್ನಿವೇಶದಲ್ಲೇ ಸಂಧಿಯ ಶರ್ತಗಳನ್ನು ಫ್ರಾನ್ಸಿನ ಮೇಲೆ ಹೊರಿಸಿರುವರು. ಈ ರೈಲುಬಂಡಿಯನ್ನು ಸ್ಮಾರಕವಾಗಿ ಜರ್ಮನಿಗೊಯ್ಯಲಾಗುವುದಂತೆ. ಇದೇ ತಾ. 22ನೇ ಅಪರಾಹ್ನ ಘಂಟೆ 4-30ಕ್ಕೆ ಫ್ರೆಂಚ್ ಸರಕಾರವು ಸಂಧಿಯ ಕರಾರಿಗೆ ಸಹಿಹಾಕಿರುವುದೆಂದು ತಿಳಿದುಬರುತ್ತದೆ. ಈ ಕುರಿತು ಅದು ಬ್ರಿಟಿಷ್ ಸರಕಾರದ ಅಭಿಪ್ರಾಯವನ್ನೇನೂ ಕೇಳಿಕೊಳ್ಳಲಿಲ್ಲ. ಈ ಸಂಧಿಯ ಶರ್ತಗಳು ಅತ್ಯಂತ ಅಪಮಾನಕರವಿದ್ದು ಫ್ರಾನ್ಸಿನ ಸ್ವಾತಂತ್ರ್ಯವನ್ನೇ ನಿರ್ನಾಮಗೊಳಿಸುವಂತಹವಾಗಿವೆ. 1. ಫ್ರಾನ್ಸಿನ ಬ್ರಿಟಿಷ್ ಚನ್ನೆಲ್ ಮತ್ತು ಅತ್ಲಾಂಟಿಕ್ ಸಾಗರ ಕರಾವಳಿಯು ಇಂಗ್ಲೆಂಡಿನೊಡನೆ ಯುದ್ಧ ಮುಗಿಯುವನಕ ಜರ್ಮನರ ಅಧೀನವಿರಬೇಕು. (ಭೂಮಧ್ಯ ಸಾಗರದ ಫ್ರಾನ್ಸಿನ ಕರಾವಳಿಯ ಪ್ರಶ್ನೆಯನ್ನು ಇಟೆಲಿಯೊಡನೆ ಸಂಧಿಮಾಡುವಾಗ ಇತ್ಯರ್ಥಪಡಿಸಿಕೊಳ್ಳಬೇಕು.) 2. ಫ್ರೆಂಚ್ ನೌಕಾಪಡೆ ಮತ್ತು ಎಲ್ಲಾ ಹಡಗಗಳನ್ನೂ ನಿರಾಯುಧವನ್ನಾಗಿಮಾಡಬೇಕು. ಹೊರಗಿರುವ ಫ್ರೆಂಚ್ ಯುದ್ಧ ಹಡಗಗಳನ್ನೆಲ್ಲಾ ಕರೆಸಿ ನಿರಾಯುಧಗೊಳಿಸಬೇಕು. 3. ಪೆರಿಸು ಸೇರಿ ಫ್ರಾನ್ಸಿನ ಮೂರನೇ ಒಂದು ಭಾಗಕ್ಕಿಂತಲೂ ಸ್ವಲ್ಪ ಕಡಿಮೆ ಭಾಗದ ಹೊರತು ಇತರ ಪ್ರದೇಶವೆಲ್ಲಾ ಇಂಗ್ಲೆಂಡಿನೊಡನೆ ಯುದ್ಧ ಮುಗಿಯುವನಕ ಜರ್ಮನಿಯ ಅಧೀನವಿರಬೇಕು. 4. ಕೊನೆಯ ಸಂಧಿ ಶರ್ತಗಳು ಇತ್ಯರ್ಥವಾಗುವನಕ ಯಾವ ತರದ ಪ್ರಾದೇಶಿಕ ಬದಲಾವಣೆಯನ್ನೂ ಮಾಡಕೂಡದು. ಇಟೆಲಿಯೊಡನೆ ಫ್ರಾನ್ಸು ಸಂಧಿಮಾಡಿಕೊಂಡು 6 ಘಂಟೆಯಾದ ಮೇಲೆ ಮಾತ್ರ ಯುದ್ಧ ನಿಲ್ಲಿಸಲ್ಪಡುವುದು. ಫ್ರೆಂಚ್ ಪ್ರತಿನಿಧಿಗಳೀಗ ವಿಮಾನ ಮೂಲಕ ಇಟೆಲಿಗೆ ಹೋಗಿರುವರು. ಭೂಮಧ್ಯ ಸಾಗರ ಕರಾವಳಿ ಮತ್ತು ಫ್ರೆಂಚ್ ವಸಾಹತುಗಳ ಕುರಿತಿನ್ನು ಇಟೆಲಿಯು ಕಠಿಣ ಶರ್ತಗಳನ್ನು ಹಾಕದಿರಲಾರದು. ಒಟ್ಟಾರೆ ಫ್ರಾನ್ಸೂ ಫ್ರೆಂಚ್ ಸಾಮ್ರಾಜ್ಯವೂ ನಾಮಾವಶೇಷವಾದಂತೆಯೇ ಸರಿ.

ಸಂಧಿಯ ಪರಿಣಾಮ

ಫ್ರೆಂಚ್ ಅಧೀನ ರಾಜ್ಯಗಳೂ, ಹೊರದೇಶಗಳಲ್ಲಿರುವ ಫ್ರೆಂಚರೂ ಸಂಧಿಗೆ ಬದ್ಧವಿರೋಧವಿರುವರು. ಜರ್ಮನಿಯೊಂದಿಗೆ ಯುದ್ಧ ಮುನ್ನಡೆಸಲೇಬೇಕೆಂಬ ನಿರ್ಧಾರವುಳ್ಳ ಸಾವಿರಾರು ಮಂದಿ ಫ್ರೆಂಚರು ಇಂಗ್ಲೆಂಡಿಗೆ ಹೋಗಿ ಸೇರುತ್ತಿರುವರು. ಫ್ರೆಂಚ್ ವಿಮಾನಗಳು ಪೂರ್ವ ಆಫ್ರಿಕಕ್ಕೂ ಇಂಗ್ಲೆಂಡಿಗೂ ಹೋಗುತ್ತಿರುವುವು. ಕೆಲವು ಟೇಂಕ್‌ಗಳು ಕೂಡಾ ಇಂಗ್ಲೆಂಡಿಗೆ ಕಳುಹಿಸಲ್ಪಟ್ಟಿವೆ. ಹಲವು ಫ್ರೆಂಚ್ ಯುದ್ಧಹಡಗಗಳು ಬ್ರಿಟಿಷರ ಸ್ವಾಧೀನವಿವೆ. ಫ್ರೆಂಚ್ ನೌಕಾಪಡೆಯೇ ಶರಣಾಗತವಾಗುವುದು ಸಂದೇಹಕರ. "ಸ್ವಾಭಿಮಾನವುಳ್ಳ ಸ್ವತಂತ್ರವಾದ ಯಾವ ಸರಕಾರವಾದರೂ ಇಷ್ಟೊಂದು ಅಪಮಾನಕರ ಸಂಧಿಗೊಪ್ಪಲಾರದು. ಬೋರ್ಡೋವಿನಲ್ಲಿರುವ ಫ್ರೆಂಚ್ ಸರಕಾರವು ಅದಕ್ಕೊಪ್ಪಿದುದು ಅತ್ಯಂತ ವಿಷಾದಕರ. ಈ ಪ್ರಕಾರ ಫ್ರಾನ್ಸಿನ ಮತ್ತು ಫ್ರೆಂಚ್ ಸಾಮ್ರಾಜ್ಯದ ಸೊತ್ತು ಸಂಪತ್ತೆಲ್ಲಾ ವೈರಿಯದಾಗುವುದು. ಫ್ರೆಂಚ್ ಸೇನೆ ಮತ್ತು ನೌಕಾಪಡೆಯೂ ಇಂಗ್ಲೆಂಡಿನ ವಿರೋಧವಾಗಿ ಉಪಯೋಗಿಸಲ್ಪಡುವುದು. ಆದರೂ ಬ್ರಿಟನಿಗೆ ಹೋರಾಡಿಯೇ ಸಿದ್ಧ. ಕಟ್ಟಕಡೆಗೆ ಅದು ಜಯಹೊಂದುವುದೆಂಬುದು ನಿಶ್ಚಯ. ಆಗ ಫ್ರಾನ್ಸನ್ನು ಬಂಧನದಿಂದ ಬಿಡಿಸಲಾಗುವುದು. ಫ್ರೆಂಚರೆಲ್ಲರೂ ಯುದ್ಧದಲ್ಲಿ ಬ್ರಿಟನಿಗೆ ಸಹಾಯಮಾಡಬೇಕೆ"ಂದು ಬ್ರಿಟಿಷ್ ಪ್ರಧಾನಮಂತ್ರಿಗಳು ಅತ್ಯಂತ ಕಳಕಳಿಯಿಂದ ವಿನಂತಿಮಾಡಿಕೊಂಡಿರುವರು. ರೈನೋಡ್ ಮಂತ್ರಿಮಂಡಲದಲ್ಲಿ ಯುದ್ಧ ಖಾತೆಯ ಮುಖ್ಯಸ್ಥರಾಗಿದ್ದ ಜನರಲ್ ಡಿಗೋಲರು ಲಂಡನಿಗೆ ಹೋಗಿ, "ಜರ್ಮನಿ ಮತ್ತು ಇಟೆಲಿಯು ಹೊರಿಸುವ ಸಂಧಿಗೊಪ್ಪುವುದೆಂದರೆ, ಶರಣಾಗತವಾಗುವುದು ಮಾತ್ರವಲ್ಲ ಗುಲಾಮಗಿರಿಗೆ ತಲೆಬಾಗುವುದು. ಇದರಿಂದ ಫ್ರೆಂಚ್ ನೆಲ, ಜಲ ಮತ್ತು ಆಕಾಶಸೇನೆಯೆಲ್ಲಾ ಜರ್ಮನಿ ಮತ್ತು ಇಟೆಲಿಗಳ ಅಧೀನವಾಗಿ ಫ್ರೆಂಚ್ ಸರಕಾರವು ಯಾವ ಸ್ವಾತಂತ್ರ್ಯವೂ ಇಲ್ಲದೆ ಅವುಗಳ ಅಧೀನವಾಗಿ ನಡೆಯಬೇಕಾಗುವುದು. ಇಂತಹ ಸ್ಥಿತಿಗೊಪ್ಪದ ಫ್ರೆಂಚರು ಅನೇಕ ಮಂದಿ ಇದ್ದಾರೆ. ಕೆಟ್ಟ ಯುದ್ಧ ಪದ್ಧತಿ, ಯುದ್ಧ ನಡೆಸುವುದರಲ್ಲುಂಟಾಗಿರುವ ತಪ್ಪು, ಮತ್ತು ಸರಕಾರದ ಪರಾಭವ ಮನೋವೃತ್ತಿಯಿಂದ ಫ್ರೆಂಚ್ ಸೇನೆಯು ಈಗ ಪರಾಜಯಹೊಂದಿದೆ. ಇನ್ನಾದರೂ ಫ್ರೆಂಚ್ ಸೇನೆಯು ನಾಶವಾಗಿಲ್ಲ. ದೊಡ್ಡ ಫ್ರೆಂಚ್ ಸಾಮ್ರಾಜ್ಯವಿದೆ. ಫ್ರೆಂಚ್ ನೌಕಾಪಡೆ ಮತ್ತು ಹೆಚ್ಚಿನ ಜನಸಂಗ್ರಹವಿದೆ. ಸಮುದ್ರದ ಅಧಿಕಾರವಿರುವ ಮತ್ತು ಅತಿದೊಡ್ಡ ಸಾಮ್ರಾಜ್ಯದಾರಿಯವಿರುವ ಇಂಗ್ಲೆಂಡಿನ ಆಶ್ರಯವಿದೆ. ಅಮೇರಿಕದ ಅತಿ ಹೆಚ್ಚಿನ ಸಹಾಯವಿದೆ. ಆದುದರಿಂದ ಸ್ವಾಭಿಮಾನಿಗಳಾದ, ಸ್ವಾತಂತ್ರ್ಯ ಪ್ರಿಯರಾದ ಫ್ರೆಂಚರೆಲ್ಲಾ ಕೊನೆಯವರೆಗೂ ಜರ್ಮನರೊಡನೆ ಹೋರಾಡಲು ಕಟಿಬದ್ಧರಾಗಬೇಕೆಂದು ಆಗ್ರಹದ ವಿನಂತಿ ಹೊರಡಿಸಿರುವರು. ಇಂಗ್ಲೆಂಡು ಬೋರ್ಡೋವಿನಲ್ಲಿನ ಫ್ರೆಂಚ್ ಸರಕಾರವನ್ನು ಅಂಗೀಕರಿಸದೆ, ಲಂಡನಿನಲ್ಲಿ ಪ್ರತ್ಯೇಕವಾಗಿ ಫ್ರೆಂಚ್ ಮಂತ್ರಿಮಂಡಲವೊಂದು ಸ್ಥಾಪಿತವಾಗುವ ಸಂಭವವಿದೆ. ಆಗ ಫ್ರೆಂಚ್ ಸರಕಾರದೊಳಗೆ ಈಗಲೇ ನೆಲೆಗೊಂಡಿರುವ ಒಡಕು ಪ್ರಬಲವಾಗಿ ಎರಡು ಸರಕಾರಗಳು ಅಸ್ತಿತ್ವಕ್ಕೆ ಬಂದು ಗೊಂದಲವುಂಟಾಗದಿರಲಾರದು.

ಸಮಾಚಾರ ಸಂಗ್ರಹ

ಜಪಾನು ಅಮೇರಿಕಗಳೊಳಗೆ ವೈಷಮ್ಯ

ಜಪಾನು ಅಮೇರಿಕಗಳೊಳಗೆ ಒಳಗಿಂದೊಳಗೆ ವೈಷಮ್ಯದ ಬೆಂಕಿಯು ಹೊಗೆಯಾಡುತ್ತಿದೆ. ಜಪಾನು ಗುಪ್ತವಾಗಿ ಅನೇಕ ಯುದ್ಧ ಹಡಗಗಳನ್ನು ಕಟ್ಟುತ್ತಿರುವುದೆಂದು ಅಮೇರಿಕವು ತನ್ನ ನೌಕಾಪಡೆಯನ್ನು ಅಪಾರವಾಗಿ ಹೆಚ್ಚಿಸಿರುವುದು. ಇದರಿಂದ ಜಪಾನು ಉದ್ವೇಗಗೊಂಡಿರುವುದು. ಜಪಾನು ಚೀನವನ್ನು ವಶಪಡಿಸಿಕೊಂಡುದರಿಂದ ಅಮೇರಿಕದ ವ್ಯಾಪಾರಕ್ಕೆ ಬಹಳ ಧಕ್ಕೆಯುಂಟಾಗಿದೆ. ಅದಕ್ಕೆ ಬಹಳ ನಷ್ಟವಾಗಿದೆ. ಡಚ್ ಈಸ್ಟ್ ಇಂಡೀಸ್ ಮೊದಲಾದ ದ್ವೀಪಗಳನ್ನು ವಶಪಡಿಸಿ ಚೀನದೊಡನೆ ವ್ಯಾಪಾರಬೆಳಸಬಹುದೆಂದು ಅಮೇರಿಕದ ಭಯ. ಡಚ್ ಈಸ್ಟ್ ಇಂಡೀಸಿನಲ್ಲಿ ಈಗಿದ್ದ ಆಡಳಿತವೇ ಇರಬೇಕೆಂದು ಜಪಾನು ಪ್ರಯತ್ನಿಸಲು ಇದೇ ಕಾರಣ. ಅಮೇರಿಕವು ಶಾಂತಸಾಗರದಲ್ಲಿ ದೊಡ್ಡ ನೌಕಾಪಡೆಯನ್ನಿರಿಸಿ ಜಪಾನಿನ ಚಲನವಲನಗಳನ್ನು ಎಚ್ಚರಿಕೆಯಿಂದ ನೋಡುತ್ತಿದೆ. ಯುರೋಪಿನ ಯುದ್ಧವಿಲ್ಲದಿರುತ್ತಿದ್ದರೆ ಜಪಾನು ಅಮೇರಿಕಗಳೊಳಗೆ ಯುದ್ಧವು ನಡೆಯುವ ಸಂಭವವಿದ್ದಿತೆಂದು ಹೇಳಬಹುದು, ಇನ್ನಾದರೂ ಯುದ್ಧವು ಅನಿವಾರ್ಯವೇ ಇದೆಯೆಂದು ರಾಜನೀತಿಜ್ಞರ ಅಭಿಮತ.

ಜರ್ಮನಿಯ ಪ್ರಚಂಡ ವಿಮಾನಪಡೆ

ಜರ್ಮನಿಯಲ್ಲಿ ಇಂತಿಷ್ಟೇ ಯುದ್ಧ ವಿಮಾನಗಳಿರುವವೆಂದು ಹೇಳಬರುವುದಿಲ್ಲ. 30,000ದ ವರೆಗಿವೆಯೆಂದು ಕೆಲವರ ಅಂದಾಜು. ವಿಮಾನತಯಾರಿಯೆಂಬುದು ಜರ್ಮನಿಯಲ್ಲಿ ಗ್ರಾಮಕೈಗಾರಿಕೆಯಾಗಿದೆಯಂತೆ, ಅದರ ಬೇರೆ ಬೇರೆ ಭಾಗಗಳು ಗ್ರಾಮಗಳಲ್ಲಿ ತಯಾರಿಸಲ್ಪಟ್ಟು ಅವನ್ನು ಜೋಡಿಸುವ ಕೆಲಸವನ್ನು ಮಾತ್ರ ದೊಡ್ಡ ಕಾರ್ಖಾನೆಗಳು ಮಾಡುತ್ತವೆ [illegible]. ಐವತ್ತರು ವತ್ತು ಸೈನಿಕರನ್ನೊಯ್ಯುವ ಚಿಕ್ಕ ಟೇಂಕುಗಳನ್ನು ಹೊರುವ, ಬೋಂಬೆಸೆವ, ಹೋರಾಡುವ, ಹೊಗೆಮೋಡ ಹರಡುವ, ಉರಿಜ್ವಾಲೆ ಕಾರುವ, ಒಮ್ಮೆಯೇ ಕೆಳಗಿಳಿದು ಧಾಳಿಯಿಟ್ಟು ಮೇಲಕ್ಕೇರುವ ವಿಮಾನಗಳು ಜರ್ಮನಿಯಲ್ಲಿ ಸಹಸ್ರಗಟ್ಟಲೆ ಇವೆ. ಅವುಗಳಿಗೆ ಇಳಿಯಲು ಪ್ರತ್ಯೇಕ ನಿಲ್ದಾಣವೇನೂ ಬೇಡ. ನಡುರಸ್ತೆಯಲ್ಲಿಳಿದು ಒಮ್ಮೆಯೇ ಮೇಲಕ್ಕೇರುವವು. ಪೆಟ್ರೋಲಿನ ಬದಲಿಗೆ ಪಾದರಸದ ಉಗಿಯಿಂದ ವಿಮಾನಗಳನ್ನು ಜರ್ಮನರು ನಡೆಸುತ್ತಿದ್ದಾರೆಂದು ಸುದ್ದಿ. ಇಂಗ್ಲೆಂಡ್ ಮತ್ತು ಫ್ರಾನ್ಸುಗಳೊಂದುಕೂಡಿ [illegible] ಪ್ರಯತ್ನಿಸಿದರೂ ಜರ್ಮನ್ ವಿಮಾನಸಂಖ್ಯೆಯನ್ನು ಮೀರಿಸಲು ಸಾಧ್ಯವಿಲ್ಲೆಂದು ಕ್ರೈಜ್ ಎಂಬವರು ಹೇಳಿದ್ದಾರೆ. ಜರ್ಮನಿಯಲ್ಲಿದ್ದು ಅನುಭವ ಪಡೆದಿರುವ ಪ್ರಖ್ಯಾತ ವೈಮಾನಿಕ ಕರ್ನಲ್ ಲಿಂಡ್‌ಬರ್ಗರು, "ಅಮೇರಿಕವು ಯುದ್ಧದಲ್ಲಿ ಕೈಹಾಕಕೂಡದು. ಕೈಹಾಕಿದರೆ ಯುರೋಪಿನಲ್ಲಿ ಮಾತ್ರವಲ್ಲ, ಅಮೇರಿಕೆಯಲ್ಲಿಯೂ ನಾವು ಪ್ರಜಾಸತ್ತೆಯನ್ನು ಕಳಕೊಳ್ಳುವೆವೆ"ಂದು ಯುದ್ಧಾರಂಭದಲ್ಲೇ ಎಚ್ಚರಿಸಿದ್ದರು.

ಬಾಲಸಾಹಿತ್ಯಮಂಡಲ
ಲಿಮಿಟೆಡ್
—·— ನಮ್ಮ ಹೊಸ ಪ್ರಕಟಣೆಗಳು —·—
ಈ ಕೆಳಗಿನ ನಮ್ಮ ಹೊಸ ಪ್ರಕಟಣೆಗಳು
ಕ್ಲಾಸು ಉಪಯೋಗಕ್ಕೆ
ಮದ್ರಾಸ್ ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಮಂಜೂರಾತಿ ಪಡೆದಿದೆ.
Vide consolidated list of approved books Fort St. George Gazette Nos. 17A & 17B d/30-4-40 pages. 59, 60, 62, 68, 70, 71, 86, 87, 88, 92 & 155.

1. ಹೊಸ ಕನ್ನಡ ಪಾಠಮಾಲೆ 1, 2, 3, 4 ಮತ್ತು 5ನೇ ದರ್ಜೆಗಳಿಗೆ,
2. ನೂತನ ಬಾಲಗಣಿತ 3, 4, 5ನೇ ದರ್ಜೆಗಳಿಗೆ ಮತ್ತು VI VII ಮತ್ತು VIII ದರ್ಜೆಗಳಿಗೆ ಅಥವಾ I, II & III ಫಾರ್ಮುಗಳಿಗೆ.
3. ನೂತನ ಸಾಮಾನ್ಯ ಗಣಿತ IV ಫಾರ್ಮಿಗೆ
4. ಭಾರತದ ಇತಿಹಾಸ I, II, III, IV ಮತ್ತು V ಫಾರ್ಮುಗಳಿಗೆ,
5. " VI, VII ಮತ್ತು VIIIನೇ ದರ್ಜೆಗಳಿಗೆ.

ಶಾಲಾ ಸೌಕರ್ಯಗೋಸ್ಕರವಾಗಿ ಇದೇ ಜೂನ್ 1ರಿಂದ ನಮ್ಮ ಒಂದು ಶಾಖೆಯನ್ನು ಉಡುಪಿಯ ಶಿರಿಬೀಡಿನಲ್ಲಿ ತೆರೆದಿರುತ್ತೇವೆ.
ಹೆಚ್ಚಿನ ಮಾಹಿತಿಗೆ ಈ ಕೆಳಗಿನವರಿಗೆ ಬರೆದುಕೊಳ್ಳಿರಿ:-
Madiman Padmanabhaya,
Agent: **Balasahithya Mandal Ltd.**
Udipi Branch.

❖ ಭಯೋತ್ಪಾದಕ ಸುದ್ದಿಗಳೇ ಸದ್ಯದ ವೈರಿಗಳು ❖

ಪ್ರಕೃತದ ಯುರೋಪು ಯುದ್ಧದ ಭವಿಷ್ಯವು ಅಂಧಕಾರಮಯವಾಗಿರುವದೇನೋ ನಿಜ. ಲೋಕದ ಹೆಚ್ಚಿನ ರಾಷ್ಟ್ರಗಳು ಅದರ ದುಷ್ಪರಿಣಾಮವನ್ನು ಪ್ರತ್ಯಕ್ಷ ಅನುಭವಿಸುವ ದುರ್ಸ್ಥಿತಿಗೊಳಗಾಗಿವೆ, ಕೆಲವು ಅಪ್ರತ್ಯಕ್ಷ ಕಷ್ಟನಷ್ಟಗಳಿಗೊಳಗಾಗಿವೆ. ಅಂತೂ ಯುರೋಪನ್ನೇ ಸೋಂಕಿರುವ ಯುದ್ಧರಾಹುವಿನ ಕರಿಛಾಯೆ ಬೀಳದ ದೇಶವಾವುದೂ ಇಲ್ಲವೆಂಬುದು ನಿಸ್ಸಂದೇಹ. ಅತ್ಯಂತ ಕಡಿಮೆ ಅಪಾಯಕ್ಕೊಳಗಾಗಿರುವ ಕೆಲವೇ ದೇಶಗಳಲ್ಲಿ ನಮ್ಮ ಹಿಂದುಸ್ಥಾನವೂ ಒಂದು. ಆದರೆ ನಮ್ಮ ದುರ್ಬಲ ಮನೋವೃತ್ತಿ ಅದ್ಭುತಗಳನ್ನು ಕನವರಿಸುವದು, ಅಸಾಧ್ಯ ಘಟನೆಗಳನ್ನು ನಂಬುವದು ಹಿಂದೀಯರ ಸ್ವಭಾವವಾಗಿ ಹೋಗಿದೆ. ಈ ಅಜ್ಞಾನದ, ಕುರುಡು ನಂಬಿಕೆಯ ಫಲವಾಗಿ ನಾವು ಸುಲಭದಲ್ಲಿ ತಳಮಳಗೊಳ್ಳುವೆವು, ಸ್ಥಾನಭ್ರಷ್ಟರಾಗುವೆವು. ಇದು ಮಹಾ ಅನಾಹುತಕಾರೀ ವಿದ್ಯಮಾನ. ಹೀಗೆ ಭಯಪುಳಕಿತರಾಗುವದರಲ್ಲಿ ನಿಧಾನವಾಗಿ ಆತ್ಮಹತ್ಯೆಮಾಡಿಕೊಳ್ಳುವಷ್ಟೇ ಕೆಡುಕಿದೆ.

ಎದೆಗುಂದುವದೇ ಪ್ರಥಮ ಪರಾಜಯ

ಸದ್ಯದ ಯುದ್ಧದ ನಾನಾ ವಿಚಿತ್ರ ಸುದ್ದಿಗಳು ಜನಸಾಮಾನ್ಯರಲ್ಲಿ ಹರಡಿಹೋಗಿ ಅವರು ದಿಗ್ಭ್ರಮೆಗೊಂಡಿರುವರು. ಪರಿಣಾಮವಾಗಿ ಬ್ಯಾಂಕು ವಹಿವಾಟುಗಳು, ವ್ಯಾಪಾರ ವಿನಿಮಯಗಳಲ್ಲೆಲ್ಲಾ ಅನಗತ್ಯವಾಗ ಮತ್ತು ಸರ್ವರಿಗೂ ಅಪಾಯಕಾರವಾದ ಅವಿಶ್ವಾಸವು ತುಂಬಿಹೋಗಿದೆ. ಯುದ್ಧ ಪರಿಸ್ಥಿತಿಯು ಆತುರದಾಯಕವಾಗಿರುವದೂ ನಿಜ; ಜನರು ಎಚ್ಚರಿಕೆಯಿಂದಿರಬೇಕಾದುದೂ ಸ್ವಾಭಾವಿಕ. ಆದರೆ ವ್ಯಾಪಾರ ವಹಿವಾಟಿನಲ್ಲಾಗಲೀ, ನಿತ್ಯವ್ಯವಹಾರದಲ್ಲಾಗಲೀ ತಾಳ್ಮೆಗೆಡಿಸುವಂತಹ ಗೊಂದಲಪಡಿಸುವಂತಹ ಆಪತ್ತು ಪ್ರಕೃತ ಹಿಂದುಸ್ಥಾನಕ್ಕೊದಗಿರುವದೇ? ಇನ್ನು ಭವಿಷತ್ಕಾಲದ ಆಪತ್ತಿನ ಕುರಿತು ಮುಂಜಾಗ್ರತೆಯೆಂದಾದರೆ, ಅದು ಈ ಶಮನದಿಂದ ಪರಿಹಾರಗೊಂಡುವಂತಿದೆಯೆ? ಈ ಎರಡು ಪ್ರಶ್ನೆಗಳಿಗೂ 'ಇಲ್ಲ' ಎಂಬ ಉತ್ತರವನ್ನೇ ಕೊಡಬೇಕಾಗುವದು. ಬದಲಾಗಿ ನಿರಾಧಾರೀ ಅದ್ಭುತ ವಾರ್ತೆಗಳೇ ಸದ್ಯದ ನಮ್ಮ ವೈರಿಗಳೆನ್ನಬಹುದು. ಒಂದು ಗಂಡಾಂತರವು ದೊಡ್ಡದೆನ್ನಿಸುವದು ಅಥವಾ ಸಣ್ಣದಾಗಿ ತೋರುವದು ಅದರ ರೂಪದ ಹಿರಿತನ ಕಿರಿತನವನ್ನು ಹೊಂದಿಕೊಂಡಿಲ್ಲ-ಜನರು ಅದನ್ನು ಎದುರಿಸುವಾಗ ತೋರಿಸುವ ಎದೆಗಾರಿಕೆಯನ್ನು ಹೊಂದಿಕೊಂಡಿದೆ. ಆಪತ್ತನ್ನು ವಿರೋಧಿಸಬೇಕು ಹೊರತು ಅದಕ್ಕೊಳಗಾಗಬಾರದು. ಅದು ಸಂಭವನೀಯವೇ ಇದ್ದರೂ ಈಗಲೇ ಕೈಕಾಲುಬಿಟ್ಟಲ್ಲಿ, ಅದನ್ನು ನಾವೇ ನಮ್ಮಲ್ಲಿ ಆವಾಹನೆಮಾಡಿಕೊಂಡಂತೆ. ಭಯಗೊಂಡು ಚಡಪಡಿಸುವದು ಎಂದೆಂದಿಗೂ ಮುಂಜಾಗ್ರತೆಯೆನ್ನಿಸಲಾರದು. ದೃಷ್ಟಾಂತಕ್ಕಾಗಿ ನಾವು ಬ್ಯಾಂಕಿನಲ್ಲಿ ಹಣ ಠೇವಣಾತಿಯಿಟ್ಟಿದ್ದೇವೆ ಎಂದು ಭಾವಿಸೋಣ; ಅದರ ಅಪಹಾರದ ಗಂಡಾಂತರ ಪ್ರಾಪ್ತವಾಗಲಿದೆ ಎಂಬ ಎಚ್ಚರಿಕೆ ಕಾರಣವಿದ್ದಾಗಲೀ ಇಲ್ಲದಾಗಲೀ ನಮಗೆ ಸಿಕ್ಕಿದೊಡನೆ ನಾವದನ್ನು ಹಿಂದೆಗೆಯುವದನ್ನು ಅವಸರಪಡಬೇಕೆ? ಹಾಗೆ ಹಿಂತೆಗೆದ ಹಣಕ್ಕೆ ಬೇರೆ ಭದ್ರವಾದ ಸ್ಥಾನವೆಲ್ಲಿ? ಈ ಹಣ ಭದ್ರವೆಂದು ತೋರಿದುದು ಮರುಕ್ಷಣದಲ್ಲಿ ಅವಿಶ್ವಾಸದಾಯಕವಾಗಿ ಕಾಣಬಹುದು. ಇಂತಿದು ವಿದ್ಯಮಾನವೇ ಆಗಿದೆ. [illegible] ರದ. ಆರ್ಥಿಕ ಸ್ವಾಸ್ಥ್ಯ ಮತ್ತು ಯುದ್ಧ [illegible] ದಿಂದ ಹುಟ್ಟಿದ [illegible] ಆಪತ್ತಿಗೆ ಅನ್ಯ ಪರಿಹಾರವಿಲ್ಲ.

ಸರಕಾರದ ಮತ್ತು ಜವಾಬ್ದಾರೀ ಜನರ ಕರ್ತವ್ಯ

ಇತರ ಪ್ರಾಂತಿಕ ಸರಕಾರಗಳಂತೆ ಮದ್ರಾಸ್ ಸರಕಾರವೂ, ಜನರನ್ನು ಗೊಂದಲಪಡಿಸುವ ಸುದ್ದಿ ಹಬ್ಬಿಸುವದು ತಪ್ಪಾಗುವದೆಂದು ಇದೇ ಜೂನ್ ತಾ. 11ರ ಪ್ರಕಟನೆಯಲ್ಲಿ ಎಚ್ಚರಿಸಿರುವದು. ಆದರೆ ಯೋಗ್ಯ ಪ್ರಚಾರಕಾರ್ಯ ಕೈಗೊಳ್ಳುವದು ಇದಕ್ಕಿಂತ ಹೆಚ್ಚು ಪರಿಣಾಮಕಾರಿಯೆನ್ನಬಹುದು. ಈ ಕುರಿತು ಸರಕಾರವೂ ಜವಾಬ್ದಾರಿಯುಳ್ಳ ಜನ ಪ್ರಮುಖರೂ ಯೋಗ್ಯ ಪ್ರಚಾರ ನಡೆಸುವಂತಾಗಬೇಕು. ಗ್ರಾಮ ಉದ್ಯೋಗಸ್ಥರಿಗೆ ಅಗತ್ಯವುಳ್ಳ ಸಲಕರಣೆಗಳನ್ನೊದಗಿಸಿ ಸರಿಯಾದ ಪ್ರಚಾರ ನಡೆಸುವಂತೆ ನೋಡುವದು ಸರಕಾರದ ಕರ್ತವ್ಯವಿದೆ. ಹಾಗೆಯೆ ಮೇಲಧಿಕಾರಿಗಳೂ ಜಿಲ್ಲಾ ಸಭೆಗಳನ್ನು ನಡೆಯಿಸಿ ಸತ್ಯ ಸ್ಥಿತಿಯನ್ನು ತಿಳಿಸಬೇಕು; ಜನಪ್ರಮುಖರು ತಾವಾಗಿ ಕೈಗೊಳ್ಳಬೇಕಾದ ಕಾರ್ಯವಿದು; ಸರಕಾರವು ಗೊಂದಲ ನಿವಾರಣೆಯ ಮಟ್ಟಿಗೆ ಅವರ ಬೆಂಬಲವನ್ನು ಅಪೇಕ್ಷಿಸಿದಲ್ಲಿ ಅವರು ಸ್ವಾಭಾವಿಕವಾಗಿ ನೆರವಾಗುವರು. ಈ ಕಡೆಗೆ ಪತ್ರಿಕೆಗಳು ಪ್ರತ್ಯೇಕ ಲಕ್ಷ್ಯಕೊಡಬೇಕಾದುದು ಅಗತ್ಯ. ಸರಕಾರವು ಆ ಕುರಿತು ಅಮೂಲ್ಯ ಸೂಚನೆಗಳನ್ನು ಪತ್ರಿಕೆಗಳಿಗೆ ಕೊಡುತ್ತಾ ಬರಬೇಕು. ಈ ಎಲ್ಲಾ ಕಾರ್ಯಗಳ ಚಾಲನೆಗಾಗಿ ತಾಲೂಕಿಗೊಂದು ಸಮಿತಿಯು ರಚನೆಯಾದಲ್ಲಿ ಕಾರ್ಯವು ಸಂಘಟಿಸಿಯೇ ಸಾಗುವಂತಾಗುವದು. ಸರಕಾರದ ಜನಪ್ರಮುಖರೂ ಈ ಕುರಿತು ಕೂಡಲೇ ಕಾರ್ಯ ಕೈಗೊಳ್ಳುವದು ಅಗತ್ಯವಲ್ಲವೆ?



ಮೇಲೆ ಕೊಟ್ಟಿರುವ ಯುರೋಪಿನ ನಕಾಶೆಯಲ್ಲಿ ಹಿಟ್ಲರರು ಗೆದ್ದ ಪ್ರದೇಶವನ್ನು ಅಡ್ಡಗೀಟು ಹಾಕಿ ತೋರಿಸಲಾಗಿದೆ. ಮೆಜಿನೋ ಕೋಟೆಯನ್ನು ಹಿಂಬದಿಯಿಂದ ಮುರಿಯಲು ಜರ್ಮನ್ ಸೇನೆಯು ಮಾಡುವ ಪ್ರಯತ್ನವನ್ನು ತಡೆಗಟ್ಟಲು ಫ್ರೆಂಚ್ ಸೇನೆಯು ಪ್ರಯತ್ನಿಸುತ್ತಿರುವುದು. ಇತ್ತಲಾಗಿ ನಡೆದ ಒಪ್ಪಂದಕ್ಕೆ ವಿರೋಧವಾಗಿ ನಡೆಯಿತೆಂದು ಲಿಥುವಾನಿಯದ ಮೇಲೆ ಸೋವಿಯೆಟ್ ರಷ್ಯ ಸೇನೆ ಕಳುಹಿಸಿ ಅಲ್ಲಿಯ ಮಂತ್ರಿಮಂಡಳವನ್ನು ಮಾರ್ಪಡಿಸಿರುವುದು. ಎಸ್ಥೋನಿಯ ಮತ್ತು ಲಟೆವಿಯಗಳಿಗೂ ರಷ್ಯವು ಸೇನೆ ಕಳುಹಿಸಿರುವದೆಂದು ತಿಳಿದುಬರುತ್ತದೆ. ನಕಾಶೆಗಳಲ್ಲಿ ಈ ರಾಜ್ಯಗಳನ್ನು ಅವುಗಳ ಮೊದಲ ಅಕ್ಷರದಿಂದ ಗುರುತಿಸಲಾಗಿದೆ.

ಈ ವಾರದ ಭವಿಷ್ಯ

ತಾರೀಕು **27-6-1940**ರಿಂದ **4-7-1940**ರ ವರೆಗೆ

ಮೇಷ—ಈ ವಾರದಲ್ಲಿ ನಿಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಜಾಗರೂಕತೆವಹಿಸಬೇಕಾಗುವದು. ಜ್ವರ, ಹೊಟ್ಟೆನೋವು, ಕ್ಷೀಣ ಜ್ವರಾದಿಗಳು ದಾ ನಿಮ್ಮನ್ನು ಪೀಡಿಸಲಿವೆ. ಆರ್ಥಿಕ ಭಾಗದಲ್ಲಿ ಬಹಳ ಸುಧಾರಣೆಹೊಂದಿರುವಿರಾದರೂ ಪ್ರವಾಸ ಮತ್ತು ಆತ್ಮಾರೋಗ್ಯದ ಮಟ್ಟಿಗೆ ಹೆಚ್ಚಿನ ಹಣ ವ್ಯಯಿಸುವಿರಿ. ಅಲ್ಪರ ಸಂಗ ಅಭಿಮಾನ ಭಂಗವೆಂಬ ಗಾದೆಯಂತೆ ಸಾಮಾನ್ಯ ಜನರ ಮೈತ್ರಿಯಿಂದಾಗಿ ಕೆಲವು ಗೌರವಕ್ಕೆ ಹಾನಿಯುಂಟಾದೀತು. ಹಿತಶತ್ರುಗಳೆಂತಿರತಕ್ಕ ಜನರು ನಿಮ್ಮ ಕಾರ್ಯಗಳಿಗೆ ಅಡತಡೆಗಳನ್ನು ಮಾಡುವರಾದರೂ ಅವುಗಳನ್ನು ನೀಗಿಸಲು ಸಾಕಷ್ಟು ಶಕ್ತಿ ಯುಕ್ತಿಗಳು ನಿಮಗಿವೆ. ಗೃಹ ಸಂಪತ್ತು ಮಿತ್ರ ಬೆಂಬಲ ಇವುಗಳು ಉತ್ತಮವಿರುವದರಿಂದ ತಾ. 29-30 1 ಮತ್ತು 4 ಈ ದಿನಗಳನ್ನು ಸುಖದಿಂದ ಕಳೆಯುವಿರಿ.

ವೃಷಭ—ಸದ್ಯದ ಗ್ರಹಸ್ಥಿತಿ ರೀತ್ಯಾ ನಿಮಗೆ ಈ ಕಾಲವು ಶ್ರೇಯಸ್ಕರವಾಗಿಲ್ಲದಿದ್ದರೂ ಕಳೆದ ದಿನಗಳಿಗಿಂತ ಸ್ವಲ್ಪ ಉತ್ತಮವಾಗಿರುವದರಲ್ಲಿ ಸಂಶಯವಿಲ್ಲ. ಅಸ್ಥಿರವಾಗಿದ್ದ ವೃತ್ತಿಯನ್ನು ಸ್ಥಿರೀಕರಿಸಿ ಹಣ ಸಂಪಾದಿಸುವ ಉದ್ಯಮದಲ್ಲಿ ಪ್ರವರ್ತಿಸುವಿರಿ. ರಾಜಕೀಯ ಕಾರ್ಯಗಳಲ್ಲಾಗಲಿ, ನೌಕರಿ ವಿಚಾರದಲ್ಲಾಗಲಿ ಮನಸ್ಸಿಗೆ ಶಾಂತಿಯಿರದು. ಮನೋರೋಗದಿಂದಾಗಿ ದೇಹಾರೋಗ್ಯವೂ ಕೆಡಲಿದೆ. ಪ್ರವಾಸಕ್ಕೀ ಸಮಯವು ಹಿತಕರವಾಗಿಲ್ಲವು. ಆಕಸ್ಮಿಕ ಅನರ್ಥ ಅಪಘಾತಗಳು ಸಂಭವಿಸಲಿವೆ. ಆರ್ಥಿಕ ಬಿಕ್ಕಟ್ಟು ಬಹುವಾಗಿದ್ದರೂ ನಿತ್ಯ ಖರ್ಚಿಗೂ ಸಂಸಾರ ನಿರ್ವಹಣೆಗೂ ಬೇಕಾದಷ್ಟು ಹಣವನ್ನು ಇತರರ ಸಹಾಯದಿಂದ ಪಡೆಯುವಿರಿ. ತಾ. 27-28 2-3 ಈ ನಾಲ್ಕು ದಿನಗಳಲ್ಲಿ ಮಿತ್ರ ಸಮಾಗಮಾದಿಗಳಿಂದ ಸಂತೋಷವೂ ಧನಲಾಭವೂ ಇರುವವು.

ಮಿಥುನ—ನಿಮ್ಮ ಅದೃಷ್ಟವು ಬಲವತ್ತರವಾಗಿರುವದರಿಂದ ನೀವೀ ವಾರದಲ್ಲಿ ರಾಜಕೀಯ ವಿಚಾರದಲ್ಲಿ ಪ್ರವೇಶಿಸಬೇಡಿ. ಕೇವಲ ಧನವ್ಯಯಗಳಿಗೆ ಕಾರಣವಲ್ಲದೆ ಇಷ್ಟಾರ್ಥವು ನೆರವೇರುವಂತಿಲ್ಲ. ಉಷ್ಣ ಪಿತ್ಥ ವಿಕಾರದಿಂದ ಆರೋಗ್ಯವೂ ಕೆಡುವ ಸಂಭವವಿದೆ. ಲಾಭ, ಧನಸ್ಥಾನಗಳು ಚೆನ್ನಾಗಿರುವದರಿಂದ ಪ್ರತಿಯೊಂದು ಕೆಲಸದಲ್ಲೂ ಧನಲಾಭವು ನಿಶ್ಚಿತವಿರುವದು. ನೌಕರಿ, ವ್ಯಾಪಾರ, ಕೈಂಕರ್ಯ ಇತ್ಯಾದಿ ಭಾಗಗಳಲ್ಲಿ ಶ್ರಮಕ್ಕೆ ತಕ್ಕ ಫಲ ದೊರೆಯುವದು. ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಕಾಲ ಅನುಕೂಲವಿರುವದು. ಸಂಸಾರಸುಖವೂ ಅತೃಪ್ತಿಕರವಾಗಿರದೆನ್ನಲಡ್ಡಿಯಿಲ್ಲ. ತಾ. 2-3ರಲ್ಲಿ ಕೊಂಚ ಖರ್ಚು ಅಧಿಕವಾದೀತು.

ಕರ್ಕಾಟಕ—ಕುರುಡನ ಪಾಲಿಗೊಂದು ಚೊಕ್ಕಳಿದ್ದಂತೆ ನಿಮ್ಮ ಪರಿಸ್ಥಿತಿಯು ದಿನ ದಿನಕ್ಕೆ ಕಠಿಣವಾಗುತ್ತಾ ಬರುತ್ತಿದೆ. ವಾತಕಲ್ಪ ಕ್ಕಯಲ್ಲಿ ನೀವು ಹೇವರ ಬಾಯಿಗೆ ಸಿಲುಕುವಿರಿ. ಮನೋಗಮದ ಮಾರ್ಗಗಳು ಕಟ್ಟಿಹೋಗಿದ್ದರೂ ಖರ್ಚು ಮಾತ್ರ ಹನುಮಂತನ ಬಾಲ ಬೆಳೆದಂತೆ ಬೆಳೆಯುತ್ತಾ ಹೋಗುವದು. ನಿರೀಕ್ಷ ಮಾನಸಿಕ ವ್ಯಥೆಗಳು ಯಾವಾಗಲೂ ತಪ್ಪಿದ್ದಲ್ಲವು. ವಿರೋಧಿಗಳ ಮಾಯಾಜಾಲಕ್ಕೆ ಸಿಲುಕಿದ ನಿಮ್ಮ ಕಾರ್ಯಗಳೊಂದೂ ಫಲಿಸುವಂತಿಲ್ಲ. ಬಂಧು ಜನರು ಶಕ್ತಿಹೀನರು, ಮಿತ್ರ ಜನರು ಸಹಾಯ ಬರಲೊಲ್ಲರು. ಅಂತೂ ದೈವ ದೇವತೆಗಳಲ್ಲಿ ಶ್ರದ್ಧೆಯಿಟ್ಟ ಆಸ್ತಿಕ ಜನಕ್ಕೆ ತಾ. 29ರಿಂದ 3ರ ವರೆಗೆ ಸ್ವಲ್ಪ ಮನಸ್ಸಮಾಧಾನ ವಾದೀತು.

ಸಿಂಹ—ಸುಖದುಃಖಗಳೂ ಲಾಭನಷ್ಟಗಳೂ ಒಂದೇ ರೀತಿಯಲ್ಲಿರತಕ್ಕ ನಿಮಗೆ ಹಿಂದಿನ ಸ್ಥಿತಿಗೆ ವ್ಯತ್ಯಯ ಉಂಟಾಗಲಾರದು. ಶಕ್ತಿಯುಕ್ತಿಗಳಲ್ಲಿ ಸಮರ್ಥರಿಂದ ನಿಮಗೆ ಅಸ್ತ್ಯವೆಂಬ ಸ್ವಕಾರ್ಯವಾಗದೂ ಇರಲಾರದಾದರೂ ಶತ್ರು ಜನರ ಕಾಟದಿಂದ ಕೆಲವೊಂದು ಕಾರ್ಯಗಳಲ್ಲಿ ವಿಘ್ನವುಂಟಾಗಲಿದೆ. ಪಿತ್ಥಾಧಿಕ್ಯದಿಂದ ಕಣ್ಣು ನೋವು ಸಂಭವವುಂಟಾದೀತು. ಮಿತ್ರರ ಸಂಪೂರ್ಣ ಸಹಕಾರವು ನಿಮಗಿರುವದರಿಂದ ಕೋರ್ಟು ಕಛೇರಿಗಳ ಕಾರ್ಯಗಳಲ್ಲಿ ಇಷ್ಟಾರ್ಥಪ್ರಾಪ್ತಿಯಾಗಲಿದೆ. ಧಾರ್ಮಿಕ ಸಮಾರಂಭಗಳಲ್ಲಿ ಭಾಗಿಯಾಗುವಿರಿ. ಆಯುಷ್ಯಯೋಗಗಳು ಸಮನಾಗಿಲ್ಲವು. ಗೃಹ ಸೌಖ್ಯದಿಂದ ಮುಕ್ತರಾದ ನಿಮಗೆ ತಾ. 2-3-4 ಅತ್ಯುತ್ತಮವಾಗಿವೆ.

ಕನ್ಯಾ—ಈ ದಿನ ಕನಸುಗಳೆಲ್ಲವೂ ಇಂದು ನನಸಾಗಲಿರುವವು. ಸ್ವಯಂ ನಿಮ್ಮಲ್ಲಿ ಶಕ್ತಿಯಿಲ್ಲದಿದ್ದರೂ ದೇವರ ಸಹಾಯದಿಂದ ಕೈಗೊಂಡ ಕಾರ್ಯಗಳು ಅಚೀರದಲ್ಲೇ ಕೊನೆಗೊಂಡಾವು. ಬಹುಮೂಲದಿಂದ ಧನಪ್ರಾಪ್ತಿಯಾಗುವದರಿಂದ ಹಣದ ಅವಶ್ಯಕತೆಯಿಂದ ಒದ್ದಾಡಬೇಕಾಗಿಲ್ಲ. ಬಂಧುವಿತ್ತರ ಬೆಂಬಲವು ನಿಮಗೆ ಹೇರಳವಿರುವದು. ದೇಹ ರೋಗ್ಯವು ನೆಟ್ಟಗಿರಲಾರದು. ಪುತ್ರ ಕಳತ್ರರಿಂದ ವಿರಸವೂ ಸಂಭವಿಸುವಂತಿದೆ. ಕಂಡದ್ದನ್ನ ಕಂಡಂತೆ ಹೇಳತಕ್ಕ ನೀವು ಹಲವರ ಕೆಂಡದಂತಹ ಕೋಪಕ್ಕೆ ತುತ್ತಾಗುವಿರಿ. ಕೆಲವು ಕಡೆಗಳಲ್ಲಿ ಮಾನಮರ್ಯಾದೆಗಳನ್ನು ಹೊಂದಿದರೆ ಇತರ ಸ್ಥಳಗಳಲ್ಲಿ ಅಪಮಾನವೂ ಸಂಭವಿಸುವಂತಿದೆ. ತಾ. 27-28-4 ಈ ಮೂರು ದಿನಗಳು ಧನಲಾಭ ಮತ್ತು ಸ್ತ್ರೀಸುಖ ಕಾರಿಗಳು.

ತುಲಾ—ಈ ವಾರದಲ್ಲಿ ನಿಮಗೆ ದಟ್ಟಿನ ಬಾಗಿಗಳಲ್ಲಿ ಪ್ರವಾಸ ಸಾಧ್ಯವಾಗಲಿದೆ. ಉದ್ಯೋಗದಲ್ಲಿ ಫಲ ಪ್ರಾಪ್ತಿಯು ಇಷ್ಟದಂತೆ ದೊರೆಯಲಿದೆ. ವಿವಾದ ಗಳು ... ಕೊನೆ ಕಾಣುತ್ತಿರುವದರಿಂದ ಆರ್ಥಿಕ ಭಾಗದಲ್ಲಿ ಸುಧಾರಣೆಯಾಗುವದು. ನಿಮ್ಮ ಮನದಾಸೆಗಳು ... ಗಳಿಗೆ ಬೇರೆ ವಿರೋಧಿಗಳೂ ಕೊಡುವ ತೊಂದರೆಯನ್ನು ಬದಿಗೊತ್ತುವಿರಿ. ಪತಿ ಪತ್ನಿ ಸಕಲ ಗ್ರಹೋಪಕರಣಗಳೂ ಅವಶ್ಯವಾಗಿರುವ ಧನಕ್ಕೆ ಲಭ್ಯತೆಯಿದ್ದು ಪರಸ್ಪರ ಐಕಮತ್ಯದಿಂದಿರುವದರಿಂದ ಸಂಸಾರ ಸುಖ ತೃಪ್ತಿಕರವಾಗಿ ಲಭಿಸಲಿದೆ. ಮನೋರೋಗದಿಂದ ಸದಾ ನಿಮ್ಮನ್ನು ಪೀಡಿಸುತ್ತಿರುವದು. ತಾ. 27ರಿಂದ 1ರ ವರೆಗೂ ಇಷ್ಟಕಾರ್ಯಗಳಲ್ಲಿ ಹಲವಾರು ನೆರವೇರುವವು.

ವೃಶ್ಚಿಕ—ಸಂಪನ್ನ ಸ್ತ್ರೀಯರೋರ್ವರು ನಿಮಗೆ ಸೇವಾಗಲಿರುವರು. ಇದರಿಂದ ನಿಮ್ಮಾಕೆಯ ಮನಸ್ಸು ಕಲುಷಿತವಾಗಿ ನಿತ್ಯ ಜಗಳವುಂಟಾದೀತು. ವ್ಯಾಪಾರ ಮೂಲಕವಾಗಿಯೂ ದೇಶ ಪ್ರವಾಸದಿಂದಲೂ ನೀವು ತುಂಬಾ ದುಡಿಯುವಿರಾದರೂ ಅದರೊಳಗಿನ ಆರ್ಥಿಕ ಹಣವು ನಿಮ್ಮ ಆರೋಗ್ಯ ಭಾಗಕ್ಕೆ ಸಲ್ಲುವದು. ಗುರು ಹಿರಿಯರ ಪ್ರಕೋಪಕ್ಕೆ ಗುರಿಯಾದ ನಿಮಗೆ ಮಾನಸಿಕ ವ್ಯಥೆಯು ದಿನೇ ದಿನೇ ಹೆಚ್ಚಲಿದೆ. ಉದ್ಯೋಗದಲ್ಲಿ ಮನಸ್ಸಿಗೆ ತೃಪ್ತಿಯಿರದು. ರಾಜಕೀಯ ಕಾರ್ಯಗಳಲ್ಲಾಗಲಿ ಸಾಮಾಜಿಕ ಕಾರ್ಯಗಳಲ್ಲಾಗಲಿ ಶತ್ರು ಜನರ ಕೈವಾಡವೇ ಮೇಲಾಗಲಿದೆ. ತಾ. 29ರಿಂದ 3ರ ವರೆಗೆ ಧನಾಗಮವೂ ಸ್ತ್ರೀ ಸುಖವೂ ಯಾನ ವಾಹನ ವಸನಾದಿಗಳೂ ದೊರೆಯಲಿವೆ.

ಧನು—ಪಂಚಮದ ಶನಿಯೂ ಸಪ್ತಮದ ರವಿ ಶುಕ್ರರೂ ಅಷ್ಟಮದ ಕುಜನೂ ಇರುವಲ್ಲಿಯೂ ಸುಕೃತ ಅದೃಷ್ಟಗಳನ್ನು ತಂದೊದಗುವದರಲ್ಲಿ ಹಿಂದಾಗುವಂತಿಲ್ಲ. ಅನಾರೋಗ್ಯಕ್ಕೆ ತುತ್ತಾದ ನೀವು ಆಕಸ್ಮಿಕ ಪ್ರವಾಸಗಳಲ್ಲಿ ಭಾಗವಹಿಸಬೇಕಾಗಿ ಮತ್ತು ಮತ್ತೂ ಹಲವು ಅಡಚಣೆಗೆ ಸಿಲುಕುವಿರಿ. ಚರ್ಮರೋಗಗಳೊಂದೊಂದಾಗಿ ಕಾಣಿಸಿಕೊಳ್ಳುವವು. ಶತ್ರು ಜನರಿಂದ ದಿನದಿನಕ್ಕೂ ಧನನಷ್ಟ ಹೆಚ್ಚಾಗಲಿರುವದು. ಸ್ತ್ರೀಯರಿಂದ ಒಂದಲ್ಲೊಂದು ದಿನವಾದ ಕಷ್ಟವು ಸಂಭವಿಸಲಿದೆ. ಆದರೂ ಗುರ್ವನುಗ್ರಹಕ್ಕೆ ಪಾತ್ರರಾದ ನಿಮಗೆ ಗೃಹೋಪಕರಣಗಳೂ ಮಿತ್ರ ಬಂಧುಗಳೂ ನಿತ್ಯ ಹಿತಾಗಿ ಬೇಕಾದಷ್ಟು ಹಣವು ಕಡಿಮೆಯಾಗದು. ತಾ. 27ರಿಂದ 1ರ ವರೆಗೂ ದಿನಗಳು ಒಳ್ಳೆಯ ದಿವಸಗಳು.

ಮಕರ—ರಾತ್ರಿ ಹಗಲುಗಳಂತೆ ಸುಖದುಃಖಗಳ ಸರದಿ ಬರುವಲ್ಲಿ ಆಶ್ಚರ್ಯವಾಗದು. ... ಬೇರೆ ... ಗಳಲ್ಲದವರು ಕೀರ್ತಿಯೂ ... ತಪ್ಪಾಗದು. ಸದ್ಯದ ಗ್ರಹಮಾನರೀತ್ಯಾ ನೀವು ತುಂಬಾ ಕಷ್ಟಕ್ಕೆ ಸಿಲುಕಿರುವಿರಿ. ... ದುಡಿದರೆ ಹೆಚ್ಚು ಕಾಸು ಖರ್ಚು ಮಾಡಬೇಕಾಗುತ್ತದೆ. ... ಗಳಿಗೆ ತವರ ... ನಿಮಗೆ ಎಷ್ಟು ... ಹಣ ಬರುವದಿಲ್ಲ. ಈ ಸಮಯದಲ್ಲಿ ನಿಮ್ಮ ತಲೆಯು ಬೇರೆ ನಿಮ್ಮ ಕೈಯಿಂದಂತೆ ಇತರರಿಂದಲೂ ಸಹಾಯ ದೊರೆಯದು. ಹೆಚ್ಚಿನ ಹಟ್ಟದ ಮಕ್ಕಳೂ ಕೈಹಿಡಿದಾಕೆಯೂ ನಿಮಗೆ ವಿರೋಧವಾಗಿ ವರ್ತಿಸುವರು. ಆದರೂ ದಿನದಿನಕ್ಕೆ ಬಲದಿಂದ ತಾ. 27, 28, 4 ರಲ್ಲಿ ಕೆಲವಷ್ಟು ಕಾರ್ಯ ಜಯ, ಸ್ತ್ರೀ ಸುಖವನ್ನು ಹೊಂದಲಿರುವಿರಿ.

ಕುಂಭ—ದೇಹಾಲಸ್ಯವು ಕೊಂಚ ಅಧಿಕವಾಗತ್ತಿರುವದರಿಂದ ಯಾವ ಕಾರ್ಯದಲ್ಲೂ ಹೆಚ್ಚಿನ ಪ್ರಯತ್ನಿಸದ ದಿವಸಗಳಿವು. ಆದರೂ ದ ದಿಕ್ಕಿಂತ ಹೆಚ್ಚಿನ ಪ್ರಯೋಜನವನ್ನು ನೀವು ಹೊಂದುವಿರಿ. ವಿರೋಧಿಗಳ ಸಮ್ಮತದ ಸಂಧಿಪ್ರಸ್ತಾಪಕ್ಕೆ ಬರುವರು. ಉದ್ಯೋಗದಲ್ಲಿ ಅಭಿವೃದ್ಧಿಯ ಚಿಹ್ನೆಗಳು ಕಂಡುಬರುವವು. ಆರ್ಥಿಕಭಾಗವು ಹೆಚ್ಚಿನ ಸುಧಾರಣೆಯಾಗುವದರಿಂದ ಯಾವಾಗಲೂ ಖರ್ಚಿಗೆ ಕೊರತೆಯಾಗದು. ವ್ಯಾಪಾರ ವ್ಯವಹಾರಗಳು ಸ್ಥಿತಿಯು ಅತ್ಯುತ್ತಮ ರೀತಿಗೆ ಬರಲಿದೆ. ಸಾಂಸಾರಿಕ ಉಪಕರಣಗಳಿಗೇನೂ ಕೊರತೆಯಾಗದು. ತಾ. 29, 30, 1, ಈ ಮೂರು ದಿನಗಳಲ್ಲಿ ..., ವಿಶೇಷಗಳ ಲಾಭ, ಕಾರ್ಯ ಜಯ, ಸ್ತ್ರೀ ಸುಖ ದೊರೆಯುವವು.

ಮೀನ—ಪ್ರಾರಂಭ ಕಾರ್ಯಕ್ಕೆ ಮುಂದಾಗಿ ನೀವು ಹೋಗಬೇಡಿ. ಅಂದ ನಿಮ್ಮ ಅದೃಷ್ಟವು ಸಾಕಷ್ಟು ಉತ್ತಮವಿಲ್ಲದಿರುವದರಿಂದ, 'ವಿ ಪರೀತ ಬುದ್ಧಿಃ' ಎಂದರೆ ಇದರಿಂದಾಗಿ ಹೋಲುವರು. ಅಪಾಯಕ್ಕೆ ಸಿಲುಕುವರು. ಎಂದಿನ ಪಾಪದಿಂದ ನಿಮ್ಮನ್ನು ನೀವೇ ಉದ್ಧರಿಸಿಕೊಳ್ಳಬೇಕಾಗುವದು. ರಾಜಕೀಯರೂ ಕೂಡ ಈ ವಾರದಲ್ಲಿ ನಿಮಗೆ ಸಾಕೀಯ ರಾಜೀ ಆಗುವರು. ಸಂಸಾರ ಮಿತ್ರರಿಂದ ಅಸಹಕಾರವೂ ಮನಸ್ಸಿನಲ್ಲಿ ಕಲಹ ಕಷ್ಟವು. ನಿತ್ಯದಂತೆ ಅಧಿಕವಾಗಿ ಖರ್ಚು ಪ್ರಾಪ್ತವಾಗುವದರಿಂದ ಹಣದ ಅಡಚಣೆಯು ಪ್ರಾಪ್ತವಾದೀತು. ಆದರೂ ತಾ. 27, 28, 2, 3, ಈ ನಾಲ್ಕು ದಿನಗಳಲ್ಲಿ ಶಕ್ತಿಗಿಂತ ಅಧಿಕವಾಗಿ ದುಡಿಯುವಿರಿ. ಯೋಗ್ಯ ವಸ್ತುಗಳು ಪ್ರಯೋಜನ ಹೊಂದುವಿರಿ.

---

1 ಘಂಟೆಯಲ್ಲಿ ನವ ಯೌವನ!

ಕಾಮಶಕ್ತಿಯನ್ನು ಹೆಚ್ಚಿಸಿ ವೀರ್ಯ ಸ್ತಂಭನ ಮಾಡುವ

ರಮಣವಿಲಾಸಿನಿ

ಸ್ತ್ರೀಯರಿಗೂ ಪುರುಷರಿಗೂ ... ರಿಗೂ ನವಯೌವನವನ್ನಿತ್ತು ರತಿ ಸುಖದಲ್ಲಿ ಪರಮಾನಂದವನ್ನು ಕೊಡುತ್ತದೆ.

ಡಬ್ಬಿ 1ರ ಕ್ರಯ ರೂ. 1-

ಮದನ ಮಂಜರಿ ಫಾರ್ಮಸಿ, 184, ಜೈನಾಬಜಾರ್, ಮದ್ರಾಸ್

ಇನ್ಕಮ್ ಟ್ಯಾಕ್ಸ್ ಮತ್ತು ಹೊಗೆಸೊಪ್ಪಿನ ಅಬಕಾರಿ ವಿಕ್ರಯ ಟ್ಯಾಕ್ಸ್‌ಗಳು.

ಇನ್ಕಮ್ ಟ್ಯಾಕ್ಸಿನ ಕಾಯದೆಯಲ್ಲಿ 1-4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸದಾದ ವಿಕ್ರಯ ಟ್ಯಾಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಕ್ರಮವಾದ ಜಮಾ ಖರ್ಚಿನ ಲೆಕ್ಕವಿದ್ದರೂ ಸಾಲದು. ಆದರಿಂದ ತಯಾರಿಸುವ ಸಾರಾಂಶದ ನಿದರ್ಶನ ಕೆಲವೇ ನಿಮಿಷಗಳಲ್ಲಿ ಟ್ಯಾಕ್ಸಿನ ಆಫೀಸರಿಗೆ ಒಪ್ಪಿಗೆಯಾಗಬೇಕು. ಅಂಥಾ ಲೆಕ್ಕಗಳ ಸಹಾಯದಲ್ಲಿಯೇ ಎಲ್ಲಾ ಬೇರೆ ವಿಧವಾದ ತಗಾದೆಗಳನ್ನು ಹೋಗಲಾಡಿಸಬೇಕು. ಹೆಚ್ಚಿನ ಟ್ಯಾಕ್ಸುಗಳನ್ನು ಕೊಡಬೇಕಾಗುವದರಿಂದ ತಪ್ಪಿಸುವ ಸಂಭವವಿದೆ. ಅಂಥವರಿಗೆ ಸಹಸ್ಥಿತಿಯನ್ನು ಸಮಾಧಾನವಾಗಿ ತಿಳಿದುಕೊಂಡಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಸರಕಾರದ ಗಮನಕ್ಕೆ ಬಾರದ ಕಾರಣ ಹೆಚ್ಚು ಟ್ಯಾಕ್ಸು ಕೊಡಬೇಕಾಗುವದು ಸಂದರ್ಭಾನುಸಾರ ಟ್ಯಾಕ್ಸು ಕೊಡಬೇಕಿಲ್ಲದೆ ಇರುವದೂ ತೀರ್ಮಾನವಾಗುವದು. "ಅಪೀಲು" ಕಟ್ಟ ಬೇಕಾಗಿ ಹೋಗಿದ್ದರೂ ಫಲವಾಗಲಿಲ್ಲವೆಂದು ಹಾತಾಶರಾದವರು 15 ದಿವಸಗಳ ಮುಂಚಿತವಾಗಿಯೂ ಕೆಳಗಿನ ವಿಳಾಸಕ್ಕೆ ಸಂದರ್ಶನವನ್ನು ಹೊಂದಬಹುದು.

ಎಸ್. ಎಸ್. ಪ್ರಭು ಬಿ.ಕಾಂ.,

ಇನ್ಕಮ್ ಟ್ಯಾಕ್ಸ್ ಪ್ರಾಕ್ಟೀಶನರ್,

ಶ್ರೀನಿವಾಸ ಬಿಲ್ಡಿಂಗ್,

ಹಂಪನಕಟ್ಟೆ, ಮಂಗಳೂರು.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ

"ಗೊನೊಕಿಲರ್" (ರಿಜಿಸ್ಟರ್ಡ್)

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ
ಪಡಕೊಳ್ಳುವ ಮೊದಲು ಕೋಳಿ
ಗುರುತಿನ ಸರಿಯಾದ ಗುರುತನ್ನೂ
ಗೊನೊಕಿಲರ್ ಹೆಸರನ್ನೂ ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವದು, ವೀರ್ಯಸ್ರಾವ, ಮೂತ್ರ ಪದೇಪದೇ ಹೋಗುವದು ಮತ್ತು ಉರಿವು ಬೀಳುವದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗುವ ವೀರ್ಯಸ್ರಾವ, 'ಗೊನೊ-ರೊಹಿಯ' ಎಂಬ ವಿಷಜ್ವರ, ಅದೇ ಮೇರೆಗೆ ಸ್ತ್ರೀಯರಿಗಾಗುವ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವವು.

ಬೆಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಚಾರ್ಜು 0-6-0 ಪ್ರತ್ಯೇಕ. ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer DR. D. N. JASANI, Vitalbhai Patel Road, BOMBAY 4

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟಿದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ

Kanara Printing Works,
Hampankatte, **MANGALORE**

ಮೂಲವ್ಯಾಧಿ

ಸಾಧು ಪ್ರೊಬ್ಬನ ಸಿದ್ಧಿಯಾಗಿರುವ ವಿಚಿತ್ರ ಹಾಗೂ **ಅಪೂರ್ವ ಔಷಧಿ.**

ಅರ್ಶಮಾರಾ (ರಿಜಿಸ್ಟರ್ಡ್)

ರಕ್ತಸುರಿಯುವ ಅಥವಾ ಒಣಗಿರುವ ಹಳೆಯ ಅಥವಾ ಹೊಸ ತಾದ ಒಳಗಿನ ಅಥವಾ ಹೊರಗಿನ ಯಾವತ್ತೂ ... "ಅರ್ಶಮಾರಾ"ವನ್ನು ಒಂದೊಮ್ಮೆ ಹಚ್ಚಿದ ಕೂಡಲೆ ಅದ್ಭುತ ... ನೋವು, ತುರಿಕೆ, ಉರಿಯುವಿಕೆ, ಕೀವು, ರಕ್ತಸ್ರಾವ ... ಕೂಡಲೆ ನಿಲ್ಲಿಸಲ್ಪಡುವುದು. ಕೇವಲ 3 ದಿನ ಹಚ್ಚಿದರೆ ಯಾವ ತರದ ಔಷಧಿಗೂ ಇಲ್ಲದ ಮೂಲವ್ಯಾಧಿ ಅಥವಾ ಮೊಳೆಗಳನ್ನು ಗುಣಪಡಿಸುತ್ತದೆ. ಈ ಔಷಧಿಯಿಂದ ಸಾವಿರಾರು ರೋಗಿಗಳು ಗುಣಹೊಂದಿ ಇತರರಿಗೆ ಅದನ್ನು ಶಿಫಾರಸು ಮಾಡುತ್ತಿದ್ದಾರೆ. ಗುಣವಾಗದಿದ್ದಲ್ಲಿ ಹಣ ವಾಪಸು. ಬೆಲೆ ರೂ. 2-0 0

ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4.
AROGYA SADAN, DURGADEVI ST BOMBAY 4

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿ ಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುವು ಇದು ಮಧುರವಾಗಿದೆ ಅರಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿನಿಮ್ಮ ಕೈಗಸೇರುವುದು ಸೀಸೆ1ಕ್ಕೆ12ಆಣೆ, ಟ.ಖ.4ಆಣೆ.

ಎನ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟರು.- **ನವಭಾರತ ಬುಕ್‌ಡಿಪೋ, ಉಡುಪಿ**

THE MOOLKY BANK, LTD.,
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ. ಭಂಗಾರ ವ ಸರಕಿನ ಈಡಿನ ಮೇಲೆ ಸೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R Punja, *President & Manager,* — **ಯಂ. ಆರ್. ಪೂಂಜ,** ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!

K. R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಪಿಯೊಂದನ್ನು ಗವರ್ನ್‌ಮೆಂಟ್ ಕಾಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕಾಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

SALE! SALE!! SALE!!!



ಮುಂಚಿನ ಕ್ರಯ ರೂ 7-8-0
ಈಗ ಅರ್ಧ ಕ್ರಯ ರೂ. **3-12-0**

Swiss Lever Wrist Watch No. 44

ಭಂಗಾರದ ಲಿವರ್ ರಿಸ್ಟ್‌ವಾಚ್ ನಂ. 44

ಈ ನವ ನವ ಗಡಿಯಾರಗಳು ವಿಲಾಯತಿಯಲ್ಲಿ ಬಹು ಬಲಿಷ್ಠ ಸಾಮಾನುಗಳಿಂದ ತಯಾರಿಸಲ್ಪಟ್ಟು ನೋಡ ಚೊಕ್ಕ, ಸ್ತ್ರೀ ಪುರುಷರ ಕೈಯಲ್ಲಿ ಕಟ್ಟಿಕೊಳ್ಳುವಂತಹ್ದು ಬಹು ಆನಂದವಾಗಿದೆ ಭಂಗಾರದ ಗಡಿಯಾರಗಳನ್ನು ... ಸುಲಭ ಕ್ರಯಕ್ಕೆ ಕೊಡುತ್ತೇವೆ ಇಂಡಿಯಾ ದೇಶದಲ್ಲಿ ಎಷ್ಟೋ ಗಡಿಯಾರಗಳು ... ಗ್ಯಾರಂಟಿ 5 ವರುಷ. ಕ್ರಯ ಗಿಕ್ಕೆ 3-0-0.

ವೆಸ್ಟರ್ನ್ ಸ್ವಿಸ್ ವಾಚ್ ಕಂಪೆನಿ, ಪೋಸ್ಟ್ ಬಾಕ್ಸ್ ನಂ. 68, ಮದರಾಸ್

Western Swiss Watch Co., Direct Importers,
Post Box No 68, MADRAS.

ನಿಮ್ಮ ಮನೆಯಲ್ಲಿ ಸದಾ ಆನಂದದ ಜ್ಯೋತಿಯು ಬೆಳಬೆಳಗುತ್ತಿರಬೇಕೇ? ಹಾಗಿದ್ದರೆ--- ---

ನಂದಾದೀಪ

ಎಂಬ ಉತ್ಕೃಷ್ಟ ಚಿಕ್ಕಕತೆಗಳ ಪ್ರತಿಯೊಂದನ್ನಿಟ್ಟುಕೊಳ್ಳಿ.

ಕರ್ನಾಟಕದ ಪ್ರಸಿದ್ಧ ಕತೆಗಾರರಲ್ಲೊಬ್ಬರಾದ ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರು ಬರೆದ ಮನೋಹರವಾದ ಹನ್ನೊಂದು ಕತೆಗಳ ಸಂಗ್ರಹ.

ಪ್ರತಿಯೊಂದು ಕತೆಯೂ ನಿಮ್ಮ ಹೃದಯದಲ್ಲೊಂದು ಬಗೆಯ ಹೊಸ ಬೆಳಕನ್ನು ಬೆಳಗಿಸುವುದು.

ಬೆಲೆ. 0-8-0 ಟಪ್ಪಾಲು ದ್ವಾರ: 0-9-0

ಕಿರಿಯರ ಪ್ರಪಂಚ, ಉಡುಪಿ.

(0-9-0 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು)

ಸದ್ವೈದ್ಯಶಾಲಾ ನಂಜನಗೂಡು ಇವರ

"ಸುಬಲಾ"

ಪಿತ್ತ ಸಂಕಟ, ಮಲಬದ್ಧತೆ ಇವುಗಳನ್ನು ಹೋಗಲಾಡಿಸಿ, ರಕ್ತ ಶುದ್ಧಿ ಪಡಿಸಿ, ಶರೀರಕ್ಕೆ ಬಲವನ್ನು ಕೊಡುತ್ತದೆ ಬಹಳ ರುಚಿಯಾಗಿರುತ್ತದೆ

ಬ್ರಾಂಚ್.--ರಥಬೀದಿ ಮಂಗಳೂರು

ಸೌಕರ್ಯ

ಆರ್ಥಿಕ ಮುಗ್ಗಟ್ಟಿನ ಈ ಮಹಾಕಾಲದಲ್ಲಿ ಕಡಿಮೆ ವೆಚ್ಚದಲ್ಲಿ ಹೆಚ್ಚು ಸೌಕರ್ಯವನ್ನು ಯಾರು ತಾನ ಅಪೇಕ್ಷಿಸುವುದಿಲ್ಲ? ಅದನ್ನು ಸದಾ ಒದಗಿಸಿಕೊಡುವುದೇ

ರಾಮಾ ರೆಸ್ಟೋರೆಂಟಿನ ಧ್ಯೇಯವಾಗಿದೆ.

ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳು !
ವಿದ್ಯಾರ್ಥಿಗಳಿಗೆ ರಿಯಾಯತಿ ದರಗಳು !!

ಒಮ್ಮೆ ಸಂದರ್ಶಿಸಿರಿ! ತೃಪ್ತಿ ಪಡೆಯಿರಿ!!

Sri Rama Restaurant
Kashi Mutt Building,
UDIPI

ಶ್ರೀರಾಮಾ ರೆಸ್ಟೋರೆಂಟ್
ಕಾಶಿ ಮಠದ ಕಟ್ಟೋಣ, ಉಡುಪಿ

ವ್ಯಾಲಕ — ಎಚ್. ರಾಮಚಂದ್ರ ನಾಯಕ್.

ಉಡುಪಿಗೆ ಬಂದಾಗ



ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಲಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ

PRINTED BY S S KARANTH AT THE THULUNAD PRESS, UDIPI. AND PUBLISHED BY K H SHETTY AT "NAVAYUGA" OFFICE, UDIPI, S. INDIA.

tered No. M 3618 4-7-1940.

ನವಯುಗ

NAVAYUGA

The Canara Industrial & Banking Syndicate Ltd.

Estd] HEAD OFFICE UDIPI (S INDIA) [1925

Member: RESERVE BANK OF INDIA,
BANKERS' CLEARING HOUSE, BOMBAY

Five years' Cash Certificates are issued at the price of
Rs 8/-, Rs 80/- Rs 400/- & Rs 800 -
repayable on maturity at
Rs 10/-, Rs 100/, Rs 500/- & Rs 1000 respectively

You can cash the Certificates at any time before maturity.

An investment which is liquid and very remunerative
FURTHER PARTICULARS ON APPLICATION
GENERAL BANKING BUSINESS TRANSACTED.

ಝಂಡು ಮಲೇರಿಯಾ ಮಿಕ್ಸ್ಚರ್

ಮಲೇರಿಯಾ, ವಿಷಮ ಜ್ವರಗಳಿಂದುಂಟಾಗುವ ಎಲ್ಲಾ ತರದ
ಕಠಿಣ ಜ್ವರಗಳಿಗೆ
ಖಾತ್ರಿಯಾದ ಸಿದ್ಧೌಷಧ
ಕ್ರಯ: ಆಣೆ 0—14—0 ಮಾತ್ರ.
ಸ್ಥಳೀಯ ಏಜಂಟರು — ಪಿ. ಎ. ಪೈ ಬ್ರದರ್ಸ್.
ಕಾರ್ಕಳದ ಏಜಂಟರು — ವಿ. ವಿ. ಶೆಣೈ, ಕಮಿಸ್ಟ್ಸ್.
ಮಂಗಳೂರಿಗೂ ದಕ್ಷಿಣ ಕನ್ನಡ ಜಿಲ್ಲೆಯ ಇತರ.
ಮುಖ್ಯ ಸ್ಥಳಗಳಿಗೂ ಏಜಂಟರು ಬೇಕಾಗಿದ್ದಾರೆ.
ಶರ್ತಗಳಿಗೂ ಏಜನ್ಸಿಗಳಿಗೂ ಮುಖ್ಯ ಏಜಂಟರಿಗೆ ಬರೆಯಿರಿ —
ದಾಮೋದರ್ ಎಂಡ್ ಕೊ,
ಮುಖ್ಯ ಏಜಂಟರು,
ZANDU 78 ಚೀನಾ ಬಜಾರ್ ರೋಡ್, ಜಿ. ಟಿ. ಮದರಾಸು
DAMODER & CO.,
78 China Bazaar Road, G T MADRAS.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —
ಇಷ್ಟರ ವರೆಗೆ ನಮ್ಮ
ವಿಲಿಯಮ್ಸ್ ಎಂಡ್ ಕೋ ರವರ
ರಾಜ ಮಾರ್ಕ್ ರಜಿಸ್ಟರ್ಡ್ ಟ್ರೇಡ್‌ಮಾರ್ಕಿನಲ್ಲಿ ರಿಂಗ್‌ವರ್ಮ್
ಮುಲಾಮು ಈ ತನಕ ವ್ಯಾಪಾರ ಮಾಡಲಾಗಿದೆ
ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.
ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತಾ.

ಮುಚ್ಚಿದರೆ ಮುಗುಳು ! ಬಿಚ್ಚಿದರೆ ಅರಳು !!
ಶ್ರೀ. ಕೆ. ಹೊನ್ನಯ್ಯ ಶೆಟ್ಟರಿಂದ ಪೋಣಿಸಲ್ಪಟ್ಟ
ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಮಾಲೆಯು

ಮುಗುಳು

ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಅತ್ಯುಪಯುಕ್ತವಾದ ಸಚಿತ್ರ ಪದ್ಯ ಪುಸ್ತಕ.
(ಮದ್ರಾಸ್, ಬೊಂಬಾಯಿ, ಮೈಸೂರು ಟೆಕ್ಸ್ಟ್ ಬುಕ್ ಕಮಿಟಿಗಳಿಂದ ಮಂಜೂರಾಗಿದೆ
ಅಭಿನಯಕ್ಕೆ, ನರ್ತನಕ್ಕೆ ಕೋಲಾಟಕ್ಕೆ, ಎಲ್ಲಕ್ಕೂ ಅತ್ಯನುಕೂಲವಾದ,
ಮಕ್ಕಳ ವಯೋಗುಣಕ್ಕನುಗುಣವಾದ ಪದ್ಯಗಳಿಂದೊಡಗೂಡಿದೆ.
ಅಧ್ಯಾಪಕರೆಲ್ಲಾ ಇದನ್ನು ಮಕ್ಕಳ ಕೈಗೆ ಕೊಟ್ಟು, ಉಲಿದಾಡಿಸಿ,
ಹುರಿದುಂಬಿಸಬೇಕಾಗಿ ಪ್ರಾರ್ಥನೆ.
ಪ್ರತಿಗಳು ಎಲ್ಲೆಲ್ಲಿಯೂ ದೊರೆಯುತ್ತವೆ] [ಬೆಲೆ: ೦—೩—೬

ಕರ್ನಾಟಕದ ಪ್ರಸಿದ್ಧ ಕವಿಗಳ ಆಧುನಿಕ ಕವಿತಾ ಸಂಗ್ರಹ

ಕಾವ್ಯ ಸಾಮ್ರಾಜ್ಯ

ಕಿರಿಯರ ಪ್ರಪಂಚದ ಪ್ರಕಟಣೆ—ಬೆಲೆ ಹನ್ನೆರಡಾಣೆ.
ವಿಕ್ರಯಾಧಿಕಾರಿಗಳ —ನವಭಾರತ ಪುಸ್ತಕ ಭಂಡಾರ, ಉಡುಪಿ

ವ್ಯಭಿಚಾರಿಣಿ ಯಾರು ?

ಕ್ರಾಂತಿಕಾರಕ ನವೀನ ಸಾಮಾಜಿಕ ನಾಟಕ
ಬೆಲೆ ೦—೧೦—೦.
ವಿಕ್ರಯಾಧಿಕಾರಿಗಳ — Navabharat Book Depot, Udipi

THE VIJAYA BANK LTD.,

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ— ಹರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಆರಂಭಿಸಿ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಂಬಂಧವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರೀಕ್ಷಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ ಅಮೋಘವಾದ ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಆ ಔಷಧದ ೨ ಬಾಟ್ಲಿಗಳು ದೊಡ್ಡ ಕರಿವೆ. ೪೦ ದಿವಸಗಳಿಗೆ ಬರುವವು. ಆಂದರೆ, ಕೇವಲ ೪ ರೂಪಾಯಿಗಳೇ ಒಂದು ಬಾಟ್ಲಿಯ ಕ್ರಯ. ಸಾಕಾಗ ವಿವರ ಪಡೆಯಲು ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಮ್. ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ. ೨ ಕೊಡಿಯಾಲಬೈಲು, ದ.ಕ.

ಸ್ಥಾಪನೆ ಕ್ರೌನ್ ರಬ್ಬರ್ ಸ್ಟಾಂಪು ಕಂಪೆನಿ 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳು, ಸ್ಟೆನ್ಸಿಲ್ ಪ್ಲೇಟು, ಪಿತ್ತಳೆ ಮೊಹರು, ಮೇಣದ ಸೀಲು ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co , 18 Balmat Road, MANGALORE

Approved firm by the Govt of Mysore. Certified by the Agent of the Govt of India in Ceylon

ನಾಟಕದಲ್ಲಿ ಕಾಲದ ಸ್ಫೂರ್ತಿಯು ಮೂರ್ತಿವೆತ್ತಾಗಿ ತೋರಬೇಕು.
ಆ ಸ್ಫೂರ್ತಿಯಿಂದ ವಾಚಕರೂ ಪ್ರೇಕ್ಷಕರೂ ಜಾಗೃತರಾಗಬೇಕು

ಅಂತಹ ನಾಟಕವೇ

ದೇಶಭಕ್ತ

ಕಾಂಗ್ರೆಸ್ ಹೋರಾಟದ ತ್ಯಾಗ ಸಂಕಷ್ಟಗಳನ್ನೂ ಅವನ್ನು ತಡೆಗಟ್ಟಲು ಅಧಿಕಾರಿ ವರ್ಗವು ಹೂಡುವ ಕುತಂತ್ರಗಳನ್ನೂ ಕಣ್ಣಮುಂದಿರಿಸಿ ಸಮತಾವಾದವನ್ನು ಪ್ರತಿಪಾದಿಸಿ, ನವಜಾಗೃತಿಯನ್ನು ಮಾಡುವ ನವೀನ ಸಾಮಾಜಿಕ ನಾಟಕ.

ವಿಶೇಷವಾಗಿ ಆಶ್ರಿತ ಸಂಸ್ಥಾನಗಳಲ್ಲಿ ಇಂದು ನಡೆಯುತ್ತಿರುವ ಸ್ವಾತಂತ್ರ್ಯ ಸಂಗ್ರಾಮದ ನೈಜ ಚಿತ್ರ. ಪ್ರತಿಯೊಬ್ಬರೂ ಓದತಕ್ಕ ನವೀನ ಪುಸ್ತಕ.

ಲೇಖಕರು ಕ. ಶ. ಶೈ. ಬೆಲೆ ೦—೧೦—೦

11 ಆಣೆಯ ಸ್ಟ್ಯಾಂಪು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಲಾಗುವುದು.

ನವಯುಗ ಆಫೀಸು, ಉಡುಪಿ.

ವಿದ್ಯಾರ್ಥಿಗಳಿಗೆ ಅಪೂರ್ವ ಸಂದರ್ಭ!

ಉತ್ತಮ ವಸ್ತುಗಳು! ನಾಜೂಕು ಕೆಲಸ! ಕಡಿಮೆ ಕ್ರಯ!

ಎಲಿಮೆಂಟರಿ ಸ್ಕೂಲ್, ಹೈಸ್ಕೂಲ್, ಟ್ರೈನಿಂಗ್ ಸ್ಕೂಲ್, ಕೊನ್ವೆಂಟ್ ಮೊದಲಾದ ಎಲ್ಲಾ ಶಾಲೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಬೇಕಾದ ಎಲ್ಲಾ ವಿಧದ ಪಾಠ ಪುಸ್ತಕಗಳೂ, ಲೇಖನ ಪುಸ್ತಕಗಳೂ, ಸ್ಟೇಶನರಿ ಸಾಮಾನುಗಳೂ ಸುಲಭ ಬೆಲೆಗೆ ದೊರೆಯುತ್ತವೆ.

ಶಾಲೋಪಯೋಗೀ ಸಾಹಿತ್ಯಗಳೆಲ್ಲಾ ಕಡಿಮೆ ದರದಲ್ಲಿ ನಮ್ಮಲ್ಲಿ ಸದಾ ತಯಾರಿವೆ!

ನಿಮಗೆ ಏನು ಬೇಕಾದರೂ ಮೊದಲು ನಮ್ಮೊಡನೆ ವಿಚಾರಿಸಿರಿ.

ನವಭಾರತ ಪುಸ್ತಕ ಭಂಡಾರ

ಇಗರ್ಜಿ ಎದುರು — — — **ಉಡುಪಿ, ದ. ಕ.**

For all your school requirements:

Navabharat Book Depot, Udipi.

The Pangal Nayak Bank Ltd.,

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(೧೯೨೦ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿತು.)

ಮುಖ್ಯ ಕಾರ್ಯಾಲಯ.-ಕೋಟ್ಯಾಬಳಿ, ಉಡುಪಿ, ದ. ಕನ್ನಡ

ಶಾಖೆಗಳು—ಉಡುಪಿ, ಮಂಗಳೂರು, ಕಟಪಾಡಿ ಮತ್ತು ಕಾಂಞಂಗಾಡ

ತೆತ್ತಮೂಲಧನ—ರೂ. 1,82,100/- ಕ್ಷೇಮನಿಧಿಗಳು ರೂ. 1,92,000/-

ಚಿನ್ನಾಭರಣಗಳ, ಮಾರಾಟಕ್ಕೆ ಅನುಕೂಲವಾಗಬಹುದಾದ ಬಾಳುವ ದವಸಗಳ, ಸಮಾಧಾನಕರವಾದ ವ್ಯಾಪಾರದ ಬಿಲ್, ಹುಂಡಿ ಇತ್ಯಾದಿಗಳ ಭದ್ರತೆಯ ಮೇಲೆ ಸುಲಭ ದರಗಳಲ್ಲಿ ಚಿಕ್ಕ ವ ದೊಡ್ಡ ಸಾಲಗಳು ಕೊಡಲ್ಪಡುತ್ತವೆ.

ದೀರ್ಘ ವ ಅಲ್ಪ ಅವಧಿಯ ನಿರಖು ಠೇವಣಾತಿಗಳು ಶ್ರೀಮಂತರಿಗೂ ಇತರರಿಗೂ ಏಕರೀತಿ ತೃಪ್ತಿಕರವಾದ ಶರ್ತಗಳಲ್ಲಿ ಅಂಗೀಕರಿಸಲ್ಪಡುತ್ತವೆ.

ಬೇಂಕಿನ ಅತ್ಯಾಧುನಿಕ ವಿಧದ ಸಮಸ್ತ ವಹಿವಾಟುಗಳೂ ನಡೆಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ದಯವಿಟ್ಟು ಮೊಕ್ತಾ ವ ಪತ್ರದ್ವಾರ ವಿಚಾರಿಸಿರಿ.

Your anxiety—

in finding a sound and progressive Life Office both to insure or to represent will end on consultation with:-

Branch Secretary

The New Guardian of India Life Insurance Co. Ltd., Madras.

Mangalore Branch

Transport & Car Owners



ARE SPECIALLY INVITED TO VISIT

OUR SHOW ROOM *for economical transport maintenance.*

CANARA AUTOMOBILES - - - - - MANGALORE

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಅವರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ESTD. 1921 ಸ್ಥಾಪನೆ

FOUNDER:
SRI. A. B. SHETTY, M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

NAVAYUGA
ನವಯುಗ

ಚಂದಾ ವಿವರ:
1 ವರ್ಷಕ್ಕೆ - ರೂ. 3—4—0
6 ತಿಂಗಳಿಗೆ - ರೂ. 1-12—0

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹ ಸಂಪಾದಕ:
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೪೩

ಉಡುಪಿ, ಗುರುವಾರ, ೪—೭—೧೯೪೦.
UDIPI, THURSDAY, 4-7-1940.

VOL. 19
No. 43

ವೈಸರಾಯಿಗಳಿಗೆ ವಿಶೇಷ ಅಧಿಕಾರ

ಇಂಗ್ಲಾಂಡು ಭೀಕರ ಹೋರಾಟಕ್ಕಿಳಿಯಬೇಕಾಗುವ ಕಾಲ ದೂರದಲ್ಲಿಲ್ಲ; ಭೂಮಧ್ಯ ಸಮುದ್ರವು ಹೋರಾಟದ ಕ್ಷೇತ್ರವಾಗಿದೆ. ಇದನ್ನೆಲ್ಲಾ ಗಮನಿಸಿ ಭಾರತ ಮಂತ್ರಿ ಮಿ. ಅಮೆರಿಯವರು ಅವಸರದ ಸಂದರ್ಭದಲ್ಲಿ ಹಿಂದುಸ್ಥಾನದ ವೈಸರಾಯರಿಗೂ ಬರ್ಮದ ಗವರ್ನರರಿಗೂ ವಿಶೇಷಾಧಿಕಾರ ಕೊಡುವ ಮಸೂದೆಯೊಂದನ್ನು ಪಾರ್ಲಿಮೆಂಟಿನಲ್ಲಿ ತಂದರು. ಇಂಗ್ಲೆಂಡು-ಭಾರತಗಳೊಳಗಿನ ವ್ಯವಹಾರ ಸಂಬಂಧವು ಕಡಿದುಹೋಗುವ ದುಷ್ಕಾಲವೊದಗಿದಾಗ ಭಾರತದಲ್ಲಿ ವೈಸರಾಯರು ಸರ್ವಾಧಿಕಾರಹೊಂದುವರು. ಅಂತೆಯೇ ಭಾರತದಲ್ಲಿರುವ ಆಂಗ್ಲೇಯರನ್ನು ಕಡ್ಡಾಯವಾಗಿ ಸೇನೆಗೆ ಸೇರಿಸಿಕೊಳ್ಳುವ ಅಧಿಕಾರವನ್ನು ವೈಸರಾಯರ ಅಪೇಕ್ಷೆಯಂತೆ ಅವರಿಗೆ ಕೊಡಲಾಗಿದೆ. ಭಾರತದ ರಾಜ್ಯ ಘಟನೆಯಲ್ಲಿ ಇದರಿಂದ ಯಾವ ವ್ಯತ್ಯಾಸವೂ ಆಗುವದಿಲ್ಲ. ಮಿ. ಅಮೆರಿಯವರು ಪಾರ್ಲಿಮೆಂಟಿನಲ್ಲಿ ಈ ಕುರಿತು ಭಾಷಣಮಾಡುತ್ತಾ "ಇದು ಕಷ್ಟಕಾಲಕ್ಕಾಗಿ ಮುಂದೆ ಬಂದ ತಾತ್ಕಾಲಿಕ ಮಸೂದೆಯೆಂದೂ, ಭಾರತದ ಆಂಗ್ಲೇಯರು ತಮ್ಮ ಹೆಸರನ್ನು ರಿಜಿಸ್ಟ್ರಿಮಾಡಿಸಬೇಕೆಂಬ ಕಾನೂನು ಹಿಂದೆಯೇ ಜಾರಿಗೆ ಬಂದಿದ್ದರೂ ಸಾಕಷ್ಟು ಆಂಗ್ಲೇಯರು ಮುಂದೆ ಬಾರದುದರಿಂದ ಒತ್ತಾಯದಿಂದ ಸೈನ್ಯಕ್ಕೆ ಸೇರಿಸುವ ಅಧಿಕಾರವನ್ನು ವೈಸರಾಯರು ಅಪೇಕ್ಷಿಸಿದರೆಂದೂ" ಹೇಳಿದರು. ಯುರೋಪಿಯಾನರು ಸಾಕಷ್ಟು ಉತ್ಸಾಹ ತೋರಿಸಲಿಲ್ಲವೆಂಬ ಅಮೆರಿಯವರ ಮಾತು ಯಥಾರ್ಥವಲ್ಲವೆಂದು ಭಾರತದ ಕೆಲವು ಆಂಗ್ಲೇಯ ಪ್ರಮುಖರು ಆಕ್ಷೇಪಿಸಿದ್ದಾರೆ. ಹಿಂದೀಯರನ್ನು ಕಡ್ಡಾಯವಾಗಿ ಸಿವಿಲ್, ಮತ್ತು ಮಿಲಿಟರಿ ಖಾತೆಗೆ ಸೇರಿಸಿಕೊಳ್ಳುವ ಅಧಿಕಾರ ವೈಸರಾಯರಿಗೆ ಕೊಡಲ್ಪಟ್ಟಿದೆಯಾದರೂ ಪ್ರಕೃತ ಮಿಲಿಟರಿಗೆ ಒತ್ತಾಯವನ್ನು ಜ್ಯಾರಿ ಮಾಡುವಂತಿಲ್ಲವೆಂದು ಪ್ರಕಟಿಸಲಾಗಿದೆ. ಈ ಮಸೂದೆಯು ವಿರೋಧವಿಲ್ಲದೆ ಪಾರ್ಲಿಮೆಂಟಿನ ಕಾಮನ್ಸ್ ಮತ್ತು ಲೋರ್ಡ್ಸ್ ಸಭೆಗಳೆರಡರಲ್ಲಿ ಮಂಜೂರಾಗಿ ರಾಜರ ಸಹಿಬಿದ್ದಿದೆ.

ಫ್ರೆಂಚ್ ಸೇನೆಯ ಅಪಜಯಕ್ಕೆ ಕಾರಣವೇನು?

ಇಡೀ ಲೋಕದಲ್ಲೇ ಫ್ರೆಂಚ್ ಸೇನೆಯು ಉತ್ಕೃಷ್ಟವಾದುದೆಂದು ಹೆಸರುವಾಸಿಯಾದುದು. ಅದು ಇಷ್ಟು ಬೇಗನೆ ಜರ್ಮನರಿಂದ ಸೋಲಿಸಲ್ಪಡಲು ಕಾರಣ [illegible]

ಸಮಾಚಾರ ಸಂಗ್ರಹ

ಈ ರೀತಿ ವಿವರಿಸಿರುವರು. "ಕಾದಾಡುವುದಕ್ಕೇನೇ ಅಸಾಧ್ಯವಾಗಿ ಫ್ರೆಂಚ್ ಸೇನೆಯು ಪರಾಜಿತವಾಗಿರುವುದು 1940ರ ಜರ್ಮನರ ನವೀನ ಯುದ್ಧ ಕ್ರಮವನ್ನು 1914ರ ರೀತಿಯಿಂದ ವಿರೋಧಿಸಿದ ಫ್ರೆಂಚ್ ಸೇನಾನಾಯಕರ ಅಚಾತುರ್ಯವೇ ಇದಕ್ಕೆ ಕಾರಣ. ಯುದ್ಧದ ಆರಂಭದಲ್ಲಿ ಬೆಲ್‌ಜಿಯಮ್ ಮತ್ತು ಫ್ರಾನ್ಸಿನಲ್ಲಿ 60,000 ಫ್ರೆಂಚ್ ಸೈನಿಕರು ಕೊಲ್ಲಲ್ಪಟ್ಟಿದ್ದರು. 300,000 ಮಂದಿ ಗಾಯಗೊಂಡು 350,000 ಮಂದಿ ಸೆರೆಹಿಡಿಯಲ್ಪಟ್ಟಿದ್ದರು. ಅನಂತರ ಉಂಟಾದ ಒಟ್ಟು ಸೈನಿಕ ನಷ್ಟ 6 ಲಕ್ಷ. ಫ್ರೆಂಚ್ ಸೈನಿಕರ ಧೈರ್ಯ ಸ್ಥೈರ್ಯ ಮತ್ತು ಉತ್ಸಾಹವೇನೂ ಕುಂದಿರಲಿಲ್ಲ. ಆದರೆ ಸೇನಾನಿಗಳ ಅವಿವೇಕದಿಂದಾಗಿ ಅವರು ಜೈಸಲ್ಪಟ್ಟರು. ಫ್ರಾನ್ಸಿನ ಯುದ್ಧದ ಇನ್ನೊಂದು ರೀತಿಯೆಂದರೆ, ಜನಸಾಮಾನ್ಯರು ದಿಗಿಲುಗೊಳ್ಳದೆ ತಮ್ಮ ಮನೆಮಾರುಗಳಲ್ಲಿಯೇ ಇರಬೇಕೆಂಬುದು. ಏನೇ ಆಗಲಿ ಜನರೆಲ್ಲರೂ ಧೃತಿಗೆಡದೆ ಮನೆಯೊಳಗಿದ್ದುಬಿಟ್ಟರೆ ಹೆಚ್ಚಿನ ಪ್ರಾಣಹಾನಿಯಾಗಲಾರದು" ಜನರಲ್ ಗೊಲ್ಲೆರ್ ಸ್ವತಂತ್ರ ಫ್ರೆಂಚರೆಲ್ಲರ ನಾಯಕರಾಗಿ ಕೆಲಸಮಾಡುವರಲ್ಲದೆ ಹೊಸ ಮಂತ್ರಿಮಂಡಲವೊಂದನ್ನು ರಚಿಸುವ ಸಂಭವವಿಲ್ಲ. ಅವರನ್ನು ಬ್ರಿಟಿಷ್ ಸರಕಾರವು ಅಂಗೀಕರಿಸಿರುವುದು.

ರೈನೋಡರು ಗಾಯಗೊಂಡಿರುವರು

ಫ್ರಾನ್ಸಿನ ಸೋಶಿಯಲಿಸ್ಟ್ ಪಕ್ಷದ ನಾಯಕರಾದ ಎಮ್. ಬ್ಲುಮ್ಮರು ಲಂಡನಿಗೆ ಬಂದಿರುವರು. ಎಮ್. ರೈನೋಡರಿಗೆ ಲಂಡನಿಗೆ ಹೋಗಲು ಸಾಧ್ಯವಾಗಿರುವುದಿಲ್ಲೆಂದು ತಿಳಿದುಬಂದಿದೆ. ಅವರು ಜೂನ್ ತಾ. 28ರಲ್ಲಿ ದಕ್ಷಿಣಫ್ರಾನ್ಸಿನಲ್ಲಿ ತಾನೇ ಮೋಟರ್‌ಕಾರನ್ನು ನಡೆಸುತ್ತಾ ಹೋಗುವಾಗ ಕಾರು ರಸ್ತೆಬದಿಯ ಮರವೊಂದಕ್ಕೆ ಢಿಕ್ಕಿಬಡಿದು ಚರಂಡಿಗೆ ಉರುಳಿಬಿದ್ದು ಗಾಯಗೊಂಡಿರುವರೆಂದು ತಿಳಿದುಬರುತ್ತದೆ. ಈ ಅಪಘಾತದ ಕಾರಣವೇನೆಂದು ತಿಳಿದಿಲ್ಲ. ರೈನೋಡರ ಪ್ರಾಣಕ್ಕೇನೂ ಹಾನಿಯುಂಟಾಗುವ ಹಾಗಿಲ್ಲ.

ಮಾರ್ಶಲ್ ಬಾಲ್ಬೋರವರ ಮರಣ

ಇಟಲಿಯ ವಿಮಾನಪಡೆಯನ್ನು ಸಂಘಟಿಸಿ, ಅಮೇರಿಕಕ್ಕೆ ವಿಮಾನದಳವೊಂದರ ಸಮೇತ ಹಾರಾಡಿ ಹೋಗಿ ಹಿಂತಿರುಗಿ ಸುಪ್ರಸಿದ್ಧರಾದವರು ಮಾರ್ಶಲ್ ಬಾಲ್ಬೋರವರು. ಅವರು ಉತ್ತರ ಆಫ್ರಿಕದ ಇಟಲಿಯ ವಸಾಹತವಾದ ಲಿಬಿಯದ ಗವರ್ನರ್ ಜನರಲಾಗಿ ನೇಮಕಹೊಂದಿದ್ದರು. ಜೂನ್ ತಾ. [illegible]ಲ್ಲಿ ಟೋಬ್ರುಕ್ ಪಟ್ಟಣದ ಮೇಲೆ ಮಾರ್ಶಲ್ ಬಾಲ್ಬೋರವರು ಸ್ವತಃ ವಿಮಾನನಡೆಸುತ್ತಾ, ಬ್ರಿಟಿಷ್ ವಿಮಾನಗಳೊಂದಿಗೆ ಹೋರಾಟನಡೆಸುತ್ತಿದ್ದಾಗ, ವೈರಿವಿಮಾನಗಳ ಗುಂಡಿಗೆ ಬಲಿಯಾಗಿ ವಿಮಾನವು ಕೆಳಗುರುಳಿಬಿದ್ದು ಬೆಂಕಿಹಿಡಿದು ಮಾರ್ಶಲರು ಕೊಲ್ಲಲ್ಪಟ್ಟಿರುವರು. ವೈರಿವಿಮಾನಗಳು ಟೋಬ್ರುಕ್ ಪಟ್ಟಣದ ಮೇಲೆ ವಿಮಾನಧಾಳಿ ನಡೆಸುವಾಗ ಅವುಗಳನ್ನು ತಡೆಗಟ್ಟಲು ಮೇಲಕ್ಕೇರಿ ಹೋಗಿದ್ದ ಮಾರ್ಶಲ್ ಬಾಲ್ಬೋರವರ ವಿಮಾನವು ಮುರಿದುಬಿದ್ದು ಬೆಂಕಿಹಿಡಿದು ಮಾರ್ಶಲರು, ಅವರ ಅಳಿಯ ಭಾವ ಮತ್ತು ತ್ರಿಪೋಲಿಯ ಇಟಲಿಯಾನ ರಾಯಭಾರಿಯೂ ಕೊಲ್ಲಲ್ಪಟ್ಟಿರುವರೆಂದು ರೋಮ್ ಪಟ್ಟಣದಿಂದ ಸುದ್ದಿ ಬಂದಿರುತ್ತದೆ. ಈ ವಿಮಾನದಲ್ಲಿ 1ಮಂದಿ ವೈಮಾನಿಕರು ಮತ್ತು 5ಮಂದಿ ಪ್ರಯಾಣಿಕರಿದ್ದರಂತೆ. ಮಾರ್ಶಲ್ ಬಾಲ್ಬೋರವರ ಮರಣದ ದುಃಖಸೂಚನಾರ್ಥವಾಗಿ ಜೂನ್ ತಾ. 30 ಮತ್ತು 31ರಲ್ಲಿ ಇಟಲಿಯ ಧ್ವಜಗಳೆಲ್ಲಾ ಅರೆಮುಚ್ಚಲ್ಪಡುವವು. ಬ್ರಿಟಿಷ್ ಈಸ್ಟ್ ಇಂಡೀಸಿನಲ್ಲಿ ಎರಡು ಇಟಲಿಯಾನ ಸಬ್‌ಮೆರೀನುಗಳು ಮುಳುಗಿಸಲ್ಪಟ್ಟಿವೆ. ಭೂಮಧ್ಯಸಾಗರದಲ್ಲಿ ಇಟಲಿಯಾನ ಡಿಸ್ಟ್ರೋಯರ ಹಡಗವೊಂದು ಮುಳುಗಿಸಲ್ಪಟ್ಟಿದೆ.

ಜಿನ್ನ ಮತ್ತು ಗಾಂಧಿಜಿಯವರೊಡನೆ ವೈಸರಾಯರ ಮಾತುಕತೆ

ಜೂನ್ ತಾ 27ನೇ ಅಪರಾಹ್ನ ಘಂಟೆ 3-30ಕ್ಕೆ ಮಿ. ಜಿನ್ನರು ವೈಸರಾಯರ ಬಳಿಗೆ ಹೋಗಿ ಅವರೊಡನೆ ಸುಮಾರು 2½ ಘಂಟೆ ಮಾತುಕತೆ ನಡೆಸಿದರು.

TROPICAL.

TROPICAL INSURANCE CO. LTD. does not boast of 'big' figures. It has not been writing crores of Business every Year. That was never its intention. It never aimed at breaking "records" at dangerous cost. Whatever it did it wrote sound business that endures in the books of the Company. Thus although not the biggest it is one of the best of Life Offices in India.

The Company, founded by Pandit Moti Lal Nehru, Dr. Ansari and Hakim Ajmal Khan, and guided now under the Chairmanship of Sj. Subhas Chandra Bose offers excellent chances to young men of culture & education to forge out their careers.

THE
Tropical Insurance Co., Ltd.
Branch Office: NIVAS BUILDING, Hampankatta,
MANGALORE.

Manager: M. SUNDER RAM SHETTY.

ಇವರ ಫಲಿತಾಂಶವೇನಾಯಿತೆಂಬುದು ಈ ವರೆಗೆ ತಿಳಿದುಬಂದಿರುವುದಿಲ್ಲ. ಮಿ. ಜಿನ್ನರು ಪುನಃ ವೈಸರಾಯರನ್ನು ಕಾಣುವ ಸಂಭವವಿದೆ. ಹೊಸ ಇಂಡಿಯಾ ಸೆಕ್ರೆಟರಿಗಳ ಸೂಚನೆ ಮೇರೆಗೆ ಈ ಪ್ರಾಮುಖ್ಯತೆಯನ್ನು ವೈಸರಾಯರು ನಡಿಸಿವರೆಂದು ತಿಳಿದು ಬರುತ್ತದೆ. ಆದರೆ ಅವರ ಫಲಿತಾಂಶದ ಕುರಿತು ಹೆಚ್ಚಿನ ಆಶಾವಾದವೇನೂ ತೋರಿಬರುವುದಿಲ್ಲ. ಇಂಡಿಯಾ ಸರಕಾರದ ಮನೋವೃತ್ತಿಯೇನೂ ಬದಲಾವಣೆ ಹೊಂದಿರುವಂತಿಲ್ಲ. ಕಾಂಗ್ರೆಸಿನ ಕುರಿತು ಮಿ. ಜಿನ್ನರ ತಿರಸ್ಕಾರ ಘೋಷಣೆಯಿಂದ ಮುಸ್ಲಿಮ್ ಲೀಗಿನ ಮುಖಂಡರಲ್ಲಿಯೇ ಅತೃಪ್ತಿಯುಂಟಾಗಿದೆ.

ಸರ್. ಸಿಕಂದರ್ ಹಾಯತ್‌ಖಾನರೇ ಮೊದಲಾದವರು ಮಿ. ಜಿನ್ನರ ನಾಯಕತ್ವವನ್ನು ಮನ್ನಿಸುವ ಹಾಗೆ ತೋರುವುದಿಲ್ಲ. ಜೂನ್. ತಾ. 29ರಲ್ಲಿ ಮಹಾತ್ಮಾ ಗಾಂಧಿಯವರು ವೈಸರಾಯರೊಡನೆ 3 ಘಂಟೆ ಸಮಯ ಮಾತಾಡಿದರು. ಈ ಮಾತಿನ ಪರಿಣಾಮವಾಗಿ ಹಿಂದೀ ರಾಜಕೀಯ ಪರಿಸ್ಥಿತಿಯೇನೂ ಬದಲಾವಣೆ ಹೊಂದಿರುವುದಿಲ್ಲ! ನಿನ್ನೆಯಂತೆಯೇ ಇವತ್ತಿನ ಪರಿಸ್ಥಿತಿಯೆಂದು "ಗಾಂಧಿಯವರು ವೈಸರಾಯರೊಡನೆ ಮಾತಾಡಿ ಹಿಂದೆ ಬಂದ ಮೇಲೆ ಹೇಳಿದ ಮಾತು—"ವೈಸರಾಯರು ಆಮಂತ್ರಿಸಿದುದರಿಂದ ನಾನವರೊಡನೆ ಮಾತಾಡಿಬಂದುದು. ಇನ್ನೊಮ್ಮೆ ನಾನು ವೈಸರಾಯರೊಡನೆ ಮಾತಾಡಬಹುದೋ ಇಲ್ಲವೋ ಎಂಬುದು ವೈಸರಾಯರ ಮೇಲೆ ಹೊಂದಿಕೊಂಡಿದೆ. ಆದರೆ ಅವರು ಆಮಂತ್ರಿಸಿದಾಗಲೆಲ್ಲಾ ನಾನವರನ್ನು ಕಾಣಲು ಸಂತೋಷಪಡುವೆನು" ಎಂದು ಮಹಾತ್ಮರು ಯುನೈಟೆಡ್ ಪ್ರೆಸ್ಸಿನ ಪ್ರತಿನಿಧಿಯೊಡನೆಂದಿರುವರು. ತಾರೀಕು30ನೇ ಬೆಳಿಗ್ಗೆ ಗಾಂಧಿಜಿಯವರು ಸಿಮ್ಲಾದಿಂದ ಡಿಲ್ಲಿಗೆ ಬಂದು ಡಾಕ್ಟರ್ ಶೌಕತುಲ್ಲ ಅನ್ಸಾರಿಯವರ ಮನೆಯಲ್ಲಿ ಉಳಿದಿರುವರು. ಕಾಂಗ್ರೆಸ್ ಪ್ರೆಸಿಡೆಂಟರಾದ ಮೌಲಾನ ಅಜಾದರು ಈ ದಿನ ಬೆಳಿಗ್ಗೆ ಗಾಂಧಿಜೀಯವರೊಡನೆ ಟೆಲಿಫೋನ್ ಮೂಲಕ ಮಾತಾಡಿದರು. ಇವರ ಪರಿಣಾಮವಾಗಿ ಮೌಲಾನರು ಜುಲ್ಯೈ ತಾ. 3ರಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಜರೂರು ಸಭೆಯೊಂದನ್ನು ಡಿಲ್ಲಿಯಲ್ಲಿ ಕರೆದಿರುವರು. ಕಳೆದ ಸಲದ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಗೆ ಆಮಂತ್ರಿಸಲ್ಪಟ್ಟಿದ್ದ ಸದಸ್ಯೇತರರಾದ ಶ್ರೀ. ಅಚ್ಯುತ ಪಟ್ವರ್ಧನ್, ಆಚಾರ್ಯ ನರೇಂದ್ರದೇವ್, ಮಿಸೆಸ್ ಆರ್. ಎಸ್. ಪಂಡಿತ್ ಮತ್ತು ಡಾಕ್ಟರ್ ಪಟ್ಟಾಭಿಯವರು ಈ ಸಲವೂ ಆಮಂತ್ರಿಸಲ್ಪಟ್ಟಿರುವರು.

ಯುರೋಪ್ ಖಂಡವು ಬರಗಾಲವನ್ನಿದಿರಿಸುತ್ತಿದೆ

"ಇತಿಹಾಸದಲ್ಲೇ ಅತ್ಯಂತ ಭಯಂಕರ ಬರಗಾಲವು ಯುರೋಪನ್ನಿದಿರಿಸುತ್ತಿದೆ. ಯುದ್ಧವು ಹಲವು ತಿಂಗಳುಗಳೊಳಗೆ ಮುಂದುವರಿಸಿದರೆ ಯುರೋಪಿನ ಮಿಲ್ಯಾಂತರ ಜನರಿಗೆ ಆಹಾರವನ್ನೊದಗಿಸುವ ಸಮಸ್ಯೆಯು ಮಾನವ ಸಂಕಷ್ಟದ ಇತಿಹಾಸದ ಅಸಮಾನವಾದುದಾಗುವುದು. 30ರಿಂದ 60 ದಿವಸಗಳೊಳಗೆ ಬೆಲ್‌ಜಿಯಮಿನ ಬ್ರಸ್ಸೆಲ್ಸ್ ಪಟ್ಟಣಕ್ಕೆ ಆಹಾರ ಸಾಮಗ್ರಿಗಳೊದಗಿಸಲ್ಪಡದಿದ್ದ ಪಕ್ಷದಲ್ಲಿ ಅಲ್ಲಿ ಆಹಾರದ ತೀವ್ರ ಅಭಾವವುಂಟಾಗುವುದು. ಕಳೆದ ಯುದ್ಧದಲ್ಲಿ ಬೆಲ್‌ಜಿಯಮಿಗೆ ಆಹಾರವನ್ನೊದಗಿಸಲು ತಿಂಗಳೊಂದರ 25 ಮಿಲ್ಯ ಡಾಲರು ಬೇಕಾಗಿದ್ದಿತೆಂದು" ಅಮೇರಿಕದ ಮಾಜಿ ಪ್ರೆಸಿಡೆಂಟ್ ಹೂವರರು ಅಭಿಪ್ರಾಯಪಟ್ಟಿರುವರು.

ಬೆಸರೇಬಿಯವನ್ನು ರಸ್ಯವು ಆಕ್ರಮಿಸಿತು

ಜೂನ್ ತಾ. 26ರಲ್ಲಿ ಸೋವಿಯೆಟ್ ರಸ್ಯದ ವಿದೇಶ ಮಂತ್ರಿ ಮೊಲೊಟೋವರು, ರಸ್ಯದ ರಾಯಭಾರಿಯನ್ನು ಕರೆದು, ರುಮೇನಿಯಕ್ಕೆ ಸೇರಿದ ರಸ್ಯದ ಎಲ್ಲೆಯ ಬೆಸರೇಬಿಯ ಮತ್ತು ಉತ್ತರ ಬುಕೋವಿನವನ್ನು ತಮಗೆ ಬಿಟ್ಟುಕೊಡಬೇಕೆಂದೂ 24 ಘಂಟೆಗಳೊಳಗೆ ಉತ್ತರಕೊಡಬೇಕೆಂದೂ ತಿಳಿಸಿದರು. ರುಮೇನಿಯ ಸರಕಾರವು ರಸ್ಯವು ಕೇಳಿರುವ ಪ್ರದೇಶಗಳನ್ನು ಬಿಟ್ಟುಕೊಡುವ ನಿರ್ಧಾರ ಮಾಡಿರುವುದು. ಸೋವಿಯೆಟ್ ಸೈನಿಕರು ಈ ಪ್ರದೇಶಗಳನ್ನು ಆಕ್ರಮಿಸಿ ವಶಪಡಿಸಿಕೊಂಡಿರುವರು. ರುಮೇನಿಯ ಸೈನಿಕರು ಹಿಂದೆಸರಿದಿರುವರು. ಬೆಸರೇಬಿಯವು ರುಮೇನಿಯದ ಅತ್ಯಂತ ಪೂರ್ವ ಪ್ರದೇಶ. ಕಳೆದ ಮಹಾ ಯುದ್ಧದ ಸಂದರ್ಭದಲ್ಲಿ ರುಮೇನಿಯವು ಅದನ್ನು ರಸ್ಯದಿಂದ ಕಿತ್ತುಕೊಂಡುದು. ಈ ಅಪಹಾರವನ್ನು ರಸ್ಯವು ಎಂದೂ ಅಂಗೀಕರಿಸದೆ ಅದನ್ನು ಶಾಂತ ರೀತಿಯಿಂದ ಬಿಟ್ಟುಕೊಡಬೇಕೆಂದು ರುಮೇನಿಯವನ್ನು ಆಗಾಗ ಎಚ್ಚರಿಸಿದ್ದಿತು. ಮ್ಯೂನಿಚ್ ಒಪ್ಪಂದದ ಸಂದರ್ಭದಲ್ಲಿ ರಸ್ಯವು ಈ ಕುರಿತು ರುಮೇನಿಯದೊಡನೆ ರಾಜಿ ಮಾಡಿಕೊಳ್ಳಲು ಸಿದ್ಧವಿದ್ದಿತು. ರುಮೇನಿಯದ ಮೂಲಕ ಜೆಕೋಸ್ಲೋವಿಯಕ್ಕೆ ಸೋವಿಯೆಟ್ ಸೇನೆ ಕಳುಹಿಸಲೊಪ್ಪಿದರೆ ಬೆಸರೇಬಿಯದ ಮೇಲಿನ ತನ್ನ ಹಕ್ಕನ್ನು ಬಿಟ್ಟುಕೊಡಲು ರಸ್ಯವು ತಯಾರಿದ್ದಿತು. ಈಗ ರಸ್ಯವು ಸಂದರ್ಭ ನೋಡಿ ಬೆಸರೇಬಿಯವನ್ನು ಆಕ್ರಮಿಸಿದೆ. ಫ್ರಾನ್ಸ್ ಸೋತು ಇಂಗ್ಲೆಂಡು ಜರ್ಮನಿಯೊಡನೆ ಜೀವನ ಮರಣ ಹೋರಾಟದಲ್ಲಿ ನಿರತವಾಗಿದೆ. ಇಟೆಲಿ ಮತ್ತು ಜರ್ಮನಿಗಳು ರಸ್ಯದೊಡನೆ ಮೈತ್ರಿಯಿಂದಿವೆ. ಟರ್ಕಿಯು ತಟಸ್ಥವಾಗಿದೆ. ಈ ಸಂದರ್ಭದಲ್ಲಿ ರಸ್ಯವು ಪೋಲೆಂಡಿನಂತೆಯೇ ಶಾಂತವಾಗಿ ಬೆಸರೇಬಿಯವನ್ನು ವಶಪಡಿಸಿಕೊಂಡುಬಿಟ್ಟಿದೆ. ಇದರಿಂದ ಹಿಟ್ಲರ್ ಮುಸಲೋನಿಗಳು ಒಳಗಿಂದೊಳಗೆ ನೊಂದುಕೊಳ್ಳದಿರಲಾರರು. ಯಾಕೆಂದರೆ ರಸ್ಯವು ರುಮೇನಿಯದ ಪೆಟ್ರೋಲ್ ಬಾವಿಗಳಿಗೆ ಬಹಳ ಸಮೀಪ ಬಂದಿದೆ. ರುಮೇನಿಯದ ಪೆಟ್ರೋಲ್ ಬಾವಿಗಳು ರಸ್ಯದ ವಶವಾದರೆ ಇಡೀ ಯುರೋಪಿನಲ್ಲೇ ಅದರಷ್ಟು ಪೆಟ್ರೋಲಿನ ಆಶ್ರಯಪ್ರದ ರಾಷ್ಟ್ರ ಇನ್ನೊಂದಿಲ್ಲವೆಂತಾಗುವುದು. ಹಿಟ್ಲರರ ರಾಜ್ಯವಿಸ್ತಾರಾಕಾಂಕ್ಷೆಗೆ ರಸ್ಯವು ತಡೆಹಾಕಿರುವುದು. ಬಲ್ಕನಿನಲ್ಲಿ ತನ್ನ ಹೊರತು ಇನ್ನಾರ ಪ್ರಭಾವವೂ ಇರಬಾರದೆಂಬ ಮುಸಲೋನಿಯವರ ಇಚ್ಛೆಗೆ ಭಂಗವಾಗಿರುವುದು. ಆದರೂ ಡಿಕ್ಟೇಟರರು ಈ ಸಂದರ್ಭದಲ್ಲಿ ಸುಮ್ಮನಿರದೆ ನಿರ್ವಾಹವಿಲ್ಲವಾಗಿದೆ.

ರುಮೇನಿಯಕ್ಕೆ ದೊಡ್ಡ ಗಂಡಾಂತರ

ರಸ್ಯದ ಈ ಆಕ್ರಮಣದಿಂದ ರುಮೇನಿಯದ ಅಸ್ತಿತ್ವಕ್ಕೇನೇ ದೊಡ್ಡ ಗಂಡಾಂತರವುಂಟಾಗಿದೆ. ರುಮೇನಿಯವು ಕಳೆದ ಮಹಾ ಯುದ್ಧದಲ್ಲಿ ತನ್ನ ರಾಜ್ಯವನ್ನು ಎರಡು ಪಾಲು ವಿಸ್ತರಿಸಿರುವುದು. ಆ ದುರಾಶೆಯ ಫಲವನ್ನೀಗ ಅದು ತಿನ್ನುತ್ತಿದೆ. ಪಶ್ಚಿಮದ ಟ್ರಾನ್ಸಿಲ್ವಾನಿಯವನ್ನು ಹಂಗೇರಿಯು ವಶಪಡಿಸಿಕೊಳ್ಳಬೇಕೆಂದಿದೆ. ದಕ್ಷಿಣದ ದೊಬ್ರುಜವು ತನಗೆ ಸೇರಬೇಕೆಂದು ಬುಲ್ಗೇರಿಯವು ಕೇಳುತ್ತಿದೆ. ರುಮೇನಿಯದ ಮಂತ್ರಿ ಮಂಡಲವು ರಾಜೀನಾಮೆ ಕೊಟ್ಟು ಹೊಸತಾಗಿ ಯುದ್ಧ ಕಮಿಟಿಯು ಸ್ಥಾಪಿಸಲ್ಪಟ್ಟಿದೆ. ಸೇನಾಸಂಗ್ರಹವು ಭರದಿಂದ ನಡೆಯುತ್ತಿದೆ. ಧನ ಮತ್ತು ಸೊತ್ತುಗಳನ್ನು ಸರಕಾರವು ಬೇಕಾದಾಗ ವಶಪಡಿಸಿಕೊಳ್ಳಬಹುದೆಂಬ ವಿಶೇಷ ತರದ ಶಾಸನವು ಜ್ಯಾರಿಗೆ ತರಲ್ಪಟ್ಟಿದೆ. ಎಷ್ಟು ಮಾತ್ರಕ್ಕೂ ಹಂಗೇರಿ ಮತ್ತು ಬುಲ್ಗೇರಿಯಗಳಿಗೆ ತನ್ನ ದೇಶದ ಭಾಗಗಳನ್ನು ಬಿಟ್ಟುಕೊಡಲಿಕ್ಕಿಲ್ಲೆಂದು ರುಮೇನಿಯವು ನಿರ್ಧರಿಸಿದೆ. ಯುದ್ಧ ಮುಗಿಯುವನಕ ರುಮೇನಿಯದಲ್ಲಿ ಯಾವ ಗಲಾಟೆಯೂ ಆಗದಂತೆ ಹಿಟ್ಲರರು ನೋಡಬಹುದು. ಯಾಕೆಂದರೆ ಜರ್ಮನಿಗೆ ಪೆಟ್ರೋಲ್ ಮತ್ತು ಗೋದಿ ಇವು ಹೆಚ್ಚಾಗಿ ರುಮೇನಿಯದಿಂದಲೇ ಹೋಗಬೇಕಾಗಿದೆ. ಆದುದರಿಂದ ಟ್ರಾನ್ಸಿಲ್ವಾನಿಯವನ್ನು ವಶಪಡಿಸಿ ಕೊಳ್ಳಬೇಕೆಂದು ಹಂಗೇರಿಯು ಚಡಪಡಿಸಿ ಹಿಟ್ಲರ್ ಮುಸಲೋನಿಯವರ ಸಹಾಯ ಕೇಳಿದರೂ ಅವರದನ್ನು ಸುಮ್ಮನಿರುವಂತೆ ಮಾಡಿರುವರೆಂದು ನಂಬಲಾಗಿದೆ.

THE

BOMBAY LIFE ASSURANCE Company Limited.

[ESTD. 1908]

LIFE INSURANCE

Dispels darkness of the mind and brings Enlightenment and Courage, Immortalises major portion of your Income whether you survive or not and thus makes life worth living to you and your dependants in reality

Ask us what particular scheme of Insurance will satisfy your requirements and your purse.

Agency Applications from Active and Influential Ladies & Gentlemen are invited.

To Insure or to Represent consult:

KOCHIKAR BROTHERS LTD.,

MADRAS BRANCH SECRETARIES AND

Chief Agents for Bombay City & Suburbs,

BOMBAY LIFE BUILDING,

Sir Lalubhai Samaldas Road,

GANDHI NAGAR, UDIPI.

Or any of their following Offices at:—

Pethyera, CALICUT.	Car Street, MANGALORE.	Central Station Road, TRIVANDRUM.
Gandhi Nivas, Charni Road, Girgaum, BOMBAY No. 4	Post Box No. 337, Mount Road, MADRAS	Visvesvarapuram Circle, BANGALORE CITY.

The Karnataka Provident Company, Limited, Udipi.

Applications are invited from well educated respectable persons for the following posts, so as to reach the undersigned on or before 25-7-40

1. Six organisers on a fixed monthly allowance of Rs. 25 to Rs 75. Cash security of Rs 500 is essential

2. A Secretary on Rs. 20 to Rs 65 per month Cash security of Rs 350 is essential

3. Two accountants on Rs. 15 to Rs 60 per month. Cash Security of Rs 300 is essential.

For full particulars apply to or see the undersigned personally

KARNATAKA P. CO, LTD, UDIPI.

B. Vamanacharya B.A. B.L., Chairman

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. P. No. 47.

ಅರ್ಜಿದಾರರು—1. ಲಕ್ಷ್ಮೀದೇವಿ, ಯಡಾಡಿ ಲಕ್ಷ್ಮೀನಾರಾಯಣರಾಯರ ವಿಧವೆ,
2 ಮೈನರ ಶಿಬರಾಮ, 3. ಮೈನರ ವರದರಾಜ, 1ನೇ ಅರ್ಜಿದಾರಳ ಮಗಂದಿರು, ಇವರ ಕ್ಷೇಮ ಚಿಂತಕಳು ತಾಯಿ 1ನೇ ಅರ್ಜಿದಾರಳು, ಬಸ್ರೂರು ಗ್ರಾಮ.

ಎಲ್ಲಾ ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

1ನೇ ಅರ್ಜಿದಾರಳ ಗಂಡ ವ ಮಿಕ್ಕ ಅರ್ಜಿದಾರರ ತಂದೆ ಯಡಾಡಿ ಲಕ್ಷ್ಮೀನಾರಾಯಣ ರಾಯರು ಈ ಕೋರ್ಟು ಚಕ್ಕುಬಂದಿಗೆ ಸೇರಿದ ಕುಂದಾಪುರ ತಾಲ್ಲೂಕು ಬಸ್ರೂರು ಗ್ರಾಮದಲ್ಲಿ ತಾರೀಕು 29-2-39ರಲ್ಲಿ ಮೃತಪಟ್ಟಿರುತ್ತಾರೆ. ಅಲ್ಲಿಂದ ಅವರಿಗೆ ದಿ. ಕೆನರಾ ಬೇಂಕ್ ಲಿಮಿಟೆಡ್ ಇದರ ಕುಂದಾಪುರ ಬ್ರೇಂಚಿನಲ್ಲಿ Deposit Nos. 100236, 100208, 04597, S. B. Account No. 85 ಮತ್ತು J. L. no. 352/38ಕ್ಕೆ ಸಹಾ ಬರತಕ್ಕ ಹಣ ವಗೈರೆಯನ್ನು ವಸೂಲು ಮಾಡುವರೆ ಅರ್ಜಿದಾರರ ಬಗ್ಗೆ 1ನೇ ಅರ್ಜಿದಾರಳ ಹೆಸರಿನಲ್ಲಿ ವಾರೀಸು ಸರ್ಟಿಫಿಕೇಟು ಕೊಡಿಸಬೇಕೆಂತ ವಗೈರೆ ಕಾಣಿಸಿ ಅರ್ಜಿದಾರರು ದಾಖಲುಮಾಡಿದ ಮೇಲಿನ ಅರ್ಜಿ ತಾರೀಕು 22-7-1940ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನಿಖೆಗೆ ಇಡೋಣಾಗಿದೆ ಎಂಬ ಸಂಗತಿ ಈ ಮೂಲಕ ಎಲ್ಲಾ ಜನರಿಗೆ ತಿಳಿಸೋಣಾಗಿದೆ.

Coondapoor, Date 30-6-1940.

B. S. Shetty, B.A., B.L.

Vakil for Petitioners.

ಐದನೆಯ ಕಾಲಂ (Fifth Column) ಎಂದರೇನು?

ಇತರ ದೇಶಗಳಲ್ಲಿ ನಡೆಯುವ ಪ್ರಚಾರದ ವಿವರಣೆ.

(ಸ್ಪೇನಿನ ಅಂತಃಕಲಹ ಮತ್ತು ಜನರಲ್ ಫ್ರಾಂಕೋವಿನ ಧಾಳಿಗಳ ಸಮಯದಲ್ಲಿ, ಯುದ್ಧ ಸಂಬಂಧ ಸುದ್ದಿಗಳ ವಿಷಯವಾಗಿ 'ಐದನೆಯ ಕಾಲಂ' ಎಂಬ ಶಬ್ದವು ಉಪಯೋಗಿಸಲ್ಪಟ್ಟಿತ್ತು. ಈಗ ಇದೇ ಶಬ್ದವು ಒಂದು ದೊಡ್ಡ ದಾದ ಭಯವನ್ನು ಸೂಚಿಸುತ್ತಿದೆ. ಈ ಲೇಖನದಲ್ಲಿ ಇದರ ವರ್ಣನೆಯನ್ನು ಕೊಡಲಾಗಿದೆ.)

●

ಈಗ ಪತ್ರಿಕೆಗಳಲ್ಲಿ "5ನೇ ಕಾಲಂ" ಎಂಬ ಶಬ್ದವು ಬಹಳವಾಗಿ ಪ್ರಯೋಗಿಸಲ್ಪಡುತ್ತಾ ಇದ್ದು, ಪ್ರತಿಯೊಬ್ಬ ವ್ಯಕ್ತಿಯೂ ಇದರಿಂದ ಪ್ರಭಾವಿತನಾಗುತ್ತಿದ್ದಾನೆ. ಕೆಲವು ವಾರಗಳಿಂದೀಚೆಗಂತೂ ಈ ಶಬ್ದದ ಪ್ರಯೋಗವು ಹೆಚ್ಚುತ್ತಿದೆ. ಇದರ ವಿಚಾರವಾಗಿ ಅನೇಕರು ಅನೇಕ ವಿಧವಾಗಿ ಹೇಳುತ್ತಿರುವರಾದರೂ, ನಿಜಸ್ಥಿತಿಯು ಈ ರೀತಿ ಇದೆ.

ಯಾವುದೇ ಒಂದು ದೇಶದ ಭೂ, ಜಲ ಸೈನ್ಯವು ವಾಯುಃ ಸೈನ್ಯದಿಂದ ಪ್ರತ್ಯೇಕವಾಗಿದ್ದುಕೊಂಡೇ ಯುದ್ಧಮಾಡುವ ಅರ್ಥದಲ್ಲಿ ಈ ಶಬ್ದವನ್ನು ಉಪಯೋಗಿಸುತ್ತಿರಲಿಲ್ಲ. ಇದರ ಮೂಲವನ್ನು ತಿಳಿಯಲು 1936ರ ಒಂದು ಘಟನೆಯನ್ನು ನೋಡೋಣ. ಆಗ ಜನರಲ್ ಮೌಲನು ಸ್ಪೈನಿನ ಕಲಹದಲ್ಲಿ ನ್ಯಾಶನಲಿಸ್ಟ್ ಲೀಡರ್ ಆಗಿದ್ದನು. ಒಂದು ಭೇಟಿಯಲ್ಲಿ ಅವನು ಈ ರೀತಿ ಹೇಳಿದ್ದನು:-ನ್ಯಾಶನಲಿಸ್ಟ್ ಸೈನ್ಯದ 4 ಕಾಲಂಗಳು ಮೆಡ್ರಿಡ್ ಮೇಲೆ ಆಕ್ರಮಣನಡಿಸಿವೆ. ಜನರು ತಪ್ಪಾಗಿ ಇದನ್ನು ಜನರಲ್ ಫ್ರಾಂಕೋವಿನ ವಿಚಾರವಾಗಿ ಹೇಳುತ್ತಿದ್ದಾರೆ. "5ನೇ ಕಾಲಂ" ಎಂಬ ಶಬ್ದವನ್ನು ಮೊದಲು ಉಪಯೋಗಿಸಿದವನು, ಜನರಲ್ ಮೌಲನು. ಆಗ ಅವನು "ನಮ್ಮ 5ನೇ ಕಾಲಂ ಮೊದಲಿಂದಲೂ ನಗರದಲ್ಲಿದ್ದು, ನಮ್ಮ ವಿಜಯದ ಬಗ್ಗೆ ಅನುಕೂಲ್ಯವಾದ ಸ್ಥಿತಿಯುಂಟಿವೆ"

ಇದರ ಅರ್ಥವೇನೆಂದರೆ:-ಸ್ಪೈನಿನ ಪ್ರಜಾತಂತ್ರ ಸರಕಾರದ ಸೈನ್ಯದ ಹಿಂದೆ, ನ್ಯಾಶನಲಿಸ್ಟ್ ಸರಕಾರದೊಡನೆ ಸಹಾನುಭೂತಿಯುಳ್ಳವರೂ ಇದ್ದಾರೆಂದು. ಗೃಹ ಕಲಹದಲ್ಲಿ ಈ ರೀತಿ ಆಗುವುದು ಏನೂ ಆಶ್ಚರ್ಯವಲ್ಲ. ಇದೇ ಕಾಲದಲ್ಲೇ ನಾಜಿಗಳು ಈ "5ನೇ ಕಾಲಂ"ನ ಉದ್ದೇಶಗಳನ್ನು ತಮಗಾಗಿ ಅಭಿವೃದ್ಧಿ ಪಡಿಸಿಕೊಳ್ಳಲಾರಂಭಿಸಿದರು. ಈ ಕೆಲಸಕ್ಕಾಗಿ ಹಿಟ್ಲರನ ಅನೇಕ ಏಜಂಟರುಗಳು ನಿಯುಕ್ತರಾದರು. ಜೆಕೊಸ್ಲೊವೇಕಿಯದ ಶಾಂತಿಯನ್ನು ನಾಶಗೊಳಿಸಿದುದು ಇಂತಹ ಗುಂಪೇ. ಇದುವರೆಗಂತೂ ನಾಜಿಗಳ ಈ ತತ್ವವು ಊಗಿರುವಂತಹ ಭಯಂಕರ ರೂಪವನ್ನು ಧರಿಸಿಕೊಳಿಸಿದೆ.

ಈಗ ನಾವು ಈ "5ನೇ ಕಾಲಂ"ನ ವಿನಾಶಕಾರಕ ಕಾರ್ಯಗಳನ್ನು ನೋಡುತ್ತಿದ್ದೇವೆ. ನಾರ್ವೆ ಮತ್ತು ಹಾಲೆಂಡುಗಳಲ್ಲಿ ಇದು ನಾಜಿಗಳ ಉದ್ದೇಶಗಳನ್ನು ಯಾವ ರೀತಿ ಮುಂದುವರಿಸಿತೆಂಬುದನ್ನು ನಾವು ನೋಡಿರುತ್ತೇವೆ. ಇಂದು ಈ "5ನೇ ಕಾಲಂ" ಕೇವಲ ಗುಪ್ತ ಸೈನ್ಯ ಮತ್ತು ಅನ್ಯ ದೇಶಗಳಲ್ಲಿ ಒಡಕು ಉಂಟುಮಾಡುವುದು ಮಾತ್ರವಲ್ಲವೆ, ಇನ್ನೂ ಅನೇಕ ಉದ್ದೇಶಗಳಿವೆ. ಯಾವ ದೇಶದ ಮೇಲೆ ನಾಜಿಗಳ ಆಕ್ರಮಣವಾಗುವುದೋ, ಅದರ ಯಾವುದಾದರೂ ಸೇತುವೆಯನ್ನು ಹಾಳುಮಾಡುವುದು, ಅಥವಾ ಆ ದೇಶವನ್ನು ಸೈನ್ಯದ ಚಲನೆಯನ್ನು ನಾಜಿಗಳಿಗೆ ತಿಳಿಸುವುದು. ಮತ್ತು ಅಲ್ಲಿನ ನಿವಾಸಿಗಳಿಗೆ ಒಂದು ರೀತಿಯ ಭಯವನ್ನುಂಟುಮಾಡಿ ಅವರು ಏನನ್ನೂ ಯೋಚಿಸಲಾಗದವರಾಗುವಂತೆ ಮಾಡುವುದು, ಇದೇ ಇದರ ಮುಖ್ಯ ಉದ್ದೇಶ. ಅವರು ನಾಜಿಗಳನ್ನು ಎದುರಿಸುವ ಪ್ರಶ್ನೆಯನ್ನೇ ಮರೆಯುವಂತಾಗಬೇಕು. ನಾರ್ವೆಯಲ್ಲಿನ ಶಕ್ತಿಯನ್ನು ದಮನಮಾಡಿದುದು ಈ 5ನೇ ಕಾಲಂನ ಒಂದು ಪ್ರತ್ಯಕ್ಷ ಉದಾಹರಣೆಯಾಗಿದೆ.

ಎರಡು ರೀತಿಗಳು

ನಾಜಿಗಳು ತಮ್ಮ ಉದ್ದೇಶ ಸಾಧನೆಗಾಗಿ 2ಮಾರ್ಗಗಳನ್ನು ಅನುಸರಿಸುವರು ಒಂದನೆಯದಾಗಿ ಅವರು ನಾಜಿ ಏಜಂಟರಿಂದ ಕೆಲಸ ತೆಗೆದುಕೊಳ್ಳುವರು. ಎರಡನೆಯದಾಗಿ, ತಾವು ಆಕ್ರಮಿಸುವ ದೇಶದ ನಿವಾಸಿಗಳಿಗೂ ಸಹ ನಾಜೀ ಮನೋವೃತ್ತಿಯನ್ನು ಉಂಟುಮಾಡುವುದು. ಯಾವುದೇ ದೇಶವಲ್ಲಾಗಲಿ, ನಾಜಿತತ್ವಗಳು ಹರಡದೆ ಇಲ್ಲ, ಅಲ್ಲಿನವರು ನಾಜಿ ತತ್ವಗಳಲ್ಲಿ ಸಹಾನುಭೂತಿಯನ್ನು ತೋರಿಸದೆ ಇರಲ್ಲ, ಅಂತಹ ಕಡೆ ನಾಜಿ ಏಜಂಟರಿಂದ ಕೆಲಸ ತೆಗೆದುಕೊಳ್ಳುವುದಿಲ್ಲ.

ನಾರ್ವೆಯ ನಿವಾಸಿ ಹರ್ ಕೋಯಿಸ್ಲಿಂಗ್‌ನನ ವ್ಯಕ್ತಿತ್ವವು ಮೋಸ ಮತ್ತು ದಂಗೆ ಕೋರತನಕ್ಕೆ ಈಗ ಹೆಸರಾಗಿಹೋಗಿರುವದು. ಇದೇ ರೀತಿ ಹಿಟ್ಲರನ ಗುಪ್ತ ರೀತಿಯ ಕೆಲಸಗಳನ್ನು ಪೂರ್ತಿಯಾಗಿ ಮಾಡಲು, ಎಲ್ಲ ದೇಶಗಳಲ್ಲಿಯೂ ಜನರಿರುವರು ಈ ಕಾರ್ಯಕ್ಕಾಗಿಯೇ ಬರ್ಲಿನ್ನಿನಲ್ಲಿ ಅನೇಕರಿಗೆ ಒಳ್ಳೇ ಶಿಕ್ಷಣವನ್ನು ಕೊಡಲಾಗುವುದು. ನಾಜಿ ಉದ್ದೇಶಗಳನ್ನು ಸಾಧಿಸುವ ಮಾರ್ಗವೇನೆಂಬುದನ್ನು ಅವರು ಬಲ್ಲರು. ಉದಾಹರಣೆಗೆ:-ಶಾಟಿಸ್ಕ ದೇಶಗಳಿಗೆ ತಮ್ಮ ವಸ್ತುಗಳನ್ನು ಮಾರುವ ಜನರಿರುವರೆನ್ನೋಣ. ಆದರೆ ಅವರಿಗೆ ತಮ್ಮ ವಸ್ತುಗಳು ಕೊನೆಗೆ ಎಲ್ಲಿಗೆ ಹೋಗುವುದೆಂಬ ಜ್ಞಾನವೇ ಇರುವುದಿಲ್ಲ. ತಮ್ಮ ಮಾಲಿಗೆ ಬೆಲೆ ದೊರೆಯಿತೆಂದು ತಾವು ತಿಳಿದಿದ್ದರೂ, ಅವರು ತಮ್ಮ ಶತ್ರುವಿಗೆ ಸಹಾಯಮಾಡುತ್ತಿರುವರೆಂಬುದು ಅವರಿಗೆ ತಿಳಿಯುವುದೇ ಇಲ್ಲ.

ಇವರ ಜೊತೆಗೆ ನಿರಾಧಾರವೂ, ವಿನಾಶಕಾರಿಯೂ ಆದ ಸುಳ್ಳು ಸುದ್ದಿಗಳನ್ನು ಹರಡುವ ಸ್ತ್ರೀಯರು ಬೇರೆ ಇದ್ದಾರೆ. ಇವರು ಈ "5ನೇ ಕಾಲಂ"ನ ಕೆಲಸಗಳನ್ನು ಬಹಳ ಸಮರ್ಥರಾಗಿ ಮಾಡಬಲ್ಲರು. ಯಾವಾಗಲೂ ಇವರು ತಮ್ಮ ನಾಲಿಗೆಯನ್ನೇ ಮುಂದುಮಾಡುತ್ತಿರುವುದೇ ಇವರ ಕೆಲಸ. ಇದರಿಂದ ಇವರು ಜನರ ಮನಸ್ಸಿನಲ್ಲಿ ಭಯ, ನಿರಾಶೆ ಮತ್ತು ಸೋಲಿನ ಮನೋಭಾವನೆಗಳನ್ನು ಸುಲಭವಾಗಿ ಹರಡಬಲ್ಲರು. ಜೊತೆಗೆ ಜನರ ಮನಸ್ಸಿನಲ್ಲಿ ತಮ್ಮದೇ ಪ್ರಭುತ್ವಕ್ಕೆ ವಿರೋಧವಾದ ಭಾವನೆಯನ್ನೂ ಸಹ ಉಂಟುಮಾಡುವರು. ಸರ್ವಾಧಿಕಾರ ಪ್ರಭುತ್ವದಲ್ಲಿ ಹಿಂದುಳಿದವರು ಇಂತಹವರ ಬಲೆಗೆ ಸುಲಭವಾಗಿ ಬೀಳುವರು. ಅಲ್ಲದೆ ಅಂತಹವರು ನಾಜಿಗಳ ದುಷ್ಕರ್ಮಗಳನ್ನು ಕಣ್ಣಾರೆ ಕಂಡು ಭಯಭೀತರಾಗುವರು.

ಭಾರತದ ಸಮಸ್ಯೆ

ಸದ್ಯಕ್ಕೆ ಭಾರತದ ಮೇಲೆ ನಾಜೀ ಆಕ್ರಮಣವು ಸಾಧ್ಯವಿಲ್ಲ. ಆದರೆ ಒಂದು ವೇಳೆ ಫ್ರಾನ್ಸು, ಬ್ರಿಟನುಗಳು ಸೋತು, ನಾಜಿಗಳ ದೃಷ್ಟಿಯು ಭಾರತದ ಮೇಲೆ ಬಿದ್ದಿತೆನ್ನೋಣ ಆಗ ಏನಾಗುವುದು? ಭಾರತದಲ್ಲಿ ಸಹ ನಾಜಿಗಳ '5ನೇ ಕಾಲಂ' ಇದೆಯೇ?

ಈಗ ಜರ್ಮನರನ್ನೆಲ್ಲಾ ಬಂಧಿಸಿರುವುದೇನೋ ನಿಜ. ಆದರೆ 5ನೇ ಕಾಲಂ ಇಲ್ಲವೆಂದು ಭಾವಿಸಲಾಗುವುದಿಲ್ಲ. ಜರ್ಮನರ ಶಕ್ತಿಯು ಅಪಾರವಾದುದು ಅವರು ಜಗತ್ತಿನ ಸಮಸ್ತ ರಾಷ್ಟ್ರಗಳಲ್ಲಿಯೂ ಹರಡಿರುವರು. ಇದರಲ್ಲಿ ಒಂದು ಮಾತನ್ನು ಗಮನಿಸಬೇಕು. '5ನೇ ಕಾಲಂ'ಗೆ ಸೇರಿದವರೆಲ್ಲರೂ ಜರ್ಮನ್ ವಂಶಸ್ಥರೇ ಆಗಬೇಕಾದ್ದಿಲ್ಲ. ಸ್ವತಃ ಹಿಟ್ಲರನೇ ಆಸ್ಟ್ರಿಯದವನಲ್ಲವೇ? ನಾಜಿಜಂ ಮತ್ತು ಜರ್ಮನಿಯು ಒಂದಾಗಲು ಕಾರಣವೇನೆಂದರೆ.-ನಾಜಿಗಳು ಜರ್ಮನಿಯವರನ್ನು ಅಪೇಕ್ಷಿಸುತ್ತಿರಬಹುದು ಅಥವಾ ಜರ್ಮನಿಯವರಿಗೇ ನಾಜಿಗಳ ರಾಜಕೀಯ ಪದ್ಧತಿಯು ಒಪ್ಪಿಗೆಯಾಗಿರಬಹುದು. ಆದುದರಿಂದ ಭಾರತದಲ್ಲಿರುವ ಯೂರೋಪಿಯನರೆಲ್ಲರೂ ನಾಜಿಗಳಿಗೆ ವಿರೋಧಿಗಳೋ ಅಥವಾ ಪರವಾಗಿರುವರೋ ಹೇಳಲಾಗುವುದಿಲ್ಲ ಇವರಲ್ಲಿಯೂ ನಾಜಿಗಳ ಏಜಂಟರೂ ಇರಬಹುದು.

ಬ್ರಿಟನಿನ ಉದಾಹರಣೆ

ಬ್ರಿಟನು ಎಲ್ಲಾ ವಿದೇಶಿಯರನ್ನೂ ಬಂಧಿಸಿದೆ. ಜರ್ಮನರ ಭಯದಿಂದ ಬ್ರಿಟನ್ನಿಗೆ ಹೋಗಿ ಶರಣುಹೊಂದಬೇಕೆಂದಿರುವವರನ್ನು ಬಂಧಿಸುವುದು ಒಂದು ವಿಚಿತ್ರವಾದ ಘಟನೆ ಹೌದು. '5ನೇ ಕಾಲಂ'ನ ಅಪಾಯ ತರಹವೆ ಅಷ್ಟೊಂದು ಹೆಚ್ಚಾಗಿರುವುದರಿಂದ ಈ ರೀತಿ ಮಾಡದೆ ಬೇರೆ ಮಾರ್ಗವೇ ಇಲ್ಲ.

S.

— ನೋಟೀಸು —

"ನವಯುಗ"ದ ಬಿಡಿ ಪ್ರತಿಗಳನ್ನು ಮಾರಾಟಮಾಡಲು ಈ ಕೆಳಗಿನ ಸ್ಥಳಗಳಲ್ಲಿ ಹೊಸ ಏಜಂಟರು ಬೇಕಾಗಿದ್ದಾರೆ. ಇಷ್ಟವುಳ್ಳವರು ಬರಕೊಳ್ಳಬಹುದು.

1. ಕುಂದಾಪುರ, 2. ಸಕಲೇಶಪುರ, 3. ಕೊಪ್ಪ, 4. ಚನ್ನಗಿರಿ, 5. ಬ್ರಹ್ಮಾವರ, 6. ಭಟ್ಕಳ, 7. ಹಾಸನ.

ಮಂಗಳೂರು ಮತ್ತು ಉಡುಪಿಗೆ ಬಂದಾಗ ನಿಮಗೆ
ಸುಖವಾದ ನಿವಾಸ ದೊರೆಯಬೇಕೋ ?
— ಹಾಗಾದರೆ —
ಸುಖನಿವಾಸಕ್ಕೆ ಬನ್ನಿ.
ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,
ವಿದ್ಯುದ್ದೀಪಾಲಂಕೃತ ಕೋಣೆ.
ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವುದೆಲ್ಲಿ?
ಸುಖನಿವಾಸದಲ್ಲಿ ಮಾತ್ರ.
ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.
ಮಂಗಳೂರಿನಲ್ಲಿ ಜೇಡಿಗುಡ್ಡೆಯಲ್ಲಿಯೂ, ಉಡುಪಿಯಲ್ಲಿ ತಾಲೂಕು ಕಚೇರಿಯ ಬಳಿಯಲ್ಲಿಯೂ ಇರುವ 'ಸುಖನಿವಾಸ'ವನ್ನು ಒಮ್ಮೆ ಸಂದರ್ಶಿಸಿರಿ.
ಪ್ರೊಪ್ರೈಟರ್, ಸುಖನಿವಾಸ.

ಒಮ್ಮೆ ತೊಡಗಿದಿರೆಂದರೆ ಕಡೆತನಕವೂ ಓದದೆ ಬಿಡಲಾಗದ ಪುಸ್ತಕ—
ಪಂಚಾರತಿ
'ಭಾರತೀ ಗ್ರಂಥಮಾಲೆ'ಯವರು ನೂತನವಾಗಿ ಪ್ರಕಟಿಸಿದ ಕರ್ನಾಟಕದ ಪ್ರಸಿದ್ಧ ಬರಹಗಾರರೈವರ ಐದು ಏಕಾಂಕ ನಾಟಕಗಳ ಸಂಗ್ರಹ.
(೧) ಮುಸುಕು (ಶ್ರೀ. ಎನ್. ಕೆ. ಕುಲಕರ್ಣಿ, ಎಂ. ಎ.)
(೨) ಪ್ರಾಯಶ್ಚಿತ್ತ (ಶ್ರೀ. ಎಸ್. ವೆಂಕಟರಾಜ)
(೩) ಜ್ವಾಲಾಮುಖಿ (ಶ್ರೀ. ಬಿ. ಅಶ್ವತ್ಥನಾರಾಯಣ ರಾವ್)
(೪) ಭಾರತಿಯ ಭಾಗ್ಯೋದಯ (ಶ್ರೀ. ಆರ್. ವಿ. ಜಾಗೀರ್‌ದಾರ್ ಎಂ. ಎ. (ಲಂಡನ್))
(೫) ಓಂ ಬೋರಿಬಸ್ಸಿಗೆ ಮೂರು ಸಾವಿರ (ಶ್ರೀ. ಕೊರಡ್ಕಲ್ ಶ್ರೀನಿವಾಸ ರಾವ್)
ಮನೋಹರವಾದ ಅಂತರಂಗ! ಚಿತ್ತಾಕರ್ಷಕ ಬಹಿರಂಗ!!
80 ಪುಟಗಳು ಬೆಲೆ 0—4—0
(0—5—0 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗವುದು.)
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕರ್ನಾಟಕ ಸಾಹಿತ್ಯ ಪರಿಷತ್ತಿನ ರಜತ ಮಹೋತ್ಸವ

ಶ್ರೀಮಾನ್ ಮಹಾರಾಜರವರು ಇದರ ಆರಂಭೋತ್ಸವ ನೆರವೇರಿಸಿದರು.

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮೈಸೂರು, ಜುಲಾಯಿ ೧.

ಮೈಸೂರು ಸಂಸ್ಥಾನವೇಕೆ ಇಡೀ ನಿನ್ನೆಯ ದಿನವು ಕರ್ನಾಟಕದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯತಕ್ಕಂಥಾ ದಿನವು. ಕನ್ನಡಿಗರು ಕುಣಿದು, ನಲಿದು ಮೆರೆದ ದಿನ ನಿನ್ನೆಯ ದಿನ. ಕನ್ನಡ ನಾಡಿನಲ್ಲಿ ಕನ್ನಡ ಮಾತೆಯ ಸೇವೆಗಾಗಿ ಅವಿಚ್ಛಿನ್ನವಾಗಿ ಕಳೆದಿಪ್ಪತ್ತೈದು ವರ್ಷಗಳಿಂದ ಹಗಲಿರುಳು ದುಡಿದು 'ಕನ್ನಡ ಕಸ್ತೂರಿ' ವಾಸನೆಯನ್ನು ಬೀರಿ ಕನ್ನಡ ಸಾಹಿತ್ಯ, ಗದ್ಯ, ಪದ್ಯ ಮತ್ತು ಭಾಷೆಯನ್ನು ಉನ್ನತಸ್ಥಿತಿಗೆ ತರುತ್ತಿರುವ ಮತ್ತು ಕನ್ನಡಾಂಬಿಕೆಯನ್ನು ಕನ್ನಡ ಬಾವುಟದ ಮೇಲೆ ಹಾರಾಡುವಂತೆ ಮಾಡುತ್ತಿರುವ ಬೆಂಗಳೂರಲ್ಲಿರುವ ಕರ್ನಾಟಕ ಸಾಹಿತ್ಯ ಪರಿಷತ್ತಿನ ರಜತ ಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ನಿನ್ನೆಯ ದಿನ ಆಚರಿಸಲಾಯಿತು.

ಮುದ್ದು ಕನ್ನಡಿಗರ ಮನೆಯಲ್ಲಿ ಕನ್ನಡಲಕ್ಷ್ಮಿಯು ತಾಂಡವವಾಡುತ್ತಿದ್ದ ಈ ರಜತ ಮಹೋತ್ಸವದ ಆರಂಭೋತ್ಸವವನ್ನು ಕರ್ನಾಟಕ ಸಿಂಹಾಸನಾಧೀಶ್ವರರೂ, ಕನ್ನಡಕರ್ತರೂ ಕನ್ನಡಿಗರೂ ಆದ ಶ್ರೀಮನ್ ಮಹಾರಾಜ ಶ್ರೀ. ನಾಲ್ವಡಿ ಕೃಷ್ಣರಾಜ ಒಡೆಯರು ನೆರವೇರಿಸಿದರು. ಈ ರಜತ ಮಹೋತ್ಸವವು ನೆರವೇರಿದ ಕ|| ಸಾ|| ಪ|| ಕಟ್ಟಡವನ್ನು ಬಣ್ಣಬಣ್ಣ ಮತ್ತು ಕನ್ನಡ ಬಾವುಟ, ತಳಿರು ತೋರಣಗಳಿಂದ ಅಲಂಕೃತವಾಗಿಸಿ ಮಂಗಳ ವಾದ್ಯಗಳಿಂದ ಭೋರ್ಗರೆಯಿಸಲಾಗುತ್ತಿತ್ತು. ಈ ಉತ್ಸವಕ್ಕೆ ಪರಿಷತ್ತಿನ ಪೋಷಕರಾದ ಶ್ರೀಮದ್ಯುವರಾಜ ಶ್ರೀ. ಜಯಚಾಮರಾಜ ಒಡೆಯರು, ಉಪಪೋಷಕರು, ಅಧ್ಯಕ್ಷ ಉಪಾಧ್ಯಕ್ಷರೂ, ಸದಸ್ಯರುಗಳು, ಹಿತಚಿಂತಕರೂ, ದಿವಾನರೂ, ಅನೇಕ ಮಾನ್ಯ ಮಹಿಳೆಯರೂ, ಮಹನೀಯರೂ, ಕನ್ನಡಾಭಿಮಾನಿಗಳೂ, ಕನ್ನಡ ಲೇಖಕರೂ ಇತರರೂ ಆಗಮಿಸಿ ಸಭೆಯಲ್ಲಿ ತುಂಬಿ ಕಿಕ್ಕಿರಿದಿದ್ದರು. ನಯನಮನೋಹರವಾಗಿದ್ದ ಈ ದೃಶ್ಯವನ್ನು ನೋಡಿ ಅನೇಕರು ಬೆರಗಾಗಿ ಹೋದರೆಂದರೆ ಅತಿಶಯೋಕ್ತಿಯಾಗಲಾರದು. ನಿರ್ದಿಷ್ಟ ಕಾಲಕ್ಕೆ ಸರಿಯಾಗಿ ಶ್ರೀಮನ್ ಮಹಾರಾಜರು ಆಗಮಿಸಲು ಪೋಷಕರಾದ ಶ್ರೀ ಯುವರಾಜರೂ, ಇತರ ಅಧಿಕಾರಿಗಳೂ ಪ್ರಭುಗಳಿಗೆ ಸ್ವಾಗತ ನೀಡುತ್ತಿರುವಾಗ್ಯೆ ಸಭೆಯು ಒಂದು ಬಾರಿ ಜೈಕಾರವನ್ನಾಡಿದ್ದು ನಭೋಮಂಡಲ ಮುಟ್ಟಿತು. ಪ್ರಭುಗಳು ವಿಶೇಷವಾಗಿ ಏರ್ಪಡಿಸಿದ್ದ (ಕ್ಯಾನೊಪಿ) ಆಸನದಲ್ಲಿ ಕುಳಿತರು.

ಕನ್ನಡಿಗರ ಪ್ರಚಂಡ ಸಭೆ—ಸಭೆಯು ಬಾಲಕಿಯರ ಪ್ರಾರ್ಥನೆಯೊಡನೆ ಪ್ರಾರಂಭವಾಯಿತು. ಕನ್ನಡ ನಾಡಿನ ಮೇಲೆ ರಚಿಸಲಾಗಿದ್ದ ವಿಶೇಷ ಪದ್ಯಗಳನ್ನೋದಲಾಯಿತು. ಮಹೋತ್ಸವವು ಯಶಸ್ವಿಯಾಗಿ ಜರಗಲೆಂದು ಕರ್ನಾಟಕದ ಆದ್ಯಂತದಿಂದಲೂ ಕನ್ನಡಾಭಿಮಾನಿಗಳೂ, ಇತರರೂ ಕಳುಹಿಸಿದ್ದ ಶುಭ ಸಂದೇಶಗಳನ್ನು ಸಭೆಯಲ್ಲಿ ಓದಲಾಯಿತು. ಸ್ವಾಗತ ಸಮಿತಿ ಸ್ವಾಗತಾಧ್ಯಕ್ಷರ ಭಾಷಣ ನಡೆದು, ಕ|| ಸಾ|| ಪ|| ಹುರಿಯಿಂದ ಸ್ಥಾಪಿತವಾಗಿ ಕಳೆದ 25 ವರ್ಷಗಳಲ್ಲಿ ಆ ಸಂಸ್ಥೆಯವರ ಕನ್ನಡ ಸೇವೆಗಾಗಿ ಮಾಡುತ್ತಿರುವ ಕಾರ್ಯಗಳನ್ನು, ಇತರ ವಿಷಯಗಳನ್ನೂ ತಿಳಿಸಿ ಪ್ರಭುಗಳಿಗೆ ಒಂದು ಬಿನ್ನವತ್ತಳೆಯನ್ನು ದಿವ್ಯವಾದ ರಜತ ಕರಂಡದಲ್ಲಿ ಅರ್ಪಿಸಿದ್ದನ್ನು ಪ್ರಭುಗಳು ಸಂತೋಷದಿಂದ ಸ್ವೀಕರಿಸಿದರು.

ಶ್ರೀಮಾನ್ ಮಹಾರಾಜರವರ ಭಾಷಣ—ಅಸಾಮಾನ್ಯವಾದ ಉಡುಪನ್ನು ಧರಿಸಿದ್ದ ಪ್ರಭುಗಳು ಕರತಾಡನಗಳ ಮಧ್ಯೆ ಎದ್ದು, ಮೈಕ್ರೋಫೋನಿನ ಮುಂದೆ ನಿಂತು ಈ ಉತ್ಸವ ಆರಂಭೋತ್ಸವ ನಡೆಸಿ ಬಹು ಗಂಭೀರ ಧ್ವನಿಯಲ್ಲಿ ಕನ್ನಡದಲ್ಲಿ ಭಾಷಣ ಮಾಡಿದಾಗ ಸಭೆಯು ನಿಶ್ಶಬ್ದದಿಂದಿತ್ತು, ಪ್ರಭುಗಳ ಭಾಷಣವು ಮನಕರಗುವಂತಿತ್ತು. ಸರ್ವ ಕನ್ನಡಿಗರೂ ಇನ್ನೂ ಹೆಚ್ಚು ಕನ್ನಡ ಸೇವೆ ಸಲ್ಲಿಸಲು ತಯಾರಾಗ ಬೇಕಲ್ಲದೆ, ಕನ್ನಡ ಕೀರ್ತಿಯು ಇನ್ನೂ ಹೆಚ್ಚಾಗಿ ವ್ಯಾಪಿಸಿ ಕನ್ನಡವನ್ನು ಉದ್ಧರಿಸಿ ಕನ್ನಡ ಪತಾಕೆಯು ಎತ್ತರವು ಇನ್ನೂ ಹೆಚ್ಚು ಮಟ್ಟಕ್ಕೆ ಏರುವಂತೆ ಸರ್ವರೂ ಸಹಕರಿಸಬೇಕೆಂದೂ, ಇತರ ವಿಷಯಗಳಿಂದ ಕೂಡಿತ್ತು.

ಕ|| ಸಾ|| ಪ||ವವರ ತಮ್ಮ ಸುವರ್ಣ, ವಜ್ರ ಮತ್ತು ಶತಮಾನೋತ್ಸವಗಳನ್ನು ನಡೆಸಿ, ಇನ್ನೂ ಹೆಚ್ಚು ಕನ್ನಡ ಸೇವೆ ಸಲ್ಲಿಸಲು ಅವರ ಕಾರ್ಯಗಳು ಸುಲಲಿತವಾಗಿ ನಡೆಯಲೆಂದು, ಕನ್ನಡಾಭಿಮಾನಿಗಳೂ ಹಿರಿಯರೊಬ್ಬರೂ ನಮ್ಮ ಪ್ರತಿನಿಧಿಗಳಿಗೆ ತಿಳಿಸಿದರು.

ಈ ಉತ್ಸವವು ಮೂರು ದಿನಗಳ ವರೆಗೆ ನೆರವೇರಿತು. ಕ|| ಸಾ|| ಪ|| ವಿವಿಧ ಭಾಗಗಳ ಕಟ್ಟಡಗಳೂ ಸಭೆಗಳೂ ನಡೆದವು. ಅನೇಕ ವಿಷಯಗಳ ಬಗ್ಗೆ ಚರ್ಚೆ ನಡೆಸಲಾಯಿತು. ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ, ಇದರಲ್ಲಿ ಗೆದ್ದವರಿಗೆ ಬಹುಮಾನ ಹಂಚಲಾಯಿತು.

ಈ ಉತ್ಸವದ ಸಂಬಂಧ ಸಾ|| ಪ|| ಕಟ್ಟೋಣದಲ್ಲಿ ಕನ್ನಡ ದಿನ, ವಾರ ಮತ್ತು ಮಾಸ ಪತ್ರಿಕೆಗಳ ಪ್ರದರ್ಶನವೊಂದನ್ನು ಏರ್ಪಡಿಸಲಾಗಿತ್ತು. ಇದರಲ್ಲಿ ಅನೇಕ ಹಳೆಯ ಪತ್ರಿಕೆಗಳ ಪ್ರತಿಗಳನ್ನು ಪ್ರದರ್ಶಿಸಲಾಗಿತ್ತು.

ಕನ್ನಡ ನಾಡಿನ ಆದ್ಯಂತದಿಂದಲೂ, ಅನೇಕ ಕರ್ನಾಟಕ ಸಂಘಗಳಿಂದಲೂ ಬಂದಿದ್ದ ಪ್ರತಿನಿಧಿಗಳೂ ಇತರರೂ ಒಟ್ಟುಗೂಡಿ ಸಂಗೀತ, ನರ್ತನ, ನಾಟಕ ನಡೆಸಿ, ಕನ್ನಡಾಂಬಿಕೆಯನ್ನು ನಲಿಸಿ ಕುಣಿಸಿ, ಸಂತೋಷಸಾಗರದಲ್ಲಿ ಮುಳುಗಿಸಿ, ಉತ್ಸವವನ್ನು ಯಶಸ್ವಿಯಾಗಿ ನೆರವೇರಿಸಿದರು. ಇದಕ್ಕೆ ಕ|| ಸಾ|| ಪ|| ಬಲು ಅಚ್ಚುಕಟ್ಟಾದ ಏರ್ಪಾಡು ಮಾಡಿದ್ದು ಅಭಿನಂದನಾರ್ಹವಾದದ್ದು.

NAVAYUGA
Advertisement Tariff

1 Page Rs. 25/- per insertion
½ ,, Rs. 15/- ,, ,,
¼ ,, Rs. 8/- ,, ,,
⅛ ,, Rs. 5/- ,, ,,
Per Single inch col. Re. 1 ,,
Contract rates on application
Manager N.vayuga UDIPI.

ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ಮಹಾಸಭೆ

ತಾ. 16-6-1940ರಲ್ಲಿ ಅಪರಾಹ್ನ ಘಂಟೆ 4ಕ್ಕೆ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗಿದ ಬಂಟರಯಾನೆ ನಾಡವರ ಸಂಘದ ಮಹಾಸಭೆ.

ತಾ. 9-6-1940ರಲ್ಲಿ ಜರಗಬೇಕಾಗಿದ್ದ ಮಹಾಸಭೆಯು ಸಂಘದ ಮಹನೀಯರು ಸಾಕಷ್ಟು ಬಾರದೆ ಇದ್ದುದರಿಂದ ಮುಂದರಿಸಲ್ಪಟ್ಟು ತಾರೀಕು 16-6-1940ರಲ್ಲಿ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದಲ್ಲಿ ಶ್ರೀ ಪಳ್ಳಿ ಮಹಾಬಲ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಕಾರ್ಯದರ್ಶಿಗಳಾಗಿದ್ದ ಶ್ರೀ. ನಾರಾಯಣ ಭಂಡಾರಿಗಳವರು, ಸದಸ್ಯರಾಗಿದ್ದ ಶ್ರೀ. ಅಸೋಡು ಸುಬ್ಬಣ್ಣ ಶೆಟ್ರು, ಮೂಲ್ಕಿ ದಾಸು ಶೆಟ್ರು ಮತ್ತು ಭವನದ ಹಳೇ ವಿದ್ಯಾರ್ಥಿ ಯಸ್. ರಾಮಣ್ಣ ಶೆಟ್ರು ಇವರುಗಳ ಅಕಾಲ ನಿಧನದ ಕುರಿತು ದುಃಖಸೂಚನೆ ಠರಾವನ್ನು ಮಂಜೂರುಮಾಡಲಾಯಿತು.

ಸಂಘದ ಕಾರ್ಯದರ್ಶಿಯವರ, ಕೋಶಾಧಿಕಾರಿ ಮತ್ತು ಬಡ ವಿದ್ಯಾರ್ಥಿ ಫಂಡಿನ ಕಾರ್ಯದರ್ಶಿಯವರ ವಾರ್ಷಿಕ ವರದಿ, ಜಮಾ ಖರ್ಚಿನ ಪಟ್ಟಿ ಮತ್ತು ಆಡಿಟರವರ ರಿಪೋರ್ಟನ್ನು ಓದಿ ಮಂಜೂರು ಮಾಡಲಾಯಿತು. ಬಂಟರ ಯಾನೆ ನಾಡವರ ಸಂಘದ ತಾಲೂಕುಗಳಲ್ಲಿರುವ ಉಚಿತ ವಿದ್ಯಾರ್ಥಿ ಭವನಗಳ ವಾರ್ಷಿಕ ರಿಪೋರ್ಟನ್ನು ಕಳುಹಿಸಬೇಕೆಂದು ಆಯಾಯ ಭವನದ ಸುಪರಿಂಟೆಂಡೆಂಟರವರಿಗೆ ತಿಳಿಸಿದರೂ ಅವರು ವಾರ್ಷಿಕ ವರದಿಯನ್ನು ಕಳುಹಿಸದೇ ಇದ್ದದ್ದು ಬಹಳ ಶೋಚನೀಯವಾಗಿರುತ್ತದೆ. ಇನ್ನು ಮುಂದಾದರೂ ಸದ್ರಿ ರಿಪೋರ್ಟನ್ನು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯವರಿಗೆ ಆಯಾ ಭವನದ ಸುಪರಿಂಟೆಂಡೆಂಟರು ಕಳುಹಿಸುವರಾಗಿ ನಂಬಲಾಗಿದೆ. ಮುಂದಿನ ವರುಷಕ್ಕೆ ಶ್ರೀ. ಕೆ. ರಾಮ ಶೆಟ್ರು, ವಕೀಲ್ ಕಾಸರಗೋಡು, ಇವರನ್ನು ಸಂಘದ ಅಧ್ಯಕ್ಷರನ್ನಾಗಿಯೂ, ರಾವ್ ಸಾಹೇಬ್ ಪಿ. ಆರ್. ರಂಗನಾಥ ಪೂಂಜರು, ಎಡ್ವೋಕೇಟ್, ಮಂಗಳೂರು, ಇವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ. ಕೆ. ಉಗ್ಗಪ್ಪ ಶೆಟ್ರು, ಎಡ್ವೋಕೇಟ್, ಮಂಗಳೂರು, ಇವರನ್ನು ಕಾರ್ಯದರ್ಶಿಯವರನ್ನಾಗಿಯೂ, ಶ್ರೀ ಎ. ವಿಠಲ ಪೂಂಜರನ್ನು ಕೋಶಾಧಿಕಾರಿಯವರನ್ನಾಗಿಯೂ ಆರಿಸಲಾಯಿತು.

ಬೇರೆ ಸಮಾಜದ ವಿದ್ಯಾರ್ಥಿಗಳನ್ನು ಭವನಕ್ಕೆ ಸೇರಿಸುವ ಅಧಿಕಾರವನ್ನು ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದ ಆಡಳಿತ ಕಮಿಟಿಗೆ ಕೊಡಲಾಯಿತು.

ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದ ಹಳೇ ವಿದ್ಯಾರ್ಥಿ ಸಂಘದ ಕಡೆಯಿಂದ ಬಂದ ಠರಾವು ಪ್ರಕಾರ ಹುಡುಗಿಯರ ವಿದ್ಯಾರ್ಥಿಭವನವನ್ನು ತೆರೆಯುವುದು ಯುಕ್ತವೆಂದು ನಿಶ್ಚಯಿಸಿ ಆ ಬಗ್ಗೆ ಮುಂದಿನ ಕಾರ್ಯವನ್ನು ಶೀಘ್ರವಾಗಿ ನೆರವೇರಿಸುವರೆ ಒಂದು ಕಮಿಟಿಯನ್ನು ನೇಮಕ ಮಾಡಿ ಮತ್ತು ಸದ್ರಿ ಕಮಿಟಿಯ ರಿಪೋರ್ಟನ್ನು ಪರ್ಯಾಲೋಚಿಸಿ, ಹುಡುಗಿಯರ ವಿದ್ಯಾರ್ಥಿಭವನವನ್ನು ತೆರೆಯುವ ಮತ್ತು ಅಗತ್ಯವಿರುವ ವೆಚ್ಚವನ್ನು ಮಾಡುವ ಅಧಿಕಾರವನ್ನು ಸಂಘದ ಕಾರ್ಯನಿರ್ವಾಹಕ ಕಮಿಟಿಗೆ ಕೊಡಲಾಯಿತು. ಅಧ್ಯಕ್ಷರಿಗೆ ವಂದನೆಯನ್ನು ಅರ್ಪಿಸಿದ ನಂತರ ಸಭೆಯು ಮುಕ್ತಾಯವಾಯಿತು.

ಸಮಾಜದ ಮಹನೀಯರುಗಳೆಲ್ಲಾ ಸಂಘದ ಉದ್ದೇಶಗಳನ್ನು ನೆರವೇರಿಸುವರೆ ತಕ್ಕ ಪ್ರೋತ್ಸಾಹವನ್ನು ಕೊಡಬೇಕಾಗಿಯೂ ಮತ್ತು ಮಹಾಸಭೆಯ ನಿರ್ಣಯಗಳನ್ನು ಕೊನೆಗಾಣಿಸುವರೆಯೂ ಸಹಾಯವನ್ನು ಮಾಡಬೇಕಾಗಿಯೂ ಹೊಸ ನಿರ್ಣಯ ಮತ್ತು ಕಾರ್ಯಗಳನ್ನು ನಿರ್ವಹಿಸುವರೆ ಹೊಸ ಸೂಚನೆಗಳನ್ನು ಕಾಗದ ಮೂಲಕ ತಿಳಿಸಬೇಕಾಗಿಯೂ ಸಂಘದ ಕಾರ್ಯದರ್ಶಿಗಳು ಅರಿಕೆಮಾಡಿಕೊಳ್ಳುತ್ತಾರೆ.

K. U. Shetty,
Secretary.
Bunt Alias Nadavar Saugha.

ನವಭಾರತ ಪುಸ್ತಕಭಂಡಾರದಲ್ಲಿ
ಲೈಬ್ರೆರಿ ಪುಸ್ತಕಗಳು
ದೊರೆಯುತ್ತವೆ.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ

ಕಾಂಗ್ರೆಸ್ ಸದಸ್ಯರಾಗಿರಿ

ಈ ಮೊದಲೇ ಎಲ್ಲಾ ಜಿಲ್ಲೆಗಳಿಗೂ ಕಾಂಗ್ರೆಸ ಸದಸ್ಯರನ್ನು ಮಾಡುವ ಪುಸ್ತಕಗಳನ್ನು ಕಳಿಸಿ ಎಷ್ಟೋ ದಿವಸಗಳಾದವು. ಆದರೂ ಇನ್ನೂ ಕಾಂಗ್ರೆಸ ಮೆಂಬರರನ್ನು ಮಾಡುವ ಕಾರ್ಯವನ್ನು ಯಾರೂ ಕೈಕೊಂಡಂತೆ ಕಾಣುವದಿಲ್ಲ. ಆದ್ದರಿಂದ ಎಲ್ಲ ಜಿಲ್ಲಾ ಕಾಂಗ್ರೆಸ ಸಮಿತಿಗಳಿಗೂ, ಜನತೆಗೂ ಅದರ ಬಗ್ಗೆ ಸೂಚಿಸಬೇಕಾಗಿದೆ. ಈಗ ಎಲ್ಲರೂ ಕೂಡಲೇ ಕಾಂಗ್ರೆಸ ಪ್ರಾಥಮಿಕ ಸದಸ್ಯರನ್ನು ಮಾಡುವ ಕಾರ್ಯ ಕೈಕೊಳ್ಳಬೇಕು. ಕಾಂಗ್ರೆಸ ಸದಸ್ಯರ ಸಂಖ್ಯೆಯು ಈ ಸಲ ಅದಷ್ಟು ಹೆಚ್ಚು ಆಗುವಂತೆ ಪ್ರತಿಯೊಬ್ಬರು ಪ್ರಯತ್ನಿಸಬೇಕು.

ದರಿದ್ರವಾಗಿ ಹೋದ ನಮ್ಮ ದೇಶದ ಹಿತ ಸಾಧಿಸುವ ಸಲುವಾಗಿ ಕಾಂಗ್ರೆಸ್ಸು ಎಷ್ಟು ವರುಷಗಳಿಂದ ಎಷ್ಟೆಷ್ಟು ಕಷ್ಟಪಡುತ್ತಿದೆ ಎಂಬುದು ಎಲ್ಲರಿಗೂ ಗೊತ್ತಾದ ಸಂಗತಿಯಾಗಿದೆ. ಅದರ ಪ್ರಯತ್ನದಿಂದ ಬಹುಕಾಲ ಮಬ್ಬುಗೊಂಡಿದ್ದ ದೇಶವು ಎಚ್ಚೆತ್ತು ಜನತೆಗೆ ತಮ್ಮ ಹಿತ ಹಾಗೂ ಹಕ್ಕುಬಾಧ್ಯತೆಗಳ ಜ್ಞಾನ ಉಂಟಾಗುವಂತಾಗಿದೆ. ಉಚ್ಚ ಧ್ಯೇಯ ಮತ್ತು ಉದಾತ್ತ ತತ್ವಗಳ ಮೂಲಕ ಕಾಂಗ್ರೆಸ್ಸು ಜನತೆಯ ಸಹಾನುಭೂತಿಯನ್ನು ಪಡೆದು ದೊಡ್ಡ ಸಾಮರ್ಥ್ಯ ಉಳ್ಳದ್ದಾಗಿದೆ. ಆದಾಗ್ಯೂ ಜನತೆಯ ಸಂಪೂರ್ಣ ಹಿತ ಸಾಧಿಸಬೇಕಾದರೆ ಅದರ ಬಲವು ಇನ್ನೂ ಬೆಳೆಯಬೇಕಾಗಿದೆ.

ಜನತೆಯು ಜನ್ಮಸಿದ್ಧ ಹಕ್ಕಾದ ಸ್ವರಾಜ್ಯವನ್ನು ದೊರಕಿಸಲು ಕಾಂಗ್ರೆಸ್ಸು ಹಲವು ದಿವಸಗಳಿಂದ ಹಲವು ವಿಧವಾಗಿ ಹೆಣಗಾಡಿ ನಡಿಸಿದೆ. ಹಿಂದುಸ್ಥಾನದಲ್ಲಿಯ ಸಮಸ್ತ ಜನಾಂಗದ ಸಹೋದರರಿಗೆ ಹಿತ ಹಾಗೂ ಹಕ್ಕು ಸಿಗಬೇಕಾದರೆ ಘಟನಾ ಸಮಿತಿಯ ಹೊರತು ಇನ್ನಾವ ಯೋಜನೆಯೂ ಯೋಗ್ಯವಾದುದಿಲ್ಲವೆಂದು ಕಾಂಗ್ರೆಸ್ಸು ಕಂಡ ಹಿಡಿದಿದೆ. ಅದರಿಂದಲೇ ಯಾವತ್ತೂ ಮತಧವರ ಎಲ್ಲ ಹಕ್ಕು (ಪಾಲು) ಸರಿಯಾಗಿ ಲಭಿಸುವಂತಾಗುವದೆಂದು ಎಲ್ಲ ಸಮಾಜದಲ್ಲಿಯ ಸಮದೃಷ್ಟಿಯ ಶಿಷ್ಟ ಜನರ ಅಭಿಮತವಾಗಿದೆ. ಆದ್ದರಿಂದ ಪ್ರತಿಯೊಬ್ಬರು ಕಾಂಗ್ರೆಸ ಮೆಂಬರರಾಗಿ ಕಾಂಗ್ರೆಸಿನ ಶಕ್ತಿಯನ್ನು ಹೆಚ್ಚಾಗಿ ಬೆಳೆಸಿ, ಎಲ್ಲರ ಪೂರ್ಣ ಹಿತವನ್ನು ದೊರಕಿಸಲು ಪ್ರಯತ್ನಿಸುತ್ತಿರುವ ಸಂಸ್ಥೆಯ ಕಾರ್ಯದಲ್ಲಿ ಸಹಭಾಗಿಗಳಾಗುವಂತೆ ಮಾಡಬೇಕು.

ಈ ಸಲ ಬೇಕಾದಂಥ ಕಷ್ಟ ನಷ್ಟ ಸಹಿಸುವ ಪ್ರಸಂಗ ಬಂದರೂ ಪರವಾಯಿಲ್ಲ, ಸಂಪೂರ್ಣ ಸ್ವರಾಜ್ಯಕ್ಕಾಗಿ ಹೋರಾಡಬೇಕೆಂಬ ನಿರ್ಧಾರವನ್ನು ಕಾಂಗ್ರೆಸ್ಸು ಮಾಡಿದೆ. ಈ ಮಹಾಕಾರ್ಯದಲ್ಲಿ ಶಕ್ತಿದ್ದ ಸಹಾಯ ಮಾಡಿಯೇ ತೀರಬೇಕಾದುದು ಸರ್ವರ ಧರ್ಮವಾಗಿದೆ. ಹೆಚ್ಚು ಏನೂ ಮಾಡಲಿಕ್ಕೆ ಆಗದವರು, ಕಾಂಗ್ರೆಸ ಮೆಂಬರನಾದರೂ ಆಗಿರುವೆನೆಂದು ಎನ್ನಿಸಿಕೊಳ್ಳುವಷ್ಟಾದರೂ ಅಭಿಮಾನವನ್ನು ಪ್ರತಿಯೊಬ್ಬರು (ಸ್ತ್ರೀ ಪುರುಷರು) ಮನಸಿನಲ್ಲಿ ತಾಳುವದು ಯುಕ್ತವಾಗಿದೆ. ಎಲ್ಲರ ಹಿತದ ದೃಷ್ಟಿಯಿಂದ ಕಾಂಗ್ರೆಸದ ಸಾಮಾನ್ಯ ಸದಸ್ಯರಾಗಿ ರಾಷ್ಟ್ರಕಾರ್ಯದ ಶ್ರೇಯಸ್ಸಿನಲ್ಲಿಯೂ ಕೀರ್ತಿಯಲ್ಲಿಯೂ ಎಷ್ಟೋ ಆಗಲಿ ಭಾಗಿಗಳಾಗುವಂತೆ ಮನಸ್ಸು ಮಾಡಬೇಕೆಂದು ಕಳಕಳಿಯ ಸೂಚನೆ.

ಧಾರವಾಡ 23-6-'40 } ಚನ್ನ ಬಸಪ್ಪ ಅಂಬಲಿ
ಪ್ರ. ಕಾರ್ಯದರ್ಶಿ

ಚಂದಾದಾರರಲ್ಲಿ ವಿನಂತಿ.

ನವಯುಗದ ಚಂದಾ ಹಣ ಬಾಕಿಯಿರುವವರು ದಯಮಾಡಿ ಅದನ್ನು ಕೂಡಲೇ ಕಳಿಸಿಕೊಡುವಂತೆ ಈ ಮೂಲಕ ವಿನಂತಿಸಲಾಗುತ್ತದೆ.

ಮೆನೇಜರ್.

ನವಯುಗಕ್ಕೆ
ಇಂದೇ
ಚಂದಾದಾರರಾಗಿರಿ

ಯುದ್ಧವು ದೀರ್ಘ ಕಾಲ ನಡೆಯುವುದು.

ಜಾಪಾನು, ಅಮೆರಿಕ ಮತ್ತು ರಸ್ಯಗಳು ಯುದ್ಧಕ್ಕೆಳೆಯಲ್ಪಡುವವೇ?

ಇಡೀ ಲೋಕಕ್ಕೇನೇ ಯುದ್ಧವು ಹಬ್ಬುವುದೇ?

ವಿಮಾನಧಾಳಿಯಿಂದ ಗೆಲ್ಲಲು ಸಾಧ್ಯವಾಗಲಾರದು

ಫ್ರಾನ್ಸು ಶರಣಾಗತವಾದೊಡನೆಯೇ ಸಾವಿರಾರು ಜರ್ಮನ್ ವಿಮಾನಗಳು ಇಂಗ್ಲೆಂಡಿನ ಮೇಲೇರಿ ಹೋಗಿ ಅದನ್ನು ನಪೆ ಬಡಿಯಲೆತ್ನಿಸುವವೆಂದು ನಿರೀಕ್ಷಿಸಲಾಗಿತ್ತು. ಆದರೆ ಜೂನ್ ತಾ. 19ರಿಂದ ಈ ವರೆಗೆ, ಹಿಟ್ಲರರ ಬ್ಲಿಟ್ಸ್‌ಕ್ರೈಗೇನೂ (ಮಿಂಚುಯುದ್ಧ) ನಡೆದುದು ತೋರಿಬರುವುದಿಲ್ಲ. ಇಂಗ್ಲೆಂಡ್, ವೇಲ್ಸ್ ಮತ್ತು ಸ್ಕೋಟ್ಲೆಂಡುಗಳ ಮೇಲೇರಿ ಹೋಗಿ ಅಲ್ಲಲ್ಲಿ ಜರ್ಮನ್ ವಿಮಾನಗಳು ಬೋಂಬಿಸಿದಿರುತ್ತವೆ. ಆದರೆ ಅದರಿಂದ ಹೆಚ್ಚಿನ ಹಾವಳಿಯೇನೂ ಆಗಿರುವುದಿಲ್ಲ. ಸೇನಾಸಿದ್ಧತೆಗೆ ಯಾವ ತರದ ಹಾನಿಯೂ ಉಂಟಾಗಿರುವುದಿಲ್ಲ. ಈ ವರೆಗೆ ಲಂಡನಿನ ಮೇಲೆ ಒಮ್ಮೆಯೂ ಜರ್ಮನ್ ವಿಮಾನಗಳು ಧಾಳಿಯಿಟ್ಟಿರುವುದಿಲ್ಲ. ಹೆಚ್ಚಾಗಿ ರಾತ್ರಿ ವೇಳೆ ಅತಿ ಎತ್ತರದಲ್ಲಿ ಹಾರಾಡಿ ಸುಂದ ಹೆಚ್ಚಿನ ಬೋಂಬುಗಳು ಗದ್ದೆ, ಗುಡ್ಡ ಬೆಟ್ಟಗಳ ಮೇಲೆ ಬಿದ್ದಿರುತ್ತವೆ. ಬ್ರಿಟಿಷ್ ವಿಮಾನನಿರೋಧಕ ವ್ಯವಸ್ಥೆಯು ಅತ್ಯುತ್ತಮವಾಗಿದೆ. ಜೂನ್ ತಾ. 19ರಿಂದ 29ರವರೆಗೆ ಜರ್ಮನ್ ವಿಮಾನಗಳು 8 ಸಲ ಇಂಗ್ಲೆಂಡಿನ ಮೇಲೆ ಹಾರಿ ಬಂದಿರುವವು. ಅವುಗಳಲ್ಲಿ ಕೆಲವನ್ನು ಹೋರಾಡುವ ಬ್ರಿಟಿಷ್ ವಿಮಾನಗಳು ನೆಲಕ್ಕುರುಳಿಸಿವೆ. ಕೆಲವನ್ನು ವಿಮಾನಭೇದಕ ತೋಪುಗಳು ಉರುಳಿಸಿವೆ. ಸರ್ಚ್ ಲೈಟುಗಳನ್ನು ವೈರಿವಿಮಾನಗಳ ಮೇಲೆ ಚೆಲ್ಲಿ ಒಡನೆಯೇ ಅವುಗಳ ಮೇಲೆ ಗುಂಡುಗಳ ಮಳೆಗರೆದು ನಾಶಮಾಡುವ ಕೆಲಸವು ಚಮತ್ಕಾರವಾಗಿ ನಡೆದಿರುವುದು. ಇದರಿಂದಾಗಿ ಜರ್ಮನ್ ವೈಮಾನಿಕರು ಹೆದರಿ ಹೋಗಿರುವಂತಿದೆ. ಅವರು ಬ್ರಿಟಿಷ್ ಸರ್ಚ್‌ಲೈಟುಗಳನ್ನು ತಪ್ಪಿಸಲೆತ್ನಿಸಿ ಅತಿ ಎತ್ತರದಲ್ಲಿ ಹಾರಾಡುತ್ತಾರೆ. ಬ್ರಿಟಿಷ್ ವಿಮಾನಗಳು ಎಡೆಬಿಡದೆ ಜರ್ಮನಿ ಮತ್ತು ಇಟೆಲಿಗಳ ಮೇಲೆ ವಿಮಾನಧಾಳಿ ನಡಿಸಿ ಹೆಚ್ಚಿನ ಹಾವಳಿಮಾಡಿರುತ್ತವೆ. ಇಟೆಲಿಯ ವಿಮಾನಪಡೆಯ ಸ್ಥಾಪನಾಚಾರ್ಯರಂತಿದ್ದ ಮಾರ್ಶಲ್ ಬಾಲ್ಬೋರವರೇ ಬ್ರಿಟಿಷ್ ವಿಮಾನಧಾಳಿಯಲ್ಲಿ ಕೊಲ್ಲಲ್ಪಟ್ಟುದರಿಂದ ಇಟೆಲಿಯ ಪ್ರತಿಷ್ಠೆಯು ಬಹಳವಾಗಿ ಇಳಿಯುವಂತಾಗಿದೆ. ಇಂಗ್ಲೆಂಡಿಗೆ ಅಮೆರಿಕ, ಕೆನಡ, ದಕ್ಷಿಣ ಆಫ್ರಿಕ ಆಸ್ಟ್ರೇಲಿಯ ಮೊದಲಾದ ದೇಶಗಳಿಂದ ಸಾವಿರಗಟ್ಲೆಯಲ್ಲಿ ವಿಮಾನಗಳು ಬರುತ್ತಿವೆ. ದಿನ ಹೋದಂತೆ ಇಂಗ್ಲೆಂಡಿನ ಬಲವು ಅಧಿಕವಾಗುತ್ತಿದೆ. ಆದುದರಿಂದ ವಿಮಾನಧಾಳಿಯ ಮೂಲಕ ಇಂಗ್ಲೆಂಡನ್ನು ಬಗ್ಗುಬಡಿಯಲು ಹಿಟ್ಲರರಿಗೆ ಇನ್ನು ಮುಂದೆ ಸಾಧ್ಯವಾಗಲಾರದು.

ಸಮುದ್ರ ಧಾಳಿಯು ಸಾಧ್ಯವೇ?

ಇಂದೀಗ ನೋರ್ವೆ, ಡೆನ್ಮಾರ್ಕ್, ಹೊಲೆಂಡ್, ಬೆಲ್‌ಜಿಯಮ್ ಮತ್ತು ಫ್ರಾನ್ಸಿನ ಸಮುದ್ರ ಕರಾವಳಿ ಮಾತ್ರವಲ್ಲದೆ ಸ್ಪೈನಿನ ಕರಾವಳಿ ಕೂಡಾ ಜರ್ಮನಿಯ ಅಧೀನವಿರುವಂತಾಗಿದೆಯೆಂದು ಹೇಳಬಹುದು. ಜನರಲ್ ಫ್ರೆಂಕೋರವರು ಜಿಬ್ರಾಲ್ಟರ್ ಜಲಸಂಧಿನ ಬಳಿಯ ಟೇಂಜಿಯರನ್ನು ಇಷ್ಟರಲ್ಲೇ ವಶಪಡಿಸಿಕೊಂಡಿರುವರು. ಸ್ಪೈನು ಕ್ರಮೇಣ ಜರ್ಮನಿ ಇಟೆಲಿಗಳ ಪಕ್ಷ ಹಿಡಿಯದೆ ನಿರ್ವಾಹವಿಲ್ಲದಾಗುವುದು. ಆಫ್ರಿಕದ ಫ್ರೆಂಚ್ ವಸಾಹತುಗಳೂ ಫ್ರಾನ್ಸಿನ ಮಂತ್ರಿಮಂಡಲದ ಪಕ್ಷ ಹಿಡಿದು ತಟಸ್ಥವಿರುವ ನಿರ್ಧಾರ ಮಾಡುವುದರಿಂದ ಮಧ್ಯ ಪೂರ್ವದಲ್ಲಿ ಕೂಡಾ ಇಂಗ್ಲೆಂಡೊಂದೇ ಹೋರಾಡಬೇಕಾಗಿದೆ. ಇಂಗ್ಲೆಂಡು ಜಿಬ್ರಾಲ್ಟರಿನ ಪಶ್ಚಿಮದಲ್ಲಿ ಮತ್ತು ಪೆಲೆಸ್ಟೈನಿಯದ ಪೂರ್ವದಲ್ಲಿ ಹೀಗೆ ಎರಡು ಯುದ್ಧಗಳನ್ನು ನಡಿಸಬೇಕಾಗಿಬರುವುದು. ಜರ್ಮನ್ ಸೇನೆಯು ಈಗ ಫ್ರಾನ್ಸಿನ ಮೂಲಕ ಸ್ಪೈನಿನ ಗಡಿಯ ವರೆಗೆ ಹೋಗಿ ನಿಂತಿದೆ. ಜಿಬ್ರಾಲ್ಟರ್‌ನ್ನು ತಮ್ಮದಾಗಿ ಮಾಡಿಕೊಳ್ಳುವಂತೆ ಹಿಟ್ಲರ್ ಮುಸಲೋನಿಗಳು ಜನರಲ್ ಫ್ರೆಂಕೋರವರನ್ನು ಎತ್ತಿ ಕಟ್ಟಬಹುದು. ಟೇಂಜಿಯರು ಮೊದಲೇ ಸ್ಪೈನಿನ ವಶವಾಗಿರುವುದರಿಂದ ಪಶ್ಚಿಮ ಭೂಮಧ್ಯ ಸಾಗರವನ್ನೇ ಅದು ಬ್ರಿಟಿಷ್ ನೌಕಾ ಪ್ರದೇಶಕ್ಕೆ ಬಂದು ಮಾಡಿಬಿಡುವ ಗಂಡಾಂತರವಿದೆ. ಫ್ರಾನ್ಸಿನ ಮತ್ತು ಸ್ಪೈನಿನ ಕರಾವಳಿಯಲ್ಲಿ ನಿಲಯಗಳನ್ನು ಸ್ಥಾಪಿಸಿಕೊಂಡು ಜರ್ಮನ್ ಸಬ್‌ಮೆರೀನುಗಳು ಬ್ರಿಟಿಷ್ ಹಡಗಗಳನ್ನು ಮುಳುಗಿಸಲೆತ್ನಿಸಬಹುದು. ಇದೇ ರೀತಿ ಇಟೆಲಿಯವರ ಸಬ್‌ಮೆರೀನುಗಳು ಭೂಮಧ್ಯ ಸಾಗರ, ಕೆಂಪು ಸಮುದ್ರ ಮತ್ತು ಹಿಂದುಸಾಗರದಲ್ಲಿ ಹಾವಳಿ ಮಾಡಬಹುದು. ಸಬ್‌ಮೆರೀನ್ ಮತ್ತು ವಿಮಾನ ಧಾಳಿಯ ಮೂಲಕ ಬ್ರಿಟಿಷ್ ಹಡಗು ಪಡೆಯ ಬಲ ಮುರಿದು ವ್ಯಾಪಾರಿ ಹಡಗಗಳು ಚಲಿಸದಂತೆ ತಡೆಗಟ್ಟುವ ಪ್ರಯತ್ನವು ನಡೆಯಬಹುದು. ಇದೇ ಸಂದರ್ಭದಲ್ಲಿ ಇಂಗ್ಲೆಂಡಿನ ಮೇಲೆ ಸಮುದ್ರ ಮೂಲಕ ಧಾಳಿ ನಡಿಸುವ ಸಾಹಸವನ್ನು ಹಿಟ್ಲರರು ಮಾಡಬಹುದು.

1914ರಲ್ಲಿ ಕೂಡಾ ಜರ್ಮನರು ಈ ಆಲೋಚನೆಮಾಡಿದ್ದರು. ಜರ್ಮನ್ ಸೈನಿಕರು ಇಂಗ್ಲೆಂಡಿನ ಕರಾವಳಿಯಲ್ಲಿ ಬಂದಿಳಿಯುವರೆಂಬ ಸುದ್ದಿಯು 1914ನೇ ನವಂಬರದಲ್ಲಿ ದಟ್ಟವಾಗಿ ಹಬ್ಬಿದ್ದಿತು. ಜರ್ಮನ್ ನಾವಿಕರು ಗುಪ್ತವಾಗಿ ಇಂಗ್ಲೆಂಡಿನ ಕರಾವಳಿಯನ್ನು ಪರೀಕ್ಷಿಸಿಹೋಗುತ್ತಿದ್ದರು. ಆದರೆ ಅದೇಕೋ ಈ ಆಲೋಚನೆಯು ಕಾರ್ಯರೂಪಕ್ಕೆ ಬರಲೇ ಇಲ್ಲ. ಸಮುದ್ರ ಮೂಲಕ ಇಂಗ್ಲೆಂಡಿನ ಮೇಲೆ ಧಾಳಿನಡಿಸಬೇಕಾದರೆ ಒಮ್ಮೆ 100,000 ಸೈನಿಕರಾದರೂ ಬಂದಿಳಿಯಬೇಕು. ಈ ಸೈನಿಕರನ್ನೊಯ್ಯುವುದಕ್ಕೇನೇ ೩೦ ದೊಡ್ಡ ಹಡಗಗಳು ಬೇಕು. ಇನ್ನು ಮದ್ದು ಗುಂಡು ತೋಪು ಮೊದಲಾದ ಯುದ್ಧ ಸಾಮಾಗ್ರಿಗಳನ್ನೊಯ್ಯಲು ಹಲವು ಹಡಗಗಳು ಬೇಕು. ಬೇಸಗೆಯ ಮಬ್ಬಿನ ಮರೆಯಲ್ಲಿ 50 ಹಡಗಗಳು ಇಂಗ್ಲೆಂಡನ್ನು ಸಮೀಪಿಸಿ ದರೂ ಸೈನಿಕರು ಮತ್ತು ಯುದ್ಧೋಪಕರಣಗಳನ್ನಿಳಿಸುವುದಾದರೂ ಹೇಗೆ? ಇಂಗ್ಲೆಂಡಿನ ಕರಾವಳಿಯಲ್ಲೆಲ್ಲಾ ದೊಡ್ಡ ದೊಡ್ಡ ಫಿರಂಗಿಗಳಿರಿಸಲ್ಪಟ್ಟಿವೆ. ಸಮುದ್ರ ತೀರದಲ್ಲೆಲ್ಲಾ ಜಾಲತೋಟಿಗಳಿರಿಸಲ್ಪಟ್ಟಿವೆ. ಇವು ಹೊರತು ಕರಾವಳಿಯನ್ನು ಕಾಯುವ ಹಡಗ ಮತ್ತು ವಿಮಾನದಳಗಳಿವೆ. ಇವನ್ನೆಲ್ಲಾ ತಪ್ಪಿಸಿಕೊಂಡು ಬಂದರೂ ನೆಲದ ಮೇಲೆ ಸೇನೆಯನ್ನಿಳಿಸುವಾಗ ಧಾಳಿಯ ಸಂಗತಿಯು ತಿಳಿಯದೆಹೋಗುವುದಿಲ್ಲ. ಆಗ ದೊಡ್ಡ ಕ್ರೂಸರ್ ಮತ್ತು ಡಿಸ್ಟ್ರೋಯರ್ ಹಡಗಗಳೋಡಿಬಂದು ಜರ್ಮನ್ ಹಡಗಗಳನ್ನು ಸದೆಬಡಿಯದಿರಲಾರವು. ಸಮುದ್ರ ಯುದ್ಧದಲ್ಲಿ ಬ್ರಿಟಿಷ್ ನೌಕಾಪಡೆಯನ್ನು ಸೋಲಿಸದೆ ಇಂಗ್ಲೆಂಡಿನ ಮೇಲೆ ಸಮುದ್ರ ಧಾಳಿನಡಿಸುವುದು ಸಾಧ್ಯವೇ ಇಲ್ಲ. ಸಾವಿರಾರು ರಬ್ಬರ್ ಬೋಟುಗಳ ಮೂಲಕ ಸೈನಿಕರು ಇಂಗ್ಲೆಂಡಿಗೆ ಹೋಗುವ ಸಮುದ್ರ ಮಧ್ಯದಲ್ಲಿ ಎರಡು ಸಾಲು ಜಲತೋಟಿ ಹಾಕಿ ನಡುವೆ ಜರ್ಮನ್ ಸೈನಿಕರನ್ನೊಯ್ಯುವ ಸಂಗತಿಗಳೆಲ್ಲಾ ಕೇವಲ ಸುದ್ದಿಗಳಾಗಿ ಹಾರಾಡಬಲ್ಲವೇ ಹೊರತು ಕಾರ್ಯರೂಪಕ್ಕೆ ಬರಲಾರವು. ಬಂದರೂ ಫಲಕಾರಿಯಾಗಲಾರವು.

ಕೆಲವು ಸಾವಿರ ವಿಮಾನಗಳು ಲಕ್ಷಗಟ್ಲೆ ಸಶಸ್ತ್ರ ಜರ್ಮನ್ ಸೈನಿಕರನ್ನು ತಂದಿಳಿಸುವ ಸಾಹಸವನ್ನು ಹಿಟ್ಲರು ಮಾಡಬಹುದು. ಬರೇ ಸೈನಿಕರಿಂದು ಪ್ರಯೋಜನವಿಲ್ಲ. ಅವರೊಂದಿಗೆ ಟೇಂಕ್, ತೋಪು ಮೊದಲಾದ ಯುದ್ಧೋಪಕರಣಗಳನ್ನೂ ತರಬೇಕು. ಇಂತಹ ಧಾಳಿಯನ್ನು ತಡೆಗಟ್ಟುವ ಸಿದ್ಧತೆಯನ್ನು ಇಂಗ್ಲೆಂಡು ಮಾಡಿರುವುದು. ಇಂಗ್ಲೆಂಡಿನಲ್ಲಿ ಅಲ್ಲಲ್ಲಿ ಸೈನಿಕರು ನಿಲ್ಲಿಸಲ್ಪಟ್ಟಿರುವರಲ್ಲದೆ ಜನರೆಲ್ಲರಿಗೂ ಹೇಂಡ್‌ಗ್ರೆನೇಡ್ ಎಂಬ ಶಸ್ತ್ರವನ್ನೊದಗಿಸುವ ಏರ್ಪಾಡಾಗಿರುವುದು.

(ಮುಂದಿನ ಪುಟ ನೋಡಿರಿ)

"ನಾಮರ್ದಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ಸಸೋನಿ ಅಮುಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಸ್ತರರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ.

"ಸವಿನಾ ಟೊನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನವುಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಕ.

ಕಿಮ್ಮತು ರೂ. 3-0-0 ಡಬ್ಬಿ 0-8-0

ಸೊರಠ್ ಫಾರ್ಮಸಿ,
ನಲ್ ಬಜಾರ್, ಡಂಕನ್ ರೋಡ್,
ಮುಂಬಾಯಿ 4

Sorath Pharmacy,
Null Bazzar, Duncan Road,
BOMBAY 4.

ONE REASON.

Love does much, but in this materialistic world, money does more. Save therefore for the sake of those you love.

RESOURCES OF A CRORE. | ESTD. 1906. **Canara Bank Limited.**

ನೋಟೀಸ್.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P. No. 13

ಅಕ್ಕಣಿ ಶೆಟ್ಟಿ ಮೃತ ಯೇಣಗುಡ್ಡೆ ಸದಾಫ ಶಿಡ್ಡಯ್ಯ ಶೆಟ್ಟಿ ಮಗಳು, ಉಡುಪಿ ತಾಲೂಕು ಕಡೆಕಾರು ಗ್ರಾಮ. ಅರ್ಜಿದಾರಳು—

ಮತ್ತು

1 [illegible] ಶೆಟ್ಟಿ ಮೃತ ಯೇಣಗುಡ್ಡೆ ಸದಾಫ ಶಿಡ್ಡಯ್ಯ ಶೆಟ್ಟಿ ಸಹೋದರ,
2 ಕೆ. ರಾಮಚಂದ್ರ ಶೆಟ್ಟಿ, 3 ಸುಂದರಿ ಶೆಡ್ತಿ, 4 ರುದ್ರು ಶೆಡ್ತಿ, ಸದ್ರಿ ಶಿಡ್ಡಯ್ಯ ಶೆಟ್ಟಿ ಮಕ್ಕಳ.
1, 2, 4ನೇ ಎದುರು ಉಡುಪಿ ತಾಲೂಕು ಕಡೆಕಾರು ಗ್ರಾಮದಲ್ಲಿಯೂ, 3ನೇ ಎದುರು ಅಂಬಲಪಾಡಿ ಗ್ರಾಮದಲ್ಲಿಯೂ ಇರುತ್ತಾರೆ. ಎದುರು—

ಸದ್ರಿ ಎದುರಿಗೆ ವ ಇತರ ಸಮಸ್ತ ಜನರಿಗೂ ಈ ಮೂಲಕ ತಿಳಿಯ ಪಡಿಸುವದೇನೆಂದರೆ:—

ಅರ್ಜಿದಾರಳ ವ 2 to 4ನೇ ಎದುರು ತಂದೆ ಮತ್ತು 1ನೇ ಎದುರು ಸಹೋದರ ಮೃತ ಯೇಣಗುಡ್ಡೆ ಸದಾಫ ಶಿಡ್ಡಯ್ಯ ಶೆಟ್ಟಿ ತಾರೀಕು 17-10-35 ರಲ್ಲಿ ಬರೆಸಿದ ಬರಸಿಟ್ಟ ವೀಲು ಪ್ರಕಾರ ಅರ್ಜಿದಲ್ಲಿ ಕಾಣಿಸಿದ ಸಾಲಗಳನ್ನು ವಸೂಲು ಪಡೆಯುವರೆ ತಾನು ಹಕ್ಕುದಾರಳೆಂದಲೂ ಆ ಬಗ್ಗೆ ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕೆಂತಲೂ ಅರ್ಜಿದಾರಳು ಮಾಡಿಕೊಂಡ ವಿನಂತಿಯ ಅರ್ಜಿಯನ್ನು ತಾ. 24-7-40ಕ್ಕೆ ವಿಚಾರಣೆಗಿಟ್ಟಿರುತ್ತದೆ. ಆ ಕುರಿತು ಆಕ್ಷೇಪವುಳ್ಳವರು ಸದ್ರಿ ತಾ. 24-7-40 ನೇ ದಿವಸ ಹಗಲು 10ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರುಮಾಡತಕ್ಕದ್ದು. ತಪ್ಪಿದರೆ ಸದ್ರಿ ಅರ್ಜಿಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

ಉಡುಪಿ ತಾ. 2-7-40 | K J. Ballal ಅರ್ಜಿದಾರಳ ಪರ ವಕೀಲ

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ಉಡುಪಿ, ಗುರುವಾರ ತಾ. ೪-೭-'೪೦

ಕನ್ನಡ ಸಾಹಿತ್ಯ ಪರಿಷತ್ತಿನ ಬೆಳ್ಳಿಯ ಹಬ್ಬ

ಈ ಹಬ್ಬವು ಕಳೆದ ಜೂನ್ ತಾ. 30ರಲ್ಲಿ ಬೆಂಗಳೂರಲ್ಲಿ ಅತ್ಯಂತ ಸಂಭ್ರಮದಿಂದ ಆಚರಿಸಲ್ಪಟ್ಟಿತೆಂಬುದು ಸಂತೋಷದ ಸಂಗತಿ. ಹಬ್ಬದ ಸಮಾರಂಭವನ್ನು ಮೈಸೂರು ಮಹಾರಾಜರು ನಡಿಸಿದರು. ಪೂರ್ವ ಕಾಲದಿಂದಲೂ ಮೈಸೂರು ರಾಜಮನೆತನದವರು ಕನ್ನಡ ಸಾಹಿತ್ಯಕ್ಕೆ ಮಾಡಿರುವ ಸೇವೆಯು ಅಮೂಲ್ಯವಾದುದು. ಆ ಮನೆತನಕ್ಕೆ ಸೇರಿದ 4 ಮಂದಿ ಕನ್ನಡದಲ್ಲಿ ಗ್ರಂಥಗಳನ್ನು ಬರೆದಿರುವರು. ಮಾವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿರುವರು. ಕನ್ನಡ ಸಾಹಿತ್ಯದ ಬೆಳವಣಿಗೆಗೆ ಮೈಸೂರು ರಾಜಮನೆತನದ ಪ್ರೋತ್ಸಾಹವು ಸದಾ ದೊರೆತಿರುವುದು. ಆದುದರಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಬೆಳ್ಳಿಯ ಹಬ್ಬವನ್ನು ಮೈಸೂರು ಮಹಾರಾಜರು ಆರಂಭಿಸುವುದು ಉಚಿತವೇ ಆಗಿದೆ.

ಮೈಸೂರು ಮಹಾರಾಜರು ಬೆಳ್ಳಿಯ ಹಬ್ಬವನ್ನಾರಂಭಿಸುವಾಗ ಮಾಡಿದ ಭಾಷಣವು ವಿಚಾರಣೀಯವಿದೆ. ಭಾಷೆಗಳು ಜೀವಂತ ವಸ್ತುಗಳು. ಹೊಸ ಶಬ್ದ ಮತ್ತು ವಚನಗಳು ಸೇರಿ ಅವು ಬೆಳೆಯುತ್ತ ಹೋಗುತ್ತವೆ. ಲೋಕದಲ್ಲಿ ಜ್ಞಾನಾಭಿವೃದ್ಧಿಯಾದಂತೆ ಮತ್ತು ವಿಜ್ಞಾನವು ನವೀನ ಶೋಧಗಳನ್ನು ಮಾಡಿದಂತೆ ಸಂಪೂರ್ಣ ಭಿನ್ನವಾದ ರೂಪವನ್ನು ಭಾಷೆಗಳು ಪಡೆಯಬಹುದು. ಹೀಗೆ ಬೆಳವಣಿಗೆ ಹೊಂದದವುಗಳು ಮೃತಭಾಷೆಗಳಾಗಿ ಉಳಿಯುವವು. ಸುಮಾರು ಒಂದು ಶತಮಾನದಲ್ಲಿ ಇಂಗ್ಲಿಷ್ ಭಾಷೆಯ ಶಬ್ದಗಳು 70,000ದಿಂದ 5,50,000ಕ್ಕೇರಿರುವವು. ಈ ಬೆಳವಣಿಗೆ ಹೊಂದಿದ ಭಾಷೆಯೇ ಜಗತ್ತಿನಲ್ಲೆಲ್ಲ. ದ್ರಾವಿಡ ಭಾಷೆಗಳ ಬೆಳವಣಿಗೆಯಂತೂ ಬಹಳ ಮಂದಿತವಾಗಿದೆ. 1903ರ ತೆಲುಗು ಶಬ್ದಕೋಶದಲ್ಲಿ ಕೇವಲ 33,000 ಶಬ್ದಗಳಿವೆ. 1894ರ ಕಿಟ್ಟೆಲ್ಸ್ ಕನ್ನಡ ಶಬ್ದಕೋಶವು 65,000 ಶಬ್ದಗಳನ್ನೊಳಗೊಂಡಿದೆ. ಹೊಸ ತಮಿಳು ನಿಘಂಟಿನಲ್ಲಿ 104,000 ಶಬ್ದಗಳಿವೆ. ಆದರೆ ಈ ಭಾಷೆಗಳೆಲ್ಲಾ ಸಂಸ್ಕೃತಕ್ಕಿಂತ ಬಹಳ ಹಿಂದೆಬಿದ್ದಿವೆ. ಸಂಸ್ಕೃತ ಭಾಷೆಯಲ್ಲಿ ಒಟ್ಟು 3,63,000 ಶಬ್ದಗಳಿವೆ. ಭಾಷೆಯು ಅಭಿವೃದ್ಧಿ ಹೊಂದಿ ಸಾಹಿತ್ಯವು ಬೆಳೆದು ಬೆಳಗಬೇಕಾದರೆ ಯಾವ ಭಾಷೆಗಾದರೂ ಕಾಲಸ್ಥಿತಿಗನುಗುಣವಾಗಿ ಹೊಸ ಹೊಸ ಶಬ್ದಗಳು ಸೇರಲೇಬೇಕು. ಇಂಗ್ಲಿಷ್ ಭಾಷೆಯು ಲೋಕದ ಎಲ್ಲಾ ಭಾಷೆಗಳಿಂದಲೂ ಶಬ್ದಗಳ ಪೋಷಣೆ ಪಡೆದು ವಿಚಿತ್ರ ಬೆಳವಣಿಗೆ ಹೊಂದಿದೆ. ಆದುದರಿಂದ ಭಾಷಾ ಶುದ್ಧತೆಯನ್ನು ಕಾಪಾಡಿಕೊಳ್ಳಬೇಕು; ಹಳೆಯದಕ್ಕೇನೇ ಕಟ್ಟುಬಿದ್ದಿರಬೇಕೆಂಬ ಹಳೆಯ ಸಂಪ್ರದಾಯಗಳ ಕೂಗಿನಿಂದ ಹಾನಿಯೇ ಹೊರತು ಒಳ್ಳಿತಿಲ್ಲ.

ಕರ್ನಾಟಕವು ಗೋದಾವರಿಯಿಂದ ಕಾವೇರಿಯವರೆಗೆ ವ್ಯಾಪಿಸಿದ್ದಾಗ ಅದರ ಸಾಹಿತ್ಯ ಮತ್ತು ಸಂಸ್ಕೃತಿಗಳೆಷ್ಟು ಉನ್ನತ ಸ್ಥಿತಿಗೆ ಮುಟ್ಟಿದ್ದುವೆಂಬುದು ಇತಿಹಾಸ ಸಿದ್ಧ ವಿಷಯ. ಇಂಗ್ಲಿಷ್ ಭಾಷೆಯು ಪ್ರಚಾರದಲ್ಲಿ ಬಂದ ಮೇಲೆ ಅದರ ಆಘಾತದಿಂದ ಆರಂಭದಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಗೊಂದಲ ಮತ್ತು ಅನಾಯಕತ್ವಗಳುಂಟಾದುವು. ಆ ಮೇಲೆ ನವೀನವಾದೊಂದು ಕ್ರಾಂತಿಯಾಗಿ ನವಸೃಷ್ಟಿಗಾರಂಭವಾಯಿತು. ಈ ನವ ರಚನೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನವರು ಪ್ರಾಮುಖ್ಯಸ್ಥಾನವಹಿಸಿರುವರು. ಹಳೆಯ ಕನ್ನಡಕ್ಕೆ ಹೊಸ ಸ್ವರೂಪನ್ನಿತ್ತಿರುವರು. ಇದರಿಂದಾಗಿ ಹೊಸ ಕನ್ನಡ ಸಾಹಿತ್ಯವು ಧಾರಾಳವಾಗಿ ಹುಟ್ಟಿ ಅಭಿವೃದ್ಧಿಹೊಂದುವಂತಾಯಿತು. ಇಂದೀಗ ಹೊಸ ಕನ್ನಡ ಸಾಹಿತ್ಯದ ಪ್ರವಾಹವೇ ಉಂಟಾಗಿರುವುದು. ಸ್ವಾಭಾವಿಕವಾಗಿ ಹಳೆಗನ್ನಡವು ಹಿಂದೆಬಿದ್ದಿರುವುದು. ಇದಕ್ಕಾಗಿ ಯಾರಾದರೂ ಸಂತಾಪಪಡಬೇಕಾಗಿಲ್ಲ. ಕಾಲ ಸ್ಥಿತಿಗನುಗುಣವಾಗಿ ಭಾಷೆಯು ನವ ಸ್ವರೂಪ ತಳೆಯಲೇಬೇಕು. ಇಲ್ಲವಾದರೆ ಅದು ಜೀವಂತ ಭಾಷೆಯಾಗಿ ಬೆಳವಣಿಗೆಹೊಂದಲಾರದು. ಆಧುನಿಕ ಜ್ಞಾನ, ಕಲೆ ಮತ್ತು ವಿಜ್ಞಾನಗಳನ್ನೆಲ್ಲಾ ಜನತೆಯು ಬಳಿಗೊಯ್ಯುವ ವಾಹನವಾಗಬೇಕು ಭಾಷೆ.

ಇತ್ತಲಾಗಿ ಕನ್ನಡ ಸಾಹಿತ್ಯವು ಸಾಕಷ್ಟು ಬೆಳೆದಿರುವುದು. ಭಿನ್ನ ಭಿನ್ನ ಸ್ವರೂಪದ ಭಾಷೆಗಳನ್ನೆಲ್ಲಾ ಒಂದುಗೂಡಿಸಿ ಕನ್ನಡಕ್ಕೆ ಒಂದೇ ರೂಪವನ್ನೀಯುವ, ಕನ್ನಡಿಗರೆಲ್ಲಾ ಒಂದೇ ಭಾಷೆಯಲ್ಲಿ ಮಾತಾಡಿ ಬರೆಯುವಂತಾಗುವ ಪ್ರಯತ್ನವು ನಡೆಯುತ್ತಿದೆ. ಅಧಿಕಾರಿಕ ಕನ್ನಡ ಶಬ್ದಕೋಶವನ್ನು ತಯಾರಿಸುವ ಪ್ರಯತ್ನವನ್ನು ಸಾಹಿತ್ಯ ಪರಿಷತ್ತಿನವರು ನಡಿಸಿರುತ್ತಾರೆ. ಕನ್ನಡಕ್ಕೆ ಇಂದೊಂದು ಗಣನೀಯ ಸ್ಥಾನವು ದೊರೆತಿದೆ. ಹೈಸ್ಕೂಲುಗಳಲ್ಲಿ ಶಿಕ್ಷಣವು ಕನ್ನಡದಲ್ಲಿ ಕೊಡಲ್ಪಡಲಾರಂಭವಾಗಿದೆ. 3500 ಕನ್ನಡ ಗ್ರಂಥಗಳೀಗ ಅಚ್ಚಾಗಿ ಪ್ರಚಾರಕ್ಕೆ ಬಂದಿವೆ. ಇವುಗಳಲ್ಲಿ ಸುಮಾರು 1000 ಕಾದಂಬರಿಗಳು 700 ಕವಿತೆ ಮತ್ತು ನಾಟಕಗಳು, 400 ಧರ್ಮ ಗ್ರಂಥಗಳು, 500 ವಿಜ್ಞಾನ, ಚರಿತ್ರೆಯೇ ಮೊದಲಾದ ಶಿಕ್ಷಣ ಸಂಬಂಧ ಪುಸ್ತಕಗಳು, 250 ಜನ ಚರಿತ್ರೆಗಳು. ಕನ್ನಡಿಗರು ಶುದ್ಧತೆ ಮತ್ತು ಸರಳತೆಯನ್ನು ಕಲಿಯಬೇಕು. ಅಂತಹ ಸಾಹಿತ್ಯವನ್ನೇ ಬೆಳೆಸಬೇಕು ಆಡಂಬರವನ್ನು ತ್ಯಜಿಸಿಬಿಡಬೇಕು. ವಿಶೇಷವಾಗಿ ಜನಪದ ಸಾಹಿತ್ಯವನ್ನು ಬೆಳೆಸುವ ಕಡೆಗೆ ಲಕ್ಷ್ಯವಿಡಬೇಕು. ಬಸವಣ್ಣ ಮತ್ತು ಹರಿದಾಸರ ಕಾಲದ ವಚನ ಮತ್ತು ಪದ್ಯಗಳು ಜನರಲ್ಲಿ ತುಂಬಾ ಹುಟ್ಟಿವೆ. ಅವುಗಳನ್ನೆಲ್ಲಾ ಅವುಗಳ ಮೂಲ ರೂಪದಲ್ಲಿಯೇ ಸಂಗ್ರಹಿಸಿಡಬೇಕು. ಮಾತ್ರವಲ್ಲದೆ ಉದ್ವೇಗಪರವಾದ ಈಗಣ ಕಾಲಕ್ಕನುಗುಣವಾದ ಕವನಗಳನ್ನು ಕಟ್ಟಬೇಕು. ನಮ್ಮಲ್ಲಿ ಕವಿಗಳಿಗೇನೂ ಕೊರತೆಯಿಲ್ಲ. ಅವರು ತಮ್ಮ ಕವನಗಳ ಮೂಲಕ ಜನತೆಗೆ ಯೋಗ್ಯ ಜೀವನದ ಹಾದಿ ತೋರಿಸಬೇಕೆಂದೇ ಮಹಾರಾಜರ ಉಪದೇಶ.

ಕನ್ನಡ ಸಾಹಿತ್ಯ ಪರಿಷತ್ತಿಗೆ ಇಂದೀಗ 25 ವರ್ಷಗಳು ತುಂಬಿ ಅದು ಯೌವನವನ್ನು ಕಳೆದಿರುವುದಾದರೂ ಅದು ಜನತಾ ಸಂಸ್ಥೆಯಾಗಿರುವುದಿಲ್ಲನ್ನಲು ವಿಷಾದವೆನಿಸುತ್ತಿದೆ. ಕರ್ನಾಟಕದ ಬೇರೆ ಬೇರೆ ಭಾಗಗಳ ಜನಸಾಮಾನ್ಯರ ಬೆಂಬಲವು ಅದಕ್ಕಿರುವುದಿಲ್ಲ. ಇದಕ್ಕೆ ಕನ್ನಡಿಗರ ಅಸಡ್ಡೆಯೇ ಬಹುಮಟ್ಟಿಗೆ ಕಾರಣವೆನ್ನಬಹುದು. ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿ 25 ವರ್ಷ ಕಾಲ ಬದುಕಿಸಿ ಬೆಳೆಸಿಕೊಂಡುಬಂದ ಪ್ರಶಂಸೆಯು ಶ್ರೀ. ಶ್ರೀಕಂಠಯ್ಯನವರೇ ಮೊದಲಾದ ಹೊಸಗನ್ನಡದ ಹಿರಿಯ ಸಾಹಿತಿಗಳಿಗೆ ಸಲ್ಲತಕ್ಕದ್ದು. ಇವರೀ ಇದು ಕೆಲವೇ ವ್ಯಕ್ತಿಗಳ ಸಂಸ್ಥೆಯಾಗದೆ ಜನತಾ ಸಂಸ್ಥೆಯಾಗುವಂತೆ ಅದನ್ನು ರೂಪಾಂತರಗೊಳಿಸುವುದು ಅತ್ಯಾವಶ್ಯಕ. ಪ್ರತಿಯೊಂದು ಜಿಲ್ಲೆಗಳಲ್ಲಾದರೂ ಅದರ ಶಾಖೆಯು ತೆರೆಯಲ್ಪಟ್ಟು ಕೆಲಸ ನಡೆಯುವಂತಾಗಬೇಕು. ಅದರ ವರ್ಗಣಿಯು ಎಂತಹ ಬಡ ಸಾಹಿತಿಗಾದರೂ ಸಂತೋಷದಿಂದ ಕೊಡಲಾಗುವಂತಾಗಬೇಕು. ಕನ್ನಡ ಸಾಹಿತ್ಯ ಪರಿಷತ್ತು ಇನ್ನು ಮುಂದೆ ಎಂದಿಗಿಂತಲೂ ಶೀಘ್ರವಾದ ಪ್ರಗತಿಹೊಂದಿ ಯಾವ ತರದ ಭಿನ್ನಭೇದವೂ ಇಲ್ಲದೆ ಕನ್ನಡಿಗರನ್ನೆಲ್ಲಾ ಒಂದುಗೂಡಿಸುವ, ಕನ್ನಡಿಗರೆಲ್ಲರ ಪ್ರೀತಿಗೆ ಪಾತ್ರವಾಗಿರುವ ಸಂಸ್ಥೆಯಾಗಿ ಬಾಳಿ ಬೆಳಗಲೆಂದು ಈ ಸಂದರ್ಭದಲ್ಲಿ ನಾವು ಅಂತಃಕರಣಪೂರ್ವಕವಾಗಿ ಹಾರೈಸುತ್ತೇವೆ.

ಅಮೆರಿಕದ ಸಂರಕ್ಷಣಾ ಸಿದ್ಧತೆ

ಬರುವ ವರ್ಷದ ಸೇನಾ ಮತ್ತು ನೌಕಾ ಖಾತೆಯ ವೆಚ್ಚಕ್ಕೆ ಅಮೆರಿಕದ ಯುನೈಟೆಡ್ ಸ್ಟೇಟ್ಸ್ ಕಾಂಗ್ರೆಸು ಸಾಮಾನ್ಯವಾಗಿ 2800 ಮಿಲ್ಯ ಡೋಲರು ಮಂಜೂರುಮಾಡಿದೆ. ಈಗ ಪುನಃ ಪ್ರೆಸಿಡೆಂಟ್ ರೂಸ್‌ವೆಲ್ಟರು 1480 ಮಿಲ್ಯ ಡೋಲರು ಮಂಜೂರುಮಾಡಿರುತ್ತಾರೆ. ಇನ್ನೂ ಬೇಕಾದರೆ 289 ಮಿಲ್ಯ ಡೋಲರು ವೆಚ್ಚಮಾಡುವ ಅಧಿಕಾರವನ್ನು ಸೇನಾ ಮತ್ತು ನೌಕಾ ಖಾತೆಗೆ ಕೊಟ್ಟಿರುತ್ತಾರೆ. ಹೊಸತಾಗಿ ಮಂಜೂರುಮಾಡಿದ ಹಣದಿಂದ 22 ಹೊಸ ಯುದ್ಧ ಹಡಗಗಳನ್ನು ಮತ್ತು ಸಾವಿರಾರು ವಿಮಾನಗಳನ್ನು ಹೆಚ್ಚಿಗೆಯಾಗಿ ತಯಾರಿಸಲಾಗುವುದು. 45,000 ಟನ್ ತೂಕದ ಹೊಸ ರೀತಿಯ ಅತಿ ದೊಡ್ಡ ಯುದ್ಧ ಹಡಗವೊಂದು ತಯಾರಾಗಿ ಗುಪ್ತವಾಗಿ ಹೊರಹಾಕಲ್ಪಟ್ಟಿರುವುದು.

ಪೂರ್ವ ಆಸ್ಯವನ್ನು ತನ್ನದಾಗಿ ಮಾಡಿಕೊಳ್ಳಲು ಜಾಪಾನಿನ ಪ್ರಯತ್ನ

ಉತ್ತರ ಮತ್ತು ದಕ್ಷಿಣ ಅಮೇರಿಕದ ರಾಷ್ಟ್ರಗಳೊಂದುಗೂಡಿ ಅವುಗಳ ಕುರಿತು ಪರರಾಷ್ಟ್ರಗಳು ಕೈಹಾಕದೆ, ಅವು ಪರಸ್ಪರ ಆಕ್ರಮಣಮಾಡಿಕೊಳ್ಳದೆ ಸುರಕ್ಷಿತವಾಗಿರುವಂತೆ ಹೇಗೆ ಮೊನ್ರೋ ತತ್ವವನ್ನು ಅನುಸರಿಸುತ್ತಿರುವವೋ ಅದೇ ರೀತಿ ಪೂರ್ವ ಆಸ್ಯದ ರಾಷ್ಟ್ರಗಳೊಳಗೆ ಭೂಗೋಲಿಕ, ಸಂಸ್ಕೃತಿಕ, ಐತಿಹಾಸಿಕ, ವ್ಯಾಪಾರಿಕ ಮತ್ತು ಜನಾಂಗಿಕ ಸಂಬಂಧವಿರುವುದರಿಂದ ಅವೆಲ್ಲಾ ಒಂದಾಗಿ ನಡೆಯುವ ನವೀನ ವ್ಯವಸ್ಥೆಯನ್ನುಂಟುಮಾಡುವುದೇ ಜಾಪಾನಿನ ಉದ್ದೇಶ. ಇದಕ್ಕೆ ಇಂಗ್ಲೆಂಡು, ಅಮೇರಿಕ, ಇಟೆಲಿ, ಜರ್ಮನಿ, ಫ್ರಾನ್ಸು ಮೊದಲಾದ ಪರರಾಷ್ಟ್ರಗಳು ತಡೆಮಾಡಕೂಡದು. ತಮ್ಮ ಕೈಗಳನ್ನು ಹಿಂತೆಗೆಯಬೇಕೆಂದು ಜಾಪಾನಿನ ವಿದೇಶ ಮಂತ್ರಿಗಳಾದ ಮಿ. ಅರಿಟರು ಎಚ್ಚರಿಸಿರುವರು. ಮಾರ್ಶಲ್ ಚ್ಯಾಂಗರ ಸರಕಾರಕ್ಕೆ ಪರದೇಶಗಳಿಂದ ಯಾವ ರೂಪದ ಸಹಾಯ ದೊರೆಯದಂತೆ ಮಾಡಲು ಜಾಪಾನು ಇಂದೀಗ ಧೈರ್ಯದಿಂದ ಫ್ರಾನ್ಸ್, ಇಂಗ್ಲೆಂಡುಗಳಿಗೆ ಬೆದರಿಕೆ ಹಾಕಿ ಪ್ರಯತ್ನಿಸುತ್ತಿದೆ. ಫ್ರಾನ್ಸಿಗೆ ಸೇರಿದ ಇಂಡೋಚೈನ ಮತ್ತು ಇಂಗ್ಲೆಂಡಿನದಾದ ಹೋಂಕೋಂಗ್ ಪ್ರದೇಶದ ಮೂಲಕ ಮಾರ್ಶಲ್ ಚ್ಯಾಂಗರಿಗೆ ಯಾವ ರೀತಿಯ ಸಹಾಯವೂ ಹೋಗದಂತೆ ಜಾಪಾನು ಸಮುದ್ರ ಕರಾವಳಿಯ ಭಾಗಗಳನ್ನು ಆಕ್ರಮಿಸಿಕೊಳ್ಳಹತ್ತಿದೆ. ಚ್ಯಾಂಗ್ ಸರಕಾರದ ಮೇಲೆ ಜಯಶೀಲ ಸಮುದ್ರ ಮುತ್ತಿಗೆ ಹಾಕಿ ಬಗ್ಗುಬಡಿಯಬೇಕೆಂದೇ ಜಾಪಾನಿನ ನಿರ್ಧಾರ. ಹೋಂಕೋಂಗ್ ಮತ್ತು ಇಂಡೋಚೈನದಿಂದ ಬಿಳಿಜನರು ಆಸ್ಟ್ರೇಲಿಯಕ್ಕೆ ಕಳುಹಿಸಲ್ಪಡುತ್ತಿರುವರು.

ಶ್ರೀ. ಭೋಸರ ದಸ್ತಗಿರಿ

ಅಖಿಲಭಾರತ ಫೋರ್ವರ್ಡ್ ಬ್ಲೋಕಿನ ವಾರ್ಷಿಕೋತ್ಸವದ ಅಧ್ಯಕ್ಷರಾಗಿ ಶ್ರೀ. ಸುಭಾಸಚಂದ್ರ ಭೋಸರು ನಾಗಪುರಕ್ಕೆ ಹೋದವರು ಅಲ್ಲಿಂದ ವಾರ್ಧಕ್ಕೆ ಹೋಗಿ ಗಾಂಧಿಜಿಯವರನ್ನು ಕಂಡು ಮಾತಾಡಿದರು. ಆ ಮೇಲೆ ಬೊಂಬಾಯಿಗೆ ತೆರಳಿ ಮಿ. ಜಿನ್ನ ಮತ್ತು ಡಾಕ್ಟರ್ ಸಾವರ್ಕರರೊಡನೆಯೂ ಅನಂತರ ಸರ್ದಾರ್ ವಲ್ಲಭಾಯಿಯವರೊಡನೆಯೂ ಮಾತಾಡಿರುವರೆಂದು ತಿಳಿದುಬರುತ್ತದೆ. ಜಾತೀಯ

ಸುಭಾಸಚಂದ್ರ ಭೋಸರ ದಸ್ತಗಿರಿ

ಮುಖಂಡರೊಡನೆ ವೈಸರಾಯರ ಮಾತುಕತೆ.

ಈ ಮಾತುಕತೆಯು ...ಾಗಿದೆ. ಆ ಮೇಲೆ ...ಕ್ಕೆ ಹಿಂತಿರುಗಿರು ...ದೇ ತಾ. 2ನೇ

...ಕ್ಕೆ ಕಲ್ಕತ್ತದಲ್ಲಿ ...ಫ್ ಇಂಡಿಯಾ ...ಗಿರಿಮಾಡಿ ಹಂ ...ವರೆಂದು ತಿಳಿಸು

ವೈಸರಾಯರ ...ಕತೆ

...ವಿಷಯವನ್ನು ... ಕಮಿಟಿಯವರು ...ಯಲ್ಲಿ ಸೇರಿ ವಿ... ಜಿನ್ನರಾಗಲಿ, ...ಸರಾಯರೊಡನೆ ...ನ್ನಾಗಲಿ ಅದರ ... ವರೆಗೆ ಸ್ವಲ್ಪವೂ ...ರಾಯರು ಇದೇ ...ನೆ ಮಾತಾಡಲು ... ಅಧ್ಯಕ್ಷರಾದ ... ಆಮಂತ್ರಿಸಿರುವ ...ಸ್. ಅಣೆಯವರ ...ಮಂತ್ರಿಸಲಿರುವ ...ಮಿ. ಜಿನ್ನರು ಇ...ನ್ನು ಕಾಣುವ ...ರು ಸಿಮ್ಲಾದಿಂದ ...ಹೋಗಿರುವರು. ...ಸೆಯವರು ಆವ...

...ಗ್ ಕಮಿಟಿಯು ... ವೈಸರಾಯರ ...ದೇನೂ ತಿಳಿಯು... ಗಾಂಧಿಜಿಯವರ ...ತಾವಾದಮೇಲೂ ...ಂಗ್ರೆಸು ಮುಸ್ಲಿಂ ...ಡಿಕೊಂಡು ಎಗ್ಜಿ... ವಿಸ್ತರಿಸುವ ವೈ... ...ಪ್ಪದಿದ್ದಲ್ಲಿ ಮು...

ಸ್ಲಿಮ್ ಲೀಗ್ ಲಿಬರಲ್ ಪಕ್ಷೀಯರು ಹಿಂದೂ ಮಹಾಸಭೆಯವರು, ಶ್ರೆಡ್ಯೂಲ್ಡ್ ಕ್ಲಾಸಿನವರೇ ಮೊದಲಾದವರೊಂದಿಗೂ ಡಿ ಫೆನ್ಸ್ ಎಗ್ಜಿಕ್ಯೂಟಿವ್ ಕೌನ್ಸಿಲನ್ನು ರಚಿಸಬಾರದೇಕೆಂಬ ಪ್ರಶ್ನೆಯು ಸಿಮ್ಲಾದಲ್ಲಿ ಉಂಟಾಗಿದೆ. ಈಗಣ ಎಗ್ಜಿಕ್ಯೂಟಿವ ಕೌನ್ಸಿಲಿಗೆ ನಾಲ್ಕೈದು ಮಂದಿಯನ್ನು ಹೆಚ್ಚಿಗೆಯಾಗಿ ಸೇರಿಸಿ ಬೆಳೆಸಬೇಕೆಂಬುದೇ ವೈಸರಾಯರ ಸೂಚನೆ. ಪ್ರಾಂತ ಮತ್ತು ಕೇಂದ್ರದಲ್ಲಿ ಕಾಂಗ್ರೆಸು ಅಧಿಕಾರ ಸ್ವೀಕರಿಸಲು ಒಪ್ಪದಿದ್ದಲ್ಲಿ ಇತರ ಪಕ್ಷೀಯರೊಡನೆ ಸೇರಿ ಅಧಿಕಾರ ಸ್ವೀಕರಿಸಲು ಮಿ. ಜಿನ್ನರು ಒಪ್ಪುವ ಸಂಭವ ತೋರುತ್ತದೆ. ಅವರು ಮುಖ್ಯವಾಗಿ ದ್ವೇಷಿಸುವುದೆಂದರೆ ಕಾಂಗ್ರೆಸನ್ನು. ಕಾಂಗ್ರೆಸ್ಸಿನವರನ್ನು ಬಿಟ್ಟೇ ಕೇಂದ್ರ ಮತ್ತು ಪ್ರಾಂತಿಕ ಆಡಳಿತ ನಡಿಸಬೇಕೆಂದು ಸಿಮ್ಲಾದ ಅಧಿಕಾರಿಗಳ ಅಭಿಮತವಿರುವಂತಿದೆ

ಕಾಂಗ್ರೆಸನ್ನು ಒಲಿಸಿಕೊಳ್ಳುವ ಸರ್ ಸಿಕಂದರ್ ಹಾಯತ್ ಖಾನರ ಮನೋವೃತ್ತಿಯೂ, ಖಾಕ್ಸಾರರ ಗಲಾಟೆಯೂ ಮಿ. ಜಿನ್ನರಿಗೆ ತೊಡಕಾಗಿದೆ ಸರ್ ಸಿಕಂದರರು ಮಿ. ಜಿನ್ನರ ನಾಯಕತ್ವವನ್ನೊಪ್ಪದೆ ತನಗೆ ತೋರಿದಂತೆ ವರ್ತಿಸುತ್ತಿದ್ದಾರೆ. ಮಿ. ಫಜ್ಲುಲ್ ಹಕ್ಕರೂ ಈಗ ಮಿ. ಜಿನ್ನರ ಅಂಕೆಯಲ್ಲಿರುವಂತೆ ತೋರುವುದಿಲ್ಲ ಸಿಂಧಿನ ಪ್ರಧಾನ ಮಂತ್ರಿಗಳು ತನ್ನದೇ ಆದ ಧೋರಣೆ ವಹಿಸಿರುತ್ತಾರೆ ಮಿ. ಜಿನ್ನರು ತನ್ನ ಹಠವನ್ನೇ ಮುನ್ನಡೆಸಿದರೆ ಮುಸ್ಲಿಮ್ ಲೀಗಿನೊಳಗೆ ಒಡಕು ಬಿಕ್ಕಟ್ಟು ಆದುದರಿಂದ ಮಿ. ಜಿನ್ನರು ಸರಕಾರದೊಡನೆ ರಾಜಿಮಾಡಿಕೊಳ್ಳುವ ಸಂಭವವೇ ತೋರಿಬರುತ್ತದೆ. ಅಂತರರಾಷ್ಟ್ರೀಯ ಗಂಡಾಂತರವು ದೂರವಾಗುವನಕ ಕಾಂಗ್ರೆಸು ತಟಸ್ಥವಿದ್ದರೆ, ಮುಸ್ಲಿಮ್ ಲೀಗಿನವರೇ ಮೊದಲಾದವರ ಸಹಕಾರದಿಂದೇಕೆ ಆಡಳಿತ ನಡಿಸಬಾರದೆಂಬುದೇ ಸಿಮ್ಲಾದ ಅಧಿಕಾರಿಗಳ ಪ್ರಶ್ನೆ. ಆದರೆ ಅಂತರರಾಷ್ಟ್ರೀಯ ಪರಿಸ್ಥಿತಿಗೂ ಹಿಂದೀ ಸ್ವಾತಂತ್ರ್ಯದ ಪ್ರಶ್ನೆಗೂ ಸಂಬಂಧವಿಲ್ಲ. ಕಾಂಗ್ರೆಸು ಇನ್ನು ಮುಂದೆ ದೀರ್ಘ ಸಮಯ ಕಾಯುತ್ತಾ ಕೂತುಕೊಳ್ಳಲು ಸಾಧ್ಯವಿಲ್ಲೆಂದು ಪಂಡಿತ ಜವಾಹರಲಾಲರು ಎಚ್ಚರಿಸಿರುವರು. ಸರಕಾರವು ಮುಸ್ಲಿಮ್ ಲೀಗ್ ಮತ್ತು ಹಿಂದು ಮಹಾಸಭೆಯೇ ಮೊದಲಾದ ಜಾತೀಯ ಸಂಸ್ಥೆಗಳನ್ನೊಲಿಸಿಕೊಂಡು ಆಡಳಿತ ನಡಿಸಲೆತ್ನಿಸಿದರೆ ಕಾಂಗ್ರೆಸಿನವರು ಕೂಡಲೆ ಕಾಯಿದೆಭಂಗ ಹೂಡುವ ನಿರ್ಧಾರ ಮಾಡದಿರಲಾರರು.

ವೈಸರಾಯರು ಗಾಂಧಿಜಿಯವರೊಡನೆ ಹೇಳಿರುವ ಸೂಚನೆಗಳ ಕುರಿತು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಬೇಗನೆ ತಮ್ಮ ಅಭಿಪ್ರಾಯವಿತ್ತು ಆ ಕುರಿತು ವೈಸರಾಯರ ಅಭಿಮತ ಪಡೆದು ಪುನಃ ವಿಚಾರಿಸಲನುಕೂಲವಾಗುವಂತೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯು ಡಿಲ್ಲಿಯಲ್ಲಿ ಕರೆಯಲ್ಪಟ್ಟಿದೆ. ಈ ಸಭೆಯು 3 ದಿನಗಳ ವರೆಗೆ ನಡೆಯಲಿದೆ ಈ ನಡುವೆ ಗಾಂಧಿಜಿಯವರು ಇನ್ನೊಮ್ಮೆ ವೈಸರಾಯರನ್ನು ಕಂಡು ಮಾತಾಡಲೂ ಬಹುದು

(೭ನೇ ಪುಟದಿಂದ ಮುಂದರಿಸಿದ್ದು)

ಇಮ ಹೋರಿಕು ಇಂಗ್ಲೆಂಡಿನಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಅತ್ಯಂತ ಶೀಘ್ರವಾಗಿ ಸೈನಿಕರನ್ನೊಯ್ಯಬಹುದು ಆದುದರಿಂದ ವಿಮಾನಗಳ ಮೂಲಕ ಸೈನಿಕರಿಳಿದಂತೆ ಅವರನ್ನು ತಕ್ಷಣವೇ ಕೊಂದು ಹಾಕಲು ಬ್ರಿಟಿಷರು ಹಿಂದೆಗೆಯಲಾರರು.

ಇಂಗ್ಲೆಂಡಿನ ಮೇಲಿನ ಧಾಳಿಯ ವಿಷಯದಲ್ಲಿ ಹಿಟ್ಲರರ ಟ್ರಿಕ್ಸ್ ಕೈಗೇನೂ ಫಲಕಾರಿಯಾಗುವ ಹಾಗಿಲ್ಲ. ಆದುದರಿಂದ ತಾಳ್ಮೆಯಿಂದ ದೀರ್ಘಕಾಲ ಯುದ್ಧ ನಡಿಸಬೇಕಾಗುವುದು. ಇಂಗ್ಲೆಂಡು ಫ್ರಾನ್ಸಿನ ಕರಾವಳಿ ಮತ್ತು ಸ್ಪೈನಿನ ಕೆಲವು ಬಂದರುಗಳ ಮೇಲೂ ಸಮುದ್ರ ಮುತ್ತಿಗೆ ಹಾಕಿದುದರಿಂದ ಅವರ ವ್ಯಾಪಾರ ಮಾರ್ಗದಳಿಗಳನ್ನು ತಡೆಗಟ್ಟುವುದು ಕಷ್ಟಸಾಧ್ಯ. ಜಿಬ್ರಾಲ್ಟರ್ ಮತ್ತು ಸುವೇಜ್ ಕಾಲುವೆಗಳನ್ನು ಬಂದುಮಾಡಲು ಸಾಧ್ಯವಾದರೆ ಮಾತ್ರ ಇಂಗ್ಲೆಂಡಿಗೆ ದೊಡ್ಡ ಹಾನಿಯುಂಟಾಗುವುದು. ಅದು ಎಷ್ಟು ಮಟ್ಟಿಗೆ ಸಾಧ್ಯವೆಂದು ಹೇಳಬರುವುದಿಲ್ಲ. ಇಂಗ್ಲೆಂಡೀಗ ಎಂತಹ ಕಷ್ಟವನ್ನಾದರೂ ತಾಳಿಕೊಂಡು ಕೆಲವು ವರ್ಷಗಳ ವರೆಗೆ ಹೋರಾಡುವ ನಿರ್ಧಾರ ಮಾಡಿ ಅವಕ್ಕೆ ಬೇಕಾದ ಸಿದ್ಧತೆಗಳನ್ನು ಭರದಿಂದ ನಡಿಸುತ್ತಿರುವುದು. ಆದರೆ ಇಟಲಿ ಜರ್ಮನಿಗಳಿಗೆ ದೀರ್ಘ ಯುದ್ಧ ನಡಿಸಲು ಸಾಧ್ಯವೇ ಎಂಬುದೀಗ ಪ್ರಶ್ನೆ. ಇಟಲಿಗಿದು ಸಾಧ್ಯವೇ ಇಲ್ಲ. ಜರ್ಮನಿಯಲ್ಲಿ ಈಷ್ಟರಲ್ಲೇ ಯುದ್ಧದ ಶ್ರಮವು ತೋರಿಬರಹತ್ತಿದೆ. ಬರುವ ಚಳಿಗಾಲದಲ್ಲೇ ಯುರೋಪಿನಲ್ಲಿ ಭಯಂಕರ ಕ್ಷಾಮವುಂಟಾಗುವ ಗಂಡಾಂತರವುಂಟಾಗಿದೆ, ಆದುದರಿಂದ ಡಿಕ್ಟೇಟರರಿಗೆ ದೀರ್ಘಕಾಲ ಹೋರಾಡಲು ಸಾಧ್ಯವಾಗಲಾರದು. ಆದರೆ ಅವರೇನೂ ಯುದ್ಧನಡಿಸದೆ ಗೆದ್ದ ರಾಜ್ಯಗಳನ್ನು ಭದ್ರಪಡಿಸಿ ಯುರೋಪಿನಲ್ಲಿ ನವವ್ಯವಸ್ಥೆಯನ್ನು ಸ್ಥಾಪಿಸಿ ಅದನ್ನಾಳುವುದರಲ್ಲಿ ನಿರತರಾದರೆ ಮಾತ್ರ ಇಂಗ್ಲೆಂಡಿಗೆ ಅವರನ್ನು ಜೈಸಲು ಅತಿ ಪ್ರಯಾಸವಾಗುವುದು. ಭೂಮಾರ್ಗವಾಗಿ ಆ ಸಾಹಸವನ್ನು ಮಾಡುವ ಶಕ್ತಿಯೂ ಇಂಗ್ಲೆಂಡಿಗೆ ಪ್ರಕೃತ ಇರಲಾರದು. ನೌಕಾ ಮುತ್ತಿಗೆ, ವಿಮಾನ ಮತ್ತು ನೌಕಾ ಧಾಳಿಯ ಮೂಲಕ ಮಾತ್ರ ಡಿಕ್ಟೇಟರರನ್ನು ಬಗ್ಗುಬಡಿಯಲು ಇಂಗ್ಲೆಂಡು ಪ್ರಯತ್ನಿಸಬೇಕು. ಇದಕ್ಕಾದರೂ ಅತಿ ದೀರ್ಘ ಸಮಯ ಬೇಕು ಆದುದರಿಂದ ಈ ಯುದ್ಧವು ಎಷ್ಟು ಸಮಯ ನಡಿಯುವುದೆಂದು ಹೇಳಬರುವುದಿಲ್ಲ.

ಲೋಕ ವ್ಯಾಪಕವಾಗಿ ಹಬ್ಬುವುದೇ?

ಈ ಯುದ್ಧವು ಇಷ್ಟರಲ್ಲೇ ನಿಲ್ಲದೆ ಇಡೀ ಲೋಕಕ್ಕೆಲ್ಲಾ ವ್ಯಾಪಿಸುವುದೇ ಎಂಬುದೀಗ ಪ್ರಶ್ನೆ. ಈಗಣ ಸ್ಥಿತಿಗತಿಯನ್ನು ನೋಡಿದರೆ ಜಾಪಾನು ಅಮೇರಿಕಗಳೂ ಯುದ್ಧಕ್ಕೆ ಸೇರುವ ಸಂಭವ ತೋರುತ್ತದೆ. ರಸ್ಯವು ಸಹ ಸೇರಬಹುದು. ಪೂರ್ವ ಏಷ್ಯದ ರಾಷ್ಟ್ರಗಳನ್ನೆಲ್ಲಾ ತನ್ನಾಧೀನ ಮಾಡಿಕೊಂಡು ತನ್ನ ಪ್ರಭಾವ ಬೆಳಸಿ ತನಗೆ ಬೇಕಾದ ನವೀನ ವ್ಯವಸ್ಥೆಯನ್ನುಂಟು ಮಾಡಬೇಕೆಂಬ ನವೀನ ಧೋರಣೆಯನ್ನೀಗ ಜಾಪಾನು ಏರ್ಪಡಿಸಿದೆ ಚೀನವೇ ಮೊದಲಾದ ಪೂರ್ವ ಏಷ್ಯದ ದೇಶಗಳಲ್ಲಿ ಬಿಳಿ ಜನಾಂಗಗಳ ಕೈವಾಡವನ್ನು ಇಂದಿನ್ನಾದರೂ ನಡೆಯ ಬಿಡಲಾರದು. ಅವರು ಗಳೆಲ್ಲಾ ಕೈತೊಳೆದು ದೂರ ಸರಿಯಬೇಕೆಂದು ಜಾಪಾನು ಎಚ್ಚರಿಸಿರುವುದು. ಮಾತ್ರವಲ್ಲದೆ ಹಾಂಕಾಂಗ್ ಮತ್ತು ಇಂಡೋಚೈನಗಳ ಕರಾವಳಿಯ ಪ್ರದೇಶಗಳು ಕೆಲವನ್ನು ಆಕ್ರಮಿಸಿರುವುದು. ಚೀನೀ ರಾಷ್ಟ್ರೀಯ ಸರಕಾರಕ್ಕೆ ಹೊರಗಣಿಂದ ಯಾವ ರೀತಿಯ ಸಹಾಯವೂ ದೊರೆಯದಂತೆ ತಡೆಗಟ್ಟಿ ಅವನ್ನು ಆದಷ್ಟು ಶೀಘ್ರವಾಗಿ ನಾಶಪಡಿಸಿ ಚೈನದಲ್ಲಿ ತಾನೇ ತಾನಾಗಿ ಮೆರೆಯುವಂತಾಗಬೇಕೆಂದು ಜಾಪಾನೀಗ ಚಡಪಡಿಸಹತ್ತಿದೆ. ಇದರಿಂದ ಅಮೇರಿಕ, ಇಂಗ್ಲೆಂಡ್ ರಸ್ಯ ಮೊದಲಾದ ರಾಷ್ಟ್ರಗಳಿಗೆ ಹೆಚ್ಚಿನ ಹಾನಿಯಾಗುವುದು. ಇಷ್ಟರಲ್ಲೇ ಶಾಂತ ಸಾಗರದಲ್ಲಿ ಅಮೇರಿಕದ ನೌಕಾಪಡೆಯು ಚಲಿಸ... ಆರಂಭವಾಗಿದೆಯೆಂದು ತಿಳಿದುಬಂದಿದೆ ಬರ್ಮಾ ಮಾರ್ಗವಾಗಿಯೂ ಮಾರ್ಶಲ್ ಚ್ಯಾಂಗರಿಗೆ ಸಹಾಯವು ಹೋಗದಂತೆ ತಡೆಗಟ್ಟಬೇಕೆಂಬ ಜಾಪಾನಿನ ಕೇಳಿಕೆಗೆ ಬ್ರಿಟಿಷ್ ಸರಕಾರವು ಒಪ್ಪಲಾರದು ರಸ್ಯವಂತೂ ಸಹಾಯವನ್ನು ಯಥಾಪ್ರಕಾರ ಕೊಟ್ಟೇ ಕೊಡುವುದು. ಜಾಪಾನು ತನ್ನ ನವೀನ ಧೋರಣೆಯನ್ನು ಭರದಿಂದ ಜ್ಯಾರಿಗೆ ತರಲೆತ್ನಿಸಿದರೆ ಅಮೇರಿಕ ಮತ್ತು ಇಂಗ್ಲೆಂಡುಗಳೊಂದಾಗಿ ಅದಕ್ಕೆ ತಡೆಮಾಡದಿರಲಾರವು. ಜಾಪಾನಿನ ವಿಷಯದಲ್ಲಿ ಡಿಕ್ಟೇಟರುಗಳು ಹೇಗೆ ನಡೆಯುವರೆನ್ನಬರುವುದಿಲ್ಲ. ಒಂದುವೇಳೆ ಅವರು ಜಾಪಾನಿನ ಪಕ್ಷವಹಿಡಿದರೆ ರಸ್ಯವು ಆಕ್ಷೇಪಿಸದಿರಲಾರದು. ಆಗ ಅವರು ತಟಸ್ಥವಾಗಿರದಿರಲಾರರು. ಮುಖ್ಯವಾಗಿ ಅಮೇರಿಕ ಮತ್ತು ಜಾಪಾನ ಗಳ ಯುದ್ಧವನ್ನು ಡಿಕ್ಟೇಟರರು ಸ್ವಾಗತೀಕರಿಸಬಹುದು ಯಾಕೆಂದರೆ ಆಗ ಅಮೇರಿಕವು ಇಂಗ್ಲೆಂಡಿಗೆ ಕೊಡುವ ಸಹಾಯವು ಕಡಿಮೆಯಾಗುವುದು ಜಾಪಾನು ಉಗ್ರಧೋರಣೆ ವಹಿಸಿದ ಪಕ್ಷದಲ್ಲಿ ಅಮೇರಿಕ ಮತ್ತು ಇಂಗ್ಲೆಂಡ ಗಳು ಸುಮ್ಮನಿರಲಾರವು ಇಷ್ಟರಲ್ಲೇ ಜಾಪಾನಿನ ಧೋರಣೆಯ ಕುರಿತು ಅಮೇರಿಕ, ಬ್ರಿಟನ್ ಮತ್ತು ಆಸ್ಟ್ರೇಲಿಯದ ರಾಯಭಾರಿಗಳು ಮಾತುಕತೆ ನಡಿಸಿರುತ್ತಾರೆ. ಅಮೇರಿಕ ಜಪಾನುಗಳೊಳಗೆ ಯುದ್ಧವಾಗುವ ಸಂಭವವಿದೆ ಆಗ ಇಂಗ್ಲೆಂಡು ಕೂಡಾ ಅಮೇರಿಕದ ಸಹಾಯಕ್ಕೆ ಹೋಗಬಹುದು. ರಸ್ಯವೂ ಸೇರಬಹುದು ಯುದ್ಧವು ಪೂರ್ವಕ್ಕೂ ವ್ಯಾಪಿಸಬಹುದು. ಯುರೋಪಿನ ಬಾಲ್ಕನ್ ರಾಷ್ಟ್ರಗಳು ಸಿಡಿಮದ್ದಿನ ಮೇಲೆ ನಿಂತುಕೊಂಡಂತಿವೆ. ಅಲ್ಲಿ ಯಾವಾಗ ಸ್ಫೋಟವುಂಟಾಗುವುದೆಂದು ಹೇಳಬರುವುದಿಲ್ಲ. ರಸ್ಯವು ಶಾಂತರೀತಿಯಲ್ಲಿ ಯೇ ರವೇನಿಯದ ಕೆಲವು ಭಾಗಗಳನ್ನು ವಶಪಡಿಸಿಕೊಂಡಿರುವುದ ರುಮೇನಿಯವು ರಸ್ಯದೊಡನೆ ಸಂಧಿಮಾಡಿಕೊಂಡು ಆತ್ಮರಕ್ಷಣೆಗೆ ತಕ್ಕ ಏರ್ಪಾಡುಮಾಡದಿರಲಾರದು. ಹಂಗೇರಿಯು ರುಮೇನಿಯದ ಮೇಲೆ ಬಂದರೆ ರುಮೇನಿಯವು ವಿರೋಧಿಸದಿರಲಾರದು. ಆಗ ರಸ್ಯವು ರುಮೇನಿಯದ ಸಹಾಯಕ್ಕೆ ಹೋಗಬಹುದು. ಯಾಕೆಂದರೆ ಹಂಗೇರಿಗೂ ರಸ್ಯಕ್ಕೂ ವೈಮನಸ್ಸಿದೆ ಬೆಸರಾಬಿಯವನ್ನು ರುಮೇನಿಯವು ಬಲ್ಗೇರಿಯಕ್ಕೆ ಬಿಟ್ಟುಕೊಡಬಹುದು. ರಸ್ಯವು ಇಂದು ತನ್ನದೇ ಆದ ಸ್ವತಂತ್ರ ಧೋರಣೆಯನ್ನನುಸರಿಸುತ್ತಿದೆ. ಅದು ತನ್ನ ಸ್ಥಾನವನ್ನು ಬಲಪಡಿಸುವ ಕಡೆಗೆ ಲಕ್ಷ್ಯವನ್ನಿಟ್ಟಿದೆ. ಇದರಿಂದ ಹಿಟ್ಲರ್ ಮುಸಲೋನಿಗಳಲ್ಲಿ ಮನಸ್ತಾಪವುಂಟಾಗದಿರಲಾರದು ರಸ್ಯವನ್ನೊಲಿಸಿಕೊಳ್ಳಲು ಬ್ರಿಟನು ತನ್ನಿಂದ ಸಾಧ್ಯವಾದ ಪ್ರಯತ್ನವನ್ನೆಲ್ಲಾ ಮಾಡಬಹುದು

ಕಂಡಲ್ಲಿ ಉಂಡರೆ ಬೆಂಡಾಗುವಿರಿ! — ಆದರೆ,

ದಿ ಮಲಬಾರ್
ಗ್ರೇಂಡ್ ಹಿಂದೂ ಹೋಟೆಲ್ ಉಡುಪಿ.

ಇಲ್ಲಿ ಉಂಡರೆ ಕೊಂಡಾಡುವಿರಿ!

ಆರೋಗ್ಯದ ಪ್ರಥಮ ಸೋಪಾನವೇ ಹಿತವಾದ ಊಟ!

ಆಗ ಮಾತ್ರ ದೇಹದ ಬೆಳವಣಿಗೆಯಾಗಿ ನಿಜವಾದ ಮನುಷ್ಯರೆಂದೆನಿಸಿಕೊಳ್ಳುವೆವು!

ಊಟವು ಹಿತವಾಗಬೇಕಾದರೆ, ಸರಿಯಾದ ದೇಖರೇಖಿಯಲ್ಲಿ ರುಚಿ, ಶುಚಿಯಾಗಿ ತಯಾರಿಸಲ್ಪಟ್ಟ ಭಕ್ಷ್ಯಗಳು

ಉಡುಪಿಯಲ್ಲಿ ಇಂಥ ಮಾದರಿಯ ಹೋಟೆಲು ಇಲ್ಲವೆಂಬ ಕೊರತೆಯನ್ನು ನಿವಾರಿಸಲೋಸ ಗ

ಶ್ರೀ ರಾಮಕೃಷ್ಣ ಥಿಯೇಟರಿನ ಸಮೀಪ

ಭವ್ಯವಾದ ಮಂದಿರದಲ್ಲಿ ತಾ. 4-7-1940ಕ್ಕೆ ಹೊಸತಾಗಿ ತೆರೆಯುವ

ನಮ್ಮ ಹೋಟೆಲನ್ನು ಒಮ್ಮೆ ಸಂದರ್ಶಿಸಿ ಪ್ರೋತ್ಸಾಹಿಸಿರಿ ಸಂಪೂರ್ಣ ತೃಪ್ತರಾಗಿರಿ!

ಶಾಲಾ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಪ್ರತ್ಯೇಕ ಏರ್ಪಾಡು ಮಾಡಿದ್ದೇವೆ ಮರೆಯದಿರಿ!

The Malabar Grand Hindu Hotel, Udipi.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಪ್ರಚಾರ ಸಮಿತಿಯ ಮೀಟಿಂಗು— ಜಿಲ್ಲಾ ಯುದ್ಧ ಸಮಿತಿಯ ಆಶ್ರಯದಲ್ಲಿ ಏರ್ಪಟ್ಟ ಪ್ರಚಾರ ಸಮಿತಿಯ ಸಭೆಯು ಜಿಲ್ಲಾ ಕಲೆಕ್ಟರ್ ಶ್ರೀ ಎ. ಎ. ಸುಬ್ರಹ್ಮಣ್ಯನ್ ಯಂ. ಎ., ಐ. ಸಿ. ಯಸ್. ಇವರ ಅಧ್ಯಕ್ಷತೆಯಲ್ಲಿ ಕಳೆದ ತಾ 28ರಲ್ಲಿ ಕಲೆಕ್ಟರರ ಆಫೀಸಿನಲ್ಲಿ ನಡೆಯಿತು. ತಾಲೂಕು (ಪ್ರಚಾರದ ಬಗ್ಗೆ) ಸಮಿತಿಗಳನ್ನು ಏರ್ಪಡಿಸಬೇಕೆಂದೂ, ಮಂಗಳೂರಲ್ಲಿಯೂ, ಇತರ ತಾಲೂಕು ಮತ್ತು ಗ್ರಾಮಗಳಲ್ಲಿಯೂ ಸಾರ್ವಜನಿಕ ಸಭೆಗಳನ್ನು ಜರಗಿಸಿ ಅಲ್ಲಿ ಜನರಿಗೆ ಸುಳ್ಳುಪ್ರಚಾರದಿಂದ ಉಂಟಾಗಿರಬಹುದಾದ ಭೀತಿಯನ್ನು ಹೋಗಲಾಡಿಸಬೇಕೆಂದೂ ನಿರ್ಧಾರವಾಯಿತು. ಮಂಗಳೂರಲ್ಲಿ ಒಂದನೇ ತಾರೀಕಿನ ದಿವಸ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಸಭೆ ಜರಗಿಸಬೇಕೆಂಬ ತೀರ್ಮಾನವಾಯಿತು. ಕರಪತ್ರಗಳನ್ನು ಮಾಡಿ ಹಂಚುವ ಪ್ರಯುಕ್ತ ಕರಪತ್ರಕ್ಕೆ ವಿಷಯಗಳನ್ನು ಬರೆದು ಅದು ಅಂಗೀಕೃತವಾಯಿತು.

ವೈ. ಯಂ ಎಸ್ ಎ.— ನಿನ್ನೆಯ ದಿವಸ ಸ್ಥಳೀಯ ಸುಖನಿವಾಸದಲ್ಲಿ ಮಂಗಳೂರು ವೈ. ಯಂ. ಎಸ್. ಎ. ಸಂಘದ ದ್ವಿತೀಯ ವರ್ಷದ ಆರಂಭಿಕ ಸಭೆಯು ಶ್ರೀ ಕೆ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಲ್. ಎಸ್. ಶೆಟ್ಟಿಯವರ ಬಾಷಣಕರ್ತರ ಹಾಗೂ ಅಧ್ಯಕ್ಷರ ಪರಿಚಯವನ್ನು ಸಭಿಕರಿಗೆ ಮಾಡಿಕೊಟ್ಟು ವೈ. ಯಂ. ಎಸ್. ಎ.ಯ ಸಂಕ್ಷಿಪ್ತ ಇತಿಹಾಸವನ್ನೂ ಅದು ತನ್ನ ಮುಂದಿಟ್ಟುಕೊಂಡಿರುವ ಉಚ್ಚ ಧ್ಯೇಯಗಳನ್ನೂ ಸಂಕ್ಷೇಪವಾಗಿ ವಿವರಿಸಿದರು. ಶ್ರೀ ಕೆ. ಕೃಷ್ಣರಾಯರು ತಮ್ಮ ಭಾಷಣದಲ್ಲಿ ಸಂಘದ ಮಹೋದ್ದೇಶಗಳನ್ನು ಕೊಂಡಾಡಿ ಪ್ರಕೃತ ಸಂಘದ ಅಭಿವೃದ್ಧಿಗೆ ಕೆಲವು ಹಿತಸೂಚನೆಗಳನ್ನಿತ್ತರು. ಆರ್ಯಧರ್ಮಪ್ರಚಾರಕರಾದ ಶ್ರೀ ಆರ್. ಯಂ. ಶೆಣೈಗಳು ಧರ್ಮದ ವಿಷಯದಲ್ಲಿ ಕೆಲವು ಮಾತುಗಳನ್ನಾಡಿದರು. ಕಾರ್ಯದರ್ಶಿಗಳಾದ ಶ್ರೀ ಎನ್. ಆರ್. ನಾಯಕರವರು ಧನ್ಯವಾದಗಳನ್ನರ್ಪಿಸಿದ ತರುವಾಯ ಸಭಾಕಾರ್ಯವಾಯಿತು.

ಶುದ್ಧಿ ಸಂಸ್ಕಾರ— ಸುಮಾರು 6 ವರ್ಷಗಳ ಹಿಂದೆ ನಾಯರ್ ಜಾತಿಯನ್ನು ತ್ಯಜಿಸಿ ಮುಸ್ಲಿಂ ಮತವನ್ನು ಸೇರಿ ಅಬ್ದುಲ್ಲನೆಂಬ ಹೆಸರಿಟ್ಟುಕೊಂಡಿದ್ದವರೊಬ್ಬ ಮಹನೀಯರು ನಿನ್ನೆಯ ದಿವಸ ಸ್ಥಳೀಯ ಆರ್ಯಸಮಾಜದಲ್ಲಿ ವೈದಿಕ ಧರ್ಮದೀಕ್ಷೆಯನ್ನು ಪುನಃ ಪಡೆದು ತಮ್ಮ ಹಿಂದಿನ ಹೆಸರನ್ನೇ (ಗೋಪಾಲನ್ ನಾಯರ್ ಎಂಬ ಹೆಸರನ್ನು) ಧರಿಂದರು. ಶ್ರೀ ಆರ್. ಯಂ. ಶೆಣೈ (ಆರ್ಯಧರ್ಮೋಪದೇಶಕ) ಯವರು ಆಚಾರ್ಯರಾಗಿದ್ದು ಶುದ್ಧಿಸಂಸ್ಕಾರವನ್ನು ವಿಧ್ಯುಕ್ತವಾಗಿ ನೆರವೇರಿಸಿದರು.

ಜಿಲ್ಲಾ ಕಾಂಗ್ರೆಸ್ ಸಮಿತಿ— ಈ ಸಮಿತಿಯ ಮಹಾಸಭೆಯೊಂದು ಕಳೆದ ತಾ 23ರಲ್ಲಿ ಸಮಿತಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸೇರಿ ಜಿಲ್ಲೆಯಲ್ಲಿ ಕಾಂಗ್ರೆಸ್ ಹಾಗೂ ಸತ್ಯಾಗ್ರಹ ಸಮಿತಿಗಳನ್ನು ಸ್ಥಾಪಿಸಲು ಏಳು ಮಂದಿ ಸದಸ್ಯರಿಗೆ ಅಧಿಕಾರವನ್ನು ಕೊಡಲಾಯಿತು. ಜಿ. ಕಾಂಗ್ರೆಸ್ ಸಮಿತಿಯ ಜತೆಕಾರ್ಯದರ್ಶಿಗಳು ರಾಜಿನಾಮೆಕೊಟ್ಟದ್ದರಿಂದ ಅವರ ಸ್ಥಾನಕ್ಕೆ ಶ್ರೀ ಎನ್. ಎಸ್. ಹೊಳ್ಳರು ಆರಿಸಲ್ಪಟ್ಟರು. ಜುಲಾಯಿ ತಾ 7ರೊಳಗೆ ಸಮಿತಿಯ ಸದಸ್ಯರೆಲ್ಲರೂ ಸತ್ಯಾಗ್ರಹ ಪ್ರತಿಜ್ಞೆಯನ್ನು ತೆಗೆದುಕೊಳ್ಳಬೇಕೆಂದೂ, ಹಾಗೆ ಸತ್ಯಾಗ್ರಹ ಪ್ರತಿಜ್ಞೆ ತೆಗೆದುಕೊಳ್ಳದವರ ಸ್ಥಾನಗಳಿಗೆ ಬೇರೆಯವರನ್ನು ಸೇರಿಸಿಕೊಳ್ಳಲಾಗುವುದೆಂದೂ ನಿರ್ಣಯವಾಯಿತು.

ಕನ್ನಾ ಕಳವು— ಕಳೆದ ... ರಾತ್ರಿಯ ... ಗಳ ಅಪ್ಪಾಯಿಸ್ವಾಮಿ ನಾಯ್ಡುಗಳೆಂಬ ಸುಮಾರು ... ವರ್ಷ ಪ್ರಾಯದ ... ಹಿತ ಹುಡುಗಿಯನ್ನು ಪುಸಲಾಯಿಸಿ ಓರ್ವ ಬ್ರಾಹ್ಮಣನು ಅಪಹರಿಸಿಕೊಂಡು ಹೋದ ... ಗೊತ್ತಾಗಿದೆ. ... ನಿಯಲ್ಲಿಲ್ಲದ ... ಬ್ರಾಹ್ಮಣನೆ ಒಂದು ... ಯಲ್ಲಿ ಆಕೆಯನ್ನು ... ಕೊಂಡು ... ಯಲ್ಲಿ ... ತಾಳ್ಮೆಗೆ ... ಸದ್ದಿಲ್ಲದೆ ... ಹುಡುಗಿಯನ್ನು ... ಬ್ರಾಹ್ಮಣನನ್ನು ... ವರಿಸಿದರು.

ಶ್ರೀ ಮದ್ರಘುಮಾನ್ಯತೀರ್ಥ ಶ್ರೀಪಾದಂಗಳವರು.

ಶ್ರೀಮದುಡುಪಿ ಶ್ರೀಕೃಷ್ಣದೇವರ ಸನ್ನಿಧಿಯಲ್ಲಿ ಶ್ರೀಮನ್ಮಧ್ವಾಚಾರ್ಯರ ಸಂಕಲ್ಪಾನುಸಾರ ಶುಭ ಸಂಪ್ರದಾಯದಂತೆ ಶ್ರೀ ಫಲಿಮಾರು ಮಠದ ಶ್ರೀಮದ್ರಘುಮಾನ್ಯತೀರ್ಥ ಶ್ರೀ ಶ್ರೀಪಾದಂಗಳವರು ತಾ. 17-1-38ರಿಂದ 17-1-40ರ ವರೆಗೆ ಎರಡು ವರ್ಷಗಳಲ್ಲಿ ಯಶಸ್ವಿಯಾಗಿ ತಮ್ಮ ಪರ್ಯಾಯ ಮಹೋತ್ಸವವನ್ನು ಪೂರೈಸಿ ತೀರ್ಥಕ್ಷೇತ್ರ ಯಾತ್ರಾ ಪರರಾಗಿ ಸಂಚಾರಕ್ಕೆ ಹೊರಟವರು ಶಿವಮೊಗ್ಗಾ, ಹೊಸಪೇಟೆ ಆದ್ವಾನಿ ಮಂತ್ರಾಲಯ ಕರ್ನೂಲು, ಹುಬ್ಬಳ್ಳಿ, ಮಿರಜ್, ಕೊಲ್ಹಾಪುರ್, ಕರಾಡ ಪೂನಾ ಮೊದಲಾದ ಸ್ಥಳಗಳಲ್ಲಿ ಅಲ್ಲಲ್ಲಿರುವ ತುಂಗಭದ್ರಾ, ಕೃಷ್ಣಾ ಮೊದಲಾದ ನದಿಗಳ ಸ್ನಾನ ಮಾಡುತ್ತಾ ಕ್ಷೇತ್ರಗಳನ್ನು ಸಂದರ್ಶಿಸುತ್ತಾ ಬೊಂಬಾಯಿಗೆ ಬಂದು, ಮಹಾಲಕ್ಷ್ಮೀ ದೇವಸ್ಥಾನದ ಸಮೀಪದಲ್ಲಿರುವ "ತುಳಸೀದಾಸ್ ಗೋಪಾಲಜೀ ಸೆನಿಟೋರಿಯಂ" ಬೊಂಬಾಯಿ No 21ರಲ್ಲಿ ವಸತಿಮಾಡಿಕೊಂಡಿರುವರು, ಇವರನ್ನು ಊರ ಪರವೂರ ಮಹನೀಯರನೇಕರು ಬಂದು ಸಂದರ್ಶಿಸುತ್ತಾ ಹೋಗುತ್ತಲಿರುವರು. ಮುಂಬಾಯಿಯ ಆಸ್ತಿಕ ಮಹಾಶಯರು ಈ ಸಂದರ್ಭದ ಸದುಪಯೋಗಮಾಡಿಕೊಳ್ಳದಿರಲಾರರೆಂದು ನಿರೀಕ್ಷಿಸಲಾಗಿದೆ.

... ಪ್ರತ್ಯಕ್ಷಮಾಡಿ ... ಹಿಟ್ಲರನು ... ಬರೆದಿದ್ದಾರಂತೆ. ... ತನ್ನ ಸ್ವೇಟ ... ಟವರಲ್ಲಿ ತಾನು ತನ್ನ ಸೇತ್ತಿಯಿಂದಲೇ ಹೋಲುದಾಗಿ ತಿಳಿದು ... ಬರುತ್ತದೆ. ಮುಂದೇನು ಸಾಗುವುದೋ ನೋಡಬೇಕಷ್ಟೆ.

ಹೊಸ ಜಿಲ್ಲಾ ಕಲೆಕ್ಟರ್— ರಾವ್ ಬಹದ್ದೂರ್ ಶ್ರೀ ಪಿ. ... ಪಿಳ್ಳೆಯವರ ಸ್ಥಾನದಲ್ಲಿ ಶ್ರೀ ... ಎ. ಸುಬ್ರಹ್ಮಣ್ಯನ್ ಯಂ. ಎ., ಐ. ಸಿ. ಎಸ್. ರವರು ಜಿಲ್ಲಾ ಕಲೆಕ್ಟರಾಗಿ ಸೇರಿ ಸಲ್ಪಟ್ಟು ಚಾರ್ಜ ವಹಿಸಿದ್ದಾರೆ.

ದುಃಖಸೂಚಕ ರಜಾವು— ಕಳೆದ 24ರಲ್ಲಿ ಜಿಲ್ಲಾಕೋರ್ಟು ಸಬ್‌ಕೋರ್ಟುಗಳು ತೆರೆಯಲ್ಪಟ್ಟವು. ಜಿಲ್ಲಾ ಜಡ್ಜರಾದ ಶ್ರೀ ಓ. ಎಸ್. ರಾಮಚಂದ್ರ ... ರವರು ... ಕೆ ನೇಮಿಯಾದರು. ದಿವಂಗತ ಜಿಲ್ಲಾ ... ಶ್ರೀ ಪಿ. ... ಯವರ ... ರವರು ... ವ್ಯಕ್ತಪಡಿಸಿ ಜಿಲ್ಲಾ ಜಡ್ಜ ಶ್ರೀ ... ಗಳನ್ನು ... ತಮ್ಮ ಸಂತಾಪವನ್ನು ವ್ಯಕ್ತಗೊಳಿಸಿದರು. ... ದಿವಂಗತರ ಗೌರವಾರ್ಥವಾಗಿ ಎರಡು ನಿಮಿಷಗಳ ವರೆಗೆ ಕೋರ್ಟಿನ ಕೆಲಸವನ್ನು ನಿಲ್ಲಿಸಿದರು.

ದ. ಕ. ಜಿಲ್ಲಾ ಯುದ್ಧ ಸಹಾಯಕ ಸಮಿತಿಯ ವಿನಂತಿ— ಪ್ರಕೃತದ ಯುದ್ಧದಲ್ಲಿ ಬ್ರಿಟಿಷರು ತಮ್ಮ ಸರ್ವಶಕ್ತಿಗಳಿಂದಲೂ ಜರ್ಮನರನ್ನು ಸದೆಬಡಿಯಲು ಸೊಂಟಕಟ್ಟಿ ನಿಂತಿರುವರು. ಪತ್ರಿಕೆಗಳಾದರೆ ಸಮ್ಯಕ್ ಕೈಕಟ್ಟಿ ಕೂತುಕೊಂಡು ಯುದ್ಧ ಸಮಾಚಾರಗಳನ್ನು ತಿಳಿಯುವುದು ಮಾತ್ರವಲ್ಲ. ಈ ... ಯ ... ಪ್ರಜೆಗಳೆಲ್ಲರೂ ... ಗಳಿಂದ ಬ್ರಿಟಿಷರಿಗೆ ಶಕ್ತಿಮೀರಿ ಸಹಾಯವನ್ನೀಯುವುದು ... ಅವಶ್ಯವಾಗದಂತೆ ವಿದ್ಯಾವಂತರು ವಿದ್ಯಾವಿಹೀನರಲ್ಲಿ ನಿಜಸಂಗತಿಗಳನ್ನು ತಿಳಿಸುವುದು.

... ಯಲ್ಲಿಯೂ ಟಪ್ಪಾಲು ಕಚೇರಿಗಳಲ್ಲಿಯೂ ಕಷ್ಟಾರ್ಜಿತ ಹಣವನ್ನು ... ನಿಮಿತ್ತ ... ಈ ಹಣವನ್ನು ಯುದ್ಧದ ವೆಚ್ಚಕ್ಕಾಗಿ ... ಆವಶ್ಯಕತೆಯಿಲ್ಲ. ... ನೋಟುಗಳನ್ನು ... ನಾಣ್ಯಗಳನ್ನು ... ಬ್ರಿಟಿಷರು ... ಸರ್ವರೂ ... ಪ್ರಜೆಗಳ ... ಕರ್ತವ್ಯ ಎಂಬುದೇ ... ಸಾರಾಂಶವಾಗಿದೆ. (ಈ ... ಇಂಥಾ ... ಸಮಿತಿಗಳು ಆಯುತ್ತವೆ)

ಉಡುಪಿ

ಮುನ್ಸಿಪಲ್ ಮೀಟಿಂಗು— ಉಡುಪಿ ಮುನ್ಸಿಪಲ ಕೌನ್ಸಿಲಿನ ಮೀಟಿಂಗು ತಾ 27 6 40 ರಲ್ಲಿ ಚೆಯರ್‌ಮೆನ್ ಶ್ರೀ ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕೌನ್ಸಿಲಿನ ಗತ ಸಭೆಯ ... ಅಂಗೀಕರಿಸಲಾಯಿತು. ಈ ಸಂದರ್ಭದಲ್ಲಿ ಚೆಯರ್‌ಮೆನ್, ಕೌನ್ಸಿಲರುಗಳು ... ಪರಸ್ಪರ ವೈತ್ಯ ... ಸ್ಕೂಲ ... ಗಳಲ್ಲಿ ಇಂಗ್ಲಿಷ್ ಕಲಿಸುವದಕ್ಕೆ ಸೆಕೆಂಡರಿ ಗ್ರೇಡ್ ಉಪಾಧ್ಯಾಯ ... ವನ್ನು ತಾ 1 7 40ರಿಂದ ನೇಮಿಸಬೇಕಾಗಿ ... ಪ್ರಕೃತದ ಪರಿಸ್ಥಿತಿಯಲ್ಲಿ ಇದು ಅಸಾಧ್ಯವಾದುದರಿಂದ ... ದಿವಂಗತ ... ಕಲಿಸುವಂತೆ ಒಂದು ... ಶಾಲೆ ... ತರಗತಿಯನ್ನು ... ಬೇಕೆಂದು ... ಸಭೆಗೆ ... ಕೌನ್ಸಿಲಿನ ಆಕ್ಷೇಪವಿದೆಯೇ ಎಂದು ವಿದ್ಯಾಧಿಕಾರಿಗಳ ಪ್ರಶ್ನೆಯ ಕುರಿತು ... ಚರ್ಚೆ ನಡೆದು ಆಕ್ಷೇಪವಿಲ್ಲವೆಂದು ತೀರ್ಮಾನಿಸಲಾಯಿತು. ಪ್ರೆಸಿಡೆಂಟ್ ... ಟೌನ್ ಪ್ಲಾನಿಂಗ್ ಫಂಡಿನಿಂದ ರೂಪಾಯಿ 2000 - ಡಿಬೆಂಚರುಗಳ ಮೇಲೆ ಹಾಕಬೇಕೆಂದಾಯಿತು. ಟೌನ್ ಪ್ಲಾನಿಂಗ್ ಕೆಲಸ ಆರಂಭಿಸಲು ಉಪಕರಣಗಳ ಬಗ್ಗೆ ರೂಪಾಯಿ 200 ಸ್ಯಾಂಕ್ಷನ್ ಮಾಡಲಾಯಿತು. ಮುನ್ಸಿಪಲ್ ಪಾರ್ಕಿಗೆ ... ಕೌನ್ಸಿಲು ಮೆಂಬರುಗಳು ಇತರರನ್ನೂ ಸೇರಿಸಿಕೊಂಡು ಕೆಲಸ ಮುಂದೊತ್ತಬೇಕೆಂಬ ... ಸೂಚನೆಯು ಬಿದ್ದುಹೋಯಿತು.

ಹೆಮ್ಮಕ್ಕಳ ಟ್ರೈನಿಂಗ್ ಶಾಲೆ— ಸ್ಥಳೀಯ ಹೆಮ್ಮಕ್ಕಳ ಗವರ್ನಮೆಂಟ್ ಟ್ರೈನಿಂಗ್ ಶಾಲೆಯ 26 ಟ್ರೈನಿಂಗ್ ವಿದ್ಯಾರ್ಥಿನಿಯರಲ್ಲಿ 24 ಜನರು ಪಾಸಾಗಿರುವರೆಂದೂ ಈ ವರ್ಷ 3... ಜನರನ್ನು ಟ್ರೈನಿಂಗಿಗೆ ಸೇರಿಸಿಕೊಳ್ಳಲಿಕ್ಕಿದೆ ಎಂದೂ ತಿಳಿದುಬರುತ್ತದೆ.

ಆಶೌಚವಿಚಾರ ಸಭೆ— ಇದೇ ತಾ 4-7-'40ಕ್ಕೆ ಶ್ರೀ ... ಬಲ್ಲಾಳರ ಬೀಡಿನಲ್ಲಿ ಜರಗಲಿರುವುದೆಂದು ತಿಳಿದುಬರುತ್ತದೆ.

ತಾ 21-6-40ರಲ್ಲಿ ಫೋಟೋಗ್ರಾಫರ್ ಸಂಜೀವ ಕಾಮತರವರು ದೈವಾಧೀನರಾಗಿರುವರೆಂದು ತಿಳಿಸಲು ತುಂಬಾ ವಿಷಾದವಾಗುತ್ತದೆ. ಇವರು ಸಾರ್ವಜನಿಕ ಸೇವೆಯಲ್ಲಿ ಬಹಳ ಉತ್ತೇಜನದಿಂದ ಭಾಗವಹಿಸಿ ಜನರ ಪ್ರೀತಿಗೆ ಪಾತ್ರರಾಗಿದ್ದರು.

ಸುಬ್ರಹ್ಮಣ್ಯ— ಸುಬ್ರಹ್ಮಣ್ಯ ಮತ್ತು ಅದರ ಸುತ್ತುಮುತ್ತಲಿನ ಸುಮಾರು 10 ಗ್ರಾಮಗಳ ಪ್ರಯೋಜನಾರ್ಥವಾಗಿ ತಾ 22 6 40 ರಲ್ಲಿ ಸುಬ್ರಹ್ಮಣ್ಯದ ಕೆರೆ ಬೀದಿಯಲ್ಲಿ ಸಹಕಾರಿ ಸ್ಟೋರ್ಸ್ ತೆರೆಯಲ್ಪಟ್ಟಿರುತ್ತದೆ. ಪ್ರಕೃತ ಇದು ಅತ್ಯಲ್ಪ ಭಂಡವಾಳದಿಂದ ಪ್ರಾರಂಭವಾಗಿರುವುದಾದರೂ ಊರಿನ ಮತ್ತು ಹತ್ತಿರದ ಗ್ರಾಮಸ್ಥರ ಪ್ರೋತ್ಸಾಹದಿಂದ ಇನ್ನೂ ಅತಿಶೀಘ್ರವಾಗಿ ಅಭಿವೃದ್ಧಿಹೊಂದಬಹುದಾಗಿ ನಿರೀಕ್ಷಿಸಲಾಗಿದೆ.

ಕುಕ್ಕುಂದೂರು— ಕುಕ್ಕುಂದೂರು ಶಾಲಾ ಮಕ್ಕಳ ಉಪಯೋಗಾರ್ಥವಾಗಿ ಪಾಪನ್ನ ಟಪ್ಪಾಲು ... ಒಂದು ... ಈ ಶಾಲಾ ಹೊರ ಬದಿಯಲ್ಲಿ ತೆರೆಯುವರೆ ಸ್ಯಾಂಕ್ಷನ್ ಮಾಡಿರುವರೆಂದು ಶಾಲಾ ಮೇನೇಜರರಾದ ಶ್ರೀ ಕೆ. ನಾರಾಯಣ ರಾಯರವರು ತಿಳಿಸುತ್ತಾರೆ.

ದಕ್ಷಿಣ ಕನ್ನಡ

ಕಾರ್ಕಳ— ತಾ 28-6 '40ರಲ್ಲಿ ಕಾರ್ಕಳ ಸರ್ಕಲ್ ಕಾಂಗ್ರೆಸು ಕಮಿಟಿಯ ಸಭೆಯು ಶ್ರೀ ಸುಬ್ಬಣ್ಣ ಭಟ್ ನಿಂಜೂರು ಇವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಧರ್ಮರಾಜ ಅಧಿಕಾರಿ [ಅಧ್ಯಕ್ಷ] ಶ್ರೀ ಕೆ ವೆಂಕಟೇಶ ಪ್ರಭು [ಉಪಾಧ್ಯಕ್ಷ ಮತ್ತು ಕೋಶಾಧಿಕಾರಿ] ಶ್ರೀ ಕೆ ಪಾಂಡುರಂಗ ಪೈ ಮತ್ತು ವಾಮನ ಪೈ ಜತೆ ಕಾರ್ಯದರ್ಶಿಗಳಾಗಿ ಆರಿಸಲಾಯಿತು. ಸದಸ್ಯರಿಂದ ಸತ್ಯಾಗ್ರಹ ಪ್ರತಿಜ್ಞೆಗಳನ್ನು ಪಡೆದ ಮೇಲೆ ಸರ್ಕಲ್ ಕಮಿಟಿಯನ್ನು ಸತ್ಯಾಗ್ರಹ ಕಮಿಟಿಯನ್ನಾಗಿ ಮಾರ್ಪಡಿಸಲಾಯಿತು.

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1 4 39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ಕೊಡಕಿನ ವಿಷಯಗಳು ಅನೇಕ ಇವೆ. ಕ್ರಮವಾದ ಜಮಾ ಖರ್ಚಿನ ಲೆಖ್ಖವಿದ್ದರೂ ಸಾಲದು. ಅದರಿಂದ ತಯಾರಿಸುವ ಸಾರಾಂಶದ ನಿಖರತೆಯು ಕೆಲವೇ ನಿಮಿಷಗಳಲ್ಲಿ ತನ್ನಿಯ ಆಫೀಸರರಿಗೆ ಒಪ್ಪಿಗೆಯಾಗಬೇಕು. ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯಿತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗುವುದು. ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನ" ಕಳ್ಸಿಯಾಗಿ ಹೋಗಿದ್ದರೂ ತಡಮಾಡದೆ ಕೂಡಲೆ ಹಾಜರು ಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸಕಾಣಿಸಿದವರೊಡನೆ ಪತ್ರವ್ಯವಹಾರ ನಡೆಸಿರಿ.

ಎಸ್ ಎಸ್, ಪುರಾಣಿಕ,
ಇನ್ಕಮ್ ಟೇಕ್ಸ್ ಪ್ರಾಕ್ಟೀಶನರ್,
ಕೃಷ್ಣಾ ರೆಸ್ಟೋರೆಂಟ್ ಬಿಲ್ಡಿಂಗ್,
ಹಂಪನಕಟ್ಟೆ, ಮಂಗಳೂರು.

ನಾವು ದೀರ್ಘ ಜೀವಿಗಳಾಗಬೇಕಾದರೆ-? ಆಹಾರವೂ ಮತ್ತು ಮನಸ್ಸೂ

ಆಹಾರಕ್ಕಿಂತ ಮನಸ್ಸಿನ ಶಕ್ತಿಯೇ ಹೆಚ್ಚು.

ಬಡವರು ದೃಢಕಾಯರಾಗಿರುವುದರ ಕಾರಣ.

ಶರೀರ ಪುಷ್ಟಿಗೆ, ಶರೀರವು ಆರೋಗ್ಯವಾಗಿದ್ದು ದೃಢತೆಯಿಂದ ಇರಬೇಕಾದರೆ ಒಳ್ಳೆಯ ಆಹಾರವು ಅತ್ಯಗತ್ಯವೆಂದು ಎಲ್ಲರೂ ಬಲ್ಲರು. ಆದರೆ ಕೇವಲ ಆಹಾರವೊಂದೇ ಶರೀರದ ದೃಢತೆಗೂ ಮತ್ತು ಮನುಷ್ಯನು ದೀರ್ಘಾಯುವಾಗುವುದಕ್ಕೂ ಸಾಲದೆಂಬುದನ್ನು, ಇಂದಿನ ಮತ್ತು ಹಿಂದಿನ ಕಾಲಗಳ ಅನುಭವವು ಸ್ಪಷ್ಟವಾಗಿ ತೋರಿಸಿಕೊಟ್ಟಿದೆ. ಇತರ ಅವಶ್ಯಕತೆಗಳೊಡನೆ ಆಹಾರವೂ ಒಂದು ಅಗತ್ಯವಾದ ವಸ್ತು ಎಂಬುದನ್ನೇನೋ ನಾವು ಒಪ್ಪಬೇಕಾಗುತ್ತದೆ.

ಕೆಲವರು 3-4 ದಿನಗಳ ವರೆಗೆ ಒಪ್ಪೊತ್ತು ಆಹಾರ ದೊರೆಯದಿದ್ದರೂ ಹೆದರಿಬಿಡುವುದನ್ನು ನಾವು ನೋಡುತ್ತಿದ್ದೇವೆ. ಲೋಕದಲ್ಲಿ ಮನಃಪೂರ್ವಕವಾಗಿಯೇ ಅಥವಾ ಅನಿವಾರ್ಯವಾಗಿಯೇ ಹಸಿದುಕೊಂಡಿದ್ದೂ ಸಹ, ಅತ್ಯಂತ ಹಸನ್ಮುಖಿಗಳಾಗಿದ್ದು ಅನೇಕ ದಿನಗಳ ವರೆಗೆ ಆಹಾರವಿಲ್ಲದೆ ಇರುವವರನ್ನೂ ನೋಡುತ್ತಿದ್ದೇವೆ. ಆಹಾರ ದೊರೆಯದೆ ಇದ್ದಲ್ಲಿ, ಅವರು ಹೆದರುವುದೂ ಇಲ್ಲ, ಅಥವಾ ದುರ್ಬಲರಾಗುವುದೂ ಇಲ್ಲ.

ಮನುಷ್ಯನು ಬಡತನ ಅಥವಾ ಇತರ ಕಾರಣಗಳಿಂದ, ಹಸಿದಿರಲೇ ಬೇಕಾಗಿ ಬಂದಾಗ, ಬಹಳ ಗಾಬರಿಯಾಗಿಬಿಡುವನು. ಬಹಳ ದುರ್ಬಲನಾಗುವನು, ಅನೇಕ ವೇಳೆ ಮರಣಹೊಂದುವುದೂ ಉಂಟು. ಆದರೆ ಅದೇ ಮನುಷ್ಯನು ತಾನೇ ಇಷ್ಟಪಟ್ಟು, ಹಸಿದಿದ್ದರೆ, ಉಪವಾಸ ಮಾಡಿದರೆ, 4-6 ದಿನಗಳಲ್ಲಿ 30-40 ದಿನಗಳ ವರೆಗಾದರೂ ಜೀವಿಸಿರಬಲ್ಲನು.

ಈ ಎರಡು ರೀತಿಯ ಸ್ಥಿತಿಗಳನ್ನು ನಾವು ಮುಂದಿಟ್ಟುಕೊಂಡು ಯೋಚಿಸಿದರೆ, ತಿಳಿಯುವುದಿದು:- ನಾವು ನಮ್ಮ ಸ್ವಂತ ಅಭಿಪ್ರಾಯ, ಮನಸ್ಸಿನಿಂದ ಉಪವಾಸ ಮಾಡಿದೆನೆಂದರೆ ನಮಗೆ ಯಾವ ವಿಧವಾದ ತೊಂದರೆಯೂ ಆಗುವುದಿಲ್ಲ. ಊಟದ ವಿಚಾರವಾಗಿ ನಾವು ಉದಾಸೀನರಾಗಿದ್ದು ಬಿಡುತ್ತೇವೆ. ಹಸಿವಿನಿಂದ ಹೆದರದೆ, ಎಂದಿನಂತೆ ಆನಂದದಿಂದಲೇ ಇರುತ್ತೇವೆ. ಆದುದರಿಂದ ಇದರಿಂದ ಸ್ಪಷ್ಟವಾಗುವುದೇನೆಂದರೆ, ಹಸಿದಿರುವುದು, ಅಥವಾ ಉಪವಾಸ ಮಾಡುವುದು ನಮ್ಮ ಕರ್ತವ್ಯ, ಅಥವಾ ಉಪವಾಸಮಾಡುವುದರಿಂದ ನಮ್ಮ ಇಂತಹ ತೊಂದರೆಯೂ, ಕಾಹಿಲೆಯೂ ದೂರವಾಗುವುದು, ಉಪವಾಸಮಾಡುವುದು ನಮ್ಮ ಧರ್ಮ ಎಂಬ ಭಾವನೆಗಳುಂಟಾದರೆ, ನಿಜವಾಗಿಯೂ ಹಸಿವು ನಮ್ಮನ್ನು ಪೀಡಿಸುವುದೇ ಇಲ್ಲ.

ಮತ್ತೆ ಕೆಲವರು ನೀರನ್ನು ಕುಡಿದು ಜೀವಿಸಿರಬಹುದೆಂದು ಹೇಳುತ್ತಾರೆ, ಆದರೆ ಅನಿವಾರ್ಯವಾಗಿ ಹಸಿದಿರುವವರು, ನೀರನ್ನು ಸಹ ತೆಗೆದುಕೊಳ್ಳುವುದಿಲ್ಲವೆಂಬುದನ್ನು ನಾವು ನೋಡುತ್ತಿದ್ದೇವೆ. ಮತ್ತೆ ಕೆಲವರು ನೀರನ್ನು ಕುಡಿದರೂ ಬದುಕಲಾರರು. ಮತ್ತೆ ಕೆಲವರು ಕೇವಲ ಗಾಳಿ ಸೇವನೆಯಿಂದ ಜೀವಿಸಿರಬಹುದೆನ್ನುವರು. ನಮ್ಮ ದೇಶದಲ್ಲಿ ಈಗಲೂ ಕತ್ತಲೆಯ ಗುಹೆಗಳಲ್ಲಿ ಧ್ಯಾನಮಗ್ನರಾಗಿರುವ ಅನೇಕ ಯೋಗಿಗಳೂ, ತಪಸ್ವಿಗಳೂ ಇದ್ದೇ ಇರುವರು. ಅವರಿಗೆ ಆಹಾರವಾಗಲೀ, ನೀರಾಗಲೀ ದೊರೆಯುವುದೇ ಇಲ್ಲ. ಹಾಗೂ ಅವರು ಅನೇಕ ಕಾಲ ಜೀವಿಸಿರುವುದಿಲ್ಲವೇ?

ಇವೆಲ್ಲವನ್ನೂ ನೋಡಿದರೆ, ಜೀವಿತಕ್ಕೆ ಆಹಾರ, ನೀರಿಗಿಂತಲೂ ಮನಸ್ಸೇ ಹೆಚ್ಚು ಮುಖ್ಯವಾದುದೆಂಬುದು ತಿಳಿದುಬರುವುದು. ಮನಸ್ಸಿನ ಬಲವು ದೃಢವಾಗಿದ್ದರೆ, ಅನೇಕ ದಿನಗಳ ವರೆಗೆ ಜೀವಿಸಿರಬಹುದಲ್ಲದೆ, ಇದರಿಂದ ನಷ್ಟಕ್ಕೆ ಬದಲಾಗಿ ಆತ್ಮಶಕ್ತಿಯು ವೃದ್ಧಿಯಾಗುವುದು. ಶರೀರವು ರೋಗಗಳಿಂದ ಮುಕ್ತವಾಗುವುದು. ಅನೇಕ ಸಣ್ಣ ಮಕ್ಕಳೂ ಸಹ ತಮ್ಮ ಹಿರಿಯರು ಉಪವಾಸವ್ರತ ಮಾಡುವುದನ್ನು ನೋಡಿ, ತಾವೂ ಅವರಂತೆ ಮಾಡುವರು, ಆ ದಿನ ಅವರು ಆಹಾರವನ್ನು ಗಮನಿಸದೇ, ಎಂದಿನಂತೆ ತಮ್ಮ ಆಟಪಾಟಗಳಲ್ಲಿ ಮಗ್ನರಾಗಿರುವರು. ಅತ್ಯಂತ ಸಂತೋಷದಿಂದ ಇರುವರು. ಇದರಿಂದಲೇ ಚಿತ್ತಸ್ಥೈರ್ಯದ ಪ್ರಬಲ ಶಕ್ತಿಯು ಪ್ರಕಾಶಕ್ಕೆ ಬರುವುದು.

ಬೀಡಿ, ಚಹಾ, ಅಫೀಮಿನ ಅಭ್ಯಾಸವಿರುವವರು ಪ್ರಾಯದಲ್ಲಿ ಅವುಗಳನ್ನು ಬಹಳವಾಗಿ ಉಪಯೋಗಿಸುವುದರ ಅಭ್ಯಾಸ ಮಾಡಿ ಒಂದು ದಿನವೂ ಅವನ್ನು ಬಿಟ್ಟಿರಲಾರೆವೆನ್ನುವರು. ಆದರೆ ಮುಸ್ಸಂಜೆಯ ಮೇಲೆ ಅಥವಾ ಯಾವುದಾದರೂ ರೋಗ ಬಂದಾಗ, ವೈದ್ಯರ ಹೇಳಿಕೆಯಂತೆ ಅವನ್ನು ಸಂಪೂರ್ಣವಾಗಿ ತ್ಯಜಿಸಿ ಅವುಗಳ ಬಗ್ಗೆ ಏನನ್ನೂ ಯೋಚಿಸುವುದು ಸಹ ಇಲ್ಲ. ಕೆಲವು ಧನಿಕರು, ಒಳ್ಳೆಯ ಹಾಲು, ತುಪ್ಪ, ಹಣ್ಣುಗಳಿಲ್ಲದೆ ಬದುಕಲಾರೆವೆಂದೇ ಹೇಳುವರು. ಆದರೆ ಬಡವರು, ಹಳ್ಳಿಯವರು, ಕೇವಲ ಒಣ ರೊಟ್ಟಿ-ಕಡೂ ಎರಡು ವೇಳೆಯಲ್ಲ ಒಂದೇ ಹೊತ್ತು-ಯಿಂದಲೇ ಅತ್ಯಂತ ಸಂತೃಪ್ತರಾಗಿದ್ದು, ಚೆನ್ನಾಗಿ ದುಡಿಯುವರು. ಧನಿಕರ ಆರೋಗ್ಯಕ್ಕಿಂತಲೂ, ಇವರ ಆರೋಗ್ಯವೇ ಹೆಚ್ಚು ತೃಪ್ತಿಕರವಾಗಿರುವುದು. ಧನಿಕರಿಗಿಂತ ಹೆಚ್ಚು ಕಾಲ ಬದುಕುವರಲ್ಲದೆ ಅವರಿಗಿಂತ ಹೆಚ್ಚು ಹಸನ್ಮುಖಿಗಳೂ ಸಹ ಆಗಿರುವರು. ಇದಕ್ಕೆ ಕಾರಣವೇನು? ತಮಗೆ ದೊರೆತುದರಲ್ಲಿಯೇ ತೃಪ್ತಿಗೊಂಡು, ಸಹನೆಯಿಂದಿರುವುದರಿಂದ. ಇದರಿಂದ ಆರೋಗ್ಯಕ್ಕೆ ಆಹಾರವು ಅಗತ್ಯವಲ್ಲದೆ, ಮನಸ್ಸೇ ಮುಖ್ಯವೆಂಬುದು ವಿದಿತವಾಗುವುದು.

"ಅನ್ನದಿಂದ ಪ್ರಾಣ, ಪ್ರಾಣದಿಂದ ಪರಾಕ್ರಮ"ವೆಂಬ ಗಾದೆಯಿದೆ. ಅಂದರೆ ಆಹಾರದಿಂದ ಪ್ರಾಣಕ್ಕೆ, ಆತ್ಮಕ್ಕೆ ಬಲವುಂಟಾಗುವುದು, ಶರೀರ ವೃದ್ಧಿಯಾಗುವುದು. ಹೆಚ್ಚು ಆಹಾರದಿಂದ ಶರೀರವು ಹೆಚ್ಚು ಕೆಲಸಮಾಡುವುದು. ಆದರೆ ಈ ಗಾದೆಯು ತೀರ ಸುಳ್ಳೆಂದು ಹೇಳಬಹುದು. ಏಕೆಂದರೆ ನಮ್ಮ ಎದುರಿನಲ್ಲಿಯೇ ಅನೇಕರು ನೋಡುವುದಕ್ಕೆ ತೀರ ದುರ್ಬಲರಿರುವರು. ಬಹಳ ಒಳ್ಳೆಯ ಆಹಾರವನ್ನು ತಿನ್ನುವುದಿಲ್ಲ ಆದರೂ ಅವರ ಮಾನಸಿಕ ಶಕ್ತಿಯು ಅದ್ಭುತವಾಗಿರುವುದು. ಅವರ ಜೀವನವು ಅತ್ಯಂತ ನಿಯಮದಿಂದ ಕೂಡಿರುವುದು. ಅವರಿಗೆ ಯಾವ ರೋಗವೂ ಬರುವುದೇ ಇಲ್ಲ, ಯಾವಾಗಲೂ ಅತ್ಯಂತ ಸಂತೋಷದಿಂದಿರುವರು.

ಇಂತ ಮೇಲೆ ನಾವು ಆಹಾರವಿಲ್ಲದೆ ಜೀವಿಸಿರಬಹುದೇ? ಎಂಬ ಪ್ರಶ್ನೆಯುಂಟಾಗುತ್ತದೆ. ಕೆಲವು ಶಾಸ್ತ್ರರು ಹೇಳುವಂತೆ, ಶರೀರವೇ ಸ್ವಯಂ ತನ್ನನ್ನೇ ತಾನು ಅವಲಂಬಿಸಿರುವುದೆಂದು ಹೇಳುತ್ತಾರೆ. ಆದರೆ ಭೌತಿಕ ಆಹಾರವಿಲ್ಲದೆ ಹೆಚ್ಚು ಕಾಲ ಬದುಕಿರಲಾರೆವೆಂಬುದೇನೋ ನಿಜವಾದರೂ ಮನಸ್ಸಿಗೆ ಇಷ್ಟು ಕಾಲ ಜೀವಿಸಿರಬಹುದೆಂಬ ನಂಬಿಕೆಯಿರುವವರಿಗೂ ಜೀವಿಸಿರಬಹುದೆನ್ನಲು ಯಾವ ಅಡ್ಡಿಯೂ ಇಲ್ಲ. ಆದರೆ ಮನಸ್ಸಿನ ಈ ಶಕ್ತಿಗೂ ಏನಾದರೂ ಒಂದು ಮಿತಿ ಇದೆಯೇ ನೋಡೋಣ. ಆದರೆ ಈ ವಿಚಾರದಲ್ಲಿ ಇನ್ನೂ ಯಾವ ತೀರ್ಮಾನವೂ ಆಗದೆ ಇದ್ದು, ಇನ್ನೂ ಚರ್ಚೆಯಲ್ಲಿಯೇ ಇದೆ. ಯೋಗಿಗಳು ತಮ್ಮ ಮನಸ್ಸು ಬರುವವರೆಗೂ ಜೀವಿಸಿರುವರು. ಅದನ್ನು ಈಗ ನಾವು ನಂಬಲಾರೆವು. ಏಕೆಂದರೆ ದೀರ್ಘಕಾಲದಿಂದ ನಾವು ಭೌತಿಕ ಜಗತ್ತಿನಲ್ಲಿದ್ದು, ಅದನ್ನೇ ಶಾಶ್ವತವೆಂದು ನಂಬಿರುವೆವು. ಆತ್ಮಶಕ್ತಿಯನ್ನು ಪೂರ್ಣವಾಗಿ ಮರೆತಿರುವೆವು. ಕೆಲವು ಕಾಲದಿಂದೀಚೆಗೆ ಪಾಶ್ಚಿಮಾತ್ಯರೇ ಹೃದಯದ 'ಪವರ್'ನಲ್ಲಿ ನಂಬಿಕೆ ಇಡಲಾರಂಭಿಸಿದ್ದಾರೆ. ಆದರೆ ಈ ಶಕ್ತಿಯಲ್ಲಿ ಸಂಪೂರ್ಣ ವಿಶ್ವಾಸವಿಟ್ಟಿರುವವರು ನೂರಕ್ಕೆ ೧ಮಂದಿ ಸಹ ಇಲ್ಲ. ಆತ್ಮಶಕ್ತಿಯನ್ನು ನಾವು ಗಳಿಸಿದೆವೆಂದರೆ, ನಮಗೆ ಯಾವುದೂ ಅಸಾಧ್ಯವಾಗಲಾರದು. ನಮ್ಮ ಮನಸ್ಸೇ ಸ್ವಯಂ ಈ ಆತ್ಮಶಕ್ತಿಗಳ ಉಗ್ರಾಣವು 'ಪವರ್ ಹೌಸ್'ನಂತಿದೆ. ಇದರಿಂದ ಲಾಭಹೊಂದಲು ಎರಡು ದಾರಿಗಳಿವೆ. ಒಂದನೆಯದು ಸಂಪೂರ್ಣ ವಿಶ್ವಾಸ, ಮತ್ತು ಶ್ರದ್ಧೆ ಎರಡನೆಯದು ಮನಸ್ಸಿನ ಸ್ಥಿರತೆ. ಇವುಗಳಿಂದ ಈಶ್ವರನಿಂದ ಅನುಗ್ರಹಿಸಲ್ಪಡುವ ಎಲ್ಲ ಅಮೂಲ್ಯ ನಿಧಿಗಳೂ ನಮ್ಮ ಹಸ್ತಗತವಾಗುವವು.

ನಮಗೆ ಬಾಲ್ಯದಲ್ಲಿ ಆಹಾರವು ಅತ್ಯಗತ್ಯ. ಏಕೆಂದರೆ ಶರೀರವು ಭೌತಿಕ ವಸ್ತುಗಳಿಂದ ಆಗಿರುವುದರಿಂದ, ಭೌತಿಕ ಆಹಾರದಿಂದಲೇ ಅದರ ಪೋಷಣೆಯಾಗಬೇಕಾಗಿದೆ. ನಂತರ ವಯಸ್ಸಾದಂತೆಲ್ಲ ಮನಸ್ಸಿನ ಶಕ್ತಿಯೇ ಹೆಚ್ಚುವುದು. ಸಾತ್ವಿಕ ಆಹಾರದಿಂದ ಸಾತ್ವಿಕ ಗುಣಗಳುಂಟಾಗುವುವು. ಶಾರೀರಕ ಮತ್ತು ಮಾನಸಿಕ ಶಕ್ತಿಗಳು ವೃದ್ಧಿಯಾಗುವುವು ರೋಗವು ದೂರವಾಗಿ, ಬುದ್ಧಿಯು ತೀಕ್ಷ್ಣವಾಗುವುದು. ನಮ್ಮ ಜೀವನದ ದರ್ಜೆಯು ಉತ್ತಮವಾಗುವುದು.

ನಮ್ಮ ಪ್ರಗತಿಯ ವೇಗವು ತೀವ್ರವಾಗಿದೆಯೇ, ಮಂದವಾಗಿದೆಯೇ ಎಂಬುದು ನಮ್ಮ ಮನಸ್ಸಿನ ಸದ್ವಿಚಾರಗಳ ಮೇಲೆ ನಿಂತಿದೆ. ನಮ್ಮಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ಮನೆಮಾಡಿಕೊಂಡಿರುವ ಅವಿಶ್ವಾಸವನ್ನು ನಿರ್ಮೂಲಮಾಡಬೇಕು. ಇಂತಹ ಉದಾತ್ತ ವಿಷಯಗಳಲ್ಲಿ ನಂಬಿಕೆಯನ್ನಿಡಬೇಕು. ಇವೆಲ್ಲವೂ ನಮ್ಮ ಪ್ರಾಚೀನ ಋಷಿಗಳ [illegible] ಸತತ ಪ್ರಯತ್ನದ ಅನುಭವದ ಫಲಗಳು. ಅವರ ಸಾತ್ವಿಕ ಭೋಜನ, ಜೀವನದ ಅನುಭವದ ಉಪದೇಶಗಳು. ಇದರಲ್ಲೇ ಮನಸ್ಸು, ಶರೀರ, ಆತ್ಮ ಮತ್ತು ಆಹಾರದ ಪ್ರಭಾವದ ಗುಟ್ಟಿರುವುದು. ಒಂದಾನೊಂದು ಕಾಲಕ್ಕಾದರೂ ನಾವು ಶರೀರದ ಅಧೀನರಾಗಿರದೆ, ಶರೀರವೇ ಮನಸ್ಸಿನ ಅಧೀನದಲ್ಲಿರುವಂತೆ ಆಗಲೆಂದೇ ಭರವಸೆ ಹಾಗೂ ಸವಿನಯ ಪ್ರಾರ್ಥನೆ.

—ಸುಬ್ರಹ್ಮಣ್ಯಂ.

ತುಳುನಾಡ್ ಬೇಂಕ್

ಆಫ್ ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ.

Authorised & Issued Capital	...	Rs 1,00,000
Subscribed & Paid up Capital	....	Rs. 31,340
Reserves & other Funds	...	Rs. 22,052

ನಿರಖು ಠೇವಣಾತಿಗಳು ರಿಯಾಯತಿ ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.

ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳೂ ಮಾಡಲ್ಪಡುತ್ತವೆ.

ಹೆಚ್ಚಿನ ವಿವರಗಳಿಗೆ ಬರೆಯಿರಿ.

THULUNAD BANK
OF SUPPLY AGENCY LIMITED.

Degrees Books Medicines.
Free H. L. M. S., H. M. B., H. M. D. etc. Free Homeo Ayur-Unani-Nature degrees by post also—Practioners also get soons Homeo Materiamedica, Rs 5 Homeo-Practice book Rs 4. Insanity Cure Pills Rs. 10 Enclose 2 annas stamp—

Principal, Indian Homeopathic Institute and Society (Govt Regd.)
P. O. MAHUVA, (Kathiawar Dt. India.

Sidh-Kalpa Kavach (Regd)
No 3 Rs 2, No 2 Rs 5 No. Rs 7 Special Rs 10. Extra Special Rs 17 for love marriage health wealth Ask any six questions with M. O. Re. 1-4 and get correct answers by return post. Life reading Rs 2 No V. P. P. Send M. O. Free pamphlets Prof Dr N. R. Chhetbar, P. O. Mahuva, (Kathiawar) India

ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ.

ಅನುಕೂಲ ಸ್ಪರ್ಧೆ

"ಈ ವರುಷ ಉಪಾಧ್ಯಾಯರ ಕಷ್ಟದ ವರುಷ ಎನ್ನಬಹುದು. ಗ್ರೇಂಟ್ ಕಡಿತ ಉಪದ್ರವೇನೂ ಇದ್ದದ್ದೇ. ಮತ್ತೊಂದು ತೊಂದರೆಯೆಂದರೆ ಪಾಠ ಪುಸ್ತಕಗಳ ಗಲಾಟೆ. ನಾನ್ನಾರು ವಿಧದ ಟೆಕ್ಸ್ಟ್ ಪುಸ್ತಕಗಳಾಗಿವೆ. ಆ ರೀಡರುಗಳ ಪ್ರಕಾಶಕರು ಶಾಲೆಗಳಿಗೆ ಹೋಗಿ "ಕೆನ್ವ್ಯಾಸ್" ಮಾಡುತ್ತಲೂ ಡಿಸ್ಟ್ರಿಕ್ಟ್ ಬೋರ್ಡ್ ಮುನ್ಸಿಪಾಲಿಟಿಗಳಲ್ಲಿ ಭಗೀರಥ ಪ್ರಯತ್ನ ಮಾಡುತ್ತಲೂ ಇದ್ದಾರೆ. ಯಾವ ಪುಸ್ತಕವನ್ನು ತಮ್ಮ ಶಾಲೆಯಲ್ಲಿಡುವದೆಂಬುದೇ ಉಪಾಧ್ಯಾಯರಿಗೆ ತಿಳಿಯುವದಿಲ್ಲ. ಈ ಗೊಂದಲಕ್ಕೆ ಏನು ಪರಿಹಾರವೆಂಬುದನ್ನು ತಿಳಿಸುವಿರಾ?"

—ಬಡ ಉಪಾಧ್ಯಾಯ, ಸುಳ್ಯ.

ಸಾಹುಕಾರರೊಳಗೆ ಸ್ಪರ್ಧೆಯಿದ್ದರಾಗ ಲಾಭವೆಂದು ಗಿರಾಕಿಗಳು, ಬಸ್ಸು ಕಂಪನಿಗಳೊಳಗೆ ಪುನಃ ಪೈಪೋಟಿಯಾರಂಭವಾಗಲೆಂದು ಪ್ರಯಾಣಿಕರು ಆಶಿಸುವ ಕಾಲವಿದು. ಆದರೆ ನಿಮ್ಮ ಮರ್ಜಿಯೇ ಬೇರೆ! ಯಾರು ಅತಿಹೆಚ್ಚಿನ ಕಮಿಶನ್ ಕೊಡುವರೋ ಅಂಥವರ ಪುಸ್ತಕವನ್ನೇ ನೀವು ಅಂಗೀಕರಿಸಿರಿ.

ಅತ್ತೆ ಸೊಸೆಯರೊಳಗಿನ ವ್ಯತ್ಯಾಸ

"ಬೆಲ್ಜಿಯಂ ಅರಸರು ಜರ್ಮನಿಗೆ ಶರಣಾಗತರಾದಾಗ ಫ್ರಾನ್ಸಿನ ಮುಖ್ಯ ಮಂತ್ರಿಯು ವಿಶ್ವಾಸ ಘಾತುಕವೆಂದು ಕಠೋರ ಟೀಕೆ ಮಾಡಿದ್ದರಷ್ಟೆ. ಈಗ ಫ್ರಾನ್ಸು ಸರಕಾರವು ಕೂಡ ಜರ್ಮನಿಗೆ ಶರಣೆಂದಿದೆ. ಬೆಲ್ಜಿಯಮು ಸೇನೆಗಾದ ನಷ್ಟ ಮತ್ತು ಜರ್ಮನಿಯ ಶಸ್ತ್ರಬಲವನ್ನು ಅರಿತೂ ಫ್ರಾನ್ಸ್ ಸರಕಾರವು ತಾನು ಶರಣಾಗುವ ಒಂದು ವಾರಕ್ಕೆ ಮೊದಲು ಬೆಲ್ಜಿಯಮು ರಾಜರನ್ನು ಹಾಗೆ ಟೀಕಿಸಿದ್ದು ಸರಿಯೆ?"

—ಎಸ್. ಕೆ. ರಾ. ಧಾರವಾಡ.

ಸೊಸೆ ಭಿಕ್ಷೆಕೊಟ್ಟಳೆಂದು ಬೈದು ಭಿಕ್ಷುಕನನ್ನು ಹಿಂದೆಕರೆಸಿ, ಅದನ್ನು ತನ್ನ ಕೈಯಿಂದ ಪುನಃ ಕೊಟ್ಟ ಅತ್ತೆಯ ಕಥೆ ನಿಮಗೆ ಗೊತ್ತಿಲ್ಲವೆ? ಅತ್ತೆ-ಸೊಸೆಯರಿಗಿರುವ ಅಧಿಕಾರದ ವ್ಯತ್ಯಾಸವಿದು. ಫ್ರಾನ್ಸು ಶರಣಾಗಬಹುದು; ಆದರೆ ಬೆಲ್ಜಿಯಮು ಶರಣಾಗುವದೆಂದರೇನು?

ಇಲ್ಲಿಯ ಬೋಂಬುಗಳು!

"ಹಳ್ಳಿಗಳಲ್ಲಿ ಈಗ ನಡೆಯುತ್ತಿರುವ ಯುದ್ಧದ ಅತಿ ವಿಚಿತ್ರ ವರ್ತಮಾನಗಳು ಹಬ್ಬಿವೆ. ಆದರೆ ಯಾವ ಪತ್ರಿಕೆಯನ್ನು ನೋಡಿದರೂ ಈ ಸುದ್ದಿಗಳಿಗಾಧಾರ ತೋರುವದಿಲ್ಲ. ಹೀಗೆ ಸುದ್ದಿ ಹೇಳುವವರಿಗೆ "ಪತ್ರಿಕೆಗಳಲ್ಲಿಲ್ಲವೇಕೆ" ಎಂದು ಕೇಳಿದರೆ ಅಂತಹ ಸುದ್ದಿಗಳನ್ನು ಪ್ರಕಟಿಸುವ ಅಧಿಕಾರ ಪತ್ರಿಕೆಗಳಿಗಿಲ್ಲವೆಂದು ಬಾಯಿ ಹಾರಿಸುತ್ತಾರೆ. ಇದರ ಸತ್ಯ ಸಂಗತಿಯೇನೆಂಬುದನ್ನು ದಯಪಟ್ಟು ತಿಳಿಸುವಿರಾ?"

—ಬಿ. ಯು. ಕೆ. ಕರಂದಾಡಿ.

ಈ ಸುದ್ದಿ ಹೇಳುವವರು ಫ್ರಾನ್ಸಿನ ರಣರಂಗದಿಂದ ಬಂದಿಳಿದವರೇನೂ ಅಲ್ಲವಷ್ಟೆ; ಹಾಗಾದರೆ ಪತ್ರಿಕೆಗಳ ಸುದ್ದಿಗಳನ್ನು ನಂಬಿಕೊಳ್ಳಿ. ಈ ಸುದ್ದಿಗಾರರ ಬಾಯಿಯು ಜರ್ಮನ್ ಬೋಂಬಿನ ಜಾತಿಯದೆಂದು ನೆನಸಿ ಜಾಗ್ರತೆಯಿಂದ ತಪ್ಪಿಸಿಕೊಂಡರಾಯಿತು.

ಗೊಂದಲ ಪ್ರೇಮಿ

"ಯುರೋಪನ್ನು ಯುದ್ಧವು ಆವರಿಸಿಕೊಂಡಿದೆ. ಎಲ್ಲೆಲ್ಲಿಯೂ ಬಹಳ ಗೊಂದಲವೆದ್ದಿದೆ. ಇಂತಹ ಅಪಾಯಕರವಾದ ಕಾಲದಲ್ಲಿ ನಮ್ಮ ಜಿಲ್ಲೆಯ ಮುಖ್ಯ ಧುರೀಣೆಯರೂ, ದಕ್ಷಿಣಕನ್ನಡದ ಅಭಿಮಾನದ ಕಲಶವೂ ಆಗಿರುವ ಶ್ರೀಮತಿ ಕಮಲಾದೇವಿಯರು ಇನ್ನೂ ಯುರೋಪಿನಲ್ಲೇ ಸಂಚರಿಸುತ್ತಿರುವದು ಸರಿಯೆ? ಮೊನ್ನೆ ತಾನೇ ಸೇರಿದ ದ. ಕ. ಕಾಂಗ್ರೆಸ್ ಸಮಿತಿಯು ಒಂದು ಠರಾವು ಪಾಸು ಮಾಡಿ ಶ್ರೀಮತಿಯವರು ಕೂಡಲೇ ಬರಬೇಕೆಂದು ಕರೆಯಬಾರದಿತ್ತೆ?"

—ಆರ್ ಆರ್. ಎಸ್. ಕಾರ್ಕಳ.

ಶ್ರೀಮತಿ ಕಮಲಾದೇವಿಯರು ಇಂತಹ ಗೊಂದಲಗಳಿಗೆ ಹೆದರುವ ಮಹಿಳೆಯೆಂದು ಭಾವಿಸಿದಿರಾ? ದಕ್ಷಿಣಕನ್ನಡದ ಒಳಗೊಂದಲ ಮುಗಿದುದನ್ನು ಕಂಡೇ ಅವರು ಯುರೋಪಿಗೆ ತೆರಳಿದ್ದರೆಂಬುದು ನಿಮಗೆ ನೆನಪಿಲ್ಲವೆ? ಇಟಲಿ ಯುದ್ಧಕ್ಕಿಳಿದೊಡನೆ ತಾವು ಒಳಗಿಂದೊಳಗೆ ಯುದ್ಧ ಹೂಡುವೆವೆಂದು ಅಬಿಸೀನಿಯದವರು ತಮ್ಮ ಚಕ್ರವರ್ತಿ ನೇಗಸರನ್ನು ಆಮಂತ್ರಿಸಿದ್ದಾರಂತೆ; ನೀವು ಶ್ರೀಮತಿ ಕಮಲಾದೇವಿಯವರನ್ನು ಆಮಂತ್ರಿಸುತ್ತೀರಿ. ಇದರ ಅಂತರ್ಯವೇನು?

ಶಾಲಾಭಿವೃದ್ಧಿ-ಸಂಖ್ಯೆಯಲ್ಲಿ

"ನಮ್ಮ ಜಿಲ್ಲೆಯಲ್ಲಿ ಜಾತ್ಯಭಿಮಾನದ ದೆಸೆಯಿಂದಾಗಿಯೇ ಹಲವು ಹೊಸ ಶಾಲೆಗಳು ಜನ್ಮವೆತ್ತುತ್ತಿರುವದು ಕಂಡುಬರುತ್ತಿದೆ. ಈಗ ಸರ್ವಸಾಧಾರಣ ಎಲ್ಲಾ ಊಗಳೊಳಗೂ ಒಂದು ಶಾಲೆಯಿರುತ್ತದೆ. ಹತ್ತಿರದಲ್ಲೇ ಮಂಜೂರಾತಿಪಡೆದ ಶಾಲೆಗಳಿದ್ದರೂ ಇಂತಹ ಶಾಲೆಗಳನ್ನು ಅಧಿಕಾರಿಗಳು ಹೇಗೆ ಮಂಜೂರುಮಾಡುತ್ತಾರೋ ತಿಳಿಯುವದಿಲ್ಲ. ಇದ್ದ ಶಾಲೆಗಳು ನಿರ್ಜೀವಾವಸ್ಥೆಯಲ್ಲಿರುವಾಗ ಜಾತ್ಯಭಿಮಾನದಿಂದ ಹುಟ್ಟುವ ಇಂತಹ ಶಾಲೆಗಳಿಗೆ ಒಪ್ಪಿಗೆ ಕೊಡುವದನ್ನು ದೇವರು ಮೆಚ್ಚಬಹುದೆ?"

—'ನಿಷ್ಪಕ್ಷಪಾತಿ' ಕುಂದಾಪುರ.

ತಮ್ಮ ದೇವರು ಮೆಚ್ಚುವನೆಂದೇ ಮತಾಭಿಮಾನಿಗಳು ಇಂತಹ ಶಾಲೆಗಳನ್ನು ತೆರೆಯುವರು. ತಮ್ಮ ಧರ್ಮ ಕರ್ಮಗಳನ್ನು ಕಲಿಸುವರು. ಮತಾಭಿಮಾನದಿಂದಲೇ ಮಂಜೂರಾತಿಯೂ ದೊರೆಯುವದು. ಧರ್ಮ ಗುರುಗಳಾಗಬೇಕಾದವರು ವಿದ್ಯಾಧಿಕಾರಿಗಳಾದರೆ ಇದೇ ಅವಸ್ಥೆ. ಈ ಅನ್ಯಾಯವನ್ನು ಮೇಲಧಿಕಾರಿಗಳ ಗಮನಕ್ಕೆ ತನ್ನಿರಿ.

ಅನ್ಯಾಯದ ಬಾಳ್ವೆ

"ಅನ್ಯಾಯವು ಎಷ್ಟುಕಾಲ ಬಾಳಲಾರದು" ಎಂಬುದು ಲೋಕದ ವಿಶ್ವಾಸ. ಆದರೆ ಹಿಟ್ಲರರು ಎಡೆಬಿಡದೆ ಗೆಲ್ಲುತ್ತಾಹೋಗುತ್ತಿದ್ದಾರೆ, ಇದರ ಅರ್ಥವೇನು?"

—ಕೆ. ಎನ್. ಆರ್. ಬೆಂಗಳೂರು.

ಅನ್ಯಾಯವು ಹುಟ್ಟಿದರೂ ಬಾಳುವದಿಲ್ಲ ಎಂಬುದೇ ಅರ್ಥ.

ಎಳೆಪ್ರಾಯದಲ್ಲೇ ಮಿತವ್ಯಯದ ಅಭ್ಯಾಸವನ್ನು ಪ್ರೋತ್ಸಾಹಿಸಿ ನಿಮ್ಮ ಹುಡುಗನ ಜೀವನಕ್ಕೆ ಕಳ್ಕ ಏರ್ಪಾಡುಮಾಡಿರಿ

ಮಕ್ಕಳಿಗಾಗಿ ಮುಂದುವರಿಸಲ್ಪಡುವ ವಿಮೆಯ ಪಾಲಿಸಿಯೊಂದನ್ನು
ಸುಭದ್ರವೂ ಅತ್ಯಂತ ಜನಪ್ರಿಯವೂ ಆದ ಭಾರತೀಯ ಜೀವ ವಿಮಾಸಂಸ್ಥೆ
ಓರಿಯಂಟಲ್‌ನಲ್ಲಿ ಪಡೆಯಿರಿ.

--- ಮಕ್ಕಳ ಮುಂದುವರಿಸಲ್ಪಡುವ ವಿಮೆಯು ---

ನೂತನವಾದ ವಿಮಾಯೋಜನೆಯು. ಈ ಪ್ರಕಾರ ಬಹಳ ಕಡಿಮೆ ಪ್ರೀಮಿಯಮ್ ಪಾವತಿಯಿಂದ ಹೆತ್ತವರು ತಮ್ಮ ಮಕ್ಕಳ ಪೋಷಣೆಗೆ ಇಡೀ ಜೀವಮಾನದ ಯಾ ಉಂಬಳಿ ವಿಮೆಯ ಪಾಲಿಸಿಯನ್ನು ಸಂಗ್ರಹಿಸಲು ಅನುಕೂಲವಾಗುವಂತೆ ತಯಾರಿಸಿದೆ. ಇದರಲ್ಲಿ 22ನೇ ವರ್ಷಕ್ಕಿಂತ ಮುಂಚಿತವಾಗಿ ಒಂದು ನಿಶ್ಚಿತ ಪ್ರಾಯದಲ್ಲಿ "ರಿಸ್ಕ್" ಆರಂಭವಾಗುವುದು.

ಹೆಚ್ಚಿನ ಮಾಹಿತಿಗೆ ಇವರಿಗೆ ಬರೆಯಿರಿ:—

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್

ಸ್ಥಾಪನೆ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನ ಕಾರ್ಯಾಲಯ—ಮುಂಬಯಿ.

ಅಥವಾ ದಿ ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸು, ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್‌ಪೆರೇಡ್ ಬೆಂಗಳೂರು.

—ORIENTAL—
GOVERNMENT SECURITY LIFE ASSURANCE CO., LTD.

ಕಾಂಗ್ರೆಸ್ ಸಮಿತಿಯ ನಿರ್ಧಾರದ ಕುರಿತು ಗಾಂಧಿಯವರ ಅಭಿಪ್ರಾಯ

ಜೂನ್ ತಾ. 21ರಲ್ಲಿ ವಾರ್ಧಾದಲ್ಲಿ ಸೇರಿದ್ದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಅಹಿಂಸಾತತ್ವವನ್ನೊಂದು ಆಚರಣೆಯಾಗಿ ಅಂಗೀಕರಿಸಿ ಅದಕ್ಕೊಂದು ಮಿತಿಯನ್ನೂ ನಿರ್ಧರಿಸಿ, ಮಹಾತ್ಮಾ ಗಾಂಧಿಯವರನ್ನು ಹೊಣೆಗಾರಿಕೆಯಿಂದ ತಪ್ಪಿಸಿತಷ್ಟೆ. ಸಮಿತಿಯ ಈ ನಿರ್ಧಾರದ ಕುರಿತು ಗಾಂಧಿಯವರು 'ಏಕಕಾಲದಲ್ಲಿ ಸಂತೋಷ ಮತ್ತು ದುಃಖ' ಎಂಬ ಶಿರೋನಾಮೆಯ ಕೆಳಗೆ ತನ್ನ ಅಭಿಪ್ರಾಯವನ್ನು 'ಹರಿಜನ' ಪತ್ರಿಕೆಯಲ್ಲಿ ಲೇಖನ ಮೂಲಕ ಸ್ಪಷ್ಟಗೊಳಿಸಿದ್ದಾರೆ. ಅದರ ಸಾರಾಂಶವನ್ನಿಲ್ಲಿ ಕೊಡಲಾಗಿದೆ.

ಏಕ ಕಾಲದಲ್ಲಿ ಸುಖದುಃಖದ ಅನುಭವ!

'ಬಹಳ ವಾದಮಾಡಿದೆ'

ನಾನು ಕಾಂಗ್ರೆಸ್ ಸಮಿತಿಯೊಡನೆ ಬಲವಾಗಿ ವಾದಿಸಿದ್ದೆ. ನಿಮಗೆ ಪ್ರಬಲ ಅಹಿಂಸೆಯಲ್ಲಿ ವಿಶ್ವಾಸವಿರುವದಾದರೆ, ಇದೀಗ ಅದನ್ನಾಚರಿಸಿ ತೋರಿಸುವ ಸಮಯ. ಹಲವು ಪಕ್ಷಗಳಿಗೆ ಅಹಿಂಸೆಯಲ್ಲಿ ನಂಬಿಕೆಯಿಲ್ಲವಾದರೆ ದೊಡ್ಡದಲ್ಲ. ಇದರಿಂದಾಗಿ ಬಂದೊದಗಿದ ಗಂಡಾಂತರಗಳನ್ನು ಅಹಿಂಸೆಯಿಂದಲೇ ಕಾಂಗ್ರೆಸ್ಸಿನವರು ಇದಿರಿಸಬೇಕೆಂಬುದಕ್ಕೆ ಪ್ರಬಲ ಕಾರಣ ದೊರೆಯುವದು. ಎಲ್ಲರೂ ಅಹಿಂಸಾವಾದಿಗಳಾದಲ್ಲಿ ಒಳಗೊಂದಲವೂ ಇಲ್ಲ; ಹೊರಗಿನ ಆಕ್ರಮಣವನ್ನು ತಡೆಗಟ್ಟಲು ಯಾರಾದರೂ ಶಸ್ತ್ರಧಾರಿಗಳಾಗಬೇಕೆಂಬ ಪ್ರಶ್ನೆಯೇ ಹುಟ್ಟುವುದಿಲ್ಲ. ಅಹಿಂಸೆಯಲ್ಲಿ ಆದರವಿಲ್ಲದ ಇತರ ಪಕ್ಷೀಯರ ನಡುವೆ ಕಾಂಗ್ರೆಸು ಅಹಿಂಸೆಯ ಪ್ರತಿನಿಧಿಯಾಗಿರುವದರಿಂದಲೇ ತನ್ನ ವಿಶ್ವಾಸದಂತೆ ಜಯಪ್ರದವಾಗಿ ಕಾರ್ಯಾಚರಣೆಮಾಡಿ ತೋರಿಸಲು ಕಾಂಗ್ರೆಸ್ಸಿನವರು ಬದ್ಧರಿರುತ್ತಾರೆ.' ನನ್ನ ವಾದ ಹೀಗಿತ್ತು. ಆದರೆ ಕಾಂಗ್ರೆಸ್ ವರ್ಕಿಂಗ್ ಸಮಿತಿ ಮೆಂಬರರು ಇದಕ್ಕನುಗುಣವಾಗಿ ವರ್ತಿಸುವದು ಅಸಾಧ್ಯವೆಂದು ಬಗೆದರು. ಇದು ಅವರಿಗೆ ಹೊಸ ಅನುಭವ. ಅವರಿಗೆ ಬಿಕ್ಕಟ್ಟನ್ನು ಈ ರೀತಿ ಇದಿರಿಸುವ ಕರೆಯು ಹಿಂದೆಂದಿಗೂ ಬಂದಿರಲಿಲ್ಲ. ಜಾತೀಯ ಗೊಂದಲ ನಿವಾರಣೆಗಾಗಿ 'ಶಾಂತಿಸ್ಥಾಪಕ ದಳ' ಸ್ಥಾಪಿಸಬೇಕೆಂಬ ಮತ್ತು ನನ್ನ ಅಂತಹ ಇತರ ಪ್ರಯತ್ನಗಳು ಅಪಜಯ ಹೊಂದಿದ್ದವು. ಹೀಗಾಗಿ ಸದ್ಯದ ನನ್ನ ಸೂಚನೆಯು ಕಾರ್ಯತಃ ಫಲಿಸಬಹುದೆಂಬ ನಂಬಿಕೆ ಅವರಿಗಿರಲಿಲ್ಲ.

ನನ್ನ ಸ್ಥಾನ

ನನ್ನ ಸ್ಥಾನವು ಭಿನ್ನವಾದುದು. ಕಾಂಗ್ರೆಸಿಗೆ ಅಹಿಂಸೆಯೆಂದರೆ ಒಂದು ಧೋರಣೆ ಮಾತ್ರ. ಆ ಧೋರಣೆ ಅಪಜಯಹೊಂದಿದಲ್ಲಿ ಅದನ್ನು ರದ್ದುಗೊಳಿಸುವ ಹಕ್ಕು ಅದಕ್ಕಿದೆ. ಅಹಿಂಸೆಯು ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ತರಲಾರದಾದರೆ ಕಾಂಗ್ರೆಸಿನ ಮಟ್ಟಿಗೆ ಅದು ನಿಷ್ಪ್ರಯೋಜಕ. ನನಗೆ ಅಹಿಂಸೆಯೊಂದು ಮೂಲ ತತ್ವ. ನಾನೊಬ್ಬನಾಗಿರಲಿ, ಸಂಗಡಿಗರೊಂದಿಗಿರಲಿ, ಅದಕ್ಕನುಗುಣವಾಗಿ ವರ್ತಿಸಲೇಬೇಕು. ಅಹಿಂಸಾಚರಣೆಯು ನನ್ನ ಜೀವನದ ಧ್ಯೇಯವಾಗಿದ್ದ ಮೇಲೆ ಎಲ್ಲಾ ಸಂದರ್ಭಗಳಲ್ಲಿಯೂ ನಾನದನ್ನು ಎತ್ತಿಹಿಡಿಯಲೇಬೇಕು. ದೇವರು ಮತ್ತು ಮನುಷ್ಯರಿದಿರಲ್ಲಿ ನನ್ನ ವಿಶ್ವಾಸವನ್ನು ಸಮರ್ಥಿಸಿ ತೋರಿಸಲು ಇದೀಗ ಸಮಯವೆಂದು ನನಗೆ ಮನವರಿಕೆಯಾಯಿತು. ಆದ್ದರಿಂದ ನನ್ನನ್ನು ಬೇರ್ಪಡಿಸಿರೆಂದು ಕಮಿಟಿಯನ್ನು ಕೇಳಿಕೊಂಡೆ. ಈ ತನಕ ಕಾಂಗ್ರೆಸಿನ ಮುಖ್ಯ ಧೋರಣೆಯನ್ನು ರೂಪಿಸುವ ಚಾಲಕತ್ವವು ನನ್ನದಾಗಿತ್ತು. ನಮ್ಮೊಳಗಿನ ಮೂಲಭೂತ ಭಿನ್ನಾಭಿಪ್ರಾಯಗಳು ಹೀಗೆ ಸ್ಪಷ್ಟವಾದ ಮೇಲೆ ಮುಂದೆ ನಾನು ಹಾಗೆಮಾಡಲಾರೆ. ನನ್ನ ಅಭಿಪ್ರಾಯದ ನ್ಯಾಯವನ್ನವರು ಕೂಡಲೇ ಮನಗಂಡರು; ನನ್ನನ್ನು ನಿವೃತ್ತಿಗೊಳಿಸಿದರು. ತಮ್ಮ ಮೇಲಿಡಲ್ಪಟ್ಟ ನಂಬಿಕೆಗೆ ಅರ್ಹರೆಂಬುದನ್ನು ಅವರು ಮತ್ತೊಮ್ಮೆ ತೋರಿಸಿದಂತಾಯಿತು; ತಮ್ಮ ಕಾರ್ಯದಲ್ಲಿ ಯಥಾರ್ಥತೆಯನ್ನು ಪ್ರದರ್ಶಿಸಿದಂತಾಯಿತು. ತಮ್ಮಲ್ಲಿಯೂ, ತಾವು ಪ್ರಾತಿನಿಧ್ಯವಹಿಸಿದ ಜನರಲ್ಲಿಯೂ ಅವರಿಗೆ ವಿಶ್ವಾಸವಿರಲಿಲ್ಲ. ಹೀಗಾಗಿ ಅವರು ಅಗತ್ಯವಿದ್ದಷ್ಟೇ ಪರಿಮಾಣದಲ್ಲಿ ಅಹಿಂಸೆಯ ಆಚರಣೆ ಕೈಕೊಳ್ಳಬೇಕಾಗುವದು. ಅಂತೆಯೇ ಯಥಾರ್ಥವಾಗಿ ಮಾಡಲಾಗುವಷ್ಟನ್ನೇ ಅವರು ಅಂಗೀಕರಿಸಿಕೊಂಡರು. ಅವರು ಮಾಡಿರುವುದು ಮಹತ್ತಾದ ತ್ಯಾಗ. ಕಾಂಗ್ರೆಸು ತನ್ನ ಅಸಾಧಾರಣ ಅಹಿಂಸಾಪ್ರಭಾವದಿಂದ ಲೋಕದಲ್ಲಿ ಸಂಪಾದಿಸಿರುವ ಗೌರವದ ತ್ಯಾಗವಿದು. ಹಾಗೂ ನನ್ನ ಮತ್ತು ಅವರೊಳಗಿದ್ದ ಮಾತು,ಬರಹಗಳಲ್ಲಿ ವರ್ಣಿಸಲಾಗದ ಅದೃಶ್ಯ ಬಂಧನದ ಬಿಡುಗಡೆಯಿದು. ಸರ್ವ ಸಮ್ಮತ ತತ್ವ ಅಥವಾ ಧೋರಣೆಯ ಸಾಮಾನ್ಯ ಆಚರಣೆಯಲ್ಲಿ ಸದ್ಯಕ್ಕೆ ನಾವು ಬೇರೆಯಾದರೂ ನಮ್ಮೊಳಗಿನ ಕಳೆದ ಇಪ್ಪತ್ತು ವರುಷಗಳ ಮೈತ್ರಿಗೆ ಭಂಗಬರುವಂತಿಲ್ಲ.

ಸಂತೋಷ ಮತ್ತು ದುಃಖ

ಈ ನಿರ್ಧಾರದಿಂದಾಗಿ ನನಗೆ ಸಂತೋಷ ಮತ್ತು ದುಃಖ ಎರಡೂ ಆಗುತ್ತಿವೆ. ನಮ್ಮೊಳಗಿನ ಅಗಲಿಕೆಯ ದುಃಖವನ್ನು ಸಹಿಸಿಕೊಳ್ಳಲು ಮತ್ತು ಏಕಾಕಿಯಾಗಿ ನಿಲ್ಲಲು ನನ್ನಲ್ಲಿ ಶಕ್ತಿಯಿದ್ದುದಕ್ಕಾಗಿ ಸಂತೋಷ; ನಿನ್ನೆಯೋ ಎಂಬಂತೆ ತೋರುತ್ತಿರುವ ಎಷ್ಟೋ ವರುಷಗಳಿಂದ, ಯಾರನ್ನು ಜತೆಗೂಡಿಗೊಂಡು ಮುಂದುವರಿಯುವದು ನನ್ನದೊಂದು ಹೆಗ್ಗಳಿಕೆಯಾಗಿತ್ತೋ, ಆ ಸಹಪ್ರವಾಸಿಗಳನ್ನು ಮುಂದಕ್ಕೊಯ್ಯುವ ಶಕ್ತಿಯು ನನ್ನ ಮಾತುಗಳಲ್ಲಿ ನಷ್ಟವಾದಂತೆ ತೋರುತ್ತಿರುವದರಿಂದ ಅದಕ್ಕಾಗಿ ದುಃಖ. ಪ್ರಬಲ ಅಹಿಂಸೆಯ ಶಕ್ತಿ ಪ್ರದರ್ಶನದ ಹಾದಿಯನ್ನು ದೇವರು ನನಗೆ ತೋರಿಸಿಕೊಟ್ಟಲ್ಲಿ ಇಂದಿನ ಅಗ

ಇಂಡಿಯನ್ ಮ್ಯೂಚುಯಲ್ ಲೈಫ್ ಎಸೋಸಿಯೇಷನ್ ಲಿಮಿಟೆಡ್

ಹೆಡ್ ಆಫೀಸ್:- ನಂ. ೧೦, ಮೌಂಟ್ ರೋಡ್, ಮದರಾಸು

— ಡೈರೆಕ್ಟರುಗಳ ಬೋರ್ಡ್ —

ಸರ್ ವೇಪಾ ರಮೇಶಂ, ಕೆ. ಟಿ ರಿಟೈರ್ಡ್ ಜಡ್ಜ್, ಮದರಾಸ್ ಹೈಕೋರ್ಟ್, ಮದರಾಸು.

ರಾವ್ ಬಹದ್ದೂರ್ ಮ|| ಕೆ. ಬಲರಾಮ ಅಯ್ಯರ್, ಬಿ.ಎ. ರಿಟೈರ್ಡ್ ಅಕೌಂಟೆಂಟ್ ಜನರಲ್ ಮದರಾಸ್.

ಮ|| ಸಿ. ಕೃಷ್ಣಮೂರ್ತಿ ಮೊದಲಿಯಾರ್ ಲ್ಯಾಂಡ್ ಲಾರ್ಡ್, ಶಿಯಾಲಿ.

ದಿವಾನ್ ಬಹದ್ದೂರ್ ಮ|| ಎ. ವಿ ರಾಮಲಿಂಗ ಅಯ್ಯರ್, ಮದರಾಸ್ ಸರಕಾರದ ರಿಟೈರ್ಡ್ ಚೀಫ್ ಇಂಜನಿಯರು.

ಮ|| ಟಿ. ಎಸ್ ನಾರಾಯಣ ಸ್ವಾಮಿ, ಎಂ.ಎ., [illegible] ಕೆಮಿಸ್ಟ್, ಬಕಿಂಗ್ಹ್ಯಾಂ ಮಿಲ್ಸ್, ಮದರಾಸ್.

ದಿವಾನ್ ಬಹದ್ದೂರ್ ಮ|| ವಿ. ಭಾಷ್ಯಂ ಅಯ್ಯಂಗಾರ್, ರಿಟೈರ್ಡ್ ಮದರಾಸ್ ಹೈಕೋರ್ಟ್ ಜಡ್ಜ್.

ಮ|| ಸಿ ಎಂ. ಶ್ರೀನಿವಾಸನ್, ಬಿ.ಎ., ಬಿ.ಎಲ್. (ಎಕ್ಸ್-ಅಫೀಸಿಯೋ) ಮದ್ರಾಸ್.

ಮ್ಯಾನೇಜರ್:- ಮ|| ಎಂ. ನಟೇಶನ್, ಎಂ.ಎ.

ಚೀಫ್ ಮೆಡಿಕಲ್ ಆಫೀಸರ್:- ಲೆ. ಕ|| ವಿ. ಮಹದೇವನ್, ಐ. ಎಂ ಎಸ್.

ಬ್ಯಾಂಕರುಗಳು:— ಇಂಡಿಯನ್ ಬ್ಯಾಂಕ್ ಲಿಮಿಟೆಡ್, ಮದರಾಸ್. ಮದರಾಸ್ ಪ್ರೋವಿನ್ಷಿಯಲ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಇಂಡೋ-ಕಮರ್ಷಿಯಲ್ ಬ್ಯಾಂಕ್ ಲಿಮಿಟೆಡ್, ದಿ ಬ್ಯಾಂಕ್ ಆಫ್ ಮೈಸೂರು, ಲಿಮಿಟೆಡ್.

ಬ್ರಾಂಚುಗಳು:— ಕಲ್ಕತ್ತ, ಲಾಹೋರ್, ಜೋಧಪುರ್, ಮಧುರೆ, ಕಲ್ಲಿಕೋಟೆ, ಬೆಜವಾಡ, ಅಲಹಾಬಾದ್ ಬೊಂಬಾಯಿ, ಅಹಮದಾಬಾದ್, ಪೂನಾ.

ಮೈಸೂರು ಸರಕಾರದ ಹೊಸ ವಿಮಾ ಕಾನೂನನ್ನು ಅನುಸರಿಸಿ ಕಂಟ್ರೋಲರವರಲ್ಲಿ ಠೇವಣಾತಿ ಮೊಬಲಗು ಇಡಲಾಗಿದೆ.

ಕರ್ನಾಟಕದಲ್ಲೆಲ್ಲಾ ಯೋಗ್ಯರಾದ ಮತ್ತು ಪ್ರತಿಭಾಶಾಲಿಗಳಾದವರಿಂದ ಏಜನ್ಸಿಗಳಿಗೆ ಅರ್ಜಿಗಳು ಸ್ವೀಕರಿಸಲ್ಪಡುವುವು.

ಉತ್ತಮ ಕೆಲಸಮಾಡುವವರಿಗೆ ಒಳ್ಳೇ ಷರತ್ತುಗಳು.

ಮ|| ಸಿ. ಎಂ. ಶ್ರೀನಿವಾಸನ್, ಬಿ. ಎ., ಬಿ. ಎಲ್. ಜನರಲ್ ಸೆಕ್ರೆಟರಿ.
ಇಂಡಿಯನ್ ಮ್ಯೂಚುಯಲ್ ಲೈಫ್ ಅಸೋಸಿಯೇಷನ್ ಲಿಮಿಟೆಡ್,
10 ಮೌಂಟ್‌ರೋಡ್, ಮದ್ರಾಸ್.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಬಿ. ಕರುಣಾಕರ ಹೆಗ್ಡೆ, ಇನ್ಸ್‌ಸ್ಪೆಕ್ಟರ್ ಆಫ್ ಏಜನ್ಸೀಸ್,
ಪರ್ಕಳ ಪೋಸ್ಟ್, ಉಡುಪಿ

Bonus: Endowment Rs. 15. Wole life Rs. 18 Last valuation.

INDIAN MUTUAL LIFE ASSOCIATION, LIMITED.

Head Office—No. 10, Mount Road Madras.

ಲುವಿಕೆಯು ತಾತ್ಕಾಲಿಕವಾದುದೆಂದು ನನಗನಿಸಿದೆ. ಹಾದಿ ಕಾಣದೆ ಹೋದರೆ, ನನ್ನ ಹಾದಿಯಲ್ಲಿ ನನ್ನನ್ನೇ ಹೋಗಲು ಬಿಟ್ಟು ಅವರ ತೀರ್ಮಾನವು ನ್ಯಾಯವೆನ್ನಿಸಲಿವೆ. ಈ ದುಃಖಕರ ಘಟನೆಗೆ ನನ್ನಲ್ಲಿರುವ ಕೊರತೆಯೇ ಕಾರಣವೆಂದಾದರೆ, ಮುಂದೆ ಅಹಿಂಸಾ ಪ್ರಕಾಶ ಬೀರುವಷ್ಟು ಉಪಕರಣಗಳು ನನ್ನಲ್ಲಿಲ್ಲವೆಂಬುದನ್ನು ನಾನು ತಿಳಿಯಬಲ್ಲೆನು. ಈ ವಾದ ಮತ್ತು ಸಂದೇಹಕ್ಕೆ ಅಸ್ತಿವಾರವೆಂದರೆ, ಕಾಂಗ್ರೆಸ್ ಕಮಿಟಿಯು ಅಭಿಪ್ರಾಯವು ಬಹುಮತೀಯ ಕಾಂಗ್ರೆಸ್ಸಿನವರ ಅಭಿಪ್ರಾಯದ ಪ್ರತಿರೂಪವಾಗಿ ಮುಂದೆ ಬಂದುದೇ. ಹೆಚ್ಚಿನ ಕಾಂಗ್ರೆಸ್ಸಿನವರು ಸ್ಥಿರವಾದ ಅಹಿಂಸಾವಾದಿಗಳಾಗಿದ್ದಾರೆಂದು ನನ್ನ ಭರವಸೆ ಮತ್ತು ಸಮಿತಿಯವರ ಆಶೆ. ಕಾಂಗ್ರೆಸ್ ಜನರ ಶಕ್ತಿಯ ಕುರಿತು ತಮ್ಮ ಅಂದಾಜು ಕಡಿಮೆಯೆಂಬುದನ್ನು ತಿಳಿಯುವಂತಾದರೆ ಅದಕ್ಕಾಗಿ ಸಮಿತಿಯವರಿಗಿಂತ ಹೆಚ್ಚಿಗೆ ಆನಂದಗೊಳ್ಳುವವರು ಇನ್ನೊಬ್ಬರಿರಲಾರರು. ಯಥಾರ್ಥವಾದರೆ, ಗಣನೀಯ ಅಲ್ಪ ಸಂಖ್ಯಾಕರು ಸ್ಥಿರವಾದ ಅಹಿಂಸಾವಾದಿಗಳಾಗಿರುವರಲ್ಲದೆ, ಕಾಂಗ್ರೆಸ್ಸಿನ ಬಹುಮತೀಯರು ಹಾಗಿಲ್ಲ. ಈ ವಿಷಯವು ತರ್ಕಿಸಲ್ಪಡಲಿಲ್ಲವೆಂಬುದನ್ನು ನೆನಪಿನಲ್ಲಿಡಬೇಕು. ವರ್ಕಿಂಗ್ ಕಮಿಟಿ ಮೆಂಬರರು ವಾದಕ್ಕೆ ಕಾರಣಗಳೊದಗಿಸಿದ್ದರು. ಆದರೆ ಅಹಿಂಸೆಯು ಹೃದಯದೊಳಗಿನ ಒಂದು ಗುಣ. ಅದನ್ನು ವಾದದ ಮೂಲಕ ಮೆದುಳಿನೊಳಗೆ ಹೊಗಿಸಲು ಸಾಧ್ಯವಿಲ್ಲ. ಆದುದರಿಂದ ಅಹಿಂಸೆಯು ದೃಢವಾದ ಮತ್ತು ಶಾಂತವಾದ ಪ್ರದರ್ಶನವೊಂದೇ ಅಗತ್ಯ. ಇದಕ್ಕೆ ಸಂದರ್ಭಗಳು ಪ್ರತಿಯೊಬ್ಬನಿಗೆ ಪ್ರತಿದಿನವೂ ಒದಗಿಬರುತ್ತಿವೆ. ಜಾತೀಯ ಕಲಹಗಳು, ಡಕಾಯಿತಿಗಳು, ಮಾತು ಜಗಳಗಳು ಇದ್ದೇ ಇವೆ. ನಿಜವಾದ ಅಹಿಂಸಾವಾದಿಗಳು ಇಂತಹ ಸಂದರ್ಭಗಳಲ್ಲೆಲ್ಲಾ ಅದನ್ನು ಪ್ರದರ್ಶಿಸಬಲ್ಲರು. ಅದು ಸರಿಯಾಗಿ ಪ್ರಯೋಗಿಸಲ್ಪಟ್ಟಲ್ಲಿ ಪರಿಣಾಮವೀಯದೆ ಹೋಗುವಂತಿಲ್ಲ.

ಅಹಿಂಸೆಯು ಜೀವಾಳ

ಅಹಿಂಸೆಯ ಪರಿಣಾಮದ ಕುರಿತು ಅಪನಂಬಿಕೆಯುಳ್ಳ ಒಬ್ಬನೇ ಒಬ್ಬ ಕಾಂಗ್ರೆಸಿಗನಿರಲಾರನೆಂದು ನನಗೆ ಖಂಡಿತವಾದ ನಂಬಿಕೆಯಿದೆ. ಒಳಗಿನ ಗೊಂದಲ ಮತ್ತು ಹೊರಗಿನ ಆಕ್ರಮಣವನ್ನಿದಿರಿಸಲು ಅಹಿಂಸಾವಲಂಬಿಗಳಾಗಬೇಕೆಂದು ಇಚ್ಛಿಸುವ ಕಾಂಗ್ರೆಸ್‌ವಾಲರು ತಮ್ಮ ದೈನಿಕ ವ್ಯವಹಾರದಲ್ಲಿ ಅದನ್ನು ಅಂಗೀಕರಿಸಲಿ. ಸ್ಥಿರವಾದ ಅಹಿಂಸೆಯು ಕೇವಲ ಒಂದು ಧೋರಣೆಯಾಗಿರಲು ಸಾಧ್ಯವಿಲ್ಲ. ಅದು ಜೀವಾಳವಾಗಿರಬೇಕು; ಅಥವಾ ಆಳವಾದ ಆವೇಗವಾಗಿಯಾದರೂ ಇರಬೇಕು. ಆ ವೇಗವು ಮಾನವನ ಪ್ರತಿಯೊಂದು ಸಣ್ಣ ಕಾರ್ಯದಲ್ಲಿ ಕೂಡ ಪ್ರದರ್ಶಿಸಲ್ಪಡುತ್ತದೆ. ಅಂತೆಯೇ ಅಹಿಂಸೆಯನ್ನಂಗೀಕರಿಸಿದವನು, ಅದನ್ನು ತನ್ನ ಕೌಟುಂಬಿಕವಾದ ಮತ್ತು ನೆರೆಕರೆಯವರೊಳಗಿನ ವ್ಯವಹಾರದಲ್ಲಿಯೂ, ಉದ್ಯೋಗದಲ್ಲಿ, ಸಾರ್ವಜನಿಕ ಸಭೆಯಲ್ಲಿ ಮತ್ತು ವಿರೋಧಿಗಳಿದಿರೂ ಅದನ್ನು ತೋರಿಸಲಿ. ಅಹಿಂಸೆಯು ಈ ರೀತಿ ಪ್ರದರ್ಶಿಸಲ್ಪಡದ ದೆಸೆಯಿಂದಲೇ ಒಳಗಿನ ಮತ್ತು ಹೊರಗಿನ ಆಕ್ರಮಣಗಳನ್ನು ಅಹಿಂಸಾತ್ಮಕವಾಗಿ ಇದಿರಿಸಲು ಕಾಂಗ್ರೆಸಿನವರು ತಯಾರಿಲ್ಲವೆಂಬ ನ್ಯಾಯವಾದ ನಿರ್ಧಾರಕ್ಕೆ ಕಾಂಗ್ರೆಸ್ ಸಮಿತಿಯು ಬರುವಂತಾಯಿತು. ಈಗ ಕಾಂಗ್ರೆಸು ಕೈಕೊಂಡಿರುವ ಅಹಿಂಸಾವಿಧಾನವು ಈ ವರೆಗಿದ್ದುದಕ್ಕಿಂತ ಭಿನ್ನವಾದುದೆಂಬುದು ಸ್ಪಷ್ಟ. ಆದರೆ ಅಹಿಂಸೆಯೊಂದೇ ಸತ್ಯವಾದುದು. ಮತ್ತು ಅದೊಂದೇ ಲೋಕವನ್ನು ಆತ್ಮನಾಶದಿಂದ ಪಾರುಮಾಡಬಲ್ಲುದು. ಯುದ್ಧಗಳಿಂದ ಬಿಡುಗಡೆಯನ್ನಪೇಕ್ಷಿಸಿ ದಾರಿಗಾಣದೆ ಒದ್ದಾಡುವ ಲೋಕಕ್ಕೆ ಭಾರತವು ನಿಜವಾದ ಅಹಿಂಸೆಯ ಸಂದೇಶವೀಯಲಾರದಾದರೆ, ಆ ಕುರಿತು ವಿಳಂಬವಾಗುವುದಕ್ಕಿಂತ ಬೇಗನೇ ಆಗುವದು ಮೇಲು. ನಾನು ಈ ಲೇಖನ ಬರೆದಾದ ಮೇಲೆ ಜವಾಹಿರಲಾಲರ ಹೇಳಿಕೆಯನ್ನು ನೋಡಿದೆ. ನನಗೆ ಸಂಬಂಧಿಸಿದ ಪ್ರತಿಯೊಂದು ವಾಕ್ಯದಲ್ಲಿಯೂ ಪಂಡಿತರಿಗೆ ನನ್ನಲ್ಲಿರುವ ಪ್ರೇಮ ಮತ್ತು ವಿಶ್ವಾಸವು ಹೊರಸೂಸುತ್ತಿತ್ತು. ಇಂದಿನ ಪ್ರತ್ಯೇಕತೆಯಿಂದ ಶುಭವೇ ಕೈಗೂಡುವದು.

NOTICE.

ಕಾಸರಗೋಡು ಡಿ ಮು ಕೋರ್ಟಿನಲ್ಲಿ

O S. No. 106/1939

ರಿಸೀವರ್ ಪಿ. ಸಂಜೀವರಾವ್ .... ವಾದಿ

ಮತ್ತು

ಅಬ್ದುಲ್ಲ ಸಹಾ .... ಪ್ರತಿವಾದಿರು

ಮುಳಿಯಾರು IIನೇ ಗ್ರಾಮದ ಪ.ಡಿಯಂಗೋಟಲ್ಲಿರುವ 1ನೇ ಪ್ರತಿವಾದಿ ಅಬ್ದುಲ್ಲನ ಮಕ್ಕಳು 4ನೇ ಪ್ರತಿವಾದಿ ಮಮ್ಮು ಮತ್ತು 7ನೇ ಪ್ರತಿವಾದಿ ಅಂದುತ್ತೈ ಸಹಾ 2 ಜನರಿಗೆ.

ವಾದಿಯು ನಿಮ್ಮ ಮೇಲೆ ಕೂಡಾ ದಾಖಲ್ ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಖು 16-7-40ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನ್ನ ಬಗ್ಗೆ ಇಡೋಣವಾಗಿರುತ್ತದೆ. ಆ ತಾರೀಕಿಗೆ 11 ಘಂಟೆಗೆ ನೀವು ಹಾಜರಾಗದೆ ಇದ್ದಲ್ಲಿ ನಿಮ್ಮನ್ನು ಎಕ್ಸ್‌ಪಾರ್ಟಿ ಮಾಡಲಾದೀತು ತಿಳಿದಿರುವದು.

ಕಾಸರಗೋಡು, ತಾ. 25-6-'40 — **K. N. Kodoth,** *Advocate for Plaintiff*

ಗ್ಯಾರಂಟಿ ಇನಾಮುಗಳು — ನಂಬ್ರ **16**

38,250 ರೂಪಾಯಿ

17 ಸರ್ವಸಮ ಉತ್ತರಗಳಿಗೆ ಹಂಚಲಾಗುವುದು. ನಿಶ್ಚಿತ ಉತ್ತರದ ಸುರುವಿನ ಅಡ್ಡ ಸಾಲಿನ ಪ್ರಥಮದ ಎರಡು ಅಂಕೆಗಳಿಗೆ ಸರಿಯಾದ ಪ್ರತಿಯೊಂದು ಉತ್ತರಕ್ಕೆ ರೂ. 5ರಂತೆ ಹಂಚಲಾಗುವುದು. ಭದ್ರವಾಗಿ ಇರಿಸಲ್ಪಟ್ಟ ಉತ್ತರದ ಯಾವುದಾದರೊಂದು ಸಾಲಿನ ಅಂಕೆಗಳಿಗೆ ಸರಿಹೋಲುವಂತಹ 'ರನ್ನರ್ಸ್ ಅಪ್ಸ್' ಪ್ರತಿ ಒಂದಕ್ಕೆ ರೂ. 20ರಂತೆ ಸಮಾಧಾನಕರ ಬಹುಮಾನಗಳಿರುವವು ಇವೂ ಅಲ್ಲದೆ ನಮ್ಮ ಉತ್ತರದ ಪ್ರಥಮ ಎರಡು ಅಡ್ಡಸಾಲುಗಳ ಸಂಖ್ಯೆಗಳನ್ನು ಸರಿಹೋಲುವಂತಹ ಪ್ರತಿಯೊಂದು ಉತ್ತರಕ್ಕೂ ರೂಪಾ 300ರ ಗ್ಯಾರಂಟಿ ಇದೆ. ಅತ್ಯಧಿಕ ಉತ್ತರಗಳನ್ನು ಕಳುಹಿಸುವ ಉಮೇದ್ವಾರರಿಗೆ ರೂ. 150 ಎಂಗಡಿಸಿಟ್ಟಿರುತ್ತದೆ.



ಚೌಕಕಟ್ಟಿನಲ್ಲಿ ಅಡ್ಡ, ನೀಟ, ಮೂಲೆ ಮೂಲೆಯ ಪ್ರತಿ ಸಾಲಿನ ಮೊತ್ತವು 34 ಆಗುವಂತೆ 1ರಿಂದ 16ರ ವರೆಗಿನ ಸಂಖ್ಯೆಗಳನ್ನು ಉಪಯೋಗಿಸುವುದು. ಒಮ್ಮೆ ಉಪಯೋಗಿಸಿದ ಸಂಖ್ಯೆಯನ್ನು ಮರಳಿ ಉಪಯೋಗಿಸಬಾರದು. ಉತ್ತರ ಕಳುಹಿಸುವ ಕೊನೆಯ ತಾರೀಕು: 9-7-40

ಫಲಿತಾಂಶ ಪ್ರಕಟನೆಯ ತಾರೀಕು 18-7-40.

ಪ್ರವೇಶಶುಲ್ಕ:- ಒಂದು ಉತ್ತರಕ್ಕೆ ಒಂದು ರೂಪಾಯಿ; 3 ಉತ್ತರಗಳಿಗೆ ರೂಪಾ 2; 5ಕ್ಕೆ ರೂಪಾ 3; ಇಲ್ಲವೆ ಪ್ರತಿ 8 ಉತ್ತರಗಳ ಸೆಟ್ಟಿಗೆ 5 ರೂಪಾಯಿ.

ನಿಯಮಗಳು- ತಕ್ಕ ಪ್ರವೇಶಶುಲ್ಕದೊಂದಿಗೆ ಕಾಲಿಕಾಗದದಲ್ಲಿ ಇಚ್ಛಾನುಸಾರ ಉತ್ತರಗಳನ್ನು ಕಳುಹಿಸಬಹುದು. ಹಣವನ್ನು ಮನಿಯಾರ್ಡರ್ ಅಥವಾ ಪೋಸ್ಟಲ್ ಆರ್ಡರ್ ಮೂಲಕ ಕಳುಹಿಸಬೇಕು. ಸಂಗ್ರಹವಾಗುವ ಹಣದ ದಾಮಾಶಯದಂತೆ ಬಹುಮಾನಗಳ ಬದಲಾವಣೆಯಾಗುವುದು. ಆದರೆ ಮುಂಬಯಿಯ ಪ್ರಸಿದ್ಧ ಬೇಂಕೊಂದರಲ್ಲಿ ಭದ್ರವಾಗಿರಿಸಲ್ಪಟ್ಟ ನಿಶ್ಚಿತ ಉತ್ತರಕ್ಕೆ ಸರಿಹೋಲುವ ಪ್ರತಿಯೊಂದು ಉತ್ತರಕ್ಕೆ ಕನಿಷ್ಠ ರೂಪಾಯಿ 2250ರ ಬಹುಮಾನದ ಗ್ಯಾರಂಟಿಯಿದೆ. ಫಲಿತಾಂಶವನ್ನು ಪಡೆಯುವದಕ್ಕಾಗಿ ವಿಳಾಸ ಸಹಿತವಾದ ಕವರೊಂದನ್ನು ಸ್ಟ್ಯಾಂಪು ಸಹಿತ ಲಗ್ತೀಕರಿಸತಕ್ಕದ್ದು. ಮೆನೇಜರರ ನಿರ್ಣಯವೇ ಕೊನೆಯದೂ ಮತ್ತು ಕಾನೂನು ಬದ್ಧವಾದದ್ದೂ ಎಂಬ ವಿಷಯ ಸರ್ವರಿಗೂ ತಿಳಿದಿರಬೇಕು.

ಹಿಂದಿನ 30 ನೊತ್ತದ ಸ್ಪರ್ಧೆಯ ಫಲಿತಾಂಶ

1ನೇ ಸಾಲು	11,	7,	0,	12
2ನೇ ಸಾಲು	4,	13,	10,	3
3ನೇ ಸಾಲು	9,	2,	5,	14
4ನೇ ಸಾಲು	6,	8,	15,	1

ನಿಮ್ಮ ಉತ್ತರ ಮತ್ತು ಪ್ರವೇಶ ಶುಲ್ಕವನ್ನು ಈ ಕೆಳಗಣ ವಿಳಾಸಕ್ಕೆ ಕಳುಹಿಸಿರಿ,

ದಿ ಮೆನೇಜರ್,

ಪ್ರೆಸಿಡೆನ್ಸಿ, ಕೆಮರ್ಸಿಯಲ್ ಸಿಂಡಿಕೇಟ್

ಮುಂಬಾದೇವಿ, ಬೊಂಬಾಯಿ 2.

The Manager,

Presidency, Commeicial Syndicate,

Mumbadevi, BOMBAY 2.

ಕನ್ನಡ ಸುದಿನೆಣ್ಣಗೊಂದು ಕನ್ನಡಗಿತ್ತಿಯ ಕಿರುಗಾಣಿಕೆ

ನಾಡ ಸೋದರಿಯರ ನೈಜ ಜೀವನದ ದುರಂತ ಚಿತ್ರವನ್ನೂ, ಸ್ತ್ರೀ-ಪುರುಷ ಹೃದಯಗಳ ಆಳವನ್ನೂ, ಹೃದಯಂಗಮವಾಗಿ ಚಿತ್ರಿಸುವ ರಮ್ಯ ಕಥಾನಕ

ವತ್ಸಲಾ

ಸಾಮಾಜಿಕ ಕಾದಂಬರಿ

ಬೆಲೆ: ೦-೭-೩.

0—8—0 ಸ್ಟಾಂಪು ಕಳುಹಿಸಿದರೆ 1 ಪ್ರತಿಯನ್ನು ಕಳಿಸಲಾಗುವುದು.

ಬರಹಗಾರ್ತಿಯರು:—

ಶ್ರೀಮತಿ ಮಟ್ಪಾಡಿ ಕಮಲಾಕ್ಷಿ

ಈ ಪುಸ್ತಕದ ಕುರಿತು ಪ್ರಾಕ್ತನ ವಿಮರ್ಶ ವಿಚಕ್ಷಣ ಕರ್ಣಾಟಕ ವಿದ್ಯಾವೈಭವ, ರಾವ್ ಬಹದೂರ್ ಆರ್. ನರಸಿಂಹಾಚಾರ್ಯ M.A., M.R.A.S. ಇವರು ಬೆಂಗಳೂರಿನಿಂದ ಹೀಗೆ ಅಭಿಪ್ರಾಯಪಡುತ್ತಾರೆ 'ಗ್ರಂಥದ ಶೈಲಿ ಗಂಭೀರವಾಗಿಯೂ ಹೃದಯರಂಜಕವಾಗಿಯೂ ಇದೆ, ಪ್ರತಿಪಾದಿತವಾದ ವಿಷಯವು ನೀತಿಬೋಧಕವಾಗಿಯೂ ದುರ್ಮಾರ್ಗ ನಿವಾರಕವಾಗಿಯೂ ಇದೆ. ಸ್ತ್ರೀಯರಿಗೆ ಬೋಧಪ್ರದವಾದ ಗ್ರಂಥ.........'

ಪ್ರತಿಗಳು ಸಿಗುವ ಸ್ಥಳ:

ನವಭಾರತ ಪುಸ್ತಕ ಭಂಡಾರ,

ಉಡುಪಿ.

ರುಮೇನಿಯದಲ್ಲಿ ನಾಜೀ ಪಂಚಮಾಂಗ

ರುಮೇನಿಯವು ಈಗ ರಷ್ಯಕ್ಕೊಂದು ತುಂಡನ್ನು ಮರುಮಾತಿಲ್ಲದೆ ಬೇರ್ಪಡಿಸಿ ಕೊಟ್ಟಿದೆ. ಅಂತೆಯೇ ಹಂಗೇರಿಯೂ ತನ್ನ ಪಾಲಿಗಾಗಿ ಕೈನೀಡಿದೆ. ಅಂತೂ ರುಮೇನಿಯವಿಂದು ನಂದರಾಯನ ಬದುಕಿನಂತಾಗುವ ದುಷ್ಕಾಲವಿದು. ರಷ್ಯವು ಕಠಿಣ ಧೋರಣೆವಹಿಸಿ, ರುಮೇನಿಯದ ಕಾಣಿಕೆಯಾಗಿ ತನ್ನ ಪಾಲನ್ನು ಕೂಡ ತೆಗೆದುಕೊಳ್ಳುವಷ್ಟು ತಾಳ್ಮೆಯಿಲ್ಲದೆ, ಒಮ್ಮೆಗೇ ಮೈಮೇಲೆ ಬಿದ್ದು ಅಪಹರಿಸುವಷ್ಟು ಅವಸರಗೊಂಡುದು ಆಶ್ಚರ್ಯವನ್ನುಂಟುಮಾಡಿದೆ. ಈ ದುರ್ಘಟನೆಗೆ ಕೆಲವೇ ದಿನಗಳ ಮೊದಲು ರುಮೇನಿಯವು ಸಂಪೂರ್ಣವಾಗಿ ಜರ್ಮನಿಯ ಪಕ್ಷ ವಹಿಸಿದ್ದಿತು. ಅದರೂ ನಿರೀಕ್ಷೆಯಲ್ಲಿದ್ದ ವಿಪತ್ತು ಒದಗಿಬಂತೇ ಬಂತು.

ನಾಜಿಗಳ ಒಳಸಂಚು

ಜರ್ಮನಿಯ ಭಯವು ರುಮೇನಿಯಕ್ಕೆ ಇಂದು ನಿನ್ನೆಯದಲ್ಲ. ಮಿಕ್ಕ ದೇಶಗಳಂತೆ ಇಲ್ಲಿಯೂ ನಾಜೀ ಗುಪ್ತದಳದ ಕಾರ್ಯವು ಹಲವು ವರುಷಗಳಿಂದ ನಡೆದಿತ್ತು. 1930ನೇ ಮಾರ್ಚಿ ತಿಂಗಳಿಂದ ರುಮೇನಿಯದ ಬನಾಟ್ ಕ್ಷೇತ್ರದ ಜರ್ಮನರು ಹಿಟ್ಲರನ ಆಗಮನ ನಿರೀಕ್ಷೆಯಲ್ಲಿದ್ದರು. ಅಲ್ಲಿಯ 40 ವರುಷದೊಳಗಿನವರೆಲ್ಲಾ ಸಂಪೂರ್ಣ ನಾಜೀ ತತ್ವಾನುಯಾಯಿಗಳು. 1939ನೇ ಮಾರ್ಚಿಯ ವರೆಗೆ ಅಲ್ಲಿ ವಿವಿಧ ಜರ್ಮನಿ ಸಂಸ್ಥೆಗಳಿದ್ದು ಅವುಗಳೊಳಗೆ ಸ್ಪರ್ಧೆ ಕೂಡ ನಡೆಯುತ್ತಿತ್ತು. ಆದರೆ ಹಿಟ್ಲರನು 'ಪ್ರೇಗು' ಪಟ್ಟಣಕ್ಕೆ ಕಾಲಿಟ್ಟೊಡನೆ ಎಲ್ಲವೂ ಫಕ್ಕನೆ ಸ್ತಬ್ಧವಾಗಿ ಒಂದೇ ಸಂಸ್ಥೆಯಡಿಯಲ್ಲಿ ನಾಜಿಗಳೆಲ್ಲಾ ಸಂಘಟನೆಯಿಂದ ಪ್ರಚಾರಕಾರ್ಯಕ್ಕಾರಂಭಿಸಿದರು. ಅವರ ಗುರಿಯೆಂದರೆ ಹಿಟ್ಲರನನ್ನು ರುಮೇನಿಯಕ್ಕೆ ಆಮಂತ್ರಿಸುವದೊಂದೇ. ಅದಕ್ಕಾಗಿ ಜರ್ಮನರ ಕ್ಲಬ್ಬುಗಳು, ಪ್ರಚಾರಕ ಸಮಿತಿಗಳು, ಭಾಷಣಗಳು ಸದಾಕಾಲ ನಡೆಯುತ್ತಿದ್ದವು. ಶಾಲಾ ಮಕ್ಕಳಿಗೂ ನಾಜೀ ರೀತಿಯ ವಿದ್ಯಾಭ್ಯಾಸ ದೊರೆಯುತ್ತಿತ್ತು. ಅಲ್ಲಿಯ ನಾಜೀ ಸಂಸ್ಥೆಗೂ ಜರ್ಮನಿಯ ರೀಚಿಗೂ ನಿಕಟ ಸಂಬಂಧವಿದ್ದು ಆಗಾಗ ಹೊಸ ಹೊಸ ನಾಜೀ ಕಾರ್ಯಕರ್ತರಾಗಮಿಸಿ ಇಲ್ಲಿ ಹುರುಪುಗೊಡುತ್ತಿದ್ದರು. ತಮಗೆ ವಿರೋಧವೆಂದು ತೋರಿದ ಸ್ಥಳೀಕ ಅಧಿಕಾರಿಗಳ ಹುಕುಮುಗಳನ್ನು ಕೂಡ ಜರ್ಮನರು ಧಿಕ್ಕರಿಸಿ ನಡೆಯುತ್ತಿದ್ದರು. ಎಲ್ಲೆಲ್ಲಿಯೂ 'ಹೈಲ್ ಹಿಟ್ಲರ್' ಘೋಷಗಳು ಕೇಳಿಬರುತ್ತಿದ್ದವು. ಮುಂದಿನ ಅಪಾಯ ನಿರೀಕ್ಷೆಯಿಂದ ರುಮೇನಿಯಾ ಸರಕಾರವು ಜರ್ಮನಿಯ ಸಂಗ್ತಿಯಲ್ಲಿ ತಾನಾಗಿ ಹೋಗಿ ಕುಳಿತರೂ, ಕಹಿತಿನ್ನುವದು ತಪ್ಪಲಿಲ್ಲ.

ನವಯುಗದಲ್ಲೇ

ನಿಮ್ಮ ಜಾಹಿರಾತು ಪ್ರಕಟಿಸಿರಿ

ಈ ವಾರದ ಭವಿಷ್ಯ

ತಾರೀಖು **4-7-1940**ರಿಂದ **11-7-1940**ರ ವರೆಗೆ

ಮೇಷ—ಒಮ್ಮೊಮ್ಮೆ ಮನಸ್ಸಿನಲ್ಲಿ ಅಶಾಂತಿಯು ಗೊಂದಲವೇಳುವುದು. ಶತ್ರುಗಳು ಬೇಕುಬೇಕೆಂದೇ ನಿಮ್ಮನ್ನು ಕೆಣಕುವರು. ಆರೋಗ್ಯವೂ ಸ್ವಲ್ಪ ಮಟ್ಟಿಗೆ ಕೆಟ್ಟು ಕಜ್ಜಿ ಹುಣ್ಣು ಇತ್ಯಾದಿ ರೋಗಗಳು ಕಾಣಿಸಿಕೊಳ್ಳಲಿವೆ. ನೌಕರಿ ವ್ಯಾಪಾರ, ಉದ್ಯೋಗ ಮೊದಲಾದವುಗಳಲ್ಲಿ ನಿಮ್ಮ ಇಚ್ಛೆಯಂತೆ ಫಲಪ್ರಾಪ್ತಿಯಿರುವುದಾದರೂ ಏನೊಂದೂ ಪ್ರಯೋಜನವಿಲ್ಲದೆ ಹಣವು ನಿಮ್ಮ ಕೈಯಿಂದ ವಿಚಾರಗಿ ಹೋಗುವುದು. ಸಂಸಾರಸುಖವೂ ಬಂಧುಮಿತ್ರರ ಸಹಾನುಭೂತಿಯೂ ನಿಮಗೆ ಸಾಕಷ್ಟಿರುವುದು. ವೈದ್ಯಜನರು ಸ್ವವೃತ್ತಿಯಲ್ಲಿ ಯಶಸ್ಸಂಪಾದಿಸುವರು. ಕಿಚಾಲಕತೆಯಿಂದ ಮಾಡಿದ ಕಾರ್ಯಗಳು ನಿಮ್ಮನ್ನು ಪಶ್ಚಾತ್ತಾಪಕ್ಕೆ ಗುರಿಪಡಿಸುವವು. ತಾ. 4, 5 ಮತ್ತು 11 ಈ ದಿನಗಳಲ್ಲಿ ಕಾರ್ಯಜಯ, ಧನಲಾಭ, ಮನಶ್ಶಾಂತಿಯೂ ದೊರೆಯಲಿವೆ.

ವೃಷಭ—ಎಂತಹ ದುರ್ಘಟ ಪ್ರಸಂಗ ಬಂದರೂ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಲಾರಿರಿ. ಹಟಸಾಧನೆಗಾಗಿ ಸಜ್ಜನ ದುರ್ಜನರೆನ್ನದೆ ಹಲವರ ಮೈತ್ರಿಯನ್ನು ಬಯಸುವಿರಿ. ಧಾನ್ಯಗಳ ಕೊಟ್ಟು ನಿಶ್ಚಯೋಜನವಾದರೂ ಜಾಣ್ಮೆಯಿಂದ ಅದು ಸಹಕಾರಿಯಾಗುವಂತೆ ನಿಮ್ಮ ಕಾರ್ಯಸಾಧನೆಗೆ ಕಾಳಸೋಕರ ಬೆಂಬಲವೂ ಕೂಡ ಅವಶ್ಯವೆನಿಸುವದು. ಕಷ್ಟಕ್ಕೆ ತಕ್ಕುದಾದ ಫಲವೂ ದೊರೆಯುವದು. ಆದರೇನು ವ್ಯಯದಲ್ಲಿದ್ದ ರಾಗುಕೇತುಗಳು ಧನದಲ್ಲಿದ್ದ ರವಿಯೂ ನಾನಾ ರೀತಿಯ ವಿಘ್ನಗಳನ್ನು ತಂದೊಡ್ಡಿ ನಿಮ್ಮನ್ನು ಹಣದ ಅಡಚಣೆಯಲ್ಲಿ ಸಿಲುಕಿಸುವರು. ಪ್ರವಾಸಾದಿಗಳು ಸಂಭವಿಸಿ ನಾನಾ ತರದ ಕಷ್ಟನಷ್ಟಗಳಿಗೊಳಗಾಗಲಿರುವಿರಿ. ಮನೋವ್ಯಥೆಯಿಂದಾಗಿ ಆರೋಗ್ಯವೂ ಕೆಡಲಿದೆ. ಅಧಿಕಾರಿಗಳ ಕೂಡೆ ಮನಸ್ತಾಪವುಂಟಾದೀತು. ತಾ 6, 7 ಈ ಎರಡು ದಿನಗಳನ್ನು ಬಿಟ್ಟು ಇತರ ದಿನಗಳು ಅನಿಷ್ಟಕಾರಿಗಳಾಗಿ ಪರಿಣಮಿಸಲಿವೆ.

ಮಿಥುನ—ಕ್ಷೇತ್ರಗ್ರಹರಾದ ರವಿ ಕುಜರು ನಿಮ್ಮ ರಾಶಿಗೆ ಪ್ರತಿಕೂಲರಾಗಿರುವದರಿಂದ ರಾಜಕೀಯ ಅಧಿಕಾರಿಗಳ ಪೀಡೆಗೆ ಗುರಿಯಾಗುವ ಸಂಭವವಿದೆ. ಪಿತ್ಥೋದ್ರೇಕ ವಿಕಾರದಿಂದಾಗಿ ದೇಹಾಲಸ್ಯವೂ ಉದರರೋಗವೂ ಕಂಡುಬಂದೀತು. ಆಕಸ್ಮಿಕ ಪ್ರವಾಸವು ಸಂಭವಿಸುವಂತಿದೆ. ಮುಂಗೋಪವು ಸ್ವಲ್ಪ ಹೆಚ್ಚಾಗಿದ್ದರೂ ಅದರಿಂದ ಹಾನಿ ಇದ್ದು, ವಿದ್ಯಾರ್ಥಿಗಳಿಗೂ ವಿದ್ಯೋಪಜೀವಿಗಳಿಗೂ ಲೇಖಕರಿಗೂ, ವ್ಯಾಪಾರಿಗಳಿಗೂ ಕಷ್ಟಜೀವಿಗಳಿಗೂ ಹಚ್ಚಿನ ಅಭೀಷ್ಟಗಳು ಸಿದ್ಧಿಸುವವು. ಆರ್ಥಿಕ ಸುಧಾರಣೆಯಾಗುವುದು. ಸ್ತ್ರೀಮೂಲಕವಾಗಿಯೂ ಧನಾಪ್ತಿಯಾಗಲಿದೆ. ಸಂಸಾರಸುಖವು ತೃಪ್ತಿಕರವಾಗಿರುವದು. ತಾ. 4, 5, 8, 9, 10 ಈ ದಿನಗಳು ಇಷ್ಟಸಾಧಕಗಳಾಗಿವೆ.

ಕರ್ಕಾಟಕ—ಈ ವಾರದಲ್ಲಿ ನಿಮ್ಮ ಅದೃಷ್ಟವು ಬಹಳವಾಗಿ ಕೆಟ್ಟಿರುವುದು. ಅತ್ಯಂತ ದುರ್ಬಲನಾದ ಶತ್ರುವೂ ಕೂಡ ನಿಮ್ಮ ಮೇಲಿನ ಸೇಡನ್ನು ತೀರಿಸಿಕೊಳ್ಳಲು ಹವಣಿಸುವನು. ಸಮಾರಂಭವೊಂದು ಕಾರಣಾಂತರದಿಂದ ಕೆಟ್ಟು ಹೋದಂತಿಲ್ಲ. ನಿಮ್ಮ ವಾಗ್ಬಾಣಗಳು ಹಲವರ ಹೃದಯವನ್ನು ಭೇದಿಸಲಿವೆ. ಅದಕಾರಣ ಹಚ್ಚಿನ ಕಡೆಗಳಲ್ಲಿ ನಿಮ್ಮ ಸ್ಥಾನಮಾನಗಳಿಗೆ ಬಾಧೆ ಸಂಭವಿಸಲಿದೆ. 'ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ' ಎಂದಂತೆ ಮನದಲ್ಲೊಂದು ರೀತಿ, ಬಾಯಿಯಲ್ಲೊಂದು ವಿಧ, ಕೃತಿಯಲ್ಲಿ ಬೇರೊಂದು ಮಾರ್ಗವನ್ನನುಸರಿಸತಕ್ಕ ನೀವು ಆಪ್ತಜನರ ವಿಶ್ವಾಸವನ್ನು ಕೂಡ ಕಳೆದುಕೊಳ್ಳುವಿರಿ. ಮಾತ್ರವಲ್ಲ ಜನನಿಂದೆಗೂ ಗುರಿಯಾಗುವಿರಿ. ತಾ. 6, 7, 11 ಈ ಮೂರು ದಿನಗಳಲ್ಲಿ ಕೆಲವೊಂದು ಗ್ರಹರ ಬಲದಿಂದ ಕಿಂಚಿತ್ಸುಖವನ್ನು ಕಾಣಲಿರುವಿರಿ.

ಸಿಂಹ— ಶುಭದ ಸುಖಗಳೂ ಅಶುಭದ ದುಃಖಗಳೂ ಲಾಭನಷ್ಟಗಳೂ ಸಮಾನವಾಗಿ ಸಂಭವಿಸಲಿವೆ. ನಿಮಗೀ ವಾರದಲ್ಲಿ ಕೋರ್ಟುಕಛೇರಿಗಳ ಕಾರ್ಯಗಳಲ್ಲೂ ವ್ಯಾಪಾರ ವ್ಯವಹಾರಾದಿಗಳಲ್ಲೂ ನಿಮ್ಮ ಮನೋರಥವು ನೆರವೇರುವುದು. ಗೃಹಕೃತ್ಯಕ್ಕೆ ಬೇಕಷ್ಟು ದವಸಧಾನ್ಯಗಳಿರುವುದರಿಂದ ಸಂಸಾರರಥವು ಸಸೂತ್ರವಾಗಿ ಸಾಗುವುದು. ಸಂಸರ್ಗ ದೋಷದಿಂದಲೂ ಗ್ರಹಗತಿಯಿಂದಲೂ ನಿಮ್ಮಲ್ಲಿ ನಾಸ್ತಿಕ್ಯವು ಬೆಳೆಯುತ್ತಲಿದೆ. ಇದರ ಪರಿಣಾಮವಾಗಿ ಅನೇಕರ ಅವಹೇಳನಕ್ಕೆ ಗುರಿಯಾಗುವಿರಿ. ನಿಮ್ಮ ಕಾರಣದಿಂದಾಗಿ ಸ್ತ್ರೀಯರಲ್ಲಿ ಕಲಹವಾಗುವುದು. ಉಷ್ಣವಿಕಾರದಿಂದ ದೇಹದಲ್ಲಿ ತಾಪಜ್ವರವು ಕಂಡುಬರುವುದು. ವಿದ್ಯಾರ್ಥಿಗಳಿಗೆ ಅಧ್ಯಯನಭಾಗಕ್ಕೆ ತೊಡಕುತೊಂದರೆಗಳಧಿಕವಾಗುವವು. ತಾ. 6, 7, 11 ರಲ್ಲಿ ಅತಿವ್ಯಯ ಸಂಭವಿಸಲಿದೆ.

ಕನ್ಯಾ—ಅಷ್ಟಮದ ಶನಿಗುರುಗಳಿಂದಾಗಿ ನಿಮಗೆ ಸದಾ ಕಷ್ಟವು ತಪ್ಪುವಂತಿಲ್ಲ. ಆದರೂ ಈ ವಾರ ಮಧ್ಯೇ ಕೆಲವು ಗ್ರಹರ ಗತಿಯಿಂದ ಕೆಲವು ಸುದಿನಗಳನ್ನು ಕಾಣಲಿರುವಿರಿ. ಸದ್ಯ ನಿಮಗೆ ಲಾಭದಲ್ಲಿ ಕುಜಬುಧರು ಕರ್ಮದಲ್ಲಿ ರವಿಯು ಇವರು ಇಷ್ಟಪ್ರದರಾಗಿರುವ ಕಾರಣ ಬೇಕಾಗಿ ಬೇಕಾದಷ್ಟು ಧನವನ್ನು ಸ್ವಯಂ ಸಂಪಾದಿಸುವಿರಿ. ಸಾಮಾಜಿಕ ರಾಜಕೀಯ ಕಾರ್ಯಗಳಲ್ಲಿ ವಿಜಯಿಗಳಾಗುವಿರಿ. ಜನಮನ್ನಣೆ ಹೊಂದುವಿರಿ. ಆದರೆ ಆರೋಗ್ಯದ ಮಟ್ಟಿಗೆ ಬಹಳ ಕೆಟ್ಟದಾಗುವುದು. ನಡುನಡುವೆ ಪ್ರಯಾಣಗಳು ಬಹಳ ವಿರ್ಘ ಕಷ್ಟಗಳಿಗೆ ಗುರಿಮಾಡುವವು. ಕೇವಲ ನಿಮಿತ್ತದಿಂದಲೇ ಕಲಹ ಗಲಾಟೆಗಳು ಎಷ್ಟೋ ಪ್ರಸಂಗಗಳು ಸಂಭವಿಸಲಿವೆ. ಆದರೂ ತಾ. 8, 9, 10ರಲ್ಲಿ ವಿಶೇಷ ಲಾಭಕರವಾಗಿವೆ.

ತುಲಾ—ಮಾಮಿತ್ರರು ಆಪತ್ಸ್ಥಾನದಲ್ಲಿದ್ದು ಕಷ್ಟಕೊಡಬೇಕೆಂದಿದ್ದರೂ ಶುಭಗ್ರಹರು ಇಷ್ಟಸ್ಥಾನದಲ್ಲಿದ್ದು ಇಷ್ಟಾರ್ಥವನ್ನು ಸಲಿಸಬೇಕೆಂದಿರುವದರಿಂದ ಈ ವಾರದಲ್ಲಿ ನಿಮಗಾವ ತರದ ಅನಿಷ್ಟಾರ್ಥಕ್ಕೆ ಗೂ ಕಾರಣವಿಲ್ಲವು. ಪೂರ್ಣ ದೃಷ್ಟಿಯಿಂದ ನಿಮ್ಮ ಮನೆಯನ್ನು ನೋಡುತ್ತಿರುವ ಶನಿಯು ಪ್ರಮಾದೋಪಾಧಿಗಳನ್ನು ತಂದೊಡ್ಡಲಿರುವನಾದರೂ ಗುರುವಿನ ಗ್ರಹದಿಂದವು ಶಾಂತವಾಗಲಿವೆ. ರಾಜಕಾರಣದಲ್ಲಿ ಎಂಬಿಕಾರ್ಯವು ಫಲಕಾರಿಯಾಗದ ಕಲಹವಾಗಿ ಮನೋರೋಗವೊಂದು ನಿಮ್ಮನ್ನು ಬಾಧಿಸುತ್ತಿರಬಹುದು. ಸಾಲಿಗರ ಉಪಟಳವು ಹೆಚ್ಚಲಿದೆಯಾದರೂ ಸ್ವಸಂಪಾದನೆಯಿಂದಲೂ ಬಂಧುಮಿತ್ರರ ಸಹಾಯದಿಂದಲೂ ಋಣಮುಕ್ತರಾಗುವಿರಿ. ತಾ. 4, 5 ಮತ್ತು 11 ಈ ದಿನಗಳಲ್ಲಿ ಅಧಿಕ ಧನವೆಚ್ಚ, ದೇಹಾಲಸ್ಯ ರಾಜಭೀತಿಗೂ ಎಡೆಯಿದೆ.

ವೃಶ್ಚಿಕ—ಶತ್ರುಗಳ ಪೀಡೆಯಿಂದಲೂ ಗೃಹಕಾಪತ್ಯದಿಂದಲೂ ದೇಹಾಲಸ್ಯದಿಂದಲೂ ನಿಮಗೆ ಒಂದಿಷ್ಟು ಸಮಾಧಾನವಿರದು. ಪೌರುಷವಿದ್ದರೂ ದೈವವು ಪ್ರತಿಕೂಲವಾಗಿರುವದರಿಂದ ಹಚ್ಚಿನ ಕಾರ್ಯಗಳು ಕೊನೆಗಾಣದಿರುವವು. ಆದಾಯಕ್ಕಿಂತಲೂ ಖರ್ಚು ಹೆಚ್ಚಾಗುವುದರಿಂದ ಹಣದ ಬಿಕ್ಕಟ್ಟಿಗೆ ಸಿಲುಕಲಿರುವಿರಿ. ಪತ್ನಿ ಪುತ್ರ ಕಲಹಪ್ರಿಯರಾದರೂ ಇಷ್ಟು ವಿರೋಧವಾಗಿ ವರ್ತಿಸಲಾರರು. ನೌಕರಿಯಲ್ಲಿ ತೃಪ್ತಿಯಿರದು, ವಿದ್ಯಾರ್ಥಿಗಳಿಗೆ ಪ್ರತಿಕೂಲವೇ ಹೆಚ್ಚು. ಸೇವಕ ವರ್ಗದವರಿಗೂ ವ್ಯಾಪಾರಿಗಳಿಗೂ ಪರಿಸ್ಥಿತಿಯು ಕೊಂಚ ಅನುಕೂಲಿಸುವುದು. ಮಾರಾಟದ 4 ದಿನಗಳು ಬಹಳ ಅನಿಷ್ಟಕಾರಿಗಳಾಗಿವೆ.

ಧನು—ಈ ವಾರದಲ್ಲಿ ನಿಮ್ಮ ಯೋಗ್ಯತೆಯನ್ನು ಸರಿಸಿ ಫಲಪ್ರಾಪ್ತಿಯಿದೆ. ಬುದ್ಧಿಬಲದಿಂದಾಗಿ ಅನುಭವವನ್ನು ಹಿತವಾಗಿ ಉಪಯೋಗಿಸುವ ಶಕ್ತಿ ನಿಮಗಿರುವುದು. ಆಯವ್ಯಯಗಳು ಸಮನಾಗಿರುವುದರಿಂದ ಹಣದ ಅಡಚಣೆಯುಂಟಾಗದು. ಗೃಹೇತರ ಜನರ ಸಹಕಾರವು ನಿಮಗಿರುವುದಾದರೂ ನಿಮ್ಮ ಉಪ್ಪನ್ನು ತಿಂದ ಭೃತ್ಯರೂ ಪುತ್ರರೂ ನಿಮ್ಮ ಇಚ್ಛೆಗೆ ವಿರೋಧವಾಗಿ ವರ್ತಿಸುವರು. ಆಕಸ್ಮಿಕ ಅಪಘಾತಾದಿಗಳು ಸಂಭವಿಸುವ ಯೋಗವಿದೆ. ಸ್ತ್ರೀ ಜನರು ನಿಮ್ಮ ಮೇಲೆ ಸದಾ ಸಿಡಿದೇಳುತ್ತಿರುವರು. ವ್ಯಾಪಾರ ವ್ಯವಹಾರಗಳಲ್ಲಿ ಲಾಭವಿರದು. ತಾ. 6ರಿಂದ 10ರ ವರೆಗೆ ಜಾಗರೂಕರಾಗಿರಿ.

ಮಕರ—"ದೈವಂ ಫಲತಿ ಸರ್ವತ್ರ ನ ವಿದ್ಯಾ ನ ಚ ಪೌರುಷಂ" ಎಂಬ ನೀತಿ ವಚನದಂತೆ ನಿಮ್ಮಗಾಗಲಿ ಪೌರುಷಗಳಿಂದ ಎಲ್ಲಾ ಕಾಲದಲ್ಲಿಯೂ ಎಲ್ಲಾ ಸ್ಥಳಗಳಲ್ಲಿಯೂ ಫಲಕೊಡುವ ಯೋಗ್ಯತೆಯಿಲ್ಲವು. ದೈವಶಕ್ತಿ ಶಕ್ತಿಯಿದೆ. ಸದ್ಯ ನಿಮ್ಮ ದೈವವು ಬಹಳ ವಿಷಮಾವಸ್ಥೆಗೆ ಬಂದಿರುವುದು. ಶತ್ರುಜನರು ಸರ್ವರೀತಿಯಿಂದ ವೃದ್ಧಿಹೊಂದುತ್ತಲಿರುವದರಿಂದಲೂ ಪ್ರಕೃತ ನಿಮಗೆ ಸಹಾಯಕರಾರೂ ಇಲ್ಲದಿರುವದರಿಂದಲೂ ವಿರೋಧಿ ಜನರ ನಾನಾ ರೀತಿಯ ಪೀಡೆಗಳಿಗೆ ಬಲಿಯಾಗುವಿರಿ. ಆರೋಗ್ಯವೂ ಕೆಡುವುದು. ಆಪ್ತರೂ ಬಂಧುಗಳೂ ಶತ್ರುಗಳಾಗಿ ಪರಿಣಮಿಸಲಿರುವದರಿಂದ ಮನಸ್ಸು ಅತೀವ ಚಂಚಲವಾಗಲಿದೆ. ಶನಿವಾರ 4 ದಿನಗಳಲ್ಲಿ ಕೆಲ ಗ್ರಹಾನುಗ್ರಹದಿಂದ ಆರೋಗ್ಯ ಲಾಭಗಳನ್ನು ಹೊಂದುವಿರಿ.

ಕುಂಭ—ಪ್ರಕೃತದ ಗ್ರಹಮಾನದಿಂದ ನಿಮಗೆ ಸುಖವೆಂದು ಕೇಳಬೇಕಾಗಿದೆ. ಇದರ ನಿಮ್ಮ ಪ್ರಿಯವೂ ಕಾರ್ಯವೂ ವ್ಯರ್ಥವಾಗುವ ಸಂಭವವಿಲ್ಲ. ಒಂದು ವೇಳೆ ಪರಿಣಾಮದಿಂದ ಕೆಲಕಾರ್ಯಗಳನ್ನು ನೀವೇ ಮುಂದರಿಸಬೇಕಾದೀತಷ್ಟೇ ವಿನಾ ಇತರ ವಿಘ್ನಗಳಿಂದಲ್ಲ. ಆರ್ಥಿಕ ಭಾಗವು ಬಹಳ ಸುಧಾರಣೆಹೊಂದಲಿದೆ. ಬಂಧುಮಿತ್ರರ ಸಹಾಯದಿಂದಾಗಿ ಸೇವಾಸಕಾರ್ಯವನ್ನು ಕ್ಷಣಮಾತ್ರದಲ್ಲಿ ಮಾಡುವಿರಿ. ನೌಕರಿ ವ್ಯಾಪಾರಾದಿ ಉದ್ಯೋಗಗಳಲ್ಲಿ ಮನಸ್ಸಿಗೆ ಹರ್ಷವಾಗುವುದು. ತಾ. 4, 5 ಮತ್ತು 11ರಲ್ಲಿ ಪ್ರಯಾಣ, ದೇಹಾಲಸ್ಯಗಳು ಕಂಡುಬರಲಿವೆ.

ಮೀನ—ಶನಿಗತಿಯಿಂದ ಸ್ವಲ್ಪ ಕಷ್ಟಸ್ಥಿತಿಗೆ ಬಂದಿದೆ. ಗುರುಶುಕ್ರರ ಗ್ರಹಮಂಡಲವೇ ನಿಮ್ಮ ಉನ್ನತಿಗೆ ಕಾರಣವಾಗಿ ನಿಂತಿರುವುದರಿಂದ ಎಲ್ಲಿದ್ದ ವಿಪತ್ತುಗಳು ನೀಗಿ ಗಂಟೆ ಬೀಳಲಿವೆ. ಪತ್ನೀ ಪುತ್ರರಿಂದ ಕಲಹವೂ ಶೋಕವೂ ವೃದ್ಧಿಯಾಗಲಿವೆ. ಆರೋಗ್ಯವೂ ಕೆಡುವುದು. ಮನೋರೋಗ ಕ್ಷೀಣಶಕ್ತಿ ವೃದ್ಧಿ ಪಡೆಯಲಿವೆ. ಆದರೂ ಬೇಗನೆ ತಕ್ಕುದಾದ ಉಪಾಯವು ದೊರೆತು ಹಣದ ಬಿಕ್ಕಟ್ಟಿಗೆ ಸಿಲುಕಲಾರಿರಿ. ಸೂಕ್ಷ್ಮ ವಿಚಾರಗಳಾದ ಗೃಹಕೃತ್ಯದ ಕಾರ್ಯಗಳಲ್ಲಿ ಮೆಚ್ಚಿನ ಫಲಕಾರಿಯಾಗಲಿವೆ. ತಾ. 8ರಿಂದ 11ರ ವರೆಗೆ ಅನುಕೂಲ.

ವಿದ್ಯಾರ್ಥಿಗಳಿಗೆ

ಆನಂದದ ವಾರ್ತೆ.

ಅತಿ ಅಭ್ಯಾಸ ಯಾ ಶ್ರಾಂತಿಯಿಂದ ಪರೀಕ್ಷೆಯ ಸಮಯ ನರ್ವಸ್ ಪಡೆಯಿಸಿರುವ ಸಾಧಾರಣ ಸೇಕಡ 50 ವಿದ್ಯಾರ್ಥಿಗಳು ತಿಳಿದು ಯಾ ತಿಳಿಯದೆ ಫಸ್ಟ್ ಕ್ಲಾಸಿನ ಯೋಗ್ಯತೆಯುಳ್ಳವರು ಕೂಡ ಥರ್ಡ್ ಕ್ಲಾಸಿನಲ್ಲಿ ಸಹ ಪಾಸಾಗದೆ ನಾಪಾಸಾಗುವ ಪರಿಸ್ಥಿತಿಯು ಬರುತ್ತದೆ. ಈ ಸರ್ವ ವಿಚಾರಗಳಿಗೆ ನಮ್ಮ ದೀರ್ಘ ಅನುಭವದಿಂದ ತಯಾರಿಸಲ್ಪಟ್ಟ ಬಹುಗುಣಯುಕ್ತ ... **ಆಮಲಕೀ ತೈಲ**ವನ್ನು ಉಪಯೋಗಿಸುವದರಿಂದ ಲಕ್ಷೋಪಲಕ್ಷ ಸಿಕ್ಕುತ್ತದೆ. 6 ಯಾ 11 ಆಣೆ ಬೆಲೆಯ 1 ಸೀಸೆ ತೈಲವನ್ನು ಕೊಂಡುಕೊಂಡು ಸ್ವಲ್ಪ ತಲೆಗೆ ಹಾಕಿ ಪರೀಕ್ಷಿಸಿರಿ. ಇದರಿಂದ ಮೊದಲಿನ ಜ್ಞಾನಶಕ್ತಿ ಯಾ ಸ್ಮರಣಶಕ್ತಿ ವೃದ್ಧಿಯಾಗಿ ಆತ್ಮವಿಶ್ವಾಸವು ಹೆಚ್ಚುವದಲ್ಲದೆ ಕಠಿಣತರದ ಪ್ರಶ್ನೆಗಳಲ್ಲಿ ಸುಲಭವಾಗಿ ಯಶಃಪ್ರಾಪ್ತಿಯಾಗುವುದು. ಪರೀಕ್ಷೆಯ ಮೊದಲೇ ಒಂದೆರಡು ಸೀಸೆ ನಮ್ಮ ಆಮಲಕೀ ತೈಲವನ್ನು ತರಿಸಿಕೊಳ್ಳಿರಿ. 4 ಔನ್ಸಿನ ಸೀಸೆ 1ರ ಕ್ರಯ ರೂ 0-11-0, 2 ಔನ್ಸಿನ ಸೀಸೆ 1ರ ರೂ. 0-6-0 ತಯಾರಿಸುವವರು:- ಸ್ವದೇಶೀ ಔಷಧಿಭಂಡಾರ, (ರಿಜಿಸ್ಟರ್ಡ್) ಕೆಂಚಾಲ, ಪ್ರಾಂತ್ಯ ಬ್ರಹ್ಮಾವರ, ದ. ಭಾರತ.

ನಮ್ಮ ಸ್ಟಾಕಿಸ್ಟರು:- ವಿ. ಆರ್. ಪ್ರಭು, ದಿ ಕೆನರಾ ಸ್ಟ್ಯಾಂಡ್ ಎಂಡ್ ಬುಕ್ ಡಿಪೋ ಸ್ಟೇಷನ್ ಬಜಾರ್ ... ಬಾಗ್, ಮುಂಬಯಿ. ಜನರಲ್ ಸಪ್ಲೈಸ್ ಲಿಮಿಟೆಡ್, ಉಡುಪಿ, ನವಭಾರತ ... ಡಿಪ್ರೋ, ಉಡುಪಿ, ಕಟೀಲಾಗಿಗೆ ಒದಗಿಸಿ.

Advt

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ

"ಗೊನೊಕಿಲರ್" (ರಜಿಸ್ಟರ್ಡ್)

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲರ್" ಹೆಸರನ್ನೂ ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ತಡೆತಡೆದಾಗಿ ಹೋಗುವುದು ಮತ್ತು ಉರಿವು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾತು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗುವ ವೀರ್ಯಸ್ರಾವ, 'ಗೊನೊ-ಕೋಕಸ' ಎಂಬ ವಿಷಕಾರಿ, ಅದೇ ವೇಳೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹನೀಯ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವವು.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಚಾರ್ಜು 0-5-0 ಪ್ರತ್ಯೇಕ. ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer DR. D. N. JASANI, Vitalbhai Patel Road, BOMBAY 4

ಸ್ಥಾಪನೆ] ಕೆನರಾ ಛಾಪಖಾನೆ [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುದ್ರಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ

Kanara Printing Works,
Hampankatte, **MANGALORE.**

ಕಿವುಡರೂ ಸಂಪೂರ್ಣವಾಗಿ ಕೇಳಬಹುದು.

ಬಧಿರತಾ ಹರಣ

ವಿಜ್ಞಾನದ ನವೀನ ಮತ್ತು ವಿಚಿತ್ರ ಶೋಧ

ಕಿವಿಸೋರುವುದು, ನೋವು, ಉರಿಯುವುದು, ಶಬ್ದ ಕೇಳುವುದು, ತುರಿಸುವುದು, ಕೀವು ಅಥವಾ ನಂಜು ಹೊರಡುವುದು, ಕರ್ಣಕುಹರದ ದೋಷ, ಶೀತ ಅಥವಾ ಜ್ವರದ ನಿಮಿತ್ತ ಕ್ವಿನೈನ್ ತೆಗೆದುಕೊಂಡು, ಪರಿಣಾಮವಾಗಿ ಉಂಟಾದ ಅರ್ಧ ಯಾ ಸಂಪೂರ್ಣ ಕಿವುಡುತನವೇ ಮೊದಲಾದ ಎಂತಹ ಕರ್ಣರೋಗವಾಗಲಿ, ಅತ್ಯಂತ ಕಠಿಣ ಕಿವುಡುತನವಾಗಲಿ ನಮ್ಮ ವಿಚಿತ್ರ 'ಬಧಿರತಾಹರಣ' ಎಣ್ಣೆಯನ್ನು ಉಪಯೋಗಿಸುವುದರಿಂದ ಮಾತ್ರ ಗುಣಹೊಂದುವುದು. ಈ ಸಿದ್ಧೌಷಧಿಯಿಂದ ನೂರಾರು ಮಂದಿ ಕಿವುಡರ ಚೆನ್ನಾಗಿ ಶ್ರವಣ ಶಕ್ತಿಯನ್ನು ಪಡೆದಿರುತ್ತಾರೆ. ಫಲಕಾರಿಯಾಗದಿದ್ದರೆ ಬೆಲೆಯನ್ನು ವಾಪಸು ಕೊಡಲಾಗುವುದು. ಪಟ್ಟಿ 1ರ ಬೆಲೆ ರೂ. 2, 3 ಬಾಟ್ಲಿಗಳಿಗೆ ರೂ. 5, ಟಪ್ಪಾಲು ಖರ್ಚು ಪ್ರತ್ಯೇಕ.

ವಿಳಾಸ:—ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ. ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿ ನಿಮ್ಮ ಕೈಗೆ ಸೇರುವುವು. ಸೀಸೆ. ಕ್ಕೆ 12 ಆಣೆ, ಟ. ಖ. 4 ಆಣೆ.

ಎಸ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ.
ಉಡುಪಿ ಸ್ಟಾಕಿಸ್ಟರು:- ನವಭಾರತ ಬುಕ್‌ಡಿಪೋ, ಉಡುಪಿ

THE MOOLKY BANK, LTD.,
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ. ಭಂಗಾರದ ವ ಸರಕಿನ ಈಡಿನ ಮೇಲೆ ಸೇಕಡ 7 ವ 8 ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, *President & Manager,*
ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್

DAIMONDS! DAIMONDS!

K. R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! ವಜ್ರಗಳು BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗುದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.





SALE! SALE!! SALE!!!

ಮುಂಚಿನ ಕ್ರಯ ರೂ. 7-8-0
ಈಗ ಅರ್ಧ ಕ್ರಯ ರೂ. 3-12-0

Swiss Lever Wrist Watch No. 44

ಭಂಗಾರದ ಲಿವರ್ ರಿಸ್ಟ್‌ವಾಚ್ ನಂ. 44

ಈ ನಮೂನೆ ಗಡಿಯಾರಗಳು ವಿಲಾಯತಿಯಲ್ಲಿ ಬಹು ಬಲಿಷ್ಠ ಸಾಮಾನುಗಳಿಂದ ತಯಾರಿಸಲ್ಪಟ್ಟು ನೋಡುವುದಕ್ಕೂ, ಸ್ತ್ರೀ ಪುರುಷರ ಕೈಯಲ್ಲಿ ಕಟ್ಟಿಕೊಳ್ಳುವುದಕ್ಕೂ ಬಹು ಅಂದವಾಗಿದೆ ಭಂಗಾರದ ಗಡಿಯಾರಗಳನ್ನು ನಾವು ಬಹಳ ತರಿಸುವುದರಿಂದ ಸುಲಭ ಕ್ರಯಕ್ಕೆ ಕೊಡುತ್ತೇವೆ. ಇಂಡಿಯಾ ದೇಶದಲ್ಲಿ ಎಷ್ಟೋ ಗಡಿಯಾರಗಳು ಪಿರ್ಯಾಗಿ ಅನೇಕ ಯೋಗ್ಯತಾಪತ್ರಗಳು ಬಂದಿರುವವು. ಅವು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವವು. ಒಂದನ್ನು ತರಿಸಿ ನೋಡಿದರೆ ಪ್ರತಿಯೊಬ್ಬರು ತರಿಸಲಿಕ್ಕೆ ಪ್ರಯತ್ನ ಪಡುವರು. ಗ್ಯಾರಂಟಿ 4 ವರುಷ. ಕ್ರಯ ರೂ. 3-12-0.

ವೆಸ್ಟರ್ನ್ ಸ್ವಿಸ್ ವಾಚ್ ಕಂಪೆನಿ, ಪೋಸ್ಟ್ ಬಾಕ್ಸ್ ನಂ. 68, ಮದರಾಸ್.

Western Swiss Watch Co., Direct Importers,
Post Box No. 68, MADRAS.

ನಿಮ್ಮ ಮನೆಯಲ್ಲಿ ಸದಾ ಆನಂದದ ಜ್ಯೋತಿಯು ಬೆಳಬೆಳಗುತ್ತಿರಬೇಕೇ? ಹಾಗಿದ್ದರೆ--- ---

ನಂದಾದೀಪ

ಎಂಬ ಉತ್ಕೃಷ್ಟ ಚಿಕ್ಕಕತೆಗಳ ಪ್ರತಿಯೊಂದನ್ನಿಟ್ಟುಕೊಳ್ಳಿ.

ಕರ್ನಾಟಕದ ಪ್ರಸಿದ್ಧ ಕತೆಗಾರರಲ್ಲೊಬ್ಬರಾದ ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರು ಬರೆದ ಮನೋಹರವಾದ ಹನ್ನೊಂದು ಕತೆಗಳ ಸಂಗ್ರಹ.

ಪ್ರತಿಯೊಂದು ಕತೆಯೂ ನಿಮ್ಮ ಹೃದಯದಲ್ಲೊಂದು ಬಗೆಯ ಹೊಸ ಬೆಳಕನ್ನು ಬೆಳಗಿಸುವುದು.

ಬೆಲೆ: **0-8-0** ಟಪ್ಪಾಲು ದ್ವಾರ: **0-9-0**

ಕಿರಿಯರ ಪ್ರಪಂಚ, ಉಡುಪಿ.

(0-9-0 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.)

—ಸೌಕರ್ಯ—

ಆರ್ಥಿಕ ಮುಗ್ಗಟ್ಟಿನ ಈ ಮುಹೂರ್ತದಲ್ಲಿ ಕಡಿಮೆ ವೆಚ್ಚದಲ್ಲಿ ಹೆಚ್ಚು ಸೌಕರ್ಯವನ್ನು ಯಾರು ತಾನೆ ಅಪೇಕ್ಷಿಸುವುದಿಲ್ಲ? ಅವನ್ನು ಸದಾ ಒದಗಿಸಿಕೊಡುವುದೇ

ರಾಮಾ ರೆಸ್ಟೋರೆಂಟಿನ ಧ್ಯೇಯವಾಗಿದೆ.

ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳು !
ವಿದ್ಯಾರ್ಥಿಗಳಿಗೆ ರಿಯಾಯತಿ ದರಗಳು !!

ಒಮ್ಮೆ ಸಂದರ್ಶಿಸಿರಿ! ತೃಪ್ತಿ ಪಡೆಯಿರಿ!!

Sri Rama Restaurant
Kashi Mutt Building
UDIPI.

ಶ್ರೀರಾಮಾ ರೆಸ್ಟೋರೆಂಟು
ಕಾಶಿ ಮಠದ ಕಟ್ಟೋಣ, ಉಡುಪಿ

ಮ್ಯಾನೇಜರ:— ಎಚ್. ರಾಮಚಂದ್ರ ನಾಯಕ್.

ಸದ್ವೈದ್ಯಶಾಲಾ ನಂಜನಗೂಡು ಇವರ

"ಸಂಬಲಾ"

ಚಿಕ್ಕ ಸಂಕಟ, ಮಲಬದ್ಧತೆ ಇವುಗಳನ್ನು ಹೋಗಲಾಡಿಸಿ, ರಕ್ತ ಶುದ್ಧಿ ಪಡಿಸಿ, ಶರೀರಕ್ಕೆ ಬಲವನ್ನು ಕೊಡುತ್ತದೆ ಬಹಳ ರುಚಿಯಾಗಿರುತ್ತದೆ.

ಬ್ರಾಂಚ್:-ರಥಬೀದಿ ಮಂಗಳೂರು.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಲಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಆರ್ಡ್ರ ಮೇಲೂ ಕೆಲ್ಸಲೂ ಬೇಕಷ್ಟು ಸಾಮಾನುಗಳಿವೆ.

PRINTED BY S. S. KARANTH AT THE THULUNAD PRESS, UDIPI. AND PUBLISHED BY K. H. SHETTY AT "NAVAYUGA OFFICE, UDIPI, S. INDIA.

...red No M 3618 | 11-7-1940.

ನವಯುಗ

NAVAYUGA

The Canara Industrial & Banking Syndicate Ltd.

Estd] HEAD OFFICE UDIPI, (S. INDIA. [1925.

Member: RESERVE BANK OF INDIA,
BANKERS' CLEARING HOUSE, BOMBAY.

Five years' Cash Certificates are issued at the price of
Rs. 8/-, Rs. 80/- Rs 400/- & Rs. 800 -.
repayable on maturity at
Rs. 10/-, Rs. 100/-, Rs. 500/- & Rs 1000 - respectively.

You can cash the Certificates at any time before maturity.

An investment which is liquid and yet very remunerative.

FURTHER PARTICULARS ON APPLICATION.

GENERAL BANKING BUSINESS TRANSACTED.

ಝಂಡು ಮಲೇರಿಯಾ ಮಿಕ್ಸ್ಚರ್

ಮಲೇರಿಯಾ, ವಿಷಮಜ್ವರಗಳಿಂದುಂಟಾಗುವ ಎಲ್ಲಾ ತರದ

ಕಠಿಣ ಜ್ವರಗಳಿಗೆ

ಖಾತ್ರಿಯಾದ ಸಿದ್ಧೌಷಧ

ಕ್ರಯ: ಆಣೆ 0—14—0 ಮಾತ್ರ.

ಸ್ಥಳೀಯ ಏಜಂಟರು:— ಪಿ. ಎ. ಪೈ ಬ್ರದರ್ಸ್.
ಕಾರ್ಕಳದ ಏಜಂಟರು:— ವಿ. ವಿ. ಶೆಣೈ, ಕೆಮಿಸ್ಟ್ಸ್.
ಮಂಗಳೂರಿಗೂ ದಕ್ಷಿಣ ಕನ್ನಡ ಜಿಲ್ಲೆಯ ಇತರ.
ಮುಖ್ಯ ಸ್ಥಳಗಳಿಗೂ ಏಜಂಟರು ಬೇಕಾಗಿದ್ದಾರೆ.
ಶರ್ತಗಳಿಗೂ ಏಜನ್ಸಿಗಳಿಗೂ ಮುಖ್ಯ ಏಜಂಟರಿಗೆ ಬರೆಯಿರಿ:—

ದಾಮೋದರ್ ಎಂಡ್ ಕೊ,
ಮುಖ್ಯ ಏಜಂಟರು,
78 ಚೀನಾ ಬಜಾರ್ ರೋಡ್, ಜಿ. ಟಿ. ಮದರಾಸು

ZANDU

DAMODER & CO.,
78 China Bazaar Road, G T. MADRAS.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —
ಇನ್ನು ಕರೆಗಣ ನಮ್ಮ
ಏಲಿಯಸ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸವಾಗಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ
ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಮುಟ್ಟಿದರೆ ಮುಗುಳು ! ಬಿಟ್ಟರೆ ಅರಳು !!

ಶ್ರೀ. ಕೆ. ಪೊನ್ನಯ್ಯ ಶೆಟ್ಟಿಯಿಂದ ಪೋಣಿಸಲ್ಪಟ್ಟ
ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಮಾಲೆಯಿದು

ಮುಗುಳು

ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಅತ್ಯುಪಯುಕ್ತವಾದ ಸಚಿತ್ರ ಪದ್ಯ ಪುಸ್ತಕ.
(ಮದ್ರಾಸ್, ಬೊಂಬಾಯಿ, ಮೈಸೂರು ಟೆಕ್ಸ್ಟ್ ಬುಕ್ ಕಮಿಟಿಗಳಿಂದ ಮಂಜೂರಾಗಿದೆ.
ಅಭಿನಯಕ್ಕೆ, ನರ್ತನಕ್ಕೆ, ಕೋಲಾಟಕ್ಕೆ, ಎಲ್ಲಕ್ಕೂ ಅತ್ಯನುಕೂಲವಾದ,
ಮಕ್ಕಳ ವಯೋಗುಣಕ್ಕನುಗುಣವಾದ ಪದ್ಯಗಳಿಂದೊಡಗೂಡಿದೆ.
ಅಧ್ಯಾಪಕರೆಲ್ಲ ಇದನ್ನು ಮಕ್ಕಳ ಕೈಗೆ ಕೊಟ್ಟು, ಉಲಿದಾಡಿಸಿ,
ಹುರಿದುಂಬಿಸಬೇಕಾಗಿ ಪ್ರಾರ್ಥನೆ.

ಪ್ರತಿಗಳು ಎಲ್ಲೆಲ್ಲಿಯೂ ದೊರೆಯುತ್ತವೆ] [ಬೆಲೆ: ೦—೨—೬

ಕರ್ನಾಟಕದ ಪ್ರಸಿದ್ಧ ಕವಿಗಳ ಆಧುನಿಕ ಕವಿತಾ ಸಂಗ್ರಹ

ಕಾವ್ಯಸಾಮ್ರಾಜ್ಯ

ಕಿರಿಯರ ಪ್ರಪಂಚದ ಪ್ರಕಟಣೆ—ಬೆಲೆ ಹನ್ನೆರಡಾಣೆ.

ವಿಕ್ರಯಾಧಿಕಾರಿಗಳು:—ನವಭಾರತ ಪುಸ್ತಕ ಭಂಡಾರ, ಉಡುಪಿ.

ವ್ಯಭಿಚಾರಿಣಿ ಯಾರು ?

ಕ್ರಾಂತಿಕಾರಕ ನವೀನ ಸಾಮಾಜಿಕ ನಾಟಕ

ಬೆಲೆ ೦—೧೦—೦.

ವಿಕ್ರಯಾಧಿಕಾರಿಗಳು:— Navabharat Book Depot, Udipi.

THE VIJAYA BANK LTD.,

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ— ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು

ಬಡಬಗ್ಗರಿಂದ ಹಿಡಿದು ಶ್ರೀಮಂತರ ವರೆಗೂ ಜನರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕ ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಕಂಡಲ್ಲಿ ಉಂಡರೆ ಬೆಂಡಾಗುವಿರಿ!—ಆದರೆ,

ದಿ ಮಲಬಾರ್ ಗ್ರೇಂಡ್ ಹಿಂದೂ ಹೋಟೆಲ್ ಉಡುಪಿ.

ಇಲ್ಲಿ ಉಂಡರೆ ಕೊಂಡಾಡುವಿರಿ!

ಆರೋಗ್ಯದ ಪ್ರಥಮ ಸೋಪಾನವೇ ಹಿತವಾದ ಊಟ!

ಆಗ ಮಾತ್ರ ದೇಶದ ಬೆಳವಣಿಗೆಯಾಗಿ ನಿಜವಾದ ಮನುಷ್ಯರೆಂದೆನಿಸಿಕೊಳ್ಳುವೆವು!

ಊಟವು ಹಿತವಾಗಬೇಕಾದರೆ, ನಿಶ್ಚಯ ದೇಶದೇಶದ ರುಚಿ, ರುಚಿಯಾಗಿ ತಯಾರಿಸಲ್ಪಟ್ಟಿರಬೇಕು.

ಉಡುಪಿಯಲ್ಲಿ ಇಂಥ ಮಾದರಿಯ ಹೋಟೆಲು ಇಲ್ಲವೆಂಬ ಕುಂದನ್ನು ನಿವಾರಿಸಲೋಸುಗ

ಶ್ರೀ ರಾಮಕೃಷ್ಣ ಥಿಯೇಟರಿನ ಸಮೀಪ

ಭವ್ಯವಾದ ಮಂದಿರದಲ್ಲಿ ತಾ 4-7-1940ಕ್ಕೆ ಹೊಸತಾಗಿ ತೆರೆಯುವ

ನಮ್ಮ ಹೋಟೆಲನ್ನು ಒಮ್ಮೆ ಸಂದರ್ಶಿಸಿ ಪ್ರೋತ್ಸಾಹಿಸಿರಿ ಪರಿಪೂರ್ಣ ತೃಪ್ತರಾಗಿರಿ!

ಶಾಲಾ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಪ್ರತ್ಯೇಕ ಏರ್ಪಾಡು ಮಾಡಿರುವುದ ಮರೆಯದಿರಿ!

The Malabar Grand Hindu Hotel, Udipi.

ನವಜೀವಾಮೃತ ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ದೇಶಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ ಅಮೋಘವಾದ ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

[illegible]

ಎಮ್. ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ 5 ಕೊಡಿಯಾಲಬೈಲು, ದ.ಕ.

The Pangal Nayak Bank Ltd.,

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿತು)

ಮುಖ್ಯ ಕಾರ್ಯಾಲಯ—ಕೋಟೇಶ್ವರ, ಉಡುಪಿ, ದ. ಕನ್ನಡ

ಶಾಖೆಗಳು—ಉಡುಪಿ, ಮಂಗಳೂರು, ಕಟಪಾಡಿ ಮತ್ತು ಕಾಂಞಂಗಾಡು

ತೆತ್ತ ಮೂಲಧನ—ರೂ. 1,82,100/- ಕ್ಷೇಮನಿಧಿಗಳು ರೂ. 1,92,000/-

ಚಿನ್ನಾಭರಣಗಳ, ಮಾರಾಟಕ್ಕೆ ಅನುಕೂಲವಾಗಬಹುದಾದ ಬೆಳೆವ ದವಸಗಳ ಸಮಾಧಾನಕರವಾದ ವ್ಯಾಪಾರದ ಬೀಲ, ಹುಂಡಿ ಇತ್ಯಾದಿಗಳ ಭದ್ರತೆಯ ಮೇಲೆ ಸುಲಭ ದರಗಳಲ್ಲಿ ಚಿಕ್ಕ ವ ದೊಡ್ಡ ಸಾಲಗಳು ಕೊಡಲ್ಪಡುತ್ತವೆ.

ದೀರ್ಘ ವ ಅಲ್ಪ ಅವಧಿಯ ನಿರಖು ಠೇವಣಾತಿಗಳು ಶ್ರೀಮಂತರಿಗೂ ಇತರರಿಗೂ ಏಕರೀತಿ ತೃಪ್ತಿಕರವಾದ ಶರ್ತಗಳಲ್ಲಿ ಅಂಗೀಕರಿಸಲ್ಪಡುತ್ತವೆ.

ಬೇಂಕಿನ ಅತ್ಯಾಧುನಿಕ ವಿಧದ ಸಮಸ್ತ ವಹಿವಾಟುಗಳೂ ನಡೆಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ದಯವಿಟ್ಟು ಮೇಲ್ಕಾಣ್ಸಿದ ಪತ್ರದ್ವಾರ ವಿಚಾರಿಸಿರಿ.

ನಿಮ್ಮ ಆಕಾಂಕ್ಷೆ—

ವಿಮೆ ಮಾಡಲಿಕ್ಕಾಗಲೀ, ಪ್ರಾತಿನಿಧ್ಯತೆ ಪಡೆಯಲಿಕ್ಕಾಗಲೀ

ಭದ್ರತೆ ಮತ್ತು ಪ್ರಗತಿ

ಪರ ಜೀವವಿಮಾ ಸಂಸ್ಥೆ ಯಾವುದೆಂದು ನೀವು ಯೋಚಿಸುತ್ತಿರುವುದಾದರೆ ನಮ್ಮೊಡನೆ ವಿಚಾರಿಸಿರಿ.

ರಾಮರಾ ಕಾರ್ಯದರ್ಶಿ,

ದಿ ನ್ಯೂ ಗಾರ್ಡಿಯನ್

ಒಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್, ಮದ್ರಾಸು

ಮಂಗಳೂರು ಬ್ರಾಂಚ್.

ಸ್ಥಾಪನೆ 1926



18 ಬಲ್ಮಠ ರಸ್ತೆ, ಮಂಗಳೂರು.

ಯಾವವರ್ನ್ನು ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್ಸಿಲ್ ಜವಾಹರ ಬೀಜು, ಮೊನೊಗ್ರಾಮ್ ಸೀಲು ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.



Crown Rubber Stamp Co , 18 Balmat Road, MANGALORE

Approved firm by the Govt of Mysore Certified by the Agent of the Govt of India in Ceylon

Transport & Car Owners



ARE SPECIALLY INVITED TO VISIT

OUR SHOW ROOM *for economical transport maintenance.*

CANARA AUTOMOBILES - - - - - MANGALORE

ನಾಟಕದಲ್ಲಿ ಕಾಲದ ಸ್ಪೂರ್ತಿಯು ಮೂರ್ತಿಮತ್ತಾಗಿ ತೋರಬೇಕು

ಆ ಸ್ಫೂರ್ತಿಯಿಂದ ನಾಟಕರೂ ಪ್ರೇಕ್ಷಕರೂ ಜಾಗೃತರಾಗಬೇಕು

ಅಂತಹ ನಾಟಕವೇ

ದೇಶಭಕ್ತ

ಕಾಂಗ್ರೆಸ್ ಹೋರಾಟದ ತ್ಯಾಗ ಸಂಕಲ್ಪಗಳನ್ನೂ ಅದನ್ನು ತಡೆಗಟ್ಟಲು ಅಧಿಕಾರಿ ವರ್ಗವು ಹೂಡುವ ಕುತಂತ್ರಗಳನ್ನೂ ಕಣ್ಣ ಮುಂದಿರಿಸಿ ಸಮಾಧಾನವಾದವನ್ನು ಪ್ರತಿಪಾದಿಸಿ, ನವಜಾಗೃತಿಯನ್ನು ಮೂಡಿಸುವ ನವೀನ ಸಾಮಾಜಿಕ ನಾಟಕ.

... ಸಂಸ್ಥಾನಗಳಲ್ಲಿ ಇಂದು ನಡೆಯುತ್ತಿರುವ ಸ್ವಾತಂತ್ರ್ಯ ಸಂಗ್ರಾಮದ ಸ್ಪಷ್ಟ ಚಿತ್ರ. ... ಪ್ರತಿಯೊಬ್ಬರೂ ಓದತಕ್ಕ ನವೀನ ಪುಸ್ತಕ.

[illegible] ಬೆಲೆ ೦—೧೦—೦

11 [illegible] ಕಳಿಸಲಾಗುವದು.

ನವಯುಗ ಆಫೀಸು, ಉಡುಪಿ.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ

ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಎಪ್ಪ ಪಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ESTD. 1921 ಸ್ಥಾಪನೆ

FOUNDER:
SRI. A. B. SHETTY, M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

NAVAYUGA
ನವಯುಗ

ಚಂದಾ ವಿವರ:
1 ವರ್ಷಕ್ಕೆ - ರೂ 3—4—0
6 ತಿಂಗಳಿಗೆ - ರೂ. 1-12-0

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹ ಸಂಪಾದಕ.
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೪೪

ಉಡುಪಿ, ಗುರುವಾರ, ೧೧—೭—೧೯೪೦.
UDIPI, THURSDAY, 11-7-1940.

VOL. 19
No. 44

ಸಮಾಚಾರ ಸಂಗ್ರಹ

ಹೊಲ್ಲೆಂಡಿನ ದುರವಸ್ಥೆ

ಜರ್ಮನರ ಅಧೀನವಾದ ಮೇಲೆ ಹೊಲ್ಲೆಂಡಿನಲ್ಲಿ ಆಹಾರ ಸಾಮಗ್ರಿಗಳ ತೀವ್ರ ಕೊರತೆಯುಂಟಾಗಿದೆ. ಎಲ್ಲಾ ಸಾಮಗ್ರಿಗಳನ್ನು ಅದೊಂದು ನಿಶ್ಚಿತ ಮಿತಿಯಲ್ಲಿ ಮಾತ್ರ ಉಪಯೋಗಿಸಬೇಕಾಗಿದೆ. ಇಂತಿಷ್ಟೇ ಕೊಟ್ಟು ತೆಗೆದುಕೊಳ್ಳಬೇಕೆಂದು ನಿರ್ಬಂಧಿಸುವ ಕಾರ್ಡುಗಳು ಜನತೆಗೆ ಕೊಡಲ್ಪಡುತ್ತಿವೆ ವಾರಕ್ಕೆ 2 ಔನ್ಸ್ ಗೋಧಿಹಿಟ್ಟನ್ನು ಮಾತ್ರ ಒಬ್ಬನು ಉಪಯೋಗಿಸತಕ್ಕದ್ದು. ಚಾ ಮತ್ತು ಕಾಫಿಯು ಬಹಳ ಮಿತ ಪ್ರಮಾಣದಲ್ಲಿ ಮಾತ್ರ ದೊರೆಯುವುದು. ಚಿಕ್ಕ ನಾಯಿಗಳ ಆಹಾರಕ್ಕೂ ನಿರ್ಬಂಧವಿದೆ ಜಾನುವಾರು ಮೇವು ದೊರೆಯುವುದು ಬಹಳ ಪ್ರಯಾಸವಾದುದರಿಂದ ಅವು ಹೆಚ್ಚೆಚ್ಚಾಗಿ ಕೊಲ್ಲಲ್ಪಡುತ್ತಿವೆ. ವ್ಯಾಪಾರ ವಹಿವಾಟುಗಳು ಬಹಳ ಕಡಿಮೆಯಾಗಿವೆ. ನಿರುದ್ಯೋಗವು ಬೆಳೆಯುತ್ತಿದೆ. ಡಚ್ಚರನ್ನು ನಾಜಿ ಪಂಥಕ್ಕೆ ಸೇರಿಸಲು ಜರ್ಮನರು ಈ ವರೆಗೆ ನಿರ್ಬಂಧವನ್ನೇನೂ ಮಾಡಿಲ್ಲ. ಡಚ್ಚರಿಗೂ ಜರ್ಮನರಿಗೂ ರಕ್ತಸಂಬಂಧವಿದೆ. ಮತ್ತು ಎರಡು ಜನಾಂಗಗಳಿಗೂ ಬಾಂಧವ್ಯವಿದೆ ಎಂದೆಲ್ಲಾ ಪುಸಲಾಯಿಸಿ ಒಲಿಸಿಕೊಳ್ಳುವ ಪ್ರಯತ್ನ ನಡೆಯುತ್ತಿದೆ.

ಸ್ವತಂತ್ರ ಫ್ರೆಂಚ್ ನೌಕಾಪಡೆಯ ನಾಯಕ

ಸ್ವತಂತ್ರ ಫ್ರೆಂಚ್ ರಾಷ್ಟ್ರೀಯ ಸಮಿತಿಯ ಚಾಲಕರಾದ ಜನರಲ್ ಡಿ ಗೊಲ್ಲರು ವೈಸ್ ಎಡ್ಮಿರಲ್ ಮುಸೆಲಿಯರರನ್ನು ಸ್ವತಂತ್ರ ಫ್ರೆಂಚ್ ನೌಕಾಪಡೆಯ ನಾಯಕರಾಗಿ ನೇಮಿಸಿರುವರು. ಫ್ರಾನ್ಸಿನ ಹಲವು ಯುದ್ಧ ಹಡಗಗಳು ಮತ್ತು ಜಲಾಂತರ್ಗಾಮಿ ನಾವೆಗಳು ಇವರ ಕೈಕೆಳಗೆ ಕೆಲಸಮಾಡಿ ಬ್ರಿಟಿಷ್ ನೌಕಾಪಡೆಯೊಂದಿಗೆ ಸಹಕರಿಸಲಿವೆ. ಇವರೇ ಸ್ವತಂತ್ರ ಫ್ರೆಂಚ್ ವಿಮಾನ ಪಡೆಯ ನಾಯಕರೂ ಆಗಿರುವರು. ಮುಸೆಲಿಯರು ಜೂನ್ ತಾ. 10 ರಲ್ಲಿ ಬೋರ್ಡೆಕ್ಸ್ ಪಟ್ಟಣದಲ್ಲಿದ್ದು ಯುದ್ಧ ಸಾಮಗ್ರಿ ತಯಾರಿ ಕಾರ್ಖಾನೆಗಳ ಮೇಲ್ವಿಚಾರದಲ್ಲಿದ್ದರು. ಫ್ರೆಂಚ್ ಸರಕಾರವು ಜರ್ಮನಿಯೊಡನೆ ರಾಜಿಮಾಡಿಕೊಳ್ಳುವುದೆಂದು ತಿಳಿದೊಡನೆಯೇ ರಾತ್ರಿ ಇಡೀ ಸಂಚರಿಸಿ ಪೆರಿಸಿಗೆ ಹೋದರು. ಅಷ್ಟರಲ್ಲಿ ಜರ್ಮನ್ ಸೇನೆಯು ಪೆರಿಸಿಗೆ ಪ್ರವೇಶಿಸುತ್ತಿದ್ದರು. ಕೂಡಲೇ ದೇಶರಕ್ಷಣಾ ಸಂಬಂಧವಾದ ಹಲವು ಗುಪ್ತ ಪ್ಲೇನ್ ಮತ್ತು ಯಂತ್ರಗಳನ್ನು ನಾಶಮಾಡಿ, ಯಾರೋ ಬಿಟ್ಟುಹೋಗಿದ್ದ ಮೋಟರ್ ಕಾರೊಂದರಲ್ಲಿ ಕೂತು ಪೆರಿಸಿನಿಂದ ಹೊರಟು ಮಾರ್ಸೇಲ್ಸಿಗೆ ಮುಟ್ಟಿ ಅಲ್ಲಿ ಸಾಧ್ಯವಾದಷ್ಟು ಮಂದಿ ನೌಕಾಧಿಕಾರಿಗಳನ್ನೆಲ್ಲಾ ಒಟ್ಟು ಸೇರಿಸಿ ಯುದ್ಧ ಹಡಗವೊಂದನ್ನು ನಡಿಸಿ ಜಿಬ್ರಾಲ್ಟರಿಗೆ ಮುಟ್ಟಿ ಅಲ್ಲಿಂದ ವಿಮಾನ ಮೂಲಕ ಲಂಡನಿಗೆ ಹೋದರು.

ಬ್ರಿಟನಿಗೆ ವಿಮಾನ ಪಡೆ ದಾನ

ವಸಾಹತುಗಳ ಜನರೆಲ್ಲಾ ವಂತಿಗೆ ಕೊಟ್ಟು ದಿನವೊಂದಕ್ಕೆ 100 ಟನ್ನು ಭಾರದ ಸ್ಫೋಟಕ ಬಾಂಬುಗಳನ್ನೆಸೆಯಬಲ್ಲ 10 ಬೊಂಬರ್ ಮತ್ತು 160 ಬೆಂಕಿ ಕಾರುವ ಹೋರಾಡುವ ವಿಮಾನಗಳ ಪಡೆಯನ್ನು ಇಂಗ್ಲೆಂಡಿಗೆ ಒಪ್ಪಿಸಲಿದ್ದಾರೆ. ಈ ಬಗ್ಗೆ ಕೆಲವೇ ವಾರಗಳಲ್ಲಿ 1,600,000 ಪವನು ಸಂಗ್ರಹವಾಗಿವೆ. ಈ ವಿಮಾನಗಳ ಚಾಲಕರು ಬ್ರಿಟಿಷ್ ವಸಾಹತುಗಳಲ್ಲಿ ತರಬೇತಾದವರೇ. ವಸಾಹತುಗಳ ಹೆಸರನ್ನೇ ವಿಮಾನಗಳಿಗೀಯಲಾಗುವುದು.

ಅಮೆರಿಕದಲ್ಲಿ ಟಿನ್ ಮತ್ತು ರಬ್ಬರ್ ಸಂಗ್ರಹ

ಅಮೇರಿಕದ ಯುನೈಟೆಡ್ ಸ್ಟೇಟ್ಸ್ ಸರಕಾರವು ಅಂತರರಾಷ್ಟ್ರೀಯ ರಬ್ಬರ್ ಮತ್ತು ಟಿನ್ ಕಂಪೆನಿಗಳ ಸಹಕಾರದಿಂದ ರಬ್ಬರ್ ಮತ್ತು ಟಿನ್‌ಗಳನ್ನು ಸಂಗ್ರಹಿಸತೊಡಗಿದೆ ಇದಕ್ಕಾಗಿ 5 ಮಿಲ್ಯ ಮತ್ತು 65 ಮಿಲ್ಯ ಡಾಲರು ಭಂಡವಾಳದ ಎರಡು ಪ್ರತ್ಯೇಕ ಕಂಪೆನಿಗಳೇ ಸ್ಥಾಪಿಸಲ್ಪಟ್ಟಿವೆ. 150,000 ಟನ್ನು ರಬ್ಬರು ಮತ್ತು 75,000 ಟನ್ನು ಟಿನ್ನನ್ನು ಸಂಗ್ರಹಿಸುವ ಏರ್ಪಾಡು ಇಷ್ಟರಲ್ಲೇ ನಡೆದಿದೆ.

ಜಪಾನರ ಆಕ್ರಮಣ

ಜಪಾನ ಸೇನೆಯು ಫ್ರೆಂಚ್ ಇಂಡೋಚೈನದ ಲಂಗ್ಸೋ ಎಂಬ ಪ್ರಾಮುಖ್ಯ ಸ್ಥಳವನ್ನು ಆಕ್ರಮಿಸಿ ಮುಂದೊತ್ತಿರುವುದು. ಇದರಿಂದ ಇಂಗ್ಲೆಂಡ್ ಮತ್ತು ಅಮೇರಿಕಗಳು ತಳಮಳಗೊಂಡಿವೆ. ಬ್ರಿಟಿಷ್ ಬಂದರಾದ ಹೊಂಕೊಂಗಿನಿಂದ ಸ್ತ್ರೀಯರು ಮತ್ತು ಮಕ್ಕಳು ಫಿಲಿಪ್ಪೈನ್ ದ್ವೀಪದ ಮನಿಲ ಪಟ್ಟಣಕ್ಕೆ ಕಳುಹಿಸಲ್ಪಡುತ್ತಿರುವರು. ಅಮೇರಿಕದ ಯುನೈಟೆಡ್ ಸ್ಟೇಟ್ಸಿನ ದೊಡ್ಡ ನೌಕಾಪಡೆಯು ಶಾಂತಸಾಗರದ ಹವೈ ಎಂಬಲ್ಲಿಗೆ ಬಂದು ನಿಂತಿರುವುದು. ಬ್ರಿಟಿಷರು ಸಿಂಗಪುರ ನೌಕಾ ನಿಲಯವನ್ನು ಮತ್ತಷ್ಟು ಭದ್ರಗೊಳಿಸುತ್ತಿರುವರು ಮಲಯದಲ್ಲಿಯೂ ರಕ್ಷಣೆಯ ಸಿದ್ಧತೆಗಳು ನಡೆದಿವೆ. ಪೂರ್ವ ಆಸ್ಯದ ಪ್ರದೇಶಗಳನ್ನೆಲ್ಲಾ ವಶಪಡಿಸಿಕೊಳ್ಳಲು ಜಪಾನಿಗೆ ಇದೇ ಸಂದರ್ಭವೆಂದು ಜಪಾನ ಸೇನಾನಿಗಳು ಹುರಿಗೊಂಡಿರುತ್ತಾರೆ. ಜಪಾನು ಇಂಡೋಚೈನಾ ಮೊದಲಾದ ಸ್ಥಳಗಳನ್ನು ವಶಪಡಿಸಿಕೊಳ್ಳತೊಡಗಿದರೆ ಅಮೇರಿಕ ಮತ್ತು ಬ್ರಿಟಿಷ್ ನೌಕಾಪಡೆಗಳು ಒಂದಾಗಿ ವಿರೋಧಿಸುವ ಸಂಭವತೋರುತ್ತದೆ.

ಚಾನ್ನೆಲ್ ದ್ವೀಪಗಳು ಜರ್ಮನರ ಅಧೀನವಾದುವು

ಬ್ರಿಟಿಷ್ ಚಾನ್ನೆಲಿನಲ್ಲಿರುವ ಜರ್ಸಿ ಮತ್ತು ಗೆರ್ನ್‌ಸಿ ದ್ವೀಪಗಳನ್ನು ಬ್ರಿಟಿಷರು ಬಿಟ್ಟು ಹೋಗಿ ಜರ್ಮನರದನ್ನು ವಶಪಡಿಸಿಕೊಂಡಿರುವರೆಂದು ತಿಳಿದು ಬಂದಿದೆ. ಈ ದ್ವೀಪಗಳನ್ನು ರಕ್ಷಿಸಿಕೊಳ್ಳುವುದರಿಂದ ಏನೂ ಬ್ರಿಟಿಷರಿಗೆ ಪ್ರಯೋಜನವಿಲ್ಲದ್ದರಿಂದ ಬಿಟ್ಟುಬಿಡಲಾಗಿದೆಯೆಂದು ನಂಬಲಾಗಿದೆ ಜರ್ಮನರು ಈ ದ್ವೀಪಗಳ ಮೂಲಕ ಬ್ರಿಟಿಷ್ ಹಡಗ ಪಡೆಯ ಮೇಲೆ ಸಬ್‌ಮೆರಿನ್ ಮತ್ತು ವಿಮಾನ ಧಾಳಿ ನಡಿಸುವ ಅಪಾಯವಿದೆಯೆಂದು ತಿಳಿದು ಬರುತ್ತದೆ.

ಸೀರಿಯದ ಕುರಿತು ಬ್ರಿಟಿಷರ ಎಚ್ಚರಿಕೆ

ಜನರಲ್ ವೈಗಾಂಡರ ಪ್ರಯತ್ನದಿಂದಾಗಿ ಫ್ರೆಂಚ್ ಅಧೀನ ರಾಜ್ಯಗಳಾದ ಸೀರಿಯ ಮತ್ತು ಲೆಬನೋನುಗಳು ಮಾರ್ಶಲ್ ಪೆಟೈನ್ ಸರಕಾರದ ಆಜ್ಞೆಯಂತೆ ನಡೆಯುವ ನಿರ್ಧಾರ ಮಾಡಿವೆ. ಇದರಿಂದ ಈ ದೇಶಗಳು ವೈರಿಗೆ ಯಾವ ರೀತಿಯಲ್ಲಾದರೂ ಆಶ್ರಯವಿತ್ತಲ್ಲಿ ಅದನ್ನು ಬ್ರಿಟಿಷ್ ಸರಕಾರವು ಸಹಿಸಲಾರದೆಂದು ಎಚ್ಚರಿಸಿರುವುದು. ಸೀರಿಯ ಮತ್ತು ಲೆಬನೋನುಗಳು ತಟಸ್ಥವಾಗಿದ್ದರೆ ಬ್ರಿಟಿಷ್ ಸರಕಾರವು ಸುಮ್ಮನಿರಬಹುದು. ಅವರೆ ಇಟಲಿಗೆ ಯಾವ ರೀತಿಯಲ್ಲಾದರೂ ಆಶ್ರಯವಿತ್ತರೆ ಅದರಿಂದ ತಾನು ರಕ್ಷಣೆಕೊಡಬೇಕಾಗಿರುವ ರಾಷ್ಟ್ರಗಳ ಸಂರಕ್ಷಿತತೆಗೆ ಹಾನಿಯುಂಟಾಗುವುದೆಂದು ಬ್ರಿಟಿಷ್ ಸರಕಾರವು ಅವನ್ನು ವಶಪಡಿಸಿಕೊಳ್ಳಲೆತ್ನಿಸಬಹುದು. ಇಂಗ್ಲೆಂಡಿನ ಈ ಘೋಷಣೆಯಿಂದ ಟರ್ಕಿಯಲ್ಲಿ ಸಮಾಧಾನವುಂಟಾಗಿದೆ.

TROPICAL.

TROPICAL INSURANCE CO. LTD., does not boast of 'big' figures. It has not been writing crores of Busines every Year. That was never its intention. It never aimed at breaking "records" at dangerous cost Whatever it did it wrote sound business that endures in the books of the Company. Thus although not the biggest it is one of the best of Life Offices in India.

The Company, founded by Pandit Moti Lal Nehru, Dr. Ansari and Hakim Ajmal Khan, and guided now under the Chairmanship of Sj. Subhas Chandra Bose offers excellent chances to young men of culture & education to forge out their careers.

THE
Tropical Insurance Co., Ltd.
Branch Office: NIVAS BUILDING, Hampankatta,
MANGALORE.

Branch Manager: M. SUNDER RAM SHETTY

ಇಟೆಲಿಯನ್ ಸಬ್‌ಮೇರಿನ್ ಹಿಡಿಯಲ್ಪಟ್ಟಿತು

ಹಿಂದೂ ಮಹಾಸಾಗರದಲ್ಲಿ ಸಂಚರಿಸುತ್ತಿದ್ದ 'ಇಟೆಲಿಯಾನ್ ಸಬ್‌ಮೇರೀನೊಂದನ್ನು ಮೂನ್‌ಸ್ಟೋನ್ ಎಂಬ ಬ್ರಿಟಿಷ ಯುದ್ಧ ಹಡಗವು ಸೆರೆಹಿಡಿದು ಏಡನ್ ಬಂದರಕ್ಕೆ ಒಯ್ದಿರುವುದೆಂದು ತಿಳಿದು ಬಂದಿದೆ. ಸಬ್‌ಮೇರೀನನ್ನು ಕಂಡೊಡನೆಯೇ ಮೂನ್‌ಸ್ಟೋನ್ ಜಲಗರ್ಭಾಸ್ತ್ರಗಳನ್ನೆಸೆಯಿತು. ಆಗ ಸಬ್‌ಮೇರಿನ ಮೇಲಕ್ಕೇರಿ ಬಂತು. ಆಗ ಮೂನ್‌ಸ್ಟೋನಿನ ತೋಪು ಗುಂಡೆಸೆದು ಸಬ್‌ಮೇರೀನಿನ ಕೆಪ್ಟನ್ ಮತ್ತು ಕೆಲಮಂದಿ ಅಧಿಕಾರಿಗಳು ಕೊಲ್ಲಲ್ಪಟ್ಟ ಮೇಲೆ ಇತರರು ಶರಣಾಗತರಾದರು. ಎಸ್ಪೇರೋ ಎಂಬ ಇಟೆಲಿಯಾನ ಡಿಸ್ಟ್ರೋಯರ್ ಹಡಗವೂ ಮುಳುಗಿಸಲ್ಪಟ್ಟಿರುವುದು.

ದೇಶರಕ್ಷಣೆಗಾಗಿ ಒಂದು ಲಕ್ಷ ಸೇನೆಯ ಸಂಘಟನೆ

ಸಂಯುಕ್ತ ಪ್ರಾಂತದ ಕಾಂಗ್ರೆಸ್ ವಾಲಂಟೀಯರ್ ಬೋರ್ಡಿನ ಸಭೆಯು ಜುಲಾಯಿ ತಾ. ೩ರಲ್ಲಿ ದೇರದೂನಿನಲ್ಲಿ ಸೇರಿ, ಸಂಯುಕ್ತಪ್ರಾಂತದ ಹಳ್ಳಿ ಮತ್ತು ಪಟ್ಟಣಗಳಲ್ಲಿ, ಒಂದು ಲಕ್ಷ ಮಂದಿಯ ಸೇನೆಯನ್ನು ದೇಶಸಂರಕ್ಷಣೆಗಾಗಿ ಸಂಘಟಿಸಬೇಕೆಂದು ನಿರ್ಧಾರವಾಗಿರುವುದು. ಈ ಯೋಜನೆಗೆ ರೂ ೫೦ ಲಕ್ಷ ಬೇಕಾಗುವುದೆಂದು ಅಂದಾಜಾಗಿದೆ. ಕಾಂಗ್ರೆಸಿನ ತತ್ವ ಮತ್ತು ಕಾರ್ಯಕ್ರಮದಲ್ಲಿ ವಿಶ್ವಾಸವಿದ್ದು ಪ್ರಾಂತದ ಶಾಂತಿ ಮತ್ತು ಭದ್ರತೆಗಾಗಿ ಸ್ವಾರ್ಥತ್ಯಾಗಮಾಡಿ ಸೇವೆ ಮಾಡಲು ಸಿದ್ಧರಾಗಿರುವ ತರುಣರನ್ನೆಲ್ಲಾ ಈ ಸೇನೆಗೆ ಸೇರಿಸಿಕೊಳ್ಳಲಾಗುವುದು.

ಪ್ರಮುಖ ಚೀನೀಯರ ದಸ್ತಗಿರಿ

ನಾನ್ಕಿಂಗಿನಲ್ಲಿ ಸ್ಥಾಪಿತವಾಗಿರುವ ಜಪಾನರ ಕೈಗೊಂಬೆ ವಾಂಗ್ ಚಿಂಗ್ ವೈ ಸರಕಾರವು, ಶಾಂಘಾಯಿಯ ೩೦ ಮಂದಿ ಪ್ರಮುಖ ಬೇಂಕರರು, ಪತ್ರಿಕಾ ವ್ಯವಸಾಯಿಗಳು ಮತ್ತು ರಾಜಕೀಯ ಕೆಲಸಗಾರರನ್ನು ದಸ್ತಗಿರಿಮಾಡುವ ಹುಕುಮು ಕೊಟ್ಟಿರುವುದು. ಸರಕಾರವಿರುದ್ಧವಾದ ಚಟುವಟಿಕೆಗಳಲ್ಲಿ ನಿರತರಾಗಿರುವರೆಂಬುದೇ ಇವರ ಮೇಲಿನ ಆರೋಪ. ಪ್ರಾಯಶಃ ಈ ಚೀನೀ ಮುಖಂಡರು ಜನರಲ್ ವಾಂಗರ ಸರಕಾರವು ಹೇಳಿದಂತೆ ನಡೆಯಲು ನಿರಾಕರಿಸುವ ಸ್ವತಂತ್ರ ತೋರಿಸಿರಬೇಕು.

ಹೆನ್ರಿಫೋರ್ಡರ ನಕಾರ

ಇಂಗ್ಲೆಂಡಿಗಾಗಿ ಯುದ್ಧವಿಮಾನಗಳನ್ನು ತಯಾರಿಸಲು ಹೆನ್ರಿಫೋರ್ಡರು ನಿರಾಕರಿಸಿರುವರು. ಅಮೇರಿಕದ ಯುನೈಟೆಡ್ ಸ್ಟೇಟ್ಸಿನ ರಕ್ಷಣೆಗಾಗಿ ಯುದ್ಧವಿಮಾನಗಳನ್ನು ತಯಾರಿಸಿಕೊಡಲು ಸಿದ್ಧನಿದ್ದೇನೆ. ಆದರೆ ಬ್ರಿಟಿಷರಿಗೆ ಕೊಡಲು ತಯಾರಿಲ್ಲ. ಕೆನಡ ಮತ್ತು ಇಂಡಿಯಾ ಮೊದಲಾದ ಕಡೆಗಳಲ್ಲಿರುವ ಫೋರ್ಡ್ ಕಾರ್ಖಾನೆಗಳು ಅದಕ್ಕೆ ಸಿದ್ಧವಿವೆ. ನಾನು ಯುದ್ಧಕ್ಕೇನೇ ವಿರುದ್ಧನಿದ್ದೇನೆ. ಆದುದರಿಂದ ಪ್ರತ್ಯಕ್ಷವಾಗಿ ಯುದ್ಧಕ್ಕೆ ಪ್ರೋತ್ಸಾಹಿಸುವ ಕೆಲಸವನ್ನು ಮಾಡಲಾರೆನೆಂದು ಹೆನ್ರಿಫೋರ್ಡರ ...

ಹಡಗ ಮತ್ತು ಸಬ್‌ಮೆರೀನು ನಾಶ

ಜೂನ್ ತಾ 24ಕ್ಕೆ ಅಂತ್ಯವಾಗುವ ಒಂದು ವಾರದಲ್ಲಿ 126,416 ಟನ್ನು ತೂಕದ 27 ಬ್ರಿಟಿಷ್ ಮತ್ತು ಮಿತ್ರರಾಷ್ಟ್ರಗಳ ಹಡಗಗಳು ಮುಳುಗಿಸಲ್ಪಟ್ಟಿವೆ. ಭೂಮಧ್ಯ ಸಾಗರದಲ್ಲಿ ಬ್ರಿಟಿಷ ಹಡಗಗಳೇನೂ ಹೆಚ್ಚು ಮುಳುಗಿಸಲ್ಪಟ್ಟಿರುವುದಿಲ್ಲ. ಬ್ರಿಟಿಷರು ಜೂನ್ ತಾ ೩೦ರ ವರೆಗೆ ೬ ಇಟೆಲಿಯಾನ ಸಬ್‌ಮೆರೀನುಗಳನ್ನು ಮುಳುಗಿಸಿರುವರು. ಬ್ರಿಟಿಷರು ನಷ್ಟವಾದುದಕ್ಕಿಂತಲೂ ಹೆಚ್ಚಿನ ಹಡಗಗಳನ್ನು ಹೊಸತಾಗಿ ತಯಾರಿಸಿಕೊಂಡಿರುವರು. ಇಷ್ಟರವರೆಗೆ ನಷ್ಟಹೊಂದಿರುವ ಜರ್ಮನ್ ಮತ್ತು ಇಟೆಲಿಯಾನ ವ್ಯಾಪಾರಿ ಹಡಗಗಳ ಒಟ್ಟು ತೂಕ 8,57,000 ಮತ್ತು 3,38,000 ಆಗಿದೆ, ಜರ್ಮನ್ ಸಬ್‌ಮೆರೀನುಗಳು ಈಗ ಇಂಗ್ಲೆಂಡಿನ ಸುತ್ತಲಿನ ಸಮುದ್ರಕರಾವಳಿಯಲ್ಲಿ ಹೆಚ್ಚಾಗಿ ಸಂಚರಿಸುತ್ತಿವೆ

ಅಪಾರ ಚಿನ್ನಸಂಗ್ರಹ

ಅಮೇರಿಕದ ಯುನೈಟೆಡ್ ಸ್ಟೇಟ್ಸ್ ಸರಕಾರವು ಅಪಾರ ಚಿನ್ನ ಸಂಗ್ರಹಮಾಡುತ್ತಿದೆ. ಕಳೆದ ಜೂನ್ ತಾ 26ಕ್ಕೆ ಅಂತ್ಯವಾಗುವ ಒಂದೇ ವಾರದಲ್ಲಿ 419 ಮಿಲ್ಯ ಡೋಲರುಗಳಷ್ಟರ ಚಿನ್ನವನ್ನು ಯುನೈಟೆಡ್ ಸ್ಟೇಟ್ಸ್ ಆಮದು ಮಾಡಿದೆ. ಇದರಲ್ಲಿ 101 ಮಿಲ್ಯ ಡೋಲರಷ್ಟು ಇಂಗ್ಲೆಂಡಿನಿಂದ ಮತ್ತು 21 ಮಿಲ್ಯ ಫ್ರಾನ್ಸಿನಿಂದ. ಯುನೈಟೆಡ್ ಸ್ಟೇಟ್ಸ್ ಸರಕಾರವು ಈ ರೀತಿ ಚಿನ್ನಸಂಗ್ರಹಮಾಡದೆ ಹೋದಪಕ್ಷದಲ್ಲಿ ಚಿನ್ನದ ಬೆಲೆಯು ಇಷ್ಟರವರೆಗೆ ಬಿದ್ದುಹೋಗುತ್ತಿತ್ತು. ಇಷ್ಟಾದರೂ ಅದು ಚಿನ್ನವನ್ನು ಸಂಗ್ರಹಿಸುತ್ತಲೇ ಇರುವುದು.

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮು ಕೋರ್ಟಿನಲ್ಲಿ

S. C. No. 1/40

ಕೃಷ್ಣಯ್ಯ ಹೆಗಡೆ ವಾದಿ–

ಮತ್ತು

ನೀಲಯ್ಯಾಚಾರಿ ಸಹಾ ಪ್ರತಿವಾದಿರು–

ಇವರೊಳಗೆ

ಕಾರ್ಕಳ ತಾಲೂಕು ನಿಟ್ಟೆ ಗ್ರಾಮದ ಕೆಮ್ಮಣ್ಣಿನಲ್ಲಿರುವ ನಾಗಪ್ಪ ಆಚಾರಿ ಮಕ್ಕಳು 1ನೇ ನೀಲಯ್ಯಾಚಾರಿ 2ನೇ ಉಗ್ರಯ್ಯಾಚಾರಿ 3ನೇ ಶೀನಾಚಾರಿ ತಮ್ಮಯ್ಯಾಚಾರಿ ಮಗ 4ನೇ ವಾಸು ಆಚಾರಿ ಕೂಡಾ 4 ಜನರಿಗೆ ಈ ಮೂಲಕ ತಿಳಿಸುವುದೇನೆಂದ್ರೆ:–

ಸದರಿ ಪ್ರತಿವಾದಿಗಳು ವಾದಿಗೆ ತಾ. 1-7-1935ರಲ್ಲಿ ರೂಪಾಯಿ 192-8-0ಕ್ಕೆ ಬರಕೊಟ್ಟ ಡಿಮಾಂಡ್ ಪ್ರೋಮಿಸರಿ ನೋಟಿನ ಬಾಬತು ಬರಬೇಕಾದ ಅಸಲು, ಬಡ್ಡಿ ಖರ್ಚುಗಳನ್ನು ವಸೂಲುಮಾಡಿಕೊಳ್ಳುವರೆ ತಂದಿರುವ ದಾವೆಯು ತಾ. 5 8 1940ಕ್ಕೆ ಸದರಿ ಪ್ರತಿವಾದಿಗೆ ನೋಟೀಸು ಆಗ್ಲಿ ಇಷ್ಟರ ವರೆ ಸದ್ರಿ ದಾವೆಯಲ್ಲಿ ಉಪಾಹರೆಯಾಗಿ ಸದ್ರಿ 5 8 40ನೇ ದಿನ ಬೆಳಿಗ್ಗೆ 10 ಗಂಟೆಗೆ ಸದರಿ ನಿಮ್ಮಿಂದ ಕೋರ್ಟಿನ ಮುಂದೆ ಹಾಜರಾಗಿ ಜ್ವಾಬು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಸದರಿ ದಾವೆಯನ್ನು ನಿಮ್ಮ ಗೈರ ಹಾಜರಿಯಿಂದ ತೀರ್ಮಾನಿಸಲಾಗುವದು ಎಂದು ಈ ಮೂಲಕ ತಿಳಿಸಲಾಗಿದೆ.

ಕೋರ್ಟು ಹುಕುಮು ಪ್ರಕಾರ,

K. Mahabala Hegde,
ವಾದಿಯ ಪರ ವಕೀಲ,
ಮೊಕ್ಕಾಂ: ಕಾರ್ಕಳ, ತಾ. 7-7-1940.

— ನೋಟೀಸು —

"ನವಯುಗ'ದ ಬಿಡಿ ಪ್ರತಿಗಳನ್ನು ಮಾರಾಟಮಾಡಲು ಈ ಕೆಳಗಿನ ಸ್ಥಳಗಳಲ್ಲಿ ಹೊಸ ಏಜಂಟರು ಬೇಕಾಗಿದ್ದಾರೆ. ಇಷ್ಟವುಳ್ಳವರು ಬರಕೊಳ್ಳಬಹುದು.

1. ಕುಂದಾಪುರ, 2. ಸಕಲೇಶಪುರ, 3. ಕೊಪ್ಪ, 4 ಕಿನ್ನಿಗೋಳಿ, 5. ಬ್ರಹ್ಮಾವರ, 6. ಭಟ್ಕಳ, 7 ಬಸ್ರೂರು.

THE
BOMBAY LIFE ASSURANCE Company Limited.
[ESTD. 1908]

LIFE INSURANCE

Dispels darkness of the mind and brings Enlightenment and Courage, Immortalises major portion of your Income whether you survive or not and thus makes life worth living to you and your dependants in reality

Ask us what particular scheme of Insurance will satisfy your requirements and your purse.

Agency Applications from Active and Influential Ladies & Gentlemen are invited.

To Insure or to Represent consult:

KOCHIKAR BROTHERS LTD.,
MADRAS BRANCH SECRETARIES AND
Chief Agents for Bombay City & Suburbs,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI.
Or any of their following Offices at:–

Puthiyara, CALICUT.	Car Street, MANGALORE.	Central Station Road, TRIVANDRUM.
Gautam Niwas, Charni Road, Girgaum, BOMBAY No. 4	Post Box No. 337, Mount Road, MADRAS	Visweswarapuram Circle BANGALORE CITY.

ಪ್ರಕಟಣೆ.

ಉಡುಪಿ ತಾಲೂಕು ನಂಬ್ರ 33ನೇ ಆರೂರು ಗ್ರಾಮದ ಬಾಳಿಕುತ್ತಲು ಹೆರಾಟಮಕ್ಕೆ ಆದಿಯಲ್ಲಿರುವ ಅಲ್ಬಾಡಿ ಗ್ರಾಮದ ಆರ್ಡಿ ದೊಡ್ಡಮನೆ ವತ್ತಕ್ಕೆ ಸೇರಿದ ಹಿರಿಯಣ್ಣ ಶೆಟ್ಟಿಯು ಸಾರ್ವಜನರ ಅವಗಾಹನೆ ಬಗ್ಗೆ ಪ್ರಕಟಪಡಿಸುವದೇನೆಂದ್ರೆ —

ತಾ. 27-6-1940ನೇ ನವಯುಗದ ಸಂಚಿಕೆಯಲ್ಲಿ ಸದರಿ ಶಿರೂರು ಗ್ರಾಮದ ಬೈಲುಮನೆ ಕಾವೇರಿ ಶೆಡ್ತಿ, ಕೋಟಾಶೆಡ್ತಿ, ಮತ್ತು ಅಂಕಯ್ಯ ಶೆಟ್ಟಿ ಹೆಸರಿನಿಂದ ತಾ. 6-6 40 ನಮೂದಿಸಿದ ಜಾಹೀರಾತು ನೋಡಿ ಆಶ್ಚರ್ಯಪಡುತ್ತೇನೆ. ಅದರಲ್ಲಿ ನನ್ನ ತಂದೆ ತಾ. 3-6-1940ರಲ್ಲಿ ಮೃತಪಟ್ಟ ಮುತ್ತಯ್ಯ ಶೆಟ್ರ ಮೇಲೆಯೂ, ನನ್ನ ಮೇಲೆ ಕೂಡಾ ಅಲ್ಲದ ಸಲ್ಲದ ಆರೋಪಣೆಗಳು ಕಾಣಿಸಲ್ಪಟ್ಟಿವೆ. ನನ್ನ ತಂದೆಯು ಅವರ ಸ್ವಂತ ಪರಿಶ್ರಮಗಳಿಂದ ಸಂಪಾದಿಸಿದ ಹಣಗಳಿಂದ ಖರೀದಿಸಿದ ಸ್ಥಿರಾಸ್ತಿಗಳು ಮತ್ತು ಈಡು, ಆಧಾರ, ಕರಾರು, ನೋಟು, ಡಿಕ್ರಿ ವಗೈರೆ ಎಲ್ಲಾ ಹಣದ ಹೊರಬಾಕಿಗಳು ವಗೈರೆಯನ್ನು ಪ್ರತ್ಯೇಕವಾಗಿ ತನ್ನ ಹೆಸರಲ್ಲೇ ಮಾಡಿಕೊಂಡು ಬಂದಿದ್ದಲ್ಲದೆ, ಅವರ ಕುಟುಂಬದ ಹಕ್ಕಿನ ವ ಕುಟುಂಬದ ಇತರ ಮೆಂಬರರ ಹಕ್ಕಿನ ಎಷ್ಟನ್ನು ಪ್ರ ... ಅವರು ಹೊಂದಿ ಅವುಗಳನ್ನು ಸಾಲ ಕೊಟ್ಟದ್ದಾಗಲಿ ಆಸ್ತಿ ಮೇಲೆ ಹಾಕಿದ್ದಾಗಲೀ ಇರುವುದಿಲ್ಲ. ಆ ರೀತಿ ಎಷ್ಟನ್ನಾದ್ರು ಹಣವು ಅವರ ತಾಬೆಗೆ ಬರುವಷ್ಟು ಅನುಕೂಲವಾಗ್ಲಿ ಉತ್ಪತ್ತಿಯಾಗ್ಲಿ ಕುಟುಂಬಕ್ಕೆ ಇದ್ದದ್ದಿಲ್ಲ. ಅವರು ಕುಟುಂಬದ ಪೋಷಣೆ ಮೆಂಬರರ ವಿದ್ಯಾಭ್ಯಾಸಕ್ಕೆ ಸಹ ತನ್ನ ಸ್ವಾರ್ಜಿತದಿಂದ ಹಣಗಳನ್ನೇ ಉಪಯೋಗಿಸುತ್ತಾ ಬಂದಿರುತ್ತಾರೆ. ಈ ಎಲ್ಲಾ ಸಂಗತಿಗಳು ಸ್ವಹಾ ಅವರ ಕುಟುಂಬದವರಿಗೆ ಗೊತ್ತಿದ್ದು ಸದ್ರಿಯವರು ಜೀವಂತರಾಗಿರುವಾಗ ಆಗಲೀ ಅವರು ಸ್ವರ್ಗಸ್ಥರಾದ ಬಳಿಕ ... ಅವರ ಉತ್ತರ ಕ್ರಿಯಾದಿಗಳನ್ನು ನಾವು ನಡೆಸುವವರೆಗೂ ಯಾವತರದ ಆಕ್ಷೇಪವನ್ನು ಹೇಳದೆ ಅವರ ಬಾಬ್ತು ಕುಟುಂಬದ ಮನೆಯಲ್ಲಿದ್ದ ಎಲ್ಲಾ ದಾಖಲೆಪತ್ರಗಳನ್ನೂ ರಿಕಾರ್ಡುಗಳನ್ನೂ ಅವರು ಸ್ವಾಧೀನ ಹೊಂದಿ, ನಮ್ಮನ್ನು ಸಹ ಮರ್ಯಾದೆಯಿಂದ ಕಳುಹಿಸಿಕೊಟ್ಟು ಈಗ ದುರುದ್ದೇಶದಿಂದಲೂ ನಮ್ಮ ದ್ವೇಷದ ದುರ್ಬೋಧನೆಯಿಂದಲೂ ಸುಳ್ಳು ಮತ್ತು ಕಲ್ಪಿಸಿದ ಸಂಗತಿಗಳನ್ನು ಕಾಣಿಸಿಕೊಟ್ಟು ಪ್ರಕಟಿಸಿದ ಸಂಗತಿಗಳನ್ನು ನಾನು ಸಂಪೂರ್ಣ ನಿರಾಕರಿಸುತ್ತೇನೆ.

ನನ್ನ ತಂದೆಯವರು ಮೃತಪಟ್ಟ ಮೂರು ವರ್ಷಗಳ ಮೊದಲೇ ಅವರ ಸ್ವಂತದ ಬಾಬ್ತು ಆಸ್ತಿಗಳನ್ನು ಹೊರಬಾಕಿಗಳು ವಗೈರೆಯನ್ನು ರಿಜಿಸ್ಟರ್ ವೀಲು ಮೂಲಕ ಅವರ ಪತ್ನಿ ಮಕ್ಕಳಿಗೆ ಹಕ್ಕು ಸ್ಥಾಪಿಸಿರುವ ಸಂಗತಿ ಗೊತ್ತಿದ್ದು, ನಮಗೆ ಸೇರತಕ್ಕ ನೋಟು ಕರಾರುಗಳು ವಗೈರೆಯನ್ನು ಅವರು ಸ್ವಾಧೀನ ಹೊಂದಿ, ಅವುಗಳನ್ನು ನಾಶ ಮಾಡುವ ಕಾರಣ ಈಗ ನನ್ನ ತಾಯಿಗೂ ನನಗೂ ಉಪದ್ರ ಕೊಡುವ ಉದ್ದೇಶ್ಯ ಈ ರೀತಿ ದುಸ್ಸಾಧನೆ ಮಾಡುವದಾಗಿ ನಾನು ತಿಳಿಯುತ್ತೇನೆ. ನಾನಾಗ್ಲಿ ಯಾರಾಗ್ಲಿ ಸದ್ರಿ ಮುತ್ತಯ್ಯ ಶೆಟ್ರ ಹೆಚ್ಚಿಟ್ಟ ಮೊಹರುಗಳನ್ನು ಅವರಕಾಟಲೆಯ ಸಮಯ ಹಾಗ್ಲಿ ಎಂದಿದ್ದು ತೆಗೆದದ್ದಿಲ್ಲ, ತೆಗೆಯುವ ಆವಶ್ಯಕತೆಯೂ ಇದ್ದದ್ದಿಲ್ಲ. ಸದರಿಯವರು ಕಾಹಿಲೆ ಬೀಳುವ ಸಂದರ್ಭ ಸ್ವತಃ ಸ್ಥಲಾಗಿ ಒಂದು ವರ್ಷದಿಂದ ಕಾಹಿಲೆಯಲ್ಲಿರುವ ಸಮಯವೂ ಅವರ ಕುಟುಂಬದ ಮನೆಯಲ್ಲಿ ಕುಟುಂಬದ ಮೆಂಬರರ ಪ್ರಕಟಣೆ ಹೊಂದಿಸಿದವರ ಒಟ್ಟಿಗಿದ್ದಲ್ಲದೆ ಕುಟುಂಬದ ಪ್ರಾಯಸ್ತ ಮೆಂಬರರು ಅವರ ಒಟ್ಟಿಗೆ ಇಲ್ಲವೆಂಬುದು ತೀರಾ ಕಲ್ಪನೆಯಾಗಿರುತ್ತದೆ. ನೀವೆಸವರು ವ್ಯಕ್ತವಾದ ವರ್ತಮಾನ ತಮಗೆ ಇಲ್ಲವೆಂಬುದು ತೀರಾ ಅಸಂಬದ್ಧ. ನಾನೂ ನನ್ನ ಸಂಬಂಧಿಕರೂ ವೀಲು ಪ್ರಕಾರ ಅಧಿಕಾರ ಹೊಂದಿದ ಸಂಬಂಧ ಅಸೂಯೆ ಪಟ್ಟು ನಮ್ಮ ಮೇಲೆ ಮಿಥ್ಯಾಪವಾದ ಹೊರಿಸಿದ್ದು ನ್ಯಾಯ ಸಮ್ಮತವಲ್ಲ. ವೀಲು ಪ್ರಕಾರ ನಮ್ಮ ಹಕ್ಕಿಗೆ ಬಂದ ಸ್ಥಿರಚರ ಸೊತ್ತುಗಳನ್ನು ಸುಳ್ಳು ಪ್ರಕಟಣೆಯಿಂದ ಅಪಹರಿಸಲಿಕ್ಕಾಗಲೀ, ನಮಗೆ ತೊಂದರೆ ಮಾಡಲಿಕ್ಕಾಗಲೀ ಸದ್ರಿಯವರಿಗೆ ಅಧಿಕಾರವಿರುವದಿಲ್ಲ. ನನ್ನ ತಂದೆಯವರಿಗೆ ಬರತಕ್ಕ ಎಲ್ಲಾ ಐವಜುಗಳು ವೀಲು ಪ್ರಕಾರ ನಮಗೆ ಸೇರತಕ್ಕದ್ದಾಗಿರುವದರಿಂದ ಅವರ ಕುಟುಂಬದವರಿಗೆ ಯಾರಾದರೂ ಕೊಟ್ಟರೆ ಅದು ಸಂಧಾನಗಳಿಕ್ಕಿಲ್ಲವೆಂತಸಹಾ ಈ ಮೂಲಕ ತಿಳಿಸಲಾಗಿದೆ.

A. Hirianna Shetty,
Teacher Board Elem. School,
Post Kokkarne, S. Kanara
ಶಿರೂರು, ತಾ. 2-7-1940.

ನನ್ನ ವಾರದ ಡೈರಿ

ಆ ಮತ್ತು ಈ ಚಿತ್ರ

ಇಂಗ್ಲೆಂಡು ಅದ್ಭುತ ಮಾರ್ಪಾಟುಗಳ ರಾಜ್ಯವಲ್ಲ. ಆದರೂ ಯುದ್ಧವು ಅದ್ಭುತವೊಂದನ್ನುಂಟುಮಾಡಿರುವುದು. ಡೈಹಾರ್ಡ್, ಲಿಬರಲ್, ಲೇಬರ್, ಸೋಶಿಯಲಿಸ್ಟ್, ಕಮ್ಯೂನಿಸ್ಟರೆಂಬ ಭೇದವಿಲ್ಲದೆ ಎಲ್ಲರೂ ಒಂದಾಗಿ ಸೊಂಟಕಟ್ಟಿ ಮುಂದೆ ಬಂದಿದ್ದಾರೆ ಹಿಟ್ಲರನ ಧಾಳಿಯಿಂದ ಬ್ರಿಟಿಷ್ ಸಾಮ್ರಾಜ್ಯವನ್ನು ರಕ್ಷಿಸಲಿಕ್ಕೆ. ಪಕ್ಷ, ಪಂಥ, ವರ್ಗ, ವ್ಯಕ್ತಿಭೇದ ವೈಷಮ್ಯಗಳೆಲ್ಲಾ ಮಾಂತ್ರಿಕವಾಗಿಯೆಂಬಂತೆ ಮಾಯವಾಗಿವೆ. ಲೇಬರ್ ಪಕ್ಷೀಯರು ದೇಶವನ್ನಾಳುವುದಕ್ಕೇನೇ ಅನರ್ಹರೆಂದಿದ್ದ ಚರ್ಚಿಲ್ಲರು ಪ್ರಧಾನ ಮಂತ್ರಿಗಳಾದೊಡನೆಯೇ, ಅಟ್ಲಿ, ಬೆವಿನ್, ಮೊರಿಸನ್ ಮೊದಲಾದ ಲೇಬರ್ ಪಕ್ಷದ ಮುಖಂಡರನ್ನು ಆದರದಿಂದ ಮಂತ್ರಿಮಂಡಲಕ್ಕೆ ಸ್ವಾಗತೀಕರಿಸಿದ್ದಾರೆ. ಇಂಗ್ಲೆಂಡಿನಲ್ಲಿ ಯಾವ ಪಕ್ಷಕ್ಕೂ ಸೇರಿಸಿಕೊಳ್ಳಲಾರದಷ್ಟು ಉಗ್ರ ಕ್ರಾಂತಿಕಾರರಾಗಿದ್ದ ಕ್ರಿಪ್ಸರು ರಷ್ಯದ ರಾಯಭಾರಿಯಾಗಿ ಕಳುಹಿಸಲ್ಪಟ್ಟಿದ್ದಾರೆ. ವ್ಯಕ್ತಿಗಳನ್ನೂ, ಅವರ ಸೊತ್ತುಗಳನ್ನೂ ಸರಕಾರವು ತನ್ನದಾಗಿ ಮಾಡಿಕೊಂಡುಬಿಟ್ಟಿದೆ. ಈ ವಿಚಿತ್ರ ಒಕ್ಕಟ್ಟು ಮತ್ತು ಮಾರ್ಪಾಟವು ಮಾತೃಭೂಮಿಯ ಸ್ವಾತಂತ್ರ್ಯರಕ್ಷಣೆಗಾಗಿ.

೦೦೦ ೦೦೦ ೦೦೦

ಇಂಗ್ಲೆಂಡಿನೊಂದಿಗೆ ಹಿಂದೂದೇಶವನ್ನು ಹೋಲಿಸಿ. ಆ ಮತ್ತು ಈ ಚಿತ್ರಗಳೊಳಗೆ ಎಂತಹ ಅಭ್ಯಂತರ! ಅದ್ಭುತಗಳ ವಿಭೂತಿಪುರುಷರ ನಾಡು ಹಿಂದೂದೇಶ. ಆದರೆ ಸಂದಿಗ್ಧ ಕಾಲದಲ್ಲಿ ಅದರ ರಕ್ಷಣೆಗಿಂತಲೂ ಪತನಕ್ಕೇನೇ ಕಾರಣವಾಗುವ ವಿದ್ಯಮಾನಗಳು ನಡೆಯುವುದೇ ಹೆಚ್ಚು. ಹಿಂದೂದೇಶದ ರಕ್ಷಕರೆನಿಸಿರುವ ಮಹಾತ್ಮರು ಈ ಸಂದರ್ಭದಲ್ಲಿ ಅಹಿಂಸಾವೇದಾಂತಕ್ಕೆ ಕಟ್ಟುಬಿದ್ದು ತದೇಕ ಧ್ಯಾನಪರರಾಗಿ ಬಾಹ್ಯಲೋಕವನ್ನೇ ಮರೆತುಬಿಟ್ಟಂತೆ ತೋರುತ್ತದೆ. ತಾನು ೨೦ ವರ್ಷಗಳಿಂದ ಪ್ರಯೋಗಮಾಡಿ ದೇಶದ ಸ್ವಾತಂತ್ರ್ಯಸಾಧಿಸಲಾಗದ, ತನ್ನ ಆತ್ಮೀಯ ಸಹವ್ಯವಸಾಯಿಗಳೇ ಅನುಸರಿಸಲೊಪ್ಪದ ಉದಾತ್ತ ಅಹಿಂಸಾವಿಧಾನವನ್ನವರು ಆಂಗ್ಲೇಯರಿಗೆ ಬೋಧಿಸಹೊರಟು, ಹಿಟ್ಲರ್ ಶಾಹಿಯನ್ನು ಶಾಂತರೀತಿಯಿಂದ ವಿರೋಧಿಸುವ ವಿಧಾನವನ್ನು ಸೂಚಿಸಿ ಆ ಕುರಿತು ಬ್ರಿಟಿಷ್ ಚಕ್ರವರ್ತಿಗಳಿಗೆ ನೆರವಾಗಲು ಮುಂದಾಗಿದ್ದಾರೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ತಮ್ಮ ಹಿಂದಿನ ಘೋಷಣೆಯ ಬಂಧನಕ್ಕೊಳಗಾಗಿ ಹಿಂದೆ ಮುಂದೆ ಓಡಾಡುತ್ತಿದ್ದಾರೆ. ತನ್ನನ್ನು ಧಿಕ್ಕರಿಸಿ ದೂರೀಕರಿಸಿರುವ ಕಾಂಗ್ರೆಸಿನ ಮೇಲೆ ಪ್ರತೀಕಾರ ಮಾಡಲು ಇದೇ ಸಂದರ್ಭವೆಂದು ಮಿ| ಜಿನ್ನರು ದೇಶದ ಸ್ವಾತಂತ್ರ್ಯವನ್ನು ತನ್ನ ಸಾಧನೆಯ ವೇದಿಕೆಯಲ್ಲಿ ಬಲಿಕೊಡಲು ಹಾತೊರೆಯುತ್ತಿದ್ದಾರೆ. ಡಾಕ್ಟರ್ ಸಾವರ್ಕರ್, ಡಾಕ್ಟರ್ ಮೂಂಜೆ ಮೊದಲಾದ ಹಿಂದೂ ಮಹಾಸಭೆಯ ಮುಖಂಡರೂ, ಡಾಕ್ಟರ್ ಅಂಬೇಡ್ಕರ್, ರಾಜಭೋಜರೇ ಮೊದಲಾದ ಹರಿಜನ ಮುಂದಾಳುಗಳೂ, ತಮ್ಮ ತಮ್ಮ ಸಂಕುಚಿತ ಜಾತೀಯ ಸ್ವಾರ್ಥಸಾಧನೆಗಾಗಿ ಪೇಚಾಡುತ್ತಿದ್ದಾರೆ.

ಈ ವಿಷಮತರ ಪರಿಸ್ಥಿತಿಯ ಸದುಪಯೋಗಪಡೆದು ಸಿಮ್ಲದ ದೇವತೆಗಳು ತಟಸ್ಥರಾಗಿ ಕುಳಿತು ಬಿಟ್ಟಿದ್ದಾರೆ, ಅವರ ಮನೋವೃತ್ತಿಯೇನೂ ಮಾರ್ಪಾಟಾಗಿಲ್ಲ. ಅಧಿಕಾರ ಬಿಟ್ಟು ಕೊಡುವ ಮನಸ್ಸು ಅವರಿಗಿಲ್ಲ ಹೀಗೆ ಹಿಂದು ಮಾತೆಯ ಬಂಧವಿಮೋಚನೆಯ ಸುವರ್ಣ ಸಂಧಿಯು ಕಳೆದು ಹೋಗುತ್ತಿದೆ. ಪರಂಪರಾಗತವಾಗಿರುವಂತಿರುವ ಬಿಕ್ಕಟ್ಟಿನ ಸಾಪದಿಂದ ಹಿಂದೀಯರು ವಿಮುಕ್ತರಾಗುವುದಾದರೂ ಎಂದು!

೧೯೧೮ರ ಮತ್ತು ೧೯೪೦ರ ಪತನಗಳ ತುಲನೆ

1918ರ ಜರ್ಮನಿಯ ಮತ್ತು 1940ರ ಫ್ರಾನ್ಸಿನ ಅಪಜಯಗಳು ತೀರಾಭಿನ್ನವಾದುವುಗಳು. 4 ವರ್ಷಗಳ 3 ರಣರಂಗಗಳ ಯುದ್ಧದಿಂದ ಜರ್ಮನ್ ಸೈನಿಕರು ಸೋತು ನೆಲಹಿಡಿದಿದ್ದರೆ ಮಿತ್ರ ರಾಷ್ಟ್ರಗಳ ಸಾಂಪತ್ತಿಕ ಮುತ್ತಿಗೆಯಿಂದ ಜರ್ಮನ್ ಜನತೆಯು ಬರಿಹೊಟ್ಟೆ ಬರಿಹೊಟ್ಟೆಯ ಪೀಡೆಯನ್ನು ಸಹಿಸಿಕೊಳ್ಳಲಾರದೆ ದಂಗೆಯೇಳುವುದರಲ್ಲಿದ್ದರು. ಜರ್ಮನಿಯ ಮಿತ್ರರಾಷ್ಟ್ರಗಳೆಲ್ಲ ಅದನ್ನು ಬಿಟ್ಟುಹಾಕಿ ತಾವೇ ಪ್ರತ್ಯೇಕವಾದ ಒಪ್ಪಂದ ಮಾಡಿಕೊಂಡಿದ್ದುವು. ಯುದ್ಧವನ್ನು ಮುಂದುವರಿಸಲು ಸಾಧ್ಯವಿಲ್ಲವೆಂಬ ಪರಿಸ್ಥಿತಿಯುಂಟಾದಾಗ ನಿರ್ವಾಹವಿಲ್ಲದೆ ಜರ್ಮನಿಯು ಸಂಧಿಗೊಪ್ಪಿತು. ಆದರೆ ಇಡೀಲೋಕದಲ್ಲೇ ಅತಿಶ್ರೇಷ್ಠವೆನಿಸಿದ್ದ ನಾಲ್ಕೈದು ಮಿಲ್ಯ ಫ್ರೆಂಚ್ ಸೇನೆಯು 2 ತಿಂಗಳಲ್ಲಿ ಸೋಲಿಸಲ್ಪಟ್ಟು ಫ್ರಾನ್ಸು ಶರಣಾಗತವಾಗುವುದೆಂದರೆ ಸುಲಭವಾಗಿ ನಂಬುವ ವಿಷಯವಲ್ಲ. ವಿಶಾಲವಾದ ಸಾಮ್ರಾಜ್ಯದ ಉತ್ಸಾಹಪರ ಬೆಂಬಲವು ಫ್ರಾನ್ಸಿಗಿತ್ತು. ಒಳ್ಳೇ ಶಿಸ್ತು ಮತ್ತು ಉತ್ಸಾಹ ಶೀಲ ಪ್ರಬಲ ಸೇನೆಯಿತ್ತು. ಇಂಗ್ಲೆಂಡಿನಂತಹ ಅತಿ ಬಲಶಾಲಿ ರಾಷ್ಟ್ರವು ಸಹಾಯಕ್ಕೆ ಸಿದ್ಧವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಫ್ರಾನ್ಸು ಪರಾಜಿತವಾಗಿ ಶರಣು ಹೊಡೆಯಿತೆಂಬುದು ಅತಿ ವಿಸ್ಮಯಕರ.

೦೦೦ ೦೦೦ ೦೦೦

ಫ್ರೆಂಚ್ ಸೇನೆಯು ನಿಜವಾಗಿಯೂ ಸೋಲಿಸಲ್ಪಡಲಿಲ್ಲ. ಫ್ರಾನ್ಸಿನ ಅಧೀನ ರಾಷ್ಟ್ರಗಳು ಅದರ ಕೈಬಿಡಲಿಲ್ಲ. ಇಂಗ್ಲೆಂಡಿನ ಉತ್ಸಾಹಪರ ಬೆಂಬಲವು ಅದಕ್ಕಿದ್ದೇ ಇತ್ತು. ಫ್ರಾನ್ಸಿನ ಪತನಕ್ಕೆ ಕಾರಣರಾದವರು ಫ್ರೆಂಚ್ ಸರಕಾರವನ್ನು ನಡೆಸುತ್ತಿದ್ದ ಕೆಲವೇ ಮಂದಿ ರಾಜನೀತಿಜ್ಞರು ಮತ್ತು ವೃದ್ಧ ಸೇನಾನಿಗಳು. ಹಿಟ್ಲರರ ಬ್ಲಿಟ್ಸ್‌ಕ್ರೈಗು ಫ್ರಾನ್ಸಿನ ಪತನಕ್ಕೆ ಮುಖ್ಯವಾಗಿ ಕಾರಣವಲ್ಲ. ಫ್ರಾನ್ಸಿನ ರಾಜನೀತಿಜ್ಞರ ದುರ್ಬಲತೆ ವೈಷಮ್ಯ ಮತ್ತು ಅಸಡ್ಡೆ. ಮುಖ್ಯವಾಗಿ ಫ್ರಾನ್ಸಿನ ಗಂಡಾಂತರದ ಸಂದರ್ಭದಲ್ಲಿ ಮಾರ್ಶಲ್ ಪೆಟೈನ್ ಮತ್ತು ಜನರಲ್ ವೈಗಾಂಡರಂತಹ ಫೆಸಿಸ್ಟ್ ಪಕ್ಷಪಾತಿ ಸೇನಾನಿಗಳು ಅದರ ಅದೃಷ್ಟಚಾಲಕರಾಗಿ ಬಂದುದು ಅತಿ ದೊಡ್ಡ ದುರ್ದೈವವಾಯಿತು. ಇಂಗ್ಲೆಂಡಿನಂತಹ ಒಕ್ಕಟ್ಟು ಶಿಸ್ತು, ಸಂಘಟನೆಯು ಫ್ರೆಂಚರಲ್ಲಿರಲಿಲ್ಲ. ಅವರ ಐಕ್ಯದಲ್ಲಿಯೇ ವೈಷಮ್ಯವು ಹೊಗೆಯಾಡುತ್ತಿತ್ತು. ಮಗಿನೋ ಕೋಟೆಯ ಅಭೇದ್ಯರಕ್ಷಣಾ ಭಾವನೆಯು ಫ್ರೆಂಚರ [illegible] ಅನಾಹುತವಾಯಿತು. ಹಿಟ್ಲರರ ಧಾಳಿಯ ಗೊಡವೆಯೇ ಫ್ರೆಂಚ್ ಜನ[illegible]ರಲಿಲ್ಲ ಪೆರಿಸನ್ನು ವೈರಿಧಾಳಿಯಿಂದ ರಕ್ಷಿಸುವ ಯಾವ ಸಿದ್ಧತೆಯೂ ನಡೆದಿರಲಿಲ್ಲ ಫ್ರೆಂಚ್ ರಾಜನೀತಿಜ್ಞರು ತಮ್ಮೊಳಗೇನೇ ಕಚ್ಚಾಡುತ್ತಿದ್ದರು. ಜನಸಾಮಾನ್ಯರಿಗೆ ರಣರಂಗದ ವಾಸ್ತವಿಕ ಪರಿಸ್ಥಿತಿಯೇ ತಿಳಿದಿರಲಿಲ್ಲ ಆ ಗೊಡವೆಗವರು ಹೋಗಲೂ ಇಲ್ಲ. ಜರ್ಮನ್ ಸೇನೆಯು ಪೆರಿಸಿನ ಮೇಲೆ ಧಾಳಿಯಿಡುವ ಗಂಡಾಂತರವಲ್ಲೂ ಪೆರಿಸಿನ ಜನರು ಸುಖವಿಲಾಸ ಮಗ್ನರಾಗಿದ್ದರು. ಫ್ರೆಂಚ್ ರಾಜನೀತಿಜ್ಞರಲ್ಲಿ ಲಾವಲ್, ಫ್ಲೇಂಡಿನ್, ಬೋನ್ನೆಟ್, ಅಷ್ಟೇಕೆ ಡೆಲಡಿಯರರೂ ಫೆಸಿಸ್ಟರನ್ನೊಲಿಸಿಕೊಳ್ಳುವ ಮನೋವೃತ್ತಿಯುಳ್ಳವರಿದ್ದರು. ಮ್ಯೂನಿಕ್ ಒಡಂಬಡಿಕೆಯಾದಾಗ ಹಿಟ್ಲರರನ್ನು ಅಭಿನಂದಿಸಿರುವರು ಫ್ಲೇಂಡಿನರು. ಫ್ರಾನ್ಸಿನ ಬಲವೆನಿಸಿದ್ದ ಡೆಲಡಿಯರರೇ ಅದರ ದೌರ್ಬಲ್ಯಕ್ಕೆ ಕಾರಣರಾದರು. ಕಣ್ಣಿದ್ದು ಕುರುಡರಂತೆ ವರ್ತಿಸಿದರವರು. ಫ್ರೆಂಚ್ ಸೇನೆಯನ್ನು ವಿಮಾನ ಮತ್ತು ಟ್ಯಾಂಕುಗಳಿಂದ ಸಿದ್ಧಗೊಳಿಸಲಿಲ್ಲ. ಹಳೆಯ ರೀತಿಯ ಯುದ್ಧಕ್ರಮಕ್ಕೇನೇ ಕಟ್ಟುಬಿದ್ದ ವೃದ್ಧ ಸೇನಾನಿಗಳ ಮೇಲೆಯೇ ಕುರುಡುವಿಶ್ವಾಸವಿಟ್ಟರು. ರೈನೋಡರು ಪ್ರಧಾನ ಮಂತ್ರಿಗಳಾದ ಮೇಲೂ ಡೆಲಡಿಯರರಿಗೂ ಅವರಿಗೂ ಸರಿಹೋಗುತ್ತಿದ್ದೇ ಇಲ್ಲ. ರೈನೋಡರನ್ನು ಅಧಿಕಾರದಿಂದ ಹೊರಹಾಕುವ ಹಂಚಿಕೆ ಹೂಡುತ್ತಿದ್ದರು ಡೆಲಡಿಯರರು. ನೋರ್ವೇಯ ಯುದ್ಧದಲ್ಲಿ ಫ್ರೆಂಚ್ ಸೇನಾನಿಗಳು ಮಾಡಿದ ದೊಡ್ಡ ಅಚಾತುರ್ಯವನ್ನು ಕಂಡುಹಿಡಿದು ಕೂಡಲೆ ಜನರಲ್ ಗೆಮೆಲಿನರನ್ನು ಸೇನಾನಾಯಕತ್ವದಿಂದ ತಳ್ಳಿಹಾಕುವುದರಲ್ಲಿದ್ದರು ರೈನೋಡರು. ಆಗ ಡೆಲಡಿಯರರು ಅಡ್ಡಬಂದರು. ಹಾಗೆ ಮಾಡಿದರೆ ತಾನು ರಾಜಿನಾಮೆ ಕೊಟ್ಟು ಮಂತ್ರಿಮಂಡಲದೊಳಗೇನೇ ಒಡಕುಂಟುಮಾಡುವ ಬೆದರಿಕೆ ಹಾಕಿದರು. ಈ ಸಂದರ್ಭದಲ್ಲಿ ಯಾವ ನಿಶ್ಚಿತಧೋರಣೆಗೂ ಬಾರದೆ ಫ್ರೆಂಚ್ ಮಂತ್ರಿ ಮಂಡಲವು ತಳಮಳಗೊಂಡಿತ್ತು. ರೈನೋಡರೇ ರಾಜಿನಾಮೆಕೊಡುವುದರಲ್ಲಿರುವಾಗ ಪ್ರೆಸಿಡೆಂಟರು ಹಾಗೆ ಮಾಡಬಿಡಲಿಲ್ಲ. ಇಷ್ಟರಲ್ಲೇ ಜರ್ಮನರು ಮ್ಯೂಸ್‌ನದಿ ಪ್ರದೇಶದಲ್ಲಿ ಪ್ರಚಂಡಧಾಳಿಯನ್ನಾರಂಭಿಸಿದರು. ಮ್ಯೂಸ್ ನದಿಯ ಪರಾಜಯವು ಜನರಲ್ ಗಮೆಲಿನರ ಅಂತ್ಯಕ್ರಿಯೆಯಾಯಿತು. ಫ್ರೆಂಚ್ ಮಂತ್ರಿಮಂಡಲವು ಕಂಗೆಟ್ಟಿತು.

ಫ್ರೆಂಚ್ ಮಾರ್ಶಲ್ ಪೆಟೈನ್

ಮುಳುಗುವ ಮನುಷ್ಯನು ಹುಲ್ಲುಕಡ್ಡಿಯ ಆಶ್ರಯ ಪಡೆವಂತೆ ಸಂಪೂರ್ಣ ಧೃತಿಗೆಟ್ಟ ಫ್ರಾನ್ಸು 1914-18ರ ಯುದ್ಧದಲ್ಲಿ ವರ್ಡನ್ ಯುದ್ಧದ ವೀರರಾಗಿ ಫ್ರಾನ್ಸನ್ನು ರಕ್ಷಿಸಿದ 84 ವರ್ಷದ ಮುದುಕ ಮಾರ್ಶಲ್ ಪೆಟೈನ್ ಮತ್ತು ಜನರಲ್ ವೈಗಾಂಡರನ್ನು ಕರೆದು ಸೇನಾಧಿ

(೧೭ನೇ ಪುಟ ನೋಡಿರಿ.)

ಮಂಗಳೂರು ಮತ್ತು ಉಡುಪಿಗೆ ಬಂದಾಗ ನಿಮಗೆ
ಸುಖವಾದ ನಿವಾಸ ದೊರೆಯಬೇಕೋ?
— ಹಾಗಾದರೆ —
ಸುಖನಿವಾಸಕ್ಕೆ ಬನ್ನಿ.
ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಸ್ನಾನ,
ವಿದ್ಯುದ್ದೀಪಾಲಂಕೃತ ಕೋಣೆ.
ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವುದೆಲ್ಲಿ?
ಸುಖನಿವಾಸದಲ್ಲಿ ಮಾತ್ರ.
ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.
ಮಂಗಳೂರಿನಲ್ಲಿ ಜೇಡಿಗುಡ್ಡೆಯಲ್ಲಿಯೂ, ಉಡುಪಿಯಲ್ಲಿ ತಾಲೂಕು ಕಚೇರಿಯ
ಬಳಿಯಲ್ಲಿಯೂ ಇರುವ 'ಸುಖನಿವಾಸ'ವನ್ನು ಒಮ್ಮೆ ಸಂದರ್ಶಿಸಿರಿ.
ಪ್ರೊಪ್ರೈಟರ್, ಸುಖನಿವಾಸ.

ಬೇಕಾಗಿದೆ! ಜರೂರು!! ಬೇಕಾಗಿದೆ!!!

ಉಡುಪಿಯಲ್ಲಿ ಹೊಸದಾಗಿ ತೆರೆದಿರುವ ಒಂದು ಸರಾಫಕಟ್ಟೆಯಲ್ಲಿ ವಜ್ರ ಮುಂತಾದ ರತ್ನಗಳನ್ನು ನಾಜೂಕಾಗಿ ಸೆಟ್ಟಿಂಗ್ ಮಾಡುವ ಒಳ್ಳೇ ಅನುಭವವುಳ್ಳ ಮತ್ತು ಚಿನ್ನಾಭರಣಗಳನ್ನು ಆಧುನಿಕ ಕ್ರಮಕ್ಕನುಸಾರವಾಗಿ ವಿಶ್ವಾಸದಲ್ಲಿ ತಯಾರಿಸುವ ಕೆಲಸಗಾರರು ಬೇಕಾಗಿದ್ದಾರೆ. ಅಲ್ಲದೆ ಕಟ್ಟಿನ ಅನುಭವವಿದ್ದ ಒಬ್ಬ ಗಡಿಯಾರ ರಿಪೇರಿ ಕೆಲಸಗಾರನೂ ಬೇಕಾಗಿದ್ದಾನೆ. ಉಮೇದ್ವಾರರು ತಮ್ಮ ಸರ್ಟಿಫಿಕೇಟುಗಳು ಇದ್ದಪಕ್ಷದಲ್ಲಿ ಅವುಗಳೊಂದಿಗೆ ಹೆಚ್ಚಿನ ಮಾಹಿತಿ ಬಗ್ಗೆ ಬರೆಕೊಳ್ಳಬಹುದು, ಅಥವಾ ಖುದ್ದು ಬಂದು ಮಾತಾಡಲೂ ಬಹುದು

R. C/o Navayuga,
Udipi, S. K.

ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ.

ರೂಪ ನೋಡಿಯೋ ಕೋಪ!

"ನನ್ನನ್ನು ಮದುವೆಯಾಗುವ ಮೊದಲು ನನ್ನ ಗಂಡ ಪರ ಊರಿನಲ್ಲಿದ್ದರು— ವಿವಾಹದ ಮೊದಲು, ನನ್ನನ್ನು ಅವರು ನೋಡಿರಲಿಲ್ಲ; ವಿವಾಹವಾದ ಮೇಲೆ ನನ್ನ ಗೊಡವೆಯೆ ಇಲ್ಲದೆ ಪರ ಊರಿಗೆ ಹೋಗಿ ಈಗಲೂ ಅಲ್ಲಿಯೇ ಇದ್ದಾರೆ. ಕಾಗದ ಬರೆದರೆ ಜವಾಬು ಕೂಡ ಬರೆಯುವದಿಲ್ಲ. 'ಆ ಕುರೂಪಿಯನ್ನು ಕಟ್ಟಿಕೊಂಡು ಈ ಸ್ಥಳದಲ್ಲಿರಲು ನಾಚಿಕೆಯಾಗುತ್ತದೆ' ಎಂದು ಹೇಳುತ್ತಾರೆಂದು ಅಲ್ಲಿಂದ ವರ್ತಮಾನ ಬಂದಿದೆ. ನನ್ನನ್ನವರು ತ್ಯಜಿಸಿಯೇ ಬಿಡುವಂತೆ ಕಾಣುತ್ತಿದೆ. ಇದರಲ್ಲಿ ನನ್ನ ಅಪರಾಧವೇನು? ಮತ್ತು ನಾನು ಹೇಗೆ ವರ್ತಿಸಿದರಾಗ ಬಹುದೆಂಬುದನ್ನು ದಯವಿಟ್ಟು ತಿಳಿಸುವಿರಾ?" ಶ್ರೀಮತಿ ಕೆ. ಎನ್. ಬಾಯಿ, ಮುಳ್ಳಹಳ್ಳಿ

ವಿವಾಹಪೂರ್ವದಲ್ಲಿ ವಧುವನ್ನು ನೋಡುವ ತನ್ನ ಕರ್ತವ್ಯವನ್ನು ಮಾಡದ ನಿಮ್ಮ ಗಂಡನ ಅಪರಾಧವನ್ನೆತ್ತಿ ತೋರಿಸಿ ಧಿಕ್ಕಾರ ಹೇಳಬಹುದಿತ್ತು; ಅದರ ಈಗ ಶಿಕ್ಷೆಗೊಳಗಾದವರು ನೀವಾದ್ದರಿಂದ ನಿಮ್ಮ ಅಪರಾಧವನ್ನೇ ತೋರಿಸಿಕೊಡಬೇಕಾಯಿತು. ನಿಮ್ಮ ಪುರುಷನಾಗಲಿರುವವನ ಸ್ವಭಾವವನ್ನು ಮೊದಲೇ ತಿಳಿದುಕೊಳ್ಳದಿದ್ದುದು ನಿಮ್ಮ ತಪ್ಪು. ಇನ್ನು ಮುಂದಿನ ವಿಚಾರ – ನಿಮ್ಮ ರೂಪವು ತಿದ್ದಲು ಬರುವಂಹದಲ್ಲ; 'ಮೇಕ್ ಅಪ್' ಮಾಡಿಕೊಳ್ಳುವ ಸೂಚನೆಯನ್ನು ನಾವು ಕೊಡಲಾರೆವು. ಆದರೆ ನಿಮ್ಮ ಗಂಡನ ಸ್ವಭಾವವನ್ನು ತಿದ್ದಲು ಸಾಧ್ಯವಿದೆ. ಪತ್ನಿಯೆಂದರೆ ಪ್ರದರ್ಶನಕ್ಕಾಗುವ ವಸ್ತು ಮಾತ್ರವಲ್ಲ; ಪ್ರೇಮಪೂರ್ಣ ವರ್ತನೆಗಳಿಂದ ಗಂಡನ ಜೀವನವನ್ನು ಸುಖಮಯವಾಗಿ ಮಾಡುವ ಸಹಧರ್ಮಿಣಿ ಎಂಬ ಹೊಸಾನುಭವವನ್ನು ಸಂದರ್ಭ ದೊರೆತರೆ ನೀವು ಅವರಿಗೆ ಮಾಡಿಕೊಡಬಲ್ಲಿರಿ. ಅದಕ್ಕಾಗಿ ಸೀದಾ ಅವರಿರುವಲ್ಲಿಗೆ ಹೋಗಿರಿ. ಕಂಡವರೇನನ್ನುತ್ತಾರೋ ಎಂಬ ಶಂಕೆಯಿರುವ ನಿಮ್ಮವನಿಗೆ ಕೈಹಿಡಿದ ಪತ್ನಿಯನ್ನು ಹಿಂದಕ್ಕಟ್ಟಲು ಸಾಧ್ಯವಾಗದು. ಹೀಗೆ ಪ್ರಥಮತಃ ಅನಿವಾರ್ಯವಾಗಿ, ದಿನ ಹೋದಂತೆ ಅಗಲುವಿಕೆಯೇ ಅಸಾಧ್ಯವಾಗಿ, ನೀವು ಒಂದಾಗುವಿರಿ. ನಿಮ್ಮ ಗಂಡ ವಿವಾಹಪೂರ್ವದಲ್ಲಿ ನಿಮ್ಮನ್ನು ಕಾಣದೆ ತಪ್ಪಿ ಬಿದ್ದನಾದರೆ, ವಿವಾಹನಂತರವೂ ನೋಡಬೇಕಾದನ್ನು ನೋಡದೇನೇ ತಪ್ಪು ಮಾಡುತ್ತಿದ್ದಾನೆ. ರೂಪದಲ್ಲಿಲ್ಲದ ಸೊಬಗು ಹೃದಯದಲ್ಲಿದೆ ಎಂಬುದನ್ನು ತೋರಿಸಿರಿ; ಅದಕ್ಕಾಗಿಯೇ ಈ ರೀತಿ ಸಂದರ್ಭ ಸಾಧಿಸಿರಿ.

ತರಬೇತಿನ ಕೊರತೆ

"ಮಂಗಳೂರಿನ ಹೆಮ್ಮಕ್ಕಳ ಟ್ರೈನಿಂಗ್ ಶಾಲೆಯು ಹೆಡ್ ಮಿಸ್ಟ್ರೆಸ್ ಕನ್ನಡವರಿಯದವರು. ಇದರಿಂದ ಎಷ್ಟೋ ತೊಂದರೆಗಳಾಗುತ್ತಿರುವ ಅನುಭವ ನನಗಿದೆ. ಆ ಪದವಿಗೆ ಅರ್ಹತೆ ಪಡೆದ ಮಹಿಳೆಯರು ದಕ್ಷಿಣಕನ್ನಡದಲ್ಲೇ ಇರುವಾಗ ಅದಕ್ಕಾಗಿ ಬೇರೆ ಪ್ರಾಂತಗಳವರನ್ನು ಹುಡುಕಿ ತಂದು ನೇಮಿಸುವದು ನ್ಯಾಯವೆ? ನಿಮ್ಮ ಪತ್ರಿಕೆಯಲ್ಲಿ ಈ ಮೊದಲೊಮ್ಮೆ ಆ ಕುರಿತು ಯೋಗ್ಯ ಸಲಹೆ ಕೊಟ್ಟಿದ್ದೀರಿ. ಮಂಗಳೂರವರು ಅದಕ್ಕಾಗಿ ಚಳವಳಿ ಹೂಡಬಾರದೇಕೆ?" ಶ್ರೀಮತಿ ಸಿ. ಸಿ. ಬಿ. ಮಂಗಳೂರು.

ನಿಜ. ಇಂತಹ ನೇಮಕಗಳಿಂದ ಹೆಮ್ಮಕ್ಕಳ ತರಬೇತಿಗೆ ತೊಂದರೆ ಇರುವದು ನಿಜ. ಆದರೆ ಸ್ಥಳೀಯ ಭಾಷೆ, ಸ್ಥಳೀಯ ಜನರನ್ನು ಅರಿಸುವುದರಲ್ಲಿ ನಮ್ಮ ವಿದ್ಯಾ ಇಲಾಖೆಯವರೇ ಈ ತನಕ ತರಬೇತಿ ಹೊಂದಿಲ್ಲವಲ್ಲಾ! ಅದಕ್ಕಾಗಿ 'ಚಳವಳಿ ಹೂಡಬಾರದೇಕೆ?' ಎಂದು ನಾವೂ ಕೇಳುತ್ತೇವೆ.

ರಾಶಿ–ರಾಶಿಭವಿಷ್ಯ !

"ಈಗ 'ರಾಶಿಭವಿಷ್ಯ'ವಿಲ್ಲದ ಕನ್ನಡ ಪತ್ರಿಕೆಯೇ ಇಲ್ಲ. ಜನರಿಗದರ ಹುಚ್ಚೇ ಹಿಡಿದುಹೋಗಿದೆ. ಒಂದೇ ರಾಶಿಯವನ ಭವಿಷ್ಯ, ಬೇರೆ ಬೇರೆ ಪತ್ರಿಕೆಯಲ್ಲಿ, ಬೇರೆ ಬೇರೆ ರೀತಿಯಲ್ಲಿ ಬರುತ್ತದೆ. ಹೀಗಿರುವಾಗ ನಾವು ಯಾವುದನ್ನು ನಂಬಬೇಕು? ಭವಿಷ್ಯವು ಸತ್ಯವಾಗುವದಿಲ್ಲವೆಂದು ಜನರಿಗನುಭವವಾಗಿದ್ದರೂ, ಪತ್ರಿಕಾ ಸಂಪಾದಕರಿಗೆ ಖಂಡಿತ ಗೊತ್ತಿದ್ದರೂ ಅವರು ನಂಬುವದನ್ನಾಗಲೀ ಇವರು ಪ್ರಕಟಿಸುವದನ್ನಾಗಲೀ ಬಿಡುವುದಿಲ್ಲ. ಇಂತಹ ಮಾಯಾಜಾಲದಿಂದ ಜನರನ್ನು ಪತ್ರಿಕೆಗಳು ಮಂಕುಗೊಳಿಸುವದು ಅನ್ಯಾಯವಲ್ಲವೆ?" ಬಿ. ಆರ್. ಎಸ್. ಗದಗ.

ಹಾಗೆನ್ನಬೇಡಿ. ನಿಮ್ಮ ಗ್ರಹಗತಿ ಒಳ್ಳೆಯದಿರಬಹುದೇ ಎಂದು ನೋಡುವದಕ್ಕಾಗಿ ನೀವೂ ರಾಶಿಭವಿಷ್ಯವನ್ನೋದುವಿರಿ; ತಮ್ಮ ಗ್ರಹಗತಿ ಇದರಿಂದಾಗಿ ಒಳ್ಳೆಯದಾಗಬಹುದೆಂದೇ ಪತ್ರಿಕೆಗಳೂ ಅದನ್ನು ಪ್ರಕಟಿಸುತ್ತಿವೆ! ಅಂತು ಇದು ಪತ್ರಿಕೆಗಳಿಗೂ ವಾಚಕರಿಗೂ ಆಗಿದ "ಗ್ರಹಚಾರ" ಎಂಬುದಕ್ಕಡ್ಡಿಯಿಲ್ಲ. ನಿಮ್ಮ ಪ್ರಶ್ನೆಯ ಆಧಾರದಿಂದ ಈ ವಾರದ ನಿಮ್ಮ ಭವಿಷ್ಯದಲ್ಲಿ 'ಚಿತ್ತಪ್ರಕೋಪವಧಿಕವಾಗಲಿದೆ' ಎಂದಿರಲೇ ಬೇಕು. ಹೌದಲ್ಲಾ?

ಯಾವ ಟಿಕೇಟು?

"ನಾನು ಎಲ್ಲಿ ಹುಡುಕಿದರೂ ಕೆಲಸ ಸಿಕ್ಕುವುದಿಲ್ಲ. ನಿರುದ್ಯೋಗದಿಂದ ಬಹಳ ಅಡಚಣೆಗೊಳಗಾಗಿದ್ದೇನೆ. ಯಾವುದಾದರೊಂದು ರೀತಿಯ ಟಿಕೇಟುಗಳನ್ನು ಮಾಡಿಸಿ ಬೊಂಬಾಯಿಗೆ ಹೋಗಿ ಹಣ ಕೂಡಿಸಬೇಕೆಂಬ ಆಲೋಚನೆಯಲ್ಲಿದ್ದೇನೆ. ಬೊಂಬಾಯಿಗೆ ಹೋದರೆ ಪ್ರಯೋಜನವಾದೀತೆ?" ಆರ್. ಕೆ. ಎಸ್. ಕಾಂಞಂಗಾಡು.

ಬೇರಾವ ಟಿಕೇಟೂ ಪ್ರಯೋಜನವಿಲ್ಲ; ಹೊರಡುವಾಗ ರಿಟರ್ನ್ ಟಿಕೇಟೊಂದನ್ನು ಹಿಡಿದುಕೊಂಡರಾಯಿತು!

ನವಯುಗದಲ್ಲೇ ನಿಮ್ಮ ಜಾಹಿರಾತು ಪ್ರಕಟಿಸಿರಿ

An Insurance Company belonging to its Policyholders!

In other words a Mutual Office without Shareholders to absorb any part of its profits, or any obligations except to its assured Members. The "Canara Mutual" is such a Company. It is one of the most successful Mutual Life Offices in India.

Take a Policy in the Company and become one of its Members.

Economical Management.] [Handsome Bonuses.

The Canara Mutual

ASSURANCE COMPANY, LTD.

(Head Office:- UDIPI, S. India.)

ಒಂದು ವಾರದ ಯುದ್ಧ

ಓರನಿನ ನೌಕಾ ಯುದ್ಧದ ಪರಿಣಾಮ.

ಮುಂದಿನ ಯುದ್ಧವಿಧಾನದ ಕುರಿತು ಡಿಕ್ಟೇಟರ ಯೋಚನೆ

ಇಡೀ ಬ್ರಿಟಿಶ್ ಜನಾಂಗವೇ ವೈರಿಯ ಧಾಳಿಗಾಗಿ ಕಾದಿದೆ.

ಬಿರುಗಾಳಿಯ ಪೂರ್ವದ ಶಾಂತತೆ.

ಹಿಟ್ಲರರು ಇಂಗ್ಲೆಂಡಿನ ಮೇಲೆ ಧಾಳಿ ನಡಿಸುವುದೆಂಬೂ ನಿಶ್ಚಯ 8 ವಾರಗಳ ಅಂತರದ ಅನಂತರ ಹರ್ ಹಿಟ್ಲರರು ಇದೇ ತಾ. ೬ರಲ್ಲಿ ಬರ್ಲಿನಿಗೆ ಹೋದಾಗ ಪ್ರಚಂಡ ಜನಸ್ತೋಮವು ಅವರಿಗೆ ಅತ್ಯುತ್ಸಾಹಪರ ಸ್ವಾಗತವಿತ್ತು. "ನಾವು ಇಂಗ್ಲೆಂಡಿನ ಮೇಲೆ ನಡೆಯುವೆವು" ಎಂದು ಉದ್ಘೋಷಿಸಿರುವುದು ಮಾರ್ಶಲ್ ಗೋರಿಂಗ್, ಹರ್ವಾನ್ ರಿಬೆಂಟ್ರಫ್, ಜನರಲ್ ವಾನ್ ಬ್ರೊಚಿಶ್, ಎಡ್ಮಿರಲ್ ರೈಡರ್ ಮೊದಲಾದವರೆಲ್ಲಾ ಬರ್ಲಿನಿನಲ್ಲಿ ಒಟ್ಟಾಗಿದ್ದಾರೆ ಇಂಗ್ಲೆಂಡನ್ನು ಯಾವರೀತಿಯಲ್ಲಿ ಬಗ್ಗುಬಡಿಯುವುದೆಂಬ ಕುರಿತು ಅವರಾಲೋಚಿಸುತ್ತಿರುವಂತಿದೆ. ಅದರ ಮೇಲೆ ಧಾಳಿ ನಡಿಸಲು ಒಳಗಿಂದೊಳಗೆ ತೀವ್ರಸಿದ್ಧತೆಯನ್ನು ಹಿಟ್ಲರರು ಮಾಡುತ್ತಿರುವಂತಿದೆ ಜರ್ಮನರ ಎಂತಹ ಧಾಳಿಯನ್ನಾದರೂ ತಡೆಗಟ್ಟಲು ಇಂಗ್ಲೆಂಡ್ ಸಿದ್ಧವಾಗಿಯೇ ಇದೆ ಸುಮಾರು ಎರಡು ಮಿಲ್ಯ ಸೇನೆಯನ್ನದು ಹೊಸದಾಗಿ ಸಂಗ್ರಹಿಸಿಕೊಂಡಿದೆ. ಫ್ರೆಂಚ್ ನೌಕಾಪಡೆಯು ಜರ್ಮನರ ವಶವಾಗದಂತೆ ಬ್ರಿಟಿಷ್ ಸರಕಾರವು ತೀವ್ರವಾಗಿ ಕೆಲಸಮಾಡಿದೆ ಫ್ರೆಂಚ್ ಯುದ್ಧಹಡಗಗಳು ವೈರಿಯ ವಶವಾಗುವುದರಿಂದ ತಮಗೆ ಎರಡು ಪೆಟ್ಟಾಗುವುದೆಂದು ಬ್ರಿಟಿಷ್ ಪ್ರಧಾನ ಮಂತ್ರಿಗಳು, ಆ ಕುರಿತು ಅತಿಕಠಿಣ ಧೋರಣೆ ವಹಿಸಿರುವರು ತಾ. ೪ರಲ್ಲಿ ಮಿ ಚರ್ಚಿಲ್ಲರು ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣವು ಅವರ ಅಚಲ ಹಾಗೂ ಉಗ್ರನಿರ್ಧಾರವನ್ನು ಮನಗಾಣಿಸುತ್ತದೆ. ಓರನಿನ ಫ್ರೆಂಚ್ ನೌಕಾಪಡೆಯು ಬ್ರಿಟಿಷರ ಕೇಳಿಕೆಯಂತೆ ಅವರ ವಶವಾಗುವುದಕ್ಕಾಗಲಿ, ನಿರಾಯುಧವಾಗಿರಿಸಲ್ಪಡುವುದಕ್ಕಾಗಲಿ ಒಪ್ಪದೆ ಪೆಟೈನ್ ಸರಕಾರದ ಆಜ್ಞೆಯಂತೆಯೇ ನಡೆಯಲು ನಿರ್ಧರಿಸಿದುದರಿಂದ ಜುಲ್ಯೆ ತಾ. ೩ರಲ್ಲಿ ಬ್ರಿಟಿಷ್ ನೌಕಾಪಡೆಯು ಅದರ ಮೇಲೆ ಗುಂಡು ಹಾರಿಸಿ ಹೋರಾಟವಾಗಿ ಹಲವು ಮಂದಿ ಫ್ರೆಂಚ್ ನಾವಿಕರು ಕೊಲ್ಲಲ್ಪಟ್ಟರಲ್ಲದೆ ಕೆಲವು ಫ್ರೆಂಚ್ ಯುದ್ಧ ಹಡಗುಗಳು ಮುಳುಗಿಸಲ್ಪಟ್ಟಿರುವವು. ಇನ್ನು ಕೆಲವು ತಪ್ಪಿಸಿಕೊಂಡುಹೋಗಿ ಫ್ರಾನ್ಸಿನ ಟೌಲೋನ್ ಬಂದರಕ್ಕೆ ಮುಟ್ಟಿರುವವು ಅವನ್ನು ಕೂಡ ಬ್ರಿಟಿಷ್ ಯುದ್ಧದ ಹಡಗುಗಳು ಬೆನ್ನಟ್ಟಿ ಜಖಮು ಮಾಡಿರುವವು ಪ್ಲಿಮೌತ್ ಮೊದಲಾದ ಬ್ರಿಟಿಷ್ ಬಂದರದ ಬಳಿಯಿದ್ದ ಫ್ರೆಂಚ್ ಹಡಗುಗಳನ್ನು ಬ್ರಿಟಿಷರು ವಶಪಡಿಸಿಕೊಂಡಿರುವರು ಫ್ರಾನ್ಸಿಗೆ ಹೋಗಲಿಚ್ಛಿಸುವ ನಾವಿಕರನ್ನು ಅಲ್ಲಿಗೆ ಕಳುಹಿಸುವ ಏರ್ಪಾಡು ಮಾಡಲಾಗುವುದು ಅಲೆಗ್ಸಾಂಡ್ರಿಯಾ ಬಂದರದಲ್ಲಿ ಫ್ರೆಂಚ್ ಹಡಗು ಪಡೆಯು ಯಾವ ತರದತೊಂದರೆಯೂ ಇಲ್ಲದೆ ನಿಶ್ಶಸ್ತ್ರವಾಗಿ ಮಾಡಲ್ಪಟ್ಟಿದೆ ಓರಾನಿನಿಂದ ತಪ್ಪಿಸಿಕೊಂಡು ಹೋಗುತ್ತಿದ್ದ ಡಂಕರ್ಕ್ ಎಂಬ ಅತಿದೊಡ್ಡ ಫ್ರೆಂಚ್ ಯುದ್ಧ ಹಡಗವು ಹೆಚ್ಚಿನ ಜಖಮ್ ಹೊಂದಿದೆ

ಪ್ರೊವೆನ್ಸ್ ಎಂಬ ಫ್ರೆಂಚ್ ಯುದ್ಧ ಹಡಗವೂ ಮತ್ತು ಒಂದು ಡಿಸ್ಟ್ರೋಯರ್ ಹಡಗವೂ ಮುಳುಗಿಸಲ್ಪಟ್ಟಿವೆ. 200 ಮಂದಿ ಫ್ರೆಂಚ್ ನಾವಿಕರು ಕೊಲ್ಲಲ್ಪಟ್ಟಿದ್ದಾರೆ 150 ಮಂದಿಗೆ ಹೆಚ್ಚಿನ ಪೆಟ್ಟಾಗಿ ಕೆಲವೇ ಮಂದಿ ಬ್ರಿಟಿಷ್ ನಾವಿಕರು ಮಾತ್ರ ಕೊಲ್ಲಲ್ಪಟ್ಟಿರುತ್ತಾರೆ ದಕ್ಷಿಣ ಅಮೇರಿಕದ ಫ್ರೆಂಚ್ ವೆಸ್ಟ್ ಇಂಡೀಸಿನ ಮಾರ್ಟಿನೆಕ್ ಎಂಬಲ್ಲಿದ್ದ ಫ್ರೆಂಚ್ ನೌಕಾಪಡೆಯ ಮೇಲೂ ಬ್ರಿಟಿಷರು ಬಲಾತ್ಕಾರ ನಡಿಸಲು ಮುತ್ತಿಗೆ ಹಾಕಿರುತ್ತಾರೆ. ಈ ಕುರಿತು ಅಮೇರಿಕ ಮತ್ತು ಇಂಗ್ಲೆಂಡುಗಳು ಆಲೋಚಿಸುತ್ತಿವೆ ಹೀಗೆ ಹೆಚ್ಚಿನ ಫ್ರೆಂಚ್ ನೌಕಾಪಡೆಯು ಇಂಗ್ಲೆಂಡಿನ ಸ್ವಾಧೀನವಾಗಿದೆ, ಇಲ್ಲವೆ ನಿರಾಯುಧವಾಗಿಮಾಡಲ್ಪಟ್ಟಿದೆ ಇದರಿಂದ ಜರ್ಮನಿ ಮತ್ತು ಇಟೆಲಿಗಳು ಅತ್ಯಂತ ಸಂತಪ್ತವಾಗಿವೆ ಈಗ ವಿಚಿ ಎಂಬ ಪಟ್ಟಣದಲ್ಲಿ ಸ್ಥಾಪಿಸಲ್ಪಟ್ಟಿರುವ ಪೆಟೈನ ಸರಕಾರವು ಓರನಿನ ಯುದ್ಧದಿಂದ ಉದ್ರೇಕಗೊಂಡು ಬ್ರಿಟಿಷ್ ಸರಕಾರದ ಸಂಬಂಧವನ್ನು ಕಡಿದು ಹಾಕಿದೆ. ಫ್ರೆಂಚ್ ನೌಕಾಪಡೆಯು ನಿಶ್ಶಸ್ತ್ರವಾಗಿರಿಸಲ್ಪಡುತ್ತಿದ್ದಿತೇ ಹೊರತು ಜರ್ಮನಿ ಮತ್ತು ಇಟೆಲಿಗಳ ವಶವಾಗುತ್ತಿದ್ದಿಲ್ಲ ಬ್ರಿಟಿಷರು ಮಹತ್ತಾದ ಅನ್ಯಾಯಮಾಡಿ ಫ್ರೆಂಚ್ ನಾವಿಕರ ರಕ್ತ ಸುರಿಸಿರುತ್ತಾರೆ. ಫ್ರೆಂಚ್ ಸರಕಾರವು ಇಂಗ್ಲೆಂಡಿಗೇನೂ ವಿರೋಧ ಬಯಸಿರುವುದಿಲ್ಲ. ಇಂಗ್ಲೆಂಡಿನ ಜನ್ನುಹಿಮ್ಮೆಯೋಗಿ [illegible] ಅನಾಕರ್ಷಣೀಯವಾಗಿದೆಯೆಂದು ಫ್ರೆಂಚ್ ವಿದೇಶಮಂತ್ರಿಗಳು ಇಂಗ್ಲೆಂಡಿನ ಧೋರಣೆಯನ್ನು ನಿಷೇಧಿಸಿರುತ್ತಾರೆ ಇಂದಿಗ ಬಿರುಗಾಳಿಯ ಮೊದಲಿನ ಶಾಂತತೆಯು ನೆಲೆಗೊಂಡಿದೆ ಹಿಟ್ಲರ್ ಮುಸಲೋನಿಯವರು ಬಾಲ್ಕನಿನ ಪ್ರಶ್ನೆಯನ್ನು ಮೊದಲಾಗಿ ಇತ್ಯರ್ಥಮಾಡಿಕೊಂಡು ಅನಂತರ ಇಂಗ್ಲೆಂಡನ್ನು ಮುರಿಯಲಿಚ್ಛಿಸುವಂತಿದೆ. ಇಟೆಲಿಯ ವಿದೇಶ ಮಂತ್ರಿ ಕೌಂಟ್ ಸಿಯಾನೋರವರು ಜರ್ಮನ್ ವಿದೇಶ ಮಂತ್ರಿ ಹರ್ವಾನ್ ರಿಬೆಂಟ್ರಫರೊಡನೆ ಮೋಸ್ಕೋವಿಗೆ ಹೋಗಲಿರುವರೆಂದು ಸುದ್ದಿಯುಂಟಾಗಿದೆ ಟರ್ಕಿ ಮತ್ತು ಯುಗೋಸ್ಲಾವಿಯಗಳು ಜರ್ಮನಿ ಮತ್ತು ಇಟೆಲಿಗಳು ಎತ್ತರದಲ್ಲಿಯೇ ಇದ್ದೇವೆ, ರಶ್ಯದ ಧೋರಣೆಯಿಂದ ಡಿಕ್ಟೇಟರರು ಅಷ್ಟೊಂದು ಸಮಾಧಾನ ಹೊಂದಿದಂತೆ ತೋರುವುದಿಲ್ಲ ಆದುದರಿಂದ ರಶ್ಯವನ್ನು ಸಂಪೂರ್ಣವಾಗಿ ಒಲಿಸಿಕೊಂಡು ಅದರ ಸಮ್ಮತಿಯಿಂದಲೇ ಬಾಲ್ಕನಿನಲ್ಲಿ ತಮ್ಮ ವರ್ಚಸ್ಸನ್ನು ಬೆಳಿಸುವ ನಿರ್ಧಾರಕ್ಕೆ ಡಿಕ್ಟೇಟರರು ಬಂದಂತಾಗಿದೆ. ರುಮೇನಿಯವು ಈಗ ಸಂಪೂರ್ಣವಾಗಿ ಡಿಕ್ಟೇಟರರ ಬಗಲೊಳಗೆ ಬಿದ್ದಿದೆ ಹಂಗೇರಿಯು ಮೊದಲೇ ಅವರ ಬಾಲವಾಗಿದೆ ಬಲ್ಗೇರಿಯವು ರಶ್ಯದ ಮಾತಿನಂತೆ ನಡೆಯಲು ಸಿದ್ಧವಿದೆ ಇನ್ನು ಉಳಿಯುವೆಂದರೆ ಯುಗೋಸ್ಲಾವಿಯ ಗ್ರೀಸ್ ಮತ್ತು ಟರ್ಕಿ. ರಶ್ಯವು ಡಿಕ್ಟೇಟರರೊಂದಿಗೆ ಸೇರಿದರೆ ಇವುಗಳಿಗೂ ಬಗ್ಗಲೇಬೇಕಾಗುವುದು

ಇನ್ನು ಕೆಲವು ದಿನಗಳಲ್ಲೇ ಇಂಗ್ಲೆಂಡಿನ ಮೇಲೆ ಪ್ರಚಂಡ ಧಾಳಿ ನಡೆಯುವುದೆಂತೂ ನಿಶ್ಚಯ ಅದನ್ನು ಇಂಗ್ಲೆಂಡು ನಿರೀಕ್ಷಿಸಿಕೊಂಡೇ ಇದೆ ಇಡೀ ಬ್ರಿಟಿಷ್ ಜನಾಂಗವು ವೈರಿ ಧಾಳಿಯು ಆರಂಭವಾಗುವ ಸಮಯವನ್ನು ಕಾಯುತ್ತಾ ಇದೆಯೆಂದು ಲೋರ್ಡ್ ಪ್ರಿವಿಸೀಲರಾದ ಮೇಜರ್ ಎಟ್ಲಿಯವರು ಇದೇ ತಾ ೬ರಲ್ಲಿತ್ತ ರೇಡಿಯೋ ಭಾಷಣದಲ್ಲಿ ನಿರೂಪಿಸಿರುವರು. ಇಂಗ್ಲೆಂಡಿನ ಸಿದ್ಧತೆಯು ದಿನದಿನಕ್ಕೆ ಮಿಂಚಿನ ಭರದಿಂದ ಅಧಿಕವಾಗುತ್ತಾ ಹೋಗುತ್ತಿದೆ ಒಂದು ವೇಳೆ ಐರ್ಲೆಂಡಿನ ಮೂಲಕ ಹಿಟ್ಲರರು ಇಂಗ್ಲೆಂಡಿನ ಮೇಲೆ ಧಾಳಿನಡಿಸಲಿಚ್ಛಿಸಿದರೂ ಅದನ್ನು ತಡೆಗಟ್ಟುವ ಏರ್ಪಾಡನ್ನು ಬ್ರಿಟಿಷರು ಮಾಡಿರುತ್ತಾರೆ. [illegible] ಹಾಕಿದ ತಟ್ಟ ಏರುವುದಾದರೂ, ಜರ್ಮನರ ಆಕ್ರಮಣವನ್ನು ತನ್ನ ಸಂಪೂರ್ಣ ಶಕ್ತಿಯಿಂದ ವಿರೋಧಿಸದಿರಲಾರದು

ಈ ನಡುವೆ ಪರಸ್ಪರ ವಿಮಾನಧಾಳಿಗಳು ನಡೆಯುತ್ತಲೇ ಇರುವವು ಜರ್ಮನಿಯು ಇತ್ತೀಚೆಗೆ ಇಂಗ್ಲೆಂಡಿನ ಮೇಲೆ ಧಾಳಿನಡಿಸಿದ ಸಂದರ್ಭದಿಂದ 37 ಜರ್ಮನ್ ವಿಮಾನಗಳನ್ನು ಬ್ರಿಟಿಷ್ ಯುದ್ಧವಿಮಾನಗಳು ನಾಶಮಾಡಿರುತ್ತವೆ ಪ್ರಾಮುಖ್ಯ ಜರ್ಮನ್ ನೌಕಾನಿಲ್ದಾಣದ ಕೀಲ್ ಮತ್ತು ವಿಲಹೆಲ್ಮ್ಸ್‌ಹೇವನ್ ಮತ್ತು ಹಲವು ಜರ್ಮನ್ ಡಚ್, ಬೆಲ್ಜಿಯಮ್ ಮತ್ತು ಫ್ರೆಂಚ್ ವಿಮಾನನಿಲ್ದಾಣಗಳ ಮೇಲೆ ಬ್ರಿಟಿಷ್ ವಿಮಾನಗಳು ಹಗಲಲ್ಲೇ ಧಾಳಿ ನಡಿಸಿ ಹಾವಳಿಮಾಡಿರುತ್ತವೆ ಮಾಲ್ಟ, ಜಿಬ್ರಾಲ್ಟರ್, ಅಲೆಗ್ಝಾಂಡ್ರಿಯ ಮೊದಲಾದ ಬಂದರುಗಳ ಮೇಲೆ ಇಟೆಲಿಯಾದ ವಿಮಾನಗಳು ಬಾಂಬೆಸೆದಿರುತ್ತವೆ ಹೆಚ್ಚಿನ ಹಾವಳಿಯೇನೂ ಆಗಿರುವುದಿಲ್ಲ ಲಿಬಿಯದ ಟೊಬ್ರೂಕಿನಲ್ಲಿದ್ದ ಇಟೆಲಿಯಾದ ಯುದ್ಧಹಡಗಗಳ ಮೇಲೆ ಬ್ರಿಟಿಷ್ ವಿಮಾನಗಳು ಬಾಂಬೆಸೆದಿರುತ್ತವೆ ಸಿಸಿಲಿಯ ಕಟಾನಿಯ ವಿಮಾನನಿಲ್ದಾಣದ ಮೇಲೂ ಬ್ರಿಟಿಷ್ ವಿಮಾನಗಳು ಬಾಂಬು ಹಾಕಿರುತ್ತವೆ.

ಲಂಡನಿನಲ್ಲಿ ಜನರಲ್ ಗೋಲ್ ಮತ್ತು ಎಡ್ಮಿರಲ್ ಮ ಸಲಿಯರರು ಆದಷ್ಟು ಫ್ರೆಂಚ್ ಸೇನೆ ಮತ್ತು ನೌಕಾಪಡೆಯನ್ನು ಸಂಗ್ರಹಿಸಿ ಸಂಘಟಿಸಿ ಇಂಗ್ಲೆಂಡಿಗೆ ಹೋರಾಡುವ ಸಿದ್ಧತೆ ನಡಿಸುತ್ತಿದ್ದಾರೆ ಕೆಲವು ಫ್ರೆಂಚ್ ವಸಾಹತುಗಳಿಂದಲೂ ಅವರಿಗೆ ಸಹಾಯದೊರೆತಿದೆ ಜಿಬೌಟಿಯ ಫ್ರೆಂಚ್ ಸೇನಾನಾಯಕರು ಪೆಟೈನ್ ಸರಕಾರದ ಆಧೀನರಾಗಲು ಎಷ್ಟುಕ್ಕೂ ಒಪ್ಪದೆ ಬ್ರಿಟಿಷರೊಂದಿಗೆ ಇಟೆಲಿಯ ವಿರೋಧವಾಗಿ ಹೋರಾಡುವ ನಿರ್ಧಾರಮಾಡಿರುತ್ತಾರೆ. ಜನರಲ್ ಗೋಲ್ಲರು ಫ್ರೆಂಚ್ ಸೇನಾ ಸಂಘಟನೆಯ ವೆಚ್ಚಕ್ಕೆ ಬೇಕಷ್ಟು ಹಣವನ್ನು ಸಹ ಒಟ್ಟುಮಾಡಿರುತ್ತಾರೆ.

ಇದೇ ತಾ. 5ರಲ್ಲಿ ಏಬಿಸಿನಿಯದ ಬಳಿಯ ಸುಡಾನಿನಲ್ಲಿ ಬ್ರಿಟಿಷ್ ಮತ್ತು ಇಟೆಲಿಯಾನರೊಳಗೆ ಹೋರಾಟ ಆರಂಭವಾಗಿದೆ ಬ್ರಿಟಿಷ ಸೈನಿಕರು ಕಸ್ಸಾಲ ಎಂಬ ಸ್ಥಳವನ್ನು ಬಿಟ್ಟು ಹಿಂದೆ ಸರಿದಿರುತ್ತಾರೆ ಗಲಬಟ್ ಎಂಬಲ್ಲಿಂದಲೂ ಹಿಂದೆ ಸರಿದಿರುತ್ತಾರೆ. ಈ ಸ್ಥಳಗಳಲ್ಲಿ ನಡೆದ ಹೋರಾಟದಲ್ಲಿ ಹಲವು ಮಂದಿ ಇಟೆಲಿಯಾನ ಸೈನಿಕರು ಕೊಲ್ಲಲ್ಪಟ್ಟಿರುವರು. ಇದೇ ತಾ. ೬ರಲ್ಲಿ ಬ್ರಿಟಿಷ್ ವಿಮಾನಗಳು 7 ಇಟೆಲಿಯಾನ ವಿಮಾನಗಳನ್ನು ನಾಶಮಾಡಿರುತ್ತವೆ. ಉತ್ತರ ಆಫ್ರಿಕದ ಬ್ರಿಟಿಷ್ ಸೊಮಾಲಿಯ ಮೇಲೆಯೂ ಇಟೆಲಿಯಾನರು ಏರಿಹೋಗಿ ತಡೆಗಟ್ಟಲ್ಪಟ್ಟಿರುತ್ತಾರೆ

ಮೇ. ತಾ 10ರಿಂದ ಜೂನ್ ತಾ. ೪ರ ವರೆಗೆ ನಡೆದ ಯುದ್ಧದಲ್ಲಿ ಕೊಲ್ಲಲ್ಪಟ್ಟ ಜರ್ಮನ್ ಸೈನಿಕರು 10,000, ಜೂನ್ ತಾ ೫ರಿಂದ 25ರ ವರೆಗೆ ಕೊಲ್ಲಲ್ಪಟ್ಟವರು 17,000 ಎಂದು ಜರ್ಮನರು ಪ್ರಕಟಿಸಿರುತ್ತಾರೆ. ಇದು ಶುದ್ಧ ಸುಳ್ಳೆಂದು ಬ್ರಿಟಿಷರು ಹೇಳುತ್ತಿದ್ದಾರೆ. ಮೇ ತಾ 10 ರಿಂದ ಯುದ್ಧ ಮುಗಿಯುವವರೆಗೆ 400000 ಮಂದಿ ಜರ್ಮನಿಯ ಸೈನಿಕರು ಕೊಲ್ಲಲ್ಪಟ್ಟಿರುವರೆಂದು ಅಂದಾಜುಮಾಡಿರುತ್ತಾರೆ ಇಡೀ ಯುದ್ಧದಲ್ಲಿ ಒಟ್ಟು ಈ ವರೆಗೆ ಒಂದು ಮಿಲ್ಯ ಜನರು ಕೊಲ್ಲಲ್ಪಟ್ಟಿರಬಹುದು.

ಜುಲೈ ತಾ ೧ರಲ್ಲಿ ಓರನಿನಲ್ಲಿ ಫ್ರೆಂಚ್ ಮತ್ತು ಬ್ರಿಟಿಷ್ ನೌಕಾಪಡೆಗಳೊಳಗೆ ಯುದ್ಧ ನಡೆಯುತ್ತಿದ್ದಾಗ ಇಟೆ

(೯ನೇ ಪುಟ ೪ನೇ ಕಾಲಂ ನೋಡಿ.)

ONE REASON.

Love does much, but in this materialistic world, money does more. Save therefore for the sake of those you love.

RESOURCES OF A CRORE | ESTD 1906 **Canara Bank Limited.**

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ಉಡುಪಿ, ಗುರುವಾರ ತಾ. ೧೧-೭-'೪೦

ಮಾನವ ಕೋಟಿಗೆ ಶಾಪ ಮತ್ತು ಎಚ್ಚರಿಕೆ

ಲೋಕದ ರಾಷ್ಟ್ರಗಳೊಳಗಣ ಸಂಬಂಧವನ್ನು ಸರಿಪಡಿಸಿಕೊಳ್ಳುವದಕ್ಕಾಗಿ ಬ್ರಿಟಿಷರು ಯುದ್ಧದ ಬದಲಿಗೆ ಅಹಿಂಸಾ ವಿಧಾನವನ್ನು ಪ್ರಯೋಗಿಸಬೇಕೆಂದು ಗಾಂಧಿಜೀಯವರು ಪ್ರತಿಯೊಬ್ಬ ಆಂಗ್ಲೇಯನಿಗೊಂದು ವಿನಂತಿ ಹೊರಡಿಸಿರುವರು. ಮತ್ತು ಬ್ರಿಟಿಷ್ ಸರಕಾರವು ಆ ರೀತಿ ನಡೆಯುವ್ವುದಾದರೆ ತನ್ನ ಸೇವೆಯನ್ನು ಬ್ರಿಟಿಷ್ ಚಕ್ರವರ್ತಿಗಳಿಗೊಪ್ಪಿಸಿರುವರು.

ಡಿಕ್ಟೇಟರರ ಧಾಳಿಯಿಂದ ಪ್ರಜಾಸತ್ತೆಯನ್ನು ರಕ್ಷಿಸುವುದಕ್ಕಾಗಿ ಬ್ರಿಟನ್ ಇಂದೀಗ ಜೀವನ್ಮರಣ ಹೋರಾಟದಲ್ಲಿ ತೊಡಗಿದೆ. ಈ ಯುದ್ಧದ ಪರಿಣಾಮ ಹೇಗಾದರೂ ಜನರ ಅಂತ್ಯದಲ್ಲಿ ಪ್ರಜಾಸತ್ತೆಯೆಂಬುದೇ ಉಳಿಯಲಾರದು. ಈ ಯುದ್ಧವು ಮಾನವ ಕೋಟಿಗೆ ಶಾಪರೂಪವಾಗಿ ಮತ್ತು ಎಚ್ಚರಿಕೆಯ ಸ್ವರೂಪದಲ್ಲಾಗಿ ಬದೊಂದು ಪ್ರಳಯಸ್ವರೂಪದಲ್ಲಿ ಬಂದಿರುವುದು. ಇದರಲ್ಲಿ ಸೈನಿಕ ಮತ್ತು ಜನಸಾಮಾನ್ಯರೆಂಬ ಭೇದವಿಲ್ಲ ಎಲ್ಲರೂ ಸಮಸ್ತವೂ ಈ ಮಹಾಪ್ರಳಯಕ್ಕೆ ಬಲಿಯಾಗುತ್ತಿದೆ. ಮಾನವನು ಹಿಂಸ್ರಪಶುವಾಗಿ ಮಾರ್ಪಾದು ಪಡುತ್ತಿದ್ದಾನೆ. ನಾಗರಿಕ ಬರ್ಬರತೆಯ ತಾಂಡವವು ನಡೆದಿದೆ.

ಇಂಗ್ಲೆಂಡು ಶಕ್ತಿ ಸೋತಿದೆ. ಶಸ್ತ್ರಶಕ್ತಿ ಜರ್ಮನಿಯನ್ನೋಡಿಸಲು ಸಾಧ್ಯವಿಲ್ಲ. ಆದುದರಿಂದ ಅದು ಅಹಿಂಸಾವಿಧಾನವನ್ನು ಸ್ವೀಕರಿಸುವುದೆಂದಲ್ಲ. ಯುದ್ಧವು ಎಲ್ಲರಿಗೂ ಹಾನಿಯನ್ನುಂಟುಮಾಡುವ ಕೆಡುಕು. ನಾಝಿ ವಾದವನ್ನು ನಾಶಮಾಡಬೇಕೆಂಬುದೇ ಈ ಹೋರಾಟದ ಉದ್ದೇಶ. ನಾಝಿವಾದದ ರೀತಿನೀತಿಯನ್ನನುಸರಿಸಿ ಅದನ್ನು ಕೊಲ್ಲಲು ಸಾಧ್ಯವಿಲ್ಲ. ಜರ್ಮನರಂತೆಯೇ ಆಂಗ್ಲೇಯ ಸೈನಿಕರೂ ವಿನಾಶಕಾರ್ಯವನ್ನು ಮಾಡುತ್ತಿದ್ದಾರೆ. ನಾಝಿಗಳಿಗಿಂತಲೂ ಆಂಗ್ಲೇಯರು ಕ್ರೂರ ... ನಿರ್ಮಾಣ ... ಸಿದರೆ ಮಾತ್ರ ಅವರು ಜಯಶಾಲಿಗಳಾಗಬಹುದು. ಆಂಗ್ಲೇಯನು ನಾಝಿಗಿಂತಲೂ ದೊಡ್ಡ ಮಾನವ ಪಿಶಾಚಿಯಾಗಿ ಕಾದಾಡಬೇಕಾಗುವುದು. ಎಂತಹ ಉದಾತ್ತ ಉದ್ದೇಶಸಾಧನೆಗಾದರೂ ಈಗ ನಿಮಿಷ ನಿಮಿಷ ನಡೆಯುತ್ತಿರುವ ಭೀಕರ ಕೊಲೆಯು ನ್ಯಾಯವಲ್ಲ. ಅಮಾನುಷಕೃತ್ಯಗಳು ನಡೆಸಲ್ಪಡಬೇಕಾದ ಯಾವ ಉದ್ದೇಶವಾದರೂ ನ್ಯಾಯವಾಗಲಾರದು.

ಇಂಗ್ಲೆಂಡು ಪರಾಜಿತವಾಗಕೂಡದ. ಮೆದುಳಿನ ಅಥವಾ ಮಾಂಸಖಂಡದ ಪಾಶವಿಕ ಶಕ್ತಿಯ ಪರೀಕ್ಷೆಯಲ್ಲಿದು ಜಯಶಾಲಿಯಾಗಬಾರದು. ಆಂಗ್ಲೇಯರ ಶಾರೀರಿಕ ಧೈರ್ಯವು ಲೋಕವಿಖ್ಯಾತವಾದುದು. ಅವರ ಮೆದುಳು ಕೂಡಾ ವಿನಾಶಶಕ್ತಿಯಲ್ಲಿ ಅಷ್ಟೇ ಅಪ್ರತಿಮವಾದುದೆಂಬುದು ಪ್ರದರ್ಶಿತವಾಗಬೇಕೇ? ನಾಝಿಗಳೊಡನೆ ಅಂತಹ ಹೀನ ಸ್ಪರ್ಧೆಯನ್ನು ಆಂಗ್ಲೇಯರು ಆರಿಸಲಾರರು.

ಅತ್ಯಂತ ವೀರ ಸೈನಿಕನಿಗರ್ಹವಾದ ಉದಾತ್ತ ಹಾಗೂ ವೀರಮಾರ್ಗವನ್ನು ಆಂಗ್ಲೇಯರಿಂದು ಅನುಸರಿಸಬೇಕು. ನಿಶ್ಶಸ್ತ್ರವಾಗಿ ನಾಝಿವಾದದೊಡನೆ ಹೋರಾಡಬೇಕು.

ಅಹಿಂಸಾತ್ಮಕ ಯುದ್ಧ ನಡಿಸಬೇಕು. ತಮ್ಮನ್ನಾಗಲಿ ಮಾನವ ಕೋಟಿಯನ್ನಾಗಲಿ ರಕ್ಷಿಸಲು ನಿರರ್ಥಕವಾಗಿರುವ ಶಸ್ತ್ರವನ್ನು ತ್ಯಾಗಮಾಡಬೇಕು. ತಮ್ಮದೆಂಗಿರುವ ದೇಶಗಳಿಂದ ಹಿಟ್ಲರ್ ಮುಸಲೋನಿಗಳು ತಮಗೆ ಬೇಕಾದ್ದನ್ನೊಯ್ಯಲು ಅವರನ್ನು ಆಮಂತ್ರಿಸಬೇಕು. ಅವರು ತಮಗೆ ಬೇಕಾದ ಸೊತ್ತುಗಳನ್ನೆಲ್ಲಾ ದೋಚಿಕೊಂಡು ಹೋಗಲಿ. ಆದರೆ ಮನಸ್ಸು ಮತ್ತು ಆತ್ಮವನ್ನು ಮಾತ್ರ ಅವರಿಗೆ ಕೊಡಕೂಡದು. ಈ ಗೃಹಸ್ಥರಿಗೆ ಆಂಗ್ಲೇಯರ ಮನೆಮಾರುಗಳು ಬೇಕಾದರೆ ಅದನ್ನು ಬಿಟ್ಟುಕೊಡಬೇಕು. ಅವರು ಆಂಗ್ಲೇಯರನ್ನು ನಿರಾತಂಕವಾಗಿ ಹೊರಹೋಗ ಬಿಡದಿದ್ದರೆ ಗಂಡಸರು, ಹೆಂಗಸರು, ಮಕ್ಕಳೆನ್ನದೆ ಎಲ್ಲರೂ ಕೊಲೆ ಮಾಡಲ್ಪಡಲು ಸಿದ್ಧರಿರಬೇಕು. ಆದರೆ ಅವರಿಗೆ ಎಂದೂ ವಿಧೇಯರಾಗಿ ನಡೆಯಬಾರದು. ಇದೇ ಅಹಿಂಸಾತ್ಮಕ ಅಸಹಕಾರ. ಇದು ಹಿಂದೂದೇಶದಲ್ಲಿ ಸಾಕಷ್ಟು ಜಯಶೀಲವಾಗಿದೆ. ಅದು ಸಂಪೂರ್ಣ ಅಹಿಂಸಾತ್ಮಕವಾಗಿ ಹಿಂದೂದೇಶದಲ್ಲಿಯೂ ನಡೆಯಲಿಲ್ಲ ಎಂಬುದು ನಿಜ. ಹಾಗೆ ನಡೆದಿದ್ದರೆ ಹಿಂದೂದೇಶದ ಯಜಮಾನರಾದ ಆಂಗ್ಲೇಯರು ಅದರ ಶಿಷ್ಯರಾಗಿ, ಈ ಆಶ್ಚರ್ಯ ಶಸ್ತ್ರವನ್ನು ಹಿಂದೀಯರಿಗಿಂತಲೂ ಹೆಚ್ಚಿನ ಚತುರತೆ ಮತ್ತು ಸಂಪೂರ್ಣತೆಯಿಂದ ಜರ್ಮನ್ ಮತ್ತು ಇಟಲಿಯಾನರ ಧಾಳಿಯನ್ನು ತಡೆಗಟ್ಟುತ್ತಿದ್ದರು. ಆಗ ಕಳೆದ ಕೆಲವು ತಿಂಗಳುಗಳ ಯುರೋಪಿನ ಇತಿಹಾಸವೇ ಬೇರೆಯಾಗುತ್ತಿತ್ತು. ನಿರ್ದೋಷಿಗಳ ರಕ್ತಪ್ರವಾಹ, ಹಲವು ಚಿಕ್ಕ ರಾಷ್ಟ್ರಗಳ ಮೇಲಿನ ಅತ್ಯಾಚಾರ, ಮತ್ತು ದ್ವೇಷತಾಂಡವದ ದುರ್ದೈವವು ಯುರೋಪಿಗೆ ತಪ್ಪುತ್ತಿತ್ತು.

ತಾನು ಮಾಡುವುದೇನೆಂದು ತಿಳಿಯದ ಅವಿವೇಕಿಯು ಮಾಡಿಕೊಂಡಿರುವ ವಿನಂತಿಯಲ್ಲ ಇದು. ಕಳೆದ 50 ವರ್ಷಗಳಿಂದ ಎಡೆಬಿಡದೆ ಸಾಧಿಸಿದ ಸಿದ್ಧಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ಜಯಶೀಲವಾಗಿ ಪ್ರಯೋಗಮಾಡಿ ಪರೀಕ್ಷಿಸಲ್ಪಟ್ಟಿರುವ ಶಸ್ತ್ರ. ಒಂದೇ ಒಂದು ಸಂದರ್ಭದಲ್ಲಾದರೂ ನಿಷ್ಫಲವಾಗದದು. ಈಶ್ವರನ ಇಚ್ಛೆಯೆಂದು ಸರಾದ ಸತ್ಯದ ಶೋಧನೆಯಲ್ಲಿ ನಿರತವಾಗಿದ್ದಾಗ ಕಂಡುಕೊಂಡ ಸಾಧನ. ಅಹಿಂಸೆ ಆತನ ತಪಸ್ಸಿನ ಫಲ, ಯೋಗಸಿದ್ಧಿ. ವಿಭೂತಿಪುರುಷರ ಜೀವನ ಸಂದೇಶ.

ಮಹಾತ್ಮರು ಬ್ರಿಟಿಷ್ ಜನತೆಯ ಮೇಲೆ ತುಂಬಾ ಪ್ರೇಮವುಳ್ಳವರು. ಒಂದು ಕಾಲದಲ್ಲಿ ಬ್ರಿಟಿಷ್ ಸಾಮ್ರಾಜ್ಯವೆಂದರೆ ಅಭಿಮಾನಪಟ್ಟವರು. ಇಂದೀಗ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಅಹಿಂಸಾತ್ಮಕವಾಗಿ ಪ್ರತಿಭಟಿಸಿ ತನ್ನ ಮಾತೃಭೂಮಿಯ ಬಂಧವಿಮೋಚನೆಗಾಗಿ ಹೆಣಗುತ್ತಿರುವವರು ಹಿಂದೂದೇಶದ ಕಟ್ಟಕಡೆಯ ಅದೃಷ್ಟ ಹೇಗಾದರೂ ಬ್ರಿಟಿಷರ ಮೇಲಿನ ಗಾಂಧಿಜಿಯವರ ಪ್ರೀತಿಯು ಒಂದಿಷ್ಟೂ ಕಡಿಮೆಯಾಗುವ ಹಾಗಿಲ್ಲ. ಅವರ ಅಹಿಂಸಾವಾದವು ಇಡೀ ಜಗತ್ತಿಗೇನೇ ಅದೊಂದು ನವೀನ ಸಂದೇಶ ಮತ್ತು ರಕ್ಷಣಾಮಾರ್ಗ. ವಿಶ್ವಪ್ರೇಮವೇ ಅದರ ಜೀವಾಳ. ಆದುದರಿಂದಲೇ ಅವರು ಇಂದಿನ ಘೋರ ವಿನಾಶದಿಂದ ಮನನೊಂದು, ಜುಗುಪ್ಸೆಗೊಂಡು ಈ ವಿನಂತಿಯನ್ನು ಹೊರಡಿಸಿರುವರು ಯುರೋಪಿನ ಯುದ್ಧಾರಂಭದಲ್ಲಿ ಹಿಟ್ಲರನೊಡನೆಯೂ ವಿನಂತಿಮಾಡಿಕೊಂಡಿದ್ದರು. ಇಂದೀಗ ಆಂಗ್ಲೇಯರಿಗೆ ಆಗ್ರಹದ ವಿನಂತಿಹೊರಡಿಸಿರುವರು. ಅದರ ಫಲವೇನೇ ಆಗಲಿ. ತನ್ನ ದೈವಪ್ರೇರಣೆಯ ಮೇರೆಗೆ, ತನ್ನ ಆತ್ಮದ ಸ್ಫುರಣೆಗನುಸಾರವಾಗಿ ಅವರು ತನ್ನ ಕರ್ತವ್ಯವನ್ನು ಮಾಡಿರುವರು. ಅವರ ಆತ್ಮದ ಉದಾತ್ತತೆ ಮತ್ತು ಲೋಕದ ಪಾಶವಿಕತನವನ್ನು ಚಿತ್ರವೇದಿಕವಾಗಿ ಮನಗೊಳಿಸುವ ಸಂದೇಶವದು. ನಾಗರಿಕ ಮಾನವನು ಕಾಡು ಪ್ರಾಣಿಗಿಂತಲೂ ಕಳತೆಯಾಗಿ, ನಡೆಯುತ್ತಿರುವಾಗ, ದ್ವೇಷೋನ್ಮತ್ತನಾಗಿ ರಾಕ್ಷಸೀ ಆಕಾಂಕ್ಷೆಯ ತೃಪ್ತಿಗಾಗಿ ಬಂಧು ಹತ್ಯೆಯ ಮಹಾ ಮಾರಣವನ್ನು ಅಭಿಮಾನದಿಂದ ನಡಿಸುವುದರಲ್ಲಿ ನಿರತನಾಗಿರುವಾಗ ಬರ್ಬರ ಹಿಂಸಾಕಾಂಡವೇ ಲೋಕವನ್ನಾವರಿಸಿರುವಾಗ ಮಹಾತ್ಮರ ಈ ವಿನಂತಿಯು ಅರಣ್ಯರೋದನವಾಗುವುದೆಂಬುದರಲ್ಲಿ ಸಂದೇಹವಿಲ್ಲ. ಆದರೆ ಅದು ಪ್ರವಾದಿಯ ಕರೆ.

ಮಾನವೋದ್ಧಾರ ಮತ್ತು ಲೋಕರಕ್ಷಣೆಯ ಕೂಗು ಮಾನವಕೋಟಿಯ ಮನೋರಾಜ್ಯದ ಮೇಲೆ ಯಾವಾಗಲೂ ದ್ವೇಷ ಪಿಶಾಚಿಯೇ ಮನೆಮಾಡಿಕೊಂಡಿರುವುದಿಲ್ಲ. ಪಾಶವಿಕತನವೇ ಅವರ ನಿಜಸ್ವಭಾವವಲ್ಲ ಅದಕ್ಕೊಂದು ಆತ್ಮವಿದೆ! ಈ ಆತ್ಮವು ಜಾಗ್ರತವಾದಾಗ, ಈ ಹತ್ಯಾಕಾಂಡದಿಂದವರು ಜುಗುಪ್ಸೆಗೊಂಡು ಈ ಬರ್ಬರ ಹಿಂಸೆಯು ಎಲ್ಲರಿಗೂ ಸಾಕು ಸಾಕಾಗಿ ಮಹಾತ್ಮರು ಪ್ರವಾದಿಯಾಗಿ ಮಾನಿಸಲ್ಪಡುವದಿನವು ಅತಿದೂರವಿರಲಾರದು. ಗಾಂಧಿಜಿಯವರೇ ತನ್ನ ವಿನಂತಿಯಲ್ಲಿ ಸೂಚಿಸಿರುವಂತೆ, ಇಡೀ ಮಾನವ ಜನಾಂಗಕ್ಕೇನೇ ಶಾಪರೂಪವಾದ ಅಭೂತಪೂರ್ವ ಭೀಕರ ಈ ಯುದ್ಧವು ಕೊನೆಯಲ್ಲಿ ಅಷ್ಟೇ ಅಭೂತಪೂರ್ವ ಎಚ್ಚರ ಮತ್ತು ಪಶ್ಚಾತ್ತಾಪವು ಜನತೆಯಲ್ಲುಂಟಾಗದಿರಲಾರದು. ಆಗ ಅವರು ಗಾಂಧಿಜಿಯವರನ್ನು ಲೋಕರಕ್ಷಕರಾಗಿ ಅಂಗೀಕರಿಸದಿರಲಾರರು. ಈಗ ಲೋಕವನ್ನೇ ಆವರಿಸಿರುವ ಕಾರ್ಮುಗಿಲಿನ ರಜತರೇಖೆಯಾಗಿ ಮಾತ್ರ ಚಮಕಿತವಾಗುವ ಅವರ ಸಂದೇಶವು ಆಗ ಸೂರ್ಯಪ್ರಕಾಶವಾಗಿ ಬೆಳಗದಿರಲಾರದು.

ವರ್ಕಿಂಗ್ ಕಮಿಟಿಯ ನಿರ್ಣಯ

ಇದೇ ತಾ. ೩ರಿಂದ 7ರ ವರೆಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಡಿಲ್ಲಿಯಲ್ಲಿ 4 ದಿನ ಸಭೆ ಸೇರಿ ದೇಶದ ಪ್ರಕೃತದ ರಾಜಕೀಯ ಪರಿಸ್ಥಿತಿಯ ಕುರಿತು ಪರ್ಯಾಲೋಚಿಸಿರುವರು. ಗಾಂಧಿಜಿಯವರೂ ಇದರಲ್ಲಿ ಭಾಗವಹಿಸಿರುವರು. ಪಂಡಿತ ಮಾಲವೀಯರು ದಿಲ್ಲಿಗೆ ಬಂದು ಮಹಾತ್ಮ ಗಾಂಧಿಯವರೊಡನೆ ಮಾತಾಡಿರುವರಲ್ಲದೆ ವರ್ಕಿಂಗ್ ಕಮಿಟಿ ಸಭೆಗೂ ಆಮಂತ್ರಿಸಲ್ಪಟ್ಟು ತನ್ನ ಅಭಿಪ್ರಾಯವನ್ನು ಅದರ ಮುಂದಿಟ್ಟಿರುವರು. ವೈಸರಾಯರ ಭೇಟಿಮಾಡಿ ಬಂದ ಶ್ರೀ. ಅಣೆಯವರೂ ಗಾಂಧಿಜಿ ಮತ್ತು ವರ್ಕಿಂಗ್ ಕಮಿಟಿ ಮೆಂಬರರೊಡನೆ ಮಾತಾಡಿರುವರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು 4 ದಿನಗಳೊಳಗೆ ಆಳವಾಗಿ ವಿಚಾರಿಸಿ, ಪಂಡಿತ ಮಾಲವೀಯರೇ ಮೊದಲಾದ ಜ್ಞಾನವೃದ್ಧ ವಯೋವೃದ್ಧರ ಅಭಿಮತಕ್ಕೂ ಕಿವಿಗೊಟ್ಟು, ಲೋಕದ ವಿದ್ಯಮಾನಗಳನ್ನು ಗಮನಿಸಿ ಹಿಂದೀ ಬಿಕ್ಕಟ್ಟನ್ನು ನಿವಾರಿಸಬೇಕೆಂದು ಹೊಸತಾಗಿ ಮಾಡಲ್ಪಟ್ಟಿರುವ ವಿನಂತಿಗಳನ್ನು ಲಕ್ಷ್ಯಕ್ಕೆ ತಂದುಕೊಂಡು ಈ ಕೆಳಗಣ ನಿರ್ಣಯಕ್ಕೆ ಬಂದಿರುವರು.

"ಹಿಂದೂದೇಶ ಮತ್ತು ಇಂಗ್ಲೆಂಡುಗಳನ್ನೆದುರಿಸುವ ಸಮಸ್ಯೆಯ ಒಂದೇ ಒಂದು ಪರಿಹಾರೋಪಾಯವೆಂದರೆ ಹಿಂದೂ ಸಂಪೂರ್ಣ ಸ್ವಾತಂತ್ರ್ಯವನ್ನು ಅಂಗೀಕರಿಸುವುದೆಂದು ವರ್ಕಿಂಗ್ ಕಮಿಟಿಗೆ ಎಂದಿಗಿಂತಲೂ ಹೆಚ್ಚಾಗಿ ಮನವರಿಕೆಯಾಗಿದೆ. ಅಂತಹ ಸ್ಪಷ್ಟವಾದ ನಿರೂಪಣೆಯನ್ನು ಬ್ರಿಟನು ಕೂಡಲೆ ಮಾಡಿ ಅದರ ಪ್ರಥಮ ಹೆಜ್ಜೆಯಾಗಿ ಕೇಂದ್ರದಲ್ಲಿ ತಾತ್ಕಾಲಿಕ ರಾಷ್ಟ್ರೀಯ ಸರಕಾರವನ್ನೇರ್ಪಡಿಸಬೇಕು. ಈ ರಾಷ್ಟ್ರೀಯ ಸರಕಾರವು ಕೇಂದ್ರ ಎಸೆಂಬ್ಲಿಯ ಚುನಾಯಿತ ಮೆಂಬರರ ವಿಶ್ವಾಸಕ್ಕೆ ಪಾತ್ರವಾಗಿದ್ದು ಪ್ರಾಂತೀಯ ಪ್ರಜಾಜವಾಬ್ದಾರಿ ಸರಕಾರಗಳೊಂದಿಗೆ ಸಹಕರಿಸಿ ಆಡಳಿತ ನಡಿಸಬೇಕು.

ಮೇಲಿನ ನಿರೂಪಣೆಯು ಮಾಡಲ್ಪಟ್ಟು ವಿಳಂಬವೇನೂ ಇಲ್ಲದೆ ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರವು ಸ್ಥಾಪಿಸಲ್ಪಡದೆ ದೇಶದ ಭೌತಿಕ ಮ... ಕ್ಷಣೆಗಾಗಿ ... ಇಚ್ಛಾಪೂರ್ವಕ ... ದೇಶವು ಸ್ವ... ಹುಮಂಧಾದಲ್ಲಿ ... ಯಾಗಲಾರದು, ... ಲ್ಪಟ್ಟರೆ, ದೇ... ಯಾದ ಸಂಘ... ಸ್ಸಿಗೆ ಸಂಪೂರ್ಣ... ಗುವುದು"

ವಜೀರಿ ಸ... ವರ್ಕಿಂಗ್ ಕಮಿ... ನ್ನು ಮಾಡಿ ... ಸ್ವತಹ ಮಾತಾ... ತಿಳಿದುಕೊಳ್ಳ... ದೇಸಾಯಿಯವ... ಆಲಿಯುವರನ್ನು ... ಯುಮ್ಯ ಗಡಿ... ನಡಿಯುತ್ತಲೇ ... ಯಿತಿ, ವರ್ತ... ಗೆಗಳು ಪ್ರತಿಪಾ... ಇರುವುದು.

ಅದನ್ನು ಸರ... ಬಾಗಲಿಲ್ಲ ... ಲು ಸಂಘಗಳಿ... ಗದ ಅಜ್ಞಾನ... ಸಾಂಪತ್ತಿಕ ... ಪುಮುಖ್ಯಗಡಿ... ಸ್ ಕಮಿಟಿಯ... ಸ್ಥಾನಕ್ಕೆ ಸ್ವತ... ಗರಿಗೆ ಬೋಧ... ತ್ರಿಕ ಸಂಕಷ್ಟಗ... ಅವರಿಗೆ ಏಕ್ಷ... ರ ಸಾಮಾಜಿಕ ... ಮಾಡಲೆತ್ನಿಸ... ಡೆಪ್ಯುಟೇಶನ್ ... ಕಳುಹಿಸುವ ನಿ... ಕಮಿಟಿಯವರು ... ಪದವಾನಿಗೆಯ... ಸಲ್ಪಟ್ಟಿತು ... ಕಾವತಿ ಪರ... ನ್ನೊಂದಿಗೆ ... ಕಾಂಗ್ರೆಸ್ ... ಪತ್ನಿಯನ್ನಿ... ಗಫರ್ ಖಾ... ನ ಡೆಪ್ಯುಟೇಶ... ದಕ್ಕನ್ನು ಪದವಾ... ಡಬೇಕು.

ಸರ್ ಸಿಕಂದ... ಡಿಲ್ಲಿಗೆ ಬೋ... ಖಾನ ಅಬ್ದುಲ್ ... ಖಾದವರೊಡನೆ ... ಜಾಬಿನ ಕಾಂಗ್ರೆ... ರಿ ವಿಷಯವೇ ... ಶವಾಗಿದ್ದಿತೆಂದು ... ಗಾಳದ ಪ್ರಧಾನ... ಕಾಂಗ್ರೆಸ್ ... ರೊಡನೆ ಮಾ... ಗಾಂಧಿಯವರ... ತಾ. 7ರಲ್ಲಿ ದಿ... ಗಿರುವರು. ಅ... ಕಮಿಟಿಯ ಸ... ರಲ್ಲು ಪೂನದಲ್ಲಿ ... ೩೬ರಲ್ಲಿ ಕಾಂಗ್ರೆ...

ಪ್ರಯತ್ನವನ್ನು ರ
ಪ್ರಯತ್ನವು
ದವಾ ಸ್ವತಂತ್ರ
ದ ಮಾಡಲ್ಪ
ಫಲಕಾರಿ
ಗಳು ಮಾಡ
ಸು ಫಲಕಾರಿ
ತ್ವದಲ್ಲಿ ಕಾಂಗ್ರೆ
ಲು ಸಾಧ್ಯವಾ

ಸು ಕಾಂಗ್ರೆಸ್
ರ್ಣಯವೊಂದ
ಗಡಿಗರೊಡನೆ
ಸಂಕಷ್ಟಗಳನ್ನು
ಭೂಲಾಭಾಯಿ
ಮಿ ಅಸಫ್
ಸವರು. ವಾ
ಗಲಾಟೆಗಳು
ನೋಡಿ, ಥಳಾ
ಕೊಲೆ, ಸುಲಿ
ನಡೆಯುತ್ತಲೇ

ರೇಗೆ ತಡೆಗಟ್ಟ
ಊಟ ನೊಡ
ನದ ಸಂಗಡಿ
ಯ, ಮತ್ತು
ಕಾರಣವೆಂದು
ತಿಕ ಕಾಂಗ್ರೆ
ದು, ವಜೀರ
ಕಲ್ಲಿಯ ಸಂಗಡಿ
ವರ ಸಾಂಪ
ರಿಸಲು ಮತ್ತು
ಮನಡಿ ಅವ
ಕೆಯನ್ನುಂಟು
ರು. ಈ ಬಗ್ಗೆ
ಜೀರಿಸ್ತಾನಕ್ಕೆ
ಕಾಂಗ್ರೆಸ್
ಸರಕಾರದ
ಗೆ ನಿರಾಕರಿ
ನವರು ಬೇ
ರಿಗಳನ್ನೂ ತ
ದ್ದರು. ಈಗ
ಯುವರು ಈ
ನ್ ಅಬ್ದುಲ್
ದೆನು ಮೇಲಿ
ರುವರು. ಇ
ದ್ದರೋ ನೋ

ತ್ ಖಾನರು
ರುತ್ತ ಮೆವು
ವದೇ ಮೊದ
ವರು. ಪಂ
ರದ ದಸ್ತಗಿ
ಕೆಯ ಉದ್ದೇ
ತ್ತದೆ. ಬಂ
ಲ್ ಹಕ್ಕರು
ಟಿನೆಂಬರ
ಮಹಾತ್ಮಾ
ವರು ಇದೇ
ರಟು ಹೋ
ಕಾಂಗ್ರೆಸ್
ಕೇ ತಾ. ೨೭
ವುದು. ತಾ.
ಕಮಿಟಿ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಧಾರ.

ಇಂಡಿಯಾ ಸೆಕ್ರೆಟರಿಗಳು ಹೇಳಿಕೆ ಕೊಡುವರು.

ಮುಂದಿನ ಯುದ್ಧದ ಕುರಿತು ಇಟೆಲಿ, ಜರ್ಮನಿಗಳ ಸಮಾಲೋಚನೆ.

ಸಭೆಯು ಅಲ್ಲಿಯೇ ಸೇರಲಿರುವುದು.

ಮಿ. ಅಮೇರಿಯವರು ಹೇಳಿಕೆ ಕೊಡುವರು

ಈ ವಾರಾಂತ್ಯದೊಳಗೆ ಹಿಂದೂದೇಶದ ಪರಿಸ್ಥಿತಿಯ ಕುರಿತು ಮಿ. ಆಮೇರಿಯವರು ಪಾರ್ಲಿಮೆಂಟಿನಲ್ಲೊಂದು ಹೇಳಿಕೆಕೊಟ್ಟು ಕಾಂಗ್ರೆಸಿನ ಕೇಳಿಕೆಯ ಕುರಿತು ಬ್ರಿಟಿಷ್ ಸರಕಾರದ ಅಭಿಪ್ರಾಯ ವನ್ನು ಸ್ಪಷ್ಟಪಡಿಸಲಿರುವರೆಂದು ತಿಳಿದುಬರುತ್ತದೆ. ಸಾಮಂತ, ಸ್ವಾತಂತ್ರ್ಯವೆಂಬ ಶಬ್ದವನ್ನವರು ಹಿಂದೂದೇಶದ ಕುರಿತು ಈ ಮೊದಲೇ ಉಪಯೋಗಿಸಿರುವರು. ದೇಶರಕ್ಷಣೆಯ ಕುರಿತು ಬ್ರಿಟಿಷ್ ಸರಕಾರದೊಡನೆ ಒಡಂಬಡಿಕೆಯನ್ನು ಮೊದಲೇ ಮಾಡಿಕೊಂಡು, ಹಿಂದೀ ಮುಖಂಡರು ತಯಾರಿಸುವ ರಾಜಕೀಯ ಘಟನೆಯನ್ನು ಅಂಗೀಕರಿಸುವುದಕ್ಕೂ ಅವರ ಸಮ್ಮತಿಯಿದೆ. ಆದರೆ ಕೇಂದ್ರ ಸರಕಾರವನ್ನು ಬದಲಾಯಿಸಿ ಪ್ರಜಾಜವಾಬ್ದಾರಿಯನ್ನಾಗಿ ಕೂಡಲೇ ಮಾಡುವುದು ಹೇಗೆಂಬುದೀಗ ಪ್ರಶ್ನೆ. ಹಿಂದೂದೇಶದ ಪ್ರಾಮುಖ್ಯ ರಾಜಕೀಯ ಪಕ್ಷಗಳು ತಮ್ಮೊಳಗಣ ಭಿನ್ನಾಭಿಪ್ರಾಯಗಳನ್ನು ಮೂಲೆಗೊತ್ತಿ ಒಟ್ಟಾದರೆ ಕೇಂದ್ರಾಡಳಿತ ನಡಿಸಬಹುದೆಂದು ಮಿ. ಅಮೇರಿಯವರು ಸೂಚಿಸಿರುತ್ತಾರೆ. ಹಿಂದೂದೇಶದ ರಾಜಕೀಯ ಪಕ್ಷಗಳವರೆಲ್ಲಾ ತಮ್ಮ ವೈಷಮ್ಯಗಳನ್ನು ಬದಿಗೊತ್ತಿ ಒಂದಾಗಿ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿ ದೇಶರಕ್ಷಣೆಗಾಗಿ ಉತ್ಸಾಹದಿಂದ ಪ್ರಯತ್ನಿಸಿ ಇಂಗ್ಲೆಂಡಿಗೆ ನೆರವಾಗಬೇಕೆಂದು ಮದ್ರಾಸಿನ ಗವರ್ನರರು ವಿನಂತಿಮಾಡಿಕೊಂಡಿರುತ್ತಾರೆ. ಆದರೆ ಸಿಮ್ಲಾದ ಮನೋವೃತ್ತಿಯು ಇನ್ನೂ ಬದಲಾವಣೆ ಹೊಂದಿರುವುದಿಲ್ಲ. ೬ ಮಂದಿ ಮೆಂಬರರನ್ನು ಹೆಚ್ಚಾಗಿ ಸೇರಿಸಿ ಈಗಣ ಎಗ್ಜಿಕ್ಯೂಟಿವ್ ಕಮಿಟಿಯನ್ನೇ ವ್ಯಾಪಕಗೊಳಿಸುವ ನಿರ್ಧಾರಕ್ಕವರು ಬಂದಂತಿದೆ. ಸರ್. ಮಹಮ್ಮದ್ ಜಾಫರುಲ್ಲ ಮತ್ತು ಸರ್. ಸಿ. ರಾಮಸ್ವಾಮಿ ಮುದಲಿಯಾರರು ಮೊದಲೇ ಎಗ್ಜಿಕ್ಯೂಟಿವ್ ಕೌನ್ಸಿಲರಾಗಿದ್ದಾರೆ. ಇನ್ನು ಕಾಂಗ್ರೆಸ್, ಮುಸ್ಲಿಮ್ ಲೀಗ್, ಹಿಂದೂ ಮಹಾಸಭೆ ಮತ್ತು ಹರಿಜನರ ಪರವಾಗಿ ಒಬ್ಬೊಬ್ಬರನ್ನು ನೇಮಿಸಿದರೆ ೬ ಮಂದಿ ಆಗುತ್ತಾರೆ. ೧೧ ಮಂದಿ ಎಗ್ಜಿಕ್ಯೂಟಿವ್ ಕಮಿಟಿಮೆಂಬರರಲ್ಲಿ ೮ ಮಂದಿ ಅನಧಿಕಾರಿ ಮೆಂಬರರೇ ಬಹುಪಕ್ಷೀಯರಾದಂತಾಯಿತು. ಕಾಂಗ್ರೆಸು ನಿರಾಕರಿಸಿದರೆ ಲಿಬರಲ್ ಪಕ್ಷದವರಲ್ಲಾರಿಗಾದರೂ ಆದರ ಸ್ಥಾನವನ್ನು ಕೊಟ್ಟರಾಯಿತೆಂದು ಸಿಮ್ಲಾದ ದೇವತೆಗಳ ಅಭಿಮತವಿರುವಂತಿದೆ. ಪ್ರಸ್ತುತ ದೇಶೀಯ ಸಂಸ್ಥಾನಗಳ ಪ್ರತಿನಿಧಿಗಳನ್ನು ಎಗ್ಜಿಕ್ಯೂಟಿವ್ ಕೌನ್ಸಿಲಿನಲ್ಲಿ ಸೇರಿಸಿಕೊಳ್ಳುವ ಅಭಿಪ್ರಾಯವಿರುವುದಿಲ್ಲ. ಇಂಡಿಯಾ ಸರಕಾರದ ಅಭಿಪ್ರಾಯದಂತೆಯೇ ಬ್ರಿಟಿಷ್ ಸರಕಾರವು ನಡೆಯುವುದಾದರೆ ಕಾಂಗ್ರೆಸಿನೊಡನೆ ರಾಜಿಯಾಗುವ ಸಂಭವ ತೋರುವುದಿಲ್ಲ. ಎಲ್ಲಾ ಮಿ. ಅಮೇರಿಯವರ ಹೇಳಿಕೆಯ ಮೇಲೆ ಹೊಂದಿಕೊಂಡಿದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರೂ ಬೇಗನೆ ಸಭೆ ಸೇರಲಿದ್ದಾರೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೀಟಿಂಗಿಗೆ ಬಂದಿರುವ ಖಾನ್ ಅಬ್ದುಲ್ ಗಫಾರ್‌ಖಾನರು

ಹಿಂದೂದೇಶದ ರಾಜಕೀಯ ಪಕ್ಷಗಳೆಲ್ಲಾ ಒಂದಾಗಿ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಬೇಕೆಂದು ಸರಕಾರವು ಸೂಚಿಸಿದರೆ ಕಾಂಗ್ರೆಸ್, ಮುಸ್ಲಿಮ್ ಲೀಗ್ ಮತ್ತು ಹಿಂದು ಮಹಾಸಭೆಗಳೊಳಗಣ ಭೇದವೂ ದೂರವಾಗುವಂತಾಗದಿರಲಾರದು. ಈಗ ಸರಕಾರವು ... ... ಸುವಂತಿದೆ. ಈ ಸಂಧಿಗ್ಧ ಕಾಲದಲ್ಲಿ ಹಿಂದೀಯರೆಲ್ಲರೂ ಒಂದಾಗಿ ರಾಷ್ಟ್ರೀಯ ಸರಕಾರವನ್ನೇರ್ಪಡಿಸಿ ದೇಶರಕ್ಷಣೆಯ ಏರ್ಪಾಡುಮಾಡಿ ಇಂಗ್ಲೆಂಡಿಗೆ ನೆರವಾಗಿದ್ದರೆ ದೇಶದ ಸ್ವಾತಂತ್ರ್ಯ ಸಾಧಿಸುವ ಸುವರ್ಣ ಸಂಧಿಯೊಂದನ್ನು ಕಳಕೊಳ್ಳುವಂತಾಗುವುದೆಂದು ಸರ್ ಸಿಕಂದರ್ ಹಯತ್‌ಖಾನರು ಸಾರಿರುತ್ತಾರೆ. ಮುಸ್ಲಿಂ ಲೀಗ್ ವರ್ಕಿಂಗ್ ಕಮಿಟಿಯ ಮತ್ತು ಅದರ ಸರ್ವಾಧಿಕಾರಿ ಮಿ. ಜಿನ್ನರ ನಿರ್ಣಯ ಮತ್ತು ನಿರೂಪಣೆಗೆ ವಿರೋಧವಾಗಿ ಪಂಜಾಬ್ ಮತ್ತು ಬಂಗಾಳದ ಪ್ರಧಾನ ಮಂತ್ರಿಗಳು ಕಾಂಗ್ರೆಸ್ ಮುಖಂಡರೊಡನೆ ಜಾತೀಯ ಪ್ರಶ್ನೆಯ ಕುರಿತು ಮಾತುಕತೆ ನಡಿಸಿರುವರು. ಇವರು ಕಾಂಗ್ರೆಸ್ಸಿನೊಂದಿಗೆ ಸಹಕರಿಸಲು ಆತುರಪಡುತ್ತಿರುವರು. ಇವರಿಬ್ಬರು ಲೀಗಿನಿಂದ ಒಡೆದುಹೋಗುವ ಅಪಾಯಬರುವಾಗ ಮಿ. ಜಿನ್ನರು ಸ್ವತಃ ದಾರಿಗೆ ಬರುವರು. ಮುಸ್ಲಿಮ್ ಲೀಗ್ ಮತ್ತು ಕಾಂಗ್ರೆಸುಗಳು ಸಹಕರಿಸುವಂತಾದರೆ ಹಿಂದೂ ಮಹಾಸಭೆಯವರೇ ಮೊದಲಾದವರು ತನ್ನಂತೆಯೇ ಅವುಗಳೊಂದಿಗೆ ಸೇರಿಕೊಳ್ಳುವರು. ಸರಕಾರವು ಯಥಾರ್ಥವಾಗಿ ಇಚ್ಛಿಸುವುದಾದರೆ ಹಿಂದೂದೇಶದ ಬಿಕ್ಕಟ್ಟನ್ನು ನಿವಾರಿಸುವುದೇನೂ ಕಷ್ಟವಲ್ಲ.

ಗಾಂಧಿಜಿಯವರ ನಾಯಕತ್ವ

ಈ ಕುರಿತು ಪೂನದ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯಲ್ಲಿ ಪ್ರಬಲ ಚರ್ಚೆ ನಡೆಯುವ ಸಂಭವ ತೋರುತ್ತದೆ. ತ್ರಿಪುರಿ ಕಾಂಗ್ರೆಸಿನಲ್ಲಿ ಅವರ ನಾಯಕತ್ವದ ಕುರಿತು ದೊಡ್ಡ ಗೊಂದಲವೆದ್ದು ಅದಕ್ಕೇನೇ ಕಾಂಗ್ರೆಸಿನಲ್ಲಿ ಹೆಚ್ಚಿನ ಬೆಂಬಲ ದೊರೆಯಿತು. ರಾಮಗಢದಲ್ಲಿದು ಸಂಪೂರ್ಣವಾಗಿ ಸ್ವೀಕರಿಸಲ್ಪಟ್ಟಿತು. ಈ ಸಂಬಂಧವಾಗಿ ಬದ್ಧ ವಿರೋಧಿಗಳಿದ್ದ ಶ್ರೀ. ಬೋಸರು ಪತನವಾಯಿತು. ಇಂದೀಗ ಇನ್ನೊಂದು ಬಿರುಗಾಳಿಯೇಳುವ ಚಿಹ್ನೆಗಳು ತೋರುತ್ತಿವೆ. ದೇಶದ ಸ್ವಾತಂತ್ರ್ಯ ಸಾಧನೆಯ ಕುರಿತು ಮಾತ್ರವಲ್ಲದೆ ರಕ್ಷಣೆಯ ಸಂಬಂಧವಾಗಿಯೂ ಅಹಿಂಸಾ ವಿಧಾನವನ್ನೇ ಉಪಯೋಗಿಸಬೇಕೆಂಬ ಗಾಂಧಿಜಿಯವರ ಧೋರಣೆಯು ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಹೆಚ್ಚಿನವರಿಗೆ ಮಾನ್ಯವಾಗದೆ ಗಾಂಧಿಜಿಯವರು ಅದರ ನಾಯಕತ್ವವನ್ನು ಬಿಟ್ಟು ನಾನೊಬ್ಬನೇ ತನ್ನ ಹಾದಿಹಿಡಿದು ಮುಂದುವರಿಯುವ ನಿರ್ಧಾರಮಾಡಿರುತ್ತಾರೆ. ಗಾಂಧಿಜಿಯವರ ನಾಯಕತ್ವವನ್ನೇ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಅನುಸರಿಸಬೇಕೆಂದು ದೇಶದಲ್ಲಿ ಚಳವಳವೆದ್ದಿದೆ. ಗಾಂಧಿಜಿಯವರ ಧೋರಣೆಯೇ ಯುಕ್ತವಾದುದು. ಅಹಿಂಸೆಯು ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಉಪಯೋಗಿಸಲಿರುವ ಸಾಧನವಾಗಬೇಕು. ತಾನು ವಾಯವ್ಯ ಗಡಿನಾಡಿನ ಖುದಾಯಿ ಖಿದ್ಮತ್‌ಗಾರರನ್ನು ಅದೇ ರೀತಿ ತರಬೇತಿಮಾಡುತ್ತಿದ್ದೇನೆ. ... ... ಯ ಕುರಿತು ಅಹಿಂಸಾ ವಿಧಾನವನ್ನು ಬಿಟ್ಟುಬಿಡುವುದರಲ್ಲಿ ಅರ್ಥವಿಲ್ಲೆಂದು ಖಾನ್ ಅಬ್ದುಲ್ ಗಫಾರ್ ಖಾನರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ತನ್ನ ಸ್ಥಾನಕ್ಕೆ ರಾಜಿನಾಮೆಕೊಟ್ಟಿರುವರು. ಬಾಬು ರಾಜೇಂದ್ರ ಪ್ರಸಾದರೇ ಮೊದಲಾದವರು ರಾಜಿನಾಮೆ ಕೊಡುವರೆಂದು ಸುದ್ದಿಯು ಸುಳಿದಾಡುತ್ತಿದೆ. ಬರುವ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಸಭೆಯು ಮುಂದೆ ಗಾಂಧಿಜಿಯವರು ತನ್ನ ಧೋರಣೆಯನ್ನು ಪ್ರತಿಪಾದಿಸಿ ಮನಗಾಣಿಸಲಿದ್ದಾರೆ. ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರು ಗಾಂಧಿಜಿಯವರ ನಾಯಕತ್ವವನ್ನೊಪ್ಪುವಂತೆ ಮಾಡುವ ಪ್ರಯತ್ನವೂ ನಡೆಯದಿರಲಾರದು. ದೇಶರಕ್ಷಣೆಯ ವಿಷಯದಲ್ಲಿ ಅಹಿಂಸಾವಿಧಾನವನ್ನು ಸ್ವೀಕರಿಸಲು ಸಾಧ್ಯವಿಲ್ಲೆಂದು ಬಹಿರಂಗವಾಗಿ ಸಾರಿದವರು ಪಂಡಿತ ಜವಾಹರಲಾಲರೆಂಬುದರಲ್ಲಿ ಸಂದೇಹವಿಲ್ಲ. ಅವರ ವಾದಕ್ಕೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಬಹು ಪಕ್ಷ ದೊರಕಿರುವುದು. ಆದರೆ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರು ಗಾಂಧಿಯವರ ಧೋರಣೆಯನ್ನೇ ಒಪ್ಪಿ ಅದಕ್ಕೇನೇ ಬೆಂಬಲವಿತ್ತರೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯನ್ನೇ ಪುನರ್ಘಟಿಸಬೇಕಾದೀತು. ಪಂಡಿತ ಜವಾಹರಲಾಲರೇ ಮೊದಲಾದವರಿಗೆ ಅದರಲ್ಲಿ ಸ್ಥಾನವಿರಲಾರದು. ಅವರು ಖಾನ್ ಅಬ್ದುಲ್ ಗಫಾರ್‌ಖಾನರ ಮಾದರಿಯನ್ನನುಸರಿಸುವುದಾದರೆ ವರ್ಕಿಂಗ್ ಕಮಿಟಿಯಿಂದ ರಾಜಿನಾಮೆ ಕೊಡಬೇಕಾಗುವುದು.

ಇಂಗ್ಲೆಂಡನ್ನು ಬಗ್ಗುಬಡಿಯುವ ವಿಧಾನದ ಕುರಿತು ಆಲೋಚನೆ

ಇದೇ ತಾ. ೭ರಲ್ಲಿ ಇಟೆಲಿಯ ವಿದೇಶ ಮಂತ್ರಿಗಳಾದ ಕೌಂಟ್ ಸಿಯಾನೋರವರು ಬರ್ಲಿನಿಗೆ ಹೋಗಿ ಹರ್ ಹಿಟ್ಲರ್ ಮತ್ತು ವಾನ್ ರಿಬ್ಬೆಂಟ್ರಾಪರೊಡನೆ ಮಾತಾಡಿರುವರು. ಇಂಗ್ಲೆಂಡಿನಮೇಲೆ ದಾಳಿ ನಡಿಸುವ ಬಗೆ ಹೇಗೆ? ಯುರೋಪಿನ ರಾಜ್ಯಗಳ ನವ ವ್ಯವಸ್ಥೆಯನ್ನು ಯಾವ ರೀತಿಮಾಡುವುದೆಂಬುದೇ ಈ ಮಾತುಕತೆಯ ಉದ್ದೇಶವಿದ್ದಿತೆಂದು ತಿಳಿದುಬಂದಿದೆ. ಇಂಗ್ಲೆಂಡಿನ ಮೇಲೆ ದಾಳಿನಡಿಸುವುದು ಹೇಗೆಂಬುದು ಡಿಕ್ಟೇಟರರಿಗೊಂದು ಸಮಸ್ಯೆಯಾಗಿದೆ. ಅವರು ಬೇಗನೆ ಇಂಗ್ಲೆಂಡಿನಮೇಲೇರಿ ಹೋಗುವ ಸಂಭವ ತೋರುವುದಿಲ್ಲ. ಅದಕ್ಕೆ ಬೇಕಾದ ಪೂರ್ವಸಿದ್ಧತೆಯನ್ನು ಮಾಡಿಕೊಳ್ಳುವುದರಲ್ಲಿದ್ದಾರೆ.

ಸುತ್ತಲಿಂದಲೂ ಇಂಗ್ಲೆಂಡನ್ನು ಮುತ್ತಿ ಅದಕ್ಕೆ ಹೊರಗಿನಿಂದ ಸಿಗುವ ಸಹಾಯವನ್ನು ತಡೆಗಟ್ಟುವ ಪ್ರಯತ್ನವು ನಡೆಯುತ್ತಿರುವಂತಿದೆ. ರುಮೇನಿಯವು ಈಗ ಐರನ್ ಗಿಗುರ್ಡರವರ ಪ್ರಧಾನಮಂತ್ರಿತ್ವದಲ್ಲಿ ರಷ್ಯಕ್ಕೆ ವಿರೋಧವಾದ ಧೋರಣೆ ವಹಿಸಿ ಸಂಪೂರ್ಣವಾಗಿ ನಾಝಿವಾದಿಯಾಗಿ ಹೋಗಿದೆ. ರಷ್ಯದ ಕುರಿತು ರುಮೇನಿಯ ತೋರಿಸುತ್ತಿರುವ ವಿರೋಧದಿಂದ ನಾಝಿಗಳೇ ಕಳವಳಗೊಳ್ಳುತ್ತಿರುವಂತಿದೆ. ರಷ್ಯವು ಇದನ್ನು ಸಹಿಸಿಕೊಳ್ಳುವಂತಿಲ್ಲ. ಅದು ಗುಪ್ತವಾಗಿ ಏನುಮಾಡುತ್ತಿರುವುದೆಂದು ತಿಳಿಯದಾಗಿದೆ........

(೭ನೇ ಪುಟದಿಂದ ಮುಂದರಿಸಿದ್ದು.)

ಲಿಯಾನ ನೌಕಾಪಡೆಯು ಜಾಗ್ರತೆಯಿಂದ ದೂರದಲ್ಲಿ ನಿಂತು ನೋಡುತ್ತಿದ್ದಿತೆಂದು ಮಿ. ಚರ್ಚಿಲ್ಲರು ತನ್ನ ಪಾರ್ಲಿಮೆಂಟಿನ ಭಾಷಣದಲ್ಲಿ ತಮಾಷೆಮಾಡಿದ್ದರು. ಇದರಿಂದ ಇಟೆಲಿಯು ಆಕ್ರೋಶಗೊಂಡು, ಇಟೆಲಿಯ ನೌಕಾದಳವು ಹತ್ತಿರವಿರಲಿಲ್ಲೆಂದೂ ಧೈರ್ಯವಿದ್ದರೆ ಬ್ರಿಟಿಷರು ಇಟೆಲಿಯಾನ ನೌಕಾನಿಲಯಗಳ ಮೇಲೆ ಧಾಳಿಯಿಟ್ಟು ನೋಡಬಹುದೆಂದೂ ಸಡ್ಡು ಕೊಡೆದಿರುವುದು. ಇಟೆಲಿಗೂ ಇಂಗ್ಲೆಂಡಿಗೂ ಭೂಮಧ್ಯಸಾಗರದಲ್ಲಿ ಘೋರ ನೌಕಾಯುದ್ಧವಾಗುವ ದಿನವು ದೂರವಿರಲಾರದು. ಇಟೆಲಿಯ ನೌಕಾಬಲವನ್ನು ಮೊದಲು ಮುರಿದುಹಾಕಬೇಕೆಂದು ಬ್ರಿಟಿಷರೂ ಹಾತೊರೆಯುವಂತಿದೆ.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು, ತಾ. 8-7-1940

ಯುದ್ಧಸಮಿತಿಯ ಆಶ್ರಯದಲ್ಲಿ ಮಹಾಜನರ ಸಭೆ—ದಕ್ಷಿಣಕನ್ನಡ ಜಿಲ್ಲಾ ಯುದ್ಧಸಮಿತಿಯ ಆಶ್ರಯದಲ್ಲಿ ಕಳೆದ ತಾ. ೧ನೇ ಸೋಮವಾರ ಗವರ್ನಮೆಂಟ್ ಕಾಲೇಜಿನಲ್ಲಿ ಮಹಾಜನರ ಸಭೆಯು ಜರಗಿತು. ಅಧಿಕಾರಿಗಳೂ, ಅನಧಿಕಾರಿಗಳೂ ಹೆಚ್ಚು ಸಂಖ್ಯೆಯಲ್ಲಿ ಸೇರಿದ್ದರು. ಜಿಲ್ಲಾ ಯುದ್ಧಸಮಿತಿಯ ಅಧ್ಯಕ್ಷರಾದ ಶ್ರೀ. ಯಾ. ವಿ. ಸುಬ್ರಹ್ಮಣ್ಯನ್ ಯಂ. ಎ., ಐ. ಸಿ. ಎಸ್ ಇವರು ಅಗ್ರಾಸನ ವಹಿಸಿ ಸಭೆಯ ಉದ್ದೇಶವನ್ನು ವಿವರಿಸುತ್ತಾ ಈಗ ಕೆಲವರು ಅಪಪ್ರಚಾರಮಾಡುತ್ತಿದ್ದಾರೆಂದೂ, ಆದರೆ ಜನರು ಗಾಬರಿಪಡಲು ಆವಕಾಶವಿಲ್ಲವೆಂದೂ, ಬ್ರಿಟಿಷರು ಈ ಯುದ್ಧದಲ್ಲಿ ವಿಜಯಿಗಳಾಗುವುದು ನಿಶ್ಚಯವೆಂದೂ ಹಿಂದೀ ಸರಕಾರದವರು ಖಾಸಗಿ ಆಸ್ತಿಪಾಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳುವರೆಂದು ಕೆಲವರು ಅಪಪ್ರಚಾರಮಾಡುತ್ತಿದ್ದಾರೆಂದೂ ಆದರೆ ಸರಕಾರಕ್ಕೆ ಖಾಸಗಿ ಆಸ್ತಿಪಾಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶವೇ ಇರುವುದಿಲ್ಲವೆಂದೂ, ಜನರು ಗಾಬರಿಯಿಂದ ತಮ್ಮ ಹಣವನ್ನು ಪೋಸ್ಟಾಫೀಸು ಸೇವಿಂಗ್ಸ್ ಬ್ಯಾಂಕುಗಳಿಂದಲೂ, ಇತರ ಬ್ಯಾಂಕುಗಳಿಂದಲೂ ಹಣವನ್ನು ಹಿಂದಕ್ಕೆ ತೆಗೆಯಬಾರದೆಂದೂ, ಹಾಗೆ ಹಿಂತೆಗೆವಲ್ಲಿ ಜನರಿಗೇನೇ ನಷ್ಟವಾಗುವದೆಂದೂ, ಇನ್ನು ಬೇಕಾದಷ್ಟು ಚಿಲ್ಲರೆ ಹಣವು ದೊರಕುವುದಿಲ್ಲ. ಒಂದು ಆಕ್ಷೇಪ ಕೇಳಬರುತ್ತಿದೆಯೆಂದೂ ಆದರೆ ಆ ಆಕ್ಷೇಪಕ್ಕೆ ಕೂಡಾ ಎಡೆಯಿಲ್ಲವೆಂದೂ ಸರಕಾರದವರು ವ್ಯವಹಾರಕ್ಕೆ ಬೇಕಾದಷ್ಟು ನಾಣ್ಯಗಳನ್ನು ಸರಕಾರದವರು ಒದಗಿಸುವರೆಂದೂ, ನಮ್ಮ ಹಣವನ್ನು ಹೂತಿಡಲು ಜನರು ನಾಣ್ಯಗಳನ್ನು ಕೇಳಿದರೆ, ಅಥವಾ ನೋಟುಗಳನ್ನು ಅರ್ಧ ಬೆಲೆಗೆ ಮಾರುವಂತೆ ಮಾಡಿದರೆ ಅಂತಹರಿಗೆ ದಂಡನೆಯಾಗುವುದೆಂದೂ ತಿಳಿಸಿದರು. ಸಕಲರೂ ಯುದ್ಧದ ನಿಧಿಗೆ ಸಹಾಯಮಾಡಬೇಕೆಂದು ಪ್ರಾರ್ಥಿಸಿ ತಮ್ಮ ಭಾಷಣವನ್ನು ಮುಗಿಸಿದರು. ಅನಂತರ ಶ್ರೀ ಎ. ಬೋಂವರೋ, ರಾವ್ ಬಹದ್ದೂರ್ ಅನಂತ ಮಾಳಿಗ, ಶ್ರೀ ಸಿ. ಎಲ್. ಲೋಬೋ, ಪಿ. ಎಮ್ ಎಕ್ಸ್‌ಪ್ರೆಸ್ ಮಿನೇಜರ್‌ರವರು; ಮತ್ತು ಶ್ರೀ. ಎನ್. ಸಟ್ಟೂರಾಯರೇ ಮೊದಲಾದವರು ಭಾಷಣಮಾಡಿ ಸರಕಾರದವರಿಗೆ ಸರ್ವ ವಿಧದ ಸಹಾಯವನ್ನು ಮಹಾಜನರು ಕೊಡಬೇಕೆಂಬುದನ್ನು ತಿಳಿಸಿ ಹಿಟ್ಲರಿಜಮನ್ನು ನಾಶಮಾಡುವುದಕ್ಕೆ ಬ್ರಿಟಿಷ್ ಸರಕಾರಕ್ಕೆ ಸಕಲರೂ ಸರ್ವ ವಿಧದಿಂದಲೂ ಸಹಾಯಮಾಡಬೇಕೆಂದು ಪ್ರಾರ್ಥಿಸಿದರು. ಅಧ್ಯಕ್ಷರ ಉಪಸಂಹಾರ ಭಾಷಣವಾಗಿ ಸಭೆಯು ಮುಕ್ತಾಯವಾಯಿತು.

ಮಂಗಳೂರು ಕಲ್ಚುರಲ್ ಸಂಸ್ಥೆ—ಮಂಗಳೂರು ಕಲ್ಚುರಲ್ ಎಸೋಸಿಯೇಶನಿನ ಐದನೇ ವಾರ್ಷಿಕ ದಿನಾಚರಣೆಯು ಕಳೆದ ತಾ. ೧ನೇ ಸೋಮವಾರ ನಾಯಂಕಾಲ ಥಿಯೊಸಾಫಿಕಲ್ ಲಾಜಿನಲ್ಲಿ ನಡೆಯಿತು. ಗತವರ್ಷದ ವರದಿಯನ್ನು ಓದಿ ಮಂಜೂರುಮಾಡಲಾಯಿತು. ಸಂಸ್ಥೆಯ ಮುಂದಿನ ಅಭಿವೃದ್ಧಿಯ ಕುರಿತು ಆಲೋಚನೆ ಮಾಡಿ ಮತ್ತು ಸಂಸ್ಥೆಯ ಕಾರ್ಯವನ್ನು ವಿಸ್ತರಗೊಳಿಸಲು ಹಲವಾರು ಸೂಚನೆಗಳು ಅಂಗೀಕೃತವಾದುವು. ಮುಂದಿನ ವರ್ಷಕ್ಕೆ ಶ್ರೀ. ಎಸ್. ಮುಕುಂದರಾಯರೇ ಪುನಃ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಇಷ್ಟಾದ ಮೇಲೆ ಸಭಾ ಕಾರ್ಯವು ಮುಕ್ತಾಯಗೊಂಡಿತು.

Degrees Books, Medicines. Free H. L. M. S., H. M. B., H. M. D. etc. Free Homeo Ay r Unani Naturo degrees by post also—Practioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10. Enclose 2 annas stamp—

Principal, Indian Homeopathic Institute and Society (Govt Regd.)
P. O. MAHUVA (Kathiawar Dt. India

Sidh-Kalpa Kavach (Regd)
No 3 Rs 2 No 2 Rs 5 No 1 Rs 7 Special Rs 10 Extra Special Rs 17 for love, marriage health wealth Ask any by person with M. O Rs 1 and get correct answer by return post Life read eng Rs 3 No V P P Send M O Free pamphlets **Prof. Dr. N. H. Chhatbar**, P. O. Mahuva, (Kathiawar, India)

ಉಡುಪಿ

ಸತ್ಕಾರ ಕೂಟ—ಉಡುಪಿ ಮುನಿಸಿಪಾಲಿಟಿಯ ಹಂಗಾಮಿ ಕಮಿಶನರಾಗಿದ್ದ ಶ್ರೀ. ಹರಿಶ್ಚಂದ್ರರಾಯರಿಗೆ ಮುನಿಸಿಪಲ ಆಫೀಸಿನವರು ಕಳೆದ ಆದಿತ್ಯವಾರ ಟೀಪಾರ್ಟಿ ಸತ್ಕಾರ ಕೊಟ್ಟು ಸನ್ಮಾನಿಸಿದ್ದರು. ಈ ಸಮಾರಂಭದ ಅಧ್ಯಕ್ಷತೆಯನ್ನು ಖಾಯಂ ಕಮಿಶನರಾದ ಶ್ರೀ ಸೂರ್ಯನಾರಾಯಣರಾಯರು ವಹಿಸಿದ್ದರು. ಶ್ರೀಗಳಾದ ಕೆ. ರಘುವೇಂದ್ರ ಶಾಸ್ತ್ರಿ, ಅನಂತ ಕೃಷ್ಣರಾವ್, ಗೋಪಾಲಕೃಷ್ಣ ಬಲ್ಲಾಳ್ ಮೊದಲಾದವರ ಭಾಷಣಗಳಾದ ಮೇಲೆ ಹಂಗಾಮಿ ಮತ್ತು ಖಾಯಂ ಕಮಿಶನರರು ಸಹ ಸಂದರ್ಭೋಚಿತ ಮಾತುಗಳನ್ನಾಡಿದರು.

ಉಡುಪಿ ಬೋರ್ಡುಹೈಸ್ಕೂಲಿನ ವಿದ್ಯಾರ್ಥಿಗಳ ಸಂಖ್ಯೆಯು ಐನೂರಕ್ಕೂ ಮೇಲ್ಪಟ್ಟಿರುವುದೆಂದು ತಿಳಿದುಬರುತ್ತದೆ.

ಪುನರ್ವಸು ನಕ್ಷತ್ರ ಪ್ರವೇಶವಾದಂದಿನಿಂದ ಮಳೆಯು ಸರಾಗವಾಗಿ ಬಾರದಿರುವುದರಿಂದ ಬೇಸಾಯಗಾರರು ಕಂಗೆಟ್ಟಿರುವರು.

ಯುದ್ಧ ಸಹಾಯಕ ಸಮಿತಿಗೆ ಧನದನ ಸಂಗ್ರಹವಾಗುತ್ತಿದೆಯಾಗಿ ತಿಳಿದುಬರುತ್ತದೆ. ಮಹಾಜನ ಸಭೆಯೊಂದು ಸದ್ಯ ಜರಗಲಿರುವುದಾಗಿಯೂ ಕೇಳುತ್ತೇವೆ.

ರಾಜೀವಿ ಎಂಬ ವಿದ್ಯಾರ್ಥಿನಿಯೊಬ್ಬಳನ್ನು ಅಪಹರಿಸಿಕೊಂಡು ಬೆಂಗಳೂರಲ್ಲಿ ವಿಕ್ರಯಿಸುವರೆಂಬ ಆರೋಪದ ಮೇಲೆ ಕೈದು ಮಾಡಲ್ಪಟ್ಟು ರಿಮಾಂಡಿನಲ್ಲಿಟ್ಟಿದ್ದ ಶ್ರೀ ಕೃಷ್ಣಯ್ಯ ಹೆಬ್ಬಾರರು ಈಗ ಜಾಮೀನು ಮೇಲೆ ಬಿಟ್ಟಿರುವರಂತೆ.

ತಾ. 30-6-40ರಲ್ಲಿ ಶ್ರೀಗಳಾದ ಬಿ ಅಂತಯ್ಯಶೆಟ್ಟಿ ಮತ್ತು ಟಿ. ವಾಸುದೇವ ಪೆನ್ನೆಯವರು ಉಡುಪಿ ಹರಿಜನ ವಿದ್ಯಾರ್ಥಿ ಭವನಕ್ಕೆ ಫಲಿಮಾರು ಮಠಾಧಿಪತಿಗಳಲ್ಲಿ ಸಂತರ್ಪಣ ಸಮಾಯಧನ ಸಂಗ್ರಹಿಸುವರೆಂದು ತಿಳಿದುಬರುತ್ತದೆ.

WANTED

Wanted a clerk who has completed the S. S. L. C. course, storng in English & Kanarese for an Office of 20 years, standing. Preference will be given to those who know typewriting and book-keeping. Those who are prepared to undergo probationary course for a period of six months and who are prepared to give a cash security of Rs. 500/- need apply to the undersigned on or before 30-7-'40.

X C/o Navayuga, Udipi.

NOTICE.

In the court of the District Munsif of Karkal.

S. C. $\frac{11}{1010}$

N. L. Keshava Iengar—*Plaintiff.*

and

V. S. Shastri— *Defendant.*

To

V. S. Shastri, son of C. Seetharama Lessee of the Nino Touring Talkies, now residing in Mangalore town and working in the New Chitra Talkies, Mangalore.

Please take notice, that the above-named plaintiff has instituted a suit against you to recover the amounts due under a demand promissory note executed by you on 17-6-1937 in his favour and the same stands posted to 9-7-1940 in the above Court. If you fail to appear on that date at 10 A. M. before the said court either personally or through a pleader and file your objections if any, you will be declared exparte and the suit will disposed of accordingly.

By order of the Court

Camp, Karkal, *Date* 30-6-40 — **B. Vasudeva Rao**, *Advocate.* **H. S. Hussain**, *Vakil.*

ದಕ್ಷಿಣ ಕನ್ನಡ

ಸೋಮೇಶ್ವರ ಆಗುಂಬೆ ಘಾಟಿ—ಯು ಈ ವರ್ಷವೂ ತಾ. 24-6-40ನೇ ರಾತ್ರಿ ಜರಿದು ಬಿದ್ದು ವಾಹನಗಳ ಸಂಚಾರವು ಬಂದುಮಾಡಲ್ಪಟ್ಟಿರುವುದು. ಇದರಿಂದ ಜನರಿಗೆ ತುಂಬಾ ಅನಾನುಕೂಲತೆಗಳುಂಟಾಗಿದೆ. ಹೀಗೆ ಜರಿದು ಬೀಳುವುದು ಇದೀಗ ಮೂರನೇ ಸಲವೆಂದು ತಿಳಿದುಬರುತ್ತದೆ. ಇನ್ನಾದರೂ ಮೈಸೂರು ಸರಕಾರವು ಇದನ್ನು ಉತ್ತಮ ರೀತಿಯಲ್ಲಿ ಆದಷ್ಟು ಬೇಗನೆ ಕಟ್ಟಿಸಬಹುದಾಗಿ ನಿರೀಕ್ಷಿಸಲಾಗಿದೆ.

ಕೋಟೆ—ಉಡುಪಿ ಕುಂದಾಪುರ ತಾಲೂಕುಗಳಲ್ಲಿ ಹಿಂದುಸ್ಥಾನಿ, ದಕ್ಷಿಣಾದಿ ರೀತಿಯ ಸಂಗೀತದಲ್ಲಿ ಸುಪ್ರಸಿದ್ಧ ವಾದನದಲ್ಲಿ ಪ್ರಖ್ಯಾತರಾಗಿದ್ದ ಶ್ರೀ ಬೇಳೂರು ಗೋವಿಂದ ನಾಯಕರವರು ತಮ್ಮ ಸುಮಾರು 60ನೇ ವರ್ಷ ಪ್ರಾಯದಲ್ಲಿ ಪಾಶರೋಗಕ್ಕೆ ತುತ್ತಾಗಿ ಮೊನ್ನೆ ಶನಿವಾರ ಮೃತ್ಯುವಶರಾದುದು ಅತೀ ದುಃಖಕರವಿದೆ. ಶ್ರೀಯುತರು ನಟ ಸಾರ್ವಭೌಮ ದಿವಂಗತ ವರದಾಚಾರ್ಯರಿಂದ ಪ್ರಶಸ್ತಿ ಪಡೆದ ಸಂಗೀತ ವಿದ್ವಾಂಸರೆಂದ ಮೇಲೆ ಅವರ ವಿದ್ವತ್ತಿನ ಕುರಿತು ಬೇರೆ ಹೇಳಬೇಕಾಗಿಲ್ಲ. ದಿವಂಗತರು ಗುಣಗಳೂ ತನ್ನ ವಿದ್ಯೆಯ ಕುರಿತು ಹೆಮ್ಮೆಪಡದವರೂ ಆಗಿದ್ದರು.

ಶ್ರೀ ಚಿಕ್ಕಯರೆಟ್ಟಿ ನಿಧನ

ಮಂಗಳೂರು ತಾಲೋಕಿನ ಪರಿಯಾಳ ಪಟ್ಣವೊಗರು ಮನೆಯ ಯಜಮಾನರಾದ ಶ್ರೀ. ಚಿಕ್ಕಯಶೆಟ್ಟಿ ಕಳೆದ ತಾ. ೩ರಲ್ಲಿ ನಿಧನ ಹೊಂದಿರುವರೆಂಬುದು ವಿಷಾದಕರ. ದಿವಂಗತರು 80ರ ಮುಪ್ಪಿನವರಾದರೂ ಯೌವನಸ್ಥರನ್ನು ನಾಚಿಸುವ ಜೀವನದ ರೀತಿನೀತಿಯುಳ್ಳವರಿದ್ದರು. ಕಟ್ಟುಳ್ಳಾಗ್ಯ, ಗಂಭೀರ ಮುಖಮುದ್ರೆಯುಳ್ಳ ಈಗ ಅತ್ಯಪರೂಪವಾಗಿರುವ ಹಿಂದಿನ ಬಂಟ ಯಜಮಾನರ ಚಿತ್ರವನ್ನು ಒಮ್ಮೆಯೇ ದೃಷ್ಟಿಪಥಕ್ಕೆ ತರುತ್ತಿದ್ದರು. ಸಾಯುವದಕ್ಕಿಂತ ಸುಮಾರು 2ತಿಂಗಳ ಕನಕವೂ ಕಾಯಿಲೆಯೆಂದು ಬಿದ್ದವರಲ್ಲ. ಕರಿಸಿಯ ಮನೆಯಿಂದ ತನ್ನ ನಿತ್ಯಕರ್ಮಗಳನ್ನು ತಾನೇ ಅಂತ್ಯಕಾಲದವರೆಗೂ ನಡಿಸಿಕೊಂಡು ಬಂದರು. ಸತ್ಯಸಂಧರೂ, ಸರಳ ಹಾಗೂ ಉದಾರ ಹೃದಯರೂ, ಸ್ವಾರ್ಥರಹಿತರೂ ಬಡಜನ ಪಕ್ಷಪಾತಿಯೂ ಆಗಿ ಸರ್ವಾದರಣೀಯರಾದವರು. ಒಕ್ಕಲುಗಳನ್ನಾದರೂ ಬಿಡದವರಲ್ಲ. ಅವರ ಮೇಲೆ ಯಾರೂ ವ್ಯಾಜ್ಯ ಸಾಧ್ಯ ಮಾಡಿದವರಲ್ಲ. ಧರ್ಮ, ಅತಿಥಿ ಸತ್ಕಾರ, ದಾನಧರ್ಮಾದಿಗಳನ್ನು ಮಾಡಿ ಸೋತವರು. ದೊಡ್ಡ ಕುಟುಂಬ ಮತ್ತು ಹೆಂಡತಿ ಮಕ್ಕಳನ್ನು ಸಮೃದ್ಧಿಯಿಂದ ಕಂಡು ಸದೆಯ, ವರೆಗೂ ಅವರ ಕಡಿಸಿಕೊಂಡು ಎರಡು ಕಡೆಯಿಂದಲೂ ಹಲವು ಮಂದಿ ಮರಿಮಕ್ಕಳ ಸುಖವನ್ನು ಪಡೆದ ಭಾಗ್ಯಶಾಲಿಯೂ ಎಡೆಬಿಡದ ಅಚಲ ದೈವಭಕ್ತಿಯ ಮತ್ತು ಧರ್ಮಪರಾಯಣ ಜೀವನ ಮೃತರದು. ಭಗವನ್ನಾಮಸ್ಮರಣೆಯಲ್ಲಿಯೇ ನಿರ್ಯಾಣಹೊಂದಿದವರು. ಕಷ್ಟಪಟ್ಟವರೂ ಸತ್ಕಾರ್ಯಕ್ಕೆ ಸಹಾಯವೀಯುವವರು. ತನ್ನ ಸ್ವಂತ ಭಾವನ ಮಗನೇ ಕಾಂಗ್ರೆಸ ವಿರೋಧವಾಗಿ ಕಳೆದ ಎಸೆಂಬ್ಲಿ ಚುನಾವಣೆಗೆ ನಿಂತು ತನ್ನನ್ನು ಏಕಮಾತ್ರಪುತ್ರ ಮತ್ತು ಬಂಧುಬಳಗದವರೆಲ್ಲ ಪಂಥಕಟ್ಟಿ ಅವರ ಕಡೆಯಲ್ಲಿ ಕೆಲಸಮಾಡುತ್ತಿದ್ದಾಗ ತಾನು ಮಾತ್ರ ತನ್ನ ಓಟನ್ನು ಕೊಟ್ಟುದು ಕಾಂಗ್ರೆಸಿಗೆಂದು ತನ್ನ ಅಳಿಯ ಈ ಪತ್ರಿಕೆಯ ಸಂಪಾದಕರೊಡನೆ ಅಭಿಮಾನದಿಂದ ಹೇಳುತ್ತಿದ್ದರು. ದಿವಂಗತರ ಜೀವನವು ಒಂದೊಂದು ಉತ್ತಮ ಮಾದರಿಯಾಗಿದ್ದಿತೆಂಬುದರಲ್ಲಿ ಸಂದೇಹವಿಲ್ಲ. ಅವರ ಆತ್ಮಕ್ಕೆ ಚಿರಶಾಂತಿಯನ್ನು ಹರೈಸಿ ಅವರ ಪತ್ನಿ ಪುತ್ರ ಪುತ್ರಿಯರ ದುಃಖದಲ್ಲಿ ಅನುತಾಪ ಪಡುವೆವು.

ಕೊಕ್ಕರ್ಣೆ—ಇದೊಂದು ದೊಡ್ಡ ಪಟ್ಟಣವಲ್ಲವಾದರೂ ಒಳ್ಳೆಯ ವ್ಯಾಪಾರಕೇಂದ್ರವಾಗಿದೆ. ವ್ಯಾಪಾರಾಭಿವೃದ್ಧಿಗೆ ಅನುಕೂಲವಾಗಿ ಸಮುದ್ರದಲ್ಲೇ ಹೊಳೆಯೊಂದಿದೆ. ಸೋಮೇಶ್ವರ ಘಾಟಿಯು ಸಮೀಪದಲ್ಲಿದ್ದು ಘಟ್ಟದ ಮೇಲಿಂದ ಬಹಳ ಹೊರೆಗಾಡಿ ಸಾಮಾನುಗಳನ್ನು ತರಲು ಅನುಕೂಲವಿದೆ. ಇಲ್ಲಿ 2, 3 ರೈಸ್ ಮಿಲ್ಲುಗಳು, ಒಂದು ಹಂಚಿನ ಕಾರ್ಖಾನೆ ಇದ್ದು ದಿನಕ್ಕೆ ನೂರಾರು ಗಾಡಿಗಳು, ನೂರಾರು ಜನರು ಬಂದುಹೋಗುವುದನ್ನು ಎಲ್ಲರೂ ಬಲ್ಲರು. ಆದರೆ ಕೋಟೆಯಿಂದ ಕೊಕ್ಕರ್ಣೆಗೆ

ಬೊಂಬಾಯಿ

ಪಾನ ಪ್ರತಿಬಂಧಕವನ್ನು ಕೋಂಗ್ರೆಸ್ ಸರಕಾರವು ಜಾರಿಗೆ ತಂದ ಕಾನೂನು ಅನ್ಯಾಯವೆಂದು ಕಳೆದ ಸಲ, ಅಂದರೆ ಎರಡುತಿಂಗಳ ಹಿಂದೆ ಮುಂಬಯಿ ಮುಂದಿ ನ್ಯಾಯಾಧೀಶರ ಕಮಿಟಿಯು ತೀರ್ಪಿತ್ತು ಆಗಲೇ ಕಳ್ಳು ಕುಡಿಕರ ಕೂಗು ಕೇಳುತ್ತದೋ ಎಂಬ ಭಯವಿತ್ತು. ಆದರೆ ಗವರ್ನರರು ಮುಂಜಾಗ್ರತೆಯಿಂದೊಂದು ಕಾನೂನನ್ನು ಜಾರಿಗೆ ತಂದದ್ದರಿಂದ ಕೂಗು ಕುಂದಿಹೋಯಿತು. ಇದೇ ಪ್ರಸಂಗವು ತಿರುಗೊಮ್ಮೆ ಬಂದೊದಗಿತು. ನಿನ್ನೆ ದಿವಸ ಒಂದು ಕೇಸಿನಲ್ಲಿ ಜಸ್ಟಿಸ್ ಕಂಬಾಟರವರು ತಿರುಗೊಮ್ಮೆ ಈ ಕಾನೂನು ನ್ಯಾಯವಲ್ಲೆಂದು ಹೇಳಿದರು. ಅಲ್ಲಿಗೇ ಕೊನೆಯಂಕ ಮುಗಿದಂತಾಯಿತು. ಕೂಗಿಗೆ ಗತಿಯಿಲ್ಲದೆ, ಬಕಾರಿಗಳಂತೆ ಬೀದಿಬೀದಿಗಳಲ್ಲಿಯೇ ತಿರುವವರೆಲ್ಲ ದಾರು ಅಂಗಡಿಗಳಿಗೆ ನುಗ್ಗ ತೊಡಗಿದರು. ಇಷ್ಟಿಗೆ ಸಾಮ್ರಾಜ್ಯ ಶಾಹಿ ಏಜಂಟರ ಕಡುಕ ಕಾರ್ಯವು ಕೈಗೂಡಿದಂತಾಯಿತು. ಸರ್ವರೂ ಪಿಶಾಚಿಗಳಂತೆ ಕುಣಿದಾಡತೊಡಗಿದರು. ಕೋಂಗ್ರೆಸ್ ಸರಕಾರವು ಮಾಡಿದ ಆ ಪುಣ್ಯ ಕಾರ್ಯವು ನಿಷ್ಫಲವಾದಂತಾಯಿತು.

ಮದ್ರಾಸಿನ ಮಾಜಿ ಮಂತ್ರಿಯವರಾದ ಶ್ರೀ. ಟಿ. ಪ್ರಕಾಶಂರವರು, ಮುಂಬಯಿ ನೇಶನಲ್ ಗಾರ್ಡಿನವರಿಗೆ ಭಾಷಣಮಾಡುತ್ತಾ, ಮಂತ್ರಿತ್ವದ ಅನುಭವವನ್ನೆಲ್ಲ ವಿವರಿಸಿ ಈಗ ಕೋಂಗ್ರೆಸಿನಲ್ಲಿ ಸ್ಫೂರ್ತಿಯಿಲ್ಲೆಂದೂ, ಇದಕ್ಕೆ ಕಾರಣ ಮುಂದಾಳುಗಳು ಹೆಚ್ಚಿನ ಜಾಗ್ರತೆ ತೆಗೆದುಕೊಳ್ಳದಿರುವುದೆಂದೂ ಹೇಳಿದರು. ಆಂಗ್ಲ ಸರಕಾರವು ಕೋಂಗ್ರೆಸಿನ ಕೇಳಿಕೆಗಳನ್ನು ಸಲ್ಲಿಸಿದ್ದಲ್ಲಿ ಈ ಯುದ್ಧದ ಸಮಯದಲ್ಲಿ 35ಕೋಟಿ ಭಾರತೀಯರು ಆಂಗ್ಲರಿಗೆ ಸಹಾಯ ಮಾಡುತ್ತಿದ್ದರೆಂದೂ ಆಂಗ್ಲರು ಕಣ್ಣು ಮುಚ್ಚಾಲೆ ಆಡುತ್ತಿರುವುದರಿಂದ ಮತ್ತು ತಾವು ಕಷ್ಟದಲ್ಲಿರುವಾಗ ಮಾತ್ರ ಭಾರತೀಯರ ಸಹಾಯ ಕೋರುತ್ತಿರುವುದರಿಂದ ಭಾರತದ ಹಿಂದೆ ಒಂದು ಸ್ವಮತಾಗಲಿ, ಜನವಾಗಲಿ ಆಂಗ್ಲರಿಗೆ ಸಿಗಕೂಡದೆಂದೂ ಹೇಳಿದರು. ಈ ಯುದ್ಧದ ಕಾರಣದಿಂದ ದೇಶದ ರಕ್ಷಣೆಗಾಗಿ ಒಂದು ಹೊಸಸೈಭಾಗವನ್ನು ತಯಾರಿಸುವದು ಅಗತ್ಯವೆಂದೂ ಪ್ರತಿಯೊಬ್ಬ ಕೋಂಗ್ರೆಸ್ ಸದಸ್ಯನೂ ಇದಕ್ಕೆ ಸಹಾಯ ಮಾಡಬೇಕೆಂದೂ ಹೇಳಿದರು.

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ಕೊಡತಕ್ಕ ವಿಷಯಗಳು ಅನೇಕ ಇವೆ. ಕ್ರಮವಾದ ಜಮಾ ಖರ್ಚಿನ ಲೆಕ್ಕವಿದ್ದರೂ ಸಾಲದು. ಅದರಿಂದ ತಯಾರಿಸಿದ ಸಾರಾಂಶದ ನಕಲ್ಪವು ಕೆಲವೇ ನಿಮಿಷಗಳಲ್ಲಿ ಟೇಕ್ಸಿನ ಆಫೀಸರರಿಗೆ ಒಪ್ಪಿಗೆಯಾಗಬೇಕು. ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗುವುದು ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನ" ಕಳ್ಸಿಯಾಗಿ ಹೋಗಿದ್ದರೂ ತಡವಾಗಲಿಲ್ಲ ಲೆಕ್ಕು ಹಾಜರು ಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸಕಾಣಿಸಿದವರೊಡನೆ ಪತ್ರವ್ಯವಹಾರ ನಡಿಸಿರಿ.

ಎಸ್. ಎಸ್. ಪುರಾಣಿಕ,
ಇನ್ಕಮ್ ಟೇಕ್ಸ್ ಪ್ರಾಕ್ಟೀಶನರ್,
ಕೃಷ್ಣಾ ರೆಸ್ಟೋರೆಂಟ್ ಬಿಲ್ಡಿಂಗ್,
ಹಂಪನಕಟ್ಟೆ, **ಮಂಗಳೂರು.**

ಹೋಗುವ ರಸ್ತೆಯು ತೀರಾ ನಿಕೃಷ್ಟಾವಸ್ಥೆಯಲ್ಲಿದ್ದು ಪ್ರಯಾಣಕ್ಕೆ ತುಂಬ ಅನಾನುಕೂಲವಾಗಿರುತ್ತದೆ. ಅಲ್ಲಲ್ಲಿ ಹೊಂಡಗಳು, ಕೆಲವು ಕಡೆ ತೀರಾ ಇಕ್ಕಟ್ಟು ಇನ್ನು ಕೆಲವೆಡೆ (ಬೇಸಿಗೆಯಲ್ಲಿ) ಧೂಳಿನ ರಾಶಿ ಹೀಗೆಲ್ಲಾ ಇದ್ದು ಪ್ರಯಾಣವು ಅಪಾಯಕರವಾಗಿದೆ. ಡಿಸ್ಟ್ರಿಕ್ಟ್ ಬೋರ್ಡಿನವರು ಈ ಕುರಿತು ತೀವ್ರವಾಗಿ ಗಮನವಿಟ್ಟರೆ ಜನರಿಗೆ ತುಂಬಾ ಉಪಕಾರವಾಗುವುದೆಂದೆಂದು ಬಯಕೆ.

2000 ದ್ವೀಪಗಳ ಮೇಲೆ ಯುದ್ಧದ ಛಾಯೆ

ಈಸ್ಟ್ ಇಂಡೀಸ್ ದ್ವೀಪಗಳ ಮೇಲೆ ಜಾಪಾನು, ಅಮೆರಿಕ, ಇಂಗ್ಲೆಂಡು ಮತ್ತು ಜರ್ಮನಿಯ ದೃಷ್ಟಿಯೇಕೆ?

ಈ ದ್ವೀಪ ಗುಂಪುಗಳು ಪೂರ್ವ ರಣರಂಗದ ಕೇಳವಾಗುವವೇ?

ಪೂರ್ವಕ್ಕೆ ಹೋಗುವ ಹಡಗವು ಸಿಂಗಪುರಕ್ಕೆ ಸಮೀಪಿಸುವಾಗ ಅದು ಸಹಸ್ರಾರ ಜಲಕಂದುಗಳೊಳಗಿಂದ ಹಾದುಹೋಗಬೇಕು. ಈ ಪ್ರದೇಶದಲ್ಲಿ ಒಂದೆಡೆ ಮಲಿಯದ್ವೀಪ ಕಲ್ಪವಿದೆ. ಅದರ ಮೇಲೆ ಬ್ರಿಟಿಷ್ ಧ್ವಜವು ಹಾರಾಡುತ್ತಿದೆ. ಇನ್ನೊಂದು ಕಡೆಯಲ್ಲಿ ಸುಮಾತ್ರವಿದೆ. ಡಚ್ ವಸಾಹತಾದ ಈಸ್ಟ್ ಇಂಡೀಸಿನ 2,000 ದ್ವೀಪಗಳಲ್ಲಿ ಅತಿ ದೊಡ್ಡದಾದುದಿದು. ಈ ದ್ವೀಪ ಸಮೂಹಗಳು ಅತ್ಯಂತ ಸಂಪನ್ನವಾಗಿವೆ. ಫಲವತ್ತಾದ ಹಸಿರು ಭತ್ತದ ಗದ್ದೆಗಳೂ ರಬ್ಬರ್ ತೋಟಗಳೂ ರಮಣೀಯವಾಗಿ ಕಂಗೊಳಿಸುತ್ತವೆ. ಆರೋಗ್ಯಶಾಲಿಗಳೂ, ಹಸನ್ಮುಖಿಗಳೂ, ಕಂದು ವರ್ಣೀಯರೂ ಆದ ಈ ಪ್ರದೇಶದ ಜನ ನೂರಾರು ದೋಣಿಗಳಲ್ಲಿ ಅತ್ತಿತ್ತ ಚಲಿಸುತ್ತಿರುವುದನ್ನು ನೋಡಬಹುದು. ಶಾಂತಿ ಮತ್ತು ರಮಣೀಯತೆಯು ಬೇರಾಗಿ ಶೋಭಿಸುತ್ತವೆ ಈಸ್ಟ್ ಇಂಡೀಸ್ ಪ್ರದೇಶ.

ಇಂದೀಗ ಹೊಲ್ಲೆಂಡು ಹಿಟ್ಲರನ ಪಾದಾಕ್ರಾಂತವಾಗಿದೆ. ಆದುದರಿಂದ ಈ ದ್ವೀಪಗಳ ಗತಿಯೇನೆಂಬ ಪ್ರಶ್ನೆಯುಂಟಾಗಿದೆ. ಮೊದಲೇ ಜರ್ಮನಿ ಮತ್ತು ಜಾಪಾನಿಗಳು ಅವುಗಳ ಮೇಲೆ ಕಣ್ಣಿಟ್ಟಿದ್ದವು. ಜರ್ಮನಿಯು ಈಸ್ಟ್ ಇಂಡೀಸಿನೊಡನೆ ಇತ್ತಲಾಗಿ ತನ್ನ ವ್ಯಾಪಾರವನ್ನು ಬಹಳವಾಗಿ ಹೆಚ್ಚಿಸಿದ್ದಿತು. ಈ 2,000 ದ್ವೀಪ ಸಮೂಹವು ನ್ಯಾಯವಾಗಿ ತನಗೆ ಸೇರಬೇಕಾದುದೆಂದು ಅದನ್ನು ಸ್ವಾಧೀನಪಡಿಸಿಕೊಳ್ಳಲು ಜಾಪಾನು [illegible] ಕೊಂಡಿರುವುದು. ಇಂದೀಗ ಈ ದ್ವೀಪಗಳಲ್ಲಿ ಮೊದಲಿದ್ದ ಸ್ಥಿತಿಯನ್ನೇ ಇರಿಸಲಾಗಿದೆ. ಇಂದೀಗ ಜಾಪಾನು ಈ ಭಾಗದಲ್ಲಿ ತನ್ನ ಪ್ರಭಾವವನ್ನು ಬೆಳೆಸುತ್ತಿದೆ. ಪಾಶ್ಚಾತ್ಯ ಜನಾಂಗಗಳು [illegible] ಯದಂತೆ ಮುಂಜಾಗ್ರತೆ ತೆಗೆದುಕೊಂಡಿದೆ.

ಈ 2000 ದ್ವೀಪಗಳು ಸಂಪತ್ತಿನ ದೃಷ್ಟಿಯಿಂದ ಆಗಿ ಅತಿ ಪ್ರಾಮುಖ್ಯವಾಗಿವೆ. ಲೋಕದಲ್ಲಿನ ನೂರಕ್ಕೆ 90ರಷ್ಟು ಕ್ವಿನೈನ, 33 ರಷ್ಟರ ಹೊಗೆಸೊಪ್ಪು, 10 ರಷ್ಟು ಪೆಟ್ರೋಲು, 33 ರಷ್ಟು ಟಿನ್ನು ಮತ್ತು ಲೋಕಕ್ಕೆ ಬೇಕಾದ ಅತಿ ಹೆಚ್ಚಿನ ರಬ್ಬರು ದೊರೆಯುವುದು. ಈ ದ್ವೀಪಗಳಲ್ಲಿ ಏಲಕ್ಕಿ, ಲವಂಗ ಮೊದಲಾದುವುಗಳು, ಅಕ್ಕಿ, ಕಾಫಿ, ಚಾ, ಸಕ್ಕರೆ, ಮೋಪು, ಕಬ್ಬಿಣ, ಚಿನ್ನ ಮತ್ತು ವಸ್ತುಗಳು ಕೂಡಾ ಧಾರಾಳವಾಗಿ ಸಿಗುತ್ತವೆ. ಅತಿ ಪ್ರಾಮುಖ್ಯವಾದುದೆಂದರೆ ಎಣ್ಣೆ. ಈಸ್ಟ್ ಇಂಡೀಸಿನಲ್ಲಿ ಪ್ರತಿ ವರ್ಷ 67 ಮಿಲ್ಯ ಪೀಪ ಎಣ್ಣೆ ದೊರೆಯುತ್ತದೆ. ಇದರಲ್ಲಿ ನೂರಕ್ಕೆ 20ರಷ್ಟು ಜಾಪಾನು ಒಯ್ಯುತ್ತದೆ. ಇದು ಹೊರತು ಈ ಪ್ರದೇಶದಲ್ಲಿ ಜನಸಂಖ್ಯೆಯು ಅತಿ ನಿಬಿಡವಾಗಿದೆ. 65 ಮಿಲ್ಯ ಜನರು ಈ ದ್ವೀಪಗಳಲ್ಲಿ ವಾಸಿಸುತ್ತಿದ್ದಾರೆ. ಮಾರ್ಕೆಟಿಗಾಗಿ ಹುಡುಕುವ ಜಾಪಾನು ಸ್ವಾಭಾವಿಕವಾಗಿ ಈ ದ್ವೀಪಗಳನ್ನು ತನ್ನ ವಶಕ್ಕೆ ಸೇರಿಸಲು [illegible]

ಇಂಗ್ಲೆಂಡಿನ ವಸಾಹತುಗಳಾದ ಮಲಯ ದ್ವೀಪಗಳ ನೆರೆಯಲ್ಲಿಯೇ ಈಸ್ಟ್ ಇಂಡೀಸ್ ಇರುವುದರಿಂದ ಬ್ರಿಟಿಷರು ಸ್ವಾಭಾವಿಕವಾಗಿ ಅದರಲ್ಲಿ ಆಸಕ್ತರೇ ಇರುವರು. ಜಾಪಾನಿನೊಂದಿಗಿದ್ದ ವ್ಯಾಪಾರ ಸಂಬಂಧವಾದ ಒಪ್ಪಂದವನ್ನು ಇಂಗ್ಲೆಂಡು [illegible] ರದ್ದುಪಡಿಸಿದುದರಿಂದ ಅಪ್ಪಣೆಗೆ [illegible] ಬೆಳೆಯುತ್ತಿದೆ. ಜಪಾನಿ ರಾಷ್ಟ್ರೀಯ ಸರಕಾರಕ್ಕೆ ಅಮೇರಿಕ [illegible] ಸಾಲ ಕೊಟ್ಟದ್ದರಿಂದ ಜಾಪಾನು ಮತ್ತಷ್ಟು ರೇಗಿದೆ. ಅಮೇರಿಕವು ಸಮಾಯಕೂಡದ [illegible] ಸರಕಾರವು ಇಷ್ಟರೊಳಗೆ [illegible] ಜಾಪಾನ ಸೇನಾನಿಗಳ [illegible] ಜಾಪಾನಿನ ಆಕ್ರಮಣದಿಂದಾಗಿ ಅಮೇರಿಕವು ಚೀನದ ಪೂರ್ವ ಸಮುದ್ರಭಾಗದ ಮಾರ್ಕೆಟನ್ನು ಕಳಕೊಳ್ಳುವಂತಾಗಿದೆ. ಆದುದರಿಂದ ಈಸ್ಟ್ ಇಂಡೀಸಿನ ಮೇಲೆ ಅಮೇರಿಕವೂ ಕಣ್ಣು ಹಾಕಿದೆ. ಜಪಾನಿನ ಪ್ರಭಾವವು ಈಸ್ಟ್ ಇಂಡೀಸಿನ ಮೇಲೆಯೂ ವ್ಯಾಪಿಸುವುದು ಅಮೇರಿಕಕ್ಕೆ ಸಹನೀಯವಾಗಲಾರದು.

ಈಸ್ಟ್ ಇಂಡೀಸನ್ನು ಜರ್ಮನರಾಗಲೀ, ಜಾಪಾನರಾಗಲೀ ಆಕ್ರಮಿಸುವ ಸಂದರ್ಭದಲ್ಲಿ ಬ್ರಿಟನ್ ಮತ್ತು ಅಮೇರಿಕಗಳು ಸುಮ್ಮನಿರಲಾರವು. ಈಸ್ಟ್ ಇಂಡೀಸಿನ ಸಮೀಪದಲ್ಲೇ ಸಿಂಗಪುರ್ ನೌಕಾನಿಲಯವಿದೆ. ಅಲ್ಲಿಂದ ಬ್ರಿಟಿಷ್ ಹಡಗಗಳು ಜಪಾನರಿಗಿಂತ ಮೊದಲೇ ಈಸ್ಟ್ ಇಂಡೀಸಿಗೆ ಮುಟ್ಟಬಹುದು. ಅಮೇರಿಕವು ಕೂಡಾ ಬ್ರಿಟನಿನೊಂದಿಗೆ ಸಹಕರಿಸದಿರಲಾರದು. ಈ ದೃಷ್ಟಿಯಿಂದಲೇ ಅದು ಅತಿ ದೊಡ್ಡ ನೌಕಾಪಡೆಯನ್ನು ಪಾಂತಸಾಗರದಲ್ಲಿ ಹವಾಯಿ ಎಂಬಲ್ಲಿ ತಯಾರಾಗಿರಿಸಿದೆ.

ಈ ಸಂದರ್ಭದಲ್ಲಿ ಈಸ್ಟ್ ಇಂಡೀಸಿನಲ್ಲಿರುವ 65 ಮಿಲ್ಯ ಜನರ ಪಾಡೇನೆಂಬ ಪ್ರಶ್ನೆಯು ಮುಂದೆಬರುತ್ತದೆ. ಹಿಂದೀಯರಿಗಿಂತಲೂ ಕೀಳತೆಯಾಗಿದೆ ಅವರ ಅವಸ್ಥೆ. ಮೊದಲು ಈ ದ್ವೀಪಸಮೂಹಗಳೆಲ್ಲ ಹಿಂದೂಪೇರಿದ ವಸಾಹತುಗಳಾಗಿದ್ದವು. ಹಿಂದೂ ಸಂಸ್ಕೃತಿಯು ಅಗಲೂ ನೆಲೆಗೊಂಡಿದೆ ಅಲ್ಲಿ. ಡಚ್ಚರ ಆಳ್ವಿಕೆಯಲ್ಲಿ ಈಸ್ಟ್ ಇಂಡೀಸಿನಲ್ಲಿ ನೂರಕ್ಕೆ 5 ರಷ್ಟು ಮಂದಿ ಮಾತ್ರ ವಿದ್ಯಾವಂತರಾಗಿದ್ದಾರೆ. ವಿದ್ಯೆಯು ಸರಕಾರದ ಪ್ರೋತ್ಸಾಹವಿಲ್ಲದೆ ಬಹಳ ಹಿಂದೆ ಬಿದ್ದಿದೆ. ಜನತೆಗೆ ಹೊಟ್ಟೆ ತುಂಬಿಸಿ ಮೊದಲನ್ನು ಉಪಯೋಗಿಸುವ ಧೋರಣೆ ಡಚ್ಚರದು. ಜನಸಂಖ್ಯೆಯ ನೂರಕ್ಕೆ ಒಂದರಷ್ಟು ಮಂದಿಗಾದರೂ ಓಟಿನ ಹಕ್ಕಿರುವುದಿಲ್ಲ. ದೇಶದ ಸಂಪತ್ತೆಲ್ಲ ವ್ಯಯವಾಗುವುದೆಂದೇ ಗೊತ್ತು ಡಚ್ ಸರಕಾರಕ್ಕೆ. ವರ್ಷಾವಧಿ 30 ಮಿಲ್ಯ ಪವನು ದೊರೆಯುತ್ತದೆ ಡಚ್ ಸರಕಾರಕ್ಕೆ ಈಸ್ಟ್ ಇಂಡೀಸಿನಿಂದ.

ಇಂದೀಗ ಈಸ್ಟ್ ಇಂಡೀಸಿನ ಜನರಲ್ಲಿ ರಾಷ್ಟ್ರೀಯ ಜಾಗ್ರತಿಯುಂಟಾಗಿದೆ. ಅವರಲ್ಲಿ ತೀವ್ರಗಾಮಿ ಮತ್ತು ಮಂದಗಾಮಿ ಪಕ್ಷಗಳಿರುತ್ತಾರೆ. ತೀವ್ರಗಾಮಿಗಳು ಸಂಪೂರ್ಣ ಸ್ವಾತಂತ್ರ್ಯ ಸಾಧನಾಕಾಂಕ್ಷಿಗಳಾಗಿದ್ದಾರೆ. ಜಾಪಾನಿನ ಧಾಳಿಯಿಂದ ತಮ್ಮನ್ನು ತಾವೇ ರಕ್ಷಿಸಿಕೊಳ್ಳಬಹುದೆಂಬ [illegible] ಅವರಿಗೆ. ಆದರೆ ಮಂದಗಾಮಿಗಳು ಜಪಾನಿನ ಆಕ್ರಮಣದ ಭೀತಿಯಿಂದ ತಳಮಳಗೊಂಡಿರುತ್ತಾರೆ.

ಈಸ್ಟ್ ಇಂಡೀಸಿನಲ್ಲಿ ಸಾಮ್ರಾಜ್ಯ [illegible] ರಾಷ್ಟ್ರಗಳ ಸೂತ್ರಚಾಲನೆ, ನೌಕಾಪಡೆ ಮತ್ತು ಸೇನೆಯ ಚಲನವಲನದ ಸುದ್ದಿಗಳನ್ನೇ ಪತ್ರಿಕೆಗಳು ಪ್ರಕಟಿಸುತ್ತಿವೆಯೇ ಹೊರತು ಅಲ್ಲಿಯ ಜನರ ಅಭಿಪ್ರಾಯವೇನು? ಅವರೇನು ಮಾಡುತ್ತಿದ್ದಾರೆಂಬುದೊಂದೂ ಪ್ರಕಟವಾಗುವುದೇ ಇಲ್ಲ. ಈ ಸಂಧಿಕಾಲದಲ್ಲಿ ಈಸ್ಟ್ ಇಂಡೀಸಿನ ಜನರು ಸುಮ್ಮನಿರಲಾರರು. ಅವರು ತಮ್ಮ ಸ್ವಾತಂತ್ರ್ಯ ಬೇಡಿಕೆಯನ್ನು ಭರದಿಂದ ಮುಂದೆ ಹೂಡದಿರಲಾರರು. ಹೊಲ್ಲೆಂಡಿನ ನೌಕಾಬಲವು ಶಾಸನಾಗಿಯೇ ಹೋಗಿರುವಾಗ, ಇನ್ನೊಂದು ಸಾಮ್ರಾಜ್ಯಶಾಹಿಯ ಅಧೀನರಾಗಲು ಅವರು ಮಾತ್ರ ಸಿದ್ಧರಿಲ್ಲ.

ಅದರ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಅವರನ್ನು ತಮ್ಮ ಪಕ್ಷಕ್ಕೆ ಸೆಳೆಯುವುದಾಗಿಲ್ಲ [illegible] ಪ್ರದೇಶದ ಮೇಲೆ ತಮ್ಮ ಪ್ರಭಾವವನ್ನು ನೆಲೆಗೊಳಿಸಲು. ಇದೇ ಸಂದರ್ಭ ನೋಡಿ ಜಾಪಾನ ಸೇನಾನಿಗಳು [illegible] ಮುಂದೊತ್ತುತ್ತಿದ್ದಾರೆ. ಅಮೇರಿಕ ಮತ್ತು ಇಂಗ್ಲೆಂಡುಗಳಲ್ಲದಿರುತ್ತಿದ್ದರೆ ಮತ್ತು ಸುಮಾರು 3 ವರ್ಷಗಳ ಚೀನೀ ಯುದ್ಧದಿಂದ ಸೋತು ಹೋಗಿಲ್ಲದಿದ್ದರೆ ಜಾಪಾನು ಇಷ್ಟರಲ್ಲೇ ಇಂಡೋಚೈನ ಮತ್ತು ಈಸ್ಟ್ ಇಂಡೀಸ್‌ಗಳನ್ನು ಆಕ್ರಮಿಸುತ್ತಿದ್ದರು. ಇನ್ನಾದರೂ ಅವರು ಸುಮ್ಮನಿರುವ ಹಾಗಿಲ್ಲ. ಹಿಟ್ಲರ್ ಮತ್ತು ಮುಸೋಲಿನಿಯವರೊಡನೆ ನಿಕಟ ಬಾಂಧವ್ಯ ಬೆಳೆಸಿ ಅವರ ಸಹಾಯದಿಂದ ಈಸ್ಟ್ ಇಂಡೀಸನ್ನು ವಶಪಡಿಸಿಕೊಳ್ಳಲೆತ್ನಿಸಬಹುದು. ಈಸ್ಟ್ ಇಂಡೀಸನ್ನು ಜರ್ಮನರ ವಶವಾಗಲು ಬ್ರಿಟನು ಎಷ್ಟರಮಟ್ಟಿಗೆ ಬಿಡದು [illegible] ಮತ್ತು ಜರ್ಮನಿಗೂ ಸಾಧ್ಯವೂ ಇಲ್ಲ. ಆದುದರಿಂದ ಜಾಪಾನಿನೊಡನೆ ಹೀಗಾದರೂ ಒಪ್ಪಂದ ಮಾಡಿಕೊಂಡರು ಹಿಟ್ಲರರು ಈಸ್ಟ್ ಇಂಡೀಸನ್ನು ಅದಕ್ಕೆ ಬಿಟ್ಟುಬಿಡುವ ಎಂತ್ರ ಹೂಡಬಹುದು. ಸಾಮ್ರಾಜ್ಯ ದಾಹದಿಂದ ಬಾಯಿಬಿಡುವ ಜಾಪಾನು ಈ ಬಲೆಗೆ ಬಿದ್ದು ಮುಂದೊತ್ತಿದರೆ ಅಮೇರಿಕ ಇಂಗ್ಲೆಂಡುಗಳೊಂದಿಗೆ ಅದನ್ನು ಎದುರಿಸಬೇಕಾದೀತು.

ನಿಮ್ಮ ಪೂರ್ಣ ತೃಪ್ತಿಗಾಗಿ ಯಾವಾಗಲೂ ಉತ್ತಮ ಮಾಲನ್ನೆ ಕೊಂಡುಕೊಳ್ಳಿರಿ

ನೀವು ತೃಪ್ತಿಗೊಂಡಿಲ್ಲವಾದರೆ ಹಣ ವಾಪಸ್ಸು [illegible] ಇಲ್ಲವಾದರೆ ನಿಮ್ಮ ಮಾಲು ಬೇಕೆಂಬುದನ್ನು ತಿಳಿಸಿರಿ.

ಅಂದವಾದ ಆಕೃತಿ

[illegible] ಬಾಕ್ಸ್

401



ನಂಬ್ರ 424 [illegible]



ನಂಬ್ರ 428



15 ವಜ್ರಗಳುಳ್ಳ ಲಿವರ್ ಚಲನೆ

ನಂ. 490 [illegible] ಗೋಲ್ಡ್ 10 ವರ್ಷ 23 12

ನಂ. 491 9 [illegible] ರೂ 34-0

ಅಂಚೆ ವೆಚ್ಚಕ್ಕೆ 9 ಆಣೆ ಹೆಚ್ಚಿಗೆ

ಹೆಚ್ಚಿನ ವಿವರಗಳಿಗೆ ನಮ್ಮ ಹೊಸ ಪಟ್ಟಿಯಾಗಿ ನಂಬ್ರ 16 ತರಿಸಿರಿ (ಪತ್ರವ್ಯವಹಾರ ಇಂಗ್ಲಿಷಿನಲ್ಲಿ)

ಎಲ್ಲಾ ಸ್ವಿಸ್ ತಯಾರಿ

ಗ್ಯಾರಂಟಿಯುಳ್ಳ ಲಿವರ್ ವಾಚು

ಪತ್ರ ಅಥವಾ ಚೌಕಾಕಾರ

[illegible] 14

ನಂ. [illegible] ರೂ. 2

ನಂ. 424 [illegible] ರೂ. 8

ನಂ. 425 [illegible] ರೂ 9 6

ನಂ. 426 [illegible] ಗೋಲ್ಡ್ 10 ವ. 15 4

15 ವಜ್ರಗಳುಳ್ಳ ಲಿವರ್

ನಂ 455 [illegible] 17 0

ನಂ [illegible] ಗೋಲ್ಡ್ ರೂ 22 2

ವಜ್ರಗಳುಳ್ಳ ಲಿವರ್ ಚಲನೆ

ನಂ 428 [illegible] ರೂ. 10 4

ನಂ 430 ರೋಲ್ಡ್ ಗೋಲ್ಡ್ 10 ವ. 17 0

ಸ್ತ್ರೀಯರಿಗೆ ಪುಟ್ಟ ವಾಚು.

ನಂ. 460 490

[illegible]

ನಂ. 460 [illegible] ರೂ. 11-14

ನಂ. 461 ಚಿನ್ನದ ಕವಚ ರೂ. 13 10

ನಂ 462 ರೋಲ್ಡ್ ಗೋಲ್ಡ್ 10 ವ. 17 0

BAPALAL & CO.,

101, Abdul Rehman Street, BOMBAY, 3.

(೧ನೇ ಪುಟದಿಂದ ಮುಂದರಿಸಿದ್ದು.)

ಪತಿತ್ವದ ಪಟ್ಟ ಕಟ್ಟಿತು. ಇವರು ನಾಯಕತ್ವ ವಹಿಸಿದ ಮೇಲೆ ಫ್ರೆಂಚ್ ನವ ಉತ್ಸಾಹದಿಂದ ತುಂಬಿ ಪ್ರಾಣವ ಹಂಗು ತೊರೆದು ಇಟ್ಟ ಹೆಜ್ಜೆ ಹಿಂದಿಡದೆ ವೈರಿಯನ್ನೆದುರಿಸುವ ಬದಲಿಗೆ, ಹುರಿಗೊಳಿಸುವ ಚತುರ ಹಾಗೂ ಸಾಹಸಪರ ನೇತೃತ್ವದ ಅಭಾವದಿಂದ ಮತ್ತಷ್ಟು ಉತ್ಸಾಹಗುಂದಿ ಹಿಂದೆ ಸರಿಯುತ್ತಿತ್ತು. ಈ ವೃದ್ಧ ನಾಯಕರೇ ಆತ್ಮವಿಶ್ವಾಸವಿಲ್ಲದೆ, ಪ್ರಾಣವನ್ನು ಅಂಗೈಯಲ್ಲಿರಿಸಿ ಹೋರಾಡುವ ಶೌರ್ಯ ಸಾಹಸವಿಲ್ಲದೆ, ಜರ್ಮನರ ಪ್ರಚಂಡಧಾಳಿಗಂಜಿ ಸಂದೇಹಗೊಳ್ಳುತ್ತಿದರು. ಒಳಗಿಂದೊಳಗೆ ಸಂಧಿಮಾಡಿಕೊಳ್ಳುವ ಆಲೋಚನೆಮಾಡಿ ಅತ್ಯಂತ ಅವಿವೇಕಪರ ಹಾಗೂ ನಾಚಿಕೆಕರ ರೀತಿಯಲ್ಲಿ ಹಿಟ್ಲರರಿಗೆ ಶರಣಾಗತರಾದರು. ಇಂದೀಗ ರೈನೋಡರು ವಿಚಿತ್ರವೆನಿಸುವ ಮೋಟರ್ ಅಪಘಾತಕ್ಕೆ ಸಿಕ್ಕಿ ಗಾಯಗೊಂಡು ಹಾಸಿಗೆ ಹಿಡಿದಿರುತ್ತಾರೆ. ಫ್ರೆಂಚ್ ರಾಜನೀತಿಜ್ಞರೆಲ್ಲ ಹೇಳಹೆಸರಿಲ್ಲದೆ ಕಣ್ಮರೆಯಾಗಿದ್ದಾರೆ. ರಕ್ತ ಹೆಪ್ಪುಗಟ್ಟಿದ ಒಂದು ಕಾಲು ಗೋರಿಯಲ್ಲಿರುವ ಮಾರ್ಶಲ್ ಪೆಟೈನ್ ಮುತ್ತಾತರು ಇಂದೀಗ ಫ್ರಾನ್ಸಿನ ಪುರಾತರಾಗಿ ಸರ್ವ ಸ್ವತಂತ್ರರಾಗಿ ರಾಜ್ಯಭಾರ ನಡಿಸಹತ್ತಿದ್ದಾರೆ. ಸ್ವಾತಂತ್ರ್ಯ, ಸಮಾನತ್ವ ಮತ್ತು ಬಂಧುತ್ವದ ಬೀಜಮಂತ್ರವನ್ನು ಲೋಕಕ್ಕೆ ಸಾರಿ ಸ್ವಾತಂತ್ರ್ಯದೇವಿಯ ಗರ್ಭಗುಡಿಯಂತಿದ್ದ ಫ್ರಾನ್ಸು ಡಿಕ್ಟೇಟರರ ಪಾದಾಕ್ರಾಂತವಾಗಿ ನೆಲಹಿಡಿದಿದೆ, ಭೂದೇವಿಯ ಮುಕುಟಮಣಿಯಂತಿದ್ದ ಪೇರಿಸು ಇಂದು ಧೂಳಲ್ಲಿ ಬಿದ್ದು ಮುಚ್ಚಿಹೋಗಿದೆ ಮುತ್ತಾತ ಪೆಟೈನರು ತನ್ನ ಡಿಕ್ಟೇಟರ ಯಜಮಾನರ ಕಾಳಕ್ಕೆ ತಕ್ಕ ಹೆಜ್ಜೆಹಾಕಿ ಅವರ ರೀತಿನೀತಿಯನ್ನನುಸರಿಸಿ ಫ್ರಾನ್ಸನ್ನು ಪುನರುಜ್ಜೀವಿಸಲು ಸೊಂಟಕಟ್ಟಿದ್ದಾರೆ. ಡಿಕ್ಟೇಟರರನ್ನೊಲಿಸಿಕೊಳ್ಳುವ ಅವರ ಆತುರದ ಪರಿಣಾಮವಾಗಿ, ಇಂದೀಗ ಅರ್ಧಶತಮಾನದಿಂದ ತಮ್ಮ ಪರಮಾಪ್ತರಾಗಿದ್ದ ಇಂಗ್ಲಿಷ್ ನಾವಿಕರೊಡನೆ ಫ್ರೆಂಚ್ ನಾವಿಕರು ಕಾದಾಡುವ ಹೃದ್ರಾವಕ ಪರಿಸ್ಥಿತಿಯುಂಟಾಗಿದೆ ಭೂಮಧ್ಯಸಾಗರದ ಓರನ್ ಎಂಬ ಫ್ರೆಂಚ್ ಬಂದರದಲ್ಲಿ ಫ್ರೆಂಚ್ ಮತ್ತು ಬ್ರಿಟಿಷ್ ಹಡಗು ಪಡೆಗಳೊಳಗೆ ನಡೆದ ಯುದ್ಧದಿಂದ ಪೆಟೈನ್ ಸರಕಾರವು ರೇಗಿಬಿದ್ದು ಇಂಗ್ಲೆಂಡಿನೊಡನೆ ರಾಜಕೀಯ ಸಂಬಂಧವನ್ನ ಕಡಿದುಹಾಕಿದೆ. ತಮಗೆ ವಿರುದ್ಧವಾದ ಫ್ರೆಂಚ್ ನೌಕಾಪಡೆಯನ್ನು ಬಲಾತ್ಕಾರದಿಂದ ವಶಪಡಿಸಿಕೊಳ್ಳುವ ಇಲ್ಲವೆ ಹೋರಾಡಿ ಮುಳುಗಿಸಿಬಿಡುವ ಚರ್ಚಿಲ್ಲರ ಉಗ್ರಘೋಷಣೆಯು ಡಿಕ್ಟೇಟರರ ಕಿಬ್ಬದಿಯ ಮುಳ್ಳಾಗಿ ಪರಿಣಮಿಸಿದೆ. ಪುಂಡ ಲೂಟಿಗಾರ, ಭೂರ್ತನೆಂದೆಲ್ಲಾ ಕಂಠಾಟಿಟ್ಟ ಬೈಯ್ಯ ತೊಡಗಿವೆ ಇಟಲಿ ಮತ್ತು ಜರ್ಮನಿಯ ಪತ್ರಿಕೆಗಳು ಚರ್ಚಿಲ್ಲರನ್ನು. ಇದರ ಪರಿಣಾಮವಾಗಿ ಫ್ರೆಂಚ್ ನೌಕಾಪಡೆಯನ್ನು ನಿಶ್ಶಸ್ತ್ರಗೊಳಿಸುವ ಶರ್ತವನ್ನು ಡಿಕ್ಟೇಟರರು ಕೂಡಲೆ ಸಡಿಲುಮಾಡಿರುತ್ತಾರೆ. ಇದರ ಉದ್ದೇಶವೇನೆಂದು ಹೇಳಬರುವುದಿಲ್ಲ. ಅಂತೂ ಮುತ್ತಾತ ಪೆಟೈನರು ಡಿಕ್ಟೇಟರ ಹೆಜ್ಜೆಯಲ್ಲಿ ಹೆಜ್ಜೆ ಹಾಕಿ, ನಿನ್ನೆಯವರೆಗಿನ ಫ್ರಾನ್ಸಿನ ಆತ್ಮೀಯಬಂಧು ಇಂಗ್ಲೆಂಡಿಗೆ ಹಿಂದಿನಿಂದ ತಿವಿಯುವ ಸಂಭವ ತೋರುತ್ತದೆ.

ಮೈಸೂರು

(ನಮ್ಮ ಸ್ವಂತ ವಾತ್ಮೀದಾರರಿಂದ)

ಮೈಸೂರು ತಾ. 8–7–'40

ರಾಜಕೀಯ ಚಟುವಟಿಕೆಗಳು— ಕಳೆದ ವಾರಾಂತ್ಯದಲ್ಲಿ ಮೈ। ಸಂ।ದಲ್ಲಿ ರಾಜಕೀಯ ಚಟುವಟಿಕೆ ಸ್ವಲ್ಪ ಬಲವಾಗಿಯೇ ಇದ್ದಿತ್ತು. ಮೈ। ಕಾಂ। ಮಾಜಿ ಅಧ್ಯಕ್ಷ ಶ್ರೀ. ಎಚ್. ಸಿ. ದಾಸಪ್ಪನವರ ಮೇಲೆ ಲೀ। ಆಫ್। ಆರ್ಡ್ಸ್ ಮೋರಿ ಬರಲಾಗಿದ್ದ ಮುಕದ್ದಮೆಯು ಹೈಕೋರ್ಟಿನಲ್ಲಿ ವಿಚಾರಣೆ ನಡೆದು ಚೀಫ್ ಜಸ್ಟಿಸ್ ಸರ್ ಡಿ ಆರ್ ಸಿ ಕ್ರೈಲಿಯವರು ತಮ್ಮ ತೀರ್ಪಿನಲ್ಲಿ "ಸಂ।ದಲ್ಲಿ ಸತ್ಯವು ರಾಜಕೀಯ ಚರ್ಚೆಗೆ ಇಳಿಯುತ್ತಿದೆ ಎಂಬ ಅವಹೇಳನ ಬಗ್ಗೆ ಇಡೀ ಭಾರತಕ್ಕೆ ಅಪಮಾನಕರವಾದದ್ದೆಂದು ಮೈ। ಕಾಂ। ಅಧ್ಯಕ್ಷರೂ, ಮುಂದಾಳುಗಳೂ, ಇತರರೂ ಹೇಳಿಕೆ ಹೊರಡಿಸಿ ಚೀಫ್ ಜಸ್ಟಿಸ್ಸರ ಅವಹೇಳನ ಖಂಡಿಸಿದರು. ಈ ತೀರ್ಪಿನ ಬಗ್ಗೆ ಸ್ಥಳೀಯ ಕನ್ನಡ ಪತ್ರಿಕೆಗಳು ಗಮನಾರ್ಹವಾದ ಅಗ್ರಲೇಖನಗಳನ್ನು ಬರೆದು ಖಂಡಿಸುವಾಗ್ಯ, ಒಂದು ಆಂಗ್ಲೋ ಇಂಡಿಯನ್ ಪತ್ರಿಕೆಯು ಚೀಫ್ ಜಸ್ಟಿಸರನ್ನು ವಹಿಸಿಕೊಂಡು ಕನ್ನಡ ಪತ್ರಿಕೆಗಳ ಅಗ್ರಲೇಖನ ಟೀಕಿಸಿ ಖಂಡಿಸಿರುವುದನ್ನು ನೋಡಿದರೆ ವಿಷಾದ ಉಂಟಾಗುತ್ತದೆ. ದಾಸಪ್ಪನವರ ಹೈಕೋರ್ಟು ವ್ಯವಹಾರ ಬಗ್ಗೆ ನ್ಯಾ। ಸಭೆಯಲ್ಲಿ ಓರ್ವ ಸದಸ್ಯರು ಚರ್ಚೆಗೆ ಒಂದು ಅವಸರ ಠರಾವು ತರಲು ಸಭೆಯ ಅಧ್ಯಕ್ಷರು ಇದಕ್ಕೆ ಚರ್ಚೆಗೆ ಅವಕಾಶವೀಯದೆ ಮುಂದಕ್ಕೆ ತಳ್ಳಿದರು. ಮೈ। ಕಾಂ। ವರ್ಕಿಂಗ್ ಸಮಿತಿ ಸಭೆಯು ಕಾಂ। ಅಧ್ಯಕ್ಷರಧ್ಯಕ್ಷತೆಯಲ್ಲಿ ಮೊನ್ನೆ ಬೆಂಗಳೂರಲ್ಲಿ ನಡೆದು ಬರಲಿರುವ ಚುನಾವಣೆಗಾಗಿ ಮತ್ತು ಇತರ ವಿಷಯ ಚರ್ಚಿಸಿದರು.

ವೈಮಾನಿಕ ಶಿಕ್ಷಣ ವ್ಯವಸ್ಥೆ— ಮೈಸೂರು ಸರಕಾರದವರು "ಶ್ರೀಕೃಷ್ಣರಾಜೇಂದ್ರ ಏರ್‌ಪ್ಲೇನ್ ಸೆಂಟರ್ ಎಂಬ ಒಂದು ವೈಮಾನಿಕ ಶಿಕ್ಷಣ ಕೇಂದ್ರವನ್ನು ಸುಮಾರು 12ಲಕ್ಷ ರೂ. ಖರ್ಚುಮಾಡಿ ಬೆಂಗಳೂರು ಎಲಹಂಕ ಬಳ್ಳಾರಿ ಏರೋಡ್ರೋಂನಲ್ಲಿ ಸ್ಥಾಪಿಸುತ್ತಿರೆಂದೂ ಇದಕ್ಕೆ ಮೈಸೂರು ಯುವಕರನ್ನು ಸೇರಿಸಿಕೊಂಡು ಓರ್ವ ನುರಿತ ಬ್ರಿಟಿಷ ಪ್ರವೀಣರಿಂದ ಶಿಕ್ಷಣಕೊಡಿಸುತ್ತಿರೆಂದೂ ಹೇಳಲಾಗಿದೆ ಈಗ ಬ್ರಿಟಿಷರಿಗೆ ಕೊಡುತ್ತಿರುವ ಪ್ರಾಗಢಿಯಲ್ಲಿ ಅರ್ಧಭಾಗ ಈ ಶಿಕ್ಷಣ ಖರ್ಚಿಗೂ ಮತ್ತೆ ಅರ್ಧ ಯುದ್ಧ ಸಹಾಯಕ್ಕೂ ಕೊಟ್ಟು, ಶಿಕ್ಷಣ ಪಡೆದ ಯುವಕರನ್ನು ಸಮಯವರಿತು ವಿಮಾನ ಸೇನೆಗೆ ಕಳುಹಿಸಲು ಒಂದು ಯೋಜನೆಯನ್ನು ಸರಕಾರದವರ ಯೋಚನೆಯಲ್ಲಿದೆಂದೂ ಹೇಳಲಾಗಿದೆ.

ಶ್ರೀ. ಶಿವರಾಮ ಕಾರಂತರು— ಮಂಗಳೂರಿನ ಶ್ರೀ. ಶಿವರಾಮ ಕಾರಂತರು ಬೆಂಗಳೂರು ಕ। ಸಾ। ಪ। ಬೆಳ್ಳಿ ಹಬ್ಬದ ಉತ್ಸವಗಳಲ್ಲಿ ಭಾಗವಹಿಸಲು ಬಂದಿದ್ದ ಕಾಲದಲ್ಲಿ ಮೈಸೂರು ನಗರಕ್ಕೂ ಬಂದಿದ್ದರು. ಶ್ರೀಯುತರು ಮರಿಮಲ್ಲಪ್ಪನವರ ಹೈಸ್ಕೂಲ್ ಕರ್ನಾಟಕ ಸಂಘ ಆರಂಭ ಭಾಷಣ ಮಾಡಿದರು. ಮತ್ತು ಮೈ। ವಿಶ್ವ ವಿದ್ಯಾನಿಲಯ ಸಂಘದಾಶ್ರಯದಲ್ಲಿ ದೊಡ್ಡ ಸಭೆಯೊಂದರಲ್ಲಿ ಮೈ। ಮಹಾರಾಜ ಕೋಲೇಜಿನಲ್ಲಿ ಶ್ರೀ. ಎ. ಆರ್. ಕೃಷ್ಣ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ 'ನಾಟಕಗಳು' ಎಂಬ ವಿಷಯದ ಮೇಲೆ ಭಾಷಣ ಮಾಡಿ ನೆರೆದವರಿಗೆ ಪ್ರಯೋಜನ ಬೆಳೆಸಿದರು.

ನಾಯಿಗಳ ಪ್ರದರ್ಶನ— ಮೈಸೂರು ಸಂ।ದ ಕೆನಲ್ ಕ್ಲಬ್ ಆಶ್ರಯದಲ್ಲಿ ಬೆಂಗಳೂರು ಲಾಲ್‌ಬಾಗ್ ಗಾಜಿನ ಮನೆಯಲ್ಲಿ ನಿನ್ನೆ ಒಂದು ನಾಯಿಗಳ ಪ್ರದರ್ಶನ ನಡೆಯಿತು. ಅನೇಕ ಮಾದರಿಯ ನಾಯಿಗಳನ್ನು ಇದರಲ್ಲಿ ಪ್ರದರ್ಶಿಸಲಾಗಿತ್ತಲ್ಲದೆ, ಸೊಗಸಾದ ನಾಯಿಗಳ ಮಾಲಿಕರಿಗೆ ಬಹುಮಾನ ಕೊಡಲಾಯಿತು. ಈ ಪ್ರದರ್ಶನದಲ್ಲಿ ಬಂದ ಉತ್ಪತ್ತಿಯನ್ನು ದಂಡಿನ ಮತ್ತು ಸಂ।ದ ಯುದ್ಧ ಸಮಿತಿಗೆ ಕೊಡಲಾಯಿತು.

ವಕೀಲ್ ಕೊಲೆ ಮೊಕದ್ದಮೆ— ಹಿಂದೆ ನವಯುಗದಲ್ಲಿ ವರದಿಮಾಡಲಾಗಿದ್ದ ಬೆಂಗಳೂರು ವಕೀಲ್ ಶ್ರೀ. ಮೋಹನ್ನಗೌಡರ ಕೃಷ್ಣಮೂರ್ತಿ ಕೊಲೆ ಮೊಕದ್ದಮೆ ಸ್ಥಳೀಯ ಮ್ಯಾಜಿಸ್ಟ್ರೇಟರಿಂದ ವಿಚಾರಣೆಯಾಗಿ ಅವರು ಸೆಷನ್ಸಿಗೆ ವಿಚಾರಣೆಗೆ ಕಳುಹಿಸಿದ್ದು, ಸ್ಪೆ। ಸೆ। ಜಡ್ಜ್ ಶ್ರೀ. ಎಸ್. ಸುಂದರರಾಜಯ್ಯಂಗಾರರು ಇದೇ ಮಾಹೆ ತಾ. 1ರಿಂದ ವಿಚಾರಣೆ ನಡೆಸುತ್ತಿರುವರು, ಅಪಾದಿತರುಗಳಿಗೆ ಕೆಳಕೋರ್ಟಿನಲ್ಲಿ ಹೊರಿಸಿದ್ದ ಸೆಕ್ಷನ್ಸ್ (ಅಪಾದನೆ)ಗಳಲ್ಲಿ ಸ್ವಲ್ಪ ಬದಲಾವಣೆ ಮಾಡಲಾಯಿತು. 'ಕೊಲೆಮಾಡಿದರೆಂದು ಐದನೇ ಆಪಾದಿತ ಶ್ರೀ. ಎಸ್. ಕೆ. ವೆಂಕಟರಂಗ್ಯಂಗಾರ್ರ ಮೇಲೆ ಚಾರ್ಜ್ ಮಾಡಿದ್ದನ್ನು ರದ್ದುಗೊಳಿಸಿ ಕೊಲೆಗೆ ಸಹಾಯಮಾಡಿದರೆಂಬ ಅಪಾದನೆಹೊರಿಸಿ ತಿದ್ದುಪಡಿಮಾಡಿದ್ದಾರೆ. ಶ್ರೀ. ಎಸ್. ಕೆ. ನಿವರ ಮದ್ರಾಸ್ ಸುಪ್ರಸಿದ್ಧ ವಕೀಲ್ ಶ್ರೀ. ವಿ. ವಿ. ಶ್ರೀನಿವಾಸ ಐಯ್ಯಂಗಾರ್ರ ವಾದ ಮಾಡುತ್ತಾರೆ. ಡಿಫೆನ್ಸ್ ಸಾಕ್ಷಿಗಾರ ಪಟ್ಟಿ ಕೋರ್ಟಿಗೆ ಒಪ್ಪಿಸಲಾಯಿತು. ಸಾಕ್ಷಿಗಳು ಪಾಟಿಸವಾಲ್ ನಡೆಯಿಸಲಾಗುತ್ತಿದೆ. ಈಗಾಗಲೇ ಅನೇಕರು ಸಾಕ್ಷಿಯಿತ್ತಿರುತ್ತಾರೆ. ಮೊಕದ್ದಮೆ ವಿಚಾರಣೆಯಾಗುತ್ತಿದೆ

ವಿಶೇಷ ವಾರ್ತೆಗಳು— ಕಲ್ಕತ್ತೆಯ ಬೇಲೂರು ಶ್ರೀ. ರಾಮಕೃಷ್ಣಾಶ್ರಮದ ಜನರಲ್ ಸೆಕ್ರೆಟರಿ ಶ್ರೀ. ಮಾಧವಾನಂದಜಿಯವರು ಮೈಸೂರಿಗೆ ಬಂದಿದ್ದರು. ಇವರಿಗೆ ಮೈಸೂರು ಪುರಪ್ರಮುಖರುಗಳು ಒಂದು ಭಿನ್ನವತ್ತಳೆ ಅರ್ಪಿಸಿದ್ದನ್ನು ಸ್ವೀಕರಿಸಿ ಭಾಷಣಮಾಡಿದರು. ಮೈಸೂರು ವಿಶ್ವವಿದ್ಯಾನಿಲಯ ಸಂಘಕ್ಕೆ ಮುಂದಿನ ಸಾಲಿಗೆ ಮಿ। ಈಗಲ್‌ಟನ್‌ರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ ಸೆಪ್ಟಂಬರ ಮಾಹೆಯಲ್ಲಿ ನ್ಯಾಯವಿಧಾಯಕ ಮತ್ತು ಪ್ರಜಾಪ್ರತಿನಿಧಿ ಸಭೆಗಳಿಗೆ ನಡೆಯಬೇಕಾಗಿರುವ ಚುನಾವಣೆಗಳನ್ನು ಮುಂದಕ್ಕೆ ಹಾಕಬೇಕೆಂದು ನ್ಯಾ. ಸಭೆಯಲ್ಲಿ 16 ಮತ್ತು 2 ಓಟುಗಳಿಂದ ತೀರ್ಮಾನವಾಯಿತು. ಸಂ॥ ದಲ್ಲಿ ಶೀಘ್ರದಲ್ಲೇ ಒಂದು (ಲಾ) ನ್ಯಾಯಕಾಲೇಜ್ ಸ್ಥಾಪಿಸಲು ಸರ್ಕಾರದವರು ಏರ್ಪಡಿಸುತ್ತಿರುವರಂತೆ. ಬೆಂಗಳೂರು ವಿಶ್ವವಿದ್ಯಾಲಯ ಸಂಘಕ್ಕೆ ಮುಂದಿನ ಸಾಲಿಗೆ ಪ್ರೊ. ವೆಂಕಟರಾವ್ ಟಲಾಂಗರನ್ನು ಅಧ್ಯಕ್ಷರನ್ನಾಗಿ ಆರಿಸಲಾಯಿತು. ಹಾಸನದ ಜಿಲ್ಲಾ ಬೋರ್ಡು ಅಧ್ಯಕ್ಷಸ್ಥಾನಕ್ಕೆ ಚುನಾವಣೆಯು ನಡೆದದ್ದು ಸರಿಯಾಗಿ ನಡೆಯಲಿಲ್ಲವೆಂದೂ, ಅದನ್ನು ಪುನಃ ನಡೆಸಬೇಕೆಂದೂ, ಆ ಜಿಲ್ಲಾ ಬೋ. ಕೆಲವು ಸದಸ್ಯರುಗಳು ಒಂದು ಮೊಕದ್ದಮೆ ಅರ್ಜಿ ಹೂಡಿರುವುದನ್ನು ಜ॥ ಮ್ಯಾ॥ರು ಸ್ವೀಕರಿಸಿ ಸರ್ಕಾರಕ್ಕೆ ತಿಳಿಸಿರುತ್ತಾರೆ. ಯುದ್ಧಸಹಾಯಕ್ಕೆ ನಿಧಿಸೇರಿಸುವ ಸಲುವಾಗಿ ಮೈ. ಸಂ. ಕೆಲವು ಭಾಗಗಳಲ್ಲಿ ಈಗಾಗಲೇ ಯುದ್ಧಸಮಿತಿ ನೇಮಿಸಿ ಹಣ ಕೂಡಿಸುತ್ತಿದ್ದಾರೆ. ಮೈಸೂರು ಶ್ರೀಚಾಮ ಮಹಾರಾಜ ಸಂಸ್ಕೃತ ಕಾಲೇಜ್ ವಿದ್ಯಾರ್ಥಿಗಳು 'ಸಂಸ್ಕೃತ ಹಬ್ಬವನ್ನ' ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದರು, ಮೈಸೂರಿನಲ್ಲಿ ಸೋನೆ ಮಳೆಬಿದ್ದು ಹವಾಮಾನ ಸರಿಯಾಗಿಲ್ಲ.

"ನಾಮುದಾರ್ಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ನಸೋನಿ ಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ.

"ಸೆಮಿನಾ ಟೋನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನ ವುಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ.

ಕಿಮ್ಮತು ರೂ. 3-0-0 ಡಬ್ಬಿ 0-8-0

ಸೊರಠ್ ಫಾರ್ಮಸಿ,
ನಲ್ ಬಜಾರ, ಡಂಕನ್ ರೋಡ್,
ಮುಂಬಾಯಿ. 4

Sorath Pharmacy,
Null Bazzar, Duncan Road,
BOMBAY 4.

The Karnataka Provident Company, Limited, Udipi.

Applications are invited from well educated respectable persons for the following posts, so as to reach the undersigned on or before 25-7-40

1 Six organisers on a fixed monthly allowance of Rs 25/ to Rs. 75. Cash security of Rs. 500 is essential.

2. A Secretary on Rs. 20 to Rs 65/ per month Cash security of Rs 350/- is essential.

3. Two accountants on Rs. 15 to Rs. 60/ per month. Cash Security of Rs. 300 is essential.

For full particulars please apply to or see the undersigned personally

KARNATAKA PRO. CO. LTD. UDIPI.
25-6-1940.

B Yamanacharya
B A. B.L., *Advocate, Chairman.*

ಲಾಭದ ಸುದ್ದಿ

(ನೀವೂ ಓದಿ; ಮಿತ್ರರಿಗೂ ತಿಳಿಸಿರಿ)

ಕನ್ನಡ ಸಾಹಿತ್ಯ ಪರಿಷತ್ತಿನ ಬೆಳ್ಳಿಯ ಹಬ್ಬ! ಕನ್ನಡ ಸಾಹಿತ್ಯದ ಕವಿಯುಣ್ಣಲು ಒಳ್ಳೆಯ ಹಬ್ಬ!! ಕನ್ನಡ ಸಾಹಿತ್ಯ ಪರಿಷತ್ತಿಗೆ 25 ವರ್ಷ ತುಂಬಿತು; ಅದರ ಬೆಳ್ಳಿಯ ಹಬ್ಬದ ಸಂಭ್ರಮವು ಕನ್ನಡ ನಾಡಿನ ಮೂಲೆ ಮೂಲೆಗಳಲ್ಲೂ ಧುಮುಧುಮಿಸುತ್ತಿದೆ ಆದರೆ ರಸದೂಟವಿಲ್ಲದೆ ಹಬ್ಬ ಬೆಳಗದು. ಆದಕ್ಕಾಗಿ ಕನ್ನಡಿಗರೆಲ್ಲರಿಗೂ ಹಬ್ಬದೂಟ ನಮ್ಮದು! ಕನ್ನಡ ಸಾಹಿತ್ಯ ಪರಿಷತ್ತಿನ ಬೆಳ್ಳಿಯ ಹಬ್ಬ-ಪ್ರತಿಯೋರ್ವ ಕನ್ನಡಿಗನಿಗೂ ಬೆಳ್ಳಿಯ ಹಬ್ಬವಾಗಬೇಕೆಂದೇ ಈ ಕೆಳಗಿನ ಪುಸ್ತಕಗಳನ್ನು ಉಚಿತವಾಗಿ ಕೊಡುವೆವು.

ಅಖಿಲ ಕನ್ನಡಿಗರ ಮೆಚ್ಚುಗೆಗೆ ಪಾತ್ರವಾದ, ಕರ್ನಾಟಕದ ಪ್ರಸಿದ್ಧ ಕವಿಗಳ ಉತ್ತಮ ಕವನ ಸಂಗ್ರಹವಾದ 0-12-0 ಬೆಲೆಯ 'ಕಾವ್ಯಸಾಮ್ರಾಜ್ಯ' ಎಂಬ ಪುಸ್ತಕವನ್ನು ತರಿಸುವವರಿಗೆ 'ಪುರುಷವಧು'ಎಂಬ ನಾಲ್ಕಾಣೆ ಬೆಲೆಯ ಏಕಾಂಕ ನಾಟಕವನ್ನೂ ಎರಡಾಣೆ ಬೆಲೆಯ 'ಮುಂದಿನ ದೇವರು' ಎಂಬ ಪ್ರಬಂಧವನ್ನೂ ಉಚಿತವಾಗಿ ಕೊಡುವೆವು.

'ಸಂಶಯ ಪಿಶಾಚಿ' ಎಂಬ 0-6-0 ಬೆಲೆಯ ಸಾಮಾಜಿಕ ನಾಟಕವನ್ನು ತರಿಸುವವರಿಗೆ 0-2-0 ಬೆಲೆಯ ನಾಟಕಕಿಗಳು ಎಂಬ ಪುಸ್ತಕ ಉಚಿತ.

'ಸನ್ಯಾಸಿಯ ಸೋಗಿನಲ್ಲಿ'ಎಂಬ 0-8-0 ಬೆಲೆಯ ಕಾದಂಬರಿಯನ್ನು ತರಿಸುವವರಿಗೆ 0-4-0 ಬೆಲೆಯ ಹೆಂಡ್ತಿಗಂಡನಾದರೆ ಎಂಬ ಏಕಾಂಕ ನಾಟಕ ಧರ್ಮಾರ್ಥ!

'ನಂದಾದೀಪ' ಎಂಬ 0-8-0 ಬೆಲೆಯ ಸಣ್ಣ ಕತೆಗಳ ಸಂಗ್ರಹವನ್ನು ತರಿಸುವವರಿಗೆ 0-2-6 ಬೆಲೆಯ 'ಸ್ವತಂತ್ರಜೀವನೋಪಾಯ' ಎಂಬ ಏಕಾಂಕ ನಾಟಕ ಉಚಿತ. 'ಮಧುವನದ 12 ಕತೆಗಳು' ಎಂಬ 0-8-0 ಬೆಲೆಯ ಪುಸ್ತಕವನ್ನು ತರಿಸುವವರಿಗೆ ಒಂದೊಂದಾಣೆ ಬೆಲೆಯ 'ಅತ್ತ ಬೆಳೆದ ಗಿಡ್ಡಿಯ ಮದುವೆ' ಮತ್ತು 'ಮುದುಕನ ಹೆಂಡತಿ ಫೊಟೊಗ್ರಾಫ್' ಎಂಬ ಪುಸ್ತಕಗಳು ಉಚಿತ.

ಈ ಯೋಜನೆಯು ಒಂದು ತಿಂಗಳ ವರೆಗ ಮಾತ್ರ ಇರುವುದರಿಂದ ಕನ್ನಡಿಗರು ತೀವ್ರವೇ ತಮಗೆ ಬೇಕಾದ ಪುಸ್ತಕಗಳನ್ನು ಸ್ಟಾಂಪು ಮೂಲಕ ಕ್ರಯ ಕಳುಹಿಸಿ ತರಿಸಿಕೊಳ್ಳಬೇಕಾಗಿ ವಿನಂತಿ. ಈ ಸಂದರ್ಭವು ಇನ್ನು ಥಟ್ಕನೆ ಸಿಗಲಾರದು..

ವಿಳಾಸ:— ಕಾರ್ಯದರ್ಶಿ,
ಕಿರಿಯರ ಪ್ರಪಂಚ, ಉಡುಪಿ

ದೇಶದ ಭೀಕರ ನಿರುದ್ಯೋಗ ಸಮಸ್ಯೆ

ಗೃಹ ಕೈಗಾರಿಕೆಗಳ ಆವಶ್ಯಕತೆ.

ಯಂತ್ರ ಕಾರ್ಖಾನೆಗಳಿಂದ ನಿರುದ್ಯೋಗವು ಹೆಚ್ಚುವುದೇ?

ಗ್ರಾಮ ನಗರಗಳಲ್ಲಿಯ ನಿರುದ್ಯೋಗಿಗಳು ಏನು ಮಾಡಬಹುದು?

ಇಂದು ನಮ್ಮ ದೇಶದ ಎಲ್ಲ ಹಿತಚಿಂತಕರ ಗಮನವೂ ನಿರುದ್ಯೋಗದ ಸಮಸ್ಯೆಯನ್ನು ಬಗೆಹರಿಸುವುದರ ಕಡೆಗೆ ಆಕರ್ಷಿತವಾಗದಿಲ್ಲ. ಯಾವ ರೀತಿಯಿಂದಲಾದರೂ, ಈ ಭಯಂಕರ ರೋಗವನ್ನು ನಿರ್ಮೂಲಮಾಡಬೇಕೆಂದೇ ಎಲ್ಲರೂ ಬಯಸುತ್ತಿದ್ದಾರೆ. ಆ ಬಗ್ಗೆ ಯೋಚಿಸಲ್ಪಟ್ಟಿರುವ ಉಪಾಯಗಳಲ್ಲಿ ಎಲ್ಲಕ್ಕಿಂತ ಉಪಯೋಗವಾದುದೂ, ಸರ್ವಸಾಮಾನ್ಯವಾಗಿರುವುದೂ ಆದ ಉಪಾಯವೆಂದರೆ ಉದ್ಯೋಗಗಳ ಪ್ರಚಾರ. ದೇಶದ ನಿರುದ್ಯೋಗ ಮತ್ತು ಬಡತನಗಳು ದೂರವಾಗಬೇಕಾದರೆ ಕೇವಲ ಪ್ರಾಚೀನ ಉದ್ಯೋಗಗಳ ಉತ್ಥಾನ ಮತ್ತು ಹೊಸ ಕೈಗಾರಿಕೆಗಳ ಪ್ರಚಾರದಿಂದಲೇ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ.

ದೊಡ್ಡ ಯಂತ್ರಗಳಿಂದ ನಿರುದ್ಯೋಗವು ಹೆಚ್ಚುವುದು

ನಿರುದ್ಯೋಗವು ಹರಡಲು ಯಂತ್ರಗಳೇ ಮುಖ್ಯ ಕಾರಣವೆಂದು ಕೆಲವರ ಮತ. ಇದು ಕೆಲವು ಅಂಶಗಳಲ್ಲಿ ನಿಜವೂ ಹೌದು. ಯಂತ್ರಗಳ ಮೂಲಕ ಒಬ್ಬನು ಅನೇಕ ಮನುಷ್ಯರ ಕೆಲಸವನ್ನು ಮಾಡಿ ಬಿಡುತ್ತಾನಾದ್ದರಿಂದ ಅನೇಕ ಜನರು ಸ್ವಾಭಾವಿಕವಾಗಿ ಕೆಲಸವಿಲ್ಲದೆ ಇರಬೇಕಾಗುವುದು. ಈ ಕಾರಣದಿಂದಲೇ ಯಂತ್ರಗಳಲ್ಲಿ ತಯಾರಾಗುವ ವಸ್ತುಗಳೂ ಕಡಿಮೆ ಬೆಲೆಗೆ ದೊರೆಯುವುವು. ಆದುದರಿಂದಲೇ ನಾವು ನಿರುದ್ಯೋಗಿಗಳಿಗೆ ಉದ್ಯೋಗಗಳನ್ನು ಒದಗಿಸಬೇಕೆಂದಿದ್ದರೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಭಾರಿ ಯಂತ್ರಗಳನ್ನು ಸ್ಥಾಪಿಸುವುದಕ್ಕಿಂತಲೂ ಸಣ್ಣ ಕೈ ಆಯುಧಗಳ ಮೂಲಕ, ನಿರುದ್ಯೋಗಿಗಳಿಂದ ಕೆಲಸ ತೆಗೆದುಕೊಳ್ಳಬೇಕಾಗಿದೆ. ಕಾರ್ಖಾನೆಗಳಿಗೆ ಬದಲಾಗಿ ಗೃಹಕೈಗಾರಿಕೆಗಳ ಪ್ರಚಾರವನ್ನು ಸಾಧ್ಯವಾದಷ್ಟು ಮಾಡಬೇಕು. 1925ನೇ ನವಂಬರ್ 6ನೇ ತಾರೀಕಿನ "ಯಂಗ್ ಇಂಡಿಯಾ"ದಲ್ಲಿ ಮಹಾತ್ಮಜಿಯವರು ಈ ರೀತಿ ಬರೆದಿದ್ದರು—

"ಯಂತ್ರಗಳು, ಕಾರ್ಖಾನೆಗಳಿಗೂ ಸಹ ಸ್ಥಾನವಿದೆ. ಆದರೆ ಅವು ಮನುಷ್ಯನ ಪರಿಶ್ರಮವನ್ನು ಮಾತ್ರ ಅಪಹರಿಸಬಾರದು. ಸುಧಾರಿಸಲ್ಪಟ್ಟ ನೇಗಿಲು ಒಳ್ಳೆಯದೇ, ಆದರೆ ಒಬ್ಬನೇ ಒಬ್ಬನು ಭಾರತದ ಸಮಸ್ತ ಭೂಮಿಯನ್ನು ಉಳಬಲ್ಲವನಾಗಿ ಎಲ್ಲ ಬೆಳೆಗಳಿಗೂ ಒಡೆಯನಾಗಿ, ಕೋಟ್ಯಂತರ ಜನರಿಗೆ ಕೆಲಸವೇ ಇಲ್ಲದಂತಾದರೆ, ಅನೇಕರು ಹಸಿವಿನಿಂದ ಸಾಯಬೇಕಾಗುವುದು."

"ತಾವು ಎಲ್ಲ ವಿಧವಾದ ಯಂತ್ರಗಳನ್ನು ವಿರೋಧಿಸುವಿರಾ" ಎಂದು ಒಬ್ಬರು ಮಹಾತ್ಮರನ್ನು ಪ್ರಶ್ನಿಸಲು, ಅವರು ಈ ರೀತಿ ಉತ್ತರವಿತ್ತರು "ನನ್ನ ಉತ್ತರವೇನೋ ಬಲವಾಗೇ ಇದೆ. ಆದರೆ ಅವುಗಳನ್ನು ನಿಕ್ಕಾಬಿಟ್ಟೆ ಹೆಚ್ಚಿಸುವುದಕ್ಕಂತೂ ನಾನು ವಿರೋಧಿಯೇ. ಮನುಷ್ಯನಿಗೆ ಸುಖದೊರೆಯುವ ಕೋಟ್ಯಂತರ ಗುಡಿಸಲುಗಳಲ್ಲಿರುವವರ ಹೊರೆಯು ಕಡಿಮೆಯಾಗುವಂತಹ, ಎಲ್ಲ ಯಂತ್ರಗಳನ್ನೂ ನಾನು ಸ್ವಾಗತಿಸುತ್ತೇನೆ.

ದೊಡ್ಡ ಯಂತ್ರಗಳೂ ಬೇಕು

ನಮಗೆ ಈಗ ಕೆಲವು ದೊಡ್ಡ ಉದ್ಯೋಗಗಳಿಗಾಗಿ ಕಾರ್ಖಾನೆಗಳನ್ನು ಸ್ಥಾಪಿಸುವ ಆಗತ್ಯವಿದೆ—ಕಬ್ಬಿಣ, ಉಕ್ಕಿನ ಕಾರ್ಖಾನೆ, ತಾಮ್ರ, ಹಿತ್ತಾಳೆ ತಗಡನ್ನು ತಯಾರಿಸುವ ಕಾರ್ಖಾನೆಗಳು, ಅಲ್ಯೂಮಿನಿಯಂನ ತಂತಿ, ತಗಡುಗಳನ್ನು ತಯಾರಿಸುವ ಕಾರ್ಖಾನೆಗಳು, ರೈಲ್ವೆ ಇಂಜಿನ್, ಮೋಟಾರ್ ಗಾಡಿಗಳು ಮಿಲ್ ಮತ್ತು ಫ್ಯಾಕ್ಟರಿಗಳ ಇಂಜಿನ್‌ಗಳು, ಹಡಗುಗಳನ್ನು ತಯಾರಿಸುವ ಕಾರ್ಖಾನೆಗಳು ಇತ್ಯಾದಿ. ಈ ಉದ್ಯೋಗಗಳಿಗೆಲ್ಲ ಲಕ್ಷಾಂತರ ರೂಪಾಯಿಗಳ ಆಗತ್ಯವಿದ್ದು, ಇವುಗಳನ್ನು ಎಲ್ಲೋ ಕೆಲವು ಮಂದಿ ಧನಿಕರು ಮಾತ್ರ ಸರ್ಕಾರದ ಸಹಾಯದಿಂದ, ಸ್ಥಾಪಿಸಬಲ್ಲರು. ಆದರೆ ಇದರ ಜೊತೆಗೆ ಹೆಚ್ಚು ಖರ್ಚುಮಾಡದೆ, ಸಣ್ಣ ಸಣ್ಣ ಗೃಹಕಸುಬುಗಳನ್ನು ನಾವು ಪ್ರಾರಂಭಿಸಬಹುದು. ಈ ರೀತಿಯಾಗಿ ನಮ್ಮ ನಿತ್ಯ ಉಪಯೋಗಿಸುತ್ತಿರುವ ವಸ್ತುಗಳ ಪೈಕಿ ಅರ್ಧಕ್ಕಿಂತ ಹೆಚ್ಚಿನವನ್ನು ನಾವು ಇಲ್ಲಿಯೇ ನಿರ್ಮಿಸಿಕೊಂಡು, ವಿದೇಶೀ ವಸ್ತುಗಳಿಂದ ತುಂಬಿ ಹೋಗಿರುವ ನಮ್ಮ ಅಂಗಡಿಗಳಲ್ಲಿ ಸ್ವದೇಶೀ ವಸ್ತುಗಳನ್ನಿಡಬಹುದು.

ದೊಡ್ಡ ದೊಡ್ಡ ಉದ್ಯೋಗಗಳೊಡನೆ ಗೃಹಕೈಗಾರಿಕೆಗಳೂ ಅಭಿವೃದ್ಧಿಗೆ ಬರುವವೆಂಬುದು ಸಮಾಧಾನವಾಗಿ ತೋರುವುದು. ಆದರೆ ಪಾಶ್ಚಾತ್ಯ ಉನ್ನತದೇಶಗಳ ಔದ್ಯೋಗಿಕ ವಾತಾವರಣವನ್ನು ಬಲ್ಲವರು, ಅಲ್ಲಿ ಕೂಡ ಗೃಹಕಸುಬುಗಳ ಸಾಕಷ್ಟು ಪ್ರವಾಹಣವಲ್ಲವೆ ಎಂಬುದನ್ನು ತಿಳಿಪಿರುವರು. ಕೈಗಾರಿಕೆಗಳ ಕೇಂದ್ರವಾದ ಗ್ರೇಟ್ ಬ್ರಿಟನಿನಲ್ಲಿ ಸಹ 2 ಲಕ್ಷ 70 ಸಾವಿರ ಮಂದಿ ಗೃಹಕೈಗಾರಿಕೆಗಳನ್ನು ಮಾಡುತ್ತಿದ್ದಾರೆ. ಫ್ರಾನ್ಸಿನಲ್ಲಿ ದೊಡ್ಡ ಕಾರ್ಖಾನೆಗಳಲ್ಲಿರುವಷ್ಟೇ ಜನರು ಸಣ್ಣ ಉದ್ಯೋಗಗಳಲ್ಲಿರುವರು. ಸುಮಾರು 5 ಲಕ್ಷ 20 ಸಾವಿರ ಕೆಲಸಗಾರರು ತಮ್ಮ ತಮ್ಮ ಮನೆಗಳಲ್ಲಿಯೇ ಕೆಲಸಮಾಡುವರು! ಆ ದೇಶದವರೇ ಈ ರೀತಿ ಮನೆಯಲ್ಲಿ ಕುಳಿತು ಕೆಲಸಮಾಡಿ, ವಸ್ತುಗಳನ್ನು ತಯಾರಿಸಿ, ನಮ್ಮ ದೇಶದ ಅಂಗಡಿಗಳನ್ನು ತುಂಬುತ್ತಿರುವಾಗ, ನಾವು ಕೂಡ ಆ ರೀತಿ ಸಣ್ಣ ಸಣ್ಣ ಕೈಗಾರಿಕೆಗಳಿಂದ ಜೀವನಮಾಡಬಾರದೇಕೆ?

1916 ರಿಂದ 18 ರವರೆಗೆ ಕೆಲಸಮಾಡಿದ ಭಾರತೀಯ ಕೈಗಾರಿಕೆ ಕಮಿಷನ್ನಿನವರು ಈ ವಿಚಾರವಾಗಿ ತಮ್ಮ ವರದಿಯಲ್ಲಿ ಈ ರೀತಿ ಬರೆದಿರುವರು. "ಯಾವ ಉದ್ಯೋಗದಲ್ಲೇ ಆಗಲಿ, ಕೂಲಿಯನ್ನು ಕಡಿಮೆಮಾಡುವುದೇ ಒಂದು ವಿಶೇಷವಲ್ಲ. ಮುಖ್ಯವಾದ ವಿಚಾರವೇನೆಂದರೆ, ಅಪೂರ್ಣ ವಸ್ತುಗಳು ನಾಶವಾಗದಂತೆ ನೋಡಿಕೊಳ್ಳುವುದೇ. ಭಾರತದ ಸರಳ ಜೀವನವು ಸಹ ಅಂತರ್ರಾಷ್ಟ್ರೀಯ ವ್ಯಾಪಾರಿಕ ಪ್ರತಿಸ್ಪರ್ಧೆಯಲ್ಲಿ, ಭಾರತಕ್ಕೆ ವಿಜಯವುಂಟಾಗುವ ಒಂದು ಸಾಧನವಾಗಿದೆ. ಆದರೆ ಈ ಸಾಧನವು ಕಾರ್ಯಕರ್ತರ ಔದಾಸೀನ್ಯದಿಂದ ನಿರರ್ಥಕವಾಗಿ ಹೋಗಿದೆ."

ಗ್ರಾಮಗಳ ನಿರುದ್ಯೋಗಿಗಳು

ಹಳ್ಳಿಗಳಲ್ಲಿ ವ್ಯವಸಾಯಮಾಡುವವರು ಅನೇಕ ತಿಂಗಳವರೆಗೆ ಕಾಲಕಳೆಯುವರು. ಹಳ್ಳಿಗರು ತಮ್ಮ ವಿರಾಮಕಾಲದಲ್ಲಿ ಮಾಡಲು ಅವರಿಗೆ ಪರಿಚಿತವಾದ, ಸುಲಭವಾದ ಕೆಲಸವನ್ನು ಅವರಿಗೆ ತೋರಿಸಿಕೊಡಬೇಕು—ರಾಟೆ ತಿರುಗಿಸುವುದು, ಬಟ್ಟೆ ನೇಯುವುದು, ಬಣ್ಣಹಾಕುವುದು, ರೇಶ್ಮೆ ಹುಳಗಳನ್ನು ಸಾಕುವುದು, ಜೇನು ಸಾಕುವುದು, ಬುಟ್ಟಿ, ಚಾಪೆ, ಬೀಸಣಿಗೆಗಳನ್ನು ಮಾಡುವುದು ಇತ್ಯಾದಿ. ಇವೆಲ್ಲಕ್ಕೂ ಗಿರಾಕಿ ಅಲ್ಲೇ ದೊರೆಯುವುದು. ಹಳ್ಳಿಗಳು ನಗರಗಳಿಗೆ ಸಮೀಪವಾಗಿದ್ದಲ್ಲಿ, ಹೈನುಗಾರಿಕೆ ಮುಂತಾದುವನ್ನು ನಡೆಯಿಸಬಹುದು.

ನಗರಗಳಲ್ಲಿ

ನಗರಗಳಲ್ಲಿರುವ ವಿದ್ಯಾವಿಶಿಷ್ಟ ಮತ್ತು ಅವಿದ್ಯಾವಿಶಿಷ್ಟ ನಿರುದ್ಯೋಗಿಗಳು ಕೆಳಗೆ ಕಂಡ ವಸ್ತುಗಳನ್ನು ಮಾಡಿಕೊಳ್ಳಬಹುದು. ಇವೆಲ್ಲವೂ ಕೋಟಿಗಟ್ಟಲೆ ರೂಪಾಯಿಗಳಷ್ಟು ಬೆಲೆಯಲ್ಲಿ ವಿದೇಶಗಳಿಂದ ನಮ್ಮಲ್ಲಿಗೆ ಬರುತ್ತಿವೆ.

ಓದುಬರಹದ ವಸ್ತುಗಳು

ಲೇಖನಿ, ಸೀಸದ ಕಡ್ಡಿ, ದೌತಿ, ಬ್ಲಾಟಿಂಗ್ ಪ್ಯಾಡ್, ಸ್ಕೇಲು, ಚಿತ್ರಕಲೆಯ ಆಯುಧಗಳು, ಬಣ್ಣ ಮಸಿ, ಕಾಗದ ಕ್ಲಿಪ್ಪುಗಳು ಇತ್ಯಾದಿ.

ಉಡಿಗೆ ತೊಡಿಗೆಯ ವಸ್ತುಗಳು

ಗುಂಡಿ, ಸೇಫ್ಟಿಪಿನ್, ಬೆಲ್ಟು, ಮೇಜುಗಳು, ಬನೀನುಗಳು, ಗಡಿಯಾರ, ಬೀಗದ ಕೈಗಳ ಸರಪಳಿಗಳು, ಕನ್ನಡಕದ ಫ್ರೇಂ ಇತ್ಯಾದಿಗಳು.

ಬಾಗಿಲುಗಳು, ಫರ್ನಿಚರುಗಳು ಮತ್ತು ಪೆಟ್ಟಿಗೆಗಳಿಗೆ ಬೇಕಾಗುವ ಸಾಮಾನುಗಳು, ಬ್ರಷ್‌ಗಳು,

ನಿತ್ಯೋಪಯೋಗಿಯಾದ ಚಂಚ, ಚಾಕು, ಕನ್ನಡಿ ಮುಂತಾದುವು.

ಕೆಲಸವನ್ನು ಹೇಗೆ ನಡೆಯಿಸಬೇಕು?

ಎಂಬುದೇ ಪ್ರಶ್ನೆ. ಹಣವಿಲ್ಲದೆ ಇವೆಲ್ಲವನ್ನೂ ಹೇಗೆ ಮಾಡುವುದು? ಆದರೆ ದೇಶದ ಧನಿಕರು ಗಮನಿಸಿದರೆ ಇದು ಅಷ್ಟು ಕಠಿಣವಾಗುವುದಿಲ್ಲ. ಮತ್ತೆ ಕೆಲವಕ್ಕೆ ಅಷ್ಟೇನೂ ಬಂಡವಾಳ ಬೇಡ. ಯಾರಾದರೂ ಯುವಕರು ಧೈರ್ಯದಿಂದ ಮುಂದೆ ಬರಬೇಕು ಅಷ್ಟೆ. ಆದರೆ ಹೆಸರಿಗಾಗಿ ವರ್ಷಗಟ್ಟಲೆ ಅಲೆದು, ಸಿಕ್ಕಿದ್ದರಲ್ಲಿ ಸಂತುಷ್ಟರಾಗುವರೆ ವಿನಹ ಈ ರೀತಿ ಕೈಗಾರಿಕೆಗಳ ಕಡೆ ಗಮನ ಕೊಡುವುದಿಲ್ಲ. ಎಷ್ಟೋ ಮಂದಿ ಯುವಕರು ಏನೇನೂ ಮೂಲಧನವಿಲ್ಲದೆ, ಧೈರ್ಯದಿಂದ ಮುಂದೆಬಂದು ಕಾರ್ಯವನ್ನಾರಂಭಿಸಿ, ಆಶ್ಚರ್ಯಜನಕವಾದ ಸಫಲತೆಯನ್ನು ಹೊಂದಿರುವ ಉದಾಹರಣೆಗಳು ನಮ್ಮ ಮುಂದೆ ಅನೇಕವಾಗಿವೆ.

(ಶ್ರೀಮತಿ ಗಂಗಾದೇವಿ ವರ್ಮರವರ ಲೇಖನದ, ಅನುವಾದಕರು:-ಶ್ರೀ ಸುಬ್ರಹ್ಮಣ್ಯಂ)

ತುಳುನಾಡ್ ಬೇಂಕ್

ಆಫ್ ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ.

Authorised & Issued Capital	...	Rs	1,00,000
Subscribed & Paid up Capital	....	Rs	31,340
Reserves & other Funds	...	Rs	22,052

ನಿರಖು ಠೇವಣಾತಿಗಳು ರಿಯಾಯತಿ ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.

ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳೂ ಮಾಡಲ್ಪಡುತ್ತವೆ.

ಹೆಚ್ಚಿನ ವಿವರಗಳಿಗೆ ಬರೆಯಿರಿ.

THULUNAD BANK

OF SUPPLY AGENCY LIMITED.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ಸಂಖ್ಯೆ 1310.

1 ಟಿ. ಪಿ. ಕೃಷ್ಣನ್ ನಾಯರ್, 2 ಕುಂಞಿರಾಮನ್ ನಾಯರ್ ವಾದಿ —

1ನೇ ಪ್ರತಿ ಅಬ್ದುಲ್ ಖಾದರ 2 ಅಬ್ದುಲ್ಲ ಪ್ರತಿವಾದಿ—

1ನೇ ಪ್ರತಿವಾದಿಯು ತಾ. 3-5-1919ರಲ್ಲಿ ವ್ಯಕ್ತಪಟ್ಟ ಸಾಲ ಅವಗೆ ಬರೆದುಕೊಟ್ಟ ಗೇಣಿ ಚೀಟು ಪ್ರಕಾರ ವಾದಿಯು ದಾಖಲಾದ ದಾವೆ ಸಂಬಂಧ ತಾ. 25-7-40ಕ್ಕೆ ಇದ್ದರೂ ಇದರಿಂದ ಪ್ರತಿವಾದಿಯು ಹಾಜರಾಗದಿದ್ದಲ್ಲಿ ಏಕಪಕ್ಷ ತೀರ್ಪು ಕೊಡಲಾಗುವುದು.

ಕೆ. ಆರ್. ಕೇರಳ ವರ್ಮರಾಜಾ
ವಾದಿಯ ವಕೀಲ.

ನಾಜಿಗಳು ಗೆದ್ದ ಜನತೆಯನ್ನು ಕಾಣುವ ರೀತಿ.

ಗುಲಾಮರಂತೆ ದುಡಿಯಬೇಕು-ಇಲ್ಲವೆ ಉಪವಾಸಬೀಳಬೇಕು

ನಾಜಿಗಳು ತಾವು ಗೆದ್ದ ರಾಜ್ಯಗಳನ್ನೆಲ್ಲಾ ಸಂಘಟಿತವಾಗಿ ಉದ್ದೇಶಪೂರ್ವಕವಾಗಿ ಮತ್ತು ನಿಷ್ಕರುಣವಾಗಿ ಸುಲಿಗೆ ಮಾಡುತ್ತಿರುವರು. ಸೈನಿಕರ ಬೆನ್ನು ಹಿಡಿದೇ ಈ ಸುಲಿಗೆಗಾರರ ಪಡೆ ಬರುವುದು. ಜರ್ಮನ್ ಯುದ್ಧ ಯಂತ್ರಕ್ಕೆ ಬೇಕಾದುದನ್ನೆಲ್ಲಾ ಜನರಿಂದ ಸೆಳೆಕೊಂಡು ಹೋಗುವುದೇ ಈ ಪಡೆಯ ಕೆಲಸ. ಕಾರ್ಖಾನೆ ಅಂಗಡಿ, ಹೊಲಗದ್ದೆ ಮತ್ತು ಮನೆಮಾರುಗಳಿಂದ ಪ್ರಯೋಜನಕಾರಿಗಳಾದ ವಸ್ತುಗಳೆಲ್ಲಾ ದೋಚಲ್ಪಡುವವು. ಯಂತ್ರ ಸಾಮಗ್ರಿಗಳನ್ನೂ ಕೂಡ ಒಯ್ದು ಉಪಯೋಗಿಸುವರು. ತಮಗೆ ಉಪಯೋಗಕ್ಕೆ ಬೀಳುವವುಗಳನ್ನು ಬಿಟ್ಟು ಉಳಿದವುಗಳನ್ನು ಮುರಿದು ಕರಗಿಸಿ ಕಬ್ಬಿಣ ತಯಾರಿಸುವರು. ವಸ್ತ್ರ, ಲಿನೆನ್, ಬೂಟ್ಸ್, ಮೆಟ್ಟು, ಲೋಹ ಮತ್ತು ಇತರ ಸಾಮಾನುಗಳನ್ನೆಲ್ಲಾ ಒಟ್ಟುಗೂಡಿಸಿ ಪಟ್ಟಿಮಾಡಿ ಒಯ್ಯುವರು. ಈ ಸಾಮಗ್ರಿಗಳ ಮೌಲ್ಯದ ಸಮಾಧಾನಕ್ಕಾಗಿ ನಕಲಿ ಪ್ರಾಮಿಸರಿ ನೋಟುಗಳನ್ನೀಯಲಾಗುವುದು. ತಾವು ಗೆದ್ದ ಜನರು ತಮಗಿಂತ ಹೀನರು. ಜರ್ಮನರೇ ಲೋಕದಲ್ಲಿ ಶ್ರೇಷ್ಠರು. ಜರ್ಮನರಿಗೆ ಬೇಕಾಗುವಷ್ಟು ಆಹಾರ ಮತ್ತು ಇತರ ಸಾಮಗ್ರಿಗಳು ಹೀನ ಜನಾಂಗಕ್ಕೆ ಸೇರಿದ ಪೋಲರು, ಫ್ರೆಂಚರು, ಡೇನರೇ ಮೊದಲಾದವರಿಗೆ ಬೇಕಾಗಿಲ್ಲವೆಂದೇ ನಾಜಿಗಳ ಭಾವನೆ. ಆದುದರಿಂದ ನಾಜಿಗಳ ದೃಷ್ಟಿಯಲ್ಲಿ ಈ ಜನರಿಗೆ ಬೇಕಾಗುವ ವಸ್ತುಗಳ ಪ್ರಮಾಣವು ಬಹಳ ಕಡಿಮೆಯಿದ್ದು ಅತ್ಯಂತ ಕರುಣಾಜನಕವಿದೆ. ಪ್ರತಿಯೊಬ್ಬರಿಗೂ ಕಠಿಣ ನಿರ್ಣಯ ಪರಿಮಿತಿಯಲ್ಲಿ ಆಹಾರವನ್ನೀಯಲಾಗುತ್ತದೆ. ಈ ಆಹಾರಪ್ರಮಾಣವು ಜರ್ಮನಿಗೊಂದು, ಪೋಲರು, ಯೆಹೂದ್ಯರೇ ಮೊದಲಾದವರಿಗೊಂದು. ಜರ್ಮನರಿಗೆ ಕೆಂಪು ಕಾರ್ಡುಗಳನ್ನೂ, ಪೋಲರು ಯೆಹೂದ್ಯರೇ ಮೊದಲಾದವರಿಗೆ ಹಸುರು ಕಾರ್ಡುಗಳೂ ಕೊಡಲ್ಪಡುತ್ತಿವೆ. ಈ ಕಾರ್ಡುಗಳಲ್ಲಿ ನಮೂದಿಸಿದಷ್ಟೇ ಆಹಾರ ಪಡೆಯಬೇಕಾಗಿದೆ.

ನಾಜಿಗಳು ಕೊಟ್ಟಷ್ಟನ್ನು ತಿಂದು ತೃಪ್ತರಾಗಬೇಕು

ನಾಜಿಗಳಿಗೆ ಅಧೀನವಾಗಿರುವ ಜನಾಂಗಗಳಿಗೆ ತಮಗೆ ಬೇಕಾದಂತೆ ಯಾವ ವಸ್ತುವನ್ನಾದರೂ ಕೊಟ್ಟು ಪಡೆಯುವ ಸ್ವಾತಂತ್ರ್ಯವಿಲ್ಲ. ಹಣವೇ ಅವರ ಕೈಗೆ ಸಿಗುವುದಾಗಿಲ್ಲ.

ಕೈಗಾರಿಕೆ, ವ್ಯಾಪಾರ ವಹಿವಾಟುಗಳೆಲ್ಲಾ ಅಸ್ತವ್ಯಸ್ತವಾಗಿವೆ. ನಿರುದ್ಯೋಗಿಗಳ ಸಂಖ್ಯೆಯು ಬಹಳವಾಗಿ ಹೆಚ್ಚಿದೆ. ಆದಾಯ ಮತ್ತು ಸಂಬಳಗಳು ಮಾಯವಾಗಿವೆ. ಹೆಚ್ಚಿನ ಸೊತ್ತುಗಳನ್ನೆಲ್ಲಾ ನಾಜಿಗಳು ವಶಪಡಿಸಿಕೊಂಡಿರುತ್ತಾರೆ. ಉಳಿದವುಗಳನ್ನಾದರೂ ಮಾರಬೇಕು ಜರ್ಮನರಿಗೆ, ಅವರು ಕೊಟ್ಟ ಬೆಲೆಯಿಂದ ತೃಪ್ತರಾಗಬೇಕು. ಸಾರ್ವಜನಿಕ ಸಂಸ್ಥೆ ಮತ್ತು ಮಜೂರ ಸಂಘಗಳ ನಿಧಿಗಳೆಲ್ಲ ಅಪಹರಿಸಲ್ಪಟ್ಟಿವೆ. ನಿರುದ್ಯೋಗಿಗಳಿಗೆ ಕೊಡಲ್ಪಡುತ್ತಿದ್ದ ಸಹಾಯವು ನಿಲ್ಲಿಸಲ್ಪಟ್ಟಿದೆ. ಮಕ್ಕಳು, ಅಂಗಹೀನರು, ಮುದುಕರು ಮೊದಲಾದವರಿಗೆ ಕೊಡುತ್ತಿದ್ದ ಸಹಾಯವು ಬಹಳವಾಗಿ ಇಳಿಸಲ್ಪಟ್ಟಿದೆ. ಸ್ತ್ರೀಪುರುಷರೆಲ್ಲರೂ ನಾಜಿಗಳು ಕೊಡುವ ಸಂಬಳಕ್ಕಾಗಿ ಅವರಿಗಾಗಿ ದುಡಿಯಬೇಕು. ಇಲ್ಲವೆ ಉಪವಾಸಬೀಳಬೇಕು. ಒಕ್ಕಲಿಗನು ಯಥಾ ಪ್ರಕಾರ ಸಾಗುವಳಿ ಮಾಡಬೇಕು. ಆದರೆ ನಾಜಿ ಅಧಿಕಾರಿಯು ಬಂದು, ಬೇಸಾಯಗಾರನ ಕುಟುಂಬ ಪೋಷಣೆಗೆ ತನಗೆ ತೋರಿದಷ್ಟು ಬಿಟ್ಟು ಉಳಿದ ಉತ್ಪತ್ತಿಯನ್ನೆಲ್ಲಾ ಒಯ್ದು ಬಿಡುವನು. ನಾಜಿಗಳು ನಿಶ್ಚಯಿಸುವ ಸಂಬಳ ಪಡೆದು ಕೆಲಸಗಾರರು ಕಾರ್ಖಾನೆಗಳಲ್ಲಿ ದುಡಿಯಬೇಕು. ಅವರ ಶ್ರಮದ ಉತ್ಪತ್ತಿಯೆಲ್ಲಾ ಜರ್ಮನರ ಉಪಯೋಗಕ್ಕಾಗಿ.

ಕೆಲವರಿಗೆ ಯುದ್ಧದಿಂದ ಹಾಳಾಗಿರುವ ರಸ್ತೆ, ಕಟ್ಟಡ, ಸೇತುವೆ ಮೊದಲಾದವುಗಳನ್ನು ಮಾಡುವ ಕೆಲಸಕೊಡಲಾಗುವುದು. ಇನ್ನು ಕೆಲವರು ಜರ್ಮನರ ಯುದ್ಧಕ್ಕಾಗಿ ಸಾಮಾನುಗಳನ್ನು ತಯಾರಿಸುವ ಕೆಲಸಕೊಡಬೇಕಾಗುವುದು. ಅನೇಕರು ತನ್ನ ಮನೆಮಾರು ಬಿಟ್ಟು ಜರ್ಮನಿಗೆ ಹೋಗಿ ಗುಲಾಮರಂತೆ ಶ್ರಮಿಸಬೇಕಾಗುವುದು. ಇದೀಗ ಯುರೋಪಿನ ಅರ್ಧ ಭಾಗದಲ್ಲಿ ನಡೆಯುತ್ತಿರುವ ಸಂಗತಿಗಳ ನಿಜವಾದ ಚಿತ್ರ.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 70/1940

ದಿ ವಿಜಯಾ ಬ್ಯಾಂಕ್ ಲಿಮಿಟೆಡ್ ಉಡುಪಿ ವಾದಿ— ಮತ್ತು

ಎ. ಸಂಜೀವ ಹೆಗ್ಡೆ ಕೂಡ ಪ್ರತಿವಾದಿಗಳು—

ಇವರೊಳಗೆ—

ಮೇಲ್ಕಂಡ ದಾವೆಯ 2ನೇ ಪ್ರತಿವಾದಿ ಕಾರ್ಕಳ ತಾಲೂಕು ಬೇಳಂಜೆ ಗ್ರಾಮದಲ್ಲಿರುವ ಬೇಳಂಜೆ ಕೃಷ್ಣಯ್ಯ ಹೆಗ್ಡೆಯ ಅಳಿಯ ಬೇಳಂಜೆ ವಿಠಲ ಹೆಗ್ಡೆಯವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ನೀವು ಕೂಡಾ 3 ಜನರು ವಾದಿ ಬ್ಯಾಂಕಿಗೆ ತಾ. 3-[illegible]-37ರಲ್ಲಿ ಬರಕೊಟ್ಟ ಡಿಮಾಂಡು ಪ್ರಾಮಿಸರಿ ನೋಟಿನ ಬಾಬತ ಅಸಲು ಬಡ್ಡಿ ಹಣಗಳ ವಸೂಲಿ ಬಗ್ಗೆ ವಾದಿಯು ದಾಖಲುಮಾಡಿದ ಮೇಲ್ಕಂಡ ದಾವೆಯು ತಾ 19-7-1940ಕ್ಕೆ ತಕ್ಕಯಿಟ್ಟಿದೆ.

ಆ ದಿವಸ ನೀವು ಖುದ್ದಾಗಲೀ ಯಾ ವಕೀಲ್ ದ್ವಾರವಾಗಲಿ ಪೂರ್ವಾಹ್ನ 11 ಘಂಟೆಗೆ ಕೋರ್ಟು ಮುಂದೆ ಹಾಜರಾಗತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ್ ಹಾಜರಿಯಲ್ಲಿ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದು.

Narayana Shetty, B.
Advocate for Plaintiff.

ಇಂಡಿಯನ್ ಮ್ಯೂಚುಯಲ್

ಲೈಫ್ ಎಸೋಸಿಯೇಷನ್ ಲಿಮಿಟೆಡ್

ಹೆಡ್ ಆಫೀಸ್:- ನಂ. ೧೦, ಮೌಂಟ್ ರೋಡ್, ಮದರಾಸು

— ಡೈರೆಕ್ಟರುಗಳ ಬೋರ್ಡ್ —

ಸರ್ ವೇಪಾ ರಮೇಶಂ, ಕೆ. ಟಿ. ರಿಟೈರ್ಡ್ ಜಡ್ಜ್, ಮದರಾಸ್ ಹೈಕೋರ್ಟ್, ಮದರಾಸು.

ರಾವ್ ಬಹದ್ದೂರ್ ಮ|| ಕೆ ಬಲರಾಮ ಅಯ್ಯರ್, ಬಿ.ಎ ರಿಟೈರ್ಡ್ ಅಕೌಂಟೆಂಟ್ ಜನರಲ್ ಮದರಾಸ್.

ಮ|| ಸಿ. ಕೃಷ್ಣಮೂರ್ತಿ ಮೊದಲಿಯಾರ್ ಲ್ಯಾಂಡ್ ಲಾರ್ಡ್, ಸಿಯಾಲಿ.

ದಿವಾನ್ ಬಹದ್ದೂರ್ ಮ|| ಎ. ವಿ. ರಾಮಲಿಂಗ ಅಯ್ಯರ್, ಮದರಾಸ್ ಸರಕಾರದ ರಿಟೈರ್ಡ್ ಚೀಫ್ ಇಂಜನಿಯರು.

ಮ|| ಟಿ ಎಸ್. ನಾರಾಯಣ ಸ್ವಾಮಿ, ಎಂ.ಎ., ಅಸಿಸ್ಟೆಂಟ್ ಕೆಮಿಸ್ಟ್, ಬಕಿಂಗ್‌ಹ್ಯಾಂ ಮಿಲ್ಸ್, ಮದರಾಸ್.

ದಿವಾನ್ ಬಹದ್ದೂರ್ ಮ|| ವಿ. ಭಾಷ್ಯಂ ಅಯ್ಯಂಗಾರ್, ರಿಟೈರ್ಡ್ ಮದರಾಸ್ ಹೈಕೋರ್ಟ್ ಜಡ್ಜ್.

ಮ|| ಸಿ.ಎಂ. ಶ್ರೀನಿವಾಸನ್, ಬಿ.ಎ.,ಬಿ.ಎಲ್. (ಎಕ್ಸ್-ಆಫೀಷಿಯೋ) ಮದ್ರಾಸ್.

ಮ್ಯಾನೇಜರ್:-ಮ|| ಎಂ. ನಟೇಶನ್, ಎಂ.ಎ.

ಚೀಫ್ ಮೆಡಿಕಲ್ ಆಫೀಸರ್:- ಲೆ. ಕ|| ವಿ. ಮಹದೇವನ್, ಐ. ಎಂ. ಎಸ್.

ಬ್ಯಾಂಕರುಗಳು:— ಇಂಡಿಯನ್ ಬ್ಯಾಂಕ್ ಲಿಮಿಟೆಡ್, ಮದರಾಸ್. ಮದರಾಸ್ ಪ್ರೊವಿನ್ಶಿಯಲ್ ಕೋ-ಅಪರೇಟಿವ್ ಬ್ಯಾಂಕ್ ಲಿಮಿಟೆಡ್, ಇಂಡೋ-ಕಮರ್ಷಿಯಲ್ ಬ್ಯಾಂಕ್ ಲಿಮಿಟೆಡ್, ದಿ ಬ್ಯಾಂಕ್ ಆಫ್ ಮೈಸೂರು, ಲಿಮಿಟೆಡ್.

ಬ್ರಾಂಚುಗಳು:- ಕಲ್ಕತ್ತ, ಲಾಹೋರ್, ಜೋಧಪೂರ್, ಮಧುರ, ಕಲ್ಲಿಕೋಟೆ, ಬೆಜವಾಡ, ಅಲಹಾಬಾದ್ ಬೊಂಬಾಯಿ, ಅಹಮದಾಬಾದ್, ಪೂನಾ.

ಮೈಸೂರು ಸರಕಾರದ ಹೊಸ ವಿಮಾ ಕಾನೂನನ್ನು ಅನುಸರಿಸಿ ಕಂಟ್ರೋಲರವರಲ್ಲಿ ಠೇವಣಾತಿ ಮೊಬಲಗು ಇಡಲಾಗಿದೆ.

ಕರ್ನಾಟಕವೆಲ್ಲಾ ಯೋಗ್ಯರಾದ ಮತ್ತು ಪ್ರತಿಭಾಶಾಲಿಗಳಾದವರಿಂದ ಏಜನ್ಸಿಗಳಿಗೆ ಅರ್ಜಿಗಳು ಸ್ವೀಕರಿಸಲ್ಪಡುವುವು.

ಉತ್ತಮ ಕೆಲಸಮಾಡುವವರಿಗೆ ಒಳ್ಳೇ ಷರತ್ತುಗಳು.

ಮ|| ಸಿ. ಎಂ. ಶ್ರೀನಿವಾಸನ್, ಬಿ. ಎ., ಬಿ. ಎಲ್. ಜನರಲ್ ಸೆಕ್ರೆಟರಿ.
ಇಂಡಿಯನ್ ಮ್ಯೂಚುಯಲ್ ಲೈಫ್ ಅಸೋಸಿಯೇಷನ್ ಲಿಮಿಟೆಡ್,
10 ಮೌಂಟ್‌ರೋಡ್, ಮದ್ರಾಸ್.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಬಿ. ಕರುಣಾಕರ ಹೆಗ್ಡೆ, ಇನ್ಸ್‌ಪೆಕ್ಟರ್ ಆಫ್ ಏಜನ್ಸೀಸ್,
ಕರ್ಕಳ ಪೋಸ್ಟ್, ಉಡುಪಿ.

Bonus: Endowment Rs. 15. Wole life Rs. 18 Last valuation.

INDIAN MUTUAL LIFE ASSOCIATION, LIMITED.

Head Office—No. 10, Mount Road Madras.

ಈ ವಾರದ ಭವಿಷ್ಯ

ತಾರೀಕು 11-7-1940ರಿಂದ 18-7-1940ರ ವರೆಗೆ

ಮೇಷ—ನಿಮ್ಮ ಶಕ್ತಿ ಪರಾಕ್ರಮಗಳಿಗೆ ವಿರೋಧಿಗಳಿಂದ ಧಕ್ಕೆ ಬರುವುದರಿಂದ ದಿನದಿಂದ ದಿನಕ್ಕೆ ಕಾರ್ಯೋತ್ಸಾಹವು ಕುಗ್ಗುವುದು. ಮನಸ್ಸು ಕಳವಳಗೊಳ್ಳುವುದು. ಶ್ರಮಕ್ಕೆ ತಕ್ಕುದಾದ ಫಲವು ದೊರೆಯದಿರುವುದರಿಂದಲೂ ಧನಾಗಮದ ಮಾರ್ಗಗಳೆಲ್ಲವೂ ಬಂದಾಗಿ ಕೇವಲ ಖರ್ಚು ಹೆಚ್ಚುತ್ತಿರುವುದರಿಂದ ಇತಿಕರ್ತವ್ಯತಾಮೂಢರಾಗುವಿರಿ. ವಿದ್ಯೋಪಜೀವಿಗಳೂ ವ್ಯಾಪಾರೀ ವರ್ಗದವರೂ ಅರ್ಥಪೂರ್ಣ ಫಲಪ್ರಾಪ್ತಿಯ ರೋಧದಿಂದ ಅಸ್ವಸ್ಥರಾಗಿ ಸಂಕಷ್ಟಕ್ಕೀಡಾಗುವರು. ಕೂಲಿ ಜನರ ಸಹವಾಸಕ್ಕೆ ಬಲಿಬಿದ್ದು ಅನಿಷ್ಟ ಶಕ್ತಿಗಳಿಗೆ ಗುರಿಯಾದ ನಿಮಗೆ ಬಂಧುಗಳೂ ಕುಟುಂಬಿಕರೂ ಕೈಲಾದ ಸಹಾಯ ಮಾಡುವರು. ತಾ. 13ರಿಂದ 16ರ ವರೆಗೆ ಬಹಳ ಕಷ್ಟದಿಂದ ದಿನಗಳೆಯಬೇಕಾಗುವದು.

ವೃಷಭ—ನಷ್ಟಹೊಂದಿದರೂ ಚಿಂತೆಯಿಲ್ಲವು, ಇಷ್ಟಸಾಧನೆಯಾಗಬೇಕೆಂಬ ಒಂದೇ ಛಲವು ನಿಮ್ಮನ್ನು ಕಾರ್ಯರಂಗದಲ್ಲಿ ಮುಂದೂಡುತ್ತಿದೆ. ನಿಮ್ಮ ಪ್ರಯತ್ನಕ್ಕನುಸಾರವಾಗಿ ಹಲವಾರು ಕಾರ್ಯಗಳಲ್ಲಿ ವಿಜಯಶ್ರೀಯನ್ನು ಹೊಂದುವಿರಿ. ನಿರುದ್ಯೋಗ ಸಮಸ್ಯಾಪೀಡಿತರಾಗಿ ಉದಾಸೀನ ಕಾಲಹರಣ ಮಾಡುತ್ತಿದ್ದವರೂ ಕೂಡ ಜೀವನೋಪಾಯದ ಕಾರ್ಯದಲ್ಲಿ ನಿರತರಾಗುವರು. ನೌಕರಿ ಜೀವಿಗಳು ಅಧಿಕಾರಿಗಳ ಪ್ರಕೋಪಕ್ಕೆ ತುತ್ತಾಗಲಿರುವರು. ದೇಹಾರೋಗ್ಯವೂ ಸ್ವಲ್ಪ ಮಟ್ಟಿಗೆ ಕೆಡಲಿದೆ. ಒಂದಿಲ್ಲೊಂದು ಚಿಂತೆಯು ಸದಾ ನಿಮ್ಮನ್ನಾವರಿಸಿಕೊಂಡಿರುವುದರಿಂದ ಕ್ಷಣಕಾಲವೂ ಮನಸ್ಸಿಗೆ ಶಾಂತಿಸಿಗದು. ವಾರಾದಿಯ ನಾಲ್ಕು ದಿನಗಳು ಅತ್ಯನುಕೂಲಗಳಾಗಿರುವುದರಿಂದ ಈ ದಿನಗಳಲ್ಲಿ ಎಲ್ಲ ಶುಭ ಕಾರ್ಯ ಜರುಗುವವು.

ಮಿಥುನ—ಸದ್ಯದ ಗ್ರಹಗಾಸವು ಉತ್ತಮವಾಗಿರುವುದು. ಇದಿರಾಳಿಯನ್ನು ಹಿಂದಿಕ್ಕಿ ಮುಂದೆ ಸಾಗಬೇಕೆಂಬ ನಿಮ್ಮ ಹೆಬ್ಬಯಕೆಯು ಸಫಲವಾಗುವುದು. ಶ್ರಮವಿಲ್ಲದೇನೇ ಹಚ್ಚಿನ ಕಾರ್ಯಗಳು ಕೊನೆಗೊಂಡುವವು. ಆದರೂ ನಿಮ್ಮ ಮಾನಸ್ಥೀಕರಣ ಬಹಳ ಭಯವಿಹ್ವಲರಾಗಿರುವುದು, ನಿಮ್ಮಲ್ಲೇ ನಿಮಗೆ ಅವಿಶ್ವಾಸ ತೋರಬರುವುದು. ಇದಕ್ಕೆ ಮುಖ್ಯವಾಗಿ ನಿಮ್ಮ ಶರೀರ ದೌರ್ಬಲ್ಯವೇ ಕಾರಣವನ್ನಬೇಕು. ಬಹು ಮೂಲದಿಂದ ಆದಾಯವಿದ್ದರೂ ಖರ್ಚುಗಳು ಅತ್ಯಲ್ಪಗಳಾಗಿರುವುದರಿಂದ ಆರ್ಥಿಕ ಸುಧಾರಣೆಯಾಗುವುದು. ಯಾವುದಕ್ಕೂ ಕುಂದುಕೊರತೆಗಳಿಲ್ಲದೆ ಸುಖದಿಂದ ದಿನಗಳನ್ನು ಕಳೆಯುವಿರಿ. ತಾ. 15ರಿಂದ 18ರ ವರೆಗಿನ ದಿನಗಳು ಅತ್ಯುತ್ತಮಗಳಾಗಿವೆ.

ಕರ್ಕಾಟಕ—ದೈವಬಲದಿಂದ ಮುಕ್ತರಾಗಿದ್ದ ನಿಮಗೆ ಈಗ ಮೇಲಿಂದ ಮೇಲೆ ಶತ್ರುಗಳಿಂದ ಆಘಾತವುಂಟಾಗುತ್ತಿರುವುದು. ಶತ್ರುಜನರಿಂದಾಗುವ ಅಪಮಾನವನ್ನು ತೀರಿಸಲು ಯೋಚಿಸಿ ನೀವಾಗಿ ಸದ್ಯ ಯಾವ ಪ್ರತೀಕಾರವನ್ನೂ ಮಾಡಲು ಶಕ್ತರಾಗಲಾರಿರಿ. ಸುತ್ತು ಮುತ್ತಲಿಂದಲೂ ವಿಘ್ನಗಳು ಪ್ರಾಪ್ತವಾಗುವುದರಿಂದಲೂ ಆದಾಯದ ಕೊರತೆಯಾಗಿರುವುದರಿಂದಲೂ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿರುವಿರಿ. ದೇಹಾರೋಗ್ಯವೂ ಕೂಡ ಕೆಡುವ ಸಂಭವವಿರುವುದು. ವಂಚನಾಗಾರರೇ ನಿಮ್ಮಲ್ಲಿ ವ್ಯಾಮೋಹವನ್ನಿಟ್ಟು ವ್ಯಾಪಾರ ಕೈಗೊಳ್ಳುವುದರಿಂದ ಗಳಿಸಿದರೂ ಬಂಧುಮಿತ್ರರೂ ನಿಮ್ಮನ್ನು ತಿರಸ್ಕಾರ ದೃಷ್ಟಿಯಿಂದ ನೋಡುವರು. ತಾ 11, 12, 17, 18 ಈ ನಾಲ್ಕು ದಿನಗಳಲ್ಲಿ ಚಂದ್ರ ಬಲವಿರೋಧದಿಂದ ಕಿಂಚಿದಾರೋಗ್ಯ ಅಲ್ಪಧನ ಪ್ರಾಪ್ತಿಯಿದೆ.

ಸಿಂಹ—ಕಳೆದ ವಾರಕ್ಕಿಂತಲೂ ಈ ವಾರವು ಸ್ವಲ್ಪ ಮಟ್ಟಿಗೆ ಕಷ್ಟಕರವಾಗಿ ಪರಿಣಮಿಸಲಿದೆ. ಕೈಗಾರಿಕೆ ವ್ಯಾಪಾರಾದಿ ಉದ್ಯಮಿಗಳಿಗೆ ಪ್ರಮುಖ್ಯ ಶಕ್ಯಫಲ ದೊರೆಯುತ್ತದಾದರೂ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವೆಂಬ ಗಾದೆಯಂತೆ ಕೈಗೆ ಸಿಕ್ಕಿದ ನಲ್ಲ ಕಾಸೂ ನಿಮ್ಮ ಉಪಭೋಗಕ್ಕೆ ಬೀಳಲಾರದು. ಶತ್ರುಸ್ಪೃಷ್ಟ ನರ ಸಹಿತ ರವಿ ಚೆನ್ನಾಗಿರುವುದು. ಎಷ್ಟೆಂದರೂ ವ್ಯಯಸ್ಥಾನಾಪನ್ನರಾದ ರವಿ ಕುಜ ಬುಧರಿಂದಾಗಿ ನಿಮಗೆ ಅಧಿಕ ವ್ಯಯವೂ, ದೇಹಾಲಸ್ಯವೂ, ಸ್ತ್ರೀಯರೊಡನೆ ಕಲಹವೂ ಆಕಸ್ಮಿಕ ಪ್ರವಾಸವೂ ಸಂಭವಿಸುವುದು. ವಿದ್ಯೋಪಜೀವಿಗಳಿಗೆ ಹೆಚ್ಚಿನ ಹಾನಿಯಿದೆ. ರಾಜಕೀಯ ಶಕ್ತಿಯಿಂದಾಗಿ ಬಂಧನಾದ್ಯನಿಷ್ಟಗಳೂ ಪ್ರಾಪ್ತವಾಗಬಹುದು. ತಾ. 13, 14 ಈ ದಿನಗಳು ಹೆಚ್ಚಿನ ಮಾನಹಾನಿಗಳಾಗಲಿವೆ.

ಕನ್ಯಾ—ಲೋಕದಲ್ಲಿ ಹಣಕ್ಕೆ ಸಮನಾದ ಬೇರೊಂದು ಪದಾರ್ಥವಿಲ್ಲವು. ಯಾಕೆಂದರೆ ಅದರಿಂದ ಸಾಧ್ಯವಾಗದ ಕಾರ್ಯವಾವುದೂ ಇಲ್ಲವಿರುವ ಪ್ರಯುಕ್ತ ಸಾಲ ರೂಪಿಯಾಗಿ ಪಂಡಿತರ ಪರ್ಯಂತವೂ ಹಣವನ್ನು ಬೆಳೆಸುವರಲ್ಲವೆ. ಈಗ ವಿದ್ಯಮಾನಕ್ಕನುಗುಣವಾಗಿ ನಿಮ್ಮ ಆರ್ಥಿಕ ಭಾಗವು ಬಹಳ ವೃದ್ಧಿಹೊಂದಲಿರುವುದು. ಅದ್ದರಿಂದಲೇ ರಾಜಕೀಯ ಕ್ಷೇತ್ರಗಳಲ್ಲಿ ಸಮಾಜದಲ್ಲಿ ನೀವು ಗೌರವಾರ್ಹರಾಗಲಿರಿ. ಆದರೂ ಆರೋಗ್ಯಭಾಗ್ಯದಿಂದ ಹೀನರಾಗಿರುವ ನಿಮಗೆ ಕೆಲವೊಮ್ಮೆ ಐಸಿರಿಯೂ ವ್ಯರ್ಥವೇ ಎಂದು ಕಂಡುಬಂದೀತು. ಕೆಲವೊಂದು ದಿನಗಳನ್ನು ಬಂಧನದಲ್ಲಿದ್ದಂತೆ ಕಳೆಯಬೇಕಾಗುವದು. ತಾ. 11, 12, 15, 16 ಇವುಗಳಲ್ಲಿ ಉತ್ತಮ.

ತುಲಾ—ಕಾರ್ಯ ಗೌರವದಿಂದಾಗಿ ನಿಮಗೆ ಒಂದಿಷ್ಟು ವಿರಾಮ ಸಿಗದು. ಕೈಲಾದಷ್ಟೂ ಒಂದೇ ಕಡೆಯ ಮಿತ್ರಲು ಶಕ್ತ್ಯನುಗಳಿಂದ … ಸ್ನೇಹನ್ಯಾಯ ಪಂಚಾಯತಿಗಳೂ ಕೂಡ ಸಂಭವಿಸುವವು. ಕೈಕೆಸರಾದರೆ ಬಾಯಿ ಮೊಸರಾದೀತು ಎಂಬ ಗಾದೆಯಂತೆ ನಿಮ್ಮ ಕಷ್ಟದ ಸತ್ಫಲವನ್ನು ಮುನ್ನಾರಿ ಅನುಭವಿಸುವಿರಿ. ಕೈಗೊಂಡ ಪ್ರತಿಯೊಂದು ಕಾರ್ಯಗಳೂ ಯಾವ ತರದ ಅಡ್ಡಿ ಆತಂಕಗಳಿಲ್ಲದೆ ಕೊನೆಗಾಣುವವು. ವಿಪಕ್ಷೀಯರು ತಲೆತಗ್ಗಿಸುವರು. ಸಮಾಜದಲ್ಲಿನ ಗೌರವಾದರಗಳೂ ಸಾಂಸಾರಿಕ ಸುಖವೂ ವಿಪುಲ ಕೊರತೆಯಿಲ್ಲವು. ತಾ. 13 14. 17 18 ಈ ನಾಲ್ಕು ದಿನಗಳು ಅತ್ಯುತ್ತಮವಿರುವುದರಿಂದ ಧನವಸನಗಳ ಲಾಭ ಸ್ತ್ರೀಸುಖ ಇಷ್ಟಾರ್ಥ ಇತ್ಯಾದಿಗಳಾಗಲಿವೆ.

ವೃಶ್ಚಿಕ—"ಶಿವನ್ಯಾಯ ವ್ಯಕ್ತಿ ಸಹಕಾರೀ ಸೋಪಕಾರೀ ದುರ್ಜನ" ದುರ್ಜನನು ಪ್ರತಿಯಾಗಿ ಅಪಕಾರ ಮಾಡುವುದರಿಂದಲೇ ಶಾಂತನಾಗುವನೇ ಹೊರತು ಉಪಕಾರ ಮಾಡುವುದರಿಂದ ಸಮ್ಮನಾಗರು. ಇಂತೆಂಬ ಲೋಕರೂಢಿಯಿದ್ದರೂ ನಿಮಗೀವಾರದಲ್ಲಿ ಶತ್ರುಗಳಿಗೆ ಪ್ರತಿಕ್ರಿಯೆಯನ್ನು ಮಾಡಲು ಬೇಕಾದ ಶಕ್ತಿ ಯುಕ್ತಿಗಳಿಲ್ಲದಿರೋದರಿಂದ ಅವರ ಬಾಧೆಯನ್ನು ಮೌನದಿಂದ ಸಹಿಸಬೇಕಾಗುವದು. ಮತ್ತು ದುಡ್ಡಿನ ಅಡಚಣೆಯೂ ಹೆಚ್ಚಲಿದೆ. ಈ ದಾಯಿ ವ್ಯಸನಗಳಿಂದಾಗಿ ಮಾನಸಿಕ ರೋಗವೂ ತನ್ಮೂಲಕ ದೇಹಾಲಸ್ಯವೂ ಉಂಟಾಗಲಿದೆ. ಆದರೂ ತಾ. 11. 12 ಮತ್ತು 15. 16 ಈ ನಾಲ್ಕು ದಿನಗಳ ಮಟ್ಟಿಗೆ ಕಿಂಚಿತ್ಸಾಮಾಪ್ತಿ, ಆರೋಗ್ಯ, ಗೃಹಸುಖಗಳು ದೊರೆಯೋದರಿಂದ ತಕ್ಕ ಮಟ್ಟಿನ ತೃಪ್ತಿಯುಂಟಾದೀತು.

ಧನು—ದೇಹದಲ್ಲಿ ಸ್ವಲ್ಪ ಅನಾರೋಗ್ಯವು ಕಂಡುಬಂದೀತು. ವ್ಯಾಪಾರ ವ್ಯವಹಾರಗಳಲ್ಲಿ ಲಾಭವಿರದು. ಕೋರ್ಟು ವ್ಯಾಜ್ಯಗಳ ಕಾರ್ಯಗಳಲ್ಲಿ ವಿಪಕ್ಷೀಯರಿಂದ ಪರಾಭವಹೊಂದುವ ಸಂಭವವಿದೆ. ಗೃಹದಲ್ಲಿ ಬೇಕಾದಷ್ಟು ಮಾನಸಿಕ ವಿವಾದವೂ ನಿಮಗವರಿಂದ ಉಪಕಾರ ದೊರೆಯದು. ಉಪಾಧ್ಯಾಯರೇ ಮೊದಲಾದ ವಿದ್ಯಾಜೀವಿಗಳಿಗೂ ಲೇಖಕರಿಗೂ ಎಲ್ಲಾ ಭಾಗದಲ್ಲೂ ಅಭಿವೃದ್ಧಿಯ ಚಿಹ್ನೆಗಳಿವೆ. ವಿರೋಧಿಗಳಿಂದ ಧನ ಮಾನಗಳಿಗೆ ಹಾನಿತಟ್ಟೀತು. ಆಕಸ್ಮಿಕ ಅಪಘಾತಾದಿಗಳೂ ಸಂಭವಿಸಲಿವೆ. ಜಾಗ್ರತೆ. ತಾ. 15. 16 ಈ ಎರಡು ದಿನಗಳು ಪ್ರತಿಕೂಲಗಳಾಗಿವೆ.

ಮಕರ—ಯಾವ ಮಾರ್ಗವನ್ನು ಅನುಸರಿಸಲಿ, ಯಾವ ಕಾರ್ಯವನ್ನು ಮಾಡಲಿ ಎಂಬೀ ವಿಚಾರದಲ್ಲಿ ನಿಮಗೆ ವಿಶೇಷ ಮುಂದರಿಯುವಾಗಿದೆ. ಈಗ ಯಾವ ಭಾಗದಲ್ಲೂ ಆಶೆಯ ಚಿಹ್ನೆಗಳು ತೋರಲಾರವು. ಬಂಧುಗಳ ಕೃತ್ಯದಿಂದಾಗಿ ಮಾನಸಿಕ ಪೀಡೆಯು ಹೆಚ್ಚಲಿದೆ. ಶತ್ರುಗಳ ಪ್ರಾಬಲ್ಯದಿಂದಾಗಿ ಯಾವ ಕೆಲಸವನ್ನೂ ದೃಷ್ಟಿಯಂತೆ ಮಾಡಲಾರಿರಿ. ಆರ್ಥಿಕ ದುರವಸ್ಥೆ ದೇಹಾಲಸ್ಯ ಪ್ರವಾಸ ಗೃಹಕಲಹ ಇತ್ಯಾದಿ ನಾನಾ ತರದ ಉಪದ್ರವಗಳಿಗೆ ಸಿಲುಕಿ ಪೇಚಾಡತಕ್ಕವರು ಗೆ ತಾ 14, 15ರಲ್ಲಿ ಸ್ವಲ್ಪ ಬಿಡುವು ದೊರೆತೀತು.

ಕುಂಭ—ದೈಹಿಕ ದೋಷದಿಂದಾಗಿ ಸಾಗಿದೀ ಕೆಲಸ ಕಾರ್ಯಗಳನ್ನು ಮುಂದಕ್ಕೆ ಹಾಕುವಿರಿ. ನಿಮಗೆ ಯಾವ ಭಾಗದಲ್ಲೂ ಕೊರತೆ ಕಾಣದು. ಪ್ರತಿಯೊಂದು ವಿಭಾಗದಲ್ಲೂ ನೀವೇ ಅಧಿಪತಿಯಾಗಿ ಕಾರ್ಯ ನಿರ್ವಹಿಸುವಿರಿ. ಸಾಮಾಜಿಕ ರಾಜಕೀಯ ಕಾರ್ಯಗಳಲ್ಲಿ ಮನ್ನಣೆಯು ಪರಿಪೂರ್ಣವಾಗುವದು. ಆರ್ಥಿಕ ಸ್ಥಿತಿ ಉತ್ತಮವಾಗಿ ಬಿಡಲಿದೆ. ಗೃಹೋಪಕರಣಗಳೇನೂ ಕೊರತೆಯಿಲ್ಲವು. ಶತ್ರುಗಳೂ ಮಿತ್ರರಾಗಿ ನಿಮ್ಮೊಡನೆ ಸಹಕರಿಸುವರು. ತಾ. 11ರಿಂದ 14ರ ವರೆಗೆ ಸ್ವಲ್ಪ ಬಾರದ ಮಾಡಿ ಕಾರ್ಯ ಮಾಡಿರಿ.

ಮೀನ—ತಪ್ಪ ಮತ್ತು ಸಂಸಾರದ ಕಾಳಜಿಯಿಂದಾಗಿ ಸಂಪಾದಿಸಿದ ಧನವೆಲ್ಲವೂ ದಾಕ್ಷರರ ಕೈಸೇರಲಿದೆ. ಮನೆಯಲ್ಲಿ ಒಬ್ಬೊಬ್ಬರು ಒಂದೊಂದು ಮತವನ್ನನುಸರಿಸುವುದರಿಂದ ಪರಸ್ಪರ ಘರ್ಷಣ ಕಲಹಗಳು ತಲೆದೋರುವವು. ನೌಕರಿ ಭಾಗದಲ್ಲಿ ಕಷ್ಟದಿಂದ ನಿರ್ವಹಿಸುವಿರಿ. ಅಕಸ್ಮಾತ್ತಾಗಿ ಸಂಗ್ರಹಿತವಾಗಿರುವ ಧನವೂ ಖಾಲಿಯಾಗಿ ಹೋಗಲಿದೆ. ತಾ. 11, 12, 17, 18 ಈ ದಿನಗಳಲ್ಲಿ ವ್ಯಾಪಾರದ ನಷ್ಟ ಮತ್ತು ಬರವಣಿಗೆಯ ಲಾಭ ಕೆಲವು ಧನ ಲಭಿಸಲಿದೆ ಗೃಹ ಸುಖವೂ ದೊರೆತೀತು.

ವಿದ್ಯಾರ್ಥಿಗಳಿಗೆ ಆನಂದದ ಬಾತಮಿ.

ಅತಿ ಅಭ್ಯಾಸ ಯಾ ಜಾಗರಣೆಯಿಂದ ಪರೀಕ್ಷೆಯ ಸಮಯ ನರ್ವಸ್ ವೀಕ್ನೆಸಿನಿಂದ ಸಾಮಾನ್ಯ ನೇಕಡ 50 ವಿದ್ಯಾರ್ಥಿಗಳು ತಿಳಿದು ಯಾ ತಿಳಿಯದೆ ಫಸ್ಟ್ ಕ್ಲಾಸಿನ ಯೋಗ್ಯತೆಯುಳ್ಳವರು ಕೂಡ ಥರ್ಡ್ ಕ್ಲಾಸಿನಲ್ಲಿ ಸಹ ಪಾಸಾಗದೆ ನಾಪಾಸಾಗುವ ಪರಿಸ್ಥಿತಿಯು ಬರುತ್ತದೆ. ಈ ಪರ್ವ ವಿಚಾರಗಳಿಗೆ ನಮ್ಮ ದೀರ್ಘ ಅನುಭವದಿಂದ ತಯಾರಿಸಲ್ಪಟ್ಟ ಬಹುಗುಣಯುಕ್ತ ಪುಷ್ಪಗಂಧಾನೋದಿತ **ಆನಂದಶೀ ತೈಲ**ವನ್ನು ಉಪಯೋಗಿಸುವದರಿಂದ ಲಕ್ಷ್ಮೀಚಾನ್ಸ್ ಸಿಕ್ಕುತ್ತದೆ. 6 ಯಾ 11 ಆಣೆ ಬೆಲೆಯ 1ಸೀಸೆ ತೈಲವನ್ನು ಕೊಂಡುಕೊಂಡು ಸ್ವಲ್ಪ ತಲೆಗೆ ಹಾಕಿ ಪರೀಕ್ಷೆಗೆ ಕುಳಿತುಕೊಳ್ಳಿರಿ. ಇದರಿಂದ ಮೆದುಳಿನ ಜ್ಞಾನಶಕ್ತಿ ಯಾ ಸ್ಮರಣಶಕ್ತಿ ವೃದ್ಧಿಯಾಗಿ ಆತ್ಮವಿಶ್ವಾಸವು ಹೆಚ್ಚುವದಲ್ಲದೆ ಕಠಿಣ … ಸುಲಭವಾಗಿ ಯಶಃಪ್ರಾಪ್ತಿಯಾಗುವುದು. ಪರೀಕ್ಷೆಯ ಮೊದಲೇ ಒಂದೆರಡು ಸೀಸೆ ನಮ್ಮ ಆನಂದಶೀ ತೈಲವನ್ನು ತರಿಸಿಕೊಳ್ಳಿರಿ 4 ಔನ್ಸಿನ ಸೀಸೆ 1ರ ಕ್ರಯ ರೂ 0-11-0, 2 ಔನ್ಸಿನ ಸೀಸೆ 1ರ ರೂ. 0-6-0 ತಯಾರಿಸುವವರು:-ಸ್ವದೇಶೀ ಔಷಧಿಭಂಡಾರ, (ರಜಿಸ್ಟರ್ಡ್) ಕುಂಜಾಲು, ಪೋಸ್ಟ್ ಬ್ರಹ್ಮಾವರ, ದ. ಭಾರತ.

ನಮ್ಮ ಸ್ಟಾಕಿಸ್ಟರು:-ವಿ.ಆರ್. ಶೆಣೈ, ದಿ ಕೆನರಾ ನ್ಯೂಸ್ ಎಂಡ್ ಬುಕ್ ಏಜೆನ್ಸೀಸ್ ಬೆಳಗಾವಿ ಲಾ ಮೆನ್ಸನ್, ಲಾಲ್‌ಬಾಗ್, ಮಂಗಳೂರು. ಜನರಲ್ ಸಪ್ಲೈಸ್ ಲಿಮಿಟೆಡ್, ಉಡುಪಿ, ನವಭಾರತ ಬುಕ್ ಡಿಪೋ, ಉಡುಪಿ, ಕಟಪಾಡಿಗೆ ಬರೆಯಿರಿ.

A.H.

NAVAYUGA
Advertisement Tariff

1 Page	Rs. 25/-	per insertion
½ „	Rs. 15/-	„ „
¼ „	Rs. 8/-	„ „
⅛ „	Rs. 5/-	„ „
Per Single inch col	Re. 1	„

Contract rates on application
Manager-Navayuga UDIPI

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ

"ಗೊನೊಕಿಲರ್" (ರಜಿಸ್ಟರ್ಡ್)

GONO KILLER ORIGINAL

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಕಟಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ 'ಗೊನೊಕಿಲರ್' ಹೆಸರನ್ನೂ ಗಮನಿಸಿರಿ.

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರಕೃಚ್ಛ್ರದಿಂದ ತೀವ್ರ ನೋವು ಉಂಟಾಗುವ, ಮೂತ್ರ ಕಷ್ಟದಿಂದ ಹೋಗುವುದು ಮತ್ತು ಉರುವ ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, 'ಗೊನೊ ಕೋಕಸ್' ಎಂಬ ವಿಷಕ್ರಿಮಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಖದಾಯಕ ವಿಕಾರಗಳಲ್ಲಿ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬುದ್ದಿಯೊಂದಕ್ಕೆ ರೂ. 3. ವಿ. ಪಿ. ಚಾರ್ಜು 0-3-0 ಪ್ರತ್ಯೇಕ. ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer DR. D. N. JASAN, Vitalbhai Patel Road, BOMBAY 4

ನಾಝಿಗಳು ಗೆದ್ದ ಜನತೆಯನ್ನು ಕಾಣುವ ರೀತಿ.

ಗುಲಾಮರಂತೆ ದುಡಿಯಬೇಕು-ಇಲ್ಲವೆ ಉಪವಾಸಬೀಳಬೇಕು

ನಾಝಿಗಳು ತಾವು ಗೆದ್ದ ರಾಜ್ಯಗಳನ್ನೆಲ್ಲಾ ಸಂಘಟಿತವಾಗಿ ಉದ್ದೇಶಪೂರ್ವಕವಾಗಿ ಮತ್ತು ನಿರ್ಘೃಣವಾಗಿ ಸುಲಿಗೆ ಮಾಡುತ್ತಿರುವರು. ಸೈನಿಕರ ಬೆನ್ನು ಹಿಡಿದೇ ಈ ಸುಲಿಗೆಗಾರರ ಪಡೆ ಬರುವುದು. ಜರ್ಮನ್ ಯುದ್ಧ ಯಂತ್ರಕ್ಕೆ ಬೇಕಾದುದನ್ನೆಲ್ಲಾ ಜನರಿಂದ ಸೆಳೆಕೊಂಡು ಹೋಗುವುದೇ ಈ ಪಡೆಯ ಕೆಲಸ. ಕಾರ್ಖಾನೆ ಅಂಗಡಿ, ಹೊಲಗೇರಿ ಮತ್ತು ಮನೆಮಾರುಗಳಿಂದ ಪ್ರಯೋಜನಕಾರಿಗಳಾದ ವಸ್ತುಗಳೆಲ್ಲಾ ದೋಚಲ್ಪಡುವವು. ಯಂತ್ರ ಸಾಮಗ್ರಿಗಳನ್ನೂ ಕೂಡ ಒಯ್ದು ಉಪಯೋಗಿಸುವರು. ತಮಗೆ ಉಪಯೋಗಕ್ಕೆ ಬೀಳುವವುಗಳನ್ನು ಬಿಟ್ಟು ಉಳಿದುವುಗಳನ್ನು ಮುರಿದು ಕರಗಿಸಿ ಕಬ್ಬಿಣ ತಯಾರಿಸುವರು. ವಸ್ತ್ರ, ಲಿನೆನ್, ಬೂಟ್ಸ್, ಪೆಟ್ಟು, ಲೋಹ ಮತ್ತು ಇತರ ವಸ್ತು ಸಾಮಾನುಗಳನ್ನೆಲ್ಲಾ ಒಟ್ಟುಗೂಡಿಸಿ ಪಟ್ಟಿಮಾಡಿ ಒಯ್ಯುವರು. ಈ ಸಾಮಗ್ರಿಗಳ ಮಾಲಕರ ಸಮಾಧಾನಕ್ಕಾಗಿ ಸಣ್ಣ ಪ್ರಾಮಿಸರಿ ನೋಟುಗಳನ್ನೀಯಲಾಗುವುದು. ತಾವು ಗೆದ್ದ ಜನರು ತಮಗಿಂತ ಹೀನರು. ಜರ್ಮನರೇ ಲೋಕದಲ್ಲಿ ಶ್ರೇಷ್ಠರು. ಜರ್ಮನರಿಗೆ ಬೇಕಾದ ವಸ್ತು ಆಹಾರ ಮತ್ತು ಇತರ ಸಾಮಗ್ರಿಗಳು ಹೀನ ಜನಾಂಗಕ್ಕೆ ಸೇರಿದ ಪೋಲರು, ಫ್ರೆಂಚರ, ಡೇನರ್ ಮೊದಲಾದವರಿಗೆ ಬೇಕಾಗಿಲ್ಲೆಂದೇ ನಾಝಿಗಳ ಭಾವನೆ. ಆದುದರಿಂದ ನಾಝಿಗಳ ದೃಷ್ಟಿಯಲ್ಲಿ ಈ ಜನರಿಗೆ ಬೇಕಾಗುವ ವಸ್ತುಗಳ ಪ್ರಮಾಣವು ಬಹಳ ಕಡಿಮೆಯಿದ್ದು ಅತ್ಯಂತ ಕರುಣಾಜನಕವಿದೆ. ಪ್ರತಿಯೊಬ್ಬರಿಗೂ ಕಠಿಣ ನಿರ್ದಯ ಪರಿಮಿತಿಯಲ್ಲಿ ಆಹಾರವನ್ನೀಯಲಾಗುವುದು. ಈ ಆಹಾರಪ್ರಮಾಣವು ಜರ್ಮನರಿಗೊಂದು, ಪೋಲರು, ಯೆಹೂದ್ಯರೇ ಮೊದಲಾದವರಿಗೊಂದು. ಜರ್ಮನರಿಗೆ ಕೆಂಪು ಕಾರ್ಡುಗಳನ್ನೂ, ಪೋಲರು ಯೆಹೂದ್ಯರೇ ಮೊದಲಾದವರಿಗೆ ಹಸುರು ಕಾರ್ಡುಗಳೂ ಕೊಡಲ್ಪಡುತ್ತದೆ. ಈ ಕಾರ್ಡುಗಳಲ್ಲಿ ನಮೂದಿಸಿದಷ್ಟೇ ಆಹಾರ ಪಡೆಯಬೇಕಾಗಿದೆ. ನಾಝಿಗಳಿಗೆ ಅಧೀನವಾಗಿರುವ ಜನಾಂಗಗಳಿಗೆ ತಮಗೆ ಬೇಕಾದಂತೆ ಯಾವ ವಸ್ತುವನ್ನಾದರೂ ಕೊಟ್ಟು ಪಡೆಯುವ ಸ್ವಾತಂತ್ರ್ಯವಿಲ್ಲ. ಹಣವೇ ಅವರ ಕೈಗೆ ಸಿಗುವ ಹಾಗಿಲ್ಲ.

ನಾಝಿಗಳು ಕೊಟ್ಟಷ್ಟನ್ನು ತಿಂದು ತೃಪ್ತರಾಗಬೇಕು

ಕೈಗಾರಿಕೆ, ವ್ಯಾಪಾರ ಮಹಿವಾಟುಗಳೆಲ್ಲಾ ಅಸ್ತವ್ಯಸ್ತವಾಗಿವೆ. ನಿರುದ್ಯೋಗಿಗಳ ಸಂಖ್ಯೆಯು ಬಹಳವಾಗಿ ಹೆಚ್ಚಿದೆ. ಆದಾಯ ಮತ್ತು ಸಂಬಳಗಳು ಮಾಯವಾಗಿವೆ. ಹೆಚ್ಚಿನ ಸೊತ್ತುಗಳನ್ನೆಲ್ಲಾ ನಾಝಿಗಳು ವಶಪಡಿಸಿಕೊಂಡಿರುತ್ತಾರೆ. ಉಳಿದುವುಗಳನ್ನಾದರೂ ಮಾರಬೇಕು ಜರ್ಮನರಿಗೆ, ಅವರು ಕೊಟ್ಟ ಬೆಲೆಯಿಂದ ತೃಪ್ತರಾಗಬೇಕು. ಸಾರ್ವಜನಿಕ ಸಂಸ್ಥೆ ಮತ್ತು ಮಜೂರ ಸಂಘಗಳ ನಿಧಿಗಳೆಲ್ಲಾ ಅಪಹರಿಸಲ್ಪಟ್ಟಿವೆ. ನಿರುದ್ಯೋಗಿಗಳಿಗೆ ಕೊಡಲ್ಪಡುತ್ತಿದ್ದ ಸಹಾಯವು ನಿಲ್ಲಿಸಲ್ಪಟ್ಟಿದೆ. ಮಕ್ಕಳು, ಅಂಗಹೀನರು, ಮುದುಕರು ಮೊದಲಾದವರಿಗೆ ಕೊಡುತ್ತಿದ್ದ ಸಹಾಯವು ಬಹಳವಾಗಿ ಇಳಿಸಲ್ಪಟ್ಟಿದೆ. ಸ್ತ್ರೀಪುರುಷರೆಲ್ಲರೂ ನಾಝಿಗಳು ಕೊಡುವ ಸಂಬಳಕ್ಕಾಗಿ ಅವರಿಗಾಗಿ ದುಡಿಯಬೇಕು. ಇಲ್ಲವೆ ಉಪವಾಸಬೀಳಬೇಕು. ಒಕ್ಕಲಿಗನು ಯಥಾ ಪ್ರಕಾರ ಸಾಗುವಳಿ ಮಾಡಬೇಕು. ಆದರೆ ನಾಝಿ ಅಧಿಕಾರಿಯು ಬಂದು, ಬೇಸಾಯಗಾರನ ಕುಟುಂಬ ಪೋಷಣೆಗೆ ತನಗೆ ತೋರಿದಷ್ಟು ಬಿಟ್ಟು ಉಳಿದ ಉತ್ಪತ್ತಿಯನ್ನೆಲ್ಲಾ ಒಯ್ದುಬಿಡುವನು. ನಾಝಿಗಳು ನಿಶ್ಚೈಸುವ ಸಂಬಳ ಪಡೆದು ಕೆಲಸಗಾರರು ಕಾರ್ಖಾನೆಗಳಲ್ಲಿ ದುಡಿಯಬೇಕು. ಅವರ ಶ್ರಮದ ಉತ್ಪತ್ತಿಯೆಲ್ಲಾ ಜರ್ಮನರ ಉಪಯೋಗಕ್ಕಾಗಿ.

ಕೆಲವರಿಗೆ ಯುದ್ಧದಿಂದ ಹಾಳಾಗಿರುವ ರಸ್ತೆ, ಕಟ್ಟಡ, ಸೇತುವೆ ಮೊದಲಾದುವುಗಳನ್ನು ಮಾಡುವ ಕೆಲಸಕೊಡಲಾಗುವುದು. ಇನ್ನು ಕೆಲವರು ಜರ್ಮನರ ಯುದ್ಧಕ್ಕಾಗಿ ಸಾಮಾನುಗಳನ್ನು ತಯಾರಿಸುವ ಕೆಲಸಕೊಡಬೇಕಾಗುವುದು. ಅನೇಕರು ತಮ್ಮ ಮನೆಮಾರು ಬಿಟ್ಟು ಜರ್ಮನಿಗೆ ಹೋಗಿ ಗುಲಾಮರಂತೆ ಶ್ರಮಿಸಬೇಕಾಗುವುದು. ಇದೀಗ ಯುರೋಪಿನ ಅರ್ಧ ಭಾಗದಲ್ಲಿ ನಡೆಯುತ್ತಿರುವ ಸಂಗತಿಗಳ ನಿಜವಾದ ಚಿತ್ರ.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 70/1940

ದಿ ವಿಜಯಾ ಬೇಂಕ್ ಲಿಮಿಟೆಡ್ ಉಡುಪಿ ವಾದಿ—

ಮತ್ತು

ಎ. ಸಂಜೀವ ಹೆಗ್ಡೆ ಕೂಡ ಪ್ರತಿವಾದಿರು—

ಇವರೊಳಗೆ—

ಮೇಲ್ಕಂಡ ದಾವೆಯ 2ನೇ ಪ್ರತಿವಾದಿ ಕಾರ್ಕಳ ತಾಲೂಕು ಬೇಳಂಜೆ ಗ್ರಾಮದಲ್ಲಿರುವ ಬೇಳಂಜೆ ಕೃಷ್ಣಯ್ಯ ಹೆಗ್ಡೆಯ ಅಳಿಯ ಬೇಳಂಜೆ ವಿಠಲ ಹೆಗ್ಡೆಯರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ.

ನೀವು ಕೂಡಾ 3 ಜನರು ವಾದಿ ಬೇಂಕಿಗೆ ತಾ. 3-೬-37ರಲ್ಲಿ ಬರೆಕೊಟ್ಟ ಡಿಮಾಂಡು ಪ್ರಾಮಿಸರಿ ನೋಟಿನ ಬಾಬತ ಅಸಲು ಬಡ್ಡಿ ಹೋಗಳ ವಸೂಲಿ ಬಗ್ಗೆ ವಾದಿರು ದಕ್ಕಲುಮಾಡಿದ ಮೇಲ್ಕಂಡ ದಾವೆಯು ತಾ 19-7-1940ಕ್ಕೆ ತನಿಖೆಗೆಯಿಟ್ಟಿದೆ.

ಆದಿವಸ ನೀವು ಖುದ್ದಾಗಲೀ ಯಾ ವಕೀಲರ ದ್ವಾರವಾಗಲಿ ಪೂರ್ವಾಹ್ನ 10ಘಂಟೆಗೆ ಕೋರ್ಟು ಮುಂದೆ ಹಾಜರಾಗತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ್ ಹಾಜರಿಯಲ್ಲಿ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದು.

Narayana Shetty, B.
Advocate for Plaintiff.

ಇಂಡಿಯನ್ ಮ್ಯೂಚುಯಲ್

ಲೈಫ್ ಎಸೋಸಿಯೇಷನ್ ಲಿಮಿಟೆಡ್

ಹೆಡ್ ಆಫೀಸ್:- ನಂ. ೧೦, ಮೌಂಟ್ ರೋಡ್, ಮದರಾಸು

— ಡೈರೆಕ್ಟರುಗಳ ಬೋರ್ಡ್ —

ಸರ್ ವೇಪಾ ರಮೇಶಂ, ಕೆ. ಟಿ ರಿಟೈರ್ಡ್ ಜಡ್ಜ್, ಮದರಾಸ್ ಹೈಕೋರ್ಟ್, ಮದರಾಸು.

ರಾವ್ ಬಹದ್ದೂರ್ ಮ॥ ಕೆ ಬಲರಾಮ ಅಯ್ಯರ್, ಬಿ.ಎ ರಿಟೈರ್ಡ್ ಅಕೌಂಟೆಂಟ್ ಜನರಲ್ ಮದರಾಸ್.

ಮ॥ ಸಿ. ಕೃಷ್ಣಮೂರ್ತಿ ಮೊದಲಿಯಾರ್ ಲ್ಯಾಂಡ್ ಲಾರ್ಡ್, ಸಿಯಾಲಿ.

ದಿವಾನ್ ಬಹದ್ದೂರ್ ಮ॥ ಎ. ವಿ. ರಾಮಲಿಂಗ ಅಯ್ಯರ್, ಮದರಾಸ್ ಸರಕಾರದ ರಿಟೈರ್ಡ್ ಚೀಫ್ ಇಂಜನಿಯರು.

ಮ॥ ಟಿ ಎಸ್. ನಾರಾಯಣ ಸ್ವಾಮಿ, ಎಂ.ಎ, ಆಸಿಸ್ಟೆಂಟ್ ಕೆಮಿಸ್ಟ್, ಬಕಿಂಗ್‌ಹ್ಯಾಂ ಮಿಲ್ಸ್, ಮದರಾಸ್.

ದಿವಾನ್ ಬಹದ್ದೂರ್ ಮ॥ ವಿ. ಭಾಷ್ಯಂ ಅಯ್ಯಂಗಾರ್, ರಿಟೈರ್ಡ್ ಮದರಾಸ್ ಹೈಕೋರ್ಟ್ ಜಡ್ಜ್.

ಮ॥ ಸಿ.ಎಂ.ಶ್ರೀನಿವಾಸನ್, ಬಿ.ಎ.,ಬಿ ಎಲ್. (ಎಕ್ಸ್-ಆಫೀಶಿಯೋ) ಮದ್ರಾಸ್.

ಮ್ಯಾನೇಜರ್:-ಮ॥ ಎಂ. ನಟೇಶನ್, ಎಂ.ಎ.

ಚೀಫ್ ಮೆಡಿಕಲ್ ಆಫೀಸರ್:- ಲೆ. ಕ॥ ವಿ. ಮಹದೇವನ್, ಐ. ಎಂ ಎಸ್.

ಬ್ಯಾಂಕರುಗಳು:— ಇಂಡಿಯನ್ ಬ್ಯಾಂಕ್ ಲಿಮಿಟೆಡ್, ಮದರಾಸ್. ಮದರಾಸ್ ಪ್ರೊವಿನ್ಶಿಯಲ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್. ಇಂಡೊ-ಕಮರ್ಶಿಯಲ್ ಬ್ಯಾಂಕ್ ಲಿಮಿಟೆಡ್, ದಿ ಬ್ಯಾಂಕ್ ಆಫ್ ಮೈಸೂರು, ಲಿಮಿಟೆಡ್.

ಬ್ರಾಂಚುಗಳು: -ಕಲ್ಕತ್ತ, ಲಾಹೋರ್, ಜೋಧಪೂರ್, ಮಧುರ, ಕಲ್ಲಿಕೋಟೆ, ಬೆಜವಾಡ, ಅಲಹಾಬಾದ್ ಬೊಂಬಾಯಿ, ಅಹಮದಾಬಾದ್, ಪೂನಾ.

ಮೈಸೂರು ಸರಕಾರದ ಹೊಸ ವಿಮಾ ಕಾನೂನನ್ನು ಅನುಸರಿಸಿ ಕಂಟ್ರೋಲರವರಲ್ಲಿ ಠೇವಣಾತಿ ಮೊಬಲಗು ಇಡಲಾಗಿದೆ.

ಕರ್ನಾಟಕದಲ್ಲೆಲ್ಲಾ ಯೋಗ್ಯರಾದ ಮತ್ತು ಪ್ರತಿಭಾಶಾಲಿಗಳಾದವರಿಂದ ಏಜನ್ಸಿಗಳಿಗೆ ಅರ್ಜಿಗಳು ಸ್ವೀಕರಿಸಲ್ಪಡುವುವು.

ಉತ್ತಮ ಕೆಲಸಮಾಡುವವರಿಗೆ ಒಳ್ಳೇ ಷರತ್ತುಗಳು.

ಮ॥ ಸಿ ಎಂ. ಶ್ರೀನಿವಾಸನ್, ಬಿ. ಎ, ಬಿ. ಎಲ್. ಜನರಲ್ ಸೆಕ್ರಿಟರಿ.
ಇಂಡಿಯನ್ ಮ್ಯೂಚುಯಲ್ ಲೈಫ್ ಆಸೋಸಿಯೇಷನ್ ಲಿಮಿಟೆಡ್,
10 ಮೌಂಟ್‌ರೋಡ್, ಮದ್ರಾಸ್.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಬಿ. ಕರುಣಾಕರ ಹೆಗ್ಡೆ, ಇನ್ಸ್‌ಪೆಕ್ಟರ್ ಆಫ್ ಏಜನ್ಸೀಸ್,
ಹರೇಕಳ ಪೋಸ್ಟ್, ಉಡುಪಿ.

Bonus: Endowment Rs. 15. Wole life Rs. 18 Last valuation.

INDIAN MUTUAL LIFE ASSOCIATION, LIMITED.

Head Office--No. 10, Mount Road Madras.

ಈ ವಾರದ ಭವಿಷ್ಯ

ತಾರೀಕು 11-7-1940ರಿಂದ 18-7-1940ರ ವರೆಗೆ

ಮೇಷ—ನಿಮ್ಮ ಶಕ್ತಿ ಪರಾಕ್ರಮಗಳಿಗೆ ವಿರೋಧಿಗಳಿಂದ ಧಕ್ಕೆ ಬರುವುದರಿಂದ ದಿನದಿಂದ ದಿನಕ್ಕೆ ಕಾರ್ಯೋತ್ಸಾಹವು ಕುಗ್ಗುವುದು ಮನಸ್ಸು ಕಲ್ಲಾಗೊಳ್ಳುವುದು ಶ್ರಮಕ್ಕೆ ತಕ್ಕುದಾದ ಫಲವು ದೊರೆಯದಿರುವುದರಿಂದಲೂ ಧನಾಗಮದ ಮಾರ್ಗಗಳೆಲ್ಲವೂ ಬಂದಾಗಿ ಕೇವಲ ಖರ್ಚು ಹೆಚ್ಚುತ್ತಿರುವುದರಿಂದ ಅತಿಕಷ್ಟವನ್ನನುಭವಿಸಬೇಕಾಗುವುದು. ವಿದ್ಯೋಪಜೀವಿಗಳೂ ವ್ಯಾಪಾರೀ ವರ್ಗದವರೂ ಅರ್ಧಮಧ್ಯ ಫಲಪ್ರಾಪ್ತಿಯ ರೋಗದಿಂದ ಅಸ್ವಾಸ್ಥ್ಯಕ್ಕೊಳಗಾಗುವರು. ಕೂಲಿ ಜನರ ಸಹವಾಸಕ್ಕೆ ಬಲಿಬಿದ್ದು ಅನಿಷ್ಟ ಕೆಲಸಗಳಿಗೆ ಗುರಿಯಾಗಬೇಕಾಗಿ ಬಂದ ಗಳಿಕೆ ಉಂಟಾಗಲೂ ಕೈಲಾದ ಸಹಾಯ ಮಾಡುವರು. ತಾ. 13ರಿಂದ 16ರ ವರೆಗೆ ಬಹಳ ಕಷ್ಟದಿಂದ ದಿನಗಳೆಯಬೇಕಾಗುವುದು.

ವೃಷಭ—ನಷ್ಟ ಹೊಂದಿದರೂ ಚಿಂತೆಯಿಲ್ಲವು, ಇಷ್ಟಸಾಧನೆಯಾಗಬೇಕೆಂಬ ಒಂದೇ ಛಲವು ನಿಮ್ಮನ್ನು ಕಾರ್ಯರಂಗದಲ್ಲಿ ಮುಂದೂಡುತ್ತಿದೆ ನಿಮ್ಮ ಪ್ರಯತ್ನಕ್ಕನುಸಾರವಾಗಿ ಹಲವಾರು ಕಾರ್ಯಗಳಲ್ಲಿ ವಿಜಯಶ್ರೀಯನ್ನು ಹೊಂದುವಿರಿ ನಿರುದ್ಯೋಗ ಸಮಸ್ಯೆಯಿಂದ ಪೀಡಿತರಾಗಿ ಉದ್ಯೋಗ ಕಾಲಹರಣ ಮಾಡುತ್ತಿದ್ದವರೂ ಕೂಡ ಜೀವನೋಪಾಯದ ಕಾರ್ಯದಲ್ಲಿ ನಿರತರಾಗುವರು. ನೌಕರಿ ಚಾಕರಿಗಳು ಅಧಿಕಾರಿಗಳ ಪ್ರೋತ್ಸಾಹಕ್ಕೆ ತುತ್ತಾಗಲಿರುವರು ದೇಹಾರೋಗ್ಯವು ಸ್ವಲ್ಪ ಮಟ್ಟಿಗೆ ಕೆಡಲಿದೆ. ಒಂದೆಳ್ಳಿನಷ್ಟು ಚಿಂತೆಯು ನಿಮ್ಮನ್ನಾವರಿಸಿಕೊಂಡಿರುವುದರಿಂದ ಕ್ಷಣಕಾಲವೂ ಮನಸ್ಸಿಗೆ ಶಾಂತಿಸಿಗದು. ವಾರಾದಿಯ ನಾಲ್ಕು ದಿನಗಳು ಅತ್ಯನುಕೂಲಗಳಾಗಿರುವುದರಿಂದ ಈ ದಿನಗಳಲ್ಲಿ ಧನಲಾಭ ಕಾರ್ಯಜಯಗಳಾಗುವವು.

ಮಿಥುನ—ನಿಮ್ಮ ಗ್ರಹಸ್ಥಾನವು ಉತ್ತಮವಾಗಿರುವುದು ಆದಿರಿಂದ ನೀವು ಹಿಡಿದ ಕೆಲಸ ಸಾಗಬೇಕೆಂಬ ನಿಮ್ಮ ಹೆಬ್ಬಯಕೆಯು ಸಫಲವಾಗುವುದು ಶ್ರಮವಿಲ್ಲದೇನೇ ಹೆಚ್ಚಿನ ಕಾರ್ಯಗಳು ಕೈಸೇರುವುವು. ಆದರೂ ನಿಮ್ಮ ಮನಸ್ಸಿನೊಳ ಬಹಳ ಭಯವಿದ್ದು ಏನಾಗುವುದೋ ಎಂತಾಗುವುದೋ ನಿಮಗೆ ಅವಿಶ್ವಾಸ ತೋರಬಹುದು. ಇದಕ್ಕೆ ಮುಖ್ಯವಾಗಿ ನಿಮ್ಮ ಶರೀರ ದೌರ್ಬಲ್ಯವೇ ಕಾರಣವಲ್ಲದೇ ಬಹು ಮುಖ್ಯವಾದ ಆದಾಯದ ಮಾರ್ಗಗಳು ಅತ್ಯಲ್ಪಗಳಾಗಿರುವುದರಿಂದ ಆರ್ಥಿಕ ಸಂಕಟಕ್ಕೆ ಗುರಿಯಾಗುವುದು. ಯಾವುದಕ್ಕೂ ಕೊಂಡುಕೊಳ್ಳತಕ್ಕ ಗಳಿಗೆ ಬಿಡುವಿಲ್ಲದ ದಿನಗಳನ್ನು ಕಳೆಯುವಿರಿ. ತಾ. 15ರಿಂದ 16ರ ವರೆಗಿನ ದಿನಗಳು ಅತ್ಯುತ್ತಮಗಳಾಗಿವೆ.

ಕರ್ಕಾಟಕ—ದೈವಬಲದಿಂದ ಮುಕ್ತರಾಗಿದ್ದ ನಿಮಗೆ ಈಗ ಮೇಲಿಂದ ಮೇಲೆ ಶತ್ರುಗಳಿಂದ ಆಘಾತವುಂಟಾಗುತ್ತಿರುವುದು. ಶತ್ರುಜನರಿಂದಾಗುವ ಅವಮಾನವನ್ನು ತಾಳಿಕೊಳ್ಳಲು ನಿಮಗೆ ಸಧ್ಯ ಯಾವ ಪ್ರತೀಕಾರವನ್ನೂ ಮಾಡಲು ಶಕ್ತಿಸಾಲದು. ಸತ್ಯವ್ರತದಿಂದಲೂ ಖರ್ಚುಗಳು ಪ್ರಾಪ್ತವಾಗುವುದರಿಂದ ಆದಾಯವೇ ದುಸ್ಸಹ ...

...ಗಿರುವುದರಿಂದಲೂ ಆರ್ಥಿಕ ವಿಕ್ಷೇಪವನ್ನು ತೋರಲಾರದು. ದೇಹಾರೋಗ್ಯವೂ ಕೂಡ ಕೆಡ್ಡಿಹೋಗುವುದು. ನಂಬಿಕಸ್ಥರಾದ ನಿಮ್ಮಲ್ಲಿ ಸ್ನೇಹ ಭಾವನೆ ಬರುತ್ತಿರುವುದರಿಂದ ಗರ ಹಿರಿಯರೂ ಬಂಧುಮಿತ್ರರೂ ನಿಮ್ಮನ್ನು ತಿರಸ್ಕಾರ ದೃಷ್ಟಿಯಿಂದ ನೋಡುವರು. ತಾ 11, 12, 17, 18 ಈ ನಾಲ್ಕು ದಿನಗಳಲ್ಲಿ ಚಂದ್ರ ಬಲವಿರುವುದರಿಂದ ಶಾಂತಿ ಆರೋಗ್ಯ ಅಲ್ಪ ಧನ ಪ್ರಾಪ್ತಿಯಿದೆ.

ಸಿಂಹ—ಕಳೆದ ವಾರಕ್ಕಿಂತಲೂ ಈ ವಾರವು ಸ್ವಲ್ಪ ಮಟ್ಟಿಗೆ ಕಷ್ಟಕರವಾಗಿ ಪರಿಣಮಿಸಲಿದೆ. ಕೈಗಾರಿಕೆ ವ್ಯಾಪಾರಾದಿ ಉದ್ಯಮಗಳಿಗೆ ಪ್ರವೃತ್ತರಾದ ಜನರು ದೊರೆಯದಿದ್ದರೂ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವೆಂಬ ಗಾದೆಯಂತೆ ಕೈಗೆ ಸಿಕ್ಕಿದ ನಗದು ಹಣವು ನಿಮ್ಮ ಉಪಯೋಗಕ್ಕೆ ಬೀಳಲಾರದು. ಸತ್ಸ್ವಭಾವದ ಸಹಾಯ ದೊರೆಯದಿರುವುದು. ಎಷ್ಟಿದ್ದರೂ ವ್ಯಯಸ್ಥಾನಾಧಿಪತಿಯಾದ ರವಿ ಕೇಂದ್ರದಲ್ಲಿರುವುದರಿಂದ ನಿಮಗೆ ಅಧಿಕ ವ್ಯಯವೂ, ದೇಹಾಲಸ್ಯವೂ ಪ್ರಯಾಣದಲ್ಲಿ ಕಳವೂ ಆಕಸ್ಮಿಕ ಪ್ರಮಾದವೂ ಸಂಭವಿಸುವುದು. ವಿದ್ಯೋಪಜೀವಿಗಳಿಗೆ ಹೆಚ್ಚಿನ ಹಣದ ಆವಶ್ಯಕತೆಯು ತಪ್ಪದಾಗಿ ಬಂಧನದ ಭಯವೂ ಅನ್ಯರ ನಿಂದೆಗಳೂ ಪ್ರಾಪ್ತವಾಗಬಹುದು. ತಾ 13, 14 ಈ ದಿನಗಳು ಹೆಚ್ಚಿನ ಪರಿಶ್ರಮಕ್ಕೆ ಫಲ ಲಾಭವು.

ಕನ್ಯಾ—ಜೀವನದಲ್ಲಿ ಹಣಕ್ಕೆ ಸಮ್ಮತವಾದ ಒಂದೊಂದು ಪದ ಘಟಿಸಿತೆಂದು ಯಾರೋ ಒಬ್ಬರು ಹೇಳಿದರೂ ನೀವು ಸ್ವಪ್ರಯತ್ನದ ಕಾರ್ಯವು ಇಲ್ಲದಿರುವಷ್ಟು ಸುಖ ಸಮಾಧಾನದಿಂದಿರುವಿರಿ. ಈಗಿನ ವ್ಯವಹಾರಗಳಲ್ಲಿ ಬರುವ ಲಾಭವು ನಿಮ್ಮ ಆರ್ಥಿಕ ಸ್ಥಿತಿಯ ವೃದ್ಧಿ ಹೊಂದಲಿರುವುದು. ಆದ್ದರಿಂದಲೇ ನಿಮ್ಮ ಕ್ಷೇತ್ರಗಳಲ್ಲಿ ಸಹವಾಸದಲ್ಲಿ ಲಾಭ ಗಳಿಸುವಿರಿ ಆದರೂ ಆರೋಗ್ಯಭಾಗ್ಯದಿಂದ ದೂರಾಗಿರುವ ನಿಮಗೆ ಕಲ್ಪನೆಯ ಸಂಶಯ ವ್ಯಥೆಯೇ ಎಂದು ಕಾಣುವುದು. ದಿನದಿನವೂ ನಿಮ್ಮನ್ನು ಬಂಧನದಲ್ಲಿದ್ದಂತೆ ಕಳೆಯಬೇಕಾಗುವುದು. ತಾ 11, 12, 15, 16 ಇವುಗಳಲ್ಲಿ ಉತ್ತಮ.

ತುಲಾ—ಕಾರ್ಯಗೌರವದಿಂದ ನಿಮಗೆ ... ಕಲಹವೂ ಒಂದೇ ಕಡೆ ನೆಲೆಸಲು ನಿಶ್ಚಯಿಸುವುದು, ... ಸಹಕಾರವೂ ... ಕರೆ ... ಎಂಬ ... ತೆ ನಿಮ್ಮ ಕಷ್ಟದ ಸಪ್ನವನ್ನು ... ಜನ ಭವಿಷ್ಯದಲ್ಲಿ ... ಪ್ರಕಿಯೊಂದು ಕಾರ್ಯಗಳು

ಯಾವ ತರದ ಅಡ್ಡಿ ಆತಂಕಗಳಿಲ್ಲದೆ ಕೆಲಸಗಳು ಪೂರೈಸುವುವು. ವಿಪತ್ತೀಯರು ಕಡಿಮೆಗೊಳ್ಳುವರು ಸಮಾಜದಲ್ಲಿನ ಗೌರವಾದರಗಳನ್ನೂ ಸಾಂಸಾರಿಕ ಸುಖವನ್ನೂ ಹೊಂದಲಿರುವಿರಿ. ತಾ 13 14 17 18 ಈ ನಾಲ್ಕು ದಿನಗಳು ಅತ್ಯುತ್ತಮವಿರುವುದರಿಂದ ಧನವಸನಗಳ ಲಾಭ ಸ್ತ್ರೀಸುಖ ಇಷ್ಟಾರ್ಥ ಪೂರ್ತಿ ಇತ್ಯಾದಿಗಳಾಗಲಿವೆ.

ವೃಶ್ಚಿಕ—'ಉದ್ಯೋಗೇ ಪುರುಷಲಕ್ಷಣಂ ಸಂತೋಷಕಾರೀ ದರ್ಶನಂ' ದುರ್ಜನರು ಪ್ರತಿನಾಗಿ ಉಪಕಾರ ಮಾಡುವುದರಿಂದಲೇ ಸಂತೋಷಗೊಂಡ ವಿಷಕಂಠ ಉಪಕಾರ ಮಾಡುವುದರಿಂದ ನಿಮ್ಮನ್ನು ಗುರು ಇಂತೆಂಬ ಮೋಹದ ದೃಷ್ಟಿಯಿಂದಲೂ ನೀವು ಈ ವಾರದಲ್ಲಿ ಶತ್ರುಗಳಿಗೆ ಪ್ರತಿಕ್ರಿಯೆಯನ್ನು ಮಾಡಲು ಮನಸ್ಸು ಮಾಡುವಿರಿ ... ದಯಮಾಡಿ ಮನದಿಂದ ಸಂಕಟಕ್ಕೊಳಗಾಗುವಿರಿ ಮತ್ತು ದುಡ್ಡಿನ ಅಡಚಣೆಯೂ ಹೆಚ್ಚಲಿದೆ ಈ ಮಾನವ ವ್ಯಸನಗಳಿಂದ ನಿಮಗೆ ರೋಗವೂ ತನ್ನೊಳಕೆ ದೌರ್ಬಲ್ಯವೂ ಉಂಟಾಗಲಿದೆ. ಆದರೂ ತಾ 11 12 ಮತ್ತು 15 16 ಈ ನಾಲ್ಕು ದಿನಗಳ ಮಟ್ಟಿಗೆ ಕಿಂಚಿತ್ಸ್ವಾಸ್ಥ್ಯ, ಆರೋಗ್ಯ, ಗೃಹಸುಖಗಳು ದೊರೆಯುವುದರಿಂದ ಕಳ್ಳ ಮಟ್ಟಿನ ತೃಪ್ತಿಯುಂಟಾದೀತು.

ಧನು—ದೇಹದಲ್ಲಿ ಸ್ವಲ್ಪ ಅನಾರೋಗ್ಯವು ಕಂಡು ಬಂದೀತು ವ್ಯಾಪಾರ ವ್ಯವಹಾರಗಳಲ್ಲಿ ಲಾಭವಿರದೆ ಕೋರ್ಟು ವ್ಯವಹಾರಗಳ ಕಾರ್ಯಗಳಲ್ಲಿ ವಿಫಲತೆಯಿಂದ ಹಣ ಖರ್ಚಾಗುವ ಸಂಭವವಿದೆ. ಗೃಹದಲ್ಲಿ ಹೆಂಡತಿ ಮಕ್ಕಳು ಪರಿಜನರ ಸಹವಾಸವು ... ಉಪಕಾರ ದೊರೆಯುವುದು, ಉನ್ನತ ಧ್ಯೇಯದ ವಿದ್ಯಾರ್ಥಿಗಳಿಗೂ ಲೇಖಕರಿಗೂ ಎಲ್ಲಾ ಭಾಗದಲ್ಲೂ ಅಭಿವೃದ್ಧಿಯ ಚಿಹ್ನೆಗಳು ವಿರೋಧಿಗಳಿಂದ ಧನ ವಸನಗಳಿಗೆ ದಕ್ಕೆಯು ಆಕಸ್ಮಿಕ ಅಪಘಾತಗಳೂ ಸಂಭವಿಸಲಿವೆ. ತಾ 15 16 ಈ ಎರಡು ದಿನಗಳು ಪ್ರತಿಕೂಲಗಳಾಗಿವೆ.

ಮಕರ—ದಾನ ಧರ್ಮವನ್ನು ಆಚರಿಸಲಿ, ಯಾವ ಕಾರ್ಯವನ್ನು ಮಾಡಲಿ ಎಂಬ ವಿಚಾರದಲ್ಲಿಯೇ ನಿಮಗೆ ಮನಸ್ಸು ಒಂದೆಡೆ ನಿಲ್ಲದು. ಯಾವ ಭಾಗದಲ್ಲೂ ಆಕಾಂಕ್ಷೆಗಳು ಕೈಗೂಡುವುದು ಬಹು ಕಷ್ಟ. ಮಾನಸಿಕ ಪೀಡೆಯು ಹೆಚ್ಚಲಿದೆ ಶತ್ರುಗಳ ಪ್ರಾಬಲ್ಯದಿಂದ ... ಅಂತೆ ... ಆಗಲೇ ದುರವಸ್ಥೆ ದೇವಾಲಯ ಪ್ರವಾಸ ಗೃಹಕಲಹ ಇತ್ಯಾದಿ ನಾನಾ ಕಾರ್ಯಗಳ ಉದ್ಭವಕ್ಕೆ ಸಿಲುಕಿ ಸಾವ ದಿನಗಳನ್ನು ಕಳೆಯುವಿರಿ. ತಾ 14, 15ರಲ್ಲಿ ಸ್ವಲ್ಪ ಬಿಡುವು ದೊರೆಯುವುದು.

ಕುಂಭ—ದೈಹಿಕ ದೋಷದಿಂದ ನೀವು ಸಾಗಿದ ಸಕಲ ಕಾರ್ಯಗಳನ್ನು ಮುಂದಕ್ಕೆ ಹಾಕುವಿರಿ ನಿಮ್ಮ ಸಂತಸವು ಯಾವ ಭಾಗದಲ್ಲೂ ಕೆಡದೆ ಕಾಣದು ಪ್ರತಿಯೊಂದು ವಿಭಾಗದಲ್ಲೂ ನೀವು ಅದೃಷ್ಟ ... ಕೆಲ ಜಾತಿಯ ಕಾರ್ಯಗಳಲ್ಲಿ ... ಪೂರ್ಣವಾಗುವುದು ಅಧಿಕ ಸಂಪಾದನೆ ಮತ್ತು ವೃದ್ಧಿ ಆಗಲಿದೆ, ಗೃಹೋಪಕರಣಗಳನ್ನೂ ಕೊಡುವ ... ಕಲ್ಲದ ವಸ್ತ್ರಗಳೂ ವಿಶೇಷ ನಿಶ್ಚಯವೆನಿಸುವ ಕಂಡುಬರುವ ತಾ 11ರಿಂದ 13ರ ವರೆಗೆ ಸ್ವಲ್ಪ ಬಾಧೆ ಪಡಾಲಿ ಕಾರ್ಯ ಮಾಡಿರಿ

ಮೀನ—ಕಷ್ಟ ಮತ್ತು ಸಂಸಾರದ ಕಲಹ ... ಗಿ ಸಂಪಾದಿಸಿದ ಧನವೆಲ್ಲವೂ ವಾಸ್ತವದ ... ಕೈಸೇರಲಿದೆ ಮನೆಯಲ್ಲಿ ಒಬ್ಬಿಬ್ಬರು ಒಂದೆಂಬ ... ಸರಿ ... ಕೆಲಸಗಳು ... ನೌಕರಿ ಬಾಗದಲ್ಲಿ ಕಷ್ಟದಿಂದ ನಿರ್ವಹಿಸುವಿರಿ ಅನಿಷ್ಟಕರವಾಗಿ ಸಂಗ್ರಹಿತವಾಗಿದ್ದ ಧನವು ... ಗೆ ಹೋಗಲಿದೆ. ತಾ 11, 12, 17, 18 ಈ ದಿನಗಳಲ್ಲಿ ವ್ಯಾಪಾರದ ಲಾಭ ಮತ್ತು ... ಕೊಂಡ ಧನ ... ದೊರೆಯುವುದು.

ವಿದ್ಯಾರ್ಥಿಗಳಿಗೆ ಆನಂದದ ವಾರ್ತೆ.

ಅತಿ ಅಭ್ಯಾಸ ಮಾಡುವುದರಿಂದ ಪರೀಕ್ಷೆಯ ಸಮಯ ನರ್ವಸ್ ವೀಕ್ನೆಸ್ಸಿನಿಂದ ಸಾಮಾನ್ಯ ಸೇಕಡ 50 ವಿದ್ಯಾರ್ಥಿಗಳು ತಿಳಿದು ಯಾ ತಿಳಿಯದೆ ಫಸ್ಟ್ ಕ್ಲಾಸಿನ ಯೋಗ್ಯತೆಯುಳ್ಳವರು ಕೂಡ ಥರ್ಡ್ ಕ್ಲಾಸಿನಲ್ಲಿ ಸಹ ಪಾಸಾಗದೆ ನಾಪಾಸಾಗುವ ಪರಿಸ್ಥಿತಿಯು ಒದಗುವುದು. ಈ ಸರ್ವ ವಿಚಾರಗಳಿಗೆ ನಮ್ಮ ದೀರ್ಘ ಅನುಭವದಿಂದ ತಯಾರಿಸಲ್ಪಟ್ಟ ಬಹುಗುಣಯುಕ್ತ ಪ್ರಸಿದ್ಧಗೊಂಡಿರುವ **ಆಮಲಕೀ ತೈಲ**ವನ್ನು ಉಪಯೋಗಿಸುವುದರಿಂದ ಒಂದು ಬಾಟಲ್ ಸಿಕ್ಕುವುದೆ 6 ಯಾ 11 ಅಣೆ ಬೆಲೆಯ 1 ಸೀಸೆ ತೈಲವನ್ನು ತಂದು ಕೊಂಡು ಸ್ವಲ್ಪ ತಲೆಗೆ ಹಾಕಿ ಸೇವನೆ ಮಾಡಿರಿ. ಇದರಿಂದ ಮೆದುಳಿನ ಜ್ಞಾನಶಕ್ತಿ ಯಾ ಸ್ಮರಣಶಕ್ತಿ ವೃದ್ಧಿಯಾಗಿ ಆತ್ಮವಿಶ್ವಾಸವು ಹೆಚ್ಚುವದಲ್ಲದೆ ಕಠಿಣತರದ ಪ್ರಶ್ನೆಗಳಲ್ಲಿ ಸುಲಭವಾಗಿ ಉತ್ತೀರ್ಣರಾಗುವುದು. ಪರೀಕ್ಷೆಯ ಮೊದಲೇ ಒಂದೆರಡು ಸೀಸೆ ನಮ್ಮ ಆಮಲಕೀ ತೈಲವನ್ನು ತರಿಸಿಕೊಳ್ಳಿರಿ 4 ಔನ್ಸಿನ ಸೀಸೆ 1ರ ಕ್ರಯ ರೂ 0-11-0, 2 ಔನ್ಸಿನ ಸೀಸೆ 1ರ ರೂ. 0-6-0 ತಯಾರಿಸುವವರ - ಸ್ವದೇಶೀ ಔಷಧಿಭಂಡಾರ, (ರಿಜಿಸ್ಟರ್ಡ್) ಕಾಂಚಾಲಯ, ಪೋಸ್ಟ್ ಬ್ರಹ್ಮಾವರ, ದ. ಕನ್ನಡ.

ನಮ್ಮ ಸ್ಟಾಕಿಸ್ಟರು:-ಪಿ ಆರ್. ಪ್ರಭು, ದಿ ಕೆನರಾ ನ್ಯೂಸ್ ಎಂಡ್ ಬುಕ್ ಏಜೆನ್ಸೀಸ್ ಪಟ್ಟಣಮ್ ಲಾ ಮೆನ್ಸನ್, ಲಾಲ್‌ಬಾಗ್, ಮಂಗಳೂರು. ಜನರಲ್ ಸಪ್ಲೈಸ್ ಲಿಮಿಟೆಡ್, ಉಡುಪಿ, ನವಭಾರತ ಬುಕ್ ಡಿಪ್ಪೋ, ಉಡುಪಿ, ಕಟಪಾಡಿ ಬಿ.

A.Int

NAVAYUGA
Advertisement Tariff

1 Page	Rs 25/	per insertion	
½ "	Rs 15-	"	"
¼ "	Rs 8/	"	"
⅛ "	Rs 5/-	"	"

Per Single inch c 1, 1,
Contract rates on application
Manager Navayuga UDIPI

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧ

ಡಾ ಜಸಾನಿಯವರ

"ಗೊನೊಕಿಲರ್" (ರಿಜಿಸ್ಟರ್ಡ್)

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ 'ಗೊನೊಕಿಲರ್' ಹೆಸರನ್ನೂ ಗಮನಿಸಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮತ್ತು ಉಪದಂಶದಿಂದ ಕೀವು ಹೋಗುವುದು, ವೀರ್ಯಸ್ರಾವ, ರಕ್ತ ಹರಿದನಿಯಾಗಿ ಹೋಗುವುದು ಮತ್ತು ಉರಿಯುವಿಕೆ, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗುವ ವೀರ್ಯಸ್ರಾವ, 'ಗೊನೊ ಕೋಕಸ' ಎಂಬ ವಿಷಜಂತು, ಅದೇ ಮೇರೆಗೆ ಸ್ತ್ರೀಯರಿಗಾದ ಬಿಳುಪು ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3 ವಿ ಪಿ ಖರ್ಚು 0 8-0 ಪ್ರತ್ಯೇಕ, ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಠ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer DR. D. N. JASAN, Vitalbhai Patel Road, BOMBAY 4

[ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ರಾ ದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ
ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ

Kanara Printing Works,
Hampankatte, **MANGALORE**

ಮೂಲವ್ಯಾಧಿ

ನಾಥ-ಪ್ರಾಬ್ಬನ ಸಿದ್ಧಿಯಾಗಿರುವ ವಿಚಿತ್ರ ಹಾಗೂ **ಅಪೂರ್ವ ಔಷಧಿ**

ಅರ್ಶಮಾರಾ (ರಿಜಿಸ್ಟರ್ಡ್)

ರಕ್ತ ಸುರಿಯುವ ಅಥವಾ ಬಂದಾಗಿರುವ ಹಳೆಯ ಅಥವಾ ಹೊಸ ತಾದ ಒಳಗಿನ ಅಥವಾ ಹೊರಗಿನ ಯಾವಸ್ಥಿತಿಯದ್ದೇ ಆದ ಮೂಲ ವ್ಯಾಧಿಯು 'ಅರ್ಶಮಾರಾ'ವನ್ನು ಒಂದೆರಡ್ಮೆ ಹಚ್ಚಿದ ಕೂಡಲೆ ಅದ್ಭುತ ವಾಗಿ ಗುಣಹೊಂದುತ್ತದೆ. ನೋವು ತುರಿಸಾಟ, ಉರಿಯುವಿಕೆ, ಕ್ಲೇಶ, ರಕ್ತಸ್ರಾವನಾಗುವುದನ್ನೆಲ್ಲಾ ಕೂಡಲೆ ನಿಲ್ಲಿಸಿಬಿಡುವುದು. ಕೇವಲ 3 ದಿನ ಹಚ್ಚಿದರೆ ಯಾವ ತರದ ಓಪರೇಶನೂ ಇಲ್ಲದೆ ಮೂಲವ್ಯಾಧಿ ಅಥವಾ ಮೊಳೆಗಳನ್ನು ಗುಣಪಡಿ ಸುವುದು. ಈ ಔಷಧಿಯಿಂದ ಸಾವಿರಾರು ರೋಗಿಗಳು ಗುಣಹೊಂದಿ ಇತರರಿಗೆ ಅದನ್ನು ಶಿಫಾ ರಸು ಮಾಡುತ್ತಿದ್ದಾರೆ ಗುಣವಾಗದಿದ್ದಲ್ಲಿ ಹಣ ವಾಪಸು. ಬೆಲೆ ರೂ. 2-0-0.

ಆರೋಗ್ಯ ಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4
AROGYA SADAN, DURGADEVI ST. BOMBAY 4.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.
ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ ಮಕ್ಕಳ ಜೀರ್ಣ ಶಕ್ತಿಯನ್ನು ಹಚ್ಚಿಸುತ್ತದೆ. ಗೂಡು ಕಟ್ಟಿ ಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಪೇಶಿಯ ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು ಇದು ಮಧುರ ವಾಗಿದೆ ಅಂಬೆಗ್ಗಿರುವ ನಿಮ್ಮ ಮಕ್ಕಳು ತಿರುಗಾಡಿಸುವಂತೆ ಮಾಡುವುದು. ಸೀಸೆ1 ಕ್ಕೆ 12 ಆಣೆ, ಟಪಾಲಖರ್ಚು.

ಎಸ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ.
ಉಡುಪಿ ಸ್ಟಾಕಿಸ್ಟರು:- ನವಭಾರತ ಬುಕ್‌ಡಿಪ್ಪೋ, ಉಡುಪಿ

THE **MOOLKY BANK, LTD.,**
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.
ಭಂಗಾರದ ವಸರಂನ ಈಡಿನ ಮೇಲೆ ಸೇಕಡ7 ವ8ರ ದರದಲ್ಲಿ ಸಾಲಕೊಡಲಾಗುವುದು.
ನಿಗಧಿ ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.
ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿರಾ ಕೊಡುವುವಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Funja, ಯಂ. ಆರ್. ಫೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!
K. R. K. SHET
Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಕ್ಸ್‌ಸ್ಪ್ರೆ ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಪ ಯೊಂಗನ್ನು ಗವರ್ನ್‌ಮೆಂಟ್ ಕಾಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕಾಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

ಈಗ ಶೀಘ್ರ ಪ್ರಿಂಟಾಗಿದೆ! ಶೃಂಗಾರವಾದ ಪುಸ್ತಕ!!

ಮದನ ಕಳಾಶಾಸ್ತ್ರ ಎಂಬ ಪ್ರೇಮ ರಹಸ್ಯಗಳು
ರೂ. **1—4—0**

ಕನ್ನಡ ಭಾಷೆಯಲ್ಲಿ ಸ್ತ್ರೀಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ ... ಎಲ್ಲಾ ದೇಶದ ವೇಶ್ಯ ಕನ್ಯಗಳು ಮೋಹಿಸುವ ರಹಸ್ಯಗಳು, ... ಸ್ತ್ರೀಪುರುಷರು ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ... ಕನ್ಯೆಗಳ ಪ್ರೇಮ ಮತ್ತು ಸಂಯೋಗ ಕಾಲದ ಮರ್ಮಗಳು, ಇನ್ನೂ ಅನೇಕ ಪ್ರೀತಿಯ, ... ಮುಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ? ಓದಿ ನೋಡಿದರೆ ಪುಸ್ತಕ ಕೈಬಿಡಲು ಮನಸ್ಸು ಬಾರದು. ಕ್ರಯ ಫೋಟೋಗಳ ಸಹಿತ ಇರುವ ಪುಸ್ತಕ ರೂ. 1 4 0.

T. R Royal & Co, 19 BEAT, MADRAS } { **ಟಿ. ಆರ್. ರಾಯಲ್ ಕಂಪೆನಿ,** 19. ಬೀಟ್ ಮದರಾಸ್

ನಿಮ್ಮ ಮನೆಯಲ್ಲಿ ಸದಾ ಆನಂದದ ಜ್ಯೋತಿಯು
ಬೆಳಬೆಳಗುತ್ತಿರಬೇಕೇ? ಹಾಗಿದ್ದರೆ....

ನಂದಾದೀಪ

ಎಂಬ ಉತ್ಕೃಷ್ಟ ಚಿಕ್ಕಕತೆಗಳ ಪ್ರತಿಯೊಂದನ್ನಿಟ್ಟುಕೊಳ್ಳಿ.
ಕರ್ನಾಟಕದ ಪ್ರಸಿದ್ಧ ಕತೆಗಾರರಲ್ಲೊಬ್ಬರಾದ ಶ್ರೀ ಕೊರಡ್ಕಲ್
ಶ್ರೀನಿವಾಸ ರಾಯರು ಬರೆದ ಮನೋಹರವಾದ
ಹನ್ನೊಂದು ಕತೆಗಳ ಸಂಗ್ರಹ.
ಪ್ರತಿಯೊಂದು ಕತೆಯೂ ನಿಮ್ಮ ಹೃದಯದಲ್ಲೊಂದು
ಬಗೆಯ ಹೊಸ ಬೆಳಕನ್ನು ಬೆಳಗಿಸುವುದು.
ಬೆಲೆ: **0-8-0** ಟಪ್ಪಾಲು ದ್ವಾರ: **0-9-0**

ಕರಿಯರ ಪ್ರಪಂಚ, ಉಡುಪಿ.
(0-9-0 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.)

—ಸೌಕರ್ಯ—

ಆರ್ಥಿಕ ಮುಗ್ಗಟ್ಟಿನ ಈ ದುಸ್ಥಿತಿಯಲ್ಲಿ ಕಡಿಮೆ ವೆಚ್ಚದಲ್ಲಿ ಹೆಚ್ಚು ಸೌಕರ್ಯವನ್ನು ಯಾರು ತಾನ ಅಪೇಕ್ಷಿಸುವುದಿಲ್ಲ? ಅದನ್ನು ಸದಾ ಒದಗಿಸಿಕೊಡುವುದೇ

ರಾಮಾ ರೆಸ್ಟೋರೆಂಟಿನ ಧ್ಯೇಯವಾಗಿದೆ.

ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳು !
ವಿದ್ಯಾರ್ಥಿಗಳಿಗೆ ರಿಯಾಯತಿ ದರಗಳು !!

ಒಮ್ಮೆ ಸಂದರ್ಶಿಸಿರಿ! ತೃಪ್ತಿ ಪಡೆಯಿರಿ!!

Sri Rama Restaurant
Kashi Mutt Building,
UDIPI.

ಶ್ರೀರಾಮಾ ರೆಸ್ಟೋರೆಂಟ್
ಕಾಶಿ ಮಠದ ಕಟ್ಟೋಣ, ಉಡುಪಿ

ವ್ಯಾಪಾರಕ.— ಎಚ್. ರಾಮಚಂದ್ರ ನಾಯಕ್.

ಸದ್ವೈದ್ಯಶಾಲಾ ಸಂಜನಗೂಡು ಇವರ

"**ಸುಬಲಾ**" ನಿಸ್ಸಂಶಯ, ಮಿಂಚಿನ್ನಂತೆ ಇಳಿದಿನ್ನು ಸೋಗೆಯ... ರಕ್ತ ವೃದ್ಧಿ ಪಟು, ಶರೀರಕ್ಕೆ ಬಲವನ್ನು ಕೊಡತಕ್ಕದ್ದು ಬಹಳ ಮಹತ್ವವಾಗಿದ್ದದ್ದು.

ಬ್ರಾಂಚ್:—ರಥಬೀದಿ ಮಂಗಳೂರು.



ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ,
ಹಿತ್ತಾಳೆ, ಕಂಚು ಮೊದಲಾದವುವಿಧ ಪಾತ್ರೆಗಳೂ ಸಾಮಾಗ್ರಿ
ಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಿಗುವದು.

PRINTED BY S. S. KARANTH AT THE THULUNAD PRESS, UDIPI, AND PUBLISHED BY K. H. SHETTY AT "NAVAYUGA OFFICE, UDIPI, S. INDIA.

gistered No. M 3618 18-7-1940.

ನವಯುಗ

navayuga

ತುಳುನಾಡ್ ಬೇಂಕ್
ಆಫ್ ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ.

Authorised & Issued Capital	.	Rs	1,00,000
Subscribed & Paid up Capital	....	Rs	31,340
Reserves & other Funds	...	Rs	22,052

ನಿರಖು ಠೇವಣಾತಿಗಳು ರಿಯಾಯತಿ ದರದ
ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.

ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳೂ ಮಾಡಲ್ಪಡುತ್ತವೆ.
ಹೆಚ್ಚಿನ ವಿವರಗಳಿಗೆ ಬರೆಯಿರಿ.

THULUNAD BANK
OF SUPPLY AGENCY LIMITED.

ಝಂಡು ಮಲೇರಿಯಾ ಮಿಕ್ಶ್ಚರ್

ಮಲೇರಿಯಾ, ವಿಷವ್ರಣಗಳಿಂದುಂಟಾಗುವ ಎಲ್ಲಾ ತರದ
ಕಠಿಣ ಜ್ವರಗಳಿಗೆ
ಖಾತ್ರಿಯಾದ ಸಿದ್ಧೌಷಧ
ಕ್ರಯ: ಆಣೆ 0—14—0 ಮಾತ್ರ.

ಸ್ಥಳೀಯ ಏಜಂಟರು:- ಪಿ. ಎ. ಪೈ ಬ್ರದರ್ಸ್.
ಕಾರ್ಕಳದ ಏಜಂಟರು:- ವಿ. ವಿ. ಶೆಣೈ, ಕೆಮಿಸ್ಟ್ಸ.
ಮಂಗಳೂರಿಗೂ ದಕ್ಷಿಣ ಕನ್ನಡ ಜಿಲ್ಲೆಯ ಇತರ.
ಮುಖ್ಯ ಸ್ಥಳಗಳಿಗೂ ಏಜಂಟರು ಬೇಕಾಗಿದ್ದಾರೆ.
ಶರ್ತಗಳಿಗೂ ಏಜನ್ಸಿಗಳಿಗೂ ಮುಖ್ಯ ಏಜಂಟರಿಗೆ ಬರೆಯಿರಿ:—
ದಾಮೋದರ್ ಎಂಡ್ ಕೊ,
ಮುಖ್ಯ ಏಜಂಟರು,
ZANDU 78 ಚೀನಾ ಬಜಾರ್ ರೋಡ್, ಜಿ. ಟಿ. ಮದರಾಸು
DAMODER & CO.,
78 China Bazaar Road, G. T. MADRAS.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪ್ಪೋವಿನ ರಿಂಗ್‌ವರ್ಮ್ ಮುಲಾಮು —
ಇಷ್ಟರ ವರೆಗಿನ ನಮ್ಮ
ವಿರಿಯಸ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್
ಮುಲಾಮು ಈ ಕೆಳಗಿನಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪ್ಪೋವಿನ ತ್ರಿವರ್ಣದ 'ರೈಸಿಂಗ್ ಸನ್''
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಸಂಗತಿ ಮಾತ್ರ ಈ ಮೂಲಕ ಭರವಸೆ ಕೊಡುತ್ತೇವೆ.
ಅಮೃತಾಂಜನ ಡಿಪ್ಪೋ, —— ಬೊಂಬಾಯಿ, ಮದ್ರಾಸು, ಕಲ್ಕತ್ತ.

ಅಪೂರ್ವ ಸಂದರ್ಭ! ತ್ವರೆಮಾಡಿರಿ!!

ಉಚಿತ! ಉಚಿತ!!

ನಿಮಗೆ ಒಂದು ವರ್ಷದ ವರೆಗೆ 'ನವಯುಗ'ವನ್ನು ಉಚಿತವಾಗಿ ಪಡೆಯಬೇಕೆಂದಿದೆಯೇ? ಹಾಗಿದ್ದರೆ ಆಗೋಸ್ತು ಅಂತ್ಯದೊಳಗೆ 'ನವಯುಗ'ಕ್ಕೆ ಬರೀ ನಾಲ್ಕು ಜನ ಚಂದಾದಾರರನ್ನು ಮಾಡಿಕೊಡಿರಿ.

ವಾರ್ಷಿಕ ಚಂದಾ ರೂ 3-4-0ನ್ನು ಮುಂಗಡವಾಗಿ ಪಡೆದು ಅದನ್ನೂ ಚಂದಾದಾರರ ಹೆಸರುಗಳನ್ನೂ ಕಳಿಸಿರಿ. ಆಗ ನಿಮಗೆ ಒಂದು ವರ್ಷದ ವರೆಗೆ ನವಯುಗವು ಉಚಿತವಾಗಿ ಕಳಿಸಲ್ಪಡುವುದು. ಅಷ್ಟೇ ಅಲ್ಲದೆ ನಿಮ್ಮ ಹೆಸರನ್ನೂ ನಮ್ಮ 'ನವಯುಗ'ದಲ್ಲಿ ಪ್ರಕಟಿಸಲಾಗುವುದು.

ಮೆನೇಜರ್, ನವಯುಗ, ಉಡುಪಿ.

ರಬ್ಬರ್ ಮೊಹರುಗಳು
ತಯಾರಿಸಿ ಕೊಡಲ್ಪಡುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಆಯುರ್ವೇದ ಔಷಧಗಳು
ವಿಕ್ರಯಿಸಲ್ಪಡುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

THE VIJAYA BANK LTD.,

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ— ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವೈವಾಟಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಆಮಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಕಂಡಲ್ಲಿ ಉಂಡರೆ ಬೆಂಡಾಗುವಿರಿ!— ಆದರೆ,

ದಿ ಮಲಬಾರ್ ಗ್ರೇಂಡ್ ಹಿಂದೂ ಹೋಟೆಲ್ ಉಡುಪಿ.

ಇಲ್ಲಿ ಉಂಡರೆ ಕೊಂಡಾಡುವಿರಿ!

ಆರೋಗ್ಯದ ಪ್ರಥಮ ಸೋಪಾನವೇ ಹಿತವಾದ ಊಟ!

ಆಗ ಮಾತ್ರ ದೇಹದ ಬೆಳವಣಿಗೆಯಾಗಿ ನಿಜವಾದ ಮನುಷ್ಯರೆಂದೆನಿಸಿಕೊಳ್ಳುವೆವು!

ಊಟವು ಹಿತವಾಗಬೇಕಾದರೆ, ನವೀನರ ದೇಖರೇಖೆಯಲ್ಲಿ ಶುಚಿ, ರುಚಿಯಾಗಿ ತಯಾರಿಸಲ್ಪಟ್ಟಿರಬೇಕು

ಉಡುಪಿಯಲ್ಲಿ ಇಂಥ ಮಾದರಿಯ ಹೋಟೆಲು ಇಲ್ಲವೆಂಬ ಕುಂದನ್ನು ನಿವಾರಿಸಲೋಸುಗ

ಶ್ರೀ ರಾಮಕೃಷ್ಣ ಥಿಯೇಟರಿನ ಸಮೀಪ

ಭವ್ಯವಾದ ಮಂದಿರದಲ್ಲಿ ತಾ 4-7-1940ಕ್ಕೆ ಹೊಸತಾಗಿ ತೆರೆಯುವ

ನಮ್ಮ ಹೋಟೆಲನ್ನು ಒಮ್ಮೆ ಸಂದರ್ಶಿಸಿ ಪ್ರೋತ್ಸಾಹಿಸಿರಿ ಪರಿಪೂರ್ಣ ತೃಪ್ತರಾಗಿರಿ!

ಶಾಲಾ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಪ್ರತ್ಯೇಕ ಏರ್ಪಾಡು ಮಾಡಿಯದೆ! ಮರೆಯದಿರಿ!

ಕುಂಜಿ ಕುಟ್ಟಿ, ಮಾಲಕ.

The Malabar Grand Hindu Hotel, Udipi.

ನವಜೀವಾತು ಎಂಬ ಸೂತಿಕಾ ರಸಾಯನ



(ಇದ ರಜಿಸ್ಟರ್ ಮಾಡಲ್ಪಟ್ಟಿದೆ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ ಅಮೋಘವಾದ ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ, ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ಸೇವನ ಮಾಡುವ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 ಕೊಡಿಯಾಲಬೈಲು, ದ.ಕ.

ಸ್ಥಾಪನೆ 1926

18 ಬಲ್ಮಠ ರಸ್ತೆ, ಮಂಗಳೂರು,

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೀಲ್ ಡೈ ಮೋನೊಗ್ರಾಮ್ ಸೀಲು ಇತ್ಯಾದಿಗಳು ತ್ವರಿತವಾಗಿ ಮಾಡಿಕೊಡಲ್ಪಡುವವು,

Crown Rubber Stamp Co, 18 Balmat Road, MANGALORE

Approved firm by the Govt. of Mysore, Certified by the Agent of the Govt. of India in Ceylon

ನಾಟಕದಲ್ಲಿ ಕಾಲದ ಸ್ಫೂರ್ತಿಯು ಮೂರ್ತಿಮತ್ತಾಗಿ ತೋರಬೇಕು.
ಆ ಸ್ಫೂರ್ತಿಯಿಂದ ನಾಚಕರೂ ಪ್ರೇಕ್ಷಕರೂ ಜಾಗೃತರಾಗಬೇಕು

ಅಂತಹ ನಾಟಕವೇ

ದೇಶಭಕ್ತ

ಕಾಂಗ್ರೆಸ್ ಹೋರಾಟದ ತ್ಯಾಗ ಸಂಕಷ್ಟಗಳನ್ನೂ ಅವನ್ನು ತಡೆಗಟ್ಟಲು ಅಧಿಕಾರಿ ವರ್ಗವು ಹೂಡುವ ಕುತಂತ್ರಗಳನ್ನೂ ಕಣ್ಣಮುಂದಿರಿಸಿ ಸಮತಾವಾದವನ್ನು ಪ್ರತಿಪಾದಿಸಿ, ನವಜಾಗೃತಿಯನ್ನು ಮಾಡುವ ನವೀನ ಸಾಮಾಜಿಕ ನಾಟಕ.

ವಿಶೇಷವಾಗಿ ಆಶ್ರಿತ ಸಂಸ್ಥಾನಗಳಲ್ಲಿ ಇಂದು ನಡೆಯುತ್ತಿರುವ ಸ್ವಾತಂತ್ರ್ಯ ಸಂಗ್ರಾಮದ ನೈಜ ಚಿತ್ರ. ಪ್ರತಿಯೊಬ್ಬರೂ ಓದತಕ್ಕ ನವೀನ ಪುಸ್ತಕ.

ಲೇಖಕರು:- ಕೆ. ಕೆ. ಶೆಟ್ಟಿ. ಬೆಲೆ: ೦—೧೦—೦

11 ಆಣೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಲಾಗುವುದು.

ನವಯುಗ ಆಫೀಸು, ಉಡುಪಿ.

The Pangal Nayak Bank Ltd.,

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿತು.)

ಮುಖ್ಯ ಕಾರ್ಯಾಲಯ—ಕೋರ್ಟುಬಳಿ, ಉಡುಪಿ, ದ. ಕನ್ನಡ.

ಶಾಖೆಗಳು—ಉಡುಪಿ, ಮಂಗಳೂರು, ಕಟಪಾಡಿ ಮತ್ತು ಕಾಂಞಂಗಾಡ್

ತೆತ್ತ ಮೂಲಧನ—ರೂ. 1,83,100/- ಕ್ಷೇಮನಿಧಿಗಳು ರೂ. 1,92,000/-

ಚಿನ್ನಾಭರಣಗಳು, ಮಾರಾಟಕ್ಕೆ ಅನುಕೂಲವಾಗಬಹುದಾದ ಬಾಳುವ ದವಸಗಳು, ಸಮಾಧಾನಕರವಾದ ವ್ಯಾಪಾರದ ಬಿಲ್ಲು, ಹುಂಡಿ ಇತ್ಯಾದಿಗಳ ಭದ್ರತೆಯ ಮೇಲೆ ಸುಲಭ ದರಗಳಲ್ಲಿ ಚಿಕ್ಕ ಮ ದೊಡ್ಡ ಸಾಲಗಳು ಕೊಡಲ್ಪಡುತ್ತವೆ.

ದೀರ್ಘ ವ ಅಲ್ಪ ಅವಧಿಯ ನಿರಖು ಠೇವಣಾತಿಗಳು ಶ್ರೀಮಂತರಿಗೂ ಇತರರಿಗೂ ಏಕರೀತಿ ತೃಪ್ತಿಕರವಾದ ಶರ್ತಗಳಲ್ಲಿ ಅಂಗೀಕರಿಸಲ್ಪಡುತ್ತವೆ.

ಬೇಂಕಿನ ಅತ್ಯಾಧುನಿಕ ವಿಧದ ಸಮಸ್ತ ವಹಿವಾಟುಗಳೂ ನಡೆಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ದಯವಿಟ್ಟು ಮೊಕ್ತಾ ಮ ಪತ್ರದ್ವಾರ ವಿಚಾರಿಸಿರಿ.

Your anxiety—

in finding a sound and progressive Life Office both to insure or to represent will end on consultation with:-

Branch Secretary

The New Guardian of India Life Insurance Co. Ltd., Madras.

Mangalore Branch.

Transport & Car Owners



ARE SPECIALLY INVITED TO VISIT

OUR SHOW ROOM *for economical transport maintenance.*

CANARA AUTOMOBILES - - - - - MANGALORE

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ESTD. 1921 ಸ್ಥಾಪಿತ

FOUNDER:
SRI. A. B. SHETTY, M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

NAVAYUGA ನವಯುಗ

ಚಂದಾ ವಿವರ:
1 ವರ್ಷಕ್ಕೆ - ರೂ. 3-4-0
6 ತಿಂಗಳಿಗೆ - ರೂ. 1-12-0
ಚಂದಾ ಹಣವನ್ನು ಮುಂಗಡ ಕಳುಹಬೇಕು.

ಸಹ ಸಂಪಾದಕ:
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೪೫

ಉಡುಪಿ, ಗುರುವಾರ, ೧೮—೭—೧೯೪೦.
UDIPI, THURSDAY, 18-7-1940.

VOL. 19
No. 45

● ಪೆಟೈನರಿಗೆ ಸರ್ವಾಧಿಕಾರ

ಫ್ರಾನ್ಸಿನಲ್ಲಿ ಹೊಸ ರೀತಿಯ ಆಡಳಿತ ಪದ್ಧತಿಯನ್ನು ಮಾರ್ಶಲ್ ಪೆಟೈನರು ಜಾರಿಗೆ ತಂದಿರುವರು. ಹೊಸ ಕ್ರಮಕ್ಕನುಸಾರವಾಗಿ ಹನ್ನೆರಡು ಮಂತ್ರಿಗಳ ಕೈಗೆ ದೇಶದ ಆಡಳಿತವು ಬರುತ್ತದೆ. ಅವರಿಗೆ ಸಹಾಯಕರಾಗಿ ಜನರಲ್ ಸೆಕ್ರೆಟರಿಗಳ ನೇಮಕವಾಗುವದು. ಪ್ರತಿಯೊಂದು ಪ್ರಾಂತ್ಯದ ಶಿರಸ್ಸಾಗಿ ಒಬ್ಬೊಬ್ಬ ಗವರ್ನರನು ನೇಮಿಸಲ್ಪಡುವನು—ಆಡಳಿತ ಕ್ರಮವನ್ನು ಸಾದಾ ರೀತಿಗೆ ತರಲಾಗುವದು. ರಕ್ಷಣಾ ಖಾತೆಯವರು ತಮ್ಮ ಕಾರ್ಯವನ್ನು ತ್ವರ್ಯದಿಂದ ಸಾಗಿಸಲನುಕೂಲವಾಗುವಂತೆ ಅವರಿಗಿರುವ ಶಾಸನಗಳ ತಡೆಯನ್ನು ತೆಗೆದು ಹಾಕಲಾಗುವದು. ಕೆಲಸ ಮತ್ತು ಕುಟುಂಬಗಳ ರಕ್ಷಣೆಯ ಜವಾಬ್ದಾರಿಯನ್ನು ಸರಕಾರವು ವಹಿಸುವದು. ಈ ಹೊಸ ಯೋಜನೆಯ ರಚನೆಗೆ ಫ್ರೆಂಚ್ ಚೇಂಬರ್ ಮತ್ತು ಸಿನೇಟಿನಲ್ಲಿಯೂ ಫ್ರೆಂಚ್ ರಾಷ್ಟ್ರೀಯ ಎಸೆಂಬ್ಲಿಯಲ್ಲಿಯೂ ಒಪ್ಪಿಗೆ ದೊರೆತಿದೆ. ಇದರ ಮಂಜೂರಾತಿಯ ಸಮಯದಲ್ಲಿ ಕಾರು ಅಪಘಾತಕ್ಕೆ ಸಿಕ್ಕಿದ ಕೈನೋಡರೂ ತಲೆಗೆ 'ಬೇಂಡೇಜ್' ಕಟ್ಟಿದ್ದಂತೆಯೇ ಹಾಜರಿದ್ದರು. ಈ ಹೊಸ ಪದ್ಧತಿಯಂತೆ ಪ್ರಾಮುಖ್ಯಾಧಿಕಾರವು ವ್ಯಕ್ತಿಶಃ ಪೆಟೈನರ ಕೈಯೊಳಗಿರುವದು. ಅವರು ಮೂರು 'ಡಿಕ್ರಿ'ಗಳನ್ನು ಹೊರಡಿಸಿ ಈ ವರೆಗೆ ಅಧ್ಯಕ್ಷರ ಮತ್ತು ಮುಖ್ಯ ಮಂತ್ರಿಗಳದಾಗಿದ್ದ ಅಧಿಕಾರಗಳನ್ನು ಪಡೆದಿರುವರು. 'ರಾಷ್ಟ್ರದ ಮುಖ್ಯಾಧಿಕಾರಿ' ಹುದ್ದೆ ಪಡೆದ ಪೆಟೈನರು, ಹೊಸ ಪ್ರತಿನಿಧಿಗಳ ಚುನಾವಣೆಯಾಗುವ ವರೆಗೆ ನ್ಯಾಯವಿಧಾಯಕ ಕಾರ್ಯಕ್ರಮಗಳ ಚಾಲಕರಾಗಿರುವರು. ಹೊಸ ಸಭೆಗಳ ಚುನಾವಣೆಯಾದ ಮೇಲೂ, ವಿದೇಶ ಸಂಬಂಧದ ಅಥವಾ ದೇಶದೊಳಗಿನ ಬಿಕ್ಕಟ್ಟಿನ ಸಮಯದಲ್ಲಿ ಆ ಅಧಿಕಾರವು ಪೆಟೈನರಿಗೇ ಇರುವದು. ಪೆಟೈನರು ರಾಜಧಾನಿಯನ್ನು ಬೇರೆ ಕಡೆಗೆ ಒಯ್ಯುವ ಆಲೋಚನೆ ಮಾಡಿರುವರೆಂಗೂ ಅವಶ್ಯಾ ವರ್ಸೇಲ್ಸನ್ನು ಬಿಟ್ಟುಕೊಡಬಹುದೋ ಎಂದು ಜರ್ಮನಿಯ ಮಿಲಿಟರಿ ಅಧಿಕಾರಿಗಳನ್ನು ಕೇಳಿಕೊಂಡಿರುವರೆಂದೂ ತಿಳಿದುಬರುತ್ತದೆ.

● ಪೆಟೈನ್-ನಾಜಿ ತಿಕ್ಕಾಟವೆ?

ಲಂಡನ್ನಿಗೆ ಹೇಗೋ ದೊರೆತಿರುವ ಒಂದು ರಿಕಾರ್ಡಿನ ಆಧಾರದಿಂದ ಪೆಟೈನ್ ಸರಕಾರಕ್ಕೂ ಫ್ರಾನ್ಸಿನ ಆಕ್ರಮಿಸಲ್ಪಟ್ಟ ಭಾಗದಲ್ಲಿರುವ ನಾಜೀ ಮಿಲಿಟರಿ ಅಧಿಕಾರಿಗಳಿಗೂ ಬೇಂಕುಗಳ ಹಣದ ಕುರಿತು ತಿಕ್ಕಾಟವುಂಟಾಗಿದೆ ಎಂಬ ಊಹೆಯು ದ್ದಿದೆ. ಜನರಲ್ ವೇಗಾಂಡರ ಸಹಿಯು ಳ್ಳ ಆ ರಿಕಾರ್ಡಿನಲ್ಲಿ ಜರ್ಮನಿ ಕಮಾಂಡರನು ಜೂನ್ ತಾ. 11ರಲ್ಲಿ ಹೊರಡಿಸಿದ್ದ ಸರ್ಕಲಾರೊಂದರ ವಿವರವಿದೆ. ಅದರಂತೆ ಆದರಲ್ಲಿ ನಮೂದಿಸಿರುವಂತೆ ಹೇರಿಸಿನ ಸಮೀಪ ನಾಜಿಗಳು ಹಿಡಿದಿರುವ ಪ್ರದೇಶದ ಬೇಂಕುಗಳಲ್ಲಿರುವ ದಾಸ್ತಾನುಗಳು, ಶೇರುಗಳು, ಬೇಂಕು ನೋಟುಗಳು, ಭಂಗಾರ, ನಾಣ್ಯ ಮೊದಲಾದ ಎಲ್ಲಾ ಮೌಲ್ಯಗಳನ್ನು ಹಿಂದಕ್ಕೊಪ್ಪಿಸಬೇಕೆಂಬ ಹುಕುಮನ್ನು ಜರ್ಮನರು ಕೊಟ್ಟಿದ್ದರು. ಫ್ರೆಂಚ್ ಆರ್ಥಿಕ ಮಂತ್ರಿಗಳ ಅಭಿಪ್ರಾಯದಂತೆ ಈ ಅಪ್ಪಣೆಯು ಜರ್ಮನ್, ಫ್ರಾನ್ಸ್ ಕರಾರಿಗೆ ವಿರುದ್ಧ. ಆಕ್ರಮಿಸಲ್ಪಟ್ಟ ವಿಭಾಗದ ಆಡಳಿತದ ಜವಾಬ್ದಾರಿ ಫ್ರಾನ್ಸ್ ಸರಕಾರದ ಮೇಲಿರುವಾಗ ಈ ಅಧಿಕಾರವು ಜರ್ಮನರಿಗೆ ಬರುವದಿಲ್ಲವೆಂಬ ಅಭಿಪ್ರಾಯವನ್ನೂ ಆ ರಿಕಾರ್ಡಿನಲ್ಲಿ ಸೂಚಿಸಲಾಗಿತ್ತಂತೆ. ಈ ಕುರಿತು ಫ್ರಾನ್ಸ್-ಜರ್ಮನಿ ಪ್ರತಿನಿಧಿಗಳೊಳಗೆ ಮಾತುಕತೆ ನಡೆಯುತ್ತಿರುವವೆಂಬ ವಾರ್ತೆಯಿದೆ.

● ಪೂರ್ವಕಡೆಯಲ್ಲಿ ಸರ್ವಾನುಕೂಲ

ಬ್ರಿಟನಿನ ವಿದೇಶಮಂತ್ರಿ ಲೋರ್ಡ್ ಹೆಲಿಫೇಕ್ಸರು ಪಾರ್ಲಿಮೆಂಟಿನ ಲೋರ್ಡ್ಸ್ ಭವನದಲ್ಲಿ ಭಾಷಣಮಾಡುತ್ತಾ ಹೀಗಂದರು—"ಇಟೆಲಿ ಯುದ್ಧಕ್ಕಿಳಿದ ಮೇಲೆ ಇಜಿಪ್ತು ಯುದ್ಧ ಸಾರಬೇಕೆಂಬ ಒತ್ತಾಯವನ್ನು ನಾವು ಮಾಡಿಲ್ಲ. ಇಜಿಪ್ಟಿನ ಬಿನ್ನಹದಂತೆ ಅಲ್ಲಿರುವ ಬ್ರಿಟಿಷ್ ಸೇನೆಯನ್ನು ಸಜ್ಜುಗೊಳಿಸಿ ಇಟೆಲಿಯನ್ನಿದಿರಿಸಲು ನಿಶ್ಚೈಸಿರುವದು ನಿಜ. ನಮ್ಮ ಮಿತ್ರ ರಾಷ್ಟ್ರವಾದ ಇಜಿಪ್ಟಿನ ರಕ್ಷಣೆಗಾಗಲು ನಾವು ಒಪ್ಪಂದ ಪ್ರಕಾರ ಬದ್ಧರಿದ್ದೇವೆ. ಕೈರೋದಲ್ಲಿ ಇಟಾಲಿಯನ್ ಮಂತ್ರಿಗಳು ಅನಿರೀಕ್ಷಿತ ವಿಳಂಬಮಾಡಿ ಇಜಿಪ್ತು ಬ್ರಿಟನಿನ ಸಂಬಂಧವನ್ನು ಕಡಿದುಕೊಳ್ಳದಿದ್ದಲ್ಲಿ ಧಾಳಿ ನಡೆಸಲಾಗುವದೆಂಬ ಬೆದರಿಕೆ ಹಾಕಿದರೂ, ಹಂಚಿಕೆ ನಡೆಸಿದರೂ ಆ ದೇಶದ ಮುತ್ಸದ್ದಿಗಳು ತಮ್ಮ ಕರ್ತವ್ಯ ಪಾಲಿಸಲು ದೃಢವಾಗಿ ನಿಂತಿದ್ದಾರೆ. ನಾಜಿಗಳು ಬಾಲ್ಕನಿನಲ್ಲಿಯೂ, ಪೂರ್ವದೇಶಗಳಲ್ಲೂ ಇಲ್ಲದ ಸಂದೇಹ,ಗೊಂದಲವನ್ನುಂಟುಮಾಡಲು ಸಾಧ್ಯವಿದ್ದಷ್ಟು ಅಪಪ್ರಚಾರ ನಡೆಸಿದರೂ ಸಫಲಕೊಂಡಲಿಲ್ಲ. ಪೇಲಸ್ಟೈನಿನಲ್ಲಿ ಯೆಹೂದಿಯರೂ ಅರಬರೂ ಎಲ್ಲಾ ವಿಧದಿಂದ ಬ್ರಿಟನಿಗೆ ಸಹಾಯಮಾಡಲು ಸಿದ್ಧರಾಗಿರುವದು ಸಂತೋಷಕರ. ಪೇಲೆಸ್ಟೈನಿನವರಿಗೆ ಇಟೆಲಿ ಆಕ್ರಮಣದ ರೀತಿ ಗೊತ್ತಿದೆ. ಟರ್ಕಿಯು ತಟಸ್ಥವಾಗಿ ಉಳಿಯುವ ಸ್ವತಂತ್ರ ನಿರ್ಧಾರವನ್ನು ಮಾಡಿದೆ. ಅದು ಸಂಪೂರ್ಣವಾಗಿ ಚಕ್ರವರ್ತಿ ಸರಕಾರದ ನಿಕಟಸಂಬಂಧವನ್ನಿಟ್ಟುಕೊಂಡೇ ವರ್ತಿಸಿದೆ. ಟರ್ಕಿಗೂ ನಮಗೂ ಆಗಿರುವ ಒಡಂಬಡಿಕೆಯು ಸಜೀವವಾಗಿಯೇ ಇದ್ದು, ಎರಡು ದೇಶಗಳು ಪರಸ್ಪರ ಸೌಹಾರ್ದತೆ ಮತ್ತು ಮಿತ್ರತ್ವದಿಂದಲೇ ವರ್ತಿಸುತ್ತಿವೆ." ಕಾಮನ್ಸ್ ಸಭೆಯಲ್ಲಿ ವಿದೇಶೀ ಉಪಮಂತ್ರಿ ಮಿ. ಬಟ್ಲರ್ ಸಾಹೇಬರು, ಪ್ರಶ್ನೆಯೊಂದಕ್ಕೆ ಉತ್ತರ ಕೊಡುತ್ತಾ ಇಟೆಲಿಯು ಯುದ್ಧಯಂತ್ರವನ್ನು ಹಾಳುಗೆಡಹುವ ಪ್ರಯತ್ನದಲ್ಲಿ ಉತ್ತರ ಮತ್ತು ಪೂರ್ವ ಆಫ್ರಿಕ ಹಾಗೂ ಅಬಿಸೀನಿಯದವರೊಡನೆ ತಮ್ಮ ಸರಕಾರವು ಸಹಕರಿಸಲಿದೆ ಎಂದರು.

● ಹಲ್ಲು ಮಸೆಯುವರಿಗೆ ಟರ್ಕಿಯ ಎಚ್ಚರಿಕೆ!

ಟರ್ಕಿಯ ಪಾರ್ಲಿಮೆಂಟಿನಲ್ಲಿ ಟರ್ಕಿಯ ಮುಖ್ಯ ಮಂತ್ರಿ ಡಾ| ಸಾಯ್ಡಾಮರು ಭಾಷಣಮಾಡುತ್ತಾ ಆಕ್ರಮಣಾಭಿಲಾಷೆಯನ್ನು ಟರ್ಕಿಯ ಕಡೆಗೂ ತೋರಿಸುತ್ತಿರುವವರಿಗೆ ಬಲವಾದ ಎಚ್ಚರಿಕೆ ಕೊಟ್ಟಿರುವರು. "ಟರ್ಕೀ ಸ್ವಾತಂತ್ರ್ಯದ ಮೇಲೆ ಬೀಳುವ ಯಾವುದೇ ವಿಧದ ಬೆದರಿಕೆಗೆ ಅದು ಕೊಡುವ ಏಕಮಾತ್ರ ಉತ್ತರವೆಂದರೆ ಶಸ್ತ್ರಧರಿಸಿ ಕೊನೆಯವರೆಗೆ ಸ್ವರಕ್ಷಣೆ ಮಾಡಿಕೊಳ್ಳುವದೇ ಸರಿ" ಎಂದು ಟರ್ಕಿ ಮಂತ್ರಿಗಳು ಸಾರಿದ್ದಾರೆ. ಜರ್ಮನ್ ಪ್ರಚಾರ ಖಾತೆಯವರು ರಶ್ಯಾ-ಟರ್ಕಿಗಳೊಳಗಿನ ಸಂಬಂಧವನ್ನು ಕೆಡಿಸುವಂತಹ ಕೆಲವು ರಿಕಾರ್ಡುಗಳನ್ನು ಪ್ರಕಟಿಸಿ ಎಡೆಬಿಡದೆ ಅಪಪ್ರಚಾರ ನಡೆಸಿದ್ದರು. ರಶ್ಯವು ಟರ್ಕಿಯಿಂದ ಕೆಲವು ಸೌಕರ್ಯಗಳನ್ನು ಪೇಕ್ಷಿಸಿ ಒತ್ತಾಯಿಸುತ್ತಿದೆ ಎಂಬ ವರ್ತಮಾನವೂ ಹರಡಿತ್ತು. ಆದರೆ ರಶ್ಯವು ಅಂತಾವ ಒತ್ತಾಯ ಸೂಚನೆಯನ್ನೂ ಕಳುಹಿಸಿಲ್ಲವೆಂದುದರಿಂದ ವಾತಾವರಣವು ಮೊದಲಿನ ಗಂಭೀರತೆಗೇನೇ ಬಂದಿದೆ. ಈ ವಿಷಯವನ್ನೂ ಪ್ರಸ್ತಾಪಿಸಿ, ಡಾ| ಸಯ್ಡಾಮರು ಟರ್ಕಿಯಲ್ಲಿ ಜರ್ಮನಿ ಮಾಡುತ್ತಿರುವ ಸಂಚು ಹಂಚಿಕೆಗಳನ್ನು ತೀಕ್ಷ್ಣ ಮಾತುಗಳಿಂದ ಖಂಡಿಸಿದರು. ಟರ್ಕಿಯಲ್ಲಿರುವ ಜರ್ಮನ್ ರಾಯಭಾರಿ ಹೆರ್ ವೋನ್ ಪೇಪನರು, ಟರ್ಕಿ-ರಶ್ಯ ಸಂಬಂಧವನ್ನು ಕೆಡಿಸುವದಕ್ಕೂ, ವಿದೇಶ ಮಂತ್ರಿ ಎಮ್. ಸಾರಜೋಗ್ಲು ಇವರನ್ನು ರಾಜೀನಾಮೆ ಕೊಡಿಸುವದಕ್ಕೂ ನಡೆಸಿದ ಚಾಣಾಕ್ಷ ತಂತ್ರಕ್ಕೆ ಯೋಗ್ಯ ಉತ್ತರವಿತ್ತರು.

TROPICAL.

TROPICAL INSURANCE CO. LTD, does not boast of 'big' figures. It has not been writing crores of Busines every Year. That was never its intention. It never aimed at breaking "records" at dangerous cost. Whatever it did it wrote sound business that endures in the books of the Company. Thus although not the biggest it is one of the best of Life Offices in India.

The Company, founded by Pandit Moti Lal Nehru, Dr. Ansari and Hakim Ajmal Khan, and guided now under the Chairmanship of Sj. Subhas Chandra Bose offers excellent chances to young men of culture & education to forge out their careers.

THE
Tropical Insurance Co., Ltd.
Branch Office: NIVAS BUILDING, Hampankatta,
MANGALORE.

Branch Manager: M. SUNDER RAM SHETTY.

★ ಬ್ರಿಟಿನಿನ ಅತ್ಯುಜ್ವಲ ಸಮುದ್ರ ಸಾಹಸ! ★

ಸಮುದ್ರಬಲದಲ್ಲಿ ಬ್ರಿಟಿಷರು ಇಂದಿಗೂ ಮೇಲ್ಮೈಯೆಂಬ ಬಗೆ ನಿದರ್ಶನಗಳಾಗಬಲ್ಲ ಕೆಲವು ಪ್ರಮುಖ ಘಟನೆಗಳು ಈ ವಾರದಲ್ಲಿ ನಡೆದಿವೆ. ಫ್ರೆಂಚ್ ಯುದ್ಧ ಹಡಗಗಳು ವಿರೋಧಿಯ ಹಸ್ತಗತವಾಗಬಾರದೆಂಬ ಮುಂಜಾಗ್ರತೆಯಿಂದ ಮತ್ತು ಶೀಘ್ರೋಪಾಯದಿಂದ ಬ್ರಿಟಿಷರು ನಿರ್ದಾಕ್ಷಿಣ್ಯವಾಗಿ ತಮ್ಮ ಸ್ವಾಧೀನಕ್ಕೆ ಬಾರದ ಫ್ರೆಂಚ್ ಹಡಗಗಳಿಗೆ ಜಲಸಮಾಧಿ ಕೊಟ್ಟು ದುಃಖದಾಯಕ ಕರ್ತವ್ಯ ಪಾಲನೆಮಾಡಿದ ರೀತಿಯನ್ನು ಚರ್ಚಿಲ್ಲರು ಕಳೆದ ವಾರ ವಿವರಿಸಿದ್ದರಷ್ಟೆ. ಆ ಮೇಲೂ ಅಂತಹ ಸಾಹಸವನ್ನು ಬ್ರಿಟಿಷ್ ನಾವಿಕದಳವು ಕೈಕೊಳ್ಳಬೇಕಾಗುವ ಸಂದರ್ಭ ಬಂತು. ಬ್ರಿಟನಿನ ಸಮುದ್ರ ನಾವಿಕದಳದ ಅಧಿನಾಯಕರಾಗಿರುವ ಮಿ. ಅಲೆಕ್ಸಾಂಡರರು ಪಾರ್ಲಿಮೆಂಟಿನಲ್ಲಿ ಈ ಕುರಿತು ವಿವರವಾಗಿ ತಿಳಿಸಿದರು.

ಫ್ರೆಂಚ್ ಹಡಗಗಳಿಗೆ ಪೆಟ್ಟು ಮತ್ತು ಕಟ್ಟುನಿಟ್ಟು!

ತಪ್ಪಿಸಿಕೊಂಡು ಹೋಗಿ ಓರಾನ್ ತೀರಪಡೆ ಸೇರಿದ್ದ ಒಂದು ಬಲವಾದ ಫ್ರೆಂಚ್ ಯುದ್ಧಹಡಗದ ಮೇಲೆ ಬ್ರಿಟಿಷರು ಹಲ್ಲೆಮಾಡಿ ದೀರ್ಘಕಾಲದ ವರೆಗೆ ಕೆಲಸಕ್ಕೆ ಬೀಳಲಾರದಷ್ಟು ಜಖಂಗೊಳಿಸಿದರು. ಫ್ರೆಂಚ್ ಪಶ್ಚಿಮಾಫ್ರಿಕದ ಡಕಾರ್ ಬಂದರದಲ್ಲಿದ್ದ 'ರಿಶೆಲ್ಯೂ' ಎಂಬ ಅತ್ಯಾಧುನಿಕ ಯುದ್ಧಹಡಗವು 35ಸಾವಿರ ಟನ್ ತೂಕವುಳ್ಳದ್ದು. ಅದರ ತಯಾರಿಯು ಈಗ ತಾನೇ ಮುಗಿದಿದ್ದು, ಲೋಕದ ಪ್ರಮುಖ ಆಧುನಿಕ ಯುದ್ಧಹಡಗಗಳಲ್ಲೊಂದಾದ ರಿಶೆಲ್ಯೂ ಕ್ಷಿಪ್ರದಲ್ಲೇ ಕೆಲಸ ಕೈಕೊಳ್ಳಲಿಕ್ಕಿತ್ತು. "ಈ ಅತಿ ಬಲಶಾಲಿ ಯುದ್ಧಹಡಗವು ವಿರೋಧಿಯ ವಶವಾಗುತ್ತಿದ್ದರೆ ಇತ್ತಂಡದವರ ನಾವಿಕಬಲದ ತೂಕದಲ್ಲೇ ವ್ಯತ್ಯಾಸವಾಗುವ ಅಪಾಯವಿತ್ತು. ಪರಿಣಾಮವು ಅನಪೇಕ್ಷಿತ ರೀತಿಯಿಂದ ನಮಗೆ ವಿರುದ್ಧವಾಗಿ ಹೋಗುತ್ತಿತ್ತು. ನಾವೀಗ ಆ ಆತಂಕದಿಂದ ಬಿಡುಗಡೆ ಹೊಂದಿದೆವು" ಎಂದು ಹೇಳಿ, ಮಿ. ಅಲೆಕ್ಸಾಂಡರರು ಪಾರ್ಲಿಮೆಂಟಿನಲ್ಲಿ ಉತ್ಸಾಹವನ್ನೆಬ್ಬಿಸಿದರು. ರಿಶೆಲ್ಯೂ ವಿರೋಧಿಗಳ ಪಾಲಿಗೆ ಸೇರುವುದನ್ನು ತಪ್ಪಿಸಲಿಕ್ಕಾಗಿ ಹೊರಟ ಬ್ರಿಟಿಷ್ ನಾವೆಯ ಅಧಿಕಾರಿಗಳು ಪ್ರಥಮತಃ ಕೆಲವು ಸಂಧಾನ ಸೂತ್ರಗಳನ್ನು ಆ ಹಡಗದ ಅಧಿಕಾರಿಗಳಿಗೆ ಕಳುಹಿಸಿದರೂ ತಕ್ಕ ಕಾಲದಲ್ಲಿ ಸಮಾಧಾನಕರ ಉತ್ತರವು ಬಾರದ್ದರಿಂದ ಕೂಡಲೇ ಉಗ್ರ ಕಾರ್ಯ ಕೈಕೊಳ್ಳಬೇಕಾಗಿ ಬಂತು. ಪ್ರಥಮತಃ ಹಡಗುಬೋಟೊಂದು ರಕ್ಷಣಾ ಬಲೆಗಳನ್ನು ಭೇದಿಸಿಕೊಂಡು ಅತಿ ಚಾತುರ್ಯದಿಂದ ಗುಂಡೊತ್ತಿ ಫ್ರೆಂಚ್ ಹಡಗದ ಮೇಲೆ ಧಾಳಿ ನಡೆಸಿ ಅತ್ಯಪಾಯಕಾರಿ ಸನ್ನಿವೇಶವಲ್ಲದರೂ ಕಮಾಂಡರು ತಪ್ಪಿಸಿಕೊಂಡು ಮರಳಿದರು. ಆಮೇಲೆ ನಾವೆಯ ವಿಮಾನಗಳು ಧಾಳಿನಡೆಸಿ ರಿಶೆಲ್ಯೂವನ್ನು ನಿಷ್ಕ್ರಿಯಗೊಳಿಸಿದವು.

ಅಲೆಗ್ಸಾಂಡ್ರಿಯದಲ್ಲಿ ಫ್ರೆಂಚ್ ನಾವೆಗಳ ನಿಷ್ಕ್ರಿಯೀಕರಣ

ಅಲೆಗ್ಸಾಂಡ್ರಿಯದಲ್ಲಿದ್ದ ಫ್ರೆಂಚ್ ಹಡಗಗಳು ಆದಿಯಲ್ಲಿ ಬ್ರಿಟಿಷ್ ಹಡಗುಗಳ ಜತೆಗೂಡಿ ಹೋರಾಡುತ್ತಿದ್ದರೂ, ಫ್ರಾನ್ಸ್ ಸೋತ ಮೇಲೂ ಯುದ್ಧ ಮುಂದೊನ್ನತ್ತುವ ಕುರಿತು ಒಮ್ಮತದ ಸಂಕಲ್ಪ ಮಾಡಿದ್ದರೂ ಫ್ರೆಂಚ್-ಜರ್ಮನಿ ಒಪ್ಪಂದದ ಸೂತ್ರಗಳು ಹೊರಬಿದ್ದ ಮೇಲೆ ಪರಿಸ್ಥಿತಿಯು ಭಿನ್ನವಾಯಿತಂತೆ. ಆದರೆ ಅಲ್ಲಿ ಬ್ರಿಟಿಷ್ ನಾವೆಗಳ ಬಲವೇ ಹೆಚ್ಚಾದುದರಿಂದ ಅಲ್ಲಿಂದ ಕದಲುವರೆ ಫ್ರೆಂಚ್ ಹಡಗಗಳಿಗೆ ಸಾಧ್ಯವಾಗಲಿಲ್ಲ. ಅಲ್ಲಿಂದ ಫ್ರೆಂಚ್ ಹಡಗಗಳ ಶಸ್ತ್ರ, ನಾವಿಕರು ಮತ್ತು ಸಲಕರಣೆಗಳನ್ನು ಉಪಯೋಗಕ್ಕೆ ತಕ್ಕಷ್ಟೇ ಇರಿಸಿ, ಬ್ರಿಟಿಷರು ತಮ್ಮ ಅಂಕೆಯೊಳಗಿಟ್ಟುಕೊಂಡಿರುವರು. ಅಲ್ಲಿರುವ ಫ್ರೆಂಚ್ ನಾವಿಕರಿಗೆ ಸಂಬಳ ಮತ್ತು ಸಲಕರಣೆಗಳನ್ನು ತಾವು ಕೊಡುವದಲ್ಲದೆ ಯುದ್ಧಾಂತ್ಯದಲ್ಲಿ ಬಿಟ್ಟುಕೊಡುವ ಭರವಸೆ ಕೊಟ್ಟಿರುವರು. ಹೀಗಾಗಿ ಭೂಮಧ್ಯ ಸಮುದ್ರದ ಪೂರ್ವ ಭಾಗದಲ್ಲಿ ನಡೆಯಲಿದ್ದ ಆಂಗ್ಲೋ-ಫ್ರೆಂಚ್ ಹಡಗಗಳ ಘರ್ಷಣೆಯ ಅಪಾಯವು ಸುಲಭದಲ್ಲಿ ತಪ್ಪಿಹೋಯಿತು. ನೋವಾ ಸ್ಕೋಟಿಯಾದ ಹಾಲಿಫ್ಯಾಕ್ಸ್ ಬಂದರದ ಬಳಿ ತನ್ನನ್ನು ತಾನೇ ನಾಶಮಾಡಿಕೊಳ್ಳಲಿಕ್ಕಿದ್ದ 30ಸಾವಿರ ಟನ್ನಿನ 'ಪಾಸ್ಟ್ಯೂರ್' ಎಂಬ ಫ್ರೆಂಚ್ ಹಡಗವನ್ನು ಬ್ರಿಟಿಷ್ ನಾವಿಕರು ಕ್ಷಿಪ್ರ ಪ್ರಯತ್ನದಿಂದ ತಡೆದಿಟ್ಟಿರುವರು. ಫ್ರೆಂಚ್-ಜರ್ಮನಿ ಕರಾರಿನ ವೇಳೆಯಲ್ಲಿ ಫ್ರೆಂಚರ ವಶದ ಪ್ರಮುಖ ಯುದ್ಧ ಹಡಗಗಳಷ್ಟುವಂತೆ ಅವುಗಳಲ್ಲಿ ಮೂರು ಬ್ರಿಟಿಷರ ವಶವಾಗಿವೆ. ಒಂದು ಮುಳುಗಿಸಲ್ಪಟ್ಟು ಮತ್ತೊಂದು ವಿಪರೀತ ಜಖಂ ಹೊಂದಿ ಪ್ರಯೋಗಕ್ಕೆ ನಾಲಾಯಕ್ಕಾಗಿ ಹೋಗಿದೆ. ಒಂದು ಹೊಡೆಯಲ್ಪಟ್ಟಿದ್ದು, ಮತ್ತೊಂದು ತಪ್ಪಿಸಿಕೊಂಡುಹೋಗಿದ್ದು ಎರಡೂ ಬಲವಾಗಿ ಜಖಂ ಹೊಂದಿರುವದರಿಂದ ಖಚಿತವಾಗಿ ಇಲ್ಲವಾದರೂ ದೀರ್ಘಕಾಲದ ವರೆಗೆ ಕೆಲಸಕ್ಕೆ ಬೀಳುವಂತಿಲ್ಲ. 'ರಿಶೆಲ್ಯೂ'ವಿನ ಅವಸ್ಥೆ ಮುಗಿಸಿಯಾಯಿತು. ಇನ್ನುಳಿದಂವರೆ ಅದರ ಮರಿ ಹಡಗವಾದ 'ಜೀನ್‌ಬರ್ಟ್' ಎಂಬುದೊಂದೇ. ಅದನ್ನೂ ಜೋಪಾನಮಾಡಲು ಬ್ರಿಟಿಷರು ಹೊಂಚುತ್ತಿದ್ದಾರೆ. ಕೆಲವು ಕ್ರೂಸರ್ ಹಡಗಗಳು ಇನ್ನೂ ಫ್ರೆಂಚರ ಅಧೀನದಲ್ಲಿವೆಯೆಂದೂ ಬ್ರಿಟಿಷರು ಅವುಗಳ ಕಡೆಗೆ ದೃಷ್ಟಿಯಿಟ್ಟಿರುವರೆಂದೂ ಮಿ. ಅಲೆಗ್ಸಾಂಡರರು ಹೇಳಿರುವರು.

ಫ್ರೆಂಚ್ ಮತ್ತು ಇಟಲಿ ಹಡಗುಗಳಿಗೆ ಹೊಡೆತ.

ಇಂಗ್ಲಾಂಡ್-ಇಟಲಿ ಸಮುದ್ರ ಯುದ್ಧ

ಭೂಮಧ್ಯ ಸಮುದ್ರದಲ್ಲಿ ಪದ್ಧತಿಯಂತೆ ಯಾವ ಸೂಚನೆಯನ್ನೂ ಕೊಡದೆ ಇಟಲಿ ಯುದ್ಧ ಹಡಗಗಳು ಮುಂದೊತ್ತಿ ಆಂಗ್ಲೋ-ಇಟಲಿ ಸಮುದ್ರ ಹೋರಾಟ ನಡೆಯಿತು. ಇಟಲಿಯ ಹೇಳಿಕೆಯ ಮೇಲಿಂದ, ಇಟಲಿ ಕಡೆಯ 29 ಜನ ಸತ್ತು 69 ಮಂದಿ ಜಖಂಹೊಂದಿದರಲ್ಲದೆ ಇಟಲಿ ಡಿಸ್ಟ್ರಾಯರೊಂದು ಮುಳುಗಿಸಲ್ಪಟ್ಟಿರುವದೆಂದೂ ಒಂದು ಸಬ್‌ಮೆರಿನ್ ಕಾಣೆಯಾಗಿರುವದೆಂದೂ ತಿಳಿದುಬರುತ್ತದೆ. ಇಂಗ್ಲಾಂಡಿನ ಕಡೆಯಲ್ಲಿ ಯಾವ ಹಾನಿಯೂ ಆಗಿಲ್ಲವಂತೆ. ವಿರೋಧಿ ಹಡಗಗಳು ಪ್ರಬಲ ಹೋರಾಟವಾಗದಂತೆ ತಪ್ಪಿಸಿಕೊಂಡದ್ದರಿಂದ ತಮಗೆ ಸಂದರ್ಭ ದೊರೆಯದಾಯಿತಲ್ಲಾ ಎಂದು ಬ್ರಿಟನಿನ ನಾವಿಕಾಧಿಕಾರಿಗಳು ಪಶ್ಚಾತ್ತಾಪಪಡುತ್ತಾರೆ. ಮಾಲ್ಟಾದಲ್ಲಿಯೂ ಹಡಗು ಯುದ್ಧ ನಡೆದು ಒಂದು ವಿರೋಧಿ ಯುದ್ಧ ಹಡಗವು ಪ್ರಬಲ ಹೊಡೆತ ತಿಂದ ಮೇಲೆ ಇಟಲಿಯವರು ಹಿಂಜರಿದರೆಂದು ತಿಳಿದು ಬರುತ್ತದೆ.

ಇಂಗ್ಲೇಂಡಿನ ಮೊದಲು ಅಯರ್ಲೇಂಡಿನ ಸರ್ತಿಯೆ?

ಜರ್ಮನಿಯು ಕ್ಷಿಪ್ರದಲ್ಲೇ ಅಯರ್ಲೇಂಡನ್ನು ಆಕ್ರಮಿಸಬಹುದೆಂಬ ಭೀತಿ ಲಂಡನಿನಲ್ಲಿ ತಲೆದೋರಿದೆ. ಇಂಗ್ಲಾಂಡು, ಅಯರ್ಲೇಂಡುಗಳು ಜರ್ಮನಿ ಆಕ್ರಮಣವನ್ನಿದಿರಿಸುವ ಬ್ರಿಟನಿನ ಪ್ರಯತ್ನವು ಅಧ್ಯಕ್ಷ ಡಿ. ವೆಲೆರಾರವರ ಘೋಷಣೆಯಿಂದ ಫಲಿಸಲಿಲ್ಲ. ಡಿ. ವೆಲೆರಾರವರು ಎಲ್ಲಾ ಸಂದರ್ಭಗಳಲ್ಲಿ ಅಯರ್ಲೇಂಡು ತಾಟಸ್ಥ್ಯ ಘೋಷಣೆ ವಹಿಸುವದೆಂದೂ ವಿರೋಧಿಯನ್ನು ಸ್ವಶಕ್ತಿಯಿಂದ ತಡೆಯುವದೆಂದೂ ನಿರ್ಧರಿಸಿ ಬಲವಾದ ರಕ್ಷಣೋಪಾಯ ಕೈಕೊಂಡಿರುವರು. ಅಯರ್ಲೇಂಡಿನ ಆಕ್ರಮಣವಾಗುವದು ಖಂಡಿತವೆಂಬ ಭಾವನೆಯಿಂದ ಐರಿಷ ಜನರೆಲ್ಲಾ ಸದಾ ಸಿದ್ಧರಾಗಿರುವರು. ಅಲ್ಲಿ ಈ ತನಕ ಎಂದೂ ಸಂಗ್ರಹವಾಗದಿದ್ದ ಒಂದು ಲಕ್ಷಕ್ಕೂ ಮಿಕ್ಕಿದ ಸೈನ್ಯ ತರಬೇತಿ ನಡೆಯುತ್ತಿದೆ. ಬ್ರಿಟಿಷ್ ಸರಕಾರವು ಅತ್ಯಾತುರತೆಯಿಂದ ಅಯರ್ಲೇಂಡಿನ ಸಮುದ್ರ ಭಾಗದ ಕಡೆಗೆ ದೃಷ್ಟಿಯಿಟ್ಟಿದೆ. ವಿರೋಧಿಗೆ ಅಯರ್ಲೇಂಡನ್ನು ಹಿಡಿಯಲು ಸಾಧ್ಯವಾದರೆ ಇಂಗ್ಲಾಂಡಿನ ಮೇಲೆ ಧಾಳಿಯಿಡಲನುಕೂಲವಾಗುವ ಹತ್ತಿರದ ಮತ್ತು ಭದ್ರವಾದ ನಿಲ್ದಾಣ ದೊರೆತಂತಾಗುವದರಿಂದ ಬ್ರಿಟಿಷರು ಒಡನೆಯೇ ಪ್ರತಿಭಟಿಸುವದು ಖಂಡಿತ.

THE
BOMBAY LIFE ASSURANCE
Company Limited.
[ESTD. 1908]

LIFE INSURANCE
Dispels darkness of the mind and brings Enlightenment and Courage, Immortalises major portion of your Income whether you survive or not and thus makes life worth living to you and your dependants in reality

Ask us what particular scheme of Insurance will satisfy your requirements and your purse.

Agency Applications from Active and Influential Ladies & Gentlemen are invited.

To Insure or to Represent consult:

KOCHIKAR BROTHERS LTD.,
MADRAS BRANCH SECRETARIES AND
Chief Agents for Bombay City & Suburbs,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI.

Or any of their following Offices at:-

Puthyara, CALICUT.	Car Street, MANGALORE	Central Station Road, TRIVANDRUM.
Gaiiam Nivas, Charni Road Girgaum, BOMBAY No. 4.	Post Box No. 347, Mount Road, MADRAS	Visweswarapuram Circle BANGALORE CITY.

ನೋಟೀಸು.

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

O. S. No 26/1938

ಕುಮಾರನ್ ನಾಯರ ವಗೈರಾ —ವಾದಿಗಳು,

ಮತ್ತು

ಕುಂಞಂಬು ನಾಯರ ವಗೈರಾ —ಪ್ರತಿವಾದಿಗಳು,

ಇವರೊಳಗೆ

ಸಪ್ಲಿಮೆಂಟಲ್ 59ನೇ ಪ್ರತಿವಾದಿ ಎರಿಂಞಾಕ್ಕಾಲ್ ಮುಣ್ಣಿಚ್ಚೇರಿ ಕಣ್ಣನ್ ನ್ಯಾರವರಿಗೆ

ಮೇಲ್ಕಂಡ ವ್ಯಾಜ್ಯದಲ್ಲಿ ನಿಮ್ಮನ್ನು ಸಪ್ಲಿಮೆಂಟಲ್ 59ನೇಪ್ರತಿವಾದಿಯಾಗಿ ತಾ. 15-6-40ರಲ್ಲು ಸೇರಿಸುತ್ತದೆ. ಸದ್ರಿ ವ್ಯಾಜ್ಯವು ತಾ. 25-7-40ಕ್ಕೆ ಸದ್ರಿ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುವದರಿಂದ ನೀವು ಖುದ್ದು ಯಾ ವಕೀಲ ದ್ವಾರ ಹಾಜರಾಗದಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನವಾಗುವದೆಂಬ ಸಂಗ್ತಿ ಈ ಮೂಲಕ ತಿಳಿಸಲಾಗಿಯದೆ.

ಕಾಸರಗೋಡು ತಾ. 15-7-40.

M. G. Ganesh Narayana Pai,
Advocate for Defts.

ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ.

ಪಾಪ-ಪುಣ್ಯ!

"ಉಡುಪಿಯಲ್ಲಿ ಮುನಿಸಿಪಾಲಿಟಿಯವರು ಚರ್ಚ್ ರೋಡಿನಲ್ಲಿ ರಸ್ತೆಯನ್ನು ಅಲ್ಲಲ್ಲಿ ಅಗಲಪಡಿಸಿ ಉಪಕಾರಮಾಡಿದ್ದೇನೋ ನಿಜ. ಆದರೆ ಕಥೋಲಿಕ್ ಬ್ಯಾಂಕಿನೆದುರು ಅಜ್ಜರಕಾಡಿಗೆ ತಿರುಗುವಲ್ಲಿ ಇರುವ ಅಶ್ವತ್ಥಮರಕ್ಕೆ ಹೊಸತಾಗಿ ಕಟ್ಟೆ ಕಟ್ಟಿಸಿದ್ದಾರೆ. ಆ ಸ್ಥಳದಲ್ಲಿ ಫಕ್ಕನೆ ತಿರುಗುವ ಕಾರು ಸೈಕಲುಗಳು ಇದಿರಿದಿರಾಗುವಾಗ ಎಷ್ಟೋ ವೇಳೆ ಢಿಕ್ಕಿ ಹೊಡೆದುಕೊಳ್ಳುವ ಪ್ರಸಂಗಬಂದಿದೆ. ಅಲ್ಲಿಯೇ ಅಶ್ವತ್ಥಕಟ್ಟೆಯನ್ನೂ ಕಟ್ಟಿ ರಸ್ತೆಯನ್ನು ಮತ್ತಷ್ಟು ಬಿಕ್ಕಟ್ಟಾಗಿಮಾಡಿದುದು ಸರಿಯೆ? ಆ ಮರವನ್ನು ಕಡಿದು ತೆಗೆಯಬಾರದೇಕೆ? ಜನರ ವಿರುದ್ಧವಿರುವದೆಂಬ ಕಾರಣದಿಂದ ಹೀಗೆಲ್ಲಾ ಹಿಂಜರಿದರೆ ಮುನಿಸಿಪಾಲಿಟಿಯವರಿಗೆ ಜನೋಪಕಾರೀ ಕಾರ್ಯಮಾಡಲು ಸಾಧ್ಯವಾದೀತೆ?" ಶ್ರೀ. ಕೆ. ಕೆ. ಎಮ್. ಉಡುಪಿ.

ಸಾವಧಾನ; ನಿಮ್ಮನ್ನು ನಾಸ್ತಿಕನೆಂದಾರು! ಜನರ ಧಾರ್ಮಿಕ ಭಾವನೆಯನ್ನು ನೋಯಿಸುವ ಪಾಪ ಕಟ್ಟಿಕೊಳ್ಳಲು ನಗರಸಭೆಯು ತಯಾರಿಲ್ಲವೆಂದು ಖಂಡಿತ ತಿಳಿದುಕೊಳ್ಳಿ. ಪಾಪ ಕಟ್ಟಿಕೊಳ್ಳಲಿಲ್ಲ- ಪುಣ್ಯ ಸಂಪಾದನೆಯ ಸಂದರ್ಭವನ್ನೂ ಬಿಟ್ಟಿತಲ್ಲಾ ಎಂದು ನಮ್ಮ ಪಶ್ಚಾತ್ತಾಪ. ಆ ಕಟ್ಟೆಯನ್ನು ರಸ್ತೆಯ ಮಧ್ಯದವರೆಗೂ ವಿಸ್ತರಿಸಿ ಕಟ್ಟುತ್ತಿದ್ದರೆ ಅತ್ತಿಂದಿತ್ತ ಹೋಗುವವರು ಅಶ್ವತ್ಥಮರಕ್ಕೊಂದು ಸುತ್ತು ತೆಗೆದೇ ಹೋಗುವಂತಾಗುತ್ತಿತ್ತು; ಅಶ್ವತ್ಥ ಪ್ರದಕ್ಷಿಣೆ ಮಾಡಿಸಿದ ಪುಣ್ಯ ಮುನಿಸಿಪಾಲಿಟಿಗೆ ಸಲ್ಲುತ್ತಿತ್ತು! ಮುನಿಸಿಪಾಲಿಟಿಯ ಹಳ್ಳೀ ವಿಭಾಗದಲ್ಲಿ ಸಾಕಷ್ಟು ಸೌಕರ್ಯವಿಲ್ಲದ ಪಾಪ ಇವರಿಂದಾದರೂ ನಿವಾರಣೆಯಾಗುತ್ತಿತ್ತು!

ಮುಯ್ಯಿಗೆ ಮುಯ್ಯಿ!

"ನನ್ನ ನೆರೆಮನೆಯವರಿಗೆ ಒಂದು ವಾರಪತ್ರಿಕೆ ಬಹಳ ಕಾಲದಿಂದ ಬರುತ್ತಿದೆ. ಅವರು ಅದಕ್ಕೆ ಚಂದಾ ಹಣ ಕಟ್ಟಿರಲಿಲ್ಲ. ನಾನು ಪ್ರಶ್ನಿಸಿದಾಗ ತಾನೇನೂ ಕಳುಹಿಕೊಡಲು ಬರೆದಿಲ್ಲ. ಆದ್ದರಿಂದ ದುಡ್ಡು ಕೊಡಲಿಲ್ಲ; ಪತ್ರಿಕೆ ಬರುತ್ತಾ ಇದೆ ಅನ್ನುತ್ತಾರೆ. ಹೀಗೆ ದುಡ್ಡು ಕೊಡದೇನೆ ಪತ್ರಿಕೆ ತರಿಸಲಾಗುತ್ತದೆಯೆ? ಪತ್ರಿಕೆಯವರು ಕಳುಹಿಸುತ್ತಾರೆಯೆ?" ಶ್ರೀ. ಎನ್. ಬಿ. ಎಮ್. ಕಾಸರಗೋಡು.

ನಿಮ್ಮ ನೆರೆಯವರು ಅಪೇಕ್ಷಿಸದೇನೆ ಪತ್ರಿಕೆಬರುತ್ತಿರುವದೆಂಬುದು ಎಷ್ಟು ಸತ್ಯವೋ ಅವರ ಆಮಂತ್ರಣವಿಲ್ಲದೆಬಂದವರೆಂದು ಅನಾದರಣೆಮಾಡುವ ಭೋಜನಕೂಟದ ಕ್ರಮವನ್ನು ಪತ್ರಿಕೆಗಳ ಮೇಲೆ ಜಾರಿ ಮಾಡುವದು ನ್ಯಾಯವಲ್ಲ. ಆ ಗೃಹಸ್ಥರು ಪತ್ರಿಕೆಯನ್ನು ಓದುತ್ತಿರುವದು ನಿಜವಷ್ಟೆ. ತಾವು ಕೇಳದೇನೆ ಪತ್ರಿಕೆ ಕಳುಹಿಸಿದ ಮುಯ್ಯನ್ನು, ಪತ್ರಿಕಾ ಮೆನೇಜರರು ಕೇಳದೇನೆ ಹಣ ಕಳುಹುವ ಮೂಲಕ ತೀರಿಸಿಕೊಳ್ಳಲಿ!

ಜೋಯಿಸರ ಭವಿಷ್ಯ?

"ನಾವು ದಿನಂಪ್ರತಿ ಪತ್ರಿಕೆಗಳಲ್ಲಿ ಹಲವು ವಿಧದ ಭವಿಷ್ಯಗಳನ್ನು ನೋಡುತ್ತೇವನ್ನ. ಆದರೆ ಈಗಿನ ಯುರೋಪು ಯುದ್ಧದ ಭವಿಷ್ಯವನ್ನು ಗ್ರಹಗಳ ಚಲನೆಯ ಆಧಾರ ತೋರಿಸಿಕೊಡುತ್ತಾ ಸ್ಪಷ್ಟವಾಗಿ ನಮ್ಮಲ್ಲಿನ ಯಾವ ಜೋಯಿಸನೂ ಹೇಳುವದಿಲ್ಲವೇಕೆ? ಇದು ಅತ್ಯಂತ ಮುಖ್ಯ ಸಂಗತಿಯಿರುತ್ತಾ ಅದನ್ನು ಹಿಂದೆ ಹಾಕುವದರಿಂದ ನಮ್ಮ ಜ್ಯೋತಿಷ್ಯಕ್ಕೊಂದು ಕೊರತೆಯಲ್ಲವೇನು?" ಕೆ. ಜಿ. ಬಿ. ಧಾರವಾಡ.

ಎಲ್ಲಿಯ ಕೊರತೆ? ನಮ್ಮಲ್ಲಿಯ ಜೋಯಿಸರಿಗೆಲ್ಲಾ ತಮ್ಮ ಭವಿಷ್ಯದ ಅರಿವಿದ್ದ್ರೆ ಚೆನ್ನಾಗಿದೆ ಎಂಬುದಕ್ಕೆ ಇದೇ ಒಂದು ದೃಷ್ಟಾಂತವಲ್ಲವೆ?

ಹಣವೇ ಶಸ್ತ್ರ!

"ಅಮೇರಿಕದವರು ಯುದ್ಧಕ್ಕಿಳಿಯುವರೆಂಬ ಸುದ್ದಿ ಮೊದಲು ಉಂಟಾಗಿತ್ತು. ಈಗ ನೋಡುವಾಗ ಬ್ರಿಟಿಷರಿಗೆ ಕೊಡುತ್ತಿದ್ದ ಶಸ್ತ್ರಾಸ್ತ್ರಗಳ ಸಹಾಯವನ್ನೂ ಅವರು ನಿಲ್ಲಿಸಿದ್ದಾರೆ ಪ್ರಜಾ ಸ್ವಾತಂತ್ರ್ಯದ ರಕ್ಷಕರೆಂದು ಹೇಳುತ್ತಿರುವ ಅಧ್ಯಕ್ಷ ರೂಸ್ವೆಲ್ಟರು ಮಿತ್ರದ್ರೋಹಮಾಡಿದಂತಾಗಲಿಲ್ಲವೆ?" ಶ್ರೀ. ಎಸ್. ಬಿ. ಎಲ್. ಬೆಂಗಳೂರು.

ಮನಸ್ಸಿದ್ದರೂ, ಮಿತ್ರದ್ರೋಹವಷ್ಟು ಸುಲಭದಲ್ಲಿ ಶತ್ರುದ್ರೋಹ ಸಾಧಿಸಲು ಸಾಧ್ಯವಿಲ್ಲ. ಅಮೇರಿಕದವರು ಹಳೇ ಸಾಲುಗಳನ್ನು ಮಾರಿ ಹೇರಳ ಹಣ ಸಂಗ್ರಹಿಸಿ ಯುದ್ಧಸಿದ್ಧರಾಗಿದ್ದಾರೆ ಶಸ್ತ್ರ ಮಾರಿ, ಹಣಮಾಡಿ, ಯುದ್ಧ ನಡೆಸುವದು ಹೇಗೆಂದು ಅನುಮಾನಪಡಬೇಡಿ ಹಿಟ್ಲರನನ್ನು ಹಿಡಿದು ಕೊಟ್ಟವರಿಗೆ 10 ಮಿಲಿಯ ಡಾಲರಿನ ಬಹುಮಾನವೆಂದು ಅಮೇರಿಕದವರು ಜಾಹೀರುಮಾಡಿದ್ದ ನೆನಪುಂಟಷ್ಟೆ- ಅದು ಕೈಗೂಡಿದರಾಯಿತು!

ಉದ್ಯೋಗವಿಲ್ಲದವರ ಕೆಲಸ

"ಇಂದಿನ ಯುದ್ಧದಿಂದ ಎಷ್ಟೋ ಆಪತ್ತು ಒದಗಿದ್ದರೂ ಬೇರೆ ದೇಶಗಳಲ್ಲಿ ನಿರುದ್ಯೋಗಿಗಳಿಗೆಲ್ಲಾ ಉದ್ಯೋಗ ದೊರೆಯುವಂತಾಗಿದೆ. ಹಿಂದೂದೇಶದಲ್ಲಿ ಆ ಪ್ರಯೋಜನವೂ ಕಂಡುಬರುವದಿಲ್ಲವೇಕೆ?" ಬಿ. ಎಮ್. ಎ. ಕಿನ್ನಿಗೋಳಿ.

ಎಲ್ಲಿ ಕಂಡುಬರುವದಿಲ್ಲ? ಅತಿ ವಿಚಿತ್ರ ರೀತಿಯ ಯುದ್ಧಸುದ್ದಿಗಳು ಹರಡಿರುವದು ಕಾಣುವದಿಲ್ಲವೆ? ನಿರುದ್ಯೋಗಿಗಳಿಗೆ ಈಗಲೂ ಕೆಲಸವಿಲ್ಲವೆಂದು ಮತ್ತೆ ಹೇಗೆ ಹೇಳಿದಿರಿ?

WANTED

Wanted a clerk who has completed the S. S. L. C. course, strong in English & Kanarese for an Office of 20 years' standing. Preference will be given to those who know typewriting and book-keeping. Those who are prepared to undergo probationary course for a period of six months and who are prepared to give a cash security of Rs.500/- need apply for further particulars to the undersigned on or before 30-7-'40.

X C/o Navayuga, Udipi.

ಇಂಡಿಯನ್ ಮ್ಯೂಚುಯಲ್
ಲೈಫ್ ಎಸೋಸಿಯೇಷನ್ ಲಿಮಿಟೆಡ್

ಹೆಡ್ ಆಫೀಸ್:- ನಂ. ೧೦, ಮೌಂಟ್ ರೋಡ್, ಮದರಾಸು

—— ಡೈರೆಕ್ಟರುಗಳ ಬೋರ್ಡ್ ——

ಸರ್ ವೇಪಾ ರಮೇಶಂ, ಕೆ. ಟಿ ರಿಟೈರ್ಡ್ ಜಡ್ಜ್, ಮದರಾಸ್ ಹೈಕೋರ್ಟ್, ಮದರಾಸು.

ರಾವ್ ಬಹದ್ದೂರ್ ಮ|| ಕೆ. ಬಲರಾಮ ಅಯ್ಯರ್, ಬಿ.ಎ. ರಿಟೈರ್ಡ್ ಅಕೌಂಟೆಂಟ್ ಜನರಲ್ ಮದರಾಸ್.

ಮ|| ಸಿ. ಕೃಷ್ಣಮೂರ್ತಿ ಮೊದಲಿಯಾರ್ ಲ್ಯಾಂಡ್ ಲಾರ್ಡ್, ಶಿಯಾಲಿ.

ದಿವಾನ್ ಬಹದ್ದೂರ್ ಮ|| ಎ. ವಿ ರಾಮಲಿಂಗ ಅಯ್ಯರ್, ಮದರಾಸ್ ಸರಕಾರದ ರಿಟೈರ್ಡ್ ಚೀಫ್ ಇಂಜನಿಯರು.

ಮ|| ಟಿ. ಎಸ್. ನಾರಾಯಣ ಸ್ವಾಮಿ, [illegible] ಅಸಿಸ್ಟೆಂಟ್ ಕೆಮಿಸ್ಟ್, ಬಕಿಂಗ್‌ಹ್ಯಾಂ ಮಿಲ್ಸ್, ಮದರಾಸ್.

ದಿವಾನ್ ಬಹದ್ದೂರ್ ಮ|| ವಿ. ಭಾಷ್ಯಂ ಅಯ್ಯಂಗಾರ್, ರಿಟೈರ್ಡ್ ಮದರಾಸ್ ಹೈಕೋರ್ಟ್ ಜಡ್ಜ್.

ಮ|| ಸಿ. ಎಂ. ಶ್ರೀನಿವಾಸನ್, ಬಿ.ಎ., ಬಿ.ಎಲ್. (ಎಕ್ಸ್-ಅಫೀಷಿಯೋ) ಮದ್ರಾಸ್.

ಮ್ಯಾನೇಜರ್:- ಮ|| ಎಂ ನಟೇಶನ್, ಎಂ.ಎ.

ಚೀಫ್ ಮೆಡಿಕಲ್ ಆಫೀಸರ್:- ಲೆ. ಕ|| ವಿ. ಮಹದೇವನ್, ಐ. ಎಂ. ಎಸ್.

ಬ್ಯಾಂಕರುಗಳು:— ಇಂಡಿಯನ್ ಬ್ಯಾಂಕ್ ಲಿಮಿಟೆಡ್, ಮದರಾಸ್. ಮದರಾಸ್ ಪ್ರೊವಿನ್ಷಿಯಲ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಇಂಡೊ-ಕಮರ್ಶಿಯಲ್ ಬ್ಯಾಂಕ್ ಲಿಮಿಟೆಡ್, ದಿ ಬ್ಯಾಂಕ್ ಆಫ್ ಮೈಸೂರು, ಲಿಮಿಟೆಡ್.

ಬ್ರಾಂಚುಗಳು:—ಕಲ್ಕತ್ತ, ಲಾಹೋರ್, ಜೋಧಪೂರ್, ಮಧುರ, ಕಲ್ಲಿಕೋಟೆ, ಬೆಜವಾಡ, ಅಲಹಾಬಾದ್ ಬೊಂಬಾಯಿ, ಅಹಮದಾಬಾದ್, ಪೂನಾ.

ಮೈಸೂರು ಸರಕಾರದ ಹೊಸ ವಿಮಾ ಕಾನೂನನ್ನು ಅನುಸರಿಸಿ ಕಂಟ್ರೋಲರವರಲ್ಲಿ ಠೇವಣಾತಿ ಮೊಬಲಗು ಇಡಲಾಗಿದೆ.

ಕರ್ನಾಟಕದಲ್ಲೆಲ್ಲಾ ಯೋಗ್ಯರಾದ ಮತ್ತು ಪ್ರತಿಭಾಶಾಲಿಗಳಾದವರಿಂದ ಏಜನ್ಸಿಗಳಿಗೆ ಅರ್ಜಿಗಳು ಸ್ವೀಕರಿಸಲ್ಪಡುವುವು.

ಉತ್ತಮ ಕೆಲಸಮಾಡುವವರಿಗೆ ಒಳ್ಳೇ ಷರತ್ತುಗಳು.

ಮ|| ಸಿ ಎಂ ಶ್ರೀನಿವಾಸನ್, ಬಿ. ಎ., ಬಿ. ಎಲ್. ಜನರಲ್ ಸೆಕ್ರೆಟರಿ.
ಇಂಡಿಯನ್ ಮ್ಯೂಚುಯಲ್ ಲೈಫ್ ಅಸೋಸಿಯೇಷನ್ ಲಿಮಿಟೆಡ್,
10 ಮೌಂಟ್‌ರೋಡ್, ಮದ್ರಾಸ್.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಬಿ. ಕರುಣಾಕರ ಹೆಗ್ಡೆ, ಇನ್ಸ್‌ಪೆಕ್ಟರ್ ಆಫ್ ಏಜನ್ಸೀಸ್,
ಪರ್ಕಳ ಪೋಸ್ಟ್, ಉಡುಪಿ.

Bonus: Endowment Rs. 15. Wole life Rs. 18 Last valuation.

INDIAN MUTUAL LIFE ASSOCIATION, LIMITED.

Head Office—No. 10, Mount Road Madras

'ಸ್ನೇಹಾಚಾರದ ಹಸ್ತವನ್ನು ಹಿಂದೆ ತಳ್ಳಬೇಡಿ'

ಬ್ರಿಟನಿಗೆ ಗಾಂಧಿಯವರ ಎಚ್ಚರಿಕೆ.

ಡಿಲ್ಲಿಯಲ್ಲಿ ಸೇರಿದ ಕಾಂಗ್ರೆಸ ವರ್ಕಿಂಗ್ ಸಮಿತಿಯು ೫ದಿನಗಳ ದೀರ್ಘ ಚರ್ಚೆ ನಡಿಸಿ ಸಂಪೂರ್ಣ ಸ್ವಾತಂತ್ರ್ಯವೇ ತನ್ನ ಗುರಿಯೆಂದೂ, ಅದರ ಮೊದಲ ಹಂತವಾಗಿ ಕೇಂದ್ರದಲ್ಲಿ ಈಗಲೇ ರಾಷ್ಟ್ರೀಯ ಸರಕಾರ ಸ್ಥಾಪಿತವಾಗಬೇಕೆಂದೂ ನಿರ್ಧಾರಮಾಡಿ ದಷ್ಟೆ. ಈ ಕುರಿತು ಗಾಂಧಿಯವರಿತ್ತಿರುವ ಹೇಳಿಕೆಯು ಹರಿಜನದೊಳಗೆ ನಡೆದ ವಿದ್ಯಮಾನಗಳ ಮೇಲೂ ಬೆಳಕು ಬೀರಿದೆ. ಅದರ ಸಾರಾಂಶವಿದು

ವಿಚಾರಪೂರ್ಣ ನಿರ್ಧಾರ

"ಸಮಿತಿಯ ಸದಸ್ಯರು ಐದು ದಿನಗಳನ್ನು ವ್ಯರ್ಥ ಕಾಲಹರಣೆಯಲ್ಲಿ ಕಳೆದರೆಂದು ನೆನಸಿದರೆ ದೊಡ್ಡ ತಪ್ಪಾದೀತು. ಅವರು ಒಂದು ದೊಡ್ಡ ಜವಾಬ್ದಾರಿಯನ್ನು ಹೊರುವ ಕೆಲಸವಿತ್ತು. ಆಕಾರದಲ್ಲಿ ಇಂದಿನ ನಿರ್ಧಾರವು ರಾಮಘರ್ ನಿರ್ಣಯಕ್ಕಿಂತ ಭಿನ್ನವಾಗಿಲ್ಲವಾದರೂ, ಗೂಢವು ನಿಸ್ಸಂದೇಹವಾಗಿಯೂ ಭಿನ್ನವಿದೆ. ಇಂದಿನವರೆಗಿದ್ದ ಕಾಂಗ್ರೆಸ್ ಧೋರಣೆಯೆಂದರೆ ಇದು: ತನ್ನ ಮುಖ್ಯ ಬೇಡಿಕೆಯು ಮನ್ನಿಸಲ್ಪಟ್ಟಲ್ಲಿ ಕಾಂಗ್ರೆಸು ತನ್ನಿಂದ ಸಾಧ್ಯವಿರುವ ನೈತಿಕ ಬೆಂಬಲಕೊಡುವ ಹೊರತು ಯುದ್ಧದಲ್ಲಿ ಭಾಗವಹಿಸುವಂತಿಲ್ಲ. ಇದೇ ಸ್ಥಿತಿಯಲ್ಲಿ ಕಾಂಗ್ರೆಸ್ ಸಮಿತಿಯ ಎಲ್ಲಾ ಮೆಂಬರರೂ ಇಲ್ಲ. ಸಂದಿಗ್ಧ ಪರಿಸ್ಥಿತಿಯುಂಟಾದಂದಿನಿಂದ ಪ್ರತಿಯೊಬ್ಬನೂ ಸ್ವತಂತ್ರ ವಿಚಾರಮಾಡಬೇಕಾಗಿ ಬಂತು. ಐದು ದಿನಗಳೆಂದರೆ ವಿಶೇಷ ರೀತಿಯಲ್ಲಿ ಪ್ರತಿಯೊಬ್ಬನೂ ಹೃದಯ ಶೋಧನೆಮಾಡಿಕೊಂಡ ದಿವಸಗಳು. ಮೆಂಬರರಿಗೆ ಅಹಿಂಸೆಯಲ್ಲಿ ಸಚೇತನ ವಿಶ್ವಾಸವಿಡಲು ಸಾಧ್ಯವಿದ್ದಲ್ಲಿ ಅಥವಾ ಅವರು ತಮ್ಮ ಕ್ಷೇತ್ರಗಳ ಜನರಿಗೆ ಅಹಿಂಸೆಯಲ್ಲಿ ನಂಬಿಕೆಯಿದೆ ಎಂದು ಸತ್ಯವಾಗಿ ಹೇಳಬಲ್ಲವರಾಗಿದ್ದಲ್ಲಿ, ಉತ್ತಮವೆಂದು ಹೆಚ್ಚಿನವರಿಗೆ ತೋರಿದ ಠರಾವಿನ ಕರಡು ನಕಲೊಂದನ್ನು ನಾನು ಸಮಿತಿಯ ಮುಂದಿರಿಸಿದೆ. ಕೆಲವರಿಗೆ ಎರಡು ವಿಧದ ವಿಶ್ವಾಸವೂ ಇರಲಿಲ್ಲ. ಕೆಲವರು ವ್ಯಕ್ತಿಗತ ವಿಶ್ವಾಸ ಮಾತ್ರವುಳ್ಳವರಿದ್ದರು.

ಗಫಾರ್ ಖಾನರ ಸ್ಥಾನ

ತನ್ನಲ್ಲಿಯೂ ತನ್ನ ಪ್ರೀತಿಯ ಖುದಾಯಿ ಖಿದ್ಮತ್‌ಗಾರರಿಗೂ ಇದರಲ್ಲಿ ಪೂರ್ಣ ವಿಶ್ವಾಸವಿದೆ ಎಂಬ ಸ್ಪಷ್ಟಾಭಿಪ್ರಾಯ ಪ್ರದರ್ಶಿಸಿದವರು ಖಾನ್ ಅಬ್ದುಲ್ ಗಫರ್ ಖಾನರೊಬ್ಬರೇ. ಅದಕ್ಕನುಗುಣವಾಗಿ ವಾರ್ಧಾ ಸಭೆಯ ನಿರ್ಧಾರದ ನಂತರ ತನಗೆ ಕಾಂಗ್ರೆಸಿನಲ್ಲಿ ಸ್ಥಾನವಿಲ್ಲವೆಂದು ಅವರು ನಿರ್ಧರಿಸಿದರು. ಅವರಿಗೆ ತನ್ನದೇ ಸಂದೇಶ ಮತ್ತು ತನ್ನದೇ ಆದ ಒಂದು ಕರ್ತವ್ಯವಿತ್ತು. ಆದ್ದರಿಂದ ಅವರು ಕಾಂಗ್ರೆಸಿನಿಂದ ನಿವೃತ್ತರಾಗಬಹುದೆಂದು ವರ್ಕಿಂಗ್ ಕಮಿಟಿಯು ಸಂತೋಷಪೂರ್ವಕ ಸಮ್ಮತಿಕೊಟ್ಟಿತು. ನಿವೃತ್ತರಾದುದರಿಂದಲೇ ನನ್ನಾಶೆಯಂತೆ ಅವರು ಇನ್ನೂ ಹೆಚ್ಚಿನ ಕಾಂಗ್ರೆಸ್ ಸೇವೆ ಸಲ್ಲಿಸಲಿರುವರು. ನನ್ನ ಪೈಕಿ ಹೀಗೆ ನಿವೃತ್ತಿಹೊಂದಿದವರೇ, ತಮ್ಮ ಸಹವ್ಯವಸಾಯಿಗಳು ತತ್ಕಾಲಕ್ಕೆ ಕಳಕೊಂಡಂತಿರುವ ವಿಶ್ವಾಸವನ್ನು ಪುನಃ ತುಂಬಲು ಶಕ್ತರಾಗಲಾರರೆಂದು ಯಾರು ತಾನೇ ಹೇಳಬಲ್ಲರು?

ರಾಜಾಜೀ ಟೀಕೆ

ರಾಜಾಜಿಯವರು ಠರಾವನ್ನು ಬರೆದವರು ನನಗೆ ನನ್ನ ಸ್ಥಾನದಲ್ಲಿದ್ದಷ್ಟೇ ನಂಬಿಕೆ ಅವರಿಗೆ ಅವರ ನೆಲೆಯಲ್ಲಿತ್ತು. ಅವರ ಸಮಜಾಯಿಸುವಿಕೆ, ಧೈರ್ಯ, ಮೊದಲಾದುವು ಕೆಲವರನ್ನು ಮತಾಂತರಗೊಳಿಸಿದವು. ಸರದಾರ ಪಟೇಲರು ಅವರ ಪಾಲಿಗೆ ಬಿದ್ದ ದೊಡ್ಡ ಬಹುಮಾನವಾಗಿದ್ದರು ನನ್ನ ಆಕ್ಷೇಪವಿರುತ್ತಿದ್ದರೆ, ಅವರೇ ನಿರ್ಣಯವನ್ನು ತರುವ ಯೋಚನೆಯನ್ನು ಕೂಡ ಮಾಡುತ್ತಿರಲಿಲ್ಲ. ಆದರೆ ನಾನು ನನ್ನದಕ್ಕೆ ಕೊಡುವಷ್ಟೇ ಬೆಲೆಯನ್ನು ನನ್ನ ಸಹವ್ಯವಸಾಯಿಗಳ ತಿಳುವಳಿಕೆ ಮತ್ತು ಆತ್ಮ ವಿಶ್ವಾಸಕ್ಕೆ ಕೊಟ್ಟೆ. ನಮ್ಮನ್ನೆದುರಿಸುತ್ತಿರುವ ರಾಜಕೀಯ ಸಮಸ್ಯೆಗಳ ಕುರಿತು ನಮ್ಮ ದೃಷ್ಟಿ ಪಥವು ಬೇರೆ ಬೇರೆಯಾಗುತ್ತಿದೆ ಎಂಬುದನ್ನು ನಾನು ದೀರ್ಘಕಾಲದಿಂದ ಅರಿತಿದ್ದೆ. ತನ್ನ ಅಹಿಂಸೆಯೇ ಈ ನಿರ್ಧಾರದಲ್ಲಡಕವಾಗಿರುವ ಗುರಿಯ ಕಡೆಗೆ ಕೊಂಡೊಯ್ಯಿತೆಂದು ರಾಜಾಜಿಯವರ ನಂಬಿಕೆ. ನಾನು ಅತಿ ವಿಶೇಷವೆನಿಸುವ ಅಹಿಂಸೆಗೆ ಕಟ್ಟುಬಿದ್ದಿದ್ದೇನೆಂದು ಅವರು ಭಾವಿಸುತ್ತಾರೆ. ನನ್ನ ರೀತಿಯು ಅಂಗೀಕಾರಾರ್ಹವಲ್ಲವಾದರೆ ರಾಜಾಜಿಯವರದೇ ಯೋಗ್ಯವೆಂಬುದನ್ನು ಸೂರ್ಯ ಪ್ರಕಾಶದಷ್ಟು ಸ್ಪಷ್ಟವಾಗಿ ಕೂಡಲೇ ನಾನು ಕಂಡುಕೊಂಡೆ. ಆದ್ದರಿಂದ ಅವರದು ಸಂಪೂರ್ಣ ತಪ್ಪೆಂಬ ಅಭಿಪ್ರಾಯವನ್ನಿಟ್ಟುಕೊಂಡೇ, ಅವರು ತನ್ನದನ್ನು ಮುಂದೊತ್ತಬೇಕೆಂದು ನಾನವರನ್ನು ಪ್ರೋತ್ಸಾಹಿಸಿದೆ. ಕಡೆಗೆ ಮಾದರಿಯೆನಿಸಬಲ್ಲ ತನ್ನ ತಾಳ್ಮೆ, ಚಾತುರ್ಯ, ಮತ್ತು ವಿಚಾರ ಪರಿಪೂರ್ಣತೆಯನ್ನು ತನ್ನ ಇದಿರುವಾದಿಗಳಿದಿರು ಒಡ್ಡಿ, ಅವರು ಗಣನೀಯ ಬಹುಮತ ಪಡೆದರು. ಐದು ಮಂದಿ ತಟಸ್ಥರಾಗಿದ್ದರು. ನಾನು ಭಯಚಕಿತನಾದ. ಸರ್ವ ಸಾಧಾರಣವಾಗಿ ಇಂತಹ ಠರಾವುಗಳು ಬಹುಮತದಿಂದ ಪಾಸಾಗುವ ರೂಢಿ ಇರಲಿಲ್ಲ. ಆದರೆ ಈ ಸಂದರ್ಭದಲ್ಲಿ ಸರ್ವ ಸಮ್ಮತಿಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ನಾನು ರಾಜಾಜಿಯವರ ಠರಾವನ್ನು ಅಂಗೀಕರಿಸಲು ಉಪದೇಶಿಸಿದೆ. ಕೊನೆಗೆ ಕಮಿಟಿಯು ಅದನ್ನು ಲೋಕದ ಮುಂದಿಡುವ ನಿರ್ಧಾರ ಮಾಡಿತು

ಬ್ರಿಟನಿನ ಮುಂದಿರುವ ಪ್ರಶ್ನೆ

ರಾಜಾಜಿಯವರ ಠರಾವು ಕಾಂಗ್ರೆಸಿನ ವಿಚಾರಪೂರ್ಣ ಧೋರಣೆಯ ಪ್ರತಿರೂಪ. ನನ್ನ ಧಾರ್ಮಿಕ ಸ್ವರೂಪದ ತತ್ವಗಳಿಂದ ಕಾಂಗ್ರೆಸು ಬಿಡುಗಡೆಹೊಂದಿ ಶುದ್ಧ ರಾಜಕೀಯ ಗುರಿಯನ್ನಂಗೀಕರಿಸಬೇಕೆಂದು ಅಪೇಕ್ಷಿಸುತ್ತಿದ್ದ ಕಾಂಗ್ರೆಸೇತರರು ಈ ನಿರ್ಧಾರವನ್ನು ಸ್ವಾಗತಿಸಿ ಮನಃಪೂರ್ವಕ ಬೆಂಬಲಕೊಡಬೇಕು. ತಮ್ಮ ತತ್ವಗಳಿಗಿಂತ ಹೆಚ್ಚಾಗಿ ದೇಶವನ್ನು ಚಿಂತಿಸುತ್ತಿರುವ ಮುಸ್ಲಿಂ ಲೀಗೂ, ಆಶ್ರಿತ ರಾಜರೂ ಹಾಗೆಯೇ ಮಾಡತಕ್ಕದ್ದಿದೆ. ಬ್ರಿಟಿಷ ಸರಕಾರವು ತನ್ನ ಪಾಲಿನದನ್ನಾರಿಸಿಕೊಳ್ಳಬೇಕಾಗಿದೆ. ರಾಜಾಜಿಯವರು ನನ್ನ ಕುರಿತು ಹೇಳಿರುವಂತೆ ಬ್ರಿಟಿಷ್ ಸರಕಾರದ ಚಿಂತನೆಯು ಮೇರೆ ಮೀರಿಲ್ಲವಾದರೆ ಅದು ಸ್ವಾತಂತ್ರ್ಯವನ್ನು ಇನ್ನೂ ಬಿಗಿಹಿಡಿಯಲಾರದು. ಸ್ವಾತಂತ್ರ್ಯವು ಮನ್ನಿಸಲ್ಪಟ್ಟರೆ ಠರಾವಿನ ಮಿಕ್ಕ ಭಾಗದ ಅಂಗೀಕಾರವು ಸ್ವಾಭಾವಿಕವಾಗಿ ನಡೆದುಹೋಗುವದು. ಮುಂದೆ ಬಂದಿರುವ ಪ್ರಶ್ನೆಯಿದು: ಅವರು ತಮ್ಮ ಆಳ್ವಿಕೆಯ ಹಕ್ಕಿನ ಮೂಲಕ ಭಾರತದಿಂದ ಸಹಾಯ ಹೊಂದಲಿಚ್ಛಿಸುವರೋ ಅಥವಾ ಸ್ವತಂತ್ರ ಭಾರತವು ಐಚ್ಛಿಕವಾಗಿ ಕೊಡುವ ಸಹಾಯ ಹೊಂದುವರೋ? ನನ್ನ ವ್ಯಕ್ತಿಗತ ಉಪದೇಶವು ಇಷ್ಟರಲ್ಲೇ ನಷ್ಟವಾಗಿಹೋಗಿದೆ. ನನ್ನ ಸಹಾಯದ ಭರವಸೆ ಸದಾಕಾಲವಿದೆ. ನನ್ನ ಬೋಧೆಯನ್ನಂಗೀಕರಿಸಿದಲ್ಲಿ ಅವರ ನಾಯಕತ್ವವು ಪ್ರಕಾಶಿಸಬಲ್ಲುದು. ಅವರದನ್ನಂಗೀಕರಿಸಲಾರರಾದರೆ, ನಾನು ನಿರ್ಭೀತಿಯಿಂದ ಮತ್ತು ಯಥಾರ್ಥ ಮಿತ್ರನ ಸ್ಥಾನದಿಂದ ಬ್ರಿಟನಿಗೆ ಕೊಡುವ ಹಿತೋಪದೇಶವೆಂದರೆ-ಕಾಂಗ್ರೆಸು ಮುಂದೆ ಚಾಚಿರುವ ಮಿತ್ರತ್ವದ ಕೈಯನ್ನು ತಿರಸ್ಕರಿಸಬೇಡಿ."

ನಂಬ್ರ 1 ಗ್ಯಾರಂಟಿ ಇನಾಂ

ರೂಪಾಯಿ 100 ರೂಪಾಯಿ.

ಸಂಪೂರ್ಣ ಸಮರ್ಪಕವಾದ 10 ಉತ್ತರಗಳಿಗೆ ಹಂಚಲಾಗುವುದು ಯಾವುದಾದರೊಂದು ಸಾಲಿನ ಅಂಕಗಳಿಗೆ ಸರಿಹೋಲುವಂತಹ "ರನ್ನರ್ಸ್ ಅಪ್" ಪ್ರತಿಯೊಂದು ಉತ್ತರಕ್ಕೆ ರೂ. 5ರಂತೆ ಸಮಾಧಾನಕರ ಬಹುಮಾನಗಳಿವೆ. ಹೆಚ್ಚು ಉತ್ತರಗಳನ್ನು ಕಳಿಸುವ ಉಮೇದ್ವಾರರಿಗೆ ರೂ. 10 ಮೀಂಗಡಿಸಲ್ಪಟ್ಟಿರುವುದು.

ಈ ಚಚ್ಚೌಕದಲ್ಲಿ ಅಡ್ಡಕ್ಕೆ ಮತ್ತು ಮೂಲೆಯಿಂದ ಮೂಲೆಗೆ ಪ್ರತಿ ಸಾಲಿನ ಮೊತ್ತವು 35ಬರುವಂತೆ 1ರಿಂದ 20ರ ವರೆಗಿನ ಅಂಕೆಗಳನ್ನು ಉಪಯೋಗಿಸುವುದು. ಒಮ್ಮೆ ಉಪಯೋಗಿಸಿದ ಅಂಕೆಯನ್ನು ಇನ್ನೊಮ್ಮೆ ಉಪಯೋಗಿಸಕೂಡದು.

ಉತ್ತರ ಕಳಿಸುವ ಕೊನೆಯ ತಾರೀಕು 30-7-40

ಫಲಿತಾಂಶ ಪ್ರಕಟಣೆಯ ತಾರೀಕು 8-8-40.

ಪ್ರವೇಶ ಹಾಸಲು:-ಪ್ರತಿಯೊಂದು ಉತ್ತರಕ್ಕೆ 0-4-0; 5 ಉತ್ತರಗಳಿಗೆ ರೂ. 1-0-0 15ಉತ್ತರಗಳ ಸೆಟ್ಟಿಗೆ ರೂ. 3ಮಾತ್ರ

ನಿಯಮಗಳು:-ತಕ್ಕ ಪ್ರವೇಶಹಾಸಲಿನೊಂದಿಗೆ ಬಿಳಿ ಕಾಗದದಲ್ಲಿ ಬೇಕಾದಷ್ಟು ಉತ್ತರಗಳನ್ನು ಕಳಿಸಬಹುದು ಹಣವನ್ನು ಪೋಸ್ಟಲ್ ಸ್ಟಾಂಪುಗಳ ಮೂಲಕ ಕಳಿಸಬಹುದು ಯಾ ಮನಿಯಾರ್ಡರು ಮಾಡಬಹುದು. ಸಂಗ್ರಹವಾಗುವ ಹಣವನ್ನು ಅವಲಂಬಿಸಿ ಇನಾಮುಗಳನ್ನು ಏರಿಸಲಾಗುವದು. ಆದರೆ ಭದ್ರವಾಗಿರಿಸಲ್ಪಟ್ಟ ನಿಶ್ಚಿತ ಉತ್ತರಕ್ಕೆ ಸರಿಹೋಲುವ ಪ್ರತಿಯೊಂದು ಉತ್ತರಕ್ಕೂ ಕನಿಷ್ಠ ರೂ. 5ರ ಗ್ಯಾರಂಟಿಯಿದೆ ಫಲಿತಾಂಶವನ್ನು ಪಡೆಯುವದಕ್ಕಾಗಿ ವಿಳಾಸ ಮತ್ತು ಸ್ಟಾಂಪು ಸಮೇತವಾದ ಕವರನ್ನು ಲಗ್ತೀಕರಿಸಬೇಕು. ಮೆನೇಜರರ ನಿರ್ಣಯವೇ ಕೊನೆಯದೂ ಸಿಂಧುವಾದುದೂ ಎಂದು ತಿಳಿದಿರಬೇಕು.

ಉತ್ತರಗಳನ್ನೂ ಪ್ರವೇಶ ಹಾಸಲನ್ನೂ ಈ ಕೆಳಗಿನ ವಿಳಾಸಕ್ಕೆ ಕಳಿಸುವುದು.

ಮೆನೇಜರ್,
ಶ್ರೀ ಕೃಷ್ಣಾ ಕಾಂಪಿಟೇಶನ್ಸ್,
ಉಡುಪಿ.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R I A No 496/1940
os 520/38.

ವಾದಿ-ಬನ್ನಕ್ಕೆ ಹಂದೆ, ಸುಬ್ಬಣ್ಣ ಹಂದೆರ ಮಗ ಉಡುಪಿ ತಾಲೂಕು ಕೋಟತಟ್ಟುಗ್ರಾಮ ನಿವಾಸಿ.

7ನೇ ಪ್ರ. ರಂಗಯ್ಯ ಬ್ಯಾರಿ, ಸಣ್ಣಯ್ಯಬ್ಯಾರಿ ಮಗ, 8ನೇ ಪ್ರ. ಸದಾಶಿವ ಬ್ಯಾರಿ, ಮಂಜುನಾಥ ಯಾನೆ ಮುಂಜಯ್ಯ ಬ್ಯಾರಿ ಮಗ, ಸದರಿ ಗ್ರಾಮದಲ್ಲಿರುತ್ತಾರೆ.

ಸದರಿ 7- 8ನೇ ಪ್ರತಿವಾದಿರಿಗೆ ತಿಳಿಯಪಡಿಸುವುದೇನೆಂದರೆ –

ಸದರಿ ಕ್ರಮ ನಂ. 520/1938ರಲ್ಲಿ ವಾದಿಯ ಗುಣಕ್ಕೆ ಕೊಡಲ್ಪಟ್ಟ ಸ್ಕ್ರೀಮನರಿ ಡಿಕ್ರಿಯ ಹಣವನ್ನು ಯಾರೂ ಕೊಡದಿರುವುದರಿಂದ ಆಸ್ತಿ ಮಾರಾಟಮಾಡುವಗೋಸ್ಕರ ಫೈನಲ್ ಡಿಕ್ರಿ ಕೊಡಿಸಬೇಕಾಗಿ ವಾದಿಯು ದಾಖಲು ಮಾಡಿದ R. I. A 496/1940ನೇ ಅರ್ಜಿಯನ್ನು ತಾ. 27-7-40ಕ್ಕೆ ತನಿಖೆಗೆ ಇಟ್ಟಿರುವುದರಿಂದ ಆ ಕುರಿತು ನಿಮ್ಮ ಆಕ್ಷೇಪವಿದ್ದರೆ ತಕ್ಕ ಸಮಯದಲ್ಲಿ ಕೋರ್ಟುಮುಂದೆ ಜಾಹೀರು ಮಾಡಬೇಕಾಗಿ ಈ ಮೂಲಕ ನಿಮಗೆ ತಿಳಿಯಪಡಿಸಿಯದೆ,

13-7-40, ಕುಂದಾಪುರ
M M. Ural,
Adocate for D H.

TENDER NOTICE

Tenders of rates to reach the Sub Assistant Director before 15-8-1940 are invited for transporting salt bags and stacking them in the fishcuring yards and salt gollahs on the West Coast from vessels or railway waggons and for sundry other works. Details and terms of contract can be obtained from the Sub Assistant Director of Fisheries (West Coast), Calicut.

Calicut, 9-7-40.
Sd/ M. Jayaram Naidu,
Sub Asst Director of Fisheries (West Coast).

ನವಯುಗದಲ್ಲೇ ನಿಮ್ಮ ಜಾಹೀರಾತು ಪ್ರಕಟಿಸಿರಿ

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಹೊಸ ವಾರಪತ್ರಿಕೆ— ಬರುವ ತಿಂಗಳ ಆದಿಯಿಂದ "ದೇಶಭಕ್ತ" ನೆಂಬ ಒಂದು ಕನ್ನಡ-ಇಂಗ್ಲಿಷ್ ವಾರಪತ್ರಿಕೆಯು ಶ್ರೀ. ಬಿ. ವಿ. ಜಯದೇವ ರಾವರ ಸಂಪಾದಕತ್ವದಲ್ಲಿ ಹೊರಡುವುದಾಗಿ ತಿಳಿದುಬರುತ್ತದೆ.

ಜಿಲ್ಲಾ ಬೋರ್ಡು ಸಭೆ— ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯೊಂದು ಜಿ. ಬೋರ್ಡ ಆಫೀಸಿನಲ್ಲಿ ಕಳೆದ ತಾ. 12ರಲ್ಲಿ ಡಾ. ಕೆ. ವಿಟ್ಠಲ ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿತು. ಸರಕಾರಿ ಹುಕುಮುಗಳು ಓದಲ್ಪಟ್ಟು ರಿಕಾರ್ಡು ಮಾಡಲ್ಪಟ್ಟ ತರುವಾಯ ಕೆಲವು ಸಾಮಗ್ರಿಗಳಿಗೆ ಹಣ ಮಂಜೂರುಮಾಡಲ್ಪಟ್ಟಿತು. ಮಂಗಳೂರು ಕರ್ಣಲ್ ಎಕ್ಸೈಜ್ ಅಪ್ಪೀಲು ಸಮಿತಿಗೆ ಶ್ರೀ. ಕೃಷ್ಣಶೆಟ್ಟರೂ, ಪಿ. ಅಲ್ಟುಕರ್ಕರರೂ ಆರಿಸಲ್ಪಟ್ಟರು. ಬಡನಿಡಿಯೂರು ಮತ್ತು ಶಿರ್ವಗಳಲ್ಲಿನ ಬೋರ್ಡುಶಾಲೆಗಳನ್ನು ಬೋರ್ಡಿನವರೇ ನಡಿಸಿಕೊಂಡು ಬರಬೇಕಾಗಿ ನಿರ್ಧಾರವಾಯಿತು. ಕುಂದಾಪುರದಿಂದ ಹೊರಕ್ಕೆ ಹೋಗುವ ಮತ್ತು ಕುಂದಾಪುರಕ್ಕೆ ಆಮದಾಗುವ ಸರಕುಗಳ ಮೇಲೆ ಕಡವಿನ ಕಂಟ್ರಾಕ್ಟುದಾರರು ಫೀಸು ವಸೂಲುಮಾಡುವ ಹಾಗೆ ದರತಾಕಿ ಕಡವನ್ನು ವರ್ಷ ಒಂದರ ರೂ. 3000 ದ ಗುತ್ತಿಗೆಯ ಪ್ರಕಾರ ಐದು ವರ್ಷಗಳ ವರೆಗೆ (ಕಂಟ್ರಾಕ್ಟು) ಕೊಡಬಹುದೆಂದಾಯಿತು. ದಾ. ಪಿ. ಜಿ. ಆಚಾರ್ಯರ ಸೂಚನೆಯ ಮೇಲೆ ಕುಂದಾಪುರ ಟೌನ್ ಎಂಬುದರ ಬದಲಾಗಿ ಪೋರ್ಟು ಎಂದು ತಿದ್ದುಪಡಿಮಾಡಲಾಯಿತು. ಇತರ ಕೆಲ ವಿಷಯಗಳು ಚರ್ಚಿಸಲ್ಪಟ್ಟ ಬಳಿಕ ಸಭೆ ಮುಕ್ತಾಯವಾಯಿತು.

ಆರೋಪಿತರ ಬಿಡುಗಡೆ— ಅಬ್ಬಾಸ ಎಂಬವನನ್ನು ತಾ ೧೦-೧೨-೪೯ರಲ್ಲಿ ಕಾಸರಗೋಡು ತಾಲೂಕು ಬೇವದ್ದ ಗ್ರಾಮದ ಕೃಷ್ಣ ಮತ್ತು ಅವನ ಹೆಂಡತಿ ಕಮಲಾವತಿ ಇವರೀರ್ವರು ಕೊಂದರೆಂಬ ಆಪಾದನೆಯ ಮೇಲೆ ಅವರಿಬ್ಬರನ್ನು ಸೆಶ್ಯನ್ಸಿಗೆ ಕಮಿಟಮಾಡಲಾಗಿತ್ತು. ವಿಚಾರಣೆ ನಡೆದು ಕಳೆದ ತಾ. ೧೧-೭-೪೦ರಲ್ಲಿ ಸೆಶ್ಯನ್ಸ್ ಜಡ್ಜರಾದ ಶ್ರೀ. ಟಿ. ಎಸ್. ರಾಮಚಂದ್ರನ್ ಐ. ಸಿ. ಎಸ್. ರವರು ಆಪಾದಿತರನ್ನು ತಪ್ಪಿತಸ್ಥರಲ್ಲವಾಗಿ ಬಿಡುಗಡೆಮಾಡಿದರು. ಎಲ್ಲ ಎಸೆಸರರೂ ಆಪಾದಿತರು ತಪ್ಪಿತಸ್ಥರಲ್ಲವಾಗಿ ಒಮ್ಮತದ ಅಭಿಪ್ರಾಯ ಕೊಟ್ಟರು. ತಾನು ಒಬ್ಬಳೇ ಮನೆಯಲ್ಲಿದ್ದಾಗ ಅಬ್ಬಾಸನು ಮನೆಯೊಳಗೆ ನುಗ್ಗಲು ಕಾದು, ಅವನನ್ನು ಕಡಿದು ಕೊಂದುದಾಗಿಯೂ, ತನ್ನ ಗಂಡನು ಮನೆಯಲ್ಲಿದ್ದಿಲ್ಲವೆಂದೂ ಹೇಳಿದ ಕಮಲಾವತಿಯ ಹೇಳಿಕೆಯನ್ನು ಕೋರ್ಟಿನವರು ಒಪ್ಪಿದರು. ಆಪಾದಿತರ ಕಡೆಯಿಂದ ಕೋರ್ಟಿನವರಿಂದ ನೇಮಕ ರಾ. ಬ. ಸುವರ್ಣರು ವ್ಯವಹರಿಸಿದ್ದರು.

ಮಿತ್ರ ಮಂಡಲಿಯ ವಾರ್ಷಿಕ ಸಭೆ- ನಿನ್ನೆಯ ದಿನ ಸಾಯಂಕಾಲ ಕೆನರಾ ಹೈಸ್ಕೂಲಿನಲ್ಲಿ ಮಿತ್ರ ಮಂಡಲಿಯ ವಾರ್ಷಿಕ ಸಭೆಯು ಮಿತ್ರ ಮಂಡಲಿಯ ಉಪಾಧ್ಯಕ್ಷರಾದ ಶ್ರೀ. ಯಂ. ವಾಸುದೇವ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಯಸ್. ಪಿ. ಭಟ್ಟರು ಗತವರ್ಷದ ವರದಿಯನ್ನೂ ಲೆಕ್ಕಪತ್ರವನ್ನೂ ಸಭೆಯ ಮುಂದಿರಿಸಿದರು. ಅದು ಮಂಜೂರಾಯಿತು. ಮುಂದಿನ ವರ್ಷಕ್ಕೆ ಶ್ರೀ ಮಾಧವ ಶಿವಾಪ್ಪಯ್ಯನವರು ಅಧ್ಯಕ್ಷರಾಗಿಯೂ, ಶ್ರೀ. ವಾಸುದೇವ ಪ್ರಭುಗಳು ಉಪಾಧ್ಯಕ್ಷರಾಗಿಯೂ, ಶ್ರೀ. ಎಸ್. ಪಿ ಭಟ್ಟರು ಕಾರ್ಯದರ್ಶಿಗಳಾಗಿಯೂ, ಶ್ರೀ. ಕೆ. ವಾಮನ ಭಟ್ಟರು ಅಖಿಲ ಸೇವಾ ಗ್ರಂಥಮಾಲೆಯ ಸಂಪಾದಕರಾಗಿಯೂ ಆರಿಸಲ್ಪಟ್ಟರು. ಮಂಡಲಿಗೆ ಒಂದು ಹೊಸ ಘಟನೆಯನ್ನು ಸಿದ್ಧಗೊಳಿಸಲಾಯಿತು.

ನೇಕಾರರ ಮುಷ್ಕರ— ಯಂ. ಎಸ್. ಯಂ. ನೇಯ್ಗೆ ಕಾರ್ಖಾನೆಯ ಕೆಲಸಗಾರರ ಸಂಬಳ ಕಡಿಮೆಮಾಡಲಾಯಿತೆಂದೂ, ಹಾಗೆ ಕಡಿಮೆಮಾಡಿದ್ದು ಸರಿಯಲ್ಲ, ತಮಗೆ ನ್ಯಾಯವಾದ ಸಂಬಳ, ವೇತನ ಕೊಡಬೇಕು ಎಂದು ಕೆಲಸಗಾರರು ಒಂದು ಅರ್ಜಿಯನ್ನು ಕಳೆದ ತಾ. 6ರಲ್ಲಿ ಮಾಲಕರಿಗೆ ಕೊಟ್ಟರೆಂದೂ, ಅದನ್ನು ಇತ್ಯರ್ಥಗೊಳಿಸುವ ಬದಲಾಗಿ ಮಾಲಕರು 125ಕ್ಕಿಂತ ಹೆಚ್ಚು ಹೊಸಬ ಕೆಲಸದವರನ್ನು ನೇಯ್ಗೆ ಕೆಲಸಗಾರರ ಮುಂದಾಳುಗಳು ಪ್ರಕಟಿಸಿ ಮೂಲಕ ತಿಳಿಸಿದ್ದಾರೆ. ನಿನ್ನೆ ಕೆಲವರು ಕಾರ್ಖಾನೆಯಿಂದ ಮೂಟೆಗಳನ್ನು ತರುತ್ತಿದ್ದಾಗ ಕೆಲ ಸಹಾಯಕರು ದಾರಿಗೆ ಅಡ್ಡವಾಗಿ ಮಲಗಿದರೆಂದೂ, ಅವರನ್ನು ಮೆಟ್ಟಿಕೊಂಡೇ ಮೂಟೆಗಳನ್ನು ಸಾಗಿಸಿದರೆಂದೂ ತಿಳಿದು ಬಂದಿದೆ. ಮಜೂರ ಸಂಘಗಳು ಮುಷ್ಕರಗಾರರಿಗೆ ಅಕ್ಕಿ ಮೊದಲಾದ ಸಹಾಯವನ್ನು ಒದಗಿಸುತ್ತಿವೆ. ಮುಂದೇನಾಗುತ್ತದೋ ನೋಡಬೇಕಾಗಿದೆ.

ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನ ಇದರ ನಿವಾಸಿಕರಾಗಿದ್ದವರು ಮತ್ತು ಇತರ ಮಹನೀಯರಿಗೂ ಕೂಡ ಈ ಮೂಲಕ ತಿಳಿಯಪಡಿಸುವದೇನೆಂದರೆ, ನಿಮ್ಮಲ್ಲಿರಬಹುದಾದ ಬಂಟರ ಯಾನೆ ನಾಡವರ ಸಂಘದ ಲೈಬ್ರರಿ ಪುಸ್ತಕಗಳನ್ನು ದಯವಿಟ್ಟು ಲೈಬ್ರರಿಗೇನೇ ರವಾನಿಸಿಕೊಡಬೇಕಾಗಿ ಸುಪರಿಂಟೆಂಡೆಂಟರಾದ ಶ್ರೀ. ಬಿ. ಆರ್. ಪೂಂಜರು ಅಪೇಕ್ಷಿಸುತ್ತಾರೆ.

ನಿಧನ— ಬೋಳೂರು ಶ್ರೀ ಬೀರಪ್ಪ ದೇವಸ್ಥಾನದ ಒಂದನೇ ಮೊಕ್ತೇಸರರೂ, ಸ್ಥಳೀಕ ಸಮ್ಮಾಲಿ ಸಮಾಜದ ಆಧ್ಯ ಮುಖಂಡರೂ, ಆದ ಟೆಲಿಗ್ರಾಫ್ ಪೆನ್ಶನರ್ ಶ್ರೀ. ಪಿ. ನಾರಾಯಣ ಪಿಳ್ಳೆಯವರು ಇದೇ ಕಳೆದ ತಾ. 29ನೇ ರಾತ್ರಿ ತನ್ನ ಅಸ್ವಂತ ವೃದ್ಧಾಪ್ಯದಲ್ಲಿ ದಿವಂಗತರಾದರೆಂದು ತಿಳಿಸಲು ವಿಷಾದವಾಗುತ್ತದೆ.

> **ಭಾರತೀ ಗ್ರಂಥಮಾಲೆಯ**
> **ಪುಸ್ತಕಗಳು.**
>
> ಬೆಳಕು (ಚಿಕ್ಕ ಕತೆಗಳ ಸಂಗ್ರಹ.)
> ತಿನಿಸು (ಕತೆ, ಕವನ, ಪ್ರಬಂಧಗಳ ಸಂಗ್ರಹ)
> ಪ್ರತೀಕಾರ (ನವಪೌರಾಣಿಕ ನಾಟಕ)
> ಲೋಪಾಮುದ್ರೆ (ಪೌರಾಣಿಕ ಕತೆ)
> ಚಿಗುರು (10 ಚಿಕ್ಕ ಕತೆಗಳ ಸಂಗ್ರಹ)
> ಪಂಚಾರತಿ (5 ಏಕಾಂಕ ನಾಟಕಗಳ ಸಂಗ್ರಹ)
> ಪ್ರತಿಯೊಂದರ ಬೆಲೆ ನಾಲ್ಕಾಣೆ ಮಾತ್ರ (ಅಂಚೆವೆಚ್ಚ ಪ್ರತಿ 1ಕ್ಕೆ 0-0-6 ಪ್ರತ್ಯೇಕ) ರೂ 1-8-0 ಕಳಿಸಿದರೆ ಆರು ಪುಸ್ತಕಗಳನ್ನು ಕಳಿಸಲಾಗುವುದು. (ಅಂಚೆವೆಚ್ಚ ಪುಕ್ಕಟೆ)
> ವ್ಯಾಪಾರಿಗಳಿಗೆ ಧಾರಾಳ ಕಮಿಶನ್.
> ಪ್ರತಿಗಳಿಗೆ ಬರೆಯಿರಿ:—
> ಮೆನೇಜರ್,
> **ನವಭಾರತ ಪುಸ್ತಕ ಭಂಡಾರ**
> **ಉಡುಪಿ**

ಉಡುಪಿ

ಯುದ್ಧ ಸಹಾಯಕ ಸಮಿತಿ— ಯುದ್ಧ ಸಹಾಯಕ ಸಭೆಯೊಂದು ತಾ. 12ನೇ ಸಂಜೆ ಮ್ಯುನಿಸಿಪಲ್ ಆಫೀಸಿನಲ್ಲಿ ಶ್ರೀ ಯು ಯಂ ಇಬ್ರಾಹಿಂ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿ, ಯುದ್ಧ ಫಂಡಿಗೆ ಸರ್ವರೂ ಸಹಾಯ ಮಾಡಬೇಕಾಗಿ ತಹಸೀಲ್ದಾರ್ ಶ್ರೀ ಗಣೇಶನವರು ವಿನಂತಿಸಿದರು. ಬೇರೆ ಬೇರೆ ಕಡೆಗಳಿಗೆ ಕಮಿಟಿ ಸದಸ್ಯರನ್ನು ಆರಿಸಲಾಯಿತು. (ವಿವರವು ವಿಳಂಬವಾಗಿ ತಲುಪಿದ್ದರಿಂದ ಅದನ್ನು ಪ್ರಕಟಿಸಲಾಗಲಿಲ್ಲ.)

ಈ ಮೊದಲು 'ನ್ಯೂ ಉಡುಪಿ ಟೆಕ್ನಿಕಲ್ ಸ್ಕೂಲ್' ಎಂದು ನಡೆಯುತ್ತಿದ್ದ ಕಮ್ಮಾರಿಕೆಯ ಶಾಲೆಯು ಇದೇ ತಾ, 15ರಿಂದ 'ಪಯನಿಯರ್ ಸ್ಕೂಲ್ ಒಫ್ ಕಾಮರ್ಸ್' ಎಂದು ತನ್ನ ಹೆಸರನ್ನು ಬದಲಾಯಿಸಿಕೊಂಡಿದೆ. ಈ ಶಾಲೆಯಲ್ಲಿ ಕೂಡಿದ ಮಹಾಸಭೆಯೊಂದು ತಾ 13ರಲ್ಲಿ ಶ್ರೀ. ಡಬ್ಲ್ಯು. ಎ. ಸುಬೇದಾರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಶ್ರೀ. ಎ. ಎಂ ಸಾಹೇಬರ ಭಾಷಣ, ಉಪಹಾರ, ಸಂಗೀತಗಳಾದುವು.

ಇದೇ ಕಳೆದ ಜನವರಿ ತಿಂಗಳಲ್ಲಿ ಉಡುಪಿಯಲ್ಲಿ ಜರುಗಿದ ವಿದ್ಯಾಶಿಕ್ಷಣ ಪ್ರದರ್ಶನದ ಸಂದರ್ಭದಲ್ಲಿ, ಪ್ರದರ್ಶನದ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿ ಆರಿಸಲ್ಪಟ್ಟಿದ್ದ, ಉಡುಪಿ ಗವರ್ನಮೆಂಟ್ ಟ್ರೈನಿಂಗ್ ಶಾಲೆಯ ಮುಖ್ಯೋಪಾಧ್ಯಾಯಿನಿ, ಶ್ರೀಮತಿ ಮನೋರಮಾಬಾಯಿ ಬಿ. ಎ. ಎಲ್. ಟಿ. ಮತ್ತು ಇದೇ ಶಾಲೆಯ ಸಹಾಧ್ಯಾಪಿಕೆ, ಶ್ರೀಮತಿ ವೆಂಕಮ್ಮ ಎಂಬಿವರುಗಳು ಮಹಿಳೆಯರೂ ತಮ್ಮ ಸದಸ್ಯತನಕ್ಕೆ 'ರಾಜಿನಾಮೆ'ಯಿತ್ತಿದ್ದರೂ ಅವರುಗಳ ಹೆಸರುಗಳು ತಪ್ಪಾಗಿ ಪ್ರದರ್ಶನದ ವರದಿಯಲ್ಲಿ ಬಂದಿರುವುದಕ್ಕಾಗಿ ವಿಷಾದಿಸುತ್ತೇವೆ ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ನೆರೆ— ಈ ವಾರದಲ್ಲಿ ವಿಪರೀತ ಮಳೆಬಂದಿದ್ದು ಅಲ್ಲಲ್ಲಿ ನೆರೆಯುಂಟಾಗಿದೆ.

ಬೊಂಬಾಯಿ ಚಂದಾದಾರರಲ್ಲಿ ವಿನಂತಿ.

ನಮ್ಮ ಬೊಂಬಾಯಿ ಪ್ರತಿನಿಧಿಗಳಾಗಿದ್ದ ಶ್ರೀ. ಯು ಕೆ ರಂಗ ಇವರನ್ನು ಈ ತಿಂಗಳಿಂದ ಪ್ರಾತಿನಿಧ್ಯದಿಂದ ತೆಗೆದು ಹಾಕಲಾಗಿದೆ. ಅವರೊಡನೆ ಯಾರೂ ಚಂದಾ ಹಣ ಕೊಡಬೇಕಾಗಿಲ್ಲ. ಅವರಿಗೇನೇ ಕಳಿಸಬೇಕಾಗಿ ಈ ಮೂಲಕ ಅಪೇಕ್ಷಿಸಲಾಗುತ್ತದೆ. 'ನವಯುಗ'ಕ್ಕೆ ಸಂಬಂಧಿಸಿದ ಯಾವ ವ್ಯವಹಾರವನ್ನಾದರೂ ಅವರೊಡನೆ ಮಾಡಿದರೆ ನಾವು ಹೊಣೆಯಲ್ಲವೆಂದೂ ಜಾಹೀರು ಮಾಡಲಾಗಿದೆ

ಮೆನೇಜರ್

ONE REASON.

Love does much, but in this materialistic world, money does more. Save therefore for the sake of those you love.

RESOURCES OF A CRORE. } LSTD. 1906. **Canara Bank Limited.**

ದಕ್ಷಿಣ ಕನ್ನಡ

ಬೆಳ್ತಂಗಡಿ— ಕಳೆದ 30 ವರ್ಷಗಳಿಂದ ಸಮೆಯುತ್ತ ಬರುತ್ತಿರುವ ಶ್ರೀ ವರ್ಗ ಹಾಯರ್ ಎಲಿಮೆಂಟರಿ ಶಾಲೆಯು ಮಂಜೂರಾತಿ ರದ್ದಾಗಿದ್ದರಿಂದಲೂ ಶ್ರೀ. ಕೆ. ನಾರಾಯಣರಾಯರು ಮೆನೇಜ್‌ಮೆಂಟ್ ಬಿಟ್ಟದ್ದರಿಂದಲೂ ಕೆಲವರು ಪ್ರಯತ್ನಿಸಿದ ಪರ್ಯವಸಾನವು ಶೂನ್ಯವಾಗಿರುತ್ತದೆ. ಶಾಲೆಯ ಯೋಗ್ಯ ಶಿಕ್ಷಕರಿಂದೊಡಗೂಡಿ ಯ ಧಾರ್ಮಿಕರ ನಡೆಯುತ್ತಿದೆಯೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಈ ಜಿಲ್ಲಾ ಮಂಡಳದಲ್ಲಿ ತೆರೆಯಲ್ಪಟ್ಟ ಹರಿಜನ ಹಾಸ್ಟೆಲು ಕಟ್ಟಿಯ ಪ್ರಯೋಜನವನ್ನು ವಿದ್ಯಾರ್ಥಿಗಳೂ ಮ ದಾನಿಗಳೂ ಹೊಂದುತ್ತಿರುತ್ತಾರೆ.

ಶಿರಸಾಲು— ಮಲೇರಿಯಾ ಮೊದಲಾದ ಜ್ವರ ರೋಗಗಳಿಂದ ನರಳುತ್ತಿರುವ ಸಮಾಜ ಹತ್ತಿರದಲ್ಲಿ ಯಾವುದೂ ಆಸ್ಪತ್ರೆ ಇಲ್ಲದ ಪ್ರದೇಶದ ಜನರು, ಈ ಕೇಂದ್ರ ಸ್ಥಳದಲ್ಲಿ ಒಂದು ರೂರಲ್ ಡಿಸ್ಪೆನ್ಸರಿಯಿಲ್ಲದೆ ಬಹಳ ಸಂಕಷ್ಟಕ್ಕೀಡಾಗಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳೂ ಜನಪ್ರಿಯರಾದ ಡಿ. ಬೋ. ಪ್ರೆಸಿಡೆಂಟರೂ ಈ ವಿಷಯದ ತಮ್ಮ ಉದಾರ ಗಮನವನ್ನು ಕೊಟ್ಟು ಜನಸಮೂಹಕ್ಕೆ ಸಂಕಷ್ಟವನ್ನು ಪರಿಹರಿಸುವ ಮುಕ್ಕಾಗಬೇಕಾದದನ್ನು ಮಾಡಲಾಗಿದೆ.

ಪ್ರೇಮ ವಿದ್ಯಾಪೀಠ ವಿದ್ಯಾರ್ಥಿ ಸಂಘ— ಮೊನ್ನೆ ಬುಧವಾರದ ದಿನ ಪ್ರೇಮ ವಿದ್ಯಾಪೀಠದ ಹಳೆಯ ವಿದ್ಯಾರ್ಥಿಗಳೂ ಹಿತೈಷಿಗಳೂ ಬೆಂಗಳೂರು ಬಸವನ ಗುಡಿಯಲ್ಲಿ ಪಂಡಿತ ತಾರಾನಾಥರ ಮನೆಯಲ್ಲಿ ಪಂಡಿತರ ಆರನೆ ತಾನೆಯ ಜನ್ಮ ದಿನೋತ್ಸವವನ್ನು ನೆರವೇರಿಸಿದರು. ಆಗ ಅವರಿಗೆ ಸಾವಿರ ಮಾನ್ಯ ಸನ್ಮಾನ ಸಲ್ಲಿಸಲಾಯಿತು. ಅವತ್ತು ಸಾಯಂಕಾಲ ಸೆಂಟ್ರಲ್ ಕಾಲೇಜಿನ ಗಣಿತ ಶಾಸ್ತ್ರಾಧ್ಯಾಪಕರಾದ ಪ್ರೊ. ಕೆ ಪ್ರಸನ್ನಾಚಾರ್ಯರು ಶ್ರೀ. ಪಂಚಾಕ್ಷರಿ ಗವಾಯಿ ಅವರ ಶಿಷ್ಯರಾದ ಶ್ರೀ. ಬಸವರಾಜ ಅವರ ಸಂಗೀತ ಕಚೇರಿಯನ್ನು ಏರ್ಪಡಿಸಿದ್ದರು. ಮಾರನೆಯ ದಿನ ಸಂಜೆ ಪ್ರೇಮ ವಿದ್ಯಾಪೀಠದ ವಿದ್ಯಾರ್ಥಿಗಳಿಗಾಗಿ ಒಂದು ಸಂತೋಷ ಕೂಟವನ್ನೇರ್ಪಡಿಸಿದ್ದರು. ಆ ಕೂಟವಾದ ಬಳಿಕ ಪಂಡಿತರು ಈ ವರ್ಷ ಪ್ರವೇಶದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರಿಕೆಗಳನ್ನು ಕೊಟ್ಟರು.

ಮೈಸೂರು

ಅಡಕೆಯ ಸಿಪ್ಪೆಯಿಂದ ಕಾಗದದ ತಯಾರಿ— ತೀರ್ಥಹಳ್ಳಿಯಲ್ಲಿ ಸ್ಥಾಪಿತವಾಗಿರುವ ಅಡಿಕೆ ವ್ಯಾಪಾರದ ಸಹಕಾರ ಸಂಘದವರು ಕಾಗದದ ತಯಾರಿಗೆ ಮುಖ್ಯವಾದ ಕಚ್ಚಾ ಸಾಮಗ್ರಿಯೊಂದನ್ನು ಕಂಡುಹಿಡಿದಿದ್ದಾರೆ. ಮೇಲ್ಕಂಡ ಸಂಘದವರ ಕೋರಿಕೆಯ ಮೇರೆಗೆ ಮೈಸೂರು ಕಾಗದದ ಕಾರ್ಖಾನೆಯವರು ಅಡಿಕೆಯ ಸಿಪ್ಪೆಯಿಂದ ಕಾಗದವನ್ನು ತಯಾರಿಸಲು ಸಾಧ್ಯವೇ ಎಂಬುದನ್ನು ಪರೀಕ್ಷಿಸಿದರು. ಉತ್ತಮವಾದ ಫಲಿತಾಂಶಗಳು ಕಂಡುಬಂದಿವೆ. ಉತ್ತಮ ತರದ ಕಾಗದವನ್ನು ಅಡಿಕೆಯ ಸಿಪ್ಪೆಯಿಂದ ತಯಾರುಮಾಡಿವೆ.

ಮೇಲ್ಕಂಡ ಸಂಘವು ಕಳೆದ ಡಿಸೆಂಬರು ತಿಂಗಳಲ್ಲಿ ರೂ. ಒಂದು ಲಕ್ಷ ಅಧಿಕೃತ ಬಂಡವಾಳದಿಂದ ಪ್ರಾರಂಭವಾಯಿತು. ಶಿವಮೊಗ್ಗ ಜಿಲ್ಲೆಯ ಡೆಪ್ಯುಟಿ ಕಮಿಶನರವರು ಈ ಸಂಘಕ್ಕೆ ಅಧಿಕಾರ ಪ್ರಯುಕ್ತ ಅಧ್ಯಕ್ಷರಾಗಿರುತ್ತಾರೆ. ಸಂಘದ ಸಿಬ್ಬಂದಿ, ಸಾದಿಲ್ವಾರ್ ಮೊದಲಾದ ವೆಚ್ಚಕ್ಕಾಗಿ ಎರಡು ವರ್ಷಗಳ ವರೆಗೂ ಸರಕಾರದವರು ವರ್ಷವೊಂದಕ್ಕೆ 3,000 ರೂಪಾಯಿ ಗಳಂತೆ ಹಣವನ್ನು ಮಂಜೂರುಮಾಡಿದ್ದಾರೆ. ಸಂಘದವರಿಗೆ ಸದಸ್ಯರಿಂದ 24,480ಮಣ ಅಡಿಕೆಯು ಬಂದಿದೆ. ಒಳ್ಳೆಯ ಮಾರ್ಕೆಟಿಲ್ಲದ ಅದು ಮಾರಾಟವಾಗದೆ, ಇನ್ನು 3,283ಮಣ ಅಡಿಕೆಯು ಬಾಕಿಯಾಗಿದೆ. ಅಡಿಕೆಯ ಆಧಾರದ ಮೇಲೆ ಸದಸ್ಯರಿಗೆ 31,355 ರೂಪಾಯಿಗಳ ಸಾಲವನ್ನು ಕೊಟ್ಟಿದೆ. ವ್ಯವಸಾಯ ಇಲಾಖೆಯ ಸಹಾಯದಿಂದ, ಈ ಸಂಘದವರು ಸದಸ್ಯರಿಗೆ ಅಡಿಕೆ ಮರಗಳಿಗೆ ಎರಚುವ ಕ್ರಿಮಿನಾಶಕ ಸಾಮಗ್ರಿಗಳನ್ನು ಒದಗಿಸುತ್ತಲೂ ಇದ್ದಾರೆ.

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ಉಡುಪಿ, ಗುರುವಾರ ತಾ. ೧೮-೭-'೪೦

ನಾಜೀ—ಫೇಸಿಸ್ಟರ ಹಂಚಿಕೆ

ಫ್ರಾನ್ಸಿನ ಪರಾಭವವಾದಂದಿನಿಂದ ಯುದ್ಧ ಸ್ಥಿತಿಯು ಪೋಲೆಂಡು ಪತನಾನಂತರದ ರೀತಿಗೆ ಬಂದಿದೆ. ಪೋಲೆಂದನ್ನು ನುಂಗಿದ ನಂತರ ಕೆಲವು ತಿಂಗಳುಗಳ ತನಕ ನಾಜೀ ಸೈನ್ಯಗಳು ನಿಂತಲ್ಲೇ ನಿಂತು ಹಲವು ವಿಧದ ಊಹಾಪೋಹಗಳಿಗವಕಾಶ ಕೊಟ್ಟಿದ್ದವು ಒಮ್ಮೆಗೇ ನೋರ್ವೆಯ ಮೇಲೆ ಕಾಲಿಟ್ಟ ನಾಜೀ ಯಮದಂಡು, ಅಲ್ಲಿಂದ ಹೊಲ್ಲೆಂಡು, ಬೆಲ್ಜಿಯಮು, ಲಕ್ಸೆಂಬರ್ಗಗಳನ್ನು ನುಂಗಿ ಫ್ರಾನ್ಸಿನ ಕೊರಳಿಗೂ ಪಾಶ ಸಿಕ್ಕಿಸಿ ಈಗ ಪುನಃ ಸ್ತಬ್ಧವಾಗಿದೆ. ಮುಂದಿನ ಕಾರ್ಯವೂ ಕಠಿಣವಿದೆ. ಭವಿಷ್ಯದ ನಿರ್ಧಾರವನ್ನು ಕೂಡ ಲಘು ಹೃದಯದಿಂದ ಮಾಡಲು ಸಾಧ್ಯವಿಲ್ಲವೆಂಬುದು ಹಿಟ್ಲರರಿಗೆ ಗೊತ್ತು. ಆದರೆ ಈತನಕ ಪರಾಭವವನ್ನರಿಯದ ಜರ್ಮನಿ ತನ್ನ ತಾಂಡವ ನೃತ್ಯಕ್ಕೊಂದು ವಿರಾಮಕೊಟ್ಟಿತೆಂದು ಭಾವಿಸುವುದು ಪ್ರಮಾದವೇ ಸರಿ. ಸದ್ಯ ಸ್ಥಿತಿಯಲ್ಲಿ, ಹಿಟ್ಲರನು ತಡೆದು ನಿಂತು ದೀರ್ಘಾಲೋಚನೆಗೆ ತೊಡಗಿದನೆಂದೊಡನೆ, ಲೋಕವೂ ಎಚ್ಚೆತ್ತು ಯೋಚಿಸಿಕೊಳ್ಳಬೇಕಾಗಿದೆ. ಇಂಗ್ಲಾಂಡಿನ ಮೇಲೆ ಈಗ ನಡೆಯುತ್ತಿರುವ ಚಿಲ್ಲರೆ ವಿಮಾನ ಧಾಳಿಗಳು, ವಾರಕ್ಕೊಂದು ರಾಷ್ಟ್ರವಂತೆ ಬಕಾಸುರ ಬಲಿ ತೆಗೆದುಕೊಂಡ ನಾಜೀ ಸೇನೆಯ ಸರ್ವಶಕ್ತಿಯ ಪ್ರಯೋಗವೆನ್ನಿಸಲಾರವು. ಹಾಗಾದರೆ ಮುಂದೇನು ಸಂಭವಿಸಲಿದೆ? ಎಂಬ ಪ್ರಶ್ನೆ. ಇಡೀ ಇಂಗ್ಲಾಂಡು 'ಹೊಸ್ನ ಕಾಲ' ವನ್ನು ಎದಿರು ನೋಡುತ್ತಾ ಕೊನೆ ತನಕ ಪ್ರತಿಭಟಿಸುವ ದೃಢ ನಿರ್ಧಾರದಿಂದ ಸರ್ವಸಿದ್ಧತೆಯಿಂದ ನಿಂತಿದೆ. ಅಯಿರ್ಲೆಂಡಿನ ಮೇಲೆ ಬೀಳುತ್ತಿರುವ ಬಿಸಿವಾತದಿಂದ ಅದು ಇಷ್ಟರಲ್ಲೇ ಕಾವೇರಿದೆ. ಅಂತೂ ಸದ್ಯದಲ್ಲೇ ಲೋಕವು ಈ ವರೆಗೆ ಕಂಡರಿಯದ ಭೀಕರ ಯುದ್ಧವನ್ನು ಕಾಣಲಿದೆ ಎಂಬುದು ಸ್ಪಷ್ಟ.

ಇಂಥ ಅರ್ಧವಿರಾಮಕಾಲದಲ್ಲಿ ನಾಜೀ ಫೇಸಿಸ್ಟರು ಮುಂದಿನ ಪ್ರಯೋಗಕ್ಕೆ ಸುದೃಢವಾದ ಅಸ್ತಿವಾರವನ್ನು ಹಾಕಿ ಕೊಳ್ಳುತ್ತಿದ್ದಾರೆ ಎಂದೂಹಿಸಲೆಡೆಯಿದೆ. ಫ್ರಾನ್ಸಿನ ಮೇಲೆ ಬಿದ್ದ ನಾಜೀ ಹೊಡೆತದೊಡನೆ ನಾಜೀ ಮೋಹರು ಕೂಡ ಬಿತ್ತೆನ್ನಬಹುದು. ಮಾರ್ಶಲ್ ಪೆಟೈನರು ಫ್ರಾನ್ಸಿನ ಸರ್ವಾಧಿಕಾರಿಯಾಗಿ ಬಹುತೇಕ ಫೇಸಿಸ್ಟ ಪದ್ಧತಿಯನ್ನು ಹೋಲುವ ಹೊಸ ರಾಜ್ಯಭಾರವನ್ನೇ ಜಾರಿಗೆ ತಂದಿದ್ದಾರೆ ಇದರಿಂದ ಜರ್ಮನಿ ಫ್ರಾನ್ಸುಗಳು ಸಮಾಧಾನಗೊಳ್ಳದಿರುವದಷ್ಟೇ ಅಲ್ಲ, ಸಂದೇಹಗೊಂಡಿವೆ. ಈ ಸಂದೇಹ ಸೂಚಿಸುವದರೊಡನೆ, ಯುರೋಪಿಗೆ ತಾವು ಕೊಡಲಿರುವ ಬಣ್ಣವಾವುದೆಂಬುದನ್ನೂ ತಿಳಿಸಿವೆ. "ತುಂಡು ತುಕ್ಕಡಿಗಳಾಗಿ ವಿಂಗಡಿಸಲು ಸಾಧ್ಯವಿಲ್ಲದಷ್ಟು ಯೂರೋಪು ಸಣ್ಣದಿದೆ" ಎಂದು ನಾಜೀ ಪತ್ರಿಕೆಗಳ ಮಾತು. "ಫೇಸಿಸಮ್ ಮತ್ತು ರಾಷ್ಟ್ರೀಯ ಸಮತಾವಾದದ ಏಕ ನಿಲಯವನ್ನು ರಚಿಸುವದೇ ನಮ್ಮ ಧ್ಯೇಯ" ಎಂದು ಇಟಲಿ ಪತ್ರಿಕೆಗಳನ್ನುತ್ತಿವೆ. ಸರ್ವಾಧಿಕಾರೀ ಸರಕಾರಗಳು ಇತ್ತೀಚೆಗೆ ಇಂಗ್ಲಾಂಡು ಯುದ್ಧಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟಂತೆ ಕಂಡುಬರುವದಿಲ್ಲ ಯುರೋಪಿನ ಭವಿಷ್ಯ ರೂಪಿಸುವ ಕಡೆಗೆ ಕಾಟ್ಟ ಲಕ್ಷ್ಯವನ್ನು ಬಾಕಿಯಿರುವ ಬ್ರಿಟನ್ ಯುದ್ಧಕ್ಕೆ ಕೊಟ್ಟಿಲ್ಲ. "ಇಂಗ್ಲಾಂಡು ಧ್ವಂಸವಾಗುವದು ಕೆಲವು ವಾರಗಳೊಳಗಿನ ಮಾತು." ಎನ್ನುತ್ತಿವೆ ಇಟಲಿ ಪತ್ರಿಕೆಗಳು. ಸದ್ಯ ಸ್ಥಿತಿಯಲ್ಲಿ ಸರ್ವಾಧಿಕಾರಿಗಳು ಇಡೀ ಯುರೋಪನ್ನು ಸಮುಷ್ಟಕ್ಕೆ ತಂದು ತಮ್ಮಾಟದ ರಂಗವಾಗಿ ಮಾಡಿಕೊಳ್ಳುವ ಮಹತ್ತಾದ ಹಂಚಿಕೆಯಲ್ಲಿರುವರೆಂಬುದು ಸ್ವತಃ ಸಿದ್ಧ.

ಸರ್ವಾಧಿಕಾರಿಗಳ ಗುರಿಯು ಇಂತಹದೇ ಎಂಬುದು ಊಹಿಸಲ್ಪಟ್ಟಿತ್ತು. ಆದರೆ ಹಿಟ್ಲರನಾಗಲಿ|ಮುಸಲಿನಿಯಾಗಲೀ,ನಿಕ್ಕ ರಾಷ್ಟ್ರಗಳಿಗೆ ಬಾಳುವ ಹಕ್ಕಿಲ್ಲವೆಂದು ಹೇಳಿದ್ದಿಲ್ಲ. ತಮಗಾಗಿರುವ ಅನ್ಯಾಯವನ್ನು ನಿವಾರಿಸಿಕೊಳ್ಳುವದಷ್ಟೇ ತಮ್ಮ ಉದ್ದೇಶವೆಂದು ಹೇಳಿದ್ದರು. ಇಂದು ಸರ್ವಾಧಿಕಾರಿಗಳ ಬಾಯಿಂದ ಬರುತ್ತಿರುವ ಇಡೀ ಯುರೋಪನ್ನಾಳುವ ಮಾತನ್ನು ಇವರ ಪರವಾಗಿ ರಾಜಕಾರಣಿಗಳು ಹಲವರು ಈ ಮೊದಲೇ ಹೇಳಿ ಅದೊಂದೇ ನಾಜಿಗಳ ಉದ್ದೇಶವೆಂಬ ಎಚ್ಚರಿಕೆ ಕೊಟ್ಟಿದ್ದರು. ಕಾಲಸ್ಥಿತಿಯು ಅನುಕೂಲವಾಯಿತು. ಈಗ ನಾಜಿಗಳು ತಾವಾಗಿ ಹೃದಯ ಬಿಚ್ಚಿ ಮಾತನಾಡುತ್ತಿದ್ದಾರೆ. ಯುರೋಪು ಪರಿಹಂಚಾಗಿರಬಾರದು. ನಾಜೀ ಆಳ್ವಿಕೆಯ ಕೆಳಗೆ ಹೆಮ್ಮೆಯಿಂದ ಬಾಳಬೇಕು, ಅದೊಂದೇ ಕ್ಷೇಮದಾಯಕವಾಗುದು, ಎಂದು ಕಂಠೋಕ್ತವಾಗಿ ಹೇಳಹತ್ತಿದ್ದಾರೆ. ನಾಜೀ ವಿಜಯವೆಂದರೆ ಪ್ರಜಾಸಂಚಕನಾಗರಿಕತೆಯು ಸರ್ವ ಸಮಾನ ಸ್ವಾತಂತ್ರ್ಯದ ಕೊಲೆಯೆಂಬ ಕುರಿತು ಇಂದು ಬೇರೆ ಮಾತನಾಡುವವರೇ ಇಲ್ಲ. ನಾಜಿಗಳೇ ಅದನ್ನೊಪ್ಪಿಕೊಂಡಿರುವದರಿಂದ ಆ ಅಭಿಪ್ರಾಯಕ್ಕೀಗ ವಿರೋಧವಿಲ್ಲ. ಇಂದು ಭಿನ್ನಾಭಿಪ್ರಾಯವಿರುವದು ಅದರ ಸಾಧ್ಯತೆಯ ಮಟ್ಟಿಗೆ ಮಾತ್ರ.

ಈ ಪರಿಸ್ಥಿತಿಯನ್ನು ಸ್ವಾಗತಿಸಲು ಯುರೋಪು ಸಿದ್ಧವಿರುವದೆ? ತುರುವಾಕಾಡಲಾಗದಂತೆ ಕೈಬಾಯಿ ಬಂಧಿಸಲ್ಪಟ್ಟ ಚಿಕ್ಕ ಸಣ್ಣ ರಾಷ್ಟ್ರಗಳು ಇಷ್ಟರಲ್ಲೇ ಮೂಲೆ ಪಾಲಾಗಿವೆ. ಯುರೋಪಿಗೆ ಈ ರಾಕ್ಷಸ ಸ್ಪರ್ಶವಾಗಲು ಬಿಡಕೂಡದೆಂಬ ಶಪಥದೊಡನೆ ಇದಿರುಬಿದ್ದ ಫ್ರಾನ್ಸು ಮುಗ್ಗರಿಸಿ ಬಿತ್ತು. ಈಗ ಎಲ್ಲದ ಅರಿಗಳ ಕೇಂದ್ರ ಸ್ಥಾನ ಇಂಗ್ಲಾಂಡೊಂದೇ. ಬ್ರಿಟಿಶ್ ಪ್ರಧಾನರಂದಿರುವಂತೆ ಲೋಕದ ನಾಗರಿಕತೆಯ ಏಕಮಾತ್ರ ರಕ್ಷಕನೆಂದರೆ ಪ್ರಸ್ತುತ ಬ್ರಿಟನೊಂದೇ. ಯುದ್ಧಾರಂಭದಲ್ಲಿ ಹಿಟ್ಲರನು ಸಣ್ಣ ರಾಷ್ಟ್ರಗಳ ಸ್ವಾತಂತ್ರ್ಯ ಹಾನಿಯಾಗುವನೆಂಬ ಸವಿಗನಸುಗಳನ್ನು ಕಾಣುತ್ತಿದ್ದವರು ಹಲವರಿದ್ದರು ಹಿಟ್ಲರನಲ್ಲಿ ಸೌಜನ್ಯವನ್ನು ತಾವಾಗಿ ಆವಾಹನೆ ಮಾಡಿದವರು ಈಗ ಕಣ್ಣು ತೆರೆಯದಿರಲಾರರು. ಫ್ರಾನ್ಸಿನ ಹೊಸ ರಾಜ್ಯರಚನೆಯಿಂದ ತೀವ್ರ ನಿರಾಶೆಗೊಂಡ ಅಮೇರಿಕವು ಮುಂದಿನ ಭವಿಷ್ಯವೆಷ್ಟು ಅಂಧಕಾರಮಯವಾಗಿದೆ ಎಂಬುದನ್ನು ತಿಳಿಯದಿರದು. ಇಟಲಿ–ಜರ್ಮನಿಗಳ ಛತ್ರದ ಕರಿಛಾಯೆಯ ಡಿಯಲ್ಲಿ ಇಡೀ ಯುರೋಪು ಮಂಕಾಗಿ ಬಿದ್ದುಕೊಂಡಿರುವದು ರಶ್ಯಕ್ಕಂತೂ ಕ್ಷೇಮದಾಯಕವಲ್ಲ. ಯುದ್ಧದ ಕೊನೆಯ ಅಂಕವು ಸಮೀಪಿಸುತ್ತಿದ್ದಂತೆ, ಭವಿಷ್ಯದ ಗಾಢಾಂಧಕಾರವೂ ಗೋಚರಿಸಹತ್ತಿದೆ. ಪ್ರಜಾ ಪ್ರಭುತ್ವವಾದಿಗಳ್, ರಾಷ್ಟ್ರಸ್ವಾತಂತ್ರ್ಯ ಮತ್ತು ನಾಗರಿಕತೆಯ ಭಕ್ತರು ಈ ಅಪಾಯವನ್ನು ಅಲಕ್ಷ್ಯಿಸಲು ಸಾಧ್ಯವಿದೆಯೆ?

ಆಧಾರವಿಲ್ಲದ ಕಳವಳ

ಭಾರತವು ಹಲವು ದೊಡ್ಡ ಪಟ್ಟಣಗಳಲ್ಲಿ ಕರೆನ್ಸಿ ನೋಟುಗಳ ಬದಲು ಬೆಳ್ಳಿ ರೂಪಾಯಿಗಳನ್ನು ಪಡೆಯುವ ಅನಗತ್ಯ ಆತುರವು ಗೊಂದಲಕ್ಕೆ ಕಾರಣವಾಗಿದೆ. ರೂಢಮೂಲವಾಗಿದ್ದ ಪರಿಸ್ಥಿತಿಯು ಥಟ್ಟನೆ ಬದಲಾಗುವಾಗ ವಸ್ತುಸ್ಥಿತಿಯ ಸೂಕ್ಷ್ಮ ಜ್ಞಾನವಿಲ್ಲದವರು ತಬ್ಬಿಬ್ಬಾಗುವದು ಸ್ವಾಭಾವಿಕ. ಅಪರಿಚಿತ ವಾತಾವರಣವು ಪ್ರಥಮತಃ ಭಯ ಸಂದೇಹಗಳಿಗೆಡೆಕೊಡುತ್ತದೆ. ಆದರೆ ಅದರ ಗೂಢವನ್ನರಿಯದೆ ತಬ್ಬಿಬ್ಬಾಗುವವರು ತಮಗೂ ಸಮಾಜಕ್ಕೂ ಅನ್ಯಾಯವನ್ನೇ ಸಾಧಿಸುತ್ತಾರೆ. ಇಂದು ರೂಪಾಯಿ ನಾಣ್ಯಗಳನ್ನು ಸಂಗ್ರಹಿಸಲು ಹಡಪಡಿಸುವವರು ಇಂತಹ ಅಪರಾಧಗಳನ್ನು ಮಾಡುತ್ತಿರುವರೆನ್ನಬಹುದು. ಅವರ ಹೆದರಿಕೆಗಾವ ಅಸ್ತಿವಾರವೂ ಇಲ್ಲ. ಕರೆನ್ಸಿ ನೋಟುಗಳು ಎಂದಾದರೊಮ್ಮೆ ಬೆಲೆಬಾಳದೆ ಹೋಗುವವೆಂಬುದು ಇವರ ಹೆದರಿಕೆಯಾಗಿದ್ದಲ್ಲಿ ಅವರು ಬೆಳ್ಳಿ ನಾಣ್ಯಗಳಲ್ಲಿ ವಿಶ್ವಾಸವಿಡಬಹುದರೂ ಹೇಗೆ? ಅದೂ ಕಾಗದದ ಬದಲು ಬೆಳ್ಳಿಯಲ್ಲಿ ಅಚ್ಚುಹಾಕಲ್ಪಟ್ಟ ನೋಟೇ ಅಲ್ಲವೆ? ಹಾಗಿದ್ದ ಮೇಲೆ ಸಂಗ್ರಹಕ್ಕನುಕೂಲವಾದ ಕರೆನ್ಸಿ ನೋಟುಗಳ ಬದಲು ನಾಣ್ಯವನ್ನೇಕೆ ಅಪೇಕ್ಷಿಸಬೇಕು? ಸಂದೇಹಕ್ಕಾಸ್ಪದ ಕೊಟ್ಟ ಕೃತಕ ಆಧಾರವು ಕಾಗದ ಮತ್ತು ಲೋಹಗಳಲ್ಲಿ ವ್ಯತ್ಯಾಸವನ್ನೇನೂ ಕಾಣಲಾರದು? ನೋಟುಗಳ ಬದಲು ನಾಣ್ಯ ದೊರೆಯಲಾರದೆಂಬ ಬೆದರಿಕೆ ಸದ್ಯಕ್ಕಾಗಲೀ, ಮುಂದಕ್ಕಾಗಲೀ ಸರ್ವಥಾ ಇಲ್ಲ. ಸರಕಾರವು ರೂಪಾಯಿ ಬೇಡಿಕೆಗಳನ್ನೆಲ್ಲಾ ಪೂರೈಸುವಷ್ಟು ಬೆಳ್ಳಿಯನ್ನು ಸಂಗ್ರಹಿಸಿಟ್ಟುಕೊಂಡಿದೆ. ಈಗ ಬಂದಿರುವ ಸಂಕಷ್ಟವು ನಾಣ್ಯಪೂರೈಸಲು ಸಾಧ್ಯವಿಲ್ಲಮದಲ್ಲ; ಕೋಟಿಗಟ್ಟಲೆ ಬೆಳ್ಳಿ ನಾಣ್ಯಗಳು ಖಾಸಗಿಯಲ್ಲಿ ದಾಸ್ತಾನಾಗಿ ಹೋದರೆ ವ್ಯವಹಾರ ವಿನಿಮಯಕ್ಕೊದಗಲಿರುವ ತಡೆಯೇ ಸದ್ಯದ ಪ್ರಶ್ನೆ. ಮುಂದೆ ಸಿಗುವ ನಾಣ್ಯವಾದರೇನು, ಕರೆನ್ಸಿ ನೋಟಾದರೇನು–ಅವುಗಳೊಳಗೆ ವ್ಯತ್ಯಾಸವಿಲ್ಲವಷ್ಟೆ? ಎಂಬ ಪ್ರಶ್ನೆ ಬರಬಹುದು. ವ್ಯತ್ಯಾಸವೇನೆಂದರೆ ರೂಪಾಯಿ ನಾಣ್ಯಗಳು ಕೋಟಿ ಸಂಖ್ಯೆಯಲ್ಲಿ ಒಳಗಿದ್ದುಬಿಟ್ಟರೆ ಸಣ್ಣ ಸಣ್ಣ ವಿನಿಮಯ ವ್ಯವಹಾರಗಳಿಗೆ ತೊಡಕಾಗುವದೊಂದೇ. ಅದಕ್ಕಾಗಿ ಒಂದು ರೂಪಾಯಿಯ ಮತ್ತು ಎರಡೂವರೆ ರೂಪಾಯಿಯ ನೋಟುಗಳನ್ನು ತಯಾರಿಸಬೇಕೆಂಬ ಸೂಚನೆ ಬಂದಿತ್ತು. ಕಳೆದ ಮಹಾ ಯುದ್ಧದ ಬಿಕ್ಕಟ್ಟಿನ ಸಮಯದಲ್ಲಿ ಈ ನೋಟುಗಳು ಜಾರಿಯಲ್ಲಿದ್ದವು ಅಂದಿನ ಅನುಭವವು ಇದಕ್ಕನುಕೂಲವಾಗಿಲ್ಲ ನೇರವಾಗಿ ಇಂದಿನ ವಾತಾವರಣದಲ್ಲಿ ಇಂತಹ ನೋಟುಗಳಿಂದ ಮತ್ತಷ್ಟು ಕೆಡುಕಾಗಬಹುದು. ವಸ್ತುಸ್ಥಿತಿಯು ಹಾಗಿಲ್ಲವಾದರೂ ಕರೆನ್ಸಿ ನೋಟುಗಳಿಗೆ ಪ್ರತಿಯಾಗಿ ಸಾಕಷ್ಟು ಬೆಳ್ಳಿಯ ಸಂಗ್ರಹವಿಲ್ಲವೆಂಬ ಅನುಮಾನವುಂಟಾಗಲು ಎಡೆದೊರೆಯಬಹುದು. ತನ್ನ ಖಾಸಗಿ ಅಥವಾ ಉದ್ಯೋಗಾನುಕೂಲತೆಗಲ್ಲದೆ ವೃಥಾ ನೋಟಿನಬದಲು ನಾಣ್ಯ ಕೇಳುವದು ರಿಝರ್ವ್ ಬ್ಯಾಂಕ್ ಓಫ್ ಇಂಡಿಯಾ ಕಾನೂನಿನಂತೆ ಅಪರಾಧವಾಗುವದೆಂದು ಸರಕಾರವು ಸಾರಿದೆ ಸಣ್ಣ ಪುಟ್ಟ ವ್ಯವಹಾರಕ್ಕನುಕೂಲವಾಗುವಂತೆ ಹೀಗೆ ಮಾಡಿದುದು ನ್ಯಾಯವೇ ಇದೆ. ಬೊಂಬಾಯಿಯ ಅನಧಿಕಾರೀ ಮಾರ್ಕೆಟೊಂದರಲ್ಲಿ ಜನರೆಲ್ಲರೂ ನೋಟುಗಳನ್ನೇ ಹಿಡಿದುಕೊಂಡು ಬಂದು ಅದನ್ನು ಮಾರುವ ಮತ್ತು ತೆಗೆದು ಕೊಳ್ಳುವ ಮಹಾಟನ್ನು ಡಿಸ್ಕೌಂಟಿಟ್ಟು ನಡೆಸಿದರೆಂದು ಕೇಳುತ್ತೇವೆ! ಜನರಲ್ಲಿ ಇಷ್ಟೊಂದು ಗಲಿಬಿಲಿಯುಂಟಾಗಿರುವಾಗ ಸುವ್ಯವಸ್ಥೆಯ ಪಾಲನೆಗಾಗಿ ಸರಕಾರವು ಕಾರ್ಯಕ್ಕೆಗೊಳ್ಳುವದು ಅಗತ್ಯವಿದೆ.

ಚರ್ಚಿಲ್ಲರ ಬ್ರಾಡ್‌ಕಾಸ್ಟ್ ಭಾಷಣ

ಬ್ರಿಟನಿನ ಪ್ರಧಾನರಾದ ಮಿ. ವಿನ್ಸ್‌ಟನ್ ಚರ್ಚಿಲ್ಲರು ತಾ 14ನೇ ರಾತ್ರಿ ಕೊಟ್ಟ ರೇಡಿಯೋ ಭಾಷಣದಲ್ಲಿ ಯುದ್ಧ ಮುಂದೊತ್ತುವ ಬ್ರಿಟನಿನ ದೃಢನಿರ್ಧಾರವನ್ನು ಪುನಃ ಸಾರಿರುವರು. ಫ್ರೆಂಚ್ ಯುದ್ಧ ಹಡಗುಗಳನ್ನು ಹಿಡಿದ ಕಾರಣವನ್ನು ವಿವರಿಸಿ ಬ್ರಿಟನಿನ ನೌಕಾಬಲದ ವರ್ಧನೆಗಾಗಿ ಹೀಗೆ ಮಾಡಿದುದಲ್ಲನೆಂದೂ ಅವು ಜರ್ಮನಿ ಅಥವಾ ಇಟಲಿ ಬಂ

ಬ್ರಿಟ…
ವಿ…
ಬ್ರಿಟಿಷ್…

ದರಗಳಿಗೆ ಹೋ…
ವಿನಹಾ ತಾವ…
ವಂತಿಲ್ಲವೆಂದೂ…
ಸಂಬಂಧದ ಈ…
ಅಂತ್ಯವಾಯಿತೆ…
ಗತವರ್ಷದ…
ಚರ್ಚಿಲ್ಲರು…

ಬ್ರಿಟ…

ದಿನ ಜುಲಾಯಿ…
ರಾಷ್ಟ್ರೀಯ ಪ…
ವರುಷಕ್ಕೆ ಮೊ…
ಪ್ಯಾರೀಸಿನಲ್ಲಿ…
ಸಾಮ್ರಾಜ್ಯದ…
ಡುತ್ತಿದ್ದೆ. ನ…
ಮಾರ್ಷಟನ್ನು…
ಕಾನೆ ಊಹಿಸಿ…
ವರುಷಗಳು…
ಯಾರು ತಾನೆ…
ಹೇಳಿ ತಾವು…
ಲಿನ ಸ್ವಾತಂ…
ನ್ನೊಂದು ಜು…
ರುವವೆಂಬ ವಿ…
"ನೀವು ನಿಮ್ಮ…
ಕೊಂಡು ಜಗ…
ಜತೆಯವನು…
ಬಿದ್ದರೆ, ಅವನ…
ರೋಧಿಯ ಪ…
ನೋಡಬೇಕು…
ರಿಯಿಂದ ಕೂ…
ಬಾರದು; ಅವ…
ನೀವು ಅನ…
ವಾರಣೆಗಾಗಿ…
ಎಂದು ಫ್ರಾನ್ಸಿ…
ಚರ್ಚಿಲ್ಲರ ಆ…
ನ್ ಫ್ರಾನ್ಸುಗ…
ಗಳು ಇನ್ನೂ…
ತಂತ್ರ್ಯವನ್ನು…
ಸಾಮ್ರಾಜ್ಯದ…
ದಿಂದ ಸಹಕರಿ…
ಎಂದರು.

ನಮ್ಮ…
ಆರೊ…
ನಾಜೀ ರ…

ಅಪೂರ್ವ ಐಕ್ಯತೆ ಮತ್ತು ದೃಢ ನಿರ್ಧಾರದಲ್ಲಿದೆ! ಚರ್ಚಿಲ್ಲರ ಸ್ಫೂರ್ತಿದಾಯಕ ಭಾಷಣ.

...ನಗಳ ಜಯಶೀಲ ಧಾಳಿ!

ಚೀನಾ-ಬರ್ಮಾ ರಸ್ತೆ ಮುಚ್ಚಲ್ಪಟ್ಟಿತು!

...ಯನ್ನು ಮಾಡದ ...ಷೆ ಕೊಡು ...-ಫ್ರಾನ್ಸುಗಳ ...ರಣವು ಇಕ್ಕಿಗೆ ...ನವರು.

ತಾ. 14. ...ನಸುತ್ತಾ ...

...ನು,

14 ಫ್ರಾನ್ಸಿನ ... ದಿನ. ಒಂದು ... ದಿನ ನಾನು ... ಮತ್ತು ಅದರ ...ಯತ್ನವನ್ನು ನೋ... ...ದು ಇಂತಹ ...ವೆಂದು ಯಾರು ...ನ್ನು ಮುಂದಿನ ... ಕರುವವೆಂದು ...ಬಲ್ಲರು?" ಎಂದು ... ಫ್ರಾನ್ಸು ಮೊದ... ...ಹೊಂದುವ ... ...ವನ್ನು ಕಾಣಲಿ... ...ಗಿದೆ ಎಂದರು. ...ರರನ್ನು ಕೂಡಿ ...ರವಾಗ ನಿಮ್ಮ ...ಕೊಡೆತ ಇಂದು ... ಯುಧವು ವಿ... ...ಗವಂತೆ ಅಗತ್ಯ ...ಕಾರನು ಗಾಬ... ...ಕ್ಕೆ ಲಕ್ಷ್ಯಕೊಡ ...ವ ನೋವನ್ನು ...ನನ ಸಂಕಟ ನಿ... ...ಯತ್ನಿಸಬೇಕು." ...ಬಂಧದ ! ಕುರಿತು ... ಮಾಡು. ಬ್ರಿಟ... ...ಷ ಮತ್ತು ಕತ್ತ... ...ವೆ. ತಮ್ಮ ಸ್ವಾ... ...ರುವ ಫ್ರೆಂಚ್ ...ಡನೆ ಸೌಜನ್ಯ... ...ವು ಸಿದ್ಧರಿದ್ದೇವೆ

...ು ಮತ್ತು ...ದ್ಧವಿದೆ ...ದ್ಧ ಯಂತ್ರಕ್ಕೆ

ವಾರಗಳು ಮತ್ತು ದಿನಗಳೊಳಗೆ ರಾಷ್ಟ್ರಗಳು ಬಲಿಬಿದ್ದುದನ್ನು ಕಂಡು ಅಟ್ಲಾಂಟಿಕಿನ ಮತ್ತು ಇತರೆಡೆಯ ರಾಷ್ಟ್ರಗಳಿಗೆ ನಮ್ಮಲ್ಲಿ ಸಹಾನುಭೂತಿಯಿದ್ದರೂ ಹೆದರಿಕೆಯಿಂದ ಅದನ್ನು ಕಾರ್ಯತಃ ಪ್ರದರ್ಶಿಸಲಸಾಧ್ಯವಾಗಿರುವುದನ್ನು ನಾನು ಬಲ್ಲೆ. ಆದರೆ ಹಿಟ್ಲರನು ಈ ವರೆಗೂ ತನ್ನ ದೇಶದಷ್ಟೇ ಆಂತರಿಕ ಶಕ್ತಿಯಿರುವ ದೊಡ್ಡ ರಾಷ್ಟ್ರವೊಂದಕ್ಕೆ ಇದಿರು ಬಿದ್ದು ನೋಡಿಲ್ಲ. ಈ ರಾಷ್ಟ್ರಗಳಲ್ಲಿ ಹೆಚ್ಚಿನವು ಹಿಂಸಾತ್ಮಕವಾಗಿ ಒಪ್ಪಳಿಸಲ್ಪಡುವ ಮೊದಲು ಒಳಗಿಂದೊಳಗೆ ವಿಷಸೋಂಕಿಗೆ ಬಲಿಬಿದ್ದಿದ್ದುವು. ಹೊರಗಿನಿಂದ ಕತ್ತರಿಸಲ್ಪಡುವ ಮೊದಲು ಒಳಗೇನೆ ಕೊಳೆಯಲ್ಪಟ್ಟಿದ್ದವು. ಫ್ರಾನ್ಸಿನ ಜನರು ಸೈನ್ಯದ ಮತ್ತು ನಾಯಕರ ಕುರಿತಾದರೂ ಅನ್ಯಥಾ ಏನೆನ್ನಲಿ? ಆದರೆ ನಾವು ನಮ್ಮ ದ್ವೀಪದಲ್ಲಿ ಬಹಳ ಆರೋಗ್ಯದಲ್ಲಿ ಮತ್ತು ನಿರ್ಮಲ ಹೃದಯದಲ್ಲಿದ್ದೇವೆ. ಹಿಟ್ಲರನು ತನ್ನ ಶಾಸ್ತ್ರೀಯವಾದ ಹಂಚಿಕೆಗಳನ್ನು ಹೂಡಿ ನೆರೆಯ ರಾಷ್ಟ್ರಗಳನ್ನು ನುಂಗಿದುದನ್ನು ನಾವು ಕಂಡೆವು. ಪೋಲೆಂಡ್, ನೋರ್ವೆ, ಡಚ್, ಬೆಲ್ಜಿಯಂಗಳ ಕುರಿತಿಲ್ಲಾ ಆವ ಮೊದಲೇ ಯೋಜನೆತಯಾರಿಸಿದ್ದ. ಫ್ರೆಂಚರನ್ನು ಬಗಲಿಗೆ ಹಾಕಿಕೊಂಡ ರೀತಿಯನ್ನೂ ನಾವು ಕಂಡೆವು. ಕೊನೆಗಾದರೂ ಜರ್ಮನಿಯ ಪ್ರಮುಖ ಹಾಗೂ ಕಡು ವೈರಿ ಎಂಬ ಗೌರವ ಪಡೆದಿರುವ ಗ್ರೇಟ್-ಬ್ರಿಟನನ್ನು ನಾಶಮಾಡುವ ಹಂಚಿಕೆಯನ್ನು ಬಹುಶಃ ಹಲವು ವರುಷಗಳ ಪೂರ್ವದಲ್ಲಿಯೇ ಹಿಟ್ಲರನು ಯೋಚಿಸಿರುವನೆಂಬುದು ಖಂಡಿತ. ಇಂಗ್ಲಾಂಡಿನಮೇಲೆ ಧಾಳಿನಡಿಸಲು ಹಿಟ್ಲರನು ಎರಡು ತಿಂಗಳುಗಳ ಮೊದಲು ಮಾಡಿಟ್ಟಿರುವ ಯೋಜನೆಯಿಂದ ನಾವೀಗ ಹೊಂದಿರುವ ಹೊಸಸ್ಥಿತಿಯನ್ನಿದಿರಿಸಲು ಆದನ್ನವನು ತಿದ್ದಿಕೊಳ್ಳಬೇಕಾಗುವದೆಂದು ನಾನು ಹೇಳಬಲ್ಲೆ.

ನಮ್ಮ ಬಲವು ಅಸಾಧಾರಣವಾದುದು

ಎರಡು ತಿಂಗಳುಗಳ ಮೊದಲು ನಮ್ಮ ಪ್ರಬಲ ಸೈನ್ಯವನ್ನೂ ಫ್ರಾನ್ಸಿನಲ್ಲಿರಿಸುವ ಅಗತ್ಯವಿತ್ತು. ಈಗ ಅವೆಲ್ಲ ನಮ್ಮ ದ್ವೀಪದಲ್ಲೇ ಜಮೆಯಾಗಿ ಈ ದಿನ ನಮ್ಮ ರಕ್ಷಣೆಗಾಗಿ ನಮ್ಮ ದ್ವೀಪದಲ್ಲಿ ನಿಂತಿರುವ ಪ್ರಬಲ ಸೇನೆಯನ್ನು ರೀತಿ ನೀತಿ, ಶಸ್ತ್ರ ಸಾಮಗ್ರಿ ಮತ್ತು ಸಂಖ್ಯೆಯಲ್ಲಿ ಸಂಗಟ್ಟಬಲ್ಲ ಸೈನ್ಯವು ಕಳೆದ ಯುದ್ಧದಲ್ಲಾಗಲೀ ಈ ಬಾರಿಯಲ್ಲಾಗಲೀ ಇಲ್ಲಿ ಇದ್ದುದಿಲ್ಲ. ಒಂದೂವರೆ ಮಿಲಿಯ ಸೈನ್ಯವು ಶಸ್ತ್ರ ಸಜ್ಜಿತವಾಗಿ ನಿಂತಿದೆ. ವಾರವಾರಕ್ಕೆ ಅವು ಬಲಗೊಂಡಿವೆ. ಇಷ್ಟು ಅಲ್ಪಾವಧಿಯಲ್ಲಿ ಇಂತಹತಯಾರುಮಾಡಿದ ಆಫೀಸರರನ್ನು ಮತ್ತು ನಾಗರಿಕರನ್ನು ಎಷ್ಟು ಹೊಗಳಿದರೂ ಸಾಲದು. ಎನ್ನುತ್ತಾ, ಚರ್ಚಿಲ್ಲರು ಶರವೇಗ ಹೊಂದಿದ ಸೈನಿಕರಷ್ಟೇ ಅಲ್ಲದೆ, ತಮ್ಮನಡುವೆ ಬಂದಿಳಿಯುವ ಏವನೇ ಕಲಮಿನವರಿಗೆ ಕೂಡಲೇ ಗತಿಕಾಣಿಸುವ ನಾಗರಿಕ ಸೈನ್ಯದಳವು ಎಲ್ಲೆಲ್ಲಿಯೂ ಇದೆ ಎಂದೂ ಗೃಹರಕ್ಷಣಾಸೈನಿಕರು ಒಂದುಮಿಲಿಯ ಬೇರೆಯೇ ಇರುವರೆಂದೂ ಹೇಳಿದರು. 'ನಾವು ನಮ್ಮ ಪ್ರತಿಯೊಂದು ಹಳ್ಳಿ ಪೇಟೆ, ಪಟ್ಟಣಗಳಲ್ಲಿ ಹೋರಾಡುವೆವು. ಲಂಡನಿನ ದೊಡ್ಡ ಜನ ಸಂದೋಹವು ಬೀದಿ ಬೀದಿಗಳಲ್ಲಿ ಹೋರಾಟ ಹೂಡುವುದು. ನಾವು ಲಂಡನ್ ಪ್ರತಿಪ್ರತಿಯಾಗುವುದನ್ನಾದರೂ ಕಾಣುವೆವು ಹೊರತು ನಿರ್ಲಜ್ಜಕರ ದಾಸತ್ವವನ್ನಂಗೀಕರಿಸಲಾರೆವು' ಎಂದುಹೇಳಿ ಮಿ| ಚರ್ಚಿಲ್ಲರು ವಿರೋಧಿಗೆ ಅಂಕುಶಪ್ರಾಯವಾಗಬಲ್ಲ ಬ್ರಿಟನಿನ ವಿಮಾನನಾವೆ, ಮತ್ತು ಆತಂಕಗಳನ್ನು ಲಕ್ಷಿಸಿ ನಡೆಸಿದ ಆಹಾರ ಸಂಗ್ರಹಣ... ಹದ ವಿವರವನ್ನೂ ತಿಳಿಸಿದರು. ಇದು ದೇ... ರಾವ ಯುದ್ಧವೂ ಆಗಿರದೆ ಜನತೆಯ, ತತ್ವಗಳ ಮತ್ತು ಅಪ್ರಸಿದ್ಧ ಯೋಧನ ಯುದ್ಧವಾಗಿರುವದೆಂದು ಹೇಳಿ "ನಾವು ನಮ್ಮ ವಿಶ್ವಾಸ ಮತ್ತು ಕರ್ತವ್ಯದಲ್ಲಿ ಭಂಗತಾರದೆ, ನಮ್ಮ ಕಾಲದಲ್ಲಿ ಹರಡಿರುವ ಹಿಟ್ಲರ್ ನಿರ್ಮಿತ ಅಂಧಕಾರವನ್ನು ನಿವಾರಿಸಿಕೊಳ್ಳೋಣ" ಎಂದರು.

೭ ಜರ್ಮನ್ ವಿಮಾನಗಳ ನಾಶ

ಡೋವರಿನ ಬಳಿ ನಾವೆಗಳ ಮೇಲೆ ಹಲ್ಲೆನಡೆಸಲು ಬಂದ ನಾಜೀ ವಿಮಾನಗಳನ್ನು ಬ್ರಿಟಿಷ್ ವಿಮಾನಗಳು ಎದುರಿಸಿ ಏಳನ್ನು ನಾಶಪಡಿಸಿರುವವು. ಮಾಲ್ಟಾ ಮತ್ತು ಅಲೆಗ್ಸಾಂಡ್ರಿಯದ ಮೇಲೆ ಧಾಳಿ ನಡೆಸುವ ಪ್ರಯತ್ನವು ಜಯಶೀಲವಾಗಿಲ್ಲ. ಮಾಲ್ಟವನ್ನು ಮೂರು ಬಾರಿ ಆರ್. ಎ. ಎಫ್. ವಿಮಾನಗಳು ಅವುಗಳನ್ನು ಹೊಡೆದೋಡಿಸಿದುವು. ಬ್ರಿಟಿಷ್ ವಿಮಾನಗಳು ಜರ್ಮನಿ ವಾಯುವ್ಯ ಭಾಗದ ಮೇಲೂ ಹೊಲೆಂಡು ಬೆಲ್ಜಿಯಂಗಳ ಮೇಲೂ ಧಾಳಿಯಿಟ್ಟು ವಿಮಾನನಿಲ್ದಾಣಗಳು, ಎಣ್ಣೆ ಕೆರೆಗಳು, ಮೋಟೆಲ್ಲಾ ಬೋಂಬು ಸುರಿಸಿ ಅತಿ ಹೆಚ್ಚಿನ ಹಾನಿಮಾಡಿರುವವು. ಜರ್ಮನಿಯ ಫ್ರೆಂಚ್ ಕಾಬ್ಜಾ ನೆಯೇ ಮೊದಲಾದ 14 ವಿಮಾನನಿಲ್ದಾಣಗಳ ಬೋಂಬು ಸುರಿಸಲಾಗಿದೆ.

ಬರ್ಮಾ ರಸ್ತೆಯನ್ನು ಮುಚ್ಚಲಾಯಿತು

ಬರ್ಮಾದಿಂದ ಚೀನಕ್ಕೆ ಕಳುಹಿಸಲ್ಪಡುತ್ತಿರುವ ಸಲಕರಣೆಗಳನ್ನು ನಿಲ್ಲಿಸಬೇಕೆಂದು ಜಪಾನು ವಾದಿಸಿ ಆ ಕುರಿತು ಬ್ರಿಟಿಷ್ ರಾಯಭಾರಿ ಮತ್ತು ಜಪಾನು ಮಂತ್ರಿಗಳೊಳಗೆ ಟೋಕಿಯೋದಲ್ಲಿ ಮಾತುಕತೆ ನಡೆಯುತ್ತಿದೆ. ವಿಚಾರಿಸದಕ್ಕೆ ಹಲವು ಸಂಗತಿಗಳಲ್ಲಿ ಬರ್ಮಾ ರಸ್ತೆಯ ವಿಷಯವು ಒಂದೇಗಾಳ ಮಿಕ್ಕ ವಿಚಾರಗಳ ಚರ್ಚೆಯು ಮುಂದುವರಿಯುತ್ತಿದೆ ಎಂದೂ ತಿಳಿದುಬರುತ್ತದೆ. ಬರ್ಮಾ ರಸ್ತೆಯನ್ನು ತತ್ಕಾಲಕ್ಕೆ ಮೂರು ತಿಂಗಳವರೆಗೆ ಮುಚ್ಚುವರೆ ಬ್ರಿಟಿಷ್ ಸರಕಾರವು ಒಪ್ಪಿಗೆಯಿತ್ತಿದೆ.

ಚೀನಾ ಜಪಾನು ರಾಜಿ ಯತ್ನವೆ?

ಬ್ರಿಟಿಷ್ ಸರಕಾರವು ಚೀನಾ ಜಪಾನು ಯುದ್ಧವನ್ನು ನಿಲ್ಲಿಸುವ ಪ್ರಯತ್ನ ಮಾಡುತ್ತಿರುವದೆಂದು ಹಾಂಗ್‌ಕಾಂಗಿನ ತಾತ್ಕಾಲಿಕ ಗವರ್ನರರಾದ ಮಿ| ಜೋನ್ಸರು ತಾ. 11ರಲ್ಲಿ ಬ್ರಾಡ್‌ಕಾಸ್ಟ್ ಭಾಷಣದಲ್ಲಿ ಹೇಳಿರುವರು. ಬ್ರಿಟನು ಜರ್ಮನಿಯನ್ನು ಗೆಲ್ಲುವ ಪ್ರಯತ್ನದಲ್ಲಿರುವಾಗ ತನಗೆ ಕೆಲವು ಸಂಬಂಧಗಳಿದ್ದ ಚೀನಾ ಯುದ್ಧವು ಮುಂದುವರಿಯುತ್ತಿರುವದರಲ್ಲಿರುವ ತೊಂದರೆಯನ್ನು ಅವ ಮನಗಂಡು ತನ್ನಿಂದಾಗುವ ಪ್ರಯತ್ನ ಮಾಡಲಿರುವದಂತೆ.

ಹಾಲ್‌ವೆಲ್ ಸತ್ಯಾಗ್ರಹ

ಸುಭಾಷರ ದಸ್ತಗಿರಿಗೆ ಕಾರಣವಾದ ಹೋಲ್‌ವೆಲ್ ಪ್ರತಿಮೆಯ ಕುರಿತು ಪ್ರಾರಂಭಿಸಲ್ಪಟ್ಟಿರುವ ಸತ್ಯಾಗ್ರಹವು ಯಥಾಪ್ರಕಾರ ಮುಂದುವರಿಯುತ್ತಿದೆ. ಜುಲಾಯಿ ತಾ. 10ರಲ್ಲಿ ದಸ್ತಗಿರಿಮಾಡಲ್ಪಟ್ಟವರ 20ಮಂದಿಗೆ 9ತಿಂಗಳ ಕಠಿಣ ಸಜೆ ವಿಧಿಸಲ್ಪಟ್ಟಿದೆ. ಆ ಪ್ರತಿಮೆಯನ್ನು ತೆಗೆಯುವ ಕುರಿತು ಬಂಗಾಳಾ ಸರಕಾರವು ಆಲೋಚನೆ ನಡೆಸುತ್ತಿರುವಾಗಲೇ ಸತ್ಯಾಗ್ರಹ ಪ್ರಾರಂಭವಾದುದರಿಂದ ತೊಂದರೆಯಾಯಿತೆಂದೂ, ಇನ್ನು ಸತ್ಯಾಗ್ರಹ ನಿಲ್ಲಿಸದೆ ಯಾವ ಕಾರ್ಯವನ್ನೂ ಸರಕಾರವು ಕೈಕೊಳ್ಳಲು ಸಿದ್ಧವಿಲ್ಲವೆಂದೂ ವರ್ತಮಾನ.

ಬ್ರಿಟಿಷ್ ಹಡಗಗಳಿಗೆ ಜಪಾನರ ಎಚ್ಚರಿಕೆ

ಚೀನದ ನಾಲ್ಕು ಬಂದರಗಳ ಮೇಲೆ ಜಪಾನ ಧಾಳಿನಡೆಸಲಿರುವುದರಿಂದ ಅಲ್ಲಿರುವ ಬ್ರಿಟಿಷ್ ಹಡಗಗಳು ಹೊರಟು ಹೋಗತಕ್ಕದ್ದೆಂದು ಜಪಾನೀ ಅಧಿಕಾರಿಗಳು ಎಚ್ಚರಿಕೆ ಕೊಟ್ಟಿರುವರು.

ಏಕ್ಸಿಸಿನೊಡನೆ ಜಪಾನರ ಒಪ್ಪಂದವೆ?

ಜಪಾನಿನ ಪ್ರಮುಖ ಪತ್ರಿಕೆಯೊಂದು ಜಪಾನು, ಜರ್ಮನಿ ಇಟಲಿಗಳೊಡನೆ ಸೈನಿಕ ಒಪ್ಪಂದ ಮಾಡಿಕೊಳ್ಳಬೇಕೆಂಬ ಸೂಚನೆಕೊಡುತ್ತದೆ. ಈ ಒಪ್ಪಂದವು ಜರ್ಮನಿಯ ಪ್ರಬಲ ಧಾಳಿ ಪ್ರಾರಂಭವಾಗುವ ಮೊದಲೇ ನಡೆಯತಕ್ಕದ್ದೆಂದು ಅದರ ಸೂಚನೆ. ಆ ಮೇಲೆ ರಷ್ಯಾ ಜರ್ಮನಿ ಒಪ್ಪಂದದಂತಹ ಒಪ್ಪಂದವನ್ನು ಜಪಾನು ರಷ್ಯದೊಡನೆಯೂ ಮಾಡಿಕೊಳ್ಳತಕ್ಕದ್ದು. ಜಪಾನು, ಅಮೇರಿಕದ ವಿರೋಧವನ್ನು ಕಟ್ಟಿಕೊಳ್ಳಬೇಕಾಗಿ ಬಂದರೂ ಲಕ್ಷಿಸದೆ ತನ್ನ ಘೋಷಣೆಯನ್ನು ಮುಂದೊತ್ತಬೇಕೆಂಬ ಸೂಚನೆಯನ್ನು ಆ ಪತ್ರಿಕೆ ಕೊಡುತ್ತಿದೆ.

ಬ್ರಿಟಿಷರ ವಿಮಾನಧಾಳಿ

ತಾ. 10ರಲ್ಲಿ ಇಂಗ್ಲಾಂಡಿನ ಆಗ್ನೇಯ ಕಡೆಯ ಪಟ್ಟಣವೊಂದರ ಮೇಲೆ ವಿಮಾನಧಾಳಿ ನಡೆದು ಇಬ್ಬರು ಕೊಲ್ಲಲ್ಪಟ್ಟಿರುವರು. ಎಂಟ್ರಿಯಾದ ಅಸ್ಸಾಬ್ ಎಂಬಲ್ಲಿಯ ಸಂಗ್ರಹಾಲಯ ಮೊದಲಾದುವುಗಳ ಮೇಲೆ ಬ್ರಿಟಿಷ್ ವಿಮಾನಗಳು ಬೋಂಬು ಸುರಿಸಿ 30ಮೈಲುಗಳವರೆಗೆ ಕಾಣಿಸುವಷ್ಟು ದೊಡ್ಡ ಬೆಂಕಿ ಎಬ್ಬಿಸಿರುವವು. ಟೋಬರ್ಕ್ ಬಂದರದ ನಾವೆಗಳ ಮೇಲೂ ಬ್ರಿಟಿಷರು ಬೋಂಬುಹಾಕಿರುವರು. ತಾ. 11ಮತ್ತು 12ರಲ್ಲಿ ಇಟಲಿ ವಿಮಾನಗಳು ಮಾಲ್ಟಾದ ಮೇಲೆ ಧಾಳಿಯಿಡಲು ಪ್ರಯತ್ನಿಸಿದವಾದರೂ ಬ್ರಿಟಿಷ್ ವಿಮಾನಗಳ ಸಾಹಸದಿದಿರು ಫಲಿಸಲಿಲ್ಲ.

ಜಪಾನಿನ ವಿದೇಶಾಂಗ ಮಂತ್ರಿ

ಅತಿ ದೊಡ್ಡ ವಿಮಾನ ಯುದ್ಧ

ತಾ. 10ರಲ್ಲಿ ಅತಿ ದೊಡ್ಡ ವಿಮಾನ ಯುದ್ಧವು ಬ್ರಿಟಿಷ್ ಚಾನೆಲಿನ ಮೇಲೆ ನಡೆದಿತ್ತು. ಒಮ್ಮೆ 15 ಪ 30 ಜರ್ಮನ್ ವಿಮಾನಗಳು ಎರಡು ಪಲ ಬಂದು ಬಾಂಬು ಸುರಿಸಿದವು. ಆದರೆ ಥಟ್ಟನೆ ಬ್ರಿಟಿಷ್ ವಿಮಾನಗಳು ಚತುರ್ದಿಕ್ಕುಗಳಲ್ಲಿಯೂ ಮೇಲೇರಿ ವೈರಿಗಳನ್ನು ಹಿಮ್ಮೆಟ್ಟಿಸಿದವು. ವೈರಿಗಳ 14 ವಿಮಾನಗಳು ಕೆಳಗೆ ಬಿದ್ದವು; 23ಕ್ಕೆ ಬಹಳ ಜಖಮಾಗಿದೆ. ಬ್ರಿಟಿಷರ ಒಂದು ವಿಮಾನಗಳು ನಷ್ಟವಾದವು. ಕರಾವಳಿಯಲ್ಲಿ ಹಲವು ಜನರೂ ಹತರಾಗಿದ್ದರಂತೆ.

ಹಂಗೇರಿಗೆ ಸೂಚನೆ

ರುಮೇನಿಯದ ಮೇಲೆ... ಒತ್ತಾಯಿ... ಮಾಡಬಾರದೆಂದು ಹಿಟ್ಲರರು ಹಂಗೇರಿಯ ಮಂತ್ರಿಗಳಿಗೆ ಸೂಚಿಸಿದ್ದಾರಂತೆ. ಯುರೋಪಿನ ಹೊಸ ವ್ಯವಸ್ಥೆಯನ್ನು ಹಿಟ್ಲರ್-ಮುಸಲಿನಿಗಳು ಮಾಡುವಾಗ ಹಂಗೇರಿಗೆ ತಕ್ಕ ಮನ್ನಣೆ ಕೊಡಲು ನಮ್ಮತಿಸಿದ್ದಾರಂತೆ. ಹಂಗೇರಿಯ ಮಂತ್ರಿಗಳು ಹಿಟ್ಲರರನ್ನು ಸಂದರ್ಶಿಸಿದ್ದರು.

ನಾಜಿ ಸಾಮ್ರಾಜ್ಯದಲ್ಲಿ

ನಾಜಿಗಳ ಸ್ವಾಧೀನವಿರುವ ಬೊಹೇಮಿಯ, ಮೊರೇವಿಯಗಳಲ್ಲಿ ಕೊವ್ಯನಿಸ್ಟರ ವಿರೋಧವಾಗಿ ಕಠಿಣ ಕಾಯಿದೆಗಳನ್ನು ನಾಜಿಗಳು ಹೊರಡಿಸಿದ್ದಾರೆ. ಬಾಲ್ಟಿಕ್ಕಿನಲ್ಲಿ ರಷ್ಯದ ಪ್ರಭಾವ ಹೆಚ್ಚುತ್ತಾ ಬಂದುದರಿಂದ ಇವುಗಳಿಗೆ ಮೂಲ ಎಂದು ತಿಳಿದುಬಂದಿದೆ.

ಸೂಚನೆ: ಈ ಸಂಚಿಕೆಯ 12ನೇ ಪುಟದಲ್ಲಿರುವ ಕಾರ್ಕಳ ಡಿಸ್ಟ್ರಿಕ್ಟ್ ಕೋರ್ಟಿನ ನೋಟೀಸಿನಲ್ಲಿ ..... the same stands posted to 29—7—1940 in the above court' ಎಂದು ಓದಿಕೊಳ್ಳತಕ್ಕದ್ದು.

ಬೊಂಬಾಯಿ

11-7-40

ಉಡುಪಿ ಶ್ರೀ ಫಲಿಮಾರು ಮಠದ ಶ್ರೀಪಾದಂಗಳವರಿಗೆ ಸಂಭ್ರಮದ ಸ್ವಾಗತ—ಇಲ್ಲಿಗೆ ಚಿತ್ತೈಸಿರುವ ಫಲಿಮಾರು ಮಠದ ಶ್ರೀ ರಘುಮಾನ್ಯತೀರ್ಥ ಶ್ರೀಪಾದಂಗಳವರನ್ನು ಗೌಡಸಾರಸ್ವತ ಸಮಾಜದವರು ತಾ. 6ನೇ ಸಂಜೆ ವಾಲಕೇಶ್ವರದಿಂದ ಬಾಣಗಂಗಾ, ವಾಲುಕೇಶ್ವರ ಮೊದಲಾದ ಕಡೆಗಳಿಗೆ ಬಹು ವಿಜೃಂಭಣೆಯ ಮೆರವಣಿಗೆಯಿಂದ ಕರೆದೊಯ್ದು ಪಾದಪೂಜೆ ನಡೆಸಿದರು. ವಾಲುಕೇಶ್ವರದ ಮಠದಲ್ಲಿ ಶ್ರೀಗಳವರ ಕಡೆಯಿಂದಲೂ ಪಾದಪೂಜೆ ನಡೆಯಿತು. ಆಗ ಆ ಸ್ವಾಮಿಯವರ ವ ಇನ್ನಿತರ ಕಾಣಿಕೆಗಳೂ ಇದ್ದವು. ತಾ. 7ರಲ್ಲಿ ಮೊಗವೀರ ಸಮಾಜದವರು ಶೃಂಗರಿಸಲ್ಪಟ್ಟ ಬಿಳಿ ಕುದುರೆಗಳನ್ನು ಕಟ್ಟಿದ ರಥದಲ್ಲಿ ಕುಳ್ಳಿರಿಸಿ ಸ್ವಾಮಿಗಳನ್ನು ಮೆರವಣಿಗೆಯಿಂದ, ಕೋಟೆಯೊಳಗಿನ ಮಂಗ್ರೋಲ್ ಮಿಸ್ಕಿನಿಗೆ ಕರೆದೊಯ್ದು ಪ್ರತ್ಯಪ್ರತ್ಯೇಕ ತಂಡದವರು ಪ್ರತ್ಯಪ್ರತ್ಯೇಕವಾಗಿ ಕಾಣಿಕೆ ಮಾಡಿ ಗೌರವಿಸಿದರು. ಈ ಸಂದರ್ಭದಲ್ಲಿ ಶ್ರೀಗಳವರ ಸುಧಾರಕ ಮನೋವೃತ್ತಿ, ಧೈರ್ಯ ಸಾಹಸ, ಬಡಜನರ ಮೇಲಿರುವ ಪ್ರೇಮಾದಿಗಳನ್ನು ವಿವರಿಸಿ ಭಾಷಣಗಳಿದ್ದವು. ಶ್ರೀಗಳವರು ಕನ್ನಡಿಗ ಮಹಾಜನರು ಸಂದರ್ಶಿಸಿ ಕಾಣಿಕೆಯಿತ್ತು ಈಗಲೂ ಗೌರವಿಸುತ್ತಿದ್ದಾರೆ.

ಶ್ರೀ. ಡಿ. ಜಿ. ಶೆಟ್ಟರು.

ಇವರು ಮುಂಬಾಯಿಯ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸನಲ್ಲಿ ಏಳುವರ್ಷಗಳ ಕಾಲ ವ್ಯಾಸಂಗ ಮಾಡಿ ಜಿ. ಡಿ ಆರ್ಟ್ ಪರೀಕ್ಷೆಯಲ್ಲಿ ಪ್ರಥಮ ಪಾಸಾದ ಬಂಟ ಸಮಾಜದ ಉತ್ಸಾಹೀ ತರುಣರು.

ಎಮರ್ಜನ್ಸೀ ಗಾರ್ಡ್ಸ್—ಈ ಯುದ್ಧದ ಸಮಯದಲ್ಲಿ, ಮುಂಬಯಿ ನಗರದಲ್ಲಿ ಶಾಂತಿಯನ್ನು ನೆಲೆಗೊಳಿಸುವುದಕ್ಕಾಗಿ ಮುಂಬಯಿ ನ್ಯಾಶನಲ್ ಗಾರ್ಡ್ಸಿನವರು ಎಮರ್ಜನ್ಸೀ ಗಾರ್ಡ್ಸ್ ಎಂಬ ವಿಶೇಷ ಸೇನಾದಳವನ್ನು ನಿರ್ಮಿಸಲು ನಿಶ್ಚೈಸಿರುವರು. ಕೋಂಗ್ರೆಸ್ ಮುಂದಾಳುಗಳಿಂದ ಮತ್ತು ಇತರರಿಂದ ಕೂಡಿದ ಒಂದು ಕಮಿಟಿಯನ್ನು ಮಾಡಿ, ಅದರ ಅಭಿಪ್ರಾಯಗಳಂತೆ ಕಾರ್ಯ ಮುಂದರಿಸಲಿರುವರು. ಪ್ರತಿಯೊಬ್ಬ ಕೋಂಗ್ರೆಸ್ ಸದಸ್ಯನೂ ಇದರೊಡನೆ ಸಹಕರಿಸಬೇಕಾದ್ದು ಅತ್ಯಗತ್ಯ.

ಹೊಸ ಮೋಟಾರು ಕಾರ್ಖಾನೆ—

ಇಲ್ಲಿ ಒಂದು ಮೋಟಾರ ಕಾರ್ಖಾನೆಯು ಸ್ಥಾಪಿಸಲ್ಪಡಲಿದೆ, ಸಿಂಧ್ಯಾ ಸ್ಟೀಂ ನೆವಿಗೇಶನ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಾದ ಶ್ರೀ. ವಾಲ್ಚಂದ್ ಹೀರಾಚಂದರವರು, ಅಮೇರಿಕ ಒಬ್ಬ ಎಂಜನಿಯರೊಡನೆ, ಇದರ ಜವಾಬ್ದಾರಿಯನ್ನು ವಹಿಸಿಕೊಂಡಿರುವರು. ಎರಡು ಕೋಟಿ ರೂಪಾಯಿ ಇದಕ್ಕಾಗಿ ವ್ಯಯಿಸಲಿರುವರೆಂದೂ, ಇದರ ಫೇಕ್ಟರಿಯು ಮಾತುಂಗದಲ್ಲಿ ಕಟ್ಟಲ್ಪಡುವದೆಂದೂ ವರ್ತಮಾನ. ಭಾರತವು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವಾಗ, ಇವರೂ ದೇಶೀಯ ಕೈಗಾರಿಕೆಗಾಗಿ ಮುಂದಾಗುತ್ತಿರುವುದು ಶ್ಲಾಘನೀಯ.

ಪಾನ ಪ್ರತಿಬಂಧಕ ಕಾನೂನು—

ಇದನ್ನು ನ್ಯಾಯಾಧೀಶರಿಂದ ತೀರ್ಪು ಹಾಕಿದ್ದನ್ನು ಕಂಡು, ಇದರ ಕುರಿತಾಗಿ ಮುಂದೇನು ಮಾಡಬೇಕೆಂದು, ವರ್ಕಿಂಗ್ ಕಮಿಟಿಗೆ ಬರೆದಲ್ಲದೆ, ಬಿ. ಪಿ. ಸಿ. ಸಿ. ಯು, ಸರಕಾರವು ಈ ಕಾರ್ಯವನ್ನು ಮಾಡಿ, ಇದರ ಕುರಿತಾಗಿ ತಕ್ಕ ನೋಟಿಫಿಕೇಶನನ್ನು ಹೊರಿಗೆ ಹಾಕಬೇಕೆಂದು ಗವರ್ನರರೊಡನೆ ಕೇಳಿಕೊಂಡಿದೆ, ಕೋಂಗ್ರೆಸಿನ ಕಾರ್ಯದರ್ಶಿಯವರು, ಬಿ. ಪಿ. ಸಿ. ಸಿ. ಯು ಈ ಪತ್ರವನ್ನು ವರ್ಕಿಂಗ್ ಕಮಿಟಿಯ ಸರ್ವ ಸದಸ್ಯರಿಗೂ ಕಳುಹಿಸಿ ಅಭಿಪ್ರಾಯ ಕೇಳುತ್ತಿರುವರೆಂದು ತಿಳಿದುಬರುತ್ತದೆ.

— ಮೈಸೂರು ಪತ್ರ —

ನಮ್ಮ ಸ್ವಂತ ಬಾತ್ಮೀದಾರರಿಂದ) ಮೈಸೂರು, ಜುಲೈ 15.

ತಾಯಿನಾಡು ಪತ್ರಿಕೆಯ ಮೇಲೆ ಕಂಟೆಂಪ್ಟ್ ಆಫ್ ಕೋರ್ಟು ಅರ್ಜಿ. ಹೈಕೋರ್ಟಿನವರು ಅರ್ಜಿ ವಜಾ ಮಾಡಿದರು.

ಮೈ। ಸಂ। ಕೆಲವು ವಕೀಲರ ಮೇಲೆ ಲೀಗಲ್ ಪ್ರಾಕ್ಟೀಶನರ್ಸ್ ಏಕ್ಟ್ ಮೇರೆ ಕೃಮ ಜರುಗಿ ಮೈಸೂರು ಹೈಕೋರ್ಟಿನಲ್ಲಿ ವಿಚಾರಣೆಯಾಗಿ ಶ್ರೀಗಳಾದ ಕೆ. ಟಿ. ಭಾಷ್ಯಂ, ಕೆ. ಸಂಜೀವ ರಾಮಯ್ಯ, ಟಿ. ರಾಮಾಚಾರ್ ಮತ್ತು ಕೆ. ಸಿ. ರಾಮಸ್ವಾಮಿಯವರುಗಳನ್ನು ಆ ವೃತ್ತಿಯಿಂದ ವಜಾಮಾಡಬೇಕೆಂದು ಹೈ। ಚೀ। ಜಸ್ಟೀಸ್‌ರು ಕಳೆದ ಮಾರ್ಚಿ ತಿಂಗಳಲ್ಲಿ ತೀರ್ಪಿತ್ತರು. ಇದರ ಮೇಲೆ ಬೆಂಗಳೂರಿನ "ತಾಯಿನಾಡು" ಪತ್ರಿಕೆಯು ಮಾರ್ಚಿ 16ನೆ ಸಂಚಿಕೆಯಲ್ಲಿ ಒಂದು ಅಗ್ರಲೇಖನ ಬರೆದು ತೀರ್ಪಿನ ಸಾರಾಂಶಗಳನ್ನು ಪ್ರಸ್ತಾಪಿಸಿ ಟೀಕೆ ಮಾಡಿತ್ತು. ಈ ಅಗ್ರಲೇಖನ "ಕಂಟೆಂಪ್ಟ್ ಆಫ್ ಕೋರ್ಟಿಗೆ" ಒಳಗಾಗುತ್ತದೆಂದೂ, ಆದ್ದರಿಂದ ಆ ಪತ್ರಿಕೆ ಮೇಲೆ ಮತ್ತು ಸಂಪಾದಕರಿಗೆ ನೋಟೀಸ್ ಕೊಡಬೇಕೆಂದೂ ಗೌ। ಎಡ್ವೋಕೇಟರು ಕೋರ್ಟಿನಲ್ಲಿ ಒಂದು ಅಪ್ಲಿಕೇಶನ್ ಅರ್ಜಿ ಸಲ್ಲಿಸಿದರು. ಈ ಅರ್ಜಿಯು ಚೀಫ್ ಜಸ್ಟಿಸ್ ಸರ್. ಡಿ. ಆರ್ಸಿ ರೈಲಿ ಮತ್ತು ಜ। ವೆಂಕಟರಂಗೈಯಂಗಾರ ಮುಂದೆ ಹೈಕೋರ್ಟಿನಲ್ಲಿ ವಿಚಾರಣೆಗೆ ಬಂದ ಕಾಲದಲ್ಲಿ ಗೌ। ಅಡ್ವೋಕೇಟರು ೪ ಮಂದಿ ವಕೀಲರ ಮೇಲೆ ಲೀ। ಪ್ರಾ। ಆಕ್ಟ್ ಬಗ್ಗೆ ನೋಟೀಸ್ ಜಾರಿಮಾಡಿ ಕೋರ್ಟಿನ ಜ। ಪ್ರಾ। ರು ಅವರು ಮುಂದಿ ಮೇಲೆ ಒಂದು ರೆಫರೆನ್ಸ್ ಮಾಡಿದ್ದರು. ಇದರಲ್ಲಿ 4 ಕೇಸು ಇತ್ಯರ್ಥವಾಗಿ ಇನ್ನು 4 ಕೇಸು ಹಾಗೆಯೇ ಉಳಿದಿರುವಾಗ ತಾಯಿನಾಡು ಅಗ್ರಲೇಖನ ಬರೆದು ಇತ್ಯರ್ಥವಾಗದಿದ್ದ ಕೇಸುಗಳನ್ನು ಟೀಕಿಸಿರುವುದು ಕಂಟೆಂಪ್ಟ್ ಆಫ್ ಕೋರ್ಟು ಕಾನೂನಿಗೊಳಗಾದುದೆಂದು ವಿವರವಾಗಿ ವಾದ ಮಾಡಿದರು. ಚೀಫ್ ಜಸ್ಟಿಸರೂ, ಜ। ವೆಂಕಟರಂಗೈಯಂಗಾರರೂ ಈ ಅರ್ಜಿಯನ್ನು ವಜಾಮಾಡಿ ಈಗ ನಮ್ಮ ಮುಂದಿರುವ ಅಗ್ರಲೇಖನವು ಇತ್ಯರ್ಥವಾಗಿರುವ ಕೇಸುಗಳ ವಿಚಾರ ಪ್ರಸ್ತಾಪಿಸಿದೆ ಆ ಲೇಖನ ಬಂದ ತಾರೀಕಿನಲ್ಲಿ ಯಾವ ಕೇಸು ಇತ್ಯರ್ಥವಾಗಿತ್ತೋ ಅವನ್ನು ಮಾತ್ರ ಪತ್ರಿಕೆಯವರು ಟೀಕಿಸಿದ್ದಾರೆ, ಅದುದರಿಂದ ಅದು ಕಂಟೆಂಪ್ಟ್ ಆಫ್ ಕೋರ್ಟಿನ ಕಾನೂನಿಗೆ ಒಳಗಾಗುವುದಿಲ್ಲ ಎಂದು ತೀರ್ಪಿತ್ತರು. ಗೌ। ಅಡ್ವೋಕೇಟರ ಅರ್ಜಿ ವಜಾ ಆಯಿತು. ಈ ಕೇಸು ಬಹಳ ಸ್ವಾರಸ್ಯವಾಗಿತ್ತು ಮತ್ತು ಇದು ನಡೆಯುತ್ತಿದ್ದ ಕಾಲದಲ್ಲಿ ಕೋರ್ಟು ಹಾಲಿನಲ್ಲಿ ಪತ್ರಿಕೋದ್ಯೋಗಿಗಳೂ ಇತರರೂ ತುಂಬಿದ್ದರು. ಈ ರೀತಿ ಅರ್ಜಿ ಸಲ್ಲಿಸುವುದು ಸಂಸ್ಥಾನದಲ್ಲಿ ಇದೇ ಪ್ರಥಮ.

ಶ್ರೀ. ಕೆ. ಶಂಕರನಾರಾಯಣ ರಾಯರಿಗೆ ಗೌರವ—ಪ್ರಪಂಚದ ಚೀಫ್ ಸ್ಕೌಟರಾದ ಲಾರ್ಡ್ ಬೇಡನ್ ಪೋವೆಲ್‌ರವರು ಮೈ। ಸಂ। ದ ಚೀಫ್ ಸ್ಕೌಟ್ ಕಮಿಷನರಾದ ಪ್ರೊ। ಶ್ರೀ। ಕೆ. ಶಂಕರ ನಾರಾಯಣ ರಾಯರಿಗೆ ಸಿಲ್ವರ್ ಉಲ್ಫ್ ದಯಪಾಲಿಸಿ ಗೌರವಿಸಿರುವುದು. ಮೈ। ಸಂ। ಮತ್ತು ಜ। ಕರ್ನಾ ಕೋಲಿಗೆ ಮುಂದಿನ ದೊರೆತಿದೆ. (ರಾ। ಅಸ್। ಚೀಸಂಟ್ ಸರ್ ತೊಗೊಲ್ಯಾಸ್ ಯಂಗ್ ಮತ್ತು ಈಗಿರುವ ವೈಸರಾಯರಿಗೆ)

WAR or NO WAR.

NAVAYUGA, the Paper of the people keeps to its programme and announces its JAYANTHI SPECIAL on 22-8-'40 in connection with the Avathar Day of LORD SRI KRISHNA

Jayanthi Special hardly needs any introduction. The importance of this Number to an Advertiser is unbounded. A campaign of Publicity through the special Number attracts innumerable persons in and out of season. Therefore send your Advertisement immediately.

Rates on application.

Advt. Manager, **NAVAYUGA, UDIPI.**

"ನವಯುಗದ ಜಯಂತಿ ಸಂಚಿಕೆ" ಎಂದಿನಂತೆ ಈ ವರ್ಷವೂ **"ಶ್ರೀಕೃಷ್ಣ ಜಯಂತಿ ಸಂಚಿಕೆ"** ಎಂಬ ವಿಶೇಷ ಸಂಚಿಕೆಯು ತಾ. ೨೨—೮—೪೦ಕ್ಕೆ ಪ್ರಕಟವಾಗುವುದು.

ಜಾಹೀರಾತಿಗೆ ಉತ್ತಮ ಸಾಧನ.

ದರಗಳಿಗೆ ಬರೆಯಿರಿ.

ಭಾರತದಲ್ಲಿ ವಿಮಾನ ತಯಾರಿಕೆ—

ಭಾರತದಲ್ಲಿ ವಿಮಾನ ತಯಾರಿಕೆ ಬಗ್ಗೆ ಶ್ರೀ. ವಾಲ್‌ಚಂದ್ ಹೀರಾಚಂದರು, ಕೆಲವು ದಿನಗಳ ಹಿಂದೆ ಭಾರತ ಸರಕಾರ ಮತ್ತು ವೈಸರಾಯರೊಂದಿಗೆ ಮಾತುಕತೆ ನಡೆಸಿದ್ದರಷ್ಟೆ. ಇದರ ಬಗ್ಗೆ ಈ ತಯಾರಿಕೆ ಕಾರ್ಖಾನೆಯನ್ನು ಬೆಂಗಳೂರಲ್ಲಿ ಸ್ಥಾಪಿಸಲು ಏರ್ಪಾಡು ನಡೆಯುತ್ತಿರುವುದರಿಂದ ಶ್ರೀ ವಾಲ್‌ಚಂದ್ ಹೀರಾಚಂದರು ಬೆಂಗಳೂರಿಗೆ ಬಂದು ದಿವಾನರನ್ನು ಕಾರ್ಖಾನೆ ಸ್ಥಾಪಿಸುವ ಸ್ಥಳವನ್ನು ನೋಡಿಕೊಂಡು ಮುಂದಿನ ಕಾರ್ಯಕ್ರಮದ ಬಗ್ಗೆ ದೀರ್ಘಕಾಲ ದಿವಾನರೊಂದಿಗೆ ಚರ್ಚಿಸಿದರೆಂದೂ ಹೇಳಲಾಗಿದೆ. ಇಂದು ವಿಮಾನ ಉಪಯೋಗ ಜಾಸ್ತಿಯಾಗಿರುವುದರಿಂದ ಈ ತಯಾರಿಕೆ ಕಾರ್ಯವು ಸದ್ಯದಲ್ಲೇ ಪ್ರಾರಂಭವಾಗುವುದಂತೆ.

ಕರ್ನಾಟಕ ಪ್ರಮುಖ ಕನ್ನಡ ಮುಂದಾಳುಗಳ ಷಷ್ಟ್ಯಬ್ದ ಪೂರ್ತಿ ಶಾಂತಿ ಮಹೋತ್ಸವ—ನಿವೃತ್ತ ಹೈಕೋರ್ಟು ಚೀಫ್ ಜಡ್ಜ್ ರಾ। ಕೆ. ಶಂಕರ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನವರು ಕನ್ನಡಿಗರ ಪ್ರಚಂಡ ಸಭೆಯೊಂದನ್ನು ನಡೆಸಿ ಕರ್ನಾಟಕ ಮತ್ತು ಉತ್ತರ ಕನ್ನಡ ಮುಂದಾಳುಗಳಾದ ಶ್ರೀ. ಆಲೂರ್ ವೆಂಕಟರಾವ್ ಮತ್ತು ಶ್ರೀ. ಹನುಮಂತ ರಾಯರ ಅರವತ್ತನೇ ವರ್ಷದ ಹುಟ್ಟಿದ ಹಬ್ಬವನ್ನು ವಿಜೃಂಭಣೆಯಿಂದಾಚರಿಸಿ, ಸಭೆಯಲ್ಲಿ ಅನೇಕರು ಭಾಷಣಮಾಡಿ ಶ್ರೀಯುತರುಗಳ ಸೇವೆ ಪ್ರಶಂಸೆಮಾಡಿ ಅವರುಗಳನ್ನು ಅಭಿನಂದಿಸಿ ಬಹುಕಾಲ ಬಾಳಲೆಂದು ಪರಮಾತ್ಮನನ್ನು ಪ್ರಾರ್ಥಿಸಲಾಯಿತು

ಹೈಕೋರ್ಟಿನಲ್ಲಿ ಒಂದು ಸ್ವಾರಸ್ಯ ಮೊಕದ್ದಮೆ—ಸೋಸಲೆಯಲ್ಲಿರುವ ವ್ಯಾಸರಾಯ ಮಠವೇ ಸರಿಯಾದ ಪಕ್ಕ್ಯಳ್ಳ ಮಠ. ತಮ್ಮ ಮಠಕ್ಕೆ ಮಾತ್ರ ಈ ಹೆಸರು ಸಲ್ಲತಕ್ಕದ್ದು, ಇದರ ಗೌರವವು ತಮಗೆ ಸಲ್ಲತಕ್ಕದ್ದು, ಆದುದರಿಂದ ಕುಂಭಾಪುರ ಮಠವು ಶ್ರೀ ವ್ಯಾಸರಾಯ ಮಠವೆಂದು ಕರೆಸಿಕೊಳ್ಳಲಾಗದಂತೆ ಆಜ್ಞೆಯಾಗಬೇಕು." ಹೀಗೆಂಬುದಾಗಿ ತಿರುಮಕೂಡಲು ನರಸೀಪುರ ಬಳಿ ಸೋಸಲೆಯಲ್ಲಿರುವ ಶ್ರೀ ವ್ಯಾಸರಾಯ ಮಠದ ಮುಖ್ಯಾಧಿಕಾರಿಗಳು ಶ್ರೀವಿದ್ಯಾಪಾರಿಧಿ ತೀರ್ಥ ಸ್ವಾಮಿಗಳು ಚನ್ನಪಟ್ಟಣ ತಾಲೂಕು ಅಬ್ಬೂರು ಕುಂಭಾಪುರ ವ್ಯಾಸರಾಯ ಮಠ ಸ್ವಾಮಿ ಅಧಿಪತಿ ಶ್ರೀ. ಲಕ್ಷ್ಮೀ ಮನೋಜ್ಞತೀರ್ಥ ಸ್ವಾಮಿಗಳ ಮೇಲೆ ಕೋರ್ಟಿನಲ್ಲಿ ಒಂದು ಮೊಕದ್ದಮೆ ದಾವ ಹೂಡಿದ್ದರು. ಈ ಮೊಕದ್ದಮೆ ಕೆಳಕೋರ್ಟುಗಳಲ್ಲಿ ವಿಚಾರಣೆಯಾಗಿ ಪ್ರತಿವಾದಿ (ಅಬ್ಬೂರು) ಸ್ವಾಮಿ ಕಡೆಯವರು ಗೆದ್ದ ನಡೆಸಲು ಮೊಕದ್ದಮೆ ತಮ್ಮ ಕಡೆಯೇ ಆಗಿ ವಾದಿ (ಸೋಸಲೆ ಸ್ವಾಮಿ)ಗಳೊಳಗೆ ಅಪಜಯ ಉಂಟಾಯಿತು ನಂತರ ಮತ್ತೆ (ಸೋಸಲೆ ಸ್ವಾಮಿ) ಕಡೆಯವರು ಹೈಕೋರ್ಟಿನಲ್ಲಿ ಕೆಳಕೋರ್ಟಿನ ತೀರ್ಪಿನ ಬಗ್ಗೆ ಅಪೀಲ್ ಹೋಗಲು ಹೈಕೋರ್ಟಿನಲ್ಲಿ ಉಭಯ ಪಕ್ಷದವರಿಗೂ ಬಲವಾದ ವಾದವಿವಾದಗಳು ಜ। ಅಬ್ದುಲ್ ಗನಿ ಮತ್ತು ಶ್ರೀ. ಸುಬ್ರಹ್ಮಣ್ಯಯ್ಯರವ ಮುಂದೆ ನಡೆಯಲು ಈ ನ್ಯಾಯಾಧೀಶರುಗಳು ಈ ಮಠಗಳ ಪೂರ್ವ ಚರಿತ್ರೆಯನ್ನು ಬಹಳ ಕೂಲಂಕಷವಾಗಿ ವಿಚಾರಿಸಿ ಕೆಳಕೋರ್ಟಿನಲ್ಲಿ ಕೋರ್ಟಿನಲ್ಲಿ ಕೊಟ್ಟಿದ್ದ ತೀರ್ಪನ್ನು ತಳ್ಳಿಹಾಕಿ ವಾದಿ (ಸೋಸಲೆ)ಗಳ ಕಡೆಯವರ ನ್ಯಾಯವು ಸರಿಯಾದುದೆಂದೂ ಅವರು ತಮ್ಮ ಅರ್ಜಿಯಲ್ಲಿ ಸಲ್ಲಿಸಿರುವುದು ಸರಿ ಎಂದು ತಿಳಿಸಿ ವಾದಿಗಳ ನ್ಯಾಯವು ಸರಿಯೆಂದು ಹೇಳಿ, ಸೋಸಲೆ ಮಠವೇ ಮುಖ್ಯ ವ್ಯಾಸರಾಯ ಮಠವೆಂದು ತೀರ್ಪಿತ್ತು ತಿಳಿಸಿ ಜಾಪ್ಪಿಸಿರುತ್ತಾರೆಂದೂ ಹೇಳಲಾಗಿದೆ.

ಸುಭಾಸರ ದಸ್ತಗಿರಿಗೆ ವರ್ಕಿಂಗ್ ಕಮಿಟಿಯ ಮರುಮಾತಿಲ್ಲವೇಕೆ?

ಮಹಾತ್ಮಾ ಗಾಂಧಿಯವರ ಉತ್ತರ.

"ನಾನು ವಾರ್ಧಾಭಿಮುಖವಾಗಿ ಪ್ರಯಾಣ ಮಾಡುತ್ತಿದ್ದಾಗ ನಾಗಪುರ ಸ್ಟೇಶನಿನಲ್ಲಿ ಒಬ್ಬ ತರುಣ "ವರ್ಕಿಂಗ್ ಕಮಿಟಿಯು ಸುಭಾಸ ಬಾಬುಗಳ ಕೈದಿನ ಕಡೆಗೆ ಗಮನವನ್ನೇ ಕೊಡಲಿಲ್ಲವೇಕೆ?" ಎಂದು ನನ್ನನ್ನು ಪ್ರಶ್ನಿಸಿದ. ನಾನಾಗ ಮೌನದಲ್ಲಿದ್ದುದರಿಂದ ಯಾವ ಉತ್ತರವನ್ನೂ ಕೊಡಲಿಲ್ಲ. ಆದರೆ ಈ ವಿಚಾರಾತ್ಮಕ ಪ್ರಶ್ನೆಯನ್ನು ನೋಟ್ ಮಾಡಿಕೊಂಡೆ. ನಾಗಪುರದಲ್ಲಿ ತರುಣನು ಹಾಕಿದ ಈ ಪ್ರಶ್ನೆಯನ್ನು ದೇಶದ ಲಕ್ಷಾವಧಿ ಜನರು ತಮ್ಮೊಳಗೇನೆ ಪ್ರಶ್ನಿಸಿಕೊಳ್ಳುತ್ತಿದ್ದಾರೆಂಬ ಕುರಿತು ನನಗಾವ ಅನುಮಾನವೂ ಇಲ್ಲ.

ಕಮಿಟಿಗೆ ಸಂಬಂಧವಿಲ್ಲ

ಸುಭಾಸ ಬಾಬುಗಳು ಎಡೆಬಿಡದೆ ಎರಡು ಬಾರಿ ಆರಿಸಿಬಂದ ಕಾಂಗ್ರೆಸಿನ ರಾಷ್ಟ್ರಪತಿಗಳೆಂಬುದು ನಿಜ. ಅವರು ಜನ್ಮತಃ ಧುರೀಣರು. ಈ ಗುಣಗಳು ಮಾತ್ರವೇ ದಸ್ತಗಿರಿಯ ನಿಷೇಧಕ್ಕೆ ಆಧಾರಗಳಾಗಲಾರವು. ರೀತಿನೀತಿಯು ಮೇಲಿಂದ ಖಂಡನಾರ್ಹವಾಗಿದ್ದಲ್ಲಿ, ಅದರ ಕಡೆಗೆ ಗಮನವೀಯಲು ವರ್ಕಿಂಗ್ ಕಮಿಟಿ ಬದ್ಧವಿದೆ. ಸುಭಾಸ ಬಾಬು ಕಾಂಗ್ರೆಸಿನ ಒಪ್ಪಿಗೆ ಪಡೆದು ಕಾಯಿದೇ ವಿರುದ್ಧ ವರ್ತನೆ ಕೈಗೊಂಡುದಲ್ಲ. ಅವರು ಯಥಾರ್ಥತೆ ಮತ್ತು ಧೈರ್ಯದೊಡನೆ ವರ್ಕಿಂಗ್ ಕಮಿಟಿಯನ್ನೂ ಇದಿರಾಡಿದ್ದಾರೆ. ಅವರು ಸದ್ಯಸ್ಥಿತಿಯಲ್ಲಿ, ಉಪಾಂಗವಾಗಿ ಒಂದು ಹೋರಾಟವೆಬ್ಬಿಸಲು ಸಮ್ಮತಿಯನ್ನಪೇಕ್ಷಿಸಿದ್ದರೂ ನನ್ನಭಿಪ್ರಾಯದಲ್ಲಿ ವರ್ಕಿಂಗ್ ಕಮಿಟಿಯು ಒಪ್ಪಿಗೆಕೊಡಲು ನಿರಾಕರಿಸುತ್ತಿತ್ತು. ಹೆಚ್ಚಿನ ಪ್ರಾಮುಖ್ಯತೆಯಿರುವ ನೂರಾರು ವಿಷಯಗಳನ್ನು ತೀರ್ಮಾನಕ್ಕಾಗಿ ಎತ್ತಿ ಹಿಡಿಯಲು ಸಾಧ್ಯವಿದೆ. ಆದರೆ ಪ್ರಕೃತ ದೇಶದ ಲಕ್ಷ್ಯವು ಅತ್ಯಗತ್ಯವಾದ ಒಂದೇ ವಿಷಯದಲ್ಲಿ ಕೇಂದ್ರೀಕರಿಸಲ್ಪಟ್ಟಿದೆ. ಹೀಗಾಗಿ ಮೇಲಿನ ವಿಷಯದ ಕುರಿತು ಕಮಿಟಿಯೇನಾದರೂ ಕಾರ್ಯ ಕೈಕೊಳ್ಳುತ್ತಿದ್ದರೆ, ಅದೊಂದು ಅಸಂಗತವೆನಿಸುತ್ತಿತ್ತು. ಕಮಿಟಿಯು ಹಾಗೆ ಮಾಡಲಿಲ್ಲ.

ಸುಭಾಸರ ಹಾದಿ ತಪ್ಪು

ನಾನು ತರುಣನ ಆಕ್ಷೇಪವನ್ನು ಅಲಕ್ಷ್ಯಿಸಿಬಿಡಬಹುದಿತ್ತು. ಆದರೆ ಈ ದಸ್ತಗಿರಿಯ ಸ್ಥಾನವನ್ನು ಇದ್ದಂತೆ ಇಲ್ಲಿ ತೋರಿಸಿಕೊಟ್ಟರೆ ಕೇಡೇನೂ ಇಲ್ಲವೆಂದು ನಾನು ಭಾವಿಸಿದೆ. ಸುಭಾಸ್ ಬಾಬುಗಳಂತಹ ದೊಡ್ಡ ಮನುಷ್ಯರ ಬಂಧನವೆಂದರೆ ಅದೊಂದು ಸಣ್ಣ ಸಂಗತಿಯಲ್ಲ. ಆದರೆ ಸುಭಾಸರು ತಮ್ಮ ಹೋರಾಟದ ಯೋಜನೆಯನ್ನು ದೃಢವಾಗಿ ಮತ್ತು ಎದೆಗಾರಿಕೆಯಿಂದ ಮುಂದರಿಸಿದರು. ತನ್ನ ಹಾದಿಯೇ ಸರಿಯಾದುದೆಂದು ಅವರ ಭಾವನೆ, ವರ್ಕಿಂಗ್ ಕಮಿಟಿಯು ತಪ್ಪುಪಥಹಿಡಿದಿದೆ ಮತ್ತು ಅದರಿಂದೇನೂ ಆಗುವಂತಿಲ್ಲವೆಂದು ಅವರಲ್ಲಿ ಯಥಾರ್ಥ ಭಾವನೆಯಿದೆ. ವರ್ಕಿಂಗ್ ಕಮಿಟಿಯಿಂದ ಮಾಡಲಾಗದುದನ್ನು ತಾನು ಮಾಡಿತೋರಿಸುವೆನೆಂದು ಅವರು ನನ್ನೊಡನೆ ಸ್ನೇಹಪೂರ್ವಕವಾಗಿ ಹೇಳಿದ್ದರು. ತಡವಾಗುವದರ ಕುರಿತು ಅವರಲ್ಲಿ ಅಸಹಿಷ್ಣುತೆಯಿತ್ತು. ಹಂಚಿಕೆಯು ಪರಿಣಾಮವಾಗಿ ನನ್ನ ಜೀವಮಾನ ಕಾಲದಲ್ಲೇ ಸ್ವರಾಜ್ಯ ದೊರೆತರೆ, ನೀವು ಮೊದಲನೆಯದಾಗಿ ನನ್ನ ಧನ್ಯವಾದದ ಟೆಲಿಗ್ರಾಮು ಪಡೆಯಲಿರುವಿರಿ ಎಂದು ನಾನವರಿಗೆ ಹೇಳಿದೆ. ಅವರು ತನ್ನ ಚಳವಳ ನಡೆಸುತ್ತಿರುವಾಗಲೇ ನಾನು ಮತಾಂತರಹೊಂದುವಂತಾದರೆ ಅವರನ್ನು ನನ್ನ ನಾಯಕರೆಂದು ಮನಃಪೂರ್ವಕವಾಗಿ ಒಪ್ಪಿಕೊಂಡು ಅವರ ಧ್ವಜದಡಿಯಲ್ಲಿ ಸೇರುವವನಿದ್ದೇನೆ. ಆದರೆ ನಿಮ್ಮ ಹಾದಿ ತಪ್ಪೆಂದು ನಾನು ಅವರನ್ನು ಎಚ್ಚರಿಸಿದೆ.

ಕಾಂಗ್ರೆಸಿನ ರೀತಿ ನೀತಿ

ಹೇಗಿದ್ದರೂ ನನ್ನ ಅಭಿಪ್ರಾಯವು ಪ್ರಾಮುಖ್ಯವಲ್ಲ. ಸುಭಾಸ್ ಬಾಬುಗಳಿಗೆ ತನ್ನ ಪ್ರತ್ಯೇಕವಾದ ಕಾರ್ಯ ರೀತಿಯು ಸರಿಯಾದುದೆಂದಿರುವವರೆಗೆ ಹಾಗೆ ಮಾಡಲು ಅವರಿಗೆ ಹಕ್ಕಿದೆ; ಅದು ಅವರ ಕರ್ತವ್ಯವಾಗಿದೆ. ಅವರು ಸಂಪೂರ್ಣವಾಗಿ ಕಾಂಗ್ರೆಸನ್ನು ಬಿಟ್ಟರೆ ತನ್ನ ರೀತಿಯಲ್ಲಿ ಇನ್ನಷ್ಟು ನ್ಯಾಯ ತೋರಿಸಿದಂತಾಗುವದೆಂದು ನಾನವರಿಗೆ ಹೇಳಿದೆ. ನನ್ನ ಬೋಧನೆಯು ಅವರಿಗೆ ಮಾರ್ಗದರ್ಶಕವಾಗಲಿಲ್ಲ. ಹೀಗಿದ್ದರೂ ಅವರ ಪ್ರಯತ್ನವು ಜಯಶೀಲವಾಗಿ ಹಿಂದೂದೇಶವು ಸ್ವಾತಂತ್ರ್ಯಪಡೆಯುವಂತಾದರೆ ಅವರು ದಂಗೆಯೆದ್ದುದು ನ್ಯಾಯವೆಂದಾಗುವದು. ಮತ್ತು ಕಾಂಗ್ರೆಸು ಅವರನ್ನು ಖಂಡಿಸದಿರುವದು ಮಾತ್ರವಲ್ಲ, ರಕ್ಷಕರೆಂದು ಸ್ವಾಗತವನ್ನು ಕೂಡ ಕೊಡುವದು. ಸತ್ಯಾಗ್ರಹದಲ್ಲಿ ಜೈಲು ಪ್ರವೇಶವೊಂದು ಬಹುಮಾನವಾಗಿದೆ. ಚಾಲ್ತಿ ಕಾನೂನುಗಳ ಉಲ್ಲಂಘನೆಗಾಗಿ ನಡೆದ ದಸ್ತಗಿರಿಗೆ ನಿಷೇಧ ಸೂಚಿಸುವಂತಿಲ್ಲ. ಅದಕ್ಕೆ ಬದಲು ಕೈದಿಗೊಳಗಾದವರನ್ನು ಅಭಿನಂದಿಸಿ, ಅವರನ್ನನುಸರಿಸುವಂತೆ ಕಾಂಗ್ರೆಸಿನವರಿಗೆ ಸೂಚನೆಕೊಡುವ ವಾಡಿಕೆ. ಸುಭಾಸ್ ಬಾಬುಗಳ ಪ್ರಸಂಗದಲ್ಲಿ ಕಾಂಗ್ರೆಸು ಹಾಗೆ ಮಾಡಲಾರದೆಂಬುದು ಕಾರಣಯುಕ್ತವಾದುದು. ಈ ಮೊದಲು ಮುಖ್ಯ ಕಾಂಗ್ರೆಸ್ ಕೆಲಸಗಾರರು ಹಲವರ ದಸ್ತಗಿರಿಯ ಸಂದರ್ಭದಲ್ಲಿ ಕಾಂಗ್ರೆಸು ಕಮಿಟಿಯು ಯಾವ ವಿಚಾರವನ್ನೂ ಮಾಡಿಲ್ಲವೆಂಬುದನ್ನು ಗಮನಕ್ಕೆ ತರುತ್ತೇನೆ. ಇದಕ್ಕೆ ಅಂಥವರ ಕುರಿತು ಕಮಿಟಿಗಾವ ಭಾವನೆಯೂ ಇಲ್ಲವೆಂಬ ಅರ್ಥವಲ್ಲ. ಆದರೆ ಜೀವನ ಹೋರಾಟದಲ್ಲಿ ಹಲವು ವಿಷಯಗಳ ಕಡೆಗೆ ಬರಿಯ ಗಮನವನ್ನಷ್ಟೇ ಕೊಡುತ್ತಾಹೋಗುವದು ತಪ್ಪಾಗುವದು. ವಿಷಯವೂ ದೃಢವಾದುದಿದ್ದು, ಅದಕ್ಕೆ ಕೊಡುವ ಲಕ್ಷ್ಯವೂ ಬಲವಾದುದಿದ್ದರೆ ಅದು ಮಾತ್ರವೇ ವಿರೋಧಕ್ಕಾಸದಳವೆನಿಸುವದು.

ಓರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲ್ಯಾಫ್

ಸ್ಥಾಪನೆ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನ ಕಾರ್ಯಾಲಯ—ಮುಂಬಯಿ

ನಿಮ್ಮನ್ನು ಆಶ್ರಯಿಸಿಕೊಂಡಿರುವವರಿಗೆ, ಮುಪ್ಪಿನಲ್ಲಿ ನಿಮಗೆ ಮತ್ತು ನಿಮ್ಮನ್ನು ಹೊಂದಿಕೊಂಡಿರುವವರಿಗೆ ಮುದ್ದಿಗಾಗಿ ಪರಾವಲಂಬಿಗಳಾಗದೆ ತಕ್ಕಷ್ಟು ಆರ್ಥಿಕ ಸ್ವಾತಂತ್ರ್ಯವು ನಿಸ್ಸಂದೇಹವಾಗಿ ದೊರಕುವಂತಹ ನಿಧಿಯು ಕ್ಲಪ್ತ ಅವಧಿಗಳ ಚಿಕ್ಕಪಾವತಿಗಳಿಂದ ನಿಶ್ಚಯವಾಗಿ ಬೆಳೆದು ಬರುವಂತೆ ಮಾಡುವ ಏಕಮಾತ್ರ ಸಾಧನವೆಂದರೆ ಜೀವವಿಮೆ ಮಾಡುವುದೇ.

ಯೋಗ್ಯಾಯೋಗ್ಯತೆಯನ್ನು ಪರಿಶೀಲಿಸಬಲ್ಲ ಸಾವಿರಾರುಮಂದಿ ಪ್ರತಿ ವರ್ಷವೂ "ಓರಿಯಂಟಲ್" ನಲ್ಲೇ ತಮ್ಮ ಜೀವವಿಮೆಮಾಡಿ ತಮ್ಮನ್ನು ಅವಲಂಬಿಸಿಕೊಂಡಿರುವವರಿಗೂ ವೃದ್ಧಾಪ್ಯದಲ್ಲಿ ತಮಗೂ ತಮ್ಮ ಆಶ್ರಿತರಿಗೂ ಆರ್ಥಿಕ ಸ್ವಾತಂತ್ರ್ಯದ ತಳಹದಿ ಹಾಕುತಿದ್ದಾರೆ.

ನೀವೇಕೆ ಕಾಲಹರಣ ಮಾಡುವಿರಿ?

ಇಂದೇ ಓರಿಯಂಟಲಿನ ಒಂದು ವಿಮಾಪತ್ರ ಹೊಂದಿರಿ!

ವಿಷಯ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ದಿ ಇನ್ಸ್‌ಪೆಕ್ಟರ್,
ಓರಿಯಂಟಲ್ ಲ್ಯಾಫ್ ಆಫೀಸು,
ಮೈನ್‌ರೋಡ್, ಮಡಿಕೇರಿ, (ಕೊಡಗು.)

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲ್ಯಾಫ್ ಆಫೀಸು,
ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು.

ORIENTAL

GOVERNMENT SECURITY LIFE ASSURANCE CO., LTD.

ಟೀಕ್ಸ್ ಮತ್ತು ಹೊಗೆಸೊಪ್ಪು
ತರ ವಿಕ್ರಯ ಟೀಕ್ಸ್‌ಗಳು.

ಟೀಕ್ಸಿನ ಕಾಯಿದೆಯಲ್ಲಿ 1-4-39ರಿಂ ನ್ಯಾಯಸಗಳಾಗಿವೆ. ಹೊಸತಾದ ವಿಕ್ರಯ ಟ್ಸ್‌ಗಳಲ್ಲಿಯೂ ವ್ಯಾಪಾರಸ್ಥರು ತೀರಿಸ ಬಡತನ ವಿಷಯಗಳು ಅನೇಕ ಇವೆ. ಕ್ರ ಮಾ ಪರ್ಜಿನ ಟಿಪ್ಪಣಿದ್ದರೂ ಸಾಲದು. ತಯಾರಿಸಿದ ಸಾರಾಂಶದ ನಿಜಪ್ರತಿ ಕೆಲ ಗಳಲ್ಲಿ ತನ್ನ ಯ ಅಧಿಕಾರಿಗೆ ಒಪ್ಪಿಗೆಯೂ ಅಂಥಾ ಛೇಟಿಗಳ ಸಮಯದಲ್ಲಿಯೂ ವಿನಾಯತಿಗಳನ್ನು ಹೊಂದಿಕೊಳ್ಳಬೇ ಲಿನ ಟೀಕ್ಸ್‌ಗಳನ್ನು ಕೊಡಬೇಕಾಗುವ ಕಾಣಿಸಿದವರಿಂದ ಅನ.ಭವಸದೆ ಅಧಿ ಸ್ಥಿತಿಯ ನ್ನು ಸಮಾಧಾನಪಡಿಸ ಕಾಯ ಬೇಕಾದ ಎಲ್ಲಾ ತರದ ಸವಲತ್ತುಗಳ ನ ಹೊಂದಬಹುದು. ಪರಿಣಾಮವಾಗಿ ಕೊಡಬೇಕಾಗುವ ಟೀಕ್ಸು ಕಮ್ಮಿಯಾಗುವು ಪ್ರಕಾರ ಟೀಕ್ಸು ಕೊಡಬೇಕಿಲ್ಲವಂ ಸಾಮಾಗಬಹುದು. "ರಿಟರ್ನ್" ಳನ್ನ ಗಿದ್ದರೂ ತಡವಾಗಲಿಲ್ಲಿಟ್ಟ ಹಾಜರು 15 ದಿವಸಗಳ ಮುಂಚೆಯಾದರೂ ಕೆಳಗೆ ಸಿದವರೊಡನೆ ಪತ್ರ ವ್ಯವಹಾರ ನಡಿಸಿರಿ.

ಎಸ್. ಎಸ್. ಪುರಾಣಿಕ್,
ಇನ್ಕಮ್ ಟೀಕ್ಸ್ ಪ್ರಾಕ್ಟೀಶನರ್,
ಸ್ಟಾ ರೆಸ್ಟೋರೆಂಟ್ ಬಿಲ್ಡಿಂಗ್,
ಹಂಪನಕಟ್ಟೆ, ಮಂಗಳೂರು.

NOTICE.

…n the court of the
…ict Munsif of Karkal.
S. C 113/1940

…Keshava Iengar *Plaintiff.*
and
…Shastri– *Defendant.*

…Shastri, son of C. Seetharama … the Nuro Touring Talkies, now … in Mangalore town and working … Chitra Talkies, Mangalore. …se take notice, that the above-…plaintiff has instituted a suit …to recover the amounts due …demand promissory note execut-…on 17-6-1937 in his favour and … stands posted to .9-7-1940 in … Court. If you fail to appear on …at 10 A. M. before the said court …sonally or through a pleader and …objections if any, you will be …exparte and the suit will disposed …ingly.

By order of the Court.

…rkal) B Vasudeva Rao, *Advocate*
…-40) H. S. Hussain, *Vakil*

…ಾಮುದ್ರಾಯಿ"
…ಶಕತ್ವವನ್ನು ಹೋಗಲಾಡಿಸು …ಧಾತು ಕ್ಷೀಣತೆ, ನಪುಂಸಕ …ರಿ ಮೊದಲಾದ ಅನೇಕ ಕೆಟ್ಟ …ದುಷ್ಟರೋಗಗಳನ್ನು ಒಮ್ಮೆಯ …ಮುಂದಲೇ ನಿಲ್ಲಿಸುತ್ತದೆ.

…ನಾ ಟೋನಿಕ್ ಪಿಲ್ಸ್"
…ರ ಸೇವನೆಯಿಂದ ನವಚೇತನ …ಗುತ್ತದೆ.

…ಔಷಧಗಳು ಸರ್ವಪ್ರಕಾರದ …ಲಾಯತಿ, ಯುನಾನಿ ಪೇಟೆಂ …ಸ್ಪತಿ ಮತ್ತು ರಸಾಯನ ಅನು

…ರೂ. 3-0-0 ಡಬ್ಬಿ 0-8-0

ಸೊರತ್ ಫಾರ್ಮಸಿ,
…ನಲ್ ಬಜಾರ್, ಡಂಕನ್ ರೋಡ್,
ಮುಂಬಾಯಿ. 4

Sorath Pharmacy,
…l Bazzar, Duncan Road,
BOMBAY 4.

ಯೂರೋಪಿನ ಮೇಲೆ ನಾಜಿ-ಫೇಸಿಸ್ಟರ ಛತ್ರಿ ಛಾ…

ಸಣ್ಣ ರಾಷ್ಟ್ರಗಳೇ ಇರಕೂಡದೆಂಬ ಹಂಚಿಕೆ.

ಫ್ರಾನ್ಸಿನಲ್ಲಿ ಹೊಸ ರೀತಿಯು, ಅಂದರೆ ನಾಜೀ ಆಳ್ವಿಕೆಯನ್ನು ಹಲವು ರೀತಿಯಿಂದ ಹೋಲುವ ಹೊಸ ರಾಜ್ಯಭಾರಪದ್ಧತಿ ಬಂದರೂ ಇದರಿಂದ ಇಟಲಿ-ಜರ್ಮನಿಗಳು ಸಮಾಧಾನಗೊಂಡಿರುವಂತೆ ಕಾಣುವದಿಲ್ಲ. 'ವಿರೋಧ ಸಾಧಿಸಿದವನು ಎಂದೆಂದಿಗೂ ವಿರೋಧಿಯೇ' ಎಂಬ ಅಭಿಪ್ರಾಯವನ್ನು ಅವು ಕಟ್ಟಿಕೊಂಡಿರುವಂತೆ ಕಾಣುತ್ತದೆ. ಇಟಲಿ ಜರ್ಮನಿ ಪತ್ರಿಕೆಗಳು ಒಂದೇಸವನೆ ಫ್ರಾನ್ಸಿಗೆ ಎಚ್ಚರಿಕೆ ಕೊಡಹತ್ತಿವೆ. ಫ್ರಾನ್ಸನ್ನು ಜಯಿಸಿದ ಹಿಟ್ಲರನು ಹೆಜ್ಜೆ ಮುಂದಿಡಲು ಶಂಕಿಸುತ್ತಾನೆಂದು ಊಹಿಸಲು ಯಾವ ಅವಕಾಶವೂ ತೋರುವದಿಲ್ಲ ಬವರಿಗೆ, ಬರ್ಲಿನ್ನಿಗೆ ಬಂದು, ಪ್ರಮುಖರೊಡನೆ ನಡೆಯಿಸಿದ ಮಾತುಕತೆ, ಇಟಲಿ, ಜರ್ಮನಿಯ ಪ್ರಮುಖ ಮುತ್ಸದ್ದಿಗಳ ಆಗಮನ-ನಿರ್ಗಮನದ ಮೇಲಿಂದ, ಮುಂದಿನ ಯುದ್ಧ ರೀತಿ ಹಾಗೂ ಆಡಳಿತ ಸ್ಥಾಪನೆಯ ಕುರಿತು ನಾಜೀ-ಫೇಸಿಸ್ಟರೊಳಗೆ ಸ್ಥಿರವಾದ ಯೋಜನೆಯೊಂದು ತಯಾರಿಸಲ್ಪಟ್ಟಿದೆ ಎನ್ನಬಹುದು. ಫ್ರಾನ್ಸಿನಲ್ಲಿ ಪೆಟೈನರು ಹೊಸ ಸರಕಾರವನ್ನು ಜಾರಿಗೆ ತಂದ ಸಂದರ್ಭವನ್ನುಪಯೋಗಿಸಿ ಯುರೋಪಿನಲ್ಲಿ ಸರ್ವಾಧಿಕಾರಿಗಳ ಮುಂದಿನ ಧೋರಣೆ ಹೇಗಿರಬಹುದೆಂಬುದರ ಕುರಿತು ಇಟಲಿ ಜರ್ಮನಿ ಪತ್ರಿಕೆಗಳು ಕೆಲವು ಸಂಗತಿಗಳನ್ನು ಹೊರಹಾಕಿವೆ.

ಫ್ರಾನ್ಸಿಗೆ ಎಚ್ಚರಿಕೆ

ಇಟಲಿಯ ಅಧಿಕಾರೀ ಪತ್ರಿಕೆಯೊಂದು ಇಂದಿನಿಂದ ಕೆಲವು ವಾರಗಳೊಳಗೆ ಇಂಗ್ಲಂಡಿನ ವಿನಾಶದ ದಿನ ಬರುವದು ಖಂಡಿತವೆಂದು ಹೇಳುತ್ತಾ ಹೀಗೆನ್ನುತ್ತದೆ. "ಫ್ರಾನ್ಸು ಫೇಸಿಸ್ಟ ಅಥವಾ ಫೇಸಿಸ್ಟೇತರ ರಾಜ್ಯವಾಗಿ ಇರಬಹುದು. ಆದರೆ 'ಎಕ್ಸಿಸ್' ರಾಷ್ಟ್ರಗಳ ವಿರುದ್ಧವಾಗಿ ಅದು ಹೂಡಿದ್ದ ಯುದ್ಧದ ದೊಡ್ಡ ಜವಾಬ್ದಾರಿಯು ಇದರಿಂದಾಗಿ ಬಿಟ್ಟುಹೋಗುವಂತಿಲ್ಲ. ಫೇಸಿಸ್‌ಮ್ ಮತ್ತು ರಾಷ್ಟ್ರೀಯ ಸಮತಾವಾದದ ಗಂಟನ್ನು ರಚಿಸುವ ಏಕೋದ್ದೇಶದಿಂದ, ಇಟಲಿ ಮತ್ತು ಜರ್ಮನಿಗಳಿಂದ ಇಂದಿನ ಯುರೋಪಿನ ಪರಿಸ್ಥಿತಿಯು ರೂಪಿಸಲ್ಪಟ್ಟಿದೆ. ಅದರಲ್ಲಿ ಸ್ಪೈಯಿನಿಗೆ ಸ್ಥಾನವಿದೆ. ಹಂಗೇರಿಯೂ ನಮಗೆ ವಿಶ್ವಾಸೀ ಸ್ನೇಹಿತನಾಗಿತ್ತು. ಅದರ ನ್ಯಾಯವಾದ ಬೇಡಿಕೆಯು ಸೌಹಾರ್ದ ಮೂಲಕ ತೀರ್ಮಾನಿಸಲ್ಪಡದಿದ್ದುದು ಅದರ ತಪ್ಪಲ್ಲ. ಬಾಲ್ಕನ್ ವಿಭಾಗದಲ್ಲಿ ನವೀನ ರೀತಿ ಸ್ಥಾಪನೆಯಾಗಬೇಕೆಂಬುದು ಖಂಡಿತ."

ಜರ್ಮನಿಯ ಸ್ವೇಚ್ಛೋದ್ದೇಶ

ನಾಜಿಗಳು ಯೋಚಿಸುತ್ತಿರುವ 'ಹೊಸ ಯುರೋಪು' ಯಾವುದೆಂಬುದರ ಕಡೆಗೆ ಜರ್ಮನಿಯ ಪ್ರಾಮುಖ್ಯ ಪತ್ರಿಕೆಯೊಂದು ಬೆಳಕು ಹಾಯಿಸಿದೆ "ಒಂದು ಸಣ್ಣ ರಾಷ್ಟ್ರವು ಜರ್ಮನ್ ರೀಚಿನ ನಾಯಕತ್ವದಲ್ಲಿ ಮತ್ತು ರಕ್ಷಣೆಯಲ್ಲಿರುವನೆಂದರೆ ಅದು ಸಂಪೂರ್ಣ ನ್ಯಾಯ ಮತ್ತು ಗೌರವಪೂರ್ಣವಾದುದು. ಈ ವರೆಗಿದ್ದಂತೆ ಹಲವು ಸಣ್ಣ ಸಣ್ಣ ತುಂಡುಗಳಾಗಿರಲು ಸಾಧ್ಯವಿಲ್ಲವೆಂಬನ್ನು ಯುರೋಪು ಸಣ್ಣದಿದೆ.

ಸ್ವಘಾತುಕಕಾರಿ ಯುದ್ಧ ಮತ್ತು ಅಂತಃಕಲಹಗಳಿಂದ ಲೋಕದಲ್ಲಿ ಯುರೋಪಿನ ಸ್ಥಾನವು ಕಳೆಕೆಯದಾಗಿದೆ"

ಗಾಂಧಿಯವರ ವಿನಂತಿಯು ಅಸಂಗೀಕಾರ

ಬ್ರಿಟಿಷರೆಲ್ಲರೂ ಅಹಿಂಸಾವ್ರತ ಕೈಕೊಂಡು ಹಿಟ್ಲರನೊಡನೆ ಅಸಹಕಾರ ಹೂಡಬೇಕೆಂದೂ ತಾನು ಈ ಕಾರ್ಯದಲ್ಲಿ ಬ್ರಿಟಿಷ್ ಸರಕಾರಕ್ಕೆ ಸಹಾಯಕೊಡಲು ಸಿದ್ಧನಿರುವೆನೆಂದೂ ಗಾಂಧಿಯವರು ಒಂದು ಹೇಳಿಕೆಯನ್ನು ಪ್ರಕಟಿಸಿದ್ದರಷ್ಟೆ. ಆ ಹೇಳಿಕೆಯ ಒಂದು ಪ್ರತಿಯನ್ನು ವೈಸರಾಯರಿಗೂ ಕಳುಹಿಸಿ, ತನ್ನ ಬಿನ್ನಹವನ್ನು ಸಂಬಂಧಪಟ್ಟವರಿಗೆ ರವಾನಿಸಬೇಕೆಂದು, ಪತ್ರ ಮೂಲಕ ಕೇಳಿಕೊಂಡಿದ್ದರು. ಅದಕ್ಕೆ ಜುಲಾಯಿ ತಾ. 10ರಲ್ಲಿ ವೈಸರಾಯ್ ಲೋರ್ಡ್ ಲಿನ್ಲಿತ್ಗೋ ಇವರ ಉತ್ತರ ಬಂದಿದೆ. ತಾನದನ್ನು ಬ್ರಿಟಿಷ್ ಗವರ್ನಮೆಂಟಿಗೆ ಕಳುಹಿಸಿದೆ. ನಿಮ್ಮ ಭಾವನೆಯನ್ನು ಶ್ಲಾಘಿಸುವದಾದರೂ, ಇಡೀ ಸಾಮ್ರಾಜ್ಯವನ್ನು ಜತೆಗೂಡಿ ವಿಜಯ ಸಂಪಾದನೆಯ ವರೆಗೆ ಯುದ್ಧ ಮುಂದೊತ್ತುವ ದೃಢ ನಿರ್ಧಾರ ಮಾಡಿರುವದರಿಂದ ನಿಮ್ಮ ಸೂಚನೆಯು ವಿಚಾರಾರ್ಹಕ್ಕ ವಿಷಯವೆಂದು ಅವರು ಭಾವಿಸುವದಿಲ್ಲವೆಂಬುದೇ ವೈಸರಾಯರ ಉತ್ತರ.

ಇಂಗ್ಲಾಂಡು ಕರಾವಳಿಯ ಮೇಲೆ ಧಾಳಿ

ಷರ್ಲ್ಸಾರ್ಥವಾಗಿ ಎಂಬಂತೆ ಇಂಗ್ಲಾಂಡಿನ ಪೂರ್ವ, ಆಗ್ನೇಯ ಭಾಗದ ಮೇಲೂ ಇತರ ಕಡೆಗಳಲ್ಲೂ ನಾಜೀ ವಿಮಾನಗಳು ಹಾರಿಬಂದು ಆಗಾಗ ಬೋಂಬು ಸುರಿಸುತ್ತಿರುವವು. ಈ ವರೆಗೆ ಹಲವು ಬಾರಿ ಇಂತಹ ಧಾಳಿಗಳು ನಡೆದಿದ್ದರೂ ಗಣನೀಯ ಹಾನಿಯೇನೂ ಆಗಿರುವದಿಲ್ಲ. ಹೆಚ್ಚಾಗಿ ಬ್ರಿಟಿಷ್ ವಿಮಾನಗಳ ಮತ್ತು ವಿಮಾನಭೇದಕ ಮಶಿನುಗನ್ನುಗಳ ಹೊಡೆತಗಳನ್ನು ತಪ್ಪಿಸಿಕೊಂಡು ಜರ್ಮನಿ ವಿಮಾನಗಳು ಹಿಂದಿರುಗಿ ಬಿಡುವವು. ಆದರೂ ಹಲವು ವಿಮಾನಗಳು ಬ್ರಿಟಿಷ್ ಗುಂಡುಗಳಿಗೆ ಬಲಿಬಿದ್ದಿವೆ. ಜೂನ್ ತಾ. 18ರಲ್ಲಿ ಜರ್ಮನರು ಇಂಗ್ಲಾಂಡಿನ ಮೇಲೆ ನಡೆಸಿದ್ದ ಸಾಮೂಹಿಕ ವಿಮಾನ ಧಾಳಿಯಿಂದ ಹಿಡಿದು ಈ ವರೆಗೆ 73 ನಾಜೀ ವಿಮಾನಗಳು ನಾಶವಾಗಿವೆಯಂತೆ. ಯುದ್ಧಾರಂಭದಿಂದ ಈ ತನಕ ಇಂಗ್ಲಾಂಡಿನ ಮೇಲೆ ಹಾರಿ ಬಂದು ನಾಶಕ್ಕೊಳಗಾದ ಜರ್ಮನ್ ವಿಮಾನಗಳು 147. ಅವುಗಳ ಪೈಕಿ ಅರೆವಾಸಿ ಕಳೆದ ಮೂರು ವಾರದಲ್ಲೇ ನಷ್ಟವಾಗಿರುವದರಿಂದ ಈ ಅವಧಿಯು ಜರ್ಮನರಿಗೆ ಹೆಚ್ಚಿನ ನಷ್ಟದಾಯಕವಾದುದೆಂದು ಬ್ರಿಟಿಷರನ್ನುತ್ತಾರೆ. ಇಂಗ್ಲಾಂಡಿನ ಏರ್.

36,000 ರೂಪಾಯಿ

16 ಸರ್ಕಾರದ ಉತ್ತರಗಳಿಗೆ ಹಂಚಲಾಗುತ್ತದೆ. ನಿಶ್ಚಿತ ಉತ್ತರದ ಸುರುವಿನ ಅಡ್ಡಸಾಲಿನ ಪ್ರಥಮದ ಎರಡು ಅಂಕೆಗಳಿಗೆ ಸರಿಯಾದ ಪ್ರತಿಯೊಂದು ಉತ್ತರಕ್ಕೆ ರೂ. 5ರಂತೆ ಹಂಚಲಾಗುವದು. ಭದ್ರವಾಗಿ ಇರಿಸಲ್ಪಟ್ಟ ಉತ್ತರದ ಮಾಪದಾದರೊಂದು ಸಾಲಿನ ಅಂಕೆಗಳಿಗೆ ಸರಿಪೆ ಬರುವಂತಹ 'ಸನ್ಲೈಟ್ ಅಪ್ಸ್' ಪ್ರತಿ ಒಂದಕ್ಕೆ ರೂ. 20ರಂತೆ ಸಮಾಧಾನಕರ ಬಹುಮಾನಗಳಿರುವವು ಇವೂ ಅಲ್ಲದೆ ನಮ್ಮ ಉತ್ತರದ ಪ್ರಥಮ ಎರಡು ಅಡ್ಡಸಾಲುಗಳ ಅಂಕೆಗಳನ್ನು ನಿರಿಸಿರುವಂತಹ ಪ್ರತಿಯೊಂದು ಉತ್ತರಕ್ಕೂ ರೂಪಾಯಿ 300ರ ಗ್ಯಾರಂಟಿ ಇದೆ. ಅತ್ಯಧಿಕ ಉತ್ತರಗಳನ್ನು ಕಳುಹಿಸುವ ಉಮೇದ್ವಾರರಿಗೆ ರೂ 150 ಹಂಚಲ್ಪಟ್ಟಿರುತ್ತದೆ.

ಚೌಕಟದಲ್ಲಿ ಅಡ್ಡ, ನೀಟ, ಮೂಲೆ ಮೂಲೆಗೆ … ಮೊತ್ತವು 34 ಆಗುವಂತೆ 6ರಿಂದ 21ರ ವರೆಗಿನ ಸಂಖ್ಯೆಗಳನ್ನು ಉಪಯೋಗಿಸುವುದು. ಒಮ್ಮೆ ಉಪಯೋಗಿಸಿದ ಸಂಖ್ಯೆಯನ್ನು ಮರಳಿ ಉಪಯೋಗಿಸಬಾರದು. ಉತ್ತರ ಕಳುಹಿಸುವ ಕೊನೆಯ ತಾರೀಕು 30-7-40

ಫಲಿತಾಂಶದ ಪ್ರಕಟಣೆಯ ತಾರೀಕು 6-8-40.

ಪ್ರವೇಶರುಸುಂ:- ಒಂದು ಉತ್ತರಕ್ಕೆ ಒಂದು ರೂಪಾಯಿ 3 ಉತ್ತರಗಳಿಗೆ ರೂಪಾಯಿ 2 ಇದಲ್ಲದೆ ಪ್ರತಿ 8 ಉತ್ತರಗಳ ಸೆಟ್ಟಿಗೆ 5 ರೂಪಾಯಿ.

ನಿಯಮಗಳು:- ತಕ್ಕ ಪ್ರವೇಶರುಸುಂನೊಂದಿಗೆ ಕಾಲಿಕಾಗದದಲ್ಲಿ ಇಚ್ಛಾನುಸಾರ ಉತ್ತರಗಳನ್ನು ಕಳುಹಿಸಬಹುದು. ಹಣವನ್ನು ಮನಿಯಾರ್ಡರ್ ಅಥವಾ ಪೋಸ್ಟಲ್ ಆರ್ಡರ್ ಮೂಲಕ ಕಳುಹಿಸಬೇಕು. ಸಂಗ್ರಹವಾಗುವ ಹಣದ ಪ್ರಮಾಣದ ಮೇಲೆ ಬಹುಮಾನಗಳ ಬದಲಾವಣೆ ಯಾಗುವುದು. ಆದರೆ ಮುಂಬಾಯಿ ಪ್ರಸಿದ್ಧ ಬೇಂಕೊಂದರಲ್ಲಿ ಭದ್ರವಾಗಿರಿಸಲ್ಪಟ್ಟ ನಿಶ್ಚಿತ ಉತ್ತರಕ್ಕೆ ಸರಿಹೋಲುವ ಪ್ರತಿಯೊಂದು ಉತ್ತರಕ್ಕೆ ಕನಿಷ್ಠ ರೂಪಾಯಿ 2250ರ ಬಹುಮಾನದ ಗ್ಯಾರಂಟಿಯಿದೆ. ಫಲಿತಾಂಶವನ್ನು ಪಡೆಯುವದಕ್ಕಾಗಿ ಅರ್ಧ ಆಣೆಯ ಸ್ಟಾಂಪು ಸಹಿತ ಲಕ್ಕೋಟೆಯನ್ನು ಕಳುಹಿಸಬೇಕು. ಮೆನೇಜರರ ನಿರ್ಣಯವೇ ಕೊನೆಯದು ಮತ್ತು ಕಾನೂನುಬದ್ಧವಾದುದೂ ಎಂಬ ವಿಷಯ ಸರ್ವರಿಗೂ ತಿಳಿದಿರಲಿ.

ಹಿಂದಿನ ಸ್ಪರ್ಧೆಯ ಫಲಿತಾಂಶ				
1ನೇ ಸಾಲು	9,	14,	7,	20
2ನೇ ಸಾಲು	8,	19,	10,	13
3ನೇ ಸಾಲು	18,	5,	16,	11
4ನೇ ಸಾಲು	15,	12,	17,	6

ನಿಮ್ಮ ಉತ್ತರ ಮತ್ತು ಪ್ರವೇಶ ರುಸುಂನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ,
ದಿ ಮೆನೇಜರ್,
ಫಾರ್ವರ್ಡ್ ಕೊಮರ್ಶಿಯಲ್ ಕೊ.,
ಝವೇರಿ ಬಜಾರ್, ಬೊಂಬಾಯಿ 2.
The Manager,
Forward Commercial Co.
Zaveri Bazar, BOMBAY 2.

ಎ. ಎಫ್ ದಳವು … ನೋರ್ವೆ, ಫ್ರಾನ್ಸ … ನ್ ಕ್ಷೇತ್ರಗಳ … ಧಾಳಿ ನಡೆಸುತ್ತಿ … ವಾಲ್‌ಹಾವೆನ್ … ಮೇಲೆ ಹಲವು ಬ … ದಿ ಎಣ್ಣೆ ಕೆರೆಗಳ … ಮೊದಲಾದ ಪ … ಮೇಲೆ ಬ್ರಿಟಿಷ್ … ಬಿದ್ದಿದೆ, ಬ್ರಿಟಿಷ … ಇನ್ನಷ್ಟು ಬಲ … ಕೆನಡಾ, ಆಸ್ಟ್ರೇಲಿಯ … ಮಾಡಿದಂತೆ ಭಾ … ತರಬೇತಿ ಕೇಂದ್ರ … ಯಿರುವದೆಂದೂ …

ಲಾಭ…

(ಶೀಘ್ರ ಬಿ…

ಕನ್ನಡ ಸಾಹಿ… ಹೆಚ್ಚ ಕನ್ನಡ … ಲು ಒಕ್ಕಯ ಹ… ಪರಿಷತ್ತಿಗೆ 25 … ಬೆಲೆಯ ಹೆಚ್ಚ… ನಾಡಿನ ಮೂಲ… ಧರಿಸುತ್ತಿವೆ … ಹೆಚ್ಚಬೇಕಾಗಿ… ರಿಗೂ ಹೆಚ್ಚದೂ… ಸಾಹಿತ್ಯ ಸರಿಷತ್… ಯೋರ್ವ ಕನ್ನ… ವಾಗಬೇಕೆಂದೇ … ಕನ್ನ ಉಚಿತ… ಅಖಿಲ ಕನ್ನ… ವಾದ, ಕರ್ನಾಟ… ಉತ್ತಮ ಕವನ… ಬೆಲೆಯ 'ಕಾವ್ಯ… ಕವನವು ತರಿಸು… ಎಂಬ ನಾಲ್ಕಾ… ಕವನಸ್ನು ಎರಡ… ದೇವರು' ಎಂಬ… ವಾಗಿ ಕೊಡುವ…

"ಸಂಜೆಯ … ಬೆಲೆಯು ಸಾಮಾ… ಮಾರವಿಗೆ 0-… ಗಳು ಎಂಬ … 'ಸನ್ಯಾಸಿ… ಬೆಲೆಯು ಸಾಮ… ರಿಗೆ 0-4-0ಕ… ಎಂಬ ಏಕಾಂತ …

'ಸಂದಾದೀಕ … ಸಣ್ಣ ಕತೆಗಳ … ರಿಗೆ 0 2-6 ಬೆ… ನಾಯ.' ಎಂಬ …

'ಮ.ಭುವನ … ಆಬೆಲೆಯು … ಒಂದೊಂದಾಗಿ… ಯು ಮಮವ… ಭಕವೈಿಂಭ…

ಈ ಯೋಜ… ಗೆ ಮಾತ್ರ … ಶೀಘ್ರವೇ ಕವ… ಸ್ಟಾಂಪು ಜ… ಸಿಕೊಳ್ಳಬೇಕಾ… ವು ಇನ್ನು ಕ…

ವಿಳಾಸ:- … ಪ್ರಸಂಗ ಉ…

ಭಾರತದ ಸಾಂಪ್ರದಾಯಿಕ ಸಮಸ್ಯೆಯು ಬಗೆಹರಿವುದೆಂತು?

ಸಾಂಪ್ರದಾಯಿಕವಾದ ಪ್ರತ್ಯೇಕ ಚುನಾವಣಾ ಪದ್ಧತಿಯು ಭಾರತವನ್ನು ಶಾಶ್ವತವಾಗಿ ಚೂರುಚೂರು ಮಾಡಿಬಿಡುವುದು. ಪ್ರಜಾಸತ್ತಾತ್ಮಕ ಪ್ರಭುತ್ವವನ್ನು ಇದರ ಆಧಾರದ ಮೇಲೆ ಸ್ಥಾಪಿಸುವುದಾದರೆ, ಎಂದಿಗೂ ಆ ರೀತಿಯ ಪ್ರಭುತ್ವವು ಬೇರೂರಲಾರದು.

—ಕರ್ನಲ್ ವೆಜ್‌ವುಡ್.

೩೫ಕೋಟಿ ಜನಸಂಖ್ಯೆಯನ್ನುಳ್ಳ ಭಾರತದಂತಹ ವಿಶಾಲ ದೇಶವು ಅತ್ಯಂತ ಸಣ್ಣದೊಂದು ವಿದೇಶೀ ಆಡಳಿತದ ಅಧೀನದಲ್ಲಿರುವುದು ಮಾನವ ಜಾತಿಯ ಒಂದು ಅದ್ಭುತವೂ ಆಶ್ಚರ್ಯಜನಕವೂ ಆದ ವಿಷಯವಲ್ಲವೇ? ಹಾಯ್, ದೌರ್ಭಾಗ್ಯವೇ, ನಮ್ಮ ಮುಂದೆ ಸ್ವಾಧೀನತೆ ಅಥವಾ ರೊಟ್ಟಿಯ ಸಮಸ್ಯೆಗಳು ಬಂದು ನಿಂತು ಅವುಗಳು ಬಗೆ ಹರಿಸಲ್ಪಡುವ ಈ ಕಾಲದಲ್ಲಿ, ಸಾಂಪ್ರದಾಯಿಕತೆಯೆಂಬ ಮೂರನೆಯ ಪ್ರಶ್ನೆಯು ಅವುಗಳ ಸ್ಥಾನವನ್ನಾಕ್ರಮಿಸಿವೆ. ಇಂದು ನಮ್ಮ ರಾಷ್ಟ್ರವು ದೀರ್ಘ ಕಾಲದ ನಿದ್ರೆಯಿಂದೆಚ್ಚೆತ್ತಿದೆ. ಇಂದು ಅದರ ಆತ್ಮವು ಸ್ವಾತಂತ್ರ್ಯದಾಹದಿಂದ ಪೀಡಿತವಾಗಿದೆ. ಅದರ ಪ್ರಾಣಗಳಲ್ಲಿ ಪುನಃ ನವ ಚೈತನ್ಯವುಂಟಾಗಿದೆ. ಅದರ ಅಂಗ ಪ್ರತ್ಯಂಗಗಳಲ್ಲಿಯೂ ಹೊಸ ಸ್ಫೂರ್ತಿಯುಂಟಾಗುತ್ತಿದೆ. ಇಂತಹ ಸಮಯದಲ್ಲಿ ಸಾಂಪ್ರದಾಯಿಕತೆಯ ಪರ್ವತವು ನಮ್ಮ ಮಾರ್ಗದಲ್ಲಿ ಅಡ್ಡಿಯಾಗಿದೆ. ಅದನ್ನು ನಿವಾರಿಸದೆ ನಾವು ಒಂದು ಹೆಜ್ಜೆ ಸಹ ಮುಂದೆ ಹೋಗಲು ಅಸಾಧ್ಯವಾಗಿದೆ.

ಆದರೆ ಇದಕ್ಕೆ ಮೊದಲು ನಾವು ಇತರರನ್ನು ದೂಷಿಸುವುದಕ್ಕಿಂತ ಮುಂಚೆ ಈ ಸಮಸ್ಯೆಯು ಜನ್ಮ ತಾಳಿದ ರೀತಿಯನ್ನು ಯೋಚಿಸೋಣ. ಭಾರತದ ರಾಜಕೀಯದಲ್ಲಿ ಈ ವಿಷ ಬೀಜವನ್ನು ಬಿತ್ತಿ, ಕಲಹ ವೆಬ್ಬಿಸಲು ಯಾರು ಜವಾಬ್ದಾರರು? ಎಲ್ಲರಿಗೂ ಗೊತ್ತಿರುವಂತೆ ಈ ವಿಷಬೀಜವನ್ನು ಬಿತ್ತಿದವನು ಲಾರ್ಡ್ ಮಿಂಟೋ. 1909ನೆಯ ಡಿಸೆಂಬರ್ ೧ರಲ್ಲಿ ಸ್ವಯಂ ಭಾರತ ಮಂತ್ರಿಯೇ ಮಿಂಟೋಗೆ ಈ ರೀತಿ ಬರೆದಿದ್ದನು— "ನಾನು ಪುನಃ ಈ ಮುಸ್ಲಿಂ ಜಗಳಕ್ಕೆ ಸಿಕ್ಕಿಕೊಳ್ಳಬಯಸುವುದಿಲ್ಲ ತಮ್ಮ ವಿಶೇಷಾಧಿಕಾರದಿಂದ ತಾವು ಕೊಟ್ಟಿರುವ ಭಾಷಣದಿಂದ, ಮುಸಲ್ಮಾನರೊಳಕ್ಕೆ ನಡೆಯುವುದನ್ನು ಕಲಿಸಿರುವಿರಿ"

ಅನೇಕ ವರ್ಷಗಳಿಂದ ಸರಕಾರ ನೌಕರಿ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಮುಸಲ್ಮಾನರಿಗೆ ವಿಶೇಷ ಆಸಕ್ತಿಯನ್ನು ತೋರಿಸಲಾಗುತ್ತಿದೆ. ಮಾರ್ಲೆಮಿಂಟೋ ಮತ್ತು ಮೊಂಟೆಗೂ ಚೆಲ್ಮ್ಸ್‌ಫರ್ಡ್ ಸುಧಾರಣೆಗಳಲ್ಲಿ ಅವರಿಗೆ ಪ್ರತ್ಯೇಕ ಚುನಾವಣಾಧಿಕಾರವನ್ನು ಕೊಟ್ಟು, ಇಂತಹ ವಸ್ತುಗಳಲ್ಲಿ ಅವರಿಗಿದ್ದ ಹಸಿವನ್ನು ಮತ್ತೂ ಹೆಚ್ಚಿಸಿದರು. ಕೊನೆಯಲ್ಲಿ ಚಕ್ರಗೋಷ್ಠಿ (Round TableConference)ಯಲ್ಲಿ ಇಂಗ್ಲಿಷ್ ರಾಜಕಾರಣ ಪಟುಗಳು ಮುಸಲ್ಮಾನರ ಈ ಸಾಂಪ್ರದಾಯಿಕ ಪ್ರತ್ಯೇಕ ಚುನಾವಣೆಯ ಬೇಡಿಕೆಯನ್ನು ಹೆಚ್ಚು ಹೆಚ್ಚಾಗಿ ಕೇಳುವಂತೆ ಮಾಡಲು ಯತ್ನಿಸಿದರು. ಪ್ರತಿನಿಧಿಗಳು ಒಪ್ಪಂದಕ್ಕೆ ಬಾರದೆ ಹೋದುದರಿಂದ, ಈ ಜಾತಿಗಳೇ ಒಪ್ಪಂದ ಮಾಡಿಕೊಳ್ಳಲು ಅಸಫಲವಾದುವೆಂದು ಹೇಳಲಾಗುವುದಿಲ್ಲ. ಸಭೆಗೆ ಹೋಗಿದ್ದ ಪ್ರತಿನಿಧಿಗಳು ವಾಸ್ತವವಾಗಿ ಪ್ರಜೆಗಳ 'ಪ್ರತಿನಿಧಿ'ಗಳಾಗಿರಲಿಲ್ಲ. ಎಲ್ಲರಲ್ಲಿಯೂ ಪೂರ್ಣವಾದ ಐಕಮತ್ಯವಾಗಲೇಬೇಕಾದರೆ, ಒಪ್ಪಂದವು ಎಂದಿಗೂ ಆಗಲೇಬಾರದು. ಸ್ವಯಂ ಬ್ರಿಟನಿನಲ್ಲಿಯೇ ಐಕಮತ್ಯವಿಲ್ಲದೆ ಮತ ಭೇದವಿದ್ದೇ ಇದೆ. ಆದರೆ ನಮ್ಮಲ್ಲಿ ಅದನ್ನು ರಾಷ್ಟ್ರೀಯ ಪ್ರಶ್ನೆಯೆಂದು ತಿಳಿಯದೆ ಸಾಂಪ್ರದಾಯಿಕತೆಯ ಬಣ್ಣವನ್ನು ಕೊಟ್ಟಿರುವರು. ಇಲ್ಲವಾಗಿದ್ದರೆ ಯುರೋಪಿನಲ್ಲಿ ಯಾವ ರೀತಿಯಲ್ಲಿ ಆ ಸಾಯಿ-ಮಹೂಪ್ಯರ ಸಮಸ್ಯೆ ಕ್ರಿಶ್ಚಿಯನ್-ಮುಸ್ಲಿಂ ಸಮಸ್ಯೆಗಳು ಬಗೆಹರಿಸಲ್ಪಟ್ಟುವೋ, ಅದೇ ರೀತಿ ನಮ್ಮಲ್ಲಿಯೂ ಆಗದಿರಲು ಕಾರಣವೇ ಇರುತ್ತಿರಲಿಲ್ಲ.

ಚಕ್ರಗೋಷ್ಠಿಯ ಕಾಲದಲ್ಲಿ ಭಾರತದ ಅಲ್ಪಸಂಖ್ಯಾಕರ ಪ್ರಶ್ನೆಯೆದ್ದಾಗ, ಹಿಂದೂ ಮಹಾ ಸಭೆ, ದೇಶದ ಅನೇಕ ವಿಚಾರತರು ಇವರಲ್ಲಿ ಪ್ರೊಫೆಸರ್ ರಾಧಾಕುಮುದ ಮುಖರ್ಜಿಯವರೂ ಒಬ್ಬರು—ರಾಷ್ಟ್ರಸಂಘವು ಯುರೋಪಿನ ಸಮಸ್ಯೆಯನ್ನು ಯಾವ ರೀತಿ ಬಗೆಹರಿಸಿತೋ, ಅದೇ ರೀತಿಯಲ್ಲಿಯೇ ಈ ಪ್ರಶ್ನೆಯನ್ನು ಬಿಡಿಸಬೇಕೆಂದು ಬ್ರಿಟಿಷರನ್ನು ಪ್ರಾರ್ಥಿಸಿದ್ದರು. ಅಲ್ಲದೆ ಇದನ್ನು ಸಹ ರಾಷ್ಟ್ರ ಸಂಘಕ್ಕೆ ಒಪ್ಪಿಸಿಬಿಡಬೇಕೆಂಬ ಸಲಹೆಯನ್ನೂ ಸಹ ಕೊಡಲಾಯಿತು. ಆದರೆ ಚಕ್ರಗೋಷ್ಠಿ ಮುಕ್ತಾಯ ನಂತರ, ಸರ್ಕಾರವು ಇದನ್ನು ಹೇಗೆ ಮತ್ತಷ್ಟು ಬಲಪಡಿಸಿತೆಂಬುದನ್ನು ಇಲ್ಲಿ ವಿವರಿಸಬೇಕಾಗಿಲ್ಲ.

ರಾಷ್ಟ್ರಸಂಘದ ಯೋಜನೆಯ ಆರಂಭವು ಅಲ್ಪಸಂಖ್ಯಾಕರ ಪರಿಭಾಷೆಯಿಂದಲೇ ಆಗುವುದು. ನಮ್ಮ ದೇಶದಲ್ಲಿ ಇದಕ್ಕೆ ಯಾವ ವಿಧವಾದ ಸ್ಪಷ್ಟವಾದ ಪರಿಭಾಷೆಯೂ ಆಗಿರುವುದಿಲ್ಲ. ಯಾರು ಬೇಕಾದರೂ ಆಗಲಿ, ಮನಸ್ಸಿಗೆ ಬಂದಾಗ "ನಾನೂ ಅಲ್ಪಸಂಖ್ಯಾಕ, ನನಗೆ ವಿಶೇಷ ರಕ್ಷಣೆ ಬೇಕು" ಎನ್ನಬಹುದು. ಇದರಿಂದ ದಿನದಿನವೂ ವಿಶೇಷ ರಕ್ಷಣೆಯ ಬೇಡಿಕೆಯನ್ನು ಮುಂದಿಡುವವರ ಸಂಖ್ಯೆಯು ಹೆಚ್ಚುತ್ತಿದೆ.

ಮಾಡರ್ನ್ ರೆವ್ಯೂ ಸಂಪಾದಕರಾದ ಶ್ರೀ ರಮಾನಂದ ಚಟ್ಟರ್ಜಿಯವರು ಸಹ ನಮ್ಮ ಸಮಸ್ಯೆಯನ್ನು ಲೀಗಿಗೆ ವಹಿಸಿರೆಂದು ಹೇಳಿರುವರು.

ನನ್ನ ಅಭಿಪ್ರಾಯದಲ್ಲಿ ಭಾರತದ ಅಲ್ಪಸಂಖ್ಯಾಕರ ಸಮಸ್ಯೆಯು ಮುಸ್ಲಿಮರ ಸಮಸ್ಯೆಯಲ್ಲ ಅದು ಹಿಂದುಗಳ ಸಮಸ್ಯೆಯಾಗಿದೆ. ಹೇಗೆಂದರೆ ಮುಸಲ್ಮಾನರು ಅನೇಕ ಪ್ರಾಂತ್ಯಗಳಲ್ಲಿ ಬಹುಸಂಖ್ಯಾಕರೇ ಆಗಿರುವರು. ಆದರೆ ಸಮಗ್ರ ಭಾರತದ ಪ್ರಶ್ನೆ ಬಂದಾಗ ಅವರು ಅಲ್ಪ ಸಂಖ್ಯಾಕರೇ ಆಗುವರು. ಕಾರಣ ಅವರ ಸಂಖ್ಯೆಯು ಒಟ್ಟು ಜನ ಸಂಖ್ಯೆಯಲ್ಲಿ ಸೇಕಡಾ ೨೫ರಷ್ಟಿದೆ. ಆದುದರಿಂದ ಪ್ರತಿ ಪ್ರಾಂತ್ಯದಲ್ಲಿಯೂ ಸಂಯುಕ್ತ ಚುನಾವಣೆಯ ಮೂಲಕ ಇದನ್ನು ನಿವಾರಿಸಬಹುದು.

ಜನಾಬ್ ಜಿನ್ನರು ಇದನ್ನು ಗಂಭೀರವಾಗಿ ಯೋಚಿಸಲಿ. ಅವರು ಮುಸ್ಲಿಂ ಸಾಮ್ರಾಜ್ಯದ ಸ್ವಪ್ನವನ್ನು ಏಕೆ ಕಾಣುವರು? ಎಷ್ಟು ಹೇಳಿದರೂ ಅವರ ಮನಸ್ಸಿಗೇ ಹಿಡಿಯದಿರಲು ಕಾರಣವೇನೆಂಬುದನ್ನು ನಾವು ಬಲ್ಲೆವು. ಆದರೆ ಅವರು ಅದು ಅಯೋಧ್ಯೆಯಲ್ಲವೆಂದೂ, ಅವನು ರಾಮನಲ್ಲವೆಂಬುದನ್ನು ಅರಿಯಲಿ! ಹಿಂದೂ ಮುಸಲ್ಮಾನರಿಬ್ಬರೂ ಭಾರತೀಯರೇ, ಇಬ್ಬರೂ ಗುಲಾಮರೇ. ಹೆಜ್ಜೆಯನ್ನು ಮುಂದಿಟ್ಟಾಗಿದೆ. ಯಾರೂ ಅದನ್ನು ತಡೆಯಲಾರರು!

(ಶ್ರೀ. [illegible] ಲೇಖನಾಧಾರ)

S. L. S.

Degrees Books Medicines.
Free H. L. M. S., H. M. B., H. M. D. etc Free Homeo Ayur-Unani-Nature degrees by post also—Practioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10 Enclose 2 annas stamp:—

Principal, Indian Homeopathic Institute and Society (Govt Regd.)
P. O. MAHUVA, (Kathiawar Dt. India.

Sidh-Kalpa Kavach (Regd)
No 3 Rs 2, No 2 Rs 5, No. 1 Rs 7 Special Rs. 10 Extra Special Rs 17, for sore, marriage health. wealth Ask any his questions with M. O. Re. 1 and get correct answers by return post. Life read ing Rs. 2 No V. P. P. Send M. O. Free pamphlets. **Prof. Dr. N. H. Chhatbar,**
P. O. Mahuva, (Kathiawar, India)

ಮಂಗಳೂರು ಮತ್ತು ಉಡುಪಿಗೆ ಬಂದಾಗ ನಿಮಗೆ
ಸುಖವಾದ ನಿವಾಸ ದೊರೆಯಬೇಕೋ?
— ಹಾಗಾದರೆ —
ಸುಖನಿವಾಸಕ್ಕೆ ಬನ್ನಿ.
ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ.
ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವುದೆಲ್ಲಿ?
ಸುಖನಿವಾಸದಲ್ಲಿ ಮಾತ್ರ.
ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ. ಮಂಗಳೂರಿನಲ್ಲಿ ಜೇಡಿಗುಡ್ಡೆಯಲ್ಲಿಯೂ, ಉಡುಪಿಯಲ್ಲಿ ತಾಲೂಕು ಕಚೇರಿಯ ಬಳಿಯಲ್ಲಿಯೂ ಇರುವ 'ಸುಖನಿವಾಸ'ವನ್ನು ಒಮ್ಮೆ ಸಂದರ್ಶಿಸಿರಿ.

ಪ್ರೊಪ್ರೈಟರ್, **ಸುಖನಿವಾಸ.**

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸ್‌ಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಕ್ರಮವಾದ ಜಮಾ ಖರ್ಚಿನ ಲೆಕ್ಕವಿದ್ದರೂ ಸಾಲದು. ಅದರಿಂದ ತಯಾರಿಸಿದ ಸಾರಾಂಶದ ನಿಚ್ಚಳ ಕೆಲವೇ ನಿಯಮಗಳಲ್ಲಿ ತನ್ನಯ ಅಧಿಕಾರಿಗೆ ಒಪ್ಪಿಗೆಯಾಗಬೇಕು. ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವವಡೆದು ಅಧಿಕಾರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗುವುದು ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನ್" ಕಳ್ಸದಾಗಿ ಹೋಗಿದ್ದರೂ ತಡಮಾಡಲಿಲ್ಲ ಲೆಕ್ಕ ಹಾಜರು ಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸ ಕಾಣಿಸಿದವರೊಡನೆ ಪತ್ರ ವ್ಯವಹಾರ ನಡಿಸಿರಿ.

ಎಸ್. ಎಸ್. ಪುರಾಣಿಕ,
ಇನ್ಕಮ್ ಟೇಕ್ಸ್ ಪ್ರಾಕ್ಟೀಶನರ್,
ಕೃಷ್ಣಾ ರೆಸ್ಟೋರೆಂಟ್ ಬಿಲ್ಡಿಂಗ್,
ಹಂಪನಕಟ್ಟೆ, ಮಂಗಳೂರು.

NOTICE.

In the court of the District Munsif of Karkal.

S. C 213/1940

N. L. Keshava Iengar *Plaintiff.*
and
V. S. Shastri— *Defendant.*

To

V. S. Shastri, son of C. Seetharama Lessee of the Nuro Touring Talkies, now residing in Mangalore town and working in the New Chitra Talkies, Mangalore.

Please take notice, that the above-named plaintiff has instituted a suit against you to recover the amounts due under a demand promissory note executed by you on 17-6-1937 in his favour and the same stands posted to 19-7-1940 in the above Court. If you fail to appear on that date at 10 A. M. before the said court either personally or through a pleader and file your objections if any, you will be declared exparte and the suit will disposed of accordingly.

By order of the Court.

Camp. Karkal
Date 30-6-40

B. Vasudeva Rao, *Advocate*
H. S. Hussain, *Vakil.*

"ನಾಮರ್ದಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ನಸೋನಿ ಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ.

"ಸೆಮಿನಾ ಟೊನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನವುಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ.

ಕಿಮ್ಮತು ರೂ. 3-0-0 ಡಬ್ಬಿ 0-8-0

ಸೊರತ್ ಫಾರ್ಮೆಸಿ,
ನಳ್ ಬಜಾರ್, ಡಂಕನ್ ರೋಡ್,
ಮುಂಬಾಯಿ. 4

Sorath Pharmacy,
Null Bazzar, Duncan Road,
BOMBAY 4.

ಯೂರೋಪಿನ ಮೇಲೆ ನಾಜಿ-ಫೇಸಿಸ್ಟರ ಛತ್ರಿ ಛಾಯೆ.

ಸಣ್ಣ ರಾಷ್ಟ್ರಗಳೇ ಇರಕೂಡದೆಂಬ ಹಂಚಿಕೆ.

ಫ್ರಾನ್ಸಿನಲ್ಲಿ ಹೊಸ ರೀತಿಯ, ಅಂದರೆ ನಾಜೀ ಆಳ್ವಿಕೆಯನ್ನು ಹಲವು ರೀತಿಯಿಂದ ಹೋಲುವ ಹೊಸ ರಾಜ್ಯಭಾರಪದ್ಧತಿ ಬಂದರೂ ಇದರಿಂದ ಇಟೆಲಿ-ಜರ್ಮನಿಗಳು ಸಮಾಧಾನಗೊಂಡಿರುವಂತೆ ಕಾಣುವದಿಲ್ಲ. 'ವಿರೋಧ ಸಾಧಿಸಿದವನು ಎಂದೆಂದಿಗೂ ವಿರೋಧಿಯೇ' ಎಂಬ ಅಭಿಪ್ರಾಯವನ್ನು ಅವು ಕಟ್ಟಿಕೊಂಡಿರುವಂತೆ ಕಾಣುತ್ತದೆ. ಇಟೆಲಿ ಜರ್ಮನಿ ಪತ್ರಿಕೆಗಳು ಒಂದೇಸಮನೆ ಫ್ರಾನ್ಸಿಗೆ ಎಚ್ಚರಿಕೆ ಕೊಡಹತ್ತಿವೆ. ಫ್ರಾನ್ಸನ್ನು ಜಯಿಸಿದ ಹಿಟ್ಲರನು ಹೆಜ್ಜೆ ಮುಂದಿಡಲು ಶಂಕಿಸುತ್ತಾನೆಂದು ಊಹಿಸಲು ಯಾವ ಅವಕಾಶವೂ ತೋರುವುದಿಲ್ಲ. ಬವರಿಗ್ಗೆ ಬರ್ಲಿನಿಗೆ ಬಂದು, ಪ್ರಮುಖರೊಡನೆ ನಡೆಯಿಸಿದ ಮಾತುಕತೆ, ಇಟೆಲಿ, ಜರ್ಮನಿಯ ಪ್ರಮುಖ ಮುತ್ಸದ್ದಿಗಳ ಆಗಮನ-ನಿರ್ಗಮನದ ಮೇಲಿಂದ, ಮುಂದಿನ ಯುದ್ಧರೀತಿ ಹಾಗೂ ಅಧಿಕಾರ ಸ್ಥಾಪನೆಯ ಕುರಿತು ನಾಜೀ-ಫೇಸಿಸ್ಟರೊಳಗೆ ಸ್ಥಿರವಾದ ಯೋಜನೆಯೊಂದು ತಯಾರಿಸಲ್ಪಟ್ಟಿದೆ ಎನ್ನಬಹುದು. ಫ್ರಾನ್ಸಿನಲ್ಲಿ ಪೆಟೈನರು ಹೊಸ ಸರಕಾರವನ್ನು ಜಾರಿಗೆ ತಂದ ಸಂದರ್ಭವನ್ನುಪಯೋಗಿಸಿ ಯುರೋಪಿನಲ್ಲಿ ಸರ್ವಾಧಿಕಾರಿಗಳ ಮುಂದಿನ ಧೋರಣೆ ಹೇಗಿರಬೇಕೆಂಬುದರ ಕುರಿತು ಇಟೆಲಿ ಜರ್ಮನಿ ಪತ್ರಿಕೆಗಳು ಕೆಲವು ಸಂಗತಿಗಳನ್ನು ಹೊರಹಾಕಿವೆ.

ಫ್ರಾನ್ಸಿಗೆ ಎಚ್ಚರಿಕೆ

ಇಟೆಲಿಯ ಅಧಿಕಾರೀ ಪತ್ರಿಕೆಯೊಂದು ಇಂದಿನಿಂದ ಕೆಲವು ವಾರಗಳೊಳಗೆ ಇಂಗ್ಲಾಂಡಿನ ವಿನಾಶದ ದಿನ ಬರುವದು ಖಂಡಿತವೆಂದು ಹೇಳುತ್ತಾ ಹೀಗನ್ನುತ್ತದೆ. "ಫ್ರಾನ್ಸು ಫೇಸಿಸ್ಟ ಅಥವಾ ಫೇಸಿಸ್ಟೇತರ ರಾಜ್ಯವಾಗಿ ಇರಬಹುದು. ಆದರೆ 'ಏಕ್ಸಿಸ್' ರಾಷ್ಟ್ರಗಳ ವಿರುದ್ಧವಾಗಿ ಅದು ಹೂಡಿದ್ದ ಯುದ್ಧದ ದೊಡ್ಡ ಜವಾಬ್ದಾರಿಯು ಇದರಿಂದಾಗಿ ಬಿಟ್ಟುಹೋಗುವಂತಿಲ್ಲ. ಫೇಸಿಸ್ಟ್ ಮತ್ತು ರಾಷ್ಟ್ರೀಯ ಸಮತಾವಾದದ ಗುಂಪನ್ನು ರಚಿಸುವ ಏಕೋದ್ದೇಶದಿಂದ, ಇಟೆಲಿ ಮತ್ತು ಜರ್ಮನರಿಂದ ಇಂದಿನ ಯುರೋಪಿನ ಪರಿಸ್ಥಿತಿಯು ರೂಪಿಸಲ್ಪಟ್ಟಿದೆ. ಅದರಲ್ಲಿ ಸ್ಪೇಯಿನಿಗೆ ಸ್ಥಾನವಿದೆ. ಹಂಗೇರಿಯು ನಮಗೆ ವಿಶ್ವಾಸೀ ಸ್ನೇಹಿತನಾಗಿತ್ತು. ಅದರ ನ್ಯಾಯವಾದ ಬೇಡಿಕೆಯು ಸೌಹಾರ್ದ ಮೂಲಕ ತೀರ್ಮಾನಿಸಲ್ಪಡದಿದ್ದುದು ಅದರ ತಪ್ಪಲ್ಲ. ಬಾಲ್ಕನ್ ವಿಭಾಗದಲ್ಲಿ ನವೀನ ರೀತಿ ಸ್ಥಾಪನೆಯಾಗಬೇಕೆಂಬುದು ಖಂಡಿತ."

ಜರ್ಮನಿಯ ನೈಜೋದ್ದೇಶ

ನಾಜಿಗಳು ಯೋಚಿಸುತ್ತಿರುವ 'ಹೊಸ ಯುರೋಪು' ಯಾವುದೆಂಬುದರ ಕಡೆಗೆ ಜರ್ಮನಿಯ ಪ್ರಾಮುಖ್ಯ ಪತ್ರಿಕೆಯೊಂದು ಬೆಳಕು ಹಾಯಿಸಿದೆ "ಒಂದು ಸಣ್ಣ ರಾಷ್ಟ್ರವು ಜರ್ಮನ್ ರೀಚಿನ ನಾಯಕತ್ವದಲ್ಲಿ ಮತ್ತು ರಕ್ಷಣೆಯಲ್ಲಿರುವದೆಂದರೆ ಅದು ಸಂಪೂರ್ಣ ನ್ಯಾಯ ಮತ್ತು ಗೌರವಪೂರ್ಣವಾದುದು. ಈ ವರೆಗಿದ್ದಂತೆ ಹಲವು ಸಣ್ಣ ಸಣ್ಣ ತುಂಡುಗಳಾಗಿರಲು ಸಾಧ್ಯವಿಲ್ಲವೆಂಬಷ್ಟು ಯುರೋಪು ಸಣ್ಣದಿದೆ. ಸ್ವಾರ್ಥಾತುರರಾದ ಯುದ್ಧ ಮತ್ತು ಅಂತಃಕಲಹಗಳಿಂದ ಲೋಕದಲ್ಲಿ ಯುರೋಪಿನ ಸ್ಥಾನವು ಕೆಳಕೆಯದಾಗಿದೆ"

ಗಾಂಧಿಯವರ ವಿನಂತಿಯು ಅಸಂಗೀಕಾರ

ಬ್ರಿಟಿಷರೆಲ್ಲರೂ ಅಹಿಂಸಾವ್ರತ ಕೈಕೊಂಡು ಹಿಟ್ಲರನೊಡನೆ ಅಸಹಕಾರ ಹೂಡಬೇಕೆಂದೂ ತಾನು ಈ ಕಾರ್ಯದಲ್ಲಿ ಬ್ರಿಟಿಷ್ ಸರಕಾರಕ್ಕೆ ಸಹಾಯಕೊಡಲು ಸಿದ್ಧನಿರುವೆನೆಂದೂ ಗಾಂಧಿಯವರು ಒಂದು ಹೇಳಿಕೆಯನ್ನು ಪ್ರಕಟಿಸಿದ್ದರಷ್ಟೆ. ಆ ಹೇಳಿಕೆಯ ಒಂದು ಪ್ರತಿಯನ್ನು ವೈಸರಾಯರಿಗೂ ಕಳುಹಿಸಿ, ತನ್ನ ಬಿನ್ನಹವನ್ನು ಸಂಬಂಧಪಟ್ಟವರಿಗೆ ರವಾನಿಸಬೇಕೆಂದು, ಪತ್ರಮೂಲಕ ಕೇಳಿಕೊಂಡಿದ್ದರು. ಅದಕ್ಕೆ ಜುಲೈ ತಾ. 10ರಲ್ಲಿ ವೈಸರಾಯ್ ಲೋರ್ಡ್ ಲಿನ್ಲಿತ್ಗೋ ಇವರ ಉತ್ತರ ಬಂದಿದೆ. ತಾವದನ್ನು ಬ್ರಿಟಿಷ್ ಗವರ್ನಮೆಂಟಿಗೆ ಕಳುಹಿಸಿದೆ. ನಿಮ್ಮ ಭಾವನೆಯನ್ನು ಶ್ಲಾಘಿಸುವದಾದರೂ, ಇಡೀ ಸಾಮ್ರಾಜ್ಯವನ್ನು ಜತೆಗೂಡಿ ವಿಜಯ ಸಂಪಾದನೆಯವರೆಗೆ ಯುದ್ಧ ಮುಂದೊತ್ತುವ ದೃಢ ನಿರ್ಧಾರ ಮಾಡಿರುವದರಿಂದ ನಿಮ್ಮ ಸೂಚನೆಯು ವಿಚಾರಿಸತಕ್ಕ ವಿಷಯವೆಂದು ಅವರು ಭಾವಿಸುವದಿಲ್ಲವೆಂಬುದೇ ವೈಸರಾಯರ ಉತ್ತರ.

ಇಂಗ್ಲಾಂಡು ಕರಾವಳಿಯ ಮೇಲೆ ಧಾಳಿ

ಪರೀಕ್ಷಾರ್ಥವಾಗಿ ಎಂಬಂತೆ ಇಂಗ್ಲಾಂಡಿನ ಪೂರ್ವ, ಆಗ್ನೇಯ ಭಾಗದ ಮೇಲೂ ಇತರ ಕಡೆಗಳಲ್ಲೂ ನಾಜೀ ವಿಮಾನಗಳು ಹಾರಿಬಂದು ಆಗಾಗ ಬೋಂಬು ಸುರಿಸುತ್ತಿರುವವು. ಈ ವರೆಗೆ ಹಲವು ಬಾರಿ ಇಂತಹ ಧಾಳಿಗಳು ನಡೆದಿದ್ದರೂ ಗಣನೀಯ ಹಾನಿಯೇನೂ ಆಗಿರುವುದಿಲ್ಲ. ಹೆಚ್ಚಾಗಿ ಬ್ರಿಟಿಷ್ ವಿಮಾನಗಳ ಮತ್ತು ವಿಮಾನಭೇದಕ ಮಶಿನುಗನ್ನುಗಳ ಹೊಡೆತಗಳನ್ನು ತಪ್ಪಿಸಿಕೊಂಡು ಜರ್ಮನಿ ವಿಮಾನಗಳು ಹಿಂದಿರುಗಿ ಬಿಡುವವು. ಆದರೂ ಹಲವು ವಿಮಾನಗಳು ಬ್ರಿಟಿಷ್ ಗುಂಡುಗಳಿಗೆ ಬಲಿಬಿದ್ದಿವೆ. ಜೂನ್ ತಾ. 18ರಲ್ಲಿ ಜರ್ಮನರು ಇಂಗ್ಲಾಂಡಿನ ಮೇಲೆ ನಡೆಸಿದ್ದ ಸಾಮೂಹಿಕ ವಿಮಾನ ಧಾಳಿಯಿಂದ ಹಿಡಿದು ಈ ವರೆಗೆ 73 ನಾಜೀ ವಿಮಾನಗಳು ನಾಶವಾಗಿವೆಯೆಂತೆ. ಯುದ್ಧಾರಂಭದಿಂದ ಈ ತನಕ ಇಂಗ್ಲಾಂಡಿನ ಮೇಲೆ ಹಾರಿ ಬಂದು ನಾಶಕ್ಕೊಳಗಾದ ಜರ್ಮನ್ ವಿಮಾನಗಳು 147. ಅವುಗಳ ಪೈಕಿ ಅರೆವಾಸಿ ಕಳೆದ ಮೂರು ವಾರದಲ್ಲೇ ನಷ್ಟವಾಗಿರುವದರಿಂದ ಈ ಅವಧಿಯು ಜರ್ಮನರಿಗೆ ಹೆಚ್ಚಿನ ನಷ್ಟದಾಯಕವಾದುದೆಂದು ಬ್ರಿಟಿಷರನ್ನುತ್ತಾರೆ. ಇಂಗ್ಲಾಂಡಿನ ಆರ್. ಎ. ಎಫ್ ದಳವು ಎಡೆಬಿಡದೆ ಹೊಲ್ಲೆಂಡು ನೋರ್ವೆ, ಫ್ರಾನ್ಸು ದೇಶಗಳಲ್ಲಿಯ ಜರ್ಮನ್ ಕ್ಷೇತ್ರಗಳ ಮೇಲೆಲ್ಲಾ ಜಯಶೀಲ ಧಾಳಿ ನಡೆಸುತ್ತಿರುವದು. ಜರ್ಮನಿಯ ವಾಲ್‌ಹಾವನ್ ವಿಮಾನ ನಿಲ್ದಾಣದ ಮೇಲೆ ಹಲವು ಬಾರಿ ಹಲ್ಲೆ ಮಾಡಲಾಗಿದೆ. ಎಣ್ಣೆ ಕೆರೆಗಳು, ವಿಮಾನ ರಾಣ್ಯಗಳೇ ಮೊದಲಾದ ಪ್ರಾಮುಖ್ಯ ವಿಭಾಗಗಳ ಮೇಲೆ ಬ್ರಿಟಿಷ್ ವಿಮಾನಗಳ ಬೋಂಬು ಬಿದ್ದಿದೆ. ಬ್ರಿಟಿಷ್ ವಿಮಾನ ದಳವನ್ನು ಇನ್ನಷ್ಟು ಬಳಿಗೊಳಿಸಲಾಗುವದೆಂದೂ, ಕೆನಡಾ, ಆಸ್ಟ್ರೇಲಿಯಾ ಮೊದಲಾದೆಡೆಗಳಲ್ಲಿ ಮಾಡಿದಂತೆ ಭಾರತದಲ್ಲೂ ವೈಮಾನಿಕ ತರಬೇತಿ ಕೇಂದ್ರ ತೆರೆಯುವ ಯೋಚನೆಯಿರುವದೆಂದೂ ತಿಳಿಯಬರುತ್ತದೆ.

36,000 ರೂಪಾಯಿ

16 ಕರ್ನಸದ ಉತ್ತರಗಳಿಗೆ ಹಂಚಲಾಗುವದು. ನಿಶ್ಚಿತ ಉತ್ತರದ ಸಾಲಿನ ಅಡ್ಡಸಾಲಿನ ಪ್ರಥಮದ ಎರಡು ಅಂಕೆಗಳಿಗೆ ಸರಿಯಾದ ಪ್ರತಿಯೊಂದು ಉತ್ತರಕ್ಕೆ ರೂ. 5ರಂತೆ ಹಂಚಲಾಗುವದು. ಭದ್ರವಾಗಿ ಇರಿಸಲ್ಪಟ್ಟ ಉತ್ತರದ ಹಾಳೆಯಲ್ಲಿರುವ ಅಡ್ಡಸಾಲಿನ ಅಂಕೆಗಳಿಗೆ ಸರಿಹೊಂದುವಂತಹ 'ರನ್ನರ್ಸ್ ಅಪ್' ಪ್ರತಿ ಒಂದಕ್ಕೆ ರೂ 20ರಂತೆ ಸಮಾಧಾನಕರ ಬಹುಮಾನಗಳಿರುವವು. ಇವೂ ಅಲ್ಲದೆ ನಮ್ಮ ಉತ್ತರದ ಪ್ರಥಮ ಎರಡು ಅಡ್ಡಸಾಲುಗಳ ಸಂಖ್ಯೆಗಳನ್ನು ಸರಿಹೊಂದುವಂತಹ ಪ್ರತಿಯೊಂದು ಉತ್ತರಕ್ಕೂ ರೂಪಾಯಿ 300ರ ಗ್ಯಾರಂಟಿ ಇದೆ. ಅತ್ಯಧಿಕ ಉತ್ತರಗಳನ್ನು ಕಳುಹಿಸುವ ಉಮೇದ್ವಾರರಿಗೆ ರೂ 150 ಕಾದಿರಿಸಲ್ಪಟ್ಟಿರುತ್ತದೆ

ಚೌಕದಲ್ಲಿ ಅಡ್ಡ, ನೀಟ, ಮೂಲೆ ಮೂಲೆ ... ಸಾಲಿನ ಮೊತ್ತವು 54 ಆಗುವಂತೆ 6ರಿಂದ 21ರ ವರೆಗಿನ ಸಂಖ್ಯೆಗಳನ್ನು ಉಪಯೋಗಿಸುವುದು. ಒಮ್ಮೆ ಉಪಯೋಗಿಸಿದ ಸಂಖ್ಯೆಯನ್ನು ಮರಳಿ ಉಪಯೋಗಿಸಬಾರದು. ಉತ್ತರ ಕಳುಹಿಸುವ ಕೊನೆಯ ತಾರೀಖು 30 7-40

ಫಲಿತಾಂಶ ಪ್ರಕಟಿಸುವ ತಾರೀಖು 6-8-40.

ಪ್ರವೇಶಧನ:- ಒಂದು ಉತ್ತರಕ್ಕೆ ಒಂದು ರೂಪಾಯಿ 3 ಉತ್ತರಗಳಿಗೆ ರೂಪಾಯಿ 2 ಇಲ್ಲವೆ ಪ್ರತಿ 8 ಉತ್ತರಗಳ ಸೆಟ್ಟಿಗೆ 5 ರೂಪಾಯಿ.

ನಿಯಮಗಳು- ತಕ್ಕ ಪ್ರವೇಶಧನದೊಂದಿಗೆ ಕಾಗದದಲ್ಲಿ ಇಷ್ಟ ಬಂದಷ್ಟು ಉತ್ತರಗಳನ್ನು ಕಳುಹಿಸಬಹುದು. ಹಣವನ್ನು ಮನಿಯಾರ್ಡರ್ ಅಥವಾ ಪೋಸ್ಟಲ್ ಆರ್ಡರ್ ಮೂಲಕ ಕಳುಹಿಸಬೇಕು. ಸಂಗ್ರಹವಾಗುವ ಹಣದ ಪ್ರಮಾಣದ ಮೇರೆಗೆ ಬಹುಮಾನಗಳ ಬದಲಾವಣೆಯಾಗುವುದು. ಆದರೆ ಮುಂಬಯಿಯ ಪ್ರಸಿದ್ಧ ಬ್ಯಾಂಕೊಂದರಲ್ಲಿ ಭದ್ರವಾಗಿರಿಸಲ್ಪಟ್ಟ ನಿಶ್ಚಿತ ಉತ್ತರಕ್ಕೆ ಸರಿಹೋಲುವ ಪ್ರತಿಯೊಂದು ಉತ್ತರಕ್ಕೆ ಕನಿಷ್ಠ ರೂಪಾಯಿ 2250ರ ಬಹುಮಾನದ ಗ್ಯಾರಂಟಿಯಿದೆ. ಫಲಿತಾಂಶವನ್ನು ಪಡೆಯುವದಕ್ಕಾಗಿ ವಿಳಾಸ ಸಹಿತವಾದ ಕವರೊಂದನ್ನು ಸ್ಟಾಂಪು ಸಹಿತ ಲಗ್ತೀಕರಿಸತಕ್ಕದ್ದು. ಮೆನೇಜರರ ನಿರ್ಣಯವೇ ಕೊನೆಯದೂ ಮತ್ತು ಕಾನೂನು ಬದ್ಧವಾದುದೂ ಎಂಬ ವಿಷಯ ಸರ್ವರಿಗೂ ತಿಳಿದಿರಬೇಕು.

ಹಿಂದಿನ ಸ್ಪರ್ಧೆಯ ಫಲಿತಾಂಶ				
1ನೇ ಸಾಲು	9,	14,	7,	20
2ನೇ ಸಾಲು	8,	19,	10,	13
3ನೇ ಸಾಲು	18,	5,	16,	11
4ನೇ ಸಾಲು	15,	12,	17,	6

ನಿಮ್ಮ ಉತ್ತರ ಮತ್ತು ಪ್ರವೇಶ ಧನವನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ,

ದಿ ಮೆನೇಜರ್,

ಫಾರ್ವರ್ಡ್ ಕಮರ್ಶಿಯಲ್ ಕೊ,

ಝವೇರಿ ಬಜಾರ್, ಬೊಂಬಾಯಿ 2.

The Manager,

Forward Commercial Co.

Zaveri Bazar, BOMBAY 2.

ಲಾಭದ ಸುದ್ದಿ

(ನೀವೂ ಓದಿ ಮಿತ್ರರಿಗೂ ತಿಳಿಸಿರಿ)

ಕನ್ನಡ ಸಾಹಿತ್ಯ ಪರಿಷತ್ತಿನ ಬೆಳ್ಳಿಯ ಹಬ್ಬ ಕನ್ನಡ ಸಾಹಿತ್ಯದ ಸವಿಯುಣ್ಣಲು ಒಳ್ಳೆಯ ಹಬ್ಬ!! ಕನ್ನಡ ಸಾಹಿತ್ಯ ಪರಿಷತ್ತಿಗೆ 25 ವರ್ಷ ತುಂಬಿತು; ಅದರ ಬೆಳ್ಳಿಯ ಹಬ್ಬದ ಸಂಭ್ರಮವು ಕನ್ನಡ ನಾಡಿನ ಮೂಲೆ ಮೂಲೆಗಳಲ್ಲೂ ಧುಮುಧುಮಿಸುತ್ತಿದೆ. ಆದರೆ ರಸದೂಟವಿಲ್ಲದೆ ಹಬ್ಬ ಬೆಳಗದು. ಅದಕ್ಕಾಗಿ ಕನ್ನಡಿಗರೆಲ್ಲರಿಗೂ ಹಬ್ಬದೂಟ ನಮ್ಮದು! ಕನ್ನಡ ಸಾಹಿತ್ಯ ಪರಿಷತ್ತಿನ ಬೆಳ್ಳಿಯ ಹಬ್ಬ-ಪ್ರತಿಯೊರ್ವ ಕನ್ನಡಿಗನಿಗೂ ಬೆಳ್ಳಿಯ ಹಬ್ಬವಾಗಬೇಕೆಂದೇ ಈ ಕೆಳಗಿನ ಪುಸ್ತಕಗಳನ್ನು ಉಚಿತವಾಗಿ ಕೊಡುವೆವು

ಅಖಿಲ ಕನ್ನಡಿಗರ ಮೆಚ್ಚುಗೆಗೆ ಪಾತ್ರವಾದ, ಕರ್ನಾಟಕದ ಪ್ರಸಿದ್ಧ ಕವಿಗಳ ಉತ್ತಮ ಕವನ ಸಂಗ್ರಹವಾದ 0-12-0 ಬೆಲೆಯ 'ಕಾವ್ಯ ಸಾಮ್ರಾಜ್ಯ' ಎಂಬ ಪುಸ್ತಕವನ್ನು ಕೊಳ್ಳುವವರಿಗೆ "ಪುರುಷವಧ" ಎಂಬ ನಾಲ್ಕಾಣೆ ಬೆಲೆಯ ಏಕಾಂಕ ನಾಟಕವನ್ನೂ ಎರಡಾಣೆ ಬೆಲೆಯ 'ಮುಂದಿನ ದೇವರು' ಎಂಬ ಪ್ರಬಂಧವನ್ನೂ ಉಚಿತವಾಗಿ ಕೊಡುವೆವು

"ಸಂಶಯ ಪಿಶಾಚಿ" ಎಂಬ 0-6-0 ಬೆಲೆಯ ಸಾಮಾಜಿಕ ನಾಟಕವನ್ನು ತರಿಸುವವರಿಗೆ 0-2-0 ಬೆಲೆಯ ನಾಡಕತೆಗಳು ಎಂಬ ಪುಸ್ತಕ ಉಚಿತ.

'ಸನ್ಯಾಸಿಯ ಕೋಣೆಯಲ್ಲಿ' ಎಂಬ 0-8-0 ಬೆಲೆಯ ಕಾದಂಬರಿಯನ್ನು ತರಿಸುವವರಿಗೆ 0-4-0 ಬೆಲೆಯ ಹೆಂಡ್ತಿ ಗಂಡನಾದರೆ ಎಂಬ ಏಕಾಂಕ ನಾಟಕ ಧರ್ಮಾರ್ಥ!

'ಸಂದೇಶ' ಎಂಬ 0-8-0 ಬೆಲೆಯ ಸಣ್ಣ ಕತೆಗಳ ಸಂಗ್ರಹವನ್ನು ಕೊಳ್ಳುವವರಿಗೆ 0 2-6 ಬೆಲೆಯ 'ಸ್ವತಂತ್ರ ಜೀವನೋಪಾಯ.' ಎಂಬ ಏಕಾಂಕ ನಾಟಕ ಉಚಿತ.

'ಮಧುವನದ 12 ಹೂಗಳು' ಎಂಬ 8 ಆಣೆ ಬೆಲೆಯ ಪುಸ್ತಕವನ್ನು ತರಿಸುವವರಿಗೆ ಒಂದೊಂದಾಣೆ ಬೆಲೆಯ "ಅಷ್ಟದಿಕ್ಪಾಲಕರಿಗೂ ಮಾನವೀಯತ್ವ" "ಮದುವೆಯ ಹೆಂಡತಿ ಶಿಕ್ಷಣ್ಯಾಭ್ಯಾಸ" ಎಂಬ ಪುಸ್ತಕಗಳು ಉಚಿತ.

ಈ ಯೋಜನೆಯು ಒಂದು ತಿಂಗಳ ವರೆಗೆ ಮಾತ್ರ ಇರುವುದರಿಂದ ಕನ್ನಡಿಗರು ಶೀಘ್ರವೇ ತಮಗೆ ಬೇಕಾದ ಪುಸ್ತಕಗಳನ್ನು ಸ್ಟಾಂಪು ಮೂಲಕ ಕ್ರಯ ಕಳುಹಿಸಿ ತರಿಸಿಕೊಳ್ಳಬೇಕಾಗಿ ವಿನಂತಿ. ಈ ಸಂದರ್ಭವು ಇನ್ನು ಧಕ್ಕದೆ ಸಿಗಲಾರದು.

ವಿಳಾಸ:- ಶಾಂತಿಮಂದಿರ, ಶಿವಪುರ ಪ್ರಕಟನ ಉಪಶಾಖೆ (Advt)

ಸ್ವೀಕಾರ ಮತ್ತು ವಿಮರ್ಶೆ

ಭಾರತಮಾರ್ಗ

ಧಾರವಾಡದ ಮನೋಹರ ಗ್ರಂಥಪ್ರಕಾಶನ ಸಮಿತಿಯವರು ಪ್ರಸಿದ್ಧಿಸುತ್ತಿರುವ ಮನೋಹರ ಗ್ರಂಥಮಾಲೆಯ ೪೯-೫೦ನೇ ಕುಸುಮ. ಮೂಲ ಲೇಖಕರು, ಇ. ಎಂ. ಫಾರ್ಸ್ಟರ್ ಅನುವಾದಕರು ಶ್ರೀ. ಗುರುರಾಜ ಭೀ. ಜೋಶಿ, ಎಂ. ಎ. ಬಿ. ಟಿ. ಇವರು, ಕ್ರೌನ್ ೧/೮ರ ಆಕಾರ ಮುಕ್ಕಾಲು ಪುಟಗಳು ಬೆಲೆ ೨-೮-೦.

ಈ ಕಾದಂಬರಿಯ ಲೇಖಕರು ಆಂಗ್ಲೇಯರು, 'The Passage to India' ಎಂಬ ಇದರ ಮೂಲರೂಪವು ಕಳೆದ 40 ವರ್ಷಗಳಲ್ಲಿ ಪ್ರಕಟವಾದ ಕಾದಂಬರಿಗಳಲ್ಲಿ ಮೊದಲ ಸ್ಥಾನಕ್ಕರ್ಹವಿದೆ ಎಂದು ಹಲವು ಆಂಗ್ಲ ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ. ಇದರಲ್ಲಿನ ಕಥಾಸಂಯೋಜನೆಯಲ್ಲಿಯೂ ಪಾತ್ರಗಳಿಗೆ ಕೊಟ್ಟ ಕೆಲಸಗಳಲ್ಲಿಯೂ ಸ್ವಾಭಾವಿಕತೆಯಿದೆ. ಆಂಗ್ಲೇಯನೊಬ್ಬನ ಕೈಯು ಭಾರತೀಯ ಜೀವನದ ವಿವಿಧ ರೀತಿನೀತಿಗಳನ್ನು ಇದ್ದಷ್ಟಿದ್ದಂತೆ ಚಿತ್ರಿಸಿದೆ. ಶಾಲೆ, ವಕೀಲ, ನ್ಯಾಯಾಧೀಶ, ಜಮೀನ್ದಾರ, ಸರಕಾರಿ ನೌಕರ ಇವರೆಲ್ಲರ ಜೀವನ ವೈಶಿಷ್ಟ್ಯಗಳು ಸಹಜ ರೀತಿಯಲ್ಲಿ ಮೂಡಿವೆ. ಸ್ವಾಭಾವಿಕತೆಯಿದ್ದುದರಿಂದಲೇ ಪ್ರತಿಯೊಂದರಲ್ಲೂ ಹಿಂದೀಯನ ದೀನ ಮನೋವೃತ್ತಿಯು ಛಾಯೆಯೂ ವಾಚಕರ ಹೃದಯದಲ್ಲಿ ಮೂಡುವಷ್ಟು ಸ್ಫುಟವಾಗಿದೆ. ಕಳದರ್ಜೆಯ ಆಂಗ್ಲೇಯರು ಭಾರತದ ಸಿವಾಸಿಗಳ ಮೇಲೆ ಹೊಂದುವ ಅಧಿಕಾರ ಮತ್ತು ಅವಮಾನಪಡಿಸಿಕೊಳ್ಳುವ ಘನತೆಯ ರೀತಿಗಳೆಲ್ಲಾ ಮಾರ್ಮಿಕವಾಗಿ ಬಂದಿವೆ. ಆಂಗ್ಲ-ಭಾರತೀಯರ ಸಂಬಂಧದಲ್ಲಿ ಆಂಗ್ಲೇಯರು ಕೆಳಗೆ ಬಂದು ಭಾರತೀಯರ ಮೇಲೆ ಹತ್ತಿ ಸಮಾನ ಸ್ಥಾನದಲ್ಲಿ ನಿಲ್ಲಬೇಕೆಂಬ ಅಭಿಪ್ರಾಯವು ಅಲ್ಲಲ್ಲಿ ಮಿಂಚದೆ ಹೋಗಿಲ್ಲ. ಹೀಗೆ ಈ ಕಾದಂಬರಿಯೊಂದು ಚಿತ್ರವೂ ಹೌದು; ಬೋಧನೆಯೂ ಹೌದು. ಅನುವಾದಿಸಿದ ಶ್ರೀ. ಜೋಶಿಯವರ ಶೈಲಿಯಿಂದಲೂ ವಿಷಯದ ಸ್ಪಷ್ಟತೆ, ಭಾವನಾ ಸ್ಫುಟತೆಗಳಲ್ಲಿಯೂ ಭಂಗಬಂದಿಲ್ಲವಾದ್ದರಿಂದ ಕಾದಂಬರಿಯು ವಾಚನೀಯವಾದೆ

ಗ್ರಾಮಪಂಚಾಯತ

ಮೇಲಿನ ಪ್ರಕಾಶನ ಸಮಿತಿಯವರ ೪೮ನೆಯ ಕುಸುಮ. ಬರೆದವರು ಬಾ. ಕೃ. ಲಕ್ಷ್ಮೇಶ್ವರ. ಬೆಲೆ ೦-೧೨-೦.

ಹಳ್ಳೀ ಜೀವನವನ್ನು ಚಿತ್ರಿಸುವ ಕಾದಂಬರಿ. ಮುಖ್ಯವಾಗಿ ಜನರ ರೀತಿನೀತಿಗಳಿಗೆ ಪ್ರಾಧಾನ್ಯತೆ ದೊರೆತಿದೆ. ಆದರೂ ಸ್ವಭಾವ ಪರಿಚಯವಾಗದೆ ಹೋಗುವದಿಲ್ಲ. ಗಂಡಹೆಂಡಿರ ಸ್ವಭಾವಭಿನ್ನತೆಯಿಂದೊದಗುವ ತಿರುಕುಳಗಳು, ಸೌಜನ್ಯ ದೌರ್ಜನ್ಯಗಳೊಳಗಿನ ಘರ್ಷಣೆಗಳು, ಹಳ್ಳಿಯ ಹಳ್ಳಿಗರ ಭಾಷೆಯಲ್ಲಿ ನಾಣ್ಣುಡಿಗಳ ಬೆರಕೆಯಲ್ಲಿ ವರ್ಣಿಸಲ್ಪಟ್ಟಿವೆ. ಕಾದಂಬರಿಯು ಉತ್ತಮತರಗತಿಯದಿದೆ. 'ಭಾರತಮಾರ್ಗ'ಕ್ಕೂ ಇದಕ್ಕೂ ಶ್ರೀ. ವಿ. ಕೃ. ಗೋಕಾಕರು ಮುನ್ನುಡಿ ಬರೆದಿದ್ದಾರೆ.

ಮಾರ್ಗದರ್ಶಕ

ಇದೂ ಧಾರವಾಡದ ಮನೋಹರ ಗ್ರಂಥಪ್ರಕಾಶನ ಸಮಿತಿಯವರ ಕಾಣಿಕೆ. ಅವರ ಮಾಲೆಯ 42ನೆ ಕುಸುಮ. ಶ್ರೀ. ಎಂ. ವಿ. ಸೀತಾರಾಮಯ್ಯ, ಎಂ. ಎ. ಇವರ ಹದಿಮೂರು ಸಣ್ಣ ಕಥೆಗಳ ಸಂಗ್ರಹ ಬೆಲೆ: ೦—೧೪—೦.

'ಮ. ಸೀ' ಇವರು ಕನ್ನಡನಾಡಿಗೆ ಚಿರಪರಿಚಿತರ; ಹೆಚ್ಚಾಗಿ ಕತೆಗಾರಿಕೆಯಿಂದಲೇ ಅವರೇ ಅಂದಿರುವಂತೆ ಅವರ ಕೃತಿಗಳಲ್ಲಿ ಭಾವಕ್ಕೆ ಪ್ರಾಧಾನ್ಯತೆ. ಆದರೆ ಯಾವ ಕಥೆಯೂ ವಾಚಕರನ್ನು ಆಕಾಶದಲ್ಲಿ ಸುತ್ತಾಡಿಸದೆ, ನೆಲದಲ್ಲೇ ನಿಲ್ಲಿಸಿ ಸವಿಗನಸು ಕಾಣುವಂತೆ ಮಾಡುತ್ತದೆ. ಶ್ರೀ. ಬೇಂದ್ರೆಯವರು ತನ್ನ ಮುನ್ನುಡಿಯಲ್ಲಿ ಹೇಳುವಂತೆ "ಇಲ್ಲಿ ಕಥನಶಕ್ತಿಯ ಬೀಜವು ಮೊಳೆತು, ಎಲೆಬಿಟ್ಟು, ಕುಡಿಚಾಚಿ, ಹೂವಾಗಿದೆ." ಅಂತೆಯೇ 'ಮಾರ್ಗದರ್ಶಕವು ನಿಜವಾಗಿಯೂ ಈ ಕತೆಗಾರರ ಬೆಳವಣಿಗೆಯ ಮಾರ್ಗದರ್ಶನವನ್ನೆ ಮಾಡುತ್ತದೆ. ಈ ಸಂಗ್ರಹದಲ್ಲಿನ ಒಂದೊಂದು ಕತೆಯು ಜನಜೀವನದ ಒಳಭಾಗದ ಕಡೆಗೆ ಬಿಟ್ಟಿತ್ತಿರುವ ಒಂದೊಂದು ಕೈಯಂತಿದೆ. ಕನ್ನಡ ಸಾಹಿತ್ಯದ ಸವಿಯರಿತವರು ಈ ಪುಸ್ತಕವನ್ನು ಓದದೆ ಬಿಡುವಂತಿಲ್ಲ. ಧಾರವಾಡದ ಮನೋಹರ ಗ್ರಂಥಮಾಲೆಯು ಇಂತಹ ಮನೋಹರ ಕುಸುಮಗಳನ್ನು ಅರ್ಪಿಸಿ ನಲಿಸುತ್ತಿರುವ ಸಾಹಿತ್ಯಪೂಜೆಯು ಹಬ್ಬಿನದ..

ದೂರ ಹೋದಳು

ಒಂದು ನೀಳ್ಗತೆ. ಕತೆಗಾರರ, 'ಭಾರತೀಸುತ' ಪ್ರಕಾಶಕರ, ಶ್ರೀ। ಎಂ. ಕೆ. ಜನಚಂದ್ರ ಗೌಡರು, ವಿಜಯಮಂದಿರಂ, ಕಲ್ಪಟ್ಟ (ವೈನಾಡ) ಬೆಲೆ: ೦—೬—೦.

ಬ್ರಾಹ್ಮಣ ತರುಣ, ಕ್ರೈಸ್ತ ತರುಣಿ, ಇವರಲ್ಲಿ ಅನುರಾಗವುಂಟಾಗುವದು. ಅವರ ತರುಣನ ತಾಯಿ ಸಾಂಪ್ರದಾಯಬದ್ಧೆ, ವಿವಾಹಕ್ಕೆ ಹೊಡಕಾಗಿ ನಿಲ್ಲುವಳು. ಅವಳು ಪಡೆಯಾಗಿ ಹಿಡಿದುದು ಮಾತ್ರ ಹೃದಯವನ್ನು. ಆದರ ವಿಜಯಕ್ಕೆ ಕ್ರೈಸ್ತರ ಹುಡುಗಿ ನೆರವಾಗಿ ದೂರ ಹೋಗುವಳು. ಹೃದಯಗಳು ಬೇರಾಗದೆ, ಜತೆಯಾಗಲು ಒಂಟಿಯಾಗುವಾಗಿನ ಯಾತನೆಯು ಈ ಕಥೆಯ ಮುಖ್ಯಭಾಗ. ಲೇಖಕರು ತರುಣರು, ಮುಂದೆ ವ್ಯವಸಾಯ ಬಲದಿಂದ ಇನ್ನಷ್ಟು ಉತ್ತಮ ಸಾಹಿತ್ಯ ನಿರ್ಮಿಸಬಲ್ಲರೆಂದು ನಿರೀಕ್ಷಿಸಬಹುದು.

ವಿವಿಧ ವಾಣಿಜ್ಯ
ಐದನೆಯ ಜನ್ಮೋತ್ಸವ ಸಂಚಿಕೆ

ವಿವಿಧ ಪ್ರಪಂಚದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ಲಾಘನೀಯ ರೀತಿಯಿಂದ ದುಡಿಯುತ್ತಿರುವ ಈ ಮಾಸಿಕದ ವಿಶೇಷ ಸಂಚಿಕೆಯು ನಮ್ಮ ಕೈಸೇರಿದೆ. ವಿವಿಧಯಲ್ಲಿ ಅಭಿರುಚಿ ಮತ್ತು ಅನುಭವವಿರುವ ಬೇರೆ ಬೇರೆ ಮಹನೀಯರ ಲೇಖನ, ಕಥೆ, ನಾಟಕ, ಕವಿತೆಗಳಿಂದು ಇದು ವಾಚನೀಯ ವಿಷಯಗಳಿವೆ. ಆರ್ಟ್ ಪೇಪರಿನ ರಕ್ಷಾಪತ್ರ ಮತ್ತು ಮೈಸೂರು ಮಹಾರಾಜರ ಹಾಗೂ ಕೆಲವು ಆಢ್ಯ ಮಹನೀಯ ಮಹಿಳೆಯರ 'ಫೋಟೊ'ಗಳಿದ್ದು ಪತ್ರಿಕೆಯು ಅಂತರಂಗ ಬಹಿರಂಗದಲ್ಲಿ ಸುಂದರವಾಗಿದೆ. —'H'

ಅಜಾದ್-ಜಿನ್ನಾ ತಂತೀ ವ್ಯವಹಾರ

ಕಾಂಗ್ರೆಸ್ ಅಧ್ಯಕ್ಷರಿಗೆ ಲೀಗ್ ಅಧ್ಯಕ್ಷರ ಧಿಕ್ಕಾರ!

ಡಿಲ್ಲಿಯಲ್ಲಿ ಸೇರಿದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಪೂರ್ಣ ಸ್ವಾತಂತ್ರ್ಯ ಮತ್ತು ಅದರ ಪೂರ್ವ ಕ್ಷೇತ್ರವಾಗಿ ಪ್ರಕೃತ ಕೇಂದ್ರಾಧಿಕಾರವುಳ್ಳ ರಾಷ್ಟ್ರೀಯ ಸರಕಾರವನ್ನು ಕೇಳಿಕೊಂಡಿತಷ್ಟೆ. ಈ ನಿರ್ಧಾರವನ್ನೂ ಮಿ. ಜಿನ್ನರು ಸಿಹಿ-ಕಹಿಯ ವ್ಯತ್ಯಾಸವರಿಯದವರಂತೆ ಕಾಂಗ್ರೆಸ್ ದೂಷಣೆ ತನ್ನ ಜನ್ಮಸಿದ್ಧಹಕ್ಕೆಂಬಂತೆ ಕಠೋರವಾಗಿ ಟೀಕಿಸಿದ್ದರು ಆ ವಿಷಯವನ್ನೆತ್ತಿ ರಾಷ್ಟ್ರಪತಿ ಮೌಲಾನ ಆಜಾದರು ಮಿ. ಜಿನ್ನರಿಗೆ ಕೊಟ್ಟ ಟೆಲಿಗ್ರಾಮನ್ನೂ ಅದಕ್ಕೆ ಜಿನ್ನರಿತ್ತ ಅತಿಗರ್ವದ ಟೆಲಿಗ್ರಾಮ್ ಉತ್ತರವನ್ನೂ ಇಲ್ಲಿ ಕೊಡಲಾಗಿದೆ.

ಆಜಾದರಿಂದ ಜಿನ್ನರಿಗೆ

"ಡಿಲ್ಲಿಯ ಕಾಂಗ್ರೆಸ್ ಠರಾವಿನಲ್ಲಿ ಅಡಕವಾಗಿರುವ ರಾಷ್ಟ್ರೀಯ ಸರಕಾರದ ಸ್ಪಷ್ಟಾರ್ಥ—ನೆಂದರೆ ಸಮ್ಮಿಶ್ರಿತವಾದ ಮಂತ್ರಿಮಂಡಲ ಹೊರತು ಯಾವುದಾದರೊಂದು ಪಕ್ಷದ್ದು ಮಾತ್ರವಲ್ಲ. ಭಾರತವನ್ನು ಭಾಗಮಾಡುವ ತನ್ನ ಯೋಜನೆಯನ್ನು ಅಸ್ತಿವಾರವಾಗಿಟ್ಟುಕೊಳ್ಳದ ಯಾವ ತಾತ್ಕಾಲಿಕ ವ್ಯವಸ್ಥೆಗೂ ಒಪ್ಪಿಗೆ ಕೊಡದ ಸ್ಥಾನದಲ್ಲಿ ಲೀಗು ಇರುವದೆ? ಹಾಗಿದ್ದರೆ ದಯವಿಟ್ಟು ತಂತೀ ಮೂಲಕ ಸ್ಪಷ್ಟವಾಗಿ ತಿಳಿಸಿರಿ"

ಜಿನ್ನರಿಂದ ಅಜಾದರಿಗೆ

"ನೀವು ಮುಸ್ಲಿಂ ಭಾರತದ ವಿಶ್ವಾಸವನ್ನು ಪೂರ್ತಿ ಕಳಕೊಂಡಿರುವುದರಿಂದ, ನಾನು ನಿಮ್ಮೊಡನೆ ತಂತೀ ಪತ್ರ ವ್ಯವಹಾರ ಮೂಲಕವಾಗಿಯಾಗಲೀ, ಬೇರೆ ರೀತಿಯಲ್ಲಾಗಲೀ ಚರ್ಚಿಸಲು ತಿರಸ್ಕರಿಸುತ್ತೇನೆ ಸ್ವೀನೇವೆಂದರೆ, ಕಾಂಗ್ರೆಸು ರಾಷ್ಟ್ರೀಯ ಸಂಸ್ಥೆಯೆಂಬ ಬಣ್ಣ ಕೊಡಲು ಮತ್ತು ಪರದೇಶಗಳ ಮನವೊಲಿಸಲು ಅಧ್ಯಕ್ಷನಾಗಿ ಮಾಡಲ್ಪಟ್ಟಿರುವ ಪ್ರದರ್ಶಕ ಮುಸ್ಲಿಂ ಗೊಂಬೆಯೆಂಬುದನ್ನು ತಿಳಿಯಲಾರಿರಾ? ನೀವು ಮುಸಲ್ಮಾನ್-ಹಿಂದೂ, ಇಬ್ಬರ ಪ್ರತಿನಿಧಿಯೂ ಅಲ್ಲ. ಕಾಂಗ್ರೆಸು ಹಿಂದೂ ಸಂಸ್ಥೆ ನಿಮ್ಮಲ್ಲಿ ಸ್ವಾಭಿಮಾನವಿದ್ದರೆ ಕೂಡಲೇ ರಾಜೀನಾಮೆ ಕೊಡಿರಿ. ನೀವು ನಿಮ್ಮಿಂದಾಗುವಷ್ಟನ್ನು ಲೀಗಿನ ವಿರುದ್ಧವಾಗಿ ಈ ತನಕ ಮಾಡಿ ನೋಡಿದಿರಿ ಅದರಲ್ಲಿ ಅತಿ ಕಳತಿಯ ಅಪಜಯಹೊಂದಿದ್ದಿರೆಂಬುದು ನಿಮಗರಿತಿದೆ. ಇನ್ನದನ್ನು ಬಿಟ್ಟುಕೊಡಿ"

The Karnataka Provident Company, Limited, Udipi.

Applications are invited from well educated respectable persons for the following posts, so as to reach the undersigned on or before 25-7-40.

Six organisers on a fixed monthly allowance of Rs. 25/ to Rs 75/- Cash security of Rs. 500 is essential.

For full particulars please apply to or see the undersigned personally.

KARNATAKA PRO. CO, LTD. UDIPI. 25-6-1940

B. Yamanacharya
B.A. B.L., *Advocate*,
Chairman.

ಪ್ರೇಮದ ಪ್ರಕಟಣೆಗಳು

ಭಾವ ಪ್ರಭಾತ (೧೪ ಸಣ್ಣ ಕತೆಗಳು)	0— 6—0
ಚಂದ್ರನಾಥ (ಶರಚ್ಚಂದ್ರರ ಕಾದಂಬರಿ)	0— 6—0
ನೆಡುಮನೆಯಲ್ಲಿ (೮ ಏಕಾಂಕ ನಾಟಕಗಳು)	0— 6—0
ನಟಿ (ಒಂಭತ್ತು ಸಣ್ಣ ಕತೆಗಳು)	0— 6—0
ಹತ್ತು ಕತೆಗಳು (೧೦ ಸಣ್ಣ ಕತೆಗಳು)	0— 6—0
ಪಂಚಾಗ (ಕವನ ಸಂಗ್ರಹ)	0— 6—0
ಬಣ್ಣದ ಬೀಸಣಿಗೆ (ಏಳು ಏಕಾಂಕ ನಾಟಕಗಳು)	0—12—0
ಅದ್ಭುತ ರಮ್ಯ ಕತೆಗಳು (ಗ್ರೀಕ್ ಪುರಾಣದಿಂದ)	0—12—0
ಕಾಶ್ಮೀರ ಪ್ರವಾಸ (ಪ್ರವಾಸದ ವಿವರಣೆ)	0— 6—0

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ.

ನವಭಾರತ ಪುಸ್ತಕ ಭಂಡಾರ ಉಡುಪಿ.

ಚಂದಾದಾರರಲ್ಲಿ ವಿನಂತಿ.

ಇದೇ ಬರುವ ಅಗೋಸ್ತು ತಿಂಗಳಾಂತ್ಯಕ್ಕೆ 'ನವಯುಗ'ದ **19**ನೇ ವರ್ಷವು ಕೊನೆಗೊಂಡು ಸಪ್ಟಂಬರ ಮೊದಲ್ಗೊಂಡು **20**ನೇ ವರ್ಷವು ಪ್ರಾರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ನಮ್ಮ ಚಂದಾದಾರರು ತಮ್ಮ ಮುಂದಿನ ವರ್ಷದ ಚಂದಾಹಣವನ್ನು ದಯಮಾಡಿ ಕೂಡಲೇ ಕಳುಹಿಸುವಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆ.

ಕೆಲವರು ಚಾಲ್ತಿ ವರ್ಷದ ಚಂದಾ ಹಣವನ್ನು ಈ ವರೆಗೂ ಕಳಿಸಿರುವುದಿಲ್ಲವೆನ್ನಲು ವಿಷಾದವಾಗುತ್ತದೆ. ಅಂಥವರು ತ್ವರ್ಯದಲ್ಲಿಯೇ ಅದನ್ನೂ ಮುಂಗಡ ಚಂದಾ ಹಣವನ್ನೂ ಪಾವತಿಮಾಡುವಂತೆ ಕೇಳಿಕೊಳ್ಳುವೆವು.

ತಮಗೆ ಪ್ರತ್ಯೇಕ ನೋಟೀಸು ಬರುವದೆಂದು ಯಾರೂ ಕಾಯದೆ ದಯಮಾಡಿ ಹಣವನ್ನು ಸಕಾಲದಲ್ಲಿ ಕಳುಹಿಸುವಂತೆ ಪ್ರತ್ಯೇಕ ವಿನಂತಿ ಇದೆ. —ಮೇನೇಜರ್.

"ದೇಶಭಕ್ತ"

ಕಾರ್ನಾಡ್ ಸದಾಶಿವರಾಯರ ಸ್ಮರಣಾರ್ಥವಾಗಿ ಅಗೋಸ್ತು ತಾ. ೧ನೇ ಗುರುವಾರದಿಂದ ಪ್ರಕಟವಾಗಲಿರುವ

ರಾಷ್ಟ್ರೀಯ ವಾರಪತ್ರಿಕೆ.

"ದೇಶಭಕ್ತ"

ವಾರ್ಷಿಕ ಚಂದಾ ರೂ. ೩-೪-೦. ಬಿಡಿ ಪ್ರತಿ ಒಂದಾಣೆ.

ಎಲ್ಲೆಲ್ಲೂ ಏಜಂಟರು ಬೇಕಾಗಿದ್ದಾರೆ.

ಮೆನೇಜರ್—"ದೇಶಭಕ್ತ" ಫಳ್ನೀರ್ ಬಜಾರ್, ಮಂಗಳೂರು.

ಈ ವಾರದ ಭವಿಷ್ಯ

ತಾರೀಖು 18-7-1940ರಿಂದ 25-7-1940ರ ವರೆಗೆ

ಮೇಷ—ಅಲ್ಪರ ಸಂಗ ಅಭಿಮಾನ ಭಂಗವೆಂಬ ಗಾದೆಯಂತೆ ನೀವೀ ವಾರದಲ್ಲಿ ದುರ್ಜನರ ಸಹವಾಸಕ್ಕೆ ಬಲಿಬಿದ್ದು ಗೌರವವನ್ನು ಕಳೆದುಕೊಳ್ಳುವ ಪ್ರಸಂಗವೊದಗಲಿದೆ. ಸೂರ್ಯನಿಚಾರದ ಶನಿಮೋಯನಿಗೋಚರದಿಂದ ಅತಿ ವ್ಯಯಕ್ಕೂ ಸಾಲಗರ ಕಾಟಕ್ಕೂ ಸಿಲುಕುವಿರಿ. ಆಹಾರದೋಷದಿಂದ ಆರೋಗ್ಯವು ಕೆಡಲಿದೆ. ವ್ಯಾಪಾರ ವ್ಯವಹಾರಗಳಲ್ಲಿ ವಿಪತ್ತಿಯಿಂದ ವಿಘ್ನಗಳುಂಟಾಗುವುದಾದರೂ ಅವನ್ನು ನಿವಾರಿಸಿಕೊಂಡು ಸ್ವಸಾಮರ್ಥ್ಯದಲ್ಲಿ ಕೃತಕೃತ್ಯರಾಗುವಿರಿ. ಪ್ರಯತ್ನಕ್ಕೆ ತಕ್ಕ ಫಲವೂ ಸಾಂಸಾರಿಕ ಸುಖವೂ ಯಥಾವತ್ತಾಗಿ ದೊರೆಯಲಿದೆ. ತಾ. 19ರಿಂದ 23ರವರೆಗಿನ ದಿನಗಳು ಹೆಚ್ಚಿನ ಸಹಾಯಕಾರಿಗಳಾಗಿರುತ್ತವೆ.

ವೃಷಭ—"ಮನಸ್ವೀ ಕಾರ್ಯಾರ್ಥೀ ನ ಗಣಯತಿ ದುಃಖಂ ನ ಚ ಸುಖಂ" ಗುರಿಯನ್ನು ಹೊಂದಬೇಕೆಂಬ ಮಹದಿಚ್ಛೆಯುಳ್ಳ ನಿರಲಸನಾದ ಪುರುಷನು ಮಧ್ಯೇ ಮಧ್ಯೇ ಕಷ್ಟಪರಂಪರೆಗಳೊದಗಲಿ ಯಾ ಸುಖವುಂಟಾಗಲಿ, ಯಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳದೆ ಸ್ವಕಾರ್ಯದಲ್ಲೇ ಆಸಕ್ತನಾಗುವಂತೆ ನೀವೀ ವಾರದಲ್ಲಿ ಕಷ್ಟಸುಖಗಳೆಡೆಗೆ ಗಮನಕೊಡದೆ ಕೇವಲ ಕಾರ್ಯಸಾಧನೆಗಾಗಿ ಹವಣಿಸುತ್ತಿರುವಿರಿ. ನಾನಾ ತರದ ಖರ್ಚುಗಳೂ ಶೋಕ ಸಮಾಚಾರವೂ ಒಮ್ಮೆಲೆ ನಿಮ್ಮನ್ನು ದಿಗ್ಭ್ರಾಂತರನ್ನಾಗಿ ಮಾಡಲಿವೆಯಾದರೂ ಪ್ರಯತ್ನಕ್ಕೆ ತಕ್ಕ ಫಲವನ್ನು ಹೊಂದುವಿರಿ. ಮನಃಸಂಕಲ್ಪವು ಸಿದ್ಧಿಸುವುದು. ವಾರಾದಿಯ ನಾಲ್ಕು ದಿನಗಳಲ್ಲಿ ಗುರುಹಿರಿಯರಲ್ಲಿ ವೈಮನಸ್ಯ, ಸೇವ್ಯಸೇವಕರಲ್ಲಿ ಕಲಹವುಂಟಾಗಲಿದೆ.

ಮಿಥುನ—ಒಂದೇ ಕಾರ್ಯವನ್ನು ಮಾಡಲು ಸಮರ್ಥನಿರಬೇಕು, ಇಲ್ಲವೆ ಮಾಡಿಸಲು ಶಕ್ತನಿರಬೇಕು. ಇವೆರಡೂ ಇಲ್ಲದಿದ್ದರೆ ಅವನೇರ್ವಸರನಾಗಲಾರನು. ಸಧ್ಯ ನಿಮ್ಮಲ್ಲಿ ಅನಾರೋಗ್ಯದ ದೆಸೆಯಿಂದಾಗಿ ಕೆಲಸವನ್ನು ಮಾಡಲಿಕ್ಕೆ ಬೇಕಾದ ಧೈರ್ಯವೂ ಶಕ್ತಿಯೂ ಇಲ್ಲವು. ಆದುದರಿಂದ ಮಾಡುವ ಸಹಾಯಾನುಕೂಲತೆಗಳು ದೊರೆತರೂ ನಿಮಗವರಲ್ಲಿ ಭರವಸೆಯಿಲ್ಲವು. ಹಾಗೆ ನೀವು ಭರವಸೆಯಿಂದ ಮಾಡುವಿರಾದರೆ ಕಾರ್ಯವು ಅಚಿರದಲ್ಲೇ ಸಿದ್ಧಿಸುವುದು. ವಿದ್ಯೋಪಜೀವಿಗಳಿಗೂ ಉದ್ಯೋಗ ವ್ಯಾಪಾರಾದಿಗಳನ್ನು ಮಾಡತಕ್ಕವರಿಗೂ ದಿನಗಳು ಸುಖದಾಯಕವಾಗುವವು, ಆರ್ಥಿಕ ಸುಧಾರಣೆಯಾಗುವುದು. ತಾ. 18, 24, 25 ಈ ದಿನಗಳು ಅನುಕೂಲಗಳಾಗಿವೆ.

ಕರ್ಕಾಟಕ—ತಾನೊಂದೆಣಿಸಿದರೆ ದೈವವು ಬೇರೊಂದನೆಣಿಸಿತೆಂಬ ಲೋಕೋಕ್ತಿಯಂತೆ ನೀವೊಂದು ಗುರಿಯನ್ನಿಟ್ಟುಕೊಂಡು ಪ್ರಾರಂಭಿಸಿದ ಕಾರ್ಯವು ವಿಪರೀತದಲ್ಲಿ ಪರ್ಯವಸಾನ ಹೊಂದಲಿದೆ. ದೈವವೂ, ಪೌರುಷವೂ ಇವೆರಡೂ ವಿಮುಖರಾಗಿದ್ದು ನಿಮಗೆ ಧನಜನರ ಬೆಂಬಲವು ಎಳ್ಳಷ್ಟೂ ಸಿಗುವಂತಿಲ್ಲ. ಜನ್ಮಸ್ಥ ರವಿ ಕುಜ ಬುಧರಿಂದ ಅನಾರೋಗ್ಯ, ಅಪಘಾತ, ಆರ್ಥಿಕ ಅಪಜಯ, ವ್ಯರ್ಥ ಕಲಹಗಳಿಗೆ ನಿಮ್ಮನ್ನು ಗುರಿಮಾಡುವವು. ನಿಮ್ಮ ಶ್ಲಾಘ್ಯತಕ್ಕೆ ಕುಬುದ್ಧಿಯು ಪರಿಣಾಮವಾಗಿ ಜನತೆಯಲ್ಲಿ ನಿಂದಾಪಾತ್ರಗಳಿಗೆ ಗುರಿಯಾಗುವಿರಿ. ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ತುಂಬಾ ತೊಂದರೆಗಳುಂಟಾಗುವವು. ತಾ. 18ರಿಂದ 21ರ ವರೆಗೆ ಕೊಂಚ ಆರೋಗ್ಯ, ಖರ್ಚಿಗೆ ತಕ್ಕ ಲಾಭ ದೊರೆಯಬಹುದು.

ಸಿಂಹ—ಇಷ್ಟರವರೆಗೆ ನಿಮ್ಮ ಆಯವು ತಕ್ಕ ಮಟ್ಟಿಗೆ ಚೆನ್ನಾಗಿಯೇ ಇತ್ತು. ಆದರೆ ಈಗಲೀಗ ಇಲ್ಲಸಲ್ಲದ ವ್ಯರ್ಥವಾದ ಖರ್ಚುಗಳು ನಿಮ್ಮನ್ನು ಸೇರಿವೆ. ದುಡಿದದ್ದು ಸಾಲದೆ ಆಪದ್ಧನವಾಗಿಟ್ಟದ್ದನ್ನು ತೆಗೆಯುವ ಪ್ರಸಂಗ ಬಂದೀತ. ಕರ್ಮಕುಶಲರಾದ ನೀವು ಮಿತ್ರರ ಬೆಂಬಲದಿಂದ ದುಃಸಾಧ್ಯವಾದ ಕಾರ್ಯವನ್ನು ಸಾಧಿಸುವಿರಿ. ನಿಮ್ಮ ಪರಿಶ್ರಮವು ವ್ಯರ್ಥವಾಗಲಾರದು. ವಿರೋಧಿಗಳು ಬಹುವಿಧದಿಂದ ಪೀಡಿಸುವರು. ಶಿಕ್ಷಾಧಿಕ್ಯದಿಂದಲೂ ಹೃದ್ರೋಗದಿಂದಲೂ ನೇತ್ರವೇದನೆಯಿಂದಲೂ ನೀವು ಪೀಡಿತರಾಗುವಿರಿ. ಆಕಸ್ಮಿಕವಾಗಿ ಸ್ತ್ರೀಯರ ಆಗ್ರಹಕ್ಕೆ ತುತ್ತಾಗುವಿರಿ. ಸತ್ಕರ್ಮ ಸದಾಚಾರಿಗಳಿಗೆ ಈ ಆಪತ್ತುಗಳು ಬಹುಮಟ್ಟಿಗೆ ಕಡಿಮೆಯಾಗಲಿವೆ. ತಾ. 19ರಿಂದ 23ರ ವರೆಗೆ ಅನುಕೂಲ.

ಕನ್ಯಾ—ಗುರುಹಿರಿಯರೊಡನೆ ಎಷ್ಟೇ ವಿನೀತಭಾವದಿಂದ ನಡೆದುಕೊಂಡಿದ್ದರೂ ಅವರ ಅನುಗ್ರಹವು ದೊರೆಯುವಂತಿಲ್ಲ. ಸ್ತ್ರೀಪುತ್ರರ ವಿರಹದಿಂದಲೂ ಕೊಂಚ ದೇಹಾಲಸ್ಯದಿಂದಲೂ ಕೊರಗುವಿರಿ. ಆದರೂ ಪ್ರತಿಯೊಂದು ಕಾರ್ಯದಲ್ಲೂ ಶಕ್ತಿಯುಕ್ತಿಗಳನ್ನುಪಯೋಗಿಸಿ ಜಯಶೀಲರಾಗುವಿರಿ. ವಿವಿಧ ರೂಪದಿಂದ ಧನಸಂಪಾದಿಸುವಿರಿ. ಕೋರ್ಟುಖಟ್ಲೆಗಳಲ್ಲಿ ಸಾರ್ವಜನಿಕ ಕಾರ್ಯಗಳಲ್ಲೂ ನಿಮ್ಮ ಮನೋರಥವು ಈಡೇರುವುದು. ಸಮಾಜದಲ್ಲಿ ಒಳ್ಳೇ ಗೌರವವನ್ನು ಹೊಂದುವಿರಿ. ಕೆಲವೊಮ್ಮೆ ಸ್ತ್ರೀಜನರಿಂದ ಮಾನಕ್ಕೆ ಹಾನಿಯಾಗುವ ಪ್ರಸಂಗ ಒದಗೀತು, ಜಾಗರೂಕರಾಗಿರಿ. ವಾರಾದಿಯ ನಾಲ್ಕು ದಿನಗಳು ಅಷ್ಟೊಂದು ಒಳ್ಳೆಯದಿಲ್ಲವು.

ತುಲಾ—ನಿಮಗೀ ವಾರವು ಹೆಚ್ಚಿನ ಭಾಗಗಳಲ್ಲಿ ಅನುಕೂಲವಾಗಿದ್ದರೂ ಅನಿರೀಕ್ಷಿತವಾಗಿ ಅಟವಷ್ಟು ಆಪತ್ತುಗಳೂ ಮಧ್ಯೇ ಮಧ್ಯೇ ಸಂಭವಿಸಲಿವೆ. ಕೈಗೊಂಡ ಕಾರ್ಯಗಳು ವಿರೋಧಿಗಳ ವಿಘ್ನಾದಿಗಳಿಲ್ಲದೆ ಸುಖದಿಂದ ಕೊನೆಗೊಳ್ಳುವವು. ಕಾರ್ಯಗಳ ಫಲವು ಕೈಸೇರುವುದರಿಂದ ಹರ್ಷಿಸಿ ಆನಂದಪಡುವಿರಿ. ಸಾತ್ವಿಕ ಕಾರ್ಯದಿಂದಲೂ ಬುದ್ಧಿಕೌಶಲದಿಂದಲೂ ಜನತೆಯಲ್ಲಿ ಪ್ರಖ್ಯಾತರಾಗುವಿರಿ. ನೃಪನ ಮಿತ್ರ ಮೈತ್ರಿಕರವಾಗಿ ದೊರೆಯುವುದು. ನೌಕರರಿಗೂ ವ್ಯಾಪಾರಿಗಳಿಗೂ ವ್ಯವಹಾರದ ಸ್ವಕಾರ್ಯದಲ್ಲಿ ವಿಜಯಿಗಳಾಗುವರು. ಊಹಾಪೋಹ ಬಾಜಿಗಳಲ್ಲೂ ಧನ ಮನಾದಿಗಳಿಗೂ ಕೊರತೆಯುಂಟಾಗದು. ತಾ. 18, 24, 25 ಈ ಮೂರು ದಿನಗಳಲ್ಲಿ ಧನಾಪ್ತಿ, ಕಾರ್ಯಜಯ, ಸ್ತ್ರೀಸುಖವೂ ದೊರೆಯುವುದು.

ವೃಶ್ಚಿಕ—ಕಾಯಕಷ್ಟದಿಂದ ಜೀವಿಸುವವರಿಗೂ ವಣಿಗ್ಜನರಿಗೂ ಶ್ರಮಕ್ಕೆ ತಕ್ಕ ಪ್ರತಿಫಲವು ದೊರಕೊಳ್ಳದುದರಿಂದ ದಿನಕಳೆಯಲು ಕಷ್ಟಕರವಾಗಲಿರುವದು. ಅನಾರೋಗ್ಯದಿಂದ ದೇಹದಲ್ಲಿ ದೌರ್ಬಲ್ಯವು ಹೆಚ್ಚಲಿದೆ ಮಾತ್ರವಲ್ಲ ಮನೋರೋಗದಿಂದ ದಿನೇ ದಿನೇ ಮನದಲ್ಲಿ ಶಾಂತಿಯು ಮಾಯವಾಗುವುದು. ಸಾಲಿಗರ ಕಾಟದಿಂದಾಗಿ ಕೋರ್ಟುಮನೆಗೆ ತಿರುಗುವ ಪ್ರಸಂಗವುಂಟಾದೀತು. ಶತ್ರುಜನರು ಕ್ಷಣಕ್ಷಣಕ್ಕೂ ವೃದ್ಧಿಗೊಳ್ಳುತ್ತಿರುವುದರಿಂದ ಮಾಡತಕ್ಕ ಕಾರ್ಯವನ್ನು ಎಷ್ಟು ಜಾಗ್ರತೆಯಿಂದ ನಿರ್ವಹಿಸಿದರೂ ಅಷ್ಟು ಒಳ್ಳೆಯದು. ಸಂಪನ್ನ ಸ್ತ್ರೀಯರ ಸ್ನೇಹಲಾಭವಾಗುವ ಲಕ್ಷಣಗಳಿವೆ. ತಾ. 19, 20, 21, ಈ ಮೂರು ದಿನಗಳು ಅನುಕೂಲಗಳಾಗಿವೆ.

ಧನು—ಸಾಯುವ ಕಾಲ ತಪ್ಪಿದರೂ ನೋಯುವ ಕಾಲ ತಪ್ಪದು ಎಂಬ ಅಭಿಯುಕ್ತೋಕ್ತಿಯಂತೆ ನೀವೆಷ್ಟೇ ಜಾಗರೂಕರಾಗಿದ್ದರೂ ಆಕಸ್ಮಿಕ ಆಪತ್ತಿಗಳಿಗೆ ಸಿಲುಕುವ ಸಂಭವವಿದೆ. ಅದ್ದರಿಂದ ವಾಹನ ಯಾನಾದಿಗಳಲ್ಲಿನ ಪ್ರವಾಸಗಳನ್ನು ಕೈಬಿಡುವುದೊಳ್ಳಿತು. ವಿರೋಧಿ ಜನರ ಹೀನತೆಯಿಂದ ಮಾನಕ್ಕೂ ಧನಕ್ಕೂ ಧಕ್ಕೆಯುಂಟಾಗಲಿದೆ. ಸ್ತ್ರೀವರ್ಗವೇ ಪ್ರತಿಕೂಲವಾಗಿದ್ದಕ್ಕೆ ಈ ಕಾಲದಲ್ಲಿ ನಿಮ್ಮಾಶೆಯೂ ನಿಮ್ಮ ಕೆಲಸವೂ ಕೆಡಲಿವೆ. ಸನ್ಮಾರ್ಗಾವಲಂಬಿಗಳಾದ ಸಜ್ಜನರ್ಯಂತಕ್ಕೆ ನಿತ್ಯ ಬಳಕೆಗೆ ಬೇಕಾದಷ್ಟು ಧನಧಾನ್ಯಗಳು ದೊರೆಯುವವು. ಸಂಸಾರತಾಪತ್ರಯಗಳು ನಿವೃತ್ತಿಗೊಳ್ಳುವವು. ತಾ. 18, 22, 23 ಈ ಮೂರು ದಿನಗಳ ಮಟ್ಟಿಗೆ ಬಂಧುಮಿತ್ರರ ಸಹಾಯ ಗೃಹಸುಖವೂ ದೊರೆಯುವುವು.

ಮಕರ—ನಿಮ್ಮ ಧೈರ್ಯವೇ ಮಾತ್ರ ಮಿತ್ರನಾಗಿ ನಿಮ್ಮ ಪಾಲಿಗೆ ಬಂದ ಸಂಕಷ್ಟವೊಂದರೂ ಆತ್ಮಯೋಗ್ಯತೆ ಮಾಡಲಾರದು. ತೃತೀಯದ ಕೇತುವು ಮತ್ತು ತಾ. 19, 20, 21 ಮತ್ತು 24, 25ರ ಚಂದ್ರನು ಹೊರತಾಗಿ ಸಕಲ ಗ್ರಹಗಳೂ ಅನಿಷ್ಟಸ್ಥಾನವನ್ನು ಪಡೆದಿರುವುದರಿಂದ ದಶದಿಕ್ಕುಗಳಿಂದಲೂ ಆಪತ್ತುಗಳು ಬಂದು ನಿಮ್ಮನ್ನು ಪೀಡಿಸಲಿವೆ. ಪುಣ್ಯವಿದ್ದರೆ [illegible] ನಿಮ್ಮ ಕೈಬಿಡುವರು. ಹಣದ ಅಡಚಣೆಯು ವಿಶೇಷವಾಗುವುದು, ಶರೀರವು ಅನಾರೋಗ್ಯದಿಂದ ಪೀಡಿತವಾಗುವುದು. ಚಿತ್ತವಿಕಲ್ಪದಿಂದಾಗಿ ಗೃಹದಲ್ಲಿ ನಿತ್ಯ ಕಲಹವಾಗುವುದು. ಅಂತೂ ಸುಖಶಾಂತಿಯೆಂಬುದೇ ದುರ್ಲಭವಾದೀತು. ತಾ. 18, 22, 23 ಈ ಮೂರು ದಿನಗಳಂತೂ ಮನಶ್ಚ್ಯುತಿ, ಕಲಹಗಳಿಗೆ ಕಾರಣಗಳಾಗಿವೆ.

ಕುಂಭ—ನಿಮ್ಮ ಗ್ರಹಬಲವು ಚೆನ್ನಾಗಿರುವುದಾದರೂ ಗುರುಹಿರಿಯರ ಆಗ್ರಹಕ್ಕೆ ಗುರಿಯಾಗಲಿರುವ ನಿಮಗೆ ಕಲಹವಿರುತ್ತ ಧನವ್ಯಯವೂ ಕೊಂಚ ದೇಹಾಲಸ್ಯವೂ ಆಕಸ್ಮಿಕ ವಿಘ್ನಗಳೂ ಬರುವಂತಿವೆ. ಕಾರಣಾಂತರದಿಂದ ಸ್ವಸ್ಥಾನವನ್ನು ಬಿಟ್ಟು ಅತಿಕ್ರಮಿಸಬೇಕಾಗುವುದು. ಹಿಡಿದ ಕಾರ್ಯಗಳು ಎಷ್ಟೇ ಗೌರವವುಳ್ಳದ್ದಾಗಿರಲಿ, ನೀವದನ್ನು ಕೊನೆಗೊಳಿಸಿಯೇ ತೀರುವಿರಿ. ಶತ್ರುಜನರು ನಶಿಸುವರು. ಮಿತ್ರವೃಂದವು ವೃದ್ಧಿಗೊಳ್ಳುವುದು. ನಾನಾ ಪ್ರಕಾರದಿಂದ ಧನಸಂಗ್ರಹಿಸುವಿರಿ. ಸ್ವಸ್ವವೃತ್ತಿಯಲ್ಲಿ ಅಭಿವೃದ್ಧಿಯನ್ನುಂಟುಮಾಡಲ್ಲದೆ ಯಶೋಭಾಗಿಗಳಾಗುವಿರಿ. ತಾ. 18, 22, 23 ಈ ದಿನಗಳು ಸತ್ಫಲಕ್ಕೆ ಶ್ರೇಷ್ಠಗಳಾಗಿವೆ.

ಮೀನ—ಪ್ರಯತ್ನಕ್ಕೆ ಫಲದೊರೆಯುವುದಾದರೂ ಖರ್ಚಿನ ಭಾಗಗಳು ವಿಪರೀತವಾಗಿರುವುದರಿಂದ ನಿತ್ಯ ಅಡಚಣೆಯು ತಪ್ಪುವಂತಿಲ್ಲ. ಅನಾರೋಗ್ಯದ ದೆಸೆಯಿಂದಾಗಿ ದೇಹದಲ್ಲಿ ನಿಶ್ಶಕ್ತಿ ಹೆಚ್ಚುವುದು. ಮನೆಯವರಲ್ಲಿ ಗ್ರಹಚಿದ್ರಗಳ ದೆಸೆಯಿಂದಾಗಿ ಕಲಹವುಂಟಾಗುವುದು. ಗಂಡಹೆಂಡರಿಗೂ ತಾಯಿಮಕ್ಕಳಿಗೂ ಸರಿಬೀಳದು. ಇದರಿಂದಾಗಿ ಜಗಳ ಯುವರ ಕಾರ್ಯಕ್ಕೆ ಬಹಳೇ ಸಹಾಯವಾಗುವುದು. ಸೌಕರ್ಯಭಾಗದಲ್ಲೂ ರಾಜಕೀಯದಲ್ಲೂ ಸೇವಾವೃತ್ತಿಯಲ್ಲೂ ವಿಘ್ನವಿಪತ್ತುಗಳು ಕಷ್ಟನಿಷ್ಠುರಗಳು ಹೆಚ್ಚಲಿವೆ. ತಾ. 22, 23 ಹೊರತು ಇತರ ದಿನಗಳಲ್ಲಿ ಧನಲಾಭ, ಸ್ತ್ರೀಸುಖ, ಇಷ್ಟಸಿದ್ಧಿ, ಮಿತ್ರಸಮಾಗಮಗಳಾಗುವವು.

ವಿದ್ಯಾರ್ಥಿಗಳಿಗೆ ಆನಂದದ ಬಾತಮಿ.

ಅತಿ ಅಭ್ಯಾಸ ಯಾ ಘಾಬರಿಯಿಂದ ಪರೀಕ್ಷೆಯ ಸಮಯ ನರ್ವಸ್ ವೀಕ್ನೆಸಿನಿಂದ ಸಾಮಾನ್ಯ ಶೇಕಡ 50 ವಿದ್ಯಾರ್ಥಿಗಳು ತಿಳಿದು ಯಾ ತಿಳಿಯದೆ ಫಸ್ಟ್ ಕ್ಲಾಸಿನ ಯೋಗ್ಯತೆಯುಳ್ಳವರು ಕೂಡ ಥರ್ಡ್ ಕ್ಲಾಸಿನಲ್ಲಿ ಸಹ ಪಾಸಾಗದೆ ನಾಪಾಸಾಗುವ ಪರಿಸ್ಥಿತಿಯು ಬರುತ್ತದೆ. ಈ ಸರ್ವ ವಿಚಾರಗಳಿಗೆ ನಮ್ಮ ದೀರ್ಘ ಅನುಭವದಿಂದ ತಯಾರಿಸಲ್ಪಟ್ಟ ಬಹುಗುಣಯುಕ್ತ ಪುಷ್ಪಗಂಧಾಮೋದಿತ **ಆಮುಲಕೀ ತೈಲ**ವನ್ನು ಉಪಯೋಗಿಸುವವರಿಂದ ಲಕ್ಷೀಚಾನ್ಸ್ ಸಿಗ್ತುತ್ತದೆ. 6 ಯಾ 11 ಆಣೆ ಬೆಲೆಯ 1 ಸೀಸೆ ತೈಲವನ್ನು ಕೊಂಡು ಕೊಂಡು ಸ್ವಲ್ಪ ತಲೆಗೆ ಹಾಕಿ ನೋಡಿರಿಗೆ ಶುರುವಾಡಿರಿ. ಇದರಿಂದ ಮೆದುಳಿನ ಜ್ಞಾನಶಕ್ತಿ ಯಾ ಸ್ಮರಣಶಕ್ತಿ ವೃದ್ಧಿಯಾಗಿ ಆತ್ಮವಿಶ್ವಾಸವು ಹೆಚ್ಚುವದಲ್ಲದೆ ಕಠಿಣತರದ ಪ್ರಶ್ನೆಗಳಲ್ಲಿ ಸುಲಭವಾಗಿ ಯಶಃಪ್ರಾಪ್ತಿಯಾಗುವುದು. ಪರೀಕ್ಷೆಯ ಮೊದಲೇ ಒಂದೆರಡು ಸೀಸೆ ನಮ್ಮ ಆಮುಲಕೀ ತೈಲವನ್ನು ತರಿಸಿಕೊಳ್ಳಿರಿ 4 ಔನ್ಸಿನ ಸೀಸೆ 1ರ ಕ್ರಯ ರೂ. 0-11-0, 2 ಔನ್ಸಿನ ಸೀಸೆ 1ರ ರೂ. 0-6-0 ತಯಾರಿಸುವವರು:-ಸ್ವದೇಶೀ ಔಷಧಿಭಂಡಾರ, (ರಿಜಿಸ್ಟರ್ಡ್) ಕೊಂಡಾಪುರ, ಪೋಸ್ಟ್ ಬ್ರಹ್ಮಾವರ, ದ. ಕನ್ನಡ.

ನಮ್ಮ ಪ್ರಾತಿನಿಧಿಗಳು:—ಎ. ಆರ್. ಪ್ರಭು, ದಿ ಕೆನರಾ ಸ್ಟೋರ್ಸ್ ಎಂಡ್ ಬುಕ್ ಏಜೆನ್ಸೀಸ್ ಬಟಾಟವಾಲಾ ಮೆನ್ಷನ್, ಲಾಲ್ ಬಾಗ್, ಮುಂಬಯಿ. ಜನರಲ್ ಸಪ್ಲೈಸ್ ಲಿಮಿಟೆಡ್, ಉಡುಪಿ, ನವಭಾರತ ಬುಕ್ ಡಿಪ್ಪೋ, ಉಡುಪಿ, ಕಟೆಲಾಗಿಗೆ ಬರೆಯಿರಿ.

Advt.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ

"ಗೊನೊಕಿಲರ್" (ರಜಿಸ್ಟರ್ಡ್)

GONO KILLER

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಡಬ್ಬಿ ಮೇಲಿರುವ ಹುಂಜದ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲರ್" ಹೆಸರನ್ನೂ ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಸಣ್ಣನಾಗಿ ಹೋಗುವುದು ಮತ್ತು ಉರಿವು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, 'ಗೊನೊ-ರೋಯಾ' ಎಂಬ ವಿಷರೋಗ, ಆದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ಶೀಘ್ರವಾಗಿ ಮತ್ತು ಸಮೂಲವಾಗಿ ನಾಶವಾಗುವವು.

ಬೆಲೆ: 60 ಮಾತ್ರೆಗಳ ಡಬ್ಬಿಯೊಂದಕ್ಕೆ ರೂ. 3. ವಿ. ಪಿ. ಚಾರ್ಜು 0-6-0 ಪ್ರತ್ಯೇಕ. ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer DR. D. N. JASAN, Vitalbhai Patel Road, BOMBAY 4

ಸ್ಥಾಪನೆ] ಕೆನರಾ ಛಾಪಖಾನೆ [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ತುಳುವಿನಲ್ಲಿ

ಎಲ್ಲಾ ವಿಧದ ಪ್ರಿಂಟಿಂಗ್ ಕೆಲಸಗಳನ್ನೂ ಎಲ್ಲಾ ತರದ ಬೈಂಡಿಂಗ್ ಕೆಲಸಗಳನ್ನೂ ಕೈಕೊಳ್ಳಲಾಗುತ್ತದೆ.

ಈಗ ಪರೀಕ್ಷಿಸಿ ನೋಡಿ ಕಡಿಮೆ ದರದಲ್ಲಿ ಮಾಡಲಾಗುತ್ತದೆ. ಒಮ್ಮೆ ಬಂದು ಪರೀಕ್ಷಿಸಿರಿ.

Kanara Printing Works,

Hampankatte, MANGALORE.

ಕಿವುಡರೂ ಸಂಪೂರ್ಣವಾಗಿ ಕೇಳಬಹುದು.

ಬಧಿರತಾ ಹರಣ

ವಿಜ್ಞಾನದ ನವೀನ ಮತ್ತು ವಿಚಿತ್ರ ಶೋಧ

ಕಿವಿ ಸೋರುವುದು, ಕಿವುಡು, ಇತ್ಯಾದಿ ಕಿವಿಯ ರೋಗಗಳು ಈ ಔಷಧದಿಂದ ಸಂಪೂರ್ಣವಾಗಿ ಗುಣವಾಗುತ್ತವೆ. 'ಬಧಿರತಾಹರಣ' ಎಂಬ ಔಷಧವನ್ನು ಉಪಯೋಗಿಸುವುದರಿಂದ ಕಿವಿಗಳು ಚೆನ್ನಾಗಿ ಕೇಳುತ್ತವೆ. ಬೆಲೆ 1 ಬಾಟಲು ರೂ. 2, 3 ಬಾಟಲುಗಳಿಗೆ ರೂ. 5, ಅಂಚೆ ವೆಚ್ಚ ಪ್ರತ್ಯೇಕ.

ವಿಳಾಸ:— ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4.

ಬಾಲಾರ್ಕ ಮಧು



ಚಿಕ್ಕ ಮಕ್ಕಳ ರಕ್ಷಣೆಗೆ ಔಷಧ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂರಲು ಕೆಮ್ಮು ಮೊದಲಾದ ಎಲ್ಲಾ ರೋಗಗಳನ್ನು ಗುಣಪಡಿಸುತ್ತದೆ. ಮಾಂಸಖಂಡ ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುತ್ತವೆ. ಇದು ಮಧುರವಾಗಿದೆ. ಬೆಳೆಯುವ ಮಕ್ಕಳಿಗೆ ಅತ್ಯಂತ ಉಪಯುಕ್ತವಾಗಿದೆ.

ಸೀಸೆ 1ಕ್ಕೆ 12 ಆಣೆ, 6 ಔನ್ಸ್.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,

ಉಡುಪಿ ಸ್ಟಾಕಿಸ್ಟರು:- ನವಭಾರತ ಬುಕ್ ಡಿಪೋ, ಉಡುಪಿ

THE MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಹಕರ ನಂಬಿಕೆ ಸಂಪಾದಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ. ಬಂಗಾರದ ಆಧಾರದ ಮೇಲೆ ಸೇಕಡಾ 7 ರ ದರದಲ್ಲಿ ಸಾಲ ಕೊಡಲಾಗುವುದು. ಸಿರಾಖಿ ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ಸಹಾಯ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, President & Manager. ಎಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!

K. R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! ವಜ್ರಗಳು BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್ಸ್ಟ ದಮ್ಮಿನಿಂದ ಒರುವ ವಜ್ರಗಳು ಮಾರಾಟಕ್ಕೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಪ್ ಒಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

ಈಗ ಪ್ರಿಂಟಾಗಿದೆ! ಶೃಂಗಾರವಾದ ಪುಸ್ತಕ!!

ಮದನ ಕಳಾಶಾಸ್ತ್ರ ಎಂಬ ಪ್ರೇಮ ರಹಸ್ಯಗಳು

ರೂ 1—4—0

ಕನ್ನಡ ಭಾಷೆಯಲ್ಲಿ ಸ್ತ್ರೀ ಪುರುಷರ ಪ್ರೇಮದ ಉಪಯೋಗಕ್ಕಾಗಿ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ಸ್ತ್ರೀ ಪುರುಷರ ರಹಸ್ಯಗಳು, ಹಾಗೂ ಅನೇಕ ಚಿತ್ರಗಳು, ಪ್ರೀತಿಸುವ ರಹಸ್ಯಗಳು, ಕನ್ಯೆಗಳ ಪ್ರೇಮ, ಮತ್ತು ಸಂಯೋಗ ಕಾಲದ ಮರ್ಮಗಳು ಮೊದಲಾದ ಅನೇಕ ವಿಷಯಗಳನ್ನು ವರ್ಣಿಸಲಾಗಿದೆ. ಇದು ನೋಡತಕ್ಕ ಪುಸ್ತಕ. ಬೆಲೆ ರೂ. 1 4 0.

T. R. Royal & Co., 19, BEAT, MADRAS. ಟಿ. ಆರ್. ರಾಯಲ್ ಕಂಪೆನಿ, 19, ಬೀಟ್ ಮದರಾಸ್.

ನಿಮ್ಮ ಮನೆಯಲ್ಲಿ ಸದಾ ಆನಂದದ ಜ್ಯೋತಿಯು ಬೆಳಬೆಳಗುತ್ತಿರಬೇಕೇ? ಹಾಗಿದ್ದರೆ— ...

ನಂದಾದೀಪ

ಎಂಬ ಉತ್ಕೃಷ್ಟ ಚಿಕ್ಕಕತೆಗಳ ಪ್ರತಿಯೊಂದನ್ನಿಟ್ಟುಕೊಳ್ಳಿ.

ಕರ್ನಾಟಕದ ಪ್ರಸಿದ್ಧ ಕತೆಗಾರರಲ್ಲೊಬ್ಬರಾದ ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರು ಬರೆದ ಮನೋಹರವಾದ ಹನ್ನೊಂದು ಕತೆಗಳ ಸಂಗ್ರಹ.

ಪ್ರತಿಯೊಂದು ಕತೆಯೂ ನಿಮ್ಮ ಹೃದಯದಲ್ಲೊಂದು ಬಗೆಯ ಹೊಸ ಬೆಳಕನ್ನು ಬೆಳಗಿಸುವುದು.

ಬೆಲೆ: 0-8-0 ಟಪ್ಪಾಲು ದ್ವಾರ: 0-9-0

ಕರಿಯರ ಪ್ರಪಂಚ, ಉಡುಪಿ.

(0-9-0 ಕಳುಹಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು)

ಸದ್ವೈದ್ಯಶಾಲಾ ನಂಜನಗೂಡು ಇವರ

"ಸುಬಲಾ"

ಚಿತ್ತಭ್ರಮೆ, ಮೂರ್ಛೆ ಇತ್ಯಾದಿಗಳನ್ನು ಹೋಗಲಾಡಿಸಿ, ಶಕ್ತಿ ವೃದ್ಧಿಪಡಿಸಿ, ಜ್ಞಾಪಕ ಶಕ್ತಿ ಬಲವನ್ನು ಕೊಡುತ್ತದೆ. ಉಪಯುಕ್ತವಾಗಿರುತ್ತದೆ.

ಬ್ರಾಂಚ್:- ರಥಬೀದಿ ಮಂಗಳೂರು.

—ಸೌಕರ್ಯ—

ಆರ್ಥಿಕ ಮುಗ್ಗಟ್ಟಿನ ಈ ಮುಗ್ಗಟ್ಟಿನಲ್ಲಿ ಕನಿಷ್ಠ ವೆಚ್ಚದಲ್ಲಿ ಹೆಚ್ಚು ಸೌಕರ್ಯವನ್ನು ಯಾರು ತಾನೆ ಅಪೇಕ್ಷಿಸುವುದಿಲ್ಲ? ಅದನ್ನು ಸದಾ ಒದಗಿಸಿಕೊಡುವುದೇ

ರಾಮಾ ರೆಸ್ಟೋರೆಂಟಿನ ಧ್ಯೇಯವಾಗಿದೆ.

ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳು!

ವಿದ್ಯಾರ್ಥಿಗಳಿಗೆ ರಿಯಾಯತಿ ದರಗಳು!!

ಒಮ್ಮೆ ಸಂದರ್ಶಿಸಿರಿ! ತೃಪ್ತಿ ಪಡೆಯಿರಿ!!

Sri Rama Restaurant, Kasai Mutt Building, UDIPI. ಶ್ರೀರಾಮಾ ರೆಸ್ಟೋರೆಂಟ್, ಕಾಶಿ ಮಠದ ಕಟ್ಟೋಣ, ಉಡುಪಿ

ವ್ಯವಸ್ಥಾಪಕ:— ಎಚ್. ರಾಮಚಂದ್ರ ನಾಯಕ್.

ಉಡುಪಿಗೆ ಬಂದಾಗ



ನಿಮಗೆ ಬೇಕಾಗುವ ಯಾವತ್ತು ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಾಂಜಿ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ಸೋವಿಯಾ ಕೊಳ್ಳಲೂ ಬೆಲೆನ್ನು ಸಾಮಾನುಗಳವೆ.

PRINTED AT THE THULUNAD PRESS, UDIPI. AND PUBLISHED BY K. H. SHETTY AT 'NAVAYUGA OFFICE, UDIPI, S. INDIA.

...stered No M. 3618 | 25-7-194

ನವಯುಗ NAVAYUGA

WAR or NO WAR.

NAVAYUGA, the Paper of the people keeps to its programme and announces its JAYANTHI SPECIAL on 22-8-'40 in connection with the Avathar Day of LORD SRI KRISHNA.

Jayanthi Special hardly needs any introduction. The importance of this Number to an Advertiser is unbounded. A campaign of Publicity through the special Number attracts innumerable persons in and out of season. Therefore send your Advertisement immediately.

Rates on application.

Advt. Manager, **NAVAYUGA, UDIPI.**

" ನವಯುಗದ ಜಯಂತಿ ಸಂಚಿಕೆ "

ಎಂದಿನಂತೆ ಈ ವರ್ಷವೂ "ಶ್ರೀ ಕೃಷ್ಣ ಜಯಂತಿ ಸಂಚಿಕೆ" ಎಂಬ ವಿಶೇಷ ಸಂಚಿಕೆಯು ತಾ. ೨೨-೮-೪೦ಕ್ಕೆ ಪ್ರಕಟವಾಗುವುದು.

ಜಾಹೀರಾತಿಗೆ ಉತ್ತಮ ಸಾಧನ. ತ್ವರೆಮಾಡಿರಿ.

ದರಗಳಿಗೆ ಬರೆಯಿರಿ.

ಝಾಂಡು ಫಾರ್ಮಸಿಯವರ ಆಯುರ್ವೇದ ಔಷಧಗಳು

ಇವೇ ಜನಪ್ರೀತ ಹಾಗು ಖಾತ್ರಿ ಪ್ರಯೋಜನಕಾರೀ ಔಷಧಗಳು.
ಆದುದರಿಂದಲೇ ಬಂಗಾರ ಮತ್ತು ಬೆಳ್ಳಿಯ ಪದಕಗಳೂ,
ಫಸ್ಟ್ ಕ್ಲಾಸ್ ಸರ್ಟಿಫಿಕೇಟುಗಳೂ ದೊರಕಲು ಕಾರಣ.

ವೈದ್ಯರೂ ಡಾಕ್ಟರರೂ ರಖಂ ದರದ ಕ್ಯಾಟಲಾಗುಗಳನ್ನು ಈ ಕೆಳಗಣ ಸೋಲ್ ಏಜಂಟರಿಂದ ಧರ್ಮಾರ್ಥ ಪಡೆಯಬಹುದು.

ದಾಮೋದರ್ ಎಂಡ್ ಕೋ,
78 ಚೀನಾ ಬಜಾರ್‌ರೋಡ್, ಜಿ. ಟಿ. ಮದ್ರಾಸ್,
ಅಥವಾ

ZANDU

ಪಿ. ಎ. ಪೈ ಬ್ರದರ್ಸ್, ಸಬ್ ಏಜಂಟ್ಸ್ ಉಡುಪಿ.
ಎ. ಪಿ ಶೆಣೈ, ಸಬ್ ಏಜಂಟ್, ಕಾರ್ಕಳ.

ಮಂಗಳೂರು, ಕಾಸರಗೋಡು, ಕುಂದಾಪುರ ಮೊದಲಾದ ದ. ಕ. ಜಿಲ್ಲೆಯ ಪ್ರಮುಖ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ. ಶರತುಗಳಿಗೆ ಸೋಲ್ ಏಜಂಟ್ಸ್ ರವರಿಗೆ ಬರೆದು ತಿಳಿಯಿರಿ.

DAMODER & CO.,
78 China Bazaar Road, **G. T. MADRAS.**

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ಮಾರ್ಕ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸಹೊಂದಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಅಪೂರ್ವ ಸಂದರ್ಭ. — **ತ್ವರೆಮಾಡಿರಿ!!**

ಉಚಿತ! ಉಚಿತ!!

ನಿಮಗೆ ಒಂದು ವರ್ಷದ ವರೆಗೆ 'ನವಯುಗ'ವನ್ನು ಉಚಿತವಾಗಿ ಪಡೆಯಬೇಕೆಂದಿದೆಯೇ? ಹಾಗಿದ್ದರೆ ಆಗೋಸ್ತು ಅಂತ್ಯದೊಳಗೆ 'ನವಯುಗ'ಕ್ಕೆ ಬರೀ ನಾಲ್ಕು ಜನ ಚಂದಾದಾರರನ್ನು ಮಾಡಿಕೊಡಿರಿ.

ವಾರ್ಷಿಕ ಚಂದಾ ರೂ. 3-4-0ನ್ನು ಮುಂಗಡವಾಗಿ ಪಡೆದು ಅದನ್ನೂ ಚಂದಾದಾರರ ಹೆಸರುಗಳನ್ನೂ ಕಳಿಸಿರಿ. ಆಗ ನಿಮಗೆ ಒಂದು ವರ್ಷದ ವರೆಗೆ ನವಯುಗವು ಉಚಿತವಾಗಿ ಕಳಿಸಲ್ಪಡುವುದು. ಅಷ್ಟೇ ಅಲ್ಲದೆ ನಿಮ್ಮ ಹೆಸರನ್ನೂ ನಮ್ಮ 'ನವಯುಗ'ದಲ್ಲಿ ಪ್ರಕಟಿಸಲಾಗುವುದು.

ಮೆನೇಜರ್, **ನವಯುಗ, ಉಡುಪಿ.**

ರಬ್ಬರ್ ಮೊಹರುಗಳು

ತಯಾರಿಸಿ ಕೊಡಲ್ಪಡುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಆಯುರ್ವೇದ ಔಷಧಗಳು

ವಿಕ್ರಯಿಸಲ್ಪಡುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

THE VIJAYA BANK LTD.,

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ--- ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಆರಂಭಿಸಿ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಕಂಡಲ್ಲಿ ಉಂಡರೆ ಬೆಂಡಾಗುವಿರಿ! — ಆದರೆ,

ದಿ ಮಲಬಾರ್ ಗ್ರೇಂಡ್ ಹಿಂದೂ ಹೋಟೆಲ್ ಉಡುಪಿ.

ಇಲ್ಲಿ ಉಂಡರೆ ಕೊಂಡಾಡುವಿರಿ!

ಆರೋಗ್ಯದ ಪ್ರಥಮ ಸೋಪಾನವೇ ಹಿತವಾದ ಊಟ!

ಆಗ ಮಾತ್ರ ದೇಶದ ಬೆಳವಣಿಗೆಯಾಗಿ ನಿಜವಾದ ಮನುಷ್ಯರೆಂದೆನಿಸಿಕೊಳ್ಳುವೆವು!

ಊಟವು ಹಿತವಾಗಬೇಕಾದರೆ, ನಂತರದ ದೇಶದೇಶಿಯಲ್ಲಿ ರುಚಿ, ರುಚಿಯಾಗಿ ತಯಾರಿಸಲ್ಪಟ್ಟಿರಬೇಕು.

ಉಡುಪಿಯಲ್ಲಿ ಇಂಥ ಮಾದರಿಯ ಹೋಟೆಲು ಇಲ್ಲವೆಂಬ ಕುಂದನ್ನು ನಿವಾರಿಸಬೇಕೆಂದು

ಶ್ರೀ ರಾಮಕೃಷ್ಣ ಥಿಯೇಟರಿನ ಸಮೀಪ

ಭವ್ಯವಾದ ಮಂದಿರದಲ್ಲಿ ತಾ. 4-7-1940ಕ್ಕೆ ಹೊಸತಾಗಿ ತೆರೆಯುವ ನಮ್ಮ ಹೋಟೆಲನ್ನು ಒಮ್ಮೆ ಸಂದರ್ಶಿಸಿ ಪ್ರೋತ್ಸಾಹಿಸಿರಿ ಪರಿಪೂರ್ಣ ತೃಪ್ತರಾಗಿರಿ!

ವಿಲಾಸಿ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಪ್ರತ್ಯೇಕ ಏರ್ಪಾಡು ಮಾಡಿದ್ದೇವೆ ಮರೆಯದಿರಿ!

ಪ್ರೊಪ್ರೈಟರ್ಸ್: ಕುಂಜಿ ಕುಟ್ಟಿ ಎಂಡ್ ಬ್ರದರ್ಸ್

The Malabar Grand Hindu Hotel, Udipi.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ ಅಮೋಘವಾದ ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲುಗಳು ಒಟ್ಟು ೪೦ ದಿವಸಗಳಿಗೆ ಬರುವವು. ಅಂದರೆ, ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 ಕೊಡಿಯಾಲಬೈಲು, ದ.ಕ.

The Pangal Nayak Bank Ltd.,

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(೧೯೨೦ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿತು.)

ಮುಖ್ಯ ಕಾರ್ಯಾಲಯ-ಕೋರ್ಟುಬಳಿ, ಉಡುಪಿ, ದ. ಕನ್ನಡ.

ಶಾಖೆಗಳು-ಉಡುಪಿ, ಮಂಗಳೂರು, ಕಟಪಾಡಿ ಮತ್ತು ಕಾಂಞಂಗಾಡ್

ವಸೂಲಧನ—ರೂ. 1,82,100,- ರಿಸರ್ವ್ ನಿಧಿಗಳು ರೂ. 1,92,000/-

ಚಿನ್ನಾಭರಣಗಳ, ಮಾರಾಟಕ್ಕೆ ಅನುಕೂಲವಾಗಬಹುದಾದ ಬಾಳುವ ದವಸಗಳ, ಸಮಾಧಾನಕರವಾದ ವ್ಯಾಪಾರದ ಬಿಲ್ಲು, ಹುಂಡಿ ಇತ್ಯಾದಿಗಳ ಭದ್ರತೆಯ ಮೇಲೆ ಸುಲಭ ದರಗಳಲ್ಲಿ ಚಿಕ್ಕ ವ ದೊಡ್ಡ ಸಾಲಗಳು ಕೊಡಲ್ಪಡುತ್ತವೆ,

ದೀರ್ಘ ವ ಅಲ್ಪ ಅವಧಿಯ ಠೇವಣಾತಿಗಳು ಶ್ರೀಮಂತರಿಗೂ ಇತರರಿಗೂ ಪರಿಣಾಮ ತೃಪ್ತಿಕರವಾದ ಶರ್ತುಗಳಲ್ಲಿ ಅಂಗೀಕರಿಸಲ್ಪಡುತ್ತವೆ.

ಬೇಂಕಿನ ಅತ್ಯಾಧುನಿಕ ವಿಧದ ಸಮಸ್ತ ವಹಿವಾಟುಗಳೂ ನಡೆಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ದಯವಿಟ್ಟು ಮೌಖಿಕ ವ ಪತ್ರದ್ವಾರ ವಿಚಾರಿಸಿರಿ.

ನಿಮ್ಮ ಆಕಾಂಕ್ಷೆ

ವಿಮೆ ಮಾಡಲಿಕ್ಕಾಗಲೀ, ಪ್ರಾತಿನಿಧ್ಯತೆ ಪಡೆಯಲಿಕ್ಕಾಗಲೀ

ಭದ್ರತೆ ಮತ್ತು ಪ್ರಗತಿ

ಪರ ಜೀವವಿಮಾ ಸಂಸ್ಥೆ ಯಾವುದೆಂದು ನೀವು ಯೋಚಿಸುತ್ತಿರುವುದಾದರೆ ನಮ್ಮೊಡನೆ ವಿಚಾರಿಸಿರಿ

ಶಾಖಾ ಕಾರ್ಯದರ್ಶಿ,

ದಿ ನ್ಯೂ ಗಾರ್ಡಿಯನ್.

ಓಫ್ ಇಂಡಿಯಾ ಲೈಫ್ ಇನ್ಶ್ಯೂರೆನ್ಸ್ ಕೊ. ಲಿಮಿಟೆಡ್, ಮದ್ರಾಸು

ಮಂಗಳೂರು ಬ್ರಾಂಚ್.

ಸ್ಥಾಪನೆ. **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್ಸಿಲ್ ಪ್ಲೇಟುಗಳು ಬಾಗಿಲಿನ ಬೋರ್ಡು, ಮೊನೊಗ್ರಾಮ್ ಸೀಲು ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.



Crown Rubber Stamp Co, 18 Balmat Road, MANGALORE.

Approved firm by the Govt. of Mysore, Certified by the Agent of the Govt. of India in Ceylon

Transport & Car Owners

ARE SPECIALLY INVITED TO VISIT

OUR SHOW ROOM *for economical transport maintenance.*

CANARA AUTOMOBILES - - - - - MANGALORE

" ದೇಶಭಕ್ತ "

ಕಾಸರಗೋಡ್ ಸದಾಶಿವರಾಯರ ಸ್ಮರಣಾರ್ಥವಾಗಿ ಆಗೋಸ್ತು ತಾ. ೧ನೇ ಗುರುವಾರದಿಂದ ಪ್ರಕಟವಾಗಲಿರುವ

ರಾಷ್ಟ್ರೀಯ ವಾರಪತ್ರಿಕೆ.

ದೇಶಭಕ್ತ

ವಾರ್ಷಿಕ ಚಂದಾ ರೂ. ೩-೪-೦. ಬಿಡಿ ಪ್ರತಿ ಒಂದಾಣೆ.

ಎಲ್ಲೆಲ್ಲೂ ಏಜಂಟರು ಬೇಕಾಗಿದ್ದಾರೆ.

ಮೆನೇಜರ್— "ದೇಶಭಕ್ತ" ಫಳ್ನೀರ್ ಬಜಾರ್, ಮಂಗಳೂರು.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜಾಗರೂಕತೆಯಿಂದ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ESTD. 1921 ಸ್ಥಾಪನೆ

FOUNDER:
SRI. A. B. SHETTY, M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

ಸಂಪಾದಕ
ಕೆ. ಕೆ. ಶೆಟ್ಟಿ.

NAVAYUGA
ನವಯುಗ

ಚಂದಾ ವಿವರ:
1 ವರ್ಷಕ್ಕೆ - ರೂ. 3—4—0
6 ತಿಂಗಳಿಗೆ - ರೂ. 1-12—0

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹ ಸಂಪಾದಕ:
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೪೬

ಉಡುಪಿ, ಗುರುವಾರ, ೨೫—೭—೧೯೪೦.
UDIPI, THURSDAY, 25-7-1940.

VOL. 19
No. 46

ಅಬಿಸೀನಿಯದ ಮಾಜಿ ಚಕ್ರವರ್ತಿಗಳು

ಅಬಿಸೀನಿಯವನ್ನು ಇಟಲಿಯು ಗೆದ್ದ ಮೇಲೆ ಈ ವರೆಗೂ ಲಂಡನಿನಲ್ಲಿದ್ದ ಅಬಿಸೀನಿಯದ ಮಾಜಿ ಚಕ್ರವರ್ತಿ ನೆಗಸರು ಈಗ ಈಜಿಪ್ತದ ಸುಡಾನಿಗೆ ಹೋಗಿರುವರೆಂದು ಅಧಿಕಾರಿಕವಾಗಿ ತಿಳಿದುಬಂದಿದೆ. ಅಬಿಸೀನಿಯದಲ್ಲಿ ಬಂಡಾಯವೆಬ್ಬಿಸುವುದೇ ಇವರ ಉದ್ದೇಶವಿರಬೇಕು. ಇಟಲಿಯ ಕುರಿತು ಅಬಿಸೀನಿಯದ ಜನಗಳಲ್ಲಿ ಅತೃಪ್ತಿಯು ಬೆಳೆಯುತ್ತಿರುವುದೆಂದು ತಿಳಿದುಬಂದಿದೆ.

ಬಾಟ್ಲಿವಾಲರ ಬಿಡುಗಡೆ ಮತ್ತು ದಸ್ತಗಿರಿ

ಪ್ರಸಿದ್ಧ ಸೋಶಿಯಲಿಸ್ಟ್ ಮುಖಂಡರಾದ ಶ್ರೀ. ಬಾಟ್ಲಿವಾಲರು ಕಲ್ಕತ್ತದ ಜೈಲಿನಿಂದ ಬಿಡುಗಡೆ ಹೊಂದಿದೊಡನೆಯೇ ಪುನಃ ದಸ್ತಗಿರಿಮಾಡಲ್ಪಟ್ಟಿರುವರು. ಇವರನ್ನು ಎರಡನೇ ಸಲ ಬಂಧಿಸಲು ಕಾರಣ ವೇನೆಂದು ತಿಳಿದಿಲ್ಲ.

ಜಾಪಾನಿಗೆ ಬ್ರಿಟನು ಬಗ್ಗಿತು

ಬರ್ಮದ ಮೂಲಕ ಇನ್ನು ಮೂರು ತಿಂಗಳ ತನಕ ಚೀನಕ್ಕೆ ಯುದ್ಧಸಾಮಗ್ರಿ, ಪೆಟ್ರೋಲ್, ಮೊದಲಾದುವುಗಳನ್ನು ಕಳುಹಿಸುವುದನ್ನು ನಿಲ್ಲಿಸಲು ಬ್ರಿಟಿಷ್ ಸರಕಾರ ಒಪ್ಪಿಕೊಂಡಿರುವುದು. ಹೊಂಕೊಂಗ್ ಮೂಲಕವೂ ಚೀನಕ್ಕೆ ಯುದ್ಧ ಸಾಹಿತ್ಯಗಳನ್ನು ಕಳುಹಿಸುವುದನ್ನು ಬಂದುಮಾಡಲಾಗುವುದು. ಈ ಪ್ರತಿಬಂಧವು ಕಾರ್ಯಕಾರಿಯಾಗಿ ನಡೆಯುವಂತೆ ಹೊಂಕೊಂಗ್ ಮತ್ತು ರಂಗೂನಿನಲ್ಲಿರುವ ಜಾಪಾನ ರಾಯಭಾರ ಅಧಿಕಾರಿಗಳು ಬ್ರಿಟಿಷ್ ಅಧಿಕಾರಿಗಳೊಂದಿಗೆ ನಿಕಟ ಸಂಬಂಧವನ್ನಿಟ್ಟುಕೊಳ್ಳುವರು. ಈ ಒಪ್ಪಂದದಿಂದ ಬ್ರಿಟನು ಸಂಪೂರ್ಣವಾಗಿ ಜಾಪಾನಿಗೆ ಬಗ್ಗಿ ನಡೆದಂತಾಗಿದೆ. ಈ ಸಂದರ್ಭದಲ್ಲದು ಜಾಪಾನಿನ ವೈರವನ್ನು ಕಟ್ಟಿಕೊಳ್ಳಲು ಸಿದ್ಧವಿಲ್ಲ.

ಮಾರ್ಶಲ್ ಚ್ಯಾಂಗರ ಉದ್ಘೋಷ

ಇಂಗ್ಲೆಂಡು ಮತ್ತು ಜಾಪಾನುಗಳು ಮಾಡಿಕೊಂಡಿರುವ ಒಪ್ಪಂದದಿಂದ ಚೀನೀ ರಾಷ್ಟ್ರೀಯ ಸರಕಾರಕ್ಕೆ ಹೆಚ್ಚಿನ ತೊಂದರೆ ಯಾಗಿರುವುದು. ಆದರಿಂದ ಬ್ರಿಟಿಷ್ ಸರಕಾರವು ಚೀನೀ ರಾಷ್ಟ್ರೀಯ ಸರಕಾರಕ್ಕೆ ದ್ರೋಹಮಾಡಿದಂತಾಗಿರುವುದು. ಈ ಒಪ್ಪಂದದಿಂದ ಬ್ರಿಟನು ಚೀನದ ಸ್ನೇಹವನ್ನು ಮಾತ್ರವಲ್ಲದೆ ಪೂರ್ವದ ತನ್ನ ಸ್ಥಾನವನ್ನೇ ಕಳಕೊಂಡಿರುವುದು. ಜಾಪಾನಿನ ಬೇಡಿಕೆಗಳಿಗೊಪ್ಪುವುದರಿಂದ ಪೂರ್ವದಲ್ಲಿ ಜಾಪಾನಿನೊಡನೆ ಕಲಹವನ್ನು ನಿವಾರಿಸಿದಂತಾಗುವದೆಂದು ಬ್ರಿಟನು ಭಾವಿಸಿದ್ದರೆ ಅದು ಬಯಲು ಭ್ರಾಂತಿ. ಅದರ ಬದಲಿಗೆ ಯುದ್ಧವನ್ನು ಮತ್ತಷ್ಟು ಸನ್ನಿಹಿತಗೊಳಿಸಿದಂತಾಗುವುದು. ಹೋರಾಟದ ಕ್ಷೇತ್ರವು ಮತ್ತಷ್ಟು ವಿಸ್ತೃತವಾದಂತಾಗುವುದು. ಯಾರೇನು ಮಾಡಿದರೂ ಚೀನವು ತನ್ನ ಸ್ವಾತಂತ್ರ್ಯ ಯುದ್ಧವನ್ನು ನಿಲ್ಲಿಸದೆ ಯಥಾಪ್ರಕಾರ ಮುನ್ನಡಸುವುದು. ಚೈನವು ಇಷ್ಟರ ವರೆಗೆ ಸಹಿಸಿದ ಕಷ್ಟ ಮತ್ತು ಮಾಡಿದ ತ್ಯಾಗದ ಉದ್ದೇಶವು ನೆರವೇರುವ ತನಕ ಅದು ಶಸ್ತ್ರವನ್ನು ಕೆಳಗಿಳಿಸಲಾರದೆಂದು ಮಾರ್ಶಲ್ ಚ್ಯಾಂಗರು ಉದ್ಘೋಷಿಸಿರುವರು.

ಚೈನಕ್ಕೆ ರಷ್ಯದ ಸಹಾಯ

ಬ್ರಿಟನಿನ ಘೋಷಣೆಯ ಕುರಿತು ಚೀನದಲ್ಲಿ ವ್ಯಾಕುಲ ಹಾಗೂ ಕ್ರೋಧವುಂಟಾಗಿದೆ. ಬ್ರಿಟಿಷ್ ಸರಕಾರವು ತನ್ನ ನೈಜ ರೂಪವನ್ನು ಪ್ರತ್ಯಕ್ಷ ಪ್ರಕಟಿಸಿದಂತಾಗಿದೆಯೆಂದು ಚೀನೀ ರಾಷ್ಟ್ರೀಯ ಸರಕಾರದ ಮುಖಂಡರ ಅಭಿಮತ. ಚೀನೀ ಸರಕಾರವು ಈಗ ಯುದ್ಧೋಪಕರಣ ಸಹಾಯಕ್ಕಾಗಿ ಸಂಪೂರ್ಣವಾಗಿ ರಷ್ಯದ ಮೇಲೆ ಅವಲಂಬಿಸುವಂತಾಗಿದೆ. ಕಮ್ಯೂನಿಸ್ಟರ ಮತ್ತು ಮಾರ್ಶಲ್ ಚ್ಯಾಂಗರ ಪಕ್ಷಗಳಿದ್ದ ವೈಮನಸ್ಯವು ಈಗ ದೂರವಾಗಿ ರಾಜಿಯಾಗಿದೆ. ಆದುದರಿಂದ ಜೆಕುವನ್ ಪ್ರಾಂತದ ಭೂಮಾರ್ಗವಾಗಿ ರಷ್ಯವು ಹೆಚ್ಚಿಗೆ ಯುದ್ಧ ಸಾಮಗ್ರಿಗಳನ್ನು ಚೀನೀ ರಾಷ್ಟ್ರೀಯ ಸರಕಾರಕ್ಕೆ ಕಳುಹಿಸುವುದೆಂದು ನಂಬಲಾಗಿದೆ

ಕ್ರಿಪ್ಸ್ ಸ್ಟೇಲಿನ ಭೇಟಿ

ರಷ್ಯದ ಬ್ರಿಟಿಷ್ ರಾಯಭಾರಿಯಾದ ಸರ್ ಸ್ಟ್ಯಾಫೋರ್ಡ್ ಕ್ರಿಪ್ಸರು ಜುಲೈ ತಾ 1ರಲ್ಲಿ ರಷ್ಯದ ಡಿಕ್ಟೇಟರರಾದ ಎಮ್. ಸ್ಟೇಲಿನರೊಡನೆ 3 ಘಂಟೆಗಳವರೆಗೆ ಸ್ನೇಹಪೂರ್ವಕವಾದ ಮಾತುಕತೆ ನಡಿಸಿರುವರೆಂದು ತಿಳಿದುಬಂದಿದೆ. ಇದರ ಉದ್ದೇಶ ಮತ್ತು ಪರಿಣಾಮವೇನೆಂದು ತಿಳಿದಿರುವುದಿಲ್ಲ.

ಪಂಡಿತ ಜವಾಹರಲಾಲರ ಖಂಡನೆ

ಇಂಗ್ಲೆಂಡು ಚೀನೀ ಸರಕಾರದ ಹಿತಕ್ಕೆ ವಿರೋಧವಾಗಿ ಜಾಪಾನಿನೊಡನೆ ಮಾಡಿಕೊಂಡಿರುವ ಒಪ್ಪಂದವನ್ನು ಪಂಡಿತ ಜವಾಹರಲಾಲರು ಖಂಡಿಸಿರುವರು. "ಇಂಗ್ಲೆಂಡಿಗ ಬಹಳ ಸಂಕಷ್ಟಕ್ಕೀಡಾಗಿರಬಹುದು. ಆದರೆ ಏನಾದರೊಂದು ರೀತಿಯಿಂದ ಜಾಪಾನನ್ನು ಸಮಾಧಾನಪಡಿಸಿ ಅಸ್ತಾಚಲದಲ್ಲಿ ಬ್ರಿಟಿಷ್ ಸಾಮ್ರಾಜ್ಯಕ್ಕೆ ವಿಪತ್ತುಂಟಾಗದಂತೆ ಮಾಡಬೇಕೆಂಬುದೇ ಬ್ರಿಟನಿನ ಉದ್ದೇಶ. ಆದರೆ ಅದು ಚೀನಕ್ಕೆ ದ್ರೋಹಮಾಡಿದರೆ ಅದರಿಂದ ಇಂಗ್ಲೆಂಡಿಗೆ ಅನುಕೂಲವಾಗಲಾರದು. ಹಿಂದೂದೇಶದ ಮತ್ತು ಅಮೇರಿಕದ ಅಭಿಪ್ರಾಯವು, ಚೀನದ ಮೇಲಿನ ಜಾಪಾನಿನ ಆಕ್ರಮಣಕ್ಕೆ ವಿರೋಧವಾಗಿದೆ. ಆಕ್ರಮಣಶೀಲ ಉದ್ಧಟ ಧೋರಣೆಯುಳ್ಳ ಜಾಪಾನನ್ನು ತೃಪ್ತಿಪಡಿಸಬೇಕೆಂಬ ಇಂಗ್ಲೆಂಡಿನ ಸಂಧಾನ ನೀತಿಯು ಪರಿಣಾಮವು ಕೆಟ್ಟದೇ ಆಗುವುದು. ಬ್ರಿಟನಿಗೆ ಅದರಿಂದ ಹಾನಿಯೇ ಹೊರತು ಒಳ್ಳೇದಾಗಲಾರದು. ಪ್ರಜಾಸತ್ತೆಗಾಗಿ ಹೋರಾಡುವದೆನ್ನುವ ... ಕಾರ್ಯತಃ ಅದಕ್ಕೆ ಪ್ರತಿವಿರೋಧವಾಗಿ ನಡೆಯುವುದು ಕೇವಲ ಅಸಮಂಜಸವಾಗಿದೆ. ಹಿಂದೀಯರು ಬ್ರಿಟನಿನ ಈ ನೀತಿಗೆ ಬೆಂಬಲಿಕೊಡಲಾರರು. ಭಾರತಕ್ಕೂ ಚೀನಕ್ಕೂ ಇರುವ ಬಾಂಧವ್ಯವೂ ಸಾಂಸ್ಕೃತಿಕ ಸಂಬಂಧವೂ ಇತ್ತೀಚೆಗೆ ಹೆಚ್ಚುತ್ತಲಿದೆ. ಇದಕ್ಕೆ ಹಾನಿತರುವ ಯಾವ ರಾಜನೀತಿಗೂ ಭಾರತದ ಬೆಂಬಲ ದೊರೆಯಲಾರದೆಂದೇ ಪಂಡಿತರ ಅಭಿಮತ.

ಲಕ್ಷಾಂತರ ಜನರು ಉಪವಾಸ ಬಿದ್ದಿರುವರು.

ಪೋಲೆಂಡಿನಲ್ಲಿ ೩|| ಕೋಟಿ ಜನರು ಹೊಟ್ಟೆಬಟ್ಟೆಗಿಲ್ಲದೆ ಹಸಿವೆಯಿಂದ ನರಳುತ್ತಿರುವರೆಂದು ತಿಳಿದು ಬರುತ್ತದೆ. ಜರ್ಮನಿಯು ಗೆದ್ದಿರುವ ಇತರ ದೇಶಗಳಲ್ಲಿ ೭|| ಕೋಟಿ ಜನರು ಹೊಟ್ಟೆಗೆ ಸಾಕಷ್ಟಿಲ್ಲದೆ ತೊಂದರೆ ಪಡುತ್ತಿದ್ದಾರೆ. ಬರುವ ಚಳಿಗಾಲದಲ್ಲಿ ಇನ್ನೂ ೧೫ ಕೋಟಿ ಜನರು ಆಹಾರವಿಲ್ಲದೆ ನರಳಬೇಕಾದೀತೆಂದು ಅಂದಾಜು ಮಾಡಲಾಗಿದೆ. ಯುರೋಪಿನಲ್ಲಿ ಈ ವರ್ಷ ಗೋಧಿ ಬೆಳೆಯು ಕಳೆದ ೧೦ ವರ್ಷಕ್ಕಿಂತಲೂ ಕಡಿಮೆಯಾಗಿದೆ. ಪಶ್ಚಿಮಾರ್ಧ ಗೋಳದಿಂದ ಯುರೋಪಿಗೆ ಬರುತ್ತಿದ್ದ ೧೬೨ ಕೋಟಿ ಪೌಂಡುಗಳಷ್ಟು ಗೋಧಿಯು ನಿಂತುಹೋಗಿದೆ. ಸೋವಿಯೆಟ್ ರಷ್ಯದ ಗೋಧಿ ಬೆಳೆಯೂ ಉತ್ತಮವಾಗಿಲ್ಲೆಂದು ಊಹಿಸಬಹುದಾಗಿದೆ.

ಮೇಡಮ್ ಚ್ಯಾಂಗ್ ಕೈಶೆಕ್ಕರ ಸಂದೇಶ

ಕಳೆದ ಜನವರಿಯಲ್ಲಿ ಅಲಹಾಬಾದಿನಲ್ಲಿ ನಡೆದ ಅಖಿಲಭಾರತ ಮಹಿಳಾ ಸಮ್ಮೇಳನವಲ್ಲಿ ಚೀನಕ್ಕೆ ಭಾರತ ಮಹಿಳಾ ಪ್ರತಿನಿಧಿಗಳನ್ನು ಕಳುಹಿಸಬೇಕೆಂದು ನಿರ್ಧ

TROPICAL.

TROPICAL INSURANCE CO. LTD., does not boast of 'big' figures. It has not been writing crores of Busines every Year. That was never its intention. It never aimed at breaking "records" at dangerous cost. Whatever it did it wrote sound business that endures in the books of the Company. Thus although not the biggest it is one of the best of Life Offices in India.

The Company, founded by Pandit Moti Lal Nehru, Dr. Ansari and Hakim Ajmal Khan, and guided now under the Chairmanship of Sj. Subhas Chandra Bose offers excellent chances to young men of culture & education to forge out their careers.

THE
Tropical Insurance Co., Ltd.
Branch Office: NIVAS BULIDING, Hampankatta,
MANGALORE.

Branch Manager: M. SUNDER RAM SHETTY.

★ ಶಾಂತಿಗಾಗಿ ಹಿಟ್ಲರರ ಆತುರ ★

ಶಾಂತಿಗೊಪ್ಪದಿದ್ದರೆ ಇಂಗ್ಲೆಂಡನ್ನು ನಾಶಮಾಡುವ ಬೆದರಿಕೆ.

ಇದೇ ತಾ. 19ರಲ್ಲಿ ಹರ್ ಹಿಟ್ಲರರು ಜರ್ಮನ್ ರೀಚ್‌ಸ್ಟಾಗಿನಲ್ಲಿ ಮಹತ್ವದ ಭಾಷಣವೊಂದನ್ನಿತ್ತು ವರ್ಸೇಲ್ಸಿನ ಒಪ್ಪಂದವೇ ಯುರೋಪಿನ ಇಂದಿನ ಅವಸ್ಥೆಗೆ ಕಾರಣವೆಂದು ಅದನ್ನು ನಿಷೇಧಿಸಿದರು. ತಾನು ಕೊಡುವ ವಿವೇಕಪರ ಹಾಗೂ ವ್ಯಾವಹಾರಿಕವಾದ ಸಲಹೆಗೆ ಇಂಗ್ಲೆಂಡು ಕಿವಿಗೊಡದಿದ್ದಲ್ಲಿ ಬ್ರಿಟನನ್ನೂ ಬ್ರಿಟಿಷ್ ಸಾಮ್ರಾಜ್ಯವನ್ನೂ ನಾಶಮಾಡುವುದಾಗಿ ಭಯಪ್ರದರ್ಶನ ಮಾಡಿದರು. ಇಟೆಲಿಯ ವಿದೇಶಮಂತ್ರಿ ಕೌಂಟ್ ಸಿಯೋನೋರವರು ಈ ಸಂದರ್ಭದಲ್ಲಿ ಹಾಜರಿದ್ದರು. ಹಿಟ್ಲರರ ಭಾಷಣವು ಹೀಗಿರುತ್ತದೆ.

"ಜರ್ಮನ್ ಜನಾಂಗದ ಭವಿಷ್ಯಕ್ಕೆ ಅತ್ಯಂತ ಮಹತ್ವದ್ದಾದ ಈ ಮಹಾ ಸಮರ ಮಧ್ಯದಲ್ಲಿ ನಾನು ಈ ಸಭೆಗೆ ನಿಮ್ಮನ್ನು ಕರೆದಿರುತ್ತೇನೆ. ಈ ವರೆಗೆ ನಡೆದಿರುವ ಘಟನೆಗಳ ಸಿಂಹಾವಲೋಕನವನ್ನು ಜರ್ಮನ್ ಜನತೆಗೆ ಸೂಚಿಸುವುದು ಅಗತ್ಯವೆಂದು ಪರಿಗಣಿಸಿರುತ್ತೇನೆ. ಜರ್ಮನಿಯು ನಮ್ಮ ನೆಶನಲ್ ಸೋಶಿಯಲಿಸ್ಟ್ ಪಕ್ಷದ ಉದ್ದೇಶವು ವರ್ಸೇಲ್ಸ್ ಒಪ್ಪಂದವನ್ನು ರದ್ದುಪಡಿಸುವುದು ಮಾತ್ರವೆಂದು ನಾನು ಪುನಃ ಇಂದು ರಾತ್ರಿ ದೃಢಪಡಿಸುತ್ತೇನೆ. ಫ್ರಾನ್ಸು ಮತ್ತು ಬ್ರಿಟನು ತಮ್ಮ ಪ್ರಭಾವದಿಂದ ಪ್ರಪಂಚದ ಮುಂದಾಳುಗಳಾಗಿ ಮೆರೆಯಬೇಕೆಂಬ ಡಾಂಬಿಕ ಅಹಂಭಾವದಿಂದ ವರ್ತಿಸಿರುತ್ತವೆಂಬುದು ಇಂದೀಗ ಸಿದ್ಧವಾಗಿದೆ. ಅವುಗಳು ಜರ್ಮನಿಯ ಕೇಳಿಕೆಗಳ ಕುರಿತು ತೋರಿಸಿರುವ ಉದಾಸೀನ ಮತ್ತು ಅವುಗಳ ನಿರಾಕರಣೆಯಿಂದ ಯುರೋಪಿನ ಇಂದಿನ ಪರಿಸ್ಥಿತಿಯುಂಟಾಗಿದೆ. ಬ್ರಿಟನ್ ಮತ್ತು ಫ್ರಾನ್ಸುಗಳು ನಿರೀಕ್ಷಿಸಿದುದರ ಪ್ರತಿ ವಿರುದ್ಧ ಪರಿಣಾಮವಾಗಿದೆ."

ಜರ್ಮನ್ ರೀಚ್‌ಸ್ಟಾಗಿನಲ್ಲಿ ಹರ್ ಹಿಟ್ಲರರ ಭಾಷಣ

"ನಮಗೆ ಜಯ ನಿಶ್ಚಯವೆಂಬುದು ಸ್ವಯಂಸಿದ್ಧ ವಿಷಯ. ಆದುದರಿಂದಲೇ ನಾನು ಬ್ರಿಟನ್ ಮತ್ತು ಫ್ರಾನ್ಸುಗಳೊಡನೆ ಶಾಂತಿ ಸಂಧಾನವನ್ನಪೇಕ್ಷಿಸಿದೆ. ನಾನು ಶಾಂತಿಯನ್ನು ಹಾರೈಸಿದಾಗ ಯಾವ ಶರ್ತಗಳನ್ನೂ ಹಾಕಿಲ್ಲ. ಮಿ. ಚೇಂಬರ್ಲೇನರು ಅಖಿಲ ಪ್ರಪಂಚದಿದಿರಲ್ಲೇ ನನ್ನ ಮುಖದ ಮೇಲೆ ಉಗುಳಿದರು. ಫ್ರಾನ್ಸು ಇಂಗ್ಲೆಂಡುಗಳೊಂದುಗೂಡಿ ಸೇನಾ ಸಂಘಟನೆ ಮಾಡತೊಡಗಿದುವು. ಹೋದ ಶರತ್ಕಾಲದಲ್ಲಿ ಪ್ರತಿಕೂಲ ಹವಾಗುಣ ಮತ್ತು ತೀವ್ರ ಚಟುವಟಿಕೆಯ ನಿಮಿತ್ತ ಜರ್ಮನ್ ಸೇನೆಯು ತನ್ನ ಕಾರ್ಯಕ್ರಮವನ್ನು ಮುಂದೆ ಹಾಕಿತು. ಸ್ವೀಡನಿನಲ್ಲಿರುವ ಕಬ್ಬಿಣದ ಅದುರನ್ನು ಪಡೆಯಲು ಬ್ರಿಟನ್ ಮತ್ತು ಫ್ರಾನ್ಸುಗಳು ನೋರ್ವೆಗೆ ಪ್ರವೇಶಿಸಿ ಅನಂತರ ಮುಂದುವರಿಸಬೇಕೆಂದಿದ್ದ ವಿಷಯವು ನಮಗೆ ತಿಳಿದುಬಂತು. ಜರ್ಮನ್ ಸೇನೆಯ ಚಲನವಲನ ಆರಂಭವಾದೊಡನೆಯೇ ಬ್ರಿಟಿಷ್ ಸೇನೆಯು ನೋರ್ವೆಯ ತೀರದಲ್ಲಿಳಿಯಬೇಕೆಂದು ಆಗ ನೌಕಾ ಮಂತ್ರಿಯಾಗಿದ್ದ ಮಿ. ಚರ್ಚಿಲ್ಲರು ಆಜ್ಞೆಯಿತ್ತರು. ಜರ್ಮನಿಯ ಯುದ್ಧೇತಿಹಾಸದಲ್ಲಿಯೇ ಅತ್ಯಂತ ಧೈರ್ಯವಾದ ಸಾಹಸ ನೋರ್ವೆಯ ದಂಡಯಾತ್ರೆ.

ಯುದ್ಧಾರಂಭವಾಗುವ ಮೊದಲು ಮೆಗಿನೋ ಕೋಟೆಯನ್ನು ಭೇದಿಸುವ ಆಲೋಚನೆ ನಡೆದಿತ್ತು. ಆದರೆ ಆ ಮೇಲಿನ ಪರಿಸ್ಥಿತಿಯಿಂದಾಗಿ ಹಾಲೆಂಡ್ ಬೆಲ್ಜಿಯಮ್‌ಗಳ ಮೇಲೆ ಧಾಳಿನಡಿಸುವುದು ಅವಶ್ಯವಾಯಿತು. ಸರಹದ್ದಿನಲ್ಲಿ ಸ್ವಲ್ಪ ಜರ್ಮನ್ ಸೇನೆಯು ಸಂಗ್ರಹಿಸಲ್ಪಟ್ಟದ್ದರೂ ಅತಿ ಹೆಚ್ಚಿನ ಫ್ರೆಂಚ್ ಸೇನೆಯು ಜಮೆಯಾಯಿತು. ಮೇ ತಿಂಗಳ ಆದಿಯಲ್ಲೇ ಮುಂದಕ್ಕೆ ನುಗ್ಗುವ ಆಲೋಚನೆಯನ್ನು ಫ್ರಾನ್ಸ್ ಮತ್ತು ಇಂಗ್ಲೆಂಡುಗಳು ಮಾಡಿದ್ದುವು. 1914ರ ಯುದ್ಧ ಕ್ರಮದಿಂದ ಭಿನ್ನವಾದ ವಿಧಾನವನ್ನನುಸರಿಸಲಾಯಿತು. ರಣಾಂಗಣದ ಪಶ್ಚಿಮಭಾಗದಿಂದ ಒಂದೇಸಮನೆ ಧಾಳಿನಡೆಸಿ ಮುಂದೊತ್ತಲಾಯಿತು. ಇದರಿಂದಾಗಿ ಬೆಲ್ಜಿಯಮ್ಮಿನಲ್ಲಿ ಹೋರಾಡಲು ಕಳುಹಿಸಲ್ಪಟ್ಟಿದ್ದ ಬ್ರಿಟಿಷ್ ಸೇನೆಯೆಲ್ಲಾ ನಿರ್ನಾಮವಾಗುವಂತಾಯಿತು. ಇದು ಜರ್ಮನ್ ಸೇನಾನಾಯಕತ್ವಕ್ಕೆ ಬಹಳ ಕೀರ್ತಿತಂದಿತು. ಪ್ರಾರಂಭದಲ್ಲೇ ಪ್ಯಾರಿಸನ್ನು ಹಿಡಿಯಬೇಕೆಂಬ ಆತುರದಿಂದ ಮುಂದುವರಿಯಲಿಲ್ಲ. ಸ್ವಿಜರ್ಲೇಂಡಿನ ಮಧ್ಯಾಂತರ ನುಗ್ಗಬೇಕೆಂಬ ಉದ್ದೇಶದಿಂದ ಹೊರಟುದಾಯಿತು. ಕೆಲವೇ ದಿನಗಳೊಳಗೆ ಜರ್ಮನ್ ಸೇನೆಗೆ ಹಿಂದಿಗಿಂತಲೂ ಹೆಚ್ಚಿನ ಸಾಮರ್ಥ್ಯದಿಂದ ಹೋರಾಡಲು ಅನುಕೂಲವಾಯಿತು.

ಜರ್ಮನಿಯ ವಿಮಾನ ಪಡೆಯು ಅತ್ಯಂತ ಪ್ರಶಂಸನೀಯ ಕೆಲಸಮಾಡಿರುವುದು. ಶತ್ರುಗಳ ವಾಯು ದಳವನ್ನು ನಾಶಗೊಳಿಸುವುದೇ ಅದರ ಮುಖ್ಯ ಉದ್ದೇಶವಾಗಿತ್ತು. ಶತ್ರುಗಳ ಮಾರ್ಗಗಳನ್ನೆಲ್ಲಾ ಆಕ್ರಮಿಸುವ ಪೆರಚೂಟ್ ಸೈನಿಕರನ್ನಿಳಿಸಿ ಆಶ್ಚರ್ಯಕರ ಕೆಲಸಮಾಡಲಾಯಿತು. ಈ ರೀತಿ ಪಡೆದ ಜಯವು ಭೂಸೇನೆಯಿಂದ ಸಾಧ್ಯವಾಗುತ್ತಿದ್ದಿಲ್ಲ. ನಾಝಿ ಒಳಸಂಚುಗಾರರು ನಡಿಸಿದ ಚಟುವಟಿಕೆಯಿಂದ ನಮಗೆ ಬಹಳ ಅನುಕೂಲವಾಯಿತು. ನಾನು ರಿಬಂಟ್ರಫರರನ್ನೂ ಗೋರಿಂಗರನ್ನೂ ಅಭಿನಂದಿಸುತ್ತೇನೆ. ಗೋರಿಂಗರ ಮಹಿಮೆಯು ಅಪ್ರತಿಮವಾದುದು. ಅವರನ್ನು ರೀಚ್ಚಿನ ಮಾರ್ಶಲ್ ಪದವಿಗೇರಿಸುತ್ತೇನೆ. ಅವರಿಗೆ ಗ್ರೇಂಡ್ ಕ್ರೋಸ್ ಆಫ್ ದಿ ಆಯರ್ನ್ ಕ್ರೋಸ್ ಎಂಬ ಬಿರುದಿನ ಬಿಲ್ಲೆ ಕೊಡುತ್ತೇನೆ.

ಆರಂಭದಿಂದಲೇ ನಾಝಿ ಪಕ್ಷವು ತನ್ನ ವಿದೇಶಾಂಗ ಧೋರಣೆಯಲ್ಲಿ ಎರಡು ಮುಖ್ಯ ಉದ್ದೇಶಗಳನ್ನಿಟ್ಟುಕೊಂಡಿರುವುದು. ಇಟೆಲಿಯೊಡನೆ ಸೌಹಾರ್ದ ಮತ್ತು ನಿಜವಾದ ಸ್ನೇಹಭಾವ. ಹಾಗೆಯೇ ಬ್ರಿಟನಿನೊಡನೆಯೂ ಗೆಳೆತನ. ನಾನು ಎಷ್ಟೊಂದು ಪ್ರಯತ್ನಮಾಡಿದರೂ ಬ್ರಿಟನಿನೊಡನೆ ಸ್ನೇಹ ಬೆಳೆಸಲು ನನಗೆ ಸಾಧ್ಯವಾಗಿರುವುದಿಲ್ಲೆಂದು ವಿಷಾದಪೂರ್ವಕವಾಗಿ ಹೇಳಬೇಕಾಗಿದೆ. ಇಂಗ್ಲೆಂಡಿನೊಡನೆ ಮೈತ್ರಿಯಿಂದಿರುವ ನಿರ್ಧಾರ ಮಾಡಿ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದೆ. ಆದರೆ ಅದು ಸಾಧ್ಯವಾಗಲಿಲ್ಲ. ನವ ಜನ್ಮಹೊಂದಿದ ಜರ್ಮನಿಯೊಡನೆ ಇಟೆಲಿಯು ಮಾತ್ರ ಸೌಹಾರ್ದದಿಂದಿರಲೆಳಸಿತು. ಯುದ್ಧಾರಂಭದಿಂದಲೂ ಇಟೆಲಿಯು ನಮ್ಮೊಡನೆ ಸಹಕರಿಸಿದ್ದಿತು. ಯುದ್ಧಕ್ಕೆ ಸೇರುವ ಸಂದರ್ಭ ಬಂದಾಗ ಅವರಾಗಿ ಮುಸಲೋನಿಯವರು ಯುದ್ಧಕ್ಕಿಳಿದರು. ಇಟೆಲಿಯು ಯುದ್ಧಕ್ಕೆ ಪ್ರವೇಶಿಸಿದೊಡನೆಯೇ ಫ್ರಾನ್ಸು ಇನ್ನು ಮುಂದೆ ಹೋರಾಡಿ ಫಲವಿಲ್ಲೆಂದು ನಿರ್ಧರಿಸಿತು. ನಮ್ಮಿಬ್ಬರ ಪ್ರಯತ್ನಗಳಿಗೂ ಸಮಾನ ವಿಜಯ ದೊರತಿದೆ.

ನಾನು ಜಂಭದ ವಿಜೃಂಭಣೆಯಿಂದ ಈ ಮಾತುಗಳನ್ನು ಹೇಳುವುದಲ್ಲ. ಜಂಭದ ಬಡಾಯಿಗಳೆಲ್ಲಾ ಚರ್ಚಿಲ್ಲರಂಥವರಿಗೆ ಆವಶ್ಯವಿದೆ. ನಾನು ಹೇಳಿದ್ದು ಸರಿಯೆಂಬುದನ್ನು ಈ ಯುದ್ಧವು ರುಜುಗೊಳಿಸಿದೆ. ಈ ಯುದ್ಧದ ಪರಿಣಾಮವಾಗಿ ಬ್ರಿಟನು ಇನ್ನೂ ಬಲವಾಗಿ ಹೊರಬರುವುದೆಂದು ಬ್ರಿಟಿಷ್ ರಾಜನೀತಿಜ್ಞರು ಉದ್ಘೋಷಿಸುತ್ತಿದ್ದಾರೆ, ನಾವು ಜಯಶೀಲರಾಗಿ ಬಲಶಾಲಿಗಳಾಗುವೆವೆಂದು ನಾನು ಹೇಳುತ್ತೇನೆ. ಸೈನ್ಯ ಶಕ್ತಿಯಲ್ಲಿ ಹಿಂದಿಗಿಂತ ಎಷ್ಟೋ ಬಲಶಾಲಿಯಾಗಿದೆ ಜರ್ಮನಿ ಇಂದು. ಈಗ ಆಗಿರುವುದಕ್ಕಿಂತಲೂ ಹೆಚ್ಚಿನ ನಷ್ಟವಾಗಬಹುದೆಂದು ನಾವೆಣಿಸಿದ್ದೆವು. ರಾಷ್ಟ್ರದ ಮಾನವ ಬಲವು ಸ್ವಾತಂತ್ರ್ಯ ಸಮರವನ್ನು ಬಲಪಡಿಸಿದೆ. ನಮಗೆ ಆಗಿರುವ

(೬ನೇ ಪುಟಕ್ಕೆ ಮುಂದುವರಿಯುತ್ತದೆ)

THE

BOMBAY LIFE ASSURANCE

Company Limited.

[ESTD. 1908]

LIFE INSURANCE

Dispels darkness of the mind and brings Enlightenment and Courage, Immortalises major portion of your Income whether you survive or not and thus makes life worth living to you and your dependants in reality.

Ask us what particular scheme of Insurance will satisfy your requirements and your purse.

Agency Applications from Active and Influential Ladies & Gentlemen are invited.

To Insure or to Represent consult:

KOCHIKAR BROTHERS LTD.,

MADRAS BRANCH SECRETARIES AND

Chief Agents for Bombay City & Suburbs,

BOMBAY LIFE BUILDING,

Sir Lalubhai Samaldas Road,

GANDHI NAGAR, UDIPI.

Or any of their following Offices at:–

Puthiyara, CALICUT.	Car Street, MANGALORE	Central Station Road, TRIVANDRUM.
Gautam Nivas, Charni Road, Girgaum, BOMBAY No. 4.	Post Box No. 337, Mount Road, MADRAS	Visweswarapuram Circle BANGALORE CITY.

(೩ನೇ ಪುಟದಿಂದ)

ರಿಸಲಾಗಿತ್ತು. ಶ್ರೀಮತಿ ವಿಜಯಲಕ್ಷ್ಮಿ ಪಂಡಿತರಿಗೆ ಮೇಡಮ್ ಚ್ಯಾಂಗ್ ಕೈಶೆಕ್ಕರೊಂದು ಪತ್ರ ಬರೆದು, ಚೀನಕ್ಕೆ ಬರುವ ಹಿಂದೂ ಮಹಿಳಾಪ್ರತಿನಿಧಿಗಳಿಗೆ ಸಂತೋಷದ ಸ್ವಾಗತವಿತ್ತಿರುವರು. ಭಾರತ ಮಹಿಳೆಯರು ಚೀನಾದೇಶಕ್ಕೆ ಬಂದು ಚೀನೀ ಸ್ತ್ರೀಯರ ಸ್ಥಿತಿಗತಿಗಳನ್ನು ತಿಳಿದುಕೊಳ್ಳಬೇಕು. ಚೀನಕ್ಕೂ ಭಾರತಕ್ಕೂ ಇರುವ ಮೈತ್ರಿಭಾವವನ್ನು ಬೆಳೆಸಬೇಕು. ಆದರೆ ನೀವು ಈಗಲೇ ಬರುವದು ಸುರಕ್ಷಿತವಲ್ಲ. ವೈರಿಗಳಾದ ಜಪಾನರು ಪ್ರಬಲ ವಿಮಾನ ಧಾಳಿ ನಡೆಸುತ್ತಿದ್ದಾರೆ. ವೈಮಾನಿಕ ಪ್ರಯಾಣವು ಕಷ್ಟವಾಗಿದೆ. ಅಕ್ಟೋಬರ ಅಥವಾ ನವಂಬರ ತಿಂಗಳಲ್ಲಿ ನೀವು ಬರುವಂತೆ ಏರ್ಪಾಡುಮಾಡಬೇಕೆಂದು ಸೂಚಿಸಿರುವರು.

ಗಿರಣಿ ಅಕ್ಕಿಯು ಆರೋಗ್ಯಕ್ಕೆ ಬಹಳ ಹಾನಿಕರ

ಪೌಷ್ಟಿಕವಾದ ಆಹಾರವೆನಿಸಲು ಸಾಕಷ್ಟು ವಿಟಮಿನ್ ಸತ್ವವು ಕೇವಲ ಅಕ್ಕಿಯಲ್ಲಿರುವುದಿಲ್ಲ. ಆದರೆ ಗಿರಣಿ ಅಕ್ಕಿಯಲ್ಲಿ ಈ ಸತ್ವವು ಸಂಪೂರ್ಣ ನಷ್ಟಹೊಂದಿ ಆರೋಗ್ಯಕ್ಕೆ ಹಾನಿಯುಂಟಾಗುವುದು.

ಇಂಡಿಯಾ ಸರಕಾರವು ಆರೋಗ್ಯ ಸಂಬಂಧವಾಗಿ ಕೆಲವು ಪ್ರಕಟಣೆಗಳನ್ನು ಹೊರಡಿಸುತ್ತಿರುವುದು. ಇಂತಹ 28ನೇ ಪ್ರಕಟಣೆಯೊಂದರಲ್ಲಿ ಅಕ್ಕಿಯ ಕುರಿತು ಬರೆಯಲಾಗಿದೆ. ಕುನ್ನೂರಿನ ಆಹಾರ ಸಂಶೋಧನಾಲಯದ ಅಭಿಪ್ರಾಯವನ್ನು ಈ ಪ್ರಕಟಣೆಯು ಒಳಗೊಂಡಿದೆ

ಸುಮಾರು ಅರೆವಾಸಿ ಮಾನವಕೋಟಿಯ ಪ್ರಾಮುಖ್ಯ ಆಹಾರ ಅಕ್ಕಿ. ಹಿಂದೂದೇಶದಲ್ಲಿ, ಇತರ ಎಲ್ಲಾ ಧಾನ್ಯಗಳು ಬೆಳೆಸಲ್ಪಡುವುದಕ್ಕಿಂತಲೂ ಹೆಚ್ಚಿನ ಪ್ರದೇಶದಲ್ಲಿ ಅಕ್ಕಿಯನ್ನು ಬೆಳೆಸಲಾಗುತ್ತದೆ. ಅಕ್ಕಿಯೊಂದೇ ಸಾಕಷ್ಟು ಪೌಷ್ಟಿಕ ಆಹಾರವಾಗಿರುವುದಿಲ್ಲ. ಅದರೊಂದಿಗೆ ಹೆಚ್ಚಾಗಿ ಬೇಳೆ, ತರಕಾರಿ, ಹಣ್ಣುಹಂಪಲು, ಮಾಂಸ, ಹಾಲು ಮತ್ತು ಹಾಲಿನ ಇತರ ಉತ್ಪತ್ತಿಗಳನ್ನು ತೆಗೆದುಕೊಳ್ಳಬೇಕು.

ಅಕ್ಕಿಯ ಒಳಗಿನ ಹಿಟ್ಟುಭಾಗಕ್ಕಿಂತಲೂ ಹೊರಗಣ ಭಾಗವೇ ಹೆಚ್ಚು ಪೌಷ್ಟಿಕವಾದುದು. ಅದರಲ್ಲೇ ಹೆಚ್ಚಾಗಿ ವಿಟಮಿನ್ ಸತ್ವವಿರುವುದು. ಭತ್ತವನ್ನು ಕೈಯಲ್ಲಿ ಕುಟ್ಟುವುದರಿಂದಲೂ ಅಕ್ಕಿಯ ಹೊರಭಾಗವು ಸವೆದು ಹೋದರೂ ಅದರ ಪೌಷ್ಟಿಕತನವು ಅಷ್ಟೇನೂ ಕಡಿಮೆಯಾಗುವುದಿಲ್ಲ. ಆದರೆ ಭತ್ತವನ್ನು ಗಿರಣಿಗೆ ಹಾಕಿ ಕುಟ್ಟುವುದರಿಂದ ಅದರ ವಿಟಮಿನ್ ಸತ್ವನೆಲ್ಲಾ ನಷ್ಟವಾಗುತ್ತದೆ. ಆದರೆ ಬೇಯಿಸಿದ ಭತ್ತವನ್ನು ಗಿರಣಿಯಲ್ಲಿ ಕುಟ್ಟಿದರೂ ಅದರ ವಿಟಮಿನ್ ಸತ್ವವು ಅಷ್ಟೊಂದು ಹೆಚ್ಚೇನೂ ಕಳೆದು ಹೋಗುವುದಿಲ್ಲ. ಭತ್ತವನ್ನು ಬೇಯಿಸುವಾಗ ಅದರ ವಿಟಮಿನ್ ಮೊದಲಾದ ಪೌಷ್ಟಿಕ ವಸ್ತುಗಳು ಅಕ್ಕಿ ಕಾಳೊಳಗೇನೇ ಸೇರಿ ಹೋಗುತ್ತವೆ. ಅಕ್ಕಿಯನ್ನು ಚೆನ್ನಾಗಿ ತೊಳೆಯುವುದರಿಂದ ಮತ್ತು ಹೆಚ್ಚಿಗೆ ನೀರಲ್ಲಿ ಬೇಯಿಸುವಾಗ ಅದರ ಸುಮಾರು ಸೇಕಡಾ 50ರಷ್ಟರ ಸತ್ವವು ಹೋಗಿಬಿಡುತ್ತದೆ.

ಇಂದೀಗ ಮದ್ರಾಸ್ ಪ್ರಾಂತದ ಎಲ್ಲೆಲ್ಲಿಯೂ ಅಕ್ಕಿ ಗಿರಣಿಗಳೇ ಅಧಿಕವಾಗಿ ಸ್ಥಾಪಿತವಾಗಿ ಸುಮಾರು ಸೇಕಡಾ 70 ರಷ್ಟು ಮಂದಿ ಗಿರಣಿ ಅಕ್ಕಿಯನ್ನೇ ಉಪಯೋಗಿಸುತ್ತಿದ್ದಾರೆ. ಗಿರಣಿಯಿಂದ ಸುಲಭವಾಗಿ ಮತ್ತು ಅಗ್ಗವಾಗಿ ಅಕ್ಕಿ ತಯಾರಿಸಬಹುದಾಗಿದೆ. ಆದುದರಿಂದ ಕೈಯಿಂದ ಭತ್ತ ಕುಟ್ಟುವುದೇ ನಿಂತು ಹೋಗಿ ಹಳ್ಳಿಗಳಲ್ಲಿ ಹಲವು ಕುಟುಂಬಗಳು ಬಹಳ ಸಂಕಷ್ಟಕ್ಕೊಳಗಾಗಿವೆ. ಹೆಚ್ಚಿನ ರೈತರು ಹಣದ ಅಡಚಣೆಗಾಗಿ ಭತ್ತವನ್ನೇ ಸಾಹುಕಾರರಿಗೆ ಮಾರಿಬಿಡುತ್ತಾರೆ. ಈ ಸಾಹುಕಾರರು ಗಿರಣಿ ಮೂಲಕವೇ ಅಕ್ಕಿ ಮಾಡಿಸುತ್ತಾರೆ. ಈ ಅಕ್ಕಿಯು ಕೈಯಲ್ಲಿ ಕುಟ್ಟಿ ಮಾಡಿದುದಕ್ಕಿಂತ ಅಗ್ಗವಾಗಿದೆ ಮತ್ತು ನಾಜೂಕಾಗಿದೆ. ಆದುದರಿಂದ ಜನರು ಗಿರಣಿ ಅಕ್ಕಿಗೇನೇ ಮೆಚ್ಚಿ ಅದನ್ನೇ ಹೆಚ್ಚಾಗಿ ಉಪಯೋಗಿಸಹತ್ತಿರುತ್ತಾರೆ. ಪರಿಸ್ಥಿತಿಯು ಇದೇ ರೀತಿ ನಡೆದಲ್ಲಿ ಕೈಯಲ್ಲಿ ಭತ್ತ ಕುಟ್ಟುವುದೇ ನಿಂತುಹೋಗುವ ದಿನವು ದೂರವಿರಲಾರದು.

ಅಕ್ಕಿ ಗಿರಣಿಗಳಿಂದಾಗಿ ಹಳ್ಳಿಗಳ ಸಾಂಪತ್ತಿಕ ಸ್ಥಿತಿಯು ತೀರಾ ಕೆಟ್ಟುಹೋಗುವಂತಾಗಿದೆ. ಹಳ್ಳಿಗಳ ಬಡ ಜನರು ವಿಶೇಷವಾಗಿ ಹೆಂಗಸರು ಪ್ರಾಮುಖ್ಯ ಉಪವೃತ್ತಿಯೊಂದನ್ನು ಕಳಕೊಳ್ಳುವಂತಾಗಿದೆ. ಸರಕಾರವು ಕಾನೂನು ಮೂಲಕ ಅಕ್ಕಿ ಗಿರಣಿಗಳನ್ನು ನಿಯತಗೊಳಿಸಬೇಕು. ಗಿರಣಿ ಅಕ್ಕಿಯನ್ನುಪಯೋಗಿಸುವುದರಿಂದ ಆರೋಗ್ಯಕ್ಕುಂಟಾಗುವ ಹಾನಿಯ ಕುರಿತು ಜನತೆಯಲ್ಲಿ ಪ್ರಚಾರ ನಡಿಸಲ್ಪಡಬೇಕು ಅಕ್ಕಿಯನ್ನು ಗಿರಣಿಯಲ್ಲಿ ತಯಾರಿಸಿದಾಗ ತೊಳೆಯುವಾಗ ಮತ್ತು ಬೇಯಿಸುವಾಗ ಅದು ಹೇಗೆ ಎಂತಹ ಸತ್ವಗಳನ್ನು ಕಳಕೊಳ್ಳುವುದೆಂಬುದನ್ನು ಜನರು ಚೆನ್ನಾಗಿ ಮತ್ತು ನಿಶ್ಚಿತವಾಗಿ ತಿಳಿದುಕೊಳ್ಳಬೇಕು.

ಅಕ್ಕಿಯನ್ನುಪಯೋಗಿಸುವವರು ಹೆಚ್ಚಾಗಿ ಹಾಲು, ಬೆಣ್ಣೆ, ಮೊಸರು, ಮಜ್ಜಿಗೆ ಮೊದಲಾದವನ್ನು ಉಪಯೋಗಿಸಬೇಕು. ಒಂದು ಹೊತ್ತು ರಾಗಿ ಯಾ ಗೋಧಿಯನ್ನುಪಯೋಗಿಸುವುದೊಳ್ಳೆಯದು ರಾಗಿಯನ್ನು ತೆಗೆದುಕೊಳ್ಳುವುದರಿಂದ ಹೆಚ್ಚಿನ ಪ್ರಯೋಜನವಿದೆ. ಹಸುರು ಸೊಪ್ಪಿನ ಕಾಯಿಪಲ್ಯಗಳನ್ನು ವಿಶೇಷವಾಗಿ ತಿನ್ನುತ್ತಿರಬೇಕು. ಮೀನ ಹಿಡಿಯುವ ಕೈಗಾರಿಕೆಯನ್ನು ಅಭಿವೃದ್ಧಿಪಡಿಸಬೇಕು. ಮೂರು ಹೊತ್ತು ಕೇವಲ ಅನ್ನವನ್ನು ಸೇವಿಸುತ್ತಿದ್ದರೆ ಮಾತ್ರ ಸಂಪೂರ್ಣ ಆಹಾರವಾಗಲಾರದು.

"ನಾಮರ್ದಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ನಸೋನಿ ಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ.

"ಸೆಮಿನಾ ಟೊನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನವುಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ.

ಕಿಮ್ಮತು ರೂ. 3-0-0 ಡಬ್ಬಿ 0-8-0

ಸೊರಠ್ ಫಾರ್ಮಸಿ,
ನಳ್ ಬಜಾರ್, ಡಂಕನ್ ರೋಡ್,
ಮುಂಬಾಯಿ 4

Sorath Pharmacy,
Nul. Bazzar, Duncan Road,
BOMBAY 4.

ಇಂಡಿಯನ್ ಮ್ಯೂಚುಯಲ್ ಲೈಫ್ ಎಸೋಸಿಯೇಷನ್ ಲಿಮಿಟೆಡ್

ಹೆಡ್ ಆಫೀಸ್:- ನಂ. ೧೦, ಮೌಂಟ್ ರೋಡ್, ಮದರಾಸು

—— ಡೈರೆಕ್ಟರುಗಳ ಬೋರ್ಡ್ ——

ಸರ್ ನೇಸಾ ರಮೇಶಂ, ಕೆ. ಟಿ ರಿಟೈರ್ಡ್ ಜಡ್ಜ್, ಮದರಾಸ್ ಹೈಕೋರ್ಟ್, ಮದರಾಸು.
ರಾವ್ ಬಹದ್ದೂರ್ ಮ|| ಕೆ. ಬಲರಾಮ ಅಯ್ಯರ್, ಬಿ.ಎ. ರಿಟೈರ್ಡ್ ಅಕೌಂಟೆಂಟ್ ಜನರಲ್ ಮದರಾಸ್,
ಮ|| ಸಿ. ಕೃಷ್ಣಮೂರ್ತಿ ಮೊದಲಿಯಾರ್ ಲ್ಯಾಂಡ್ ಲಾರ್ಡ್, ಶಿಯಾಳಿ.
ದಿವಾನ್ ಬಹದ್ದೂರ್ ಮ|| ಎ. ವಿ ರಾಮಲಿಂಗ ಅಯ್ಯರ್, ಮದರಾಸ್ ಸರಕಾರದ ರಿಟೈರ್ಡ್ ಚೀಫ್ ಇಂಜಿನಿಯರು.
ಮ|| ಟಿ. ಎಸ್ ನಾರಾಯಣ ಸ್ವಾಮಿ, ಎಂ ಎ, ಅಸಿಸ್ಟೆಂಟ್ ಕೆಮಿಸ್ಟ್, ಬಕಿಂಗ್ ಹ್ಯಾಂ ಮಿಲ್ಸ್, ಮದರಾಸ್.
ದಿವಾನ್ ಬಹದ್ದೂರ್ ಮ|| ವಿ. ಭಾಷ್ಯಂ ಅಯ್ಯಂಗಾರ್, ರಿಟೈರ್ಡ್ ಮದರಾಸ್ ಹೈಕೋರ್ಟ್ ಜಡ್ಜ್.
ಮ|| ಸಿ.ಎಂ. ಶ್ರೀನಿವಾಸನ್, ಬಿ.ಎ., ಬಿ.ಎಲ್. (ಎಕ್ಸ್-ಅಫೀಸಿಯೋ) ಮದ್ರಾಸ್.

ಮ್ಯಾನೇಜರ್:— ಮ|| ಎಂ. ನಟೇಶನ್, ಎಂ.ಎ. ಚೀಫ್ ಮೆಡಿಕಲ್ ಆಫೀಸರ್:— ಲೆ. ಕ|| ವಿ. ಮಹದೇವನ್, ಐ. ಎಂ. ಎಸ್.

ಬ್ಯಾಂಕರುಗಳು:— ಇಂಡಿಯನ್ ಬ್ಯಾಂಕ್ ಲಿಮಿಟೆಡ್, ಮದರಾಸ್. ಮದರಾಸ್ ಪ್ರೋವಿನ್ಶಿಯಲ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್.
ಇಂಡೊ-ಕಮರ್ಶಿಯಲ್ ಬ್ಯಾಂಕ್ ಲಿಮಿಟೆಡ್, ದಿ ಬ್ಯಾಂಕ್ ಆಫ್ ಮೈಸೂರು, ಲಿಮಿಟೆಡ್.

ಬ್ರಾಂಚುಗಳು:— ಕಲ್ಕತ್ತ, ಲಾಹೋರ್, ಜೋಧಪೂರ್, ಮಧುರ, ಕಲ್ಲಿಕೋಟೆ, ಬೆಜವಾಡ, ಅಲಹಾಬಾದ್ ಬೊಂಬಾಯಿ, ಅಹಮದಾಬಾದ್, ಪೂನಾ

ಮೈಸೂರು ಸರಕಾರದ ಹೊಸ ವಿಮಾ ಕಾನೂನನ್ನು ಅನುಸರಿಸಿ ಕಂಟ್ರೋಲರವರಲ್ಲಿ ಠೇವಣಾತಿ ಮೊಬಲಗು ಇಡಲಾಗಿದೆ.

ಕರ್ನಾಟಕದಲ್ಲೆಲ್ಲಾ ಯೋಗ್ಯರಾದ ಮತ್ತು ಪ್ರತಿಭಾಶಾಲಿಗಳಾದವರಿಂದ ಏಜನ್ಸಿಗಳಿಗೆ ಅರ್ಜಿಗಳು ಸ್ವೀಕರಿಸಲ್ಪಡುವುವು.

ಉತ್ತಮ ಕೆಲಸಮಾಡುವವರಿಗೆ ಒಳ್ಳೇ ಷರತ್ತುಗಳು. **ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—**

ಮ|| ಸಿ. ಎಂ. ಶ್ರೀನಿವಾಸನ್, ಬಿ. ಎ., ಬಿ. ಎಲ್. ಜನರಲ್ ಸೆಕ್ರೆಟರಿ.
ಇಂಡಿಯನ್ ಮ್ಯೂಚುಯಲ್ ಲೈಫ್ ಅಸೋಸಿಯೇಷನ್ ಲಿಮಿಟೆಡ್,
10 ಮೌಂಟ್ ರೋಡ್, ಮದ್ರಾಸ್.

ಬಿ. ಕರುಣಾಕರ ಹೆಗ್ಡೆ, ಇನ್ಸ್‌ಪೆಕ್ಟರ್ ಆಫ್ ಏಜನ್ಸೀಸ್,
ಕರ್ಕಳ ಪೋಸ್ಟ್, ಉಡುಪಿ.

Bonus: Endowment Rs. 15. Whole life Rs. 18 Last valuation.

INDIAN MUTUAL LIFE ASSOCIATION, LIMITED.

Head Office—No 10, Mount Road Madras.

ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ.

ಸ್ಮಶಾನ ವರ್ಗಾವಣೆ

ಉಡುಪಿಯ ಮುನ್ಸಿಪಾಲಿಟಿಯು ನಗರದ ಆರೋಗ್ಯ ರಕ್ಷಣೆಯ ಸಂಸ್ಥೆಯಷ್ಟೆ. ಆದರೆ ಪೇಟೆಯ ಮಧ್ಯದಲ್ಲೊಂದು ಹೆಣಗಳನ್ನು ಸುಡುವ ಸ್ಮಶಾನವಿದೆಯಲ್ಲಾ. ಅದರ ಅಕ್ಕಪಕ್ಕದಲ್ಲಿ ಹೋಟೇಲುಗಳಿದ್ದು ಅವುಗಳ ಆಳವಾದ ಬಾವಿಯ, ಕುಡಿಯುವ ನೀರಿಗೇನಾದರೂ ದೋಷ ಬಂದಿದೆಯೋ ಎಂಬುದನ್ನು ತಿಳಿದಿದ್ದೀರೆಯೋ?

ಅದರಿಂದೇನೂ ದೋಷವಿಲ್ಲವಾದರೆ ಪಟ್ಟಣದ ಸುಮಾರು 1½ ಮೈಲು ದೂರದಲ್ಲಿ ಬೀಡಿನಗುಡ್ಡೆಯಲ್ಲಿರುವ ಇನ್ನೊಂದು ಸ್ಮಶಾನವನ್ನು ಬೊಬ್ಬರ್ಯಗುಡ್ಡೆಗೆ ವರ್ಗಾಯಿಸಬಹುದೆ?—ಶ್ರೀ. ಎಸ್. ಬಿ ಎ. ಉಡುಪಿ.

ಪೇಟೆಯ ಮಧ್ಯದಲ್ಲಿರುವ ಹೆಣಸುಡುವ ಸ್ಥಳವು ಆರೋಗ್ಯಕ್ಕೆ ಅಪಾಯಕರವೆಂದು ಬೇರೆ ಹೇಳಬೇಕೆ? ಆದರೆ ನಾವು ಹಿಂದೊಮ್ಮೆ ಉತ್ತರಿಸಿರುವಂತೆ ಉಡುಪಿ ಮುನಿಸಿಪಾಲಿಟಿಯು ಇದ್ದ ಜನರಿಗಿಂತ ಹೆಚ್ಚಾಗಿ ಸತ್ತವರ ಮತ್ತು ದೈವ ದೇವರ ಕಡೆಗೇ ಲಕ್ಷ್ಯಕೊಟ್ಟಿದೆ. ನಮ್ಮವರು ಸತ್ತರೂ ನಮ್ಮನ್ನು ಬಿಟ್ಟು ದೂರ ಹೋಗಿಲ್ಲ ಎಂಬ ಸಮಾಧಾನವನ್ನಾದರೂ ಸಂಬಂಧಿಕರು ಹೊಂದಲೆಂಬ ಉಪಕಾರ ಬುದ್ಧಿಯನ್ನು ಮುನಿಸಿಪಾಲಿಟಿ ಪ್ರದರ್ಶಿಸಿತೆಂದು ಭಾವಿಸಿಕೊಳ್ಳಿ! ಬೀಡಿನ ಗುಡ್ಡೆಯ ಸ್ಮಶಾನವನ್ನು ಬೊಬ್ಬರ್ಯಗುಡ್ಡೆಗೆ ವರ್ಗಾಯಿಸುವ ಸೂಚನೆ ನಿಮ್ಮದು. ಆದರೆ ಮುನಿಸಿಪಲ್ ಆಫೀಸು ಪಟ್ಟಣಿಗರ ಹೊಗೆ ನೋಡುವ ಅಳಿಯಲ್ಲಿರಬಾರದಷ್ಟೆ!

ಸ್ವತಯಾರಿ ಇನ್ಸ್ಪೆಕ್ಟರ್!

ಈ ಹಿಂದೆ ಮಂಗಳೂರಿನ ಬಿಶೋಪರು ತಮ್ಮದೊಂದು ಸಭೆಯಲ್ಲಿ ಕ್ರೈಸ್ತಸಮಾಜದ ತರುಣ ತರುಣಿಯರಿಗೆ ಕ್ರೈಸ್ತ ಸಂಸ್ಕೃತಿಯ ಬಗ್ಗೆ, ಕ್ರೈಸ್ತರ ಇಗರ್ಜಿ ಶಾಲೆಗಳಲ್ಲೇ ವಿದ್ಯಾಭ್ಯಾಸ ಹೊಂದಬೇಕೆಂದು ಕ್ರೈಸ್ತರ ಮುಂದೆ ಮಾಡಿದ ಭಾಷಣದಿಂದಾಗಿ ಕೆಲವುಂದಿ ಹಿಂದುಗಳು ಉದ್ದೇಶಪೂರ್ವಕ ತಮ್ಮ ಮಕ್ಕಳನ್ನು ಬೇರೆ ಶಾಲೆಗಳಿಂದ ತಪ್ಪಿಸಿ ಕ್ರೈಸ್ತರ ಶಾಲೆಗಳಿಗೆ ಕಳುಹಿಸುತ್ತಾರಲ್ಲಾ ಆ ಮಕ್ಕಳು ಯಾರು? ಮಕ್ಕಳನ್ನು ಹೆತ್ತವರ್‍ಯಾರು? ತಿಳಿಸಬಹುದೆ?—ಶ್ರೀ. ಎ. ಎಸ್. ಬ್ರಹ್ಮಾವರ.

ಕ್ರೈಸ್ತರ ಶಾಲೆಗಳ ಹಾಜರಿ ರಿಜಿಸ್ತ್ರಿಗಳಲ್ಲಿ ನಮ್ಮಲ್ಲಿ ದಾಖಲಾಗುತ್ತವೆಂದು ತಿಳಿದಿರಾ? ಅಥವಾ ಈ ಪ್ರಶ್ನೆಯನ್ನು ಕ್ರೈಸ್ತ ಶಾಲಾ ಅಧ್ಯಾಪಕರಿಗಾದರೂ ಕೇಳುವ ಮೊದಲು ನೀವು ಶಾಲಾ ಇನ್ಸ್ಪೆಕ್ಟರರಾಗಿ ಕೊಳ್ಳಬೇಕು.

ಶರ್ತವೂ ಅರ್ಥವೂ

"ಹಿಟ್ಲರರು ತನ್ನ ಭಾಷಣದಲ್ಲಿ ಯುದ್ಧ ಮುಂದುವರಿಸಲು ಯಾವ ಕಾರಣವೂ ಇಲ್ಲವೆಂದು ಹೇಳಿದ್ದಾನೆ ತನ್ನ ಶಾಂತಿ ಶರ್ತಗಳಿಗೆ ಇಂಗ್ಲೆಂಡು ಒಪ್ಪಬೇಕೆಂದು ಕೇಳಿಕೊಂಡಿದ್ದಾನೆ. ಇದರ ಪರಿಣಾಮವಾಗಿ ಯುದ್ಧ ನಿಂತು ಲೋಕಶಾಂತಿಯಾಗುವ ಸಂಭವವುಂಟೆ?"— ಶ್ರೀ. ಎನ್. ಎಮ್. ಎಸ್. ಕುಂದಾಪುರ.

ಹಿಟ್ಲರನು ಶರ್ತಗಳನ್ನು ಹಾಕಿದುದರಿಂದಲೇ ಯುದ್ಧಾರಂಭವಾಗಿತ್ತು; ಇನ್ನು ಯುದ್ಧ ನಿಲ್ಲಬೇಕಾದರೂ ಹಿಟ್ಲರನು ಶರ್ತಗಳನ್ನು ಹಾಕದಿರಬೇಕು. ಹಿಟ್ಲರನು ಹಾಕುವ ಶರ್ತಕ್ಕೆ ಬ್ರಿಟಿಷರು ಮಾಡುವ ಅರ್ಥವನ್ನು ಹೊಂದಿಕೊಂಡುಂಟು ಶರಣಾವ.!

ಶಬ್ದ ನಷ್ಟ!

"ಜರ್ಮನಿಯಲ್ಲಿ ವ್ಯಭಿಚಾರಕ್ಕಾಗಿ ಗಂಡಸರನ್ನು ಆಮಂತ್ರಿಸುವ ನವಯುವತಿಯರ ಅಡ್ವರ್ಟೈಸ್‌ಮೆಂಟು ಅಲ್ಲಿಯ ಪತ್ರಿಕೆಗಳಲ್ಲೆಲ್ಲಾ ಬರುತ್ತಿದೆಯಂತೆ. ಇದಕ್ಕೆ ಅಲ್ಲಿಯ ಗುಪ್ತಪೋಲೀಸು ದಳವಾದ ಗೆಸ್ಟಪೋಗಳ ಪ್ರೋತ್ಸಾಹವಿರುವದಂತೆ. ಎಲ್ಲಾ ದೇಶಗಳಲ್ಲೂ ಹೀಗಾದರೆ 'ವ್ಯಭಿಚಾರ' ಎಂಬ ಶಬ್ದವನ್ನೇ ಶಬ್ದಕೋಶದಿಂದ ತೆಗೆದುಹಾಕುವ ಕಾಲ ಬರುತ್ತದಲ್ಲಾ?"— ಕೆ. ಎನ್. ಕೆ. ಅಂಕೋಲ.

ಆ ಶಬ್ದ ಹೋದೊಡನೆ ನಿಮಗಾಗುವ ನಷ್ಟವೇನು? ನೀವೊಬ್ಬರು ಲೇಖಕರೇನು? ಹಾಗಾದರೆ 'ವ್ಯಭಿಚಾರ'ದ ಬದಲು 'ಸದಾಚಾರ' ಶಬ್ದಪ್ರಯೋಗ ಮಾಡಿ.

ನೋಟೀಸು.

The Vijaya Bank Ltd., Coondapoor.

ದಿ ವಿಜಯ ಬೇಂಕ್ ಲಿಮಿಟೆಡ್, ಕುಂದಾಪುರ.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ:—

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನ, ಬೆಳ್ಳಿ, ಆಭರಣಗಳ ಆಧಾರದ ಮೇಲೆ ಪಡೆದ ಸಾಲಗಳನ್ನಾಗಲೀ, ಅದರ ಬಡ್ಡಿಯನ್ನಾಗಲೀ, ವಾಯಿದೆಗೆ ಕೊಡದೆ ಇದ್ದುದರಿಂದಲೂ, ಸದ್ರಿಯವರಿಗೆ ಬಿಟ್ಟ ರಿಜಿಸ್ಟ್ರ ನೋಟೀಸುಗಳಲ್ಲಿ ಕೆಲವು ಪಾವತಿಯಾಗದೆ ಇದ್ದುದರಿಂದಲೂ, ಸದ್ರಿ ಲೋನನ್ನು ಇನ್ನು ಹೆಚ್ಚಿಗೆ ಸಮಯ ಬಾಕಿ ಇಟ್ಟಲ್ಲಿ ಬೇಂಕಿಗೆ ನಷ್ಟವಾಗಬಹುದಾಗಿ ಕಂಡುಬರುವುದರಿಂದಲೂ, ಸದ್ರಿ ಲೋನಿನ ಆಸಾಮಿಯು ನಮಗೆ ಬರ ಎಲ್ಲಾ ಅಸಲು ಬಡ್ಡಿ ಹಣಗಳನ್ನು ಕೊಟ್ಟು ತಾರೀಕು 29-7-40ನೇ ಸೋಮವಾರ ಮಧ್ಯಾಹ್ನ 3 ಘಂಟೆಯ ಒಳಗೆ ಬಿಡಿಸಿಕೊಂಡು ಹೋಗದೆ ಇದ್ದಲ್ಲಿ ತಾ. 30-7-40ನೇ ಮಂಗಳವಾರ ಮಧ್ಯಾಹ್ನ ಘಂಟೆ 3ಕ್ಕೆ ಸದ್ರಿ ನಗಗಳನ್ನು ಬಹಿರಂಗವಾಗಿ ಏಲಂ ಮಾಡಿ ಹುಟ್ಟಿ ಬಂದ ಹಣಗಳಲ್ಲಿ ನಮಗೆ ಬರ ಅಸಲು, ಬಡ್ಡಿ ಮತ್ತು ಎಲ್ಲಾ ಖರ್ಚು ವಗೈರೆ ಕಳೆದು ಹೆಚ್ಚಿನ ಹಣ ಉಳಿದರೆ ಸದರಿಯವರ ಅನಾಮತು ಲೆಕ್ಕಕ್ಕೆ ನಿಬಡ್ಡಿಯಿಂದ ಜಮಾ ಮಾಡಲ್ಪಡುವುದು. ಏಲಮಿನಿಂದ ಹುಟ್ಟಿಬಂದ ಹಣ ಬೇಂಕಿಗೆ ಬರತಕ್ಕ ಹಣಕ್ಕೇ ಕಮ್ಮಿಬಿದ್ದರೆ ಸದರಿ ಆಸಾಮಿಯ ಮೇಲೆ ಹೆಚ್ಚಿಗೆ ಬರತಕ್ಕ ಹಣಗಳಿಗೆ ದಾವಾದಾಖಲು ಮಾಡಲಾದೀತು. ಏಲಂ ಅದೇ ದಿವಸ ಆಗದೆ ಇದ್ದಲ್ಲಿ ಬೇಂಕಿಗೆ ಯುಕ್ತ ಕಂಡ ದಿವಸಕ್ಕೆ ಮುಂದುವರಿಸಲ್ಪಡುವುದು, ತಿಳಿದಿರುವುದು.

ಲೋನು ನಂಬ್ರ	ಇಟ್ಟ ತಾರೀಕು	ಹೆಸರು ಮತ್ತು ವಿಳಾಸ	ಅಸಲು ರೂಪಾಯಿ
113/36	21 7 37	ಟಿ. ವಿಟ್ಠಲ ಶೆಟ್ಟಿ, ಲಕ್ಷ್ಮಮ್ಮ ಶೆಡ್ತಿಯವರ ಮಗ, ಕೋಟತಟ್ಟು, ಬೆಂಗಳಿ ಗ್ರಾಮ, ಪೋಸ್ಟ್ ಶಂಕರನಾರಾಯಣ.	260 0-0
128/36	28-7-37	ಬಿ ಮಂಜಯ್ಯ ಹೆಗ್ಡೆ, ಎಮ್ ಹಿರಿಯಣ್ಣ ಹೆಗ್ಡೆರ ಮಗ, ನಡುಮನೆ, ಮೊಳಹಳ್ಳಿ ಗ್ರಾಮ, ಪೋಸ್ಟ್ ಶಂಕರನಾರಾಯಣ.	720-0-0
164/36	12-8-37	ನಾಗಪ್ಪ ಸೆಟ್ಟಿ, ಸುಬ್ಬಯ್ಯ ಸೆಟ್ರ ಮೊಮ್ಮಗ, ಆನಗಳ್ಳಿ ಗ್ರಾಮ, ಪೋಸ್ಟ್ ಕುಂದಾಪುರ.	25-0-0
267/36	20 9 37	ನಾಗಯ್ಯ ಸೆಟ್ಟಿ, ದುಗ್ಗಮ್ಮ ಶೆಡ್ತೀರ ಮಗ, ಗುಡ್ಡಮ್ಮಾಡಿ ದೊಡ್ಡಮನೆ, ಸೇನಾಪುರ ಗ್ರಾಮ, ಪೋಸ್ಟ್ ಗಂಗೊಳ್ಳಿ.	42-0-0
105/37	30-11-37	ಕೆ. ಶ್ರೀನಿವಾಸ ಶೇಟ್, ಪದ್ಮನಾಭ ಶೇಟ್ರ ಮಗ, ಗೋಲ್ಡ್‌ಸ್ಮಿತ್ ಕುಂದಾಪುರ.	25-0-0
269/37	21-3-38	ಕೆ. ಶ್ರೀನಿವಾಸ ಶೇಟ್, ಪದ್ಮನಾಭ ಶೇಟ್ರ ಮಗ, ಗೋಲ್ಡ್‌ಸ್ಮಿತ್ ಕುಂದಾಪುರ.	23-0 0
323/37	20-4-38	ಎನ್. ರಾಮಣ್ಣ ಸೆಟ್ಟಿ, ಎ. ಮೋನಪ್ಪ ಸೆಟ್ರ ಮಗ, ಕಾಳಾವರ ಗ್ರಾಮದ ಸಲ್ವಾಡಿ, ಪೋಸ್ಟ್ ಕುಂದಾಪುರ.	60-0-0
363/37	11-5-38	ಮಂಜಯ್ಯ ಹೆಗ್ಡೆ, ಹಿರಿಯಣ್ಣ ಹೆಗ್ಡೇರ ಮಗ, ಮೊಳಹಳ್ಳಿ ಗ್ರಾಮದ ನಡುಮನೆ, ಪೋಸ್ಟ್ ಶಂಕರನಾರಾಯಣ.	145-0-0
401/37	31-5-38	ನಾಗಪ್ಪ ಸೆಟ್ಟಿ, ಸುಬ್ಬಯ್ಯ ಸೆಟ್ರ ಮೊಮ್ಮಗ, ಆನಗಳ್ಳಿ ಗ್ರಾಮ, ಪೋಸ್ಟ್ ಕುಂದಾಪುರ.	10-0-0
473/37	12-7-38	ನಾಗಯ್ಯ ಸೆಟ್ಟಿ, ತುಂಗಮ್ಮ ಶೆಡ್ತೀರ ಮಗ, ಹಕ್ಲಾಡಿ ಗ್ರಾಮದ ಹೊಸಿನಕಟ್ಟೆ ಮನೆ, ಪೋಸ್ಟ್ ಹಕ್ಲಾಡಿ.	35 0-0
564/37	15-8-38	ಮಹಾಬಲ ಸೆಟ್ಟಿ, ಸಂಕ್ಕ ಸೆಟ್ರ ಅಳಿಯ, ಅಲಬಾಡಿ ಗ್ರಾಮದ ಕೊಂಬಾಡಿ, ಪೋಸ್ಟ್ ಶಂಕರನಾರಾಯಣ.	185 0-0
165/38	3-2-39	ನಾಗಯ್ಯ ಶೆಟ್ಟಿ, ತುಂಗಮ್ಮ ಶೆಡ್ತೀರ ಮಗ, ಹಕ್ಲಾಡಿ ಗ್ರಾಮದ ಹೊಸಿನಕಟ್ಟೆ ಮನೆ, ಪೋಸ್ಟ್ ಹಕ್ಲಾಡಿ.	85-0-0
206/38	28-2-39	ರಾಮಪ್ಪ ಸೆಟ್ಟಿ, ಕೊರಗಯ್ಯ ಸೆಟ್ರ ಅಳಿಯ, ಶಂಕರನಾರಾಯಣ ಗ್ರಾಮದ ಹೆಂಬ್ಯಲು, ಪೋಸ್ಟ್ ಶಂಕರನಾರಾಯಣ.	25-0-0
230/38	13-3-39	ಕೆ. ಮಹಾಲಿಂಗ ಸೆಟ್ಟಿ, ಪಟೇಲ್ ನಾಗಪ್ಪ ಸೆಟ್ರ ಅಳಿಯ, ಕೆದೂರು ಗ್ರಾಮ, ಪೋಸ್ಟ್ ಕುಂದಾಪುರ	110-0-0
121/39	6 12-39	ನಾರಾಯಣ ಸೆಟ್ಟಿ, ಕೀನಪ್ಪ ಸೆಟ್ರ ಮಗ ಒಳ್ತೂರು ಗ್ರಾಮ, ಪೋಸ್ಟ್ ಕೋಟೇಶ್ವರ.	60 0-0

Office of the Bank,
Coondapur,
20-7-40

K. Sanjiva Hegde.
Agent.

ವಿಮಾನವೋ ಮಾನವೋ?

"'ಮದ್ರಾಸ್ ಮೈಲ್' ಪತ್ರಿಕೆಯವರು ಯುದ್ಧವಿಮಾನ ತಯಾರಿಗಾಗಿ 3 ಲಕ್ಷ ನಿಧಿಕೂಡಿಸುವ ಶಪಥಹಾಕಿ ಇಷ್ಟರಲ್ಲೇ ಅದು ಪೂರ್ತಿಯಾಗುತ್ತಾ ಬಂದಿದೆ. ಈ ಮಾದರಿಯನ್ನು ಕನ್ನಡಪತ್ರಿಕೆಗಳೂ ಅನುಸರಿಸಿದರೆ ದೇಶೋದ್ಧಾರದ ಜತೆಯಲ್ಲಿ ತಮ್ಮ ಪ್ರತಿಷ್ಠೆಯನ್ನೂ ಸಾಧಿಸಿಕೊಂಡಂತಾಗುವದಿಲ್ಲವೆ?" —ಬಿ. ಎಮ್. ಬಿ. ಬೊಂಬಾಯಿ.

ಪಕ್ಷಪಾತ ತಾಗಿದವನನ್ನು ಮಲ್ಲಯುದ್ಧಕ್ಕೆ ಹೊರಡು, ಎಂಬ ಗಾದೆ ನಿಮ್ಮದು. ಕನ್ನಡ ಪತ್ರಿಕೆಗಳಿಗೆ ಹಾಗೆಲ್ಲಾ ನಿಧಿ ಕೂಡಿಸುವದು ಸಾಧ್ಯವಿರುತ್ತಿದ್ದರೆ 'ವಿಮಾನ ತಯಾರಿ'ಯ ಬದಲು ತಮ್ಮ 'ಮಾನ ತಯಾರಿ' ನಿಧಿಯನ್ನು ಕೂಡಿಸಿಕೊಳ್ಳುತ್ತಿದ್ದುವಲ್ಲ!

ನೂತನ ಸಮಸ್ಯೆ

"ನಮ್ಮೂರು ದೊಡ್ಡ ಪಟ್ಟಣವಲ್ಲವಾದರೂ ಒಂದು ದೊಡ್ಡ ರೋಗ ತಾಗಿದಂತಿದೆ. ರಾತ್ರಿಯಲ್ಲಿ ಒಬ್ಬಿಬ್ಬರು ಹೆಂಗಸರು ಗಂಡಸರ ಪೋಷಾಕನ್ನು ಧರಿಸಿಕೊಂಡು ತಮ್ಮ ಬೇಟೆಗಳನ್ನು ಹುಡುಕುತ್ತಾ ಸಂಚರಿಸುತ್ತಿರುವರೆಂಬ ವಾರ್ತೆ ಕೇಳಿದ್ದೇನೆ. ಆದರೆ ನಮ್ಮೂರಿಗೆ ಅಪರಿಚಯಸ್ಥರಾದುದರಿಂದ ಥಕ್ಕನೆ ಗುರುತು ಹಿಡಿಯಲು ಕಷ್ಟವಾಗುತ್ತದೆ. ಇಂಥವರನ್ನು ಗೊತ್ತುಹಚ್ಚುವ ಸುಲಭೋಪಾಯವೇನಾದರೂ ಇದ್ದರೆ ತಿಳಿಸುವಿರಾ?"—ಶ್ರೀ ಎಸ್. ಎಸ್. ಬಿ. ಸೋಕಿನಗರ.

ನಿಮ್ಮೂರಿನ ಪರಿಚಯವಿಲ್ಲದ ನಾವು ಯಾವ ಉಪಾಯ ಹೇಳಿಕೊಡಲಿ? ಯುರೋಪಿನಲ್ಲಾದರೆ 'ನಗ್ನವಲಯ'ಗಳಿವೆ.

ಅಸಾಧ್ಯ

"ಫ್ರಾನ್ಸಿನ ನಿವೃತ್ತ ಸೇನಾಧ್ಯಕ್ಷರಾದ ಜನರಲ್ ಗ್ಯಾಮ್ಲಿನರ ಸುದ್ದಿಯೇ ಈಗ ಕೇಳಿಬರುವುದಿಲ್ಲ. ಅವರ ಗತಿಯೇನಾಯಿತೆಂಬುದನ್ನು ತಿಳಿಸಲು ಸಾಧ್ಯವೇ?" —ಬಿ. ಬಿ. ಆರ್. ದಾರವಾಡ.

ಸಾಧ್ಯವಿಲ್ಲ.

ಸುಖದುಃಖ

"ನಾಜೀ-ಫೇಸಿಸ್ಟರ ಆಳ್ವಿಕೆಯ ಕೆಳಗೆ ಪತ್ರಿಕೆಗಳಿಗೆ ಸ್ವಂತಾಭಿಪ್ರಾಯ ಪ್ರಕಟಿಸಲು ಅವಕಾಶವಿಲ್ಲವೆಂದು ಕೇಳುತ್ತೇವೆ. ಇಂದಿನ ಕಠಿಣ ಸನ್ನಿವೇಶದಲ್ಲಾದರೂ ನಮ್ಮಲ್ಲಿಯ ಪತ್ರಿಕೆಗಳಿಗೆ ಆ ಸ್ವಾತಂತ್ರ್ಯವಿರುವದು ಆನಂದದಾಯಕವಲ್ಲವೆ?"— ಆರ್. ವಿ. ಬಿ. ಧಾರವಾಡ.

ಆ ಆನಂದವನ್ನನುಭವಿಸಲು ಜೀವದಿಂದಿರುವದು ಹೇಗೆಂಬುದೊಂದೇ ದುಃಖದಾಯಕವಾದುದು.

Degrees. Books: Medicines. Froc. H. L. M. S., H. M. B., H. M. D. etc Free Homeo-Ayur-Unani Naturo degrees by post also—Practioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10 Enclose 2 annas stamp—

Principal, Indian Homeopathic Institute and Society (Govt Regd.)
P. O. MAHUVA, (Kathiawar Dt. India.

Sidh-Kalpa Kavach (Regd)
No. 3 Rs 2, No 2 Rs 5, No. 1 Rs 7 Special Rs. 10, Extra Special Rs. 17, for love, marriage health, wealth. Ask any six questions with M. O. Re. 1/4 and get correct answers by return post Life reading Rs. 2 No. V. P.P. Send M. O. Free pamphlets. **Prof. Dr. P. H. Chhathar,** P. O. Mahuva, (Kathiawar, India.)

ವಿವಿಧ ವಿಷಯ

ಸಬ್‌ಮೆರೀನಾಗಿ ಮಾರ್ಪಡುವ ಟೇಂಕು

ನೆಲದಲ್ಲಿ ಟೇಂಕಾಗಿದ್ದು ನೀರಿನಲ್ಲಿ ಸಬ್‌ಮೆರೀನಾಗಿ ಮಾರ್ಪಡುವ ಹೊಸ ಯುದ್ಧೋಪಕರಣವೊಂದು ಅಮೇರಿಕದಲ್ಲಿ ಕಂಡುಹಿಡಿಯಲ್ಪಟ್ಟಿದೆ. ಇದಕ್ಕೆ ಸಬ್‌ಮೆರೀನ್ ಟೇಂಕ್ ಎಂದು ಹೆಸರು. ರೆಕ್ಸ್ ಮೇಸನ್ ಎಂಬವರು ಇದನ್ನು ಕಂಡುಹಿಡಿದವರು. ಇದರ ಪ್ರಯೋಗವನ್ನು ಮೇಸನರು ದೊಡ್ಡ ಸರೋವರದಲ್ಲಿ ಮಾಡುತ್ತಿದ್ದಾಗ ನೀರಲ್ಲಿ ತೇಲಾಡುತ್ತಿರುವ ವಿಚಿತ್ರ ವಸ್ತುವೊಂದನ್ನು ಸ್ನಾನಮಾಡುವ ಜನರು ಕಂಡು ಪೋಲೀಸರಿಗೆ ತಿಳಿಸಿದರು. ಕೂಡಲೇ ಪೋಲೀಸ್ ಅಧಿಕಾರಿಗಳು ದೋಣಿಯೊಂದರಲ್ಲಿ ಈ ವಸ್ತುವಿನ ಬಳಿಗೆ ಹೋದಾಗ ಅದು ದೋಣಿ ಅಡಿಗೆ ಬಂದು ದೋಣಿಯನ್ನು ಮುಳುಗಿಸಿಬಿಟ್ಟಿತು. ಇದರಿಂದ ಗಲಾಟೆಯಾಗುವುದೆಂದು ತಿಳಿದು ಮೇಸನರು ಸಬ್‌ಮೆರೀನನ್ನು ನೆಲದ ಕಡೆಗೋಡಿಸಿದರು. ನೆಲಕ್ಕೆ ಮುಟ್ಟಿದೊಡನೆಯೇ ಗುಬ್ಬಿಯೊಂದನ್ನೊತ್ತಿದರು. ಕೂಡಲೆ ಚಕ್ರಗಳು ಹೊರಬಂದುವು. ಇಂಜಿನು ಕೆಲಸ ಮಾಡಲಾರಂಭಿಸಿತು. ಸಬ್‌ಮೆರೀನು ಟೇಂಕಾಗಿ ನೆಲದ ಮೇಲೆ ಓಡತೊಡಗಿತು. ಪೋಲೀಸರು ಬಿಡದೆ ಈ ವಿಚಿತ್ರ ವಸ್ತುವನ್ನು ಬೆನ್ನಟ್ಟಿದರು. ಅವರು ಮೋಟರ್ ಕಾರಿನಲ್ಲಿ ಎಷ್ಟು ವೇಗದಿಂದ ಓಡಿದರೂ ಸಬ್‌ಮೆರೀನು ಟೇಂಕನ್ನು ಹಿಡಿಯಲಾಗಲಿಲ್ಲ. ಅದು ಹೆಚ್ಚೆಚ್ಚು ವೇಗದಿಂದೋಡುತ್ತಿತ್ತು. ರಸ್ತೆ ಸಂದೊಂದರಲ್ಲಿ ನಿರ್ವಾಹವಿಲ್ಲದೆ ರೆಕ್ಸ್ ಮೇಸನರು ತನ್ನ ಸಬ್‌ಮೆರೀನ್ ಟೇಂಕನ್ನು ನಿಲ್ಲಿಸಿದರು. ಪೋಲೀಸರು ಅವರನ್ನು ಹಿಡಿದು ಖಟ್ಲೆ ಮಾಡಿದರು. ಮೆಜಿಸ್ಟ್ರೇಟರು ಅವರಿಗೆ ಒಂದು ಶಿಲ್ಲಿಂಗ್ ಜುಲ್ಮಾನೆ ಮಾಡಿ ತಾನೇ ಸ್ವತಹ ಅವರ ಸಬ್‌ಮೆರೀನ್ ಟೇಂಕಿನಲ್ಲಿ ಕೂತು ಸಂತೋಷಗೊಂಡರು. ಈಗ ಅದನ್ನು ದೊಡ್ಡ ಕಾರ್ಖಾನೆ ಮಾಲಕರೊಬ್ಬರ ವಶಕ್ಕೊಪ್ಪಿಸಲಾಗಿದೆ.

ರಸ್ಯಾನ ಸರ್ಜನರ ವಿಚಿತ್ರ ಶಸ್ತ್ರಕ್ರಿಯೆ.

ಅರ್ಮೀನಿಯದ ರಸ್ಯಾನ ಸರ್ಜನರೊಬ್ಬರು ಅರ್ಮೀನಿಯನನೊಬ್ಬನ ಕಾಲ್ಬೆರಳನ್ನು ಜಯಶೀಲವಾಗಿ ಆತನ ಬಲ ಕೈಗೆ ಕಸಿ ಮಾಡಿರುವರು. ಈ ಅರ್ಮೀನಿಯನನು ತನ್ನ ಬಲ ಕೈ ಹೆಬ್ಬೆಟ್ಟನ್ನು ಅಪಘಾತವೊಂದರಲ್ಲಿ ಕಳಕೊಂಡು ಈ ಸರ್ಜನರ ಬಳಿಗೆ ಚಿಕಿತ್ಸೆಗಾಗಿ ಹೋದನು. ಈ ಸರ್ಜನರು 9 ಕೈಬೆರಳು ಮಾತ್ರ ಇದ್ದ ಚಿಕ್ಕ ಹುಡುಗಿಗೆ ಈ ಮೊದಲು ಜಯಶೀಲವಾಗಿ ಕಾಲ್ಬೆರಲೊಂದನ್ನು ಕಸಿಮಾಡಿದ್ದರು. ಅದೇ ರೀತಿ ಇವನಿಗೂ ಮಾಡಿದರು. ಅರ್ಮೀನಿಯನನು ಕಾಲ್ಬೆರಳೊಂದನ್ನು ಕಳಕೊಂಡರೂ ಕೈಬೆರಳನ್ನು ಪಡೆದು ಸರಿಯಾಗಿ ಕೆಲಸ ಮಾಡುತ್ತಿರುವನು.

ಜರ್ಮನಿಯ ಪ್ರಚಂಡ ಟೇಂಕುಗಳು.

ಜರ್ಮನರು ಫ್ರಾನ್ಸಿನಲ್ಲಿ ಉಪಯೋಗಿಸಿದ್ದ ಟೇಂಕುಗಳು ಅತಿ ದೊಡ್ಡದಾಗಿದ್ದುವು. ಒಂದೊಂದರ ತೂಕ 30 ಟನ್ನಾಗಿದ್ದು 1000 ಕುದುರೆ ಶಕ್ತಿಯ ಇಂಜಿನುಗಳು ಅವನ್ನು ನಡಿಸುತ್ತಿದ್ದುವು. ಅದರೊಳಗೆ 15 ಮಂದಿ ಕೂತು ಗುಂಡೆಸೆಯುತ್ತಿದ್ದರು. ಅದರ ಹೊದಿಕೆಯನ್ನು ಭೇದಿಸುವುದು ಬಹಳ ಕಷ್ಟ. ಈ ಸಂಚಾಲಕ ಕೋಟೆಗಳಿಗೆ ಮೈಲಿಗೆ 6 ಗೆಲನು ಪೆಟ್ರೋಲು ಬೇಕಾಗಿದ್ದಿತು.

ಹೊಸ ರೀತಿಯ ಜರ್ಮನ್ ಪೆರಚೂಟ್

ಜರ್ಮನಿಯಲ್ಲಿ ವಿಮಾನದಿಂದ ವಾಯು ಕೊಡೆಗಳ ಮೂಲಕ ಸೇನೆಯನ್ನಿಳಿಸುವುದನ್ನು ಪ್ರಥಮವಾಗಿ ಕಂಡು ಹಿಡಿದವರೆಂದರೆ ಅರ್ನೆಸ್ಟ್ ಉಡೆಟರೆಂಬ ವೈಮಾನಿಕರು. ಪೆರಚೂಟ್‌ಗಳ ಮೂಲಕ ಸೈನಿಕರನ್ನಿಳಿಸಬಹುದೆಂದವರು ಜರ್ಮನ್ ಸೇನಾಧಿಕಾರಿಗಳಿಗೆ ಸೂಚಿಸಿದಾಗ ಅವರು ಪರಿಹಾಸ್ಯ ಮಾಡಿದರು. ಅನಂತರ ಉಡೆಟರು ಮೋಟಾರು ಬೈಕಿನ ಸಮೇತ ಮನುಷ್ಯನೊಬ್ಬನನ್ನು ಒಯ್ಯುವಷ್ಟು ಬಲವಾದ ಪೆರಚೂಟೊಂದನ್ನು ತಯಾರಿಸಿ ವಿಮಾನದಿಂದ ಅದರ ಮೂಲಕ ಕೆಳಕ್ಕೆ ಹಾರಿ ಭೂಮಿಗಿಳಿದ ಕೂಡಲೆ ಮೋಟರ್ ಬೈಕಿನಲ್ಲಿ ಓಡಿಹೋದರು. ಕೂಡಲೆ ಮಾರ್ಶಲ್ ಗೋರಿಂಗರು ಉಡೆಟರನ್ನು ಕರೆಸಿ ಪೆರಚೂಟ್ ಸೇನೆಯನ್ನು ತಯಾರಿಸಿದರು. ನಾಝಿ ಪೆರಚೂಟ್ ಸೇನೆಯು ಹೊಸ ರೀತಿಯ ಪೆರಚೂಟೊಂದನ್ನು ಉಪಯೋಗಿಸುತ್ತಿದೆ. [illegible] ಬರುತ್ತದೆ. ಅದು ಶೀಘ್ರವಾಗಿ ತೆರೆಯುವುದು. ಆ ಮೂಲಕ ಜರ್ಮನ್ ಸೈನಿಕರು ನೆಲದಿಂದ 150 ಅಡಿ ಎತ್ತರದಿಂದಲೇ ಕೆಳಗೆ ಹಾರುವರು. ಇದರಿಂದ ಗಾಳಿಗೆ ಅತ್ತಿತ್ತ ಒಯ್ಯಲ್ಪಡುವ ತೊಡಕು ತಪ್ಪುವುದು. ಮತ್ತು ನೆಲಕ್ಕಿಳಿದೊಡನೆಯೇ ಈ ಪೆರಚೂಟುಗಳನ್ನು ಸುಟ್ಟುಹಾಕಿಬಿಡಬಹುದಂತೆ.

ಬೊಂಬಾಯಿ ಚಂದಾದಾರರಲ್ಲಿ ವಿನಂತಿ.

ನಮ್ಮ ಬೊಂಬಾಯಿ ಪ್ರತಿನಿಧಿಗಳಾಗಿದ್ದ ಶ್ರೀ. ಯು ಕೆ ರಂಗ ಇವರನ್ನು ಈ ತಿಂಗಳಿಂದ ಪ್ರಾತಿನಿಧ್ಯದಿಂದ ತೆಗೆದುಹಾಕಲಾಗಿದೆ ಅವರೊಡನೆ ಯಾರೂ ಚಂದಾಹಣ ಕೊಡದೆ ನೇರಾ ಆಫೀಸಿಗೇನೇ ಕಳಿಸಬೇಕಾಗಿ ಈ ಮೂಲಕ ಅಪೇಕ್ಷಿಸೋಣಾಗುತ್ತದೆ. 'ನವಯುಗ'ಕ್ಕೆ ಸಂಬಂಧಿಸಿದ ಯಾವ ವ್ಯವಹಾರವನ್ನಾದರೂ ಅವರೊಡನೆ ಮಾಡಿದರೆ ನಾವು ಹೊಣೆಯಲ್ಲವೆಂದೂ ಜಾಹೀರುಮಾಡಲಾಗಿದೆ

ಮೆನೇಜರ್

ಸಿಡುಬನ್ನು ಗುಣಪಡಿಸಲು ಹೊಡೆತ

ಲಕ್ನೋದಲ್ಲಿ ರಾಮಧೀನನೆಂಬವನ ಹೆಂಡತಿಗೆ ಸಿಡುಬುಂಟಾಯಿತು. ಕೆಲವು ಅಂಧ ಸಂಪ್ರದಾಯಿಗಳ ಮಾತಿನ ಮೇರೆಗೆ ತನ್ನ ಹೆಂಡತಿಯನ್ನು ಸಿಡುಬಿನಿಂದ ಮುಕ್ತಳನ್ನಾಗಿ ಮಾಡಲು ರಾಮಧೀನನು ಲಾಠಿಯಿಂದ ಸರಿಯಾಗಿ ಹೊಡೆದನು. ಕೆಟ್ಟ ಪ್ರೇತವೊಂದರ ಬಾಧೆಯೇ ಸಿಡುಬಿಗೆ ಕಾರಣವೆಂದು ಅವನು ನಂಬಿದ್ದನು. ಅದನ್ನುಚ್ಚಾಟನೆ ಮಾಡಲು ಹೆಂಡತಿಗೆ ಹೊಡೆದನು. ಈ ಪೆಟ್ಟಿನಿಂದ 2 ಘಂಟೆಗಳಲ್ಲೇ ರಾಮಧೀನನ ಹೆಂಡತಿಯು ಸತ್ತಳು. ಅವಳ ಶವವನ್ನು ಕೂಡಲೆ ಗುಟ್ಟಿನಲ್ಲಿ ಹೂಳಲಾಯಿತು. ಇದು ಪೋಲೀಸರಿಗೆ ತಿಳಿದು ಅವರು ಹೂಗಿಯಲ್ಪಟ್ಟಿದ್ದ ಶವವನ್ನು ಹೊರತೆಗೆದು ಪರೀಕ್ಷೆ ಮಾಡಿಸಿದರು. ಈಗ ರಾಮಧೀನನು ಖಟ್ಲೆಗೊಳಗಾಗಿರುವನು.

ವಿವಾಹವಿಲ್ಲದೆ ಮಕ್ಕಳ ಉತ್ಪಾದನೆ.

ಮದುವೆಯಾಗದಿದ್ದರೂ ಮಕ್ಕಳನ್ನು ಉತ್ಪಾದಿಸುವ ಕೆಲಸವನ್ನು ಭರದಿಂದ ನಡಿಸಬೇಕೆಂಬ ಅಭಿಪ್ರಾಯವನ್ನು ನಾಝಿ ಮುಖಂಡರಾದ ಹರ್ ಹಿಮ್ಲರರು ಅನುಜ್ಞೆ ಕೊಟ್ಟಿರುವರು. ನಾಝಿ ಪತ್ರಿಕೆಗಳು ಈ ಕುರಿತೀಗ ಪ್ರಚಾರಮಾಡಹತ್ತಿರುವುವು. ಈ ಪ್ರಚಾರದಿಂದಾಗಿ ಸ್ತ್ರೀಯರು ಮತ್ತು ಪುರುಷರು ಮದುವೆಯಾಗದೇನೆ ಒಟ್ಟು ಸೇರಿ ಸಂಭೋಗಿಸುವ ಕುರಿತು ಜಾಹೀರಾತುಗಳು ಪ್ರಕಟಿಸಲ್ಪಡತೊಡಗಿವೆ. ವಾರಾಂತ್ಯವನ್ನು ಒಟ್ಟಿಗೆ ಕಳೆಯಲು ಸುಂದರ ತರುಣನೊಬ್ಬನು ಬೇಕಾಗಿರುವನೆಂದು ಜರ್ಮನ್ ತರುಣಿಯರು ಪತ್ರಿಕೆಗಳಲ್ಲಿ ಪ್ರಕಟಗೊಳಿಸಹತ್ತಿದ್ದಾರೆ. ಇದೇ ರೀತಿ ಗಂಡಸರೂ ಪ್ರಕಟಗೊಳಿಸುತ್ತಿದ್ದಾರೆ. ಯುದ್ಧದ ಮಾನವ ನಷ್ಟವನ್ನು ಭರ್ತಿಮಾಡುವ ಜರೂರಿನ ವ್ಯವಸ್ಥೆಯಿದಂತೆ.

ಲಂಡನ್ ಟವರ್

ಲಂಡನಿನಲ್ಲಿ ಒಮ್ಮೆಯೇ ಎಲ್ಲರ ಕಣ್ಣನ್ನೆಳೆಯುವ ಕಟ್ಟಡವೆಂದರೆ ಲಂಡನ್ ಪಾರ್ಲಿಮೆಂಟ್ ಸಭಾಸದನದ ಮೇಲಿರುವ ಲೋಕ ಪ್ರಸಿದ್ಧ ಗಡಿಯಾರ ಶಿಖರ. ಈ ಶಿಖರದ ತುದಿಯಲ್ಲಿರುವ ಅತಿ ದೊಡ್ಡ ಗಡಿಯಾರಕ್ಕೆ 'ಬಿಗ್ ಬೆನ್' ಎಂದು ಹೆಸರು. ಈಗಣ ಪಾರ್ಲಿಮೆಂಟ್ ಸಭಾಸದನ ಕಟ್ಟಿ ಈ ವರ್ಷಕ್ಕೆ ನೂರು ವರ್ಷ ತುಂಬಿತು. ಪಾರ್ಲಿಮೆಂಟ್ ಸಭಾಸದನ ಕಟ್ಟುವಾಗ ಅದರ ಮೇಲ್ವಿಚಾರ ನೋಡಿದವರು ಸರ್. ಬೆಂಜಮಿನ್ ಹೋಲ್ ಎಂಬವರು. ಇವರ ಸ್ಮಾರಕವಾಗಿ ಬಿಗ್ ಬೆನ್ನನ್ನು ಇರಿಸಲಾಗಿದೆ. ಬಿಗ್ ಬೆನ್ನಿನಷ್ಟು ಸರಿಯಾದ ಸಮಯಕೊಡುವ ಸಾರ್ವಜನಿಕ ಗಡಿಯಾರವೇ ಲೋಕದಲ್ಲಿಲ್ಲವಂತೆ. ಅದರ ಭಾರ 13 ಟನ್ನು. ಹಪ್ತೆಗೆ ಮೂರು ಸಲ ಇಲೆಕ್ಟ್ರಿಕ್ ಮೋಟರೊಂದರ ಮೂಲಕ ಅದಕ್ಕೆ ಕೀ ಕೊಡಲಾಗುವುದು. ಗ್ರೀನಿಚ್ಚಿನ ಪರೀಕ್ಷಾ ನಿಲಯದಿಂದ ದಿನಕ್ಕೆರಡು ಸಲ ಸರಿ ಸಮಯವು ಸೂಚಿಸಲ್ಪಡುವುದು. ಈ ಗಡಿಯಾರ ಶಿಖರವು 180 ಅಡಿ ಎತ್ತರವಾಗಿದೆ.

ಶಾಂತಿಗಾಗಿ ಹಿಟ್ಲರರ ಆತುರ

(೪ನೇ ಪುಟದಿಂದ ಮುಂದರಿಸಿದ್ದು)

ಶಸ್ತ್ರನಷ್ಟ ಬಹಳ ಸ್ವಲ್ಪ. ನಾವು ಪಶ್ಚಿಮದಲ್ಲಿ ಧಾಳಿ ನಡೆಸಿದಾಗ ನಮ್ಮಲ್ಲಿದ್ದುದಕ್ಕಿಂತಲೂ ಹೆಚ್ಚಿನ ಸೇನೆಯೂ, ವಿಮಾನಪಡೆಯೂ ಈಗ ನಮ್ಮಲ್ಲಿದೆ. ಈ ನಾಲ್ಕು ವರ್ಷಗಳಲ್ಲಿ ಜರ್ಮನಿಯು ಅತ್ಯಂತ ಕಠಿಣ ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿದೆ. ಇದ್ದಲು ಮತ್ತು ಕಬ್ಬಿಣ ನಮಗೆ ಹೇರಳವಾಗಿ ದೊರೆಯುತ್ತದೆ. ನಾವು ಜೈಸಿದ ರಾಷ್ಟ್ರಗಳಿಂದ ನಮಗೆ ಹೆಚ್ಚು ಸಾಮಗ್ರಿಗಳು ಬರುತ್ತಿವೆ. ಜರ್ಮನ್ ಸೇನೆಯಲ್ಲೀಗ 200 ಮಿಲ್ಯ ಜನರಿದ್ದಾರೆ. ಸಕಾಲದಲ್ಲಿ ನಾವು ಆಹಾರ ಸಾಮಗ್ರಿಗಳನ್ನು ಬೇಕಷ್ಟು ಸಂಗ್ರಹಿಸಿರುತ್ತೇವೆ. ಯುದ್ಧವು ಎಷ್ಟು ಕಾಲ ನಡೆದರೂ ನಾವು ಸಹಿಸಬಲ್ಲೆವು.

ಜರ್ಮನಿಗೂ ರಷ್ಯಕ್ಕೂ ಹೊಸತಾಗಿ ಮನಸ್ತಾಪವುಂಟಾಗಿದೆಯೆಂದು ಬ್ರಿಟಿಷ್ ರಾಜನೀತಿಜ್ಞರು ಆಶೆಕಟ್ಟಿಕೊಂಡಿರುತ್ತಾರೆ ಇದು ಸುಳ್ಳು ಆಶೆ. ಯುರೋಪಿನಲ್ಲಿ ಬಿಕ್ಕಟ್ಟನ್ನುಂಟುಮಾಡಿ ತಮ್ಮ ಸ್ವಾರ್ಥಸಾಧಿಸಬಹುದೆಂದು ಬ್ರಿಟಿಷರು ಮನಸ್ಸಿನಲ್ಲಿ ಮಂಡಿಗೆ ತಿನ್ನುತ್ತಿರಬಹುದು. ಈ ಸಂಗತಿಗಳನ್ನೆಲ್ಲಾ ತಿಳಿದಿರುವ ನಾನು ಫ್ರಾನ್ಸಿಗೂ ಬ್ರಿಟನಿಗೂ ಮೈತ್ರಿಯ ಹಸ್ತವನ್ನು ನೀಡಿದ್ದೇನೆ. ಈ ಯುದ್ಧದಿಂದ ಯಾರಿಗೂ ಲಾಭವಿಲ್ಲ. ಎಲ್ಲರಿಗೂ ಹಾನಿ. ಫ್ರಾನ್ಸು ಯುದ್ಧ ನಿಲ್ಲಿಸಿತು. ಬ್ರಿಟನು ಶಸ್ತ್ರ ಯುದ್ಧವನ್ನು ಮುಂದುವರಿಸುವ ನಿರ್ಧಾರ ಮಾಡಿರುವುದು. ಬ್ರಿಟನಿನಲ್ಲಿ ಆಗ ಯುದ್ಧದ ಕೂಗೊಂದೇ ಕೇಳಿ ಬರುತ್ತದೆ. ಅದು ಜನತೆಯ ಕೂಗಲ್ಲ. ಕೆಲಮಂದಿ ರಾಜನೀತಿಜ್ಞರ ಕೂಗು. ಚರ್ಚಿಲ್ಲರು ಯುದ್ಧಕ್ಕಾಗಿ ಹಾತೊರೆಯುತ್ತಿದ್ದಾರೆ. ಸೇನಾಪ್ರದೇಶಗಳ ಮೇಲೆ ಬೊಂಬೆಸೆವ ನೆವದಿಂದ ಜರ್ಮನಿಯ ನಾಗರಿಕರ ಮೇಲೆ ವಿಮಾನಧಾಳಿನಡಿಸಿರುವರು. ಇದಕ್ಕೆ ನಾನು ಈ ವರೆಗೆ ತಕ್ಕ ಪ್ರತೀಕಾರ ಮಾಡಿಲ್ಲ. ನನ್ನ ಪ್ರತೀಕಾರವು ಇನ್ನೂ ಮುಂದೆ ಬರಲಿದೆ ಅದರಿಂದ ಜನತೆಯು ಕೊನೆಗಾಣದ ಕಷ್ಟನಷ್ಟಕ್ಕೊಳಗಾಗಬೇಕಾಗುವುದು ಜನತೆಗೆ ಅಪಾರ ನಷ್ಟಕಷ್ಟವಾಗುವುದೇ ಹೊರತು ಚರ್ಚಿಲ್ಲರಿಗಲ್ಲ. ಏಕೆಂದರೆ ಅವರೂ ಅವರ ಮಕ್ಕಳೂ ಸುರಕ್ಷಿತವಾಗಿ ಕೆನಡದಲ್ಲಿದ್ದು ಬಿಡಬಹುದು!

ಎಂದೀ ಲೋಕದಲ್ಲೇ ಅತಿ ದೊಡ್ಡದಾದ ಬ್ರಿಟಿಷ್ ಸಾಮ್ರಾಜ್ಯವನ್ನು ನಾಶಮಾಡಬೇಕೆಂದೇನೂ ನಾನು ಇಚ್ಛಿಸುವುದಿಲ್ಲ. ಅದನ್ನುಳಿಸಲೆಳಸುತ್ತೇನೆ ಆದರೆ ಚರ್ಚಿಲ್ಲರು ಈ ಯುದ್ಧವನ್ನು ಮುನ್ನಡೆಸಿದರೆ ನಮ್ಮಲ್ಲಿ ಒಬ್ಬರನಾಶವಂತೂ ನಿಶ್ಚಯ. ಕಟ್ಟಕಡೆಗೆ ನಾಶವಾಗುವುದು ಜರ್ಮನಿಯೆನ್ನುತ್ತಾರೆ ಚರ್ಚಿಲ್ಲರು. ಇಂಗ್ಲೆಂಡೆಂದು ನನಗೆ ಖಾತ್ರಿಯಿದೆ. ಪರಾಜಿತ ಹೇಡಿಯಾಗಿ ನಾನು ಕೃಪಾಭಿಕ್ಷೆ ಬೇಡುವಂತೆ ಮಾತನಾಡುವುದಿಲ್ಲ. ವಿಜಯಿಯಾಗಿ ಮಾತನಾಡುತ್ತೇನೆ ಈ ಯುದ್ಧವು ಏತಕ್ಕಾಗಿ ಮುಂದುವರಿಯಬೇಕೆಂದು ನನಗೆ ತಿಳಿಯುವುದು. ಕೋಟ್ಯಾಂತರ ಜನರು ನಾಶಹೊಂದುವ ಈ ಯುದ್ಧವನ್ನು ನಾವು ತಪ್ಪಿಸಬೇಕು. ನಾನು ಹೆದರಿಕೊಂಡು, ಜಯದ ವಿಷಯದಲ್ಲಿ ಸಂದೇಹಪಟ್ಟು ಮಾತಾಡುತ್ತಿದ್ದೇನೆಂದು ವಿವೇಕಪರವಾದ ನನ್ನ ಮಾತುಗಳನ್ನು ಚರ್ಚಿಲ್ಲರು ತೃಣೀಕರಿಸಲು ಅವಕಾಶವಿದೆ. ಹಾಗೆ ಅವರು ಮಾಡಿದರೆ ಮುಂದಾಗುವ ಪರಿಣಾಮದ ಬಗ್ಗೆ ನನ್ನ ಮನಸ್ಸಾಕ್ಷಿಯು ನಿರ್ಮಲವಿದೆ.

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST **IS ONLY ONE.**

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ಉಡುಪಿ, ಗುರುವಾರ ತಾ. ೨೫-೭-'೪೦

ಸರಕಾರದ ವಿಸ್ಮಯಕರ ಮೌನ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ದಿಲ್ಲಿಯ ನಿರ್ಣಯವು ಅತ್ಯಂತ ವಿವೇಕಪರವಾದುದೆಂಬುದರಲ್ಲಿ ಸಂದೇಹವೇ ಇಲ್ಲ. ಕಾಂಗ್ರೆಸಿನ ಪೋಲಿಸ ದ್ವೇಷ ಸಾಧನೆಯೇ ತಮ್ಮ ಜೀವನದ ಉದ್ದೇಶವಾಗಿಟ್ಟುಕೊಂಡಿರುವ ವಿ. ಜನ್ನರಂಥವರನ್ನು ಬಿಟ್ಟಲ್ಲಿ ಇತರ ಜನರೆಲ್ಲರೂ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯವನ್ನು ಸ್ವಾಗತೀಕರಿಸಿರುವರೆಂದೇ ಹೇಳಬಹುದು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ದಿನ ದಿನ ಕ್ಷಣ ಕ್ಷಣವೆಂಬಂತೆ ಮಾರ್ಪಡುತ್ತಿರುವ ವಿದ್ಯಮಾನಗಳನ್ನು ಗಮನಿಸಿಕೊಂಡು, ಯಾವ ತರದ ಆಗ್ರಹವನ್ನೂ ಕಟ್ಟಿಕೊಳ್ಳದೆ ಇಂದಿನ ಪರಿಸ್ಥಿತಿಗುಚಿತವಾದ ಧೋರಣೆ ವಹಿಸಿರುವರು. ಇದೇ ತಾ ೨೧ರಲ್ಲಿ ಪಂಡಿತ ಜವಾಹರಲಾಲರು ಅಲಹಾಬಾದಿನ ಸಾರ್ವಜನಿಕ ಸಭೆಯಲ್ಲಿ ಹೇಳಿದಂತೆ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಅತ್ಯಂತ ವ್ಯವಹಾರ ಕುಶಲತೆಯಿಂದ ಪ್ರಸ್ತುತದ ದೇಶದ ಸಮಸ್ಯೆಯನ್ನು ಬಿಡಿಸಲೆತ್ನಿಸಿರುವುದು. ಇಂದೀಗ ತಲೆದೋರಿರುವ ಹೊಸ ಪರಿಸ್ಥಿತಿಯನ್ನದು ಸಂಪೂರ್ಣವಾಗಿ ದೃಷ್ಟಿಪಥದಲ್ಲಿಟ್ಟುಕೊಂಡಿರುವುದು. ಅದು ಹಳೆಯ ಮಾರ್ಗಕ್ಕೇನೇ ಕಟ್ಟು ಬಿದ್ದಿರುವುದಿಲ್ಲ. ದೇಶದ ಸಂಪೂರ್ಣ ಸ್ವಾತಂತ್ರ್ಯ ಸಾಧನೆಯ ಮೂಲ ಉದ್ದೇಶವನ್ನು ಲಕ್ಷ್ಯದಲ್ಲಿಟ್ಟುಕೊಂಡು, ಅತ್ಯಾಧುನಿಕ ವಿದ್ಯಮಾನಗಳ ದೃಷ್ಟಿಯಿಂದ ಹೊಸ ನಿರ್ಧಾರಗಳಿಗೆ ಬರುವ ಧೈರ್ಯ ಮತ್ತು ಸಿದ್ಧತೆಯನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ತೋರಿಸಿರುವುದು. ಅದೀಗ ಕಾನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯ ಪ್ರಶ್ನೆಯನ್ನು ಮುಂದೆ ನೂಕುತ್ತಿರುವುದಿಲ್ಲ. ಅಹಿಂಸಾತ್ಮಕ ರೀತಿಯಲ್ಲಿ ದೇಶದ ರಕ್ಷಣೆಯ ಸಿದ್ಧತೆ ಮಾಡಿದರೆ ಮಾತ್ರ ಸರಕಾರದೊಂದಿಗೆ ಸಹಕರಿಸಲು ಕಾಂಗ್ರೆಸು ಸಿದ್ಧವಿದೆಯೆಂದು ಸರಕಾರದ ಸೇನಾ ಸಿದ್ಧತೆಯನ್ನೇನೂ ನಿಷೇಧಿಸಿರುವುದಿಲ್ಲ. ದೇಶದ ರಕ್ಷಣೆ ಮತ್ತು ಡಿಕ್ಟೇಟರ್ ಶಾಹಿಯ ಆಕ್ರಮಣ ವಿರೋಧದಲ್ಲಿ ಉತ್ಸಾಹದಿಂದ ಭಾಗವಹಿಸಲು ಕಾಂಗ್ರೆಸು ಸಿದ್ಧತೆ ತೋರಿಸಿದೆ. ಆದರೆ ಬ್ರಿಟಿಷ್ ಸರಕಾರವು ಹಿಂದೂದೇಶವನ್ನು ಸ್ವತಂತ್ರವಾಗಿ ಮಾಡಬೇಕಾಗಿದೆ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿ ದೇಶದ ಆಡಳಿತದ ಜವಾಬ್ದಾರಿಯನ್ನು ಪ್ರಜಾ ಪ್ರತಿನಿಧಿಗಳಿಗೊಪ್ಪಿಸಬೇಕಾಗಿದೆ.

ಇದೇ ತಾ. ೨೧ರಲ್ಲಿ ಮದ್ರಾಸ್ ಕಾಂಗ್ರೆಸ್ ಸದನದ ವಠಾರದಲ್ಲಿ ನಡೆದ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಶ್ರೀ. ಸಿ. ರಾಜಗೋಪಾಲಾಚಾರ್ಯರು ಪ್ರಾಮುಖ್ಯವಾದೊಂದು ಭಾಷಣವಿತ್ತು ಕಾಂಗ್ರೆಸಿನ ಧೋರಣೆಯನ್ನು ಸ್ಪಷ್ಟಪಡಿಸಿರುವರು. ಕಾಂಗ್ರೆಸಿನ ಕೇಳಿಕೆಯನ್ನೊಮ್ಮೆ ಬ್ರಿಟಿಷ್ ಸರಕಾರವು ತೃಪ್ತಿಪಡಿಸಿದರೆ ಕಾಂಗ್ರೆಸಿನವರು ಜನತೆಯ ಬಳಿಗೆ ಹೋಗಿ ದೇಶದ ಸಂರಕ್ಷಣಾ ಕಾರ್ಯದಲ್ಲಿ ಅವರು ಉತ್ಸಾಹದಿಂದ ಸಹಕರಿಸುವಂತೆ ಮಾಡದಿರಲಾರರು. ಆಗ ಹಿಂದೂದೇಶವು ಅತ್ಯುತ್ಸಾಹದಿಂದ ಸರಕಾರಕ್ಕೆ ಬೆಂಬಲವಿತ್ತು ದೇಶರಕ್ಷಣೆಗಾಗಿ ಯಾವ ತ್ಯಾಗ ಮಾಡುವುದಕ್ಕೂ ಸಿದ್ಧವಾಗದಿರಲಾರದು. ಈಗಣ ಸರಕಾರದ ದೇಶ ಸಂರಕ್ಷಣಾ ಯತ್ನಕ್ಕೆ ಜನತೆಯ ಬಲವೇನೂ ದೊರೆತಿರುವುದಿಲ್ಲ. ಕಲೆಕ್ಟರರೇ ಮೊದಲಾದ ಅಧಿಕಾರಿಗಳು ಕೆಲವರು ತಮ್ಮ ಅಧಿಕಾರ ಬಲದಿಂದ ಯುದ್ಧ ಫಂಡಿಗೆ ಹಣ ಶೇಖರಿಸಿರುವರು. ಸರಕಾರಕ್ಕೆ ಸದಾ ವಿಧೇಯರಾಗಿರುವ ಲೋಯಲಿಸ್ಟರು ಕೆಲವರು ಯುದ್ಧ ಕಮಿಟಿಗಳಲ್ಲಿ ಸೇರಿ ಕಟ್ಟುಕಟ್ಟಳೆಯಂತೆ ಕೆಲಸ ಮಾಡ ಹತ್ತಿರುವರು. ಆದರೆ ಅವರಿಗೆ ಜನ ಸಮಾನ್ಯರ ಬೆಂಬಲವೇನೂ ದೊರೆತಿರುವುದು. ದೇಶ ರಕ್ಷಣೆಯ ವಿಷಯದಲ್ಲಿ ಜನತೆಯಲ್ಲಿ ಹುರುಪುಂಟಾಗಿರುವುದಿಲ್ಲ. ಎಂದಿನಂತೆಯೇ ನಿರುತ್ಸಾಹ ಮತ್ತು ಅಸಡ್ಡೆಯು ಜನಸಾಮಾನ್ಯರಲ್ಲಿ ನೆಲೆಗೊಂಡಿರುವುದಿಲ್ಲ. ಬ್ರಿಟನು ತನ್ನ ಹಿಂದಿನ ಸಂಶಯಾತ್ಮಕ ಧೋರಣೆಯನ್ನು ತ್ಯಜಿಸಿಬಿಡಬೇಕು. ಹಿಂದೀಯರಲ್ಲಿ ಸಂಪೂರ್ಣ ವಿಶ್ವಾಸವನ್ನಿಡಬೇಕು. ಅವರು ನ್ಯಾಯಪ್ರಿಯರು, ಕೃತಜ್ಞತಾ ಬುದ್ಧಿಯುಳ್ಳವರು. ಬ್ರಿಟನು ಅವರ ಮೇಲೆ ನಂಬುಗೆಯಿಟ್ಟು ಹಿಂದೂದೇಶಕ್ಕೆ ಸ್ವಾತಂತ್ರ್ಯವಿತ್ತು ಅವರ ಆಡಳಿತವನ್ನು ಪ್ರಜಾಪ್ರತಿನಿಧಿಗಳಿಗೊಪ್ಪಿಸಿದರೆ ಇಂಗ್ಲೆಂಡಿನೊಂದಿಗೆ ಅವರು ನವ ಉತ್ಸಾಹದಿಂದ ಸಹಕರಿಸದಿರಲಾರರು. ಈ ಕುರಿತು ಇಂಗ್ಲೆಂಡು ಯಾವ ರೀತಿಯ ಸಂದೇಹವನ್ನಾದರೂ ಕಟ್ಟಿಕೊಳ್ಳಬಾರದು. ಪ್ರಜಾಸತ್ತೆಗಾಗಿ ಹೋರಾಡುವ ಇಂಗ್ಲೆಂಡು ಹಿಂದೂದೇಶವನ್ನು ಪರಾಧೀನದಲ್ಲಿಡುವುದು ಅದರ ಹೆಸರಿಗೊಂದು ದೊಡ್ಡ ಕಳಂಕ. ಇಂದೀಗ ಬ್ರಿಟನು ಹಿಂದು ದೇಶಕ್ಕೆ ಸ್ವಾತಂತ್ರ್ಯವಿತ್ತರೆ ಅದು ಬ್ರಿಟಿಷ್ ಅಳ್ವಿಕೆಗೆ ಕೀರ್ತಿಯ ಕಿರೀಟವಾಗಿ ಅದು ಮಾಡಿರುವ ಹಿಂದಿನ ಸಂಗತಿಗಳೆಲ್ಲಾ ಗತಕಾಲದ ಗರ್ಭದಲ್ಲಿ ಮರೆಯಾಗುವವು.

ಹಿಂದೂದೇಶದ ಸಂತೋಷ ಹಾಗೂ ಉತ್ಸಾಹಪೂರ್ವಕವಾದ ಬೆಂಬಲವನ್ನದು ಪಡೆದು ಯುದ್ಧದಲ್ಲಿ ಜಯಹೊಂದುವಂತಾಗುವುದು. ತನ್ನ ಹೆಸರಿಗೆ ಯಾವ ಕಳಂಕವೂ ಇಲ್ಲದೆ ತಲೆಯೆತ್ತಿ ಮೆರೆಯುವಂತಾಗುವುದು. ಕಾಂಗ್ರೆಸಿನ ಕೇಳಿಕೆಯನ್ನು ಬ್ರಿಟಿಷ್ ಸರಕಾರವು ಮನ್ನಿಸಿದುದೇ ಆದರೆ ಕಾಂಗ್ರೆಸ್ ಮುಖಂಡರೇ ದೇಶರಕ್ಷಣೆಯ ಜವಾಬ್ದಾರಿ ಹೊತ್ತು ಕೆಲಸಮಾಡಲಿರುವರು. ಇಡೀ ದೇಶದಲ್ಲಿ ನವಚೈತನ್ಯವುಂಟಾಗಿ, ದೇಶರಕ್ಷಣೆಯ ಕೆಲಸವು ಅತ್ಯಂತ ಫಲಕಾರಿಯಾಗಿ ನಡೆಯುವಂತಾಗುವುದು. ಸ್ವತಂತ್ರ ಹಿಂದೂಸ್ಥಾನವು ಮಾತ್ರ ಅತ್ಯ... ವ್ಯವಸ್ಥೆಯನ್ನು ತೀವ್ರವಾಗಿ ಮತ್ತು ತೃಪ್ತಿಕರವಾಗಿ ಮಾಡಬಲ್ಲುದು. ಎಗ್ಸಿಕ್ಯೂಟಿವ್ ಕೌನ್ಸಿಲನ್ನು ವಿಸ್ತರಿಸಿ ಕೆಲಮಂದಿ ಸದಸ್ಯರನ್ನು ಹೆಚ್ಚಿಗೆಯಾಗಿ ಸೇರಿಸುವುದರಿಂದ ಹಿಂದಿನ ಬದಲಿಗೆ ಅಹಿತವೇ ಆಗದಿರಲಾರದು. ಕೇಂದ್ರದಲ್ಲಿ ಸಂಪೂರ್ಣ ಪ್ರಜಾ ಜವಾಬ್ದಾರಿ ರಾಜ್ಯಭಾರವು ಸ್ಥಾಪಿಸಲ್ಪಡಬೇಕು. ಈ ಕುರಿತು ಬ್ರಿಟನು ಇನ್ನೂ ಇನ್ನೂ ಸಂದೇಹ ಪಟ್ಟು ಹಿಂಜರಿಯಬಾರದು. ಯುದ್ಧಾರಂಭದಲ್ಲೇ ಹಿಂದೂದೇಶದಲ್ಲಿ ರಾಷ್ಟ್ರೀಯ ಸರಕಾರವು ಸ್ಥಾಪಿಸಲ್ಪಟ್ಟು ಸ್ವತಂತ್ರ ಹಿಂದೂಸ್ಥಾನವು ಇಚ್ಛಾಪೂರ್ವಕವಾಗಿ ಬ್ರಿಟನಿನೊಂದಿಗೆ ಸಹಕರಿಸುವಂತಾಗುತ್ತಿದ್ದರೆ ಇಂಗ್ಲೆಂಡಿಗೆ ಬಹಳ ಯಶಸ್ಸಿತ್ತು. ಇನ್ನಾದರೂ ಅದು ಈ ಕೊರತೆಯನ್ನು ನಿವಾರಿಸಬೇಕು. ಸ್ವತಂತ್ರ ಹಿಂದೂಸ್ಥಾನದ ಸಹಾಯವು ಯುದ್ಧಕ್ಕೆ ಅತ್ಯಾವಶ್ಯಕವಾಗಿದೆ. ಹಿಂದೂದೇಶದ ಸಹಾಯವು ಇಂಗ್ಲೆಂಡಿಗೆ ಸಿಗದಂತಾಗಬೇಕೆಂದು ಹಿಟ್ಲರರು ಬಹಳ ಪ್ರಚಾರ ಮಾಡುತ್ತಿದ್ದಾರೆ. ಹಿಂದಿ ಸ್ಥಾನಿಯಲ್ಲಿ ರೇಡಿಯೋ ಮೂಲಕ ನಾನಾ ರೀತಿಯ ಪ್ರಚಾರಮಾಡುತ್ತಿದ್ದಾರೆ. ಇದರಿಂದ ಹಿಂದೂದೇಶದ ಪ್ರಾಮುಖ್ಯತೆಯು ಸಿದ್ಧವಾಗುವುದು. ಇಂಗ್ಲೆಂಡಾದರೂ ಇದನ್ನು ಮನಗಂಡಿರುತ್ತದೆ. ಹಿಂದೀಯರ ಸಹಾಯ ಪಡೆಯಲು ಪ್ರಯತ್ನ ಮಾಡಿರುತ್ತದೆ. ಆದರೆ ಸ್ವತಂತ್ರ ಹಿಂದೂಸ್ಥಾನದ ಸಹಾಯ ಮಾತ್ರ ಅದಕ್ಕೆ ನಿಜವಾದ ಪ್ರಯೋಜನವನ್ನುಂಟುಮಾಡಬಹುದು. ಪ್ರಾಂತಿಕ ಸ್ವಾತಂತ್ರ್ಯ ವಿಷಯವಾಗ ಬ್ರಿಟಿಷ್ ಸರಕಾರವು ಬಹಳ ಸಂಶಯ ಕಟ್ಟಿಕೊಂಡಿತ್ತು. ಆದರೆ ಅನಂತರ ಅಂತಹ ಸಂಶಯಕ್ಕೇನೂ ಕಾರಣವಿಲ್ಲೆಂಬುದು ಸಿದ್ಧವಾಯಿತು. ಅಂತೆಯೇ ಇಂದು ಬ್ರಿಟಿಷ್ ಸರಕಾರವು ಹಿಂದೀಯರ ಮೇಲೆ ವಿಶ್ವಾಸವಿಟ್ಟು ಕೂಡಲೆ ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಬೇಕೆಂದೇ ಶ್ರೀ ರಾಜಗೋಪಾಲಾಚಾರ್ಯರ ಭಾಷಣದ ಸಾರಾಂಶ.

ಬಾಬು ರಾಜೇಂದ್ರ ಪ್ರಸಾದ್ ಸರ್ದಾರ್ ವಲ್ಲಭಭಾಯಿ ಮೊದಲಾದ ಕಾಂಗ್ರೆಸಿನ ಅಗ್ರಗಣ್ಯ ಮುಖಂಡರು ರಾಜಗೋಪಾಲಾಚಾರ್ಯರ ಅಭಿಪ್ರಾಯವನ್ನೇ ಪ್ರತಿಧ್ವನಿಸಿರುವರು. ಮಹಾತ್ಮ ಗಾಂಧಿಯವರಾದರೂ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯಕ್ಕೆ ವಿರೋಧವಿರುವುದಿಲ್ಲ. ಆದರೆ ಬ್ರಿಟಿಷ್ ಸರಕಾರದ ಮೌನವು ವಿಸ್ಮಯಕರವಿದೆ. ಇಂಡಿಯಾ ಸೆಕ್ರೆಟರಿಗಳು ಪಾರ್ಲಿಮೆಂಟಿನಲ್ಲಿ ಹಿಂದುದೇಶದ ಕುರಿತು ಹೇಳಿಕೆಯೊಂದನ್ನೀಯುವರೆಂಬ ಸುದ್ದಿಯು ಸ್ವಲ್ಪ ಸಮಯ ಬಲವಾಗಿ ಹಬ್ಬಿದ್ದಿತು. ಆದರೆ ಅದು ಸುಳ್ಳಾಯಿತು. ಇಂದೀಗ ವೈಸರಾಯರು ಪ್ರಾಮುಖ್ಯವಾದೊಂದು ಹೇಳಿಕೆ ಕೊಡಲಿರುವರೆಂದು ಸುದ್ದಿಯುಂಟಾಗಿದೆ. ಆದರೆ ಅವರೂ ಬಾಯ್ಬಿಡುವಂತೆ ತೋರುವುದಿಲ್ಲ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯವಾಗಿ ಈಗ ಒಂದು ತಿಂಗಳಾಗುತ್ತ ಬಂತು. ಇಷ್ಟರಲ್ಲಿಗ ಆಲ್ ಇಂಡಿಯಾ-ಕಾಂಗ್ರೆಸ್ ಕಮಿಟಿ ಸಭೆ ಕೂಡಲಿರುವುದು. ಇನ್ನು ಒಂದೆರಡು ದಿನಗಳಲ್ಲಿ ಸರಕಾರವು ಕಾಂಗ್ರೆಸಿನ ನಿರ್ಣಯದ ಕುರಿತು ತನ್ನ ಅಭಿಪ್ರಾಯವನ್ನು ವ್ಯಕ್ತಗೊಳಿಸದಿದ್ದರೆ ಕಾಂಗ್ರೆಸಿನವರಲ್ಲಿ ತೀವ್ರ ನಿರಾಶೆಯುಂಟಾಗಿ ಸರಕಾರದ ಕುರಿತು ವಿರೋಧವು ಹೆಚ್ಚದಿರಲಾರದು. ಹಿಂದೀಯರೊಳಗಣ ಅಸ್ಪೃಶ್ಯದ ಪಲ್ಲವಿಯನ್ನೇ ಬ್ರಿಟಿಷ್ ಸರಕಾರವು ಇನ್ನೂ ಇನ್ನೂ ಹಾಡಿ ಫಲವಿಲ್ಲ. ಅದಕ್ಕೀಗ ಬೆಲೆಬರುವ ಹಾಗಿಲ್ಲ. ಅದು ಕೇವಲ ನೆವನವೆಂಬುದೀಗ ಸೂರ್ಯಪ್ರಕಾಶದಷ್ಟು ಸ್ಪಷ್ಟವಾಗಿದೆ. ಸರಕಾರವು ಇಚ್ಛೆಪಟ್ಟಲ್ಲಿ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಲು ಹೆಚ್ಚಿನ ತೊಂದರೆ ಏನೂ ಆಗಲಾರದು.

ಸರಕಾರದ ಆಸೆಯು ತಪ್ಪಿದೊಡನೆಯೇ ಮುಸ್ಲಿಮ್ ಲೀಗಿನ ವಿರೋಧವು ಕ್ಷಣಮಾತ್ರದಲ್ಲ ಮಾಯವಾಗುವುದು. ಮಿ ಜಿನ್ನರಿಗಿರುವ ಈಗಣ ತೋರುವಿಕೆಯ ಪ್ರಬಲ ಬೆಂಬಲವು ಒಮ್ಮೆಯೇ ಇಲ್ಲದಾಗುವುದು. ಸರಕಾರವು ಇಚ್ಛೆಪಟ್ಟಲ್ಲಿ ದೇಶೀಯ ಸಂಸ್ಥಾನಗಳಲ್ಲೆಲ್ಲಾ ಪ್ರಜಾಪ್ರತಿನಿಧಿ ಸರಕಾರವು ಸ್ಥಾಪಿತವಾಗುವಂತೆ ಮಾಡುವುದೇನೂ ಅಸಾಧ್ಯವಲ್ಲ. ಶ್ರೀ. ರಾಜಗೋಪಾಲಾಚಾರ್ಯರು ಸೂಚಿಸಿದಂತೆ, ಯುರೋಪಿನಲ್ಲಿ ಪ್ರಜಾಸತ್ತೆಯ ರಕ್ಷಣೆಗಾಗಿ ಉತ್ಸಾಹದಿಂದ ಸಹಾಯ ಮಾಡಲು ಮುಂದಾಗಿರುವ ದೇಶೀಯ ರಾಜ ಮಹಾರಾಜರುಗಳು ತಮ್ಮ ರಾಜ್ಯಗಳಲ್ಲಿ ನಿರಂಕುಶ ಪ್ರಭುತ್ವದ ಪ್ರತಿಪಾದಕರಾಗುವುದರಲ್ಲಿ ಅರ್ಥವಿಲ್ಲ. ಪ್ರಚಂಡ ಮಾರ್ಪಾಟಿನ ಪ್ರಕೃತದ ಪರಿಸ್ಥಿತಿಯಲ್ಲಿ ದೇಶೀಯ ರಾಜರುಗಳು ಮಧ್ಯ ಕಾಲೀನ ರಾಜ್ಯಭಾರ ಕ್ರಮವನ್ನು ಸ್ಥಿರವಾಗಿರಿಸಲೆತ್ನಿಸಿದರೆ ಅವರು ಇನ್ನೂ ತಮ್ಮದೇ ಆದ ಕಾಲ್ಪನಿಕ ಲೋಕದಲ್ಲಿರುವರೆಂದಾಗುವುದು. ಬ್ರಿಟಿಷ್ ಸರಕಾರದ ಇಚ್ಛೆಗೆ ವಿರೋಧವಾಗಿ ನಡೆಯಲು ಅವರಿಗೆ ಎಂದಿಗೂ ಸಾಧ್ಯವಾಗಲಾರದು. ಎಂದಿನಂತೆ ಮೇಲಣ ನೆವನಗಳನ್ನು ಮುಂದೊಡ್ಡಿ ಬ್ರಿಟಿಷ್ ಸರಕಾರವು ಹಿಂದೂದೇಶವನ್ನು ಇನ್ನೂ ಪರಾಧೀನದಲ್ಲೇ ಇರಿಸುವ ಕಳಂಕವನ್ನು ಹೊತ್ತುಕೊಂಡು ಲೋಕಮತದ ಟೀಕೆಗೆ ಆಸ್ಪದ ಕೊಡುವುದೆ? ಅಥವಾ ಸ್ವಾತಂತ್ರ್ಯವೀಯುವ ವಿವೇಕಪರ ಧೋರಣೆಯನ್ನು ಧೈರ್ಯ ಮತ್ತು ಉದಾರ ಬುದ್ಧಿಯಿಂದ ವಹಿಸಿ, ಲೋಕದ ಪ್ರಜಾಸತ್ತೆಗಾಗಿ ಹೋರಾಡುವ... ದರೆ ಗ್ರೇಟ್ ಬ್ರಿ... ಸಾರ್ಥಕವಾ... ದ ದೇಶದ ... ಸತ್ವ ಪರೀಕ್ಷೆ... ಆದರಲ್ಲದು ... ಹೊಂದುವುದು... ದಿನಗಳಲ್ಲಿಯೇ ...

ಪ್ರೆಸಿಡೆ...

ಇಂದೀಗ ... ರು ಸರ್ವಸನ್ನ... ದಲ್ಲಿ ನಡೆಯಲಿ... ಟ್ಸನ ಪ್ರೆಸಿಡೆ... ಪಾರ್ಟಿಯು ... ಮೂರನೇ ... ಲ್ಪಡುವುದು ... ಅವರು ಇದೇ ... ಪಾರ್ಟಿಯ ... ಕಾಸ್ಟ್ ಮಾಡಿ... ದ್ದಾಗಿದೆ.

...ನಾನೀಗ ... ಮಿತ್ರ ಭಾವನೆ... ಉಮೇದ್ವಾರಿ... ಕೆಂದು ನನ್ನ... ಆದರೆ ಹರಡೆ... ನಡೆಯುತ್ತಿರು... ನನ್ನನ್ನು ... ಉಮೇದ್ವಾರಿ... ಪ್ರೇರೇಪಿಸಿರು... ದಿಂದ ನಿವೃತ್ತ... ನಡಿಸಬೇಕೆಂ... ನನ್ನನ್ನೆದುರಿ... ಅಪಾಯದ ... ತೀರ್ಮಾನಗಳ... ಇತಿಹಾಸದಲ್ಲಿ ... ಸ್ಥೆಯನ್ನು ... ಇಂದೀಗ ನವ... ಉಳಿಯಬೇಕೆ... ಸಮಸ್ಯೆಯು ... ಪ್ರಿಯವಾಗಿರ... ನಾಶವಾಗುವ ... ಧರ್ಮಗಳೋ... ವ್ಯವಹಾರಕ್ಕೆ ... ಹೋರಾಡು... ಗುಂಡು ಹ... ಹೋರಾಡುತ್ತಿ... ದಿಂದ ಎತ್ತಿಸಿ... ಸಮಾಧಾನದ... ತೂಕಡಿಕೆಯೊ...

ಅಮೇರಿಕ... ಉದ್ಯಮಗಳ... ಲೋಕದಲ್ಲಿ ... ಗಳೇ ಸಾಕ್ಷಿ... ರಾಷ್ಟ್ರವು ಒಗ್ಗ... ಎೀಗ ಬಂದಿ... ಗುಪ್ತ ಮಾರ್ಗ... ರಹಸ್ಯಗಳನ್ನು ... ತ್ತಿದ್ದಾರೆ. ... ಚರಣೆಯು ... ರಾಷ್ಟ್ರೀಯ ... ಪ್ರೆಸಿಡೆಂಟರನ್ನಾಗಿ... ರಿಸ ಬೇಕೊ...

ವು ರಾಷ್ಟ್ರವೆಂ
ಉದ್ಯೋಗವು
ಸುವುದೇ? ಹಿಂ
ಾ ಬ್ರಿಟನಿನ
ವೇಗ ಬಂದಿದೆ.
ಸಲ್ಲಿ ತೀರ್ಗಡೆ
ನ್ನು ಕೆಲವೇ
ಲಿದೆ.

ವೆಲ್ಟರ

ರೂಸ್‌ವೆಲ್ಟ
ುವನವಂಬರ
ನೈಟೆಡ್ ಸ್ಟೇ
ಡೆಮೊಕ್ರೆಟಿಕ್
ವರು. ಅವರು
ಟರಾಗಿ ಆರಿಸ
ಗೆ ನಿಶ್ಚಯ.
ಡೆಮೊಕ್ರೆಟಿಕ್
ಗೆ ಬ್ರೋಡ್
ಅತಿಮಹತ್ವ

ದುತ್ತಿರುವುದು
ಸಿಡೆಂಟತನದ
ವೃತ್ತನಾಗಬೇ
ಪ್ರಾಯವಿತ್ತು.
ತ ವೇಗವಾಗಿ
ಮಾನಗಳು
ಅಧ್ಯಕ್ಷತನದ
ಸ್ವೀಕರಿಸಲು
ರಾಜಕೀಯ
ಸಗಿ ಜೀವನ
ಚಿಸಿದಾಗ್ಯೂ
ಸಾರ್ವಜನಿಕ
ಂದೆ ಖಾಸಗಿ
ಗಲೇ ಬೇಕು.
ಹತ್ತಾದ ಸನು
ಿಸುತ್ತಿದ್ದೇವೆ.
ನಾಗರಿಕತೆಯ
ಬೇಕೋ ಎಂಬ
ಗಿದೆ. ನಮಗೆ
ವಸ್ತುಗಳೂ
ದೆ. ಧರ್ಮಾ
ಟ ನಡೆದಿದೆ.
ಶಕ್ತಿಯೊಂದಿಗೆ
ನಿಯಮವು
ಪಡೆಯೊಡನೆ
ನ್ನು ಧೈರ್ಯ
ಲವು ಸುಳ್ಳು
ುವ ನಿದ್ದೆಯ
ುತ್ತಿದೆ.
ಗೆಯ ನೂತನ
ಲು ಈಗೆಗೆ
ುವ ಘಟನೆ
ಡ್ ಸ್ಟೇಟ್ಸ್
ಾದ ಕಾಲ
ಸಾಧ್ಯವಾದ
ಸ್ತ ರಾಷ್ಟ್ರದ
ಳಿಯಲೆತ್ತಿಸು
ಸು ದ್ರೋಹಾ
ಈಗಿನ ಅಂತ
ನಾನು ಪ್ರೆಸಿ
ನ್ನು ಅಂಗೀಕ
ಎಂಬುದು

ಪ್ರೆಸಿಡೆಂಟ್ ರುಸವೆಲ್ಟರ ಮಹತ್ವದ ಭಾಷಣ

ಡಿಕ್ಟೇಟರ್‌ಶಾಹಿ ಮತ್ತು ಆಕ್ರಮಣ ನೀತಿಯ ನಿಷೇಧ!

ಯುನೈಟೆಡ್ ಸ್ಟೇಟ್ಸಿನ ವಿದೇಶಾಂಗ ನೀತಿಯ ಸ್ಪಷ್ಟೀಕರಣ

ಮುಖ್ಯ ಪ್ರಶ್ನೆಯಲ್ಲ. ಯುನೈಟೆಡ್ ಸ್ಟೇಟ್ಸ್ ನನ್ನನ್ನು ಸೇವೆಗಾಗಿ ಕರೆದರೆ ಅದನ್ನು ನಾನು ಕೇಳಬೇಕೋ ಬೇಡವೋ ಎಂಬುದು ಸಮಸ್ಯೆ. ಬರಿಯ ಪಕ್ಷದ ಕೂಗೇ ನನ್ನನ್ನು ಅಧ್ಯಕ್ಷತೆಗೆ ಕರೆದಿದ್ದರೆ ನಾನದಕ್ಕೆ ಕಿವಿಗೊಡುತ್ತಿದ್ದಿಲ್ಲ. ಈ ಗಂಡಾಂತರದ ಕಾಲದಲ್ಲಿ, ಲೋಕದ ಮಹಾ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ. ಪ್ರಪಂಚವನಿಸ್ಸೀರ್ಣವೇಶ್ವಸ್ತವಾಗಿ ಕಂಡುಬಂದು ಒಂದೇ ಒಂದು ಸಮಸ್ಯೆಯು ನಮ್ಮ ಮುಂದೆ ಬಂದು ನಿಲ್ಲುತ್ತದೆ. ಆ ಸಮಸ್ಯೆಯೇ ಸಶಸ್ತ್ರ ಆಕ್ರಮಣ. ಈ ಆಕ್ರಮಣವು ಜಯಪ್ರದವಾಗುತ್ತ ಮುಂದೆ ನುಗ್ಗಿ ಯುನೈಟೆಡ್ ಸ್ಟೇಟ್ಸ್ ಅಂಗೀಕರಿಸಿರುವ ಸರಕಾರದ ರೂಪ ಮತ್ತು ಸ್ವರೂಪವನ್ನೇ ಕಬಳಿಸಲೆತ್ನಿಸುತ್ತಿದೆ.

ಇದು ಸಾಮಾನ್ಯ ಯುದ್ಧವಲ್ಲ. ಬಲಾತ್ಕಾರವಾಗಿ ಸಶಸ್ತ್ರವಾಗಿ ಹೊರಿಸಲ್ಪಟ್ಟಿರುವ ಕ್ರಾಂತಿ, ಅದರ ಭೀತಿಯು ಪ್ರಪಂಚದಲ್ಲೆಲ್ಲಾ ಹಬ್ಬಿದೆ ಈ ಕ್ರಾಂತಿಯು ಜನರನ್ನು ಸ್ವತಂತ್ರರನ್ನಾಗಿ ಮಾಡುವಂತಹದಲ್ಲ, ಅವರನ್ನು ಡಿಕ್ಟೇಟರಶಾಹಿಗೇಗೆ ಅಧೀನರಾದ ಗುಲಾಮರನ್ನಾಗಿ ಮಾಡುವಂತಹದು. ಇಂತಹ ಮಹಾವಿಪತ್ತಿನ ಸಮಯದಲ್ಲಿ ಯಾವ ವ್ಯಕ್ತಿಯೂ ತನ್ನ ಸ್ವಂತ ಇಷ್ಟದಂತೆ ನಡೆಯಲು ಅವಕಾಶವಿಲ್ಲ. ಪ್ರತಿಯೊಬ್ಬ ಮನುಷ್ಯನು ತನ್ನ ದೇಶಕ್ಕೆ ಈಗ ಸೇವೆಯನ್ನು ಸಲಿಸುವ ಕಾಲ ಬಂದಿದೆ. ದೇಶವು ಅವನನ್ನು ಯಾವ ಕರ್ತವ್ಯಕ್ಕೆ ಕರೆಯುತ್ತದೋ ಅದನ್ನು ಮಾಡಲವನು ಸಿದ್ಧನಾಗಲೇ ಬೇಕು. ಅಮೇರಿಕದ ಜನರು ನನ್ನನ್ನು ಯಾವ ಸೇವೆಗೆ ಕರೆದರೂ ಅದಕ್ಕೆ ನಾನು ಸಿದ್ಧನಿದ್ದೇನೆ. ದೇವರ ಸಹಾಯದಿಂದ ನನ್ನ ಯಾವತ್ತು ಶಕ್ತಿಯನ್ನೂ ಬುದ್ಧಿಯನ್ನೂ ದೇಶಸೇವೆಗಾಗಿ ಅರ್ಪಿಸುತ್ತೇನೆ.

ಮುಂದಿನ ತಿಂಗಳುಗಳು ಹಿಂದಿನದಕ್ಕಿಂತ ಭಿನ್ನವಾದುವು. ಘಟನೆಗಳು ಬಹಳ ತ್ವರಿತವಾಗಿ ಮುಂದೆ ನುಗ್ಗುತ್ತಿವೆ ಪ್ರಪಂಚದ ಇತರ ಭಾಗಗಳು ಬಹಳ ವೇಗವಾಗಿ ಮಾರ್ಪಾಟುಗೊಳ್ಳುತ್ತಿವೆ. ಕಳೆದ ಒಂದುವರೆ ಶತಮಾನದಿಂದ ಪರಂಪರೆಯಾಗಿ ಬಂದಿರುವ ನಮ್ಮ ರಾಷ್ಟ್ರದ ಅಡಿಗಲ್ಲಾಗಿರುವ ತತ್ವಗಳನ್ನೂ ಸ್ವಾತಂತ್ರ್ಯವನ್ನೂ ನಾವು ಕಾಯ್ದುಕೊಳ್ಳಬೇಕಾಗಿದೆ. ನಮ್ಮ ಜೀವನವೇ ಈ ತತ್ವಗಳ ಮೇಲೆ ಹೊಂದಿಕೊಂಡಿದೆ. ಡಿಕ್ಟೇಟರ ರೀತಿಯ ಮತ್ತು ರೂಪದ ರಾಜಕೀಯ ಪದ್ಧತಿಯು ಯುನೈಟೆಡ್ ಸ್ಟೇಟ್ಸಿಗೆ ಹರಡದಂತೆ ಕಳೆದ ೭ ವರ್ಷಗಳಿಂದ ಸಕಲ ಶಾಂತನೀತಿಯಿಂದ ಸರಕಾರವು ಪ್ರಯತ್ನಿಸಿದೆ. ಮುಂದಿನ ಜನವರಿಯಲ್ಲಿ ಯುನೈಟೆಡ್ ಸ್ಟೇಟ್ಸ್ ಸರಕಾರವು ಇತರರ ಕೈಗೆ ಹೋದರೆ ಅವರು ಕೂಡಾ ಈ ಡಿಕ್ಟೇಟರ್ ಶಾಹಿಯೊಡನೆ ಸಮಾಧಾನ ಅಥವಾ ರಾಜಿಯ ಮಾರ್ಗವನ್ನನುಸರಿಸಲಾರರೆಂದು ನಂಬುತ್ತೇನೆ. ಯುರೋಪಿನ ಡಿಕ್ಟೇಟರರು ಎಲ್ಲಾ ಪ್ರಜಾಸತ್ತೆಗಳನ್ನೂ ತಮ್ಮ ಅಧೀನಪಡಿಸಲು ಅಪೇಕ್ಷಿಸುತ್ತಿರುವರು. ಯುದ್ಧಕ್ಷೇತ್ರ ಮತ್ತು ರಕ್ತಪಾತವು ಇನ್ನೂ ವ್ಯಾಪಿಸದಂತೆ ನಾನು ಯುದ್ಧಾರಂಭದಿಂದಲೂ ಪ್ರಯತ್ನಮಾಡಿರುತ್ತೇನೆ. ನಾನೂ ಸ್ಟೇಟ್ ಸೆಕ್ರೆಟರಿಗಳಾದ ಮಿ. ಕೋರ್ಡೆಲ್ ಹಲ್ಲರೂ ಈ ಆಕ್ರಮಣ ನೀತಿಯನ್ನು ಖಂಡಿಸುತ್ತಲೇ ಬಂದಿರುತ್ತೇವೆ. ಈ ಆಕ್ರಮಣಕಾರರು, ಧಾಳಿನಡಿಸಿ ಅತ್ಯಂತ ಪುರಾತನ ಶಾಂತಿಪ್ರಿಯ ತಟಸ್ಥ ರಾಷ್ಟ್ರಗಳ ಸ್ವಾತಂತ್ರ್ಯವನ್ನೂ ಅಪಹರಿಸಿ ಅವನ್ನು ಮುಳುಗಿಸಿರುತ್ತಾರೆ. ಇಂತಹ ಆಕ್ರಮಣವನ್ನು ವಿರೋಧಿಸುತ್ತಿರುವ ಎಲ್ಲಾ ಸ್ವತಂತ್ರರಾಷ್ಟ್ರಗಳ ಪ್ರಜೆಗಳಿಗೂ ನಮ್ಮ ಸಹಾನುಭೂತಿ ಇದ್ದೇ ಇದೆ. ಇದನ್ನು ಕಡಿಮೆ ಮಾಡುವಹಾಗಿಲ್ಲ ಮತ್ತು ನಮ್ಮ ಕೈಲಾದ ಸಹಾಯ ಕೂಡಾ ನಾವು ಮಾಡಿರುತ್ತೇವೆ ಅದಕ್ಕಾಗಿ ನಾವು ಸಂತಾಪಪಡುವುದಿಲ್ಲ"

"ಇಂತು ಎಲ್ಲರಿಗೂ ಅಪಾಯಕರ ಪರಿಸ್ಥಿತಿಯು ಉಂಟಾಗಿದೆಯೆಂದು ನಾವು ನಮ್ಮ ದೇಶೀಯರಿಗೆ ಎಚ್ಚರಿಕೆಯಿತ್ತಿರಬೇಕಾಗಿದೆ ಆಕ್ರಮಣಕಾರರನ್ನು ನಾವು ಸಮಜಾಯಿಸಲೆತ್ನಿಸಲಾರೆವು. ಐದನೇ ಕಲಮ್ ಕಾರ್ಯಕ್ರಮವನ್ನು ನಾವು ತೀವ್ರವಾಗಿ ಎದುರಿಸುತ್ತೇವೆ. ನಮ್ಮ ವಿದೇಶಾಂಗ ನೀತಿಯು ಮುಂದೆಯೂ ಇದೇ ರೀತಿ ಇರುವುದು. ಈಗ ನಮ್ಮ ಮುಂದಿರುವ ಮಾರ್ಗಗಳೆಂದರೆ ಎರಡು. ನಾವು ನಮ್ಮ ನಾಗರಿಕತೆಯನ್ನು ಮುಂದುವರಿಸಿ ಹೋಗವುದು, ಅದಕ್ಕೀಗ ವಿಘ್ನಉಂಟಾಗಿದೆ. ಇಲ್ಲವೆ ನಮಗೆ ಪ್ರಿಯವೆನಿಸಿರುವ ಎಲ್ಲವನ್ನೂ ನಾಶವಾಗಬಿಡುವುದು. ಅಮೇರಿಕಾನರು ದೇವರ ದಯೆಯಿಂದ ತಮ್ಮ ಪ್ರಜಾಪ್ರತಿನಿಧಿ ರಾಜ್ಯಭಾರವನ್ನು ಧೈರ್ಯದಿಂದಲೂ ವಿಶ್ವಾಸದಿಂದಲೂ ಕಾಪಾಡಿಕೊಂಡು ಹೋಗುವರೆಂದು ನಂಬುತ್ತೇವೆ"

"ಯುರೋಪಿನ ಅನೇಕ ರಾಷ್ಟ್ರಗಳು ಡಿಕ್ಟೇಟರ್ ಶಿಪ್ಪಿನಿಂದಲೂ ಆಕ್ರಮಣದಿಂದಲೂ ಹೊಸ ರೀತಿಯ ರಾಜ್ಯಭಾರವನ್ನು ಬಲಾತ್ಕಾರದಿಂದ ಸ್ಥಾಪಿಸಿ ಅದು ಉತ್ಕೃಷ್ಟವಾದುದೆಂದು ಹೇಳುತ್ತಿವೆ. ಆದರೆ ವಾಸ್ತವಿಕ ಸ್ಥಿತಿಯು ಬೇರೆಯಾಗಿದೆ. ಈ ರಾಷ್ಟ್ರಗಳು ಪ್ರಾಚೀನ ಅನಾಗರಿಕ ಸ್ಥಿತಿಗಿಳಿದಿವೆ. ಹಿಂದೆ ಪರಾಕ್ರಮಶಾಲಿಗಳಾದ ಡಿಕ್ಟೇಟರರು ಆಧುನಿಕ ಯುರೋಪಿನ ಬಹು ಭಾಗವನ್ನು ಜೈಸಿ ಅದನ್ನು ಸಾಮರ್ಥ್ಯಯುತವಾಗಿಯೂ ಸುರಕ್ಷಿತವಾಗಿಯೂ ಮಾಡುವೆನಾಗಿ ಹೇಳುತ್ತಿರುವರು. ಆದರೆ ಐಗುಪ್ತದ ಪಿರಮಿಡ್ಡುಗಳನ್ನು ಅತ್ಯಂತ ಸಾಮರ್ಥ್ಯದಿಂದ ಕಟ್ಟಿದವರು ಗುಲಾಮರು. ಡಿಕ್ಟೇಟರ ಫರೋನನ ಕೀರ್ತಿಗಾಗಿ ಗುಲಾಮರದನ್ನು ಕಟ್ಟಿದರು. ಅಂತಹ ಸುರಕ್ಷಿತತೆ, ಸಾಮರ್ಥ್ಯ ಮತ್ತು ಆ ರೀತಿಯ ಸಾಮಾಜಿಕ ಸರಕಾರ ನಮಗೆ ಬೇಡ. ದಬ್ಬಾಳಿಕೆಯು ಎಂತಹ ವೇಷವನ್ನು ಹಾಕಿಕೊಂಡು ಯಾವ ಹೊಸ ಕೂಗೆಬ್ಬಿಸಿದರೂ ಅದು ದಬ್ಬಾಳಿಕೆಯೇ. ಇತಿಹಾಸಕ್ಕೆ ಅದು ಹಿಂದಿನಿಂದಲೂ ತಿಳಿದ ವಿಷಯ. ಅತ್ಯಂತ ಗರ್ಹಣೀಯ ಮತ್ತು ನಿಷೇಧಿನೀಯವಾದುದದು."

ಪ್ರಜಾಸತ್ತೆಯು ಬೆಳೆಯಬೇಕಾದರೆ ಲಿಂಕೋಲ್ನರು ಹೇಳಿರುವಂತೆ ಸಾಮಾನ್ಯ ಜನತೆಗೆ ಸ್ವತಂತ್ರಪಟ್ಟಿನ ಅಧಿಕಾರವಿರಬೇಕು. ನಮ್ಮ ಪ್ರಜಾಸತ್ತೆಯೇ ಆಗಲಿ, ಇನ್ನು ಡಿಕ್ಟೇಟರರಿಂದ ಜೈಸಲ್ಪಡದ ಇತರ ಪ್ರಜಾಸತ್ತೆಗಳೇ ಆಗಲಿ, ಮನಃಪೂರ್ವಕವಾಗಿ, ಡಿಕ್ಟೇಟರ ರೀತಿಯ ರಾಜಕೀಯ ಪದ್ಧತಿಯನ್ನೊಪ್ಪಲಾರವು ಅದಕ್ಕೆ ಮಿಗಿಲಾದ, ಮಾನವನ ಘನತೆಗೆ ಪ್ರಾಣರೂಪವಾದ ತಮ್ಮ ಸುರಕ್ಷಿತತೆಯ ರೀತಿನೀತಿಯನ್ನು ತೊರೆಯಲಾರವು."ಎಂದೇ ಪ್ರೆಸಿಡೆಂಟ್ ರುಸವೆಲ್ಟರ ಉದಾತ್ತ ಭಾಷಣ. ಇದರಿಂದ ಬ್ರಿಟನು ಉತ್ಸಾಹಗೊಳ್ಳದಿರಲಾರದು. ಮುಂದಿನ ಲೋಕ ರಚನೆಯಲ್ಲಿ ಅಮೇರಿಕವು ಪ್ರಾಮುಖ್ಯ ಭಾಗ ವಹಿಸುವುದೆಂಬುದರಲ್ಲಿ ಸಂದೇಹವಿಲ್ಲ. ಆಗ ಪ್ರೆಸಿಡೆಂಟ್ ರೂಸ್‌ವೆಲ್ಟರಂತಹ ಮೂಕಮಾನ್ಯ ಮಹಾವ್ಯಕ್ತಿಯು ಅವರ ನಾಯಕರಾಗಿರುವಂತಾದರೆ ಲೋಕಸಮೃದ್ಧಿ ಮತ್ತು ಸುಖಶಾಂತಿಯ ವ್ಯವಸ್ಥೆಗೆ ಹೆಚ್ಚಿನ ಸಹಾಯವಾಗುವುದೆಂಬುದರಲ್ಲಿ ಸಂದೇಹವಿಲ್ಲ. ಅವರೇ ಮೂರನೇ ಸಲ ಯುನೈಟೆಡ್ ಸ್ಟೇಟ್ಸಿನ ಪ್ರೆಸಿಡೆಂಟರಾಗಿ ಆರಿಸಿ ಬರಲೆಂದು ನಮ್ಮ ಹಾರೈಕೆ.

ಮಿ. ಅಲ್ಲಾಬಕ್ಷರು ಕಾಂಗ್ರೆಸಿಗೆ ಸೇರುವರು.

ಸಿಂಧುದೇಶದ ಮಾಜಿ ಪ್ರಧಾನ ಮಂತ್ರಿಗಳಾದ ಖಾನ್‌ಬಹದೂರು ಅಲ್ಲಾಬಕ್ಷರು ಕಾಂಗ್ರೆಸಿಗೆ ಸೇರಲು ಅಪೇಕ್ಷೆ ಪಟ್ಟಿರುವರು. ಅವರು ಶಿಕಾರಪುರ ಕಾಂಗ್ರೆಸ್ ಕಮಿಟಿಗೆ ಮತ್ತು ಅಲ್ಲಿಯ ಕಾಂಗ್ರೆಸ್‌ವಾಲಂಟೇಯರ್ ಕೋರಿಗೆ ಸೇರುವವರಿದ್ದಾರೆ.

ಬಾಲ್ಟಿಕ್ ರಾಜ್ಯಗಳು ರಷ್ಯದೊಡನೆ ಸೇರಿದುವು.

ಬಾಲ್ಟಿಕ್ ಸಮುದ್ರ ತೀರದ ರಾಜ್ಯಗಳಾದ ಲಿಥುವೆನಿಯ, ಎಸ್ಟೋನಿಯ ಮತ್ತು ಲಟೋವಿಯಗಳು ಸೋವಿಯೆಟ್ ರಷ್ಯದೊಡನೆ ಸೇರಿ ನಡೆಯುವ ನಿರ್ಧಾರವಮಾಡಿರುವವು. ಈ ರಾಜ್ಯಗಳ ಪಾರ್ಲಿಮೆಂಟಿನವರೇ ಈ ನಿರ್ಧಾರಮಾಡಿರುವರು. ಜನಸಾಮಾನ್ಯರು ಅತ್ಯುತ್ಸಾಹಗೊಂಡಿರುವರು. ಈ ರಾಜ್ಯಗಳ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ದೊಡ್ಡ ಕ್ರಾಂತಿಯಾಗಲಿರುವುದು. ಇದರಿಂದ ಒಂದು ಬಿಂದು ರಕ್ತವನ್ನು ಸುರಿಸದೆ 60,000 ಚದರ ಮೈಲಿ ಪ್ರದೇಶವನ್ನು ಹೆಚ್ಚಿಸಿಕೊಂಡಂತಾಗಿದೆ. ಸೋವಿಯೆಟ್ ರಿಪಬ್ಲಿಕಿನ ಜನಸಂಖ್ಯೆಯು 6 ಮಿಲ್ಯ ಅಧಿಕವಾಗುವಂತಾಗಿದೆ ಬಾಲ್ಟಿಕ್ ಸಮುದ್ರದ 75 ಮೈಲು ಸಮುದ್ರ ತೀರವು ರಷ್ಯಕ್ಕೆ ಸೇರುತ್ತದೆ. ಇದರಲ್ಲಿ ಹಲವು ಪ್ರಾಮುಖ್ಯ ಬಂದರುಗಳಿರುತ್ತವೆ. ರುಮೇನಿಯವು ಕೂಡಾ ರಷ್ಯದ ಪ್ರಭಾವಕ್ಕೊಳಗಾಗುವ ಸಂಭವ ತೋರುತ್ತದೆ. ಹಿಟ್ಲೆರರು ಮತ್ತು ಸ್ಟೆಲಿನರು ತಮ್ಮ ತಮ್ಮ ಪ್ರಭಾವ ಸ್ಥಾಪನೆಯ ಕ್ಷೇತ್ರದ ಕುರಿತು ಒಳಗಿಂದೊಳಗೆ ಒಪ್ಪಂದಮಾಡಿಕೊಂಡಿರುವಂತಿದೆ.

ಜನರಲ್ ಸಪ್ಲೈಸ್, ಲಿಮಿಟೆಡ್, ಉಡುಪಿ

ಮೇಲಿನ ಸಂಸ್ಥೆಯ ಮೆನೇಜಿಂಗ್ ಡೈರೆಕ್ಟರರಾಗಿದ್ದ ಶ್ರೀ. ಯಸ್, ಯು. ಪಣಿಯಾಡಿಯವರು ಕಾರಣಾಂತರಗಳಿಂದ ಜನರಲ್ ಸಪ್ಲೈಸ್ ಲಿಮಿಟೆಡಿನ ತಮ್ಮ ಮೆನೇಜಿಂಗ್ ಡೈರೆಕ್ಟರ ಮತ್ತು ಡೈರೆಕ್ಟರತನಕ್ಕೆ ರಾಜೀನಾಮೆ ಕೊಟ್ಟಿರುವರೆಂದು ತಿಳಿಸಲು ನಮಗೆ ವಿಷಾದವೆನಿಸುತ್ತದೆ

ಈ ಅನಿರೀಕ್ಷಿತ ಘಟನೆಯಿಂದ ಸಂಸ್ಥೆಯ ಬಹುಮುಖದ ಚಟುವಟಿಕೆಗಳಲ್ಲಿ ಕೊಂಚ ತೊಡಕುಂಟಾಗಿರಬಹುದಾದರೂ ಸಂಸ್ಥೆಯು ಎಂದಿನಂತೆಯೇ ಎಲ್ಲ ಚಟುವಟಿಕೆಗಳನ್ನು ನಡೆಸಿಕೊಂಡು ಬರುವುದೆಂದು ಸಂಸ್ಥೆಯ ಹಿತಚಿಂತಕರಿಗೆ ತಿಳಿಸಲು ನಾವು ಸಂತೋಷಿಸುತ್ತೇವೆ.

ನಮ್ಮ ಸಂಸ್ಥೆಯ ಡೈರೆಕ್ಟರರ ಮಂಡಲಿಯವರು ಶ್ರೀಮಾನ್ ಆರ್. ಆರ್. ಕುಂಜೂರರವರನ್ನು ಪ್ರಕೃತ ಜನರಲ್ ಸಪ್ಲೈಸಿನ ಮೆನೇಜಿಂಗ್ ಡೈರೆಕ್ಟರರನ್ನಾಗಿ ನೇಮಿಸಿರುತ್ತಾರೆ. ಶ್ರೀಯುತರು ಸಂಸ್ಥೆಯ ಕೆಲಸಗಾರರ ಹಾಗು ಹಿತಚಿಂತಕರ ಹಾರ್ದಿಕ ಸಹಕಾರದಿಂದ ಸಂಸ್ಥೆಯನ್ನು ಪ್ರಗತಿಪಥದಲ್ಲೊಯ್ಯಲು ಸರ್ವ ಯತ್ನಗಳನ್ನು ಮಾಡುತ್ತಿದ್ದಾರೆ

ಪ್ರಕೃತ, ಸಂಸ್ಥೆಯ ಅಧೀನವಿರುವ ಸಾಧನಗಳ ಇನ್ವೆಂಟರಿಯು ಸಿದ್ಧವಾಗುತ್ತಿದೆ ಈ ಕಾರ್ಯವು ಪೂರೈಸಿದೊಡನೆ ನಮ್ಮ ಸಂಸ್ಥೆಯ ಆಗುಹೋಗುಗಳ ಪಸ್ತುಸ್ಥಿತಿಯನ್ನು ಸಾರ್ವಜನಿಕರಿಗೆ ಕೂಲಂಕಷವಾಗಿ ತಿಳಿಸಲಿದ್ದೇವೆ. ಅಷ್ಟರ ವರೆಗೆ ಹಾಗು ಅನಂತರ ಸಾರ್ವಜನಿಕರು ತಮ್ಮ ಬೆಂಬಲವನ್ನು ಇಮ್ಮಡಿ ಮುಮ್ಮಡಿಯಾಗಿ ಕೊಟ್ಟು ಸಂಸ್ಥೆಯ ಅಭಿವೃದ್ಧಿಗೆ ಸದಾ ಮುಕರಾಗಬೇಕೆಂದು ನಾವು ವಿನೀತ ಭಾವದಿಂದ ಬಿನ್ನವಿಸಿಕೊಳ್ಳುತ್ತೇವೆ

ಜನರಲ್ ಸಪ್ಲೈಸ್, ಲಿಮಿಟೆಡ್. ಉಡುಪಿ.

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

22-7-40

ನಗರ ಸಭೆಯ ಆಡಳಿತ ವರದಿ— ಮಂಗಳೂರು ನಗರ ಸಭೆಯು ಕಳೆದ ಸೋಮವಾರ ನಗರ ಸಭಾಭವನದಲ್ಲಿ ಶ್ರೀ ಬಿ. ವಿ. ಬಾಳಿಗ, ಯಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಸೇರಿತು. ಕಾರ್ಯಕ್ರಮದ ಪಟ್ಟಿಯಲ್ಲಿದ್ದ ವಿಷಯಗಳು ಚರ್ಚಿಸಲ್ಪಟ್ಟು ತೀರ್ಮಾನಿಸಲ್ಪಟ್ಟ ತರುವಾಯ 1939-40ರ ಆಡಳಿತ ವರದಿಯನ್ನು ಪರಿಶೀಲಿಸಿ ಚರ್ಚಿಸಲಾಯಿತು. ವಿ. ಅಂದ್ರಾದೆಯವರು ಹಲವೊಂದು ವಿಷಯಗಳ ಮೇಲೆ ಚರ್ಚೆಮಾಡಿ ಕೆಲವು ಸೂಚನೆಗಳನ್ನು ಕೊಟ್ಟರು. ಆಮೇಲೆ ವರದಿಯು ಸರ್ವ ಸಮ್ಮತಿಯಿಂದ ಮಂಜೂರಾಯಿತು. ಮಿಸೆಸ್ ಲೀಲಾಬಾಯಿಯವರು ನಗರ ಸಭಾಧ್ಯಕ್ಷರು ದಕ್ಷತೆಯಿಂದ ಅಧ್ಯಕ್ಷತನದ ಕಾರ್ಯಕಲಾಪಗಳನ್ನು ನೆರವೇರಿಸಿದ ಬಗ್ಗೆ ಅವರಿಗೆ ನಗರ ಸಭೆಯ ಧನ್ಯವಾದಗಳನ್ನರ್ಪಿಸಿದರು. ಅಂತೆಯೇ ಉಪಾಧ್ಯಕ್ಷರ, ಕಮಿಶನರ, ಹೆಲ್ತ್ ಆಫೀಸರರ, ಸುಪರ್ನ್ಟೆಂಡರರ ಮತ್ತು ನೌಕರರ ಕಾರ್ಯದಕ್ಷತೆಯನ್ನು ಪ್ರಶಂಸಿಸಿ, ಠರಾವುಗಳು ಸರ್ವ ಸಮ್ಮತಿಯಿಂದ ಮಂಜೂರುಮಾಡಲ್ಪಟ್ಟವು. ಅಧ್ಯಕ್ಷರು ತಮ್ಮ ಕೃತಜ್ಞತೆಯನ್ನು ಸೂಚಿಸಿ ಚಿಕ್ಕ ಭಾಷಣಮಾಡಿದರು. ಅನಂತರ ಸಭಾಂತ್ಯವಾಯಿತು.

ವರದಿಯ ಮುಖ್ಯ ಅಂಶಗಳು— ವರದಿಯಲ್ಲಿ ಅನೇಕ ಪ್ರಾಮುಖ್ಯ ವಿಷಯಗಳು ಸೂಚಿಸಲ್ಪಟ್ಟವೆ. ನಗರದಲ್ಲಿ ವಿದ್ಯುದ್ದೀಪಗಳ ಸೌಕರ್ಯ ಹೆಚ್ಚಿಸಲಾಗಿದೆ. ರಸ್ತೆಗಳ ದುರಸ್ತಿಗೆ ಧಾರಾಳ ಹಣ ವೆಚ್ಚ ಮಾಡಿದ್ದಾರೆ. ಅನೇಕ ಅಗಲ ಕಿರಿದಾದ ರಸ್ತೆಗಳನ್ನು ವಿಸ್ತರಿಸಿರುವರಲ್ಲದೆ ರಸ್ತೆಗಳು ಕೂಡುವ ಮೂಲೆಗಳನ್ನು ವಿಸ್ತರಿಸಲು ಧಾರಾಳ ಹಣ ವೆಚ್ಚ ಮಾಡಿದ್ದಾರೆ. ನಗರದ ಶಾಲೆಗಳಲ್ಲಿ (ಮುನಿಸಿಪಲ್) ಮಕ್ಕಳ ಸಂಖ್ಯೆಯು ಹೆಚ್ಚಿದೆಯಲ್ಲದೆ ಬಹ್ವಂಶ ಮಕ್ಕಳು ಶಾಲೆಗಳಿಗೆ ಸೇರಿದ್ದಾರೆ. ನಗರದಲ್ಲಿ ವರದಿಯ ವರ್ಷದಲ್ಲಿ ಸಾಂಕ್ರಮಿಕ ರೋಗಗಳು ಇರಲಿಲ್ಲ. ಆರೋಗ್ಯವನ್ನು ಕಾಪಾಡಲು ಉತ್ತಮ ಏರ್ಪಾಡುಮಾಡಿದ ಬಗ್ಗೆ ಪಾರಿತೋಷಕ 'ಗುರಾಣಿ' (ಶೀಲ್ಡ್)ಯು ಮಂಗಳೂರಿಗೆ ದೊರಕುದು ಮಂಗಳೂರಿಗೆ ಒಂದು ಹೆಮ್ಮೆಯ ವಿಷಯವೇ ಸರಿ. ಸಂಕ್ಷೇಪವಾಗಿ ಹೇಳುವದಾದರೆ ನಗರಸಭೆಯ ಆಡಳಿತೆಯು ಬಹಳ ಉತ್ತಮವಾಗಿದೆ.

ಯುದ್ಧ ಸಹಾಯ ನಿಧಿ-ತಾಲೂಕು ಸಮಿತಿಯ ಸ್ಥಾಪನೆ— ಯುದ್ಧ ಸಮಿತಿಯ ಆಶ್ರಯದಲ್ಲಿ ಯುದ್ಧ ನಿಧಿಗೆ ಹಣವನ್ನು ಶೇಖರಿಸುವರೆ ಟೌನ್ ಕೋರ್ಟು ಹಾಲಿನಲ್ಲಿ ಕಳೆದ ತಾ. 18ರಲ್ಲಿ ಸಭೆ ಜರಗಿತು. ಮಂಗಳೂರು ತಾಲೂಕಿಗೊಂದು ನಿಧಿ ಸಂಗ್ರಹ ಸಮಿತಿಯನ್ನು ಏರ್ಪಡಿಸಲಾಯಿತು. ರೆವಿನ್ಯೂ ಡಿವಿಜನಲ್ ಆಫೀಸರರು ಸಂಘದ ಅಧ್ಯಕ್ಷರಾಗಿಯೂ ಪಿ. ಸಿ. ಎಲ್. ಲೋಬೋರವರೂ, ಮಂಗಳೂರು ತಹಶಿಲ್ದಾರರೂ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಪ್ರತಿಯೊಂದು ಫಿರ್ಕದಿಂದಲೂ ಸದಸ್ಯರನ್ನು ಸಮಿತಿಗೆ ಸೇರಿಸಿದರು. ಅನಂತರ ಕೆಲವರನ್ನು ನಿಧಿ ಸಂಗ್ರಹಮಾಡಲು ನೇಮಿಸಿದರು. ಪ್ರತಿ ತಿಂಗಳಿಗೊಂದಾವರ್ತಿ ಸಮಿತಿ ಸಭೆ ಸೇರಬೇಕೆಂದು ತೀರ್ಮಾನವಾದ ತರುವಾಯ ಸಭಾಂತ್ಯವಾಯಿತು.

ಆರೋಪಿತರ ಬಿಡುಗಡೆ— ತಾ. 21-10-39ರಲ್ಲಿ ಬೋಳಾರ ಮಾರಿಗುಡಿಯಲ್ಲಿ ಶಕ್ತಿ ಪೂಜೆ ಉತ್ಸವವಾಗಿ ಪ್ರಸಾದ ಹಂಚುತ್ತಿದ್ದ ಅಂಗರ ಮರಕಾಲನಿಗೂ ದೂಮ ಪೂಜಾರಿ ಎಂಬವನಿಗೂ ಜಗಳವುಂಟಾಯಿತೆಂದೂ, ಅಂಗರನು ಸೇರಿ ಏಳು ಜನರು ದೂಮನಿಗೆ ಹೊಡೆದರಾಗಿಯೂ, ಮತ್ತು ಅಂಗರನ ಕಡೆಯವನಾದ ಐತು ಎಂಬವನು ದೂಮನನ್ನು ಕಡಿದನಾಗಿಯೂ ಅಂಗರನೇ ಮೊದಲಾದ ಏಳು ಜನರ ಮೇಲೆ ದಾವೆ ನಡೆದಿತ್ತು. ತಾ. 15-12-39ರಲ್ಲಿ ದೂಮನು ಆಸ್ಪತ್ರೆಯಲ್ಲಿ ಮೃತನಾದನು. ಓರ್ವ ಸಬ್ ಇನ್ಸ್ಪೆಕ್ಟರರು ವಿಚಾರಣೆ ನಡಿಸಿ ವ್ಯವಹರಣೆಯು ಸುಳ್ಳೆಂಬುದಾಗಿ ವರದಿಮಾಡಿದ್ದರು. ಆಮೇಲೆ ಡಿ. ಸುಪರಿಂಟೆಂಡೆಂಟರ ಆಜ್ಞೆಯ ಮೇರೆಗೆ ಸರ್ಕಲ್ ಇನ್ಸ್ಪೆಕ್ಟರರು ತನಿಕೆನಡಿಸಿದರು. ಆಪಾದಿತರನ್ನು ಸಶ್ಯನಿಗೆ ಕಮಿಟ ಮಾಡಲಾಯಿತು. ಸೆಶ್ಯನ್ಸ್ ಕೋರ್ಟಿನಲ್ಲಿ ಅವರ ವಿಚಾರಣೆಯು ನಡೆಯಿತು. ಎಸೆಸರೆಲ್ಲರೂ ಆಪಾದಿತರು ನಿರಪರಾಧಿಗಳೆಂದು ಒಮ್ಮತದ ಅಭಿಪ್ರಾಯಪಟ್ಟರು. ಸೆಶ್ಯನ್ಸ್ ಜಡ್ಜರಾದ ಶ್ರೀ ಟಿ. ಎಸ್. ರಾಮಚಂದ್ರನ್ ಐ. ಸಿ. ಎಸ್., ರವರು ಎಸೆಸರರ ಅಭಿಪ್ರಾಯವನ್ನು ಅಂಗೀಕರಿಸಿ ಆಪಾದಿತರನ್ನು ಬಿಡುಗಡೆಮಾಡಿದರು. ಶ್ರೀಗಳಾದ ಮಂಜೇಶ್ವರ ಶಂಕರರಾಯರೂ, ಎ. ಶಂಕರ ಆಳ್ವರೂ ಆಪಾದಿತರ ಕಡೆಯಿಂದ ವ್ಯವಹರಿಸಿದ್ದರು.

ಉಡುಪಿ

ವಿಷಾದಕರ ಘಟನೆ— 'ತುಳುನಾಡ್ ಬೇಂಕ್ ಓಫ್ ಸಪ್ಲೈ ಏಜೆನ್ಸಿ ಲಿಮಿಟೆಡ್' ಮತ್ತು 'ಜನರಲ್ ಸಪ್ಲೈಸ್ ಲಿಮಿಟೆಡ್' ಸಂಸ್ಥೆಗಳ ಮೆನೇಜಿಂಗ್ ಡೈರೆಕ್ಟರರಾಗಿದ್ದ ಶ್ರೀ. ಎಸ್. ಯು. ಪಣಿಯಾಡಿಯವರು, ಹಲವು ದಿನಗಳಿಂದ ಅನಾರೋಗ್ಯದಿಂದಿದ್ದು ಕಳೆದ ವಾರ ಅನಿರೀಕ್ಷಿತವಾಗಿ ಎಲ್ಲಿಗೋ ಹೋಗಿರುವುದರಿಂದ ಗೊಂದಲವೆದ್ದಿದೆ. ತುಳುನಾಡ್ ಬೇಂಕಿನ ಡೈರೆಕ್ಟರರ ಜರೂರು ಸಭೆ ಜರಗಿ ಶ್ರೀ ಮಿಯಾಳ ನರಸಿಂಹಾಚಾರ್ಯರನ್ನು ಮೆನೇಜಿಂಗ್ ಡೈರೆಕ್ಟರರಾಗಿ ನೇಮಿಸಲಾಗಿದೆ. ಬೇಂಕು ಒಂದು ದಿವಸ ತೆರೆಯಲ್ಪಟ್ಟು ಕಾರಣಾಂತರಗಳಿಂದ ಪುನಃ ಒಂದು ತಿಂಗಳ ವರೆಗೆ ವ್ಯವಹಾರವು ಬಂದುಮಾಡಲ್ಪಟ್ಟಿರುವುದೆಂದು ತಿಳಿದುಬರುತ್ತದೆ. ಶೇರ್ ಹೋಲ್ಡರರ ಮತ್ತು ಠೇವಣಾತಿದಾರರರ ಸಭೆ ಜರಗಿಸಿ ಮುಂದಿನ ನಿರ್ಧಾರವನ್ನು ಮಾಡಲಾಗುವುದಂತೆ. ಜನರಲ್ ಸಪ್ಲೈಸ್ ಲಿಮಿಟೆಡಿನ ಕೈಕೆಳಗಿನ 'ಮಣಿಪಾಲ ಪವರ್ ಪ್ರೆಸ್' 'ತುಳುನಾಡ್ ಪ್ರೆಸ್' 'ಭಾರತ ವಸ್ತ್ರಮಂದಿರ'ಗಳೂ ತಾರೀಕು 20ರಲ್ಲಿ ಮುಚ್ಚಲ್ಪಟ್ಟವು. ತಾರೀಕು 22ರಲ್ಲಿ ಅವು ಪುನಃ ತೆರೆಯಲ್ಪಟ್ಟರೂ ಮಣಿಪಾಲ ಪವರ್ ಪ್ರೆಸ್ ತಾತ್ಕಾಲಿಕವಾಗಿ ತಿರುಗಿ ಮುಚ್ಚಲ್ಪಟ್ಟಿರುವದೆಂದು ತಿಳಿದು ಬರುತ್ತದೆ. ಜನರಲ್ ಸಪ್ಲೈಸ್‌ನ ಡೈರೆಕ್ಟರರ ಸಭೆಯಲ್ಲಿ ಶ್ರೀ. ಆರ್. ಆರ್. ಕುಂಜೂರರು ಮೆನೇಜಿಂಗ್ ಡೈರೆಕ್ಟರರಾಗಿ ನೇಮಕಹೊಂದಿರುವರು. ಎರಡೂ ಕಂಪೆನಿಗಳ ತನ್ನ ಮೆನೇಜಿಂಗ್ ಡೈರೆಕ್ಟರರ ಸ್ಥಾನಕ್ಕೆ ರಾಜೀನಾಮೆಯನ್ನು ಮಂಗಳೂರಿನಿಂದ ಶ್ರೀ. ಪಣಿಯಾಡಿಯವರು ಕಳುಹಿಸಿರುವರೆಂದೂ ತಿಳಿದು ಬರುತ್ತದೆ. ಈ ಎಲ್ಲಾ ಗೊಂದಲಗಳಿಂದಾಗಿ ಪಾಲುಗಾರರ, ಠೇವಣಾತಿದಾರರೇ ಮೊದಲಾದವರಲ್ಲಿ ಆತುರೋದ್ವೇಗವುಂಟಾಗಿದೆ. ಸಾಹಸಿ ಅತ್ಯುತ್ಸಾಹಿ ಹಾಗೂ ಕಾರ್ಯಚತುರರಿದ್ದ ಶ್ರೀ. ಪಣಿಯಾಡಿಯವರ ವರ್ತನೆಯು ಸಾರ್ವಜನಿಕರ ವಿಶ್ವಾಸಕ್ಕೆ ಧಕ್ಕೆಯುಂಟುಮಾಡುವಂತಾಗಿರುವುದು. ಅತ್ಯಂತ ವ್ಯಸನಕರ. ಮುಂದಾದರೂ ತುಳುನಾಡ್ ಬೇಂಕಿನ ಆಡಳಿತ ಮಂಡಳಿಯವರು ಧೈರ್ಯವಹಿಸಿ ಸ್ಥಿತಿಗತಿಗಳನ್ನೆಲ್ಲಾ ಜನತೆಯ ಮುಂದಿಟ್ಟು ಬೇಂಕನ್ನು ಮುನ್ನಡೆಸುವ ಸಾಹಸ ಕೈಕೊಂಡಲ್ಲಿ, ಮತ್ತು ಸಾರ್ವಜನಿಕರು ಬೆಂಬಲವಿತ್ತಲ್ಲಿ, ಅದು ಬಾಳಿ ಬೆಳಗಬಹುದೆಂಬ ನಿರೀಕ್ಷೆಯಿದೆ. ಜನರಲ್ ಸಪ್ಲೈಸಿನ ಹೊಣೆಹೊತ್ತವರೂ ಸಾರ್ವಜನಿಕರ ವಿಶ್ವಾಸ ಸಂಪಾದಿಸಿ, ತಮ್ಮ ಜವಾಬ್ದಾರಿಗೆ ಹೊಂದಿಕೊಂಡು ವರ್ತಿಸಿದಲ್ಲಿ 'ಅಂತರಂಗ'ದಂತಹ ಅಖಿಲಕರ್ನಾಟಕ ಪ್ರಸಿದ್ಧಿಯನ್ನು ಅತ್ಯಂತ ತೀವ್ರವಾಗಿಪಡೆದ ಪತ್ರಿಕೆಯನ್ನೂ ಪ್ರೆಸ್ಸುಗಳನ್ನೂ, ಬಾಡಿಗೆ ಕಟ್ಟಿಸಿದ ಕೇರ್ತಿಭಾಗಿಗಳಾಗಬಹುದು. ಮೇಲಿನ ಸಂಸ್ಥೆಗಳು ಕನ್ನಡನಾಡಿನಲ್ಲಿ ಪ್ರಸಿದ್ಧಿ ಪಡೆದವುಗಳಾಗಿದ್ದು ಶ್ರೀ. ಪಣಿಯಾಡಿಯವರ ಮೇಲ್ವಿಚಾರದಲ್ಲಿ ಹಲವು ಕೆಲಸಗಾರರಿಗೆ ಆಶ್ರಯವಿತ್ತಿದ್ದವು. ಅವು ತಮ್ಮ ಅಸ್ತಿತ್ವವನ್ನುಳಿಸಿಕೊಂಡು ಅಭಿವೃದ್ಧಿಯ ಸ್ಥೈರ್ಯದುಮಂತಾಗಲೆಂದೊಂದು ಹಾರೈಕೆ.

ಮುನಿಸಿಪಾಲಿಟಿ— ಉಡುಪಿ ಮುನಿಸಿಪಾಲಿಟಿಯ ಸಭೆಯು ತಾ. 19 7-'40ನೇ ಶುಕ್ರವಾರ ಕಂಪೆ ಚೆಯರ್‌ಮನ್ ಶ್ರೀ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಎಜಂಡದಲ್ಲಿ ವಿಶೇಷ ಕಾರ್ಯಕ್ರಮಗಳು ಇಲ್ಲದಿದ್ದಾಗ್ಯೂ, ಯುದ್ಧ ಫಂಡಿಗೆ ದನಸಹಾಯ ನೀಡುವ ಕುರಿತು ವಿಶೇಷ ಚರ್ಚೆ ನಡೆಯಿತು. ಕೊನೆಗೆ ಈ ವಿಷಯದ ತೀರ್ಮಾನವು ಮುಂದಿನ ಸಭೆಗೆ ಬಾಕಿಯಿಡಲಾಯಿತು. ಕೌನ್ಸಿಲಿಗೊಂದು ಹೊಸ ಹಾಲನ್ನು ಕಟ್ಟಿಸುವರೆ ರೂ. 3800/- ಖರ್ಚುಮಾಡಬಹುದೆಂದಾಯಿತು. ದರಿಯಾ ಬಹಾದರಗಡದಲ್ಲಿರುವ ಫಿರಂಗಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದು ಅಜ್ಜರಕಾಡು ಮೈದಾನದಲ್ಲಿಡುವ ಯೋಜನೆ ಹೂಡಲಾಯಿತು.

ಸಂಗೀತ ಕಚೇರಿ— ಶ್ರೀ. ಬಿ. ಉಮಾನ ಥಯ್ಯರ ಪರಿಚಯವನ್ನು ಪ್ರತ್ಯೇಕ ಮಾಡಿಕೊಡಬೇಕಾಗಿಲ್ಲ. ಅವರ ಗಾಯನ ಕುಶಲತೆಯನ್ನು ತಿಳಿಯದವರಿಲ್ಲ. ಇವರಿಗೆ ಅನಿರ್ವಾಹ ಕಾರಣಗಳಿಂದ ಉಪಜೀವಿಯಿಂದ ಸಜ್ಜದಸ್ಥಿಯೇ ವರ್ಗವಾಗಲಿರುವುದು, ನಮ್ಮ ಗಾಯನ ಕಲಾಭಿಮಾನಿಗಳ ದೌರ್ಭಾಗ್ಯವೆನ್ನಬೇಕು. ಆದರೂ ಅವರ ಭಾವನಾಗೀತಗಳನ್ನು ಕಡೆಯ ಸಲವಾದರೂ ಒಮ್ಮೆ ಕೇಳಿ ಸಂತೋಷಪಡಬೇಕೆಂದು ಅಭಿಲಾಷೆಯಿಂದ ತಾ. 5-8-'40ನೇ ಸೋಮವಾರ ದಿನ ರಾತ್ರಿ ಘಂಟೆ 9-30ಕ್ಕೆ ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಇವರ ಸಂಗೀತ ಕಚೇರಿ ನಡಿಸಬೇಕೆಂದು ನಿಶ್ಚಯಿಸಿರುವೆವು. ಈ ಸಮಯ ಅವರಿಗೆ ಕೊಡುವ ಪಾರಿತೋಷಕ ನಿಧಿಗೆ ಸಹಾಯಮಾಡಲಿಚ್ಛಿಸುವ ಸಂಗೀತಾಭಿಮಾನಿಗಳೂ, ದಯಾಪ್ರಕೃತಯರೂ ಆದ ನಮ್ಮ ಪ್ರೋತ್ಸಾಹಕರು ಅದೇ ದಿನ ಸಾಯಂಕಾಲ ಘಂಟೆ 5ರ ಒಳಗೆ ಯಥಾಶಕ್ತಿ ಹಣವನ್ನು ತಂದು ಶ್ರೀಯುತ ಎ. ಟಿ. ಅಲ್ಸಿಯವರೊಡನೆ ಕೊಡಬಹುದು.

ಮೂಲೂರು— ಪಂಜಾಬಿಯ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಸುಮಾರು 15 ವರ್ಷಗಳಿಂದ ಕೆಲಸಮಾಡುತ್ತಿದ್ದ ಶ್ರೀ. ತಿಮ್ಮಪುತ್ರ ಎಂಬವರು ಇತ್ತೀಚೆಗೆ ತನ್ನ ಊರಾದ ಮೂಲೂರಿಗೆ ಬಂದಿದ್ದವರು ಕೆಲವು ದಿನಗಳ ಕಾಯಿಲೆಯಿಂದ ತಾರೀಕು 10-7-'40ನೇ ಬೆಳಗ್ಗೆ ಮೃತಪಟ್ಟಿರುವರೆನ್ನಲು ವಿಷಾದವಾಗುತ್ತದೆ. ಇವರ ಬಂಧುಬಳಗದೊಂದಿಗೆ ನಾವೂ ಸಹಾನುಭೂತಿಪಡುತ್ತೇವೆ.

ಕಾರ್ಕಳ— ಇತರ ಶಾಲೆಗಳ ವಿರೋಧವಿದ್ದರೂ, ಕಳೆದ ವರ್ಷಗಳ ಇಲಾಖಾಧಿಕಾರಿಗಳ ಅನುಮತಿಯಿಂದ ಸ್ಥಾಪಿಸಲ್ಪಟ್ಟ ರೋಮನ್ ಕೆಥೋಲಿಕರ ಕ್ರಾಸ್ಲಿಂಗ ಚರ್ಚ್ ಎಲಿಮೆಂಟರಿ ಶಾಲೆಯವರು ಈಗ 1ರಿಂದ 5ರ ತನಕ ಎಲ್ಲಾ ತರಗತಿಗಳಿಗೆ ಒಮ್ಮೆಲೆ ಮಂಜೂರಾತಿಯನ್ನು ಕೊಡಬೇಕೆಂದು ಅಪೇಕ್ಷಿಸಿ ಅರ್ಜಿಮಾಡಿರುವುದನ್ನು ತೀವ್ರವಾಗಿ ಪ್ರತಿಭಟಿಸಿ, ಅಂಥ ಮಂಜೂರಾತಿಯು ಆ ಶಾಲೆಗೆ ದೊರೆತುದಾದರೆ, ಸ್ಥಳೀಯ ಇತರ ಬೋರ್ಡ ಮತ್ತು ಹಾಯರ ಎಲಿಮೆಂಟರಿ ಶಾಲೆಗಳ ಕ್ರಮವಾದ ಉನ್ನತಿ ಮತ್ತು ಅಭಿವೃದ್ಧಿಗೆ ಭಂಗಬರುವದಾದ್ದರಿಂದ, ಕೆಥೋಲಿಕರ ಶಾಲೆಗೆ 1ರಿಂದ 5ರ ತನಕ ಮಾತ್ರ, ವರ್ಷಕ್ಕೆ ಒಂದು ಕ್ಲಾಸಿನಂತೆ ಮಂಜೂರಾತಿಕೊಡಬೇಕಾಗಿ ಪ್ರಾರ್ಥಿಸಿ ಇಲಾಖಾಧಿಕಾರಿಗಳಿಗೆ ಪ್ರಾರ್ಥನಾಪತ್ರಗಳು ಹೋಗಿವೆ.

ವಿದ್ಯಾಭ್ಯಾಸದಲ್ಲಿ ಬಹಳ ಹಿಂದುಳಿದಿರುವ ಅಸ್ಪೃಶ್ಯವರ್ಗಕ್ಕೆ ಸೇರಿದ ರಣವೀರ ಬಾಲಕಬಾಲಕಿಯರಿಗೆ ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಸಂತೋಷದ ಪ್ರವೇಶವನ್ನು ಕೊಟ್ಟದ್ದಾರೆ. ಶಾಲಾ ಮೆನೇಜರರಾದ ಶ್ರೀ. ಕೆ. ಕೃಷ್ಣಪೈಯವರು ತಮ್ಮ ಸ್ವಂತ ಖರ್ಚಿನಿಂದ ಬಹು ಬಡವರಾದ ಆ ವಿದ್ಯಾರ್ಥಿಗಳಿಗೆ ಸ್ಲೇಟು ಪುಸ್ತಕಾದಿಗಳನ್ನು ಒದಗಿಸಿಕೊಟ್ಟಿದ್ದಾರೆ.

ಇತರ ಕಡೆಗಳಲ್ಲಿಯಂತೆ ಇಲ್ಲಿಯೂ ಸರಕಾರದ ಪ್ರೋತ್ಸಾಹದಿಂದ ಯುದ್ಧ ಪ್ರಚಾರಸಮಿತಿಯು ಸ್ಥಾಪಿಸಲ್ಪಟ್ಟು ಬಹು ಉತ್ಸಾಹದಿಂದ ಕೆಲಸಮಾಡುತ್ತಾ ಇರುವದು. ಸರಕಾರದ ಸಾಲಪತ್ರ ಮತ್ತು ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳಲ್ಲಿ ಹಣ ವಿನಿಯೋಗಿಸುವದರಿಂದ ಸಿಕ್ಕುವ ಲಾಭ ಮತ್ತು ಸರಕಾರಕ್ಕಾಗುವ ಸಹಾಯದ ಕುರಿತು ಕನ್ನಡದಲ್ಲಿ ಕರಪತ್ರಗಳು ಛಾಪಿಸಲ್ಪಟ್ಟು ವಿತರಣವಾಗಿವೆ.

ಪ್ರೊ. ರಾಮಚಂದ್ರ ಅಯ್ಯರ್‌ರವರು

ಪ್ರೊ. ಎಸ್. ರಾಮಚಂದ್ರ ಅಯ್ಯರ್‌ರವರು ದಕ್ಷಿಣ ಹಿಂದೂಸ್ಥಾನದ ಉಪಾಧ್ಯಾಯರ ಸಂಘದ ವರ್ಕಿಂಗ್ ಕಮಿಟಿಯ ಸದಸ್ಯರಾಗಿ ಬಹುಮತದಿಂದ ಆರಿಸಲ್ಪಟ್ಟಿರುವರಾಗಿ ತಿಳಿದುಬರುತ್ತದೆ. ಅಭಿನಂದನೀಯ.

ವಿಳಾಸ ಸ್ಪರ್ಧೆ

ಯಾರೂ ಭಾಗವಹಿಸಬಹುದು.

ಎಲ್ಲರಿಗೂ ಭಾಗವಹಿಸಲು ಅನುಕೂಲವಾದ ಸ್ಪರ್ಧೆಯಿದು. ಪ್ರವೇಶಧನ ತೆರಬೇಕಾಗಿಲ್ಲ. ಒಗಟು ಸ್ಪರ್ಧೆಯಂತೆ, ತಲೆಖರ್ಚುಮಾಡಬೇಕಾಗಿಯೂ ಇಲ್ಲ. ನಿಮ್ಮ ಊರಿನ, ಯಾ ತಾಲೂಕಿನ ಇಲ್ಲವೆ ಜಿಲ್ಲೆಯ ಅಥವಾ ಜಿಲ್ಲೆಯ ಹೊರಗಿನ ಕನ್ನಡ ಓದುಬರಹ ಬಲ್ಲ (ಇಂಗ್ಲಿಷ್ ಬಂಬಾರದೆಂದಿಲ್ಲ) ಬೇರೆ ಬೇರೆ ಸದ್ಗೃಹಸ್ಥರ ಆದಷ್ಟು ಹೆಚ್ಚು ವಿಳಾಸಗಳನ್ನು ಬರೆದು ಕಳಿಸಿರಿ. (ಹೆಸರು, ವಿಳಾಸ ಮತ್ತು ಪೋಸ್ಟು ಸ್ಪಷ್ಟವಾಗಿ ಬರೆಯಲ್ಪಡಬೇಕು.) ಈ ಸ್ಪರ್ಧೆಯಲ್ಲಿ ಯಾರು ಬೇಕಾದರೂ ಭಾಗವಹಿಸಬಹುದು. ಆದರೆ ಭಾಗವಹಿಸತಕ್ಕವರು ಕಳಿಸತಕ್ಕ ಕನಿಷ್ಠ ವಿಳಾಸಗಳು 25 ಇರತಕ್ಕದ್ದು. ವಿಳಾಸಗಳನ್ನು ಕನ್ನಡದಲ್ಲಾಗಲೀ, ಇಂಗ್ಲಿಷಿನಲ್ಲಾಗಲಿ ಬರೆಯಬಹುದು. ಯಾರು ಅತೀ ಹೆಚ್ಚು ವಿಳಾಸಗಳನ್ನು ಕಳಿಸುತ್ತಾರೋ ಅವರಿಗೆ ಬಹುಮಾನವಾಗಿ ಒಂದು ವರ್ಷದ ವರೆಗೆ ನವಯುಗವನ್ನು ಉಚಿತ ಕಳಿಸಲಾಗುವುದು. ವಿಳಾಸಗಳನ್ನು ಕಳಿಸುವ ಕೊನೆಯ ತಾರೀಕು 15-8-40. ಫಲಿತಾಂಶವನ್ನು ತಾ. 22 8-40ಕ್ಕೆ ಪ್ರಕಟಿಸಲಾಗುವುದು. ಅಂದೇ ಗೆದ್ದವರ ಹೆಸರನ್ನು ಮಾತ್ರ ಕೊಡಲಾಗುವುದು.

ವಿಳಾಸ:-ಮೆನೇಜರ್ ನವಯುಗ
ಉಡುಪಿ, ದ. ಕ.

MONEY TO LEND.

Loans are granted at competitive rates on Bullion, Gold Ornaments, Government Paper, goods and produce, Shares & other valuable securities. Enquire of any of our THIRTY SEVEN OFFICES.

RESOURCES OF A CRORE

CANARA BANK LIMITED.
ESTD. 1906.

ಪ್ರೆಸಿಡೆಂಟ್ ರುಸವೆಲ್ಟರು ಹಳೆಯ ಸಂಪ್ರದಾಯವನ್ನು ಮುರಿಯುವರೇ?

ಅವರು ಮೂರನೇ ಸರ್ತಿ ಪ್ರೆಸಿಡೆಂಟರಾಗಿ ಆರಿಸಲ್ಪಡುವರೆ?

ಅಮೇರಿಕದ ಯುನೈಟೆಡ್ ಸ್ಟೇಟ್ಸಿನ ಪ್ರೆಸಿಡೆಂಟ್ ಚುನಾವಣೆಯು ಬೇಗನೆ ನಡೆಯಲಿರುವುದು. ಅಮೇರಿಕದಲ್ಲಿರುವ ಪ್ರಾಮುಖ್ಯ ರಾಜಕೀಯ ಪಕ್ಷಗಳೆಂದರೆ ಡೆಮೊಕ್ರೆಟಿಕ್ ಮತ್ತು ರಿಪಬ್ಲಿಕನ್. ಪ್ರೆಸಿಡೆಂಟ್ ರುಸವೆಲ್ಟರು ಡೆಮೊಕ್ರೆಟಿಕ್ ಪಕ್ಷದವರು. ರಿಪಬ್ಲಿಕನ್ ಪಕ್ಷೀಯರು ಇತ್ತಲಾಗಿ ಮಿ. ವೆಂಡೆಲ್ ವಿಲ್ಕಿ ಎಂಬವರನ್ನು ಪ್ರೆಸಿಡೆಂಟ್‌ತನಕ್ಕೆ ಉಮೇದ್ವಾರರಾಗಿ ಆರಿಸಿರುವರು. ಡೆಮೊಕ್ರೆಟಿಕ್ ಪಕ್ಷದ ವಾರ್ಷಿಕ ಸಭೆಯು ಈಗ ಚಿಕಾಗೋ ಪಟ್ಟಣದಲ್ಲಿ ನಡೆಯುತ್ತಿರುವುದು. ಅವರು ಪ್ರೆಸಿಡೆಂಟ್ ರುಸವೆಲ್ಟರನ್ನೇ ಮೂರನೇ ಸಲ ಪ್ರೆಸಿಡೆಂಟ್‌ತನಕ್ಕೆ ಉಮೇದ್ವಾರರಾಗಿ ಆರಿಸುವರು. ಮಿ. ರುಸವೆಲ್ಟರು ತಾನು ಮೂರನೇ ಸಲ ಪ್ರೆಸಿಡೆಂಟ್ ತನಕ್ಕೆ ಉಮೇದ್ವಾರರಾಗಿ ನಿಲ್ಲುವ ಕುರಿತು ಯಾವ ಅಭಿಪ್ರಾಯವನ್ನೂ ಇವರಿಗೆ ಕೊಟ್ಟಿರುವುದಿಲ್ಲ ಆದರೆ ತನ್ನ ಪಕ್ಷದವರು ಆರಿಸಿದಾಗ ನಿರಾಕರಿಸಿರುವುದಿಲ್ಲ.

ಎಡೆಬಿಡದೆ ಮೂರು ಸರ್ತಿ ಯುನೈಟೆಡ್ ಸ್ಟೇಟ್ಸಿನ ಪ್ರೆಸಿಡೆಂಟ್‌ತನದ ಗದ್ದುಗೆಯನ್ನು ಇಷ್ಟರವರೆಗೆ ಯಾರೂ ಏರಿದವರಿಲ್ಲ. ಯುನೈಟೆಡ್ ಸ್ಟೇಟ್ಸಿನ ಪ್ರಥಮ ಪ್ರೆಸಿಡೆಂಟರಾದ ಜೋರ್ಜ್ ವಾಷಿಂಗ್ಟನರು, ಮೂರನೇ ಸಲ ಪ್ರೆಸಿಡೆಂಟರಾಗಲೊಪ್ಪದೆ ಒಬ್ಬನು 8 ವರ್ಷಗಳಿಗಿಂತ ಹೆಚ್ಚಾಗಿ ಪ್ರೆಸಿಡೆಂಟನಾಗಿರುವುದೆಂದರೆ ಅರಸುತನದ ಸಂಪ್ರದಾಯವನ್ನನುಸರಿಸಿದಂತೆಯೇ ಸರಿಯೆಂದು ಹೇಳಿದ್ದರು. ಆ ಪ್ರಕಾರ ಇಷ್ಟರವರೆಗೆ ಯಾರಾದರೂ ಬಿಡದೆ ಮೂರು ಸರ್ತಿ ಪ್ರೆಸಿಡೆಂಟರಾಗಿ ಆರಿಸಿಬಂದಿರುವುದಿಲ್ಲ. ಈಗಣ ಪ್ರೆಸಿಡೆಂಟರ ಹಿರಿಯ ಥಿಯಡೊರ್ ರುಸವೆಲ್ಟರು ಮೂರನೇ ಸಲ ಚುನಾವಣೆಗೆ ನಿಂತು ಪರಾಜಯಗೊಂಡಿದ್ದರು. ಮಿ. ಅಬ್ರಹಾಮ ಲಿಂಕೋಲ್ನರು ಮೂರನೇ ಸಲ ಪ್ರೆಸಿಡೆಂಟರಾಗಿ ಆರಿಸಲ್ಪಡಲಿದ್ದಾಗ ಕೊಲ್ಲಲ್ಪಟ್ಟಿದ್ದರು.

ಆದರೆ ಪ್ರೆಸಿಡೆಂಟ್ ಫ್ರೇಂಕ್ಲಿನ್ ರುಸವೆಲ್ಟರು ಅಮೇರಿಕದ ಪ್ರೆಸಿಡೆಂಟ್‌ತನದ ಸಂಪ್ರದಾಯವನ್ನು ಮುರಿಯುವ ಸಂಭವ ತೋರುತ್ತದೆ. ಅವರು ಮೂರನೇ ಸಲ ಯುನೈಟೆಡ್ ಸ್ಟೇಟ್ಸಿನ ಪ್ರೆಸಿಡೆಂಟರಾಗಿ ಆರಿಸಲ್ಪಡುವುದು ನಿಶ್ಚಯವೆಂಬಂತೆ ತೋರುತ್ತದೆ. ಅಮೇರಿಕದ ಪ್ರತಿಯೊಬ್ಬ ನಿರುದ್ಯೋಗಿಗೂ ಉದ್ಯೋಗವನ್ನೊದಗಿಸಿಕೊಡಬೇಕೆಂದು 'ನ್ಯೂಡೀಲ್' ಎಂಬ ಹೊಸ ರಚನೆಯೊಂದನ್ನು ಪ್ರೆಸಿಡೆಂಟ್ ರುಸವೆಲ್ಟರು ಕೈಕೊಂಡು ಧನಿಕ ವರ್ಗದ ವಿರೋಧ ಪಡೆದಿರುತ್ತಾರೆ. ಆದುದರಿಂದ ಧನಿಕ ವರ್ಗದವರು ಹೆಚ್ಚಾಗಿ ಈ ಸಲದ ಚುನಾವಣೆಯಲ್ಲಿ ರಿಪಬ್ಲಿಕನ್ ಉಮೇದ್ವಾರರಿಗೇನೇ ಬೆಂಬಲವೀಯದಿರಲಾರರು. ಆದರೆ ಮಧ್ಯಮ ಮತ್ತು ಬಡ ತರಗತಿಯ ಜನತೆಯ ಸಂಪೂರ್ಣ ಬೆಂಬಲವು ಪ್ರೆಸಿಡೆಂಟ್ ರುಸವೆಲ್ಟರಿಗಿದೆ. ಅವರನ್ನು ಶ್ರೀಮಂತರು ತೀವ್ರವಾಗಿ ದ್ವೇಷಿಸುವಂತೆಯೇ ಬಡ ಜನರು ಆರಾಧಿಸುತ್ತಿದ್ದಾರೆ. ಅವರಂತಹ ಪ್ರತಿಷ್ಠೆ ವರ್ಚಸ್ಸು ಮತ್ತು ಪ್ರತಿಭಾಪೂರ್ಣ ವ್ಯಕ್ತಿತ್ವವುಳ್ಳ ಇನ್ನೊಬ್ಬ ಮುತ್ಸದ್ದಿಯೇ ಅಮೆರಿಕದ ರಾಜಕಾರಣದಲ್ಲಿಲ್ಲ. ಅವರು ಇಡೀ ಲೋಕದ ಒಂದು ಉಜ್ವಲ ಜ್ಯೋತಿ. ಪ್ರಜಾ ಪಕ್ಷಪಾತಿ ಮತ್ತು ಬಡ ಜನ ಹಿತೈಷಿ. ಎಂತಹ ಕಷ್ಟಕ್ಲೇಶಗಳಾದರೂ ಸತ್ಕಾರ್ಯಕ್ಕೆ ಪ್ರೋತ್ಸಾಹಕೊಡದಿರುವವರಲ್ಲ ದುಷ್ಕಾರ್ಯವನ್ನು ನಿಷ್ಠುರವಾಗಿ ವಿರೋಧಿಸುವವರು.

ಮಿ. ರೂಸ್‌ವೆಲ್ಟರೂ ಅವರ ಸಹಧರ್ಮಿಣಿಯೂ ತಮ್ಮ ಸೌಹಾರ್ದ, ಉದಾರತೆ, ವಿನಯಪರತೆ ಮತ್ತು ಮೃದುಮಧುರ ನಡತೆಯಿಂದ ಬಹಳವಾಗಿ ಜನಪ್ರಿಯರಾಗಿರುವರು. ಪತಿಯಂತೆಯೇ ಮಿಸೆಸ್ ರೂಸ್‌ವೆಲ್ಟರೂ ಸಾರ್ವಜನಿಕ ಕಾರ್ಯಗಳಲ್ಲಿ ಅತ್ಯಾಸಕ್ತರಾಗಿರುವರು. ಪತಿಯ ಸಹಾಯಕರಾಗಿ, ಪ್ರೋತ್ಸಾಹಕರಾಗಿ ಎಡೆಬಿಡದೆ ದುಡಿಯುತ್ತಿರುವರು. ಚಿಕ್ಕಂದಿನಲ್ಲಿ ಹಿಮದಲ್ಲಿ ಬಿದ್ದು ಪ್ರೆಸಿಡೆಂಟ್ ರೂಸ್‌ವೆಲ್ಟರ ಕಾಲುಗಳು ಮರಗಟ್ಟಿಹೋಗಿ ಅವರಿಗೆ ನಡೆಯಲು ಊರುಗೋಲು ಬೇಕಾದರೂ ಅವರ ಆರೋಗ್ಯವು ಬಹಳ ಚೆನ್ನಾಗಿರುವುದು. ಅವರು ಉತ್ಸಾಹ ಮತ್ತು ಚಟುವಟಿಕೆಯ ಪ್ರತಿಮೂರ್ತಿಯಾಗಿರುವರು. ಯಾವ ತರದ ಆಗ್ರಹಗಳಿಗೂ ಕಟ್ಟುಬೀಳದ ವ್ಯಾಪಕ ಹಾಗೂ ಉದಾರ ಮನೋವೃತ್ತಿಯವರು. ತನ್ನ ದೇಶ ಜನಾಂಗವೆಂಬ ಅಭಿಮಾನಾಭಿಭೂತರಾಗದೆ ಇಡೀ ಲೋಕದ ಮತ್ತು ಮಾನವಕೋಟಿಯ ಉದ್ಧಾರದ ಕುರಿತು ರಾತ್ರಿ ಹಗಲು ಚಿಂತಿಸಿ ಹೆಣಗಾಡುತ್ತಿರುವರು.

ಅನ್ನ ವಸ್ತ್ರ ಮತ್ತು ನಿವಾಸಾನುಕೂಲತೆಯು ಎಲ್ಲರಿಗೂ ಸರಿಸಮಾನವಿರಬೇಕು. ಉಣ್ಣಲಿಲ್ಲವೆ, ಬಟ್ಟೆಬರೆ ಇಲ್ಲವೆ, ಮನೆಗಳು ವಸತಿಯಿಲ್ಲದೆ ಯಾರೂ ಕಷ್ಟಪಡಬಾರದೆಂದೇ ಪ್ರೆಸಿಡೆಂಟ್ ರೂಸ್‌ವೆಲ್ಟರ ಹಿರಿಯ ಬಯಕೆ. ಅಮೇರಿಕದ ವ್ಯಾಪಾರ ವ್ಯವಹಾರ ಮತ್ತು ಸಾಂಪತ್ತಿಕ ಕ್ಷೇತ್ರಗಳಲ್ಲಿ ಧನಿಕರ ವಂಚನೆ, ಸೂತ್ರಚಾಲನೆಗಳು ನಡೆಯದಂತೆ ರೂಸ್‌ವೆಲ್ಟರು ಬಹಳ ಪ್ರಯತ್ನ ಮಾಡಿರುವರು ಆರ್ಥಿಕ ಕ್ಷೇತ್ರದಲ್ಲಿ ನಡೆಯುತ್ತಿದ್ದ ಜೂಗಾರಿ ಮೋಸತನವನ್ನು ನಿಲ್ಲಿಸುವಂತೆ ನೋಡಿರುವರು. ಬೇಂಕುಗಳು ಮತ್ತು ದಲಾಲಿಗಳು ಮಾಡುವ ಸೂರೆಯನ್ನು ತಡೆಗಟ್ಟಿರುವರು. ಆದುದರಿಂದ ಶ್ರೀಮಂತರೆಲ್ಲಾ ಪ್ರೆಸಿಡೆಂಟ್ ರೂಸ್‌ವೆಲ್ಟರಿಗೆ ವಿರೋಧವಿರುವರು. ಅವರು ಜಯಶೀಲರಾಗದಂತೆ ಧನಿಕವರ್ಗದ ಜನರು ಬಹಳವಾಗಿ ಪ್ರಯತ್ನಿಸದಿರಲಾರರು.

ಲೋಕವಿಪ್ಲವದ ಪ್ರಕೃತದ ಪರಿಸ್ಥಿತಿಯಲ್ಲಿ ಪ್ರೆಸಿಡೆಂಟ್ ರೂಸ್‌ವೆಲ್ಟರಂತಹ ಮಹಾವ್ಯಕ್ತಿಯೇ, ಜಗತ್ತಿನ ಅತಿ ದೊಡ್ಡ ಪ್ರಜಾಸತ್ತೆಯ ನಾಯಕರಾಗಿರುವುದು ಅತ್ಯಾವಶ್ಯಕವಾಗಿದೆ. ಇನ್ನು ಒಂದೆರಡು ವರ್ಷಗಳಲ್ಲಿ ಜಗತ್ತಿನ ಪರಿಸ್ಥಿತಿಯು ಹೇಗೆ ನಿಲ್ಲುವುದೆಂದು ಹೇಳಬರುವುದಿಲ್ಲ ಎಂತಹ ಅನಾಯಕತ್ವ ಮತ್ತು ಗೊಂದಲಗಳುಂಟಾಗುವವೋ? ಈ ಸಂದರ್ಭದಲ್ಲಿ ಪ್ರೆಸಿಡೆಂಟ್ ರೂಸ್‌ವೆಲ್ಟರಂತಹ ಲೋಕನಾಯಕರು ಅಧಿಕಾರದಲ್ಲಿದ್ದರೆ ಪ್ರಜಾಸತ್ತೆಗೊಂದು ದೊಡ್ಡ ಆಶಯದೊರೆತಂತಾಗುವುದು

Let us help you to Ensure

YOUR CHILD'S FUTURE

Whether it is a Boy or a Girl, you have to make provisions for the future either for EDUCATION or for MARRIAGE; that can be easily done by going in for a CHILDREN'S ENDOWMENT POLICY in the **CANARA MUTUAL**.

The Canara Mutual

ASSURANCE COMPANY, LTD.

(Head Office:- UDIPI, S. India.)

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

22-7-40

ನಗರ ಸಭೆಯ ಆಡಳಿತ ವರದಿ—ಮಂಗಳೂರು ನಗರ ಸಭೆಯು ಕಳೆದ ಸೋಮವಾರ ನಗರ ಸಭಾಭವನದಲ್ಲಿ ಶ್ರೀ. ಬಿ. ವಿ. ಬಾಳಿಗ, ಯಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಸೇರಿತು. ಕಾರ್ಯಕ್ರಮದ ಪಟ್ಟಿಯಲ್ಲಿದ್ದ ವಿಷಯಗಳು ಚರ್ಚಿಸಲ್ಪಟ್ಟು ತೀರ್ಮಾನಿಸಲ್ಪಟ್ಟ ತರುವಾಯ 1939-40ರ ಆಡಳಿತ ವರದಿಯನ್ನು ಪರಿಶೀಲಿಸಿ ಚರ್ಚಿಸಲಾಯಿತು. ಪಿ. ಅಂದ್ರಾದೆಯವರು ಹಲವೊಂದು ವಿಷಯಗಳ ಮೇಲೆ ಚರ್ಚೆಮಾಡಿ ಕೆಲವು ಸೂಚನೆಗಳನ್ನು ಕೊಟ್ಟರು. ಅಮೇಲೆ ವರದಿಯು ಸರ್ವ ಸಮ್ಮತಿಯಿಂದ ಮಂಜೂರಾಯಿತು. ಮಿಸೆಸ್ ಲೀಲಾಬಾಯಿಯವರು ನಗರ ಸಭಾಧ್ಯಕ್ಷರು ದಕ್ಷತೆಯಿಂದ ಅಧ್ಯಕ್ಷತನದ ಕಾರ್ಯಕಲಾಪಗಳನ್ನು ನೆರವೇರಿಸಿದ ಬಗ್ಗೆ ಅವರಿಗೆ ನಗರ ಸಭೆಯ ಧನ್ಯವಾದಗಳನ್ನರ್ಪಿಸಿದರು. ಅಂತೆಯೇ ಉಪಾಧ್ಯಕ್ಷರ, ಕಮಿಶನರ, ಹೆಲ್ತ್ ಆಫೀಸರರ, ಸುಪರ್ವೈಜರರ ಮತ್ತು ನೌಕರರ ಕಾರ್ಯದಕ್ಷತೆಯನ್ನು ಪ್ರಶಂಸಿಸಿ, ಠರಾವುಗಳು ಸರ್ವ ಸಮ್ಮತಿಯಿಂದ ಮಂಜೂರುಮಾಡಲ್ಪಟ್ಟವು. ಅಧ್ಯಕ್ಷರು ತಮ್ಮ ಕೃತಜ್ಞತೆಯನ್ನು ಸೂಚಿಸಿ ಚಿಕ್ಕ ಭಾಷಣಮಾಡಿದರು. ಅನಂತರ ಸಭಾಂತ್ಯವಾಯಿತು.

ವರದಿಯ ಮುಖ್ಯ ಅಂಶಗಳು—ವರದಿಯಲ್ಲಿ ಅನೇಕ ಪ್ರಾಮುಖ್ಯ ವಿಷಯಗಳು ಸೂಚಿಸಲ್ಪಟ್ಟಿವೆ. ನಗರದಲ್ಲಿ ವಿದ್ಯುದ್ದೀಪಗಳ ಸೌಕರ್ಯ ಹೆಚ್ಚಿಸಲಾಗಿದೆ. ರಸ್ತೆಗಳ ದುರಸ್ತಿಗೆ ಧಾರಾಳ ಹಣ ವೆಚ್ಚಮಾಡಿದ್ದಾರೆ. ಅನೇಕ ಅಗಲ ಕಿರಿದಾದ ರಸ್ತೆಗಳನ್ನು ವಿಸ್ತರಿಸಿರುವರಲ್ಲದೆ ರಸ್ತೆಗಳು ಕೂಡುವ ಮೂಲೆಗಳನ್ನು ವಿಸ್ತರಿಸಲು ಧಾರಾಳ ಹಣ ವೆಚ್ಚಮಾಡಿದ್ದಾರೆ. ನಗರದ ಶಾಲೆಗಳಲ್ಲಿ (ಮುನಿಸಿಪಲ್) ಮಕ್ಕಳ ಸಂಖ್ಯೆಯು ಹೆಚ್ಚಿದೆಯಲ್ಲದೆ ಬಹ್ವಂಶ ಮಕ್ಕಳು ಶಾಲೆಗಳಿಗೆ ಸೇರಿದ್ದಾರೆ. ನಗರದಲ್ಲಿ ವರದಿಯ ವರ್ಷದಲ್ಲಿ ಸಾಂಕ್ರಾಮಿಕ ರೋಗಗಳು ಇರಲಿಲ್ಲ. ಆರೋಗ್ಯವನ್ನು ಕಾಪಾಡಲು ಉತ್ತಮ ಏರ್ಪಾಡು ಮಾಡಿದ ಬಗ್ಗೆ ಪಾರಿತೋಷಕ 'ಗುರಾಣಿ' (ಶೀಲ್ಡ್)ಯು ಮಂಗಳೂರಿಗೆ ದೊರಕುದು ಮಂಗಳೂರಿಗೆ ಒಂದು ಹೆಮ್ಮೆಯ ವಿಷಯವೇ ಸರಿ. ಸಂಕ್ಷೇಪವಾಗಿ ಹೇಳುವುದಾದರೆ ನಗರಸಭೆಯ ಆಡಳಿತೆಯು ಬಹಳ ಉತ್ತಮವಾಗಿದೆ.

ಯುದ್ಧ ಸಾಹಸ ನಿಧಿ-ತಾಲೂಕು ಸಮಿತಿಯ ಸ್ಥಾಪನೆ—ಯುದ್ಧ ಸಮಿತಿಯ ಆಶ್ರಯದಲ್ಲಿ ಯುದ್ಧ ನಿಧಿಗೆ ಹಣವನ್ನು ಶೇಖರಿಸುವರೆ ಟೌನ್ ಕೋರ್ಟು ಹಾಲಿನಲ್ಲಿ ಕಳೆದ ತಾ. 18ರಲ್ಲಿ ಸಭೆ ಜರಗಿತು. ಮಂಗಳೂರು ತಾಲೂಕಿಗೊಂದು ನಿಧಿ ಸಂಗ್ರಹ ಸಮಿತಿಯನ್ನು ಏರ್ಪಡಿಸಲಾಯಿತು. ರೆವಿನ್ಯು ಡಿವಿಜನಲ್ ಆಫೀಸರರು ಸಂಘದ ಅಧ್ಯಕ್ಷರಾಗಿಯೂ ಮಿ. ಸಿ. ಎಲ್. ಲೋಬೋರವರೂ, ಮಂಗಳೂರು ತಹಶಿಲ್ದಾರರೂ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಪ್ರತಿಯೊಂದು ಫಿರ್ಕದಿಂದಲೂ ಸದಸ್ಯರನ್ನು ಸಮಿತಿಗೆ ಸೇರಿಸಿದರು. ಅನಂತರ ಕೆಲವರನ್ನು ನಿಧಿ ಸಂಗ್ರಹಮಾಡಲು ನೇಮಿಸಿದರು. ಪ್ರತಿ ತಿಂಗಳಿಗೊಂದಾವರ್ತಿ ಸಮಿತಿ ಸಭೆ ಸೇರಬೇಕೆಂದು ತೀರ್ಮಾನವಾದ ತರುವಾಯ ಸಭಾಂತ್ಯವಾಯಿತು.

ಆರೋಪಿತರ ಬಿಡುಗಡೆ—ತಾ. 21-10-39ರಲ್ಲಿ ಬೋಳಾರ ಮಾರಿಗುಡಿಯಲ್ಲಿ ಕತ್ತಿಪೂಜೆ ಉತ್ಸವವಾಗಿ ಪ್ರಸಾದ ಹಂಚುತ್ತಿದ್ದ ಅಂಗರ ಮರಕಾಲನಿಗೂ ದೂಮ ಪೂಜಾರಿ ಎಂಬವನಿಗೂ ಜಗಳವುಂಟಾಯಿತೆಂದೂ, ಅಂಗರನು ಸೇರಿ ಏಳು ಜನರು ದೂಮನಿಗೆ ಹೊಡೆದರಾಗಿಯೂ, ಮತ್ತು ಅಂಗರನ ಕಡೆಯವನಾದ ಐತು ಎಂಬವನು ದೂಮನನ್ನು ಕಡಿದನಾಗಿಯೂ ಅಂಗರನೇ ಮೊದಲಾದ ಏಳು ಜನರ ಮೇಲೆ ದಾವೆ ನಡೆದಿತ್ತು. ತಾ. 15-12-39ರಲ್ಲಿ ದೂಮನು ಆಸ್ಪತ್ರೆಯಲ್ಲಿ ಮೃತನಾದನು. ಓರ್ವ ಸಬ್ ಇನ್ಸ್‌ಪೆಕ್ಟರರು ವಿಚಾರಣೆ ನಡಿಸಿ ವ್ಯವಹರಣೆಯು ಸುಳ್ಳೆಂಬುದಾಗಿ ವರದಿಮಾಡಿದ್ದರು. ಅಮೇಲೆ ಡಿ. ಸುಪರಿಂಟೆಂಡೆಂಟರ ಆಜ್ಞೆಯ ಮೇರೆಗೆ ಸರ್ಕಲ್ ಇನ್ಸ್‌ಪೆಕ್ಟರರು ತನಿಕೆನಡಿಸಿದರು. ಆಪಾದಿತರನ್ನು ಸೆಶ್ಶನಿಗೆ ಕಮಿಟ ಮಾಡಲಾಯಿತು. ಸೆಶ್ಶನ್ಸ್ ಕೋರ್ಟಿನಲ್ಲಿ ಅವರ ವಿಚಾರಣೆಯು ನಡೆಯಿತು. ಎಸೆಸರಿಬ್ಬರೂ ಆಪಾದಿತರು ನಿರಪರಾಧಿಗಳೆಂದು ಏಕಮತದ ಅಭಿಪ್ರಾಯಪಟ್ಟರು. ಸೆಶ್ಶನ್ಸ್ ಜಡ್ಜರಾದ ಶ್ರೀ. ಟಿ. ಎಸ್. ರಾಮಚಂದ್ರನ್ ಐ. ಸಿ. ಎಸ್., ರವರು ಎಸೆಸರರ ಅಭಿಪ್ರಾಯವನ್ನು ಅಂಗೀಕರಿಸಿ ಆಪಾದಿತರನ್ನು ಬಿಡುಗಡೆಮಾಡಿದರು. ಶ್ರೀಗಳಾದ ಮಂಜೇಶ್ವರ ಶಂಕರರಾಯರೂ, ಎ. ಶಂಕರ ಆಳ್ವರೂ ಆಪಾದಿತರ ಕಡೆಯಿಂದ ವ್ಯವಹರಿಸಿದ್ದರು.

ಪ್ರೊ. ರಾಮಚಂದ್ರ ಅಯ್ಯರ್‌ರವರು

ಪ್ರೊ. ಎಸ್. ರಾಮಚಂದ್ರ ಅಯ್ಯರ್‌ರವರು ದಕ್ಷಿಣ ಹಿಂದೂಸ್ಥಾನದ ಉಪಾಧ್ಯಾಯರ ಸಂಘದ ವರ್ಕಿಂಗ್ ಕಮಿಟಿಯ ಸದಸ್ಯರಾಗಿ ಬಹುಮತದಿಂದ ಆರಿಸಲ್ಪಟ್ಟಿರುವರಾಗಿ ತಿಳಿದುಬರುತ್ತದೆ. ಅಭಿನಂದನೀಯ.

ಉಡುಪಿ

ವಿಷಾದಕರ ಘಟನೆ—"ತುಳುನಾಡ್ ಬೇಂಕ್ ಓಫ್ ಸಪ್ಲೈ ಏಜೆನ್ಸಿ ಲಿಮಿಟೆಡ್" ಮತ್ತು 'ಜನರಲ್ ಸಪ್ಲೈಸ್ ಲಿಮಿಟೆಡ್' ಸಂಸ್ಥೆಗಳ ಮೆನೇಜಿಂಗ್ ಡೈರೆಕ್ಟರರಾಗಿದ್ದ ಶ್ರೀ. ಎಸ್. ಯು. ಪಣಿಯಾಡಿಯವರು, ಹಲವು ದಿನಗಳಿಂದ ಅನಾರೋಗ್ಯದಿಂದಿದ್ದು ಕಳೆದ ವಾರ ಅನಿರೀಕ್ಷಿತವಾಗಿ ಎಲ್ಲಿಗೋ ಹೋಗಿರುವುದರಿಂದ ಗೊಂದಲವೆದ್ದಿದೆ. ತುಳುನಾಡ್ ಬೇಂಕಿನ ಡೈರೆಕ್ಟರರ ಜರೂರು ಸಭೆ ಜರಗಿ ಶ್ರೀ. ವಿ. ಯಾಳನರಸಿಂಹಾಚಾರ್ಯರನ್ನು ಮೆನೇಜಿಂಗ್ ಡೈರೆಕ್ಟರರಾಗಿ ನೇಮಿಸಲಾಗಿದೆ. ಬೇಂಕು ಒಂದು ದಿವಸ ತೆರೆಯಲ್ಪಟ್ಟು ಕಾರಣಾಂತರಗಳಿಂದ ಪುನಃ ಒಂದು ತಿಂಗಳ ವರೆಗೆ ವ್ಯವಹಾರವು ಬಂದುಮಾಡಲ್ಪಟ್ಟಿರುವುದೆಂದು ತಿಳಿದುಬರುತ್ತದೆ. ಶೇರ್ ಹೋಲ್ಡರರ ಮತ್ತು ಠೇವಣಾತಿದಾರರರ ಸಭೆ ಜರಗಿಸಿ ಮುಂದಿನ ನಿರ್ಧಾರವನ್ನು ಮಾಡಲಾಗುವುದಂತೆ. ಜನರಲ್ ಸಪ್ಲೈಸ್ ಲಿಮಿಟೆಡಿನ ಕೈಕೆಳಗಿನ 'ಮಣಿಪಾಲ ಪವರ್ ಪ್ರೆಸ್' 'ತುಳುನಾಡ್ ಪ್ರೆಸ್' 'ಭಾರತ ವಸ್ತ್ರಮಂದಿರ'ಗಳೂ ತಾರೀಕು 20ರಲ್ಲಿ ಮುಚ್ಚಲ್ಪಟ್ಟಿದ್ದವು. ತಾರೀಕು 22ರಲ್ಲಿ ಅವು ಪುನಃ ತೆರೆಯಲ್ಪಟ್ಟರೂ ಮಣಿಪಾಲ ಪವರ್ ಪ್ರೆಸ್ ತಾತ್ಕಾಲಿಕವಾಗಿ ತಿರುಗಿ ಮುಚ್ಚಲ್ಪಟ್ಟಿರುವದೆಂದು ತಿಳಿದುಬರುತ್ತದೆ. ಜನರಲ್ ಸಪ್ಲೈಸ್‌ನ ಡೈರೆಕ್ಟರರ ಸಭೆಯಲ್ಲಿ ಶ್ರೀ. ಆರ್. ಆರ್. ಕುಂಜೂರರು ಮೆನೇಜಿಂಗ್ ಡೈರೆಕ್ಟರರಾಗಿ ನೇಮಕಹೊಂದಿರುವರು. ಎರಡೂ ಕಂಪೆನಿಗಳ ತನ್ನ ಮೆನೇಜಿಂಗ್ ಡೈರೆಕ್ಟರರ ಸ್ಥಾನಕ್ಕೆ ರಾಜೀನಾಮೆಯನ್ನು ಮಂಗಳೂರಿನಿಂದ ಶ್ರೀ. ಪಣಿಯಾಡಿಯವರು ಕಳುಹಿಸಿರುವರೆಂದೂ ತಿಳಿದುಬರುತ್ತದೆ. ಈ ಎಲ್ಲಾ ಗೊಂದಲಗಳಿಂದಾಗಿ ಪಾಲುಗಾರರ, ಠೇವಣಾತಿದಾರರೇ ಮೊದಲಾದವರಲ್ಲಿ ಆತುರೋದ್ವೇಗವುಂಟಾಗಿದೆ. ಸಾಹಸಿ ಅತ್ಯುತ್ಸಾಹಿ ಹಾಗೂ ತ್ಯಾಗಚತುರರಿದ್ದ ಶ್ರೀ. ಪಣಿಯಾಡಿಯವರ ವರ್ತನೆಯು ಸಾರ್ವಜನಿಕರ ವಿಶ್ವಾಸಕ್ಕೆ ಧಕ್ಕೆಯುಂಟುಮಾಡುವಂತಾಗಿರುವುದು. ಅತ್ಯಂತ ವ್ಯಸನಕರ. ಮುಂದಾದರೂ ತುಳುನಾಡ್ ಬೇಂಕಿನ ಆಡಳಿತ ಮಂಡಲಿಯವರು ಧೈರ್ಯವಹಿಸಿ ಸ್ಥಿತಿಗತಿಗಳನ್ನೆಲ್ಲಾ ಜನತೆಯ ಮುಂದಿಟ್ಟು ಬೇಂಕನ್ನು ಮುನ್ನಡೆಸುವ ಸಾಹಸ ಕೈಕೊಂಡಲ್ಲಿ, ಮತ್ತು ಸಾರ್ವಜನಿಕರು ಬೆಂಬಲವಿತ್ತಲ್ಲಿ, ಅದು ಬಾಳಿ ಬೆಳಗಬಹುದೆಂಬ ನಿರೀಕ್ಷೆಯಿದೆ. ಜನರಲ್ ಸಪ್ಲೈಸಿನ ಹೊಣೆಹೊತ್ತವರೂ ಸಾರ್ವಜನಿಕರ ವಿಶ್ವಾಸ ಸಂಪಾದಿಸಿ, ತಮ್ಮ ಜವಾಬ್ದಾರಿಗೆ ಹೊಂದಿಕೊಂಡು ವರ್ತಿಸಿದಲ್ಲಿ 'ಅಂತರಂಗ'ದಂತಹ ಅಖಿಲಕರ್ನಾಟಕ ಪ್ರಸಿದ್ಧಿಯನ್ನು ಅತ್ಯಂತ ತೀವ್ರವಾಗಿಪಡೆದ ಪತ್ರಿಕೆಯನ್ನೂ ಪ್ರೆಸ್ಸುಗಳನ್ನೂ ಬಾಳಿಸಿದ ಕೀರ್ತಿಭಾಗಿಗಳಾಗಬಹುದು. ಮೇಲಿನ ಸಂಸ್ಥೆಗಳು ಕನ್ನಡನಾಡಿನಲ್ಲಿ ಪ್ರಸಿದ್ಧಿಪಡೆದವುಗಳಾಗಿದ್ದು ಶ್ರೀ. ಪಣಿಯಾಡಿಯವರ ಮೇಲ್ವಿಚಾರದಲ್ಲಿ ಹಲವು ಕೆಲಸಗಾರರಿಗೆ ಆಶ್ರಯವಿತ್ತಿದ್ದವು. ಅವು ತಮ್ಮ ಅಸ್ತಿತ್ವವನ್ನುಳಿಸಿಕೊಂಡು ಅಭಿವೃದ್ಧಿಯನ್ನೈದುವಂತಾಗಲೆಂದೆಮ್ಮ ಬಯಕೆ.

ಮುನಿಸಿಪಾಲಿಟಿ—ಉಡುಪಿ ಮುನಿಸಿಪಾಲಿಟಿಯ ಸಭೆಯು ತಾ. 19-7-'40ನೇ ಶುಕ್ರವಾರ ಸಂಜೆ ಚೆಯರ್‌ಮನ್ ಶ್ರೀ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಎಜೆಂಡದಲ್ಲಿ ವಿಶೇಷ ಕಾರ್ಯಕ್ರಮಗಳು ಇಲ್ಲದಿದ್ದಾಗ್ಯೂ, ಯುದ್ಧ ಫಂಡಿಗೆ ಧನಸಹಾಯಮೀಯುವ ಕುರಿತು ವಿಶೇಷ ಚರ್ಚೆ ನಡೆಯಿತು. ಕೊನೆಗೆ ಈ ವಿಷಯದ ತೀರ್ಮಾನವು ಮುಂದಣ ಸಭೆಗೆ ಹಾಕಿಯಿಡಲಾಯಿತು. ಕೌನ್ಸಿಲಿಗೊಂದು ಹೊಸ ಹಾಲನ್ನು ಕಟ್ಟಿಸುವರೆ ರೂ. 3800/- ಖರ್ಚುಮಾಡಬಹುದೆಂದಾಯಿತು. ಧರಿಯಾ ಬಾಬರಗಡದಲ್ಲಿರುವ ಫಿರಂಗಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದು ಅಜ್ಜರಕಾಡು ಮೈದಾನದಲ್ಲಿಡುವ ಯೋಜನೆ ಹೂಡಲಾಯಿತು.

ಸಂಗೀತ ಕಚೇರಿ—ಶ್ರೀ. ಬಿ. ಉಮಾನಥರಾಯರ ಪರಿಚಯವನ್ನು ಪ್ರತ್ಯೇಕ ಮಾಡಿಕೊಡಬೇಕಾಗಿಲ್ಲ. ಅವರ ಗಾಯನ ಕುಶಲತೆಯನ್ನು ತಿಳಿಯದವರಿಲ್ಲ. ಇವರಿಗೆ ಅನಿವಾರ್ಯ ಕಾರಣಗಳಿಂದ ಉಡುಪಿಯಿಂದ ಸದ್ಯದಲ್ಲಿಯೇ ವರ್ಗವಾಗಲಿರುವುದು, ನಮ್ಮ ಗಾಯನ ಕಲಾಭಿಮಾನಿಗಳ ದೌರ್ಭಾಗ್ಯವೆನ್ನಬೇಕು. ಆದರೂ ಅವರ ಭಾವನಾಗೀತಗಳನ್ನು ಕಡೆಯ ಸಲವಾದರೂ ಒಮ್ಮೆ ಕೇಳಿ ಸಂತೋಷಪಡಬೇಕೆಂದು ಅಭಿಲಾಷೆಯಿಂದ ತಾ. 5-8-'40ನೇ ಸೋಮವಾರ ದಿನ ರಾತ್ರಿ ಘಂಟೆ 9-30ಕ್ಕೆ ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಇವರ ಸಂಗೀತ ಕಚೇರಿ ನಡಿಸಬೇಕೆಂದು ನಿಶ್ಚಯಿಸಿರುವೆವು. ಈ ಸಮಯ ಅವರಿಗೆ ಕೊಡುವ ಪಾರಿತೋಷಕ ನಿಧಿಗೆ ಸಹಾಯಮಾಡಲಿಚ್ಛಿಸುವ ಸಂಗೀತಾಭಿಮಾನಿಗಳೂ, ದಯಾರ್ದ್ರಹೃದಯರೂ ಆದ ನಮ್ಮ ಪ್ರೋತ್ಸಾಹಕರು ಅದೇ ದಿನ ಸಾಯಂಕಾಲ ಘಂಟೆ 5ರ ಒಳಗೆ ಯಥಾಶಕ್ತಿ ಹಣವನ್ನು ತಂದು ಶ್ರೀಯುತ ಎ. ಟಿ. ಅಲ್ಸಿಯವರೊಡನೆ ಕೊಡಬಹುದು.

ಮೂಲೂರು—ಮುಂಬಾಯಿಯ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಸುಮಾರು 15 ವರ್ಷಗಳಿಂದ ಕೆಲಸಮಾಡುತ್ತಿದ್ದ ಶ್ರೀ. ತಿಮ್ಮತುಕ್ರ ಎಂಬವರು ಇತ್ತೀಚೆಗೆ ತನ್ನ ಊರಾದ ಮೂಲೂರಿಗೆ ಬಂದಿದ್ದು ಬರೇ ಕೆಲವು ದಿನಗಳ ಕಾಯಿಲೆಯಿಂದ ತಾರೀಕು 10-7-'40ನೇ ಬೆಳಿಗ್ಗೆ ಮೃತಪಟ್ಟಿರುವರೆನ್ನಲು ವಿಷಾದವಾಗುತ್ತದೆ. ಇವರ ಬಂಧುಬಳಗದೊಂದಿಗೆ ನಾವೂ ಸಹಾನುಭೂತಿಪಡುತ್ತೇವೆ.

ಕಾರ್ಕಳ—ಇತರ ಶಾಲೆಗಳ ವಿರೋಧವಿದ್ದರೂ, ಕಳೆದ ವರ್ಷಗಳ ಇಲಾಖಾಧಿಕಾರಿಗಳ ಅನುಮತಿಯಿಂದ ಸ್ಥಾಪಿಸಲ್ಪಟ್ಟ ರೋಮನ್ ಕೆಥೋಲಿಕರ ಕ್ರೈಸ್ತಕಿಂಗ ಚರ್ಚ್ ಎಲಿಮೆಂಟರಿ ಶಾಲೆಯವರು ಈಗ 1ರಿಂದ 5ರ ತನಕ ಎಲ್ಲಾ ತರಗತಿಗಳಿಗೆ ಒಮ್ಮೆಲೆ ಮಂಜೂರಾತಿಯನ್ನು ಕೊಡಬೇಕೆಂದು ಅಪೇಕ್ಷಿಸಿ ಅರ್ಜಿಮಾಡಿರುವದನ್ನು ತೀವ್ರವಾಗಿ ವಿರೋಧಿಸಿ, ಅಂಥ ಮಂಜೂರಾತಿಯು ಆ ಶಾಲೆಗೆ ದೊರೆತುದಾದರೆ, ಸ್ಥಳೀಯ ಇತರ ಬೋರ್ಡರ ಮತ್ತು ಹಾಯರ ಎಲಿಮೆಂಟರಿ ಶಾಲೆಗಳ ಕ್ರಮವಾದ ಉನ್ನತಿ ಮತ್ತು ಅಭಿವೃದ್ಧಿಗೆ ಭಂಗಬರುವದಾದ್ದರಿಂದ, ಕೆಥೋಲಿಕರ ಶಾಲೆಗೆ 1ರಿಂದ 5ರ ತನಕ ಮಾತ್ರ, ವರ್ಷಕ್ಕೆ ಒಂದು ಕ್ಲಾಸಿನಂತೆ ಮಂಜೂರಾತಿಕೊಡಬೇಕಾಗಿ ಪ್ರಾರ್ಥಿಸಿ ಇಲಾಖಾಧಿಕಾರಿಗಳಿಗೆ ಪ್ರಾರ್ಥನಾಪತ್ರಗಳು ಹೋಗಿವೆ.

ವಿದ್ಯಾಭ್ಯಾಸದಲ್ಲಿ ಬಹಳ ಹಿಂದುಳಿದಿರುವ ಅಸ್ಪೃಶ್ಯವರ್ಗಕ್ಕೆ ಸೇರಿದ ರಣವೀರ ಬಾಲಕಬಾಲಕಿಯರಿಗೆ ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಸಂತೋಷದ ಪ್ರವೇಶವನ್ನು ಕೊಟ್ಟಿದ್ದಾರೆ. ಶಾಲಾ ಮೆನೇಜರರಾದ ಶ್ರೀ. ಕೆ. ಕೃಷ್ಣಪ್ಪಯ್ಯನವರು ತಮ್ಮ ಸ್ವಂತ ಖರ್ಚಿನಿಂದ ಬಹು ಬಡವರಾದ ಆ ವಿದ್ಯಾರ್ಥಿಗಳಿಗೆ ಸ್ಲೇಟು ಪುಸ್ತಕಾದಿಗಳನ್ನು ಒದಗಿಸಿಕೊಟ್ಟಿದ್ದಾರೆ.

ಇತರ ಕಡೆಗಳಲ್ಲಿಯಂತೆ ಇಲ್ಲಿಯೂ ಸರಕಾರದ ಪ್ರೋತ್ಸಾಹದಿಂದ ಯುದ್ಧ ಪ್ರಚಾರಸಮಿತಿಯು ಸ್ಥಾಪಿಸಲ್ಪಟ್ಟು ಬಹು ಉತ್ಸಾಹದಿಂದ ಕೆಲಸಮಾಡುತ್ತಾ ಇರುವದು. ಸರಕಾರದ ಸಾಲಪತ್ರ ಮತ್ತು ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳಲ್ಲಿ ಹಣ ವಿನಿಯೋಗಿಸುವದರಿಂದ ಸಿಕ್ಕುವ ಲಾಭ ಮತ್ತು ಸರಕಾರಕ್ಕಾಗುವ ಸಹಾಯದ ಕುರಿತು ಕನ್ನಡದಲ್ಲಿ ಕರಪತ್ರಗಳು ಛಾಪಿಸಲ್ಪಟ್ಟು ವಿತರಣವಾಗಿವೆ.

ವಿಳಾಸ ಸ್ಪರ್ಧೆ

ಯಾರೂ ಭಾಗವಹಿಸಬಹುದು.

ಎಲ್ಲರಿಗೂ ಭಾಗವಹಿಸಲು ಅನುಕೂಲವಾದ ಸ್ಪರ್ಧೆಯಿದು. ಪ್ರವೇಶಧನ ತೆರಬೇಕಾಗಿಲ್ಲ. ಒಗಟು ಸ್ಪರ್ಧೆಯಂತೆ, ತಲೆಬಿಸಿಮಾಡಬೇಕಾಗಿಯೂ ಇಲ್ಲ. ನಿಮ್ಮ ಊರಿನ, ಯಾ ತಾಲೂಕಿನ ಇಲ್ಲವೆ ಜಿಲ್ಲೆಯ ಅಥವಾ ಜಿಲ್ಲೆಯ ಹೊರಗಿನ ಕನ್ನಡ ಓದುಬರಹ ಬಲ್ಲ (ಇಂಗ್ಲಿಷ್ ಬರಬಾರದೆಂದಿಲ್ಲ) ಬೇರೆ ಬೇರೆ ಸದ್ಗೃಹಸ್ಥರ ಆದಷ್ಟು ಹೆಚ್ಚು ವಿಳಾಸಗಳನ್ನು ಬರೆದು ಕಳಿಸಿರಿ. (ಹೆಸರು, ವಿಳಾಸ ಮತ್ತು ಪೋಸ್ಟು ಸ್ಪಷ್ಟವಾಗಿ ಬರೆಯಲ್ಪಡಬೇಕು.) ಈ ಸ್ಪರ್ಧೆಯಲ್ಲಿ ಯಾರು ಬೇಕಾದರೂ ಭಾಗವಹಿಸಬಹುದು. ಆದರೆ ಭಾಗವಹಿಸತಕ್ಕವರು ಕಳಿಸತಕ್ಕ ಕನಿಷ್ಠ ವಿಳಾಸಗಳು 25 ಇರತಕ್ಕದ್ದು. ವಿಳಾಸಗಳನ್ನು ಕನ್ನಡದಲ್ಲಾಗಲೀ, ಇಂಗ್ಲಿಷಿನಲ್ಲಾಗಲಿ ಬರೆಯಬಹುದು. ಯಾರು ಅತೀ ಹೆಚ್ಚು ವಿಳಾಸಗಳನ್ನು ಕಳಿಸುತ್ತಾರೋ ಅವರಿಗೆ ಬಹುಮಾನವಾಗಿ ಒಂದು ವರ್ಷದ ವರೆಗೆ ನವಯುಗವನ್ನು ಉಚಿತ ಕಳಿಸಲಾಗುವುದು. ವಿಳಾಸಗಳನ್ನು ಕಳಿಸುವ ಕೊನೆಯ ತಾರೀಕು 15-8-40. ಫಲಿತಾಂಶವನ್ನು ತಾ. 22-8-40ಕ್ಕೆ ಪ್ರಕಟಿಸಲಾಗುವುದು. ಆಂದ್ರೆ ಗೆದ್ದವರ ಹೆಸರನ್ನು ಮಾತ್ರ ಕೊಡಲಾಗುವುದು.

ವಿಳಾಸ:-ಮೆನೇಜರ್ ನವಯುಗ
ಉಡುಪಿ, ದ. ಕ.

MONEY TO LEND.

Loans are granted at competitive rates on Bullion, Gold Ornaments, Government Paper, goods and produce, Shares & other valuable securities. Enquire of any of our THIRTY SEVEN OFFICES.

RESOURCES OF A CRORE } **CANARA BANK LIMITED.** ESTD. 1906.

ಪ್ರೆಸಿಡೆಂಟ್ ರುಸವೆಲ್ಟರು ಹಳೆಯ ಸಂಪ್ರದಾಯವನ್ನು ಮುರಿಯುವರೇ?

ಅವರು ಮೂರನೇ ಸರ್ತಿ ಪ್ರೆಸಿಡೆಂಟರಾಗಿ ಆರಿಸಲ್ಪಡುವರೆ?

ಅಮೇರಿಕದ ಯುನೈಟೆಡ್ ಸ್ಟೇಟ್ಸಿನ ಪ್ರೆಸಿಡೆಂಟ್ ಚುನಾವಣೆಯು ಬೇಗನೆ ನಡೆಯಲಿರುವುದು. ಅಮೇರಿಕದಲ್ಲಿರುವ ಪ್ರಾಮುಖ್ಯ ರಾಜಕೀಯ ಪಕ್ಷಗಳೆಂದರೆ ಡೆಮೊಕ್ರೆಟಿಕ್ ಮತ್ತು ರಿಪಬ್ಲಿಕನ್. ಪ್ರೆಸಿಡೆಂಟ್ ರುಸವೆಲ್ಟರು ಡೆಮೊಕ್ರೆಟಿಕ್ ಪಕ್ಷದವರು. ರಿಪಬ್ಲಿಕನ್ ಪಕ್ಷೀಯರು ಇತ್ತಲಾಗಿ ಮಿ. ವೆಂಡೆಲ್‌ವಿಲ್ಕಿ ಎಂಬವರನ್ನು ಪ್ರೆಸಿಡೆಂಟ್‌ತನಕ್ಕೆ ಉಮೇದ್ವಾರರಾಗಿ ಆರಿಸಿರುವರು. ಡೆಮೊಕ್ರೆಟಿಕ್ ಪಕ್ಷದ ವಾರ್ಷಿಕ ಸಭೆಯು ಈಗ ಚಿಕಾಗೋ ಪಟ್ಟಣದಲ್ಲಿ ನಡೆಯುತ್ತಿರುವುದು. ಅವರು ಪ್ರೆಸಿಡೆಂಟ್ ರುಸವೆಲ್ಟರನ್ನೇ ಮೂರನೇ ಸಲ ಪ್ರೆಸಿಡೆಂಟ್‌ತನಕ್ಕೆ ಉಮೇದ್ವಾರರಾಗಿ ಆರಿಸುವರು. ಮಿ. ರುಸವೆಲ್ಟರು ತಾನು ಮೂರನೇ ಸಲ ಪ್ರೆಸಿಡೆಂಟ್ ತನಕ್ಕೆ ಉಮೇದ್ವಾರರಾಗಿ ನಿಲ್ಲುವ ಕುರಿತು ಯಾವ ಅಭಿಪ್ರಾಯವನ್ನೂ ಈವರೆಗೆ ಕೊಟ್ಟಿರುವುದಿಲ್ಲ. ಆದರೆ ತನ್ನ ಪಕ್ಷದವರು ಆರಿಸುವಾಗ ನಿರಾಕರಿಸಿರುವುದಿಲ್ಲ

ಎಡೆಬಿಡದೆ ಮೂರು ಸರ್ತಿ ಯುನೈಟೆಡ್ ಸ್ಟೇಟ್ಸಿನ ಪ್ರೆಸಿಡೆಂಟ್‌ತನದ ಗದ್ದುಗೆಯನ್ನು ಇಷ್ಟರವರೆಗೆ ಯಾರೂ ಏರಿದವರಿಲ್ಲ. ಯುನೈಟೆಡ್ ಸ್ಟೇಟ್ಸಿನ ಪ್ರಥಮ ಪ್ರೆಸಿಡೆಂಟರಾದ ಜೋರ್ಜ್ ವಾಷಿಂಗ್ಟನರು, ಮೂರನೇ ಸಲ ಪ್ರೆಸಿಡೆಂಟರಾಗಲೊಪ್ಪದೆ ಒಬ್ಬನು 8ವರ್ಷಗಳಿಗಿಂತ ಹೆಚ್ಚಾಗಿ ಪ್ರೆಸಿಡೆಂಟನಾಗಿರುವುದೆಂದರೆ ಅರಸುತನದ ಸಂಪ್ರದಾಯವನ್ನನುಸರಿಸಿದಂತೆಯೇ ಸರಿಯೆಂದು ಹೇಳಿದ್ದರು. ಆ ಪ್ರಕಾರ ಇಷ್ಟರವರೆಗೆ ಯಾರಾದರೂ ಬಿಡದೆ ಮೂರು ಸರ್ತಿ ಪ್ರೆಸಿಡೆಂಟರಾಗಿ ಆರಿಸಿಬಂದಿರುವುದಿಲ್ಲ. ಈಗಣ ಪ್ರೆಸಿಡೆಂಟರ ಹಿರಿಯ ಥಿಯಡೊರ್ ರುಸವೆಲ್ಟರು ಮೂರನೇ ಸಲ ಚುನಾವಣೆಗೆ ನಿಂತು ಪರಾಜಯಹೊಂದಿದ್ದರು. ಮಿ. ಅಬ್ರಹಾಮ ಲಿಂಕೋಲ್ನರು ಮೂರನೇ ಸಲ ಪ್ರೆಸಿಡೆಂಟರಾಗಿ ಆರಿಸಲ್ಪಡಲಿದ್ದಾಗ ಕೊಲ್ಲಲ್ಪಟ್ಟಿದ್ದರು.

ಆದರೆ ಪ್ರೆಸಿಡೆಂಟ್ ಫ್ರೇಂಕ್ಲಿನ್ ರುಸವೆಲ್ಟರು ಅಮೆರಿಕದ ಪ್ರೆಸಿಡೆಂಟ್‌ತನದ ಸಂಪ್ರದಾಯವನ್ನು ಮುರಿಯುವ ಸಂಭವ ತೋರುತ್ತದೆ. ಅವರು ಮೂರನೇ ಸಲ ಯುನೈಟೆಡ್ ಸ್ಟೇಟ್ಸಿನ ಪ್ರೆಸಿಡೆಂಟರಾಗಿ ಆರಿಸಲ್ಪಡುವುದು ನಿಶ್ಚಯವೆಂಬಂತೆ ತೋರುತ್ತದೆ. ಅಮೇರಿಕದ ಪ್ರತಿಯೊಬ್ಬ ನಿರುದ್ಯೋಗಿಗೂ ಉದ್ಯೋಗವನ್ನೊದಗಿಸಿಕೊಡಬೇಕೆಂದು 'ನ್ಯೂಡೀಲ್' ಎಂಬ ಹೊಸ ರಚನೆಯೊಂದನ್ನು ಪ್ರೆಸಿಡೆಂಟ್ ರುಸವೆಲ್ಟರು ಕೈಕೊಂಡು ಧನಿಕ ವರ್ಗದ ವಿರೋಧ ಪಡೆದಿರುತ್ತಾರೆ ಆದುದರಿಂದ ಧನಿಕ ವರ್ಗದವರು ಹೆಚ್ಚಾಗಿ ಈ ಸಲದ ಚುನಾವಣೆಯಲ್ಲಿ ರಿಪಬ್ಲಿಕನ್ ಉಮೇದ್ವಾರಿಗೇನೇ ಬೆಂಬಲವೀಯದಿರಲಾರರು ಆದರೆ ಮಧ್ಯ ಮತ್ತು ಬಡ ತರಗತಿಯ ಜನತೆಯ ಸಂಪೂರ್ಣ ಬೆಂಬಲವು ಪ್ರೆಸಿಡೆಂಟ್ ರುಸವೆಲ್ಟರಿಗಿದೆ. ಅವರನ್ನು ಶ್ರೀಮಂತರು ತೀವ್ರವಾಗಿ ದ್ವೇಷಿಸುವಂತೆಯೇ ಬಡ ಜನರು ಆರಾಧಿಸುತ್ತಿದ್ದಾರೆ ಅವರಂತಹ ಪ್ರತಿಷ್ಠೆ ವರ್ಚಸ್ಸು ಮತ್ತು ಪ್ರತಿಭಾಪೂರ್ಣ ವ್ಯಕ್ತಿತ್ವವುಳ್ಳ ಇನ್ನೊಬ್ಬ ಮನುಷ್ಯನಿದ್ದಿಯೇ ಅಮೆರಿಕದ ರಾಜಕಾರಣದಲ್ಲಿಲ್ಲ. ಅವರು ಇಡೀ ಲೋಕದ ಒಂದು ಉಜ್ವಲ ಜ್ಯೋತಿ ಪ್ರಜಾ ಪಕ್ಷಪಾತಿ ಮತ್ತು ಬಡ ಜನ ಹಿತೈಷಿ. ಎಂತಹ ಕಷ್ಟಕ್ಕೊಳಗಾದರೂ ಸತ್ಕಾರ್ಯಕ್ಕೆ ಪ್ರೋತ್ಸಾಹಕೊಡದಿರುವವರಲ್ಲ ದುಷ್ಕಾರ್ಯವನ್ನು ನಿಷ್ಠುರವಾಗಿ ವಿರೋಧಿಸುವವರು.

ಮಿ. ರೂಸ್‌ವೆಲ್ಟರೂ ಅವರ ಸಹಧರ್ಮಿಣಿಯೂ ತಮ್ಮ ಸೌಹಾರ್ದ, ಉದಾರತೆ, ವಿನಯಪರತೆ ಮತ್ತು ಮೃದು ಮಧುರ ನಡತೆಯಿಂದ ಬಹಳವಾಗಿ ಜನಪ್ರೀತರಾಗಿರುವರು. ಪತಿಯಂತೆಯೇ ಮಿಸೆಸ್ ರೂಸ್‌ವೆಲ್ಟರೂ ಸಾರ್ವಜನಿಕ ಕಾರ್ಯಗಳಲ್ಲಿ ಅತ್ಯಾಸಕ್ತರಾಗಿರುವರು. ಪತಿಯ ಸಹಾಯಕರಾಗಿ, ಪ್ರೋತ್ಸಾಹಕರಾಗಿ ಎಡೆಬಿಡದೆ ದುಡಿಯುತ್ತಿರುವರು. ಚಿಕ್ಕಂದಿನಲ್ಲಿ ಹಿಮದಲ್ಲಿ ಬಿದ್ದು ಪ್ರೆಸಿಡೆಂಟ್ ರೂಸ್‌ವೆಲ್ಟರ ಕಾಲುಗಳು ಮರಕಟ್ಟಿಹೋಗಿ ಅವರಿಗೆ ನಡೆಯಲು ಊರುಗೋಲು ಬೇಕಾದರೂ ಅವರ ಆರೋಗ್ಯವು ಬಹಳ ಚೆನ್ನಾಗಿರುವುದು. ಅವರು ಉತ್ಸಾಹ ಮತ್ತು ಚಟುವಟಿಕೆಯ ಪ್ರತಿಮೂರ್ತಿಯಾಗಿರುವರು. ಯಾವ ತರದ ಆಗ್ರಹಗಳಿಗೂ ಕಟ್ಟುಬೀಳದ ವ್ಯಾಪಕ ಹಾಗೂ ಉದಾರ ಮನೋವೃತ್ತಿಯವರು. ತನ್ನ ದೇಶ ಜನಾಂಗವೆಂಬ ಅಭಿಮಾನಾಭಿಭೂತರಾಗದೆ ಇಡೀ ಲೋಕದ ಮತ್ತು ಮಾನವಕೋಟಿಯ ಉದ್ಧಾರದ ಕುರಿತು ರಾತ್ರಿ ಹಗಲು ಚಿಂತಿಸಿ ಹೆಣಗಾಡುತ್ತಿರುವರು.

ಅನ್ನ ವಸ್ತ್ರ ಮತ್ತು ನಿವಾಸಾನುಕೂಲತೆಯು ಎಲ್ಲರಿಗೂ ಸರಿಸಮಾನವಿರಬೇಕು. ಉಣ್ಣಲಿಲ್ಲವೆ, ಬಟ್ಟೆಬರೆ ಇಲ್ಲವೆ, ಮಲಗಲು ಮನೆಯಿಲ್ಲದೆ ಯಾರೂ ಕಷ್ಟಪಡಬಾರದೆಂಬೇ ಪ್ರೆಸಿಡೆಂಟ್ ರೂಸ್‌ವೆಲ್ಟರ ಹಿರಿಯ ಬಯಕೆ ಅಮೇರಿಕದ ವ್ಯಾಪಾರ ವ್ಯವಹಾರ ಮತ್ತು ಸಾಂಪತ್ತಿಕ ಕ್ಷೇತ್ರಗಳಲ್ಲಿ ಧನಿಕರ ವಂಚನೆ, ಸೂತ್ರಚಾಲನೆಗಳು ನಡೆಯದಂತೆ ರೂಸ್‌ವೆಲ್ಟರು ಬಹಳ ಪ್ರಯತ್ನಮಾಡಿರುವರು. ಆರ್ಥಿಕ ಕ್ಷೇತ್ರದಲ್ಲಿ ನಡೆಯುತ್ತಿದ್ದ ಜೂಗಾರಿ ಮೋಸತನವನ್ನು ನಿಲ್ಲಿಸುವಂತೆ ನೋಡಿರುವರು. ಬೇಂಕುಗಳು ಮತ್ತು ದಲ್ಲಾಲಿಗಳು ಮಾಡುವ ಸುಲಿಗೆಯನ್ನು ತಡೆಗಟ್ಟಿರುವರು. ಆದುದರಿಂದ ಶ್ರೀಮಂತರೆಲ್ಲಾ ಪ್ರೆಸಿಡೆಂಟ್ ರೂಸ್‌ವೆಲ್ಟರಿಗೆ ವಿರೋಧವಿರುವರು ಅವರು ಜಯಶೀಲರಾಗದಂತೆ ಧನಿಕವರ್ಗದ ಜನರು ಬಹಳವಾಗಿ ಪ್ರಯತ್ನಿಸದಿರಲಾರರು.

ಲೋಕವಿಪ್ಲವದ ಪ್ರಕೃತದ ಪರಿಸ್ಥಿತಿಯಲ್ಲಿ ಪ್ರೆಸಿಡೆಂಟ್ ರೂಸ್‌ವೆಲ್ಟರಂತಹ ಮಹಾವ್ಯಕ್ತಿಯೇ, ಜಗತ್ತಿನ ಅತಿ ದೊಡ್ಡ ಪ್ರಜಾಸತ್ತೆಯ ನಾಯಕರಾಗಿರುವುದು ಅತ್ಯಾವಶ್ಯಕವಾಗಿದೆ. ಇನ್ನು ಒಂದೆರಡು ವರ್ಷಗಳಲ್ಲಿ ಜಗತ್ತಿನ ಪರಿಸ್ಥಿತಿಯು ಹೇಗಿರಬಹುದೆಂದು ಹೇಳಬರುವುದಿಲ್ಲ ಎಂತಹ ಅನಾಯಕತ್ವ ಮತ್ತು ಗೊಂದಲಗಳುಂಟಾಗುವವೋ? ಈ ಸಂದರ್ಭದಲ್ಲಿ ಪ್ರೆಸಿಡೆಂಟ್ ರೂಸ್‌ವೆಲ್ಟರಂತಹ ಲೋಕನಾಯಕರು ಅಧಿಕಾರದಲ್ಲಿದ್ದರೆ ಪ್ರಜಾಸತ್ತೆಗೊಂದು ದೊಡ್ಡ ಆಶ್ರಯದೊರೆತಂತಾಗುವುದು.

Let us help you to Ensure

YOUR CHILD'S FUTURE

Whether it is a Boy or a Girl, you have to make provisions for the future either for EDUCATION or for MARRIAGE; that can be easily done by going in for a CHILDREN'S ENDOWMENT POLICY in the **CANARA MUTUAL.**

The Canara Mutual

ASSURANCE COMPANY, LTD.

(Head Office:- UDIPI, S. India.)

ಜಾಪಾನ ರಾಜಕೀಯದಲ್ಲಿ ಸೈನ್ಯಾಧಿಕಾರಿಗಳ ಸೂತ್ರಚಾಲನೆ.

1932ರಿಂದ 1940ರ ವರೆಗೆ ಜಾಪಾನಿನಲ್ಲಿ 10 ಮಂತ್ರಿಮಂಡಲಗಳು ಬಂದು ಹೋದವುದಾಯಿತು. ಚೀನೀ ಯುದ್ಧಾರಂಭವಾದಂದಿನಿಂದ 5 ಸಚಿವಮಂಡಲಗಳು ಅಧಿಕಾರಕ್ಕೆ ಬಂದು ಪತನಹೊಂದಿರುವವು 1932ನೇ ಮೇ ತಾ. 15ರಲ್ಲಿ ತರುಣೋತ್ಸಾಹಿ ಸೈನ್ಯಾಧಿಕಾರಿಗಳು ಕೆಲವರು ತಲೆಗೆಟ್ಟು ಹಿರಿಯ ಜಾಪಾನ ರಾಜಕೀಯ ಮುಖಂಡರು ಕೆಲವರನ್ನು ಕೊಲ್ಲಲೆತ್ನಿಸಿದರು. 1935ರಲ್ಲಿ ಜಾಪಾನ ರಾಷ್ಟ್ರೀಯ ಕಾರ್ಯಕಲಾಪಗಳಲ್ಲಿ ಸೇನೆಯ ಹಿಡಿತವು ಬಲವಾಯಿತು. ಇಂದೀಗ ಜಾಪಾನಿನಲ್ಲಿ ಪ್ರಥಮ ಶ್ರೇಣಿಯ ರಾಜಕೀಯ ಪಟುಗಳೇ ಇಲ್ಲ.

ಕಳೆದ ಆಗೋಸ್ತು ತಿಂಗಳಲ್ಲಿ ಜರ್ಮನಿಯು 'ಎಂಟಿ ಕಮಿಂಟರ್ನ ಪೆಕ್ಟ'ನ್ನು ಮುರಿದೊಗೆದು ರಶ್ಯದೊಡನೆ ಒಡಂಬಡಿಕೆ ಮಾಡಿಕೊಂಡಾಗ ಪ್ರಿನ್ಸ್ ಕೊನೊಯೆಯವರ ಮಂತ್ರಿಮಂಡಲವು ಪತನಹೊಂದಿ ಎಡ್ಮಿರಲ್ ಯೊನಾಯಿಯವರು ಪ್ರಧಾನ ಮಂತ್ರಿಗಳಾದರು. ಇದರಿಂದ ಜಾಪಾನು ಹಿಟ್ಲರ್ ಮುಸಲೋನಿಗಳಿಂದ ವಿಮುಖವಾಗಿ ಇಂಗ್ಲೆಂಡು, ಅಮೆರಿಕ ಮತ್ತು ರಶ್ಯಗಳೊಡನೆ ಮೈತ್ರಿ ಬೆಳೆಸಿ ಚೀನೀ ಯುದ್ಧವನ್ನು ಆದಷ್ಟು ಬೇಗ ಕೊನೆಗೊಳಿಸುವ ಧೋರಣೆಯುಳ್ಳದಾಯಿತು. ಆದರೆ ಈ ಎಡ್ಮಿರಲ್ ಯೊನಾಯಿಯವರಿಗೂ ಸೈನ್ಯಾಧಿಕಾರಿಗಳಿಗೂ ಅಭಿಪ್ರಾಯ ಭೇದ ಹುಟ್ಟಿ ಎಡ್ಮಿರಲ್ ಯೊನಾಯಿಯವರು ಪದಚ್ಯುತರಾಗಿದ್ದಾರೆ. ಪುನಃ ಪ್ರಿನ್ಸ್ ಕೊನೊಯೆಯವರೇ ಪ್ರಧಾನ ಮಂತ್ರಿಗಳಾಗಿದ್ದಾರೆ.

ಇಂದೀಗ ಪುನಃ ಜಾಪಾನಿನ ರಾಜಕೀಯ ಧೋರಣೆಯು ಬದಲಾವಣೆಯಾಗುವಂತಿದೆ. ಜರ್ಮನಿಯು ಫ್ರಾನ್ಸನ್ನು ಗೆದ್ದು, ಇಂಗ್ಲೆಂಡು ಜೀವನ್ಮರಣ ಸಮರದಲ್ಲಿ ನಿರತವಾಗಿರುವಾಗ, ಹಿಟ್ಲರ್ ಮುಸಲೋನಿಗಳ ಸಹಕಾರ ಪಡೆದು ಪೂರ್ವದಲ್ಲಿ ತನ್ನ ಬೇಳೆ ಬೇಯಿಸಬೇಕೆಂದು ಜಾಪಾನ ಸೈನ್ಯಾಧಿಕಾರಿಗಳು ಹಾತೊರೆಯುತ್ತಿದ್ದಾರೆ. ಚೀನೀ ಯುದ್ಧವನ್ನು ಭರದಿಂದ ಮುನ್ನಡೆಸಬೇಕೆಂದೂ, ಯುದ್ಧೋಪಕರಣಗಳನ್ನು ಬಹಳವಾಗಿ ಹೆಚ್ಚಿಸಬೇಕೆಂದೂ ಜಾಪಾನ ಸೇನಾನಿಗಳ ಮನೋಗತ, ಅದಕ್ಕಾಗಿ ಹೆಚ್ಚಿನ ಹಣಬೇಕಾಗಿದೆ, ಜನತೆಯಿಂದದನ್ನು ಶೇಖರಿಸಿಕೊಳ್ಳಬೇಕಾಗಿದೆ ಅದಕ್ಕಾಗಿ ನವರಚನೆಯೊಂದರ ಯೋಜನೆ ನಡೆದಿದೆ. ಈ ಪ್ರಕಾರ ಜಾಪಾನಿನ ಸಾಂಪತ್ತಿಕ ರೀತಿನೀತಿಗಳನ್ನೇ ಬದಲಾಯಿಸಲಾಗುವುದು. ಇದು ಹೊರತು ಇಂಡೋಚೈನ, ಡಚ್ ಈಸ್ಟ್ ಇಂಡೀಸ್, ಮಲಯ ಮೊದಲಾದ ದೇಶಗಳನ್ನು ಆಕ್ರಮಿಸಿ ತನ್ನ ಅಧಿಕಾರವನ್ನು ವ್ಯಾಪಿಸಲು ಇದೇ ಸುಸಂದರ್ಭ. ಹಿಟ್ಲರ್ ಮುಸಲೋನಿಯವರೊಂದಿಗೆ ಯುದ್ಧಕ್ಕಿಳಿದಾದರೂ ಜಪಾನು ತನ್ನ ಉದ್ದೇಶ ಸಾಧಿಸಬೇಕೆಂದು ಸೇನಾನಿಗಳ ಅಭಿಪ್ರಾಯವಿರುವಂತಿದೆ. ಸೇನಾನಿಗಳ ಈ ಹೊಸ ಧೋರಣೆಗನುಗುಣವಾಗಿ ಹೊಸ ಮಂತ್ರಿಮಂಡಲವು ಜನ್ಮಕ್ಕೆ ಬಂದಿದೆ. ಪ್ರಿನ್ಸ್ ಕೊನೊಯೆಯವರು ಜಾಪಾನಿನ ಸರ್ವಾಧಿಕಾರಿಯಾಗಿ ಮಾಡಲ್ಪಡುವರೆಂದು ನಂಬಲಾಗಿದೆ.

ಪ್ರಥಮ ಶ್ರೇಣಿಯ ರಾಜನೀತಿಜ್ಞರ ಅಭಾವ-

ರಾಜಕೀಯ ಪಕ್ಷಗಳ ನಿರ್ನಾಮ.

ಸೈನ್ಯಾಧಿಕಾರಿಗಳ ತಾಳಕ್ಕೆ ತಕ್ಕ ಹೆಜ್ಜೆ ಹಾಕಬೇಕು ಮಂತ್ರಿಮಂಡಲ.

●

ಇಂದೀಗ 3 ವರ್ಷಗಳ ಚೀನೀ ಯುದ್ಧವು ಜಾಪಾನ ಜನಸಾಮಾನ್ಯರಲ್ಲಿ ತೀವ್ರ ಅತೃಪ್ತಿಯನ್ನುಂಟುಮಾಡಿರುತ್ತದೆಂಬುದರಲ್ಲಿ ಸಂದೇಹವಿಲ್ಲ. ಅವರು ತೀವ್ರ ಸಾಂಪತ್ತಿಕ ಸಂಕಷ್ಟಕ್ಕೊಳಗಾಗಿದ್ದಾರೆ. ದಿನೇ ದಿನೇ ಬೆಳೆಯುತ್ತಿರುವ ಜನತೆಯ ಅತೃಪ್ತಿ ಮತ್ತು ಸೇನಾನಿಗಳ ಉದ್ಧಟತನದಿಂದಾಗಿ ಜಾಪಾನ ರಾಜನೀತಿಜ್ಞರು ಕಂಗೆಟ್ಟುಹೋಗಿರುತ್ತಾರೆ. ಆದುದರಿಂಲೇ ಆಗಾಗ ಮಂತ್ರಿಮಂಡಲಗಳ ಪತನವಾಗಲು ಕಾರಣ ಹಿರನೂಮ ಮಂತ್ರಿಮಂಡಲವು 8 ತಿಂಗಳುಗಳೊಳಗೆ ಅಧಿಕಾರಚ್ಯುತವಾಯಿತು. ಸೇನೆಯ ಆಸಾಧ್ಯ ಧೋರಣೆಯನ್ನು ಕಾರ್ಯಕ್ಕೆ ಹಚ್ಚಹೋಗಿ ಹಿರನೂಮರು ದೊಡ್ಡ ಗೊಂದಲವನ್ನುಂಟುಮಾಡಿ ಕಡೆಗೆ ಸೇನಾನಿಗಳ ಒತ್ತಾಯದಿಂದಲೇ ಹೊರತಳ್ಳಲ್ಪಟ್ಟರು. ಸೇನಾನಿಗಳು ಅಬೆಯವರನ್ನು ಪ್ರಧಾನ ಮಂತ್ರಿಗಳಾಗಿ ಮಾಡಿದರು. ಅವರಿಗೆ ಸ್ವತಂತ್ರ ಧೋರಣೆಯೇನೂ ಇರಲಿಲ್ಲ. ಯುರೋಪಿನಲ್ಲಿ ಯುದ್ಧವುಂಟಾದುದರಿಂದ ರಾಜಕೀಯ ಪರಿಸ್ಥಿತಿಯು ಮತ್ತಷ್ಟು ಗೊಂದಲಮಯವಾಯಿತು. ಅಬೆಯವರಿಗೂ ಜಾಪಾನ ವಿದೇಶಾಂಗಖಾತೆಗೂ ಜಟಾಪಟಿಯುಂಟಾಯಿತು. ಅದನ್ನು ನಿವಾರಿಸಲೆಂದು ಅಬೆಯವರು ಎಡ್ಮಿರಲ್ ನೊಮೂರರನ್ನು ವಿದೇಶಾಂಗ ಮಂತ್ರಿಯಾಗಿ ನೇಮಿಸಿದರು. ಜಾಪಾನಿನ 5 ಪಕ್ಷಗಳ ಸಭೆ ಕರೆದು ಅವರ ಬೆಂಬಲ ಪಡೆಯಲೆತ್ನಿಸಿದರು. ಆದರೂ ಪ್ರಯೋಜನವಾಗಲಿಲ್ಲ. ಜಾಪಾನ ಪಾರ್ಲಿಮೆಂಟಿನ 250 ಮಂದಿ ಮೆಂಬರರು ಅಬೆಯವರ ರಾಜಿನಾಮೆ ಕೇಳಿದುದರಿಂದ ಅವರು ಪದಚ್ಯುತಹೊಂದಬೇಕಾಯಿತು.

ಅಬೆಯವರ ಪತನಾನಂತರ ಮೇಲೆ ಸೇನಾನಿಗಳು ತಮ್ಮ ಜನವಾದ ಎಡ್ಮಿರಲ್ ಹಟರವರನ್ನು ಪ್ರಧಾನ ಮಂತ್ರಿಗಳಾಗಿ ಮಾಡಬೇಕೆಂದಿದ್ದರು, ಆದರೆ ನೆಟ್ಟಗೆ ಅವರ ಹೆಸರನ್ನು ಸೂಚಿಸಬಾರದೆ, ಪ್ರಿನ್ಸ್ ಕೊನೊಯೆಯವರು ಪುನಃ ಅಧಿಕಾರಕ್ಕೆ ಬರಬೇಕೆಂದು ಸೂಚಿಸತೊಡಗಿದರು. ಈ ನಡುವೆ ಜಾಪಾನ ಹಿರಿಯ ಮುತ್ಸದ್ದಿಗಳು ಕೆಲವರು ಸೇರಿ ಎಡ್ಮಿರಲ್ ಯೊನಾಯಿಯವರನ್ನು ಪ್ರಧಾನಮಂತ್ರಿಯಾಗಿಮಾಡಿದರು ಇದರಿಂದ ಸೇನಾನಿಗಳು ಹತಭಗ್ನರಾದರು. ಜಾಪಾನ ಚಕ್ರವರ್ತಿಗಳು ಎಡ್ಮಿರಲ್ ಹಟರನ್ನು ಕರೆದು ಯೊನಾಯಿ ಮಂತ್ರಿಮಂಡಲದೊಂದಿಗೆ ಸಹಕರಿಸಬೇಕೆಂದು ಆಜ್ಞಾಪಿಸಿದರು. ನಿರ್ವಾಹವಿಲ್ಲದೆ ಸೇನಾನಿಗಳು ಆ ಪ್ರಕಾರ ನಡೆಯಬೇಕಾಯಿತು.

ಇಂದೀಗ ಎಡ್ಮಿರಲ್ ಹಟರವರು, ಎಡ್ಮಿರಲ್ ಯೊನಾಯಿಯೊಂದಿಗೆ ಸಹಕರಿಸಲು ನಿರಾಕರಿಸಿರುವರು ಅಂದರೆ ಸೇನಾನಿಗಳಿಗೆ ಎಡ್ಮಿರಲ್ ಯೊನಾಯಿಯವರು ಅಧಿಕಾರದಲ್ಲಿರುವುದು ಹಿತವಿಲ್ಲ ಅವರು ಇಂದು ರಾಜಿನಾಮೆಯಿತ್ತಿದ್ದಾರೆ ಪ್ರಾಯಶಃ ಜಾಪಾನಿನ ರಾಜಕೀಯ ವಾತಾವರಣದಲ್ಲಿ ದೊಡ್ಡ ಬದಲಾವಣೆಯೊಂದು ಇನ್ನು ಕೆಲವೇ ದಿನಗಳಲ್ಲಿ ಆಗಲಿದೆ. ಜಾಪಾನು ಸಂದರ್ಭ ಸಾಧಿಸಿ ಪೂರ್ವಏಸ್ಯದಲ್ಲಿ ತನ್ನ ಅಧಿಕಾರವನ್ನು ಸ್ಥಿರವಾಗಿ ಸ್ಥಾಪಿಸಲೆತ್ನಿಸುವುದೆಂಬುದರಲ್ಲಿ ಸಂದೇಹವಿಲ್ಲ ಇಂಡೋಚೈನ, ಡಚ್ ಈಸ್ಟ್ ಇಂಡೀಸ್, ಮಲಯ ಬರ್ಮ ಮತ್ತು ಹಿಂದೂದೇಶದ ವರೆಗೂ ಜಾಪಾನಿನ ದೃಷ್ಟಿ ಬಿದ್ದಿರಲಾರದು. ಆಸ್ಟ್ರೇಲಿಯ, ನ್ಯೂಜೀಲೆಂಡುಗಳ ಮೇಲೂ ಅದು ಕಣ್ಣಿಟ್ಟಿದೆ. ಅದು ತನ್ನ ಆಕ್ರಮಣಶೀಲ ಧೋರಣೆಯನ್ನು ಈ ರೀತಿ ಮುಂದೊತ್ತಿದರೆ ಪೂರ್ವದಲ್ಲಿಯೂ ಯುದ್ಧದ ಕಾಡ್ಗಿಚ್ಚೇಳದಿರಲಾರದು. ಯೂಕಂಡರೆ ಬ್ರಿಟನು ಜಾಪಾನನ್ನೀಗ ಎಷ್ಟೊಂದು ಸಮಾಧಾಯಿಸಲೆತ್ನಿಸಿದರೂ, ಅದು ಇಂಡೋಚೈನ, ಡಚ್ ಈಸ್ಟ್ ಇಂಡೀಸ್ ಮೊದಲಾದುವನ್ನು ಆಕ್ರಮಿಸುವಾಗ ಸುಮ್ಮನಿರಲಾರದು ಚೀನದೊಡನೆ ವ್ಯಾಪಾರ ವ್ಯವಹಾರ ಮಾರ್ಗಗಳನ್ನೆಲ್ಲಾ ಬಂದುಮಾಡಲು ಸಾಧ್ಯವಿಲ್ಲೆಂದು ಅಮೇರಿಕವು ಇಷ್ಟರಲ್ಲೇ ಎಚ್ಚರಿಸಿದೆ. ಅಮೇರಿಕವು ಕೂಡಾ ಜಾಪಾನಿನ ಆಕ್ರಮಣಶೀಲ ಧೋರಣೆಗೆ ತಡೆಹಾಕದಿರಲಾರದು.

ಜಾಪಾನಿನ ಆಂತರಿಕ ಪರಿಸ್ಥಿತಿಯು ತೀರಾ ಕೆಟ್ಟುಹೋಗಿದೆ. ಜಾಪಾನ ಸೇನಾನಿಗಳ ಉದ್ಧಟ ಧೋರಣೆಯಿಂದ ರಾಜಕೀಯ ಪಕ್ಷಗಳಲ್ಲೆಲ್ಲಾ ಅತೃಪ್ತಿಯುಂಟಾಗಿದೆ. ಈಗ ಜಾಪಾನನ್ನು ಆಳುವವರೆಂದರೆ ಸೇನಾನಿಗಳು ಮತ್ತು ಅವರ ಸಹಾಯಕರಾದ ಕೆಲಮಂದಿ ಭಂಡವಾಳಗಾರರು. ಜನಮತಕ್ಕೆ ಕಿವಿಗೊಡುವವರೇ ಇಲ್ಲ. ಈಗ ಸ್ಥಾಪಿಸಲ್ಪಟ್ಟಿರುವ ಮಂತ್ರಿಮಂಡಲವು ಫೆಸಿಸ್ಟ ರೀತಿನೀತಿಯನ್ನು ಪ್ರತಿಪಾದಿಸುವಂತಹುದು. ಇದರಿಂದ ಜನರಲ್ಲಿ ಮತ್ತಷ್ಟು ಅತೃಪ್ತಿ ಹೆಚ್ಚುವಂತಾಗುವುದು, ಚೀನೀ ಯುದ್ಧದಲ್ಲಿ ಜಾಪಾನರು ಕೈಹಾಕಿ ಕೆಟ್ಟುಹೋಗಿರುತ್ತಾರೆ. ಅವರು ಇತ್ತಲಾಗಿ ಸ್ಥಾಪಿಸಿದ ಸರಕಾರಕ್ಕೆ ಜನತೆಯ ಬೆಂಬಲವೇನೂ ದೊರಕಿರುವುದಿಲ್ಲ. ಚೀನೀ ರಾಷ್ಟ್ರೀಯ ಸರಕಾರವು ಯುದ್ಧವನ್ನು ನಿಲ್ಲಿಸುವಹಾಗಿಲ್ಲ ಆದುದರಿಂದ ಮುಂದೆ ಜಾಪಾನಿನ ಆಂತರಿಕ ಪರಿಸ್ಥಿತಿಯು ಇನ್ನಷ್ಟು ವಿಷಮವಾಗಲಿದೆ. ದೊಡ್ಡ ಕ್ರಾಂತಿಯೊಂದುಂಟಾದರೆ ಮಾತ್ರ ಜಾಪಾನ ಸೇನಾನಿಗಳು ಕಣ್ಣು ತೆರೆಯಬಹುದು ದೇವಾಂಶಸಂಭೂತ ಚಕ್ರವರ್ತಿಗಳು ತಳಮಳಗೊಳ್ಳುವಂತಾಗಬಹುದು.

ಚಂದಾದಾರರಲ್ಲಿ ವಿನಂತಿ.

ಇದೇ ಬರುವ ಆಗೋಸ್ತು ತಿಂಗಳಂತ್ಯಕ್ಕೆ 'ನವಯುಗ'ದ **19**ನೇ ವರ್ಷವು ಕೊನೆಗೊಂಡು ಸಪ್ಟಂಬರ ಮೊದಲ್ಗೊಂಡು **20**ನೇ ವರ್ಷವು ಪ್ರಾರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ನಮ್ಮ ಚಂದಾದಾರರು ತಮ್ಮ ಮುಂದಿನ ವರ್ಷದ ಚಂದಾಹಣವನ್ನು **ದಯಮಾಡಿ ಕೂಡಲೇ ಕಳುಹಿಸುವಂತೆ ಈ ಮೂಲಕ ಅಪೇಕ್ಷಿಸೋಣಾಗುತ್ತದೆ**

ಕೆಲವರು ಚಾಲ್ತಿ ವರ್ಷದ ಚಂದಾ ಹಣವನ್ನು ಈ ವರೆಗೂ ಕಳಿಸಿರುವುದಿಲ್ಲವೆನ್ನಲು ವಿಷಾದವಾಗುತ್ತದೆ. ಅಂಥವರು ತ್ವರ್ಯದಲ್ಲಿಯೇ **ಅದನ್ನೂ ಮುಂಗಡ ಚಂದಾ ಹಣವನ್ನೂ ಪಾವತಿಮಾಡುವಂತೆ ಕೇಳಿಕೊಳ್ಳುವೆವು.**

ತಮಗೆ **ಪ್ರತ್ಯೇಕ ನೋಟೀಸು ಬರುವದೆಂದು ಯಾರೂ ಕಾಯದೆ ದಯಮಾಡಿ ಹಣವನ್ನು ಸಕಾಲದಲ್ಲಿ ಕಳುಹಿಸುವಂತೆ ಪ್ರತ್ಯೇಕ ವಿನಂತಿ** ಇದೆ.

—ಮೆನೇಜರ್.

ಮಂಗಳೂರು ಮತ್ತು ಉಡುಪಿಗೆ ಬಂದಾಗ ನಿಮಗೆ
ಸುಖವಾದ ನಿವಾಸ ದೊರೆಯಬೇಕೋ?
— ಹಾಗಾದರೆ —

ಸು ಖ ನಿ ವಾ ಸ ಕ್ಕೆ ಬ ನ್ನಿ .

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,
ವಿದ್ಯುದ್ದೀಪಾಲಂಕೃತ ಕೋಣೆ.

ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವುದೆಲ್ಲಿ?

ಸುಖನಿವಾಸ ದಲ್ಲಿ ಮಾತ್ರ.

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.
ಮಂಗಳೂರಿನಲ್ಲಿ ಜೇಡಿಗುಡ್ಡೆಯಲ್ಲಿಯೂ, ಉಡುಪಿಯಲ್ಲಿ ತಾಲೂಕು ಕಚೇರಿಯ ಬಳಿಯಲ್ಲಿಯೂ ಇರುವ 'ಸುಖನಿವಾಸ'ವನ್ನು ಒಮ್ಮೆ ಸಂದರ್ಶಿಸಿರಿ.

ಪ್ರೊಪ್ರೈಟರ್, **ಸುಖನಿವಾಸ.**

ಭಾರತದ ಆದರ್ಶ ಮಹಿಳಾ ಶಿಕ್ಷಣ ಸಂಸ್ಥೆ

ಹೆಣ್ಣು ಮಕ್ಕಳಿಗೆ ಬೇಕಾದ ಪೂರ್ಣ ಶಿಕ್ಷಣ

ಡೆಹರಾಡೂನಿನ ಕನ್ಯಾ ಗುರುಕುಲದ ಚರಿತ್ರೆ.

ಬೇಸಿಗೆ ಕಾಲದ ಒಂದು ದಿನ. ಶುಭ್ರವಾದ ಆಕಾಶದಲ್ಲಿ ಸೂರ್ಯನು ಹುಸಿನಗೆ ಬೀರುತ್ತಿದ್ದನು. ಮತ್ತು ಹಿಮಾಲಯ ಪರ್ವತಗಳ ತಪ್ಪಲಿನಲ್ಲಿನ ಭೂಭಾಗವನ್ನು ಬೆಚ್ಚಗೂ ಸುವರ್ಣಮಯವಾಗಿಯೂ ಮಾಡುತ್ತಿದ್ದನು. ನಮ್ಮ ಎದುರಿನಲ್ಲಿ ಸಣ್ಣ ಮನೆಗಳ ಸಾಲಿದ್ದಿತು. ಇವುಗಳಲ್ಲಿ ಅನೇಕ ಮನೆಗಳಿಗೆ ತಗಡಿನಮೇಲ್ಛಾವಣಿ ಇತ್ತು. ಇವೆಲ್ಲ ಮನೆಗಳೂ ಎತ್ತರವಾದ ಪ್ರದೇಶಗಳಲ್ಲಿ ಕಟ್ಟಲ್ಪಟ್ಟದ್ದು ಅಲ್ಲಿಂದ ಮಸೂರಿಯ ಸುಂದರ ಭವನಗಳು ಆಟದ ಮನೆಗಳಂತೆ ಕಾಣಿಸುತ್ತವೆ.

ನಾವು ನಿಂತಿದ್ದ ಅಂಗಳದಲ್ಲಿ ಬಾಲಕಿಯರು ಅಲ್ಲಿಂದಿಲ್ಲಿಗೆ ತಿರುಗುತ್ತಿದ್ದರು. ಇವರ ಸಂಖ್ಯೆಯು ೨೦೦-೩೦೦ರ ವರೆಗಿತ್ತು. ಇವರಲ್ಲಿ ಸಣ್ಣ ವಯಸ್ಸಿನವರಿಂದ ಹಿಡಿದು ಯುವತಿಯರ ವರೆಗೂ ಇರುತ್ತಿದ್ದರು. ಆದರೆ ಇವರೆಲ್ಲರಲ್ಲಿಯೂ ಇದ್ದ ಒಂದು ವಸ್ತುವೇನೆಂದರೆ, ಅವರ ಆನಂದ ಮನೋವೃತ್ತಿ. ಎಲ್ಲರೂ ಹಸನ್ಮುಖಿಗಳು. ಇವರ ಭಾವೀ ಜೀವನದ ಕಟ್ಟಡವನ್ನು ಕಟ್ಟಲು ಇವರಿಗಿಂತ ವಯಸ್ಸಾದ ಸ್ತ್ರೀಯರು ಇವರಿಗೆ ಸಹಾಯ ಮಾಡುತ್ತಿದ್ದರು. ಈ ರೀತಿ ಇವರ ಪರಸ್ಪರ ಪ್ರಯತ್ನಗಳಿಂದ, ಜೀವನವೇ ಸುಖಮಯವಾಗುವಂತಿತ್ತು!

ಇದೊಂದು ಶಾಲೆ, ಡೆಹರಾಡೂನಿನಲ್ಲಿ ನಿರ್ಮಿಸಲ್ಪಟ್ಟಿರುವ ಶಿಕ್ಷಣ ಸಂಸ್ಥೆ. ಇದಕ್ಕೆ ಉತ್ತರದಲ್ಲಿ ಹಿಮಾಚಲವು ಅಚಲವಾಗಿದೆ. ದಕ್ಷಿಣದಲ್ಲಿ ಸಿವಾಲಿಕ್ ಬೆಟ್ಟಗಳಿವೆ.

ಈ ಶಾಲೆಯಲ್ಲಿ ಬಾಲಕಿಯರ ವಾಸಕ್ಕೂ ವ್ಯವಸ್ಥೆ ಇದ್ದಿತು, ಇದರ ರೂಪು ರಚನೆಗಳಿಗೆಲ್ಲ ಭಾರತೀಯರೇ ವಿನಹ ಹೊರಗಿನವರ ಕೈವಾಡವೇನೂ ಅದರಲ್ಲಿಲ್ಲ. ರಪ್ಪ ಎಂಬ ನದಿಯ ದಡದಲ್ಲಿರುವ ಈ ಶಾಲೆಯಿರುವ ಜಾಗದಿಂದ ಎರಡು ಗಂಟೆಗಳ ಪ್ರಯಾಣದಲ್ಲಿರುವ ಒಂದು ಸ್ಥಳದಲ್ಲಿ, ಹಿಂದಿನ ಕಾಲದ ಒಬ್ಬ ಮಹನೀಯರು ಇದ್ದರಂತೆ! ಅವರೇ ಗುರುದ್ರೋಣಾಚಾರ್ಯರು! ಕೌರವ, ಪಾಂಡವರ ಗುರುಗಳಾಗಿದ್ದ, ಭಾರತದಲ್ಲಿ ಯುದ್ಧ ಕಲಿಸುವ ಆಚಾರ್ಯರವರಾಗಿದ್ದ ದ್ರೋಣಾಚಾರ್ಯರು! ಅದೇ ಜಾಗದಲ್ಲೇ, ಈ ಗುರುವರ್ಯರ ಚರಣ ಕಮಲಗಳಲ್ಲೇ ರಾಜಾಧಿರಾಜರ ಮಕ್ಕಳು ಶಿಕ್ಷಣ ಪಡೆಯುತ್ತಿದ್ದುದು! ಆಗಿನ ಶಾಲೆಗೆ ಸೇರಲು ವಿದ್ಯಾರ್ಥಿಗಳು ತೆರಬೇಕಾಗಿದ್ದ ಶುಲ್ಕ (fees) ವೆಂದರೆ ಒಣಕಟ್ಟಿಗೆಯ ಹೊರೆಯೇ! ರಾಜಕುಮಾರರೂ ಸಹ ತಾವೇ ಕಡಿದು, ತಮ್ಮ ಹೆಗಲ ಮೇಲೇ ಹೊತ್ತು ತರುತ್ತಿದ್ದ ಸೌದೆಹೊರೆಗೆ! ಈ ಶುಲ್ಕದಿಂದ ಯಾರಿಗೂ ವಿನಾಯಿತಿ ಇರುತ್ತಿರಲಿಲ್ಲ. ಅಲ್ಲಿ ಉಚ್ಚ, ನೀಚ, ಬಡವ ಬಲ್ಲಿದನೆಂಬ ವಾಸನೆಯೂ ಸಹ ಇರುತ್ತಿರಲಿಲ್ಲ. ಅಲ್ಲಿಗೆ ಬಂದವರೆಲ್ಲ, ತಮ್ಮ ಸಾಮಾಜಿಕ ಸ್ಥಾನಮಾನಗಳನ್ನು ಬದಿಗಿಟ್ಟೇ ಇರುತ್ತಿದ್ದರು!

ಮಧ್ಯಾಹ್ನದ ಊಟ, ವಿಶ್ರಾಂತಿಯ ನಂತರ ಬಾಲಕಿಯರು ಆಟದ ಮೈದಾನಕ್ಕೆ ಹೋದಾಗ, ಅದನ್ನು ನೋಡುವುದಕ್ಕೇ ಆನಂದವಾಗುತ್ತಿತ್ತು. ಅವರಲ್ಲಿ ಸ್ವಾತಂತ್ರ್ಯದ ಶಿಸ್ತೂ ಕಾಣುತ್ತಿತ್ತು. ಅವರು ಸ್ವತಂತ್ರ ಗುಂಪುಗಳಾಗಿ, ಹಸನ್ಮುಖಿಯರಾಗಿ ಹಾಡುತ್ತ, ನಗುತ್ತ, ಹೋಗುತ್ತಿದ್ದರು. ಅವರಿಗೆ ಯಾರ ಕಟ್ಟಾಜ್ಞೆಯೂ ಇರಲಿಲ್ಲವಾದರೂ, ಅವರಲ್ಲಿ ನಿಷ್ಕಾರಣವಾದ ಗಲಭೆಯಾಗಲಿ, ಅಶ್ಲೀಲತೆಯ ವರ್ತನೆಗಳಾಗಲೀ ಕಂಡುಬರುತ್ತಿರಲಿಲ್ಲ. ಅವರೆಲ್ಲರೂ ಆರೋಗ್ಯ ಮತ್ತು ಸ್ಫೂರ್ತಿಯ ಸಾಕಾರಮೂರ್ತಿಗಳಂತಿದ್ದರು.

ಇವರೆಲ್ಲರೂ ಕೈಯಿಂದ ಮಾಡಿದ ಖಾದಿಯನ್ನೇ ಧರಿಸಿದ್ದರು. ಇವರನ್ನು ನೋಡಿದಾಗ ನನಗೆ, ಹಿಂದಿನ ಕಾಲದ ಬಡವರು, ರಾಜಕುಮಾರರು ಮೊದಲಾಗಿ ಎಲ್ಲರಿಗೂ ಶಿಕ್ಷಣಕೊಡುತ್ತಿದ್ದ ಗುರು ದ್ರೋಣಾಚಾರ್ಯರ ಕಾಲವು ನೆನಪಿಗೆ ಬಂದಿತು.

ಅವರ ಉಡುಪುಗಳಲ್ಲಿಯೂ ಬಡವ ಬಲ್ಲಿದರೆಂಬುವ ವ್ಯತ್ಯಾಸವೇ ಕಾಣುತ್ತಿರಲಿಲ್ಲ. ಅಲ್ಲಿ ಅತ್ಯಂತ ಬಡವರ ಮಕ್ಕಳಿಗೂ ಅತ್ಯಂತ ಧನಾಢ್ಯರ ಮಕ್ಕಳಿಗೂ ಒಂದೇ ವಿಧವಾದ ಉಡುಪನ್ನೇ ಕೊಡುವರು. ಈ ಬಟ್ಟೆಗಳೆಲ್ಲವೂ ಗುರುಕುಲದಿಂದಲೇ ಕೊಡಲ್ಪಡುವುವು. ಅವುಗಳಿಗೆ ಯಾವ ಬೆಲೆಯನ್ನೂ ತೆಗೆದುಕೊಳ್ಳುವುದಿಲ್ಲ. ಇದರಿಂದ ಧನಿಕ ಬಾಲಕಿಯರು ಉತ್ತಮ ಬಟ್ಟೆಗಳನ್ನು ಹಾಕಿಕೊಂಡಿರುವುದನ್ನು ನೋಡಿ, ಬಡವರು ವ್ಯಸನಪಡುವುದಕ್ಕೆ ಅವಕಾಶವೇ ಇರುವುದಿಲ್ಲ.

ಇದಕ್ಕೂ ಮೊದಲು ಇವರು ಊಟ ಮಾಡುವಾಗಿರುವ ಸರಳತೆ, ರೀತಿ ನೀತಿಗಳನ್ನು ನೋಡಿ ಬಹಳ ಪ್ರಭಾವಿತನಾದೆನು. ಅವರ ಊಟದಲ್ಲಿ ಕಾಯಿಪಲ್ಯಗಳೇ ಹೆಚ್ಚು, ಅದರಲ್ಲಿ ಖಾರ, ಹುಳಿ, ಉಪ್ಪು ಯಾವುದೂ ಹೆಚ್ಚು ಇರುವದಿಲ್ಲ. ಈರುಳ್ಳಿ, ಬೆಳ್ಳುಳ್ಳಿಗಳನ್ನು ಸಹ ಉಪಯೋಗಿಸವುದಿಲ್ಲ. ಇಷ್ಟಾದರೂ ತಾನೇ ಅದನ್ನು ರುಚಿ ನೋಡಿದಾಗ, ಅಡಿಗೆಯು ಮಾತ್ರ ಅತ್ಯಂತ ರುಚಿಯಾಗಿದ್ದಿತು.

ಈ ಆಹಾರಗಳಲ್ಲಿ ಮುಖ್ಯವಾಗಿ ಗಮನಿಸಲ್ಪಡುವ ವಿಚಾರವೇನೆಂದರೆ ಶರೀರವು ಬೆಳೆಯಲು ದೃಢವಾಗಲು ಬೇಕಾಗುವ ವಸ್ತುಗಳೆಲ್ಲ ಅದರಲ್ಲಿರುವಂತೆ ನೋಡಿಕೊಳ್ಳುವರು. ಅಡಿಗೆಯ ಮೇಲ್ವಿಚಾರಣೆಯು ಬಹಳ ಅನುಭವಿಯಾದ ಸ್ತ್ರೀಯ ಕೈಯಲ್ಲಿದೆ.

ಊಟಮಾಡುವ ತಟ್ಟೆ ಬಟ್ಟಲುಗಳೂ ತೀರ ಸಾದಾ ರೀತಿಯವು. ಬಿದ್ದರೆ ಚೂರಾಗುವ ಅಧುನಿಕ ಫ್ಯಾಷನ್ನಿನವಲ್ಲ. ಊಟದಲ್ಲಿ ಏನಾದರೂ ಬದಲಾವಣೆಯಾಗಬೇಕಾದರೆ ವೈದ್ಯರ ಸಲಹೆಯನ್ನು ಪಡೆಯಬೇಕಾಗುವುದು. ಈ ವೈದ್ಯರೂ ಸ್ವಯಂಸೇವಕರಂತೆಯೇ ಇದ್ದು, ಸೇವೆ ಸಲ್ಲಿಸುವರು. ಗುರುಕುಲದಲ್ಲಿ ಬಾಲಕಿಯರು ಹೋಗಿ ಕೊಂಡುಕೊಳ್ಳಲು ಯಾವ ಅಂಗಡಿಗಳು ಸಹ ಇರುವುದಿಲ್ಲ

ಗುರುಕುಲದ ವಿದ್ಯಾರ್ಥಿನಿಯರ ಹಿಂದೆಯೇ ಆಟದ ಮೈದಾನಕ್ಕೆ ಹೋದೆ. ಅಲ್ಲಿ ಅನೇಕರು ಅನೇಕ ವಿಧವಾದ ಆಟಗಳನ್ನಾಡುತ್ತಿದ್ದರು. ನೆಗೆಯುವುದು, ಓಡುವುದು, ಹಗ್ಗದಲ್ಲಿ ಆಟವಾಡುವುದು, ವ್ಯಾಯಾಮ ಮಾಡುವುದು, ನನ್ನ ಎದುರಿನಲ್ಲಿಯೇ ಇಬ್ಬರು ಹುಡುಗಿಯರು ಕಟ್ಟಿಗೆ ವರಸೆಯನ್ನು ಕಲಿಯುತ್ತಿದ್ದರು; ಸ್ತ್ರೀಯರು ಇದಕ್ಕಿಂತಲೂ ಉತ್ತಮವಾಗಿ ತಮ್ಮ ರಕ್ಷಣೆಯನ್ನು ಮಾಡಿಕೊಳ್ಳಲಾಗವುದೇ ಇಲ್ಲ.

ನಂತರ ಕತ್ತಿವರಸೆಗಾರಂಭವಾಯಿತು. ಅವರು ಮಾಡುತ್ತಿದ್ದ ಕೆಲಸಗಳನ್ನು ನೋಡಿ ನನಗೆ ದಂಗು ಬಡಿದಂತಾಯಿತು. ಮಧ್ಯ ಯುಗದ ಸ್ತ್ರೀಯರ ನೆನಪಾಯಿತು.

ಮಾರನೇ ದಿನ ಕನ್ಯೆಯರ ವ್ಯಾಸಂಗವನ್ನು ನೋಡುವ ಉದ್ದೇಶದಿಂದ ಗುರುಕುಲಕ್ಕೆ ಹೋದೆನು. ಅವರ ಆಚಾರ್ಯರು ನನ್ನನ್ನು ಒಳಗೆ ಕರೆದೊಯ್ದು, ಅಲ್ಲಿನ ಶಿಕ್ಷಣವೆಲ್ಲವೂ ಉಚಿತವೆಂದು ಹೇಳಿದರು. ಅಲ್ಲಿ ಯಾವ ಶುಲ್ಕವನ್ನೂ ತೆಗೆದು

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮು. ಕೋರ್ಟಿನಲ್ಲಿ

ಕ್ರಮನಂಬ್ರ 194/1940.

ಚಂದಯ್ಯ ಶೆಟ್ಟಿ—ವಾದಿ.

ಕೋಟಿಯಾಬಾರಿ ಸಹಾ—ಪ್ರತಿವಾದಿಗ,

1ನೇ ಪ್ರತಿವಾದಿ ಕೋಟಿಯಾಬಾರಿ, ಧವ ನನ್ನಾ ಬಾರಿ ಮಗ, ಹಾಲಿ ಕಾರ್ಕಳ ತಾಲ್ಲೂಕು ಕಾರ್ಕಳ ಕಸಬಾ ಕಾಳಿಂಗುಡಿ ಹತ್ತಿರ ಇರುವವ, ||

ಜ್ಯಾದೆ ಗೇಣಿ ಬಾಬ್ತು ಗೇಣಿ ವ ಹುಟ್ಟುವಳಿ, ಸ್ವಮೇತ ಆಸ್ತಿ ಸ್ವಾಧೀನತೆ ಬಗ್ಗೆ ವಾದಿಯು ಪ್ರತಿವಾದಿರ ಮೇಲೆ ರೂ. 46-10-10ಕ್ಕೆ ದಾಖಲ್ಮಾಡಿದ ಸದ್ರಿ ದಾವೆಯಲ್ಲಿ 1ನೇ ಪ್ರತಿವಾದಿಗೆ ಪುನಃ ನೋಟೀಸಿಗೆ ಹುಕುಂ ಆಗಿ ತಾ. 22-8-1940ಕ್ಕೆ ಇಟ್ಟಿರುವದ್ರಿಂದ ಆ ದಿವಸ ಹಗಲು 10 ಘಂಟೆಗೆ ಈ ಕೋರ್ಟು ಮುಂದೆ 1ನೇ ಪ್ರತಿವಾದಿಯು ಸ್ವತಃ ಯಾ ವಕೀಲರ ಮುಖಾಂತ್ರ ಹಾಜ್ರಾಗಿ ಉದಾಹರ ದಾಖಲ್ಮಾಡತಕ್ಕದ್ದು. ತಪ್ಪಿದ್ರೆ ಸದ್ರಿ ವ್ಯಾಜ್ಯವನ್ನು ಒಂದನೇ ಪ್ರತಿವಾದಿಯ ಗೈರುಹಾಜರಿಯಲ್ಲೇ ಫೈಸಲ್ ಮಾಡೋಣಾಯಿತೆಂತ ತಿಳಿಯತಕ್ಕದ್ದು.

M. Mukunda Kamath,
ವಾದಿಕಡೆ ವಕೀಲ,

ಕಾರ್ಕಳ, ತಾ. 18-7-1940.

ನೋಟೀಸು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. 210/1935 R. I. A. 1315/1936

1. ಬಾಡೂರು ಕುಂಞಪ್ಪ ಆಳ್ವ-ವಾದಿ ಸ್ಥಾನ ವಾರಿಸ್ದಾರರು. } ಅರ್ಜಿದಾರರು
2. ಅಂದಕ್ಕೆ ಹೆಂಗ್ಸು. }

ಮೊದಲಾದ ಬ್ಯಾರಿ ಕೆಲವು ಪ್ರತಿವಾದಿಯರ ಮೇಲೆ ಹೊಂದಿದ್ದು,

4. ಬಿ. ಪಾತುಮ್ಮ ಮತ್ತು ಅಬ್ದುಲ್ ಖಾದ್ರಿ ಬ್ಯಾರಿ ಹೆಂಡತಿ. ಬಂಟ್ವಾಳ ಕಾಜಿ ಆದಂ ಕುಂಞಿ ಮಗಳು ಕಾಸರಗೋಡು ತಾಲೂಕು ಮಟ್ಟಿಕಡೆ ಗ್ರಾಮ,

14. ಮರಿಯುಮ್ಮ ಅಬ್ದುಲ್ ರಹಿಮಾನ್ ಬ್ಯಾರಿ ವಿಧವೆ ವ ಕುಂಞಿ ಮೋಯಿದ್ದೀನ್ ಬ್ಯಾರಿ ಮಗಳು ಕಾಸರಗೋಡು ತಾಲೂಕು ಮೊಗ್ರಾಲು ಗ್ರಾಮ, ಮೊಗ್ರಾಲು ಕಸಬಾ,

15. ಬಿ ಪಾತುಮ್ಮ		ಮೃತ 6ನೇ ಪ್ರತಿವಾದಿ ಅಬ್ದುಲ್ ರಹಿಮಾನ ಬ್ಯಾರಿ ಮಕ್ಕಳು ಮೃತರಾಗಿ ಈ ವಾದಿಯಾದ 14ನೇ ಪ್ರತಿವಾದಿ ಮರಿಯುಮ್ಮ ಸದ್ರಿ ಮೊಗ್ರಾಲು ಗ್ರಾಮ ಮೊಗ್ರಾಲು ಕಸಬಾ
16. ಕದೀಜಮ್ಮ		
17. ಅವ್ವಮ್ಮ		
18. ಸಕ್ಕೀಣಮ್ಮ		
19. [illegible]		

ಸದ್ರಿ 4 ವ 14ನೇ ಪ್ರತಿವಾದಿಗೆ ಮತ್ತು 15ರಿಂದ 19ನೇ ವರೆಗಿನವ್ರ ಪ್ರತಿವಾದಿರ ಗಾರ್ಡಿಯನಾಗಿ ಕೂಡಾ 14ನೇ ಪ್ರತಿವಾದಿಗೆ ಸಹಾ ಈ ಮೂಲಕ ತಿಳಿಯಪಡಿಸುವದೇನಂದರೆ, ಮೇಲ್ಕಂಡ ಸ್ಯೂಟಿನ ಡಿಕ್ರಿ ವಿಧಿಯಂತೆ ಖಾಸ ಐವಜುಗಳನ್ನು ಪ್ರತಿವಾದಿಯು ವಸೂಲು ಕೊಡದ್ರಿಂದ ಸದ್ರಿ ಸ್ಯೂಟಿನ ಡಿಕ್ರಿ ಪ್ರಕಾರ ಖಾಸ ಐವಜುಗಳನ್ನು ದಾವಾ ಆಸ್ತಿ ಮಾರಾಟದಿಂದ ವಸೂಲಾಗುವದೆ ಸದ್ರಿ ಸ್ಯೂಟಿನ ಡಿಕ್ರಿಗನುಸರಿಸಿ ಫೈನಲ್ ಡಿಕ್ರಿ ಕೊಡಿಸಬೇಕು ಎಂತ ವಾದಿಯು ಮಾಡಿದ ದಾವೆಯಂತೆ ಅರ್ಜಿ ತನ್ನ ಸಮಯ ಸದ್ರಿ ವಾದಿಯು ಮೃತಪಟ್ಟಿರುವುದರಿಂದ ಸದ್ರಿ ಮೃತವಾದಿಯ ವಾರಿಸ್ಸಿನಕ್ಕೆ 2ನೇ ಅರ್ಜಿದಾರಳು ಆಂದಕ್ಕೆ ಹೆಂಗ್ಸು ವಾರಿಸ್ದಾರಳಾಗಿ ಸೇರಿ 2ನೇ ಅರ್ಜಿದಾರಳ ಹೆಸರಿಗೆ ಫೈನಲ್ ಡಿಕ್ರಿ ಕೊಡಿಸಬೇಕೆಂತ ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 7-8-1940ಕ್ಕೆ ತನಿಖೆಗೆ ಇಟ್ಟಿರುವದರಿಂದ ಆ ಕುರಿತು ನಿಮ್ಮ ಆಕ್ಷೇಪಣೆಯಿದ್ದರೆ ಸದ್ರಿ ದಿನ ಬೆಳಿಗ್ಗೆ 10ಗಂಟೆಗೆ ಈ ಕೋರ್ಟು ಮುಂದೆ ನೀವು ಸ್ವತಃ ಹಾಜರಾಗಿ ಉಜರಿಸಿಕೊಳ್ಳದಿದ್ರೆ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ವ್ಯವಹಾರವು ಕೋರ್ಟು ಸಮ್ಮಂಧ ಪ್ರಕಾರ ತೀರ್ಮಾನಿಸಲ್ಪಡುವುದು,

ಪುತ್ತೂರು 12 7 1940 | **H. Sanjiva Shetty**
2ನೇ ಅರ್ಜಿದಾರಳ ಕಡೆ ವಕೀಲ್.

THE
Canara Industrial & Banking Syndicate Ltd.
UDIPI.

ನೋಟೀಸು

ಉಡುಪಿ ಶ್ರೀ ಪೇಜಾವರ ಮಠದ ಶ್ರೀ ವಿಶ್ವಮಾನ್ಯ ತೀರ್ಥ ಶ್ರೀಪಾದಂಗಳವರ ತಾರೀಕು 29-1-1932ರಲ್ಲಿ ಪವರ್ ಆಫ್ ಎಟೋರ್ನಿ ಹೊಂದಿದ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇವರು ಈ ಮೂಲಕ ತಿಳಿಯಪಡಿಸುವದೇನಂದರೆ:—

ಸದ್ರಿ ಪವರ್ ಆಫ್ ಎಟೋರ್ನಿಗೆ ಕಾರಣವಾದ ಸಾಲಗಳು ತೀರ್ಮಾನವಾಗಿರುವುದರಿಂದ ಸದ್ರಿ ಪವರ್ ಆಫ್ ಎಟೋರ್ನಿ ಶರ್ತ ಪ್ರಕಾರ ಮುಂದಿನ ಗೇಣಿಯನ್ನು ನಾವು ವಸೂಲು ಮಾಡಕೂಡದಾಗಿರುತ್ತದೆ. ಒಕ್ಕಲುಗಳು ಗೇಣಿಯನ್ನು ಮಠಕ್ಕೆ ಸೇರುವಲ್ಲಿ ನಮ್ಮ ಆಕ್ಷೇಪವಿರುವುದಿಲ್ಲ ಎಂಬ ಸಂಗತಿಯನ್ನು ಈ ಮೂಲಕ ಸರ್ವರಿಗೂ ತಿಳಿಸಿರುತ್ತದೆ.

"MUKUND NIVAS" UDIPI. 21—7—1940

T. M. A. Pai,
Managing Director.

ಕೊಳ್ಳುವುದಿಲ್ಲ. ಓದುಬರಹದ ಪುಸ್ತಕಗಳನ್ನು ಸಹ ಉಚಿತವಾಗಿಯೇ ಕೊಡುವರು. ಬಾಲಕಿಯರ ತಂದೆತಾಯಿಗಳು ಪ್ರತಿ ತಿಂಗಳೂ ಕಳುಹಿಸುವ 15 ರೂ ನ ಮೊಬಲಗು ಕೇವಲ ಊಟ, ಉಡಿಗೆಗಾಗಿ ಖರ್ಚಾಗುವುದು. 'ವಿದ್ಯೆಯು ಮಾರಾಟದ ವಸ್ತುವಲ್ಲ'ವೆಂಬ ಹಿಂದಿನ ಕಾಲದ ಸಿದ್ಧಾಂತವನ್ನೇ ಇಲ್ಲಿ ಅನುಸರಿಸುತ್ತಿರುವುದು.

ನಾವು ಅಲ್ಲಿ ಹಿಂದಿಯಲ್ಲೇ ಮಾತಾಡುತ್ತಿದ್ದೆವು. ನನ್ನ ಅಭಿಪ್ರಾಯದಲ್ಲಿ ಗುರುಕುಲದ ಸಫಲತೆಯ ಅರ್ಧ ಕಾರಣ ಅಲ್ಲಿನ ಹಿಂದೀ ಶಿಕ್ಷಣ. ಅಲ್ಲಿಗೆ ಬರುವವರೆಲ್ಲರೂ ಹೆಚ್ಚು ಕಡಿಮೆ ಹಿಂದಿಯನ್ನು ಬಲ್ಲವರಾಗಿರುವರು. ವಿದೇಶೀ ಭಾಷೆಯನ್ನು ಕಲಿಯುವುದರಲ್ಲಿ ಆಗುವ ಕಾಲವ್ಯಯವು ಇದರಲ್ಲಿ ಉಳಿಯುವುದು. ತಮಿಳುನಾಡಿನ ಒಬ್ಬ ಹುಡುಗಿಯು ಬಂದಿದ್ದಳು. ಹಿಂದಿ ಇಲ್ಲದೆ ಹೇಗೆ ನಿರ್ವಹಿಸುವಳೆಂದು ನನಗೆ ಸಂಶಯವುಂಟಾಗಿತ್ತು. ಆದರೆ 2 ತಿಂಗಳ ನಂತರ ಹೋಗಿ ನೋಡಲು, ಆಕೆಯು ಹಿಂದಿಯಲ್ಲಿ ಬಹಳ ಚೆನ್ನಾಗಿ ಮಾತನಾಡುತ್ತಿದ್ದಳು.

ಗುರುಕುಲದಲ್ಲಿ 7–8 ವರ್ಷ ವಯಸ್ಸಿನ ಬಾಲಕಿಯರನ್ನೇ ಸೇರಿಸಿಕೊಳ್ಳುವುದು. ಶಾಲೆಯ ಶಿಕ್ಷಣವು ಪೂರ್ಣವಾಗುವ ವರೆಗೂ ಅವರು ಅಲ್ಲೇ ಇರಬೇಕಾಗುವುದು. ಅಂದರೆ ಸುಮಾರು 16 ವರ್ಷ ವಯಸ್ಸಿನ ವರೆಗೆ.

ಹುಡುಗಿಯರು "ಅಧಿಕಾರಿ" ಎಂಬ ಪರೀಕ್ಷೆಯಲ್ಲಿ ಅಂದರೆ ಎಂಟನೇ ತರಗತಿಯನ್ನು ಮುಗಿಸುವ ವರೆಗೆ, ಅವರನ್ನು ಮನೆಗೆ ಕಳುಹಿಸಿಕೊಡುವುದಿಲ್ಲ. ಬಹಳ ವರ್ಷಗಳಿಗೊಮ್ಮೆ ಅವರ ತಾಯಿ ತಂದೆಗಳು ಬಂದು ನೋಡಿಕೊಂಡು ಹೋಗಲು ಮಾತ್ರ ಅನುಮತಿ ದೊರೆಯುವುದು. ಅದಕ್ಕಾಗಿಯೇ "ಅತಿಥಿ ಗೃಹ"ಗಳಿವೆ. ಅಲ್ಲಿ ಬಂದವರು ಇಳಿದುಕೊಳ್ಳುವರು.

ಆಚಾರ್ಯ ರಾಮದೇವರು ನನ್ನೊಡನೆ ಈ ರೀತಿ ಹೇಳಿದ್ದರು– "ನಮ್ಮ ಮಕ್ಕಳಿಗೆ ವೇದಗಳಿಗನುಸಾರವಾಗಿ, ಶಾರೀರಿಕ ಮತ್ತು ಮಾನಸಿಕ ಶಿಕ್ಷಣವನ್ನು ಕೊಡುವ ವರೆಗೂ, ಬಾಹ್ಯ ಜಗತ್ತಿನ ವಾತಾವರಣವು ಹಾನಿಕಾರಕವಾಗುವುದು" ಕನ್ಯಾ ಗುರುಕುಲದ ತರಗತಿಗಳೆಲ್ಲವೂ ಕೋಣೆಗಳಿಗೆ ಬದಲಾಗಿ ಹೊರಗಿನ ಗಾಳಿಯಲ್ಲೇ ನಡೆಯುವುವು. ಭಾರತದ ಎಲ್ಲ ಪ್ರಾಂತ್ಯಗಳ, ಸಂಸ್ಥಾನಗಳ ಬಾಲಕಿಯರೂ ನೆಲದ ಮೇಲೆ ಕುಳಿತು ಶಿಕ್ಷಣ ಪಡೆಯುವರು.

ಅಲ್ಲಿನ ಅಧ್ಯಾಪಕಿಯರೂ ಸಹ ಎಲ್ಲ ಪ್ರಾಂತ್ಯದವರಾಗಿರುವರು. ಇವರ ಉಡುಪು ಸಹ ಖಾದಿಯದೇ, ಬಣ್ಣ ಬಿಳುಪು. ಇವರೆಲ್ಲರೂ, ದೇಶದ ಯಾವ ಭಾಗದವರೇ ಆಗಿರಲಿ, ಯಾವ ಪಾಠವನ್ನೇ ಬೋಧಿಸುತ್ತಿರಲಿ, ಶಿಕ್ಷಣವನ್ನು ಮಾತ್ರ ಹಿಂದಿಯಲ್ಲೇ ಕೊಡುವರು. ಬಾಲಕಿಯು ಶಾಲೆಗೆ ಸೇರಿದ ಕೂಡಲೆ, ಸಂಸ್ಕೃತವನ್ನು ಹೇಳಿಕೊಟ್ಟು, ಕೊನೆಗೆ ಅದರಲ್ಲಿ ಆಕೆಯನ್ನು ಪರಿಪೂರ್ಣಳನ್ನಾಗಿ ಮಾಡುವರು. ಜೊತೆಗೆ ಇಂಗ್ಲಿಷಿನಲ್ಲಿ ಸಹ–ಒಂದು 'ಇಂಗ್ಲಿಷ್' ಗ್ರಂಥವನ್ನು ಓದಲನುಕೂಲವಾಗುವಷ್ಟು ಶಿಕ್ಷಣ ಕೊಡುವರು.

ಪಾಠ್ಯಕ್ರಮದಲ್ಲಿ ಬಾಲಕಿಯರ ಮಾನಸಿಕ ಉನ್ನತಿಗೆ ಕಾರಣವಾಗುವಂತಹ ವಿಚಾರಗಳನ್ನೇ ಸೇರಿಸಿರುವರು. 'ಉದಾಹರಣೆಗೆ– ಭಾರತದ ಚರಿತ್ರೆಯನ್ನೂ ಹೇಳುವಾಗ ಹಿಂದಿನ ಮತ್ತು ಇಂದಿನ ಚರಿತ್ರೆಗಳೊಡನೆ, ಈಗಿನ ಚಳವಳಿ, ಮಾತೃಭೂಮಿಯ ಮೇಲಿನ ಪ್ರೇಮಗಳನ್ನು ಸಹಾ ತಿಳಿಸುವರು. ಒಬ್ಬ ಹುಡುಗಿಯನ್ನು ಕರೆದು ಫಿಲಿಪೈನ್ ದ್ವೀಪದ ಸ್ವಾತಂತ್ರ್ಯದ ವಿಚಾರವಾಗಿ ಕೇಳಿದೆನು. ಆಕೆಯು ಕೊಟ್ಟ ಉತ್ತರದಿಂದ ನಾನು ಅತ್ಯಂತ ಆಶ್ಚರ್ಯಚಕಿತನಾದೆನು.

ಶಿಕ್ಷಣದಲ್ಲಿ ಮನುಷ್ಯತ್ವದ ಬಗ್ಗೆ ಬಹಳ ಹೇಳಿಕೊಡುವರು. ಉತ್ತಮ ಮಾತೆಯರಾಗಲು, ಶ್ರೇಷ್ಠರಾದ ಸತಿಯರಾಗಲು ಏನು ತಿಳಿವಳಿಕೆಬೇಕೋ ಎಲ್ಲವನ್ನೂ ಕೊಡುವರು. ಸಮಾಜದ ಕಲ್ಯಾಣವಾಗಲು ಸಹಾಯವಾಗುವರು. ಅಡಿಗೆ ಮಾಡುವುದು, ಸೇವೆ ಸಲ್ಲಿಸುವುದು, ಹೊಲಿಗೆ, ಕಸೂತಿ ಮುಂತಾದುದರಲ್ಲಿ ಕಲಿಸಲಾಗುವುದು. ಪ್ರಥಮ ಚಿಕಿತ್ಸೆ (First Aid) ಯ ನಿಯಮ, ರೋಗಿಗಳ ಉಪಚಾರ, ಆಹಾರ ವಿಜ್ಞಾನ, ಔಷಧಿಗಳ ವಿಚಾರ ಇವೆಲ್ಲವೂ ಹೇಳಲ್ಪಡುತ್ತವೆ.

ಆಚಾರ್ಯ ರಾಮದೇವಜಿಯವರ ಮರಣದ ನಂತರ ಕುಮಾರಿ ವಿದ್ಯಾವತಿಯವರೇ ಗುರುಕುಲದ ಅಧ್ಯಕ್ಷೆಯಾಗಿದ್ದಾರೆ. ಇವರ ತಂದೆಯು ಇವರಿಗೆ ಉಚ್ಚ ಶಿಕ್ಷಣವನ್ನು ಕೊಡಿಸಿದ್ದರು. ಒಂದು ಸಾರಿ B. A. ಯಲ್ಲಿ ಉತ್ತೀರ್ಣರಾಗದೆ ನಿರಾಶರಾಗಿದ್ದರು. ಇವರು ಬರೆದಿದ್ದ 'ವಿಧವಾ ವಿವಾಹ' ಎಂಬ ಲೇಖನವನ್ನು ಓದಿದ್ದ ರಾಮದೇವಜಿಯವರು, ಅವರ ಯೋಗ್ಯತೆಗೆ ಬೆರಗಾಗಿ, ಅವರಲ್ಲಿಗೆ ಹೋಗಿ ಪುನಃ ಬಿ ಎ,ಗೆ ಕುಳಿತುಕೊಳ್ಳುವಂತೆ ಹೇಳಿದರು. ಉತ್ತೀರ್ಣರಾದರು. ನಂತರ ತನ್ನ ಗುರುಕುಲದ ಅಧ್ಯಕ್ಷಿಣಿಯಾದರು. ಇಂದಿಗೂ ಅವರು ಅಲ್ಲಿ ಅನುಪಮ ನಿಃಸ್ವಾರ್ಥ ತ್ಯಾಗ ಮತ್ತೂ ಸೇವೆಯ ಸಾಕಾರಮೂರ್ತಿಗಳೇ ಆಗಿ, ಜನಸೇವೆ, ರಾಷ್ಟ್ರಸೇವೆಯನ್ನೂ ಮಾಡುತ್ತಿದ್ದಾರೆ.

(ಶ್ರೀ ಸಂತಾನಲಾಲ್ ಸಂಗರ ಲೇಖನ ವಾದ-)

S. L. S.

TENDER NOTICE.

Tenders of rates to reach the Sub Assistant Director before 15-8-1940 are invited for transporting salt bags and stacking them in the fishcuring yards and salt gollahs on the West Coast from vessels or railway waggons and for sundry other works. Details and terms of contract can be obtained from the Sub Assistant Director of Fisheries (West Coast, Calicut.

Calicut, 9-7-40. Sd/ M. Jayaram Naidu. Sub Asst Director of Fisheries (West Coast)

ಮೈಸೂರು

ಶ್ರೀ ಯಸ್. ಶ್ರೀನಿವಾಸ್ಯಂಗಾರ್– ಅ। ಭಾ। ಕಾಂಗ್ರೆಸ್ ಮಾಜಿ ಅಧ್ಯಕ್ಷರೂ, ಮದ್ರಾಸು ಸುಪ್ರಸಿದ್ಧ ಮುಂದಾಳುಗಳೂ, ಫಾರ್ವರ್ಡ್ ಬ್ಲಾಕ್ ಬೆಂಬಲಗಾರರೂ ಆದ ಶ್ರೀ. ಯಸ್. ಶ್ರೀನಿವಾಸ್ಯಂಗಾರರು ಕಳೆದ ಶುಕ್ರವಾರ ಮೈಸೂರಿಗೆ ಆಗಮಿಸಿ ಅನೇಕ ಪ್ರೇಕ್ಷಣೀಯ ಸ್ಥಳಗಳಿಗೂ, ಮಂತ್ಯ ಮತ್ತು ಮೇಲುಕೋಟೆಗೂ, ಸಂಸ್ಥೆಗಳಿಗೂ ಭೇಟಿಯಿತ್ತರು. ನಂತರ ವಿಶ್ವವಿದ್ಯಾನಿಲಯ ಸಂಘಕ್ಕೆ ಆಗಮಿಸಿ ಆ ಸಂಘದ ಈ ವರ್ಷ ಆರಂಭ ಭಾಷಣ ಮಾಡಿದರು.

ಕೂಲಿಗಾರರ ಮುಷ್ಕರ—ಕಳೆದ ವಾರ ಮೈ। ಸಂ। ದ ಎರಡು ಕಡೆಗಳಲ್ಲಿ ಕೂಲಿಗಾರರ ಮುಷ್ಕರ ನಡೆದು ಸ್ವಲ್ಪ ಶಾಂತಿ ಕೆಟ್ಟಿತ್ತು. ಬೆಂಗಳೂರು "ಬಿನ್ನಿಮಿಲ್" ಕೂಲಿ ಕೆಲಸಗಾರರು ಮಿಲ್ಲಿನ ಅಧಿಕಾರಿಗಳೊಂದಿಗೆ ಅಸಮಾಧಾನಪಟ್ಟು ಕೆಲಸಕ್ಕೆ ಹೋಗದೆ ತಾ. 17 ಮತ್ತು 18ರಲ್ಲಿ ಮುಷ್ಕರ ಹಿಡಿದಿದ್ದರು. ಕೂಲಿ ಕೆಲಸಗಾರರಿಗೆ ಈ ಬಾರಿ ಬೋನಸ್ ಬದಲು ಮಿಲ್ಲು ಲಾಭದ ಮೇಲೆ ಹಂಚಿಗೆ ಕೊಡಲಾಗುತ್ತೆಂಬುದರ ಮೇಲೆ ಈ ಮುಷ್ಕರ ನಡೆಯಿತೆಂದು ಹೇಳಲಾಗಿದೆ. ಈಗ ದಿವಾನರ ಮಧ್ಯಸ್ಥಿಕೆಯಿಂದ ಮುಷ್ಕರ ನಿಂತಿದೆ.

ಮೈ। ಸಂ। ದ ಅತಿದೊಡ್ಡ ಕೋಲಿಗಾರರ ಸ್ಥಳವಾದ ಕೋಲಾರದ ಚಿನ್ನದಗಣಿಪ್ರದೇಶದ ಕೆಲವು ಭಾಗಗಳಲ್ಲಿ ಅಲ್ಲಿ ಕೂಲಿ ಕೆಲಸಗಾರರು ಅವರಿಗೆ ಹಂಚುವ "ಗ್ರ್ಯಾಜುಟಿ" ಅಧಿಕಾರಿಗಳೊಂದಿಗೆ ಅಸಮಾಧಾನಪಟ್ಟು ಸುಮಾರು 20 ಸಾವಿರ ಮಂದಿ ಕೂಲಿಗಾರರು ಮುಷ್ಕರ ಹಿಡಿದರು. ಅಲ್ಲಲ್ಲಿ ಸ್ವಲ್ಪ ಗಲಭೆಯಾಯಿತೆಂದು ಹೇಳಿದ್ದರ ಮೇಲೆ ಬೆಂಗಳೂರಿಂದ ಪೋಲೀಸ್ ರಿಸರ್ವ್ ಪಡೆಯೊಂದು ಆಗಮಿಸಿ ಸ್ಥಳ ಕಾಯುತ್ತಿತ್ತು. ಕೆಲಸಗಾರರು ಶಾಂತರೀತಿಯಲ್ಲಿದ್ದರು. ಸಂ। ದ ಪ್ರಥಮ ಸಚಿವರು ಆ ಸ್ಥಳಕ್ಕೆ ತೆರಳಿ ಸಂ। ಲೇಬರ್ ಕಮಿಷನರನ್ನು ಬರಮಾಡಿಕೊಂಡು ಚಿನ್ನದ ಗಣಿ ಅಧಿಕಾರಿಗಳೊಂದಿಗೂ, ಕೆಲಸಗಾರರ ಮುಂದಾಳುಗಳೊಡನೆಯೂ, ದೀರ್ಘಕಾಲ ಮಾತುಕತೆ ನಡೆಸಿ, ಎಲ್ಲವನ್ನು ಸದ್ಯದಲ್ಲಿ ಸರಿಪಡಿಸಲು ಯತ್ನಿಸಲಾಗುವುದೆಂದು ಭರವಸೆಯಿತ್ತುದರಿಂದ ಕೆಲಸಗಾರರು ಮುಷ್ಕರ ನಿಲ್ಲಿಸಿ ಕೆಲಸಕ್ಕೆ ವಾಪಾಸ್ ಬರಲು ಎಲ್ಲರೂ ಒಪ್ಪಿಕೊಂಡಿದ್ದಾರೆ.

ವಿಶೇಷ ವಾರ್ತೆಗಳು—ಶ್ರೀ ಮುಮ್ಮಡಿ ಕೃಷ್ಣರಾಜಒಡೆಯರ ಜಯಂತ್ಯುತ್ಸವವನ್ನು ವಿಜೃಂಭಣೆಯಿಂದಾಚರಿಸಲಾಯಿತು. ಮೈಸೂರು ಸಂ। ಯುದ್ಧ ಸಹಾಯನಿಧಿ ಆಶ್ರಯದಲ್ಲಿ ದಿವಾನರಧ್ಯಕ್ಷತೆಯಲ್ಲಿ ಬೆಂಗಳೂರು ಪುಟ್ಟಣ್ಣಶೆಟ್ಟಿ ಭವನದಲ್ಲಿ ಒಂದು ಸಭೆ ಸೇರಿತ್ತು. ಅನೇಕ ಸದಸ್ಯರುಗಳು ಹಾಜರಿದ್ದರು. ಯುದ್ಧಕ್ಕೆ ಹೆಚ್ಚು ಸಹಾಯ ಒದಗಿಸುವ ಮತ್ತು ಹೆಚ್ಚು ಹಣ ಶೇಖರಿಸಲು ಜನರು ಸಹಾಯಮಾಡುವರೆಂದು ತಿಳಿಸಿದರು. ಮೈ। ಸಂಸ್ಥಾನದ ದಿವಾನ್ ಸರ್. ಮಿರ್ಜಾರವರು ಇದೇ ಮಾಹೆ ತಾ. 26ರಲ್ಲಿ ಬೆಳಗಾಂವಿಗೆ ಪ್ರಯಾಣ ಬೆಳೆಸಿ ಅಲ್ಲಿ ಪೌರಸಭೆ ಬಿನ್ನವತ್ತಳೆ ಸ್ವೀಕರಿಸಿ ರಾಜಾಲಖಮನ ಗೌಡ ಲಾ ಕಾಲೇಜ್ ಪ್ರಾರಂಭ ಭಾಷಣಮಾಡಿ, ಸಿರಾಜ್ ಸಾಂಗ್ಲಿ ಸಂಸ್ಥಾನಗಳಿಗೆ ಹೋಗಿ ಧಾರವಾಡ, ಹುಬ್ಬಳ್ಳಿಗೆ ಭೇಟಿ ಕೊಟ್ಟು ಹಿಂತಿರುಗುವರು. ಬೆಂಗಳೂರು ವಕೀಲ್ ಕೊಲೆ ಮೊಕದ್ದಮೆ ಮುಂದುವರೆದು ಅನೇಕರ ಸಾಕ್ಷ್ಯ ನಡೆಯಿತು. ವಿಲ್ ಬರೆದ ಶ್ರೀರಾಮಚಂದ್ರಯ್ಯನವರ ಮತ್ತು ಮೊದಲನೆ ಆಪಾದಿ ಶ್ರೀ ನಾರಾಯಣ ರೆಡ್ಡಿ ತಾಯಿ ಶ್ರೀಮತಿ ಲಕ್ಷ್ಮಮ್ಮನವರ ಸಾಕ್ಷ್ಯ ಮತ್ತು ವಾಟ ಸವಲ್ ಸ್ವಾರಸ್ಯವಾಗಿತ್ತು, ಮೊಕದ್ದಮೆ ಮುಂದುವರೆಯುತ್ತಿದೆ. ಮೈಸೂರು ಮೆಟ್ರಿಪಾಳ್ಯಂ ರೈಲನ್ನು ಹಾಕಲು ತಕ್ಕ ಕಾರ್ಯಕ್ರಮ ಏರ್ಪಾಡು ಕೈಕೊಳ್ಳಬೇಕೆಂದು, ಮೈಸೂರು ವಾಣಿಜ್ಯ ಸಂಘದವರು ಮಹಾರಾಜರಿಗೆ ಶೀಘ್ರದಲ್ಲೇ ಬರಲಿರುವ ಇಂ। ಸ। ರೈಲ್ವೆ ಫೈನಾನ್ಶಿಯಲ್ ಕಮಿಷನರ್ ಮಿ। ಬಿ। ಎಂ। ಸ್ಟೇಗರಿಗೆ ಒಂದು ಮೆಮೊರಾಂಡವನ್ನು ಕಳುಹಿಸುತ್ತಾರೆಂದು ಕೇಳಲಾಗಿದೆ. ಮೈಸೂರಲ್ಲಿ ಜನಾಗಮನವು ಸರಿಯಾಗಿಲ್ಲ. ಸೋನೆಮಳೆ ಇನ್ನೂ ಬರುತ್ತಿದೆ.

ನೋಟೀಸು.

The Vijaya Bank, Limited, Kaup.

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾಪು.

ಈ ಕೆಳಗೆ ಹೆಸರು ಬರೆಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಆಧಾರದ ಮೇಲೆ ಪಡೆದ ಸಾಲವನ್ನು ಮರುಪಾವತಿಮಾಡದೆ ಬಡ್ಡಿ ಸಹಾ ಕಟ್ಟದೆ ಸಮಯ ಕೊಡದೆ ಬಾಕಿಮಾಡಿಕೊಂಡಿರುವದರಿಂದ ಸದರಿಯವರಿಗೆ ರಿಜಿಸ್ಟರ್ಡ್ ನೋಟೀಸು ಜ್ಯಾರಿಯಾಗದೆ ವಾಪಾಸು ಬಂದಿರುವುದರಿಂದ ಈ ಮೂಲಕ ಜಾಹೀರು ಪಡಿಸುವುದೇನೆಂದರೆ—

ಸದರಿ ನಗಗಳನ್ನು 27 7 40ನೇ ಶನಿವಾರ ಮಧ್ಯಾಹ್ನ ಘಂಟೆ 11ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂ ಅದೇ ದಿವಸ ಸಂಪೂರ್ಣ ಆಗದೆಯಿದ್ದರೆ ಬೇಂಕಿಗೆ ಯುಕ್ತಕಂಡ ದಿವಸಕ್ಕೆ ಮುಂದುವರಿಸಲ್ಪಡುವುದು, ತಿಳಿದಿರುವುದು.

ಸಾಲದ ನಂಬ್ರ	ಆಸಾಮಿಯ ಹೆಸರು	ಸಾಲದ ಮೊಬಲಗು
136/36	ಇಬ್ರಾಹಿಂ ಸಾಹೇಬ್, ಹಸನ್ ಸಾಹೇಬರ ಮಗ, ದರ್ಜಿ, ಮಲ್ಲಾರು ಗ್ರಾಮ.	15 0-0
608/37	ಚೆನ್ನಪ್ಪ ಮರಕಾಲ, ಶಂಕರ ಮರಕಾಲನ ಮ.ಗ, ಫೊಲಿಪು, ಪಡುಗ್ರಾಮ	4-0-0
734 37	ಪಿ. ಯಸ್. ನಾರಾಯಣ ರಾವ್, ಸೀತಾರಾಮಯ್ಯನವರ ಮಗ, ಬೆಳಪುಗ್ರಾಮ, ಎಲ್ಲೂರು.	21-0-0
126/38	ಯಂ. ಹಮ್ಜಾ ಹಾಜಿ ಅಬ್ದುಲ್ಲಾ ಹಾಜಿಅಬ್ದುಲ್ಲರ ಮಗ, ಬೆಳಪು ಗ್ರಾಮ, ಎಲ್ಲೂರು.	30-0 0
147 38	ಶೇಕ್ ಇಬ್ರಾಹಿಮ್, ಅನ್ವರ್ ಸಾಹೇಬರ ಮಗ, ಶಿರ್ವಾಗ್ರಾಮ.	10-0 0
423/38	ಪದ್ಮನಾಭ ಸೆಟ್ಟಿ, ಎಲ್ಲೂರುಗುತ್ತು ಶೀನಸೆಟ್ಟಿಮಗ, ಎಲ್ಲೂರು ಗುತ್ತು.	63 0-0
192 38	ಮುದ್ದಣ್ಣಸೆಟ್ಟಿ, ಲೋಕು ಸೆಟ್ಟಿ ಮ.ಗ, ಪಂಜಿತ್ತಿಲು, ಮಜೂರು ಗ್ರಾಮ.	14 0 0

Office of the Bank, KAUP. Date 22-4-40

H. NANDIAPPA SHETTY, *Agent.*

The Karnataka Provident Company, Limited, Udipi.

Applications are invited from well educated respectable persons for the following posts, so as to reach the undersigned on or before 25-7-40.

Six organisers on a fixed monthly allowance of Rs. 25/ to Rs. 75/- Cash security of Rs. 500 is essential.

For full particulars please apply to or see the undersigned personally.

KARNATAKA P. CO., LTD. UDIPI 25-7-1940

B. Vamanacharya B.A. B.L., Advocate, Chairman

ಈ ವಾರದ ಭವಿಷ್ಯ

ತಾರೀಖು **25-7-1940**ರಿಂದ **1-8-1940**ರ ವರೆಗೆ

ಮೇಷ—ಜನ್ಮಗತರಾದ ನೀಚ ಶನಿ ಮತ್ತು ಬೃಹಸ್ಪತಿಯಿಂದಾಗಿ ನಿಮಗೆ ಸದಾ ಧನವ್ಯಯಕಾರಿಗಳಾದ ಅನೇಕ ಕಾರ್ಯಗಳೂ ಪ್ರವಾಸವೂ ಸಂಭವಿಸುವುದು. ಚಿಂತೆ ಮತ್ತು ವಿಷದಿಂದ ಹಾನಿಯೊದಗುವ ಚಿಹ್ನೆಗಳಿವೆ. ದೇಹಾರೋಗ್ಯದ ಮಟ್ಟಿಗೆ ವಿಶೇಷ ಜಾಗ್ರತೆವಹಿಸಬೇಕಾಗುವದು. ಕಾರ್ಯ ಸಾಧನೆಯ ಸಲುವಾಗಿ ಹಗೆಯವರಿಗೂ ಕೂಡ ತಲೆ ಬಾಗಬೇಕಾಗುವುದು. ನೀಚ ಕುಜ ಮತ್ತು ರವಿಯು ದುಷ್ಟರಾಗಿ ಸುಖ ಸ್ಥಾನವನ್ನೇ ಹಿಡಿದಿರುವುದರಿಂದ ಮನಸ್ಸಿಗೆ ಕಿಂಚಿತ್ತೂ ಸುಖವಿರದು. ಸಂಸರ್ಗ ದೋಷಕ್ಕೆ ಗುರಿಯಾಗುವಿರಿ. ಭೂಮಿ ವಿತ್ತ ಕಲಹವೂ ಪ್ರಾಪ್ತವಾಗುವಂತಿದೆ. ತಾ. 27-28-31-1 ಈ ದಿನಗಳಲ್ಲಿ ನೌಕರರಿಗೂ ವ್ಯಾಪಾರಿಗಳಿಗೂ ಧನಲಾಭವಿದೆ. ಕಾರ್ಯವೂ ಸಿದ್ಧಿಸುವುದು. ಗೃಹ ತಾಪತ್ರಯಗಳು ಬಹುಮಟ್ಟಿಗೆ ಶಾಂತವಾಗುವವು.

ವೃಷಭ— "ಕರ್ಮಣ್ಯೇವಾಧಿಕಾರಸ್ತೇ" ಎಂಬ ಗೀತೋಕ್ತಿಯನ್ನು ಅನುಸರಿಸಿ ಎಷ್ಟೇ ಎಡರುತೊಡರುಗಳು ಬಂದರೂ ಕರ್ತವ್ಯ ಪರಾಙ್ಮುಖರಾಗದೆ ಕಾರ್ಯದಲ್ಲಿ ಉದ್ಯುಕ್ತರಾಗಿರಿ, ಸತತೋದ್ಯಮಿಯಾದ ಪುರುಷಶ್ರೇಷ್ಠನನ್ನು ಲಕ್ಷ್ಮಿಯು ತಾನಾಗಿ ಬಂದು ಸೇರುವಳು. ಸದ್ಯದ ಗ್ರಹಮಾನವು ನಿಮ್ಮ ಆರ್ಥಿಕ ಭಾಗಕ್ಕೆ ಬಹು ಕಂಟಕಪ್ರದವಾಗಿರುವುದಾದರೂ ಖರ್ಚಿಗೆ ಬೇಕಷ್ಟು ಧನ ದೊರೆತೇ ತೀರುವುದು, ಅನಿರೀಕ್ಷಿತವಾಗಿ ರೋಗ ಆಪತ್ತುಗಳು ಸಂಭವಿಸುವವಾದರೂ ನೀವು ಒಮ್ಮೆಗೆ ಭ್ರಾಂತರಾಗಬಾರದು. ತಕ್ಕ ಮಾರ್ಗವನ್ನು ಹುಡುಕುತ್ತ ಮುಂದರಿಯುವಿರಿ. ತಾ. 25, 26, 29, 30 ಈ ದಿನಗಳು ಉತ್ತಮವಾಗಿವೆ.

ಮಿಥುನ—ಗ್ರಹಮಾನವು ಬಹುತೇಕ ಉತ್ತಮರೀತಿಯಲ್ಲಿರುವುದಾದರೂ ಸ್ತ್ರೀಜನರ ಭಾಗಕ್ಕೆ ವಿಪರೀತವೇ ಆಗಿದೆ. ಮತ್ತು ರಾಜಕೀಯ ಕಾರ್ಯಗಳಿಗೆ ಪ್ರತಿಕೂಲಕಾರಿಯಾಗಿದೆ. ಉಷ್ಣ ಪಿತ್ಥ ಪ್ರಕೋಪದಿಂದ ಅನಾರೋಗ್ಯವೂ ಪ್ರಾಪ್ತವಾಗಬಹುದು. ಆದರೂ ನೀವು ನಿಮ್ಮ ವೃತ್ತಿಯಲ್ಲಿ ಅವ್ಯಾಹತವಾಗಿ ದುಡಿದು ಕೀರ್ತಿಯನ್ನೂ ಸಂಪತ್ತನ್ನೂ ಗಳಿಸುವಿರಿ, ಆರಂಭಿಸಿದ ಪ್ರತಿಯೊಂದು ಕಾರ್ಯವೂ ಒಳ್ಳೇ ಲಾಭದಾಯಕವಾಗಿ ಕೊನೆಗೊಳ್ಳುವುದು, ಬಂಧುಮಿತ್ರರ ಸಹಕಾರ ಗುರುಹಿರಿಯರ ಅನುಗ್ರಹಗಳಿಂದ ಕೂಡಿದ ನಿಮ್ಮ ಗೃಹಕೃತ್ಯವು ತೃಪ್ತಿಕರವಾಗಿರುವುದು. ತಾ. 29, 30ರಲ್ಲಿ ವ್ಯರ್ಥ ಖರ್ಚುಗಳು ಪ್ರಾಪ್ತವಾಗಬಹುದು.

ಕರ್ಕಾಟಕ— ಹಿಂದೆಂದೂ ಪ್ರಾಪ್ತವಾಗದಂತಹ ಸಂಧಿಸಮಯವು ಇಂದೀಗ ನಿಮಗೆ ಪ್ರಾಪ್ತವಾಗಿದೆಯೆಂದರೆ ತಪ್ಪಾಗಲಾರದು. ಮಾನಸಿಕ ದೌರ್ಬಲ್ಯದಿಂದಾಗಿ ಕಾರ್ಯಾಕಾರ್ಯ ವಿಚಾರಶಕ್ತಿಯಿಲ್ಲದೆ ಮಾಡಬಾರದ ಕೆಲಸಗಳನ್ನು ಮಾಡಿ ಹೊರಲಾರದ ನಷ್ಟಕ್ಕೆ ಗುರಿಯಾಗುತ್ತೀರಿ. ಮಾತ್ರವಲ್ಲ ಜನರ ಕೆಟ್ಟ ನಿಂದೆಗೂ ಪಾತ್ರರಾಗುವಿರಿ. ಮುಂಗೋಪದಿಂದಲೂ ದುರ್ವಚನದಿಂದಲೂ ಸಿಕ್ಕಸಿಕ್ಕವರಲ್ಲಿ ಕಲಹಕ್ಕೆಳಸುವಿರಿ. ಹಗೆಯವರ ಭಯವು ಹೆಚ್ಚುತ್ತಾ ಬರುತ್ತಿದೆ. ಆಕಸ್ಮಿಕ ಅಪಘಾತಗಳು ಅನಿವಾರ್ಯವೆಂದರೂ ತಪ್ಪಾಗದು, ತಾ. 25, 26 ಮತ್ತು 31, 1 ಈ ನಾಲ್ಕು ದಿನಗಳು ರಾಜಪೀಡಾ, ಬಂಧನ, ಅನಾರೋಗ್ಯಾದಿ ಅನಿಷ್ಟದಾಯಿಗಳಾಗಿವೆ.

ಸಿಂಹ—ನೀವು ಮಾಡತಕ್ಕ ಕಾರ್ಯಗಳು ವಿಘ್ನವಿಪತ್ತುಗಳಿಲ್ಲದೆ ನಿರಾಯಾಸದಿಂದ ಮುಂದರಿವವಾದರೂ ಅದರಿಂದ ನಿಮಗೆ ಸಿಗತಕ್ಕ ಲಾಭಕ್ಕಿಂತಲೂ ಖರ್ಚೇ ದ್ವಿಗುಣವಾಗುವಂತಿವೆ. ಇದರಿಂದ ಕೇವಲ ನಿಮ್ಮ ಇಷ್ಟಸಿದ್ಧಿಯಾಯಿತೆಂಬೊಂದೇ ಸಂತೃಪ್ತಿ ವಿನಹಾ ಆರ್ಥಿಕ ಭಾಗಕ್ಕೆ ದೊಡ್ಡ ಧಕ್ಕೆಯನ್ನುಂಟುಮಾಡದಂತಾಗದು. ಉದರಸಂಬಂಧೀ ರೋಗವು ಬಹುವಾಗಿ ಬಾಧಿಸುವುದು, ಧರ್ಮಾದಿಗಳಲ್ಲಿ [illegible]ವೂ ಹೆಚ್ಚಲಿದೆ. ಶ್ರಮಜೀವಿಗಳಿಗೂ ವಿದ್ಯೋಪಜೀವಿಗಳಿಗೂ ಕಾಲಕ್ಷೇಪವು ಕಷ್ಟತರವಾಗಿ ಕಂಡುಬಂದರೂ ವ್ಯಾಪಾರೀ ವೃತ್ತಿಯಲ್ಲಿ ತಕ್ಕಮಟ್ಟಿನ ಯಶಸ್ವಿಗಳಾಗುವರು. ವಾರಾಂತ್ಯದ ನಾಲ್ಕು ದಿನಗಳು ಇದ್ದುದರಲ್ಲಿ ಉತ್ತಮವಾಗಿವೆ.

ಕನ್ಯಾ—ಆಧಾರ ಪ್ರತೀಕ್ಷೆಯನ್ನು ನಿರೀಕ್ಷಿಸದೆ ಸ್ವಯಮೇವ ಧೈರ್ಯದಿಂದ ಮುಂದಾಗತಕ್ಕ ನಿಮ್ಮ ಮನಃಸಂಕಲ್ಪವು ಶೀಘ್ರದಲ್ಲೇ ಕಾರ್ಯರೂಪಕ್ಕೆ ಬರಲಿದೆ. ದೇಹಗತವಾದ ವ್ಯಾಧಿಯು ಬಹುವಾಗಿ ಪೀಡಿಸುವುದರಿಂದಲೂ ಪ್ರವಾಸದಲ್ಲಿ ಕಷ್ಟನಷ್ಟಗಳಧಿಕವಾಗುವುದರಿಂದಲೂ ನಿಮ್ಮಲ್ಲಿ ಮನೋವ್ಯಾಧಿಯು ಹೊಸತಾಗಿ ಮನೆಮಾಡಲಿದೆ. ಉತ್ಪತ್ತಿಯು ಬಹುವಾಗಿದ್ದರೂ ನಿಶ್ಚಿಂತೆಯಿಂದ ದಿನವೊಂದನ್ನು ಕಳೆಯಲು ಅನುಕೂಲತೆಯು ನಿಮಗಿಲ್ಲವೆಂಬುದು ವಿಷಾದದ ಸಂಗತಿಯಾಗಿದೆ. ತಾ. 27ರಿಂದ 30ರವರೆಗೆ ವಿಶೇಷ ಜಾಗ್ರತೆ ವಹಿಸಿರಿ.

ತುಲಾ—ಸದ್ಯ ನಿಮಗೆ ಪ್ರತಿಕೂಲರಾಗಿದ್ದವರೆಂದರೆ ಶನಿ ಕುಜ ರಾಹು ಈ ಮೂವರು. ಆದಕಾರಣ ಕಳತ್ರರಿಗೆ ದೇಹಾಲಸ್ಯವೂ ಕನಿಷ್ಠ ಧನವ್ಯಯವೂ ಸಂಭವಿಸೀತು. ಮತ್ತು ಪೇಚಾಟದ ಮಾಡುವ ಪ್ರಸಕ್ತಿಯೂ ಬರುವಂತಿದೆ. ಗುರುವಿನ ಗೃಹವು ನಿಮ್ಮಲ್ಲಿ ಪೂರ್ಣವಾಗಿರುವುದರಿಂದ ಕೈಗೊಂಡ ಕಾರ್ಯಗಳಲ್ಲಾಗಲೀ ಮಾಡತಕ್ಕ ಉದ್ಯೋಗದಲ್ಲಾಗಲೀ ಇಷ್ಟಾರ್ಥವು ಅನಾಯಾಸದಿಂದ ನೆರವೇರುವುದು, ವಿದ್ಯಾರ್ಥಿಗಳಿಗೂ ವ್ಯಾಪಾರಿಗಳಿಗೂ ನೌಕರ, ವೈದ್ಯ, ಸನಾತನಿ ಇವರೇ ಮೊದಲಾದ ಸಕಲ ಜನಸಮುದಾಯಕ್ಕೂ ಕಾಲವು ಬಹು [illegible] ಅನುಕೂಲವಾಗಿರುವುದು, ಆರೋಗ್ಯ ಮತ್ತು ಆರ್ಥಿಕ ಭಾಗಗಳು ಪೂರ್ಣವಾಗಿರುವವು, ತಾ. 25, 26 ಮತ್ತು 31, 1 ಈ ನಾಲ್ಕು ದಿನಗಳು ಉತ್ತಮವಿರುವವು.

ವೃಶ್ಚಿಕ—ನಾನಾವೆಂಬ ಕೂಪದಲ್ಲಿ ಸಿಲುಕಿ ನಾನಾ ರೀತಿಯ ವ್ಯಥೆಗೊಳಗಾಗುವಿರಿ. ಅತ್ಯಮಿತ್ರವಾಗಿ ರಾಜಸ್ಥಾನಕ್ಕೂ ದೂರುಹೋಗುವ ಪ್ರಸಕ್ತಿ ಬರಬಹುದು, ವಿರೋಧೀ ಜನರ ವಿಶ್ವಾಸಘಾತದಿಂದ ರಾಜಕೀಯ, ಸಾಮಾಜಿಕ ಮತ್ತು ನೌಕರಿ ಮೊದಲಾದವುಗಳಲ್ಲಿ ನಿರಾಶೆಯೇ ಹೆಚ್ಚೀತು, ಗೃಹತಾಪತ್ರಯಗಳು ಹೆಚ್ಚುವುದರಿಂದಲೂ ಮನೋವ್ಯಾಧಿಯು ಪ್ರಬಲವಾಗಿ ಪೀಡಿಸುವುದರಿಂದಲೂ ನಿಮ್ಮ ದೇಹಾರೋಗ್ಯವು ಚೆನ್ನಾಗಿ ಉಳಿಯಲಾರದು, ಕಷ್ಟಜೀವಿಗಳೂ, ವೈಶ್ಯವೃತ್ತಿಯವರೂ ಸೌಖ್ಯದಲ್ಲಿ ವಿಜಯಿಗಳಾಗುವರು, ತಾ. 27ರಿಂದ 30ರ ವರೆಗಿನ ದಿನಗಳು ಇದ್ದುದರಲ್ಲಿ ತೃಪ್ತಿಕರವಿರುವುದರಿಂದ ಕಷ್ಟದಿಂದ ಧನಾಪ್ತಿ, ಸ್ತ್ರೀಸುಖ ಮಿತ್ರಸಮಾಗಮಾದಿಗಳುಂಟಾಗುವವು.

ಧನು— ಪಂಚಮದ ನೀಚ ಶನಿಯಿಂದಾಗಿಯೂ ಅಷ್ಟಮದ ನೀಚ ಕುಜನಿಂದಲೂ ಇನ್ನಿತರ ಪ್ರತಿಕೂಲ ಗ್ರಹದಿಂದಲೂ ಆರಂಭಿಸಿದ ಕಾರ್ಯಗಳೆಲ್ಲವೂ ವಿಘಾತದಲ್ಲಿ ಪರ್ಯವಸಾನ ಹೊಂದಲಿವೆ. ಗೃಹದಲ್ಲಿ ನಿತ್ಯ ಕಲಹಗಳೂ, ಪರಸ್ಪರ ವೈರಭಾವವೂ ಹೆಚ್ಚುತ್ತಿರುವುದು, [illegible] ಕಡಿಮೆಯಾಗುವಂತಿಲ್ಲ. ಬರತಕ್ಕ ಅನಿಷ್ಟಗಳಲ್ಲಿ ಹೆಚ್ಚಿನವು ಪ್ರಾಣ[illegible]ವೆಂಬುದನ್ನು ನೆನಪಿನಲ್ಲಿಡಿರಿ. ಇಷ್ಟಾದರೂ ನೀವು ಅಪಮಾನವನ್ನು ಲಕ್ಷ್ಯಕ್ಕೆ ತಾರದೆ ಹಟವೃತ್ತಿ ತಿರುಗುತ್ತಿರುವುದು ಕೇವಲ ಗುರ್ವನುಗ್ರಹದಿಂದೆನ್ನಬಹುದು. ವಾರಾಂತ್ಯದ 4 ದಿನಗಳು ಇಷ್ಟಸಾಧಕಗಳಾಗಿವೆ.

ಮಕರ—ವರ್ತಮಾನ ಗ್ರಹರೀತ್ಯಾ ಒಟ್ಟಿನಲ್ಲಿ ಹೇಳುವುದಾದರೆ ಸಕಲರಿಂದಲೂ ತ್ಯಕ್ತರಾದ ಸರ್ವಾಪತ್ತುಗಳಿಗೆ [illegible] ದುರ್ದೈವೀ ಜನರ ಸಾಲಿಗೆ ನಿಮ್ಮನ್ನು ಸೇರಿಸಬಹುದಾಗಿದೆ. ಸಂಸಾರದ ಕೊರಗು ದಿನೇ ದಿನೇ ಹೆಚ್ಚುವುದು, ದೈಹಿಕ ವ್ಯಾಧಿಯು ಅಷ್ಟೊಂದು ವಿಶೇಷವಿಲ್ಲದಿದ್ದರೂ ಮನೋರೋಗವು ಅಧಿಕವಾಗುವುದು, ವಿಚಾರವಿಪ್ಲವಗಳಿಂದ ವಿಹ್ವಲಿತವಾದ ಮನಸ್ಸನ್ನು ಸ್ಥಿರೀಕರಿಸಲು ಸಾಧ್ಯವಾಗಲಾರದು. ಆದಾಯವು ಅತ್ಯಲ್ಪವಾಗಿರುವುದರಿಂದ ಖರ್ಚನ್ನು ಕಡಿಮೆಮಾಡಬೇಕೆಂಬ ಯತ್ನವಿದ್ದರೂ ಅದು ಹೆಚ್ಚುತ್ತಾ ಹೋಗುವುದು. ಬಂಧುಜನರಲ್ಲೂ ಮನೆಯವರಲ್ಲೂ ಕೂಡ ನಿಷ್ಠುರವಾಗಲಿದೆ. ತಾ. 25, 26, 31, 1 ಈ ನಾಲ್ಕು ದಿನಗಳು ಹೆಚ್ಚಿನ ಕಷ್ಟದಾಯಕಗಳಾಗಲಿರುವವು.

ಕುಂಭ—ಯುಕ್ತಾಯುಕ್ತ ವಿಚಾರಶಕ್ತಿಯುಳ್ಳ ನಿಮಗೆ ಯಾವ ಕಾರ್ಯದಲ್ಲೂ ಸೋಲು ಪ್ರಾಪ್ತವಾಗದು. ಸ್ವಯಮೇವ ಎಂತಹ ದುಃಸಾಧ್ಯವಾದ ಕಾರ್ಯವನ್ನಾದರೂ ಮಾಡಲು ಶಕ್ತರಿರುವುದರಿಂದ ಜನರೂ ಕೂಡ ನಿಮಗೆ ಬೇಕಾದಂತೆ ಸಹಾಯಕರಾಗುವರು. ಮಿತ್ರರ ಮಧ್ಯಸ್ತಿಕೆಯಿಂದ ಭಿನ್ನ ಮನಸ್ಕರಲ್ಲಿ ಐಕಮತ್ಯವುಂಟಾಗುವುದು. ಆರಂಭಿಸಿದ ಕಾರ್ಯಗಳಲ್ಲಿ ಇಷ್ಟಾರ್ಥಕವಾದ ಫಲಪ್ರಾಪ್ತಿಯಾಗುವುದರಿಂದ ಧನಧಾನ್ಯ ವಸನಾದಿಗಳಿಗೆ ಏನೂ ಕೊರತೆಯುಂಟಾಗದು. ತಾ. 27-28ಹೊರತು ಇತರ ದಿನಗಳಲ್ಲಿ [illegible] ಫಲವಾಗಿ ಕೆಲವೊಂದು ಕಾರ್ಯಗಳು ಅನ್ಯಥಾ ಆಗಬಹುದು, ದೇಹದಲ್ಲಿ ಜಾಡ್ಯವೂ ತಲೆದೋರೀತು.

ಮೀನ—ಯುಕ್ತಿಗೆ ತಕ್ಕುದಾದ ಶಕ್ತಿಯು ನಿಮ್ಮಲ್ಲಿಲ್ಲದ ಕಾರಣ ಮನಸ್ಸಿನಲ್ಲಿ ನಿರ್ಣೀತವಾದ ವಿಚಾರವನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗದು. ಧನದ ಚಿಂತೆಯು ವಿಶೇಷವಾಗುವುದು ಮಾತ್ರವಲ್ಲ [illegible], ಸ್ವಕೀಯ ಅನಾರೋಗ್ಯ, ಸಾಂಸಾರಿಕ [illegible] ಈ ಸಲುವಾಗಿ [illegible], ಗೃಹದಲ್ಲಿ [illegible]ಗಳು ಅಭಿವೃದ್ಧಿಯಾಗಿ ಅನ್ಯಕ್ಕೆ ತಲೆದೋರುವುದು. ಪ್ರವಾಸಗಳಿಂದಲೂ [illegible]ಗಳ ಅಪಚಾರದಿಂದಲೂ ಸದಾ ಮನನೊಂದಿರತಕ್ಕ ನಿಮಗೆ ತಾ. 25-26-31-1 ಈ ದಿನಗಳಲ್ಲಿ ಮಿತ್ರರಿಂದಲೂ ಬಂಧುಜನರಿಂದಲೂ ಮನಸ್ತಾಪವುಂಟಾಗುವದು. ಅಲ್ಪ ಧನವೂ ಲಭಿಸಲಿದೆ.

ವಿದ್ಯಾರ್ಥಿಗಳಿಗೆ ಆನಂದದ ಬಾತಮಿ.

ಅತಿ ಅಭ್ಯಾಸ ಯಾ ಘಾಬರಿಯಿಂದ ಪರೀಕ್ಷೆಯ ಸಮಯ ನರ್ವಸ್ ವೀಕ್ನೆಸಿನಿಂದ ಸಾಮಾನ್ಯ ಶೇಕಡ 50 ವಿದ್ಯಾರ್ಥಿಗಳು ತಿಳಿದು ಯಾ ತಿಳಿಯದೆ ಫಸ್ಟ್ ಕ್ಲಾಸಿನ ಯೋಗ್ಯತೆಯುಳ್ಳವರು ಕೂಡ ಥರ್ಡ್ ಕ್ಲಾಸಿನಲ್ಲಿ ಸಹ ಪಾಸಾಗದೆ ನಾಪಾಸಾಗುವ ಪರಿಸ್ಥಿತಿಯು ಬರುತ್ತದೆ. ಈ ಸರ್ವ ವಿಚಾರಗಳಿಗೆ ನಮ್ಮ ದೀರ್ಘ ಅನುಭವದಿಂದ ತಯಾರಿಸಲ್ಪಟ್ಟ ಬಹುಗುಣಯುಕ್ತ ಪುಷ್ಪಗಂಧಾಮೋದಿತ **ಆಮಲಕೀ ತೈಲ** ವನ್ನು ಉಪಯೋಗಿಸುವದರಿಂದ ಲಕ್ಕೀಚಾನ್ಸ್ ಸಿಕ್ಕುತ್ತದೆ. 6 ಯಾ 11 ಆಣೆ ಬೆಲೆಯ 1 ಸೀಸೆ ತೈಲವನ್ನು ಕೊಂಡುಕೊಂಡು ಸ್ವಲ್ಪ ತಲೆಗೆ ಹಾಕಿ ಮೇಪರಿಗೆ ಶುರುಮಾಡಿರಿ. ಇದರಿಂದ ಮೆದುಳಿನ ಜ್ಞಾನಶಕ್ತಿ ಯಾ ಸ್ಮರಣಶಕ್ತಿ ವೃದ್ಧಿಯಾಗಿ ಆತ್ಮವಿಶ್ವಾಸವು ಹೆಚ್ಚುವದಲ್ಲದೆ ಕಠಿಣ ತರದ ಪ್ರಶ್ನೆಗಳಲ್ಲಿ ಸುಲಭವಾಗಿ ಯಶಃಪ್ರಾಪ್ತಿಯಾಗುವುದು. ಪರೀಕ್ಷೆಯ ಮೊದಲೇ ಒಂದೆರಡು ಸೀಸೆ ನಮ್ಮ ಆಮಲಕೀ ತೈಲವನ್ನು ತರಿಸಿಕೊಳ್ಳಿರಿ 1 ಔನ್ಸಿನ ಸೀಸೆ 1ರ ಕ್ರಯ ರೂ. 0-11-0, ½ ಔನ್ಸಿನ ಸೀಸೆ 1ರ ರೂ. 0-6-0 ತಯಾರಿಸುವವರು:-ಸ್ವದೇಶೀ ಔಷಧಿಭಂಡಾರ, (ರಿಜಿಸ್ಟರ್ಡ್)ಕೊಂಚಾಡಿ, ಪೋಸ್ಟ್ ಬ್ರಹ್ಮಾವರ, ದ. ಕಾರಕ.

ನಮ್ಮ ಸ್ಟಾಕಿಸ್ಟರು:-ಪಿ.ಆರ್. ಪ್ರಭು, ದಿ ಕೆನರಾ ನ್ಯೂಸ್ ಎಂಡ್ ಬುಕ್ ಏಜೆನ್ಸೀಸ್ ಬಟಾಟವಾಲಾ ಮೆನ್ಶನ್, ಲಾಲ್ ಬಾಗ್, ಮುಂಬಯಿ. ಜನರಲ್ ಸಪ್ಲೈಸ್ ಲಿಮಿಟೆಡ್, ಉಡುಪಿ, ನವಭಾರತ ಬುಕ್ ಡಿಪ್ಪೋ, ಉಡುಪಿ, ಕೆಟಲಾಗಿಗೆ ಬರೆಯಿರಿ.

Advt

ನವಯುಗ ಜಯಂತಿ ಸಂಚಿಕೆ ತಾ. ೨೨-೮-೪೦ಕ್ಕೆ [illegible]ವಾಗುವುದು.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ

"ಗೊನೊಕಿಲರ್" (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ತೀವ್ರ [illegible], ವೀರ್ಯಸ್ರಾವ, ಮೂತ್ರ [illegible]ವಾಗಿ ಹೋಗುವುದು ಮತ್ತು ಉರಿವು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗುವ ವೀರ್ಯಸ್ರಾವ, 'ಗೊನೊ-ಕೋಕಸ್' ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗೂ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವವು.

ಬೆಲೆ: 30 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಚಾರ್ಜು 0-6-0 ಪ್ರತ್ಯೇಕ. ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡೆಯುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲರ್" ಹೆಸರನ್ನೂ ಗಮನಿಸಿರಿ.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

Sole Manufacturer DR. D. N. JASANI, Vitalbhai Patel Road, BOMBAY 4

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ

Kanara Printing Works,

Hampankatte, **MANGALORE.**

ಮೂಲವ್ಯಾಧಿ

ಸಾಧ ಪ್ರೊಟ್ಟನ ಸಿದ್ಧಿಯಾಗಿರುವ ವಿಚಿತ್ರ ಹಾಗೂ ಅಪೂರ್ವ ಔಷಧಿ

ಅರ್ಶಮಾರಾ (ರಜಿಸ್ಟರ್ಡ್)

ರಕ್ತ ಸುರಿಯುವ ಅಥವಾ ಬಂದಾಗಿರುವ ಕಳೆಯ ಅಥವಾ ಹೊಕ್ಕಿನಾದ ಒಳಗಿನ ಅಥವಾ ಹೊರಗಿನ ಯಾವ ಸ್ಥಿತಿಯಲ್ಲೇ ಇದ್ದ ಮೂಲವ್ಯಾಧಿಯು 'ಅರ್ಶಮಾರಾ'ನ್ನು ಒಂದೊಮ್ಮೆ ಹಚ್ಚಿದ ಕೂಡಲೆ ಅದ್ಭುತವಾಗಿ ಗುಣ ಹೊಂದುವುದು. ನೋವು, ತುರಿಕೆ, ಉರಿಯುರಿಕೆ, ತೀವ್ರ ರಕ್ತಸ್ರಾವ ಗುಡ್ಡೆಗಳೆಲ್ಲಾ ಕೂಡಲೇ ನಿಲ್ಲಿಸಿಬಿಡುವುದು. ಕೇವಲ 3 ದಿನ ಹಚ್ಚಿದರೆ ಯಾವ ತರದ ಒಸರೆಯನ್ನೂ ಇಲ್ಲದೆ ಮೂಲವ್ಯಾಧಿ ಅಥವಾ ಮೊಳೆಗಳನ್ನು ಗುಣಪಡಿಸುವುದು. ಈ ಔಷಧಿಯಿಂದ ಸಾವಿರಾರು ರೋಗಿಗಳು ಗುಣಹೊಂದಿ ಇತರರಿಗೆ ಅದನ್ನು ಶಿಫಾರಸುಮಾಡುತ್ತಿದ್ದಾರೆ. ಗುಣವಾಗದಿದ್ದಲ್ಲಿ ಹಣ ವಾಪಸು. ಬೆಲೆ ರೂ 2—0—0

ಆರೋಗ್ಯ ಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4.

AROGYA SADAN, DURGADEVI ST BOMBAY 4

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿ ಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ. ಅಡಿಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿನಿಮ್ಮಕೈಗೆಸೇರುವುದು. ಸೀಸೆ1ಕ್ಕೆ12ಆಣೆ, ಟಪಾಲಖರ್ಚು ಆಣೆ

ಎಸ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ.

ಉಡುಪಿ ಸ್ಟಾಕಿಸ್ಟರು: ನವಭಾರತ ಬುಕ್‌ಡಿಪ್ಪೋ, ಉಡುಪಿ

THE **MOOLKY BANK, LTD.,**

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ. ಭಂಗಾರದ ಸರಿಕಿನ ಈಡಿನ ಮೇಲೆ ಸೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು. ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು. ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R Punja, ಯಂ. ಆರ್. ಪೂಂಜ,

President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್

DAIMONDS! DAIMONDS!

K. R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕಾಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕಾಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

ಈಗಲೇ ಪ್ರಿಂಟಾಗಿದೆ! ಶೃಂಗಾರವಾದ ಪುಸ್ತಕ!!

ಮದನ ಕಳಾಶಾಸ್ತ್ರ ಎಂಬ ಪ್ರೇಮ ರಹಸ್ಯಗಳು

ರೂ 1—4—0

ಕನ್ನಡ ಬಾಷೆಯಲ್ಲಿ ಸ್ತ್ರೀಪುರುಷರ ಪ್ರೀತಿಯ ಫ್ಹೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯ ಕನ್ಯಗಳು ಮಾಡುವ ರಹಸ್ಯಗಳು, ಹುಡುಗಿಯರ ಸವಿಲಾಸಗಳು, ಸ್ತ್ರೀಪುರುಷರು ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು, ಮುಕ್ತಿದವ ವಿಧಗಳು, ಕನ್ನೆಗೆ ಪ್ರೇಮ ಮತ್ತು ಸಂಯೋಗ ಕಾಲದ ಮರ್ಮಗಳು, ಇಲ್ಲಾ ಅನೇಕ ಪ್ರೀತಿಯ, ಮುತ್ತಿಡುವ ಆಗುವ ಮನೆಯ ಶೃಂಗಾರ ರಹಸ್ಯ ಫ್ಹೋಟೋಗಳು ಅಡಗಿವೆ. ಸ್ತ್ರೀಯ ನನ್ನ ಪಡಮಾಡಿಕೊಳ್ಳುವುದು ಹೇಗೆ? ಓದಿ ನೋಡಿದರೆ ಪುಸ್ತಕ ವ ಗಿಯುವವರಿಗೂ ವಿಟಲಕ್ಕೇಲಿಲ ಮನಸ್ಸು ಬಾರದು. ಪ್ರಿಯ ಫ್ಹೋಟೋಗಳ ಸಹಿತ ಇರುವ ಪುಸ್ತಕ ರೂ. 1 4 0

T. R Royal & Co., 19 BEAT, MADRAS } { ಟಿ. ಆರ್. ರಾಯಲ್ ಕಂಪೆನಿ, 19, ಬೀಟ್ ಮದ್ರಾಸ್

ನಿಮ್ಮ ಮನೆಯಲ್ಲಿ ಸದಾ ಆನಂದದ ಜ್ಯೋತಿಯು ಬೆಳಬೆಳಗುತ್ತಿರಬೇಕೇ? ಹಾಗಿದ್ದರೆ--- ---

ನಂದಾದೀಪ

ಎಂಬ ಉತ್ಕೃಷ್ಟ ಚಿಕ್ಕಕತೆಗಳ ಪ್ರತಿಯೊಂದನ್ನಿಟ್ಟುಕೊಳ್ಳಿ.

ಕರ್ನಾಟಕದ ಪ್ರಸಿದ್ಧ ಕತೆಗಾರರಲ್ಲೊಬ್ಬರಾದ ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರು ಬರೆದ ಮನೋಹರವಾದ ಹನ್ನೊಂದು ಕತೆಗಳ ಸಂಗ್ರಹ.

ಪ್ರತಿಯೊಂದು ಕತೆಯೂ ನಿಮ್ಮ ಹೃದಯದಲ್ಲೊಂದು ಬಗೆಯ ಹೊಸ ಬೆಳಕನ್ನು ಬೆಳಗಿಸುವುದು.

ಬೆಲೆ: **0-8-0** ಟಪ್ಪಾಲು ದ್ವಾರ: **0-9-0**

ಕಿರಿಯರ ಪ್ರಪಂಚ, ಉಡುಪಿ.

(0-9-0 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು)

ಸದ್ವೈದ್ಯಶಾಲಾ ನಂಜನಗೂಡು ಇವರ

"ಸುಬಲಾ" ಪಿತ್ತ ಸಂಕಟ, ಮಲಬದ್ಧತೆ ಇವುಗಳನ್ನು ಹೋಗಲಾಡಿಸಿ, ರಕ್ತ ವೃದ್ಧಿಪಡಿಸಿ, ಶರೀರಕ್ಕೆ ಬಲವನ್ನು ಕೊಡುತ್ತದೆ ಬಹಳ ರುಚಿಯಾಗಿರುತ್ತದೆ

ಬ್ರಾಂಚ್ --ರಥಬೀದಿ ಮಂಗಳೂರು.

ಸೌಕರ್ಯ

ಆರ್ಥಿಕ ಮುಗ್ಗಟ್ಟಿನ ಈ ಮುಸ್ಥಾಂದಲ್ಲಿ ಕಡಿಮೆ ವೆಚ್ಚದಲ್ಲಿ ಹೆಚ್ಚು ಸೌಕರ್ಯವನ್ನು ಯಾರು ತಾನೆ ಅಪೇಕ್ಷಿಸುವುದಿಲ್ಲ? ಅದನ್ನು ಸದಾ ಒದಗಿಸಿಕೊಡುವುದೇ

ರಾಮಾ ರೆಸ್ಟೋರೆಂಟಿನ ಧ್ಯೇಯವಾಗಿದೆ.

ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳು!

ವಿದ್ಯಾರ್ಥಿಗಳಿಗೆ ರಿಯಾಯತಿ ದರಗಳು!!

ಒಮ್ಮೆ ಸಂದರ್ಶಿಸಿರಿ! ತೃಪ್ತಿ ಪಡೆಯಿರಿ!!

Sri Rama Restaurant Kashi Mutt Building, **UDIPI.** | **ಶ್ರೀರಾಮಾ ರೆಸ್ಟೋರೆಂಟ್** ಕಾಶಿ ಮಠದ ಕಟ್ಟೋಣ, ಉಡುಪಿ

ವ್ಯವಸ್ಥಾಪಕ — ಎಚ್. ರಾಮಚಂದ್ರ ನಾಯಕ್.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ **ರಥಬೀದಿಯ ಕಲ್ಲಂಜೆ ವ್ಯಾಸಾಚಾರ್ಯ** ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ

PRINTED BY P. A. K. UPADHYAYA AT THE THULUNAD PRESS, UDIPI. AND PUBLISHED BY K. H. SHETTY AT "NAVAYUGA OFFICE, UDIPI, S. INDIA.